Regd. No. M. 3618 [illegible] Licence No. 31
Licensed to Post without Prepayment.

ನವಯುಗ

Founder:- Sri A. B. Shetty, Minister for Public Health, Govt. of Madras.
Vol.33 No 43 1-7-1954 [illegible]

ಕಳೆದ ಶುಕ್ರವಾರ ಮುಂಜಾನೆ ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಚೀನದ ಪ್ರಧಾನ ಮಂತ್ರಿಗಳೂ ವಿದೇಶಾಂಗ ಸಚಿವರೂ ಆದ ಶ್ರೀ ಚೌ ಎನ್ ಲಾಯರು ಬಂದಿಳಿದರು—ಅವರೊಂದಿಗೆ ಕೆಲವು ಮಂದಿ ಸಲಹೆಗಾರರೂ ಇತರ ಪರಿವಾರದವರೂ ಇದ್ದರು. ಭಾರತ ಸರಕಾರದ ಆಮಂತ್ರಣವನ್ನು ಮನ್ನಿಸಿ ನಮ್ಮ ದೇಶಕ್ಕೆ ಚೌ ಎನ್ ಲಾಯರು ಸಂದರ್ಶನವನ್ನು ಕೊಟ್ಟದ್ದು ಮಹತ್ವದ ಐತಿಹಾಸಿಕ ಘಟನೆಯಷ್ಟೇ ಅಲ್ಲ, ಜಾಗತಿಕ ದೃಷ್ಟಿಯಿಂದಲೂ ಸುವರ್ಣಾಕ್ಷರಗಳಲ್ಲಿ ಬರೆದಿಡಬೇಕಾದ ವಿಷಯ. ರಾಷ್ಟ್ರಪತಿ ಭವನದಲ್ಲಿ ತಂಗಿದ ಸನ್ಮಾನ್ಯ ಅತಿಥಿ ಚೌ ಎನ್ ಲಾಯರನ್ನು ಕರೆದು ತರಲು ಭಾರತ ಸರಕಾರದವರು ಏರ್ ಇಂಡಿಯ ಇಂಟರನೇಶನಲದ ನಾಲ್ಕು ಇಂಜಿನುಗಳ ಕಾನ್‌ಸ್ಟಲೇಶನ್ ವಿಮಾನವನ್ನು ಕಳಿಸಿದ್ದರು- ಇದರಲ್ಲಿ ಹನ್ನೆರಡು ಮಂದಿ ವೈಮಾನಿಕರಿದ್ದರು ನಮ್ಮ ವೈಮಾನಿಕರು ವಿಮಾನವನ್ನು ನಡೆಸಿಕೊಂಡು ಬಂದ ಬಗೆ, ಅವರ ಚಾತುರ್ಯ ಮತ್ತು ದಕ್ಷತೆಗಳನ್ನು ಚೀನದ ಪ್ರಧಾನ ಮಂತ್ರಿಗಳು ಹೊಗಳಿದರು. ಚೀನೀ ವೈಮಾನಿಕರು ಅನುಕರಿಸಬಹುದಾದ ಗುಣ ವಿಶೇಷಗಳು ಭಾರತೀಯ ವೈಮಾನಿಕರಲ್ಲಿ ಕಂಡು ಬಂದವೆಂದು ಶ್ಲಾಘಿಸಿದರು.

ವಿಮಾನ ನಿಲ್ದಾಣದಲ್ಲಿ ನಮ್ಮ ಪ್ರಧಾನ ಮಂತ್ರಿ ನೆಹರೂರವರೂ ರಾಷ್ಟ್ರಪತಿಯವರ ಮಿಲಿಟರಿ ಕಾರ್ಯದರ್ಶಿಯೂ ರಾಯಭಾರಿ ವರ್ಗವೂ ಇತರ ಅಧಿಕಾರಿಗಳೂ ಸಹಸ್ರಾರು ಮಂದಿ ನಾಗರಿಕರೂ ಶ್ರೀ ಚೌ ಎನ್ ಲಾಯರಿಗೆ ಭವ್ಯವಾದ ಸ್ವಾಗತವನ್ನು ಬಯಸಿದರು. ವಿಮಾನ ನಿಲ್ದಾಣದಲ್ಲಿ ಸಿದ್ಧಗೊಳಿಸಿದ್ದ ವೇದಿಕೆಯ ಮೇಲೆ ಚೀನೀ ಪ್ರಧಾನ ಮಂತ್ರಿಗಳನ್ನು ನೆಹರೂರವರು ಕರೆದು ಕೊಂಡು ಹೋದರು—ಆಗ ನಮ್ಮ ಸೈನ್ಯ ದಳವು ನೀಡಿದ ಗೌರವ ರಕ್ಷೆಯನ್ನು ಶ್ರೀ ಚೌ ಎನ್ ಲಾಯರು ಸ್ವೀಕರಿಸಿದರು. ಚೀನದ ರಾಷ್ಟ್ರಗೀತೆಯನ್ನು ಬ್ಯಾಂಡುಗಳು ನುಡಿಸುತಿದ್ದಂತೆ, ಸಹಸ್ರಾರು ಸಂಖ್ಯೆಯಲ್ಲಿ ನೆರೆದಿದ್ದ ಜನಸ್ತೋಮವು ಭಾರತ ಹಾಗು ಚೀನದ ರಾಷ್ಟ್ರ ಧ್ವಜಗಳನ್ನು ಎತ್ತಿ ಹಿಡಿದು ಉಭಯ ರಾಷ್ಟ್ರಗಳ ಮೈತ್ರಿ ಹಾಗು ಮಧುರ ಬಾಂಧವ್ಯವನ್ನು ಕುರಿತು ಪ್ರಚಂಡವಾಗಿ ಜಯ ಜಯಕಾರ ಗೈದಿತು. ಈ ಸಂದರ್ಭದಲ್ಲಿ ಪತ್ರಿಕಾ ಪ್ರತಿನಿಧಿಗಳ ಮೂಲಕ ಭಾರತೀಯರಿಗೆ ಒಂದು ಸಂದೇಶವನ್ನು ಕೊಡುತ್ತಾ, ವಿಶ್ವಶಾಂತಿಯ ಧ್ಯೇಯದಿಂದ ಕೆಲಸ ಮಾಡುತ್ತಿರುವ ಭಾರತ-ಚೀನಾ ದೇಶಗಳ ಒಂದು ನೂರು ಕೋಟಿ ಜನತೆಯ ವಾಣಿಯು ಬಲಗೊಳ್ಳಲೆಂದು ಚೌ ಹಾರೈಸಿದರು. ಮುಂದೆ ಚೀನದ ಪ್ರಧಾನ ಮಂತ್ರಿಗಳು ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರನ್ನೂ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರನ್ನೂ ಪ್ರತ್ಯೇಕವಾಗಿ ಕಂಡರು. ರಾಜಘಾಟಿನಲ್ಲಿರುವ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಸಮಾಧಿಯ ಮೇಲೆ ಪುಷ್ಪಹಾರವನ್ನು ಏರಿಸಿ, ಚೀನದ ಜನತೆಯ ಶ್ರದ್ಧಾಂಜಲಿಯನ್ನು ಅರ್ಪಿಸಿದರು ಮುಂದೆ ಮಧ್ಯಾಹ್ನದನಂತರ ಚೌ ಎನ್ ಲಾಯರು ನೆಹರೂರೊಡನೆ ಸಮಾಲೋಚನೆಗಳನ್ನು ನಡೆಸತೊಡಗಿದರು.

ಕೆಂಪು ಚೀನದೊಡನೆ ಗೆಳೆತನ

ಲೋಕದ ನಾಗರಿಕರಲ್ಲಿ ಅರೆವಾಸಿಯಷ್ಟು ಜನರನ್ನು ಪ್ರತಿನಿಧೀಕರಿಸುವ ನೆಹರೂ-ಚೌ ಎನ್ ಲಾಯರ ಮಾತುಕತೆಯ ವಿವರಗಳನ್ನು ತಿಳಿಯುವ ಮೊದಲು, ಭಾರತ ಹಾಗೂ ಚೀನಾ ದೇಶಗಳ ನಡುವಣ ಸಾವಿರಾರು ವರ್ಷ ಕಾಲದಷ್ಟು ಪುರಾತನವಾದ ಬಾಂಧವ್ಯವನ್ನು ಸ್ಮರಿಸುವುದು ಅಪೇಕ್ಷಣೀಯ. ಇವೆರಡೂ ದೇಶಗಳು ಪುರಾಣೇತಿಹಾಸ ಹಾಗು ಸಂಸ್ಕೃತಿಗಳಲ್ಲಿ ಪ್ರಾಚೀನ ವೈಭವ ಪರಂಪರೆಯನ್ನು ಪಡೆದಿದ್ದು, ಅನಾದಿ ಕಾಲದಿಂದಲೂ ನಮ್ಮ ನಡುವೆ ಸ್ನೇಹ ಸೌಹಾರ್ದ ಇದ್ದುದನ್ನು ಗುರುತಿಸಬಹುದು. ಭಾರತದಲ್ಲಿ ಬೌದ್ಧಧರ್ಮವು ಉಚ್ಛ್ರಾಯಾವಸ್ಥೆಯನ್ನು ಮುಟ್ಟಿದ ಕ್ರಿಸ್ತಪೂರ್ವದ ಶತಮಾನಗಳಲ್ಲಿ ಬೌದ್ಧ ಭಿಕ್ಷುಗಳು ಆಗ್ನೇಯ ಏಶಿಯಾ ರಾಷ್ಟ್ರಗಳಾದ ಬರ್ಮಾ, ಇಂಡೋನೇಶಿಯಾ, ಸಯಾಂ, ಕಂಬೋಡಿಯಾ, ಇಂಡೋಚೀನ ಮುಂತಾದ ದೇಶಗಳಲ್ಲಿ ಧರ್ಮ ಪ್ರಚಾರವನ್ನು ಮಾಡಿದ್ದಲ್ಲದೆ, ಮುಂದೆ ಚೀನ-ಜಪಾನುಗಳಿಗೂ ಗೌತಮ ಬುದ್ಧನ ಸಂದೇಶವನ್ನು ಒಯ್ದು ಮುಟ್ಟಿಸಿದರು. ನಮ್ಮ ವಣಿಕರು ಈ ಎಲ್ಲ ದೇಶಗಳೊಡನೆ ವ್ಯಾಪಾರ ವ್ಯವಹಾರಗಳನ್ನು ಕೈಗೊಂಡರು ಈ ಎಲ್ಲ ದೇಶಗಳ ಮೇಲೆ ಭಾರತದ ಧರ್ಮ, ಕಲೆ ಹಾಗು ತತ್ವಜ್ಞಾನದ ಗಾಢವಾದ ಪ್ರಭಾವ ಬಿದ್ದಿರುವುದನ್ನು ನಾವು ಅಭಿಮಾನದಿಂದ ನೆನೆಯಬಹುದು. ಚೀನದ ಸಂಸ್ಕೃತಿಯನ್ನು ಕಾನ್‌ಫ್ಯೂಶಿಯಸ, ಲಾವೋತ್ಸೆ ಮುಂತಾದವರು ಪೋಷಿಸಿದರು, ಚೀನೀಯರು ಆಡಳಿತ ಕಲೆಯಲ್ಲಿ ನುರಿತವರಿದ್ದರು—ಸೈನಿಕ ವ್ಯವಸ್ಥೆಗಳಲ್ಲಿಯೂ ರಾಜ್ಯ ಪರಿಷ್ಕರಣ ಕಾರ್ಯದಲ್ಲಿಯೂ ಅವರು ಭಾರತೀಯರಿಗಿಂತ ಹೆಚ್ಚು ಯೋಗ್ಯತೆಯನ್ನು ತೋರಿಸುತಿದ್ದರು. ಆದರೂ ನಮ್ಮ ಎರಡು ದೇಶಗಳಲ್ಲಿ ಯಾರಿಗೂ ಯಾರನ್ನೇಲೂ ಈರ್ಷ್ಯಾಸೂಯೆಗಳಿರಲಿಲ್ಲ — ಗಂಗಾ ಯಮುನೆಯರ ಪ್ರವಾಹದಂತೆ, ವಿಶ್ವಕಲ್ಯಾಣ ಮಾಡುವ ಚೈತನ್ಯವಾಗಿ ಎರಡೂ ದೇಶಗಳ ನಾಗರಿಕತೆ ಸಂಗಮವನ್ನು ಹೊಂದಿದೆ.

ಭಾರತ-ಚೀನಗಳ ಮಧುರ ಬಾಂಧವ್ಯದ ದ್ಯೋತಕವಾಗಿ ಈಚೆಗೆ ಟಿಬೇಟನ ಕುರಿತು ನಡೆದ ವಾಣಿಜ್ಯ ಒಪ್ಪಂದವನ್ನು ಉಲ್ಲೇಖಿಸಬಹುದು -ಒಪ್ಪಂದದ ಪೀಠಿಕೆಯಲ್ಲಿ ಹೇಳಲಾದ "ಉಭಯ ರಾಷ್ಟ್ರಗಳಲ್ಲಿ ಪ್ರತಿಯೊಂದರ ಸಾರ್ವಭೌಮಾಧಿಕಾರಕ್ಕೆ ಪರಸ್ಪರ ಮನ್ನಣೆ, ಅನಾಕ್ರಮಣ ಘೋಷಣೆ, ಆಂತರಿಕ ವಿಷಯಗಳಲ್ಲಿ ಹಸ್ತಕ್ಷೇಪ ಮಾಡದಿರುವುದು, ಸಮಾನತೆ ಹಾಗು ಪರಸ್ಪರ ಲಾಭವಾಗುವಂತೆ ಶಾಂತಿಯಿಂದ ಬಾಳುವುದು" ಎಂಬ ಆದರ್ಶವು ನಮ್ಮೆರಡು ದೇಶಗಳ ಸ್ನೇಹಕ್ಕೆ ಸುದೃಢವಾದ ಅಡಿಪಾಯವಾಗಿದೆಯಷ್ಟೇ ಅಲ್ಲ—ಲೋಕ ಶಾಂತಿಯನ್ನು ಬಯಸುವ ಎಲ್ಲ ರಾಷ್ಟ್ರಗಳೂ ಈ ಆದರ್ಶವನ್ನು ಮೆಚ್ಚಬೇಕು, ಮತ್ತು ಅನುಸರಿಸುವುದಕ್ಕೂ ಮುಂಬರಬೇಕು ಇದೀಗ ಭಾರತ—ಚೀನ ವ್ಯಾಪಾರ ವ್ಯವಹಾರವನ್ನು ಉತ್ತಮಗೊಳಿಸುವ ಪ್ರಯತ್ನವೂ ನಡೆಯುತ್ತದೆ. ಚೀನದಿಂದ ರೇಶ್ಮೆ ಮುಂತಾದ ಸರಕುಗಳೂ ಭಾರತದಿಂದ ಸಣಬು, ಅರಗು ಮುಂತಾದ ದ್ರವ್ಯಗಳೂ ಪರಸ್ಪರ ನಿರ್ಯಾತವಾಗುತ್ತವೆ ಚೀನವು ೧೯೪೮ನೇ ಇಸವಿಯಲ್ಲಿ ನಡೆದ ಚಿಯಾಂಗ ಕೈಶೇಕರ ಪತನದ ಬಳಿಕ "ಕೆಂಪು" ಚೀನವೆಂದು ಹೆಸರುಗೊಂಡಿದ್ದರೂ ಭಾರತ ಸರಕಾರವು ಅದರ ನ್ಯಾಯಬದ್ಧತೆಯನ್ನು ಪ್ರಶ್ನಿಸದೆ, ೧೯೪೯ರಲ್ಲಿ ಮನ್ನಣೆಯನ್ನು ಕೊಟ್ಟಿತು. ಕಮ್ಯುನಿಸ್ಟರಿರಲಿ, ಇತರ ಯಾರೇ ಆಗಲಿ, ನ್ಯಾಯಬದ್ಧವಾದ ಸರಕಾರವನ್ನು ರಚಿಸಿದ ಮೇಲೆ ಮತ್ತು ಆ ಸರಕಾರದ ಆಡಳಿತೆಯನ್ನು ಜನರು ಒಪ್ಪಿಕೊಂಡಮೇಲೆ, ಪತನಹೊಂದಿದ ಸರಕಾರದ ಕುರಿತು ಮೋಹವನ್ನು ಪ್ರಕಟಿಸುತ್ತಾ ಕೂಡುವುದು ರಾಜಕಾರಣವಾಗದು—ಎಂತಲೇ ಫೊರ್ಮೋಸಾ ದ್ವೀಪಕ್ಕಷ್ಟೇ ಸೀಮಿತವಾದ ಚಿಯಾಂಗರ ಕುಮಿಂಟಾಂಗ ಸರಕಾರವನ್ನು ಎತ್ತಿಹಿಡಿಯುವ ಹುಚ್ಚು ಹವ್ಯಾಸಕ್ಕೆ ಭಾರತವು [illegible]

ಸುಮಾರು ೬೦ ಕೋಟಿಯನ್ನೂ ಮಿಕ್ಕಿದ ಪ್ರಜೆಗಳು ಚೀನದ "ಕಮ್ಯುನಿಸ್ಟ" ಸರಕಾರವನ್ನು ಮನ್ನಿಸಿರುವರು—ಏಶಿಯಾದ ಪ್ರಬಲ ರಾಷ್ಟ್ರಗಳಲ್ಲಿ ಚೀನವು ಒಂದೆಂಬುದನ್ನು ಯಾರೊಬ್ಬರೂ ಅಲ್ಲಗಳೆಯುವಂತಿಲ್ಲ ಏಶಿಯಾದ ಆಗುಹೋಗುಗಳ ಮೇಲೆ ಚೀನದ ಜನತೆಯು ಮಾತು ನಡೆಸಲೇ ಬೇಕಾಗಿದ್ದು, ಅದಕ್ಕೆ ತಕ್ಕ ಅವಕಾಶವನ್ನು ಕಲ್ಪಿಸಿಕೊಡುವುದು ಧರ್ಮ. ದ್ವಿತೀಯ ಮಹಾ ಯುದ್ಧದ ಬಳಿಕ ಶಾಂತಿ ಸ್ಥಾಪನೆಯ ಘನೋದ್ದೇಶದಿಂದ ಏರ್ಪಡಿಸಲಾದ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಚೀನಕ್ಕೆ ಸ್ಥಾನವನ್ನು ಕೊಡಬೇಕೆಂದು ಭಾರತವು ಆಗ್ರಹಪಡಿಸುತ್ತಿರುವುದಕ್ಕೆ ಚೀನದ ಸ್ಥಳ ವೈಶಾಲ್ಯ, ಅಲ್ಲಿಯ ಅಪಾರ ಜನಸಮುದಾಯವೇ ಹೇತು. ಆದರೆ ಕಮ್ಯೂನಿಸ್ಟರೆಂದರೆ ವಿರೋಧ ತೋರುವ ಅಮೇರಿಕವು ಚಿಯಾಂಗರ ಬೆನ್ನು ತಟ್ಟುವ ಕೆಲಸವನ್ನು

[೧೩ನೇ ಪುಟ ನೋಡಿರಿ]

THE CANARA INDUSTRIAL & BANKING SYNDICATE LTD
Estd: 1925 H O UDIPI. S India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಒಂ[illegible]ರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಲೇವಡಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ

ಮದ್ರಾಸು ರಾಜ್ಯದ ಹಸುರು ತುಂಬಿದ ಅರಣ್ಯ ಪ್ರದೇಶ

ಡೆಹರಾಡೂನಿನ ಸಂಶೋಧನಾಲಯದ ಮನನೀಯ ಕಾರ್ಯಗಳು

ಇದೇ ಜೂಲೈ ೧ನೇ ದಿನಾಂಕದಿಂದ ಭಾರತದಲ್ಲೆಲ್ಲ ಐದನೇ ವನಮಹೋತ್ಸವ ಸಪ್ತಾಹವು ಆಚರಿಸಲ್ಪಡುತ್ತದೆ. ಸಸಿನೆಡುವುದೆಂದರೆ ಮಕ್ಕಳನ್ನು ಸಾಕಿಸಲಹಿದಷ್ಟೇ ಪುಣ್ಯಕಾರ್ಯವೆಂದು ನಮ್ಮ ಧರ್ಮಶಾಸ್ತ್ರಗಳು ಹೇಳುತ್ತವೆ—ಲೌಕಿಕ ಅಥವಾ ವ್ಯಾವಹಾರಿಕ ದೃಷ್ಟಿಯಿಂದಲೂ ಸಸಿನೆಟ್ಟು ತೋಟಗಳನ್ನು ಬೆಳೆಸುವುದೂ ಅರಣ್ಯಗಳನ್ನು ವಿಸ್ತರಿಸುವುದೂ ನಮಗೂ ದೇಶಕ್ಕೂ ಲಾಭವನ್ನುಂಟುಮಾಡುವ ಕೆಲಸವೆಂದು ಹೇಳಬಹುದು. ಈ ದೃಷ್ಟಿಯಿಂದ ನಾವು ನಮ್ಮ ರಾಜ್ಯದ ಅರಣ್ಯಸಂಪತ್ತಿನ ಕಲ್ಪನೆಯನ್ನು ಮಾಡಿಕೊಳ್ಳುವುದು ಮತ್ತು ಈ ವಿಷಯದಲ್ಲಿ ನಮ್ಮ ಕರ್ತವ್ಯವನ್ನು ನೆನೆಯುವುದು ತಪ್ಪಾಗಲಾರದು. ಇದೇ ಸಂದರ್ಭದಲ್ಲಿ, ಉತ್ತರ ಪ್ರದೇಶದ ಡೆಹರಾಡೂನಿನಲ್ಲಿ ನಡೆಯಲಿರುವ ವಿಶ್ವ ಅರಣ್ಯ ಶಾಸ್ತ್ರಜ್ಞರ ಮಹಾಸಭೆಯ ನಾಲ್ಕನೇ ಅಧಿವೇಶನವು ಸೇರಲಿದೆಯೆಂಬ ಸ್ವಾರಸ್ಯವಾದ ಸುದ್ದಿಯನ್ನೂ ನಾವು ಕೇಳುತ್ತೇವೆ. ಈ ಅಧಿವೇಶನವು ಭಾರತ ಸರಕಾರದ ಆಹ್ವಾನದ ಮೇರೆಗೆ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಆಶ್ರಯದಲ್ಲಿ ದಶಂಬರ ೧೧ರಿಂದ ೨೨ನೇ ದಿನಾಂಕಗಳ ವರೆಗೆ ನಡೆಯುತ್ತದೆ. ಭಾರತದ ರಾಷ್ಟ್ರಪತಿಗಳಾದ ಡಾ| ರಾಜೇಂದ್ರ ಪ್ರಸಾದರು ಅಧಿವೇಶನದ ಉದ್ಘಾಟನೆಯನ್ನು ನೆರವೇರಿಸುವರು. ಭಾರತ ಸರಕಾರದ ಆಹಾರ ಮತ್ತು ವ್ಯವಸಾಯ ಖಾತೆಯ ಅರಣ್ಯ ವಿಭಾಗದ ಇನ್ಸ್‌ಪೆಕ್ಟರ ಜನರಲ್ಲರಾಗಿ ಇದುವರೆಗೂ ಕೆಲಸ ಮಾಡುತ್ತಿದ್ದ ಶ್ರೀ. ಎಂ. ಡಿ. ತ್ರಿವೇದಿಯವರನ್ನು ಮಹಾಧಿವೇಶನದ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿದ್ದು, ಇವರು ಇಷ್ಟರಲ್ಲೇ ಬೇಕಾದ ಸಿದ್ಧತೆಗಳನ್ನು ನಡೆಸುವರು. ಕಾರಣ, ಅರಣ್ಯ ವಿಷಯದಲ್ಲಿ ನಾವು ಡೆಹರಾಡೂನು ನಗರದ ವೈಶಿಷ್ಟ್ಯವನ್ನು ತಿಳಿದು ಕೊಳ್ಳುವುದು ಅಪ್ರಸ್ತುತವಾಗದು.

ಅರಣ್ಯ ಸಂಪತ್ತು

ಭಾರತದಲ್ಲಿ ಅರಣ್ಯ ಪ್ರದೇಶವು ಸುಮಾರು ಒಂಭತ್ತು ಕೋಟಿ ಎಕ್ರೆಯಷ್ಟು ಇದೆ; ಇದು ನೆಲದ ವಿಸ್ತೀರ್ಣದಲ್ಲಿ ನೂರಕ್ಕೆ ಹದಿಮೂರರಷ್ಟಾಗುತ್ತದೆ. ಆದರೆ ಇಷ್ಟು ಅರಣ್ಯಸಾಲದೆಂದೂ ಇದನ್ನು ಸಾಧ್ಯವಾದಷ್ಟು ಬೇಗನೆ ಇಮ್ಮಡಿಯಾಗಿಸಬೇಕೆಂದೂ ಕೇಂದ್ರ ಸರಕಾರವು ಪ್ರಯತ್ನವನ್ನು ಮಾಡುತ್ತದೆ. ಮದ್ರಾಸು ರಾಜ್ಯದಲ್ಲಿ ವಿಭಜನೆಗೆ ಮೊದಲು ಸುಮಾರು ೧೯೦೦೦ ಚದರ ಮೈಲುಗಳಷ್ಟು ಅರಣ್ಯವು ವ್ಯಾಪಿಸಿತ್ತು-ಆದರೆ ಈಗ, ಆಂಧ್ರ ರಾಜ್ಯವು ಪ್ರತ್ಯೇಕಗೊಂಡ ಬಳಿಕ, ಅರಣ್ಯದ ವಿಸ್ತಾರವು ೮೫೦೦ ಚದರ ಮೈಲುಗಳಿಗೆ ಇಳಿದಿರುವುದು. ಇದರಿಂದ ತೋರಿಕೆಗೆ ನಮ್ಮ ಅರಣ್ಯ ಸಂಪತ್ತು ಕಡಿಮೆಯಾಯಿತೆಂದೂ ಆಂಧ್ರದ ಪಾಲಿಗೆಯೇ ಅರಣ್ಯದ ಪಾಲು ಹೆಚ್ಚಾಗಿ ಸಂದಿತೆಂದೂ ಅನಿಸಬಹುದು. ಆದರೆ ನಿಜವಾಗಿ ಹೀಗಿಲ್ಲ. ಮದ್ರಾಸು ರಾಜ್ಯದ ಪಾಲಿಗೆ ಉಳಿದ ಅರಣ್ಯ ವಿಭಾಗವು ಉತ್ಪಾದನೆ ಮತ್ತು ಬೆಲೆಯ ದೃಷ್ಟಿಯಿಂದ ಹೆಚ್ಚು ಅನುಕೂಲ್ಯವಾಗಿದೆ. ಭಾರತದಲ್ಲಿ ಅತ್ಯುತ್ತಮವಾದ ಮೋಪು ಮತ್ತು ವಿಶ್ವದಲ್ಲಿಯೇ ಗಣ್ಯ ಸ್ಥಾನವನ್ನು ಪಡೆದ ಗಂಧದ ಮರಗಳು ಮದ್ರಾಸು ರಾಜ್ಯದ ಅರಣ್ಯಗಳಲ್ಲಿ ವಿಶೇಷವಾಗಿ ಬೆಳೆಯುತ್ತವೆ. ಆದಕಾರಣ, ಅವಿಭಾಜ್ಯ ಮದ್ರಾಸು ರಾಜ್ಯಕ್ಕೆ ವರ್ಷಕ್ಕೆ ೧೫೫ ಲಕ್ಷ ರೂಪಾಯಿಗಳ ಉತ್ಪಾದನೆಯು ಬರುತ್ತಿದ್ದರೆ, ಆಂಧ್ರ ರಾಜ್ಯದ ಸ್ಥಾಪನೆಯಾದ ಮೇಲೆ, ಮದ್ರಾಸಿನ ಅರಣ್ಯ ಪ್ರದೇಶಗಳು ಕಡಿಮೆಯಾದರೂ, ೧೧೩ ಲಕ್ಷ ರೂಪಾಯಿಗಳ ಆದಾಯವುಂಟಾಯಿತು. ಮದ್ರಾಸು ರಾಜ್ಯದಲ್ಲಿ ಮಳೆಯು ಏಕಪ್ರಕಾರವಾಗಿಲ್ಲ—ವರ್ಷಕ್ಕೆ ೩೦೦ ಅಂಗುಲದಷ್ಟು ಮಳೆ ಬೀಳುವ ಪಶ್ಚಿಮ ಕರಾವಳಿಯಲ್ಲಿ ರಾಕ್ಷಸ ಸದೃಶ ಮರಗಳು ಕಂಡು ಬಂದರೆ ೩೦ ಅಂಗುಲದಷ್ಟು ಮಳೆ ಬೀಳುವ ಪ್ರದೇಶಗಳಲ್ಲಿ ಕುರುಚಲು ಗಿಡಗಳು ಮಾತ್ರ ಬೆಳೆಯುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಎಲ್ಲೆಲ್ಲಿಯೂ ಹಸರು ಕಂಗೊಳಿಸುತ್ತದೆ--ಪಶ್ಚಿಮ ಘಟ್ಟದ ತಪ್ಪಲಿನಲ್ಲಿ ಹಾಚಿರುವ ನಮ್ಮ ಜಿಲ್ಲೆಯು ಮೂಡಣ ಸೆರಗು ಮಲೆನಾಡಿನ ದಟ್ಟವಾದ ಅರಣ್ಯದಿಂದ ಶೋಭಿಸುತ್ತದೆ. ಜಿಲ್ಲೆಯಲ್ಲಿ ಐದು ಲಕ್ಷ ಎಕ್ರೆಗಳಿಗೂ ಹೆಚ್ಚು ಪ್ರದೇಶವು ಕಾಡುಗಳಿಂದ ತುಂಬಿಕೊಂಡಿದೆಯಲ್ಲದೆ ಮೂರೂವರೆ ಲಕ್ಷ ಎಕ್ರೆಗಳಷ್ಟು ವಿವಿಧ ಜಾತಿಯ ಮರಮಟ್ಟುಗಳನ್ನೊಳಗೊಂಡ ತೋಟಗಳು ಇವೆ. ನಮ್ಮ ಜಿಲ್ಲೆಯಲ್ಲದೆ ನೆರೆಯ ಮಲಬಾರು, ಕೊಯಮುತ್ತೂರು, ಮಧುರೆ, ತಿರುನೆಲ್ವೇಲಿ ಮುಂತಾದ ಜಿಲ್ಲೆಗಳಲ್ಲಿ ಸುಲಭದಲ್ಲಿ ಮಾರಾಟ ಮಾಡಬಲ್ಲ ಸುಮಾರು ೪೦ ಜಾತಿಯ ಮರಗಿಡಗಳೂ ಮೋಪುಗಳೂ ಬೆಳೆಯುತ್ತವೆ. ಮನೆಗಳನ್ನು ಕಟ್ಟುವುದಕ್ಕೆ, ಕುರ್ಚಿ ಮೇಜು ಮತ್ತಿತರ ಗೃಹೋಪಕರಣಗಳನ್ನು ತಯಾರಿಸುವುದಕ್ಕೆ, ರೈಲ್ವೆ ಸ್ಲೀಪರುಗಳಾಗಿ ಉಪಯೋಗಿಸುವುದಕ್ಕೆ ಉಪಯುಕ್ತವಾದ ಈ ಮೋಪುಗಳು ಬಹಳ ಗಟ್ಟಿಯಾಗಿವೆಯಲ್ಲದೆ ತಲೆಮಾರುಗಳ ವರೆಗೆ ಕೆಡದೆ ಬಾಳಿಕೆ ಬರುತ್ತವೆ.

ನಟ್ಟು ಬೆಳೆಸಿದ ವೃಕ್ಷ

ಮರಗಳಲ್ಲೆಲ್ಲ ತೇಗು ಶ್ರೇಷ್ಠವಾದ ಮೋಪು—ದಕ್ಷಿಣ ಕನ್ನಡ ಹಾಗು ಮಲಬಾರುಗಳ ಅರಣ್ಯ ಪ್ರದೇಶಗಳಲ್ಲಿ ಇದು ಧಾರಾಳವಾಗಿ ಬೆಳೆಯುತ್ತದೆ. ನೂರು ಅಡಿಯಷ್ಟು ಎತ್ತರ ಹಾಗು ಐದು ಹತ್ತು ಅಡಿಯಷ್ಟು ಸುತ್ತಳತೆಯನ್ನು ಹೊಂದಿದ ದೆವ್ವದಂಥ ತೇಗಿನ ಮರಕ್ಕೆ ಗೆದ್ದಲು ಹಿಡಿಯುವುದೇ ಇಲ್ಲ—ಈ ವಿಶಿಷ್ಟ ಗುಣವು ಮರದ ಯೋಗ್ಯತೆಯನ್ನು ಬಹಳವಾಗಿ ಅಧಿಕಗೊಳಿಸಿದೆ. ಸಾಮಾನ್ಯವಾಗಿ ಒಂದು ತೇಗಿನ ಮರವು ಒಂದು ಸಾವಿರ ರೂಪಾಯಿಯಷ್ಟು ಬೆಲೆಬಾಳುತ್ತದೆ. ತೇಗಿನ ಮರದ ಉಪಯುಕ್ತತೆಯನ್ನು ಕಂಡುಕೊಂಡ ಸರಕಾರವು ೧೮೪೦ನೇ ಇಸವಿಯಷ್ಟು ಹಿಂದೆಯೇ ನೀಲಂಬೂರಿನಲ್ಲಿ ತೇಗಿನ ತೋಟಗಳನ್ನು ಶಾಸ್ತ್ರೀಯ ರೀತಿಯಿಂದ ಕೃಷಿ ಮಾಡಲು ಹವಣಿಸಿತು. ವಾಸ್ಕೋಡಿಗಾಮನು ಕೇರಳದಲ್ಲಿ ಇಳಿಯುವುದಕ್ಕೆ ಎಷ್ಟೋ ಶತಮಾನಗಳ ಮುಂಚೆಯೇ ಪಡುಕರಾವಳಿಯ ತೇಗಿನ ಕೀರ್ತಿಯು ಅರೇಬಿಯಾ, ಐಗುಪ್ತ, ಇಟಲಿ ಮತ್ತು ಗ್ರೀಸ್ ಮುಂತಾದ ದೇಶಗಳಲ್ಲಿ ಹಬ್ಬಿ ಅಲ್ಲಿಯ ಗಿರಾಕಿಗಳನ್ನು ಆಕರ್ಷಿಸಿತ್ತು. ತೇಗಿನ ತೋಟಗಳ ಕೃಷಿಯನ್ನು ಪ್ರೋತ್ಸಾಹಿಸುವುದಕ್ಕೆ ಅದಕ್ಕಾಗಿ ಬಂದ ಬೇಡಿಕೆಯೇ ಹೇತು. ಸಾಮಾನ್ಯವಾಗಿ ಒಂದು ಮರವು ಬೆಳೆದು ಮೋಪಿಗೋಸ್ಕರ ಕಡಿಯುವುದಕ್ಕೆ ಎಪ್ಪತ್ತು ವರ್ಷಗಳು ಬೇಕಾಗುತ್ತವೆ. ಆದರೆ ಪ್ರಾರಂಭದ ಆರೇಳು ವರ್ಷಗಳ ಬಳಿಕ ಅಡ್ಡತಿಡ್ಡವಾಗಿ ಬೆಳೆಯುವ ಕೊಂಬೆಗಳನ್ನೆಲ್ಲ ಕತ್ತರಿಸಿ, ಅವುಗಳನ್ನು ಉರುವಲಿಗಾಗಿಯೂ ಇತರ ಉದ್ದೇಶಗಳಿಗಾಗಿಯೂ ಬಳಸಬಹುದು; ಮಾರಾಟಮಾಡಲೂ ಸಾಧ್ಯ. ಸರಕಾರದವರು ೫೦ ಅಥವಾ ೭೫ ರೂಪಾಯಿದಳ ಗೇಣಿಯ ಮೇಲೆ ಬಿಟ್ಟುಗೊಟ್ಟ ಕುಮರಿಗಳ ಮೇಲೆ ತೇಗಿನಸಸಿಗಳನ್ನು ನೆಟ್ಟು ತೋಟವನ್ನು ಬೆಳೆಸುವುದು ವಾಡಿಕೆ.--ಈ ತೋಟಗಳು ಬಂಡವಾಳದ ಮೇಲೆ ಸಾಲಿಯಾನ ಶೇಕಡಾ ಆರೂಕಾಲರಷ್ಟು ಬಡ್ಡಿಯನ್ನು ಸಂಪಾದಿಸುತ್ತವೆಂದು ತಿಳಿದು ಬರುತ್ತದೆ. ಇನ್ನು ಹತ್ತು ಹದಿನೈದು ವರ್ಷಗಳಲ್ಲಿ ವೈನಾಡು ಮತ್ತಿತರ ಕಡೆಗಳಲ್ಲಿ ಬೆಳೆಸಿದ ತೋಟಗಳು ಪ್ರಬುದ್ಧಾವಸ್ಥೆಯನ್ನು ಮುಟ್ಟುತ್ತವೆ; ಆಗ ನಮ್ಮ ರಾಜ್ಯದ ತೇಗಿನ ಉತ್ಪಾದನೆಯು ಮೂರು ಪಾಲಿನಷ್ಟು ಹೆಚ್ಚುತ್ತದೆ. ತೇಗಿನಷ್ಟು ಉಪಯುಕ್ತವಲ್ಲದಿದ್ದರೂ ಅಮೂಲ್ಯವಾದ ಗಂಧದ ಮರಕ್ಕೂ ಮದ್ರಾಸು ರಾಜ್ಯವು ಹೆಸರುವಾಸಿಯಾಗಿರುತ್ತದೆ. ವಿಶ್ವದಲ್ಲಿ ಗಂಧದ ಮರಗಳ ಮಟ್ಟಿಗೆ ಭಾರತವನ್ನೇ ಆಶ್ರಯಿಸಬೇಕಾಗುವುದು- ಇಂಥದರಲ್ಲಿ ಮದ್ರಾಸು ರಾಜ್ಯವು ಅರೆವಾಸಿಯಷ್ಟು ಗಂಧದ ಮರವನ್ನು ಬೆಳೆಸುತ್ತದೆಂದರೆ ಅಭಿಮಾನವಾಗುತ್ತದೆ. ಉತ್ತರ ಆರ್ಕಾಟು, ಸೇಲಂ, ಕೊಯಮುತ್ತೂರು, ನೀಲಗಿರಿ ಜಿಲ್ಲೆಗಳಲ್ಲಿ ಗಂಧದ ಮರವು ಬೆಳೆಯುತ್ತದೆ. ಇಲ್ಲಿಂದ ಉತ್ಪಾದಿಸಲ್ಪಡುವ ೬೦೦ ಟನ್ನು ಮರವು ವರ್ಷಕ್ಕೆ ೨೦ ಲಕ್ಷ

[೧೧ನೇ ಪುಟ ನೋಡಿರಿ]

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಜಾಗತಿಕ ಸಂಸ್ಥೆಗಳಿಂದ ತಾಂತ್ರಿಕ ಸಹಾಯ

ಏಶ್ಯಾಕ್ಕೂ ಭಾರತಕ್ಕೂ ಸಂದ ಮೊತ್ತವೇ ಹೆಚ್ಚು

ಸಂಯುಕ್ತ ರಾಷ್ಟ್ರ ಸಂಘದ ಒಳಗೂ ಹೊರಗೂ ನಡೆಯುವ ರಾಜಕೀಯ ಚಟುವಟಿಕೆಗಳು ಸಾಮಾನ್ಯವಾಗಿ ಎಲ್ಲರಿಗೂ ದೈನಿಕ ಪತ್ರಿಕೆಗಳ ಮೂಲಕವಾಗಿ ಗೊತ್ತಾಗುತ್ತವೆ. ಆದರೆ ರಾಷ್ಟ್ರ ಸಂಘವು ಮಾನವತೆಗೆ ನೆರವಾಗುವ ಇತರ ಅನೇಕ ಸಂಸ್ಥೆಗಳ ಕೇಂದ್ರ ಸ್ಥಾನವಾಗಿದ್ದುಕೊಂಡು ನಡೆಸುವ ಪ್ರಯತ್ನಗಳು ಸಾಕಷ್ಟು ಪ್ರಸಿದ್ಧಿಯನ್ನು ಹೊಂದಿಲ್ಲ. ರಾಜಕೀಯ ರಂಗದಲ್ಲಿ ಕಂಡು ಬರುವ ಜಗಳ, ಭಿನ್ನಾಭಿಪ್ರಾಯ ಹಾಗು ವೈಮನಸ್ಸುಗಳು ಅಭಿವೃದ್ಧಿ ಪ್ರಯತ್ನಗಳನ್ನು ಕಾರ್ಯಗತಗೊಳಿಸಬೇಕೆಂಬ ಘನೋದ್ದೇಶಕ್ಕೇನೂ ಆತಂಕವನ್ನು ತಂದೊಡ್ಡಿಲ್ಲ—ಇದು ನಮ್ಮ ಸುದೈವ. ೧೯೫೩ನೇ ಇಸವಿಯಲ್ಲಿ ರಾಷ್ಟ್ರಸಂಘದ ಅಧೀನ ಸಂಸ್ಥೆಗಳು ಬೇರೆ ಬೇರೆ ದೇಶಗಳಿಗೆ ನೀಡಿದ ತಾಂತ್ರಿಕ ಸಹಾಯದ ವರದಿಯೊಂದು ಇದೇ ೨೪ನೇ ದಿನಾಂಕ ಪ್ರಕಟಗೊಂಡಿದೆ. ೩ನೇ ತಾರೀಕಿನಂದು ಈ ವರದಿಯು ರಾಷ್ಟ್ರ ಸಂಘದ ಆರ್ಥಿಕ ಹಾಗು ಸಾಮಾಜಿಕ ಮಂಡಳದಿಂದ ಪರಾಮರ್ಶಿಸಲ್ಪಡುತ್ತದೆ. ಈ ವರದಿಯಲ್ಲಿ ಹೇಳಿದಂತೆ, ಸಂಯುಕ್ತ ರಾಷ್ಟ್ರ ಸಂಘವು ನೀಡಿದ ತಾಂತ್ರಿಕ ಸಹಾಯವನ್ನು ಅತಿ ಹೆಚ್ಚು ಪ್ರಮಾಣದಲ್ಲಿ ಪಡೆದ ರಾಷ್ಟ್ರಗಳಲ್ಲಿ ಭಾರತವು ಎರಡನೆಯ ಸ್ಥಾನವನ್ನು ಪಡೆಯುತ್ತದೆ. ಈಗ ನಡೆಯುವ ೧೯೫೪ನೇ ಇಸವಿಯಲ್ಲಿ ನಮ್ಮ ಎಲ್ಲ ಯೋಜನೆಗಳೂ ಕ್ರಮಬದ್ಧವಾಗಿ ಮುಂದುವರಿದರೆ, ಈ ಸಲವೂ ಸಂಯುಕ್ತ ರಾಷ್ಟ್ರ ಸಂಘದಿಂದ ನಾವು ದೊಡ್ಡ ಪ್ರಮಾಣದ ಸಹಾಯವನ್ನು ಪಡೆಯುತ್ತೇವೆ. ಸಹಾಯವನ್ನು ಪಡೆದಂತೆಯೇ, ರಾಷ್ಟ್ರ ಸಂಘಕ್ಕೆ ದೊಡ್ಡ ಪ್ರಮಾಣದಲ್ಲಿ ದೇಣಿಗೆಯನ್ನು ಸಲ್ಲಿಸಿದ ರಾಷ್ಟ್ರಗಳಲ್ಲಿಯೂ ಭಾರತವು ಒಂದಾಗಿದೆ—ಸಂಯುಕ್ತರಾಷ್ಟ್ರ ಸಂಘದ ತಾಂತ್ರಿಕ ಸಹಾಯ ಮಂಡಳ, ಅಂತಾರಾಷ್ಟ್ರೀಯ ಕೂಲಿಕಾರ ಸಂಸ್ಥೆ, ಆಹಾರ ಹಾಗು ವ್ಯವಸಾಯ ಸಂಸ್ಥೆ, ಜಾಗತಿಕ ಆರೋಗ್ಯ ಸಂಸ್ಥೆ, ಶೈಕ್ಷಣಿಕ, ವೈಜ್ಞಾನಿಕ ಹಾಗು ಸಾಂಸ್ಕೃತಿಕ ಸಂಸ್ಥೆ ಮತ್ತಿತರ ವಿಶೇಷ ಮಂಡಳಗಳ ಮುಖಾಂತರ ಅಂತಾರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಐವತ್ತಕ್ಕಿಂತಲೂ ಹೆಚ್ಚು ತಜ್ಞರನ್ನು ಒದಗಿಸಿದ ದೇಶಗಳಲ್ಲಿ ಭಾರತದ ಗಣನೆಯಾಗುತ್ತದೆ.

ಏಶ್ಯದ ಪಾಲೇ ದೊಡ್ಡದು

ವರದಿ ವರ್ಷದಲ್ಲಿ ಇಂತಹ ತಾಂತ್ರಿಕ ಸಹಕಾರವು ಅತ್ಯಂತ ಉಪಯುಕ್ತವೆಂದು ಎಲ್ಲೆಡೆಗಳಿಂದಲೂ ಸ್ವಾಗತ ದೊರೆತದ್ದು ಕಂಡು ಬಂತು. ಬೇಡಿಕೆಗಳು ಹೆಚ್ಚುಹೆಚ್ಚಾಗಿ ಬರತೊಡಗಿದವು, ರಾಷ್ಟ್ರ ಸಂಘದ ಸಾಮಾನ್ಯ ಸಭೆಯೂ ಆರ್ಥಿಕ ಹಾಗು ಸಾಮಾಜಿಕ ಮಂಡಳವೂ ತಾಂತ್ರಿಕ ಸಹಕಾರ ನೀಡುವ ಕಾರ್ಯಕ್ರಮಕ್ಕೆ ತಮ್ಮ ಸಂಪೂರ್ಣ ಬೆಂಬಲವನ್ನು ಪ್ರಕಟಿಸಿ, ಪ್ರೋತ್ಸಾಹ ಕೊಟ್ಟವು. ಇವೆಲ್ಲಕ್ಕಿಂತಲೂ ಹೆಚ್ಚಾಗಿ ಮಾನವತೆಯ ಸೇವೆ ಮಾಡುವ ಈ ಅವಕಾಶವನ್ನು ಸದುಪಯೋಗಗೊಳಿಸಲು ಹೆಚ್ಚು ಸಂಖ್ಯೆಯಲ್ಲಿ ರಾಷ್ಟ್ರಗಳು ತಮ್ಮ ದೇಣಿಗೆಯನ್ನು ನೀಡಲು ಮುಂಬಂದವು. ಹೀಗಿದ್ದರೂ ೧೯೫೩ನೇ ವರ್ಷ ನೀಡಿದುದಕ್ಕಿಂತ ಕಳೆದ ವರ್ಷದ ತಾಂತ್ರಿಕ ಸಹಕಾರದ ಮೊತ್ತವು ತುಸು ಕಡಿಮೆಯಾಯಿತು; ಆರ್ಥಿಕ ವ್ಯವಸ್ಥೆಯನ್ನು ಮುಂಜಾಗರೂಕತೆಯಿಂದ ಕೈಗೊಳ್ಳುವ ಕ್ರಮಗಳೇ ಮೊತ್ತದ ಪ್ರಮಾಣವನ್ನು ತಗ್ಗಿಸಿದವು. ಆದರೂ ಕಳೆದ ವರ್ಷಾಂತ್ಯದಲ್ಲಿ ಉತ್ತಮ ರೀತಿಯ ಕಾರ್ಯ ವಿಧಾನವನ್ನು ಹಾಕಿಕೊಡಲಾಗಿದ್ದು ಈ ವರ್ಷ ಇದರಿಂದ ಲಾಭವನ್ನು ನಿರೀಕ್ಷಿಸಬಹುದು. ಕಳೆದ ವರ್ಷ ನೀಡಲಾದ ೨,೨೪,೧೦,೦೦೦ ಡಾಲರುಗಳ ತಾಂತ್ರಿಕ ಸಹಾಯದಲ್ಲಿ ಏಶ್ಯಾ ಮತ್ತು ದೂರ ಪೂರ್ವದ ರಾಷ್ಟ್ರಗಳಿಗೆ ನೂರಕ್ಕೆ ಮೂವತ್ತಕ್ಕಿಂತಲೂ ಹೆಚ್ಚು ಅಂಶವು ಸಂದಿತು. ಈ ವರ್ಷ ಯುರೋಪ್ಯ ರಾಷ್ಟ್ರಗಳಿಗೆ ನೀಡುವ ಸಹಾಯವನ್ನು ತಗ್ಗಿಸಿ, ಏಶ್ಯಾಕ್ಕೆ ಕೊಡುವ ನೆರವನ್ನು ಇನ್ನೂ ೪% ಏರಿಸಲಾಗುವುದು. ಈ ವರ್ಷದ ಕಾರ್ಯಕ್ರಮ ಪಟ್ಟಿಯಲ್ಲಿ ಪ್ರತಿಯೊಂದೂ ಯೋಜನೆಗೆ ಇಬ್ಬರು ತಜ್ಞರ ಸಹಕಾರ ಅಗತ್ಯ ಬೇಳುವ ೮೦೦ ಯೋಜನೆಗಳಲ್ಲದೆ, ಪ್ರತಿಯೊಂದಕ್ಕೂ ಒಬ್ಬ ಉನ್ನತ ಸದಸ್ಯನ ಅಗತ್ಯ ಕೋರಿಸುವ ಬೇರೆ ೧೧೫ ಯೋಜನೆಗಳೂ ಇವೆ. ಆರೋಗ್ಯ, ಶಿಕ್ಷಣ, ನಾಗರಿಕ ಆಕಾಶಯಾನ ಮುಂತಾದವುಗಳಲ್ಲಿ ಇಬ್ಬರು ತಜ್ಞರು ಸಾಕಾಗುವುದಿಲ್ಲ. ಆದರೂ ಐದು ಅಥವಾ ಹತ್ತು ಮಂದಿ ಪರಿಣತರನ್ನೊಳಗೊಂಡ ಯೋಜನೆಗಳು ಕೆಲವೇ ಇರುತ್ತವೆ.

ಹಿಂದುಳಿದವರಿಗೆ ತರಬೇತಿ

ಹಿಂದುಳಿದ ದೇಶಗಳಲ್ಲಿ ಅಲ್ಲಿಯ ನಾಗರಿಕರನ್ನೇ ಯೋಗ್ಯ ತರಬೇತಿಯನ್ನು ಕೊಟ್ಟು ಆಯಾಕ್ಷೇತ್ರದ ಯೋಗಕ್ಷೇಮ ನೋಡಿಕೊಳ್ಳುವಂತೆ ಸಿದ್ಧಗೊಳಿಸುವ ಗುರುತರವಾದ ಹೊಣೆಗಾರಿಕೆಯು ಸಂಯುಕ್ತ ರಾಷ್ಟ್ರ ಸಂಘದಿಂದ ನೀಡಲಾಗುವ ತಜ್ಞರ ಮೇಲಿದೆ. ಇಂಡೋನೇಶಿಯಾದ ಆಕಾಶಯಾನ ಕಾಲೇಜಿನಲ್ಲಿ ಪರಿಣತರು ರೇಡಿಯೋ ಆಪರೇಟರ, ರೇಡಿಯೋ ಯಂತ್ರ ತಜ್ಞ, ಉಡ್ಡಾಣ ನಿಯಂತ್ರಣ, ನಿಲ್ದಾಣ ವ್ಯವಸ್ಥೆ ಮುಂತಾದ ವಿವಿಧ ಅಂಗಗಳಲ್ಲಿ ತರಬೇತಿಯನ್ನು ಕೊಟ್ಟರು. ಕಾರ್ಖಾನೆಗಳಿಂದ ಚುನಾಯಿತರಾದ ಸದಸ್ಯರಿಗೂ ಬೇರೆ ಕೆಲವು ಸಿಬ್ಬಂದಿಗಳಿಗೂ ವಸ್ತ್ರವನ್ನು ಕುಂಡು ಮಾಡುವುದು, ಕೈಲ್ವೆ ನಿರ್ಮಾಣ ಶಾಲೆಯಲ್ಲಿ ಕೆಲಸ ಮಾಡುವುದು, ಶೀತಕಕಾರಿ ಯಂತ್ರಗಳನ್ನು ವ್ಯವಸ್ಥಿತವಾಗಿ ಇಡುವುದು ಮುಂತಾದ ತರಬೇತಿ ಕೊಡುವ ಉಪಕ್ರಮವನ್ನು ಉತ್ಪಾದನಾ ಸಂಸ್ಥೆಯೊಂದು ನಿರ್ವಹಿಸಿತು. ಪಾಕಿಸ್ತಾನದಲ್ಲಿ ಗ್ರಾಮಮಟ್ಟದ ಆರೋಗ್ಯ ಸಂದರ್ಶಕರನ್ನು ಸಿದ್ಧಗೊಳಿಸುವ ಕೆಲಸ ನಡೆದರೆ, ಭಾರತದ ಖರಗಪುರದಲ್ಲಿರುವ ತಾಂತ್ರಿಕ ಸಂಸ್ಥೆಯಲ್ಲಿ ಅಣೆಕಟ್ಟುಗಳ ನಿರ್ಮಾಣ ಮತ್ತಿತರ ಇಂಜಿನಿಯರಿಂಗ ಕೆಲಸಗಳಲ್ಲಿ ತಜ್ಞರು ತರಬೇತಿಯನ್ನೂ ಸಹಾಯವನ್ನೂ ನೀಡಿದರು. ಇರಾನು ಮತ್ತು ಪಾಕಿಸ್ತಾನಗಳಲ್ಲಿ ನೀರಿನ ಸದುಪಯೋಗ ವಿಷಯದ ಕುರಿತಾಗಿಯೂ ಭಾರತದಲ್ಲಿ ಸಿಂಧ್ರಿಯ ಗೊಬ್ಬರ ಕಾರ್ಖಾನೆಯನ್ನು ಚೆನ್ನಾಗಿ ನಡೆಸುವುದರ ಕುರಿತಾಗಿಯೂ ತಜ್ಞರಿಂದ ಸಲಹೆಗಳೂ ಸಹಾಯವೂ ದೊರಕಿರುತ್ತವೆ. ಕೊಸ್ಟರೀಕಾದಲ್ಲಿ ನಾಗರಿಕ ಆಡಳಿತವನ್ನು ಸಾರ್ವಜನಿಕ ಆಡಳಿತ ವಿಷಯದಲ್ಲಿ ಉತ್ತಮ ಮಾಹಿತಿಯನ್ನೊದಗಿಸುವ ಸಂಸ್ಥೆಯೊಂದು ತಜ್ಞರ ಪ್ರಭುದಿಂದ ನಡೆಯುತ್ತದೆ. ಕೃಷಿ ವಿಸ್ತರಣಾ ಕಾರ್ಯದಲ್ಲಿ ತರಬೇತಿಯನ್ನು ಬೀರಟಿನಲ್ಲಿ ಒದಗಿಸಲಾದರೆ, ಕೃಷಿಗೆ ಸಂಬಂಧಿಸಿದ ಅಂಕೆಸಂಖ್ಯೆಗಳನ್ನು ಕಲೆ ಹಾಕುವ ಕೆಲಸದಲ್ಲಿ ಮಾರ್ಗದರ್ಶನವನ್ನು ಲಾಂಗಕಾಕಿನಲ್ಲಿ ನೀಡಲಾಯಿತು. ಎಷ್ಟೋ ದೇಶಗಳಲ್ಲಿ ಮುಂದಿನ ಕಾರ್ಯಕ್ರಮಗಳನ್ನು ರೂಪಿಸುವುದಕ್ಕೆ ಅಗತ್ಯವೆನಿಸಿದ ಮೂಲ ಸಂಗತಿಗಳ ಕುರಿತಾದ ಮಾಹಿತಿಯೇ ಲಭ್ಯವಿಲ್ಲ—ಈ ಆರೋಗ್ಯ ಶಿಕ್ಷಣ ಕೊಡುವ ಏರ್ಪಾಡು ಆಯಿತು. ಇಷ್ಟೆಲ್ಲ ಕೆಲಸಗಳನ್ನು ನೆರವೇರಿಸುವಾಗ ಒಂದು ಸಂಗತಿಯನ್ನು ಮರೆಯಬಾರದು-ಪ್ರತಿಯೊಂದೂ ದೇಶದ ಆವಶ್ಯಕತೆಗಳು ಭಿನ್ನಭಿನ್ನವಾಗಿದ್ದು, ಆಯಾ ದೇಶದ ಸಮಸ್ಯೆಗಳನ್ನು ದೃಷ್ಟಿಯಲ್ಲಿಟ್ಟು ಕಾರ್ಯ... ವಿಧಾನವು ಬಳಕೆಯಲ್ಲಿ ಬರಬೇಕು. ತೋರ ಮಟ್ಟಿಗೆ ಉತ್ಪಾದನೆಯನ್ನು ಹೆಚ್ಚಿಸುವುದೂ ಸಾಧನ ಸಂಪತ್ತುಗಳ ಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವುದೂ ನಮ್ಮ ಉದ್ದೇಶವೆಂದು ಹೇಳಬಹುದಾದರೂ ರಾಷ್ಟ್ರೀಯ ಸಮಸ್ಯೆಯ ವಿವೇಚನೆಯೂ ವಸ್ತುಸ್ಥಿತಿಯ ಆಧಾರದ ಮೇಲೆಯೇ ನಡೆಯುವುದಗತ್ಯ ಎಂತಲೇ ಭಾರತದಲ್ಲಿ ಜವುಳಿ ಯಂತ್ರಗಳಲ್ಲಿ ಉತ್ಪಾದನೆ ಹೆಚ್ಚಿಸುವ ಪ್ರಯತ್ನ ಕಂಡುಬಂದರೆ, ಯುಗೊಸ್ಲಾವಿಯಾದಲ್ಲಿ ಕಬ್ಬಿಣದ ಅದುರಿನ ಯೋಗ್ಯತೆಯನ್ನು ಅಧಿಕ ಕಾರ್ಯಕ್ಷಮತೆಯಿಂದ ನಿಯಂತ್ರಿಸುವ ಲಿಬಿಯಾದಲ್ಲಿ ಚರ್ಮವನ್ನು ಕೈಗಾರಿಕೆಗಳಿಗೆ ಉಪಯುಕ್ತವೆನಿಸುವಂತೆ ಶುದ್ಧೀಕರಿಸುವ ಹಾಗು ಇರಾಕಿನಲ್ಲಿ ಖರ್ಜೂರದ ಸಸ್ಯ(?)ನ ವಿಷಯದಲ್ಲಿ ಸಂಶೋಧನೆಗಳನ್ನು ನಡೆಸುವ ಪ್ರಯತ್ನಗಳು ದೃಷ್ಟಿಗೋಚರವಾಗುತ್ತವೆ.

[೧೦ನೇ ಪುಟ ನೋಡಿರಿ]

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಬಿಂದ ಪುಷ್ಟಿಯನ್ನು ಕಲಗಿಸುವದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಮುಟು ದೋಷಗಳನ್ನು, ಬಿಳಿ ಸೂರೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮುಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ನೆಹರೂ ಚೌ ಎನ್ ಲಾಯರ ನಡುವೆ

ಸನ್ಮಾನ್ಯ ಅತಿಥಿಗಳಿಗೆ ಹೊಸದೆಹಲಿಯಲ್ಲಿ ಸಂಭ್ರಮದ ಸ್ವಾಗತ

ಚೌ ಎನ್ ಲಾಯರ ಭೇಟಿ

ಕಳೆದ ವಾರ ಚೀನದ ಪ್ರಧಾನ ಮಂತ್ರಿ ಚೌ ಎನ್ ಲಾಯರು ನೆಹರೂರವರ ಆಹ್ವಾನವನ್ನು ಮನ್ನಿಸಿ ಭಾರತಕ್ಕೆ ನೀಡಿದ ಸಂದರ್ಶನವು ಎರಡು ಸಾವಿರ ವರ್ಷಗಳಷ್ಟು ಪುರಾತನವಾದ ಚೀನ-ಭಾರತ ಸಂಬಂಧದಲ್ಲಿ ಒಂದು ಮೈಲುಗಲ್ಲಾಗಿದೆ; ಜಾಗತಿಕ ಇತಿಹಾಸದಲ್ಲಿಯೂ ಈ ಘಟ್ಟನೆಯು ಚಿರಸ್ಥಾಯಿಯಾಗಿ ಉಳಿಯುವುದು ನಿಶ್ಚಯ. ತನ್ನನ್ನು ಕಾಣಲು ಬಂದ ಚೀನದ ಪ್ರಧಾನ ಮಂತ್ರಿಗಳನ್ನು ಸ್ವಾಗತಿಸುತ್ತಾ ಉಪ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರು ಚೀನದ ಮಹಾನುಭಾವರು ಭಾರತಕ್ಕೆ ಈ ಹಿಂದೆಯೂ ಸಂದರ್ಶನವನ್ನು ಕೊಟ್ಟಿದ್ದಾರೆಂದು ಹೇಳಿ, ಫಾಹಿಯಾನ, ಹ್ಯೂಯೆನ್‌ತ್ಸಾಂಗರನ್ನು ಉದಾಹರಿಸಿದರು. ಈ ಯಾತ್ರಿಕರು ಭಾರತದ ಬಗೆಗೆ ಏನು ಬರೆದರೆಂಬುದನ್ನು ಚೀನದ ಮಕ್ಕಳಿಗೆ ಶಾಲೆಗಳಲ್ಲಿ ಕಲಿಸಲಾಗುತ್ತದೆಯೆಂದು ಚೌ ಎನ್ ಲಾಯರು ಉಪ ರಾಷ್ಟ್ರಪತಿಗಳಿಗೆ ಉತ್ತರಿಸುತ್ತಾ ತಿಳಿಸಿದರು. ಉಭಯ ರಾಷ್ಟ್ರಗಳೊಳಗೆ ಸ್ಥಿರವಾದ ಮೈತ್ರಿಯು ಪ್ರಾಚೀನ ಕಾಲದಿಂದಲೂ ಇತ್ತು—ತನ್ನ ಉತ್ತರ ಹಾಗು ಪೂರ್ವ ದಿಶೆಯಲ್ಲಿ ೧೨೦೦ ಮೈಲುಗಳ ಉದ್ದಕ್ಕೆ ಚೀನೀ ಪ್ರದೇಶದೊಡನೆ ಮೇರೆಯನ್ನು ಹೊಂದಿದ ಭಾರತವು ಚೀನೀ ಸರಕಾರವನ್ನು ಮೈತ್ರಿ ಭಾವದಿಂದ ಕಾಣಲು ಆಶಿಸುತ್ತಿರುವುದು ಸಹಜ. ಇತಿಹಾಸದಲ್ಲಿ ಹಿಂದೆಂದೂ ನಮ್ಮೆರಡು ದೇಶಗಳೊಳಗೆ ಘರ್ಷಣೆ ನಡೆದದ್ದಿಲ್ಲ—ಈಚೆಗೆ ಟಿಬೇಟಿನ ಕುರಿತು ಚೀನದೊಡನೆ ಮಾಡಿಕೊಂಡ ಒಡಂಬಡಿಕೆಯನ್ನು ನೋಡಿದರೆ, ಮುಂದೆಯೂ ನಾವು ಸ್ನೇಹಿತರಂತೆ, ಒಳ್ಳೆಯ ನೆರೆಕರೆಯವರಂತೆ, ಕಚ್ಚಾಡಿಕೊಳ್ಳದೆ ಪ್ರೀತಿಯಿಂದ ಬಾಳುವುದು ಸಾಧ್ಯವೆನಿಸುತ್ತದೆ. ಚೌ ಎನ್ ಲಾಯರು ಹೊಸ ದೆಹಲಿಗಿತ್ತ ಭೇಟಿಯು ಈ ಆಶೆಯು ಸಫಲಗೊಳ್ಳಲಿದೆಯೆಂದು ಘೋಷಿಸುತ್ತದೆ.

ನಗರ ಪರಿಭ್ರಮಣ

ಚೀನದ ಪ್ರಧಾನ ಮಂತ್ರಿಗಳು ಶುಕ್ರವಾರ ಮಧ್ಯಾಹ್ನ ದಿನದ ದೆಹಲಿಗೆ ಆಗಮಿಸಿ, ನೇಪಾಳದ ಪ್ರಾತಃಕಾಲ ರಂಗೂನಿನ ಮಾರ್ಗವಾಗಿ ಪೀಕಿಂಗಿಗೆ ಮರಳಲು ಹೊಸದೆಹಲಿಯಿಂದ ಹೊರಟರು. ಮೂರು ದಿನಗಳ ತಮ್ಮ ಭಾರತ ವಾಸ್ತವ್ಯ ಕಾಲದಲ್ಲಿ ಅವರು ಪ್ರಧಾನಿ ನೆಹರೂರೊಡನೆ ಹನ್ನೆರಡು ತಾಸುಗಳನ್ನು ಸಮಯ ಸಮಾಲೋಚನೆಗಳನ್ನು ನಡೆಸಿದರಲ್ಲದೆ, ತಮ್ಮ ಗೌರವಾರ್ಥ ಏರ್ಪಡಿಸಲಾದ ಸಮಾರಂಭಗಳಲ್ಲಿ ಭಾಗವಹಿಸಿದರು; ದೆಹಲಿಯನ್ನು ಸುತ್ತಾಡಿಕೊಂಡು ಬಂದರು; ಆಗ್ರಾಕ್ಕೆ ವಿಮಾನ ಮೂಲಕ ಹಾರಿ ಹೋಗಿ, ತಾಜಮಹಾಲಿನ ಸೌಂದರ್ಯವನ್ನು ವೀಕ್ಷಿಸಿ, ತೃಪ್ತಿಹೊಂದಿದರು. ಭಾರತದ ರಾಜಧಾನಿಯ ಐತಿಹಾಸಿಕ ಅವಶೇಷಗಳನ್ನು ನೋಡಲೆಂದು ಚೌ ಎನ್ ಲಾಯರು ತಮ್ಮ ಪರಿವಾರದೊಂದಿಗೆ ಹೊರಟಾಗ, ದಾರಿಯುದ್ದಕ್ಕೂ ಭಾರತೀಯ ಜನತೆಯು ಅವರಿಗೆ ಸಂಭ್ರಮದ ಸ್ವಾಗತವನ್ನು ನೀಡಿತು. ದಿಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ಬ್ರಹ್ಮ ಪ್ರಕಾಶರೂ ಆರೋಗ್ಯ ಮಂತ್ರಿ ಶ್ರೀಮತಿ ಸುಶೀಲಾ ನಯ್ಯರರೂ ಚೀನೀ ಪ್ರಧಾನ ಮಂತ್ರಿಗಳ ಸಂಗಡ ಇದ್ದುಕೊಂಡು ಎಲ್ಲವನ್ನೂ ಅವರಿಗೆ ವಿವರಿಸುತ್ತಿದ್ದರು. "ಜಿಂದಾಬಾದ್" ಎಂಬ ಹರ್ಷೋದ್ಗಾರವು ಸಂಚರಿಸಿದೆಡೆಯಲ್ಲೆಲ್ಲ ಚೌ ಎನ್ ಲಾಯರಿಗೆ ಕೇಳಿಬಂತು. ಮಾರ್ಗದ ಇಕ್ಕೆಲಗಳಲ್ಲಿಯೂ ವಿದ್ಯಾರ್ಥಿಗಳು, ಕೆಲಸದ ಮೇಲೆ ಹೊರಟ ನಾಗರಿಕರು, ಕಚೇರಿಗೆ ಹೊರಟ ಸ್ಟೈಕಲ್ ಸವಾರರು, ಹುಲ್ಲು ಹೊತ್ತುಕೊಂಡಿದ್ದ ಗೌಳಿಗರ ಹೆಣ್ಣು ಮಕ್ಕಳು ಎಲ್ಲರೂ ನಿಂತು ಚೌರವರ ದರ್ಶನ ಪಡೆದುಕೊಂಡರು. ಕಾರಿನಲ್ಲಿದ್ದ ಈ ಮಹಾನುಭಾವರನ್ನು ಮನೆಯೊಳಗಿನ ಹೆಂಗಸರು ನೋಡಲಾಗದಿದ್ದರೂ ಗುಲಾಬಿ ಮತ್ತಿತರ ಪುಷ್ಪಗಳ ಎಸಳನ್ನು ಮನೆಯ ಮೇಲಿನ ಅಟ್ಟದಿಂದ ಕಾರಿನ ಮೇಲೆ ಎಸೆದು ತಮ್ಮ ಸಂತೋಷವನ್ನು ಸೂಚಿಸಿದರು. ಚೌಎನ್‌ಲಾಯರು ಹವಾಮಾನವು ಅಷ್ಟು ಅನುಕೂಲವಿರದಿದ್ದರೂ ೨೩೮ ಅಡಿ ಎತ್ತರದ ಕುತುಬ್ ಮಿನಾರವನ್ನು ಕತ್ತೆತ್ತಿ ಕುತೂಹಲದಿಂದ ನೋಡಿ, ಒಂದು ಅಂತಸ್ತಿನ ವರೆಗೆ ಏರಿ ಹೋದರು. ನಿರಾಶ್ರಿತರು ನೆಲಸಿದ ಮೂಲವೀಯ ನಗರದಲ್ಲಿ ಚೌರನ್ನು ಸ್ವಾಗತಿಸಲು ಸುಂದರವಾದ ಕಮಾನು ರಚಿಸಿ, ದ್ವಾರಕ್ಕೆ ಗಾಂಧೀಜಿಯವರ ಚಿತ್ರವನ್ನು ತೂಗಿದ್ದರು; "ಭಾರತ ಚೀನ ಸ್ನೇಹವು ಚಿರಕಾಲ ಬಾಳಲಿ" ಎಂದೂ ಬರೆದಿದ್ದರು. ಚೀನೀ ಪ್ರಧಾನ ಮಂತ್ರಿಗಳಿಗೆ ಇಲ್ಲಿ ಒಪ್ಪಿಸಲಾದ ಮಾನಪತ್ರದಲ್ಲಿ ನಿರಾಶ್ರಿತರು 'ಚೀನದ ತೇಜಪುಂಜ ನಕ್ಷತ್ರ'ವೆಂದು ಅವರನ್ನು ಸಂಬೋಧಿಸುತ್ತಾ 'ಮಾನವ ಬಂಧುತ್ವವನ್ನು ಸ್ಥಾಪಿಸಲು' ಅವರ ಸಹಕಾರವನ್ನು ಕೋರಿದ್ದರು. ಚೀನದ ಪ್ರಧಾನ ಮಂತ್ರಿಗಳು ಜಮೇತ್ ಮಿಲಿಯಾ ಎಂಬ ಶಿಕ್ಷಣ ಸಂಸ್ಥೆಗೆ ಭೇಟಿ ಕೊಟ್ಟು, ದುಭಾಷಿಯ ಸಹಾಯದಿಂದ ಎಂಟು ವರ್ಷ ವಯಸ್ಸಿನ ಬಾಲಕನೊಬ್ಬನ ಸಂಗಡ ಮಾತುಕತೆ ನಡೆಸಿದರು. ಕಸ್ತೂರ್ಬಾ ನಿಕೇತನದಲ್ಲಿಯೂ ಅವರು ಸ್ವಲ್ಪ ಸಮಯ ಕಳೆದರು. ಇಲ್ಲೆಲ್ಲ ಅವರಿಗೆ ಅಪೂರ್ವ ಕಾಣಿಕೆಗಳು ನೀಡಲಾದುವು.

ಸಂಭ್ರಮದ ಸತ್ಕಾರ

ಆಗ್ರಾಕ್ಕೆ ಅವರು ವಿಮಾನದ ಮೂಲಕ ತೆರಳಿದಾಗ, ನಿಲ್ದಾಣದಿಂದ ಐದು ಮೈಲು ಸಾಗುವ ದಾರಿಯ ಉದ್ದಕ್ಕೂ ಜನರು ನಿಂತು ಮುಗುಳು ನಗೆಯ ಸ್ವಾಗತ ನೀಡಿದರು. ಚೀನ-ಭಾರತಗಳು ಸಹೋದರ ರಾಷ್ಟ್ರಗಳೆಂದು ಜಯಕಾರಗೈದರು. ನಗರದ ಕಾಂಗ್ರೆಸ ಸಮಿತಿಯ ಅಧ್ಯಕ್ಷರು ಸನ್ಮಾನ್ಯ ಅತಿಥಿಗಳನ್ನು ಬರಮಾಡಿಕೊಂಡು ಭಾರತ ಚೀನಗಳು ಜಾಗತಿಕ ಶಾಂತಿಗಾಗಿ ಕೂಡಿಯೇ ನಡೆಯುತ್ತವೆಂದು ಹಾರೈಸಿದರು. ಇದಕ್ಕೆ ಉತ್ತರಿಸುತ್ತಾ ಚೌ ಎನ್ ಲಾಯರು ಉಭಯ ರಾಷ್ಟ್ರಗಳ ನಡುವೆ ಸ್ನೇಹವನ್ನು ಇನ್ನಷ್ಟು ಅಭಿವೃದ್ಧಿಗೊಳಿಸಲು ತಾನು ಶಕ್ಯವಿದ್ದಷ್ಟು ಶ್ರಮಿಸುವುದಾಗಿ ಹೇಳಿದರು. ಆಗ್ರಾ ಸಂದರ್ಶನದ ಸ್ಮರಣಾರ್ಥವಾಗಿ ಚೀನದ ಪ್ರಧಾನ ಮಂತ್ರಿಗಳಿಗೆ ಅಮೃತಶಿಲೆಯಲ್ಲಿ ಕೆತ್ತಿದ ತಾಜಮಹಾಲಿನ ಪ್ರತಿಕೃತಿಯೊಂದನ್ನು ಅರ್ಪಿಸಲಾಯಿತು. ದೆಹಲಿಯ ಕೆಂಪು ಕೋಟೆಯಲ್ಲಿ ಏರ್ಪಡಿಸಿದ ಪೌರ ಸ್ವಾಗತದಲ್ಲಿಯೂ ಚೌ ಭಾಗವಹಿಸಿದರು. ರಾಷ್ಟ್ರಪತಿ ಭವನದಲ್ಲಿ ಏರ್ಪಡಿಸಲಾದ ಭೋಜನ ಸಮಾರಂಭದಲ್ಲಿ ಚೌರವರನ್ನು ರಾಜ ಮರ್ಯಾದೆಯಿಂದ ಗೌರವಿಸಲಾಯಿತು. ಮಂತ್ರಿಗಳು, ವಿದೇಶದ ರಾಯಭಾರಿಗಳು, ಸಚಿವಾಲಯದ ಹಿರಿಯ ಅಧಿಕಾರಿಗಳು, ಸೇನಾಧಿಪತಿಗಳು ಮುಂತಾದವರು ಇಲ್ಲಿ ಉಪಸ್ಥಿತರಿದ್ದರು. ಇಲ್ಲಿ ನೆಹರೂರವರು ಚೀನೀ ಪ್ರಜಾರಾಜ್ಯದ ಅಧ್ಯಕ್ಷ ಮಾವೋರ ಆರೋಗ್ಯ ಲಾಭವನ್ನು ಬಯಸಿದರೆ, ಚೌರವರು ಭಾರತದ ರಾಷ್ಟ್ರಪತಿ ರಾಜೇಂದ್ರರ ಕ್ಷೇಮವನ್ನು ಹಾರೈಸಿದರು. ಈ ಸಂದರ್ಭದಲ್ಲಿ ಪ್ರಧಾನ ಮಂತ್ರಿಗಳು ಮಾತನಾಡುತ್ತಾ ಹದಿನೈದು ವರ್ಷಗಳ ಪೂರ್ವದಲ್ಲಿ ತಾವು ಚೀನಕ್ಕೆ ಹೋದಾಗ ಚೌ ಎನ್ ಲಾಯರನ್ನು ಕಾಣುವ ಆಸೆ ತಳೆದಿದ್ದೆನೆಂದೂ ಆದರೆ ಅಷ್ಟರಲ್ಲಿಯೇ ದ್ವಿತೀಯ ಮಹಾಯುದ್ಧ ತೊಡಗಿದುದರಿಂದ ಭೇಟಿಯು ಅಸಾಧ್ಯವೆನಿಸಿ, ಮರಳಬೇಕಾಯಿತೆಂದೂ ಸ್ಮರಿಸಿ, ಈಗ ಅಂತಹ ಸುಯೋಗ ದೊರೆತುದಕ್ಕೆ ಸಂತೋಷವನ್ನು ವ್ಯಕ್ತಗೊಳಿಸಿದರು. ಉಭಯ ರಾಷ್ಟ್ರಗಳ ಸಂಬಂಧವನ್ನು ಪ್ರಸ್ತಾಪಿಸುತ್ತಾ ಕಳೆದ ಎರಡು ಸಾವಿರ ವರ್ಷಗಳಲ್ಲಿ ನಾವು ನೆರೆ ರಾಷ್ಟ್ರವಾಗಿದ್ದುಕೊಂಡು ಪರಸ್ಪರ ವಿಚಾರ ವಿನಿಮಯ ಮತ್ತು ಸಂಸ್ಕೃತಿ ಸಂವರ್ಧನೆಯಲ್ಲಿ ಸಹಾಯಕರಾಗಿದ್ದೇವೆ; ಉಳಿದ ನೆರೆ ರಾಷ್ಟ್ರಗಳಿಗೂ ಇಂಥ ಲಾಭವನ್ನು ಒದಗಿಸಿಕೊಟ್ಟಿದ್ದೇವೆ ಎಂದರು. ಭಾರತ-ಚೀನಗಳು ತಮ್ಮದೇ ದಾರಿಯನ್ನು ಹಿಡಿದುಕೊಂಡು ರಾಷ್ಟ್ರದ ಏಳಿಗೆಗಾಗಿ ಕೆಲಸ ಮಾಡುತ್ತವೆಂದೂ ರಾಷ್ಟ್ರಗಳು ಬಲಿತು ಬಾಳಬೇಕಾದರೆ ಯುದ್ಧದ ಕೋಲಾಹಲವಿಲ್ಲದ ಶಾಂತಿಮಯ ವಾತಾವರಣ ನೆಲೆಸಬೇಕೆಂದು ಉಭಯ ರಾಷ್ಟ್ರಗಳಿಗೂ ಅನಿಸುವುದೆಂದೂ ನೆಹರೂ ಹೇಳಿದರು. ರಚನಾತ್ಮಕ ಕಾರ್ಯಗಳಲ್ಲಿ ನಾವು ಎಲ್ಲ ಶಕ್ತಿ ಮತ್ತು ಉತ್ಸಾಹಗಳನ್ನು ವ್ಯಯಿಸಬೇಕಾಗಿರುವುದರಿಂದ ವಿಧ್ವಂಸಕ ಕೃತ್ಯಗಳನ್ನು ತಡೆಗಟ್ಟುವ ಆವಶ್ಯಕತೆ ನಮಗನಿಸುವುದೆಂದು ನೆಹರೂ ಅಭಿಪ್ರಾಯಪಟ್ಟರು.

ವಿಶ್ವಶಾಂತಿಯೇ ಉದ್ದೇಶ

ಭಾರತ-ಚೀನ ಸಂಬಂಧವನ್ನು ನೆಹರೂ ವಿವರಿಸಿ, ಟಿಬೇಟಿನ ಕುರಿತು ಮಾಡಿಕೊಂಡ ಒಡಂಬಡಿಕೆ ಜಾಗತಿಕ ಶಾಂತಿಗೆ ತಳಹದಿಯಾಗಬಲ್ಲ ಮಾದರಿ ಎಂದು ಸಾರಿದರು. ಜಿನೇವಾದಲ್ಲಿ ಇಂಡೋಚೀನದ ಕದನ ಮತ್ತಿತರ ವಿಶ್ವ ಸಮಸ್ಯೆಗಳನ್ನು ಬಿಡಿಸುವ ಪ್ರಯತ್ನವು ಯಶಸ್ವಿಯಾಗುವುದೆಂದು ನೆಹರೂ ಹಾರೈಸಿ, ಮಾನವ ಜನಾಂಗದ ಕಲ್ಯಾಣ ಸಾಧಿಸುವಲ್ಲಿ ಭಾರತ ಚೀನಾಗಳು ಜೊತೆಯಾಗಿ ಹೆಜ್ಜೆ ಇಡುತ್ತವೆಂಬ ತಮ್ಮ ಬಲವಾದ ನಂಬಿಕೆಯನ್ನು ಪ್ರಕಟಗೊಳಿಸಿದರು. ಚೀನೀ ಪ್ರಧಾನ ಮಂತ್ರಿಗಳು ಇದಕ್ಕೆ ಉತ್ತರ ಕೊಡುತ್ತಾ ಚಿಕ್ಕ, ಆದರೆ ಚೊಕ್ಕ,

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/- per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

THE JUPITER GENERAL INSURANCE CO., LTD.

ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

೧೯೧೯ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬ್ಯಾಂಕ್ ಸ್ಟ್ರೀಟ್, ಬೊಂಬ್ಯಾ 1.

ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಮಾಲು ಬಂಡವಳ ...	...	ರೂ. 23,74,800
ಒಟ್ಟು ಮೂಲಗಳು ...	... (ಮಿಕ್ಕಿದೆ)	ರೂ. 3,35,00,000
ಊರ್ಜಿತದಲ್ಲಿರುವ ವಿಮಾವ್ಯವಹಾರ ...	,,	ರೂ. 7.50,00,000
೧೯೫೩ರಲ್ಲಿ ಪೂರ್ಣವಾದ ವಿಮಾವ್ಯವಹಾರ...	,,	ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ, ಕೆಲಸಗಾರರ ಪರಿಹಾರ ದ್ರವ್ಯಾನುಕೂಲತೆ, ಕಳ್ಳಕಾಕರ ಪಾಲಾಗುವಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂಪರ್ಕಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ, ಸಿಲೋನ್, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ:—

ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,

ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ಸೌಹಾರ್ದ ಪೂರ್ಣವಾದ ಮಾತುಕತೆ

ಏಶ್ಯಾದ ಭದ್ರತೆ ಮತ್ತು ವಿಶ್ವಶಾಂತಿಯೇ ಉಭಯ ರಾಷ್ಟ್ರಗಳ ಉದ್ದೇಶ

ಭಾಷಣವನ್ನು ಮಾಡಿದರು. ಭಾರತೀಯರು ತಮಗಿತ್ತ ಹೃತ್ಪೂರ್ವಕ ಸ್ವಾಗತಕ್ಕೆ ಅವರು ಕೃತಜ್ಞತೆಯನ್ನು ವ್ಯಕ್ತಗೊಳಿಸುತ್ತಾ ನೆಹರೂರಂತಹ ಕೀರ್ತಿವಂತ ಮಿತ್ರರನ್ನು ಕಾಣುವಂತಾದದ್ದು ತನ್ನ ಭಾಗ್ಯವೆಂದು ಹೇಳಿದರು. ತಿಬೇಟಿನ ಕುರಿತು ಮಾಡಿಕೊಂಡ ಒಡಂಬಡಿಕೆಗೂ ಭಾರತೀಯರೊಡನೆ ಇರುವ ಸ್ನೇಹ ಸಂಬಂಧಕ್ಕೂ ಚೀನದ ಸರಕಾರ ಮತ್ತು ಜನತೆ ಹೆಚ್ಚಿನ ಮಹತ್ವವನ್ನು ಕೊಡುವರೆಂದು ಚೌ ನುಡಿದು ಈ ಸಾಂಸ್ಕೃತಿಕ ಮತ್ತು ಆರ್ಥಿಕ ಸಂಬಂಧಗಳು ಇನ್ನಷ್ಟು ಬಲಗೊಳ್ಳುವುವೆಂದು ಅವರು ಆಶಿಸಿದರು. ಶಾಂತಿಗಾಗಿ ಪ್ರಯತ್ನಿಸುತ್ತಿರುವ ಭಾರತವನ್ನು ನೆರೆ ರಾಷ್ಟ್ರವಾಗಿ ಪಡೆದಿರಲು ಚೀನಕ್ಕೆ ಅಭಿಮಾನವೆನಿಸುತ್ತಿದೆಯೆಂದು ಸಾರುತ್ತಾ ಕೊರಿಯಾದಲ್ಲಿ ಕದನ ವಿರಾಮವನ್ನುಂಟು ಮಾಡಲು, ಹಾಗು ಇಂಡೋಚೀನದ ಸಮರ ನಿಲ್ಲಿಸಲು ಭಾರತವು ಒಂದೇ ಸಮನೆ ನಡೆಸಿದ ಪ್ರಯತ್ನಗಳನ್ನು ಶ್ಲಾಘಿಸಿದರು. ಏಶಿಯದ ಶಾಂತಿ ಪ್ರಿಯ ರಾಷ್ಟ್ರಗಳು ಯುದ್ಧೋತ್ಸುಕರ ಆಕಾಂಕ್ಷೆಯನ್ನೂ ಅವರ ದುಷ್ಟ ಪ್ರಯತ್ನಗಳನ್ನೂ ನಿರರ್ಥಕಗೊಳಿಸುವರೆಂದು ಹಾರೈಸುತ್ತಾ ಏಶಿಯಾದ ಶಾಂತಿಗಾಗಿ ಉಭಯ ರಾಷ್ಟ್ರಗಳು ಇನ್ನೂ ಹೆಚ್ಚು ಆತ್ಮೀಯತೆಯಿಂದ ನಡಕೊಳ್ಳಲಿ ಎಂದರು. ಉಭಯ ರಾಷ್ಟ್ರಗಳ ಮಿತ್ರತ್ವದ ಸಹಕಾರವನ್ನು ಸ್ಥಿರಗೊಳಿಸುವುದಕ್ಕಾಗಿಯೂ ಭಾರತದ ಹಿರಿಮೆ ಗೌರವಗಳನ್ನು ಎತ್ತಿ ಹಿಡಿದು ಭಾರತೀಯರ ಉನ್ನತಿಯನ್ನು ಸಾಧಿಸುವುದಕ್ಕಾಗಿಯೂ ಚೌ ಎನ್ ಲಾಯರು ನಮ್ಮ ಪ್ರಧಾನ ಮಂತ್ರಿ ನೆಹರೂರವರಿಗೆ ಆಯುರಾರೋಗ್ಯಗಳನ್ನು ಕೋರಿದರು.

ಚೀನದ ಪ್ರಧಾನ ಮಂತ್ರಿಗಳು ಇಲ್ಲಿ ವ್ಯಕ್ತಗೊಳಿಸಿದ ಭಾವನೆಗಳನ್ನೆ ಪೇಕಿಂಗದಿಂದ ಪ್ರಕಟವಾಗುವ ಪತ್ರಿಕೆಗಳೂ ಹೊಂದಿರುತ್ತವೆ—"ಜನತಾ" ಎಂಬ ಪತ್ರಿಕೆಯು ಚೌ ಎನ್ ಲಾಯರ ಸಂದರ್ಶನ ಮಹತ್ವವನ್ನು ವರ್ಣಿಸುತ್ತಾ ನಮ್ಮ ಎರಡು ರಾಷ್ಟ್ರಗಳೊಳಗೆ ಪರಂಪರಾನುಗತವಾಗಿ ಬಂದಿರುವ ಹಾರ್ದಿಕ ಸಂಬಂಧವು ಏಶ್ಯಾದ ರಾಷ್ಟ್ರಗಳ ನಡುವೆ ಇರಬೇಕಾದ ಸಂಬಂಧಕ್ಕೆ ದಿವ್ಯ ಉದಾಹರಣೆಯಾಗಿದೆ ಎಂದು ಹೇಳಿತು. "ಚೀನ ಮತ್ತು ಭಾರತದ ಪ್ರಜೆಗಳೊಳಗಿನ ಸ್ನೇಹಸಹಕಾರಗಳಿಗೆ ಚೀನೀ ಸಂಸ್ಕಾರದಂತೆ ಜನತೆಯೂ ಬಹಳ ಬೆಲೆ ಕೊಡುತ್ತದೆ" ಎಂದೂ ಆ ಪತ್ರಿಕೆ ಉದ್ಘೋಷಿಸಿತು.

ಪತ್ರಿಕಾ ಪರಿಷತ್ತಿನಲ್ಲಿ

ಚೌ ಎನ್ ಲಾಯರು ರಾಷ್ಟ್ರಪತಿ ಭವನದಲ್ಲಿ ಏರ್ಪಡಿಸಲಾದ ಪತ್ರಿಕಾ ಪರಿಷತ್ತಿನಲ್ಲಿ ಪತ್ರಿಕೋದ್ಯಮಿಗಳು ಕೇಳಿದ್ದ ಪ್ರಶ್ನೆಗಳಿಗೆ ತಾವು ಸಿದ್ಧಪಡಿಸಿದ ಉತ್ತರಗಳನ್ನು ಓದಿ ಹೇಳಿದರು. ಮೂವತ್ತು ನಿಮಿಷಗಳ ಕಾಲ ನಡೆದ ಈ ಪರಿಷತ್ತಿನಲ್ಲಿ ಜಾಗತಿಕ ದ್ವೇಷವನ್ನು ಕಡಿಮೆ ಮಾಡುವ ವಿಷಯಕ್ಕೆ ಸಂಬಂಧಿಸಿದ ಪ್ರಶ್ನೆಗೆ ಅವರು ಮೊದಲಾಗಿ ಉತ್ತರ ಕೊಟ್ಟರು—"ಯುದ್ಧವನ್ನು ವಿರೋಧಿಸಿ, ಶಾಂತಿಗೆ ಹೋರಾಡುವುದು ಜಾಗತಿಕ ಬಿಕ್ಕಟ್ಟನ್ನು ಕಡಿಮೆ ಮಾಡುವ ಕ್ರಮ" ಎಂದರು. ಕೊರಿಯಾದಲ್ಲಿ ನೆರವೇರಿದ ಯುದ್ಧ ವಿರಾಮ ಒಪ್ಪಂದವು ಜಾಗತಿಕ ದ್ವೇಷವನ್ನು ಕೆಲಮಟ್ಟಿಗೆ ಕಡಿಮೆ ಮಾಡಿರುವುದು; ಇಂಡೋಚೀನದಲ್ಲಿ ಯುದ್ಧ ನಿಲ್ಲಿಸಲು ಸಾಧ್ಯವಾದರೆ, ದ್ವೇಷವು ಇನ್ನಷ್ಟು ಕಡಿಮೆಯಾಗುವುದು. ಆದರೆ ಉಭಯ ಪಕ್ಷಗಳು ಗೌರವಯುತ ಒಡಂಬಡಿಕೆಗೆ ಬಾರದಂತೆ ಆತಂಕವೊಡ್ಡುವ ವರ್ಗಗಳೂ ಇವೆಯೆಂಬುದನ್ನು ಮರೆಯಕೂಡದು— ಆತಂಕವೊಡ್ಡುವವರ ಪ್ರಯತ್ನಗಳನ್ನು ತಡೆಗಟ್ಟಲು ಶಾಂತಿಪ್ರಿಯ ರಾಷ್ಟ್ರಗಳು ದುಡಿಯಬೇಕು ಎಂದು ಚೌ ಅಭಿಪ್ರಾಯಪಟ್ಟರು. ಏಶ್ಯಾದ ರಾಷ್ಟ್ರಗಳು ಶಾಂತಿಯುತವಾದ ಸಹಜೀವನವನ್ನು ಹೇಗೆ ನಡೆಸಬಹುದೆಂಬ ಇನ್ನೊಂದು ಮಹತ್ವದ ಪ್ರಶ್ನೆಗೆ ಉತ್ತರ ಕೊಡುತ್ತಾ ನೆಹರೂರವರು ಈ ಕುರಿತು ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆಂದು ಚೌ ಎನ್ ಲಾಯರು ಹೇಳಿದರು. ತಿಬೇಟಿನ ಕುರಿತು ಮಾಡಿಕೊಂಡ ಒಡಂಬಡಿಕೆಯು ಪಂಚಸೂತ್ರಗಳನ್ನು ಹೊಂದಿಕೊಂಡಿದೆ—ಈ ತತ್ವಗಳ ದೃಢವಾದ ನೆಲಗಟ್ಟಿನ ಮೇಲೆ ಏಶ್ಯಾದ ರಾಷ್ಟ್ರಗಳಷ್ಟೇ ಅಲ್ಲ—ವಿಶ್ವದೆಲ್ಲ ರಾಷ್ಟ್ರಗಳೂ ಶಾಂತಿ—ಸಹಕಾರದಿಂದ ಬಾಳಲು ಸಾಧ್ಯವಾಗುವುದು ಎಂದರು. ಇಂತಹ ಒಡಂಬಡಿಕೆಯು ಯುದ್ಧ ಭೀತಿಯನ್ನು ಹೋಗಲಾಡಿಸುವುದೆಂದೂ ಅವರು ತಿಳಿಸಿದರು. "ಏಶಿಯದ ಶಾಂತಿ ಮತ್ತು ಭದ್ರತೆಗಳನ್ನು ಕಾಯ್ದುಕೊಳ್ಳುವ ಸಾಮಾನ್ಯ ಕ್ರಮಗಳನ್ನು ಹುಡುಕುವುದಕ್ಕೋಸ್ಕರ ಏಶಿಯದ ಪ್ರಮುಖ ರಾಷ್ಟ್ರಗಳ ಹೊಣೆಗಾರ ವ್ಯಕ್ತಿಗಳು ಪರಸ್ಪರ ವಿಚಾರ ವಿನಿಮಯ ಮಾಡಲು ಆಗಾಗ ಸಭೆ ಸೇರುವುದು ಉಚಿತ" ಎಂದು ಚೌ ಸಾರಿದರು. "ಕ್ರಾಂತಿಯು ನಿರ್ಯಾತ ಮಾಡಲಾಗುವ ವಸ್ತುವಲ್ಲ; ಇದೇ ಸಮಯಕ್ಕೆ ಯಾವುದೊಂದು ರಾಷ್ಟ್ರದ ಜನಾಭಿಪ್ರಾಯದಲ್ಲಿ ಹೊರಗಿನವರು ಕೈ ಹಾಕುವುದೂ ಇಷ್ಟವಲ್ಲ" ಎಂದವರು ಹೇಳಿದರು.

ಮೈತ್ರಿಯ ನೆಲಗಟ್ಟು

ಏಶಿಯದ ೯೬ ಕೋಟಿ ಜನತೆಯ ಧುರೀಣರಾದ ಚೌ ಎನ್ ಲಾಯ್ ಹಾಗು ನೆಹರೂರವರು ಪ್ರಧಾನ ಮಂತ್ರಿಗಳ ನಿವಾಸದ ಮೊದಲನೆಯ ಮಾಳಿಗೆಯಲ್ಲಿ ಕುಳಿತು ನಡೆಸಿದ ಸಮಾಲೋಚನೆಯು ಅತ್ಯಂತ ಸೌಹಾರ್ದಪೂರ್ಣ ವಾತಾವರಣವನ್ನು ಹೊಂದಿ, ಯಶಸ್ವಿಯಾಗಿ ಮುಕ್ತಾಯಗೊಂಡಿತು. ಈ ಮಾತುಕತೆಗಳ ಕಾಲಕ್ಕೆ ದುಭಾಷಿಯೊಬ್ಬನನ್ನು ಬಿಟ್ಟರೆ ಬೇರೆ ಯಾರೂ ಉಪಸ್ಥಿತರಿರಲಿಲ್ಲ. ಪ್ರಧಾನ ಮಂತ್ರಿದ್ವಯರೊಳಗೆ ಮಾತುಕತೆ ನಡೆಯುತ್ತಿದ್ದಂತೆಯೇ ಚೌ ಎನ್ ಲಾಯರ ಇಬ್ಬರು ಸಲಹೆಗಾರರು ವಿದೇಶ ಖಾತೆಯ ಕಾರ್ಯದರ್ಶಿಗಳಾದ ಶ್ರೀ. ಆರ್. ಕೆ. ನೆಹರೂ ಹಾಗು ಶ್ರೀ ಎನ್. ಆರ್. ಪಿಳ್ಳೆಯವರನ್ನು ಕಂಡು ವಿಚಾರ ವಿನಿಮಯ ನಡೆಸುತ್ತಿದ್ದರು. ಈ ಸಮಾಲೋಚನೆಗಳ ಕುರಿತು ಸೋಮವಾರ ಸಂಜೆ ಆರು ಗಂಟೆಗೆ ಸಂಯುಕ್ತ ಪ್ರಕಟಣೆಯೊಂದನ್ನು ನೀಡಲಾಯಿತು. ಸಮಾಲೋಚನೆಗಳು ಸ್ಥೂಲವಾಗಿ (೧) ಪರಸ್ಪರ ಆರ್ಥಿಕ ವ್ಯಾಪಾರ ಮತ್ತು ಸಾಂಸ್ಕೃತಿಕ ಸಂಬಂಧ ಸಂವರ್ಧನೆ; (೨) ಸಾಮಾನ್ಯವಾಗಿ ಏಶಿಯಾದ, ವಿಶೇಷವಾಗಿ ಆಗ್ನೇಯ ಏಶಿಯಾ ರಾಷ್ಟ್ರಗಳ, ಶಾಂತಿ ಮತ್ತು ಭದ್ರತೆ; ಮತ್ತು (೩) ವಿಶ್ವ ಶಾಂತಿಯ ಸ್ಥಾಪನೆ ಮತ್ತು ಅಂತಾರಾಷ್ಟ್ರೀಯ ದ್ವೇಷನಿವಾರಣೆ—ಎಂಬ ಮೂರು ಪ್ರಮುಖ ವಿಷಯಗಳ ಮೇಲೆ ಕೇಂದ್ರೀಕೃತವಾಗಿದ್ದವೆಂದು ಈ ಪ್ರಕಟಣೆ ಹೇಳುತ್ತದೆ. ತಿಬೇಟಿನ ಕುರಿತು ಮಾಡಿಕೊಳ್ಳಲಾದ ಒಡಂಬಡಿಕೆಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಲಾಯಿತೆಂದು ಪ್ರಕಟಣೆಯು ಸ್ಪಷ್ಟವಾಗಿ ನಿರೂಪಿಸುತ್ತದೆ. ಸಂಯುಕ್ತ ಪ್ರಕಟಣೆಯು ಇಂಡೋಚೀನದ ಕುರಿತು ಜಿನೇವದಲ್ಲಿ ನಡೆದ ಮಾತುಕತೆಗಳಿಗೆ ಪ್ರಧಾನಿಗಳು ವಿಶೇಷ ಗಮನವನ್ನು ನೀಡಿದರೆಂದೂ ಇಂಡೋಚೀನದ ರಾಜ್ಯಗಳನ್ನೆಲ್ಲ ಪ್ರತ್ಯೇಕವಾಗಿ ವಿಮುಕ್ತಗೊಂಡ ರಾಷ್ಟ್ರಗಳಂತೆ ಪರಿಗಣಿಸಬೇಕೆಂದೂ ಮತ್ತು ಆ ರಾಜ್ಯಗಳನ್ನು ಅನ್ಯದೇಶಗಳ ಆಕ್ರಮಣಕ್ಕಾಗಿ ಉಪಯೋಗಿಸ ಕೂಡದು; ಆಕ್ರಮಣ ನಡೆಯಲೂ ಬಾರದು ಎಂದು ಸೂಚಿಸಿದರಾಗಿಯೂ ತಿಳಿಸುತ್ತದೆ. ತಿಬೇಟಿನ ಕುರಿತು ಮಾಡಲಾದ ಒಡಂಬಡಿಕೆಯು ಏಶಿಯಾದ ಹಾಗು ವಿಶ್ವದ ಬೇರೆ ಬೇರೆ ಪ್ರದೇಶಗಳಲ್ಲಿರುವ ಭಿನ್ನ ಭಿನ್ನ ಸಾಮಾಜಿಕ ಹಾಗು ಆಡಳಿತ ನೀತಿಯ ನಡುವೆಯೂ ಶಾಂತಿಯನ್ನು ಪೋಷಿಸಬಲ್ಲುದು ಎಂದು ಜಂಟಿ ಹೇಳಿಕೆಯು ಸ್ಪಷ್ಟಗೊಳಿಸುತ್ತದೆ. ಒಟ್ಟಾರೆ ಈ ಮಾತುಕತೆಯು ಏಶ್ಯದ ಬಗ್ಗೆ ಹೆಚ್ಚಿನ ತಿಳುವಳಿಕೆಯನ್ನುಂಟು ಮಾಡುವುದಕ್ಕೂ ಬೇರೆ ದೇಶಗಳಲ್ಲಿ ಈ ಕುರಿತು ಸದಭಿಪ್ರಾಯವನ್ನು ಮೂಡಿಸುವುದಕ್ಕೂ ನೆರವಾಯಿತು.

ನೆಹರೂರಿಗೆ ಆಮಂತ್ರಣ

ಪ್ರಧಾನಿ ನೆಹರೂರವರು ಈ ಮಾತುಕತೆಯ ವಿವರವನ್ನೆಲ್ಲ ಕೊಲೊಂಬೋ ಪರಿಷತ್ತಿನ ರಾಷ್ಟ್ರಗಳಾದ ಸಿಂಹಳ, ಬರ್ಮ, ಇಂಡೋನೇಶಿಯಾ ಮತ್ತು ಪಾಕಿಸ್ತಾನಗಳಿಗೆ ತಿಳಿಸಿದ್ದಾರೆ; ಆಗ್ನೇಯ ಏಶ್ಯಾದ ಈ ರಾಷ್ಟ್ರಗಳು ಹೊಸ ದೆಹಲಿಯಲ್ಲಿ ನಡೆಸಿದ ಈ ಸಮಾಲೋಚನೆಯ ಕುರಿತು ವಿಶೇಷವಾದ ಕುತೂಹಲವನ್ನು ತೋರಿಸಿರುತ್ತವೆ. ಬರ್ಮಾ ದೇಶವು ಚೌ ಎನ್ ಲಾಯರನ್ನು ಪೇಕಿಂಗಿಗೆ ಮರಳುವ ದಾರಿಯಲ್ಲಿ ರಂಗೂನಿನಲ್ಲಿ ಸರಕಾರದ ಅತಿಥಿಯಾಗಿರಬೇಕಾಗಿ ಬಿನ್ನವಿಸಿತು. ಈ ವಿನಂತಿಯನ್ನು ಚೌ ಮನ್ನಿಸಿ, ಸೋಮವಾರ ಪ್ರಾತಃಕಾಲ ದೆಹಲಿಯಿಂದ ಹೊರಟವರು ರಂಗೂನಿನಲ್ಲಿ ಇಳಿದು, ಬರ್ಮಾ ಪ್ರಧಾನಿ ಯುನೂರನ್ನು ಕಂಡರು. ದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ಅವರು ಒಂದು ಹೇಳಿಕೆ ನೀಡಿ ಅನ್ಯೋನ್ಯತೆಯ ವಾತಾವರಣದಲ್ಲಿ ನಡೆದ ಈ ಮಾತುಕತೆಗಳು ಖಚಿತ ಫಲಿತಾಂಶವನ್ನು ನಿಕಟ ಭವಿಷ್ಯದಲ್ಲಿಯೇ ನೀಡುತ್ತವೆಂದರು. ಶಾಂತಿಯನ್ನು ನೆಲೆಗೊಳಿಸುವುದಕ್ಕಾಗಿ ಪ್ರಧಾನಿ ನೆಹರೂರವರು ನಿರ್ವಹಿಸುತ್ತಿರುವ ಪ್ರಯತ್ನಗಳನ್ನೂ

(೮ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE POPULAR INSURANCE CO. LTD.

"POPULAR BUILDINGS" MANGALORE-1

ನವಯುಗ
ಉಡುಪಿ, ಗುರುವಾರ ೧-೭-'೫೪

ಗ್ರಾಮ ಸ್ವರಾಜ್ಯ

ಕಳೆದ ವಾರ ಸಿಮ್ಲಾದಲ್ಲಿ ಗ್ರಾಮ ಪಂಚಾಯತುಗಳ ಪುನರ್ಘಟನೆಯ ವಿಷಯವನ್ನು ಪರ್ಯಾಲೋಚಿಸಲು ಪ್ರಾತಿನಿಧಿಕವಾದ ಪರಿಷತ್ತೊಂದು ಕೇಂದ್ರದ ಆರೋಗ್ಯ ಸಚಿವರಾದ ರಾಜಕುಮಾರಿ ಅಮೃತಕೌರರ ಅಧ್ಯಕ್ಷತೆಯಲ್ಲಿ ಜರಗಿತು. ರಾಜ್ಯಗಳ ಸ್ಥಾನಿಕ ಸ್ವರಾಜ್ಯ ಶಾಖೆಗಳ ಪ್ರತಿನಿಧಿಗಳಲ್ಲದೆ ಕೇಂದ್ರದ ಗೃಹ, ಹಣಕಾಸು, ಆಹಾರ ಮತ್ತು ವ್ಯವಸಾಯ ಮಂತ್ರಾಲಯಗಳ, ಯೋಜನಾ ಆಯೋಗ, ಅಖಿಲ ಭಾರತ ಸ್ಥಾನಿಕ ಸ್ವರಾಜ್ಯ ಸಂಸ್ಥೆ ಮುಂತಾದವುಗಳ ಪ್ರತಿನಿಧಿಗಳು ಪರಿಷತ್ತಿನಲ್ಲಿ ಉಪಸ್ಥಿತರಿದ್ದರು. ಭಾರತದಲ್ಲಿ ಗ್ರಾಮ ಪಂಚಾಯತುಗಳ ಮೂಲಕ ಆಡಳಿತವನ್ನು ನಿರ್ವಹಿಸುವ ಪದ್ಧತಿಯು ಪುರಾತನಕಾಲದಷ್ಟು ಹಿಂದಿನಿಂದಲೂ ಪ್ರಚಾರದಲ್ಲಿದ್ದು, ಸ್ವಾತಂತ್ರ್ಯೋತ್ತರದಲ್ಲಿ ಕಾಂಗ್ರೆಸ್ ಮಂತ್ರಿ ಮಂಡಳಗಳು ಈ ವಿಷಯದತ್ತ ವಿಶೇಷ ಗಮನವನ್ನು ಹರಿಸಿ, ಕಾಯಿದೆಗಳನ್ನು ರೂಪಿಸಿರುತ್ತವೆ. ಸ್ವರಾಜ್ಯದ ಕಲ್ಪನೆಯ ಮೂಲ ಘಟಕವಂತೆ ಗ್ರಾಮ ಪಂಚಾಯತುಗಳು ಕೆಲಸ ಮಾಡುತ್ತವೆಂದು ಹೇಳಿದರೆ ಅತಿಶಯೋಕ್ತಿಯಾಗದು. ಪರಿಷತ್ತನ್ನು ಉದ್ಘಾಟಿಸಿದ ಲೋಕಸಭೆಯ ಅಧ್ಯಕ್ಷರಾದ ಶ್ರೀ ಮಾವಳಣಕರರು ಜನರಲ್ಲಿ ಸ್ವರಾಜ್ಯದ ಭಾವನೆಯನ್ನು ಹುಟ್ಟಿಸಿ, ಪೋಷಿಸಿ, ಪ್ರಜಾರಾಜ್ಯದ ನಾಗರಿಕರಲ್ಲಿರಬೇಕಾದ ಗುಣ ಧರ್ಮಗಳನ್ನು ನೆಲೆಗೊಳಿಸಿ, ತಮ್ಮ ಪಾತ್ರವನ್ನು ಎಲ್ಲರೂ ಸಮರ್ಥವಾಗಿ ನಿರ್ವಹಿಸುವಂತೆ ಮಾಡಲು ಗ್ರಾಮ ಪಂಚಾಯತುಗಳು ನೆರವಾಗುತ್ತವೆ ಎಂದು ಹೇಳಿರುವುದನ್ನು ನಾವು ಗಮನಿಸಬೇಕು. ಮಹಾತ್ಮಾ ಗಾಂಧೀಜಿಯವರು ಪ್ರತಿಪಾದಿಸುತ್ತಿದ್ದ ವಿಕೇಂದ್ರೀಕರಣ ತತ್ವದ ತಳಹದಿಯಾಗಿ ಗ್ರಾಮ ಪಂಚಾಯತುಗಳು ಕೆಲಸ ಮಾಡುವಂತೆ ನೋಡಿಕೊಳ್ಳುವ ಹೊಣೆಯು ರಾಜ್ಯ ಘಟನೆಯನ್ನುಳ್ಳ ಭಾರತದಲ್ಲಿ ಅಧಿಕಾರಾರೂಢವಾದ ಸರಕಾರದ ಮೇಲೇರುತ್ತದೆ. ರಾಷ್ಟ್ರದ ಉತ್ಕರ್ಷದ ಮಹಲನ್ನು ನಾವು ಬುಡದಿಂದ ಕಟ್ಟಬೇಕಾಗುತ್ತದೆ; ಈ ದೃಷ್ಟಿಯಿಂದ ಗ್ರಾಮ ಪಂಚಾಯತುಗಳ ಮುಖಕ ಆಡಳಿತದ ಹೊಣೆಯನ್ನು ಕ್ರಮೇಣ ನಿರ್ವಹಿಸಬಹುದೆಂಬ ಕಾರಣವನ್ನು ಗ್ರಾಮೀಣರಿಗೆ ಹೇಳಿಕೊಡುವುದು ಅಪೇಕ್ಷಣೀಯವಷ್ಟೇ ಅಲ್ಲ—ಸಾರ್ವಜನಿಕ ಪ್ರಯೋಗಕ್ಕಾಗಿ ದುಡಿಯುವಂತೆ ನಾಗರಿಕರ ಭಾವನೆಗೆ ಪ್ರಚೋದಿಸುವುದಕ್ಕೂ ಪಂಚಾಯತುಗಳೇ ಯೋಗ್ಯ ಘಟಕವಾಗಬಲ್ಲವು. ಇತರ ಅಗತ್ಯದ ಸಮಸ್ಯೆಗಳ ಒತ್ತಾಯದಿಂದಾಗಿ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯು ಗ್ರಾಮ ಪಂಚಾಯತುಗಳ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಕೊಡದಿದ್ದರೂ, ಈಚೆಗೆ ಈ ತಪ್ಪನ್ನು ಕೆಲಮಟ್ಟಿಗೆ ತಿದ್ದಿಕೊಂಡಿರುವುದು. ಮಾವಳಣಕರರು ಗ್ರಾಮ ಪಂಚಾಯತುಗಳು ಚೆನ್ನಾಗಿ ಕೆಲಸ ಮಾಡುವಂತೆ ಹಣದ ಉಚಿತ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದು ಒತ್ತಾಯಿಸಿದರು. ಈಚೆಗೆ ಯೋಜನಾ ಆಯೋಗವು ಈ ವಿಷಯವನ್ನು ಕೈಗೆತ್ತಿಕೊಂಡು ಸುಮಾರು ೧೩ ಕೋಟಿ ರೂಪಾಯಿಗಳನ್ನು ನಗರಸಭೆಯೇ ಮುಂತಾದ ಸ್ಥಾನಿಕ ಸಂಸ್ಥೆಗಳಿಗೆ ಅಭಿವೃದ್ಧಿ ಕೆಲಸಗಳಿಗೋಸ್ಕರ ವ್ಯಯಿಸಲು ಕೊಡಮಾಡಿದೆ. ಈ ಹಣಕ್ಕೆ ಅಮಿತ ಬೇಡಿಕೆಗಳು ಬಂದಿವೆಯೆಂದೂ ಏಳು ಕೋಟಿ ರೂಪಾಯಿಗಳನ್ನು ಈಗಾಗಲೇ ಹಂಚಲಾಗಿದೆಯೆಂದೂ ಅರ್ಥಸಚಿವ ದೇಶಮುಖರು ಕಳೆದ ವಾರ ವಿಜಯವಾಡಾದಲ್ಲಿ ಒಂದು ಸಭೆಯಲ್ಲಿ ತಿಳಿಸಿದರು. ಹಣಕಾಸಿನ ಅಡಚಣಿ ಇದೆಯೆಂಬ ಕಾರಣಕ್ಕೋಸ್ಕರ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಪ್ರಗತಿ ಸಾಧಿಸುವುದರಲ್ಲಿ ಹಿಂದೇಟು ಹೊಡೆಯಲಾಗದೆಂದು ಯೋಜನಾ ಆಯೋಗವು ಅಪೇಕ್ಷಿಸುತ್ತಿರುವುದಾಗಿ ಇದರಿಂದ ಸ್ಪಷ್ಟಗೊಳ್ಳುತ್ತದೆ. ಹಣಕಾಸಿನ ವಿಷಯದಲ್ಲಿ ಎಷ್ಟೋ ವೇಳೆ ಸ್ಥಾನಿಕ ಸಂಸ್ಥೆಗಳೇ ತಮಗೆ ದೊರೆತ ಅಧಿಕಾರವನ್ನು ಉಪಯೋಗಿಸದೆ ಸುಮ್ಮನುಳಿದ ಉದಾಹರಣೆಯುಂಟೆಂದು ರಾಜಾಜಿಯವರೊಮ್ಮೆ ಹೇಳಿದ್ದರು. ಮನೆ ತೆರಿಗೆ ಮುಂತಾದುವನ್ನು ಹೊರಿಸಲು ಪಂಚಾಯತುದಾರರು ಅಪೇಕ್ಷಿಸದೆ "ಹಣವಿಲ್ಲ" ಎಂದು ದೂರಿಡುವರಂತೆ—ಈ ಮಟ್ಟಿಗೆ ಗ್ರಾಮ ಪಂಚಾಯತುಗಳು ತಮ್ಮ ಕರ್ತವ್ಯದಲ್ಲಿ ತಪ್ಪಬಾರದೆಂದೆನಿಸುತ್ತದೆ. ಮಾವಳಣಕರರು ಸ್ಥಾನಿಕ ಸಂಸ್ಥೆಗಳ ಅಧಿಕಾರ ವ್ಯಾಪ್ತಿಯನ್ನು ವಿಸ್ತರಿಸುವ ವಿಷಯಕ್ಕೆ ಹೆಚ್ಚು ಮಹತ್ವ ಕೊಡಬೇಕೆಂದು ಹೇಳಿದರು. "ತಮ್ಮ ಒಳ್ಳೆಯದೇನೆಂಬುದನ್ನು ಹಳ್ಳಿಗರು ತಿಳಿದಿಲ್ಲ" ಎಂಬ ಮನೋಭಾವನೆಯನ್ನು ಸರಕಾರವಾಗಲೀ ಇತರರಾಗಲೀ ತೋರ್ಪಡಿಸಬಾರದೆಂದು ಅವರು ಸಾರಿದರು. ಆದರೆ ಅಮೃತ ಕೌರರು ಹೇಳಿದ ಮಾತೊಂದನ್ನು ಲಕ್ಷ್ಯಕ್ಕೆ ತೆಗೆದುಕೊಂಡರೆ, ಜಾತೀಯತೆ ಮುಂತಾದ ಭಾವನೆಗಳಿಂದ ಹುಟ್ಟಿಕೊಂಡ ತಿಕ್ಕಾಟದಿಂದಲೇ ಗ್ರಾಮಗಳ ಪ್ರಗತಿ ಕುಂಠಿತವಾಗಿದೆಯೆಂದು ತಿಳಿಯುತ್ತದೆ; ಅಧಿಕಾರ ವ್ಯಾಪ್ತಿಯು ಮಿತವಾಗಿದೆಯೆಂಬುದು ಪ್ರಗತಿಗೆ ಪ್ರಬಲ ಆತಂಕವಾಗಿ ಪರಿಣಮಿಸಿಲ್ಲ. ಆದುದರಿಂದ ಹಳ್ಳಿಯ ವಾತಾವರಣವನ್ನು ಮೊದಲಾಗಿ ಶುಚಿಗೊಳಿಸಬೇಕು. ಪಂಚಾಯತುಗಳ ಸದಸ್ಯರನ್ನು ಸರ್ವಾನುಮತದಿಂದ ಆರಿಸಬೇಕೆಂದು ಪರಿಷತ್ತು ಸ್ವೀಕರಿಸಿದ ನಿರ್ಣಯವು ಇದಕ್ಕೆ ಪೋಷಕವಾಗಿರುತ್ತದೆ. ಪರಿಷತ್ತು ಕೈಗೊಂಡ ಇತರ ನಿರ್ಣಯಗಳಲ್ಲಿ ಮುಂದಿನ ಪಂಚವಾರ್ಷಿಕ ಯೋಜನೆಯನ್ನು ಸಿದ್ಧಪಡಿಸುವಲ್ಲಿಯೂ ಕಾರ್ಯಗತಗೊಳಿಸುವಲ್ಲಿಯೂ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳಿಗೆ ಹೆಚ್ಚು ಪ್ರಾತಿನಿಧ್ಯವನ್ನು ಕೊಡಬೇಕೆಂಬುದು ಉಲ್ಲೇಖನೀಯ. ಹಳ್ಳಿಯ ಅಭಿವೃದ್ಧಿ ಯೋಜನೆಯನ್ನು ಸರ್ವಾನುಮತದಿಂದ ಪಂಚಾಯತುಗಳೇ ರೂಪಿಸಬೇಕೆಂದೂ ಇಲ್ಲಿ ಅಭಿಪ್ರಾಯ ವ್ಯಕ್ತಗೊಳಿಸಲ್ಪಟ್ಟಿತು. ಕೊಳಕು ವಸತಿಗಳ ನಿರ್ಮೂಲನ, ಶುದ್ಧ ನೀರಿನ ವ್ಯವಸ್ಥೆ, ವಿದ್ಯುಚ್ಛಕ್ತಿಯ ಪೂರೈಕೆ, ಮಾರ್ಗಗಳ ನಿರ್ಮಾಣ ಇತ್ಯಾದಿಗಳಿಗೆ ಕೇಂದ್ರ ಸರಕಾರವು ಉದಾರ ಭಾವನೆಯಿಂದ ಸಹಾಯನೀಡಬೇಕೆಂದೂ ಪರಿಷತ್ತು ತೀರ್ಮಾನಿಸಿತು. ನ್ಯಾಯದಾನ ಪದ್ಧತಿಯ ಮಟ್ಟಿಗೆ ಈಗಿನ ವ್ಯವಸ್ಥೆಯೇ ಮುಂದರಿಯಬೇಕೆಂದೂ ಆದರೂ ರಾಜ್ಯ ಸರಕಾರಗಳು ಕೆಲವು ಸುಧಾರಣಾ ಪ್ರಯೋಗಗಳನ್ನು ನಡೆಸಬಹುದಾಗಿಯೂ ಹೇಳಲಾಯಿತು. ಜಿಲ್ಲಾ ಬೋರ್ಡುಗಳಂತಹ ಘಟಕಗಳಿಗೆ ಗ್ರಾಮಪಂಚಾಯತುಗಳಿಂದ ಅಪ್ರತ್ಯಕ್ಷ ಚುನಾವಣೆ ನಡೆಸಿ ಸದಸ್ಯರನ್ನು ಆರಿಸುವುದೊಳಿತೆಂದೂ ಪರಿಷತ್ತು ಸೂಚಿಸಿತು. ಒಟ್ಟಾರೆ, ಹೊಸ ಸಮಾಜದ ರಚನೆಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳು ಮೂಲಘಟಕವಾಗಬೇಕೆಂದು ಅಭಿಪ್ರಾಯಪಟ್ಟು ಈ ಉದ್ದೇಶ ಯೋಜನಾ ಆಯೋಗದೊಡನೆ ಸಾಧನೆಗಾಗಿ ವಿಚಾರ ವಿನಿಮಯ ನಡೆಸಲು ಸಮಿತಿಯೊಂದು ಏರ್ಪಟ್ಟಿತು. ಹಾಗೆಯೇ ದೇಶದಾದ್ಯಂತ ಈ ವಿಷಯದಲ್ಲಿ ನಿರಂತರವಾದ ವಿಚಾರವಿನಿಮಯ ಸಾಗುವ ಉದ್ದೇಶದಿಂದ ರಾಜ್ಯಗಳ ಸ್ಥಾನಿಕ ಸ್ವರಾಜ್ಯ ಖಾತೆಯ ಮಂತ್ರಿಗಳಿಂದ ಕೂಡಿದ ಮಂಡಳವು ನೇಮಕಗೊಂಡಿತು. ಈ ಪ್ರಕಾರವಾಗಿ ಗ್ರಾಮ ಸ್ವರಾಜ್ಯದ ಅಡಿಪಾಯವನ್ನು ಹಾಕುವುದರಲ್ಲಿ ಮಹತ್ವದ ಪಾತ್ರವನ್ನು ಪರಿಷತ್ತು ವಹಿಸಿದುದಕ್ಕೆ ನಾವು ಸಂತೋಷಪಡುತ್ತೇವೆ.

ಗ್ವಾಟೆಮಾಲಾದಲ್ಲಿ ಬಂಡುಗಾರರ ಮೇಲ್ಗೈ

ಐಸೆನಹೋವರರೊಡನೆ ಚರ್ಚಿಲರ ಮಾತುಕತೆ

ಅಮೇರಿಕವು ಯಾದವೀ ಕಲಹವೆಂದು ಹೇಳುವ ಗ್ವಾಟೆಮಾಲಾದ ಗೊಂದಲವು ದಿನದಿನಕ್ಕೂ ಪ್ರಕೋಪಕ್ಕೆ ಹೋಗುತ್ತಿರುವುದೆಂದು ವಾರ್ತೆಗಳು ತಿಳಿಸುತ್ತವೆ. ಪ್ರಥಮ ಕಾಳಗದಲ್ಲಿ ಸರಕಾರಿ ಪಕ್ಷವು ಬಲವಾದ ಆಘಾತವನ್ನು ಹೊಂದಿದರೂ ಮುಂದೆ ಅದು ಚೇತರಿಸಿಕೊಂಡು ದಾಳಿಗಾರರನ್ನು ಹಿಂದಟ್ಟಲು ಸಮರ್ಥವಾಯಿತು. ಆದರೆ ಹಿಂದಿನಿಂದ ಮರಳಿ ದಾಳಿಗಾರರದೇ ಮೇಲ್ಗೈಯಾಯಿತೆಂದು ತಿಳಿಯುತ್ತದೆ. ಬಂಡುಗಾರರ ಹತ್ತಿರ ಅಮೇರಿಕದಿಂದ ಪೂರೈಸಲಾದುವೆಂದು ಹೇಳಲಾದ ಅತ್ಯಾಧುನಿಕ ಮಾದರಿಯ ಶಸ್ತ್ರಾಸ್ತ್ರಗಳು ಹೇರಳವಾಗಿದ್ದು, ಅವರ ವೈಮಾನಿಕ ಚಟುವಟಿಕೆಯು ಗ್ವಾಟೇಮಾಲಾದ ಸರಕಾರವನ್ನು ಪೇಚಿನಲ್ಲಿ ಸಿಲುಕಿಸಿದೆ. ದಾಳಿಗಾರರು ರೈಲ್ವೇ ಕೇಂದ್ರಗಳ ಮೇಲೆಯೂ ರಾಜಧಾನಿಯಾದ ಗ್ವಾಟೇಮಾಲಾದ ಮೇಲೆಯೂ ಹೆಚ್ಚು ಪ್ರಮಾಣದಲ್ಲಿ ಬಾಂಬುಗಳನ್ನು ಸುರಿದು, ಸರಕಾರವನ್ನು ಮಣಿಸಲು ನೋಡುತ್ತಿದ್ದಾರೆ. ಜಕಾಪಾ, ಚಿಕಿಮೂಲಾ ಮುಂತಾದ ಪ್ರಸಿದ್ಧ ಕೇಂದ್ರಗಳು ಬಂಡುಗಾರ ಸೈನಿಕರ ಗುಂಡಿನ ಸುರಿಮಳೆಯನ್ನೂ ಬಾಂಬು ದಾಳಿಯನ್ನೂ ಇದಿರಿಸಬೇಕಾಯಿತು. ದಂಗೆಖೋರರು ನೆರೆಯ ಹೊಂಡುರಾಸದ ಗಡಿ ಪ್ರದೇಶದಲ್ಲಿರುವ ಹಾಗು ಅಮೇರಿಕದ ಹಣ್ಣಿನ ಕಂಪೆನಿಗಳ ಅಧೀನವಿರುವ ಅನೇಕ ವಿಮಾನ ನಿಲುಮನೆಗಳ ಉಪಯೋಗ ಮಾಡಿಕೊಂಡು ಸರಕಾರವನ್ನು ಬಗ್ಗು ಬಡಿಯುತ್ತಿವೆಯೆಂದು ಹೇಳಲಾಗುತ್ತದೆ. ನಿಕಾರಾಗುವಾದ ಸರಕಾರವೂ ದಾಳಿಗಾರರಿಗೆ ಬೆಂಬಲವನ್ನೂ ಪ್ರೋತ್ಸಾಹವನ್ನೂ ಕೊಡುತ್ತಿದೆಯೆಂದು ಗ್ವಾಟೆಮಾಲಾ ಆರೋಪಿಸುತ್ತದೆ.

ಕೇಳಿಕೆಯ ನಿರಾಕರಣೆ

ಕಳೆದ ವಾರ ಭದ್ರತಾ ಮಂಡಳವು ಹೊಂಡುರಾಸ, ನಿಕಾರಾಗುವಾ ಮುಂತಾದ ಯಾವುದೇ ರಾಷ್ಟ್ರಗಳು ಬಂಡುಗಾರರಿಗೆ ಸಹಾಯ ಕೊಡಲಾಗದೆಂದು ಪ್ರಾರ್ಥಿಸಿದ್ದರೂ ದಾಳಿಯಾಗುವುದೇನು ನಿಲ್ಲಲಿಲ್ಲ. ಇದನ್ನು ಕಂಡ ಗ್ವಾಟೆಮಾಲಾವು ಭದ್ರತಾ ಮಂಡಳಕ್ಕೆ ಪುನಃ ದೂರನ್ನೊಯ್ದು, ಹಿಂದೆ ಸ್ವೀಕರಿಸಿದ ಗೊತ್ತುವಳಿಯು ನಿಷ್ಕ್ರಿಯವಾಯಿತೆಂದು ಆಕ್ಷೇಪಿಸಿತು. ಇದನ್ನು ವಿಚಾರಿಸಲು ಎರಡನೆಯ ಸಲ ಭದ್ರತಾ ಮಂಡಳವು ಸಭೆ ಸೇರಿದಾಗ, ಗ್ವಾಟೆಮಾಲಾದ ಈಗಿನ ಸರಕಾರವನ್ನು ಉರುಳಿಸಲು ಹೊಂಚುಹಾಕುತ್ತಿರುವ ಅಮೇರಿಕವೂ ಅದರ ವರ್ಚಸ್ಸಿಗೆ ಒಳಗಾದ ಇತರ ಕೆಲವು ರಾಷ್ಟ್ರಗಳೂ ಗ್ವಾಟೆಮಾಲಾಕ್ಕೆ ಅನ್ಯಾಯವನ್ನೇ ಮಾಡಿದವು. ಪಾಶ್ಚಿಮಾತ್ಯ ಗೋಲದ ಈ ತಂಟೆಯನ್ನು ಅಂತರ ಅಮೇರಿಕಾ ಶಾಂತಿ ಮಂಡಳವೆಂಬ ಸಂಸ್ಥೆಯೇ ವಿಚಾರಿಸಬೇಕೆಂದೂ ಭದ್ರತಾ ಮಂಡಳವು "ಪ್ರಾದೇಶಿಕ ಸಮಸ್ಯೆ"ಗಳ ಹೊಣೆ ಹೊತ್ತುಕೊಳ್ಳುವುದಾದರೆ "ಪ್ರಗತಿ" ಹಿಂದಕ್ಕೆ ಬೀಳುವುದೆಂದೂ ಅಮೇರಿಕದ ಪ್ರತಿನಿಧಿಗಳು ವಾದಿಸಿ, ಜಯ ಪಡೆದರು. ರಶಿಯಾದ ಪ್ರತಿನಿಧಿಗಳು ಈ ಸಂದರ್ಭದಲ್ಲಿ ಅಮೇರಿಕಾ ಮತ್ತು ಅದನ್ನು ಬೆಂಬಲಿಸುವ ಬ್ರಿಟನು ಹಾಗು ಇತರ ರಾಷ್ಟ್ರಗಳ ನಿಲುಮೆಯನ್ನು ಕಟುವಾಗಿ ಟೀಕಿಸಿ, ಗಂಭೀರ ಎಚ್ಚರಿಕೆ ಕೊಟ್ಟರು.

ಪರಿಸ್ಥಿತಿಯ ನಿರೀಕ್ಷಣೆ

ಆದರೆ ಇದು ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ಭದ್ರತಾ ಮಂಡಳದ ನಿರಾಕರಣದಿಂದ ಬಂಡುಗಾರರಿಗೆ ಪ್ರೋತ್ಸಾಹವೇ ದೊರಕಿದಂತಾಯಿತು. ಅವರು ತಮ್ಮ ಧುರೀಣರಾದ ಕರ್ನಲ್ ಕಾಸ್ಟಿಲೋ ಅರ್ಮಾಸನರ ನೇತೃತ್ವದಲ್ಲಿ ಪ್ರತಿ ಸರಕಾರವನ್ನು ಸ್ಥಾಪಿಸಿ ತಮ್ಮ ದಾಳಿಯ ಪ್ರತಾಪವನ್ನು ಹೆಚ್ಚಿಸಿಕೊಂಡರು. ಈ ನಡುವೆ ಗ್ವಾಟೆಮಾಲಾದ ಅಧ್ಯಕ್ಷರಾದ ಜಾಕೊಬೊ ಅರ್ಬೆಂಜರು ತಮ್ಮ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟು, ಸೇನಾಧಿಪತಿ ಕರ್ನಲ್ ನೀಕೆ ಡಾಯಜರಿಗೆ ಸರ್ವಾಧಿಕಾರವನ್ನು ಒಪ್ಪಿಸಿದರು. ಡಾಯಜರು ಈಗ ಹೊಸ ಸರಕಾರವನ್ನು ರಚಿಸಿದ್ದಾರೆ; ಸರಕಾರದ ಬದಲಾವಣೆಯಿಂದ ಧೋರಣೆಯು ಪರಿವರ್ತನೆಗೊಳ್ಳುವುದಿಲ್ಲವೆಂದು ಹೇಳಿದ್ದಾರೆ. ಸರಕಾರದ ಬದಲಾವಣೆ ನಡೆಯುವುದಕ್ಕೆ ಮುಂಚೆ, ಅಮೇರಿಕಾದ ಪ್ರತಿನಿಧಿ ಆಗ್ರಹಪಟ್ಟಂತೆ, ಅಂತರ ಅಮೇರಿಕಾ ಶಾಂತಿ ಮಂಡಳವು ಗ್ವಾಟೆಮಾಲಾದ ಮೇಲೆ ಪರಕೀಯರ ಆಕ್ರಮಣ ನಡೆದಿದೆಯೆ,

ಹೇಗೆ ಎಂಬುದನ್ನು ವಿಚಾರಿಸಿ, ಇದೇ ಜುಲೈ ೭ನೇ ತಾರೀಕಿನೊಳಗೆ ತನ್ನ ವರದಿಯನ್ನೊಪ್ಪಿಸಬೇಕಾಗಿ ನಿರ್ಧರಿಸಿತ್ತು. ಯುದ್ಧ ಕ್ಷೇತ್ರದಲ್ಲಿ ನಾಲ್ಕು ದಿನಗಳ ವರೆಗೆ ಸಂಚರಿಸಿ, ಪರಿಸ್ಥಿತಿಯನ್ನು ಪ್ರತ್ಯಕ್ಷವಾಗಿ ತಿಳಿದುಕೊಳ್ಳಲು ಅದು ಪ್ರಯತ್ನಿಸಬೇಕೆಂದಿತ್ತು. ಆದರೆ ಇದೀಗ ಸರಕಾರ ಬೇರೆಯಾಗಿರುವುದರಿಂದ, ಶಾಂತಿ ಮಂಡಳದ ಭೇಟಿಯ ದಿನವು ಮುಂದೂಡಲಾಗಿರುತ್ತದೆ.

ಐಕ್-ಚರ್ಚಿಲ ಭೇಟಿ

ಇತ್ತ ವಾಷಿಂಗಟನ್ನಿನಲ್ಲಿ ಅಧ್ಯಕ್ಷ ಐಸೆನ ಹೋವರರೊಡನೆ ಮಾತುಕತೆ ನಡೆಸಬೇಕೆಂದು ಹೊರಟ ಬ್ರಿಟಿಷ ಪ್ರಧಾನ ಮಂತ್ರಿ ಚರ್ಚಿಲ್ಲರೂ ವಿದೇಶಾಂಗ ಸಚಿವ ಈಡನ್ನರೂ ತಮ್ಮ ಭೇಟಿಯ ಕಾರ್ಯಕ್ರಮವನ್ನು ಯಶಸ್ವಿಯಾಗಿಯೇ ಮುಗಿಸಿದರು. ಬ್ರಿಟಿಷ ಮಂತ್ರಿಗಳು ವಾಷಿಂಗಟನ್ನಿಗೆ ಹಾರುವ ಮೊದಲು ಮಂತ್ರಿ ಮಂಡಲದ ಇತರ ಸದಸ್ಯರೊಡನೆ ಧೋರಣೆಯ ಸಂಬಂಧದಲ್ಲಿ ಪರಾಮರ್ಶೆಯನ್ನು ನಡೆಸಿದ್ದರು. ಐಸೆನ ಹೋವರರೊಡನೆ ಆಗ್ನೇಯ ಏಶಿಯಾದ ಸಂರಕ್ಷಣೆಯ ವಿಷಯದಲ್ಲಿ ವಿಚಾರ ವಿನಿಮಯ ನಡೆಸಬಹುದು; ಆದರೆ ಯಾವುದೇ ನಿಲುಮೆಗೆ ಅಂಟಿಕೊಳ್ಳಲಾಗದು ಎಂದು ಮಂತ್ರಿ ಮಂಡಳವು ಚರ್ಚಿಲ್ಲರಿಗೆ ಆದೇಶ ಕೊಟ್ಟಿತ್ತು. ಇದನ್ನು ಚರ್ಚಿಲ್ಲರು ಶಿರಸಾವಹಿಸಿದ್ದಾರೆಂದು, ಐಸೆನ ಹೋವರರೊಡನೆ ಮಾತುಕತೆ ನಡೆಸಿದ ಬಳಿಕ ಸೋಮವಾರ ಹೊರಡಿಸಲಾದ ಪ್ರಕಟಣೆ ತಿಳಿಸುತ್ತದೆ. ಜಿನೀವಾದಲ್ಲಿ ಇಂಡೋಚೀನದ ಸಮರ ನಿಲುಗಡೆಗಾಗಿ ನಡೆಯುತ್ತಿರುವ ಪ್ರಯತ್ನಗಳ ಮೇಲೆ ವಿಪರೀತ ಪರಿಣಾಮವನ್ನುಂಟುಮಾಡುವ ಯಾವುದೇ ಕ್ರಮ ತೆಗೆದುಕೊಳ್ಳುವುದು ಅಪೇಕ್ಷಣೀಯವಲ್ಲ ಎಂಬ ಬ್ರಿಟಿಷ ನಿಲುಮೆಗೆ ಅಮೇರಿಕವು ಅನಿವಾರ್ಯವಾಗಿ ಅರೆಮನಸ್ಸಿನಿಂದಲೇ ಸಮ್ಮತಿ ಸೂಚಿಸಿತು. ಹಾಗೆಂದು ಯುರೋಪಿನ ಸಂರಕ್ಷಣ ವಿಷಯದಲ್ಲಿ ಎರಡೂ ರಾಷ್ಟ್ರಗಳ ವರಿಷ್ಠರು ತಮ್ಮ ಬೆಂಬಲವನ್ನು ಮರಳಿ ದೃಢೀಕರಿಸಿದರು; ಮತ್ತು ಬಾನ ಒಪ್ಪಂದದಲ್ಲಿ ಪ್ರವೇಶಿಸಲು ತಡಮಾಡುವುದರಿಂದ ಅಟ್ಲಾಂಟಿಕ ರಾಷ್ಟ್ರಗಳಲ್ಲಿ ಒಕ್ಕಟ್ಟು ಮುರಿಯುತ್ತದೆಂದು ಅಭಿಪ್ರಾಯಪಟ್ಟರು. ಅಣು ಶಸ್ತ್ರಾಸ್ತ್ರಗಳ ಕುರಿತಾದ ಮಾಹಿತಿಯನ್ನು ಹೆಚ್ಚಿನ ಪ್ರಮಾಣದಲ್ಲಿ ಅಮೇರಿಕವು ಬ್ರಿಟನಿಗೆ ಒದಗಿಸಬೇಕೆಂಬ ಸಲಹೆಗೆ ಐಕರ ಸಹಾನುಭೂತಿಪರ ಬೆಂಬಲದ ಆಶ್ವಾಸನೆಯನ್ನು ದೊರಕಿಸಲಾಯಿತು.

ಯುದ್ಧ ನಿಲ್ಲಿಸುವ ಪ್ರಯತ್ನ

ಇಂಡೋಚೀನ ಸಮರ ನಿಲುಗಡೆಗಾಗಿ ಜಿನೀವಾದ ಪ್ರಯತ್ನಗಳು ಆಶಾದಾಯಕ ವಾತಾವರಣವನ್ನು ಏರ್ಪಡಿಸಿದ್ದರೂ ಖಚಿತ ಪ್ರಗತಿಯನ್ನೇನು ಅವು ಸಾಧಿಸಿಲ್ಲ. ಫ್ರೆಂಚ ಸರಕಾರದ ಹೊಸ ಪ್ರಧಾನಿ ಮೆಂಡೆಸರು ಚೌ ಎನ್ ಲಾಯರನ್ನು ಬರ್ನದಲ್ಲಿ ಭೇಟಿಮಾಡಿ ಚೀನದ ಸಂಪೂರ್ಣ ಸಹಕಾರದ ಭರವಸೆಯನ್ನು ಪಡೆದರು. ಇದರಿಂದ ಜುಲೈ ೨೦ ರೊಳಗೆ ಯುದ್ಧ ನಿಲ್ಲಿಸುವೆನೆಂಬ ತಮ್ಮ ಪ್ರತಿಜ್ಞೆಯನ್ನು ಈಡೇರಿಸಲು ಸಹಾಯವಾದೀತೆಂದು ಮೆಂಡೆಸರು ಹರ್ಷಪಟ್ಟರು. ಯುದ್ಧ ವಿರಾಮದ ಮೇಲ್ವಿಚಾರಣೆ ನಡೆಸುವ ಸಮಿತಿಯ ರಚನೆಯ ಕುರಿತು ನವರಾಷ್ಟ್ರಗಳು ಒಂದು ತಜ್ಞ ಸಮಿತಿಯನ್ನು ನೇಮಿಸಬೇಕೆಂದು ಫ್ರಾನ್ಸು ಮಾಡಿದ ಸೂಚನೆಯನ್ನು ರಶಿಯಾ–ಚೀನಗಳು ಒಪ್ಪಿರುತ್ತವೆ. ಇಂತಹ ಸಭೆಯು ಎಂದು ಸೇರುವುದೋ ತಿಳಿದಿಲ್ಲ—ಅಲ್ಲದೆ, ಹಾನ್ಯೊಯಿಂದ ೨೫ ಮೈಲು ದೂರದ ಒಂದು ಹಳ್ಳಿಯಲ್ಲಿ ವೀಟಮಿನ ಹಾಗು ಫ್ರೆಂಚ ಸೈನಿಕ ಅಧಿಕಾರಿಗಳ ನಡುವೆ ನಡೆಯಲಿದ್ದ ಸಮರ ನಿಲುಗಡೆಯ ಮಾತುಕತೆಗಳೂ ಮುಂದೆ ಹಾಕಲ್ಪಟ್ಟಿವೆ. ಜಿನೀವಾದಲ್ಲಿ ಸೂಚಿಸಿದ ಪ್ರಕಾರ, ಯೋಗ್ಯತೆ ಹಾಗು ಅಧಿಕಾರ ಹೊಂದಿದವರನ್ನು ಫ್ರೆಂಚರು ಕಳಿಸಲಿಲ್ಲವೆಂಬುದೇ ಇದಕ್ಕೆ ಕಾರಣವೆಂದು ತಿಳಿಯುತ್ತದೆ.

ಸಾಮ್ರಾಜ್ಯಶಾಹಿಗಳ ಕೈವಾಡ

ಫ್ರೆಂಚ ಭಾರತದಲ್ಲಿಯೂ ಪೋರ್ಚುಗೀಜ ವಸಾಹತುಗಳಲ್ಲಿಯೂ ಕಳೆದವಾರ ಸೈನಿಕ ಚಟುವಟಿಕೆಗಳು ವಿಶೇಷವಾಗಿ ಕಂಡುಬಂದವು "ವೀಟನಾಂ" ಎಂಬ ಹಡಗದ ಮೂಲಕ ಪಾಂಡಿಚೇರಿಯಲ್ಲಿ ಕೆಲ ದಿನಗಳ ಹಿಂದೆ ಐರೋಪ್ಯ ಸೈನಿಕರೂ ಅಧಿಕಾರಿಗಳೂ ಬಂದಿಳಿದಿದ್ದರು ಈಗ ಪುನಃ ಸೈಗಾನಿನಿಂದ ಸಿಂಗಾಪುರದ ಮಾರ್ಗವಾಗಿ ಹೊರಟು ಬಂದ ಸ್ಟೆಂಟ್ ನಝೋರಿಯಾ ಎಂಬ ಹಡಗವು ಮುನ್ನೂರಕ್ಕಿಂತಲೂ ಹೆಚ್ಚು ಮದ್ದು ಗುಂಡುಗಳನ್ನು ತುಂಬಿಸಿದ ಪೆಟ್ಟಿಗೆಯನ್ನು ಪಾಂಡಿಚೇರಿಯಲ್ಲಿ ಇಳಿಸಿತೆಂದು ತಿಳಿದು ಬರುತ್ತದೆ. ಈ ಘಟನೆಯು ನಡೆಯುತಿದ್ದಾಗ ರಾಜಮಾರ್ಗಗಳಲ್ಲಿ ಸಂಚಾರ ನಿರ್ಬಂಧವನ್ನು ಹೇರಿ, ಸುದ್ದಿ ಹೊರಗೆ ಹೋಗದಂತೆ ಜಾಗರೂಕತೆಯನ್ನು ವಹಿಸಲಾಯಿತು. (ಆದರೆ ಗೌಪ್ಯ ಸ್ಫೋಟವಾಗುವುದನ್ನು ಈ ಕ್ರಮ ತಡೆಯಲಿಲ್ಲ!) ಗೋವೆಯಲ್ಲಿಯೂ ಪರಿಸ್ಥಿತಿ ಕೆಡಗೆಡುತ್ತಿದೆ— ಡಿಯೂದಂತಹ ಐದು ಸಾವಿರ ಜನವಸತಿಯುಳ್ಳ ಸಣ್ಣ ದ್ವೀಪದಲ್ಲಿ ೩೦೦ ಐರೋಪ್ಯ ಹಾಗು ಆಫ್ರಿಕನ ಸೈನಿಕರನ್ನು ಇಳಿಸಿದ್ದು, ವಸಾಹತುಗಳನ್ನು ಪ್ರಬಲ ಸೈನಿಕ ಠಾಣ್ಯವಾಗಿ ಪರಿವರ್ತಿಸುವ ಗತ್ತುಗಾರಿಕೆಗೆ ಇದೊಂದು ನಿದರ್ಶನ. ಜೂನು ತಿಂಗಳ ೨೫ನೇ ತಾರೀಕಿನಂದು ಆಗಮಿಸಿದ "ತಿಮೂರ್" ಎಂಬ ಹಡಗವು ಮರ್ಮಗೋವಾ ಬಂದರದಲ್ಲಿ ತಂಗಿ ಎಂಟು ಜನ ಅಧಿಕಾರಿಗಳನ್ನೊಳಗೊಂಡ ೬೧ ಸೈನಿಕರನ್ನು ಇಳಿಸಿತು. ಈಚೆಗೆ ಗೋವೆಯಲ್ಲಿ ರಾಷ್ಟ್ರೀಯ ಸ್ವಾತಂತ್ರ್ಯ ಹೋರಾಟದ ಎಂಟನೇ ವಾರ್ಷಿಕೋತ್ಸವವನ್ನು ಆಚರಿಸಿದಾಗ, ಅನೇಕರನ್ನು ಬಂಧಿಸಲಾಯಿತು. ಇಂತಹ ಕ್ರಮಗಳನ್ನು ಭಾರತ ಸರಕಾರವು ತೀವ್ರವಾಗಿ ಪ್ರತಿಭಟಿಸಿದೆಯಲ್ಲದೆ, ಪೋರ್ಚುಗೀಜ ವಸಾಹತುಗಳ ಪರಿಸ್ಥಿತಿಯನ್ನು ತಿಳಿಯಲು ಇದೇ ಒಂದನೇ ತಾರೀಕಿನಂದು ಶ್ರೀ ಆರ್. ಕೆ. ನೆಹರೂರನ್ನು ಮುಂಬಯಿಗೆ ಅದು ಕಳಿಸುತ್ತದೆ.

ಪೂರ್ವ ಬಂಗಾಲ

ಮಹಮ್ಮದಾಲಿಯವರ ಸರಕಾರವು ಪೂರ್ವ ಬಂಗಾಲದಲ್ಲಿ ಫಜಲುಲ ಹಕ್ಕರ ಮಂತ್ರಿ ಮಂಡಳವನ್ನು ತಳ್ಳಿ ಹಾಕಿ, ಗವರ್ನರರ ಆಡಳಿತವನ್ನು ಹೇರಿದುದರಿಂದ ಉದ್ಭವಿಸಿದ ಪರಿಸ್ಥಿತಿಯು ಕಳೆದ ೨೮ನೇ ದಿನಾಂಕ ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಟ್ಟಿತು. ಪ್ರಧಾನ ಮಂತ್ರಿಗಳು ಚರ್ಚೆಯನ್ನು ಪ್ರಾರಂಭಿಸುತ್ತ ಹಕ್ಕರು ದೇಶ ದ್ರೋಹಿಗಳೆಂಬ ತಮ್ಮ ಹಿಂದಿನ ಹೇಳಿಕೆಯನ್ನು ಪುನರುಚ್ಚರಿಸಿದರು. ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದಕ್ಕೋಸ್ಕರ ತೆಗೆದುಕೊಂಡ ಕ್ರಮವಿದೆಂದು ಅವರು ಹೇಳಿದರು. ಹಕ್ಕರು ಆರ್ಥಿಕ ಅವನತಿ ಹಾಗು ಸರಕಾರಿ ನೌಕರರ ನೀತಿ ಭ್ರಷ್ಟತೆಗೆ ಕಾರಣರಾದರೆಂದು ಹಳಿದರು. ಪೂರ್ವ ಬಂಗಾಲದಲ್ಲಿ ಮೊದಲಿನ ಪರಿಸ್ಥಿತಿಯು ಪುನಃ ನೆಲೆಗೊಂಡನಂತರ ಗವರ್ನರರ ಆಳಿಕೆಯನ್ನು ಕೊನೆಗಾಣಿಸಲಾಗುವುದೆಂದು ಹೇಳಿದರು. ಆದರೆ, ಮಹಮ್ಮದಾಲಿಯವರ ಈ ಧೋರಣೆಯು ವಿರೋಧೀ ಗುಂಪಿನ ಕಟು ವಿಮರ್ಶೆಗೆ ಒಳಗಾಯಿತು. ಮಿಯಾ ಇಫ್ತಿಕರುದ್ದೀನರು ಮಾತನಾಡುತ್ತಾ ಹಕ್ಕರು ದೇಶದ್ರೋಹಿಗಳಾಗಿದ್ದರೆ, ಅವರ ಮಂತ್ರಿ ಮಂಡಳವನ್ನು ತಳ್ಳಿ ಹಾಕಿ ಹೊಸ ಸರಕಾರದ ರಚನೆಗೆ ಅವಕಾಶ ಕೊಡಬೇಕಿತ್ತೆಂದು ಹೇಳಿದರು. "ಗಡಿನಾಡಿನ ಗಾಂಧಿ" ಖಾನ್ ಅಬ್ದುಲ್ ಗಫರ್ ಖಾನರು ಪ್ರಜಾಪ್ರಭುತ್ವದ ಇತಿಹಾಸದಲ್ಲಿಯೇ ಪೂರ್ವ ಬಂಗಾಲದಲ್ಲಿ ಹೇರಲಾದ ಗವರ್ನರರ ಆಳಿಕೆಯಂತಹ ಕ್ರಮವು ಇಲ್ಲವೆಂದು ಉದ್ಗರಿಸಿದರು. "ಹಕ್ಕರು ನನ್ನನ್ನು ಕಂಡಿದ್ದಾಗ ಪಶ್ಚಿಮ ಪಾಕಿಸ್ತಾನದ ಸಂಪರ್ಕವಿಲ್ಲದ ಸ್ವಾತಂತ್ರ್ಯವನ್ನು ಪೂರ್ವ ಬಂಗಾಲಕ್ಕೋಸ್ಕರ ಬೇಡುವ ಅಭಿಪ್ರಾಯ ತನ್ನದಿಲ್ಲ ಎಂದು ಹೇಳಿದ್ದರು. ಬದಲು, ಪಶ್ಚಿಮ ಪಾಕಿಸ್ತಾನದಲ್ಲಿರುವ ಮುಸ್ಲಿಂ ಲೀಗಿನ ಕಾರ್ಯಕರ್ತರಲ್ಲಿಯೇ ಅನೇಕ ಪ್ರಭಾವಶಾಲಿ ವ್ಯಕ್ತಿಗಳು ಪೂರ್ವ ಬಂಗಾಲವನ್ನು ಪಶ್ಚಿಮ ಪಾಕಿಸ್ತಾನದಿಂದ ಪ್ರತ್ಯೇಕಿಸಬೇಕೆಂದು ಹೇಳುತಿದ್ದುದನ್ನು ನಾನು ಕೇಳಿದ್ದೇನೆ" ಎಂದರು. ಚರ್ಚೆಯು ಇದೇ ೩ನೇ ದಿನಾಂಕ ಮುಂದುವರಿಯುವುದು.

ಉಡುಪಿ

ಚಿನ್ನ ಕರಗಿಸುವ ಸಮಾರಂಭ— ಉಡುಪಿ ಶ್ರೀ ಕೃಷ್ಣಮಠದ ಬಂಗಾರ ಮಂಟಪದ ಜೀರ್ಣೋದ್ಧಾರಕ್ಕಾಗಿ ಚಿನ್ನ ಕರಗಿಸುವ ಸಮಾರಂಭವು ಕಳೆದ ತಾ ೨೬ರಲ್ಲಿ ಸೂರ್ಯೋದಯಕ್ಕೆ ಮೊದಲು ಶ್ರೀ ಪುತ್ತಿಗೆ ಮಠದ ಹಿರಿಯ ಸ್ವಾಮಿಗಳ ನೇತೃತ್ವದಲ್ಲಿ ಜರಗಿತು. ಪರ್ಯಾಯ ಫಲಿಮಾರು, ಅಧಮಾರು, ಕಾಣಿಯೂರು ಸ್ವಾಮಿಗಳವರು ಉಪಸ್ಥಿತರಿದ್ದರು. ಶ್ರೀ ಸೋದೆ ಮತ್ತು ಶ್ರೀ ಕೃಷ್ಣಾಪುರ ಮಠಗಳ ಕಡೆಯಿಂದ ಶ್ರೀಗಳಾದ ಪಿ. ಶ್ರೀಪತಿ ಆಚಾರ್ಯ ಮತ್ತು ಬಿ. ರಾಮಕೃಷ್ಣಾಚಾರ್ಯರು ಹಾಜರಿದ್ದರು.

ಡಾ| ಮುಖರ್ಜಿಯವರ ಸ್ಮೃತಿ ದಿನವು— ಕಳೆದ ತಾ ೨೩ರಲ್ಲಿ ಜನತಾ ವಾಚನಾಲಯದ ಆಶ್ರಯದಲ್ಲಿ ಸ್ಥಳೀಯ ಕಲಾವೃಂದದಲ್ಲಿ ಶ್ರೀ ಬಿ. ರಾಮಕೃಷ್ಣಾಚಾರ್ಯ, ವಿದ್ವಾನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು.

ನಗರಸಭೆಯು— ಕಳೆದ ತಾ ೨೬ರಲ್ಲಿ ಸಂಜೆ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮೂರನೆ ತರಗತಿಯ ನಗರಸಭೆಗಳಿಗೆ ಕಮಿಶನರರು ಅನಗತ್ಯವೆಂದು ಆದ ಈ ನಗರ ಸಭೆಯ ನಿರ್ಧಾರವನ್ನು ಮನ್ನಿಸಲು ಅಸಾಧ್ಯವೆಂದು ಸೂಚಿಸಿದ ಸರಕಾರಿ ಮೆಮೊವನ್ನು ರಿಕಾರ್ಡು ಮಾಡಲಾಯಿತು. ಐದು ವರುಷಗಳಿಗೊಮ್ಮೆ ಪುನರ್ವಿಮರ್ಶಿಸುವ ಪ್ರೊಫೆಶನ್ ಟ್ಯಾಕ್ಸು ಕಾರ್ಯಕ್ಕಾಗಿ ಬೇಕಾಗುವ ನಿಬಂಧನೆಯನ್ನು ಸೆಂಕ್ಷನ್ ಮಾಡಲಾಯಿತು. ನಗರ ಸಭೆಯ ಪೇದೆಗಳಿಗೆ ಕೆಳತರಗತಿಯ ನಿಬಂಧನೆಗೂ ಒಂದೊಂದು ಜತೆ ಇಜಾರು ಮತ್ತು ಶರ್ಟು ಕೊಡಲು ಸಮ್ಮತಿಯನ್ನು ಅಪೇಕ್ಷಿಸಿದ ಆಫೀಸು ನೋಟನ್ನು ಪರ್ಯಾಲೋಚಿಸಿ ಚರ್ಚೆಯ ಕೊನೆಗೆ ಗಂಡಸರಿಗೆ ಒಂದೊಂದು ಚಟ್ಟ ಮತ್ತು ಜಲ್ಲಣ, ಹೆಂಗಸರಿಗೆ ಒಂದೊಂದು ಸೀರೆ ಮತ್ತು ರವಕೆ ಕೊಡಬೇಕೆಂದು ನಿರ್ಧರಿಸಲಾಯಿತು. ಬನ್ನಂಜೆ ವಾರ್ಡಿನಲ್ಲಿ ಎಯಿಡೆಡ್ ಎಲಿಮೆಂಟರಿ ಶಾಲೆಯೊಂದನ್ನು ತೆರೆಯುವ ವಿಷಯದಲ್ಲಿ ನಗರ ಸಭೆಗೆ ಆಕ್ಷೇಪವೇನೂ ಇಲ್ಲವೆಂದು ಶಾಲಾ ಡೆಪ್ಯುಟಿ ಇನ್ಸ್ಪೆಕ್ಟರರ ಪತ್ರಕ್ಕೆ ಉತ್ತರವೀಯಬೇಕೆಂದಾಯಿತು. ಗುಂಡಿಬೈಲು ಖಾಸಗಿ ಎಲಿಮೆಂಟರಿ ಶಾಲೆಯ ಉಪಯೋಗಕ್ಕಾಗಿ ಪಾಡಿಗಾರು ಮಠದ ಸಮೀಪದ ಬದಿಯ ಕೆಲವಂಶ ಸರಕಾರಿ ಜಾಗವನ್ನು ಕೆಲವೊಂದು ಶರ್ತದ ಮೇರೆ ಕೊಡಬಹುದೆಂದು ತಹಶೀಲ್ದಾರರಿಗೆ ತಿಳಿಸಲಾಯಿತು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

os. 499/52.

ಲಕ್ಷ್ಮಿ ಕೊಡಾ —ವಾದಿರು.
ಕೊರಗಪ್ಪ ಯಾನೆ ವೆಂಕಪ್ಪ ರೈ ಕೊಡಾ —ಪ್ರತಿವಾದಿರು.

38ನೆ ಪ್ರತಿವಾದಿ ಚೆನ್ನಮ್ಮ ನೀಲಮ್ಮನ ಮಗಳು, ಮಂಗಳೂರು ಶಹರಿನ ಕೊಡಿಯಾಲಬೈಲು.

54ನೆ ಪ್ರತಿವಾದಿ ಭಾಗೀರಥಿ ಕಾವೇರಿಯ ಮಗಳು, ಮಂಗಳೂರು ಶಹರಿನ ಬೋಳಾರಿನಲ್ಲಿ.

60ನೆ ಪ್ರತಿವಾದಿ ರಾಮಣ್ಣ ರೈ, ಚೆನ್ನಮ್ಮನ ಮಗ, ಪುತ್ತೂರು ತಾಲೂಕು ಪೆರ್ನೆ ಗ್ರಾಮದಲ್ಲಿ.

—ಇವರಿಗೆ ತಿಳಿಸುವುದೇನೆಂದರೆ.

ವಾದಿರು ಅರ್ವಾರು ವಿನೋಜನೆ ಬಗ್ಗೆ ದಾಖಲು ಮಾಡಿದ ಈ ದಾವೆಯು ತಾ. 1-7-54ಕ್ಕೆ ಇಟ್ಟಿರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಸದ್ರಿ ದಿವಸ ಹಾಜ್ರಾಗಿ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

B. Chidananda Rao.
Vakil for Plaintiff.

ತಾ. 15-6-54, ಪುತ್ತೂರು.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯ ಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಜಿಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. ನವಯುಗ, ಉಡುಪಿ.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆ

ತಾ. ೨೦—೬—೫೪ರಂದು ೬೧ ಸ್ಥಾನಗಳ ಬಗ್ಗೆ ೬೦ ನಾಮಪತ್ರಗಳು ಸ್ವೀಕರಿಸಲ್ಪಟ್ಟು, ೫೮ ಸಿಂಧುವಾದ ನಾಮಪತ್ರಗಳು ಸರ್ಕ್ಯುಲೇಟಾದು ಈ ಕೆಳಗಿನಂತಿವೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶ್ರೀ. ಎ. ಶಂಕರ ಆಳ್ವರೂ, ಜಿಲ್ಲಾ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿ ಶ್ರೀ. ಬಿ. ಆರ್. ಕರ್ಕೇರರೂ ತಿಳಿಸುತ್ತಾರೆ.

೧. ಕುಂದಾಪುರ ಉತ್ತರ—ಶ್ರೀಗಳಾದ (೧) ಬಿ. ಮಂಜಯ್ಯ ಹೆಗ್ಡೆ, (೨) ಎಚ್. ಮಹಾಬಲ ಶೆಟ್ಟಿ, (೩) ಕಾಪು ಸಂಜೀವ ಶೆಟ್ಟಿ, (೪) ಎಸ್. ಎಸ್. ಪರಮೇಶ್ವರಯ್ಯ, (೫) ಎಂ. ಎಸ್. ವೆಂಕಟರಮಣಯ್ಯ ಮತ್ತು (೬) ಕೆ. ಚಂದ್ರಶೇಖರ ಶೆಟ್ಟಿ.

೨. ಕುಂದಾಪುರ ದಕ್ಷಿಣ—ಶ್ರೀಗಳಾದ (೧) ಬಿ. ನಾಗರಾಜೇಂದ್ರ ಹೆಗ್ಡೆ, (೨) ಕೊಳ್ಕೆಬೈಲು ಮಹಾಬಲ ಶೆಟ್ಟಿ, (೩) ಬಿ. ಎಸ್. ಸೂರಪ್ಪ ಶೆಟ್ಟಿ.

೩. ಬ್ರಹ್ಮಾವರ—ಶ್ರೀಗಳಾದ (೧) ಕೆ. ಶಿನರಾಮ ಶೆಟ್ಟಿ, (೨) ಬಿ. ರಾಜೀವ ಶೆಟ್ಟಿ.

೪. ಉಡುಪಿ—ಶ್ರೀಗಳಾದ (೧) ಬಿ. ಹಿರಿಯಣ್ಣ ಹೆಗ್ಡೆ, (೨) ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ, ಉಳಿದ ೪ ಸ್ಥಾನಗಳ ಬಗ್ಗೆ ಉಪ ಚುನಾವಣೆ ನಡೆಯಲಿದೆ.)

೫. ಕಟಪಾಡಿ—ಶ್ರೀಗಳಾದ (೧) ಕೆ. ಕೆ. ಶೆಟ್ಟಿ, (೨) ಮೂಳೂರು ಭೋಜ ಹೆಗ್ಡೆ.

೬. ಕಾರ್ಕಳ—ಶ್ರೀಗಳಾದ (೧) ಮುಪ್ರಾಡಿ ಕೃಷ್ಣಯ್ಯ ಶೆಟ್ಟಿ, (೨) ಕೆ. ಸದಾನಂದ ಹೆಗ್ಡೆ, (೩) ಎಸ್. ಭುಜಬಲಿ ಅಧಿಕಾರಿ, (೪) ಎಸ್. ಬ್ರಹ್ಮರಾಯ ನಾಯ್ಕ್.

೭. ಮೂಡಬಿದ್ರಿ—ಶ್ರೀಗಳಾದ ೧. ಜಿ. ವಾಸುದೇವ ಪೈ, ೨. ಎಸ್. ನರಸಪ್ಪಯ್ಯ, ೩. ಎಸ್. ಡಿ. ಸಾಮ್ರಾಜ್ಯ, ೪. ಪಿ. ಚಂದ್ರ [illegible] ಎಸ್. ವಾಸುದೇವ ಶೆಟ್ಟಿ.

೮. ಬೆಳ್ತಂಗಡಿ—ಶ್ರೀಗಳಾದ ೧. ಟಿ. ದಾಮೋದರ ಪ್ರಭು, ೨. ವಂಟೆ ಸುಬ್ರಾಯ.

೯. ಬಂಟ್ವಾಳ—ಶ್ರೀಗಳಾದ ೧. ಬಿ. ಕೇಶವ ಪಾಲ್, ೨. ಜಿ. ಟಿ. ಜನಾರ್ಧನ ಶೆಟ್ಟಿ, ೩. ಧರ್ಮಪಾಲ ಶೆಟ್ಟಿ, ೪. ಶಂಕರ ನಾರಾಯಣ ಹೆಗ್ಡೆ, ೫. ಪಿ. ಲಕ್ಷ್ಮಣ ಪ್ರಭು, ೬. [illegible] ಸದಾಶಿವ ಹೆಗ್ಡೆ, ಒಂದು ಸ್ಥಾನದ ಬಗ್ಗೆ ಉಪಚುನಾವಣೆ ನಡೆಯಲಿದೆ.

೧೦. [illegible]—ಶ್ರೀಗಳಾದ ೧. ಎಸ್. [illegible], ೨. ಕೆ. [illegible], ೩. ಪಿ. [illegible], ೪. ಪಿ. [illegible].

೧೧. [illegible]—ಶ್ರೀಗಳಾದ ೧. ಎ. [illegible] ಕೆ. [illegible], ೩. [illegible] ಶೆಟ್ಟಿ.

೧೨. [illegible]—ಶ್ರೀಗಳಾದ ೧. [illegible] ಕೆ. ಕೆ. [illegible], ೨. [illegible], ೩. [illegible].

೧೩. [illegible] ಉತ್ತರ—ಶ್ರೀಗಳಾದ ೧. ಕೆ. [illegible], ೨. ಬಿ. ಪಿ. ಶೆಟ್ಟಿ, ೩. [illegible], ೪. ಎಸ್. [illegible], ೫. [illegible], ೬. [illegible] ಶೆಟ್ಟಿ.

೧೪. ಮಂಗಳೂರು ದಕ್ಷಿಣ—ಶ್ರೀಗಳಾದ ೧. ಎಂ. ಗೋವಿಂದ, ೨. ಟಿ. ಅಂಣಪ್ಪ ನಾಯಕ್, ೩. ಎಚ್. ಕೆ. ತಿಂಗಳಾಯ.

೧೫. ಮಂಜೇಶ್ವರ—ಶ್ರೀಗಳಾದ ೧. ಬಿ. ಮಾಧವ ಪೈ, ೨. ಎಂ. ಅಮೃತ ಕೃಷ್ಣರಾವ್.

೧೬. ಕಾಸರಗೋಡು—ಶ್ರೀಗಳಾದ ೧. ಕೆ. ಸುಂದರ, ೨. ಕೆ. ರಾಮ ಭಟ್ಟ.

೧೭. ಹೊಸದುರ್ಗ—ಶ್ರೀಗಳಾದ ೧. ಬಿ. ಮಹಾಬಲ ಶೆಟ್ಟಿ, ೨. ಬಿ. ವೈಕುಂಠ ಬಾಳಿಗ, ೩. ಎನ್. ಭೋಜ ಶೆಟ್ಟಿ.

ಮಣೂರು-ಕೋಟ— ಈ ಗ್ರಾಮದ ಪಡು ಕರಾವಳಿಯ ಮೊಗವೀರ ಕೂಡುಕಟ್ಟಿನವರು ಶ್ರೀ ಕೆ. ಬಚ್ಚ ತಂಡೇಲರ ಮುಂದಾಳುತ್ವದಲ್ಲಿ ಸಾಧಾರಣ ಹತ್ತು ಸಾವಿರ ರೂಪಾಯಿ ವೆಚ್ಚಮಾಡಿ ಮಣೂರು ಫಿಶರೀಸ್ ಶಾಲೆಯ ಬಗ್ಗೆ ಕಟ್ಟಿಸಿದ ಭವ್ಯ ಕಟ್ಟಡವನ್ನು ಕಳೆದ ತಾ ೨೪ರಲ್ಲಿ ಫಿಶರೀಸ್ ಇಲಾಖೆಗೆ ಬಿಟ್ಟುಕೊಡುವ ಮತ್ತು ಶಾಲಾ ಉದ್ಘಾಟನಾ ಸಮಾರಂಭಗಳು ಫಿಶರೀಸ್ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಎ. ಜೆ. ಜೋರ್ಜರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಮ್. ಚಂದಯ್ಯನವರು ಸ್ವಾಗತ ಭಾಷಣ ಮಾಡಿ ವರದಿಯನ್ನೋದಿದರು.

ಶ್ರೀ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ. ಅವರು ನೂತನ ಕಟ್ಟಡದ ಉದ್ಘಾಟನಾ ಸಮಾರಂಭವನ್ನು ನೆರವೇರಿಸುತ್ತಾ ಮಣೂರು ಮೊಗವೀರರ ಸಾಹಸವನ್ನು ಕೊಂಡಾಡಿ ಈ ಶಾಲೆಯು ಉತ್ತರೋತ್ತರ ಅಭಿವೃದ್ಧಿ ಹೊಂದುವಂತಾಗಲೆಂದು ಆಶಿಸಿದರು. ಅಲ್ಲದೆ ಮಣೂರಿಗೆ ಆಗತ್ಯವಿರುವ ರಸ್ತೆ ಮತ್ತು ಎರಡು ಬಾವಿಗಳ ಬಗ್ಗೆ ಸರಕಾರದಿಂದ ಸಹಾಯ ದೊರೆಯುವುದಾಗಿ ಭರವಸೆ ಕೊಟ್ಟರು. ಶ್ರೀಗಳಾದ ಬಿ. ಸುಬ್ಬಣ್ಣ ಹೆಗ್ಡೆ, ಉಡ್ಪಿ ಜನಾಬ್ ಉಸ್ಮಾನ್ ಸಾಹೇಬರು ಸಮಯೋಚಿತ ಮಾತುಗಳನ್ನಾಡಿದರು. ಸಭಾಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ, ಈ ಶಾಲೆಯು ಬಹಳ ಹೀನಾವಸ್ಥೆಯಲ್ಲಿದ್ದುದನ್ನು ಮನಗಂಡು ಮೊಗವೀರ ಬಂಧುಗಳನ್ನು ಒಟ್ಟುಗೂಡಿಸಿ ಈ ಕಟ್ಟಡದ ಶೀಘ್ರ ಏರ್ಪಾಡು ಮಾಡಿದ ಶ್ರೀ ಎಸ್. ಎಸ್. ಕೊಳ್ಕೆಬೈಲ್, ಅವರ ಕಾರ್ಯ ಸೇವಾ ತತ್ಪರತೆಯನ್ನು ಪ್ರಶಂಸಿಸಿದರು. ಧನ್ಯವಾದಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಶಿರ್ವ—ಸ್ಥಳೀಯ ಪಂಚಾಯತ ಬೋರ್ಡಿನ ಸಾಮಾನ್ಯ ಸಭೆಯು ಕಳೆದ ತಾ ೨೫ರಲ್ಲಿ ಶ್ರೀ ಎಸ್. ಎ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಿರ್ವ—ಬಂಟಕಲ್ ಪೇಟೆಯಲ್ಲಿ ಸಾರ್ವಜನಿಕ ವಾಚನಾಲಯವೊಂದನ್ನು ತೆರೆಯುವ, ವನಮಹೋತ್ಸವ ಆಚರಿಸುವ ಇತ್ಯಾದಿ ನಿರ್ಣಯಗಳಾದುವು.

ಗುರುಪುರ—ಇಲ್ಲಿಯ 'ರೋಜಾ ಮಿಸ್ತಿಕಾ' ಮಹಿಳೆಯರ ಬುನಾದಿ ತರಬೇತಿ ಶಾಲೆಯಲ್ಲಿ, ಕಳೆದ ಮಾರ್ಚಿ ತಿಂಗಳ ಸರಕಾರೀ ಪರೀಕ್ಷೆಗೆ ಕುಳಿತ ಸೆಕೆಂಡರಿ ಗ್ರೇಡಿನ ವಿದ್ಯಾರ್ಥಿನಿ ಅಧ್ಯಾಪಿಕೆಯರು ೩೩ರಲ್ಲಿ ೨೦ ಮಂದಿಯೂ, ಹಾಯರ್ ಗ್ರೇಡಿನ ವಿದ್ಯಾರ್ಥಿನಿ ಅಧ್ಯಾಪಿಕೆಯರು 40ರಲ್ಲಿ ೩೯ ಮಂದಿಯೂ ಉತ್ತೀರ್ಣರಾಗಿರುವರು.

ಕಾರ್ಕಳ—ಕಳೆದ ತಾ ೨೫ರಲ್ಲು ಅಪರ ರಾತ್ರಿಯಲ್ಲಿ ಬಸ್ ಸ್ಟಾಂಡಿನ ಸಮೀಪದ ಶ್ರೀ ಸಿ. ಮಾಧವ ಶೆಣೈಯವರ ಅಂಗಡಿಯ ಬೀಗ ಮುರಿದು ಕೆಲವು ಸಾಮಾನುಗಳನ್ನು ಕಳವು ಮಾಡಿರುವುದಾಗಿ ತಿಳಿದು ಬರುತ್ತದೆ.

ಅಲೆವೂರು—ಕಳೆದ ತಿಂಗಳ ಉತ್ತರಾರ್ಧದಿಂದ ಅಲೆವೂರಿಗೆ ಉಡುಪಿ ಎಕ್ಸ್‌ಚೇಂಜ್ ಆಫೀಸಿನಿಂದ ಟೆಲಿಫೋನ್ ಸಂಪರ್ಕ ಪ್ರಾರಂಭವಾಗಿರುವುದು.

ಮಣಿಪಾಲ—ಕಳೆದ ತಾ ೨೩ರಲ್ಲು ಸೇರಿದ ಮಣಿಪಾಲ ಹೈಸ್ಕೂಲಿನ ವಿದ್ಯಾರ್ಥಿ ಸಭೆಯಲ್ಲಿ ದ. ಕ. ಜಿಲ್ಲಾ ಭಾರತ ಸ್ಕೌಟ್ ದಳದ ಅಸಿಸ್ಟೆಂಟ್ ಕಮಿಷನರ್ ಶ್ರೀ ಟಿ. ರಮೇಶ ಪೈಗಳವರೂ ಉಡುಪಿ ಸ್ಕೌಟ್ ಸಂಘದ ಕಾರ್ಯದರ್ಶಿ ಶ್ರೀ ಎ. ಜೆ. ಅಳ್ವೆಯವರೂ ಸ್ಕೌಟ್‌ದಳ ಸ್ಥಾಪನೆ ಕುರಿತು ಭಾಷಣವಿತ್ತರು. ಶಾಲಾ ಹೆಡ್ಮಾಸ್ತರ್ ಶ್ರೀ ಯು. ಪುಂಡಲೀಕ ಶೆಣೈಯವರು ವಂದನೆಗಳನ್ನರ್ಪಿಸಿದರು.

ಬೈಂದೂರು—ದಿ. ನ. ಕೆಳಬೆಟ್ಟು ಮಹಾಬಲ ಸೆಟ್ರ ಪುತ್ರ ಶ್ರೀ ನಾರಾಯಣ ಸೆಟ್ರು ಬಾಳೆಬೆಟ್ಟು ತಿಮ್ಮಯ್ಯ ಸೆಟ್ರ ಪುತ್ರಿ ಸೌ. ಪದ್ಮಾವತಿಯನ್ನು ತಾ 20-6-54ರಂದು ಬೈದಬೆಟ್ಟು ಶ್ರೀ ರಾಮಾ ಎಲಿಮೆಂಟರಿ ಶಾಲೆಯಲ್ಲಿ ವಿವಾಹವಾದರು.

Our Bombay Stockist:- V. N. SHENOY, BOMBAY 12.

[೫ನೇ ಪುಟದಿಂದ]

ಅವರ ವೈಶಿಷ್ಟ್ಯಪೂರ್ಣವಾದ ಕ್ರಿಯಾತ್ಮಕ ವ್ಯಕ್ತಿತ್ವವನ್ನೂ ಚೌ ಪುನಃಪೂರ್ವಕ ಶ್ಲಾಘಿಸಿದರು. "ಸದ್ಯದಲ್ಲಿಯೇ ನಾವು ಇನ್ನೊಮ್ಮೆ ಭೇಟಿಯಾಗುವೆನೆಂದು ನಾನು ಆಶಿಸಿದ್ದೇನೆ" ಎಂದು ಚೌ ವಿಮಾನವೇರುವಾಗ ನೆಹರೂರಿಗೆ ಹೇಳಿ ಮುಗುಳುನಕ್ಕರು. ಪ್ರಧಾನಿ ನೆಹರೂರವರಿಗೆ ಎರಡು ವರ್ಷಗಳ ಪೂರ್ವದಲ್ಲಿಯೇ ಚೀನಕ್ಕೆ ಬರಲು ಆಮಂತ್ರಣ ಬಂದಿದ್ದರೂ ಕಾರ್ಯಬಾಹುಲ್ಯದಿಂದ ಅದನ್ನು ಮನ್ನಿಸುವುದಾಗಲಿಲ್ಲ. ಈಗ ತಿಳಿದು ಬಂದಂತೆ, ನೆಹರೂರವರು ಈ ವರ್ಷಾಂತ್ಯದಲ್ಲಿ ಬಿಡುವುಮಾಡಿಕೊಂಡು ಚೀನವನ್ನು ಸಂದರ್ಶಿಸುವರು. ನೆಹರುಗಳನ್ನೆ ಈ ಕುರಿತು ಪ್ರಶ್ನಿಸಿದಾಗ "ಚೀನವನ್ನು ಸಂದರ್ಶಿಸಲು ನಾನು ನಿಶ್ಚಯವಾಗಿಯೂ ಆಶಿಸಿದ್ದೇನೆ. ಪಂಚಾಂಗ ನೋಡಿ ಸುಮುಹೂರ್ತವೊಂದನ್ನು ಗೊತ್ತು ಮಾಡಲಿದ್ದೇನೆ" ಎಂದು ವಿನೋದಾತ್ಮಕವಾಗಿ ಉತ್ತರವಿತ್ತರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಎಮ್. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಸಿಶಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ, ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಋತುಸ್ರಾವ ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿದೋಷ, ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು, ಬಾಟ್ಲಿ 1ರ ರೂ. 3-8-0
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು

ದಿನದುಡಿತದ ಬೇಸರ ನೀಗಿಸಲು— ಸಿನಿಮಾ ಪ್ರದರ್ಶನ.
ನಿಮ್ಮ ವ್ಯಾಪಾರದ ಅಭಿವೃದ್ಧಿಗೆ— **ಸ್ಲೈಡ್ ಪ್ರದರ್ಶನ.**
ಸಭೆ ಸಮಾರಂಭ ಮದುವೆಗಳಿಗಾಗಿ— **ಧ್ವನಿವರ್ಧಕ ಯಂತ್ರ.**
ಅಲ್ಲದೆ ಬೆಟರಿ ಚಾರ್ಜಿಂಗ್‌ನ ವ್ಯವಸ್ಥೆಯೂ ಇದೆ—
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,
ಉಡುಪಿ.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿಯ-- ಬಾಕಿ ಉಳಿದಿರುವ ಉಡುಪಿ ಸರ್ಕಲಿನ 4, ಬಂಟವಾಳ ಸರ್ಕಲಿನ 1 ಸ್ಥಾನಕ್ಕೆ ಉಪಚುನಾವಣೆ ಈ ಕೆಳಗಿನಂತೆ ಜರಗಲಿದೆ.

ತಾ 3—7—54ನೇ ಸಂಜೆ 4 ಗಂಟೆಯೊಳಗೆ ನಾಮಪತ್ರ ಸ್ವೀಕಾರ, ಅದೇ ಸಂಜೆ ಗಂಟೆ 5ಕ್ಕೆ ನಾಮಪತ್ರ ಪರಿಶೀಲನೆ. ಉಮೇದ್ವಾರಿಕೆಯನ್ನು ತಾ 5—7—54ನೇ ಸಂಜೆ 5 ಗಂಟೆಯೊಳಗೆ ಹಿಂತೆಗೆಯಬಹುದು. ಆವಶ್ಯ ಬಿದ್ದರೆ ಚುನಾವಣೆಯು ತಾ 11-7-54ಕ್ಕೆ ಆಯಾಯ ಸರ್ಕಲುಗಳಲ್ಲಿ ನಡೆಯುವುದು.

ನಗರದ ನಳ್ಳಿ ನೀರು ಯೋಜನೆಗೆ ಸಾಲವಾಗಿ 17½ ಲಕ್ಷ ರೂಪಾಯಿಯನ್ನು ಸಾರ್ವಜನಿಕರಿಂದ ಎತ್ತಬಹುದೆಂದು ಸರಕಾರವು ಮಂಗಳೂರು ನಗರಸಭೆಗೆ ಅಧಿಕಾರವಿತ್ತಿದೆ. ಅದರಂತೆ ತಾ. 15.7.54ರಿಂದ ಒಂದು ತಿಂಗಳವರೆಗೆ ನಗರಸಭೆಯು ಸಾರ್ವಜನಿಕರಿಂದ ಸಾಲ ಸ್ವೀಕರಿಸುವುದು. ಈ ಸಾಲಕ್ಕೆ ನಗರ ಸಭೆಯು 15 ವರ್ಷ ಅವಧಿಯ ಡಿಬೆಂಚರ್ ಜವಾಬ್ದಾರಿಯನ್ನಿತ್ತು 4½% ಬಡ್ಡಿ ತೆರುವುದು. 5 ವರ್ಷಗಳಿಗೊಮ್ಮೆ ಸಾಲದ ⅓ ಅಂಶವನ್ನು ಹಿಂದೆ ಸಲಾಯಿಸುತ್ತದೆ.

ಕೈಗಾರಿಕೆಯ ಕ್ಷೇತ್ರದಲ್ಲಿ ಸಂಶೋಧನೆ— ಕಳೆದ ತಾ 24ರಲ್ಲಿ ಮಂಗಳೂರಿನ ರೋಟರಿ ಕ್ಲಬ್ಬಿನ ಸಭೆಯೊಂದು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ಗತಸಭೆಯ ವರದಿಯನ್ನೋದಿದರು. ಶ್ರೀ ಎಚ್. ರತ್ನಾಕರ ಕಾಮತರು 'ಕೈಗಾರಿಕೆಯ ಕ್ಷೇತ್ರದಲ್ಲಿ ಸಂಶೋಧನೆ' ಎಂಬೀ ವಿಷಯದಲ್ಲಿ ವಿಚಾರ ಸಂಕೀರ್ಣವನ್ನು ಪ್ರಾರಂಭಿಸಿ ಪರರಾಷ್ಟ್ರಗಳ ಕೈಗಾರಿಕೆ ಉದ್ಯಮಗಳನ್ನು ವಿವರಿಸಿ ಭಾರತದಲ್ಲಿಯೂ ಪ್ರತಿಯೊಂದು ಕೈಗಾರಿಕೆಯ ಅಭಿವೃದ್ಧಿಗೆ ಪ್ರತ್ಯೇಕ ಸಂಶೋಧನಾ ಶಾಖೆಗಳು ಸ್ಥಾಪಿಸಬೇಕಾದುದು ಅತ್ಯಾವಶ್ಯಕವೆಂದರು. ಶ್ರೀಗಳಾದ ಕೆ. ವಿಶ್ವನಾಥ ಕಾಮತ್ ಮತ್ತು ಪಿ. ಆರ್. ರಂಗನಾಥ ಪೂಂಜರು ಚರ್ಚೆಯಲ್ಲಿ ಭಾಗವಹಿಸಿ ತಂತಮ್ಮ ಅಭಿಪ್ರಾಯಗಳನ್ನಿತ್ತರು. ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಭೆಯು ಕೊನೆಗೊಂಡಿತು.

ಗುಡಿಕೈಗಾರಿಕೆ ಸಂಘವನ್ನು — ಮಂಗಳೂರಲ್ಲಿ ಸ್ಥಾಪಿಸುವ ಕುರಿತು ತಾ 25ರಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿತು. ದ. ಕ. ಗುಡಿಕೈಗಾರಿಕೆ ಸಹಕಾರಿ ಸಂಘವನ್ನು ಪುನರುಜ್ಜೀವನ ಗೊಳಿಸಬೇಕೆಂದು ನಿರ್ಧಾರವಾಯಿತು. ಆ ಬಗ್ಗೆ ಈಗಿನ ಆಡಳಿತೆ ಮಂಡಳಿಯೊಡನೆ ವ್ಯವಹಾರ ನಡೆಸಬೇಕೆಂದಾಯಿತು. ಮುಂದಿನ ಸಭೆಯಲ್ಲಿ ವರದಿ ಮಾಡುವ ಬಗ್ಗೆ ಶ್ರೀಗಳಾದ ಬಿ. ಆರ್. ಕರ್ಕೇರ, ಬಿ. ಜಿ. ಸೆಟ್ಟಿ, ಎನ್. ಎಮ್. ಡೀನ್, ಬಿ. ಎಸ್. ಭಾಸ್ಕರ ರೈ ಮತ್ತು ಜೆ. ಬಿ. ಡಿ ಸೋಜರಿರುವ ಕಮಿಟಿ ರಚನೆಯಾಯಿತು.

ವಾರ್ಷಿಕೋತ್ಸವ— ಟಪ್ಪಾಲು ಮತ್ತು ತಂತಿ ಕೆಲಸಗಾರರ ಸಂಘದ ಮಂಗಳೂರು ಆರ್. ಎಮ್. ಎಸ್. ಶಾಖೆಯ ವಾರ್ಷಿಕೋತ್ಸವವು ಕಳೆದ ತಾ 20ರಲ್ಲಿ ಶ್ರೀ ಪಿ. ಕುಮಾರನ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ದ. ಕ. ಡಿವಿಜನಿನ ಪೋಸ್ಟಲ್ ಸುಪರಿಂಟೆಂಡೆಂಟ್ ಶ್ರೀ ಆರ್. ಬಿ. ವಿಶ್ವನಾಥನ್ ಮತ್ತು ಮಂಗಳೂರು ಪೋಸ್ಟಲ್ ಯೂನಿಯನ್ ಕಾರ್ಯದರ್ಶಿ ಶ್ರೀ ಕೆ. ಪಿ. ಆಚಾರ್ಯರು ಭಾಷಣವಿತ್ತರು. ಸಭಾಧ್ಯಕ್ಷರು ಆರ್. ಎಮ್. ಎಸ್. ಕೆಲಸಗಾರರ ಸಂಕಷ್ಟಗಳನ್ನು ವಿವರಿಸಿ ಅವರಿಗೆ ಇತರ ಟಪ್ಪಾಲು ಕೆಲಸಗಾರರಿಗಿಂತ ಹೆಚ್ಚಿನ ಸಂಬಳ ಕೊಡಬೇಕೆಂದೂ ಆರ್. ಎಮ್. ಎಸ್. ಕೆಲಸಗಾರರಿಗೆ ಪ್ರತ್ಯೇಕ ಅಖಿಲಭಾರತ ಸಂಘವು ಆವಶ್ಯವೆಂದೂ ಹೇಳಿದರು. ಹೊಸ ವರುಷಕ್ಕೆ ಕಾರ್ಯಕಾರಿ ಮಂಡಳಿಯ ರಚನೆಯಾಗಿ ಸಭಾಂತ್ಯವಾಯಿತು.

ಡಾ| ಮುಖರ್ಜಿ ಸ್ಮಾರಕ ಪಕ್ಷದ ಆಚರಣೆಯು— ಕಳೆದ ತಾ 23ರಲ್ಲಿ ಸ್ಥಳೀಯ ಜನಸಂಘದ ಆಶ್ರಯದಲ್ಲಿ ಶ್ರೀ ಭಾಸ್ಕರ ರಾಯರ ನೇತೃತ್ವದಲ್ಲಿ ಪ್ರಾರಂಭಿಸಲ್ಪಟ್ಟಿತು. ಶ್ರೀ ಕೆ. ರಾಮ ಭಟ್ಟರೂ ಅಧ್ಯಕ್ಷರೂ ಸಮಯೋಚಿತ ಮಾತುಗನ್ನಾಡಿ ಡಾ| ಮುಖರ್ಜಿ ಸ್ಮಾರಕ ನಿಧಿಗೆ ಮಹಾಜನರ ಬೆಂಬಲವನ್ನು ಅಪೇಕ್ಷಿಸಿ ಮಾತನಾಡಿದರು. ಶ್ರೀ ಮಧ್ವಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲೆಯಲ್ಲಿ ಕಾರ್ಯಾಂಗ —ನ್ಯಾಯಾಂಗ ವಿಭಜನೆಯು — ಇದೇ ತಾ 10ರಿಂದ ಜ್ಯಾರಿಗೆ ಬರುವುದು. ಆದುದರಿಂದ ನ್ಯಾಯಾಂಗ ವಿಭಾಗಕ್ಕೆ ಈ ಕೆಳಗಿನಂತೆ ಮೆಜಿಸ್ಟ್ರೇಟರುಗಳ ನೇಮಕವಾಗಿದೆ. ಜಿಲ್ಲಾ ಮೆಜಿಸ್ಟ್ರೇಟರು: ಶ್ರೀ ಪಿ. ಎಚ್. ಸುಂದರಮ್ ಇವರ ಕಾರ್ಯಕ್ಷೇತ್ರ: ದಕ್ಷಿಣ ಕನ್ನಡ.

ಇಡೀ ಜಿಲ್ಲೆಯನ್ನು ಸಬ್ ಡಿವಿಜನುಗಳಾಗಿ ವಿಭಜಿಸಲಾಗಿದ್ದು ಮಂಗಳೂರು ಸಬ್‌ಡಿವಿಜನು, ಜಿಲ್ಲಾ ಮೆಜಿಸ್ಟ್ರೇಟರ ಆಡಳಿತೆಗೂ, ಪುತ್ತೂರು ಸಬ್‌ಡಿವಿಜನು ಡಿವಿಜನಲ್ ಸಬ್‌ಡಿವಿಜನಲ್ ಮೆಜಿಸ್ಟ್ರೇಟರ ಆಡಳಿತೆಗೂ ಒಳಪಟ್ಟಿರುತ್ತದೆ. ಪುತ್ತೂರು ಸಬ್‌ಡಿವಿಜನಿಗೆ ಶ್ರೀ ಪಿ. ಎಫ್. ರೇಗೊ, ಅವರನ್ನು ಸಬ್‌ಡಿವಿಜನಲ್ ಮೆಜಿಸ್ಟ್ರೇಟರಾಗಿ ನೇಮಿಸಲಾಗಿದೆ.

ದ. ಕ. ಜಿಲ್ಲೆಯನ್ನು ಏಳು ಸಬ್ ಮೆಜಿಸ್ಟ್ರೇಟರುಗಳ ಕ್ಷೇತ್ರಗಳನ್ನಾಗಿ ವಿಭಾಗಿಸಲಾಗಿದೆ: 1 ಕುಂದಾಪುರ-ಶ್ರೀ ಎ. ವೆಂಕಟರಾವ್. 2 ಉಡುಪಿ—ಶ್ರೀ ಪಿ. ಚಂದ್ರಶೇಖರ ಹೆಗ್ಡೆ 3 ಮಂಗಳೂರು—ಶ್ರೀ ಎಮ್. ರಾಮಚಂದ್ರ ರಾವ್ 4 ಬಂಟ್ವಾಳ—ಶ್ರೀ ಆರ್. ಸಿ. ಕೇಸ್ತಲಿನೋ 5 ಪುತ್ತೂರು—ಶ್ರೀ ಬಿ. ವಿಶ್ವನಾಥ ಶೈ 6 ಕಾಸರಗೋಡು—ಶ್ರೀ ಕೆ. ರಂಗರಾವ್ 7 ಹೊಸದುರ್ಗ—ಶ್ರೀ ಯು. ವಾಸುದೇವಪ್ಪ. ಕುಂದಾಪುರ ಮತ್ತು ಉಡುಪಿ ಸಬ್ ಮೆಜಿಸ್ಟ್ರೇಟರುಗಳ ಕಾರ್ಯಕ್ಷೇತ್ರವನ್ನೊಳಗೊಂಡ ಕ್ಷೇತ್ರವು ಕಾರ್ಕಳದಲ್ಲಿರುವ ಎಡಿಶನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರ ಅಧಿಕಾರಕ್ಕೊಳಪಟ್ಟಿದೆ. ಈ ಮೆಜಿಸ್ಟ್ರೇಟರ ನೇಮಕ ಇನ್ನು ಆಗಬೇಕಷ್ಟೆ.

ಜಿಲ್ಲಾ ಬೋರ್ಡ್ ಚುನಾವಣೆಯೂ ಪ್ರ. ಸೋ. ಪಕ್ಷವೂ— ಕಳೆದ ತಾ 20ರಲ್ಲಿ ಸೇರಿದ ಪ್ರಜಾ ಸೋಶಲಿಸ್ಟ್ ಪಕ್ಷದ ಸಭೆಯಲ್ಲಿ, ಮುಂಬರುವ ದ. ಕ. ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಪಕ್ಷವು ಸ್ಪರ್ಧಿಸಬೇಕೆಂದು ನಿರ್ಣಯವಾಯಿತು. ಶ್ರೀ ಕೆ. ಆರ್. ಕಾರಂತರು ಸಭಾಧ್ಯಕ್ಷತೆ ವಹಿಸಿದ್ದರು. ಚುನಾವಣೆಯ ಪೂರ್ವ ಸಿದ್ಧತೆಗಾಗಿ ಕಾರ್ಯಕಾರೀ ಸಮಿತಿಗೆ ಶ್ರೀಗಳಾದ ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಪಿ; ಯು. ಎಸ್. ನಾಯಕ್, ವೈ. ಸುಬ್ಬಯ್ಯ ಹೆಗ್ಡೆ, ಕೆ. ನಾರಾಯಣ ರೈ ಮೊದಲಾದವರನ್ನು ಸೇರಿಸಲಾಯಿತು. ಪಕ್ಷದ ಕಡೆಯಿಂದ ಸ್ಪರ್ಧಿಸ ಬಯಸುವವರು ಇದೇ ತಾ 20ರೊಳಗೆ ತಮ್ಮ ನಾಮಪತ್ರಗಳನ್ನು ಕನ್ವೀನರರಿಗೆ ಕಳುಹಿಸಬೇಕೆಂದು ಕೂಡಾ ನಿಶ್ಚಯಿಸಲಾಯಿತು.

ಬಜ್ಪೆಯಲ್ಲಿ ಇಳಿಯತಕ್ಕ ವಿಮಾನವು— ಕಳೆದ ತಾ 27ರಲ್ಲಿ ಹವಾಮಾನವು ಪ್ರತಿಕೂಲವಾಗಿದ್ದುದರಿಂದ, ಎಂದಿನಂತೆ ಬಜ್ಪೆಯಲ್ಲಿ ಇಳಿಯಲಿಲ್ಲ. ಅಂತೂ ಜೂನ್ ತಿಂಗಳಲ್ಲಿ ನಾಲ್ಕು ಸಲ ವಿಮಾನ ಇಳಿಯದಂತಾಯಿತು.

ಸಹಾಯಾರ್ಥ ಚಲಚ್ಚಿತ್ರ ಪ್ರದರ್ಶನ— ಮಂಗಳೂರಿನ ಆರಾಮದಿ ವಾರಪತ್ರಿಕೆಯ ಸಹಾಯಾರ್ಥವಾಗಿ ಜ್ಯೋತಿ ಟಾಕೀಸಿನವರ ಬಲ್ಮಠದಲ್ಲಿರುವ ಚಲಚಿತ್ರ ಮಂದಿರದಲ್ಲಿ ತಾ. 11ನೇ ಆದಿತ್ಯವಾರ ಬೆಳಿಗ್ಗೆ 10-30ಕ್ಕೆ 'ಜೇಕ್ ಎಂಡ್ ದಿ ಬೀನ್ ಸ್ಟೋಕ್' ಎಂಬ ಹಾಸ್ಯಪ್ರದ ಇಂಗ್ಲಿಷ್ ಚಿತ್ರ ಪ್ರದರ್ಶಿಸಲ್ಪಡುವುದು. ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಶ್ರೀ ಎಫ್. ಎಕ್ಸ್. ಡಿ. ಪಿಂಟೋ, ಅವರು ಸಮಾರಂಭದ ಅಧ್ಯಕ್ಷತೆವಹಿಸುವರು. ಸಾರ್ವಜನಿಕರು ಪ್ರೋತ್ಸಾಹಿಸಬೇಕಾಗಿ ಪತ್ರಿಕೆಯ ಸಂಪಾದಕರವಿನಂತಿಯಿದೆ.

ಫೇಕ್ಟರಿ ಕಾನೂನಿನಂತೆ— ಉಡುಪಿಯ ಶ್ರೀ ಎಮ್. ಎನ್. ಭಟ್ಟರಿಗೆ ರೂ. 70/– ಕುಂದಾಪುರದ ಶ್ರೀ ಕೆ. ಡಿ. ಪೈಯವರಿಗೆ ರೂ 15/ರ ಜುಲ್ಮಾನೆಯನ್ನು ಕುಂದಾಪುರದ ಸಬ್ ಡಿವಿಜನ್ ಮೆಜಿಸ್ಟ್ರೇಟರು ವಿಧಿಸಿರುತ್ತಾರೆಂದೂ ಮಂಗಳೂರಿನ ಫೇಕ್ಟರಿ ಇನ್ಸ್‌ಪೆಕ್ಟರ್ ಶ್ರೀ ಎ. ಮರಿಯಪ್ಪನ್, ಬಿ. ಎ. ಬಿ. ಇ. ಇವರು ಕಂಪ್ಲೇಂಟ್ ದಾಖಲ್ಮಾಡಿದವರೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಕಾರಿಗೆ ಡಿಕ್ಕಿ— ಕಳೆದ ತಾ 19ರಲ್ಲಿ ತಾನು ಸೈಕಲಿನಲ್ಲಿ ಹೋಗುತ್ತಿದ್ದಾಗ ಕರಂಗಲ್ಪಾಡಿಯಲ್ಲಿ ಕಾರೊಂದು ಡಿಕ್ಕಿ ಹೊಡೆದು ಸೈಕಲು ಪುಡಿಯಾಯಿತೆಂದೂ ಪೋಲಿಸ ಅಧಿಕಾರಿಗಳು ವಿಚಾರ ನಡೆಸಿ ಸೈಕಲ್ ರಿಪೇರಿ ಖರ್ಚು ಕೊಡಿಸಿದರೆಂದೂ ಕೊಲಾಸ್ಕೊದಿನ ಉಪಾಧ್ಯಾಯ ಶ್ರೀ ಬಿ. ಯಸ್. ತೋಡಿನ್ನಾಯರು ತಿಳಿಸುತ್ತಾರೆ.

ವನ ಮಹೋತ್ಸವ

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯು ಸಹಜವಾಗಿಯೂ ಮರಗಿಡಗಳ ನಾಡೆಂಬುದು ನಿಜ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಹೆಚ್ಚಿನ ಪ್ರದೇಶಗಳು ಮಲೆನಾಡಾಗಿದ್ದು ದಟ್ಟವಾದ ಅರಣ್ಯಗಳಿಂದ ಶೋಭಿಸುತ್ತದೆ. 5,11,789 ಎಕ್ರೆಗಳಷ್ಟು ವಿಸ್ತೀರ್ಣದ ಕಾಡುಗಳಿಂದ ತುಂಬಿದೆ. ಅಲ್ಲದೆ ಇನ್ನೂ 3,61,585 ಎಕ್ರೆಗಳಲ್ಲಿ ವಿವಿಧ ಜಾತಿಯ ಮರಮಟ್ಟುಗಳ ತೋಟಗಳಿವೆ. ಆದರೂ ಹೆಚ್ಚಿನ ಪ್ರದೇಶಗಳಲ್ಲಿ ಗೊಬ್ಬರ ಸೊಪ್ಪಿಗೆ ಉಪಯುಕ್ತವಾದ ಮರಗಳು ಇನ್ನೂ ಸಾಕಷ್ಟು ಇಲ್ಲದೆ ನಮ್ಮ ಭೂಮಿಗಳಿಗೆ ಸಾಕಷ್ಟು ಗೊಬ್ಬರವು ಇನ್ನೂ ದೊರಕುತ್ತಿಲ್ಲ. ಈ ಗೊಬ್ಬರದ ಅಭಾವವನ್ನು ನೀಗಿಸಿ, ನಮ್ಮ ಭೂಮಿಯನ್ನು ಫಲವತ್ತಾಗಿ ಮಾಡಲು ಗೊಬ್ಬರ ಸೊಪ್ಪಿಗೆ ಯೋಗ್ಯವಾದ ಮರಗಿಡಗಳನ್ನು ಹೆಚ್ಚಾಗಿ ನಡುವುದು ಅವಶ್ಯವಾಗಿದೆ. ಗೊಬ್ಬರ ಸೊಪ್ಪಿಗೆ ಅತೀ ಉಪಯುಕ್ತವಾದ ಮರವೆಂದರೆ "ಗ್ಲೈರಿಸಿಡಿಯಾ" (Glyricidia) ಅಥವಾ "ನಗರ ಕೇಸರಿ."

"ನಗರ ಕೇಸರಿ"ಯ ಗಿಡಗಳನ್ನಾಗಲೀ ಒಳ್ಳೆಯ ಗೆಲ್ಲಿನ ತುಂಡುಗಳನ್ನಾಗಲೀ ನಡಬಹುದು. ಇವುಗಳನ್ನು ನಿಮ್ಮ ತಾಲೂಕಿನ ಎಗ್ರಿಕಲ್ಚರಲ್ ಡೆಮೊನ್‌ಸ್ಟ್ರೇಟರಿಂದಾಗಲೀ ಕಂಕನಾಡಿಯಲ್ಲಿರುವ ಭತ್ತ ಪರಿಶೋಧನಾ ಕ್ಷೇತ್ರದಿಂದಾಗಲೀ ಪಡೆಯಬಹುದು.

ಅಡಕೆ ಮತ್ತು ತೆಂಗು ತೋಟಗಳಿಗೆ ಹಸುರೆಲೆ ಗೊಬ್ಬರವು ಅತೀ ಆವಶ್ಯ. ಕರಾವಳಿಯಲ್ಲಿರುವ ಹೆಚ್ಚಿನ ತೋಟಗಳಿಗೆ ಬೇಕಾದಷ್ಟು ಸೊಪ್ಪು ಗೊಬ್ಬರಗಳು ದೊರಕದೆ, ಫಸಲಿಯು ಕಮ್ಮಿಯಾಗುತ್ತಿವೆ. ಆದ್ದರಿಂದ ಪ್ರತಿಯೊಬ್ಬ ಅಡಕೆಯ ಮತ್ತು ತೆಂಗಿನ ತೋಟಗಾರನೂ ತನ್ನ ತೋಟದ ಸುತ್ತಲೂ ಈ "ಗ್ಲಿರಿಸೀಡಿಯಾ" ಗಿಡಗಳನ್ನು ಅರ್ಧ ಗಜ ಕ್ಕೊಂದರಂತೆ ನಟ್ಟು, ತಮ್ಮ ತೋಟಕ್ಕೆ ಬೇಕಾದ ಸೊಪ್ಪನ್ನು ತೋಟದಲ್ಲಿಯೇ ಬೆಳೆಯಿಸಿ ಉಪಯೋಗಿಸುವುದು ಆಗತ್ಯವಾಗಿದೆ.

ತಾ. 1-7-54ರಂದು ಪ್ರಾರಂಭವಾಗುವ ವನಮಹೋತ್ಸವದಂದು, ಬೇರೆ ಹಣ್ಣು, ಹಂಪಲು, ಮರಗಿಡಗಳೊಂದಿಗೆ, ಈ ಹಸುರೆಲೆ ಗೊಬ್ಬರದ ಮರವಾದ "ಗ್ಲೈರಿಸಿಡಿಯಾ" ಮರವನ್ನು ಎಲ್ಲಾ ರೈತರೂ ನಟ್ಟು ತಮ್ಮ ಭೂಮಿಯ ಫಲವತ್ತನ್ನು ಕಾಪಾಡಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವರಾಗಿ ನಂಬಿಕೆ.

ಈ ಸಸಿಗಳನ್ನು ದಕ್ಷಿಣ ಕನ್ನಡಾ ಮಾರ್ಕೆಟು ಕಮಿಟಿಯಿಂದಲೂ ಪಡೆಯಬಹುದು.

ಇಂಡಿಯಾ ಸರಕಾರ

15 ವರ್ಷದ ವರ್ಷಾಸನ ಸರ್ಟಿಫಿಕೇಟುಗಳು

(ಇಂಡಿಯನ್ ಇನ್‌ಕಮ್ ಟೇಕ್ಸ್ ವಿರಹಿತವಾದ್ದು)

15 ವರ್ಷಗಳ ಅವಧಿಗೆ ತಿಂಗಳೊಂದಕ್ಕೆ ರೂ 25, ರೂ. 50, ರೂ 100 ಮತ್ತು ರೂ. 200 ಅನುಕ್ರಮವಾಗಿ ಸಿಗುವಂತಹ ವರ್ಷಾಸನ ಸರ್ಟಿಫಿಕೇಟುಗಳು 1ನೇ ಜುಲ್ಯಾ 1954ರಿಂದ ಮುಂದೆ ನೋಟೀಸು ಕೊಡುವ ತನಕ ಈ ಕೆಳಗಿನ ಹೊರಪಡಿಸುವ ಬೆಲೆಯಲ್ಲಿ ಸಿಗುತ್ತವೆ:—

ರೂ. 25ರಂತೆ ಮಾಸಿಕ ಸಂದಾಯದ ವರ್ಷಾಸನ ಸರ್ಟಿಫಿಕೇಟಿನ		ಹೊರಪಡಿಸುವ ಬೆಲೆ	ರೂ. 3,500
ರೂ. 50	,,	,,	ರೂ. 7,000
ರೂ. 100	,	,,	ರೂ. 14,000
ರೂ. 200	,,	,.	ರೂ. 28,000

ಈ ಸರ್ಟಿಫಿಕೇಟುಗಳು **ವ್ಯಕ್ತಿಗಳಿಗೆ ಮಾತ್ರ** ದೊರೆಯುವುವು. ಸಂಸ್ಥೆಗಳು ಫರ್ಮು ಮತ್ತು ಕೊರ್ಪೊರೇಶನುಗಳಿಂದ ವ ಅವುಗಳ ಪರವಾಗಿ ಮಾಡಿದ ಅರ್ಜಿಗಳಿಗೆ ಗಮನ ಕೊಡೋಣಾಗಲಿಕ್ಕಿಲ್ಲ.

ಸರ್ಟಿಫಿಕೇಟುಗಳಲ್ಲಿ ವಿನಿಯೋಗಿಸಬಹುದಾದ ಪರಮಾವಧಿ ಮೊಬಲಗು:

ಒಬ್ಬ ವ್ಯಕ್ತಿಗೆ ರೂ. **28,000**
ಇಬ್ಬರು ಜೊತೆಯಾಗಿ ರೂ **56,000**

ಕೊಂಡುಕೊಂಡ ಬೆರೆಯ ಪಾವತಿಯ ತಾರೀಕಿನಿಂದ ಒಂದು ತಿಂಗಳು ಪೂರ್ಣವಾದ ಮೇಲೆ ಮಾಸಿಕ ಸಂದಾಯವು ಆರಂಭವಾಗುವುದು. ಅಂತಹ ಸಂದಾಯಗಳು ಇಂಡಿಯನ್ ಇನ್‌ಕಮ್ ಟೇಕ್ಸಿನಿಂದ ವಿರಹಿತವಾಗಿ ಆದಾಯ ತೆರಿಗೆಯ ಬಗ್ಗೆ ಪಡೆದವನ ಜುಮ್ಲಾ ಆದಾಯದ ಗಣನೆಯಲ್ಲಿ ಇದನ್ನು ಲೆಕ್ಕಕ್ಕೆ ಹಿಡಿಯೋಣಾಗಲಿಕ್ಕಿಲ್ಲ.

ವರ್ಷಾಸನ ಸರ್ಟಿಫಿಕೇಟುಗಳನ್ನು ಸುಭದ್ರತೆಗಾಗಿ ಪಬ್ಲಿಕ್ ಡೆಟ್ ಆಫೀಸುಗಳಲ್ಲಿ ಸ್ವೀಕರಿಸಲಾಗುವುದು ಮತ್ತು ಅಪೇಕ್ಷಿಸಿದಲ್ಲಿ ಅವನ್ನು ಪಡೆದವರಿಗೆ ಮಾಸಿಕ ಸಂದಾಯಗಳನ್ನು ಕಳುಹಿಸಲಾಗುವುದು.

ಬೊಂಬ್ಯಾ, ಕಲ್ಕತ್ತಾ, ಡಿಲ್ಲಿ, ಮದ್ರಾಸ್ ಮತ್ತು ಬೆಂಗಳೂರು ಇಲ್ಲಿಯ ರಿಸರ್ವ್ ಬೇಂಕ್ ಆಫ್ ಇಂಡಿಯದ ಆಫೀಸುಗಳಲ್ಲಿಯೂ; ಹೈದರಾಬಾದು ಸಂಸ್ಥಾನದಲ್ಲಿ ಹೈದರಾಬಾದು ಸ್ಟೇಟ್ ಬೇಂಕಿನ ಶಾಖೆಗಳಲ್ಲಿಯೂ; ಮೈಸೂರು, ಶಿವಮೊಗ್ಗ, ಮಂಡ್ಯ, ಚಿಕ್ಕಮಗಳೂರು, ಚಿತ್ರದುರ್ಗ, ತುಮಕೂರು ಮತ್ತು ಹಾಸನದಲ್ಲಿ ಬೇಂಕ್ ಆಫ್ ಮೈಸೂರು ಲಿಮಿಟೆಡ್ ಇದರ ಶಾಖೆಗಳಲ್ಲಿಯೂ; ಇಂಡಿಯಾದ ಇತರ ಸ್ಥಳಗಳಲ್ಲಿ ಇಂಪೀರಿಯಲ್ ಬೇಂಕ್ ಆಫ್ ಇಂಡಿಯಾದ ಶಾಖೆಗಳಲ್ಲಿಯೂ ಮತ್ತು ಇಂ[illegible]ಲ್ಲಿ ಸರಕಾರೀ ಖಜಾನೆ ಕೆಲಸ ಮಾಡುವ ಈ ಮೇಲಿನ ಯಾವದಾದರೂ ಬೇಂಕುಗಳ ಶಾಖೆಗಳು ಇಲ್ಲದ ಸ್ಥಳಗಳಲ್ಲಿ ಎಲ್ಲಾ ಖಜಾನೆಗಳು ಮತ್ತು ಉಪಖಜಾನೆಗಳಲ್ಲಿಯೂ ಅರ್ಜಿಗಳನ್ನು ಸ್ವೀಕರಿಸಲಾಗುವುದು.

ಸಂಪೂರ್ಣ ಮಾಹಿತಿ ಬಗ್ಗೆ ಈ ಮೇಲಿನ ಪಡಕೊಳ್ಳುವ ಕಾರ್ಯಾಲಯಗಳಲ್ಲಿ ಯಾವುದಕ್ಕಾದರೂ ಬರಮಕೊಳ್ಳಿರಿ.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಸನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. 5-6-0

ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

ಸ್ವೀಕಾರ—ವಿಮರ್ಶೆ

ಕ್ಷಾತ್ರ ದರ್ಶನ—

ಬರೆದವರು: ಅ. ಗೌ. ಕಿನ್ನಿಗೋಳಿ. ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದ. ಕನ್ನಡ. ಬೆಲೆ: ಒಂದು ರೂಪಾಯಿ.

ಚಪೋಟಾದ ನಾಟಕಕ್ಕೆ ಹಿನ್ನುಡಿ ಬೇಡವೆಂಬ ಶೇಕ್ಸ್‌ಪಿಯರನ ಮಾತನ್ನು ಉದ್ಧರಿಸುತ್ತಾ ಈ ಪುಸ್ತಕಕ್ಕೆ ಮುನ್ನುಡಿಯ ಕುಂಕುಮ ಬೊಟ್ಟನ್ನು ಇಡುತ "ಶಾಸ್ತ್ರ" ವನ್ನಪ್ಪೀಶ್ರೀ ಮುಂಜೇಶ್ವರದ ಗೋವಿಂದ ಪೈಗಳು ನೂರಿ "ಇದೊಂದು ಸೊಗಸಾದ ಕವಿತೆ; ರಚಕರನ್ನು ಮನಸಾರ ಅಭಿನಂದಿಸುತ್ತೇನೆ" ಎಂದಿದ್ದಾರೆ. ಕಿನ್ನಿಗೋಳಿಯವರ ಈ ಮಿಶ್ರಛಂದ ಕಾವ್ಯ ರಾಷ್ಟ್ರಕವಿಗಳ ಮೆಚ್ಚುಗೆಗೆ ಪಾತ್ರವಾದಂತೆ, ಕನ್ನಡದ ಇತರ ರಸಿಕರಿಗೂ ಸೊಗಯಿಸಬಹುದು. ಜೈಮಿನಿ ಭಾರತದಲ್ಲಿ ಬರುವ ಬಭ್ರುವಾಹನನ ಕಾಳಗದ ಕತೆಯನ್ನು ಇಲ್ಲಿ ಆಯ್ದುಕೊಂಡಿದ್ದರೂ ಕವಿತೆಯಲ್ಲಿ ವ್ಯಕ್ತಗೊಂಡ ಕಲ್ಪನಾಶಕ್ತಿಯೂ ಹೊಸತನವೂ ಕಾವ್ಯ ಸ್ವೋಪಜ್ಞತೆಯ ಕವಿಯ ಪ್ರತಿಭೆಗೆ ಸಾಕ್ಷಿ ಹೇಳುತ್ತವೆ. ಶೈಲಿಯು ಸರಳವಾಗಿದ್ದರೂ ಪದಸಂಯೋಜನೆಯಲ್ಲಿ ಲಾಲಿತ್ಯವೂ ಗಾಂಭೀರ್ಯವೂ ಕಂಡು ಬರುತ್ತವೆ. ಅರ್ಜುನನ ಬೆಂಗಾವಲಿನಲ್ಲಿ ಬಂದ ಧರ್ಮರಾಜನ ಅಶ್ವಮೇಧದ ತುರಗವನ್ನು ಕಟ್ಟಿದ ನೀಲಧ್ವಜನ ರಾಣಿ ಜ್ವಾಲೆ ಕ್ಷತ್ರ ತೇಜದ ಕನೆಯೂ ಕೆಚ್ಚು ಗಡಣದ ಠವಣೆಯೂ ಅಧಿಕೀಯಳೂ ಆಗಿದ್ದಳು. ಕವಿಯು ಜ್ವಾಲೆಯನ್ನು "ಅಕೆಗಿಡ ಅಕೆಯು!" ಎಂದೆನ್ನುತ್ತಾನೆ. ಆದರೆ ನೀಲಧ್ವಜನ ಧೋರಣೆಯನ್ನು ಮೆಚ್ಚದೆ, ನಿಷ್ಪನ ಜಾಹ್ನವಿಯ ಬಳಿ ಬಂದು ಅವಳನ್ನು ಅರ್ಜುನನ ವಿರುದ್ಧ ರೊಚ್ಚಿಗೆಬ್ಬಿಸುತ್ತಾಳೆ. "ಗಂಗೆಯು ಕರೆಯು ಸೀಳುವಂತೆ ಅಳಲ್ಲಾಕಕೆ ಒಗ್ಗರಣೆಯನ್ನಿತ್ತವಳು." ಆಗ "ವರದೆಯಾಗಿದ್ದವಳೆ ಶಾಪದೆಯಾಗಿ ಗಂಗೆಯು ಅರ್ಜುನನಿಗೆ ಅಹಿತವಾದವಳು. ಪರಿಣಾಮವಾಗಿ ತೀರ್ಥಯಾತ್ರಾ ಕಾಲದಲ್ಲಿ ಮಣಿಪುರದಲ್ಲಿ ಚಿತ್ರಾಂಗದೆಯೊಂದಿಗೆ ತಿಂಗಳ ಕಾಲ ಪ್ರಣಯಕೇಳಿಯಾಡಿ "ಬಾಳಬಳ್ಳಿಯ ಇಲ್ಲಿ ತಳೆದು ನಡೆನಡೆಸುತಿರ್ದ್ದ, ಮೂಡ ಕೋಣನ ಮೊಪದೆ ಮೊಳೆತ್ತಿರ್ಪುದು!" ಎಂದು ವಿಷಾದದಿಂದಲೆ ಹೊರಟಿದ್ದ ಅರ್ಜುನನಿಗೆ ಚಿತ್ರಳ ನೆನಪು ಕಾಡಿಸುತ್ತದೆ. "ಅಭಿಮನ್ಯುವಿಗು ಮಿಕ್ಕ [illegible]" [illegible] ಬಭ್ರುವಾಹನನು ಕುದುರೆಯನ್ನು ಕಟ್ಟಿ ಕಾದಲೆಳಸಿದಾಗ ಅರ್ಜುನ ದೇವನೆ. "[illegible]" [illegible] ಚಿತ್ರಾಂಗದೆ [illegible] [illegible] "[illegible]" ಎನ್ನುವಳು. [illegible] ನೀಲಧ್ವಜನ [illegible] ಬಭ್ರುವಾಹನನ [illegible] ಕೇಳಿದ ಅರ್ಜುನನಿಗೆ "[illegible] [illegible] ಬಿಟ್ಟ" ಆದರೆ "ತನ್ನದೆಯ ಕ್ಷತ್ರತೆಯ ಬಿರುಸಿಂಗಿದ ಕತ್ತರಿಸು [illegible]?" ತಪತನೆದು ಜನಿಸಿದ ಬಭ್ರುವಾಹನನನ್ನು ಕಂಡು ಅರ್ಜುನ "ನೀನೆಂದು ಪೇಳಾ ಮಗಾ ಬೀರನೇ ಈತ?" ಎಂದು ನೀಲಧ್ವಜನೊಡನೆ ವ್ಯಂಗ್ಯವಾಡುವನು. ಅಷ್ಟರಲ್ಲಿಂದು ಕರೆದು ಚಿತ್ರಾಂಗದೆಯ ಅಭಿಪ್ರಾಯದ ಪ್ರೇರಿತ ಬಭ್ರುವಾಹನನೊಡನೆ "ನೀನೊರೆದ ಕತೆ ಕೇಳುವುದಕೆ ಚೆನ್ನಾಗಿಹುದು; ಆದರೂ ಅನ್ಯರ ದೇವನು ತನತೆಂದು ಎನ್ನಲ್ಲಿ ನಾನೇನು ಷಂಡನಲ್ಲ" ಎಂದೂ ಕಪ್ಪಕಾಣಿಕೆಯನ್ನೊಪ್ಪಿಸಿ ತನ್ನಾಯಿತೆಂದು ಕೈಂಕರ್ಯವನ್ನಾಶಿಸುತ್ತಿರುವುದರಿಂದ ಅದನ್ನು ಒಪ್ಪಿಕೊಳ್ಳುವೆನೆಂದೂ ಸೋತವರನ್ನು ಬೆಂಗಾವಲಿಗೆ ಕರೆದೊಯ್ಯುದು ಕ್ರಮವಾದರೂ "ನೀನು ಬಾರದಿರು, ಮನ್ನಿಸುವೆ"ನೆಂದೂ ಹೇಳುವನು; ಚಿತ್ರಾಂಗದೆಯ ಚಾರಿತ್ರ್ಯವನ್ನು ಜರೆಯುವನು. ಇದರಿಂದ ಕುಪಿತನಾದ ಬಭ್ರುವಾಹನನು ಧುರವೀಳೆಯವನ್ನೀಯುವನು. "ಈವರೆಗೆ ರಣದಲಿ ಮಲೆತು ಮಣಿದವರುಂಟು; ಆದರೆ ಮಣಿದು ಮಲೆತವರಿಲ್ಲ!" ಹೀಗೆ ಕೈಗೊಂಡ ಅದ್ಭುತ ಸಂಗ್ರಾಮದಲ್ಲಿ ಬಿರುಸು ಹೆಚ್ಚಿತು. ಚಿತ್ರಾಂಗದೆಯ ಹಾಡೋ—"ಬಸಿರ ಕಂದನು ಒಬ್ಬನಾದರೆ, ತನುಮನಕೆ ಅಧಿಪನ-ಪತಿ-ಮಗುದೊಬ್ಬ! ಕಂಗಳೊಳಾವುದೆ ರಡರಲಿ ಮುಖ್ಯವು?" ಈ ದ್ವಂದ್ವದಲ್ಲಿ ಬಿದ್ದ ಅವಳಿಗೆ "ಬಿದ್ದೋಡಬರುವೆನೇ? ಗೆದ್ದು ಬಂದೆನು ತಾಯಿ!" ಎಂದು ಮಗನು ಉಬ್ಬಿನಿಂದ ನುಡಿದಾಗ ಸಿಡುಕೇ ಟ್ಯಂಟಾಯಿತು. ಅವಳು "ಬಾಳುವೆನೆ ಬಿಟ್ಟೆನ್ನ ಬಾಳ ಬೆಳಕನು?" ಎಂದು ವಿಲಪಿಸುವಳು. "ನಿನ್ನನಪ್ಪುವ ವೇಳೆ—ಒಂದು ಕೈಯೊಳಗೆನ್ನ ತಾಯ್ತನದ ಭಾವದಲಿ, ಒಂದು ಕೈಯೊಳು ನಿನ್ನ ತಂದೆಯ ನಿಭಾವದಲಿ ತಬ್ಬುತಿದ್ದೆನು" ಎನ್ನುವಳು. "ನನ್ನ ನೇವಸನಿಂದ ಕೂರಸಿಯ ಪಾವಿತ್ರ್ಯ ದ್ವಿಗುಣಿಸಲಿ" ಎಂದು ತನ್ನನು ತರಿಯಲು ಕೇಳುವಳು. ಇದನ್ನು ಕಂಡು ಕಳವಳಗೊಂಡ ಬಭ್ರುವಾಹನನು ವೈದ್ಯರಿಗೆ ಕರೆಕಳುಹುವನು. ಅವರು ಅರ್ಜುನನನ್ನು ಪರೀಕ್ಷಿಸಿ "ಮೂಲಿಕೆಗೆ ಮಿದಿಯವಾ ಕಾರ್ಯವಿದು; ರಕ್ತ ತುಂಬಲು ಬೇಕು" ಎನ್ನುವರು. ಆಗ ಚಿತ್ರಾಂಗದೆ "ಹಿಳಿಸೆನ್ನ ನೆತ್ತರನು; ಉಳಿಸೆನ್ನ ಭಾಗ್ಯವನು" ಎಂದು ಸಿದ್ಧಳಾಗುವಳು. ಅಂದಿ ಗಂಡನೆ ದಿನಕೆ "ಎಂಥ ವಿಸ್ಮಯವೋ! ಜಂಗಿಸ್ದ ನೆನಹದು ತಾನಾಗಿ ಮರಳಿ ಮುದ್ರಿತವಾಯ್ತು" ಅರ್ಜುನನ ಚಿತ್ತಭಿತ್ತಿಯ ಮೇಲೆ! ಅವನು ಬಸವಳಿದು ಬಿದ್ದಿದ್ದ ಚಿತ್ರಾಂಗದೆಯನ್ನು "ದೇವಿ—ಚಿತ್ರ ಚಿತ್ರಾ" ಎಂದು ಒಂಟುಸಿರೇ ಕರೆದು ಕ್ರಂದನ ಗೈದನು. ಆಗ "ಗುಪ್ತವಾಗಿಹ ಸತ್ಯ ಕಟ್ಟಕಡೆಗಳಿಗೆಯಲಿ ಘನಮಹೋನ್ನತವಾಗಿ ಜನ ಜನಿತವಪ್ಪಂತೆ" ದೇವೀ ಕಣ್ಣು ತರೆದು "ತನ್ನಿನಿಯನನು ನೋಡಿ ನಗುಮಲ್ಲಿಗೆಯ ಮುಗುಳು ಚೆಲ್ಲಿದಳು." "ಅರು ಮೂದರಿಯದಾ ಹಸುಳೆ" ಬಭ್ರುವಾಹನನನ್ನು ಕೈನಿಡಿದು ಮನ್ನಿಸಬೇಕೆಂದು ಪ್ರಾರ್ಥಿಸುತ್ತಾ "ಪ್ರಭುವೆ, ಬಾಯಾರುತಿದೆ; ನಿಮ್ಮಮೃತ ಹಸ್ತದಲಿ, ಅಂತೆ ಕಂಡಾ ನಿನ್ನ ನಿಷ್ಪಾಪ ಹಸ್ತದಲಿ ತಣಿಸಿರರತೆಯನು, ಹರಿಸಿ ಒಲವಿನೊರತೆಯನು" ಎನ್ನುವಳು. "ಪ್ರೇಮವಾತ್ಸಲ್ಯಗಳ ಅಮೃತಧಾರೆಯ ಕೂಡಿತು" "ಧನ್ಯಳಾದೆನು" ಎಂದು ಕಣ್ಮುಚ್ಚುವಳು... ಧೂರ್ತ ಪಾರ್ಥನನ್ನು ಬಲಿ ತೆಗೆದುಕೊಳ್ಳಬೇಕೆಂದು ಹವಣಿಸಿದ ಜ್ವಾಲೆ, ಚಿತ್ರಾಂಗದೆಯ ಮೃತ್ಯುವನ್ನು ಕಂಡು ಪಾಶ್ಚಾತ್ತಾಪದ ಬೆಂಕಿಯೊಂದು ಕಪಿಲೆ ಬಣಿಯಾಯಿತೆ ಎಂದು ಪಲುಬುತ್ತಾ ಚಿತ್ರಾಂಗದೆಯ ಚಿತೆಗೆ "ಬಂದೊಮ್ಮೆಲೆ ನೆಗೆದಳು." ಹೀಗೆ ಮುಗಿಯುವ ಕತೆಯಲ್ಲಿ ಉಪಮೆಗಳೂ ಇತರ ಅಲಂಕಾರಗಳೂ ನುಂಬಿ ತುಳುಕುತ್ತವೆ. ಸನ್ನಿವೇಶಗಳೂ ಮಾತುಗಳೂ ಮನ ಸೆಳೆಯುತ್ತವೆ. ಚಿತ್ರಾಂಗದೆಯು ಅರ್ಜುನನಿಗೆ ರಕ್ತ ಪೂರಣ ಮಾಡುವುದು ಕೃತಕವೆಂದೂ ವಿಸಂಗತಿಯೆಂದೂ ಕಂಡು ಬಂದರೂ ನವ್ಯ ಕಲ್ಪನೆಯನ್ನದು ಪೋಷಿಸುತ್ತದೆ. "ಈ ಕವಿಗೆ, ಇತರ ಕವಿತಾ ಶಕ್ತಿಗೆ ಹುಲುಸಾದ ಭವಿಷ್ಯವಿದೆ; ಆ ಭವಿಷ್ಯವನ್ನು ದೇವರು ಕಾಪಾಡಲಿ, ಉತ್ತರೋತ್ತರವಾಗಿ ಬೆಳಗಲಿ" ಎಂಬ ಗೋವಿಂದ ಪೈಗಳ ಹಾರೈಕೆಯೊಡನೆ ನಾವೂ ಧ್ವನಿಗೂಡಿಸುತ್ತೇವೆ.

—ಕುಮಾರಸ್ವಾಮಿ.

ಅಘು ಪರಿಚಯ

❀ ದಿವಂಗತ ಅಜ್ಜನಗದ್ದೆ ಶಂಕರನಾರಾಯಣಯ್ಯನವರು ಬರೆದ "ಅನುಸಾಲ್ವ ಗರ್ವಭಂಗ ಮತ್ತು ನೀಲಧ್ವಜಕಾಳಗ" ಎಂಬೀ ಯಕ್ಷಗಾನ ರೂಪಕವನ್ನು (ಬೆಲೆ: ಆರಾಣೆ) ಕಾರ್ಕಳದ ಪುಸ್ತಕದ ವ್ಯಾಪಾರಿಗಳಾದ ಅರ್. ವಿಟ್ಠಪ್ಪ ಶೆಣೈ ಎಂಡ್ ಸನ್ಸ್ ಇವರು ಪ್ರಕಟಿಸಿರುವರು. ಯಕ್ಷಗಾನಾಭಿಮಾನಿಗಳಿಗೆ ಪುಸ್ತಕವು ಪ್ರಿಯವಾದೀತು. ಆದರೆ ೪೭೫ ಪದ್ಯಗಳಿಂದ ಕೂಡಿದ ಈ ಪ್ರಸಂಗವನ್ನು ರಾತ್ರಿ ಬೆಳಗಾಗುವುದರೊಳಗೆ ಪೂರ್ಣವಾಗಿ ಆಡಲು ಸಾಧ್ಯವೇ ಎಂಬ ಸಂದೇಹ ನಮಗಾಗುತ್ತದೆ.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಧೀನ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) [illegible] ಗಲ್ಲಿ, ಹುಬ್ಬಳ್ಳಿ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. D.s (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು.

[೩ನೇ ಪುಟದಿಂದ]

ದೃಢವಾದ ಪ್ರಗತಿ

ಆಯಾ ದೇಶದ ಆವಶ್ಯಕತೆಯನ್ನು ಅರಿತು ಕಾರ್ಯಕ್ರಮಗಳನ್ನು ರೂಪಿಸುವ ಪದ್ಧತಿಯನ್ನು ಅನುಸರಿಸುವ ಮೂಲಕ ಕಳೆದ ವರ್ಷ ಒಂದು ಪ್ರಾಮುಖ್ಯವಾದ ಹೆಜ್ಜೆಯನ್ನು ಮುಂದಿಡಲಾಯಿತು. ಏನಾಗಬೇಕೆಂಬುದನ್ನು ಸೂಚಿಸುವುದಕ್ಕೆ ಇದ್ದ ಪ್ರಾಮುಖ್ಯತೆಯು ಈಗ ಉದ್ದಿಷ್ಟ ಕಾರ್ಯವನ್ನು ಹೇಗೆ ಮಾಡಿ ಮುಗಿಸಬಹುದೆಂಬುದಕ್ಕೆ ಸಲ್ಲುತ್ತದೆ ಸುಮಾರು ಒಂದು ನೂರಕ್ಕೂ ಮಿಕ್ಕಿದ ಯೋಜನೆಗಳನ್ನು ಸಹಾಯ ಪಡೆಯುವ ದೇಶದ ಮನೋಗತವನ್ನನುಸರಿಸಿ, ತಿದ್ದುಪಡಿಗೊಳಪಡಿಸಿದುದರ ರಹಸ್ಯ ಇದೇ ಆಗಿದೆ. ಹೀಗೆ ಯೋಜನೆಗಳನ್ನು ಸ್ವೀಕರಿಸುವ ದೇಶಗಳ ಅಂಗೀಕಾರದೊಂದಿಗೆ ಈ ವರ್ಷ (೧೯೫೪)ದಲ್ಲಿ ಅನುಸರಿಸಲಾಗುವ ಕಾರ್ಯಕ್ರಮಗಳು ಸುಮಾರು ೨,೨೨,೮೦,೦೦೦ ಡಾಲರುಗಳ ವೆಚ್ಚವನ್ನು ಮುಟ್ಟುತ್ತವೆ. ಕಳೆದ ವರ್ಷ ಮುಂದಿಟ್ಟ ಇನ್ನೊಂದು ಪ್ರಮುಖ ಹೆಜ್ಜೆಯೆಂದರೆ ಆಡಳಿತದ ವೆಚ್ಚದಲ್ಲಿ ಉಂಟುಮಾಡಿದ ಕಡಿತ—ಮಂಡಳದ ಅಧ್ಯಕ್ಷರು ನಡೆಸಿದ ಸರ್ವೆಯ ಪರಿಣಾಮವಾಗಿ ಸುಮಾರು ೨,೮೨,೦೦೦ ಡಾಲರುಗಳಷ್ಟು (ಅಂದರೆ ಕಾಲಂಶ) ಆಡಳಿತ ವೆಚ್ಚವನ್ನು ಕಡಿಮೆ ಮಾಡಬಹುದೆಂದು ಕಂಡಿತು. ವೆಚ್ಚ ಕಡಿಮೆಯಾಯಿತೆಂದಷ್ಟಕ್ಕೆ ಆಡಳಿತದ ಕಾರ್ಯಕ್ಷಮತೆ ಕುಗ್ಗುವುದೆಂದೇನು ಎಣಿಸಬಾರದು. ಅಂತೂ ತಾಂತ್ರಿಕ ಸಹಾಯವನ್ನೊದಗಿಸುವ ಘನವಾದ ಕಾರ್ಯಕ್ರಮಗಳ ಮೂಲದಲ್ಲಿ ಹೇಳಲಾದ "ಭೌತಿಕ ಹಾಗು ಮಾನವೀಯ ಸಾಧನ ಸಂಪತ್ತುಗಳ ಸದುಪಯೋಗದಿಂದ ಉತ್ಪಾದನೆಯನ್ನು ಹೆಚ್ಚಿಸಿ, ಅದನ್ನು ವ್ಯಾಪಕವಾಗಿಯೂ ಸಮಾನವಾಗಿಯೂ ಹಂಚಿಕೊಂಡು ಇಡೀ ಮಾನವ ಜನಾಂಗದ ಜೀವನ ಮಟ್ಟವನ್ನು ಉತ್ತರಿಸುವ" ಧ್ಯೇಯವು ನಿಧಾನವಾಗಿಯೇ ಆದರೂ ದೃಢತಾ ಪೂರ್ವಕ ಸಾಧಿಸಲ್ಪಡುತ್ತದೆ. ಈ ಮಟ್ಟಿಗೆ ಹಿಂದುಳಿದ ದೇಶಗಳು ಸಂಯುಕ್ತರಾಷ್ಟ್ರ ಸಂಘಕ್ಕೆ ಕೃತಜ್ಞರಾಗಿರುವುದು ಧರ್ಮ. ಕೆಲವು ವಿಶಿಷ್ಟ ಕಾರ್ಯಕ್ರಮಗಳ ಫಲಿತಾಂಶವು ಸ್ಪಷ್ಟವಾಗಿ ಎದ್ದು ತೋರುತ್ತಿರದಿರಬಹುದು—ಆದರೂ ಎಷ್ಟೋ ಕ್ಷೇತ್ರಗಳಲ್ಲಿ ಪ್ರಗತಿ ಕೈಗೊಂಡಿದೆಯೆಂಬ ಸಂಗತಿ ಸತ್ಯ.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

1000 ಯಾ 500ಕ್ಕೆ ಅತೀ ರಿಯಾಯತಿ ಇದೆ.

ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ

ಎಕ್ಸರ್ ಸೈಜ್

ಪುಸ್ತಕಗಳು ದೊರೆಯುತ್ತವೆ.

[೩ನೇ ಪುಟದಿಂದ]

ರೂಪಾಯಿಗಳ ಆದಾಯ ತರುತ್ತದೆ. ಗಟ್ಟಿ ಜಾತಿಯ ಬೀಟೆ, ಭೋಗಿ ಮುಂತಾದ ಮೋಪುಗಳಲ್ಲದೆ, ಉರುವಲಿಗೆ ಉಪಯುಕ್ತವಾದ ಕರಿಮರ ಮುಂತಾದ ಜಾತಿಯ ಅರಣ್ಯಗಳೂ ನಮ್ಮಲ್ಲಿ ಹೇರಳ. ಇವುಗಳ ಹೊರತಾಗಿ ಮಿದು ವರ್ಗದ ಅನೇಕ ಜಾತಿಯ ಮರಗಳನ್ನೂ ಕಾಣಬಹುದು—ದ್ವಿತೀಯ ಮಹಾಯುದ್ಧ ಕಾಲದಲ್ಲಿ ಮಿದು ಜಾತಿಯ ಮರಗಳಿಗೋಸ್ಕರ ವಿಶೇಷವಾದ ಬೇಡಿಕೆಯು ಕಂಡು ಬಂತು. ದೇವದಾರು, ಧೂಪ ಮುಂತಾದ ಮರಗಳು ಬೆಂಕಿ ಪೆಟ್ಟಿಗೆ ತಯಾರಿಸುವುದಕ್ಕೂ ಪ್ಲೈವೂಡನ್ನು ಸಿದ್ಧಗೊಳಿಸಿ ಚಾ ಪೆಟ್ಟಿಗೆಗಳನ್ನು ಕಟ್ಟುವುದಕ್ಕೂ ಉಪಯೋಗಿಸಲ್ಪಡುತ್ತವೆ. ಮಿದು ಜಾತಿಯ ಮರಗಳನ್ನು ಹೆಚ್ಚು ಹೆಚ್ಚಾದ ಪ್ರದೇಶದಲ್ಲಿ ಬೆಳೆಸಬೇಕೆಂದು ಅರಣ್ಯ ಇಲಾಖೆಯು ನಿರ್ಧರಿಸಿದ್ದು, ಈ ವರ್ಷ ಕನಿಷ್ಠ ೭೫೦ ಎಕ್ರೆಗಳಲ್ಲಾದರೂ ಈ ಸಸಿಗಳನ್ನು ನೆಡಬೇಕೆಂದು ಅದರ ಸಂಕಲ್ಪ.

ಉಪಯುಕ್ತ ವಸ್ತುಗಳು

ಅರಣ್ಯಗಳು ಎಷ್ಟೋ ಉಪಯುಕ್ತವಾದ ಔಷಧಗಳನ್ನೂ ಕೊಡುತ್ತವೆ—"ನೀಲಗಿರಿ ಎಣ್ಣೆ—ಕ್ರಿಯ ಎರಡಾಣೆ" ಎಂಬ ಪದ್ಯದ ಸಾಲು ಪ್ರಾಥಮಿಕ ಶಾಲೆಯ ಮಕ್ಕಳಿಗೆ ಚೆನ್ನಾಗಿ ಗೊತ್ತಿದೆಯಷ್ಟೇ. ಆಸ್ಟ್ರೇಲಿಯದ ಸಸ್ಯವಾದರೂ ನಮ್ಮ ನೀಲಗಿರಿ ಜಿಲ್ಲೆಯಲ್ಲಿ ಪುಷ್ಕಳವಾಗಿ ಬೆಳೆಯುವ "ಯೂಕಲಿಪ್ಟಸ್" ಮರದ ಎಲೆಗಳು "ನೀಲಗಿರಿ ಎಣ್ಣೆ"ಯನ್ನು ಒದಗಿಸುತ್ತವೆ. ಸುಮಾರು ಎರಡು ಸಾವಿರ ಎಕ್ರೆ ಪ್ರದೇಶದಲ್ಲಿ ಯೂಕಲಿಪ್ಟಸ್ ತೋಟಗಳು ವ್ಯಾಪಿಸಿದ್ದರೂ, ದೇಶದ ಆವಶ್ಯಕತೆಯನ್ನು ಪೂರೈಸುವಷ್ಟು ಎಣ್ಣೆಯು ದೊರಕುತ್ತಿಲ್ಲ. ಯೂಕಲಿಪ್ಟಸ್ ಮರದ ದಿಂಡುಗಳು ಮೂರು ಲಕ್ಷ ಟನ್ನಿನಷ್ಟು ಕಟ್ಟಿಗೆಯನ್ನು ಕೊಡುತ್ತವೆ; ಈಗ ಈ ಮರವನ್ನು ಕಾಗದ ತಯಾರಿಕೆಯಲ್ಲೂ ಉಪಯೋಗಿಸಲಾಗುತ್ತದೆ. ವರ್ಷಕ್ಕೆ ಕನಿಷ್ಟ ೩೦೦ ಎಕ್ರೆ ಪ್ರದೇಶದಲ್ಲಾದರೂ ಹೊಸತಾಗಿ ಯೂಕಲಿಪ್ಟಸನ್ನು ಬೆಳೆಯಬೇಕೆಂದು ಸರಕಾರ ನಿರ್ಧರಿಸಿದೆ. ಅರಣ್ಯಗಳು ಬಿದಿರು ಮುಂತಾದ ಕಾಗದ ತಯಾರಿಕಾ ಸಾಧನವನ್ನೂ ಬೆತ್ತ, ಕೊಂಬು, ಜೇನು, ಮಯಣ ಮುಂತಾದ ವಸ್ತುಗಳನ್ನೂ ಕೊಡುತ್ತವೆ. ವಿದೇಶಗಳಿಂದ ಈಗ ತರಿಸಲಾಗುವ ಅನೇಕ ಅಮೂಲ್ಯ ದ್ರವ್ಯಗಳೂ ಅರಣ್ಯಗಳಲ್ಲಿ ಸಿಗುತ್ತವೆ. ಕಾಳು ಮೆಣಸು, ಏಲಕ್ಕಿ ಇತ್ಯಾದಿಗಳು ಡಾಲರು ಸಂಪಾದನೆಯ ಸ್ರೋತಗಳೆಂದು ಎಲ್ಲರಿಗೂ ಗೊತ್ತಿದೆ. ಕುರಿಚಲು ಗಿಡಗಳು ಬೆಳೆಯುವ ಕಾಡುಗಳು ರೈತರಿಗೆ ಗೊಬ್ಬರವನ್ನು ಪೂರೈಸುತ್ತವೆ ಮಾವು, ಹಲಸು ಮುಂತಾದ ಫಲ ವೃಕ್ಷಗಳು ಹಣ್ಣು ಹಂಪಲುಗಳನ್ನು ಕೊಟ್ಟು ಪೌಷ್ಟಿಕ ಆಹಾರವನ್ನು ನೀಡುತ್ತವೆ. ನಿಸರ್ಗಪ್ರಿಯರಿಗೂ ಅರಣ್ಯಗಳು ಸೌಂದರ್ಯ ಕ್ಷೇತ್ರಗಳಾಗಿವೆ — ನಮ್ಮ ಕಾಡುಗಳಲ್ಲಿ ನವಿಲು ಮುಂತಾದ ಸುಂದರ ಪಕ್ಷಿಗಳೂ ಜಿಂಕೆ, ಹುಲಿ, ಕಾಡುಕೋಣ, ಚಿರತೆ, ಆನೆ ಮುಂತಾದ ವನ್ಯ ಪ್ರಾಣಿಗಳೂ ನಿರ್ಭಯವಾಗಿ ಸಂಚರಿಸುತ್ತವೆ. ಇವುಗಳನ್ನು ಬೇಟೆಯಾಡುವುದಕ್ಕೆ ಪ್ರತಿಬಂಧವಿದ್ದರೂ ಅತ್ಯುತ್ತಮವಾದ ವಿಹಾರ ಸ್ಥಾನಗಳೆಂದು ಇವನ್ನು ಪರಿಗಣಿಸಬಹುದು. ನಮ್ಮ ಅರಣ್ಯಗಳಲ್ಲಿ ಮೃಗರಾಜನೆನಿಸಿದ ಸಿಂಹವು ಕಂಡುಬರುವುದಿಲ್ಲ— ಕಳೆದ ಒಂದು ತಲೆಮಾರಿನಲ್ಲಿ ಯಾರೂ ಸಿಂಹವನ್ನು ನಮ್ಮ ಕಾಡುಗಳಲ್ಲಿ ಕಂಡಿಲ್ಲ. ವನ್ಯ ಪಶುಗಳ ಪ್ರಮಾಣವು ದಿನೇ ದಿನೇ ಕಡಿಮೆಯಾಗುತ್ತಿರುವ ಈ ದಿನ ಮಾನಗಳಲ್ಲಿ ಸೌರಾಷ್ಟ್ರದ ಗೀರ ಅರಣ್ಯ ವಲಯದಲ್ಲಿ ಕೆಲವೇ ಸಿಂಹಗಳು ವಾಸಿಸುತ್ತವೆ.

ಅರಣ್ಯ ಪ್ರಯೋಗ ಶಾಲೆ

ಈ ಅರಣ್ಯಗಳ ಯೋಗ ಕ್ಷೇಮವನ್ನು ನೋಡಿಕೊಳ್ಳಲು ಸರಕಾರೀ ಅಧಿಕಾರಿಗಳು ಇದ್ದಾರೆ. ಕಾದಿಟ್ಟ ಅರಣ್ಯಗಳಿಂದ ಖಾಸಗಿ ಜನರು ಕಳ್ಳತನದಿಂದ ಮರಮುಟ್ಟುಗಳನ್ನೂ ಮೋಪುಗಳನ್ನೂ ಸಾಗಿಸುವುದುಂಟು. ಇದನ್ನು ತಡೆಗಟ್ಟಲು ಹತ್ತು ಚದರ ಮೈಲು ಪ್ರದೇಶಕ್ಕೆ ಒಬ್ಬನಂತಿರುವ ಕಾವಲುಗಾರರಿಂದ ಸಾಧ್ಯವಾಗುವುದಿಲ್ಲ. ಕಾವಲುಗಾರರ ಸಂಖ್ಯೆಯನ್ನು ಹೆಚ್ಚಿಸುವ ಆಗತ್ಯವಿದ್ದಂತೆಯೇ, ಹಳ್ಳಿಗಳಲ್ಲಿ ಕೆಲವು ಮುಖಂಡರನ್ನೂ ಕಳವುಗಳಾಗದಂತೆ ನೋಡಿಕೊಳ್ಳಲು ಕೇಳಿಕೊಳ್ಳಬಹುದು. ಸಣ್ಣ ಮಂಡಳಗಳನ್ನು ಈ ಹಳ್ಳಿಯಲ್ಲಿ ಏರ್ಪಡಿಸಿ, ಕಳ್ಳತನವನ್ನು ತಡೆಗಟ್ಟಲು ಉಪಾಯ ಯೋಜಿಸಬಹುದು. ಆದರೆ ಸರಕಾರದ ಮೇಲೆಯೇ ನಾವು ಇಂದು ಹೆಚ್ಚಾಗಿ ಅವಲಂಬನೆಯನ್ನು ಹೊಂದಿದ್ದೇವೆ. ಮದ್ರಾಸು ರಾಜ್ಯದ ಕೊಯಮುತ್ತೂರಿನಲ್ಲಿ ಕಾವಲುಗಾರ ಮತ್ತಿತರ ಅರಣ್ಯಾಧಿಕಾರಿಗಳಿಗೆ ತರಬೇತಿ ಕೊಡುವ ವ್ಯವಸ್ಥೆಯು ಈಗ ಏರ್ಪಟ್ಟಿರುವುದು. ಈ ಸಂಸ್ಥೆಗೆ ಮಾತೃಸ್ಥಾನದಂತಿರುವ ಕೇಂದ್ರವು ಉತ್ತರ ಪ್ರದೇಶದ ಡೆಹರಾಡೂನ ನಗರದಲ್ಲಿ ಇದೆ. ನಗರದ ಐದು ಮೈಲು ಪಶ್ಚಿಮಕ್ಕೆ ಸುಮಾರು ೫೦೦೦ ಮಂದಿ ಜನರು ೧೩೦೦ ಎಕ್ರೆ ಪ್ರದೇಶವನ್ನು ಅರಣ್ಯ ಸಂಶೋಧನಾ ಕೇಂದ್ರವಾಗಿ ಏರ್ಪಡಿಸಿರುವರು. ಏಶಿಯಾದ ರಾಷ್ಟ್ರಗಳಲ್ಲಿಯೇ ಅತ್ಯುತ್ತಮವೆನಿಸಿದ ಕೇಂದ್ರ ಇದು ಇಲ್ಲಿ ಎರಡು ವರ್ಷಗಳ ಶಿಕ್ಷಣವನ್ನು ಹೊಂದಿದ ೭೫ ರೇಂಜರರು ಹಾಗು ೩೫ ಅಧಿಕಾರಿಗಳು ವರ್ಷಂಪ್ರತಿ ಹೊರಬೀಳುವರು. ೧೯೩೮ರಷ್ಟು ಹಿಂದೆ ಸ್ಥಾಪನೆಗೊಂಡ ಈ ಕೇಂದ್ರದಲ್ಲಿ ಇಷ್ಟರವರೆಗೆ ೨೫೦೦ ರೇಂಜರರೂ ೬೦೦ ಅರಣ್ಯಾಧಿಕಾರಿಗಳೂ ತರಬೇತಿಯನ್ನು ಹೊಂದಿದ್ದಾರೆ. ಅರಣ್ಯಗಳನ್ನು ಸಂವರ್ಧಿಸುವ, ಅರಣ್ಯೋತ್ಪಾದನೆಯನ್ನು ಹೊಂದಿಕೊಂಡ ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸುವ ಮತ್ತು ಸಂಬಂಧಪಟ್ಟ ಇತರ ಕ್ಷೇತ್ರಗಳಲ್ಲಿ ಸಂಶೋಧನೆ ಹಾಗು ಶಿಕ್ಷಣಗಳೆರಡಕ್ಕೂ ಒಟ್ಟಿಗೆ ಅವಕಾಶ ನೀಡುವ ಕೇಂದ್ರ ಜಗತ್ತಿನಲ್ಲಿ ಇರುವುದೇ ಇದೊಂದು. ಈ ಸಂಗತಿಯನ್ನು ಸಂಯುಕ್ತ ರಾಷ್ಟ್ರ ಸಂಘದ ಆಹಾರ ಮತ್ತು ಕೃಷಿ ಮಂಡಳವೂ ಮನ್ನಿಸಿದೆ; ಅಮೇರಿಕವೂ ಈ ಭಾರತೀಯ ಸಂಸ್ಥೆಯ ಕೆಲಸದಲ್ಲಿ ಆಸಕ್ತಿಯನ್ನು ವಹಿಸುತ್ತದೆ. ತಾಂತ್ರಿಕ ಸಹಕಾರದ ಒಪ್ಪಂದದನ್ವಯ ಸುಮಾರು ೫ ಲಕ್ಷ ರೂಪಾಯಿಗಳಷ್ಟು ಸಹಾಯ ಧನವನ್ನು ನೀಡಿ ಹೆಚ್ಚಿನ ಸಂಶೋಧನೆಗಳನ್ನು ನಡೆಸಲು ಉಪಯುಕ್ತವಾದ ಯಂತ್ರೋಪಕರಣಗಳನ್ನೂ ತಾಂತ್ರಿಕರನ್ನೂ ಅಮೇರಿಕವು ಒದಗಿಸಿ ಕೊಟ್ಟಿದೆ.

ವಿಶೇಷ ಚಟುವಟಿಕೆ

ಈ ಕೇಂದ್ರವು ಭಾರತೀಯ ಕೃಷಿ ಮಂತ್ರಾಲಯದ ಅಧೀನದಲ್ಲಿ ಕೆಲಸ ಮಾಡುತ್ತದೆ. ೬೦ ಮಂದಿ ಗಜೆಟೆಡ್ ಅಧಿಕಾರಿಗಳೂ ಇತರ ೮೦೦ ಮಂದಿ ಸಿಬಂಧಿಗಳೂ ಇಲ್ಲಿದ್ದುಕೊಂಡು, ನಮ್ಮ ಘನವಾದ ಅರಣ್ಯಸಂಪತ್ತನ್ನು ಸದುಪಯೋಗಗೊಳಿಸಲು ಅಭ್ಯಾಸ ನಡೆಸುತಿದ್ದಾರೆ. ಭೂಗರ್ಭ ಶಾಸ್ತ್ರಜ್ಞರು, ಸಸ್ಯ ವಿಜ್ಞಾನಿಗಳು, ರಸಾಯನ ಶಾಸ್ತ್ರಜ್ಞರು, ತಾಂತ್ರಿಕರು, ಅರ್ಥ ಶಾಸ್ತ್ರಿಗಳು, ಅಂಕೆಸಂಖ್ಯೆಗಳಲ್ಲಿ ಪರಿಣತರು ಎಲ್ಲರೂ ಈ ಕೇಂದ್ರದಲ್ಲಿ ತಮ್ಮ ಹೊಣೆಯನ್ನು ಸಮರ್ಥವಾಗಿ ನಿರ್ವಹಿಸುತ್ತಾರೆ. ಇಲ್ಲಿ ನಡೆಸಿದ ಸಂಶೋಧನೆಯ ಫಲವಾಗಿ, ಎರಡೂವರೆ ಟನ್ನುಗಳಷ್ಟು ಬಿದಿರಿನಿಂದ ಒಂದು ಟನ್ನು ಕಾಗದವನ್ನು ಉತ್ಪಾದಿಸಲು ಸಾಧ್ಯವಾಯಿತು. ತತ್ಪರಿಣಾಮವಾಗಿ ವಿದೇಶಗಳಿಂದ ನಾವು ಆಮದು ಮಾಡಿಕೊಳ್ಳುತ್ತಿರುವ ಕಾಗದದ ಪ್ರಮಾಣವು ಗಣನೀಯವಾಗಿ ತಗ್ಗಬಲ್ಲದು. ಇಲ್ಲಿ ಕೆಲಸ ಮಾಡುತ್ತಿದ್ದ ಡಾ. ಕಾಪೋರ ಎಂಬವರು ಮರಮುಟ್ಟುಗಳು ಕೆಡದಂತೆ "ಅಸ್ಕು" ಎಂಬ ಒಂದು ವಿಶೇಷ ದ್ರವ್ಯವನ್ನು ಕಂಡು ಹಿಡಿದರು. ಈ ದ್ರವ್ಯದ ತಯಾರಿ ಮತ್ತು ಮಾರಾಟದ ಗುತ್ತಿಗೆಯನ್ನು ಅಮೇರಿಕದ ಬೆಲ್ ಟೆಲಿಫೋನ್ ಎಂಬ ಕಂಪೆನಿಯು ಪಡೆದು ಕೊಂಡು, ಕಾಸು ಮಾಡುತ್ತಿದೆ. ನಾವು ಹೊರ ದೇಶಗಳಿಂದ ತರಿಸುತ್ತಿರುವ ಕರ್ಪೂರವನ್ನೂ ತುಳಸಿಯ ಜಾತಿಗೆ ಸೇರಿದ ಒಂದು ಬಗೆಯ ಸಸ್ಯದಿಂದ ತಯಾರಿಸಲು ಸಾಧ್ಯವೆಂದು ನಮ್ಮ ವಿಜ್ಞಾನಿಗಳ ಅಭಿಪ್ರಾಯ. ಅರಣ್ಯಗಳಲ್ಲಿ ಉಪಲಬ್ಧವಿರುವ ಅನೇಕ ಗಿಡಮೂಲಿಕೆಗಳು ಔಷಧಕ್ಕೆ ಉಪಯುಕ್ತವಿವೆಯೆಂದು ನಮಗೆ ಗೊತ್ತೇ ಇದೆ. ಇವಲ್ಲದೆ, ಅನೇಕ ಬಗೆಯ ಬೀಜಗಳು ಎಣ್ಣೆಯನ್ನು ಕೊಡುತ್ತವೆ. ಡೆಹರಾಡೂನಿನಲ್ಲಿ ಈ ಕುರಿತು ವಿಶೇಷ ಆಸಕ್ತಿಯಿಂದ ಕೆಲಸ ನಡೆಯುತಿದ್ದು, ಆಶಾದಾಯಕ ಪರಿಣಾಮವೂ ಕಂಡು ಬರುತ್ತದೆ. ಬೆಂಕಿ ಪೆಟ್ಟಿಗೆಗೆ ದೇವದಾರ, ಸಣಬಿನ ಯಂತ್ರದಲ್ಲಿ ಮಾವಿನ ಮರ, ಮುಂತಾದುವನ್ನು ಉಪಯೋಗಿಸಲು ಈ ಕೇಂದ್ರದ ಸಂಶೋಧನೆಗಳೇ ಕಾರಣವಾದವು. ಪ್ಲೈವೂಡೆಂದು ಹೇಳುವ ತೆಳುವಾದ ಮರದ ಹಲಗೆಯ ತಯಾರಿಗೂ ಡೆಹರಾಡೂನಿನ ಕೇಂದ್ರ ಮನಸ್ಸುಗೊಟ್ಟಿತು; ಇದರಿಂದಾಗಿ, ನಾವು ಹೊರಗಿನಿಂದ ತರಿಸುವ ಸುಮಾರು ಎರಡು ಕೋಟಿ ರೂಪಾಯಿ ಬೆಲೆ ಬಾಳುವ ಚಾ ಪೆಟ್ಟಿಗೆಗಳಲ್ಲಿ ಸ್ವಲ್ಪಾಂಶವನ್ನು ಕಲ್ಕತ್ತೆಯ ಕಾರ್ಖಾನೆಯೊಂದರಲ್ಲಿ ಸಿದ್ಧಗೊಳಿಸಲು ಸಾಧ್ಯವಾಯಿತು. ರಾಜಸ್ಥಾನದಲ್ಲಿ ಮರುಭೂಮಿಯ ವಿಸ್ತರಣೆಯನ್ನು ತಡೆಗಟ್ಟಲು ಅರಣ್ಯ ಬೆಳೆಸುವ ಕ್ರಮಕ್ಕೆ ಡೆಹರಾಡೂನಿನ ಸಂಶೋಧನಾಲಯವು ವಿಶೇಷ ಲಕ್ಷ್ಯವನ್ನು ಪೂರೈಸುತ್ತದೆ. ಫಲವತ್ತಾದ ಭೂಮಿಯನ್ನು ಬೀಸುವ ಮರಳು ತುಂಬಿಕೊಂಡು ಬಂಜರು ಮಾಡದಂತೆ ಉತ್ಸಾಹದಿಂದ ಕೇಂದ್ರವು ಹೋರಾಡುತ್ತದೆ.

—ಸಂಕಲಿತ.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ಠೇವಣಾತಿ	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ಮಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ=3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

ಪಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.
ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನಕೊಡುತ್ತೇವೆ.
ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.
ಫೋನು ನಂಬ್ರ 66

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

[ಗನೇ ಪುಟದಿಂದ]

ಇನ್ನೂ ಬಿಟ್ಟುಗೊಟ್ಟಿಲ್ಲ-ಪರಿಣಾಮದಲ್ಲಿ ಚೀನದ ನ್ಯಾಯಬದ್ಧ ಸರಕಾರದ ಪ್ರತಿನಿಧಿಯ ಸ್ಥಾನದಲ್ಲಿ ಕುಮಿಂಟಾಂಗ ಬೊಂಬೆಯೊಂದು ವಿರಾಜಿಸುತ್ತದೆ! ಈ ಧೋರಣೆಯನ್ನು ಸ್ವತಃ "ಕೆಂಪು" ಚೀನವು ಆಕ್ಷೇಪಿಸಿ ತನ್ನ ಪ್ರಬಲ ಅಸಮ್ಮತಿಯನ್ನು ಆಗಿಂದಾಗ್ಗೆ ಸೂಚಿಸುತ್ತದೆ. ಆದರೆ ಅಮೇರಿಕದ ಪ್ರಭಾವಲಯದಲ್ಲಿ ಬಿದ್ದು, ಕಣ್ಣಿದ್ದೂ ಕುರುಡರಾದ ರಾಷ್ಟ್ರಗಳು ಚೀನದ ನ್ಯಾಯವಾದ ಬೇಡಿಕೆಯನ್ನು ಮನ್ನಿಸಲು ಇನ್ನೂ ಸಿದ್ಧಗೊಂಡಿಲ್ಲ. ಇದು ಶೋಚನೀಯ.

ನಿಜ ವಿಚಾರಿಸಿದರೆ, ಅಮೇರಿಕದ ಧೋರಣೆಯಲ್ಲಿ ಏನೂ ಹುರುಳಿಲ್ಲವೆಂದು ಸ್ಪಷ್ಟವಾಗುತ್ತವೆ. ಚೀನದ ಕಮ್ಯುನಿಸ್ಟ ಸರಕಾರವನ್ನು ಭಾರತವಷ್ಟೇ ಅಲ್ಲ—ಬರ್ಮಾ, ಸಿಂಹಳ ಮುಂತಾದ ಆಗ್ನೇಯ ಏಶಿಯಾದ ರಾಷ್ಟ್ರಗಳು ಮನ್ನಿಸುತ್ತವೆ. ಅಮೇರಿಕದ ಪರಮಮಿತ್ರ ರಾಷ್ಟ್ರವಾದ ಬ್ರಿಟನು ಸಹ ಕೆಂಪು ಚೀನಕ್ಕೆ ಮನ್ನಣೆಯನ್ನು ನೀಡಿದೆ. ವ್ಯಾಪಾರ ಸಂಪರ್ಕವನ್ನು ಅದರೊಡನೆ ಇದರವಕ್ಕೂ ಹಿಂದೆಯೇ ಏರ್ಪಡಿಸಿದೆ. ಈಚೆಗೆ ಬಂದ ವರ್ತಮಾನದಂತೆ, ಚೀನವೂ ಲಂಡನಿನಲ್ಲಿ ತನ್ನ ಪ್ರತಿನಿಧಿ ಕಾರ್ಯಾಲಯವನ್ನು ತೆರೆಯಲು ಹವಣಿಸಿದೆ— ಜಿನೇವಾ ಪರಿಷತ್ತಿನ ಕಾಲದಲ್ಲಿ ಈಡನರೂ ಚೌ ಎನ್ ಲಾಯರೂ ಈ ಕುರಿತು ಮಾತುಕತೆ ನಡೆಸಿದ್ದರು. ಬ್ರಿಟಿಷ ಕೂಲಿಕಾರ ಪಕ್ಷದ ಪ್ರಮುಖ ವ್ಯಕ್ತಿಗಳಾದ ಕ್ಲೆಮೆಂಟ ಆಟ್ಲಿ, ಬೇವಾನ ಮುಂತಾದವರಿಂದ ಕೂಡಿದ ನಿಯೋಗವೊಂದು ಇಷ್ಟರಲ್ಲೇ ಚೀನವನ್ನು ಸಂದರ್ಶಿಸುತ್ತದೆ. ಸ್ವತಃ ಅಮೇರಿಕವು ಜಿನೇವಾದಲ್ಲಿ ಚೀನದ ಪ್ರತಿನಿಧಿಗಳನ್ನು ಎದುರು ಕೂತಿರಿಯೇ ಮಾತುಕತೆಗಳನ್ನು ನಡೆಸಬೇಕಾಯಿತು. ಅಲ್ಲದೆ ಚೌ ಎನ್‌ಲಾಯರೊಡನೆ ಇದ್ದಿ ಸಂಪರ್ಕವನ್ನು ಬೆಳೆಸಿಕೊಂಡು. ಚೀನದಲ್ಲಿರುವ ಅಮೇರಿಕದ ರಾಷ್ಟ್ರೀಕರು ಕೆಲವರನ್ನು ಸ್ವದೇಶಕ್ಕೆ ಹೋಗಗೊಡುವ ಪ್ರಸ್ತಾಪ ಮಾಡಿತು. ಇನ್ನು ಚೀನದ ಜನತಾ ಪ್ರಭುತ್ವಕ್ಕೆ ಮನ್ನಣೆಯನ್ನು ಕೊಡದ ಫ್ರಾನ್ಸಿನ ಪ್ರಧಾನ ಮಂತ್ರಿ ಮೆಂಡೆಸ ಫ್ರಾನ್ಸರು ಬರ್ನ ನಗರದಲ್ಲಿ ಚೌ ಎನ್ ಲಾಯರನ್ನು ಕಂಡು ಇಂಡೋ ಚೀನದಲ್ಲಿ ಶಾಂತಿ ಸ್ಥಾಪನೆಯ ಕುರಿತು ಬಿಚ್ಚು ಮನಸ್ಸಿನ "ಹರಟೆ"ಯನ್ನು ಹೊಡೆದು, ವಿಚಾರ ವಿನಿಮಯ ನಡೆಸಿದರು ಆದರೂ ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವಿರಕೂಡದೆಂದು ಹೇಳುವುದು ದುರಾಗ್ರಹವೆನಿಸುತ್ತದೆ.

ಕೆಂಪು ಚೀನದ ಅಂತರಿಕ ಧೋರಣೆಯು ಭಾರತಕ್ಕೂ ಸಮ್ಮತವಾಗಲಿಕ್ಕಿಲ್ಲ- ಆದರೆ, ಸರಕಾರದ ಕ್ರಮ ಬದ್ಧತೆಯನ್ನು ನಿರಾಕರಿಸಲು ಇದೊಂದೇ ಯೋಗ್ಯ ಕಾರಣವಾಗದು. ಕಮ್ಯುನಿಸ್ಟ ಸರಕಾರವೆಂಬುದೆ ಯೋಗ್ಯತೆಯ ಮಾನದಂಡವಾದರೆ, ರಶಿಯಾ, ಪೋಲೆಂಡ ಮುಂತಾದ ರಾಷ್ಟ್ರಗಳನ್ನೂ ಸಂಯುಕ್ತ ರಾಷ್ಟ್ರ ಸಂಘದಿಂದ ಹೊರಗೆ ದಬ್ಬಿ ಬಹಿಷ್ಕರಿಸಬೇಕಾಗುವುದು. ಇದು ಕಲ್ಪನಾತೀತವಾದ ಮಾತು — ಈ ಪ್ರಕಾರ ರಶಿಯಾದ ಸೇಜೋರವಥೆಯನ್ನು ಮಾಡುವ ಎದೆಗಾರಿಕೆ ಅಮೇರಿಕಕ್ಕೆ ಬರಲಿಕ್ಕೆಯೇ ಇಲ್ಲ! ರಶಿಯಾವು ಸಂಯುಕ್ತರಾಷ್ಟ್ರ ಸಂಘದಲ್ಲಿ ಇರಬಹುದೆಂದಾದರೆ, ಚೀನದ ಸರಕಾರಕ್ಕೆ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಮೀನ ಮೇಷ ಮಾಡುವುದು ಏಕಾಗಿ? ಚಿಯಾಂಗ ಕೈಶೇಕರು ಚೀನದ ಮುಖ್ಯ ಭೂಮಿಯ ಮೇಲೆ ದಾಳಿ ನಡೆಸುವ ಕನಸನ್ನು ಕಾಣುತ್ತಿರಬಹುದು—ಅಮೇರಿಕಾವು ಇದಕ್ಕೆ ಅನುಕೂಲವಾದ ವಾತಾವರಣವನ್ನು ಕಲ್ಪಿಸಿರಬಹುದು. ಆದರೆ ಅಮೇರಿಕ ಹಾಗು ಅದರ ಬೆಂಬಲಿಗರು ಸಶಸ್ತ್ರ ಸೈನ್ಯಗಳ ಸಹಾಯವನ್ನು ಕೊಟ್ಟು ಚಿಯಾಂಗರ ಕೈಯನ್ನು ಬಲಗೊಳಿಸಿದರೆ ಮಾತ್ರ, ಈ ಕುಮಿಂಟಾಂಗ ಧೊರೆಯು ಕಮ್ಯುನಿಸ್ಟ ರಾಷ್ಟ್ರವಾದ ಚೀನದ ಮೇಲೆ ಏರಿಹೋಗಬಲ್ಲನು. ಇಂತಹ ಸಂಭವ ಸಾವಿರದಲ್ಲಿ ಒಂದೂ ಇಲ್ಲ-ಅಂಬ ಬಳಿಕ, ಈ ದಾಳಿಯ ಪರಿಣಾಮವನ್ನು ಊಹಿಸುವುದೇ ಬೇಡ ಆದ ಕಾರಣ, ಚೀನಕ್ಕೆ ಸಂಯುಕ್ತರಾಷ್ಟ್ರ ಸಂಘದಲ್ಲಿ ಪ್ರಾತಿನಿಧ್ಯವನ್ನು ಕೊಡುವುದೇ ಕ್ರಮಪ್ರಾಪ್ತ. ಚೀನದ ಪ್ರಾತಿನಿಧ್ಯ ಪ್ರಶ್ನೆಯೇ ಜಿನೇವಾದಲ್ಲಿ ನಡೆದ ಕೊರಿಯಾದ ಮಾತುಕತೆಗಳು ಮುರಿಯುವುದಕ್ಕೆ ಕಾರಣವಾಯಿತು. ರಾಷ್ಟ್ರ ಸಂಘದ ಚೌಕಟ್ಟಿನಿಂದ ಚೀನವನ್ನು ಹೊರಗುಳಿಸುವುದರಿಂದ ಇಂತಹ ಅನರ್ಥ ಪರಿಣಾಮಗಳು ದಿನಹೋದಂತೆ ಹೆಚ್ಚಬಹುದು; ಲೋಕ ಶಾಂತಿಯು ಬಯಲಾಸೆಯಾದೀತು. ಚೀನವು ಅಪೇಕ್ಷಿಸುವ, ಭಾರತವು ಪುರಸ್ಕರಿಸುವ ಈ ಪ್ರಾತಿನಿಧ್ಯದ ಪ್ರಶ್ನೆಯನ್ನು ಇನ್ನಾದರೂ ಸಹಾನುಭೂತಿಯಿಂದ ವಿಚಾರಿಸಿ, ಚೀನದೊಡನೆ ಗೆಳೆತನವನ್ನು ಸ್ಥಾಪಿಸುವುದೊಳಿತು.

—ಕಾರ್ತಿಕೇಯ.

ಮತದಾರರ ಪಟ್ಟಿ

ಮದ್ರಾಸು ಶಾಸನ ಸಭೆ ಮತ್ತು ಲೋಕಸಭೆಗಳ ಕೆಲವು ಚುನಾವಣಾ ಕ್ಷೇತ್ರಗಳ ಹೊರತು ಮದ್ರಾಸು ಪ್ರಾಂತದ ಎಲ್ಲಾ ಚುನಾವಣಾ ಕ್ಷೇತ್ರಗಳ ಮತದಾರರ ಮೊದಲ ಪಟ್ಟಿಗಳನ್ನು ಪ್ರಕಟಿಸಲಾಗಿದೆ. ಮೇಲ್ಕಾಣಿಸಿದ ಕೆಲವು ಕ್ಷೇತ್ರಗಳ ಪಟ್ಟಿಗಳನ್ನು ಸದ್ಯದಲ್ಲೆ ಪ್ರಕಟಿಸಲಾಗುವುದು. ಕ್ಷೇತ್ರದ ತಹಶೀಲ್ದಾರ ಅಥವಾ ಡೆಪ್ಯೂಟಿ ತಹಶೀಲ್ದಾರರ ಕಚೇರಿಗಳಲ್ಲಿ ಪಟ್ಟಿಗಳನ್ನು ಪ್ರಕಟಿಸಲಾಗಿದ್ದು, ಸ್ಥಳೀಕ ಸಂಸ್ಥೆ, ಪೋಲೀಸು ಠಾಣೆ ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲೂ ಆಯಾಯ ಸ್ಥಳದ ಮತದಾರರ ಪಟ್ಟಿಗಳನ್ನು ಪ್ರಕಟಿಸಲಾಗಿರುವುದು. ಮತದಾನ ಹಕ್ಕುಳ್ಳವರ ಹೆಸರು ಪಟ್ಟಿಯಲ್ಲಿ ಸೇರಿಸಲ್ಪಟ್ಟಿಲ್ಲವಾದರೆ, ಇಲ್ಲವೆ ಪಟ್ಟಿಯಲ್ಲಿರುವ ಹೆಸರುಗಳ ಬಗ್ಗೆ ಆಕ್ಷೇಪಗಳಿದ್ದರೆ ಈಗ ಅಧಿಕಾರಿಗಳ ಗಮನಕ್ಕೆ ತರಬಹುದು. 1—3—54ರಂದು ಒಬ್ಬ ವ್ಯಕ್ತಿಯು 21 ವರ್ಷ ಪ್ರಾಯದವನಾಗಿದ್ದು 1953ರಲ್ಲಿ 180 ದಿವಗಳಿಗಿಂತ ಹೆಚ್ಚು ಅವಧಿಯಲ್ಲಿ ಚುನಾವಣಾ ಕ್ಷೇತ್ರದಲ್ಲಿ ವಾಸವಾಗಿದ್ದರೆ ಇಲ್ಲವೆ ವಸತಿಯೊಂದರ ಮಾಲಕನಾಗಿದ್ದರೆ, ಮತದಾನಕ್ಕೆ ಅವನು ಇಲ್ಲವೆ ಅವಳು ಅರ್ಹನು. ಭಾರತದ ನಾಗರಿಕರಲ್ಲದವರು, ತಲೆಕೆಟ್ಟವರು, ಚುನಾವಣೆಯಲ್ಲಿ ಕಾಕೂನಿಗೆ ವಿರೋಧವಾಗಿ ವರ್ತಿಸಿದವರೆಂದು ಅಧಿಕೃತವಾಗಿ ಸಾರಲ್ಪಟ್ಟವರು ಮತದಾನಕ್ಕೆ ಅರ್ಹರಲ್ಲ. ಕೇಳಿಕೆ ಆಕ್ಷೇಪಗಳನ್ನು ಅಧಿಕೃತ ಅರ್ಜಿ ಪತ್ರಗಳಲ್ಲಿ ಬರೆಯಬೇಕು. ಈ ಪತ್ರಗಳನ್ನು ಪುಕ್ಕಟೆಯಾಗಿ ಗ್ರಾಮಾಧಿಕಾರಿ, ಫಿರ್ಕಾ ರೆವೆನ್ಯೂ ಅಧಿಕಾರಿ, ದೊಡ್ಡ ಪಂಚಾಯ್ತುಗಳ ಅಧಿಕಾರಿ, ಮತ್ತು ನಗರ ಸಭೆಯ ಕಮಿಶನರರಿಂದ ಪಡೆಯ ಬಹುದು. ಫಾರ್ಮು VIರಲ್ಲಿ, ತಮ್ಮ ಹೆಸರನ್ನು ಪಟ್ಟಿಯಲ್ಲಿ ಸೇರಿಸಲು ಮತ್ತು ಫಾರ್ಮು VIIIರಲ್ಲಿ ಆಕ್ಷೇಪಗಳನ್ನು ಬರೆಯಬೇಕು. ಅರ್ಜಿಪತ್ರದಲ್ಲಿ ಎಲ್ಲಾ ವಿವರಗಳನ್ನು ಕಾಣಿಸಿ, ಮೇಲಿನ ಅಧಿಕಾರಿಗಳಿಗೆ ಇಲ್ಲವೆ ಚುನಾವಣಾಧಿಕಾರಿಗಳಿಗೆ ಕಳುಹಿಸ ಬಹುದು. ಗ್ರಾಮಾಂತರ ಪ್ರದೇಶಗಳಲ್ಲಿ ರೆವೆನ್ಯೂ, ಡಿವಿಜನಲ್ ಅಧಿಕಾರಿಗಳು ಮತದಾರರ ಪಟ್ಟಿಗಳನ್ನು ಪರಿಶೀಲಿಸುವರು. ಪಟ್ಟಿಗಳನ್ನು ಪ್ರಕಟಿಸಿದ 21 ದಿನಗಳೊಳಗೆ ಅರ್ಜಿಪತ್ರಗಳನ್ನು ಸಲ್ಲಿಸತಕ್ಕದ್ದು. ಆ ಮೇಲೆ ಬಂದ ಅರ್ಜಿಗಳಿಗೆ ಗಮನಕೊಡುವುದಿಲ್ಲ. ಆಕ್ಷೇಪವೆತ್ತುವವನು ಮತದಾನದ ಹಕ್ಕುಳ್ಳವನಾಗಿರಬೇಕು. ಹೆಸರನ್ನು ಒಂದು ಪಟ್ಟಿಯಿಂದ ಇನ್ನೊಂದಕ್ಕೆ ವರ್ಗಾಯಿಸಲು, ಆಕ್ಷೇಪ ಮತ್ತು ಕೇಳಿಕೆಗಾಗಿರುವ 2 ಫಾರ್ಮುಗಳಲ್ಲಿ ಪ್ರತ್ಯೇಕವಾಗಿ ಬರೆಯಬೇಕು. ಸಣ್ಣ ಪುಟ್ಟ ತಪ್ಪುಗಳನ್ನು ತಿದ್ದಲು, ಚುನಾವಣಾಧಿಕಾರಿಗಳಿಗೆ ಪತ್ರ ಬರೆದರೆ ಸಾಕು. ಪರಿಶೀಲನಾಧಿಕಾರಿಗಳು ನಗರ ಸಭೆ, ತಾಲೂಕು ಕಚೇರಿ ಮತ್ತಿತರ ಕೇಂದ್ರಗಳಲ್ಲಿ, ಅರ್ಜಿದಾರರ ಕೇಳಿಕೆ, ಆಕ್ಷೇಪಗಳನ್ನು ಪಂಚಾಯ್ತು ಅಥವಾ ಗ್ರಾಮಾಧಿಕಾರಿಗಳ ಸಮ್ಮುಖದಲ್ಲಿ ವಿಚಾರಿಸುವರು. ಅರ್ಜಿದಾರರು ಸಾಕ್ಷಿ ಪುರಾವೆಗಳೊಡನೆ ಅಧಿಕಾರಿಗಳನ್ನು ನಿಯಮಿತ ದಿನದಂದು ಕಾಣಬೇಕು. ಈ ಪರಿಶೀಲನಾಕಾರ್ಯವು ಮುಗಿದ ಮೇಲೆ, ಹೊಸ ಪಟ್ಟಿಗಳನ್ನು ತಯಾರಿಸಲಾಗುವುದು. 1—10—54ಕ್ಕೆ ಮೊದಲು ಹೊಸ ಪಟ್ಟಿಯು ಪ್ರಕಟಿಸಲ್ಪಟ್ಟರೆ ಅದು 1-10-54ರಿಂದ ಜಾರಿಗೆ ಬರುವುದು. ಆ ಮೇಲೆ ತಯಾರಾದ ಪಟ್ಟಿಗಳು ಪ್ರಕಟಿಸಲ್ಪಟ್ಟಂದಿನಿಂದ ರೂಢಿಗೆ ಬರುವುವು. ಜನತೆ ಸರಕಾರದೊಡನೆ ಸಹಕರಿಸಿ, ಹೊಸ ಪಟ್ಟಿಗಳಲ್ಲಿ ಲೋಪಗಳಿಲ್ಲದಂತೆ ನೋಡಬೇಕು. ರಾಜಕೀಯ ಮತ್ತು ಸಾರ್ವಜನಿಕ ಸಂಸ್ಥೆಗಳ ನೆರವನ್ನೂ ಈ ಕಾರ್ಯದಲ್ಲಿ ಸರಕಾರವು ಬಯಸುತ್ತಿದೆ.

ಟ್ರೇಡ್ ಮಾರ್ಕ್ — ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ

ದಿ| ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 36 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಪಂ A. R. ಅಯ್ಯರ್ ರವರು, ಸ್ಥಾಪಕರು.

ಸಂತಾನ ಸಿಂಧೂರ (ಸ್ತ್ರೀಯರಿಗೆ: ಭಸ್ಮ) || **ಮದನ ವಿಲಾಸ** (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಠೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

*ಈ ಗುಳಿಗೆಗಳು ಪುರುಷನ ಆತ್ಮುಷ್ಟವನ್ನು ಕಮ್ಮಿಮಾಡಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಲಾಡಿಸುತ್ತದೆ. ದಂಪತಿಗಳು ಕೂಡಿ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೊ? ಹಾಗಾದರೆ ಒಂದೊಂದು ಸೆಟ್ (8ಪೊಟ್ಲ+4 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ. ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.

ಕ್ರಯ: 2 ಔಷಧಿಗಳ 1 ಸೆಟ್ 7 ರೂ M.O. ಮಾಡಿರಿ. ತಲಪಿದ ಒಡನೆ ರಿಜಿಸ್ಟರ್ ಪಾರ್ಸೆಲ್ ರವಾನೆ. ವಿ.ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ:- ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ - ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)

ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ.ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ. 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಓತ್ರಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

Regd. No. M. 3618 [ಎರಡಾಣೆ] Licence No. 31
Licensed to Post without Prepayment.

ನವಯುಗ

Founder.- **Sri A. B. Shetty**, Minister for Public Health, Govt. of Madras

Vol.33 No 44 8-7-1954 ವರ್ಷ ೩೩ ವಾರ ೪೪

ರಾಹು ಮುಸುಕಿದ ಸೂರ್ಯ

ಅಮೃತ ಮಂಥನ ಕಾಲದಲ್ಲಿ ಸೂರ್ಯ ಚಂದ್ರರು ತಮ್ಮನ್ನು ಬೊಟ್ಟಿತ್ತಿ ತೋರಿಸಿ ಮಾಡಿದ ಅನ್ಯಾಯದ ಸೇಡನ್ನು ತೀರಿಸಿ ಕೊಳ್ಳಲು ರಾಹು ಕೇತುಗಳು ಮಾಡುವ ಸಾಹಸವೇ ಗ್ರಹಣವೆಂಬುದಾಗಿ ನಮ್ಮ ಪುರಾಣ ಕಥೆ ತಿಳಿಸುತ್ತದೆ. ಇಂದಿನ ವಿಜ್ಞಾನ ಇದನ್ನು ಒಪ್ಪುವುದಿಲ್ಲವಾದರೂ ಗ್ರಹಣವನ್ನು ಕುರಿತಾದ ಆಸ್ಥೆಯು ಭಾರತೀಯರಲ್ಲಿ ಪ್ರಾಚೀನ ಕಾಲದಿಂದಲೂ ಸಜೀವವಿದ್ದಿತೆಂಬುದಕ್ಕೆ ಪುರಾಣದ ಉಲ್ಲೇಖವೇ ಸಾಕು. ಭಾರತೀಯರು ಸೂರ್ಯ ದೇವನನ್ನು ವೇದ ಕಾಲಕ್ಕಿಂತಲೂ ಮೊದಲು ಪೂಜಿಸ ತೊಡಗಿದ್ದರು ನೆರೆಯ ಇರಾಣ ದೇಶದಲ್ಲೂ ಈ ಪದ್ಧತಿಯು ಬಳಕೆಯಲ್ಲಿದ್ದುದನ್ನು ಕಾಣುತ್ತೇವೆ. ಆ ದೇಶದಲ್ಲಿ ಜೋರಾಸ್ಟ್ರನು ಈ ರೂಢಿಗೊಂದು ಮಿರುಗನ್ನು ತಂದುಕೊಟ್ಟನು. ನಮ್ಮ ನಾಡಿನಲ್ಲಿ ವೇದಕಾಲದ ಋಷಿ ಮುನಿಗಳು ಸೂರ್ಯ ದೇವನ ಮಹಿಮೆಯನ್ನು ಕೊಂಡಾಡುವ ಅನೇಕಾನೇಕ ಶ್ಲೋಕಗಳನ್ನು ರಚಿಸಿ, ಹಾಡಿದರು. ಇವು ನಿಸರ್ಗ ಸೌಂದರ್ಯದ ಮೇಲಿನ ಅಭಿಮಾನವನ್ನು ಕಲಾತ್ಮಕವಾಗಿ ವ್ಯಕ್ತಗೊಳಿಸುತ್ತವೆ. ಪ್ರಪಂಚದಲ್ಲಿ ಇತರೆ ರನಾದರಸವ್ಯಂಜಕ ಕವನಗಳು ವಿರಳವಾಗಿಯೇ ದೊರಕುತ್ತವೆ. ಋಗ್ವೇದದಲ್ಲಿ ಉಕ್ತವಾದ ಉಷೆಯ ವರ್ಣನೆ ಅರುಣೋದಯದ ಉಲ್ಲೇಖ, ಸೂರ್ಯದೇವನ ಕೀರ್ತನೆಗಳು ಸುಂದರಭಾವನೆಗಳನ್ನೂ ಭಕ್ತಿಶ್ರದ್ಧೆಗಳನ್ನೂ ಹೊರ ಹೊಮ್ಮುತ್ತವೆ. ಸವಿತೃ ನಾರಾಯಣನನ್ನು ಪೂಜ್ಯನೆಂದು ನಾವೆಲ್ಲರೂ ಭಾವಿಸುತ್ತೇವೆ.

ಈ ಪ್ರಕಾರವಾದ ಉಜ್ವಲ ಪರಂಪರೆಯಲ್ಲಿ ನಾವು ಹುಟ್ಟಿ ಬೆಳೆದವರಾದುದರಿಂದಲೇ ಕಳೆದ ಬುಧವಾರ (ಜೂನ್ ೩೦) ಸೂರ್ಯ ಗ್ರಹಣವು ಸಂಭವಿಸಿದಾಗ, ಪುಣ್ಯ ಕ್ಷೇತ್ರಗಳಲ್ಲಿ ಲಕ್ಷಾಂತರ ಯಾತ್ರಿಕರು ಪವಿತ್ರ ಸ್ನಾನಮಾಡಿ, ಭಗವಾನ್ ಭಾಸ್ಕರನಿಗೆ ತಮ್ಮ ಶ್ರದ್ಧಾಂಜಲಿಯನ್ನು ಅರ್ಪಿಸಿದರು. ಸೂರ್ಯ ಗ್ರಹಣವನ್ನು ಕೆಟ್ಟದರ ವಿರುದ್ಧ ಒಳ್ಳೆಯದರ ಮೇಲ್ಗೈ ಎಂಬುದಾಗಿ ಪರಿಗಣಿಸಲಾಗುತ್ತದೆ; ಕತ್ತಲೆಯ ವಿರುದ್ಧ ಬೆಳಕಿನ ವಿಜಯವೆಂದೂ ಇದನ್ನು ಕರೆಯಬಹುದು. "ಅಸತೋ ಮಾ ಸದ್ಗಮಯ, ತಮಸೋ ಮಾ ಜ್ಯೋತಿರ್ಗಮಯ, ಮೃತ್ಯೋರ್ಮಾಮೃತಂ ಗಮಯ" ಎಂಬ ಉಪನಿಷತ್ ವಾಕ್ಯವನ್ನು ಈ ಪರ್ವಕಾಲವು ನೆನಪಿಗೆ ತರುತ್ತದೆ. ಗ್ರಹಣ ಕಾಲದಲ್ಲಿ ಮಾಡಿದ ತೀರ್ಥ ಸ್ನಾನವು ಸಾವಿರ ಅಶ್ವಮೇಧ ಯಜ್ಞವನ್ನು ಮಾಡಿದ ಪುಣ್ಯವನ್ನು ತಂದುಕೊಡುವುದೆಂದು ಪ್ರತೀತಿ ಇದೆ.

ಸಾಮಾನ್ಯವಾಗಿ ಘಟಿಸುವ ಗ್ರಹಣಕ್ಕಿಂತ ಈ ಸಲದ ಗ್ರಹಣವು ವಿಶೇಷ ರೀತಿಯದಿತ್ತು—ಈ ಸಲ ಸೂರ್ಯನಿಗೆ ಪೂರ್ಣ ಅಥವಾ ಖಗ್ರಾಸ ಗ್ರಹಣವು ಸಂಭವಿಸಿತು. ಭಾರತದಲ್ಲಿ ಐವತ್ತಾರು ವರ್ಷಗಳ ಹಿಂದೆ ೧೮೯೮ರಲ್ಲಿ ಸೂರ್ಯನಿಗೆ ಖಗ್ರಾಸ ಗ್ರಹಣವಾಗಿತ್ತು—ಆಗ ಪಶ್ಚಿಮ ಭಾರತದಲ್ಲಿ ನಡೆಸಿದ ಅತ್ಯಮೂಲ್ಯ ವೈಜ್ಞಾನಿಕ ಸಂಶೋಧನೆಗಳನ್ನು ಒಂದು ವರದಿಯ ರೂಪದಲ್ಲಿ ಕ್ರೋಢೀಕರಿಸಲಾಯಿತು.

ಈ ಸಲದ ಖಗ್ರಾಸ ಗ್ರಹಣವು ಭಾರತದ ವಾಯುವ್ಯ ಭಾಗದಲ್ಲಿಯಷ್ಟೇ ಕಂಡು ಬಂತು. ಪಶ್ಚಿಮ ಭಾಗದಲ್ಲಿ ಗ್ರಹಣ ಸ್ಪರ್ಶವಾಗುವುದನ್ನು ಕೆಲವೇ ನಿಮಿಷ ನೋಡಬಹುದಿತ್ತು. ಆದರೆ ಪೂರ್ವತೀರದ ಮದರಾಸು, ಕಲ್ಕತ್ತೆಗಳಲ್ಲಿ ಗ್ರಹಣವು ದೃಷ್ಟಿಗೋಚರವಾಗಲಿಲ್ಲ. ಏಕೆಂದರೆ ಈ ಭಾಗಗಳಲ್ಲಿ ಸೂರ್ಯಾಸ್ತಮಾನವಾದ ಬಳಿಕವೇ ಗ್ರಹಣವು ಘಟಿಸಿತು ಗ್ರಹಣವನ್ನು ವೀಕ್ಷಿಸಬಹುದಾಗಿದ್ದ ಪ್ರದೇಶದಲ್ಲಿ ಸಹ ಎಲ್ಲ ಕಡೆ ಹವಾಮಾನವು ಅನುಕೂಲವಿರಲಿಲ್ಲ. ಆಕಾಶವು ಮೋಡಗಳಿಂದ ಮುಸುಕಿಕೊಂಡಿತ್ತು; ಮಳೆಯ ಸೆಳಕುಗಳೂ ಬೀಳುತ್ತಿದ್ದವು; ಕುರುಕ್ಷೇತ್ರದಲ್ಲಿ ಗ್ರಹಣ ಕಾಲವು ತೀರ್ಥ ... ಅವಧಿಯಲ್ಲಿಯೇ ಧೂಳಿನ ಬಿರುಗಾಳಿಯು ಎದ್ದು ಜನರು ಕಣ್ಣುಗಳನ್ನು ಮೇಲಕ್ಕೆ ಎತ್ತಲಾರದಾದರು ಸರಕಾರದ ಮುನ್ನೆಚ್ಚರಿಕೆಯಂತೆ ಕಪ್ಪು ಗಾಜುಗಳನ್ನು ಸಿದ್ಧಪಡಿಸಿಕೊಂಡು ಸೂರ್ಯ ಗ್ರಹಣವನ್ನು ನೋಡಲು ಆತುರರಾಗಿದ್ದ ಲಕ್ಷಾಂತರ ಮಂದಿ ಪ್ರತಿಕೂಲ ಹವಾಮಾನದ ದೆಸೆಯಿಂದ ನಿರಾಶರಾದರು. ದೆಹಲಿಯಲ್ಲಿ ಕುತುಬ್‌ಮಿನಾರಿನ ಮೇಲೇರಿ ಕುಳಿತಿದ್ದ ಹವಾಮಾನ ನಿವೇದನಾಧಿಕಾರಿಗೆ ಮೂರರಲ್ಲೊಂದು ಪಾಲು ಸೂರ್ಯ ಬಿಂಬವು ಕತ್ತಲೆಯಲ್ಲಿದ್ದಾಗ ಮಾತ್ರ ಕೆಲವು ಚಿತ್ರಗಳನ್ನು ತೆಗೆಯುವುದು ಸಾಧ್ಯವಾಯಿತು.

ಗ್ರಹಣದ ವೈಜ್ಞಾನಿಕ ಚಮತ್ಕಾರಗಳನ್ನು ಪರಿಶೀಲಿಸುವ ಉದ್ದೇಶದಿಂದ ಪುಣೆ, ಅಲಿಬಾಗ್, ಕೊಡೈಕನಾಲ್ ಮುಂತಾದ ಪ್ರದೇಶಗಳಿಂದ ೧೫ ವಿಜ್ಞಾನಿಗಳು ಜೋಧಪುರದಿಂದ ೮೦ ಮೈಲು ದೂರವಿರುವ ಫಾಲೋಡಿ ಎಂಬ ಮರು ಪ್ರದೇಶದಲ್ಲಿ ನೆರೆದಿದ್ದರು. ಇಲ್ಲಿ ಸೂರ್ಯ ಗ್ರಹಣವು ೭–೩೨ ಗಂಟೆಗೆ ಸರಿಯಾಗಿ ಪ್ರಾರಂಭವಾಯಿತು ಮೊದಲು ಸೂರ್ಯನ ಪಶ್ಚಿಮ ಖಂಡವು ಕಪ್ಪಗೆ ಕಾಣಿಸ ತೊಡಗಿತು ಆಗ ವಿಜ್ಞಾನಿಗಳು ದೂರ ದರ್ಶಕ, ರೇಡಿಯೊ ಹಾಗು ಮೆಗ್ನಿಟಿಕ್ ಸಲಕರಣೆಗಳನ್ನು ಸಜ್ಜುಗೊಳಿಸಿ ಗ್ರಹಣ ಕಾಲದ ಸೂರ್ಯನ ನಿರೀಕ್ಷಣೆಯಲ್ಲಿ ನಿರತರಾದರು. ಕೆಲವೇ ನಿಮಿಷಗಳಲ್ಲಿ ವಾತಾವರಣವು ಕತ್ತಲೆಯಿಂದ ತುಂಬಿಕೊಂಡಿತು. ಪಶು ಪಕ್ಷಿಗಳ ಜೀವನವು ಸ್ಥಗಿತಗೊಂಡಿತು ಸೂರ್ಯನ ಖಗ್ರಾಸ ಗ್ರಹಣವು ೭–೫೭ ಗಂಟೆಗೆ ಒಟ್ಟು ೬೮ ಸೆಕೆಂದುಗಳ ಕಾಲ ಇದ್ದಿತು. ಆಗ ಸೂರ್ಯನ ಪ್ರಕಾಶಮಾನವಾದ ಬಿಂದು. ಮತ್ತದನ್ನು ಕವಿದ ಪ್ರಭಾವಲಯವು ಸ್ಪಷ್ಟವಾಗಿ ಗೋಚರಿಸಿತು. ಆಕಾಶದಲ್ಲಿ ನಕ್ಷತ್ರಗಳು ಮಿನುಗಹತ್ತಿದವು. ಮುಂದೆ ಗ್ರಹಣದ ನೆರಳು ಸರಿಯಾಗುತ್ತಾ ಮೆಲ್ಲ ಮೆಲ್ಲನೆ ಸರಿಯತೊಡಗಿತು ಛಾಯೆಯು ಪೂರ್ಣ ಮಾಯವಾಗುವಷ್ಟರಲ್ಲಿ ೭–೩೫ ಗಂಟೆಗೆ ಸರಿಯಾಗಿ ಸೂರ್ಯನು ಅಸ್ತಾಚಲವನ್ನೈದಿದನು. ಹವಾಮಾನ ನಿವೇದನಾ ಶಾಖೆಯ ದಿಗ್ದರ್ಶಕರಾದ ಶ್ರೀ ಬಸುರವರು, ವೈಜ್ಞಾನಿಕ ಯಂತ್ರೋಪಕರಣಗಳನ್ನು ಉಪಯೋಗಿಸಿ ಕಂಡುಕೊಂಡ ಗ್ರಹಣದ ಪರಿಣಾಮಗಳನ್ನು ಬರೆದಿಡಲಾಗಿದೆಯೆಂದು ತಿಳಿಸಿದರು. ಸೂರ್ಯನು ಬಹಳ ಇಳಿಮುಖನಿದ್ದುದರಿಂದ ಒಳ್ಳೆಯ ಚಿತ್ರಗಳನ್ನು ತೆಗೆದುಕೊಳ್ಳುವುದು ಕಠಿಣವಿದ್ದರೂ ಪ್ರಯತ್ನವನ್ನೇನೊ ಮಾಡಲಾಯಿತು ಎಂದರು. ಗ್ರಹಣವು ಬಿಟ್ಟ ೪೮ ತಾಸುಗಳ ವರೆಗೂ ಅಭ್ಯಾಸವನ್ನು ಮುಂದುವರಿಸಲು ವಿಜ್ಞಾನಿಗಳು ನಿರ್ಣಯಿಸಿದ್ದು ಫಲಿತಾಂಶ ಇನ್ನು ತಿಳಿಯಬೇಕಷ್ಟೆ!

ಸೂರ್ಯನಿಗೂ ಭೂಮಿಗೂ ಅಡ್ಡವಾಗಿ ಚಂದ್ರನು ಸರಳ ರೇಷೆಯಲ್ಲಿ ಕಾಣಿಸಿಕೊಂಡಾಗ ಸೂರ್ಯ ಗ್ರಹಣವಾಗುತ್ತದೆಂದು ವಿಜ್ಞಾನಿಗಳು ಕಂಡು ಕೊಂಡಿದ್ದಾರೆ. ಈ ಸಲದ ಸೂರ್ಯ ಗ್ರಹಣವು ಭೂಮಂಡಲದ ಮೂರರಲ್ಲಿ ಎರಡಾಂಶವನ್ನು ವ್ಯಾಪಿಸಿತ್ತು. ಗಂಟೆಗೆ ಎರಡು ಸಾವಿರ ಮೈಲು ವೇಗದಲ್ಲಿ ಕ್ರಮಿಸುವ ಚಂದ್ರನ ಶಂಕು ಆಕೃತಿಯ ದಟ್ಟನಾದ ನೆರಳ ಮೊನೆಯು ಮಧ್ಯ ಅಮೇರಿಕದ ನೆಬ್ರಾಸ್ಕದಲ್ಲಿ ೪-೪೮ ಗಂಟೆಗೆ ಮಧ್ಯಾಹ್ನಾನಂತರ ಬಿತ್ತು. ಅಲ್ಲಿಂದ ಎಂಭತ್ತು ಮೈಲು ಅಗಲ ಹಾಗು ೯ ಸಾವಿರ ಮೈಲು ಉದ್ದ ಪ್ರದೇಶಕ್ಕೆ ನೆರಳು ಪಸರಿಸ ತೊಡಗಿತು. ಮಿನ್ನಿಸೋಟಾ, ವಿಸ್‌ಕನ್ಸಿನ್, ಮಿಚಿಗನ್, ಕೆನಡಾ, ದಕ್ಷಿಣ ಗ್ರೀನ್‌ಲೇಂಡ್, ಐಸ್‌ಲೇಂಡ್‌ಗಳಲ್ಲಿ ಹಾದು ನಾರ್ವೆಯ ತೀರದ ಬರ್ಗನಕ್ಕೆ ಬಂತು. ಅಲ್ಲಿಂದ ದಕ್ಷಿಣ ಸ್ವೀಡನದಲ್ಲಿ ಹಾಯ್ದು ರಶಿಯಾದ ೧ ಸಾವಿರ ಮೈಲು ಪ್ರದೇಶದಲ್ಲಿ ಕಾಣಿಸಿಕೊಂಡು, ಅಜರ ಬೈಜಾನದ ಪ್ರಜಾರಾಜ್ಯದ ಮೂಲಕ ಮುಂದೆ ಸಾಗಿ, ಇರಾಣ ಹಾಗು ಪಾಕಿಸ್ತಾನಗಳನ್ನು ಕವಿದು, ಭಾರತದ ವಾಯುವ್ಯ ಭಾಗದಲ್ಲಿ ಗೋಚರಿಸಿತು. ಈ ಮಾರ್ಗವು ಜೋಧಪುರದಲ್ಲಿ ಕೊನೆಗೊಂಡಿತು. ಇಲ್ಲೆಲ್ಲ ಖಗ್ರಾಸ ಗ್ರಹಣವು ಹೆಚ್ಚೆಂದರೆ ೨ ನಿಮಿಷ ಕಾಲ ಕಂಡು ಬಂದಿತು. ಚಂದ್ರನ ಸಾಧಾರಣ ಛಾಯೆಯು ಕವಿದ ಭೂಮಂಡಲದ ಉಳಿದ ಪ್ರದೇಶಗಳಲ್ಲಿ ಆಂಶಿಕ ಗ್ರಹಣವಷ್ಟೇ

(೧೧ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O UDIPI, S India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಲೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆಯಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ಸ್ವಾತಂತ್ರ್ಯೋತ್ತರದಲ್ಲಿ ಸಂರಕ್ಷಣೋದ್ಯಮ

ಎಲ್ಲ ದೃಷ್ಟಿಯಿಂದಲೂ ಸ್ವಾವಲಂಬಿಯಾಗುವ ಧ್ಯೇಯ

ಭಾರತವು ಶಾಂತಿಪ್ರಿಯವಾದ ರಾಷ್ಟ್ರ; ನಮಗೆ ಬೇರೆ ದೇಶಗಳ ಮೇಲೆ ಆಕ್ರಮಣ ನಡೆಸುವ ಇಚ್ಛೆ ಇಲ್ಲವೇ ಇಲ್ಲ. ಆದರೆ ನಮ್ಮ ದೇಶದ ಮೇಲೆ ಶತ್ರು ಧಾಳಿಯು ನಡೆಯಲಾರದೆಂದು ಹೇಗೆ ಹೇಳೋಣ? ಆದುದರಿಂದ ನಮ್ಮ ಸಂರಕ್ಷಣಾ ವ್ಯವಸ್ಥೆಯನ್ನು ಯಾವಾಗಲೂ ಚೊಕ್ಕ ರೀತಿಯಲ್ಲಿಡಬೇಕಾಗಿರುತ್ತದೆ. ಈಚೆಗೆ ನೆರೆಯ ಸಹೋದರ ರಾಷ್ಟ್ರವಾದ ಪಾಕಿಸ್ತಾನಕ್ಕೆ ಅಮೇರಿಕವು ಸೈನಿಕ ಸಹಾಯವನ್ನು ಕೊಡಮಾಡಿದುದರಿಂದಂತೂ ನಾವು ಸಂರಕ್ಷಣೆಯ ವಿಷಯದಲ್ಲಿ ಹೆಚ್ಚು ಆಸ್ಥೆಯನ್ನು ವಹಿಸಬೇಕಾಗಿದೆ. ಈ ದೃಷ್ಟಿಯಿಂದ "ಕೆಪಿಟಲ್" ಪತ್ರಿಕೆಯಲ್ಲಿ ಸಂರಕ್ಷಣಾ ಮಂತ್ರಿ ಶ್ರೀ ಮಹಾವೀರ ತ್ಯಾಗಿಯವರು ಬರೆದ ಲೇಖನದ ಸಾರವನ್ನು ಗ್ರಹಿಸುವುದರಿಂದ ಪ್ರಯೋಜನವಾದೀತು.

ಹಿನ್ನೆಲೆಯ ಪ್ರಭಾವ

ನಮ್ಮ ದೇಶದಲ್ಲಿ ಸಂರಕ್ಷಣಾ ವ್ಯವಸ್ಥೆ, ಮುಖ್ಯವಾಗಿ ಅದಕ್ಕೆ ಸಂಬಂಧಿಸಿದ ಕೈಗಾರಿಕೆ, ಕೈಗೂಡಿಸಿದ ಪ್ರಗತಿಯನ್ನು ಅದರ ಮೇಲೆ ವಿಶೇಷ ಪ್ರಭಾವವುಂಟುಮಾಡುವ ಹಿನ್ನೆಲೆಯ ಕೆಲವು ಸಂಗತಿಗಳ ಮೇಲಿಂದ ಅಳೆಯಬೇಕಾಗುವುದು. ಬ್ರಿಟಿಷ ಆಡಳಿತ ಕಾಲದಲ್ಲಿ ನಮ್ಮಲ್ಲಿ ಸಂರಕ್ಷಣೆಗೆ ಸಂಬಂಧಿಸಿದ ಕೆಲವು ಉದ್ಯೋಗಗಳು ತಲೆ ಎತ್ತಿದವು. ಇಲ್ಲಿ ಕೆಲಸಮಾಡುತ್ತಿದ್ದ ಏಳೆಂಟು ಕಾರ್ಖಾನೆಗಳು ಸಾಮಾನ್ಯ ಯಂತ್ರೋಪಕರಣಗಳನ್ನು ಜೋಡಿಸುವುದಕ್ಕೆ ನೆರವಾಗುತ್ತಿದ್ದವು. ಅವುಗಳಿಗೆ ಬೇಕಾದ ಪ್ರಾಮುಖ್ಯ ಸಲಕರಣೆಗಳು ಮಾತ್ರ ಬ್ರಿಟನಿನಿಂದಲೇ ಬರಬೇಕಿತ್ತು. ಇಲ್ಲಿ ಸಿದ್ಧಗೊಳಿಸಿದ ಸಾಮಗ್ರಿಗಳ ನಕಾಶೆಯಾಗಲೀ ಚಿತ್ರವಾಗಲೀ ಭಾರತದಲ್ಲಿ ಸಿದ್ಧಗೊಳ್ಳುತ್ತಿರಲಿಲ್ಲ. ವಿದೇಶದ ತಂತ್ರಜ್ಞರದೇ ಕೈವಾಡ ನಡೆಯುತ್ತಿದ್ದು, ಅವರಿಲ್ಲದಿದ್ದರೆ, ಇಲ್ಲಿಯ ಯಂತ್ರಗಳು ಕೆಲಸಮಾಡುವುದನ್ನು ನಿಲ್ಲಿಸಬೇಕಿತ್ತು. ಹೀಗಿದ್ದರೂ ದ್ವಿತೀಯ ಮಹಾಯುದ್ಧದ ಕಾಲದಲ್ಲಿ ಈ ಕಾರ್ಖಾನೆಗಳು ಮಿತ್ರ ರಾಷ್ಟ್ರಗಳಿಗೆ ವಿಶೇಷವಾದ ಸಹಾಯವನ್ನು ಮಾಡಿದವು. ಕಾರ್ಖಾನೆಗಳ ಸಂಖ್ಯೆಯೂ ಹೆಚ್ಚಿ ಕೊಂಡಿತು. ಆದರೆ ಯುದ್ಧ ಸಮಾಪ್ತಿಯಾಗಲು ಕಾರ್ಖಾನೆಗಳು ಕೆಲಸಗೇಡಿಗಳಾದವು. ಸ್ವಾತಂತ್ರ್ಯೋತ್ತರದಲ್ಲಿ ಈ ಪರಿಸ್ಥಿತಿಯನ್ನು ಸುಧಾರಿಸಲಾಯಿತು; ಮೂಲ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿ, ಕಾರ್ಖಾನೆಗಳನ್ನು ವಿಸ್ತರಿಸಲಾಯಿತು. ಇಂದು ಇಪ್ಪತ್ತಕ್ಕಿಂತಲೂ ಹೆಚ್ಚು ಕಾರ್ಖಾನೆಗಳು ಸಂರಕ್ಷಣಾ ವ್ಯವಸ್ಥೆಗೆ ಉಪಯುಕ್ತವಾದ ಸಾಮಗ್ರಿಗಳನ್ನು ತಯಾರಿಸುತ್ತವೆ; ಇವುಗಳ ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದಕ್ಕೋಸ್ಕರ ಕೇಂದ್ರ ಸರಕಾರ ಅನೇಕ ಯೋಜನೆಗಳನ್ನು ಪರಿಶೀಲಿಸುತ್ತಿದೆ.

ಸ್ವಾವಲಂಬನದ ಉದ್ದೇಶ

ಪರದೇಶಗಳ ಮೇಲೆ ಆಕ್ರಮಣ ನಡೆಸುವ ಉದ್ದೇಶ ನಮಗಿಲ್ಲವಾದುದರಿಂದ, ಸ್ವತಂತ್ರವಾದ, ಸಾರ್ವಭೌಮಾಧಿಕಾರವುಳ್ಳ ರಾಷ್ಟ್ರದ ಗೌರವಕ್ಕೆ ಉಚಿತವೆನಿಸಿದ, ಸ್ವಾವಲಂಬನದ ಉದ್ದೇಶವನ್ನು ಕೈಗೂಡಿಸುವುದೇ ನಮ್ಮ ಈಗಿನ ಧ್ಯೇಯ. ಅಮೇರಿಕವೇ ಮುಂತಾದ ದೇಶಗಳು ಶಸ್ತ್ರಾಸ್ತ್ರ ಸಂಗ್ರಹಣ ಕಾರ್ಯದಲ್ಲಿ ತೀವ್ರ ಸ್ಪರ್ಧೆಯನ್ನು ಹೂಡುತ್ತಿರುವುದನ್ನು ನಾವು ಕಾಣಬಹುದು. ಸೈನ್ಯ ವಿಸ್ತರಣೆಯ ವಿಷಯಕ್ಕೂ ಅವು ಹೆಚ್ಚು ಗಮನವನ್ನು ಕೊಡುತ್ತವೆ. ಆದರೆ ನಾವು ಅಂತಹ ಹುಚ್ಚು ಹವ್ಯಾಸವನ್ನು ತೋರಿಸುವ ಪರಿಸ್ಥಿತಿಯಲ್ಲಿಲ್ಲ. ಒಂದನೆಯದಾಗಿ, ನಮಗೆ ನಮ್ಮ ಸಂರಕ್ಷಣೆಯ ವ್ಯವಸ್ಥೆಯನ್ನು ಚೊಕ್ಕವಾಗಿಡುವುದಕ್ಕಿಂತ ಹೆಚ್ಚಿನ ಅಭಿಲಾಷೆ ಇಲ್ಲ; ಎರಡನೆಯದಾಗಿ, ರಾಷ್ಟ್ರದ ಸರ್ವಾಂಗೀಣ ಪ್ರಗತಿಯನ್ನು ಸಾಧಿಸಿ, ನವಭಾರತದ ನಿರ್ಮಾಣ ಕಾರ್ಯವನ್ನು ನೆರವೇರಿಸುವ ಘನತರವಾದ ಹೊಣೆಯು ನಮ್ಮ ಹೆಗಲೇರಿರುತ್ತದೆ. ಆರ್ಥಿಕ ಹಾಗು ಸಾಮಾಜಿಕ ಪ್ರಗತಿಯನ್ನು ಸಾಧಿಸುವ ಸಾವಿರಾರು ಯೋಜನೆಗಳನ್ನು ನಾವು ಕಾರ್ಯಗತಮಾಡಬೇಕಾಗಿರುವುದು; ಮತ್ತು ಅದಕ್ಕೋಸ್ಕರ ನಮ್ಮ ಸಾಧನ ಸಂಪತ್ತುಗಳನ್ನು, ವ್ಯಯಿಸುವ ಅಗತ್ಯ ಹೆಚ್ಚಾಗಿರುವುದು. ಆದುದರಿಂದ ಆವಶ್ಯಕತೆಗಿಂತ ಅಧಿಕ ಪ್ರಮಾಣದಲ್ಲಿ ಸಂರಕ್ಷಣಾ ವ್ಯವಸ್ಥೆಯನ್ನು ಬಲಗೊಳಿಸುವುದು ನಮಗೆ ಇಷ್ಟವಿಲ್ಲ ಹಾಗೆ ಮಾಡಲು ನಮಗೆ ಹಣ ದೊರಕುವಂತೆಯೂ ಇಲ್ಲ.

ಪ್ರಥಮ ಹೆಜ್ಜೆ

ಸ್ವಾವಲಂಬನಕ್ಕೋಸ್ಕರ ಇಡಲಾದ ಪ್ರಥಮ ಹೆಜ್ಜೆಯೆಂದರೆ ಅಂಬರನಾಥದಲ್ಲಿ ಸ್ಥಾಪಿಸಲಾದ ಮದ್ದುಗುಂಡಿನ ಕಾರ್ಖಾನೆ: ಹೊಸ ಆಯುಧಗಳನ್ನೂ ಹತ್ಯಾರುಗಳನ್ನೂ ತಯಾರಿಸುವ ಈ ಕೇಂದ್ರದ ಉದ್ಘಾಟನೆಯನ್ನು ೧೯೫೪ನೇ ಇಸವಿಯ ಜನವರಿ ಮಾಸದಲ್ಲಿ ಪ್ರಧಾನ ಮಂತ್ರಿ ನೆಹರೂರವರು ನೆರವೇರಿಸಿದರು. ಈ ಕಾರ್ಖಾನೆಯು ನವೀನ ಮಾದರಿಯ ಶಸ್ತ್ರಾಸ್ತ್ರಗಳನ್ನು ತಯಾರಿಸುವುದರಲ್ಲಿ ನೆರವಾಗುತ್ತದಲ್ಲದೆ, ಫಿರಂಗಿ ಮತ್ತು ತೋಪುಗಳ ಕಾರ್ಖಾನೆಗಳಿಗೆ ಅಗತ್ಯವೆನಿಸಿದ ಯಂತ್ರೋಪಕರಣಗಳನ್ನೂ ಒದಗಿಸುತ್ತದೆ. ಫಿರಂಗಿ ಕಾರ್ಖಾನೆಗಳಿಗೆ ಪ್ರತಿವರ್ಷವು ಬಹಳ ದೊಡ್ಡ ಪ್ರಮಾಣದಲ್ಲಿ ಯಂತ್ರೋಪಕರಣಗಳು ಬೇಕಾಗುತ್ತವೆ. ಹಳೆಯದನ್ನು ಕಳಚಿ, ಹೊಸತನ್ನು ಪ್ರತಿಕ್ಷೇಪಿಸುವುದಕ್ಕೂ ಇದು ಅಗತ್ಯ. ಅಲ್ಲದೆ ತುರ್ತಿನ ಸಂದರ್ಭಗಳಲ್ಲಿ, ಕೋವಿ, ಫಿರಂಗಿ, ತೋಪು ಮುಂತಾದವುಗಳ ತಯಾರಿಕೆಯ ಪ್ರಮಾಣವನ್ನು ನಾವು ಹೆಚ್ಚಿಸಬೇಕಾದಾಗ, ಅದಕ್ಕೆ ಬೇಕೆನಿಸಿದ ಯಂತ್ರೋಪಕರಣಗಳ ಪೂರೈಕೆಯು ಯಥೇಷ್ಟ ನಡೆಯಬೇಕಾಗುವುದು. ಆಯಕಟ್ಟಿನ ಪ್ರಸಂಗಗಳಲ್ಲಿ ವಿದೇಶಗಳಿಂದ ಯಂತ್ರೋಪಕರಣಗಳನ್ನು ತರಿಸಲು ನಮಗೆ ಸಾಧ್ಯವಾಗಲಾರದು—ನಮಗೆ ಕೊಡುವವರೇ ಇರಲಾರರು; ಕೊಟ್ಟರೂ ಅವನ್ನು ನಮ್ಮ ದೇಶಕ್ಕೆ ತರುವುದಕ್ಕೆ ಸಾಗೆ ಸೌಕರ್ಯದ ಕಷ್ಟ ಕಂಡುಬಂದೀತು. ಈ ದೃಷ್ಟಿಯಿಂದ ಅಂಬರನಾಥದ ಕಾರ್ಖಾನೆಯು ಸ್ವಾಗತಾರ್ಹವಾದ ಉಪಕ್ರಮವೆಂದು ಸ್ಪಷ್ಟವಾಗುತ್ತದೆ.

ತಂತ್ರಜ್ಞರ ವ್ಯವಸ್ಥೆ

ಆಯುಧ ಹಾಗು ಯಂತ್ರೋಪಕರಣಗಳ ಉತ್ಪಾದನೆಯಲ್ಲಿ ತರಬೇತಿ ಹೊಂದಿದ ತಂತ್ರಜ್ಞರು ಮತ್ತು ಕುಶಲ ಕಲಾವಿದರು ಬೇಕಾಗುತ್ತಾರೆ. ಅಂಬರನಾಥದ ಕಾರ್ಖಾನೆಗೆ ಹೊಂದಿಕೊಂಡಂತೆ ಈ ದಿಸೆಯಲ್ಲಿ ತರಬೇತಿಯನ್ನು ಕೊಡುವ ಶಾಲೆಯೊಂದು ನಡೆಸಲಾಗುತ್ತದೆ. ಅಂಬರನಾಥದ ಕಾರ್ಖಾನೆಯ ಮಟ್ಟಿಗಷ್ಟೇ ಅಲ್ಲ—ಭಾರತದ ಇತರ ಕಾರ್ಖಾನೆಗಳ ಆವಶ್ಯಕತೆಯನ್ನು ಪೂರೈಸುವಂತಹ ಶಿಕ್ಷಣವೂ ತರಬೇತಿಯೂ ಈ ಶಾಲೆಯಲ್ಲಿ ಕೊಡಲಾಗುವುದು. ಉತ್ಪಾದನೆಯನ್ನು ಹೆಚ್ಚಿಸುವ ಎಲ್ಲ ಪ್ರಯತ್ನಗಳೂ ಯೋಜನಾ ಬದ್ಧವಾಗಿ ನೆರವೇರುತ್ತವೆ. ಈ ಪ್ರಕಾರವಾದ ವಿಸ್ತರಣಾ ಕಾರ್ಯಕ್ಕೆ ಯಂತ್ರೋಪಕರಣಗಳ ಮಾದರಿಯನ್ನೊಳಗೊಂಡ ನಕಾಶೆಗಳೂ ಚಿತ್ರಗಳೂ ಅಗತ್ಯಬೀಳುತ್ತವೆ. ಪ್ರಕೃತ ಸ್ಥಾಪಿಸಲಾದ ಶಾಲೆಯು ಇನ್ನು ಕೆಲವೇ ವರ್ಷಗಳಲ್ಲಿ ನಾವು ಈ ಮಟ್ಟಿಗೆ ಸ್ವಾವಲಂಬಿಯಾಗಬಲ್ಲೆವೆಂದು ಸೂಚಿಸುತ್ತದೆ. ವಿಶೇಷವಾದ ತರಬೇತಿ ಕಾರ್ಯಕ್ರಮವೂ ರೂಪಿತವಾಗಿದ್ದು, ಸ್ವಿಜರಲೇಂಡಿಗೆ ನಮ್ಮ ಕೆಲವು ಪರಿಣತರು ಹೆಚ್ಚಿನ ಜ್ಞಾನ ಸಂಪಾದನೆಗೋಸ್ಕರ ಹೋಗಿದ್ದಾರೆ. ತರಬೇತಿ ಶಾಲೆಯು ಮೊದಲನೇ ಗುಂಪಿನ ಆಳು ಮಂದಿಗೆ ಮೂರು ವರ್ಷ ಅವಧಿ ಕುಶಲ ತರಬೇತಿಯನ್ನು ಕೊಟ್ಟು ಹೊರಗೆ ಕಳಿಸಿದ್ದು, ಎರಡನೇ ಮತ್ತು ಮೂರನೇ ಗುಂಪು ತರಬೇತಿಯನ್ನು ಪಡೆಯುತ್ತಾ ಇದೆ.

ವಿಶೇಷ ಚಟುವಟಿಕೆ

ಸಂರಕ್ಷಣಾ ಕಾರ್ಯಕ್ರಮದಲ್ಲಿ ಬೆಂಗಳೂರಿನಲ್ಲಿರುವ ಹಿಂದುಸ್ಥಾನ ವಿಮಾನ ಕಾರಖಾನೆಯು ವಹಿಸಿದ ಪಾತ್ರವೂ ದೊಡ್ಡದು—ಇಲ್ಲಿಯೇ ನಕಾಶೆ ತಯಾರಿಸಿ, ನಿರ್ಮಾಣಗೈದ "H T 2" ಎಂಬ ಮಾದರಿಯ ವಿಮಾನಗಳು ಎಲ್ಲ ರೀತಿಯಿಂದಲೂ ತೃಪ್ತಿಕರವಾದ ಫಲಿತಾಂಶವನ್ನು ಕೊಟ್ಟಿರುತ್ತವೆ. ಪ್ರಾಯೋಗಿಕ ಪರೀಕ್ಷೆಗಳು ಇನ್ನೂ ನಡೆಯುತ್ತಿದ್ದು, ಅವು ಮುಗಿದೊಡನೆಯೇ ವಿಸ್ತೃತ ಪ್ರಮಾಣದಲ್ಲಿ ಉತ್ಪಾದನೆಯನ್ನು ಕೈಗೊಳ್ಳಲಾಗುವುದು. ಸೈನಿಕ ಹಾಗು ನಾಗರಿಕ ಬೇಡಿಕೆಗಳನ್ನು ಇದು ಪೂರೈಸುತ್ತದೆ. "ವಾಂಪಾಯರ್" ಮಾದರಿಯ ವಿಮಾನಗಳನ್ನು ಕಟ್ಟುವಲ್ಲಿ ಈ ಕೇಂದ್ರವು ಈಗಾಗಲೇ ತನ್ನ ಕೈಚಳಕವನ್ನು ಪ್ರಕಟಿಸಿರುತ್ತದೆ. ವಿಮಾನ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office. UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ 18/- ರೂ. 15/-
ಹೋಲ್ ಲೈಫ್ ಎಶ್ಯೂರೆನ್ಸಿಗೆ ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಷಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಟ್ರಾಂಬೇಯಲ್ಲಿ ತೈಲ ಶುದ್ಧೀಕರಣ ಗೃಹ

ಸ್ಟೇಂಡರ್ಡ್ ವೆಕ್ಯೂಂ ಕಂಪೆನಿಯ ಉತ್ಪಾದನೆ ಪ್ರಾರಂಭ

ಈ ಜುಲೈ ತಿಂಗಳಲ್ಲಿ ಭಾರತದಲ್ಲಿ ದೀರ್ಘಕಾಲೀನ ಪರಿಣಾಮಗಳನ್ನುಂಟು ಮಾಡುವ ಸಾಹಸವೊಂದು ಕೈಗೂಡಿತು; "ಚಾರ್ಲ್ಸ್ ಎಫ್. ಮೇಯರ್" ಎಂಬ ಸಾಗರ ನೌಕೆಯು ಪರ್ಶಿಯಾದ ಕೊಲ್ಲಿಯಿಂದ ಮುಂಬಯಿಗೆ ಹನ್ನೆರಡು ಮೈಲು ವಾಯವ್ಯಕ್ಕಿರುವ ಟ್ರಾಂಬೇ ದ್ವೀಪಕ್ಕೆ ಕಚ್ಚಾ ಎಣ್ಣೆಯ ಪೀಪಾಯಿಗಳನ್ನು ಹೊತ್ತು ತಂದಿತು. ಇದನ್ನು ಅಮೇರಿಕದ ಸ್ಟೇಂಡರ್ಡ್ ವೆಕ್ಯೂಂ ಎಣ್ಣೆ ಕಂಪೆನಿಯ ಶುದ್ಧೀಕರಣ ಗೃಹದಲ್ಲಿ ಭಟ್ಟಿ ಇಳಿಸಿ ಪೆಟ್ರೋಲಿಯಂ ಮತ್ತು ಇತರ ಶಕ್ತಿಪೂರಕ ತೈಲಗಳನ್ನು ಸಿದ್ಧಗೊಳಿಸಲಾಗುವುದು. ಈ ಹಿಂದಿನದೊಂದು ಲೇಖನದಲ್ಲಿ (ತಾ. ೧೫-೧೦-೧೯೫೩) ಪ್ರಸ್ತಾಪಿಸಿದಂತೆ, ತೈಲ ಶುದ್ಧೀಕರಣ ಗೃಹಗಳ ಸ್ಥಾಪನೆಯು ಭಾರತದ ಪ್ರಗತಿಯಲ್ಲಿ ಮುಂದಿಟ್ಟ ದೃಢವಾದ ಹೆಜ್ಜೆಯಾಗಿರುತ್ತದೆ. ಮುಂಬಯಿಯಲ್ಲಿ ಕೆಲಸಮಾಡುವ "ಸ್ಟೇಂಡರ್ಡ್ ವೆಕ್ಯೂಂ" ಹಾಗು "ಬರ್ಮಾಶೆಲ್" ಮತ್ತು ವಿಶಾಖಪಟ್ಟಣದಲ್ಲಿ ತಲೆಎತ್ತುವ "ಕಾಲ್ಟೆಕ್ಸ್" ಕಂಪೆನಿಗಳು ನಮ್ಮ ದೇಶದಲ್ಲಿ ಒಟ್ಟಿಗೆ ೬೦ ಕೋಟಿ ರೂಪಾಯಿಗಳ ವಿದೇಶೀಬಂಡವಾಳವನ್ನು ನಿಕ್ಷೇಪಿಸುತ್ತವೆ. ೧೯೫೭ನೇ ಇಸವಿಗಾಗುವಾಗ ಈ ಮೂರೂ ಕಂಪೆನಿಗಳ ಉತ್ಪಾದನೆಯು ೩೩ ಲಕ್ಷ ದೊಡ್ಡ ಟನ್ನುಗಳಷ್ಟು ಕಚ್ಚಾ ಎಣ್ಣೆಯನ್ನು ಬಳಸುತ್ತದೆ; ಮತ್ತು ಭಾರತದ ಆವಶ್ಯಕತೆಯ ಐದರಲ್ಲಿ ನಾಲ್ಕುಪಾಲಿನಷ್ಟು ಪೆಟ್ರೋಲಿಯಂ ಹಾಗು ಇತರ ತೈಲಗಳನ್ನು ಪೂರೈಸುತ್ತದೆ.

ಏರುವ ಬೇಡಿಕೆ

ದ್ವಿತೀಯ ಮಹಾ ಯುದ್ಧದ ಬಳಿಕ ನಮ್ಮ ದೇಶದಲ್ಲಿ ಕೈಗಾರಿಕೆಗಳ ಅಭಿವೃದ್ಧಿಯನ್ನು ದ್ರುತಗತಿಯಿಂದ ಕೈಗೊಳ್ಳಲಾಗುತ್ತದೆ. ಸ್ವಾತಂತ್ರ್ಯೋತ್ತರದಲ್ಲಿ ಕೈಗೊಳ್ಳಲಾದ ಪಂಚವಾರ್ಷಿಕ ಯೋಜನೆಯು ಕೈಗಾರಿಕೆಗಳ ಬೆಳವಣಿಗೆಗೆ ಹೆಚ್ಚಿನ ಉತ್ತೇಜನವನ್ನು ಕೊಟ್ಟಿದೆ. ತತ್ಪರಿಣಾಮವಾಗಿ ೧೯೪೮ರಿಂದ ೧೯೫೩ನೇ ವರ್ಷಕ್ಕಾಗುವಾಗ ಯಂತ್ರಚಾಲಕ ಶಕ್ತಿ ಸ್ರೋತ್ರಗಳ ಬಳಕೆಯಲ್ಲಿ ನೂರಕ್ಕೆ ೩೭ರಷ್ಟು ಹೆಚ್ಚಳ ಕಂಡುಬಂದಿದೆ. ಇನ್ನೂ ಹೆಚ್ಚು ಯಂತ್ರಚಾಲಕ ಶಕ್ತಿಯನ್ನು ಉಪಯೋಗಿಸಲು ಕೈಗಾರಿಕೆಗಳು ನೋಡುತ್ತಿದ್ದು ಬೇಡಿಕೆಯು ದಿನೇ ದಿನೇ ಪೂರೈಕೆಗಿಂತ ವೃದ್ಧಿಹೊಂದುತ್ತಿದೆ. ಯಂತ್ರಚಾಲಕ ಶಕ್ತಿಗಳಲ್ಲಿ ಪ್ರಾಮುಖ್ಯವಾದ ತೈಲದ ಬೇಡಿಕೆಯು ೧೯೪೮ ರಿಂದ ಮೂರೇ ವರ್ಷಗಳಲ್ಲಿ ೩೦% ಹೆಚ್ಚಿಕೊಂಡಿತು. ಈಗ ನಮ್ಮ ದೇಶದಲ್ಲಿ ಬಳಸಲಾಗುವ ಯಂತ್ರಚಾಲಕ ಶಕ್ತಿಗಳಲ್ಲಿ ತೈಲದ ಅಂಶವು ನಾಲ್ಕರಲ್ಲಿ ಒಂದಾಗಿದೆ—ಉಳಿದ ಪಾಲು ವಿದ್ಯುಚ್ಛಕ್ತಿ, ಕಲ್ಲಿದ್ದಲು ಮುಂತಾದುವಕ್ಕೆ ಸಲ್ಲುತ್ತದೆ. ಹೀಗೆ ತೈಲದ ಬೇಡಿಕೆ ಹೆಚ್ಚುತ್ತಿದ್ದಾಗ, ಅಬದಾನಿನ ಎಣ್ಣೆ ಶುದ್ಧೀಕರಣ ಕಂಪೆನಿಗಳ ಕೆಲಸವು ನಿಂತು ಹೋದುದರಿಂದ ಪ್ರಗತಿಗೆ ಆಘಾತವೇ ಸಂಭವಿಸಿತು. ವಿದೇಶೀ ವಿನಿಮಯದ ಸಮಸ್ಯೆಯೂ ಆಯಾತ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಪ್ರತಿಕೂಲವಾಯಿತು. ನಮ್ಮ ದೇಶದಲ್ಲಿಯೇ ಕಚ್ಚಾ ಎಣ್ಣೆಯನ್ನು ಭಟ್ಟಿ ಇಳಿಸುವ ಶುದ್ಧೀಕರಣ ಗೃಹಗಳು ಸ್ಥಾಪಿಸಲ್ಪಟ್ಟರೆ ದೊಡ್ಡ ಸಮಸ್ಯೆಯೊಂದು ದೂರವಾಗುವುದೆಂದು ಖಚಿತವಾಯಿತು. ಈ ದಿಸೆಯಲ್ಲಿ ಸಾಹಸದಿಂದ ಮುಂದೆ ಬಂದು ಮೊದಲಾಗಿ ಕೆಲಸ ಪ್ರಾರಂಭಿಸಿದ ಶ್ರೇಯಸ್ಸು "ಸ್ಟೇಂಡರ್ಡ್ ವೆಕ್ಯೂಂ" ಕಂಪೆನಿಗೆ ಸೇರುತ್ತದೆ ಈ ಕಂಪೆನಿಯು ಟ್ರಾಂಬೇಯಲ್ಲಿ ಹದಿನೇಳೂವರೆ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಿದ ಶುದ್ಧೀಕರಣ ಗೃಹವು ಅಮೇರಿಕದ ಖಾಸಗಿ ಕಂಪೆನಿಯೊಂದು ಭಾರತದಲ್ಲಿ ತೊಡಗಿಸಿದ ಬಂಡವಾಳಗಳಲ್ಲೆಲ್ಲ ದೊಡ್ಡದು ಮಾತ್ರವಾಗಿರುತ್ತದೆ. ಈ ಜುಲೈಯಲ್ಲಿ ಎಲ್ಲರಿಗಿಂತಲೂ ಮೊದಲು ಕೆಲಸ ಪ್ರಾರಂಭಿಸಿದ ಈ ಕಂಪೆನಿಯು ಭಾರತದ ಈಗಿನ ತೈಲ ಉತ್ಪಾದನೆಯನ್ನು ಐದು ಪಾಲಿನಷ್ಟು ಹೆಚ್ಚಿಸುತ್ತದೆ. ದಿನಕ್ಕೆ ೨೫೦೦೦ರಿಂದ ೩೦೦೦೦ ಪೀಪಾಯಿ ಕಚ್ಚಾ ಎಣ್ಣೆಯನ್ನು ಇಲ್ಲಿ ಉಪಯೋಗಿಸಲಾಗುತ್ತದೆ ಆರು ನಮೂನೆಯ ತೈಲ ಶಕ್ತಿಗಳನ್ನು ಒಟ್ಟಿಗೆ ೬೦ ಕೋಟಿ ಗ್ಯಾಲನ್ನುಗಳಷ್ಟು ಇದು ಪ್ರತಿ ವರ್ಷ ಉತ್ಪಾದಿಸುತ್ತದೆ.

ನಿರ್ಮಾಣ ಕಾರ್ಯ

ಶುದ್ಧೀಕರಣ ಗೃಹ ನಿರ್ಮಾಣಕ್ಕೋಸ್ಕರ ಅಕ್ಟೋಬರ ೧೯೫೨ರಲ್ಲಿ ಭಾರತ ಸರಕಾರದೊಡನೆ ಈ ಕಂಪೆನಿ ಮಾತುಕತೆಗಳನ್ನು ತೊಡಗಿತು. ಒಂದೂವರೆ ತಿಂಗಳುಗಳಲ್ಲಿ ಈ ಪ್ರಶ್ನೆಯು ನಿಲುಗಡೆಗೆ ಬಂದಿತು; ಮತ್ತು ಒಪ್ಪಂದಕ್ಕೆ ಅಂಕಿತಬಿತ್ತು. ಭಾರತ ಸರಕಾರವು ತನ್ನ ಸಾರ್ವಭೌಮಾಧಿಕಾರಕ್ಕೆ ಉಚಿತವಾದ ನಿಯಂತ್ರಣಗಳನ್ನು ಕಂಪೆನಿಯ ಮೇಲೆ ಹೇರುವುದೆಂದೂ ಆದರೂ ಅನಾವಶ್ಯಕ ಹಸ್ತಕ್ಷೇಪದ ಭಯವಿಲ್ಲದೆ ಕಂಪೆನಿಯು ಕೆಲಸ ಮಾಡಬಹುದೆಂದೂ ಇದು ಹೇಳುತ್ತದೆ. ಗೃಹ ನಿರ್ಮಾಣಕ್ಕೆ ಮುಂಚೆ ಯೋಗ್ಯ ಸ್ಥಳದ ಆಯ್ಕೆಗೆ ಪ್ರಯತ್ನ ಮಾಡಬೇಕಾಯಿತು. ಟ್ರಾಂಬೇಯು ಎಲ್ಲ ರೀತಿಯಿಂದಲೂ ಯೋಗ್ಯವೆಂದು ತಜ್ಞ ಮಂಡಳವು ತೀರ್ಮಾನಿಸಿತು. ಇಲ್ಲಿ ಶುದ್ಧೀಕರಣ ಗೃಹದ ಭಾರವನ್ನು ಹೊರಬಲ್ಲ ಬಂಡೆಗಲ್ಲುಗಳು ಬಹಳ ಮೇಲೆಯೇ ಇವೆ; ಈ ಪ್ರದೇಶವು ಭೂಕಂಪ ವಲಯದ ಹೊರಗೆ ಇದೆ; ಭಾರತದ ಎರಡು ದೊಡ್ಡ ರೈಲ್ವೆಗಳು ಮುಂಬಯಿಯಿಂದ ಹೊರಡುತ್ತವಾಗಿ, ಸಾಗಿಗೆ ಸೌಕರ್ಯ ಚೆನ್ನಾಗಿಯೇ ಇವೆ; ಪಶ್ಚಿಮ ಕರಾವಳಿಯ ಬೇಡಿಕೆಯಲ್ಲೆಲ್ಲ ಮುಕ್ಕಾಲಂಶ ಮುಂಬಯಿಯಿಂದ ಬರುತ್ತದೆ; ಈ ಹಾಗು ಇತರ ಸಂಗತಿಗಳು ನಿರ್ಣಯಕ್ಕೆ ಆಧಾರವಾಗಿದ್ದವು. ಹೀಗೆ ತೀರ್ಮಾನಿಸಿದ ಬಳಿಕ, ಸರಕಾರವು ಒದಗಿಸಿದ ೪೫೦ ಎಕ್ರೆ ಸ್ಥಳದಲ್ಲಿ ೭೫ ದಿನಗಳವರೆಗೆ ಕೆಲಸ ಮಾಡಿ, ನೆಲವನ್ನು ಹದಗೊಳಿಸಲಾಯಿತು. ಗೃಹ ನಿರ್ಮಾಣಕ್ಕೋಸ್ಕರ ದಿನಕ್ಕೆ ೬೦೦ ಘನ ಗಜದಷ್ಟು ಕಾಂಕ್ರೀಟನ್ನು ಒದಗಿಸಬಲ್ಲ ದೊಡ್ಡ ತೊಟ್ಟಿಯನ್ನು ಕಟ್ಟಲಾಯಿತು. ಕಳೆದ ಮಳೆಗಾಲದಲ್ಲಿ, ಬೇರೆ ಬೇರೆ ಯಂತ್ರಗಳನ್ನು ನೆಲೆಗೊಳಿಸುವ ಕೆಲಸವು ಮುಂದೊತ್ತಲ್ಪಟ್ಟಿತು. ಇವುಗಳಲ್ಲಿ ೧೪೯ ಅಡಿಯಷ್ಟು ದೊಡ್ಡದಾದ ಸಾಧನವೊಂದನ್ನು ಮುಂಬಯಿಯ ಅಲೆಗ್ಸಾಂಡ್ರಾ ಬಂದರಿನಿಂದ ಪೀರಪಾವು ರೇವಿಗೆ ವಿಶೇಷ ನೌಕೆಯ ಮೇಲಿಂದ ತಂದುದೂ ಅಲ್ಲಿಂದ ೬೩ ಗಾಲಿಗಳ ಲಾರಿಯೊಂದರ ಮೂಲಕ ಅದನ್ನು ಕಾರ್ಖಾನೆಯ ಸ್ಥಳಕ್ಕೆ ಸಾಗಿಸಿದ್ದೂ ಉಲ್ಲೇಖನೀಯ. ೨೦೦ ಅಡಿಯಷ್ಟು ಎತ್ತರವಾದ ಈ ಶುದ್ಧೀಕರಣ ಗೃಹದ ನಿರ್ಮಾಣಕ್ಕೆ ಸಾಮಾನ್ಯ ಕ್ರೇನುಗಳು ಸಾಕಾಗದೆ ಹೋಗಿ, ವಿಶೇಷ ಮಾದರಿಯ ಉಪಕರಣಗಳನ್ನು ಬಳಸಬೇಕಾಯಿತು. ಕಟ್ಟಡ ರಚನೆಗೆ ೩೦ಸಾವಿರ ಘನ ಗಜ ಕಾಂಕ್ರೀಟು, ೩೫೫ ಮೈಲು

(೧೧ನೇ ಪುಟ ನೋಡಿರಿ)

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿಶ್ಶಕ್ತಿ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ. 1 ಪೌಂಡ್: ರೂ. 6-8-0 ¼ ಪೌಂಡ್: ರೂ. 1-14-0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ರಮ್ಲ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS-3.

NOTIFICATION
UDIPI MUNICIPALITY

Sealed tenders will be received by the Commissioner, Udipi Municipality upto 4-0 p. m. on 15—7—1954 for the following works:-

Name of Work.	Estimate.	Tender Deposit
1. Maintenance of Mission Hospital Chitpadi Road and Bhandarkvoni Alevoor Road	Rs. 1902/-	Rs. 95/-
2. Providing surface dressing with precoated chips along Kadbettu Road ...	Rs. 1315/-	Rs 70/-
3 Petty Works for 1954-55		Rs. 100 -

Full particulars as to conditions of contract etc. may be obtained from the Municipal Office during office hours on working days.

Municipal Office, UDIPI, Dated 1—7—1954.

K Gopala Menon,
Commissioner,
Udipi Municipality, Udipi.

ಉಪಾಧ್ಯಾಯರು ಬೇಕಾಗಿದ್ದಾರೆ.

ಸೆಕೆಂಡರಿ ತರಬೇತಾದ ಉಪಾಧ್ಯಾಯರು ಬೇಕಾಗಿದ್ದಾರೆ. ಅಪೇಕ್ಷೆ ಉಳ್ಳವರು ತಾ. 15—7—1954ರ ಒಳಗೆ ಈ ಕೆಳಗಿನ ವಿಳಾಸಕ್ಕೆ ಅರ್ಜಿ ಕಳಿಸತಕ್ಕದ್ದು.

Corespondent & manager
Ananthamathi Aided Ele School
Hekkadaka Yerlapady P. O.
Karkal Taluk, S. K.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 101/1954

ಪೆಟೀಷನ್ ಲಕ್ಷ್ಮೀ ಬಾ.. ಅರ್ಜಿದಾರಳು ಇವರೊಳಗೆ—

ಸದ್ರಿ ಅರ್ಜಿ ಪ್ರತಿವಾದಿಯು ಅರ್ಜಿದಾರಳ ಗಂಡ ಸರಕಿಂದ ಬಂದಾಯಿತು ತಾ. 22—3—51ರಲ್ಲಿ ಮೃತಪಟ್ಟಿದ್ದು ಅವರು The Canara Industrial and Banking Syndicate Ltd., Udipi ಇವರ ಹಿರಿಯಡಕ ಬ್ರಾಂಚಿನಲ್ಲಿ P. D. No 116ನೇ ಫಿಕ್ಸ್ ಡಿಫಾಸಿಟು ಮಾಡಿದ ರೂ. 520—0—0 ವಸೂಲು ಮಾಡುವದಕ್ಕೆ ತಾನು ವಾರೀಸಳಾಗಿದ್ದು ಆ ಬಗ್ಗೆ ಸಕ್ಸೆಸನ್ ಸರ್ಟಿಫಿಕೇಟು ಕೊಡುವಂತೆ ಕೇಳಿದ ಅರ್ಜಿ ತಾ. 21—7—54ಕ್ಕೆ ತನಿಖೆಗೆ ಇಟ್ಟಿರುವದ್ರಿಂದ ಆಕ್ಷೇಪ ಹೇಳತಕ್ಕವರು ಆ ದಿನ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Petitioner.

Dated 2—7—54, Udipi.

ಗೋವೆಯ ನಾಗರಿಕರಿಗೆ ಬಿಡುಗಡೆಯ ಕರೆ

ಭಾರತದಲ್ಲಿ ಅಂಚೆ ಚೀಟುಗಳ ಶತ ಸಾಂವತ್ಸರಿಕೋತ್ಸವ

ಭಾರತದ ಕಡಲ ತೀರದಲ್ಲಿರುವ ಗೋವೆ ಮೊದಲಾದ ವಿದೇಶೀ ಉಪನಿವೇಶಗಳಲ್ಲಿಯ ಗಂಭೀರ ಪರಿಸ್ಥಿತಿಯನ್ನು ಕಂಡು ನಮ್ಮ ಸರಕಾರವು ತುಂಬ ಚಿಂತೆಗೆ ಗುರಿಯಾಗಿದೆ. ಅಲ್ಲಿ ಕಂಡು ಬರುವ ಸೈನಿಕ ಚಟುವಟಿಕೆಗಳು ಭಯಕಾರಕವಿವೆಯಲ್ಲದೆ, ಪ್ರಜೆಗಳು ವ್ಯಕ್ತಪಡಿಸುವ ಸ್ವಾತಂತ್ರ್ಯಾಪೇಕ್ಷೆಯನ್ನು ದಬ್ಬಾಳಿಕೆಯಿಂದ ಹತ್ತಿಕ್ಕುವುದು ವಿವಂಚನೆಯನ್ನುಂಟು ಮಾಡುತ್ತದೆ. ಈಚೆಗೆ ಗೋವೆಯ ರಾಷ್ಟ್ರೀಯ ಕಾಂಗ್ರೆಸು ತನ್ನ ಎಂಟನೇ ವರ್ಧಂತಿಯನ್ನು ಆಚರಿಸಿದಾಗ ಅನೇಕ ಧುರೀಣರನ್ನು ಬಂಧಿಸಲಾಯಿತು. ಈ ಕುರಿತು ಪೋರ್ಚುಗೀಜ ಸರಕಾರಕ್ಕೆ ಭಾರತವು ತೀವ್ರ ಪ್ರತಿಭಟನೆಯನ್ನು ವ್ಯಕ್ತಗೊಳಿಸಿತು. ಆದರೆ, ಲಿಸ್ಬನಿನಿಂದ ಹೊರಟ ಪ್ರಕಟನೆಯೊಂದು ಭಾರತಸರಕಾರದ ಈ ದೂರನ್ನು ವಿಚಾರಿಸುವುದಿಲ್ಲವೆಂದು ಹೇಳುತ್ತದೆ. "ಪೋರ್ಚುಗೀಜರ ವಶವಿರುವ ಪ್ರದೇಶಗಳನ್ನು ಇತರ ರಾಷ್ಟ್ರಗಳಿಗೆ ಸೇರಿಸಬೇಕೆನ್ನುವ ಚಳವಳವು ಅಕ್ರಮವಿದ್ದು ಪೋರ್ಚುಗೀಜ ಕಾಯಿದೆಯ ದೃಷ್ಟಿಯಿಂದ ಅಪರಾಧವೆನಿಸುತ್ತದೆ. ಪೋರ್ಚುಗೀಜ ಪ್ರದೇಶದಲ್ಲಿ ಅಲ್ಲಿಯ ನಾಗರಿಕರು ನಡೆಸುವ ಚಟುವಟಿಕೆಗಳು ಪೋರ್ಚುಗೀಜ ಸರಕಾರಕ್ಕೆ ಮಾತ್ರ ಸಂಬಂಧಿಸಿದ್ದು, ಹೆರವರ ಹಸ್ತಕ್ಷೇಪವನ್ನು ಸಹಿಸುವಂತಿಲ್ಲ; ಆದುದರಿಂದ ಭಾರತದ ಪ್ರತಿಭಟನೆಯನ್ನು ವಿಚಾರಿಸುವುದಿಲ್ಲ" ಎಂದು ಪೋರ್ಚುಗೀಜ ಸರಕಾರ ತನ್ನ ನಿಲುವೆಯನ್ನು ವಿವರಿಸುತ್ತದೆ.

ಗೋವಾಂತಕರಿಗೆ ಕರೆ

ಆದರೆ ಪೋರ್ಚುಗೀಜ ನಾಗರಿಕರು ಈ ಬೆದರಿಕೆಯನ್ನು ಕೇಳಿದಷ್ಟಕ್ಕೆ ತಮ್ಮ ವಿಮೋಚನಾ ಆಂದೋಲನವನ್ನು ನಿಲ್ಲಿಸುವಷ್ಟು ಹೇಡಿಗಳಿರುವುದಿಲ್ಲ. ಭಾರತ ಒಕ್ಕೂಟದಲ್ಲಿ ವಾಸಿಸುತ್ತಿರುವ ಸುಮಾರು ಒಂದು ನೂರು ಮಂದಿ ಗೋವೆಯ ಪ್ರಮುಖರು ಮಹತ್ವದ ಘೋಷಣೆಯೊಂದನ್ನು ಹೊರಡಿಸಿ, ಪೋರ್ಚುಗೀಜರ ಆಡಳಿತವನ್ನು ಕಿತ್ತೊಗೆದು ಭಾರತದಲ್ಲಿ ಸೇರುವಂತೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕೆಂದು ಕೇಳಿದ್ದಾರೆ. ಜೀವನದ ಬೇರೆ ಬೇರೆ ಕ್ಷೇತ್ರಗಳಲ್ಲಿ ದುಡಿಯುವ ಈ ಪ್ರತಿಷ್ಠಿತರ ಘೋಷಣೆಯನ್ನು ಕೊಂಕಣಿ, ಮರಾಠಿ ಮತ್ತು ಪೋರ್ಚುಗೀಜ ಭಾಷೆಗಳಲ್ಲಿ ಮುದ್ರಿಸಿ, ಗೋವೆ, ದೀವ ಹಾಗೂ ದಮನಗಳಲ್ಲಿ ಹಂಚಲಾಗುತ್ತದೆ. ವಿದೇಶೀ ವಸಾಹತುವಾದದ ನೊಗವನ್ನು ಕಿತ್ತೊಗೆದು ಮಾತೃಭೂಮಿಯಾದ ಭಾರತದೊಂದಿಗೆ ಸೇರುವ ಪ್ರಶ್ನೆಯನ್ನು ಭೌಗೋಲಿಕ, ಆರ್ಥಿಕ, ರಾಷ್ಟ್ರಿಕ ಮುಂತಾದ ಯಾವುದೇ ದೃಷ್ಟಿಯಿಂದ ಪರಿಶೀಲಿಸಿದರೂ ಅದು ನ್ಯಾಯಸಮ್ಮತವೆನಿಸುತ್ತದೆಂದು ಘೋಷಣೆಯು ಸ್ಪಷ್ಟಪಡಿಸುತ್ತದೆ. "ನಮಗೆ ಭಾರತದೊಡನೆಯೇ ಅತಿ ನಿಕಟ ಸಂಬಂಧವಿದೆಯಾಗಲಿ, ಪೋರ್ಚುಗಾಲದೊಡನೆ ಅಲ್ಲ. ಆದುದರಿಂದ ಗೋವೆಯು ಪೋರ್ಚುಗಾಲದ ಅಚ್ಛೇದ್ಯ ಅಂಗವೆಂದು ಸಾಧಿಸುತ್ತಿರುವ ಪೋರ್ಚುಗೀಜ ಸರಕಾರದ ಹೇಳಿಕೆಯನ್ನು ಗೋವಾಂತಕರಾದ ನಾವು ನಮ್ಮ ಸರ್ವಶಕ್ತಿಯಿಂದ ನಿರಾಕರಿಸಬೇಕು" ಎಂದು ಈ ಘೋಷಣೆ ಕರೆ ಕೊಡುತ್ತದೆ.

ಎಚ್ಚೆತ್ತ ಏಶ್ಯಾ

ಏಶಿಯವು ಎಚ್ಚೆತ್ತಿದೆಯೆಂದು ಸಾರುತ್ತಾ "ನಿರ್ಣಾಯಕ ಕಾಲವು ಸನ್ನಿಹಿತವಾಗುತ್ತದೆ; ನಾವು ನಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಕವಲುದಾರಿಯ ಮುಂದೆ ನಿಂತಿದ್ದೇವೆ. ಹೃದಯದಲ್ಲಿ ಹುದುಗಿರಬಹುದಾದ ಅಳುಕನ್ನು ದೂರಮಾಡಿ, ನಿಷ್ಕ್ರಿಯತೆಯನ್ನು ಬಿಟ್ಟುಗೊಟ್ಟು, ನಾವು ಚಳವಳಿಸುವುದಗತ್ಯ. ಏಶಿಯಾ ಮತ್ತು ಆಫ್ರಿಕಗಳಲ್ಲಿ ವಸಾಹತು ಆಡಳಿತವು ಕೊನೆಗೊಳ್ಳುತ್ತಿದೆ; ಭಾರತ ಮೊದಲಾದ ಮಹಾ ರಾಷ್ಟ್ರಗಳು ಸ್ವತಂತ್ರಗೊಂಡಿವೆ. ಹೀಗಿರುತ್ತಾ ಕೆಲವು ತುಣುಕುಗಳಲ್ಲಿ ವಸಾಹತುವಾದಿಗಳ ಕೈವಾಡ ಇನ್ನೂ ನಡೆಯುವುದೆಂದರೆ, ಐತಿಹಾಸಿಕ ವೈಚಿತ್ರ್ಯವಷ್ಟೇ ಅಲ್ಲ, ಹೊಸ ರಾಷ್ಟ್ರಗಳಿಗೆ ಆಹ್ವಾನವೂ ಆಗಿರುತ್ತದೆ, ಎಂದು ಈ ಹೇಳಿಕೆಯು ಸಾರುತ್ತದೆ. ನಾಲ್ಕುನೂರ ಐವತ್ತು ವರ್ಷಗಳ ಪೋರ್ಚುಗೀಜ ಆಡಳಿತವು ನಡೆದ ಬಳಿಕವಾದರೂ "ಸ್ಥಾನಿಕ ಸ್ವರಾಜ್ಯ"ದಂತಹ ಅಲ್ಪ ಕೊಡುಗೆಯ ಕನಸನ್ನೂ ಗೋವಾಂತಕರು ಕಾಣುತ್ತಿಲ್ಲ! ಜನತೆಯ ಆಶೋತ್ತರಗಳನ್ನು ಸಾರ್ವತ್ರಿಕ ಮತಗಣನೆ ಅಥವಾ ಇತರ ಯಾವುದೇ ಸಾಧನದಿಂದ ಕಂಡುಕೊಳ್ಳುವುದು ಪೋರ್ಚುಗೀಜರಿಗೆ ಬೇಕಿಲ್ಲ; ಏಕೆಂದರೆ, ಮತಗಣನೆ ನಡೆಸಿದರೆ, ವಸಾಹತುಗಳಿಂದ ಗಂಟುಮೂಟೆ ಹೊರಬೇಕೆಂದು ಅವರಿಗೆ ಗೊತ್ತಿದೆ. ಒತ್ತಾಯದ ರಾಜನಿಷ್ಠೆಯು ಏತಕ್ಕೂ ಪ್ರಯೋಜನವಿಲ್ಲ. ಪೋರ್ಚುಗೀಜ ವಸಾಹತುಗಳಲ್ಲಿ ವಾಕ್ ಸ್ವಾತಂತ್ರ್ಯ, ಸಂಘ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯ ಮುಂತಾದ ಮೂಲಭೂತ ಹಕ್ಕುಗಳೇ ಇಲ್ಲ. ಗೋವೆಯು ವಾಸ್ತವದಲ್ಲಿ ಕೊರತೆಯ ಪ್ರದೇಶ. ಅಲ್ಲಿಯ ಸಾವಿರಾರು ಕುಟುಂಬಗಳ ಜೀವನ ನಿರ್ವಹವು ಭಾರತದಲ್ಲಿರುವ ಗೋವಾಂತಕರು ಕಳಿಸಿಕೊಡುವ ಹಣದಿಂದಲೇ ನೆರವೇರುತ್ತದೆ ಎಂಬುದಾಗಿ ಘೋಷಣೆಯು ತಿಳಿಸುತ್ತದೆ.

ಪೋರ್ಚುಗಾಲದ ಹೆದರಿಕೆ

ಗೋವೆಯ ವಿಷಮ ಪರಿಸ್ಥಿತಿಯನ್ನು ಚರ್ಚಿಸಿ, ಅರಿತುಕೊಳ್ಳಲು ಭಾರತದ ವಿದೇಶ ಶಾಖೆಯ ಕಾರ್ಯದರ್ಶಿ ಶ್ರೀ ಆರ್. ಕೆ. ನೆಹರೂರವರು ಮುಂಬಯಿಗೆ ಆಗಮಿಸಿ, ಮುಖ್ಯಮಂತ್ರಿ ಮುರಾರಜಿ ದೇಸಾಯಿಯವರನ್ನು ಕಂಡರು. ಮುಂಬಯಿ-ಗೋವಾಗಡಿಯನ್ನು ಇನ್ನಷ್ಟು ಭದ್ರಗೊಳಿಸುವ ಕುರಿತು ವಿಚಾರ ವಿನಿಮಯವನ್ನು ನಡೆಸಲಾಯಿತು. ಗೋವೆಯ ನಾಗರಿಕರು ಭಾರತಕ್ಕೆ ಸ್ವಾತಂತ್ರ್ಯ ದೊರೆತ ದಿನವಾದ ಆಗೋಸ್ತು ೧೫ರಂದು ಗೋವೆಯಲ್ಲಿ ಸತ್ಯಾಗ್ರಹವನ್ನು ಪ್ರಾರಂಭಿಸುವುದಾಗಿ ಹೇಳಿದ್ದು, ಇದರಲ್ಲಿ ಸುಮಾರು ೩೦೦ ಮಂದಿ ಸ್ವಯಂಸೇವಕರು ಭಾಗವಹಿಸುವರು. ಭಾರತದ ಕಾಂಗ್ರೆಸು, ಪ್ರಜಾ ಸಮಾಜವಾದಿ ಮುಂತಾದ ಎಲ್ಲ ಪಕ್ಷಗಳೂ ಈ ಆಂದೋಲನಕ್ಕೆ ಬೆಂಬಲ ಕೊಡುತ್ತವೆ. ಫ್ರೆಂಚ ಭಾರತದ ಆರೆವಾಸಿಯಷ್ಟು ಪ್ರದೇಶವು ಈಗಾಗಲೇ "ವಿಮೋಚನೆ"ಗೊಳಿಸಲ್ಪಟ್ಟಿರುವುದರಿಂದ ಗೋವಾಂತಕರ ಉತ್ಸಾಹವು ಹೆಚ್ಚಿಕೊಳ್ಳುತ್ತಿದೆ. ಗೋವೆಯಲ್ಲಿರುವ ಆರುಲಕ್ಷ ಜನರಲ್ಲಿ ೫೭% ಹಿಂದುಗಳು; ಉಳಿದವರು ಕ್ರಿಶ್ಚಿಯನ ಹಾಗು ಇತರ ಮತಾವಲಂಬಿಗಳು. ಎಲ್ಲ ಹಿಂದುಗಳೂ ಅನ್ಯ ಮತೀಯರಲ್ಲಿ ೮೦% ಜನರೂ ವಿಲಯನಪರ ಆಂದೋಲನಕ್ಕೆ ಬೆಂಬಲ ಕೊಡುತಿದ್ದು, ಭಾರತದೊಡನೆ ಸೇರ್ಪಡೆ ಹೊಂದುವ ದಿನದ ಬರವನ್ನು ಹಾರೈಸುತಿದ್ದಾರೆ. ಇದನ್ನು ಅರಿತಿರುವ ಪೋರ್ಚುಗಾಲವು ಗಾಬರಿಯಾಗಿ ಉತ್ತರ ಅಟ್ಲಾಂಟಿಕ ಒಡಂಬಡಿಕೆಯ ಸೆರಗಿನಲ್ಲಿ ಮುಖ ಮುಚ್ಚಿಕೊಳ್ಳಲು ನೋಡುತ್ತದೆ ಈ ಕುರಿತು ಭಾರತ ಸರಕಾರವು ಕೆನಡಾ, ಅಮೇರಿಕಾ ಮತ್ತು ಬ್ರಿಟನುಗಳೊಡನೆ ಕೇಳಿದ ಸ್ಪಷ್ಟೀಕರಣಕ್ಕೆ ಉತ್ತರ ಬಂದಿರುವುದಾಗಿ ತಿಳಿಯುತ್ತದೆ. ಪೋರ್ಚುಗಾಲದ ವಸಾಹತುವಾದ ಗೋವೆಯ ರಕ್ಷಣೆಗಾಗಿ ಅಟ್ಲಾಂಟಿಕ ರಾಷ್ಟ್ರಗಳು ಧಾವಿಸಿ ಬರುವ ಸಂಭವ ಕಡಿಮೆಯೆಂದು ಉತ್ತರಗಳು ಹೇಳುತ್ತವೆ. ಬ್ರಿಟನು ಮಾತ್ರ ತನ್ನ "ಅತಿ ಪುರಾತನ ಮಿತ್ರರಾಷ್ಟ್ರವಾದ" ಪೋರ್ಚುಗಾಲದೊಡನೆ ೧೩೭೩ರಲ್ಲೇ ಇಸವಿಯಷ್ಟು ಹಿಂದಿನಿಂದ ಮಾಡಿಕೊಂಡು ಬಂದಿದ್ದ ಒಡಂಬಡಿಕೆಗಳನ್ನು ಮುರಿಯಲು ಇಚ್ಛಿಸುವುದಿಲ್ಲ. ಆದರೂ ಅಂದಿಗಿಂತ ಇಂದಿನ ಪರಿಸ್ಥಿತಿ ಭಿನ್ನವೆಂಬ ತತ್ವವನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳುತ್ತದೆ. ಹೀಗಾಗಿ, "ನ್ಯಾಟೋ" ರಾಷ್ಟ್ರಗಳ ಬೆಂಬಲದ ಭರವಸೆ ಪೋರ್ಚುಗಾಲಕ್ಕೆ ಉಳಿದಿಲ್ಲ, ಆದರೂ ಜಂಭವನ್ನೇನು ಅದು ಬಿಟ್ಟುಗೊಟ್ಟಿಲ್ಲ!

ಇನ್ನೊಂದು ಶತಸಾಂವತ್ಸರಿಕೋತ್ಸವ

ಇದೇ ಅಕ್ಟೋಬರ ಒಂದನೇ ದಿನಾಂಕ ಭಾರತದಲ್ಲಿ ಅಂಚೆಚೀಟುಗಳ ಶತಸಾಂವತ್ಸರಿಕೋತ್ಸವವು ಜರಗುತ್ತದೆ. ಈ ಸಂದರ್ಭದಲ್ಲಿ ಅಂತಾರಾಷ್ಟ್ರೀಯ ಅಂಚೆ ಚೀಟುಗಳ ಸುಂದರವೂ ಭವ್ಯವೂ ಆದ ಪ್ರದರ್ಶನವೊಂದು ಹೊಸದೆಹಲಿಯಲ್ಲಿ ಏರ್ಪಡುವುದು. ರಶಿಯಾ, ಅಮೇರಿಕ, ಬ್ರಿಟನು, ಫ್ರಾನ್ಸು, ದಕ್ಷಿಣ ಆಫ್ರಿಕಾ ಮುಂತಾದುವನ್ನೊಳಗೊಂಡು ಸುಮಾರು ೫೦ ರಾಷ್ಟ್ರಗಳು ಈ ಪ್ರದರ್ಶನದಲ್ಲಿ ಉತ್ಸಾಹದಿಂದ ಭಾಗವಹಿಸುತ್ತವೆ. ಪ್ರಧಾನ ಮಂತ್ರಿ ನೆಹರೂರವರು ಪ್ರದರ್ಶನದ ಉದ್ಘಾಟನೆಯನ್ನು ಮಾಡುವರು. ಮಕ್ಕಳಿಗಾಗಿ ಅಂಚೆಚೀಟುಗಳ ಚಿತ್ರ ತೆಗೆಯುವ ಸ್ಪರ್ಧೆಯೂ ಅಂಚೆ ಚೀಟುಗಳ ಚಿತ್ರ ಶಾಸ್ತ್ರದ ಬಗ್ಗೆ ಭಾಷಣವೂ ನಡೆಯುತ್ತದೆ. ಶತಸಾಂವತ್ಸರಿಕೋತ್ಸವದಸ್ಮಾರಕಾರ್ಥವಾಗಿ ಭಾರತದ ಅಂಚೆ ಇಲಾಖೆಯು ವಿಶೇಷ ಅಂಚೆ ಚೀಟುಗಳನ್ನೂ ಲಕೋಟೆಗಳನ್ನೂ ಹೊರಡಿಸುತ್ತದೆ. ಕಳೆದ ನೂರು ವರ್ಷಗಳ ವರೆಗೆ ಮುದ್ರಿಸಲಾದ ಅಂಚೆ ಚೀಟುಗಳ ಪುಸ್ತಕವೂ ಮಾರಾಟಕ್ಕೆ ದೊರಕುವುದು: ಅಂಚೆ ಚೀಟುಗಳ ಇತಿಹಾಸವನ್ನು ವಿವರಿಸುವ ಈ ಪುಸ್ತಕದ ಸಂಪಾದನ ಕಾರ್ಯವನ್ನು ಪ್ರಸಿದ್ಧ ಸಾಹಿತಿ ಹಾಗು ಕಲಾವಿಮರ್ಶಕ ಶ್ರೀ ಮುಲ್ಕರಾಜ ಆನಂದರು ಮಾಡಿದ್ದಾರೆ. ಸ್ವಾತಂತ್ರ್ಯಕ್ಕೆ ಮೊದಲು ಮುದ್ರಿಸಿ ಬಳಕೆಯಲ್ಲಿ ತಂದ ಅಂಚೆ ಚೀಟುಗಳನ್ನೆಲ್ಲ ಮೂರು ತಿಂಗಳ ಅವಧಿಯನ್ನು ಕೊಟ್ಟು ಇದೇ ಅಕ್ಟೋಬರ ಒಂದರೊಳಗೆ ಹಿಂತೆಗೆದುಕೊಳ್ಳಲಾಗುವುದೆಂದೂ ಮುಂದಿನ ಪ್ರಜಾರಾಜ್ಯ ದಿನದಂದು (೨೬-೧-೧೯೫೫) ಈಗ ಬಳಕೆಯಲ್ಲಿರುವ ಪ್ರಾಚ್ಯ ವಸ್ತುಗಳ ಚಿತ್ರವನ್ನೊಳಗೊಂಡ ಅಂಚೆ ಚೀಟುಗಳ ಬದಲು ಪಂಚ ವಾರ್ಷಿಕ ಯೋಜನೆಯ ವಿವಿಧ ಚಟುವಟಿಕೆಯನ್ನು ಚಿತ್ರಿಸುವ ಅಂಚೆ ಚೀಟುಗಳನ್ನು ಒದಗಿಸಲಾಗುವುದೆಂದೂ ತಿಳಿಯುತ್ತದೆ. ಭಾರತದ ಅಂಚೆ ಚೀಟುಗಳನ್ನು ೧೯೨೬ಕ್ಕೆ ಮುಂಚೆ ಇಂಗ್ಲೆಂಡಿನ ಕಂಪೆನಿಯೊಂದು ಮುದ್ರಿಸುತಿತ್ತು; ಆದರೆ ಈಗ ೨೮ ವರ್ಷಗಳಿಂದ ನಾಸಿಕದಲ್ಲಿ ಸ್ಥಾಪಿಸಲಾದ ಭಾರತ ಸರಕಾರದ ಮುದ್ರಣಾಲಯವು ಈ ಕೆಲಸವನ್ನು ಚೊಕ್ಕರೀತಿಯಲ್ಲಿ ನಿರ್ವಹಿಸುತ್ತದೆ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ..	... ರೂ.	25,00,000
ಚಂದಾ ಆಗಿಸಿ, ತೆತ್ತು ಬಂದ ಭಂಡವಾಳ	... ರೂ.	20,00,000
ಕ್ಷೇಮ ನಿಧಿ ...	... ರೂ.	10,50,000
ಠೇವಣಾತಿಗಳು ...	... ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ	... ಸುಮಾರು ರೂಪಾ	4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ

ಎಕ್ಸರ್ ಸೈಜ್

ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ನಾರದ ವಾರ್ತಾವಲೋಕನ

ಗುಂಟೂರಿನಲ್ಲಿ ಆಂಧ್ರದ ಹೈಕೋರ್ಟು

ಶಾಂತಿಗಾಗಿ ಅಮೇರಿಕದೊಡನೆ ಸಹಕಾರ

ಆಂಧ್ರಕ್ಕೆ ಹೈಕೋರ್ಟು

ಪ್ರತ್ಯೇಕ ಹೈಕೋರ್ಟನ್ನು ಗುಂಟೂರಿನಲ್ಲಿ ನೆಲೆಗೊಳಿಸಬೇಕೆಂದು ಆಂಧ್ರ ಶಾಸನಸಭಾ ಸದಸ್ಯರು ಅಪೇಕ್ಷಿಸಿದಂತೆ, ಇದೇ ದಿನಾಂಕ ೫ರಂದು ಸಂಭ್ರಮದ ಸಮಾರಂಭದ ನಡುವೆ ಈ ನ್ಯಾಯಸ್ಥಾನದ ಉದ್ಘಾಟನೆಯು ನೆರವೇರಿತು. ಮದ್ರಾಸು ಹೈಕೋರ್ಟನಲ್ಲಿ ನ್ಯಾಯಾಧೀಶರಾಗಿದ್ದ ಶ್ರೀಗಳಾದ ಕೆ. ಸುಬ್ಬರಾವ್, ಕೆ. ಉಮಾಮಹೇಶ್ವರನ್ ಮತ್ತು ಪಿ. ಚಂದ್ರ ರೆಡ್ಡಿಯವರು ಆಂಧ್ರ ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಕಗೊಂಡಿದ್ದಾರೆ. ಇವರಲ್ಲದೆ ಇನ್ನೂ ಮೂವರನ್ನು ರಾಷ್ಟ್ರಪತಿಗಳು ಇಷ್ಟರಲ್ಲೇ ನಾಮಕರಣಮಾಡುವರು. ಈ ಸಮಾರಂಭಕ್ಕೆ ಸಂದೇಶವನ್ನು ಕಳುಹಿಸುತ್ತಾ ರಾಷ್ಟ್ರಪತಿಗಳು ಆಂಧ್ರದ ಹೈಕೋರ್ಟು ಭಾರತದ ಘಟನೆಯನ್ನು ಎತ್ತಿಹಿಡಿದು ವೈಯಕ್ತಿಕ ಹಾಗು ಸಾಮಾಜಿಕ ನ್ಯಾಯವನ್ನು ರಕ್ಷಿಸಲು ಸಮರ್ಥವಾಗುವುದೆಂದು ಆಶಿಸಿದರು.

ಶೀಘ್ರ ನ್ಯಾಯದಾನ

ಭಾರತ ಸರಕಾರದ ಗೃಹಮಂತ್ರಿ ಡಾ. ಕೈಲಾಸನಾಥ ಕಟಜೂರವರು ಹೈಕೋರ್ಟಿನ ಉದ್ಘಾಟನೆಯನ್ನು ಮಾಡುತ್ತಾ ನೂರು ವರ್ಷಗಳಿಗೂ ಹೆಚ್ಚು ಸಮಯದಿಂದ ನ್ಯಾಯದಾನ ಮಾಡುತ್ತಿರುವ ಮದ್ರಾಸು ಹೈಕೋರ್ಟಿನ ಉಚ್ಚ ಸಂಪ್ರದಾಯವನ್ನು ಈ ನ್ಯಾಯಸ್ಥಾನವು ಕಾಯ್ದುಕೊಂಡು ಹೋಗುವುದೆಂದು ಹಾರೈಸಿದರು. ತಮ್ಮದೇ ಆದ ಸಮಾಜ ಜೀವನವನ್ನು ನಡೆಸಬೇಕೆಂಬ ಆಂಧ್ರದ ಪ್ರಜೆಗಳ ಉತ್ಕಟೇಚ್ಛೆಯ ಪರಿಪೂರ್ಣತೆಯೇ ಈ ಈ ಹೈಕೋರ್ಟೆಂದು ಅವರು ಸಾರಿದರು. ಬ್ರಿಟಿಷರು ಪ್ರಜಾಪ್ರಭುತ್ವದ ಬುನಾದಿಯಾದ ನ್ಯಾಯದಾನ ಪದ್ಧತಿಯನ್ನು ಸ್ಥಾಪಿಸಿದರೂ ಭಾರತದಲ್ಲಿ ಹಿಂದೆ ರೂಢಿಯಿದ್ದ ಶೀಘ್ರ ನ್ಯಾಯದಾನ ಪದ್ಧತಿಯು ಇದರಿಂದ ಪೆಟ್ಟು ತಿಂದಿತೆಂದು ಅವರು ಹೇಳಿದರು. ಪ್ರಜೆಗಳಿಗೆ ಅಗ್ಗವಾಗಿಯೂ ವಿಳಂಬವಿಲ್ಲದೆಯೂ ನ್ಯಾಯವು ದೊರಕುವಂತೆ ನಾವು ನೋಡಿಕೊಳ್ಳಬೇಕೆಂದು ಅವರು ಅಭಿಪ್ರಾಯಪಟ್ಟರು.

ಶಾಂತಿಗಾಗಿ ಸಹಕಾರ

ಅಮೆರಿಕದ ಸಂಯುಕ್ತ ರಾಜ್ಯವು ತನ್ನ ಸ್ವಾತಂತ್ರ್ಯ ವರ್ಧಂತಿಯನ್ನು ಆಚರಿಸುವ ಶುಭ ಸಂದರ್ಭದಲ್ಲಿ (ದಿನಾಂಕ ೩) ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಒಂದು ಸಂದೇಶ ಕಳುಹಿಸಿ ಅಭಿನಂದನೆಗಳನ್ನು ಅರ್ಪಿಸಿದ್ದಲ್ಲದೆ ಅಮೇರಿಕದೊಡನೆ ಸ್ನೇಹ ಮತ್ತು ತಿಳಿವಳಿಕೆಯನ್ನು ಹೆಚ್ಚಿಸಬೇಕೆಂದೂ ಸಾಮಾನ್ಯ ಧ್ಯೇಯವಾದ ಜಾಗತಿಕ ಶಾಂತಿಗೆ ಪ್ರಯತ್ನಿಸುವಲ್ಲಿ ಸಹಕಾರ ನೀಡಬೇಕೆಂದೂ ನಮ್ಮ ಬಲವಾದ ಇಚ್ಛೆ ಇರುವುದಾಗಿ ಹೇಳಿದರು. ಪ್ರಧಾನ ಮಂತ್ರಿ ನೆಹರೂರವರು ತಮ್ಮ ಸಂದೇಶದಲ್ಲಿ ಜಾಗತಿಕ ಸ್ವಾತಂತ್ರ್ಯ ಹಾಗು ಶಾಂತಿ ಸ್ಥಾಪನೆಯ ಧ್ಯೇಯವನ್ನಿಟ್ಟುಕೊಂಡ ಭಾರತ ಮತ್ತು ಅಮೇರಿಕಗಳು ಈ ಆದರ್ಶದ ಸಾಧನೆಗಾಗಿಯೂ ಪರಸ್ಪರ ಹಿತಸಂವರ್ಧನೆಗಾಗಿಯೂ ಫಲಪ್ರದ ಸಹಕಾರ ಮಾರ್ಗವನ್ನು ಹೆಚ್ಚು ಹೆಚ್ಚಾಗಿ ಶೋಧಿಸುವವೆಂದು ಹಾರೈಸಿದರು.

ಭಾಷಾವಾರು ರಾಜ್ಯ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗವು ಈಗ ಹೈದರಾಬಾದಿನಲ್ಲಿ ಮನವಿಗಳನ್ನು ಕೇಳಿ ಕೊಳ್ಳುತ್ತದೆ. ಆ ರಾಜ್ಯವನ್ನು ವಿಭಜಿಸಿ ವಿಶಾಲಾಂಧ್ರ, ಸಂಯುಕ್ತ ಕರ್ನಾಟಕ ಮತ್ತು ಮಹಾ ರಾಷ್ಟ್ರ ರಾಜ್ಯಗಳನ್ನು ರಚಿಸಬೇಕೆಂದು ಸ್ವಾಮಿ ರಮಾನಂದ ತೀರ್ಥರೇ ಮುಂತಾದವರು ಪ್ರತಿಪಾದಿಸಿದರು. ಭಾಷಾನುಗುಣವಾಗಿ ರಾಜ್ಯಗಳನ್ನು ವಿಂಗಡಿಸುವುದರಿಂದ ರಾಷ್ಟ್ರದ ಐಕ್ಯಕ್ಕೆ ಗಂಡಾಂತರ ಬರುವುದಿಲ್ಲೆಂದು ಅವರು ಹೇಳಿದರು. ಬೆಂಗಳೂರಿನಲ್ಲಿ ಆಯೋಗವನ್ನು ಕಂಡ ಮೈಸೂರಿನ ಪ್ರಮುಖರು ತಮ್ಮ "ವೈಶಿಷ್ಟ್ಯ" ರಕ್ಷಣೆಗಾಗಿ ಆತುರವಿದ್ದಂತೆ ಕಂಡು ಬಂದರೂ ಬೇರೆ ಕೆಲವರು ಸಂಯುಕ್ತ ರಾಜ್ಯಕ್ಕೆ ಅನುಕೂಲ ಮತವಿತ್ತರು. ಮೈಸೂರು ಸರಕಾರದ ದೃಷ್ಟಿಗೆ ಕೊರತೆಯ ಪ್ರದೇಶವಾದ ಮುಂಬಯಿ ಕರ್ನಾಟಕದ ಸೇರ್ಪಡೆಯಿಂದ ಮೈಸೂರಿನ ಆರ್ಥಿಕ ಅಡಚಣೆ ಹೆಚ್ಚಿಕೊಳ್ಳಬಹುದೆಂದು ತೋರುತ್ತದೆ. ಆದರೆ, ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ಶ್ರೀ. ನಿಜಲಿಂಗಪ್ಪನವರು ಮೈಸೂರಿನವರೇ ಸಮೃದ್ಧಿ ಹಾಗು ಸಂಪತ್ತಿನ ದೃಷ್ಟಿಯಿಂದ ಉತ್ತರ ಕರ್ನಾಟಕದ ಪ್ರಜೆಗಳಿಗಿಂತ ಹಿಂದುಳಿದಿದ್ದಾರೆ ಎಂದು ಖಂಡತುಂಡ ಮಾತುಗಳಲ್ಲಿ ತಿಳಿಸಿದರು.

ಹಿಂದಿಯಲ್ಲಿ ಟೆಲಿಪ್ರಿಂಟರು

ರಾಷ್ಟ್ರಭಾಷೆಯಾಗಿ ಸಂಗಣಿಸಲ್ಪಟ್ಟಿರುವ ಹಿಂದಿಯಲ್ಲಿ ಇದೇ ಮೊದಲನೇ ಸಲ "ಟೆಲಿಪ್ರಿಂಟರ" ವ್ಯವಸ್ಥೆಯನ್ನು ದಿನಾಂಕ ೪ರಂದು ಹೊಸದೆಹಲಿ ಮತ್ತು ಪಾಟ್ನಾಗಳ ನಡುವೆ ಏರ್ಪಡಿಸಲಾಯಿತು. ದೆಹಲಿಯ "ಹಿಂದುಸ್ಥಾನ ಸಮಾಚಾರ" ಎಂಬ ಹಿಂದೀ ಸುದ್ದಿ ಸಂಸ್ಥೆಯ ಕಾರ್ಯಾಲಯದಲ್ಲಿ ಈ ವ್ಯವಸ್ಥೆ ಮಾಡಲ್ಪಟ್ಟಿತು. ಈ ಸಂದರ್ಭದಲ್ಲಿ ಸಂಪರ್ಕ ಮಂತ್ರಿ ಶ್ರೀ ಜಗಜೀವನರಾಮ ಹಾಗು ಪಾಟ್ನಾದಲ್ಲಿರುವ ಲೋಕಸಭಾ ಸದಸ್ಯ ಶ್ರೀ ಪುರುಷೋತ್ತಮದಾಸ ಟಂಡನ್ನರಲ್ಲಿ ಶುಭಾಶಯಗಳ ವಿನಿಮಯ ನಡೆಯಿತು. ರಾಷ್ಟ್ರಪತಿಗಳು ಕಳಿಸಿದೊಂದು ಸಂದೇಶದಲ್ಲಿ ತಮ್ಮ ಅಭಿನಂದನೆಗಳನ್ನು ತಿಳಿಸಿರುವರಲ್ಲದೆ, ಹಿಂದೀ ಭಾಷೆಯನ್ನು ಮಾತನಾಡುವ ಪ್ರದೇಶಕ್ಕೆ ಈ ಹೊಸ ಸಂಪರ್ಕ ಸಾಧನವು ಮಹತ್ವದ ವಿಷಯವೆಂದು ಹೇಳಿದರು.

ಮುಂದಿನ ಯೋಜನೆ

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಅಗರವಾಲರು ಪ್ರದೇಶ ಕಾಂಗ್ರೆಸುಗಳಿಗೆ ಕಳುಹಿಸಿದ ಪರಿಪತ್ರವೊಂದು ಎರಡನೆಯ ಪಂಚವಾರ್ಷಿಕ ಯೋಜನೆಯು ಇಡೀ ದೇಶದ ಜನತೆಯ ಆವಶ್ಯಕತೆಗಳನ್ನು ಪ್ರತಿಬಿಂಬಿಸುವ ಹಾಗು ಪೂರೈಸುವ ರೀತಿಯಲ್ಲಿರಬೇಕೆಂದೂ ಇದಕ್ಕೋಸ್ಕರ ತಂತಮ್ಮ ಅಧೀನವಿರುವ ಕಾಂಗ್ರೆಸ ಸಮಿತಿಗಳ ಸಂಪರ್ಕವನ್ನು ಬೆಳೆಸಿಕೊಂಡು ಸ್ಥಳೀಯ ಆವಶ್ಯಕತೆಗಳನ್ನು ಮನಗಂಡು ಯೋಜನೆಯ ಕರಡುಗಳನ್ನು ಸಿದ್ಧಗೊಳಿಸಿ ರವಾನಿಸಬೇಕೆಂದೂ ಹೇಳುತ್ತದೆ. ನಮ್ಮ ಮುಂದಿನ ಯೋಜನೆಯು ನಿರುದ್ಯೋಗ ಸಮಸ್ಯೆಯನ್ನು ನಿವಾರಿಸುವುದಕ್ಕೋಸ್ಕರ ಗೃಹಕೈಗಾರಿಕೆ ಮತ್ತಿತರ ಸಣ್ಣ ಪ್ರಮಾಣದ ಉದ್ದಿಮೆಗಳ ಅಭಿವೃದ್ಧಿ; ಗ್ರಾಮಾಂತರ ಪ್ರದೇಶಗಳಿಗೆ ಶುದ್ಧ ನೀರಿನ ಪೂರೈಕೆ; ಹಳ್ಳಿಗಳನ್ನು ಹತ್ತಿರ ಜೋಡಿಸುವಂತೆ ವ್ಯವಸ್ಥಿತ ರಸ್ತೆಗಳ ಮೂಲ ಶಿಕ್ಷಣ ಶಾಲೆಗಳು; ಹಾಗು ವಿವಿಧ ಉದ್ಯೋಗಗಳಲ್ಲಿ ತರುಣರಿಗೆ ತರಬೇತಿ ಕೊಡುವ ತಾಂತ್ರಿಕ ಶಾಲೆಗಳ ಸ್ಥಾಪನೆ ಮುಂತಾದುವಕ್ಕೆ ಪ್ರಾಶಸ್ತ್ಯ ಕೊಡುವಂತೆ ಕರಡು ತಯಾರಿಯ ಕೆಲಸ ನಡೆಯಬೇಕೆಂದು ಅಗರವಾಲರ ಅಭಿಪ್ರಾಯ.

"ಭಾರತ ವಾಣಿ"

ಸ್ಥಳೀಯ [illegible] ಗಳಲ್ಲಿ ಇದೀಗ ರಾಷ್ಟ್ರಪಿತ ಮಹಾತ್ಮಾ ಗಾಂಧೀಜಿಯವರ ಜೀವನದ ಮಹತ್ವದ ಘಟನೆಗಳನ್ನು ಚಿತ್ರೀಕರಿಸುವ "ಭಾರತವಾಣಿ" ಎಂಬ ಅಪೂರ್ವ ಚಲಚ್ಚಿತ್ರವು ಪ್ರದರ್ಶಿಸಲ್ಪಡುತ್ತದೆ. ಈ ಪ್ರದರ್ಶನದಿಂದ ಸಂಗ್ರಹವಾದ ಹಣವನ್ನು ಆಯಾಯ ರಾಜ್ಯಗಳಲ್ಲಿಯೇ ವೆಚ್ಚ ಮಾಡಲು ಗಾಂಧೀ ಸ್ಮಾರಕ ನಿಧಿಯು ತೀರ್ಮಾನಿಸಿದ್ದು, ನಿಧಿಯ ಉದ್ದೇಶಗಳಿಗೆ ಒಪ್ಪುವ ಯೋಜನೆಗಳು ರಚಿಸಲ್ಪಡುತ್ತವೆ. ನಮ್ಮ ಜೀವಮಾನದಲ್ಲಿ, ಭಾರತೀಯರ ನಡುವೆ ಇದ್ದುಕೊಂಡು, ಅಹೋರಾತ್ರಿ ಶ್ರಮಿಸುತಿದ್ದ ಬಾಪೂಜಿಯನ್ನು ರಜತ ಪರದೆಯಮೇಲೆ ನೋಡುವ ಅವಕಾಶವನ್ನು ಯಾರೊಬ್ಬರೂ ಕಳೆದುಕೊಳ್ಳಲಾಗದು. ಈ ಚಲಚ್ಚಿತ್ರ ರಚನೆಯಲ್ಲಿ ಪ್ರಸಿದ್ಧ ದಿಗ್ದರ್ಶಕರಾದ ಶ್ರೀ ವಿ. ಶಾಂತಾರಾಮರ ಕೈವಾಡವೂ ಸಾಕಷ್ಟು ಇದ್ದು, ಚಲಚ್ಚಿತ್ರ ಪ್ರಿಯರಿಗೆ "ಭಾರತವಾಣಿ" ಯು ಮೆಚ್ಚಿಕೆಯಾಗಬಲ್ಲುದು.

ಯೋಜನಾ ಸಾಲ

ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುವುದಕ್ಕೆ ಅಗತ್ಯವಾದ ಬಂಡವಾಳವನ್ನು ದೇಶದೊಳಗಿಂದ ಕೂಡಿಸುವ ಉದ್ದೇಶದಿಂದ ಭಾರತ ಸರಕಾರವು ಸಾರಿದ ರಾಷ್ಟ್ರೀಯ ಯೋಜನಾ ಸಾಲಕ್ಕೆ-ಜೂನುತಿಂಗಳ ಕೊನೆಯವರೆಗೆ ೧೫ ಕೋಟಿ ರೂಪಾಯಿಗಳಷ್ಟು ಚಂದಾ ಹಣವು ಕೂಡಿದೆಯಾಗಿ ತಿಳಿಯುತ್ತದೆ. ಸಾರ್ವಜನಿಕರು ಈ ಸಾಲಕ್ಕೆ ಇನ್ನೂ ಹೆಚ್ಚಿನ ವಂತಿಗೆಯನ್ನು ಕೊಡುವ ಆವಶ್ಯಕತೆ ಇದೆಯೆಂದು ಈ ಸಂದರ್ಭದಲ್ಲಿ ನಾವು ಸೂಚಿಸಲು ಬಯಸುತ್ತೇವೆ. ಭಾರತ ಸರಕಾರವು ಕನಿಷ್ಟ ೧೫೦ ಕೋಟಿ ರೂಪಾಯಿಗಳನ್ನಾದರೂ ಸಂಗ್ರಹಿಸುವ ಗುರಿಯನ್ನು ಇಟ್ಟು ಕೊಂಡಿದೆ. ಮೇ ತಿಂಗಳಿಗಿಂತ ಜೂನಿನಲ್ಲಿ ಕೂಡಿದ ಚಂದಾ ಹಣವು ಹೆಚ್ಚಿತ್ತು — ಈ ಹಾಗೆ ಮುಂದಿನ ತಿಂಗಳುಗಳಲ್ಲಿ ವಂತಿಗೆಯ ಪ್ರಮಾಣವು ಇನ್ನೂ ಏರಿ ಕೊಂಡು ಯೋಜನೆ ಯಶಸ್ವಿಯಾಗುವಂತೆ ಭಾರತೀಯರು ನೋಡಿ ಕೊಳ್ಳಬೇಕು.

"ಭಿಕ್ಷುಕರು ನಾವಲ್ಲ"

ಈ ಸಂದರ್ಭದಲ್ಲಿ ಪ್ರಧಾನಿ ನೆಹರೂರವರು ಹಿಮಾಚಲ ಪ್ರದೇಶದಲ್ಲಿ ಪ್ರವಾಸ ಮಾಡುತಿದ್ದಾಗ ಹೇಳಿದ ಮಾತನ್ನು ನೆನಪಿನಲ್ಲಿಟ್ಟು ಕೊಳ್ಳುವುದು ಶ್ರೇಯಸ್ಕರ— ಪರ ರಾಷ್ಟ್ರಗಳ ಆರ್ಥಿಕ ಸಹಾಯದ ಅವಲಂಬನೆಯ ಮೇಲೆಯೇ ನಮ್ಮ ಪ್ರಗತಿಯನ್ನು ರೂಪಿಸಿಕೊಳ್ಳುವ ವಿಚಾರವು ಸಲ್ಲದೆನ್ನುತ್ತಾ "ನಾವು ಭಿಕ್ಷುಕರಲ್ಲ" ಎಂದವರು ಸಾರಿದರು. ಭಾರತೀಯರು ಆತ್ಮಾಭಿಮಾನವನ್ನು ಬಿಟ್ಟುಗೊಡತಕ್ಕದ್ದಲ್ಲವೆಂದೂ ದೇಶದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೆಚ್ಚು ಹೆಚ್ಚಾಗಿ ನಾವು ದುಡಿಯಬೇಕೆಂದೂ ಅವರು ಉಪದೇಶಿಸಿದರು. ಈ ದಿಸೆಯಲ್ಲಿ ಕಾಂಗ್ರೆಸು ಕಾರ್ಯಕರ್ತರು ಜನತೆಯನ್ನು ಹೇಗೆ ಮನಪ್ರೇರಿಸಿಕೊಳ್ಳಬಹುದೆಂದು ಅವರು ತಮ್ಮ ಇನ್ನೊಂದು ಭಾಷಣದಲ್ಲಿ ಪ್ರಸ್ತಾಪಿಸಿದರು ಪ್ರಧಾನ ಮಂತ್ರಿಗಳ ಕಳಕಳಿಯ ಬಿನ್ನಹ ಅಮಾನ್ಯವಾಗಲಾರದೆಂದು ಆಶಿಸೋಣ!

(೭ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ನ ವ ಯು ಗ
ಉಡುಪಿ, ಗುರುವಾರ ೮-೭-'೫೪

ಎಚ್ಚೆತ್ತ ಏಶ್ಯಾ

ಅಮೇರಿಕದ ರಾಜಕೀಯ ವಾತಾವರಣದಲ್ಲಿ ಈಗ ತುಂಬ ಕಳವಳವು ಕಂಡುಬರುತ್ತದೆ. ತನ್ನ ಸೈನಿಕ ಶಕ್ತಿಯಮೇಲೆ ದೃಢವಾದ ವಿಶ್ವಾಸವನ್ನು ಇಟ್ಟುಕೊಂಡಿರುವ ಅಮೇರಿಕಕ್ಕೆ ತನ್ನ ವರ್ಚಸ್ಸು ಕಳೆಗುಂದುತ್ತಿರುವುದನ್ನು ಕಂಡು ಗಲಿಬಿಲಿಯಾಗಿರುವುದು ಸಹಜವೇ ಆಗಿದೆ. ಅಮೇರಿಕದ ದೂರಪ್ರಾಚ್ಯ ಧೋರಣೆಯು ಈಚೆಗೆ ಒಂದರಮೇಲೊಂದೆಂಬಂತೆ ಪೆಟ್ಟು ತಿನ್ನ ತೊಡಗಿದೆ. ಇಂಡೋಚೀನದ ಸಮರ ಭೂಮಿಯಲ್ಲಿ ಪ್ರಥಮ ಆಘಾತವು ಸಂಭವಿಸಿತು. ಡೀನ ಬೀನ ಫೂ ಕೋಟೆಯನ್ನು ವಶಪಡಿಸಿಕೊಳ್ಳುವದಕ್ಕೋಸ್ಕರ ವೀಟಮಿನರು ನಿಕರದ ಕದನವನ್ನು ತೊಡಗಿದಾಗ, ಅಮೇರಿಕವು ಬ್ರಿಟನಿನ ಬೆಂಬಲವನ್ನು ಪಡೆದು ಪ್ರತ್ಯಕ್ಷವಾಗಿ ರಣರಂಗಕ್ಕೆ ಧುಮುಕುವ ಆತುರವನ್ನು ವ್ಯಕ್ತಪಡಿಸಿತು. ಆದರೆ ಇಂತಹ ಕ್ರಮವು ಆಗ್ನೇಯ ಏಶ್ಯಾ ರಾಷ್ಟ್ರಗಳ—ಮುಖ್ಯವಾಗಿ ಭಾರತದ—ಭಾವನೆಯನ್ನು ನೋಯಿಸಬಹುದೆಂದು ಕಂಡುಕೊಂಡ ಬ್ರಿಟನು ಅಮೇರಿಕದ ಉತ್ಸಾಹಕ್ಕೆ ತಣ್ಣೀರನ್ನು ಎರಚಿತು. ನೆಹರೂರವರೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡ ಈಡನರು ಅಮೇರಿಕದ ಮಿತ್ರನಂತೆ ನಟಿಸುತ್ತಾ ಕೊರಳು ಕೊಯ್ದರೆಂದು ಕೆಲವು ಮಂದಿ ನಿರ್ದಾಕ್ಷಿಣ್ಯವಾಗಿ ಟೀಕಿಸಿದರು. ಈಡನರು ಜಾಣತನದಿಂದ ವರ್ತಿಸಿದರೆಂದು ಈ ಜನಗಳು ತಿಳಿಯದೆ ಹೋದರು. ಮುಂದೆ ಜಿನೇವಾದಲ್ಲಿ ಪರಿಷತ್ತು ಸೇರಿದಾಗಲೂ ಅಮೇರಿಕದ ಧ್ವನಿಗೆ ಪ್ರಾಶಸ್ತ್ಯ ದೊರಕಲಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಅಭಿಪ್ರಾಯವನ್ನು ಪ್ರತಿಬಿಂಬಿಸುವ ಕೆಲಸವನ್ನು ಈಡನರೇ ನಿರ್ವಹಿಸಿದರು. ಕಮ್ಯುನಿಸ್ಟರೊಡನೆ ಪ್ರಬಲ ವಿರೋಧವನ್ನು ಕಟ್ಟಿಕೊಂಡ ಅಮೇರಿಕಕ್ಕೆ ಈಡನರು ಮೊಲೊಟೋವರೊಡನೆಯೂ ಚೀನೀ ಪ್ರಧಾನ ಮಂತ್ರಿ ಚೌ ಎನ್ ಲಾಯರೊಡನೆಯೂ ಒಳ್ಳೆಯ ಸಲಿಗೆಯಿಂದ ನಡಕೊಂಡುದು ಸರಿಬೀಳುತ್ತಿರಲಿಲ್ಲ. ಕಮ್ಯುನಿಸ್ಟರ ಪ್ರಾಮಾಣಿಕತೆಯನ್ನು ಪರೀಕ್ಷಿಸುವುದಕ್ಕೋಸ್ಕರ ಸಾಕಷ್ಟು ದೀರ್ಘವಾದ ಕಾಲಾವಧಿಯನ್ನು ಕೊಡಬೇಕೆಂಬ ಬ್ರಿಟನಿನ ನಿಲುವೆಯಲ್ಲಿ ಅಮೇರಿಕಕ್ಕೆ ಯಾವ ಪುರುಷಾರ್ಥವೂ ಕಂಡುಬರಲಿಲ್ಲ. ಎಂತಲೇ ಅದು ಮಾತುಕತೆ ಮುರಿಯಿತೆಂದು ಸಾರಲು ಹೆಚ್ಚಿನ ಉದ್ವೇಗವನ್ನು ಪ್ರಕಟಿಸಿತು. ಕೊರಿಯಾದ ಮಟ್ಟಿಗೆ ಅಮೇರಿಕದ ಆಶೆ ಪೂರೈಸಿತು. ಆದರೆ ಇಂಡೋಚೀನದ ಮಾತುಕತೆಗಳಿಗೆ ಈಡನರ ಪ್ರಯತ್ನದಿಂದ ಜೀವದಾನ ಕೊಡಲಾಯಿತು. ನೆಹರೂರವರ ಪ್ರತಿನಿಧಿಯಾಗಿ ಶ್ರೀ ಕೃಷ್ಣಮೆನೊನ್ನರು ಜಿನೇವಾದಲ್ಲಿ ಸೇರಿದ ಎಲ್ಲ ರಾಷ್ಟ್ರಗಳ ಧುರೀಣರೊಡನೆಯೂ ಖಾಸಗಿ ಮಾತುಕತೆಗಳನ್ನು ನಡೆಸಿ, ಈಡನರ ಮನವೊಲಿಸಿ ಕೊಂಡಿದ್ದರು. ಕೊಲೊಂಬೋ ರಾಷ್ಟ್ರಗಳ ಪರಿಷತ್ತೊಂದು ಈ ಸಮವೆ ಜರಗಿ, ಈಡನರ ಮೇಲೆ ಸಾಕಷ್ಟು ಪ್ರಭಾವವನ್ನು ಉಂಟು ಮಾಡಿತು. ಈ ಎಲ್ಲ ಸಂಭವಗಳು ಅಮೇರಿಕಕ್ಕೆ ಇಷ್ಟವಾಗಿರಲಿಲ್ಲ. ಪರಿಣಾಮದಲ್ಲಿ ಉಭಯ ರಾಷ್ಟ್ರಗಳೊಳಗೆ ತೀವ್ರ ಭಿನ್ನಾಭಿಪ್ರಾಯ ಎದ್ದಿತೆಂದೂ ಹೇಳಲಾಯಿತು. ಇದನ್ನು ಸರಿಪಡಿಸುವುದೇ ವಾಶಿಂಗಟನ್ನಿನಲ್ಲಿ ನಡೆದ ಐಕ—ಚರ್ಚಿಲ ಭೇಟಿಯ ಉದ್ದೇಶವೆಂದು ಊಹಿಸಲಾಯಿತು. ಆದರೆ ಈ ಸಮ್ಮೇಳನಕ್ಕೂ ಜಾಗತಿಕ ಮಹತ್ವ ಪ್ರಾಪ್ತವಾಗಲಿಲ್ಲ. ಜಿನೇವಾದಲ್ಲಿ ಕಮ್ಯುನಿಸ್ಟರೊಡನೆ ನಿಕಟ ಸಂಬಂಧವನ್ನು ಇಟ್ಟುಕೊಂಡು, ರಾಯಭಾರಿ ಸಂಪರ್ಕವನ್ನೂ ವಾಣಿಜ್ಯ ವ್ಯವಹಾರವನ್ನೂ ವೃದ್ಧಿಗೊಳಿಸಿದ ಬ್ರಿಟನು ಕಮ್ಯುನಿಸ್ಟರೊಡನೆ "ಸಹಜೀವನ" ಸಾಧ್ಯವೆಂದು ಐಕರಿಗೆ ಮನವರಿಕೆ ಮಾಡಿಕೊಡುವ ಪ್ರಯತ್ನಗೈದಿತು. ಕಮ್ಯುನಿಸ್ಟರ ಮನಸ್ಸನ್ನು ಕೆರಳಿಸಬಾರದೆಂಬುದರಿಂದಲೇ ಆಗ್ನೇಯ ಏಶ್ಯಾ ಸಂರಕ್ಷಣಾ ವ್ಯವಸ್ಥೆಯ ಕುರಿತು ಈಗಲೇ ನಿರ್ಣಯ ಕೈಗೊಳ್ಳತಕ್ಕದ್ದಲ್ಲವೆಂದು ಅಭಿಪ್ರಾಯಪಟ್ಟಿತು. ಹೀಗೆ ವಾಶಿಂಗಟನ್ನಿನ ಮಾತುಕತೆ ಸಪ್ಪೆಗಾದುದಕ್ಕೆ ವಿಶ್ವದೃಷ್ಟಿಯು ಹೊಸದೆಹಲಿಯಲ್ಲಿ ಕೇಂದ್ರೀಕೃತವಾದದ್ದೂ ಒಂದು ಕಾರಣ. ಚೌ–ನೆಹರೂ ಭೇಟಿಯು ಏಶಿಯಾದ ರಾಷ್ಟ್ರಗಳು ತಮ್ಮ ಭವಿಷ್ಯವನ್ನು ತಾವೇ ರೂಪಿಸಿಕೊಳ್ಳಬಲ್ಲವೆಂದು ಸ್ಪಷ್ಟಗೊಳಿಸಿತು. ಪ್ರಾದೇಶಿಕ ಪರಿಪೂರ್ಣತೆ ಹಾಗು ಶ್ರೇಷ್ಠಾಧಿಕಾರಗಳ ಮನ್ನಣೆ, ಅತಿಕ್ರಮಣದ ನಿರೋಧ, ಒಳಾಡಳಿತದಲ್ಲಿ ಹಸ್ತಕ್ಷೇಪ ಮಾಡದಿರುವುದು, ಸಮಾನತೆ ಹಾಗು ಪರಸ್ಪರ ಸಹಕಾರ, ಶಾಂತ ರೀತಿಯಲ್ಲಿ ಐಕ್ಯತೆಯಿಂದಿರುವುದು ಎಂಬೀ ಪಂಚಸೂತ್ರಗಳ ಆಧಾರದ ಮೇಲೆ ಲೋಕ ಶಾಂತಿಯ ಬುನಾದಿಯನ್ನು ಹಾಕಬಹುದೆಂದು ಈ ಭೇಟಿಯು ಸಿದ್ಧ ಮಾಡಿತು. ಬೇರೆ ಬೇರೆ ರಾಜಕೀಯ ತತ್ವಗಳನ್ನು ಅನುಸರಿಸುತಿದ್ದರೂ ರಾಷ್ಟ್ರ ರಾಷ್ಟ್ರಗಳಲ್ಲಿ ಶಾಂತಿಯುತ ಸಹಜೀವನವು ಸಾಧ್ಯವೆಂದೂ ಯುದ್ಧದ ಮಾತೆತ್ತದೆ ಸಮೃದ್ಧಿಯ ಜೀವನವನ್ನು ನಡೆಸಬಹುದೆಂದೂ ಚೌ–ನೆಹರೂರ ಜಂಟಿ ಪ್ರಕಟಣೆಯು ತಿಳಿಸಿತು; ಏಶ್ಯಾದಲ್ಲಿ ಅಮೇರಿಕವು ವಹಿಸಿದ ನಿಲುವೆಗೆ ತೀರ ವ್ಯತಿರಿಕ್ತವಾದ ಈ ಹೇಳಿಕೆಯು ಅಮೇರಿಕದ ರಾಜಕಾರಣಿಗಳಿಗೆ ತಳಮಳವನ್ನು ಮಾಡಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ— ತಮ್ಮ ಕೂಡೆ ಮೈತ್ರೀಭಾವವನ್ನು ತೋರಿಸುತ್ತಿರುವ ರಾಷ್ಟ್ರಗಳೇ ಕಮ್ಯುನಿಸ್ಟರನ್ನು ಸ್ನೇಹದಿಂದ ನೋಡುವುದು ಅಮೇರಿಕಕ್ಕೆ ಸರಿ ಬರುವುದಿಲ್ಲ. ಎಂತಲೇ ಕೃತಘ್ನವಾದ ಆಗ್ನೇಯ ಏಶ್ಯಾ ರಾಷ್ಟ್ರಗಳನ್ನು ಹಣ್ಣು ಮಾಡಲು ಏನು ಕ್ರಮ ತೆಗೆದುಕೊಂಡರಾದೀತೆಂದು ಅಮೇರಿಕ ಯೋಚಿಸುತ್ತಿದೆ. ಆದರೆ ದುಡುಕಿ ಪ್ರಯೋಜನವಿಲ್ಲವೆಂದು ಅಮೇರಿಕದ ಕೆಲವು ಮುತ್ಸದ್ದಿಗಳು ಬುದ್ಧಿ ಹೇಳುತಿದ್ದಾರೆ–ಭಾರತದಲ್ಲಿ ಹಿಂದೆ ರಾಯಭಾರಿಯಾಗಿದ್ದ ಚೆಸ್ಟರ ಬೌಲ್ಸರು "ಅಮೇರಿಕವು ಒಂದು ತಿಂಗಳ ಕಾಲ ಮೌನವಾಗಿ ಉಳಿಯಲಿ" ಎಂದರೆ, "ಕ್ರಿಶ್ಚಿಯನ್ ಸಾಯಿನ್ಸ್ ಮೊನಿಟರ್" ಎಂಬ ಪತ್ರಿಕೆ "ಸ್ವತಂತ್ರ ರಾಷ್ಟ್ರಗಳ ಸ್ನೇಹವನ್ನು ಅಮೇರಿಕವು ಕಳೆದುಕೊಳ್ಳುತ್ತಿರುವುದೇ ಹೇಗೆ?" ಎಂದು ಪ್ರಶ್ನಿಸುತ್ತದೆ. ಐಕರ ರಾಜಕೀಯ ಸಲಹೆಗಾರರು ಈ ಮಾತುಗಳ ಕಡೆಗೆ ವಿಶೇಷವಾದ ಗಮನವನ್ನು ಕೊಡುವುದು ಅಗತ್ಯ–ಜಾಗತಿಕ ಸಹಾನುಭೂತಿಯನ್ನು ಅಣುಬಾಂಬುಗಳಿಂದ ಪಡೆಯಲಾಗುವುದಿಲ್ಲವೆಂದೂ ಆರ್ಥಿಕ ಹಾಗು ಸೈನಿಕ ಶಕ್ತಿಗಳು ನೈತಿಕ ಶಕ್ತಿಗಿಂತ ತೀರ ಭಿನ್ನವಿರುತ್ತವೆಂದೂ ಅಮೇರಿಕದ ಸರಕಾರ ಬೇಗನೇ ಮನಗಂಡರೆ, ಅದರಿಂದ ಒಳಿತಾಗುತ್ತದೆ.

ಇಂಡೋಚೀನದಲ್ಲಿ ಫ್ರೆಂಚರ ಹಿನ್ನಡೆ

ಗ್ವಾಟೆಮಾಲಾದಲ್ಲಿ ಯುದ್ಧ ವಿರಾಮ ಒಪ್ಪಂದ

ಇಂಡೋ ಚೀನದ ಸಮರ ಭೂಮಿಯಲ್ಲಿ ಕಳೆದ ವಾರ ಫ್ರೆಂಚರು ನಾಟಕೀಯ ಗತ್ತುಗಾರಿಕೆಯನ್ನು ಪ್ರದರ್ಶಿಸಿದರು. ಅವರಿಗೂ ವೀಟಮಿನರಿಗೂ ಕೆಂಪು ನದಿಯ ಮುಖಜ ಭೂಮಿಯಲ್ಲಿ ನಿಕರವಾದ ಕಾಳಗ ನಡೆಯುತಿತ್ತು. ಆದರೆ ಈ ಪ್ರತಿಭಟನೆಯನ್ನು ಫ್ರೆಂಚರು ದಿನಾಂಕ ೨ರಂದು ನಿಲ್ಲಿಸಿಬಿಟ್ಟು, ಆರು ಸಾವಿರ ಚದರ ಮೈಲು ಪ್ರದೇಶವನ್ನು ಖಾಲಿ ಮಾಡಿದರು. ಒಂದೇ ಸವನೆ ಮುನ್ನುಗ್ಗಿ ಬರುತಿದ್ದ ೬೦,೦೦೦ ವೀಟಮಿನ ಸೈನಿಕರನ್ನು ಪ್ರತಿಭಟಿಸುವುದು ೧೫,೦೦೦ ಫ್ರೆಂಚ ಸೈನಿಕರಿಗೆ ಸಾಧ್ಯವಾಗಲಿಕ್ಕಿಲ್ಲವೆಂಬುವದಕ್ಕಿಂತಲೂ, ಇದನ್ನು ಸೈನಿಕ ಗತ್ತುಗಾರಿಕೆಯೆಂದು ಕರೆಯುವುದೇ ಚೆನ್ನ. ಏಕೆಂದರೆ, ಇದರಿಂದ ಕೆಂಪು ನದಿಯ ಮುಖದಲ್ಲಿರುವ ಹಾನ್ಯೊ ಬಂದರದ ರಕ್ಷಣೆಗೋಸ್ಕರ ತಮ್ಮ ಶಕ್ತಿ ಸರ್ವಸ್ವವನ್ನು ಉಪಯೋಗಿಸಲು ಫ್ರೆಂಚರಿಗೆ ಸಾಧ್ಯವಾಗುತ್ತದೆ. ಲೇನಿಯಲರ ಸರಕಾರವು ಅಧಿಕಾರದಲ್ಲಿ ಇದ್ದಾಗಲೇ ಈ ಪ್ರದೇಶವನ್ನು ತೆರವುಮಾಡಬೇಕೆಂಬ ನಿರ್ಣಯಕ್ಕೆ ಬಂದಿದ್ದಂತೆ ಕಾಣುತ್ತದೆ. ಹೀಗಾಗಿ ಪಲಾಯನ ಸೂತ್ರವನ್ನು ಫ್ರೆಂಚರು ಹರಿಸುವಾಗ ಯಾವುದೇ ಉದ್ವೇಗವನ್ನು ತೋರಿಸಲಿಲ್ಲ. ಆದರೆ ಈ ಹಿನ್ನಡೆಯ ದೆಸೆಯಿಂದ ಫ್ರಾನ್ಸಿನ ಮತ್ತು ಅದನ್ನು ಬೆಂಬಲಿಸಿ,ಪ್ರೋತ್ಸಾಹಿಸುತ್ತಿರುವ ಅಮೇರಿಕ ಮಿತ್ರರಾಷ್ಟ್ರಗಳ ಪ್ರತಿಷ್ಠೆಗೆ ಧಕ್ಕೆ ಉಂಟಾಗಿದೆ. ಫ್ರೆಂಚರು ಈ ಪಲಾಯನವನ್ನು "ಸೈನಿಕ ಗತ್ತುಗಾರಿಕೆ"ಯೆಂದು ಕರೆಯುತಿದ್ದರೂ ಅಮೇರಿಕಕ್ಕೆ ಈ ವಿವರಣೆಯು ಸಮಾಧಾನಕರವೆಂದು ಮನವರಿಕೆಯಾಗಿಲ್ಲ.

ಅಮೇರಿಕದ ಸಂಶಯ

ಫ್ರೆಂಚರ ಹಿನ್ನಡೆಯು ಕೇವಲ ತಾಂತ್ರಿಕ ವಿಷಯವಲ್ಲ--ಇದರ ಹಿಂದೆ ಏನೋ ರಹಸ್ಯವಿದೆಯೆಂದು ಅಮೇರಿಕ ಭಾವಿಸುತ್ತದೆ. ಹೀಗೆ ಹಿಂದೆ ಸರಿಯುವ ವಿಚಾರವನ್ನು ಅಮೇರಿಕೆಗೆ ಫ್ರಾನ್ಸು ತಿಳಿಸಲಿಲ್ಲವೆಂದು ಅಮೇರಿಕ ಆರೋಪಿಸಿದೆಯಲ್ಲದೆ, ಫ್ರೆಂಚರ ಮುಂದಿನ ಕ್ರಮಗಳ ವಿಷಯದಲ್ಲಿ ವಿವರಗಳನ್ನು ಕೇಳಿದೆ. ಕೆಂಪು ನದಿಯ ಮುಖಪ್ರದೇಶದಲ್ಲಿದ್ದ ಕಮ್ಯುನಿಸ್ಟ ವಿರೋಧಿ ಜನರನ್ನು ಅವರಪಾಡಿಗೆ ಬಿಟ್ಟುಗೊಟ್ಟು ಪಲಾಯನ ಹೇಳುವುದೆಂದರೆ ಘಾತಕತನವೆಂದು ಅಮೇರಿಕ ತಿಳಿಯುತ್ತದೆ. ಸಿನೇಟರ ನೋಲೆಂಡರಂತಹ ಮುತ್ಸದ್ದಿತನಗಳಂತೂ ಹತ್ತು ದಿನಗಳ ಹಿಂದೆ ಬರ್ನದಲ್ಲಿ ಚೌ–ಮೆಂಡೆಸ ಭೇಟಿಯು ನಡೆದಾಗ, ವೀಟನಾಂ ಪ್ರದೇಶವನ್ನು ವಿಭಜಿಸಲು ಅನುಕೂಲವಾಗುವಂತೆ ಒಡಂಬಡಿಕೆ ನಡೆದಿರಬೇಕೆಂದೂ ಈ ಗುಪ್ತ ಒಪ್ಪಂದದ ಪರಿಣಾಮವಾಗಿಯೇ ಫ್ರೆಂಚರು ರಣರಂಗವನ್ನು ತೆರವು ಮಾಡಿಸರಿದರೆಂದೂ ಬಹಿರಂಗವಾಗಿ ಅಭಿಪ್ರಾಯ ಪಟ್ಟರು. ಇಂಡೋಚೀನದಲ್ಲಿ ಭತ್ತದ ಕಣಜವೆಂದು ಹೆಸರಾದ ಈ ಪ್ರದೇಶವನ್ನು ಖಾಲಿಮಾಡಿದುದರಿಂದ ವೀಟಮಿನರಿಕ್ಕೆಗೆ ಹೆಚ್ಚಿನ ಬಲಬಂದಿದೆ ಯೆಂಬುದಂತೂ ಖಂಡಿತ. ಈ ರೀತಿ ಶತ್ರುವಿನ ಶಕ್ತಿಯನ್ನು ಅಧಿಕಗೊಳಿಸುವುದು ಅಮೇರಿಕಕ್ಕೆ ಸಹಿಸಲಾಗದ ವಿಷಯ.

ಹುರುಳಿಲ್ಲದ ಆಕ್ಷೇಪ

ಆದರೆ ಅಮೇರಿಕದ ಆಕ್ಷೇಪಗಳಲ್ಲಿ ಹುರುಳೇನೂ ಇಲ್ಲವೆಂದು ಫ್ರಾನ್ಸು ಹೇಳುತ್ತದೆ—ಫ್ರೆಂಚ ಸೈನ್ಯವನ್ನು ಹಿಂದಕ್ಕೆ ಕರೆಸಿಕೊಳ್ಳುವ ನಿಶ್ಚಯವನ್ನು ಒಂದು ತಿಂಗಳ ಪೂರ್ವದಲ್ಲಿಯೇ ಅಮೇರಿಕಕ್ಕೆ ತಿಳಿಸಿದ್ದೆವು; ಆಗ ಯಾರೂ ತಮಗೆ ಸಹಾಯಕೊಡುವ ಮಾತನ್ನು ಆಡಲಿಲ್ಲ ಎಂದು ಫ್ರೆಂಚ ವಕ್ತಾರರು ಹೇಳಿದರು. ಫ್ರಾನ್ಸಿನ ಹೊಸ ಪ್ರಧಾನಿ ಮೆಂಡೆಸರು ಒಂದು ಆಕಾಶವಾಣಿ ಭಾಷಣದಲ್ಲೂ ಅಮೇರಿಕದ ಸಂಶಯಗಳು ನಿರಾಧಾರವಾದುದೆಂದೂ ಸ್ಪಷ್ಟಗೊಳಿಸಿದರು. ಇಂಡೋಚೀನದಲ್ಲಿ ಶರಣಾಗತಿಯನ್ನು ಒಪ್ಪಿಕೊಳ್ಳುವುದಿಲ್ಲವೆಂದೂ ಅಗತ್ಯವೆನಿಸಿದರೆ ಹೊಸ ಸೈನಿಕ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಹೇಳುತ್ತಾ ವೀಟಮಿನರು ಹಾನ್ಯೊ ಬಂದರಿನ ಮೇಲೆ ಮಾಡಬಹುದಾದ ಹೊಸ ದಾಳಿಯನ್ನು ಯಶಸ್ವಿಯಾಗಿ ಪ್ರತಿಭಟಿಸಲು ಕೆಂಪು ನದಿಯ ಬಯಲನ್ನು ತೆರವು ಮಾಡಬೇಕಾಯಿತು ಎಂದರು. ಫ್ರೆಂಚ ಸೈನ್ಯಗಳು ಅಲ್ಲಿ ಇಲ್ಲಿ ಚದರಿಕೊಂಡು ವೀಟಮಿನರ ಕೈಯಲ್ಲಿ ಅಪಾಯಕರ ಪರಿಸ್ಥಿತಿಯನ್ನು ಇದಿರಿಸುತಿದ್ದವು. ಆದರೆ ಈಗ ಸೈನ್ಯದ ತುಣುಕುಗಳೆಲ್ಲ ಸುರಕ್ಷಿತ ಸ್ಥಾನವನ್ನು ಸೇರಿರುತ್ತವೆ—ಇದರಿಂದ, ಜಿನೇವಾ ಪರಿಷತ್ತು ವಿಫಲವಾದರೆ, ದೃಢಚಿತ್ತದಿಂದ ಇಂಡೋಚೀನದಲ್ಲಿ ಸಮರ ಮುಂದುವರಿಸಲು ಸಾಧ್ಯವಾಗುತ್ತದೆ ಎಂದು ಮೆಂಡೆಸರು ಹೇಳಿದರು.

ಮೆಂಡೆಸರ ನಿಲುವೆ

ಮೆಂಡೆಸರು ತಾವು ಮೊದಲೇ ಸಾರಿದಂತೆ ಜುಲೈ ೨೦ರೊಳಗಾಗಿ ಇಂಡೋಚೀನದಲ್ಲಿ ಕದನ ನಿಲುಗಡೆಯನ್ನು ಸಾಧಿಸಲು ತುಂಬ ಶ್ರಮ ವಹಿಸುತಿದ್ದಾರೆ. ಅವರು ದೃಢ ನಿರ್ಧಾರದಿಂದ ಮುಂದೊತ್ತುತಿದ್ದು, ಈ ಪ್ರಯತ್ನಗಳು ಫಲಿಸಿಯಾವೆಂದು ಹೇಳಲಾಗುತ್ತದೆ. ಕಳೆದ ವಾರ ಮುಂದೂಡಲಾದ ಕದನ ವಿರಾಮ ಮಾತುಕತೆಯು ಹಾನ್ಯೊಗೆ ೩೫ ಮೈಲು ಉತ್ತರಕ್ಕಿರುವ ಟ್ರುಂಗಗಿಯಾದಲ್ಲಿ ಈ ವಾರ ಸೇರಿದ್ದು, ಕೆಲವು ಸೂಚನೆಗಳನ್ನು ಫ್ರೆಂಚ ಹಾಗು ವೀಟಮಿನ ಸೇನಾಧಿಕಾರಿಗಳು ಸ್ವೀಕರಿಸಿದ್ದಾರೆ ಮಣ್ಣಿನ ಗೋ

ಡೆ, ಬಿದಿರ್ ತಟ್ಟಿ ಮತ್ತು ಹಗಡಿನ ಮಾಡುಗಳಿರುವ ಒಂದು ಗುಡಿಸಲಿನಲ್ಲಿ ಈ ಮಾತುಕತೆಗಳು ನಡೆದವು. ಕೊರಿಯದಲ್ಲಿ ಅಮೇರಿಕ ಹಾಗು ಕಮ್ಯುನಿಸ್ಟ ಪ್ರತಿನಿಧಿಗಳಲ್ಲಿದ್ದಂತೆ ಶಾಶ್ವತ ದ್ವೇಷವೇನೂ ಈ ಮಾತುಕತೆಗಳಲ್ಲಿ ಕಂಡುಬರಲಿಲ್ಲ. ಇತ್ತಂಡದವರೂ ಒಬ್ಬರಿನ್ನೊಬ್ಬರನ್ನು ನೋಡಿ ಮುಗುಳು ನಗೆಸೂಸುವಷ್ಟು ಸೌಜನ್ಯವನ್ನು ತೋರುತಿದ್ದರು. ಸೇನಾಧಿಕಾರಿಗಳ ಮಾತುಕತೆಯ ಪರಿಣಾಮವಾಗಿ ಗಾಯಗೊಂಡ ಹಾಗು ರೋಗ ಗ್ರಸ್ತ ಸೈನಿಕರ ವಿನಿಮಯವು ಇದೇ ೧೮ನೇ ತಾರೀಕಿನಂದು ತೊಡಗುತ್ತದೆ. ಯುದ್ಧ ವಿರಾಮ ಕಾಲದಲ್ಲಿ ಇತ್ತಂಡದ ಸೈನ್ಯಗಳು ನಿಲ್ಲಬೇಕಾದ ಸ್ಥಾನಗಳೇ ಮುಂತಾದ ತಾಂತ್ರಿಕ ವಿಷಯಗಳೂ ಉಭಯ ಸಮ್ಮತ ರೀತಿಯಲ್ಲಿ ಇತ್ಯರ್ಥ ಹೊಂದುವ ನಿರೀಕ್ಷೆ ಇದೆ.

ಜಿನೇವಾದ ವಾತಾವರಣ

ಇತ್ತ ಜಿನೇವಾದಲ್ಲಿ ಒಂಭತ್ತು ರಾಷ್ಟ್ರಗಳ ಪ್ರತಿನಿಧಿಗಳು ಕದನ ನಿಲುಗಡೆಯ ಉಸ್ತುವಾರಿ ನೋಡಿಕೊಳ್ಳುವ ಸಮಿತಿಯ ರಚನೆ ಮುಂತಾದ ಪ್ರಶ್ನೆಗಳನ್ನು ವಿಚಾರಿಸುತಿದ್ದಾರೆ. ಫ್ರೆಂಚರು ಹೊಸ ಸೂಚನೆಗಳನ್ನು ಮಾಡಿರುವರೆಂದೂ ಇದಕ್ಕೆ ರಶಿಯಾದ ಬೆಂಬಲವು ದೊರಕಿದೆಯೆಂದೂ ತಿಳಿದು ಬರುತ್ತದೆ. ಹೆಚ್ಚಿನ ವಿವರಗಳು ಇದೇ ಮಂಗಳವಾರ (ದಿನಾಂಕ ೬) ಸೇರುವ ಪರಿಷತ್ತಿನಲ್ಲಿ ಹೊರಗೆಡವಲ್ಪಡುತ್ತವೆ. ಲಾವೋಸ ಮತ್ತು ಕಂಬೋಡಿಯಾಗಳಿಂದ ವಿಯಟಮಿನ ಪಡೆಯನ್ನು ಹಿಂದೆಗೆದು ಕೊಳ್ಳುವ ಮಾತುಕತೆಯೂ ಮಂದಗತಿಯಿಂದ ಮುಂದೆ ಸಾಗುತ್ತಿದೆ. ಇದೇ ಶನಿವಾರ (ದಿನಾಂಕ ೧೦)ದೊಳಗೆ ಈ ಸಂಬಂಧದಲ್ಲಿ ಕೊನೆಯ ವರದಿಯನ್ನು ಒಪ್ಪಿಸಬೇಕಾಗಿದೆ. ಹೀಗೆ ಜಿನೇವಾದಲ್ಲಿ ಪ್ರಗತಿ ಕಂಡುಬಂದರೂ ಇಂಡೋಚೀನದಲ್ಲಿ ಫ್ರೆಂಚರು ಪೂರಾ ಸೋಲುತಿದ್ದಾರೆ. ಈಚೆಗೆಬಂದ ವರದಿಯಂತೆ ಹಾನೋಯಿಯಿಂದ, ೨೦ ಮೈಲು ಅಂತರದಲ್ಲಿರುವ ಫುಲಿಎಂಬ ಕೇಂದ್ರವನ್ನೂ ಫ್ರೆಂಚರು ತೆರವು ಮಾಡಿದ್ದು, ಸಮರವು ಹೆಚ್ಚು ಕಡಿಮೆ ನಿಂತಂತೆಯೇ ಆಗಿದೆ.

ಸಂರಕ್ಷಣಾ ವ್ಯೂಹ

ಚರ್ಚಿಲರಿಗೂ ಐಸೆನ ಹಾವರರಿಗೂ ನಡೆದ ಭೇಟಿಯು ಆಗ್ನೇಯ ಏಶ್ಯಾದಲ್ಲಿ ಸಂರಕ್ಷಣ ಒಪ್ಪಂದ ಮಾಡಿಕೊಳ್ಳುವ ಅಮೇರಿಕದ ಬಯಕೆಗೆ ಹೆಚ್ಚಿನ ಉತ್ತೇಜನವನ್ನು ಕೊಡದಿದ್ದರೂ ಈ ದಿಸೆಯಲ್ಲಿ ಪ್ರಯತ್ನಗಳನ್ನು "ಮುಂದೊತ್ತುವ" ನಿರ್ಣಯಕ್ಕೆ ಇಬ್ಬರೂ ಬಂದರು. ಸಿಂಗಾಪುರದಲ್ಲಿ ಬ್ರಿಟನು, ಅಮೇರಿಕ, ಆಸ್ಟ್ರೇಲಿಯಾ ಮತ್ತು ನ್ಯೂಜೀಲೇಂಡುಗಳ ಸೈನಿಕ ಪ್ರತಿನಿಧಿಗಳು ಈಗ ಸಭೆಗೂಡಿದ್ದು, ಸಾಮೂಹಿಕ ಕಾರ್ಯಾಚರಣೆಯ ವಿಷಯವನ್ನು ಪರ್ಯಾಲೋಚಿಸಿದರು. ಇಲ್ಲಿ ಬರುವ ಯಾವುದೇ ನಿರ್ಣಯದಿಂದ ಇಂಡೋಚೀನ ಸಮರದ ಮೇಲೆ ವಿಪರೀತ ಪರಿಣಾಮವಾಗುವುದಿಲ್ಲವೆಂದು ಬ್ರಿಟಿಷ ಪ್ರತಿನಿಧಿಗಳು ಅಭಿಪ್ರಾಯ ಪಟ್ಟರು. ಅಮೇರಿಕದೊಡನೆ ಬ್ರಿಟನಿಗ ಭಿನ್ನಾಭಿಪ್ರಾಯವಿಲ್ಲದ ವಿಷಯವೆಂದರೆ ಐರೋಪ್ಯ ಸಂರಕ್ಷಣೆಯೆಂದೆನ್ನಬಹುದು. ಪಶ್ಚಿಮ ಜರ್ಮನಿಯನ್ನೊಳಗೊಂಡ ಐರೋಪ್ಯ ಸಂರಕ್ಷಣಾ ಕ್ರಮಕ್ಕೆ ಫ್ರಾನ್ಸು ಸಮ್ಮತಿಸದಿದ್ದರೆ, ಪಶ್ಚಿಮ ಜರ್ಮನಿಯಿಂದ ತಾವು ಹೊರಬರುವದಾಗಿ ಬ್ರಿಟನು—ಅಮೇರಿಕಗಳು ಹೇಳುತ್ತವೆ. ಆಗ ಜರ್ಮನಿಯು ತನ್ನದೇ ಸೈನ್ಯವನ್ನು ಕಟ್ಟಿಕೊಂಡು ಯಾರ ಅಂಕೆಗೂ ಬೀಳದೆ ಸ್ವಯಂಪ್ರಭುವೆನಿಸುತ್ತದೆ. ಇದಕ್ಕಿಂತ ಇತರ ದೇಶಗಳ ನಿಯಂತ್ರಣಕ್ಕೊಳಪಟ್ಟ ಜರ್ಮನ ಸೈನ್ಯವಿರುವುದೇ ಯೋಗ್ಯವೆಂದು ಫ್ರಾನ್ಸ ಭಾವಿಸ ಬಹುದು

ಗ್ವಾಟೆ ಮಾಲದಲ್ಲಿ

ಕರ್ನಲ ಡಯಾಜರ ಹೊಸ ಸರಕಾರ ರಚಿಸಿದ ಎರಡೇ ದಿನಗಳಲ್ಲಿ ಅವರ ಪರಿವಾರದಲ್ಲಿಯೇ ಒಬ್ಬರಾಗಿದ್ದ ಕರ್ನಲ ಮುಂಜೋನರು ಅಧ್ಯಕ್ಷರನ್ನು ತಳ್ಳಿಹಾಕಿ, ತಾನೇ ಅಧಿಕಾರ ಸೂತ್ರವನ್ನು ಕೈಗೆ ತೆಗೆದುಕೊಂಡರು ಮುಂಜೋನರು ಬಂಡುಗಾರರೊಡನೆ ಯುದ್ಧ ಮುಂದರಿಸುವ ಬದಲು, ಧಾಳಿಖೋರರ ಮುಖಂಡ ಕರ್ನಲ ಅರ್ಮಾಸರೊಡನೆ ಸಂಧಾನ ಮಾಡಿಕೊಳ್ಳಲು ಸಿದ್ಧತೆ ನಡೆಸಿದರು. ಹೊಸ ಸರಕಾರವು ಕಮ್ಯುನಿಸ್ಟ ಪಕ್ಷಕ್ಕೆ ಮುಟ್ಟುಗೋಲು ಹಾಕಿದ್ದಲ್ಲದೆ, ಸುಮಾರು ೫೦೦ ಮಂದಿಯನ್ನು ಕಮ್ಯುನಿಸ್ಟರೆಂದು ಹೇಳಿ ಸೆರೆಹಿಡಿಯಿತು. ಅನೇಕ ಮಂದಿ ಕಮ್ಯುನಿಸ್ಟರು ವಿದೇಶಿರಾಯಭಾರಿಗಳ ಕಾರ್ಯಾಲಯದಲ್ಲಿ ಆಶ್ರಯವನ್ನು ಕೋರಿದ್ದಾರೆ. ಗ್ವಾಟೆಮಾಲದ ನೆರೆಯಲ್ಲಿರುವ ಸಾಲ್ವಡೋರದಲ್ಲಿ ಯುದ್ಧ ವಿರಾಮದ ಒಪ್ಪಂದಕ್ಕೆ ಅಂಕಿತವನ್ನು ಹಾಕಲಾಯಿತು. ಕಮ್ಯುನಿಸ್ಟ ವಿರೋಧಿ ಬಂಡುಗಾರರ ಧುರೀಣ ಕರ್ನಲ ಅರ್ಮಾಸರು ಗ್ವಾಟೆಮಾಲಾ ನಗರಕ್ಕೆ ಆಗಮಿಸಿದಾಗ ಅವರಿಗೆ "ಸಂಭ್ರಮದ" ಸ್ವಾಗತ ನೀಡಲಾಯಿತು ಪ್ರಾಯಶಃ ಇವರೇ ಗ್ವಾಟೆಮಾಲಾದ ಮುಂದಿನ ಅಧ್ಯಕ್ಷರಾಗುವರು. ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸರು 'ಕಮ್ಯುನಿಸ್ಟರ ಸೊಕ್ಕು' ಅಡಗಿದುದಕ್ಕೆ ತಮ್ಮ ಹಾರ್ದಿಕ ಸಂತೋಷವನ್ನು ವ್ಯಕ್ತಗೊಳಿಸಿದರು. ಆದರೆ ಇಷ್ಟರಿಂದಲೇ ಕಮ್ಯುನಿಸ್ಟರ ಹುಟ್ಟಡಗಿದಂತಾಗಲಿಲ್ಲವೆಂದು ಅವರು ಎಚ್ಚರವಿತ್ತರು. ಅಮೇರಿಕದ ಯಾವುದೇ ಪ್ರದೇಶದಲ್ಲೂ ಕಮ್ಯುನಿಸ್ಟ[illegible] ಪ್ರವೇಶಕ್ಕೆ ಅವಕಾಶಕೊಡತಕ್ಕದ್ದಲ್ಲವೆಂದು ಅವರು ಸಾರಿದರು. ಆದರೆ ಅಮೇರಿಕದ ಸ್ವತಂತ್ರ ರಾಜ್ಯಗಳು ಡಲ್ಲೇಸರ ಪ್ರಾಮಾಣಿಕತೆಯನ್ನು ಸಂಶಯದಿಂದಲೇ ನೋಡುತ್ತವೆ. ಅಮೇರಿಕದ ಕುಹಕವೇ ಗ್ವಾಟೆಮಾಲಾದ ಪತನಕ್ಕೆ ದಾರಿ ಮಾಡಿಕೊಟ್ಟಿತೆಂಬ ಅಭಿಪ್ರಾಯ ದೃಢವಾಗಿ ನೆಲೆಯೂರಿದೆ.

ಪೂರ್ವ ಬಂಗಾಲ

ಪಾಕಿಸ್ತಾನದ ಪಾರ್ಲಿಮೆಂಟಿನಲ್ಲಿ ಕಳೆದ ಶನಿವಾರ ಪೂರ್ವ ಬಂಗಾಲದ ಪರಿಸ್ಥಿತಿಯ ಚರ್ಚೆ ಮುಂದುವರಿಯಿತು. ಸ್ವತಂತ್ರ ಸದಸ್ಯರಾದ ಶ್ರೀ ಧೀರೇಂದ್ರನಾಥ ದತ್ತರು ಹಕ್ಕರ ಮಂತ್ರಿ ಮಂಡಳವನ್ನು ಕಿತ್ತೊಗೆದು ಗವರ್ನರರ ಆಳಿಕೆ ಹೇರಿದುದನ್ನು ಖಂಡಿಸಿದರು. ಅವರು ತಮ್ಮ ಭಾಷಣದಲ್ಲಿ ಮುಸ್ಲಿಂ ಲೀಗಿನ ಪ್ರಭೃತಿಗಳೇ ಆದಂಜೀ ಕಾರ್ಖಾನೆಯ ದಂಗೆಯನ್ನು ಪ್ರಚೋದಿಸಿದರೆಂದು ಆರೋಪಿಸಿದರು. ಗವರ್ನರರ ಆಡಳಿತವೂ ಛಲನೆಯ ಕ್ರಮಗಳೂ ಜನರಲ್ಲಿ ಬೆದರಿಕೆಯನ್ನು ಹುಟ್ಟಿಸಿವೆಯೆಂದೂ ಅವರ ಆಕಾಂಕ್ಷೆಯನ್ನು ಹತ್ತಿಕ್ಕುತ್ತಿವೆಯೆಂದೂ ದತ್ತರು ಹೇಳಿದರು. ಈ ಶನಿವಾರ ಚರ್ಚೆಯು ಮರಳಿ ನಡೆಯುತ್ತದೆ. ಇದರ ನಡುವೆ ಒಂದು ವಿಶೇಷ ಘಟನೆ ನಡೆಯಿತು.—ಗವರ್ನರ ಮಿರ್ಜಾರವರು ಕಮ್ಯುನಿಸ್ಟ ಪಕ್ಷದ ಮೇಲೆ ಪ್ರತಿಬಂಧವನ್ನು ಹೇರಿದ್ದಾರೆ ದೈನಂದಿನ ಆಡಳಿತದಲ್ಲಿ ಕೈ ಹಾಕಿ, ಸುವ್ಯವಸ್ಥೆಯನ್ನು ಕಾಯ್ದುಕೊಳ್ಳುವಲ್ಲಿ ಅಡ್ಡಿ ಮಾಡುವುದೇ ಕಮ್ಯುನಿಸ್ಟರ ಧ್ಯೇಯವೆಂದು ಈ ಆಜ್ಞೆ ತಿಳಿಸುತ್ತದೆ. ೧೨೦ ಕಮ್ಯುನಿಸ್ಟರನ್ನು ಬಂಧಿಸಿದ್ದು, ಈ ಕ್ರಮದ ಹಿಂದೆ ಅಮೇರಿಕದ ಕೈವಾಡ ಇರಲೂ ಬಹುದು. ಆ ದೇಶದಿಂದ ಪಾಕಿಸ್ತಾನಕ್ಕೆ ಕೊಡಮಾಡಿರುವ ಸೈನಿಕ ಸಹಾಯದ ಮೊದಲನೇ ಕಂತು ಇದೇ ಅಕ್ಟೋಬರದಲ್ಲಿ ಬರುತ್ತದೆ. ಭೂ ಜಲ ಹಾಗು ವಾಯು ಸೇನೆಗಳ ೩೦ ಮಂದಿ ಅಮೇರಿಕನ್ ಅಧಿಕಾರಿಗಳು ಪಾಕಿಸ್ತಾನದ ಸೈನಿಕ ಅವಶ್ಯಕತೆಗಳನ್ನು ಅಭ್ಯಸಿಸಲು ಮುಂದಿನ ತಿಂಗಳಲ್ಲಿ ಬರುವರೆಂದೂ ತಿಳಿಯುತ್ತದೆ.

(೫ನೇ ಪುಟದಿಂದ)

ಮದ್ಯಪಾನ ಪ್ರತಿಬಂಧ

ರಾಮ ಮೂರ್ತಿ ಸಮಿತಿಯ ಶಿಫಾರಸುಗಳ ಪರಿಣಾಮವಾಗಿ ಆಂಧ್ರ ರಾಜ್ಯವು ಪಾನ ಪ್ರತಿಬಂಧವನ್ನು ಬಿಟ್ಟುಗೊಡಬಹುದೆಂದು ವಿಮಂಚನೆ ಉಂಟಾಯಿತು. ಆದರೆ ಕಳೆದ ವಾರ ಉಪ ಮುಖ್ಯಮಂತ್ರಿ ಶ್ರೀ ಸಂಜೀವ ರೆಡ್ಡಿಯವರು ಸರಕಾರವು ಪಾನ ನಿಷೇಧ ಧೋರಣೆಗೆ ಅಂಟಿಕೊಳ್ಳುವುದೆಂದು ಸ್ಪಷ್ಟವಾಗಿ ಹೇಳಿದರಾಗಿ, ಈ ಕುರಿತು ತರ್ಕಕ್ಕೆ ಎಡೆ ಇಲ್ಲ. ಪಾನ ನಿಷೇಧವು ಜಾರಿಯಲ್ಲಿರುವ ಪ್ರದೇಶಗಳು ತಮ್ಮ ಕೆಲಸದ ವರದಿಯನ್ನು ಕಳಿಸಬೇಕೆಂದು ಯೋಜನಾ ಆಯೋಗವು ಪ್ರಾರ್ಥಿಸಿದ್ದು, ಸಮಗ್ರ ಭಾರತಕ್ಕೆ ಅನ್ವಯಿಸುವಂತೆ ಪಾನ ನಿಷೇಧವನ್ನು ವಿಸ್ತರಿಸಲು ಅದು ತಕ್ಕ ಸೂಚನೆಗಳನ್ನು ಕೊಡಬಹುದು. ಆಂಧ್ರ ರಾಜ್ಯವು ತನ್ನ ಹನ್ನೊಂದು ಜಿಲ್ಲೆಗಳಲ್ಲಿ ಒಂದೊಂದರಲ್ಲಿ ಎರಡೆರಡು ಮಾದರಿ "ನೀರಾ ಭವನ"ಗಳನ್ನು ತೆರೆಯುವುದೆಂದೂ ತಾಳೆ ಮರದ ಬೆಲ್ಲ ಹಾಗು ಇತರ ಉತ್ಪತ್ತಿಗಳನ್ನು ತಯಾರಿಸುವ ೩೦೦ ಕೇಂದ್ರಗಳನ್ನು ಸ್ಥಾಪಿಸುವುದೆಂದೂ ತಿಳಿದು ಬರುತ್ತದೆ. ಇದರಿಂದ ರಾಜ್ಯದಲ್ಲಿ ಮೂರ್ತೆದಾರರಾಗಿ ಕೆಲಸ ಮಾಡುತಿದ್ದ ೧೦,೦೦೦ ಮಂದಿಗೆ ಉದ್ಯೋಗ ದೊರಕುತ್ತದೆ.

ರೇಡಿಯೋ ನಾಟಕಗಳು

ಅಖಿಲ ಭಾರತ ಆಕಾಶವಾಣಿಯವರು ವಿಶೇಷ ಕಾರ್ಯಕ್ರಮಗಳನ್ನು ಉತ್ತಮಪಡಿಸುವುದಕ್ಕೆ ಉದ್ದೇಶಿಸಿ ಹದಿಮೂರು ಭಾರತೀಯ ಭಾಷೆಗಳಲ್ಲಿ ರೇಡಿಯೋ ನಾಟಕಗಳ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಪಾಶ್ಚಾತ್ಯ ದೇಶಗಳಲ್ಲಿ ಬಹಳವಾಗಿ ಅಭಿವೃದ್ಧಿಗೊಂಡಿರುವ ಈ ವಿಶೇಷ ಕಲೆಯ ರಚನೆಯಲ್ಲಿ ಪ್ರಸ್ತುತ ಉದ್ಯಮವು ಆಸಕ್ತಿಯನ್ನು ಪ್ರೇರೇಪಿಸುತ್ತದೆ. ಪ್ರತಿಯೊಂದು ಭಾಷೆಯಲ್ಲಿಯೂ, ಉತ್ತಮವಾದ ಮೂರು ನಾಟಕಗಳಿಗೆ ಬಹುಮಾನಗಳು ಕೊಡಲಾಗುತ್ತವೆ. ಪ್ರಥಮ, ದ್ವಿತೀಯ ಹಾಗೂ ತೃತೀಯ ಪಾರಿತೋಷಕಗಳ ಮೊತ್ತವು ಅನುಕ್ರಮವಾಗಿ ೩೦೦, ೨೦೦, ರೂಪಾಯಿಗಳದುತ್ತವೆ. ಕೃತಿಗಳನ್ನು ಇದೇ ಆಗಸ್ಟ್ ಅಖೈರಿನೊಳಗೆ ಮುಟ್ಟುವಂತೆ ಅಖಿಲ ಭಾರತ ಆಕಾಶವಾಣಿ ಯಾವ ಕೇಂದ್ರಕ್ಕೂ ಕಳುಹಿಸಬಹುದು ಕನ್ನಡ ಭಾಷೆಯಲ್ಲಿ ಮುಂಬಯಿ ಕೇಂದ್ರವು ಸ್ಪರ್ಧೆಯನ್ನು ನಡೆಸುತ್ತದೆ.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಅವಸರದ ಸಭೆಯು—ಇದೇ ತಾ ೬ರಲ್ಲು ಸಂಜೆ ಚೇರ್ಮನ್ ಶ್ರೀ ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಮುನಿಸಿಪಲ್ ಸೌತ್ ಹಾ| ಎ| ಶಾಲೆಗೆ ಎರಡು ಸೆಕೆಂಡರಿ ಗ್ರೇಡ್ ಮತ್ತು ಎರಡು ಹಾಯರ್ ಗ್ರೇಡಿನ, ಮುನಿಸಿಪಲ್ ನೋರ್ತ್ ಶಾಲೆಗೆ ಎರಡು ಹಾಯರ್ ಗ್ರೇಡಿನ ಮತ್ತು ಮುನಿಸಿಪಲ್ ಎ. ಎಲ್. ಎನ್. ರಾವ್ ಹಾಗೂ ಕಿನ್ನಿಮೂಲ್ಕಿ ಶಾಲೆಗಳಿಗೆ ಒಂದೊಂದು ಹಾಯರ್ ಗ್ರೇಡಿನ ಇಸಮುಗಳನ್ನು ಕಾಯಮಾಗಿ ಸೆಂಕ್ಷನ್ ಮಾಡಬೇಕೆನ್ನುವ ಆಫೀಸು ನೋಟಿಸ ಕುರಿತು ತುಂಬಾ ಚರ್ಚೆನಡೆಯಿತು. ಮುನಿಸಿಪಾಲಿಟಿಯ ಆರ್ಥಿಕ ಪರಿಸ್ಥಿತಿಯು ಇಳಿಮುಖವಾಗಿರುವುದರಿಂದ ಖರ್ಚಿನ ವಿಚಾರದಲ್ಲಿ ತುಂಬಾ ಜಾಗ್ರತೆ ನಡೆಸಬೇಕಾದುದು ಅದ್ಯ ಕರ್ತವ್ಯವಿದೆ ಎಂದು ಸಭಿಕರ ಅಭಿಪ್ರಾಯವಾಯಿತು. ನಂತರ ಆಫೀಸು ನೋಟಿಸಲ್ಲಿ ಕೇಳಲಾದ ಇಸಮುಗಳಲ್ಲಿ ಮುನಿಸಿಪಲ್ ನೋರ್ತ್ ಶಾಲೆಯ ಮಟ್ಟಿಗೆ ಒಬ್ಬ ಉಪಾಧ್ಯಾಯರ ಇಸಮನ್ನು ಕಡಿಮೆ ಮಾಡಿ ಇತರ ಎಲ್ಲಾ ಇಸಮುಗಳನ್ನು ಖಾಯಮಿಯಾಗಿ ಸೆಂಕ್ಷನ್ ಮಾಡಲಾಯಿತು.

ವರ್ಗಾವರ್ಗಿ—ಸ್ಥಳೀಯ ಎಡಿಶನಲ್ ಡಿ| ಮುನ್ಸಿಫ್ ಶ್ರೀ ಎಚ್. ಲಕ್ಷ್ಮಣ ಸ್ವಾಮಿಯವರು ಕುಂದಾಪುರ ಡಿ| ಮುನ್ಸಿಫರಾಗಿ ವರ್ಗಾಯಿಸಲ್ಪಟ್ಟಿದ್ದಾರೆ. ಅವರ ಸ್ಥಾನದಲ್ಲಿ ಕುಂದಾಪುರದ ಡಿ| ಮುನ್ಸಿಫ್ ಜನಾಬ್ ಯು. ಹಮ್ಮಬ್ಬನವರು ನೇಮಕ ಹೊಂದಿರುವರು.

ಸತ್ಕಾರ ಸಮಾರಂಭ—ನ್ಯಾಯಾಂಗದಿಂದ ಕಾರ್ಯಾಂಗ ವಿಭಜನೆಯ ನಿಮಿತ್ತ ಇದೇ ತಾ 1ರಲ್ಲು ಸ್ಥಳೀಯ ಬಾರ್ ಎಸೋಸಿಯೇಶನನಲ್ಲಿ, ಜುಡಿಶಿಯಲ್ ಸಬ್ ಮೆಜಿಸ್ಟ್ರೇಟ್ ಶ್ರೀ ಚಂದ್ರಶೇಖರ ಹೆಗ್ಡೆ ಮತ್ತು ಶ್ರೀ ಬಿ. ಕೊರಗಪ್ಪನವರಿಗೆ ಸತ್ಕಾರ ಸಮಾರಂಭ ಜರಗಿತು. ವಕೀಲ್ ಶ್ರೀ ಕೆ. ಜಿ. ಬಲ್ಲಾಳರು ಸಂದರ್ಭೋಚಿತ ಮಾತುಗಳಿಂದ ಸ್ವಾಗತ ಭಾಷಣ ಮಾಡಿದರು ಡಿ| ಮುನ್ಸಿಫ್ ಶ್ರೀ ಇ. ಗೊನ್ಸಾಲ್ವಿಸ್, ಶ್ರೀಯುತರಾದ ಚಂದ್ರಶೇಖರ ಹೆಗ್ಡೆ ಮತ್ತು ಕೊರಗಪ್ಪನವರು ಆಭಾರ ಸೂಚಿಸಿದರು. ಬಾರ್ ಎಸೋಸಿಯೇಶನ್ ಕಾರ್ಯದರ್ಶಿ ಶ್ರೀ ಕೆ. ನಾರಾಯಣ ರಾಯರು ಧನ್ಯವಾದಗಳನ್ನರ್ಪಿಸಿದರು.

ಸಾರ್ವಜನಿಕ ಸಭೆ—ಸ್ಥಳೀಯ ಜನಸಂಘದ ಆಶ್ರಯದಲ್ಲಿ ಕಳೆದ ತಾ 29ರಲ್ಲು ಸಂಜೆ ಶ್ರೀ ಅನಂತೇಶ್ವರ ದೇವಸ್ಥಾನದ ಪೋಳಿಯಲ್ಲಿ ಜನಸಂಘದ ಕರ್ನಾಟಕ ಶಾಖೆಯ ಪ್ರಚಾರಕ ಶ್ರೀ ಜಗನ್ನಾಥ ರಾವ್ ಜೋಶಿಯವರು ಡಾ| ಮುಖರ್ಜಿಯವರ ಸ್ಮಾರಕ ಪಕ್ಷದ ಆಚರಣೆಗಾಗಿ ಜರಗಿದ ಸಭೆಯಲ್ಲಿ ಅಮೋಘ ಭಾಷಣವಿತ್ತರು. ದಿವಂಗತ ಮುಖರ್ಜಿಯವರ ಸ್ಮಾರಕ ನಿಧಿಗೆ ಸರ್ವರೂ ಮುಕ್ತ ಹಸ್ತದಿಂದ ಧನ ಸಹಾಯ ಮಾಡಬೇಕಾಗಿ ವಿನಂತಿಸಿದರು. ಅಂದಿನ ಸಭೆಯ ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಅನಂತಕೃಷ್ಣ ಶರ್ಮರು ಧನ್ಯವಾದಗಳನ್ನರ್ಪಿಸಿದರು.

ಧರ್ಮ ಸೇವೆ—ಶ್ರೀ ಅದೂರು ಲಕ್ಷ್ಮೀನಾರಾಯಣ ರಾಯರು ಈ ಕೆಳಗಿನ ಉಂಬಳಿಗಳ ವ್ಯವಸ್ಥೆ ಮಾಡಿರುವರೆಂದು ತಿಳಿದು ಬರುತ್ತದೆ. ರೂ. 2000/ ಬೆಲೆಯ ಸಿಂಡಿಕೇಟ್ ಬೇಂಕಿನ ನಿರಖು 5% ಬಡ್ಡಿ ದೊರೆಯುವ ಶೇರುಗಳನ್ನು, ಸ್ಥಳೀಯ ಎಮ್. ಜಿ ಎಮ್. ಕಾಲೇಜಿನ ಬಡತನದಲ್ಲಿ ಬ್ರಾಹ್ಮಣ ವಿದ್ಯಾರ್ಥಿಗೆ ವರ್ಷಾವಧಿ ರೂ. 100 ವೇತನ ಕೊಡುವ ಬಗ್ಗೆ ಮತ್ತು ಸರಕಾರಿ ಪರೀಕ್ಷೆಯಲ್ಲಿ ಕನ್ನಡದಲ್ಲಿ ಅತ್ಯಧಿಕ ಮಾರ್ಕನ್ನು ಪಡೆಯುವ ವಿದ್ಯಾರ್ಥಿಗೆ ರೂಪಾಯಿ 30/-ರ ಸಂಭಾವನೆ ಬಗ್ಗೆ ಶ್ರೀ ಕೃಷ್ಣ ಮಠದಲ್ಲೂ ಶ್ರೀ ಅನಂತೇಶ್ವರ—ಚಂದ್ರೇಶ್ವರ ದೇವಸ್ಥಾನಗಳಲ್ಲೂ ಧರ್ಮ ಸೇವೆಗಾಗಿಯೂ ಪ್ರತ್ಯೇಕ ಬೇಂಕಿನ ಪಾಲುಗಳನ್ನು ಮೀಸಲಿಟ್ಟಿರುವರು.

ಕಾಸರಗೋಡು— ದ. ಕ. ಜಿಲ್ಲೆಯ ಎಡಿಶನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರಾಗಿದ್ದು ಈಗ ನ್ಯಾಯಾಂಗ ಮತ್ತು ಕಾರ್ಯಾಂಗ ವಿಭಜನೆಯ ನಿಮಿತ್ತ ಆ ಹುದ್ದೆಯಿಂದ ನಿವೃತ್ತರಾದ ಶ್ರೀ ಎಸ್. ಜೋಶಿ—ಅವರನ್ನು ಬೀಳ್ಕೊಡುವ ಸಮಾರಂಭವು ಕಳೆದ ತಾ 29 ರಲ್ಲು ಸ್ಥಳೀಯ ಬಾರ್ ಎಸೋಸಿಯೇಶನಿನಲ್ಲಿ ಶ್ರೀ ಕೆ. ಪಿ. ಮಾಧವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಿ| ಮುನ್ಸಿಫ್ ಶ್ರೀ ಕೆ. ಸೀತಾರಾಮ ರಾವ್, ಎಡ್ವೊಕೇಟ್ ಶ್ರೀ ಕೆ. ಕೆ. ರಾವ್ ಮೊದಲಾದವರು ಅತಿಥಿಯ ಗುಣಗಾನ ಮಾಡಿ ಅವರಿಗೆ ಶುಭವನ್ನು ಕೋರಿ ಮಾತನಾಡಿದರು. ಶ್ರೀ ಜೋಶ್ಯರು ತಮಗಿತ್ತ ಮನ್ನಣೆಗಾಗಿ ಕೃತಜ್ಞತೆ ಸಲ್ಲಿಸಿದರು. ಶ್ರೀ ಕೆ. ರಾಮ ಕಾಮತರು ವಂದನೆಗಳನ್ನರ್ಪಿಸಿದರು.

ಚಂದ್ರಗ್ರಹಣದಿಂದ ತಿಥಿ ಶುದ್ಧಿ

ಪಂಚಾಂಗಗಳಲ್ಲಿ ಯಾವುದು ತಪ್ಪು-ಯಾವುದು ಸರಿ—ಎಂದು ಸಾಮಾನ್ಯರು ತಿಳಿದುಕೊಳ್ಳಬೇಕಾದರೆ ಗ್ರಹಣ ಅಸ್ತೋದಯಾದಿಗಳನ್ನು ನೋಡಿಕೊಂಡರೆ ಸರಿ. ಅದು ಪ್ರತ್ಯಕ್ಷಕ್ಕೆ ಸರಿಯಾಗಿದ್ದರೆ, ಹಾಗೆ ಸರಿ ಬರುವುದನ್ನು ಪಂಚಾಂಗದಿಂದ ಗಣಿತನೇ ಶುದ್ಧ ಗಣಿತ, ಹೀಗೆ ಕ್ರಿಯೆಯಿಂದ ಗಣಿತವು ಆಯಾಯ ಕಾಲದಲ್ಲಿ ಸೂಕ್ಷ್ಮವಾಗಿ ಪ್ರತ್ಯಕ್ಷ ಸಿದ್ಧವಾಗಿದ್ದು, ಆಗ ಬಂದು ಆ ಹಿಂದಿನ ಗಣಿತವಾದ ಸೂರ್ಯ ಸಿದ್ಧಾಂತ ಆರ್ಯ [illegible] ಮೊದಲಾದ ಗಣಿತಗಳು ಪ್ರತ್ಯಕ್ಷಕ್ಕೆ ಸರಿಬರುವುದಿಲ್ಲ. ಇದನ್ನು ಎಲ್ಲಾ ಗಣಿತಜ್ಞರು ಬಲ್ಲರು—

ಅವೆಲ್ಲಾ ಗಿಯೇ ಪಂಚಾಂಗಗಳ ಶುದ್ಧಾಶುದ್ಧ ವಿಚಾರಗಳನ್ನು ಸಾಮಾನ್ಯರೂ ತಿಳಿದುಕೊಳ್ಳಬಹುದಾದ ಗ್ರಹಣ ಅಸ್ತೋದಯಾದಿಗಳನ್ನು ಸೂಕ್ಷ್ಮವಾದ ನವೀನ ದೃಕ್ ಸಿದ್ಧಾಂತ ರೀತಿಯಲ್ಲಿ ಗಣಿಸುತ್ತಿದ್ದು ಸದ್ಯ ದೃಷ್ಟಿಗೆ ಅಪ್ರತ್ಯಕ್ಷವಾಗಿರುವ ಉಳಿದ ಪಂಚಾಂಗಗಳನ್ನು (ತಿಥಿ ನಕ್ಷತ್ರಾದಿ ಮಾನಾ ವಿಚಾರಗಳನ್ನು) ಸೂರ್ಯಾರ್ಯ ಸಿದ್ಧಾಂತ ಮೊದಲಾದ ಪ್ರಾಚೀನ ಪದ್ಧತಿಯಿಂದಲೇ ಗಣಿಸಿ ಹಲವರು ಪಂಚಾಂಗ ಮಾಡುತ್ತಿದ್ದಾರೆ. ಇದೆಂಥಾ ಅನ್ಯಾಯ: ಈ ದೋಷ ಯಾರೆ [illegible] ದೂರದರ್ಶಿನಿಯಿಂದ ನೋಡಿದರೆ ಚಿತ್ರ ನಕ್ಷತ್ರ ಮಘಾ ನಕ್ಷತ್ರಾದಿಗಳು [illegible] ಬರೆದ ಸ್ಥಾನದಲ್ಲಿರುವುದಿಲ್ಲ. ಹಾಗಾದರೆ ಆ ಹಿಂದಿನ ಸೂರ್ಯ ಸಿದ್ಧಾಂತಾದಿ ಪ್ರಾಚೀನ ಕರಣ ರೀತಿಯ ಪಂಚಾಂಗಗಳಿಂದ ಮಾಡಿದ [illegible] ಕರ್ಮಗಳ [illegible] ಹೇಗೆ? ಆದರೆ [illegible] ರೀತಿಯಲ್ಲಿ [illegible] ಚಿತ್ರ [illegible] ಎಷ್ಟು [illegible] ಧರ್ಮ [illegible] ನಕ್ಷತ್ರ [illegible] (ತಾ 15-7-54) [illegible] (ಘಟಿ 6-10ಕ್ಕೆ) [illegible] ಗ್ರಹಣ [illegible] ಕಾಲ [illegible] (ಘಟಿ 0—40) [illegible] ಸೂರ್ಯಾರ್ಯ [illegible] ಪ್ರಾಚೀನ ಸಿದ್ಧಾಂತ [illegible] ಪಂಚಾಂಗಗಳಲ್ಲಿ [illegible] ಗ್ರಹಣ [illegible] ಕಾಲ [illegible] ಘಂಟೆ 30 ಮಿನಿಟ ಕಾಲಗಳ [illegible] ಅಭ್ಯಂತರ ಬರುವುದರಿಂದ ಧರ್ಮ ಕರ್ಮಾಚರಣೆಗೆ ಅದು ಯೋಗ್ಯವಲ್ಲೆಂಬುದು ಸ್ಪಷ್ಟವಾಗುತ್ತದೆ. ಈ ವಿಷಯಗಳನ್ನು ಸಂಬಂಧಿಸಿದ ಮಹಾಜನರು ಪರಿಶೀಲಿಸಿ ಪಂಚಾಂಗಗಳ ಶುದ್ಧಾಶುದ್ಧತೆಯನ್ನು ಪರೀಕ್ಷಿಸಲಿ.

ಇತಿ ಶ್ರೀಪತಿ ಪಂಚಾಂಗ ಸಂಪಾದಕ
ಶ್ರೀಪತಿ ನರಸಿಂಹ ಅಡಿಗ
ಪ್ರೋಷ್ಟು ಕೋಟೆ.

ಮೂಡಬಿದ್ರೆ— ಸ್ಥಳೀಯ ಕಾಂಗ್ರೆಸ ಕಮಿಟಿಯ ಕಡೆಯಿಂದ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ನಡೆಯಲಿರುವ ನಾಲ್ಕನೆ ಮತದಾರ ಕ್ಷೇತ್ರದ ಚುನಾವಣೆಯು ಇದೇ ತಾ. 10ರಲ್ಲಿ ಜರಗಲಿರುವುದು. ಕಲ್ಲಮುಂಡ್ಕೂರು ಮತ್ತು ನಿಡ್ಡೋಡಿ ಗ್ರಾಮಗಳ ಬಗ್ಗೆ ನಿಡ್ಡೋಡಿ ಕೇಂದ್ರದಲ್ಲಿಯ ಶ್ರೀ ಸತ್ಯನಾರಾಯಣ ಹಾ| ಎ| ಶಾಲೆಯಲ್ಲಿ ಮತದಾನ ನಡೆಯುವುದು. ಇತರ ಗ್ರಾಮಗಳ ಮತದಾನದ ಬಗ್ಗೆ ಒಂದು ಮತಗಟ್ಟೆಯು ಮೂಡಬಿದ್ರೆಯಲ್ಲಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಏರ್ಪಡಿಸಲಾಗಿದೆ.

ಬೈಂದೂರು— ಕಳೆದ ತಾ. 28 ರಲ್ಲು ರಾತ್ರಿ ಬೈಂದೂರು ಯಕ್ಷಗಾನ ಕಲಾ ಕೂಟದ ನೇತೃತ್ವದಲ್ಲಿ 'ಸುಧನ್ವ ಕಾಳಗ' ಯಕ್ಷಗಾನ ಕಾಲಕ್ಷೇಪವು ಶ್ರೀ ಶೇನೇಶ್ವರ ದೇವಳದ ಹೆಬ್ಬಾಗಿಲಲ್ಲಿ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಹಡುವರಿ ಸುಬ್ಬಣ್ಣ ಸೆಟ್ಟರು (ಹಂಸಧ್ವಜ) ಬಿ. ಬಾಲಯ್ಯ ನ್ಯಾಕರು (ಸುಧರ್ಬ), ಮರಿಯಣ್ಣ ನ್ಯಾಕರು (ಸುಧನ್ವ), ರಾಮಕೃಷ್ಣ ಭಟ್ಟರು (ಪ್ರಭಾವತಿ), ಎಸ್. ನಾರಾಯಣ ಸೇರುಗಾರರು (ಮಂತ್ರಿ), ಶಂಕರ ಸೇರುಗಾರರು (ಕುವರೆ), ಬಿ. ದೇವದಾಸ ನಾಯ್ಕರು (ಚಾರಕ) ತಂತಮ್ಮ ಪಾತ್ರವನ್ನು ಚುರುಕಾಗಿ ನಿರ್ವಹಿಸಿದರು. ಶ್ರೀ ಬಿ. ವಿ. ರಮಣರ ಹಾಡುಗಾರಿಕೆ, ಶ್ರೀ ನಾಗಪ್ಪ ಆಚಾರಿಯವರ ಮೃದಂಗ ವಾದನ ಮತ್ತು ಶ್ರೀ ವೆಂಕಟ್ರಮಣ ಆಚಾರಿಯವರ ಚಂಡೆ ಬಾರಿಸುವಿಕೆ ಕರ್ಣಾನಂದ ಹಾಗೂ ನೇತ್ರಾನಂದಕರವಾಗಿತ್ತು.

ಕುಂಬಳೆ—ಇಲ್ಲಿಯ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಇದೇ ತಾ. 2ರಲ್ಲು ಶ್ರೀ. ಐ. ಸಿ. ಭಂಡಾರಿಯವರ ಅಧ್ಯಕ್ಷತೆಯಲ್ಲಿ ವನಮಹೋತ್ಸವದ ಸಾರ್ವಜನಿಕ ಸಭೆಯು ಜರಗಿತು. ಶ್ರೀಗಳಾದ ಕೆ. ಕಣ್ಣಪ್ಪ ಕೆ. ಕೇಶವ ಭಟ್ ಮೊದಲಾದವರು ಗಿಡಗಳನ್ನು ನೆಡುವಿಕೆಯ ಮಹತ್ವದ ಕುರಿತು ಭಾಷಣ ಮಾಡಿದರು.

ಪುತ್ತೂರು— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಕುಸ್ತಿಮಾಸ್ತರರಾಗಿದ್ದ ಶ್ರೀ ಬಿ. ರಾಮಯ್ಯ ಸೆಟ್ಟರು ಕಳೆದ ತಾ 30ರಲ್ಲು ನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ಅವರ ಅಗಲುವಿಕೆಯ ದು:ಖಸೂಚಕವಾಗಿ ಆ ದಿನ ಶಾಲಾ ವಿದ್ಯಾರ್ಥಿಗಳು ಸಭೆ ಸೇರಿದ್ದರು. ದಿವಂಗತರ ಸ್ಮರಣಾರ್ಥವಾಗಿ ಶಾಲೆಗೆ ಅರ್ಧ ದಿವಸ ರಜೆ ಕೊಡಲಾಗಿತ್ತು.

ದಿ| ಬೆಳ್ಳಿಪಾಡಿ ಮಾಜಪ್ಪ ರೈಗಳ ಪುತ್ರ ಶ್ರೀ ಧನಂಜಯ ರೈಗಳು ದಿ| ಮೊಗರು ಸಂಕಪ್ಪ ರೈಗಳ ಪುತ್ರಿ ಸೌ| ಜಯಂತಿಯನ್ನು ತಾ 7—7—54ರಲ್ಲಿ ಅರುಣಾ ಥಿಯೇಟರಿನಲ್ಲಿ ವಿವಾಹವಾದರು.

ಕುಂದಾಪುರ—ಸ್ಥಳೀಯ ಪಂಚಾಯತ ಬೋರ್ಡಿನ ಕಡೆಯಿಂದ ವನ ಸಪ್ತಾಹ ಸುದಿನಗಳಲ್ಲಿ ಸೆನಿಟರಿ ಇನ್ಸ್‌ಪೆಕ್ಟರ್ ಶ್ರೀ ಕೆ. ಎಸ್. ನಾಯ್ಕರು ಸಾಲುಮರದ ಗಿಡಗಳನ್ನು ನೆಡಿಸಿರುತ್ತಾರೆ. ಕಳೆದ ವರ್ಷ ನಡಲ್ಪಟ್ಟ ಗಿಡಗಳೆಲ್ಲವೂ ಜೀವಂತವಿರುತ್ತವೆ. ಕುಂದಾಪುರದಲ್ಲಿ ಸಾಲು ಮರಗಳನ್ನು ನೆಟ್ಟು ಯೋಗ್ಯ ರೀತಿಯಲ್ಲಿ ಪೋಷಣೆ ಮಾಡಿದವರು ಶ್ರೀಗಳಾದ ಕೆ. ಎಲ್. ಕಾರಂತ, ಬಿ. ಎ., ಎಲ್. ಟಿ. ಮತ್ತು ಕೆ. ಎಸ್. ನಾಯ್ಕರು ಆಗಿದ್ದು ಅವರ ಸತ್ಕಾರ್ಯವು ಅಭಿನಂದನೀಯವೆಂದು 'ಮರಜನ'ರೊಬ್ಬರು ಬರೆಯುತ್ತಾರೆ.

ರೆವಿನ್ಯೂ ಡಿವಿಜನಲ್ ಆಫೀಸಿನಲ್ಲಿ ಇದೇ ತಾ. 3 ರಲ್ಲು ವನಮಹೋತ್ಸವವು ಯಶಸ್ವಿಯಾಗಿ ಆಚರಿಸಲ್ಪಟ್ಟಿತು. ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ; ಎಸ್. ಎಸ್. ಕೊಳ್ಕೆಬೈಲ್, ಎಮ್. ಎಲ್. ಎ; ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಕೆ. ವೆಂಕಪ್ಪ ಸೆಟ್ಟಿ ಮೊದಲಾದವರು ಈ ಸಮಾರಂಭಕ್ಕೆ ಆಗಮಿಸಿದ್ದರು. ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಸ್. ಯು. ಪಿ. ನಾಯ್ಕರು ತಮ್ಮ ಬಂಗ್ಲೆ ಮತ್ತು ಆಫೀಸು ಪಟಾರದಲ್ಲಿ ಎರಡು ಮತ್ತು ಆರು ಕಸಿ ಮಾವಿನ ಗಿಡಗಳನ್ನು ನೆಟ್ಟು ನೆರೆದ ಮಹನೀಯರಿಗೆ ಲಘು ಉಪಹಾರವಿತ್ತು ಉತ್ಸವವನ್ನು ಸಾಂಗಗೊಳಿಸಿದರು

ಕುಕ್ಕಾಲು—ಇದೇ ತಾ. 7 ರಲ್ಲು ಕುಕ್ಕಾಲು ಸಹಕಾರಿ ಸಂಘದ ಕಚೇರಿಯಲ್ಲಿ ಕಾಪು ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರರ ಅಧ್ಯಕ್ಷತೆಯಲ್ಲಿ ಕುಕ್ಕಾಲು, ಬೆಳ್ಳೆ ಗ್ರಾಮಗಳ ಕೂಡುವಿಕೆಯಿಂದ ವನಮಹೋತ್ಸವ ಆಚರಿಸಲಾಯಿತು. ಶ್ರೀ ಕುಕ್ಕಾಲು ಗಣಪ್ಪಯ್ಯ ಸೆಟ್ಟರೇ ಮೊದಲಾದವರು ಸಸಿ ನೆಡುವ ಮಹತ್ವದ ಕುರಿತು ಭಾಷಣವಿತ್ತರು.

ಬಿಲ್ಲವರ ಎಸೋಸಿಯೇಶನ್, ಮುಂಬಾಯಿ:—ಇದರ ವಾರ್ಷಿಕ ಮಹಾಸಭೆಯು ಇದೇ ತಾ. 11—7—1954ನೇ ಆದಿತ್ಯವಾರ ಅಪರಾಹ್ನ ಘಂಟೆ 2ಕ್ಕೆ ಎಸೋಸಿಯೇಶನಿನ ಚಾವಡಿಯಲ್ಲಿ ಜರಗಲಿರುವುದರಿಂದ ಸದಸ್ಯರೆಲ್ಲ ಹಾಜರಿರಬೇಕಾಗಿ ವಿನಂತಿ.

ಜಿ. ಎ. ಕೋಟ್ಯಾನ್.
ಗೌರವ ಕಾರ್ಯದರ್ಶಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.
ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೨ನೇ ಮುದ್ರಣವನ್ನು ಕಂಡಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ.)
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.
ಡಿಪ್ಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ.
ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚವಿದೋಷ, ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು

ನಡಿಯುವ ಚಿತ್ರ.
ಆಕಾಶ್ [ಹಿಂದಿ]
ನಾದಿರಾ, ಆಗಾ, ಬಲರಾಜ್ ಸಹಾನಿ, ಶಮ್ಮಿ.
ಮುಂದಿನ ಚಿತ್ರ:— ಸಾಹಸಮಯ ಅದ್ಭುತ ಚಿತ್ರ
ನಿಶಾನಡಂಕಾ– ರಂಜನಾ, ಶ್ಯಾಮ.
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.



ಮಂಗಳೂರು

ಮಂಗಳೂರು ಪೋರ್ಟ್ ಟ್ರಸ್ಟಿಗೆ ಕೆನರಾ ಚೇಂಬರ್ ಆಫ್ ಕಾಮರ್ಸಿನ ಕಡೆಯಿಂದ ಶ್ರೀಗಳಾದ ವಿ. ಎಸ್. ಕುಡ್ವಾ, ಎ. ಉಮಾನಾಥ ರಾವ್, ಮಡೇಲ್ ಶ್ರೀನಿವಾಸ ನಾಯಕ್ ಮತ್ತು ತಲಪಾಡಿ ಅಣ್ಣಪ್ಪ ನಾಯಕರು ಚುನಾಯಿಸಲ್ಪಟ್ಟಿರುವರು.

ವನಮಹೋತ್ಸವ— ಮತ್ತು ಕಂಪೋಸ್ಟ್ ಗೊಬ್ಬರದ ಸಪ್ತಾಹವು ಇದೇ ತಾ. 1ರಲ್ಲು ಬೆಳಿಗ್ಗೆ ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆ, ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲ್ಪಟ್ಟಿತು. ಈ ಸಮಾರಂಭಕ್ಕೆ ಶಾಲಾ ಮಕ್ಕಳು ಸಸಿಗಳನ್ನು ಹಿಡಿದುಕೊಂಡು ಮೆರವಣಿಗೆಯಿಂದ ಬಂದಿದ್ದರು. ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಮ್.ಎಲ್.ಎ., ಸಿ. ಎಲ್. ರೋಬೊ ಮತ್ತು ಶ್ರೀಮತಿ ಶಾಂಭವಿ, ಆರ್. ಪೂಂಜರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ತಮ್ಮ ಕೊನೆಯ ಮಾತುಗಳಲ್ಲಿ ಮಣಸೆ ಸಸಿ ಮತ್ತು ಕಬಿಬೇವಿನ ಸಸಿನಡುವುದಕ್ಕೆ ಹೆಚ್ಚಿನ ಪ್ರಾಧಾನ್ಯ ಕೊಡುವುದು ಉತ್ತಮವೆಂದು ಹೇಳಿದರು. ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಎಸ್. ಯು. ಪಿ. ನಾಯ್ಡುರು ಧನ್ಯವಾದಗಳನ್ನರ್ಪಿಸಿದರು.

ಜಿಲ್ಲಾ ಮೆಜಿಸ್ಟ್ರೇಟ್ ಕೋರ್ಟಿನ ಉದ್ಘಾಟನೆ— ಕಾರ್ಯಾಂಗದಿಂದ ನ್ಯಾಯಾಂಗದ ವಿಭಜನೆಯು ಇದೇ ತಾ. 1 ರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜ್ಯಾರಿಗೆ ಬಂದಿದ್ದು, ಜಿಲ್ಲಾ ಮೆಜಿಸ್ಟ್ರೇಟ್ ಕೋರ್ಟಿನ ಉದ್ಘಾಟನೆಯು ಅದೇ ದಿನ ಪೂರ್ವಾಹ್ನ 10 ಗಂಟೆಗೆ ಮಂಗಳೂರಿನ ಫಸ್ಟ್‌ಕ್ಲಾಸ್ ಬೆಂಚ್ ಕೋರ್ಟು ಹಾಲಿನಲ್ಲಿ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಪಿ. ಕಂಗ ನರಸಿಂಹ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಜಿ. ಸೋಮಶೇಖರ ರಾಯರು ಈ ಯೋಜನೆಯು ಈ ಜಿಲ್ಲೆಯಲ್ಲಿ ಜ್ಯಾರಿಯಾದುದು ಸಂತೋಷಕರವೆಂದು ಹೇಳಿ ಅದನ್ನು ಸ್ವಾಗತಿಸಿದರು. ಅಧ್ಯಕ್ಷರಾಗೂ ಉದ್ಘಾಟಕರಾದ ಶ್ರೀ ಚೆಟ್ಟಿಯಾರರು ತಮ್ಮ ಭಾಷಣದಲ್ಲಿ, ನ್ಯಾಯಾಧೀಶರುಗಳು ಸ್ವತಂತ್ರರಾಗಿರುವ ಆವಶ್ಯಕತೆಯನ್ನೆತ್ತಿ ತೋರಿಸಿದರು. ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಪಿ. ಎಚ್. ಸುಂದರಂ ಅವರು ವಂದನೆಗಳನ್ನರ್ಪಿಸಿದರು.

ರೋಟರಿ ಕ್ಲಬ್ಬಿನಲ್ಲಿ ಶ್ರೀ ಹೆಗ್ಡೇರ ಭಾಷಣ— ಮಂಗಳೂರಿನ ರೋಟರಿ ಕ್ಲಬ್ಬಿನ ಸಭೆಯು ಕಳೆದ ತಾ 30ರಲ್ಲು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ಗತಸಭೆಯ ವರದಿಯನ್ನೋದಿದರು. ಅಂದಿನ ಪ್ರಮುಖ ಭಾಷಣಗಾರರಾದ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ಇಂದಿನ ರಾಜಕೀಯ ಪರಿಸ್ಥಿತಿ ಕುರಿತು ಭಾಷಣವಿತ್ತರು. ಜಗತ್ತಿನ ಇಂದಿನ ನಿರಾಶಾಜನಕ ಪರಿಸ್ಥಿತಿಯಲ್ಲಿ ಭಾರತವ ಧೋರಣೆಯು ಶಾಂತಿ ಸ್ಥಾಪನೆಗೆ ಹೇಗೆ ಮಾರ್ಗದರ್ಶನ ಮಾಡುತ್ತಿದೆ ಎಂಬುದನ್ನು ಸುರಸವಾಗಿ ವಿವರಿಸಿದರು. ಮಂಗಳೂರು ಪೋರ್ಟು ಟ್ರಸ್ಟಿಗೆ ಆರಿಸಲ್ಪಟ್ಟ ಶ್ರೀ ವಿ. ಎಸ್. ಕುಡ್ವ ಮೊದಲಾದವರನ್ನು ಶ್ರೀ ಪಿ. ಆರ್. ಆರ್. ಪೂಂಜರು ಅಭಿನಂದಿಸಿದರು.

ಮಳೆ— ಮಂಗಳೂರಲ್ಲಿ ಜೂನ್ ತಾ. 1ರಿಂದ ಇದೇ ತಿಂಗಳ ತಾ 3ರ ಬೆಳಿಗ್ಗೆ ಎಂಟೂವರೆ ಗಂಟೆ ತನಕ 52¼ ಇಂಚು ಮಳೆ ಸುರಿದಿರುವುದು.

ಮಹಾಸಭೆ— ದ. ಕ. ಜಿಲ್ಲಾ ಹಿಂದುಳಿದ ಜಾತಿಗಳ ಸಂಘದ ಮಹಾ ಸಭೆಯು ಕಳೆದ 27 ರಲ್ಲು ಶ್ರೀ ಎಸ್. ಜಿ. ಸಾಲಿನ್ಸರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲೆಯ ಪತಿತ ವರ್ಗಗಳ ಏಳಿಗೆ ಇತ್ಯಾದಿ ಕುರಿತು ಗೊತ್ತುವಳಿಗಳಾದುವು. ಹೊಸವರುಷಕ್ಕೆ ಶ್ರೀಗಳಾದ ಎಸ್. ಜಿ. ಸಾಲಿನ್ಸ ಮತ್ತು ಕೆ. ರಾಮ ಕೋಟಿಯಾನ್, ಇವರು ಅಧ್ಯಕ್ಷ ಮತ್ತು ಕಾರ್ಯದರ್ಶಿಗಳಾಗಿ ಅನುಕ್ರಮವಾಗಿ ಆರಿಸಲ್ಪಟ್ಟರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಚುನಾವಣೆ— ಉಡುಪಿ ಮತ್ತು ಬಂಟ್ವಾಳ ಸರ್ಕಲುಗಳ ಕೆಲವು ಸ್ಥಾನಗಳಿಗೆ ನಡೆದ ಉಪ ಚುನಾವಣೆಯಲ್ಲಿ, ಇದೇ ತಾ 3ರಲ್ಲು ಸ್ವೀಕರಿಸಲ್ಪಟ್ಟ ಸಿಂಧುವಾದ ನಾಮಪತ್ರಗಳ ವಿವರ:—

ಉಡುಪಿ ಸರ್ಕಲ್— ಶ್ರೀಗಳಾದ 3 ಕೆ. ನರಹರಿ ಕಾಮತ್ 4 ಕೆ. ಹೊನ್ನಯ್ಯ ಸೆಟ್ಟಿ 5 ಕೆ. ಆನಂದ ಹೆಗ್ಡೆ ಮತ್ತು ಎಚ್. ರಾಮಣ್ಣ ಹೆಗ್ಡೆ ಮತ್ತು ವಿ. ಮಾಧವ ಹೆಗ್ಡೆ. ಬಂಟ್ವಾಳ ಸರ್ಕಲ್–ಶ್ರೀ ಕಾಂತಪ್ಪ ಎ. ರೈ, ಪುತ್ತೂರು ಸರ್ಕಲ್– ಬಿ. ಕಿಟ್ಟಣ್ಣ ರೈ.

ಮುಖರ್ಜಿ ಸ್ಮಾರಕ ವಾಕ್‌ಸ್ಪರ್ಧೆ ಮುಕರ್ಜಿ ಸ್ಮಾರಕ ಸಪ್ತಹದ ಅಂಗವಾಗಿ ಇದೇ ತಾ 1ರಲ್ಲು ಉಳ್ಳಾಲ ರಘುನಾಥಯ್ಯ ಮೆಮೋರಿಯಲ್ ಹಾಲಿನಲ್ಲಿ, ವಿವೇಕಾನಂದ ಮಂಡಳಿಯ ಆಶ್ರಯದಲ್ಲಿ ವಾಕ್ ಸ್ಪರ್ಧೆಯೊಂದು ನಡೆಯಿತು. ಪ್ರಥಮ ಪಾರಿತೋಷಕ ಬೆಸೆಂಟ್ ಹೈಸ್ಕೂಲಿನ ಕುಮಾರಿ ಚಂದ್ರಮತಿಗೂ, ಎರಡನೆ ಪಾರಿತೋಷ ಸರಕಾರೀ ಕಾಲೇಜಿನ ಶ್ರೀ ವರದರಾಜ ರಾಯರಿಗೂ, ಕಾನ್ಸೊಲೇಶನ್ ಬಹುಮಾನವು, ಕೆನರಾ ಹೈಸ್ಕೂಲಿನ ಶ್ರೀ ರಾಮಕೃಷ್ಣ ನಾಯ್ಕ ಮತ್ತು ಸೈಂಟ್ ಎಲೋಸಿಯಸ್ ಕಾಲೇಜಿನ ಶ್ರೀ ಸೂರ್ಯನಾಥ ಕಾಮತರಿಗೂ ದೊರೆತವು.

ಮಾಲಕ-ಮಜೂರ ಸೌಹಾರ್ದ ಸಮಿತಿ ಸಭೆಯು — ಇದೇ ತಾ 4ರಲ್ಲು ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ರೆ। ಫಾ। ಡಬ್ಲ್ಯು. ಎಫ್. ಸಿಕ್ವೇರರು ಗತವರುಷದ ವರದಿಯನ್ನೋದಿದರು. ಸಮಿತಿಗೆ ಹಣ ಸಂಗ್ರಹಿಸಲು ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎ. ಸಿ. ಮಥಾಯಿ, ಜೆ. ಪಿ. ರೇಗೊ ಮತ್ತು ರೆ। ಫಾ। ಸಿಕ್ವೇರರಿರುವ ಉಪಸಮಿತಿ ರಚಿಸಲಾಯಿತು. ಸಮಿತಿಯನ್ನು ಸೊಸೈಟಿ ರಿಜಿಸ್ಟ್ರೇಶನ್ ಕಾನೂನು ಮೇರೆಗೆ ರಿಜಿಸ್ಟ್ರು ಮಾಡಬೇಕೆಂದು ನಿರ್ಧಾರವಾಯಿತು.

ಶಾಂತಿ ಸಮಿತಿಯ— ಕಾರ್ಯನಿರ್ವಾಹಕ ಮಂಡಳಿಯ ಸಭೆಯು ತಾ 4ರಲ್ಲು ಸಂಜೆ ಶ್ರೀ ಬಿ. ಎಸ. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಸಪ್ಟಂಬರ ತಿಂಗಳ ಪ್ರಥಮ ವಾರದಲ್ಲಿ ಮಂಗಳೂರಲ್ಲಿ ಜಿಲ್ಲಾ ಶಾಂತಿ ಸಮ್ಮೇಳನವನ್ನು ಜರಗಿಸಬೇಕೆಂದು ನಿರ್ಣಯಿಸಲಾಯಿತು. ಅಧ್ಯಕ್ಷಸ್ಥಾನಕ್ಕೆ ಡಾ। ಎ. ವಿ. ಬಾಳಿಗಾ, ಪಂಡಿತ್ ಸುಂದರ ಲಾಲ್, ಶ್ರೀ ಜಿ. ಸಿ. ಕುಮಾರಪ್ಪ, ಮೇಜರ್ ಜನರಲ್ ಸೋಖೀ ಅಥವಾ ಪ್ರೊಫೆಸರ್ ಡಿ. ಡಿ. ಕೋಸಾಂಬಿ ಇವರಲ್ಲೊಬ್ಬರನ್ನು ಕೇಳಿಕೊಳ್ಳಬೇಕೆಂದಾಯಿತು.

ಟ್ರೈನಿಂಗ್ ಶಾಲೆಗಳಿಗೆ ಜುಲಾಯಿ ೧೯೫೪ರಲ್ಲು ಸೇರಲಿಚ್ಛಿಸಿ ಅರ್ಜಿಸಲ್ಲಿಸಿರುವ–ಉಮೇದ್ವಾರರನ್ನು ಆರಿಸುವ ಬಗ್ಗೆ ಕೆಳಗೆ ಕಾಣಿಸಿದ ತಾರೀಕುಗಳಲ್ಲಿ ಆಯಾಯ ಶಾಲೆಗಳಲ್ಲಿ ಅವರ ಸಂದರ್ಶನಗಳನ್ನಿಡಲಾಗಿದೆ.

೧. ಗವರ್ನಮೆಂಟ್ ಬೇಸಿಕ್ ಟ್ರೈನಿಂಗ್ ಶಾಲೆ ಪಣ್ಯಾಪಾಡಿ. ೮—೭—೫೪ ಜೂನಿಯರ್ ಬೇಸಿಕ್ ಬೆಳಿಗ್ಗೆ ೮ ಗಂಟೆಗೆ. ಸೀನಿಯರ್ ಬೇಸಿಕ್ ಮಧ್ಯಾಹ್ನ ೩ ಗಂಟೆಗೆ.

೨. ಗವರ್ನಮೆಂಟ್ ಬೇಸಿಕ್ ಟ್ರೈನಿಂಗ್ ಶಾಲೆ ಮಂಗಳೂರು. ೧೦—೭—೫೪, ಜೂನಿಯರ್ ಬೇಸಿಕ್ ಬೆಳಿಗ್ಗೆ ೮ ಗಂಟೆಗೆ. ಸೀನಿಯರ್ ಬೇಸಿಕ್ ಮಧ್ಯಾಹ್ನ ೨ ಗಂಟೆಗೆ.

೩. ಗವರ್ನಮೆಂಟ್ ಬೇಸಿಕ್ ಟ್ರೈನಿಂಗ್ ಶಾಲೆ ಉಪ್ರ. ೧೨—೭—೫೪ ಜೂನಿಯರ್ ಬೇಸಿಕ್ ಬೆಳಿಗ್ಗೆ ೯ ಗಂಟೆಗೆ.

೪. ಗವರ್ನಮೆಂಟ್ ಬೇಸಿಕ್ ಟ್ರೈನಿಂಗ್ ಶಾಲೆ ಉಡುಪಿ. ೧೯—೭—೫೪. ಹಾಯರ್ ಗ್ರೇಡ್ — ಬೆಳಿಗ್ಗೆ ೯ ಗಂಟೆಗೆ. ಸೆಕೆಂಡರಿ ಗ್ರೇಡ್ ಮಧ್ಯಾಹ್ನ ೨ ಗಂಟೆಗೆ.

ಅರ್ಜಿ ಸಲ್ಲಿಸಿರುವ ಪ್ರವೇಶಾರ್ಥಿಗಳು ಆಯಾಯ ಶಾಲೆಗಳ ಮುಖ್ಯೋಪಾಧ್ಯಾಯರ ಮುಂದೆ ಮೇಲೆ ಹೇಳಿದ ತಾರೀಕು ಮತ್ತು ಸಮಯಗಳಲ್ಲಿ ತಮ್ಮ ಸರ್ಟಿಫಿಕೇಟುಗಳೊಂದಿಗೆ ಹಾಜರಾಗತಕ್ಕದೆಂದು ಜಿಲ್ಲಾ ವಿದ್ಯಾಧಿಕಾರಿಗಳು ತಿಳಿಸುತ್ತಾರೆ.

ಮನಸಿನಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು—

ನಗೆ ನೋಟಗಳು

(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)
ಲೇಖಕರು: ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.
(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)
ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಬಳಿಯಲ್ಲಿರಲಿ.
ಬೆಲೆ: ೧—೪—೦ (ಟಿ. ಖರ್ಚು ಬೇರೆ)
ಸಿಗುವ ಸ್ಥಳಗಳು:– ಕಿರಿಯರ ಪ್ರಪಂಚ, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)
ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.
ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-
Mrs. **P. DEVEE,** Γ. D.s (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಸಹಾಕಂಪೆನಿ, ಮಂಗಳೂರು.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ
‘ನವಯುಗ’ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ **ಲೈಬ್ರರಿಗಳ** ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ **‘ನವಯುಗ’** ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟಿ ಯವರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ **‘ನವಯುಗ’ಕ್ಕೆ** ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ. ಮೆನೇಜರ್,
ವಾರ್ಷಿಕ ಚಂದಾ ರೂ. 5-12-0 ಮಾತ್ರ. **ನವಯುಗ, ಉಡುಪಿ.**

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು.

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	1
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾ ದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	2	8
20	ನೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಶ್ವವಿನ ಪದಾರ್ಥ ಅರ್ಥಾತ್ ದರ್ಶನಕಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜನಿವಾಸ್ತವ	1	6
33	ಬಾಳಿನ ಬೆದಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ಸಣ್ಣ ಕಥೆಗಳು	0	10

ನವಭಾರತ ಪುಸ್ತಕ ಭಂಡಾರ, ಉಡುಪಿ.

(೪ನೇ ಪುಟದಿಂದ)

ಉದ್ದನಾದ, ೬೯೦ ಟನ್ನು ಭಾರವಾದ, ಉಕ್ಕಿನ ಪರೆಳುಗಳು ಆಗತ್ಯವಿದ್ದವು. ರಾಕ್ಷಸ ಸದೃಶವಾದ ಈ ಕಾರ್ಖಾನೆಯ ನಿರ್ಮಾಣ ಕಾರ್ಯ ನಡೆಯುತ್ತಿದ್ದಾಗ ಸುಮಾರು ಏಳುಸಾವಿರ ಮಂದಿ ಜನರು ದುಡಿಯುತ್ತಿದ್ದ ದಿನಗಳೂ ಇದ್ದವು.

ನಮಗಾಗುವ ಲಾಭ

ಮುಂಬಯಿಯ ಬಂದರು ಸಮಿತಿಯವರು ಬುಚರ ದ್ವೀಪದಲ್ಲಿ ಕಟ್ಟಿಸಿದ ಜೆಟ್ಟಿಯಲ್ಲಿ ಒಂದು ಲಕ್ಷ ಎಣ್ಣೆ ಪೀಪಾಯಿಗಳನ್ನು ಹೊತ್ತು ತಂದ ಸಾಗರ ನೌಕೆಗಳು ನಿಲ್ಲುತ್ತವೆ. ಅಲ್ಲಿಂದ ನಳಗಳ ಮೂಲಕ ಶುದ್ಧೀಕರಣ ಗೃಹಕ್ಕೆ ಎಣ್ಣೆಯನ್ನು ಸಾಗಿಸಲಾಗುತ್ತದೆ. ಇಲ್ಲಿ ಉತ್ಪಾದನೆಗೊಂಡು ದ ವಸ್ತುಗಳಲ್ಲಿ ಗೆಸೋಲೀನದ ಪ್ರಮಾಣ ಅತ್ಯಧಿಕವಿದ್ದು ೯ ಕೋಟಿ ಗೆಲನು ಆಗುವುದು ಇದು ಭಾರತದಲ್ಲಿ ಈಗ ಇರುವ ಮೋಟಾರುಕಾರು, ಬಸ್ಸು, ಲಾರಿ ಮುಂತಾದುವನ್ನು ನಾಲ್ಕು ತಿಂಗಳುಗಳ ವರೆಗೆ ಓಡಾಡಿಸಲು ಸಾಕು. ಇಲ್ಲಿ ತಯಾರಿಸಲ್ಪಡುವ ೪ ಕೋಟಿ ಗೆಲನು ಚಿಮಿಣಿ ಎಣ್ಣೆಯು ಭಾರತದ ಎಲ್ಲ ದೀಪಗಳನ್ನೂ ಎರಡು ತಿಂಗಳು ಉರಿಸಲು ಸಾಕಾಗುವುದು. ೫೫೦ ಲಕ್ಷ ಗೆಲನು ಡೀಸೆಲ ಎಣ್ಣೆಯನ್ನು ಈ ಕೇಂದ್ರ ಉತ್ಪಾದಿಸುತ್ತದೆ; ಇದು ದಿನಕ್ಕೆ ಎಂಟು ತಾಸು ಕೆಲಸ ಮಾಡುವ ೧೦೦ ಟ್ರ್ಯಾಕ್ಟರುಗಳನ್ನು ೪೦ ವರ್ಷಗಳ ವರೆಗೆ ದುಡಿಸಲು ಸಾಕು. ಇವನ್ನೆ ಛತ್ತದ ಗಿರಣಿಗಳಿಗೆ ಉಪಯೋಗಿಸಿದರೆ, ನಾಲ್ಕು ಕೋಟಿ ಟನ್ನು ಶಕ್ತಿಯನ್ನು ತಯಾರಿಸಲು ಈ ಎಣ್ಣೆಯಿಂದ ಸಾಧ್ಯವಾಗುತ್ತದೆ. ಗಿರಣಿಗಳಿಗೆ ಬಳಸುವ ಎಣ್ಣೆಯನ್ನು ೫೮೦ ಲಕ್ಷ ಗೆಲನಿನಷ್ಟು ಈ ಕೇಂದ್ರ ಉತ್ಪಾದಿಸುತ್ತದೆ; ಇದು ೩೦೦೦೦ ಕದಿರು ಹಾಗು ೯೦೦ ಕೈಮಗ್ಗಗಳಿಂದ ಕೂಡಿದ ಗಿರಣಿಯೊಂದನ್ನು ದಿನಕ್ಕೆ ಎಂಟು ತಾಸಿನಂತೆ ೧೧೦ ವರ್ಷಗಳ ವರೆಗೆ ಕೆಲಸ ಮಾಡಿಸಲು ಸಾಕಾಗುತ್ತದೆ. ಈ ಎಲ್ಲ ಉತ್ಪಾದನೆ ಕೈಗೂಡುವಂತೆ ಸ್ಥಾಪಿಸಲಾದ ಯಂತ್ರಗಳು ಅತ್ಯಾಧುನಿಕ ಮಾದರಿಯವುಗಳು-ಸ್ವತಃ ಅಮೇರಿಕದಲ್ಲೂ ಈ ವರೆಗೆ ಈ ಬಗೆಯ ಯಂತ್ರೋಪಕರಣಗಳು ನೆಲೆಗೊಂಡಿಲ್ಲ. ಇಂತಹ ಕಾರ್ಖಾನೆಗಳು ಕೆಲಸ ಮಾಡಿದ ಪರಿಣಾಮವಾಗಿ ನಮ್ಮ ಪಂಚವಾರ್ಷಿಕ ಯೋಜನೆಗೆ ಅತ್ಯಾವಶ್ಯಕವೆನಿಸಿದ ಡಾಲರುಗಳ ಉಳಿತಾಯವಾಗುತ್ತದೆ. ಕಂಪೆನಿಗಳು ಉತ್ಪಾದಿಸುವ ಸರಕುಗಳ ಮೇಲಿನ ತೆರಿಗೆ ಇತ್ಯಾದಿಗಳಿಂದ ೬೦ರಿಂದ ೧೦ ಕೋಟಿ ರೂಪಾಯಿಗಳ ವರಮಾನವೂ ಸರಕಾರಕ್ಕೆ ಸಿಗುತ್ತದೆ. ಭಾರತೀಯರಿಗೆ ತೈಲ ಶುದ್ಧೀಕರಣದ ತಂತ್ರವು ಕರಗತವಾಗುತ್ತದೆ. ಉದ್ಯೋಗದ ಅವಕಾಶಗಳು ಸಾಕಷ್ಟು ಹೆಚ್ಚಿಕೊಳ್ಳುತ್ತವೆ. ಸಾಧ್ಯವಾದಷ್ಟು ಮಟ್ಟಿಗೆ ಸ್ಥಳೀಯ ಸರಕುಗಳನ್ನು ಉಪಯೋಗಿಸಿಯೇ ಈ ಕಾರ್ಖಾನೆಗಳು ನಿರ್ಮಾಣಗೊಂಡಿವೆಯಾಗಿ ಅಷ್ಟು ಮಟ್ಟಿಗೆ ದೇಶದ ಕೈಗಾರಿಕೆ ಬೆಳೆಯುವುದಕ್ಕೆ ಪ್ರೋತ್ಸಾಹ ಪ್ರಾಪ್ತವಾಯಿತು. ದೊಡ್ಡ ಮೊತ್ತದಲ್ಲಿ ವಿದೇಶದ ಬಂಡವಾಳವು ಭಾರತಕ್ಕೆ ಹರಿದು ಬರುವುದಕ್ಕೆ ತೈಲ ಶುದ್ಧೀಕರಣ ಗೃಹಗಳ ಸ್ಥಾಪನೆಯು ಮಹತ್ವದ ಉತ್ತೇಜನೆ ಕೊಡುತ್ತದೆ. ಇದು ಭಾರತದ ಏಳಿಗೆಗೆ ತೀರ ಸಹಕಾರಿಯಾದ ವಿಷಯ. ಇಂತಹ ಅಪೂರ್ವ ಸಾಹಸವನ್ನು ಮೊದಲಾಗಿ ತೊಡಗಿದುದಕ್ಕೆ "ಸ್ಟೇಂಡರ್ಡ್ ವೆಕ್ಯುಂ" ಕಂಪೆನಿಗೆ ಕೃತಜ್ಞತೆಯನ್ನು ತೋರಿಸಬೇಕಾದದ್ದು ಕರ್ತವ್ಯ.

ಕಾಸರಗೋಡು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

S. C. No. 20/1954

P. ಮಾಹಿನ್ ಕಳ್ನಾಡ. ... ವಾದಿ.

ಮತ್ತು.

D. K. ಬಾಪುಂಞಿ ಬ್ಯಾರಿ. ಪಟ್ಲಕುಂಞಿ ಮ್ಯಾಂಕುಟ್ಟಿ ಬ್ಯಾರಿಗಳ ಮಗ ಕಾಸರಗೋಡು ತಾಲೂಕು ಮೊಗ್ರಾಲ್ ಪುತ್ತೂರು ಗ್ರಾಮದಲ್ಲಿರುವವ ... ... ಪ್ರತಿವಾದಿ. ಮೇಲ್ಕಂಡ ದಾವೆಯು ಪ್ರತಿವಾದಿಯು ಕೊಟ್ಟ ದಿವಾಂದ ಪ್ರೊಮಿಸರಿ ನೋಟಿನ ಅಸಲು ಬಡ್ಡಿ ಐವಜಿಗೆ ಮಾಡಿದ ಸದ್ರಿ ವ್ಯಾಜ್ಯವು ತಾರೀಕು 19—7—1954ಕ್ಕೆ ಇಟ್ಟಿರುವ ಸಂಗ್ತಿ ತಿಳಿಸೋಣಾಗಿರುತ್ತದೆ.

sa/. P. Ahmad

Advocate for Plaintiff

ಕಾಸರಗೋಡು 29—6—54

ಸ್ವೀಕಾರ—ವಿಮರ್ಶೆ

ಅನುಪಮ ಸುಂದರ—

ಬರೆದವರು: "ಧನ್ವಂತ". ಪ್ರಕಾಶಕರು: ಎಚ್. ಎನ್. ರಾವ್ ಬ್ರದರ್ಸ್, ಚಿಕ್ಕಪೇಟೆ, ಬೆಂಗಳೂರು ನಗರ. ಬೆಲೆ: ರೂ. ೧-೪-೦.

ಇದೊಂದು ನೀಳ್ಗತೆ. ಶಾರದಾ ಮಂದಿರದಲ್ಲಿ ಬೋಧಕರಾಗಿದ್ದ ದಿನಕರ ರಾಯರು ತಮ್ಮ ಅಂತಿಮ ದಿನಗಳನ್ನು ಗಜಪುರಿಯಲ್ಲಿ ಹಳ್ಳಿಗರ ನಡುವೆ ಕಳೆಯಲು ನಿರ್ಧರಿಸುವರು. ಇಲ್ಲಿ ಅವರಿಗೆ ಪ್ರಿಯ ಶಿಷ್ಯ ಧನೂ ಹಾಗೂ ಊಳಿಗದ ಆಳು ಭೈರವ ನೆರವಾಗುವರು. ಊರಿನ ಹಿರಿಯ ಚಂದ್ರಯ್ಯನು ಬಾಲವಿಧವೆಯಾದ ಇಂದು ಎಂಬ ತನ್ನ ಮಗಳ ಸುಖಕ್ಕೋಸ್ಕರ ರಾಯರ ಸಲಹೆಯಂತೆ "ಅಭಯ ನಿಕೇತನ" ಎಂಬುದನ್ನು ತೆರೆದು ಔದಾರ್ಯದಿಂದ ಪೋಷಿಸುವನು ಆದರೆ ಇಂತಹ ಉಪಕ್ರಮವನ್ನು ವಿರೋಧಿಸುವವರೂ ಊರಿನಲ್ಲಿ ಇದ್ದರು. ಅವರಿಗೆ ಇಂದುವಿನ ಚೆಲುಗು ಗಾತಿ ತಂಗಿ ಸಿಂಧುವಿನ ಮೇಲೆ, ಹಾಗು ಚಂದ್ರಯ್ಯನ ಐಶ್ವರ್ಯದ ಮೇಲೆ ಕಣ್ಣು—ಎಂತಲೇ ಅವರು ಸಲ್ಲದ ಅಪಪ್ರಚಾರ ಮಾಡುವರು; ಉಪಟಳ ಕೊಡುವರು. ಚಂದ್ರಯ್ಯನು ಕಾಯಿಲೆಯಿಂದ ನರಳಿ ತೀರಿದ ಬಳಿಕ ಕೇಡಿಗರ ಮುಂದಾಳು ಜಗದೀಶನ ಕಿರುಕುಳ ಹೆಚ್ಚುವುದು. ಇದನ್ನು ತಡೆಗಟ್ಟುವುದು ಧರ್ಮ ಹಾಗು ಶಾಂತಿ ಪ್ರಿಯರಾದ ಸಾತ್ವಿಕ ಬುದ್ಧಿಯ ದಿನಕರ ರಾಯರಿಂದಾಗುವುದಿಲ್ಲ. ಹಲವು ವರ್ಷಗಳ ಹಿಂದೆ ತಮ್ಮನ್ನು ಅಗಲಿ ಹೋದ ಮಗ ಚಿದಾನಂದನ ನೆನಪು ಅವರನ್ನು ಒತ್ತಟ್ಟು ಬಾಧಿಸುತ್ತಿದ್ದರೆ, ಇನ್ನೊಂದು ಕಡೆಯಿಂದ ಕೇಡಿಗರ ಪುಂಡುತನವೂ ಅವರನ್ನು ಚಿಂತೆಗೀಡು ಮಾಡಿತು. ಅವರು ಕೇಡಿಗರ ಕೈಯಿಂದ ಉಳಿದುಕೊಂಡು ಮರ್ಯಾದೆಯಿಂದ ಪ್ರಾಣಬಿಡಲು ಬಯಸಿ, ಪ್ರವಾಹದಲ್ಲಿ ತೇಲಿ ಹೋಗುವರು. ಅವರ ಮರಣಾನಂತರ ಆ ಊರಿಗೆ, ಅಭಯ ನಿಕೇತನಕ್ಕೆ, ಚಿದಾನಂದನು ತಿರುಗಾಡುತ್ತ ಬಂದರೂ ಅಲ್ಲಿ ನೆಲೆನಿಲ್ಲಬೊಪ್ಪದೆ,ಸಚ್ಚಿದಾನಂದದ ದಿವ್ಯ ಪ್ರಕಾಶವನ್ನು ಅರಸುತ್ತ ತೆರಳುವನು. ಹೀಗೆ ಸಾಗುವ ಕತೆಯಲ್ಲಿ ಧರ್ಮ ವಿಚಾರದ ಚರ್ಚೆಯು ಪ್ರಾಮುಖ್ಯವಾಗಿ ಕಾಣುತ್ತದೆ. ರಾಯರ ವ್ಯಕ್ತಿತ್ವವನ್ನು ಪುಷ್ಟೀಕರಿಸುವುದಕ್ಕೆ ಇಂತಹ ವಿಚಾರ ವಿವೇಚನೆಯು ನೆರವಾದೀತು. ಆದರೆ ಓದುಗರ ಮನಸ್ಸನ್ನು ಆಕರ್ಷಿಸಿಕೊಳ್ಳುವ ರೀತಿಯಲ್ಲಿ ಈ ಸಂಭಾಷಣೆಗಳಿಲ್ಲವೆಂದು ಭಾಸವಾಗುತ್ತದೆ. ಸಾಮಾನ್ಯ ಕತೆ-ಕಾದಂಬರಿಗಳಿಗಿಂತ ಭಿನ್ನವಾದ, ಉನ್ನತ ಶೈಲಿಯ ಸಾಹಿತ್ಯ ರಚನೆಯ ಪ್ರಯತ್ನವನ್ನು ನಾವಿಲ್ಲಿ ಕಾಣುತ್ತೇವೆ. ಈ ಗಾಂಭೀರ್ಯವೇ ಕಥನ ದೃಷ್ಟಿಯಿಂದ ಕೃತಿಯನ್ನು ನೀರಸಗೊಳಿಸಿದಂತೆ ತೋರುತ್ತದೆ. ಹೀಗಾಗಿ, ಆದರ್ಶ ಚಿತ್ರಣದ ದೃಷ್ಟಿಯಿಂದ ಯೋಗ್ಯ ಪ್ರಯತ್ನವೆಂದು ಭಾವಿಸಬಹುದಾದ ಈ ಬರೆಹ ಜನಪ್ರಿಯತೆಯ ಮಾನದಂಡದಿಂದ ಅಳೆಯುವಾಗ ಸಪ್ಪಗೆ ಕಂಡೀತು.

ನನ್ನ ಕತೆಗಳು—

ಬರೆದವರು: ಕೆ. ವಿ. ಆಚಾರ್ಯ. ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ. ಬೆಲೆ: ಹತ್ತಾಣೆ.

ಈ ಪುಸ್ತಕದಲ್ಲಿ ಶ್ರೀಮಾನ್ ಆಚಾರ್ಯರು ಬರೆದ "ಬಡ ಬಾಳು" ಎಂಬ ಸ್ವತಂತ್ರ ಕಥೆಯಲ್ಲದೆ, ಹಿಂದೀಯಿಂದ ಅನುವಾದಿಸಲಾದ ಬೇರೆ ನಾಲ್ಕು ಸಣ್ಣ ಕಥೆಗಳೂ ಎರಡು ಏಕಾಂಕ ನಾಟಕಗಳೂ ಇವೆ. ಆಚಾರ್ಯರ ಸ್ವತಂತ್ರ ಕಥೆಯ ಪ್ರಥಮಾರ್ಧವು ಮರ್ಮಸ್ಪರ್ಶಿಯಾಗಿದೆ; ನಿಯಂತ್ರಣ ಕಾಲದ ವಾಸ್ತವ ಸ್ಥಿತಿಯನ್ನು ಚೆನ್ನಾಗಿ ಮನಗಾಣಿಸುತ್ತದೆ. ಆದರೆ ಉತ್ತರಾರ್ಧವು ಕಲ್ಪನೆಯ ಚಿತ್ರವೋ ಎಂಬ ಸಂಶಯವನ್ನು ಹುಟ್ಟಿಸುತ್ತದೆ. ಇತರ ಅನುವಾದಿತ ಕತೆಗಳಲ್ಲಿ ಪ್ರೇಮಚಂದರ "ರಾಮೂ" ಹೃದಯ ಸ್ಪಂದನವನ್ನುಂಟುಮಾಡುತ್ತದೆ. ಮಂಗನನ್ನೆ ಮಗನೆಂದು ತಿಳಿದಿದ್ದ ದಂಪತಿಗಳ ದುಃಖವು ಕಣ್ಣಿನಲ್ಲಿ ನೀರು ಬರಿಸುತ್ತದೆ. ಪ್ರೇಮಚಂದರ "ವೀರವನಿತೆ ಬುಂದೇಲ್ ರಾಣಿ" ಎಂಬ ಕತೆಯು ರಣರಂಗದಿಂದ ಓಡಲಾಗದೆಂಬ ರಾಜಪೂತ ಆದರ್ಶವನ್ನು ಎತ್ತಿ ಹಿಡಿಯುತ್ತದೆ. ಪಂಡಿತ ಗೋವಿಂದ ವಲ್ಲಭ ಪಂತರ "ಮಿಲನ ಮುಹೂರ್ತ"ವು ಬೌದ್ಧ ಕಥೆಗಳಲ್ಲಿ ಉಕ್ತವಾದ ಉಪಗುಪ್ತ ಹಾಗು ವಾಸವದತ್ತೆಯ ರೋಚಕ ಭೇಟಿಯನ್ನು ಚಿತ್ರಿಸುತ್ತದೆ. ವಾರಾಂಗನೆಯಾದ ವಾಸವದತ್ತೆಯು ಪ್ರಾಪಂಚಿಕ ದುಃಖದ ಮೂಲವಾದ ತೃಷ್ಣೆ ಮತ್ತು ಆಸಕ್ತಿಗಳನ್ನು ತ್ಯಜಿಸಿ, ಅಂತಃಚಕ್ಷುಗಳನ್ನು ತೆರೆದು ಶಾಂತಿ ಸಾಮ್ರಾಜ್ಯಕ್ಕೆ ಹೋದ ಬಗೆಯು ಬೋಧಪ್ರದವಿರುತ್ತದೆ. "ಮೃತ್ಯು ಮುಖದಲ್ಲಿ" ಎಂಬ ಕತೆಯು ಹುಲಿ ಶಿಕಾರಿಯ ವರ್ಣನೆಯಿಂದ ಕೂಡಿದ್ದರೂ ಮನಸ್ಸಿನ ಮೇಲೆ ವಿಶೇಷವಾದ ಪರಿಣಾಮವನ್ನು ಮಾಡುವುದಿಲ್ಲ. ಏಕಾಂಕ ನಾಟಕಗಳೂ ಅಷ್ಟೇ—ಆದರೂ ಓದಿ ಆನಂದಿಸಬಹುದು. ಪುಸ್ತಕದ ಬೆಲೆಯೂ ಹೆಚ್ಚಿಲ್ಲ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಎಸ್. ಆರ್.
ಅತ್ಯುತ್ತಮ ಬೀಡಿಗಳು
Our Bombay Stockist:- V. N. SHENOY, BOMBAY 12.

ಡಾ| ಕೊರಡ್ಕಲ್ಲರ
ಮನೆ ಮದ್ದು
ವೈದ್ಯರ ಸಹಾಯವಿಲ್ಲದೆ ಮನೆಯಲ್ಲೇ ನೂರಾರು ಕಾಯಿಲೆಗಳಿಗೆ ಔಷಧಮಾಡಿಕೊಳ್ಳುವ ವಿಧಾನವನ್ನು ವಿವರಿಸುವ ಗೃಹವೈದ್ಯ. ಬಾಣಂತಿ ಸಾಕಣೆಯ ಕುರಿತು ವಿವರವಾದ ಮಾಹಿತಿ ಇದೆ.
ಬೆಲೆ: ರೂ. 2—8—0
ನವಭಾರತ ಪುಸ್ತಕ ಭಂಡಾರ ಉಡುಪಿ.

ಆರ್ಥಿಕ ಅಭಿವೃದ್ಧಿಗೆ ಹೆದ್ದಾರಿ

ತಿರು-ಕೊಚ್ಚಿಯಲ್ಲಿ ಪ್ರಗತಿಪರ ಕಾರ್ಯಕ್ರಮ

ತಿರುವಾಂಕೂರಿನ ನೆಯ್ಯಟ್ಟಿನ್‌ಕರ—ವಿಲವನ್‌ಕೋಡ್ ತಾಲ್ಲೂಕುಗಳಲ್ಲಿ ಸಾಮುದಾಯಕ ಯೋಜನಾ ಕಾರ್ಯಕ್ರಮವು ಗಡಿಬಿಡಿಯಲ್ಲಿಯೇ ಆರಂಭವಾಯಿತು. 1952ರ ಅಕ್ಟೋಬರ್ 2ರಂದು ಭಾರತದಾದ್ಯಂತ ಸಾಮುದಾಯಕ ಯೋಜನೆಯ ಕಾರ್ಯಕ್ರಮವನ್ನು ಆರಂಭಿಸಿದಾಗ, ಯೋಜನಾಧಿಕಾರಿಗಳು ಮತ್ತು ಕ್ಷೇತ್ರದ ಜನರು ಸಾಮುದಾಯಕ ಯೋಜನೆಗಳ ಆರಂಭೋತ್ಸವದ ಕುರುಹಿಗಾಗಿ ರಸ್ತೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದರು. ಆದರೆ ಈ ನಿರ್ಮಾಣ ಕಾರ್ಯ ನಿರಾತಂಕವಾಗಿ ನಡೆಯದೆ, ವ್ಯವಸ್ಥಿತ ಪ್ರತಿಭಟನೆ ಕಂಡು ಬಂದಿತು. ಸಾಮುದಾಯಕ ಯೋಜನೆಗಳು ಸ್ವಯಂಪ್ರೇರಿತ ಶ್ರಮ ಪದ್ಧತಿಗೆ ಉತ್ತೇಜನವೀಯುವುದರಿಂದ ಇದು ಕಾರ್ಮಿಕ ವರ್ಗದ ಹಿತರಕ್ಷಣೆ ಧಕ್ಕೆಯನ್ನುಂಟುಮಾಡುವುದೆಂದು ಅವರಲ್ಲಿ ಹಲವರು ಅಭಿಪ್ರಾಯಪಟ್ಟರು. ಕಾರ್ಯಾರಂಭ ಮಾಡಿದ ಅಧಿಕಾರಿಗಳು ಮತ್ತು ಇತರರ ಮೇಲೆ ಕಲ್ಲುಗಳನ್ನೂ ಎಸೆಯಲಾಯಿತು. ಆದರೂ 2 ಮೈಲುಗಳ ದೂರದ ರಸ್ತೆಯನ್ನು ಮುಗಿಸಲಾಯಿತು. ಆರಂಭದ ಪ್ರತಿಭಟನೆ ಅದೃಷ್ಟವಶಾತ್ ಪೂರ್ಣ ಸಹಕಾರವಾಗಿ ಪರಿವರ್ತನೆಗೊಂಡಿತು.

ಸುಮಾರು ಎರಡು ವರ್ಷಗಳ ಕಾಲ ಈ ಯೋಜನಾ ಕಾರ್ಯವು ನಡೆದು ಅದರಿಂದುಂಟಾಗುವ ಉಪಯೋಗಗಳನ್ನು ತೋರಿಸಿಕೊಟ್ಟಿದೆ. ಈಗ ಈ ಕಾರ್ಯಕ್ರಮದ ವ್ಯಾಪ್ತಿಗೆ ಒಳಪಡದಿರುವ ಕ್ಷೇತ್ರಗಳಲ್ಲಿನ ಜನರು ತಮ್ಮ ಕ್ಷೇತ್ರಕ್ಕೂ ಈ ಕಾರ್ಯಕ್ರಮವನ್ನು ವಿಸ್ತರಿಸಬೇಕೆಂದು ಕೇಳುತ್ತಿರುವರು.

ವಿಶೇಷ ಪರಿಸ್ಥಿತಿಗಳು

ತಿರುವಾಂಕೂರು ಮತ್ತು ಕೊಚ್ಚಿನ್‌ನಲ್ಲಿ ಸಾಮುದಾಯಕ ಯೋಜನೆಯ ಕಾರ್ಯಪ್ರಗತಿಯನ್ನು ಅಂದಾಜು ಮಾಡಬೇಕಾದರೆ ಅಲ್ಲಿನ ವಿಶೇಷ ಸಮಸ್ಯೆಗಳನ್ನು ಮತ್ತು ಸ್ಥಳೀಯ ಪರಿಸ್ಥಿತಿಯನ್ನು ಪರಿಗಣಿಸಬೇಕು. ತಿರುವಾಂಕೂರು-ಕೊಚಿನ್ ಭಾರತದಲ್ಲಿ ಹೆಚ್ಚು ಜನಸಾಂದ್ರತೆಯುಳ್ಳ ಸಂಸ್ಥಾನ. ಅಲ್ಲಿ ಹೆಚ್ಚು ಸಂಖ್ಯೆಯಲ್ಲಿ ಅಕ್ಷರಸ್ಥರಿರುವರು. [illegible] ದಲ್ಲೇ ಏಕೆ ಇಡೀ ವಿಶ್ವದಲ್ಲೇ ಅತ್ಯಂತ ಸುಂದರವಾದ ಸಂಸ್ಥಾನ ತಿರುವಾಂಕೂರು-ಕೊಚ್ಚಿನ್. ಒಂದು ರೀತಿಯ ಭೌಗೋಳಿಕ ಪ್ರತ್ಯೇಕತೆಯನ್ನು ಹೊಂದಿರುವ ಈ ಸಂಸ್ಥಾನದಲ್ಲಿರುವ ಜನತೆಯ ಸಂಸ್ಕೃತಿಯೇ ವಿಭಿನ್ನತೆಯಿಂದ ಕೂಡಿದೆ. ಇಲ್ಲಿಯ ಜನರು ತುಂಬಾ ವೈಯುಕ್ತಿಕವಾದಿಗಳು. ಉತ್ತರ ಭಾರತದ ಹಳ್ಳಿಗಳಲ್ಲಿ ವಾಸಿಸುವ ಜನರಂತೆ ಇಲ್ಲಿ [illegible] ಗ್ರಾಮ ನಿವಾಸಿಗಳಿಲ್ಲ. ಪತಕ್ಕೆಂದರೆ ಅ[illegible]ಯ ಹಳ್ಳಿಗಳೇ ಇಲ್ಲಿಲ್ಲ. ಮುಖ್ಯ ಹೆದ್ದಾರಿಯ ಅಕ್ಕ ಪಕ್ಕಗಳಲ್ಲಿ ದೂರ ದೂರಕ್ಕೆ ಮನೆಗಳಿರುತ್ತವೆ. ಮನೆಗಳಿಗೆ ಹೊಂದಿಕೊಂಡಂತೆ ಹಣ್ಣು, ತರಕಾರಿ ಬೆಳೆಯುವ ಕೈತೋಟವಿರುತ್ತವೆ. ಒಂದಿಷ್ಟು ಜಾಗವನ್ನು ಬಿಡದಂತೆ ಗ್ರಾಮನಿವಾಸಿಗಳು ಬೇಸಾಯ ಮಾಡುತ್ತಾರೆ.

ಸಾಧಾರಣ ರೀತಿಯ ಹಳ್ಳಿಗಳಿಗಿಂತ ಭಿನ್ನವಾದ ಹಳ್ಳಿಗಳು, ಹೆಚ್ಚಿನ ಅಕ್ಷರಸ್ಥರುಳ್ಳ ಜನತೆ, ಅಧಿಕ ಸಂಖ್ಯೆಯಲ್ಲಿರುವ ವಿದ್ಯಾವಂತ ನಿರುದ್ಯೋಗಿಗಳು—ಇವೆಲ್ಲದರ ಜೊತೆಗೆ ವೈಯುಕ್ತಿಕ ದೃಷ್ಟಿಯುಳ್ಳ ಜನತೆ ಇವೆಲ್ಲಾ ಸಂಸ್ಥಾನದ ಸಾಮುದಾಯಕ ಯೋಜನೆಗಳ ವಿಶಿಷ್ಟ ರೀತಿಯ ಕಾರ್ಯಕ್ರಮಗಳನ್ನು [illegible]ದಿಸುವಂತೆ ಮಾಡಿವೆ.

ಅಗತ್ಯವೆನಿಸಿದ ಅಂಶಗಳು

ನೆಯ್ಯಟ್ಟಿನ್‌ಕರ — ವಿಲವನ್‌ಕೋಡ್ ಯೋಜನಾ ಕ್ಷೇತ್ರದಲ್ಲಿನ ಅಗತ್ಯತೆಗಳು ಬೇರೆ ಬೇರೆ ಕ್ಷೇತ್ರಗಳ ಅಗತ್ಯತೆಗಳಿಗಿಂತ ವಿಭಿನ್ನವಾಗಿವೆ. ಸಾಮಾನ್ಯವಾಗಿ ಬೇರೆ ಕ್ಷೇತ್ರಗಳಲ್ಲಿನ ಜನರು ಮೊಟ್ಟಮೊದಲು ಅಪೇಕ್ಷಿಸುವುದು

1) ನೀರಾವರಿಗಾಗಿ ನೀರು 2) ಶಾಲೆಗಳು 3) ಸಂಪರ್ಕ ಸೌಲಭ್ಯಗಳನ್ನು.

ಆದರೆ ಇಲ್ಲಿಯ ಜನರು ರಸ್ತೆ ನಿರ್ಮಾಣ ಕಾರ್ಯವನ್ನು ಮೊಟ್ಟಮೊದಲು ಅಪೇಕ್ಷಿಸುತ್ತಾರೆ. ಸಾಮಾನ್ಯ ರೀತಿಯ ಶಾಲೆಗಳು ಈ ಕ್ಷೇತ್ರದಲ್ಲಿ ಅಷ್ಟು ಅಗತ್ಯವೆನಿಸುವುದಿಲ್ಲ. 400 ಚದರ ಮೈಲು ವಿಸ್ತಾರವಿದ್ದು 6½ ಲಕ್ಷ ಜನಸಂಖ್ಯೆಯುಳ್ಳ ಈ ಕ್ಷೇತ್ರದಲ್ಲಿ ಈಗ 345 ಪ್ರೈಮರಿ ಶಾಲೆಗಳು, 50 ಮಾಧ್ಯಮಿಕ ಶಾಲೆಗಳು, 21 ಪ್ರೌಢ ಶಾಲೆಗಳು ಇವೆ. ಆದರೆ ಇಲ್ಲಿ ದೊರೆಯುವ ಶಿಕ್ಷಣವು ಶುದ್ಧ ಸಾಹಿತ್ಯಕವಾದುದು. ಇಲ್ಲಿ ವೃತ್ತಿ ಶಿಕ್ಷಣಶಾಲೆಗಳು ಇಲ್ಲ. ಮುಖ್ಯವಾಗಿ ಗೃಹಕೈಗಾರಿಕೆಗಳಿಗೆ ಸಂಬಂಧಿಸಿದ ತಾಂತ್ರಿಕ ಹಾಗೂ ವೃತ್ತಿ ಶಿಕ್ಷಣವು ಇಲ್ಲಿಗೆ ಅಗತ್ಯವಾಗಿ ಬೇಕಾಗಿದೆ. ಇದರಿಂದ ಗೃಹಕೈಗಾರಿಕೆಗೆ ಉತ್ತೇಜನ ದೊರೆತಂತಾಗುವುದರ ಜೊತೆಗೆ ಉದ್ಯೋಗ ದೊರಕುವುದಕ್ಕೂ, ಉತ್ಪನ್ನ ಹೆಚ್ಚುವುದಕ್ಕೂ ಇದು ಸಹಾಯಕವಾಗುವುದು.

ನೀರಾವರಿಗಾಗಿ ನೀರು ಬೇಕು, ನಿಜ. ಆದರೆ ಅದಕ್ಕಿಂತಲೂ ಮುಖ್ಯವಾಗಿ ಕುಡಿಯುವ ನೀರು ಬೇಕಾಗಿದೆ. ಈ ಕ್ಷೇತ್ರದಲ್ಲಿ, ಕುಡಿಯುವ ನೀರನ್ನು ಬಾವಿ ಮತ್ತು ಕೆರೆಗಳಿಂದ ಪಡೆಯಬೇಕು. ವರ್ಷದ ಕೆಲವು ತಿಂಗಳಲ್ಲಿ ಅವು ಬಣಗಿ ಹೋಗುತ್ತದೆ.

ಪ್ರಗತಿಪರ ಕಾರ್ಯಕ್ರಮ

ಈ ಕ್ಷೇತ್ರದಲ್ಲಿ ಸಾಮುದಾಯಕ ಯೋಜನಾ ಕಾರ್ಯದ ಪ್ರಕಾರ ಅನೇಕ ಕೆಲಸಗಳನ್ನು ಕೈಗೊಳ್ಳಲಾಗಿದ್ದರೂ ಮುಖ್ಯ ಅವಶ್ಯಕ ಕೆಲಸಗಳಿಗೆ ಹೆಚ್ಚಿನ ಗಮನ ಕೊಡಲಾಗಿದೆ. ಪ್ರಗತಿಯಲ್ಲಿರುವ ಕೆಲವು ವಿಶೇಷ ಕಾರ್ಯಗಳಿವು:—

ಬೆಸ್ತರಿಗೆ ಗೃಹವಸತಿ ಯೋಜನೆ:— ಉದ್ದವಾದ ಸಮುದ್ರ ತೀರವುಳ್ಳ ಈ ಸಂಸ್ಥಾನದಲ್ಲಿ ಮೀನು ಹಿಡಿಯುವುದು ಒಂದು ಮುಖ್ಯೋದ್ಯೋಗ. ಬೆಸ್ತರು ಸಾಮಾನ್ಯವಾಗಿ ಛಿದ್ರ ಛಿದ್ರವಾದ ಗುಡಿಸಲುಗಳಲ್ಲಿ ವಾಸಿಸುತ್ತಾರೆ. ಯೋಜನಾಧಿಕಾರಿಗಳು ಇವರಿಗಾಗಿ ಅನುಕೂಲವಾದ ಮನೆಗಳನ್ನು ತಯಾರಿಸಲು ಯೋಜನೆಯೊಂದನ್ನು ತಯಾರಿಸಿರುವರು. ಸ್ವಲ್ಪ ಜಮೀನೂ ಉಚಿತವಾಗಿ ದೊರೆತು ಅರ್ಧ ಕಾರ್ಯ ಮುಗಿದಿದೆ. ಈ ಮನೆಗಳನ್ನು ಕಟ್ಟುವುದಕ್ಕೆ ಹಣವನ್ನು 20 ಅಥವಾ 25 ವರ್ಷಗಳ ಅವಧಿಯಲ್ಲಿ ತೀರಿಸುವ ಒಪ್ಪಂದದ ಮೇಲೆ ಕೊಡಲಾಗುವುದು. ಇಲ್ಲಿಯ ಚರ್ಚುಗಳೂ ಸಾಮುದಾಯಕ ಯೋಜನೆ ಕೆಲಸಗಳಲ್ಲಿ ಪೂರ್ಣ ಸಹಕಾರವೀಯುತ್ತವೆ.

ವಿಕೇಂದ್ರೀಕೃತ ಗೃಹ ಕೈಗಾರಿಕಾ ಯೋಜನೆ:—ಉದ್ಯೋಗ ಸೌಲಭ್ಯ ಹಾಗೂ ಸಿದ್ಧ ವಸ್ತುಗಳ ಉತ್ಪಾದನೆ ಇವೆರಡು ದೃಷ್ಟಿಯಿಂದಲೂ ಗೃಹ ಕೈಗಾರಿಕೆ ಸಾಮುದಾಯಕ ಯೋಜನೆಗಳಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಈ ಕ್ಷೇತ್ರದಲ್ಲಿ ಮೀನು ಹಿಡಿಯುವುದು, ಕೈಮಗ್ಗ, ತಾಳೆಬೆಲ್ಲ, ಜೇನು ಸಾಕುವುದು ಇತ್ಯಾದಿ ಕೈಗಾರಿಕೆಗಳಿಗೆ ಉತ್ತೇಜನ ನೀಯಲಾಗಿದೆ. ಇದರ ಜೊತೆಗೆ ವಿಕೇಂದ್ರೀಕೃತ ಗೃಹಕೈಗಾರಿಕಾ ಯೋಜನೆಯೊಂದನ್ನು ತಯಾರಿಸಲಾಗಿದೆ. ಇಲ್ಲಿನ "ಟ್ಯೂಬ್‌ವೆಲ್" ಮತ್ತು ಇತರ ಬಾವಿಗಳಿಗೆ ಬೇಕಾದ ಕೈಪಂಪು ಇತ್ಯಾದಿಗಳನ್ನು ಸ್ಥಳದಲ್ಲಿಯೇ ತಯಾರಿಸುವಂತೆ ಪ್ರೋತ್ಸಾಹಿಸಲಾಗಿದೆ. ಅದಕ್ಕಾಗಿ ಒಂದು ಸಹಕಾರಸಂಘವಿದೆ. ಚಾಲಕ ವರ್ಕ್‌ಷಾಪ್ ಒಂದನ್ನು ಪ್ರಾಜೆಕ್ಟ್ ಮುಖ್ಯ ಕಛೇರಿಯಲ್ಲಿ ಇಡಲಾಗಿದೆ.

ಸಹಕಾರ ಸಂಘವು ತನ್ನ ಸದಸ್ಯರಿಗೆ ಬೇಕಾದ ಉಪಕರಣಾದಿಗಳನ್ನು ಬಾಡಿಗೆ ಅಥವಾ ಕ್ರಯಕ್ಕೆ ಸರಬರಾಜು ಮಾಡುವುದು. ಕೈಪಂಪಿನ ಯೋಜನೆಯು ಯಶಸ್ವಿಯಾದ್ದರಿಂದ ಇದೇ ರೀತಿಯ ಯೋಜನೆಯನ್ನು ನೀರಿನ ಮೋಟರು, ವಿದ್ಯುಚ್ಛಕ್ತಿಯ ವಸ್ತುಗಳು, ಆಟದ ಸಾಮಾನುಗಳು, ಟರ್ಬೈನ್‌ಗಳು, ಎಲೆಕ್ಟ್ರಿಕ್ ಮೋಟಾರುಗಳು, ಮಕ್ಕಳ ಬೈಸಿಕಲ್‌ಗಳು, ವ್ಯವಸಾಯ ಉಪಕರಣಗಳು ಇವುಗಳ ತಯಾರಿಗೂ ಅಳವಡಿಸಲಾಗುವುದು.

ವೃತ್ತಿ ಶಿಕ್ಷಣ ಶಾಲೆಗಳು:—ಪ್ರಾಜೆಕ್ಟ್ ಅಧಿಕಾರಿಗಳು ಕೈಗೊಂಡಿರುವ ವೃತ್ತಿಶಿಕ್ಷಣ ಶಾಲೆಯ ನಿರ್ಮಾಣ ಕಾರ್ಯ ಮುಗಿದ ಮೇಲೆ ವಿಕೇಂದ್ರೀಕೃತ ಯೋಜನೆಗೆ ಮತ್ತಷ್ಟು ಹೆಚ್ಚಿನ ಪ್ರಭಾವ ಬರುವುದು. ವಿವಿಧ ವೃತ್ತಿಗಳಲ್ಲಿ ಶೇ. 90ರಷ್ಟು ಪ್ರಾಯೋಗಿಕ ಶಿಕ್ಷಣ ಕೊಡುವುದೇ ಈ ಶಾಲೆಯ ಮುಖ್ಯೋದ್ದೇಶವಾಗಿರುವುದು. ಈ ಶಾಲೆಯಲ್ಲಿ ತರಬೇತು ಹೊಂದಿದವರಿಗೆ ಉಪಕರಣಾದಿಗಳನ್ನು ಕೊಳ್ಳುವುದಕ್ಕೆ ಸಾಲಗಳನ್ನು ಕೊಡಲಾಗುವುದು. ಶಿಕ್ಷಣ ಪಡೆಯುವುದಕ್ಕೆ ಯಾವ ಶುಲ್ಕವೂ ಇಲ್ಲ. ಅಲ್ಲದೆ ಶಿಕ್ಷಣ ಪಡೆಯುವವರಲ್ಲಿ ಅರ್ಧದಷ್ಟು ಜನರಿಗೆ ತಿಂಗಳಿಗೆ 20 ರೂ ಸಹಾಯ ಮಾಡಲಾಗುವುದು. ಸ್ಥಳೀಯ ವ್ಯವ

(೨ನೇ ಪುಟದಿಂದ)

ನಿರ್ಮಾಣದಲ್ಲಿ ತೀರ ಮುಂದರಿದ, ಮೇಲ್ಮಟ್ಟದ ತರಬೇತಿ ವ್ಯವಸ್ಥೆಯು ಈಗ ಪ್ರಗತಿಯನ್ನು ಹೊಂದುತ್ತಲಿದೆ. ಇದೇ ಬೆಂಗಳೂರಿನಲ್ಲಿ ಸದ್ಯವೇ "ಭಾರತ್ ಇಲೆಕ್ಟ್ರೋನಿಕ್ಸ್" ಎಂಬ ಇನ್ನೊಂದು ಪ್ರಮುಖ ಉತ್ಪಾದನಾ ಕೇಂದ್ರವು ತೆರೆಯಲ್ಪಡುತ್ತದೆ. ಸಂರಕ್ಷಣಾ ವ್ಯವಸ್ಥೆಯ ಆವಶ್ಯಕತೆಯನ್ನು ಪೂರೈಸುವುದಕ್ಕೋಸ್ಕರ "ವಯರ್‌ಲೆಸ್" ಹಾಗು "ಸಿಗ್ನಲ್" ಉಪಕರಣಗಳನ್ನು ಈ ಕೇಂದ್ರ ತಯಾರಿಸುತ್ತದೆ. ೨೫೦ ಲಕ್ಷ ರೂಪಾಯಿಗಳ ಬಂಡವಾಳವನ್ನೊಳಗೊಂಡು ಕೇಂದ್ರಕ್ಕೆ ೧೫೦ ಲಕ್ಷ ರೂಪಾಯಿಗಳ ವೆಚ್ಚ ತಗಲುತ್ತದೆ; ೧೯೫೬ನೇ ಇಸವಿಯ ಸಮಾರಿಗೆ ಉತ್ಪಾದನೆಯನ್ನು ತೊಡಗುವ ಈ ಕಾರ್ಖಾನೆಗೆ ಭಾರತೀಯ ತಂತ್ರಜ್ಞರನ್ನು ತರಬೇತಿಗೊಳಿಸುವುದಕ್ಕಾಗಿ ಶಾಲೆಯೊಂದು ಈ ವರ್ಷಾಂತ್ಯದೊಳಗೆ ಸ್ಥಾಪಿಸಲ್ಪಡುತ್ತದೆ. ಈಗಾಗಲೇ ಫ್ರಾನ್ಸಿಗೆ ಅನೇಕ ಮಂದಿ ತರಬೇತಿ ಪಡೆಯಲು ಹೋಗಿದ್ದಾರೆ.

ನಾಗರಿಕರ ಸಲಕರಣೆ

ಸಂರಕ್ಷಣಾ ವ್ಯವಸ್ಥೆಗೆ ಪೂರಕವಾಗಿ ಸಂರಕ್ಷಣಾ ವಿಜ್ಞಾನ ಸಂಸ್ಥೆ ಹಾಗು ಅಭಿವೃದ್ಧಿ ಮಂಡಳಿಗಳು ಸ್ಥಾಪನೆ ಹೊಂದಿದ್ದು ತಂತಮ್ಮ ಕ್ಷೇತ್ರದಲ್ಲಿ ಇವು ಗಣನೀಯ ಕೆಲಸವನ್ನು ಮಾಡುತ್ತವೆ. ಸಂರಕ್ಷಣಾ ಸಾಮಗ್ರಿಗಳನ್ನು ತಯಾರಿಸುವ ಈ ಕಾರ್ಖಾನೆಗಳು ಸೈನ್ಯದ ಅವಶ್ಯಕತೆಯನ್ನು ಉಚಿತ ಪ್ರಮಾಣದಲ್ಲಿ ಪೂರೈಸಿದ ಬಳಿಕ, ಸಾಕಷ್ಟು ಪರಿಮಾಣದಲ್ಲಿ, ನಾಗರಿಕರ ಬೇಡಿಕೆಯನ್ನು ಮನ್ನಿಸುತ್ತವೆ. ಕಳೆದ ವರ್ಷ ಸುಮಾರು ೧೫೦ ಲಕ್ಷ ರೂಪಾಯಿ ಮೊತ್ತದ ನಾಗರಿಕ ಬೇಡಿಕೆಗಳನ್ನಲ್ಲದೆ, ತಂತಿ ಟಪ್ಪಾಲು ಹಾಗು ರೈಲ್ವೇ ಖಾತೆಗಳ ಆವಶ್ಯಕತೆಯನ್ನೂ ಈ ಕಾರ್ಖಾನೆ ಪೂರೈಸಿತ. ಈ ಎಲ್ಲ ಕಾರ್ಖಾನೆಗಳಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ದೇಶೀಯ ಸಾಮಗ್ರಿಗಳನ್ನು ಬಳಸುವ ಪ್ರಯತ್ನ ಮಾಡಲಾಗುತ್ತದೆ. ಈ ದೃಷ್ಟಿಯಿಂದ ಕಳೆದ ಆರೇಳು ವರ್ಷಗಳ ಪ್ರಗತಿಯು ನಮಗೆ ಸಮಾಧಾನ ತರುತ್ತದೆ. ಸ್ವಾವಲಂಬನೆಯ ಗುರಿಯನ್ನು ನಾವಿನ್ನೂ ಮುಟ್ಟಿಲ್ಲವಾದರೂ, ಆ ಧ್ಯೇಯವನ್ನು ಸಾಧಿಸುತ್ತೇವೆಂಬ ಆತ್ಮವಿಶ್ವಾಸಕ್ಕೆ ನಡೆದು ಬಂದ ದಾರಿಯು ಪುಟ ಕೊಡುತ್ತದೆ.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಬಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,00[illegible]	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ=3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕ್ಯಾಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಂಕಿನ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

ಖಾತ್ರಿ ಚಿನ್ನದ ನೆಕ್‌ಲೇಸ್, ಹರಳುವಾರು ಚೈನುಗಳು, ಪೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೆ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ ಉಡುಪಿ, ದ. ಭಾರತ.

ಫೋನು ನಂಬ್ರ 66

ಶಿರ್ವ ಪಂಚಾಯತ್ ಕೋರ್ಟಿನಲ್ಲಿ

ಸಿವಿಲ್ ವ್ಯಾಜ್ಯ ನಂಬ್ರ 13/54

ಜನಾರ್ಧನ ಕಾಮತ್ ... ವಾದಿ.

ಮತ್ತು

1 ಲಿಗೋರಿ ಸೋಜ 2 ಲಿಮಜ ಗೋಮಿಸ ಬ್ಬಾ. ... .. ಪ್ರತಿವಾದಿರು.

ಉಡುಪಿ ತಾಲೂಕು ಶಿರ್ವ ಗ್ರಾಮದ ಉಕ್ಕೊಟ್ಟು ಬಾಳ್ಳಿ ಸೋಜರ ಮಗ ಲಿಗೋರಿ ಸೋಜ—ಇವರಿಗೆ ಈ ಮೂಲಕ ತಿಳಿಸುವುದೇನಂದರೆ:—ವಾದಿಗೆ ನಿಮ್ಮಿಂದ ಅಂಗಡಿ ವ್ಯಾಪಾರದ ಬಾಬ್ತು ಸಲ್ಲಬೇಕಾದ ರೂ. 60—6—0ಕ್ಕೆ ನಿಮ್ಮ ಮೇಲೆ ಈ ಕೋರ್ಟಿನಲ್ಲಿ ದಾವೆ ತಂದಿದ್ದಾರೆ. ಆ ಬಗ್ಗೆ ನಿಮ್ಮದೇನು ಉಘಾಪರಣೆ ಇರುವುದಾದರೆ ತಾರೀಕು 12—7—54ರಲ್ಲು ಸಾಯಂಕಾಲ ಗಂಟೆ 3ಕ್ಕೆ ಈ ಕೋರ್ಟಿನ ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮ ಮೇಲೆ ಎಕ್ಸ್‌ಪಾರ್ಟಿ ಡಿಕ್ರಿ ಕೊಡಲಾಗುವುದು.

(Sd) S. A. Hegde.
President, Panchayat
Board Shirva

Panchayat Board Office, Shirva
Dated 29—6—54

ಸಾಗುವಳಿಗಾರರು ಸುಮಾರು 30,000 ರೂಗಳಷ್ಟು ಬೆಲೆ ಬಾಳುವ 10 ಎಕರೆಗಳಷ್ಟು ಜಮೀನನ್ನು ಉಚಿತವಾಗಿ ಕೊಟ್ಟಿರುವರು. ಈ ಯೋಜನೆಗೆ 3,95,000 ವೆಚ್ಚವಾಗುವುದು ಅದರಲ್ಲಿ 3,03,000 ರೂಗಳನ್ನು ನಿರ್ಮಾಣ ಕಾರ್ಯಗಳಿಗೂ ಉಪಕರಣಗಳಿಗೂ ಉಪಯೋಗಿಸಲಾಗುವುದು.

ಮಣ್ಣು ಸವೆತ—ಈ ಕ್ಷೇತ್ರದಲ್ಲಿ ಮಣ್ಣು ಸವೆತದ ಉಪಪ್ರಬಂಧ, ಪ್ರಾಜೆಕ್ಟ್ ಅಧಿಕಾರಿಗಳು ಮಣ್ಣಿನ ಸವೆತವನ್ನು ತಡೆಯುವುದಕ್ಕಾಗಿ ಹೇಗೆ 'ಟೆರ್ರೇಸಿಂಗ್' ಮಾಡಬೇಕೆಂಬುದನ್ನು ಪ್ರದರ್ಶನ ಮಾಡಿ ತೋರಿಸುವರು. ಅನೇಕರು 'ಟೆರ್ರೇಸಿಂಗ್' ಪದ್ಧತಿಯನ್ನು ತಮ್ಮ ಜಮೀನುಗಳಲ್ಲಿ ಅನುಸರಿಸಿದ್ದಾರೆ. ರೈತರು 'ಟೆರ್ರೇಸಿಂಗ್' ಪದ್ಧತಿಯನ್ನು ತೀವ್ರಾಸಕ್ತಿಯಿಂದ ಕೈಗೊಳ್ಳುತ್ತಿದ್ದರೆ, ಫಲವತ್ತಾದ ಮೇಲ್ಮಣ್ಣು ಕೊಚ್ಚಿ ಹೋಗುವುದರ ಜೊತೆಗೆ ಸಾಮಾನ್ಯವಾಗಿ ಕಣಿವೆಗಳ ಕೆಳಗಿನ ಬತ್ತದ ಗದ್ದೆಗಳ ನೆಲವೂ ಸಹ ಪಾಳು ಬೀಳುವುದು.

ಜನತೆಯ ಸಹಕಾರ

ಸಾಮುದಾಯಿಕ ಯೋಜನೆಗಳು ಯಶಸ್ವಿಯಾಗುವುದಕ್ಕೆ ಜನತೆಯು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸಬೇಕಾದುದು ಅಗತ್ಯ. ಅದಿಲ್ಲದಿದ್ದರೆ, ಈ ಕಾರ್ಯಕ್ರಮ ನೀರಸವಾಗುವುದು.

ಈ ಕ್ಷೇತ್ರದಲ್ಲಿರುವ 35 ಪಂಚಾಯತಿಗಳ ಮೂಲಕ ಜನತೆಯ ಸಹಕಾರವನ್ನು ಪಡೆಯುತ್ತಿರಲಾಗಿದೆ. ಪ್ರತಿಯೊಂದು ಪಂಚಾಯತಿಯೂ 15ರಿಂದ ಹಿಡಿದು 20 ಸಾವಿರ ಸಾವಿರ ಜನರ ಸಾಂದ್ರತೆಯನ್ನು ಹೊಂದಿದೆ. ಪಂಚಾಯತಿಗಳು ಸಾಮುದಾಯಿಕ ಯೋಜನೆ ಕಾರ್ಯಗಳಲ್ಲಿ ಅಧಿಕಾರಿಗಳೊಂದಿಗೆ ಸಮಾಲೋಚನೆ ನಡೆಸುವರು. ಸಾಮುದಾಯಿಕ ಯೋಜನೆಗಳ ಕಾರ್ಯಕ್ರಮಗಳೆಲ್ಲವನ್ನೂ ಸರಕಾರದ ನೇರವಾದ ಸಹಾಯವಿಲ್ಲದೆ ಅನುಷ್ಠಾನದಲ್ಲಿ ತರುವುದಕ್ಕೆ ಅವಶ್ಯವಾದ ಆಡಳಿತ ಯಂತ್ರವನ್ನು ಪಂಚಾಯತಿಗಳು ರೂಪಿಸಬೇಕು.

ವಯಸ್ಕರು ಸಾಮುದಾಯಿಕ ಯೋಜನೆಯ ಮೇಲ್ಕಂಡ ಕಾರ್ಯಕ್ರಮಗಳಲ್ಲಿ ನಿರತರಾಗಿರುವಾಗ, ತರುಣರು ಮತ್ತು ಯುವಕ-ಯುವತಿಯರು ಸಾಮುದಾಯಿಕ ಯೋಜನಾ ಕ್ಷೇತ್ರವನ್ನು ದೈಹಿಕ ಶಿಕ್ಷಣಗಳನ್ನು ಪಡೆಯುವ ರಂಗವನ್ನಾಗಿ ಮಾಡಿಕೊಂಡಿದ್ದಾರೆ. ಈ ಸಾಮುದಾಯಿಕ ಯೋಜನಾ ಕ್ಷೇತ್ರದಲ್ಲಿ 10 ಸ್ತ್ರೀ ಸಂಘಗಳು, 11 ಯುವಕ ಮತ್ತು ಯುವತಿಯರ ಸಂಘಗಳು, 10 ವಾಲಿಬಾಲ್ ಕ್ಲಬ್ಬುಗಳು ಮತ್ತು 10 ಮನೋರಂಜನಾ ಕೇಂದ್ರಗಳು ಈ ಒಂದು ವರ್ಷದ ಅವಧಿಯಲ್ಲಿ ಆರಂಭವಾಗಿವೆ.

ದ. ಕ. ಜಿಲ್ಲೆಯಲ್ಲಿ ಗೋವುಗಳ ಹೀನಸ್ಥಿತಿ

ದ. ಕ. ಜಿಲ್ಲೆಯು ಈಗಲೀಗ ಅನೇಕ ವಿಧಗಳಲ್ಲಿ ಮುಂದುವರಿಯುತ್ತಲಿದ್ದು ಅನೇಕ ಮುಖಂಡರುಗಳಿಂದ ಪ್ರಶಂಸೆಯನ್ನು ಪಡೆಯುತ್ತಲಿದೆ. ಆದರೆ ಅವರ ಹೀನಾವಸ್ಥೆ ಜಿಲ್ಲೆಯ ಗೋವುಗಳ ಹೀನಾವಸ್ಥೆಯಲ್ಲಿದೆ–ಬಡ ಒಕ್ಕಲಿಗನ ಕೆಲಸಕ್ಕೆ ಬಾರದ ಬಡಕಲು ಎತ್ತು ಕೋಣಗಳೂ ಜನರ ಹಾಲಿನ ಆಕಳುಗಳೂ ದುರವಸ್ಥೆಯ ಆದರ್ಶವಾಗಿವೆ. ಫಲವತ್ತಾದ ಭೂಮಿಯು ಮತ್ತು ಮಳೆಯ ಸೌಕರ್ಯಗಳ ಫಲವು ದೊರಕುವುದಿಲ್ಲ. ಹಾಲಿನ ಅಭಾವದಿಂದ ಜನಸಾಮಾನ್ಯರ, ಮುಖ್ಯವಾಗಿ ಹೆಂಗಸರು ಮಕ್ಕಳ ಆರೋಗ್ಯವು ಕೆಡುತ್ತಿದೆ. ಕ್ಷಯ ಮುಂತಾದ ರೋಗಗಳು ಹೆಚ್ಚುತ್ತಿವೆ. ಇವನ್ನು ನಿವಾರಿಸಲು ಗೋರಕ್ಷಣೆಗೆ ಬೇಕಾದ ಕಾರ್ಯಗಳನ್ನು ಕೈಗೊಳ್ಳಬೇಕು. ಈಗಲಾದರೋ ಜಿಲ್ಲೆಯಲ್ಲಿ ಪಶುವೈದ್ಯ ಇಲಾಖೆಯು ತಕ್ಕ ಮಟ್ಟಿಗೆ ಪಸರಿಸಿದೆ. ವೆಟರಿನರಿ ಇಲಾಖೆ, ಕಮ್ಯೂನಿಟಿ ಪ್ರೊಜೆಕ್ಟ ಸಂಬಂಧಿ, ಗ್ರಾಮಾಭಿವೃದ್ಧಿ ಇಲಾಖಾ ನೌಕರರು ಎಲ್ಲರೂ ಕೂಡಿ ೧೪ ಮಂದಿ ವೆಟರಿನೆರಿ ಡಾಕ್ಟರುಗಳೂ ೧೦ ಮಂದಿ ಜಾನುವಾರು ಇನ್ಸ್‌ಪೆಕ್ಟರುಗಳೂ ಇರುವರು. ಮುಂಚಿನಂತೆ ಮೃಗ ಚಿಕಿತ್ಸೆ ಮಾತ್ರ ಇವರ ಕರ್ತವ್ಯವಾಗಿರದೆ ಗೋವುಗಳ ಅಭಿವೃದ್ಧಿ ಕಾರ್ಯ ಕೂಡಾ ಇವರು ವಹಿಸಿರುವರು. ಆದುದರಿಂದ ಇದೇ ಜಿಲ್ಲೆಯವನಾಗಿ ಜಿಲ್ಲೆಯಲ್ಲೇ ಉದ್ಯೋಗ ನಡೆಸಿ ಈಗ ವಿಶ್ರಾಂತಿ ಪಡೆದಿರುವ ನನ್ನ ನಾಲ್ಕು ಮಾತುಗಳನ್ನು ಇವರ ಮುಂದಿಡುವೆನು.

೧. ಜಾನುವಾರುಗಳ ಮಹಾ ಮಾರಿ ರೋಗ—ಇದನ್ನು ತಡೆಗಟ್ಟುವುದಕ್ಕೆ ಸುಬ್ರಹ್ಮಣ್ಯ ಮತ್ತು ಸೀತಾ ನದಿ ಸಂತೆಗಳ ಮುಂಚಿತವಾಗಿಯೇ ಮುಂಜಾಗ್ರತೆಯಿಂದ ಕಾರ್ಯಕ್ರಮವನ್ನು ಕೈಗೊಳ್ಳಿರಿ. ಮಳೆಗಾಲ ಪ್ರಾರಂಭವಾದೊಡನೆ ಪ್ರಾರಂಭವಾಗುವ ಗಂಟಲು ರೋಗವನ್ನು ತಡೆಗಟ್ಟಿರಿ.

೩. ಗ್ರಾಮಗಳಲ್ಲಿ ಗೋಚರವಿನ ಸ್ಥಳಗಳನ್ನು ರಕ್ಷಿಸಿರಿ. ಸಂಬಂಧಪಟ್ಟ ಅಧಿಕಾರಿಗಳಿಗೆ ಈ ವಿಷಯ ಅನುಭವಕೊಟ್ಟು ಅವನ್ನು ವೃದ್ಧಿ ಪಡಿಸುವುದಕ್ಕೆ ಸಹಾಯ ಕೊಡಿರಿ. ಇಡೀ ವರ್ಷದಲ್ಲಿ ಹಸಿ ಹುಲ್ಲು ದೊರಕುವಂತೆ ಗಿನಿ, ನೇಪಿಯರ್ ಮುಂತಾದ ಹುಲ್ಲುಗಳನ್ನು ಬೆಳೆಯಿಸಿ ಹಸಿ ಹುಲ್ಲನ್ನು ಶೇಖರಿಸಿ ಇಡುವ ಕ್ರಮಗಳನ್ನು ರೂಢಿಗೆ ತಂದು ಗೋವುಗಳನ್ನು ಪಾಲಿಸಿರಿ.

೪. ಹಾಲಿನ ಗೋವುಗಳನ್ನು ಮತ್ತು ಕೆಲಸದ ಹೋರಿ ಎತ್ತುಗಳನ್ನು ಗೊಬ್ಬರದ ಜಾನುವಾರುಗಳಿಂದ ಪ್ರತ್ಯೇಕಿಸಿಟ್ಟು ಯೋಗ್ಯ ತರದ ಹಟ್ಟಿಗಳನ್ನು ನಿರ್ಮಿಸಿರಿ. ಸರಿಯಾದ ಸಲಹೆಯನ್ನು ಕೊಟ್ಟಲ್ಲಿ ಜಿಲ್ಲೆಯಲ್ಲಿ ಎಷ್ಟೋ ಮಹನೀಯರು ಹೊಸ ಪದ್ಧತಿಯನ್ನು ಕೈಗೊಳ್ಳಲು ಸಿದ್ಧರಿರುವರು. ನಿಮಗೆಲ್ಲರಿಗೆ ತಿಳಿದಂತೆ ಈಗಿನ ಹಳ್ಳಿಯ ಹಟ್ಟಿಯ ಏರ್ಪಾಡು ಗೊಬ್ಬರಕ್ಕಾಗಿ ಇಟ್ಟುಕೊಳ್ಳುವ ಜಾನುವಾರುಗಳಿಗಾಗಿ ಮಾತ್ರ ಯೋಗ್ಯವಲ್ಲದೆ ಗೋವುಗಳ ಆರೋಗ್ಯಕ್ಕೂ ಅವುಗಳ ಬೆಳವಣಿಗೆಗೂ ಯೋಗ್ಯವಾದುದಲ್ಲ. ಈಗಿನ ಪದ್ಧತಿಯಿಂದ ಅಂಟು ರೋಗಗಳು ಬಹು ಸುಲಭವಾಗಿ ಉಂಟಾಗುತ್ತವೆ, ಮತ್ತು ಹಬ್ಬುತ್ತವೆ. ಜನರು ವಾಸಿಸುವ ಮನೆಗಳ ಸಮೀಪದಲ್ಲಿಯೇ ಇಂತಹ ಜಾನುವಾರು ಮಲಮೂತ್ರ ಗೊಬ್ಬರದಿಂದ ತುಂಬಿದ ಹಟ್ಟಿಗಳಿಂದ ಜನರ ಆರೋಗ್ಯವೂ ಕೆಡುವುದು. ಮಾದರಿ ಹಟ್ಟಿಗಳನ್ನು ಆಯಾಯ ಸ್ಥಳದ ಆರ್ಥಿಕ ಸ್ಥಿತಿಗೆ ಅನುಗುಣವಾಗಿ ಕಟ್ಟಿಸಿ ತೋರಿಸಿರಿ.

ಈ ರೀತಿ ಮಾಡಿದಲ್ಲಿ ನೀವು ಗೋಸೇವೆ ಮತ್ತು ಜನ ಸೇವೆ ಮಾಡಿದಂತಾಗುವುದು. ಈ ಮಾತುಗಳನ್ನು ಪಶುವೈದ್ಯ ಇಲಾಖೆಯವರ ಅವಗಾಹನೆ ಬಗ್ಗೆ ಬರೆದಿದ್ದೇನೆ.

೫. ಗೋವಧೆಯನ್ನು ನಿಲ್ಲಿಸುವುದು–ಇದು ಮಂಗಳೂರು ಮುನಿಸಿಪಾಲಿಟಿಯವರ ಕರ್ತವ್ಯ. ಅವರು ತಮ್ಮ ಜವಾಬ್ದಾರಿಯನ್ನು ಸಲ್ಲಿಸಲು ಪ್ರಯತ್ನಿಸುತ್ತಿರುವರು. ಕೆಲಸವು ಕೈಗೂಡುವುದು.

ಡಾ। ಬಿ. ಸೀತಾರಾಮ ರಾವ್.

(೧ನೇ ಪುಟದಿಂದ)

ನೋಡಸಿಕ್ಕಿತು. ನ್ಯೂಯಾರ್ಕಿನಲ್ಲಿ ಇನ್ನು ಐದು ತಲೆಮಾರುಗಳ ವರೆಗೆ ಕಾಣಿಸಲಾರದ ಖಗ್ರಾಸ ಸೂರ್ಯಗ್ರಹಣವನ್ನು ಜನರು ಟೆಲೆವಿಜನದಲ್ಲಿ ನಿರೀಕ್ಷಿಸಿದರು.

ಸೂರ್ಯನ ವ್ಯಾಸವು ಚಂದ್ರನದಕ್ಕಿಂತ ೪೦೦ ಪಾಲು ದೊಡ್ಡದಿರುತ್ತದೆ. ಆದರೆ ಭೂಮಿಗೆ ಸೂರ್ಯನು ಚಂದ್ರನಿಗಿಂತ ೪೦೦ ಪಾಲು ಹೆಚ್ಚು ದೂರದಲ್ಲಿರುವುದರಿಂದ ಸೂರ್ಯನ ಬಿಂಬವು ಚಂದ್ರನದಕ್ಕಿಂತ ದೊಡ್ಡದಾಗಿ ಕಾಣಿಸುವುದಿಲ್ಲ. ಎಂತಲೇ ಖಗ್ರಾಸ ಸೂರ್ಯಗ್ರಹಣವು ಸಂಭವಿಸುವುದು ಸಾಧ್ಯವಾಗುತ್ತದೆ. ಸೂರ್ಯಗ್ರಹಣ ಕಾಲದಲ್ಲಿ, ಸೂರ್ಯನ ಹತ್ತಿರವಿದ್ದು ಆತನ ಪ್ರಭೆಯಿಂದಾಗಿ ನಮಗೆ ಕಾಣಿಸದ, ಬುಧ ಮುಂತಾದ ಗ್ರಹಗಳೂ ಉಲ್ಕೆಗಳೂ ಧೂಮಕೇತುಗಳೂ ಗೋಚರಿಸುತ್ತವೆ. ಸೂರ್ಯನ ಜಾಜ್ವಲ್ಯಮಾನವಾದ ರಚನೆಯ ಪರಿಚಯವನ್ನೂ ಮಾಡಿಕೊಳ್ಳಬಹುದು. ಅಲ್ಲದೆ, ಸೂರ್ಯನ ವ್ಯಾಸದ ಇಮ್ಮಡಿ ಅಥವಾ ಮುಮ್ಮಡಿಯಷ್ಟು ಅಗಲವಿದ್ದು ಲಕ್ಷಾಂತರ ಮೈಲುಗಳಷ್ಟು ದೂರ ನೆಗೆಯುವ ಪ್ರಭಾವಲಯವೂ ಗೋಚರಿಸುತ್ತದೆ. ತಿಂಗಳ ಬೆಳಕಿನ ಅರ್ಧದಷ್ಟು ಇದರ ಪ್ರಕಾಶವಿರುತ್ತದೆ. ಗ್ರಹಗತಿ ಮತ್ತು ಸ್ಥಾನ ನಿರ್ದೇಶ ವಿಷಯಗಳಲ್ಲಿ ಸೂರ್ಯಗ್ರಹಣದ ನಿರೀಕ್ಷಣೆಯು ವಿಶೇಷವಾಗಿ ನೆರವಾಗುತ್ತದೆ. ಜ್ಯೋತಿಷ ಶಾಸ್ತ್ರದ ಆಧಾರದ ಮೇಲಿಂದ ಗ್ರಹಣಗಳ ನಿಶ್ಚಿತ ಕಾಲವನ್ನು ಮುಂಚೆಯೇ ಹೇಳಬಹುದು; ಕಳೆದ ಶತಮಾನದಲ್ಲಿ ಆಗಿಹೋದ ಆಸ್ಟ್ರಿಯಾದ ಜ್ಯೋತಿಷಿಯೊಬ್ಬರು ಕ್ರಿಸ್ತಪೂರ್ವ ೧೨೦೭ ನೇ ವರ್ಷದಿಂದ ಕ್ರಿಸ್ತಶಕ ೨೧೬೧ನೇ ವರ್ಷದ ವರೆಗಿನ ಗ್ರಹಣಕಾಲಗಳನ್ನೆಲ್ಲ ಗುರುತಿಸಿರುವರು. ಈಗ ತಿಳಿದುಬಂದಂತೆ ೧೯೫೫, ೧೯೭೩ ಮತ್ತು ೧೯೯೧ ನೇ ಇಸವಿಗಳಲ್ಲಿ ಸಂಭವಿಸುವ ಖಗ್ರಾಸ ಸೂರ್ಯ ಗ್ರಹಣಗಳು ಏಳು ನಿಮಿಷ ಅವಧಿಯ ವರೆಗೆ ಉಳಿಯುತ್ತವೆ; ಮತ್ತು ಇದು ವೈಜ್ಞಾನಿಕ ನಿರೀಕ್ಷಣೆಗೆ ತುಂಬ ಅನುಕೂಲವೆನಿಸುತ್ತದೆ. ಬರುವ ವರ್ಷ (೨೦-೬-೧೯೫೫) ಸಂಭವಿಸುವ ಖಗ್ರಾಸ ಸೂರ್ಯ ಗ್ರಹಣವನ್ನು ಸಿಂಹಳ, ಸಯಾಮು, ಫಿಲಿಪ್ಪೈನುಗಳಲ್ಲಿ ನೋಡಬಹುದು. ಆದರೆ ಮಳೆಗಾಲದಲ್ಲಿ ಹವಾಮಾನ ಹೇಗಿರುತ್ತದೋ ಎಂದು ವಿಜ್ಞಾನಿಗಳಿಗೆ ಕಳವಳ ಇದ್ದೇ ಇದೆ.

ಟ್ರೇಡ್ ಮಾರ್ಕ್

ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ
ದಿ| ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 90 ವರ್ಷ
ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯಂಗಾರರವರ


ಪಂ। A. R. ಅಯ್ಯಂಗಾರ್ ರವರು, ಸ್ಥಾಪಕರು.

ಸಂತಾನ ಸಿಂಧೂರ || ಮದನ ವಿಲಾಸ
(ಸ್ತ್ರೀಯರಿಗೆ: ಭಸ್ಮ) || (ಪುರುಷರಿಗೆ: ಗುಳಿಗೆ)

*ಭಸ್ಮವು ಬಹಿಷ್ಠೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.
*ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.
ದಂಪತಿಗಳು ಕೂಡಿ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಒಂದೇ ೧ ಸೆಟ್ (8ಪೊಟ್ಲ+4 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ.
ಕೋಣೆಯಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.
ಕ್ರಯ: 2 ವಿಶಯಗಳ 1 ಸೆಟ್ 7 ರೂ. M.O. ಮಾಡಿರಿ. ತಲಪಿದ ಒಡನೆ ರಿಜಿಸ್ಟರ್ ಪಾರ್ಸೆಲ್ ಮೂಲಕ ಕಳುಹಿಸಲ್ಪಡುವುದು. ಕ್ಯಾಟಲಾಗ್ ಉಚಿತ, ಮಾಹಿತಿಗೆ 2 ಆಣೆ ಸ್ಟ್ಯಾಂಪು ಕಳಿಸಿರಿ ವಿಳಾಸ:-
ಎ. ರಾಮಸ್ವಾಮಿ ಅಯ್ಯಂಗಾರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", ಮಹಾರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore–South India).

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್
[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:– ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ.ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ವಿವಿಧ ಪಾತ್ರೆಗಳು



ಬಗೆಬಗೆಯ ಪಾತ್ರೆಗಳು ಸಗಟಾಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

–ಹೊಸಕೆರೆ ಚಿದಂಬರಯ್ಯನವರ–
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ. 0-12-0
V. P. P. ಮೂಲಕ 1—4—0
ನವಯುಗ ಪ್ರೆಸ್, ಉಡುಪಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಷನೆರಿ
ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.
ಬೆಲೆ ರೂ. 5-6-0
ನವಭಾರತ ಬುಕ್ ಡಿಪೊ, ಉಡುಪಿ.
ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No. 31
Licensed to Post without Prepayment.

ನವಯುಗ

Founder:- Sri A. B. Shetty, Minister for Public Health, Govt of Madras.

Vol.33 No 45 15-7-1954 ವರ್ಷ ೩೩ ವಾರ ೪೫

ಶಾಂತಿಯುತ ಸಹಜೀವನ

ಕಾಂಗ್ರೆಸಾಧ್ಯಕ್ಷ ನೆಹರೂರವರು ಪ್ರದೇಶ ಕಾಂಗ್ರೆಸುಗಳ ಅಧ್ಯಕ್ಷರಿಗೆ ಪರಿಪತ್ರ ಮುಖೇನ ಆಗಿಂದಾಗ್ಗೆ ಯೋಗ್ಯ ಮಾರ್ಗದರ್ಶನವನ್ನು ಮಾಡುವ ನೂತನ ಸಂಪ್ರದಾಯವನ್ನು ತೊಡಗಿರುವರಷ್ಟೇ! ಇದರಂತೆ ಈ ತಿಂಗಳು ಅವರು ಕಳುಹಿಸಿದ ಪರಿಪತ್ರವು ಭಾರತದ ರಾಜಕೀಯ ನಿಲುಮೆಯ ದೃಷ್ಟಿಯಿಂದ ಅತ್ಯಂತ ಮಹತ್ವಪೂರ್ಣವೆಂದು ಕಂಡುಬರುತ್ತದೆ. ಏಶಿಯದ ಇನ್ನೊಂದು ಮಹಾರಾಷ್ಟ್ರವಾದ ಚೀನದ ಪ್ರಧಾನ ಮಂತ್ರಿಗಳೊಡನೆ ನಡೆಸಿದ ಮಾತುಕತೆಗಳ ಹಿನ್ನೆಲೆಯನ್ನು ಇಟ್ಟುಕೊಂಡು ಕಾಂಗ್ರೆಸಿಗರಿಗೆ ಸಂಬೋಧಿಸಲ್ಪಟ್ಟ ಈ ಪತ್ರದ ಸಾರಾಂಶವನ್ನು ನಾವೆಲ್ಲರೂ ತಿಳಿದುಕೊಳ್ಳುವುದು ಅಪೇಕ್ಷಣೀಯ. ಸ್ವತಃ ನೆಹರೂರವರು ಜನತೆಗೆ ಈ ಪರಿಪತ್ರದಲ್ಲಿರುವ ವಿಷಯವನ್ನು ಸಾರ್ವಜನಿಕ ಸಭೆಗಳನ್ನು ಜರಗಿಸುವುದೇ ಮುಂತಾದ ಬಗೆಯಿಂದ ತಿಳಿಸಬೇಕೆಂದು ಹೇಳಿದ್ದಾರೆ. ಭಾರತದಲ್ಲಿ ಆಡಳಿತಾಧಿಕಾರವನ್ನು ನಿರ್ವಹಿಸುವ,ರಾಷ್ಟ್ರದಲ್ಲಿಯೇ ಅತ್ಯಂತ ಬಲಯುತವಾದ ಪಕ್ಷದ, ಪರಿಷ್ಕರು ಪ್ರಕಟಿಸುವ ಅಭಿಪ್ರಾಯಗಳನ್ನು ಗ್ರಹಿಸಿಕೊಂಡು, ಪ್ರಜೆಗಳು ವಿಮರ್ಶಿಸುವುದರಿಂದಲೇ ಪ್ರಜಾಪ್ರಭುತ್ವವು ಸುಗಮವಾಗಿ ಪ್ರಗತಿಯನ್ನು ಹೊಂದಬಲ್ಲುದು.

ಹಿಮಾಚಲ ಪ್ರದೇಶದಲ್ಲಿ ವಿರಾಮಕ್ಕೋಸ್ಕರ ತೆರಳಿದ್ದಾಗ ನೆಹರೂರವರು ಈ ಪರಿಪತ್ರವನ್ನು ಹೊರಡಿಸಿದರು. ಚೀನದ ಪ್ರಧಾನಿ ಚೌ‌ರವರೊಡನೆ ಭಾರತದ ಹಾಗು ಬರ್ಮಾದ ಪ್ರಧಾನಿಗಳು ನಡೆಸಿದ ಮಾತುಕತೆಯು ಬಳಿಕ ಹೊರಟ ಸಂಯುಕ್ತ ಪ್ರಕಟಣೆಗಳು 'ಏಶ್ಯಾದ ಶಕ್ತಿಗಳ ಸಂಬಂಧದಲ್ಲಿ ಸಂಸ್ಮರಣೀಯವಾದ ಸ್ಥಿತ್ಯಂತರವನ್ನು ತೋರಿಸುತ್ತವೆ. ಇದು ಚಾರಿತ್ರಿಕ ಮಹತ್ವದ ಪರಿವರ್ತನೆಯೆಂದು ನಂಬಬಹುದು ಈ ಪ್ರಕಟಣೆಗಳು ಹೊರಟುದರಿಂದ ಸ್ಥಿತ್ಯಂತರಗಳು ಉಂಟಾದುವೆಂದಲ್ಲ—ಜಾಗತಿಕ ರಾಜಕಾರಣದಲ್ಲಿ ಏಶ್ಯಾಕ್ಕೆ ಅದರ ನ್ಯಾಯವಾದ ಸ್ಥಾನವನ್ನು ದೊರಕಿಸಿಕೊಡುವ ಅಂಶವನ್ನು ಈ ಪ್ರಕಟಣೆಗಳು ಬಿಂಬಿಸುತ್ತವೆ. ಇದಕ್ಕೆ ಮುಂಚೆ ಶತಮಾನಗಳ ಕಾಲ ವಿದೇಶೀಯರು ಏಶ್ಯಾದ ಸಮಸ್ಯೆಗಳ ಪರಿಹಾರವನ್ನು ನಿರ್ಧರಿಸುವ ಹವ್ಯಾಸವನ್ನು ತೋರಿಸುತ್ತಿದ್ದರು. ಈಗ ಏಶ್ಯಾದ ವಾಣಿಯನ್ನು ಉಪೇಕ್ಷಿಸುವುದಕ್ಕೆ ಸಾಧ್ಯವಿಲ್ಲೆಂದು ಪ್ರಕಟಣೆಗಳು ಸ್ಪಷ್ಟಗೊಳಿಸುತ್ತವೆ. ಈ ಹೇಳಿಕೆಗಳಿಗೆ ಭಾರತದಲ್ಲಿ ಹೃತ್ಪೂರ್ವಕ ಸ್ವಾಗತ ದೊರೆತುದು ಕಂಡುಬರುತ್ತದೆ. ಆದುದರಿಂದ ಇಂದಿನ ಕಾಲಧರ್ಮಕ್ಕೆ ಅನುಗುಣವಾಗಿಯೂ ಜನತೆಯ ಅವ್ಯಕ್ತ ಹಾಗು ಅವಶ್ಯ ಭಾವನೆಗಳನ್ನು ಪ್ರತಿನಿಧೀಕರಿಸುವಂತೆಯೂ ಈ ಪ್ರಕಟಣೆಗಳು ಇವೆಯೆಂದು ಸಿದ್ಧವಾಗುತ್ತದೆ. ನಾವು ಅನುಸರಿಸಿಕೊಂಡು ಬಂದ ವಿದೇಶ ನೀತಿಯ ಸಹಜ ಬೆಳವಣಿಗೆಯೇ ಈ ಪ್ರಕಟಣೆಗಳೆಂದರೂ ಸಲ್ಲುತ್ತದೆ.

ನಮ್ಮ ವಿದೇಶ ನೀತಿಯ ಮೂಲಭೂತ ಅಂಶಗಳನ್ನು ಕಾಂಗ್ರೆಸಿಗರು ಸ್ಪಷ್ಟವಾಗಿ ತಿಳಿದುಕೊಳ್ಳಬೇಕೆಂದು ನೆಹರೂರ ಅಪೇಕ್ಷೆ. ಕೇವಲ ಸಹಾನುಭೂತಿ ಸಾಲದು; ನಿಜವಾದ ಅರ್ಥದಲ್ಲಿ ಈ ತತ್ವಗಳನ್ನು ಮನಗಾಣಬೇಕು. ಏಕೆಂದರೆ ಜನತೆಗೆ ತಿಳಿಸಿ ಹೇಳುವ ಬಹುದೊಡ್ಡ ಹೊಣೆಗಾರಿಕೆಯು ಕಾಂಗ್ರೆಸು ಸಂಸ್ಥೆಯ ಮೇಲೆ ಇದೆ. ಅಧಿಕಾರ ಸ್ಥಾನದಲ್ಲಿರುವುದರಿಂದ ಇತರ ಪಕ್ಷಗಳಿಗಿಂತಲೂ ಹೆಚ್ಚು ಈ ವಿಷಯದ ಕಡೆಗೆ ಕಾಂಗ್ರೆಸಿಗರು ಗಮನ ಹರಿಸಬೇಕಾಗಿದೆ. ಹಾಗಾದರೆ ನಾವು ಅನುಸರಿಸಿದ ಧೋರಣವೇನು? ಯಾವುದೇ ಧೋರಣೆಯಿರಲಿ, ದೇಶದ ಪ್ರಾಚೀನ ಪರಂಪರೆ ಮತ್ತು ಹಿನ್ನೆಲೆಯಲ್ಲಿ ಅದು ಬೆಳೆದು ಬರಬೇಕು. ಅದು ಕೆಲವು ಧ್ಯೇಯಗಳ ಸಾಧನೆಯ ಆದರ್ಶವನ್ನು ಇಟ್ಟುಕೊಂಡಿರಬೇಕು; ಅದೇ ಕಾಲಕ್ಕೆ ವಾಸ್ತವಿಕ ದೃಷ್ಟಿಕೋನವನ್ನೂ ಅಳವಡಿಸಿಕೊಳ್ಳಬೇಕು. ಆದರ್ಶ ವಾದಕ್ಕೆ ಎಡೆ ಇಲ್ಲದಿದ್ದರೆ, ಅದು ಸಂದರ್ಭ ಸಾಧಕ ನೀತಿಯಾದೀತು; ವಾಸ್ತವಿಕ ದೃಷ್ಟಿಯ ಅಭಾವವಿದ್ದರೆ, ಹುಚ್ಚು ಸಾಹಸವೆಂದು ಹೇಳಲ್ಪಟ್ಟು ಪರಿಣಾಮದಲ್ಲಿ ನಿಷ್ಕ್ರಿಯವಾದೀತು. ನಮ್ಮ ದೇಶದ ಪ್ರಾಚೀನ ವೈಭವವಂತೂ ಸರಿಯೇ, ಈಚಿನ ಇತಿಹಾಸವೂ ರೋಮಾಂಚಕವಿದೆ. ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ನಾವು ಶಾಂತಿಯುತ ಸಾಧನಗಳಿಂದ ಧ್ಯೇಯ ಸಾಧಿಸುವ ತಂತ್ರವನ್ನು ಕಲಿತಿದ್ದೇವೆ; ಸಹನೆಯನ್ನೂ ಸ್ನೇಹವನ್ನೂ ತೋರಿಸಿ ಸ್ವಾತಂತ್ರ್ಯವನ್ನು ಗಳಿಸಿದ್ದೇವೆ. ಸ್ವಾತಂತ್ರ್ಯಾನಂತರ ಪ್ರಜಾಪ್ರಭುತ್ವ ಪದ್ಧತಿಯಲ್ಲಿ ವಿಶ್ವಾಸವನ್ನು ಪ್ರಕಟಿಸಿ, ಒಬ್ಬರಿನ್ನೊಬ್ಬರನ್ನು ಶೋಷಿಸುವುದಕ್ಕೆ ಅವಕಾಶವಿಲ್ಲದ, ಸಾಮಾಜಿಕ ಅಸಮತೆಯು ನಿಧಾನವಾಗಿ ನಿರ್ಮೂಲ ಹೊಂದುವ ರಾಷ್ಟ್ರವನ್ನು ಕಟ್ಟಲು ಹೆಣಗುತ್ತಿದ್ದೇವೆ. ಈ ಕೆಲಸದಲ್ಲಿ ಶಾಂತಿಯುತ ಸಾಧನಗಳನ್ನೇ ನಾವು ಅನುಸರಿಸುತ್ತಿದ್ದೇವೆ.

ಪ್ರಭಾವಿಯಾದ ಈ ಹಿನ್ನೆಲೆಯಿಂದ ನಮ್ಮ ವಿದೇಶ ನೀತಿಯು ಹರಿದು ಬರುತ್ತದೆ ಸಹಜವಾಗಿಯೇ ನಮ್ಮ ನೀತಿಯು ಮಹಾಶಕ್ತಿಗಳ ಗುಂಪಿನಿಂದ ದೂರ ಇರಲು ಪ್ರೇರೇಪಿಸುತ್ತದೆ ನಾವು ಇತರರೊಡನೆ ಒಂದು ಗುಂಪಿನಲ್ಲಿ ಸೇರಿಕೊಂಡರೆ ... ಗಳ ಇಚ್ಛೆ ಮತ್ತು ನಿಶ್ಚಯಕ್ಕೆ ತಲೆ ತಗ್ಗಿಸಬೇಕಾಗುತ್ತದೆ ಯಾವ ದೇಶವೂ ಇತರ ರಾಷ್ಟ್ರಗಳ ಗೊಡವೆಯೇ ಬೇಡವೆಂದು ಸುಮ್ಮನಿರಲಾರದು ನಿಜ. ಆದರೆ ಒಂದು ಗುಂಪಿನೊಡನೆ ನಮ್ಮ ಭವಿಷ್ಯ ಸೂತ್ರವನ್ನು ಜೋಡಿಸುವುದೆಂದರೆ, ಅದು ಲೋಕದಲ್ಲಿ ಅನರ್ಥ ಪರಿಣಾಮಗಳನ್ನು ಉಂಟುಮಾಡುತ್ತದೆ. ಹಾಗೆ ತನ್ನನ್ನು ಬಂಧಿಸಿಕೊಳ್ಳುವ ಕ್ಷೀಣ ರಾಷ್ಟ್ರವು ಶಕ್ತಿಯುತ ರಾಷ್ಟ್ರದ ಅಂಕೆಗೊಳಪಡುತ್ತದೆ. ಮುಂದೆ ಆ ಬಂಧನದಿಂದ ಬಿಡುಗಡೆಯು ಆಕಿಯೇ ತೋರುವುದಿಲ್ಲ. ಆದರೆ ಸ್ವತಂತ್ರ ರೀತಿಯಲ್ಲಿ ನಡೆದುಕೊಳ್ಳುವ ರಾಷ್ಟ್ರವು ಯಾವ ಗುಂಪಿಗೂ ಸೇರಿಕೊಳ್ಳದೆ, ಪ್ರತಿಯೊಂದೂ ದೇಶದ ನಿಶ್ಚಯವನ್ನು ತನ್ನ ಹಿತಸಂಬಂಧದ ದೃಷ್ಟಿಯಿಂದ ವಿಚಾರಿಸಿ ಬೆಂಬಲಿಸಬಹುದು; ಬಿಡಬಹುದು. ನಾವು ಇದಕ್ಕೋಸ್ಕರ ಶಾಂತಿಗೆ ಪೋಷಕವಾದ ನೀತಿಯನ್ನೇ ಅನುಸರಿಸುತ್ತಿದ್ದೇವೆ—ಮಹಾಯುದ್ಧದ ಖಂಡನೆಯನ್ನೂ ಇದೇ ಬೆಳಕಿನಲ್ಲಿ ನೋಡಬೇಕು. ಇಲ್ಲಿ ಅವಸರವಾಗಲೀ ಅನುಚಿತ ನಿರ್ಣಯವಾಗಲೀ ಪ್ರಯೋಜನ ತಾರದು. ಒಂದು ಸಮಸ್ಯೆಯನ್ನು ಬಿಡಿಸಲು ಹೋಗಿ, ಹದಿನೆಂಟು ಹೊಸ ಸಮಸ್ಯೆಗಳಿಗೆ ಅವಕಾಶಕೊಡುವುದು ಬುದ್ಧಿವಂತಿಕೆಯಾಗದು.

ನಮ್ಮ ದೇಶದ ಹಾಗು ಏಶ್ಯಾದ ಇತರ ದೇಶಗಳ ಭವಿಷ್ಯದ ಪ್ರಗತಿಯು ಶಾಂತಿಯನ್ನೇ ಪ್ರಾಮುಖ್ಯವಾಗಿ ಹೊಂದಿಕೊಂಡಿದೆ ನಮ್ಮ ಸ್ವಾಭಾವಿಕ ಒಲವಿನಿಂದಷ್ಟೇ ಅಲ್ಲ—ಪ್ರಗತಿಸಾಧನೆಯ ಉದ್ದೇಶದಿಂದಲೂ ನಾವು ಶಾಂತಿ ಸ್ಥಾಪನೆಗೆ ಪ್ರಾಶಸ್ತ್ಯವನ್ನು ಕೊಡುತ್ತಿದ್ದೇವೆ. ಅನಂತ ಕಾಲದವರೆಗೆ ಶಾಂತಿಯ ಭರವಸೆಯನ್ನು ಯಾರೂ ಕೊಡಲಾರರು, ನಿಜ. ಆದರೆ ಶಾಂತಿಯ ಅವಧಿಯು ಎಷ್ಟು ದೀರ್ಘವಾಯಿತೋ ಅಷ್ಟು ಮಟ್ಟಿಗೆ ಯುದ್ಧದ ಭಯವು ಭವಿಷ್ಯದಲ್ಲಿ ಕಡಮೆಯಾಗುತ್ತದೆ. ಈಗಿನ ಅಣು ಹಾಗು ಜಲಜನಕ ಬಾಂಬುಗಳ ಪ್ರತಾಪವನ್ನು ನೋಡಿದರೆ, ನಮ್ಮ ಮುಂದಿನ ಚಿತ್ರದಿಂದ ಯುದ್ಧವನ್ನು ಅಳಿಸಿಬಿಡಬೇಕೆನಿಸುತ್ತದೆ. ಈಗ ಲೋಕದಲ್ಲಿ ಎರಡು ಗುಂಪುಗಳನ್ನು ಕಾಣುತ್ತೇವೆ—ಕಮ್ಯುನಿಸ್ಟರನ್ನು ದ್ವೇಷಿಸುವ ಪಾಶ್ಚಾತ್ಯ ರಾಷ್ಟ್ರಗಳು ಒಂದಾದರೆ, ಪಾಶ್ಚಾತ್ಯ ರಾಷ್ಟ್ರಗಳ ಧೋರಣೆಯನ್ನು ಟೀಕಿಸುವ ಕಮ್ಯುನಿಸ್ಟ ರಾಷ್ಟ್ರಗಳೇ ಇನ್ನೊಂದು ಗುಂಪು ಇವೆರಡರ ನಡುವೆ ಶಾಂತಿಯುತ ಸಹಜೀವನವು ಸಾಧ್ಯವೆ? ಒಂದು ಇನ್ನೊಂದರ ಅಸ್ತಿತ್ವದ ಮೂಲಭೂತ ಅಂಶಗಳನ್ನು ಹೊಡೆದು ಹಾಕದೆ, ಸೌಹಾರ್ದದಿಂದ ಇರಬಲ್ಲುದೆ? ಇದು ಅಸಾಧ್ಯವೆಂದು ನಾವು ಹೇಳುವುದಾದಲ್ಲಿ ದೊಡ್ಡ ಸೋಲನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಸದ್ಯೈವದಿಂದ ನಾವು ಈ ನಿರ್ಣಯಕ್ಕೆ ಬರಬೇಕಾಗಿಲ್ಲ ಭಾರತೀಯರಾದ

(೧೦ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O UDIPI, S- India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಠೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡೆಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ ಭಾರತ.

ಆಚಾರ್ಯ ವಿನೋಬಾರ ಅಪೂರ್ವ ಪವಾಡ

ಮನುಷ್ಯನ ಸತ್ಪ್ರವೃತ್ತಿಯನ್ನು ಜಾಗೃತಗೊಳಿಸುವ ತಂತ್ರ

ಕೆಲವು ದಿನಗಳ ಹಿಂದೆ ಪ್ರಜಾ ಸಮಾಜವಾದಿ ಪಕ್ಷದ ಮುಂದಾಳುಗಳೂ ಘನ ಪಂಡಿತರೂ ಆದ ಆಚಾರ್ಯ ನರೇಂದ್ರ ದೇವರು ಭಾರತೀಯರನ್ನೆಲ್ಲ ವಿಚಾರಕ್ಕೆ ಹಚ್ಚುವ ಅಭಿಪ್ರಾಯವೊಂದನ್ನು ಪ್ರಕಟಿಸಿದರು. ವಿನೋಬಾಜೀಯವರು ಕೈಗೊಂಡ ಭೂದಾನ ಯಜ್ಞವು ಅಪೂರ್ವವಾದ ಅಹಿಂಸಾತ್ಮಕ ಪ್ರಯೋಗವೆಂದು ಲೋಕವೇ ಕೊಂಡಾಡುತ್ತಿರುವಾಗ, ಅವರ ಯಶಸ್ಸಿನಲ್ಲಿ ದೃಢವಾದ ವಿಶ್ವಾಸವನ್ನು ಎಲ್ಲರೂ ವ್ಯಕ್ತಗೊಳಿಸುತ್ತಿರುವಾಗ ಭೂದಾನ ಯಜ್ಞದ ಉದ್ದೇಶದಲ್ಲಿ ತನಗೆ ನಂಬಿಕೆ ಇಲ್ಲವೆಂದು ನರೇಂದ್ರ ದೇವರು ಹೇಳಿದರು. "ಭೂದಾನದ ನೈತಿಕ ಮಹತ್ವವನ್ನು ನಾನು ಒಪ್ಪಿಕೊಳ್ಳುವೆನಾದರೂ ಅದರ ಕಾರ್ಯಕ್ಷೇತ್ರವು ಪರಿಮಿತವಾಗಿದೆ. ಅಗತ್ಯವಾಗಿಯೂ ಶೀಘ್ರವಾಗಿಯೂ ನಡೆಯಬೇಕಾದ ಸಾಮಾಜಿಕ ಮತ್ತು ಆರ್ಥಿಕ ಪರಿವರ್ತನೆಯು ವರ್ಗ ಸಮರದಿಂದಲೇ ಸಾಧಿಸಲ್ಪಡಬೇಕಾಗುವುದೆಂದು ನನ್ನ ಅಭಿಪ್ರಾಯ. ಜಮೀನುದಾರಿ ನಿರ್ಮೂಲನಕ್ಕೆ ಸರಕಾರ ಕೈಗೊಂಡ ಕ್ರಮಗಳೂ ಪರಿಹಾರವಿಲ್ಲದೆ ಭೂಮಿಯ ವಿತರಣೆ ನಡೆಯಬೇಕೆಂಬ ರಾಜಕೀಯ ಪಕ್ಷಗಳ ಆಂದೋಲನವೂ ವಿನೋಬಾರ ಕೈಗೆ ಭೂಮಿಯನ್ನು ದಾನವಾಗಿ ಒಪ್ಪಿಸುವಂತೆ ಜನರನ್ನು ಪ್ರೇರೇಪಿಸಿದೇ ಹೊರತು ಅದಕ್ಕೆ ತನ್ನದೇ ಆದ ತಾತ್ವಿಕ ನೆಲಗಟ್ಟು ಇರುವುದಿಲ್ಲ" ಎಂದು ನರೇಂದ್ರ ದೇವರು ಹೇಳಿದರು. ಈ ಕಟುವಾದ ವಿಮರ್ಶೆಯ ಹಿನ್ನೆಲೆಯಲ್ಲಿ ಧ್ವನಿಸುವ ಧೋರಣೆಗೆ ಸಮರ್ಪಕವಾದ ಉತ್ತರವನ್ನು ಭೂದಾನದ ಪುರಸ್ಕರ್ತರು ಕೊಡುವುದು ಅಗತ್ಯ. ಪ್ರಜಾ ಸಮಾಜವಾದಿ ಪಕ್ಷದ ಇನ್ನೊಬ್ಬ ಧೀರ ಶ್ರೀ ಜಯಪ್ರಕಾಶ ನಾರಾಯಣರು ಇಂಥ ಪ್ರಯತ್ನ ಮಾಡಿದ್ದಾರೆ. ವರ್ಗ ಸಮರದ ಬದಲು ಪರಿವರ್ತನ ಭಾವನೆಯನ್ನು ಬೋಧಿಸಿಕೊಂಡ. ಸಾಮಾಜಿಕ ಕ್ರಾಂತಿಯನ್ನು ಮಾಡಲು ಸಾಧ್ಯವೆಂದೂ ಆದೇ ವಿನೋಬಾಜೀಯ [illegible] ಎಂದು ಹೇಳುತ್ತಾರೆ.

ಅಹಿಂಸಾತ್ಮಕ ಅರ್ಥಶಾಸ್ತ್ರ

ಆಚಾರ್ಯ ವಿನೋಬಾ ಭಾವೆಯವರು ೧೯೫೧ನೇ ಏಪ್ರೀಲಿನಲ್ಲಿ ಕಮ್ಯೂನಿಸ್ಟರ ಚಟುವಟಿಕೆಯ ಕೇಂದ್ರವಾದ ತೆಲಂಗಾಣದಲ್ಲಿ, ಸರ್ವಪ್ರಥಮವಾಗಿ ತಮ್ಮ ಭೂದಾನ ಯಜ್ಞವನ್ನು ಪ್ರಾರಂಭಿಸಿದರು. ಅಂದಿನಿಂದ ಇಂದಿನವರೆಗೆ ಅವರಿಗೆ ದೊರೆತ ಪ್ರೋತ್ಸಾಹವು ತೀವ್ರ ನಿರಾಶಾವಾದಿಗಳನ್ನೂ ವಿಸ್ಮಯಗೊಳಿಸುತ್ತದೆ. ೧೯೫೪ನೇ ಏಪ್ರೀಲು ಮಾಸಾಂತ್ಯಕ್ಕೆ ೨೫ ಲಕ್ಷ ಎಕ್ರೆ ಭೂಮಿಯನ್ನು ದಾನವಾಗಿ ಸಂಗ್ರಹಿಸಬೇಕೆಂದು ನಿರ್ಧರಿಸಿದ್ದರು. ಈ ಗುರಿಯು ಎಂಟು ಲಕ್ಷ ಎಕ್ರೆಯಷ್ಟು ಹೆಚ್ಚು ಪ್ರಮಾಣದಲ್ಲಿ ಸಿದ್ಧಿಸಿತು. ಕನಿಷ್ಠ ೫ ಕೋಟಿ ಎಕ್ರೆ ಭೂಮಿಯನ್ನಾದರೂ ದಾನ ಪಡೆಯುವುದು ವಿನೋಬಾಜೀಯ ಸಂಕಲ್ಪ. ಇದು ಕೈಗೂಡುವುದಕ್ಕೆ ಇನ್ನೂ ಕೆಲವು ಸಮಯ ಬೇಕಾದೀತು ಆದರೆ ಈಗ ಕೈಗೊಳ್ಳಲಾದ ಪ್ರಯತ್ನಗಳು ಜನರ ಮನೋಭಾವನೆಯನ್ನು ಯಜ್ಞದ ಕಡೆಗೆ ಆಕರ್ಷಿಸಿಕೊಂಡಿವೆ; ಭೂಮಿಯನ್ನು ನೋಡುವ ದೃಷ್ಟಿಕೋಣವನ್ನು ಪರಿಮಾರ್ಜಿತಗೊಳಿಸಿವೆ—ಎಂಬುದಂತೂ ಸತ್ಯ. ಭೂದಾನದಲ್ಲಿ ವಿನೋಬಾ ಏಕಾಗಿ ಪ್ರವೃತ್ತರಾದರು.? ಭಾರತದಲ್ಲಿ ಭೂಮಿಯೇ ಸರ್ವಸ್ವವಾಗಿದೆ; ಅದು ಉತ್ಪಾದನೆಯ ಪ್ರಾಮುಖ್ಯ ಸ್ರೋತವಾಗಿದೆ; ಭೂಮಿಯ ಹಸಿವು ನಮ್ಮಲ್ಲಿ ತೀವ್ರವಾಗಿಯೇ ಕಂಡು ಬರುತ್ತದೆ. ಮೇಲಾಗಿ, ನೀರು-ಗಾಳಿ-ಬೆಳಕುಗಳಂತೆಯೇ ಭಗವಂತನಿಂದ ನಮಗೆ ದೇಣಿಗೆಯಾಗಿ ದೊರೆತ ವಸ್ತು ಭೂಮಿಯೆಂದು ಸುಲಭದಲ್ಲಿ ಪ್ರತಿಪಾದಿಸಲು ಸಾಧ್ಯ. ಅಹಿಂಸಾತ್ಮಕ ಅರ್ಥ ಶಾಸ್ತ್ರದ ತಿರುಳನ್ನು ಮನವರಿಕೆ ಮಾಡಿಕೊಡಲು, ಎಲ್ಲವೂ ಪರಮಾತ್ಮನದ್ದೆಂದು ತಿಳಿಸಿ ಹೇಳಲು, ಭೂಮಿಯನ್ನು ದಾನವಾಗಿ ಕೇಳುವುದು ಯೋಗ್ಯ ಉಪಾಯ. ಈ ಮೂಲಭೂತ ವಿಚಾರವು ನಿಧಾನವಾಗಿಯೇ ಆದರೂ ದೃಢವಾಗಿ ಜನರಲ್ಲಿ ಬೇರುಬಿಟ್ಟಂತೆಲ್ಲ ವಿನೋಬಾಜೀಯವರು ಸಂಪತ್ತಿ ದಾನ ಯಜ್ಞವನ್ನು ಪ್ರಾರಂಭಿಸಿದರು ಹೇಗೆಯೇ ಸಾಧನ ದಾನ, ಶ್ರಮ ದಾನ, ಪ್ರೇಮದಾನ ಎಂದು ಮುಂತಾಗಿ ಭೂದಾನವು ಕವಲೊಡೆಯಿತು. ಬೋಧ ಗಯಾದಲ್ಲಿ ಏಪ್ರೀಲಿನಲ್ಲಿ ಸರ್ವೋದಯ ಸಮ್ಮೇಳನವು ಜರಗಿದ ಕಾಲಕ್ಕೆ ಜೀವನ ದಾನ ಎಂಬ ಹೊಸತೊಂದು ಉಪಕ್ರಮವು ರಾಷ್ಟ್ರದ ತರುಣ ತರುಣಿಯರಿಗೆ ಆಹ್ವಾನ ರೂಪದಲ್ಲಿ ವ್ಯಕ್ತಗೊಂಡಿತು.

ಹೃದಯ ಪರಿವರ್ತನೆ

ಭೂದಾನ ಮತ್ತು ಇತರ ಯಾವುದೇ ಆನ್ತಂಗಿಕ ಕಾರ್ಯಗಳಲ್ಲಿ ಮೂಲಭೂತವಾದ ಸಿದ್ಧಾಂತವು ಗಾಂಧೀಜಿಯ ತತ್ವಕ್ಕೆ ಅನುಗುಣವಾಗಿರುತ್ತದೆ— ನರೇಂದ್ರ ದೇವರು ವರ್ಗಸಮರವೂ ಸರಕಾರವೂ ಸಾಮಾಜಿಕ ಹಾಗು ಆರ್ಥಿಕ ಬದಲಾವಣೆಯನ್ನು ಸಾಧಿಸುವ ಶಕ್ತಿ ಪಡೆದವುಗಳೆಂದು ಹೇಳುತ್ತಾರೆ. ಆದರೆ ಗಾಂಧೀಜಿಯವರ ಬರೆಹಗಳನ್ನೂ ಜೀವನವನ್ನೂ ಮನನ ಮಾಡಿದರೆ, ಸರಕಾರವೂ ಕಾಯಿದೆಯೂ ಮಾಡಬಹುದಾದ ಕೆಲಸ ಅತ್ಯಲ್ಪ ಮಾತ್ರವಲ್ಲ, ಅಶಾಶ್ವತವೆಂದೂ ತಿಳಿದುಬರುತ್ತದೆ ಜನಮತಕ್ಕೆ ಮುದ್ರೆ ಹೊಡೆಯುವುದೇ ಶಾಸನಾಂಗದ ಕೆಲಸ; ಹೊರತು, ಜನರ ಮೇಲೆ ಕಾಯಿದೆಗಳು ಸವಾರಿ ಮಾಡುವುದು ಕಷ್ಟ. ಸಾರ್ವಜನಿಕ ಅಭಿಪ್ರಾಯವನ್ನು ಉದಾತ್ತಧ್ಯೇಯ ಮತ್ತು ಆದರ್ಶಗಳ ಕಡೆಗೆ ಒಲಿಸಿಕೊಳ್ಳುವ ಪ್ರಯತ್ನ ಯಶಸ್ಸುಹೊಂದಿದ ಬಳಿಕ ಉಂಟಾದ ವಾತಾವರಣಕ್ಕೆ ಶಾಸನದ ಚೌಕಟ್ಟನ್ನು ಹಾಕಬಹುದು. ಮನುಷ್ಯನಲ್ಲಿ ಸುಪ್ತವಿರುವ ನೈತಿಕ ಹಾಗು ದೈವಿಕ ಭಾವನೆಗಳನ್ನು ಜಾಗೃತಗೊಳಿಸುವುದರಿಂದಲೇ ಶಾಶ್ವತ ಪರಿಣಾಮವನ್ನುಂಟುಮಾಡಬಲ್ಲ ಕ್ರಾಂತಿಯನ್ನು ಕೈಗೂಡಿಸಬಹುದು. ಕಾಯಿದೆಯು ಸಾಮಾಜಿಕ ಪರಿವರ್ತನೆಗೆ ಒತ್ತಾಯ ತಂದೀತು; ಆದರೆ ಹೃದಯ ಶುದ್ಧಿಗೆ ಅದು ನೆರವಾಗಲಾರದು. ಏಕೆಂದರೆ ಕಾಯಿದೆಯ ಬರವಣಿಗೆಯಲ್ಲಿ ಆ ಚೈತನ್ಯವಿರುವುದಿಲ್ಲ. ಮನುಷ್ಯನ ಹೃದಯದೊಡನೆ ಮಾತನಾಡುವ ಶಕ್ತಿ ಇನ್ನೊಂದು ದೊಡ್ಡ ಹೃದಯಕ್ಕೆ ಮಾತ್ರ ಇರುತ್ತದೆ. ಭೂದಾನ ಯಜ್ಞವು ಮನುಷ್ಯನ ಹೃದಯ ಪರಿವರ್ತನೆಯಲ್ಲಿ ವಿಶ್ವಾಸವನ್ನು ಪ್ರಕಟಿಸುತ್ತದೆ. ಹೃದಯ ಪರಿವರ್ತನೆಯು ವರ್ಗ ಸಮರವು ಸಾಧಿಸಬಹುದಾದ ಕೆಲಸಕ್ಕಿಂತ ಸಾವಿರಾರು ಪಾಲು ಅಧಿಕ ಫಲವನ್ನು ಕೊಡುತ್ತದೆ. ವರ್ಗಸಮರದ ಕಾವು ಆರಿದೊಡನೆಯೇ ಸಮಾಜವು ಹಿಂದಿನ ಸ್ಥಿತಿಯನ್ನು ಅವಲಂಬಿಸಬಹುದು; ಆದರೆ ಒಮ್ಮೆ ಹೃದಯವು ಪರಿವರ್ತಿಸಲ್ಪಟ್ಟರೆ, ಮುಂದೆಂದೂ ಅದು ಮೊದಲಿನ ಹೀನ ಬದುಕನ್ನು ಸ್ವೀಕರಿಸಲಾರದು.

ವಿಚಾರದ ಕಿಡಿ

ಅಹಿಂಸಾತ್ಮಕ ಅರ್ಥಶಾಸ್ತ್ರ [illegible] ಅಸ್ತೇಯ ಮತ್ತು ಅಪರಿಗ್ರಹವೆಂಬ ಉದಾತ್ತ ತತ್ವಗಳನ್ನು ಆಶ್ರಯಿಸುತ್ತದೆ. ಅರ್ಥಪ್ರಾಪ್ತಿಯ ಪದ್ಧತಿಯನ್ನು ಅಸ್ತೇಯವು ನಿಯಮನಗೊಳಿಸುತ್ತದೆ. ಅರ್ಥದ ಪ್ರಮಾಣವನ್ನು ಅಪರಿಗ್ರಹವು ನಿಯಂತ್ರಿಸುತ್ತದೆ. ಶರೀರನಿರ್ವಾಹವು ಶ್ರಮಮೂಲಕ ಆಗ ತಕ್ಕದ್ದೆಂದೂ ನಾವು ಇನ್ನೊಬ್ಬರ ಕಷ್ಟಾರ್ಜಿತ ವಸ್ತುವಿನ ಮೇಲೆ ಹೊಂದಿಕೊಳ್ಳದೆ ಸ್ವಂತ ದುಡಿಮೆಯಿಂದಲೇ ಬದುಕಬೇಕೆಂದೂ ಅಸ್ತೇಯವು ಉಪದೇಶಿಸುತ್ತದೆ. ನಾವು ಗಳಿಸಿದ್ದು ಏನಿದ್ದರೂ ಅದಕ್ಕೆ ನಮ್ಮ ಪುರುಷಾರ್ಥವು ಮೂಲ ಕಾರಣವಲ್ಲ—ಆ ಪುರುಷಾರ್ಥವನ್ನು ನಮಗೆ ನೀಡಿದ ಪರಮಾತ್ಮನ ಕೃಪೆಯೇ ಹೇತು ಎಂಬ ಭಾವನೆಯು ಅಪರಿಗ್ರಹದ ತಿರುಳು. ಈ ವಿಚಾರ ಮನಸ್ಸಿನಲ್ಲಿ ಮೂಡಿದಾಗ, ನಮ್ಮ ಸಂಪತ್ತು ಏನಿದ್ದರೂ ಎಷ್ಟಿದ್ದರೂ ಅದು ದೇವರು ಒಪ್ಪಿಸಿಕೊಟ್ಟ ವಿಶ್ವಸ್ತ ನಿಧಿಯೆಂದೂ ಅದರಿಂದ ನಮ್ಮ ಜೀವನ ನಿರ್ವಾಹಕ್ಕೆ ನ್ಯಾಯವಾಗಿ ಅಗತ್ಯವೆನಿಸಿದಷ್ಟನ್ನು ಮಾತ್ರ ನಾವು ಉಪಯೋಗಿಸಬಲ್ಲೆವೆಂದೂ ಬೋಧವಾಗುತ್ತದೆ. ಉಳಿದ ಅಂಶವನ್ನು ಸಾಮಾಜಿಕ ಹಿತಕಾರ್ಯಗಳಿಗೆ ವಿನಿಯೋಗಿಸಬೇಕೆಂದು ಕರ್ತವ್ಯ ಹೇಳುತ್ತದೆ. ವಿನೋಬಾರಿಂದ ಪ್ರವರ್ತಿಸಲ್ಪಟ್ಟ ಸಂಪತ್ತಿದಾನ ಯಜ್ಞವು ಮನುಷ್ಯನ ನ್ಯಾಯ ಬುದ್ಧಿಗೆ ಕೊಟ್ಟ ಆಹ್ವಾನವೆಂದರೂ ಸಲ್ಲುತ್ತದೆ. ತಾನು ದುಡಿದು

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ಬೆಲೆಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ
ರಿಜಿಸ್ಟರ್ಡ್ ನಂ ೧] [ಮೆಡಿಕೇಟೆಡ್
ಸ್ಮರಣಶಕ್ತಿ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬಿಳಿ ಕೂದಲು ಕಪ್ಪಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ವಾಯುವ್ಯ ಭಾರತದ ರೈತರ ಭಾಗ್ಯೋದಯ

ನಾಂಗಲ ಕಾಲುವೆಗೆ ನೀರು ಬಿಡುವ ಸಮಾರಂಭ

ವಾಯುವ್ಯ ಭಾರತದ ಪೂರ್ವ ಪಂಜಾಬ, ಪೆಪ್ಸು ಹಾಗು ರಾಜಸ್ಥಾನಗಳ ರೈತರ ಭಾಗ್ಯನಿಧಿ ಎನಿಸಿದ ಭಾಕರಾ ನಾಂಗಲಾ ಯೋಜನೆಯ ಮೊದಲನೆಯ ಘಟ್ಟವೊಂದು ಕಳೆದ ವಾರ ಮುಗಿದು ನಾಂಗಲ ಕಾಲುವೆಗೆ ನೀರನ್ನು ಹರಿಯ ಬಿಡುವ ಸಮಾರಂಭವು ಪ್ರಧಾನ ಮಂತ್ರಿ ನೆಹರೂರಿಂದ ವಿಧ್ಯುಕ್ತವಾಗಿ ನೆರವೇರಿತು. ನಾಂಗಲ ಕಾಲುವೆಯು ೬೦ ಲಕ್ಷ ಎಕ್ರೆ ಪ್ರದೇಶಕ್ಕೆ ನೀರುಣಿಸುತ್ತದೆ. ಹಿಂದಿಯಲ್ಲಿ ಕಾಲುವೆ ಎಂಬ ಅರ್ಥವನ್ನು ಕೊಡುವ "ನಹರ್" ಶಬ್ದದಿಂದ ಜನಿಸಿದ ನೆಹರೂ ಎಂಬ ಕುಟುಂಬದ ಹೆಸರು ಹೊಂದಿದ ಪ್ರಧಾನ ಮಂತ್ರಿಗಳು "ನಿಮ್ಮ ಪರವಾಗಿಯೂ ನನ್ನ ಪರವಾಗಿಯೂ ಭಾಕರಾ ನಾಂಗಲ ಯೋಜನೆಯನ್ನು ಭಾರತೀಯ ಜನತೆಯ ಒಳಿತಿಗಾಗಿ ಮುಡುಪಿಡುತ್ತೇನೆ"ಎಂದು ಇದೇ ದಿನಾಂಕ ೮ರಂದು ಸಾರಿದಾಗ, ನೆರೆದ ಜನಸ್ತೋಮವು ಹರ್ಷೋದ್ಗಾರವನ್ನು ಮಾಡಿತು. ಈ ಸಮಾರಂಭಕ್ಕೆ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್, ಉಪರಾಷ್ಟ್ರಪತಿ ರಾಧಾಕೃಷ್ಣನ್ ಮುಂತಾಗಿ ಹಲವು ಮಹನೀಯರಿಂದ ಶುಭ ಸಂದೇಶಗಳು ಬಂದಿದ್ದವು. ಇವರು ನಮ್ಮ ಸ್ಥಾಪತ್ಯ ಶಿಲ್ಪಿಗಳು ವ್ಯಕ್ತಗೊಳಿಸಿದ ಕೌಶಲ್ಯವನ್ನು ತಮ್ಮ ಸಂದೇಶಗಳಲ್ಲಿ ಮೆಚ್ಚಿಕೊಂಡಿದ್ದಲ್ಲದೆ, ಭಾರತದ ಮುಖವನ್ನೆ ಬದಲಾಯಿಸಿಬಿಡುವ ಮಹಾ ಕಾರ್ಯವೆಂದು ಯೋಜನೆಯನ್ನು ವರ್ಣಿಸಿದರು.

ಹೊಸ ಜೀವನ

ತಮ್ಮ ಜೀವನದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದ ಆ ಶುಭದಿನದಂದು ಸುತ್ತಣ ಹಳ್ಳಿಗಳ ರೈತರೂ ನಾಗರಿಕರೂ ವೈವಿಧ್ಯಪೂರ್ಣವಾದ ಪೋಷಾಕುಗಳನ್ನು ಧರಿಸಿಕೊಂಡು ಸಮಾರಂಭಕ್ಕೆ ಅನೇಕ ತಾಸುಗಳ ಮುಂಚಿತವಾಗಿಯೇ ಆಗಮಿಸಿದ್ದರು. ಸಟ್ಲೆಜ್ ನದಿಯ ಎರಡೂ ದಂಡೆಯ ಮೇಲೆ ಸಾಸಿವೆಕಾಳಿಗೂ ಬೀಳಲು ಎಡೆ ಇಲ್ಲದಂತೆ ಅವರು ಕುಳಿತಿದ್ದರು. ಎಲ್ಲರ ಮುಖಗಳೂ ಉಲ್ಲಸಿತವಿದ್ದವು. ಪ್ರಧಾನಮಂತ್ರಿಗಳು ನದಿಯ ಬಲದಂಡೆಯ ಮೇಲೆ ೨೦ ಅಡಿ ಎತ್ತರವಾದ ವೇದಿಕೆಯನ್ನೇರಿ, ಒಂದು ವಿದ್ಯುತ್ತಿನ ಗುಂಡಿಯನ್ನು ಒತ್ತಿದೊಡನೆಯೇ ನಾಂಗಲ ಕಾಲುವೆಯ ಬಾಗಿಲೊಂದು ನಿಧಾನವಾಗಿ ಮೇಲೆದ್ದು ಸಟ್ಲೆಜ್ ನದಿಯ ನೀರನ್ನು ನಾಲೆಯೊಳಗೆ ಬಿಟ್ಟಿತು. ಇದನ್ನು ಕಂಡ ಜನರು ಪಟಾಕಿಗಳನ್ನು ಹಾರಿಸಿಯೂ ಪುಗ್ಗಗಳನ್ನು ಏರಿಸಿಯೂ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು. ಒಂದು ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿ ನೆರೆದಿದ್ದ ಜನರು ಜಯಕಾರವನ್ನು ಮಾಡುತ್ತಿದ್ದಂತೆ, ಭಾರತೀಯ ವಿಮಾನ ದಳದ ಎರಡು ವಿಮಾನಗಳು ವಂದನೆಯನ್ನು ಸಲ್ಲಿಸಲು ತೀರ ಕೆಳಗಿನಿಂದ ಹಾರಿಹೋದವು. ಮತ್ತು ಕಾಲುವೆಯ ಮಹತ್ವವನ್ನು ವಿವರಿಸುವ ಕರಪತ್ರಗಳನ್ನು ಜನರ ನಡುವೆ ಉದುರಿಸಿದವು.

ಭಾರತದ ಜನಬಲ

ನೆಹರೂರವರು ನಾಲೆಯ ಉದ್ಘಾಟನೆಯನ್ನು ಮಾಡುತ್ತಾ "ನಾನು ಭಾಕರಾ ನಾಂಗಲ ಯೋಜನೆಯನ್ನು ತಾಂತ್ರಿಕರಿಗೂ ಸ್ಥಾಪತ್ಯ ವಿಜ್ಞಾನಿಗಳಿಗೂ ರಾಷ್ಟ್ರೀಯ ಅಭಿವೃದ್ಧಿಯನ್ನು ಕೈಗೊಳ್ಳುವುದಕ್ಕೆ ಬೇಕಾದ ತರಬೇತಿಯೊದಗಿಸುವ ವಿಶ್ವವಿದ್ಯಾಲಯವೆಂದು ಭಾವಿಸುತ್ತೇನೆ" ಎಂದು ವರ್ಣಿಸಿದರು. ಭಾರತದಲ್ಲಿ ಇಂದು ಶಾಂತಿಯುತ ರೀತಿಯಲ್ಲಿ ಕ್ರಾಂತಿಯು ನಡೆಯುತ್ತಿದೆಯೆಂದು ಹೇಳುತ್ತಾ "ದುರ್ದೈವದಿಂದ ಶಾಂತಿಯುತ ಕಾರ್ಯಗಳು ಸಮಾಚಾರದ ರೂಪದಲ್ಲಿ ಪರಿಣಮಿಸುವುದಿಲ್ಲ; ಅದೇ ಎಲ್ಲಿಯಾದರೂ ಗಲಭೆ ದೊಂಬಿಗಳಾದರೆ ಕೂಡಲೇ ಆ ಸುದ್ದಿಯು ಊರೂರಿಗೆ ಮುಟ್ಟುತ್ತದೆ" ಎಂದರು. ಶಾಂತ ರೀತಿಯಲ್ಲಿ ನಿಧಾನವಾಗಿ ಕೈಗೂಡಿಸಿದ ಈ ಭಾಕರಾ ನಾಂಗಲ ಯೋಜನೆಯಂಥ ಕೆಲಸವು ಸುದ್ದಿ ರೂಪದಲ್ಲಿ ಜನರನ್ನು ಸೇರುವುದಿಲ್ಲ ಎಂದವರು ವಿಷಾದಿಸಿದರು. ಈ ಕುರಿತು ಏನಾದರೂ ಪ್ರಯತ್ನ ಮಾಡಿದರೆ ಅದನ್ನು ಟೀಕಿಸಲಾಗುತ್ತದೆ. ಸರಕಾರದ ಚಟುವಟಿಕೆಗಳನ್ನು ಹೀಗಳೆದು ಮಾತನಾಡುವುದು ಇಂದಿನ ರಾಜಕೀಯ ಪಕ್ಷಗಳ ಕೆಲಸವಾಗಿದೆ. "ಇವರು ಸರಕಾರವನ್ನು ದೂರಲಿ, ಚಿಂತಿಲ್ಲ; ಆದರೆ ಭಾರತದಲ್ಲಿ ಏನೂ ನಡೆದಿಲ್ಲವೆಂದು ೩೬ ಕೋಟಿ ಭಾರತೀಯರನ್ನು ಮಾತ್ರ ಕೆಣಕಲಾಗದು. ನಮ್ಮ ದೇಶದಲ್ಲಿ ನಾವೇನು ಮಹತ್ಕಾರ್ಯ ಮಾಡುತ್ತಿರುವೆನೆಂಬುದನ್ನು ನೋಡಬನ್ನಿರೆಂದು ನಾನು ಅವರಿಗೆ ಆಹ್ವಾನ ಕೊಡುತ್ತೇನೆ" ಎಂದು ನೆಹರೂ ನುಡಿದರು.

ಪವಿತ್ರ ಕ್ಷೇತ್ರ

ದೊಡ್ಡ ದೊಡ್ಡ ಯೋಜನೆಗಳು ಜರಗುವ ಪ್ರದೇಶವನ್ನು ನೋಡಿದಾಗ "ನನ

ಹೊಲಕ್ಕಾಗಿ ಸಿಮೆಂಟು



ಬಾಳಬೇಕಿದ್ದರೆ ಎ.ಸಿ.ಸಿ. ಸಿಮೆಂಟಿನಿಂದ ಕಟ್ಟಿರಿ

ಎ.ಸಿ.ಸಿ. ಸಿಮೆಂಟು ನಂ ೧೯೪೭ ನೆಯ ಇಸ್ವಿಯ ನಂಬರು ೧೨ ರ ಬ್ರಿಟಿಷ್ ಮಟ್ಟದ ತಯಾರಿಕೆಗಿಂತ, ಹಾಗೂ ೧೯೫೧ ನೆಯ ಇಸ್ವಿಯ ಭಾರತೀಯ ಮಟ್ಟದ ತಯಾರಿಕೆಗಿಂತ ಮೇಲ್ಪಟ್ಟಿದ್ದು ಸದ್ಯಕ್ಕೆ ದಕ್ಷಿಣ ಹಿಂದುಸ್ಥಾನದಲ್ಲಿ ದೊರೆಯುತ್ತಿದೆ

ಕಾಂಕ್ರೀಟ್ ಕಟ್ಟುವಿಕೆಗೆ ಸಂಬಂಧಪಟ್ಟ ಎಲ್ಲ ಪ್ರಶ್ನೆಗಳ ವಿಷಯವಾಗಿ ತಾಂತ್ರಿಕ ಸಲಹೆಯು ಕಾಂಕ್ರೀಟ್ ಅಸೋಸಿಯೇಷನ್ ಆಫ್ ಇಂಡಿಯಾ, ೯, ಮೌಂಟ್ ರೋಡ್ ಮದ್ರಾಸ್ ಅಥವಾ ಸುಗರ್ ಕಂಪನಿ ಬಿಲ್ಡಿಂಗ್, ಬೆಂಗಳೂರು, ಇವರ ಕಡೆಯಿಂದ ಪುಕ್ಕಟೆಯಾಗಿ ದೊರೆಯ ಬಹುದು.

ನೀಲಗಿರಿ ಬ್ರಾಂಡ್

ಸಿಮೆಂಟು

ಸದ್ಯಕ್ಕೆ ದಕ್ಷಿಣ ಹಿಂದುಸ್ಥಾನದಲ್ಲಿ ದೊರೆಯುತ್ತದೆ

ಎ ಸಿ ಸಿ

ಸೇಲ್ಸ್ ಮ್ಯಾನೇಜರ್ಸ್

ದಿ ಸಿಮೆಂಟ್ ಮಾರ್ಕೆಟಿಂಗ್ ಕಂಪೆನಿ ಆಫ್ ಇಂಡಿಯಾ ಲಿಮಿಟೆಡ್

ಸುಗರ್ ಕಂಪೆನಿ ಬಿಲ್ಡಿಂಗ್ ಬೆಂಗಳೂರು, ೪/೧೨ ರೇಸ್ ಕೋರ್ಸ್, ಕೊಯಿಂಬತ್ತೂರು, ೯ ಮೌಂಟ್ ರೋಡ್, ಮದ್ರಾಸ್.

A 1 CM 108 Kanarese

ವಿಶ್ವದಲ್ಲಿಯೇ ದೊಡ್ಡದೆನಿಸಿದ ಅಣೆಕಟ್ಟು

ಗೆ ಅವುಗಳು ಪವಿತ್ರವಾದ ಮಂದಿರಗಳೆಂದೂ ಅಲ್ಲೆಲ್ಲ ಜನತಾ ಜನಾರ್ದನನ ಪೂಜೆ ಸಲ್ಲುತ್ತದೆಂದೂ ಭಾಸವಾಗುತ್ತದೆ. ಈ ಯೋಜನಾಕ್ಷೇತ್ರಗಳಷ್ಟು ದೇವಮಂದಿರವಾಗಲೀ ಗುರುದ್ವಾರವಾಗಲೀ ಪೂಜಾಸ್ಥಳವೆಂದು ನಾನು ಭಾವಿಸುವುದಿಲ್ಲ" ಎಂದು ನೆಹರೂ ತಮ್ಮ ವಿಚಾರವನ್ನು ವ್ಯಕ್ತಪಡಿಸಿದರು. ಪಾಕಿಸ್ತಾನದೊಡನೆ ಕಾಲುವೆ ನೀರಿನ ವಿಷಯದಲ್ಲಿರುವ ತಂಟೆಯನ್ನು ಪ್ರಸ್ತಾಪಿಸುತ್ತಾ ಅವರು ಭಾರತದ ನ್ಯಾಯವಾದ ನಿಲುಮೆಯನ್ನು ಸ್ಪಷ್ಟಗೊಳಿಸಿದರು. ವಿಭಜನೆಯಾಗುವ ಕಾಲಕ್ಕೆ ಮಾಡಿಕೊಂಡ ಒಡಂಬಡಿಕೆಯಂತೆಯೇ ಭಾರತವು ಕೆಲಸ ಮಾಡುತ್ತಿದೆ ಎಂದವರು ಖಚಿತವಾಗಿ ಅಭಿಪ್ರಾಯಪಟ್ಟರು. "ಕಾನೂನಿನಂತೆ ಹೋಗುವುದಾದರೆ ಪಾಕಿಸ್ತಾನಕ್ಕೆ ನೀರು ಹರಿಯಗೊಡುವುದನ್ನು ಭಾರತವು ನಿಲ್ಲಿಸಿಬಿಡಬಲ್ಲುದು; ಆದರೆ ನಾವು ಮಾನವೀಯ ದೃಷ್ಟಿಯಿಂದ ಪ್ರಶ್ನೆಯನ್ನು ನೋಡುತ್ತೇವೆ" ಎಂದು ಹೇಳುತ್ತಾ ನೆಹರೂ ಪಶ್ಚಿಮ ಪಾಕಿಸ್ತಾನದ ಲಕ್ಷಾಂತರ ರೈತರ ಹಿತಾಸಕ್ತಿಯ ಮೇಲೆ ವಿಪರೀತ ಪರಿಣಾಮಮಾಡುವ ಕೆಲಸದಲ್ಲಿ ಭಾರತವು ಸದ್ಯಕ್ಕೆ ಪ್ರವೃತ್ತವಾಗುವುದಿಲ್ಲೆಂದು ಸಾರಿದರು. "ನಿಜವಾಗಿ ಪಾಕಿಸ್ತಾನಕ್ಕೆ ನೀರಿನ ಕೊರತೆ ಇಲ್ಲ; ಪಶ್ಚಿಮ ಪಂಜಾಬದ ಜಲಸ್ರೋತಗಳನ್ನು ಉಪಯೋಗಿಸುವುದಕ್ಕೆ ಅದು ಪ್ರಯತ್ನಿಸುತ್ತಿಲ್ಲ, ಅಷ್ಟೇ. ಜಾಗತಿಕ ಬ್ಯಾಂಕು ಇದನ್ನು ಸ್ಪಷ್ಟವಾಗಿ ಹೇಳುತ್ತದೆ. ಪಾಕಿಸ್ತಾನ ಈ ವಿಷಯವನ್ನು ಪರ್ಯಾಲೋಚಿಸಲಿ; ನಾವೂ ತುಸು ಕಾಲಾವಧಿಯನ್ನು ಕೊಡುತ್ತೇವೆ. ಆದರೆ ಇಂದಿನ ಅನಿಶ್ಚಿತ ಪರಿಸ್ಥಿತಿಯು ಅನಿರ್ದಿಷ್ಟವಾಗಿ ಮುಂದುವರಿಯಲಾರದು" ಎಂದವರು ಪಾಕಿಸ್ತಾನಕ್ಕೆ ಎಚ್ಚರಿಕೆಯನ್ನು ಕೊಟ್ಟರು.

ರೋಮಾಂಚಕ ಕೆಲಸ

ಪೂರ್ವ ಪಂಜಾಬದ ಮುಖ್ಯಮಂತ್ರಿ ಶ್ರೀ ಭೀಮಸೇನ ಸಾಚಾರರು ಭಾಕರಾ ಅಣೆಕಟ್ಟನ್ನು ಪ್ರಧಾನಮಂತ್ರಿಗಳ ಹೆಸರಿನಿಂದ ಕರೆಯಬೇಕೆಂದು ಸೂಚಿಸಿ ದಾಗ ನೆಹರೂರವರು ಆ ಪ್ರವೃತ್ತಿಯನ್ನು ಖಂಡಿಸಿ "ವ್ಯಕ್ತಿಗಳ ಸ್ಮಾರಕ ಕ್ಷೇತ್ರವೆ ಈ ಯೋಜನೆ ಇರುವುದಿಲ್ಲ; ಜನತೆಯ ಹಿತಕ್ಕಾಗಿ ಇದನ್ನು ಕೈಗೊಂಡಿದ್ದೇವೆ" ಎಂದು ತಿಳಿಸಿದರು. ಈ ಯೋಜನೆಯ ಕೆಲಸಗಳು ನಡೆಯುತ್ತಿದ್ದಾಗ ಸುಮಾರು ೨೦ ಮಂದಿ ಮಡಿದಿದ್ದರು. ಅವರ ಸ್ಮರಣಾರ್ಥವಾಗಿ ಒಂದು ಕಲ್ಲು ನೆಡಲಾಯಿತು. ಸ್ಥಾಪತ್ಯ ವಿಜ್ಞಾನದಲ್ಲಿ ಈ ಯೋಜನೆಯು ಇತರ ಕ್ಷೇತ್ರದಲ್ಲೂ ಕೌಶಲ್ಯ ತೋರಿಸಿದವರಿಗೆ ಪಾರಿತೋಷಕಗಳು ಹಂಚಲಾಯಿತು. ಸಮಾರಂಭ ಕಾಲದಲ್ಲಿ ಒಂದು ದುರ್ಘಟನೆಯೂ ನಡೆಯಿತು. ಒಂದು ಅಂಗುಲದಷ್ಟೂ ಸ್ಥಳವಿಲ್ಲದೆ ನುಗ್ಗುತ್ತಿದ್ದ ಜನಸಮ್ಮರ್ದದಿಂದ ಯಾರೋ ಇಬ್ಬರು ನದಿಗೆ ಬಿದ್ದರು. ಅವರಲ್ಲಿ ಒಬ್ಬರನ್ನು ಬದುಕಿಸ

ಪಾಕಿಸ್ತಾನದ ಆಕ್ಷೇಪಕ್ಕೆ ಉತ್ತರ

ಲಾಯಿತು. ಉದ್ಘಾಟಿಸಲ್ಪಟ್ಟ ಈ ಕಾಲುವೆಯು ೪೦ ಮೈಲು ಉದ್ದವಿದೆ. ಹಿಮಾಲಯದ ಶಿವಾಲಿಕ್ ಪರ್ವತ ಶ್ರೇಣಿಯ ತಪ್ಪಲು ಪ್ರದೇಶಗಳಲ್ಲಿ ಇದು ಹಾದು ಹೋಗುತ್ತದೆ. ಇದರ ನಿರ್ಮಾಣ ಕಾರ್ಯವು ನಿರ್ದಿಷ್ಟ ಅವಧಿಗಿಂತ ಒಂದು ವರ್ಷ ಮುಂಚಿತವಾಗಿಯೇ ಮುಕ್ತಾಯಗೊಂಡಿತು. ಕಡಿದಾದ ಪ್ರದೇಶಗಳಲ್ಲಿ ಹಾದುಹೋಗುವ ಕಾಲುವೆಯ ನಿರ್ಮಾಣ ಕಾರ್ಯವು ಭಾರತೀಯ ಸ್ಥಾಪತ್ಯ ವಿಜ್ಞಾನಿಗಳ ಮೇಧಾಶಕ್ತಿ ಮತ್ತು ಕೌಶಲ್ಯಕ್ಕೆ ಆಹ್ವಾನ ರೂಪದಲ್ಲಿ ಇತ್ತೆಂದರೂ ಸಲ್ಲುತ್ತದೆ. ಅಲ್ಲಿರುವ ದಟ್ಟವಾದ ಅರಣ್ಯಗಳ ನಡುವೆ ಹಾಗು ಕಲ್ಲು ಬಂಡೆಗಳ ಎಡೆಯಿಂದ ಕಾಲುವೆ ರಚಿಸಿದುದನ್ನು ನೋಡುವಾಗ ರೋಮಾಂಚನವಾಗುತ್ತದೆ.

ವಿದ್ಯುಚ್ಛಕ್ತಿಯ ಉತ್ಪತ್ತಿ

ನಾಂಗಲ ಕಾಲುವೆಯು ಸುಮಾರು ೯೬೦೦೦ ಕಿಲೋವಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಎರಡು ಕೇಂದ್ರಗಳನ್ನು ಹೊಂದಿದೆಯಲ್ಲದೆ, ರೂಪಾರದ ಬಳಿ ಬರುವ ಭಾಕರಾ ಮುಖ್ಯ ಕಾಲುವೆಗೆ ನೀರನ್ನು ಒದಗಿಸಿ ವ್ಯವಸಾಯಕ್ಕೆ ನೆರವಾಗುತ್ತದೆ. ನಾಂಗಲ ನಗರದಿಂದ ಕ್ರಮವಾಗಿ ೧೬ ಮತ್ತು ೧೮ ಮೈಲುಗಳ ದೂರದಲ್ಲಿ ಗಂಗುವಾಲಿ ಹಾಗು ಕೋಟ್ಲಾಗಳಲ್ಲಿ ಈ ವಿದ್ಯುದುತ್ಪಾದನಾ ಕೇಂದ್ರಗಳು ನೆಲೆಗೊಂಡಿವೆ. ಆವಶ್ಯಕತೆ ಕಂಡರೆ ಈ ಕೇಂದ್ರಗಳಲ್ಲಿ ಒಟ್ಟು ೪೮೦೦೦ ಕಿಲೋವಾಟು ವಿದ್ಯುಚ್ಛಕ್ತಿಯನ್ನು ಹೆಚ್ಚಿಗೆ ಉತ್ಪಾದಿಸಬಹುದು. ಗಂಗುವಾಲದ ಕೇಂದ್ರವು ಮುಂದಿನ ತಿಂಗಳಿಂದ ಕೆಲಸವನ್ನು ತೊಡಗುತ್ತದೆ. ಇದರಿಂದ ದೆಹಲಿ ನಗರಕ್ಕೂ ವಿದ್ಯುಚ್ಛಕ್ತಿಯು ಪೂರೈಕೆಯಾಗುವುದು. ಕೋಟ್ಲಾದ ಕೆಲಸವು ಮುಂದಿನ ವರ್ಷಾಂತ್ಯದಲ್ಲಿ ಕೊನೆಗೊಳ್ಳುತ್ತದೆ. ಭಾಕರಾ ಮತ್ತು ನಾಂಗಲ ಯೋಜನೆಯು ೩೦೦೦ ಮೈಲು ಉದ್ದ ಕಾಲುವೆಯನ್ನು ಪಡೆದಿದೆಯಲ್ಲದೆ ಯೋಜನೆಯ ದೃಷ್ಟಿಯಿಂದ ಇದು ವಿಶ್ವದಲ್ಲಿ ದ್ವಿತೀಯ ಸ್ಥಾನ ಪಡೆಯುತ್ತದೆ. ನಾಂಗಲ ಅಣೆಕಟ್ಟಿನ ಕೆಲಸ ೧೯೪೬ರಲ್ಲಿ ತೊಡಗಿದ್ದರೂ ಸ್ವಾತಂತ್ರ್ಯೋತ್ತರದಲ್ಲಿಯೇ (೧೯೪೮) ಕೆಲಸವು ದ್ರುತಗತಿಯಿಂದ ಮುಂದೊತ್ತಲ್ಪಟ್ಟಿತು. ೧೯೫೧ರಲ್ಲಿ ಅಣೆಕಟ್ಟಿನ ನಿರ್ಮಾಣ ಕಾರ್ಯ ಮುಗಿದಿದ್ದರೂ ತೂಬುಕದಗಳು ಸಿದ್ಧವಾಗದ ಕಾರಣ ಕಾಲುವೆಯಲ್ಲಿ ನೀರು ಹರಿಯಗೊಡಲಿಲ್ಲ. ಈಗ ತೂಬುಕದಗಳನ್ನು ಅಮೃತಸರದಲ್ಲಿ ತಯಾರಿಸಿ ಜೋಡಿಸಿರುವರು.

ಭಾಕ್ರಾ ಅಣೆಕಟ್ಟು

ಇದಕ್ಕೆ ೮ ಮೈಲು ಮೇಲ್ಭಾಗದಲ್ಲಿ ಸಟ್ಲೆಜ್ ನದಿಯು ಪರ್ವತ ಶ್ರೇಣಿಯನ್ನು ಭೇದಿಸಿಕೊಂಡು ಮೈದಾನು ಪ್ರದೇಶಕ್ಕೆ ನುಗ್ಗುವ ಭಾಕರಾದಲ್ಲಿ ವಿಶ್ವದಲ್ಲಿಯೇ ದೊಡ್ಡದಾದ ಅಣೆಕಟ್ಟನ್ನು ಮುಂದಿನ ಚಳಿಗಾಲದಲ್ಲಿ ಕಟ್ಟಲಾಗುತ್ತದೆ. ೧೯೪೮ನೇ ವರ್ಷದಿಂದ ಇಲ್ಲಿ ಪ್ರಾರಂಭಿಕ ಕೆಲಸಗಳು ನಡೆಯುತ್ತವೆ. ಮೂರು ಅಡಿ ದಪ್ಪನಾದ ೫೦ ಅಡಿ ವ್ಯಾಸ ಹಾಗು ಅರ್ಧ ಮೈಲು ಉದ್ದದ ಎರಡು ಭಾರಿ ಸುರಂಗ ಮಾರ್ಗಗಳನ್ನು ಸಿಮೆಂಟಿನಿಂದ ಕಟ್ಟಿದ್ದು, ಸಟ್ಲೆಜ್ ನದಿಯ ಪೂರ್ಣ ಪ್ರವಾಹ ಕಾಲದಲ್ಲಿ ಹರಿಯುವ ೨೫೦೦೦೦ ಕ್ಯೂಸೆಕ್ಸ್ ನೀರನ್ನೂ ಇವುಗಳು ಬೇರೆ ಕಡೆಗೆ ಹರಿಯಿಸಬಲ್ಲವು. ಅಣೆಕಟ್ಟು ರಚನಾನಂತರ ಸುರಂಗ ಮಾರ್ಗಗಳ ಅಗತ್ಯ ಬೀಳುವುದಿಲ್ಲ. ಅಣೆಕಟ್ಟನ್ನು ಭದ್ರವಾಗಿ ನಿರ್ಮಿಸಬೇಕೆಂದು ಈಗಾಗಲೇ ೪೦೦೦ ಕೆಲಸಗಾರರು ದುಡಿಯುತಿದ್ದಾರೆ. ಅಣೆಕಟ್ಟು ೭೪೦ ಅಡಿ ಎತ್ತರವೂ ೧೭೦೦ ಅಡಿ ಉದ್ದವೂ ಆಗುತ್ತದೆ. ೬೦ ಚದರ ಮೈಲು ಪ್ರದೇಶದ ವಿಶಾಲ ಜಲಾಶಯವು ಏರ್ಪಡುವುದಲ್ಲದೆ, ಪರ್ವತದ ತಪ್ಪಲಿನಲ್ಲಿ ೫೫ ಮೈಲುಗಳಷ್ಟು ಉದ್ದಕ್ಕೆ ಅಣೆಕಟ್ಟಿನ ನೀರು ನಿಲ್ಲುತ್ತದೆ. ಇಲ್ಲಿಯ ಜಲಶಕ್ತಿಯನ್ನು ಉಪಯೋಗಿಸಿ ೧೦ ಲಕ್ಷ ಕಿಲೋವಾಟುಗಳಷ್ಟು ವಿದ್ಯುತ್ತನ್ನು ಉತ್ಪಾದಿಸಲಾಗುವುದು. ಯೋಜನೆಗೆ ಒಟ್ಟು ೧೫೬ ಕೋಟಿ ರೂಪಾಯಿಗಳ ಖರ್ಚು ಬರುತ್ತದೆ; ಮತ್ತು ೧೯೫೯ನೇ ವರ್ಷದ ಸುಮಾರಿಗೆ ಕೆಲಸವು ಸಂಪೂರ್ಣವಾಗುತ್ತದೆ.

ನಮ್ಮ ನ್ಯಾಯಾಂಗ ವ್ಯವಸ್ಥೆ

ಸುಮಾರು ಹತ್ತು ತಿಂಗಳ ಹಿಂದೆ ಭಾರತದ ಗೃಹ ಮಂತ್ರಿ ಕಟಜೂರವರು ನ್ಯಾಯಾಂಗ ಸುಧಾರಣೆಗಳ ವಿಷಯದಲ್ಲಿ ಅಭಿಪ್ರಾಯವನ್ನು ಕೇಳಿದುದಕ್ಕೆ ಭಾರತದ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಕೊಟ್ಟಿದ್ದ ಉತ್ತರವು ಈಗ ಪ್ರಕಟಗೊಂಡಿದೆ. ಇದು ಸದ್ಯಕ್ಕೆ ಪರಿಶೀಲಕ ಸಮಿತಿಯ ಎದುರಿರುವ ಕ್ರಿಮಿನಲ್ ಪ್ರೊಸೀಜರ್ ಕೋಡಿನ ತಿದ್ದುಪಡಿ ವಿಧೇಯಕಕ್ಕೆ ಭಾಷ್ಯ ಸ್ವರೂಪವಾಗುವುದೆಂದು ಹೇಳುವುದು ತಪ್ಪಾದೀತು; ಏಕೆಂದರೆ ಆ ಸಮಯದಲ್ಲಿ ವಿಧೇಯಕವು ಸಿದ್ಧಗೊಳಿಸಲ್ಪಡುತಿತ್ತು ಮಾತ್ರ. ಹೀಗಿದ್ದರೂ ಮುಖ್ಯ ನ್ಯಾಯಾಧೀಶರ ಅಭಿಪ್ರಾಯಗಳು ಎಲ್ಲರಿಗೂ ಒಪ್ಪಿಗೆಯಾಗುತ್ತವೆಂದು ಖಚಿತವಾಗಿ ಹೇಳಬಹುದು.

ವಕೀಲರು ಈಗ ಹಣ ಸಂಪಾದನೆಯನ್ನೆ ಗುರಿಯಾಗಿಟ್ಟುಕೊಂಡಿದ್ದು, ಕಕ್ಷಿಗಾರರಿಗೆ ಸರಿಯಾದ ಸಲಹೆಯನ್ನು ಕೊಡುವುದಿಲ್ಲ. ವ್ಯವಹರಣೆಗಳನ್ನು ಬೆಳೆಸುವುದೇ ಅವರಿಗೆ ಇಷ್ಟವೆಂದು ಕಾಣುತ್ತದೆ. ನ್ಯಾಯಸ್ಥಾನದ ಮುಂದೆ ಸಾಕ್ಷಿ ಹೇಳುವವರು ಪ್ರಾಮಾಣಿಕರಾಗಿ ವರ್ತಿಸುವುದಿಲ್ಲ. ನೈತಿಕ ದೃಷ್ಟಿಯನ್ನು ಹೊಂದದೆ ಸುಳ್ಳು ಹೇಳುವುದರಲ್ಲಿಯೇ ಪುರುಷಾರ್ಥ ಕಾಣುತ್ತಾರೆ. ಹೆಚ್ಚಿನ ನ್ಯಾಯಾಧೀಶರು ತಮ್ಮ ಕೆಲಸವನ್ನು ಚೊಕ್ಕ ರೀತಿಯಲ್ಲಿ ನಿರ್ವಹಿಸುವುದಿಲ್ಲ. ವ್ಯವಹರಣೆಯು ತನಿಖೆಯಾಗುತ್ತಿರುವಾಗ ಇವರು ಅದಕ್ಕೆ ಲಕ್ಷ್ಯ ಕೊಡದೆ ತಮ್ಮ ಖಾಸಗಿ ಪತ್ರ

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ; ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ತ್ಲ: ರೂ. 6–8–0 ¼ ರಾತ್ತ್ಲ: ರೂ. 1–14–0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎಸ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town–**MADRAS-3.**

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives at whatever stage We welcome yours association with the POPULAR.

THE

POPULAR INSURANCE CO. LTD.

"POPULAR BUILDINGS" MANGALORE-1

ನಾರದ ವಾರ್ತಾವಲೋಕನ

ಪ್ಯಾರಿಸಿನೊಡನೆ ಮರಳಿ ಮಾತುಕತೆ ನಡೆಯುವ ಸೂಚನೆ

ರಾಜ್ಯಗಳ ಪುನರ್ಘಟನೆ ಮತ್ತು ಕಾಂಗ್ರೆಸು

ಪುನಃ ಸಂಧಾನ

ಭಾರತದಲ್ಲಿರುವ ಫ್ರೆಂಚ್ ಸ್ವಾಸ್ಥ್ಯಗಳ ಹಸ್ತಾಂತರದ ಕುರಿತು ಹಿಂದೆ ನಿಂತು ಹೋಗಿದ್ದ ಸಂಧಾನದ ಮಾತುಕತೆಗಳನ್ನು ಮರಳಿ ತೊಡಗಬೇಕೆಂದು ಭಾರತ ಸರಕಾರಕ್ಕೆ ಫ್ರೆಂಚ ಸರಕಾರವು ತಿಳಿಸಿದೆಯಾಗಿ ಕೇಳುತ್ತೇವೆ. ಫ್ರಾನ್ಸಿನ ಹೊಸ ಮುಖ್ಯ ಮಂತ್ರಿ ಮೆಂಡೆಸರಿಗೆ ಅನೇಕ ಜಟಿಲವಾದ ಸಮಸ್ಯೆಗಳನ್ನು ಇದಿರಿಸಬೇಕಾಗಿದೆ—ಇಂಡೋ ಚೀನದ ಸಮರ, ಟ್ಯುನೀಸಿಯಾ ಮುಂತಾದ ವಸಾಹತುಗಳ ಅಶಾಂತಿ ಇತ್ಯಾದಿಗಳಿದ್ದರೂ ಭಾರತದಲ್ಲಿರುವ ವಸಾಹತುಗಳ ಕುರಿತು ಪರ್ಯಾಲೋಚನೆ ನಡೆಸಲು ಅವರು ಮುಂದಾಗಿರುವುದು ಆಶ್ಚರ್ಯವನ್ನೇ ಉಂಟು ಮಾಡುತ್ತದೆ. ಲೇನಿಯೆಲರ ಸರಕಾರವು ವಹಿಸಿದ್ದ ನಿಲುವೆಗಿಂತ ಭಿನ್ನವಾದ ಧೋರಣೆಯನ್ನು ಮೆಂಡೆಸರು ಅನುಸರಿಸುವರೋ ಏನೆಂದು ಗೊತ್ತಿಲ್ಲ. ಪರಸ್ಪರ ಅಂಗೀಕೃತವಾಗಬಹುದಾದ ತತ್ವಗಳನ್ನು ರಾಯಭಾರಿಗಳ ಮೂಲಕ ವಿನಿಮಯ ಮಾಡಿಕೊಂಡು ಉಭಯ ಸರಕಾರಗಳೂ ಸ್ವೀಕರಿಸಿದ ಬಳಿಕ, ಸಂಧಾನದ ಮಾತುಕತೆಯನ್ನು ಪುನರಾರಂಭಿಸಬಹುದು.

ಮೆಂಡೆಸರ ಅಭಿಲಾಷೆ

ಫ್ರೆಂಚರಿಗೆ ತಮ್ಮ ಸಾಗರೋತ್ತರ ವಸಾಹತು ಪ್ರದೇಶಗಳಲ್ಲಿ ರಾಷ್ಟ್ರೀಯ ಜಾಗೃತಿಯುಂಟಾಗಿರುವುದು ನಿಚ್ಚಳವಾಗಿ ಕಂಡು ಬರುತ್ತದೆ. ಎಚ್ಚೆತ್ತ ಜನತೆಯು ಸ್ವಾತಂತ್ರ್ಯಾಪೇಕ್ಷೆಯಿಂದ ಕೈಕೊಂಡ ಚಳವಳಿಯನ್ನು ಹತ್ತಿಕ್ಕಲು ಸೈನ್ಯ ಹಾಗು ಸಂಪತ್ತನ್ನು ಉಪಯೋಗಿಸಿದರೆ, ಆದರಿಂದ ಫ್ರಾನ್ಸಿಗೆ ಅಪಾರ ನಷ್ಟ ಸಂಭವಿಸುವುದೆಂದು ಖಚಿತವಾಗಿದೆ. ಇದಲ್ಲದೆ, ಜುಲಾಯಿ ೨೦ನೇ ತಾರೀಕಿನೊಳಗೆ ಇಂಡೋಚೀನದ ಸಮರ ನಿಲುಗಡೆಯನ್ನು ಸಾಧಿಸಬೇಕೆಂದು ಮೆಂಡೆಸರು ಪ್ರಯತ್ನಿಸುತಿದ್ದಾರೆ. ಇದು ಸಾಧ್ಯವಾಗುವಂತೆ ಹುಸು ನಯವಾದ ಧೋರಣೆಯನ್ನು ಅವಲಂಬಿಸುವುದು ಅವರಿಗೆ ಅಗತ್ಯವೆಂದು ತೋರಿರಬೇಕು. ಪೌರ್ವಾತ್ಯ ದೇಶಗಳ

ನ್ನೇಹ ಸಂಪಾದನೆಗೆ ಪೋಷಕವಾದ ಕ್ರಮಗಳನ್ನು ಅನುಸರಿಸುವುದು ಅನಿವಾರ್ಯವೆಂದೂ ಅವರಿಗೆ ಮನವರಿಕೆಯಾಗಿರಬೇಕು. ಅದೇನೇ ಇರಲಿ, ಫ್ರೆಂಚ ಸ್ವಾಸ್ಥ್ಯಗಳಲ್ಲಿ ಕೈಗೊಳ್ಳಲಾದ ದಬ್ಬಾಳಿಕೆಯನ್ನು ನಿಲ್ಲಿಸಿ, ರಾಷ್ಟ್ರೀಯ ಜಾಗೃತಿಯನ್ನು ಹೊಂದಿದ ಪ್ರಜೆಗಳ ನ್ಯಾಯುವಾದ ಆಶೋತ್ತರಗಳನ್ನು ಮನ್ನಿಸುವುದು ಅಪೇಕ್ಷಣೀಯ.

ಆಡಳಿತದಲ್ಲಿ ಕಾರ್ಯಕ್ಷಮತೆ

ಮದ್ರಾಸು ಸರಕಾರದವರು ಜಿಲ್ಲೆಗಳಲ್ಲಿ ಕಂದಾಯದ ಆಡಳಿತವನ್ನು ಕುರಿತು ವಿಚಾರಣೆ ನಡೆಸಿ ಯೋಗ್ಯ ಮಾರ್ಗದರ್ಶನವನ್ನು ಕೈಗೊಳ್ಳಲು ಕಂದಾಯ ಮಂಡಳದ ಸದಸ್ಯರಲ್ಲಿ ಒಬ್ಬರಾದ ಶ್ರೀ. ಎಂ.ವಿ. ಸುಬ್ರಹ್ಮಣ್ಯಮರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದಾರೆ. ಜಿಲ್ಲಾ ಕಲೆಕ್ಟರರಿಗೆ ತಮ್ಮ ಅಧಿಕಾರ ವಲಯದಲ್ಲಿ ನಡೆಯುವ ಅಭಿವೃದ್ಧಿ ಪ್ರಯತ್ನಗಳ ಕಡೆಗೆ ವಿಶೇಷವಾದ ಲಕ್ಷ್ಯ ಪೂರೈಸಲಾಗುವಂತೆ ಇತರ ಕಾರ್ಯಭಾರಗಳನ್ನು ಹಗುರಗೊಳಿಸುವುದು, ತಾಲೂಕು ಕಚೇರಿಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು, ಅಲ್ಲಿ ಕೆಲಸ ಮಾಡುವವರಿಗೆ ಉತ್ತಮ ಮಟ್ಟದ ತರಬೇತಿಯನ್ನು ಒದಗಿಸುವುದು, ವಿಳಂಬ, ತಪ್ಪುತಡೆ ಮುಂತಾದುವುಗಳಾಗದಂತೆ ನೋಡಿಕೊಳ್ಳುವುದು ಇತ್ಯಾದಿ ಮಹತ್ವದ ವಿಷಯಗಳನ್ನು ಸಮಿತಿಯು ಪರ್ಯಾಲೋಚಿಸುತ್ತದೆ.

ಬೇಂಕಿಂಗ ತರಬೇತಿ

ರಿಜರ್ವ ಬೇಂಕಿನ ಗವರ್ನರರಾದ ಶ್ರೀ. ಬಿ. ರಾಮರಾಯರು ಬಡೋದೆಯ ವಿಶ್ವವಿದ್ಯಾಲಯದಲ್ಲಿ ಭಾರತದಲ್ಲಿಯೇ ಸರ್ವಪ್ರಥಮವಾಗಿ ತೊಡಗಿದ, ಬೇಂಕಿಂಗ ವಿಷಯದಲ್ಲಿ ಸ್ನಾತಕೋತ್ತರ ಶಿಕ್ಷಣದ ಪ್ರಾರಂಭೋತ್ಸವವನ್ನು ನೆರವೇರಿಸುತ್ತಾ ಬೇಂಕುಗಳ ಅಧಿಕಾರಿ ವರ್ಗಗಳಿಗೆ ತರಬೇತಿ ಕೊಡುವ ಕಾಲೇಜೊಂದನ್ನು ಬೇಗನೆ ತೆರೆಯಲಾಗುವುದೆಂದು ತಿಳಿಸಿದರು. ಕೊಲೊಂಬೋ ಯೋಜನೆಯಂತೆ ಎರವಲು ಕೊಡಲಾದ ಇಬ್ಬರು ತಜ್ಞರು ಈ ಕಾಲೇಜಿನ ಸ್ಥಾಪನೆಗೆ ನೆರವಾಗುತ್ತಾರೆ. ದೇಶದ ಆರ್ಥಿಕ, ಔದ್ಯಮಿಕ ಹಾಗು ಕೃಷಿ ಕ್ಷೇತ್ರದಲ್ಲಿ ಬೇಂಕುಗಳು ವಹಿಸುವ ಪಾತ್ರವನ್ನು ವರ್ಣಿಸುತ್ತಾ ಈ ಸಂಸ್ಥೆಗಳನ್ನು ದಕ್ಷತೆಯಿಂದ ನಡೆಸಿಕೊಂಡು ಹೋಗಲು ತರಬೇತಿ ಪಡೆದ ಅಧಿಕಾರಿಗಳಿರುವುದು ಅಗತ್ಯವೆಂದು ರಾಮರಾಯರು ಹೇಳಿದರು. ಬೇಂಕುಗಳ ವಹಿವಾಟಿನ ಕುರಿತು ಸರಿಯಾದ ತಿಳಿವಳಿಕೆ ಇಲ್ಲದ್ದರಿಂದ ಅನೇಕ ಬೇಂಕುಗಳು ವಂಚಿಸಲ್ಪಟ್ಟಿವು. ಇದರಿಂದ ತಮ್ಮ ಹಣವನ್ನು ಬೇಂಕುಗಳಲ್ಲಿ ತೊಡಗಿಸಿದ ಮಧ್ಯಮ ವರ್ಗದವರು ೩೩ ಕೋಟಿ ರೂಪಾಯಿಯಷ್ಟು ಬಂಡವಾಳವನ್ನು ಕಳೆದುಕೊಂಡರು. ಜನರಿಗೆ ಈ ರೀತಿ ಹಾನಿಯಾಗಬಾರದು ಎಂದವರು ಅಭಿಪ್ರಾಯಪಟ್ಟರು.

ಕಂದಾಯ ವಸೂಲಿಯ ಅಧಿಕಾರ

ಭೂಕಂದಾಯ ವಸೂಲಿಮಾಡುವ ಕೆಲಸವನ್ನು ಮದ್ರಾಸುರಾಜ್ಯದಲ್ಲಿ ಸುವ್ಯವಸ್ಥಿತ ರೀತಿಯಿಂದ ಹೊಣೆಗಾರಿಕೆಯನ್ನು ನಿರ್ವಹಿಸುತ್ತಾ ಬಂದ ಒಂದೆರಡು ಗ್ರಾಮ ಪಂಚಾಯತುಗಳಿಗೆ ಪ್ರಾಯೋಗಿಕ ಮಟ್ಟದಲ್ಲಿ ಒಪ್ಪಿಸಿಕೊಡಲಾಗುವುದೆಂದು ತಿಳಿದುಬರುತ್ತದೆ. ಸಿಮ್ಲಾದಲ್ಲಿ ಈಚೆಗೆ ಸ್ಥಾನಿಕ ಸ್ವರಾಜ್ಯ ಸಂಸ್ಥೆಗಳ ಅಭಿವೃದ್ಧಿಯನ್ನು ಕುರಿತು ನಡೆದ ಪರಿಷತ್ತಿನಲ್ಲಿ ಮಾಡಲಾದ ಸೂಚನೆಯಂತೆ ಈ ಪ್ರಯೋಗವು ನಡೆಯುತ್ತದೆ. ಭೂಕಂದಾಯದ ವಸೂಲಿ ಕಾರ್ಯವನ್ನು ಪಂಚಾಯತುಗಳಿಗೆ ಒಪ್ಪಿಸಿಕೊಡಬೇಕೆಂದೂ ಅವರಲ್ಲಿ ನೂರಕ್ಕೆ ಹತ್ತರಷ್ಟು ಅಂಶವನ್ನು ಪಂಚಾಯತುಗಳಿಗೆ ದಳ್ಳಾಳಿಯಾಗಿ ಬಿಡಬೇಕೆಂದೂ ಪರಿಷತ್ತು ಹೇಳಿರುತ್ತದೆ.

ನೆಹರೂರ ಟೀಕೆ

ರಾಜ್ಯಗಳ ಪುನರ್ಘಟನೆಯ ವಿಷಯದಲ್ಲಿ ಕಾಂಗ್ರೆಸಿಗರು ವೈಯಕ್ತಿಕವಾಗಿ ತಮ್ಮ ಅಭಿಪ್ರಾಯಗಳನ್ನು ಫಜಲ ಅಲಿ ಆಯೋಗದ ಮುಂದೆ ಹೇಳಬಹುದೆಂದೂ ಆದರೆ ಸಾರ್ವಜನಿಕ ಚಳವಳಿಯಲ್ಲಿ ಭಾಗವಹಿಸತಕ್ಕದ್ದಲ್ಲವೆಂದೂ ಕಾರ್ಯ ಸಮಿತಿ ನೀಡಿದ ಆದೇಶವನ್ನು ಅನೇಕ ಕಾಂಗ್ರೆಸಿಗರು ಮನ್ನಿಸಿಲ್ಲವೆಂದು ನೆಹರೂ ವಿಷಾದದಿಂದ ಹೇಳಿದ್ದಾರೆ. "ಭಾಷಾನುಗುಣ ರಾಜ್ಯ ರಚನೆಯ ಪ್ರಶ್ನೆಯು ಮೊದಲು ದಕ್ಷಿಣ ಭಾರತಕ್ಕೆ ಮಾತ್ರ ಸೀಮಿತವಾಗಿದ್ದಿತು; ಆದರೆ ಈಗ ಭಾರತದ ಪ್ರತಿಯೊಂದು ಭಾಗಕ್ಕೂ ಈ ಸೋಂಕು ರೋಗ ವ್ಯಾಪಿಸಿರುತ್ತದೆ. ಎಲ್ಲ ಬಗೆಯ ವಿಚಿತ್ರ ಬೇಡಿಕೆಗಳು ಮುಂದಿಡಲ್ಪಡುತ್ತವೆ. ತಮ್ಮ ರಾಜ್ಯವು ದೊಡ್ಡದಿರಬೇಕೆಂದು ಪ್ರತಿಯೊಬ್ಬ ಭಾಷಾಭಿಮಾನಿಯೂ ಹಾರೈಸುತ್ತಾನೆ; ಆದರೆ ಇತರರಿಗೆ ಅನ್ಯಾಯ ಬಗೆಯದೆ ರಾಜ್ಯ ದೊಡ್ಡದಾಗುವುದಿಲ್ಲ. ಕಾರಣ, ಘರ್ಷಣೆಗಳು ಹುಟ್ಟಿಕೊಳ್ಳುತ್ತವೆ; ಆರೋಪ ಪ್ರತ್ಯಾರೋಪಗಳು ಮಾಡಲ್ಪಡುತ್ತವೆ. ಇದನ್ನು ನೋಡಿದರೆ ಪರಸ್ಪರ ವೈರತ್ವ ಕಟ್ಟಿಕೊಂಡು ರಾಷ್ಟ್ರಗಳಲ್ಲಿ ಕಾಳಗ ನಡೆದಿದೆಯೋ ಎಂದ ಭಾಸವಾಗುತ್ತದೆ. ಇಂತಹ ಚಳವಳಿ ಮತ್ತು ಬೈದಾಟಗಳಲ್ಲಿ ಮಗ್ನರಾದರೆ ನಾವು ಗುರಿಯನ್ನು ಮುಟ್ಟುವಂತಿಲ್ಲ" ಎಂದು ಅವರು ಎಚ್ಚರಿಸಿದರು.

ಭಾಷಾರಾಜ್ಯಗಳ ನಿರ್ಮಾಣ

ಕಾಂಗ್ರೆಸಿನ ಕಾರ್ಯದರ್ಶಿ ಶ್ರೀ ಬಳವಂತರಾವ ದೇಶಪಾಂಡೆ ಭಾಷಾನುಗುಣ

(೭ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಮಿಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔ. ಸೀಸೆ ೧ಕ್ಕೆ ರೂ 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. ४—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ. ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೩೦ ಮಾತ್ರೆಗಳ [illegible] ೧ಗೆ 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨.

ನವಯುಗ

ಉಡುಪಿ, ಗುರುವಾರ ೧೫-೭-'೫೪

ಅಕ್ಕಿಯ ವಿನಿಯಂತ್ರಣ

ಭಾರತ ಸರಕಾರವು ಒಂದು ಪ್ರಕಟಣೆಯನ್ನು ಹೊರಡಿಸಿ, ಇದೇ ೧೦ನೇ ದಿನಾಂಕದಿಂದ ಅಕ್ಕಿಯ ಮೇಲಿನ ಎಲ್ಲ ನಿಯಂತ್ರಣಗಳನ್ನು ಕಿತ್ತೊಗೆಯಲಾಗಿದೆಯೆಂದೂ ಇನ್ನು ಮುಂದೆ ದೇಶದೊಳಗೆ ಅಕ್ಕಿಯನ್ನು ಅನಿರ್ಬಂಧವಾಗಿ ಸಾಗಿಸಬಹುದೆಂದೂ ತಿಳಿಸಿದೆ. ಇದರಿಂದ ಗೋಧಿಯ ಸಾಗಾಟದ ಮೇಲಿನ ಪ್ರಾದೇಶಿಕ ನಿಯಂತ್ರಣವೊಂದು ಮಾತ್ರ ಈಗ ಉಳಿದಂತಾಯಿತು. ಇದಕ್ಕೆ ಗೋಧಿಯ ಕೊರತೆ ಕಾರಣವಲ್ಲವೆಂದೂ ಅಂತಾರಾಷ್ಟ್ರೀಯ ಗೋಧಿ ಒಡಂಬಡಿಕೆಯಂತೆ ಭಾರತವು ಖರೀದಿ ಮಾಡಬೇಕಿರುವ ೧೦ ಲಕ್ಷ ಟನ್ನು ಗೋಧಿಯ ಮಾರಾಟದಲ್ಲಿ ಸರಕಾರಕ್ಕೆ ತೊಂದರೆಯಾಗಬಾರದೆಂದು ಹತೋಟಿಯನ್ನು ಇಟ್ಟಿರುವುದಾಗಿಯೂ ಸರಕಾರ ಹೇಳುತ್ತದೆ. ಗೋಧಿಯ ಒಡಂಬಡಿಕೆಯನ್ನು ಮಾಡಿಕೊಳ್ಳುವ ಆ ಕಾಲದಲ್ಲಿ ನಮ್ಮ ಆಹಾರಾಭಾವದ ವಾತಾವರಣವು ಈಗಿನಷ್ಟು ತೃಪ್ತಿಕರವಾಗಿ ಸುಧಾರಿಸಬಹುದೆಂಬ ಕಲ್ಪನೆ ಯಾರಲ್ಲೂ ಇರಲಿಲ್ಲ. ಹೀಗಾಗಿ ಗೋಧಿಯನ್ನಾದರೂ ತರಿಸಿಕೊಂಡು ಅಭಾವಗ್ರಸ್ತ ಪ್ರದೇಶಗಳ ಜನರಿಗೆ ಉಣಬಡಿಸಬೇಕೆಂದು ಸರಕಾರ ಇಚ್ಛಿಸಿತು. ಇಂದಿನ ಸುಧಾರಿತ ಪರಿಸ್ಥಿತಿಯಲ್ಲಿ ಒಡಂಬಡಿಕೆಯಂತೆ ಗೋಧಿ ಕೊಂಡು ಕೊಳ್ಳುವುದು ಅನಾವಶ್ಯಕವೆಂದಷ್ಟೇ ಅಲ್ಲ—ನಷ್ಟವಾಗಿಯೂ ತೋರುತ್ತದೆ. ಏಕೆಂದರೆ ಈ ಗೋಧಿಯ ಬೆಲೆಯು ದೇಶದೊಳಗೆ ಪ್ರಚಲಿತವಿರುವ ಬೆಲೆಯನ್ನು ಮೀರುತ್ತದೆ. ಅಮೇರಿಕ—ಕೆನಡಾಗಳಂಥ ದೇಶದ ರೈತರಿಗೆ ತಮ್ಮ ಉತ್ಪನ್ನದ ಮೇಲೆ ಯೋಗ್ಯ ಬೆಲೆ ದೊರಕಬೇಕೆಂದು ಅವರಿಗಿಂತಲೂ ಬಡತನದಿಂದ ದಿನಗಳೆಯುವ ಭಾರತದಂಥ ದೇಶದ ಪ್ರಜೆಗಳಿಗೆ ಹೆಚ್ಚು ಹಣಕ್ಕೆ ಗೋಧಿಯನ್ನು ಮಾರಾಟ ಮಾಡಲಾಗುತ್ತದೆ—ಈ ಅನ್ಯಾಯವನ್ನು ಬ್ರಿಟನು ಹಿಂದೆಯೇ ವಿರೋಧಿಸಿದ್ದಿತು. ಇಂದು ಎಲ್ಲಾ ರಾಷ್ಟ್ರಗಳೂ ವಿರೋಧಿಸುವಂತಾಗಿದೆಯಾದರೂ, ಒಡಂಬಡಿಕೆಯ ಹೆಸರಲ್ಲಿ ಬೆಲೆ ಇಳಿಯುವ ಸಂಭವ ಕಾಣಿಸುವುದಿಲ್ಲ. ಇದೇನೇ ಇರಲಿ, ಈಗ ಅಕ್ಕಿಯ ವಿನಿಯಂತ್ರಣವನ್ನು ಸಾರಿದುದರಿಂದ ನಮ್ಮ ದೇಶದಲ್ಲಿಯೂ ಬೆಲೆ ಸರ್ರನೆ ಇಳಿದು ಹೋದೀತೆಂದು ವ್ಯಾಪಾರಿ ವರ್ಗಗಳು ಹೆದರಿಕೆ ವ್ಯಕ್ತಪಡಿಸಿ ಸರಕಾರದ ಕಡೆಗೆ ದೂರೊಯ್ಯುತ್ತವೆ. ಭಾರತದ ವಣಿಕ ಸಂಘಗಳ ಮಹಾ ಮಂಡಳವು ದೇಶದಲ್ಲಿ ಕೃಷಿ ಉತ್ಪನ್ನಗಳ ಬೆಲೆ ಇಳಿಯುವಿಕೆಯಿಂದ ಆರ್ಥಿಕ ವ್ಯವಸ್ಥೆಯ ಮೇಲೆ ದುಷ್ಪರಿಣಾಮವಾದೀತೆಂದು ಎಚ್ಚರಿಕೆ ಕೊಡುತ್ತದೆ. ಆಹಾರಧಾನ್ಯ ಮತ್ತಿತರ ಬೆಳೆಗಳ ಪ್ರಮಾಣವು ಈಚೆಗೆ ಕೆಲವು ವರ್ಷಗಳಿಂದ ಹೆಚ್ಚಿಕೊಳ್ಳುತ್ತಿದೆಯೆಂಬುದನ್ನು ಮಂಡಳವು ಒಪ್ಪುತ್ತದೆ; ಮತ್ತದನ್ನು ಸ್ವಾಗತಿಸುತ್ತದೆ. ಈ ಹೆಚ್ಚಳದಿಂದ ವಿದೇಶಗಳಿಗೆ ಹಣದ ಹೊಳೆ ಹರಿಯುವುದು ನಿಂತೀತೆಂದೂ ಜೀವನವೆಚ್ಚವನ್ನು ಕಡಿಮೆ ಮಾಡುವುದು ಸಾಧ್ಯವಾದೀತೆಂದೂ ಮಂಡಳವು ಅಭಿಪ್ರಾಯಪಡುತ್ತದೆ. ಹೀಗಿದ್ದರೂ ಕೃಷಿ ಉತ್ಪನ್ನಗಳ ಬೆಲೆಯ ಕನಿಷ್ಠ ಮಿತಿಯನ್ನು ನಿರ್ಧರಿಸಬೇಕೆಂದು ಅದು ಒತ್ತಾಯಿಸುತ್ತದೆ. ಇದು ಬೋಧನ್ನವೇ ಸರಿ—ಏಕೆಂದರೆ, ನಮಗೆ ತಿಳಿದಂತೆ ಅಕ್ಕಿಯೇ ಮುಂತಾದ ಆಹಾರ ಧಾನ್ಯಗಳ ಬೆಲೆಯು ಇಳಿಮುಖವಾಗುತ್ತಿದ್ದರೂ ಅದು ಆರ್ಥಿಕ ವ್ಯವಸ್ಥೆಯ ಮೇಲೆ ಗಂಡಾಂತರ ಮಾಡುವಷ್ಟು ತೀವ್ರವಾಗಿರುವುದಿಲ್ಲ; ಬದಲು, ಮಧ್ಯಮ ವರ್ಗದವರ ಬೆಂಗೋಲಿಗೆನೇ ಹೊಡೆದು, ಅವರನ್ನು ಹಣ್ಣು ಮಾಡುತ್ತಲಿದೆ. ವಿನಿಯಂತ್ರಣವನ್ನು ಸಾರಿದ ಮೇಲೆ ಆಹಾರ ಧಾನ್ಯದ ಬೆಲೆಗಳು—ನಮ್ಮ ಜಿಲ್ಲೆಯಲ್ಲಂತೂ—ಸರಕಾರದ ನ್ಯಾಯ ಬೆಲೆಯ ಅಂಗಡಿಗಳಿಗಿಂತ ಸದಾ ಕಾಲ ಒಂದೂ ಕಾಲರಿಂದ ಒಂದೂವರೆ ಪಾಲಿನಷ್ಟು ಹೆಚ್ಚೇ ಇದ್ದವು. ಈಗಲೂ ಈ ಪರಿಸ್ಥಿತಿ ಊರ್ಜಿತಗೊಂಡಿಲ್ಲ. ಹೀಗಾಗಿ ಮೊದಲಿನ ಕಳ್ಳ ಪೇಟೆಯ ದರದಲ್ಲೇ ಇಂದಿನ ಮುಕ್ತ ಪೇಟೆಯಲ್ಲಿ ಅಕ್ಕಿಯನ್ನು ಕೊಂಡುಕೊಳ್ಳುತ್ತಿರುವ ವಿಚಿತ್ರ ವಾತಾವರಣವು ಕಂಡು ಬರುತ್ತದೆ. ಆದುದರಿಂದ ಬೆಲೆಗಳು ಇಳಿದು ಹೋಗಿ ರೈತರಿಗೆ ನಷ್ಟವಾಗುವುದೆಂಬ ವಾದವು ಅರ್ಥ ಶೂನ್ಯವೆನಿಸುತ್ತದೆ. ಅಕ್ಕಿಯ ಮುಡಿಯೊಂದರ ಬೆಲೆಯು ೨೫ ರೂಪಾಯಿಗಿಂತ ೨೨ ರೂಪಾಯಿಗೆ ಇಳಿದಿದೆಯೇನೋ, ನಿಜ. ಆದರೆ ಇಷ್ಟು ಸಾಲದು—೧೭ ರೂಪಾಯಿಗೆ ಅದು ಇಳಿಯ ಬೇಕಾದದ್ದು ಅಗತ್ಯ: ನ್ಯಾಯ ದೃಷ್ಟಿಯಿಂದಲೂ ಇದು ಸರಿಯಾದ ಬೆಲೆ. ಅಕ್ಕಿಯ ಬೆಲೆಯು ಇಷ್ಟು ಇಳಿಯದೆ ಹೋದರೆ, ಜೀವನ ವೆಚ್ಚದ ಪ್ರಮಾಣವನ್ನು ತಗ್ಗಿಸುವುದಕ್ಕೆಯೇ ಸಾಧ್ಯವಿಲ್ಲ; ಏಕೆಂದರೆ, ಇತರ ಪ್ರತಿಯೊಂದೂ ವಸ್ತುವಿನ ಬೆಲೆಯು ಆಹಾರ ಧಾನ್ಯಗಳ ಬೆಲೆಯನ್ನೇ ಅವಲಂಬಿಸಿರುತ್ತದೆ. ಕೃಷ್ಣಮಾಚಾರಿ ಸಮಿತಿಯು ೧೯೫೦ನೇ ಇಸವಿಯಲ್ಲಿ ಆಹಾರ ಧಾನ್ಯಗಳ ಬೆಲೆ ೧೦೦ ಎಂದಿಟ್ಟುಕೊಂಡರೆ, ಯುದ್ಧೋತ್ತರದಲ್ಲಿ ಈ ಕನಿಷ್ಠ ಮಿತಿಯನ್ನು ೧೫೦ ಎಂದು ಇಟ್ಟುಕೊಂಡರೆ ಕ್ಷೇಮವಾದೀತೆಂದು ಅಭಿಪ್ರಾಯ ಪಟ್ಟಿರುವುದನ್ನು ನಾವಿಲ್ಲಿ ನೆನೆಯುವುದೊಳಿತು. ಈ ದೃಷ್ಟಿಯಿಂದ ಅಕ್ಕಿಯನ್ನು ವಿನಿಯಂತ್ರಣಗೊಳಿಸಿದರೂ ನ್ಯಾಯ ಬೆಲೆಯ ಅಂಗಡಿಗಳನ್ನು ನಡೆಸಿಕೊಂಡು ಹೋಗಲು ಮದ್ರಾಸು, ತಿರುವಾಂಕೂರು ಕೊಚ್ಚಿ ಮುಂತಾದ ರಾಜ್ಯಗಳು ನಿರ್ಧರಿಸಿರುವುದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಇಲ್ಲಿ ಸರಕಾರದ ದೃಷ್ಟಿ ಮಾತ್ರ ಬೇರೆಯೇ ತೆರನಾಗಿದೆ—ಬಹಿರಂಗ ಪೇಟೆಯಲ್ಲಿ ಆಹಾರಧಾನ್ಯಗಳ ಬೆಲೆಯು ನ್ಯಾಯ ಬೆಲೆಯ ಅಂಗಡಿಗಳ ದರಕ್ಕಿಂತಲೂ ಕುಸಿದು ಹೋಗಬಹುದೆಂದು ಸರಕಾರ ಅಂಜಿಕೊಂಡಂತೆ ತೋರುತ್ತದೆ. ಹೀಗಾದರೆ ಸರಕಾರಕ್ಕೆ ವಿಪರೀತ ನಷ್ಟವನ್ನು ಹೊರಬೇಕಾಗುವುದರಿಂದ, ಸಂಗ್ರಹದಲ್ಲಿದ್ದ ಅಕ್ಕಿಯನ್ನೆಲ್ಲ ಆದಷ್ಟು ಬೇಗನೆ ಮಾರಾಟ ಮಾಡಲು ಅದು ಹಾತೊರೆಯುತ್ತವೆ. ಮದ್ರಾಸು ಸರಕಾರದೊಡನೆ ಈಗ ೧,೩೦,೦೦೦ ಟನ್ನುಗಳಷ್ಟು ಅಕ್ಕಿಯ ಸಂಗ್ರಹವುಂಟು. ಭಾರತ ಸರಕಾರದೊಡನೆ ೧೩ ಲಕ್ಷ ಟನ್ನುಗಳ ಸಂಗ್ರಹವಲ್ಲದೆ ೯ ಲಕ್ಷ ಟನ್ನು ಅಕ್ಕಿಯು ಬರ್ಮಾದಿಂದ ಇದೇ ವರ್ಷ ಪೂರೈಕೆಯಾಗುತ್ತದೆ. ಮೊದಲು ಕೊರತೆ ಪ್ರದೇಶಗಳಾಗಿದ್ದ ಮೈಸೂರು, ಹೈದರಾಬಾದು ಮುಂತಾದವು ಈಗ ಉಳಿಕೆಯನ್ನು ತೋರಿಸುತ್ತವೆ. ೧೯೫೨ರಲ್ಲಿ ರಾಜಾಜಿಯವರು ಕೊರತೆಯ ರಾಜ್ಯವಾಗಿದ್ದ (ಅವಿಭಕ್ತ) ಮದ್ರಾಸಿನಲ್ಲಿ ಧೈರ್ಯದಿಂದ ವಿನಿಯಂತ್ರಣವನ್ನು ಸಾರಿದಂದಿನಿಂದ, ಭಾರತ ಸರಕಾರದ ಆಹಾರ ಸಚಿವ ಕಿಡ್ವಾಯಿಯವರೂ ವಿನಿಯಂತ್ರಣ ಧೋರಣಕ್ಕೆ ಅಂಟಿಕೊಂಡು, ಆಮದು ಪ್ರಮಾಣವನ್ನು ಕ್ರಮವಾಗಿ ಇಳಿಸಿದರು. ಕಳೆದ ವರ್ಷ ಭಾರತದಲ್ಲಿ ಸುಮಾರು ೨೭೦ ಲಕ್ಷ ಟನ್ನುಗಳಷ್ಟು ಅಕ್ಕಿ ಬೆಳೆಯಿತೆಂದೂ ಇದು ಹಿಂದಿನ ಐದು ವರ್ಷಗಳ ಸರಾಸರಿ ಉತ್ಪಾದನೆಗಿಂತ ೫೫ ಲಕ್ಷ ಟನ್ನುಗಳಷ್ಟು ಅಧಿಕನೆಂದೂ ಅಂಕೆ ಸಂಖ್ಯೆಗಳು ತಿಳಿಸುತ್ತವೆ. ಭಾರತದಲ್ಲಿ ಆಹಾರ ಧಾನ್ಯಗಳ ಉತ್ಪಾದನೆಯನ್ನು ೭೬ ಲಕ್ಷ ಟನ್ನುಗಳಷ್ಟು ಹೆಚ್ಚಿಸಬೇಕೆಂದು ಇಟ್ಟುಕೊಂಡ ಗುರಿಯ ವಿರುದ್ಧ ೯೫ ಲಕ್ಷ ಟನ್ನು ಬೆಳೆದಿದ್ದೇವೆಂದು ಯೋಜನಾ ಆಯೋಗದ ಸಲಹೆಗಾರರು ಅಭಿಮಾನದಿಂದ ಹೇಳಿದ್ದಾರೆ. ಇದೆಲ್ಲವನ್ನು ವಿಮರ್ಶಿಸಿದರೆ ಆಹಾರದ ಮಟ್ಟಿಗೆ ಸ್ವಾವಲಂಬಿಗಳಾದೆವಲ್ಲ ಎಂದು ಸಂತೋಷವಾಗುತ್ತದೆ. ದೇವರ ದಯೆಯಿಂದ ಕಳೆದೆರಡು ವರ್ಷಗಳಲ್ಲಿ ನೈಸರ್ಗಿಕ ಆಪತ್ತುಗಳು ಯಾವುದೂ ಬಾರದೆ, ಮಳೆಯು ಅನುಕೂಲವಾಗಿದ್ದುದರಿಂದ ಹಾಗು ಸರಕಾರವು ಅಧಿಕ ಬೆಳೆ ಬೆಳೆಯುವುದಕ್ಕೆ ನೀರಾವರಿ ಮತ್ತಿತರ ಸೌಕರ್ಯಗಳನ್ನು ಒದಗಿಸಿದ್ದರಿಂದ ಈ ಸುದಿನವನ್ನು ಕಾಣುವಂತಾಯಿತು. ಬಂಗಾಳದ ಬರಗಾಲದ ವಿಭೀಷಿಕೆಯಿಂದ ಕಂಗೆಟ್ಟು ೧೧ ವರ್ಷಗಳ ಹಿಂದೆ ಹೇರಿದ್ದ—ಭಾರತದ ಅರೆವಾಸಿ ಪ್ರಜೆಗಳಿಗೆ ಅನ್ವಯಿಸುತ್ತಿದ್ದ—ವಿನಿಯಂತ್ರಣವು ರದ್ದುಗೊಂಡಿತು; ಅದರ ಅನಿಷ್ಟ ಪರಿಣಾಮಗಳೂ ದೂರಾದವು. ಆದರೆ ಬಡವರ ಹಾಗು ಮಧ್ಯಮ ವರ್ಗದ ಕೈಯಳವಿಗೆ ಆಹಾರಧಾನ್ಯಗಳು ಇನ್ನೂ ಬಂದಿಲ್ಲವೆಂಬುದು ಶೋಚನೀಯ. ಸರಕಾರದವರು ಇತ್ತ ಗಮನಕೊಟ್ಟು, ಜೀವನದ ವೆಚ್ಚವನ್ನು ಕಡಿಮೆಮಾಡಿ, ಜೀವನದ ಮಟ್ಟವನ್ನು ಉನ್ನತಗೊಳಿಸಲು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇವೆ.

ಜಿನೇವ ಸಂಧಾನದ ಪುನರಾರಂಭ

ಮೆಂಡೆಸರಿಗೆ ಶಪಥ ನೆರವೇರಿಸುವ ಆತುರ

ಕಳೆದ ತಿಂಗಳ ಮೂರನೇ ವಾರದಲ್ಲಿ ಸ್ಥಗಿತಗೊಂಡಂತೆ ಕಂಡು ಬಂದ ಜಿನೇವಾದ ಪರಿಷತ್ತು ಈಗ ಮರಳಿ ಪ್ರಾರಂಭವಾಗಿದೆ. ಮಹಾರಾಷ್ಟ್ರಗಳ ವಿದೇಶಾಂಗ ಸಚಿವರು ಒಬ್ಬೊಬ್ಬರಾಗಿಯೇ ಜಿನೇವಾಕ್ಕೆ ಆಗಮಿಸಿ, ಪರಸ್ಪರ ಸಮಾಲೋಚನೆಗಳನ್ನು ನಡೆಸಿದರು. ಮೊದಲಾಗಿ ರಶಿಯಾದ ಮೊಲೋಟವರು ಜಿನೇವಕ್ಕೆ ಬಂದರು; ಅವರ ಬೆನ್ನಿಗೆ ಫ್ರಾನ್ಸಿನ ಹೊಸ ಪ್ರಧಾನಿ ಹಾಗು ವಿದೇಶಾಂಗ ಮಂತ್ರಿ ಮೆಂಡೆಸರು ಆಗಮಿಸಿದರು; ಹಿಂದಿನಿಂದ ಚೀನೀ ಪ್ರಧಾನಿ ಚೌ ಎನ್ ಲಾಯರೂ ಬ್ರಿಟಿಷ ವಿದೇಶಾಂಗ ಸಚಿವ ಈಡನರೂ ಜಿನೇವಾದಲ್ಲಿ ಇಳಿದರು. ಭಾರತದ ಶ್ರೀ ಕೃಷ್ಣ ಮೆನೋನ್ನರು ಸಹ ಈ ಮಾತುಕತೆಯ ಕಾಲದಲ್ಲಿ ಹಾಜರಿದ್ದು, ಭಾರತದ ಸಲಹೆಗಳನ್ನು ಖಾಸಗಿಯಾಗಿ ಮುಂದಿಡಲು ಜಿನೇವಕ್ಕೆ ಮರಳಿ ಬಂದರು. ಆದರೆ ಅಮೇರಿಕದ ವಿದೇಶಾಂಗ ಸಚಿವರಾದ ಡಲ್ಲೇಸರು ಮಾತ್ರ ಕಮ್ಯುನಿಸ್ಟ ಧೋರಣೆಯಲ್ಲಿ ತೃಪ್ತಿಕರವಾದ ಪರಿವರ್ತನೆಯನ್ನು ಕಾಣದೆ, ಜಿನೇವಕ್ಕೆ ಹೋಗುವುದು ಅರ್ಥಶೂನ್ಯವೆಂದು ಹೇಳುತ್ತಾ, ಪೇರಿಸಿನಲ್ಲೆ ಬಿಡಾರ ಹೂಡಿ, ಪಶ್ಚಿಮ ರಾಷ್ಟ್ರಗಳೊಡನೆ ಸಂಪರ್ಕದಿಂದ ಇರಲು ನಿಶ್ಚಯಿಸಿದ್ದಾರೆ.

ಮೆಂಡೆಸರ ಆತುರ

ಮೆಂಡೆಸ ಫ್ರಾನ್ಸರು ತಾವು ಅಧಿಕಾರವನ್ನು ಸ್ವೀಕರಿಸಿದ ಕಾಲಕ್ಕೆ ಇದೇ ಜುಲೈ ೨೦ರೊಳಗೆ ಇಂಡೋ ಚೀನದಲ್ಲಿ ಕದನ ವಿರಾಮ ಸಾಧಿಸುವೆನೆಂದು ಮಾಡಿದ್ದ ಪ್ರತಿಜ್ಞೆಯನ್ನು ಪೂರೈಸಲು ಬಹಳ ಪ್ರಯತ್ನಶೀಲರಾಗಿದ್ದಾರೆ. ಅವರು ತುಂಬ ಪ್ರಾಮಾಣಿಕತೆಯಿಂದ ನಡೆದುಕೊಳ್ಳುತ್ತಿದ್ದು ವೀಟಮಿನ ಪ್ರಭೃತಿಗಳನ್ನೂ ಮೊಲೊಟೊವರನ್ನೂ ಚೌರವರನ್ನೂ ಕಂಡು ಮಾತುಕತೆ ನಡೆಸಿದ್ದಾರೆ. ಕೃಷ್ಣ ಮೆನೊನ್ನರೊಡನೆಯೂ ಅವರು ಚರ್ಚಿಸಿದ್ದಾರೆ. ಮೆಂಡೆಸರ ಪ್ರಯತ್ನಗಳ ಫಲವಾಗಿ ಅವರು ಯುದ್ಧ ವಿರಾಮವನ್ನು ಸಾಧಿಸಿಯಾರೆಂದು ಭಾರತದ ಪ್ರಧಾನಿ ನೆಹರೂರವರಂತೆ ನಾವೂ ಆಶಿಸಬಹುದು; ಮೆಂಡೆಸರ ಸದಿಚ್ಛೆಗೆ ನಾವು ಮೆಚ್ಚಿಗೆ ವ್ಯಕ್ತಪಡಿಸಬಹುದು. ವೀಟನಾಮದಲ್ಲಿ ೧೩ ಡಿಗ್ರಿ ಅಕ್ಷಾಂಶದಲ್ಲಿ ಯುದ್ಧ ವಿರಾಮ ರೇಖೆಯನ್ನೆಳೆಯಲು ಫ್ರೆಂಚರು ತಮ್ಮ ಸಮ್ಮತಿಯನ್ನು ತೋರಿಸಿರುವರೆಂದೂ ಆದರೆ ವೀಟಮಿನರು ೧೮ ಡಿಗ್ರಿ ಅಕ್ಷಾಂಶದಲ್ಲಿ ಕದನ ವಿರಾಮರೇಖೆಯಿರಬೇಕೆಂದು ಹೇಳುತ್ತಿರುವುದಾಗಿಯೂ ವದಂತಿ. ಮಂಗಳವಾರ (ದಿನಾಂಕ ೧೩) ಸೇರಿದ ನವರಾಷ್ಟ್ರಗಳ ಸಭೆಯಲ್ಲಿ ಹೊಸ ಸೂಚನೆಗಳು ಚರ್ಚಿಸಲ್ಪಡುತ್ತವೆ.

ಹಾನೋಯಿಗೆ ಗಂಡಾಂತರ

ಆದರೆ ಅಮೇರಿಕಕ್ಕೆ ಜಿನೇವಾದಲ್ಲಿ ಪುನಃ ಸೇರಿದ ಪರಿಷತ್ತು ಸ್ವಲ್ಪವೂ ರುಚಿಸುವುದಿಲ್ಲ. ಅನ್ಯಥಾ ಡಲ್ಲೇಸರು ಜಿನೇವಾಕ್ಕೆ ಹೋಗದೆ ಉಳಿಯುತ್ತಿರಲಿಲ್ಲ; ಕನಿ

ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ದಯಮಾಡಿ ಅವರ ಚಂದಾ ನಂಬ್ರವನ್ನು (ಕೊನೆಗೆ ಪೂರ್ತಿ ವಿಳಾಸವನ್ನಾದರೂ) ಕೊಡುವಂತೆ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ ಬರೆಯುವಾಗ **ಪೋಸ್ಟ್ ಬಾಕ್ಸ್ ನಂಬ್ರ 22** ಎಂದು ಬರೆಯುವಂತೆಯೂ ಸೂಚಿಸುತ್ತೇವೆ.

ಮೆನೇಜರ್-ನವಯುಗ,
ಪೋಸ್ಟ್ ಬಾಕ್ಸ್ ನಂಬ್ರ ೨೨,
ಉಡುಪಿ.

ಷ್ಟ ಪಕ್ಷಕ್ಕೆ ತಮ್ಮ ಬಲಿಗೈ ಬಂಟ ಬೇಡಿ ಲ ಸ್ಮಿಥರನ್ನಾದರೂ ಕಳಿಸುತ್ತಿದ್ದರು. ಹಾಗೇನೂ ಮಾಡದೆ ಪೇರಿಸಿನಲ್ಲಿ ತಳವೂರಲು ಅವರುಹವಣಿಸಿದುದು ಧೂರ್ತತನದ ದ್ಯೋತಕ. ಈಡನರೂ ಮೆಂಡೆಸರೂ ಪೇರಿಸಿನಲ್ಲಿರುವ ಡಲ್ಲೇಸರೊಡನೆ ಸಂಪರ್ಕ ಕಳೆದುಕೊಂಡಿಲ್ಲ. ಆದರೆ ಅಮೇರಿಕದ ನಿಲುಮೆಯನ್ನು ಒಪ್ಪುವುದು ಫ್ರಾನ್ಸಿಗೆ ಅಸಾಧ್ಯವೆಂದೇ ಭಾಸವಾಗುತ್ತದೆ ಏಕೆಂದರೆ ಇಂಡೋಚೀನದಲ್ಲಿ ಹಾನ್ಯೊ ನಗರದ ಮೇಲೆ ಇಷ್ಟರಲ್ಲೇ ಪ್ರಬಲ ದಾಳಿಯನ್ನು ವೀಟಮಿನರು ಕೈಗೊಳ್ಳಬಹುದೆಂದು ಹೇಳಲಾಗುತ್ತದೆ. ಡೀನ ಬೀನ ಫೂ ಕೋಟೆಯ ಕದನಕ್ಕಿಂತಲೂ ಇದು ಭೀಕರವಾದೀತು. ಫ್ರೆಂಚರು ಈಗಾಗಲೇ ಜನರನ್ನು ಸ್ಯೆಗಾನಿಗೆ ಸುರಕ್ಷಿತವಾಗಿ ಸಾಗಿಸಲು ವ್ಯವಸ್ಥೆ ಮಾಡಿದ್ದು, ವೀಟಮಿನ ಆಕಾಶಯಾನ ಮಂಡಳವು "ಜೂಲೈ ೨೭ನೇ ತಾರೀಕಿನವರೆಗೆ ಎಲ್ಲಾ ಸೀಟುಗಳೂ ಭರ್ತಿಯಾಗಿವೆ" ಎಂಬ ಹಲಗೆಯನ್ನು ಕಾರ್ಯಾಲಯದ ಮುಂದೆ ತೂಗಿಸಿದೆ! ಫ್ರೆಂಚ ಸೈನಿಕರು ಹಾನ್ಯೊ ನಗರದ ಸುತ್ತಲೂ ಮುಳ್ಳು ತಂತಿಗಳನ್ನು ಬಿಗಿದು, ಸಂರಕ್ಷಣ ಕ್ರಮಗಳನ್ನು ಭದ್ರಗೊಳಿಸುತ್ತಿದ್ದಾರೆ.

ಅಮೇರಿಕದ ಅಭಿಲಾಷೆ

ಫ್ರೆಂಚರನ್ನು ಹೇಗಾದರೂ ಮಾಡಿ ಹಣ್ಣು ಮಾಡಬೇಕೆಂದು ಅಮೇರಿಕದ ಅಭಿಲಾಷೆ: ಐರೋಪ್ಯ ಸಂರಕ್ಷಣಾ ಒಡಂಬಡಿಕೆಯನ್ನು ಒಪ್ಪಿಕೊಳ್ಳದಿದ್ದರೆ, ಇದೇ ದಶಂಬರದ ಬಳಿಕ ಫ್ರಾನ್ಸಿಗೆ ಸಹಾಯ ಕೊಡುವುದನ್ನು ನಿಲ್ಲಿಸಬೇಕೆಂದು ಅಧ್ಯಕ್ಷರಿಗೆ ಆದೇಶ ಕೊಡಲು ಅಮೇರಿಕದ ಸಿನೇಟು ನಿರ್ಧರಿಸಿದೆ. ಕೆಂಪು ಚೀನಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ದೊರಕದಂತೆ ಅಮೇರಿಕ ಸದಾ ಪ್ರಯತ್ನಿಸಬೇಕೆಂದೂ ಒಂದು ವೇಳೆ ಹಾಗೆ ಸ್ಥಾನ ದೊರೆತರೆ ಅಮೇರಿಕವು ರಾಷ್ಟ್ರಸಂಘದಿಂದ ಹೊರ ಬರಬೇಕೆಂದೂ ಅಧ್ಯಕ್ಷರಿಗೆ ಆದೇಶಿಸುವ ಸಿನೇಟರ ನ್ನೋಲೆಂಡರ ಗೊತ್ತುವಳಿ ಈ ಪ್ರಶ್ನೆಯನ್ನೂ ಜಟಿಲಗೊಳಿಸಿದೆ. ಕೆಂಪು ಚೀನಕ್ಕೆ ಸ್ಥಾನ ದೊರಕಿಸಿಕೊಡುವ ಪ್ರಶ್ನೆಯನ್ನು ನಿಷೇಧಾಧಿಕಾರದ ಬಲದಿಂದ ಅಮೇರಿಕ ತಳ್ಳಿಹಾಕುವುದೆಂದು ಡಲ್ಲೇಸರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದುದರ ಗುಟ್ಟಾದರೂ ಇದೇ ಆಗಿದೆ. ಆದರೆ, ರಾಜಕಾರಣ ಪಟುವೆನಿಸಿದ ಭಾರತದ ಸರ್ದಾರ ಪಣಿಕ್ಕರರು "ಇಲ್ಲಿ ನಿಷೇಧಾಧಿಕಾರವನ್ನು ಉಪಯೋಗಿಸುವ ಪ್ರಶ್ನೆಯೇ ಬರುವುದಿಲ್ಲ. ಅಧಿಕಾರ ಸತ್ರಗಳ ಸಮಿತಿಯಲ್ಲಿ ಮತ್ತು ಸಾಮಾನ್ಯ ಸಭೆಯಲ್ಲಿ ಬಹುಮತ ದೊರೆತರೆ ಕೆಂಪು ಚೀನಕ್ಕೆ ಪ್ರಾತಿನಿಧ್ಯ ಸಲ್ಲಬೇಕಾಗುತ್ತದೆ" ಎಂದಿದ್ದಾರೆ.

ಅಣು ಶಸ್ತ್ರಗಳ ಸ್ಫೋಟ

ಮಾರ್ಶಲ್ ದ್ವೀಪದಲ್ಲಿ ಈಚೆಗೆ ಅಮೇರಿಕವು ಜಲಜನಕ ಬಾಂಬುಗಳ ಪ್ರಯೋಗವನ್ನು ನಡೆಸಿದ್ದರಿಂದ ಅನರ್ಥ ಪರಂಪರೆಯುಂಟಾಯಿತೆಂದು ದ್ವೀಪ ನಿವಾಸಿಗಳು ಕೊಟ್ಟ ದೂರು ರಾಷ್ಟ್ರಸಂಘದ ವಿಶ್ವಸ್ತ ಮಂಡಳದ ಮುಂದೆ ಚರ್ಚೆ ಸಲ್ಪಟ್ಟಿತು. ಜಲಜನಕ ಬಾಂಬುಗಳ ಪ್ರಯೋಗವನ್ನು ಮಾರ್ಶಲ್ ದ್ವೀಪದಲ್ಲಿ ನಡೆಸುವುದು ತೀರಾ ಅಗತ್ಯವೋ ಎಂದು ಅಮೇರಿಕ ಪುನಃ ವಿಚಾರಿಸಬೇಕು; ಹಾಗಿದ್ದರೆ ಗಂಡಾಂತರಗಳುಂಟಾಗದಂತೆ ಯೋಗ್ಯ ಮುಂಜಾಗ್ರತೆಯ ಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಬ್ರಿಟನು, ಫ್ರಾನ್ಸು, ಬೆಲ್ಜಿಯಮುಗಳು ಸಂಯುಕ್ತ ಗೊತ್ತುವಳಿಯನ್ನು ತಂದವು. ರಶಿಯಾವು ಜಲಜನಕ ಬಾಂಬುಗಳ ಪ್ರಯೋಗವೇ ನಡೆಯಬಾರದೆಂದೂ ಈಗ ಗಂಡಾಂತರಕ್ಕೆ ಗುರಿಯಾದ ದ್ವೀಪ ನಿವಾಸಿಗಳಿಗೆ ಅಮೇರಿಕ ಪರಿಹಾರ ಕೊಡಬೇಕೆಂದೂ ಗೊತ್ತುವಳಿ ತಂದಿತು. ಭಾರತವು ತನ್ನ ಸ್ವತಂತ್ರ ಧೋರಣೆಯನ್ನನುಸರಿಸಿ, ವಿಶ್ವಸ್ತ ಆಡಳಿತೆಗೆ ಒಪ್ಪಿಸಿದ ಪ್ರದೇಶದಲ್ಲಿ ದ್ವೀಪಗಳ ವಿನಾಶ ಹಾಗು ಜನತೆಯ ಆರೋಗ್ಯಕ್ಕೆ ಹಾನಿಮಾಡುವ ಜಲಜನಕ ಬಾಂಬುಗಳ ಪ್ರಯೋಗ ನಡೆಸುವುದು ಸರಿಯೇ ಎಂಬುದನ್ನು ಅಂತಾರಾಷ್ಟ್ರೀಯ ನ್ಯಾಯಮಂಡಳದ ತೀರ್ಮಾನಕ್ಕೆ ಬಿಟ್ಟುಗೊಡಬೇಕೆಂದು ಠರಾವು ಮಂಡಿಸಿತು. ಆದರೆ ಅಮೇರಿಕದ ನಿಲುಮೆಗೆಯೇ ಸಮಿತಿಯಲ್ಲಿ ಬಹುಮತ ದೊರೆತು, ಈ ಠರಾವುಗಳೆಲ್ಲ ನಿರಾಕೃತವಾದವು.

(೫ನೇ ಪುಟದಿಂದ)

ರಾಜ್ಯ ರಚನೆಯ ಪ್ರಶ್ನೆಯನ್ನು ಹಿಂದೂ ಡಲು ಫಜಲ ಅಲಿ ಆಯೋಗವನ್ನು ನೇಮಿಸಲಾಗಿದೆಯೆಂದು ಕಾಂಗ್ರೆಸು ಭಾವಿಸುವುದಿಲ್ಲ. ಆಯೋಗದ ಕಾರ್ಯದ ಪರಿಣಾಮವಾಗಿ ಸಮಸ್ಯೆಯ ತೃಪ್ತಿಕರ ಪರಿಹಾರಕ್ಕೆ ಅವಕಾಶವಾಗುವುದೆಂದು ನಾನು ನಂಬುತ್ತೇನೆ" ಎಂದರು. ಒಂದೇ ಭಾಷೆಗಳ ಎರಡು ರಾಜ್ಯಗಳ ರಚನೆಯನ್ನು ಕುರಿತು ಪ್ರಸ್ತಾಪಿಸುತ್ತಾ ಕೆಲವು ಏಕಭಾಷಾ ಪ್ರದೇಶಗಳು ಆಡಳಿತ ದೃಷ್ಟಿಯಿಂದ ಅತಿ ದೊಡ್ಡದಾಗಬಹುದಾದರೆ ಇನ್ನು ಕೆಲವು ಆರ್ಥಿಕ ದೃಷ್ಟಿಯಿಂದ ಸ್ವತಂತ್ರ ಅಸ್ತಿತ್ವವನ್ನು ಪಡೆಯಲು ಅಸಾಧ್ಯವಾದೀತು: ಇಂಥಲ್ಲೆಲ್ಲ ಒಂದೇ ಭಾಷೆಯ ಎರಡು ರಾಜ್ಯಗಳ ನಿರ್ಮಾಣ ಪ್ರಶ್ನೆ ಮತ್ತಿತರ ಸಂಗತಿಗಳನ್ನು ವಿವೇಚಿಸಬೇಕಾಗುತ್ತದೆ ಎಂದರು.

ಕರ ನಿರಾಕರಣ ಚಳವಳಿ

ಪ್ರಜಾಸಮಾಜವಾದಿ ಪಕ್ಷದ ಪ್ರಭಾವಿ ಧುರೀಣರಾದ ಶ್ರೀ ರಾಮಮನೋಹರ ಲೋಹಿಯಾರನ್ನು ಉತ್ತರ ಪ್ರದೇಶ ಸರಕಾರವು ನೀರಾವರಿ ಕರ ನಿರಾಕರಣೆಯ ಚಳವಳವನ್ನು ಪ್ರಚೋದಿಸಿದರೆಂದು ಆರೋಪಿಸಿ ಬಂಧಿಸಿರುತ್ತದೆ ಈ ಕುರಿತು ದೇಶದಾದ್ಯಂತ ಪ್ರಜಾಸಮಾಜವಾದಿಗಳು ಪ್ರತಿಭಟನೆ ತೋರುತ್ತಿದ್ದಾರೆ. ಏರಿಸಿದ ನೀರಾವರಿ ತೆರಿಗೆಯನ್ನು ಕೊಡಬಾರದೆಂದು ಉಪದೇಶಿಸುವುದು ಘಟನಾತ್ಮಕವಾಗಿ ನಾಗರಿಕರ ಪಾಲಿಗೆ ಬಂದ ಅಧಿಕಾರವೆಂದು ಇವರ ಅಂಬೋಣ. ಆದರೆ ಶಾಸನ ಸಭೆಗಳಲ್ಲಿಯ ತಮ್ಮ ಪ್ರತಿನಿಧಿಗಳ ಮೂಲಕವೇ ಅನಪೇಕ್ಷಿತ ಕಾಯಿದೆಗಳು ಪಾಸಾಗುವುದನ್ನು ತಡೆಯಬೇಕೆಂಬ ಪ್ರಜಾಪ್ರಭುತ್ವ ಪದ್ಧತಿಯ ತಿರುಳನ್ನು ಇವರು ಮನಗಾಣುವುದಿಲ್ಲ. ಕೆಲದ ಪ್ರಜಾ ಸಮಾಜವಾದಿಗಳು ಅಲಹಾಬಾದಿಗೆ ಪ್ರಧಾನ ಮಂತ್ರಿ ನೆಹರೂರವರು ಆಗಮಿಸಿದಾಗ ಅವರ ಮುಂದೆ ಪ್ರದರ್ಶನವನ್ನು ನಡೆಸಿದರು. ಇದು ಕೆಲವು ಪ್ರಸ ವಾಧುರೀಣರಿಗೆ ಸರಿ ಬಾರದೆ ಅವರು ಪಕ್ಷಕ್ಕೆ ರಾಜಿನಾಮೆ ಕೊಟ್ಟಿರುವರೆಂದು ಕೇಳುತ್ತೇವೆ. ಇದೇ ೧೮ರಂದು ಲೋಹಿಯಾ ದಿನಾಚರಣೆಯನ್ನು ದೇಶದಾದ್ಯಂತ ಆಚರಿಸಲು ಪಕ್ಷದ ಸದಸ್ಯರಿಗೆ ಕರೆ ಕೊಡಲಾಗಿದೆ; ಅಲ್ಲದೆ, ಲೋಹಿಯಾರು ತಮ್ಮ ಬಂಧನದ ವಿರುದ್ಧ ಅಲಹಾಬಾದಿನ ಹೈಕೋರ್ಟಿಗೆ "ಹೇಬಿಯಸ್ ಕಾರ್ಪಸ್" ಅರ್ಜಿ ಸಲ್ಲಿಸಿದ್ದಾರೆ ಇದರ ವಿಚಾರಣೆಯು ಇದೇ ೧೫ರಂದು ನಡೆಯುತ್ತದೆ. ಕರನಿರಾಕರಣ ಚಳವಳದ ಸಂಬಂಧದಲ್ಲಿ ನೂರಕ್ಕೂ ಹೆಚ್ಚು ಮಂದಿ ಬಂಧನದಲ್ಲಿರುವರು

ರಾಷ್ಟ್ರ ನಿರ್ಮಾಣ ಕಾರ್ಯ

ಅಂಬಾಲದಲ್ಲಿ ತರುಣರನ್ನು ಉದ್ದೇಶಿಸಿ ಮಾತನಾಡುತ್ತಾ ಪ್ರಧಾನ ಮಂತ್ರಿಗಳು ಭಾರತದ ಹಳ್ಳಿಗಳಲ್ಲಿ ನವ ಚೈತನ್ಯ ನ್ನ ಮೂಡಿಸುವುದಕ್ಕೋಸ್ಕರ ಸಾವಿರಾರು ತರುಣರು ಉಚಿತ ತರಬೇತಿ ಹೊಂದಲು ಮುಂಬರಬೇಕೆಂದು ಹೇಳಿದರು. ವಿಧಾಯಕ ಕಾರ್ಯಗಳಲ್ಲಿ ಹೆಚ್ಚು ಹೆಚ್ಚು ಆಸಕ್ತಿಯನ್ನು ತೋರಿಸಬೇಕು; ಸರಕಾರದ ಯೋಜನೆಗಳ ಮಾಹಿತಿಯನ್ನು ಧಾರಾಳವಾಗಿ ಪಡೆದಿರಬೇಕು; ತನ್ನ ಕೆಲಸದ ಬಗ್ಗೆ ಅಭಿಮಾನಿಗಳಾಗಿರಬೇಕು ಎಂದವರು ಉಪದೇಶಿಸಿದರು. ಮುಂಬಯಿಯಲ್ಲಿ ಭಾರತ ಸೇವಕ ಸಮಾಜದ ಸಭೆಯನ್ನು ಉದ್ದೇಶಿಸುತ್ತಾ ಯೋಜನಾ ಸಚಿವ ನಂದಾರವರು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ಜನರು ತಮ್ಮ ಉತ್ಸಾಹ ಶಕ್ತಿಯನ್ನು ನೀಡಬೇಕೆಂದು ಅಪೇಕ್ಷಿಸಿದರು. ಭಾರತೀಯರು ಸ್ವಲ್ಪ ಹೆಚ್ಚು ಕರ್ತವ್ಯ ನಿಷ್ಠರಾದರೆ ಈಗ ಸುಪ್ತವಾಗಿರುವ ಅಪಾರ ಜನಸಂಪತ್ತಿನ ಸದುಪಯೋಗವಾಗಿ ದೇಶಕ್ಕೆ ಅಪಾರ ಲಾಭ ದೊರಕುತ್ತದೆ ಎಂದರು. ವಾರಕ್ಕೆ ಐದು ತಾಸುಗಳ ಕಾಲವನ್ನು ಸಮಾಜ ಸೇವೆಗಾಗಿ ವಿನಿಯೋಗಿಸಿದರೆ ಯಾವ ಸಮಸ್ಯೆಗಳೂ ದೀರ್ಘ ಕಾಲ ಉಳಿಯಲಾರವು ಎಂದವರು ತಿಳಿಸಿದರು.

ವಿಷಮತೆಯ ನಿವಾರಣೆ

ಭೂದಾನದ ಚಳವಳಿಯಲ್ಲಿ ಧುಮುಕಿರುವ ಶ್ರೀ. ಜಯಪ್ರಕಾಶ ನಾರಾಯಣರು ಇತ್ತೀಚೆಗೊಂದು ಆಕಾಶವಾಣಿ ಭಾಷಣದಲ್ಲಿ ಸದ್ಯ ವಿದ್ಯಮಾನವಿರುವ ಸಾಮಾಜಿಕ ಹಾಗು ಆರ್ಥಿಕ ವಿಷಮತೆಯನ್ನು ನಿವಾರಿಸುವುದಕ್ಕೆ ಹಾಗು ಅಹಿಂಸಾತ್ಮಕ ಕ್ರಾಂತಿಯನ್ನು ಸಾಧಿಸುವುದಕ್ಕೆ ಭೂದಾನವೇ ಶ್ರೇಷ್ಠ ಮಾರ್ಗವೆಂದು ಸಾರಿದರು. ವಿನೋಬಾ ಭಾವೆಯವರು 'ದಾನ' ಶಬ್ದವನ್ನು ಶಂಕರಾಚಾರ್ಯರಂತೆ "ಸಮ ವಿಭಾಗ" ಎಂಬ ವಿಶಾಲ ಅರ್ಥದಲ್ಲಿ ಉಪಯೋಗಿಸುತ್ತಾರೆ; ಸಂಪತ್ತಿದಾನ, ಶ್ರಮದಾನ, ಬುದ್ಧಿದಾನ ಎಲ್ಲವನ್ನೂ ಇದು ಒಳಗೊಳ್ಳುತ್ತದೆ. ದಾನಶಬ್ದದ ಈಗಿನ ವ್ಯಾವಹಾರಿಕ ಅರ್ಥವು ಅದರ ಕ್ರಾಂತಿಕಾರಕ ಸ್ವರೂಪವನ್ನೆ ಕೊಲ್ಲುತ್ತದೆಎಂದರು.

ಉಡುಪಿ

ಉಡುಪಿ ತರಬೇತಿ ಶಾಲೆಗೆ— ಪ್ರವೇಶದ ಬಗ್ಗೆ ಅರ್ಜಿ ಮಾಡಿದ ಉಮೇದ್ವಾರರು ಸರ್ಟಿಫಿಕೇಟು ಮತ್ತು ಗುಣ ನಡತೆಯ ಶಿಫಾರಸು ಪತ್ರ ಸಹಿತ ಇದೇ ತಾ. 19ನೆ ಸೋಮವಾರ ಬೆಳಿಗ್ಗೆ 9 ಗಂಟೆಗೆ ಹಾಯರ್ ಗ್ರೇಡ್ ಪ್ರವೇಶದ ಬಗ್ಗೆ, ಅಪರಾಹ್ನ 2 ಗಂಟೆಗೆ ಸೆಕೆಂಡರಿ ಗ್ರೇಡ್ ಪ್ರವೇಶದ ಬಗ್ಗೆ ಉಮೇದ್ವಾರರು ಮುಖ್ಯೋಪಾಧ್ಯಾಯರ ಮುಂದೆ ಹಾಜರಾಗಬೇಕಾಗಿ ಅವರು ತಿಳಿಸುತ್ತಾರೆ.

ವಿದಾಯ ಸತ್ಕಾರ— ದ. ಕ. ಜಿಲ್ಲಾ ಪೋಸ್ಟಾಫೀಸು ಸುಪರಿಂಟೆಂಡೆಂಟ್ ಶ್ರೀ ಆರ್. ಬಿ ವಿಶ್ವನಾಥನ್, ಅವರು ಬಳ್ಳಾರಿಗೆ ವರ್ಗಾಯಿಸಲ್ಪಟ್ಟ ಕಾರಣ ಅವರಿಗೆ ವಿದಾಯ ಸಲ್ಲಿಸುವ ಸತ್ಕಾರ ಕೂಟವು ತಾ 9 ರಲ್ಲಿ ಸ್ಥಳೀಯ ಹೆಡ್ ಪೋಸ್ಟಾಫೀಸಿನಲ್ಲಿ ಜರಗಿತು ಶ್ರೀಗಳಾದ ಎಮ್. ಎನ್. ರಾವ್, ಪೋಸ್ಟ್‌ಮಾಸ್ಟರ್, ಬಿ ಬಾಲಕೃಷ್ಣ, ಪಿ. ಆರ್. ನಾಯಕ್, ಕೆ. ಆರ್. ಶೆಟ್ಟಿ ಮತ್ತು ಆರ್. ಬಿ. ಭಟ್ಟರು ಮಾತನಾಡಿದರು. ದೇಶ ಹಾಗೂ ಜನತೆಯ ಸೇವೆಯನ್ನು ಉತ್ಸಾಹದಿಂದ ಮಾಡಬೇಕಾಗಿ ಮಾನ್ಯ ಅತಿಥಿಯು ಸಲಹೆಯಿತ್ತು ಹೆಡ್ ಪೋಸ್ಟಾಫೀಸು ನೌಕರರ ಕಾರ್ಯಕುಶಲತೆಯನ್ನು ಪ್ರಶಂಸಿಸಿದರು.

ಮುನಿಸಿಪಲ್ ಸಭೆಯು ತಾ. 10 ರಲ್ಲಿ ಚೆರ್ಮನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಜನವರಿ, ಫೆಬ್ರವರಿ ಮತ್ತು ಮಾರ್ಚಿ ತಿಂಗಳಲ್ಲಿ ವೆಚ್ಚಕ್ಕೆ ಬೇಕಾಗುವ ಹಣವನ್ನು ಒಂದು ಖಾತೆಯಿಂದ ಇನ್ನೊಂದು ಖಾತೆಗೆ ವರ್ಗಾಯಿಸಿದುದನ್ನು ಮಂಜೂರು ಮಾಡಬೇಕೆನ್ನುವ ಆಫೀಸು ನೋಟಿನ ಕುರಿತು ತುಂಬಾ ಚರ್ಚೆ ನಡೆದು ಕೊನೆಗೆ ಮುಂದಿನ ಸಭೆಯ ಇತ್ಯರ್ಥಕ್ಕೆ ಬಾಕಿಯಿಡಲಾಯಿತು. ಮದ್ರಾಸು ಡಿ! ಮು! ಆಕ್ಟಿನ 300ನೇ ಸೆಕ್ಷನಿನ ಸಬ್ ಸೆಕ್ಷನ್ (2) ಮತ್ತು (2 A) ಪ್ರಕಾರ ಉಪನಿಬಂಧನೆಗಳನ್ನು ಮಾಡಬೇಕೆಂದು ಸೂಚಿಸಿದ ಶ್ರೀ ಕೆ. ದೇವೇಂದ್ರ ಶೆಣೈಯವರ ನಿರ್ಣಯವು ಬಹುಮತದಿಂದ ಪಾಸಾಯಿತು. ಕೌನ್ಸಿಲಿನ 1953–54ರ ಆಡಳಿತೆ ವರದಿ ಪರಿಶೀಲನೆಯನ್ನು ಮುಂದಿನ ಸಭೆಗೆ ಬಾಕಿಯಿಡಲಾಯಿತು. ಕಾಯಿದೆ ಬದ್ಧ ವಿದ್ಯಾಖಾತೆಯ ಗ್ರಾಂಟನ್ನು ನಗರ ಸಭೆಗೆ ಕೊಡುವಂತೆ ಸರಕಾರವನ್ನು ಪುನಹ ಕೇಳಿಕೊಳ್ಳಲಾಯಿತು.

ವಿವಾಹ ಸಮಾರಂಭಗಳು

ಪ್ರೊವಿನ್ಶಿಯಲ್ ಇನ್ಶೂರೆನ್ಸ್ ಕಂಪೆನಿಯ ಇನ್ಸ್‌ಪೆಕ್ಟರ್ ಶ್ರೀ ಎ. ಬಿ. ಕೃಷ್ಣರಾಜರ ಪುತ್ರಿ ಚಿ! ಸೌ! ಕುಮಾರಿ ಶಾರದಾ ದೇವಿಯನ್ನು, ಶ್ರೀ ಕಲ್ಲಂಜೆ ಪದ್ಮನಾಭ ಭಟ್ಟರ ಪುತ್ರ ಶ್ರೀ ಕೆ. ಶ್ರೀನಿವಾಸ ರಾಯರು ಇದೇ ತಾ. 14 ರಲ್ಲಿ ತಿರುಪತಿ ಶ್ರೀ ಶ್ರೀನಿವಾಸ ದೇವರ ಸನ್ನಿಧಿಯಲ್ಲಿ ವಿವಾಹವಾದರು.

ಶ್ರೀ ಉಪ್ಪೂರು ಹೊಸಮನೆ ಕೃಷ್ಣಯ್ಯ ಶೆಟ್ಟಿ ಪುತ್ರ ಶ್ರೀ ರತ್ನಾಕರ ಶೆಟ್ಟರು ಪೇಜಾವರು ನಣ್ಣಮನೆ ವೀರಪ್ಪ ಶೆಟ್ಟಿ ಪುತ್ರಿ ಚಿ! ಸೌ! ಲೀಲಾವತಿಯನ್ನು ಇದೇ ತಾ. 12 ರಲ್ಲಿ ಉಡುಪಿ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ವಿವಾಹವಾದರು.

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/- per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ಕಾರ್ಕಳ— ಕಾರ್ಕಳ ಪರಿಸರದಲ್ಲಿ ವನ ಮಹೋತ್ಸವವು ವಿವಿಧ ಸಂಘ ಸಂಸ್ಥೆಗಳಲ್ಲಿ ಆಚರಿಸಲ್ಪಟ್ಟಿತು. ಡಿಸ್ಟ್ರಿಕ್ಟ್ ಮುನ್ಸಿಫ್ ಶ್ರೀ ಎಮ್. ಎಮ್. ದೇಸಾಯಿ, ಶ್ರೀಗಳಾದ ಕೆ. ಹಿ. ಮುಕುಂದ ಪ್ರಭು, ವೆಂಕಟನಾರಾಯಣ ಅಯ್ಯಂಗಾರ್, ಮೊದಲಾದವರು ಸಸಿನೆಡುವ ಆವಶ್ಯಕತೆ ಕುರಿತು ಭಾಷಣವಿತ್ತರು.

ಸಾರ್ವಜನಿಕ ಸಭೆಯು ಬೋರ್ಡ್ ಹೈಸ್ಕೂಲಿನ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಎಸ್. ಯು. ಸಿ. ನಾಯ್ಡುರ ಅಧ್ಯಕ್ಷತೆಯಲ್ಲಿ ಜರಗಿತು. ಕಮ್ಯೂನಿಟಿ ಪ್ರೊಜೆಕ್ಟ್ ಆಫೀಸರ್ ಶ್ರೀ ಎಚ್. ನರಸಿಂಹ, ಶ್ರೀಗಳಾದ ಬಿ. ಶ್ಯಾಮರಾಯ ಶೆಟ್ಟಿ, ಹೈಸ್ಕೂಲ್ ಹೆಡ್ಮಾಸ್ತರ್, ಪಿ. ವಿ. ಶೆಣೈ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ತಾ. 9 ರಲ್ಲು ಸ್ಥಳೀಯ ಎಸ್. ವಿ. ಟಿ. ಗರ್ಲ್ಸ್ ಹೈಸ್ಕೂಲಿನಲ್ಲಿ ಸಹಕಾರಿ ಸಂಘಗಳ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀ ಕೆ. ಪ್ರಾಣಪ್ಪನವರು ಚಲಚಿತ್ರ ಪ್ರದರ್ಶನವಿತ್ತು ಸರಕಾರದ ವಿವಿಧ ಖಾತೆಗಳಿಂದ ನಡೆಯುತ್ತಿರುವ ಸಮಾಜೋನ್ನತಿಯ ಕೆಲಸಗಳ ಪರಿಚಯ ಮಾಡಿಕೊಟ್ಟರು. ಸಮಾರಂಭದ ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಎಮ್. ಕೃಷ್ಣಯ್ಯ ಶೆಟ್ಟರು, ಇಂತಹ ಪ್ರದರ್ಶನಗಳ ಸದುಪಯೋಗವನ್ನು ಜನತೆಯು ಪಡೆಯಬೇಕೆಂದರು.

ರಂಜಾಳ— ಕಾರ್ಕಳ ತಾಲೂಕಿನ ಮುಖ್ಯ ಗ್ರಾಮ ಕೇಂದ್ರವಾದ ರಂಜಾಳದಲ್ಲಿ ಇದೇ ತಾ. 7ರಲ್ಲು ಗ್ರಾಮಸೇವಕ ಶ್ರೀ ಕೆ. ವೆಂಕಟ್ರಾಯರ ಅಧ್ಯಕ್ಷತೆಯಲ್ಲಿ ಕೂಡಿದ ಸಭೆಯಲ್ಲಿ ಕೃಷಿಕರ ಸಂಘವೊಂದು ಸ್ಥಾಪಿಸಲಾಯಿತು. ಈ ಸಂಘಕ್ಕೆ ಶ್ರೀಗಳಾದ ಪದ್ಮರಾಜ ಆಜ್ರಿ ಮತ್ತು ವಿಠಲ ನಾಯ್ಕರು ಅಧ್ಯಕ್ಷ ಮತ್ತು ಕಾರ್ಯದರ್ಶಿಯರಾಗಿ ಆರಿಸಲ್ಪಟ್ಟರು.

ಬ್ರಹ್ಮಾವರ— ಸ್ಥಳೀಯ ಬೋರ್ಡ್ ಹಾ। ಪ್ರಾ। ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಬಿ. ರಾಮಣ್ಣ ಶೆಟ್ಟರು ತಮ್ಮ ಉದ್ಯೋಗದಿಂದ ನಿವೃತ್ತರಾದುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವನ್ನು ಸಭ್ರಿ ಶಾಲಾ ಅಧ್ಯಾಪಕ ವೃಂದದವರು ತಾ. 7 ರಲ್ಲು ಜರಗಿಸಿದರು. ಸೀನಿಯರ್ ಬೇಸಿಕ ಟ್ರೇ ಸ್ಕೂ ಕುರಿಯಾ ಕೋಟಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅಧ್ಯಾಪಕ ವೃಂದವು ಶ್ರೀ ಶೆಟ್ಟರಿಗೆ ಸುವರ್ಣ ಪದಕವನ್ನಿತ್ತು ಗೌರವಿಸಿತು.

ಹೆಬ್ರಿ— ಈ ಗ್ರಾಮದ ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ವನಮಹೋತ್ಸವ ಮತ್ತು ಕಂಪೋಸ್ಟ್ ಗೊಬ್ಬರ ಸಪ್ತಾಹವು ತಾ. 7 ರಲ್ಲು ಸೋಶಿಯಲ್ ಎಜ್ಯುಕೇಶನಲ್ ಆರ್ಗನೈಜರ್ ಕುಮಾರಿ ಸುಶೀಲಾಬಾಯಿ, ಇವರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಬೋರ್ಡ್ ಪ್ರೆಸಿಡೆಂಟ್ ಶ್ರೀ ಶಿವಣ್ಣ ಶೆಟ್ಟಿ, ಪಟೇಲ್ ಸದಾನಂದ ಶೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಕೆಂಬಳೆ— ಸ್ಥಳೀಯ ಕೈಸ್ತ ಸ್ಕೂಲಿನ ಹೆಡ್ಮಾಸ್ತರ್ ಶ್ರೀ ಎಮ್. ಕುಂಬಾ [illegible] ನಾಯರರಿಗೆ [illegible] ಸ್ಥಳ [illegible] ವರ್ಗವಾದುದರಿಂದ, ಅವರಿಗೆ [illegible] ಬೀಳ್ಕೊಡುವ ಸತ್ಕಾರ ಕೂಟವು ತಾ. 6 ರಲ್ಲು ಶ್ರೀ ಎ. ಕೆ. ಶೆರೀಫ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು.

ಶಿರೂರು— ನಂದಿಕೂರು ಮತ್ತು ಶಿರೂರು ಗ್ರಾಮಗಳ ಸಂಯುಕ್ತ ವನಮಹೋತ್ಸವವು ತಾ. 5 ರಲ್ಲು ಸ್ಥಳೀಯ ಬೋರ್ಡ್ ಹಾ। ಪ್ರಾ। ಶಾಲೆಯಲ್ಲಿ ಡಾ। ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ವೆಂಕಟ್ರಾಯ ಪೈ, ಪಿ. ಎ. ಆಚಾರ್ಯ, ಕೆ. ವಿ. ಶೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಸಸಿಗಳನ್ನು ನೆಡುವ ಕಾರ್ಯ ಕ್ರಮವಾಗಿ ಸಮಾರಂಭ ಕೊನೆಗೊಂಡಿತು.

ಕುಂದಾಪುರ— ಗುಡ್ಡೆ ಅಂಗಡಿ— ಈ ಭಾಗದಲ್ಲಿ ಇಸ್ಪೀಟು ಆಟವು ದಿನಾಲೂ ನಡೆಯುತ್ತಿದೆಯಾಗಿಯೂ ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ನಿಗಾ ಕೊಡಬೇಕಾಗಿಯೂ ಓರ್ವ ಬಾತ್ಮಿದಾರರು ಬರೆಯುತ್ತಾರೆ.

ಬೈಂದೂರು— ಕಾರೂರು ಮತ್ತು ಸಾಗರ ರಸ್ತೆ ಸಂಯೋಜನೆ ಮತ್ತು ತಾಳಗುಪ್ಪದಿಂದ ಗಂಗೊಳ್ಳಿ ತನಕ ರೈಲ್ವೆ ರಸ್ತೆ ವಿಸ್ತರಣೆ ಆವಶ್ಯಕತೆ ಕುರಿತು— ದ. ಕ. ಜಿಲ್ಲಾ ಬೋರ್ಡಿನ ಮಾಜಿ ಸದಸ್ಯ ಶ್ರೀ ಬೈಂದೂರು ಸುಬ್ಬಣ್ಣ ಶೆಟ್ಟರು ಬೆಂಗಳೂರಿಗೆ ಹೋಗಿ ಇದೇ ತಾ. 3 ರಲ್ಲು ಮೈಸೂರು ಸರಕಾರದ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರನ್ನು ಹಾಗೂ ಲೋಕೋಪಯೋಗಿ ಶಾಖೆಯ ಮಂತ್ರಿಗಳನ್ನು ಭೇಟಿಯಾಗಿ ಮನವಿಯನ್ನಿತ್ತರೆಂದೂ ಆ ಬಗ್ಗೆ ಮಂತ್ರಿಗಳು ಸಹಾನುಭೂತಿ ವ್ಯಕ್ತಪಡಿಸಿದರೆಂದೂ ತಿಳಿಸುತ್ತಾರೆ.

ಕೋರ್ಟುಧಾರಣೆಯು ಅಕ್ಕಿ ಮುಡಿಗೆ ರೂ. 20/- ಇದ್ದಾಗ್ಯೂ ತಾ. 9ರಲ್ಲು ಸಂತೆ ಮಾರ್ಕೆಟಿನಲ್ಲಿ ರೂ. 16—8—0ರಂತೆ ಅಕ್ಕಿ ಮುಡಿ ಮಾರಾಟವಾಗಿರುವುದು.

ಸೋಮೇಶ್ವರ— ಹೆಬ್ರಿ ಪಂಚಾಯತ ಬೋರ್ಡಿನ ಕಡೆಯಿಂದ ಕಟ್ಟಿಸಲಾದ ಬಸ್ ಸ್ಟೇಂಡನ್ನು ತಾ. 11ರಲ್ಲು ಕಾರ್ಕಳದ ಡಿ। ಮುನ್ಸಿಫ್ ಶ್ರೀ ಎಮ್. ಎಮ್. ದೇಸಾಯಿಯವರು ಉದ್ಘಾಟಿಸಿದರು. ಜಿಲ್ಲಾ ಪಂಚಾಯತ ಆಫೀಸರ್ ಶ್ರೀ ಕೆ. ಎಸ್. ಶೆಟ್ಟಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದರು. ಪಂಚಾಯತ ಬೋರ್ಡ್ ಉಪಾಧ್ಯಕ್ಷ ಶ್ರೀ ಎಚ್. ರಾಮದಾಸ ಹೆಗ್ಡೆಯವರಿಂದ ಮಾನಪತ್ರ ಓದಲ್ಪಟ್ಟ ಬಳಿಕ ಶ್ರೀ ದೇಸಾಯರವರು ಇಂತಹ ಉದ್ಯಮಗಳಿಗೆ ಮಹಾಜನರು ನೆರವು ನೀಡಬೇಕೆಂದು ಸೂಚಿಸಿದರು. ಪಂಚಾಯತ ಬೋರ್ಡಿನಿಂದ ಜನತೆಗೆ ದೊರಕುವ ಸೌಕರ್ಯಗಳನ್ನು ಅಧ್ಯಕ್ಷರು ವಿವರಿಸಿ ಭಾಷಣ ಮಾಡಿದರು. ಶ್ರೀ ಸಂಜೀವ ನಾಯ್ಕರು ಧನ್ಯವಾದಗಳನ್ನರ್ಪಿಸಿದರು.

ಬಾರ್ಕೂರು— ಇದೇ ತಾ. 9 ರಲ್ಲು ಸ್ಥಳೀಯ ನೇಶನಲ್ ಹೈಸ್ಕೂಲಿನ ವಿದ್ಯಾರ್ಥಿ ಮುಖಂಡ ಮತ್ತು ಉಪಮುಖಂಡರಾಗಿ ಶ್ರೀಗಳಾದ ವೈ. ರಾಮದಾಸ ತಂತ್ರಿ ಮತ್ತು ಟಿ. ರಘುರಾಮ ಶೆಟ್ಟರು ಆರಿಸಲ್ಪಟ್ಟರು.

ದ. ಕ. ಜಿಲ್ಲೆಯಲ್ಲಿ ತಾಲೂಕುಗಳ ಪುನರ್ವ್ಯವಸ್ಥೆ— ತಾ. ೧—೭—೫೪ರಿಂದ ನಮ್ಮ ಜಿಲ್ಲೆಯಲ್ಲಿ ಈಗಿರುವ ಆರು ರೆವಿನ್ಯೂ ತಾಲೂಕುಗಳನ್ನು ಪುನರ್ವ್ಯವಸ್ಥೆಗೊಳಿಸಿ ಏಳು ರೆವಿನ್ಯೂ ತಾಲೂಕುಗಳನ್ನಾಗಿ ಬೇರ್ಪಡಿಸಲಾಗಿದೆ. ಮಂಗಳೂರು ತಾಲೂಕಿನ ಬಂಟ್ವಾಳ ಸಬ್ ತಾಲೂಕನ್ನು ಪುತ್ತೂರು ತಾಲೂಕಿನ ಬೆಳ್ತಂಗಡಿ ಸಬ್ ತಾಲೂಕಿಗೆ ಒಂದುಗೂಡಿಸಿ ಬೆಳ್ತಂಗಡಿ ತಾಲೂಕಾಗಿ ಮಾರ್ಪಡಿಸಲಾಗಿದೆ. ಈ ತಾಲೂಕಿಗೆ ಬೆಳ್ತಂಗಡಿಯಲ್ಲಿ ತಾಲೂಕಾಫೀಸು ಮತ್ತು ತಾಲೂಕು ಸಬ್ ಟ್ರೆಜರಿಯನ್ನು ತೆರೆಯಲಾಗುವುದು.

ತಾ. ೧—೭—೫೪ ರಿಂದ ಈಗಿನ ಮಂಗಳೂರು ರೆವಿನ್ಯೂ ಸಬ್ ಡಿವಿಜನನ್ನು ರದ್ದುಗೊಳಿಸಿ ಮಂಗಳೂರು ತಾಲೂಕನ್ನು (ಬಂಟ್ವಾಳ ಸಬ್ ತಾಲೂಕು ಹೊರತಾದ) ಕುಂದಾಪುರ ರೆವಿನ್ಯೂ ಸಬ್ ಡಿವಿಜನಿಗೆ ಸೇರಿಸಲಾಗುವುದು. ಹೊಸತಾಗಿ ರಚಿಸಲಾಗುವ ಬೆಳ್ತಂಗಡಿ ತಾಲೂಕನ್ನು ಪುತ್ತೂರು ರೆವಿನ್ಯೂ ಸಬ್ ಡಿವಿಜನಿಗೆ ಸೇರಿಸಲಾಗುವುದು. ಹೀಗಾಗಿ ಈಗಿನ ಮೂರು ಸಬ್ ರೆವಿನ್ಯೂ ಡಿವಿಜನುಗಳ ಬದಲಿಗೆ ಮುಂದೆ ಎರಡೇ ರೆವಿನ್ಯೂ ಸಬ್ ಡಿವಿಜನುಗಳು ಉಳಿಯುತ್ತವೆ.

ಕುಂದಾಪುರ ಸಬ್ ಡಿವಿಜನು— ಕುಂದಾಪುರ, ಉಡುಪಿ, ಕಾರ್ಕಳ ಮತ್ತು ಮಂಗಳೂರು ತಾಲೂಕುಗಳು.

ಪುತ್ತೂರು ಸಬ್ ಡಿವಿಜನು— ಬೆಳ್ತಂಗಡಿ, ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳು.

ಹಿಂದುಳಿದ ವರ್ಗದವರಿಗೆ ಶಿಷ್ಯವೃತ್ತಿಗಳು— ಶೆಡ್ಯೂಲ್ ಜಾತಿ ವರ್ಗ ಮತ್ತಿತರ ಹಿಂದುಳಿದ ವರ್ಗದವರಿಗೆ ಕೊಡಲಾಗುತ್ತಿದ್ದ ವಿದ್ಯಾರ್ಥಿ ವೇತನಗಳ ಯೋಜನೆಯನ್ನು ಭಾರತ ಸರಕಾರದ ಶಿಕ್ಷಣ ಇಲಾಖೆಯು 1954-55 ರಲ್ಲಿಯೂ ಮುಂದರಿಸಲು ನಿರ್ಧರಿಸಿದ್ದು ಈ ಬಗ್ಗೆ ರೂ. 75 ಲಕ್ಷ ಮಂಜೂರು ಮಾಡಲಾಗಿರುವುದು. ಅಧಿಕೃತ ವಿದ್ಯಾಸಂಸ್ಥೆಗಳಲ್ಲಿ ಮೆಟ್ರಿಕ್‌ನಿಂದ ಮೇಲಿನ ತರಗತಿಗಳಲ್ಲಿ ಓದುತ್ತಿರುವ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಈ ವೇತನಗಳನ್ನು ಕೊಡಲಾಗುವುದು. ಶಿಷ್ಯವೃತ್ತಿ ಪಡೆಯಲು ಬಯಸುವವರು ಅಧಿಕೃತ ಅರ್ಜಿ ಪತ್ರಗಳಲ್ಲಿ ತಮ್ಮ ಮನವಿಗಳನ್ನು ಬರೆದು ತಾವು ಕಲಿತ ವಿದ್ಯಾಸಂಸ್ಥೆಯ ಮುಖ್ಯಾಧಿಕಾರಿಯ ಮೂಲಕ ಈ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು— ಕಾರ್ಯದರ್ಶಿ, ಶೆಡ್ಯೂಲ್ಡ್ ಕಾಸ್ಟ್ಸ್, ಟ್ರೈಬ್ಸ್, ಮತ್ತಿತರ ಹಿಂದುಳಿದ ವರ್ಗದವರ ಸ್ಕಾಲರಶಿಪ್ ಬೋರ್ಡ್. ವಿದ್ಯಾ ಇಲಾಖೆ ನವದೆಹಲಿ-2.

TENDER NOTICE.

Sealed tenders are invited by the undersigned from the registered contractors up to 4 P. M. on 2—8—1954 for the work shown below. (to be executed at the temple)

The tender should be sent in sealed cover, accompanied by a chalan in token of having remitted the prescribed Earnest money deposit into the temple-treasury. Intending tenderers can peruse the estimate in the office of the undersigned during the office hours on any working day. Tenderers, or their authorized agents may be present in the office of the undersigned at 4-15 P. M. on 2—8—1954 when the tenders will be opened. The undersigned reserves to himself the right of rejecting any tender, without assigning reasons therefor

Name of work.	Amount of Estimate.	Earnest money deposit.
Urgent improvements to the Temple Elementary School, Perdoor, S.K.	Rs 3000/-	Rs 75/-

N. B. The Earnest money deposit will be refunded only after satisfactory completion of the work.

K. B. Shetty,
Executive Officer,
Sri Ananthapadmanabha Temple, Perdoor.

Date 12—7—54.

ಸಂಗೀತವೂ ಸಾಹಸವೂ ಒಟ್ಟಾದಾಗ
ಅತಿಸ್ಲಾಂದು ಮಾಧುರಮಿಲನವಾಗುವದು.

ನಿಶಾನ್ ಡಂಕಾ [ಹಿಂದಿ]

ರಂಜನ್, ಶ್ಯಾಮಾ, ಜೀವನ್, ಬೇಬಿ ತಬಸುಮ.
ದಿಗ್ದರ್ಶಕರು:— **ಜಯಂತ ದೇಸಾಯಿ.**

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಬರುವ ಚಿತ್ರ: ಆಸ್, ಬೂಟ್ ಪಾಲಿಶ್ ಇತ್ಯಾದಿ.

ತರುಣ ತರುಣಿಯರಿಗೆ ಅತ್ಯಂತ ಬೋಧಪ್ರದವಾದ ಆಧುನಿಕ ನಾಟಕ
ಅಂಧ ಸಮಾಜದ ಶಿರೂಪವನ್ನು, ನ್ಯಾಯವು ಅನ್ಯಾಯವನ್ನು ಗೆದ್ದುಬರುವುದಕ್ಕೆ
ಅಧಿಕಾರಿ, ಧನಬಾಲಿನೆಯಲ್ಲಿ—ಪವಿತ್ರ ಪ್ರೇಮವೊಂದೇ ಶಾಂತಿಯೊಯುವು
ದೆಂಬುದನ್ನು ಕಾಣಬರುವುದಾದ ಏಕಮಾತ್ರ ಸಾಮಾಜಿಕ ನಾಟಕ—

ವ್ಯಭಿಚಾರಿಣಿ ಯಾರು?

100 ಪುಟಗಳಿಗೂ ಮಿಕ್ಕಿದ ಪುಸ್ತಕ!
ಸಾಮಾಜಿಕ ಕ್ರಾಂತಿಕಾರಕ ನಾಟಕಗಳನ್ನು ಬರೆದು ಹೆಸರುಗೊಂಡ
ಶ್ರೀ. ಕೆ. ಕೆ. ಶೆಟ್ಟರೇ ಇದರ ಲೇಖಕರು!!
ಬೆಲೆ: 1—0—0 ಮಾತ್ರ.] [ಟ. ಖರ್ಚು ಬೇರೆ.
ಸಿಗುವ ಸ್ಥಳಗಳು:—
ಕಿರಿಯರ ಪ್ರಪಂಚ ಉಡುಪಿ., ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!
ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ। ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.
ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ.)
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಮಂಗಳೂರು

ರಾಷ್ಟ್ರೀಯ ಯೋಜನಾ ಸಾಲಕ್ಕೆ– ದ. ಕ. ಜಿಲ್ಲೆಯಿಂದ ಜೂನ್ ತಿಂಗಳ ಅಂತ್ಯಕ್ಕೆ ರೂಪಾಯಿ 39,83,125 ಜಮೆಯಾಗಿರುವುದು. ಈ ಪೈಕಿ ಐದು ಲಕ್ಷ ರೂಪಾಯಿ ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಬೊಂಬಾಯಿ ಶಾಖೆಯ ಮೂಲಕ ಸದ್ರಿ ಬೇಂಕಿನವರು ಚಂದಾ ಕೊಟ್ಟಿರುವರು.

ರೋಮನ್ ಕಥೋಲಿಕರ ಮನವಿ

ಕುಲಶೇಖರದ ಸೈಂಟ್ ಜೋಸೆಫ್ಸ್ ಕಾನ್ವೆಂಟಿನ ಮುಖ್ಯಾಧಿಕಾರಿ ಹಾಗೂ ಡಿಸ್ಕಾಲ್ಸ್‌ಡ್ ಕಾರ್ಮಲೈಟ್ಸ್ ಸಂಘಕ್ಕೆ ಸೇರಿದ ರೆ! ಫಾ! ಹೆನ್ರಿಕೊಸ್ಸೆ ಯಾನೆ ಫಾದರ್ ಕಾನ್ಸ್‌ಟೆಂಟ್ಯಾನಾ ಓ. ಸಿ. ಡಿ. ಎಂಬ ರೋಮನ್ ಕಥೋಲಿಕ್ ಗುರುಗಳನ್ನು ಕಳೆದ ತಿಂಗಳ ತಾ. 20ರಿಂದ ಎರಡು ತಿಂಗಳುಗಳೊಳಗೆ ಭಾರತವನ್ನು ಬಿಟ್ಟು ಹೋಗಬೇಕೆಂದು ಭಾರತ ಸರಕಾರವು ಆಜ್ಞೆ ಮಾಡಿರುವುದು. ಫಾ! ಕಾನ್ಸ್‌ಟೆಂಟ್ಯಾನರು ಭಾರತದಲ್ಲಿ ಉಳಕೊಳ್ಳುವ ಅವಧಿಯನ್ನು ಹೆಚ್ಚಿಸಬೇಕೆಂದು ಕೇಳಿಕೊಂಡ ಅರ್ಜಿಗೆ ಮಾನ್ಯತೆ ದೊರೆಯಲಿಲ್ಲ. ಸರಕಾರವು ತನ್ನ ನಿರ್ಧಾರವನ್ನು ಪುನರಾಲೋಚಿಸಿ ಅವರ ಜೀವಾಂತ್ಯದ ತನಕ ಭಾರತದಲ್ಲೆ ಇರುವರೆ ಅನುಮತಿ ಕೊಟ್ಟು, ಅವರು ಈಗ ಈ ಜಿಲ್ಲೆಯಲ್ಲಿ ಕೈಕೊಂಡ ಕಾರ್ಯಗಳನ್ನು ಮುಂದೊತ್ತಿ ಹೋಗಲು ಅನುಕೂಲ ಮಾಡಿ ಕೊಡಬೇಕೆಂದು ದ. ಕ. ಜಿಲ್ಲೆಯ ಕಥೋಲಿಕ್ ಎಸೋಸಿಯೇಶನಿನ ಜನರಲ್ ಕೌನ್ಸಿಲು ಸಭೆಯು ಕಳೆದ ತಾ. 28ರಲ್ಲು ನಿರ್ಣಯಮಾಡಿ ಭಾರತ ಸರಕಾರಕ್ಕೆ ಕಳುಹಿಸಿರುವುದು. ಅಲ್ಲದೆ ಸಾಧಾರಣ 5200 ಜನರ ಸಹಿಯುಳ್ಳ ಮನವಿಯೊಂದನ್ನು ಇದೇ ತಾ. 5ರಲ್ಲು ಕೇಂದ್ರ ಸರಕಾರದ ಗೃಹ ಇಲಾಖಾಧಿಕಾರಿಗಳಿಗೂ ಕಳುಹಿಸಲಾಗಿದೆ. ಮನವಿಯ ಪ್ರತಿಗಳನ್ನು ರಾಷ್ಟ್ರಾಧ್ಯಕ್ಷ, ಪ್ರಧಾನ ಮಂತ್ರಿ, ಮದ್ರಾಸು ಸರಕಾರದ ಪೋಪರ ರಾಯಭಾರಿ, ಪೂಜ್ಯ ಕಾರ್ಡಿನಲ್ ಗ್ರೇಸಿಯಸ್, ಮತ್ತು ಪಾರ್ಲಿಮೆಂಟ್ ಸದಸ್ಯರೇ ಮೊದಲಾದವರಿಗೆ ಕಳುಹಿಸಲಾಗಿದೆ ಎಂದು ತಿಳಿದು ಬರುತ್ತದೆ.

ಲೋಕನಾಥ ಸೆಟ್ಟಿ ಕೊಲೆ ಮೊಕದ್ದಮೆ— ಕುರಿತು ಮಂಗಳೂರು ಸಬ್ ಮೆಜಿಸ್ಟ್ರೇಟರು ವಿಚಾರಣೆ ನಡಿಸಿ ತಾ. 9ರಲ್ಲು ತೀರ್ಪನ್ನು ಕೊಟ್ಟರು. ಆಪಾದಿತರಾಗಿದ್ದ ಶ್ರೀಗಳಾದ ಕೋಟಿಕಾರು ಕೃಷ್ಣ ಸೆಟ್ಟಿ, ಕೊರಗಪ್ಪ ರೈ ಮತ್ತು ವಾಮನ ಪಂಡಿತರನ್ನು ಆರೋಪಹೊರಿಸಲು ತಕ್ಕ ರುಜುವಾತುಗಳಿಲ್ಲದ್ದರಿಂದ ಬಿಡುಗಡೆ ಮಾಡಲಾಯಿತು. ಉಳಿದ ಶ್ರೀಗಳಾದ ಮುತ್ತಪ್ಪ, ವೆಂಕಪ್ಪ, ಬಾಬು ಪೂಜಾರಿ ಮತ್ತು ಸಿಂಪ್ಸನ್ ಸೋನ್ಸ್ ಇವರನ್ನು ಆರೋಪಹೊರಿಸಲು ತಕ್ಕ ರುಜುವಾತುಗಳಿದ್ದುದರಿಂದ ಸೆಶನ್ಸ್ ಕೋರ್ಟಿನ ವಿಚಾರಣೆಗೊಳಪಡಿಸಲಾಯಿತು.

ಶ್ರೀರಾಮಕೃಷ್ಣ ಧರ್ಮ ವೈದ್ಯಾಶ್ರಮ– ಸಂಘದ ವಠಾರದಲ್ಲಿ ತಾ. 4ರಲ್ಲು ಅಖಿಲಭಾರತ ಆಯುರ್ವೇದ ವಿದ್ಯಾಪೀಠದ ನೇತೃತ್ವದಲ್ಲಿ ನಡೆಸಲ್ಪಡುವ ಆಯುರ್ವೇದ ಪರೀಕ್ಷೆಗಳಿಗೆ ತರಬೇತಿಕೊಡುವ ಕ್ಲಾಸುಗಳ ಉದ್ಘಾಟನೆ ಆಯಿತು.

ನಗರ ಸಭೆಯು— ತಾ. 10 ರಲ್ಲು ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ರಾಮಕೃಷ್ಣ ಮಿಶನ್ ಮತ್ತು ಆಶ್ರಮದ ಕಟ್ಟಡವನ್ನು ಆಸ್ತಿ ತೆರಿಗೆಯಿಂದ ವಿನಾಯಿತಿಗೊಳಿಸಲಾಯಿತು. ಮುನಿಸಿಪಲ್ ಶಾಲೆಗಳನ್ನು ಬೇಸಿಕ್ ಶಾಲೆಗಳಾಗಿ ರೂಪಾಂತರಿಸುವುದು ಅಗತ್ಯವಿಲ್ಲವೆಂದು ವಿದ್ಯಾ ಸಮಿತಿಯು ಮಾಡಿದ ನಿರ್ಣಯವನ್ನು ಮಾನ್ಯಮಾಡಲಾಯಿತ.

ಸತ್ಕಾರ ಸಮಾರಂಭ— ದ. ಕ. ಜಿಲ್ಲೆಯ ಪೋಸ್ಟಾಫೀಸುಗಳ ಹೊಸ ಸೂಪರಿಂಟೆಂಡೆಂಟರಾಗಿ ತಾ. 10 ರಲ್ಲು ಅಧಿಕಾರ ವಹಿಸಿದ ಶ್ರೀ ಎ. ಕೆ. ನರಸಿಂಗ ರಾಯರನ್ನು ಸ್ವಾಗತಿಸಲು ಮತ್ತು ಇಲ್ಲಿಂದ ತಿರುಚಿನಾಪಳ್ಳಿಗೆ ವರ್ಗವಾಗಿರುವ ಮಾಜಿ ಸೂಪರಿಂಟೆಂಡೆಂಟ್ ಶ್ರೀ ಆರ್. ಬಿ. ವಿಶ್ವನಾಥನರನ್ನು ಅಂತೆಯೇ ಮೈಸೂರಿಗೆ ವರ್ಗವಾಗಿರುವ ಟೌನ್ ಪೋಸ್ಟಲ್ ಇನ್ಸ್‌ಪೆಕ್ಟರ್ ಶ್ರೀ ಎಸ್. ಎಚ್. ಸಾಲ್ದಾನರನ್ನೂ ಬೀಳ್ಕೊಡಲು ತಾ. 11 ರಲ್ಲು ಬೆಳಿಗ್ಗೆ ತಾಜ್ ಮಹಾಲ್ ಹೊಟೇಲಿನಲ್ಲಿ ಅಂಚೆ ಮತ್ತು ತಂತಿ ಕೆಲಸಗಾರರ ಯೂನಿಯನ್ನಿನ ಆಶ್ರಯದಲ್ಲಿ ಸತ್ಕಾರ ಕೂಟವೊಂದು ಶ್ರೀ ಬಿ. ಎಸ್. ಭಾಸ್ಕರ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಸಿ. ಆಚಾರ್ಯರು ಸ್ವಾಗತ ಮಾತುಗಳನ್ನಾಡಿದರು. ಸಭಿಕರ ಭಾಷಣಗಳಾಗಿ ಶ್ರೀ ಎ. ಎಮ್. ಪ್ರಭುಗಳ ಧನ್ಯವಾದದೊಂದಿಗೆ ಸಮಾರಂಭ ಕೊನೆಗೊಂಡಿತು.

ಜುಲ್ಮಾನೆ— ಶೋಫ್ಸ್ ಎಂಡ್ ಎಸ್ಟೆಬ್ಲಿಷ್‌ಮೆಂಟ್ಸ್ ಆಕ್ಟಿನನ್ವಯ ಮಂಗಳೂರಿನ ಫಸ್ಟ್‌ಕ್ಲಾಸ್ ಬೆಂಚಿನಲ್ಲಿ ಶ್ರೀಗಳಾದ ಟಿ. ಗೋಪಾಲಕೃಷ್ಣ ರಾಯರಿಗೆ ರೂ. 25/– ಪಿ. ಕೆ. ಅಲಿಯಬ್ಬ ಮತ್ತು ಸಲಿಯಬ್ಬನವರಿಗೆ ರೂ. 25/– ಜುಲ್ಮಾನೆ ವಿಧಿಸಲಾಯ್ತು. ಮಂಗಳೂರಿನ ಲೇಬರ್ ಅಸಿಸ್ಟ್ಯಾಂಟ್ ಇನ್ಸ್‌ಪೆಕ್ಟರ್ ಶ್ರೀ ಜಿ. ಉಮಾನಾಥ ರಾಯರು ಚಾರ್ಜುಶೀಟು ಹಾಕಿದವರು.

ಸ್ವೀಕಾರ—ವಿಮರ್ಶೆ

ಮರು ಮದುವೆ—

ಬರೆದವರು: ಎಚ್. ಬಿ. ಸಾವಿತ್ರಮ್ಮ. ಪ್ರಕಾಶಕರು: ಕಾವ್ಯಾಲಯ, ಮೈಸೂರು. ಬೆಲೆ: ರೂ. ೧—೪—೦.

ಕನ್ನಡದಲ್ಲಿ ಕೈಯೊತ್ತಿಗೆಗಳು ಸಾಕಷ್ಟು ವಿಪುಲವಾಗಿಯೇ ಈಚೆಗೆ ಕೆಲ ದಿನಗಳಿಂದ ಪ್ರಕಟವಾಗುತ್ತಿರುವುದು ಶುಭ ಚಿಹ್ನೆ. ಕನ್ನಡ ಓದುಗರ ಕೈಯಳವಿಗೆ ಬರುವಂತೆ ಗ್ರಂಥ ಪ್ರಕಾಶನ ಕಾರ್ಯವನ್ನು ನಡೆಸುವುದು ಸ್ವಾಗತಾರ್ಹವಾದ ಉಪಕ್ರಮವೆಂದು ಸಾಹಿತ್ಯಾಭಿಮಾನಿಗಳ ಅಭಿಪ್ರಾಯ. ಉನ್ನತ ಮಟ್ಟದ ಕೃತಿಗಳನ್ನೆ ಪ್ರಕಟಿಸುತ್ತಾ ಬಂದಿರುವ ಮೈಸೂರಿನ ಕಾವ್ಯಾಲಯದವರೂ ಈಗ ಸುಲಭ ಬೆಲೆಗೆ ಶ್ರೇಷ್ಠ ಕೃತಿಗಳನ್ನು ಕನ್ನಡಿಗರಿಗೆ ಅರ್ಪಿಸಲು ಮುಂದಾದುದು ಸಂತೋಷದ ವಿಚಾರ. "ಪುಟ ಹೆಚ್ಚು—ಬೆಲೆ ಕಡಿಮೆ" ಎಂದೊಡನೆಯೇ ಕೃತಿಯು ನೀರಸವಾಗಿರಬಹುದೋ ಏನೋ ಎಂಬ ಅನುಮಾನ ತಾರ್ಕಿಕ ಓದುಗರಲ್ಲಿ ಸ್ವಾಭಾವಿಕವಾಗಿಯೇ ಹುಟ್ಟುತ್ತದೆ. ಪುಟ ಬೆಳೆಸುವ ಉದ್ದೇಶದಿಂದ ಅನಾವಶ್ಯಕವಾಗಿ ಕತೆಯನ್ನು ಉದ್ದ ಬೆಳೆಸುವ ಚಟಕ್ಕೆ ಕೈಹೊತ್ತಿಗೆಗಳು ಅವಕಾಶ ಕೊಡುತ್ತವೆಂಬ ಆಕ್ಷೇಪ ಇತ್ತೀಚೊಳಗೆಯೇ ಕೇಳತೊಡಗಿದೆ. ಕಾವ್ಯಾಲಯ ಅಗ್ಗ ಬೆಲೆಗೆ ಒದಗಿಸಿಕೊಟ್ಟ "ಮರು ಮದುವೆ" ಎಂಬ ಕಥಾ ಸಂಗ್ರಹವು ಈ ದೂರಿಗೆ ಎಡೆಕೊಡುವುದಿಲ್ಲ. ಇದನ್ನು ರಸವತ್ತಾದ, ಉನ್ನತ ಮಟ್ಟದ, ಶ್ರೇಷ್ಠ ಕೃತಿಯೆಂದೇ ಪರಿಗಣಿಸಬಹುದು. ಕಥನ ಕಲೆಯನ್ನು ಮೈಗೂಡಿಸಿಕೊಂಡ ಲೇಖನಿಯಿಂದ ಹೊರ ಹೊಮ್ಮಿದ ಸುಂದರ ಚಿತ್ರಗಳನ್ನು ಈ ಸಂಗ್ರಹದಲ್ಲಿ ಕಾಣುತ್ತೇವೆ. ಇದನ್ನು ಬರೆದವರು ಒಬ್ಬ ಹೆಂಗಸೆಂಬುದನ್ನು ನೆನೆದಾಗ, ಪುಸ್ತಕದ ಬಗೆಗಿನ ಗೌರವ ಇನ್ನಷ್ಟು ಹೆಚ್ಚುತ್ತದೆ. ಬರೆವಣಿಗೆಯ ವ್ಯವಸಾಯದಲ್ಲಿ ಬಿದ್ದ ಮಹಿಳೆಯರ ಅಭಾವವು ದೊಡ್ಡದಾಗಿ ಕಾಣಿಸುವ ಕನ್ನಡನಾಡಿನಲ್ಲಿ ಇಷ್ಟು ಸಹಜತೆಯಿಂದ, ನವೀನತೆಯಿಂದ, ಸರಳತೆಯಿಂದ ಕತೆಗಳನ್ನು ಹೆಣೆದು ಕೊಡುವವರು ಇರುವರೇ ಎಂದು ನಾವು ಬೆರಗಾಗುತ್ತೇವೆ. ಇಲ್ಲಿ ಉಕ್ತವಾದ ಎಂಟೂ ಕತೆಗಳು ಕಾಟುಂಬಿಕ ಜೀವನದ ಪರಿಸರವನ್ನು ಹೊಂದಿವೆ, ಹೆಣ್ಣು ಬಾಳ್ವೆಯ ಮೇಲೆಯೇ ಕೇಂದ್ರೀಕೃತವಾಗಿವೆ; ಮತ್ತು ತುಂಬು ಸಹಾನುಭೂತಿಯ ಬೆಳಕನ್ನು ಚೆಲ್ಲುತ್ತವೆ. "ನಿಮ್ಮ ದಮಯಂತಿಯು ಸಿಯಾಲ್ ಕೋಟೆಯಲ್ಲಿಯೇ ಸತ್ತಳು" ಎಂದು ಭಾಸ್ಕರನಿಗೆ ಹೇಳಿ, ಮಹಮ್ಮದನನ್ನು ಮದುವೆಯಾದ ಮಹಿಳೆಯು ತನ್ನ ಧೈರ್ಯ ಹಾಗು ಕೆಚ್ಚುಗಳನ್ನು ನಮ್ಮ ಮನಸ್ಸಿನ ಮೇಲೆ ಅಚ್ಚೊತ್ತುತ್ತಾಳೆ; ಎಂಥವನೂ ಅರ್ಥ ಮಾಡಿ ಕೊಳ್ಳಬಲ್ಲನು. ಇದೇ ದಿಟ್ಟತನ ಗಂಡನ ಬಣ್ಣದ ಜೀವನಕ್ಕೆ ರೋಸಿಹೋಗಿ, ಬಾಪೂಜಿಯ ಆದರ್ಶದ ನೆರಳಲ್ಲಿ ಆಶ್ರಯ ಪಡೆಯುವ ಸಂಕಲ್ಪವನ್ನು ಕೈಗೊಂಡ ಸತ್ಯವತಿಯ ಚಿತ್ರದಲ್ಲೂ ಸ್ಫುಟವಾಗಿ ವ್ಯಕ್ತಗೊಂಡಿದೆ. ಗ್ರಾಮಸೇವೆಯ ಆದರ್ಶವನ್ನಿಟ್ಟುಕೊಂಡು ದುಡಿಯುತಿದ್ದ ರಾಮುವಿನ ಪತ್ನಿ ಸೀತೆಯು ಸರ್ಪಮತ್ಸರಕ್ಕೆ ಆಹುತಿಯಾಗಿ ಜೀವದ ಬಲಿ ತೆರಬೇಕಾದ ಸಂದರ್ಭವು ರೋಮಾಂಚಕವೆನಿಸುತ್ತದೆ. "ನನಗಿಂತ ಗೇಣುದ್ದ ಎತ್ತರವಾಗಿದ್ದಾಳೆ; ನನ್ನ ಎರಡರಷ್ಟು ದಪ್ಪವಾಗಿದ್ದಾಳೆ" ಎಂದು ತಾನು ತಿರಸ್ಕರಿಸಿದ ರಾಧೆಯು ಮಂಕು ತಲೆಯ ಗಂಡ ಅನಂತನ ಜೊತೆತದಿಂದ ಪ್ರಾಣ ಕಳಕೊಂಡಾಗ ಇದಕ್ಕೆ ಹೊಣೆ ಯಾರು—ತಾನೇ ಅಲ್ಲವೆ ಎಂದು ನಿಟ್ಟುಸಿರು ಬಿಡುವ ಚಂದು ಇಂದಿನ ಸಮಾಜದಲ್ಲಿ ಕಾಣಸಿಗುವ ತರುಣರ ಒಂದು ಮಾದರಿ. ಓರಗೆಯವರೂ ಮಲಮಕ್ಕಳೂ ತುಂಬಿದ ಸಂಸಾರದಲ್ಲಿ ಬದುಕನ್ನು ಹೊಂದಿಸಿಕೊಳ್ಳಲಾರದೆ ಓಡಿದ ರತ್ನಳ ವಿರಸ ಚಿತ್ರ "ಕಲಿತ" ಹೆಣ್ಣು ಮಕ್ಕಳ ಮನೋಭೂಮಿಕೆಗೆ ಕನ್ನಡಿ ಹಿಡಿಯುತ್ತದೆ. ಗಂಡ ವಿಲಾಯತಿಗೆ ಹೋಗಿ ತನ್ನನ್ನು ಮರೆತ ಸೇಡನ್ನು ತೀರಿಸಿಕೊಳ್ಳರೋ ಎಂಬಂತೆ ಆತ್ಮ ವಿಶ್ವಾಸದಿಂದ ಬದುಕಿಗೊಂದು ಅರ್ಥ ಕಲ್ಪಿಸಿಕೊಂಡ ಮೋನಕೆ ಲೌಕಿಕರಿಗೆ ಗಂಡು ಬೀರಿಯಾಗಿ, ಹಾದಿ ತಪ್ಪಿದವಳಾಗಿ ಕಂಡು ಬಂದರೂ "ನಾಗರಿಕ" ವಾತಾವರಣದ ಜೀವಂತ ವ್ಯಕ್ತಿಯೇ ನಿಜ. ಮರುಮದುವೆಯ ಗಂಡನಲ್ಲಿ ಆಸಕ್ತಿ ಕಾಣದೆ, ಓದುವಿಕೆ, ಕಲಿಸುವಿಕೆಗಳಲ್ಲಿ ಶಾಂತಿಯನ್ನರಸಲುಹೋದ ಭಾರತಿ ಹೆಂಗಸಿನ ಮೇಲೆ ಸಮಾಜ ಮಾಡುತ್ತಿರುವ ಅನ್ಯಾಯದ ಕೊಳ್ಳಿ. ಕೊನೆಯ "ಬಿಸಿಲುಗುದುರೆ" ಅಥವಾ "ಸಲ್ಲದ ಆಶೆ" ಎಂಬುದು ಮನೋವಿಶ್ಲೇಷಣಾತ್ಮಕವಾದ ನೀಳ್ಗತೆ. ತಾನು ದಮಯಂತಿಯಾಗಿ ನಾಟಕ ಅಭಿನಯಿಸಿದಾಗ ನಳನಾಗಿ ಜೊತೆಗೆ ನಿಂತ ರಘುವನ್ನೆ ಹೃದಯ ದೇವತೆಯಾಗಿ ಪೂಜಿಸುತಿದ್ದ ಸುಶೀಲಾ ಮದುವೆಯಾದ ಬಳಿಕವೂ ಆತನ ಹಂಬಲದಿಂದ ಕಂಗೆಡುವ ದುರಂತ ಈ ಕತೆಯ ಜೀವಾಳ. ಇವೆಲ್ಲ ಕತೆಗಳೂ ಬಹಳ ಸುಂದರವಾಗಿವೆ; ಪಾತ್ರ ಚಿತ್ರಣವೂ ಸನ್ನಿವೇಶ ರಚನೆಯೂ ಕಲಾತ್ಮಕವಾಗಿವೆ. ಮಾತುಗಳು ಸರಳವಾಗಿ, ನಯವಾಗಿ ಸಾಗುತ್ತವೆ; ಶೃಂಗಾರದ ಅತಿರೇಕವಿಲ್ಲ; ಆಕ್ರೋಶವೂ ಇಲ್ಲ. ಪ್ರಕಾಶಕರು ಹೇಳಿದಂತೆ ಇವರ ಪಾತ್ರಗಳು ಅಪೂರ್ವವಾದ ಸಂಸ್ಕಾರವನ್ನು ಪ್ರದರ್ಶಿಸುತ್ತವೆ. ಉತ್ತಮ ಕತೆಗಾರಿಕೆಯನ್ನು ವ್ಯಕ್ತಗೊಳಿಸುವ ಈ ಮಹಿಳೆಯಿಂದ ನಾವು ಹೆಚ್ಚಿನ ಕೃತಿಗಳನ್ನು ಆಶಿಸುತ್ತೇವೆ; ಮತ್ತು ಈ ಬಯಕೆ ಕೈಗೂಡಿ ಬರುವಂತೆ ಕನ್ನಡಿಗರು ಧಾರಾಳವಾಗಿ ಪ್ರೋತ್ಸಾಹ ನೀಡಬೇಕೆಂದು ಕೋರುತ್ತೇವೆ.

ಧರ್ಮದ ಮರ್ಮ—

ಲೇಖಕ ಹಾಗು ಪ್ರಕಾಶಕ: ಪಾಂಗಾಳ ರಾಮಚಂದ್ರರಾವ್, ಶ್ರೀ ಮಹಾಲಕ್ಷ್ಮೀ ನಿಲಯ, ಅಲೆವೂರು, ದಕ್ಷಿಣ ಕನ್ನಡ: ಬೆಲೆ: ರೂ. ೦—೮—೦.

ಈ ಚಿಕ್ಕ ಪುಸ್ತಕದಲ್ಲಿ ಯಜ್ಞ, ಸಂಧ್ಯಾವಂದನೆ, ಪರಮಾತ್ಮ ಧ್ಯಾನ, ಭಕ್ತಿ, ವರ್ಣ ಮತ್ತು ಆಶ್ರಮದ ಕಟ್ಟು, ಸ್ತ್ರೀ ಶಿಕ್ಷಣ, ಮದಿ ಮೈಲಿಗೆ ಮುಂತಾದ ವಿಷಯಗಳನ್ನು ಕುರಿತು ಶ್ರುತಿ, ಸ್ಮೃತಿ ಮುಂತಾದ ಧರ್ಮಶಾಸ್ತ್ರ ಗ್ರಂಥಗಳಲ್ಲಿ ಉಕ್ತವಾದ ಅಂಶಗಳನ್ನು ಚುಟುಕಾಗಿ ವಿವರಿಸಿರುವರು. ಆಧ್ಯಾತ್ಮಿಕವಾಗಿ ಉನ್ನತಿಯನ್ನು ಹೊಂದಬಯಸುವ ಜಿಜ್ಞಾಸುಗಳು ಈ ಕಿರುಹೊತ್ತಿಗೆಯನ್ನೋದಿ ಮನನಮಾಡುವುದರಿಂದ ಪ್ರಯೋಜನವನ್ನು ಹೊಂದಬಹುದು.

OUR FINANCIAL OPERATIONS IN 1953 AT A GLANCE!

OUR POLICYHOLDERS NUMBER		1,16,923
LIFE ASSURANCE IN FORCE over	Rs.	26,96,57,000
TOTAL ASSETS	,, ,,	8,37,53,000
TOTAL INCOME	,, ,,	1,48,69,000
LIFE ASSURANCE FUND ...	,, ,,	7,48,98,000
TOTAL CLAIMS PAID IN 1953	,, ,,	40,00,000

POLICYHOLDERS' FUNDS VESTED IN THE OFFICIAL TRUSTEE OF MADRAS EXCEED

Rs. 8 CRORES.

* * * * *

(DISABILITY BENEFITS FREE. ACCIDENT BENEFIT AT RS. 1/8 PER THOUSAND EXTRA)

* * * * *

Ask for particulars of our

ESTATE DUTY POLICY.

THE UNITED INDIA LIFE ASSURANCE COMPANY, LIMITED.

(Established 1906)

HEAD OFFICE: MADRAS 1.

WANTED AGENTS

on attractive commission to canvass orders for Bhavani Carpets.

Please apply to:

SRI AMBIGA INDUSTRIALS,
Carpet Manufacturers,
BHAVANI (Via) ERODE, S. India.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಸ್‌ನರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ಪೊಕ್ಕೆಟ್ ಸೈಜಿನ ನಿಘಂಟು.

ಬೆಲೆ ರೂ. 5-6-0

ನವಭಾರತ ಬುಕ್ ಡಿಪೋ, ಉಡುಪಿ.
ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ನಾವು ಹಾಗು ಏಶ್ಯಾದ ಬೇರೆ ರಾಷ್ಟ್ರಗಳವರು ಒಂದು ರಾಷ್ಟ್ರವು ಇನ್ನೊಂದರ ಆಂತರಿಕ ಆಡಳಿತದಲ್ಲಿ ಕೈಹಾಕದಿದ್ದರೆ ಮತ್ತು ಸಾಮಾಜಿಕ, ರಾಜಕೀಯ ಅಥವಾ ಆರ್ಥಿಕ ಧ್ಯೇಯವಾದವನ್ನು ಇನ್ನೊಂದರ ಮೇಲೆ ಹೇರಲು ನೋಡದಿದ್ದರೆ ಶಾಂತಿಯುತ ಸಹಜೀವನವು ಸಾಧ್ಯವೆಂದು ಭಾವಿಸುತ್ತೇವೆ. ಭಾರತ–ಬರ್ಮ–ಚೀನಗಳ ಸಂಯುಕ್ತ ಪ್ರಕಟಣೆಯು ಇದನ್ನು ಒತ್ತಿ ಹೇಳುತ್ತವೆ. ಆದರೆ ನಾವು ಈ ಘೋಷಣೆಗಳಲ್ಲಿ ಹೇಗೆ ವಿಶ್ವಾಸವನ್ನು ಇಡೋಣ ಎಂದು ಪ್ರಶ್ನಿಸಬಹುದು? ಅಂತಾರಾಷ್ಟ್ರೀಯ ವ್ಯವಹಾರದಲ್ಲಿ ಯಾವುದನ್ನೂ ಖಚಿತವಾಗಿ ಹೇಳಲು ಅಸಾಧ್ಯವೆಂದು ತೋರೀತು. ಇಂದಿನ ಮಿತ್ರರೇ ನಾಳೆಯ ಶತ್ರುಗಳಾದಾರು. ಆದರೆ ಇದಕ್ಕೋಸ್ಕರವೇ ನಾವು ಶತ್ರುತ್ವ ಹಾಗೂ ಸಂಶಯದ ಭಾವನೆಗಳಿಂದ ತುಂಬಿಕೊಂಡು ಇತರ ಯಾವುದೇ ಪರಿಹಾರ ಮಾರ್ಗವನ್ನು ಬಿಟ್ಟುಕೊಡಬೇಕೆ? ಅತ್ಯುತ್ತಮವಾದುದನ್ನು ಹಾರೈಸಿ, ಅತಿ ನಿಕೃಷ್ಟವಾದುದಕ್ಕೂ ಎದೆಗೊಡಬೇಕೆಂಬ ತತ್ವವು ವ್ಯಕ್ತಿಗಳಷ್ಟೇ ರಾಷ್ಟ್ರಗಳಿಗೂ ಚೆನ್ನಾಗಿ ಅನ್ವಯಿಸುತ್ತದೆ. ಆದರೆ ಅತ್ಯುತ್ತಮವೆನಿಸಿದ ತತ್ವದಲ್ಲಿ ನಾವು ಪ್ರಾಮಾಣಿಕವಾದ ಶ್ರದ್ಧೆಯನ್ನು ಮಾತ್ರ ಇಡಬೇಕು. ಎಂದರೆ ಈ ವಿಶ್ವಾಸವೇ ಸೌಹಾರ್ದವಾತಾವರಣವನ್ನು ವ್ಯಾಪಕಗೊಳಿಸುತ್ತದೆ. ಇದನ್ನು ಸ್ವೀಕರಿಸದಿರುವುದೆಂದರೆ ಇನ್ನೊಂದು ಸೋಲನ್ನು ಒಪ್ಪಿಕೊಂಡಂತೆಯೇ ಆಗುತ್ತದೆ.

ನಾವು ದೇಶದಲ್ಲಿ ಸಂಪತ್ತಿನ ಸಮಾನ ವಿತರಣೆಯಾಗಬೇಕೆಂದು ಬಯಸುತ್ತೇವೆ; ಮಾನವರ ಶೋಷಣೆ ನಿಲ್ಲಬೇಕೆಂದು ಒಪ್ಪುತ್ತೇವೆ; ದೀನ ಹಾಗು ದಲಿತರ ಉದ್ಧಾರವನ್ನು ಹಾರೈಸುತ್ತೇವೆ. ಆದರೂ ಇವುಗಳ ಸಾಧನೆಗೆ ಸಾಮ್ಯವಾದಿ ತತ್ವಪ್ರಣಾಳಿಯನ್ನು ಅಂಗೀಕರಿಸಲು ಸಿದ್ಧರಿಲ್ಲ. ಇದರಂತೆ ಅಮೇರಿಕ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳ ನಿಲುಮೆಯನ್ನೂ ಸಂಪೂರ್ಣ ಒಪ್ಪುವುದಿಲ್ಲ. ನಾವು ಭಿನ್ನ ಭಿನ್ನ ಧೋರಣೆಗಳನ್ನು ಅಂಟಿಕೊಂಡ ರಾಷ್ಟ್ರಗಳ ಮಾರ್ಗ ಹಾಗು ನಿಲುಮೆಯನ್ನು ಒಪ್ಪಲಿ, ಒಪ್ಪದಿರಲಿ—ಅವುಗಳೊಡನೆ ಸ್ನೇಹವನ್ನು ಇಚ್ಛಿಸುತ್ತೇವೆ; ನಮಗೆ ಒಪ್ಪಿಗೆಯಾಗಬಹುದಾದ ವಿಷಯಗಳಲ್ಲಿ ಸಹಕಾರ ನೀಡಲು ಸಿದ್ಧರಿದ್ದೇವೆ. ಈ ಪ್ರಕಾರ ನಾವು ಇತರರ ನಿರ್ಣಯಗಳಿಂದ ಬಾಧಕ ಹೊಂದದೆ ಸ್ವತಂತ್ರರಿರಲು ಬಯಸುತ್ತೇವೆ; ಇದನ್ನೇ ಬೇರೆ ದೇಶಗಳೂ ಅನುಭವಿಸಬೇಕೆಂದು ಕೋರುತ್ತೇವೆ. ಪರಸ್ಪರ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ನಡೆಯದಿರುವುದೇ ಈ ಸಹಕಾರದ ಒಳಗುಟ್ಟು. ಜಗತ್ತಿನಲ್ಲಿ ಮಹಾರಾಷ್ಟ್ರಗಳು ಈ ಧೋರಣೆಗೆ ಬದ್ಧವಾಗಿದ್ದೇವೆಂದು ಸಾರುವುದರಿಂದ, ಜಾಗತಿಕ ವಾತಾವರಣವು ಎಷ್ಟೋ ಮಟ್ಟಿಗೆ ಸುಧಾರಿಸುತ್ತದೆ. ಈ ಘೋಷಣೆಗಳು ಪ್ರಾಮಾಣಿಕವಾಗಿಲ್ಲವೆಂದು ಭಾವಿಸಿದರೂ ಸಹ, ಅವುಗಳ ಪರಿಣಾಮವಾಗಿ ಆಯಾ ಜನತೆಯ ವಿಚಾರಗಳು ಶಾಂತಿ ಹಾಗು ಸಹಕಾರದ ಕಡೆಗೆ ಹೆಚ್ಚು ಹೆಚ್ಚಾಗಿ ಒಲಿಯುತ್ತವೆ.

ಶಾಂತಿಯನ್ನು ಶಾಂತಿಯುತ ಸಾಧನಗಳಿಂದಲೇ ಪ್ರಸ್ಥಾಪಿಸಲು ಸಾಧ್ಯ. ಬೆದರಿಕೆಯಿಂದ ನೆಲೆಗೊಳಿಸಿದ ಶಾಂತಿಗೆ ಭದ್ರ ತಳಹದಿಯಿಲ್ಲ; ಸದಾ ಯುದ್ಧದ ಸಿದ್ಧತೆಯಲ್ಲಿ ತೊಡಗಿಕೊಂಡು ಶಾಂತಿಗೆ ಪೋಷಕವಾದ ಮಾತಾಡುವುದರಲ್ಲೂ ಅರ್ಥವಿಲ್ಲ. ಯುದ್ಧದ ವಿಚಾರ ಮಾಡುವುದೆಂದರೆ, ಯುದ್ಧಕ್ಕೆ ತಕ್ಕ ಸಿದ್ಧತೆಗಳನ್ನೂ ಮಾಡಿಕೊಳ್ಳಬೇಕಾಗುತ್ತದೆ. ತಮ್ಮ ಹೊಟ್ಟೆ ಬಟ್ಟೆಯ ಚಿಂತೆಯೇ ಹೆಚ್ಚಾಗಿರುವ ರಾಷ್ಟ್ರಗಳು ಯುದ್ಧದ ಮಾತೆತ್ತಲಾರವು; ಆದರೆ, ಶಾಂತಿಯ ಕುರಿತಾಗಿ ಅವು ಅಧಿಕ ಉತ್ಸಾಹವನ್ನು ಪ್ರಕಟಿಸಿ, ಭರವಸೆಯ ನುಡಿಯನ್ನಾಡಬಲ್ಲವು, ಶಾಂತಿಯ ವಿಷಯದಲ್ಲಿ ಹೆಚ್ಚು ರಾಷ್ಟ್ರಗಳ ವಾಣಿಯು ಕೇಳಿ ಬರುತ್ತಿರುವುದರ ರಹಸ್ಯ ಇದೇ ಆಗಿದೆ. ಶಾಂತಿಗಾಗಿ ಸಾಮೂಹಿಕ ಸಹಕಾರದ ಪ್ರವೃತ್ತಿಯನ್ನು ತೋರಿಸಿ, ಯುದ್ಧದ ಮಾತುಗಳಿಂದ ದೂರವುಳಿದ ವಲಯವೊಂದು ಏರ್ಪಟ್ಟರೆ ಕ್ರಮೇಣ ಈ ಭಾಗದ ವ್ಯಾಪ್ತಿಯು ಹೆಚ್ಚುತ್ತಾ ಹೋಗುತ್ತದೆ. ದಿನ ಬೆಳಗಾಗುವಷ್ಟರಲ್ಲಿ ಐಂದ್ರಜಾಲಿಕ ಪರಿವರ್ತನೆ ಕೈಗೂಡುವುದೆಂದಲ್ಲ—ಆದರೆ ಶಾಂತಿಯ ದಿಸೆಯಲ್ಲಿ ನಿಧಾನವಾಗಿಯೇ ಒಂದೊಂದೇ ಹೆಜ್ಜೆಯನ್ನು ಮುಂದಿಟ್ಟಂತೆ ಆಗುವುದು.

ಭಯ ದೌರ್ಬಲ್ಯಗಳ ಮೇಲೆ ಶಾಂತಿಯ ಧೋರಣೆಯು ಬದುಕುವಂತಿಲ್ಲ; ಆದುದರಿಂದ ನಾವು ನಮ್ಮ ಸ್ವಂತ ಕಾಲ ಮೇಲೆ ನಿಂತುಕೊಳ್ಳುವಷ್ಟು ಶಕ್ತಿ ಸಂಪನ್ನರಾಗಬೇಕು. ನೈತಿಕ ಶಕ್ತಿಯಂತೆ ಭೌತಿಕ ಉನ್ನತಿಯನ್ನೂ ಸಾಧಿಸಬೇಕು. ಈ ಪ್ರಗತಿಯನ್ನು ಸಾಧಿಸುವಾಗ ಭಾರತವು ಅಮೇರಿಕದಿಂದ ಸಹಾಯ ಪಡೆಯುತ್ತಿರುವುದನ್ನು ಟೀಕಿಸಲಾಗುತ್ತದೆ. ಹೊರದೇಶಗಳ ಸಹಾಯವನ್ನು ಅವಲಂಬಿಸಿದ ರಾಷ್ಟ್ರ ಶ್ರೇಯಸ್ಸನ್ನು ಪಡೆಯಲಾರದೆಂಬುದನ್ನು ಒಪ್ಪಿಕೊಳ್ಳಬಹುದು. ಆದರೆ ಅಪಾಯಕರವಲ್ಲದ, ಗೌರವಕ್ಕೆ ಚ್ಯುತಿತಾರದ, ಮಿತವಾದ ಸಹಾಯವನ್ನು ನಿರಾಕರಿಸುವುದೂ ಸರಿಯಲ್ಲ. ಏಕೆಂದರೆ ಈ ನಿರಾಕರಣೆ ಸ್ನೇಹವಿಲ್ಲ ಎಂಬ ಕಲ್ಪನೆಯನ್ನುಂಟು ಮಾಡಬಹುದು. ನಮ್ಮ ಧೋರಣೆಯ ಮೇಲೆ ವಿಪರೀತ ಪರಿಣಾಮ ಮಾಡದ ಸಹಾಯಕ್ಕೆ ನಾವು ಯಾವಾಗಲೂ ಸ್ವಾಗತ ಕೋರುತ್ತೇವೆ. ನಮ್ಮ ವಿದೇಶಾಂಗ ನೀತಿಯ ಈ ಕ್ರಿಯಾತ್ಮಕ ಭಾವನೆಗಳನ್ನು ಎಲ್ಲ ಜನರೂ ಮನವರಿಕೆ ಮಾಡಿಕೊಳ್ಳಬೇಕು. ಭಾರತ–ಚೀನ–ಬರ್ಮಾಗಳ ಘೋಷಣೆಯನ್ನೂ ಇದೇ ದೃಷ್ಟಿಯಿಂದ ವಿಚಾರಿಸಬೇಕು. ನಾವು ಇಂತಹ ಒಡಂಬಡಿಕೆಯನ್ನು ಇತರ ದೇಶಗಳೊಡನೆಯೂ ಮಾಡಿಕೊಳ್ಳಲು ಸಂತೋಷದಿಂದ ಮುಂಬರುತ್ತೇವೆ. ಏಶ್ಯಾದಲ್ಲಿ ವ್ಯಕ್ತಗೊಳ್ಳುತ್ತಿರುವ ಗಣನೀಯ ಪರಿವರ್ತನೆಯು ವಾಸ್ತವಿಕ ದೃಷ್ಟಿ ಇಲ್ಲೆಲ್ಲ ಪರಿಗಣಿಸಲಾಗುತ್ತದೆ.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:– ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:-- 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಋತುತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. D.s (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು.

In the Court of the District Munsif of Coondapoor.

O. S. No. 84 of 1954.

Between:

A. Narasimha Hebbar... Plaintiff.

and

1. Thungu Hengsu; 2. Sukra Poojary ... Defendants.

To

1. Thungu Hengsu daughter of Laxmi Poojarthi (1st defendant) 2. Sukra Poojary son of Thungu Hengsu (2nd defendant). Both residing at Airody village, Udipi Taluk.

Please take notice that the above suit filed by the plaintiff against you for possession, recovery of rent and mesne profits in respect of the properties held by you on mulgeni from the plaintiff as per registered mulgeni agreement dated 14—8—1950 stands posted to 26—7—1954 at 11 A. M. before the aforesaid court. In case you fail to appear on that day either in person or through a duly instructed pleader at the appointed time, you will be declared exparte and the suit will be decided in your absence.

Sd. **K. Ramappayya**, *B A B.L.*
Advocate for plaintiff.

Coondapoor, 10—7—1254.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:–

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ:– (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. **52**/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

(೩ನೇ ಪುಟದಿಂದ)

ಗಳಿಸಿದ ಹಣವೆಂಬ ಮೋಹದ ಅಡಿಗಲ್ಲನ್ನೇ ಭೂದಾನ ಯಜ್ಞವು ಅಲುಗಾಡಿಸುತ್ತದೆ. ಪ್ರಕೃತ ವಿನೋಬಾಜಿಯವರು ಗಳಿಕೆಯ ಆರರಲ್ಲಿ ಒಂದು ಪಾಲನ್ನು ದಾನವಾಗಿ ಕೇಳುತ್ತಾರೆ. ಆದರೆ ಉಳಿದ ಐದಂಶವನ್ನು ವ್ಯಕ್ತಿಯು ತನ್ನಲ್ಲಿ ಸಂಗ್ರಹಿಸಬಹುದೆಂದು ಅವರ ಅಭಿಪ್ರಾಯವಲ್ಲ. ಸದ್ಯ ಆರರಲ್ಲಿ ಆರೂ ಅಂಶ ತನ್ನದೆಂದು ಹೇಳುತ್ತಿರುವವರ ತಿಳಿವಳಿಕೆಗೆ "ಹಾಗಿಲ್ಲ- ಆದರಲ್ಲಿ ಒಂದಂಶ ಸಮಾಜಕ್ಕೆ ಸಲ್ಲಬೇಕು" ಎಂದು ಸಾರುವುದರಿಂದ ಧಕ್ಕೆಯುಂಟಾಗುತ್ತದೆ. ಹೀಗೆ ವ್ಯಕ್ತಿಯನ್ನು ವಿಚಾರ ಮಾಡಲು ವಿನೋಬಾ ಹಚ್ಚುತ್ತಾರೆ. ಮುಂದೆ ಹರಿನಾಮದ ಸಿಹಿ ಸವಿದವನಂತೆ, ಆರರಲ್ಲಿ ಒಂದಂಶ ಪಾಲು ಕೊಟ್ಟಾತನು ತನ್ನ ಸರ್ವಸ್ವವನ್ನು, ತನ್ನ ಜೀವನವನ್ನೂ ದಾನವಾಗಿ ಅರ್ಪಿಸಬಲ್ಲನು.

ವಿಶ್ವಾಸದ ನೆಲಗಟ್ಟು

ಸಂಪತ್ತಿದಾನ ಯಜ್ಞವು ಆಜೀವನ ಪರ್ಯಂತ ಕೈಗೊಳ್ಳತಕ್ಕ ವ್ರತ: ತಾನು ಬದುಕಿರುವಷ್ಟು ಕಾಲ ತನ್ನ ಉತ್ಪನ್ನದ ಆರರಲ್ಲಿ ಒಂದಂಶದಷ್ಟನ್ನಾದರೂ ಅನವರತ ಇದಕ್ಕೆ ಮುಡುಪಾಗಿಡಬೇಕಾಗುವುದು. ವಿನೋಬಾ ಸಂಪತ್ತನ್ನು ಸ್ವೀಕರಿಸುವುದಿಲ್ಲ. ದಾನಿಯ ಬಳಿಯಲ್ಲೇ ಅದನ್ನು ಇರಗೊಳಿಸುವರು. ವಿಶ್ವಸ್ತನಂತೆ ಈ ಸಂಪತ್ತನ್ನು ದಾನಿಯು ನಡೆಸಿಕೊಳ್ಳಬೇಕು; ವಿನೋಬಾ ನಿರ್ದೇಶಿಸಿದ ಕಾರ್ಯಕ್ಕೆ ಇದನ್ನು ವಿನಿಯೋಗಿಸಿ ಲೆಕ್ಕ ಪತ್ರವನ್ನು ಒಪ್ಪಿಸಬೇಕು. ಮನುಷ್ಯನ ವಿಶ್ವಾಸದ ಮೇಲೆ ವಿನೋಬಾ ಇಟ್ಟಿರುವ ಗೌರವಕ್ಕೆ ಇದು ಅಪೂರ್ವವಾದ ನಿದರ್ಶನ. ಆದರೆ ಒಬ್ಬ ವಿನೋಬಾ ಎಷ್ಟು ಮಂದಿಗೆ ಸಂದೇಶವನ್ನು ಮುಟ್ಟಿಸಬಹುದು? ಅವರು ಪಾದಚಾರಿಗಳಾಗಿ ತೆಲಂಗಾಣದಿಂದ ಬಿಹಾರದ ವರೆಗೆ ಯಾತ್ರೆಯನ್ನು ಕೈಗೊಂಡರು. ಹಳ್ಳಿ ಹಳ್ಳಿಯಲ್ಲಿ ಸಭೆಗಳನ್ನು ಜರಗಿಸಿ, ಕೃಷಿಕರ, ಶ್ರೀಮಂತರ, ಇತರ ನಾಗರಿಕರ ಹೃದಯಕ್ಕೆ ಅಮೃತ ಸಂದೇಶವನ್ನು ಮುಟ್ಟಿಸಿದರು. ಆದರೆ, ಅವರೊಬ್ಬರೇ ಈ ಕೆಲಸ ಮಾಡಿದರೆ ಸಾಕಾಗದು. ಅವರ ಮಾರ್ಗದರ್ಶನವನ್ನು ಒಪ್ಪಿಕೊಂಡು, ಅವರ ವಿಚಾರಗಳನ್ನು ಭಾರತದ ೩೫ ಕೋಟಿ ಜನತೆಗೆ ತಿಳಿಸಿ ಹೇಳುವ ಕಾರ್ಯಕರ್ತರು ಸಹಸ್ರಾರು ಸಂಖ್ಯೆಯಲ್ಲಿ ಬೇಕಾಗಿದೆ. ಮಹಾತ್ಮಾ ಗಾಂಧೀಜಿಯವರು ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ತಾವು ಪ್ರತಿಪಾದಿಸುತ್ತಿದ್ದ ರಾಜಕೀಯ, ಆರ್ಥಿಕ ಹಾಗು ಸಾಮಾಜಿಕ ತತ್ವಗಳಲ್ಲಿ ಶ್ರದ್ಧೆಯನ್ನು ಇಟ್ಟುಕೊಂಡ ಸಾವಿರಾರು ಸ್ವಯಂಸೇವಕರನ್ನು ಪಡೆದರು. ಎಂತಲೇ, ಅವರ ಕೆಲಸವು ರಾಷ್ಟ್ರವ್ಯಾಪಿಯಾಯಿತು. ಆಧುನಿಕ ಜಗತ್ತಿನಲ್ಲಿಯೇ ಅಪೂರ್ವವಾದ ಅಹಿಂಸಾತ್ಮಕ ಕ್ರಾಂತಿಯನ್ನು ಅವರು ಸಾಧಿಸಿದರು. ಶಸ್ತ್ರಶಕ್ತಿಯು ಬ್ರಿಟಿಷ ಪಕ್ಷದ ಹೊರೆ ಹರಿಯಲಿಲ್ಲ. ಬದಲು ಸ್ನೇಹಭಾವದಿಂದಲೇ ಆಂಗ್ಲರು ಭಾರತೀಯರನ್ನು ಬೀಳ್ಕೊಟ್ಟರು. ಇದೇ ಅದ್ಭುತವನ್ನು ಭೂದಾನ ಹಾಗು ಇತರ ಸರ್ವೋದಯ ಕಾರ್ಯಕ್ರಮಗಳಲ್ಲಿ ನಾವಿಂದು ಸಾಧಿಸಬೇಕು. ಇದಕ್ಕೋಸ್ಕರವೇ ಆಜೀವನ ಪರ್ಯಂತ ವಿನೋಬಾರ ಆದರ್ಶಕ್ಕೆ ಕಟ್ಟು ಬಿದ್ದು ದುಡಿಯುವ ದಾನಿಗಳು ದೇಶದ ಮೂಲೆ ಮೂಲೆಯಿಂದ ಬರಬೇಕು.

ಜನತೆಗೆ ಕರೆ

ಜನತೆಗೆ ಈ ಕರೆಯನ್ನು ನೀಡಲು ನೀಡಿದವರೇ ಜಯಪ್ರಕಾಶ ನಾರಾಯಣ —ಅದಕ್ಕೆ ಮೊದಲನೆಯ ಉತ್ತರವನ್ನು ಕೊಟ್ಟವರೇ ವಿನೋಬಾ ಭಾವೆ! ಬೋಧಗಯೆಯಲ್ಲಿ ಜಯಪ್ರಕಾಶರು ದೇಶದ ನಾಗರಿಕರಿಗೆ ಜೀವನದಾನ ಮಾಡಿರೆಂದು ಆಹ್ವಾನ ನೀಡಿದಾಗ, ವಿನೋಬಾಜಿಯವರು "ಇಗೋ, ನಾನು ನಿನ್ನ ಕರೆಗೆ ಉತ್ತರಿಸಿ ಆತ್ಮಾರ್ಪಣ ಮಾಡುತ್ತೇನೆ" ಎಂದರು. ಇದು ನನಗೆ ವಿಚಿತ್ರವಾಗಿ ಕಂಡೀತು—ಆದರೆ ಇದರಲ್ಲಿ ತಿರುಳಿಲ್ಲದಿಲ್ಲ. ನಿನ್ನೆ ಕಾಂಗ್ರೆಸಿನಲ್ಲಿದ್ದುಕೊಂಡು, ಇಂದು ಕಾಂಗ್ರೆಸಿನ ಧ್ಯೇಯ ಹಾಗು ಕಾರ್ಯಕ್ರಮದಲ್ಲಿ ನಂಬಿಕೆಯಿಟ್ಟು ಇತರ ಪಕ್ಷದೊಡನೆ ಸೇರಿಕೊಳ್ಳುವ ರಾಜಕೀಯ ಪಟುಗಳು ಇರುವಂತೆ, ಭೂದಾನ ಯಜ್ಞದಲ್ಲಿ ಇಂದು ಶ್ರದ್ಧೆಯುಳ್ಳವರು, ನಾಳೆ ಇದನ್ನೇ ನಿಷ್ಪ್ರಯೋಜಕ ಹವ್ಯಾಸವೆಂದು ಹಳಿಯಬಹುದು. ಇಂತಹ ಕಾರ್ಯಕರ್ತರನ್ನು ನಂಬಿಕೊಂಡಿರುವುದು ನಿಷ್ಫಲ. ಅವರಿಂದ ಯಾವ ಪುರುಷಾರ್ಥವೂ ಸಾಧಿಸದು. ಭೂದಾನದ ಕಲ್ಪನೆಯನ್ನು ಅದರ ವ್ಯಾಪಕ ಅರ್ಥದಲ್ಲಿ ಸ್ಪಷ್ಟವಾಗಿ ತಿಳಿದುಕೊಂಡು, ಎಂದೂ ಕದಲದ ದೃಢ ವಿಶ್ವಾಸವನ್ನು ಪ್ರಕಟಿಸುವ ಕಾರ್ಯಕರ್ತರು ಇದ್ದರೆ ಮಾತ್ರ ಆಂದೋಲನವು ಫಲಪ್ರದವಾಗುತ್ತದೆ. ಜಯಪ್ರಕಾಶ ನಾರಾಯಣರು ಇದಕ್ಕೆ ಒಂದು ದಾರಿಮಾಡಿಕೊಟ್ಟರು; ಮುಷ್ಟಿ ವಿನೋಬಾ ಅದರಲ್ಲಿ ನಡೆದು ತೋರಿಸಿದರು. ಈ ಜೀವನದಾನಿಗಳು ರಾಜಕೀಯ ಅಧಿಕಾರದ ಅಭಿಲಾಷೆಯನ್ನು ಹೊಂದಿರಬಾರದು. ರಾಜಕೀಯಕ್ಕೂ ಭೂದಾನಕ್ಕೂ ಯಾವುದೇ ಸಂಬಂಧವಿಲ್ಲ. ನಿಜ ಹೇಳಬೇಕೆಂದರೆ ಸಾಮಾಜಿಕ ಮತ್ತು ಆರ್ಥಿಕ ಸುಧಾರಣೆಗೆ ರಾಜಕೀಯ ಪಕ್ಷಗಳು ಕೆಲಸ ಮಾಡುವುದು ಅನಿವಾರ್ಯವೆಂದು ವಿನೋಬಾ ಭಾವೆ ಭಾವಿಸುವುದಿಲ್ಲ. ಗ್ರಾಮ ರಾಜ್ಯದ ಆದರ್ಶದಲ್ಲಿ ಸರಕಾರವೇ ಇರುವುದಿಲ್ಲ. ಜನತೆಯೇ ಸರಕಾರವಾಗುತ್ತದೆ. ಅಲ್ಲಿ ಜನಸಾಮಾನ್ಯರು ಮತ್ತು ಜನತಾ ಪ್ರತಿನಿಧಿಗಳು ರಚಿಸಿದ ಮಂತ್ರಿಮಂಡಳ ಎಂಬ ಯಾವ ವ್ಯವಸ್ಥೆಗೂ ಅವಕಾಶವಿಲ್ಲ. ಇದು ಆದರ್ಶವಾದದ ನಗ್ನ ಸ್ವರೂಪವೆಂದು ತೋರೀತು—ಈ ಆದರ್ಶವನ್ನು ಮುಟ್ಟುವುದೂ ದಿಗಂತವನ್ನು ನಾವು ಸೇರುವುದೂ ಒಂದೇಯೆಂದು ಹೋಲಿಸಬಹುದು. ಆದರೆ ನಮ್ಮ ಮುನ್ನಡೆಗೆ ಇದು ನೆರವಾಗುತ್ತದೆ. ಇದರಲ್ಲಿ ಸೃಷ್ಟಿಯಾಗುವ ಆವೇಗವನ್ನು ಬಿಟ್ಟುಗೊಟ್ಟು, ಒಳ್ಳೆಯದರ ಕಡೆಗೆ ಆಕೃಷ್ಟರಾಗುವ ಮನೋಭಾವವನ್ನು ಅದು ಹುಟ್ಟಿಸುತ್ತದೆ.

ಬೆಳೆಂತಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ಕೊಟ್ಟ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ಠೇವಣಿಗಳು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ತನಕದ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ 3½% ಬಡ್ಡಿ.
ಚಾಲ್ತಿ ಖಾತೆ ..., ... ಠೇವಣಾತಿಗೆ ¼% ಬಡ್ಡಿ ಕೊಡಲಾಗುತ್ತದೆ.
ಉಳಿತಾಯ ಖಾತೆ ..., ... ಠೇವಣಾತಿಗೆ 1½% ಬಡ್ಡಿ ಕೊಡಲಾಗುತ್ತದೆ.
ವಿಜಯಾ ಕ್ಯಾಶ್ ಸರ್ಟಿಫಿಕೇಟು— ... = 1½ ಬಡ್ಡಿ.
... [illegible]
... [illegible]
10 ಕೇಂದ್ರಗಳಲ್ಲಿಯೂ, ... ಶಾಖೆಗಳಿವೆ.
ಸ್ಥಾಪನೆ 1931 ದಿ ವಿಜಯಾ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಚೇರಿ ಮಂಗಳೂರು 3.

ದಿ ಬೊಂಬಾಯಿ ಲೈಫ್ ಎಶ್ಯೂರೆನ್ಸ್ ಕಂಪನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋವ್‌ಮೆಂಟ್ ... ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ
(...)
... ...
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವದು
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.
ಅಧೀನ ಶಾಖಾ ಕಛೇರಿಗಳಲ್ಲಿ ... ತ್ರಿವೆಂಡ್ರಮ್, ಕಲ್ಲಿಕೋಟೆ ... ಮಂಗಳೂರು ಮತ್ತು ಕೊಯಮುತ್ತೂರು
The Bombay Life Assurance Co., Ltd., Bombay.

ಭಕ್ತನ ಕಂಪ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

... [illegible] ...
... ಗರ್ಭ ... ನಿಲ್ಲುವದು ...
... — ರೂ. ೫-೮-೦ .... ರೂ ೦-೧೪-೦
—ಸ್ಥಳ—
ಪಾಲಿಸ್ಟ್ರಾ ... ಆಯುರ್ವೇದ ಔಷಧಾಲಯ, ಗದಗ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
100 ಯೂ 500ಕ್ಕೆ ಅತೀ ರಿಯಾಯತಿ ಇದೆ.
ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ
ಎಕ್ಸರ್ ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು.

1	ಸ್ವತಂತ್ರ ...	0	4
2	ಸಂಧ್ಯಾ ...	0	10
3	ನಾಟಕಗಳು	0	3
4	ಕಂದಲ	0	3
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	...	0	4
8	...	1	1
9	...	0	4
10	...	0	4
11	...	0	12
12	...	0	11
13	...	1	1
14	...	1	0
15	...	0	10
16	...	0	8
17	...	1	8
18	ಭಾರತೀಯ ಕತೆಗಳು	1	12
19	...	2	8
20	... ಪ್ರವಚನಗಳು	1	4
21	...	1	4
22	... ಮತ್ತು ಕತೆಗಳು	1	0
23	ಭಾರತದಲ್ಲಿ ...	1	0
24	... ಆಚಾರ್ಯ ...	0	12
25	...	2	8
26	...	1	4
27	...	1	8
28	...	1	4
29	...	2	0
30	...	0	4
31	...	0	12
32	...	1	8
33	...	1	4
34	...	1	0
35	...	0	10
36	...	0	10

ನವಯುಗದ ಪುಸ್ತಕ ... ಉಡುಪಿ.

ತುಂಗಭದ್ರೆಯ ಅಣೆಕಟ್ಟು

ಬಳ್ಳಾರಿ ಜಿಲ್ಲೆಯ ಸೌಭಾಗ್ಯದ ನಿಧಿಯೆನಿಸಿದೆ ತುಂಗಭದ್ರಾ ಅಣೆಕಟ್ಟು. ಪಾವನ ತುಂಗೆ, ಮನೋಹರ ಭದ್ರೆ ಇವು ಒಂದಾಗಿ ತುಂಗಭದ್ರೆಯಾಗಿ ಹರಿಯುತ್ತವೆ. ಹೊಸಪೇಟೆಗೆ ಮೂರು ಮೈಲು ದೂರದಲ್ಲಿ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಲಾಗಿದೆ. ಈ ಅಣೆಕಟ್ಟು 1½ ಮೈಲು ಉದ್ದವೂ 160 ಅಡಿ ಎತ್ತರವೂ ಇದ್ದು ತುಂಗಭದ್ರಾ ನದಿಯ ಪ್ರವಾಹದ ನೀರನ್ನು ತಡೆಹಿಡಿದು ನಿಲ್ಲಿಸುತ್ತದೆ.

ಈ ಅಣೆಕಟ್ಟಿನಲ್ಲಿ 113,1260 ಘನ ಅಡಿಗಳಷ್ಟು ನೀರು ನಿಲ್ಲುವುದು. ಮೈಸೂರು, ಹೈದರಾಬಾದ್ ಮತ್ತು ಆಂಧ್ರಗಳಲ್ಲಿ ಒಟ್ಟು 30 ಲಕ್ಷ ಎಕರೆಗಳಷ್ಟು ಜಮೀನು ಹೆಚ್ಚಾಗಿ ಸಾಗುವಳಿಗೆ ಒಳಪಡುವುದು. ಇದರಿಂದ 140.000 ಟನ್ನುಗಳಷ್ಟು ಆಹಾರ ಧಾನ್ಯಗಳೂ, 80.000 ಟನ್ನುಗಳಷ್ಟು ವಾಣಿಜ್ಯ ಬೆಳೆಗಳೂ ಹೆಚ್ಚು ಉತ್ಪನ್ನವಾಗುವುವು. ಸಾಗುವಳಿಯ ಜೊತೆಗೆ, ಈ ನೀರು ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಅಭಿವೃದ್ಧಿಪಡಿಸುವುದಕ್ಕೂ ಸಹಾಯಕವಾಗುತ್ತದೆ. ಸುಮಾರು 18,000 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯ ಕೊನೆಯಲ್ಲಿ ಉಪಯೋಗಕ್ಕಾಗಿ ದೊರೆಯುವುದು.

ತುಂಗಭದ್ರಾ ಯೋಜನೆ

ಈ ಪ್ರಾಜೆಕ್ಟಿನಲ್ಲಿ ಮುಖ್ಯವಾಗಿ 1) ಕಲ್ಲಿನಿಂದ ಕಟ್ಟಲ್ಪಟ್ಟ ಮುಖ್ಯ ಅಣೆಕಟ್ಟು ಇದೆ. ಅದರ ಎಡಭಾಗದಲ್ಲಿ ಜಲಾಶಯವನ್ನು ರೂಪಿಸಿರುವ ಎರಡು ಸಣ್ಣ ಅಣೆಕಟ್ಟುಗಳಿವೆ, 2) ನದಿಯ ಇಕ್ಕೆಲಗಳಲ್ಲಿಯೂ ಎರಡು ಕಾಲುವೆಗಳಿವೆ; 3) ಒಂದು ಎತ್ತರದ ಕಾಲುವೆ; 4) ಕಾಲುವೆಗಳ ನೀರು ಧುಮುಕುವ ಸ್ಥಳಗಳಲ್ಲಿ ವಿದ್ಯುದುತ್ಪಾದನೆಯ ಯಂತ್ರಗಳು—ಈ ನಾಲ್ಕು ವಿಭಾಗಗಳಿವೆ. ಮೊದಲನೆಯ ಎರಡು ಕೆಲಸಗಳ ನಿರ್ಮಾಣಕ್ಕಾಗಿ ಸುಮಾರು 50 ಕೋಟಿ ರೂ.ಗಳ ಖರ್ಚು ತಗಲುವುದೆಂದು ನಿರೀಕ್ಷಿಸಲಾಗಿದೆ.

ಈ ಅಣೆಕಟ್ಟನ್ನು ಪೂರ್ಣವಾಗಿ ಕಟ್ಟಿ ಮುಗಿಸಲಾಗಿದೆ. ಪ್ರಾಜೆಕ್ಟಿನ ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ಕೆಲವು ಉಕ್ಕಿನ 'ಗೇಟು'ಗಳನ್ನು ಮಾತ್ರ ಜೋಡಿಸಬೇಕಾಗಿದೆ. ಅಣೆಕಟ್ಟಿನ ಮೇಲೆ ಒಂದು ಕೊನೆಯಿಂದ ಕೊನೆಯ ವರೆಗೆ ಮೋಟಾರು ರಸ್ತೆಯ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ನೀರಾವರಿ ಕಾಲುವೆಗಳ [illegible] ತುದಿಗಳನ್ನು ಅಗೆಯುವುದರಲ್ಲಿ ಕೆಲವು ಕಾರ್ಮಿಕರು ನಿರತರಾಗಿರುವರು. ಎರಡು ವಿದ್ಯುದುತ್ಪತ್ತಿ ಯಂತ್ರಗೃಹಗಳಿಗಾಗಿ ತಳಪಾಯಗಳನ್ನು ತೋಡಲಾಗಿದೆ. ಎತ್ತರದ ಕಾಲುವೆಯ ಕಾರ್ಯ ಮುಕ್ತಾಯದ ಘಟ್ಟದಲ್ಲಿದೆ.

ಅಣೆಕಟ್ಟಿನ ವಿವರಗಳು

ಮುಖ್ಯ ಅಣೆಕಟ್ಟು 6,000 ಅಡಿ ಉದ್ದವಾಗಿದೆ. ಚಿತ್ರದುರ್ಗದ ಗಣಿಗಳಲ್ಲಿ ದೊರೆಯುವ ಕಲ್ಲಿನಿಂದ ಇದನ್ನು ಕಟ್ಟಲಾಗಿದೆ. ಅದರ ಮಧ್ಯದಲ್ಲಿ 2.300 ಅಡಿಗಳ ಅಗಲವೂ 100 ಅಡಿಗಳ ಉದ್ದವೂ ಇರುವ [illegible] ಕೋಡಿಯೂ ಇದೆ. ಜಲಾಶಯದಲ್ಲಿ ನೀರು ಬಹಳ ಹೆಚ್ಚಾದಾಗ ಅದನ್ನು [illegible] ತರಲು ಇದು ಅನುಕೂಲವಾಗಿದೆ.

ಮುಖ್ಯ ಅಣೆಕಟ್ಟಿನ ಎಡಗಡೆಯಲ್ಲಿ ಎರಡು ತಡೆಗಳಿವೆ. ಅವರಲ್ಲಿ ಒಂದು ಮಣ್ಣಿನದ್ದು. ಇನ್ನೊಂದು ಮಿಶ್ರವಾದ್ದು. ತುಂಗಭದ್ರಾ ನದಿಯ ನೀರು ತನ್ನ ಎಲ್ಲೆಯನ್ನು ದಾಟಿ ಆಚೆಗೆ ಹರಿದು ಹೋಗದಂತೆ ತಡೆಯಲು ಇವುಗಳನ್ನು ನಿರ್ಮಿಸಲಾಗಿದೆ.

ಈ ಜಲಾಶಯವು 133 ಚದರ ಮೈಲುಗಳಷ್ಟು ವಿಸ್ತಾರವುಳ್ಳದ್ದಾಗಿದೆ. ಇಲ್ಲಿಂದ ನೀರನ್ನು ನಾಲೆಗಳ ಮೂಲಕ ಬೆಂಗಾಡಾದ ರಾಯಲಸೀಮೆಗೂ, ಮುಂಗಾರು ಮಳೆಯ ನಂತರ ನೀರಿನ ಅಭಾವವನ್ನು ಹೊಂದುವ ಜಮೀನುಗಳಿಗೂ ಹರಿಸಬಹುದು.

ಈ ಜಲಾಶಯ ನಿರ್ಮಾಣಕ್ಕಾಗಿ ಹೈದರಾಬಾದ್, ಮುಂಬೈ ಮತ್ತು ಮೈಸೂರು ಸಂಸ್ಥಾನಗಳಿಗೆ ಸೇರಿದ ಸುಮಾರು 65 ಹಳ್ಳಿಗಳನ್ನು ಖಾಲಿ ಮಾಡಿಸಲಾಯಿತು. ಅವು ಮುಳುಗಡೆಯಾದವು. ಈ ಹಳ್ಳಿಗಳಿಂದ ಸ್ಥಾನ ಪಲ್ಲಟರಾದವರಿಗೆ ಬೇರೆ ಪ್ರದೇಶಗಳಲ್ಲಿ ಜಮೀನುಗಳನ್ನು ಕೊಟ್ಟು ಪುನರ್ವಸತಿ ಏರ್ಪಡಿಸಿಕೊಡಲಾಗಿದೆ. ಸೂಕ್ತ ಪರಿಹಾರವನ್ನು ಕೊಡುವುದರ ಜೊತೆಗೆ ಅವರಿಗೆ ಗೃಹವಸತಿಗಾಗಿ ಸ್ಥಳಗಳನ್ನೂ ಅವರ ಸಂಸಾರಗಳನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸುವುದಕ್ಕೆ ಸೌಕರ್ಯಗಳನ್ನೂ ಏರ್ಪಡಿಸಲಾಯಿತು. ಇದಕ್ಕೆಲ್ಲಾ ಒಟ್ಟು ಒಂಭತ್ತು ಕೋಟಿ ರೂ ಗಳ ವೆಚ್ಚವಾಗಿದೆ.

ನಾಲೆಗಳು

ನದಿಯ ಎಡಕ್ಕೊಂದು ಬಲಕ್ಕೊಂದು ಎಂದು ಎರಡು ಕಾಲುವೆಗಳು ಅಣೆಕಟ್ಟಿನಿಂದ ನೀರನ್ನು ಸಾಗಿಸುವುವು. ಬಲಭಾಗದ ಕಾಲುವೆಯು ಮುಖ್ಯವಾದುದು ಇದರ ಉದ್ದ 225 ಮೈಲುಗಳು. ಇದರ ಮುಕ್ಕಾಲು ಭಾಗ ಕೆಲಸವು ಈಗಾಗಲೇ ಮುಗಿದಿದೆ. ಎಡ ಭಾಗದಲ್ಲಿರುವ 127 ಮೈಲು ಉದ್ದದ ಕಾಲುವೆಯ ಕೆಲಸವು ಅರ್ಧಕ್ಕಿಂತಲೂ ಹೆಚ್ಚು ಭಾಗದಷ್ಟು ಮುಗಿದಿದೆ. ಅನೇಕ ಕಡೆಗಳಲ್ಲಿ ಈ ಕಾಲುವೆಗಳಲ್ಲಿ ಹಲವು ಮೇಲು ಕಾಲುವೆಗಳಿವೆ. ಹಗರಿ ನದಿಯ ಅಡ್ಡಲಾಗಿರುವ ಮೇಲು ಕಾಲುವೆಯು ಅತ್ಯಂತ ದೊಡ್ಡದಾಗಿದೆ.

ಸೆಕೆಂಡಿಗೆ 10,000 ಘನ ಅಡಿಗಳಷ್ಟು ನೀರನ್ನು ಸಾಗಿಸಬಲ್ಲ ಈ ಕಾಲುವೆಗಳು ನೂರಾರು ಉಪಕಾಲುವೆಗಳಿಗೆ ನೀರನ್ನೊದಗಿಸುವುವು.

ಈ ಉಪ ಕಾಲುವೆಗಳು ಆಂಧ್ರ, ಮೈಸೂರು, ಹೈದರಾಬಾದ್ ಸಂಸ್ಥಾನಗಳಲ್ಲಿ ಅತಿದೂರದ ವರೆಗೂ ಪಸರಿಸಿವೆ. ಅವುಗಳ ಮೂಲಕ ನೀರನ್ನು ಸಾಗಿಸಿ ವ್ಯವಸಾಯಕ್ಕೆ ಅನುಕೂಲ ಮಾಡಿಕೊಡಬಹುದಾಗಿದೆ.

ಎತ್ತರದ ಕಾಲುವೆ

ಜಲಾಶಯದ ನೀರನ್ನು ಸಂಪೂರ್ಣವಾಗಿ ಉಪಯೋಗಿಸಲು ಈ ಕಾಲುವೆಗಳು ಮಾತ್ರವೇ ಸಾಕಾಗುವುದಿಲ್ಲ. ಆದುದರಿಂದ 170 ಮೈಲುಗಳ ಉದ್ದದ ಎತ್ತರದ ಕಾಲುವೆಯನ್ನು ತೋಡುವುದಕ್ಕಾಗಿ ಸಲಹೆಯೊಂದು ಬಂದಿದೆ. ಇದರಿಂದ ಮೂರು ಲಕ್ಷ ಎಕರೆಗಳಿಗೆ–ವಿಶೇಷವಾಗಿ ಕೊರತೆಯ ಪ್ರದೇಶಗಳೆನಿಸಿದ ಅನಂತಪುರ ಹಾಗೂ ರಾಯದುರ್ಗಗಳಿಗೆ ನೀರಾವರಿ ಸೌಕರ್ಯ ದೊರೆಯಬಹುದು.

ವಿದ್ಯುಚ್ಛಕ್ತಿ ಅಭಿವೃದ್ಧಿ

ತುಂಗಭದ್ರಾ ತಪ್ಪಲು ಮತ್ತು ಸುತ್ತಮುತ್ತಿನ ಪ್ರದೇಶಗಳಿಗೆ ಅತ್ಯಗತ್ಯವಾದ ವಿದ್ಯುಚ್ಛಕ್ತಿಯನ್ನು ಒದಗಿಸಲು ಅನೇಕ ವಿದ್ಯುದುತ್ಪತ್ತಿ ಯಂತ್ರಶಾಲೆಗಳನ್ನು ನಿರ್ಮಿಸುವ ಯೋಜನೆಯಿದೆ. ಅಣೆಕಟ್ಟಿನ ಬಲಭಾಗಕ್ಕೆ ಒಂದು ವಿದ್ಯುದುತ್ಪತ್ತಿ ಯಂತ್ರಶಾಲೆ ಸ್ಥಾಪಿಸಲ್ಪಡುವುದು. ನೀರಾವರಿ ಕಾಲುವೆಯ ನೀರು 15 ಮೈಲು ದೂರದಾಚೆ ಬೀಳುವ ಜಾಗದಲ್ಲಿ ಮತ್ತೊಂದು ಯಂತ್ರಶಾಲೆಯನ್ನು ನಿರ್ಮಿಸಲಾಗುವುದು. ಈ ಎರಡು ವಿದ್ಯುತ್ ಕೇಂದ್ರಗಳಿಂದಲೂ ಮೊದಲನೆಯ 5 ವರ್ಷಗಳಲ್ಲಿ ಒಟ್ಟು 30,000 ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು. ಎರಡನೆಯ ಐದು ವರ್ಷಗಳಲ್ಲಿ 45,000 ಕಿಲೋವ್ಯಾಟುಗಳಷ್ಟು ಆ ಮುಂದೆ 60,000 ಕಿಲೋವ್ಯಾಟುಗಳಷ್ಟೂ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದು.

ಎಡಗಡೆಯ ದಡದಲ್ಲಿ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದು. ನೀರಾವರಿ ಕಾಲುವೆಗಳಲ್ಲಿಯೂ ನಾಲ್ಕು ಕಡೆ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಲಾಗುವುದು. ಇವೆಲ್ಲವುಗಳಿಂದ ಒಟ್ಟು 1,30,300 ಕಿಲೋವ್ಯಾಟುಟುಗಳಷ್ಟು ವಿದ್ಯುಚ್ಛಕ್ತಿಯು ಉತ್ಪತ್ತಿಯಾಗುವುದು.

ಈ ರೀತಿ ಉತ್ಪತ್ತಿಯಾದ ವಿದ್ಯುಚ್ಛಕ್ತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿನ ಮನೆಗಳನ್ನು ಬೆಳಗಿಸುವುದಕ್ಕೂ, ಗೃಹ ಕೈಗಾರಿಕೆಗಳ ಚಾಲನೆಗೂ ಬೇಸಾಯಕ್ಕಾಗಿ ಭಾವಿಗಳಿಂದ ನೀರನ್ನೆತ್ತುವ ಪಂಪುಗಳ ಚಾಲನೆಗೂ ಉಪಯೋಗಿಸಲಾಗುವುದು.

ಹತ್ತಿ ಕೈಗಾರಿಕೆ ಮತ್ತು ಸೀಮೆ ಗೊಬ್ಬರದ ತಯಾರಿಕೆಗಳಂಥ ಕೈಗಾರಿಕೆಗಳನ್ನು ಇಲ್ಲಿ ಆರಂಭಿಸುವುದಕ್ಕೆ ಸಾಧ್ಯತೆಗಳೂ ಇವೆ.

ಈ ಶತಮಾನದ ಆರಂಭದಲ್ಲಿ ಹೊಳೆದ ಯೋಜನೆಯು ಈಗ ನಿರ್ದಿಷ್ಟವಾದ ರೂಪು ತಾಳಿದೆ. ಈ ಅಣೆಕಟ್ಟಿಗೆ ಕೇವಲ ಎಂಟು ಮೈಲು ದೂರದಲ್ಲಿರುವ ಹಂಪೆಯನ್ನು ರಾಜಧಾನಿಯಾಗಿಟ್ಟುಕೊಂಡು ವೈಭವದಿಂದ ಮೆರೆದ ವಿಜಯನಗರ ಸಾಮ್ರಾಜ್ಯದ ಕನಸನ್ನು ಮತ್ತೊಮ್ಮೆ ಕಾಣುತ್ತಿರುವ ಗ್ರಾಮವಾಸಿಗಳ ಮನದಾಶಯ ಈ ಅಣೆಕಟ್ಟಿನ ನಿರ್ಮಾಣದೊಂದಿಗೆ ಬೆಳೆಯುತ್ತಿದೆ.

ಯಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ. ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಳಿಜ್ವರ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವಿಕೆ ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ [illegible]ಯನ್ನು ರವಾನಿಸಬಹುದು.

ಟ್ರೇಡ್ ಮಾರ್ಕ್ ಮೈಸೂರು ಶ್ರೀಮನ್ ಮಹಾರಾಜರವರ ಖಾಸ್ ವೈದ್ಯ
ದಿ। ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 90 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್ ರವರ

ಜಂ A. K ಅಯ್ಯರ್ ರವರು, ಸ್ಥಾಪಕರು

ಸಂತಾನ ಸಿಂಧೂರ ಮದನ ವಿಲಾಸ
(ಸ್ತ್ರೀಯರಿಗೆ: ಭಸ್ಮ) (ಪುರುಷರಿಗೆ: ಗುಳಿಗೆ)
*ಭಸ್ಮವು ಬಹಿಷ್ಟೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗಗಳನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹರನ್ನಾಗಿ ಮಾಡುತ್ತದೆ.
*ಈ ಗುಳಿಗೆಗಳು ಪುರುಷನ ಅಶಕ್ತತೆಯನ್ನು ಕಮ್ಮಿಮಾಡಿ, ಸ್ವಪ್ನ ಸ್ಖಲನ ಶೀಘ್ರ ಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ಪುಂಸಕತೆಯನ್ನು ಹೋಗಲಾಡಿಸುತ್ತದೆ.
[illegible] ಗುಣವಾಗಿ [illegible] ಸಂತಾನ [illegible] ಬೇಕೋ ಹಾಗಾದರೆ [illegible] ಸೀಸೆ (ಗುಳಿಗೆ 14 ಗುಳಿಗೆ) ಅನುಪಾನ ಪತಿ [illegible] ಸೇವಿಸಿರಿ.
ಶೀಘ್ರವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.
ಕ್ರಯ: 2 [illegible] ರೂ 7 ರೂ M.O. ಮಾಡಿರಿ, ತಲಪಿದ ಒಡನೆ ರಿಜಿಸ್ಟರ್ಡ್ ಪಾರ್ಸೆಲ್ [illegible] ವಿ.ಪಿ. [illegible] ಕ್ಯಾಟಲಾಗ್ ಉಚಿತ. ಮಾಹಿತಿಗೆ [illegible] ಕಳಿಸಿರಿ ವಿಳಾಸ:–
ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", [illegible] ರೋಡ್ ಸೌತ್ [illegible], ಮೈಸೂರು (Mysore-South India).

Our Bombay Stockist.- V. N. SHENOY, BOMBAY 12



-ಹೊಸಕೆರೆ ಚಿದಂಬರಯ್ಯನವರ-
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ ಭಾಷಾಂತರ.
ಬೆಲೆ. 0-12-0
V. P. P. ಮೂಲಕ 1—4—0

Edited, Printed & Published By K. H. Shetty at the Navayuga Press, Udipi, S. India

Regd. No. M. 3618 [ಎರಡಾಣೆ] Licence No. 31
Licensed to Post without Prepayment.

ನವಯುಗ

(Founder:- Sri A. B. Shetty, Minister for Public Health, Govt. of Madras.
Vol.33 No. 46 22-7-1954 ವರ್ಷ ೩೩ ವಾರ ೪೬

ಜನತೆಯ ನೆನಪು

ನಮ್ಮ ಶಾಸನಸಭೆ ಹಾಗು ಪಾರ್ಲಿಮೆಂಟಿನ ಸದಸ್ಯರಿಗೆ ಅಧಿವೇಶನವು ನಡೆಯುತ್ತಿರುವ ಕಾಲದಲ್ಲಿ ತಿಲಾಂಶವೂ ಬಿಡುವಿರುವುದಿಲ್ಲೆಂದು ಯಾರಾದರೂ ಒಪ್ಪಬಹುದು. ಮಹತ್ವದ ಅನೇಕ ವಿಷಯಗಳ ಕುರಿತ. ಚರ್ಚೆಯು ನಡೆಯುತ್ತಿರುವಾಗ, ಅವುಗಳಲ್ಲಿ ಭಾಗವಹಿಸಿ, ತಾವು ಪ್ರತಿನಿಧಿಸುವ ಜನರ ಅಭಿಪ್ರಾಯಗಳನ್ನು ನಿರ್ಭಯವಾಗಿ ಮಂಡಿಸಲು ಅವರು ಸಿದ್ಧರಿರಬೇಕಾಗುತ್ತದೆ. ಆಳವಾದ ಅಭ್ಯಾಸವನ್ನೂ ವಿಷಯದ ಕೂಲಂಕಷ ಪರಿಶೀಲನೆಯನ್ನೂ ಅವರು ನಡೆಸಿರಬೇಕಾಗುತ್ತದೆ. ತಮ್ಮನ್ನು ಚುನಾಯಿಸಿ ಕಳಿಸಿದ ಮತದಾರರ ಇಷ್ಟಕ್ಕೆ ಪೋಷಕವಾದ ರೀತಿಯಲ್ಲಿ ರಾಷ್ಟ್ರದ ಹಿತವನ್ನು ಸಾಧಿಸುವುದಕ್ಕೆ ಅವರು ಮನಸಾರೆ ದುಡಿಯಬೇಕಾಗುತ್ತದೆ; ಕೆಲವೊಮ್ಮೆ ಹೆಣಗಾಡುತ್ತಿರುವುದೂ ಆಗತ್ಯವೆನಿಸುತ್ತದೆ. ಇದನ್ನೆಲ್ಲ ಕಂಡು, ಶಾಸನಸಭೆ ಅಥವಾ ಪಾರ್ಲಿಮೆಂಟಿನ ಅಧಿವೇಶನಗಳ ನಡುವಣ ಸಮಯವನ್ನು ಬಿಡುವಿನ ದಿನಗಳೆಂದು ಕರೆಯಲು ಕರುಣಾಳುಗಳಿಗೆ ಮನಸ್ಸಾದರೆ ಆಶ್ಚರ್ಯವಲ್ಲ—ಆದರೆ, ಪ್ರಜಾಪ್ರಭುತ್ವ ಪದ್ಧತಿಯನ್ನು ಅಂಗೀಕರಿಸಿ ಮುನ್ನಡೆಯುವ ರಾಷ್ಟ್ರದಲ್ಲಿ ಹೀಗೆ ಭಾವಿಸುವುದು ತಪ್ಪಾಗುತ್ತದೆ.

ಜನತೆಯ ಹಿತ ಸಂವರ್ಧನೆಯೇ ಧ್ಯೇಯವಾಗುಳ್ಳ ಪ್ರತಿನಿಧಿಗೆ ಈ ಬಿಡುವಿನ ವೇಳೆ ವಿಲಾಸೋಪಭೋಗದ ಸಮಯವಾಗಲಾರದು-ಸರಕಾರದ ಮುಂದೆ ಜನತೆಯ ಚುನಾಯಿತ ಪ್ರತಿನಿಧಿಯಾಗಿ ತಾನು ನಿರ್ವಹಿಸುವ ಕೆಲಸಗಳಿಗೆ ಹಿನ್ನೆಲೆಯ ಸ್ವರೂಪದ ಯೋಗ್ಯ ಮಾಹಿತಿಗಳನ್ನು ಕಲೆ ಹಾಕಲು ಅವನು ಈ ಅವಧಿಯನ್ನು ಉಪಯೋಗಿಸಿ ಕೊಳ್ಳುವನು. ಬ್ರಿಟಿಷರ ಆದರ್ಶವನ್ನು ನಾವು ಅಂಗೀಕರಿಸುವುದಾದರೆ, ಚುನಾಯಿತ ಪ್ರತಿನಿಧಿಗಳು ಮಾಡತಕ್ಕ ಕೆಲಸವೂ ಪಡೆಯ ತಕ್ಕ ಜ್ಞಾನವೂ ಯಾವಾಗಲೂ ಇದ್ದೇ ಇರುತ್ತದೆ. ತಂತಮ್ಮ ಮತದಾರ ಕ್ಷೇತ್ರದಲ್ಲಿ ಈ ಪ್ರತಿನಿಧಿಗಳು ಸುತ್ತಾಡಿಕೊಂಡು, ರಾಜಕೀಯ ಸಭೆಗಳನ್ನು ಜರಗಿಸಿ, ಆ ರಾಷ್ಟ್ರದ ಮುಂದಿರುವ ಅನೇಕ ಸಮಸ್ಯೆಗಳ ಬಗ್ಗೆ ತಮ್ಮ ವಿಚಾರವನ್ನೂ ನಿಲುಮೆಯನ್ನೂ ಸ್ಪಷ್ಟೀಕರಿಸುತ್ತಾ ಭಾಷಣ ಮಾಡಬಹುದು. ಇದಕ್ಕೆ ವ್ಯಕ್ತಗೊಳ್ಳುವ ಪ್ರತಿಕ್ರಿಯೆಯು ಯಾವ ರೀತಿ ಇರುವದೆಂಬುದನ್ನು ಮನಗಂಡು ತಮ್ಮ ಅಭಿಪ್ರಾಯಕ್ಕೂ ಮತದಾರ ಕ್ಷೇತ್ರಗಳ ಬಹುಮತಕ್ಕೂ ಹೊಂದಾಣಿಕೆಯನ್ನು ಸ್ಥಾಪಿಸಿಕೊಳ್ಳಬಹುದು. ಗ್ರಾಮಾಂತರ ಪ್ರದೇಶಗಳ ವರ್ಚಸ್ವಿ ಧುರೀಣರನ್ನು ಕಂಡು ಅವರೊಡನೆ ಅನೌಪಚಾರಿಕವಾಗಿ ಸಮಾಲೋಚನೆಗಳನ್ನು ನಡೆಸಬಹುದು. ಮತದಾರರು ಕ್ಷೇತ್ರದ ಪ್ರತಿಯೊಂದೂ ಮೂಲೆಯ ಆಗು ಹೋಗುಗಳ ಪರಿಚಯವನ್ನು ಮಾಡಿಕೊಳ್ಳಬಹುದು.

ತನ್ನ ಮತದಾರರೊಡನೆ ಅತಿ ನಿಕಟವಾದ ಸಂಪರ್ಕವನ್ನು ಸ್ಥಾಪಿಸಿಕೊಳ್ಳುವುದೂ ಅವರ ಸುಖದುಃಖಗಳ ಸಂಪೂರ್ಣ ತಿಳುವಳಿಕೆಯನ್ನು ಹೊಂದಿರುವುದೂ ಸರಕಾರದ ಮುಂದೆ ಸ್ಥಳೀಯ ಸಮಸ್ಯೆಗಳ ಪರಿಹಾರ ಮಾರ್ಗವನ್ನು ಮಂಡಿಸುವುದೂ ಚುನಾವಣೆಯಲ್ಲಿ ಗೆದ್ದು ಬಂದ ಜನತಾ ಪ್ರತಿನಿಧಿಯ ಮಹತ್ವದ ಹೊಣೆ ಹಾಗು ಕರ್ತವ್ಯವಾಗಿರುತ್ತದೆ. ಚುನಾವಣಾ ಭಾಷಣಗಳಲ್ಲಿ ತಾನು ನೀಡಿದ ಭರವಸೆಯ ಮಾತು ಹಾಗು ಕೈಗೊಂಡ ಪ್ರತಿಜ್ಞೆಗಳನ್ನು ಈಡೇರಿಸಿಕೊಳ್ಳಲು ಹವಣಿಸದ, ಆ ಕುರಿತು ಪ್ರಾಮಾಣಿಕವಾದ ಪ್ರಯತ್ನಗಳೇನನ್ನೂ ಕೈಗೊಳ್ಳದ, ಪ್ರತಿನಿಧಿಯು ಜನತೆಯ ಗೌರವಾದರಗಳನ್ನು ಕಳೆದುಕೊಳ್ಳುವುದು ನಿಶ್ಚಯ. ಇದನ್ನು ಮನವರಿಕೆ ಮಾಡಿಕೊಳ್ಳಲು ಕರ್ತವ್ಯಭ್ರಷ್ಟನಾದ ಪ್ರತಿನಿಧಿಯು ಮುಂದಿನ ಚುನಾವಣೆಯ ವರೆಗೆ ಕಾದು ಕುಳಿತಿರಬೇಕಾಗುವುದಿಲ್ಲ—ಜನರೇ ಇದಕ್ಕೆ ಮುಂಚೆ ಅವನಿಗೆ ತಮ್ಮ ಅತೃಪ್ತಿಯನ್ನು ಸೂಚಿಸಿಕೊಡುತ್ತಾರೆ. ತನ್ನ ಕರ್ತವ್ಯಗಳನ್ನು ಮರೆತು ಮತದಾರರ ಅಸಂತೋಷಕ್ಕೆ ಕಾರಣನಾಗುವುದು ಯಾವ ಪ್ರತಿನಿಧಿಗೂ ಭೂಷಣವೆನಿಸುವುದಿಲ್ಲ—ಇದನ್ನು ಮನಗಂಡೇ, ರಾಜಕೀಯ ಪಕ್ಷಗಳ ವರಿಷ್ಠರು ಆದೇಶಗಳ ಮೂಲಕ ಎಲ್ಲ ಜನತಾ ಪ್ರತಿನಿಧಿಗಳೂ ತಮ್ಮ ಬಿಡುವಿನ ವೇಳೆಯನ್ನು ಜನತೆಯೊಡನೆ ಬೆರೆತು ಕಳೆಯಬೇಕೆಂದು ಒತ್ತಾಯಿಸುತ್ತಾರೆ

ಜನತಾ ಸಂಪರ್ಕವನ್ನು ಸದಾಕಾಲ ಊರ್ಜಿತವಾಗಿಟ್ಟುಕೊಳ್ಳುವುದು ಹೇಗೆ? ಇದಕ್ಕೆ ಸುಲಭದ ಉಪಾಯವೊಂದನ್ನು ಅನುಸರಿಸಬಹುದು: ಚುನಾವಣೆಗಳು ಜರಗುವುದರಲ್ಲಿರ ವಾಗ ಅದರಲ್ಲಿ ಸ್ಪರ್ಧಿಸುವ ಎಲ್ಲ ಹುರಿಯಾಳುಗಳೂ ತಮಗೆ ಬೆಂಬಲ ದೊರಕಿಸಿಕೊಳ್ಳುವುದಕ್ಕೋಸ್ಕರ ಮತದಾರ ಕ್ಷೇತ್ರದ ಪ್ರತಿಯೊಂದೂ ಘಟಕದೊಡನೆ ಸಂಪರ್ಕ ಬೆಳೆಸುವುದು ವಾಡಿಕೆಯಾಗಿರುತ್ತದೆ. ಹಳ್ಳಿಯ ಧುರೀಣರ ಗೆಳೆತನವನ್ನೂ ವಿಧಾಯಕ ಕಾರ್ಯಕರ್ತರ ಸಹಕಾರವನ್ನೂ ಪಡೆದುಕೊಂಡು ಹುರಿಯಾಳುಗಳು ಚುನಾವಣಾ ಭಾಷಣಗಳನ್ನು ನಡೆಸುವರು, ಅಲ್ಲಿ ಜನತೆಯ ಒಲವು ಮತ್ತು ಸಹಾನುಭೂತಿಯನ್ನು ಯಾಚಿಸುವರು. ಸ್ಪರ್ಧಿಸುವ ಹುರಿಯಾಳುಗಳಲ್ಲಿ ಗೆದ್ದು ಬಂದವನು, ಚುನಾವಣಾ ಕಾಲದಲ್ಲಿ ಸ್ಥಾಪಿಸಿಕೊಂಡ ಸಂಪರ್ಕ ಸಾಧನಗಳನ್ನು ಮುಂದಕ್ಕೂ ಊರ್ಜಿತವಿಡುವುದು ಅತ್ಯಂತ ಅಪೇಕ್ಷಣೀಯ. ಕೇವಲ ಗೆದ್ದು ಬಂದವನಷ್ಟೇ ಅಲ್ಲ—ರಾಷ್ಟ್ರದ ಭವಿಷ್ಯದಲ್ಲಿ ಉತ್ತಮ ಪಾತ್ರ ನಿರ್ವಹಿಸಬೇಕೆನ್ನುವ ಇತರ ರಾಜಕೀಯ ಪಕ್ಷಗಳೂ ತಮ್ಮ ಸಂಪರ್ಕವನ್ನು ಕಡಿದುಕೊಳ್ಳಲಾಗದು. ಪ್ರತಿಯೊಂದೂ ಹಳ್ಳಿಯಲ್ಲಿ ಜನತೆಯ ಬೆಂಬಲ ಪಡೆಯುವುದಕ್ಕೆ ಚುನಾವಣಾ ಕಾಲದಲ್ಲಿ ರಚಿಸಿಕೊಂಡ ಚಿಕ್ಕ ಸಮಿತಿಗಳಿಂದ ಮುಂದಿನ ಅಧಿಕಾರಾವಧಿಯಲ್ಲಿ ಚುನಾಯಿತ ಪ್ರತಿನಿಧಿಯು ಯೋಗ್ಯ ಸಲಹೆಯನ್ನು ಕೇಳುತ್ತಿರಬೇಕು; ಇವುಗಳಿಂದ ಬರುವ ಮನವಿ ಹಾಗು ದೂರುಗಳಿಗೆ ಕಿವಿಗೊಡಬೇಕು; ರಾಷ್ಟ್ರದ ಆಂತರಿಕ ಹಾಗು ವಿದೇಶ ವ್ಯವಹಾರಗಳ ಬಗ್ಗೆ ತಮ್ಮ ಅಭಿಪ್ರಾಯವನ್ನು ಪ್ರತಿನಿಧಿಗಳು ಈ ಸಮಿತಿಗಳಿಗೆ ವಿವರಿಸಿ ಹೇಳಿ, ಅವುಗಳೊಡನೆ ಪರಾಮರ್ಶೆ ನಡೆಸುತ್ತಿರಬೇಕು ಈ ಸಮಿತಿಗಳು ಜನತೆಯ ಆಶೋತ್ತರಗಳನ್ನು ವ್ಯಕ್ತಗೊಳಿಸುವ ಕನ್ನಡಿಯಂತಿವೆಯೆಂದು ಪ್ರತಿನಿಧಿಗಳು ಭಾವಿಸುತ್ತಾ, ಅಲ್ಲಿ ತೋರಿಬರುವ ಬಿಂಬಕ್ಕೆ ಹೊಂದಿಕೆಯಾಗುವಂತೆ, ಶಾಸನಸಭೆಯಲ್ಲಿ ತಾವು ನಿರ್ವಹಿಸುವ ಪಾತ್ರವನ್ನೂ ಧೋರಣೆಯನ್ನೂ ರೂಪಿಸಬೇಕು; ಅಥವಾ ತಿದ್ದಿಕೊಳ್ಳಬೇಕು.

ಹೀಗೆ ಮತದಾರರನ್ನು ಮರೆಯದೆ ಸದಾ ನೆನಪಿನಲ್ಲಿಟ್ಟುಕೊಂಡರೆ ಮಾತ್ರ ಪ್ರಜಾಪ್ರಭುತ್ವವು ತನ್ನ ಹೆಸರನ್ನು ಸಾರ್ಥಕಪಡಿಸಿಕೊಳ್ಳಬಹುದು; ಅನ್ಯಥಾ ರಾಜಕೀಯ ಪಕ್ಷಗಳು ಪಾತಿನ ಮಲ್ಲಿನಾಥರಿಂದಲೇ ಕೂಡಿವೆಯೆಂದೂ ಜನತೆಯ ಹಿತದ ಬದಲು ಅಧಿಕಾರದ ಅಭಿಲಾಷೆಯೇ ಚುನಾವಣೆಗಿಳಿಯುವ ಧುರೀಣರಿಗಿರುತ್ತವೆಂದೂ ಜನರು ಹೇಳುವಂತಾಗುತ್ತದೆ. ಚುನಾವಣಾ ಭಾಷಣಗಳಿಗೋಸ್ಕರ ಹಳ್ಳಿಯ ಮೈದಾನಿಗೆ ಬಂದ ಹಾಗು ಓಟು ಕೇಳಲು ಮನೆಬಾಗಿಲಿನಲ್ಲಿ ಪ್ರತ್ಯಕ್ಷಗೊಂಡ ಜನತಾಸೇವಕರು ಚುನಾವಣೆಯ ಬಳಿಕ ವರ್ಷಕ್ಕೊಮ್ಮೆಯಾದರೂ ಅತ್ತ ಸುಳಿಯದಿದ್ದರೆ, ಜನತೆಗೆ ಸರಿಹೋಗದು. ರಾಜಕೀಯ ಪಕ್ಷಗಳ ಮುಂದೆ ಶಾಸನಸಭೆ ಅಥವಾ ಪಾರ್ಲಿಮೆಂಟಿನ ಚುನಾವಣೆಗಳು ಮಾತ್ರ ಇರುವುದಿಲ್ಲ—ಜಿಲ್ಲಾ ಬೋರ್ಡ್, ಮುನಿಸಿಪಾಲಿಟಿ, ಗ್ರಾಮ ಪಂಚಾಯತು ಮುಂತಾದವುಗಳಿಗೆ ಸಹ ಚುನಾವಣೆಗಳು ನಡೆಯುತ್ತವೆ. ಇಲ್ಲೆಲ್ಲ ಬೆಂಬಲವನ್ನು ಗಳಿಸಬೇಕೆಂದರೆ, ಜನತೆಯೊಡನೆ ನಿಕಟ ಸಂಪರ್ಕವನ್ನು ಸಾಧಿಸುವುದು ಅತ್ಯಗತ್ಯವಾಗುತ್ತದೆ. ತಮ್ಮನ್ನು ಮರೆತು ಕೃತಘ್ನರಾದವರನ್ನು ಮರಳಿ

(೧೨ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O UDIPI, S India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಠೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡೆಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ. ಉಡುಪಿ, ದ. ಭಾರತ

ಚಂದಾದಾರರು ನಮ್ಮೊಡನೆ ಪತ್ರವ್ಯವಹಾರ ಮಾಡುವಾಗ ದಯಮಾಡಿ ಅವರ ಚಂದಾನಂಬ್ರವನ್ನು (ಕೊನೆಗೆ ಪೂರ್ತಿ ವಿಳಾಸವನ್ನಾದರೂ) ಕೊಡುವಂತೆ ಕೇಳಿಕೊಳ್ಳುತ್ತೇವೆ.

ನಮ್ಮ ವಿಳಾಸ ಬರೆಯುವಾಗ **ಪೋಸ್ಟ್ ಬಾಕ್ಸ್ ನಂಬ್ರ 22** ಎಂದು ಬರೆಯುವಂತೆಯೂ ಸೂಚಿಸುತ್ತೇವೆ.

ಮೆನೇಜರ್-ನವಯುಗ,
ಪೋಸ್ಟ್ ಬಾಕ್ಸ್ ನಂಬ್ರ 22,
ಉಡುಪಿ.

ದಾಮೋದರ ಕಣಿವೆಯ ಇಂದಿನ ನೋಟ

ಹಿಂದೆ ಸೊಕ್ಕಿ ಹರಿಯುತ್ತಿದ್ದ ನದಿ : ಇಂದು ಸೌಭಾಗ್ಯದ ನಿಧಿ

ಭಾರತದ "ಟಿ ವಿ ಎ" ಎಂದು ಹೆಸರಾದ ದಾಮೋದರ ಕಣಿವೆಯ ಯೋಜನೆಯ ಮುಂದಿನ ಹಂತಗಳನ್ನು ವಿಮರ್ಶಿಸಲು ಕಳೆದವಾರ ಕಲ್ಕತ್ತೆಯಲ್ಲಿ ಅಂತರ್ ರಾಜ್ಯ ಸಮಾಲೋಚನಾ ಸಭೆಯೊಂದು ಜರಗಿತು. ಕೇಂದ್ರದ ನೀರಾವರಿ ಹಾಗು ಯೋಜನಾ ಸಚಿವರಾದ ನಂದಾರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಯೋಜನೆಯಲ್ಲಿ ಆಸ್ಥೆಯನ್ನು ವಹಿಸಿರುವ ಪಶ್ಚಿಮ ಬಂಗಾಳ ಮತ್ತು ಬಿಹಾರ ರಾಜ್ಯಗಳ ಪ್ರತಿನಿಧಿಗಳಲ್ಲದೆ, ದಾಮೋದರ ಕಣಿವೆಯ ಕಾರ್ಪೊರೇಶನ್ನಿನ ಪ್ರತಿನಿಧಿಗಳೂ ಮಾತುಕತೆಯಲ್ಲಿ ಭಾಗವಹಿಸಿದರು. ಮೈಥಾನ ಹಾಗು ಪಂಚೇತ್‌ಹಿಲ್ ಅಣೆಕಟ್ಟುಗಳಿಂದಾಗಿ ಸ್ಥಳಾಂತರಿಸಲ್ಪಟ್ಟವರ ಪುನರ್ವಸತಿ, ತಿಲೈಯಾ ಅಣೆಕಟ್ಟಿನ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುವುದು, ಬೊಕಾರೋ ವಿದ್ಯುಚ್ಛಕ್ತಿ ಕೇಂದ್ರದಿಂದ ಸರಬರಾಜನ್ನು ವಿಸ್ತರಿಸುವುದು, ಮಲೇರಿಯಾ ರೋಗ ನಿರೋಧ, ಉದ್ಯಮಗಳ ವಿಸ್ತರಣೆ, ಭೂಮಿಯ ಸಂರಕ್ಷಣೆ ಮುಂತಾದ ವಿಷಯಗಳು ಇಲ್ಲಿ ಪರ್ಯಾಲೋಚಿಸಲ್ಪಟ್ಟವು. ಈ ದೃಷ್ಟಿಯಿಂದ ದಾಮೋದರ ಯೋಜನೆಯು ಈಗ ಎಷ್ಟರಮಟ್ಟಿಗೆ ಪ್ರಗತಿಯನ್ನು ಹೊಂದಿದೆಯೆಂದು ತಿಳಿದುಕೊಳ್ಳುವುದು ಯೋಗ್ಯವಾದೀತು. ಸರಿಯಾಗಿ ಅಳವಡಿಸಿಕೊಂಡರೆ ಈ ಪ್ರದೇಶವು ಜಗತ್ತಿನ ಪ್ರಮುಖ ಔದ್ಯಮಿಕ ಕ್ಷೇತ್ರಗಳಲ್ಲಿ ಒಂದಾಗಿ ಪರಿಣಮಿಸಬಲ್ಲುದೆಂಬ ಸಂಗತಿಯನ್ನು ನಾವು ಈಗಾಗಲೇ (ತಾರೀಕು ೧೯ನೇ ಮಾರ್ಚ್, ೧೯೫೩ನೇ ಸಂಚಿಕೆಯಲ್ಲಿ) ತಿಳಿದುಕೊಂಡಿದ್ದೇವೆ. ನಮ್ಮ ಆಶೋತ್ತರಗಳು ವಾಸ್ತವದಲ್ಲಿ ಹೇಗೆ ರೂಪುಗೊಳ್ಳುತ್ತಿರುವುವೆಂಬುದೇ ನಮ್ಮ ಈಗಿನ ಆಶಯ.

ಇಂಜಿನಿಯರರ ಕೊರತೆ

ಸುಮಾರು ಮೂರೂವರೆ ವರ್ಷಗಳ ಹಿಂದೆ ದಾಮೋದರ ನದಿಯ ಕಣಿವೆಯನ್ನು ಸಂದರ್ಶಿಸಿದಾತನಿಗೆ ಅಲ್ಲಿ ಇಂದು ಕಂಡುಬರುವ ಚಿತ್ರಾಂತರಗಳು ವಿಸ್ಮಯವನ್ನೆ ಹುಟ್ಟಿಸುತ್ತವೆ. ಈಚೆಗೆ ಕೆಲವು ತಿಂಗಳ ಹಿಂದಿನವರೆಗೂ ದಾಮೋದರ ಯೋಜನೆಯಲ್ಲಿ ಹಣವು ಪೋಲಾಗುತ್ತಿದೆಯೆಂದೂ ಕೆಲಸಗಳು ನಾನಾ ಅಡಚಣೆಗಳನ್ನು ಎದುರಿಸುತ್ತಾ ಕುಂಟುತ್ತಿವೆಯೆಂದೂ ವರದಿಗಳನ್ನು ಕೇಳುತ್ತಿದ್ದವರಿಗೆ ಇಲ್ಲಿ ಕೈಗೂಡಿಸಲಾದ ಪ್ರಗತಿಯು ಆಶ್ಚರ್ಯಕರವೆಂದೇ ಭಾಸವಾಗುತ್ತದೆ. ಎಲ್ಲೋ ಸ್ವಲ್ಪ ಹಣವು ದುಂದಾಗಿರಬಹುದು; ಕೆಲವು ತಾಂತ್ರಿಕ ಹಾಗು ವ್ಯಾವಹಾರಿಕ ಅಡಚಣೆಗಳೂ ಕಾಣಿಸಿದ್ದಾವು. ಆದರೆ ಪ್ರಗತಿಯು ಕುಂಠಿತವಾಗಿದೆಯೆಂದು ಹೇಳುವುದು ಮಾತ್ರ ಸರಿಯಾಗದು. ಮೊದಲಿನ ಒಂದೂವರೆ ವರ್ಷಕಾಲ ಯೋಜನೆಗೆ ಮುಖ್ಯ ಇಂಜೀನಿಯರರು ದೊರಕಲಿಲ್ಲವೆಂಬುದು ನಿಜ. ದಾಮೋದರ ಯೋಜನೆಯಲ್ಲಿ ಕಾಂಕ್ರೀಟು ಅಣೆಕಟ್ಟುಗಳು ನಿರ್ಮಾಣ ಹೊಂದುತ್ತವೆ. ಭಾರತವು ಸ್ವತಂತ್ರಗೊಂಡಾಗ (೧೯೪೭) ನಮ್ಮಲ್ಲಿ ಕೇವಲ ಒಂದೇ ಒಂದು ಕಾಂಕ್ರೀಟು ಅಣೆಕಟ್ಟು ಇತ್ತು. ಹೀಗಾಗಿ ನಮ್ಮ ಇಂಜೀನಿಯರುಗಳು ಬೇರೆ ಎಲ್ಲ ಪ್ರಕಾರದ ಅಣೆಕಟ್ಟುಗಳನ್ನು ಕುಶಲವಾಗಿ ಕಟ್ಟಬಲ್ಲವರಾಗಿದ್ದರೂ ಕಾಂಕ್ರೀಟು ಅಣೆಕಟ್ಟಿನ ವಿಷಯದಲ್ಲಿ ಅವರಿಗೆ ಉಚಿತ ಮಾಹಿತಿಯಾಗಲೀ ತರಬೇತಿಯಾಗಲೀ ದೊರೆತಿರಲಿಲ್ಲ. ಹೊರ ದೇಶಗಳಿಂದ ತಜ್ಞರೊಬ್ಬರನ್ನು ಕರೆಸುವುದು ಆಗತ್ಯವೆನಿಸಿದರೂ ಅವರಿಗೆ ಕೊಡಬೇಕಾದ ಸಂಬಳದ ಪ್ರಶ್ನೆಯೊಂದು ಭಾರತಕ್ಕೆ ದೊಡ್ಡ ಹೊರೆಯಾಗಿಯೇ ಕಂಡಿತು. ಏಕೆಂದರೆ ಪಾರ್ಲಿಮೆಂಟಿನಲ್ಲಿ "ಇಷ್ಟು ಹೆಚ್ಚು ಸಂಬಳ ಕೊಡುವುದು ನ್ಯಾಯವೇ" ಎಂಬ ಪ್ರಶ್ನೆಗಳಿಗೆ ಉತ್ತರ ಕೊಡುವುದೆಂತು? ಕೊನೆಗೂ, ಭಾರತದಲ್ಲಿ ಯೋಗ್ಯ ಇಂಜೀನಿಯರು ಇಲ್ಲವೆಂದು ಕಂಡು ಬಂದುದರಿಂದ, ಹೊರಗಿನವರೊಬ್ಬರನ್ನು ಕರೆದುಕೊಳ್ಳಬೇಕಾಯಿತು. ಇದನ್ನು ಅಡಚಣೆ ಎಂದು ಪರಿಗಣಿಸುವುದಾದರೆ, ನಾವು ಕೊಂದರೆಗಳನ್ನು ಯಶಸ್ವಿಯಾಗಿ ಎದುರಿಸಿಯೇ ಪಾರ ಕಲಿಯ ಬೇಕಾಗುತ್ತದೆ ಎಂದು ಒಪ್ಪಿಕೊಳ್ಳೋಣ. ನಮಗೆ ಅನುಭವವಿಲ್ಲದ ಕ್ಷೇತ್ರದಲ್ಲಿ ಪ್ರಯೋಗಾತ್ಮಕ ಸಾಹಸಗಳನ್ನು ಕೈಗೊಳ್ಳುವಾಗ ಕೆಲವೊಮ್ಮೆ ಇಂತಹ ತೊಂದರೆಗಳು ಸಹಜವಾಗಿಯೇ ಪ್ರಗತಿಯ ಮಾರ್ಗದಲ್ಲಿ ಕಾಣಿಸಿಕೊಳ್ಳುತ್ತವೆ. ಅವುಗಳಿಗೆ ಹೆದರಿಕೊಂಡು, ಸುಮ್ಮನೆ ಕುಳಿತಿರುವುದು ಪ್ರಗತಿಗೆ ಪೋಷಕವಲ್ಲ. ಪ್ರಧಾನಮಂತ್ರಿಗಳು ಹೇಳಿದಂತೆ "ಏನೂ ಮಾಡದೆ ಕುಳಿತಿರುವುದಕ್ಕಿಂತ ತಪ್ಪುಗಳನ್ನು ಮಾಡಿ ಪಾಠಕಲಿಯುವುದರಿಂದ ಹಿತವೇ ಆದೀತು."

ನೂತನ ವಾತಾವರಣ

ನ್ಯೂನಾತಿರೇಕಗಳನ್ನು ಹುಡುಕುತ್ತಾ ಹೋಗುವವರ ಕಣ್ಣಿಗೆ ಇನ್ನೂ ಅನೇಕ ಸಂಗತಿಗಳು ಕಕ್ಕಾಗಿ ಬೀಳಬಹುದು. ಮಣ್ಣನ್ನೊಯ್ಯುವ ಉಪಕರಣದ ಅಭಾವದಿಂದ ಒಂದೆಡೆ ಕೆಲಸನಿಂತಂತೆ ತೋರುತ್ತದೆ; ಇನ್ನೊಂದೆಡೆ, ಮಣ್ಣನ್ನೊಯ್ಯುವ ಯಂತ್ರವೊಂದು ತುಕ್ಕುತಿನ್ನುತ್ತಾ ಬಿದ್ದಿರುವುದು ಗೋಚರಿಸುತ್ತದೆ. ಇದನ್ನು ಕೆಲಸಕ್ಕೆ ಬಳಸಿಕೊಳ್ಳುವ ಬದಲು ಯೋಜನಾಧಿಕಾರಿಗಳು ವಿದೇಶದಿಂದ ಈ ಉಪಕರಣವನ್ನು ತರಿಸಲು ಪ್ರಯತ್ನಿಸುವುದನ್ನು ಕಾಣುತ್ತೇವೆ. ಇದೆಂತಹ ವಿರೋಧಾಭಾಸವೆಂದು ನಾವು ವ್ಯಂಗ್ಯವಾಗಿ ನಗುತ್ತೇವೆ. ಆಡಳಿತ ಯಂತ್ರದಲ್ಲಿ ಕಾರ್ಯಕ್ಷಮತೆಯಾಗಲೀ ಕಟ್ಟುನಿಟ್ಟುಗಲೀ ಅಚ್ಚುಕಟ್ಟುತನವಾಗಲೀ ಇಲ್ಲವೆಂದು ದೂರುತ್ತೇವೆ. ಇದರಂತೆ ನಮ್ಮ ಇಂಜೀನಿಯರುಗಳಿಗೆ ಒಂದು ಯಂತ್ರದ ಸಂಪೂರ್ಣ ಪ್ರಯೋಜನವನ್ನು ಪಡೆದುಕೊಳ್ಳುವಷ್ಟು ಕೌಶಲ್ಯವಿಲ್ಲವೆಂದೂ ಕೆಲವೊಂದ ಪ್ರಸಂಗಗಳಲ್ಲಿ ಅನಿಸಬಹುದು. ಅಮೇರಿಕದ ಇಲಿನೋಯಿ ರಾಜ್ಯದಲ್ಲಿ ಪಡೆದುಕೊಳ್ಳುತ್ತಿರುವುದರ ಅರೆವಾಸಿ ಪ್ರಯೋಜನವನ್ನಷ್ಟೇ ನಮ್ಮ ದೇಶದಲ್ಲಿ ಈ ಉಪಕರಣಗಳಿಂದ ತೆಗೆದುಕೊಳ್ಳುವರಲ್ಲಾ ಎಂದು ಖೇದವಾಗುತ್ತದೆ. ಇದಕ್ಕೂ ನಾವಿನ್ನೂ ಕಲಿಯುವುದರಲ್ಲಿಯೇ ಮಗ್ನರು ಎಂದು ಸಮಾಧಾನ ಹೊಂದಬೇಕಾಗುತ್ತದೆ. ನಮ್ಮ ಇಂಜೀನಿಯರುಗಳಿಗೆ ಈ ಕೆಲಸ ಎಷ್ಟು ಹೊಸತೋ, ಇಂತಹ ಯೋಜನೆಗಳಿಂದ ಧಾರಾಳ ಪ್ರಯೋಜನವನ್ನು ಹೊಂದಬಹುದೆಂಬ ಕಲ್ಪನೆಯೂ ನಮ್ಮ ಜನಕ್ಕೆ ಅಷ್ಟೇ ನವೀನ: ಶತಮಾನಗಳಿಂದ ಮುರುಕು ಗುಡಿಸಲಿನಲ್ಲಿ, ಅನಾರೋಗ್ಯದ ಕೊಳಚೆಯಲ್ಲಿ ಬಿದ್ದಿರುತ್ತಿದ್ದ ಹಳ್ಳಿಗರನ್ನು ಶುಚಿಯಾದ ಸುಂದರವಾದ ಮನೆಗಳಲ್ಲಿ ನೆಲೆಗೊಳಿಸಿದಾಗ ಅವರಿಗೆ ಅದು ಒಗ್ಗುವುದಿಲ್ಲ! ಗದ್ದೆಯಲ್ಲಿ ಮಲವಿಸರ್ಜನೆ ಮಾಡುತ್ತಿದ್ದ ಜನರಿಗೆ ಪಾಯಿಖಾನೆಗೆ ಹೋಗುವ ಅಭ್ಯಾಸ ಮಾಡುವುದು ಕಷ್ಟವೆನಿಸುತ್ತದೆ. ಕತ್ತಲೆಯ ಕೋಣೆಯಲ್ಲಿ ಕುಳಿತಿರುವವರಿಗೆ ವಿಶಾಲವಾದ ಕಿಟಕಿ ಬಾಗಿಲುಗಳಿಂದ ಗಾಳಿ ಬೆಳಕು ಬರುವುದನ್ನು ಕಂಡು ಮನಸ್ಸಿಗೆ ಅಸ್ವಸ್ಥವೆನಿಸುತ್ತದೆ! ಇದು ಕತೆ ಕಟ್ಟುವುದಲ್ಲ — ಪುನರ್ನಿವೇಶನ ಹೊಂದಿದ ಜನರು ಮಾಡುವ ಉದ್ಗಾರ ಕೇಳಿದವರಿಗೆ ನಮ್ಮ ಮಾತಿನ ಸತ್ಯ ಮನವರಿಕೆಯಾಗುತ್ತದೆ. ಸರಕಾರ ತಮ್ಮನ್ನು ಹಾಳು ಮಾಡಿತೆಂದೇ ಅವರ ಭಾವನೆ: ಇಂಥವರಿಗೆ ನವ ಭಾರತದ ದರ್ಶನ ಮಾಡಿಸುವ ಅಧಿಕಾರಿಗಳ ಸಾಹಸ ಮತ್ತು ತಾಳ್ಮೆಗಳನ್ನು ನಾವು ಹೊಗಳಬೇಕಾಗುತ್ತದೆ.

ಭವ್ಯ ಅಣೆಕಟ್ಟು

ಹಾಗೆಂದು ಹೊಸ ಜೀವನದಲ್ಲಿ ಆಸ್ಥೆಯುಳ್ಳ ಸುಶಿಕ್ಷಿತ ನಾಗರಿಕನು, ದಾಮೋದರ ಕಣಿವೆಯನ್ನು ಈಗ ಸಂದರ್ಶಿಸುವಾಗ ಅವನಿಗೆ ತುಂಬ ಸಂತೋಷವೆನಿಸುತ್ತದೆ — ಚೊಕ್ಕ ರೀತಿಯ ರಸ್ತೆಗಳು, ಅಚ್ಚುಕಟ್ಟಾದ ವ್ಯವಸ್ಥೆಗಳು ಅವನನ್ನು ಮುಗ್ಧಗೊಳಿಸುತ್ತವೆ. ಅಣೆಕಟ್ಟು ಹಾಗು ವಿದ್ಯುದುತ್ಪಾದನಾ ಕೇಂದ್ರಗಳು ಅವನನ್ನು ಚಕಿತಗೊಳಿಸುತ್ತವೆ. ಕೂಲಿಕಾರರ ವಸತಿಗಳೂ ಉಪಕರಣಗಳನ್ನು ಸಿದ್ಧಪಡಿಸುವ ಕಾರ್ಖಾನೆಗಳೂ ಅಧಿಕಾರಿಗಳ ಕಾರ್ಯಾಲಯಗಳೂ ಗೋಚರಿಸುತ್ತವೆ. ಎಲ್ಲೆಲ್ಲೂ ಉತ್ಸಾಹ ತುಂಬಿ ತುಳುಕುತ್ತದೆ. ಮೈಥಾನ ಅಣೆಕಟ್ಟಿನ ಪ್ರದೇಶದಲ್ಲಿ ಕೆಲಸವನ್ನು ಭರದಿಂದ ಮುಂದೊತ್ತಲಾಗುತ್ತದೆ. ಇಲ್ಲಿ ಯಂತ್ರಗಳೇ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office, UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಶೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಶೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ
ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

ರಾಷ್ಟ್ರಗಳ ಅಭಿವೃದ್ಧಿಯಲ್ಲಿ ಅಣುಶಕ್ತಿಯ ಕ್ರಿಯಾಚ

ಕ್ಷಿಪ್ರದಲ್ಲಿ ಕೈಗಾರೀಕರಣವನ್ನು ಸಾಧಿಸಲು ನೆರವಾಗುವ ಶಕ್ತಿ ಸ್ರೋತ

ಸುಮಾರು ಹತ್ತು ವರ್ಷಗಳಿಂದೀಚೆಗೆ ಜಗತ್ತು ಅಣುಶಕ್ತಿಯ ವಿಧ್ವಂಸಕ ಚಟುವಟಿಕೆಯನ್ನು ಬೆರಗಾಗಿ ನೋಡುತ್ತಾ ಭಯ ವಿಹ್ವಲತೆಯನ್ನು ಪ್ರದರ್ಶಿಸುತ್ತದೆ. ಯಾವುದೇ ವೈಜ್ಞಾನಿಕ ಆವಿಷ್ಕಾರವನ್ನಾದರೂ ಮಾನವತೆಯ ಒಳಿತು ಅಥವಾ ಕೆಡುಕುಗಳೆರಡಕ್ಕೂ ಬಳಸುವುದು ಸಾಧ್ಯ. ದುರ್ದೈವದಿಂದ ಈ ಶತಮಾನದ ಅತ್ಯಂತ ಮಹತ್ವದ ಸಂಶೋಧನೆಯೆನಿಸಿದ ಪರಮಾಣು ಸ್ಫೋಟನ ರಹಸ್ಯವು ದ್ವಿತೀಯ ಮಹಾ ಯುದ್ಧವು ತೊಡಗಿದ ವರ್ಷವೇ (೧೯೩೯) ವಿಜ್ಞಾನಿಗಳ ಕರಗತವಾಯಿತು—ಮತ್ತು ಯುದ್ಧರಂಗದಲ್ಲಿ ಮಾರಕಾಸ್ತ್ರವಾಗಿಯೇ ಅದನ್ನು ಬಳಸಲಾಯಿತು. ಆದರೆ ಅಂದಿನಿಂದಲೂ ವಿಜ್ಞಾನಿಗಳು ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೋಸ್ಕರ ಬಳಸುವ ವಿಚಾರವು ಅತ್ಯಂತ ಪ್ರಾಮುಖ್ಯವಾದುದೆಂದು ಪ್ರತಿಪಾದಿಸುತ್ತಾ ಈ ದಿಸೆಯಲ್ಲಿಯೂ ಪ್ರಯೋಗಗಳನ್ನು ನಡೆಸುತ್ತಿದ್ದರು. ಇದೀಗ ಇಂತಹ ಪ್ರಯತ್ನಗಳು ಫಲಿಸಿ, ಎಷ್ಟೋ ದೇಶಗಳಲ್ಲಿ ಕೈಗಾರಿಕೆಗಳು ಬಳಸುವ ಯಂತ್ರಗಳನ್ನು ನಡೆಸಲು ಅಣುಶಕ್ತಿಯನ್ನು ಉಪಯೋಗಿಸುವುದು ಸಾಧ್ಯವೆಂದು ತಿಳಿದು ಬರುತ್ತದೆ.

ಅಮೇರಿಕದ ಸೂಚನೆ

ಅಮೇರಿಕದ ಅಧ್ಯಕ್ಷ ಐಸೆನಹೋವರರು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯನ್ನು ಉದ್ದೇಶಿಸಿ, ಕಳೆದ ದಶಂಬರ ತಿಂಗಳಿನಲ್ಲಿ ಮಾತನಾಡುವಾಗ ಅಣುಶಕ್ತಿಯನ್ನು ಶಾಂತಿಕಾಲದ ಉಪಯೋಗಕ್ಕೋಸ್ಕರ ಬಳಸುವ ವಿಷಯಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಸಲ್ಲಿಸಿದರು. ಜಗತ್ತು ಮಾರಕಾಸ್ತ್ರವಾಗಿಯಲ್ಲ—ಹಿಂದುಳಿದ ರಾಷ್ಟ್ರಗಳಲ್ಲಿ ವೈದ್ಯುತಿಕ ಅಭಿವೃದ್ಧಿಯನ್ನು ಸಾಧಿಸಬಲ್ಲ ಅಲ್ಲಾವುದ್ದೀನನ ದೀಪದ ರೂಪದಲ್ಲಿ ಅಣುಶಕ್ತಿಯನ್ನು ಕಾಣುವಂತಾಗಬೇಕೆಂದು ಅವರು ಅಪೇಕ್ಷಿಸಿದರು. ಇದಕ್ಕೋಸ್ಕರ ಅಣುಶಕ್ತಿಯ ಅಂತಾರಾಷ್ಟ್ರೀಯ ನಿಯಂತ್ರಣ ಮಂಡಳವೊಂದನ್ನು ರಚಿಸಬೇಕೆಂದು ಅವರು ಸೂಚಿಸಿದರು. ಅಣುಶಕ್ತಿಗೆ ಸಂಬಂಧಿಸಿದ ಖನಿಜ ದ್ರವ್ಯಗಳನ್ನುಳ್ಳ ಎಲ್ಲ ರಾಷ್ಟ್ರಗಳೂ ಈ ಮಂಡಳಕ್ಕೆ ತಮ್ಮ ಕಾಣಿಕೆಯನ್ನೊಪ್ಪಿಸಬೇಕೆಂದು ಹೇಳುತ್ತಾ ಸೋವಿಯೆಟ್ ರಶ್ಯಕ್ಕೂ ಮಂಡಳದಲ್ಲಿ ಸ್ಥಾನವಿರತಕ್ಕದ್ದೆಂದು ಅಭಿಪ್ರಾಯಪಟ್ಟರು. ಆದರೆ ಈ ಮಂಡಳದ ವಿಷಯದಲ್ಲಿ ಭಾರತದ ಅಭಿಪ್ರಾಯವು ಸಾಕಷ್ಟು ಉತ್ತೇಜನಕಾರಿಯಾಗಿಲ್ಲ. ಇದೇ ಮೇ ತಿಂಗಳಲ್ಲಿ ಪರಮಾಣು ವಿಷಯದ ಕುರಿತು ಮೇಘನಾದ ಶಹಾರು ತೊಡಗಿದ ಚರ್ಚೆಯನ್ನು ಉತ್ತರಿಸುತ್ತಾ ಪ್ರಧಾನ ಮಂತ್ರಿ ನೆಹರೂರವರು ಭಾರತದ ನಿಲುವೆಯನ್ನು ಪಾರ್ಲಿಮೆಂಟಿನಲ್ಲಿ ವಿವರಿಸಿ ಹೇಳಿದರು. ಐಸೆನ ಹೋವರರ ಸಲಹೆಗಳು ಅಸ್ಪಷ್ಟವಿರುತ್ತವೆಂದು ಪ್ರಧಾನಿಗಳು ಅಭಿಪ್ರಾಯಪಟ್ಟದಲ್ಲದೆ ಈ ನಿಯಂತ್ರಣ ಮಂಡಳದ ಚಟುವಟಿಕೆಯಿಂದ ಮಹಾ ರಾಷ್ಟ್ರಗಳ ಆದೇಶವನ್ನು ಚಿಕ್ಕ ರಾಷ್ಟ್ರಗಳು ಸ್ವೀಕರಿಸಲೇ ಬೇಕಾದ ಸಂದರ್ಭ ಬರಲಾಗದೆಂದೂ ಅಣುಶಕ್ತಿಗೆ ಸಂಬಂಧಿಸಿದ ಖನಿಜ ದ್ರವ್ಯಗಳನ್ನೊಳಗೊಂಡ ರಾಷ್ಟ್ರವು ಎಷ್ಟೇ ಚಿಕ್ಕದಾಗಿದ್ದರೂ ಮಂಡಳದಿಂದ ಹೊರಗುಳಿದರೆ ಈ ಸಂಸ್ಥೆಯ ಪ್ರಯತ್ನ ನಿಷ್ಫಲವಾದೀತೆಂದೂ ಅವರು ನುಡಿದರು. ಹೀಗೆ ರಾಜಕೀಯವು ಈ ವಿಷಯದಲ್ಲಿ ಮಹತ್ವದ ಪಾತ್ರವನ್ನು ವಹಿಸುವುದರಿಂದ ಅಣುಶಕ್ತಿಯ ಶಾಂತಿಕಾಲದ ಬಳಕೆಯು ಅನೇಕ ಆತಂಕಗಳನ್ನು ಇದಿರಿಸಬೇಕಾಗಿರುತ್ತದೆ. ತಾಂತ್ರಿಕ ಅಡಚಣೆಗಳೂ ಕಾಣಿಸಿಕೊಳ್ಳುತ್ತವೆ. ಆದರೆ ಲೋಕದಲ್ಲೆಲ್ಲ ಅಣುಶಕ್ತಿಯನ್ನು ಮಾನವತೆಯ ಕಲ್ಯಾಣಕ್ಕೋಸ್ಕರ [illegible] ತ್ಯಂರಿಕಂಡು ಬರುತ್ತದೆನ್ನುವುದು ಮಾತ್ರ ನಿಜ. ಎಂತಲೇ ಕಲ್ಲಿದ್ದಲು ಮತ್ತು ಪೆಟ್ರೋಲು ದೊರೆಯದ ಬಡದೇಶಗಳಲ್ಲಿ ಕೈಗಾರಿಕೆಗಳನ್ನು ವಿಸ್ತರಿಸುವುದಕ್ಕೋಸ್ಕರ ಅಣುಶಕ್ತಿಯಿಂದ ವಿದ್ಯುತ್ತನ್ನು ಉತ್ಪಾದಿಸುವ ಪ್ರಯತ್ನಗಳು ನಡೆಯಬೇಕೆಂದು ಹೇಳಲಾಗುತ್ತದೆ. ಎಲ್ಲ ಸ್ವಾಪತ್ಯ ವಿಜ್ಞಾನಿಗಳೂ ತಾಂತ್ರಿಕರೂ ರಾಜಕೀಯ ಪಟುಗಳೂ ಇದನ್ನು ಸೂಕ್ಷ್ಮವಾಗಿ ಪರ್ಯಾಲೋಚಿಸುವರೆಂದರೂ ಸಲ್ಲುತ್ತದೆ.

ಅಣುಶಕ್ತಿಯೇ ಇಂಧನ

ಬಾಂಬುಗಳನ್ನು ಸ್ಫೋಟನಗೊಳಿಸುವ ಅಣುಶಕ್ತಿಯನ್ನು ಕೈಗಾರಿಕೆಗಳಿಗೆ ವಿದ್ಯುತ್ತು ಮುಂತಾದ ರೂಪದಲ್ಲಿ ಬಳಸಲು ಮಾಡಬೇಕಾದುದೇನು? ಅಣುಸ್ಫೋಟನಾ ಕಾರ್ಯವು ಆಪರೇಟರನ ನಿಯಂತ್ರಣಕ್ಕೆ ಒಳಪಟ್ಟು ನಿಧಾನವಾಗಿ, ಅಪೇಕ್ಷಿತ ಪ್ರಮಾಣದಲ್ಲಿ ನೆರವೇರುವಂತೆ ಮಾಡಿದರೆ ಸರಿ ಎಂಬುದಾಗಿ ಸುಲಭದಲ್ಲಿ ಈ ಪ್ರಶ್ನೆಯನ್ನು ಉತ್ತರಿಸಬಹುದು. ಈಗ ತಿಳಿದು ಬಂದಂತೆ ಒಂದು ರಾತಲು ಯುರೇನಿಯಂ ಧಾತುವಿನಿಂದ ೧೫೦೦ ಟನ್ನು ಕಲ್ಲಿದ್ದಲನ್ನು ಸುಡುವುದರಿಂದ ಉಂಟಾಗುವಷ್ಟು ಶಕ್ತಿಯು ದೊರಕುತ್ತದೆ. ಈ ಪ್ರಕಾರ ಅಣು ಇಂಧನವು ಅದೇ ಪ್ರಮಾಣದ ಕಲ್ಲಿದ್ದಲಿಗಿಂತ ೩೦ ಲಕ್ಷ ಪಾಲಿನಷ್ಟು ಹೆಚ್ಚು ಶಕ್ತಿಯನ್ನು ಉತ್ಪಾದಿಸುತ್ತವೆಂದು ಸ್ಪಷ್ಟವಾಗುತ್ತದೆ. ಆದರೆ ಅಣು ಇಂಧನದ ಬೆಲೆಯು ಕಲ್ಲಿದ್ದಲಿಗಿಂತ ಎಷ್ಟೋ ಹೆಚ್ಚಿಗಿರುವುದರಿಂದ ಕಲ್ಲಿದ್ದಲಿಗಿಂತ ಅಗ್ಗವಾಗಿ ಅಣು ಶಕ್ತಿಯನ್ನು ಬಳಸಬಹುದೆಂದು ಹೇಳಲು ಬಾರದು. ಆದುದರಿಂದ ಹೇರಳವಾಗಿ ಕಲ್ಲಿದ್ದಲು ಅಥವಾ ಪೆಟ್ರೋಲಿಯಂಗಳ ನಿಕ್ಷೇಪವನ್ನು ಹೊಂದಿದ ದೇಶಗಳು ಅಣುಶಕ್ತಿಯನ್ನು ಉಪಯೋಗಿಸಿ ಯಂತ್ರಗಳನ್ನು ನಡೆಸಲು ಮನಸ್ಸುಮಾಡುವುದು ಅಷ್ಟರಲ್ಲೇ ಇದೆ. ಆದರೆ ಬಹಳ ದೂರದ ದೇಶಗಳಿಂದ ಕಲ್ಲಿದ್ದಲು ಮತ್ತು ಪೆಟ್ರೋಲಿಯಮನ್ನು ಆಮದುಮಾಡಿಕೊಳ್ಳಬೇಕಾದಾಗ ಟನ್ನುಗಟ್ಟಳೆ ಕಲ್ಲಿದ್ದಲನ್ನು ತರಿಸುವುದಕ್ಕಿಂತ ರಾತಲು ಪ್ರಮಾಣದಲ್ಲಿ ಯುರೇನಿಯಂ ಮುಂತಾದ ಧಾತುಗಳನ್ನು ತರಿಸುವುದೇ ಸುಖಕರವೆಂದು ತೋರಬಹುದು. ಅಣುಶಕ್ತಿಯನ್ನು ವಿದ್ಯುಚ್ಛಕ್ತಿಯ ರೂಪದಲ್ಲಿ ಇಂಧನವಾಗಿ ಬಳಸಿದಾಗ ಎಷ್ಟು ವೆಚ್ಚ ಬಂದೀತೆಂದು ಇನ್ನೂ ಖಚಿತವಾಗಿ ತಿಳಿದಿಲ್ಲ. ಆದರೂ ಟನ್ನಿಗೆ ಹತ್ತು ಡಾಲರುಗಳಿಗಿಂತಲೂ ಹೆಚ್ಚು ದರವು ಕಲ್ಲಿದ್ದಲಿಗೆ ಬೀಳುವಲ್ಲೆಲ್ಲ ಅಣುಶಕ್ತಿಯು ಅಗ್ಗವಾಗಿ ತೋರುವುದೆಂದು ಹೇಳಲಾಗುತ್ತದೆ. ಶಕ್ತಿ ಸ್ರೋತಗಳನ್ನು ಪಡೆಯದ ಬಡ ರಾಷ್ಟ್ರಗಳಿಗೆ ಇದರಿಂದ ಮಹದುಪಕಾರವಾಗಬಲ್ಲುದು. ಸಾವಿರಗಟ್ಟಳೆ ಟನ್ನು ಕಲ್ಲಿದ್ದಲನ್ನು ತುಂಬಿಕೊಂಡು ಹೋಗುವ ಹಡಗುಗಳು ಇನ್ನುಮುಂದೆ ಕೆಲವೇ ರಾತಲು ಅಣು ಖನಿಜವನ್ನು ತುಂಬಿಸಿ, ಉಳಿದ ಜಾಗದಲ್ಲಿ ಇತರ ಸಾಮಾನನ್ನು ಹೇರಿಕೊಂಡು ಹೋಗುತ್ತವೆ; ದೂರ ಪ್ರಯಾಣಿಸುವ ವಿಮಾನಗಳು ಇಂಧನವನ್ನು ತುಂಬಿಕೊಳ್ಳುವ ನೆಪದಿಂದ ನಡುವಿನ ನಿಲ್ದಾಣದಲ್ಲಿ ಇಳಿಯಲೇ ಬೇಕಾದ ಸಂದರ್ಭಗಳೂ ಪೆಟ್ರೋಲಿನ ಸ್ಥಾನದಲ್ಲಿ ಅಣುಶಕ್ತಿಯನ್ನು ಉಪಯೋಗಿಸಿದಾಗ ತಪ್ಪುತ್ತವೆ.

ಸಹಕಾರಿಯಾದ ಅಂಶ

ಉದ್ದಿಮೆಗಳಲ್ಲಿ ಅಣುಶಕ್ತಿಯನ್ನು ಬಳಸಲು ಸಹಕಾರಿಯಾದ ಕೆಲವು ಅಂಶಗಳು ಈಗೀಗ ಗೋಚರಿಸುತ್ತವೆ. ಯುದ್ಧದ ಉದ್ದೇಶಗಳಿಗಾಗಿ ಅಣುಶಕ್ತಿಯನ್ನು ಬಳಸುವ ಪ್ರಯತ್ನಗಳು ಈಗ ಮಾರಕಾಸ್ತ್ರಗಳ ದೊಡ್ಡ ಸಂಗ್ರಹವನ್ನು ಮಾಡಿಟ್ಟಿರುತ್ತವೆ. ಅಮೇರಿಕೆಯೊಡನೆ ಇಂದು ಆರು ಸಾವಿರ ಅಣುಬಾಂಬುಗಳ ಸಂಗ್ರಹವಿದೆಯೆಂದೂ ಸೋವಿಯೆಟ್ ರಶಿಯಾದ ಬಳಿ ಕನಿಷ್ಠ ಮುನ್ನೂರಾದರೂ ಅಣುಬಾಂಬುಗಳಿವೆಯೆಂದೂ ಹೇಳಲಾಗುತ್ತದೆ. ಜಲಜನಕ ಬಾಂಬುಗಳ ತಯಾರಿಕೆಗೂ ಈ ರಾಷ್ಟ್ರಗಳು ಇಳಿದಿವೆಯಲ್ಲದೆ, ರಾಡರು ಹಾಗು ಜಲಾಂತರ್ಗಾಮಿ ನೌಕೆಗಳನ್ನು ಅಣುಶಕ್ತಿಯಿಂದ ನಡೆಸುವ ಪ್ರಯತ್ನ ಅಮೇರಿಕದಲ್ಲಿ ಸಾಕಷ್ಟು ಫಲಪ್ರದವಾಗುತ್ತದೆ. ಆದುದರಿಂದ ಯುದ್ಧದಲ್ಲಿ ಅಣುಶಕ್ತಿಯನ್ನು ಬಳಸುವ ಆತುರಕ್ಕೆ ಸಾಕಷ್ಟು ಸಮಾಧಾನ ದೊರೆತಿರುತ್ತದೆ. ಶಾಂತಿ ಕಾಲದ ಉಪಯೋಗದ ಕುರಿತು ಚಿಂತಿಸುವುದಕ್ಕೆ ಇದು ತಕ್ಕ ಹಿನ್ನೆಲೆಯನ್ನು ಒದಗಿಸಿದರೆ, ಅಮೇರಿಕದ ಅಣುಶಕ್ತಿ ಮಂಡಳವು ಕಂಡು ಹಿಡಿದ ಯಂತ್ರ ವಿಶೇಷವೊಂದು ಇನ್ನಷ್ಟು ಪ್ರೋತ್ಸಾಹವನ್ನು ಕೊಟ್ಟಿರುತ್ತದೆ. ಈ ಯಂತ್ರದಲ್ಲಿ ಉಪಯುಕ್ತವಾದ ಅಣುಶಕ್ತಿಯನ್ನು ಅಭಿವೃದ್ಧಿ ಪಡಿಸಲಾಗುವುದಲ್ಲದೆ ಯುರೇನಿಯಮಿನ ಜಡ ಅಂಶವನ್ನು ಚೈತನ್ಯದಿಂದ ತುಂಬಿ ತುಟು

(೧೦ನೇ ಪುಟ ನೋಡಿರಿ)

ತೋನ್ಸೆ ಪಂಚಾಯತ ಬೋರ್ಡಿನಲ್ಲಿ

ಓ. ಸ್ಯೂ. ನಂಬ್ರ 21/54.

ಮಿಂಗೆಲ್ ಫೆರ್ನಾಂಡಿಸ್ —ವಾದಿ.

ಮತ್ತು

ಚಂದ್ರಯ್ಯ ಆಚಾರಿ-ಸೋಮಯ್ಯ ಆಚಾರಿಯ ಮಗ ಪಡುತೋನ್ಸೆ ಗ್ರಾಮದ ಗುಜ್ಜಾರಿನಲ್ಲಿರುವ —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನಂದ್ರೆ— ನೀವು ವಾದಿಯಿಂದ ತಾ. 16-5-51ರಲ್ಲು ಡಿ. ನೋಟಿನ ಮೇಲೆ ಸಾಲವಾಗಿ ಪಡಕೊಂಡ ರುಪ್ಯಾ 75-0-0 ಅವರ ಮೇಲಣ ಬಡ್ಡಿ, ಕೋರ್ಟು ಕರ್ಚು ಕೂಡಾ ಬರಮಾಡಿಕೊಳ್ಳುವರೆ ವಾದಿಯು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 29-7-54ಕ್ಕೆ ತನಿಖೆಗೆ ಇಟ್ಟಿದೆ. ಸದ್ರಿ ದಾವೆಯಲ್ಲಿ ಉತ್ತರಿಸುವದಾದಿದ್ದರೆ ಸದ್ರಿ ದಿನ ಅಪರಾಹ್ನ ಘಂಟೆ 3ಕ್ಕೆ ಸದ್ರಿ ಕೋರ್ಟಿನ ಮುಂದೆ ನೀವು ಸ್ವತಃ ಯಾ ಮುಖ್ತಾರೀಕನ ಮೂಲಕ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ಏಕಪಕ್ಷವಾಗಿ ತೀರ್ಮಾನಿಸಲಾಗೀತು.

ಕೆ. ಗೋವಿಂದ ಉಡುಪ,
ಪ್ರೆಸಿಡೆಂಟ್,
ತೋನ್ಸೆ ಪಂಚಾಯತ ಬೋರ್ಡ್.

ತಾ. 17-7-1954.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ. 1 ರಾತ್ಲು: ರೂ. 6–8–0 ¼ ರಾತ್ಲು: ರೂ. 1–14–0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.

3 ರಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎನ್. ಶರ್ಮ, ಪಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಸ್ಥಾನಿಕವಿಲ್ಲದ ಸ್ಥಳಗಳಲ್ಲಿ [illegible] ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town–**MADRAS-3.**

WANTED AGENTS

on attractive commission to canvass orders for Bhavani Carpets.

Please apply to:

SRI AMBIGA INDUSTRIALS,
Carpet Manufacturers,
BHAVANI (Via) ERODE, S. India.

ವಸಾಹತುಗಳ ಜನತೆಯ ವಿಮೋಚನ ಚಳವಳ

ಫ್ರೆಂಚರಿಂದ ಮುಕ್ತಗೊಂಡ ಮಾಹೆಯ ಅಧಿಕಾರ ಜನತೆಯ ಕೈಯಲ್ಲಿ

ಕೆಲವು ವಾರಗಳಿಂದ ಈಚೆಗೆ ಭಾರತದ ಕರಾವಳಿ ಪ್ರದೇಶದಲ್ಲಿರುವ ನಾಲ್ಕಾರು ಫ್ರೆಂಚ್ ಹಾಗು ಪೋರ್ಚುಗೀಜ ವಸಾಹತುಗಳು ಭಾರತದೊಡನೆ ವಿಲೀನ ಹೊಂದಬೇಕೆನ್ನುವ ಚಳವಳವು ಬಹಳ ತೀವ್ರವಾಗಿರುತ್ತದೆ. ಈ ಜನತಾ ಚಳವಳವು ಆಡಳಿತಾಧಿಕಾರಿಗಳ ಗರ್ವ ದಬ್ಬಾಳಿಕೆಯನ್ನು ಇದಿರಿಸಿ, ತನ್ನ ಆಶೋತ್ತರಗಳು ಎಷ್ಟು ಸಹಜ ಹಾಗು ನ್ಯಾಯವಾದವುಗಳೆಂದು ತೋರಿಸಿ ಕೊಡುತ್ತವೆ. ವಿದೇಶದ ಆಡಳಿತಕ್ಕೆ ಇಲ್ಲೆಲ್ಲೂ ಬೆಂಬಲವು ಕಂಡು ಬರುವುದಿಲ್ಲ. ಬದಲು ಚಳವಳಗಾರರು ನ್ಯಾಯವನ್ನೆ ಹೇಳುತಿದ್ದಾರೆಂಬುದನ್ನು ಮನಗಂಡು ಅಧಿಕಾರಿಗಳೆಲ್ಲ ವಿದೇಶೀಯರ ಹಿಡಿತದಿಂದ ಹೊರಗೆ ಬಂದು, ಚಳವಳಗಾರರನ್ನು ಸೇರಿ, ತಮ್ಮ ಸಹಾನುಭೂತಿ ಪ್ರಕಟಿಸುತಿದ್ದಾರೆ. ಫ್ರೆಂಚ ವಸಾಹತುಗಳಲ್ಲಿ ಒಂದಾದ ಯಾನಮಿನ ಆಡಳಿತೆಗಾರರು ಫ್ರೆಂಚರ ಕೈಕೆಳಗಿನ ಎಲ್ಲ ಅಧಿಕಾರಗಳನ್ನೂ ಬಿಟ್ಟುಗೊಟ್ಟು ವಿಲಯನ ವಾದಿಗಳೊಂದಿಗೆ ಸೇರಿಕೊಂಡರು; ಮಾಹೆಯ ಪ್ರಧಾನ ನ್ಯಾಯಾಧೀಶರು ಫ್ರೆಂಚರ ಆಡಳಿತದಲ್ಲಿ ನ್ಯಾಯ ಸ್ಥಾನದ ಗೌರವಕ್ಕೆ ಚ್ಯುತಿ ಬರದಂತೆ ತನ್ನ ಕೆಲಸ ನಿರ್ವಹಿಸುವುದು ಅಸಾಧ್ಯವಾಗಿದೆಯೆಂದು ಹೇಳಿ, ಅಧಿಕಾರವನ್ನು ತ್ಯಜಿಸಿದರು. ಮೊನ್ನೆ ಮೊನ್ನೆಯವರೆಗೆ ಫ್ರೆಂಚ ಪರವಾದ ಧೋರಣೆಯನ್ನು ಇಟ್ಟುಕೊಂಡಿದ್ದ ಪುದುಚೇರಿಯ ಪ್ರಜಾಸತ್ತಾತ್ಮಕ ಪಕ್ಷವು ಸರಕಾರಕ್ಕೆ ಬೆಂಬಲ ಕೊಡುವುದನ್ನು ನಿಲ್ಲಿಸಿ ವಿಲಯನವಾದಿಗಳಿಗೆ ಸಹಕಾರ ನೀಡಲು ನಿರ್ಣಯಿಸಿರುವುದು. ಪಕ್ಷದ ನಾಯಕರು ಒಂದು ಹೇಳಿಕೆಯಲ್ಲಿ ಜನತೆಯ ಹಿತಾಸಕ್ತಿಗಳನ್ನು ಮನ್ನಿಸದ, ನ್ಯಾಯವಾದ ಆಶೋತ್ತರಗಳನ್ನು ಈಡೇರಿಸಲಾರದ ಫ್ರೆಂಚ ಸರಕಾರಕ್ಕೆ ಇನ್ನು ಮುಂದೆ ಬೆಂಬಲ ಕೊಡುವುದು ಸಾಧ್ಯವಿಲ್ಲವೆಂದು ಸಾರಿದರು. ಕರೈಕಲ್ಲಿನಲ್ಲಿ ಗಡಿಯ ಸುತ್ತಲೂ ಮತಪ್ರದರ್ಶನ ಮತ್ತು ಸತ್ಯಾಗ್ರಹವು ನಡೆಯುತಿದ್ದು ಅಲ್ಲಿಯ ಪರಿಸ್ಥಿತಿ ಫ್ರೆಂಚರಿಗೆ ತೀರ ಪ್ರತಿಕೂಲವಿರುತ್ತದೆ.

ಅನಿರೀಕ್ಷಿತ ನಿರ್ಣಯ

ಹೀಗೆ ವಿದೇಶೀಯರ ಆಳಿಕೆಯು ನಡುಗುತ್ತಿರುವುದನ್ನು ಕಂಡ ಫ್ರೆಂಚರು ಸಹಜವಾಗಿಯೇ ತಬ್ಬಿಬ್ಬಾಗಿದ್ದಾರೆ. ಇವರಿಗೆ ಪಶ್ಚಿಮ ಕರಾವಳಿಯ ಮಾಹೆಯಲ್ಲಿ ಮಹಾಜನ ಸಭೆ ಕೈಗೊಂಡ ಚಳವಳವು ನುಂಗಲಾರದ ತುತ್ತಾಯಿತು. ಮೇ ೧ನೇ ತಾರೀಕಿನಂದು ಇಲ್ಲಿ ವಿಲಯನ ಚಳವಳವು ಸತ್ಯಾಗ್ರಹ ರೂಪದಲ್ಲಿ ತೊಡಗಿತು. ಸತ್ಯಾಗ್ರಹಿಗಳು ಮಾಹೆಯ ಗಡಿಯೊಳಗೆ ಏನೂ ಹೋಗದಂತೆ ದಿಗ್ಬಂಧನವನ್ನು ಮಾಡಿದರು. ಭಾರತದಿಂದ ಆಹಾರ ಸಾಮಗ್ರಿ ಮುಂತಾದುವನ್ನು ಪೂರೈಸುತಿದ್ದ ಮೋಟಾರು ಲಾರಿ ಮುಂತಾದುವನ್ನು ವಿಲಯನವಾದಿಗಳು ಮರಳಿಸುತಿದ್ದರು. ತತ್ಪರಿಣಾಮವಾಗಿ ಜನರು ಆಹಾರ ಮುಂತಾದ ನಿತ್ಯೋಪಯೋಗದ ವಸ್ತುಗಳು ಸಿಗದೆ, ವಸಾಹತು ಪ್ರದೇಶವನ್ನು ಬಿಟ್ಟು ಭಾರತಕ್ಕೆ ಹೊರಡತೊಡಗಿದರು. ಕೆಲವು ದಿನಗಳ ಪೂರ್ವದಲ್ಲಿ ಮಾಹೆಯ ಮೇಯರ ಹಾಗು ಕೌನ್ಸಿಲರುಗಳೂ ಇತರ ಸರಕಾರಿ ಅಧಿಕಾರಿಗಳೂ ಮಾಹೆಯ ಕಷ್ಟಗಳನ್ನು ಸಹಿಸಲಾರದೆ, ಅದನ್ನು ಬಿಟ್ಟು ಹೊರನಡೆದರು. ಮಹಾಜನ ಸಭೆಯ ಧುರೀಣರೂ ವಿಲಯನವಾದಿಗಳು ರಚಿಸಿಕೊಂಡ ಕ್ರಿಯಾ ಸಮಿತಿಯ ಅಧ್ಯಕ್ಷರೂ ಆದ ಶ್ರೀ. ಐ. ಕೆ. ಕುಮಾರನ್ನರು ಚಳವಳಗಾರರ ಮುಖಂಡತ್ವವನ್ನು ವಹಿಸಿ, ಯೋಗ್ಯ ಮಾರ್ಗದರ್ಶನ ಮಾಡುತಿದ್ದರು. ೩½ ಚದರ ಮೈಲು ಪ್ರದೇಶದಷ್ಟು ವಿಸ್ತಾರವಾದ ಮತ್ತು ೧೫೦೦೦ ಜನಸಂಖ್ಯೆಯಿಂದ ಕೂಡಿದ ಮಾಹೆಯ ವಸಾಹತನ್ನು ಸುತ್ತುವರಿದಿದ್ದ ನಾಲ್ಕು ಹಳ್ಳಿಗಳು ವಿಲಯನವಾದಿಗಳ ಕೈಯಲ್ಲಿ "ವಿಮೋಚನೆ"ಯನ್ನು ಹೊಂದಿದವು. ಮಾಹೆ ನಗರ ಹಾಗು ಬಂದರದಿಂದಲೂ ಫ್ರೆಂಚರನ್ನು ಓಡಿಸಲು ಕುಮಾರನ್ನರು ಕೃತಸಂಕಲ್ಪರಾಗಿ ನೂರು ಮಂದಿ ಸ್ವಯಂ ಸೇವಕರನ್ನು ಕೂಡಿಕೊಂಡು ಕಳೆದ ವಾರ "ಸ್ವತಂತ್ರ"ವಾದ ನಲ್ಲತ್ತೂರು ಗ್ರಾಮದಿಂದ ಆಡಳಿತಾಧಿಕಾರಿಗಳ ಕಾರ್ಯಾಲಯಕ್ಕೆ ನಡೆದರು. ಅಲ್ಲಿ ಸಾರ್ವಜನಿಕ ಸಭೆಯೊಂದನ್ನು ನಡೆಸಿ, ಫ್ರೆಂಚರು ವಸಾಹತುಗಳನ್ನು ತೊರೆದು ಹೋಗಬೇಕೆಂದು ಪ್ರತಿಪಾದಿಸಿದರು. ಆಗ ಅನಿರೀಕ್ಷಿತವಾಗಿ ಮಾಹೆಯ ಫ್ರೆಂಚ್ ಆಡಳಿತಾಧಿಕಾರಿ ಮಾನ್ಸ್ಯರ್ ಡಿಚಾಂಪ್ಸರು ಸಭೆಯಲ್ಲಿ ಪ್ರವೇಶಿಸಿ, "ಮಾಹೆಯ ಅಧಿಕಾರವನ್ನು ನಿಮಗೆ ಒಪ್ಪಿಸುವ ಸಿದ್ಧತೆ ನಡೆಸಿದ್ದೇನೆ. ನಾನು ಇಲ್ಲಿ ಉಳಿದ ಫ್ರೆಂಚ ಪೋಲೀಸರನ್ನೂ ಅವರ ಶಸ್ತ್ರಾಸ್ತ್ರಗಳನ್ನೂ ಕೂಡಿಕೊಂಡು ಹೊರಟು ಹೋಗುತ್ತೇನೆ" ಎಂದು ತಿಳಿಸಿದರು; ಮತ್ತು ತಮ್ಮೊಡನೆ ವಿಚಾರ ವಿನಿಮಯ ನಡೆಸಲು ಜನತಾ ಧುರೀಣರನ್ನು ಬರಮಾಡಿಕೊಂಡರು.

ಅಧಿಕಾರದ ಹಸ್ತಾಂತರ

ಈ ಮಾತುಕತೆಗಳು ಫಲಪ್ರದವಾದವು: ಫ್ರೆಂಚ ಆಡಳಿತಾಧಿಕಾರಿಯು ತಮ್ಮ ಸರಕಾರದ ಆದೇಶಾನುಸಾರ ಮಾಹೆಯ ಆಡಳಿತವನ್ನು ಅಲ್ಲಿಯ ಧುರೀಣರಿಗೆ ನಿರಾಡಂಬರವಾಗಿ ನಡೆದ ಸಮಾರಂಭವೊಂದರಲ್ಲಿ ದಿನಾಂಕ ೧೬ರಂದು ಬಿಟ್ಟುಗೊಟ್ಟನು. ಇದರಿಂದಾಗಿ ೧೮ನೇ ಶತಮಾನದ ಕಾಲದಲ್ಲಿ ಫ್ರೆಂಚ ಹಾಗು ಇಂಗ್ಲೀಷರೊಡನೆ ನಡೆದ ಯುದ್ಧಗಳಲ್ಲಿ ಮಹತ್ವದ ಪಾತ್ರವನ್ನು ವಹಿಸಿದ್ದ ಮತ್ತು ಕಳೆದ ೨೩೦ ವರ್ಷಗಳಿಂದ ದಾಸ್ಯ ಕೂಪದಲ್ಲಿ ಹೊರಳುತಿದ್ದ ಮಾಹೆಯು ಜನತೆಯ ಅಧೀನವಾಯಿತು. ಅಧಿಕಾರ ಹಸ್ತಾಂತರದ ಕಾಲದಲ್ಲಿ ಗಲಭೆಯಾಗದಂತೆ ಮತ್ತು ಎಲ್ಲವೂ ಸುಸೂತ್ರವಾಗಿ ಸಾಗುವಂತೆ ನೋಡಿಕೊಳ್ಳಬೇಕೆಂದು ಫ್ರೆಂಚ ಅಧಿಕಾರಿಗಳು ಕೇಳಿಕೊಂಡ ಮೇರೆಗೆ ಮಲಬಾರಿನ ಕಲೆಕ್ಟರರು ಸಮಾರಂಭದಲ್ಲಿ ಕೆಲವು ಭಾರತೀಯ ಕಂದಾಯ ಅಧಿಕಾರಿಗಳೊಂದಿಗೆ ಉಪಸ್ಥಿತರಿದ್ದರು. ಭಾರತ ಸರಕಾರದ ವಿದೇಶ ಖಾತೆಯ ಕಾರ್ಯದರ್ಶಿ ಶ್ರೀ. ಆರ್. ಕೆ. ನೆಹರೂರವರು ಮದ್ರಾಸು ಸರಕಾರಕ್ಕೆ ಕಳಿಸಿದ ಆದೇಶದಲ್ಲಿ ಪೋಲೀಸು ಪಡೆಯನ್ನು ಕಲೆಕ್ಟರರು ಕರೆದುಕೊಂಡು ಹೋಗತಕ್ಕದ್ದಲ್ಲವೆಂದು ಸ್ಪಷ್ಟವಾಗಿ ವಿಧಿಸಿದ್ದರು. ವಸಾಹತುವಿನ ಸುತ್ತವಷ್ಟೇ ಪೋಲೀಸ ಕಾವಲನ್ನು ಇಟ್ಟಿದ್ದರು. ಫ್ರೆಂಚರು ವಸಾಹತನ್ನು ತ್ಯಜಿಸಿ ಹೋಗುವ ಸಂದರ್ಭದಲ್ಲಿ ನೆರೆದಿದ್ದ ೧೫೦೦೦ ಮಂದಿಯನ್ನು ಉದ್ದೇಶಿಸಿ ಮಾತನಾಡುತ್ತ ಮಾನ್ಸ್ಯರ್ ಡೀಚಾಂಪ್ಸರು ಮಾಹೆಯು ತ್ವರಿತದಲ್ಲಿಯೆ ಭಾರತ ಒಕ್ಕೂಟದಲ್ಲಿ ವಿಲೀನ ಹೊಂದಲೆಂದೂ ವಸಾಹತಿನ ಜನರಿಗೆ ಸುಖ ಶಾಂತಿಗಳು ಲಭಿಸಲೆಂದೂ ಹಾರೈಸಿದರು. ಮಹಾಜನ ಸಭೆಯ ಧುರೀಣ ಶ್ರೀ. ಐ. ಕೆ. ಕುಮಾರನ್ನರು ಮಾಹೆಯಲ್ಲಿ ಭಾರತದ ತ್ರಿವರ್ಣ ರಾಷ್ಟ್ರ ಧ್ವಜವನ್ನೇರಿಸಿ, ಭಾರತದೊಡನೆ ವಿಲೀನ ಹೊಂದುವುದೇ ತಮ್ಮ ನಿಜವಾದ ಧ್ಯೇಯವೆಂದು ಸಾರಿದ ಬಳಿಕ ಫ್ರೆಂಚ ಅಧಿಕಾರಿಗಳು ಮಾಹೆಯಿಂದ "ಗ್ರ್ಯಾಂಡ್ ವಿಲೆ" ಎಂಬ ಹಡಗವನ್ನೇರಿ ಪುದುಚೇರಿಗೆ ಹೊರಟರು. ಜನತಾ ಧುರೀಣ ಕುಮಾರನ್ನರು ತಾವು ಅಧ್ಯಕ್ಷರಾಗಿರುವ ೧೫ ಮಂದಿಯ ಆಡಳಿತಮಂಡಳವನ್ನು ರಚಿಸಿದರು. ಸರಕಾರದ ಕಾರ್ಯಾಲಯಗಳಿಗೆಲ್ಲ ಭೇಟಿ ಕೊಟ್ಟರು. ಅಧಿಕಾರದ ಹಸ್ತಾಂತರದಿಂದಾಗಿ ೧೯೩೮ರಲ್ಲಿ ತೊಡಗಿದ ಹೋರಾಟವು ಒಂದು ನಿಲುಗಡೆಗೆ ಬಂದಿತೆನ್ನಬಹುದು. ಜನರು ತಮಗಾದ ಸಂತೋಷವನ್ನು ವ್ಯಕ್ತಪಡಿಸಲು ಮನೆಗಳನ್ನೂ ಬೀದಿಗಳನ್ನೂ ತಳಿರು ತೋರಣಗಳಿಂದ ಶೃಂಗರಿಸಿದ್ದರು. ಭಾರತದ ರಾಷ್ಟ್ರಧ್ವಜಗಳು ಎಲ್ಲೆಡೆಯಲ್ಲೂ ಹಾರುತಿದ್ದವು. ಬಾಲಕರಿಗೆ ಮಿಠಾಯಿಗಳು ಹಂಚಲಾದವು. ಫ್ರೆಂಚರ ನಿರ್ಗಮನದಿಂದ ಮಾಹೆಯ ದಿಗ್ಬಂಧನವು ಹಿಂತೆಗೆದುಕೊಳ್ಳಲ್ಪಟ್ಟಿದ್ದು, ಮಾಹೆಯನ್ನು ಬಿಟ್ಟು ಹೋಗಿದ್ದ ನಾಗರಿಕರು ಈಗ ಮರಳುತಿದ್ದಾರೆ. ನಿತ್ಯೋಪಯೋಗದ ಅನೇಕ ವಸ್ತುಗಳು ಇಲ್ಲದಂತಾಗಿದ್ದ ಮಾಹೆಯಲ್ಲಿ ದಿನಾಂಕ ೧೯ರಂದು ಅನೇಕ ದಿನಗಳ ಬಳಿಕ ಜನರಿಗೆ ಚಹಾಪಾನ ಮಾಡುವುದಾಯಿತು. ಅಂದು ಸಿಗರೇಟುಗಳು ಪೇಟೆಯಲ್ಲಿ ಕಾಣಿಸಿಕೊಂಡಾಗ ಜನರೆಲ್ಲ ಅವಕ್ಕೆ ಮುಗಿಬಿದ್ದರು.

ಗಾಢವಾದ ಪರಿಣಾಮ

ಮಾಹೆಯನ್ನು ಫ್ರೆಂಚರು ಬಿಟ್ಟುಗೊಟ್ಟ ರೀತಿಯು ಭಾರತ ಸರಕಾರದ ನಿಲುವಿಯ ಮೇಲೆ ಪ್ರತಿಕೂಲ ಪರಿಣಾಮವನ್ನೇನೂ ಮಾಡಲಾರದು. ಮಾಹೆಯನ್ನು ಭಾರತದೊಡನೆ ವಿಲಯನಗೊಳಿಸುವ ಪ್ರಶ್ನೆಯು ಇತ್ಯರ್ಥವಾದಂತಾಗಲಿಲ್ಲವೆಂಬುದಂತೂ ಸ್ಪಷ್ಟವೇ ಇದೆ. ಪೇರಿಸಿನೊಡನೆ ಸಂಧಾನ ನಡೆಸಿಯೇ ಭಾರತ ಸರಕಾರವು ಪ್ರಶ್ನೆಯನ್ನು ಕೊನೆಯದಾಗಿ ನಿರ್ಣಯಿಸಬೇಕಾಗುತ್ತದೆ. ಅಲ್ಲಿಯ ವರೆಗೆ ಮಾಹೆಯು ಇತರ ವಿಮೋಚಿತ ಪ್ರದೇಶಗಳಂತೆ ಜನತಾ ಧುರೀಣರ ನೇತೃತ್ವದಲ್ಲಿಯೇ ದಿನಗಳೆಯುತ್ತದೆ. ಅಧಿಕಾರ ಹಸ್ತಾಂತರದ ಈ ನಾಟಕವು ಪರಿಸ್ಥಿತಿಯ ಒತ್ತಡದಿಂದ ನಡೆಯಬೇಕಾಯಿತೆಂದು ಹೇಳಿದರೆ ತಪ್ಪಾಗದು.

ಇದೀಗ ಹೊರಬಿದ್ದಿದೆ

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ.

ವಾಚನಾಲಯಗಳಿಗೆ ಅತ್ಯಗತ್ಯವಾದ್ದು.

ಬೆಲೆ: ಎರಡು ರುಪಾಯಿ.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಶಾಲಾ, ಕಾಲೇಜುಗಳಿಗೆ ನಾವು ಕೊಡುವ ಕಮಿಶನ್ ದರಕ್ಕೂ ಬರೆಯಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	... ..	ರೂ. 25,00,000
ಚಂದಾ ಆರ್ಜಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ	... ...	ರೂ. 10,50,000
ಠೇವಣಾತಿಗಳು	... ...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪ್ಯಾ 4 ಕೋಟಿ
ಒಟ್ಟು ಶಾಖೆಗಳು	... ..	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

ಆದರೆ ಇವರೊಳಗೇನಾದರೂ ಗತ್ತುಗಾರಿಕೆ ಇದೆಯೇ ಎಂಬುದು ಸೂಕ್ಷ್ಮವಾಗಿ ವಿಚಾರಿಸಬೇಕಾದ ಪ್ರಶ್ನೆ: ಈಗ ಮಾಹೆಯ ಅಧಿಕಾರವು ಜನತಾ ಧುರೀಣರ ಕೈಗೆ ಬಂದಿರುವುದರಿಂದ, ಭಾರತ ಸರಕಾರಕ್ಕೂ ಈ ಜನತಾ ಧುರೀಣರಿಗೂ ಘರ್ಷಣೆ ಸಂಭವಿಸದಿರದು—ಆಗ ಚಳವಳದ ಬೆಂಗೋಲೇ ಮುರಿಯುತ್ತದೆ ಎಂದು ಫ್ರೆಂಚರು ಭಾವಿಸಿದ್ದಾರೆಂದು ಹೇಳಲಾಗುತ್ತದೆ. ಇದು ಭಾರತ ಸರಕಾರದ ಲಕ್ಷ್ಯದಿಂದ ಮರೆಯಾಗಿಲ್ಲ—ಎಂತಲೇ ಅದು ತಾನು ತಪ್ಪುಗಾರನೆನಿಸುವ ಯಾವ ಹೆಜ್ಜೆಯನ್ನೂ ಮುಂದಿಡುವುದಿಲ್ಲವೆಂದು ನಿಶ್ಚಯಿಸಿರುತ್ತದೆ. ಮಾಹೆಯ ಜನತಾ ಧುರೀಣರಾದರೂ ಅಧಿಕಾರ ತಮ್ಮ ಕೈಗೆ ಬಂದ ಮಾತ್ರಕ್ಕೆ ತೃಪ್ತಿಹೊಂದದೆ, ಭಾರತದೊಡನೆ ವಿಲಯನ ಹೊಂದುವುದೇ ತಮ್ಮ ನಿಜವಾದ ಧ್ಯೇಯವೆಂದು ಸ್ಪಷ್ಟವಾಗಿ ಹೇಳಿದ್ದಾರೆ. ಇವೆರಡೂ ಶುಭ ಸೂಚನೆ.

ಇದೇನಿದ್ದರೂ ಮಾಹೆಯ ಪ್ರಕರಣದ ಪರಿಣಾಮವು ಪುದುಚೇರಿ ಮತ್ತು ಕಾರೈಕಲ್ಲುಗಳೆಂಬ ಫ್ರೆಂಚರ ಇನ್ನುಳಿದ ಎರಡು ವಸಾಹತು ಪ್ರದೇಶಗಳ ಮೇಲೆ ಗಾಢವಾಗಿಯೇ ಬಿದ್ದಿರುತ್ತದೆ. ಮಾಹೆಯ ಜನರಿಗೆ ಈ ಪ್ರದೇಶದಿಂದ ಅಭಿನಂದನೆಗಳ ಸುರಿಮಳೆಯಾಗಿದ್ದು, ವಿಲಯನಪರ ಚಳವಳವನ್ನು ಇನ್ನಷ್ಟು ಒತ್ತಡದಿಂದ ಸಾಗಿಸಲು ಅವರಿಗೆ ಮಾಹೆಯ ಘಟನೆಯು ಉತ್ತೇಜನವನ್ನು ಕೊಟ್ಟಂತೆ ತೋರುತ್ತದೆ. ಪುದುಚೇರಿಯ ಬಾಕೋರ್ ಎಂಬ ಗ್ರಾಮದಲ್ಲಿ ಸೇರಿದ ಸಭೆಯೊಂದರಲ್ಲಿ ಈ ಮಾಸಾಂತ್ಯದೊಳಗೆ ಫ್ರೆಂಚರು ಅಧಿಕಾರದ ಹಸ್ತಾಂತರಕ್ಕೆ ಮನಸ್ಸುಮಾಡದಿದ್ದರೆ, ಭಾರತೀಯ ಧ್ವಜವನ್ನು ಇಲ್ಲಿ ಅರಳಿಸುವುದೇ ನಿಶ್ಚಯವೆಂದು ಜನತಾ ಧುರೀಣರು ಸಾರಿದರು. ಕೇವಲ ಫ್ರೆಂಚ ವಸಾಹತುಗಳ ಜನರಷ್ಟೇ ಅಲ್ಲ—ಗೋವೆಯ ರಾಷ್ಟ್ರೀಯರೂ ಮಾಹೆಯ ಚಳವಳದಿಂದ ಸ್ಫೂರ್ತಿಗೊಂಡಿದ್ದಾರೆ. ಗೋಮಾಂತಕರ ಧುರೀಣರಾದ ಪೀಟರ ಅಳ್ವಾರಿಸರು ಮಾಹೆ ಮಹಾಜನ ಸಭೆಗೆ ಕಳಿಸಿದ ಒಂದು ತಂತಿಯಲ್ಲಿ ೧೫ ವರ್ಷಗಳ ಹಿಂದೆ ಪ್ರಾರಂಭಿಸಲ್ಪಟ್ಟ ಸ್ವಾತಂತ್ರ್ಯ ಹೋರಾಟದಲ್ಲಿ ಜಯಶೀಲರಾದುದಕ್ಕೆ ಅಭಿನಂದನೆಗಳನ್ನು ಅರ್ಪಿಸಿದ್ದಲ್ಲದೆ, ಪೋರ್ಚುಗೀಜರ ವಿರುದ್ಧ ಗೋಮಾಂತಕರು ಹೂಡಿರುವ ಹೋರಾಟಕ್ಕೆ ಇದು ಸ್ಫೂರ್ತಿ ಕೊಡುತ್ತದೆಂದು ಅಭಿಪ್ರಾಯಪಟ್ಟರು. ತಾವು ಸಹ ದಾಸ್ಯವನ್ನು ಬಿಟ್ಟುಗೊಟ್ಟು ಬೇಗನೇ ವಿಮುಕ್ತರಾಗುವ ಕ್ರಮವನ್ನು ತೆಗೆದುಕೊಳ್ಳುವುದಾಗಿ ಹೇಳಿದರು.

ಗೋಮಾಂತಕರ ಚಳವಳಿ

ಗಡಿಯಾಚೆಗೆ ಕಠಿಣ ಪ್ರಸಂಗವು ಉಂಟಾದಲ್ಲಿ ಅದನ್ನು ಯಶಸ್ವಿಯಾಗಿ ಪ್ರತಿಭಟಿಸಲು ಸೈನಿಕರನ್ನು ಸಜ್ಜುಗೊಳಿಸುವುದರಲ್ಲಿ ಗೋವೆಯ ಸರಕಾರ ಆಸ್ಥೆಯನ್ನು ವಹಿಸುತ್ತಿದೆ. ಭಾರತದ ನಿಲುವೆಯನ್ನು ಮನವರಿಕೆಮಾಡಿಕೊಂಡ ಯಾರಿಗೇ ಆದರೂ ಗೋವೆಯ ಮೇಲೆ ದಾಳಿಯಾಗುವ ಸಂಭವ ಹುಚ್ಚು ಕಲ್ಪನೆಯೆಂದು ಸ್ಪಷ್ಟವಾಗುತ್ತದೆ. ಇಂಥದರಲ್ಲಿ—ಪೋರ್ಚುಗೀಜ ಸರಕಾರ ಯುದ್ಧ ಸಿದ್ಧತೆ ನಡೆಸುತ್ತಿರುವುದರ ಔಚಿತ್ಯ ಗೊತ್ತಾಗುವುದಿಲ್ಲ. ಸರಕಾರದ ವರಿಷ್ಠರು ಕೈಕೆಳಗಿನ ಅಧಿಕಾರಿಗಳ ಪ್ರಾಮಾಣಿಕತೆಯನ್ನು ಸಂದೇಹ ದೃಷ್ಟಿಯಿಂದ ನೋಡುತಿದ್ದಾರೆಂದು ಹೇಳಲಾಗುತ್ತದೆ. ಜನತಾ ಚಳವಳದೊಡನೆ ಅವರು ಸೇರಿಕೊಳ್ಳದಂತೆ ಹೆಚ್ಚು ಸಂಬಳ ಮತ್ತು ಭಡ್ತಿಯ ಆಮಿಷ ತೋರಿಸಲಾಗುತ್ತಿದೆಯೆಂದೂ ತಿಳಿದು ಬರುತ್ತದೆ. ಅಧಿಕಾರಿಗಳು ನೀತಿಗೆಡದಂತೆ ಪ್ರತಿದಿನ ಅವರ ಸಭೆಯನ್ನು ಗವರ್ನರ ಜನರಲರು ಸೇರಿಸುತಿದ್ದಾರೆ! ಹೀಗಿದ್ದರೂ ಭಾರತ ಸ್ವಾತಂತ್ರ್ಯ ದಿನವಾದ ಆಗೋಸ್ತು ೧೫ರಂದು ಭಾರತದಲ್ಲಿ ವಾಸಿಸುವ ಗೋಮಾಂತಕರ ಸ್ವಯಂ ಸೇವಕರ ತಂಡವೊಂದು ಗೋವೆಯಲ್ಲಿ ನುಗ್ಗಿ ವಿಮೋಚನ ಸತ್ಯಾಗ್ರಹವನ್ನು ನಡೆಸುವುದು. ಲಿಸ್ಬನದಲ್ಲಿ ಪೋರ್ಚುಗೀಜರ ಕೈಯಲ್ಲಿ ಸ್ಥಾನ ಬದ್ಧತೆಯಲ್ಲಿದ್ದು ತಪ್ಪಿಸಿಕೊಂಡು ಬಂದಿರುವ ಶ್ರೀ. ಟಿ. ಬಿ. ಕುನ್ಹಾರು ಈ ಬಗ್ಗೆ ನೇಮಿಸಲಾದ ಕ್ರಿಯಾ ಸಮಿತಿಯ ಅಧ್ಯಕ್ಷರಾಗಿದ್ದು ಆಜಾದ ಗೋವಾ ದಳವೆಂದು ಹೆಸರಿಸಲಾದ ಸ್ವಯಂ ಸೇವಕ ತಂಡಕ್ಕೆ ಸದಸ್ಯರನ್ನು ಸೇರಿಸುವುದರಲ್ಲಿ ತೊಡಗಿದ್ದಾರೆ. ಗೋವೆಯ ಗಡಿಗೆ ಸ್ವಯಂ ಸೇವಕರನ್ನು ಕರೆದುಕೊಂಡು ಹೋಗಿ, ಅಲ್ಲಿ ಮಹಾತ್ಮಾಗಾಂಧೀಯವರು ಹಾಕಿಕೊಟ್ಟ ತತ್ವವನ್ನನುಸರಿಸಿ ಅಹಿಂಸಾತ್ಮಕ ಸತ್ಯಾಗ್ರಹವನ್ನು ತೊಡಗಲಾಗುವುದೆಂದೂ ಸ್ವಯಂಸೇವಕರು ಸ್ಥಳೀಯ ಜನರೊಡನೆ ಕೂಡಿ ಸತ್ಯಾಗ್ರಹ ಕ್ಷೇತ್ರವನ್ನು ವಿಸ್ತರಿಸುವರೆಂದೂ ಆಡಳಿತವನ್ನು ಸ್ಥಗಿತಗೊಳಿಸುವರೆಂದೂ ಹೇಳಲಾಗುತ್ತದೆ. ಪ್ರಜಾ ಸಮಾಜವಾದಿ ಧುರೀಣರಾದ ಶ್ರೀ ಗೋರೆಯವರು ಗೋವೆಯ ವಿಮೋಚನೆಗಾಗಿ ಮಹಾರಾಷ್ಟ್ರದಲ್ಲಿ ಸ್ವಂತ ದಳವನ್ನು ಸಂಘಟಿಸುವುದರಲ್ಲಿ ತೊಡಗಿದ್ದು, ಸತ್ಯಾಗ್ರಹಕ್ಕೆ ಭಾಗವಹಿಸಲು ಬಯಸುವ ಪ್ರತಿಯೊಬ್ಬರಿಗೂ ಅದರಲ್ಲಿ ಪ್ರವೇಶ ದೊರಕುತ್ತದೆ.

ಕಾಲುವೆ ನೀರಿನ ಕುರಿತು ಭಾರತದ ಮೇಲೆ ಆರೋಪ

ಅಜಮೀರದ ಎ. ಐ. ಸಿ. ಸಿ. ಅಧಿವೇಶನದ ಮುಂದಿರುವ ವಿಷಯಗಳು

ಭಾಕ್ರಾ ನಾಂಗಲ ಕಾಲುವೆಗಳನ್ನು ತೆರೆದುದರಿಂದ ಪಾಕಿಸ್ತಾನವು ತುಂಬ ರೊಚ್ಚಿಗೆದ್ದು ಆಕ್ರೋಶವನ್ನು ಮಾಡತೊಡಗಿರುವುದು. ಭಾರತದ ಮೇಲೆ ಪಾಕಿಸ್ತಾನವು ಆರೋಪಗಳ ಸರಮಾಲೆಯನ್ನು ಹೊರಿಸುತ್ತ ಇದರಿಂದ ತಮ್ಮ ದೇಶದ ಐವತ್ತು ಲಕ್ಷ ಎಕ್ರೆ ಜಮೀನು ಮರಳುಗಾಡಾಗುವುದೆಂದೂ ಆಹಾರ ಧಾನ್ಯಗಳ ಉತ್ಪಾದನೆಯು ಮೂರರಲ್ಲಿ ಒಂದಂಶ ತಗ್ಗುವುದೆಂದೂ ಪಶ್ಚಿಮ ಪಂಜಾಬ ಮತ್ತು ಭವಾಲಪುರಗಳಲ್ಲಿ ಕೃಷಿ ನಿರತರಾದ ಒಂದೂವರೆ ಕೋಟಿ ಪಾಕಿಸ್ತಾನದ ನಾಗರಿಕರು ನಿರುದ್ಯೋಗಿಗಳಾಗುವರೆಂದೂ ತತ್ಪರಿಣಾಮವಾಗಿ ಪಾಕಿಸ್ತಾನದ ಪ್ರಗತಿಯು ಹಿಂದೆ ಬೀಳುವುದೆಂದೂ ವಾದಿಸುತ್ತದೆ. ಆದರೆ ಭಾರತದ ವಕ್ತಾರರು ಈ ಮಾತುಗಳಲ್ಲಿ ಸತ್ಯಾಂಶವೇನೂ ಇಲ್ಲವೆಂದು ಸ್ಪಷ್ಟಗೊಳಿಸಿದ್ದಾರೆ. ಭಾಕ್ರಾನಾಂಗಲ ಕಾಲುವೆಯಿಂದ ಮುಂಗಾರಿನ ವೇಳೆಯಲ್ಲಿ ಮಾತ್ರ ಈಗ ನೀರು ಬಿಡಲಾಗುತ್ತದೆ. ಇದರಿಂದ ಪಾಕಿಸ್ತಾನಕ್ಕೆ ಸಟ್ಲೆಜನದಿ ಪೂರೈಸುವ ನೀರಿನಲ್ಲಿ ನೂರಕ್ಕೆ ಹತ್ತರಷ್ಟು ಮಾತ್ರ ಕಡಮೆಯಾಗುತ್ತದೆ. ಪರಿಣಾಮವಾಗಿ ಸಟ್ಲೆಜದಿಂದ ಈಗ ನೀರುಣ್ಣುವ ಭೂಮಿಯಲ್ಲಿ ಒಂದೂವರೆ ಲಕ್ಷ ಎಕ್ರೆಯಷ್ಟು ಪಾಕಿಸ್ತಾನೀ ಜಮೀನು ಶುಷ್ಕವಾದೀತು ಮತ್ತು ಪಾಕಿಸ್ತಾನದ ಒಟ್ಟು ಉತ್ಪಾದನೆಯಲ್ಲಿ ನೂರಕ್ಕೆ ಒಂದರಷ್ಟು ಮಾತ್ರ ಆಹಾರ ಧಾನ್ಯಗಳ ಬೆಳೆ ಕಡಿಮೆಯಾದೀತು. ಆದರೆ ವಾಸ್ತವದಲ್ಲಿ ಹೀಗಾಗುವುದಿಲ್ಲ—ಏಕೆಂದರೆ, ಸುಲೈಮಂಕಿ ಮತ್ತು ಬ್ಯಾಲೋಕಿ ಕಾಲುವೆಗಳನ್ನು ಪಾಕಿಸ್ತಾನವು ರಚಿಸಿಕೊಂಡಿದ್ದು ಅದು ತನ್ನ ಕೊರತೆಯನ್ನು ಬೇಕಾದ ಹಾಗೆ ತುಂಬಿಕೊಳ್ಳಬಲ್ಲುದು.

ಅಂಕೆ ಸಂಖ್ಯೆ ಇಲ್ಲದ ಆಕ್ರೋಶ

ಇದರಿಂದ ಭಾರತವು ಯಾವುದೇ ತರದ ಅನ್ಯಾಯವನ್ನು ಮಾಡಿಲ್ಲವೆಂದು ಗೊತ್ತಾಗುತ್ತದೆ. ಆದರೂ ಪಾಕಿಸ್ತಾನದ ಪ್ರಧಾನಿ ಮಹಮ್ಮದ ಅಲಿಯವರು ದುರುದ್ದೇಶದಿಂದ ಕೂಡಿದ ಅಪಪ್ರಚಾರ ಮಾಡುವುದನ್ನು ಬಿಟ್ಟುಗೊಟ್ಟಿಲ್ಲ. ಸುದ್ದಿಗಾರರ ಸಭೆಯಲ್ಲಿ ಅವರು ಕಳೆದ ವಾರ ಮಾತನಾಡುತ್ತಾ ಜಾಗತಿಕ ಬೇಂಕು ಕಾಲುವೆ ನೀರಿನ ತಂಟೆಯನ್ನು ಅಪೂರ್ಣ ಅಂಕೆ ಸಂಖ್ಯೆಗಳ ಆಧಾರದ ಮೇಲೆ ಬಿಡಿಸಲು ಯತ್ನಿಸಿದೆಯೆಂದು ದೂರಿದರು. ಈ ವಿಷಯವನ್ನು ಪುನಃ ಪರಿಶೀಲಕ ಮಂಡಳಕ್ಕೆ ಒಪ್ಪಿಸಬೇಕೆಂದು ತಮ್ಮ ಸರಕಾರ ಹೇಳಿರುವುದಾಗಿ ನುಡಿದರು. ಕಾಲುವೆ ನೀರಿನ ಪ್ರಶ್ನೆಯು ತಮ್ಮ ದೇಶಕ್ಕೆ ಗಂಡಾಂತರ ಪ್ರಾಯವಾದ ಮಹತ್ವದ ವಿಷಯವೆಂದು ಸಾರಿದರು. ಆರು ಘಟಿಗಳ ಸುದೀರ್ಘ ಹೇಳಿಕೆಯಲ್ಲಿ ಅವರು ಭಾರತವನ್ನೂ ಜಾಗತಿಕ ಬೇಂಕನ್ನೂ ಕೂಡಿಯೇ ಬಯ್ದರು. ಆಗ ಸುದ್ದಿಗಾರರು "ಮಹನೀಯರೇ, ನಿಮ್ಮ ಅಂಕೆ ಸಂಖ್ಯೆಗಳು ಕಾಣುವುದಿಲ್ಲವಲ್ಲ!" ಎಂದು ಪ್ರಶ್ನಿಸಲು, ಅವುಗಳನ್ನು ತರಲು ತಮ್ಮ ಬಳಿಯಲ್ಲಿದ್ದ ಆಪ್ತ ಕಾರ್ಯದರ್ಶಿ ಮುಂತಾದವರನ್ನು ಕಾರ್ಯಾಲಯಕ್ಕೆ ಓಡಿಸಿದರು. ಆದರೆ ಅವರೆಲ್ಲರೂ ಬರಿಗೈಯಿಂದ ಮರಳಿದರು. ಹೀಗೆ ಮಹಮ್ಮದ ಅಲಿಯವರೊಡನೆ ನಿಶ್ಚಿತ ಅಂಕೆಸಂಖ್ಯೆಗಳಿಲ್ಲವೆಂದು ಸ್ಪಷ್ಟವಾಯಿತು. "ಗಣಿತದಲ್ಲಿ ಮುಸಲ್ಮಾನರಿಗೆ ಪಾಂಡಿತ್ಯವಿಲ್ಲ" ಎಂದೊಬ್ಬ ಸರಕಾರೀ ವಕ್ತಾರರು ಸುದ್ದಿಗಾರರ ಮುಂದೆ ಒಪ್ಪಿಕೊಂಡರು: ಅರ್ಥಾತ್ ಬಾಯಿಬಡಕತನವೇ ಅವರ ನಿಲುವೆಯ ಸರ್ವಸ್ವ!

ಮೊಲೆಂಕೋವ-ನೆಹರೂ ಭೇಟಿ

ಪಾಕಿಸ್ತಾನವು ಭಾರತದ ಪ್ರತಿಷ್ಠೆಗೆ ಮಸಿ ಹಚ್ಚುವುದಕ್ಕಾಗಿಯೇ ಇಂತಹ ಕಿರುಕುಳವನ್ನು ಉಂಟುಮಾಡುತ್ತಿದೆಯೆನ್ನಬಹುದು. ಆದರೆ ಲೋಕಕ್ಕೆ ಭಾರತದ ನಿಲುವೆ ನ್ಯಾಯವಾದುದೆಂದೂ ಅದರ ಮುತ್ಸದ್ದಿಗಳು ಪ್ರಾಮಾಣಿಕರೆಂದೂ ತಿಳಿದಿರುತ್ತದೆ. ಎಂತಲೇ ರಶಿಯಾದ ಪ್ರಧಾನ ಮಂತ್ರಿ ಮೊಲೆಂಕೋವರು ಸಹ ನೆಹರೂರನ್ನು ಕಂಡು ಮಾತನಾಡುವಮನಸು ವ್ಯಕ್ತಗೊಳಿಸಿದರು. ಶಾಂತಿ ಪಾರಿತೋಷಕವನ್ನು ಪಡೆಯಲೆಂದು ಮಾಸ್ಕೋಗೆ ಹೋದ ಭಾರತದ ಡಾ॥ ಕಿಚಲೂರನ್ನು ಮೊಲೆಂಕೋವರು ತಮ್ಮ ಹಳ್ಳಿಯಮನೆಯಲ್ಲಿ ಬರಮಾಡಿಕೊಂಡಾಗ ಚೀನಮತ್ತು ಭಾರತದ ಪ್ರಧಾನಿಗಳು ಪರಸ್ಪರ ಅಂಗೀಕರಿಸಿದ ಪಂಚಸೂತ್ರಗಳ ತಳಹದಿಯ ಮೇಲೆ ರಶಿಯಾ—ಭಾರತ ಸಂಬಂಧ ಬೆಳೆದು ಬರುವುದನ್ನು ಅವರು ಸ್ವಾಗತಿಸಿದರು; ಮತ್ತು ಚೀನೀ ಪ್ರಜಾರಾಜ್ಯದ ಅಧ್ಯಕ್ಷ ಮಾವೋ ಹಾಗು ಭಾರತದ ನೆಹರೂರೊಡನೆ ಸಮಾಲೋಚನೆ ನಡೆಸಲು ತಾವು ಆತುರರಿರುವುದಾಗಿ ತಿಳಿಸಿದರು. ರಶಿಯಾ—ಭಾರತಗಳ ನಡುವೆ ವ್ಯಾಪಾರ ವ್ಯವಹಾರವು ಬೆಳೆದು ಬರಬೇಕೆಂದೂ ಅವರು ಆಶಿಸಿದರು. ಹೀಗಿರುವಾಗ ನೆಹರೂರವರು ಬರ್ಮಾ ಹಾಗು ಇಂಡೋನೇಶಿಯಾದ ಪ್ರಧಾನ ಮಂತ್ರಿಗಳ ಜೊತೆಗೆ ಸಪ್ಟೆಂಬರ ಅಥವಾ ಅಕ್ಟೋಬರ ತಿಂಗಳಲ್ಲಿ ಚೀನವನ್ನು ಸಂದರ್ಶಿಸುವುದಾಗಿ ಬರ್ಮಿ ಪತ್ರಿಕೆಯ ವರದಿಯೊಂದು ಹೇಳುತ್ತದೆ.

ಪತ್ರಿಕಾ ಆಯೋಗದ ವರದಿ

ನಮ್ಮ ದೇಶದಲ್ಲಿರುವ ಪತ್ರಿಕೆಗಳ ಸ್ಥಿತಿಗತಿ, ಅವುಗಳ ಬೆಳವಣಿಗೆಯ ವಿಧಾನ, ಪತ್ರಿಕೋದ್ಯೋಗಿಗಳ ನೌಕರಿಯ ಪರಿಸ್ಥಿತಿ, ಪತ್ರಿಕೆಗಳ ಮಟ್ಟ ಕಾಯ್ದುಕೊಳ್ಳುವುದು, ಪತ್ರಿಕಾ ಸ್ವಾತಂತ್ರ್ಯ ಮುಂತಾದ ಮಹತ್ವದ ವಿಷಯಗಳನ್ನು

(೭ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ನ ವ ಯು ಗ

ಉಡುಪಿ, ಗುರುವಾರ ೨೨-೭-'೫೪

ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹ

ಮುಂಬಯಿಯಲ್ಲಿ ಈ ವಾರ ತೆರೆಯಲಾದ ಖಾದಿ-ಗ್ರಾಮೋದ್ಯೋಗ ಭವನವನ್ನು ಶ್ರೀ ವೈಕುಂಠಲಾಲ ಮೆಹತಾರು "ರಾಷ್ಟ್ರೀಯ ಆರ್ಥಿಕ ರಚನೆಯನ್ನು ಕಾರ್ಯಕಾರಿಯಾಗಿಸುವುದರಲ್ಲಿ ಮಹತ್ವದ ಹೆಜ್ಜೆ" ಎಂದೇನೊ ವರ್ಣಿಸಿದರು. ಇದರ ಉದ್ಘಾಟನೆಯನ್ನು ನೆರವೇರಿಸಿದ ಶ್ರೀ ಮುರಾರಜಿ ದೇಸಾಯರು ಜನತೆಯು ಖಾದಿ ಮತ್ತು ಗ್ರಾಮೋದ್ಯೋಗಗಳಿಗೆ ಕೊಡಬೇಕಾದ ಪ್ರೋತ್ಸಾಹವನ್ನು ಕುರಿತು ಸುದೀರ್ಘ ಭಾಷಣ ಮಾಡಿದರು. ಸ್ವಾತಂತ್ರ್ಯಾಂದೋಲನ ಕಾಲದಲ್ಲಿ ವಿದೇಶೀ ವಸ್ತ್ರಗಳಿಗೆ ಭಾರತೀಯರು ಮಹಾತ್ಮಾ ಗಾಂಧೀಜಿಯವರ ನೇತೃತ್ವದಲ್ಲಿ ಬಹಿಷ್ಕಾರವನ್ನು ಹಾಕಿದ್ದರು; ಪಿಕೆಟಿಂಗು ನಡೆಸಿ, ಬಂಧನಕ್ಕೂ ಗುರಿಯಾಗಿದ್ದರು. ಆಗ ನಮ್ಮಲ್ಲಿ ತುಂಬಿ ತುಳುಕುತಿದ್ದ ಸ್ವಾಭಿಮಾನವೂ ರಾಷ್ಟ್ರನಿಷ್ಠೆಯೂ ಈಗ—ಸ್ವಾತಂತ್ರ್ಯೋತ್ತರದಲ್ಲಿ— ದಿನೇ ದಿನೇ ಕ್ಷೀಣಿಸುತ್ತಾ ನಶಿಸುತ್ತಿರುವುದು ಘಾತಕವಾದ ವಿಷಯ, ಎಂದು ಗತವೈಭವವನ್ನು ಕೊಂಡಾಡುತ್ತಾ ಇಂದಿನ ಪರಿಸ್ಥಿತಿಯನ್ನು ಹಳಿಯುತ್ತಾ ನಾವು ಕೂಡಿದರೆ ಸಾಲದು. ಖಾದಿಯಾಗಲೀ ಇತರ ಗ್ರಾಮೋದ್ಯೋಗಗಳಾಗಲೀ ಜನತೆಗೆ ಆಕರ್ಷಕವಾಗುವಂತೆ ಸರಕಾರೀ ಹಾಗು ಖಾಸಗಿ ಮಟ್ಟದಲ್ಲಿ ಹೆಚ್ಚಿನ ಪ್ರಯತ್ನಗಳು ನಡೆಯುವುದು ಅಗತ್ಯವಾಗಿದೆ. ಪ್ರಕೃತ ಗ್ರಾಮೋದ್ಯೋಗಗಳನ್ನು ರಕ್ಷಿಸುವ ಹೊಣೆ ಎಲ್ಲವೂ ಸರಕಾರದ ಮೇಲೆಯೇ ಬಿದ್ದಿರುವಂತೆ ಭಾಸವಾಗುತ್ತದೆ. ಲಕ್ಷಾಂತರ ರೂಪಾಯಿಗಳ ಸಹಾಯವನ್ನು ಕೊಡುವ ಮೂಲಕ ಹಾಗು ದೇಶವಿದೇಶಗಳಲ್ಲಿ ಹೊಸ ಹೊಸ ಪೇಟೆಗಳನ್ನು ರಚಿಸಿಕೊಳ್ಳುವುದಕ್ಕೆ ಪ್ರಯತ್ನಿಸಿ ಸರಕಾರವು ಕೋಟ್ಯಾಂತರ ಮಂದಿಯ ಜೀವನಾಧಾರದ ಸಾಧನವಾದ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಊರ್ಜಿತವಾಗಿಡಲು ಸಾಹಸಪಡುತ್ತದೆ. ಮುಂಬಯಿಯಲ್ಲಿ ಈ ವಾರ ತೆರೆಯಲಾದ "ಭವನ"ವಾಗಲೀ ಕಳೆದ ವಾರ ಮದ್ರಾಸಿನಲ್ಲಿ ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ಉದ್ಘಾಟಿಸಿದ "ಎಂಪೋರಿಯಂ" ಆಗಲೀ ಖಾದಿ ಮತ್ತು ಗ್ರಾಮೋದ್ಯೋಗಗಳನ್ನು ಜನಪ್ರಿಯಗೊಳಿಸುವ ಪ್ರಾಮಾಣಿಕ ಪ್ರಯತ್ನವೆಂದೆನ್ನಬಹುದು. ಈ ಪ್ರದರ್ಶನ ವ್ಯವಸ್ಥೆಯು ಜನರ ಮನೋರಂಜನೆಯನ್ನಷ್ಟೇ ಉದ್ದೇಶವಾಗಿಟ್ಟುಕೊಂಡಿಲ್ಲ— ನಮ್ಮ ದೇಶದಲ್ಲಿ ಕುಶಲ ವಿದ್ಯೆಗಳು ಯಾವ ಪ್ರಕಾರವಾಗಿ ಇನ್ನೂ ಜೀವ ಹಿಡಿದುಕೊಂಡಿವೆಯೆಂಬುದನ್ನು ಈ ಪ್ರದರ್ಶನ ವ್ಯವಸ್ಥೆ ಪ್ರಕಟಪಡಿಸುವುದಲ್ಲದೆ, ಸಾಕಷ್ಟು ಪ್ರೋತ್ಸಾಹವು ದೊರೆತ ಪಕ್ಷದಲ್ಲಿ ಗ್ರಾಮಾಂತರ ಪ್ರದೇಶದಲ್ಲಿರುವ ನಮ್ಮ ಕೆಲಸಗಾರರು ಎಷ್ಟು ರೋಮಾಂಚಕವಾದ ಸೂಕ್ಷ್ಮ ಸರಕುಗಳನ್ನು ತಯಾರಿಸಬಲ್ಲರೆಂಬುದನ್ನೂ ತೋರಿಸಿ ಕೊಡುತ್ತದೆ. ದಂತ, ಕೊಂಬು, ಕಟ್ಟಿಗೆ, ಬೆತ್ತ, ಬಿದಿರು ಮುಂತಾದ ವಸ್ತುಗಳನ್ನು ಉಪಯೋಗಿಸಿ, ನಿತ್ಯೋಪಯೋಗಕ್ಕೆ ಉಪಯುಕ್ತವಾದ ಸರಕುಗಳನ್ನು ನಮ್ಮ ಕುಶಲ ಕೆಲಸಗಾರರು ಸಿದ್ಧಪಡಿಸುತ್ತಾರೆ. ಜಪಾನು ಮುಂತಾದ ದೇಶಗಳಲ್ಲಿ ಗುಡಿಕೈಗಾರಿಕೆಗಳು ಉತ್ಪಾದಿಸಿದ ಸಾಮಾನುಗಳು ಇಲ್ಲದ ಮನೆಯೇ ಕಾಣಿಸುವುದಿಲ್ಲ. ಕೇವಲ ಅಲಂಕಾರ ಅಥವಾ ಶೃಂಗಾರ ಸಾಧನವೆಂದಷ್ಟೇ ಅಲ್ಲ—ಕಲಾತ್ಮಕ ಸೃಷ್ಟಿಯನ್ನು ಹೊರ ಹೊಮ್ಮುತ್ತವೆಂಬ ಉದಾತ್ತ ಭಾವನೆಯಿಂದಲೂ ನಾವು ಈ ಸರಕುಗಳನ್ನು ಕೊಂಡುಕೊಂಡು ಪುನರುಜ್ಜೀವನ ಕಾರ್ಯದಲ್ಲಿ ನೆರವಾಗಬೇಕಾದದ್ದು ಕರ್ತವ್ಯ. ಜನತೆಯು ಈ ಪ್ರಕಾರ ಔದಾರ್ಯವನ್ನು ತೋರಿಸದೆ ಹೋದಲ್ಲಿ, ಸರಕಾರದವರು ಎಷ್ಟೇ ಹೆಚ್ಚು ಸಹಾಯಧನವನ್ನು ಕೊಟ್ಟರೂ ಗ್ರಾಮೋದ್ಯೋಗಗಳು ಬಹುಕಾಲ ಬಾಳುವಂತಿಲ್ಲ: ಏಕೆಂದರೆ, ಸರಕಾರದ ನೆರವಿಗೆ ಪರಮಾವಧಿ ಮಿತಿಯೊಂದು ಇದ್ದೇ ಇರುತ್ತದೆ. ಜನತೆಯಲ್ಲಿ ಗ್ರಾಮೋದ್ಯೋಗಗಳ ಕಡೆಗೆ ಅಭಿರುಚಿ ಹೆಚ್ಚುವಂತೆ ಮಾಡಲು ಮನೆಯ ಮಹಿಳೆಯರಿಗೆ ಸಾಧ್ಯವುಂಟೆಂದು ಶ್ರೀ. ಕೃಷ್ಣಮಾಚಾರಿಯವರ ಅಭಿಪ್ರಾಯ. ಇದರಲ್ಲಿ ಬಹಳಷ್ಟು ಸತ್ಯ ಅಡಗಿದೆಯೆಂದು ಹೇಳಬಹುದು. ಏಕೆಂದರೆ ಗೃಹಕೃತ್ಯವನ್ನು ಸಾಗಿಸಿಕೊಂಡು ಹೋಗುವಾಕೆಯೇ ಮನೆಯಲ್ಲಿ ನಿತ್ಯೋಪಯೋಗಕ್ಕೆ ಬಳಸುವ ವಸ್ತುಗಳ ಆಯ್ಕೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಾಳೆ. ಆದುದರಿಂದ ಮಹಿಳೆಯರು ಇಂತಹ ಪ್ರದರ್ಶನಗಳನ್ನು ಹೆಚ್ಚು ಹೆಚ್ಚಾಗಿ ಸಂದರ್ಶಿಸಿ, ತಮ್ಮ ಅಭಿರುಚಿಯ ವೈಶಿಷ್ಟ್ಯವೇನೆಂಬುದನ್ನು ತೋರಿಸಿಕೊಡಬೇಕು. ಹೀಗೆ ಜನತೆಯು ಯಾವ ಪ್ರಕಾರದ ಸರಕುಗಳನ್ನು ಹೆಚ್ಚು ಪ್ರೀತಿಯಿಂದ ಕಾಣುವುದೆಂದು ಸ್ಪಷ್ಟಗೊಂಡರೆ, ಆಗ ವ್ಯಾಪಾರಿಗಳು ಅವುಗಳಿಗೋಸ್ಕರ ಆರ್ಡರುಗಳನ್ನು ಕೊಟ್ಟು ಕುಶಲ ಕೆಲಸಗಾರರಿಂದ ಸಿದ್ಧ ಸರಕುಗಳನ್ನು ತರಿಸಲೂ ವಿತರಿಸಲೂ ಅನುಕೂಲವಾಗುತ್ತದೆ. ಈಗಿರುವಂತೆ, ಕುಶಲ ಕೆಲಸಗಾರರು ಪರಂಪರಾಗತವಾಗಿ ಬಂದ ವೃತ್ತಿಯನ್ನೆ ಅವಲಂಬಿಸುತಿದ್ದಾರೆ; ಅದೇ ಹಳೆಯ ಪದ್ಧತಿಯನ್ನೂ ಅನುಸರಿಸುತಿದ್ದಾರೆ. ಕಾಲದ ಬದಲಾವಣೆಯೊಂದಿಗೆ ಮತ್ತು ಪರಿವರ್ತನೆ ಹೊಂದಿದ ಅಭಿರುಚಿಗಳೊಂದಿಗೆ ಅವರಿಗೆ ಹೊಂದಾಣಿಕೆ ಸ್ಥಾಪಿಸಿಕೊಳ್ಳುವುದು ಕಷ್ಟಸಾಧ್ಯವಾಗಿದೆ. ಹೀಗಾಗಿ ಅವರ ಶ್ರಮದ ಪ್ರಮಾಣ ಹೆಚ್ಚುತ್ತಿದೆಯೇ ಹೊರತು ಅಷ್ಟು ಹಣವನ್ನು ಕೊಟ್ಟು ಸರಕುಗಳನ್ನು ಕೊಂಡುಕೊಳ್ಳಬಲ್ಲ ಆಢ್ಯರಾಗಲೀ ಆ ಸರಕುಗಳನ್ನು ಮೆಚ್ಚಬಲ್ಲ ಅಭಿರುಚಿಯವರಾಗಲೀ ಅಪೇಕ್ಷಿತ ಪ್ರಮಾಣದಲ್ಲಿ ತೋರಿಬರುತ್ತಿಲ್ಲ. ಕುಶಲ ಕೆಲಸಗಾರರು ಕೇವಲ ವಿಲಾಸದ ವಸ್ತುಗಳನ್ನು ಮಾತ್ರ ತಯಾರಿಸುತಿದ್ದರೆ ಬದುಕಲಾರರು—ಶ್ರೀಮಂತರಿಗಿಂತಲೂ ಮಧ್ಯಮ ವರ್ಗದ ಜನರ ಕೈಯುಳವಿಗೆ ಬರುವ ಹಾಗು ಇಂದಿನ ಸುಸ್ನಾರಿತ ಮನೋಭೂಮಿಕೆಗೆ ಒಪ್ಪುವ ರೀತಿಯಲ್ಲಿ ಅಗ್ಗವಾಗಿಯೂ ನಾಜೂಕಾಗಿಯೂ ಸರಕುಗಳನ್ನು ಸಿದ್ಧಗೊಳಿಸುವುದು ಅಪೇಕ್ಷಣೀಯ. ಪೇಟೆಯಲ್ಲಿ ಯಂತ್ರಗಳಿಂದ ಉತ್ಪಾದಿತವಾದ ಸರಕುಗಳಿಗಿಂತ ಕುಶಲ ಕೈಗಾರಿಕೆಯ ವಸ್ತುಗಳ ಬೆಲೆ ವಿಪರೀತ ಹೆಚ್ಚಿದ್ದರೆ, ಜನಸಾಮಾನ್ಯರು ಎಷ್ಟೇ ಆಸೆ ಅಭಿರುಚಿಗಳಿದ್ದರೂ, ಅವುಗಳನ್ನು ಖರೀದಿಮಾಡಲು ಸಮರ್ಥರಾಗಲಿಕ್ಕಿಲ್ಲ. ಈಚೆಗೆ ಫೋರ್ಡ್ ಫೌಂಡೇಶನ್ನಿನವರು ಕಳುಹಿಸಿದ್ದ ತಜ್ಞರ ಸಮಿತಿಯು ನಮ್ಮ ಗ್ರಾಮೋದ್ಯೋಗಗಳು ಬೆಳೆದು ವಿಕಾಸ ಹೊಂದಲು ಬಹಳಷ್ಟು ಅವಕಾಶ ಉಂಟೆಂದು ಅಭಿಪ್ರಾಯಪಟ್ಟಿದನ್ನು ನಾವು ಈ ದೃಷ್ಟಿಕೋಣದಿಂದ ವಿಚಾರಿಸಿದರೆ ಒಳಿತು.

ಇಂಡೋಚೀನದಲ್ಲಿ ಯುದ್ಧ ನಿಲ್ಲುವುದು

ಭಾರತಕ್ಕೆ ಮೇಲ್ವಿಚಾರಣಾ ಮಂಡಳದ ಅಧ್ಯಕ್ಷ ಸ್ಥಾನ

ಇಂಡೋಚೀನದ ಸಮರ ನಿಲುಗಡೆಗಾಗಿ ಜಿನೇವಾ ನಗರದಲ್ಲಿ ನಡೆಯುತ್ತಿರುವ ಸಮಾಲೋಚನೆಗಳು ಮೊದಲು ನಿರಾಶೆಯನ್ನು ತೋರಿಸಿದವು— ಮುಂದೆ ಆಶಾವಾದವು ಬಲಿಯಿತಾದರೂ, ಫ್ರಾನ್ಸಿನ ಪ್ರಧಾನ ಮಂತ್ರಿ ಮೆಂಡೆಸರು "ಒಂದೋ ಕದನ ವಿರಾಮ—ಅಥವಾ ರಾಜೀನಾಮೆ" ಎಂದು ಗಡು ಹಾಕಿದ್ದ ೨೦ನೇ ತಾರೀಕಿನ ಮಧ್ಯರಾತ್ರಿಯ ಅವಧಿ ಕಳೆದರೂ ಒಪ್ಪಂದಕ್ಕೆ ಸಹಿ ಬೀಳಲಿಲ್ಲ ಎಂದು ಕೇಳಿದಾಗ ತೀವ್ರ ನಿರಾಶೆಯಾಯಿತು. ಆದರೆ ಈ ವಾರ್ತೆಯನ್ನು ಪ್ರಸಾರ ಮಾಡುತಿದ್ದಂತೆಯೇ ಆಕಾಶವಾಣಿಯು ಮಧ್ಯರಾತ್ರಿ ಕಳೆದ ತುಸು ಹೊತ್ತಿನಲ್ಲಿಯೇ ಒಪ್ಪಂದಕ್ಕೆ ಸಹಿಬಿದ್ದಿತೆಂದು ಶುಭ ಸಮಾಚಾರವನ್ನು ತಂದಿತು. ಮೆಂಡೆಸರು ನವರಾಷ್ಟ್ರಗಳ ನಿಯೋಗದ ಪ್ರತಿನಿಧಿಗಳೊಡನೆ ಅನೇಕ ಭೇಟಿಯನ್ನು ನಡೆಸಿ, ಪ್ರಶ್ನೆಯನ್ನು ಸಮಾಧಾನಕರವಾಗಿ ಬಗೆಹರಿಸಲು ಸಮಯವನ್ನು ಉಪಯೋಗಿಸಿಕೊಂಡುದರಿಂದ ಈ ರೀತಿ ತುಸು ವಿಳಂಬ ಘಟಿಸಿತೆಂದು ಸಮಾಧಾನವನ್ನು ಹೇಳಲಾಯಿತು. ಈಗಲಾದರೂ ಇಂಡೋಚೀನದ ಮೂರು ರಾಜ್ಯಗಳಲ್ಲಿ ಲಾವೋಸ ಮತ್ತು ವೀಟನಾಂಗಳ ಮಟ್ಟಿಗೆ ಮಾತ್ರ ಒಪ್ಪಂದವಾಗಿದೆಯಲ್ಲದೆ, ಕಂಬೋಡಿಯಾದ ವಿಚಾರವು ನಿಲುಗಡೆಗೆ ಬಂದಿಲ್ಲವೆಂದು ಕೇಳುತ್ತೇವೆ. ಆದರೆ ಯುದ್ಧ ವಿರಾಮ ಒಪ್ಪಂದ ಸೂತ್ರಗಳ ಬಗ್ಗೆ ತತ್ವಶಃ ಒಮ್ಮತವು ಏರ್ಪಟ್ಟಿದೆಯಾಗಿ, ಇಷ್ಟರೊಳಗಾಗಿ ಕಂಬೋಡಿಯದ ಒಡಂಬಡಿಕೆಗೂ ಸಹಿ ಬಿದ್ದಿರುವುದು ನಿಶ್ಚಯ.

ಸ್ಮಿತ್ತರ ಆಶ್ವಾಸನೆ

ಕಳೆದ ಏಳು ವರ್ಷಗಳಿಂದಲೂ ಹೆಚ್ಚು ಸಮಯ ನಡೆದ ಇಂಡೋಚೀನ ಸಮರದ ಅನರ್ಥ ಪರಂಪರೆಯನ್ನು ನಿಲ್ಲಿಸುವುದಕ್ಕೋಸ್ಕರ ಒಡಂಬಡಿಕೆಯನ್ನು ಇಷ್ಟು ತಡವಾಗಿಯೇ ಆದರೂ—ಮಾಡಿಕೊಳ್ಳಲು ಸಾಧ್ಯವಾದುದಕ್ಕೆ ಮೆಂಡೆಸರನ್ನು ಜಗತ್ತಿಗೆ ಜಗತ್ತೇ ಅಭಿನಂದಿಸುತ್ತದೆ. ಅವರು ಅಧಿಕಾರ ಗ್ರಹಣ ಮಾಡುವ ಕಾಲದಲ್ಲೇ ಭೀಷ್ಮ ಪ್ರತಿಜ್ಞೆಯನ್ನು ಕೈಗೊಂಡು ಫ್ರೆಂಚ ರಾಷ್ಟ್ರೀಯರಿಗಷ್ಟೇ ಅಲ್ಲ—ಯುದ್ಧದಿಂದ ಕಳವಳಗೊಂಡ ಲೋಕಕ್ಕೂ ತುಸು ಸಮಾಧಾನವನ್ನುಂಟುಮಾಡಿದರು. ಆದರೆ ಅಮೇರಿಕೆಯ ಗತ್ತುಗಾರಿಕೆಯ ಮುಂದೆ ಮೆಂಡೆಸರ ಪ್ರಯತ್ನಗಳು ವಿಫಲವಾಗುತ್ತವೆಯೋ ಏನೋ ಎಂಬ ಸಂಶಯವು ಎಲ್ಲರಿಗೂ ತೋರಿ ಬರುತಿತ್ತು. ಏಕೆಂದರೆ, ಜಿನೇವಾದಲ್ಲಿ ಮಾತುಕತೆಗಳನ್ನು ಪುನರಾರಂಭಿಸಲು ಬ್ರಿಟನು, ಫ್ರಾನ್ಸು, ರಶಿಯಾ, ಚೀನಾ ಮುಂತಾದ ಪ್ರಧಾನ ರಾಷ್ಟ್ರಗಳು ಆಗಮಿಸಿದರೂ ಅಮೇರಿಕದ ವಿದೇಶಾಂಗ ಸಚಿವ ಡಲ್ಲೇಸರು ಬಿಮ್ಮಗೆ ಬೀಗಿ ಕುಳಿತಿದ್ದರು. ಅವರು ಅಕಸ್ಮಾತ್ತಾಗಿ ಪೇರಿಸಿಗೆ ಹಾರಿ ಹೋದಾಗ ಕೂಡ, ಒಪ್ಪಂದಕ್ಕೋಸ್ಕರ ಅವಸರಿಸಬೇಡಿರೆಂದು ಎಚ್ಚರಿಸುವ ಹಾಗು ಆಗ್ನೇಯ ಏಶ್ಯಾ ರಾಷ್ಟ್ರಗಳ ಸೈನಿಕ ಒಪ್ಪಂದವನ್ನು ಸಾಧಿಸುತ್ತೇವೆಂದು ಚೀನಕ್ಕೆ ಹೆದರಿಕೆ ಹುಟ್ಟಿಸಬೇಕೆನ್ನುವ ನಿಶ್ಚಯ ಕೈಗೊಂಡಿದ್ದಾರೆಂದು ವರದಿಗಳು ಹೇಳುತಿದ್ದವು. ಆದರೆ ಬ್ರಿಟನು ಮತ್ತು ಫ್ರಾನ್ಸುಗಳು ಇಲ್ಲಿ ಮುತ್ಸದ್ದಿತನದಿಂದ ವರ್ತಿಸಿ, ಡಲ್ಲೇಸರ ಮನವೊಲಿಸಿ ಕೊಂಡಂತೆ ತೋರುತ್ತದೆ. ಅಮೇರಿಕದ ಅಸಹಕಾರವು ರಶಿಯಾ-ಚೀನಗಳ ಪ್ರತಿಷ್ಠೆಗೆ ಧಕ್ಕೆ ಉಂಟುಮಾಡಿವೆಯೆಂದು ಹೇಳಲಾದುದರಿಂದ ಒಪ್ಪಂದದ ತಳಗಟ್ಟು ಕುಸಿಯಬಹುದು. ಕಾರಣ "ಕಮ್ಯುನಿಸ್ಟರ ಹೃದಯ ಪರಿವರ್ತನೆಯ ಚಿಹ್ನೆ" ಗೋಚರಿಸದಿದ್ದರೂ, ಶಿಷ್ಟಾಚಾರಕ್ಕಾದರೂ ಅಮೇರಿಕದ ಪ್ರತಿನಿಧಿ ಜಿನೇವಾಕ್ಕೆ ಆಗಮಿಸುವುದು ಇಷ್ಟ ಎಂಬೀ ಅಂಶಗಳನ್ನು ಇವರು ಡಲ್ಲೇಸರಿಗೆ ಬಿಂಬಿಸಿದರು. ಈ ಅನುರೋಧನವನ್ನು ನಿರಾಕರಿಸಲಾರದೆ, ಡಲ್ಲೇಸರ ಬಲಗೈ ಬಂಟ ಬೇಡೆಲ ಸ್ಮಿಥರು ಜಿನೇವಾಕ್ಕೆ ಆಗಮಿಸಿದರು; ಮತ್ತು ಅಮೇರಿಕದ ಗೌರವಕ್ಕೆ ಹಾನಿಯನ್ನು ಉಂಟುಮಾಡಲಾರದ ಒಪ್ಪಂದಕ್ಕೆ ಆತಂಕವೊಡ್ಡುವುದಿಲ್ಲವೆಂದು ಆಶ್ವಾಸನವಿತ್ತರು.

ಮೆನನ್ನರ ಪ್ರಯತ್ನ

ಅಮೇರಿಕದ ಸಹಕಾರಕ್ಕಿಂತಲೂ ತುಂಬ ಮಹತ್ವದ ನೆರವು ಭಾರತದ ಪ್ರಧಾನ ಮಂತ್ರಿ ನೆಹರೂರ ಪ್ರತಿನಿಧಿಯಾಗಿ ಜಿನೇವಾದಲ್ಲಿ ಸಭೆಗೂಡಿದ ಎಲ್ಲ ಪ್ರಭೃತಿಗಳೊಡನೆಯೂ ಖಾಸಗಿ ಮಾತುಗತೆಗಳನ್ನು ನಡೆಸಿ, ಒಡಂಬಡಿಕೆಗೆ ಅನುಕೂಲ ವಾತಾವರಣವನ್ನು ಏರ್ಪಡಿಸಲು ಯತ್ನಿಸಿದ ಮೆನನ್ನರಿಂದ ದೊರೆಯಿತೆಂದು ಎಲ್ಲ ವರ್ಗಗಳೂ ಒಪ್ಪುತ್ತವೆ. ನೆಹರೂರವರು ಈಚೆಗೊಂದು ಸಾರ್ವಜನಿಕ ಸಭೆಯಲ್ಲಿ ಮೆನನ್ನರ ದೌತ್ಯವನ್ನು ಮನಃಪೂರ್ವಕ ಹೊಗಳಿದರು—ಇದು ನಮ್ಮ ಬೆನ್ನನ್ನು ನಾವೇ ಚಪ್ಪರಿಸಿಕೊಂಡಂತೆ ತೋರೀತು. ಆದರೆ ಜಿನೇವಾದ ಎಲ್ಲ ವರ್ತುಲಗಳೂ ಮೆನನ್ನರ ಪ್ರಯತ್ನಗಳನ್ನು ಪ್ರಶಂಸಾತ್ಮಕ ಉದ್ಗಾರಗಳಿಂದ ಮೆಚ್ಚಿ ಕೊಂಡಾಡುತ್ತಿರುವುದನ್ನು ಕಂಡರೆ ನಮಗೆ ಸಹಜವಾಗಿಯೇ ಅಭಿಮಾನವೆನಿಸುತ್ತದೆ. ಮೆನನ್ನರು ಎಲ್ಲ ನಾಯಕರೊಡನೆಯೂ ಸ್ನೇಹದಿಂದ ನಡೆದುಕೊಂಡು ಅವಿಶ್ರಾಂತವಾಗಿ ದುಡಿದುದರಿಂದ

ಬಿಕ್ಕಟ್ಟಿನ ಅನೇಕ ಮುದ್ದೆಗಳಲ್ಲಿ ಒಮ್ಮತಕ್ಕೆ ಬರುವುದು ಸಾಧ್ಯವಾಯಿತು. ತತ್ಪರಿಣಾಮವಾಗಿಯೇ ಕದನ ವಿರಾಮ ರೇಖೆಯನ್ನು ೧೮° ಅಕ್ಷಾಂಶದ ನೇರ ಎಳೆಯಬೇಕೆಂಬ ಫ್ರೆಂಚರ ಧೋರಣೆಗೂ ೧೬° ಅಕ್ಷಾಂಶಕ್ಕೆ ಸರಿಯಾಗಿ ಅದು ಇರಬೇಕೆಂಬ ವೀಟಮಿನ ಬೇಡಿಕೆಗೂ ಸೇತುವೆ ರಚಿಸಲ್ಪಟ್ಟು, ೧೭° ಅಕ್ಷಾಂಶದಲ್ಲಿ ರೇಖೆ ಯೆಳೆಯುವುದೆಂದು ತೀರ್ಮಾನಿಸಲ್ಪಟ್ಟಿತು. ಉತ್ತರ ವೀಟನಾಂ ಪ್ರದೇಶದಿಂದ ಇನ್ನು ಮೂರುದಿನಗಳೊಳಗಾಗಿಯೇ ಉಭಯ ಪಕ್ಷಗಳ ಸೇನೆಗಳೂ ಹಿನ್ನಡಿಯುತ್ತವೆ. ಮುಂದಿನ ವರ್ಷ ಯಾವಾಗಲಾದರೂ ಅನುಕೂಲ ಸಮಯ ನೋಡಿ ವೀಟನಾಂ ರಾಜ್ಯದಲ್ಲಿ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲಾಗುತ್ತದೆ.

ಭಾರತಕ್ಕೆ ಅಧ್ಯಕ್ಷಪದ

ಬಹಳ ವಾದವಿವಾದಕ್ಕೆ ಎಡೆಕೊಟ್ಟಿದ್ದ ಬಿಕ್ಕಟ್ಟಿನ ಪ್ರಶ್ನೆಗಳಲ್ಲಿ ಯುದ್ಧ ವಿರಾಮದ ಮೇಲ್ವಿಚಾರಣೆಯನ್ನು ನಡೆಸುವ ಸಮಿತಿಯ ರಚನೆಯೇ ಮುಖ್ಯವಾಗಿದ್ದಿತು—ಈಗ ಈ ಬಗ್ಗೆ ಐಕಮತ್ಯವು ಕಂಡುಬರುತ್ತದೆ. ಈ ಸಮಿತಿಯಲ್ಲಿ ಪೋಲೆಂಡ, ಭಾರತ, ಕೆನಡಾ ದೇಶಗಳ ಪ್ರತಿನಿಧಿಗಳಿರಬೇಕೆಂದು ಗೊತ್ತಾಗಿದೆ. ಭಾರತವು ಸಮಿತಿಯ ಅಧ್ಯಕ್ಷಸ್ಥಾನವನ್ನು ವಹಿಸುತ್ತದೆ— ಇಂಡೋಚೀನದ ಮೂರು ರಾಜ್ಯಗಳಿಗೂ ಪ್ರತ್ಯೇಕವಾದ ಸಮಿತಿಗಳು ಏರ್ಪಡುತ್ತವೆಯೆಂದೂ ಆದರೆ ಪ್ರತಿಯೊಂದು ಸಮಿತಿಯಲ್ಲೂ ಪೋಲೆಂಡ ಭಾರತ, ಕೆನಡಾಗಳ ಪ್ರತಿನಿಧಿಗಳೇ ಇರುವರೆಂದೂ ತಿಳಿಯುತ್ತದೆ. ಜಾಗತಿಕ ಶಾಂತಿಯ ಸದುದ್ದೇಶದಿಂದ ಗಂಭೀರವಾದ ಈ ಹೊಣೆಗಾರಿಕೆಗೆ ಹೆಗಲು ಕೊಡಬೇಕೆಂದು ಮೂರೂ ರಾಷ್ಟ್ರಗಳನ್ನು ತಂತಿಯ ಮೂಲಕ ಬಿನ್ನವಿಸಿಕೊಂಡಿರುವರಲ್ಲದೆ, ಸಮಿತಿಯ ಅಧ್ಯಕ್ಷಸ್ಥಾನ ವಹಿಸಬೇಕಿರುವ ಭಾರತದೊಡನೆ ಹೆಚ್ಚಿನ ಸಮಾಲೋಚನೆಗಳು ನಡೆಯುತ್ತಿವೆ. ಈಡನರ ಆದೇಶದಂತೆ, ಹೊಸ ದೆಹಲಿಯಲ್ಲಿರುವ ಹಂಗಾಮಿ ಬ್ರಿಟಿಷ ಹೈಕಮಿಶನರು ಪ್ರಧಾನಮಂತ್ರಿ ನೆಹರೂರನ್ನು ಭೇಟಿಯಾಗಿ ವಿಷಯದ ಚರ್ಚೆಯನ್ನು ನಡೆಸಿದರೆಂದು ಕೇಳುತ್ತೇವೆ. ಈ

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 93/54

ಅಪ್ಪಿ ಹೆಂಗಸು — ಅರ್ಜಿದಾರಳು.

ಮತ್ತು

ಸೀನ ಪೂಜಾರಿ — — ಎದ್ರಿ.

ಇವರೊಳಗೆ

ಉಡುಪಿ ತಾಲ್ಕು ಶಿರ್ವ ಗ್ರಾಮದ ಮುಡಾಬಲ ಪೂಜಾರಿಯ ಅಳಿಯ ಸೀನ ಪೂಜಾರಿಗೆ ಈ ಮೂಲಕ ತಿಳಿಯ ಪಡಿಸುವುದೇನಂದರೆ:-

ಅರ್ಜಿದಾರಳು ನಿಮ್ಮ ಮೇಲೆ 1949ನೆ ಇಸ್ವಿ ನಂಬ್ರ IXನೆ ಅಳಿಯಸಂತಾನ ಆಕ್ಟಿನ 8ನೇ ಸೆಕ್ಷನ್ ಪ್ರಕಾರ ಮದುವೆ ರದ್ದಿಗೆ ಅರ್ಜಿ ಮಾಡಿರುತ್ತಾ ಸದ್ರಿ ಅರ್ಜಿ ತನ್ಕಿಗೆ ಮತ್ತು ನಿಮಗೆ ನೋಟೀಸಿಗೆ ತಾ. 5-3-54ಕ್ಕೆ ಇಡೋಣಾಗಿದೆ. ತಾ. 5-8-54ಕ್ಕೆ ಬೆಳಗ್ಗೆ ಘಂಟೆ 10ಕ್ಕೆ ಸದ್ರಿ ಕೋರ್ಟಿನ ಮುಂದೆ ನೀವು ಹಾಜರಾಗದಿದ್ದಲ್ಲಿ ಸದ್ರಿ ಅರ್ಜಿ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನವಾಗುವದು.

Narayana Rao K.

Advocate for Petitioner

ಉಡುಪಿ, 19-7-54.

ಕಾಲುವೆ ನೀರಿನ ಕುರಿತು ಭಾರತದ ಮೇಲೆ ಆರೋಪ

(೫ನೇ ಪುಟದಿಂದ)

ಪರ್ಯಾಲೋಚಿಸಿ ವರದಿ ಮಾಡಲು ೧೯೫೨ನೇ ಆಕ್ಟೋಬರದಲ್ಲಿ ಭಾರತ ಸರಕಾರ ನೇಮಿಸಿದ ಸಮಿತಿಯು ಮುಂಬಯಿಯಲ್ಲಿ ತನ್ನ ೧೨೮೦ ಪುಟಗಳ ವರದಿಗೆ ಸರ್ವಾನುಮತದಿಂದ ಅಂಕಿತವನ್ನು ಹಾಕಿತು. ಸಮಿತಿಯ ಅಧ್ಯಕ್ಷ ಶ್ರೀ ರಾಜಾಧ್ಯಕ್ಷರು "ನಮಗಿಂತಲೂ ಪರಿಮಿತವಾದ ಕಾರ್ಯಕ್ಷೇತ್ರವಿದ್ದ ಬ್ರಿಟನಿನ ರಾಯಲ್ ಕಮಿಶನಿನವರು ತಮ್ಮ ವರದಿಯನ್ನು ಪೂರ್ತಿಗೊಳಿಸಲು ಎರಡು ವರ್ಷ ತೆಗೆದುಕೊಂಡರು. ಕಾರಣ ನಾವು ನಮ್ಮ ಕೆಲಸವನ್ನು ತ್ವರೆಯಾಗಿಯೇ ಮುಗಿಸಿದೆವೆಂದು ಹೇಳಬಹುದು" ಎಂದರು. ಆದರೆ ಈ ವರದಿಯು ಇನ್ನೂ ಪ್ರಕಟಗೊಂಡಿಲ್ಲ— ಬ್ರಿಟನಿನಲ್ಲಿ ಒಂದು ತಿಂಗಳೊಳಗಾಗಿ ರಾಯಲ ಕಮಿಶನಿನ ವರದಿ ಎಲ್ಲರ ಕೈಗೂ ಸಿಗುವಂತೆ ವ್ಯವಸ್ಥೆ ಮಾಡಿದ್ದರು. ಈ ಪ್ರಕಾರ ರಾಜಾಧ್ಯಕ್ಷರ ವರದಿಯೂ ಸಾರ್ವಜನಿಕರ ಕೈಗೆ ಬೇಗನೇ ದೊರೆತರೆ, ಆಗ ವರದಿಯ ವಿಮರ್ಶೆ ಮಾಡಲು ಸಾಧ್ಯವಾಗುತ್ತದೆ.

ಎ. ಐ. ಸಿ. ಸಿ. ಅಧಿವೇಶನ

ಇದೇ ೨೪ ಮತ್ತು ೨೫ನೇ ದಿನಾಂಕಗಳಲ್ಲಿ ಅಜಮೀರದಲ್ಲಿ ಕಾಂಗ್ರೆಸ ಕಾರ್ಯಕಾರಿ ಸಮಿತಿಯ ಅಧಿವೇಶನ ಜರಗುತ್ತದೆ. ಇಲ್ಲಿ ಗ್ರಾಮ ಪಂಚಾಯತುಗಳ ಕುರಿತು ನೇಮಿಸಿದ ಉಪಸಮಿತಿಯ ವರದಿಯು ಚರ್ಚೆಗೆ ಬರುತ್ತದೆ. ಈ ವರದಿಯು ಪಂಚಾಯತುಗಳ ನ್ಯಾಯಾಂಗ ಕಾರ್ಯ, ಸಹಕಾರಿ ಸಂಘಗಳೊಡನೆ ಅವುಗಳ ಸಂಬಂಧ, ಆರ್ಥಿಕ ಪರಿಸ್ಥಿತಿಯ ಸುಧಾರಣೆ, ಪ್ರಜಾಪ್ರಭುತ್ವದ ಮೂಲ ಘಟಕಗಳೆಂದು ಯೋಜನೆಯಲ್ಲಿ ಅವುಗಳಿಗೆ ಸ್ಥಾನ— ಮುಂತಾದ ವಿಷಯಗಳನ್ನು ಒಳಗೊಂಡಿದೆ. ಕಾರ್ಯ ಸಮಿತಿಯ ಮುಂದೆ ಸಂವಿಧಾನದ ತಿದ್ದುಗೆಯ ವಿಷಯವೂ ಭೂಸುಧಾರಣೆಯನ್ನು ಸುಗಮಗೊಳಿಸುವ ಪ್ರಶ್ನೆಯೂ ಬರುತ್ತದೆ. ಗ್ರಾಮೋದ್ಯೋಗಗಳ ಅಭಿವೃದ್ಧಿಯ ಕುರಿತು ತಳೆಯಬೇಕಾದ ಧೋರಣೆಯನ್ನೂ ವಿಚಾರಿಸಲಾಗುವುದು. ದೇಶದ ಕೈಗಾರಿಕಾ ನೀತಿಯಲ್ಲಿ ಮಹೋದ್ಯಮ, ಗೃಹೋದ್ಯಮ ಮತ್ತು ಗ್ರಾಮೋದ್ಯೋಗಗಳಿಗೆ ತಯಾರಿಕೆಯ ಯಾವ ಯಾವ ವಲಯಗಳನ್ನು ಬಿಟ್ಟುಗೊಡಬೇಕೆಂದೂ ಸಮಿತಿಯು ನಿರ್ಣಯಿಸುತ್ತದೆ.

ಗ್ರಾಮೋದ್ಯೋಗ ಪ್ರದರ್ಶನ

ಮುಂಬಯಿಯಲ್ಲಿ ಮುರಾರಜೀ ದೇಸಾಯರ ಹಸ್ತದಿಂದ ಖಾದಿ-ಗ್ರಾಮೋದ್ಯೋಗಭವನದ ಉದ್ಘಾಟನೆಯು ದಿನಾಂಕ ೧೫ರಂದು ನೆರವೇರಿತು. ಇಲ್ಲಿ ಅನೇಕ ನಮೂನೆಯ ಖಾದಿ ಹಾಗು ಗ್ರಾಮೋದ್ಯೋಗಸರಕುಗಳು ಪ್ರದರ್ಶಿಸಲ್ಪಡುತ್ತವೆ ಒಟ್ಟು ಸುಮಾರು ೧೦ ಲಕ್ಷ ರೂಪಾಯಿ ಬೆಲೆಯ ಸರಕುಗಳು ಇಲ್ಲಿದ್ದು, ಅವುಗಳಲ್ಲಿ ಮುರಾದಾಬಾದಿನ ಹಿತ್ತಾಳೆ ಪಾತ್ರೆ, ತಿರುಕೊಚ್ಚಿ ಹಾಗು ಮೈಸೂರಿನ ದಂತದ ಸರಕುಗಳು, ಆಗ್ರಾದ ನಯನಮನೋಹರವಾದ ಚಂದ್ರಕಾಂತ ಶಿಲಾ ಮೂರ್ತಿಗಳು, ಚರ್ಮದ ಸಾಮಾನುಗಳು ಆಟಿಕೆಗಳು ಕೊಂಬಿನ ಉಪಕರಣಗಳು, ಕಾಶ್ಮೀರದ ಕಟ್ಟಿಗೆ ವಸ್ತುಗಳು, ಆಂಧ್ರದ ಖಾದಿ ಮತ್ತು ರೇಶ್ಮೆ ಉಲ್ಲೇಖನೀಯವಿರುತ್ತವೆ. ಈ ಪ್ರದರ್ಶನಾಲಯಕ್ಕೆ ಸಣ್ಣದೊಂದು ಥಿಯೇಟರನ್ನು ಜೋಡಿಸಿ, ಅಲ್ಲಿ ಈ ಕೈಗಾರಿಕೆಗಳಿಗೆ ಸಂಬಂಧಿಸಿದ ೧೬ ಮಿಲಿಮೀಟರು ಚಲಚ್ಚಿತ್ರಗಳನ್ನು ತೋರಿಸಲಾಗುವುದು. ಇಂತಹ ಪ್ರದರ್ಶನಗಳು ದಿಲ್ಲಿ, ಕಲ್ಕತ್ತೆ ಹಾಗು ಮದ್ರಾಸುಗಳಲ್ಲೂ ತೆರೆಯಲ್ಪಡುತ್ತವೆ. ಗುಡಿ ಕೈಗಾರಿಕೆಗಳನ್ನು ಜನಪ್ರಿಯಗೊಳಿಸುವುದೇ ಇದರ ಉದ್ದೇಶ. ಶ್ರೀ ವೈಕುಂಠಲಾಲ ಮೆಹತಾ ಹೇಳಿದಂತೆ ಹೊಸ ಹೊಸ ಪೇಟೆಗಳನ್ನು ಈ ಸರಕುಗಳು ಕಂಡುಕೊಳ್ಳದಿದ್ದರೆ ಸರಕಾರದ ಯೋಜನೆಗಳು ಎಷ್ಟು ವ್ಯಾಪಕವಾಗಿದ್ದರೂ ಪ್ರಯೋಜನವಾಗದು. ಹೀಗಿರುವುದರಿಂದ ರಾಜ್ಯ ಸರಕಾರಗಳೆಲ್ಲ ಒಟ್ಟಾಗಿ ತಮ್ಮ ಸಹಕಾರವನ್ನು ಈ ಪ್ರದರ್ಶನಕ್ಕೆ ಕೊಟ್ಟುದು ಸ್ತುತ್ಯ.

ಮದರಾಸಿನ ಆಹಾರ ಖಾತೆ

ದೇಶದ ಆದ್ಯಂತ ಆಹಾರ ಧಾನ್ಯಗಳ ವಿನಿಯಂತ್ರಣವನ್ನು ಸಾರಿರುವುದರಿಂದ, ಮದ್ರಾಸು ಸರಕಾರವು ಆಹಾರ ಖಾತೆಯನ್ನು ರದ್ದುಗೊಳಿಸಲು ತೀರ್ಮಾನಿಸಿದೆಯಾಗಿ ಶ್ರೀ. ಸುಬ್ರಹ್ಮಣ್ಯಂ ಹೇಳಿದ್ದಾರೆ. ಇನ್ನು ಮುಂದೆ ಕೃಷಿವಿಭಾಗವೇ ಆಹಾರ ವಿಷಯವನ್ನು ವಿಚಾರಿಸಿ ಕೊಳ್ಳುತ್ತದೆ. ಈ ವರೆಗೆ ಆಹಾರ ಖಾತೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರನ್ನು ಬೇರೆ ಇಲಾಖೆಗಳಲ್ಲಿ ನೇಮಿಸಿಕೊಳ್ಳುವ ವಿಚಾರವನ್ನು ಸರಕಾರವು ಪರ್ಯಾಲೋಚಿಸುತ್ತದೆಯೆಂದೂ ಅವರು ಹೇಳಿದರು.

ಪ್ರಕಾರವಾಗಿ ಗೂರ್ಣ ಪ್ರಾಚ್ಯದಲ್ಲಿ ಶಾಂತಿಯನ್ನು ನೆಲೆಗೊಳಿಸುವ ಘನ ಪ್ರಯತ್ನದಲ್ಲಿ ಭಾರತವು ಒಂದೇ ವರ್ಷದೊಳಗೆ ಎರಡನೆಯ ಸಲ ಮಹತ್ವದ ಪಾತ್ರವನ್ನು ವಹಿಸುವಂತಾಗಿರುವುದು—ನಮ್ಮ ವಿದೇಶ ಧೋರಣೆಯ ನೈತಿಕ ವಿಜಯವೆಂದು ಸಂಶಯದ ಲವಲೇಶವಿಲ್ಲದೆ ಹೇಳಬಹುದು.

ಉಡುಪಿ

ಶಾಶ್ವತ ಒಕ್ಕಲುಹಿತ ಮಸೂದೆಯು—ಬರುವ ಮಾರ್ಚಿಯೊಳಗೆ ನಮ್ಮ ಜಿಲ್ಲೆಯಲ್ಲಿ ಜಾರಿಗೆ ಬರಬಹುದೆಂದೂ ಅದರ ಕರಡು ಈಗಾಗಲೇ ತಯಾರಾಗಿದೆ ಎಂದೂ ಇತ್ತೀಚೆಗೆ ಮದ್ರಾಸಿಗೆ ಹೋಗಿಬಂದ ಶ್ರೀ ಟಿ. ಎ. ಪೈ, ಎಂ. ಎಲ್. ಎ, ರವರು ಹೇಳಿಕೆಯಿತ್ತಿದ್ದಾರೆ. ಅದರಲ್ಲಿ ಚಾಲಗೇಣಿ ಪಕ್ಷಗಳಿಗೆ ಕಾಯಂ ಹಕ್ಕು ಬಾಧ್ಯತೆ, ನ್ಯಾಯವಾದ ಗೇಣಿ, ಉದ್ಭೂತವಾಗಿರುವ ಎಲ್ಲ ತರದ ಒಕ್ಕಲುತನ ಸಮಸ್ಯೆಗಳ ಪರಿಹಾರಗಳಿವೆ ಎಂದೂ ತಿಳಿದು ಬರುತ್ತದೆ.

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ—ಎರಡನೆ ವರ್ಷದ ವಿದ್ಯಾರ್ಥಿಗಳಿಗೆ ಮಂಗಳೂರು ಸರಕಾರಿ ಆಸ್ಪತ್ರೆಗಳ ಸಲಕರಣೆಗಳ ಉಪಯೋಗ ದೊರಕಿಸಿಕೊಳ್ಳಲು ಮದರಾಸು ಸರಕಾರದೊಡನೆ ಶಿಷ್ಟಾಚಾರದಂತೆ ಮಾತುಕತೆ ನಡೆಸಲು ಮದ್ರಾಸಿಗೆ ತೆರಳಿದ್ದ ಕಾಲೇಜಿನ ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಗಳು ಎಲ್ಲ ವ್ಯವಸ್ಥೆಗಳನ್ನು ಪೂರೈಸಿಕೊಂಡು ನಿನ್ನೆ ಹಿಂದಿರುಗಿ ಬಂದಿರುವರು.

ವಿದಾಯ ಸತ್ಕಾರ—ಉಡುಪಿ ಬೋರ್ಡು ಹ್ಯಾಸ್ಕೂಲಿನ ಸಹಾಯಕ ಅಧ್ಯಾಪಕರಾದ ಶ್ರೀ ಮುಕುನಾಥಾಚಾರ್ಯರು, ಕಾಸರಗೋಡಿನ ಶ್ರೀಕರ ಪುರದಲ್ಲಿ ಹೊಸತಾಗಿ ತೆರೆಯಲಾದ ಡಿಸ್ಟ್ರಿಕ್ಟ್ ಬೋರ್ಡು ಹ್ಯಾಸ್ಕೂಲಿನ ಹೆಡ್ಮಾಸ್ತರರಾಗಿ ಭಡ್ತಿ ಹೊಂದಿದುದರಿಂದ ತಾ. 14ರಲ್ಲು ಅವರಿಗೆ ಅಧ್ಯಾಪಕ ವೃಂದದವರು ಸತ್ಕಾರದೊಡನೆ ವಿದಾಯವಿತ್ತರು.

ಶಾಲಾ ಮುಖಂಡರ ಚುನಾವಣೆಗಳು—ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲಿನ ಶಾಲಾ ಮುಖಂಡ ಮತ್ತು ಉಪಮುಖಂಡರಾಗಿ ಶ್ರೀಗಳಾದ ಸೀತಾರಾಮ ಭಟ್ಟ ಮತ್ತು ಎಮ್. ಕೃಷ್ಣಮೂರ್ತಿ ಭಾಗವತರು ಆರಿಸಲ್ಪಟ್ಟರು. ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ವಿದ್ಯಾರ್ಥಿ ನಾಯಕ ಮತ್ತು ಉಪನಾಯಕರಾಗಿ ಶ್ರೀಗಳಾದ ಟಿ. ಶ್ರೀನಿವಾಸ ರಾವ್ ಮತ್ತು ಯು. ಶ್ರೀಪತಿ ಭಟ್ಟರು ಚುನಾಯಿಲ್ಪಟ್ಟರು.

ಮಂಗಳೂರಿನ ನಳ್ಳಿ ನೀರಿನ ಸಾಲಕ್ಕೆ—ಉಡುಪಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯು ತಮ್ಮ ಬ್ಯಾಂಕರರಾದ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟಿನ ಮೂಲಕ ಹತ್ತು ಲಕ್ಷ ರೂಪಾಯಿ ಚಂದಾ ತೆತ್ತಿರುವರೆಂದೂ ಇವು ಒಬ್ಬರೇ ಸಲ್ಲಿಸಿದ ಅರ್ಜಿಗಳಲ್ಲಿ ಅತ್ಯಧಿಕ ಮೊತ್ತದ್ದೆಂದೂ ತಿಳಿದು ಬರುತ್ತದೆ.

ಡಾ| ಲೋಹಿಯಾ ದಿನಾಚರಣೆ-ಉತ್ತರ ಪ್ರದೇಶ ಸರಕಾರವು ಡಾ. ಲೋಹಿಯಾರವರನ್ನು ವಿಶೇಷ ಕಾನೂನಿಂದ ಬಂಧಿಸಿದುದರ ನಿಷೇಧ ಸೂಚಕ ಸಭೆಯು ಸ್ಥಳೀಯ ಪ್ರ. ಸ. ವಾ. ಪಕ್ಷದ ಆಶ್ರಯದಲ್ಲಿ ತಾ. 19 ರಂದು ಶ್ರೀ ಎಮ್. ಎಸ್. ಮಂಜೇಯವರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಬಿ. ಎಸ್. ಲೂವಿಸ್, ಎಮ್. ಎನ್. ಮನ್ನ ಅವರ ಭಾಷಣಗಳಾಗಿ ನಿಷೇಧ ಸೂಚಕ ನಿರ್ಣಯಗಳಾದುವು

ಎಮ್. ಜಿ. ಎಮ್. ಕಾಲೇಜ್ ಯೂನಿಯನ್ ಅಧಿಕಾರಿಗಳ ಚುನಾವಣೆಯು—ತಾ. 19ರಲ್ಲು ಜರಗಿ ಶ್ರೀ ಬಿ. ಭಾಸ್ಕರ ಸೆಟ್ಟರು ಅಧ್ಯಕ್ಷರಾಗಿಯೂ ಶ್ರೀಗಳಾದ ಡಬ್ಲ್ಯು. ಬಿ. ಆಳ್ವ ಮತ್ತು ಬಿ. ಆರ್. ಕಾಮತರು ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟಿರುವರು.

ಬರುವ ವಾರ—

ಶ್ರೀ. ಕು. ಶಿ. ಹರಿದಾಸ ಭಟ್ಟರ 'ಭಾರತದ ರಾಜನೈತಿಕ ಮತ್ತು ಆರ್ಥಿಕ ತತ್ವಗಳು' ಎಂಬ ವಿಶೇಷ ಲೇಖ ಬರಲಿದೆ.

ನಡಿಯುವ ಚಿತ್ರ:—

ಅಜೀಬ್ ಲಡಕಿ

ನಾಸೀಂ, ರೆಹಮಾನ್, ಕುಕ್ಕೂ, ಆಗಾ.

ಬರುವ ಚಿತ್ರಗಳು:

ಅರ್ಮಾನ್, ಬೂಟ್ ಪಾಲಿಶ್, ಮಾಪಿಳ್ಳೈ.

ತಾ. 25—7—54ರಂದು ಬೆಳಿಗ್ಗೆ.

Stranger on The Train

(English)

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಶಿರಿವಾರು— ಸ್ಥಳೀಯ ಬೋರ್ಡು ಶಾಲೆಯಲ್ಲಿ ತಾ. 11ರಲ್ಲಿ ಉಪಾಧ್ಯಾಯ ವೃತ್ತಿಯಿಂದ ನಿವೃತ್ತರಾದ ಶ್ರೀ ಪಾದೆಬೆಟ್ಟು ರಾಮರಾಯರನ್ನು ಬೀಳ್ಕೊಡುವ ಸಮಾರಂಭವು ಡಾ| ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಈ ಸಮಾರಂಭಕ್ಕೆ ಡಾ| ರವೀಂದ್ರ ಹೆಗ್ಡೆ, ವೈದ್ಯ ಪರಿಷ್ಷಂಪ್ರ ಉಪಾಧ್ಯ, ಪಂಚಾಯತಬೋರ್ಡು ಪ್ರೆಸಿಡೆಂಟ್ ಶ್ರೀ ಮಹಾಬಲ ಸೆಟ್ಟಿ ಮೊದಲಾದ ಆಹ್ವಾನಿತರೂ ಗ್ರಾಮಸ್ಥರೂ ಬಂದಿದ್ದರು. ಶ್ರೀಗಳಾದ ಕೆ. ವಿ. ಪೈ, ಪಿ. ಎ. ಆಚಾರ್ಯ, ಕೆ. ಎಮ್. ಸೆಟ್ಟಿ, ಎಸ್. ಎನ್. ಪ್ರಭು, ಎಮ್. ಎಮ್. ಪ್ರಭು, ಪಿ. ಕೆ. ನಾಯಕ್, ಕು. ಸಿ. ಅಡಿಗ ಮೊದಲಾದವರು ಮುಖ್ಯ ಅತಿಥಿಯ ಕುರಿತು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಪಡುಬಿದ್ರೆ— ಸ್ಥಳೀಯ ಬೋರ್ಡು ಹಾ| ಎ| ಶಾಲೆಯಲ್ಲಿ ತಾ. 5ರಲ್ಲಿ ವನಮಹೋತ್ಸವವು ಉಡುಪಿಯ ಅಸಿಸ್ಟೆಂಟ್ ಕಮರ್ಶಿಯಲ್ ಟ್ಯಾಕ್ಸ್ ಆಫೀಸರ್ ಶ್ರೀ ಎಸ್. ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಪಿ. ವೆಂಕಟ್ರಮಣಾಚಾರ್ಯ, ಪಿ. ಗೋಪಾಲ ಹೆಗ್ಡೆ, ಪಿ. ಕರಿಯಣ್ಣ ಸೆಟ್ಟಿ, ಎಮ್. ಮಂಜುನಾಥ ಪ್ರಭು ಮೊದಲಾದವರ ಮಾತುಗಳಾಗಿ ವಿದ್ಯಾರ್ಥಿಗಳಿಗೆ ತಿಂಡಿ ಹಂಚೋಣಾದೊಡನೆ ಸಮಾರಂಭ ಕೊನೆಗೊಂಡಿತು.

ಹಾವಂಜೆ— ಇಲ್ಲಿಯ ನೇಶನಲ್ ಎಯಿಡೆಡ್ ಎಲಿಮೆಂಟರಿ ಶಾಲಾ ಉದ್ಘಾಟನಾ ಸಮಾರಂಭವು ತಾ. 15ರಲ್ಲಿ ಶ್ರೀ ಇಮ್ಮಾಡಿ ನಾರಾಯಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ಉತ್ತರಶ್ರೇಣಿಯ ಪರೀಕ್ಷಾಧಿಕಾರಿಗಳು ನೂತನ ಶಾಲೆಯನ್ನು ಉದ್ಘಾಟಿಸಿದರು. ಶ್ರೀಗಳಾದ ಎಚ್. ಪುಟ್ಟಯ್ಯ ಸೆಟ್ಟಿ, ಎಚ್. ಸುಬ್ಬಣ್ಣ ಸೆಟ್ಟಿ, ಡಾ| ಟಿ. ಕೆ. ಶಂಕರ ಸೆಟ್ಟಿ, ಎಸ್. ವಿಠಲ ಸೆಟ್ಟಿ ಮೊದಲಾದವರು ಭಾಷಣವಿತ್ತರು.

ಹಿರಿಯಡಕ— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ವಿದ್ಯಾರ್ಥಿ ಮುಖಂಡರ ಚುನಾವಣೆ ನಡೆದು ಶ್ರೀಗಳಾದ ಎಮ್. ಅಣ್ಣಪ್ಪ ಮತ್ತು ಎಮ್. ರಾಜು ಸುವರ್ಣರು ಅನುಕ್ರಮವಾಗಿ ಮುಖಂಡ ಮತ್ತು ಉಪಮುಖಂಡರಾಗಿ ಆರಿಸಲ್ಪಟ್ಟರು. ಸದ್ರಿ ಶಾಲೆಯ ವಿದ್ಯಾರ್ಥಿ ಸರಕಾರದ ಸ್ಪೀಕರ ಸ್ಥಾನಕ್ಕೆ ಶ್ರೀ ಕೆ. ಸುಖಾನಂದ ಸೆಟ್ಟರು ಆರಿಸಲ್ಪಟ್ಟರು. ಶ್ರೀ ಕೆ. ಕೇಶವ ಹೆಗ್ಡೆಯರು ಉಪಾಧ್ಯಕ್ಷರಾಗಿ ಆರಿಸಲ್ಪಟ್ಟರು.

ಶುಕ್ರಾಲು— ಈ ಗ್ರಾಮದ ಸೂಜಿಪಟ್ಟಾರದಲ್ಲಿ ತಾ. 19ರಲ್ಲಿ ಬೆಳಗಿನ ಝಾವದಲ್ಲಿ ಶ್ರೀ ಗೋಪಾಲಕೃಷ್ಣ ಪುರಾಣಿಕರ ಹಂಚಿನ ಕಟ್ಟೋಣವು ಕುಸಿದು ಬಿದ್ದು ಒಳಗೆ ಮಲಗಿದ್ದ 13 ವರ್ಷದ ಹೆಣ್ಣು ಮತ್ತು 6 ವರ್ಷದ ಗಂಡು ಮಗು ಕೂಡಾ ಇಬ್ಬರು ಮೃತಪಟ್ಟಿರುವುದು ವಿಷಾದಕರವಿದೆ.

ಕಳಂಜ ಬಾಳಿಲ— ಸ್ಥಳೀಯ ಯುವಕರ ಸಂಘದ ಮಹಾಸಭೆಯು ಇದೇ ತಾ. 11 ರಲ್ಲಿ ಜರಗಿ ಅಧಿಕಾರಿ ವರ್ಗಕ್ಕೆ ಈ ಕೆಳಗಿನವರು ಆರಿಸಲ್ಪಟ್ಟರು. ಶ್ರೀಗಳಾದ ಕೆ. ಎಸ್. ನಾರಾಯಣಯ್ಯ, ಅಧ್ಯಕ್ಷ; ಕೆ. ನಾರಾಯಣ ಭಟ್, ಪಟೇಲ್, ಉಪಾಧ್ಯಕ್ಷ; ಕೆ. ಲಕ್ಷ್ಮೀನಾರಾಯಣ ಕಾರ್ಯದರ್ಶಿ; ಪಿ. ಎಸ್. ಗಣಪಯ್ಯ, 'ಗ್ರಾಮ ಬಂಧು', ಸಂಪಾದಕ; ಪಿ. ಎಸ್. ಪರಮೇಶ್ವರಯ್ಯ ಲೆಖ್ಖ ಪರಿಶೋಧಕ.

'ಗ್ರಾಮ ಬಂಧು' ವಿಶೇಷಾಂಕ— ಕಳಂಜ ಬಾಳಿಲ ಯುವಕರ ಸಂಘದಿಂದ ಪ್ರಕಟವಾಗಿರುವ 'ಗ್ರಾಮ ಬಂಧು' ವಿಶೇಷಾಂಕವು 288 ಪುಟಗಳಿಂದ ಕೂಡಿದ್ದು ಅದರಲ್ಲಿ 50 ಬರಹಗಾರರ 70ಕ್ಕೂ ಮಿಕ್ಕಿ ಬರಹಗಳಿವೆ. ಶ್ರೀಗಳಾದ ಗೋವಿಂದ ಪೈ, ಎಸ್. ಆರ್. ಚಂದ್ರ, ಪಿ. ಲಕ್ಷ್ಮೀನಾರಾಯಣರಾವ್ ಮೊದಲಾದವರ ಕಥೆ, ಕವಿತೆ, ಲೇಖನಗಳಿಂದ ಕೂಡಿದ ಈ ವಿಶೇಷಾಂಕದಲ್ಲಿ ಶ್ರೀಗಳಾದ ಆರ್. ಆರ್. ದಿವಾಕರ್, ಗವರ್ನರ್, ಡಿ. ವಿ. ಗುಂಡಪ್ಪ, ಗೋವಿಂದ ಪೈ, ಮೊಳಹಳ್ಳಿ ಶಿವರಾವ್ ಮತ್ತು ನಿರಂಜನರ ಸಂದೇಶಗಳೂ ಇವೆ.

ದೇವಿಪುರ— ಶ್ರೀ ದುರ್ಗಾಪ್ರಸಾದಿಕ್ ಶಾಲೆಯಲ್ಲಿ ತಾ. 12ರಲ್ಲಿ ಶ್ರೀ ಇ. ವಿಠಲರಾಯರ ಅಧ್ಯಕ್ಷತೆಯಲ್ಲಿ 6ನೇ ದರ್ಜೆಯನ್ನು ಉದ್ಘಾಟಿಸಿ ಪ್ರೌಢ ಪ್ರಾಥಮಿಕ ಪಾಠಶಾಲೆಯನ್ನಾಗಿ ಮಾರ್ಪಡಿಸಲಾಯಿತು. ಶಾಲಾ ಮೆನೇಜರ್ ಶ್ರೀ ಟಿ. ಸುಬ್ರಾಯ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಹೊಸದುರ್ಗ— ಮಂಗಳೂರು ಒಂದನೇ ಗ್ರೇಡಿನ ಅಸಿಸ್ಟೆಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ಪಿ. ರಾಮಚಂದ್ರ ರಾಯರು ಹೊಸದುರ್ಗದಲ್ಲಿ ಎಡಿಶನಲ್ ಡಿ| ಮುನ್ಸೀಫರಾಗಿ ನೇಮಕ ಹೊಂದಿದ್ದು ಅವರು ತಾ. 12 ರಲ್ಲಿ ಚಾರ್ಜು ವಹಿಸಿದರು. ಹೊಸದುರ್ಗದ ಎಡಿಶನಲ್ ಡಿ| ಮುನ್ಸೀಫ್ ಶ್ರೀ ವೈ. ರವಿರಾಜರು ಅಲ್ಲೇ ಪ್ರಿನ್ಸಿಪಾಲ್ ಡಿ| ಮುನ್ಸೀಫರಾಗಿ ಚಾರ್ಜು ವಹಿಸಿದರು.

ಕೊರಂಗ್ರಪಾಡಿ— ಇಲ್ಲಿಯ ಪಡುಮನೆ ಗಿರಿಯಮ್ಮ ಹೆಗ್ಗಡ್ತಿಯವರು (ಶ್ರೀ ಕೆ. ದೇವಯ್ಯ ಹೆಗ್ಡೆಯವರ ತಾಯಿ) ಇದೇ ತಾ. 15 ರಲ್ಲಿ ತಮ್ಮ 80ನೆ ವರ್ಷದಲ್ಲಿ ದೈವಾಧೀನರಾದರೆನ್ನಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವೆವು.

ಬಾರ್ಕೂರು— ಸ್ಥಳೀಯ ನೇಶನಲ್ ಹ್ಯಾಸ್ಕೂಲಿನ ವಿದ್ಯಾರ್ಥಿ ಮುಖಂಡ ಮತ್ತು ಉಪಮುಖಂಡರಾಗಿ ಶ್ರೀಗಳಾದ ವೈ. ರಾಮದಾಸ ತಂತ್ರಿ ಮತ್ತು ಟಿ. ರಘುರಾಮ ಸೆಟ್ಟರು ಚುನಾವಣೆ ಹೊಂದಿರುವರು.

ಹಂಗಾರಕಟ್ಟೆ— ಬಾಳಕುದ್ರು ಪಂಚಾಯತ ಬೋರ್ಡು ಸದಸ್ಯರು, ಹಂಗಾರಕಟ್ಟೆ ಸಾಹುಕಾರರು, ಬಂದರೆ ಅಧಿಕಾರಿಗಳು, ಗ್ರಾಮ ಪಟೇಲ್ ಮೊದಲಾದವರು ತಾ. 7 ರಲ್ಲಿ ಶ್ರೀ ಬಾಲಕೃಷ್ಣ ಕಿಣಿಯರ ಅಧ್ಯಕ್ಷತೆಯಲ್ಲಿ ವನಮಹೋತ್ಸವವನ್ನು ಯಶಸ್ವಿಯಾಗಿ ಆಚರಿಸಿದರು.

ಪುತ್ತೂರು— ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಉಪ್ಪಿನಂಗಡಿ ಸರ್ಕಲಿನ ಶ್ರೀ ವೇಣುಗೋಪಾಲ ನಾಯ್ಕರೂ ಪುತ್ತೂರಿಗೆ ಡಾ| ಬಾಳಪ್ಪ ಸೆಟ್ಟರೂ, ವಿಟ್ಲಕ್ಕೆ ಶ್ರೀ ವಕೀಲ್ ಭೀಮ ಭಟ್ಟರೂ ಕಾಂಗ್ರೆಸ್ ಉಮೇದ್ವಾರಿಗರಾಗಬೇಕಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯವರು ಕೇಳಿಕೊಂಡಿರುವರಾಗಿ ತಿಳಿದು ಬರುತ್ತದೆ.

ಮಜೂರರ ಆಂದೋಲನ

ತಮ್ಮ ಕೇಳಿಕೆಗಳಿಗೆ ಮನ್ನಣೆ ಸಿಗುವುದಕ್ಕಾಗಿ ಪ್ರಾಂತದ ಕೆಲವು ಮಜೂರರು ಮುಷ್ಕರ, ಅನ್ನಸತ್ಯಾಗ್ರಹ ಮುಂತಾದ ಚಟುವಟಿಕೆಗಳಲ್ಲಿ ಪ್ರವೃತ್ತರಾಗುತಿದ್ದಾರೆ. ಕಾರ್ಮಿಕರ ನ್ಯಾಯವಾದ ಬೇಡಿಕೆಗಳು ಮನ್ನಿಸಲ್ಪಡುವಂತೆ ಮಾಡಲು ಮಜೂರ ಇಲಾಖೆಯಲ್ಲಿ ತಕ್ಕ ಏರ್ಪಾಡುಗಳಿವೆ. ಆದರೆ ಬಲ ಪ್ರಯೋಗ ಒತ್ತಾಯಗಳಿಂದ ನ್ಯಾಯ ಸಿಗುವುದು ಕಷ್ಟ. ಇದರಿಂದ ಜನತೆಯ ಆದರವನ್ನು ಮಜೂರರು ಕಳೆದುಕೊಳ್ಳುವುದಲ್ಲದೆ, ತಮ್ಮ ಧೋರಣೆ ತತ್ವಗಳಿಗೆ ಧಕ್ಕೆತಂದಂತಾಗುವುದು. ಆದುದರಿಂದ ಟೊಳ್ಳು ಧುರೀಣತ್ವಕ್ಕೆ ಬಲಿಬಿದ್ದು ಮಜೂರರು ತಮ್ಮ ಹಕ್ಕುಗಳನ್ನು ಕಳೆದುಕೊಳ್ಳುವುದಲ್ಲದೆ, ನ್ಯಾಯದಾನಕ್ಕೂ ಅಡ್ಡಿಯಾಗುತ್ತದೆ. ಸಾರ್ವಜನಿಕರಾಗಲೀ, ಪತ್ರಿಕೆಗಳಾಗಲೀ, ಈ ಪ್ರದರ್ಶನಗಳಿಂದ ಮೋಸ ಹೋಗಬಾರದು.

(ಮದ್ರಾಸು ಸರಕಾರದ ಪ್ರಚಾರ ಸಮಾಚಾರ ಶಾಖೆಯಿಂದ)

ಜಿಲ್ಲಾ ಕಲೆಕ್ಟರರ ಪ್ರಕಟಣೆ

ಈ ಮೂಲಕ ತಿಳಿಯ ಪಡಿಸುವುದೇನೆಂದರೆ—

ಆಂಧ್ರ ಪ್ರಾಂತ್ಯದಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಕೆಂಪು ತರಗತಿಯ ಅಕ್ಕಿಯನ್ನು ಇಲ್ಲಿಯ ಫುಡ್ ಗ್ರೈನ್ಸ್ ಲೈಸೆನ್ಸ್ ಪಡೆಕೊಂಡ ಎಲ್ಲಾ ವ್ಯಾಪಾರಸ್ಥರು ತರಿಸಬಹುದು. ಈ ಬಗ್ಗೆ ಆಂಧ್ರ ಪ್ರಾಂತ್ಯದ ಪಶ್ಚಿಮ ಮತ್ತು ಪೂರ್ವ ಗೋದಾವರಿ ಜಿಲ್ಲೆಗಳ ಜಿಲ್ಲಾ ಸಪ್ಲೈ ಆಫೀಸರರು ಆ ಜಿಲ್ಲೆಗಳಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಅಕ್ಕಿಯನ್ನು ಕಳುಹಿಸಲಿಚ್ಛಿಸುವ ಆಂಧ್ರ ಪ್ರಾಂತ್ಯದ ವ್ಯಾಪಾರಸ್ಥರಿಗೆ ಪರ್ಮಿಟನ್ನು ಕೊಡುವರು. ದಕ್ಷಿಣ ಕನ್ನಡ ಜಿಲ್ಲೆಗೆ ಅಕ್ಕಿ ತರಲಿಚ್ಛಿಸುವ ವ್ಯಾಪಾರಸ್ಥರು ದಕ್ಷಿಣಕನ್ನಡ ಜಿಲ್ಲೆಗೆ ಅಕ್ಕಿ ಕಳುಹಿಸುವರೆ ಪರ್ಮಿಟ್ ಪಡೆದ ಆಂಧ್ರ ಪ್ರಾಂತ್ಯದ ಸಾಹುಕಾರರೊಡನೆ ವ್ಯವಹಾರ ನಡಿಸಬೇಕು. ಹೀಗೆ ವ್ಯವಹಾರ ಮಾಡಲು ಕಷ್ಟವಾದಲ್ಲಿ ಮದ್ರಾಸು ಸರಕಾರವು ನಿಯಮಿಸಿದ ವಿಜಯವಾಡದಲ್ಲಿರುವ ಅಕ್ಕಿಯ ಸ್ಪೆಶಲ್ ಆಫೀಸರರೊಡನೆ ವ್ಯವಹಾರ ನಡಿಸಬೇಕು. ಈ ಆಫೀಸರರಲ್ಲಿ ಜಿಲ್ಲಾ ಸಪ್ಲೈ ಆಫೀಸರರು ಕಳುಹಿಸುವ ಅಧಿಕೃತ ವ್ಯಾಪಾರಸ್ಥರ ಪಟ್ಟಿ ಇರುತ್ತದೆ. ಅಲ್ಲಿಯ ಜಿಲ್ಲಾ ಸಪ್ಲೈ ಆಫೀಸರರು ಕೊಟ್ಟ ಪರ್ಮಿಟಿನ ನಕಲು ವಿಜಯವಾಡದ ಅಕ್ಕಿ ಸ್ಪೆಶಲ್ ಆಫೀಸರರಿಗೂ ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರಿಗೂ ಕಳುಹಿಸಿ ಕೊಡೋಣಾಗುವುದು. ಈ ಪರ್ಮಿಟಿನ ಆಧಾರದಿಂದ ವಿಜಯವಾಡದ ಅಕ್ಕಿ ಸ್ಪೆಶಲ್ ಆಫೀಸರರು ಈ ಜಿಲ್ಲೆಗೆ ಅಕ್ಕಿಯನ್ನು ರವಾನಿಸುವರೆ ಅಗತ್ಯವಿರುವ ರೈಲ್ವೆ ವ್ಯಾಗನ್ ಒದಗಿಸುವರೆ ಏರ್ಪಾಡು ಮಾಡುವರು.

ಪಿ. ಸೀತಾರಾಮ ಸೆವ್ಯಾ.

ಕಲೆಕ್ಟರ್. ದಕ್ಷಿಣ ಕನ್ನಡ.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್. ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರೆಕುವ ಸ್ಥಳಗಳು.— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್. ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜೀವದೋಷ, ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವಿಕೆ ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3 8-0.
ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—
ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ| ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣರಾಯರ ಮುನ್ನುಡಿ.
ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.
ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ
ಈಗ ೧೨ನೇ ಮುದ್ರಣವನ್ನು ಕಂಡಿದೆ—
ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು,
ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ.)
ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.
ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 105/1954.

ರಾಂಭಣಿ—ಪದ್ಮನಾಭನ ವಿಧವೆ—2. ರವೀಂದ್ರ. 3. ಪ್ರಫುಲ್ಲಾ. 4. ಲೋಹಿತ. 5. ಕಿಶೋರ. ಮೈನರರು—ಪದ್ಮನಾಭನ ಮಕ್ಕಳು ಕ್ಷೇಮಚಿಂತಕಳು ತಾ 1ನೆ ಅರ್ಜಿದಾರಳು ಉಡುಪಿ ತಾಲೂಕು—ಮಣಿಪುರ ಗ್ರಾಮ—

ಅರ್ಜಿದಾರ್ರು—

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಸದ್ರಿ ಅರ್ಜಿ ವ್ಯವಹರಣೆಯ 1ನೆ ಅರ್ಜಿದಾರಳ ಗಂಡ, ಬಾಕಿ ಅರ್ಜಿದಾರರ ತಂದೆ ಮೃತ ಪದ್ಮನಾಭಗೆ—ಪೋಸ್ಟಲ್ ಡಿಪಾರ್ಟಮೆಂಟಿನಿಂದ—ಪೋಲಿಸಿ ನಂಬ್ರ 15,100 C ನೇ ಬಾಬ್ತು ಸಿಕ್ಕತಕ್ಕ ಆಯಿವೇಜು ವಸೂಲು ಪಡಿಯುವರೆ—ಅಳಿಯಸಂತಾನ ಆಕ್ಟು ಪ್ರಕಾರ—ತಾವು ಹಕ್ಕುದಾರರೆಂತಲೂ—ಆ ಕುರಿತು 1ನೆ ಅರ್ಜಿದಾರಳ ಹೆಸರಿಗೆ—ಸಕ್ಸೆಸನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ದಾಖಲ್ಲು ಮಾಡಿದ—ಮೇಲ್ಕಂಡ ಅರ್ಜಿ ತಾ. 11-8-1954ಕ್ಕೆ ತನ್ನಿ ಬಗ್ಗೆ ಇಡೋಣಾಗಿಯದೆ—ಆಕ್ಷೇಪ ಹೇಳತಕ್ಕವರು ಇದ್ರೆ ಆ ದಿವ್ಸ 11 ಗಂಟೆಗೆ ಸದ್ರಿ ಕೋರ್ಟು ಮುಂದೆ—ಹಾಜರಾಗಿ—ಜಾಹೀರು ಮಾಡಿಕೊಳ್ಳತಕ್ಕದ್ದು—ಎಂಬ ಸಂಗ್ತಿ ತಿಳಿಸೋಣಾಗಿಯದೆ.

N. V. KAMATH
Advocate for Petitioner.

ಉಡುಪಿ—19—7—54.

ಮಂಗಳೂರು

ಡಿಫ್ತೀರಿಯಾರೋಗ ಬಾಧೆ — ಮಂಗಳೂರಲ್ಲಿ ಡಿಫ್ತೀರಿಯಾ (ಗಂಟಲೊಳಗಿನ ರೋಗ) ದಿಂದ ಪೀಡಿತರಾಗಿ ಕೆಲವು ಮಕ್ಕಳ ಮರಣ ಉಂಟಾಗಿದೆ ಎಂದು ತಿಳಿದುಬರುತ್ತದೆ. ಈ ರೋಗ ಬಾಧೆಯು ಹಬ್ಬುತ್ತಲಿದೆ ಯಾದುದರಿಂದ, ಇದರ ಸೋಂಕಣೆ ಇದ್ದವರಿಗೆ, ವಿಶೇಷವಾಗಿ ಮಕ್ಕಳಿಗೆ ದಾಕು ಹಾಕಿಸುವ ಅತ್ಯಾವಶ್ಯಕತೆಯಿದೆ. ನಗರ ಸಭೆಯ ಆಫೀಸಿನಲ್ಲಿ ಧರ್ಮಾರ್ಥವಾಗಿ ದಿನಂಪ್ರತಿ ಅಪರಾಹ್ನ 4ರಿಂದ 5ರ ತನಕ ದಾಕು ಹಾಕುವ ವ್ಯವಸ್ಥೆ ಮಾಡಲಾಗಿದೆ. ತಮ್ಮ ತಮ್ಮ ಖಾಸಗಿ ಡಾಕ್ಟರುಗಳಿಂದ ದಾಕು ಹಾಕಿಸಿಕೊಳ್ಳಲಿಚ್ಛಿಸುವವರು ಸದ್ರಿ ಡಾಕ್ಟರುಗಳಿಂದ ಚೀಟು ಪಡಕೊಂಡು ತಂದಲ್ಲಿ ದಾಕಿನ ಔಷಧಿಯನ್ನು ಧರ್ಮಾರ್ಥವಾಗಿ ನಗರಸಭೆಯ ಕಚೇರಿಯಲ್ಲಿ ಒದಗಿಸಲಾಗುವುದೆಂದು ತಿಳಿದುಬರುತ್ತದೆ.

ದರಿದ್ರರ ಸೇವೆಯಲ್ಲಿ ವಿದ್ಯಾರ್ಥಿಗಳ ಪಾತ್ರ— ಸ್ಥಳೀಯ ಸೈಂಟ್ ಎಲೋಸಿಯುಸ್ ಕಾಲೇಜಿನ ಸಮಾಜಸೇವಾ ದಳದ ಸಭೆಯು ತಾ. 12ರಲ್ಲು ಜರಗಿತು. ಕಾಲೇಜಿನ ವೈಸ್ ಪ್ರಿನ್ಸಿಪಾಲ್ ರೆ| ಫಾ| ಜೆ. ಸಿಕೇರರು ಭಾಷಣಮಾಡುತ್ತಾ ಸಮಾಜ ಹಾಗೂ ದರಿದ್ರರ ಸೇವೆಯಲ್ಲಿ ವಿದ್ಯಾರ್ಥಿಗಳು ವಹಿಸಬಹುದಾದ ಪಾತ್ರವನ್ನು ವಿವರಿಸಿದರು. ಸೇವಾದಳದ ಕಡೆಯಿಂದ ನಡೆಸಲಾಗುವ ವಯಸ್ಕರ ಶಾಲೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಬೇಕೆಂದು ಉಪದೇಶವಿತ್ತರು. ದಳದ ಅಧ್ಯಕ್ಷ ಶ್ರೀ ಎ. ಸಿ. ಮಥಾಯಿ, ಅವರು ವಂದನೆಗಳನ್ನರ್ಪಿಸಿದರು.

ಆನಂದ ಕಲಾ ಸಂಘದ — ನಾಯಕ ಮಂಡಳಿ ಸಭೆಯೊಂದು ತಾ. 11ರಲ್ಲು ಉಪಾಧ್ಯಕ್ಷ ಶ್ರೀ ಕೆ. ಕೆ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಮುಂದಿನ ಆಗೋಸ್ತು ತಿಂಗಳಲ್ಲಿ ಧರ್ಮಾರ್ಥ ವಿವಿಧ ವಿನೋದಾವಳಿ ಪ್ರದರ್ಶನ ಮೀಯಬೇಕೆಂದು ನಿರ್ಧಾರವಾಯಿತು.

ತೆರಿಗೆದಾರರ ಸಂಘದ — ಕಾರ್ಯನಿರ್ವಾಹಕ ಮಂಡಳಿಯ ಸಭೆಯು ತಾ. 11ರಲ್ಲು ಶ್ರೀ ಡಿ. ಮೋಹನ ರಾಯರ ಅಧ್ಯಕ್ಷತೆಯಲ್ಲಿ ಸೇರಿತು. ಇತ್ತೀಚೆಗೆ ಏರಿಸಿದ ಸ್ವತ್ತು ತೆರಿಗೆಯನ್ನು ರದ್ದು ಪಡಿಸುವಂತೆ ಕೇಳಿಕೊಳ್ಳುವ ಮನವಿಯೊಂದನ್ನು ಮದ್ರಾಸಿನ ಸ್ಥಳೀಯ ಸಂಸ್ಥೆಗಳ ಇಲಾಖಾ ಮಂತ್ರಿಗಳಿಗೆ ಕಳುಹಿಸಬೇಕೆಂದೂ, ಸರಕಾರವು ಮನವಿಗೆ ಹುಕುಂ ಕೊಡುವ ತನಕ ಮುನಿಸಿಪಲ್ ಕಮಿಶನರರು ರಿವಿಜನ್ ಅಪೀಲುಗಳನ್ನು ವಿಮರ್ಶಿಸುವುದನ್ನು ನಿಲ್ಲಿಸುವಂತೆ ಸ್ತಂಭನ ಆಜ್ಞೆಯನ್ನು ಕೊಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದೂ ಗೊತ್ತುವಳಿಗಳಾದುವು.

ಹಾಲು ಸರಬರಾಯಿ ಕುರಿತು ಭಾಷಣ — ಮಂಗಳೂರು ರೋಟರಿ ಕ್ಲಬ್ಬಿನ ಸಭೆಯೊಂದು ತಾ. 8ರಲ್ಲು ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಪುತ್ತೂರು ತಾಲೂಕಿನ ಕ್ಯೊಲದಲ್ಲಿ ಸರಕಾರದಿಂದ ಸ್ಥಾಪಿಸಲಾದ ಜಿಲ್ಲಾ ಪಶು ಅಭಿವೃದ್ಧಿ ಕೇಂದ್ರದ ಕಾರ್ಯಗಳ ಕುರಿತು ಮದ್ರಾಸು ಪ್ರಾಂತದ ಪಶು ಅಭಿವೃದ್ಧಿ ಬೋರ್ಡಿನ ಸದಸ್ಯ ಡಾ| ಕೆ. ಬಾಲಪ್ಪ ಸೆಟ್ಟರು ಭಾಷಣವಿತ್ತರು. ಈ ಪಶು ಅಭಿವೃದ್ಧಿ ಕೇಂದ್ರದಿಂದ ಹಾಲು ಮತ್ತು ಮೊಟ್ಟೆಗಳ ಮಾರಾಟದಿಂದ ಸಾಧಾರಣವಾಗಿ ಒಂದೂವರೆ ಲಕ್ಷ ರೂಪಾಯಿ ಜಮೆಯಾಗುವುದು. ಕೇಂದ್ರದ ಖರ್ಚು ವರ್ಷಕ್ಕೆ ಎರಡು ಲಕ್ಷ ರೂಪಾಯಿಗಳಷ್ಟಿದೆ. ಈ ಕೇಂದ್ರದ ಹಾಲು ಕೊಡುವ ದನ ಮತ್ತು ಎಮ್ಮೆಗಳನ್ನು ಮಂಗಳೂರಿಗೆ ತಂದು ಸಾಕುವ ವ್ಯವಸ್ಥೆಯನ್ನು ನಗರಸಭೆ ಅಥವಾ ಬೇರಾವ ಸಂಸ್ಥೆಗಳು ವಹಿಸುವುದಿದ್ದರೆ ಆ ಬಗ್ಗೆ ಸರಕಾರವನ್ನು ಒತ್ತಾಯ ಪಡಿಸಬಹುದೆಂದೂ, ಈ ವ್ಯವಸ್ಥೆಯಿಂದಾಗಿ ಪೇಟೆಯಲ್ಲಿ ಉತ್ತಮ ತಳಿದ ಹಾಲನ್ನು ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಕೊಡಲು ವ್ಯವಸ್ಥೆ ಮಾಡಬಹುದೆಂದೂ, ಅಂತೆಯೇ ಸ್ಥಳೀಯ ಬರಡು ಪಶುಗಳನ್ನು ಕಾಪಾಡುವ ವ್ಯವಸ್ಥೆಯನ್ನು ನಗರಸಭೆಯಾಗಲಿ ಯಾ ಇನ್ನಾವ ಸಂಸ್ಥೆಗಳು ವಹಿಸುವುದಾದರೆ ವೆಚ್ಚದ 75% ದಷ್ಟು ಧನ ಸಹಾಯ ಕೇಂದ್ರ ಸರಕಾರದಿಂದ ದೊರೆಯಬಹುದೆಂದೂ ಡಾ| ಸೆಟ್ಟರು ತಮ್ಮ ಭಾಷಣದಲ್ಲಿ ಹೇಳಿದರು.

ನಗರಸಭೆಯ ನಳ್ಳಿ ನೀರಿನ ಸಾಲ

ಮಂಗಳೂರು ನಗರದಲ್ಲಿ ನಳ್ಳಿನೀರಿನ ಸರಬರಾಯಿ ಯೋಜನೆಗಾಗಿ ನಗರಸಭೆಯು $17\frac{1}{2}$ ಲಕ್ಷ ರೂಪಾಯಿಯ ಸಾಲಪತ್ರ ಲು ನಿರ್ಧರಿಸಿದಂತೆ ಇದೇ ತಾ. 15ರಲ್ಲು ಪೂರ್ವಾಹ್ನ 11 ಗಂಟೆಗೆ ಸಾಲದ ಚಂದಾವನ್ನು ಸ್ವೀಕರಿಸಲಾಯಿತು. ಹತ್ತು ನಿಮಿಷಗಳೊಳಗಾಗಿ ಸಾಲದ ಚಂದಾಹಣವು ರೂ. 32,71,300 ಆಯಿತು. ಉಡುಪಿಯ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನ ಕಡೆಯಿಂದ (ಕೆನರಾ ಮ್ಯೂಚುವಲ್ ಇನ್ಶೂರೆನ್ಸ್ ಕಂಪೆನಿಯ ಹತ್ತು ಲಕ್ಷ ಕೂಡಾ) $17\frac{1}{2}$ ಲಕ್ಷ ಸಾಲ ದೊರೆಯಿತು. ಉಳಿದ ಸಂಸ್ಥೆಗಳು ಕೊಟ್ಟ ಸಾಲದ ವಿವರಗಳು ಹೀಗಿವೆ:- ಕೆನರಾ ಬೇಂಕಿಂಗ್ ಕೊರ್ಪರೇಶನ್ ಲಿಮಿಟೆಡ್ 3 ಲಕ್ಷ, ಕರ್ನಾಟಕ ಬೇಂಕ್ $2\frac{1}{2}$ ಲಕ್ಷ, ಕೆನರಾ ಬೇಂಕ್ 2 ಲಕ್ಷ, ಕಥೋಲಿಕ್ ಬೇಂಕ್ 2 ಲಕ್ಷ, ಜಯಲಕ್ಷ್ಮೀ ಬೇಂಕ್ 1 ಲಕ್ಷ. ಮೊಸ್ಯುಲರ್ ಇನ್ಶೂರೆನ್ಸ್ ಕಂಪೆನಿ 1 ಲಕ್ಷ, ವಿಜಯ ಬೇಂಕ್ 50,000, ಉಡುಪಿ ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ 10,000 ಇದೇ ರೀತಿಯಲ್ಲಿ ಇತರ ಬೇಂಕುಗಳೂ ಸಂಸ್ಥೆಗಳೂ ಸಾಲ ಕೊಟ್ಟಿವೆ. ವೈಯಕ್ತಿಕವಾಗಿಯೂ ಪದಿನೈದು ಸಾವಿರ, ಹತ್ತು ಸಾವಿರ ಹಾಗೂ ಕಡಿಮೆ ಎಂದರೆ ಒಂದುನೂರು ರೂಪಾಯಿ ಸಾಲ ಕೊಟ್ಟವರೂ ಇರುವರು. ಹೀಗೆ ಸಾಲ ಕೊಟ್ಟವರಿಂದ ಹತ್ತು ಸಾವಿರ ಮತ್ತು ಅದಕ್ಕೂ ಕಡಿಮೆಯ ಮೊತ್ತಗಳನ್ನು ಮಾತ್ರ ಸ್ವೀಕರಿಸಲಾಗುವುದೆಂದೂ ಹೆಚ್ಚಿನವುಗಳಿಂದ ಸೇಕಡಾ 48ರಷ್ಟು ಸ್ವೀಕರಿಸಲಾಗುವುದೆಂದೂ ಹೇಳಲಾಗಿದೆ.

ಪ್ರೋಟ್ರೇಟ್ ಟ್ರಸ್ಟ್ — ಮಂಗಳೂರು ಪೋರ್ಟ್ರ್ಯಾ ಟ್ರಸ್ಟಿಗೆ ಪಂಚನ ಮಾಲಕರ ಕಡೆಯಿಂದ ಶ್ರೀಗಳಾದ ಎಫ್. ಎಕ್ಸ್. ಡಿ'ಸಿಂಟೋ ಮತ್ತು ಗಜಾನನ ರಾವ್ ಪಂಡಿತರು ಆರಿಸಲ್ಪಟ್ಟಿರುವರು. ಬಂದರದ ಮಜೂರ ಸಂಘದ ಪರವಾಗಿ ಶ್ರೀ ಎ. ಶಾಂತಾರಾಂ ಪೈಗಳವರು ಚುನಾಯಿತರಾಗಿದ್ದಾರೆ.

ಸತ್ಕಾರಕೂಟ — ಮಂಗಳೂರು ವಕೀಲ ಗುಮಾಸ್ತರ ಸಂಘದ ಮಾಜಿ ಅಧ್ಯಕ್ಷ ಶ್ರೀ ಕೆ. ಪಾಂಡುರಂಗ ಭಕ್ತರು ನಿವೃತ್ತಿ ಹೊಂದಿದ ಕಾರಣ ಅವರಿಗೊಂದು ಸತ್ಕಾರಕೂಟವು ಪ್ರಿನ್ಸಿಪಾಲ್ ಸಬೋರ್ಡಿನೇಟ್ ಜಡ್ಜರಾದ ಶ್ರೀ ಟಿ. ಎಸ್. ಅನವರತಂ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಬಿ. ವೈಕುಂಠ ಬಾಳಿಗ, ಬಿ. ವೆಂಕಟ್ರಾವ್ ಮೊದಲಾದವರು ಮುಖ್ಯ ಅತಿಥಿಯ ಕುರಿತು ಮಾತನಾಡಿದರು.

ಆಶಾಢ ಶುಕ್ಲ ಪೂರ್ಣಿಮಾ — ಸ್ಥಳೀಯ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ತಾ. 15ರಲ್ಲು ಶ್ರೀ ಬಿ. ಭುಜಂಗ ರಾಯರ ಅಧ್ಯಕ್ಷತೆಯಲ್ಲಿ 'ಆಶಾಢ ಶುಕ್ಲ ಪೂರ್ಣಿಮಾ ದಿನಾಚರಣೆ ನಡೆಯಿತು. ಕಲಾಪುತ್ರಿ ಕುಮಾರಿ ವಿಮಲಾ ಪಂಡೆಯವರ ಸ್ವಾಗತ ಮಾತುಗಳಾದ ನಂತರ ಕುಮಾರಿಯರು ಚಂದ್ರಮತಿ ಮತ್ತು ಎಸ್. ಅರುಣಾ, ಅವರು ಬುದ್ಧನ ಜೀವನ ಮತ್ತು ಉಪದೇಶಗಳ ಮೇಲೆ ಬರೆದ ಪ್ರಬಂಧ ಓದಿದರು.

ಅಶೋಕ ಫಾರ್ಮೆಸಿ — ಕುಲಶೇಖರದಲ್ಲಿ ಡಾ| ಕೆ. ಗೋವಿಂದ ಪಣಿಕ್ಕರ್‌ರವರ ಅಶೋಕ ಫಾರ್ಮೆಸಿ ಆಯುರ್ವೇದ ಚಿಕಿತ್ಸಾ ಮಂದಿರವನ್ನು ತಾ. 11ರಲ್ಲು ಡಾ| ಕೆ. ನಾಗಪ್ಪ ಆಳ್ವರು ಉದ್ಘಾಟಿಸಿದರು. ಸಂಸ್ಥೆಗೆ ಶ್ರೇಯೋಭಿವೃದ್ಧಿಯನ್ನು ಹಾರೈಸಿ ಶ್ರೀ ಗೋಪಿಂದ ವೈದ್ಯರು ಮಾತನಾಡಿದರು.

ನೆರೆಯ ಪ್ರವಾಹದ ಅನಾಹುತ— ತಾ. 17ರಲ್ಲು ಸಂಜೆ ಸಮಯಕ್ಕೆ ಮಂಗಳೂರಿನ ಬಳಿಯ ಅಳಪೆಯಲ್ಲಿನ ಪಾವ್ಲ್ ತಾರೋರವರ ಮಗಳು ಸಾಧಾರಣ ಹತ್ತು ವರ್ಷ ಪ್ರಾಯದ ಲೀನಾ ಎಂಬಾಕೆಯು ತೋಡಿನಲ್ಲಿ ಏರಿಬಂದ ನೆರೆಯ ಪ್ರವಾಹಕ್ಕೆ ಸಿಲುಕಿ ಕೊಚ್ಚಿಹೋದಳೆಂದೂ ಮರುದಿವಸ ಬೆಳಿಗ್ಗೆ ಆಕೆಯ ಶವವು ಕಣ್ಣೂರು ಗ್ರಾಮದ ಬಡಿಲ ಗುತ್ತಿನ ಬಳಿ ಸಿಕ್ಕಿತೆಂದೂ ವರದಿಯಾಗಿದೆ. ಅಂತೆಯೇ ಪಡಂಬೂರಿಗೆ ಹೋಗುತಿದ್ದ ಸುಮಾರು 45 ವರ್ಷ ಪ್ರಾಯದ ಗಂಡಸೊಬ್ಬರು ಕೂಳೂರಿನ ಬಳಿಯಲ್ಲಿ ರಾತ್ರಿವೇಳೆ ನೆರೆಪ್ರವಾಹಕ್ಕೆ ಸಿಕ್ಕಿದರೆಂದೂ ಮರುದಿನ ಅವರ ಶವ ದೊರೆಯಿತೆಂದೂ ಹೇಳಲಾಗಿದೆ ದ. ಕ. ಜಿಲ್ಲೆಯ ವಲವೆಡೆಗಳಲ್ಲಿ ನೆರೆಯಿಂದ ನಷ್ಟ ಸಂಭವಿಸಿದೆಯಾಗಿ ಹೇಳಲಾಗುತ್ತಿದೆ.

ಲೋಹಿಯಾ ದಿನಾಚರಣೆ — ಪ್ರಜಾ ಸೋಶಲಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿ ಡಾ| ರಾಮಮನೋಹರ ಲೋಹಿಯಾರವರನ್ನು ಉತ್ತರ ಪ್ರದೇಶ ಸರಕಾರವು ಬಂಧಿಸಿದುದನ್ನು ಖಂಡಿಸುವುದಕ್ಕಾಗಿ ತಾ. 18ರಂದು ಸ್ಥಳೀಯ ಪ್ರಜಾ ಸೋಶಲಿಸ್ಟ್ ಪಾರ್ಟಿ ಕಚೇರಿಯಲ್ಲಿ ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಶ್ರೀಗಳಾದ ಡಿ. ಮೋಹನರಾವ್, ಕೆ. ಕಮಲಾಕ್ಷ ಮತ್ತು ಡಾ| ಸಂಜೀವನಾಥರು ಮಾತನಾಡಿದ ಬಳಿಕ ಅಧ್ಯಕ್ಷರ ಭಾಷಣವಾಯಿತು. ಬಳಿಕ ಉತ್ತರ ಪ್ರದೇಶದ ಸರಕಾರ ನೀತಿಯನ್ನು ಖಂಡಿಸುವ ನಿರ್ಣಯ ಪಾಸಾಯಿತು. ಡಾ| ನಾಗಪ್ಪ ಆಳ್ವರು ವಂದನೆಗಳನ್ನರ್ಪಿಸಿದರು.

ಬೊಂಬಾಯಿ — ಮುನಿಸಿಪಲ್ ಕನ್ನಡ ಶಾಲೆಯೊಂದು ಇದೇ ತಾ. 8ರಲ್ಲು ಬಂದರ್ ಸ್ಟೇಶನ್ ರೋಡಿನಲ್ಲಿ ತೆರೆಯಲಾಗಿದೆ. ಈ ಶಾಲೆಯು ಕಳೆದ ತಿಂಗಳು ತನಕ ಬಂದರ್ ಕನ್ನಡ ಸೇವಾ ಸಮಿತಿಯ ಆಶ್ರಯದಲ್ಲಿ ಪಂಡಿತ ಎಸ್. ಕೆ. ಸುವರ್ಣರ ನಾಯಕತ್ವದಲ್ಲಿ ನಡೆಸಲಾಗಿತ್ತು. ಈಗ ಮುನಿಸಿಪಲ್ ಆಡಳಿತೆಗೊಳಪಟ್ಟು ನಡೆಯುವ, ಕನ್ನಡವೇ ಮಾಧ್ಯಮವಾಗಿರುವ ಈ ಶಾಲೆಗೆ ಕನ್ನಡಿಗರು ತಮ್ಮ ಮಕ್ಕಳನ್ನು ಕಳುಹಿಸುವರೆಂದು ನಂಬಲಾಗಿದೆ. ಸೇವಾ ಸಮಿತಿಯ ಆಶ್ರಯದಲ್ಲಿ ಐದು ವರ್ಷಗಳೊಳಗಿನ ಮಕ್ಕಳಿಗೆ ಪ್ರತ್ಯೇಕ ಶಿಂಡೆಗೊಂದು ಬಂದರ್ ಅಗ್ರ ರೋಡಿನ ಶ್ರೀ ನಿತ್ಯಾನಂದ ಗುರು ಮಂದಿರದಲ್ಲಿ ನಡೆಸಲಾಗುತ್ತಿದೆ.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ

ಚಿಲ್ಲರೆಯಾಗಿಯೂ ದೊರೆಯುತ್ತವೆ

100 ಯಾ 500ಕ್ಕೆ ಅತೀ ರಿಯಾಯತಿ ಇದೆ.

ಉತ್ತಮ ಕಾಗದದ, ದಪ್ಪನಾದ ಹೊರಕವಚದ, ಎಲ್ಲಾ ತರದ

ಎಕ್ಸ್‌ಸೈಜ್ ಸ್ಲ್ಯಾಬ್

ಪುಸ್ತಕಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಪಥತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಪರೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಕ್ರ. ರೂ. 5/- ಸ್ಪೆಶಲ್ ರೂ. 8/- (ವಿ.ಪಿ.ಪಿ. ಪ್ರತ್ಯೇಕ)

Mrs. P. DEVEE, P. Ds (N. J)
CALCUTTA - 10

ಸ್ಟಾಕಿಸ್ಟರು: ದವಾ ಕಂಪೆನಿ, ಮಂಗಳೂರು.

ಡಿ. ಕೆ. ಭಾರದ್ವಾಜರ

ಇಂಗ್ಲಿಷ್ × ಇಂಗ್ಲಿಷ್ ಕನ್ನಡ ಡಿಕ್ಸನೆರಿ

ವಿದ್ಯಾರ್ಥಿಗಳಿಗೆ ಅತ್ಯುಪಯುಕ್ತವಾದ ದೊಡ್ಡ ಸೈಜಿನ ನಿಘಂಟು.

ಬೆಲೆ ರೂ. 5-6-0

ನವಭಾರತ ಬುಕ್ ಡಿಪ್ಪೊ, ಉಡುಪಿ.

ನವಯುಗ ಪ್ರೆಸ್, ಉಡುಪಿ.

(೩ನೇ ಪುಟದಿಂದ)

ಕುವಂತೆ ಮಾಡಲು ವಿಕಿರಣ ಕ್ರಿಯೆಯನ್ನು ಬಳಸಲಾಗುತ್ತದೆ. ಅರ್ಥಾತ್ ಈ ಅಣುಕುಲುಮೆಯು ಯುರೇನಿಯಂ ಧಾತುವಿನ ಚೇತನಾಂಶವನ್ನು ಇಂಧನವಾಗಿ ಉಪಯೋಗಿಸುತ್ತಿರುವಾಗ ತಾನು ನಿಜವಾಗಿ ಬಳಸುವುದಕ್ಕಿಂತ ಎಷ್ಟೋ ಹೆಚ್ಚು ಪ್ರಮಾಣದಲ್ಲಿ ಯುರೇನಿಯಂ ಚೇತನವನ್ನು ಹುಟ್ಟಿಸುತ್ತದೆ. ಕುಲುಮೆಗೆ ಹಾಕಿದ್ದಕ್ಕಿಂತಲೂ ಹೆಚ್ಚು ಕಲ್ಲಿದ್ದಲನ್ನು ಅದರಿಂದ ಹೊರ ತೆಗೆಯಲು ಸಾಧ್ಯವಾದಂತೆ ಈ ವಿಚಿತ್ರವನ್ನು ವರ್ಣಿಸಬಹುದು. ಈ ಯಂತ್ರವನ್ನು ಉಪಯೋಗಿಸುವುದರಿಂದ ನಾವು ಉಪಯೋಗಿಸಿದ ಅಣುಶಕ್ತಿಗಿಂತ ಎಷ್ಟೋ ಹೆಚ್ಚು ಪಾಲು ಅಣುಶಕ್ತಿಯ ಸಂಗ್ರಹ ಮಾಡಿಕೊಂಡಂತೆ ಆಗುತ್ತದೆ; ಅಲ್ಲದೆ, ಅಗೆದು ತೆಗೆಯಬಹುದಾದ ಯುರೇನಿಯಂ ಅದುರೆಲ್ಲವನ್ನೂ ಅಣುಶಕ್ತಿಯ ಉತ್ಪಾದನೆಗೋಸ್ಕರ ಬಳಸುವಂತಾಗುತ್ತದೆ. ತನ್ನ ನಿಸರ್ಗ ರೂಪದಲ್ಲಿ ಯುರೇನಿಯಂ ಸಾವಿರದಲ್ಲಿ ಏಳು ಅಂಶವನ್ನು ಮಾತ್ರ ಚೈತನ್ಯಪೂರ್ಣವಿರುತ್ತದೆ; ಉಳಿದುದೆಲ್ಲ ಜಡ. ಇಷ್ಟರವರೆಗೆ ಚೈತನ್ಯಪೂರ್ಣ ಅಂಶವನ್ನು ಯುರೇನಿಯಂ ಧಾತುವಿನಿಂದ ಬೇರ್ಪಡಿಸಿ ಅದನ್ನು ಮಾತ್ರ ಶಕ್ತಿಯ ರೂಪದಲ್ಲಿ ಬಳಸುತ್ತಿದ್ದರು. ಇನ್ನು ಮುಂದೆ ಈಗ ಕಟ್ಟಲಾದ ಯಂತ್ರ ವಿಶೇಷದ ನೆರವಿನಿಂದ ಪ್ರತಿಯೊಂದೂ ರಾತಲು ಯುರೇನಿಯಮನ್ನು ಉಪಯೋಗಿಸಿ, ೧೪೦ ಪಾಲು ಹೆಚ್ಚು ಶಕ್ತಿಯನ್ನು ಪಡೆಯಲು ಸಾಧ್ಯವಾಗುತ್ತದೆ. ಈ ಯಂತ್ರವು ಥೋರಿಯಂ ಧಾತುವನ್ನು ನವ ಇಂಧನವಾಗಿ ಪರಿವರ್ತಿಸುವ ಶಕ್ತಿಯನ್ನು ಹೊಂದಿರುತ್ತದೆ.

ವಿಪುಲ ನಿಧಿ

ಅಮೆರಿಕದ ಅಣುಶಕ್ತಿಯನ್ನು ಶಾಂತಿ ಕಾಲದಲ್ಲಿ ಬಳಸಲು ತೊಡಗಿದರೆ, ಸಾಕಷ್ಟು ಖನಿಜ ದ್ರವ್ಯಗಳು ದೊರೆತಾವೇ ಹೇಗೆಂಬ ಸಂಶಯ ಉಳಿಯಲಾರದು. ಇನ್ನು ಮುಂದಿನ ಹಲವು ಶತಮಾನಗಳವರೆಗೆ ಉಪಯೋಗಿಸುತ್ತಿದ್ದರೂ ಮುಗಿಯದಷ್ಟು ಯುರೇನಿಯಂ ಮತ್ತು ಥೋರಿಯಂ ಧಾತುಗಳ ನಿಕ್ಷೇಪವು ಭೂಗರ್ಭದಲ್ಲಿ ಇದೆಯೆಂದು ಹೇಳಬಹುದು. ಕೆನಡಾ, ಅಮೇರಿಕಾ ಮತ್ತಿತರ ಪಶ್ಚಿಮಾರ್ಧ ಗೋಲದ ರಾಷ್ಟ್ರಗಳು ವಿಸ್ತಾರವಾದ ಅಣು ಖನಿಜ ನಿಕ್ಷೇಪಗಳನ್ನು ಪಡೆದಿರುತ್ತವೆ. ಈ ರಾಷ್ಟ್ರಗಳು ಅಣುಶಕ್ತಿಯನ್ನು ಶಾಂತಿಕಾಲದಲ್ಲಿ ಬಳಸುವ ಕುರಿತಾಗಿ ಅಧಿಕ ಜಿಜ್ಞಾಸೆಯನ್ನೂ ತೋರಿಸುತ್ತವೆ. ಆದರೆ ಇವಕ್ಕೂ ಹೆಚ್ಚಿನ ನಿಕ್ಷೇಪವು ಇನ್ನೂ ಅಭಿವೃದ್ಧಿಯನ್ನು ಹೊಂದದ ಜಗತ್ತಿನ ಭೂಭಾಗಗಳಲ್ಲಿದೆಯೆಂದು ಹೇಳಬಹುದು. ಭಾರತದ ತಿರುವಾಂಕೂರು ಕೊಚ್ಚಿ ರಾಜ್ಯದ ಮೋನೊಜ್ಯಾಟ್ ಮರಳು ಹೇರಳ ಥೋರಿಯಂ ಧಾತುವಿನಿಂದ ಕೂಡಿದ್ದು, ಸರಕಾರವು ಇದರ ನಿರ್ಯಾತವನ್ನು ಪ್ರತಿಬಂಧಿಸಿ, ಈ ಅಪಾರ ಶಕ್ತಿಯನ್ನು ದೇಶದೊಳಗೆಯೇ ವಿಧಾಯಕ ಕಾರ್ಯಗಳಿಗೆ ಬಳಸಲು ನೋಡುತ್ತಿದೆ. ಆಫ್ರಿಕಾದ ಬೆಲ್ಜಿಯಂ ಕಾಂಗೋ ಪ್ರದೇಶದಲ್ಲಿ ಜಗತ್ತಿನಲ್ಲಿಯೇ ಅತ್ಯಮೂಲ್ಯವಾದ ಯುರೇನಿಯಂ ಭಂಡಾರವನ್ನು ಕಾಣುತ್ತೇವೆ. ಬ್ರೆಜಿಲು ರಾಷ್ಟ್ರದಲ್ಲಿ ಯುರೇನಿಯಂ ಹಾಗು ಥೋರಿಯಂ ಧಾತುಗಳೆರಡೂ ಕಂಡು ಬರುತ್ತವೆ. ಆಸ್ಟ್ರೇಲಿಯಾದಲ್ಲಿ ಯುರೇನಿಯಂ ಧಾತು ಸಿಗುತ್ತದೆಂದು ಈಚೆಗೆ ಕಂಡು ಹಿಡಿದಿರುವರು: ಜಗತ್ತಿನ ಉತ್ಪಾದನೆಯಲ್ಲಿ ಆಸ್ಟ್ರೇಲಿಯಾ ಮೂರರಲ್ಲಿ ಒಂದಂಶವನ್ನು ಪೂರೈಸೀತೆಂದು ಹೇಳಲಾಗುತ್ತದೆ. ದಕ್ಷಿಣ ಆಫ್ರಿಕಾದಲ್ಲಿ ಚಿನ್ನದ ಗಣಿಗಳನ್ನು ಅಗೆಯುವವಾಗ ಅನುಪಯುಕ್ತವೆಂದು ಬಿಸುಟ ಕಲ್ಲು ಹರಳುಗಳಲ್ಲಿ ಯುರೇನಿಯಂ ಧಾತು ಇದೆಯೆಂದು ಗೊತ್ತಾಗಿರುತ್ತದೆ. ರಶಿಯಾ ಮತ್ತು ಚೀನಾ ದೇಶಗಳಲ್ಲಿಯೂ ಅಣು ಖನಿಜಗಳ ಸಂಗ್ರಹವು ವಿಪುಲವಾಗಿದೆಯೆಂದು ಕೇಳುತ್ತೇವೆ. ಆದುದರಿಂದ ಕೈಗಾರಿಕೆಗಳಲ್ಲಿ ಅಣುಶಕ್ತಿಯನ್ನು ಬಳಸುವ ವಿಚಾರ ಈ ಎಲ್ಲ ರಾಷ್ಟ್ರಗಳಿಗೂ ಸಂತೋಷವನ್ನುಂಟುಮಾಡುತ್ತದೆ. ರಶಿಯಾ ದೇಶವು ಇದೇ ಜೂನು ತಿಂಗಳ ೨೭ನೇ ತಾರೀಕಿನಂದು ಜಗತ್ತಿನಲ್ಲಿಯೇ ಮೊದಲನೆಯ ಅಣುಶಕ್ತಿಯ(?) ವಿದ್ಯುತ್ತನ್ನು ಉತ್ಪಾದಿಸುವ ಕೇಂದ್ರವನ್ನು ತೆರೆದಿತೆಂದು ಕುತೂಹಲಪ್ರದವಾದ ಸುದ್ದಿ ಬಂದಿರುತ್ತದೆ. ಅಣು ವಿಜ್ಞಾನದಲ್ಲಿ ಸಾಕಷ್ಟು ಮುಂದುವರಿದ ರಾಷ್ಟ್ರಗಳು ಪರಸ್ಪರ ಸಹಕರಿಸಿದ ಪಕ್ಷದಲ್ಲಿ ಬಡರಾಷ್ಟ್ರಗಳ ಅಭಿವೃದ್ಧಿ ಕಾರ್ಯದಲ್ಲಿ ಅಮೂಲ್ಯವಾದ ನೆರವು ದೊರಕೀತೆಂಬ ಆಶಾ ಕಿರಣ ಕಾಣಿಸುತ್ತದೆ.

ಶೈಕ್ಷಣಿಕ ಪ್ರಗತಿ ಅಗತ್ಯ

ಇದು ಸುಲಭದಲ್ಲಿ ಸಾಧ್ಯವಾಗುವ ಸಂಗತಿ ಮಾತ್ರ ಅಲ್ಲವೆಂದು ಇಲ್ಲಿ ಹೇಳುವುದೊಳಿತು. ಏಕೆಂದರೆ, ಅಣುಶಕ್ತಿಯ ಬೆಳವಣಿಗೆ ಮತ್ತು ಉಪಯೋಗದಲ್ಲಿ ರಸಾಯನ ಶಾಸ್ತ್ರಿಗಳೂ ಭೌತ ಶಾಸ್ತ್ರಿಗಳೂ ಭೂಗರ್ಭ ಶಾಸ್ತ್ರಿಗಳೂ ಇತರ ತಾಂತ್ರಿಕರೂ ಅಧಿಕ ಸಂಖ್ಯೆಯಲ್ಲಿ ದುಡಿಯಬೇಕಾಗುತ್ತದೆ. ಹಿಂದೆ ಪ್ರಸ್ತಾಪಿಸಿದ ವಿಶೇಷ ಮಾದರಿಯ ಯಂತ್ರವನ್ನು ಕಟ್ಟುವುದೂ ನಡೆಸುವುದೂ ಬಹಳ ಜಟಿಲವಾದ ಮತ್ತು ವೆಚ್ಚದ ಕೆಲಸ. ಅಷ್ಟು ನೈಪುಣ್ಯವನ್ನು ಹೊಂದಿದ ವಿಜ್ಞಾನಿಗಳೂ ತಾಂತ್ರಿಕರೂ ಎಲ್ಲ ದೇಶಗಳಲ್ಲಿ ದೊರೆಯಲಿಕ್ಕಿಲ್ಲ; ಅಲ್ಲದೆ, ಶಿಕ್ಷಣ ಕ್ಷೇತ್ರದಲ್ಲಿ ತೀರ ಹಿಂದುಳಿದ ಪ್ರದೇಶಗಳಲ್ಲಿ ಅಣುಶಕ್ತಿಯನ್ನು ಕೈಗಾರಿಕೆಗಳಲ್ಲಿ ಬಳಸುವಂತೆ ಮಾಡುವುದು ಕಷ್ಟ ಸಾಧ್ಯ. ಅಣುಶಕ್ತಿಯ ಅಂತಾರಾಷ್ಟ್ರೀಯ ನಿಯಂತ್ರಣವು ಸಾಧ್ಯವಾದಲ್ಲಿ ವಿಜ್ಞಾನದಲ್ಲಿ ತೀರ ಹೊಸ ಅಧ್ಯಾಯಗಳಾದ ಅಣು ಭೌತ ಶಾಸ್ತ್ರವೂ ಅಣು ರಸಾಯನ ಶಾಸ್ತ್ರವೂ ವಿಶ್ವವಿದ್ಯಾನಿಲಯಗಳಲ್ಲಿ ಕಲಿಸಲ್ಪಡುವ ವ್ಯವಸ್ಥೆ ಏರ್ಪಡಬಹುದು. ಎಲ್ಲ ದೇಶಗಳ ಕಾಲೇಜುಗಳೂ ಈ ವಿಷಯದಲ್ಲಿ ಪಾಠ ಹೇಳಬೇಕಲ್ಲದೆ, ಪ್ರಾಥಮಿಕ ಶಾಲೆಯ ಶಿಕ್ಷಣದಿಂದ ತೊಡಗಿ ಪ್ರೌಢ ಶಿಕ್ಷಣದ ವರೆಗೆ ಪ್ರತಿಯೊಂದು ಹಂತದಲ್ಲಿ ಅಣುವಿಷಯಕವಾದ ಉಚಿತ ಮಾಹಿತಿಯನ್ನು ನೀಡುವ ನೂತನ ಉಪಕ್ರಮವನ್ನೂ ಪ್ರಾರಂಭಿಸಬೇಕಾದೀತು. ಇಷ್ಟು ಜ್ಞಾನವನ್ನು ಒದಗಿಸುವ ವ್ಯವಸ್ಥೆ ಮಾಡದಿದ್ದರೆ, ಒಂದೇ ಒಂದು ಪರಮಾಣು ಘಟಕವನ್ನು ರಚಿಸುವುದೂ ಸಾಧ್ಯವಾಗಲಿಕ್ಕಿಲ್ಲ. ಆದುದರಿಂದ ವೈಜ್ಞಾನಿಕ ಹಾಗು ತಾಂತ್ರಿಕ ತರಬೇತಿಯನ್ನೂ ವೃತ್ತಿ ಶಿಕ್ಷಣವನ್ನೂ ಹಿಂದುಳಿದ ದೇಶಗಳಲ್ಲಿ ಧಾರಾಳವಾಗಿ ಕೊಡುತ್ತಿರಬೇಕಾಗುವುದು. ಅಲ್ಲದೆ ಕೈಗಾರಿಕೆಗಳೆಲ್ಲವೂ ಅಣುಶಕ್ತಿಯನ್ನು ಬಳಸ ತೊಡಗಿದರೆ, ದೇಶದ ಆರ್ಥಿಕ ವ್ಯವಸ್ಥೆಯ ಮೇಲೆ ಇದರಿಂದ ಗಾಢವಾದ ಪರಿಣಾಮವಾದೀತು. ಇದರ ಅಂದಾಜನ್ನು ಕಟ್ಟಬಲ್ಲ ದೂರದರ್ಶಿಗಳು ವಿರಳವಾಗಿಯೇ ಕಾಣಿಸುತ್ತಾರೆ—ಅಂಥವರ ನೆರವನ್ನು ಪಡೆಯಲೂ ಯತ್ನಿಸಬೇಕು. ಕೈಗಾರಿಕೆಗಳ ರಂಗವನ್ನು ಮೀರಿ, ಕೃಷಿ ಕ್ಷೇತ್ರಕ್ಕೆ ಅಣುಶಕ್ತಿಯು ವ್ಯಾಪಿಸಿತೆಂದರೆ, ೧೫೦ ವರ್ಷಗಳ ಹಿಂದೆ ಯುರೋಪಿನಲ್ಲಿ ಉಗಿ ಶಕ್ತಿಯು ಉಂಟು ಮಾಡಿದ ಅಲ್ಲೋಲ ಕಲ್ಲೋಲವನ್ನು ಹಿಂದುಳಿದ ದೇಶಗಳಲ್ಲಿ ಕಾಣುವಂತಾದೀತು.

ಸಾವಿರ ಉಪಕಾರ

ಇದನ್ನು ಕಂಡರೆ, ಅಣುಶಕ್ತಿಯು ಈಗಲೇ ಶಾಂತಿ ಕಾಲದ ಉಪಯೋಗಕ್ಕೆ ಬಳಸಲ್ಪಡುವ ಸಂಭವ ಕಡಿಮೆಯೆಂದೇ ತೋರುತ್ತದೆ. ಹಾಗೆಂದು ಪಾಶ್ಚಾತ್ಯ ರಾಷ್ಟ್ರಗಳು ತಮ್ಮ ಸಾಹಸವನ್ನು ಬಿಟ್ಟುಗೊಟ್ಟಿಲ್ಲ. ಇಂಗ್ಲೆಂಡಿನ ಹಾರ್ವೆಲದಲ್ಲಿ ಈಗಾಗಲೇ ಇಂತಹ ಪ್ರಯತ್ನವೊಂದು ಕೈಗೊಳ್ಳಲಾಗಿದ್ದು ಕಂಬರ್‌ಲೇಂಡಿನ ಕಾಲ್ಡರ್ ಹಾಲಿನಲ್ಲಿ ಪರಮಾಣು ಘಟಕವೊಂದು ನಿರ್ಮಾಣವಾಗುತ್ತಿದೆ. ಸ್ಕಾಟ್‌ಲೇಂಡಿನಲ್ಲೂ ಒಂದು ಘಟಕ ಇಷ್ಟರಲ್ಲೇ ಸ್ಥಾಪಿಸಲ್ಪಡುತ್ತದೆ. ಅಮೇರಿಕದಲ್ಲಿ ಪ್ರಯೋಗಾತ್ಮಕ ಮಟ್ಟದಲ್ಲಿ ಪರಮಾಣು ಘಟಕಗಳನ್ನು ನಿರ್ಮಿಸುವ ದಿನಗಳು ಹೋಗಿ, ಪಿಟ್ಸ್‌ಬರ್ಗ್ ಪ್ರದೇಶಕ್ಕೆಲ್ಲ ವಿದ್ಯುತ್ತನ್ನು ಒದಗಿಸಬಲ್ಲ ದೊಡ್ಡ ಅಣುಶಕ್ತಿಯ ಕೇಂದ್ರವೊಂದು ತಲೆಎತ್ತುವಂತಾಗಿರುತ್ತದೆ. ಕಲ್ಲಿದ್ದಲಿನಿಂದ ಉತ್ಪಾದಿಸಬಹುದಾದ ವಿದ್ಯುಚ್ಛಕ್ತಿಯಷ್ಟು ಇದು ಅಗ್ಗವಿಲ್ಲ ಎಂಬ ಆತಂಕವನ್ನು ಲೆಕ್ಕಿಸದೆಯೇ ಈ ಪ್ರಯತ್ನವನ್ನು ಕೈಗೊಳ್ಳಲಾಯಿತು. ವಿಜ್ಞಾನಿಗಳ ಅಭಿಪ್ರಾಯದಂತೆ ಅಣುಶಕ್ತಿಯಿಂದ ಉತ್ಪಾದಿಸಿದ ವಿದ್ಯುತ್ತು ಅಗ್ಗವಾಗುವಂತೆ ಮಾಡಬಹುದು ಆದರೆ ಇದು ಸಾಧ್ಯವಾಗುವಂತೆ ನೆರವೇರಬೇಕಾದ ವೈಜ್ಞಾನಿಕ, ತಾಂತ್ರಿಕ ಹಾಗು ಶೈಕ್ಷಣಿಕ ಅಭಿವೃದ್ಧಿ ಆ ಕ್ಷೇತ್ರಗಳಲ್ಲಿ ಕೈಗೂಡುವುದು ಸಂಶಯ. ಆದರೆ ಇಷ್ಟು ಮಾತ್ರ ಖಚಿತವಾಗಿ ನಂಬಬಹುದು—ಅದೇನೆಂದರೆ, ಅಣುಶಕ್ತಿಯ ಶಾಂತಿಕಾಲದ ಬಳಕೆಯು ಮನುಷ್ಯನ ಸುಖವನ್ನು ಹೆಚ್ಚಿಸುವುದರಲ್ಲಿ ಕ್ರಾಂತಿಕಾರ ಪುಟವನ್ನು ತೆರೆಯುತ್ತದೆ. ಚಿಕಿತ್ಸಾ ವಿಜ್ಞಾನದ ಸೂಕ್ಷ್ಮ ಸಮಸ್ಯೆಗಳನ್ನು ಅಣುಶಕ್ತಿಯ ನೆರವಿನಿಂದ ಬಿಡಿಸಲು ಸಾಧ್ಯವಾಗುತ್ತದೆ. ಕ್ಯಾನ್ಸರದಂತಹ ಭೀಕರ ರೋಗದ ಪ್ರಸಾರವನ್ನು ಅಣುಶಕ್ತಿಯ ಸಹಾಯದಿಂದ ಯಶಸ್ವಿಯಾಗಿ ತಡೆಗಟ್ಟಬಹುದು; ವಿಮಾನಗಳು ತಾಸಿಗೆ ೧೫೦೦ ಮೈಲಿಗಿಂತಲೂ ಅಧಿಕ ವೇಗದಲ್ಲಿ ಓಡಾಡುವಂತೆ ಮಾಡಬಹುದು; ಭೂಮಿಯು ಹೆಚ್ಚು ಅನ್ನವನ್ನು ಉತ್ಪಾದಿಸಿ ಸಂಪತ್ಸಮೃದ್ಧವಾಗುವಂತೆ ನೋಡಿಕೊಳ್ಳಬಹುದು; ಮನುಷ್ಯನ ಆಯುಷ್ಯವನ್ನು ಹೆಚ್ಚಿಸಿ ಅವನು ಸುಖಜೀವನ ನಡೆಸುವಂತೆ ಸಕಲಾನುಕೂಲತೆಗಳನ್ನೂ ಕಲ್ಪಿಸಬಹುದು. ಒಟ್ಟಿನಲ್ಲಿ ವಿಜ್ಞಾನದ ಕಲ್ಪನಾ ಲೋಕದಲ್ಲಿ ವಿಹರಿಸ ಬಯಸುವ ತರುಣ ತರುಣಿಯರಿಗೆ ತಮ್ಮ ದೇಶ ಬಾಂಧವರನ್ನು ಸುಖಿಗಳಾಗಿ ಮಾಡಲು ಅತ್ಯುತ್ತಮ ಅವಕಾಶವನ್ನು ಅಣುಶಕ್ತಿಯ ಶಾಂತಿ ಕಾಲದ ಉಪಯೋಗವು ಒದಗಿಸಿ ಕೊಡುತ್ತದೆ. ಇದು ಸಾಧ್ಯವಾಗುವಂತೆ ಅಮೇರಿಕ—ಬ್ರಿಟನುಗಳಲ್ಲಿ ಈಚೆಗೆ ಉಂಟಾದ ಮಾದರಿಯ ತಿಳಿವಳಿಕೆಯು ಪ್ರಪಂಚದ ಇತರ ರಾಷ್ಟ್ರಗಳ ನಡುವೆಯೂ ಸಾಧ್ಯವಾಗುವುದು ಅಪೇಕ್ಷಣೀಯ. ಅಣುಶಕ್ತಿಯ ಮೂಲ ತತ್ವಗಳ ಗುಟ್ಟು ರಟ್ಟಾದರೆ ಮಾತ್ರ ಮಾರಕಾಸ್ತ್ರಗಳ ಬದಲು ವಿಧಾಯಕ ಕೆಲಸಗಳಲ್ಲಿ ಅಣುಶಕ್ತಿಯನ್ನು ಬಳಸುವ ಪ್ರಯತ್ನ ಈಗಿನದಕ್ಕಿಂತ ಹೆಚ್ಚು ತ್ವರೆಯಿಂದ ಕೈಗೂಡೀತು.

(ಆಧಾರ–*UNESCO*)

ಕುಂದಾಪುರದ ಡಿ. ಮುನ್ಸಿಫ್ ಕೋರ್ಟಿನಲ್ಲಿ

Claim No. 445/1951-1952

S. E. P. No. 81/1953

ಅರ್ಜಿದಾರ [illegible]

[illegible]

[illegible] 1728 [illegible]

ಸದ್ರಿ ಅರ್ಜಿದಾರನು ಸದ್ರಿ [illegible] ಸದ್ರಿ ಅಮಲ್ಜಾರಿಯಲ್ಲಿ [illegible] ತಾ. 6.8.54 ಕ್ಕೆ ಕುಂದಾಪುರದ ಕೋರ್ಟಿನಲ್ಲಿ [illegible] ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಕುಂದಾಪುರದ ಕೋರ್ಟಿನಲ್ಲಿ ಸ್ವತಃ ಯಾ ವಕೀಲರ ಮುಖಾಂತ್ರ ಹಾಜರಾಗಿ ಬಾಧೆಯನ್ನು ಮಾಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರ ಹಾಜರಿಯಲ್ಲಿ ನಿಮ್ಮನ್ನು ಏಕಪಾರ್ಟಿ ಮಾಡಿ ಸದ್ರಿ ಅಮಲ್ಜಾರಿಯಲ್ಲಿ ಮುಂದಿನ ಕ್ರಮ ನಡೆಯುವುದೆಂತ ಈ ಮೂಲಕ ತಿಳಿಸಿರುತ್ತದೆ. ತಿಳಿದಿರುವುದು

M. M. HEBBAR.
Advocate for Petitioner.
ಮೊಕ್ಕಾಂ ಕುಂದಾಪುರ, ತಾ. 15-7-54.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟ ಖರ್ಚು ರೂ. ೦–೧೪–೦
—:ವಿಳಾಸ:—
ಹಾಲಪ್ಪಾ ಡಾಪಣಗೇರಿ ಆಯುರ್ವೇದ ಔಷಧಾಲಯ, ಗದಗ.

–ಹೊಸಕೆರೆ ಚಿದಂಬರಯ್ಯನವರ–
ಗೀತೆಯ ಕೈಗನ್ನಡಿ
ಭಗವದ್ಗೀತೆಯ ಸಮೂಲ
ಭಾಷಾಂತರ.
ಬೆಲೆ. 0-12-0
V. P. P. ಮೂಲಕ 1—4—0
ನವಯುಗ ಪ್ರೆಸ್, ಉಡುಪಿ.

(೨ನೇ ಪುಟದಿಂದ)

ಹೆಚ್ಚಾಗಿ ಕಂಡು ಬರುತ್ತವೆ. ನಮ್ಮ ದೇಶದಲ್ಲಿ ನಿರುದ್ಯೋಗದ ಸಮಸ್ಯೆ ತಾಂಡವ ವಾಡುತ್ತಿರುವಾಗ ಯಂತ್ರಗಳನ್ನು ಹೆಚ್ಚಾಗಿ ಆಶ್ರಯಿಸುತಿದ್ದೇವಲ್ಲವೆಂದು ವಿಸ್ಮಯಗೊಂಡು ಇಂಜೀನಿಯರನನ್ನು ನಾವು ಪ್ರಶ್ನಿಸಿದರೆ, ಆತನ ಉತ್ತರದಿಂದ ನಮಗೆ ಸಮಾಧಾನವಾಗುತ್ತದೆ. "ಹೌದು, ೫೦,೦೦೦ ಮಂದಿಯನ್ನು ಕೆಲಸಕ್ಕೆ ಹಿಡಿಯಬಹುದು ಆದರೆ ಕೆಲಸವು ಮೂರು ವರ್ಷಕಾಲ ವಿಳಂಬಿಸುತ್ತದೆ. ಪರಿಣಾಮವಾಗಿ ೧೫೦ ಲಕ್ಷ ಜನಕ್ಕೆ ಈ ಆಣೆಕಟ್ಟಿನಿಂದ ದೊರಕುವ ಲಾಭವೂ ತಡೆಹಿಡಿಯಲ್ಪಡುತ್ತದೆ. ನೆರೆಯ ಹಾವಳಿ ಮುಂತಾದುವುಗಳಿಂದ ಈ ಅವಧಿಯಲ್ಲಿ ಅಪಾರ ನಷ್ಟ ಸಂಭವಿಸುವುದಲ್ಲದೆ, ಕಾರ್ಖಾನೆ ಮುಂತಾದವುಗಳು ತಲೆ ಎತ್ತುವುದೂ ತಡವಾಗುತ್ತದೆ." ಇದಕ್ಕಿಂತ ಯಂತ್ರಗಳನ್ನೇ ಬಳಸುವುದು ಕ್ಷೇಮ. ಸಮಯದ ಬೆಲೆಯನ್ನು ಇದು ವ್ಯಕ್ತಪಡಿಸುತ್ತದೆ. ಇದನ್ನು ದಾಮೋದರ ಕಣಿವೆಯ ವೈಶಿಷ್ಟ್ಯವೆಂದೇ ಹೇಳಬಹುದು. ಮೈಥಾನ ಆಣೆಕಟ್ಟಿನಿಂದ ಪಂಚೇತ್ ಹಿಲ್ಲಿಗೆ ಈ ಉಪಕರಣಗಳು ಸಾಗುತ್ತವೆ. ಅಲ್ಲಿಯ ಕೆಲಸವೂ ಚಮತ್ಕಾರವಾಗಿ ನೆರವೇರುತ್ತದೆ. ದುರ್ಗಾಪುರದಲ್ಲಿಯಂತೂ ತೀರ ಸೋಜಿಗವನ್ನುಂಟುಮಾಡುವ ವಿದ್ಯಮಾನ ಕಂಡುಬರುತ್ತದೆ. ಬಂಗಾಳದಿಂದ ಬಂದ ೧೦೦ ಮಂದಿ ಸುಶಿಕ್ಷಿತ ತರುಣರು ಬಿಸಿಲಿನಲ್ಲಿ ನಿಂತುಕೊಂಡು ಶಾರೀರಿಕ ಶ್ರಮವೆಂದೇ ಹೇಳಬಹುದಾದ ಕೆಲಸದಲ್ಲಿ ನಿರತರಾದುದನ್ನು ಕಾಣುತ್ತೇನೆ. ಇವರಲ್ಲಿ ಪದವೀಧರರೂ ಇದ್ದಾರೆ. ಇವರನ್ನು ಭಾರತದ ಇತರ ಪ್ರದೇಶದ ಸುಶಿಕ್ಷಿತರೂ ಅನುಕರಿಸಿದರೆ ನಿರುದ್ಯೋಗದ ಸಮಸ್ಯೆಯ ಪರಿಹಾರಕ್ಕೆ ಹೆಚ್ಚು ವಿಳಂಬವಾಗದು; ಸುಶಿಕ್ಷಿತರ ಕಷ್ಟಗಳೂ ಬಹಳಷ್ಟು ದೂರಾಗುತ್ತವೆ.

ವಿದ್ಯುಚ್ಛಕ್ತಿಯ ಕೇಂದ್ರ

ಬೊಕಾರೋದ ವಿದ್ಯುದುತ್ಪಾದನಾ ಕೇಂದ್ರವನ್ನು ಪ್ರಧಾನಮಂತ್ರಿಗಳು ಕಳೆದ ವರ್ಷ ಉದ್ಘಾಟಿಸಿದರು. ಇದು ೧,೫೦,೦೦೦ ಕಿಲೋವಾಟಿನಷ್ಟು ವಿದ್ಯುತ್ತನ್ನು ಉತ್ಪಾದಿಸಬಲ್ಲುದಾದರೂ ಸದ್ಯಕ್ಕೆ ೪೮೦೦೦ ಕಿಲೋವಾಟು ಶಕ್ತಿಯನ್ನಷ್ಟೇ ಪಡೆಯಲಾಗುತ್ತದೆ. ಇಲ್ಲಿ ಮೂವರು ತಾಂತ್ರಿಕ ಜಜ್ಞರು ಕೆಲಸಮಾಡುತಿದ್ದರೂ ಅವರಿಗೆ ಭಾರತೀಯರನ್ನು ತಂಬೇತಿಗೊಳಿಸುವ ಅವಕಾಶ ಸಾಕಷ್ಟು ಸಿಗದೆಹೋಗಿದೆ. ದುರ್ಗಾಪುರ, ಕಲ್ಕತ್ತ, ಕಲ್ಲಿದ್ದಲು ಕ್ಷೇತ್ರ ಮತ್ತಿತರ ಉದ್ದಿಮೆಗಳಿಗೆ ವಿದ್ಯುಚ್ಛಕ್ತಿ ಪೂರೈಸುವುದು ಯೋಗ್ಯವೆಂದು ಭಾವಿಸಲಾಗಿದ್ದರೂ ಕೆಲಸ ಏಕಾಗಿಯೋ ಕುಂಟುತ್ತದೆ. ಮೊನ್ನೆಯ ಸಭೆಯಲ್ಲಿ ಈ ಕುರಿತು ಚರ್ಚೆ ನಡೆದದ್ದು ಒಳಿತೇ ಆಯಿತು. ಬೊಕಾರೋದಿಂದ ಆಚೆಗೆ ಕೋನಾರ ಆಣೆಕಟ್ಟು ಇದೆ. ಇಲ್ಲಿ ಸಂಗ್ರಹಿಸಿದ ನೀರನ್ನು ಬೊಕಾರೋ ಕೇಂದ್ರಕ್ಕೆ ಒಯ್ಯಲಾಗುತ್ತದೆ; ಇದನ್ನೆ ನೀರಾವರಿಗೂ ಬಳಸುವ ಯೋಜನೆ ಉಂಟು. ಈ ಆಣೆಕಟ್ಟು ಬಹಳ ಸುಂದರವಿದೆಯಲ್ಲದೆ, ಈ ಮಾದರಿಯ ಇತರ ಆಣೆಕಟ್ಟುಗಳೊಡನೆ ಹೋಲಿಸಿದರೆ, ತಗಲಿದ ವೆಚ್ಚವೂ ಕಡಿಮೆಯಾಗಿ ತೋರುತ್ತದೆ. ತಿಲ್ಲೈಯಾದ ಆಣೆಕಟ್ಟು ಕೂಡ ರೋಮಾಂಚನಗೊಳಿಸುತ್ತದೆ. ಸ್ವೀಜನ ಲೇಂಡಿನ ಸರೋವರಗಳಷ್ಟೇ ಸುಂದರವಾದ ೫೦ ಚದರ ಮೈಲು ಪ್ರದೇಶವನ್ನು ವ್ಯಾಪಿಸಿದ ಜಲಾಶಯವು ರಸಿಕರಿಗೆ ಮನೋರಂಜನೆಯನ್ನು ಒದಗಿಸಬಲ್ಲುದು. ಈ ಆಣೆಕಟ್ಟುಗಳೆಲ್ಲ ನೆರೆ ಹಾವಳಿಯನ್ನು ನಿಯಂತ್ರಿಸುವ ಉದ್ದೇಶದಿಂದ ನಿರ್ಮಾಣಗೊಂಡಿದ್ದು, ನೀರಾವರಿಯ ಸೌಕರ್ಯಗಳನ್ನೂ ಒದಗಿಸಿ, ಅಧಿಕ ಆಹಾರ ಬೆಳೆಯುವುದಕ್ಕೂ ನೆರವೀಯುತ್ತವೆ. ಅತ್ಯುತ್ತಮ ಖನಿಜ ದ್ರವ್ಯಗಳನ್ನು ಪಡೆದುಕೊಂಡ ದಾಮೋದರ ಕಣಿವೆಯಲ್ಲಿ ಅನೇಕ ಹೊಸ ಉದ್ದಿಮೆಗಳನ್ನು ಸ್ಥಾಪಿಸುವುದಕ್ಕೆ ವಿದ್ಯುಚ್ಛಕ್ತಿಯ ಕೇಂದ್ರಗಳು ಸಹಕಾರಿಯಾಗುತ್ತವೆ. ಅಮೇರಿಕದ "ಟಿ ವಿ ಎ" ಯೋಜನೆಯು ಒಂದು ಕಾಲದಲ್ಲಿ ಸರಕಾರಕ್ಕೆ ತಲೆಸಿಡಿತವನ್ನುಂಟು ಮಾಡುತ್ತಿದ್ದ ಪ್ರದೇಶವನ್ನು ಸಂಪತ್ತಿನ ಆಕರವಾಗಿ ಪರಿವರ್ತಿಸಿತು. ದಾಮೋದರ ಯೋಜನೆಯ ಕೆಲಸಗಳು ಪೂರ್ಣಗೊಂಡಾಗ ನಾವು ಇಂತಹದೇ ಸುಂದರ ಚಿತ್ರವನ್ನು ನೋಡಬಹುದು. ಈ ಆಶೆಯೇ ಎಲ್ಲ ತಪ್ಪು ತಡೆಗಳನ್ನೂ ಮನ್ನಿಸಿ, ಇಲ್ಲಿ ನಡೆಯುವ ಕೆಲಸವನ್ನು ಪ್ರಶಂಸಿಸುವ ಮನೋಭಾವವನ್ನು ಉಂಟುಮಾಡುತ್ತದೆ. ನಿನ್ನೆ ಸೊಕ್ಕಿ ಹರಿಯುತಿದ್ದ ನದಿಯನ್ನು ಸೌಭಾಗ್ಯದ ನಿಧಿಯಾಗಿ ಪರಿವರ್ತಿಸಿದ ನಮ್ಮ ತಂತ್ರಜ್ಞರ ಪ್ರಾಮಾಣಿಕ ಸಾಹಸವನ್ನು ಭಾರತೀಯ ಹೃದಯ ಮೆಚ್ಚಿ ಕೊಂಡಾಡುತ್ತದೆ.

ಭಾರತದಲ್ಲಿ ಟೆಲಿಫೋನ್ ಕೈಗಾರಿಕೆ

"ದೂರವಾಣಿ" ನಗರದ ಕಾರ್ಖಾನೆಯ ಪರಿಚಯ

'ಟೆಲಿಫೋನಿನಲ್ಲಿ ಎಷ್ಟು ಭಾಗಗಳಿವೆ?'— ಈ ಪ್ರಶ್ನೆಗೆ ಬಹು ಜನರು ಸರಿಯಾದ ಉತ್ತರವನ್ನು ಕೊಡಲಾರರು. ರಿಸೀವರ್, ಡೈಯಲ್ ಮತ್ತು ಕಾರ್ಡ್—ಇವಿಷ್ಟು ಬಾಗಗಳೇ ಹೊರಗಿನಿಂದ ನೋಡಿದಾಗ ಕಾಣುವ ಭಾಗಗಳು. ಆದರೆ ಈ ಉಪಕರಣಗಳಲ್ಲಿ ಸುಮಾರು 363 ಬೇರೆ ಬೇರೆ ಭಾಗಗಳಿವೆ.

ಇಂದು ಈ ಭಾಗಗಳಲ್ಲಿ ಶೇಕಡಾ 99 ರಷ್ಟು ಭಾಗಗಳನ್ನು ಇಂಡಿಯಾದಲ್ಲೇ ತಯಾರಿಸಲಾಗುತ್ತದೆ. ಬೆಂಗಳೂರಿನ ದೂರವಾಣಿ ನಗರದಲ್ಲಿರುವ ಭಾರತ ಟೆಲಿಫೋನ್ ಕಾರ್ಖಾನೆಯಲ್ಲಿ ಇವು ತಯಾರಾಗುತ್ತವೆ. ಇದು ವರೆಗೆ ಇಲ್ಲಿ ಮೂರು ನಿಮಿಷಗಳಿಗೊಂದು ಟೆಲಿಫೋನಿನಂತೆ ತಯಾರಾಗುತ್ತಿತ್ತು; ಈಗ ನಿಮಿಷಕ್ಕೊಂದರಂತೆ ಹೊಸ ಟೆಲಿಫೋನನ್ನು ತಯಾರಿಸಲಾಗುತ್ತದೆ. ಇದರಿಂದಾಗಿ ಪ್ರತಿ ವರ್ಷದಲ್ಲಿ 40,000 ಟೆಲಿಫೋನ್‌ಗಳನ್ನು ಹಿಂದೆ ತಯಾರಿಸುತಿದ್ದರೆ ಇನ್ನು ಮುಂದೆ 60,000 ಟೆಲಿಫೋನ್‌ಗಳನ್ನು ತಯಾರಿಸಲಾಗುವುದು.

ಟೆಲಿಫೋನ್‌ಗಳ ತಯಾರಿಕೆ ಈ ಕಾರ್ಖಾನೆಯ ಅನೇಕ ಕೆಲಸಗಳಲ್ಲೊಂದು. 1952ರ ಸೆಪ್ಟೆಂಬರ್ ತಿಂಗಳಿಂದ 'ಆಟೋಮ್ಯಾಟಿಕ್ ಎಕ್ಸ್‌ಛೇಂಜ್' ಯಂತ್ರವನ್ನು ಜೋಡಿಸುವ ಕೆಲಸವನ್ನೂ ಈ ಕಾರ್ಖಾನೆಯೇ ವಹಿಸಿಕೊಂಡಿದೆ. ಈಗಾಗಲೇ ಆಟೋಮ್ಯಾಟಿಕ್ ಎಕ್ಸ್‌ಚೇಂಜ್ ಯಂತ್ರದ ಭಾಗಗಳಲ್ಲಿನ ಶೇ. 15 ರಷ್ಟನ್ನು ಈ ಕಾರ್ಖಾನೆಯಲ್ಲಿಯೇ ತಯಾರಿಸಲಾಗುತ್ತದೆ.

ಕಾರ್ಖಾನೆಯಲ್ಲಿ ತಯಾರಾಗುತ್ತಿರುವ ಮೂರನೆಯ ವಸ್ತುವೆಂದರೆ, 'ಟೆಲಿಫೋನ್ ಕ್ಯಾರಿಯರ್ ಸಿಸ್ಟಂ'. ಇದನ್ನು "ತಂತಿಸಹಿತವೂ ಇಲ್ಲದ ಯಂತ್ರ" ಎಂದು ವರ್ಣಿಸಲಾಗಿದೆ. ಈ ವ್ಯವಸ್ಥೆ ಹೆಚ್ಚಿನ ಟೆಲಿಫೋನ್ ಸಂಭಾಷಣೆಗೆ ಸಹಕಾರಿಯಾಗುವುದು. ಅದಲ್ಲದೆ ಈ ಕಾರ್ಖಾನೆಯು 'ಸಿಂಗಲ್ ಮತ್ತು ತ್ರೀ ಛಾನಲ್ ಸಿಸ್ಟಂ' ಎಂಬುದನ್ನೂ ಅಭಿವೃದ್ಧಿಪಡಿಸಿದೆ.

ಕಾರ್ಖಾನೆಯ ಇತಿಹಾಸ

ಈ ಮಹತ್ಸಾಧನೆಯ ಇತಿಹಾಸ 1949ರ ಮೇ ಮೂರನೆಯ ತಾರೀಖು ಆರಂಭವಾಗುತ್ತದೆ. ಇಂಡಿಯಾ ಸರಕಾರದವರು ಲಿವರ್‌ಪೂಲಿನ ಆಟೋಮ್ಯಾಟಿಕ್ ಟೆಲಿಫೋನ್ ಅಂಡ್ ಎಲೆಕ್ಟ್ರಿಕಲ್ ಕಂಪೆನಿಯವರೊಂದಿಗೆ 15 ವರ್ಷಗಳ ಒಪ್ಪಂದವನ್ನು ಆದಿನ ಮಾಡಿಕೊಂಡರು. ಈ ಒಪ್ಪಂದವು ಟೆಲಿಫೋನ್, ಆಟೋಮ್ಯಾಟಿಕ್ ಎಕ್ಸ್‌ಛೇಂಜ್ ಕ್ಯಾರಿಯರ್, ಮತ್ತು ಇದಕ್ಕೆ ಸಂಬಂಧಪಟ್ಟ ಉಪಕರಣಗಳ ತಯಾರಿಕೆಗೆ ಬೇಕಾದ ತಾಂತ್ರಿಕ ಸಹಾಯ ಮತ್ತು ಜ್ಞಾನವನ್ನು ಒದಗಿಸಿಕೊಟ್ಟಿತು.

1949ರಲ್ಲಿ 360 ಎಕರೆಗಳಷ್ಟು ವಿಸ್ತಾರವುಳ್ಳ ಕಾರ್ಖಾನೆಯಲ್ಲಿ ಕೇವಲ ಎರಡೇ 'ಹ್ಯಾಂಗರು'ಗಳಿದ್ದು ಪ್ರಥಮತಃ ಜೋಡಿಸುವ ಕೆಲಸ ಆರಂಭವಾಯಿತು. ಅನಂತರ ಈ ಕಾರ್ಖಾನೆಯು ಬಹಳ ಬೆಳೆಯುತ್ತ ಬಂದು 1950ರ ಫೆಬ್ರುವರಿಯ ಹೊತ್ತಿಗೆ ಇದು ಮೂವರು ಪಾಲುದಾರರುಳ್ಳ ಖಾಸಗೀ ಜಾಯಿಂಟ್ ಸ್ಟಾಕ್ ಕಂಪೆನಿಯಾಯಿತು. ಮೈಸೂರು ಸರ್ಕಾರ, ಆಟೋಮ್ಯಾಟಿಕ್ ಟೆಲಿಫೋನ್ ಮತ್ತು ಎಲೆಕ್ಟ್ರಿಕ್ ಕಂಪನಿ ಹಾಗೂ ಇಂಡಿಯಾ ಸರ್ಕಾರದ ಇಲ್ಲಾಖೆಗಳೇ ಈ ಮೂವರು ಪಾಲುದಾರರು.

ಇಂದು ಈ ಕಾರ್ಖಾನೆಯಲ್ಲಿ 26,100 ಚದರ ಅಡಿಗಳ 5 ಯೂನಿಟ್ಟುಗಳಿವೆ. ಪ್ರತಿಯೊಂದು ಯೂನಿಟ್ಟು ಸ್ವತಂತ್ರವಾಗಿದೆ. ಹಲವು ಕೋಣೆಗಳು ಅಸ್ತಿತ್ವದಲ್ಲಿವೆ. ಈ ಕಾರ್ಖಾನೆಯಲ್ಲಿ ಮಾಡಿರುವ ಬೆಳಕಿನ ಯೋಜನೆಯು ಮೇಘಾಚ್ಛಾದಿತ ದಿನಗಳಲ್ಲಿಯೂ ಕೃತಕ ಬೆಳಕಿನ ಅವಶ್ಯಕತೆ ಬೀಳದಂತೆ ಮಾಡಿದೆ.

ಯಾವ ಸ್ಥಳದಲ್ಲಿಯೇ ಆಗಲಿ, ಕೆಲಸಗಾರರ ಅಥವಾ ಯಂತ್ರೋಪಕರಣಗಳ ಗುಂಪು ಗುಂಪಿಲ್ಲ ಇಲ್ಲದೆ, ವಿರಳ ವಿರಳವಾಗಿದೆ. ಸುಮಾರು 2,500 ಮಂದಿ ಗಂಡಸರು ಮತ್ತು ಹೆಂಗಸರು ಒಂದು ಒಂದು ಸರದಿಯಲ್ಲಿ,

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ವಹಿವಾಟು	77,000	15,60,000	60,30-000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ=3¾% ಬಡ್ಡಿ.
ರೂಪಾಯಿ ಹತ್ತು ಸಾವಿರದ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರದ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 ದಿ ವಿಜಯ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ ಮಂಗಳೂರು 3.



ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

WANTED AGENTS
on attractive commission to canvass orders for Bhavani Carpets.
Please apply to.
SRI AMBIGA INDUSTRIALS,
Carpet Manufacturers,
BHAVANI (Via) ERODE, S. India

೨೦೦ ಯಂತ್ರಗಳ ಜೊತೆಗೆ ಕೆಲಸ ಮಾಡುತ್ತಿದ್ದರೂ ಅವರಲ್ಲಿ ಒಂದು ವ್ಯವಸ್ಥೆಯಿದೆ; ಒಂದು ಅಚ್ಚುಕಟ್ಟುತನವಿದೆ.

ಶಾಖೆಗಳ ಚಟುವಟಿಕೆ

ಕಾರ್ಖಾನೆಯ ಒಳಗೆಯೇ ತಯಾರಿಕೆಗೆ ಅನುಕೂಲವಾದ ಅನೇಕ ಶಾಖೆಗಳಿವೆ. ಒಂದು ಶಾಖೆಯು ಕಾಲಕ್ಕೆ ಸರಿಯಾಗಿ ಕಚ್ಚಾವಸ್ತುಗಳು ಮತ್ತು ಅಂಗ ವಸ್ತುಗಳ ಸರಬರಾಜಿನ ಕೆಲಸವನ್ನು ನೋಡಿಕೊಳ್ಳುವುದು. ಮತ್ತೊಂದು ತಯಾರಿಕೆಯ ಪ್ರಮಾಣವನ್ನು ಗಮನಿಸುತ್ತ ಬಿಕ್ಕಟ್ಟು ಬರದಂತೆ ಸಕಾಲದಲ್ಲಿ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು. ಮೂರನೆಯ ಶಾಖೆ ತಯಾರಿಕೆಯ ವಿಧಾನವನ್ನು ಉತ್ತಮ ಪಡಿಸುವುದಕ್ಕೆ ಪ್ರಯತ್ನಿಸುವುದು. ಯಂತ್ರಗಳ ಉಸ್ತುವಾರಿಯನ್ನು ನೋಡಿಕೊಳ್ಳುವವರು ಯಂತ್ರಗಳನ್ನು ಸರಿಯಾದ ಸ್ಥಿತಿಯಲ್ಲಿಟ್ಟುಕೊಂಡಿದ್ದು ಆಗಿಂದಾಗ್ಗೆ 'ಓವರ್ ಆಲ್' ಮಾಡುವರು. ಸಾಗಾಣಿಕೆಯ ಪಟ್ಟಿಯನ್ನು ಇಟ್ಟುಕೊಂಡಿರುವ ಶಾಖೆಯು ಕಾರ್ಖಾನೆಗೆ ಬರುವ ಮತ್ತು ಕಾರ್ಖಾನೆಯಿಂದ ಹೋಗುವ ಸಾಮಾನು ಸರಂಜಾಮುಗಳ ಪಟ್ಟಿಯನ್ನು ಸಿದ್ಧಪಡಿಸುವುದು.

ಕಾರ್ಖಾನೆಯ ಎಂಜಿನಿಯರಿಂಗ್ ವಿಭಾಗವು ತಯಾರಿಕೆಗೆ ಬೇಕಾದ ವಸ್ತುಗಳ ನಕ್ಷೆಯನ್ನು ತಯಾರಿಸುವುದು. ಎಂಜಿನಿಯರಿಂಗ್ ಶಾಖೆಯವರು ಹಾಕಿದ ಪಟ್ಟಿಯನ್ನು ಅನುಸರಿಸಿ ಪರೀಕ್ಷಾ ವಿಭಾಗದವರು ಕಚ್ಚಾವಸ್ತುವಿನಿಂದ ಹಿಡಿದು ಸಿದ್ಧ ವಸ್ತುವಿನ ವರೆಗೂ ಎಲ್ಲಾ ವಸ್ತುಗಳ ಗುಣಾಂಶವನ್ನು ಪರೀಕ್ಷಿಸುವರು.

ಸಾಮಾನುಗಳನ್ನು ಕೊಳ್ಳುವ ವಿಭಾಗವು ಬೇಕಾದ ಎಲ್ಲಾ ಕಚ್ಚಾವಸ್ತುಗಳ ಸರಬರಾಜನ್ನು ಒದಗಿಸುವುದು. ಈ ಕಚ್ಚಾವಸ್ತುಗಳಲ್ಲಿ ಶೇ. ೬೦ರಷ್ಟು ಸ್ವದೇಶಗಳಲ್ಲಿಯೇ ದೊರೆಯುವುವು. ಮಾರಾಟದ ವಿಭಾಗದವರು ಜನರು, ಗಿರಾಕಿಗಳಿಂದ 'ಆರ್ಡರ್'ಗಳನ್ನು ತೆಗೆದುಕೊಂಡು ಅವುಗಳ ಸರಬರಾಜು ಮಾಡುವ ವಿಷಯವನ್ನು ಗಮನಿಸುವರು. ಲೆಕ್ಕಪತ್ರಗಳ ವಿಭಾಗವು ಸಾಧಾರಣ ಜಮಾ ಖರ್ಚಿನ ಬಿಲ್ಲು, ಬಜೆಟ್, ಸಂಗ್ರಹ, ಸ್ಥಿರ ವಸ್ತುಗಳಿಗೆ ತಗಲಿದ ವೆಚ್ಚ ಇತ್ಯಾದಿಗಳನ್ನು ನೋಡಿಕೊಳ್ಳುತ್ತದೆ.

ಕಾರ್ಮಿಕರ ಹಿತ

ಅವರ ಅತಿ ಮುಖ್ಯವಾದ ವಿಭಾಗವೆಂದರೆ ಸಿಬ್ಬಂದಿಯೊಂದಿಗೆ ವ್ಯವಹರಿಸುವ ವಿಭಾಗ. ಆಯಾಯ ಕೆಲಸಗಳಿಗೆ ತಕ್ಕಂತೆ ಕೆಲಸಗಾರರನ್ನು ಒದಗಿಸುವುದಲ್ಲದೆ, ಅದೇ ಕೆಲಸಗಾರರ ಹಿತರಕ್ಷಣೆಯನ್ನು ಅದು ನೋಡಿಕೊಳ್ಳುವುದು.

ಕೆಲಸಗಾರರ ಸಹಕಾರ ಸಂಸ್ಥೆಯು ಉಪಾಹಾರ ಗೃಹವು ಕಡಮೆ ದರದಲ್ಲಿ ಕಾಫಿ ಟೀ ಮತ್ತು ತಿಂಡಿಗಳನ್ನು ಒದಗಿಸುವುದು. ಪ್ರತಿಯೊಂದು ವರ್ಕ್ ಶಾಪಿನಲ್ಲಿಯೂ ನೀರನ್ನು ತಣ್ಣಗೆ ಮಾಡುವ ಯಂತ್ರಗಳಿವೆ. ಪ್ಲೇಟಿಂಗ್, ಸ್ಪ್ರೇಯಿಂಗ್, ಪಾಲಿಷಿಂಗ್ ಇತ್ಯಾದಿ ಶಾಖೆಗಳಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ 8 ಔನ್ಸುಗಳಷ್ಟು ಹಾಲನ್ನು ಉಚಿತವಾಗಿ ಕೊಡಲಾಗುವುದು. ಕಾರ್ಖಾನೆಯ ಕೆಲಸಗಾರರಿಗೆ ಕಡಮೆ ದರದಲ್ಲಿ ಸಂಚಾರದ ಸೌಲಭ್ಯವನ್ನು ಒದಗಿಸಲಾಗಿದೆ. ಒಬ್ಬ ವೈದ್ಯ ಮತ್ತು ನರ್ಸುಗಳುಳ್ಳ ಆಸ್ಪತ್ರೆಯೊಂದಿಗೆ ಪ್ರಥಮ ಚಿಕಿತ್ಸೆ ಹಾಗೂ ಇತರ ಚಿಕಿತ್ಸೆಗಳನ್ನು ಅಲ್ಲಿ ನಡೆಸಲಾಗುವುದು.

ಈ ಕಾರ್ಖಾನೆಯಲ್ಲಿ ಕೆಲಸಗಾರರಿಗಾಗಿ ಕ್ರೀಡಾ ಸಂಸ್ಥೆಯಿದೆ; ಲಲಿತ ಕಲೆ ಮತ್ತು ಛಾಯಾ ಗ್ರಾಹಕರ ಸಂಘಗಳಿವೆ. ತಾಂತ್ರಿಕ ಪುಸ್ತಕಗಳ ಭಂಡಾರವಿದೆ. ಕೆಲಸಗಾರರು ನೆರೆ ಹೊರೆಯ ರಾಜ್ಯಗಳಿಗೆ ಆಗಾಗ್ಗೆ ಪ್ರವಾಸ ಹೋಗುವರು.

ಈ ಕಾರ್ಖಾನೆಯಲ್ಲಿ ತಾಂತ್ರಿಕ ಶಾಲೆಯೊಂದಿದೆ. ಕೆಲಸದಲ್ಲಿರುವವರಿಗೆ ಅನುಕೂಲವಾಗುವಂತೆ ಅವರಿಗೆ ಆರು ವಾರಗಳ ತಾಂತ್ರಿಕ ಪರಿಶ್ರಮ ತರಗತಿಗಳನ್ನು ಈ ಶಾಲೆಯಲ್ಲಿ ನಡೆಸಲಾಗುವುದು. ಅನೇಕ ಮಂದಿ ಕೆಲಸಗಾರರು ಈ ಶಾಲೆಗೆ ಹೋಗುವರು. ಅವರಲ್ಲಿ ಕೆಲವರು ತಮ್ಮ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವುದಕ್ಕೆ ಹೋದರೆ ಮತ್ತೆ ಕೆಲವರು ಕಾರ್ಖಾನೆಯಲ್ಲಿ ತಮ್ಮ ಕೆಲಸಗಳನ್ನು ಕಲಿಯುವುದಕ್ಕಾಗಿ ಶಿಕ್ಷಣ ಪಡೆಯುವ 'ಅಪ್ರೆಂಟಿಸ್'ಗಳು.

ಕುಶಲರಾದ ಕೆಲಸಗಾರರು ಹೆಚ್ಚಾಗಿದ್ದು ಹೆಚ್ಚು ಟೆಲಿಫೋನ್‌ಗಳು ತಯಾರಾಗಿ ಇಂದು ಭಾರತ ಟೆಲಿಫೋನ್ ಕಾರ್ಖಾನೆಯು ನಿರ್ಯಾತದ ಪೇಟೆಯನ್ನು ದಿಟ್ಟಿಸಿ ನೋಡುತ್ತಿದೆ. ಆಗ್ನೇಯ ಏಷಿಯಾದ ಹಲವರು ನಮ್ಮ ವಾಣಿಜ್ಯ ವಿವರಗಳನ್ನು ವಿಚಾರಿಸಿರುವರು. ಬೆಳೆಯುತ್ತಿರುವ ಇಂಡಿಯಾದ ಅಗತ್ಯಗಳನ್ನೂ ಹಾಗೂ ತನ್ನ ವಿದೇಶಿ ಗಿರಾಕಿಗಳ ಬೇಡಿಕೆಗಳನ್ನೂ ಪೂರೈಸುವ ಧೈರ್ಯ, ನಂಬಿಕೆ ಭಾರತದ ಟೆಲಿಫೋನ್ ಕೈಗಾರಿಕೆಗೆ ಇದೆ.

(೧ನೇ ಪುಟದಿಂದ)

ಅಧಿಕಾರ ಸೀರಕ್ಕೇರಿಸಲು ಜನತೆ ಇಚ್ಛಿಸುವುದಿಲ್ಲ: ಇಲ್ಲಿ ಒತ್ತಾಯ ದಾಕ್ಷಿಣ್ಯಗಳಾಗಲೀ ಅಧಿಕಾರ ಬೆದರಿಕೆಗಳಾಗಲೀ ಪ್ರಯೋಜನವನ್ನುಂಟುಮಾಡುವುದು ಅಷ್ಟರಲ್ಲೇ ಇದೆ. ಪ್ರಜಾಪ್ರಭುತ್ವವು ಜನತೆಯ ಒಲವು ಸಂಪಾದಿಸಬಲ್ಲ ಪಕ್ಷಗಳ ತಳಹದಿಯ ಮೇಲೆಯೇ ಕೆಲಸ ಮಾಡುವುದರಿಂದ ಎಲ್ಲ ಪ್ರೌಢ ಮತದಾರರ ಸ್ನೇಹವನ್ನೂ ಕಾಯ್ದುಕೊಳ್ಳುವುದು ರಾಜಕೀಯ ಪಕ್ಷಗಳ ಏಳಿಗೆ ಮತ್ತು ಉತ್ಕರ್ಷದ ದೃಷ್ಟಿಯಿಂದ ಇಷ್ಟವಾಗಿರುತ್ತದೆ. ಬ್ರಿಟನಿನಂಥ ದೇಶಗಳಲ್ಲಿ ಜನತಾ ಸಂಪರ್ಕವೇ ರಾಷ್ಟ್ರದ ಧೋರಣೆಯ ಮೂಲ ತತ್ವಗಳನ್ನು ರೂಪಿಸುವ ಸಾಧನವೆಂದು ಕಂಡುಬರುತ್ತದೆ. ನಮ್ಮ ಮಟ್ಟಿಗೂ ಈ ಮಾತನ್ನು ಅನ್ವಯಿಸಬಹುದು.

ಆದುದರಿಂದ ಚುನಾವಣೆಯ ಎರಡು ತಿಂಗಳ ಪೂರ್ವದಲ್ಲಿಯಷ್ಟೇ ರಾಜಕೀಯ ಪಕ್ಷಗಳು ಉತ್ಸಾಹದಿಂದ ವರ್ತಿಸಿದರೆ ಸಾಲದು; ಸದಾಕಾಲ ಜನತೆಯ ಸುಖ ದುಃಖಗಳಲ್ಲಿ ಭಾಗಿಯಾಗಿ ಬೆಳೆದು ಬರಬೇಕು. ಸಂಬಂಧಪಟ್ಟ ಎಲ್ಲರೂ ಇದನ್ನು ಗಮನಿಸುವರೆಂದು ನಾವು ಭಾವಿಸುತ್ತೇವೆ.

— ಕಾರ್ತಿಕೇಯ.

ಸ್ವೀಕಾರ—ವಿಮರ್ಶೆ

ಭಾರತೀಯ ಕಥೆಗಳು—

ಸಂಪಾದಕರು: ಎಂ. ಹರಿದಾಸ ರಾವ್. ಪ್ರಕಾಶಕರು: ಸರ್ವೋದಯ ಸಾಹಿತ್ಯ ಮಾಲೆ, ಹುಬ್ಬಳ್ಳಿ. ಬೆಲೆ: ರೂ. ೧-೦-೦.

ಈ ಪುಸ್ತಕದ ಹೆಸರು ಉಡುಪಿಯ "ಕಿರಿಯರ ಪ್ರಪಂಚ"ದವರು ಪ್ರಕಟಿಸಿರುವ ಗ್ರಂಥವೊಂದನ್ನು ನೆನಪಿಗೆ ತರುತ್ತಿದ್ದರೂ ನಾಮಕರಣವನ್ನು ಅನ್ವರ್ಥವೆಂದೇ ಹೇಳಬಹುದು. ಏಕೆಂದರೆ ಇದರಲ್ಲಿ ಭಾರತದಲ್ಲಿ ಪ್ರಚಲಿತವಿರುವ ಮಲೆಯಾಳಿ, ತಮಿಳು, ತೆಲುಗು, ಉರ್ದು, ಒರಿಯಾ, ಅಸಾಮಿ, ಹಿಂದಿ, ಮರಾಠಿ, ಗುಜರಾಥಿ ಭಾಷೆಯ ಒಂದೊಂದು ಹಾಗು ಬಂಗಾಳಿಯ ಎರಡು ಕಥೆಗಳು ಅನುವಾದ ರೂಪದಲ್ಲಿ ಕೊಡಲಾಗಿರುತ್ತವೆ. ಕನ್ನಡ ಸಾಹಿತ್ಯವು ಹೇಗೋ ಭಾರತದ ಇತರ ಭಾಷೆಗಳ ಸಾಹಿತ್ಯ ಪ್ರಕಾರವೂ ನಾನಾ ತೆರನಾಗಿ ಬೆಳೆದು ಬಂದಿದ್ದು, ನೂತನ ತಂತ್ರವನ್ನು ಬಳಸುತ್ತಾ ಗಮನಾರ್ಹ ಪ್ರಗತಿಯನ್ನು ತೋರುತ್ತದೆ. ಕನ್ನಡದ ಸ್ಥಾನಮಾನವನ್ನು ವಿಮರ್ಶಿಸ ಬಯಸುವವರಿಗೆ ಭಾರತದ ಇತರ ಭಾಷೆಗಳ ಸಾಧನೆಯ ಪರಿಚಯವಾಗುವುದು ಅಗತ್ಯವಾಗಿ ಕಾಣುತ್ತದೆ. ಈ ದೃಷ್ಟಿಯಿಂದ ಭಾರತೀಯ ಭಾಷೆಗಳಲ್ಲಿ ಬರೆಯಲಾದ ಕಥೆಗಳ ಪ್ರಾತಿನಿಧಿಕ ಸಂಗ್ರಹ ಕಾರ್ಯವೊಂದು ನಡೆಯುವುದು ಅಪೇಕ್ಷಣೀಯ. ಪ್ರಕೃತದ ಪುಸ್ತಕವು ಅಂಥದೊಂದು ಪ್ರಯತ್ನವೆಂದು ನಾವು ಹೇಳುವಂತಿಲ್ಲ—ಏಕೆಂದರೆ ಸಂಪಾದಕರು ಇಲ್ಲಿ ಕೈಗೆ ನಿಲುಕಿದ ಕಥೆಗಳನ್ನೆ ಎತ್ತಿಕೊಂಡು ಅನುವಾದಿಸಿದ್ದಾರೆ. ಆದರೂ ಇದನ್ನು ಅನುಕರಣೀಯ ಸಾಹಸವೆಂದು ಹೇಳಬಹುದು. ಇಲ್ಲಿ ಪ್ರಕಟವಾದ ಕಥೆಗಳಲ್ಲಿ "ಟೈಪಿಸ್ಟ್" (ಅಸಾಮಿ), "ಅಪರಾಧಿ" (ಮಲೆಯಾಳಿ) "ಪ್ರತ್ಯಾವರ್ತನ" (ಬಂಗಾಳಿ) ಮತ್ತು "ಹೂ ಅರಳಿತು" (ತೆಲುಗು) ಚೆನ್ನಾಗಿದ್ದು ಓದುಗರಿಗೆ ಮೆಚ್ಚುಗೆಯಾಗುತ್ತವೆ. ಮೊದಲಿನೆರಡು ಕಥೆಗಳು ಸಮಕಾಲೀನ ಚಿತ್ರವನ್ನು ಸ್ಫುಟವಾಗಿ ಕೊಡುತ್ತವೆ; ಕೊನೆಯದು ಭಾವನಾತ್ಮಕ ಸೌಂದರ್ಯವನ್ನು ಮೈಗೂಡಿಸಿಕೊಂಡಿದೆ. "ಇಬ್ಬರು ವೈದ್ಯರು" (ಹಿಂದಿ), "ಅಂದು ಮತ್ತು ಇಂದು" (ತಮಿಳು), "ಡೊಂಬರಾಟ" (ಬಂಗಾಳಿ) ಇವನ್ನು ಒಳ್ಳೆಯ ಕಥೆಗಳೆಂದು ಹೇಳಬಹುದು. ಆದರೆ ಇವಕ್ಕೂ ಉತ್ತಮವಾದ ಕಥೆಗಳನ್ನು ಆಯ್ದುಕೊಂಡಿದ್ದರೆ ಚೆನ್ನಾಗುತ್ತಿತ್ತು. ಮರಾಠಿ, ಗುಜರಾಥಿ, ಉರ್ದು ಮತ್ತು ಒರಿಯಾ ಭಾಷೆಗಳಲ್ಲೂ ಇಲ್ಲಿ ಕೊಟ್ಟುದಕ್ಕಿಂತ ಮೇಲ್ಪಟ್ಟದ ಕತೆಗಳು ಕಂಡು ಬರುತ್ತವೆ. ಈ ದೃಷ್ಟಿಯಿಂದ ಕಥೆಗಳ ಸಂಪಾದನ ಕಾರ್ಯವು ಯಶಸ್ವಿಯಾಗಿಲ್ಲವೆಂದೊಪ್ಪಬೇಕು. ಹೀಗಿದ್ದರೂ ಸಾಮಾನ್ಯ ಓದುಗನಿಗೆ ಎಲ್ಲ ಕತೆಗಳೂ ರುಚಿಸಿಯಾವು; ಮತ್ತವನು ಸಾತ್ವಿಕ ಆನಂದವನ್ನೂ ಪಡೆದಾನು.

ಸ್ವಪ್ನವಾಸವದತ್ತ ನಾಟಕ ವಿಮರ್ಶೆ

ಬರೆದವರು: ಪಂಡಿತ 'ಸೂರಿ'. ಪ್ರಕಾಶಕರು: ತಿರು. ಶ್ರೀರಂಗ, "ಸುದರ್ಶನ ಮಂದಿರ", ೩೦೭೭—೧, ವಾಣೀ ವಿಲಾಸ ಮೊಹಲ್ಲಾ, ಮೈಸೂರು. ಬೆಲೆ: ರೂ. ೦—೬—೦.

ಕ್ರಿಸ್ತಶಕ ೩ನೇ ಶತಮಾನದ ಸುಮಾರಿನಲ್ಲಿದ್ದನೆಂದು ಭಾವಿಸಲಾದ ಭಾಸ ಮಹಾಕವಿಯು ಸಂಸ್ಕೃತದಲ್ಲಿ ರಚಿಸಿದ ನಾಟಕಗಳಲ್ಲಿ ಸ್ವಪ್ನವಾಸವದತ್ತಕ್ಕೆ ಉತ್ಕೃಷ್ಟ ಕಲಾಕೃತಿ ಎಂಬ ಮನ್ನಣೆ ದೊರಕಿರುತ್ತದೆ. ಈ ದೃಶ್ಯ ಕಾವ್ಯದ ಕನ್ನಡ ವಿಮರ್ಶೆಯಿಂದ ಕಾವ್ಯಭ್ಯಾಸಿಗಳಾದ ವಿದ್ಯಾರ್ಥಿಗಳಿಗೆ ಹೆಚ್ಚಿನ ಪ್ರಯೋಜನ ದೊರಕಬಲ್ಲುದು. ಪಂಡಿತ ಸೂರಿಯವರು ಕವಿ ಸಮಯ, ಕಥಾ ವಸ್ತು ದರ್ಶನ, ಪಾತ್ರಗಳ ಚರಿತ್ರ ಚಿತ್ರಣ, ಶೈಲಿ ಮತ್ತು ಇತರ ವೈಶಿಷ್ಟ್ಯ ಇವೆಲ್ಲವನ್ನೂ ರಸಿಕ ರಂಜನೆಯಾಗುವಂತೆ ಸುಂದರವಾಗಿ ನಿರೂಪಿಸಿದ್ದಾರೆ. ಪಾಠ್ಯ ಗ್ರಂಥವೆಂದು ಈ ನಾಟಕದ ಅಧ್ಯಯನ ನಡೆಸಬೇಕಾದವರಿಗೆ ಉಪಯುಕ್ತವೆನಿಸಿದ ಟಿಪ್ಪಣಿ ಪುಸ್ತಕವೆಂದು ಈ ಸರಳ ವಿಮರ್ಶೆಯನ್ನು ಕರೆಯಬಹುದು.

ಲಘು ಪರಿಚಯ

❖ ಉಡುಪಿಯ ಮಹಾತ್ಮ ಗಾಂಧೀ ಮೆಮೋರಿಯಲ್ ಕಾಲೇಜು ಪತ್ರಿಕೆಯ ಚತುರ್ಥ ವಾರ್ಷಿಕಾಂಕ (೧೯೫೪) ಎಂದಿಗಿಂತಲೂ ಹೆಚ್ಚು ಸುಂದರವಾಗಿ ಹೊರಗೆ ಬಂದಿರುವುದು ಸಂತೋಷದ ವಿಚಾರ. ಇಂಗ್ಲೀಷಿನಲ್ಲಿ ಬರೆಯಲಾದಷ್ಟೇ ಪ್ರೌಢ ಲೇಖನಗಳು ಕನ್ನಡದಲ್ಲಿರುವುದನ್ನು ಕಂಡು ಅಭಿಮಾನವೆನಿಸುತ್ತದೆ. ಕಾಳಿದಾಸ, ಮುದ್ದಣ, ಚೆಸ್ಟರ್‌ಟನ್, ಶೇಕ್ಸ್‌ಪಿಯರ್ ಇವರ ಕಾವ್ಯ ವಿಮರ್ಶೆ; ವಿವೇಕಾನಂದ ಹಾಗು ಕಿಲ್ಲೆಯವರ ಜೀವನ ದರ್ಶನ; ಇತಿಹಾಸದಲ್ಲಿ ಸತ್ಯ, ವಿಶ್ವವಿದ್ಯಾನಿಲಯಗಳಲ್ಲಿ ಬೋಧ ಭಾಷೆ, ಜಪಾನಿನಲ್ಲಿ ಶಿಕ್ಷಣ ಕ್ರಮ, ನಮ್ಮ ವಿಶ್ವದ ವೈಚಿತ್ರ್ಯ, ಮಾನವ ವಿಜ್ಞಾನ ಮುಂತಾದ ಹಲವು ಲೇಖನಗಳು—ಇವೆಲ್ಲವೂ ಮನನೀಯವಿದ್ದು, ವಿಚಾರ ಪ್ರಚೋದನೆಯನ್ನುಂಟು ಮಾಡುತ್ತವೆ. ಸಂಚಿಕೆಯು ಹಿಂದೀ ಮತ್ತು ಸಂಸ್ಕೃತ ವಿಭಾಗಗಳನ್ನೊಳಗೊಂಡಿದೆಯಲ್ಲದೆ, ಕಾಲೇಜಿನ ಚಟುವಟಿಕೆಯನ್ನು ವರ್ಣಿಸುವ ವರದಿ ಹಾಗು ಚಿತ್ರಗಳಿಂದ ನಮ್ಮನ್ನು ಆಕರ್ಷಿಸುತ್ತದೆ. ಸಂಚಿಕೆಯ ಸಂಪಾದನ ಕಾರ್ಯವನ್ನು ಚೊಕ್ಕ ರೀತಿಯಲ್ಲಿ ನೆರವೇರಿಸಿದ ಪ್ರಿನ್ಸಿಪಾಲ್ ಸುಂದರರಾಯರಿಗೂ ಪ್ರಾಧ್ಯಾಪಕ ಹರಿದಾಸ ಭಟ್ಟರಿಗೂ ನಮ್ಮ ಅಭಿನಂದನೆಗಳು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಟ್ರೇಡ್ ಮಾರ್ಕ್



[illegible] A. R. ಅಯ್ಯರ್ [illegible]

ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ ಡಿ। ಅಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 90 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ (ಸ್ತ್ರೀಯರಿಗೆ ಭಸ್ಮ) || ಮದನ ವಿಲಾಸ (ಪುರುಷರಿಗೆ: ಗುಳಿಗೆ)

"ಭಸ್ಮವು ಬಹಿಷ್ಟೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚು ಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

"ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನ ಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು(SPERMS)ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಮೇಲ್ಕಂಡ ಎರಡು ಔಷಧಿಗಳನ್ನು ಕೂಡಿ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೆಂದಿರುವವರು ಒಟ್ಟಿಗೆ ಒಂದು ಸೆಟ್ (8ಪೊಟ್ಟಣ+4 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ.

ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.

ಕ್ರಯ: 2 ಔಷಧಿಗಳ 1 ಸೆಟ್ 7 ರೂ M.O. ಮೂಲಕ. ತಲುಪಿದ ಒಡನೆ ರಿಜಿಸ್ಟರ್ ಟಪಾಲ್ ರವಾನೆ. ವಿ.ಪಿ. ಇಲ್ಲ. ಕ್ಯಾಟಲಾಗ್ ಉಚಿತ. ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ. ವಿಳಾಸ:-
ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).



Edited, Printed & Published By K. H. Shetty at the Navayuga Press, Udipi, S. India

Regd. No. M. 5018 [illegible] Licence No. 31
Licensed to Post without Prepayment.

ನವಯುಗ

Founder:- Sri A. B. Shetty, Minister for Public Health, Govt. of Madras.
Vol.33 No 47 29-7-1954 ವರ್ಷ ೩೩ ವಾರ ೪೭

ವಿಷಮತೆಯಿಂದ ಸಮರಸತೆಗೆ

ಹೆಚ್ಚು ಕಡಿಮೆ ಇಷ್ಟು ಹೊತ್ತಿಗಾಗಲೇ ನಮ್ಮ ಕಾಲೇಜು ಮತ್ತಿತರ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿ ಸಂಘಗಳ ಉದ್ಘಾಟನಾ ಕಾರ್ಯವು ಈ ವರ್ಷ ಜರಗಿರಬಹುದು. ಶಕ್ತ್ಯಯುಕ್ತ ಏರ್ಪಡಿಸಿದ ಸಮಾರಂಭದಲ್ಲಿ ಯಾರಾದರೊಬ್ಬ ಹಿರಿಯರು ಭಾಷಣವನ್ನು ಬಿಗಿದು, ನಾಳಿನ ಜನಾಂಗವಾಗಿ ದುಡಿಯಬೇಕಿರುವ ಇಂದಿನ ವಿದ್ಯಾರ್ಥಿಗಳಿಗೆ ಹಿತೋಪದೇಶವನ್ನು ನೀಡುವುದು ಸಂಪ್ರದಾಯ. ವಿದ್ಯಾರ್ಥಿ ಜೀವನದಲ್ಲಿ ಕಾಣಿಸುವ ವಿಷಮತೆಯನ್ನು ನಿವಾರಿಸಿ ಸಮರಸತೆಗೆ ಅವಕಾಶ ಮಾಡಿಕೊಡುವುದಕ್ಕೆ ಅಗತ್ಯವೆನಿಸಿದ ಅಂಶಗಳನ್ನು ಅಂತಹ ಮಹಾನುಭಾವರು ತಮ್ಮ ಭಾಷಣಗಳಲ್ಲಿ ವಿವರಿಸುವರು. ಅವರ ಮಾತಿಗೆ ಕಾಲೇಜಿನಲ್ಲಿ ಕಲಿಯುವ ತರುಣ—ತರುಣಿಯರು ಕಿವಿಗೊಡುವರೋ, ಬಿಡುವರೋ ಹೇಳಲು ಬರುವಂತಿಲ್ಲ. ಚಕ್ರವರ್ತಿ ರಾಜಗೋಪಾಲಾಚಾರಿಯಂಥವರೇ ಮದ್ರಾಸಿನ ಲೊಯೋಲಾ ಕಾಲೇಜಿನ ಸಂಘವನ್ನು ಉದ್ಘಾಟಿಸಿದ ಕಾಲಕ್ಕೆ “ನಾನು ಈಗ ಹೇಳುವ ಮಾತೊಂದಕ್ಕೆ ನೀವು ಕಿವಿಯನ್ನೆ ಕೊಡಲಿಕ್ಕಿಲ್ಲ; ಕಿವಿಗೊಟ್ಟರೂ ಅದನ್ನು ನೆನಪಿನಲ್ಲಿರಿಸಲು ಕಷ್ಟಪಡಲಿಕ್ಕಿಲ್ಲ; ನೆನಪಿಟ್ಟುಕೊಂಡರೂ ಅದನ್ನು ಕಾರ್ಯಗತಗೊಳಿಸಲಿಕ್ಕಿಲ್ಲ.” ಎಂಬ ಸಂದೇಹವನ್ನು ವ್ಯಕ್ತಗೊಳಿಸಿದರು. ರಾಜಾಜಿಯ ಈ ಮಾತು ಇಂದಿನ ವಿದ್ಯಾರ್ಥಿ ಜೀವನಕ್ಕೆ ಕನ್ನಡಿ ಹಿಡಿಯುವಂತಿವೆಯೆಂದರೂ ತಪ್ಪಾಗದು.

ಇಂದಿನ ವಿದ್ಯಾರ್ಥಿಗಳ ಮನೋಭಾವವು ಪ್ರಾಯಶಃ ಅಸಡ್ಡೆಯಿಂದ ತುಂಬಿದೆ; ಧ್ಯೇಯರಹಿತವಾಗಿದೆ. ಶಿಕ್ಷಣ ಸಂಸ್ಥೆಗೆ ತಾವು ಕಾಲಿರಿಸಿದುದು ಏತಕ್ಕಾಗಿ ಎಂಬ ಪ್ರಶ್ನೆಗೆ ಅವರು ಉತ್ತರಿಸುವ ರೀತಿಯು ಅಸಮರ್ಪಕವಾಗಿದೆ. ಪದವಿ ಪಡೆದು ಉದ್ಯೋಗ ಸಂಪಾದಿಸುವುದೇ ಅವರ ಉದ್ದೇಶವೆಂದು ತಿಳಿದು ಬರುತ್ತದೆ. ಇದಕ್ಕೋಸ್ಕರ ಪರೀಕ್ಷೆಯಲ್ಲಿ ಉತ್ತೀರ್ಣರಾಗುವುದೇ ಸರ್ವಸ್ವವೆಂದು ಅವರು ಭಾವಿಸಿದ್ದಾರೆ. ಇಂದಿನ ಶಿಕ್ಷಣವು ಈ ಲಿಖಿತ ಪರೀಕ್ಷೆಗಳಿಗೆ ಅವಾಸ್ತವವಾದ ಮಹತ್ವವನ್ನು ಕೊಟ್ಟು ನಮ್ಮ ಜನಾಂಗದ ಉತ್ಕರ್ಷಕ್ಕೆ ತಡೆಯನ್ನು ಉಂಟುಮಾಡುತ್ತದೆ. ಜನರ ಹಸನಾದ ಜೀವನಕ್ಕೆ ಅಗತ್ಯವೆನಿಸಿದ ಬಹುಮುಖ ಅಭಿರುಚಿಯ ಚಿಗುರನ್ನೆ ಚಿವುಟಿ ತೆಗೆಯುತ್ತದೆ. ಒಬ್ಬನ ಯೋಗ್ಯತೆಯನ್ನು ತಿಳಿದುಕೊಳ್ಳಲೂ ಅಳೆಯಲೂ ಒಂದಲ್ಲ ಒಂದು ರೀತಿಯ ಪರೀಕ್ಷೆಯನ್ನೇ ನಾವು ಆಶ್ರಯಿಸಬೇಕಾದೀತ, ನಿಜ. ಆದರೆ ಲೇಖಿ ಪರೀಕ್ಷೆಯೇ ಯೋಗ್ಯತೆಗೆ ಕನ್ನಡಿ ಹಿಡಿಯುತ್ತದೆನ್ನುವುದು ಕೇವಲ ಮೌಢ್ಯ. ಬೌದ್ಧಿಕ ಪರೀಕ್ಷೆ, ಸಂದರ್ಶನ, ಮುಂತಾದ ಆಧುನಿಕ ರೀತಿಗಳಾದರೂ ಪರಿಪೂರ್ಣ ವ್ಯವಸ್ಥೆಯೆಂದು ಹೇಳಲು ಬಾರದು. ಏಕೆಂದರೆ ನಾವಿಂದು ಮನುಷ್ಯನ ಯೋಗ್ಯತೆಯನ್ನು ಮಾನಸಿಕ ಮಟ್ಟದಲ್ಲಿಯೇ ಅಳೆಯುವ ದುಷ್ಟ ಸಂಪ್ರದಾಯಕ್ಕೆ ಬಲಿಬಿದ್ದಿದ್ದೇವೆ; ದೈಹಿಕ ದಾರ್ಢ್ಯ, ಮತ್ತು ಸಂಶ್ರಮಕ್ಕೆ ಸಲ್ಲಬೇಕಾದ ಮಹತ್ವವನ್ನು ಕಡೆಗಣಿಸಿದ್ದೇವೆ. ಆದುದರಿಂದ ಈ ಸಂದರ್ಶನಗಳು, ಬುದ್ಧಿ ಹಾಗು ವ್ಯಕ್ತಿತ್ವ ಪರೀಕ್ಷೆ ಮುಂತಾದವುಗಳ ಬದಲು ಉಮೇದ್ವಾರನಿಗೆ ತನ್ನ ವಸ್ತ್ರವನ್ನು ಒಗೆದುಕೊಳ್ಳಲು ಬರುವುದೇ, ಊಟ ಮಾಡಿದ ಬಟ್ಟಲನ್ನು ಆತ ತೊಳೆದು ಶುಚಿಯಾಗಿಡಬಲ್ಲನೇ ಎಂಬಿತ್ಯಾದಿ ರೀತಿಯ “ಪರೀಕ್ಷೆ”ಯನ್ನು ನಡೆಸುವುದು ಅಪೇಕ್ಷಣೀಯ.

ಆದರೆ ಈ ಸೂಚನೆಯನ್ನು ಹೃತ್ಪೂರ್ವಕ ಸ್ವಾಗತಿಸುವ ವಿದ್ಯಾರ್ಥಿ ಯಾರೂ ಇಲ್ಲವೆಂದು ಕಂಡು ಬರುತ್ತದೆ. ಅವರಿಗೆ ಪರೀಕ್ಷೆಯೆಂಬುದೇ ದೊಡ್ಡ ಪರ್ವತವೆನಿಸುತ್ತದೆ. ನಾಗರಿಕ ತರಬೇತಿಗಾಗಿ ಹೈಸ್ಕೂಲು ವಿದ್ಯಾರ್ಥಿಗಳನ್ನು ನಗರದ ಹೊರ ವಲಯದ ಹಳ್ಳಿಯೊಂದಕ್ಕೆ ಶಿಕ್ಷಕರು ಕರೆದುಕೊಂಡು ಹೋಗಿದ್ದಾಗ, ಮನಃಶಾಸ್ತ್ರಜ್ಞರೊಬ್ಬರಿಗೆ ಈ ಹುಡುಗರ ದರ್ಶನ ಲಾಭ ಲಭಿಸಿತು. “ಏನಪ್ಪ, ಏಕೆ ಬಂದಿದ್ದೀರಿ” ಎಂದು ಹುಡುಗರನ್ನು [illegible]ರಿಸಿದಾಗ, “ಇದಕ್ಕೆ ಪರೀಕ್ಷೆಯಲ್ಲಿ [illegible] ಇಂತಿಷ್ಟು ಮಾರ್ಕುಗಳಿವೆ; ಅದಕ್ಕೋಸ್ಕರ ಬಂದಿದ್ದೇವೆ” ಎಂದು ಹುಡುಗರು ಉತ್ತರಿಸಿದರು. ಇದನ್ನು ಕೇಳಿ ಮನಃಶಾಸ್ತ್ರಿಗಳು ತುಂಬ ಖೇದಗೊಂಡರು. ನಾಗರಿಕ ತರಬೇತಿ ಎಂಬ ಶಬ್ದ ಸಮುದಾಯದ ಅರ್ಥವೇ ಹುಡುಗರಿಗಾದಂತೆ ಕಂಡು ಬರಲಿಲ್ಲ: ಹಳ್ಳಿಯಲ್ಲಿ ಸುತ್ತಾಡಿ, ಕೆಲವು ಗಳಿಗೆಗಳನ್ನಾದರೂ ಸಂತೋಷದಿಂದ ಕಳೆಯುವ ಮನೋಭಾವದ ಬದಲು, ಹುಡುಗರ ಮುಂದೆ ಪರೀಕ್ಷೆಯು ಪೆಡಂಭೂತವೇ ಕುಣಿಯುತ್ತಿದ್ದಂತೆ ತೋರಿತು. ಇದು ಬದುಕಿಗೆ ಸವಿಯಾದೀತೆ? ಎಂದಿಗೂ ಇಲ್ಲ. ಲಿಖಿತ ಪರೀಕ್ಷೆಗಾದರೆ, ಟಿಪ್ಪಣಿ ಪುಸ್ತಕವನ್ನಾದರೂ ಓದಿ ಬಾಯಿಪಾಠ ಮಾಡಬಹುದು; ಈ “ನಾಗರಿಕ ತರಬೇತಿ” ಅಂತಹ ಸೌಕರ್ಯವನ್ನು ಪಡೆದಿಲ್ಲ ಎಂದು ಈ ವಿದ್ಯಾರ್ಥಿಗಳು ಗೊಣಗುತ್ತಿದ್ದಿರಬಹುದು.

ಪುಸ್ತಕದ ಕೀಟವಾಗಿ ಕುಳಿತಿರಬೇಕಾದ ವಿದ್ಯಾರ್ಥಿಗಳ ಸಮಸ್ಯೆಯೂ ಅನೇಕ—ಎಷ್ಟೋ ಮಂದಿಗೆ ಓದಲು ಮನಸ್ಸೇ ಆಗುವುದಿಲ್ಲ; ಇನ್ನೆಷ್ಟೋ ಜನಕ್ಕೆ ಓದಿದ್ದು ನೆನಪಿನಲ್ಲಿ ಉಳಿಯುವುದಿಲ್ಲ; ಪರೀಕ್ಷೆಯ ಗಳಿಗೆಯಲ್ಲೇ ಬಾಯಿಪಾಠ ಮಾಡಿಕೊಂಡಿದ್ದ ಸಾಲು ಮರೆತು ಹೋಗುತ್ತದೆ. ಇದೆಲ್ಲ ಕಷ್ಟದಿಂದ ದೂರಾಗುವುದು ಹೇಗೆ ಎಂಬುದೇ ಪ್ರೌಢ ವಿದ್ಯಾರ್ಥಿಗಳ ಅನುದಿನದ ಚಿಂತೆಯಾಗಿರುತ್ತದೆ. ಮನಸ್ಸು ಆಗುವುದಿಲ್ಲ ಎಂಬುದರ ಕಾರಣ ಆಲಸ್ಯವೇ ಹೊರತು ಬೇರೇನಲ್ಲ—ಅವರಿಗೆ ಸಮಯದ ಬೆಲೆ ಗೊತ್ತಿಲ್ಲವೆಂದು ಪರ್ಯಾಯವಾಗಿ ಹೇಳಬಹುದು. ಸದಾ ವಿದ್ಯಾರ್ಥಿಯೊಂದಿಗೆ ತಾಸುಗಟ್ಟಳೆ ಏನೇನೋ ಮಾತನಾಡುತ್ತಿರುವ, ಆಟದ ಬಯಲಿನಲ್ಲಿಯೇ ದಿನಕಳೆಯಲು, ಸಿನೆಮಾ ಕಾಫಿ ಹೋಟೆಲುಗಳಿಗೆ ಸಂದರ್ಶನವೀಯಲು ಸದಾ ಆತುರ ತೋರಿಸುವ ಜನರಿಂದ ಓದಲು ಸಮಯವಿಲ್ಲ; ಅಥವಾ ಮನಸ್ಸಾಗುವುದಿಲ್ಲ ಎಂಬ ದೂರು ಬರುವುದೇ ಚೋದ್ಯ. ಅವರ ತಲೆ ಪುಸ್ತಕವನ್ನು ಬಿಟ್ಟು ಬಾಹ್ಯ ಜಗತ್ತಿನ ಕೂಡೆ ಅತಿರೇಕ ಸಂಪರ್ಕವನ್ನು ಹೊಂದಿದೆಯೆಂದು ನಾವು ಹೇಳಬೇಕಾಗುತ್ತದೆ; ಅವರಿಗೆ ತಾವು ಕಲಿತು ನಿರ್ವಹಿಸಬೇಕಾದ ಹೊಣೆಗಾರಿಕೆಯ ಕಲ್ಪನೆ ಇಲ್ಲವೆಂದು ನಿರ್ಣಯ ಮಾಡಬೇಕಾಗುತ್ತದೆ. ಇಂಥವರು ತಮ್ಮ ದೌರ್ಬಲ್ಯದ ನಿವಾರಣೆಗೋಸ್ಕರ ನಿಶ್ಚಿತ ಕಾರ್ಯಕ್ರಮವೊಂದನ್ನು ಮಾಡಿಟ್ಟುಕೊಂಡು ದೃಢ ಮನಸ್ಸಿನಿಂದ ಅದರಂತೆ ನಡೆದುಕೊಳ್ಳಲು ಪ್ರಯತ್ನಿಸಬೇಕು. ಮೊದಲೆರಡು ವಾರಗಳಲ್ಲಿ ದಿನಕ್ಕೆ ಅರ್ಧ ತಾಸಾದರೂ ಸರಿಯೇ ಓದಲೇ ಬೇಕೆಂಬ ಹಟ ಹಿಡಿಯಬೇಕು. ಕ್ರಮೇಣ ಓದಿನ ಅವಧಿಯನ್ನು ಹೆಚ್ಚಿಸಬೇಕು. ಇಲ್ಲಿ ಒಲವನ್ನು ಅದಲು ಬದಲು ಮಾಡಿಕೊಳ್ಳುವ ಪ್ರಶ್ನೆಯೇ ಇರುತ್ತದೆ; ಹೊರತು; ಪರಿವರ್ತನಾತೀತವಾದ ಯಾವ ಆತಂಕವೂ ಮನಃಶಾಸ್ತ್ರಿಗೆ ಗೋಚರಿಸುವುದಿಲ್ಲ.

ಒಮ್ಮೆ ಓದಿನ ಅಭ್ಯಾಸಕ್ಕೆ ಅಂಟಿಕೊಂಡರೆ, ಆತನು ತಮ್ಮ ಅಧ್ಯಯನವನ್ನು ಸಾಂಗವಾಗಿ ಮುಂದುವರಿಸಬಲ್ಲನು—ಆದರೆ ಎಷ್ಟೋ ಮಂದಿಗೆ ಓದುವದೆಲ್ಲ ಮರೆತು ಹೋಗುತ್ತದೆಯಲ್ಲ! ಇವರಾದರೂ ಅವರ ತಲೆಯಲ್ಲಿ ಬೇಡದ ವಿಚಾರಗಳು ಸುತ್ತುತ್ತಿವೆಯೆಂದೇ ಉತ್ತರಿಸುವುದೊಳಿತು. ಅನತೋಲಾ ಫ್ರಾನ್ಸ್ ಹೇಳಿದಂತೆ, ತಿಂದ ಅನ್ನ ಜೀರ್ಣವಾಗುವುದಕ್ಕೆ ಅದನ್ನು ಚೆನ್ನಾಗಿ ಜಗಿಯುವುದು ಎಷ್ಟು ಅಗತ್ಯವೋ ಓದಿದ ವಿಷಯವು ನೆನಪಿನಲ್ಲಿ ಉಳಿಯುವಂತೆ ಅದನ್ನು ಶ್ರದ್ಧೆಯಿಂದ ಮನನಮಾಡಲೂ ಬೇಕು. ಈ ಸೂತ್ರದಂತೆ ನಡೆಯದಿದ್ದರೆ ನಾವು ಓದಿಗೆ ಪ್ರಾಮುಖ್ಯತೆಯನ್ನು ಕೊಡುವುದಿಲ್ಲೆಂದು ಅರ್ಥವಾಗುತ್ತದೆ. ಪ್ರೌಢ ವಯಸ್ಕರಲ್ಲಿ ಸ್ಮರಣಶಕ್ತಿಯು ಪೂರ್ಣಾವಸ್ಥೆಯಲ್ಲಿ ಬೆಳೆದಿರುತ್ತದೆ—ಅದು ಕ್ಷೀಣವಾಗಿರಬಹುದೆಂದು ಭಾವಿಸುವುದೇ ತಪ್ಪು. ಆದರೂ ಅವರಿಗೆ ಸಂಗತಿಗಳು ಮರೆತುಹೋಗುತಿದ್ದರೆ, ಅವರ ಆಸ್ಥೆಯು ಮಕ್ಕಳಿಗಿಂತ ತುಂಬ ವ್ಯಾಪಕವಾಗಿದೆ ಎಂಬುದೇ ಸಮಾಧಾನ. ನಮ್ಮ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಕಲಿಯುವ ತರುಣ ತರುಣಿಯರ ಮಟ್ಟಿಗಂತೂ ಲೈಂಗಿಕ ಭಾವನೆಯು ಶಿಕ್ಷಣದಿಂದ ಮನಸ್ಸನ್ನು

(೧೧ನೇ ಪುಟ ನೋಡಿರಿ)

THE CANARA INDUSTRIAL & BANKING SYNDICATE LTD.
Estd: 1925 H. O: UDIPI, S- India
ಖರ್ಚಿಲ್ಲದೆ ಹಣ ಕಳುಹಿಸಬೇಕೆ?
ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.
ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ “ಸೇವಿಂಗ್ಸ್ ಬೇಂಕ್ ಲೇವಣಾತಿ”ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.
ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,
ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ: ಉಡುಪಿ, ದ. ಭಾರತ.

ದಕ್ಷಿಣ ಭಾರತದಲ್ಲಿ ವಿದ್ಯುಚ್ಛಕ್ತಿಯ ಅಭಿವೃದ್ಧಿ

ಹೊಲ ಮನೆ ಕಾರಖಾನೆಗಳಿಗೆ ಕಲಿಯುಗದ ಬಲಭೀಮನ ಸಂದರ್ಶನ

ಜಗತ್ತಿನಲ್ಲಿ ಅಣುಯುಗವು ಕಾಲಿರಿಸಿದಂತೆ ಭಾಸವಾಗುತ್ತಿದ್ದರೂ, ಕಳೆದ ವಾರದ ಲೇಖನದಲ್ಲಿ ಸೂಚಿಸಿದಂತೆ, ಅಣುಶಕ್ತಿಯು ನಮ್ಮ ವ್ಯವಹಾರ ಕ್ಷೇತ್ರದಲ್ಲಿ ತಾನೇ ತಾನಾಗಿ ಮೆರೆಯಲು ಇನ್ನೂ ಕೆಲವು ದಶಕಗಳು ಬೇಕಾಗಬಹುದು. ಅಲ್ಲಿಯವರೆಗೆ ನಾವು ವಿದ್ಯುಚ್ಛಕ್ತಿಯೇ ಮೊದಲಾದ ಶಕ್ತಿಸ್ರೋತಗಳನ್ನು ಬಳಸುತ್ತಿರಬೇಕಾಗುವುದು. ತಾಂತ್ರಿಕ ಪ್ರಗತಿಯಲ್ಲಿ ಹಿಂಬಳಿದ ದೇಶವೆಂದು ಪರಿಗಣಿಸಲಾಗುವ ಭಾರತದಲ್ಲಿಯಂತೂ ಇನ್ನು ಒಂದು ಶತಮಾನದ ವರೆಗೆ ವಿದ್ಯುಚ್ಛಕ್ತಿಯ ವಿಸ್ತರಣಾ ಕಾರ್ಯಗಳು ನಡೆಯುತ್ತಿರಬಲ್ಲವು. ವಿದ್ಯುಚ್ಛಕ್ತಿಯನ್ನು ಕೃಷಿ—ಕೈಗಾರಿಕೆಗಳ ಅಭಿವೃದ್ಧಿಗೋಸ್ಕರ ಬಳಸಬಹುದೆಂದು ಎಲ್ಲರಿಗೂ ಗೊತ್ತು: ಅದಕ್ಕಿಂತ ಹೆಚ್ಚಾಗಿ ಜನರ ಜೀವನದ ಮಟ್ಟವನ್ನು ಸುಧಾರಿಸಲು ನೆರವಾಗುವ ಶಕ್ತಿಯೆಂದೂ ವಿದ್ಯುತ್ತನ್ನು ಹೆಸರಿಸಬಹುದು. ನಾವು ಹಿಂದುಳಿದವರೆಂದು ಹೇಳುವುದಕ್ಕೆ ವರ್ಷವೊಂದಕ್ಕೆ ತಲಾ ೧೭ ಯುನಿಟುಗಳಷ್ಟು ಮಾತ್ರ ವಿದ್ಯುಚ್ಛಕ್ತಿ ಬಳಸಲಾಗುತ್ತದೆಂಬ ಸಂಗತಿಯೇ ಕಾರಣ. ಯುರೋಪಿನ ನಾರ್ವೆ ದೇಶದಲ್ಲಿ ವರ್ಷವೊಂದಕ್ಕೆ ತಲಾ ೫೫೦೦ ಯುನಿಟು ವಿದ್ಯುಚ್ಛಕ್ತಿಯನ್ನು ಉಪಯೋಗಿಸುತ್ತಾರೆ. ನಮ್ಮ ದೇಶದಲ್ಲಿ ಪೇಟೆ ಪಟ್ಟಣಗಳ ಜನರಿಗಲ್ಲದೆ ವಿದ್ಯುಚ್ಛಕ್ತಿಯುಪಯೋಗವಿಲ್ಲದೆ, ಹಳ್ಳಿಯ ಜನಕ್ಕೆ ವಿದ್ಯುತ್ತಿನ ಮುಂತಾದ ಸಾಮಾನ್ಯ ಸೌಕರ್ಯಗಳೂ ಅಲಭ್ಯವಾದ ವಸ್ತುಗಳಾಗಿವೆ. ನೂರಕ್ಕೆ ಎಂಭತ್ತು ಮಂದಿಯಷ್ಟು ಜನಸಂಖ್ಯೆಯನ್ನೊಳಗೊಂಡ ಭಾರತದ ಗ್ರಾಮಾಂತರ ಪ್ರದೇಶಗಳಲ್ಲಿ ನಾಲ್ಕಕ್ಕೆ ಒಬ್ಬರನ್ನು ವಿದ್ಯುಚ್ಛಕ್ತಿಯು ಮುಟ್ಟಿಲ್ಲವೆಂದರೆ, ನಾವು ಎಷ್ಟು ಅಗಾಧವಾದ ಕೆಲಸವನ್ನು ಸಾಧಿಸುವುದು ಉಳಿದಿದೆಯೆಂದು ಸ್ಪಷ್ಟವಾಗುತ್ತದೆ.

ಪ್ರಥಮ ಪ್ರಯತ್ನ

ಭಾರತದಲ್ಲಿ ವಿದ್ಯುದುತ್ಪಾದನಾ ಕೇಂದ್ರವನ್ನು ತೆರೆಯುವ ಪ್ರಥಮ ಪ್ರಯತ್ನವನ್ನು ನಡೆಸಿದ ಶ್ರೇಯಸ್ಸು ಮಾದರಿ ರಾಜ್ಯವೆಂದು ಕರೆಯಲ್ಪಡುವ ಮೈಸೂರಿಗೆ ಸಲ್ಲುತ್ತದೆ. ಸರ್. ಕೆ. ಶೇಷಾದ್ರಿ ಅಯ್ಯರರ ಪ್ರತಿಭಾನ್ವಿತ ದಿವಾನಗಿರಿಯಲ್ಲಿ (೧೯೦೨) ಮೈಸೂರು ಸರಕಾರವು ಶಿವಸಮುದ್ರದಲ್ಲಿ ಜಲ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಮಹಾ ಸಾಹಸವನ್ನು ಕೈಗೊಂಡಿತು. ಈ ಶಕ್ತಿ ಸ್ರೋತವೇ ಮೈಸೂರಿನ ಕೈಗಾರೀಕರಣಕ್ಕೂ ಮುನ್ನಡೆಗೂ ನೆರವಾಯಿತೆಂದು ಹೇಳಿದರೆ ಅತಿಶಯೋಕ್ತಿಯಾಗದು. ಅಂದಿನ ಪ್ರಯತ್ನ ೪೫೦೦ ಕಿಲೋವಾಟುಗಳಷ್ಟು ಅಲ್ಪ ಪ್ರಮಾಣದಲ್ಲಿ ವಿದ್ಯುತ್ತನ್ನು ಉತ್ಪಾದಿಸುವುದಾಗಿದ್ದರೂ ಇಂದು ಅದನ್ನು ವ್ಯಾಪಕವಾಗಿ ಅಭಿವೃದ್ಧಿಗೊಳಿಸಿರುವರು; ಅಲ್ಲದೆ ದೇಶದ ಇತರೆಡೆಯ ಜನರೂ, ಸ್ವತಃ ಸರಕಾರದವರೂ ವಿದ್ಯುಚ್ಛಕ್ತಿಯ ಅಭಿವೃದ್ಧಿ ಕಾರ್ಯವು ಜನರ ಸುಖಜೀವನಕ್ಕೆ ಎಷ್ಟು ಸಹಕಾರಿಯಾದುದೆಂಬುದನ್ನು ಮನಗಂಡಿರುವರು. ಇಪ್ಪತ್ತೈದು ವರ್ಷಗಳ ತರುವಾಯ ಸರ್. ಸಿ. ಪಿ. ರಾಮಸ್ವಾಮಿ ಅಯ್ಯರರಂತಹ ಇನ್ನೊಬ್ಬ ದೂರದರ್ಶಿಗಳು ದಕ್ಷಿಣ ಭಾರತದಲ್ಲಿ ವಿದ್ಯುಚ್ಛಕ್ತಿಯ ಬೆಳವಣಿಗೆಯನ್ನು ಸಾಧಿಸಲು ಮುಂಬಂದರು. ಮದ್ರಾಸಿನಲ್ಲಿ ಪೈಕರಾ ಯೋಜನೆಯು ೧೯೨೭ರಲ್ಲಿ ಪ್ರಾರಂಭಿಸಲ್ಪಟ್ಟಿತು; ತಿರುವಾಂಕೂರಿನಲ್ಲಿ ಪಳ್ಳಿವಾಸಲ ಯೋಜನೆಯನ್ನು ತೊಡಗಲಾಯಿತು. ಅಂದು ಹಾಕಲಾದ ತಳಗಟ್ಟಿನ ಮೇಲೆ ಇಂದು ವಿದ್ಯುಚ್ಛಕ್ತಿಯ ವಿಸ್ತರಣಾ ಕಾರ್ಯವು ಬಹಳಷ್ಟು ಸಾಧಿಸಲ್ಪಟ್ಟಿದ್ದು— ದಕ್ಷಿಣ ಭಾರತದ ಮದ್ರಾಸು, ಮೈಸೂರು, ತಿರು-ಕೊಚ್ಚಿ ಮತ್ತು ಆಂಧ್ರರಾಜ್ಯಗಳು ಕ್ರಮವಾಗಿ ೨,೦೫,೦೦೦; ೧,೭೯,೦೦೦; ೩೩,೦೦೦ ಮತ್ತು ೩೩,೦೦೦ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸಬಲ್ಲ ಕೇಂದ್ರಗಳನ್ನು ಹೊಂದಿರುತ್ತವೆ. ಭಾರತದಲ್ಲಿ ಒಟ್ಟು ಉತ್ಪಾದಿಸಲ್ಪಡುವ ೨೦,೬೨,೦೦೦ ಕಿಲೋವಾಟು ವಿದ್ಯುಚ್ಛಕ್ತಿಯಲ್ಲಿ ದಕ್ಷಿಣದ ಈ ನಾಲ್ಕು ರಾಜ್ಯಗಳು ೪,೫೦,೦೦೦ ಕಿಲೋವಾಟಿನಷ್ಟು ವಿದ್ಯುತ್ತನ್ನು ಉತ್ಪಾದಿಸುತ್ತವೆ. ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಭಾರತದಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯನ್ನು ೩೦,೫೦,೦೦೦ ಕಿಲೋವಾಟುಗಳಿಗೆ ಏರಿಸಬೇಕೆಂಬ ಉದ್ದೇಶದಿಂದ ಘನವಾದ ಪ್ರಯತ್ನಗಳು ನಡೆಯುತ್ತವೆ.

ಹಳ್ಳಿಗಳಿಗೆ ವಿದ್ಯುಚ್ಛಕ್ತಿ

ಅಂಕೆ ಸಂಖ್ಯೆಗಳನ್ನು ಆಧರಿಸಿ ಹೇಳುವುದಾದರೆ ಮುಂಬಯಿ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳನ್ನು ಬಿಟ್ಟರೆ ದಕ್ಷಿಣದ ಮದ್ರಾಸು ಮತ್ತು ಮೈಸೂರು ರಾಜ್ಯಗಳು ಭಾರತದಲ್ಲಿಯೇ ಅತ್ಯಧಿಕ ವಿದ್ಯುಚ್ಛಕ್ತಿಯನ್ನು ಉತ್ಪಾದಿಸುತ್ತವೆ. ಉತ್ತರ ಪ್ರದೇಶ ರಾಜ್ಯವು ಐದನೇ ಸ್ಥಾನವನ್ನು ಪಡೆಯುತ್ತದೆ. ದಕ್ಷಿಣದಲ್ಲಿ ಸರಕಾರದ ಸಾಹಸವೇ ವಿದ್ಯುಚ್ಛಕ್ತಿಯ ಉತ್ಪಾದನೆಗೆ ಕಾರಣವಾದಂತೆ ಕಂಡುಬರುತ್ತದೆ— ಆದರೆ ಮುಂಬಯಿ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳಲ್ಲಿ ಹೀಗಿಲ್ಲ: ಮುಂಬಯಿ ರಾಜ್ಯದಲ್ಲಿ ನೂರಕ್ಕೆ ೯೭ ಅಂಶದಷ್ಟನ್ನು ಟಾಟಾರವರ ಖಾಸಗಿ ಕಂಪೆನಿಯೂ ಬಂಗಾಳದಲ್ಲಿ ನೂರಕ್ಕೆ ೯೯ ಅಂಶದಷ್ಟನ್ನು ಕಲ್ಕತ್ತೆಯ ಖಾಸಗಿ ವಿದ್ಯುಚ್ಛಕ್ತಿ ಕೇಂದ್ರವೂ ಪೂರೈಸುತ್ತವೆ. ಇವೆರಡೂ ರಾಜ್ಯಗಳಲ್ಲಿ ಉತ್ಪಾದಿಸಲಾದ ವಿದ್ಯುಚ್ಛಕ್ತಿಯ ಬಹ್ವಂಶ ಮುಂಬಯಿ ಮತ್ತು ಕಲ್ಕತ್ತ ನಗರಗಳಿಗೆಯೇ ಪೂರೈಕೆಯಾಗುತ್ತದೆ. ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯ ಲಾಭ ಮದ್ರಾಸು ಮೈಸೂರುಗಳಷ್ಟು ಉಂಟಾಗಿಲ್ಲ. ಖಾಸಗಿ ಬಂಡವಾಳಗಾರರಿಗೆ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಪೂರೈಸುವ ಪ್ರಯತ್ನವು ಸಾಕಷ್ಟು ಲಾಭ ಕೊಡದೆಂದು ತಿಳಿದಿರುವಂತೆ ತೋರುತ್ತದೆ. ಆದರೆ ಕಲ್ಯಾಣ ರಾಷ್ಟ್ರವನ್ನು ಕಟ್ಟಿ ಜನಹಿತವನ್ನು ಸಾಧಿಸುವ ಧ್ಯೇಯವಿಟ್ಟುಕೊಂಡ ಮದ್ರಾಸು, ಮೈಸೂರಿನಂತಹ ಸರಕಾರಗಳು ಗ್ರಾಮಾಂತರ ಪ್ರದೇಶಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದರಲ್ಲಿ ಮುಂದಡಿಯನ್ನು ಇಟ್ಟು ಭಾರತಕ್ಕೆ ಯೋಗ್ಯ ಮಾರ್ಗದರ್ಶನವನ್ನು ಮಾಡಿರುತ್ತವೆ. ಈಗ ಲಭ್ಯವಿರುವ ೧೯೫೨ನೇ ವರ್ಷದ ಅಂಕೆ ಸಂಖ್ಯೆಗಳಿಗನುಸಾರವಾಗಿ ಮದ್ರಾಸು, ಮೈಸೂರು, ಉತ್ತರಪ್ರದೇಶ, ತಿರು-ಕೊಚ್ಚಿ, ಮುಂಬಯಿ, ಪಂಜಾಬ, ಪಶ್ಚಿಮ ಬಂಗಾಲ, ಮತ್ತು ಉಳಿದ ರಾಜ್ಯಗಳಲ್ಲಿ ಅನುಕ್ರಮವಾಗಿ ೨೧೪೫; ೫೬೮; ೪೨೪; ೨೧೧; ೧೮೩; ೭೬; ೬೬; ಮತ್ತು ೧೯೩ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯು ಪೂರೈಕೆಯಾಗುತ್ತದೆ. ಭಾರತದ ಐದು ಲಕ್ಷ ಹಳ್ಳಿಗಳಲ್ಲಿ ಕೇವಲ ೩೮೬೬ ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯು ದೊರಕುತ್ತಿದೆಯೆಂದು ಇದರಿಂದ ಸ್ಪಷ್ಟವಾಗುತ್ತದೆ. ಇಲ್ಲಿ ಸರಕಾರದ ಪ್ರಯತ್ನವೇ ಮುಖ್ಯ ಪಾತ್ರವನ್ನು ವಹಿಸಿದೆಯಲ್ಲದೆ, ಖಾಸಗಿ ಬಂಡವಾಳವಲ್ಲವೆಂಬುದು ಗಮನಾರ್ಹವಾದ ವಿಷಯ.

ಭವಿಷ್ಯದ ಭವ್ಯಚಿತ್ರ

ದಕ್ಷಿಣ ಭಾರತದ ವಿದ್ಯುದುತ್ಪಾದನಾ ಕೇಂದ್ರಗಳು ಜೋಗ, ಶಿವ ಸಮುದ್ರ, ಶಿಂಶಾ (ಮೈಸೂರು): ಪಳ್ಳಿವಾಸಲ (ತಿರು-ಕೊಚ್ಚಿ); ಪೈಕರಾ, ಮೋಯಾರ, ಮೆಟ್ಟೂರು, ಪಾಪನಾಶಂ, ಮದ್ರಾಸು, ಮಧುರೆ (ಮದ್ರಾಸು); ತುಂಗಭದ್ರಾ, ವಿಜಯವಾಡಾ, ವಿಶಾಖ ಪಟ್ಟಣ;

(೧೨ನೇ ಪುಟ ನೋಡಿರಿ)

ನೋಟೀಸು

ಸ್ಪೆಶಲ್ ಮಹಾಸಭೆ

ನಮ್ಮ ದಕ್ಷಿಣ ಕನ್ನಡ ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಜಿಸ್ಟರ್ಡ್) ಶಿರ್ವ ಇದರ, ಸ್ಪೆಶಲ್ ಮಹಾಸಭೆಯು ಇದೇ ಬರುವ 8—8—54ನೇ ಆದಿತ್ಯವಾರ ದಿನ ಸಾಯಂಕಾಲ ಗಂಟೆ 3ಕ್ಕೆ ಶಿರ್ವ ಹಿಂದೂ ಹಾಯರ್ ಎಲಿಮೆಂಟರಿ ಶಾಲೆಯ ನಿತ್ಯಾನಂದ ಸದನದಲ್ಲಿ, ಉಡುಪಿಯ ವಕೀಲ್ ಶ್ರೀ. ಕೆ. ಜಿ. ಬಳ್ಳಾಳರ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ, ಸಂಘದ ಎಲ್ಲಾ ಮೆಂಬರರೂ ತಪ್ಪದೆ ಬರಬೇಕಾಗಿ ವಿನಂತಿ.

ಎಜೆಂಡ:— ಈ ಸಂಘವು ನಡೆಸಿಕೊಂಡು ಬಂದಿರುವಂತಹ ವಿದ್ಯಾ ಸಂಸ್ಥೆಗಳ ಮುಂದಿನ ವ್ಯವಸ್ಥೆಯ ಕುರಿತು

ಸಂಘದ ಆಫೀಸು. ಶಿರ್ವ, 18-7-54. — N.S.Kuthyar, *Secretary.*

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶವಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಸಮರ ನಿಲುಗಡೆಗೊಂಡ ಇಂಡೋಚೀನ

ಶಾಂತಿಯ ಹೊಸ್ತಿಲಲ್ಲಿ ಕಾಲಿಟ್ಟ ಆಗ್ನೇಯ ಏಶ್ಯಾದ ಭತ್ತದ ಕಣಜ

ಆಗ್ನೇಯ ಏಶ್ಯಾದ ಭೂಪಟವನ್ನು ನೋಡಿದರೆ, ೧೦೦-೧೧೦ ಡಿಗ್ರಿ ಪೂರ್ವ ರೇಖಾಂಶ ಹಾಗು ೯-೨೩ ಡಿಗ್ರಿ ಉತ್ತರ ಅಕ್ಷಾಂಶ ಭಾಗವನ್ನು ಆವರಿಸಿರುವ ಪರ್ಯಾಯ ದ್ವೀಪ ಖಂಡವೊಂದು ಗೋಚರಿಸುತ್ತದೆ. ಇದರ ಪಶ್ಚಿಮ ಭಾಗದ ಬಹ್ವಂಶವು ಸಯಾಂ ದೇಶವನ್ನೂ ಪೂರ್ವ ಭಾಗವಿಡೀ ಇಂಡೋಚೀನವನ್ನೂ ಒಳಗೊಳ್ಳುತ್ತದೆ. ಶುದ್ಧ ಭಾರತೀಯ ಭಾಷೆಯಲ್ಲಿ "ಹಿಂದೀ ಚೀನ"ವೆಂದೂ ಇಂಡೋಚೀನವನ್ನು ನಾವು ಕರೆಯಬಹುದು. ಫ್ರೆಂಚರ ಸಾಮ್ರಾಜ್ಯಶಾಹಿತ್ವಕ್ಕೆ ಒಳಪಟ್ಟ ಇಂಡೋಚೀನದಲ್ಲಿ ಪೂರ್ವ ಕರಾವಳಿಯ ಉದ್ದಕ್ಕೂ ವೀಟನಾಂ ಎಂಬ ಆಶ್ರಿತ ರಾಜ್ಯ ವಿಸ್ತರಿಸಿದೆ; ಪಶ್ಚಿಮ ಭಾಗದ ಉತ್ತರಾರ್ಧದಲ್ಲಿ ಲಾವೋಸವೂ ದಕ್ಷಿಣಾರ್ಧದಲ್ಲಿ ಕಂಬೋಡಿಯವೂ ನೆಲಸಿವೆ. ಇಂಡೋಚೀನದ ಸಮರವೆಂದು ಹೆಸರುಗೊಂಡ ಕಾಳಗವು ವೀಟನಾಂ ಪ್ರದೇಶದಲ್ಲಿಯೇ ಜರಗಿತು. ಲಾವೋಸಿನ ಪೂರ್ವಭಾಗದಲ್ಲಿ ಸ್ವಲ್ಪಾಂಶ ಹೋಚಿಮಿನರ ಧುರೀಣತ್ವದಲ್ಲಿ ಹೋರಾಡಿದ ವೀಟಮಿನರ ಕೈಗೆಬಂದಿದೆ; ಹಾಗೆಯೇ ಕಂಬೋಡಿಯದೊಳಗೂ ವೀಟಮಿನ ಸೈನಿಕರು ನುಗ್ಗಿದ್ದರು—ಎಂಬ ಸಂಗತಿಯೇನೋ ನಿಜ. ಆದರೆ ಇದೀಗ ವೀಟನಾಂದಲ್ಲಿ ೧೭ಡಿಗ್ರಿ ಉತ್ತರ ಅಕ್ಷಾಂಶದ ನೇರಕ್ಕೆ ಕದನ ವಿರಾಮ ರೇಖೆಯನ್ನು ಎಳೆದು, ಶಾಂತಿ ನೆಲೆಗೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟ ಸುದ್ದಿಯನ್ನು ಕೇಳುತಿದ್ದೇವೆ. ಎಂಟು ವರ್ಷಗಳ ಕಾಳಗದ ಬಳಿಕ ಇಂಡೋಚೀನವು ಶಾಂತಿಯ ದಿನಗಳನ್ನು ಕಂಡು, ಉಳಿದ ದೇಶಗಳಂತೆ ತಾನೂ ಅಭಿವೃದ್ಧಿ ಹೊಂದುವ ಆಶೆಯನ್ನು ವ್ಯಕ್ತಪಡಿಸುತ್ತದೆ.

ಫ್ರೆಂಚರ ಆಕ್ರಮಣ

ಇಂಡೋಚೀನವು ಫ್ರೆಂಚರ ಕೈವಶವಾದ ಕತೆ ಭಾರತೀಯರಿಗೆ ವಿಚಿತ್ರವೆನಿಸಲಿಕ್ಕಿಲ್ಲ: ಬ್ರಿಟಿಷರ ಕೈಯಲ್ಲಿ ಮುಖಭಂಗ ಹೊಂದಿ ಭಾರತದಿಂದ ಕಾಲ್ತೆಗೆಯಬೇಕಾಗಿ ಬಂದ ಫ್ರೆಂಚರಿಗೆ ವೀಟನಾಂದ ದಕ್ಷಿಣ ಭಾಗವಾದ ಕೊಚಿನ್ ಚೀನದಲ್ಲಿ ನೆಲೆಸುವುದರಿಂದ ಲಾಭವುಂಟೆಂದು ತಿಳಿಯಿತು: ವ್ಯಾಪಾರ ಹಾಗು ಯುದ್ಧ ದೃಷ್ಟಿಯಿಂದ ಈ ಪ್ರದೇಶ ಮಹತ್ವದ್ದೆಂದು ಕಂಡುಬಂತು. ಹದಿನಾರನೇ ಲೂಯಿಯ ಕಾಲದಲ್ಲಿ ಪಿನೋ ಎಂಬ ಪಾದ್ರಿಯೊಬ್ಬ ಅನ್ನಾಮಿನ ಮಾಜಿ ಅರಸನ ಪರವಾಗಿ ಫ್ರಾನ್ಸಿಗೆ ಹೋಗಿ, ಅಲ್ಲಿಂದ ಆತನನ್ನು ಪಟ್ಟಕ್ಕೇರಿಸಲು ಬೇಕಾದ ಸೈನ್ಯವನ್ನೂ ಧನವನ್ನೂ ಒದಗಿಸಿ ಕೊಟ್ಟು ಉಪಕರಿಸಿದ. ಇದಕ್ಕೆ ಪ್ರತಿಯಾಗಿ ಆತನು ವೀಟನಾಂದಲ್ಲಿ ಎಲ್ಲೆಲ್ಲೂ ಧರ್ಮ ಪ್ರಚಾರ ಮಾಡುವ ಅಧಿಕಾರವನ್ನು ಪಡೆದುಕೊಂಡ. ಆದರೆ ಅರಸನ ಉತ್ತರಾಧಿಕಾರಿಗಳು ಪಾದ್ರಿಗಳಿಗೆ ಕೃತಜ್ಞರಾಗಿರದೆ, ಮತಾಂತರಿತ ಕ್ರೈಸ್ತರ ರುಂಡ ಹಾರಿಸಲು ತೊಡಗಿದಾಗ ಮೂರನೇ ನೆಪೋಲಿಯನ ದೊರೆಯು ಕ್ರೋಧಗೊಂಡು ಸೈನ್ಯ ಕಳಿಸಿ (೧೮೫೮, ಇಂಡೋಚೀನದಲ್ಲಿ ಮುನ್ನುಗ್ಗಿದ: ೧೮೮೦ರ ಹೊತ್ತಿಗೆ ಬ್ರಿಟಿಷರ ವರ್ಶಸ್ಸಿಗೆಬಿದ್ದ ಸಯಾಂದಗಡಿಯನ್ನು ಈ ಸೈನ್ಯ ಸಮೀಪಿಸಿತು. ಹೀಗೆ ವ್ಯಾಪಾರ ಹಾಗು ಧರ್ಮಪ್ರಸಾರದ ನೆಪದಲ್ಲಿ ಫ್ರೆಂಚರು ಸಾಮ್ರಾಜ್ಯವೊಂದನ್ನು ಕಟ್ಟಿಕೊಂಡರು. ವೀಟನಾಂ ಫ್ರಾನ್ಸಿನ ಅರ್ಧದಷ್ಟು ಇದೆ: ಇಲ್ಲಿ ಕ್ರಿ. ಶ. ಎರಡನೇ ಶತಮಾನದ ಸುಮಾರಿಗೆ ಚೀನದಿಂದ ವಲಸೆ ಬಂದ ಮಂಗೋಲ ಜನಾಂಗಕ್ಕೆ ಸೇರಿದ ಅನ್ನಾಮಿ ಜನರೇ ಐದರಲ್ಲಿ ನಾಲ್ಕರಂತೆ ಇದ್ದಾರೆ. ಭಾರತೀಯರನ್ನೊಳಗೊಂಡು ಆಗ್ನೇಯ ಏಶ್ಯಾದ ಇತರ ರಾಷ್ಟ್ರಗಳವರನ್ನೂ ಇಂಡೋಚೀನದಲ್ಲಿ ಕಾಣಬಹುದು: ಪ್ರಾಚೀನ ಕಾಲದಲ್ಲಿ ಇತರ ನಾಗರಿಕ ದೇಶಗಳ ಮೇಲೆ ಕೆಡವಿದಂತೆ ಇಂಡೋಚೀನದ ಮೇಲೂ ಭಾರತದ ಧರ್ಮ ಹಾಗೂ ಸಂಸ್ಕೃತಿಯು ಗಾಢವಾದ ಪರಿಣಾಮವನ್ನು ಉಂಟುಮಾಡಿತು. ಇಂದಿಗೂ ಅಲ್ಲಿಯ ಮಂದಿರಗಳನ್ನು ಕಂಡರೆ ಮತ್ತು ಜನರ ನಡವಳಿಕೆಯನ್ನು ನಿರೀಕ್ಷಿಸಿದರೆ ಇದು ಸ್ಪಷ್ಟವಾಗುತ್ತದೆ. ಇಂಡೋಚೀನಕ್ಕೆ ಭವ್ಯವಾದ ಇತಿಹಾಸವೂ ಇದೆ— ಕಂಬೋಡಿಯಾ ಲೋಕದ ಪ್ರಾಚೀನ ಅದ್ಭುತಗಳಲ್ಲಿ ಒಂದೆಂದು ಎಲ್ಲ ವಿದ್ವಾಂಸರೂ ಒಪ್ಪುತ್ತಾರೆ. ಸುಮಾರು ನೂರುವರ್ಷಗಳ ಪೂರ್ವದಲ್ಲಿ ಘನಪಂಡಿತನಾದ ಫ್ರೆಂಚ ಪ್ರವಾಸಿಯೋರ್ವನು ಪೂರ್ವ ಕರಾವಳಿಯನ್ನು ಬಿಟ್ಟು ಪಶ್ಚಿಮದ ದಟ್ಟ ಅರಣ್ಯಗಳಲ್ಲಿ ಸಂಚರಿಸುತಿದ್ದಾಗ ಸಾವಿರ ವರ್ಷಗಳ ಹಿಂದೆ ಕಂಬೋಡಿಯಾದ ಕೀರ್ತಿ ನಾಲ್ದೆಸೆಗೂ ಹಬ್ಬಿದ್ದಾಗ ಮೆರೆಯುತಿದ್ದ ಅಂಗ್‌ಕೋರ ನಗರ ಪಾಳುಬಿದ್ದುದನ್ನು ಗುರುತಿಸಿದ: ಸಯಾಂದೊಡನೆ ಹೂಡಿದ ಯುದ್ಧದಲ್ಲಿ ಈ ನಗರವನ್ನು ತ್ಯಜಿಸಿಬಿಟ್ಟಿದ್ದರು; ಮುಂದೆ ಐನೂರು ವರ್ಷಗಳ ವರೆಗೆ ನಗರ ನೆಲಸಿದ್ದ ಸ್ಥಳ ಅರಣ್ಯದಿಂದ ತುಂಬಿಕೊಂಡು ಇತಿಹಾಸದ ನೆನಪನ್ನೂ ಮುಸುಕುಗೊಳಿಸಿತು. ಬಿದಿರಿನಿಂದ ಕಟ್ಟಿದ ಮನೆಗಳು ನೆಲಸಮವಾದವು: ಆದರೆ ಶಿಲಾನಿರ್ಮಿತವಾದ ೬೦೦ ಮಂದಿರಗಳು ಹಿಂದಿನ ಹೆಗ್ಗಳಿಕೆಯನ್ನು ಸಾರುತ್ತಿರಲು ಇಂದಿನವರೆಗೆ ಉಳಿದುಕೊಂಡವು.

ಪುಷ್ಕಳವಾದ ಪೈರು

ಭಾರತೀಯರಿಗೆ ಇಂಡೋಚೀನವನ್ನು ಕಂಡರೆ ಯುರೋಪಿನಷ್ಟು ವಿಚಿತ್ರವೆನಿಸಲಿಕ್ಕಿಲ್ಲ—ಪ್ರವಾಸಿಯೋರ್ವನು ಸೈಗಾನು ನಗರವನ್ನು ಪ್ರವೇಶಿಸಿದಾಗಲೇನೋ ದಕ್ಷಿಣ ಫ್ರಾನ್ಸಿನ ನಗರವನ್ನು ಕಾಣುತ್ತಿರುವಂತೆ ಭಾಸವಾದೀತು. ಬಂದರಿನಿಂದ ಸೀದಾ ಇಗರ್ಜಿಗೆ ಸಾಗುವ ಮುಖ್ಯ ಬೀದಿಯು ಫ್ರೆಂಚರು ಸಾಮ್ರಾಜ್ಯಸ್ಥಾಪಿಸಿದ ಬಗೆಯನ ನೆನಪಿಗೆ ತಂದುಕೊಟ್ಟೀತು. ಆದರೆ ಮುಖ್ಯ ಬೀದಿಗಳನ್ನು ಬಿಟ್ಟು ಆಚೀಚೆ ತಿರುಗಿದರೆ, ಎಲ್ಲೆಲ್ಲೂ ಬಿದಿರು ಮನೆಗಳು ನೆಲಸಿರುವುದು ಕಂಡುಬರುತ್ತದೆ. ಸಾಲದುದಕ್ಕೆ ನೀರ ಮೇಲೆ ತೇಲುವ ಸಾವಿರಗಟ್ಟಳೆ ದೋಣಿಯ ಮನೆಗಳೂ ತೋರುತ್ತವೆ. ತಾಳೆಯ ಮರಗಳು ಇಲ್ಲಿ ಹೇರಳವಾಗಿ ಕಂಗೊಳಿಸುತ್ತವೆ ವೀಟನಾಮಿಯರು ಈ ಕಲ್ಪವೃಕ್ಷಕ್ಕೆ ಅತ್ಯಂತ ಕೃತಜ್ಞರಾಗಿದ್ದಾರೆ— ತಮ್ಮ ಮನೆಯ ಮಾಡುಗಳಿಗೂ ತಟ್ಟಿಗಳಿಗೂ ತಾಳೆಯ ಸೋಗೆಯನ್ನು ಉಪಯೋಗಿಸುತ್ತಾರೆ, ದಿಂಡಿನಿಂದ ಕಂಭಗಳನ್ನು ಊರುತ್ತಾರೆ; ತೆಂಗಿನ ಸಿಪ್ಪೆಯಿಂದ ಹಗ್ಗ ಹೊಸೆಯುತ್ತಾರೆ; ಕರಟದಿಂದ ಒಲೆ ಉರಿಸುತ್ತಾರೆ; ಕೊಬ್ಬರಿಯಿಂದ ಎಣ್ಣೆ ತೆಗೆಯುತ್ತಾರೆ; ಕಡ್ಡಿಯಿಂದ ಮನೆಯನ್ನು ಗುಡಿಸಿ, ಶುಚಿಯಾಗಿಡುತ್ತಾರೆ ಇದೆಲ್ಲ ನಮ್ಮ ದೇಶದಲ್ಲಿ ನಡೆಯುವಂಥದೇ. ಬೆಳೆಗಳ ವಿಚಾರದಲ್ಲಿಯಾದರೂ ಇದೇ ಮಾತನ್ನು ಹೇಳಬಹುದು—ಮಾನ್ಸೂನು ಮಳೆಗಾಳಿಗೆ ತಲೆಯೊಡ್ಡಿದ ಇಂಡೋಚೀನದಲ್ಲಿ ಎರಡು ಮಹಾ ನದಿಗಳು — ಉತ್ತರದಲ್ಲೊಂದು, ದಕ್ಷಿಣದಲ್ಲೊಂದು —ಹರಿಯುತ್ತವೆ. ಕರಾವಳಿಯ ಉದ್ದಕ್ಕೂ ಪಶ್ಚಿಮದ ಪರ್ವತ ಪ್ರದೇಶದಿಂದ ಧುಮ್ಮಿಕ್ಕಿ ಹರಿಯುವ ಇತರ ಅನೇಕ ನದಿಗಳು ಇವೆ. ಈ ಕರಾವಳಿಯು ತುಂಬ ಫಲವತ್ತಾದ ಪ್ರದೇಶ. ಮಹಾನದಿಗಳ ಮುಖಭೂಮಿಯಂತೂ ಭತ್ತದ ಕಣಜವೆಂದು ಹೆಸರಾಗಿದೆ—ವೀಟನಾಮಿನ ಮುಕ್ಕಾಲಂಶ ಜನರು ಸಮೂರವಾದ ಪೂರ್ವ ಕರಾವಳಿಯಲ್ಲಿ ಭತ್ತದ ವ್ಯವಸಾಯವನ್ನು ಕೈಗೊಂಡು ದಿನಗಳೆಯುತ್ತಾರೆ. ಚೌಕಾಕಾರದ ಹೊಲಗಳಲ್ಲಿ ಕೋಣವನ್ನು ನೇಗಿಲಿಗೆಕಟ್ಟಿ ಉಳುತ್ತಿರುವುದೂ ಆರೇಳು ಹೆಂಗಸರು ನೇಜಿಯನ್ನು ನಡುತ್ತಿರುವುದೂ ಸಾಮಾನ್ಯವಾದ ನೋಟ. ವರ್ಷಕ್ಕೆ ಎರಡು ಸಲ ಬೆಳೆ ತೆಗೆಯುತ್ತಾರೆ. ತಮ್ಮ ಉಪಯೋಗಕ್ಕೆ ಬೇಕಾದಷ್ಟು ಬಳಸಿಕೊಂಡೂ ೨೦ ಲಕ್ಷ ಟನ್ನುಗಳಷ್ಟು ಅಕ್ಕಿಯನ್ನು ಹೊರದೇಶಗಳಿಗೆ ರಫ್ತು ಮಾಡುವಷ್ಟು ಈ ಪ್ರದೇಶ ಫಲವತ್ತಾಗಿದೆ. ನದಿಯ ಇಕ್ಕೆಲದಲ್ಲೂ ಒಂದೆರಡು ಮೈಲು ಉದ್ದಕ್ಕೆ ಭತ್ತದ ಹಸುರು ಗದ್ದೆಗಳು ಕಂಗೊಳಿಸುತ್ತವೆ ಬೇಸಾಯಗಾರರಲ್ಲಿ ಸ್ವಂತ ಭೂಮಿ ಇರುವವರ ಪ್ರಮಾಣವು ಮಾತ್ರ ಅತ್ಯಲ್ಪ.

ನೈಸರ್ಗಿಕ ಸಂಪತ್ತು

ಫ್ರೆಂಚರು ಭತ್ತದ ಎರಡು ಬೆಳೆಗಳಲ್ಲದೆ, ಇತರ ಬೆಳೆಯನ್ನೂ ತೆಗೆಯಬೇಕೆಂದು ಬೋಧಿಸುತಿದ್ದುದರ ಪರಿಣಾಮವಾಗಿ ಈಗೀಗ ಜೋಳದ ಬೆಳೆಯಾಗುತ್ತದೆ. ರಬ್ಬರು ಹಾಗು ಕರಿಮೆಣಸಿನ ತೋಟಗಳೂ ತಲೆಎತ್ತಿವೆ. ಆದರೆ, ಗುಡ್ಡಗಾಡುಗಳಲ್ಲಿರುವ ಜನರಿಗೆ ಇವಾವುದರ ಗೊಡವೆಯೂ ಬೇಡ.—ಇವರು ಕಾಡುಗಳಲ್ಲಿ ಕೆಲವಂಶಕ್ಕೆ ಬೆಂಕಿಕೊಟ್ಟು, ಸುಟ್ಟು, ತೆಗೆಯುತ್ತಾರೆ. ಮಳೆಗಾಲ ತೊಡಗಿದೊಡನೆಯೇ ಭತ್ತದ ಸಸಿಯನ್ನು ಆ ನೆಲದಲ್ಲಿ ಊರುತ್ತಾರೆ; ಮುಂದೆ ಬೆಳೆ ಕೊಡುವುದನ್ನೂ ಬಿಡುವುದನ್ನೂ ದೇವರ ಕೈಗೊಪ್ಪಿಸಿ, ನಿಶ್ಚಿಂತರಾಗುತ್ತಾರೆ! ಇಂಥ ಇಂಡೋಚೀನದ ಜನರನ್ನು ಸುಧಾರಿಸಲು ಫ್ರೆಂಚ ಸಾಮ್ರಾಜ್ಯವಾದಿಗಳು ಪ್ರಯತ್ನಪಟ್ಟರು: ಸಾರಿಗೆ ಸಂಪರ್ಕದ ಅಭಾವವು ತೀಕ್ಷ್ಣವಾಗಿದ್ದುದನ್ನು ಕಂಡು ರೈಲು ಮಾರ್ಗವನ್ನು ರಚಿಸಿದರು. ಆಗ ಸ್ಥಳೀಯರಿಗೆ ಎಷ್ಟು ಚಿತ್ರಹಿಂಸೆಯನ್ನು ಕೊಟ್ಟರೆಂದು ಹೇಳುವುದಕ್ಕೆ ಸಾಧ್ಯವಿಲ್ಲ— ಆದರೆ ಉತ್ತಮ ರಸ್ತೆಗಳಿರುವುದು ಜನರ ಒಳಿತಿಗಾಗಿಯೇ ಅಲ್ಲವೇ? ಆದುದರಿಂದ ಯಾರೂ ಏನೂ ಮಾತಾಡುವಂತಿಲ್ಲ— ಮೂರು ಮೈಲು ದೂರ ಸಾಗಲು ಮೂರು ಕಡವುಗಳನ್ನು ದಾಟಬೇಕಿರುವಾಗ, ಮಾರ್ಗಗಳು ಇದ್ದರೇನೇ ಒಳಿತೆಂದು ತೋರುತ್ತದೆ. ಹಳ್ಳಿಯ ರಸ್ತೆಗಳಲ್ಲಿ ಗಾಡಿಗಳು ಓಡಾಡುವಂತಿಲ್ಲ—

(೯ನೇ ಪುಟ ನೋಡಿರಿ)

ಸ್ಯೆಂಟ್ ಜೋರ್ಜರ
ಹೋಮಿಯೋಪಥಿಕ್ ಫಾರ್ಮಸಿ
"ಜಯಂತ ಬಿಲ್ಡಿಂಗ್"— ಸೆಂಟ್ರಲ್ ಕೋಫಿ ಹೌಸಿನ ಎದುರು,
ಮೈದಾನು ಕ್ರೊಸ್ ರೋಡು, ಮಂಗಳೂರು—1.
ಮಾಲಿಕರು ಮತ್ತು ಗಮನಿಸುವ ಚಿಕಿತ್ಸಕರು:
ಡಾ. ಜೋಸೆಫ್ ಜಕರಿಯಸ್ (ಹೋಮಿಯೋಪಥ್)

ಅಮೇರಿಕದ ಬೋರಿಕ್ ಮತ್ತು ಟಾಫೆಲ್ ಕಂಪೆನಿಯ ಹೋಮಿಯೋಪಥಿ ಔಷಧಗಳ ಮಾತೃದ್ರಾವಕಗಳೂ, ಹುಡಿಗಳೂ, ತೆಳುನಿಕೆಗಳೂ, ಗುಳಿಗೆಗಳೂ ಟಿಶ್ಯೂ ಔಷಧಗಳ ಹುಡಿಗಳೂ, ಮಾತ್ರೆಗಳೂ; ಅಮೇರಿಕದ ಲೂಟಿಸ್ ಕಂಪೆನಿಯವರ ಮತ್ತು ಜರ್ಮನಿಯ ವಿಲ್ಮಾರ್ ಶೋಭೆಯವರ ಸಿದ್ಧ ಔಷಧಗಳೂ ಯಾವಾಗಲೂ ದೊರೆಯುತ್ತವೆ.

ಸಾಮಾನ್ಯ ದಿನನಿತ್ಯದ ಎಲ್ಲಾ ರೋಗಗಳನ್ನು ಗುಣಪಡಿಸಲು ಅನುಕೂಲವಾಗುವಂತೆ ಹೋಮಿಯೋಪಥಿ ಅಥವಾ ಟಿಶ್ಯೂ ಔಷಧಗಳನ್ನೊಳಗೊಂಡ ಗೃಹೋಪಯೋಗದ ಸಾಗುವಾನಿಯ ಪೆಟ್ಟಿಗೆಗಳು, ಚಿಕಿತ್ಸಾ ಕ್ರಮವನ್ನು ಸುಲಭವಾಗಿ ತಿಳಿಸುವ ಕನ್ನಡ ಮತ್ತು ಇತರ ಭಾಷೆಗಳ ಪುಸ್ತಕಗಳೂ ದೊರೆಯುತ್ತವೆ.

ವಿ. ಸೂ: ಎಲ್ಲವರಿಗೂ ಅನುಕೂಲವಾಗುವಂತೆ ನಮ್ಮ ಹೋಮಿಯೋಪಥಿ ಮತ್ತು ಟಿಶ್ಯೂ ಔಷಧಗಳ ಚಿಕಿತ್ಸಾಕ್ರಮಗಳ ವಿವರಗಳನ್ನೂ ಹೋಮಿಯೋಪಥಿ ಮತ್ತು ಟಿಶ್ಯೂ ಔಷಧಗಳ ಚಿಕಿತ್ಸಾ ಕ್ರಮಗಳನ್ನೂ ಒಳಗೊಂಡ "ಸ್ಯೆಂಟ್ ಜೋರ್ಜರ ಹೋಮಿಯೋಪಥಿ ಮತ್ತು ಟಿಶ್ಯೂ ಔಷಧಗಳ ಗೃಹವೈದ್ಯ" ಎಂಬ ಪುಸ್ತಕವು ಬರೇ ರೂ. 0—12—0 ಗೆ ದೊರೆಯುವುದು.
—: ಒಮ್ಮೆ ಸಂದರ್ಶಿಸಿರಿ :—

ದಾದ್ರಾ ಹಳ್ಳಿಯಲ್ಲಿ ಸ್ವಯಂಸೇವಕರ ಪ್ರಭುತ್ವ

ಪೋರ್ಚುಗೀಜ ಸೇನೆಗೆ ಭಾರತದ ಮೇಲಿಂದ ಹೋಗಲು ಅನುಮತಿ ನಿರಾಕರಣೆ

ಫ್ರೆಂಚರು ಮಾಹೆಯನ್ನು ತ್ಯಜಿಸಿ ಹೋದುದರ ಮತ್ತು ವಿಲಯನವಾದಿಗಳು ಫ್ರೆಂಚ ಭಾರತದಲ್ಲಿ ಆಂದೋಲನವನ್ನು ಮತ್ತಷ್ಟು ತೀವ್ರಗೊಳಿಸಿದುದರ ಪರಿಣಾಮವು ಪೋರ್ಚುಗೀಜರ ವಶವಿರುವ ದಮನ ಎಂಬ ವಸಾಹತಿನಲ್ಲಿ ಚೆನ್ನಾಗಿ ವ್ಯಕ್ತಗೊಂಡಿತು. ಮುಂಬಯಿಗೆ ಉತ್ತರದಲ್ಲಿರುವ, ಸುಮಾರು ೬೦,೦೦೦ ಜನ ಸಂಖ್ಯೆಯನ್ನೊಳಗೊಂಡ, ೧೪೮ ಚದರ ಮೈಲು ವಿಸ್ತಾರವಾದ ಈ ವಸಾಹತಿನಲ್ಲಿ ಸುಮಾರು ೭೦ ಹಳ್ಳಿಗಳು ಇವೆ. ಇವುಗಳಲ್ಲಿ ಸುತ್ತಲೂ ಭಾರತ ಸರಕಾರದ ಅಧೀನವಿರುವ ನೆಲದಿಂದ ಆವೃತವಾದ ದಾದ್ರಾ ಎಂಬ ೧೦ ಚದರ ಮೈಲು ವಿಸ್ತಾರವಾದ ಹುಲ್ಲು ಬೆಳೆಯುವ ಹಳ್ಳಿಯನ್ನು ದಿನಾಂಕ ೨೨ರಂದು ಗೋಮಾಂತಕರ ಸಂಯುಕ್ತರಂಗದ ೩೦ ಸ್ವಯಂ ಸೇವಕರು ವಿಮೋಚನೆಗೊಳಿಸಿದರು. ವಿಮೋಚನಾ ಪಡೆಯು ಮಂಗಳವಾರ ಮಧ್ಯ ರಾತ್ರಿಗೆ ಹಳ್ಳಿಯನ್ನು ಪ್ರವೇಶಿಸಲು ಒಂದು ವಿಫಲ ಪ್ರಯತ್ನ ಮಾಡಿತು. ಆಗಿನಿಂದ ಹಳ್ಳಿಯಲ್ಲಿದ್ದ ಪೋರ್ಚುಗೀಜ ಅಧಿಕಾರಿಗಳು ಜಾಗರೂಕರಾಗಿದ್ದರು. ಸ್ವಯಂ ಸೇವಕರು ತಮ್ಮ ಎರಡನೇ ಪ್ರಯತ್ನವನ್ನು ನಡೆಸಿದಾಗ ಪೋಲೀಸರು ಹಳ್ಳಿಗರ ಗುಂಪೊಂದಕ್ಕೆ ಎಚ್ಚರಿಕೆಯನ್ನು ಹೇಳುತಿದ್ದರು. ಆದರೆ ಈ ಪೋಲೀಸರನ್ನೇ ಸ್ವಯಂ ಸೇವಕರು ಸುತ್ತುವರಿದು ಶರಣು ಬರಲು ಹೇಳಿದರು. ಆಗ ಪೋಲೀಸರು ಗುಂಡುಗಳ ಹೊಡೆತವನ್ನು ತೊಡಗಿದರು. ಜನರು ದಿಕ್ಕುಗೆಟ್ಟು ಓಡತೊಡಗಿದಾಗ ಒಬ್ಬ ಸ್ವಯಂಸೇವಕನು ಪೋಲೀಸ ಅಧಿಕಾರಿ ಓಚೋರಿಯೊ ಎಂಬವರ ತಲೆಯಮೇಲೆ ಲಾಠಿಯಿಂದ ಹೊಡೆದನು. ಅಧಿಕಾರಿಯ ಕೈಯಿಂದ ತುಪಾಕಿಯು ಕೆಳಗೆ ಬಿದ್ದಿತಲ್ಲದೆ, ಹಳ್ಳಿಗರು ರೋಷದಿಂದ ಅವರ ಮೇಲೆ ಬಿದ್ದು, ಚೂರಿಯಿಂದ ಇರಿದು ಕೊಂದರು. ಇದನ್ನು ಕಂಡ ಎಲ್ಲ ಪೋಲೀಸರೂ ಜನತೆಗೆ ಹಾಗು ಸ್ವಯಂಸೇವಕರಿಗೆ ಶರಣೆಂದರು. ರಾತ್ರಿ ಬೆಳಗಾಗುವುದರೊಳಗೆ ಪೋಲೀಸರನ್ನೆಲ್ಲ ಬಂಧನದಲ್ಲಿಟ್ಟು, ಇಡೀ ಹಳ್ಳಿಯನ್ನ ಸ್ವಯಂಸೇವಕರ ಕೈವಶಪಡಿಸಿಕೊಂಡರು.

ಲಿಸ್ಬನದ ತಿರುಬೊಬ್ಬೆ

ಹೀಗೆ ಸ್ವಯಂಸೇವಕರ ಪ್ರಯತ್ನ ಮತ್ತು ದಾದ್ರಾ ಹಳ್ಳಿಗರ ಸಹಕಾರದಿಂದ ಪೋರ್ಚುಗೀಜ ವಸಾಹತು ಪ್ರದೇಶದಲ್ಲಿ ಭಾರತದ ತ್ರಿವರ್ಣ ರಾಷ್ಟ್ರಧ್ವಜವು ಹಾರಾಡುವಂತಾಯಿತು. ಜಾಗೃತ ರಾಷ್ಟ್ರೀಯ ಭಾವನೆಯ ತೀವ್ರತೆಗೆ ಈ ಘಟನೆಯೊಂದು ದ್ಯೋತಕವೆಂದರೂ ಸಲ್ಲುವುದು. ಆದರೆ ಲಿಸ್ಬನಿನಲ್ಲಿರುವ ಪೋರ್ಚುಗಾಲದ ವರಿಷ್ಠರು ಈ ಸಂಭವಗಳಿಗೆ ಬೇರೆಯೇ ಬಣ್ಣ ಹಚ್ಚುತ್ತಿರುವರು. ಪೋರ್ಚುಗೀಜ ಭಾರತದ ಸುತ್ತಲೂ ಗಂಭೀರವಾದ ಘಟನೆಗಳು ಸಂಭವಿಸುತ್ತಿವೆಯೆಂದೂ ಜಗತ್ತಿನ ರಾಷ್ಟ್ರಗಳ ಲಕ್ಷ್ಯವನ್ನು ಇತ್ತ ಸೆಳೆಯುವ ಸಮಯ ಬಂದಿದೆಯೆಂದೂ, ಅಲ್ಲಿಯ ವಿದೇಶ ಸಚಿವರು ಹೇಳಿದರು. ಭಾರತದ ಸೈನಿಕರು ಗಡಿಯ ಸುತ್ತಲೂ ಕಂದಕಗಳನ್ನು ತೋಡುತ್ತಿರುವುದಾಗಿಯೂ ವಿಶೇಷವಾದ ಸೈನಿಕ ಚಟುವಟಿಕೆಗಳನ್ನು ನಡೆಸುತ್ತಿರುವುದಾಗಿಯೂ ಸುಳ್ಳು ಸುಳ್ಳೇ ಆರೋಪಿಸಿದರು. ದಮನದಲ್ಲಿ ಯಾವುದೇ ಪ್ರಕಾರದ ಹಿಂಸಾತ್ಮಕ ಘಟನೆಯು ನಡೆದಿಲ್ಲ; ಶಾಂತಿಯೇ ತನ್ನ ಧ್ಯೇಯವೆಂದು ಸಾರಿಕೊಳ್ಳುವ ಭಾರತವು ವಸಾಹತುಗಳ ಸಂಬಂಧದಲ್ಲಿಯೂ ಇದನ್ನು ಆಚರಣೆಯಲ್ಲಿ ತರುವುದೆಂದು ನಂಬುತ್ತೇನೆ—ಎಂಬುದಾಗಿ ಅವರು ಭಾರತಕ್ಕೆ ಅಪ್ರತ್ಯಕ್ಷ ಹಿತೋಪದೇಶವನ್ನು ಕೊಟ್ಟರು. ತಮ್ಮ ನ್ಯಾಯವಾದ" ಅಧಿಕಾರ ಕ್ಷೇತ್ರದ ರಕ್ಷಣೆಗಾಗಿ ಕೊನೆಯ ವರೆಗೆ ಹೋರಾಡುವ ತಮ್ಮ ಸಂಕಲ್ಪವನ್ನು ಅವರು ಪ್ರಕಟಗೊಳಿಸಿದರು. ಅಲ್ಲದೆ, ಭಾರತವು ಶಾಂತಿ ಧೋರಣೆಗೆ ಅಂಟಿಕೊಳ್ಳಲೆಂದು ಹೇಳುತಿದ್ದಂತೆ ಮತ್ತು ದಮನದಲ್ಲಿ ಹಿಂಸಾತ್ಮಕ ಕೃತ್ಯ ನಡೆದಿಲ್ಲವೆಂದು ಒಪ್ಪಿಕೊಂಡಂತೆ–ಆಫ್ರಿಕನ ಹಾಗು ಪೋರ್ಚುಗೀಜ ಸೈನಿಕರನ್ನು ತುಂಬಿಕೊಂಡ ಹಡಗವನ್ನು ದಮನಕ್ಕೆ ಕಳಿಸಿಕೊಟ್ಟರು. ಇದರಿಂದ ಭೀತಿಗ್ರಸ್ತರಾದ ವಸಾಹತಿನ ನಿವಾಸಿಗಳು ಭಾರತದ ಗಡಿಯೊಳಗೆ ನಿರಾಶ್ರಿತರಂತೆ ನುಗ್ಗಿ ಬರತೊಡಗಿರುವರು.

ಸೈನ್ಯ ಕಳಿಸುವಂತಿಲ್ಲ

ಪೋರ್ಚುಗೀಜ ಅಧಿಕಾರಿಗಳು ದಾದ್ರಾಕ್ಕೆ ತಮ್ಮ ಸೈನ್ಯವನ್ನು ಭಾರತದ ನೆಲದ ಮೂಲಕ ಕಳಿಸಲು ಅನುಮತಿ ಕೊಡಬೇಕೆಂದು ವಿನಂತಿಸಿದರು. ಭಾರತವು ಈ ಬಿನ್ನಹವನ್ನು ನೇರಾಗಿ ನಿರಾಕರಿಸಿತು. ಯಾವುದೇ ಶಸ್ತ್ರಾಸ್ತ್ರ ಸಜ್ಜಿತ ವಿದೇಶೀ ಸೈನಿಕರನ್ನು ಭಾರತದ ಗಡಿ ಪ್ರದೇಶದಲ್ಲಿ ಹಾದು ಹೋಗಲು ಬಿಡಲಾರೆವೆಂಬ ಸರಕಾರದ ಧೋರಣೆಗೆ ಅನುಗುಣವಾಗಿಯೇ ಪೋರ್ಚುಗೀಜರ ವಿನಂತಿಯನ್ನು ಕಡೆಗಣಿಸಲಾಯಿತು. ಅಲ್ಲದೆ ದಾದ್ರಾದ ವಿಮೋಚನೆಯಲ್ಲಿ ಭಾರತ ಸರಕಾರದ ಹಸ್ತಕ್ಷೇಪವಿರುವುದೆಂಬ ಅಂಶವನ್ನೂ ಅಲ್ಲಗಳೆಯಲಾಯಿತು. ಸ್ವಯಂ ಸೇವಕರ ಚಟುವಟಿಕೆಯೇ ಕಂಡು ಬರುತ್ತಿದೆ ಯಾಗಲೀ ಭಾರತ ಸರಕಾರದ ಅಂಗ ಇದರಲ್ಲಿಲ್ಲ. ತಮ್ಮ ಮಾನನೀಯ ಹಕ್ಕುಗಳಿಗೋಸ್ಕರ ಹೋರಾಡುವ ಅಧಿಕಾರವು ವಸಾಹತುಗಳ ಜನರಿಗಿದೆಯೆಂದು ಭಾರತದ ಅಭಿಪ್ರಾಯ. ಈ ಉದ್ದೇಶವನ್ನು ಶಸ್ತ್ರ ಬಲದಿಂದ ಪೋರ್ಚುಗಾಲವು ಹತ್ತಿಕ್ಕಲೆತ್ನಿಸುವುದಾದರೆ, ತನ್ನ ಕೃತ್ಯದ ಕಹಿ ಫಲವನ್ನು ಅದು ಉಣ್ಣುವುದು ನಿಶ್ಚಯ ಎಂಬುದಾಗಿ ಸರಕಾರಿ ವಕ್ತಾರರು ಭಾರತದ ಧೋರಣೆಯನ್ನು ಸ್ಪಷ್ಟ ಪಡಿಸಿದರು. ವಸಾಹತುಗಳ ಜನತೆಯನ್ನು ಭಾರತೀಯರು ತಮ್ಮ ಬಂಧುಗಳೆಂದು ತಿಳಿದಿರುವರಾಗಿಯೂ ಅವರ ಮೇಲೆ ನಡೆಯುವ ಹಿಂಸಾಚಾರಗಳು ಭಾರತೀಯರ ಮನಸ್ಸಿನಲ್ಲಿ ತೀವ್ರ ಪ್ರತಿಕ್ರಿಯೆಯನ್ನುಂಟು ಮಾಡಬಹುದೆಂದೂ ಅವರು ಎಚ್ಚರಿಸಿದರು. ಹೊಸ ದೆಹಲಿಯಲ್ಲಿರುವ ಪೋರ್ಚುಗಾಲದ ಪ್ರತಿನಿಧಿಗೊಂದು ರಾಯಸವನ್ನು ಭಾರತ ಸರಕಾರವು ಕೊಟ್ಟು, ಈಚೆಗೆ ಗೋವೆ ಮುಂತಾದೆಡೆ ಬಂಧಿತರಾದ ಭಾರತೀಯರನ್ನು ಚಿತ್ರಹಿಂಸೆಗೆ ಗುರಿ ಮಾಡುವುದಿಲ್ಲೆಂದೂ ದೇಶಾಂತರಕ್ಕೆ ಗಡೀಪಾರು ಮಾಡುವುದಿಲ್ಲೆಂದೂ ಆಶ್ವಾಸನೆ ಕೊಡಬೇಕಾಗಿ ಕೇಳುತ್ತದೆ. ಸ್ಥಾನಬದ್ಧರನ್ನು ಭೇಟಿಯಾಗಿ ಅವರ ಹೇಳಿಕೆಯನ್ನು ಕೇಳಿಕೊಳ್ಳಲು ಭಾರತ ಸರಕಾರದ ಪ್ರತಿನಿಧಿಗಳಿಗೆ ಅವಕಾಶ ಕೊಡಬೇಕೆಂದು ರಾಯಸವು ಹೇಳಿದೆಯಲ್ಲದೆ, ಈ ವಿನಂತಿಗಳಿಗೆ ಕಿವಿಗೊಡದೆ ಹೋದಲ್ಲಿ ಅದರ ಅನಿಷ್ಟ ಪರಿಣಾಮಗಳಿಗೆ ಪೋರ್ಚುಗಾಲವೇ ಹೊಣೆಯಾಗುವುದೆಂದು ಸಾರಿರುತ್ತದೆ.

ಮುಂಜಾಗ್ರತೆಯ ಕ್ರಮ

ದಾದ್ರಾವಲ್ಲದೆ ಮತ್ತೆ ನಾಲ್ಕಾರು ಹಳ್ಳಿಗಳೂ ಈಗ ವಿಮೋಚನೆ ಹೊಂದಿವೆ. ಸ್ವಯಂ ಸೇವಕರ ಧುರೀಣ ಫ್ರಾನ್ಸಿಸ ಮಾಸ್ಕರೇಞರು ತಾವು ನೇಮಿಸಿದ ಮುಖ್ಯ ಆಡಳಿತಗಾರರಾದ ಶ್ರೀ. ಆರ್. ವಿ. ರುದ್ರಾರ ನಿಯಂತ್ರಣದಲ್ಲಿ ಕೆಲಸ ಮಾಡಲು ಒಂದು ಪಂಚಾಯತನ್ನು ನೇಮಿಸಿದ್ದಾರೆ. ಹಳ್ಳಿಯಲ್ಲಿ ಕೊರತೆ ಬಿದ್ದ ಆಹಾರ ಮತ್ತಿತರ ಸರಕುಗಳನ್ನು ತರಿಸಲು ರಹದಾರಿ ಕೊಡಬೇಕೆಂಬ ವಿನಂತಿಯನ್ನು ಭಾರತವು ಮನ್ನಿಸಿದೆ. ಪೋರ್ಚುಗೀಜ ವಸಾಹತಿನೊಳಗಿನ ಘಟನೆಗಳಿಂದಾಗಿ ಭಾರತ ಪ್ರದೇಶದ ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಒದಗಿಬರಬಾರದೆಂದು ಸುರತ ಜಿಲ್ಲೆಯ ಪೋಲೀಸರು ಯೋಗ್ಯ ಮುಂಜಾಗ್ರತೆಯ ಕ್ರಮಗಳನ್ನು ಕೈಗೊಂಡಿದ್ದಾರೆ. ಆದರೆ ಚಳವಳದಲ್ಲಿ ಧುಮುಕುವ ಇಚ್ಛೆ ಭಾರತ ಸರಕಾರಕ್ಕೆ ಇಲ್ಲವೇ ಇಲ್ಲ. ಪೋರ್ಚುಗೀಜ ಅಧಿಕಾರಿಗಳು ತುಂಬ ಹೆದರಿಕೊಂಡಿದ್ದರೂ ಸ್ವಯಂ ಸೇವಕ ತಂಡಕ್ಕೆ ಬೆದರಿಕೆ ಹಾಕುವ ಮಾತುಗಳನ್ನು ಧಾರಾಳವಾಗಿ ಆಡುತಿದ್ದಾರೆ. ಗೋವೆಯಲ್ಲಿ ಕಾಲಿಡಬಾರದೆಂದು ಸ್ವಯಂ ಸೇವಕರಿಗೆ ಗಂಭೀರ ಎಚ್ಚರಿಕೆಯನ್ನು ಲಿಸ್ಬನವು ಕೊಟ್ಟದೆಯಲ್ಲದೆ, ಸೈನ್ಯ ಹಾಗು ಹಿಂಸೆಯನ್ನು ಉಪಯೋಗಿಸಿ, ಸ್ವಯಂ ಸೇವಕರನ್ನು ಬಗ್ಗುಬಡೆಯಲು ಅದು ತುದಿಗಾಲ ಮೇಲೆ ನಿಂತಿರುತ್ತದೆ. ಈ ಕಿಚ್ಚಿಗೆ ಹೆಚ್ಚಿನ ಉತ್ತೇಜನವನ್ನು ಕೊಡಲೆಂಬಂತೆ ಲಿಸ್ಬನಿನಲ್ಲಿ ಭಾರತದ ವಿರುದ್ಧ ಬೊಬ್ಬೆಯೂ ಪ್ರದರ್ಶನವೂ ನಡೆಯುವ ವರದಿಗಳು ಬರುತ್ತವೆ. ಪೋರ್ಚುಗೀಜರು ವಸಾಹತುಗಳ ರಕ್ಷಣೆಗಾಗಿ ರಕ್ತ ಸುರಿಸಲು ಸಿದ್ಧರೆಂದು ಒಬ್ಬ ಹೆಂಗಸು ಪೌರುಷದ ಮಾತನ್ನು ಆಡಿದಳೆಂದು ತಿಳಿಯುತ್ತದೆ. ಈ ಮತಪ್ರದರ್ಶಕರಿಗೆ ಸಮಾಧಾನವನ್ನು ಹೇಳುತ್ತಾ ಲೋಪ್ಸರು "ನಮ್ಮದು ನ್ಯಾಯವಾದ ವಿವೇಕಮಾರ್ಗವೆಂಬುದು ನಿಶ್ಚಿತ" ಎಂದು ಹೇಳಿದರು. ಸಮಯದೊಡನೆ ಹೊಂದಿಕೊಳ್ಳಲಾರದ ಲೋಪ್ಸರ ಮಾತಿನಲ್ಲಿ ಸತ್ಯಾಂಶ ಶಿಲಾಂಶದಷ್ಟೂ ಇಲ್ಲವೆಂದ ಜಾಗೃತಗೊಂಡ ರಾಷ್ಟ್ರೀಯ ಮನೋವೃತ್ತಿಯು ತಿಳಿಸಲು ಬಯಸುತ್ತದೆ.

ಪ್ರಕಟಣೆ

ಸುವರ್ಣ ಸಂಧಿ

ದಿ ಬೆಂಗಳೂರ ಪ್ರಾವಿಡೆಂಟ ಇನ್ಸುರನ್ಸ ಕಾರ್ಪೋರೇಶನ್ ಲಿ.,

ಮುಖ್ಯ ಕಚೇರಿ: 'ಸತ್ಯನಾರಾಯಣ' ೬೫, ಸೆಕೆಂಡ ಕ್ರಾಸ್ ಗಾಂಧಿನಗರ, ಬೆಂಗಳೂರು.

ಈ ವರೆಗಿನ ಪ್ರಗತಿ

೧. ತೆತ್ತ ಕ್ಲೇಮುಗಳ ಹಣ ಮಿಕ್ಕಿದೆ ರೂ. ೮೦,೦೦೦
೨. ಜೀವ ನಿಧಿ ಮೀರಿದೆ . . . ರೂ. ೪,೩೦,೦೦೦
೩. ಅತಿ ಇತ್ತೀಚಿನ ಮೌಲ್ಯಮಾಪನವು ತೋರಿಸಿದ ಹೆಚ್ಚಳವು ಮಿಕ್ಕಿದೆ . ರೂ. ೩೦,೦೦೦

ನಮ್ಮ ನಾಡಿನ ಜನತೆಯಲ್ಲಿ ಮಿತವ್ಯಯದ ಚಟವನ್ನು ಬೆಳೆಸಲು ಮತ್ತು ನಮ್ಮ ಸಂಸ್ಥೆಯನ್ನು ವಿಶಾಲವಾಗಿ ಮಾಡಲು ಬೋನಸ ಅನುಕೂಲತೆಯಿಂದ ಕೂಡಿಕೊಂಡ ಸಂಬಳದ ತಳಹದಿಯ ಮೇಲೆ ಏಜನ್ಸಿಗಳಿಗಾಗಿ ಅರ್ಜಿಗಳನ್ನು ಕರೆದಿದ್ದೇವೆ. ಸರ್ವರಿಗೂ ಇದೊಂದು ಅಪೂರ್ವ ಸಂಧಿ; ಈ ಉದಾರ ಉದ್ಯೋಗ ವ್ಯವಸಾಯದ ಬಗ್ಗೆ ಕಾರ್ಯಪ್ರವೃತ್ತರಾಗಿ ನಿರುದ್ಯೋಗ ಸಮಸ್ಯೆಯನ್ನು ಓಡಿಸಿರಿ. ಹಾಗೂ ರಾಷ್ಟ್ರೀಯ ಸಂಪತ್ತನ್ನು ನಿರ್ಮಿಸಿರಿ.

ಬೇಕಾಗಿದ್ದಾರೆ:- ಭಾರತದ ಒಕ್ಕೂಟದಲ್ಲಿ ಎಲ್ಲಾ ಕಡೆಗೂ ೧೦೦ ರೂ. ಮಾಸಿಕ ಸಂಬಳ ಹಾಗೂ ನಿಶ್ಚಿತ ಪ್ರವಾಸಿಕ ಭತ್ತೆ ರೂ. ೫೦ರ ಮೇಲೆ ಏಜಂಟರು ಬೇಕು. ಈ ಏಜಂಟರು ವಾರ್ಷಿಕ ವಿಮಾ ಕಂತುಗಳ ತಿಂಗಳೊಂದಕ್ಕೆ ೧೦೦೦೦ ರೂ. ಕಾರ್ಯದ ಗ್ಯಾರಂಟಿ ಕೊಡಬೇಕು. ಅಲ್ಲದೆ ಅವರಿಗೆ ಪೂರ್ಣ ವರ್ಷದ ವಿಮಾ ಕಂತುಗಳ ಪ್ರತಿ ೧೦೦೦ ಕೇಸುಗಳಿಗೆ ಬೋನಸ ರೂ. ೧೦ ಕೊಡಲಾಗುವದು. ಇದು ರೂ. ೧೨೦ರಷ್ಟಾಗುವದು. ರಿನೆವಾಲ್ ಕಮೀಶನ್ ೫% ಸಹ ಕೊಡಲಾಗುವದು.

ಮ್ಯಾನೇಜಿಂಗ ಡೈರೆಕ್ಟರರಿಗೆ ಬರೆಯಿರಿ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಪತ್ರಿಕಾ ಸ್ವಾತಂತ್ರ್ಯದ ರಕ್ಷಣೆ

ಕಳೆದ ವಾರ ಮುಂಬಯಿಯಲ್ಲಿ ಅಂಕಿತ ಹಾಕಲಾದ ಪತ್ರಿಕಾ ಆಯೋಗದ ಸುದೀರ್ಘ ವರದಿಯ ವಿಷಯದಲ್ಲಿ ಸಾರ್ವಜನಿಕರು ವ್ಯರ್ಥ ಊಹಾಪೋಹಗಳಲ್ಲಿ ತೊಡಗಬಾರದೆಂದು ಹೇಳುತ್ತಾ ಭಾರತ ಸರಕಾರವು ಆಯೋಗದ ಮುಖ್ಯ ಶಿಫಾರಸುಗಳ ಸಾರಾಂಶವನ್ನು ದಿನಾಂಕ ೨೩ರಂದು ಪ್ರಕಟಿಸಿತು. ವರದಿಯ ಮುದ್ರಣ ವ್ಯವಸ್ಥೆಯನ್ನು ಸರಕಾರವು ಮಾಡಿರುವುದೆಂದೂ ಮುಖ್ಯ ಭಾಗಗಳು ಅಗೋಸ್ತು ಮೂರನೇ ವಾರದಲ್ಲಿ ಲಭ್ಯವಾಗಬಹುದೆಂದೂ ಪೂರ್ತಿ ವರದಿ ಪ್ರಕಟವಾಗುವವರೆಗೆ ಯಾವುದೇ ನಿಶ್ಚಿತ ಅಭಿಪ್ರಾಯಕ್ಕೆ ಸಾರ್ವಜನಿಕರು ಬರಲಾಗದೆಂದೂ ಸರಕಾರ ಹೇಳುತ್ತದೆ.

ಪತ್ರಿಕೆಗಳ ಬೆಲೆಯನ್ನು ಪುಟದ ಪರಿಮಿತಿಯನ್ನು ಹೊಂದಿಕೊಂಡು ನಿಶ್ಚಯಿಸಬೇಕು; ನೂರಕ್ಕೆ ನಲ್ವತ್ತಕ್ಕಿಂತ ಹೆಚ್ಚು ಸ್ಥಳವನ್ನು ಪತ್ರಿಕೆಯಲ್ಲಿ ಜಾಹೀರಾತುಗಳಿಂದ ತುಂಬಲಾಗದು; ಬಹುಮಾನ ಸ್ಪರ್ಧೆಯ ಕೂಪನುಗಳನ್ನು ಪತ್ರಿಕೆಗಳು ಪ್ರಕಟಿಸಕೂಡದು; ಸರಕಾರಿ ಜಾಹೀರಾತು ಕೊಡುವಲ್ಲಿ ಪತ್ರಿಕೆಯ ಪ್ರಸಾರ, ಜಾಹೀರಾತು ದರ ಮತ್ತು ಯಾವ ವರ್ಗದ ಓದುಗರಿಗೆ ಅದು ಸೇರುತ್ತದೆ ಎಂಬ ವಿಚಾರವು ಗಮನಿಸಲ್ಪಡಬೇಕು; ಪತ್ರಿಕೆಗಳ ಒಡೆತನವು ವಿಶ್ವಸ್ತ ಮಂಡಳಿಗಳ ವಶದಲ್ಲಿರಬೇಕಲ್ಲದೆ ಪತ್ರಿಕೆಗಳ ಒಡೆಯರ ಆರ್ಥಿಕ ಹಿತಸಂಬಂಧಗಳಿಂದ ಪತ್ರಿಕಾ ನೀತಿಗೆ ಭಂಗ ಬಾರದಂತೆ ನೋಡಿಕೊಳ್ಳಬೇಕು; ಸಂಪಾದಕನು ಪತ್ರಿಕಾಧರ್ಮದಂತೆ ನಡೆದುಕೊಳ್ಳಲು ಹೊಣೆಗಾರನಿರಬೇಕು; ಪತ್ರಿಕೆಗಳ ಸ್ವಾತಂತ್ರ್ಯ ರಕ್ಷಣೆಗಾಗಿ ಕಾರ್ಯನಿರತ ಪತ್ರಿಕೋದ್ಯಮಿಗಳಿಗೂ ಪ್ರಾತಿನಿಧ್ಯವಿರುವ ಮಂಡಳವನ್ನು ನೇಮಿಸಬೇಕು; ಪತ್ರಿಕೋದ್ಯೋಗಿಗಳಿಗಾಗಿ ನೀತಿ ನಿಯಮಾವಳಿಯ ರಚನೆಯಾಗಬೇಕು, ಎಂದು ಮುಂತಾಗಿ ಈ ಸೂಚನೆಗಳಿರುತ್ತವೆ. ಅಲ್ಲದೆ, ಕಾರ್ಯನಿರತ ಪತ್ರಿಕೋದ್ಯೋಗಿಗಳ ಸ್ಥಿತಿಗತಿಯನ್ನು ಊರ್ಜಿತಗೊಳಿಸಲು ಪರಿಣಾಮಕಾರಿಯಾದ ಸಲಹೆಗಳನ್ನು ಆಯೋಗ ನೀಡಿರುತ್ತದೆ.

ಭಾರತದಲ್ಲಿ ೩೩೦ ದಿನ ಪತ್ರಿಕೆಗಳಿವೆಯೆಂದೂ ಅವುಗಳನ್ನು ೨೫ ಲಕ್ಷ ಜನರು ಓದುತ್ತಾರೆಂದೂ ತಿಳಿಯುತ್ತದೆ. ಇವುಗಳಲ್ಲಿ ೭ ಕೋಟಿ ರೂಪಾಯಿ ಬಂಡವಾಳವನ್ನು ತೊಡಗಿಸಿದ್ದು ವಾರ್ಷಿಕ ಉತ್ಪನ್ನವು ೧೧ ಕೋಟಿ ರೂಪಾಯಿಯಾಗುತ್ತದೆ. ಜಾಹೀರಾತುಗಳಿಂದಲೇ ೫ ಕೋಟಿ ರೂಪಾಯಿಗಳು ಸಂಗ್ರಹವಾಗುತ್ತವೆ. ಸಂಬಳ ಇತ್ಯಾದಿಗಳಿಗೆ ೪ ಕೋಟಿ ರೂಪಾಯಿ ಕೊಡಲಾಗುತ್ತದೆ. ಹೆಚ್ಚಿನ ಪತ್ರಿಕೆಗಳು ಮುಖ್ಯ ಪಟ್ಟಣಗಳಲ್ಲಿಯೇ ಪ್ರಸಾರವನ್ನು ಹೊಂದಿವೆ; ಗ್ರಾಮಾಂತರ ಪ್ರದೇಶಗಳಲ್ಲಿ ಪತ್ರಿಕೆಗಳ ಸಂಖ್ಯೆ ಹೆಚ್ಚಬೇಕಾದ ಅಗತ್ಯವಿದ್ದು, ಜಿಲ್ಲಾ ಕೇಂದ್ರಗಳಲ್ಲಿ ಪತ್ರಿಕೆಗಳು ನೆಲೆಗೊಂಡರೆ ಆದೀತೆಂದು ಆಯೋಗ ಹೇಳುತ್ತದೆ.

ಅಜಮೀರದಲ್ಲಿ ಕಾಂಗ್ರೆಸು ಅಧಿವೇಶನ

ರಾಷ್ಟ್ರದ ಭವಿಷ್ಯವನ್ನು ಚಿತ್ರಿಸುವ ಮಹತ್ವದ ಗೊತ್ತುವಳಿಗಳು

ಅಜಮೀರದಲ್ಲಿ ಈ ವಾರ ಸೇರಿದ ಅಖಿಲ ಭಾರತ ಕಾಂಗ್ರೆಸು ಸಮಿತಿಯ ಅಧಿವೇಶನವು ಜಾಗತಿಕ ಹಾಗು ದೇಶೀಯ ಧೋರಣೆಗಳ ವಿಷಯದಲ್ಲಿ ಕೆಲವು ಮಹತ್ವಪೂರ್ಣ ಗೊತ್ತುವಳಿಗಳನ್ನು ಅಂಗೀಕರಿಸಿತು. ಕಾಂಗ್ರೆಸಿನ ಮುಂದಿನ ಮಹಾಧಿವೇಶನವನ್ನು ತಮಿಳುನಾಡಿನಲ್ಲಿ ೧೯೫೫ನೇ ಜನವರಿ ತಿಂಗಳ ೧೦–೨೦ ದಿನಾಂಕಗಳ ನಡುವೆ ಸೇರಿಸಬೇಕೆಂದೂ ನಿಶ್ಚಿತ ತಾರೀಕನ್ನು ಪ್ರದೇಶ ಕಾಂಗ್ರೆಸು ನಿರ್ಧರಿಸಬೇಕೆಂದೂ ತೀರ್ಮಾನವಾಯಿತು. ಕಾಂಗ್ರೆಸಾಧ್ಯಕ್ಷ ನೆಹರೂರವರು ಅಜಮೀರದಲ್ಲಿ ದಿನಾಂಕ ೨೫ರಂದು ಮುಂಜಾನೆ ರಾಷ್ಟ್ರಧ್ವಜವನ್ನೇರಿಸುತ್ತಾ "ನಾವು ಅನೇಕ ಸಂಗ್ರಾಮಗಳನ್ನು ಈ ಧ್ವಜದ ನೆರಳಿನಲ್ಲಿ ಹೋರಾಡಿ ಜಯಿಸಿದ್ದೇವೆ. ನಮ್ಮ ಶಕ್ತಿಸಾಮರ್ಥ್ಯಗಳ ದ್ಯೋತಕವಾದ ರಾಷ್ಟ್ರಧ್ವಜವನ್ನು ನೋಡಿದಾಗಲೆಲ್ಲ ರಾಷ್ಟ್ರದ ಬಗ್ಗೆ ನಮ್ಮ ಕರ್ತವ್ಯದ ಅರಿವೇನೆಂದು ತಿಳಿದುಬರುತ್ತದೆ. ಶ್ರೇಷ್ಠ ಹಾಗು ಉದಾತ್ತವಾದ ಅನೇಕ ತತ್ವಗಳ ಪ್ರತೀಕವೆಂದು ಈ ಧ್ವಜವನ್ನು ವರ್ಣಿಸಬಹುದು" ಎಂದರು. ಇದರ ನೆರಳಲ್ಲಿ ಐಕ್ಯದಿಂದ ಮುನ್ನಡೆಯಲು ಭಾರತೀಯರು ಕಟಿಬದ್ಧರಾಗಬೇಕೆಂದು ಉಪದೇಶಿಸಿದರು.

ಶಾಂತ ವಾತಾವರಣ

ಕಾಂಗ್ರೆಸು ಅಧಿವೇಶನದಲ್ಲಿ ನೆರೆದ ೨೫೦ ಜನ ಸದಸ್ಯರನ್ನೂ ೧೦ ಸಾವಿರ ಪ್ರೇಕ್ಷಕರನ್ನೂ ಉದ್ದೇಶಿಸಿ ನೆಹರೂರವರು ಭಾಷಣ ಮಾಡುತ್ತಾ ಹೀಗೆಂದರು— ಜಗತ್ತಿನಲ್ಲಿ ಇಂದು ಎಲ್ಲಿಯೂ ಯುದ್ಧವಿಲ್ಲ; ದ್ವಿತೀಯ ಮಹಾ ಯುದ್ಧದ ಬಳಿಕ ಹೀಗಾದದ್ದು ಇದೇ ಮೊದಲನೆಯ ಸಲ. ಇಂಡೋ ಚೀನದ ಒಡಂಬಡಿಕೆಯನ್ನು ಸಾಧಿಸಿದ ಬಳಿಕ ಜಗತ್ತಿನ ಮೇಲೆ ಹೆಚ್ಚಿನ ಹೊಣೆಗಾರಿಕೆಯು ಬಿದ್ದಿರುತ್ತದೆ. ಭಾರತದ ಮೇಲೂ [illegible] ಭಾರವು ಬಿದ್ದಿದ್ದು ನಮ್ಮ ನಿಷ್ಪಕ್ಷಪಾತ ಬುದ್ಧಿಯ ಬಗ್ಗೆ ಉಳಿದ ದೇಶಗಳಿಗೆ ಹೆಚ್ಚಿನ ವಿಶ್ವಾಸವಿದೆಯೆಂದು ಇದರಿಂದ ಅರ್ಥವಾಗುತ್ತದೆ. ಆದರೆ ಈ ತೆರನಾದ ಗಂಭೀರ ಹೊಣೆಯನ್ನು ಹೊರಲು ರಾಷ್ಟ್ರದ ಆಂತರಿಕ ಶಕ್ತಿಯು ಬಲವಾಗಿರಬೇಕಾಗುವುದು— ಕಾಂಗ್ರೆಸು ಜನತೆಯ ಸಂಸ್ಥೆಯಾಗಿದ್ದು ರಾಷ್ಟ್ರವನ್ನು ಸಂಪತ್ಸಮೃದ್ಧ ಮಾಡುವ ಯೋಜನೆಗಳೆಲ್ಲ ಜನತೆಯ ಆವಶ್ಯಕತೆಗಳಿಗೆ ಅನುಗುಣವಾಗಿರುವಂತೆ ಅದು ಧೋರಣೆಯನ್ನು ರೂಪಿಸಿಕೊಳ್ಳುತ್ತದೆ. ಹೆಚ್ಚು ಆಹಾರ ಬೆಳೆಯಿರಿ ಎಂಬ ಚಳವಳಿಯು ಫಲಪ್ರದವಾದ ಪರಿಣಾಮವಾಗಿ, ಇಂದು ಆಹಾರ ಧಾನ್ಯಗಳ ಉತ್ಪಾದನೆಯು ಹೆಚ್ಚಿ ದರಗಳು ಇಳಿದು ಪರಿಸ್ಥಿತಿಯು ಸುಧಾರಿಸಿದ್ದು ಗೋಚರವಾಗುತ್ತದೆ. ದೇಶದ ಪ್ರಗತಿಗೆ ಇದು ಪೋಷಕವಾಗಿದೆಯಲ್ಲದೆ ಜನತೆಗೂ ಪ್ರೋತ್ಸಾಹ ಕೊಡುತ್ತದೆ.

ವಿಧಾಯಕ ಕಾರ್ಯ

ಆರ್ಥಿಕ ಪುನಾರಚನೆಯನ್ನು ಮಾಡಿಕೊಳ್ಳುವಾಗ ನಾವು ಸ್ವಂತ ಶಕ್ತಿಯನ್ನು ಹೆಚ್ಚಾಗಿ ಅವಲಂಬಿಸಬೇಕು. ನಿರುದ್ಯೋಗದ ಸಮಸ್ಯೆ ಪೇಟೆ ಪಟ್ಟಣಗಳಲ್ಲಿಯಂತೆ ಗ್ರಾಮಾಂತರ ಪ್ರದೇಶಗಳನ್ನೂ ವ್ಯಾಪಿಸಿರುವುದು ನಿಜ. ಇದಕ್ಕೆ ಪರಿಹಾರ ಮಾರ್ಗವನ್ನು ಶಿಕ್ಷಣ ಕ್ರಮದಲ್ಲಿ ಆಮೂಲಾಗ್ರ ಬದಲಾವಣೆ ಮಾಡಿಯೇ ಸಾಧಿಸಬೇಕಾಗುವುದು. ಪದವೀಧರರು ಸಹ ಕೈಯಿಂದ ದುಡಿದುಣ್ಣುವುದಕ್ಕೆ ಹಿಂಜರಿಯದಂತೆ ನೋಡಿಕೊಳ್ಳುವುದು ಅಗತ್ಯ. ಮೂವತ್ತು ವರ್ಷಗಳ ಹಿಂದೆ ಶಾಸನಾಂಗವನ್ನು ಪ್ರವೇಶಿಸಬೇಕೋ ಅಥವಾ ರಚನಾತ್ಮಕ ಕಾರ್ಯಗಳನ್ನು ಕೈಗೊಳ್ಳಬೇಕೋ ಎಂಬ ದ್ವಂದ್ವ ಪರಿಸ್ಥಿತಿಯೇ ಕಾಂಗ್ರೆಸಿನ ಸಮಸ್ಯೆಯಾಗಿದ್ದಿತು. ಆದರೀಗ ಸ್ವಾತಂತ್ರ್ಯ ದೊರೆತಿರುವುದರಿಂದ ವಿಧಾಯಕ ಕಾರ್ಯಗಳೇ ಕಾಂಗ್ರೆಸಿನ ಕರ್ತವ್ಯವಾಗುತ್ತದೆ. ಇದಕ್ಕೆ ಹೆಚ್ಚಿನ ಗಮನ ಕೊಡದಿದ್ದರೆ ಕಾಂಗ್ರೆಸು ಸಮೂಲ ನಾಶವಾಗುವುದು ನಿಶ್ಚಯ. ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸುತ್ತಿರುವುದರಿಂದಂತೂ ರಚನಾತ್ಮಕ ಕೆಲಸಗಳ ವ್ಯಾಪ್ತಿಯು ಇನ್ನಷ್ಟು ವಿಸ್ತಾರಹೊಂದಿದೆ. ಕ್ರಾಂತಿಯನ್ನು ಕೈಗೂಡಿಸಬೇಕೆನ್ನುವ ಜನರು ಶಾಂತರೀತಿಯ ಈ ಆಂದೋಲನದಲ್ಲಿ ಉತ್ಸಾಹದಿಂದ ಧುಮುಕಬೇಕು. ನಾವು ವಿದೇಶದ ವಸಾಹತುಗಳ ಬಗ್ಗೆಯೂ ಶಾಂತಿಯುತ ಧೋರಣವನ್ನೇ ಸ್ವೀಕರಿಸುತ್ತಿದ್ದೇವೆ. ಇಂಡೋ ಚೀನದ ಸಮಸ್ಯೆಯನ್ನು ಮುತ್ಸದ್ದಿತನದಿಂದ ಬಿಡಿಸಿದ ಮೆಂಡೆಸರು ಭಾರತದಲ್ಲಿರುವ ತಮ್ಮ ವಸಾಹತುಗಳ ಪ್ರಶ್ನೆಯನ್ನೂ ಶಾಂತರೀತಿಯಿಂದ ಶೀಘ್ರವೇ ಬಿಡಿಸುವರೆಂದು ನಂಬುತ್ತೇನೆ. ಭಾರತದಲ್ಲಿ ವಿದೇಶೀಯರ ವಸಾಹತುಗಳಿರುವುದನ್ನು ನಾವೆಂದಿಗೂ ಸಹಿಸುವುದಿಲ್ಲ. ಅವುಗಳು ಲೀನವಾದಾಗಲೇ ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಪೂರ್ಣ ಸ್ವರೂಪ ಬರುವುದು.

ಆರ್ಥಿಕ ಪುನಾರಚನೆ

ನೆಹರೂರವರ ಸ್ಫೂರ್ತಿದಾಯಕ ಭಾಷಣದ ಬಳಿಕ ಅಧಿವೇಶನವು ಕಾರ್ಯಕಾರಿ ಸಮಿತಿಯು ತಯಾರಿಸಿದ ಗೊತ್ತುವಳಿಗಳನ್ನು ಪರಿಶೀಲನೆಗೆ ತೆಗೆದುಕೊಂಡಿತು. ಪ್ರಾರಂಭದಲ್ಲಿ ಸುಯೋಜಿತ ಅಭಿವೃದ್ಧಿ ಧೋರಣೆಯಿರಬೇಕೆಂದು ಕೇಳುವ ಗೊತ್ತುವಳಿಯು ಮಂಡಿಸಲ್ಪಟ್ಟಿತು. ಆರ್ಥಿಕ ಪುನಾರಚನೆಗಾಗಿ ಪ್ರಯತ್ನಿಸುವಾಗ ಕಾಂಗ್ರೆಸಿಗರು ತಮ್ಮ ಹಳ್ಳಿಗಳಲ್ಲೂ ನಗರಗಳಲ್ಲೂ ಆಯಾ ಭಾಗದ ಜನಸಂಖ್ಯೆ, ಜನರ ವಯಸ್ಸು, ಪರಿಸ್ಥಿತಿ, ಬಾಲ ಮರಣ, ನಿರಕ್ಷರಿಗಳ ಪ್ರಮಾಣ, ಉದ್ಯೋಗ ವ್ಯವಹಾರ ಮುಂತಾದ ಮಾಹಿತಿಗಳನ್ನು ಸಂಗ್ರಹಿಸಬೇಕೆಂದೂ ಆಗ ಆರ್ಥಿಕ ಸಮಸ್ಯೆಯ [illegible] ಕಲ್ಪನೆಯಾಗುವದೆಂದೂ ಅಭಿಪ್ರಾಯ ವ್ಯಕ್ತಗೊಳಿಸಲ್ಪಟ್ಟಿತು. ಅಲ್ಲದೆ ಇದರಿಂದ ಜನರಲ್ಲಿ ಯೋಗ್ಯ ಮಾನಸಿಕ ಪರಿವರ್ತನೆಯೂ ಕೈಗೂಡುವುದೆಂದು ಹೇಳಲಾಯಿತು. ರಾಷ್ಟ್ರೀಯ ಯೋಜನೆಗಳ ಪ್ರಗತಿಯ ಬಗ್ಗೆ ಸಮಾಧಾನ ಪ್ರಕಟಿಸುವ ಗೊತ್ತುವಳಿಯೂ ಅಂಗೀಕಾರ ಗೊಂಡಿತು. ಉದ್ದಿಮೆಗಳ ವಿಚಾರದಲ್ಲಿ ಮಂಡಿಸಲಾದ ಗೊತ್ತುವಳಿಯು ಪರಮಾವಧಿ ಉತ್ಪಾದನೆ, ಪೂರ್ಣ ಉದ್ಯೋಗ ಮತ್ತು ಸಾಮಾಜಿಕ ಹಾಗು ಆರ್ಥಿಕ ನ್ಯಾಯ ಎಂಬೀ ಮೂರು ತತ್ವಗಳನ್ನು ಗಮನಿಸಬೇಕೆಂದು ಪ್ರತಿಪಾದಿಸುತ್ತವೆ. ಖಾಸಗಿ ಉದ್ದಿಮೆಗಳಿಗೆ ಸಾಕಷ್ಟು ವಿಶಾಲವಾದ ಅವಕಾಶವನ್ನು ಕೊಡಬೇಕೆಂಬ ತತ್ವವನ್ನೂ ಈ ಗೊತ್ತುವಳಿ ಒಪ್ಪುತ್ತದೆ.

(೭ನೇ ಪುಟ ನೋಡಿರಿ)

ಅಗೋಸ್ತು ೧೫

ಭಾರತ ಸ್ವಾತಂತ್ರ್ಯೋತ್ಸವದ ಎಂಟನೇ ವಾರ್ಷಿಕೋತ್ಸವದ

ಸುಸಂದರ್ಭದಲ್ಲಿ

"ನವಯುಗ"ವು

ವಾಡಿಕೆಯಂತೆ ವಿಶೇಷ ಸಂಚಿಕೆಯನ್ನು ಹೊರಡಿಸುವುದು.

ಸಂದರ್ಭೋಚಿತವಾದ ಲೇಖನ ಕವನಗಳಿಂದೊಡಗೂಡಿದ ಈ ಸಂಚಿಕೆ ವಿಶಿಷ್ಟವಾದ ಆಕರ್ಷಣೆಯುಳ್ಳದ್ದೂ ವೈವಿಧ್ಯಪೂರ್ಣವೂ ಆಗುವದು.

ಈ ಸಂಚಿಕೆಯಲ್ಲಿ ಪ್ರಕಟನೆಗೆಂದು ಜಾಹೀರಾತುಗಳನ್ನು ಅಗೋಸ್ತು ಮೊದಲನೇ ವಾರದ ವರೆಗೆ ಸ್ವೀಕರಿಸಲಾಗುವುದು. ಜಾಹೀರಾತುದಾರರು ತ್ವರೆ ಮಾಡಬೇಕೆಂದು ವಿನಂತಿ.

ಮೆನೇಜರ್, ನವಯುಗ, ಉಡುಪಿ.

WANTED

for the Jain High School, Moodbidri, a B. Sc., L. T., or B. T., for a temporary vacancy till 31—5—1955 to join duty on 2—8—1954. Apply immediately to the Correspondent with a copy to the District Educational Officer, S. K. Mangalore.

ನ ವ ಯು ಗ

ಉಡುಪಿ, ಗುರುವಾರ ೨೯-೭-'೫೪

ಪಂಚಾಯತುಗಳ ಹೊಸ ರೂಪ

ರಾಜ್ಯದ ಆಡಳಿತ ವ್ಯವಹಾರದಲ್ಲಿ ವಿಕೇಂದ್ರೀಕರಣವನ್ನು ಸಾಧಿಸಿ, ಪ್ರಜಾಪ್ರಭುತ್ವವೆಂಬ ಮಾತನ್ನು ಅನ್ವರ್ಥಗೊಳಿಸುವ ಉದ್ದೇಶದಿಂದ ಭಾರತದಲ್ಲಿ ಸರಕಾರೀ ಮತ್ತಿತರ ಮಟ್ಟದಿಂದ ಪ್ರಯತ್ನಗಳು ನಡೆಯುತ್ತಿರುವ ಸಂಗತಿಯನ್ನು ಕೇಳಿದ್ದೇವೆ. ಸಿಮ್ಲಾದಲ್ಲಿ ಕಳೆದ ತಿಂಗಳು ಜರಗಿದ ಸಮ್ಮೇಳನವು ಗ್ರಾಮ ಪಂಚಾಯತುಗಳನ್ನು ಇನ್ನಷ್ಟು ಕ್ರಿಯಾತ್ಮಕವಾಗಿಯೂ ವ್ಯಕ್ತಿತ್ವಪೂರ್ಣವಾಗಿಯೂ ರೂಪಿಸುವ ಧ್ಯೇಯದಿಂದ ೧೬ ಸದಸ್ಯರುಳ್ಳ ಸಮಿತಿಯೊಂದನ್ನು ನೇಮಿಸಿತು. ಇದಕ್ಕೆ ಮೊದಲೇ ಕಾಂಗ್ರೆಸು ಸಂಸ್ಥೆಯು ಪಂಚಾಯತುಗಳು ಪ್ರಜಾಪ್ರಭುತ್ವದ ಮೂಲ ಘಟಕವಾಗುವಂತೆ ಏನು ಉಪಾಯ ಕೈಗೊಳ್ಳಬೇಕೆಂಬುದನ್ನು ವಿವೇಚಿಸಲು ಸಮಿತಿಯೊಂದನ್ನು ರಚಿಸಿದ್ದಿತು. ಈ ವಾರ ಇವೆರಡೂ ಸಮಿತಿಗಳ ವರದಿಯ ಸಾರಾಂಶ ಪ್ರಕಟಗೊಂಡಿದ್ದು, ಅವುಗಳನ್ನು ಒಟ್ಟಿಗೆ ವಿಮರ್ಶಿಸಿದರೆ ಗ್ರಾಮ ಪಂಚಾಯತುಗಳ ಈಗಿನ ಸ್ವರೂಪದಲ್ಲಿ ಕ್ರಾಂತಿಕಾರಕ ಪರಿವರ್ತನೆಯನ್ನು ಮಾಡಲು ಹವಣಿಸಿರುವಂತೆ ಭಾಸವಾಗುತ್ತದೆ. ಇವೆರಡು ವರದಿಗಳು ಅನೇಕ ವಿಷಯಗಳಲ್ಲಿ ಒಂದೇ ರೀತಿಯ ಅಭಿಪ್ರಾಯಕ್ಕೆ ಬಂದಂತೆ ಕಂಡು ಬರುತ್ತಾದರೂ ಸಿಮ್ಲಾದ ಪರಿಷತ್ತಿನಲ್ಲಿ ನೇಮಕಗೊಂಡ ಉಪಸಮಿತಿಯ ವರದಿಯು ಸುಧಾರಣೆಯ ದೃಷ್ಟಿಯಿಂದ ಬಹಳ ಮುಂದೆ ಹೋಗುತ್ತದೆಂದು ಸ್ಪಷ್ಟವಾಗುತ್ತದೆ. ಒಂದರಿಂದ ಒಂದೂವರೆ ಸಾವಿರ ಜನಸಂಖ್ಯೆಯುಳ್ಳ ಪ್ರತಿಯೊಂದು ಹಳ್ಳಿಗೆ ಅಥವಾ ಹಳ್ಳಿಗಳ ಗುಂಪಿಗೆ ಗ್ರಾಮ ಸಭೆಯೊಂದು ಇರಬೇಕು; ಗ್ರಾಮದ ಪ್ರಾಯ ಪ್ರಬುದ್ಧರೆಲ್ಲರೂ ಅದರ ಸದಸ್ಯರೆಂದು ಭಾವಿಸಬೇಕು. ಇದರ. ಪಂಚಾಯತುದಾರರನ್ನು ಚುನಾಯಿಸುವರು. ಇಲ್ಲಿ ಸಾಧ್ಯವಾದಷ್ಟು ಮಟ್ಟಿಗೆ ಸರ್ವಾನುಮತದ ಆಯ್ಕೆ ನಡೆಯಬೇಕೇ ಹೊರತು ರಾಜಕೀಯ ಪಕ್ಷಗಳ ತಳಹದಿಯ ಮೇಲೆ ಚುನಾವಣಾ ಹೋರಾಟ ನಡೆಸುವುದು ಇಷ್ಟವಲ್ಲ. ಪಂಚಾಯತುದಾರರ ಮಂಡಳವು ಗ್ರಾಮಸಭೆಯ ಕಾರ್ಯನಿರ್ವಾಹಕ ಸಮಿತಿಯಂತೆ ಕೆಲಸ ಮಾಡಬೇಕು. ವರ್ಷಕ್ಕೆ ಎರಡು ಸಲವಾದರೂ ಗ್ರಾಮಸಭೆಯ ಅಧಿವೇಶನವು ಜರಗಿ, ಒಂದು ಸಭೆಯಲ್ಲಿ ಮುಂಗಡ ಪತ್ರದ ಮಂಜೂರಾತಿ ಹಾಗು ಇನ್ನೊಂದರಲ್ಲಿ ಪಂಚಾಯತುದಾರರ ಮಂಡಳಕ್ಕೆ ಕೆಲಸ ಕಾರ್ಯಗಳ ನಿರ್ದೇಶನವನ್ನು ಗ್ರಾಮಸಭೆಯು ಕೊಡುವಂತಾಗಬೇಕು. ಹಳ್ಳಿಯ ಪಂಚಾಯತುಗಳ ಅಧಿಕಾರವನ್ನು ವ್ಯಾಪಕವಾಗಿ ಅಧಿಕಗೊಳಿಸಬೇಕು; ಮತ್ತು ಆದಾಯ ಸ್ರೋತವನ್ನೂ ವಿಸ್ತರಿಸಬೇಕು ಉದಾಹರಣೆಗಾಗಿ ಭೂಕಂದಾಯವನ್ನು ವಸೂಲು ಮಾಡುವ ಅಧಿಕಾರವನ್ನು ಗ್ರಾಮ ಪಂಚಾಯತುಗಳಿಗೆ ಒಪ್ಪಿಸಬೇಕೆಂದೂ ಸಂಗ್ರಹವಾದ ಹಣದಲ್ಲಿ ನೂರಕ್ಕೆ ೧೫ರಿಂದ ೨೦ ಅಂಶವನ್ನು ಗ್ರಾಮ ಪಂಚಾಯತುಗಳಿಗೆ ನಿತ್ಯದ ಆಡಳಿತ ವೆಚ್ಚಕ್ಕೆ ಬಿಟ್ಟುಗೊಡಬೇಕೆಂದೂ ಹೇಳಲ್ಪಟ್ಟಿದೆ; ಅಲ್ಲದೆ ಪಂಚಾಯತುಗಳು ಜನರಿಂದ ಒತ್ತಾಯಪೂರ್ವಕ ಶ್ರಮದಾನವನ್ನು ಪಡೆಯುವಂತೆ ಅಧಿಕಾರಕೊಡಬೇಕು; ಶ್ರಮದಾನ ಮಾಡಲು ನಿರಾಕರಿಸುವವರು ಶ್ರಮದ ಪ್ರಮಾಣಕ್ಕಿಂತ ಇಮ್ಮಡಿಯಷ್ಟು ಶ್ರಮದಾನಕರವನ್ನು ಕೊಡುವಂತೆ ನಿರ್ಬಂಧಿಸಬೇಕು ಎಂದೂ ವರದಿಗಳು ಸೂಚಿಸುತ್ತವೆ. ಸಿಮ್ಲಾ ಉಪಸಮಿತಿಯ ವರದಿಯು ಭೂಮಿಗಳಿಗೆ ಸಂಬಂಧಿಸಿದ ಕಾಗದ ಪತ್ರಗಳನ್ನು ಗ್ರಾಮ ಪಂಚಾಯತುಗಳು ನೋಡಿಕೊಳ್ಳಬೇಕೆಂದೂ ಪಡ ಭೂಮಿ, ಹುಲ್ಲುಗಾವಲು, ಅರಣ್ಯ ಮುಂತಾದ ಸರಕಾರಿ ಸ್ವತ್ತಿನ ವ್ಯವಸ್ಥಾಪಕತ್ವ ಹಾಗು ಅವುಗಳನ್ನು ಅಭಿವೃದ್ಧಿಗೊಳಿಸುವ, ಕೃಷಿ ಮತ್ತಿತರ ಉದ್ದೇಶಗಳಿಗೋಸ್ಕರ ಗುತ್ತಿಗೆಗೆ ಕೊಡುವ ಅಧಿಕಾರ ಗ್ರಾಮ ಪಂಚಾಯತುಗಳಿಗಿರಬೇಕೆಂದೂ ಹಾಗು ನೆಲ ಭೂಮಿಯನ್ನು ಗ್ರಾಮಪಂಚಾಯತುಗಳ ಮೂಲಕವೇ ರೈತರಿಗೆ ಗೇಣಿಗೆ ಒಪ್ಪಿಸಿ, ಭೂಮಾಲಿಕರಿಂದಾಗುವ ತ್ರಾಸವನ್ನು ತಪ್ಪಿಸಬೇಕೆಂದೂ ಸೂಚಿಸುತ್ತದೆ. ಒಟ್ಟು ೧೫ ವರ್ಗದ ಕರಗಳನ್ನು ಹೇರಬಹುದೆಂದು ಅದು ಸಲಹೆಮಾಡಿದೆಯಲ್ಲದೆ ಕೇಂದ್ರ ಸರಕಾರವು ರಾಜ್ಯ ಸರಕಾರಗಳ ಮೂಲಕ ಉದಾರ ಸಹಾಯವನ್ನು ಒದಗಿಸಬೇಕೆಂದೂ ಹೇಳುತ್ತದೆ. ಎರಡೂ ವರದಿಗಳು ಗ್ರಾಮ ಪಂಚಾಯತುಗಳು ಅಭಿವೃದ್ಧಿ ಕಾರ್ಯದಲ್ಲಿ ವಹಿಸಬೇಕಾದ ಮುಖ್ಯ ಪಾತ್ರವನ್ನು ಬಿಂಬಿಸುತ್ತವೆ: ಗ್ರಾಮ ಸಹಕಾರಿ ಸಂಘಗಳನ್ನು ನಡೆಸಿ ರೈತರಿಗೆ ಸುಧಾರಿತ ಬೀಜ, ಗೊಬ್ಬರಗಳನ್ನು ಪೂರೈಸಬೇಕೆಂದೂ ಕೃಷಿ ಸರಕುಗಳನ್ನು ಕೊಂಡುಕೊಳ್ಳಲು ಹಣಕಾಸಿನ ಏರ್ಪಾಡು ಮಾಡಬೇಕೆಂದೂ ಅವು ಹೇಳುತ್ತವೆಯಲ್ಲದೆ ಹಳ್ಳಿಯ ಆಡಳಿತ ಹಾಗು ಅಭಿವೃದ್ಧಿಯು ಸಮರ್ಪಕ ರೀತಿಯಲ್ಲಿ ನೆರವೇರುವಂತಹ ಸ್ಥಳೀಯ ಧುರೀಣತ್ವಕ್ಕೆ ಅಡಿಗಲ್ಲನ್ನು ಹಾಕಬೇಕೆಂದೂ ಅದಕ್ಕಾಗಿ ಯೋಗ್ಯ ತರಬೇತಿಯ ವ್ಯವಸ್ಥೆ ಮಾಡಬೇಕೆಂದೂ ಅಭಿಪ್ರಾಯಪಡುತ್ತವೆ. ಆರ್ಥಿಕ ಪುನಾರಚನೆಯಲ್ಲಿ ಯೋಜನೆಯ ಮೂಲ ಘಟಕವಾಗಿಯೂ ದೈನಂದಿನ ಆಡಳಿತದಲ್ಲಿ ಕ್ರಿಯಾತ್ಮಕ ಅಂಗವಾಗಿಯೂ ಗ್ರಾಮ ಪಂಚಾಯತುಗಳು ಕೆಲಸ ಮಾಡಬೇಕೆಂದು ವರದಿಗಳು ಆಶಿಸುತ್ತವೆ. ಶೀಘ್ರ ನ್ಯಾಯದಾನದ ವ್ಯವಸ್ಥೆಯ ಕಡೆಗೂ ವರದಿಗಳು ಗಮನಹರಿಸಿದ್ದು, ನಾಲ್ಕಾರು ಹಳ್ಳಿಗಳ ಗುಂಪಿಗೆ ನ್ಯಾಯ ಪಂಚಾಯತುಗಳು ಇರಬೇಕೆಂದು ಹೇಳಿ, ಅವುಗಳ ಆಯ್ಕೆಯ ಕ್ರಮವನ್ನು ವಿವರಿಸುತ್ತವೆ. ಇವೆಲ್ಲ ಸೂಚನೆಗಳನ್ನು ಕಂಡು ಯಾರಿಗಾದರೂ ಆಶ್ಚರ್ಯವಾಗದಿರದು—ನಮ್ಮ ಪಂಚಾಯತುಗಳ ಕೆಲಸವು ಸಾಕಷ್ಟು ತೃಪ್ತಿಯನ್ನು ಇನ್ನೂ ಕೊಟ್ಟಿಲ್ಲದಾಗ ಮತ್ತು ಹಳ್ಳಿಯ ವಿವೇಕಶೀಲರನ್ನು ಗೌರವಿಸುವ ಹಿಂದಿನ ಪರಂಪರೆಯು ಪೂರ್ಣ ನಶಿಸಿ ಪಕ್ಷಪಂಗಡಗಳ ಬಣ ರಾಜಕೀಯವು ಪ್ರಬಲಿಸಿರುವಾಗಿ ಆಡಳಿತದ ವಿಕೇಂದ್ರೀಕರಣ ತತ್ವವನ್ನು ಮನ್ನಿಸುವುದೆಂದರೆ ಅರಾಜಕತೆಗೆ ಎಡೆಕೊಟ್ಟಂತಾಗದೆ ಎಂಬ ಪ್ರಾಮಾಣಿಕ ಸಂಶಯ ಹಲವು ವಿಚಾರಕರಲ್ಲಿ ಸಹಜವಾಗಿಯೇ ಏಳುತ್ತದೆ. ಗ್ರಾಮ ಪಂಚಾಯತುಗಳಿಗೆ ವಹಿಸಿಕೊಡಬೇಕೆನ್ನುವ ಹೊಣೆಗಾರಿಕೆಗಳನ್ನು ರಾಜ್ಯ ಸರಕಾರಗಳಿಗೆ ಸಹ ಕಾರ್ಯಕ್ಷಮ ರೀತಿಯಲ್ಲಿ ನಿರ್ವಹಿಸುವುದು ಕಠಿಣವೆನಿಸಿದಾಗ ಆಡಳಿತ ಕ್ಷೇತ್ರದಲ್ಲಿ ಏನೇನೂ ಅನುಭವವಿಲ್ಲದ ಪಂಚಾಯತುದಾರರು ಯೋಜನೆಯನ್ನು ರೂಪಿಸುವ ಹಾಗು ನಿರ್ವಹಿಸುವ ಸ್ವಾತಂತ್ರ್ಯವನ್ನು ಎಷ್ಟರ ಮಟ್ಟಿಗೆ ಸದುಪಯೋಗಗೊಳಿಸುವರೊ ಎಂಬ ಶಂಕೆಯುಂಟಾಗುತ್ತದೆ. ಇಂಥವರಿಗೆ ತಮ್ಮ ಒಳ್ಳೆಯದೇನೆಂಬುದನ್ನು ಹಳ್ಳಿಗರು ತಿಳಿದಿಲ್ಲ ಎಂಬ ಭಾವನೆಯೇ ತಪ್ಪೆಂದು ಹೇಳಿದ ಮಾವಳಣಕರರ ಮಾತೂ ನಡೆವರೆಡಹದೆ ಕುಳಿತರೆಡಹುವರೆ ಎಂಬ ಸುಭಾಷಿತವು ಪಥ್ಯವಾಗಲಿಕ್ಕಿಲ್ಲ. ಜನರ ಒಳ್ಳೆಯತನಕ್ಕೆ ಗೌರವವನ್ನು ಕೊಟ್ಟು, ಅವರ ಶಕ್ತಿಸಾಮರ್ಥ್ಯಗಳ ಮೇಲೆ ವಿಶ್ವಾಸವನ್ನಿಟ್ಟು ಮುಂದುವರಿಯುವುದೇ ಪ್ರಜಾಪ್ರಭುತ್ವದ ರೀತಿಯಾಗಿದೆಯೆಂದು ಹೇಳಿಯೇ ಇಂಥವರನ್ನು ಒಪ್ಪಿಸಬೇಕಾಗುತ್ತದೆ; ಮತ್ತು ದಿಟ್ಟವಾದ ಧೋರಣವನ್ನು ಪ್ರಯೋಗಾತ್ಮಕ ರೂಪದಲ್ಲಿ ಮೊದಲಿಗೆ ಜ್ಯಾರಿಗೆ ತಂದು ಸಾಧಕಬಾಧಕ ಪರಿಣಾಮಗಳನ್ನು ಅಳೆದು ಕೊನೆಯ ನಿರ್ಣಯ ಕೈಗೊಳ್ಳೋಣವೆಂಬ ಸಮಾಧಾನವನ್ನು ಕೊಡಬೇಕಾಗುತ್ತದೆ. ಈ ಮನೋಭಾವದಿಂದ ಪಂಚಾಯತುಗಳ ಪುನರ್ಘಟನೆಯಾಗಲೆಂದು ನಾವು ಹಾರೈಸುತ್ತೇವೆ.

ಇಂಡೋಚೀನದಲ್ಲಿ ಮುಂದಿನ ಕ್ರಮ

ಹೊಸಹೆಜ್ಜೆಗೆ ಬರಲು ಸಂಬಂಧಿಸಿದವರಿಗೆ ಕರೆ

ಏಳು ವರ್ಷಗಳಿಗೂ ಹೆಚ್ಚು ಸಮಯ ನಡೆದ ಇಂಡೋಚೀನದ ಸಮರವು ಇದೀಗ ನಿಲುಗಡೆಗೆ ಬಂದಿತು; ಮತ್ತು ಭಾರತದ ಪ್ರಧಾನಮಂತ್ರಿಗಳು ಹೇಳಿದಂತೆ ದ್ವಿತೀಯ ಮಹಾ ಯುದ್ಧದ ಬಳಿಕ ಜಗತ್ತಿನ ಯಾವ ಭಾಗದಲ್ಲಿಯೂ ಯುದ್ಧವಿಲ್ಲ ಎಂದು ಹೇಳುವ ಸಂತೋಷಜನಕ ವಾತಾವರಣವು ಏರ್ಪಟ್ಟಿತು. ಫ್ರಾನ್ಸಿನ ಪ್ರಧಾನ ಮಂತ್ರಿಗಳು ತಮ್ಮ ಭೀಷ್ಮ ಪ್ರತಿಜ್ಞೆಯನ್ನು ಈಡೇರಿಸುವುದಕ್ಕೋಸ್ಕರ ಕೈಗೊಂಡ ಪ್ರಯತ್ನಗಳು ಅಗಾಧವಾಗಿದ್ದು ಎಲ್ಲರ ಮೆಚ್ಚುಗೆಯನ್ನು ಪಡೆದವು. ಫ್ರೆಂಚರ ಪ್ರತಿಷ್ಠೆಗೆ ಇದರಿಂದ ಧಕ್ಕೆಯುಂಟಾಯಿತೆಂದು ತೋರುತ್ತದೇನೋ ನಿಜ: ಆದರೆ ವಾಸ್ತವವಾದ ಅಂಶಗಳನ್ನು ಮನಗಂಡರೆ ಫ್ರೆಂಚರು ಒಪ್ಪಂದವನ್ನು ಮಾಡಿಕೊಂಡು ಲಾಭವನ್ನೆ ಸಂಪಾದಿಸಿದರು. ಅನ್ಯಥಾ ಫ್ರೆಂಚರು ವೀಟನಾಮದಲ್ಲಿ ನಿಲ್ಲಿಸಿದ ಶ್ರೇಷ್ಠ ವರ್ಗದ ಸೈನ್ಯಗಳು ಶತ್ರುವಶವಾಗುತಿದ್ದವು. ಮೆಂಡೆಸರ ಈ ನಿಲುಮೆಯನ್ನು ಫ್ರೆಂಚ ರಾಷ್ಟ್ರೀಯ ಸಮಿತಿಯು ಅನುಮೋದಿಸಿತು ಇದರಂತೆ ಬ್ರಿಟನು ಸಹ ಒಪ್ಪಂದದ ಕುರಿತು ಸಮಾಧಾನ ವ್ಯಕ್ತಗೊಳಿಸಿತು. ಒಪ್ಪಂದಕ್ಕೆ ಅಂಕಿತ ಬಿದ್ದುದರಿಂದಾಗಿ, ಜಾಗತಿಕ ಯುದ್ಧದಭೀತಿಯು ಸದ್ಯಕ್ಕೆ ದೂರವಾಯಿತೆಂದು ಈಡನರು ಅಭಿಪ್ರಾಯಪಟ್ಟರು ಈ ಒಡಂಬಡಿಕೆಯನ್ನು ಸಾಧಿಸುವಲ್ಲಿ ಮೆಂಡೆಸರೊಡನೆ ಹೆಗಲಿಗೆ ಹೆಗಲು ಕೊಟ್ಟು ದುಡಿದ ಶ್ರೇಯಸ್ಸು ಈಡನ್ನರಿಗೆ ಸಲ್ಲುತ್ತದೆ.

ಏಶ್ಯಾದ ಪ್ರತಿಕ್ರಿಯೆ

ಒಡಂಬಡಿಕೆಯು ಏಶ್ಯಾದಲ್ಲೆಲ್ಲ ಹರ್ಷದ ಪುಳಕವನ್ನುಂಟುಮಾಡಿತು: ಅಮೇರಿಕನ್ನರೂ ಐರೋಪ್ಯರೂ ಕಮ್ಯುನಿಸ್ಟರ ಆಕ್ರಮಣವೆಂಬ ದೃಷ್ಟಿಯಿಂದ ಇಂಡೋಚೀನದ ಸಮರವನ್ನು ನೋಡುತಿದ್ದರೂ ಏಶ್ಯಾದ ಮಟ್ಟಿಗೆ ಇದು ಸಾಮ್ರಾಜ್ಯಶಾಹಿತ್ವದ ವಿರುದ್ಧ ಜಾಗೃತ ರಾಷ್ಟ್ರೀಯ ಭಾವನೆಯ ಹೋರಾಟವೇ ಸರಿ. ನೆಹರೂರವರು ಪಾರ್ಲಿಮೆಂಟಿನಲ್ಲಿ ಹಿಂದೊಮ್ಮೆ ಹೇಳಿಕೆ ಕೊಡುತ್ತಾ ಈ ಮಾತನ್ನು ಸ್ಪಷ್ಟಗೊಳಿಸಿದ್ದರು—ಮತ್ತು ಇಂದು ನೆಹರೂರ ಮಾತು ನಿಜವೆಂದು ಎಲ್ಲರಿಗೂ ಮನವರಿಕೆಯಾಗಿರುತ್ತದೆ. ಆದುದರಿಂದ ಒಡಂಬಡಿಕೆಗೆ ಏಶ್ಯಾದಲ್ಲೆಲ್ಲ ಸ್ವಾಗತವು ಕಂಡುಬರುತ್ತದೆ. ಕೊಲೊಂಬೋ ಪರಿಷತ್ತನ್ನು ಕರೆದು ಇಂಡೋಚೀನ ಸಮರದ ವಿಷಯದಲ್ಲಿ ಏಶ್ಯಾದ ರಾಷ್ಟ್ರಗಳ ಅಭಿಪ್ರಾಯವನ್ನು ಜಗತ್ತಿಗೆ ತಿಳಿಸಿ ಹೇಳಲು ಪ್ರಯತ್ನಿಸಿದ ಕೋಟೆಲನಾಲರು ವಸಾಹತು ಸಾಮ್ರಾಜ್ಯವಾದವು ಮಣ್ಣುಮುಕ್ಕುವಂತಾಯಿತೆಂದು ಹೇಳಿದ್ದು ಸತ್ಯ ರಶಿಯಾ—ಚೀನಗಳು ಒಡಂಬಡಿಕೆಯನ್ನು ತೃಪ್ತಿಕರವೆಂದು ಭಾವಿಸಿರುವುದೂ ಶುಭ ಚಿಹ್ನೆ: ಆದರೆ, ಅಮೇರಿಕವು ಒಡಂಬಡಿಕೆಯಿಂದ ತೃಪ್ತವಾಗಿಲ್ಲ. ಒಡಂಬಡಿಕೆಗೆ ಗ್ಯಾರಂಟಿಯನ್ನು ಕೊಟ್ಟ ರಾಷ್ಟ್ರಗಳಲ್ಲಿ ಇದು ಒಂದಾಗಿದ್ದರೂ ಕಮ್ಯುನಿಸ್ಟರ ಆಕ್ರಮಣ ಪ್ರವೃತ್ತಿಗೆ ಮರಳಿ ಚಾಲನೆ ದೊರೆತಲ್ಲಿ ತಾನು ಹಸ್ತಕ್ಷೇಪ ಮಾಡಬೇಕಾಗುವುದೆಂದು ಅದು ಈಗಲೇ ಹೇಳಿರುತ್ತದೆ. ಒಪ್ಪಂದದಿಂದ ದುಃಖಿತವಾದ ಇನ್ನೊಂದು ರಾಷ್ಟ್ರವೆಂದರೆ ವೀಟನಾಮ—ದೇಶದ ವಿಭಜನೆಯಾಗ ಕೂಡದೆಂದು ಹೇಳುತಿದ್ದ ವೀಟನಾಂ ನಾಯಕರಿಗೆ ಒಡಂಬಡಿಕೆಯು ಸರಿತೋರಿಲ್ಲ.

ತಟಸ್ಥೀಕರಣ

ಇಂತಹ ವಿರೋಧ ಸಹಜವಾದದ್ದು—ಏಕೆಂದರೆ ವೀಟನಾಮದ ವಿಭಜನೆಯು ಕಮ್ಯುನಿಸ್ಟರ ಮೇಲ್ಗೈಯನ್ನು ತೋರಿಸುತ್ತದೆ. ೧೭ ಡಿಗ್ರಿ ಉತ್ತರ ಅಕ್ಷಾಂಶದ ಸುಮಾರಿಗೆ ಎಳೆಯಲಾದ ಕದನವಿರಾಮ ರೇಖೆಯಿಂದಾಗಿ, ವೀಟಮಿನರ ಕೈಗೆ ಕೆಂಪು ನದೀ ಮುಖದ ಫಲವತ್ತಾದ ಭತ್ತದ ಗದ್ದೆಗಳೂ ಹಾನ್ವ್ಯಾ, ಹೈಪಾಂಗ ಮುಂತಾದ ಬಂದರಗಳೂ ದೊರಕುವಂತಾಯಿತು. ಅಲ್ಲದೆ, ವೀಟಮಿನರ ಅಧಿಕಾರಕ್ಕೆ ಬಂದ ಪ್ರದೇಶದಲ್ಲಿ ೧೨೦ ಲಕ್ಷ ಜನರಿದ್ದಾರೆ: ವೀಟನಾಮದಲ್ಲಿ ೯೦ ಲಕ್ಷ ಜನರು ಮಾತ್ರ ಉಳಿಯುತ್ತಾರೆ ಇದರಿಂದ ೧೯೫೬ನೇ ಇಸವಿಯ ಪೂರ್ವಾರ್ಧದಲ್ಲಿ ಚುನಾವಣೆಗಳು ನಡೆದಾಗ ವೀಟಮಿನರಿಗೇ (ಅ

ಥಾರ್ತ್ ಕಮ್ಯುನಿಸ್ಟರಿಗೆ) ಜಯ ದೊರೆಕೀತೆಂಬ ಭಾವನೆ ಬೆಳೆಯುತ್ತದೆ. ಫ್ರೆಂಚರಿಗೆ ಈ ಸಂಭವವು ಗೋಚರವಾಗುತಿದ್ದರೂ ಅಷ್ಟು ಸಮಯದೊಳಗೆ ವೀಟಮಿನ್ನರ ಪ್ರಭಾವಲಯವು ವಾಸಕಾದೀತೆಂದೂ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿ ವೀಟನಾಮೀಯರನ್ನು ಕಮ್ಯೂನಿಸ್ಟ ಆಕರ್ಷಣೆಯಿಂದ ಮುಕ್ತಗೊಳಿಸಬಹುದೆಂದೂ ಆಶಾಕಿರಣ ತೋರುತ್ತದೆ. ಒಡಂಬಡಿಕೆಯು ಉಭಯ ಪಕ್ಷಗಳೂ ಹೊಸ ಸೇನೆ ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಕೂಡದೆಂದೂ ಇಂಡೋಚೀನದ ಮೂರೂ ರಾಜ್ಯಗಳಿಂದ ವಿದೇಶೀಯರ ಸೇನೆಗಳು ಹಿಂದೆಗೆಯಬೇಕೆಂದೂ ಹೇಳುತ್ತದೆ. ಫ್ರೆಂಚರ ಮಟ್ಟಿಗೆ ಆ ಸರಕಾರಗಳ ಇಚ್ಛೆಯ ಮೇರೆಗೆ ತಮ್ಮ ಸೈನ್ಯವನ್ನು ಇಡಬಹುದೆಂಬ ವಿನಾಯಿತಿ ಸಿಕ್ಕಿರುವುದು: ಆದರೆ ಇಂಡೋಚೀನದ ಮೂರು ಆಶ್ರಿತ ರಾಜ್ಯಗಳು ವಿದೇಶಗಳೊಡನೆ ಯಾವುದೇ ಸಂರಕ್ಷಕ ಅಥವಾ ಆಕ್ರಮಕ ಒಪ್ಪಂದವನ್ನು ಮಾಡಬಾರದೆಂದು ಹೇಳಿದ್ದು, ಇಂಡೋಚೀನದ ತಟಸ್ಥೀಕರಣದಲ್ಲಿ ಇದು ದೊಡ್ಡ ಹೆಜ್ಜೆ.

ಭಾರತದ ಕಾರ್ಯ

ಒಪ್ಪಂದವು ೨೦ನೇ ದಿನಾಂಕ ರಾತ್ರಿ ಅಸ್ತಿತ್ವಕ್ಕೆ ಬಂದಂದಿನಿಂದ ಸಮರ ಭೂಮಿಯಲ್ಲಿ ಚಟುವಟಿಕೆಗಳು ಸ್ಥಗಿತಗೊಂಡವು. ಅಲ್ಲದೆ, ಇದೇ ಮಂಗಳವಾರ (ದಿನಾಂಕ ೨೭) ದಿಂದ ಅಧಿಕೃತವಾಗಿ ಸೈನ್ಯಗಳನ್ನು ನಿಶ್ಚಿತ ವಲಯಗಳಿಗೆ ಹಿಂದೆಗೆದುಕೊಳ್ಳುವ ಕೆಲಸವು ಪ್ರಾರಂಭವಾಯಿತು. ಆಗೋಸ್ತು ತಿಂಗಳ ಕೊನೆಯ ಸುಮಾರಿಗೆ ಈ ಕೆಲಸ ಮುಗಿಯುತ್ತದೆ. ಉತ್ತರ ವೀಟನಾಮದಿಂದ ಫ್ರೆಂಚ ಪಡೆಗಳೂ ದಕ್ಷಿಣದಿಂದ ವೀಟಮಿನ ಸೇನೆಗಳೂ ಇನ್ನು ಹತ್ತು ತಿಂಗಳಲ್ಲಿ ಸಂಪೂರ್ಣ ಕಾಲ್ದೆಗೆಯುತ್ತವೆ. ಯುದ್ಧ ವಿರಾಮ ಒಪ್ಪಂದದ ಮೇಲ್ವಿಚಾರಣೆ ನಡೆಸುವ ಮಹತ್ವದ ಹೊಣೆಗಾರಿಕೆಯು ಕೆನಡಾ-ಭಾರತ-ಪೋಲೆಂಡ ರಾಷ್ಟ್ರಗಳ ತಟಸ್ಥ ಮಂಡಳಕ್ಕೆ ಸೇರುತ್ತದೆ. ಭಾರತವು ಈ ಮಂಡಳದ ಅಧ್ಯಕ್ಷನಾಗುತ್ತದೆ: ಮತ್ತು ಸಾಮಾನ್ಯ ವಿಷಯಗಳಲ್ಲಿ ಬಹುಮತದ ತೀರ್ಮಾನವೇ ಸಿಂಧುವಾಗುವುದು. ವಿಶೇಷ ಸಂಗತಿಗಳ ಮಟ್ಟಿಗೆ ಮಾತ್ರ ಸರ್ವಾನುಮತದ ನಿರ್ಣಯವಾಗಬೇಕು, ಅನ್ಯಥಾ ಅದನ್ನು ಜಿನೇವಾದಲ್ಲಿ ಸಭೆ ಸೇರಿದ ರಾಷ್ಟ್ರಗಳಿಗೆ ವರದಿ ಮಾಡಬೇಕು. ಭಾರತವು ಕಳೆದ ವರ್ಷ ಕೊರಿಯಾದಲ್ಲಿ ತಟಸ್ಥ ಮಂಡಳದ ಅಧ್ಯಕ್ಷನಾಗಿ ಕೆಲಸಮಾಡಿರುವುದು:—ಆದರೆ ಈಗಿನ ಹೊಣೆಗಾರಿಕೆಯ ಸ್ವರೂಪ ಬೇರೆಯಾಗಿರುತ್ತದೆ. ಕೊರಿಯಾಕ್ಕೆ ಕಳಿಸಿದಂತೆ ಇಲ್ಲಿ ಸೈನ್ಯ ಕಳಿಸಬೇಕಾಗುವುದಿಲ್ಲ ಏಕೆಂದರೆ ಯುದ್ಧ ಕೈದಿಗಳ ವಿನಿಮಯದ ಪ್ರಶ್ನೆಯು ತೊಡಕಿಲ್ಲದೆ ಬಗೆ ಹರಿದಿದೆ. ೫೦ರಿಂದ ೧೦೦ ಯುದ್ಧ ವಿರಾಮ ನಿರೀಕ್ಷಕರನ್ನು ಕಳಿಸಬೇಕಾಗಬಹುದು. ನಮ್ಮ ಪ್ರತಿನಿಧಿಯು ಎರಡು ವರ್ಷದಷ್ಟು ದೀರ್ಘಕಾಲ ಮಾತೃಭೂಮಿಯನ್ನು ಬಿಡಬೇಕಾಗಬಹುದು. ಆದರೂ ಶಾಂತಿಯ ಸದಿಚ್ಛೆಯಿಂದ ಭಾರತವು ಈ ಹೊಣೆ ಹೊರಲು ಒಪ್ಪಿಕೊಂಡು, ಪ್ರಾಸ್ತಾವಿಕ ಮಾತುಕತೆಗಳ ಬಗ್ಗೆ ಕೆನಡಾ ಪೋಲೆಂಡುಗಳನ್ನೂ ಫ್ರಾನ್ಸನ್ನು, ವೀಟಮಿನ ಹಾಗು ಇಂಡೋಚೀನದ ಮೂರು ರಾಜ್ಯಗಳನ್ನೂ ಹೊಸದಿಲ್ಲಿಗೆ ಪ್ರತಿನಿಧಿಗಳನ್ನು ಕಳಿಸಬೇಕೆಂದು ಆಮಂತ್ರಣ ಕೊಟ್ಟಿರುವುದು ಎಲ್ಲ ಪ್ರಗತಿಯೂ ಶಾಂತಿಯ ಮಾರ್ಗದಿಂದಲೇ ಕೈಗೂಡತಕ್ಕದೆಂದೂ ಪ್ರಜಾಸತ್ತಾತ್ಮಕ ತತ್ವದ ಮೇಲೆಯೇ ಕೆಲಸ ಮುಂದುವರಿಬೇಕೆಂದೂ ಭಾರತಕ್ಕೆ ಆಶ್ವಾಸನೆ ದೊರೆತರೆ ಹೊಣೆ ನಿರ್ವಹಿಸುವಲ್ಲಿ ಅದಕ್ಕೆ ನೈತಿಕ ಬಲವುಬರುತ್ತದೆ.

ಉಡುಪಿ

ಹಳೆವಿದ್ಯಾರ್ಥಿ ಸಂಘ— ಉಡುಪಿ 'ಬೋರ್ಡು ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ಸಭೆಯೊಂದು 25ನೇ ತಾರೀಕಿನಂದು ಜನತಾ ಭವನದಲ್ಲಿ ಶ್ರೀ ಟಿ. ಎ. ಪೈ, ಎಂ. ಎಲ್. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಎನ್. ಎಸ್. ಪಕ್ಕಾಳರು ಲೆಕ್ಕ ಪತ್ರಗಳ ವರದಿಯನ್ನೋದಲು, ಅದು ಮಂಜೂರಾಯಿತು. ಸಂಘದ ಕಾರ್ಯಕಾರಿ ಸಮಿತಿಯಲ್ಲಿದ್ದು ನಿಧನ ಹೊಂದಿದ ಶ್ರೀ ಲಕ್ಷ್ಮೀನಿಧಿಯವರ ಆತ್ಮಕ್ಕೆ ಶಾಂತಿ ಕೋರಲು ಸಭೆಯು ಒಂದು ನಿಮಿಷ ಎದ್ದು ನಿಂತು ಮೌನ ಪ್ರಾರ್ಥನೆ ಸಲ್ಲಿಸಿತು. ಮುಂದೆ, ಹೊಸ ಕಾರ್ಯಕಾರಿ ಸಮಿತಿಗೆ ಶ್ರೀ ಟಿ. ಎ. ಪೈ, (ಅಧ್ಯಕ್ಷ), ಶ್ರೀ ಎನ್. ಎಸ್. ಪಕ್ಕಾಳ (ಕಾರ್ಯದರ್ಶಿ), ಶ್ರೀಗಳಾದ ರಾಕಿ ಫೆರ್ನಾಂಡಿಸ್, ಕೆ. ಮೋಹನದಾಸ ಪೈ, ಜೆ. ಆರ್. ಪಿಂಟೋ, ಪಿ. ಶಿವಾಜಿ ಶೆಟ್ಟಿ (ಉಪಾಧ್ಯಕ್ಷರು), ಶ್ರೀ ಕು. ಶಿ. ಹರಿದಾಸ ಭಟ್ಟ ಮತ್ತು ಶ್ರೀಮತಿ ಲೀಲಾವತಿ ಎಂ. ಪೈ (ಸಹಕಾರ್ಯದರ್ಶಿಗಳು), ಶ್ರೀ ವಿ. ಗಣೇಶಸುಂದರರಾವ್ (ಕೋಶಾಧಿಕಾರಿ) ಮತ್ತು ಶ್ರೀಗಳಾದ ಪಿ. ಶೀನ ಶೆಟ್ಟಿ, ಜೆ. ಕೆ. ಪೈ, ಕೆ. ಪಿ. ರಾವ್. ಎಂ. ಆರ್. ಕಾರ್ನಾಡ್ ಮುಂತಾದ ೧೫ ಮಂದಿ ಸಾಮಾನ್ಯ ಸದಸ್ಯರು ಆಯ್ಕೆ ಹೊಂದಿದರು. ಶ್ರೀಗಳಾದ ರಾಮಕೃಷ್ಣ ರಾವ್, ಡಾ| ಮಾಧವ ಪೈ, ಬಿ. ಶ್ಯಾಮರಾಯ ಶೆಟ್ಟಿ, ರಾಕಿ ಫೆರ್ನಾಂಡಿಸ ಮುಂತಾದವರು ಸಮಯೋಚಿತ ಭಾಷಣ ಮಾಡಿದರು. ಸಭೆಯಲ್ಲಿ ಹಾಜರಿದ್ದ ಹಿರಿಯ ಹಳೆವಿದ್ಯಾರ್ಥಿ ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳನ್ನು ಕಿರಿಯ ಹಳೆವಿದ್ಯಾರ್ಥಿ ಶ್ರೀ ಚಿತ್ತರಂಜನ ದಾಸರು ಹೂಮಾಲೆ ಹಾಕಿ ಗೌರವಿಸಿದರು. ಮುಂದಿನ ವರ್ಷದಿಂದ ಪ್ರತಿ ಆಗೋಸ್ತು ೧೫ರಂದು ಭೋಜನ ಸಮಾರಂಭವನ್ನು ಜರಗಿಸುತ್ತಿರಬೇಕೆಂಬ ಸೂಚನೆಯು ಅಂಗೀಕಾರವಾಯಿತು. ಸಂಗೀತ ಕಾರ್ಯಕ್ರಮದ ಬಳಿಕ ಜರಗಿದ ಭೋಜನ ಸಮಾರಂಭದಲ್ಲಿ ಹಳೆವಿದ್ಯಾರ್ಥಿಗಳಲ್ಲದೆ, ಶಾಲೆಯ ಈಗಿನ ಹಾಗು ಹಿಂದಿನ ಅಧ್ಯಾಪಕ ವೃಂದದವರೂ ಭಾಗವಹಿಸಿದ್ದರು.

ಸ್ಥಳಾಂತರ— ನ್ಯೂ ಕರ್ನಾಟಕ ಪ್ರಾವಿಡೆಂಟ್ ಇನ್ಸೂರೆನ್ಸ್ ಕಂಪೆನಿಯ ಪ್ರಧಾನ ಕಚೇರಿಯು ಉಡುಪಿಯಿಂದ ಬೆಂಗಳೂರು ಹಲಸನಕಟ್ಟೆಯಲ್ಲಿರುವ ಹಾಯೆಸ್ ಬಿಲ್ಡಿಂಗಿಗೆ ಸ್ಥಳಾಂತರಿಸಲ್ಪಟ್ಟಿರುವುದು.

ಕ್ರಿಶ್ಚಿಯನ್ ಹೈಸ್ಕೂಲಿನ— ಉಪನ್ಯಾಸ ಸಭೆಯು ತಾ. 23ರಲ್ಲು ಸಂಸ್ಕೃತ ಕಾಲೇಜು ಪ್ರಿನ್ಸಿಪಾಲ್ ಶ್ರೀ ಕಾಳಗಿ ಶೇಷಾಚಾರ್ಯರಿಂದ ಉದ್ಘಾಟಿಸಲ್ಪಟ್ಟಿತು. ಹೆಡ್ಮಾಸ್ಟರ್ ಶ್ರೀ ಎಸ್. ಎನ್. ಸುತಾಯರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿ ನಾಯಕ ಶ್ರೀ ಸೀತಾರಾಮ ಭಟ್ಟರು ವಂದನೆಗಳನ್ನರ್ಪಿಸಿದರು.

ಇದೇ ಶಾಲೆಯ ಬೆನಿಫಿಟ್ ಟ್ರಸ್ಟ್ ಫಂಡಿನ ಮಹಾಸಭೆಯು ತಾ. 21ರಲ್ಲು ಶ್ರೀ ಕೊಚ್ಚಿಕಾರ್ ಪದ್ಮನಾಭ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು ಈ ನಿಧಿಯು ಇನ್ನೂ ದೊಡ್ಡದಾಗಿ ಇದರಿಂದ ಶಾಲೆಗೆ ಹೆಚ್ಚಿನ ಪ್ರಯೋಜನ ದೊರೆಯುವಂತಾಗಲೆಂದು ಡಾ| ಮಾಧವ ಪೈಗಳು ಬಯಸಿದರು. ಹೊಸ ವರ್ಷದ ನಾಯಕ ಮಂಡಳಿಯ ರಚನೆಯಾದ ಬಳಿಕ ಶ್ರೀ ಯು. ಪುಂಡಲೀಕ ಶೆಣೈಯವರು ಧನ್ಯವಾದಗಳನ್ನರ್ಪಿಸಿದರು.

ಕರ್ನಾಟಕ ಯೂತ್ ಕಾಂಗ್ರೆಸ್ ಸಂಘಟಕರಾಗಿ—ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರನ್ನು ಕೆ. ಪಿ. ಸಿ. ಸಿ. ಪ್ರೆಸಿಡೆಂಟ್ ಶ್ರೀ ಎಸ್. ನಿಜಲಿಂಗಪ್ಪನವರು ಆರಿಸಿರುವರಾಗಿ ತಿಳಿದು ಬರುತ್ತದೆ.

ಭಾಷಣ—ಸ್ಥಳೀಯ ಯೂತ್ ಕಾಂಗ್ರೆಸ್ ಸಭೆಯು ತಾ. 24ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸ್ ಹಿಂದೂ ಪತ್ರಿಕೆಯ ನಿಜಸ್ವ ಇನ್ಸ್ಪೆಕ್ಟರ್ ಶ್ರೀ ರಾಜಗೋಪಾಲನ್ನರು ಪತ್ರಿಕೋದ್ಯಮದ ಕುರಿತು ಭಾಷಣವಿತ್ತರು.

ಅನಾಥರಿಗೆ ಧರ್ಮಾರ್ಥ ಗಂಜಿ ಊಟವನ್ನು—ತಾ. 31—7—54ರಿಂದ 21—8—54ರ ವರೆಗೆ ಪ್ರತಿ ಶನಿವಾರ 'ತಾಜಮಹಾಲ'ನವರು ಉಡುಪಿ ಮತ್ತು ಉದ್ಯಾವರದಲ್ಲಿ ಕೊಡುವ ವ್ಯವಸ್ಥೆ ಮಾಡಿದ್ದಾರೆ.

ನಿಧನ—ಉಡುಪಿಯಲ್ಲೂ ಇತರ ಕಡೆಗಳಲ್ಲೂ ದಕ್ಷ ಹಾಗು ಘನಸ್ತಿಕೆಯ ತಹಸೀಲ್ದಾರರಾಗಿದ್ದು ಕೊಂಡು ಜನಪ್ರಿಯತೆ ಗಳಿಸಿದ್ದ ಹಾಗೂ ಸ್ವಲ್ಪಕಾಲ ರೆವಿನ್ಯೂ ಡಿವಿಜನಲ್ ಆಫೀಸರರಾಗಿ ಕೆಲಸ ಮಾಡಿದ್ದ ಶ್ರೀ ಎ. ಸದಾನಂದ ಪೈಗಳು ಇತ್ತೀಚೆಗೆ ಅಸ್ವಸ್ಥದಿಂದಿದ್ದು ತಾ. 18ರಲ್ಲಿ ಮುಂಬಯಿಯಲ್ಲಿ ನಿಧನಗೊಂಡುದು ಅತ್ಯಂತ ವಿಷಾದಕರವಿದೆ.

ಉದ್ಘಾಟನೆ—ತಾ. 26ರಲ್ಲಿ ಶ್ರೀಮತಿ ಲೀಲಾಬಾಯಿ ಕಾಮತರಿಂದ ಸೈಂಟ್ ಸಿಸಿಲೀಸ್ ಕಾನ್ವೆಂಟಿನ ಸಾಹಿತ್ಯ ಸಭೆಯು ಉದ್ಘಾಟಿಸಲ್ಪಟ್ಟಿತು. ಶ್ರೀ ಕೆ. ಎಲ್. ಎನ್. ಉಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದು, ಕು| ನೆಲ್ಲಿ ಡಿ'ಲಿಮಾರು ಆಭಾರ ಸೂಚಿಸಿದರು.

ವಿದಾಯ ಸತ್ಕಾರ—ಸ್ಥಳೀಯ ವಿದ್ಯುಚ್ಛಕ್ತಿ ಸರಬರಾಯಿ ಸಂಸ್ಥೆಯ ಜನಪ್ರಿಯ ಅಸಿಸ್ಟಂಟ್ ಇಂಜಿನೀಯರಾಗಿದ್ದ ಶ್ರೀ ಎಸ್. ಬಿ. ಕೆ. ಶೆಣೈಯವರಿಗೆ ಕೊಯಂಬತ್ತೂರಿಗೆ ವರ್ಗವಾಗಿದ್ದು ತಾ. 24ರಲ್ಲಿ ಕಂಪೆನಿ ಸಿಬ್ಬಂದಿಯವರು ಶ್ರೀ ಕೆ. ವಿ. ಶ್ಯಾನುಭಾಗರ ಅಧ್ಯಕ್ಷತೆಯಲ್ಲಿ ವಿದಾಯ ಸತ್ಕಾರವಿತ್ತರು.

[೫ನೇ ಪುಟದಿಂದ]

ಭೂ ಸುಧಾರಣೆ

ವಿದೇಶಾಂಗ ಧೋರಣೆಯನ್ನು ಕುರಿತಾದ ಗೊತ್ತುವಳಿಯು ಭಾರತ ಚೀನ—ಬರ್ಮಾಗಳು ಈಚೆಗೆ ಮಾಡಿಕೊಂಡ ಒಡಂಬಡಿಕೆಯಲ್ಲಿ ಅಡಕವಾದ ಪಂಚ ತತ್ವಗಳ ತಳಹದಿಯ ಮೇಲೆ ಶಾಂತಿ ವಲಯವನ್ನು ವಿಸ್ತರಿಸಬಹುದೆಂಬ ವಿಶ್ವಾಸವನ್ನು ಬಿಂಬಿಸುತ್ತದೆ; ಅಲ್ಲದೆ, ವಿದೇಶದ ವಸಾಹತುಗಳಲ್ಲಿ ಜಾಗೃತಗೊಂಡ ರಾಷ್ಟ್ರೀಯ ಭಾವನೆಯನ್ನು ಮೆಚ್ಚಿ ಈ ಸಮಸ್ಯೆಯನ್ನು ಸಾಮ್ರಾಜ್ಯ ಶಾಹಿ ರಾಷ್ಟ್ರಗಳು ಸೌಹಾರ್ದದಿಂದ ಬಿಡಿಸುವವೆಂಬ ಆಶೆಯನ್ನು ತೋರಿಸುತ್ತದೆ. ಬಹಳ ಕುತೂಹಲವನ್ನುಂಟುಮಾಡಿದ ಭೂಸುಧಾರಣಾ ಗೊತ್ತುವಳಿಯು ಗೃಹೋದ್ಯಮಗಳನ್ನು ಪ್ರೋತ್ಸಾಹಿಸುವುದೇ ಮುಂತಾದ ಕ್ರಮದಿಂದ ಭೂಮಿಯ ಮೇಲಿನ ಒತ್ತಡವನ್ನು ಕಡಿಮೆ ಮಾಡಿ, ಸಾಮಾಜಿಕ ಹಾಗು ಆರ್ಥಿಕ ನ್ಯಾಯವನ್ನು ದೊರಕಿಸಿಕೊಳ್ಳುವಂತೆಯೂ ಪರಮಾವಧಿ ಉತ್ಪಾದನೆಯನ್ನು ಕೈಗೂಡಿಸುವಂತೆಯೂ ರಾಜ್ಯ ಸರಕಾರಗಳು ತೀವ್ರವೇ ಕ್ರಮ ತೆಗೆದುಕೊಳ್ಳಬೇಕೆಂದು ಸೂಚಿಸುತ್ತದೆ. ಗೇಣಿ ಒಕ್ಕಲುಗಳ ಮೇಲೆ ಈಗ ಬಿದ್ದಿರುವ ಅನ್ಯಾಯದ ಹೊರೆಯ ಭಾರ ತಗ್ಗಬೇಕು; ಅವರ ಸುಖ ಸಮೃದ್ಧಿಗಳು ಕೈಗೂಡಬೇಕು— ಎಂಬ ಆಶಯವನ್ನು ಗೊತ್ತುವಳಿ ಪ್ರಕಟಿಸುತ್ತದೆ. ರಾಜ್ಯ ಸರಕಾರಗಳು ಇನ್ನೆರಡು ವರ್ಷಗಳೊಳಗೆ ಇಂತಹ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಬಂಧಿಸುವುದಕ್ಕೆ ಅಧಿವೇಶನವು ಒಪ್ಪದಿದ್ದರೂ ಈ ವಿಷಯದ ಕುರಿತಾದ ತೀವ್ರ ಭಾವನೆಯನ್ನು ಲಕ್ಷ್ಯದಲ್ಲಿಟ್ಟುಕೊಂಡಿದೆಯೆಂದು ಸ್ಪಷ್ಟವಾಗುತ್ತದೆ. ತಮ್ಮ ಸಮಾರೋಪ ಭಾಷಣದಲ್ಲಿ ನೆಹರೂರವರು ಜನತೆಯನ್ನು ಕ್ರಮಪೂರ್ವಕ ದುಡಿದು ರಾಷ್ಟ್ರವನ್ನು ಕಟ್ಟಲು ಮುಂಬರುವಂತೆ ಆಹ್ವಾನಿಸಿದ್ದಲ್ಲದೆ ಕೆಂಪು ಚೀನಕ್ಕೆ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಪ್ರವೇಶವನ್ನು ಕೊಟ್ಟು ಜಾಗತಿಕ ಶಾಂತಿಗೆ ನೆರವಾಗಬೇಕೆಂದೂ ಲೋಕದ ನಾಯಕರನ್ನು ವಿನಂತಿಸಿ ಕೊಂಡರು.

NAVAYUGA
INDEPENDENCE DAY SPECIAL
WITH
CHOICEST ARTICLES ETC. ETC.
An advertisement in the Special is a good investment.
Advertisements will be received upto 7—8—1954.
For details please write to:
The Manager,
"NAVAYUGA" Weekly,
P. B No. 22, UDIPI (S. K.)

ತಾ. 28—7—54ರಿಂದ
ನರ್ಗಿಸ್ ಮತ್ತು ಸಜ್ಜನ್ ಇವರಿಬ್ಬರ ಜೋಡಿಯೆಂದರೆ
ನೋಡುವವರಿಗೊಂದು ಮಾಯಾ ನೋಡಿಯಂತೆ.
★ ಶೀಷಾ ★
ತಾ. 1—8—1954ನೇ ಆದಿತ್ಯವಾರ ವರ್ಣ ಚಿತ್ರ
ಬೆಲ್ಸ್ ಆನ್ ದೆಯರ ಟೋಸ್ BELLS ON THEIR TOES

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನೆರಿ
ಬೆಲೆ ರೂ. 5-6-0
ನವಭಾರತ ಬುಕ್ ಡಿಪ್ಪೋ, ಉಡುಪಿ.

ಕುಳಂಜೆ— ಕುಂದಾಪುರ ತಾಲೂಕಿನ ಕುಳಂಜೆ ಗ್ರಾಮದಲ್ಲಿಯ ಹೊಸ ಪ್ರಾಥಮಿಕ ಶಾಲೆಯನ್ನು ತಾ. 19ರಲ್ಲು ಶ್ರೀ ಗೋಪಾಲ ರಾಯರ ಅಧ್ಯಕ್ಷತೆಯಲ್ಲಿ ತೆರೆಯಲಾಯಿತು. ಈ ಶಾಲೆಯು ಕಮ್ಯೂನಿಟಿ ಪ್ರೊಜೆಕ್ಟಿನ ಆಶ್ರಯದಲ್ಲಿ ತೆರೆಯಲ್ಪಟ್ಟಿದೆ.

ಅಜೆಕಾರು— ದ. ಕ. ಜಿಲ್ಲಾ ಚೀಫ್ ಸೋಶಿಯಲ್ ಎಡ್ಯುಕೇಶನಲ್ ಆರ್ಗನೈಜರ್ ಕುಮಾರಿ ಎ. ವಿಶಾಲಾಕ್ಷಿಯವರ ಸಲಹೆಯಂತೆ ಈ ಕೇಂದ್ರದಲ್ಲಿ ತಾ. 20ರಲ್ಲು ಯಕ್ಷಗಾನ ಸಂಘವೊಂದು ಸ್ಥಾಪಿಸಲ್ಪಟ್ಟಿತು.

ಸುಳ್ಯ— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ನಿವೇಕಾ ಸ್ಟಾಫು ವಳವು ತಾ. 20ರಲ್ಲು ಸ್ಥಾಪಿಸಲ್ಪಟ್ಟಿತು.

ಕಾಸರಗೋಡು— ಸ್ಥಳೀಯ ಆಫೀಸಲ್ಲಿ ಕೆಲಸದಲ್ಲಿ ವರ್ಗವಾಗಿ ಹೋಗುವ ಪಂಚಾಯತ ಬೋರ್ಡು ಎಕ್ಸಿಕ್ಯೂಟಿವ್ ಆಫೀಸರ್ ಶ್ರೀ ಅಣ್ಣಪ್ಪ ಗೌಡರಿಗೆ ತಾ. 21ರಲ್ಲು ಟೀಪಾ ಸತ್ಕಾರವಿತ್ತು ಗೌರವಿಸಲಾಯಿತು.

ಮುದರಂಗಡಿ— ಕಿಲಾರ್ ಬ್ರಾಂಚ್ ಪೋಸ್ಟಾಫೀಸನ್ನು ಸಬ್ ಆಫೀಸಾಗಿ ಪರಿವರ್ತಿಸುವ ಸಮಾರಂಭವು ತಾ. 19ರಲ್ಲು ನೆಕ್ಲೆ ಶ್ರೀ ಟಿ ಎ ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಬಿ. ಶೆಟ್ಟಿ ಸ್ವಾಗತ ಭಾಷಣ ಮಾಡಿದರು. ಮಂಗಳೂರು ಸರ್ಕಲ್ ಪೋಸ್ಟಲ್ ಇನ್ಸ್‌ಪೆಕ್ಟರರು ಈ ಪೋಸ್ಟಾಫೀಸಿನ ಪೂರ್ವ ಚರಿತ್ರೆಯನ್ನು ತಿಳಿಸಿದರು. ಶ್ರೀಗಳಾದ ಪಿ. ಕರಿಯಣ್ಣ ಶೆಟ್ಟಿ, ಮಹಾಲಿಂಗ ಶೆಟ್ಟಿ, ಸಂಜೀವ ಶೆಟ್ಟಿ, ಫಾದರ್ ಎ. ಕನ್ಹಾ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣ, ವಂದನಾರ್ಪಣೆಗಳೊಂದಿಗೆ ಸಮಾರಂಭ ಕೊನೆಗೊಂಡಿತು.

ಕಲ್ಯಾಣಪುರು— ಸ್ಥಳೀಯ ಮಿಶನ್ ಎಲಿಮೆಂಟರಿ ಶಾಲೆಯ ಹಾಯರ್ ಎಲಿಮೆಂಟರಿ ಕ್ಲಾಸುಗಳನ್ನು ಉದ್ಘಾಟಿಸುವ ಸಮಾರಂಭವನ್ನು ತಾ. 20ರಲ್ಲು ಶ್ರೀ ಟಿ. ಎ. ಪೈ ಎಮ್. ಎಲ್. ಎ. ಅವರು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯರಿಂದ ಶಾಲಾ ವರದಿ ವಾಚನವಾದ ಬಳಿಕ ಶ್ರೀಗಳಾದ ಎ. ಜೆ. ಆಳ್ವ, ಎಲ್ಲಪ್ಪ ಹೆಗ್ಡೆ, ನರಸಿಂಹ ತಂತ್ರಿ, ಕೆ. ಪಿ. ಕೃಷ್ಣಯ್ಯ ಮೊದಲಾದವರು ಮಾತನಾಡಿದರು. ಶಾಲಾ ವಯಸ್ಸಿನ ಮಕ್ಕಳನ್ನು ಶಾಲೆಗೆ ಕಳುಹಿಸುವ ಆವಶ್ಯಕತೆಯನ್ನು ಮತ್ತು ಆ ಭಾಗದಲ್ಲಿ ಹೆತ್ತವರ ಮತ್ತು ರಕ್ಷಕರ ಜವಾಬ್ದಾರಿಯನ್ನು ವಿವರಿಸಿ ಶ್ರೀ ಟಿ. ಎ. ಪೈಗಳು ಭಾಷಣವಿತ್ತರು.

ಮಿತ್ತಬೈಲು— ಪಾಲಡ್ಕ ಸ್ಕೆಂಟ್ ಇಗ್ನೇಶಿಯಸ್ ಹಾ. ಎ. ಶಾಲೆಯಲ್ಲಿ ಆರನೆ ವರ್ಗವನ್ನು ತೆರೆಯುವ ಸಮಾರಂಭವು ಶ್ರೀ ಎಮ್. ರಾಮಮೋಹನ ರೈಗಳ ಅಧ್ಯಕ್ಷತೆಯಲ್ಲಿ ಜರಗಿತು. ರೆ! ಫಾ! ಜಿ. ಸೆರೊಕ್ಷಾರವರು ಸ್ವಾಗತಿಸಿದರು. ಶ್ರೀಗಳಾದ ಎ. ಎಸ್. ಕರ್ವಾಲೋ, ಸದಾಶಿವ ಶೆಟ್ಟಿ, ಪಿ. ಕೇಶವ ಭಟ್, ಪಿ. ಸೀತಾರಾಮ ಭಟ್ ಮೊದಲಾದವರು ಮಾತನಾಡಿದರು.

ಸೆರ್ಲ— ಶ್ರೀ ಸತ್ಯನಾರಾಯಣ ಹೈಸ್ಕೂಲಿನ ಶಾಲಾ ವಿದ್ಯಾರ್ಥಿ ಮುಖಂಡರಾಗಿ ಶ್ರೀ ಕೆ. ರಾಮಚಂದ್ರ ಭಟ್ಟರೂ, ಉಪನಾಯಕರಾಗಿ ಶ್ರೀ ಬಿ. ಕಂಬಣ್ಣ ರೈಗಳೂ ಆರಿಸಲ್ಪಟ್ಟರು.

ಹುಣ್ಸೆಮಕ್ಕಿ— ಜಿಲ್ಲಾ ಬೋರ್ಡು ಸ್ಕೂಲ್ ಆಫೀಸರರ ಹುಕುಂ ಪ್ರಕಾರ ಹುಣ್ಸೆಮಕ್ಕಿ ಪೇಟೆ ಬೋರ್ಡು ಎಲಿಮೆಂಟರಿ ಶಾಲೆಯು ತಾ. 20ರಲ್ಲು ಶಾಲಾ ಕಮಿಟಿ ಅಧ್ಯಕ್ಷ ಶ್ರೀ ನೊಳವಳ್ಳಿ ಮುತ್ತಯ್ಯ ಹೆಗ್ಡೆಯವರ ನೇತೃತ್ವದಲ್ಲಿ ಶ್ರೀ ಭಂಡಾರರ ಅಂಗಡಿ ಉಪ್ಪರಿಗೆಯಲ್ಲಿ ತೆರೆಯಲ್ಪಟ್ಟಿತು. ಶಾಲಾ ಕಟ್ಟಡ ಕೆಲಸವು ಭರದಿಂದ ಸಾಗುತ್ತಿದೆ.

ಕುಂಬಳೆ— ಜಾಗತಿಕ ಆರೋಗ್ಯ ದಿನಾಚರಣೆಯು ತಾ 21ರಲ್ಲು ಡಾ! ಕೆ. ಯು. ಜಯರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಬಾಡೂರು— ಇಲ್ಲಿಯ ಪಟೇಲ್ ಶ್ರೀ ಬಿ. ಮೈಂದಪ್ಪ ರೈಗಳು ತಾ. 17ರಲ್ಲು ದಿವಂಗತರಾದರು.

ಗುಡ್ಡೆಯಂಗಡಿ (ಕುಂದಾಪುರ)— ಇದೇ ತಾ. 22ರಲ್ಲು ಊರವರ ಕೊಡುಗೆಯಿಂದ ಸ್ಥಳೀಯ ರೋಡ್ ಡೆವಲಪ್‌ಮೆಂಟ್ ಕಮಿಟಿಯವರು ಕೈಕೊಂಡ, ಆಲೂರಿನಿಂದ ಕೊಡಗುಂಜಿ ಕಡವಿನ ವರೆಗೆ ಆಗಲಿರುವ ರಸ್ತೆಯ ಉದ್ಘಾಟನಾ ಸಮಾರಂಭವು ಶ್ರೀ ನೈರಾಡಿ ಸೂರಪ್ಪ ಶೆಟ್ಟರಿಂದ ನೆರವೇರಿಸಲ್ಪಟ್ಟಿತು.

ಮಳವೂರು— ಕೆಂಜಾರು, ಮಳವೂರು ಮೊದಲಾದ ಗ್ರಾಮಗಳ ಹರಿಜನರ ಸಭೆಯೊಂದು ತಾ. 25ರಲ್ಲು ಶ್ರೀ ಕೆ. ಈಶ್ವರ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿ 'ದಲಿತ ಸುಧಾರಕ ಸಂಘ'ವೊಂದು ಸ್ಥಾಪಿಸಲಾಯಿತು. ಶ್ರೀಗಳಾದ ಬಾಡನವರು ಅಧ್ಯಕ್ಷರಾಗಿಯೂ ಟಿ. ವಿಠಲ ಮಾಸ್ತರ್, ಕಾರ್ಯದರ್ಶಿಗಳಾಗಿಯೂ ಇರುವ ಕಾರ್ಯಕಾರೀ ಸಮಿತಿಗೆ ಸದಸ್ಯರನ್ನು ಆರಿಸಲಾಯಿತು.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರುಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದ್ದು.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು. ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಗಿರುವುದು. 1 ರಾತ್ಲು: ರೂ. 6—8—0 ¼ ರಾತ್ಲು: ರೂ. 1—14—0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ. ಪಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎನ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town—MADRAS-3.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ!! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ವ್ಯವಸಾಯ ಕಾಲೇಜು ಮತ್ತು ವೆಟರಿನರಿ ಕಾಲೇಜುಗಳಿಗೆ ಪ್ರವೇಶ

ಮೇಲ್ಕಾಣಿಸಿದ ೩ ಕಾಲೇಜುಗಳಿಗೆ ವಿದ್ಯಾರ್ಥಿಗಳನ್ನಾರಿಸಲು ಒಂದು ಸಮಿತಿಯು ರಚಿಸಲ್ಪಟ್ಟದ್ದು ಅದರ ಚಟುವಟಿಕೆಗಳನ್ನು ಕೆಳಗೆ ಕೊಡಲಾಗಿದೆ—

ವ್ಯವಸಾಯ ಕಾಲೇಜು-ಕೊಯಂಬತ್ತೂರು— ಈ ಕಾಲೇಜಿನಲ್ಲಿ 108 ಸ್ಥಾನಗಳಿದ್ದು ಅದರಲ್ಲಿ 11 ಸ್ಥಾನಗಳನ್ನು ಹೊರಪ್ರಾಂತದ ವಿದ್ಯಾರ್ಥಿ ಮತ್ತು ತೀರ್ಗಡೆ ಹೊಂದದ ವಿದ್ಯಾರ್ಥಿಗಳಿಗಾಗಿ ಕಾದಿರಿಸಲಾಗಿದೆ. ಈ ವರ್ಷ 311 ಅರ್ಜಿಗಳು ಬಂದಿವೆ. ಹಿಂದಿನ ವರ್ಷ ಕೊಯಂಬತ್ತೂರು ಮತ್ತು ಬಾಪಟ್ಲ ವ್ಯವಸಾಯ ಕಾಲೇಜುಗಳಿಗೆ ಒಟ್ಟಿಗೆ 302 ಅರ್ಜಿ ಪತ್ರಗಳು ಬಂದಿದ್ದುವು. ತಪ್ಪು ಅರ್ಜಿ ಪತ್ರ ಮತ್ತು ಗೈರು ಹಾಜರಿಗಳನ್ನು ಹೊರತು ಒಟ್ಟು 344 ವಿದ್ಯಾರ್ಥಿಗಳನ್ನು ಭೇಟಿ ಮಾಡಿ ಸಮಿತಿಯು 97 ಮಂದಿಯನ್ನು ಆರಿಸಿರುವುದು. ಇದರಲ್ಲಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದವರ 1 ಸ್ಥಾನ ಸಮೇತ ದಕ್ಷಿಣ ಕನ್ನಡಕ್ಕೆ ವ್ಯವಸಾಯ ಕಾಲೇಜಿನಲ್ಲಿ 5 ಸ್ಥಾನಗಳು ದೊರೆತಿರುವುವು.

ವೆಟರಿನರಿ ಕಾಲೇಜು—ಮದ್ರಾಸು— ಈ ಕಾಲೇಜಿನಲ್ಲಿ 80 ಸ್ಥಾನಗಳಿದ್ದು, 40 ಮಾತ್ರ ನಮ್ಮ ಪ್ರಾಂತಕ್ಕೆ ದೊರೆಯುತ್ತವೆ. ಆಂಧ್ರಕ್ಕೆ 23. ಇತರ ಪ್ರಾಂತಗಳಿಗೆ 8, ವಿದೇಶಿ ವಿದ್ಯಾರ್ಥಿಗಳಿಗೆ 6, ಕೇಂದ್ರ ಸರಕಾರದ ನೌಕರರ ಮಕ್ಕಳಿಗೆ 2, ಮತ್ತು ಸ್ವಸ್ಥದಲ್ಲಿದ್ದವರಿಗೆ 1. ಹೀಗೆ ಉಳಿದ ಸ್ಥಾನಗಳನ್ನು ಹಂಚಲಾಗಿದೆ. ಕಳೆದ ವರ್ಷ 153 ಅರ್ಜಿಗಳು ಬಂದಿದ್ದು ಈ ವರ್ಷ 80 ಬಂದಿರುವುದು. ಗೈರು ಹಾಜರಾದವರನ್ನು ಹೊರತು 68 ವಿದ್ಯಾರ್ಥಿಗಳನ್ನು ಪರಿಶೀಲಿಸಿ ಸಮಿತಿ 40 ಮಂದಿಯನ್ನು ಆರಿಸಿರುವುದು. ಈ ವರ್ಷ ಶೆಡ್ಯೂಲ್ ಜಾತಿ ಮತ್ತು ವರ್ಗದವರಿಂದ ಅರ್ಜಿಗಳು ಬಂದಿಲ್ಲ ದಕ್ಷಿಣ ಕನ್ನಡದಿಂದ ವೆಟರಿನರಿ ಕಾಲೇಜಿಗೆ ಯಾರೂ ಆರಿಸಲ್ಪಟ್ಟಿಲ್ಲ. ಸ್ಥಾನ ದೊರೆತ 40 ವಿದ್ಯಾರ್ಥಿಗಳಲ್ಲಿ 14 ಮಂದಿ ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಜಾತಿಗಳಿಗೆ ಸೇರಿದವರಾಗಿರುವರು.

ಬೊಂಬಾಯಿ— ಬಗ್ವಾಡಿ ಹೋಬಳಿ ಮೊಗವೀರ ಮಹಾ ಜನಸಂಘ, ಕೋಟೆ, ಮುಂಬಯಿ, ಇದರ ವರ್ಧಂತಿಯು ತಾ. 11ರಲ್ಲು ಸರ್. ಸಿ. ಜೆ. ಹೋಲಿನಲ್ಲಿ ಶ್ರೀ ಯು. ಪಿ. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಸಿ. ಕುಂದರರು ಸಮಾರಂಭಕ್ಕೆ ಬಂದ ಶುಭ ಸಂದೇಶಗಳನ್ನೋದಿದರು. ಶ್ರೀ ಎಸ್. ಸಿ. ಹೊಳಮೊಗೆಯವರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಜೆ. ಎಸ್. ಅಯ್ಯರ್, ನರಸಿಂಹಯ್ಯ, ಬಿ. ಯು. ಉಪ್ಪೂರ್, ಜಮಿಯತ್ ರಾಮಜೋಶಿ ಮತ್ತು ಕುಮಾರಿ ಎ. ಸರಿಮೆನ್, ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಬಹುಮಾನಗಳನ್ನು ವಿತರಣೆ ಮಾಡಿದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಂಬಯಿಯಲ್ಲಿರುವ ಮೊಗವೀರರು ವಿದ್ಯಾಕ್ಷೇತ್ರದಲ್ಲೂ ಜನತಾ ಸೇವಾ ಕ್ಷೇತ್ರದಲ್ಲೂ ಸಲ್ಲಿಸುತ್ತಿರುವ ಕಾರ್ಯಗಳನ್ನು ಅಭಿನಂದಿಸಿದರು. ಸಂಗೀತರತ್ನ ಶ್ರೀ ಸಿ. ವಿ. ನಾಗರಾಜರ ಗಾಯನ, ಶ್ರೀ ಬಿ. ಶ್ಯಾಮಾಚಾರ್ಯರ ವೇಣುವಾದನವಾದ ಬಳಿಕ ಸಂಘದ ಸೇವಾದಳದವರು 'ಸಂಶಯ ಪಿಶಾಚಿ' ಎಂಬ ಕನ್ನಡ ನಾಟಕವನ್ನು ಅಭಿನಯಿಸಿದರು. ವಂದನಾರ್ಪಣೆಯೊಂದಿಗೆ ಉತ್ಸವವು ಕೊನೆಗೊಂಡಿತು.

ಉಡುಪಿ ದಿ. ಮು. ಕೋರ್ಟಿನಲ್ಲಿ

O. P. 106/51

ಪಿರ್ಯಾದಿ ಪೀಲಿ ಕೊರ—ಅರ್ಜಿದಾರರು.

1ನೇ ಅರ್ಜಿದಾರಳ ಗಂಡ ವ ಹಿತ್ತ ಆರ್ಜಿದಾರರ ತಂದೆ, ಪೀಲಿ ವಸ್ಸರಿ ಮಡಿದವರು ತಾ. 16—10—53ರಲ್ಲಿ ಉಡುಪಿ ಕಸಬೆಯಲ್ಲಿ ಮೃತಪಟ್ಟ ಅಬ್ದುಲ್ ರಹಿಮಾನ್ ಗುಲಾಮ್ ಮಹಮ್ಮದ ಸಾಹೇಬರ ಬಾಬ್ತು ಹೊರಗಿನಿಂದ ಬರತಕ್ಕ ಸಾಲಗಳ ವಸೂಲಿ ಕುರಿತು, ಸಕ್ಸೆಷನ್ ಸರ್ಟಿಫಿಕೇಟು ಸದ್ರಿಯವರ ವಾರಿಸುದಾರರಾದ ಅರ್ಜಿದಾರರು, ಎಲ್ಲ ಆರ್ಜಿದಾರರ ಪರವಾಗಿ 2ನೇ ಅರ್ಜಿದಾರರಿಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅಪೇಕ್ಷಿಸಿ ದಾಖಲು ಮಾಡಿದ ಮೇಲ್ಕಂಡ ಅರ್ಜಿಯು ತಾ. 25—8—51ರಲ್ಲು ಈ ಕೋರ್ಟು ಮುಂದೆ ತನಿಖೆಗೆ ಇಟ್ಟದೆಂತಲೂ ಆ ಕುರಿತು ಆಕ್ಷೇಪವುಳ್ಳವರು ಸದ್ರಿ ದಿವಸ ಹಗಲು ಘಂಟೆ 10-45ಕ್ಕೆ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿ ಕೊಳ್ಳ ಬಹುದಾಗಿ ಸರ್ವಜನರಿಗೆ ಈ ಮೂಲಕ ತಿಳಿಸೋಣಾಗುತ್ತದೆ.

(By order of court)

K. Vittal Nayak.
Vakil for Plaintiff

Udipi. 27—7—51.

—ಹೊಸಕೆರೆ ಚಿದಂಬರಯ್ಯನವರ—

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ 0-12-0

V. P. P. ಮೂಲಕ 1—4—0

ಮಂಗಳೂರು

ರೋಟರಿ ಕ್ಲಬ್ ಸಭೆಯು— ತಾ. 22ರಲ್ಲಿ ಶ್ರೀ ಪಿ. ಆರ್. ಪೂಂಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೆ. ಎಸ್. ಭಂಡಾರಿಗಳಿಂದ ಪ್ರಾರ್ಥನೆ, ಶ್ರೀ ಎಚ್. ರತ್ನಾಕರ ಕಾಮತರಿಂದ ಗತಸಭೆಯ ವರದಿವಾಚನಗಳಾದ ಬಳಿಕ ಶ್ರೀಮತಿ ಶಾಂಭವಿ ಆರ್. ಪೂಂಜರು 'ಮಂಗಳೂರಲ್ಲಿ ಸಮಾಜ ಸೇವಾ ಕಾರ್ಯಗಳು ಮತ್ತು ಅದರಲ್ಲಿ ಮಹಿಳೆಯರ ಪಾತ್ರ' ಎಂಬೀವಿಷಯವಲ್ಲಿ ಭಾಷಣವಿತ್ತರು. ಶ್ರೀ ಎ. ಅಬ್ದುಬಕರ್‌ರವರು ಮಲಬಾರು ಮೊದಲಾದ ಸ್ಥಳಗಳಲ್ಲಿ ಮಹಮ್ಮದೀಯರು ಕೈಗೊಂಡಿರುವ ಕೆಲವು ಸಮಾಜ ಸೇವಾ ಕಾರ್ಯಗಳನ್ನು ವಿವರಿಸಿದರು. ಅಧ್ಯಕ್ಷರ ಭಾಷಣವಾಗಿ ಸಭಾಂತ್ಯವಾಯಿತು.

ನಗರ ಸಭೆಯು— ತಾ. 23ರಲ್ಲು ಸಂಜೆ ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ಮಾರ್ಗಗಳಿಗೆ ತಾರು ಹಾಕುವ ವಿಚಾರದಲ್ಲಿ ಚರ್ಚೆ ನಡೆದು ಜಲ್ಲಿ ಮತ್ತು ಮಣ್ಣು ಹಾಕುವ ಕೆಲಸವನ್ನು ಮಾತ್ರ ಹೊರಗಿನವರಿಂದ ಕಂಟ್ರಾಕ್ಟು ಪ್ರಕಾರ ಮಾಡಿಸಬೇಕೆಂದೂ ತಾರು ಹಾಕುವ ಕೆಲಸವನ್ನು ನಗರ ಸಭೆಯ ನೌಕರರಿಂದಲೇ ಮಾಡಿಸಬೇಕೆಂದೂ ನಿರ್ಣಯವಾಯಿತು. ನಿವೃತ್ತ ಜಿಲ್ಲಾ ಜಡ್ಜರಾದ ಶ್ರೀ ಬಿ. ಎಲ್. ಎನ್. ರೈಗಳನ್ನು ನಗರ ರಚನಾ ಯೋಜನೆಯ ೨ನೆ ವಿಭಾಗದ ಕಂಟೋನ್ಮೆಂಟು ವಾರ್ಡಿನ ಪಂಚಾಯತ ದಾರರಾಗಿ ನೇಮಿಸಬಹುದೆಂದು ಸರಕಾರಕ್ಕೆ ಸೂಚಿಸಲಾಯಿತು. ಕಮಿಶನರ್ ಶ್ರೀ ಎ. ಕೆ. ರಾಘವನ್, ಅವರು ಸಭೆಯ ಮುಂದಿರಿಸಿದ 1953-54ರ ಆಡಳಿತ ವರದಿ ಮಂಜೂರಾಯಿತು. ಶ್ರೀಗಳಾದ ಜೆ. ಬಿ ಮಸ್ಕರೇನ್ಹಸ್, ಡಾ। ನಾಗಪ್ಪ ಆಳ್ವ, ಡಾ। ಎಮ್. ಸಿ. ಶಾಸ್ತ್ರಿ, ಜೆ. ಬಿ. ಡಿ. ಸೋಜರು ಆಡಳಿತ ವರದಿಯ ಕುರಿತು ಮಾತನಾಡಿದರು. ವರದಿಯಲ್ಲಿಯ ಮುಖ್ಯಾಂಶಗಳು:—1951ರ ಜನಗಣಾನ ಮೇರೆಗೆ ನಗರದ ಜನಸಂಖ್ಯೆ 1,17,095. ವರ್ಷದಲ್ಲಿ 35 ಸಭೆಗಳು ಜರಗಿದವು. ಎಲ್ಲಾ ಸಭೆಗಳಿಗೂ ಕೋರಂ ಇತ್ತು.

ವರದಿ ವರ್ಷದಲ್ಲಿ 21 ಪ್ರಾಥಮಿಕ ಶಾಲೆಗಳಿದ್ದುವು. ಈ ಪೈಕಿ 4 ಹಾ। ಎ। ಶಾಲೆಗಳು. ಈ ಎಲ್ಲಾ ಶಾಲೆಗಳಲ್ಲಿ 3128 ಹುಡುಗರೂ 2632 ಹುಡುಗಿಯರೂ ಓದುತ್ತಿದ್ದರು. ವರದಿ ವರ್ಷಾಂತ್ಯದಲ್ಲಿ 249 ಅಕ್ರಮಣದ ದಾವೆಗಳು ತೀರ್ಮಾನಕ್ಕೆ ಬಾಕಿ ಇದ್ದವು.

ವರದಿ ವರ್ಷದಲ್ಲಿ ಜಪ್ತಿಸಲಾದ 25 ದೀಪಗಳು ಕೂಡಾ ವರ್ಷಾಂತ್ಯದಲ್ಲಿ 1558 ದೀಪಗಳಿದ್ದುವು. ಮರ್ಕ್ಯುರಿ ದೀಪಗಳು 24 ಇದ್ದುವು. ರಸ್ತೆಗಳ ದುರುಸ್ತಿಗೆ ಬಜೆಟಿನಲ್ಲಿ ಒದಗಿಸಲಾದ ರೂಪಾಯಿ 1,90,000ದ ಪೈಕಿ ರೂ. 1,71,891 ವೆಚ್ಚ ಮಾಡಲಾಗಿತ್ತು. ನಗರ ಸಭೆಯ ಆರ್ಥಿಕ ಸ್ಥಿತಿಯು ಉತ್ತಮವಿತ್ತು.

ಅಂತರ್‌ಶಾಲಾ ಎತ್ಲೆಟಿಕ್ ಸಂಘದ ಮಹಾಸಭೆಯು ತಾ. 25ರಲ್ಲು ಶ್ರೀ ಜೋರ್ಜ ಪಮರ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷಕ್ಕೆ ಶ್ರೀಗಳಾದ ರೆ। ಫಾ। ಜೇಮ್ಸ್ ಕುವೆಲ್ಲೋ. ಎಸ್. ಜೆ. ಮತ್ತು ಅಲೆಕ್ಸಾಂಡರ್ ಡಿಸೋಜರು ಅಧ್ಯಕ್ಷ,ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು.

ಕೊಲೆಯ ಆಪಾದನೆ— ಕಳದ ಜೂನ್ ತಿಂಗಳ ತಾ. 12ರಲ್ಲು ರಾತ್ರೆ ಬಜಾಲ್ ಗ್ರಾಮದಲ್ಲಿ 20 ವರ್ಷ ಪ್ರಾಯದ ರತ್ನಾ ಎಂಬಾಕೆಯು ಇರಿತಗಳಿಂದಾಗಿ ಮೃತಳಾಗಿದ್ದು ಮತ್ತು ಅವಳ ಸೋದರ 30 ವರ್ಷ ಪ್ರಾಯದ ರಾಮಣ್ಣ ಸೆಟ್ಟಿ ಎಂಬವನು ಹೊಟ್ಟೆಯಲ್ಲಿ ಇರಿತದಿಂದಾಗಿ ಗಾಯಗೊಂಡಿದ್ದ ಪ್ರಕರಣದಲ್ಲಿ ರಾಮಣ್ಣ ಸೆಟ್ಟಿಯ ಮೇಲೆ ಈಗ ಕೊಲೆ ಮತ್ತು ಸುಳ್ಳು ಹೇಳಿಕೆ ಕೊಟ್ಟ ಆರೋಪ ಹೊರಿಸಿ ಸ್ಥಳೀಯ ಸಬ್ ಮೆಜಿಸ್ಟ್ರೇಟರ ಮುಂದೆ ಚಾರ್ಜುಶೀಟು ದಾಖಲಾಗಿದೆ.

ಸಮಾಜ ವಿಕಾಸ ಯೋಜನೆ— ಜಿಲ್ಲೆಯ ಸಮಾಜ ವಿಕಾಸ ಯೋಜನೆಯ ಕಾರ್ಯಕಾರೀ ಸಮಿತಿ ಸಭೆಯು ಈಚೆಗೆ ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿತು. ಮೂಲ್ಕಿ ಬಂಟ್ವಾಳ ಮತ್ತು ಮೂಡಬಿದ್ರೆ ಎಲ್. ಎಫ್. ಆಸ್ಪತ್ರೆಗಳಲ್ಲಿ ಜಾಸ್ತಿ ಸೌಕರ್ಯಗಳನ್ನೊದಗಿಸುವಂತೆ ಜಿಲ್ಲಾ ಮೆಡಿಕಲ್ ಆಫೀಸರರು ಕೊಟ್ಟ ಸಲಹೆಗಳನ್ನು ಸರಕಾರದ ಮಂಜೂರಾತಿಗೆ ಒಪ್ಪಿಸಲಾಯಿತು. ಕಿನ್ನಿಕಂಬಳದಲ್ಲಿ ಒಂದು ಸಮಾಜ ಮಂದಿರವನ್ನು ತೆರೆಯಬೇಕೆಂದಾಯಿತು. ದಕ್ಷಿಣ ಕನ್ನಡ, ಮಲಬಾರು ಮತ್ತು ಈರೋಡು ಯೋಜನಾ ಕ್ಷೇತ್ರಗಳಲ್ಲಿ ಕಾಮಗಾರೀ ಕಾರ್ಯಗಳು ಶೀಘ್ರ ಪೂರ್ಣಗೊಳ್ಳುವಂತೆ ಮಾಡಲು ಒಂದು ಪ್ರತ್ಯೇಕ ಡಿವಿಜನಲ್ ಇಂಜಿನಿಯರರ ನೇಮಕವಾಗಬೇಕೆಂದೂ, ನೀರಾವರಿ ಕೆಲಸಗಳ ಬಗ್ಗೆ ಪ್ರತ್ಯೇಕಿಸಲಾಗಿದ್ದು ಈಗ ಬಿಟ್ಟು ಕೊಡಲಾಗಿದ್ದ ಹದಿನೈದು ಲಕ್ಷ ರೂಪಾಯಿಗಳ ಗ್ರಾಂಟನ್ನು ಬೇರೆ ರೀತಿಯ ಸಾರ್ವಜನಿಕ ಕಾರ್ಯಗಳಿಗೆ ಉಪಯೋಗಿಸಲು ಅನುಮತಿ ಕೊಡಬೇಕೆಂದೂ ಸರಕಾರವನ್ನು ಕೇಳಿಕೊಳ್ಳಲಾಯಿತು. ಯೋಜನಾ ಕ್ಷೇತ್ರದಲ್ಲಿ ಬಾವಿಗಳನ್ನು ತೋಡಿಸಲು ಒಂದು ಪವರ್ ಬೋರಿಂಗ್ ಸೆಟ್ಟನ್ನು ಇಟ್ಟುಕೊಳ್ಳಬೇಕೆಂದೂ ಮಂಗಳೂರು ಗೋ ಆಸ್ಪತ್ರೆಯಲ್ಲಿರುವ ಕೋಳಿ ಸಾಕಣೆ ಕೇಂದ್ರವನ್ನು ಇನ್ನಷ್ಟು ಸುಧಾರಿಸಬೇಕೆಂದೂ ನಿರ್ಣಯಿಸಲಾಯಿತು.

ಹೊಸ ಶಾಲೆಗಳು— ಜಿಲ್ಲಾ ಬೋರ್ಡಿನವರು ಶಾಲೆಗಳಿಲ್ಲದ ಗ್ರಾಮಗಳಲ್ಲಿ ಹೊಸತಾಗಿ 76 ಶಾಲೆಗಳನ್ನು ತೆರೆಯಬೇಕೆಂದು ಮಾಡಿದ ನಿರ್ಧಾರವನ್ನು ಸರಕಾರವು ಒಪ್ಪಿರುತ್ತದೆ. ಇದು ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಕಡಿಮೆ ಮಾಡುವ ಯೋಜನೆಗನುಗುಣವಾಗಿರುವುದರಿಂದ ಈ ಶಾಲೆಗಳ ವೆಚ್ಚವನ್ನು ಸರಕಾರವೇ ವಹಿಸಿಕೊಳ್ಳುವುದು.

ಸಭಾ ಉದ್ಘಾಟನೆ— ಮಂಗಳೂರಿನ ಹೆಮ್ಮಕ್ಕಳ ತರಬೇತಿ ಶಾಲೆಯ ಸಾಹಿತ್ಯ ಸಂಘದ ಉದ್ಘಾಟನೆಯನ್ನು ಶ್ರೀ ಪಿ ಕೆ. ನಾರಾಯಣ, ವಿದ್ವಾನ್, ಅವರು ತಾ. 23ರಂದು ನೆರವೇರಿಸಿದರು. ಶ್ರೀಮತಿ ಸರಸ್ವತಿ ಎನ್. ಮೂರ್ತಿಯವರು ಸ್ವಾಗತ ಮಾತುಗಳನ್ನಾಡಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯ— ಪ್ರಥಮ ಮಹಾ ಸಭೆಯು ತಾ. 1—8—54ನೇ ಆದಿತ್ಯವಾರ ಅಪರಾಹ್ನ 4 ಗಂಟೆಗೆ ಮಂಗಳೂರು ಬಾವುಟ ಗುಡ್ಡೆಯಲ್ಲಿರುವ ಕಮಿಟಿ ಆಫೀಸಿನಲ್ಲಿ ಜರಗಲಿದ್ದು ಅದರಲ್ಲಿ ಪದಾಧಿಕಾರಿಗಳ ಮತ್ತು ಕಾರ್ಯಕಾರೀ ಸಮಿತಿಯ ಚುನಾವಣೆ, ಜಿಲ್ಲಾ ಕಾಂಗ್ರೆಸ್ ಚುನಾವಣಾ ಪಂಚ ಮಂಡಲದ ನೇಮಕ ನಡೆಯಲಿದೆ.

(೩ನೇ ಪುಟದಿಂದ)

ನಡೆದುಕೊಂಡು ಹೋಗಬಹುದು. ಆದರೆ ಗುಡ್ಡ ಪ್ರದೇಶದಲ್ಲಿ ಹೆಗಲ ಮೇಲೆ ಒಂದು ಕೋಲು ಇಟ್ಟುಕೊಂಡು, ಅದರ ತುದಿಗೆ ಸಾಮಾನು ಕಟ್ಟಿ ಹೊತ್ತು ಸಾಗಬೇಕಾಗುತ್ತದೆ. ಕಷ್ಟವನ್ನು ಹೊರಲು ಮುಂಬರುವ ಧೀರರು ಕಡಿಮೆ—ಅಂತಹ ಸಾಹಸಿಗರಿಗೆ ದಟ್ಟವಾದ ಅರಣ್ಯಗಳಲ್ಲಿ ಹುಲಿ ಆನೆಗಳು ಕಾಣಿಸುತ್ತವೆ. ಹೋರಾಟದಲ್ಲಿ ಹುಲಿಯನ್ನು ಒಂದೇ ಇರಿತದಿಂದ ಕೊಂದುಬಿಡಬಲ್ಲ ಕಾಡುಕೋಣಗಳೂ ನೋಡಸಿಗುತ್ತವೆ. ಇಂತಹದೊಂದು ಗುಡ್ಡ ಪ್ರದೇಶದಲ್ಲಿಯೇ ಶತ್ರುಗಳಿಗೆ ಅಭೇದ್ಯವೆಂದು ಫ್ರೆಂಚರು ತಿಳಿದುಕೊಂಡಿದ್ದ ಡೀನಬೀನ ಫೂ ಕೋಟೆಯು ಇದೆ— ಈ ಗುಡ್ಡದ ತುದಿಯ ಮೇಲೆ ವಿಮಾನ ಇಳಿಯುವುದಕ್ಕೆ ಸಾಕಷ್ಟು ವಿಶಾಲವಾದ ಜಾಗ ಇತ್ತು: ಅದೀಗ ಹೋಚಿಮಿನರ ಕೈಗೆ ಸೇರಿದೆ. ಭೀಕರ ಹೋರಾಟ ನಡೆದ ಕೆಂಪು ನದಿಯ ಮುಖಭೂಮಿಗೆ ತುಸುದೂರದಲ್ಲಿ ಒಂದು ಕೊಲ್ಲಿಯಲ್ಲಿ ೩೦೦೦ ಚಿಕ್ಕ ದ್ವೀಪಗಳನ್ನು ಕಾಣುತ್ತೇವೆ. ಪ್ರಪಂಚದಲ್ಲಿಯೇ ಸುಂದರವಾದ ಪ್ರದೇಶವಿದು — ಇಲ್ಲಿಯ ದ್ವೀಪದಲ್ಲಿ ಖನಿಜ ದ್ರವ್ಯಗಳು ತುಂಬಿ ತುಳುಕುತ್ತಿವೆ. ವರ್ಷಕ್ಕೆ ೨೦ ಲಕ್ಷ ಟನ್ನುಗಳಷ್ಟು ಕಲ್ಲಿದ್ದಲು ದೊರಕುವ— ಈ ಪ್ರಮಾಣ ಮೂರರಷ್ಟು ಹೆಚ್ಚಿಸಬಹುದು— ಗಣಿಗಳ ಉಪಯೋಗ ಸಾಕಷ್ಟು ಪಡೆಯಲಾಗಿಲ್ಲ. ಕೈಗಾರಿಕೆಗಳೂ ಹಾಗೆಯೇ— ವಿಸ್ತೃತ ಪ್ರಮಾಣದಲ್ಲಿ ಕಂಡು ಬರುವುದಿಲ್ಲ. ಮುಂದಿನ ಎರಡು ದಶಕಗಳಾದರೂ ಯುದ್ಧದ ಆಕ್ರೋಶವಿಲ್ಲದೆ ಕಳೆದರೆ—ಇಂಡೋಚೀನ ತನ್ನ ಭೂಗರ್ಭ ನಿಧಿಯನ್ನು ಉಪಯೋಗಿಸಿ, ಸಾರ್ವಾಂಗಿಕ ಪ್ರಗತಿಯನ್ನು ಹೊಂದಬಹುದು. ಆದರೆ ರಾಜಕೀಯ ಸ್ಥಿತ್ಯಂತರಗಳ ಕುರಿತು ಭವಿಷ್ಯ ಹೇಳುವುದು ಹೇಗೆ?

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ–ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜೆವಿದೋಷ, ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0. ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾವಧಿ ಪೋಲಿಸಿ " ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಋತುತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. **P. DEVEE,** F. D.s (N. J.)
CALCUTTA—40

ಸ್ಟಾಕಿಸ್ಟರು: ಶಮಾಕಂಪೆನಿ, ಮಂಗಳೂರು.

In the Court of the Subordinate Judge of South Kanara.

(II additional)

R. I. A. No. 1069/1954
in
O. S. No. 44/1953.

Between:

Sherame Vasudeva Nayak—
Petitioner (Plaintiff)
and
Mangalpady Thyampanna Shetty and others— Respondents (Defts.)

To

7th Supplemental Defendant: Chikkappa Alias Aruvinda Adyanthaya, Son of Ummakke, residing at Room No. 30, New Block, S. M. C Hostel, Madras.

NOTICE.

Please take notice that the above suit filed by the Plaintiff for redemption against you, and you have been impleaded as supplemental defendant in the suit. Now the aforesaid suit and the petition stands posted to 26—8—1954 for hearing. Should you fail to appear on that day either in person or through a lawyer before this court, at 11 A. M. the case will be heard in your absence.

(By order of the court)

Sd/ Sri **G. Somashekar Rao,**
Vakil for Plaintiff.

Mangalore, 26-7-1954.

(೧ನೇ ಪುಟದಿಂದ)

ಪರಾವೃತ್ತಗೊಳಿಸುವುದರಲ್ಲಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ಶೀಲ ಸಂವರ್ಧನೆ ಮತ್ತು ಸಂಯಮವನ್ನು ಆಶ್ರಯಿಸಿಯೇ ನಾವು ಈ ಪ್ರಚೋದನೆಯಿಂದ ನಿರ್ಲಿಪ್ತರಾಗಬೇಕಾಗಿದೆ. ಮನುಷ್ಯನ ಮೇಧಾ ಶಕ್ತಿಯು ಅನಂತವಾದುದಲ್ಲ—ಅದಕ್ಕೊಂದು ಮಿತಿ ಉಂಟು. ಆದುದರಿಂದ ಮುಖ್ಯ ವಿಷಯವನ್ನು ಬಿಟ್ಟು ಗೌಣವಿಷಯಗಳ ಕಡೆಗೆ ಗಮನ ಹರಿಸಿದಾಗ ಸ್ಮರಣ ದೋಷ ಮುಂತಾದವು ಕಾಣಿಸಿಕೊಳ್ಳುತ್ತವೆ.

ಸಿನಿಮಾ ಕತೆಕಾದಂಬರಿಗಳೂ ವಿದ್ಯಾರ್ಥಿಗಳ ಮನಸ್ಸನ್ನು ಬಹಳಷ್ಟು ಕೆಡಿಸುತ್ತವೆ—ಓದುವಾಗ ಉಂಟಾಗುವ ಆನಂದವು ಪುಸ್ತಕದಲ್ಲಿ ವರ್ಣಿಸಲ್ಪಟ್ಟ ಕಲ್ಪಿತ ಪಾತ್ರ ಮತ್ತು ಸನ್ನಿವೇಶಗಳೊಂದಿಗೆ ತನ್ನನ್ನು ಹಾಗು ತನ್ನ ಜೀವನವನ್ನು ಹೋಲಿಸಿ ನೋಡುವುದರಿಂದಲೇ ದೊರಕುತ್ತದೆ. ಮನಃಶಾಸ್ತ್ರಜ್ಞರ ಸ್ಪಷ್ಟವಾದ ಅಭಿಪ್ರಾಯ: ನಾವು ಕಲ್ಪನಾ ಲೋಕದಲ್ಲಿ ವಿಹರಿಸಲು ತೊಡಗಿದರೆ, ಸಹಜವಾಗಿಯೇ ಈ ಲೋಕದ ಬದುಕಿನ ರೀತಿ ನೀತಿಗಳನ್ನು ಕಂಡು ಹಗುರ [illegible] ನಾವು [illegible] ಈ ಪ್ರವಾಹಕ್ಕೆ ಎದೆಕೊಡುವುದು ಸಲ್ಲದು. [illegible] ನಾವು [illegible] ವಿದ್ಯಾರ್ಥಿಗಳು ಇದಕ್ಕೆ [illegible] ಕಲಿಯುತ್ತಿ[illegible] ವಿದ್ಯಾರ್ಥಿ [illegible] ಕಂಡು [illegible]!

[illegible] ವಿದ್ಯಾರ್ಥಿ [illegible] ಸ್ವತಂತ್ರ ಭಾರತದ ವಿದ್ಯಾರ್ಥಿಗಳು [illegible]

[illegible] ಇದಕ್ಕೋಸ್ಕರವಾಗಿ, [illegible] ಒಳ್ಳೆಯ ಆದರ್ಶವನ್ನು ಮನಃಪೂರ್ವಕ ಅಂಗೀಕರಿಸಬೇಕು. ಬುದ್ಧಿಮಂತಿಕೆಯೊಂದಿಗೆ ದೈಹಿಕ ಶ್ರಮದ ಪ್ರಮಾಣವನ್ನೂ ಹೆಚ್ಚಿಸಿಕೊಂಡು ಹೋಗಬೇಕು. ಈ ಪ್ರಕಾರ "ಯಾವುದು ಅಗತ್ಯವಾಗಿ ಮಾಡಬೇಕಾದದ್ದೋ ಅದನ್ನು ಮಾಡದಿರುವುದಕ್ಕೋಸ್ಕರ ತಲೆಕೆಡಿಸಿಕೊಳ್ಳುವ" ಇಂದಿನ ಶಿಕ್ಷಣ ಪದ್ಧತಿಯ ವಿಷಮ ಪ್ರಭಾವದಿಂದ ತಮ್ಮನ್ನು ರಕ್ಷಿಸಿಕೊಳ್ಳಬೇಕು.

—ಕಾರ್ತಿಕೇಯ.

ಚರ್ಮದ ಕೈಗಾರಿಕೆಯಲ್ಲಿ ನವೀನ ತಂತ್ರ

ಮದ್ರಾಸಿನ ಕೇಂದ್ರ ಸಂಸ್ಥೆಯ ಸಿದ್ಧಿ

ಚರ್ಮದ ವಸ್ತುಗಳ ಉಪಯೋಗ ಈಗ ಬಹಳ ಹೆಚ್ಚುತ್ತಿದೆ. ಆದ್ದರಿಂದ ಮದರಾಸಿನಲ್ಲಿರುವ ಕೇಂದ್ರದ ಚರ್ಮ ಸಂಶೋಧನಾ ಸಂಸ್ಥೆಯವರು, ಚರ್ಮವನ್ನು ಇನ್ನೂ ಹೆಚ್ಚಾಗಿ ಹಾಗೂ ವೈಜ್ಞಾನಿಕ ರೀತಿಯಲ್ಲಿ ಉಪಯೋಗಿಸುವ ಸಂಬಂಧವಾಗಿ ಹೊಸ ಸಂಶೋಧನೆಗಳನ್ನು ನಡೆಸಿದ್ದಾರೆ.

ಈ ಸಂಸ್ಥೆಯವರು ನಿಯೋಜಿಸಿರುವ ಹೊಸ ವಿಧಾನ ಮತ್ತು ತಂತ್ರ ಕೌಶಲ್ಯಗಳಿಂದ ಭಾರತದಲ್ಲಿ ಚರ್ಮದ ಕೈಗಾರಿಕೆಯ ಉತ್ಪತ್ತಿ ಹೆಚ್ಚುವುದಲ್ಲದೆ ಸಿದ್ಧ ವಸ್ತುಗಳ ಗುಣಾಂಶ ಮತ್ತು ವೈವಿಧ್ಯತೆಗಳೂ ಹೆಚ್ಚುವುವು.

ಉದಾಹರಣೆಗೆ: ಆಟ್ಟೆಯ ಚರ್ಮದ ಹದ ಮಾಡುವುದಕ್ಕೆ 3—4 ತಿಂಗಳ ಕಾಲ ಬೇಕಾಗುತ್ತಿದ್ದುದು ಈಗ ಕೆಲವು ವಾರಗಳು ಮಾತ್ರ ಹಿಡಿಯುತ್ತವೆ. ಅದರಂತೆ ಮೇಜು ಕುರ್ಚಿ ಮತ್ತು ಇತರ ಆಸನಗಳಿಗೆ ಉಪಯೋಗಿಸುವ ಚರ್ಮ, ಕ್ರೀಡಾವಸ್ತುಗಳಿಗೆ ಮತ್ತು ಬೂಟಿನ ಮೇಲ್ಭಾಗಗಳಿಗೆ ಉಪಯೋಗಿಸುವ ಚರ್ಮಗಳನ್ನು ಹದಮಾಡುವುದಕ್ಕೆ ಉತ್ತಮವಾದ ಹೊಸ ವಿಧಾನವನ್ನು ಕಂಡು ಹಿಡಿಯಲಾಗಿದೆ. ವಿದೇಶಗಳಲ್ಲಿ ಚರ್ಮದ ಕೈಗಾರಿಕೆಗಳಲ್ಲಿ ಅನುಸರಿಸುತ್ತಿರುವ ರೀತಿ ನೀತಿಗಳನ್ನು ಭಾರತದ ಪರಿಸ್ಥಿತಿಗಳಿಗೆ ಹಾಗೂ ಕಚ್ಚಾ ವಸ್ತುಗಳಿಗೆ ಅನ್ವಯಿಸುವ ಬಗ್ಗೆ ಪ್ರಯೋಗಗಳನ್ನು ಈ ಸಂಸ್ಥೆಯಲ್ಲಿ ನಡೆಸುತ್ತಿರಲಾಗಿದೆ.

1953ರ ಜನವರಿಯಲ್ಲಿ ಈ ಸಂಸ್ಥೆಯನ್ನು ಸ್ಥಾಪಿಸಲಾಯಿತು. ಪಂಚವಾರ್ಷಿಕ ಯೋಜನೆಯ ಪ್ರಕಾರ, ಕೈಗಾರಿಕೆಗಳನ್ನು ವೈಜ್ಞಾನಿಕ ರೀತಿಯಲ್ಲಿ ಅಭಿವೃದ್ಧಿಪಡಿಸುವುದಕ್ಕಾಗಿ ಸ್ಥಾಪಿಸಲಾದ ಹನ್ನೊಂದು ಸಂಸ್ಥೆಗಳಲ್ಲಿ ಈ ಸಂಸ್ಥೆಯೂ ಒಂದು. ಚರ್ಮದ ಕೈಗಾರಿಕೆಯನ್ನು ಉತ್ತಮಪಡಿಸುವುದಕ್ಕೆ ಹಾಗೂ ಆಧುನಿಕ ರೀತಿಯಲ್ಲಿ ತಯಾರಿಕೆ ನಡೆಸುವುದಕ್ಕೆ ಹೊಸ ವಿಧಾನಗಳನ್ನು ಕಂಡು ಹಿಡಿಯುವ ಕೆಲಸದಲ್ಲಿ ಈ ಸಂಸ್ಥೆ ನಿರತವಾಗಿರುವುದು. ಈ ಸಂಸ್ಥೆಯಲ್ಲಿ ಸಂಶೋಧನೆ, ಶಿಕ್ಷಣ ಮತ್ತು ವಿಷಯಗಳ ಪ್ರಸರಣ—ಈ ಕೆಲಸಗಳು ನಡೆಯುತ್ತಿವೆ.

ಸಂಶೋಧನಾ ಕಾರ್ಯ

ಭಾರತದ ಚರ್ಮದ ಗುಣಾಂಶವನ್ನು ಉತ್ತಮಪಡಿಸುವುದು, ಹಾಗೂ ಚರ್ಮ ಹದ ಮಾಡುವುದಕ್ಕೆ ಸ್ವದೇಶಿ ವಸ್ತುಗಳನ್ನು ಸಂಶೋಧನೆ ಮಾಡುವುದು—ಇವು ಮುಖ್ಯವಾಗಿ ಈ ಸಂಸ್ಥೆಯ ಸಂಶೋಧನಾ ವಿಭಾಗವು ಮಾಡುತ್ತಿರುವ ಕೆಲಸಗಳು. ಈಗ ಚರ್ಮ ಹದಮಾಡುವ ಕೈಗಾರಿಕೆಯು ಹೆಚ್ಚಾಗಿ ಹೆಚ್ಚು ಉಪಯೋಗಿಸುವ ಬಗ್ಗೆ ಹೊರದೇಶಗಳಿಂದ ಬರುವ ಪದಾರ್ಥಗಳನ್ನು (ವ್ಯಾಟಲ್ ಬಲ್ಕ್ ಮತ್ತು ಛಟ್ಟಿಯನ್ನು) ಅವಲಂಬಿಸಿದೆ. ಈ ಸಂಸ್ಥೆಯು ಈ ಕ್ಷೇತ್ರದಲ್ಲಿ ಸಂಶೋಧನೆಗಳನ್ನು ನಡೆಸಿ ಕೊಂಚಮಟ್ಟಿಗೆ ಯಶಸ್ವಿಯಾಗಿದೆ. ಇದೇ ರೀತಿ ಆಧುನಿಕ ಚರ್ಮದ ಕೈಗಾರಿಕೆಗೆ ಸಂಬಂಧಿಸಿದ, ರಾಸಾಯನಿಕ, ಭೌತಿಕ ಇತ್ಯಾದಿ ಎಲ್ಲಾ ವಿಭಾಗಗಳಲ್ಲಿಯೂ ಸಂಶೋಧನೆಗಳನ್ನು ನಡೆಸಲಾಗುತ್ತಿದೆ. ಪ್ರಯೋಗ ಶಾಲೆಗೆ ಹೊಂದಿಕೊಂಡಂತೆ ಚರ್ಮ ಹದ ಮಾಡುವ ವಿಭಾಗವೂ ಇದೆ. ಈ ಸಂಸ್ಥೆಯಲ್ಲಿ ನಿಯೋಜಿಸಲಾದ ವಿಧಾನವನ್ನು ಕುರಿತಾದ ಆರ್ಥಿಕ ಪರಿಣಾಮವನ್ನು ಅಂದಾಜು ಮಾಡುವುದಕ್ಕಾಗಿ ಒಂದು ಸಣ್ಣ ಕಾರ್ಖಾನೆಯೂ ಇದೆ.

ಶಿಕ್ಷಣದ ವ್ಯವಸ್ಥೆ

ಚರ್ಮದ ಕೈಗಾರಿಕೆಯಲ್ಲಿ ತಂತ್ರಜ್ಞರ ಅಭಾವವನ್ನು ಪೂರೈಸುವ ದೃಷ್ಟಿಯಿಂದ ಈ ಸಂಸ್ಥೆಯು ಚರ್ಮದ ಕೈಗಾರಿಕೆಗೆ ಸಂಬಂಧಿಸುವ ಎಲ್ಲಾ ವಿಷಯಗಳನ್ನೂ ಮದರಾಸು ವಿಶ್ವವಿದ್ಯಾನಿಲಯದ ಬಿ. ಎಸ್. ಸಿ. (ಟೆಕ್-ಲೆದರ್) ಡಿಗ್ರಿಗಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಬೋಧಿಸುವುದರ ಜೊತೆಗೆ ಪ್ರಾಯೋಗಿಕ ಶಿಕ್ಷಣವನ್ನು ಕೊಡಲಾಗುವುದು. ಎಂ. ಎಸ್. ಸಿ. ಅಥವಾ ಪಿ. ಎಚ್. ಡಿ. ಪದವಿಗಳಿಗಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೂ ಈ ಸಂಸ್ಥೆಯಲ್ಲಿ ಶಿಕ್ಷಣವೀಯಲಾಗುವುದು.

ಈ ಸಂಸ್ಥೆಯ ಅಂಕೆ ಅಂಶಗಳ ಮತ್ತು ವಾರ್ತಾ ವಿಭಾಗವು ಚರ್ಮದ ಕೈಗಾರಿಕೆಗೆ ಸಂಬಂಧಪಟ್ಟ ವಿಷಯಗಳನ್ನು ಪ್ರಕಟಿಸುತ್ತದೆ. "ಕೇಂದ್ರದ ಚರ್ಮದ ಸಂಶೋಧನೆ ಸಂಸ್ಥೆ" ಎಂಬ ಮಾಸಿಕವು ಚರ್ಮದ ಕೈಗಾರಿಕೆಯವರಿಗೆ, ತಾಂತ್ರಿಕರಿಗೆ ಮತ್ತು ರಸಾಯನ ಶಾಸ್ತ್ರಜ್ಞರಿಗೆ ಚರ್ಮ ವಿಜ್ಞಾನದ ಕ್ಷೇತ್ರದಲ್ಲಿ ಸಾಧಿಸಲಾದ ಪ್ರಗತಿಯನ್ನು ತಿಳಿಸುತ್ತದೆ. ಆಗಾಗ್ಗೆ ವಿಚಾರ ಗೋಷ್ಠಿಗಳನ್ನು ಈ ಸಂಸ್ಥೆ ಏರ್ಪಡಿಸುವುದರ ಜೊತೆಗೆ ವೈಯಕ್ತಿಕವಾದ ಪತ್ರವ್ಯವಹಾರಗಳಿಗೂ ಗಮನ ಕೊಡುತ್ತದೆ.

ಈ ಸಂಸ್ಥೆಯ ಇಂಜಿನಿಯರಿಂಗ್ ವಿಭಾಗ ಅಗತ್ಯವಾದ ನಕ್ಷೆಗಳನ್ನು ರಚಿಸಿ ಯಂತ್ರೋಪಕರಣಗಳ ಮೇಲ್ವಿಚಾರಣೆಯನ್ನು ನೋಡಿಕೊಳ್ಳುವುದು.

ಭಾರತದಲ್ಲಿ ಗೋಸಂಪತ್ತು ಅಧಿಕವಾಗಿದ್ದರೂ ಅವುಗಳಿಂದ ದೊರೆಯುವ ಚರ್ಮ ಕಡಿಮೆ ಗುಣಾಂಶವುಳ್ಳದಾಗಿರುವುದರಿಂದ ಗೋವುಗಳ ತಳಿಗಳನ್ನು ಉತ್ತಮಪಡಿಸುವ ಕಾರ್ಯದಲ್ಲಿ ಪಶು ಸಂಸ್ಥೆಗಳೊಂದಿಗೆ ಈ ಸಂಸ್ಥೆಯೂ ಸಹಕರಿಸಿ ಕೆಲಸಮಾಡುತ್ತದೆ. ಚರ್ಮ ಹದ ಮಾಡುವುದಕ್ಕೆ ಬೇಕಾದ ಸಸ್ಯಗಳನ್ನು ಈ ಸಂಸ್ಥೆಯು ತನ್ನ 84 ಎಕರೆಗಳ ಜಮೀನಿನಲ್ಲಿ ಬೆಳೆಯುವುದು.

• ಭಾರತದಲ್ಲಿ ಚರ್ಮದ ವಸ್ತುಗಳ ಉತ್ಪತ್ತಿಯಲ್ಲಿ ತ್ವರಿತಪೂರ್ಣತೆಯನ್ನು ಸಾಧಿಸುತ್ತಿರುವುದರ ಜೊತೆಗೆ ಭಾರತದ ರಫ್ತು ವ್ಯಾಪಾರವನ್ನು ಈ ಸಂಸ್ಥೆ ಉತ್ತಮ ಪಡಿಸುತ್ತಿದೆ. ಇಂದು ಸುಮಾರು 35 ಕೋಟಿ ರೂ. ಗಳಷ್ಟು ಚರ್ಮದ ವಸ್ತುಗಳನ್ನು ಭಾರತದಿಂದ ರಫ್ತು ಮಾಡಲಾಗುತ್ತಿದೆ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ಶೈನ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸಮುದ್ರ ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦
—:ವಿಳಾಸ:—
ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
[illegible]
ಚಿಲ್ಲರೆಯಾಗಿಯೂ ದೊರೆಯುತ್ತವೆ
[illegible]
ಉತ್ತಮ ಕಾಗದದ, ದಪ್ಪವಾದ ಹೊರಕವಚದ, ಎಲ್ಲಾ ತರದ
ಎಕ್ಸರ್ ಸೈಜ್
ಪುಸ್ತಕಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಭಾರತದ ರಾಜನೈತಿಕ ಮತ್ತು ಆರ್ಥಿಕ ತತ್ತ್ವಗಳು

ಶ್ರೀ. ಹರಿದಾಸ ಭಟ್ಟ, ಎಂ. ಎ.

ಹಿಂದೂ ರಾಜನೀತಿಯ ಕುರಿತು ಈವರೆಗೆ ಬಂದ ಬರವಣಿಗೆಗಳು ಭಾರತೀಯ ರಾಜನೀತಿಯ ಗತವೈಭವವನ್ನು ವರ್ಣಿಸಿ, ಅದು ಮರೆಯಾದುದಕ್ಕೆ ನಮ್ಮ ಮನಸ್ಸು ಕಳವಳಪಡುವಂತೆ ಮಾಡುತ್ತವೆ. ನಮ್ಮ ಧರ್ಮ ಶಾಸ್ತ್ರಗಳಲ್ಲಿ ಬರುವ ರಾಜನೀತಿಯು ಉತ್ತಮ ಆದರ್ಶಗಳಿಂದ ಪ್ರೇರಿತವಾದುದೆಂಬುದರಲ್ಲಿ ಸಂದೇಹವಿಲ್ಲ. ದಂಡವು ದೈವನಿಯತವಾದ್ದೆಂದೂ, ದಂಡನೀತಿ (ರಾಜನೀತಿ)ಯಲ್ಲಿ ಅರಸನು ಸಂಯಮದಿಂದ ವರ್ತಿಸಬೇಕೆಂದೂ, ರಾಜ್ಯವು ಪ್ರಜೆಗಳಿಂದ ಸ್ವಲ್ಪಾಂಶವನ್ನು ಮಾತ್ರ ಪಡೆದು ಹೆಚ್ಚಿನ ಭಾಗವನ್ನು ಅವರಿಗೇ ಬಿಟ್ಟುಬಿಡಬೇಕೆಂದೂ, ರಾಜನ ಸ್ವಾರ್ಥವೂ ಪ್ರಜೆಗಳ ಹಿತವೂ ಐಕಮತ್ಯದಲ್ಲಿರಬೇಕೆಂದೂ, ಆಡಳಿತೆ ಒಳ್ಳೆಯದಾಗಿದ್ದರೆ ರಾಜ್ಯದಲ್ಲಿ ಮಳೆ ಬೆಳೆ ಸರಿಯಾಗಿ ಆಗುವುದೆಂದೂ, ಶಾಸ್ತ್ರಕಾರರು ಹೇಳಿರುವರು. "ಕರ್ತವ್ಯಕ್ಕೆ ಸನ್ನದ್ಧನಾಗಿರುವುದೇ ರಾಜನ ಪ್ರತಿಜ್ಞೆ; ಸರಿಯಾದ ಕರ್ತವ್ಯನಿರ್ವಹಣವೇ ಅವನು ಮಾಡುವ ಯಜ್ಞವು; ಎಲ್ಲರನ್ನೂ ಸರಿಸಮಾನವಾಗಿ ಪರಿಗಣಿಸುವುದೇ ಅವನು ಮಾಡತಕ್ಕ ಶ್ರೇಷ್ಠದಾನವು. ಪ್ರಜೆಗಳ ಸುಖವೇ ಅವನ ಸುಖ, ಅವರ ಕಲ್ಯಾಣವು ಅವನ ಕಲ್ಯಾಣ; ತನಗೆ ಯಾವುದು ಇಷ್ಟವೋ ಅದು ಒಳ್ಳೆಯದೆಂದು ಅವನು ಭಾವಿಸಬಾರದು. ಪ್ರಜೆಗಳಿಗೆ ಯಾವುದು ಇಷ್ಟವೋ ಅದನ್ನು ಒಳ್ಳೆಯದೆಂದು ತಿಳಿದು ಅವನು ಮಾಡತಕ್ಕದ್ದು." ಎಂದು ಕೌಟಿಲ್ಯನು ವಿಧಿಸಿದ್ದಾನೆ. ಇದೇ ರೀತಿಯಾಗಿ ಬಡ ಪ್ರಜೆಗಳ ವಿಷಯದಲ್ಲಿ ರಾಜನ ಕರ್ತವ್ಯವೇನೆಂಬುದನ್ನು ಇತರ ಅನೇಕ ಗ್ರಂಥಗಳು ವಿವರಿಸುತ್ತವೆ.

ಆದರೂ ನಿಷ್ಪಕ್ಷಪಾತವಾಗಿ ವಿಮರ್ಶಿಸಿದರೆ ಪ್ರಾಚೀನ ಭಾರತೀಯ ರಾಜನೀತಿಯಲ್ಲಿ ಮತ್ತು ಜನಜೀವನದಲ್ಲಿ ಸರಕಾರದ ಪಾತ್ರವು ಸೀಮಿತವಾಗಿತ್ತೆಂದು ನಮಗೆ ಕಂಡು ಬರುತ್ತದೆ. ಜನ ತಮ್ಮ ಹಿತಕ್ಕಾಗಿ ತಾವೇ ಮಾಡದೆ ಇರುವುದನ್ನು ಸರಕಾರವು ಮಾಡಬೇಕೆಂದು ಯಾವ ಗ್ರಂಥದಲ್ಲಿಯೂ ಹೇಳಿಲ್ಲ. ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿ ಮಿತವ್ಯಯವು ರಾಜನ ಒಂದು ಕರ್ತವ್ಯವೆಂದು ನಿರೂಪಿಸಲ್ಪಟ್ಟಿದೆ. ಅಲ್ಲದೆ ಯಾರು ಕೆಳತರಗತಿಯ ಭೂಮಿಯನ್ನು ಉತ್ತು ಜೀವಿಸುತ್ತಾರೋ, ಅಥವಾ ರಾಜ್ಯದಲ್ಲಿ ಕೋಟೆ ಕೊತ್ತಳಗಳನ್ನೂ, ರಸ್ತೆದಾರಿಗಳನ್ನೂ ಗಣಿಗಳನ್ನೂ, ಅರಣ್ಯರಕ್ಷಣೆಯನ್ನೂ, ಪಡಭೂಮಿಯ ಕೃಷಿಯನ್ನೂ ಕಾರ್ಯಗತ ಮಾಡುತ್ತಿರುವರೋ ಅಂಥವರಿಂದ ರಾಜ್ಯದಲ್ಲಿ ಅತೀವ ಆರ್ಥಿಕ ತಾಪತ್ರಯವು ಉಂಟಾದಾಗಲೂ ಕರ ವಸೂಲು ಮಾಡಬಾರದಾಗಿ ಕಟ್ಟಳೆ ಇದೆ. ರಾಜ್ಯದ ಗಡಿನಾಡಿನಲ್ಲಿ ವಾಸ ಮಾಡುವವರಿಗೂ, ಜೀವನ ನಿರ್ವಾಹಕ್ಕೆ ಬೇಕಾದಷ್ಟು ಸಂಪತ್ತಿಲ್ಲದವರಿಗೂ ಇದೇ ರೀತಿ ತೆರಿಗೆಗಳಿಂದ ವಿನಾಯತಿ ಇದೆ. ಅಡವಿಯಲ್ಲಿ ವಾಸಮಾಡುವ ಆದಿವಾಸಿಗಳಿಂದಲೂ, ಬ್ರಾಹ್ಮಣರಿಂದಲೂ ರಾಜನು ಕರಗಳನ್ನು ವಸೂಲು ಮಾಡಬಾರದು. ಅಂದರೆ, ನ್ಯಾಯವಾಗಿ ರಾಷ್ಟ್ರದ ಕಾರ್ಯಭಾರವು ಸಂಕುಚಿತವಾದ ಕ್ಷೇತ್ರದಲ್ಲಿ ನಡೆಯುವುದು ಅನಿವಾರ್ಯವಾಗುತ್ತದೆ. ಸರ್ವ ಶಕ್ತಿವಂತವಾದ ಆಧುನಿಕ ರಾಷ್ಟ್ರದ ಕಲ್ಪನೆಯು ಕೌಟಿಲ್ಯನಲ್ಲಿಯೂ ಇಲ್ಲ, ಶುಕ್ರನೀತಿಯಲ್ಲಿಯೂ ಇಲ್ಲ. ಶುಕ್ರನ ದೃಷ್ಟಿಯಲ್ಲಿ ಕರಗಳೆಂದರೆ ರಾಜನಿಗೆ ಕೊಡುವ ವೇತನವಷ್ಟೆ. ರಾಜನ ಅಧಿಕಾರವು ದೈವದತ್ತವೆಂದು ನಂಬಿದ ಒಬ್ಬ ಅರಸನನ್ನು ಬೌದ್ಧಗುರು ಆರ್ಯದೇವನು ಖಂಡಿಸಿದ್ದಾನೆ. ರಾಜನು ರಾಜ್ಯ ಶಕ್ತಿಯ ಮೂಲವೆಂದು ತಿಳಿದುಕೊಳ್ಳುವುದು ಕೇವಲ ಭ್ರಮೆಯೆಂದೂ, ರಾಜನಿಗೆ ಆರನೆಯ ಒಂದಂಶವನ್ನು ಮಾತ್ರ ಪ್ರಜೆಗಳಿಂದ ಪಡೆಯುವ ಹಕ್ಕಿರುವುದೆಂದೂ, ರಾಜನು ಗಣದ ಸೇವಕನೆಂದೂ, ಆತ ಎಚ್ಚರಿಸಿದ್ದಾನೆ.

ಕೌಟಿಲ್ಯನ ಅರ್ಥಶಾಸ್ತ್ರದ ಪ್ರಕಾರ ರಾಜನೀತಿಯು ಸಂಧಿ, ವಿಗ್ರಹ, ಯಾನ, ಆಸನ, ದ್ವೈಧ್, ಆಶ್ರಯ ಈ ಆರು ಮುಖಗಳುಳ್ಳ ಧೋರಣೆಯುಳ್ಳದ್ದಾಗಿರಬೇಕು. ವಿಜಿಗೀಷುವು(ರಾಜ್ಯ ವಿಸ್ತಾರ ಮಾಡಬೇಕೆಂಬ ಆಕಾಂಕ್ಷೆಯುಳ್ಳವನು) ದಿಗ್ವಿಜಯವನ್ನೇನೋ ಮಾಡಬೇಕೆಂಬ ವಿಧಿ ಇದ್ದರೂ ಹಾಗೆ ಮಾಡುವಲ್ಲಿ ಅವನು ಸಮಾಜದ ಪ್ರಚಲಿತ ಕಟ್ಟುಪಾಡನ್ನು—ಚಾತುರ್ವರ್ಣ್ಯವನ್ನು—ಮೀರಿ ನಡೆಯಬಾರದು. ಶುಕ್ರನೀತಿಯಲ್ಲಿ ರಾಜ್ಯ ಕರ್ತೃಗಳನ್ನು ಎಂಟು ವರ್ಗಗಳಾಗಿ ವಿಂಗಡಿಸಲಾಗಿದೆ. ಒಂದು ಲಕ್ಷ ಕರ್ಷ ವರಮಾನವುಳ್ಳ ಮಾಂಡಲಿಕನಿಂದ ಐವತ್ತುಕೋಟಿ ಕರ್ಷ ವರಮಾನವಿರುವ ಸಾರ್ವಭೌಮನವರೆಗೂ ಈ ಎಂಟು ವರ್ಗಗಳು ಒಂದರ ಮೇಲೊಂದು ಏರುತ್ತ ಹೋಗುವುವು. ಮಾಂಡಲಿಕನಾಗಿದ್ದವನು ಶಾಸ್ತ್ರೀಯವಾಗಿ ಮುಂದಿನ ಮೆಟ್ಟಲನ್ನೇರಲಿಚ್ಛಿಸುವುದಾದರೆ ಅವನಿಗೆ ದಿಗ್ವಿಜಯವೊಂದೇ ದಾರಿಯಲ್ಲದೆ, ತನ್ನ ರಾಜ್ಯದಲ್ಲಿ ಜನಸಾಮಾನ್ಯನ ಸ್ವಾತಂತ್ರ್ಯವನ್ನು ಅಪಹರಿಸಿ ಪ್ರಭುತ್ವವನ್ನು ಬೆಳೆಸಿಕೊಳ್ಳುವ ಹವಣಿಕೆ ಸಲ್ಲದು. ಕೌಟಿಲ್ಯನಲ್ಲಿ ಸಮಾಜವಾದಿ—ಜನ ಹಿತೈಷಿ ರಾಷ್ಟ್ರವೆಂಬ ಆಧುನಿಕ ವಿಚಾರವು ನಮಗೆ ಎಲ್ಲಿಯೂ ನೋಡ ದೊರೆಯುವುದಿಲ್ಲ. ಅವರವರು ಅವರವರ ಕೆಲಸವನ್ನು ಮಾಡದೆ ಇನ್ನೊಬ್ಬರ ಕೆಲಸಕ್ಕೆ ಕೈಯಿಕ್ಕಲು ನೋಡಿದರೆ, ಸ್ವಧರ್ಮವನ್ನು ಮರೆತು ಹೆಜ್ಜೆ ಹಾಕಿದರೆ, ಪ್ರಪಂಚದಲ್ಲಿ ವರ್ಣ ಸಂಕರವೂ, ಗೊಂದಲವೂ ವ್ಯಾಪಿಸುವುವೆಂದು ಕೌಟಿಲ್ಯನು ನಂಬಿದ್ದಾನೆ.

ರಾಜನ ಕರ್ತವ್ಯವು ದುಷ್ಟ ನಿಗ್ರಹ, ದಂಡನೆ. ಈಗಿನ ಪ್ರಪಂಚದಲ್ಲಾದರೆ ಅವನೊಬ್ಬ ಪೋಲೀಸ ಅಧಿಕಾರಿಯಾಗಿರುತ್ತಿದ್ದನು. ಕಾಲಾಂತರದಲ್ಲಿ ಮುಸ್ಲಿಮರು ಭಾರತವನ್ನು ಆಳುತ್ತಿದ್ದಾಗಲೂ ರಾಜ್ಯದ ಉತ್ಪತ್ತಿಯ ಆರನೆಯ ಒಂದಂಶ ಮಾತ್ರ ರಾಜನಿಗೆ ಸೇರಬೇಕಾದ್ದೆಂಬ ಪುರಾತನ ಸೂತ್ರವು ಉಳಿದುಬಂತು. ಆದರೆ ಜನರ ಮೇಲಿನ ಹೊರೆ ಬರಬರುತ್ತ ಅಧಿಕವಾಗಲಾರಂಭಿಸಿತು. 'ರಾಜ್ಯಕ್ಕೆ ಯಾವುದು ಒಳ್ಳೆಯದೋ, ಸಂದರ್ಭಕ್ಕೆ ಯಾವುದು ಹಿತಕರವೋ ಅದನ್ನು ನಾನು ಶಾಸಿಸುತ್ತೇನೆ' ಎಂದು ಅಲ್ಲಾವುದ್ದೀನ ಖಿಲ್ಜಿ ಹೇಳಿದ ಮಾತಿನಲ್ಲಿ ಭಾರತದಲ್ಲಿ ಮಹಮ್ಮದೀಯರ ಕಾಲದ ರಾಜನೀತಿಯ ತತ್ತ್ವವು ಅಡಗಿದೆ. ಕರ ತೆರಿಗೆಗಳು ಹೆಚ್ಚಾದುವು. ಮುಸ್ಲಿಮೇತರರು (೧೫೬೪–೧೬೭೯ ಈ ಕಾಲವನ್ನು ಬಿಟ್ಟು) 'ಜಿಸಿಯಾ' ಎಂಬ ತಲೆತೆರಿಗೆಯನ್ನು ತೆರಬೇಕಾಯಿತು. ರಾಷ್ಟ್ರದ ಕಾರ್ಯಭಾರವೂ, ಕಾರ್ಯಕ್ಷೇತ್ರವೂ ಹಿಂದಿನಷ್ಟೇ ಇದ್ದು ಸಾರ್ವಜನಿಕ ಕೆಲಸಗಳಿಗೆ ತೆಗೆದಿಡುವ ಹಣವು ತೀರ ಅಲ್ಪವಾಗಿರುತಿತ್ತು. ಯುದ್ಧಗಳಿಗೋಸ್ಕರ ಮಾತ್ರ ಹೇರಳ ಧನವ್ಯಯ ಮಾಡಲು ಮುಸ್ಲಿಮ ರಾಜರು ಸಿದ್ಧರಾಗಿರುತ್ತಿದ್ದರು

ಹೀಗೆ ರಾಷ್ಟ್ರದ ಕಾರ್ಯಕ್ಷೇತ್ರವೂ, ಸರಕಾರದ ಕೈವಾಡವೂ ಸ್ವಲ್ಪ ಮಾತ್ರ ನಡೆಯಲು ಕೆಲವು ಕಾರಣಗಳನ್ನು ಕೊಡಬಹುದು: (೧) ರಾಜ್ಯದ ವಿಸ್ತಾರವು ಅತಿಯಾಗಿದ್ದುದರಿಂದ ರಾಷ್ಟ್ರವು ಕೇಂದ್ರಿತ ಶಾಸನವನ್ನು ನಿರ್ವಹಿಸುವುದು ಸುಲಭವಾಗಿರಲಿಲ್ಲ. (೨) ರಾಜನೀತಿಯ ಹಿನ್ನೆಲೆಯಲ್ಲಿರುವ ಅರ್ಥಮಂಡಲವು ಸ್ವತಂತ್ರವಾದ ಮಾರ್ಕೆಟುಗಳುಳ್ಳ ಅನಿಯಂತ್ರಿತ ವ್ಯಾಪಾರ ವಹಿವಾಟನ್ನೊಳಗೊಂಡಿದ್ದುದರಿಂದ ಸಮಾಜದಲ್ಲಿ ಸ್ವಾಭಾವಿಕವಾಗಿ ರೂಪಿತವಾದ ಅನುಕೂಲ್ಯಗಳು ರಾಷ್ಟ್ರದ ಹಸ್ತಕ್ಷೇಪದಿಂದಾಗಿ ತಪ್ಪಿಹೋಗುವ ಸಂಭವವಿರುತಿತ್ತು. (೩) ಸಾಂಪ್ರದಾಯಿಕ ಹಿಂದೂ ಪರಂಪರೆಯಲ್ಲಿ ದಂಡನೀತಿಯನ್ನು ಶಾಸ್ತ್ರಗಳ ಜತೆಗೆ ಸೇರಿಸಿಬಿಟ್ಟಿದ್ದರು: ಅನ್ವೀಕ್ಷಕಿ (ತತ್ತ್ವಜ್ಞಾನ, ಅಥವಾ ದರ್ಶನಗಳು), ವಾರ್ತಾ (ವ್ಯಾಪಾರ, ವ್ಯವಸಾಯ), ವೇದ ಇವು ಮೂರಾದ ಮೇಲೆ ನಾಲ್ಕನೆಯದು ದಂಡನೀತಿ (ರಾಜನೀತಿ). ಇದರಿಂದ ದಂಡನೀತಿಯು ವ್ಯಕ್ತಿಯ ವಿಕಾಸಕ್ಕೆ ಪೋಷಕವಾದ ಅಧ್ಯಯನವೆಂದೂ ಒಬ್ಬನ ವ್ಯಕ್ತಿತ್ವವನ್ನು ನಿಯಂತ್ರಿಸುವುದು ಸಾಧುವಲ್ಲವೆಂದೂ ನಾವು ತೀರ್ಮಾನಿಸಬಹುದು. ಹಿಂದೂ ಧರ್ಮಶಾಸ್ತ್ರಕಾರರ ಮತದಂತೆ ಪ್ರಜೆಯು ರಾಜ್ಯವನ್ನೇ ಅವಲಂಬಿಸಿದ್ದರೆ ಅವನ ಸ್ವಾತಂತ್ರ್ಯವು ಅಷ್ಟುಮಟ್ಟಿಗೆ ಕಡಮೆಯಾಯಿತೆಂದು ತಿಳಿಯಬೇಕು.

ಕ್ರಿಸ್ತಪೂರ್ವ ನಾಲ್ಕನೆಯ ಶತಮಾನದಲ್ಲಿ ಚೀನದಲ್ಲಿ ಬರೆಯಲ್ಪಟ್ಟ ಒಂದು ಗ್ರಂಥದಲ್ಲಿ "ಜನ ನಿಶ್ಶಕ್ತರಾಗಿದ್ದರೆ ರಾಷ್ಟ್ರವು ಸರ್ವಶಕ್ತವಾಗಿರುತ್ತದೆ, ರಾಷ್ಟ್ರವು ಸರ್ವಶಕ್ತವಾದರೆ ಜನ ನಿಶ್ಶಕ್ತರಾಗುತ್ತಾರೆ" ಎಂದು ಹೇಳಿದೆ. ಇದೇ ಮಾತನ್ನು ಭಾರತೀಯ ರಾಜನೀತಿಜ್ಞರೂ ಸಮರ್ಥಿಸುವರು.

ಭಾರತೀಯ ಅರ್ಥ ಶಾಸ್ತ್ರ

ಶಾಸ್ತ್ರಕಾರರು ಅರ್ಥ ಶಾಸ್ತ್ರವನ್ನು ಒಟ್ಟು ಜೀವನಕ್ಕಿಂತ ಬೇರೆಯಾಗಿ ಪರಿಗಣಿಸಲಿಲ್ಲವಾದುದರಿಂದ ನಮ್ಮ ಆರ್ಥಿಕ ತತ್ತ್ವಗಳನ್ನು ಯಾವುದಾದರೂ ಒಂದು ಗ್ರಂಥದಿಂದ ಶೋಧಿಸಲಾಗುವುದಿಲ್ಲ. ಈ ಸಾಮಾನ್ಯ ನಿಯಮಕ್ಕೆ ಕೌಟಿಲ್ಯನ "ಅರ್ಥ ಶಾಸ್ತ್ರ"ವು ಒಂದು ಅಪವಾದ. ಅದರಲ್ಲಿ ರಾಷ್ಟ್ರದ ಆರ್ಥಿಕ ಕಾರ್ಯಭಾರವನ್ನು ಸಾಕಷ್ಟು ವಿವರಿಸಲಾಗಿದೆ. ರಾಷ್ಟ್ರದ ಖಜಾನೆಯು ಯಾವಾಗಲೂ ತುಂಬಿಕೊಂಡಿರಬೇಕೆಂದೂ, ವರಮಾನವನ್ನು ಹೆಚ್ಚಿಸಿಕೊಂಡು ವೆಚ್ಚವನ್ನು ಕಡಿಮೆ ಮಾಡುವುದು ಕೋಶಾಧ್ಯಕ್ಷನ ಕರ್ತವ್ಯವೆಂದೂ, ಅದರಲ್ಲಿ ಹೇಳಿದೆ. ಅಧಿಕಾರಿಗಳು ಸರಕಾರದ ವರಮಾನವನ್ನು ಹೆಚ್ಚಿಸುವ ಸಮಯ ಜನರಿಗೆ ಪೀಡೆಯಾಗದಂತೆ ಎಚ್ಚರಿಕೆಯಿಂದಿರಬೇಕು. "ವರಮಾನವನ್ನು ಎರಡು ಪಟ್ಟಾಗಿ ಹೆಚ್ಚಿಸುವವನು ಜನರ ಜೀವವನ್ನು ತಿಂದ ಹಾಗೆಂದು ಭಾವಿಸಿ ಅವನ ಈ ಘೋರವಾದ ತಪ್ಪಿಗೆ ಅವನಿಗೆ ಯೋಗ್ಯವಾದ ದಂಡನೆಯನ್ನು ವಿಧಿಸುವುದು ರಾಜನ ಕರ್ತವ್ಯ". ತೆರಿಗೆಗಳನ್ನು ಯಾವಾಗ, ಎಷ್ಟು ಹೊರಿಸಬೇಕೆಂಬುದಕ್ಕೆ 'ಅರ್ಥ ಶಾಸ್ತ್ರ'ದಲ್ಲಿ ಒಳ್ಳೆಯ ದೃಷ್ಟಾಂತವಿದೆ "ತೋಟದಲ್ಲಿರುವ ಫಲವಸ್ತುಗಳು ಮಾಗಿದ ಹಾಗೆ ನಾವು ಆ ಮಾಗಿದ ಹಣ್ಣುಗಳನ್ನು ಆಯುವಂತೆ, ಜನರ ವರಮಾನವು ತುಂಬಿ ಬಂದ ಮೇಲೆಯೇ ಕರಗಳನ್ನು ವಸೂಲು ಮಾಡಬೇಕು. ಕಸುವಾದ ಹಣ್ಣನ್ನಾಗಲೀ,

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ಮಹಿವಾಟು	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ $3\frac{1}{2}\%$ ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ=$3\frac{3}{4}\%$ ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ $4\frac{1}{4}\%$ ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = $4\frac{1}{4}\%$ ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 **ದಿ ವಿಜಯ ಬ್ಯಾಂಕ್ ಲಿಮಿಟೆಡ್** ಪ್ರಧಾನ ಕಛೇರಿ ಮಂಗಳೂರು 3.

ಆದಾಯವನ್ನಾಗಲೀ ಚವುಟಿ ತೆಗೆಯುವುದರಿಂದ ಅವುಗಳ ಬುಡಕ್ಕೆ ಪೆಟ್ಟಾಗುವವನು"

ಪರದೇಶದಿಂದ ಸರಕುಗಳನ್ನು ತರಿಸುವವರಿಗೆ ಕೆಲವು ತೆರಿಗೆಗಳಿಂದ ವಿನಾಯಿತಿ ಕೊಡಬೇಕೆಂದು ಕೌಟಿಲ್ಯನು ಅಭಿಪ್ರಾಯಪಡುತ್ತಾನೆ. ವಿದೇಶದ ವರ್ತಕರಿಗೆ ಅತಿ ಕಡಿಮೆ ತೊಂದರೆಗಳನ್ನೂ, ಹೆಚ್ಚು ಸೌಕರ್ಯಗಳನ್ನೂ ರಾಷ್ಟ್ರವು ಒದಗಿಸಬೇಕೆಂದು ಆತ ಹೇಳುತ್ತಾನೆ. ಔರಂಗಜೇಬನ ಕಾಲದಲ್ಲಿ ಭಾರತಕ್ಕೆ ಬಂದ ಯುರೋಪಿಯನರಿಗೆ 'ಜಿಸಿಯಾ'ದಿಂದ ಮುಕ್ತಿ ಪಡೆಯಲು ಎಷ್ಟು ಕಷ್ಟವಾಯಿತು! ಆದರೆ ಕೌಟಿಲ್ಯನು ವಿದೇಶೀಯ ವ್ಯಾಪಾರ ವಹಿವಾಟಿನಿಂದ ಸ್ವದೇಶಕ್ಕೆ ಉಂಟಾಗುವ ಲಾಭಗಳನ್ನು ಗಮನಿಸಿ ಅವನ್ನು ಪ್ರೋತ್ಸಾಹಿಸಲು ಮುಂದಾಗಿದ್ದನು.

ಭೂಮಿಯ ಉತ್ಪನ್ನದಲ್ಲಿ ಆರರ ಒಂದಂಶದಿಂದ ರಾಜನು ತೃಪ್ತನಾಗಬೇಕೆಂದು ಶಾಸ್ತ್ರಗಳಲ್ಲಿ ಹೇಳಿದ್ದರೂ ವಾಸ್ತವವಾಗಿ ರಾಜಭಾಗವು ಇದಕ್ಕಿಂತ ಹೆಚ್ಚಾಗಿಯೇ ಇರುತ್ತಿತ್ತು. ಮೌರ್ಯ ಯುಗದಲ್ಲಿ ನಾಲ್ಕನೆಯ ಒಂದಂಶವನ್ನು, ಮೊಗಲ ಯುಗದಲ್ಲಿ ಸುಮಾರು ಮೂರನೆಯ ಒಂದಂಶವನ್ನು ಸರಕಾರವು ಜನರಿಂದ ವಸೂಲು ಮಾಡಿಕೊಳ್ಳುತ್ತಿದ್ದಿತು. ಆದ್ದರಿಂದ ಕೌಟಿಲ್ಯನ ತತ್ವಗಳ ಪ್ರಕಾರ ನಡೆಯುವ ಅರಸರು ಚರಿತ್ರೆಯ ಕಾಲದಲ್ಲಿಂತೂ ವಿರಳವಾಗಿದ್ದರೆಂದೇ ಹೇಳಬೇಕಾಗುವುದು. ಅಲ್ಲದೆ ಭೂಮಿಯಿಂದ ನೇರಾಗಿ ಒದಗುವ ಈ ಕಂದಾಯವಷ್ಟೇ ಅಲ್ಲದೆ ಇನ್ನೂ ಅನೇಕ ಪರೋಕ್ಷ ತೆರಿಗೆಗಳನ್ನು ಭಾರತೀಯ ರಾಜರು ವಿಧಿಸುವುದು ರೂಢಿಯಾಗಿತ್ತು. ಪರಂಪರೆಯಿಂದ ಬಂದ ರಾಜಧರ್ಮದ ತತ್ವಗಳಲ್ಲಿ ರಾಷ್ಟ್ರವು ಕಡಿಮೆ ತೆರಿಗೆಗಳನ್ನು ವಿಧಿಸಬೇಕೆಂದೂ ಅತ್ಯಾವಶ್ಯಕವಾದ ಪ್ರಸಂಗಗಳಲ್ಲಿ ಮಾತ್ರ ಆರ್ಥಿಕ ಕ್ಷೇತ್ರದಲ್ಲಿ ಕೈಹಾಕಬೇಕೆಂದೂ, ನಿಯಮವಿದ್ದರೂ ಅದನ್ನು ಸರಕಾರಗಳು ಪಾಲಿಸುತ್ತಿರಲಿಲ್ಲ. ದೇಶದಲ್ಲಿ ಕೃಷಿ ಮತ್ತು ವಾಣಿಜ್ಯದ ಉತ್ಪನ್ನವು ವೃದ್ಧಿಗೊಂಡಾಗಲೂ, ಜನರ ಕೈಯಲ್ಲಿ ಹಣವು ಬೇಗ ಮಾಗುವ ಪರಿಸ್ಥಿತಿ ಇರುವಾಗಲೂ, ರಾಷ್ಟ್ರವು ಕರಗಳನ್ನು ವಸೂಲು ಮಾಡಬೇಕೆಂಬುದು ನ್ಯಾಯವೇನೋ ನಿಜ. ಆದರೆ ಸೈನ್ಯ ಮತ್ತು ಯುದ್ಧಗಳ ಅನಿರೀಕ್ಷಿತವಾದ ಮತ್ತು ನಿರಂತರವಾದ ವೆಚ್ಚಕ್ಕೆ ಈ ರೀತಿ ನ್ಯಾಯವನ್ನು ನಂಬಿ ಕೂತರೆ ಸಾಧ್ಯವಾಗುತ್ತಿರಲಿಲ್ಲ. ಹೀಗೆ ಕರಭಾರವು ಹಗುರವಾಗಿರತಕ್ಕದೆಂಬ ತತ್ತ್ವ ಒಂದುಕಡೆ; ಪರಿಸ್ಥಿತಿಗೆ ಉಚಿತವಾಗಿ ಈ ತತ್ತ್ವವನ್ನು ಹೊಂದಿಸಿಕೊಳ್ಳುವ ಪ್ರಯತ್ನ ಒಂದುಕಡೆ. ಈ ಎರಡರ ನಡುವೆ ಬಹುಕಾಲದಿಂದ ತಿಕ್ಕಾಟವು ನಡೆದುಬಂದಿದೆ ಈಗಲೂ ನಡೆಯುತ್ತಿದೆ.

(ಈಸ್ಟರ್ನ್ ಇಕಾನಮಿಸ್ಟ ಲೇಖದ ಆಧಾರದಿಂದ)

[೨ನೇ ಪುಟದಿಂದ]

ನೆಲ್ಲೂರು(ಆಂಧ್ರ) ಕಲ್ಲಿಲ್ಲ ನೆಲೆಗೊಂಡಿವೆ. ಧಾರಾಳವಾಗಿ ಮಳೆ ಬರುವ ಪಶ್ಚಿಮ ಹಾಗು ಪೂರ್ವಘಟ್ಟಪ್ರದೇಶಗಳೇ ಜಲವಿದ್ಯುಚ್ಛಕ್ತಿಯನ್ನು ಉತ್ಪಾದಿಸುವ ಕೇಂದ್ರಗಳಾಗುತ್ತವೆ ನಮ್ಮ ಮಳೆ ನೀರನ್ನೂ ನದಿ ತೊರೆಗಳನ್ನೂ ಉಪಯೋಗಿಸಿ ಎಷ್ಟು ವಿದ್ಯುತ್ತನ್ನು ಉತ್ಪಾದಿಸಬಹುದೆಂದು ನಿಗದಿಯಾಗಿ ಹೇಳುವಂತಿಲ್ಲ; ಆದರೂ ಹೊಸ ಹೊಸ ಕೇಂದ್ರಗಳನ್ನು ಈ ಕಾರ್ಯಕ್ಕೋಸ್ಕರ ನಿರ್ಮಿಸುವ ಪ್ರಯತ್ನವಂತೂ ನಡೆಯುತ್ತಲೇ ಇದೆ. ತತ್ಪರಿಣಾಮವಾಗಿ ಮೈಸೂರಿನಲ್ಲಿ ಹರಿಯುವ ಶರಾವತಿಯ ನೀರನ್ನು ಉಪಯೋಗಿಸಿ ೩,೪೦,೦೦೦ ಕಿಲೋವಾಟು ವಿದ್ಯುತ್ತನ್ನು ನೀಡುವ ನೀಲಗಿರಿಯ ಕುಂಥಾ ಯೋಜನೆಯೂ ೧,೦೦,೦೦೦ ಕಿಲೋವಾಟು ವಿದ್ಯುಚ್ಛಕ್ತಿಯನ್ನು ಪಡೆಯಬಹುದಾದ ಪೆರಿಯಾರ ಯೋಜನೆಯೂ ಸರಕಾರದೊಡನೆ ಇವೆ. ಆಂಧ್ರದ ಮುಚಕುಂದ, ನಂದಿಕೊಂಡ, ತುಂಗಭದ್ರಾ ಯೋಜನೆಗಳು ಒಟ್ಟು ೨—೩ ಲಕ್ಷ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸುತ್ತವೆ. ದಕ್ಷಿಣ ಆರ್ಕಾಟಿನ ನೇವೇಲಿಯಲ್ಲಿ ಲಿಗ್ನೈಟ್ ಎಂಬ ಕಂದು ಕಲ್ಲಿದ್ದಲನ್ನು ಇಂಧನವಾಗಿ ಉಪಯೋಗಿಸಿ ಎರಡು ಲಕ್ಷ ಕಿಲೋವಾಟು ವಿದ್ಯುತ್ತನ್ನು ಉತ್ಪಾದಿಸಬಲ್ಲ ಕೇಂದ್ರವನ್ನು ತೆರೆಯಲಾಗುತ್ತದೆ. ಈ ಪ್ರಕಾರವಾಗಿ ವಿದ್ಯುಚ್ಛಕ್ತಿಯ ಉತ್ಪಾದನೆಯು ದಿನೇ ದಿನೇ ಹೆಚ್ಚುತ್ತಿರುವುದರಿಂದ ನಮ್ಮ ಜೀವನ ಮಟ್ಟವು ಸುಧಾರಿಸುವುದು ನಿಶ್ಚಯವೆಂಬ ಆಶಾದಾಯಕ ವಾತಾವರಣವು ಗೋಚರವಾಗುತ್ತದೆ. ಪ್ರತಿ ನೂರು ಯುನಿಟು ವಿದ್ಯುಚ್ಛಕ್ತಿಯಲ್ಲಿ ೬೫ ಯುನಿಟುಗಳನ್ನು ಕೈಗಾರಿಕೆಗೂ ೯ ಯುನಿಟುಗಳನ್ನು ಕೃಷಿಗೂ ೧೧ ಯುನಿಟುಗಳನ್ನು ಮನೆವಾರ್ತೆಗೂ ೭ ಯುನಿಟುಗಳನ್ನು ವ್ಯಾಪಾರೋದ್ಯಮಕ್ಕೂ ನಾವು ಬಳಸುತಿದ್ದೇವೆಂದು ತಿಳಿದು ಬರುತ್ತದೆ ಇದನ್ನು ಪರಿಶೀಲಿಸಿದರೆ ಮುಕ್ಕಾಲಂಶ ವಿದ್ಯುಚ್ಛಕ್ತಿಯು ಕೃಷಿ-ಕೈಗಾರಿಕಾ ಕ್ಷೇತ್ರಗಳನ್ನೊಳಗೊಂಡ ಉತ್ಪಾದಕ ಕಾರ್ಯದಲ್ಲಿ ತೊಡಗಲ್ಪಟ್ಟಿರುವುದು ವೇದ್ಯವಾಗುತ್ತದೆ ಆರ್ಥಿಕ ಏಳಿಗೆಯ ದೃಷ್ಟಿಯಿಂದ ಇದು ತೃಪ್ತಿಕರವಾದಪರಿಸ್ಥಿತಿಯೆಂದೆನ್ನಬಹುದು

—ಹಿಂದೂವಿನಿಂದ ಉದ್ಧೃತ

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂಬ್ರ 66

ಟ್ರೇಡ್ ಮಾರ್ಕ್

ಡಾ। A. R. ಅಯ್ಯರ್‌ರವರು, ಸ್ಥಾಪಕರು

ಮೈಸೂರು ಶ್ರೀಮನ್ ಮಹಾರಾಜರವರ ಖಾಸ್‌ವೈದ್ಯ ದಿ। ಆಂಬಳೆ ನರಸಿಂಹ ಪಂಡಿತರ ಮನೆತನದಲ್ಲಿ 90 ವರ್ಷ ಖ್ಯಾತಿಗಳಿಸಿದ ಎ. ರಾಮಸ್ವಾಮಿ ಅಯ್ಯರ್‌ರವರ

ಸಂತಾನ ಸಿಂಧೂರ (ಸ್ತ್ರೀಯರಿಗೆ: ಭಸ್ಮ) || ಮದನ ವಿಲಾಸ (ಪುರುಷರಿಗೆ: ಗುಳಿಗೆ)

"ಭಸ್ಮವು ಬಹಿಷ್ಟೆಯ ಹೊಟ್ಟೆನೋವನ್ನು ನಿರ್ಮೂಲಮಾಡಿ, ಮಾಸಿಕದ ಹೆಚ್ಚುಕಡಿಮೆಗಳನ್ನು ಕ್ರಮಪಡಿಸಿ, ಗರ್ಭಪಾತವನ್ನು ತಡೆಗಟ್ಟಿ, ಗರ್ಭಾಶಯ ರೋಗವನ್ನು ನಿವಾರಿಸಿ, ತಾಯ್ತನ (Motherhood) ಪಡೆಯಲರ್ಹಳನ್ನಾಗಿ ಮಾಡುತ್ತದೆ.

"ಈ ಗುಳಿಗೆಗಳು ಪುರುಷನ ಅತ್ಯುಷ್ಣವನ್ನು ಕಮ್ಮಿಮಾಡಿ, ಸ್ವಪ್ನಸ್ಖಲನ ಶೀಘ್ರಸ್ಖಲನಗಳನ್ನು ನಿವಾರಿಸಿ, ಸಂತಾನದಾಯಕವಾದ ವೀರ್ಯಾಣು SPERMS ಗಳನ್ನು ವೃದ್ಧಿಪಡಿಸಿ ನಪುಂಸಕತೆಯನ್ನು ಹೋಗಲಾಡಿಸುತ್ತದೆ.

ಮೇಲ್ಕಂಡ ಖಾಯಿಲೆಗಳು ಕೂಡ್ಲೆ ಗುಣವಾಗಿ ಜಾಗ್ರತೆ ಸಂತಾನಫಲ ಬೇಕೋ? ಹಾಗಾದರೆ ಇಬ್ಬರೂ ಇಂದೇ ೧ ಸೆಟ್ (8ಪೊಟ್ಲ+4 ಗುಳಿಗೆ) ಅನುಪಾನ ಪತ್ರಿಕೆಯ ಮೇರೆಗೆ ಸೇವಿಸಿರಿ ಶೋಭನವಾಗಿ 16-18 ವರ್ಷ ಮಕ್ಕಳಿಲ್ಲದವರಿಗೂ ಸಂತಾನ ಲಭಿಸಿದೆ.

ಕ್ರಯ: 2 ಔಷಧಿಗಳ 1 ಸೆಟ್ 7 ರೂ M.O. ಮಾಡಿರಿ ತಲಪಿದ ಒಡನೆ ರಿಜಿಸ್ಟರ್ ಆರ್ಪಾರ್ಸೆಲ ರವಾನೆ. ವಿ ಪಿ ಇಲ್ಲ. ಕ್ಯಾಟಲಾಗ್ ಉಚಿತ ಮಾಹಿತಿಗೆ 2 ಆಣೆ ಸ್ಟಾಂಪು ಕಳಿಸಿರಿ ವಿಳಾಸ:—

ಎ. ರಾಮಸ್ವಾಮಿ ಅಯ್ಯರ್ ಸನ್ & ಕಂ., 628 "ಸಂತಾನ ಸಿಂಧೂರ ನಿಲಯ", ಚಾಮರಾಜ ರೋಡ್ ಸೌತ್ ಕ್ರಾಸ್, ಮೈಸೂರು (Mysore-South India).

[illegible]

25 [illegible]

[illegible]

(ENGLISH MADE EASY)

[illegible]

ಪ್ರಕಟಣೆ

ವರಮಹಾಲಕ್ಷ್ಮೀವ್ರತ ನಿರ್ಣಯ

ಇದೇ ಬರುವ ಶ್ರಾವಣ ಶುದ್ಧ ೧೪ ಯು. ಶುಕ್ರವಾರ (ತಾ. 13—8—1954) ದಿನ "ವರಮಹಾಲಕ್ಷ್ಮೀವ್ರತ'ವನ್ನು ನಮ್ಮ ಉಡುಪಿ ಪಂಚಾಂಗದಲ್ಲಿ ಶಾಸ್ತ್ರ ವಿಮರ್ಶೆಯಿಂದ ಸ್ಪಷ್ಟವಾಗಿ ಬರೆದಿದ್ದರೂ, ಉಡ್ಪಿಯ ಪರ್ಯಾಯ ಪಂಚಾಂಗವೊಂದರಲ್ಲಿ ಮಾತ್ರ ತಾ. 6—8—'54ಕ್ಕೆ ವರಮಹಾಲಕ್ಷ್ಮೀವ್ರತ ಹಾಕಿರುವದು ಮಾತ್ರವಲ್ಲದೆ, ಕಳೆದ ಫಾಲ್ಗುಣ ಕೃಷ್ಣ ಏಕಾದಶೀ ಸಭೆಯ ಮಹಾ ವಿದ್ವಾಂಸರಲ್ಲೊಬ್ಬರು ಇದೇ ಜುಲ್ಯೆ ತಿಂಗಳ ಧರ್ಮಘೋಷದಲ್ಲಿ ಅದನ್ನೆ ಸಮರ್ಥಿಸಿ, ಪ್ರಸಿದ್ಧಿಸಿರುವದರಿಂದ, ಧರ್ಮಬೀರುಗಳಾದ ಅನೇಕ ಆಸ್ತಿಕ ಮಹಾಜನರು ಸಂದೇಹಪರವಾಗಿ ನಮಗೆ ಬರೆದು ಕೇಳಿಕೊಂಡಿರುವದರಿಂದ— ಧರ್ಮಶಾಸ್ತ್ರ ಪರಿಶೋಧನೆಯಲ್ಲಿ.

ಭವಿಷ್ಯೋತ್ತರ ಪುರಾಣೆ—ಉಮಾ ಮಹೇಶ್ವರ ಸಂವಾದೇ— .

ಶುಕ್ಲೇ ಶ್ರಾವಣಿಕೇ ಮಾಸಿ ಪೂರ್ಣಿಮೋಪಾಂ ಭಾರ್ಗವೇ।

ವ್ರತಂ ಕುರ್ವಂತಿದೇ ಯೇಷ್ಯ ತೇಷಾಮಿಷ್ಟಂ ಭವೇದ್ಧ್ರುವಂ॥.

ಇತ್ಯಾದಿ ಅನೇಕ ಶಾಸ್ತ್ರವಚನ ರೀತ್ಯಾ. ಶ್ರಾವಣ ಶುಕ್ಲ ಪೌರ್ಣಮಾ ಶುಕ್ರವಾರ; ಹಾಗೆ ಬಾರದಿದ್ರೆ ಪೌರ್ಣಮಾ ಸಮೀಪದ ಶುಕ್ರವಾರ ವರಮಹಾಲಕ್ಷ್ಮೀವ್ರತವನ್ನು ಆಚರಿಸಬೇಕೆಂತ ಇರುವದರಿಂದ, ಈ ವರ್ಷ ಶ್ರಾವಣ ಶುಕ್ಲ ೧೪ ಯು. ಶುಕ್ರವಾರ, ಸೂರ್ಯಾಸ್ತಮಾನಕ್ಕೆ ಪೌರ್ಣಮಾ ಸಂಯೋಗವು ಕೂಡಾ ಬರುವದರಿಂದ ತಾ 13-8-1954 ನೇ ಶುಕ್ರವಾರ ವರಮಹಾಲಕ್ಷ್ಮೀವ್ರತವನ್ನು ಆಚರಿಸುವದು—ಶಾಸ್ತ್ರೋಕ್ತ ಮಹಾಫಲಪ್ರದವಾಗಿರುತ್ತದೆ ಇತರ ಎಲ್ಲಾ ಪಂಚಾಂಗಗಳಲ್ಲಿ ಕೂಡಾ ಹೀಗೆಯೇ ಇದ್ದು ಮಾತ್ರವಲ್ಲದೆ ಈಗಿನ ಪರ್ಯಾಯ ಪಂಚಾಂಗ ಕರ್ತರೇ ಪೂರ್ವಕ್ಕೆ ಇತರ ಪಂಚಾಂಗದಲ್ಲಿ ಹಾಕಿರುವರು. ನೋಡಿ ವಿಮರ್ಶಿಸಿರಿ. .

ಆಸ್ತಿಕ ಧರ್ಮಾಭಿಮಾನಿಗಳು ಧರ್ಮಶಾಸ್ತ್ರ—ಅನುಷ್ಠಾನಗಳನ್ನೆ ಪರಿಶೀಲನೆ ಮಾಡಿ, ಶಾಸ್ತ್ರ—ನ್ಯಾಯಗಳಿಗೆ ಕೇವಲ ವಿರುದ್ಧವಾಗಿ ಹಾಕಿಕೊಂಡು ಪ್ರಸಿದ್ಧಿಸಿರುವ ತಾ. 6—8—1954ನೇ ಶುಕ್ರವಾರವನ್ನು ದೂರಬಿಟ್ಟು, ಸಕಲ ಧರ್ಮಶಾಸ್ತ್ರೋಕ್ತ ಸರ್ವಾನುಮತದಿಂದ ನಿಶ್ಚಿತವಾಗಿರುವ 13-8-1954 ಶುಕ್ರವಾರ ವರಮಹಾಲಕ್ಷ್ಮೀವ್ರತವನ್ನು ಆಚರಿಸಿ, ಶ್ರೀ ಲಕ್ಷ್ಮೀಕಟಾಕ್ಷ ವರಪ್ರಸಾದಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇನೆ.

ಇತಿ ಸುಜನ ವಿಧೇಯ

ಅತ್ತೂರು ವಾಸುದೇವ ಉಡುಪ.

ಉಡುಪಿ ಪಂಚಾಂಗ ಸಂಪಾದಕ.

21 7 1954 Coimbatore.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು

THE MOOLKY BANK LTD.

Moolky, S. K.

ಅಮೃತಾಂಜನ

ಎಲ್ಲಾ ನೋವುಗಳಿಗೂ ಔಷಧ



ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ

50 ವರ್ಷ ಪ್ರಾಯದ

ನಾಕಟ್ ಡಾಕ್ಟರ್

ಅಮೃತಾಂಜನ ಲಿ. ಬೊಂಬಾಯಿ ಮದರಾಸು ಕಲ್ಕತ್ತಾ

Edited, Printed & Published By K. H. Shetty at the Navayuga Press, Udipi, S. India

Licence No. 31
Licensed to Post without Prepayment.

ನವಯುಗ

Founder:- Sri A. B. Shetty, Minister for Public Health, Govt. of Madras.

Vol.33 No. 48 5-8-1954 ವರ್ಷ ೩೩ ವಾರ ೪೮

ಭಾರತೀಯರ ಮನೋಭಾವ

ಇನ್ನು ಎಂಟು ಹತ್ತು ದಿನಗಳಲ್ಲಿಯೇ ನಾವು ಸ್ವಾತಂತ್ರ್ಯ ದಿನೋತ್ಸವವನ್ನು ಸಂಭ್ರಮದಿಂದ ಆಚರಿಸಲಿದ್ದೇವೆ. ಭಾರತೀಯರಾದ ನಾವು ಹಿಂದೊಂದು ಕಾಲದಲ್ಲಿ ವಸುಧೈವ ಕುಟುಂಬಕಂ ಎಂಬ ನೀತಿಯನ್ನು ಮೆಚ್ಚಿಕೊಂಡು ಇಲ್ಲಿಗೆ ಬಂದೆಲ್ಲರನ್ನೂ ಆಕ್ಕರೆಯಿಂದ ಸ್ವಾಗತಿಸಿ, ನಮ್ಮೊಡನೆ ಸೇರಿಸಿಕೊಂಡೆವು. ಮಧ್ಯೆವದಿಂದ ಇಲ್ಲಿಗೆ ಬಂದವರೆಲ್ಲರೂ ನಮ್ಮನ್ನು ಮೆಟ್ಟಿ, ಪ್ರಭುತ್ವವನ್ನು ಹೇರಲು ಬಯಸಿದರು. ಭಾರತೀಯರ ಶಾಂತ ಹಾಗು ಉದಾರವಾದ ಅಂತಃಕರಣವನ್ನು ಅವರು ದೌರ್ಬಲ್ಯವೆಂದು ತಪ್ಪು ತಿಳಿದುಕೊಂಡರು. ಶಾಸನಾಧಿಕಾರವನ್ನು ಕೈವಶಪಡಿಸಿಕೊಂಡ ಬಳಿಕ ಅವರು ತಮ್ಮ ಅಸ್ತಿತ್ವವನ್ನು ಸ್ಥಿರವಾಗಿ ಕಾಯ್ದುಕೊಳ್ಳುವುದಕ್ಕೋಸ್ಕರ ಭಾರತೀಯರನ್ನು ಭ್ರಾಮಕ ವಿಚಾರದ ಬಲೆಯೊಳಕ್ಕೆ ನೂಕಲು ಸಹ ಬಹಳವಾಗಿ ಯತ್ನಿಸಿದರು. ಭಾರತದಲ್ಲಿ ೨೦೦ ವರ್ಷಗಳ ಆಳಿಕೆಯನ್ನು ನಡೆಸಿದ ಬ್ರಿಟಿಷರು ಈ ಪ್ರಯತ್ನದಲ್ಲಿ ಸಾಕಷ್ಟು ಅಧಿಕ ಯಶಸ್ಸನ್ನು ಗಳಿಸಿದರು. ಇಷ್ಟು ದೀರ್ಘ ಕಾಲದಲ್ಲಿ ರೂಪಿಸಿಕೊಂಡ ಮನೋಭಾವವನ್ನು ಭಾರತೀಯರು ಸ್ವಾತಂತ್ರ್ಯ ದೊರೆಯಿತೆಂಬ ಮಾತ್ರಕ್ಕೆ ಬಿಟ್ಟುಕೊಟ್ಟಿಲ್ಲವೆಂದು ಈಗಿನ ಪರಿಸ್ಥಿತಿಯ ವಿವೇಚನೆಯಿಂದ ಸ್ಪಷ್ಟವಾಗುತ್ತದೆ.

ಬ್ರಿಟಿಷರು ನಮ್ಮ ಮೇಲೆ ಮಾಡಿದ ಪರಿಣಾಮಗಳಾದರೂ ಏನು? ಇದನ್ನು ತಿಳಿಯಬೇಕಾದರೆ ಬ್ರಿಟಿಷರು ನಮ್ಮ ದೇಶಕ್ಕೆ ಕಾಲಿರಿಸಿದ ಗಳಿಗೆಯಿಂದ ಸ್ವಾತಂತ್ರ್ಯವನ್ನು ಕೊಟ್ಟು ಭಾರತದಿಂದ ತೊಲಗಿದವರೆಗೆ ಯುರೋಪಿನಲ್ಲಿ ಏನೆಲ್ಲ ನಡೆಯಿತೆಂದು ವಿಮರ್ಶಿಸಬೇಕಾಗುತ್ತದೆ. ೧೪೦೦ರಿಂದ ೧೯೩೦ನೇ ಇಸವಿಯ ವರೆಗಿನ ಮಧ್ಯ ಯುಗವು ಬ್ರಿಟನ ಮತ್ತು ಐರೋಪ್ಯರ ಮನೋಭೂಮಿಕೆಯಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನು ಕೈಗೂಡಿಸಿತು. ಮಹಾ ಪುನರುತ್ಥಾನವೆಂದು ಆ ದೇಶಗಳವರು ಕರೆಯುತಿದ್ದರೂ ವಾಸ್ತವದಲ್ಲಿ ಅದು ನೈತಿಕ ಹಾಗು ಆಧ್ಯಾತ್ಮಿಕ ಅಧಃಪಾತಕ್ಕೆ ಅವಕಾಶ ಮಾಡಿಕೊಟ್ಟ ಕಾಲ: ಧಾರ್ಮಿಕ ನಂಬಿಕೆಗಳು ಕುಸಿದು ಹೋದವು; ಔದ್ಯೋಗಿಕ ವಿಪ್ಲವದಪಸೆಯಿಂದಾಗಿ ಮನುಷ್ಯನ ಶೀಲ ಮತ್ತು ಚಾರಿತ್ರ್ಯವೂ ಮೂಲೆಗುಂಪಾಯಿತು. ಆರಾಮ ಜೀವನದ ನವೀನ ಕಲ್ಪನೆಯು ದುಡಿದುಣ್ಣುವ ಬಾಳ್ವೆಯ ಉನ್ನತ ಆದರ್ಶವನ್ನು ಹೀಯಾಳಿಸಿತು. ಪುಸ್ತಕೀಯ ಜ್ಞಾನದ ಶಿಕ್ಷಣಕ್ಕೆ ಸಲ್ಲದ ಮಹತ್ವ ಕೊಡಲಾದುದಲ್ಲದೆ ಮನುಷ್ಯನ ಹಕ್ಕು ಬಾಧ್ಯತೆಗಳನ್ನು ವಿವರಿಸುವ ಸುದೀರ್ಘ ಪಟ್ಟಿಯೊಂದನ್ನು ಸಿದ್ಧಗೊಳಿಸಲಾಯಿತು. ಸ್ವಾತಂತ್ರ್ಯ, ಸಮಾನತೆ, ಸೋದರತೆಗಳ ಹೆಸರಿನಲ್ಲಿ ಫ್ರಾನ್ಸು, ರಶಿಯಾಗಳಲ್ಲಿ ರಕ್ತದ ಓಕುಳಿಯನ್ನು ಹುಚ್ಚೆದ್ದ ಜನ ಜಂಗುಳಿ ನಡೆಸಿತು. ಹಿಂದೆ ರೂಢಿಯಲ್ಲಿದ್ದ ಬಲವಾದ ಸಾಮಾಜಿಕ ಹಾಗು ಕೌಟುಂಬಿಕ ಬಂಧನಗಳು ಸಡಿಲಾಗಿ ಧಾರ್ಮಿಕ ವಿಧಿಗಳು ಕಂದಾಚಾರಗಳೆಂದು ಮೂದಲಿಕೆಗೆ ಗುರಿಯಾದವು. ಸಾಹಿತ್ಯವು ಮನುಷ್ಯನ ದೈವಿಕ ಭಾವನೆಗಳನ್ನು ಉದಾತ್ತೀಕರಿಸುವ ಘನವಾದ ಕೆಲಸ ಮಾಡುವ ಬದಲು ಅವನಲ್ಲಿ ಸುಪ್ತವಿದ್ದ ಪಶುಚೇತನವನ್ನು ಉದ್ರೇಕಿಸಲು ಸೊಂಟಕಟ್ಟಿತು. ಕಲಾ ಕೃತಿಗಳ ಮೌಲ್ಯವು ನಗ್ನ ಚಿತ್ರದ ಪ್ರಶಂಸೆಯ ಮಟ್ಟಕ್ಕೆ ಇಳಿದು ಕೊಂಡಿತು.

ಇಂದಿನ ಭಾರತೀಯ ಮನೋಭಾವವನ್ನು ಈ ಹಿನ್ನೆಲೆಯಲ್ಲಿಯೇ ಬ್ರಿಟಿಷರು ರೂಪಿಸಿದರು. ಉಚ್ಚ ಆದರ್ಶದಲ್ಲಿ ಇಟ್ಟುಕೊಂಡ ಶ್ರದ್ಧೆಯನ್ನು ಅಂಧ ವಿಶ್ವಾಸವೆಂದು ಹೀಗಳೆದರು. ಯಾವುದನ್ನು ಪವಿತ್ರವೆಂದು ಭಾರತೀಯರು ಅದುವರೆಗೆ ತಿಳಿದುಕೊಂಡಿದ್ದರೊ ಅವುಗಳಲ್ಲಿ ತಿರುಳೇನೂ ಇಲ್ಲವೆಂಬ ತಪ್ಪು ಕಲ್ಪನೆಯನ್ನು ಶಿಕ್ಷಣ ಹಾಗು ಇತರ ಮಾರ್ಗಗಳಿಂದ ಮೂಡಿಸಲಾಯಿತು. ವಿತಂಡ ವಾದವನ್ನು ಅಪ್ಪಲು ಮುಂದರಿಯುತಿದ್ದ ಭಾರತೀಯರಿಗೆ ಯಾವುದರಲ್ಲೂ ಶಾಶ್ವತ ಮೌಲ್ಯವನ್ನು ನೋಡಲು ಅಶಕ್ಯವಾಯಿತು. ವ್ಯಕ್ತಿ ಹಾಗು ಸಮಾಜಕ್ಕೆ ಇದ್ದ ಸಂಬಂಧವು ತೀರಾ ನಾಜೂಕುಗೊಂಡು, ಕುಟುಂಬಗಳೊಡೆದು, ಪರಸ್ಪರ ವಿರಸ ಮೂಡಿ, ಸಂಬಂಧವು ಕಡಿಯಿತು. ಇಂದು ದೇವರ ಪೂಜೆ ಮಾಡುವುದೆಂದರೆ ಮೂರ್ಖತನವೆನಿಸುತ್ತದೆ; ಹಿರಿಯರ ಆಶೀರ್ವಾದಕ್ಕೆ ಬೆಲೆಯೇ ಇರುವುದಿಲ್ಲ; ಹೊಸ ದರ್ಶನಗಳ ಹಾಗು ಶಾಸ್ತ್ರಗಳ ಪ್ರಾದುರ್ಭಾವದಿಂದಾಗಿ ನಮ್ಮ ಗುಣಗಳಿಗೆ ತಾಯಿತಂದೆಯರೇ ಹೊಣೆಯೆಂದೂ ನಮ್ಮ ತಪ್ಪುಗಳಿಗೆ ಸಮಾಜವೇ ಉತ್ತರವಾದಿಯೆಂದೂ ಹೇಳಿ ವ್ಯಕ್ತಿಯನ್ನು ದೂರುವುದೇ ಅನ್ಯಾಯವೆಂದೂ ಅಸಂಬದ್ಧವೆಂದೂ ಪ್ರತಿಪಾದಿಸಲಾಗುತ್ತದೆ.

ಪಶ್ಚಿಮ ದೇಶಗಳಷ್ಟು ಭಾರತೀಯರ ಶೀಲವು ದಿವಾಳಿಹೊಂದಿಲ್ಲ ಎನ್ನುವುದೇನೋ ನಿಜ—ನಮ್ಮಲ್ಲಿ ವ್ಯಭಿಚಾರ, ಕಳ್ಳತನ, ದರೋಡೆ ಮತ್ತಿತರ ಅಕೃತ್ಯಗಳು ನಡೆಯುತಿದ್ದರೂ ಒಟ್ಟು ಜನಬಲದ ಮೇಲಿಂದ ಈ ಪ್ರಮಾಣ ಅಲ್ಪವೆಂದು ತೋರುತ್ತದೆ. ಆದರೆ ಇದಿಷ್ಟು ಅನಾಹುತವು ನಮ್ಮ ಸುಶಿಕ್ಷಿತ ಜನರಿಂದಲೇ ಘಟಿಸುತ್ತಿದೆಯೆಂಬುದು ಹೆದರಿಕೆಯನ್ನುಂಟುಮಾಡುತ್ತದೆ. ಹಕ್ಕುಗಳಿಗಾಗಿ ಹೋರಾಡುವಂತೆ ಸುಶಿಕ್ಷಿತ ವರ್ಗವು ನಮ್ಮನ್ನು ಪ್ರೇರೇಪಿಸುತ್ತದೆ. ಮುಂದಿನ ಜನಾಂಗವಾದ ವಿದ್ಯಾರ್ಥಿಗಳು ಮೊನ್ನೆ ಇಂದೋರಿನಲ್ಲಿ ನಡೆಸಿದಂತೆ, ಪ್ರಿನ್ಸಿಪಾಲರನ್ನು ಹಿಂದೆಗೆದುಕೊಳ್ಳಬೇಕೆಂದು ಹೇಳುತ್ತಾ ಹೈಕೋರ್ಟಿಗೆ ಬೆಂಕಿ ಕೊಡುತ್ತಾರೆ; ಪ್ರಶ್ನಾಪತ್ರಿಕೆಗಳು ಕಠಿಣವಾಗಿದೆಯೆಂದು ಪರೀಕ್ಷಾ ಮಂದಿರದಿಂದ ಸಾಮೂಹಿಕವಾಗಿ ಹೊರಬಿದ್ದು ಪ್ರದರ್ಶನ ನಡೆಸುತ್ತಾರೆ: ಇವರನ್ನು ತಡೆಗಟ್ಟುವವರು ಯಾರೂ ಇಲ್ಲ. ತಂದೆತಾಯಿಗಳಿಗೆ ಮಕ್ಕಳ ಮೇಲಿನ ನಿಯಂತ್ರಣ ತಪ್ಪಿ ಹೋಗಿರುವುದು. ಧುರೀಣರ ಪಾಲಿಗೆ ಇದುವೇ ಸಾಮಾನ್ಯ ಜನಾಭಿಪ್ರಾಯ ವ್ಯಕ್ತಗೊಳ್ಳುವ ಬಗೆಯಾಗುತ್ತದೆ! ಪೋಲೀಸರೋ, ಸ್ವಾತಂತ್ರ್ಯ ಯುಗದ ಈ ಮೊದಲ ಗಳಿಗೆಯಲ್ಲಿ ತಮ್ಮ ಕರ್ತವ್ಯವೇನೆಂಬುದನ್ನು ಇನ್ನೂ ಸ್ಪಷ್ಟವಾಗಿ ತಿಳಿದುಕೊಂಡಿಲ್ಲ: ಅವರು ಲಾಠಿ ಬೀಸಿ, ಗೋಳಿಬಾರು ನಡೆಸಿದರೆ ದಬ್ಬಾಳಿಕೆಯಾಗುತ್ತದೆ; ಕೈಕಟ್ಟಿ ಸುಮ್ಮನೆ ಕುಳಿತರೆ ಕರ್ತವ್ಯ ಪರಾಙ್ಮುಖರೆಂಬ ಅಪಕೀರ್ತಿ ಬರುತ್ತದೆ. ನಮ್ಮ ರಾಜಕೀಯ ಪಕ್ಷಗಳು ಶಿಸ್ತು, ನ್ಯಾಯ ಮತ್ತು ರಾಷ್ಟ್ರಹಿತದ ದೃಷ್ಟಿಕೋಣವನ್ನು ಅಳವಡಿಸದೆ ಪ್ರತಿಯೊಂದು ಹೆಜ್ಜೆಗೂ ಅಧಿಕಾರ ನಡೆಸುವ ಸರಕಾರದ ಕಿವಿ ಹಿಂಡುವುದನ್ನೆ ಧ್ಯೇಯವಾಗಿಟ್ಟುಕೊಂಡಂತೆ ತೋರುತ್ತದೆ.

ಹೀಗಿರುವ ನಮ್ಮ ಜನರಿಗೆ ನಿಶ್ಚಿತವಾದ ರಾಜಕೀಯ ಅಭಿಪ್ರಾಯಗಳೂ ಇಲ್ಲ—ಸಾಮಾಜಿಕ ಹಾಗು ಧಾರ್ಮಿಕ ಅಭಿರುಚಿಗಳು ಬ್ರಿಟಿಷರ ಕಾಲದಲ್ಲಿಯೇ ಕೆಟ್ಟು ಹೋಗಿದ್ದವು. ಸ್ವಾತಂತ್ರ್ಯ ದೊರೆತ ಬಳಿಕವಂತೂ ನಮ್ಮ ಯೋಗ್ಯತೆಗೆ ಸರಿಯಾದ ಪ್ರಜಾಪ್ರಭುತ್ವ ಸರಕಾರವೇ ದೊರಕಿದಂತೆ ಭಾಸವಾಗುತ್ತದೆ. ಒಬ್ಬ ಮಹಾತ್ಮರ ಧುರೀಣತ್ವವನ್ನು ಸ್ವೀಕರಿಸಿ, ಏಕ ಚಿತ್ತದಿಂದ ಉನ್ನತ ಆದರ್ಶಕ್ಕಾಗಿ ಹೋರಾಡುವ ಬುದ್ಧಿ ನಮ್ಮಲ್ಲಿ ಈಗ ಉಳಿದಿಲ್ಲ. ರಾಜಕೀಯದ ವಿಷಮ ವರ್ತುಲದಲ್ಲಿ ಜನನಾಯಕ ನೆಹರೂ ಸಿಕ್ಕಿಬಿದ್ದು, ಅವರ ಪ್ರಖರ ತೇಜಸ್ಸನ್ನು ವಿರುದ್ಧಶಕ್ತಿಗಳು ಮಸುಕುಗೊಳಿಸುತ್ತಿರುವುದು ಕಂಡುಬರುತ್ತದೆ. ಪ್ರತಿಯೊಂದು ಹೆಜ್ಜೆಗೂ ತಪ್ಪಿಬೀಳುತ್ತಿರುವ ನಾವು ಪಾನ ನಿರೋಧವನ್ನು ಜಾರಿಗೆ ತಂದಷ್ಟಕ್ಕೆ, ಗಾಂಧೀಜಿಯ ನಾಮಸ್ಮರಣೆ ಮಾಡಿದಷ್ಟಕ್ಕೆ, ಸ್ವಾತಂತ್ರ್ಯ ದಿನದಂದು ಜಯವೆಂದು ಘೋಷಿಸಿದಷ್ಟಕ್ಕೆ—ಸಮೃದ್ಧ ಸ್ಥಿತಿಯನ್ನು ಹೊಂದುವುದು ಕಷ್ಟ. ನಾವು ಶಾಂತಿಪ್ರಿಯರೆಂದುಕೊಚ್ಚಿಕೊಳ್ಳುತ್ತೇವೆ;

(೧೧ನೇ ಪುಟ ನೋಡಿರಿ)

The Canara Industrial & Banking Syndicate Limited.

Head Office: UDIPI, S. India.

"ಬೇಂಕಿಂಗ್ ಅಭ್ಯಾಸ"

ಜನತೆಯ ಹಣವನ್ನು ಕ್ರೋಢೀಕರಿಸಿ ಅದನ್ನು ಸಾರ್ವಜನಿಕ ಉಪಯೋಗಕ್ಕೆ ಬೇಂಕು ಹೇಗೆ ಒದಗಿಸಿಕೊಡುತ್ತದೆಂಬುದು ಕುತೂಹಲದಾಯಕ ಕಥೆಯಾಗಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಸಂಸ್ಥೆಯು 1925ನೇ ಇಸವಿಯಲ್ಲಿ ರೂ. 8,000 ಮೂಲಧನದಿಂದ ಚಿಕ್ಕ ಬೇಂಕಾಗಿ ಸ್ಥಾಪನೆಗೊಂಡು ಅಂದಿನಿಂದ ವರ್ಷವರ್ಷಕ್ಕೂ ಪ್ರವರ್ಧಮಾನವಾಗಿ ಬೆಳೆಯುತ್ತ ಬಂತು. ಹಿಂದೂಸ್ಥಾನದ ಪೇಟೆ ಪಟ್ಟಣ, ಹಳ್ಳಿಹಳ್ಳಿಗಳಲ್ಲಿ ಚಿಕ್ಕ ಉಳಿತಾಯ ಸಂದೇಶವನ್ನು ಬಹು ಜತನದಿಂದ ಪ್ರಸಾರ ಮಾಡಿ ಜಮೆಯಾದ ಹಣವನ್ನು ಸುರಕ್ಷಿತ ಠೇವುಗಳಲ್ಲಿರಿಸಿಯದೆ. ಬೇಂಕಿಂಗ್ ಸೌಕರ್ಯಗಳಿಲ್ಲದ ಗ್ರಾಮಗಳಲ್ಲಿ ಬೇಂಕಿಂಗ್ ಪದ್ಧತಿಯನ್ನುಂಟುಮಾಡಿ ಅವುಗಳ ತಳಹದಿಯ ಮೇಲೆ ಜನತೆಗೆ ಒಳ್ಳೆ ಕಾರ್ಯಗಳಿಗಾಗಿ ಹಣವನ್ನು ಒದಗಿಸುವುದು ಇದು ಒಂದೇ ಬೇಂಕು.

ವಿಶೇಷ ಪರಿಶ್ರಮ ಮತ್ತು ಹೊಸ ಯೋಜನೆ ಮೂಲಕ ಠೇವಣಾತಿದಾರರ ಚಿಕ್ಕ ಪುಟ್ಟ ಉಳಿತಾಯವನ್ನು ಸಂಘಟಿಸಿ ಇದೀಗ ಸಿಂಡಿಕೇಟ್ ಬೇಂಕು ತಾ. 30-6-54ರಲ್ಲಿ **ರೂಪಾಯಿ ಐದು ಕೋಟಿಗೂ ಮಿಕ್ಕಿದ** ತನ್ನ ಧ್ಯೇಯವನ್ನು ಸಾಧಿಸಿದೆ. ಈ ಹಣದಲ್ಲಿ **25** ಲಕ್ಷಕ್ಕೂ ಜಾಸ್ತಿ ಹಣವನ್ನು ರಾಷ್ಟ್ರೀಯ ಯೋಜನಾ ಸಾಲದ ಮೇಲೂ, ಮಂಗಳೂರು ನಗರ ಸಭೆಯು ನಲ್ಲಿ ನೀರಿನ ರೂ. 17½ ಲಕ್ಷದ ಸಾಲದ ಮೇಲೆ ರೂ. 17¼ ಲಕ್ಷಕ್ಕೂ ಸಾಲದ ಅರ್ಜಿ ಸಲ್ಲಿಸಿಯದೆ. ಆದುದರಿಂದ ನಿಮ್ಮ ಹಣವು ಸರಕಾರದ ಕೃಷಿ, ಕೈಗಾರಿಕೆ, ವ್ಯಾಪಾರ ಮೊದಲಾದ ರಾಷ್ಟ್ರನಿರ್ಮಾಣ ಕಾರ್ಯಗಳಲ್ಲಿ ತೊಡಗಿಸಲಾಗಿದೆ. ಸದಾ ನಿಮ್ಮ ಉಳಿತಾಯವನ್ನು ಇದೇ ಬ್ಯಾಂಕಿನಲ್ಲಿರಿಸಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಭಾರತೀಯ ನೌಕೆಗಳ ಐತಿಹಾಸಿಕ ಪರಂಪರೆ

ಸ್ವತಂತ್ರ ಭಾರತದಲ್ಲಿ ಹಡಗು ಸಾರಿಗೆಯ ಅಭಿವೃದ್ಧಿಗೆ ಕೊಡಲಾಗುತ್ತಿರುವ ಪ್ರೋತ್ಸಾಹ

ಭಾರತ ಸರಕಾರದ ಸಾಂಗೆ ಉಪ ಮಂತ್ರಿ ಶ್ರೀ. ಜಲಗೇಶನ್ನರು ದಿನಾಂಕ ೨೭ರಂದು ಮುಂಬಯಿಯಲ್ಲಿ ಭಾರತ ಹಾಗೂ ಪೂರ್ವ ಆಫ್ರಿಕೆಗಳ ನಡುವೆ ಸಂಚರಿಸುವ ಹಡಗನ್ನೊಂದನ್ನು ನೀರಿಗಿಳಿಸಿದರು. "ಈಸ್ಟರ್ನ್ ಶಿಪ್ಪಿಂಗ್ ಕಾರ್ಪೊರೇಶನ್" ಎಂಬ ಸರಕಾರದ ಅಂಗವಿರುವ ಈ ಸಂಸ್ಥೆಯು "ಮುಂಬಯಿ ರಾಜ್ಯ"ವೆಂದು ಹೆಸರಿಡಲಾದ ಈ ಹಡಗಿನ ಒಡೆತನವನ್ನು ಹೊಂದಿದ್ದು, ಸುಮಾರು ೯೦೦ ಪ್ರವಾಸಿಕರು ಸುಖವಾಗಿ ಪ್ರಯಾಣವನ್ನು ಕೈಗೊಳ್ಳುವಂತೆ ಸಕಲಾನುಕೂಲತೆಯನ್ನು ಅದು ಕಲ್ಪಿಸಿರುವುದು. ಮುಂಬಯಿಯಿಂದ ಮೊಂಬಾಸಾ ದಾರೆಸಲಾಂಗಳಿಗಾಗಿ ಜಾಂಜಿಬಾರಕ್ಕೆ ೭೦೦೦ ಮೈಲು ದೂರ ಪ್ರಯಾಣಿಸುವ ಈ ನೌಕೆಯು ಆಫ್ರಿಕೆಯಲ್ಲಿ ನೆಲಸಿದ ಹಿಂದೀಯರಿಗೂ ಭಾರತಕ್ಕೂ ನಿಕಟವಾದ ಸಂಬಂಧವನ್ನು ಸ್ಥಾಪಿಸಿ ಇಡಲಿಕ್ಕೆ ಸಾಧ್ಯವಾಗಬಲ್ಲದು. ತ್ರಯು.ತ್ತ ಏರ್ಪಡಿಸಿದ ಸಮಾರಂಭದ ಉದ್ಘಾಟನೆ ಮಾಡುತ್ತಾ ಮಾನ್ಯ ಜಗಜೀವನ್ನರು ಭಾರತದಲ್ಲಿ ಸಾಗರ ನೌಕೆಗಳ ಇಂದಿನ ಪರಿಸ್ಥಿತಿ ಹೇಗಿದೆಯೆಂದು ವರ್ಣಿಸಿದರು. ನಮ್ಮ ಹಡಗು ಸಾರಿಗೆಯನ್ನು ಅಭಿವೃದ್ಧಿಪಡಿಸಲು ಸರಕಾರವು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದೆ ಎಂದರು. [illegible] ಭಾರತಕ್ಕೆ [illegible] ವರ್ಷಗಳ ಸಾವಿರ ವರ್ಷಗಳಷ್ಟು ಪ್ರಾಚೀನವಾದ ಐತಿಹಾಸಿಕ ಪರಂಪರೆಯಿರುವುದು. ಈ ಪ್ರಸಂಗದಲ್ಲಿ ಅದರ ಪರಿಚಯವನ್ನು ಮಾಡಿಕೊಂಡರೆ ಅಪ್ರಸ್ತುತವಾಗಲಾರದು. ಶ್ರೀ ಮುಕಿ ಸುಮು [illegible] ಆಧಾರದಿಂದ ಈ ಪ್ರಾಚೀನ ಚರಿತ್ರೆಯನ್ನು ಕೆಳಗೆ ಕೊಡಲಾಗಿದೆ.

ಮೊಹೆಂಜೊದಾರೊ ನಾಗರಿಕತೆ

ನೌಕಾ ಪ್ರವಾಸವನ್ನು ನಾಗರಿಕತೆಯು ಬೆಳೆದು ಬಂದ ಲಕ್ಷಣ ವಿಶೇಷಗಳಲ್ಲಿ ಒಂದೆಂದು ಪರಿಗಣಿಸಬಹುದು. ನಮ್ಮ ಸಂಸ್ಕೃತಿಯು ಆರ್ಯರಿಂದ ಸಿಂಧೂ ಕಣಿವೆಗಳಲ್ಲಿ ಹುಟ್ಟಿ ಒಂದು ಕೃಷಿ ಭೂಮಿಯಲ್ಲಿ ವ್ಯಕ್ತಗೊಂಡಾಗ, ವ್ಯಾಪಾರೋದ್ಯಮಗಳ ಕುರಿತು ಮುಂದಿದ ಆಸ್ಥೆಯಲ್ಲಿ ಒದಗಿದ್ದಾಗ, ನೌಕಾ ಪ್ರವಾಸದ ಕಲ್ಪನೆಯು ಉದಯಿಸಿತು. ತುಂಬಿ ಹರಿಯುವ ವಿಶಾಲವಾದ ನದಿಗಳ ಫಲವತ್ತಾದ ದಂಡೆಗಳ ಮೇಲೆ ಮಹಾನಗರಗಳು ತಲೆ ಎತ್ತಿದವು. ಈ ಪಟ್ಟಣಗಳ ನಡುವೆ ಪರಸ್ಪರ ಸಂಪರ್ಕವನ್ನು ಏರ್ಪಡಿಸುವುದರಲ್ಲಿ ಜಲ ನೌಕೆಗಳು ಮಹತ್ವದ ಪಾತ್ರವನ್ನು ವಹಿಸಿದವು. ಕರಾವಳಿಯ ತೀರದಲ್ಲಿರುವ ಜನರು ಮತ್ಸ್ಯ ವ್ಯವಸಾಯದ ಅಭಿವೃದ್ಧಿಗಾಗಿ ಸಾಗರದ ಮೇಲೆ ವಿಹರಿಸಬಯಸಿದರು. ಈ ಪ್ರಕಾರ ಕರಾವಳಿಯ ತೀರದಲ್ಲೂ ಒಳನಾಡಿನಲ್ಲೂ ಜಲ ಸ್ರೋತಗಳ ತುಂಬ ನೌಕೆಗಳ ಓಡಾಟವೇ ಓಡಾಟವಾಯಿತು.

ಭಾರತದಲ್ಲಿ ಮೊಹೆಂಜೊದಾರೊದಲ್ಲಿ ನಡೆಸಿದ ಉತ್ಖನನವು ೩೦೦೦ ವರ್ಷಗಳ ಪೂರ್ವದಲ್ಲಿಯೂ ನೌಕೆಗಳು ಬಳಸಲ್ಪಡುತ್ತಿದ್ದುದನ್ನು ತೋರಿಸಿಕೊಡುತ್ತದೆ. ಮರದ ಹೊಳ್ಳು ದಿಮ್ಮಿಯಿಂದ ರಚಿಸಲಾದ ಈ ನೌಕೆಗೆ ಹಾಯಿ ಮತ್ತು ಚುಕ್ಕಾಣಿಯಿದ್ದಂತೆ ಕಾಣುತ್ತದೆ. ಆದರೆ ಹೆಚ್ಚು ಸ್ಪಷ್ಟವಾದ ನಿದರ್ಶನವು ನಾಗರಿಕತೆಯ ಮುಂದಿನ ಘಟ್ಟದಲ್ಲಿ ದೊರಕಿಸಿಗುತ್ತದೆ: ವೈದಿಕ ಸಾಹಿತ್ಯದಲ್ಲಿ ಜಲನೌಕೆಗಳ ಚಟುವಟಿಕೆಯನ್ನು ಕುರಿತಾದ ಅನೇಕ ಪ್ರಸಂಗಗಳು ಉಲ್ಲೇಖಗೊಂಡಿವೆ. ನೌಕೆಗಳನ್ನು ಆಗಿನ ಜನರು ಹೇಗೆ ಕಟ್ಟುತ್ತಿದ್ದರೆಂಬ ಬಗ್ಗೆ ನಮಗೆ ವಿಶೇಷ ಮಾಹಿತಿ ದೊರಕದಿದ್ದರೂ ಅಥರ್ವ ವೇದ ಸಂಹಿತೆಯು ನೌಕೆಗಳು ತೆರೆಗಳ ಮೇಲಿಂದ ಗಂಭೀರವಾಗಿ ಹಾದು ಹೋಗುತ್ತಿದ್ದುವೆಂದೂ ಅಗಲವೂ ವಿಶಾಲವೂ ಸುಖದಾಯಕವೂ ಬಲಯುತವೂ ಆಗಿದ್ದುವೆಂದೂ ಹೇಳುತ್ತದೆ. ಪಾಲಿಸಾಹಿತ್ಯದಲ್ಲಿ ಸಹ ಹಡಗುಗಳಿಗೆ ಹಾಗು ಸಾಗರ ಪ್ರಯಾಣಕ್ಕೆ ಸಂಬಂಧಿಸಿದ ಹಲವು ಸನ್ನಿವೇಶಗಳ ವರ್ಣನೆ ಬರುತ್ತದೆ. ವಿಜಯ ಮತ್ತು ಆತನ ಅನುಯಾಯಿಗಳನ್ನು ಬಂಗಾಳದಿಂದ ಕರೆದೊಯ್ದ ಹಡಗವು ೭೦೦ ಮಂದಿಯನ್ನು ಹೊಂದುವಷ್ಟು ವಿಶಾಲವಾಗಿತ್ತೆಂದು ತಿಳಿಯುತ್ತದೆ. ಅಜಂತದ ಭಿತ್ತಿಚಿತ್ರಗಳಲ್ಲಿ ಒಂದು ವಿಜಯನ ಸಂಗಡ ಹಡಗಗಳ ಪಡೆಯೊಂದು ಒಟ್ಟು ೧೫೦೦ ಮಂದಿಯನ್ನೂ ಅನೇಕ ಕುದುರೆ ಹಾಗು ಆನೆಗಳನ್ನೂ ಹೊತ್ತು ಸಾಗಿತ್ತೆಂದು ತೋರಿಸಿ ಕೊಡುತ್ತದೆ. ಶಂಖಜಾತಕವು ೮೦೦ ಕ್ಯೂಬೀಟು ಉದ್ದ, ೭೦೦ ಕ್ಯೂಬೀಟು ಅಗಲ ಹಾಗು ೨೦ ಫಾದಮು ಆಳವಾದ ಮೂರು ಕೂವೆ ಮರಗಳುಳ್ಳ ಹಡಗವನ್ನು ಉಲ್ಲೇಖಿಸುತ್ತದೆ ಇದು ಪ್ರಾಚೀನ ಕಾಲದ ಹಡಗಗಳ ವೈಶಾಲ್ಯವನ್ನೂ ಹಡಗು ಕಟ್ಟುವ ಕಲೆ ಎಷ್ಟು ಮುಂದುವರಿದಿತ್ತೆಂಬುದನ್ನೂ ಸ್ಪಷ್ಟವಾಗಿ ಸೂಚಿಸುತ್ತದೆ.

ನೌಕಾ ಶಾಸ್ತ್ರ ಗ್ರಂಥ

ಗ್ರೀಕ ಸಾಹಿತ್ಯವನ್ನು ನೋಡಿದರೆ ಹಡಗಗಳನ್ನು ಕಟ್ಟುವುದು ಭಾರತದ ಪ್ರಮುಖ ಉದ್ಯೋಗಗಳಲ್ಲಿ ಒಂದಾಗಿತ್ತೆಂದು ತಿಳಿದು ಬರುತ್ತದೆ. ಕ್ರಿ.ಪೂ.೩೦೫ನೇ ವರ್ಷದಲ್ಲಿ ೩೦ ಹುಟ್ಟುಗಳುಳ್ಳ ಭವ್ಯ ನೌಕೆಗಳಿದ್ದುವೆಂದರೆ ಆಶ್ಚರ್ಯವಾಗುತ್ತದೆ. ಮೌರ್ಯ ಸಾಮ್ರಾಟರ ಬಳಿಕವೂ ನೌಕಾ ನಿರ್ಮಾಣ ಕಲೆಯು ನಶಿಸಲಿಲ್ಲ. ಆಂಧ್ರದಲ್ಲಿ ಕ್ರಿಸ್ತಶಕ ಎರಡನೇ ಶತಮಾನದ ಸುಮಾರಿಗೆ ಆಳುತ್ತಿದ್ದ ರಾಜರ ನಾಣ್ಯಗಳಲ್ಲಿ ಅಂದಿನ ಕಾಲದ ಹಡಗಗಳ ನಕಾಶೆಯು ತೋರುತ್ತದೆ.

ಮುಂದಿನ ದಿನಗಳಲ್ಲಿ ಅತ್ಯಂತ ಪ್ರಗಲ್ಭವಾದ, ಹಡಗು ನಿರ್ಮಾಣದ ಕಲೆಯನ್ನು ವರ್ಣಿಸುವ, ಶಾಸ್ತ್ರ ಗ್ರಂಥವೊಂದು ರಚಿಸಲ್ಪಟ್ಟಿತು. ಅಜಂತ ಹಾಗು ಸಾಂಚಿಯ ಸ್ತೂಪಗಳಲ್ಲಿ ಕಂಡು ಬರುವ ನೌಕೆಗಳು "ಯುಕ್ತಿ ಮಲ್ಲಿಕೆ" ಎಂದು ಕರೆಯಲಾದ ಈ ಗ್ರಂಥದ ವರ್ಣನೆಗೆ ತುಂಬ ಒಪ್ಪುತ್ತವೆ. ಸಂಸ್ಕೃತದಲ್ಲಿ ಬರೆಯಲಾದ ಈ ಗ್ರಂಥರತ್ನವು ಪ್ರಾಚೀನ ಭಾರತದಲ್ಲಿ ಹಡಗುಗಳನ್ನು ನಿರ್ಮಿಸುತ್ತಿದ್ದ ಬಗೆಯನ್ನು ಅಂದವಾಗಿ ವರ್ಣಿಸುತ್ತದೆ. ಹಡಗದ ಗಾತ್ರ, ರೂಪ, ಮತ್ತು ಬೇರೆ ಬೇರೆ ಉದ್ದೇಶಗಳಿಗಾಗಿ ಉಪಯೋಗಿಸಲ್ಪಡುತ್ತಿದ್ದ ನಾನಾ ಪ್ರಕಾರದ ಹಡಗಗಳ ವಿಷಯವನ್ನು ಇದು ತಿಳಿಸುತ್ತದೆ. ಗ್ರಂಥದ ಪ್ರಕಾರ ಒಳನಾಡಿನ ವ್ಯವಹಾರಕ್ಕೆ ಬಳಸುವ "ಸಾಮಾನ್ಯ" ನೌಕೆಗಳೂ ಸಾಗರ ಪ್ರಯಾಣಕ್ಕೆ ಉಚಿತವಾದ "ವಿಶೇಷ" ನೌಕೆಗಳೂ ಇದ್ದಂತೆ ಗೊತ್ತಾಗುತ್ತದೆ. ಇವೆರಡು ವರ್ಗದಲ್ಲೂ ಅನೇಕ ಉಪವರ್ಗದ ನೌಕೆಗಳು ಇದ್ದುವು. ಸಾಗರ ನೌಕೆಗಳಲ್ಲಿ "ದೀರ್ಘ" ಹಾಗು "ಉನ್ನತ" ಎಂಬ ಪ್ರಭೇದವು ಉಲ್ಲೇಖನೀಯ. ದೀರ್ಘ ಹಾಗು ಉನ್ನತ ನೌಕೆಗಳಲ್ಲಿ ಸಹ ಕ್ರಮವಾಗಿ ಹತ್ತು ಹಾಗು ಐದು ಉಪವರ್ಗಗಳು ಇದ್ದುವು!

ಯುಕ್ತಿಮಲ್ಲಿಕೆಯು ಹಡಗುಗಳ ಶೃಂಗಾರದ ಮಾಹಿತಿಯನ್ನೂ ಕೊಡುತ್ತದೆ. ಅಲಂಕಾರಕ್ಕೋಸ್ಕರ ಚಿನ್ನ, ಬೆಳ್ಳಿ, ತಾಮ್ರ ಮತ್ತು ಈ ಮೂರರ ಮಿಶ್ರಣವನ್ನು ಬಳಸಬೇಕೆಂದು ಅದು ಹೇಳುತ್ತದೆ. ನಾಲ್ಕು ಕೂವೆ ಮರಗಳಿದ್ದ ನೌಕೆಗೆ ಬಿಳಿ ಬಣ್ಣವನ್ನೂ ಮೂರು ಕೂವೆಮರನಿದ್ದುದಕ್ಕೆ ಕೆಂಬಣ್ಣವನ್ನೂ ಎರಡಿದ್ದುದಕ್ಕೆ ಹಳದಿಯನ್ನೂ ಒಂದು ಕೂವೆ ಮರ ಮಾತ್ರವಿರುವ ನೌಕೆಗೆ ನೀಲಿಯನ್ನೂ ಬಳಿಯಬೇಕೆಂದು ಅದು ತಿಳಿಸುತ್ತದೆ. ಹಡಗದ ಮುಂಭಾಗವನ್ನು ಗಿಳಿ, ನವಿಲು, ಸಿಂಹ, ಸರ್ಪ, ಹುಲಿ, ಆನೆ, ಕುದುರೆ ಮುಂತಾದ ಪಶು ಪಕ್ಷಿಗಳ ಬೊಂಬೆಯಾಕಾರದಲ್ಲಿ ರಚಿಸುವುದು ಚಂದವೆಂದು ಅದು ಸಲಹೆ ಕೊಡುತ್ತದೆ. ಸೇನೆ, ಜಾನುವಾರು ಮುಂತಾದುವನ್ನು ಸಾಗಿಸಲು ಅನುಕೂಲವಾದ ಸರ್ವ ಮಂದಿರ ನೌಕೆ, ನಡುವೆ ಕೋಣೆಯನ್ನು ಹೊಂದಿ, ಪ್ರವಾಸಕ್ಕೆ ಅನುಕೂಲವಾದ ಮಧ್ಯ ಮಂದಿರ ನೌಕೆ, ಮುಂಭಾಗದಲ್ಲಿ ಕೋಣೆಯಿದ್ದು ಯುದ್ಧ ಕಾಲಕ್ಕೆ ಉಪಯುಕ್ತವಾದ ಅಗ್ರ ಮಂದಿರ ನೌಕೆ—ಎಂದು ಯುಕ್ತಿಮಲ್ಲಿಕೆ ಹಡಗಗಳ ರಚನಾ ಪ್ರಭೇದವನ್ನು ಉಲ್ಲೇಖಿಸುತ್ತದೆ.

ಮಧ್ಯಯುಗದ ಕ್ಷಿಪ್ರ ಪ್ರಗತಿ

ಅಜಂತ ಮತ್ತು ಸಾಂಚಿಯ ಸ್ತೂಪಗಳಲ್ಲಿ ಮೇಲೆ ಹೇಳಿದ ನಾನಾ ಪ್ರಕಾರದ ನೌಕೆಗಳ ಚಿತ್ರವನ್ನು ಕಾಣಬಹುದು. ಜಗನ್ನಾಥಪುರಿಯ ದೇವಾಲಯದಲ್ಲಿ ರಾಜ ಯೋಗ್ಯವಾದ ಮಧ್ಯ ಮಂದಿರ ವರ್ಗದ ಹಡಗದ ಚಿತ್ರವೊಂದು ನೋಡಸಿಗುತ್ತದೆ. ಇದರ ಕೊನೆಯು ಮೂರು ನಾಲ್ಕು ಮನುಷ್ಯಾಕೃತಿಯ ಕಂಭಗಳಿಂದ ಎತ್ತಿ ಹಿಡಿಯಲ್ಪಟ್ಟದ್ದು ಹಾದಿನಿಂದ ಉಯ್ಯಾಲೆಯೊಂದು ತೂಗುತ್ತದೆ. ಬಹುಕಾಲ ಜಲ ಪ್ರಯಾಣದಿಂದ ರೋಗಪೀಡಿತರಾಗುವವರಿಗೋಸ್ಕರ ಈ ಉಯ್ಯಾಲೆಯನ್ನು ಕಟ್ಟಿರಬೇಕು. ತರಂಗಗಳ ಮೇಲೆ ಹಾದು ಹೋಗುವ ನೌಕೆ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಸಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

UDIPI, S. India.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ಪಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ನಾಗರಿಕತೆಯೊಡನೆ ಹೆಣೆದುಕೊಂಡ ನಾಗಾರಾಧನೆ

ನಿಸರ್ಗ ಪೂಜೆಯ ಅತಿ ಪುರಾತನ ವಿಧಾನ

ಮೊನ್ನೆ, ಶ್ರಾವಣ ಶುಕ್ಲ ಪಂಚಮಿಯಂದು (ದಿನಾಂಕ ೩) ನಾವೆಲ್ಲರೂ ನಾಗಪಂಚಮಿ ಎಂಬ ಹಬ್ಬವನ್ನು ಸಂಭ್ರಮದಿಂದ ಆಚರಿಸಿದ್ದೇವೆ. ಹಿಂದುಗಳಿಗೆ ಪವಿತ್ರವಾದ ದಿನಗಳಲ್ಲಿ ಇದೊಂದು ಆಗಿದೆ. ಆಸ್ತಿಕ ಮಹಾಶಯರು ಹಿಂದಿನ ದಿವಸ ಒಂದೇ ಊಟ ಮಾಡಿ, ಪಂಚಮಿಯ ರಾತ್ರಿಗೆ ಭೋಜನ ಮಾಡುವರು; ಹಗಲಿಗೆ ನಾಗ ಪೂಜೆಯನ್ನು ನೆರವೇರಿಸುವರು. ಅರಶಿನ ಮಿಶ್ರವಾದ ಗಂಧದಿಂದ ಪೀಠ ಅಥವಾ ಗೋಡೆಯ ಮೇಲೆ ಐದು ಹೆಡೆಗಳುಳ್ಳ ಐದು, ಏಳು ಅಥವಾ ಒಂಭತ್ತು ನಾಗರನ್ನು ಬರೆದು, ಪೂಜಿಸುವರು; ನಾಗನ ವಿಗ್ರಹಗಳನ್ನು ಮಾಡಿಯೂ ಆರಾಧಿಸಬಹುದು; ನಾಗ ಬನಗಳಿಗೆ ಹೋಗಿ, ಅಲ್ಲಿಯೂ ನಾಗ ದೇವರನ್ನು ಸೇವಿಸಬಹುದು. ಹಾಲು, ಮೊಸರು, ತುಪ್ಪ, ಸಕ್ಕರೆ, ಅರಳು, ಪಾಯಸಗಳನ್ನು ಸಮರ್ಪಣೆ ಮಾಡಿ, ಹುತ್ತದ ಬಳಿಯಲ್ಲಿ ಕೊಳಲು ವಾದನವನ್ನು ನಡೆಸುವುದು ಸಂಪ್ರದಾಯ. ಇದರಿಂದ ನಾಗದೇವರು ಸಂಪ್ರೀತನಾಗಿ, ಮಾನವಕುಲವನ್ನು ಹರಸಿ, ಸಂಪತ್ಸಮೃದ್ಧಿಯನ್ನೂ ಕಲ್ಯಾಣವನ್ನೂ ಉಂಟು ಮಾಡುವನೆಂದು ಹೇಳಲಾಗುತ್ತದೆ.

ಪ್ರಾಚೀನ ಪದ್ಧತಿ

ಮನುಷ್ಯನ ನಾಗರಿಕ ಭಾವನೆಗೆ ಹೊಳೆದ ನಿಸರ್ಗ ಪೂಜೆಯ ವಿಧಾನಗಳಲ್ಲಿ ನಾಗ ಪೂಜೆಯು ಅತಿ ಪ್ರಾಚೀನವಾದುದೆಂದು ಇತಿಹಾಸಕಾರರ ಅಭಿಪ್ರಾಯ. ಮನುಷ್ಯನ ಮೇಲೆ ಇಷ್ಟೊಂದು ಪ್ರಭಾವವನ್ನು ಬೀರಿದ, ಅವನ ಭಯ ಭಕ್ತಿಗಳನ್ನು ಸಂಪಾದಿಸಿದ, ಪ್ರಾಣಿ ವರ್ಗವು—ಅದರಲ್ಲೂ ಉರಗ ಜಾತಿಯು—ಬೇರೊಂದಿಲ್ಲವೆಂದರೆ ತಪ್ಪಾಗದು. ನಾಗನ ಸುಳಿವು ಅಗೋಚರವಾಗಿರುವುದು; ಅದರ ವಿಷ ಭಯಂಕರವಾಗಿರುವುದು. ಹೆಡೆಯೆತ್ತಿ ಭುಸುಗುಟ್ಟುವ ಅದರ ವಿಚಿತ್ರ ವರ್ತನೆಯೂ ಸೀಳಾದ ನಾಲಿಗೆ ಹಾಗು ಮಿಂಚುವ ಕಣ್ಣುಗಳೂ ಭಯವಿಹ್ವಲತೆಯನ್ನುಂಟು ಮಾಡುವುದು ಎಂತಲೇ ಅದನ್ನು ಕಂಡರೆ ಮನುಷ್ಯ ಜಾತಿಯು ಹೆದರಿ ಬಿದ್ದು, ಕರಗಳನ್ನು ಜೋಡಿಸುತ್ತದೆ. ಗ್ರೀಕರು ಭೂಮಿಯನ್ನು ಎಟ್ಲಾಸನೆಂಬವನು ತನ್ನ ಹೆಗಲ ಮೇಲೆ ಹೊತ್ತಿರುವನೆಂದು ಸಾರುವುದಕ್ಕೆ ಬಹಳಷ್ಟು ಮುಂಚೆಯೇ ಭಾರತೀಯರು ಸಾವಿರ ಹೆಡೆಗಳುಳ್ಳ ಅನಂತ ನಾಗನೇ ಭೂಭಾರಕ್ಕೆ ತಲೆಯೊಡ್ಡಿರುವನೆಂದು ನಂಬಿದ್ದರು. ಜಗತ್ಪ್ರಳಯವಾದ ಗಳಿಗೆಯಲ್ಲಿ ಶ್ರೀಮನ್ನಾರಾಯಣನು ನಾಗಶಯನನಾಗುತಿದ್ದನು. ಕ್ರೈಸ್ತರ ಪವಿತ್ರ ಗ್ರಂಥ ಬೈಬಲು ಮಾನವ ಕುಲದ ಅಧಃಪತನಕ್ಕೆ ಸರ್ಪವೇ ಹೇತುವಾಯಿತು; ಅದರ ಪ್ರೇರಣೆಯಿಂದಲೇ ಆದಾಮನು ಅವಿಧೇಯತೆಯನ್ನು ಪ್ರದರ್ಶಿಸಿದನು, ಎಂದು ಹೇಳುತ್ತದೆ. ಉತ್ತರ ಅಮೇರಿಕದ ರೆಡ್ ಇಂಡಿಯನರೂ ಮೆಕ್ಸಿಕೊ ಹಾಗು ಲ್ಯಾಟಿನ ಅಮೇರಿಕ ಪ್ರದೇಶದ ನಿವಾಸಿಗಳೂ ತಮ್ಮ ದೇಶದಲ್ಲಿ ಕಂಡು ಬರುವ ಭಯಂಕರ ವಿಷ ಸರ್ಪಗಳನ್ನು ಆರಾಧಿಸುತ್ತಿದ್ದರು. ಐಗುಪ್ತ ಮತ್ತಿತರ ಮಧ್ಯ ಪೂರ್ವ ಏಷಿಯದ ರಾಷ್ಟ್ರಗಳಲ್ಲೂ ಸರ್ಪ ಪೂಜೆಯ ಸಂಪ್ರದಾಯವಿದ್ದದ್ದು ಕಂಡು ಬರುತ್ತದೆ.

ನಮ್ಮ ಸಾಹಿತ್ಯದಲ್ಲಿ

ನಮ್ಮ ಸಾಹಿತ್ಯದಲ್ಲಿಯಂತೂ ಸರ್ಪಗಳ ವರ್ಣನೆಯು ಬಹು ವಿಧವಾಗಿ ಮಾಡಲಾಗಿರುವುದು: ಋಗ್ವೇದ ಮತ್ತು ಯಜುರ್ವೇದಗಳಲ್ಲಿ ಸರ್ಪ ಸಂಬಂಧವಾದ ಶ್ಲೋಕಗಳೂ ಪ್ರಾರ್ಥನಾ ವಾಕ್ಯಗಳೂ ಇವೆ. ಅಥರ್ವ ವೇದದಲ್ಲಿ ಸರ್ಪ ವಿಷಕ್ಕೆ ಪ್ರತಿ ವಿಷವೆಂಬ ಚಿಕಿತ್ಸೆಯ ಮೂಲ ಕಲ್ಪನೆಯನ್ನು ಕಾಣುತ್ತೇವೆ. ನಮ್ಮ ಸಂಧ್ಯಾ ವಂದನೆಯಲ್ಲಿಯೂ ಸರ್ಪಗಳನ್ನು ದೂರದಿಂದಲೇ ನಮಸ್ಕರಿಸಿ, ಕಲ್ಯಾಣವುಂಟು ಮಾಡುವಂತೆ ಪ್ರಾರ್ಥಿಸುವ ಶ್ಲೋಕಗಳುಂಟು. ಮಹಾ ಭಾರತದಲ್ಲಿ ಪರೀಕ್ಷಿತ ರಾಜನ ಪ್ರಾಣ ಹರಣಕ್ಕೆ ತಕ್ಷಕನೆಂಬ ನಾಗನು ಕಾರಣನಾದನೆಂದೂ ಇದರಿಂದ ಕುಪಿತಗೊಂಡ ಜನಮೇಜಯನು ಸರ್ಪ ಯಾಗವನ್ನು ನಡೆಸಿದನೆಂದೂ ಓದುತ್ತೇವೆ. ವಾಸುಕಿಯ ತಂಗಿಯನ್ನು ಮದುವೆಯಾದ ಆಸ್ತಿಕ ಮಹಾಮುನಿಯು ಈ ಸರ್ಪ ಯಾಗವನ್ನು ನಿಲ್ಲಿಸಿದನು. ಭಾಗವತದಲ್ಲಿ ಶ್ರೀ ಕೃಷ್ಣನು ಕಾಲೀಯ ದಮನ ಮಾಡಿದ ವರ್ಣನೆಯು ಇದೆ. ಪೌರಾಣಿಕ ಯುಗದ ಸಾಹಿತ್ಯಗಳಲ್ಲಿ ನಾಗರನ್ನು ದೇವತೆಗಳ ವರ್ಗಕ್ಕೆ ಸೇರಿದವರೆಂದೂ ಅರ್ಧ ಮನುಷ್ಯ ಹಾಗು ಅರ್ಧ ಉರಗ ದೇಹವುಳ್ಳವರೆಂದೂ ನಿಧಿ, ನೀರು ಹಾಗು ನೆಲದ ಬಿಯ ಅಭಿಮಾನಿಗಳೆಂದೂ ವಿವರಿಸಿರುವುದು ಗೊತ್ತಾಗುತ್ತದೆ. ಜಾತಕ ಕತೆಗಳಲ್ಲಿ ತಮ್ಮ ಉಸಿರಿನಿಂದಲೇ ಮನುಷ್ಯರ ಪ್ರಾಣಾಪಹರಣ ಮಾಡುವ ಭಯಂಕರನಾಗರ ಉಲ್ಲೇಖವು ಬರುತ್ತದೆ. ಭರ್ತೃಹರಿಯು ತನ್ನ ಹೆಂಡತಿಯ ವಿಶ್ವಾಸಭಂಗಕ್ಕೆ ರೋಸಿ ಹೋಗಿ, ಹೆಂಗಸಿನ ಕಣ್ಣಿನ ವಿಷವು ಸರ್ಪವಿಷಕ್ಕಿಂತಲೂ ಉಗ್ರವಾದುದೆಂದು ಶೃಂಗಾರ ಶತಕದಲ್ಲಿ ನಿಂದಿಸಿದ್ದಾನೆ. ಧೂರ್ತಸ್ತ್ರೀಯರನ್ನು ನಾಗಿಣಿ, ವಿಷಕನ್ಯೆಯೆಂದೂ ಹೆಂಗಸನ್ನು ನಾಗವೇಣಿಯೆಂದೂ ಕರೆಯುವದು ಸಂಪ್ರದಾಯ. ತನ್ನ ಪ್ರಿಯತಮನನ್ನು ಹುಡುಕುತ್ತಾ ಅಭಿಸಾರಿಕಾ ನಾಯಿಕೆಯು ಒಬ್ಬಳೇ ನಡುರಾತ್ರಿಗೆ ಸಾಗುತ್ತಿರುವ ಅಂಕುಡೊಂಕಾದ ದಾರಿಯನ್ನು ಮುಂದಿನ ಭೀಕರತೆಯ ಸೂಚಕವಾಗಿ ಸರ್ಪಕ್ಕೆ ಹೋಲಿಸುವುದುಂಟು.

"ನಾಗಾನಂದ"

ಹರ್ಷವರ್ಧನನು ಬರೆದ ನಾಗಾನಂದ ನಾಟಕವು ಉರಗ ಜಂತುಗಳ ಮೇಲೆ ಅವನಿಗಿದ್ದ ಪ್ರೇಮವನ್ನು ವ್ಯಕ್ತಗೊಳಿಸುತ್ತದೆ. ನಲಂದ ವಿಶ್ವವಿದ್ಯಾಲಯಕ್ಕೆ ಆ ಹೆಸರನ್ನು ಒಬ್ಬ ನಾಗನ ಮೇಲಿಂದ ಇಡಲಾಯಿತೆಂದು ಹ್ಯೂಯೆನ್‌ತ್ಸಾಂಗನು ಬರೆದಿದ್ದಾನೆ. ಅಜಂತ, ಎಲ್ಲೋರ, ನಾಂಚನಾಥ, ಸಾಂಚಿ ಮುಂತಾದ ಹಲವೆಡೆ ಸರ್ಪಗಳ ಚಿತ್ರವೂ ಶಿಲ್ಪವೂ ಕಂಡು ಬರುತ್ತವೆ. ರಾಗಮಾಲಿಕೆಗಳ ಚಿತ್ರದಲ್ಲಿ ಕೆಲವು ವಿಶಿಷ್ಟ ರಾಗಾಲಾಪನೆಗೆ ಮೋಹಗೊಂಡು ಬಿಲದಿಂದ ಹೊರಕ್ಕೆ ಬರುತ್ತಿರುವ ಸರ್ಪಗಳ ಹಿಂಡಿಗೆ ಹಿಂಪನ್ನೇ ಕಾಣಬಹುದು ಹೀಗೆ ಬಹುವಿಧವಾಗಿ ನಮ್ಮ ಸಂಸ್ಕೃತಿಯೊಂದಿಗೆ ಸಂಬಂಧವನ್ನು ಹೆಣೆದುಕೊಂಡ ನಾಗನ ಪೂಜೆಯು ನಾಗಪಂಚಮಿಯಂದು ವಿಶೇಷ ರೂಪದಲ್ಲಿ ಮಾಡಲ್ಪಡುತ್ತದೆ. ಸುಬ್ರಹ್ಮಣ್ಯ ಷಷ್ಠಿಯೂ ಇದಕ್ಕೆ ಸಂಬಂಧಿಸಿದ ಒಂದು ಹಬ್ಬವೆಂದು ಹೇಳಬಹುದು. ನಾಗಪಂಚಮಿಯಂದು ಅಶ್ವತ್ಥ ಮರದ ಬುಡದಲ್ಲಿ ನೆಟ್ಟ ನಾಗನಕಲ್ಲುಗಳಿಗೆ, ನಾಗಬನದಲ್ಲಿರುವ ಹುತ್ತಗಳಿಗೆ, ಮನೆ ಮತ್ತಿತರ ಗುಡಿಗಳಲ್ಲಿರುವ ನಾಗ ಪ್ರತಿಮೆಗಳಿಗೆ ಸಾವಿರಾರು ಸ್ತ್ರೀ ಪುರುಷರು ಪೂಜಾರ್ಥಿಗಳಾಗಿ ಬರುವರು. ಜೀವಂತ ಸರ್ಪವನ್ನು ಪೂಜಿಸುವ ಕೆಲವು ಗುಡಿಗಳು ಕೇರಳ ರಾಜ್ಯದಲ್ಲಿ ಇವೆಯೆಂದು ತಿಳಿಯುತ್ತದೆ. ಅಶ್ವತ್ಥ ಮರಕ್ಕೂ ಬೇವಿನ ಗಿಡಕ್ಕೂ "ಮದುವೆ" ನಡೆಸುವ ಸಂಪ್ರದಾಯದಲ್ಲಿ ಆರ್ಯ—ದ್ರಾವಿಡ ಸಂಸ್ಕೃತಿಯ ಮಿಳನದ ಆದರ್ಶವನ್ನು ಕಂಡವರಿಗೆ, ಅಶ್ವತ್ಥ ಮರದ ಬುಡದಲ್ಲಿ ಬಿದ್ದಿರುವ ನಾಗಕಲ್ಲುಗಳು ಉಭಯತರಿಗೂ ಪೂಜಾರ್ಹವಾಗಿದ್ದುವೆಂಬ ಭಾವನೆಯನ್ನು ಹುಟ್ಟಿಸುತ್ತವೆ. ನಮ್ಮೀ ದಕ್ಷಿಣ ದೇಶದಲ್ಲಿ ೧೨ ಸಾವಿರಕ್ಕೂ ಹೆಚ್ಚು ನಾಗಬನಗಳು ಇವೆ. ಇದನ್ನು ಮುಟ್ಟಿದ ಹೆಂಗಸರೇ ಮುಂತಾದವರು ಪ್ರವೇಶಿಸುವಂತಿಲ್ಲ. ಅಲ್ಲಿಯ ಮರಗಿಡಗಳನ್ನೂ ಯಾರೂ ಕಡಿಯುವಂತಿಲ್ಲ. ಸರ್ಪವನ್ನು ಕೊಂದರೆ, ಅಥವಾ ಅದರ ವಾಸ ಸ್ಥಾನವನ್ನು ಹಾಳುಗೆಡವಿದರೆ ಕುಷ್ಠವೇ ಮುಂತಾದ ವ್ಯಾಧಿಗಳೂ ಬಂಜೆತನವೂ ಪ್ರಾಪ್ತವಾಗುವುವೆಂದು ನಾವು ನಂಬುತ್ತೇವೆ. ಸರ್ಪ ದೋಷದ ವಿಮೋಚನೆಗಾಗಿ ಸರ್ಪ ಸಂಸ್ಕಾರ, ನಾಗ ಮಂಡಲ ಮತ್ತಿತರ ಪ್ರಾಯಶ್ಚಿತ್ತಗಳನ್ನು ಕೈಗೊಳ್ಳುತ್ತೇವೆ.

ಐತಿಹ್ಯದ ಪ್ರಕಾರ

ಸರ್ಪ ಜಾತಿಗಳು ಹೆಚ್ಚಾಗಿ ನೀರಿನ ಒರತೆ ಶಾಶ್ವತವಾಗಿರುವಲ್ಲಿ ನೆಲದಡಿ ವಾಸಿಸುತ್ತವೆ. ಮೆದುವಾದ ಮಣ್ಣಿನಲ್ಲಿ ತಮ್ಮ ಮೊಟ್ಟೆಯನ್ನು ಇಡುತ್ತವೆ. ಇಂಥ ಪ್ರದೇಶವು ಕೃಷಿಗೆ ಅತ್ಯಂತ ಯೋಗ್ಯವಾದ ಫಲವತ್ತಾದ ಗದ್ದೆಯಾಗುತ್ತದೆ. ಎಂತಲೇ ರೈತರಿಗೂ ನಾಗ ಪಂಚಮಿಯು ಪವಿತ್ರವಾದ ಹಬ್ಬ—ಅವರು ಅಂದು

(೧೯ನೇ ಪುಟ ನೋಡಿರಿ)

ZANDU KESARI JIVAN
ಝಂಡೂ ಕೇಸರಿ ಜೀವನ
ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿಶ್ಶಕ್ತಿ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕವಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ಲು: ರೂ. 6–8–0 ¼ ರಾತ್ಲು: ರೂ. 1–14–0.
ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎಸ್. ಶರ್ಮ, ಹಜೂರು ರಸ್ತೆ, ಮಂಗಳೂರು.
ಮತ್ತೆಂದ ನೇಲ್ ಏಜಂಟರಲ್ಲಿ.
ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗಾಗಿ ಬರೆಯಿರಿ.
DAMODAR & CO.,
Nainiappa Naicken Street, Park Town–MADRAS-3.

ಮುಖ್ಯ ಪ್ರಕಟಣೆ
"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಮಿಂದ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ಒಕ್ಕೆ ರೂ. 3—0—0.
"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಟೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.
"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಮಹೌಷಧವಾಗಿದೆ. ಹೀಗಿರುವ ಔಷಧ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ಒಕ್ಕೆ ರೂ. 1—0—0.
ಹೆಡ್ಡಾಫೀಸ್:
ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.
ಬೆಂಗಳೂರು ಏಜನ್ಸಿ:
ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-೨.

ಸ್ವಯಂ ಸೇವಕರ ವಿಮೋಚನಾ ಚಳವಳದ ಮುನ್ನಡೆ

"ಮಾಡು ಅಥವಾ ಮಡಿ" ಎಂಬ ನಿರ್ಧಾರದ ಹೋರಾಟ

ಏಳು ವರ್ಷಗಳ ಪೂರ್ವದಲ್ಲಿ ಬ್ರಿಟಿಷರ ಕೈಯಲ್ಲಿ ಜಗತ್ತಿನಲ್ಲಿಯೇ ಅತಿ ದೊಡ್ಡದಾದ ಸಾಮ್ರಾಜ್ಯ ಇತ್ತು. ಆದರೆ ಕಾಲ ಮಹಿಮೆಯಿಂದ ಅವರು ಭಾರತಕ್ಕೆ ಸ್ವಾತಂತ್ರ್ಯವನ್ನು ಕೊಟ್ಟು ಇಲ್ಲಿಂದ ಕಾಲ್ತೆಗೆಯಬೇಕಾಯಿತಲ್ಲದೆ, ಹಿಂದಿನಿಂದ [illegible] ಮುಂತಾದ ಇತರ ದೇಶಗಳ ರಾಷ್ಟ್ರೀಯ ಭಾವನೆಗೂ ಮನ್ನಣೆಯನ್ನು ಕೊಡಬೇಕಾಯಿತು. ಪಶ್ಚಿಮದ ಇನ್ನೊಂದು ಸಾಮ್ರಾಜ್ಯವಾದೀ ರಾಷ್ಟ್ರವಾದ ಫ್ರಾನ್ಸು ಇಂಡೋಚೈನದ [illegible] ತನ್ನ ಶಕ್ತಿ ಸಾಮರ್ಥ್ಯಗಳನ್ನು [illegible] ಕಳೆದುಕೊಂಡು ಇಡೀ ವಸಾಹತುಗಳ ವಿಷಯದಲ್ಲಿ ಹೊಸ [illegible] ನಡೆದುಕೊಳ್ಳಬೇಕಾಗುತ್ತಿದೆ. ಇದರಲ್ಲಿ ಭಾರತದ ಕೆಲವು [illegible] ವಸಾಹತು [illegible] ಬಿಟ್ಟು ಕೊಡುವ [illegible] ತಮ್ಮ ಅಧಿಕಾರವನ್ನು "[illegible] ವರ್ಷ"ದಿಂದ ಸ್ಥಿರ [illegible] ಪ್ರಯತ್ನಿಸುತ್ತಿರುವುದು [illegible] ಕಳೆದ [illegible] ಬ [illegible] ಹಾಗು ಇತರ ವಸಾಹತುಗಳ ವಾತಾವರಣವನ್ನು ನೋಡಿದರೆ, ಪೋರ್ಚುಗೀಜ [illegible] ಭಾರತದ ವಸಾಹತುಗಳನ್ನು ಬಿಟ್ಟುಕೊಡುವುದು [illegible] ದೃಷ್ಟಿಯಿಂದ ಅವರಿಗೆ [illegible] ಹೇಳಬಹುದು.

ಸ್ವಾತಂತ್ರ್ಯೋತ್ಸವ

[illegible] ವಸಾಹತು ವಿಮೋಚನೆಯು [illegible] ರಾಷ್ಟ್ರೀಯ ಭಾವನೆಯ [illegible] ಗೋವಾಂತಕರ [illegible] ಮಾಡಿದ [illegible] ಸೇರಿ [illegible] ಸ್ವಯಂಸೇವಕರು ಕಳೆದ ವಾರ [illegible] ನಡುಗಡ್ಡೆಯನ್ನು ವಿಮೋಚನೆಗೊಳಿಸಿದರು. ಅಲ್ಲಿಂದೀಚೆಗೆ ಸ್ವಯಂಸೇವಕರ ಚೈತ್ರಯಾತ್ರೆಯು ಅ[illegible] ಕಾರ್ಯಗಳನ್ನು ವ್ಯಕ್ತಗೊಳಿಸುತ್ತದೆ. [illegible] ಹೆಸರಿಗೆಯೇ ಲಾವೋರಿ, [illegible], ನರೋಲಿ ಮುಂತಾದ ಹಳ್ಳಿಗಳನ್ನು ಒಂದರ ಹಿಂದೊಂದರಂತೆ ಸ್ವಯಂಸೇವಕರು ಪೋರ್ಚುಗೀಜರಿಂದ ಬಿಡಿಸಿಕೊಂಡರು. ಇಲ್ಲಿ ಅವರಿಗೆ ಜನತೆಯಿಂದ ಅಮಿತ ಸಹಕಾರವು ದೊರಕಿತು. ಪೋರ್ಚುಗೀಜರ ಅಸಹನೀಯ ಆಡಳಿತೆಯಿಂದ ರೋಸಿ ಹೋದ ಎಲ್ಲ ನಾಗರಿಕರು ಸ್ವಯಂಸೇವಕರನ್ನು ಅತ್ಯಾದರದಿಂದ ಬರಮಾಡಿಕೊಂಡು "ಸ್ವಾತಂತ್ರ್ಯೋತ್ಸವ"ವನ್ನು ಸಂಭ್ರಮದಿಂದ ಆಚರಿಸಿದರು. ಸ್ವಯಂಸೇವಕರ ದೊಡ್ಡ ಸಾಧನೆಯು ಇದಕ್ಕೂ ಮುಂದೆ ಇದ್ದಿತು— ನಗರ ಹವೇಲಿ ಎಂಬ ದಮನದ ಪೂರ್ವ ವಿಭಾಗವನ್ನು ಪೂರ್ಣ ಮುಕ್ತಗೊಳಿಸುವುದು ಅವರ ಪ್ರಾಥಮಿಕ ಧ್ಯೇಯವಿದ್ದುದರಿಂದ ಅವರು ಸೆಲ್ವಾಸಾ ಎಂಬ ಪ್ರಮುಖ ಕೇಂದ್ರದ ಮೇಲೆ ನಾಲ್ಕು ಸುತ್ತಲಿಂದ ಧಾಳಿ ನಡೆಸಿದರು. ಇಲ್ಲಿದ್ದ ಬಿಳಿ ಅಧಿಕಾರಿಗಳು ಪಲಾಯನ ಸೂತ್ರವರಿಸಲು ನಗರದ ನಾಗರಿಕರು ತಮ್ಮ ಸಂಪೂರ್ಣ ಬೆಂಬಲವನ್ನು ಸ್ವಯಂ ಸೇವಕರಿಗೆ ನೀಡಿದರು. ಪರಿಣಾಮದಲ್ಲಿ ನಗರ ಹವೇಲಿಯ ವಸಾಹತು ಪೂರ್ಣ ವಿಮೋಚನೆ ಹೊಂದಿದಂತೆಯೇ ಆಯಿತು.

"ತೊಲಗಿ ಹೋಗಿರಿ"

ವಿಮೋಚನೆ ಹೊಂದಿದ ಹಳ್ಳಿಗಳಲ್ಲೆಲ್ಲ ಭಾರತದ ತ್ರಿವರ್ಣ ರಾಷ್ಟ್ರ ಧ್ವಜವನ್ನು ಸ್ವಯಂ ಸೇವಕರು ಹಾರಿಸಿರುವರಲ್ಲದೆ, ಭಾರತದೊಡನೆ ವಿಲೀನ ಹೊಂದುವ ತೀವ್ರ ಇಚ್ಛೆಯನ್ನು ಸಾರಿರುವರು. ಪೋರ್ಚುಗೀಜ ಮುಖ್ಯ ಮಂತ್ರಿ ಸಾಲಾಜಾರರು ಭಾರತದ ತಮ್ಮ ವಸಾಹತುಗಳನ್ನು ಬಿಟ್ಟು ಹೋಗುವುದಕ್ಕೋಸ್ಕರ ಒಂದು ನಿಶ್ಚಿತದಿನವನ್ನು ಸಾರಿ, ಆ ವೇಳೆ ಅಧಿಕಾರ ಹಸ್ತಾಂತರದ ಕುರಿತು ಮಾತುಕತೆಗಳನ್ನು ನಡೆಸಲು ಇಲ್ಲಿಗೆ ಪ್ರತಿನಿಧಿಗಳನ್ನು ಕಳುಹಿಸಲಿ ಎಂದು ಪ್ರಕಟ ಆಹ್ವಾನ ಕೊಡಲ್ಪಟ್ಟಿರುವುದು. ನಗರ ಹವೇಲಿಯೊಡನೆ ನಾಗರಿ ಸಂಪರ್ಕವು ಕತ್ತರಿಸಲ್ಪಟ್ಟುದರಿಂದ ಅಲ್ಲಿಯ ಸ್ಥಿತಿಯನ್ನು ಪರಿಶೀಲಿಸಲು ಪ್ರತಿನಿಧಿಗಳನ್ನು ಕಳುಹಿಸಬೇಕೆಂದಿದ್ದೇವೆಂದೂ ಅದಕ್ಕಾಗಿ ಅನುಮತಿ ಕೊಡಬೇಕೆಂದೂ ಭಾರತ ಸರಕಾರವನ್ನು ಪೋರ್ಚುಗೀಜರು ಪ್ರಾರ್ಥಿಸಿದುದಕ್ಕೆ ಇದು ಜನತೆಯ ಉತ್ತರವೆಂದರೂ ಸಲ್ಲುತ್ತದೆ. ಭಾರತ ಸರಕಾರವು ಜನತೆಯ ನ್ಯಾಯವಾದ ಆಕಾಂಕ್ಷೆಯನ್ನು ದಬ್ಬಾಳಿಕೆಯ ಕ್ರಮಗಳಿಂದ ಹತ್ತಿಕ್ಕಲು ಪ್ರೋತ್ಸಾಹ ಕೊಡುವಂತಹ ಯಾವುದೇ ಅವಕಾಶವನ್ನು ನೀಡಲಾರೆನೆಂದು ಸ್ಪಷ್ಟವಾಗಿ ಹೇಳಿರುತ್ತದೆ. ಎಂತಲೇ ಪೋರ್ಚುಗೀಜ ಪೂರ್ವ ಆಫ್ರಿಕೆಯಿಂದ ಗೋವೆಗೆ ಹೊರಟ ಯುದ್ಧ ನೌಕೆಗೆ ಮುಂಬಯಿಯಲ್ಲಿ ಪೆಟ್ರೋಲು ಮತ್ತು ಆಹಾರಗಳನ್ನು ತುಂಬಲು ಅವಕಾಶ ಕೊಡಲಿಲ್ಲ. ಆದರೆ ಭಾರತದೊಡನೆ ಉದ್ದೇಶಪೂರ್ವಕ ಮನಸ್ತಾಪವನ್ನು ಕಟ್ಟಿಕೊಂಡಿರುವ ಪಾಕಿಸ್ತಾನವು ಈ ನೌಕೆಗೆ ಕರಾಚಿಯಲ್ಲಿ ಬಂದು ಇಳಿಯಲು ಅನುಮತಿಯನ್ನು ನೀಡಿತು.

ಮುಯ್ಯಿಗೆ ಮುಯ್ಯಿ

ಜನತಾ ಚಳವಳದಿಂದ ಕಂಗೆಟ್ಟ ಪೋರ್ಚುಗಾಲವು ಭಾರತವು ವಿಮೋಚನಾ ಚಳವಳದಲ್ಲಿ ಹಸ್ತಕ್ಷೇಪ ಮಾಡುತ್ತಿದೆಯೆಂದು ನಿರಾಧಾರವಾದ ಆರೋಪವನ್ನೂ ಅತಿರಂಜಿತ ವರದಿಗಳ ಮೂಲಕ ಭಾರತದ ನಡವಳಿಕೆಯ ವಿರುದ್ಧ ಅಪಪ್ರಚಾರವನ್ನೂ ಬಿಟ್ಟೂಬಿಡದೆ ಮಾಡುತ್ತಿರುವುದು. ಈ ವಾಮಾಚಾರಗಳಿಂದ ಭಾರತದ ಕುರಿತಿರುವ ಜಾಗತಿಕ ಸದಭಿಪ್ರಾಯವನ್ನು ಕೆಡಿಸಲು ಅದು ನೋಡುತ್ತಿರುವುದು. ವಸಾಹತು ಸಾಮ್ರಾಜ್ಯವಾದದ ಹುಚ್ಚಿನಲ್ಲಿ ಸಿಕ್ಕಿಬಿದ್ದು ಬ್ರಿಟನಿನೊಡನೆ ತನಗೆ ಸಹಾಯ ನೀಡಬೇಕೆಂದು ಕೇಳಿತು. ಆದರೆ ಬ್ರಿಟನ ಮುತ್ಸದ್ದಿಗಳು ತಮ್ಮಿಂದ ಏನೂ ನೆರವು ದೊರಕದೆಂದು ಸ್ಪಷ್ಟವಾಗಿ ತಿಳಿಸಿದರು. ಇದರಿಂದ ನಿರಾಶೆಗೊಂಡ ಪೋರ್ಚುಗಾಲವು ಉತ್ತರ ಅಟ್ಲಾಂಟಿಕ ರಾಷ್ಟ್ರಗಳ ಮುಂದೆ ಭಾರತವು "ಆಕ್ರಮಣ" ಮಾಡಿದೆಯೆಂದು ದೂರುಕೊಟ್ಟಿತು. ಇಲ್ಲೂ ಅದಕ್ಕೆ ಯಾವುದೇ ಬೆಂಬಲನ ಭರವಸೆ ದೊರೆಯಲಿಲ್ಲ.. ಇದರಿಂದ ಕುಪಿತಗೊಂಡೇ ಇರಬೇಕು—ಗೋವೆಯಲ್ಲಿರುವ ಭಾರತೀಯ ಪ್ರತಿನಿಧಿಗಳು ವಸಾಹತಿನ ಅಂತರಿಕ ಭದ್ರತೆಗೆ ವಿರುದ್ಧವಾದ ವೈಯಕ್ತಿಕ ಚಟುವಟಿಕೆಗಳಲ್ಲಿ ತೊಡಗಿರುವರೆಂದು ಅಪಾದನೆ ಹೊರಿಸಿ, ಅವರಿಗಿತ್ತ ಮನ್ನಣೆಯನ್ನು ಹಿಂದೆಗೆದುಕೊಂಡಿತು. ಈ ಅನ್ಯಾಯವನ್ನು ಭಾರತವು "ಮುಯ್ಯಿಗೆ ಮುಯ್ಯಿ" ಎಂಬ ಕ್ರಮದಿಂದಲೇ ಪ್ರತಿಭಟಿಸಿ, ಮುಂಬಯಿಯಲ್ಲಿರುವ ಪೋರ್ಚುಗಾಲದ ಪ್ರತಿನಿಧಿಗಳು ತಕ್ಷಣ ಭಾರತವನ್ನು ಬಿಟ್ಟು ಹೊರಡಬೇಕೆಂದು ಆಜ್ಞಾಪಿಸಿತು. ಭಾರತೀಯ ಪ್ರತಿನಿಧಿಗಳ ಮೇಲೆ ಹೊರಿಸಲಾದ ಆರೋಪಗಳೆಲ್ಲ ಸುಳ್ಳೆಂದು ನಿರಾಕರಿಸಿದ್ದಲ್ಲದೆ ಭಾರತ ಸರಕಾರವು ಪೋರ್ಚುಗಾಲದ ಧೋರಣೆಯ ಸಂಬಂಧದಲ್ಲಿ ಮುಂದೆ ಯಾವುದೇ ಕ್ರಮ ತೆಗೆದುಕೊಳ್ಳುವುದಕ್ಕೆ ತಾನು ಸ್ವತಂತ್ರವಿರುವುದೆಂದು ತಿಳಿಸಿತು.

ಜನತಾ ಹೋರಾಟ

ಸತ್ಯಾಗ್ರಹದೆಡೆಯಲ್ಲಿಯೂ ವ್ಯಾಪಕವಾಗಿ ಹಬ್ಬುವ ಲಕ್ಷಣಗಳೀಗ ಕಂಡು ಬರುತ್ತವೆ—ಗೋವಾಂತಕರು ದೃಢ ನಿಶ್ಚಯದಿಂದ ವಸಾಹತು ಆಡಳಿತವನ್ನು ಕೊನೆಗೊಳಿಸಲು ಅಂತಿಮ ಹೋರಾಟಕ್ಕೆ ಸದ್ಯದಲ್ಲೇ ಧುಮುಕಲಿರುವರು "ಮಾಡು, ಇಲ್ಲವೆ ಮಡಿ" ಎಂಬ ಭೀಷ್ಮ ಪ್ರತಿಜ್ಞೆಯನ್ನೆ ಅವರು ಕೈಗೊಂಡಿರುವರೆಂದು ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷರು ತಿಳಿಸಿರುವರಲ್ಲದೆ, ಆಗೋಸ್ತು ೧೫ರಂದು ಗೋವೆಯ ಹನ್ನೊಂದೂ ತಾಲೂಕುಗಳಲ್ಲಿ ಸ್ವಯಂ ಸೇವಕರ ಸತ್ಯಾಗ್ರಹ ಚಳವಳವು ತೊಡಗಲ್ಪಡುವುದೆಂದೂ ಎಲ್ಲ ವ್ಯವಸ್ಥೆಗಳೂ ಚೊಕ್ಕವಾಗಿ ಏರ್ಪಟ್ಟಿವೆಯೆಂದೂ ಪ್ರಕಟಿಸಿರುವರು. ಸ್ವಾತಂತ್ರ್ಯಕ್ಕೋಸ್ಕರ ದಮನ ಮತ್ತು ದಿಯೂಗಳಲ್ಲೂ ಅಂದು ಸತ್ಯಾಗ್ರಹ ಪ್ರಾರಂಭಿಸಲ್ಪಡುವುದು. ಗೋವಾಂತಕರು ನಡೆಸುವ ಈ ಅಹಿಂಸಾತ್ಮಕ ಸತ್ಯಾಗ್ರಹವನ್ನು ಹತ್ತಿಕ್ಕಲು ಉಗ್ರ ಕ್ರಮಗಳನ್ನು ಕೈಗೊಂಡ ಪಕ್ಷದಲ್ಲಿ, ಇದರ ಪರಿಣಾಮವು ಸಮಸ್ತ ಭಾರತೀಯರಲ್ಲಿ ಭೀಕರ ಪ್ರತಿಕ್ರಿಯೆಯನ್ನು ಉಂಟುಮಾಡೀತೆಂದೂ ಆಗಿನ ಎಲ್ಲ ಅನಾಹುತ ಮತ್ತು ಅನರ್ಥಗಳಿಗೂ ಪೋರ್ಚುಗೀಜ ಸರಕಾರವೇ ಹೊಣೆಯಾಗುತ್ತದೆಂದೂ ಭಾರತ ಸರಕಾರ ಒಂದು ರಾಯಸದ ಮೂಲಕ ಎಚ್ಚರಿಸಿರುವುದು. ಆದರೆ ಇದನ್ನು ಪೋರ್ಚುಗೀಜ ಸರಕಾರವು ಗಮನಿಸಿದಂತೆ ಕಾಣುವುದಿಲ್ಲ.. ಕರ್ಫ್ಯೂ ಆಜ್ಞೆಯನ್ನು ಅದು ಜ್ಯಾರಿಮಾಡಿದೆಯಲ್ಲದೆ, ಸೈನಿಕ ಶಕ್ತಿಯನ್ನು ಉಪಯೋಗಿಸುವ ಬೆದರಿಕೆಯನ್ನೂ ಹಾಕುತ್ತಿದೆ. ವಿಧ್ವಂಸ್ತ ಪಾಸು

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಅಂಗಡಿಗಳಲ್ಲೂ ದೊರಕುವುದು —

ಗೌವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ..	...	ರೂ. 25,00,000
ಚಂದಾ ಅರ್ಪಿಸಿ, ತೆತ್ತು ಬಂದ ಭಂಡವಾಳ	...	ರೂ. 20,00,000
ಕ್ಷೇಮ ನಿಧಿ ...	...	ರೂ. 10,50,000
ಠೇವಣಾತಿಗಳು ...	...	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

ಉತ್ತರ ಭಾರತದಲ್ಲಿ ಇಂದ್ರನ ಪ್ರಕೋಪ

ತುಂಬಿ ಹರಿಯುವ ನದಿಗಳಿಂದ ಅಪಾರ ಹಾನಿ

ಸಮೃದ್ಧ ಬೆಳೆಗೆ ಅತ್ಯಾವಶ್ಯಕವೆನಿಸಿದ ಮಳೆಯು ತೃಪ್ತಿಕರ ರೀತಿಯಲ್ಲಿ ಬಂದರೆ ಎಲ್ಲರಿಗೂ ಸಂತೋಷವಾಗುತ್ತದೆ ಆದರೆ ಇಂದ್ರನ ಪ್ರಕೋಪವು ಅತಿವೃಷ್ಟಿಯಲ್ಲಿ ಅಥವಾ ಅನಾವೃಷ್ಟಿಯಲ್ಲಿ ಪರಿಣಮಿಸಿದಾಗ, ಲೋಕ ಕಂಗೆಡುತ್ತದೆ. ಕಳೆದ ವರ್ಷ ಗೋದಾವರಿ ನದಿಗೆ ಮಹಾಪೂರವು ಉಕ್ಕಿ ಬಂತು. ಅದಕ್ಕೆ ಹಿಂದೆ ಅಸಾಮು—ಬಿಹಾರಗಳಲ್ಲಿ ನೆರೆ ಹಾವಳಿ ಕಾಣಿಸಿತು. ಈಗ ಮರಳಿ ಉತ್ತರ ಭಾರತದಲ್ಲಿ ಜನ ಜಾನುವಾರುಗಳಿಗೂ ಪೈರುಪಚ್ಚೆಗೂ ಅಪಾರ ಹಾನಿ ಮಾಡುತ್ತಿರುವ ನೆರೆಯ ಸುದ್ದಿಯನ್ನು ಕೇಳುತ್ತಿದ್ದೇವೆ. ಬಿಹಾರಿನ ಮುಜಫರಪುರ, ದರ್ಭಾಂಗ, ಚಂಪಾರಣ, ಪೂರ್ಣಿಯಾ ಜಿಲ್ಲೆಗಳ ಜನರು ಸಂತ್ರಸ್ತರಾಗಿದ್ದಾರೆ. ಉತ್ತರ ಬಂಗಾಲದಲ್ಲಿ ಜಲಪೈಗುರಿ ಜಿಲ್ಲೆಯಲ್ಲಿ ನೆರೆಯು ವಿಪರೀತ ಹಾವಳಿಯನ್ನು ನಡೆಸಿದೆ. ಉತ್ತರ ಆಸಾಮಿನ ನೌಗಾಂಗ, ಧುಬ್ರಿ ಮುಂತಾದ ಸಾವಿರಾರು ಮೈಲು ವಿಸ್ತೀರ್ಣದ ಪ್ರದೇಶಗಳಲ್ಲಿ ಬ್ರಹ್ಮಪುತ್ರೆಯ ನೀರು ತುಂಬಿಕೊಂಡು ಜನರನ್ನು ಕಂಗೆಡಿಸಿರುವುದು. ಹಿಂದಿನ ಹತ್ತೈವತ್ತು ವರ್ಷಗಳಲ್ಲಿ ಎಂದೂ ಕಂಡಿರದಷ್ಟು ನೀರು ಉಕ್ಕಿ ಹರಿಯುತ್ತಿರುವುದು.

ಪರಿಹಾರೋಪಾಯ

ಇದರಿಂದ ಲಕ್ಷಾಂತರ ಜನರು ಮನೆಮಾರುಗಳನ್ನು ಕಳೆದುಕೊಂಡಂತಾಗಿದೆಯಲ್ಲದೆ, ಅವರು ಬಿತ್ತಿದ ಬೆಳೆಯೆಲ್ಲವೂ ನೆರೆಯಲ್ಲಿ ತೇಲಿ ಹೋಗಿರುವುದು. ಅನ್ನ ಹಾಗು ಬಟ್ಟೆಯ ಕೊರತೆಗಳು ಕಾಣಿಸಿಕೊಂಡಿರುವುವು. ರೈಲ್ವೆ, ತಂತಿ ಹಾಗು ಟೆಲಿಫೋನು ಸಂಪರ್ಕಗಳು ಕಡಿದಿದ್ದು, ದೋಣಿಯ ಪ್ರಯಾಣವಾದರೂ ಕಷ್ಟಸಾಧ್ಯವೆನಿಸುತ್ತದೆ ಸರಕಾರದ ಅಧಿಕಾರಿಗಳು ವಿಮಾನ ಮೂಲಕ ನೆರೆ ಹಾವಳಿಗೀಡಾದ ಪ್ರದೇಶಗಳಲ್ಲಿ ಸುತ್ತಾಡಿ, ತಕ್ಕ ಪರಿಹಾರ ಕ್ರಮಗಳನ್ನು ಯೋಜಿಸುತ್ತಿದ್ದಾರೆ. ಆಕಾಶದಿಂದಲೇ ಆಹಾರವನ್ನು ಒಗೆಯುವ ವ್ಯವಸ್ಥೆಯು ಮಾಡಲ್ಪಟ್ಟಿರುವುದು. ಪ್ರಧಾನಿ ನೆಹರೂರವರು ದೇಶಬಾಂಧವರಿಗೊಂದು ಕರೆಕೊಟ್ಟು, ಸಂತ್ರಸ್ತರಿಗೆ ಉಚಿತ ಪರಿಹಾರವನ್ನೊದಗಿಸಲು ತಮ್ಮ ನಿಧಿಗೆ ಮುಕ್ತಹಸ್ತದಿಂದ ಸಹಾಯ ನೀಡಬೇಕೆಂದು ಪ್ರಾರ್ಥಿಸಿರುವರು. ಜಿಲ್ಲೆಯ ಅಧಿಕಾರಿಗಳು ಸರಕಾರದ ವಿಧ್ಯುಕ್ತ ಸ್ವೀಕೃತಿಗೋಸ್ಕರ ಕಾಯುತ್ತಿರದೆ, ಉಚಿತ ಕಂಡ ಪರಿಹಾರೋಪಾಯಗಳನ್ನು ಶೀಘ್ರದಲ್ಲಿಯೇ ಕೈಗೊಳ್ಳಬೇಕೆಂದು ಬಿಹಾರ ಸರಕಾರವು ಸ್ವಾತಂತ್ರ್ಯ ಕೊಟ್ಟಿರುವುದು. ಈ ನೆರೆಹಾವಳಿಯ ನಡುವೆ, ಪೂರ್ವ ಪಂಜಾಬ, ಪೆಪ್ಸು, ದಿಲ್ಲಿ ಮತ್ತು ಉತ್ತರ ಪ್ರದೇಶಗಳಲ್ಲಿ ಏಳೆಂಟು ದಿನಗಳಲ್ಲಿ ಭಯಂಕರವಾದ ಮಿಡಿತೆಗಳ ಆಕ್ರಮಣ ನಡೆಯುವ ಸಂಭವವು ತೋರಿಬರುತ್ತದೆ.

ತಿರುಕೊಚ್ಚಿಯಲ್ಲಿ

ಮೊನ್ನೆ ಮಾರ್ಚಿ ತಿಂಗಳಲ್ಲಿ ತಿರುವಾಂಕೂರು–ಕೊಚ್ಚಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಪ್ರಜಾಸಮಾಜವಾದೀ ಪಕ್ಷವು ದಿನಾಂಕ ೩೧ರಂದು ತನ್ನ ಮೊದಲನೆಯ ಸೋಲನ್ನು ಕಾಣುವಂತಾಯಿತು. ಕಳೆದ ತಿಂಗಳು ಆದು ಶಾಸನ ಸಭೆಯ ಮುಂದೆ ಮಂಡಿಸಿದ ಪೂರಕ ಮುಂಗಡ ಪತ್ರಿಕೆಯು ಕಾಂಗ್ರೆಸಿಗಿಂತ ಭಿನ್ನವಾದ ಕಾರ್ಯಸಾಮರ್ಥ್ಯವನ್ನೇನು ತೋರಿಸಲಿಲ್ಲವೆಂದು ವಿರೋಧಿ ಸದಸ್ಯರ ಟೀಕೆಯಿದ್ದರೂ ಸ್ವೀಕಾರಗೊಂಡಿತು. ಆದರೆ ನ್ಯಾಯಾಂಗದ ಆಡಳಿತೆಗೋಸ್ಕರ ಪೂರಕ ಬೇಡಿಕೆಯು ಮಂಡಿಸಲ್ಪಟ್ಟಾಗ ಶ್ರೀ ಗೋವಿಂದ ಮೆನೊನ್ನರ ಧುರೀಣತ್ವದಲ್ಲಿರುವ ಕಾಂಗ್ರೆಸು ಸದಸ್ಯರು ಸರಕಾರಕ್ಕೆ ವಿರುದ್ಧವಾಗಿ ಮತವನ್ನು ನೀಡಿದರು. ಹೈಕೋರ್ಟಿನ ತ್ರಿವೆಂಡ್ರಂ ಬೆಂಚಿಗೆ ಒಬ್ಬ ಸರಕಾರಿ ವಕೀಲರನ್ನು ಹೆಚ್ಚಾಗಿ ನೇಮಿಸಿದ್ದೇ ಈ ವಿರೋಧಕ್ಕೆ ಹೇತು. ಇದರಿಂದ ಪರಾಭವಗೊಂಡ ಮಂತ್ರಿಮಂಡಳವು ರಾಜೀನಾಮೆ ಕೊಡುವುದೇ ಹೇಗೆಂದು ಕಮ್ಯುನಿಸ್ಟ ಮತ್ತು ಸ್ವತಂತ್ರ ಸದಸ್ಯರು ಪ್ರಶ್ನಿಸಿದರು. ಸಭಾಧ್ಯಕ್ಷರು ಈ ವಿಷಯವು ಸರಕಾರದ ತೀರ್ಮಾನಕ್ಕೆ ಸೇರಿದ ವಿಷಯವೆಂದು ಹೇಳಿ ಸಭೆಯನ್ನು ಮುಂದೂಡಿದರು. ಕಾಂಗ್ರೆಸು ಧುರೀಣರು ಹಿಂದಿನಿಂದ ತಮ್ಮ ನಿಲುವೆಯನ್ನು ವ್ಯಕ್ತಪಡಿಸುತ್ತಾ ಮಂತ್ರಿಮಂಡಲದಲ್ಲಿ ತಮಗೆ ಅವಿಶ್ವಾಸವಿಲ್ಲೆಂದು ಸ್ಪಷ್ಟೀಕರಿಸಿದರು. ದಿನಾಂಕ ೩ರಂದು ಸ್ವತಂತ್ರ ಸದಸ್ಯರೊಬ್ಬರು ವಿಶ್ವಾಸ ಸೂಚಕ ಗೊತ್ತುವಳಿಯನ್ನು ತಂದಾಗ, ಕಾಂಗ್ರೆಸು ಅದಕ್ಕೆ ಬೆಂಬಲ ಕೊಟ್ಟಿತು. ಹೀಗೆ ಅಪ್ರಿಯವಾದ ದ್ವಂದ್ವ ಪರಿಸ್ಥಿತಿಯೊಂದು ದೂರಗೊಂಡಿತು.

ಬೋಧ ಭಾಷೆಯ ಸ್ವಾತಂತ್ರ್ಯ

ಮುಂಬಯಿ ಸರಕಾರವು ಕಳೆದ ವರ್ಷ ಇಂಗ್ಲೀಷು ಬೋಧ ಭಾಷೆಯಾಗಿರುವ ಶಾಲೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶದ ಕುರಿತು ಹೇರಿದ್ದ ನಿಯಮಗಳು ಅಕ್ರಮವೆಂದು ವರಿಷ್ಠ ನ್ಯಾಯಾಲಯವು ತೀರ್ಪು ಕೊಟ್ಟದ್ದರಿಂದ, ಈಗ ರಾಜ್ಯದಲ್ಲಿಯ ಶಾಲೆಗಳು ತಮಗೆ ಸರಿಕಂಡ ಬೋಧಭಾಷೆಯನ್ನು ಆರಿಸಿಕೊಳ್ಳಬಹುದೆಂದು ಸಂಪೂರ್ಣಸ್ವಾತಂತ್ರ್ಯವನ್ನು ನೀಡಿರುವುದು. ಈ ಆಜ್ಞೆಯನ್ನು ಸ್ಪಷ್ಟೀಕರಿಸುತ್ತಾ, ರಾಜ್ಯದ ಶಿಕ್ಷಣ ಮಂತ್ರಿ ಶ್ರೀ ದಿನಕರರಾಯ ದೇಸಾಯಿಯವರು "ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳಲ್ಲಿ ಯೋಗ್ಯವಾದ ಬೋಧಭಾಷೆಯು ಮಾತೃಭಾಷೆಯೇ ಆಗಿರುವುದೆಂಬ ಸರಕಾರದ ನಿಲುವೆಯೇನೂ ಬದಲಾಗಿಲ್ಲ. ಪ್ರತಿಯೊಬ್ಬ ಶಿಕ್ಷಣ ತಜ್ಞನೂ ಈ ತರದ ಬೋಧ ಭಾಷೆಯ ಅನುಸರಣೆಯೇ ಶ್ರೇಯಸ್ಕರವೆಂದಿರುವುದನ್ನು ಇಲ್ಲಿ ಉಲ್ಲೇಖಿಸುವುದೊಳಿತು. ಶಿಕ್ಷಣ ಕೇಂದ್ರಗಳೂ ಇದನ್ನು ಗಮನಿಸುವವೆಂದು ಭಾವಿಸುತ್ತೇನೆ" ಎಂದರು. ಸರಕಾರವು ಇನ್ನೊಂದು ಆಜ್ಞೆಯ ಮೂಲಕ ಪ್ರಾಥಮಿಕ ಹಾಗು ಮಾಧ್ಯಮಿಕ ಶಾಲೆಗಳ ಅಭ್ಯಾಸ ಪತ್ರಿಕೆಗಳಲ್ಲಿಯೂ ಮುಂದಿನ ಮಾರ್ಚಿ ತಿಂಗಳಿಂದ ಕೆಲವೊಂದು ಬದಲಾವಣೆಯನ್ನು ಮಾಡಿರುವುದು.

ಹೊಸ ವೈದ್ಯಕೀಯ ಕಾಲೇಜು

ಮದ್ರಾಸು ರಾಜ್ಯದ ಮಧುರೆಯಲ್ಲಿ ಸ್ಥಾಪಿಸಲಾದ ಹೊಸ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಉದ್ಘಾಟನೆಯನ್ನು ದಿನಾಂಕ ೩ರಂದು ಕೇಂದ್ರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ಮಾಡಿದರು. ವೈದ್ಯಕೀಯ ಶಿಕ್ಷಣದಲ್ಲಿ ಕೆಲವು ಕನಿಷ್ಠಮಟ್ಟದ ಯೋಗ್ಯತೆಯನ್ನು ಹಾಕಿಕೊಳ್ಳುವ ಅಗತ್ಯವನ್ನು ಅವರು ತಮ್ಮ ಭಾಷಣದಲ್ಲಿ ಪ್ರಸ್ತಾಪಿಸಿದರು. ಸಮಾರಂಭದ ಅಧ್ಯಕ್ಷಸ್ಥಾನವನ್ನು ವಹಿಸಿದ್ದ ರಾಜ್ಯದ ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿಯವರು ದಿನದಿಂದ ದಿನಕ್ಕೆ ಅಭಿವೃದ್ಧಿಯನ್ನು ಹೊಂದುತ್ತಿರುವ ವೈದ್ಯಕೀಯ ವಿಜ್ಞಾನದಲ್ಲಿ ತರಬೇತಿ ಹೊಂದುವವರು ಹೊಸ ಹೊಸ ಸಂಶೋಧನೆಗಳೊಂದಿಗೆ ಪರಿಚಯ ಬೆಳೆಸುವ ವ್ಯವಸ್ಥೆಯಾಗಬೇಕೆಂದೂ ಗ್ರಾಮಾಂತರ ಆರೋಗ್ಯರಕ್ಷಣೆ ಹಾಗು ಶುಶ್ರೂಷಾ ಸಮಸ್ಯೆಗಳ ಪರಿಹಾರಾರ್ಥ ವೈದ್ಯಕೀಯ ವೃತ್ತಿಯನ್ನು ಕೈಗೊಂಡವರ ಮನಃ ಪರಿವರ್ತನೆಯಾಗಬೇಕೆಂದೂ ಹೇಳಿದರು. ಈ ಸಂಸ್ಥೆಯಲ್ಲಿ ಈ ವರ್ಷ ೫೦ ಮಂದಿ ವಿದ್ಯಾರ್ಥಿಗಳು ಕಲಿಯುವರು. ಕಾಲೇಜಿನ ೩ ಅಂತಸ್ತುಗಳ ಕಟ್ಟಡವು ೧೯೫೬ಕ್ಕೆ ಮುಗಿಯುತ್ತದೆ. ಸಮೀಪದಲ್ಲಿರುವ ಸರಕಾರಿ ಆಸ್ಪತ್ರೆಯನ್ನು ಕಾಲೇಜು ವಿದ್ಯಾರ್ಥಿಗಳ ಅಭ್ಯಾಸಕ್ಕೆ ಅಳವಡಿಸಿಕೊಳ್ಳಲಾಗುತ್ತದೆ.

ಸಹಜೀವನದ ಆದರ್ಶ

ಚೀನ ವಿದ್ವಾಂಸರಾದ ಸರದಾರ ಪಣಿಕ್ಕರರು ತಮ್ಮದೊಂದು ಆಕಾಶವಾಣಿ ಭಾಷಣದಲ್ಲಿ ಅಂತಾರಾಷ್ಟ್ರೀಯ ರಂಗದಲ್ಲಿ ಭಾರತವು ಹೊಸದಾಗಿ ಕಾಲಿರಿಸಿದ್ದರೂ ಕಮ್ಯುನಿಸ್ಟ ಹಾಗು ಕಮ್ಯುನಿಸ್ಟೇತರ ರಾಷ್ಟ್ರಗಳಲ್ಲಿ ಉದಾರವಾದ ಶಾಂತಿಯುತ ಸಹಜೀವನ ಸಾಧ್ಯವೆಂದು ತೋರಿಸಿಕೊಟ್ಟಿತು. ಬ್ರಿಟಿಷರ ನಿರ್ಗಮನದ ಬಳಿಕ ಭಾರತವು ಒಂದೋ ಅದರ ಹೆಜ್ಜೆಯನ್ನು ತುಳಿಯುವುದು; ಅಥವಾ ಪಾಶ್ಚಾತ್ಯ ಗುಂಪನ್ನು ಅನುಸರಿಸುವುದು ಎಂದು ಎಣಿಸಿದ್ದವರಿಗೆ ಸ್ವತಂತ್ರ ಭಾರತದ ವಿಶಿಷ್ಟ ಧೋರಣೆಯು ಕಣ್ಣು ತೆರೆಯಿಸಿತು. ಚೀನ–ಭಾರತಗಳು ಅಂಗೀಕರಿಸಿದ ಪಂಚತತ್ವಗಳ ವಿಚಾರವನ್ನು ಭಾರತವೇ ಮೊದಲು ಸೂಚಿಸಿತು ಎಂದರು.

ಯಾಂತ್ರಿಕ ಬೀದಿಗಳ ನಿಯಂತ್ರಣ

ವಿದ್ಯುಚ್ಛಕ್ತಿಯ ಸಹಾಯದಿಂದ ಲಭ್ಯವಾಗುವ ನೂತನ ರೀತಿಯ ಯಂತ್ರಗಳ

(೬ನೇ ಪುಟ ನೋಡಿರಿ)

ಪೋರ್ಟ್ ಅಥವಾ ತತ್ಸಮ ಕಾಗದ ಪತ್ರಗಳಿಲ್ಲದೆ ಗೋವೆಯನ್ನು ಭಾರತೀಯರು ಪ್ರವೇಶಿಸಲಾಗದೆಂದು ಆಜ್ಞೆ ಹೊರಡಿಸಿರುತ್ತದೆ. ಇಷ್ಟರಲ್ಲೇ ಸೈನ್ಯಗಳು ಬರಲಿವೆಯೆಂದು ಜನತೆಗೆ ಎಚ್ಚರಿಕೆ ಕೊಡಲಾಗುತ್ತಿರುವುದಲ್ಲದೆ, ಪತ್ರಿಕೆಗಳಿಗೆ ಪ್ರತಿಬಂಧ, ಹಿಂಸೆ ಹಾಗೂ ಗದರಿಕೆಗಳು ನಡೆಯುತ್ತಲಿವೆ. ಇದರಿಂದ ಕಂಗೆಟ್ಟು ಭಾರತ ಪ್ರದೇಶಕ್ಕೆ ವಲಸೆ ಬರುವವರ ಸಂಖ್ಯೆಯು ದಿನೇ ದಿನೇ ಅಧಿಕಗೊಳ್ಳುತ್ತಿರುವುದು.

–ಕನ್ನಡದಲ್ಲಿ ಹೊಸ ಬಗೆಯ ಗ್ರಂಥ–

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

● ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.

● ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ಪ್ರತಿಗಳಿಗೆ ಬರೆಯಿರಿ:- ನವಯುಗ ಪ್ರೆಸ್, ಉಡುಪಿ.

THE JUPITER GENERAL INSURANCE CO., LTD.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

1919ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬೇಂಕ್ ಸ್ಟ್ರೀಟ್, ಬೊಂಬಾಯಿ 1.

ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಳ ..	...	ರೂ. 23,74,800
ಒಟ್ಟು ಮೂಲಗಳು ..	(ಮಿಕ್ಕಿದೆ)	ರೂ. 3,35,00,000
ಊರ್ಜಿತದಲ್ಲಿರುವ ವಿಮಾಸ್ವಹಾರ	,,	ರೂ. 1,50,00,000
1953ರಲ್ಲಿ ಪೂರ್ಣವಾದ ವಿಮಾವ್ಯವಹಾರ ..	,,	ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ, ಕೆಲಸಗಾರರ ಪರಿಹಾರ ಪ್ರಯಾಣ ಕೂಲಿ, ಕಳ್ಳಕಾಕರ ಪಾಲುಗಾರಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂದರ್ಭಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ, ಸಿಲೋನ, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ —

ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ನ ವ ಯು ಗ

ಉಡುಪಿ, ಗುರುವಾರ ೫-೮-'೫೪

ತೋಟಗಳ ಮೇಲೆ ತೆರಿಗೆ

ಇಷ್ಟರಲ್ಲೇ ಸೇರಲಿರುವ ಮದ್ರಾಸಿನ ಶಾಸನ ಸಭಾ ಅಧಿವೇಶನದ ಮುಂದೆ ಚರ್ಚೆಗೆ ಬರಲಿರುವ ಕೆಲವು ಮಸೂದೆಗಳನ್ನು ಸರಕಾರವು ಪ್ರಕಟಿಸಿರುವುದು. ಇವುಗಳಲ್ಲಿ ತೋಟಗಳ ಆದಾಯದ ಮೇಲೆ ತೆರಿಗೆ ಹೊರಿಸುವ ಮಸೂದೆಯು ಉಲ್ಲೇಖನೀಯವಿರುತ್ತದೆ. ಮದ್ರಾಸಿನ ಅರ್ಥಸಚಿವರು ಮುಂಗಡ ಪತ್ರವನ್ನು ಮಂಡಿಸುತ್ತಾ ಮಾಡಿದ ಭಾಷಣದಲ್ಲಿ ಈ ಮಸೂದೆ ಬರುವುದೆಂಬ ಸೂಚನೆಯನ್ನು ಕೊಟ್ಟಿದ್ದರು. ಆದಾಯದ ಬಾಬುಗಳನ್ನು ಅವಶ್ಯ ಹೆಚ್ಚಿಸಿಕೊಳ್ಳ ಬೇಕೆಂದಿರುವ ಸರಕಾರವು ಇದಕ್ಕಾಗಿ ಮಾಡಲಾದ ಯಾವುದೇ ಸೂಚನೆಯನ್ನು ವ್ಯರ್ಥ ಹೋಗಗೊಡಲಾರದೆಂದು ಭಾವಿಸಿದರೆ, ಭೂಕಂದಾಯ ಸುಧಾರಣಾ ಸಮಿತಿಯು ಬಹಳ ಹಿಂದೆಯೇ ಮಾಡಿದ್ದ ಮಹತ್ವದ ಸೂಚನೆಯೊಂದು ಕಾರ್ಯಗತವಾಗುತ್ತಿರುವಲ್ಲಿ ನಡೆದ ಈ ವಿಳಂಬವೇ ಆಶ್ಚರ್ಯಕರವಾದೀತು. ಮೇಲೆ ಹೇಳಿದ ಸಮಿತಿಯು ಭೂಕಂದಾಯದ ಹೊರತಾಗಿ ಕೃಷಿ ಉತ್ಪನ್ನದ ಮೇಲೆ ತೆರಿಗೆ ಹೊರಿಸಬೇಕೆಂದೂ ಮೊದಲ ಹೆಚ್ಚಾಗಿ ತೋಟಗಳಿಗೆ ಇದನ್ನು ಅನ್ವಯಿಸಿ, ಮುಂದೆ ನಿಧಾನವಾಗಿ ಇತರ ಬೆಳೆಗಳಿಗೆ ವಿಸ್ತರಿಸಬೇಕೆಂದೂ ಹೇಳಿದ್ದಿತು. ಸರಕಾರದವರು ಈಗ ಈ ಸೂಚನೆಯ ಲಾಭವನ್ನು ಮಾಡಿಕೊಳ್ಳಲು ಮುಂದಾಗಿರುವರು. ಕಾಫಿ, ಚಾ, ರಬ್ಬರು, ಸಿಂಕೋನಾ ಮತ್ತು ಏಲಕ್ಕಿಯ ತೋಟಗಳ ನಿವ್ವಳ ಉತ್ಪನ್ನದ ಮೇಲೆ ಏರಿಕೆಯ ಪ್ರಮಾಣದಲ್ಲಿ ತೆರಿಗೆಯನ್ನು ಹೇರಬೇಕೆಂದು ಅವರ ಸಂಕಲ್ಪ—ಇದರಿಂದ ರಾಜ್ಯದ ಬೊಕ್ಕಸಕ್ಕೆ ಸುಮಾರು ಏಳರಿಂದ ಹನ್ನೆರಡು ಲಕ್ಷ ರೂಪಾಯಿಗಳ ಆದಾಯ ಬರಬಹುದೆಂದು ಅಂದಾಜು. ತತ್ವತಃ ನೋಡಿದರೆ, ಭೂಕಂದಾಯದ ಹೊರತಾಗಿ, ಕೃಷಿ ಉತ್ಪನ್ನದ ಮೇಲೂ ತೆರಿಗೆ ಹೊರಿಸುವುದರಲ್ಲಿ ತಪ್ಪೇನೂ ಕಾಣುವುದಿಲ್ಲ. ಆದರೆ ತೆರಿಗೆಯನ್ನು ತೆರಬೇಕಾದವರ ಸ್ಥಿತಿಗತಿಯನ್ನೂ ನಾವು ಆಲೋಚಿಸಬೇಕಾದದ್ದು ನ್ಯಾಯ: ಸಾಮಾನ್ಯವಾಗಿ ಭತ್ತ ಮತ್ತಿತರ ಆಹಾರ ಧಾನ್ಯಗಳ ಕೃಷಿಯನ್ನು ಮಾಡುತ್ತಿರುವವರ ಪರಿಸ್ಥಿತಿಯು ಎಂತಹ ಸುಧಾರಣೆಗಳಿಂದಲೂ ಇನ್ನೆರಡು ದಶಕಗಳ ವರೆಗೆ ಊರ್ಜಿತಗೊಂದಲಾರದಷ್ಟು ಕೆಟ್ಟಿರುವುದು. ಬಡತನದೊಂದಿಗೆ ಸಾಲದ ಹೊರೆಯೂ ಸಾಮಾನ್ಯ ರೈತರನ್ನು ಬಾಧಿಸುತ್ತಿರುವುದು. ಆದರೆ ರೊಕ್ಕದ ಪೈರು ಬೆಳೆಯುವವರು ಇಷ್ಟು ತಾಪತ್ರಯವನ್ನು ಅನುಭವಿಸುತ್ತಿಲ್ಲ—೧೯೩೦ನೇ ಇಸವಿಯ ಸುಮಾರಿನ ಮಂದಿಯು ರೊಕ್ಕದ ಪೈರಿನ ತೋಟಗಳ ಮೇಲೆ ವಿಪರೀತ ಪರಿಣಾಮವನ್ನು ಉಂಟುಮಾಡಿದ್ದೇನೊ ನಿಜ. ಆದರೆ ಅಂದಿನಿಂದ ಇಂದಿಗೆ ಪರಿಸ್ಥಿತಿಯು ತುಂಬ ಬದಲಾವಣೆಗೊಂಡಿದೆ; ಮತ್ತು ದ್ವಿತೀಯ ಮಹಾಯುದ್ಧದ ಕಾಲದಲ್ಲೂ ಆ ಬಳಿಕವೂ ಸುಧಾರಣೆ ಹೊಂದಿದೆ. ಲಕ್ಷಾಂತರ ರೂಪಾಯಿಗಳ ವರಮಾನವನ್ನು ಹೊಂದುತ್ತಿರುವ ತೋಟಗಾರರು ಕಂಡುಬರುತ್ತಾರೆ. ಅವರ ಲಾಭದಲ್ಲಿ ಜನಹಿತದ ಕಾರ್ಯಗಳನ್ನು ಕೈಗೊಳ್ಳುವುದಕ್ಕೋಸ್ಕರ ಲಕಿಭ ಕೇಳುವುದರಲ್ಲಿ ತಪ್ಪೇನೂ ಇಲ್ಲ—ಆದರೆ ಇಲ್ಲಿ ಸಹ ತೋಟಗಾರರಿಗೆ ಏನೂ ಕಷ್ಟವಿಲ್ಲವೇ ಹೇಗೆಂಬುದನ್ನು ತುಸು ಪರ್ಯಾಲೋಚಿಸಬೇಕಾಗುವುದು. ಈಗ ಸಾರಲಾದ ದರಗಳಂತೆ ವ್ಯಕ್ತಿಯ ಸಂಬಂಧದಲ್ಲಿ ೩,೦೦೦ ರೂಪಾಯಿಗಳೂ ಅವಿಭಕ್ತ ಕುಟುಂಬದ ವಿಷಯದಲ್ಲಿ ೬,೦೦೦ ರೂಪಾಯಿಗಳೂ ವಿನಾಯತಿಯ ಗರಿಷ್ಠ ಮಿತಿಯಾಗಿದ್ದು, ಮುಂದೆ ಒಂಭತ್ತು ಪೈಯಿಂದ ನಾಲ್ಕಾಣೆಯವರೆಗೆ ತೆರಿಗೆ ಏರುತ್ತಾ ಹೋಗುತ್ತದೆ. ಸರಕಾರದವರು ಕೇಂದ್ರದ ಆದಾಯ ತೆರಿಗೆಯ ಸೂತ್ರವನ್ನೆ ಸಾಮಾನ್ಯವಾಗಿ ಅನುಸರಿಸಲಾಗಿದೆಯೆಂದು ಹೇಳಿದ್ದರೂ, ವಿನಾಯತಿಯ ಮಿತಿಯನ್ನು ಆ ಪ್ರಮಾಣಕ್ಕೆ ಹೆಚ್ಚಿಸಿರುವುದಿಲ್ಲ. ಇದನ್ನು ಮಸೂದೆಯ ಚರ್ಚೆಯ ಕಾಲದಲ್ಲಿ ಸದಸ್ಯರು ತೋರಿಸಿಕೊಟ್ಟು, ಹೆಚ್ಚು ವಿನಾಯತಿ ದೊರಕುವಂತೆ ನೋಡುವುದು ಅಪೇಕ್ಷಣೀಯ. ಈ ತೆರಿಗೆಯಲ್ಲದೆ ೨೫,೦೦೦ ರೂಪಾಯಿಗಳಿಗಿಂತ ಹೆಚ್ಚು ಆದಾಯವುಳ್ಳವರು ಒಂದೂವರೆ ಆಣೆಯಿಂದ ಆರು ಆಣೆಗಳ ವರೆಗೆ ಏರುವ ಮೇಲ್ತೆರಿಗೆಯನ್ನು ಸಹ ಕೊಡಬೇಕಾಗುವುದು. ಇವೆರಡನ್ನು ಒಟ್ಟಿಗೆ ಲೆಕ್ಕಕ್ಕೆ ಹಿಡಿದರೆ, ಸಾಮಾನ್ಯ ಒಂದು ಲಕ್ಷ ರೂಪಾಯಿ ವರಮಾನವುಳ್ಳ ತೋಟಗಾರನು ರೂಪಾಯಿಯಲ್ಲಿ ಹತ್ತಾಣೆಯನ್ನು ತೆರಿಗೆಯ ರೂಪದಲ್ಲಿ ಕೊಡುವಂತಾಗುವುದು. ಕಂಪೆನಿಗಳ ವಿಷಯದಲ್ಲಿ ಆದಾಯ ಎಷ್ಟೇ ಇರಲಿ, ರೂಪಾಯಿಗೆ ಐದೂವರೆ ಆಣೆಯಷ್ಟು ಆಗುತ್ತದೆ. ತೋಟಗಾರರ ಮೇಲೆ ಬೀಳುವ ಈ ಕರಭಾರವು ತುಸು ಅಧಿಕವಾಗಿಯೇ ಕಾಣುತ್ತದೆ. ತಿರುವಾಂಕೂರು ಕೊಚ್ಚಿ, ಬಂಗಾಳಗಳಲ್ಲಿಯೂ ತೋಟಗಳ ಮೇಲೆ ಕರವು ಹೇರಲಾಗುತ್ತದೆ; ಆದರೆ ಅಲ್ಲಿಯ ಕರ ಪ್ರಮಾಣವು ರೂಪಾಯಿಗೆ ಎರಡೂವರೆ ಆಣೆಯನ್ನು ಮೀರುವುದಿಲ್ಲ. ಕೊಡಗಿನಲ್ಲಿ ಸಹ ರೂಪಾಯಿಯಲ್ಲಿ ನಾಲ್ಕಾಣೆಯಷ್ಟು ಮಾತ್ರ ಕರವು ಹೇರಲಾಗುತ್ತದೆ. ಮದ್ರಾಸು ರಾಜ್ಯಕ್ಕೆ ಈ ಕರವು ಇನ್ನೂ ಹೊಸತು—ತೋಟಗಾರರಿಗೆ ಈ ಕರದ ವಿಷಯದಲ್ಲಿ ಹೆಚ್ಚಿನ ಅನುಭವವಿರುವುದಿಲ್ಲ. ಅಲ್ಲದೆ, ತೋಟಗಳಲ್ಲಿ ಕೆಲಸ ಮಾಡುವ ಲಕ್ಷಾಂತರ ಕೂಲಿಕಾರರ ಪರಿಸ್ಥಿತಿಯು ತೃಪ್ತಿಯನ್ನು ಕೊಡುವಂತಿಲ್ಲ. ಹೀಗಿರುವಾಗ ತೋಟಗಾರರು ಕೆಲಸದವರನ್ನು ಸುಖಿಗಳಾಗಿ ಮಾಡುವಂತೆ ಒತ್ತಾಯಿಸುವ ಹಾಗು ತೋಟಗಳನ್ನು ಸಮೃದ್ಧಿಗೊಳಿಸುವ ಕಾರ್ಯಕ್ರಮಗಳಲ್ಲಿ ಹೆಚ್ಚು ಆಸ್ಥೆಯಿಂದ ದುಡಿಯುವಂತೆ ಸರಕಾರ ಪ್ರೋತ್ಸಾಹನೆ ಕೊಡುತಿದ್ದರೆ ಅದು ನಿಜಕ್ಕೂ ಸ್ವಾಗತಾರ್ಹವೆಂದು ಭಾವಿಸಬಹುದಾಗಿದ್ದಿತು. ಇತ್ತ ಗಮನ ಪೂರೈಸದೆ, ಆದು ತೆರಿಗೆಯ ಆದಾಯದ ಮೇಲೆಯೇ ಕಣ್ಣು ಇಟ್ಟಿರುವುದು ತೋಟಗಾರರಿಗೆ ಅಪ್ರಿಯವಾಗುವುದಂತೂ ನಿಶ್ಚಯ—ಕೂಲಿಕಾರರ ಮೇಲೂ ಒಂದು ವಿಧವಾದ ವಿಪರೀತ ಪರಿ

ಹೊಸದೆಹಲಿಯ ಇಂಡೋಚೀನ ಅಧಿವೇಶನ

ಶನಿವಾರ ಮುಂದಳ ಕಳುಹಿಸುವ ನಿರ್ಧಾರ

ಇಂಡೋ ಚೀನದಲ್ಲಿ ಮುಂದಿನ ಕ್ರಮವನ್ನು ನಿರ್ಧರಿಸುವುದಕ್ಕೋಸ್ಕರ ಭಾರತದ ಪ್ರಧಾನಿ ನೆಹರೂರವರು ಹೊಸ ದೆಹಲಿಯಲ್ಲಿ ಕರೆದ ಪ್ರಾಸ್ತಾವಿಕ ಸಮಾಲೋಚನೆಗಳ ಸಭೆಯು ಅಗೋಸ್ತು ೧ನೇ ದಿನಾಂಕ ಜರಗಿತು. ಯುದ್ಧ ವಿರಾಮದ ಮೇಲ್ವಿಚಾರಕ ಮಂಡಳದ ಸದಸ್ಯ ರಾಷ್ಟ್ರಗಳಾದ ಭಾರತ, ಕೆನಡಾ, ಮತ್ತು ಪೋಲೆಂಡಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದರು. ಒಳ್ಳೆಯ ಸ್ನೇಹ ಮಯ ವಾತಾವರಣದಲ್ಲಿ ಸೇರಿದ ಈ ಸಭೆಯನ್ನು ನೆಹರೂರವರು ಉದ್ಘಾಟಿಸುತ್ತಾ ಸಹಕಾರದ ವಾತಾವರಣವನ್ನು ಉಂಟುಮಾಡುವುದೂ ಮುಂದಿನ ಕಾರ್ಯ ವಿಧಾನವನ್ನು ಗೊತ್ತುಪಡಿಸುವುದೂ ಈ ಪ್ರಾಸ್ತಾವಿಕ ಸಭೆಯ ಉದ್ದೇಶವೆಂದು ಹೇಳಿದರು. "ನಾವಿಲ್ಲಿ ತತ್ವಗಳನ್ನು ಕುರಿತು ವಾದಿಸುವುದಿಲ್ಲ; ಕಾರ್ಯ ವಿಧಾನವನ್ನಷ್ಟೇ ರೂಪಿಸುತ್ತೇವೆ. ಆದುದರಿಂದ ಸಹಕಾರ ಮತ್ತು ಒಮ್ಮತಗಳು ದೊರಕುವುದಕ್ಕೇನೂ ಕಷ್ಟ ಕಾಣುವುದಿಲ್ಲ" ಎಂದವರು ಅಭಿಪ್ರಾಯ ಪಟ್ಟರು. ನೆಹರೂರವರ ಬಳಿಕ ಮಾತನಾಡಿದ ಕೆನಡಾ ಹಾಗು ಪೋಲೆಂಡಗಳ ಪ್ರತಿನಿಧಿಗಳು ತಮ್ಮ ಸಂಪೂರ್ಣ ಸಹಕಾರದ ಭರವಸೆಯನ್ನು ನೀಡಿದರು.

ಮುಂದಳ ಹೋಗುವುದು

ಯುದ್ಧ ವಿರಾಮ ಮೇಲ್ವಿಚಾರಕ ಮಂಡಳವು ಇನ್ನು ಸ್ಥಾಪಿತಗೊಳ್ಳಬೇಕಷ್ಟೆ: ಆದರೆ ಆದಷ್ಟು ಬೇಗನೆ ಈ ಮಂಡಳದ ಸದಸ್ಯರನ್ನು ನೇಮಿಸಬೇಕೆಂದೂ ಇದಕ್ಕೆ ಮುಂಚೆ ಇಂಡೋಚೀನದ ವಾತಾವರಣ ಮತ್ತು ಪರಿಸ್ಥಿತಿಯನ್ನು ತಿಳಿದುಬರಲು ಮೂರು ರಾಷ್ಟ್ರಗಳ ಪ್ರತಿನಿಧಿಗಳಿರುವ ಮುಂದಳವೊಂದನ್ನು ಅಲ್ಲಿಗೆ ಕಳಿಸಬೇಕೆಂದೂ ತೀರ್ಮಾನವಾಯಿತು. ಎಂಟು ಸೈನಿಕ ಅಧಿಕಾರಿಗಳನ್ನೊಳಗೊಂಡು ಒಟ್ಟು ೧೭ ಮಂದಿಯಿರುವ ಈ ಮುಂದಳದ ನಾಯಕತ್ವವನ್ನು ಭಾರತದ ಕಾಮನವೆಲ್ತ್ ರಾಷ್ಟ್ರಗಳ ಕಾರ್ಯದರ್ಶಿ ಶ್ರೀ ದತ್ತರು ವಹಿಸುವರು. ಎರಡು ಭಾರತೀಯ ಡಕೋಟಾ ವಿಮಾನಗಳಲ್ಲಿ ಈ ಮುಂದಳದ ಸದಸ್ಯರು ಇದೇ ಶನಿವಾರ (ದಿನಾಂಕ ೭) ಪ್ರಯಾಣಿಸುವರು. ಇಂಡೋಚೀನದ ನಾಲ್ಕೂ ರಾಜ್ಯಗಳ ಮುಖ್ಯ ಪಟ್ಟಣಗಳನ್ನು ಅವರು ಸಂದರ್ಶಿಸಿ, ಮೇಲ್ವಿಚಾರಕ ಮಂಡಳಕ್ಕೆ ಅಲ್ಲಿ ಸಿಗಬಹುದಾದ ಸೌಕರ್ಯ, ಮಂಡಳದ ಕಾರ್ಯಾಲಯ ಸ್ಥಾಪನೆಗಿರುವ ಅನುಕೂಲತೆ ಮತ್ತು ಇತರ ಅಗತ್ಯದ ವಿಷಯಗಳ ಬಗ್ಗೆ ಮಾಹಿತಿಪಡೆದು ಸಾಧ್ಯವಾದಷ್ಟು ಬೇಗನೆ ತಂತಮ್ಮ ರಾಷ್ಟ್ರಗಳಿಗೆ ವರದಿಮಾಡುವರು.

ಇಂಡೋಚೀನದ ಕೆಲಸವು ಕೊರಿಯದಕ್ಕಿಂತ ಭಿನ್ನವಿರುತ್ತದೆ—ಇಲ್ಲಿ ರಾಜಕೀಯ ಹೊಣೆಗಾರಿಕೆಯನ್ನು ನಿರ್ವಹಿಸುವುದೇ ದೊಡ್ಡ ಪ್ರಶ್ನೆಯಾಗಿರುತ್ತದೆ. ಕದನ ವಿರಾಮದ ಬಗ್ಗೆ ಉಭಯ ಪಕ್ಷಗಳು ತಮ್ಮಲ್ಲಿಯೇ ಹೊಣೆಗಾರಿಕೆಯನ್ನು ಹಂಚಿಕೊಂಡವೆಯಾಗಿ ತಟಸ್ಥ ಮಂಡಳದ ಮೇಲೆ ಹೆಚ್ಚಿನ ಭಾರ ಬೀಳುವುದಿಲ್ಲ. ಅಲ್ಲದೆ, ಈ ಮಂಡಳದ ಕೆಲಸಗಳು ನಿರ್ದಿಷ್ಟವಿದ್ದು, ಬಿಕ್ಕಟ್ಟಿನ ಪ್ರಸಂಗಗಳಲ್ಲಿ ಜಿನೇವಾದಲ್ಲಿ ಸೇರಿದ ಒಂಭತ್ತು ರಾಷ್ಟ್ರಗಳಿಗೆ ನಿವೇದನೆಯನ್ನು ಮಾಡಬಹುದು. ಈ ಸೌಕರ್ಯವಿದ್ದರೂ ವೀಟನಾಮದಲ್ಲಿ ನಿಷ್ಪಕ್ಷಪಾತವಾದ ರೀತಿಯ ಣಾಮವಾದೀತು. ಇದನ್ನು ತಪ್ಪಿಸುವುದಕ್ಕೋಸ್ಕರ, ಕೃಷಿ ಸಂಬಂಧದ ವೆಚ್ಚ. ಗೇಣಿ ಮುಂತಾದುವನ್ನು ತೆರಿಗೆ ಹಾಕುವ ಹಣದಿಂದ ಹೊರಗಟ್ಟಂತೆ, ತೋಟಗಳ ಸ್ಥಿತಿಗತಿಯನ್ನು ಊರ್ಜಿತಪಡಿಸಿ, ಅಭಿವೃದ್ಧಿಗೋಸ್ಕರ ವೆಚ್ಚ ಮಾಡಿದ ಹಣವನ್ನು ಸಹ ತೆರಿಗೆಯಿಂದ ಹೊರತು ಪಡಿಸಬೇಕೆಂದು ಸೂಚಿಸಿದರೆ ತಪ್ಪಲ್ಲ. ಇವಲ್ಲದೆ, ಕರಭಾರವನ್ನು ತುಸು ತಗ್ಗಿಸುವುದೂ ಅಪೇಕ್ಷಣೀಯ. ಅನ್ಯಥಾ ಪ್ರಾದುರ್ಭವಿಸುತ್ತಿರುವ ತೋಟಗಳು ಹೆಚ್ಚಿನ ಪ್ರಗತಿಯನ್ನು ತೋರಿಸದೆ, ಹಿಂಡುವ ಆಕಳು ಹಿಂಡಿ ದೊರಕದೆ ಸೊರಗುತ್ತಾ ಹೋಗುವಂತಹ ದಾರುಣ ಸಂಭವವು ಬರುಬಹುದೆಂದು ಹೇಳಬೇಕಾಗುತ್ತದೆ.

ಟೆಂಡರು.

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾಪರಮೇಶ್ವರೀ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರ ಆಫೀಸಿನಿಂದ ಈ ಮೂಲಕ ತಿಳಿಸುವುದೇನೆಂದರೆ–

ಸದ್ರಿ ಭಂಡಾರದ ದಕ್ಷಿಣಾವರ ಮೇಳದ ಹಳೇ ಸಾಮಾನುಗಳ ದುರಸ್ತಿಯನ್ನು ವಹಿಸಿಕೊಳ್ಳುವರೆ ತಾ. 18—8—54ನೇ ಬುಧವಾರ ದಿನ ಸಂಜೆ ಗಂಟೆ 3ಕ್ಕೆ ಮೇಲ್ಕಂಡ ಆಫೀಸಿನಲ್ಲಿ ಟೆಂಡರ್ ಸ್ವೀಕರಿಸಲಾಗುವುದು. ಕಾಯಸುಳ್ಳವರು ಹಾಜರಾಗಿ ಭಂಡಾರದಲ್ಲಿ ರೂ. 50/- ಡಿಪೋಜಿಟ್ ಕಟ್ಟಿ ರಶೀದಿ ಪಡೆದು ಟೆಂಡರು ಕೊಡತಕ್ಕದ್ದು. ಡಿಪೋಜಿಟ್ ವಿನಾ ಟೆಂಡರುಗಳನ್ನು ಸ್ವೀಕರಿಸಲಾಗುವುದಿಲ್ಲ; ಏಲಂನ ಎಲ್ಲಾ ಶರ್ತಗಳನ್ನು ಆಫೀಸಿನಿಂದ ತಿಳಿಯತಕ್ಕದ್ದು.

ಮಂದಾರ್ತಿ, 2-8-54. — *Sd.* N. R. Bolar. Executive Officer.

ಚಂದಾದಾರರಲ್ಲಿ ಬಿನ್ನಹ

ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 33ನೆಯ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ 34ನೆಯ ಹೊಸ ವರ್ಷವು ಆರಂಭವಾಗುತ್ತದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಚಂದಾಹಣವನ್ನು (ಬಾಕಿ ಇದ್ದರೆ ಅದನ್ನು ಕೂಡ) ಕಳುಹಿಸಿ ಕೊಡುವಂತೆ ಕೋರುತ್ತೇವೆ. ವಿ. ಪಿ. ಪಿ ಮಾಡುವುದರಿಂದ ಹತ್ತು ಆಣೆಯಷ್ಟು ನಷ್ಟ ಸಂಭವಿಸುತ್ತದಾದ್ದರಿಂದ ಸರ್ವರೂ ಬಾಕಿಯನ್ನು ಮುಂದಾಗಿ ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ಲ್ಲಿ ಚುನಾವಣೆಗಳನ್ನು ನಡೆಸುವುದು ಸಾಮಾನ್ಯ ಕೆಲಸವಲ್ಲ. ಇದಕ್ಕೆ ಭಾರತದ ಚುನಾವಣಾ ಕಮೀಶನರಾದ ಶ್ರೀ. ಸುಕುಮಾರ ಸೇನರ ನೆರವು ಬೇಕಾದೀತು: ಹಾಗೆಯೇ ಇತರ ನೂರಿನ್ನೂರು ಸೈನಿಕ ಅಧಿಕಾರಿಗಳ ಅಗತ್ಯವೂ ಬಿದ್ದೀತು

ಸುಯೇಜದಿಂದ ನಿರ್ಗಮನ

ಕಳೆದ ವಾರ ಲೋಕದ ಮುಂದಿದ್ದ ಬೇರೆ ಕೆಲವು ಜಟಿಲ ಪ್ರಶ್ನೆಗಳೂ ಉಭಯ ಸಮ್ಮತವಾದ ತೃಪ್ತಿಕರ ರೀತಿಯಲ್ಲಿ ಇತ್ಯರ್ಥಗೊಂಡವು. ಕಾರಣ, ಜಾಗತಿಕ ಶಾಂತಿಯ ಸುವರ್ಣಯುಗ್ಮವೆಂದು ಕಳೆದ ೧೫ ದಿನಗಳ ಅವಧಿಯನ್ನು ಕರೆದರೆ ತಪ್ಪಾಗದು. ಸುಮಾರು ಮೂರು ದಶಕಗಳಿಂದೀಚೆಗೆ ರಾಷ್ಟ್ರೀಯ ಮನೋವೃತ್ತಿಯ ಐಗುಪ್ತರ ಅಭಿಮಾನವನ್ನು ಕೆಣಕಿದ್ದ ಹಾಗು ದ್ವಿತೀಯ ಮಹಾಯುದ್ಧದ ಬಳಿಕ ಅಲ್ಲಿಯ ರಾಜಕೀಯ ವಾತಾವರಣವನ್ನು ಅಪಾಯಕರ ರೀತಿಯಲ್ಲಿ ಕಲುಷಿತಗೊಳಿಸಿದ ಸುಯೇಜ ಕಾಲುವೆಯ ತಂಟೆಯು ಸಮಾಧಾನಕರವಾಗಿ ಬಗೆಹರಿಯಿತು. ಪರಿಣಾಮದಲ್ಲಿ, ಎಪ್ಪತ್ತು ವರ್ಷಗಳಿಂದ ಐಗುಪ್ತ ದೇಶದಲ್ಲಿ ನೆಲೆಯೂರಿದ್ದ ಬ್ರಿಟಿಷ ಸೇನೆಗಳು ಇನ್ನು ಮುಂದಿನ ೨೦ ತಿಂಗಳುಗಳಲ್ಲಿ ಸುಯೇಜ ಕಾಲುವೆ ಪ್ರದೇಶದಿಂದ ಕಾಲ್ದೆಗೆಯುತ್ತವೆ; ತುರ್ಕಿ ಹಾಗು ಅರಬರಾಷ್ಟ್ರಗಳ ಮೇಲೆ ಏಳು ವರ್ಷಗಳಲ್ಲಿ ಧಾಳಿ ನಡೆದರೆ ಬ್ರಿಟಿಷ ಸೈನಿಕರು ಪುನಃ ಇಲ್ಲಿಗೆ ಬರಬಹುದು; ಕಾಲುವೆ ಪ್ರದೇಶದಲ್ಲಿ ಬ್ರಿಟಿಷ ತಾಂತ್ರಿಕರು ನಾಗರಿಕ ಉಡುಪಿನಲ್ಲಿಯೇ ಉಳಿಯುವರು.

ಹೀಗೆ ಸುಯೇಜದಿಂದ ನಿರ್ಗಮನ ಹೊಂದಲು ಬ್ರಿಟಿಷರು ಸಮ್ಮತಿಸಿದುದಕ್ಕೆ ಕಾಲ ಧರ್ಮವೇ ಕಾರಣ—ಈಡನ್ನರು ಪಾರ್ಲಿಮೆಂಟಿನಲ್ಲಿ ವಿವರಿಸಿದಂತೆ, ಮುಂದಿನ ಯುದ್ಧಗಳಲ್ಲಿ ಅಣುಶಸ್ತ್ರಗಳೇ ಉಪಯೋಗಿಸಲ್ಪಡತ್ತವೆಯಾಗಲಿ, ಭೂಕದ

ನೋಟೀಸು

ಶಿವಳ್ಳಿ ಗ್ರಾಮದ ಸಗ್ರಿಯಲ್ಲಿರುವ—ಮಾಲಿಂಗ ಸೇರಿಗಾರನ ಅಳಿಯ—ದೂಜ ಸೇರಿಗಾರನು ಈ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸುವದೇನಂದ್ರೆ—

ನನ್ನ ಮಗ ಸೂರ್ಯ ಸೇರಿಗಾರನು "ಪ್ರಕಾಶ" ಪತ್ರಿಕೆಯ ತಾ. 27—7—54ನೆ ಸಂಚಿಕೆಯಲ್ಲಿ ಕೊಟ್ಟಿರುವ ನೋಟೀಸು ಸರಿಯಾದ್ದಲ್ಲಾ—ಆ ನೋಟೀಸಿನಲ್ಲಿ ಕಾಣುವ ಸಂಗ್ತಿಯು ತೀರಾ ಸುಳ್ಳು—ನನಗೆ ಬುದ್ಧಿಶಕ್ತಿಯೂ-ಜ್ಞಾನಶಕ್ತಿಯೂ ಸರಿಯಾಗಿರುತ್ತದೆ.—ನಾನು ನನ್ನ ಸ್ವಂತದ ಬಗ್ಗೆ ಮೂಲಗೇಣಿಗೆ ಪಡೆದ ಆಸ್ತಿಯಲ್ಲಿ ನಾನು ನನ್ನ ಸ್ವಂತ ಕಾಯಕಷ್ಟಗಳಿಂದ ಸಂಪಾದಿಸಿದ ನನ್ನ ಸ್ವಂತದ ಹಣಗಳು ಖರ್ಚು ಮಾಡಿ ಮನೆ ಕಟ್ಟೋಣ ಕಟ್ಟಿಸಿ ವಗೈರೆ ಕೃತಗಳು ಮಾಡಿ ಆ ಕೃತಗಳ ಸಮೇತ ಸದ್ರಿ ಆಸ್ತಿಯನ್ನು—ಸುತ್ತು ನನ್ನ ಸ್ವಂತದ ಚರೂಸೊತ್ತುಗಳನ್ನೂ ಕೂಡಾ ಸ್ವಂತ ವ, ಸಮ್ಪೂರ್ಣ ಹಕ್ಕಿನಿಂದ್ಲೂ-ಇಚ್ಛಾನುಸಾರದ ಹಕ್ಕಿನಿಂದ್ಲೂ ನಾನು ಅನುಭವ್ಸಿ ಬರುತ್ತೇನೆ—ಅವುಗಳಲ್ಲಿ ನನಗೊಬ್ಬಗಲ್ಲದೆ—ಇನ್ನ್ಯಾರಿಗೂ ಯಾವುವೇ ತರದ ಏಸ್ವಸ್ವಾದರೂ ಹಕ್ಕಿಲ್ಲವೆಂತ್ಲೂ-ಸದ್ರಿ ಸ್ಥಿರಚರ ಸೊತ್ತುಗಳನ್ನು ನನ್ನ ಇಷ್ಟದಂತೆ ವಿಲೆವಾರಿಪಡಿಸುವರೆ ನಾನೊಬ್ಬನೇ ಸಂಪೂರ್ಣ ಹಕ್ಕುದಾರನೆಂತ್ಲೂ—ಆ ಬಗ್ಗೆ ಆಕ್ಷೇಪಿಸುವರೆ ಯಾರಿಗೂ ಹಕ್ಕಿಲ್ಲವೆಂತ್ಲೂ ಈ ಮೂಲಕ ತಿಳಿಯಪಡಿಸುತ್ತೇನೆ.

ಉಡ್ಪಿ ತಾ 3-8-54 } ● ಈ ಯಡಹೆಬ್ಬೆಟ್ಟುಗುರುತು ದೂಜ ಸೇರಿಗಾರನ ರುಜು.

ತ್ವದ ಮಹತ್ವವು ಬಹಳ ತಗ್ಗುತ್ತದೆ. ಅಲ್ಲದೆ ಫರೂಕ ಅರಸರ ಪದಚ್ಯುತಿ, ಸೈನಿಕ ಕ್ರಾಂತಿ ಮುಂತಾದ ಭೀಕರ ಕ್ರಮಗಳು ಜರಗುತ್ತಿರುವ ಐಗುಪ್ತದ ಸ್ನೇಹವನ್ನು ಕಳೆದುಕೊಂಡು ಸುಯೇಜದಲ್ಲಿ ನೆಲೆಸುವುದೂ ಅಪಾಯಕರ. ಬ್ರಿಟಿಷರು ಇದನ್ನು ತಿಳಿದಿದ್ದಾರೆ:ಎಂತಲೇ ಎಷ್ಟು ಲಾಭ ಸಂಪಾದಿಸಬಹುದೋ ಅಷ್ಟನ್ನೂ ಗಿಟ್ಟಿಸಲು ಕೊನೆಯ ಗಳಿಗೆಯ ವರೆಗೆ ಪ್ರಯತ್ನಿಸಿ, ಸಾಕಷ್ಟು ಲಾಭವನ್ನೆ ದೊರಕಿಸಿಕೊಂಡರು. ಇನ್ನು ಮುಂದೆ ಐಗುಪ್ತವು ತನ್ನ ಆಂತರಿಕ ಸಮಸ್ಯೆಗಳ ಪರಿಹಾರಕ್ಕೆ ಪ್ರಯತ್ನಿಸಬಹುದು: ಇದಕ್ಕಾಗಿ ಅಮೇರಿಕದ ಧಾರಾಳ ಧನ ಸಹಾಯ ದೊರಕುವ ಸಂಭವ ಕಾಣುತ್ತದೆ.

ಟ್ಯುನೀಸಿಯಕ್ಕೆ ಸ್ವರಾಜ್ಯ

ಫ್ರಾನ್ಸಿನ ಪ್ರಧಾನಿ ಮೆಂಡೆಸರು ಇಂಡೋ ಚೀನದಲ್ಲಿ ಶಾಂತಿ ತಂದ ಯಶಸ್ಸಿನಿಂದ ಉತ್ತೇಜಿತರಾಗಿಯೋ ಏನೋ, ವಸಾಹತುಗಳ ವಿವಾದವನ್ನು ಬಿಡಿಸಲು ನೋಡುತ್ತಿರುವುದು ಶುಭ ಲಕ್ಷಣ: ಟ್ಯುನೀಸಿಯಾದ ಗೊಂದಲಮಯ ವಾತಾವರಣದತ್ತ ಅವರ ದೃಷ್ಟಿಯು ಈಗ ಹೊರಳಿರುವುದು. ತಮ್ಮ ಮಂತ್ರಿಮಂಡಳದೊಡನೆ ಐದು ತಾಸುಗಳಷ್ಟು ದೀರ್ಘ ಕಾಲ ವಿಚಾರವಿನಿಮಯ ನಡೆಸಿ, ತಾವು ತಯಾರಿಸಿದೊಂದು ಯೋಜನೆಗೆ ಆದರ ಬೆಂಬಲವನ್ನು ಪಡೆಯುವುದರಲ್ಲಿ ಮೆಂಡೆಸರು ಜಯಹೊಂದಿದರು. ಇದರನ್ವಯ ಟ್ಯುನೀಸಿಯಾದಲ್ಲಿ "ಹೋಂ ರೂಲ್" ಮಾದರಿಯ ಸ್ವರಾಜ್ಯವು ನೀಡಲ್ಪಡುವುದು. ವಿದೇಶ ವ್ಯವಹಾರ ಮತ್ತು ಸಂರಕ್ಷಣಾ ಖಾತೆಗಳು ಮಾತ್ರ ಫ್ರಾನ್ಸಿನ ವಶದಲ್ಲಿ ಉಳಿಯುತ್ತವೆ; ಅಲ್ಲದೆ ಟ್ಯುನೀಸಿಯಾದಲ್ಲಿರುವ ೧೮೫೦೦೦ ಫ್ರೆಂಚ ವಲಸೆಗಾರರಿಗೋಸ್ಕರ ಪ್ರತ್ಯೇಕ ಸಭೆಯೊಂದು ಆಯ್ಕೆಹೊಂದುತ್ತದೆ. ಈ ಸಭೆಗೆ ಟ್ಯುನೀಸಿಯಾದ ಆಡಳಿತದಲ್ಲಿ ಕೈ ಹಾಕುವ ಅಧಿಕಾರವೇನೂ ಇಲ್ಲ. ಪ್ರಾಯಶಃ ಫ್ರಾನ್ಸಿನ ಕೈಯಲ್ಲಿ ಉಳಿಯುವ ಅಧಿಕಾರಗಳಲ್ಲಿ ಇವರ ಮಾತು ನಡೆಯಬಹುದು. ಈ ಸೂಚನೆಗಳನ್ನು ಟ್ಯುನೀಸಿಯದಲ್ಲಿ ಫ್ರೆಂಚರನ್ನು ವಿರೋಧಿಸುತಿದ್ದ ನಿಯೊ ದಸ್ತೂರ ಪಕ್ಷವು ಸ್ವಾಗತಿಸಿರುವುದು. ಅಲ್ಲಿಯ ಬೇಯವರು ಫ್ರೆಂಚ ಪ್ರಧಾನರನ್ನು ಕಂಡು ಮುಂದಿನ ಕ್ರಮಗಳನ್ನು ಕೈಗೊಳ್ಳಲು ಟ್ಯುನೀಸಿಯದ ಮುಖ್ಯ ಮಂತ್ರಿಗೆ ಆಜ್ಞೆ ವಿಧಿಸಿರುವರು.

ಈಚೆಗೆ ಬಂದ ಅನಧಿಕೃತ ಸುದ್ದಿಗಳ ಪ್ರಕಾರ ಫ್ರೆಂಚರು ಭಾರತದ ತಮ್ಮ ವಸಾಹತುಗಳಿಂದಲೂ ಹಿಂತೆರಳಲು ನಿರ್ಧರಿಸಿದಂತೆ ತಿಳಿಯುತ್ತದೆ. ಪಾಂಡಿಚೇರಿ ಮತ್ತು ಕಾರೈಕಲುಗಳಲ್ಲಿ ಸ್ವಯಂಸೇವಕರು ಅಹಿಂಸಾತ್ಮಕ ರೀತಿಯಲ್ಲಿ ರೈಲುಗಳ ಓಡಾಟ, ನಿತ್ಯೋಪಯೋಗದ ವಸ್ತುಗಳ ಪೂರೈಕೆ ಮುಂತಾದುವಕ್ಕೆ ಪ್ರತಿಬಂಧವನ್ನೊಡ್ಡಿರುವರು. ಅಲ್ಲದೆ, ಫ್ರೆಂಚ ಆಡಳಿತದಲ್ಲಿರುವ ಅಧಿಕಾರಿಗಳ ಮನಃ ಪರಿವರ್ತನೆಯ ಉದ್ದೇಶದಿಂದ ಉಪವಾಸ ಮುಂತಾದ ಭೀಕರ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವರು. ಫ್ರೆಂಚ ಅಧಿಕಾರಿಗಳಿಗೆ ಈ ಪರಿಸ್ಥಿತಿಯಲ್ಲಿ ವಸಾಹತಿನಲ್ಲಿ ಉಳಿ

ಉಡುಪಿ

ಕಾಲೇಜು ಯೂನಿಯನ್ ಉದ್ಘಾಟನೆ—ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಯೂನಿಯನ್ ಉದ್ಘಾಟನೆಯನ್ನು ತಾ. 30ರಲ್ಲು ಮಣಿಪಾಲ ಕಸ್ತೂ

ಯುವುದು ಪ್ರಯೋಜನವಿಲ್ಲವೆಂದು ತೋರುತ್ತದೆ. ಈ ವಿಷಯದಲ್ಲಿ ಫ್ರೆಂಚ ಸರಕಾರದಿಂದ ಪರಿಪತ್ರವೊಂದು ಬಂದಿದೆಯಾಗಿಯೂ ತಿಳಿದು ಬರುತ್ತದೆ. ಇದೇ ಆಗೋಸ್ತು ೧೫ರೊಳಗೆ ಇಲ್ಲೆಲ್ಲ ಮಹತ್ವದ ಘಟನೆಗಳು ನಡೆಯಬಹುದೆಂದು ಅಂದಾಜು.

ಎಣ್ಣೆ ತಂಟೆಯ ಇತ್ಯರ್ಥ

ಮೂರು ವರ್ಷಗಳಿಂದ ಕೊಳೆಯುತ್ತಿದ್ದ ಇರಾಣದ ಎಣ್ಣೆಯ ವಿವಾದವೂ ಬಿಡಿಸಲ್ಪಟ್ಟಿತೆಂದು ಈಗ ತಾನೆ ಬಂದ ವರದಿಗಳು ಹೇಳುತ್ತವೆ—ಆಂಗ್ಲೊ ಇರಾಣಿಯನ್ ಎಣ್ಣೆ ಕಂಪೆನಿಯನ್ನು ರಾಷ್ಟ್ರೀಕರಿಸಿದ ತರುವಾಯ ಅಲ್ಲಿ ಪ್ರಕ್ಷುಬ್ಧ ಪರಿಸ್ಥಿತಿಯು ಉಂಟಾಯಿತು. ವಿವಾದ ತಲೆದೋರಿದುದರಿಂದ ಮಿಲಿಯಾಂತರ ಸ್ಟರ್ಲಿಂಗುಗಳ ವರಮಾನವನ್ನು ಇರಾಣು ಕಳೆದು ಕೊಂಡಿತು. ಇದೀಗ ಎಣ್ಣೆ ಕಂಪೆನಿಯೊಡನೆ ಒಂದು ಒಪ್ಪಂದನ್ನು ಸಾಧಿಸಲಾಯಿತು—ಇದರಂತೆ, ಸುಮಾರು ೩ ಕೋಟಿ ಸ್ಟರ್ಲಿಂಗು ಪರಿಹಾರ ಧನವನ್ನು ಎಣ್ಣೆ ಕಂಪೆನಿಗಳಿಗೆ ಕೊಡಲಾಗುವುದು. ಸರಕಾರದ ಒಡೆತನದಲ್ಲಿಯೇ ಎಣ್ಣೆ ಕಂಪೆನಿಗಳು ಕೆಲಸ ನಡೆಸುತ್ತವೆ. ಹೀಗೆ ಮರಳಿ ಕೆಲಸ ತೊಡಗಿನ ಮೂರು ವರ್ಷಗಳ ಮೇಲಿನ ಹತ್ತು ವರ್ಷಗಳಲ್ಲಿ ಪರಿಹಾರ ಧನವನ್ನು ಕೊಡಲಾಗುವುದು.

ಆಗ್ನೇಯ ಏಶ್ಯಾದ ರಕ್ಷಣೆ

ಶಾಂತಿಯ ವಾತಾವರಣ ಹೀಗೆ ನೆಲೆಗೊಳ್ಳುತಿದ್ದಾಗಲೇ ಅಮೇರಿಕದ ಪತಿಯಿಂದ ಕೆಲವು ಕುಟಿಲ ತಂತ್ರಗಳು ನಡೆಯುತ್ತವೆ. ಆಗ್ನೇಯ ಏಶ್ಯಾ ಸಂರಕ್ಷಣಾ ವ್ಯವಸ್ಥೆಯನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು: ಮುಂದಿನ ತಿಂಗಳಲ್ಲಿ ಈ ಕುರಿತು ಸಮಾಲೋಚನೆ ನಡೆಸಲು ಬ್ರಿಟನು ಕಾಮನವೆಲ್ತು ರಾಷ್ಟ್ರಗಳಿಗೆ ಆಮಂತ್ರಣ ಕೊಟ್ಟಿರುವುದು. ತಟಸ್ಥ ಉಳಿದು, ಶಾಂತಿಯ ವಲಯವನ್ನು ಸಂಘಟಿಸುವ ಇಚ್ಛೆಯುಳ್ಳ ಭಾರತವು ಈ ಕರೆಯನ್ನು ನಿರಾಕರಿಸಿದೆ. ಏಶ್ಯಾದಲ್ಲಿ ಮಹತ್ವದ ಪಾತ್ರ ನಿರ್ವಹಿಸುವ ಕೊಲೊಂಬೋ ಪರಿಷತ್ತಿನ ರಾಷ್ಟ್ರಗಳು ಈ ಸಂಬಂಧದಲ್ಲಿ ಸಭೆ ಸೇರಿ, ತಮ್ಮ ನಿಲುವೆಯನ್ನು ನಿಶ್ಚಳಪಡಿಸಬೇಕೆಂದು ಸಿಂಹಳದ ಪ್ರಧಾನಿ ಕೋಟೆಲವಾಲರು ಸೂಚಿಸಿದ್ದಾರೆ; ಭಾರತ ಇದಕ್ಕೆ ಒಪ್ಪಿದೆ; ಆದರೆ ಇತರ ಮೂರು ರಾಷ್ಟ್ರಗಳ ಅಭಿಮತವೇನೊ ಗೊತ್ತಾಗಿಲ್ಲ.

(೫ನೇ ಪುಟದಿಂದ)

ನ್ನು ನಡೆಸಿ ಉತ್ಪಾದಿಸಲಾದ ಬೀಡಿಗಳ ಮೇಲೆ ಭಾರತ ಸರಕಾರವು ೧೦೦೦ಕ್ಕೆ ಮೂರು ರೂಪಾಯಿಯಷ್ಟು ಭಾರವಾದ ತೆರಿಗೆಯನ್ನು ಹೊರಿಸಿರುತ್ತದೆ. ಗ್ರಾಮಾಂತರ ಭಾರತದಲ್ಲಿ ಆರು ಲಕ್ಷ ಜನಕ್ಕೆ, ಉದ್ಯೋಗವನ್ನು ಒದಗಿಸುತ್ತಿರುವ ಬೀಡಿ ಕಟ್ಟುವಿಕೆಯನ್ನು ಯಂತ್ರಗಳ ಪ್ರವೇಶವು ನಿರ್ನಾಮ ಮಾಡದಂತೆ ನೋಡಿಕೊಳ್ಳುವುದೇ ಈ ತೆರಿಗೆಯ ಉದ್ದೇಶ.

ರ್ಬಾ ಮೆಡಿಕಲ್ ಕಾಲೇಜಿನ ಡಾ। ಸಿ. ಎಚ್. ಶಿವರಾಮನ್, ಅವರು ನೆರವೇರಿಸಿದರು. ಯೂನಿಯನ್ ಅಧ್ಯಕ್ಷ ಶ್ರೀ ಭಾಸ್ಕರ ಸಟ್ಟರ ಸ್ವಾಗತ ಭಾಷಣ; ಶ್ರೀ ಎಚ್. ಕೆ. ರಾಮಚಂದ್ರ ಮೂರ್ತಿಯವರಿಂದ ಅತಿಥಿಯ ಪರಿಚಯ ಮಾತುಗಳಾದುವು. ಡಾ। ಶಿವರಾಮನ್ ರವರು ತಮ್ಮ ಭಾಷಣದಲ್ಲಿ ಎಡಿನ್‌ಬರ್ಗ, ಆಕ್ಸ್‌ಫರ್ಡ, ಲಂಡನ್ ವಿಶ್ವವಿದ್ಯಾಲಯಗಳ ಯೂನಿಯನ್ನುಗಳು ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ವಿವರಿಸಿ ಭಾಷಣವಿತ್ತರು. ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ತಮ್ಮ ಕೊನೆಯ ಮಾತುಗಳಲ್ಲಿ ತಮ್ಮ ವಿಶ್ವವಿದ್ಯಾಲಯಗಳು ವಾಸ್ತವ್ಯದ ಕೇಂದ್ರಗಳಾಗಬೇಕೆನ್ನುವ ಹೆಬ್ಬಯಕೆಯನ್ನು ವ್ಯಕ್ತಪಡಿಸಿದರು. ಕುಮಾರಿ ಅನಸೂಯಾದೇವಿಯವರು ಧನ್ಯವಾದಗಳನ್ನರ್ಪಿಸಿದರು.

ಆಕಾಶವಾಣಿಯಲ್ಲಿ ಭಾಷಣ—ಜಪಾನು ಪ್ರವಾಸವನ್ನು ಮುಗಿಸಿ ಇತ್ತೀಚೆಗೆ ಊರಿಗೆ ಬಂದ ಶ್ರೀ ಟಿ. ರಮೇಶ ಪೈಗಳು ಧಾರವಾಡದ ಆಕಾಶವಾಣಿ ಕೇಂದ್ರದಿಂದ ಇದೇ ತಾ. 10ನೆ ಮಂಗಳವಾರ ಸಂಜೆ 7.30 ರಿಂದ 7.45ರ ತನಕ 'ನವೀನ ಜಪಾನು' ವಿಚಾರದಲ್ಲಿ ಕನ್ನಡದಲ್ಲಿ ಮಾತನಾಡುವರು.

ಪರಿಯಾಳ ಸಮಾಜ ಸುಧಾರಕ ಸಂಘದ—ಕಾರ್ಯಕಾರೀ ಸಮಿತಿ ಸಭೆಯು ಕಳೆದ ತಾ. 29ರಲ್ಲು ಶ್ರೀ ಎಮ್. ಪಿ. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿತು. ಬೊಂಬಾಯಿ ಪರಿಯಾಳ ಹಿತೈಷಿ ಸಂಘದ ಕಡೆಯಿಂದ ಬಡ ವಿದ್ಯಾರ್ಥಿಗಳಿಗೆ ವಿದ್ಯಾವೇತನವಾಗಿ ಬಂದಿದ್ದ ಹಣವನ್ನು ಸಂಬಂಧಪಟ್ಟ ವಿದ್ಯಾರ್ಥಿಗಳ ರಕ್ಷಕರ ಮೂಲಕ ವಿತರಣೆ ಮಾಡಲಾಯಿತು.

ಜೋಗ್ ವಿದ್ಯುಚ್ಛಕ್ತಿ—ಪೂರೈಕೆಯ ಪೂರ್ವಭಾವಿ ಕಾರ್ಯಗಳನ್ನು ಮದ್ರಾಸು ಸರಕಾರವು ಭರದಿಂದ ಮಾಡುತಿದ್ದ ಅದನ್ನು ವರ್ಷಾಂತ್ಯದೊಳಗೆ ಪೂರ್ತಿಗೊಳಿಸುವ ಸಂಭವವಿರುವುದರಿಂದ ಮೈಸೂರು ಕಡೆಯಿಂದಲೂ ಅದು ಬೇಗನೆ ಮುಗಿಯುವಂತಾಗಬೇಕೆಂದು ಮೈಸೂರು ಮುಖ್ಯ ಮಂತ್ರಿ ಕೆ. ಹನುಮಂತಯ್ಯ, ಕೃಷಿ ಮಂತ್ರಿ ನಾಗಣ್ಣ ಗೌಡ ಇವರನ್ನು ಭೇಟಿಯಾಗಿ ಶ್ರೀ ಟಿ. ಎ. ಪೈ, ಎಂ. ಎಲ್. ಎ.ರವರು ಕೇಳಿಕೊಂಡಿರುವರೆಂದೂ ಅವರು ಹಾಗೆ ಮಾಡುವುದಾಗಿ ಭರವಸೆಯಿತ್ತರೆಂದೂ ಗೊತ್ತಾಗಿದೆ.

ಹಿಂದೀ ಪ್ರಚಾರ ಸಭೆ—ಸ್ಥಳೀಯ ಮುಕುಂದ ನಿವಾಸದಲ್ಲಿ ತಾ. 2ರಂದು ದ. ಭಾ. ಹಿಂದೀ ಪ್ರಚಾರ ಸಭೆಯ ಕರ್ನಾಟಕ ಪ್ರಾಂತೀಯ ಕಾರ್ಯದರ್ಶಿ ಶ್ರೀ ಎ. ರಾಮಕೃಷ್ಣ ನಾವಡರು ಹಿಂದೀ ಪ್ರಚಾರಕರ ಸಭೆಯೊಂದರಲ್ಲಿ ಮಾತಾಡುತ್ತಾ ಕೆಲವು ಸಲಹೆಗಳನ್ನು ನೀಡಿದರು. ಉ. ಲ. ಶೆಣೆಯವರು ಸ್ವಾಗತಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಟಿ. ಎ. ಪೈ ವಹಿಸಿದ್ದರು.

ಮಳೆ–ನೆರೆ—ನಾಲ್ಕಾರು ದಿವಸಗಳಿಂದ, ಈ ವರ್ಷ ಎಂದೂ ಬಾರದಷ್ಟು ವಿಶೇಷ ಮಳೆ ಬರುತ್ತಿದ್ದು ಆಸುಪಾಸಿನ ಹೊಳೆಗಳಲ್ಲಿ ನೆರೆಯಾಗಿರುವುದು. ವರ್ಷದ ಸರಾಸರಿ ಮಳೆ 120 ಇಂಚು ಇದ್ದು ಇಷ್ಟರಲ್ಲೇ 100 ಇಂಚಿಗೂ ಮಿಕ್ಕಿ ಮಳೆಯಾಗಿರುವುದೆಂದು ತಿಳಿದು ಬರುತ್ತದೆ.

ಶ್ರೀ. ಎಂ. ಹರಿದಾಸರಾಯರ ನಿಧನ—ಉಡುಪಿ ಸಮೀಪದ ಮೂಡಹಳ್ಳಿ ಪಳ್ಳಿಯವರಾಗಿದ್ದು, ಹುಬ್ಬಳ್ಳಿಯಲ್ಲಿ ನೆಲಸಿಕೊಂಡು ಸಂಯುಕ್ತ ಕರ್ನಾಟಕದ ಉಪಸಂಪಾದಕ, ಸರ್ವೋದಯ ಸಾಹಿತ್ಯಮಾಲೆಯ ಸಂಪಾದಕರಾಗಿ ಜನಪ್ರಿಯರಾಗಿದ್ದ ಶ್ರೀ ಎಂ. ಹರಿದಾಸ ರಾಯರು ಕಳೆದ ತಾ. 29ರಲ್ಲಿ ಮೋಟಾರು ಅಪಘಾತಕ್ಕೊಳಗಾಗಿ ಮೃತರಾದರೆನ್ನಲು ಅತ್ಯಂತ ವಿಷಾದಿಸುತ್ತೇವೆ. ಮೃತರು ಸುಮಾರು 37 ವರ್ಷದ ಉತ್ಸಾಹಿ ತರುಣರಿದ್ದು, 1942ರಲ್ಲಿ ಭಾರತ ಸ್ವಾತಂತ್ರ್ಯ ಸಮರದಲ್ಲಿ ಕಾರಾಗೃಹವಾಸವನ್ನು ಅನುಭವಿಸಿದವರು. ಇವರು ಅನೇಕ ಪುಸ್ತಕಗಳನ್ನು ಬರೆದೂ, ಬರೆಸಿಯೂ ಪ್ರಕಟಿಸಿದ್ದಾರೆ. ಮೃತರ ಪತ್ನಿ ಮತ್ತು ಇಬ್ಬರು ಪುತ್ರರ ದುಃಖದೊಂದಿಗೆ ನಾವೂ ಸಹಾನುಭೂತಿಪಡುವೆವು.

ಪುತ್ತೂರು—ಸ್ಥಳೀಯ ಬೋರ್ಡು ಹ್ಯಾಸ್ಕೂಲಿನಲ್ಲಿ ಕಳೆದ ತಾ. 24ರಲ್ಲು ಶ್ರೀ ಕೆ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜಾಗತಿಕ ಆರೋಗ್ಯ ದಿನಾಚರಿಸಲ್ಪಟ್ಟಿತು. ಶ್ರೀಗಳಾದ ಎಚ್. ಪುಂಡಲೀಕ ಭಟ್, ಬಿ. ರಾಮಚಂದ್ರ ರಾವ್, ಕೆ. ಎಸ್. ಮಲ್ಯ, ಎಚ್. ಎಸ್. ನಾಯಕ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು.

ಬೆಳ್ಮಾರೆ—ಇಲ್ಲಿಯ ಬೋರ್ಡು ಹ್ಯಾಸ್ಕೂಲ್ ಪಾರ್ಲಿಮೆಂಟಿನ ಸಭಾಪತಿಗಳಾಗಿ ಶ್ರೀ ಕುತ್ಯಾಡಿ ಸುಬ್ಬರಾಯರು ಆರಿಸಲ್ಪಟ್ಟಿರುವ ಹೈಸ್ಕೂಲಿನ ಹಿರಿಯ ಹಾಗೂ ಕಿರಿಯ ವಾಗ್ಮಿಗಳ ಪ್ರಥಮ ಸಭೆಯು ಪ್ರೊ. ಇನ್ಸ್‌ಪೆಕ್ಟರ್ ತಂತ್ರಿಯವರ ಅಧ್ಯಕ್ಷತೆಯಲ್ಲಿ ಶ್ರೀ ಬಿ. ಕಿಣ್ಣಣ್ಣ ನಾಯ್ಕರಿಂದ ಉದ್ಘಾಟಿಸಲ್ಪಟ್ಟಿತು.

ಪಾಬೆಟ್ಟು—ಇಲ್ಲಿಯ ಶ್ರೀ ಶಾರದಾ ಭವನ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಅಚ್ಯುತ ಪೈಗಳವರು 'ಭಕ್ತಸುಧಾಮ' ಹರಿಕಥಾ ಕಾಲಕ್ಷೇಪನಿತ್ತರು.

ಪೆರಂಪಳ್ಳಿ—ಕಳೆದ ತಾ. 27ರಲ್ಲು ಇಲ್ಲಿಯ ಶ್ರೀ ಪಿ. ಎಸ್. ರಾಮರಾಯರ ಮನೆಯಲ್ಲಿ ಶ್ರೀ ಬಾಳ್ಕುದ್ರು ಸಣ ಭಟ್ಟರಿಂದ 'ಧ್ರುವ ಚರಿತ್ರೆ'ಎಂಬಹರಿಕಥಾ ಕಾಲಕ್ಷೇಪ ನಡೆಸಲ್ಪಟ್ಟಿತು. ಕಕ್ಕುಂಜೆ ಯಕ್ಷಗಾನ ಸಂಘದ ವತಿಯಿಂದ 'ಕೃಷ್ಣ ಸಂಧಾನ'ವೆಂಬ ಯಕ್ಷಗಾನ ತಾಳಮದ್ದಳೆ ಕೂಟವೂ ಜರಗಿತು.

ಪೊಳಲಿ—ಕಳೆದ ತಾ. 27ರಲ್ಲು ಶ್ರೀ ರಾಜರಾಜೇಶ್ವರಿ ದೇವಸ್ಥಾನದ ಹೊರಾಂಗಣದಲ್ಲಿ ಗ್ರಾಮಸ್ಥರಸಭೆಯೊಂದು ಶ್ರೀ ಕೆ. ಎಲ್. ಸೂರ್ಯನಾರಾಯಣ ರಾವ್, ಆಸಿಸ್ಟಂಟ್ ಪ್ರೊಜೆಕ್ಟ್ ಆಫೀಸರ್, ಮಂಗಳೂರು ಅವರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಾಭಿವೃದ್ಧಿ ಸಂಘ ಸ್ಥಾಪಿಸಲಾಯಿತು. ಶ್ರೀಗಳಾದ ಅಚ್ಯುತ ಪಟ್ಲರು ಅಧ್ಯಕ್ಷರಾಗಿಯೂ, ಎಸ್. ಎ. ಶೀನಪ್ಪ ಹೆಗ್ಡೆಯವರು ಕಾರ್ಯದರ್ಶಿಗಳಾಗಿಯೂ ಕೆ. ಐತಪ್ಪ ಪೂಜಾರಿ ಖಜಾನ್ಜಿಯರಾಗಿಯೂ ಆರಿಸಲ್ಪಟ್ಟರು. ಸಂಘವು ಕೈಕೊಳ್ಳಬೇಕಾದ ಕೆಲವು ಕಾರ್ಯಕ್ರಮಗಳನ್ನು ಈ ಸಭೆಯಲ್ಲಿ ನಿರ್ಧರಿಸಲಾಯಿತು.

ಪೆರ್ಡೂರು ಪುತ್ತಿಗೆ—ಇಲ್ಲಿಯ ಹೊಳೆಗೆ ಸೇತುವೆ ಕಟ್ಟಿ ಅದರ ಆರಂಭೋತ್ಸವವು ಜರಗಿ ಎರಡು ತಿಂಗಳು ಆಗಿ ಹೋದರೂ ಇನ್ನೂ ಬಸ್ಸುಗಳ ಸೇವಾ ಚಲಾವಣೆಗೆ ಬಸ್ ಕಂಪೆನಿಯವರಿಗೆ ರೀಜನಲ್ ಟ್ರಾನ್ಸ್‌ಪೋರ್ಟ್ ಆಫೀಸರರಿಂದ ಹುಕುಮ ದೊರೆಯಲಿಲ್ಲವೆಂದೂ ಬಸ್ಸುಗಳು ಸಂಕದಿಂದ ಮೂರು ಫರ್ಲಾಂಗು ದೂರದಲ್ಲಿ ನಿಂತು ಪ್ರಯಾಣಿಕರ ವ, ಅವರ ಸಾಮಾನುಗಳ ಬದಲಾವಣೆಯ ಸಂಕಷ್ಟವನ್ನು ಹೇಳತೀರದೆಂದೂ ಪ್ರಯಾಣಿಕರೊಬ್ಬರು ಬರೆಯುತ್ತಾರೆ.

ಮಲ್ಪೆ—ಸ್ಥಳೀಯ ಸರಕಾರಿ ಫಿಶರೀಸ್ ಹ್ಯಾಸ್ಕೂಲಿನ ವಿದ್ಯಾರ್ಥಿ ಮುಖಂಡರಾಗಿ ಶ್ರೀ ಗುಡ್‌ವಿಲ್ ಕರ್ಕಡರೂ, ಉಪನಾಯಕರಾಗಿ ಶ್ರೀ ಸ್ಟೇನಿ ಡಿ'ಸೋಜರೂ ಆರಿಸ್ಪಟ್ಟಿರುವರು.

ಫಲಿಮಾರು—ದ. ಕ. ಜಿಲ್ಲಾ ವಿದ್ಯಾಧಿಕಾರಿಗಳ ಪರ್ಸನಲ್ ಅಸಿಸ್ಟಂಟ್ ಶ್ರೀ ಟಿ. ಎಲ್. ರಾಯರು ಕಳೆದ ತಾ. 28ರಲ್ಲು ಇಲ್ಲಿಯ ಬೋರ್ಡು ಹಾ। ಎ। ಶಾಲೆಯನ್ನು ಸಂದರ್ಶಿಸಿದರು. ಒಂದು ಸಾವಿರಕ್ಕೂ ಜಾಸ್ತಿ ಜನಸಂಖ್ಯೆಯುಳ್ಳ ಈ ಶಾಲೆಗೆ ಇನ್ನೆರಡು ಅಧ್ಯಾಪಕರ ಮತ್ತು ಇತರ ಸಲಕರಣೆಗಳ ಆವಶ್ಯಕತೆಯನ್ನು ಸೂಚಿಸಿ ರಿಮಾರ್ಕು ಬರೆದಿರುವರು.

ಜಿಲ್ಲಾ ಬೋರ್ಡು ಚುನಾವಣೆಗಳು—ಪ್ರಾಂತದ 13 ಜಿಲ್ಲಾ ಬೋರ್ಡುಗಳ ಚುನಾವಣೆಗಳು ಮುಂಬರುವ ಸಪ್ಟಂಬರ ಮತ್ತು ಆಕ್ಟೋಬರ್ ತಿಂಗಳುಗಳಲ್ಲಿ ಜರಗುವವು. ಈ ಬಗ್ಗೆ ಜಿಲ್ಲೆಗಳನ್ನು 4 ಗುಂಪುಗಳಾಗಿ ಮಾಡಿ, ಮತದಾನಕ್ಕೆ ಪ್ರತಿ ಜಿಲ್ಲೆಯನ್ನು ಇಬ್ಭಾಗಿಸಲಾಗಿದೆ. 4ನೇ ಗುಂಪಿನಲ್ಲಿ ಮಲಬಾರು ಮತ್ತು ದ. ಕ. ಜಿಲ್ಲೆಗಳಿವೆ. ದಕ್ಷಿಣ ಕನ್ನಡದ 1 ಕುಂದಾಪುರ 2 ಉಡುಪಿ 3 ಕಾರ್ಕಳ ಇವು ೧ನೇ ಭಾಗ, 4 ಮಂಗಳೂರು 5 ಪುತ್ತೂರು 6 ಕಾಸರಗೋಡು ಇವು 2ನೆ ಭಾಗ

ಚುನಾವಣೆಯ ಕಾರ್ಯಕ್ರಮ:-ನೋಟೀಸು ಪ್ರಕಟಣೆ ತಾ. 30-8-54. ನಾಮಪತ್ರಗಳ ಸ್ವೀಕಾರ ತಾ. 13 ಮತ್ತು 14-9-54. ನಾಮಪತ್ರಗಳ ಪರಿಶೀಲನೆ ತಾ. 15-9-54. ಕ್ರಮಬದ್ಧವಾಗಿರುವ ನಾಮಪತ್ರಗಳ ಬಗ್ಗೆ ಅಪೀಲು ಇಲ್ಲವಾದರೆ ಅವುಗಳ ಪ್ರಕಟಣೆ ತಾ. 20-9-54 ಜಿಲ್ಲೆಯ 1ನೇ ಭಾಗದಲ್ಲಿ ಮತದಾನ ತಾ. 17-10-54 ಜಿಲ್ಲೆಯ 2ನೆ ಭಾಗದಲ್ಲಿ ಮತದಾನ ತಾ. 20-10-54 1ನೆ ಭಾಗದ ಮತ ಗಣನೆ ತಾ. 21-10-54 2ನೆ ಭಾಗದ ಮತ ಗಣನೆ ತಾ. 23-10-54 ಮತದಾನ ಪತ್ರದಲ್ಲಿ ಗುರುತು ಹಾಕಿ ಮತದಾನ ಮಾಡಬೇಕು. ಚುನಾವಣೆಗೆ ನಿಂತ ಪ್ರತಿಯೊಬ್ಬನಿಗೆ ಒಂದೊಂದು ಸಂಖ್ಯೆ ಮತ್ತು ಚಿನ್ಹೆ ಕೊಡಲಾಗುವುದು. ಮತದಾರನು ತನ್ನ ಸ್ವಾಸಾಥಿಯ ಚಿ[illegible]ತದಾನ ಪತ್ರದಲ್ಲಿರುವಲ್ಲಿ ಪೆನ್ಸಿಲಿನಿಂದ ಗು[illegible] ಹಾಕಬೇಕು.

ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳಲ್ಲಿ—ಈ ಹಿಂದೆ ಕಾಂಗ್ರೆಸ್ ಧ್ಯೇಯದಂತೆ ಸ್ವಾತಂತ್ರ್ಯದ ಪೂರ್ವದಲ್ಲಿ ಸ್ಥಾಪಿಸಲ್ಪಟ್ಟು ಈ ವರೆಗೆ ಸತತ ನಡೆದು ಸರಕಾರದ ಮಾನ್ಯತೆ ಪಡೆದ ಮುಂಬಯಿ ರಾಜ್ಯದಲ್ಲಿರುವ ಕೆಲವೊಂದು ಗ್ರೇಂಟ್ ಇನ್ ಏಡ್ ಶಾಲೆಗಳಿಗೆ ಸರಕಾರ ಸ್ಕೂಲ್ ಬೋರ್ಡಿನಿಂದ ಕಳೆದ ಸನ್ ೧೯೫೩—೫೪ನೇ ಸಾಲಿನ ಸಹಾಯ ಧನವನ್ನು ಈ ವರೆಗೆ ಕೊಡದ ಕಾರಣ ಅಂಥ ಶಾಲೆಗಳ ಕೆಲವೊಂದು ಸಂಚಾಲಕರು ತಮ್ಮ ಶಾಲೆಗಳನ್ನು ಇದೇ ಬರುವ ಅಗಸ್ಟ ೧೫ನೇ ಸ್ವಾತಂತ್ರ್ಯ ದಿನದಂದಿನಿಂದ ಮುಚ್ಚಲು ನಿರ್ಧರಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಬರೆದು ತಿಳಿಸಿದ್ದರಾಗಿ ತಿಳಿದು ಬರುತ್ತದೆ. ಕಾರಣ ಮುಂಬಯಿ ರಾಜ್ಯದ ಶಿಕ್ಷಣ ಮಂತ್ರಿಗಳು ಮಿತವ್ಯಯದಿಂದ ಸಾಗುವ ಹಳ್ಳಿಯ ಇಂಥ ಶಾಲೆಗಳ ಬಗ್ಗೆ ಲಕ್ಷ್ಯ ಕೊಟ್ಟು ಸಂಚಾಲಕರಿಗೆ ಸಲಹೆ ಸಹಾಯ ನೀಡುವ ಆಶ್ವಾಸನವನ್ನು ಕೊಟ್ಟು ಶಾಲೆಗಳನ್ನು ಮುಚ್ಚದಂತೆ ವ್ಯವಸ್ಥೆ ಮಾಡಬೇಕಾಗಿ ಒರ್ವ ಶಿಕ್ಷಣಾಭಿಮಾನಿಗಳು ಬಿನ್ನೈಸುತ್ತಾರೆ.

ಪ್ರಕಟಣೆ

ಬೆಳ್ತಂಗಡಿ ತಾಲೂಕು ಶಿಬಾಜೆ ಗ್ರಾಮದ ಮೇಜಿನ ಅಜಿರಡ್ಕದಲ್ಲಿರುವ ಶಿವಳ್ಳಿ ಬ್ರಾಹ್ಮಣ ವರ್ಗದಾರ ರಾಮಕೃಷ್ಣಯ್ಯನವರ ಮಗ ಲಕ್ಷ್ಮಣಯ್ಯನು ಸಮಸ್ತ ಜನರಿಗೆ ತಿಳಿಯಪಡಿಸುವದೇನಂದರೆ—

ನನ್ನ ತಂದೆ ಮೇಲೆ ಹೆಸರು ಕಾಣಿಸಿದ ರಾಮಕೃಷ್ಣಯ್ಯ ಎಂಬವರು—ವ—ನಾನು ಸಮಿಷ್ಟಿ ಪಕ್ಷನಿಂದ ಅನುಭವಿಸುವ ಪಿತ್ರಾರ್ಜಿತ ಆಸ್ತಿಯನ್ನು ಅವರು ಇತ್ತೀಚೆಗೆ ದುರ್ವಿನಿಯೋಗಪಡಿಸುವ ಇರಾಧೆ ಕಂಡುಬರುತ್ತದೆ. ಗಾಣಿಗ ಜಾತಿಯ ಕಾವೇರಿ ಎಂಬವಳಿಂದ ವ್ಯಭಿಚಾರದಲ್ಲಿ ಜನಿಸಿರುವ ಸುಬ್ರಾಯ—ರಾಮಚಂದ್ರ ಎಂಬ ಯೌವನಸ್ಥ ಮಕ್ಕಳಿರುತ್ತಾರೆ. ಸದ್ರಿ ರಾಮಕೃಷ್ಣಯ್ಯನು ವ್ಯಭಿಚಾರ—ವ—ಇತರ ದುರಾಚಾರಗಳಿಂದ ತನ್ನ ದೇಹವನ್ನೂ ಬುದ್ಧಿಯನ್ನೂ ಕೆಡಿಸಿಕೊಂಡು ಈಗ ಕೆಲವು ಸಮಯದಿಂದ ಬುದ್ಧಿಸ್ವಾಧೀನ ಇಲ್ಲದೆ, ಸದ್ರಿ ಕಾವೇರಿ—ವ—ಅವಳ ಮಕ್ಕಳ, ಮತ್ತು ಮಗಳನ್ನು ಇಟ್ಟುಕೊಂಡಿರುವವರ ಪ್ರಭಾವಕ್ಕೊಳಗಾಗಿ, ಅವರ ಪ್ರೇರೇಪಣೆಗೊಳಪಟ್ಟು ಇರುತ್ತಾರೆ. ಈಗ ಕೆಲವು ವರ್ಷಗಳಿಂದ ನನ್ನನ್ನು ವಂಚಿಸಿ, ಪಿತ್ರಾರ್ಜಿತ ಆಸ್ತಿಗೆ ಅನ್ಯಾಯವಾಗಿ ಸಾಲ ಹೊರಿಸಲು—ವ, ತೋರಿಸಲು ಮತ್ತು ಇತರ ರಿಕಾರ್ಡು ಮಾಡಿ ಆಸ್ತಿಯನ್ನು ಸದ್ರಿ ಕಾವೇರಿಗೂ ಅವಳ ಮಕ್ಕಳಿಗೂ ಕೊಡಲು ಯತ್ನ ನಡಿಸುತ್ತಿದ್ದಾರೆ. ಈ ರೀತಿ ಮಾಡಲು ಸದ್ರಿಯವರಿಗೆ ಯಾವ ಹಕ್ಕೂ, ಸ್ವಾತಂತ್ರ್ಯವೂ, ಅಗತ್ಯವೂ ಇಲ್ಲ—ಸದ್ರಿ ಆಸ್ತಿಗ ನಾನೊಬ್ಬನೇ ಸಂಪೂರ್ಣ ಹಕ್ಕುದಾರನಾಗಿರುತ್ತೇನೆ. ಸದ್ರಿ ಆಸ್ತಿಗೆ ಈ ತನಕ ಏನೂ ಸಾಲವಿಲ್ಲ—ಇನ್ನು ಸಾಲ ಮಾಡುವ ಅಗತ್ಯವೂ ಪ್ರಸ್ತುತ ಇರುವುದಿಲ್ಲ—ಈ ಮೊದಲೇ ಸದ್ರಿ ಕಾವೇರಿಗೂ ಅವಳ ಮಕ್ಕಳಿಗೂ ಸದ್ರಿಯವರು ಹೇರಳ ನಗದಿ ಐವೆಜ್ಜು ಕೊಟ್ಟಿರುತ್ತಾರೆ.

ಆದ್ದರಿಂದ ಸದ್ರಿ ರಾಮಕೃಷ್ಣಯನು ಆಸ್ತಿ ಕುರಿತು ಮಾಡಬಹುದಾದ ಯಾವ ಯೋಜೆ, ಪರಭಾರೆ, ಅಡವು ಕ್ರಯಸಾಧನ, ವ, ಶಾಸನ ಇತ್ಯಾದಿ ರಿಕಾರ್ಡುಗಳೂ, ಚರಸೊತ್ತಿನ ಪರಾಧೀನಗಳೂ, ನೋಟು, ಕೈಕಾಗದ, ಕರಾರುಗಳೂ ಸಿಂಧುವಲ್ಲವೆಂತಲೂ, ಮಾಡಿಸುವವರಿಗೆ ಫಲ ಸಿಗಲಾರದೆಂತಲೂ ತಿಳಿಸೋಣಾಗಿಯದೆ.

ತಾ. 23—7—54. ಲಕ್ಷ್ಮಣಯ್ಯ.

ಪ್ರಕಟಣೆ

ಸೂರ್ಯ ಸಂಕ್ರಾಂತಿ ನಿರ್ಣಯ

ಬರುವ ಸಿಂಹ ಸಂಕ್ರಮಣವು ಶುದ್ಧ ಗಣಿತ ರೀತ್ಯಾ ಆಗೋಸ್ತು 16ನೇ ಸೋಮವಾರ ಕ್ಕು, ಬರುವ ಕನ್ಯಾ ಸಂಕ್ರಮಣವು ಸಪ್ಟಂಬರ ತಾ 16ನೇ ಗುರುವಾರವೂ ಆಗುವದು. ಈಗ ಸಂಶೋಧಿತವಾದ ಗಣಿತ ಕ್ರಮದಿಂದ ತಯಾರಿಸಿದ ಶುದ್ಧ ಪಂಚಾಂಗಗಳಲ್ಲೆಲ್ಲಾ ಹೀಗೆ ಇರುವುದು—ಪೂರ್ವಾಚಾರ್ಯರು ಈ ರೀತಿಯಲ್ಲಿ ಬರುವ ಸಂಕ್ರಮಣ ಕಾಲವನ್ನೆ ಆಚರಿಸಬೇಕೆಂದು ಹೇಳಿದ್ದಾರೆ. ಸೂರ್ಯ ಸಿದ್ಧಾಂತ ಆರ್ಯ ಸಿದ್ಧಾಂತಾದಿ ಪುರಾತನ ಗಣಿತ ಕ್ರಮವು ಗುಣ ಹಾರಗಳ ಲೋಪಾಂಶದಿಂದಲೂ, ರವಿಗತಿಯ ಅವಯವಗಳ ಕಾಲಾಂತರ ವ್ಯತ್ಯಾಸದಿಂದಲೂ, ಭೂ ರವಿಗಳ ಕಾಲಾಂತರ ಸಾಮೀಪ್ಯದಿಂದಲೂ ಈಗ ಸರಿ ಬಾರದಿರುವುದರಿಂದ ಸಂಕ್ರಾಂತಿ ಮೊದಲಾದ ಗಣಿತ ವಿಷಯದಲ್ಲಿ ಅಶುದ್ಧವಾದ ಪುರಾತನ ಗಣಿತಗಳನ್ನು ತೆಗೆದು ಕೊಳ್ಳಬಾರದೆಂದು ಪುರಾತನ ಗ್ರಂಥದಲ್ಲಿಯೇ ಇದೆ—ಸೂರ್ಯ ಸಿದ್ಧಾಂತ ಆರ್ಯ ಸಿದ್ಧಾಂತ ಪಂಚಾಂಗಗಳಲ್ಲಿ ಈ ಸಂಕ್ರಮಣ ಕಾಲವು ಶುದ್ಧ ದೃಕ್ ಪಂಚಾಂಗದಲ್ಲಿ ಕಾಣುವ ಸಂಕ್ರಮಣ ಕಾಲಕ್ಕಿಂತ ವೃದ್ಧಿಯಾಗಿದ್ದು ಸೂರ್ಯ ಸಿದ್ಧಾಂತ ರೀತಿಯಲ್ಲಿ ಮರು ದಿನಕ್ಕೆ ಮುಟ್ಟಿರುವುದರಿಂದ ಒಂದು ದಿನ ಅಭ್ಯಂತರವಾಗಿ ಕಂಡು ಬರುತ್ತದೆ—ಅತೀಂದ್ರಿಯ ಜನ್ಯವಾದ ಸಾಕ್ಷಾತ್ ಜ್ಯೋತಿಶ್ಶಾಸ್ತ್ರಯನಕ್ಕೆ ಇದು ಶುದ್ಧ ವಿರುದ್ಧವಾದ್ದರಿಂದ ಧರ್ಮಾಚಾರಾಪೇಕ್ಷೆ ಉಳ್ಳವರು ಸಂಕ್ರಾಂತಿ ಸಂಬಂಧವಾದ ಪೂಜೋತ್ಸವಾದಿಗಳನ್ನು ಆಗೋಸ್ತು 16ನೆ ಸೋಮವಾರದಲ್ಲಿಯೂ ಸಪ್ಟಂಬರ ತಾ. 16ನೇ ಗುರುವಾರದಲ್ಲಿಯೂ ಆಚರಿಸತಕ್ಕವೆಂದು ತಿಳಿಸಲಾಗಿದೆ.

ಇತಿ ಶ್ರೀಪತಿಪಂಚಾಂಗ ಸಂಪಾದಕ.

ಆಗೋಸ್ತು ೧೫

ಭಾರತ ಸ್ವಾತಂತ್ರ್ಯೋತ್ಸವದ ಎಂಟನೇ ವಾರ್ಷಿಕೋತ್ಸವದ ಸುಸಂದರ್ಭದಲ್ಲಿ

"ನವಯುಗ"ವು

ನಾಡಿಕೆಯಂತೆ ವಿಶೇಷ ಸಂಚಿಕೆಯನ್ನು ಹೊರಡಿಸುವುದು.

ಸಂದರ್ಭೋಚಿತವಾದ ಲೇಖನ ಕವನಗಳಿಂದೊಡಗೂಡಿದ ಈ ಸಂಚಿಕೆ ನಿಶಿಷ್ಟವಾದ ಆಕರ್ಷಣೆಯುಳ್ಳದ್ದೂ ವೈವಿಧ್ಯಪೂರ್ಣವೂ ಆಗುವುದು.

ಈ ಸಂಚಿಕೆಯ ಪ್ರಕಟಣೆಗೆಂದು ಜಾಹೀರಾತುಗಳನ್ನು ಆಗೋಸ್ತು ಮೊದಲನೇ ವಾರದ ವರೆಗೆ ಸ್ವೀಕರಿಸಲಾಗುವುದು. ಜಾಹೀರಾತುದಾರರು ತ್ವರೆ ಮಾಡಬೇಕೆಂದು ವಿನಂತಿ.

ಬೆಲೆ ಬರೇ 0—2—0. ಮೂರಾಣೆ ಸ್ಟಾಂಪು ಕಳಿಸಿದರೆ ಪ್ರತಿಯೊಂದನ್ನು ಬುಕ್ ಪೋಸ್ಟು ಮಾಡಬಹುದು.

ಮೆನೇಜರ್, ನವಯುಗ, ಉಡುಪಿ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ನಡಿಯುವ ಚಿತ್ರ:
ನರ್ಗಿಸ್—ರಾಜ್ ಕಪೂರ್—ಅಶೋಕ್ ಕುಮಾರ್ ನಟಿಸಿದ
ಬೇವಫಾ (ಹಿಂದಿ)
ಅನಂತರ:— ಫಿಲ್ಮಿಸ್ತಾನದವರ ನಕ್ಕು ನಗಿಸುವ
ಶ್ರೀಮತಿಜೀ (ಶ್ಯಾಮಾ, ನಸೀರ್ ಖಾನ್)
ತಾ. 8—8—54ರಂದು ಆದಿತ್ಯವಾರ ಬೆಳಗ್ಗೆ ಗಂಟೆ 10ಕ್ಕೆ
ON THE TOWN (ಹಾಸ್ಯ ಚಿತ್ರ)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಉದ್ಘಾಟನೆ— ಗವರ್ನಮೆಂಟ್ ಟ್ರೈನಿಂಗ್ ಕಾಲೇಜಿನ ಸೆಕೆಂಡರಿ ವಿಭಾಗದ ವಿದ್ಯಾರ್ಥಿ ಅಧ್ಯಾಪಕ ಸಂಘವನ್ನು ಕಳೆದ ತಾ. 28ರಲ್ಲಿ ಶ್ರೀ ಬಿ. ಆರ್. ಗೋಪಾಲಕೃಷ್ಣ ರಾಯರು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಪಿ. ಬೆರ್ನಾರ್ಡ್ ಮ್ಯೊಯರು ವಹಿಸಿದ್ದರು. ಶ್ರೀ ಎಮ್. ಶಿವರಾಯ ಆಚಾರರು ಅತಿಥಿಗಳ ಪರಿಚಯಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ ಶಂಕರನ್ ನಂಬಿಯಾರರು ವಂದನೆಗಳನ್ನರ್ಪಿಸಿದರು.

ಅಧಿಕಾರಿ ವರ್ಗದ ಚುನಾವಣೆ— ಗವರ್ನಮೆಂಟ್ ಆರ್ಟ್ಸ್ ಕಾಲೇಜ್ ಯೂನಿಯನ್ನಿನ ಅಧಿಕಾರಿಗಳ ಚುನಾವಣೆಯು ತಾ. 30ರಲ್ಲಿ ಜರಗಿ ಶ್ರೀಗಳಾದ ಪಿ. ವಿಶ್ವನಾಥ ರೈಗಳು ಅಧ್ಯಕ್ಷರಾಗಿಯೂ ಶ್ರೀ ಕೆ. ಸುಂದರನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಜಿಲ್ಲಾ ಬೋರ್ಡಿನ ಆಡಳಿತ ವರದಿ— 1953—54ನೆ ವರುಷದ ದ. ಕ. ಜಿಲ್ಲಾ ಬೋರ್ಡಿನ ಆಡಳಿತ ವರದಿಯಲ್ಲಿ ಬೋರ್ಡಿನ ಆರ್ಥಿಕ ಪರಿಸ್ಥಿತಿ ಉತ್ತಮವಾಗಿಲ್ಲವೆನ್ನಲಾಗಿದೆ. ವರದಿ ವರ್ಷವು ರೂಪಾಯಿ 88½ ಸಾವಿರದ ಕೊರತೆಯಿಂದ ಅಂತ್ಯವಾಗಿದೆ. ಈ ಐವಜಿಗೆ ಹಿಂದಿನ ಕೊರತೆಯನ್ನು ಸೇರಿಸಿದರೆ ಎರಡು ಲಕ್ಷಕ್ಕೆ ಬರುವುದು. ಈ ಪರಿಸ್ಥಿತಿಯಲ್ಲಿ ಹೊಸ ಕಾಮಗಾರಿಗಳನ್ನು ಕೈಕೊಳ್ಳಲು ಸಾಧ್ಯವಾಗಲಿಲ್ಲ. ದ. ಕ. ಜಿಲ್ಲೆಯಲ್ಲಿರುವ ಪ್ರಾಥಮಿಕ ಶಾಲೆಗಳ ಸಂಖ್ಯೆ 1258. ಈ ಪೈಕಿ 568 ಶಾಲೆಗಳು ಬೋರ್ಡಿನ ಆಡಳಿತದಲ್ಲಿವೆ. ಇವುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ 71,000. ಜಿಲ್ಲೆಯಲ್ಲಿರುವ 70 ಹೈಸ್ಕೂಲುಗಳ ಪೈಕಿ 13 ಹೈಸ್ಕೂಲುಗಳು ಬೋರ್ಡಿನ ಅಂಕಿತದಲ್ಲಿದ್ದು 1472 ಮಂದಿ ವಿದ್ಯಾರ್ಥಿಗಳು ಓದುತ್ತಿದ್ದಾರೆ. ಬೋರ್ಡಿನ ಆಡಳಿತೆಯಲ್ಲಿ 17 ಮಾತೃತ್ವ ಮತ್ತು ಶಿಶು ಕ್ಷೇಮ ಕೇಂದ್ರಗಳಿವೆ. 41 ವೈದ್ಯಕೀಯ ಸಂಸ್ಥೆಗಳನ್ನೂ ಬೋರ್ಡು ನಡೆಸುತ್ತಿದೆ. ಮಲೇರಿಯಾ ವಿರುದ್ಧ ಕೈಕೊಂಡ ಕಾರ್ಯಕ್ರಮಗಳು ಫಲದಾಯಕವಾಗಿವೆ.

ಹಿಂದೀ ಸಮ್ಮೇಳನ— ದ. ಕ. ಜಿಲ್ಲೆಯ ಹಿಂದೀ ಪಂಡಿತರ, ಪ್ರಚಾರಕರ ಮತ್ತು ಅಧ್ಯಾಪಕರ ಸಮ್ಮೇಳನವೊಂದು ಕಳೆದ ತಾ. 25ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಕೇಶವ ರಾಯರು ತಮ್ಮ ಸ್ವಾಗತ ಭಾಷಣದಲ್ಲಿ ಮದ್ರಾಸು ಸರಕಾರದ ಹಿಂದೀ ಧೋರಣೆ, ಈಚೆಗೆ ಬಂದ ಸರಕಾರದ ಆಜ್ಞೆ ಕುರಿತು ಪ್ರಸ್ತಾಪಿಸಿದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ ಅವರು ಸಮ್ಮೇಳನವನ್ನು ಉದ್ಘಾಟಿಸುತ್ತಾ ಮದ್ರಾಸು ಸರಕಾರದ ಹಿಂದೀ ಧೋರಣೆಯು ಸರಿಯಲ್ಲವೆಂಬುದನ್ನು ತಿಳಿಸಿ ಈ ರೀತಿಯ ಅನಾದರವನ್ನು ಖಂಡಿಸಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹಿಂದಿಗೆ ಯೋಗ್ಯ ಸ್ಥಾನವು ಶಿಕ್ಷಣ ಕ್ರಮದಲ್ಲಿರಬೇಕೆಂದು ತಿಳಿಸಿ ಅಧ್ಯಾಪಕರಿಗೆ ಹೆಚ್ಚಿಗೆ ಸಂಬಳ ಕೊಡಲು ಸರಕಾರಕ್ಕಿರುವ ಅಡಚಣೆಗಳನ್ನು ತಿಳಿಸಿದರು. ಹಿಂದೀ ಭಾಷೆಗೆ ಹೈಸ್ಕೂಲುಗಳಲ್ಲಿ ವಿಶಿಷ್ಟ ಸ್ಥಾನವೀಯಬೇಕು. ಹಿಂದೀ ಪಂಡಿತರಿಗೂ ಇತರ ಭಾಷಾ ಪಂಡಿತರ ಸ್ಥಾನ ವೀಯಬೇಕು. ಪರಿಪೂರ್ಣ ಹೈಸ್ಕೂಲುಗಳಲ್ಲಿ ಪ್ರಥಮ ಶ್ರೇಣಿಯ ಪಂಡಿತರ ಸ್ಥಾನ ಕೊಡಬೇಕು. ಒಬ್ಬರಿಗಿಂತ ಹೆಚ್ಚು ಪಂಡಿತರಿರುವಲ್ಲಿ ಮಾತ್ರ 17 ತಾಸುಗಳ ನಿಯಮವನ್ನು ಜಾರಿಗೆ ತರಬೇಕು. ಈಗಿರುವ ಪ್ರಥಮ ಶ್ರೇಣಿಯ ಪಂಡಿತರಿಗೆ ಸರಕಾರದ ಈಚೆಗಿನ ಆಜ್ಞೆಯನ್ನು ಅನ್ವಯಿಸಬಾರದು ಎಂಬರ್ಥವುಳ್ಳ ನಿರ್ಣಯವನ್ನು ಶ್ರೀ ಎಸ್. ರತ್ನಾಕರ ಕಾಮತರು ಸೂಚಿಸಿದರು. ಅದು ಮಂಜೂರಾಯಿತು.

ಸ್ವಾತಂತ್ರ್ಯ ದಿನಾಚರಣೆಯನ್ನು— ಯಶಸ್ವಿಯಾಗಿ ತಾ. 15ರಲ್ಲಿ ಆಚರಿಸಲು ಸರ್ಕಲ್ ಕಾಂಗ್ರೆಸ್ ಕಮಿಟಿ ಸಭೆಯು ತಾ. 1ರಲ್ಲಿ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಸಮಿತಿಗಳನ್ನು ರಚಿಸಲಾಯಿತು.

ಕವಿ ಮುದ್ದಣನ— ಜೀವನದ ಕುರಿತು ಮಂಗಳೂರಿನ ಶ್ರೀ ಮುಳಿ ಭೀಮರಾಯರ ಕಾರ್ಯಕ್ರಮವೊಂದು ಕಳೆದ ತಾ. 25ರಲ್ಲಿ ಸಂಜೆ ಮೈಸೂರು ಆಕಾಶವಾಣಿಯಿಂದ ಪ್ರಸಾರ ಮಾಡಲ್ಪಟ್ಟಿತು.

ಜಯಂತಿ ಸಮಾರಂಭ— ಪ್ರಾದೇಶಿಕ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ತಾ. 31ರಲ್ಲಿ ಸಂಜೆ ಶ್ರೀ ಪ್ರೇಮಚಂದ ಜಯಂತಿಯು ಆಚರಿಸಲ್ಪಟ್ಟಿತು. ಶ್ರೀ ಎ. ರಾಮಕೃಷ್ಣ ನಾವಡರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಶೆಕ್ಕುಂಜೆ ಗೋಪಾಲಕೃಷ್ಣ ಭಟ್, ಆರ್. ಜಗದೀಶ ಶೆಣೈ, ಕುಮಾರಿ ಸರೋಜಿನಿ ಮೊದಲಾದವರು ಶ್ರೀ ಪ್ರೇಮಚಂದರ ಕುರಿತು ಮಾತನಾಡಿದರು.

ಸಂತಾಪ ಸೂಚಕ ಸಭೆ— ದ. ಕ. ಜಿಲ್ಲೆಯ ತರುಣ ಲೇಖಕರೂ ಹುಬ್ಬಳ್ಳಿಯ ಸರ್ವೋದಯ ಸಾಹಿತ್ಯಮಾಲೆಯ ಸಂಪಾದಕರೂ, ಪತ್ರಿಕೋದ್ಯಮಿಗಳೂ ಆಗಿದ್ದ ಶ್ರೀ ಎಸ್. ಹರಿದಾಸರ ಅಕಾಲ ನಿಧನಕ್ಕೆ ಸಂತಾಪ ಸೂಚಿಸುವ ಸಭೆಯು ತಾ. 1ರಲ್ಲಿ ಸಿಟಿಜನ್ಸ್ ಲ್ಯಾಬ್ರರಿಯಲ್ಲಿ ಶ್ರೀ ಕೆ. ಪಿ. ನಾರಾಯಣನವರ ಅಧ್ಯಕ್ಷತೆಯಲ್ಲಿ ಜರಗಿತು.

ಸ್ಮಾರಕ ದಿನಾಚರಣೆ— ಮಂಗಳೂರು ಪಿನ್ಸನ್ ರೋವರ್ ಸ್ಕೌಟ್ ದಳದವರು ಕಳೆದ ತಾ. 31ರಲ್ಲಿ ಭಾರತ ಸ್ಕೌಟ್ಸ್ ಮತ್ತು ಗೈಡ್ ಆಫೀಸಿನಲ್ಲಿ ದಿವಂಗತ ಶ್ರೀ ಟಿ. ಸಾಲಿನ್ಸರ ಸ್ಮಾರಕ ದಿನವನ್ನು ಜಿಲ್ಲಾ ರೋವರ ಸ್ಕೌಟ್ ಕಮಿಶನರ್ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ದಳನಾಯಕ ಶ್ರೀ ಬಿ. ಪರಿಕ್ಷಿತರಂಗಾಚಾರ್ಯರು ಧನ್ಯವಾದಗಳನ್ನರ್ಪಿಸಿದರು.

ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಚುನಾವಣೆಯು— ಇದೇ ತಾ. 1ರಲ್ಲಿ ಅಧ್ಯಕ್ಷರ ಗೈರುಹಾಜರಿಯಲ್ಲಿ ಉಪಾಧ್ಯಕ್ಷ ಡಾ। ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ಕಾಂಗ್ರೆಸ್ ಸದಸ್ಯರ ಮಹಾಸಭೆಯಲ್ಲಿ ನಡೆಯಿತು. ಶ್ರೀ ಬಿ. ವಿಠಲದಾಸ ಶೆಟ್ಟರ ಸೂಚನೆ, ಶ್ರೀ ಕೆ. ಪೊನ್ನಯ್ಯ ಶೆಟ್ಟರ ಅನುಮೋದನೆ ಮೇರೆಗೆ ಡಾ। ಯು. ಪಿ. ಮಲ್ಯರು ಸರ್ವಾನುಮತದಿಂದ ಮುಂದಿನ ವರ್ಷಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ಆಡಳಿತೆ ಮಂಡಳಿ ಹಾಗು ಕಾರ್ಯಕಾರೀ ಸಮಿತಿ ಸದಸ್ಯರ ನಾಮಕರಣವನ್ನು ಮಾಡುವ ಯಾವತ್ತೂ ಜವಾಬ್ದಾರಿಯನ್ನು ಅಧ್ಯಕ್ಷರಿಗೆ ಒಮ್ಮತದಿಂದ ಒಪ್ಪಿಸಲಾಯಿತು.

(೩ನೇ ಪುಟದಿಂದ)

ನೇಗಿಲನ್ನು ಹೂಡುವುದಿಲ್ಲ. ತನು, ತಂಬಿಲಗಳಿಂದ ನಾಗನ ಪ್ರೀತಿಯನ್ನು ಅವರು ಸಂಪಾದಿಸುತ್ತಾರೆ ಆರ್ಯರು ತಮ್ಮ ಮಹತಿಯನ್ನು ಪ್ರಸ್ಥಾಪಿಸಲು ಶಿವನನ್ನು ನಾಗ ಭೂಷಣನೆಂದೂ ನಾರಾಯಣನನ್ನು ನಾಗಶಯನನೆಂದೂ ಕರೆದರು ಆದರೆ ನಾಗಲೋಕವೆಂದು ಹೆಸರಾದ ಪಶ್ಚಿಮ ಸಮುದ್ರ ತೀರದಲ್ಲಿ ರೂಢವಾಗಿದ್ದ ಮತ್ತು ಮನುಷ್ಯ ಸಂಸ್ಕೃತಿಯೊಂದಿಗೆ ಹಾಸು ಹೊಕ್ಕಾಗಿದ್ದ ನಾಗ ಪೂಜಾ ಪದ್ಧತಿಯನ್ನು ನಾಶ ಮಾಡುವುದು ಅವರಿಂದಾಗಲಿಲ್ಲ. ಕೇರಳೋತ್ಪತ್ತಿಯಲ್ಲಿ ಹೇಳಲ್ಪಟ್ಟ ಒಂದು ಕತೆಯ ಆಧಾರದಂತೆ, ಪರಶುರಾಮ ಕ್ಷೇತ್ರದಲ್ಲಿ ನೆಲೆಯೂರುವುದು ಕಠಿಣವೆಂದು ಬ್ರಾಹ್ಮಣರು ತಿಳಿದುಕೊಂಡಾಗ ಅದನ್ನು ನಾಗರು ಆಕ್ರಮಿಸಿದರು; ಆದರೆ ಅದೇ ಬ್ರಾಹ್ಮಣರು ಪುನಃ ಈ ಪ್ರದೇಶಕ್ಕೆ ಬರಲು ಕದನವೇ ಸಂಘಟಿಸಿತು. ಪರಶುರಾಮನು ಆಗ ಮಧ್ಯಸ್ಥನಾಗಿ ಬಂದು, ನಾಗರು ಭೂಮಿಯನ್ನು ಬ್ರಾಹ್ಮಣರಿಗೆ ಬಿಟ್ಟುಗೊಡಬೇಕೆಂದೂ ಪ್ರತಿಯೊಂದು ಮನೆಯವರೂ ನೈಋತ್ಯ ಭಾಗದಲ್ಲಿ ನಾಗರಿಗಾಗಿ ಪ್ರತ್ಯೇಕ ಸ್ಥಳವನ್ನು ಮೀಸಲಿಡುವರೆಂದೂ ಅನುಜ್ಞೆ ಮಾಡಿದನ. ತಮ್ಮ ಹಿರಿಯರೆಂದೇ ಈ ನಾಗರನ್ನು ಪೂಜಿಸಲು ಆವನು ವಿಧಿಸಿದನು. ನಾಗಪಂಚಮಿಯ ಮಹತ್ವವನ್ನು ಇನ್ನೊಂದು ಐತಿಹ್ಯ ಈ ಪ್ರಕಾರ ವಿವರಿಸುತ್ತದೆ—ಶ್ರಾವಣ ಶುಕ್ಲ ಪಂಚಮಿಯಂದು ನೇಗಿಲಿನಿಂದ ರೈತನೊಬ್ಬ ಉಳುತಿದ್ದಾಗ, ಅವನ ಕುಳಕ್ಕೆ ಸಿಕ್ಕಿ ಸರ್ಪದ ಮರಿಯೊಂದು ನಾಶವಾಯಿತು. ತಾಯಿ ಸರ್ಪವು ಮಗುವನ್ನು ಕೊಂದವರನ್ನು ನಾಶ ಮಾಡಲು ಬಯಸಿ ರೈತನ ಬಂಧುಬಾಂಧವರನ್ನು ಕೊಂದಿತು. ಅವನ ಮಗಳೊಬ್ಬಳು ಗಂಡನ ಮನೆಯಲ್ಲಿದ್ದಳು. ಅವಳನ್ನು ಕಡಿಯಬೇಕೆಂದು ಅಲ್ಲಿ ಹೋಗಲು, ಆಕೆ ನಾಗ ಪೂಜೆಮಾಡಿ, ಹಾಲು ಸಮರ್ಪಿಸುತಿದ್ದುದನ್ನು ಇದು ನೋಡಿತು. ಆಕೆಯ ಭಕ್ತಿಯಿಂದ ಸಂಪ್ರೀತಗೊಂಡು, ಕೊಂದೆಲ್ಲರನ್ನೂ ಅದು ಬದುಕಿಸಿತು: ಅಂದಿನಿಂದ ನಾಗ ಪೂಜೆಯ ಸಂಪ್ರದಾಯ ನಡೆದು ಬಂತು.

NAVAYUGA
INDEPENDENCE DAY SPECIAL
WITH
CHOICEST ARTICLES ETC. ETC.

An advertisement in the Special is a good investment.
Advertisements will be received upto 7—8 - 1954.

For details please write to

The Manager,
"NAVAYUGA" Weekly,
P B No. 22, UDIPI (S. K)

ಯಂ. ಗಣಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚೆವಿನೋವು, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3 8-0.
ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 138/53 R. E. P. 768/53
R. E. A. 149/54 R. E. A. 424/54

ಶ್ರೀ ಸುಧೀಂದ್ರ ತೀರ್ಥ ಸ್ವಾಮಿಗಳೂ.
ಅರ್ಜಿದಾರರು.

ಮತ್ತು

ದೇವಮ್ಮ ಸೆಡ್ತಿ ... ... ಯಡ್ರಿಳು.
ಮೊದಲಾದವರು

(2) ಮಾನಕ್ಕ ಸೆಡ್ತಿ (3) ಶಿವಮ್ಮ ಸೆಡ್ತಿ (5) ವಿಟ್ಠಲ ಶೆಟ್ಟಿ ಮೃತ ಯಡ್ರಿಳು ದೇವಮ್ಮ ಸೆಡ್ತಿರ ಮಕ್ಕಳು. ಕಾರ್ಕಳ ತಾಲ್ಲೂಕು ಶಿವಪುರ ಗ್ರಾಮದ ನಾಯರಕೋಡು ಎಂಬಲ್ಲಿರುವವರು.

ಇವರಿಗೆ ಈ ಮೂಲಕ ತಿಳಿಯಪಡಿಸುವದೇನಂದರೆ.

ಸದ್ರಿ ಅಮಲಜಾರಿಯಲ್ಲಿ 1ನೇ ಯಡ್ರಿಳ ಕುಟುಂಬದ ಸ್ಥಿರಾಸ್ತಿ ಏಲಂ ಮಿನ ಬಗ್ಗೆ ಏಲಂ ಇಸ್ತಿಹಾರು ಹಾಜರು ಮಾಡಿದ ನಂತ್ರ ಅವಳು ಮೃತಪಟ್ಟಿರುವದ್ರಿಂದ ಅವಳ ವಾರೆಸ್ದಾರರಾಗಿ ನಿಮ್ಮನ್ನು ಕೂಡಾ ಕಕ್ಷಿಗೆ ಸೇರಿಸಬೇಕಾಗಿ ಅರ್ಜಿದಾರರ ಕಡೆಯಿಂದ ಕೊಟ್ಟ ಅರ್ಜಿಯು ತಾ. 17—8—1954ಕ್ಕೆ ಇದೇನಾಗಿಯದೆ. ಈ ಬಗ್ಗೆ ನಿಮ್ಮ ಆಕ್ಷೇಪ ಇರುವದಾದರೆ ಆ ದಿವಸ ನೀವು ಸ್ವತಃ ಯಾ ವಕೀಲರ ಮುಖಾಂತರ ಹಾಜರು ಆಗದೆ ಇದ್ದಲ್ಲಿ ಸದ್ರಿ ಅರ್ಜಿಯು ನಿಮ್ಮ ಗೈರ ಹಾಜ್ರಿಯಲ್ಲಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕ್ಕುಂ ಪ್ರಕಾರ
ಯಂ. ಯಸ್. ಅಧಿಕಾರಿ.
ಅರ್ಜಿದಾರರ ಕಡೆ ವಕೀಲ.

ಕಾರ್ಕಳ, ತಾ. 28-7-1954.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ದಿ ವಿಜಯಾ ಬೇಂಕ್ ಲಿಮಿಟೆಡ್, ಬೈಂದೂರು.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಸಾಲಗಾರರು ನಮ್ಮ ಬೇಂಕಿನಿಂದ ಚಿನ್ನಾಭರಣ ನಗಗಳ ಈಡಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ, ಅಸಲು-ಬಡ್ಡಿ; ಯಾವುದನ್ನೂ ಈ ತನಕವೂ ಕೊಡದೆ ಬಾಕಿಮಾಡಿ ಕೊಂಡಿರುವುದರಿಂದಲೂ, ಕೆಲವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸುಗಳು ಕಾರಣಾಂತರಗಳಿಂದ ನಮಗೇನೆ ವಾಪಾಸು ಬಂದಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಇಡಿಟ್ಟಿರುವ ಚಿನ್ನಾಭರಣ ನಗಗಳನ್ನು ಇದೇ ಆಗೋಸ್ತು ತಿಂಗಳ ತಾರೀಕು 13ನೇ ಶುಕ್ರವಾರ ಅಪರಾಹ್ನ ಗಂಟೆ 2-0ಕ್ಕೆ ಯಾ ಬೇಂಕಿಗೆ ಯುಕ್ತ ಕಂಡ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆವಾರದಲ್ಲಿ ಬಹಿರಂಗವಾಗಿ ಹರಾಜುಮಾಡಲಾದೀತು. ತಿಳಿದಿರಲಿ.

ಸಾಲದ ಜಂಜಾಪ್ರ ನಂಬರು	ಹೆಸರು ಮತ್ತು ವಿಳಾಸ	ಮೊಬಲಗು ರೂ.	ಅ.
1619/50	ಶ್ರೀ ಯು. ಸುಬ್ಬಣ್ಣ ಶೆಟ್ಟಿ, ಕುಪ್ಪಯ್ಯ ಶೆಟ್ಟಿರ ಅಳಿಯ, ಮಾವೈಶೆಟ್ಟಿರ ಮನೆ, ಉಪ್ಪುಂದ.	1230	8
1125/51	,, ಶೇಖ್ ಅಹ್ಮದ್ ಸಾಹೇಬ್, ಅಲ್ಲಿ ಸಾಹೇಬರ ಮಗ, ಕಳಿಹಿತ್ಲು, ಶಿರೂರು.	41	4
1277/51	,, ಬಸ್ರೂರು ಖಾದಿರ್ ಸಾಹೇಬ, ಮಹಮ್ಮದ್ ಸಾಹೇಬರ ಮಗ, ಗೋಳಿಹೊಳೆ ಗ್ರಾಮ, ಯೇಳಜಿತ.	99	0
1390/51	,, ಬಿ. ನರಹರಿ ಶೆಟ್ಟಿ, ಕೊಲ್ಲೆ ತಿಮ್ಮಪ್ಪ ಶೆಟ್ಟಿರ ಮಗ, ಬೈಂದೂರು.	26	12
1109/51	,, ಗೋವಿಂದ ಗಾಣಿಗ, ಮಂಜ ಗಾಣಿಗನ ಮಗ, ಶಿರೂರು.	55	7
62/52	,, ಕಾಕು ನಾಗಪ್ಪ ಮೊಗೇರ, ಸುಬ್ಬನ ಅಳಿಯ, ದುರ್ಮಿ, ಪಡುವರಿ.	31	8
77/52	,, ಸುಬ್ಬಯ್ಯ ಮೊಗೇರ. ಮಂಜ ಮೊಗೇರನ ಅಳಿಯ, ಬಂದಾರಿ ಮನೆ, ಪಡುವರಿ.	35	0
1[illegible]/52	,, ಮುದ್ದಯ್ಯ ವೆಂಕಟ್ರಮಣ ಶೆಟ್ಟಿ, ವೆಂಕಟ್ರಮಣ ಶೆಟ್ಟರ ಮಗ, ಶಿರೂರು.	30	10
211/52	,, ಜಕರ್ ಸಾಹೇಬ್. ಉಮ್ರ ಸಜ್ರತರ ಮಗ, ಹೊಸಾಗ್ರ ಹಿತ್ಲು, ಪಡುವರಿ.	8	6
2[illegible]2/52	,, ಯು. ಅಣ್ಣಪ್ಪ ಶೆಟ್ಟಿ, ಸೂರ ಶೆಟ್ಟಿರ ಅಳಿಯ, ಮಾವೈಶೆಟ್ಟಿರ ಮನೆ, ಉಪ್ಪುಂದ.	455	13
301/52	,, ಚಿಕ್ಕದ ಕತ್ತಿ ಸುಬ್ರಾಯ ಸೇರುಗಾರ, ಮಲ್ಲಯ್ಯ ಸೇರುಗಾರರ ಮಗ, ಮಯ್ಯಾಡಿ.	53	1
3[illegible]5/52	ಶ್ರೀಮತಿ ಲಕ್ಷ್ಮಿ, ಮದ್ದೋಡಿ ಮಂಜುನಾಥ ಸೇರುಗಾರರ ಹೆಂಡ್ತಿ, ಮಯ್ಯಾಡಿ.	26	13
401/52	ಶ್ರೀ ಅಲ್ಲಿ ಅಹ್ಮದ್, ಅಹ್ಮದ್ ಸಾಹೇಬರ ಮಗ, ಕೆಸರಕೋಡಿ, ಶಿರೂರು.	32	0
497/52	ಶ್ರೀಮತಿ ಮಂಜಿ, ಕಾಳು ಮನೆ ದುರ್ಗಿಯ ಮಗಳು, ಯಡ್ತರೆ ಗ್ರಾಮ, ಬೈಂದೂರು.	39	0
779/52	ಶ್ರೀ ಅಬ್ದುಲ್ಲಾ ಅಬ್ದುಲ್ ಖಾದಿರ್ ಸಾಹೇಬ್, ಹಸನ್ ಸಾಹೇಬರ ಮಗ, ದರವಿನಕೋಣೆ, ಶಿರೂರು.	41	5
907/52	,, ಕೆ. ಮಂಜುನಾಥ ನಾಯಕ್, ಕೃಷ್ಣಪ್ಪ ನಾಯಕರ ಮಗ, ಪ್ಯಾಟಿ, ಕಂಬದಕೋಣೆ.	79	5
6[illegible]/53	,, ಮುಗ್ರಿ ಮಹಮ್ಮದ್ ಇಬ್ರಾಹಿಮ್ ಸಾಹೇಬ್, ಫಕೀರ ಸಾಹೇಬರ ಮಗ, ಶಿರೂರು.	40	0
131/53	,, —Do—	221	10
138/53	,, —Do—	130	13
133/53	,, B. S. ರಾಮಕೃಷ್ಣ ಪೈ, ಮಂಜುನಾಥ ಪೈಯವರ ಮಗ, ಪ್ರಸಿಡೆಂಟ್ ಪಂಚಾಯ್ತ ಬೋರ್ಡ್, ಬಿಜೂರು.	252	10
130/53	—Do—	501	5
172/53	—Do—	117	13
214/53	—Do—	167	5
215/53	—Do—	195	1
354/53	ಶ್ರೀಮತಿ ಬೀಬಿ ಆಶಾ, ಅಹ್ಮದ್ ಖಾದಿರ್ ಸಾಹೇಬರ ಹೆಂಡತಿ, ಮಾಗದಿಬೆಟ್ಟು, ಶಿರೂರು.	95	5
361/53	,, ನಂದು, ಮಂಚಿ ಮಗಳು, ಮುಬ್ಬಾರ ಹಿತ್ಲು, ಉಪ್ಪುಂದ.	40	1
180/53	ಶ್ರೀ ಮುಸ್ತಾಧ್ ಖಾನ್ ಸಾಹೇಬ್, ಮಕ್ಬೂಲ್ ಸಾಹೇಬರ ಮಗ, ಮಾವಿಕಲ್ಲು, ಉಪ್ಪುಂದ.	331	11
113/53	,, ಮುಗ್ರಿ ಖಾದಿರ್ ಸಾಹೇಬ್, ಹುಸೇನ್ ಸಾಹೇಬರ ಮಗ ಶಿರೂರು.	60	13
450/53	,, ಮಾಧ್ವ ಶೆಟ್ಟಿ, ನಾಗಪ್ಪ ಶೆಟ್ಟರ ಮಗ, ನ್ಯಾಕನ ಕಟ್ಟೆ, ಕೆರ್ಗಾಲು.	42	2
518/53	,, ಗೋವಿಂದ ಖಾರ್ವಿ, ಕರಿನಮನೆ ಮಂಜನ ಮಗ, ಕೊಡಿ ಒಪ್ಪೇರಿ ಕಂಬದಕೋಣೆ.	11	2

ಬೈಂದೂರು,
30—7—51

ಎಚ್. ರಾಜೀವ ಶೆಟ್ಟಿ,
ಏಜಂಟ್.

(೧ನೇ ಪುಟದಿಂದ)

—ನಾಳೆ ನಮ್ಮ ದೇಶದ ಮೇಲೆ ಪರಕೀಯ ಆಕ್ರಮಣ ನಡೆದರೆ ನಾವು ಶಸ್ತ್ರವೆತ್ತಲಾಗದ ಹೇಡಿಗಳೆಂದು ಇದು ಸಿದ್ಧಮಾಡಿ ತೋರಿಸಬಹುದು; ಅಷ್ಟುಮಟ್ಟಿಗೆ ನಾವು ಶಾಂತಿಪ್ರಿಯರಾಗಿರಬಹುದು: ನಮ್ಮ ಮನೋಭೂಮಿಕೆಯಲ್ಲಿ ಸದಾಕಾಲ ಅಶಾಂತಿಯ ತೆರೆಗಳೇ ಏಳುತ್ತಲಿವೆಯೆಂಬುದೇ ನಾವು ಉತ್ತರಿಸಬೇಕಾದ ಪ್ರಶ್ನೆ. ಇದನ್ನು ಯಾರೂ ಗಮನಿಸದಿರುವುದು ದುರ್ದೈವ.

— ಗಾಂಧೀಜಿಯವರೊಬ್ಬರು ಇದನ್ನು ಮನಗಂಡಿದ್ದರು: ಆದುದರಿಂದ ಅವರು ಬದುಕಿನ ನೂರು ಕ್ಷೇತ್ರಗಳಲ್ಲಿ ವಿಹರಿಸುತಿದ್ದಾಗಲೂ ಭಾರತೀಯರ ಪುರಾತನ ಮನೋಭಾವವನ್ನು ಜಾಗೃತಗೊಳಿಸಿ, ಈಗ ಕವಿದ ಅಂಧಃಕಾರವನ್ನು ತೊಲಗಿಸಲು ಪ್ರಯತ್ನ ಪಟ್ಟರು. ಬುದ್ಧ ಭಗವಾನನು ಬೋಧಿಸಿದ ಅಹಿಂಸೆಯನ್ನು ಅವರು ಅನುಷ್ಠಾನಕ್ಕೆ ತಂದರು; ಅಹಿಂಸೆಯು ದುರ್ಬಲತೆಯ ಇನ್ನೊಂದು ಹೆಸರೆಂಬುದನ್ನು ಅಲ್ಲಗಳೆದರು; ಸತ್ಯವ್ರತವನ್ನು ಕೈಗೊಂಡರು; ಶಿಕ್ಷಣದ ತಿರುಳೇನೆಂಬುದನ್ನು ಪ್ರತ್ಯಕ್ಷವಾಗಿ ಮನಗಾಣಿಸಿ ಕೊಟ್ಟರು; ಶೀಲ ಹಾಗು ಚಾರಿತ್ರ್ಯ ಸಂವರ್ಧನೆಯ ಬಗೆಯನ್ನು ಸ್ವಂತ ಜೀವನದಿಂದ ಜಗತ್ತಿಗೆ ತಿಳಿಸಿ ಕೊಟ್ಟರು. ಪ್ರಾರ್ಥನೆ, ಉಪವಾಸಗಳಿಂದ ಆಧ್ಯಾತ್ಮಿಕ ಶ್ರೇಯಸ್ಸನ್ನೂ ನೈತಿಕ, ಬೌದ್ಧಿಕ ಹಾಗು ದೈಹಿಕ ಶಕ್ತಿಯನ್ನು ಕಾಪಾಡಿಕೊಳ್ಳುವ ರಹಸ್ಯವನ್ನೂ ಉದ್ಘಾಟಿಸಿ, ಅದರ ತೇಜಸ್ಸನ್ನು ತೋರಿಸಿದರು. ಎಲ್ಲ ಕಾಲಕ್ಕೂ ಎಲ್ಲ ರಾಷ್ಟ್ರಗಳಿಗೂ ಮಾನ್ಯವಾದ ಧಾರ್ಮಿಕ ತತ್ವಗಳನ್ನು ಮನನ ಮಾಡಲು ಉಪದೇಶಿಸಿದರು. ಮಾನವನ ಉತ್ಕರ್ಷಕ್ಕೆ ಹಿತವೆನಿಸಿದ, ಜಗತ್ತನ್ನು ರಕ್ಷಿಸಿ ಪೋಷಿಸುವ ನಿಯಮಗಳೆ ಧರ್ಮವೆಂದು ಮನಗಾಣಿಸಿ ಕೊಟ್ಟರು. ಆತ್ಮಸಾಕ್ಷಾತ್ಕಾರವು ಕರ್ಮ ಮಾರ್ಗದಿಂದಲೇ ಕೈಗೂಡಬೇಕೆಂಬ ಶ್ರೀ ಕೃಷ್ಣನ ಗೀತಾಮೃತವನ್ನು ಎಲ್ಲರಿಗೂ ಉಣಬಡಿಸಿದರು.

ಇವನ್ನು ನಾವು ಸ್ಮರಿಸಿಕೊಂಡು ಸ್ವಾತಂತ್ರ್ಯ ದಿನೋತ್ಸವವನ್ನು ಶ್ರದ್ಧೆಯಿಂದ ಸ್ವಾಗತಿಸಲು ಅಣಿಯಾದರೆ ಅದರಿಂದ ಒಳಿತಾಗುವುದು. ಭಾರತೀಯರು ಬ್ರಿಟಿಷ ಪರಂಪರೆಯ ದುಷ್ಪರಿಣಾಮಕ್ಕೆ ಸಿಕ್ಕಿ ತನ್ನತನ ಕಳೆದುಕೊಂಡ ಮನಸ್ಸನ್ನು ಪ್ರಾಚೀನ ಭಾರತೀಯ ಧರ್ಮ ಸೂತ್ರಗಳ ಅನುಷ್ಠಾನದಿಂದ ಬೆಳಗಿಕೊಂಡು ರುಚಿ ಮಾಗಿಡಬೇಕು. ಜನಸಾಮಾನ್ಯರು ತಮ್ಮ ಅಸಂಖ್ಯ ತಪ್ಪು ತಡೆಗಳನ್ನು ತಿದ್ದಿಕೊಂಡು ಕರ್ತವ್ಯ ಮಾಡಲು ಅಣಿಯಾಗದಿದ್ದಲ್ಲಿ ಯಾವ ರಾಜಕೀಯ ಧುರೀಣನೂ ನಮ್ಮನ್ನು ಹೊಂಡದಿಂದ ಮೇಲಕ್ಕೆ ಎತ್ತುವಂತಿಲ್ಲ—ಇದು ನಿಶ್ಚಯ.

—ಕಾರ್ತಿಕೇಯ.

-ಹೊಸಕೆರೆ ಚಿದಂಬರಯ್ಯನವರ-

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ 0-12-0

V. P. P. ಮೂಲಕ 1—4—0

ನವಯುಗ ಪ್ರೆಸ್, ಉಡುಪಿ.

ಸ್ವೀಕಾರ—ವಿಮರ್ಶೆ

ತಬ್ಬಲಿ—

ಬರೆದವರು: ವಿಜಯನಾರಸಿಂಹ. ಪ್ರಕಾಶಕರು: ಸುವರ್ಣ ಪ್ರಕಾಶನ, ೫೩೩, ನೆಹರೂ ನಗರ, ಬೆಂಗಳೂರು 2. ಬೆಲೆ: ಹನ್ನೆರಡಾಣೆ.

ತನ್ನವರೆಂಬ ಎಲ್ಲರನ್ನೂ ಕಳೆದುಕೊಂಡ ತಬ್ಬಲಿ ವೈದೇಹಿಗೆ ನರಸಿಂಹಾಚಾರಿಯ ಮನೆ ಸೇರುವ ಇಷ್ಟವಿರಲಿಲ್ಲ—ಆದರೆ ಹೆಂಡತಿಯೊಂದಿಗೆ ಅಲ್ಲಿ ಸೇರಿದ್ದ ಆಕೆಗೆ ಬೇರೆ ದಿಕ್ಕೂ ಇರಲಿಲ್ಲ. ನರಸಿಂಹಾಚಾರಿಯ ತಾಯಿಯನ್ನೆ ತನ್ನ ಮಾತೆಯಂತೆ ತಿಳಿದಳು; ಅವನ ಮಗಳು ಪದ್ಮಳೇ ವೈದೇಹಿಯ ಗೆಳತಿಯಾದಳು. ಆದರೆ ಪದ್ಮಳಿಗೆ ತಾಳಿಕಟ್ಟಬೇಕಾಗಿದ್ದ ಶ್ರೀ ಕಾಂತನಲ್ಲಿ ಇವಳ ಮನಸ್ಸು ಸೇರಿತು: ಅವನಿಗೂ ಇವಳಲ್ಲಿ ಅನುರಾಗ ಬೆಳೆಯಿತು. ಆದರೆ ಸುಬ್ಬನೆಂಬ ಯುವಕನೂ ವೈದೇಹಿಯ ಹುಚ್ಚಿಗೆ ಬಿದ್ದಿದ್ದ—ನರಸಿಂಹಾಚಾರಿಯಂತೂ ರೋಗಿ ಹೆಂಡತಿಯು ಹಾಸಿಗೆಯಲ್ಲಿ ಬಿದ್ದಿದ್ದಂತೆಯೇ ವೈದೇಹಿಯನ್ನು ಹೆಂಡತಿಯಾಗಿ ಕೂಡಲು ಆತುರಗೊಂಡ. ವೈದೇಹಿ ಈತನ ಮದದಿಯಾಗುವ ಸಂಗತಿ ತಿಳಿದು, ಸುಬ್ಬ ಎಲ್ಲಿಗೋ ಓಡಿಹೋದ. ಶ್ರೀ ಕಾಂತ ಪದ್ಮಳನ್ನೂ ವೈದೇಹಿಯನ್ನೂ ತ್ಯಜಿಸಿ, ಊರಿನ ತೋಳ ಸೆರೆಯಲ್ಲಿ ಸುಖಕಂಡ. ವೈದೇಹಿ ಪಿತೃ ಸಮಾನನಾದ ನರಸಿಂಹಾಚಾರಿಯೊಡನೆ ಬಾಳಲು ಇಷ್ಟಪಡದೆ ಬಾವಿಗೆ ಹಾರಿಕೊಂಡಳು—ಇದಿಷ್ಟು ಕತೆ. ಬೇರೆ ಕೆಲವು ಉಪಪಾತ್ರಗಳು ಈ ಕತೆಯನ್ನು ಪೋಷಿಸುತ್ತಾ ಹೋಗುತ್ತವೆ. ವೈದೇಹಿ ಮತ್ತು ಪದ್ಮರ ಪಾತ್ರ ಚಿತ್ರಣವು ಸೊಗಸಾಗಿದೆ—ಸುಬ್ಬನ ಹುಚ್ಚಿನ ವಿವರಣೆಯೂ ಚೆನ್ನಾಗಿದೆ. ಶ್ರೀ ಕಾಂತನ ಪಾತ್ರ ಮಾತ್ರ ನ್ಯಾಯದಿಂದ ನಡೆದುಕೊಂಡಂತೆ ತೋರುವುದಿಲ್ಲ; ಬಹುಶಃ ಅವನು ಇದ್ದ ವಿಚಿತ್ರ ಪರಿಸ್ಥಿತಿಯಿಂದ ಬೇರಾವ ವಿಧದಿಂದಲೂ ಪಾರಾಗುವಂತಿರಲಿಲ್ಲ. ಇಂದಿನ ಸಾಮಾಜಿಕ ಜೀವನದಲ್ಲಿ ತಬ್ಬಲಿ ಹೆಣ್ಣುಗಳ ಸ್ಥಾನಮಾನವನ್ನು ವಿವೇಚಿಸುವ ಈ ಕಾದಂಬರಿ ಚಿಕ್ಕದಾಗಿದ್ದರೂ ಚೊಕ್ಕವಾಗಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗದು. ಶೈಲಿಯೂ ನಿರೂಪಣೆಯೂ ಗಾಂಭೀರ್ಯವನ್ನೂ ಆಕರ್ಷಣೆಯನ್ನೂ ಉಳಿಸಿಕೊಂಡಿದೆಯೆಂದೆನ್ನಬಹುದು. ವಿಜಯನಾರಸಿಂಹರು ಇದಕ್ಕೂ ಉತ್ಕೃಷ್ಟವಾದ ಕೃತಿಗಳನ್ನು ಮುಂದೆ ಕೊಡುವಂತಾಗಲೆಂದು ಹಾರೈಸುತ್ತೇವೆ.

ಸಂಸ್ಕೃತಿ ಪ್ರದೀಪ—

ಬರೆದವರು: ಪಂಡಿತ ತಿರು. ಶ್ರೀನಿವಾಸಾಚಾರ್ಯ. ಪ್ರಕಾಶಕರು: ತಿರು. ಶ್ರೀರಂಗ, "ಸುದರ್ಶನ ಮಂದಿರ" ೩೦೭೭—೧, ವಾಣೀವಿಲಾಸ ಮೊಹಲ್ಲಾ ಮೈಸೂರು. ಬೆಲೆ: ರೂ. ೦—೮—೦.

ಭಾರತೀಯ ಸಂಸ್ಕೃತಿಯ ಪರಿಚಯವನ್ನು ಸುಲಭವಾದ ಮಾತುಗಳಲ್ಲಿ ಶಾಸ್ತ್ರ ಗ್ರಂಥಗಳ ಆಧಾರದ ಮೇಲೆ ಮಾಡಿಕೊಡುವ ಪ್ರಾಮಾಣಿಕ ಪ್ರಯತ್ನವನ್ನು ನಾವು ಈ ಪುಸ್ತಕದಲ್ಲಿ ಕಾಣುತ್ತೇವೆ. ಭಾರತದ ಉದ್ಧಾರ ಕಾರ್ಯಕ್ಕೆ ಧುಮ್ಮಿಕ್ಕ ಬಯಸುವ ನಾವು ನಮ್ಮ ಸಂಸ್ಕೃತಿಯ ರಹಸ್ಯವನ್ನು ತಿಳಿದು ಕೊಂಡಿರುವುದೂ ನಿತ್ಯ ಜೀವನದಲ್ಲಿ ಪ್ರಾಚೀನವಾದ ಸಾಂಸ್ಕೃತಿಕ ವೈಶಿಷ್ಟ್ಯಗಳಿಗೆ ಯೋಗ್ಯ ಸ್ಥಾನವನ್ನು ಕಲ್ಪಿಸಿಕೊಡುವುದೂ ಇಂದಿನ ಅಗತ್ಯವೆಂದು ತೋರಿಬರುತ್ತದೆ. ಹೀಗಿರುವಾಗ, ಸಂಸ್ಕೃತಿಯ ಕುರಿತು ಅಧಿಕಾರ ಪೂರ್ವಕವಾಗಿ ವಿವರಿಸಿ ಬರೆದ ಪುಸ್ತಕಗಳು ನಾಡಿಗೆ ಮಹದುಪಕಾರವನ್ನು ಮಾಡುತ್ತವೆ; ನಾಗರಿಕರನ್ನು ಚಾರಿತ್ರ್ಯ ಸಂಪನ್ನರಾಗಿ ಮಾಡುತ್ತವೆ. ಎಲ್ಲ ಹುಡುಗ—ಹುಡುಗಿಯರೂ ಈ ಪುಸ್ತಕವನ್ನೋದಿ ಜ್ಞಾನಾರ್ಜನೆಯನ್ನು ಮಾಡಿಕೊಳ್ಳಲೆಂದು ನಾವು ಹಾರೈಸುತ್ತೇವೆ.

❀ ಸ್ವಾಮಿ ಶಿವಾನಂದರ ಇಪ್ಪತ್ತು ಆಧ್ಯಾತ್ಮಿಕ ಉಪದೇಶಗಳನ್ನೂ ಚುಟುಕಾದ ಕೆಲವು ಪ್ರಶ್ನೋತ್ತರಗಳನ್ನೂ ಒಳಗೊಂಡ "ಮುಕ್ತಿಪಥ" ಎಂಬ ಚಿಕ್ಕ ಪುಸ್ತಕವನ್ನು ಶ್ರೀ ಆರ್. ಎಸ್. ರಾಮಕೃಷ್ಣಯ್ಯ, (ರಾಮನಕೊಪ್ಪ, ಕರ್ಮಚಿರ ಪೋಸ್ಟು, ಶಿವಮೊಗ್ಗ ಜಿಲ್ಲೆ) ಎಂಬವರು ಪ್ರಕಟಿಸಿರುವರು. ಪಾರಮಾರ್ಥಿಕ ವಿಷಯಗಳಲ್ಲಿ ಆಸ್ಥೆ ಉಳ್ಳವರಿಗೆಲ್ಲ ಸ್ವಲ್ಪಮಟ್ಟಿನ ಪ್ರಯೋಜನವನ್ನು ಇದು ನೀಡಬಹುದು.

ಭಾರತೀಯ ನೌಕೆಗಳ ಐತಿಹಾಸಿಕ ಪರಂಪರೆ

[೩ನೇ ಪುಟದಿಂದ]

ಯಲ್ಲಿ ಪ್ರವಾಸಿಕರು ಹೊಯ್ದಾಡದಂತೆ ಹಿಡಕೊಳ್ಳಲು ಮಾಡಿಸಿದ ಹಗ್ಗಗಳನ್ನು ಇಳಿಬಿಟ್ಟದ್ದು ಕಾಣುತ್ತದೆ.

ಈ ಅವಧಿಯಲ್ಲಿ ಹಡಗು ನಿರ್ಮಾಣವು ಕ್ಷಿಪ್ರ ಪ್ರಗತಿಯನ್ನು ಹೊಂದಿತು. ೧೩ನೇ ಶತಮಾನದಲ್ಲಿ ಭಾರತಕ್ಕೆ ಬಂದ ಮಾರ್ಕೋಪೋಲೋ ಮರದಿಂದ ಕಟ್ಟಿ ಕಬ್ಬಿಣದ ಮೊಳೆಯಿಂದ ಬಿಗಿಯಲಾದ, ಹಾಗು ಸಸ್ಯತೈಲಗಳಿಂದ ಲೇಪಿತಗೊಂಡ ಭಾರತೀಯ ಹಡಗುಗಳನ್ನು ಕಂಡು ಮುಗ್ಧನಾದಂತೆ ಭಾಸವಾಗುತ್ತದೆ. ೧೫–೩೦೦ ಜನರನ್ನೂ ಐದಾರು ಸಾವಿರ ಕುಕ್ಕೆ ಮೆಣಸನ್ನೂ ಹಿಡಿದುಕೊಳ್ಳಲಾಗುವಷ್ಟು ದೊಡ್ಡ ನೌಕೆಗಳು ಆಗ ಇದ್ದಿದ್ದವು. ಪ್ರತಿಯೊಂದಕ್ಕೂ ನಾಲ್ಕು ಮಂದಿ ಬೇಕಾದ ಹುಟ್ಟುಗಳ ಮೂಲಕ ಅವು ಚಲಿಸುತಿದ್ದವು. ೧೫ನೇ ಶತಮಾನದಲ್ಲಿ ಭಾರತಕ್ಕೆ ಆಗಮಿಸಿದ ನಿಕೋಲೊ ಕೋಂತಿ ಎಂಬ ಇಟಲಿಯ ಪ್ರವಾಸಿಯು ಯುರೋಪು ಖಂಡದವರಿಗೆ ಗೊತ್ತಿದ್ದ ನೌಕೆಗಳಿಂದ ಎಷ್ಟೋ ದೊಡ್ಡದಾದ ಹಡಗಗಳನ್ನು ಭಾರತೀಯರು ಕಟ್ಟುತಿದ್ದುದನ್ನು ಹೊಗಳಿ ಬರೆದಿದ್ದಾನೆ.

ಮುಗಲ ಬಾದಶಾಹರ ಆಡಳಿತ ಕಾಲದಲ್ಲಿ ನೌಕಾ ನಿರ್ಮಾಣವು ವ್ಯಾಪಕವಾಗಿ ಬೆಳೆಯಿತು. ಸಮಕಾಲೀನ ಬಂಗಾಳಿ ಸಾಹಿತ್ಯ ಕೃತಿಗಳಲ್ಲಿ ನೌಕೆಗಳ ವಿಶೇಷ ವರ್ಣನೆಯು ಬರುತ್ತದೆ. ತೇಗು ಮುಂತಾದ ಗಟ್ಟಿ ಜಾತಿಯ ಮರಗಳನ್ನು ಆಗ ಬಳಸುತಿದ್ದರು. ಕಬ್ಬಿಣದ ಮೊಳೆಯನ್ನು ಉಪಯೋಗಿಸುತಿದ್ದರು. ನೌಕಾ ಶೃಂಗಾರದ ಕಡೆಗೆ ಅತಿಯಾದ ಗಮನವನ್ನು ಕೊಡುತಿದ್ದರು ಚಿನ್ನ ಬೆಳ್ಳಿಗಳನ್ನು ಅಲಂಕಾರಕ್ಕಾಗಿ ಉಪಯೋಗಿಸುತಿದ್ದರು.

ಮರಾಠರ ಕಾಲದಲ್ಲಿ "ಯುದ್ಧನೌಕೆ"ಗಳು ಭಾರತದಲ್ಲಿ ಉತ್ಕರ್ಷವನ್ನು ಹೊಂದಿದವು. ಹದಿನೇಳನೇ ಶತಮಾನದಲ್ಲಿ ಶತ್ರು ಭಯಂಕರವಾದ ನೌಕಾಪಡೆಯನ್ನು ಮರಾಠರು ಸಜ್ಜುಗೊಳಿಸಿದರು. ಉದ್ದದೊಡನೆ ಹೋಲಿಸಿದರೆ ಬಹಳ ಅಗಲವಾಗಿ ಕಾಣುವ, ಎರಡು ಕೂವೆ ಮರಗಳುಳ್ಳ, ೭೦ ಟನ್ನು ಭಾರವಾದ, ಎರಡು ಕೂವೆ ಮರಗಳುಳ್ಳ. ಹಾಗು ತಾಸಿಗೆ ನಾಲ್ಕು ಮೈಲು ದೂರ ಕ್ರಮಿಸಬಲ್ಲ ನೌಕೆಗಳನ್ನು ಮರಾಠರು ಸೇನೆಯ ಅಂಗವಾಗಿ ಕಟ್ಟಿಕೊಂಡರು.

ಬ್ರಿಟಿಷರಿಂದ ತಿಂದ ಪೆಟ್ಟು

ಬ್ರಿಟಿಷರು ಭಾರತದಲ್ಲಿ ಆಳಿಕೆಯನ್ನು ತೊಡಗಿದ ಪ್ರಾರಂಭದಲ್ಲಿ ಹಡಗು ನಿರ್ಮಾಣ ಕಲೆಗೆ ಪ್ರೋತ್ಸಾಹವನ್ನೇ ಕೊಟ್ಟರು: ಸೂರತದಿಂದ ಮುಂಬಯಿಗೆ ಹಡಗು ನಿರ್ಮಾಣ ಕೇಂದ್ರವನ್ನು ೧೭೩೫ರಲ್ಲಿ ಬ್ರಿಟಿಷರು ವರ್ಗಾಯಿಸಿ, ಮೋಣಕ್‌ಜೀ ಲೋವ್‌ಜೀ ವಾಡಿಯಾ ಎಂಬ ಪಾರ್ಸಿ ಮೇಸ್ತ್ರಿಯ ನೇತೃತ್ವದಲ್ಲಿ ಭಾರತೀಯ ಕೆಲಸಗಾರರಿಂದ ಬ್ರಿಟಿಷ ನೌಕಾಪಡೆಗೆ ಹಡಗಗಳನ್ನು ಕಟ್ಟಿಸಿಕೊಂಡರು. ಕಲ್ಕತ್ತೆಯಲ್ಲಿಯೂ ೧೭೮೧–೧೮೦೦ ಅವಧಿಯಲ್ಲಿ ಒಟ್ಟು ೧೭೦೨೦ ಟನ್ನು ಭಾರವಾದ ೩೫ ಹಡಗಗಳು ಕಟ್ಟಲ್ಪಟ್ಟವು. ಬಂಗಾಳಿಗಳು ನಾಲ್ಕೈದು ಸಾವಿರ ಮಣ ಅಕ್ಕಿಯನ್ನು ತುಂಬಿ ಕಳಿಸಬಹುದಾಗಿದ್ದ ಭಾರಿ ಹಡಗಗಳನ್ನು ಕಟ್ಟುತಿದ್ದರು. ಲಾರ್ಡ್ ವೆಲ್ಲೆಸ್ಲಿಯು ಭಾರತದ ಗವರ್ನರ್ ಜನರಲನಾಗಿದ್ದಾಗ ಹಡಗ ಕಟ್ಟುವ ಉದ್ಯೋಗಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಟ್ಟನು. ದುರ್ದೈವದಿಂದ ಇದೇ ಕಾಲಕ್ಕೆ ಬ್ರಿಟನ್ನಿನ ಹಡಗು ಕಟ್ಟುವ ಸಂಸ್ಥೆಗಳಿಗೆ ಭಾರತದ ಕೆಲಸಗಾರರ ಮೇಲೆ ಸೇಡು ತೀರಿಸಿಕೊಳ್ಳುವ ಮನಸ್ಸಾಯಿತು. ನಮ್ಮ ಕೆಲಸಗಾರರು ಸುಲಭ ಖರ್ಚಿನಲ್ಲಿ ಗಟ್ಟಿಮುಟ್ಟಾದ ಬಹುಕಾಲ ಬಾಳುವ ನೌಕೆಗಳನ್ನು ಕಟ್ಟುತಿದ್ದುದರಿಂದ ಅವರು ನಿರ್ಮಿಸಿದ ನೌಕೆಗಳಿಗೆ ಬೇಡಿಕೆ ಕಡಿಮೆಯಾಗ ತೊಡಗಿತು. ಬ್ರಿಟಿಷ ಸೈನ್ಯಕ್ಕೆ ಸದ ಭಾರತದಲ್ಲಿ ಕಟ್ಟಲಾದ ಹಡಗಗಳನ್ನು ತರಿಸಬೇಕೆಂಬ ಸೂಚನೆ ಬರಲು ಅವರು ಪಾರ್ಲಿಮೆಂಟಿನಲ್ಲಿ ಇದರ ವಿರುದ್ಧ ಕೋರಾಟ ತೊಡಗಿದರು. ಇದರಲ್ಲಿ ಅವರು ಜಯ ಹೊಂದಿದುದರಿಂದ ಭಾರತೀಯರ ಕುಶಲ ಕಲೆಯ ಮೇಲೆ ಕುಠಾರಾಘಾತವಾದಂತಾಯಿತು. ಹಡಗುಗಳಲ್ಲಿ ಮುಕ್ಕಾಲಕ್ಕಿಂತಲೂ ಹೆಚ್ಚು ಬ್ರಿಟಿಷ ನಾವಿಕರಿರಬೇಕೆಂದೂ ಬ್ರಿಟಿಷ ನೌಕಾಧಿಪತಿಯಿರದ ಯಾವುದೇ ಹಡಗವು ಥೇಮ್ಸ ನದಿಯನ್ನು ಹೊಕ್ಕಲಾರದೆಂದೂ ಬ್ರಿಟಿಷ ಸರಕಾರ ವಿಧಿಸಿತು

೧೮೨೧ರಲ್ಲಿ ಇನ್ನೊಂದು ದೊಡ್ಡ ಪೆಟ್ಟುಕೊಟ್ಟು ಭಾರತೀಯರ ಕುಶಲ ಕಲೆ ಮರ್ಮಾಘಾತವಾದ ನೋವಿಗೆ ಗುರಿಯಾಗುವಂತೆ ಬ್ರಿಟಿಷರು ಮಾಡಿದರು. ಕಲ್ಕತ್ತೆಯ ವಿಲಿಯಂ ಕೋಟೆಗೆ ಪ್ರವೇಶಿಸುವ ಹಡುಗಗಳಲ್ಲಿ ಬ್ರಿಟಿಷರದಕ್ಕೆ ಶೇಕಡಾ ಏಳೂವರೆಯಂತೆಯೂ ಬ್ರಿಟಿಷರದಲ್ಲದಕ್ಕೆ ಹದಿನೈದರಂತೆಯೂ ಸುಂಕ ಹೇರತೊಡಗಿದರು. ಇದನ್ನೇ ಮುಂದೆ ಮದ್ರಾಸಿನ ಸಂತಜಾರ್ಜ ಕೋಟೆಯಲ್ಲಿಯೂ ಮುಂಬಯಿಯ ಸಂತ ಜೇವಿಡ ಕೋಟೆಯಲ್ಲಿಯೂ ಅನುಸರಿಸಲಾಯಿತು. ೧೮೭೦ನೇ ವರ್ಷದ ಹೊತ್ತಿಗೆ ಈ ಪಕ್ಷಪಾತತನದಿಂದ ಕಂಗೆಟ್ಟ ಡಚ್ಚರೂ ಪೋರ್ಚುಗೀಜರೂ ಫ್ರೆಂಚರೂ ಬೇರೆ ವಸಾಹತುಗಳನ್ನು ಕಂಡುಕೊಂಡು ನಷ್ಟ ಭರ್ತಿಮಾಡಿಕೊಂಡರು. ಆದರೆ ಭಾರತೀಯರು ಮಾತ್ರ ಚೇತರಿಸಿಕೊಳ್ಳುವುದಾಗಲಿಲ್ಲ.

ಪುನರುಜ್ಜೀವನದ ಪ್ರಯತ್ನ

ಭಾರತದಲ್ಲಿ ಹಡಗು ನಿರ್ಮಾಣ ಕಲೆಯು ಊರ್ಜಿತವಾಗಬೇಕೆಂದು ಮತ್ತು ಸಮುದ್ರ ವ್ಯಾಪಾರೋದ್ಯಮವು ಬೆಳೆದು ಬರಬೇಕೆಂದು ಭಾವಿಸಿ, ಬ್ರಿಟಿಷರು ಭಾರತೀಯರಿಗೆ ಮರಳಿ ಪ್ರೋತ್ಸಾಹಕೊಡ ತೊಡಗಿದ್ದು ಪ್ರಥಮ ಮಹಾ ಯುದ್ಧದ ಬಳಿಕವೇ ಎಂದೆನ್ನಬೇಕು. ೧೯೧೯ರಲ್ಲಿ ಸಿಂದಿಯಾ ನೌಕಾ ಕಂಪೆನಿಯು ಸ್ಥಾಪಿಸಲ್ಪಟ್ಟು, ಭಾರತೀಯ ಹಿತಾಸಕ್ತಿಗಳ ರಕ್ಷಣೆಯಲ್ಲಿ ಅಂಬೆಗಾಲನ್ನು ಇಡತೊಡಗಿತು.

ಈ ದಿಸೆಯಲ್ಲಿ ಏನಾದರೂ ಮೂರ್ತಿವಂತ ಪ್ರಗತಿಯಾದಂತೆ ಕಂಡು ಬಂದದ್ದು ಸ್ವಾತಂತ್ರ್ಯೋತ್ತರದಲ್ಲಿಯೇ ನಿಜ– ವಿಶಾಖ ಪಟ್ಟಣದಲ್ಲಿ ಕಟ್ಟಲಾದ ೮೦೦೦ ಟನ್ನು ಭಾರದ ಜಲ ಉಷಾ ಎಂಬ ಭಾರತೀಯ ನೌಕೆಯನ್ನು ೪ನೇ ಮಾರ್ಚ ೧೯೪೮ರಂದು ಪ್ರಧಾನ ಮಂತ್ರಿ ನೆಹರೂರವರು ನೀರಿಗೆ ಇಳಿಸಿದಾಗ ವಾಸ್ತವದಲ್ಲಿ ಭಾರತೀಯರು ಪ್ರಗತಿಯ ಹೆಜ್ಜೆಯೊಂದನ್ನು ಮುಂದಿಟ್ಟಂತೆ ಕಂಡುಬಂತು. ಅಂದಿನಿಂದ ೧೯೫೩ನೇ ವರ್ಷದ ಕೊನೆಯ ವರೆಗೆ ೮೦೦೦ ಟನ್ನು ಭಾರದ ಏಳು ಹಡಗಗಳು ನಿರ್ಮಾಣಗೊಂಡು ಭಾರತದ ಪ್ರಗತಿಯ ಹಾಗು ಭಾರತೀಯರ ಪರಂಪರಾಗತವಾದ ಕೌಶಲ್ಯದ ದ್ಯೋತಕವಾಗಿ ಸಾಗರದ ತೆರೆಗಳ ನಡುವೆ ರಾಷ್ಟ್ರಧ್ವಜವನ್ನು ಹೊತ್ತು ಗಂಭೀರವಾಗಿ ಓಡಿಯಾಡುತ್ತವೆ.

ಬ್ರಿಟಿಷರು 'ಕಡಲರಾಣಿ' ಎಂಬುದಾಗಿ ತಮ್ಮ ದೇಶವನ್ನು ಸಂಭ್ರಮದಿಂದ ಕರೆದುಕೊಳ್ಳುವುದಕ್ಕೆ ಹಲವು ಶತಮಾನಗಳಷ್ಟು ಪೂರ್ವದಲ್ಲಿಯೇ ಭಾರತೀಯ ನಾವಿಕರು ಪಶ್ಚಿಮದ ರೋಮಿನಿಂದ ಪೂರ್ವದ ಚೀಣದವರೆಗೆ ವ್ಯಾಪಾರ ವ್ಯವಹಾರಾಸಕ್ತರಾಗಿ ಸಂಚರಿಸುತಿದ್ದರೆಂದು ಗೊತ್ತಾಗುತ್ತದೆ. ಆದರೆ ಬ್ರಿಟಿಷರ ತಂತ್ರಗಳು ಭಾರತೀಯರ ಹಿರಿಮೆಯನ್ನು ಮೂಲೆಗುಂಪು ಮಾಡಿದ ಬಳಿಕ ಪುನರುಜ್ಜೀವನದ ಪ್ರಯತ್ನವನ್ನು ಕೈಗೊಳ್ಳುವುದು ಅಷ್ಟು ಸುಲಭವಿರಲಿಲ್ಲ. ಆದರೂ ಪರಕೀಯರ ಒಡೆತನದ ಹಡಗುಗಳ ಮೂಲಕ ಸ್ವತಂತ್ರ ಭಾರತದ ವ್ಯಾಪಾರವನ್ನು ತಪ್ಪಿಸಿ, ದೇಶೀಯರ ಕೈಗೆ ಅದು ದೊರಕುವಂತೆ ಹಾಗು ಮಿತವ್ಯಯ ಮತ್ತು ಲಾಭಗಳಾಗುವಂತೆ ನೋಡಲು ನಮ್ಮ ಸರಕಾರ ಪ್ರಯತ್ನಶೀಲವಾಯಿತು. ಹಡಗು ವ್ಯಾಪಾರ ಧೋರಣೆಯ ಸಮಿತಿಯು ಭಾರತದ ಹಡಗುಗಳ ಪ್ರಮಾಣವು ೨೦ ಲಕ್ಷ ಟನ್ನುಗಳಷ್ಟು ಹೆಚ್ಚಿಕೊಳ್ಳಬೇಕೆಂದು ಸೂಚಿಸಿ, ಆಗ ಮಾತ್ರ ಈ ದೇಶವು ಸ್ವಾವಲಂಬಿಯಾದೀತೆಂದು ಹೇಳಿರುವುದು. ಸರಕಾರದವರು ಈ ವಿಷಯದಲ್ಲಿ ಉಚಿತ ಕ್ರಮವನ್ನು ಹಂತಗಳ ಮಟ್ಟದಲ್ಲಿ ಕೈಗೊಳ್ಳಲು ಬಯಸಿದ್ದಾರೆ. ಮತ್ತು ಪ್ರಥಮ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಒಟ್ಟು ಆರು ಲಕ್ಷ ಟನ್ನುಗಳಷ್ಟು ಹಡಗಗಳ ಪ್ರಮಾಣ ಏರಬೇಕೆಂದು ಸಂಕಲ್ಪಿಸಿ, ೧೫ ಕೋಟಿ ರೂಪಾಯಿ ವೆಚ್ಚದ ವಿವಿಧ ಕಾರ್ಯಕ್ರಮಗಳನ್ನು ತಯಾರಿಸಿದ್ದಾರೆ. ಇದರಂತೆ, ೧೯೫೩ನೆ ವರ್ಷದ ಕೊನೆಯ ವರೆಗೆ ಒಂದು ಲಕ್ಷ ಟನ್ನುಗಳಷ್ಟು ಹೆಚ್ಚಳವನ್ನು ಕೈಗೂಡಿಸಲಾಗಿದೆ

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಬ್ಯಾಡಿ ವ್ಯಾಸಾಚಾರ್ಯ
ರಥಬೀದಿ ಉಡುಪಿ.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ,
ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು
ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,
ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

ಫೋನು ನಂ. ೯೯

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಓಂಪ್ರಕಾಶ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. D.s (N. J.)
CALCUTTA—40

(ವಿ. ಪಿ. ಪಿ. ಪ್ರತ್ಯೇಕ)
ಸ್ಟಾಕಿಸ್ಟರು: ಶರ್ಮಾ ಕಂಪೆನಿ, ಮಂಗಳೂರು.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನರಿ
ಬೆಲೆ ರೂ. 5-6-0
ನವಭಾರತ ಬುಕ್ ಡಿಪ್ಪೊ, ಉಡುಪಿ.

ಯೊಂದು ಮಂತ್ರಿಗಳ ಹೇಳಿಕೆಯಿಂದ ಗೊತ್ತಾಗುತ್ತದೆ

ಹೆಚ್ಚಿನ ವ್ಯಾಪಾರ

ನಾವು ೨೦ ಲಕ್ಷ ಟನ್ನುಗಳಷ್ಟು ಪ್ರಮಾಣವನ್ನು ಹೆಚ್ಚಿಸಿಕೊಂಡದ್ದೇ ಆದರೆ, ಕರಾವಳಿಯ ಎಲ್ಲ ಸಾರಿಗೆ ವ್ಯವಸ್ಥೆಯನ್ನೂ ನಿರ್ವಹಿಸಬಹುದಲ್ಲದೆ, ಬರ್ಮಾ, ಸಿಂಹಳ ಮುಂತಾದ ನೆರೆಯ ದೇಶಗಳ ವ್ಯಾಪಾರ ವ್ಯವಹಾರದಲ್ಲಿ ಮುಕ್ಕಾಲು ಪಾಲನ್ನೂ ದೂರ ಪೂರ್ವದ ದೇಶಗಳ ವ್ಯಾಪಾರದಲ್ಲಿ ಮೂರರಲ್ಲಿ ಒಂದಂಶವನ್ನೂ ಮತ್ತು ದೇಶದ ಸಾಗರೋತ್ತರ ವ್ಯವಹಾರದಲ್ಲಿ ಅರೆವಾಸಿಯಷ್ಟನ್ನೂ ಯಶಸ್ವಿಯಾಗಿ ಕೈಗೊಳ್ಳಬಹುದೆಂದು ಹೇಳಲಾಗುತ್ತದೆ. ಆದರೆ ಇದುವರೆಗೆ ಸಾಧಿಸಿದ ಮಂದ ಪ್ರಗತಿಯಿಂದಾಗಿ, ಕರಾವಳಿಯ ವ್ಯಾಪಾರ ವ್ಯವಹಾರವಷ್ಟೇ ಸಂಪೂರ್ಣವಾಗಿ ಭಾರತೀಯರ ಕೈಗೆ ದೊರಕುವಂತಾಗಿದೆ: ೧೯೫೦ರಲ್ಲಿ ಸ್ಥಾಪಿಸಲಾದ, ಸರಕಾರದ ಅಂಗವಿರುವ, ಈಸ್ಟರ್ನ್ ಶಿಪ್ಪಿಂಗ್ ಕೋರ್ಪರೇಶನ್ ಮುಂತಾದವು ಪೂರ್ವ ದೇಶಗಳೊಡನೆಯೂ ಆಸ್ಟ್ರೇಲಿಯಾದೊಡನೆಯೂ ವ್ಯಾಪಾರವನ್ನು ಬೆಳೆಸುತ್ತವೆ. ಅಲ್ಲದೆ ಅಮೇರಿಕ, ಬ್ರಿಟನು ಮತ್ತಿತರ ಐರೋಪ್ಯ ರಾಷ್ಟ್ರಗಳ ನೇಟಿಯೊಡನೆಯೂ ನಮ್ಮ ಹಡಗಗಳು ಸಂಪರ್ಕವನ್ನು ದೃಢಗೊಳಿಸುತ್ತಲಿವೆ. ಈ ವ್ಯಾಪಾರದ ಭರವು ಇನ್ನಷ್ಟು ಹೆಚ್ಚಬೇಕೆಂಬ ಉದ್ದೇಶದಿಂದ ಸರಕಾರದವರು ಸುಲಭ ಬಡ್ಡಿ ದರದಲ್ಲಿ ಸಾಲವನ್ನು ಕೊಡಲು ಮುಂದುವರಿದ್ದಾರೆ. ಆದರೆ ನಮ್ಮ ವರ್ತಕರು ಇದರ ಪ್ರಯೋಜನವನ್ನು ಅಪೇಕ್ಷಿತ ಪ್ರಮಾಣದಲ್ಲಿ ಪಡೆದುಕೊಳ್ಳದಿರುವುದು ಶೋಚನೀಯವಾದ ವಿಷಯ. ಮಾನ್ಯ ಮಂತ್ರಿಗಳು ಇದನ್ನು ಖೇದದಿಂದ ಕಂಡಿದ್ದು, ವರ್ತಕವರ್ಗವು ಸ್ವಹಿತ ಹಾಗು ರಾಷ್ಟ್ರಹಿತವನ್ನು ಅನುಲಕ್ಷಿಸಿ, ಈ ಸಂದರ್ಭದ ಸದುಪಯೋಗ ಪಡೆಯಬೇಕೆಂದು ವಿನಂತಿಸಿರುವದು ಉಚಿತವೇ ಆಗಿದೆ.

ಹಡಗು ಸಾರಿಗೆಯಲ್ಲಿ ಪ್ರಯಾಣಿಕರಿಗೆ ಯೋಗ್ಯ ಸೌಕರ್ಯಗಳನ್ನು ಒದಗಿಸುವ ಉದ್ದೇಶದಿಂದ ೧೯೫೦ರಲ್ಲಿ ಶ್ರೀ. ಎಸ್. ಜಗನ್ನಾಥನ್ನರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದರು. ಇದು ಪ್ರಯಾಣಿಕರಿಗೆ ಹಡಗಿನಲ್ಲಿ ಹೆಚ್ಚು ವಿಸ್ತಾರವಾದ ಸ್ಥಳಗಳು ದೊರಕಬೇಕೆಂದೂ ಬೀಸಣಿಗೆ, ನೀರಿನ ನಳ, ಉಡುಪುತೊಡುಪುಗಳನ್ನು ಧರಿಸುವ ಕೋಣೆ, ಹೊಸ ನೀರಿನ ವಿಪುಲ ಪೂರೈಕೆಗಳಾಗಬೇಕೆಂದೂ ವಾಯುಖಾನೆಗಳನ್ನು ಹೆಚ್ಚಿಸಿ ವೈದ್ಯಕೀಯ ಉಪಚಾರದ ವ್ಯವಸ್ಥೆಯನ್ನು ವಿಸ್ತರಿಸಬೇಕೆಂದೂ ಸೂಚಿಸಿದ್ದಿತು. ಸರಕಾರದವರು ಇವೆಲ್ಲ ಶಿಫಾರಸುಗಳನ್ನೂ ಮಾನ್ಯ ಮಾಡಿದ್ದು, ಕಾಯಿದೆ ಮೂಲಕ ಅವುಗಳು ಜ್ಯಾರಿಗೆ ಬರುವಂತೆ ನೋಡಿದ್ದಾರೆ. ಹೊಸ ಹಡಗಗಳು ಸಂಚಾರವನ್ನು ಪ್ರಾರಂಭಿಸಿದಂತೆಲ್ಲ ಈ ಸೌಕರ್ಯಗಳ ವಿಶೇಷವಾದ ಅನುಭವವನ್ನು ಪ್ರಯಾಣಿಕರು ಹೊಂದಬಲ್ಲರು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಆರು ತಾಸುಗಳಿಗೊಂದು ಹೊಸ ಗಾಡಿ

ಪೆರಂಬೂರಿನಲ್ಲಿ ತಲೆಎತ್ತುವ ಕಾರ್ಖಾನೆ

ಭಾರತೀಯ ರೈಲ್ವೆಗಳಿಗೆ ಪ್ರತಿ ವರ್ಷ ೬೭೦ ಹೊಸ ಗಾಡಿಗಳು ಬೇಕಾಗುತ್ತವೆ. ಇವುಗಳಲ್ಲಿ ಅರೆವಾಸಿಗಿಂತಲೂ ಹೆಚ್ಚು ಗಾಡಿಗಳನ್ನು ಭಾರತದಲ್ಲಿಯೇ ಉತ್ಪಾದಿಸುವ ಕಾರ್ಖಾನೆಯೊಂದು ಇದೀಗ ಮದ್ರಾಸಿನ ಉಪನಗರವಾದ ಪೆರಂಬೂರದಲ್ಲಿ ನಿರ್ಮಾಣಗೊಳ್ಳುತ್ತದೆ. ಇದು ಮುಂದಿನ ವರ್ಷ ಇಷ್ಟು ಹೊತ್ತಿಗೆ ಉತ್ಪಾದನೆಯನ್ನು ಪ್ರಾರಂಭಿಸುವುದು. ಆಗ ಪ್ರತಿ ಆರು ಕೆಲಸದ ತಾಸುಗಳಿಗೆ ಒಂದರಂತೆ ರೈಲ್ವೆ ಗಾಡಿಯು ತಯಾರಾಗಿ ಹೊರಕ್ಕೆ ಬರುವುದು.

ವಿಶೇಷ ಆಕರ್ಷಣೆ

ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಲ್ಪಟ್ಟಿರುವ ಈ ಕೆಲಸವು ೧೯೫೧ನೇ ವರ್ಷದಲ್ಲಿ ಪ್ರಾರಂಭಿಸಲ್ಪಟ್ಟಿತು. ೧೯೪೮ನೇ ಇಸವಿಯಷ್ಟು ಹಿಂದೆಯೇ ಭಾರತ ಸರಕಾರದವರು ರೈಲ್ವೆಯ ಗಾಡಿಗಳನ್ನು ಈ ದೇಶದಲ್ಲಿಯೇ ಸಿದ್ಧಗೊಳಿಸುವ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಿದ್ದರು. ಇದಕ್ಕಾಗಿ ಅಗತ್ಯವೆನಿಸಿದ ತಾಂತ್ರಿಕ ಸಹಾಯವನ್ನೂ ಯಾಂತ್ರಿಕ ಸಲಕರಣೆಗಳನ್ನೂ ಪಡೆಯಲು ೧೯೪೯ ಮತ್ತು ೧೯೫೦ನೇ ವರ್ಷಗಳಲ್ಲಿ ಸ್ವಿಸ್ ಕಂಪೆನಿಯೊಂದರೊಡನೆ ಒಡಂಬಡಿಕೆಯನ್ನು ಮಾಡಿಕೊಳ್ಳಲಾಯಿತು. ಐದು ವರ್ಷಗಳೊಳಗಾಗಿ ಇಡೀ ಕಾರ್ಖಾನೆಯನ್ನು ಭಾರತೀಯರೇ ನಡೆಸಲು ಅನುಕೂಲವಾಗುವಂತೆ ಯೋಗ್ಯ ತರಬೇತಿಯನ್ನು ಕೊಡುವುದಕ್ಕೂ ಈ ಸ್ವಿಸ್ ಕಂಪೆನಿಯು ಒಪ್ಪಿ ಕೊಂಡಿರುವುದು.

ಇಲ್ಲಿ ತಯಾರಾಗುವ ಗಾಡಿಗಳು ಈಗ ಉಪಯೋಗದಲ್ಲಿರುವ ಗಾಡಿಗಳಿಗಿಂತ ಭಿನ್ನ ರೀತಿಯವಾಗಿವೆ- ಗಾಡಿಗಳ ತಳ ಮತ್ತು ಮೇಲ್ಭಾಗಗಳನ್ನು ಜೋಡಿಸುವ ಕ್ರಮವನ್ನು ಬಿಟ್ಟುಕೊಟ್ಟು ಇಡಿಯಾಗಿಯೇ ನಿರ್ಮಾಣ ಹೊಂದುವಂತೆ ಅತ್ಯಾಧುನಿಕ ರೀತಿಯನ್ನು ಕಾರ್ಖಾನೆಯಲ್ಲಿ ಅಳವಡಿಸಲಾಗಿದೆ. ಇದರಿಂದಾಗಿ ಅಪಘಾತಗಳು ಸಂಭವಿಸಿದಾಗ ಅದರ ಪೆಟ್ಟು ಗಾಡಿಯ ಯಾವುದಾದರೊಂದು ವಿಶಿಷ್ಟ ಭಾಗಕ್ಕೆ ಬೀಳದೆ, ಎಲ್ಲ ಕಡೆಗೆ ಹಂಚಿ ಹೋಗುತ್ತದೆ. ಈ ಹೊಸ ಗಾಡಿಗಳ ತೂಕವೂ ಕಡಿಮೆಯಾಗಿದೆ. ಈಗಿನ ಗಾಡಿಗಳು ೪೨ ಟನ್ನುಗಳಷ್ಟು ತೂಗುತ್ತವೆ; ಪೆರಂಬೂರಿನಲ್ಲಿ ತಯಾರಾಗುವ ಗಾಡಿಗಳ ಭಾರ ೩೫ ಟನ್ನುಗಳಿಗೆ ಇಳಿಯುತ್ತದೆ.

ಕಾರ್ಖಾನೆಯ ಪರಿಚಯ

ಸುಮಾರು ಹತ್ತು ಎಕ್ರೆ ಪ್ರದೇಶವನ್ನು ಈ ಕಾರ್ಖಾನೆಯು ವ್ಯಾಪಿಸಿದ್ದು, ಗಾಡಿಗಳನ್ನು ಜೋಡಿಸುವ ಮುಖ್ಯ ಕಾರ್ಖಾನೆಯು ಕಾಲಂಶ ಸ್ಥಳವನ್ನು ಆಕ್ರಮಿಸುತ್ತದೆ. ಇದಕ್ಕೆ ಪೂರಕವಾದ ಇನ್ನಿತರ ಒಂಭತ್ತು ಕಾರ್ಖಾನೆಗಳು ಉಳಿದ ಜಾಗದಲ್ಲಿ ಕಾಣಸುತ್ತವೆ. ಕಚ್ಚಾ ಸರಕನ್ನು ಒಂದು ತುದಿಯಲ್ಲಿ ಕೊಟ್ಟರೆ, ಇನ್ನೊಂದು ತುದಿಯಲ್ಲಿ ಸಿದ್ಧವಾದ ಹೊಸ ಗಾಡಿಯು ಹೊರ ಬೀಳುತ್ತಿರುವಂತೆ ಈ ಕಾರ್ಖಾನೆಯು ರಚಿಸಲ್ಪಡುತ್ತದೆ. ದಿನಕ್ಕೆ ಒಂದು ಸರದಿಯಂತೆ ೪೦೦೦ ಕೆಲಸಗಾರರು ಇಲ್ಲಿ ದುಡಿದು, ವರ್ಷಕ್ಕೆ ೩೫೦ ಹೊಸ ಗಾಡಿಗಳನ್ನು ಉತ್ಪಾದಿಸುವರು. ಅವರ ಆರೋಗ್ಯ ಕೆಡದಂತೆ ಗಾಳಿ ಬೆಳಕುಗಳ ಸಂಚಾರಕ್ಕೆ ಯೋಗ್ಯ ವ್ಯವಸ್ಥೆಯು ಇರುತ್ತದೆ.

ಏಳು ಕೋಟಿ ರೂಪಾಯಿಗಳ ಬಂಡವಾಳ ವೆಚ್ಚವು ಈ ಕಾರ್ಖಾನೆಯ ನಿರ್ಮಾಣ ಕಾರ್ಯದಲ್ಲಿ ಬರುತ್ತದೆ. ಜಗತ್ತಿನ ಬೇರೆ ಬೇರೆ ಭಾಗಗಳಿಂದ ಯಂತ್ರೋಪಕರಣಗಳ ದರಗಳನ್ನು ಕುರಿತು ಟೆಂಡರು ಕರೆದು, ಆದಷ್ಟು ಕಡಿಮೆ ಬೆಲೆಗೆ ಉತ್ತಮ ತರದ ಆಧುನಿಕ ಸಲಕರಣೆಗಳನ್ನು ಪೂರೈಸಿಕೊಳ್ಳಲಾಗಿರುವುದು. ಕಾರ್ಖಾನೆಯಲ್ಲಿ ಒಟ್ಟು ೨೫೦ ಯಂತ್ರ ಇದ್ದು, ಅವುಗಳು ವರ್ಷಕ್ಕೆ ೬೦ ಲಕ್ಷ ಯುನಿಟುಗಳಷ್ಟು ವಿದ್ಯುಚ್ಛಕ್ತಿಯನ್ನು ಬಳಸುತ್ತವೆ.

ಶಿಕ್ಷಣ ವ್ಯವಸ್ಥೆ

ಕಾರ್ಖಾನೆಯನ್ನು ನಡೆಸುವ ಕಲೆಯಲ್ಲಿ ಪರಿಣತಿಯನ್ನು ಹೊಂದಲು ಇದೇ ಮಾರ್ಚ ತಿಂಗಳಲ್ಲಿ ಕೆಲಸಗಾರರಿಗೆ ತರಬೇತಿ ಕೊಡುವ ವ್ಯವಸ್ಥೆಯು ಕೈಗೊಳ್ಳಲ್ಪಟ್ಟಿತು. ಈಗ ೭೦ ಮಂದಿ ತಜ್ಞರು ಇಲ್ಲಿ ಶಿಕ್ಷಣವನ್ನು ಹೊಂದುತ್ತಿರುವರು. ಪ್ರಥಮದ ನಾಲ್ಕು ವರ್ಷಗಳ ಅವಧಿಯಲ್ಲಿ ಪ್ರತಿವರ್ಷ ೬೦೦ ಮಂದಿ ತಾಂತ್ರಿಕರಿಗೆ ಯೋಗ್ಯ ತರಬೇತಿಯನ್ನು ಇಲ್ಲಿ ಕೊಡಲಾಗುವುದು; ಮುಂದೆ ೧೫೦ ಮಂದಿಗೆ ಮೂರುವರೆ ವರ್ಷದ ಶಿಕ್ಷಣವನ್ನು ಕೊಡಲು ವ್ಯವಸ್ಥೆಯು ಏರ್ಪಡುವುದು.

ಆವಶ್ಯಕ ಕೆಲಸಗಾರರು ಉಳಕೊಳ್ಳುವುದಕ್ಕೆ ಅನುಕೂಲವಾಗುವಂತೆ ೩೨ ಎಕ್ರೆ ಸ್ಥಳದಲ್ಲಿ ಸಣ್ಣ ನಗರವೊಂದು ತಲೆ ಎತ್ತಿದ್ದು, ಇದರಲ್ಲಿ ನಾನಾ ಪ್ರಕಾರದ ೪೦೦ ಮನೆಗಳು ಇವೆ; ಅಲ್ಲದೆ ಮಕ್ಕಳಿಗಾಗಿ ಆಟದ ಮೈದಾನು, ತೋಟ ಮುಂತಾದವುಗಳೂ ದನಕರುಗಳಿಗಾಗಿ ಹಟ್ಟಿಕೊಟ್ಟಿಗೆಗಳೂ ಇವೆ.

ಭಾರತದಿಂದ ಹೊರಗೆ ಹರಿದು ಹೋಗುವ ಹಣವನ್ನು ಇಲ್ಲಿಯೇ ಉಳಿಸಿಕೊಂಡು ರಾಷ್ಟ್ರವನ್ನು ಸ್ವಾವಲಂಬಿಮಾಡುವುದರಲ್ಲಿ ಪೆರಂಬೂರಿನ ಕಾರ್ಖಾನೆಯನ್ನು ನಮ್ಮ ಪ್ರಗತಿಯ ಇನ್ನೊಂದು ಮೈಲುಗಲ್ಲೆಂದು ಸಂಶಯದ ಲವಲೇಶವಿಲ್ಲದೆ ತುಂಬಿದ ಅಭಿಮಾನದಿಂದ ಹೇಳಬಹುದು.

ನಿಮ್ಮಿಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ.ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿನ್ನ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.







ನವಯುಗ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ 1954

(ಬೆಲೆ: 0-2-0)

ಕರ್ನಾಟಕದ ಜನತೆಗೆ..........

.... ಸ್ವಾತಂತ್ರ್ಯ ದಿನದ ಎಂಟನೆ ವಾರ್ಷಿಕೋತ್ಸವದ ಸುಮುಹೂರ್ತದಲ್ಲಿ ನಮ್ಮ ಹಾರ್ದಿಕ ಶುಭಾಶಯಗಳು. **92** ಶಾಖಾ ಕಚೇರಿಗಳ ಕಾರ್ಯಕ್ಷೇತ್ರದ ಮೂಲಕ ನಮ್ಮ **29** ವರ್ಷಗಳ ಪರಿಪಕ್ವ ಅನುಭವವನ್ನೂ ಸಮರ್ಥ ಹಾಗೂ ಶೀಘ್ರ ಸಂಗ್ರಹ ವ್ಯವಸ್ಥೆಯನ್ನೂ ಜನತೆಗೆ ಅರ್ಪಿಸುತ್ತೇವೆ. ಜನತೆಯ ಸೇವೆಯನ್ನು ಇನ್ನು ಮುಂದಿನ ವರ್ಷಗಳಲ್ಲೂ ತೃಪ್ತಿಕರವಾಗಿ ಮಾಡಲು ಪ್ರತಿಜ್ಞಾಬದ್ಧರಾಗುತ್ತೇವೆ.

ಚಲಾವಣೆ ಭಂಡವಾಳ ರೂ. 6,00,00,000 ಕ್ಕೂ ಮಿಕ್ಕಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ 1925.

ಪ್ರಧಾನ ಕಚೇರಿ: ಉಡುಪಿ (ದ. ಭಾರತ.)

ದಕ್ಷಿಣ ಕನ್ನಡ ಜಿಲ್ಲೆಯ ಕೆಲವು ಶಾಖೆಗಳು

ಮಂಗಳೂರು	ನಿಟ್ಟೆ.	ಕೆಮ್ಮಣ್ಣು.	ಬೆಳ್ತಂಗಡಿ.	ಕುಂದಾಪುರ
ಬ್ರಹ್ಮಾವರ.	ಪುತ್ತೂರು.	ಮೂಡಬಿದ್ರೆ.	ಹೆಬ್ರಿ	ಬೈಲೂರು.
ಬಾರ್ಕೂರು.	ಉಡುಪಿ.	ಫಲಿಮಾರು	ಕುಂಬಳೆ.	ಬೈಂದೂರು
ಗಂಗೊಳ್ಳಿ.	ಕಾರ್ಕಳ.	ಸಾಲಿಗ್ರಾಮ.	ಮೂಲ್ಕಿ.	ಕನೆಕಾರು.
ಕಾಪು.	ಬಸ್ರೂರು	ಉಡುಪಿ ರಥಬೀದಿ.	ಪಾಣೆಮಂಗಳೂರು	ಕಿನ್ನಿಗೋಳಿ.
ಮಲ್ಪೆ	ಗುರುಪುರ	ಕಾಸರಗೋಡು.	ಶಂಕರನಾರಾಯಣ	ನೀಲೇಶ್ವರ
		ಕಾಂಞಂಗಾಡು		ಪರ್ದೂರು

THE CANARA INDUSTRIAL & BANKING SYNDICATE LTD.

THE

BOMBAY LIFE Assurance Co., Ltd.

H. O. BOMBAY.

(Estd: 1908)

A leading Life Assurance Company which offers all that is best in Policy contracts. To plan your future, it always pays you to contact:-

KOCHIKAR BROTHERS, LTD.,

Chief Agents,

BOMBAY LIFE BUILDING,

UDIPI, S. K.

or any of their other Offices at:-

BANGALORE, CALICUT, MADURA, MANGALORE, TRIVANDRUM, COIMBATORE & BOMBAY.

BHUVANENDRA PRODUCTS LIMITED,

KATAPADI, S. KANARA.

Regd.

Head Office & Factory: KATAPADI, S.K.

Trade mark

DEPOT:-
(1) Near Bus Stand, Udipi.
(2) Maharata Galli, Hubli.

ಸ್ವಾವಲಂಬನವೇ ಸ್ವರ್ಗ. ಪರಾವಲಂಬನವೆ ನರಕ.
ದೇಶೀಯ ಭಾವನೆ ಬೆಳೆದು, ಪ್ರೀತಿ ಸೌಹಾರ್ದದಿಂದ ಸಂಘಟಿತರಾಗಿ, ದೇಶದ ಸಂಪತ್ತು ಸಂಸ್ಕೃತಿಗಳನ್ನು ಅಭಿವೃದ್ಧಿಗೊಳಿಸುವಂತಾಗಲಿ.

O

ಇದೇ ಸಂದರ್ಭದಲ್ಲಿ ವೈದ್ಯರಿಗೂ, ರೋಗಿಗಳಿಗೂ ಇನ್ನೂ ಹೆಚ್ಚಿನ ವಿಶ್ವಾಸವ, ಆತ್ಮೀಯತೆ ಉಂಟಾಗುವಂತೆ "ಆಯುರ್ವೇದ ಶಾಸ್ತ್ರೀಯ ರೀತ್ಯಾ ಪ್ರ, ಅನುಭವಸಿದ್ಧ ಖಾತ್ರಿ ಔಷಧಿಗಳನ್ನು" ಪೂರೈಸಿ ನಿಮ್ಮ ಸೇವೆ ನಡೆಸುವಂತಾಗಲೆಂಬುದೇ ನಮ್ಮ ಹಾರೈಕೆ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ. ಕನ್ನಡ.

ಡಿಪೋ: (1) ಉಡುಪಿ. (2) ಮರಾಠಗಲ್ಲಿ, ಹುಬ್ಬಳ್ಳಿ.

TYPES & MACHINERY

FOR THE PRINTING

& ALLIED TRADES

CAN BE HAD OF



ROTARY CUTTING MACHINE
18" size Rs. 800/-
24" „ Rs. 1100/-

NORTON & COMPANY.

1-16, BAKER THIRUVENGADA MUDALI ST.,

CHOOLAI, MADRAS, 7.

Phone. 3001

Grams: CLEANTYPES

Write today for our Free Catalogue.

For all your requirements in

PAPER, BOARDS,
STATIONERY,
INKS PRINTING or WRITING

Please enquire at

SRINIVAS BROTHERS,

WHOLESALE PAPER MERCHANTS
& STATIONERS,

CAR STREET, POST BOX NO. 130,

MANGALORE—1.

PLACE YOUR LIFE
ASSURANCE WITH
A COMPANY OF
YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy-holders and Representatives at whatever stage We welcome yours association with the POPULAR.

THE

POPULAR
Insurance Co. Ltd.

"POPULAR BUILDINGS"

MANGALORE-1.

ವೈದ್ಯರತ್ನಂ ಪಿ. ಎಸ್. ವಾರಿಯರವರ

ಆರ್ಯ ವೈದ್ಯಶಾಲಾ, ಕೋಟಿಕ್ಕಲ್.

ಸ್ಥಾಪನೆ: 1902.

GOLDEN JUBILEE NURSING HOME

ಗೋಲ್ಡನ್ ಜ್ಯುಬಿಲಿ

ನರ್ಸಿಂಗ್ ಹೋಮಿನಲ್ಲಿ

ನವೀನ ಸೌಕರ್ಯಗಳೂ, ನವರ್ಕಿಳಿ, ಧಾರೆ, ಶಿರೋವಸ್ತಿ ಮೊದಲಾದ ಕೇರಳೀಯ ಚಿಕಿತ್ಸೆಗಳಿರುವ ಪ್ರತ್ಯೇಕ ಸೌಕರ್ಯಗಳೂ ಇರುತ್ತವೆ.

For effective AYURVEDIC TREATMENT & MEDICINES
APPROACH

Vaidya Ratnam P. S. VARIAR'S

ARYA VIDYA SALA

(Established in 1902)

KOTTAKKAL (S. Malabar)

Men may come and Men may go! But I go on for ever.!

ಹೊಸವರ್ಷದ ಎಂಟನೆಯ ಸ್ವಾತಂತ್ರ್ಯದಿನದ ಶುಭಕಾಲದಲ್ಲಿ

ನಮ್ಮ ಗ್ರಾಹಕರೆಲ್ಲರಿಗೂ ಶುಭಾಶಯಗಳು!

ಕಲ್ಮಂಜೆ ವ್ಯಾಸಾಚಾರ್ಯರ ಪಾತ್ರೆ ಭಂಡಾರ,

ರಥಬೀದಿ, ಉಡುಪಿ, ದ. ಕನ್ನಡ.

ಬಳಕೆಗೆ ಅಡ್ಡಿಯಿಲ್ಲ! ಥಳಕಿಗೆ ಕುಂದಿಲ್ಲ!! ಬಾಳಿಕೆಗೆ ಸಂಶಯವಿಲ್ಲ!!!

ಹಿತ್ತಾಳಿ, ಕಂಚು, ಪಂಚಲೋಹಗಳದೋ, ಸ್ಟೈನ್‌ಲೆಸ್ ಸ್ಟೀಲ್, ಬೆಳ್ಳಿ, ತಾಮ್ರಗಳದೋ?



ಅಡಿಗೆಗೆ, ದೇವತಾರ್ಚನೆಗೆ, ದಾನಕ್ಕೆ,
ಉಡುಗೊರೆಗೆ, ಮಿತ್ರಕೂಟಕ್ಕೆ,
ದೂರ ಸಂಚಾರಕ್ಕೆ
ಕಟ್ಟಿದರೆ ಚಿಕ್ಕ ಗಂಟು!
ಬಿಚ್ಚಿದರೆ ಎಲ್ಲಕ್ಕೂ ಉಂಟು!!
ತರತರದ ಗಾತ್ರದಲ್ಲಿ ಬಗೆಬಗೆಯ ಆಕಾರದಲ್ಲಿ
ಅತ್ಯಾಧುನಿಕ ಅಭಿರುಚಿಗೆ ತಕ್ಕಂತೆ ಚಿತ್ತಾಕರ್ಷಕವಾಗಿ!

ಬಂದು ನೋಡಿ! ಬರೆದು ಕೇಳಿ!

ಕೊಂಡು ಮನದಾನಂದ ಹೊಂದಿರಿ!

ರೊಕ್ಕಕ್ಕೆ ತಕ್ಕ ತರವಾರು ಪಾತ್ರಗಳ ಭರವಸೆಯುಳ್ಳ ವ್ಯಾಪಾರವೆಂದರೆ

ಕಲ್ಮಂಜೆಯವರಲ್ಲಿ

ಪಾತ್ರೆಗಳ ತಯಾರಿಕೆಗೆ ಹೆಸರುಗೊಂಡ ಊರುಗಳ ಸಕಲ ಉತ್ಕೃಷ್ಟ ಮ್ಹಾಲುಗಳೂ
ಒಂದೇ ಕಡೆ ದೊರೆಯುವ ಸಂಗ್ರಹಾಲಯ.

Kalmanje Vyasacharya's

METALWARE EMPORIUM,

CAR STREET, UDIPI, S. KANARA.

ದೇಶೀಯ ಕೈಗಾರಿಕೆಗಳಿಗೆ ಸದಾ ಪ್ರೋತ್ಸಾಹವಿರಲಿ.
ಕಲ್ಮಂಜೆಯವರ ಪಾತ್ರೆಗಳಿಂದ ಮನೆಮನೆಯೂ ಬೆಳಗಲಿ!

N. B **SPECIAL ATTENTION WILL BE GIVEN IN EXECUTING OUTSIDE ORDERS.**

ಭಾರತ ವಾಣಿ……

ವರ್ಷ ೩೩
ವಾರ ೪೯

Vol.
No.

ಸ್ಥಾಪಕರು:
ಶ್ರೀ. ಎ. ಬಿ. ಶೆಟ್ಟಿ,
ಮದರಾಸು ಸರಕಾರದ ಆರೋಗ್ಯ ಮಂತ್ರಿ.

ಸಂಚಾಲಕ ಸಂಪಾದಕ
ಕೆ. ಹೊನ್ನಯ್ಯ ಶೆಟ್ಟಿ

ಸ್ವಾತಂತ್ರ್ಯ ದಿನೋತ್ಸವ ಸಂಚಿಕೆ

NAVAYUGA

INDEPENDENCE DAY SPECIAL 1954

ಕನಸುಗಾರ ಗಾಂಧೀಜಿಯ ಅನುಪಮ ವಿಚಾರ

ನಿಜವಾಗಿ ನಾನೊಬ್ಬ ವ್ಯಾವಹಾರಿಕ ಕನಸುಗಾರ. ನನ್ನ ಕನಸುಗಳೆಂದರೆ ಗಾಳಿ ಗೋಪುರವಲ್ಲ. ನನ್ನ ಕನಸುಗಳನ್ನೆಲ್ಲ ಸಾಧ್ಯವಾದಷ್ಟು ಮಟ್ಟಿಗೆ ನನಸು ಮಾಡಲು ನಾನು ಬಯಸುತ್ತೇನೆ.

ಒಂದು ತುಣುಕು ಒಣ ರೊಟ್ಟಿ, ಒಂದು ಚಿಮಿಟ ಉಪ್ಪು ಇಷ್ಟರಿಂದಲೇ ಹೊಟ್ಟೆಯ ಕುಣಿಯನ್ನು ತುಂಬಿಕೊಳ್ಳುವವರಿಗಾಗಿ, ಒಂದು ತುಂಡು ವಸ್ತ್ರವನ್ನೆ ಉಟ್ಟು ಸಂತೋಷಿಸುವವರಿಗಾಗಿ ಸ್ವರಾಜ್ಯ ದೊರಕಬೇಕೆಂದು ನಾನು ಯತ್ನಿಸುತಿದ್ದೇನೆ.

ನಿರುದ್ಯೋಗಿ ಹಾಗು ಉಪವಾಸ ಬಳಲುತ್ತಿರುವ ಜನರಿಗೆ ದೇವರು ಒಂದೇ ಒಂದು ರೂಪದಿಂದ ದರ್ಶನ ಕೊಡಬಲ್ಲನು: ಅದೆಂದರೆ, ಪರಿಶ್ರಮ ಪೂರ್ವಕವಾದ ದುಡಿಮೆ; ಅರ್ಥಾತ್ ಕೂಲಿಯ ಮೂಲಕ ಆಹಾರ.

ನನ್ನಲ್ಲಿ ಹಾಗು ರೈತನಲ್ಲಿ ಈಗಿರುವ ವ್ಯತ್ಯಾಸವೇನೆಂದರೆ, ಅವನು ಪರಿಸ್ಥಿತಿವಶನಾಗಿ ಶ್ರಮಜೀವಿಯಾದೆನೆಂದು ಭಾವಿಸುವನು; ಆದರೆ ನಾನು ಸ್ವೇಚ್ಛೆಯಿಂದ ಶ್ರಮಜೀವಿಯಾಗಬೇಕೆನ್ನುತ್ತೇನೆ. ಅವನನ್ನು ನನ್ನಂತೆ ಮಾಡಿಬಿಟ್ಟೆನೆಂದರೆ ಅವನಿಗೆ ತನ್ನ ಶೃಂಖಲೆಗಳನ್ನು ಕತ್ತರಿಸಲು ಸಾಧ್ಯವಾಗುತ್ತದೆ.

ನನಗೂ ಪ್ರಗತಿಬೇಕು, ಸ್ವಯಂ ನಿರ್ಣಯ ಬೇಕು, ಸ್ವಾತಂತ್ರ್ಯ ಬೇಕು. ಆದರೆ ಇವೆಲ್ಲ ಆತ್ಮನ ವಿಕಾಸಕ್ಕಾಗಿ ಬೇಕು. ಶಿಲಾಯುಗಕ್ಕಿಂತ ಈಗಿನ ಆಯಾಸಯುಗವೇ ಹೆಚ್ಚು ಪ್ರಗತಿಪರವೆಂದು ನನಗನಿಸುತ್ತದೆ. ನಮ್ಮ ಆತ್ಮನ ವಿಕಾಸಕ್ಕಾಗಿ ನಮ್ಮ ಬುದ್ಧಿ ಹಾಗು ಇತರ ಶಕ್ತಿಯನ್ನು ಉಪಯೋಗಿಸಿದರೆ ಮಾತ್ರ ಅದನ್ನು ನಿಜವಾದ ಪ್ರಗತಿಯ ಲಕ್ಷಣವೆನ್ನಬಹುದು.

ಸ್ವರಾಜ್ಯವು ಪವಿತ್ರ ಶಬ್ದ: ಸ್ವನಿಯಮನ, ಸ್ವಸಂಯಮ ಎಂದು ಅದರ ಅರ್ಥ. ಸ್ವಾತಂತ್ರ್ಯವೆಂದರೆ ಎಷ್ಟೋ ಸಲ ಸ್ವೈರ ಎಂದು ತಪ್ಪು ತಿಳಿದುಕೊಳ್ಳುವುದುಂಟು. ಸ್ವರಾಜ್ಯವೆಂದರೆ ಅದಲ್ಲ.

ಅತ್ಯಂತ ಬಡವರೊಡನೆ ತನ್ಮಯತೆ, ಅವರಂತೆ ಅವರಷ್ಟೇ ಸರಳತನದಿಂದ ಜೀವಿಸುವ ಲವಲವಿಕೆ; ಬುದ್ಧಿಪೂರ್ವಕ ಹಾಗೆ ಜೀವಿಸುವ ಪ್ರಯತ್ನ ಇವು ಪ್ರಜಾಪ್ರಭುತ್ವದ ಉಪಾಸಕರ ಲಕ್ಷಣಗಳಾಗಿದ್ದರೆ ನಾನು ಅಂಥವರಲ್ಲಿ ಒಬ್ಬನೆಂದು ಹೇಳುತ್ತೇನೆ.

ಗಂಡಸರಿರಲಿ, ಹೆಂಗಸರಿರಲಿ, ಇಲ್ಲಿ ಹುಟ್ಟಿದವರಿರಲಿ, ನಾಗರಿಕ ಅಧಿಕಾರ ಪಡೆದವರಿರಲಿ, ಭಾರತದ ಬಹು ಸಂಖ್ಯ ವಯಸ್ಕರಲ್ಲಿ ಯಾರು ಮೈ ದುಡಿತದ ಮೂಲಕ ಸರಕಾರದ ಸೇವೆಮಾಡಿ ತಮ್ಮ ಹೆಸರುಗಳನ್ನು ಮತದಾರರ ಯಾದಿಯಲ್ಲಿ ಸೇರಿಸಿರುವರೋ ಅವರ ಸಮ್ಮತಿಯಿಂದ ನಡೆಸಲಾದ ರಾಜ್ಯಕ್ಕೆ ನಾನು ಸ್ವರಾಜ್ಯವೆನ್ನುತ್ತೇನೆ.

ರಾಷ್ಟ್ರೀಯ ಸ್ವಾತಂತ್ರ್ಯವೆಂಬುದು ಕೇವಲ ಕನಸಲ್ಲ, ಅಥವಾ ಕಾಲ್ಪನಿಕ ವಸ್ತುವಲ್ಲ. ವೈಯಕ್ತಿಕ ಸ್ವಾತಂತ್ರ್ಯದಷ್ಟೇ ಅದು ಅವಶ್ಯವಾಗಿರುತ್ತದೆ. ಅವೆರಡೂ ಅಹಿಂಸೆಯನ್ನು ಅವಲಂಬಿಸಿದ್ದರೆ ಇತರ ರಾಷ್ಟ್ರದ ಅಥವಾ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅವು ಭಯಕಾರಕವಾಗುವುದಿಲ್ಲ. ಇದು ಅಂತಾರಾಷ್ಟ್ರೀಯ ಮಾತುಗಳಿಗೂ ಅನ್ವಯಿಸುತ್ತದೆ.

ಎರಡು ರಾಷ್ಟ್ರಗಳು ಹೋರಾಡುತ್ತಿರುವಾಗ ಆ ಹೋರಾಟವನ್ನು ನಿಲ್ಲಿಸುವುದು ಅಹಿಂಸಕ ಮನುಷ್ಯನ ಕರ್ತವ್ಯ.

ಲಾಲಸೆಯೇ ಇಲ್ಲದಿದ್ದರೆ ಶಸ್ತ್ರಾಸ್ತ್ರಗಳ ಆವಶ್ಯಕತೆ ಬೀಳುವುದಿಲ್ಲ. ಅಹಿಂಸಾ ತತ್ವವು ಯಾವುದೇ ಪ್ರಕಾರದ ಶೋಷಕ ವೃತ್ತಿಯನ್ನು ಅಲ್ಲಗಳೆಯುತ್ತದೆ.

ಇನ್ನೊಬ್ಬರ ಮೇಲೆ ಅಧಿಕಾರ ನಡೆಸಲು ನನ್ನ ಬಳಿ ಪ್ರೇಮದ ಹೊರತು ಬೇರೇನೂ ಇರುವುದಿಲ್ಲ.

ಅಹಿಂಸೆಯ ಸಂದೇಶವನ್ನು ಮಾನವ ಕುಲಕ್ಕೆ ಬೀರುವುದು ಭಾರತದ ಭವಿತವ್ಯವಿರುವದೆಂದು ನನ್ನ ದೃಢವಾದ ವಿಶ್ವಾಸ. ಅದು ನೆರವೇರಲು ಕಾಲಾಂತರವಾಗಬಹುದು. ಆದರೆ ಈ ಮಹಾಕಾರ್ಯವನ್ನು ಈ ದೇಶವು ಮಾಡುವ ಪೂರ್ವದಲ್ಲಿ ಇನ್ನಾರೂ ಮಾಡಲಾರರೆಂದು ನನಗೆ ಕಾಣುತ್ತದೆ.

ನನ್ನ ಅಹಿಂಸಾಧ್ಯೇಯವು ಅತ್ಯಂತ ಪ್ರಗತಿಪರ ಶಕ್ತಿಯಿಂದ ಪ್ರೇರಿತವಾಗಿದ್ದು ಅದರಲ್ಲಿ ಹೇಡಿತನ ಅಥವಾ ದೌರ್ಬಲ್ಯಕ್ಕೆ ಅವಕಾಶವೇ ಇಲ್ಲ. ಹಿಂಸಾ ಪ್ರವೃತ್ತಿಯುಳ್ಳವನು ಒಂದಲ್ಲ ಒಂದು ದಿನ ಅಹಿಂಸಕನಾದಾನೆಂಬ ಆಶೆ ನನಗುಂಟು; ಆದರೆ ಹೇಡಿಯು ಕೊನೆಯ ವರೆಗೂ ಹೇಡಿಯಾಗಿಯೆ ಉಳಿಯುವನು.

ನಾನು ನನ್ನ ಜೀವನದಲ್ಲಿ ಸಂದರ್ಭ ಸಾಧಕನಾಗಲು ಏನನ್ನಾದರೂ ಮಾಡಿಲ್ಲ. ಅತ್ಯಂತ ಶ್ರೇಷ್ಠ ನೈತಿಕ ಆಚಾರವೇ ಉತ್ತಮ ಕಾರ್ಯ ಸಾಧಕವೆಂದು ನಾನು ಯಾವಾಗಲೂ ನಂಬುತ್ತಾ ಬಂದಿದ್ದೇನೆ.

ಆರ್ಥಿಕ, ಸಾಮಾಜಿಕ, ರಾಜಕೀಯ ಮುಂತಾದ ಚಟುವಟಿಕೆಗಳನ್ನು ಪರಸ್ಪರ ಸಂಬಂಧವಿಲ್ಲದವೆಂದು, ಬಿಡಿ ಬಿಡಿಯಾದವುಗಳೆಂದು, ಭಾವಿಸುವುದು ಸರಿಯಲ್ಲ. ಮಾನವೀ ಚಟುವಟಿಕೆಗಳು ಬೇರೆ, ಧರ್ಮವು ಬೇರೆ ಎನ್ನುವುದೂ ತಪ್ಪು. ಅವು ಅಭಿನ್ನ: ಏಕೆಂದರೆ ಧರ್ಮವೇ ಎಲ್ಲ ಚಟುವಟಿಕೆಗಳಿಗೂ ನೈತಿಕ ತಳಹದಿಯನ್ನೊದಗಿಸುತ್ತದೆ. ಅದಿಲ್ಲದಿದ್ದರೆ ಮಾನವನ ಜೀವನವೂ ಸಕಲ ವ್ಯವಹಾರವೂ ಗೊಂದಲಮಯವಾಗಿ ಅರ್ಥ ಶೂನ್ಯವೆನಿಸುತ್ತದೆ.

ನಮ್ಮ ಸಂಸ್ಕೃತಿಯ ವೈಶಿಷ್ಟ್ಯವನ್ನು ಕಾಪಾಡುವುದು ನನ್ನ ಮಟ್ಟಿಗೆ ಸ್ವರಾಜ್ಯದ ಉದ್ದೇಶ. ನಾನು ಅನೇಕ ಹೊಸ ಮಾತುಗಳನ್ನು ನೋಡಬೇಕೆನ್ನುತ್ತೇನಾದರೂ ಭಾರತದ ಪರಂಪರೆಗನುಸರಿಸಿ ಅವು ಕೈಗೂಡಬೇಕೆನ್ನುತ್ತೇನೆ.

* * * * *

ಪ್ರಜಾಸತ್ತಾತ್ಮಕ ಸಾಮ್ಯವಾದದ ರಹಸ್ಯ

ಕಾಂಗ್ರೆಸು ಸ್ವಾತಂತ್ರ್ಯ ಹೋರಾಟವನ್ನು ಕೈಗೊಂಡ ಕಾಲಕ್ಕೆ ಶಾಂತಿಯುತ ರೀತಿಯಲ್ಲಿ ಕ್ರಾಂತಿಕಾರಕ ಪರಿವರ್ತನೆಗಳನ್ನು ಸಾಧಿಸಲು ಪ್ರತಿಜ್ಞಾಬದ್ಧವಾಯಿತು. ಕಮ್ಯುನಿಸ್ಟರು ಪ್ರತಿಪಾದಿಸುತ್ತಿರುವ ಸಾಮ್ಯವಾದದ ತತ್ವಗಳನ್ನು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಅನುಷ್ಠಾನಕ್ಕೆ ತರುವ ಕರ್ತವ್ಯ ಭಾರವನ್ನು ಹೊತ್ತುಕೊಂಡ ಕಾಂಗ್ರೆಸು ಇಂದು ರಾಷ್ಟ್ರವ್ಯಾಪಿಯಾದ ರಚನಾತ್ಮಕ ಕಾರ್ಯಗಳಲ್ಲಿ ತೊಡಗಬೇಕಾಗಿರುವುದು.

ಬರೆದವರು: ಹಿ. ರಾಮರಾಯ ಮಲ್ಯ.

ಕಮ್ಯೂನಿಸ್ಟರ ಶಕ್ತಿ ಜಗತ್ತಿನಲ್ಲಿ ಬೆಳೆಯುತ್ತಿದೆಯೆಂಬುದನ್ನು ಇಂದಿನ ಜಗತ್ತಿನ ಸಂಸ್ಥಿತಿಯನ್ನು ಪರಿಶೀಲಿಸಿದರೆ ನಾವು ಕಾಣಬಲ್ಲೆವು. ಕಮ್ಯೂನಿಸ್ಟ ವಿರೋಧಿ ರಾಷ್ಟ್ರಗಳ ಮುಂದಾಳಾದ ಅಮೇರಿಕವು ಜಗತ್ತಿನ ರಾಜಕೀಯ ರಂಗದಲ್ಲಿ ಸೋಲನ್ನು ಅನುಭವಿಸಿ ಮುಂದಿನ ದಾರಿ ಕಾಣದೆ ನಿರಾಶೆಯತ್ತ ಸಾಗುತ್ತಿದೆ. ಇದೇ ಪರಿಸ್ಥಿತಿ ಮುಂದುವರೆದರೆ ಜಗತ್ತಿಗೆ ಇನ್ನೊಂದು ಭಯಂಕರ ಮಹಾಯುದ್ಧ ಅನಿವಾರ್ಯವಾದೀತು. ಇದರಿಂದಾಗಿ ಈ ಕಮ್ಯೂನಿಸ್ಟರನ್ನು ಸೋಲಿಸುವ ದಾರಿಯನ್ನು ಕಂಡು ಹಿಡಿಯಬೇಕಾದುದು ಇಂದಿನ ಮುಖ್ಯ ಪ್ರಶ್ನೆ. ಈ ಕಾರ್ಯವನ್ನು ಸಾಧಿಸಬೇಕಾದ ನೈತಿಕ ಹೊಣೆ ಸ್ವತಂತ್ರ ಭಾರತದ ಮೇಲೆ ಬೀಳುತ್ತದೆ. ಏಕೆಂದರೆ ಜಗತ್ತಿನಲ್ಲಿ ಯುದ್ಧವನ್ನು ತಡೆಗಟ್ಟಿ ಶಾಂತಿ ನೆಲೆಸುವಂತೆ ಮಾಡುವ ಕಾರ್ಯಭಾರದ ಮುಂದಾಳ್ತನವನ್ನು ನಾವಿಂದು ವಹಿಸಿಕೊಂಡಿದ್ದೇವೆ. ಇಂದು ಇಡೀ ಜಗತ್ತಿನ ಜನತೆ ಭಾರತದತ್ತ ಆಸೆಯಿಂದ ನೋಡುತ್ತಿದೆ. ಕಮ್ಯೂನಿಸ್ಟರನ್ನು ಸೋಲಿಸುವ ಈ ಕಾರ್ಯವನ್ನು ನಾವು ಹೇಗೆ ಸಾಧಿಸೋಣ? ಭಾರತದ ಮುಂದಾಳ್ತನದ ಭಾರ ಹೊತ್ತ ಜವಾಹರಲಾಲರು ಹೇಳಿದಂತೆ ಕಾಂಗ್ರೆಸಿಗರೂ ಈ ಪ್ರಶ್ನೆಯನ್ನು ಪರ್ಯಾಲೋಚಿಸಬೇಕು.

ಭಾರತವು ಈ ಪ್ರಶ್ನೆ ಬಿಡಿಸಲು ಸಮರ್ಥವುಂಟು. ನಮ್ಮ ಇತಿಹಾಸದಲ್ಲಿ ಇಂಥ ಅನೇಕ ಪ್ರಶ್ನೆಗಳನ್ನು ನಾವು ಯಶಸ್ವಿಯಾಗಿ ಬಿಡಿಸಿದ್ದೇವೆ. ಅನೇಕ ಬಗೆಯ ನಾಗರಿಕತೆಗಳು, ಹೊಸ ಹೊಸ ವಿಚಾರಗಳು ಆಗಿಂದಾಗ ನಮ್ಮ ದೇಶದಲ್ಲಿ ಉದಯವಾಗಿವೆ. ಭಾರತದ ನಾಗರಿಕತೆ ಇವೆಲ್ಲವನ್ನೂ ಯಶಸ್ವಿಯಾಗಿ ಅರಗಿಸಿಕೊಂಡು ಇಂದಿಗೂ ಸಜೀವವಾಗಿ ಉಳಿದಿರುತ್ತದೆ. ಈಗ ಜಗತ್ತಿನಲ್ಲಿ ಅತಿ ಹೆಚ್ಚು ಜನರ ಧರ್ಮವೆನ್ನಿಸುವ ಬೌದ್ಧಮತವು ಭಾರತವನ್ನು ಸಂಪೂರ್ಣವಾಗಿ ಒಮ್ಮೆ ಆವರಿಸಿತ್ತು. ಶಂಕರಾಚಾರ್ಯರು ಬೌದ್ಧ ಧರ್ಮ ಭಾರತದಲ್ಲಿ ಮಾಯವಾಗುವಂತೆ ಮಾಡಿದರು. ಹೇಗೆ ಈ ಕಾರ್ಯ ಮಾಡಿದರು ಗೊತ್ತೆ? ಬೌದ್ಧ ಧರ್ಮದಲ್ಲಿಯ ಸತ್ಯವನ್ನು ತಾವೇ ಸ್ವೀಕರಿಸಿದರು. ಅದನ್ನೇ ಹಿಂದೂ ಧರ್ಮದಲ್ಲಿ ಅಳವಡಿಸಿಕೊಂಡರು. ಅಂದಮೇಲೆ ಬೌದ್ಧ ಧರ್ಮದ ಅವಶ್ಯಕತೆಯೇ ಇಲ್ಲವಾಯಿತು. ಇಂಥ ಅನೇಕ ಉದಾಹರಣೆಗಳನ್ನು ನಮ್ಮ ಇತಿಹಾಸ ತೋರಿಸುತ್ತಿದೆ.

ಇಂದಿನ ಜಗತ್ತಿನಲ್ಲಿ ಉದಯಕ್ಕೆ ಬಂದಿರುವ ಕಮ್ಯೂನಿಸ್ಟ ತತ್ವವನ್ನು ಇದಿರಿಸಲಿಕ್ಕೆ ಕೂಡಾ ಇದೇ ಬಗೆಯ ದಾರಿಯನ್ನು ಅನುಸರಿಸಬೇಕಾಗಿದೆ. ಕಮ್ಯೂನಿಸ್ಟ ತತ್ವಗಳ ಮುಖ್ಯ ಧ್ಯೇಯಗಳೇನೆಂಬುದನ್ನು ನಾವು ಕಂಡುಕೊಂಡರೆ ಅವನ್ನು ನಾವು ನಮ್ಮದೇ ಮಾರ್ಗದಲ್ಲಿ ಜಾರಿಗೆ ತರಬಲ್ಲೆವೆಂದು ಗೊತ್ತಾಗುತ್ತದೆ. ಹೀಗೆ ಮಾಡಿದರೆ ಮತ್ತೆ ಈ ದೇಶದಲ್ಲಿ ಕಮ್ಯೂನಿಸ್ಟ ಚಳವಳದ ಆಗತ್ಯವೇ ಉಳಿಯುವದಿಲ್ಲ. ಜನಸಾಮಾನ್ಯರ, ಅಂದರೆ, ಸಾಗುವಳಿ ಕೆಲಸದಲ್ಲಿ ನಿರತರಾಗಿರುವ ಹಾಗೂ ಚಿಕ್ಕ ದೊಡ್ಡ ಕೈಗಾರಿಕೆಗಳಲ್ಲಿ ದುಡಿಯುವ ಬಡ ಜನರೆಲ್ಲರ ಜೀವನ ಸುಖಮಯವಾಗಬೇಕು. ರಾಷ್ಟ್ರದಲ್ಲಿ ಸರ್ವ ಸಮಾನತೆಯುಳ್ಳ ಹೊಸ ಪರಿಸ್ಥಿತಿ ನೆಲೆನಿಲ್ಲಬೇಕು. ಇದು ಕಮ್ಯೂನಿಸ್ಟರ ತತ್ವಗಳ ಸಾರ. ಇದು ನ್ಯಾಯವಾದ ಉದ್ದೇಶವೆಂಬುದನ್ನು ಕಾಂಗ್ರೆಸಿಗರಾದ ನಾವು ಎಂದೋ ಮನಗಂಡಿದ್ದೇವೆ. ಇದನ್ನೇ ನಮ್ಮ ಉದ್ದೇಶವನ್ನಾಗಿ ಇಟ್ಟುಕೊಂಡಿದ್ದೇವೆ. ಈ ಕಾರ್ಯವನ್ನು ಯಾರ ಮೇಲೆ ಬಲಾತ್ಕಾರ ಅಥವಾ ಹಿಂಸೆಗೆ ಹೋಗದೇನೇ ಸ್ವೇಚ್ಛೆಯಿಂದ, ಶಾಂತ ರೀತಿಯಿಂದ, ಪ್ರಜಾಸತ್ತಾತ್ಮಕ ವಿಧಾನದಲ್ಲಿ ಸಾಧಿಸಲಿಕ್ಕೆ ಸಾಧ್ಯವುಂಟೆಂಬುದನ್ನು ಮಾತ್ರ ಈಗ ತೋರಿಸಿಕೊಡಬೇಕಾಗಿದೆ. ಇದನ್ನು ನಾವು ಮಾಡಿದರೆ ಕಮ್ಯೂನಿಸ್ಟರನ್ನು ಸಂಪೂರ್ಣವಾಗಿ ಸೋಲಿಸಿದಂತಾಗುತ್ತದೆ.

ರಸ್ಯಾ ಮತ್ತು ಚೀನಾದಂಥ ಕಮ್ಯೂನಿಸ್ಟ ರಾಜ್ಯಗಳಲ್ಲಿ ಇಂದು ಜನಸಾಮಾನ್ಯರ ಜೀವನ ಪರಿಸ್ಥಿತಿ ಅತ್ಯಂತ ವೇಗದಿಂದ ಸುಧಾರಿಸಲ್ಪಡುತ್ತಿದೆಯೆಂಬುದನ್ನು ಅಲ್ಲಗಳೆಯುವುದರಲ್ಲಿ ಸಾರ್ಥಕತೆಯೇನೂ ಇಲ್ಲ ಏಕೆಂದರೆ ಅವರು ಪ್ರಗತಿ ಸಾಧಿಸುತ್ತಿರುವುದು ಸತ್ಯಸಂಗತಿ. ಅಲ್ಲಿ ದೋಷಗಳಿಲ್ಲವೆಂದಲ್ಲ, ನೂರಾರು ದೋಷಗಳಿರಬಹುದು. ನಾವು ಆ ದೋಷಗನ್ನು ನಿವಾರಿಸಲಿಕ್ಕೂ ಅವು ಇಲ್ಲದೆ ಅಲ್ಲಿಯದಕ್ಕಿಂತಲೂ ಒಳ್ಳೆಯ ಪ್ರಗತಿ ನಮ್ಮಲ್ಲಿ ಆಗಲಿಕ್ಕೂ ಯತ್ನಿಸೋಣ. ಈ ರೀತಿ ನಾವು ಮುಂದರಿದು ಯಶಸ್ವಿಯಾದರೆ ಕಮ್ಯೂನಿಸ್ಟ ರಾಜ್ಯಗಳು ಕೂಡಾ ತಮ್ಮಲ್ಲಿಯ ದೋಷಗಳನ್ನು ನಿವಾರಿಸಿಕೊಳ್ಳಲು ನಮ್ಮಿಂದಲೇ ದಾರಿ ಕಾಣುವಂತಾದೀತು.

ಅಮೇರಿಕ ಮೊದಲಾದ ರಾಷ್ಟ್ರಗಳಲ್ಲಿಯೂ ಕಮ್ಯೂನಿಸ್ಟ ರಾಷ್ಟ್ರಗಳಲ್ಲಿಯೂ ಏನೆಲ್ಲ ಒಳ್ಳೆಯದಿದೆಯೊ ಅದೆಲ್ಲವನ್ನೂ ನಾವಿಂದು ಸ್ವೀಕರಿಸಬೇಕು. ಇತ್ತಂಡಗಳಲ್ಲಿಯೂ ಇರುವ ದೋಷ ನಾವು ಬಿಡಬೇಕು. ಇದು ನಮ್ಮ ಮುಂದಿನ ದಾರಿಯ ಮುಖ್ಯ ಸೂತ್ರವಾಗಬೇಕು.

ಸಂಪತ್ ಸಮೃದ್ಧಿಯನ್ನು ಸಾಧಿಸಲು ಪಾಶ್ಚಾತ್ಯ ರಾಷ್ಟ್ರಗಳು ಅನೇಕಾನೇಕ ಮಾಹಿತಿ ಸಂಗ್ರಹಮಾಡಿ ಜಾರಿಗೆ ತಂದಿವೆ. ಅವುಗಳಲ್ಲಿ ನಮಗೆ ಉಪಯುಕ್ತವೆಂದು ಕಾಣುವುದನ್ನು ಇಲ್ಲಿಗೆ ತರಲು ಅನುಮಾನಿಸುವ ಅಗತ್ಯವಿಲ್ಲ. ಭಂಡವಲಶಾಹೀ ಪದ್ಧತಿಯ ದೋಷಗಳು ಅಲ್ಲಿ ತುಂಬಾ ಇವೆ. ಅವು ಮಾತ್ರ ನಮ್ಮಲ್ಲಿ ಬಾರದಂತೆ ಅದೇ ಸಮಯ ತಡೆಗಟ್ಟಬೇಕು.

ಭಂಡವಲಶಾಹೀ ರಾಷ್ಟ್ರಗಳಲ್ಲಿಯೂ ಕಮ್ಯೂನಿಸ್ಟ ರಾಷ್ಟ್ರಗಳಲ್ಲಿಯೂ ಕಾಣಿಸುವ ಮುಖ್ಯ ದೋಷವೆಂದರೆ ಬಲಾತ್ಕಾರ ಅಥವಾ ಹಿಂಸೆಯಿಂದ ಸಾಧನೆ: ಈ ಹಿಂಸೆಯ ದಾರಿಯನ್ನು ಬಿಟ್ಟು ಶಾಂತರೀತಿಯಿಂದಲೇ ಇತ್ತಂಡದವರು ಸಾಧಿಸಿರುವ ಉತ್ತಮ ಕಾರ್ಯಗಳನ್ನು ನಾವು ಜಾರಿಗೆ ತರಬೇಕಾಗಿದೆ. ಇದೊಂದೇ ಇಂದು ಜಗತ್ತಿನ ಕಣ್ಣನ್ನು ತೆರೆಯಬಲ್ಲುದು. ಜಗತ್ತಿಗೆ ಶಾಂತಿಯ ಮಾರ್ಗವನ್ನು ತೋರಬಲ್ಲುದು.

ನಮ್ಮ ದೇಶವನ್ನು ಪ್ರಕೃತ ಇದಿರಿಸುತ್ತಿರುವ ಮೇಲಿನ ಪ್ರಶ್ನೆ ಬಿಡಿಸುವ ದಾರಿಯನ್ನು ನಮ್ಮ ಪ್ರೀತಿಯ ಮುಂದಾಳು ಶ್ರೀ ಜವಾಹರಲಾಲರು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇದನ್ನೇ ಅವರಿಂದು ಕಾಂಗ್ರೆಸಿಗೆ ಉಪದೇಶಿಸಿದ್ದಾರೆ. ಕಾಂಗ್ರೆಸಿಗರು ಇದನ್ನು ತಿಳಿದು ವರ್ತಿಸಬೇಕೆಂದು ಆಶಿಸುತಿದ್ದಾರೆ.

ಅಜ್ಮೀರದಲ್ಲಿ ಇತ್ತೀಚೆಗೆ ಸೇರಿದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದಲ್ಲಿ ಶ್ರೀ ನೆಹರೂರವರ ನೇತೃತ್ವದಲ್ಲಿ ಮಂಜೂರಾದ ನಿರ್ಣಯಗಳ ಸಾರವೇ ಇದು. ಭಾರತದ ಸಂಪತ್ತನ್ನು ಹೆಚ್ಚಿಸಬೇಕು. ಎಲ್ಲರಿಗೂ ಉದ್ಯೋಗ ದೊರಕಬೇಕು. ಎಲ್ಲರಿಗೂ ನ್ಯಾಯ ಸಿಕ್ಕುವ ಸರ್ವಸಮಾ

(೨೨ನೇ ಪುಟ ನೋಡಿರಿ)

THE JUPITER GENERAL INSURANCE CO., LTD.

ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

೧೯೧೯ರಲ್ಲು ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬೇಂಕ್ ಸ್ಟ್ರೀಟ್, ಬೊಂಬ್ಬಾ 1.

ಸಮರ್ಧ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಳ ...	...	ರೂ. 23,74,800
ಒಟ್ಟು ಮೂಲಗಳು ...	... (ಮಿಕ್ಕಿದೆ)	ರೂ. 3,35,00,000
ಊರ್ಜಿತವಲ್ಲಿರುವ ವಿಮಾವ್ಯವಹಾರ ...	,,	ರೂ. 7.50,00,000
1953ರಲ್ಲಿ ಪೂರ್ಣವಾದ ವಿಮಾವ್ಯವಹಾರ...	,,	ರೂ. 1,00,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ, ಕೆಲಸಗಾರರ ಪರಿಹಾರ ದ್ರವ್ಯಾನುಕೂಲತೆ, ಕಳ್ಳಕಾಕರ ಪಾಲಾಗುವಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂಪರ್ಕಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ, ಸಿಲೋನ್, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ:—

ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,

ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ಖಾತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkapet, UDIPI, S. Kanara.

ಫೋನು ನಂಬ್ರ 66

ಉಡ್ಪಿ ಡಿ. ಮು ಕೋರ್ಟಿನಲ್ಲಿ

O. S. 200/54.

ಸಂಕಯ ಸೆಟ್ಟಿ — — ವಾದಿ.

ಗೋಪಾಲಾಚಾರಿ ನಾರಾಯಣಾಚಾರಿ ಮಗ — ಕಡೆಕಾರು ಗ್ರಾಮ ಉಡ್ಪಿ ತಾಲ್ಕು

ಪ್ರತಿವಾದಿ.

ಇವರೊಳಗೆ

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯ ಪಡಿಸುವದೇನೆಂದ್ರೆ:—

ವಾದಿಗೆ ಪ್ರತಿವಾದಿಯಿಂದ ಬರಾ ಬಾಕಿಗೆ ಬಾಕಿ ವ ಕಟ್ಟೋಣ ಸ್ವಾಧೀನತೆ ಕೇಳಿ ವಾದಿಯು ದಾಕಲು ಮಾಡಿದ ಮೇಲ್ಕಂಡ ದಾವೆಯು ತಾ. 19-8-54ಕ್ಕೆ ಆತನ ನೋಟೀಸು ಬಗ್ಗೆ ಇಟ್ಟಿದೆ. ಪ್ರತಿವಾದಿಯು ಸಾಧಿಸುವಂತಾದ್ದಿದ್ದರೆ ಸದ್ರಿ ದಿವಸ ಬೆಳಿಗ್ಗೆ ಗಂಟೆ 11ಕ್ಕೆ ಸ್ವತಃ ವ ವಕೀಲರ ಮುಖಾಂತ್ರ ಹಾಜರಾಗಿ ಜಾಹೀರು ಮಾಡಿಕೊಳ್ಳ ತಕ್ಕದ್ದೆಂತಲೂ— ತಪ್ಪಿದರೆ ಆತನನ್ನು ವಿನ್ಯಾ ಮಾಡಿ ಸದ್ರಿ ದಾವೆಯು ತೀರ್ಮಾನಿಸಲ್ಪಡುವುದೆಂತಲೂ ಈ ಮೂಲಕ ತಿಳಿಯಪಡಿಸೋಣಾಗಿಯದೆ.

ತಾ. 6-8-54 } K. J. Ballal
ಉಡ್ಪಿ. } Pleader for Plaintiff.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ ಕೋರ್ಟಿನಲ್ಲಿ

O. P, 110/54

ನರ್ಶಿ ಪೂಜಾರ್ತಿ— ಕುಜುಂಬ ಪೂಜಾರಿಯ ಹೆಂಡತಿ ಉಡ್ಪಿ ತಾಲ್ಕು ಪಡುತೋನ್ಸೆ ಗ್ರಾಮ

ಅರ್ಜಿದಾರಳು.

ಅರ್ಜಿದಾರಳ ಮಗ ಸೋಮಪ್ಪ ಪೂಜಾರಿಯು, ಮದುವೆಯಾಗದೆ, ವೀಲು ವಗೈರೆ ಮಾಡದೆ ತಾ. 30-5-54ರಲ್ಲು ಕೊಲೆಮಾಡಲ್ಪಟ್ಟು ಮೃತ ಪಟ್ಟಿರುವುದರಿಂದ, ಆತನ ಬಾಬ್ತು 'The Bombay Mutual Life Assurance Society Ltd., Bombay ಎಂಬ ಕಂಪೆನಿಯಲ್ಲಿ ನಂಬ್ರ 420302ನೇ ಪೋಲಿಸಿ ಪ್ರಕಾರ ಬರತಕ್ಕ ವಿಮಾ ಹಣವನ್ನು ಪಡೆಯಲು ತಾನು ಹಕ್ಕುದಾರಳೆಂತಲೂ, ಆ ಕುರಿತು ತನಗೆ ಒಂದು ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಕೂಡಾ ಕೇಳಿ ಕೊಟ್ಟ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾ. 1-9-54 ರಲ್ಲು ತನ್ಖಿಗೆ ಇಟ್ಟಿರುತ್ತದೆಂತ ಈ ಮೂಲಕ ಎಲ್ಲಾ ಜನರಿಗೆ ತಿಳಿಸೋಣಾಗುತ್ತದೆ—

(By order of court)

Udipi. } K. Vittal Nayak
7—8—54 } Vakil for Petitioner.

ನಮ್ಮ ಸ್ವಾತಂತ್ರ್ಯ ಚಳವಳಿ ಮತ್ತು ಅದರ ಇತಿಹಾಸ

ಸ್ವಾತಂತ್ರ್ಯ ಚಳವಳಿಯ ರೋಮಾಂಚಕ ಇತಿಹಾಸ ರಾಷ್ಟ್ರಭಕ್ತರ ತ್ಯಾಗಮಯ ಜೀವನದ ವರ್ಣನೆಯನ್ನು ಮಾಡುತ್ತದೆ. ಆಗಿನ ಸ್ವಾರಸ್ಯಪೂರ್ಣ ಘಟನೆಗಳ ಸ್ಮರಣ ಮಾತ್ರದಿಂದಲೇ ಮೈ ಪುಳಕಗೊಳ್ಳುತ್ತದೆ; ಸ್ಫೂರ್ತಿಯ ಸೆಲೆ ಉಕ್ಕೇರುತ್ತದೆ.

ಲೇಖಕ:— ಶ್ರೀ. ರಂಗನಾಥ ರಾಮಚಂದ್ರ ದಿವಾಕರ
ಬಿಹಾರದ ರಾಜ್ಯಪಾಲರು.

ನಮ್ಮ ಸ್ವಾತಂತ್ರ್ಯ ಚಳವಳಿಯ ರೋಚಕ ಘಟನೆಗಳ ಮೇಲೆ ಸಮರ್ಥರೂ, ಸ್ಫೂರ್ತಿವಂತರೂ ಆದ ಲೇಖಕರು ಕೂಡ ಕೈ ಆಡಿಸ ಬಹುದಾಗಿದೆ. ಅದನ್ನು ವಿಷಯವಾಗಿಟ್ಟುಕೊಂಡು ಬರೆಯುವವರಿಗೆ ರೋಮಾಂಚನಕಾರಿ ಘಟನೆಗಳ ಕೊರತೆಯೇ ಇಲ್ಲ; ಅಲ್ಲದೆ ಬರವಣಿಗೆಯು ಮುಗಿದ ಮೇಲೆ ನಿಜವಾಗಿಯೂ ತಾವು ಒಂದು ದೊಡ್ಡ ಕೆಲಸ ಮಾಡಿದ್ದೇವೆಂದು ಅವರು ತಿಳಿದುಕೊಂಡರೆ ಅದರಲ್ಲಿ ತಪ್ಪಿಲ್ಲ. ಮುಂದಿನ ತಲೆಮಾರಿಗೆ ನಾವು ಇಂದೇ ಸಲ್ಲಿಸಬೇಕಾದ ಋಣಗಳ ಪೈಕಿ ಇದು ಮುಖ್ಯವಾದ್ದು. ನಮಗೆ ಇತಿಹಾಸದ ಪರಿಜ್ಞಾನ ಕಡಿಮೆ ಎಂದು ಎಷ್ಟೋ ಜನ ಪದೇ ಪದೇ ಟೀಕಿಸಿದ್ದುಂಟು. ಸ್ವಲ್ಪಮಟ್ಟಿಗೆ ಇದರಲ್ಲಿ ತಥ್ಯಾಂಶವೂ ಇದೆ ಎನ್ನಬಹುದು. ವಿದೇಶೀಯ ಪ್ರವಾಸಿಗಳು, ವರದಿಕಾರರು, ಸಾಹಿತ್ಯ ಕೃತಿಗಳು ಇವುಗಳ ಅವಲಂಬನೆಯಿಂದ ನಮ್ಮ ಇತಿಹಾಸದ ಬಹ್ವಂಶವು ರಚಿತವಾಗಿದೆ ಎಂಬುದನ್ನು ನಾವು ಅಲ್ಲಗಳೆಯುವಂತಿಲ್ಲ. ಆದರೆ ಇದೇ ಪ್ರಸಕ್ತಿಯು ನಮ್ಮ ಅರ್ವಾಚೀನ ಇತಿಹಾಸಕ್ಕೂ ಬಾರದಂತೆ ನೋಡಿಕೊಳ್ಳುವುದು ನಮ್ಮ ಕರ್ತವ್ಯವಾಗುತ್ತದೆ. ಪ್ರಪಂಚದಲ್ಲೇ ಅತಿ ವಿಶಿಷ್ಟ ರೀತಿಯಲ್ಲಿ ನಡೆದ ನಮ್ಮ ಸ್ವಾತಂತ್ರ್ಯ ಸಮರಕ್ಕೆ ಈ ಗತಿ ಒದಗದಂತೆ ನಾವು ಎಚ್ಚರಿಕೆಯಿಂದಿರಬೇಕಾಗುತ್ತದೆ.

ಸ್ವಾತಂತ್ರ್ಯ ಸಮರದ ಕುರಿತು ಅಧಿಕೃತವಾದ ಇತಿಹಾಸವನ್ನು ಬರೆದುಕೊಡಲು ಅಧಿಕಾರೇತರ ತಜ್ಞರ ಮಂಡಳಿಯೊಂದು ನೇಮಕವಾದ ಬಳಿಕ ಭೂಗತವಾದ, ವಿಸ್ಮೃತವಾದ ಎಷ್ಟೋ ಸ್ವಾರಸ್ಯದ ಪ್ರಸಂಗಗಳು ಬೆಳಕಿಗೆ ಬರಲು ಕಾರಣವಾಯಿತು. ಉದಾಹರಣೆಗೆ ಹೇಳುವುದಾದರೆ, ೧೮೫೭ರಲ್ಲಿ ನಡೆದ 'ದಂಗೆ'ಯು ಯಥಾರ್ಥವಾಗಿ 'ದಂಗೆ' ಯಂಥ ಕ್ಷುಲ್ಲಕ ವಿಷಯವೇನೂ ಅಲ್ಲವೆಂದೂ, ಈ ನಾಡಿನ ಸಾಮಾನ್ಯ ಜನತೆಯ ಬೆಂಬಲದಿಂದ ನಡೆದ ಒಂದು ಮಹಾ ಕ್ರಾಂತಿಯೆಂದೂ, ಈಗ ಧೈರ್ಯವಾಗಿ ಹೇಳಲು ಸಾಕಷ್ಟು ಪುರಾವೆಗಳು ಸಂಗ್ರಹವಾಗಿವೆ. ಸಮಕಾಲೀನ ಲಂಡನ್ 'ಟೈಮ್ಸ್' ಪತ್ರಿಕೆಯ ಕಲಮುಗಳಲ್ಲಿಯೂ 'ದಂಗೆ'ಯು ಅಲ್ಲಿ ಇಲ್ಲಿ, ಎಲ್ಲೆಲ್ಲಿಯೂ ನಡೆದಂತೆ ವರದಿಯಾಗಿರುವುದನ್ನು ನೋಡಿದರೆ, ಈ ನಮ್ಮ ಪ್ರಥಮ ಸ್ವಾತಂತ್ರ್ಯಸಮರವು ಸರ್ವವ್ಯಾಪಿಯಾದ ಒಂದು ಆಂದೋಲನವಾಗಿತ್ತೆಂಬುದು ಗೋಚರವಾಗುವುದಿಲ್ಲವೇ? ಪರಕೀಯರ ದುರಾಡಳಿತದ ವಿರುದ್ಧ ನಮ್ಮ ನಾಡಿನ ಜನ ಹೋರಾಡಿದ ಈ ಸಾಹಸಮಯ ಆಂದೋಲನವು ನಮ್ಮ ಸ್ವಾತಂತ್ರ್ಯಸಮರಕ್ಕೆ ನಾಂದಿಯಾಗಿತ್ತೆಂದು ಹೇಳಲು ಅಡ್ಡಿ ಏನು?

ಈ ನಡುವೆ ನಾವು ಮರೆತು ಬಿಡಬಹುದಾದ ಒಂದು ವಿಷಯವನ್ನು ಇಲ್ಲಿ ಈಗಲೇ ಜ್ಞಾಪಿಸಬೇಕಾಗಿದೆ: ನಮ್ಮ ದೇಶದ ಮನೆ ಮನೆಯ ಬಾಗಿಲಿಗೂ ಸ್ವರಾಜ್ಯವನ್ನು ಒಯ್ದ ಶ್ರೇಯಸ್ಸು ಒಂದು ಪಕ್ಷದ (ಕಾಂಗ್ರೆಸಿನ) ಭಗೀರಥ ಯತ್ನಕ್ಕೆ ಸಲ್ಲುವುದು ನ್ಯಾಯವಾದರೂ ಸಹಿತ, ಇನ್ನೂ ಅನೇಕ ಪಕ್ಷಗಳೂ ಜನರ ಗುಂಪುಗಳೂ ಸ್ವರಾಜ್ಯ ಸಂಪಾದನೆಯ ಕಾರ್ಯದಲ್ಲಿ ಬೇಕಷ್ಟು ಸಹಾಯವನ್ನು ನೀಡದೆ ಇಲ್ಲ. ಈ ಸಂಗಡಗಳ ಉದ್ದೇಶವೇನು? ಇವು ಕೈಗೊಂಡ ಧೋರಣೆಗಳು ಯಾವುವು? ಇವುಗಳ ಕಾರ್ಯಕ್ರಮದ ವಿವರ ಯಾವುವು? ಎಂಬುದನ್ನು ಸ್ವಾತಂತ್ರ್ಯಸಮರದ ಇತಿಹಾಸ ಮಂಡಳಿಯಂಥ ಇತಿಹಾಸೈಕ ಪಕ್ಷಪಾತಿ ಸಂಸ್ಥೆಗಳು ಸರಿಯಾಗಿ ಅಳೆದು ನಮ್ಮ ಮುಂದಿಡಬೇಕಾಗಿದೆ.

ಈ ದೊಡ್ಡ ದೇಶದ ಬೇರೆ ಬೇರೆ ಪ್ರಾಂತಗಳಲ್ಲಿ ನಡೆದ ಮುಖ್ಯ ಘಟನೆಗಳನ್ನೂ, ವಹಿಸಿದ ಕಾರ್ಯಕ್ರಮಗಳನ್ನೂ ಸರಿಯಾಗಿ ವಿವರಿಸುವುದು ಆಗತ್ಯವಾಗಿ ಜರಗತಕ್ಕ ಇನ್ನೊಂದು ಕಾರ್ಯಭಾರ. ನಮ್ಮ ಪ್ರಾಂತಗಳಲ್ಲಿ ಕೆಲವು ದೊಡ್ಡವು, ಕೆಲವು ಸಣ್ಣವು. ಹೀಗಿದ್ದರೂ ಯಾವುದೇ ಸಣ್ಣ ಅಥವಾ ದೊಡ್ಡ ಪ್ರದೇಶದಲ್ಲಿ ನಡೆದ ಯಾವುದೇ ಪ್ರಧಾನ ಪ್ರಸಂಗವೂ ಕಣ್ಣುತಪ್ಪಿಸಿಕೊಳ್ಳದಂತೆ ನಾವು ಜಾಗ್ರತೆಯಿಂದಿರಬೇಕು. ಚಳವಳಿಯ ವಿಷಯ ತಿಳಿದಿರುವವರೆಲ್ಲರೂ ತಮಗೆ ತಿಳಿದೆಲ್ಲವನ್ನೂ ಮಂಡಳಿಯ ಮುಂದೆ ನಿವೇದಿಸಿಕೊಂಡು ನಮ್ಮ ಸ್ವಾತಂತ್ರ್ಯ ಸಮರವನ್ನು ಒಟ್ಟಾಗಿ ಗ್ರಹಿಸುವ ದೃಷ್ಟಿಯನ್ನು ಮಂಡಳಿಯ ಸದಸ್ಯರಿಗೆ ಉಂಟುಮಾಡಿಕೊಡಬೇಕಾದ್ದು ಯುಕ್ತವಾಗಿದೆ.

ಇದಕ್ಕೆ ನಾನು ಕೆಲವು ಉದಾಹರಣೆಗಳನ್ನು ಕೊಡಬಲ್ಲೆ. ನಾನು [illegible] ವಿಷಯಗಳನ್ನು ಬೇರೆ ಬೇರೆಯಾಗಿ ಗ್ರಹಿಸಿದಲ್ಲಿ ಅದರಲ್ಲಿ ಹೆಚ್ಚು ಮಹತ್ವವಿಲ್ಲವೆಂದು ಕಂಡರೂ ಸ್ವಾತಂತ್ರ್ಯ ಸಮರದ ಹಿನ್ನೆಲೆಯಲ್ಲಿ ಇವಕ್ಕೆ ಒಂದು ವಿಶೇಷ ವರ್ಣವೂ, ಸ್ಥಾನವೂ ಉಂಟಾಗುವುವು. ನನಗೆ ಗೊತ್ತಿರುವ ಈ ವಿಷಯಗಳು ನಡೆದ ಕಾಲ ೧೮೫೭ರಿಂದ ೧೯೪೭ರ ನಡುವಣದ್ದು, ಸ್ಥಳ ಕರ್ನಾಟಕ ಎಂದು ನಮ್ಮ ದೇಶದಲ್ಲಿ ಕರೆದುಕೊಳ್ಳಲ್ಪಡುವಂಥ ಪ್ರದೇಶವು. ೧

ಧಾರವಾಡದಿಂದ ೩೦ ಮೈಲು ದೂರದಲ್ಲಿ, ಕರಿ ನೆಲದ ನಡುವೆ ಒಂದೇ ಒಂದಾಗಿ ಎದ್ದು ತೋರುವ ನರಗುಂದವೆಂಬ ಒಂದು ಗುಡ್ಡವಿದೆ. ಅದರ ಮೇಲೊಂದು ಹಳೆಯ ಕೋಟೆ ಇದೆ. ೧೮೫೭—೫೮ರಲ್ಲಿ ಈ ಸ್ಥಳದಲ್ಲಿ ಬಾಬಾ ಸಾಹೇಬ ಎಂಬ ಮಹಾನುಭಾವನು ಕ್ರಾಂತಿಯ ಧ್ವಜವನ್ನೆತ್ತಿ ಹಿಡಿದಿದ್ದನು. ಅವನಿಗೆ ಪರಕೀಯರು ತಕ್ಕ ಶಾಸ್ತಿಯನ್ನು ಮಾಡಿಯೇ ಮಾಡಿದರು. ಅವನ ಸಂಗಡಿಗರಲ್ಲಿ ಹಲವರನ್ನು ಕೋಟೆಯ ದಾರಿಯಲ್ಲಿದ್ದ ಮರಗಳಿಗೆ ತೂಗ ಹಾಕಿ ಕೊಲ್ಲುವ ಅಮಾನುಷ ಕೃತ್ಯಕ್ಕೂ ಅವರು ಹಿಂಜರಿಯಲಿಲ್ಲವಂತೆ.

ನಿಜಾಮು ರಾಜ್ಯದ ಬೇಡರ ವಿಷಯ ಇಂಥದೇ ಒಂದು ಪ್ರತೀತಿ ಇದೆ. ೧೮೫೮ರಲ್ಲಿ ನಮ್ಮ ಜನ ಯಾರೂ ಆಯುಧಗಳನ್ನು ಧರಿಸಬಾರದೆಂದು ಶಾಸನವಾಯಿತಲ್ಲಾ, ಆಗ ನಡೆದ ಕತೆ ಇದು. ಸುರಪುರದ ನಿವಾಸಿಗಳಾದ ಈ ಸಾವಿರ ಜನ ಬೇಡರು ತಮ್ಮ ಆಯುಧಗಳನ್ನು ಕೆಳಗಿಟ್ಟು ಪರಕೀಯ ಶಾಸನಕ್ಕೆ ತಲೆ ಬಾಗುವ ಬದಲು, ಕತ್ತಿಯನ್ನೇ ಕೈಯಲ್ಲಿ ಹಿಡಿದುಕೊಂಡು ಹೋರಾಡಿ ವೀರಸ್ವರ್ಗವನ್ನು ಪಡೆದರಂತೆ.

ಮೂರನೆಯ ಘಟನೆಯ ಮೇಲೆ ಒಂದು ನಾಟಕವೇ ರಚಿತವಾಗಿದೆ. ಅದು ಚಿತ್ತೂರಿನ ಚನ್ನಮ್ಮ ಎಂಬವಳ ಸಾಹಸದ ಕತೆ. ಬೆಳಗಾವಿಯ ಸಮೀಪದಲ್ಲಿ ಒಂದು ಪುಟ್ಟ ದೇಶೀ ರಾಜ್ಯದ ವೀರ ರಾಣಿ ಚನ್ನಮ್ಮ ಬ್ರಿಟಿಷರು ತನ್ನ ರಾಜ್ಯವನ್ನು ವಶಪಡಿಸಿಕೊಳ್ಳುವುದರ ವಿರುದ್ಧ ಭಯಂಕರ ಕಾದಾಟವನ್ನು ಹೂಡಿದಳು.

ನಮ್ಮ ಅಹಿಂಸಾತ್ಮಕ ವಿರೋಧದ ಅಧ್ಯಾಯದಲ್ಲಿ ಈ ಎಲ್ಲಕ್ಕಿಂತಲೂ ರೋಚಕವಾದ ಘಟನಾವಳಿಗಳು ೧೮೮೦ರ ಸುಮಾರಿಗೆ 'ಕೆನರಾ'ದಲ್ಲಿ ಜರಗಿದುವು. ಗಾಂಧೀಜಿ ಅಹಿಂಸೆಗೆ ಒಂದು ಸ್ಪಷ್ಟ ರೂಪವನ್ನು ಕೊಡುವುದಕ್ಕೆ ಎಷ್ಟೋ ದಶಕಗಳ ಪೂರ್ವದಲ್ಲಿ ಇಲ್ಲಿನ ಜನರು ಅಸಹಯೋಗದ ಚಳವಳಿಯನ್ನು ಆರಂಭಿಸಿ ಬಿಟ್ಟಿದ್ದರು. ಈಗ ದಕ್ಷಿಣ ಕನ್ನಡ ಮತ್ತು ಉತ್ತರ ಕನ್ನಡವೆಂದು ಕರೆಯಲಾಗುತ್ತಿರುವ ಎರಡು ಜಿಲ್ಲೆಗಳೂ ಆಗ ಒಂದೇ ಆಗಿದ್ದು, ಒಂದೇ ಆಡಳಿತದ್ದಾಗಿರುತ್ತಿದ್ದುವು. ಅಲ್ಲಿನ ಬ್ರಿಟಿಷ ಅಧಿಕಾರಿಗಳು ಭೂಮಿಯ 'ಸೆಟ್ಲ್‌ಮೆಂಟ್' ಕಾರ್ಯಕ್ರಮವನ್ನು ಕೈಗೊಳ್ಳುವ ಸುದ್ದಿ ಪ್ರಚಾರವಾದ ಕೂಡಲೆ 'ಕೆನರಾ'ದ ಭೂಮಾಲಿಕರಿಗೆ ಅಪಾಯದ ಸುಳಿವು ಹತ್ತಿ ಬಿಟ್ಟಿತು. ಇನ್ನು ಈ ಬಿಳಿ ಜನ ತಮ್ಮ ವಿಶಿಷ್ಟ ಹಕ್ಕುಗಳನ್ನು ಕಸಗೊಳ್ಳುವರೆಂದು ಅವರಿಗೆ ಖಚಿತವಾಗಿತ್ತು. ಇದನ್ನು ವಿರೋಧಿಸಲು ಅವರು ಅಸಹಕಾರದ ಪದ್ಧತಿಯನ್ನು ಬಳಸಿದರು. ಅಧಿಕಾರಿಗಳು ಯಾವ ಗ್ರಾಮ ಅಥವಾ ಪಟ್ಟಣಗಳನ್ನು ಹೊಕ್ಕರೋ ಅಲ್ಲಿ, ಸ್ಥಳೀಯ ಮಾಲಿಕರು ಪತ್ತೆ ಇಲ್ಲದೆ ಹೋಗುತ್ತಿದ್ದರು. ಅಲ್ಲದೆ ಆಯಾ ಪ್ರದೇಶದಲ್ಲಿ ಯಾರೂ ಈ ಅಧಿಕಾರಿಗಳಿಗೆ ಊಟ ವಸತಿ ಕೊಡಲು ನಿರಾಕರಿಸುತ್ತಿದ್ದರು. ಆಗ ಅಲ್ಲಿ ಕಮಿಶನರ್ ಆಗಿದ್ದ ಥಾಮಸ್ ಮನ್ರೋ ಎಂಬ ದೊರೆ ಇಂಗ್ಲೆಂಡಿನಲ್ಲಿ ಡೈರೆಕ್ಟರುಗಳಿಗೆ ಬರೆದ ಒಂದು ಪತ್ರದಲ್ಲಿ ಈ ಕೆನರದ ದೊರೆಯಾಗಿರುವುದಕ್ಕಿಂತ, ದ್ವೀಪಾಂತರದಲ್ಲಿ ಸಿಪಾಯಿಯಾಗಿರುವುದು ಮೇಲು ಎಂದು ಬರೆದಿದ್ದಾನೆ. ಈ ಪರಿಸ್ಥಿತಿ ತಿಂಗಳುಗಟ್ಟಲೆ ನಡೆದು ಬಂದು ಕಟ್ಟಕಡೆಗೆ ಅಧಿಕಾರಿಗಳು ಉಪಾಯ ತೋರದೆ, ಒಡೆದು ಆಳುವ ನೀತಿಯನ್ನು ಪಾಲಿಸಿ, ಉತ್ತರ—ದಕ್ಷಿಣವೆಂಬುದಾಗಿ ವಿಭೇದ ಕಲ್ಪನೆ ಮಾಡಿ ಒಂದನ್ನು ಮುಂಬಯಿ ರಾಜ್ಯಕ್ಕೂ, ಇನ್ನೊಂದನ್ನು ಮದ್ರಾಸ ರಾಜ್ಯಕ್ಕೂ ಸೇರಿಸಿಬಿಡಬೇಕಾಯಿತು.

ಇದೇ ಸ್ಫೂರ್ತಿಯನ್ನು ಕೆನರಾದ ಜನ ಮತ್ತೊಮ್ಮೆ ೧೯೩೦—೩೧ರಲ್ಲಿ ತೋರಿಸದೆ ಇರಲಿಲ್ಲ. ಗಾಂಧೀಜಿಯವರು ಇದಿ ಸವಿನಯ ಕಾಯಿದೇ ಭಂಗ ಚಳುವಳಿಯನ್ನು ಹಿಂತೆಗೆದುಕೊಳ್ಳುವ ವರೆಗೂ ಉತ್ತರ ಕನ್ನಡ ಜಿಲ್ಲೆಯ ಜನಗಳು ಕರನಿರಾಕರಣೆಯನ್ನು ಯಶಸ್ವಿಯಾಗಿ ನಿರ್ವಹಿಸಿಯೇ ಬಿಟ್ಟರು.

ಈ ತೆರನಾದ ಘಟನೆಗಳಲ್ಲಿರಬಹುದಾದ ಕಲ್ಪನೆ, ಕಿಂವದಂತಿಗಳನ್ನೆಲ್ಲ ಬದಿಗೆ ಸೆದು ತಥ್ಯವನ್ನು ಆಯಲು ಜಾಣ್ಮೆ ಬೇಕು. ಆ ಮೇಲೆ ಅದನ್ನು ಸ್ವಾತಂತ್ರ್ಯ ಸಮರದ ಒಟ್ಟಿನ ಹಿನ್ನೆಲೆಯಲ್ಲಿಟ್ಟು ತೂಗಬೇಕು. ಈ ಕೆಲಸಗಳು ಸ್ವಭಾವತಃ ರುಚಿಕರವಾಗಿರುವುದರಲ್ಲಿ ಸಂದೇಹವೇನು?

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ:— ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ — ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಹೆಂಗಸು

'ನಾಂ ನಾನೆಂಪಕಟ ರೂಪಗೋಸಾಯಿ೧

ನನಗೀಯನೆನುಪನೇಂ ದರ್ಶನದ ಭಾಗ್ಯಂ?
ಹೆಣ್ಮಗವ ನೋಡದೇನವನ ವೈರಾಗ್ಯಂ?

ಏತರೀ ವ್ರತವೊ!'—ಎಂದಳು ಮೀರಾ ಬಾಯಿ,
'ಇವನಾದೊಡಂ ಗಂಡೆ೨ ಗೋಕುಲದೊಳೆಲ್ಲ

ಹೆಂಗಸಲ್ಲದೆ ಗಂಡಸಿಲ್ಲಿ ಬರಸಲ್ಲ!
ಅರಿಯಲಿವನಿಲ್ಲಿಹುವನಷ್ಟ್ರಿದಿರಲೆಲ್ಲ

ವೃಂದಾವನದ ದೇವಿ! ಇವನದೇಂ ಬಲ್ಲ?
ಬಲ್ಲವರ ಬಲ್ಲನೀ ಸಾಧುವೆಂದರಿವಂ

ಜಗದೊಳೊಗೆದವರೆಲ್ಲ ಹೆಣ್ಮಕ್ಕಳೆಂದು?
ನನ್ನ ಹೃದಯೇಶ ಜಗದೀಶನವನೊರುವಂ೩

ಶ್ರೀ ಕೃಷ್ಣನೈಸೆ೪ ಭುವನಕೆ ಗಂಡಸೊಂದು?
ರಾಧೆ ಯಾರೆಂಬುದಂ ಗೋಸಾಯಿ ಮರೆವಂ—
ರಾಧೆಯಹ ಮುನ್ನವೇಂ ಗಿರಿಧಾರಿ ದೊರೆವಂ?'

ಗೋವಿಂದ ಪೈ.

೧ ಬಂಗಾಳದ ಮಹಾ ಕೃಷ್ಣ ಭಕ್ತನಾದ ಚೈತನ್ಯ ದೇವನ ಶಿಷ್ಯರಲ್ಲಿ ಪ್ರಖ್ಯಾತನಾದ ರೂಪಗೋಸಾಯಿ ಎಂಬವನು ವೃಂದಾವನದ ಬಳಿಯ ಗೋಕುಲದಲ್ಲಿ ಇದ್ದಾಗ, ಅವನ ದರ್ಶನದ ಬಗ್ಗೆ ಅಲ್ಲಿಗೆ ಹೋದ ಸಂತಶಿಖಾಮಣಿಯಾದ ಮೀರಾಬಾಯಿಗೆ ಹೆಂಗಸನ್ನು ತಾನು ಕಾಣದೊಲ್ಲೆನೆಂದು ಆತನು ಹೇಳಿ ಕಳುಹಿಸಿದುದಕ್ಕೆ ಆಕೆ ಇತ್ತ ಪ್ರತ್ಯುತ್ತರವಿದು ೩ ಒರುವಂ = ಒಬ್ಬನು. ೪ ಐಸೆ = ಅಲ್ಲವೆ?

ಯುವಕರಿಗೊಂದು ಕರೆ-

ರಾಜಕೀಯ ರಂಗದಿಂದ ಯುವಕರು ಹೊರಗುಳಿಯಬೇಕೆನ್ನುತಿದ್ದ ಕಾಲ ಹಿಂದೆ ಹೋಯಿತು. ಹಳೆಯ ಹೊಲಸನ್ನು ಹೋಗಲಾಡಿಸಲು ತರುಣ ಧಮನಿಯ ರಕ್ತಧಾರೆ ಅತ್ಯಗತ್ಯವೆಂಬುದನ್ನು ಈಗ ಎಲ್ಲರೂ ಪ್ರತಿಮಾತಿಲ್ಲದೆ ಒಪ್ಪುವರು.

ಯುವಕ ಸಂಘಟಕ .

ಎರಡೂವರೆ ವರ್ಷಗಳ ಹಿಂದಿನ ಮಾತು. ಮಹಾ ಚುನಾವಣೆಯಲ್ಲಿ ಕಾಂಗ್ರೆಸ್ ಟಿಕೇಟಿಗಾಗಿ ಕರ್ನಾಟಕ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಇದಿರು ನಾನು ಹಾಜರಾಗಿದ್ದೆ. ಆಗ ನನ್ನ ವಿರುದ್ಧವಿದ್ದ ಆಪಾದನೆಗಳೆರಡು. ನಾನು ಯುವಕ, ಅನನುಭವಿ ಎಂದೊಂದು, ನನ್ನ ಪ್ರತಿಸ್ಪರ್ಧಿ ಬಹುಕಾಲ ಕಾಂಗ್ರೆಸ್ಸಿನಲ್ಲಿದ್ದವರಲ್ಲದೆ ಜೈಲಿಗೆ ಕೂಡಾ ಹೋದವರೆಂದು ಇನ್ನೊಂದು "ನೀವು ಹೊರಲಿಚ್ಛಿಸುವ ಹೊಣೆಗಾರಿಕೆಗೆ ನೀವು ತೀರಾ ಚಿಕ್ಕವರಲ್ಲವೇ" ಎಂದು ಆಯ್ಕೆ ಸಮಿತಿಯವರು ನನಗೆ ನೇರವಾದ ಪ್ರಶ್ನೆ ಹಾಕಿದರು. ನನ್ನ ಚಿಕ್ಕ ಪ್ರಾಯ ನನಗೊಂದು ಅರ್ಹತೆಯಲ್ಲದೆ, ಅನರ್ಹತೆಯಲ್ಲವೆಂದು ನಾನಾಗ ವಾದಿಸಿದೆ ಕಾಂಗ್ರೆಸ್ಸಿಗರಾಗಿ ನನ್ನ ಪ್ರತಿಸ್ಪರ್ಧಿ ಹೇಗೆ? ಎಂದು ಸಮಿತಿಯವರು ನನ್ನ ಅಭಿಪ್ರಾಯವನ್ನು ಕೇಳಿದರು. ಅವರು ಕಾಂಗ್ರೆಸ್ಸಿನಲ್ಲಿ ಬಹುಕಾಲ ಇದ್ದು, ಜೈಲಿಗೂ ಹೋಗಿ, ಕಾಂಗ್ರೆಸ್ಸಿನಲ್ಲಿ ಅರ್ಹತೆಯನ್ನು ಪಡೆದವರು ನಿಜವೆಂದು ನಾನು ಹೇಳಿದೆ. ಈ ಹೇಳಿಕೆಯನ್ನು ನನ್ನ ವಿರುದ್ಧ ತಿರುಗಿಸಿ "ನಿಮ್ಮ ವಿಷಯ ವೇನು?" ಎಂದು ಪ್ರಶ್ನಿಸಲಾಯಿತು. ನಾನು ೧೯೪೨ರಲ್ಲಿ ಕಾಲೇಜಿನಿಂದ ಹೊರಬಂದು ರಾಷ್ಟ್ರೀಯ ಚಳವಳಿಯಲ್ಲಿ ಭಾಗವಹಿಸಿದ್ದೆ ಅನಂತರ ಕಾಂಗ್ರೆಸ್ಸಿನ ಎಲ್ಲಾ ರಚನಾತ್ಮಕ ಚಟುವಟಿಕೆಗಳಲ್ಲಿ ಕೂಡಿಕೊಂಡಿದ್ದೆ—ಆದರೆ ಜೈಲಿಗೆ ಹೋಗುವ ಮಟ್ಟಿಗೆ ನಾನು ಹುಟ್ಟಿದುದೇ ಸ್ವಲ್ಪ ತಡವಾಯಿತು ಎಂದು ಹೇಳಿದೆ. ಇದೇನಿದ್ದರೂ ಕಾಂಗ್ರೆಸ್ ಟಿಕೇಟು ಪಡೆಯುವ ಅದೃಷ್ಟ ನನಗಿತ್ತು. ಆದರೆ ನನ್ನಷ್ಟೇ ಅರ್ಹತೆ ಇರುವ ಇತರ ಯುವಕರಿಗೆ ಇಂತಹ ಭಾಗ್ಯೋದಯವಾಗಿರಲಿಕ್ಕಿಲ್ಲ

ಭಾರತದಲ್ಲಿ ಇಂದು ಯುವಕರ ಮುಂದಿರುವ ಸಮಸ್ಯೆಯೇ ಇದು ಕಾಂಗ್ರೆಸ್ಸಿಗೆ ಯುವಕರು ಬೇಕೆ? ಯುವಕರಿಗೆ ಕಾಂಗ್ರೆಸ್ಸಿನಲ್ಲಿ ಸ್ಥಾನವಿದೆಯೆ? ರಾಷ್ಟ್ರದ ಅತಿದೊಡ್ಡ ಶ್ರೇಷ್ಠ ರಾಜಕೀಯ ಪಕ್ಷ ಯುವಕರನ್ನು ಅಲಕ್ಷಿಸಿರುವುದೂ ಇವರ ವಿಷಯ ವಹಿಸಬೇಕಾದಷ್ಟು ಜಾಗ್ರತೆ ವಹಿಸಿಲ್ಲವೆಂಬುದೂ ನಿಜ. ಸಂಸ್ಥೆಯನ್ನು ಸೇರಿದ ಪ್ರತಿಯೊಬ್ಬನೂ ಸ್ಥಾನಮಾನದ ಲೆಕ್ಕಾಚಾರವನ್ನೇ ನೋಡಬೇಕೆಂದಲ್ಲ ಆದರೆ ಸೇರಿದವನಿಗೆ ಸೇವೆಯನ್ನು ಸಲ್ಲಿಸಲು ಕಾರ್ಯಕ್ಷೇತ್ರ ಬೇಕು. ನಮ್ಮ ದೇಶದಲ್ಲಿ ಯುವಕರಿಗೂ ಮುದುಕರಿಗೂ ಅಧಿಕಾರ ಸ್ಥಾನದ ಪೋಟಿಯು ಹುಚ್ಚು ಹಚ್ಚಾಗಿದೆ. ಕಾಂಗ್ರೆಸ್ಸಿಗರಾಗಿ ದೇಶಸೇವೆಗಾಗಿ ಸರ್ವತ್ಯಾಗ ಮಾಡಿದವರಲ್ಲಿ ಸಹ ತಮ್ಮ ಬಯಕೆಯ ಅಧಿಕಾರ ಸ್ಥಾನ ಸಿಗಲಿಲ್ಲವೆಂದು ಅದೆಷ್ಟು ಜನ ಸಂಸ್ಥೆಯನ್ನು ತ್ಯಜಿಸಿ ಹೊರಬಂದಿಲ್ಲ? ಹಿರಿಯರು ಹೀಗೆ ಹೊರನಡೆಯುವಾಗ ಕಿರಿಯರು ಅದನ್ನೇ ಮಾರ್ಗದರ್ಶನವಾಗಿ ಸ್ವೀಕರಿಸುವುದರಲ್ಲಿ ಆಶ್ಚರ್ಯವೇನು?

ಎಲ್ಲಾ ಪ್ರಾಂತ್ಯಗಳಲ್ಲೂ ಪಕ್ಷ ಪಕ್ಷಗಳೊಳಗಲ್ಲದೆ, ಪಕ್ಷದೊಳಗ ಸಹ ಅಧಿಕಾರಕ್ಕಾಗಿ ಹೊಲಸು ತಿಕ್ಕಾಟವನ್ನು ನಾವು ಕಾಣುತ್ತಿರುವೆವು. ಸೇವಾಧ್ಯೇಯವು ಅಧಿಕಾರ ಲಾಲಸೆಗೆ ಆಹುತಿಯಾಗುತ್ತಿರುವುದು.

ಆದರೆ ಯುವಕರ ಗುರಿ ಅಧಿಕಾರವಲ್ಲ ಸೇವೆ. ರಾಜಕೀಯ ಜೀವನದಲ್ಲಿ ನಿಸ್ವಾರ್ಥಸೇವೆ ಸಲ್ಲಿಸಿದ ಯಾವನನ್ನೂ ಕಡೆಗಣಿಸಲಾಗುವುದಿಲ್ಲ. ಯುವಕರು ಪರಿಶ್ರಮ, ಪರಿಶೀಲನೆಯಿಂದ ಹಿರಿಯರು ತೋಡಿರುವ ಗುಳಿಗಳನ್ನು ಬಿಟ್ಟು ನಡೆಯಬೇಕು ೧೫೦ ವರುಷಗಳ ಬ್ರಿಟಿಷ ಆಡಳಿತೆಯಿಂದ ಮನಸ್ಸನ್ನು ಆವರಿಸಿರುವ ಸಂಕೋಲೆಗಳಿಂದ ತಪ್ಪಿಸಿಕೊಳ್ಳುವುದು ನಮ್ಮ ಹಿರಿಯರಿಗೆ ಕಷ್ಟಸಾಧ್ಯ ಹಿಂದಿನ ಪರದಾಸ್ಯ ಜೀವನ ಇವರ ದೃಷ್ಟಿಯ ಮೇಲೆ ಮಬ್ಬು ಹರಡಿರುವುದು. ಇಂದಿನ ಕ್ರಾಂತಿ ಯುಗಕ್ಕೆ ಸರಿಯಾಗಿ ಅವರು ಹೊಂದಿಕೊಳ್ಳಲಾರದವರಾಗಿರುವರು ಸ್ವಂತಿಕೆಯನ್ನು ತುಂಡರಿಸಿ, ಮಬ್ಬನ್ನು ಹರಿದೊಗೆದ ಕೆಲವು ಅದೃಷ್ಟಶಾಲಿಗಳೂ ಇರುವರು. ಪಂಡಿತ ನೆಹರೂ ಇಂತಹವರಲ್ಲೊಬ್ಬರು. ಆದುದರಿಂದಲೇ ಅವರಲ್ಲಿ ನವಿನದ ಯೌವನ ತುಂಬಿ ತುಳುಕುತ್ತಿದೆ.

ಇಂದು ಭಾರತವನ್ನು ಭದ್ರಗೊಳಿಸಿ, ಮುಂದೆ ಅದರ ಉಜ್ವಲ ಭವಿಷ್ಯವನ್ನು ಬೆಳಗಿಸುವ ಹೊಣೆಗಾರಿಕೆ ಯುವಕರ ಮೇಲಿದೆ. "ಸ್ವಾತಂತ್ರ್ಯ" ಎಂಬ ಪದಕ್ಕೆ ನೈಜ ತಾತ್ಪರ್ಯ ಮಹತ್ವವನ್ನೀಯುವ ನಿರ್ದೇಶಕತ್ವ ಯುವಕರ ಮುಂದಿರುವ ಸಮಸ್ಯೆ ನಮ್ಮ ಬಯಕೆಗನುಗುಣವಾಗಿ ದೇಶದ ಭವಿಷ್ಯವನ್ನು ನಿರೂಪಿಸುವುದು ನಮ್ಮ ಕೈಯಲ್ಲಿದೆ. ರಾಜಕೀಯ ಪರಾಶ್ರಯಪ್ರಭಾವದಿಂದ ಭಾರತವನ್ನು ವಿಮೋಚನೆಗೊಳಿಸಲು ನಮ್ಮ ಹಿರಿಯರು ಹೋರಾಡಿದರು. ಈ ವಿಮೋಚನೆಯು ಸ್ವಾರ್ಥತೆಗಾಗಿ ನಾವೀಗ ಹಣಗಬೇಕು. ಅಂದ ಮೇಲೆ ನಾವು ಹೊಣೆಗಾರಿಕೆಯುಳ್ಳವರಾಗಿರಬೇಕು, ಯುವಕರ ಗುಣ ವಿಶೇಷಗಳಾದ ಧೈರ್ಯ, ದಾರ್ಢ್ಯ ಮತ್ತು ಸತ್ ಶೀಲಗಳನ್ನು ಸಮೀಕರಿಸಿ, ಬೇಜವಾಬ್ದಾರಿ ಅಥವಾ ಮುದುಕತನವನ್ನು ನಾವು ತ್ಯಜಿಸಬೇಕು.

ನಮ್ಮ ಮುಂದೆ ಹಿಡಿಯುತ್ತಿರುವ ಒಂದೆಡೆ ಅಮೇರಿಕ, ಇನ್ನೊಂದೆಡೆ ರಷ್ಯಾ ದೇಶಗಳ ಆದರ್ಶ ಯುವಕರಾದ ನಮಗೆ ಬೇಡ. ಭಾರತೀಯರಾಗಿಯೇ ನಮ್ಮ ಸಮಸ್ಯೆಗಳನ್ನು ನಾವು ವಿವೇಚಿಸೋಣ ನಮ್ಮ ಸಮಸ್ಯೆಗಳ ಉತ್ತರವು ಭಾರತಕ್ಕೆ ಭೂಷಣಪ್ರಾಯವಾಗಿರುವಂತೆ ನೋಡೋಣ ಭಾರತ ಭೂಮಿಯಲ್ಲಿ ಬೇರು ಬಿಟ್ಟಿರುವ ಸಸಿ ಉತ್ತಮ ಬೆಳೆ ಕೊಡುವ ವೃಕ್ಷವಾಗಿ ಬೆಳೆಯಬೇಕಾದರೆ ಈ ತತ್ವವನ್ನು ನಾವು ಮೆಚ್ಚಲೇಬೇಕಾಗುವುದು. ಕಾಯಾ, ವಾಚಾ, ಮನಸಾ ನಾವು ದೇಶಪ್ರೇಮಿಗಳಾಗದಿರುವಲ್ಲಿ, ದೇಶದ ಮುಂದಿರುವ ಬಡತನ, ಅವಿದ್ಯೆ, ಅನಾರೋಗ್ಯವೆಂಬ ಮಹಾ ಸಮಸ್ಯೆಗಳನ್ನು ನಮ್ಮ ಆಯುರ್ಮಾನದಲ್ಲಿ ಬಿಡಿಸಲಾರೆವು. "ಆರಾಮ್ ಹರಾಮ್ ಹೈ" ಎಂಬ ಹೊಸ ಶ್ಲೋಕವನ್ನು ಪಂಡಿತ ನೆಹರೂಗಳು ಇದೀಗ ಉದ್ಗರಿಸಿರುವರು ಇದನ್ನು ನಮಗೆ, ದೇಶದ ಯುವಕರಿಗೆ, ಕೊಟ್ಟ ಸಂದೇಶವೆಂದು ನಾವು ತಿಳಿಯೋಣ. ನಾವು ಯಾವ ಧಂಧೆಯವರೇ ಆಗಿರಲಿ, ನಮ್ಮ ಇಂದಿನ ಸುಖಮಯ ಜೀವನ ಬಿಟ್ಟು ಅವಿಶ್ರಾಂತ ಶ್ರಮ ವಹಿಸದಿದ್ದರೆ, ಕರ್ತವ್ಯಚ್ಯುತರಾಗುತ್ತೇವೆ ಎಂಬುದನ್ನು ಮರೆಯದಿರೋಣ.

ರಾಜಕೀಯದಿಂದ ಯುವಕರು ದೂರವಿರಬೇಕೆಂದು ಹೇಳುತ್ತಿದ್ದ ಕಾಲ ಒಂದಿತ್ತು. ಕೆಲವೊಂದು ಜನ ಮಾತ್ರ ರಾಜಕೀಯ ತಮ್ಮ ನಿಡುಗಂಟೆಂದು ತಿಳಿದಿದ್ದರು ಅವರೇ ಆಳುವವರಾಗಿದ್ದರು; ಇತರರಿಗೆ ಅವಕಾಶ ಕೊಡುವ ಉದ್ದೇಶವೂ ಅವರಲ್ಲಿ ಇದ್ದಿರಲಿಲ್ಲ. ಆದರೆ ಈಗ ಸಮಯ ಬದಲಾಯಿಸಿದೆ. ಆಳುವವರೂ ಆಳಲ್ಪಡುವವರೂ ಒಂದೇ ಆಗಿದ್ದಾರೆ. ಇದು ನಮ್ಮ ಸರಕಾರ, ಸರಕಾರವನ್ನು ಚುನಾಯಿಸುವ ಹಕ್ಕು ನಮ್ಮಲ್ಲಿದೆ. ನಮ ಮೇಲೆ ತೆರಿಗೆ ಹೊರಿಸುವ ಅಧಿಕಾರವನ್ನು ಅವರಿಗೆ ನಾವೇ ಕೊಟ್ಟಿರುವುದಾಗಿದೆ. ಅವರು ಏನು ಮಾಡುತ್ತಾರೆ, ಹೇಗೆ ಮಾಡುತ್ತಾರೆ ಎಂಬುದು ನಮಗೆಲ್ಲರಿಗೂ ಸಂಬಂಧಿಸಿದ ಪ್ರಶ್ನೆ. ಆದುದರಿಂದ ವಿವಿಧ ರಾಜಕೀಯ ಪಕ್ಷಗಳ ಧ್ಯೇಯವೇನು, ಧೋರಣೆ ಏನೆಂಬ ಎಲ್ಲಾ ರಾಜಕೀಯ ಮಾಹಿತಿಯನ್ನು ಯುವಕರು ಅವಶ್ಯಕವಾಗಿ ಪಡೆದುಕೊಳ್ಳಬೇಕು. ಯುವಕರ ರಾಜಕೀಯ ಅಜ್ಞಾನವನ್ನು ರಾಜಕೀಯ ಪಕ್ಷಗಳಾಗಲಿ, ಧುರೀಣರಾಗಲಿ ತಮ್ಮ ಸ್ವಾರ್ಥಕ್ಕಾಗಿ ದುರುಪಯೋಗಗೊಳಿಸದಂತೆ ನೋಡಿಕೊಳ್ಳಬೇಕು. ದೇಶದ ಯುವಕರಿಗೆ ಇಂತಹ ವಿವೇಚನೆಯ ಅವಕಾಶವಿಲ್ಲವಾದರೆ, ಅವರ ನ್ಯಾಯ ಬುದ್ಧಿಯ ಮೇಲೆ ಮೋಡ ಮುಸುಕದಿರದು.

ನಮ್ಮ ದೇಶದಲ್ಲಿರುವ ವಿವಿಧ ರಾಜಕೀಯ ಪಕ್ಷಗಳ ತತ್ವ ಧೋರಣೆಗಳು ತೋರಿಕೆಯಲ್ಲಿ ಪರಸ್ಪರ ವಿರುದ್ಧವಿರುವುದರಿಂದ ಗಲಿಬಿಲಿಯ ಪ್ರಸಂಗ ಉಂಟಾಗಿರುವುದು ಆದರೆ ಇವುಗಳನ್ನು ಜಾಗರೂಕತೆಯಿಂದ ಪೃಥಕ್ಕರಿಸಿದರೆ, ಕಾಂಗ್ರೆಸ್ಸು ಯಾವ ತತ್ವ ಧೋರಣೆಗಳನ್ನು ಪಾಲಿಸಲು ಹೋರಾಡುತ್ತಿರುವುದೋ ಅದನ್ನೇ ಇತರ ಪಕ್ಷಗಳೂ ಬೋಧಿಸುತ್ತಿರುವುವು. ಆದುದರಿಂದ ವಿವಿಧ ಪಕ್ಷಗಳ ಬದಲಿಗೆ ವಿವಿಧ ಧುರೀಣರ ಮೇಲಣ ವ್ಯಕ್ತಿಗತ ಮೆಚ್ಚುಗೆಯೇ ಇಂದು ನಾವು ಹೊಂದಿಕೊಳ್ಳುವ ಪಕ್ಷದ ಆಯ್ಕೆಯ ಮೂಲ ಕಾರಣವಾಗುತ್ತದೆ.

ಬ್ರಿಟಿಷರ ಆಳ್ವಿಕೆಯ ಸಮಯ ಸರಕಾರದ ಕಡೆ ನಮಗಿದ್ದ ವಿರೋಧದ ಆಘಾತ್ಯಷವೇ ಇಂದು ಬ್ರಿಟಿಷರು ತೊಲಗಿದ ಬಳ

ಸ್ವತಂತ್ರ ಭಾರತದಲ್ಲಿ ತರುಣರ ಕರ್ತವ್ಯ

ಲೇಖಕರು:—
ಶ್ರೀ. ಟಿ. ಎ. ಪೈ, ಎಮ್. ಎಲ್. ಎ.,
ಕರ್ನಾಟಕ ಯುವಕ ಕಾಂಗ್ರೆಸ್ಸಿನ ಸಂಘಟಕರು.

ಕವೂ ದೇಶೀಯ ಸರಕಾರದ ಕಡೆ ವಿರೋಧಿ ಪಕ್ಷಗಳು ತೋರುತ್ತಿರುವ ಅಭ್ಯಾಸವಾಗಿ ನಿಂತಿರುವುದು. ಸರಕಾರ ತಂದುದನ್ನೆಲ್ಲ ಸರಿಯಾಗಲಿ, ತಪ್ಪಾಗಲಿ—ವಿರೋಧಿಸುವುದೇ ನಮ್ಮ ಕರ್ತವ್ಯವೆಂದು ವಿರೋಧಿ ಪಕ್ಷಗಳು ತಿಳಿದು ಕೊಂಡಂತೆ ತೋರುತ್ತದೆ. ಜನತೆಯ ಪ್ರತಿಯೊಂದು ದೂರನ್ನೂ ಹಾರಿ ಹಿಡಿದು ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳಬೇಕು; ಇದರಿಂದಲೇ ತಮ್ಮ ತಮ್ಮ ಪಕ್ಷಗಳು ಜನಾನುರಾಗ ಪಡೆಯುವುವೆಂದು ಅವರು ಭಾವಿಸುವರು. ವಾಕ್ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹೆಸರಲ್ಲಿ ಪ್ರತಿಯೊಬ್ಬನೂ ಬೊಬ್ಬೆ ಇಡುತ್ತಾನೆ; ಅರ್ಥಶೂನ್ಯ ಲೇಖನ ಬರೆಯುತ್ತಾನೆ. ಇದರ ಪರಿಣಾಮವೇನು? ಇಂದು ವಿರೋಧದಲ್ಲಿರುವ ರಾಜಕೀಯ ಪಕ್ಷ ಮುಂದೆ ಅಧಿಕಾರ ಸ್ವೀಕಾರ ಮಾಡಿದರೆ ಆಗ ಅದಕ್ಕೆ ಸಹ ವಿರೋಧಕರನ್ನೆದುರಿಸುವ ಕಹಿ ಅನುಭವವಾಗುತ್ತದೆ. ಆಗಿನ ವಿರೋಧದ ಕಹಿ ಅನುಭವ ಜನತೆಯಲ್ಲಿ ತಾನೊಮ್ಮೆ ಬೆಳೆಯಿಸಿದ ಅಭ್ಯಾಸವನ್ನು ಒಮ್ಮೆಯೇ ಮರೆಯಿಸಲು ಸಾಧ್ಯವಾಗುವುದಿಲ್ಲ ಎಂಬುದನ್ನು ತೋರಿಸಿ ಕೊಡುತ್ತದೆ.

ಭೂ ಸುಧಾರಣೆಯ ಪ್ರಶ್ನೆ ನೋಡೋಣ—ಇದೊಂದು ಎಲ್ಲಾ ರಾಜಕೀಯ ಪಕ್ಷಗಳಿಗೂ ಆಡಲು ಅನುಕೂಲವಾದ ಕಾಲ್ಚೆಂಡಿನಂತಾಗಿರುವುದು. ಕಾಂಗ್ರೆಸು ಮುಂದಾಳುತನದಲ್ಲಿ ಈ ಸುಧಾರಣಾ ಮಸೂದೆಯನ್ನು ಶಾಸನ ಸಭೆಯ ಇದಿರು ಮಂಡಿಸಿದರೆ ಪ್ರ. ಸ. ಪಾ. ಹಾಗೂ ಇನ್ನಿತರ ಪಕ್ಷಗಳು "ಛಿ—ಇದರಲ್ಲೇನಿದೆ?" ಎಂದು ಮೂಗು ಮುರಿಯುತ್ತವೆ ಅಥವಾ "ಇದನ್ನು ಕಾಂಗ್ರೆಸು ಮುಂದೆ ತರುವಂತೆ ಮಾಡಲು ಕಾರಣ ಭೂತರು ನಾವು; ಇದಕ್ಕಾಗಿ ನಾವು ಬೇಕಷ್ಟು ಕೂಗೆಬ್ಬಿಸಿರಲಿಲ್ಲವೆ?" ಎಂದು ಬಡಾಯಿ ಕೊಚ್ಚುತ್ತವೆ. ತಿರುಕೊಚ್ಚಿಯಲ್ಲಿ ಪ್ರ.ಸ.ಪಾ.ಮಂತ್ರಿಗಳೊಬ್ಬರು ಅಲ್ಲಿಯ ಭೂಸುಧಾರಣೆಯ ಮಸೂದೆಯನ್ನು ಮಂಡಿಸಿದ ಸಂಪೂರ್ಣ ಪ್ರತಿಷ್ಠೆ ತಮಗೆ ಸಲ್ಲಬೇಕೆನ್ನುತ್ತಿರುವಾಗ, ಈಗ ವಿರೋಧ ಪಕ್ಷದಲ್ಲಿರುವ ಕಾಂಗ್ರೆಸ್ ಮಾಜಿಮಂತ್ರಿಗಳೊಬ್ಬರು "ಇದರಲ್ಲಿ ಹೊಸತೇನೂ ಇಲ್ಲ; ಹಿಂದಿನ ಶಾಸನಸಭೆ ವಿಸರ್ಜನೆಯಾಗುವ ಮೊದಲು ಇಂತಹದೇ ಮಸೂದೆಯನ್ನು ತಾವೂ ಮಂಡಿಸಿದ್ದೆವು" ಎಂದರು. ಮೇಲಾಗಿ, ಕಮ್ಯುನಿಸ್ಟ್ ಸದಸ್ಯರೊಬ್ಬರು ಮಸೂದೆಯ ಮುನ್ನಡೆ ಸಾಲದೆನ್ನುವಾಗ, ಕೇರಳದ ಸಮಾಜವಾದಿಗಳಲ್ಲೊಬ್ಬರು ಇದು ಎಷ್ಟು ಮಾತ್ರಕ್ಕೂ ಕ್ರಮಿಕವಲ್ಲವೆಂದೂ ಹೇಳಿರುವರು. ಜನಹಿತ ಸುಧಾರಣೆಗಳಲ್ಲಿ ಪರಸ್ಪರ ಸಹಕಾರದಿಂದ ವರ್ತಿಸಬೇಕೆಂಬುದೇ ಇಂತಹ ವಿಷಯಗಳಿಂದ ರಾಜಕೀಯ ಪಕ್ಷಗಳು ಕಲಿಯಬೇಕಾದ ಪಾಠ.

ಪ್ರತಿಯೊಂದು ರಾಜಕೀಯ ಪಕ್ಷದಲ್ಲೂ ನಾನಾ ರೀತಿಯ ಜನರು ಸೇರಿಹೋಗಿರುವರು. ಉತ್ತಮ ರಾಜಕೀಯ ಪಕ್ಷವಾಗಿ ಬೆಳೆಯಬಹುದಾಗಿದ್ದ ಭಾರತದ ಸಮಾಜವಾದೀ ಪಕ್ಷವೂ—ಕಿಸಾನರೂ ಇಲ್ಲದ, ಮಜ್ದೂರರೂ ಇರದ-ಪ್ರತಿಗಾಮಿ, ನಕಾರಾತ್ಮಕ ಧೋರಣೆಯ ಕಿಸಾನ್ ಮಜದೂರ್ ಪ್ರಜಾಪಕ್ಷದೊಂದಿಗೆ ಸೇರಿಕೊಂಡು ಆತ್ಮಹತ್ಯೆ ಮಾಡಿಕೊಂಡುದಂತೂ ಅತ್ಯಂತ ಶೋಚನೀಯ.

ರಾಜಕೀಯ ಧುರೀಣರು ಆಗಾಗ ಪಕ್ಷಗಳನ್ನು ಬದಲಾಯಿಸುತ್ತಿರುವುದನ್ನು ನಾವು ನೋಡುತ್ತಿರುವೆವು. ಅಂತಹವರ ಹಿಂಬಾಲಕರಾಗಿ ನಾವೂ ಪಕ್ಷ ಬದಲಾಯಿಸಬೇಕೆ? ಒಂದಿಷ್ಟು ಆಲೋಚನೆ ನಾವು ಮಾಡಬಾರದೆ? ರಾಷ್ಟ್ರಾಭಿಮಾನಿಗಳಾದ ನಾವು ನಮ್ಮ ಅದೃಷ್ಟವನ್ನು ಅಂಧಶ್ರದ್ಧೆಯಿಂದ ಇನ್ನೊಬ್ಬರ ಕೈಯ್ಯಲ್ಲಿಟ್ಟು ರಾಜಕೀಯದ ಹೊರಗಿರಲಾರೆವು. ದೇಶದ ಮಹಾ ಪಕ್ಷವಾಗಿರುವ ಕಾಂಗ್ರೆಸ್ಸಿನಲ್ಲಿ ನಮಗೆ ನಿರಾಯಾಸವಾಗಿ ವೇದಿಕೆ ದೊರೆಯದೆಂಬುದು ನಿಜ. ಇಲ್ಲಿ ನಾವು ಶ್ರಮಿಸಿ ನಮ್ಮ ಯೋಗ್ಯತೆಯನ್ನು ಪ್ರತ್ಯಕ್ಷೀಕರಿಸಬೇಕಾಗುವುದು. ಇದನ್ನು ಬಲ್ಲ ಇತರ ರಾಜಕೀಯ ಪಕ್ಷಗಳು ನಮ್ಮನ್ನು ಆಮಂತ್ರಿಸಿ ಉಚ್ಚಾಸನಕೊಡಲು ಸದಾ ಸಿದ್ಧವಿರುವುವು. «ಕಾಂಗ್ರೆಸಿಗೆ ನೀವು ಬೇಡವಾದರೆ, ನೀವು ನಮಗೆ ಬೇಕು" ಎಂದು ಆಹ್ವಾನಿಸುವುವು. ಒಮ್ಮೆಯೇ ಅಂತಹ ಪಕ್ಷದ ಧುರೀಣನಾಗುವ ಸುಯೋಗ ಯಾರಿಗೆ ಬೇಡವಾಗಿದೆ? ಯೋಧನಾಗಿ ದುಡಿಯದೇನೇ ಸೈನ್ಯಾಧಿಕಾರಿಯಾಗುವ ಸೌಲಭ್ಯ ಅಲ್ಲಿದೆ. ಆದರೆ ಈ ವ್ಯಾಮೋಹಕ್ಕೆ ನಾವು ಬಲಿಬಿದ್ದರೆ ಜಾತೀಯತಾ ಪಕ್ಷಗಳ ಪ್ರತಿಗಾಮಿ ತತ್ವಗಳಿಗೆ ನಾವು ಶರಣು ಹೊಡೆಯ ಬೇಕಾಗಬಹುದು; ನಮ್ಮ ಜನಜೀವನಕ್ಕೆ [illegible] ಸಂಬಂಧವಿಲ್ಲದ ತ್ರಿಶಂಕು ತತ್ವಗಳನ್ನು ನಾವು ಅಂಗೀಕರಿಸ ಬೇಕಾಗಬಹುದು ಇದು ಅವನತಿ—ಇದರ ಕಹಿ ಅನುಭವ ಪಡೆದು ಆ ಮೇಲೆ ನಾವು ಭ್ರಾಂತರಾಗ ಬೇಕಾಗುವುದು! ಆದುದರಿಂದ ಮೊದಲಾಗಿ ನಮ್ಮ ಧುರೀಣರ ಜೀವನವನ್ನು ಶೋಧಿಸೋಣ—ಅವರು ಹೇಗೆ ನಡೆಯುತ್ತಿರುವರೆಂಬುದನ್ನು ಕಂಡು ಕೊಳ್ಳೋಣ. ಧುರೀಣರು ಹೇಳಿದುದನ್ನೆಲ್ಲ ಮಾಡುವುದಕ್ಕಿಂತ, ಅವರು ಮಾಡುತ್ತಿರುವುದೇನೆಂಬುದನ್ನು ನೋಡಿಕೊಂಡು ಅದರಂತೆ ನಡೆಯುವುದೇ ಬಾಳ್ವೆಯನ್ನು ಬೆಳಗಿಸುವ ಮಾರ್ಗ ಎಂದು ರಾಜಕಾರಣಿಗಳೊಬ್ಬರು ವ್ಯಂಗ್ಯವಾಗಿ ಹೇಳಿದುದು ನನಗಿಲ್ಲಿ ಸ್ಮರಣೆಗೆ ಬರುವುದು. ಕೃತಿ ಮತ್ತು ಬೋಧನೆಯೊಳಗೆ ಬಹು ದೊಡ್ಡ ಅಂತರವಿದೆಯೆಂದಿವರ ಅರ್ಥ. ಅನೇಕ ರಾಜಕೀಯ ಪಕ್ಷಗಳ ಜನಕ್ಕೆ, ಅವುಗಳ ಸ್ಥಾಪಕರ ವೈಯಕ್ತಿಕ ನಿರಾಶೆಯೇ ಮುಖ್ಯ ಕಾರಣವೆಂಬುದನ್ನು ನಾವು ಕಾಣಬಹುದು. ಇಂತಹ ನಿರಾಶೆಗೆ ತುತ್ತಾದ ಧುರೀಣರ ಸಾಧನಾ ಆಯುಧವಾಗಿ ನಾವಿರಬೇಕೆ?

ಪಂಡಿತ ನೆಹರೂಗಳು ಭಾರತದ ಧುರೀಣರು; ಅವರು ಭಾರತದ ಯುವಕರ ವಜ್ರ ಕವಚ. ಇಂದು ನಮ್ಮ ನಿರೀಕ್ಷೆಗೆ ಸರಿಯಾದ ಸತ್ವಪೂರ್ಣಕಾರ್ಯ ಅವರಿಂದಾಗುತ್ತಿಲ್ಲವಾದರೆ, ತಪ್ಪು ನಮ್ಮದು. ಸುತ್ತಮುತ್ತ ಬೆಳೆದಿರುವ ಸಂಕುಚಿತ ಮನೋಭಾವದ ಮೋಸದ ಬಲೆಯನ್ನು ಛೇದಿಸಿಯೇ ಅವರು ಹೊರಗೆ ಬರಬೇಕಾಗಿರುವುದು. ಅವರೊಂದಿಗೆ ಯುವಕರು ನಿಂತು, ಅವರ ಆಜ್ಞಾಧಾರಿಗಳಾಗಿ ಕಾರ್ಯಪ್ರವರ್ತರಾದ ಪಕ್ಷದಲ್ಲಿ ಈ ಬಲೆಯನ್ನು ಝಾಡಿಸಲು ನೆಹರೂಗಳಿಗೆ ಸಾಧ್ಯವಾಗುವುದು. ಕಾಂಗ್ರೆಸ್ ಮುಂದಿಟ್ಟು ಕೊಂಡಿರುವ ಧ್ಯೇಯ, ಧೋರಣೆಗಳಲ್ಲಿ ಯಾರೂ ತಪ್ಪು ಹುಡುಕುವಂತಿಲ್ಲ. ಅವುಗಳನ್ನು ಕಾರ್ಯಗತಗೊಳಿಸಲಿಲ್ಲವೆಂಬುದೇ ಇತರ ಪಕ್ಷಗಳ ಕೂಗಾಗಿರುವುದು. ಕಾಂಗ್ರೆಸಿನಲ್ಲಿ ಕೆಲವೊಂದು ಪ್ರತಿಗಾಮಿಗಳೂ, ಜಾತ್ಯಂಧರೂ ಸಂಕುಚಿತ ಭಾಷಾ ಪ್ರೇಮಿಗಳೂ ಇದ್ದರೆ, ಇತರ ಪಕ್ಷಗಳಲ್ಲೂ ಇಂತಹ ಕೊಳಚೆಗಳಿಲ್ಲವೆಂದಲ್ಲ. ಅತೀ ದೊಡ್ಡ ರಾಜಕೀಯ ಪಕ್ಷವಾದ ಕಾಂಗ್ರೆಸು ಭಾರತದ ಜನಕೋಟಿಯ ಜೀವನ ಮತ್ತು ಗುಣಶೀಲಗಳನ್ನು ಪ್ರತಿಬಿಂಬಿಸುವುದು ಸ್ವಾಭಾವಿಕ. ಇಂತಹ ಕುಂದು ಕೊರತೆಗಳನ್ನು ನಿವಾರಿಸಿ, ಸಂಸ್ಥೆಯನ್ನು ಭದ್ರಗೊಳಿಸುವುದು ಯುವಕರ ಕರ್ತವ್ಯ. ಹೊಸ ಕಸಬರಿಕೆ ಚೆನ್ನಾಗಿ ಗುಡಿಸಬಲ್ಲದು. ಅಧಿಕಾರದಲ್ಲಿರುವ ಪಕ್ಷಕ್ಕೆ ಒಂದು ದೋಷ ತಗಲುತ್ತದೆ—ಅಧಿಕಾರ ಲಾಲಸಿಗಳಿಗೂ, ಅಪ್ರಾಮಾಣಿಕರಿಗೂ ಕೆಲವೊಂದು ಬಾರಿ ಇದರಲ್ಲಿ ಎಡೆ ಸಿಕ್ಕುತ್ತದೆ.

ಇದಕ್ಕೆ ಮದ್ದೇನು? ಯುವಕರು ತಂಡೋಪತಂಡವಾಗಿ ಪಕ್ಷವನ್ನು ಸೇರಬೇಕು. ಹೊಸ ನೆತ್ತರಿನ ಪ್ರವೇಶದಿಂದ ರಾಜಕೀಯದ ಕೊಳಚೆ ಅನೇಕ ವೇಳೆ ಮಾಯವಾಗುವುದು. ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಈ ತತ್ವವನ್ನು ಅಂಗೀಕರಿಸಿ "ಯುವಕರ ಖಾತೆ"ಯನ್ನು ತೆರೆದುದು ಸ್ತುತ್ಯ. "ಯುವಕರ ಖಾತೆ"ಯ ಕಾರ್ಯಕ್ರಮವೇನೆಂಬುದನ್ನು ಇನ್ನೂ ವಿಶದೀಕರಿಸಿಲ್ಲವಾದರೂ, ಭೂದಾನ, ಶ್ರಮದಾನ, ಅಭ್ಯಾಸ ದರ್ಜೆಗಳು, ಯುವಕರ ಸಂಘಟನೆ, ರಾಷ್ಟ್ರ ಕಲ್ಯಾಣ ಚಟುವಟಿಕೆಗಳು, ಸಾಮಾಜಿಕ ಹಾಗೂ ವಯಸ್ಕರಲ್ಲಿ ವಿದ್ಯಾ ಪ್ರಸಾರ, ಸಮಾಜ ವಿಕಾಸ ಯೋಜನೆ ಅಥವಾ ಯಾವುದೇ ರಾಷ್ಟ್ರೀಯ ರಚನಾತ್ಮಕ ಚಟುವಟಿಕೆಗಳಲ್ಲಿ ಯುವಕರು ನಿರತರಾಗಬಹುದು. ಎ. ಐ. ಸಿ. ಸಿ. ಯ ಆದೇಶವನ್ನು ಕರ್ನಾಟಕ ಪ್ರಾದೇಶಿಕ ಸಮಿತಿಯವರೂ ಕಾರ್ಯಗತ ಗೊಳಿಸುತ್ತಿರುವುದು ಸಂತೋಷದ ಸಂಗತಿ.

ಇಂಗ್ಲಾಂಡಿನಲ್ಲಿ ಶಾಲಾ ಕಾಲೇಜುಗಳಲ್ಲಿ ಯುವಕರನ್ನು ಹೆಕ್ಕಿ ಧುರೀಣತ್ವದ ತರಬೇತಿಯನ್ನು ಕೊಡುತ್ತಾರೆ. ಅದೇ ರೀತಿ ಭಾರತದಲ್ಲೂ ಯುವಕರಿಗೆ ಪಕ್ಷ ಧುರೀಣತ್ವದೆಡೆಗೆ ತರಬೇತಿಕೊಟ್ಟು ಸಾಗಿಸುವ ಅಗತ್ಯವನ್ನು ಮನನ ಮಾಡಿಕೊಂಡ ಹೊರತು, ನಮ್ಮ ಜವಾಬ್ದಾರಿಯನ್ನು ನಿರ್ವಹಿಸುವದು ಕಷ್ಟವಾದೀತು. ಪಂಡಿತ ನೆಹರೂಗಳಿತ್ತ ರಾಷ್ಟ್ರೀಯ ಧುರೀಣತ್ವ, ಗುಣ ಶೀಲತೆ ಮತ್ತು ಗಣ್ಯ ಗುರಿಯ ಬೆನ್ನ ಹಿಂದೆ ಅಂತಹದೇ ವ್ಯಕ್ತಿತ್ವ ಮತ್ತು ಧುರೀಣತ್ವ ನಮಗೆ ಬೇಕು. ಅವರ ಧುರೀಣತ್ವವು ಹಚ್ಚಿದ ದೀಪವು ಪ್ರಜ್ವಲಿಸುತ್ತ ಇರಬೇಕು. ಕೃತಿಯಲ್ಲಿ ರಾಷ್ಟ್ರ ನೋಟ ಹಾಗೂ ದೇಶ ಪ್ರೇಮವನ್ನು ಬೆಳಗಿಸಲು, ಶಾರೀರಿಕ ಶ್ರಮದೊಂದಿಗೆ ಸಮಾಜ ಸೇವೆಯಲ್ಲಿ ನಿರತರಾಗಲು, ಸಾಮೂಹಿಕ ಕಾರ್ಯ ಸಾಧನೆಯಿಂದ ಜಾತೀಯತೆಯ ತಾರತಮ್ಯವನ್ನು ನಿವಾರಿಸಲು, ರಾಷ್ಟ್ರದ ಆರ್ಥಿಕ ಅಭಿವೃದ್ಧಿ ಸಾಧನಗಳಾದ ಸಮಾಜ ವಿಕಾಸ ಯೋಜನೆ, ವಿದ್ಯಾಪ್ರಸಾರ, ರಾಷ್ಟ್ರ ಭಾಷಾಭಿವೃದ್ಧಿಯನ್ನು ಯನ್ನು ಸಾಧಿಸಲು, ದೇಶದ ಯುವಕರು ಟೊಂಕ ಕಟ್ಟಿ ಮಾತೃ ಭೂಮಿಯ ಕರೆಗೆ ಓ ಕೊಡಬೇಕು. ಯುವಕರ ಮುಕುಟಪ್ರಾಯವಾದ ಸ್ವಾಮಿ ವಿವೇಕಾನಂದರು "ಏಳಿರಿ, ಎದ್ದೇಳಿರಿ—ಗುರಿಯನ್ನು ಸೇರದೆ ನಿಲ್ಲ ಬೇಡಿರಿ" ಎಂದು ಉತ್ತೇಜಿಸಿದ್ದರು. ಗುರಿಯು ಇನ್ನೂ ಬಹುದೂರ ಇದೆ. ನಾವೀಗ ಏಳಬೇಕು; ಎದ್ದೇಳಬೇಕು. ಗುರಿಯನ್ನು ಸೇರದೆ ನಾವು ನಿಲ್ಲುವಂತಿಲ್ಲ.

ಶಾಂತಿ—ವೀಣೆ

೧

ವಿಶ್ವ ಶಾಂತಿಯು ಕುಣಿಯುವಳು ಚೆನ್ನಿ! ಚೆನ್ನಿ!
ನವಯುಗದ ಗಾಯಕರೆ—ಓ ಬನ್ನಿ! ಬನ್ನಿ!
ಎದೆಯ ಆಳದ ತಾಳವನು, ತನ್ನಿ! ತನ್ನಿ!
ಜೀವಗೀತೆಯ ಕರೆಗೆ ಓ ಎನ್ನಿ! ಎನ್ನಿ!

೨

ಶಾಂತಿದೇವಿಯ ಪೂಜೆಗೆಂದಿಂದು ಬನ್ನಿ!
ಪ್ರೇಮರಸ ಗಂಗೆಯೊಳು ಮಿಂದಿಂದು ಬನ್ನಿ!
ಅದರೊಳಿಹ ಅಲೆಗಳನು ಒಂದೊಂದು ತನ್ನಿ!
ಪಾವನ ಸುತೀರ್ಥವಿದು ಎಂದೆಂದು ಎನ್ನಿ!

೩

ಪ್ರಾಣಪುಷ್ಪಗಳರಳುತಿವೆ ನೋಡಿ ಬನ್ನಿ!
ಗಾನಶಿಲ್ಪಿಯ ಕರೆಯುತಿವೆ ಹಾಡಿ ಬನ್ನಿ!
ಬಾಳುವೆಯ ಸೊದರನುರಿಸುತ ಓಡಿ ಬನ್ನಿ!
ಭಾರತಿಯ ಚರಣಾರತಿಯ ಮಾಡಿ ಬನ್ನಿ!

೪

ಬಗೆ ಬಗೆಯ ಬಾಳುವೆಯ ಬಣ್ಣಿಸುವ ಬನ್ನಿ!
ಯುಗ ಯುಗದ ಬೇನೆಗಳ ಮರೆಸುವೆವು ಎನ್ನಿ!
ವಿಧ ವಿಧದಿ ರಸವೀಣೆ ಬಾರಿಸುವ ಬನ್ನಿ!
ಮಧು ಮಧುರ ಮಕರಂದ ಸುರಿಸುವೆವು ಎನ್ನಿ!

ವಿಠಲದಾಸ ಸೆಟ್ಟಿ.

ಭಾರತದ ವಿದೇಶಾಂಗ ನೀತಿ

ನ್ಯಾಯದ ತಳಹದಿಯ ಮೇಲೆ ಧೋರಣೆಯನ್ನು ನಿಲ್ಲಿಸಬೇಕೆಂಬುದೇ ನೆಹರೂರ ವಿದೇಶಾಂಗ ನೀತಿಯ ತಿರುಳು. ಪ್ರಪಂಚದಲ್ಲಿ ರಾಜಕೀಯ ಕೌಟಿಲ್ಯವನ್ನು ಬಿಟ್ಟುಗೊಟ್ಟು ಋಜುವಾದ ಮಾರ್ಗಾನುಸರಣ ಮಾಡುವ ರಾಷ್ಟ್ರವೆಂದರೇನೇ ಭಾರತ.

○

ಬರೆದವರು: ಕು ಶಿ. ಹರಿದಾಸ ಭಟ್ಟ, ಎಂ. ಎ.



ಶಾಂತಿ ಶೋಧಕ. ....

ಅಖಂಡ ಭಾರತವು ಎರಡು ಹೋಳಾಗಿ ಒಡೆದು ಇಂಡಿಯನ್ ಯೂನಿಯನ್ ಸ್ಥಾಪನೆಯಾಗುವ ಹೊತ್ತಿಗೆ ಜಾಗತಿಕ ರಾಜಕಾರಣದಲ್ಲಿಯೂ ಎರಡು ಬಣಗಳಾಗಿ ಪರಸ್ಪರ ವಿದ್ವೇಷಕ್ಕೆ ಬೀಜಾರೋಪಣವಾಗಿ ಹೋಗಿತ್ತು. ಈ ಪರಿಸ್ಥಿತಿಯಲ್ಲಿ ಭಾರತವು ತನ್ನದೇ ಆದ ವಿದೇಶಾಂಗ ನೀತಿಯನ್ನು ರಚಿಸಿಕೊಳ್ಳುವುದು ನಮಗೆ ಸುಲಭವಾಗಿರಲಿಲ್ಲ. ಪ್ರಪಂಚದ ಇತಿಹಾಸವನ್ನು ಕೂಲಂಕಷವಾಗಿ ಅಧ್ಯಯನ ಮಾಡಿ, ಅದರಲ್ಲಿ ಏಶಿಯದ ಸ್ಥಾನವನ್ನು ನಿಷ್ಕರ್ಷಿಸಿ, ಭವಿಷ್ಯದಲ್ಲಿ ಭಾರತವು ವಹಿಸತಕ್ಕ ಪಾತ್ರವೇನೆಂಬುದರ ಕುರಿತು ಆಗಲೇ ನಿರ್ಧಾರಕ್ಕೆ ಬಂದಿದ್ದ ಪಂಡಿತ ನೆಹರೂ ಭಾರತೀಯ ವಿದೇಶಾಂಗ ನೀತಿಯನ್ನು ಸಮರ್ಪಕವಾಗಿ ರಚಿಸುವರೆಂಬುದರಲ್ಲಿ ಯಾರಿಗೂ ಸಂದೇಹವಿರಲಿಲ್ಲ. ಆದರೆ ಈ ೭ ಇಷ್ಟು ಕ್ಷಿಪ್ರದಲ್ಲಿ ಯಶಸ್ವಿಯಾಗಿ, ಜಾಗತಿಕ ರಾಜಕಾರಣದ ಗರಡಿಯಲ್ಲಿ ಸಾಧನೆಮಾಡಿದ ಜಗಜಟ್ಟಿಗಳಿಂದಲೂ ಮನ್ನಣೆ ಪಡೆದೀತೆಂದು ಮಾತ್ರ ಯಾರೂ ಯೋಚಿಸುವುದು ಸಾಧ್ಯವಿರಲಿಲ್ಲ.

ನೆಹರೂ ನೀತಿಯ ಈ ಅಪೂರ್ವಯಶಸ್ಸಿನ ಗುಟ್ಟು ನೆಹರೂಅವರ ಐತಿಹಾಸಿಕ ಜ್ಞಾನದಲ್ಲಿ ಅಡಗಿದೆ ಎಂದು ನಾವು ದೃಢಗೊಳಿಸಬಹುದು. ಪ್ರಥಮ ಜಾಗತಿಕ ಸಮರವು ಪೂರ್ವ ರಾಷ್ಟ್ರಗಳ ಅಡಿಪಾಯವನ್ನು ಅಲುಗಿಸಿ ಬಿಟ್ಟರೆ, ದ್ವಿತೀಯ ಸಮರದಲ್ಲಿ ಆ ಅಡಿಪಾಯವು ತತ್ತರಿಸಿ ಪತನವಾಯಿತೆಂದು ನೆಹರೂ ನಂಬಿದ ಹಾಗೆ ಯಾವ ಜಾಗತಿಕ ಮುತ್ಸದ್ದಿಯೂ ನಂಬಿಲ್ಲ. ಪೂರ್ವ ರಾಷ್ಟ್ರಗಳಲ್ಲಿ ಐರೋಪ್ಯರ ಬೇಳೆ ಬೇಯಿವೆಂಬುದನ್ನು ಯುದ್ಧವು ಮುಗಿದ ಹತ್ತೇ ಹತ್ತು ವರ್ಷಗಳಲ್ಲಿ ನಾವು ಪಾಶ್ಚಾತ್ಯರಿಗೆ ಕಲಿಸಿಕೊಟ್ಟೇವೆಂಬುದನ್ನು ಅವರು ಮನಗಂಡಿದ್ದರು. ಆದುದರಿಂದ ಸಾಮ್ರಾಜ್ಯವಾದಿಗಳು ಇಂಡಿಯದಿಂದ ತೊಲಗಿದಂತೆ ಏಶಿಯದಿಂದಲೂ ತೊಲಗಿ ಮನೆಗೆ ಹೊರಡುವ ದಿನ ಸಮೀಪವಾಗಿದೆ ಎಂಬದನ್ನು ಅವರು ನಿಶ್ಚಯಿಸಿದರು. ಹೀಗೆ ಭಾರತದ ವಿದೇಶಾಂಗ ನೀತಿ ಕೇವಲ ಭಾರತದ ಸೀಮೆಯೊಳಗೇ ಪರ್ಯಾಪ್ತವಾಗದೆ ಆರಂಭದಿಂದಲೇ ಅಂತಾರಾಷ್ಟ್ರೀಯ ನ್ಯಾಯ ನಿರ್ಮಾಣದ ಉನ್ನತ ಆದರ್ಶದಿಂದ ಪ್ರಸ್ಫುರವಾಯಿತು. ನಮ್ಮ ನೀತಿ ನಮ್ಮ ರಾಷ್ಟ್ರದ ಘನಸ್ಥಿಕೆಯನ್ನು ಮಾತ್ರವಲ್ಲದೆ ಇಡಿಯ ಏಶಿಯದ ಆತ್ಮಗೌರವವನ್ನು ರಕ್ಷಿಸುವ ಸಾಧುಮಾರ್ಗವಾಗಿ ಪರಿಗಣಿಸಲ್ಪಟ್ಟಿತು.

ನಾಝೀ ಮತ್ತು ಫ್ಯಾಸಿಸ್ಟ ರಾಜ್ಯಗಳ ನೀತಿಯನ್ನು ಅಸ್ವತಂತ್ರ ಭಾರತದಲ್ಲಿಯೇ ಆದರೂ ಸಾರುವ ಎದೆಗಾರಿಕೆ ಪಂಡಿತ ನೆಹರೂ ಅವರಿಗಿತ್ತು. ಹಿಟ್ಲರನು ಯುರೋಪಿನಲ್ಲಿ ಸ್ಥಾಪಿಸಲೆಳಸಿದ ಸಾಮ್ರಾಜ್ಯವಾದಕ್ಕೂ, ಏಶಿಯದಲ್ಲಿ ಬಿಳಿಯರು ನೂರಾರು ವರ್ಷಗಳಿಂದ ನಡೆಸುತ್ತಿದ್ದ ದಬ್ಬಾಳಿಕೆಗೂ ನಿಕಟವಾದ ಸಂಬಂಧವಿದೆ ಎಂಬುದನ್ನು ಗಮನಿಸಿ, ಸಾಮ್ರಾಜ್ಯವಾದವು ತೊಲಗದೆ ಯುರೋಪಿನಲ್ಲಾಗಲಿ, ಏಶಿಯದಲ್ಲಾಗಲಿ, ಶಾಂತಿಯು ನೆಲಸುವುದಸಾಧ್ಯವೆಂಬ ನಿಶ್ಚಿತಾರ್ಥದ ಮೇಲಿಂದಲೇ ಮಹಾತ್ಮಾಗಾಂಧಿಯವರ 'ಕ್ವಿಟ್ ಇಂಡಿಯಾ' ಚಳುವಳಿಗೆ ಪಂಡಿತ ನೆಹರೂ ಸಂಪೂರ್ಣವಾಗಿ ಸಮ್ಮತಿಸಿ ಬೆಂಬಲಿಸಿದ್ದರು. ಪಾಶ್ಚಾತ್ಯ ನರಭಕ್ಷಕರ ಪ್ರಭಾವದಿಂದ ಬಿಡಿಸಿಕೊಳ್ಳದಿದ್ದರೆ ಏಶ್ಯವು ಎದ್ದು ನಿಲ್ಲುವುದು ಅಸಾಧ್ಯವೆಂಬುದನ್ನು ಗಮನಿಸಿ ಇನ್ನಿಲ್ಲಿ ಕೊಳ್ಳಿಗೆ ಸ್ಥಾನವಿಲ್ಲ ಎಂಬುದನ್ನು ನೆಹರೂ ತಮ್ಮ ವಿದೇಶಾಂಗ ನೀತಿಯ ಮೂಲಕ ಸಾರಿದರು.

ಈ ನೀತಿಯ ಸತ್ಯಾರ್ಥವನ್ನು ಅಚ್ಚ ಸಾಮ್ರಾಜ್ಯವಾದಿ ವಿನ್‌ಸ್ಟನ್ ಚರ್ಚಿಲ ಅಂಥವರೂ ಒಪ್ಪಿಕೊಳ್ಳಬೇಕಾಗಿ ಬಂದಿತು. ೧೯೪೧ರ ಅಟ್ಲಾಂಟಿಕ ಘೋಷಣೆಯಲ್ಲಿ ಪ್ರತಿ ರಾಷ್ಟ್ರಕ್ಕೂ ತನಗೆ ಹಿತವೆನಿಸುವ ಸರಕಾರವನ್ನು ರಚಿಸಿಕೊಳ್ಳುವ ಹಕ್ಕನ್ನು ಕೊಡಬೇಕೆಂಬ ನಿರ್ಣಯವಾಯಿತು. ಇದಕ್ಕೆ ವಿನ್‌ಸ್ಟನ್ ಚರ್ಚಿಲರ ಸಹಿಯೂ ಬೀಳಬೇಕಾಯಿತು. ಯುದ್ಧ ಮುಗಿಯುವ ತನಕವೂ ಭಾರತವನ್ನು ಬಂಧನದಲ್ಲಿಡುವುದು ಸಾಧ್ಯವೆನಿಸಿದರೂ, ತದನಂತರ ಕೇವಲ ಎರಡು ವರ್ಷಗಳಲ್ಲಿ ಬ್ರಿಟಿಷ ಸರಕಾರವು ಇಲ್ಲಿಂದ ಕಾಲ್ತೆಗೆಯಬೇಕಾಯಿತು. ಬುದ್ಧಿವಂತರಾದ ಬ್ರಿಟಿಷರು ಭಾರತವನ್ನು ವಿಭಜಿಸಿದರೂ, ಶಾಂತವಾಗಿ ನಮ್ಮ ನಾಡನ್ನು ಬಿಟ್ಟು ತೆರಳಿದರು. ಆದರೆ ಡಚ್ಚರನ್ನು ಇಂಡೋನೇಶಿಯದಿಂದ ಕಳಿಸುವುದು ಇಷ್ಟು ಶಾಂತವಾಗಿ ಆಗಲಿಲ್ಲ. ಕಾದಾಟವು ಮುಗಿದು ವಿಶ್ವಸಂಘದ ನಾಯಕತ್ವದಲ್ಲಿ ಇಂಡೋನೇಶಿಯವು ಸ್ವತಂತ್ರವಾಯಿತು; ಡಚ್ಚರ ಆಳಿಕೆ ಕೊನೆಗಂಡಿತು (೧೯೪೯). ಅದೇ ವರ್ಷದ ಸುಮಾರಿಗೆ ಏಶಿಯದ ಇನ್ನೊಂದು ಮಹಾರಾಷ್ಟ್ರವಾದ ಚೀನದಲ್ಲಿ ಪ್ರತಿಗಾಮಿ ಚಿಯಾಂಗ ಆಡಳಿತೆಯು ಮುಗಿದು ಕಮ್ಯುನಿಸ್ಟ ಸರಕಾರವು ಸ್ಥಾಪನೆಯಾಯಿತು. ಚೀನದ ಆರ್ಥಿಕ—ರಾಜಕೀಯ ರಂಗದಲ್ಲಿ ಒಂದೆರಡು ಶತಮಾನಗಳ ಲಾಗಾಯಿತು ದೃಢವಾಗಿ ವರ್ಚಸ್ಸನ್ನು ಬೆಳೆಸಿಕೊಂಡಿದ್ದ ಫ್ರೆಂಚ, ಇಂಗ್ಲಿಷ್, ಜರ್ಮನ, ಅಮೇರಿಕನ್ ಮುಂತಾದ ಪಶ್ಚಿಮದ ರಾಷ್ಟ್ರಗಳು ಗಂಟು ಮೂಟೆ ಹೊತ್ತು ಅಲ್ಲಿಂದ ಓಟ ಕೀಳಬೇಕಾಯಿತು. ಸೋವಿಯಟ್ ಸರಕಾರವು ಚೀನದ ಶೋಷಣೆಯಲ್ಲಿ ಪಾಲುಗಾರನಾಗದೆ ಇದ್ದುದರಿಂದ ಸೋವಿಯಟ್ ರಶಿಯ ಒಂದನ್ನು ಬಿಟ್ಟು ಉಳಿದ ಎಲ್ಲ ರಾಷ್ಟ್ರಗಳೂ ಕಮ್ಯೂನಿಸ್ಟ ಚೀನದೊಡನೆ ಹೊಸ ಮೈತ್ರಿಯನ್ನು ಹೊಸ ತಳಹದಿಯ ಮೇಲಿಂದ ಕಟ್ಟಬೇಕಾದ ಪ್ರಮೇಯ ಒದಗಿತು. ಇಂಡೋಚೀನದ ಗುತ್ತಿಗೆಯನ್ನು ಸರ್ವಥಾ ಬಿಡಲಾರೆವೆಂದು ಪಣತೊಟ್ಟು ಅಮೇರಿಕದ ಡಾಲರಿನ ಬಲದಿಂದ ವೀಟನಾಮದಲ್ಲಿ ರಕ್ತದ ಹೊಳೆ ಹರಿಯಿಸಿದ ಫ್ರೆಂಚ ಸಾಮ್ರಾಜ್ಯವಾದಿಗಳೂ ಈಚೆಗೆ ಸೋತು ಸಣ್ಣವಾಗಿ ಆ ಪ್ರದೇಶವನ್ನು ಏಶಿಯನರಿಗೆ ಬಿಟ್ಟುಹೋಗುವ ನಿರ್ಧಾರವನ್ನು ಮಾಡಿದುದು ನಾವು ೧೯೪೨ರಲ್ಲಿ ಬ್ರಿಟಿಷ ಸರಕಾರಕ್ಕೆ ತೋರಿದ ಪ್ರತಿಭಟನೆಯ ನ್ಯಾಯಪೂರ್ವಕ ಪರಿಣಾಮಗಳೆಂದು ನಿರ್ಧರಿಸಬಹುದು

ಹೀಗೆ ಭಾರತದ ವಿದೇಶಾಂಗ ನೀತಿಯ ನಾಂದಿಯಲ್ಲೇ ಪ್ರಬಲ ರಾಷ್ಟ್ರಗಳು ಬಲಹೀನ ರಾಷ್ಟ್ರಗಳ ಮೇಲೆ ಸವಾರಿ ಮಾಡುವುದು ಯುಕ್ತವಲ್ಲವೆಂಬ, ಇದರಿಂದಲೇ ಅಂತಾರಾಷ್ಟ್ರೀಯ ರಾಜಕೀಯವು ಅನರ್ಥಕರವಾಗಿ ಬೆಳೆದಿರುವುದೆಂಬ, ಈ ಮತ್ಸ್ಯನ್ಯಾಯದ ಸ್ಥಾನದಲ್ಲಿ ಚಿಕ್ಕ ರಾಷ್ಟ್ರಗಳು ದೊಡ್ಡ ರಾಷ್ಟ್ರಗಳೊಡನೆಯೂ, ಮುಂದುವರಿದವರು ಹಿಂದುವರಿದವರೊಡನೆಯೂ ಅನ್ಯೋನ್ಯ ಬಾಂಧವ್ಯವನ್ನು ಬೆಳೆಸಿಕೊಂಡಿರುವುದೇ ಪ್ರಪಂಚದ ಶಾಂತಿಗೆ ಹೇತುವೆಂಬ ವಿಚಾರವನ್ನು ಪಂಡಿತ ನೆಹರೂ ಅವರು ಸೇರಿಸಿಕೊಂಡರು. ರಾಷ್ಟ್ರಗಳು ತಮ್ಮ ಗಡಿಯೊಳಗಂತೂ 'ಬಲವಿದ್ದವರ ಕಾರ್ಯ' ಎಂಬ ಪ್ರಾಚೀನ ನೀತಿಯನ್ನು ಕಿತ್ತೊಗೆದು 'ನ್ಯಾಯದ ಬಲವಿರುವವರ ಕಾರ್ಯ' ವೆಂಬುದಾಗಿ ಸಮುಚಿತವಾದ ತಿದ್ದುಪಡಿಯನ್ನು ಮಾಡಿಕೊಂಡು ಹಲವು ವರ್ಷಗಳಾದುವು. ಆದರೆ ಈ ರಾಷ್ಟ್ರಗಳೇ ಅಂತಾರಾಷ್ಟ್ರೀಯ ರಾಜಕೀಯದಲ್ಲಿ ಆ ಪ್ರಾಚೀನ ನೀತಿಗೆ ಪೂಜೆ ಸಲ್ಲಿಸುತ್ತಿರುವುದು ಪ್ರಕೃತ ಇರುವ ಪರಿಸ್ಥಿತಿ. ಇದು ನಿಲ್ಲಬೇಕು ಪ್ರತಿ ರಾಷ್ಟ್ರವೂ ತನ್ನ ಪರರಾಷ್ಟ್ರ ಧೋರಣೆಯನ್ನು ನ್ಯಾಯದ ಬಲದ ಮೇಲೆಯೇ ನಿಲ್ಲಿಸಬೇಕು ಎಂಬುದು ನೆಹರೂ ಅವರ ಆಶಯ. ಈ ಆಶಯದಿಂದ ಪ್ರೇರಿತವಾದ ನೀತಿಯೇ ಭಾರತದ ವಿದೇಶಾಂಗ ನೀತಿ.

ಆದುದರಿಂದ ವಿಶ್ವಶಾಂತಿಯ ಸ್ಥಾಪ

(೨೦ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು.

Member: I. S. T. M. A.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ಬಿಂಡ ಪುಷ್ಟಿಯನ್ನು ಕಲಿಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ. 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣದಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರ್ವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.

ಪರಕೀಯ ಪ್ರಭುತ್ವದ ವಿರುದ್ಧ ಎದ್ದು ನಿಂತ ಏಶಿಯ

ಬರೆದವರು: ಶ್ರೀ ಪ ನಮಿರಾಜ ಮಲ್ಲ, ಎಂ.ಎ.,ಬಿ.ಎಲ್.

ಎಚ್ಚೆತ್ತ ಏಶಿಯವು ಶೀಘ್ರವಾಗಿ ಬೆಳೆಯುತ್ತಿದೆ. ಅದರ ಜೊತೆ ಪರಕೀಯರು ಇಟ್ಟುಕೊಂಡಿದ್ದ ಸಂಮೋಹಿನಿ ಶಕ್ತಿಯ ಪ್ರಭಾವವು ದಿನದಿನಕ್ಕೆ ಕಳೆಗುಂದುತ್ತಿದೆ. ಪ್ರಬಲ ರಾಷ್ಟ್ರೀಯ ಭಾವನೆಯು ದಾಸ್ಯ ಶೃಂಖಲೆಯ ಗೊಣಸನ್ನು ನಿಕಟ ಭವಿಷ್ಯದಲ್ಲಿಯೇ ಕಳಚುವುದು ಸ್ವತಃ ಸಿದ್ಧ!

§ § § § §

"ಏಶ್ಯವು ಏಶ್ಯನರಿಗಾಗಿ" ಎಂಬ ಕರೆಯು ಆರಂಭವಾಗಲು ಕಾರಣವು ಏಷ್ಯಾ ಖಂಡದ ಪ್ರಜೆಗಳ ಸ್ವಾತಂತ್ರ್ಯವನ್ನು ಅಪಹರಿಸಿ ಅವರ ಸಂಪತ್ತನ್ನು ದರೋಡೆ ಮಾಡಲು ಪಾಶ್ಚಿಮಾತ್ಯ "ಸುಸಂಸ್ಕೃತ" ರಾಷ್ಟ್ರಗಳು ತೊಡಗಿದುದರಿಂದಾಯಿತು. ಇದು ಕೇವಲ ರಾಷ್ಟ್ರೀಯ ಇಲ್ಲವೇ ಒಂದು ಜನಾಂಗದ ಕೂಗಲ್ಲ; ಜಗತ್ತಿನಲ್ಲೇ ದೊಡ್ಡದಾದ ಏಷ್ಯಾ ಖಂಡದಲ್ಲಿ ಭಾರತೀಯರು, ಚೀನೀಯರು, ಪರ್ಶಿಯನ್ನರು, ಮಂಗೋಲಿಯನ್ನರು, ಅಫಘಾನಿಗಳು, ಬರ್ಮೀಯರು ಮುಂತಾದ ಹಲವಾರು ಜನಾಂಗದವರಿದ್ದಾರೆ. ಅಂತೆಯೇ ಇಲ್ಲಿ ಹಲವಾರು ರಾಷ್ಟ್ರಗಳೂ ಇವೆ. ಈ ಎಲ್ಲ ಜನಾಂಗದವರೂ "ಪರಕೀಯರೇ, ತೊಲಗಿರಿ" ಎಂದು ಒಕ್ಕೊರಲಿನಿಂದ ಕೂಗುವುದು ಅಹಂಕಾರದಿಂದಲ್ಲ—ನರಳುವಿಕೆಯಿಂದ; ಅಸಹನೀಯವಾದ ಶತಮಾನಗಳ ವೇದನೆಯಿಂದ. ಅದನ್ನು ರಣಕಹಳೆನ್ನುವುದಕ್ಕಿಂತ ಆರ್ತನಾದವೆಂದರೇನೇ ಹೆಚ್ಚು ಸಮಂಜಸವಾಗುತ್ತದೆ. ಏಕೆಂದರೆ ಏಷಿಯದ ಹೆಚ್ಚಿನ ರಾಷ್ಟ್ರಗಳು ಸೈನ್ಯ ಶಕ್ತಿಯಲ್ಲಿಯೂ, ಸಂಘಟನೆಯ ದುರ್ಬಲತೆಯಲ್ಲಿಯೂ ಪಾಶ್ಚಿಮಾತ್ಯ ರಾಷ್ಟ್ರಗಳೆದುರು ತೃಣಸಮಾನವಾಗಿವೆ. ಅವಕ್ಕೆ ಬೇಕಾದುದು, ವಿಮೋಚನೆ. ತಮ್ಮ ಮಣ್ಣನ್ನು, ತಮ್ಮ ನೀರನ್ನು, ತಮ್ಮ ಬೆಳಕನ್ನು ತಮ್ಮದೆಂದು ಹೇಳಿಕೊಳ್ಳುವ ಸ್ವಾತಂತ್ರ್ಯ.

ಯುರೋಪ್ ಖಂಡದಲ್ಲಿ ಏಷಿಯಾದ ಬಗ್ಗೆ ಆಸಕ್ತಿ ಬಹಳ ಹಿಂದಿನಿಂದಲೂ ಇತ್ತು. ಗ್ರೀಸಿನ ಅಲೆಕ್ಸಾಂಡರನು ಏಷಿಯಾ ಖಂಡದ ಮೇಲೆ ಎರಡು ಸಾವಿರ ವರ್ಷಗಳ ಹಿಂದೆಯೇ ಧಾಳಿ ಮಾಡಿದ್ದ; ಅವನ ಅಲ್ಪಾಯು ಸಾಮ್ರಾಜ್ಯ ಭಾರತದ ವರೆಗೂ ಹರಡಿತ್ತು. ಭಾರತಕ್ಕಿಂತಲೂ ಅವನು ಮುಂದೆ ಹೋಗಬಹುದಿತ್ತು—ಅವನಲ್ಲಿ ಶಕ್ತಿಯಿರುತ್ತಿದ್ದರೆ. ಆದರೆ ಆಗಿನ ಕಾಲದ ಕುದುರೆ, ಒಂಟೆ, ಆನೆಗಳನ್ನೊಳಗೊಂಡ ವಾಹನ ಸೌಕರ್ಯದ ಚಲನೆಯ ವೇಗ ಬಹಳ ಮಂದವಾಗಿತ್ತು. ಅವನಿಗೆ ಏಷಿಯಾ ಖಂಡಕ್ಕೆ ಬರುವ ಜಲ ಮಾರ್ಗದ ಅರಿವಿದ್ದಿಲ್ಲ.

ಕೇವಲ ಭಾರತದ ದೃಷ್ಟಿಯಿಂದ ನೋಡಿದರೂ ಅಲೆಕ್ಸಾಂಡರನ ಧಾಳಿ ಇಡೀ ಏಶ್ಯಕ್ಕೇ ಒಂದು ಸೂಚನೆಯಾಗಿತ್ತೆನ್ನಲಡ್ಡಿಯಿಲ್ಲ. ಭಾರತದ ಸಂಸ್ಕೃತಿಯ ಮೇಲೆ, ಭಾರತದ ರಾಜಕಾರಣದ ಮೇಲೆ ಅವನಿಂದಾದ ಪರಿಣಾಮ ಅಷ್ಟಿಷ್ಟಲ್ಲ. ಭಾರತೀಯ ರಾಜರಿಗೆ ಅವನು ಸಾಮ್ರಾಜ್ಯವಾದದ ಆಸೆಯನ್ನು ಹುಟ್ಟಿಸಿದ. ಅಂದಿನಿಂದ ಅನೇಕ ರಾಜರು ಚಕ್ರಾಧಿಪತ್ಯವನ್ನೇ ಸ್ಥಾಪಿಸಿದರು. ಈ ಧಾಂಧಲೆಯಲ್ಲಿ ಆಗ ಭಾರತದಲ್ಲಿದ್ದ ಪ್ರಜಾರಾಜ್ಯಗಳೂ ನಿರ್ಮೂಲವಾದುವು: ಅರಸೊತ್ತಿಗೆಯು ಅಂತ ಸ್ಥಿರವಾಯಿತಲ್ಲದೆ, ಬಲವಾಯಿತು; ವಿಸ್ತೃತವಾಯಿತು.

ಆನಂತರ ಅಲೆಕ್ಸಾಂಡರನು ಆಗ ಎರಡು ವಿಧದ ಭೂಮಿಕೆಗಳನ್ನು ವಹಿಸಬೇಕಾಗಿತ್ತು. ಅವನು ಚಕ್ರವರ್ತಿಯಾಗುವುದರೊಡನೆ ಮಹಾ ದಂಡ ನಾಯಕನ ಕೆಲಸವನ್ನೂ ದಕ್ಷತೆಯಿಂದ ಮಾಡಬೇಕಾಗಿತ್ತು. ಪರಿಣಾಮವಾಗಿ ಅವನು ಜೀವನದ ಹೆಚ್ಚಿನ ಕಾಲವನ್ನು ದಂಡ ನಾಯಕನಾಗಿಯೇ ಕಳೆದನು.

ಅವನ ಬಳಿಕ ಮಾತ್ರ ಅವನಂಥ ಏಕೈಕ ವೀರರು ಯುರೋಪಿನಲ್ಲಿ ಜನ್ಮಗೊಳ್ಳಲಿಲ್ಲ. ಅವರು ಒಬ್ಬೊಬ್ಬರಾಗಿ ಏಷಿಯಾ ಖಂಡದ ಮೇಲೆ ತಮ್ಮ ದಿಗ್ವಿಜಯವನ್ನು ನಡೆಸಲೂ ಇಲ್ಲ.

ಅಲೆಕ್ಸಾಂಡರನ ಧಾಳಿಯಾದ ಹಲವು ಶತಮಾನಗಳ ಬಳಿಕ, ಯುರೋಪಿನ ಜನಾಂಗಗಳು ತಮ್ಮ ವ್ಯಾಪಾರಿಗಳನ್ನು—ಮುಖ್ಯವಾಗಿ ಸಮುದ್ರ ಮಾರ್ಗವನ್ನು ಕಂಡು ಹಿಡಿದ ಬಳಿಕ—ಏಶ್ಯಕ್ಕೆ ಕಳಿಸಿದುವು. ಅವುಗಳ ಪೈಕಿ ಉಲ್ಲೇಖನೀಯರಾದವರು ಇಂಗ್ಲೀಷರು, ಫ್ರೆಂಚರು, ಡಚ್ಚರು ಮತ್ತು ಪೋರ್ತುಗೀಸರು. ಇವರ ವ್ಯಾಪಾರ ಇಡೀ ಏಷ್ಯಾ ಖಂಡದಲ್ಲೇ ಹಬ್ಬಿದರೂ, ಅವರ ವ್ಯಾಪಾರ ಕೇಂದ್ರವು ಆಗ್ನೇಯ ಏಷ್ಯಾವಾಯಿತು. ತಮ್ಮ ವ್ಯಾಪಾರ ಸಂಸ್ಥೆಗಳ ಭದ್ರತೆಗಾಗಿ ಅವರು ಅಲ್ಲಲ್ಲಿ ಕೋಟೆ-ಕೊತ್ತಲಗಳನ್ನು ನಿರ್ಮಿಸಿದರು. ಕೋಟೆ-ಕೊತ್ತಲಗಳಾಗುವಾಗ ಅವುಗಳ ರಕ್ಷಣೆಗಾಗಿ ತಮ್ಮ ಸೈನ್ಯಗಳನ್ನು ತರಿಸಿ ಅಲ್ಲಿ ನಿಲ್ಲಿಸುವುದೂ ಅನಿವಾರ್ಯವಾಯಿತು.

ಈ ವ್ಯಾಪಾರ ಕೇಂದ್ರಗಳು ಒಂದು ದಿನ ಇಡೀ ಇಡೀ ದೇಶಗಳನ್ನೇ ನುಂಗುವವೆಂದು ಅಂದು ಯಾರೂ ತಿಳಿದಿರಲಿಲ್ಲ. ಆದರೆ ಕೇವಲ ಒಂದೆರಡು ಶತಮಾನಗಳೊಳಗೆ ಈ ವ್ಯಾಪಾರಿ ಜನಾಂಗಗಳು ಚಕ್ರಾಧಿಪತ್ಯಗಳನ್ನು ಸ್ಥಾಪಿಸಿ ಬಿಟ್ಟುವು! ತಮಗೆ ಆಶ್ರಯ ಕೊಟ್ಟು ತಮ್ಮೊಡನೆ ಸಹಕರಿಸಿದ ಸ್ಥಳೀಯರ ಮೇಲೆ ಅವು ತಮ್ಮ ಅಧಿಕಾರವನ್ನು ಹೇರಿದುವು!

ಹೀಗಾಗಿ ಏಷ್ಯಾ ಖಂಡದ ಬಹುಭಾಗವನ್ನು ಯುರೋಪು ನುಂಗಿತು. ಚೀನಾ, ಜಾಪಾನು ಮುಂತಾದ ಕೆಲ ರಾಜ್ಯಗಳು ಮಾತ್ರ ಯುರೋಪಿನ ವ್ಯಾಪಾರಕ್ಕೆ ಬಲಿಯಾಗಲಿಲ್ಲ ಆದರೆ ಅವುಗಳೊಡನೆಯೂ ಯುರೋಪು ಸಂಪರ್ಕವನ್ನು ಬೆಳೆಸಿತು.

ಐರೋಪ್ಯರು ಭಾರತ, ಬರ್ಮಾ, ಮಲಯಾ, ಇಂಡೋನೇಷಿಯಾ (ಜಾವಾ ಸುಮಾತ್ರಾ ಮುಂತಾದ ದ್ವೀಪಗಳು), ಲಾವೋಸ್, ಕ್ಯಾಂಬೋಡಿಯಾ, ಸಿಂಹಳ ಇವುಗಳನ್ನು ಸ್ವಾಧೀನಪಡಿಸಿಕೊಂಡರು. ಇದೇನಾದರೂ ಅವರ ಸೈನ್ಯಬಲದಿಂದ ಮಾತ್ರ ಸಾಧಿಸಿದುದಲ್ಲ. ಇದಕ್ಕಾಗಿ ಯ ಕುತಂತ್ರ, ವಂಚನೆ, ವಿಶ್ವಾಸಘಾತುಕತನದ ವಿಧಾನಗಳನ್ನು ಅವರು ಪ್ರಯೋಗಿಸಿದರು: ಹಿಂದೆ ರೋಮಿನ ಚಕ್ರಾಧಿಪತಿಗಳು ತಮ್ಮ ವಸಾಹತುಗಳಲ್ಲಿ ಉಪಯೋಗಿಸಿದ, ಜನರ ಒಗ್ಗಟ್ಟನ್ನು ಮುರಿಯುವುದು, ತಮ್ಮ ಸಂಸ್ಕೃತಿಯನ್ನು ಅವರ ಮೇಲೆ ಹೇರುವುದು ಮುಂತಾದ ಎಲ್ಲಾ ಉಪಾಯಗಳನ್ನೂ ಅಕ್ಷರಶಃ ಅದಕ್ಕಿಂತಲೂ ಉಗ್ರವಾಗಿ, ದಕ್ಷತೆಯಿಂದ ಕಾರ್ಯಾಚರಣೆಗೆ ತಂದರು. ಹೀಗಾಗಿ ಏಷ್ಯಾ ಖಂಡಕ್ಕೆ ಯುರೋಪಿನ ಸಂಸ್ಕೃತಿಯ ಆಯಾತ ಧಾರಾಳವಾಗಿ ನಡೆಯಿತು. ಯುರೋಪಿನ ಕ್ರೈಸ್ತ ಧರ್ಮ ಬೆಂಕಿಯಂತೆ ಏಷ್ಯಾದಲ್ಲಿ ವ್ಯಾಪಿಸಿತು. ಐರೋಪ್ಯರ ಭಾಷೆಗಳು ಈ ವಸಾಹತುಗಳ ದೇಶ ಭಾಷೆಗಳಾದುವು. ವೇಷ ಭೂಷಣಗಳಲ್ಲಿ ಕೂಡಾ ಐರೋಪ್ಯ ಮಾದರಿಯನ್ನನುಸರಿಸಬೇಕಾಯಿತು.

ಈ ವಸಾಹತುಗಳ ಸಂಪತ್ತೆಲ್ಲ ಐರೋಪ್ಯರ ವಶವಾಯಿತು. ಅವರು ಅದನ್ನು ಕೊಳ್ಳೆಹೊಡೆದರಲ್ಲದೆ, ವಸಾಹತುಗಳ ಹಿತದೃಷ್ಟಿಯನ್ನು ತಮ್ಮ ಗಮನದಲ್ಲಿಟ್ಟುಕೊಳ್ಳಲಿಲ್ಲ. ರೈಲು, ರಸ್ತೆ, ತಂತಿ ಮೊದಲಾದ ಆಧುನಿಕ ಸೌಕರ್ಯಗಳನ್ನು ಕೂಡಾ ಬಹಳ ಮಿತವಾಗಿ, ತಮ್ಮ ಸೈನ್ಯಾನುಕೂಲತೆಗಳನ್ನು ಕಣ್ಣೆದುರಲ್ಲಿಟ್ಟುಕೊಂಡೇ ಈ ವಸಾಹತುಗಳಲ್ಲಿ ನಿರ್ಮಿಸಿದರು. ಹೀಗಾಗಿ ಏಷ್ಯಾದ ರಾಷ್ಟ್ರಗಳು ಯುರೋಪಿನ ಗಿರಣಿಗಳಿಗೆ ಕಚ್ಚಾ ಸಾಮಗ್ರಿಯನ್ನೊದಗಿಸುವ ಸಾಧನಗಳಾದುವು.

ಈ ಶೋಷಣೆ ಜನ ಜೀವನದ ಮೇಲೆ ಮಾಡಿದ ಹಾವಳಿಯನ್ನು ಹೇಳಿ ತೀರದು. ಎಲ್ಲ ಬಿಟ್ಟು ದೇಶಕ್ಕೆ ಪ್ರಯೋಜನಕರವಾಗುವ ಒಂದು ವಿದ್ಯಾಭ್ಯಾಸದ ಪದ್ಧತಿಯನ್ನು ಕೂಡಾ — ಐರೋಪ್ಯ ಸಾಮ್ರಾಜ್ಯಶಾಹಿಗಳು ಒದಗಿಸಲಿಲ್ಲ. ಮಾನವರನ್ನು ಕುರಿಗಳನ್ನಾಗಿ ಮಾಡುವ ಕೆಲಸವು ಅವರ ಹಿತದೃಷ್ಟಿಯಿಂದ ಅತ್ಯಗತ್ಯವಾಗಿತ್ತು. ಅದನ್ನು ದಕ್ಷತೆಯಿಂದ ಶತಮಾನಗಳ ಕಾಲ ಸಾಕಷ್ಟು ಯಶಸ್ವಿಯಾಗಿಯೂ ನೆರವೇರಿಸಿಬಿಟ್ಟರು.

ಅವರ ಇಂದ್ರಜಾಲ ಸ್ಥಳೀಯ ಜನರಿಗೆ ತಿಳಿಯಲೂ ಇಲ್ಲ. ಅದಕ್ಕೆ ಬಹಳ ಕಾಲ ಹೋಗಬೇಕಾಯಿತು.

ಈ ಶತಮಾನದ ಆದಿಯಿಂದ ಮಾತ್ರ ರಾಷ್ಟ್ರೀಯ ಚಳವಳಿಗಳು ಆರಂಭವಾದುವು. ಭಾರತ ಈ ಚಳವಳದಲ್ಲಿ ಅಗ್ರಗಣ್ಯವಾದ ಹಾಗೂ ಅಪೂರ್ವ ರೀತಿಯ ಪಾತ್ರವನ್ನು ವಹಿಸಿತು. ಆದರೆ ಐರೋಪ್ಯರು ಎಷ್ಟೇ ನೈತಿಕ ಬೋಧನೆಗಳನ್ನು ಮಾತಿನಲ್ಲಿ ಹೇಳುತ್ತಿದ್ದರೂ, ಅವರಿಗೆ ತಮ್ಮೊಡನೆ ಬೇಕಾದಷ್ಟು ಸೈನ್ಯ ಹಾಗೂ ಶಸ್ತ್ರಾಸ್ತ್ರ ಸಾಮಗ್ರಿಗಳಿರುವ ತನಕ, ಆ ನೀತಿಬೋಧೆಯನ್ನು ತಮ್ಮ ವೈಯಕ್ತಿಕ ನಡತೆಗೆ ಅನ್ವಯಿಸುವ ಮನಸ್ಸಾಗಲಿಲ್ಲ. ಅವರ ಈ ಭೌತಿಕ ಶಕ್ತಿಯ ದರ್ಪವು ಇಳಿಯಬೇಕಾದರೆ ಎರಡು ಮಹಾಯುದ್ಧಗಳಾಗಬೇಕಾಯಿತು.

ಎರಡನೆ ಯುದ್ಧ ಕಳೆಯುವಾಗ 'ಸೂರ್ಯ ಮುಳುಗದ ಚಕ್ರಾಧಿಪತ್ಯ'ದ ಒಡೆಯರಾದ ಬ್ರಿಟಿಷರ ಶಕ್ತಿ ಪೂರ್ಣ ಕುಂದಿ ಹೋಗಿತ್ತು. ಒಂದೆಡೆಯಿಂದ ಜರ್ಮನಿಯೊಡನೆ, ಇನ್ನೊಂದೆಡೆಯಿಂದ ಇಟಲಿಯೊಡನೆ ಕಾದಾಡುತ್ತಿದ್ದ ಅವರಿಗೆ ಜಪಾನು ತಮ್ಮ ಏಶ್ಯದ ವಸಾಹತುಗಳನ್ನು ನುಂಗುತ್ತ ಭಾರತದ ಬಾಗಿಲಿಗೆ ಬರುವವರೆಗೂ ಅದನ್ನು ತಡೆಯಲಾಗಲಿಲ್ಲ. ಈ ವಿನಾಶಕಾರಿಯಾದ ಬಹುಮುಖ ಯುದ್ಧವು ಅವರ ತಾಯ್ನಾಡಾದ ಇಂಗ್ಲೆಂಡನ್ನೇ ಹೆಚ್ಚು ಕಡಿಮೆ ಭಸ್ಮಮಾಡಿತ್ತು. ಅವರ ಸಾಮ್ರಾಜ್ಯದ ನೆರಮಂಡಲದಂತಿದ್ದ ಹಡಗುಗಳು ನೀರು ಪಾಲಾಗಿದ್ದುವು. ಪ್ರಪಂಚ ವಿಶಾಲವಾದ ವ್ಯಾಪಾರವಂತೂ ಒಮ್ಮಿಂದೊಮ್ಮೆಗೇ ನಿಂತುಹೋಗಿತ್ತು.

(೧೬ನೇ ಪುಟ ನೋಡಿರಿ)

ಇದೀಗ ಹೊರಬಿದ್ದಿದೆ

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರುಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದ್ದು.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಶಾಲಾ, ಕಾಲೇಜುಗಳಿಗೆ ಮಾತ್ರ ಕೊಡುವ ಕಮಿಶನ್ ದರಕ್ಕೂ ಬರೆಯಿರಿ.

1 ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವಾತಂತ್ರ್ಯೋತ್ತರದಲ್ಲಿ ನಮ್ಮ ಕೈಗಾರಿಕಾ ಕ್ಷೇತ್ರ

ಭಾರತದಲ್ಲಿ ಏನೂ ನಡೆದಿಲ್ಲವೆಂದು ಹೇಳುತ್ತಿರುವವರಿಗೆ ಸ್ವಾತಂತ್ರ್ಯೋತ್ತರದಲ್ಲಿ ಕೈಗೂಡಿಸಿದ ಪ್ರಗತಿಯ ಜ್ಞಾನ ಏನೇನೂ ಇಲ್ಲವೆನ್ನಬೇಕಾಗುತ್ತದೆ. ವಾಣಿಜ್ಯ ಹಾಗು ಕೈಗಾರಿಕಾ ಕ್ಷೇತ್ರದಲ್ಲಿ ಕರೆ ಹಾಕಲಾದ ಅಂಕೆ ಸಂಖ್ಯೆಗಳು ಅಂಥವರ ತಪ್ಪು ಕಲ್ಪನೆಯನ್ನು ಹೋಗಲಾಡಿಸುತ್ತವೆ.

○

ಸ್ವಾತಂತ್ರ್ಯೋತ್ತರದಲ್ಲಿ ಭಾರತವು ಕೈಗಾರಿಕೆಗಳ ದೃಷ್ಟಿಯಿಂದ ಅದ್ಭುತ ಪ್ರಗತಿಯನ್ನು ಹೊಂದಿರುವುದು ಕಂಡು ಬರುತ್ತದೆ. ನಮ್ಮ ಸರಕಾರದ ಕೈಗಾರಿಕಾ ನೀತಿಯೂ ಯೋಜನಾ ಬದ್ಧವಾಗಿ ಅರ್ಥ ಮಂಡಳದ ಪುನಾರಚನೆ ಮಾಡುವ ಸಂಕಲ್ಪವೂ ಈ ಪ್ರಗತಿಯನ್ನು ಸಾಧಿಸಲು ನೆರವಾದವು. ಈ ಅಭಿವೃದ್ಧಿಗೆ ಹಿನ್ನೆಲೆಯಾಗಿ ಸ್ವಾತಂತ್ರ್ಯ ಸಿಗುವುದಕ್ಕೆ ಎರಡು ವರ್ಷಗಳ ಪೂರ್ವದಲ್ಲಿ ನಿಂತ ದ್ವಿತೀಯ ಮಹಾ ಯುದ್ಧವನ್ನು ನಾವು ಗುರುತಿಸಬಹುದು. ಭಾರತೀಯರಲ್ಲಿ—ಮುಖ್ಯವಾಗಿ ಖಾಸಗಿ ಬಂಡವಾಳದ ಕ್ಷೇತ್ರದಲ್ಲಿ—ಕೈಗಾರಿಕೆಗಳ ಅಭಿವೃದ್ಧಿಯಾಗುವುದಕ್ಕೆ ದ್ವಿತೀಯ ಮಹಾ ಯುದ್ಧದ ಪರಿಸ್ಥಿತಿಯೇ ಹೇತುವೆನ್ನಬಹುದು. ೧೯೩೯ರಲ್ಲಿ ನಮ್ಮ ದೇಶದಲ್ಲಿ ೧೦ ಲಕ್ಷ ಟನ್ನು ಉಕ್ಕನ್ನು ತಯಾರಿಸುವ ಕಾರ್ಖಾನೆ ಇತ್ತು; ಮತ್ತೆ ಬೇರೆ ಕೆಲವು ಸಣ್ಣ ಕೈಗಾರಿಕೆಗಳೂ ಇದ್ದವು. ಆದರೆ ನಮ್ಮ ಗಿರಣಿಗಳೂ ಇತರ ಕೈಗಾರಿಕೆಗಳೂ ತಮಗೆ ಅಗತ್ಯವೆನಿಸಿದ ವಸ್ತುಗಳನ್ನೂ ಸರಕುಗಳನ್ನೂ ಆಯಾತ ಮಾಡಬೇಕಾಗುತಿತ್ತು. ರಾಸಾಯನಿಕ ಪದಾರ್ಥಗಳಲ್ಲಿ ಆಗ ಸಲ್ಫ್ಯೂರಿಕ್ ಎಸಿಡು ಮುಂತಾದ ಕೆಲವೇ ದ್ರವ್ಯಗಳನ್ನು ನಮ್ಮವರು ಅಲ್ಪಪ್ರಮಾಣದಲ್ಲಿ ಉತ್ಪಾದಿಸುತ್ತಿದ್ದರು. ದೊಡ್ಡ ಮಟ್ಟಿನ ಹತ್ತಿಯ ಹಾಗೂ ಸಣಬಿನ ಗಿರಣಿಗಳನ್ನೆ ಭಾರತದ ಕೈಗಾರಿಕೆಯು ಸರ್ವಸ್ವವಾಗಿ ಆಗ ತೋರಿಸಬೇಕಿತ್ತು.

ಯುದ್ಧಕಾಲದಲ್ಲಿ ವಿದೇಶಗಳಿಂದ ಸರಕುಗಳನ್ನು ಆಯಾತ ಮಾಡಿಕೊಳ್ಳುವುದು ದುಸ್ತರವಾದಾಗ ಮತ್ತು ಪಶ್ಚಿಮದ ಜರ್ಮನಿಯಷ್ಟೇ ಪ್ರಬಲ ಶತ್ರುವಾಗಿ ಪೂರ್ವದ ಜಪಾನು ಪರಿಣಮಿಸಿದಾಗ, ಭಾರತೀಯ ಕೈಗಾರಿಕೆಗಳು ಉಚ್ಛ್ರಾಯಾವಸ್ಥೆಯನ್ನು ಹೊಂದುವುದು ಅನಿವಾರ್ಯವೇ ಆಯಿತು. ಯುದ್ಧದ ಆವಶ್ಯಕತೆಯನ್ನು ಪೂರೈಸಲು ಆನುಷಂಗಿಕ ಕೈಗಾರಿಕೆಗಳನ್ನು ಸ್ಥಾಪಿಸಲಾಯಿತಲ್ಲದೆ, ಕಬ್ಬಿಣ, ಉಕ್ಕು, ಬಟ್ಟೆ ಮುಂತಾದವುಗಳ ಉತ್ಪಾದನೆಯನ್ನು ಬಿರಬಿಂದ ಹೆಚ್ಚಿಸಲಾಯಿತು. ಮದ್ದು ಗುಂಡುಗಳ ರಚನೆಗೆ ಅಗತ್ಯವೆನಿಸಿದ ಅನೇಕ ರಸಾಯನ ಪದಾರ್ಥಗಳನ್ನು ಉತ್ಪಾದಿಸುವುದಕ್ಕೂ ಶಸ್ತ್ರಾಸ್ತ್ರಗಳ ಸರಕಾರೀ ಕಾರ್ಖಾನೆಯನ್ನು ವಿಸ್ತರಿಸುವುದಕ್ಕೂ ಪ್ರಯತ್ನ ನಡೆಯಿತು.

ಆದರೆ ಈ ಸಮೃದ್ಧಿ ಹೆಚ್ಚು ದಿವಸ ಬಾಳಲಿಲ್ಲ—ಯುದ್ಧ ಕಾಲದ ಅವಿಶ್ರಾಂತ ದುಡಿಮೆಯಿಂದ ನಮ್ಮ ಯಂತ್ರ ಸಾಮಗ್ರಿಗಳೆಲ್ಲ ಸೋಸು ಸುಣ್ಣವಾಗಿದ್ದವು—ತೀರ ಹಳೆಯದಾಗಿದ್ದವು. ಅವುಗಳನ್ನು ಪ್ರತಿಕ್ಷೇಪಿಸುವುದಕ್ಕೆ—ಮತ್ತು ನವೀಕರಣವನ್ನು ಸಾಧಿಸುವುದಕ್ಕೆ - ಅನುಕೂಲ ಪರಿಸ್ಥಿತಿಯು ಇರಲಿಲ್ಲ. ಏಕೆಂದರೆ ಯುದ್ಧಾಹತವಾದ ಐರೋಪ್ಯ ರಾಷ್ಟ್ರಗಳಿಂದಲೇ ಯಂತ್ರ ಸಾಮಗ್ರಿಗಳು ಬರಬೇಕಿತ್ತು. ಆಗಿನ ಭಾರತೀಯ ರಾಜನೀತಿಯೂ ಕೈಗಾರಿಕೆಗಳ ವಿಷಯದಲ್ಲಿ ನಿಶ್ಚಿತವಿರಲಿಲ್ಲ. ಕೇಂದ್ರದಲ್ಲಿ ಮಧ್ಯಕಾಲದ ಸರಕಾರ ಸ್ಥಾಪನೆಯಾಯಿತು (೧೯೪೬); ಮತ್ತು ಲಿಯಾಕತ ಅಲಿಖಾನರ ಪ್ರಥಮ ಮುಂಗಡ ಪತ್ರವು ಕೈಗಾರಿಕೆಗಳಿಗೆಲ್ಲ ನಿರಾಶೆಯನ್ನೂ ಅತೃಪ್ತಿಯನ್ನೂ ತಂದಿತು. ೧೯೪೭ರಲ್ಲಿ ಭಾರತವು ಸ್ವತಂತ್ರಗೊಂಡಾಗ, ಪಾಕಿಸ್ತಾನವೆಂಬ ನೂತನ ರಾಷ್ಟ್ರವೂ ಹುಟ್ಟಿಕೊಂಡು, ವಿಭಜನೆಯು ದುಷ್ಪರಿಣಾಮಗಳಿಗೆ ನಾಂದಿಯನ್ನು ಹೇಳಿತು. ಹತ್ತಿಯ ಬಟ್ಟೆ ಮತ್ತು ಸಣಬಿನ ನಾರುಗಳೆಂಬ ನಮ್ಮ ಅತಿ ದೊಡ್ಡ ಉದ್ದಿಮೆಗಳೆರಡು ವಿಭಜನೆಯ ಪರಿಣಾಮವಾಗಿ ಆಘಾತವನ್ನು ಹೊಂದಿದವು. ಪಾಕಿಸ್ತಾನವು ಕಚ್ಚಾ ವಸ್ತುಗಳ ಪೂರೈಕೆಯಲ್ಲಿ ಆತಂಕವೊಡ್ಡಿತಲ್ಲದೆ, ನಮ್ಮ ಪೇಟೆಯ ವ್ಯಾಪ್ತಿಯನ್ನೂ ಕುಗ್ಗಿಸಿತು.

ಇದರಿಂದ ಜಾಗೃತಗೊಂಡ ಸ್ವತಂತ್ರ ಭಾರತದ ನೆಹರೂ ಸರಕಾರವು ಕೈಗಾರಿಕೆಗಳ ಅಭಿವೃದ್ಧಿ ಪರಿಷತ್ತೊಂದನ್ನು ೧೯೪೭ನೇ ಡಿಸೆಂಬರದಲ್ಲಿ ಕರೆದು ಕೈಗಾರಿಕೆಗಳನ್ನು ಆಗ ಎದುರಿಸುತ್ತಿದ್ದ ಕಚ್ಚಾವಸ್ತುಗಳ ಅಭಾವ, ಯಂತ್ರ ಸಾಮಗ್ರಿಗಳನ್ನು ತರಿಸುವಲ್ಲಿನ ಕಷ್ಟ, ಅಗತ್ಯದ ಸರಕುಗಳ ವಿನಿಮಯದಲ್ಲಿದ್ದ ತೊಂದರೆ, ತಾಂತ್ರಿಕ ಸಹಕಾರ, ಮಾಲಕ ಮಜೂರರ ಸುಖ ಸಂಬಂಧ, ಸಾರಿಗೆ ಸೌಕರ್ಯಗಳ ಅಭಿವೃದ್ಧಿ ಮುಂತಾದ ಪ್ರಶ್ನೆಗಳನ್ನು ಕೂಲಂಕಷವಾಗಿ ಚರ್ಚಿಸಿತು. ಮುಂದೆ ೧೯೪೮ನೇ ಎಪ್ರಿಲಿನಲ್ಲಿ ಸಾರಲಾದ ಕೈಗಾರಿಕಾ ನೀತಿಯಲ್ಲಿ ಸರಕಾರವು ಸಾಧ್ಯವಿದ್ದೆಲ್ಲ ಮಾರ್ಗದಿಂದ ಉತ್ಪಾದನೆಯನ್ನು ಹೆಚ್ಚಿಸಲು ಕ್ರಿಯಾತ್ಮಕವಾದ ರಾಷ್ಟ್ರೀಯ ಧೋರಣೆಯನ್ನು ಅನುಸರಿಸಲಾಗುವುದೆಂದೂ ಖಾಸಗಿ ಬಂಡವಾಳದ ಸಹಕಾರ ಅಗತ್ಯವಾಗಿ ಬೇಕೆಂದೂ ಸ್ಪಷ್ಟಗೊಳಿಸಿತು.

ಇದೊಂದು ರೀತಿಯ ಉತ್ತೇಜನವಾಗಿ ಪರಿಣಮಿಸಿದರೂ ೧೯೪೯ನೇ ಸಪ್ಟಂಬರದಲ್ಲಿ ರೂಪಾಯಿಯ ಮೌಲ್ಯ ವಿಚ್ಛೇದನವನ್ನು ಮಾಡಿಕೊಂಡುದರಿಂದ ಮತ್ತು ಪಾಕಿಸ್ತಾನವು ಈ ಕ್ರಮಕ್ಕೆ ಒಳಪಡದುದರಿಂದ ಕೈಗಾರಿಕೆಗಳ ತಳಗಟ್ಟು ಜಗ್ಗತೊಡಗಿತು. ೧೯೫೦ರಲ್ಲಿ ಎರಡು ತಿಂಗಳುಗಳಷ್ಟು ದೀರ್ಘಕಾಲ ಮುಂಬಯಿಯ ಗಿರಣಿಕಾರರು ಹೂಡಿದ ಸಂಪು ಆ ಉದ್ದಿಮೆಯ ಉತ್ಪಾದನಾ ಪ್ರಮಾಣದ ಮೇಲೆ ವಿಪರೀತ ಪರಿಣಾಮ ಮಾಡಿತು. ಮುಂದೆ ಕೋರಿಯದ ಯುದ್ಧವು ಪ್ರಾರಂಭವಾಗಲು ವಿದೇಶಗಳಿಂದ ಯಂತ್ರ ಸಾಮಗ್ರಿಗಳನ್ನು ತರಿಸುವುದು ಕಷ್ಟಕರವಾಗ ತೊಡಗಿತು. ಆದರೆ ಇದು ನಮ್ಮ ಕೈಗಾರಿಕೆಗಳ ಪ್ರಗತಿಗೆ ಹೆಚ್ಚಿನ ಆತಂಕವನ್ನೊಡ್ಡಲಿಲ್ಲವೆಂದೇ ಹೇಳಬೇಕು. ೧೯೫೧ನೇ ಫೆಬ್ರುವರಿಯಲ್ಲಿ ಪಾಕಿಸ್ತಾನದೊಡನೆ ಆರ್ಥಿಕ ಕದನವು ನಿಂತದ್ದರಿಂದ ನಮ್ಮ ಕೈಗಾರಿಕೆಗಳಿಗೆ ಹೊಸ ಶಕ್ತಿ ಬಲಬಂತು. ಅಂದಿನಿಂದ ಇಂದಿನ ವರೆಗೂ ನಮ್ಮ ಉತ್ಪಾದನಾ ಪ್ರಮಾಣವು ಹೆಚ್ಚುತ್ತಾ ಹೋಗಿರುವುದು: ಸಣಬಿನ ನಾರೊಂದೇ ಇದಕ್ಕೆ ಅಪವಾದ.

ಸ್ವಾತಂತ್ರ್ಯದ ಮೊದಲಿನ ಮೂರು ನಾಲ್ಕು ವರ್ಷಗಳಲ್ಲಿ ಕೈಗಾರಿಕೆಗಳ ಬೆಳವಣಿಗೆಯು ಕುಂಠಿತವಾಗಿದ್ದರೂ ಕಳೆದ ಮೂರು ವರ್ಷಗಳಲ್ಲಿ ಡೋಲಾಯಮಾನ ಪರಿಸ್ಥಿತಿಯ ಸ್ಥಾನವನ್ನು ಭದ್ರವಾದ, ಸ್ಥಿರವಾದ ಆರ್ಥಿಕ ನೆಲಗಟ್ಟು ಆಕ್ರಮಿಸಿಕೊಂಡಿರುವುದು ಪ್ರಗತಿಯ ದೃಷ್ಟಿಯಿಂದ ಅಪೇಕ್ಷಣೀಯವಾದ, ತೃಪ್ತಿಕರವಾದ ವಿಷಯ. ಸರಕಾರ ಅನುಸರಿಸಿದ ಧೋರಣೆಯಿಂದಾಗಿ, ನಮ್ಮ ಕೈಗಾರಿಕೆಗಳು ಬಹುಮುಖವಾದ ತಮ್ಮ ಚಟುವಟಿಕೆಯನ್ನು ತೋರುವಂತಾಯಿತು. ಕೆಲವೇ ಪ್ರಮುಖ ಕ್ಷೇತ್ರದಲ್ಲಿ ಅಭಿವೃದ್ಧಿ ಹೊಂದುವ ಹಿಂದಿನ ಪರಂಪರೆಯನ್ನು ಬಿಟ್ಟುಕೊಟ್ಟು, ಭಾರತೀಯರ ಸರ್ವಾಂಗಿಕ ಪ್ರಗತಿಗೆ ಪೋಷಕವಾದ ನಿತ್ಯೋಪಯೋಗದ ಸರಕುಗಳನ್ನು ಉತ್ಪಾದಿಸುವ ಹಾಗು ವ್ಯಾಪಕ ಅಂಗಗಳಲ್ಲಿ ಕೈಯಾಡಿಸುವ ಹೊಸ ಹೊಸ ಉದ್ದಿಮೆಗಳು ಹುಟ್ಟಿಕೊಂಡವು. ಯಂತ್ರಗಳ ಉತ್ಪಾದಕ ಸಾಮರ್ಥ್ಯದಲ್ಲಿಯೂ ಬಹಳಷ್ಟು ಹೆಚ್ಚಳವನ್ನು ಕೈಗೂಡಿಸಲಾಯಿತು. ಮೋಟಾರು ವಾಹನ, ಅಲುಮಿನಿಯಂ ಸರಕು, ಡೀಸೆಲ್ ಇಂಜಿನು, ನೀರೆಳೆಯುವ ಪಂಪು, ಸೈಕಲುಗಳು, ಹೊಲಿಗೆಯ ಯಂತ್ರ, ವಿದ್ಯುದ್ದೀಪ, ರೇಡಿಯೋ, ವಿದ್ಯುತ್ತಿನ ಮೋಟರು ಮತ್ತು ಬೀಸಣಿಗೆ, ಅಮೋನಿಯಂ ಸಲ್ಫೇಟು, ಸೋಡಾ ಏಶ್, ಕಾಸ್ಟಿಕ್ ಸೋಡಾ, ರೇಯನ್ ಮತ್ತು ಲಿನೋಲಿಯಂ, ಬ್ಲೇಡುಗಳು, ಸ್ಕ್ರೂಗಳು, ಗಾಜಿನ ಹಾಳೆಗಳು, ಸರಿಗೆ ಮತ್ತು ಕೇಬಲುಗಳು ಇತ್ಯಾದಿಗಳನ್ನು ಉತ್ಪಾದಿಸುವ ಕೈಗಾರಿಕೆಗಳೆಲ್ಲ ಸ್ವಾತಂತ್ರ್ಯೋತ್ತರದಲ್ಲಿಯೇ ಸಂಘಟಿಸಲ್ಪಟ್ಟು ವಿಸ್ತಾರ ಹೊಂದಿದವು.

(೨೧ನೇ ಪುಟ ನೋಡಿರಿ)

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.
1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ. ಹಿತಸಾಧನೆಯನ್ನು ಮಾಡುತ್ತಿರುವುದು.
THE MOOLKY BANK LTD.
Moolky, S. K.

THE CANARA MUTUAL
ASSURANCE COMPANY LTD.
Managing Director T. R. A. PAI
Head Office: UDIPI, S. India.] [Estd: 1935.
ಅತ್ಯುತ್ತಮ ಬೋನಸ್
ಲಾಭ ಸಹಿತ ಪಾಲಿಸಿಗಳಿಗೆ
ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ರೂ. 15/-
ಹೋಲ್ ಲ್ಯಾಫ್ ಎಶ್ಯೂರೆನ್ಸಿಗೆ ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
* * * * *
ಈ ವಿಮಾಗಣನೆಯನ್ನು ನಡೆಸಿದ ಸಲಹೆಗಾರ ವಿಮಾಗಣಕರಾದ ಶ್ರೀ. ಕೆ. ಎಸ್. ಶೆತ್ತಿ, ಬಿ.ಎಸ್‌ಸಿ., ಎಫ್. ಐ. ಎ., ಅವರು ಇತರ ಸಂಗತಿಗಳೊಂದಿಗೆ ಹೀಗೆ ಹೇಳಿರುವರು— "ಕಳೆದ ಹಲವು ವರ್ಷಗಳಿಂದ ನೀವು ಕಾಯ್ದುಕೊಂಡು ಬಂದ ದೃಢವಾದ ಕ್ಷೇಮನಿಧಿಯ ಸ್ಥಿತಿಯನ್ನು ಸಡಲಿಸದೆ, ನಿಜವಾಗಿಯೂ ಉನ್ನತ ಮಟ್ಟದ ಲಾಭಾಂಶವನ್ನು ಸಾರುವುದಕ್ಕೆ ನಿಮ್ಮ ಗಾತ್ರದ ಕಂಪೆನಿಗೆ ಸಾಧ್ಯವಾಗಿರುವುದು ಮೆಚ್ಚುವ ವಿಷಯ."
* * * * *
ದಿ ಕೆನರಾ ಮ್ಯೂಚುವಲ್
ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA LTD.,
"MUKUND NIVAS", UDIPI, S. INDIA.

ಯೋಜನೆಯಲ್ಲಿ ವಾಸ್ತವಿಕ ದೃಷ್ಟಿ ಮತ್ತು ಮುನ್ನೋಟ

ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಗತಿಯು ತೃಪ್ತಿಕರವೆಂದು ಹೇಳಲಾಗುತ್ತದೆ. ಹಾಗೆಂದು, ಭಾರತದ ಸಮಸ್ಯೆಗಳಿಗೆಲ್ಲ ಉತ್ತರವನ್ನು ಇದರಲ್ಲಿ ನಿರೀಕ್ಷಿಸಿದರೆ ತಪ್ಪಾದೀತು. ಯೋಜನಾಬದ್ಧವಾಗಿ ಕೈಗೂಡಿಸಬೇಕಾದ ಸಾಧನೆಗಳ ಒಂದು ಮಜಲನ್ನಷ್ಟೇ ಮುಟ್ಟುವಪ್ರಯತ್ನವೆಂದು ಇದನ್ನು ಭಾವಿಸಬೇಕು. ಇಂತಹ ಹಲವು ಮೆಟ್ಟಲನ್ನೇರಲು ನಾವು ರಾಷ್ಟ್ರೀಯ ಉತ್ಪಾದನೆಗೆ ಪ್ರಾಶಸ್ತ್ಯವನ್ನೂ ಅನುಭೋಗಕ್ಕೆ ಗೌಣ ಸ್ಥಾನವನ್ನೂ ಕೊಡಬೇಕಾಗುವುದು.

ಯುದ್ಧೋತ್ತರ ಪುನಾರಚನೆಯ ಉದ್ದೇಶದಿಂದ ಕಲೆ ಹಾಕಿದ ಸಂಗತಿಗಳೇ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಗೆ ಆಧಾರವಾಗಿದ್ದರೂ ಅಷ್ಟರಲ್ಲಿಯೇ ನಮ್ಮ ಸರಕಾರದಲ್ಲಿ ಜನನಾಯಕರು ನೇರಿಕೊಂಡು ಉಂಟಾದ ರಾಷ್ಟ್ರೀಯ ಮನೋಭಾವನೆಯು ಯೋಜನೆಯು ಜನತೆಯದಾಗುವಂತೆ ಅದಕ್ಕೆ ಒಪ್ಪವಿಡಲು ಕಾರಣವಾಯಿತೆಂಬುದು ಸ್ಪಷ್ಟ. ಯೋಜನಾ ಆಯೋಗವು ಕೈಗೆತ್ತಿಕೊಂಡು ಪರಿಶೀಲಿಸಿದ ಅನೇಕ ಕಾರ್ಯಕ್ರಮಗಳ ಕಲ್ಪನೆ ಬ್ರಿಟಿಷ ಆಳಿಕೆಯ ಕಾಲದಲ್ಲಿಯೇ ಮೂಡಿದ್ದರೂ ಸ್ವಾತಂತ್ರ್ಯೋತ್ತರದಲ್ಲಿ ಜನತೆಯ ಸರ್ವಾಂಗೀಣ ಏಳಿಗೆಗೆ ಪೋಷಕವಾದ ಕಲ್ಯಾಣ ರಾಷ್ಟ್ರದ ಆದರ್ಶವುಳ್ಳ ಮಹನೀಯರು ಅದನ್ನು ಸಾಕಷ್ಟು ವ್ಯಾಪಕಗೊಳಿಸಲು ಮುಂದಾದರು. ಎಂತಲೇ ಕೃಷಿ ಮತ್ತು ಸಮಾಜ ವಿಕಾಸ ಯೋಜನೆ, ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಉತ್ಪಾದನೆ, ಸಾರಿಗೆ ಮತ್ತು ಸಂಪರ್ಕ ಸೌಕರ್ಯ, ವ್ಯಾಪಾರೋದ್ಯಮಗಳ ಅಭಿವೃದ್ಧಿಯೊಂದಿಗೆ ಸುಮಾರು ೩೪೦ ಕೋಟಿ ರೂಪಾಯಿಗಳನ್ನು ಸಮಾಜ ಸೇವಾ ಕಾರ್ಯಗಳಿಗೆ ವಿನಿಯೋಗಿಸಿದ್ದಲ್ಲದೆ, ನಿರುದ್ಯೋಗದ ಸಮಸ್ಯೆಯ ಪರಿಹಾರಾರ್ಥ ಪುನರ್ನಿವೇಶನ ಮತ್ತಿತರ ಕಾರ್ಯಕ್ರಮಗಳನ್ನು ಈಚೆಗೆ ರೂಪಿಸಿಕೊಂಡು ಯೋಜನೆಯನ್ನು ೨೩೭ ಕೋಟಿ ರೂಪಾಯಿಗಳಷ್ಟು ವಿಸ್ತರಿಸಲಾಯಿತು. ಈ ಪ್ರಕಾರ ಬ್ರಿಟಿಷರ ಯುದ್ಧೋತ್ತರ ಪುನಾರಚನೆಯ ವಿಚಾರಕ್ಕಿಂತ ಇಂದಿನ ಕಲ್ಯಾಣ ರಾಷ್ಟ್ರದ ಧ್ಯೇಯ ಭಿನ್ನ ಸ್ವರೂಪವನ್ನು ಹೊಂದಿತು.

ಭಾರತ ಸರಕಾರದ ಮತ್ತು ಎಲ್ಲ ರಾಜ್ಯಸರಕಾರಗಳ ವಾರ್ಷಿಕ ಆದಾಯವು ಸುಮಾರು ಒಂದು ಸಾವಿರ ಕೋಟಿ ರೂಪಾಯಿಗಳಷ್ಟಾಗುವುದು. ನಮ್ಮ ಪಂಚವಾರ್ಷಿಕ ಯೋಜನೆಗಾಗಿ ವಿನಿಯೋಗಿಸಬೇಕೆಂದಿರುವ ಹಣವು ಉತ್ಪನ್ನದ ೪೫% ಆಗುತ್ತದೆ. ಈ ಧ್ಯೇಯವು ಬಹಳ ಸಾಹಸದದ್ದಾಗಿದೆಯಲ್ಲದೆ ಇದಕ್ಕೆ ತಕ್ಕ ಬಂಡವಾಳವನ್ನು ತೀರಿಸುವುದು ಕಠಿಣವೇ ಆಗಿದೆ. ಅರ್ಥಸಚಿವ ಶ್ರೀ ಚಿಂತಾಮಣಿ ದೇಶಮುಖರೇ ಹೇಳಿರುವಂತೆ ೨೦೦೦ ಕೋಟಿ ರೂಪಾಯಿಗಳಷ್ಟು ವೆಚ್ಚದ ಈ ನಮ್ಮ ಮೊದಲನೆಯ ಯೋಜನೆಗೋಸ್ಕರ ಹೆಚ್ಚೆಂದರೆ ೧೪೦೦ ಕೋಟಿ ರೂಪಾಯಿಗಳನ್ನಷ್ಟೇ ಆಂತರಿಕ ಸಾಧನ ಸಂಪತ್ತಿಯ ಉಪಯೋಗದಿಂದ ಸಂಗ್ರಹ ಮಾಡಲು ಸಾಧ್ಯವಾದೀತು. ಉಳಿದ ಹಣವನ್ನು ವಿದೇಶಗಳ ನೆರವು ಹಾಗು ಸ್ಟರ್ಲಿಂಗ ಸಿಲ್ಕಿನ ಬಳಕೆ ಮತ್ತು ಕೊರತೆ ಧನ ವಿನಿಯೋಗಗಳ ಮೂಲಕ ಸಂಗ್ರಹಿಸ ಬೇಕಾಗಿರುವುದು. ಇದು ಸರಕಾರದ ಪಾಲಾಯಿತು. ಇದನ್ನು ಬಿಟ್ಟು ಖಾಸಗಿ ಕ್ಷೇತ್ರದಲ್ಲಿ ತೊಡಗಿಸಲ್ಪಡಬೇಕೆಂದಿರುವ ಬಂಡವಾಳವೂ ಅಪಾರವಾಗಿದೆ. ಎರಡೂ ಕ್ಷೇತ್ರಗಳಲ್ಲಿ ಕೈಗೊಳ್ಳಲಾಗುವ ಅಭಿವೃದ್ಧಿ ಪ್ರಯತ್ನಗಳಿಂದ ರಾಷ್ಟ್ರೀಯ ವಾರ್ಷಿಕ ಉತ್ಪನ್ನವು ೧೩೦೦ ಕೋಟಿ ರೂಪಾಯಿಗಳಷ್ಟು ಹೆಚ್ಚಿಕೊಂಡು ೧೦೦೦೦ ಕೋಟಿ ರೂಪಾಯಿಗೇರಬಹುದೆಂದು ಹೇಳಲಾಗುತ್ತದೆ.

ಯೋಜನೆಯು ಈಗ ನಾಲ್ಕನೇ ವರ್ಷದ ಮಧ್ಯದಲ್ಲಿದ್ದು, ನಾವೀಗಲೇ ಎರಡನೇ ಪಂಚವಾರ್ಷಿಕ ಯೋಜನೆಯ ವಿಚಾರವನ್ನು ಮಾಡುತ್ತಿದ್ದೇವೆ. ಮೊದಲಿನ ಮೂರು ವರ್ಷಗಳಲ್ಲಿ ನಾವು ೧೦೦೦ ಕೋಟಿ ರೂಪಾಯಿಗಳನ್ನು ಯೋಜನೆಯಲ್ಲಿ ತೊಡಗಿಸಿದ್ದು ನಾಲ್ಕು ಮತ್ತು ಐದನೇ ವರ್ಷಗಳಲ್ಲಿ ಉಳಿದ ಹಣವು ವಿನಿಯೋಗಿಸಲ್ಪಡುತ್ತದೆ. ಕೃಷಿ, ಸಮಾಜ ವಿಕಾಸ ಯೋಜನೆ, ನೀರಾವರಿ ಮತ್ತು ವಿದ್ಯುದುತ್ಪಾದನಾ ಕಾರ್ಯಗಳಿಗಾಗಿ ವಿನಿಯೋಗಿಸಿದ ಹಣದ ಫಲವನ್ನು ಈಗಲೇ ಪ್ರತ್ಯಕ್ಷವಾಗಿ ಕಾಣಲು ಸಾಧ್ಯವಿಲ್ಲ. ಏಕೆಂದರೆ, ಯೋಜನೆಯು ಪೂರ್ತಿಯಾದ ಬಳಿಕವೇ ಅವುಗಳ ಪೂರ್ಣ ಉಪಯೋಗಮಾಡಲು ಸಾಧ್ಯ. ಅದಕ್ಕೂ ಮೊದಲಲ್ಲ. ಹೀಗಿದ್ದರೂ ಆಹಾರ ಧಾನ್ಯಗಳ ವಿಷಯದಲ್ಲಿ ಕೈಗೂಡಿಸಿದ ಪ್ರಗತಿಯು ತೃಪ್ತಿಯನ್ನು ನೀಡುವಂತಿರುವುದಲ್ಲದೆ ಕೈಗಾರಿಕಾ ವಲಯದಲ್ಲಿಯೂ ಪ್ರಗತಿಯು ಸಂತೋಷಜನಕವಿದೆಯೆಂದು ನಂಬಿಕೆಯಾಗುತ್ತದೆ. ಆದರೆ ಎದ್ದು ತೋರುವ ದೋಷವೆಂದರೆ, ಇಷ್ಟು ವೆಚ್ಚ ಮಾಡಿದರೂ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ವಿಷಯದಲ್ಲಿ ಯಾವ ತರದ ಸಮಾಧಾನಕರ ಪರಿಣಾಮವೂ ಉಂಟಾಗಿಲ್ಲ. ಇನ್ನೊಂದು ಕೊರತೆಯೆಂದರೆ, ಖಾಸಗಿ ಬಂಡವಾಳದ ಕ್ಷೇತ್ರದಲ್ಲಿ ಸರಕಾರದ ನಿಯಂತ್ರಣ ಮತ್ತು ಹಸ್ತಕ್ಷೇಪದ ವಿಷಯದಲ್ಲಿ ಸಮಾಧಾನವೇ ಕಂಡುಬರುತ್ತದೆಯಾಗಲಿ, ರಾಷ್ಟ್ರದ ಪುನಾರಚನೆಯ ಘನೋದ್ದೇಶದಲ್ಲಿ ಸರಕಾರದೊಂದಿಗೆ ಸಹಕರಿಸಬೇಕೆಂಬ ಮನೋಭಾವ ದೃಢವಾಗಿ ಮೂಡಿರುವುದಿಲ್ಲ.

ದ್ವಿತೀಯ ಪಂಚವಾರ್ಷಿಕ ಯೋಜನೆಯ ನಿಶ್ಚಿತ ರೂಪರೇಷೆಯನ್ನು ಈಗಲೇ ಹೇಳಲು ಬರುವಂತಿಲ್ಲ. ಆದರೂ ಅದು ಪ್ರತಿ ವರ್ಷ ಏಳು ನೂರು ಕೋಟಿ ರೂಪಾಯಿಗಳನ್ನು ವ್ಯಯಿಸುವ ಯೋಜನೆಯಾಗುತ್ತದೆಂದೂ ಈಗ ಕೃಷಿ ಕ್ಷೇತ್ರಕ್ಕೆ ಕೊಡಲಾದ ಮಹತ್ವವು ಮುಂದಿನ ಯೋಜನೆಯು ಕಾಲಕ್ಕೆ ಕೈಗಾರಿಕಾ ಕ್ಷೇತ್ರದತ್ತ ಹೊರಳುವುದೆಂದೂ ಸಾಮಾನ್ಯವಾಗಿ ಗೊತ್ತಾಗುತ್ತದೆ. ಯೋಜನಾ ಆಯೋಗದ ಅಂದಾಜಿನಂತೆ ಪ್ರಥಮ ಪಂಚವಾರ್ಷಿಕ

(೧೪ನೇ ಪುಟ ನೋಡಿರಿ)

ಬಿಡುಗಡೆಯ ಬಯಕೆ

ಸ್ವಾತಂತ್ರ್ಯ ಹಿಮಗಿರಿಯ ಗೌರಿಶಂಕರವಾಗಿ
ಲೋಕನಾಕದ ಬಿರಗು ಗೊಳಿಸಲೆಳಸೆ;
ಬಿಡುಗಡೆಯ ತಗ್ಗು ಗದ್ದೆಯ ಹುಣಿಯ ಹುಲ್ಲಾಗಿ
ಗೋವು ಮೇವಿನ ಒದಗಿಗೊದಗುವಾಸೆ' ೧

ವಿಶ್ವವಿಶದ ಚರಿತ್ರಗ್ರಂಥ ಸಂಪುಟದಲ್ಲಿ
ಸ್ವರ್ಣವರ್ಣದಿ ನಾಮದುಲ್ಲೇಖವೊಲ್ಲೆ;
ತಾಯ್ನಾಡ ನೆಲದಲ್ಲಿ ಹಿಡಿಮಣ್ಣು ಹುಡಿಯಲ್ಲಿ
ಬೆರೆವ ಭಾಗ್ಯವೇ ಸಾಕು—ಸಾಯುಜ್ಯವಲ್ಲೆ' ೨

ವೇದ ಶಾಸ್ತ್ರ ಪುರಾಣ ಕಾವ್ಯೇತಿಹಾಸಗಳ
ಜೀರ್ಣಿಸಿದ ಪೂರ್ಣಿಸಿದ ಪಾಂಡಿತ್ಯ ಬೇಡ;
ಎನ್ನ ತಾಯ್ನಾಡ ನಿರ್ಭಾಗ್ಯ ಸೋದರಸೋದರೆ
ನಲ್ನುಡಿಯ ನುಡಿಯುವೆನು—ನಿತ್ಯನೋಡ! ೩

ಸ್ವಾತಂತ್ರ್ಯ ಧರಣಿಭಾರವ ಹೊತ್ತ ಶೇಷನೆನೆ
ಗರ್ವಾಂಧಕಾರ ಮನ ಮುಸುಕದಿರಲಿ;
ಬಿಡುಗಡೆಯ ಬಂಡಿಯೆಳೆಯುವ ಹುರಿಯ ಹಗ್ಗದಲಿ
ಕಿರುಕಣ್ಣೆಯೆನಿಸುವೆನು, ಶಕ್ತಿ ಬರಲಿ! ೪

ಸ್ವಾತಂತ್ರ್ಯಸಾಗರ ತಿಮಿಂಗಿಲಂ ತಾನಾಗಿ
ಸುಮಿ ಸಂಕುಳವ ಗಿಳಂಕರಿಸಲೆಳಸೆ;
ಬಿಡುಗಡೆಯ ತೊರೆ ಕರೆಯ ಹಸಿರು ಹಾವಸೆಯಾಗಿ
ಹರಿ ಹರಿದು ಹೋದರೂ—ಸೊಗವ ನೆನಸೆ ೫

ಸ್ವಾತಂತ್ರ್ಯನಂದನದ ವರ ಕಲ್ಪತರುವಾಗಿ
ಅಜರಾಮರರ ಜೆಸಿ ಪಣಿಸಲೇಕೆ?
ಎನ್ನ ತಾಯ್ನೆಲದ ಬಡವನ ಗಂಟಲಾರುತಿರೆ
ಗಂಜಿತೆಳಯಾಗುವೆನೆ? ಭಾಗ್ಯಬೇಕೆ? ೬

ಕಾಶಿಯೋ, ರಾಮೇಶ್ವರವೊ, ಗಂಗೆ ತುಂಗೆಯೋ,
ತೀರ್ಥಯಾತ್ರಾಟನದ ಪುಣ್ಯವೊಲ್ಲೆ;
ತಾಯ್ನೆಲದ ಹೊಲದ ನೇಗಿಲ ಕುಳದ ಹಾದಿಯಲಿ
ಕೆಸರಿನೊಳೆ ಕುಸಿಯುವೆನು—ಧನ್ಯನಲ್ಲೆ! ೭

ವ್ಯಾಸವಾಲ್ಮೀಕಿ ಹೋಮರದಾಂಟೆ ಪಂಪರೊಲು
ಕಾವ್ಯ ಸಾಮ್ರಾಜ್ಯದೊಡೆತನವೇಣಿಸೆನು;
ಶುಕವಾಗಿ ಪಿಕವಾಗಿ ಕಿರುದುಂಬಿ ಮರಿಯಾಗಿ
ತಾಯ್ನಾಡನುತಿಪೆ ದಿನದಿನ, ಪಣಿಸೆನು! ೮

ಎಲ್ಲಿಯೋ, ವೈಕುಂಠದಲ್ಲಿಯೋ ಜನಿಸಿದರು,
ದೇವತ್ವ ದೊರಕಿದರು—ಬಯಸಲಾರೆ;
ಇಲ್ಲಿಯೇ, ತಾಯ್ನಾಡಿನಲ್ಲಿಯೇ ಹುಟ್ಟುವೆನು,
ಕ್ರಿಮಿಕೀಟವಾದರೂ—ಕೊರಗುವೋರೆ' ೯

— ಕಯ್ಯಾರ್ರ ಕಿಞ್ಞಣ್ಣ ರೈ.

ಓದಲೇಬೇಕಾದ ದಿ| ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು
(ಎನ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)
ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)
150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ
"ಭಾರತದ ಕರ್ಣನು ದಿ| ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನ ಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿ ಹೋಗದು. (ಪ್ರೊ| ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ
ಮೇಲ್ತರಗತಿಯ ಕವಿತೆಗಳ ಸಂಗ್ರಹ.
ಬೆಲೆ 0-12-0.
(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)
ಮೂರೂ ಪುಸ್ತಕಗಳನ್ನೂ ದಿ| ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.
ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ

ವಿಶ್ವದ ರಾಜಕೀಯ ರಂಗದಲ್ಲಿ ಭಾರತದ ಸ್ಥಾನ

ನಮ್ಮ ಪ್ರಧಾನ ಮಂತ್ರಿಗಳು ರಾಷ್ಟ್ರಪಿತನ ಅಮರ ಸಂದೇಶವನ್ನು ಲೋಕಕ್ಕೆ ಮುಟ್ಟಿಸಲು ನೋಡುತ್ತಿದ್ದಾರೆ. ಅವರು ಭಾರತೀಯರ ಹಾಗು ಇತರರ ಮುಂದೆ ತಾತ್ಕಾಲಿಕ ಕ್ಷೇಮದ ಆದರ್ಶಕ್ಕಿಂತಲೂ ಶಾಶ್ವತ ಶಾಂತಿಯ ಧ್ಯೇಯವನ್ನು ಮುಂದಿಸುತ್ತಾರೆ. ವಿಶ್ವದ ರಾಜಕೀಯ ರಂಗದಲ್ಲಿ ನಮ್ಮ ನಿಲುವಿಗೆ ಹೆಚ್ಚು ಹೆಚ್ಚು ಬೆಂಬಲ ದೊರೆಕುತ್ತಿರುವುದೇ ನಮ್ಮ ಧೋರಣೆಯ ಯಶಸ್ಸಿಗೆ ಪ್ರತ್ಯಕ್ಷ ನಿದರ್ಶನ.

ಬರೆದವರು: **ಕೆ. ಸದಾನಂದ ಹೆಗ್ಡೆ,** ಎಂ.ಎ., ಬಿ.ಎಲ್., ಎಂ.ಪಿ.

ವಿಶ್ವರಾಷ್ಟ್ರಗಳ ಪಂಕ್ತಿಯಲ್ಲಿ ಭಾರತವು ಇಂದು ಅತ್ಯುನ್ನತವಾದ ಸ್ಥಾನವನ್ನು ಹೊಂದಿರುವುದು. ತಲ್ಲಣಗೊಂಡ ಲೋಕಕ್ಕೆ ಭಾರತವು ಆಶಾಜ್ಯೋತಿಯಾಗಿರುವುದು. ಶಾಂತಿ ಮತ್ತು ಸಮೃದ್ಧಿಯ ಯುಗಕ್ಕಾಗಿ ಜಗತ್ತಿನ ಕೋಟ್ಯಂತರ ಪೀಡಿತರು ಭಾರತದತ್ತ ನೋಡುತ್ತಿದ್ದಾರೆ. ಭಾರತದ ಕ್ರಿಯಾತ್ಮಕ ಅಂಗವಿಲ್ಲದೆ ಯಾವದೇ ಮಹತ್ವದ ಪ್ರಶ್ನೆಯು ಇತ್ಯರ್ಥವಾಗುವದಿಲ್ಲ. ಇಬ್ಬಣಗಳಲ್ಲಿ ಒಡೆದು ಹೋದ ಜಗತ್ತಿನಲ್ಲಿ ಭಾರತವೇ ಪರಸ್ಪರ ಹೊಂದಾಣಿಕೆಯನ್ನು ಸ್ಥಾಪಿಸಲು ಶಕ್ತವಾದ ಸೇತುವೆಯೆಂದು ತೋರುತ್ತದೆ. ಹಲವು ಗಡುಚಾದ ಹಾಗು ಕಠಿಣವಾದ ಜಾಗತಿಕ ಸಮಸ್ಯೆಗಳ ಪರಿಹಾರದಲ್ಲಿ ಮಹತ್ವದ ಪಾತ್ರವನ್ನು ವಹಿಸಿರುವೆನೆಂಬುದು ಭಾರತೀಯರಾದ ನಮಗೆ ಅಭಿಮಾನದ ವಿಷಯ. ಈ ಉನ್ನತ ಸ್ಥಾನಮಾನವನ್ನು ಹೊಂದಲು ನಮಗೆ ಹೇಗೆ ಶಕ್ಯವಾಯಿತೆಂಬುದನ್ನು ಸ್ವಾತಂತ್ರ್ಯ ದಿನೋತ್ಸವದ ಈ ಸಂದರ್ಭದಲ್ಲಿ ತಿಳಿದುಕೊಳ್ಳುವುದು ಸೂಕ್ತ.

ನಮ್ಮ ವಿದೇಶಾಂಗ ಧೋರಣೆಯನ್ನು ಅರ್ಥಮಾಡಿಕೊಳ್ಳಬೇಕಾದರೆ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ನಾವು ಕೈಗೊಂಡರಾಷ್ಟ್ರೀಯ ಸ್ವಾತಂತ್ರ್ಯ ಚಳವಳದ ಮೂಲ ತತ್ವಗಳನ್ನು ತಿಳಿದುಕೊಳ್ಳಬೇಕಾಗುತ್ತದೆ. ಆ ನಮ್ಮ ಆಂದೋಲನದಲ್ಲಿ ಸಾಧನವೂ ಗುರಿಯಷ್ಟೇ ಪವಿತ್ರವಿದ್ದಿತು. ನಮ್ಮ ಮುಂದೆ ಅದು ಸ್ವಯಂ ನಿರ್ಣಯಾಧಿಕಾರ, ಜಾಗತಿಕ ಶಾಂತಿ ಮತ್ತು ಸಮೃದ್ಧಿ ಹಾಗು ಸಮತೆ ಮತ್ತು ನ್ಯಾಯಗಳೆಂಬ ನೂರು ಧ್ಯೇಯ ವಾಕ್ಯಗಳನ್ನು ಮುಂದಿಸಿತು. ಆಂತರಿಕ ಹಾಗು ಅಂತರ್ರಾಷ್ಟ್ರೀಯ ಸಮಸ್ಯೆಗಳಿಗೆ ಈ ತತ್ವಗಳು ಸರಿಯಾಗಿಯೇ ಅನ್ವಯಿಸುತ್ತಿದ್ದವು. ಆ ಕಾಲದಲ್ಲಿ ಸಹ ನಮ್ಮ ಈಗಿನ ಪ್ರಧಾನ ಮಂತ್ರಿಗಳೇ ವಿದೇಶಾಂಗ ಧೋರಣೆಯನ್ನು ರೂಪಿಸುತ್ತಿದ್ದರು. ನಮ್ಮನ್ನು ತಪ್ಪು ತಿಳಿದುಕೊಂಡಿದ್ದ ಸಂದರ್ಭಗಳೂ ಅನೇಕ ಬಂದಿದ್ದವು. ಯಾವುದೇ ಬಣದೊಡನೆ ಸೇರಿಕೊಳ್ಳದ ನಮ್ಮ ನಿಲುವಿಯನ್ನು ತಾಟಸ್ಥ್ಯವೆಂದೂ ಕ್ರಿಯಾತ್ಮಕ ಪಾತ್ರವನ್ನು ಅಸಂಬದ್ಧವೆಂದೂ ಹೇಳಿದವರುಂಟು. ಆದರೆ ಇಂಥಿನ ಘಟನೆಗಳು ನಮ್ಮ ನಿಲುವು ಯಥಾರ್ಥವಾದುದೆಂಬ ಅಭಿಮಾನವನ್ನು ದೃಢಗೊಳಿಸುತ್ತವೆ.

ನಮಗೆ ಸ್ವಾತಂತ್ರ್ಯ ದೊರೆತ ಪ್ರಥಮದಲ್ಲಿಯೇ ಇಂಡೋನೇಶಿಯಾದ ಸ್ವಾತಂತ್ರ್ಯಕ್ಕಾಗಿ ನಾವು ಧುರೀಣತ್ವವನ್ನು ವಹಿಸಿದೆವು. ಏಶ್ಯಾ ರಾಷ್ಟ್ರಗಳ ಪರಿಷತ್ತೊಂದನ್ನು ಹೊಸದಿಲ್ಲಿಯಲ್ಲಿ ಪ್ರಧಾನ ಮಂತ್ರಿಗಳು ಕರೆದರು. ಆ ದೇಶಕ್ಕೆ ಸ್ವಾತಂತ್ರ್ಯ ನೀಡಬೇಕೆನ್ನುವ ವಿಷಯದಲ್ಲಿ ಜಾಗತಿಕ ಅಭಿಪ್ರಾಯವು ಮೂಡುವಂತೆ ಹಾಗು ಅದಕ್ಕೆ ಪೋಷಕವಾದ ನೈತಿಕ ಆದರ್ಶದ ನಿರ್ಮಿತಿಗೆ ನಾವು ಪ್ರಯತ್ನಿಸಿದೆವೆಂದು ಹೇಳಬಹುದು. ಟ್ಯುನೀಸಿಯಾ, ಮೊರೊಕ್ಕೊ ಎಲ್ಲಿಯೇ ಆಗಲಿ, ಸ್ವಯಂನಿರ್ಣಯಾಧಿಕಾರ ಬೇಕೆಂದು ನಾವು ಪ್ರತಿಪಾದಿಸಿದ್ದೇವೆ. ಸ್ವಾತಂತ್ರ್ಯಕ್ಕೋಸ್ಕರ ಹೋರಾಡುವವರಿಗೆ ನಮ್ಮ ನೈತಿಕ ಬೆಂಬಲವು ಇದ್ದೇ ಇದೆ.

ನಾವು ಎಲ್ಲ ಜನಾಂಗಗಳಲ್ಲೂ ಸಮಾನತೆಯ ಭಾವವನ್ನು ಮೂಡಿಸಲು ನೋಡಿದ್ದೇವೆ. ದಕ್ಷಿಣ ಹಾಗು ಪೂರ್ವ ಆಫ್ರಿಕೆಗಳಲ್ಲಿಯೂ ಇತರೆಡೆಯೂ ಕಂಡುಬರುವ ವರ್ಣ ವಿಭೇದ ಧೋರಣೆಯ ವಿರುದ್ಧ ನಾವು ಹೋರಾಡಿದ್ದೇವೆ. ಜಗತ್ತಿನ ವಿಚಾರಕರೆಲ್ಲ ಈಗ ನಿಧಾನವಾಗಿ ನಮ್ಮ ಅಭಿಪ್ರಾಯದತ್ತ ಒಲಿಯುತ್ತಿದ್ದಾರೆ. ಈ ಮಹತ್ವದ ಹಾಗು ವಿಪತ್ಕಾರಕವಾದ ಸಮಸ್ಯೆಯ ಪರಿಹಾರಕ್ಕೆ ಜಗತ್ತು ಯೋಚಿಸುವಂತೆ ನಮ್ಮ ನೀತಿಯು ಪ್ರೇರೇಪಿಸಿರುವುದು.

ಕಳೆದ ಮಹಾ ಯುದ್ಧದ ಬಳಿಕ ಭುಜಕ್ಕೆ ಭುಜ ಕೊಟ್ಟು ಹೋರಾಡುತ್ತಿದ್ದ ಮಿತ್ರ ರಾಷ್ಟ್ರಗಳೇ ಎರಡು ಗುಂಪುಗಳಲ್ಲಿ ವಿಭಜನೆ ಹೊಂದಿ ಒಂದು ಇನ್ನೊಂದನ್ನು ತನ್ನ ಸಂಭಾವ್ಯ ಶತ್ರುವೆಂದು ಭಾವಿಸುವ ವಿಚಿತ್ರ ಪರಿಸ್ಥಿತಿಯುಂಟಾಯಿತು. ಕಮ್ಯುನಿಷ್ಟ ಹಾಗು ಕಮ್ಯುನಿಷ್ಟೇತರ ರಾಷ್ಟ್ರಗಳೆಂಬ ಈ ಗುಂಪುಗಳು ಶಸ್ತ್ರಾಸ್ತ್ರ ಸಂಗ್ರಹ ಸ್ಪರ್ಧೆಯನ್ನು ತೊಡಗಿದವು. ಜಾಗತಿಕ ವಾತಾವರಣದಲ್ಲಿ ಭಯ ದ್ವೇಷಗಳು ತಾಂಡವವಾಡುವಂತಾಯಿತು. ಪ್ರತಿ ಪಕ್ಷದ ದೃಷ್ಟಿ ಕೋಣವನ್ನು ಸಹಾನುಭೂತಿಯಿಂದ ವಿಚಾರಿಸುವ ಮನೋಭಾವನೆ ಇಲ್ಲವಾಯಿತು. ಈ ಪರಿಸ್ಥಿತಿಯಲ್ಲಿಯೇ ಚೀನದಲ್ಲಿ ಚಿಯಾಂಗರ ಅಧಿಕಾರವು ಅಳಿದು ಮಾವೋರ ಜನತಾ ರಾಜ್ಯ ತಲೆ ಎತ್ತಿತು. ಭಂಡವಾಳಶಾಹಿ ರಾಷ್ಟ್ರಗಳಿಗೆ ಇದು ತೀವ್ರ ಆಘಾತವನ್ನುಂಟು ಮಾಡಿತು. ಅಮೇರಿಕ ಮುಂತಾದ ರಾಷ್ಟ್ರಗಳು ಅದನ್ನು ನ್ಯಾಯವಾದ ಸರಕಾರವೆಂದು ಮನ್ನಿಸಲು ನಿರಾಕರಿಸಿದವು. ಸಂಯುಕ್ತರಾಷ್ಟ್ರ ಸಂಘದ ತಾವು ಪಟವನ್ನು ಮೂಲೆಗೆ ತಳ್ಳಿದ್ದಲ್ಲದೆ, ಮಹಾರಾಷ್ಟ್ರಗಳು ಚೀನಕ್ಕೆ ಬೇಕಾದ ಸರಕಾರದ ಮಾದರಿಯನ್ನು ನಿಷ್ಕರ್ಷಿಸುವ ಹೊಣೆಯನ್ನು ತಾವೇ ಹೊರುವ ಔತ್ಸುಕ್ಯವನ್ನು ತೋರಿಸಿದವು. ಆದರೆ ಭಾರತವು ಮಾತ್ರ ಇದು ಸಲ್ಲದೆಂದು ಹೇಳಿತು. ಯಾರ ಆದೇಶಕ್ಕೆ ಜನತೆಯು ತಲೆಬಾಗುವುದೋ ಅದೇ ನಿಜವಾದ ಸರಕಾರವೆಂಬ ತತ್ವವನ್ನು ಮನ್ನಿಸಬೇಕೆಂಗು ಭಾರತ ಅಭಿಪ್ರಾಯಪಟ್ಟಿತು. ಕೇವಲ ದ್ವೇಷಾಗ್ನಿ ಪೂರಿತವಾದ ರಾಷ್ಟ್ರಗಳಿಗೆ ನಮ್ಮ ಒತ್ತಾಯವು ರುಚಿಸಲಿಲ್ಲ. ಆದರೆ ಚೀನಕ್ಕೆ ತಕ್ಕ ಮನ್ನಣೆಯನ್ನು ಕೊಡದಿದ್ದುದೇ ಅಂತಾರಾಷ್ಟ್ರೀಯ ತ್ವೇಷಕ್ಕೆ ಕಾರಣವೆಂದು ನಿಧಾನವಾಗಿಯಾದರೂ ಲೋಕಕ್ಕೆ ತಿಳಿಯತೊಡಗಿದೆ. ಫೋರ್ಮೋಸಾ ಅಥವಾ ಸಿಯೋಲ—ಎಲ್ಲಿಯೇ ಆಗಲಿ, ಗೊಂಬೆಗಳ ರಾಜ್ಯ ನಡೆಯದೆಂದು ಈಗ ಇಂಗ್ಲೆಂಡು, ಫ್ರಾನ್ಸ್ ಇತ್ಯಾದಿ ರಾಷ್ಟ್ರಗಳಿಗೂ ಭಾಸವಾಗುತ್ತಿರುವುದು.

ಉತ್ತರ ಕೊರಿಯವು ದಕ್ಷಿಣ ಕೊರಿಯದ ಮೇಲೆ ಧಾಳಿ ನಡೆಸಿದಾಗ ಸಂಯುಕ್ತ ರಾಷ್ಟ್ರ ಸಂಘವು ಇದನ್ನು ಆಕ್ರಮಣವೆಂದು ಸಾರಿತು. ಭಾರತವೂ ಇದನ್ನು ಅನುಮೋದಿಸಿ ಶುಶ್ರೂಷಾ ಪಥಕವೊಂದನ್ನು ದಕ್ಷಿಣ ಕೊರಿಯಕ್ಕೆ ಕಳುಹಿಸಿತು. ಆದರೆ ೩೮ನೇ ಅಕ್ಷಾಂಶದಾಚೆಗೆ ಧಾಳಿಗಾರರನ್ನು ಹಿಮ್ಮೆಟ್ಟಿಸಿದ ನಂತರ ಯುದ್ಧ ನಿಲ್ಲಿಸಬೇಕೆಂದು ಅದು ಹೇಳಿತು. ಈ ರೇಖೆಯನ್ನು ದಾಟುವುದರಿಂದ ಚೀನಾದ ಪ್ರತ್ಯಕ್ಷ ಪ್ರವೇಶಕ್ಕೆ ಅನುವಾಗುವುದೆಂದು ಅದು ಎಚ್ಚರಿಸಿತು. ಆದರೆ ಈ ಸಲಹೆ ಯಾರಿಗೂ ಪ್ರಿಯವಾಗಲಿಲ್ಲ. ಯುದ್ಧಾಹತವಾದ ಆ ನಾಡಿನಲ್ಲಿ ಕೊನೆಗಾದರೂ ಶಾಂತಿ ಸ್ಥಾಪನೆ ಮಾಡಲು ನಮ್ಮ ಪ್ರತಿನಿಧಿಯು ರಾಷ್ಟ್ರ ಸಂಘದ ಮುಂದಿಟ್ಟ ಸೂಚನೆಗಳನ್ನೇ ತುಸು ಪರಿಷ್ಕರಿಸಿ ಸ್ವೀಕರಿಸಬೇಕಾಯಿತು. ಅಲ್ಲದೆ ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷತೆಯ ಗೌರವವನ್ನು ಭಾರತಕ್ಕೇ ಒಪ್ಪಿಸಲಾಯಿತು ಈ ಕಠಿಣ ಹೊಣೆಗಾರಿಕೆಯನ್ನು ಸಮರ್ಥ

(೨೩ನೇ ಪುಟ ನೋಡಿರಿ)

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
100 ಯೂ 500ಕ್ಕೆ ಅತೀ ರಿಯಾಯತಿ ಇದೆ.

ಉತ್ತಮ ಕಾಗದದ, ದಪ್ಪನಾದ ಹೊರಕವಚದ, ಎಲ್ಲಾ ತರದ
ಎಕ್ಸ್‌ರ್ ಸೈಜ್
ಪುಸ್ತಕಗಳು, ಕೋರ್ಟು ಮತ್ತು ಸೊಸೈಟೀ ಫೋರ್ಮುಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಏಲಂ ನೋಟೀಸು

ಶ್ರೀ ಶೀರೂರು ಮಠದ ಬಾಬ್ತು ಶೀರೂರು ಗ್ರಾಮದ ಸರ್ವೆ ನಂಬ್ರ 172–3ನೇ ಸ್ಥಳದಲ್ಲಿರುವ ಕಿರಾಬು ಜೋಗಿ ವಗೈರೆ ಮರಮಟ್ಟುಗಳನ್ನು ತಾ.30–8–54 ನೇ ಅಪರಾಹ್ನ ಘಂಟೆ 3ರಿಂದ 5ರ ವರೆಗೆ ಸದ್ರಿ ಮಠದ ಉಡ್ಪಿ ಆಫೀಸಿನಲ್ಲಿ ಏಲಂ ಮಾಡಲಾಗುವುದು. ಉಮೇದುವಾರರು ಸಮಯಕ್ಕೆ ಸರಿಯಾಗಿ ಬರಬಹುದೆಂದು ಈ ಮೂಲಕ ತಿಳಿಸಲಾಗುತ್ತದೆ.

ಕಾ. ಡಿಸ ಪಿಸ್ತೀರ್ಣ ಎ. ಸಿ. 9—95

K. Ramachandra Upadya
Manager.
Shirur Mutt

Udipi, 7-8-54.

ದಿ ಉಡುಪಿ ಇಲೆಕ್ಟ್ರಿಕ್ ಸ್ಟೋರ್ಸ್,

ಚರ್ಚ್ ರೋಡು, ಉಡುಪಿ.

ಇಲೆಕ್ಟ್ರಿಕ್ ವಯರಿಂಗ್, ಇಲೆಕ್ಟ್ರಿಕ್ ಮೋಟಾರ್ ಮತ್ತು ಪಂಪು ಸೆಟ್ಟುಗಳನ್ನು ಹಾಕುವ ಕಾರ್ಯಗಳನ್ನೆಲ್ಲಾ ನಾಜೂಕಾಗಿ ಮಿತದರದಲ್ಲಿ ಮಾಡಿ ಕೊಡಲಾಗುವುದು. ವಿಚಾರಿಸಿ:

THE UDIPI ELECTRIC STORES,
CHURCH ROAD, UDIPI, S. K.

ಮಂದಾರ್ತಿ
ಶ್ರೀ ದುರ್ಗಾಪರಮೇಶ್ವರಿ ದೇವಸ್ಥಾನ,
ಮಂದಾರ್ತಿ, ದಕ್ಷಿಣ ಕನ್ನಡ.

ಜಿಲ್ಲೆಯ ಅತಿ ಪುರಾತನವಾದ ಉತ್ತು ಪ್ರಸಿದ್ಧಿಯ ಈ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯವು ಈಗಾಗಲೇ ಪ್ರಾರಂಭವಾಗಿದ್ದು ಸುಮಾರು ನಲ್ವತ್ತು ಸಾವಿರ ರೂಪಾಯಿ ವೆಚ್ಚವಾಗಿದೆ. ಪೂರ್ತಿಯಾಗಲು ಇನ್ನೂ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಬೇಕಾಗಬಹುದು. ಆಸ್ತಿಕ ಮಹಾಶಯರು ಈ ಜೀರ್ಣೋದ್ಧಾರ ಕಾರ್ಯಕ್ಕೆ ಕೊಡುಗೈಯ ಸಹಾಯ ಮಾಡಿ ಶ್ರೀ ದೇವಿಯ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸಲಾಗುತ್ತದೆ. ವಂತಿಗೆ ಹಣವನ್ನು ಈ ಕೆಳಗಿನ ವಿಳಾಸಕ್ಕೆ ಕಳುಹಿಸಬಹುದು.

N. R. BOLAR,
Executive Officer.

ಪ್ರಜಾಪ್ರಭುತ್ವದಲ್ಲಿ ಕರ್ತವ್ಯಜ್ಞಾನದ ಮಹತ್ವ

ಪಾಶ್ಚಾತ್ಯ ರಾಜನೀತಿಯನ್ನು ಅನುಸರಿಸಿರುವ ನಮ್ಮ ವ್ಯಕ್ತಿ ನಿಷ್ಠ ಪ್ರಜಾಪ್ರಭುತ್ವದಲ್ಲಿ ಎಲ್ಲರೂ ಸಜ್ಜನರೆಂಬ ಭ್ರಾಮಕ ಕಲ್ಪನೆಯನ್ನು ಕಾಣುತ್ತೇವೆ. ಮತಾಧಿಕಾರ ಸಂಪನ್ನರಾದ ನಾಗರಿಕರಲ್ಲಿ ತಮ್ಮ ನಿಜ ಕರ್ತವ್ಯದ ಪರಿಜ್ಞಾನವಿರುವವರು ವಿರಳ. ಧರ್ಮ ಪ್ರಭಾವಿತ ಸತ್ತೆಯಲ್ಲಿ ಈ ದೋಷ ಬಹು ಮಟ್ಟಿಗೆ ದೂರವಾಗುತ್ತದೆ.

ಸ್ವಾತಂತ್ರ್ಯ, ಸ್ವರಾಜ್ಯವೆಂದರೆ ನಮ್ಮ ರಾಷ್ಟ್ರೀಯ ಸಂಸ್ಕೃತಿಯನ್ನು ಪೋಷಿಸುವ ಸಾಧನವೆಂದು ಮಹಾತ್ಮಾ ಗಾಂಧೀಯವರೂ ಇತರ ಪ್ರಾಚೀನ ಅರ್ವಾಚೀನ ವಿಚಾರಕರೂ ಒಪ್ಪಿದ್ದಾರೆ. ಪರಂಪರಾನುಗತವಾಗಿ ಹರಿದು ಬಂದ ಸಾಂಸ್ಕೃತಿಕ, ಸಾಮಾಜಿಕ ಹಾಗು ಆಧ್ಯಾತ್ಮಿಕ ವಿಚಾರ ಪ್ರವಾಹಗಳನ್ನು ಮೂಲೆ ಗುಂಪು ಮಾಡಿ ಅಥವಾ ಉಪೇಕ್ಷಿಸಿ ನಾವೊಂದ ರಾಷ್ಟ್ರವನ್ನು ಕಟ್ಟುವುದು ಸಾಹಸವೇ ಆದೀತು. ಹೀಗೆ ಅಸ್ತಿತ್ವಕ್ಕೆ ಬಂದ ರಾಷ್ಟ್ರವು ಆ ಶಬ್ದದ ಮಹತಿಗೆ ಹೇಳಿಸಿದ ರೀತಿಯಲ್ಲಿ ಶಾಶ್ವತವಾಗಿ ಬಾಳುವುದು ದುಸ್ತರ. ನಮಗೆ ಪ್ರಗತಿಬೇಕು, ನೆಮ್ಮದಿ ಬೇಕು, ಸುಖ ಶಾಂತಿಯ ಜೀವನ ಬೇಕು—ನಿಜ. ಆದರೆ ಇವೆಲ್ಲವನ್ನು ನಾವು ಸಾಧಿಸುವ ಮಾರ್ಗದ ಕಲ್ಪನೆಯನ್ನು ಮೊದಲಿಗೆ ಮಾಡಿಕೊಂಡಿರದಿದ್ದರೆ, ಆಶೆಯನ್ನಷ್ಟೇ ವ್ಯಕ್ತಪಡಿಸುವ ಘೋಷಣೆಗಳಿಗೆ ನಮ್ಮ ಪ್ರಯತ್ನ ಸೀಮಿತವಿದ್ದರೆ, ಮುನ್ನಡೆಯ ಆದರ್ಶ ಕೈಗೂಡಲಾರದು.

ಸ್ವಯಂನಿರ್ಣಯಾಧಿಕಾರವನ್ನೆ ನಾವು ಸ್ವಾತಂತ್ರ್ಯದ ಪ್ರಥಮ ಲಕ್ಷಣವೆಂದು ಭಾವಿಸಿದ್ದೇವೆ. ಈ ನಿರ್ಣಯ ಯಾರ ಮೇಲೆ ಬಂಧನಕಾರಿಯಾಗುತ್ತದೆ ಎಂಬ ವಿಷಯದಲ್ಲಿ ಮಾತ್ರ ನಾವಿನ್ನೂ ನಿಶ್ಚಿತವಾದ ನಿರ್ಣಯಕ್ಕೆ ಬರುವುದು ಸಾಧ್ಯವಾಗಿಲ್ಲ. ವ್ಯಕ್ತಿಯ ಮೇಲೆ ಈ ಅಧಿಕಾರವು ನಡೆಸಲ್ಪಡುವುದೋ ಅಥವಾ ಸಮಾಜದ ಮೇಲೋ ಎಂಬುದು ವಿವಾದಾತ್ಮಕ ವಿಷಯವಾಗಿಯೇ ಉಳಿದಿರುತ್ತದೆ. ಪ್ರಾಚೀನ ಭಾರತೀಯ ಪರಂಪರೆಯತ್ತ ದೃಷ್ಟಿಕ್ಷೇಪ ಮಾಡಿದರೆ, ಸಮಾಜದ ರೂಢಿ ಸಂಪ್ರದಾಯಗಳೇ ವ್ಯಕ್ತಿಗೆ ಪ್ರಿಯವಾದವು ವ್ಯಕ್ತಗೊಳ್ಳುತ್ತವೆ. ಕುಲಾಚಾರವನ್ನು ನಿರ್ದೇಶಿಸುವ ಕುಲಪತಿಯು ತನ್ನ ವಂಶಜರಿಗೆ ಯೋಗ್ಯ ಮಾರ್ಗದರ್ಶನವನ್ನು ಮಾಡುತಿದ್ದನು; ಅವರ ಒಟ್ಟು ಕ್ಷೇಮದ ಚಿಂತನೆಯಿಂದ ಸಂಪ್ರದಾಯಗಳನ್ನು ಹಾಕಿ ಕೊಡುತಿದ್ದನು. ಆಗಿನ ಮಾನವ ನಾಗರಿಕತೆಯು ಇಂದಿನಷ್ಟು ಸಂಕೀರ್ಣವಾಗಿದ್ದಿಲ್ಲ; ಜಟಿಲವೂ ಇರಲಿಲ್ಲ. ಧರ್ಮಾಚರಣೆಯೇ ಲೋಕತಾರಕವಾದುದೆಂಬ ನಂಬಿಕೆಯೂ ದೇವರಲ್ಲಿ ದೃಢವಾದ ಭಕ್ತಿ ವಿಶ್ವಾಸಗಳೂ ನಾಗರಿಕತೆಯ ಸಲ್ಲಕ್ಷಣಗಳಾಗಿದ್ದವು. ವ್ಯಕ್ತಿಯ ಶ್ರೇಯಸ್ಸು ಹಾಗು ಸಮಾಜದ ವಿಕಾಸವು ಈ ಸೂತ್ರ ಬಂಧಕ್ಕೆ ಒಳಪಟ್ಟು ಅಂದು ನಡೆಯುತಿದ್ದುವನ್ನು ನಾವು ಪರಿಕಿಸಬಹುದು.

ಆಗಲೂ ಪ್ರಜಾಪ್ರಭುತ್ವವು ಅಸ್ತಿತ್ವದಲ್ಲಿದ್ದಂತೆ ಕಂಡು ಬರುತ್ತದೆ—ಪ್ರಾಚೀನ ರಾಜ್ಯ ಶಾಸ್ತ್ರದಲ್ಲಿ ಉಕ್ತವಾದ ಪ್ರಸಂಗವೊಂದು ಸತ್ಪ್ರಜೆಗಳಿಗೆ ಆಡಳಿತದಲ್ಲಿ ದೊರಕುತಿದ್ದ ಮನ್ನಣೆಯನ್ನು ಸ್ಪಷ್ಟವಾಗಿಯೇ ನಿರ್ದೇಶಿಸುತ್ತದೆ. ವೇನನೆಂಬ ದುಷ್ಟ ರಾಜನನ್ನು ಸಿಂಹಾಸನದಿಂದ ತಳ್ಳಲು ಋಷಿ ಮುನಿಗಳು ಕಟಿಬದ್ಧರಾದ ವಿಸ್ಮಯಕರ ಘಟನೆಯು ಇಂದಿನ ಪ್ರಜಾಪ್ರಭುತ್ವದ ಪದ್ಧತಿಯು ಕಲ್ಪನೆಗೆ ಬಹಳಷ್ಟು ಸಮೀಪಗತವಿರುವಂತೆ ಭಾಸವಾಗುತ್ತದೆ. ಆದರೆ ಅಂದು ಮತ್ತು ಇಂದಿನ ಪ್ರಜಾಪ್ರಭುತ್ವದಲ್ಲಿ ಎದ್ದು ಕಾಣುವ ಲಕ್ಷಣವೊಂದಿದೆ — ಋಷಿ ಮುನಿಗಳೇ ಮುಂತಾದ ಸಾತ್ವಿಕರ, ಸಜ್ಜನರ, ಧರ್ಮಾನುಯಾಯಿಗಳಾದ ನಾಗರಿಕರ ಮಾತು ಸರಕಾರದ ಮೇಲೆ ನಡೆಯುವುದು ಅಂದಿನ ಸಂಪ್ರದಾಯ. ದುಷ್ಟರೂ ದುರ್ಜನರೂ ಮೂಢರೂ ಅವಿವೇಕಿಗಳೂ ಹಿಂಸಕರೂ ಇಂದ್ರಿಯಲೋಲುಪರೂ ಈ "ಅಧಿಕಾರ"ವನ್ನು ಹೊಂದಿರಲಿಲ್ಲ. ಆದರೆ ಇಂದಿನ ದಿನಮಾನದಲ್ಲಿ ೨೧ ವರ್ಷ ವಯಸ್ಸಾಗುವುದೇ ತಡ, ವ್ಯಕ್ತಿಯು ನಾಗರಿಕ ಅಧಿಕಾರವನ್ನು ಪಡೆಯುತ್ತಾನೆ; ಮತ್ತು ಅವನ ಅಭಿಪ್ರಾಯಗಳಿಗೂ ವಿಚಾರಕ್ಕೂ ಬೇಡಿಕೆಗಳಿಗೂ ಬೆಲೆ ಬಂದು ಬಿಡುತ್ತದೆ.

ಎಲ್ಲರೂ ಸಜ್ಜನರು ಎಂಬ ಘಾತಕವಾದ ನಿರ್ಣಯಕ್ಕೆ ಬಂದಿರುವುದೇ ಇಂದಿನ ಪ್ರಜಾಪ್ರಭುತ್ವ ಪದ್ಧತಿಯಲ್ಲಿರುವ ಮುಖ್ಯ ದೋಷವೆಂದು ಹೇಳಬಹುದು. ಇದೇಕೆ ಹೀಗಾಯಿತು? ನಾವು ಪಾಶ್ಚಾತ್ಯ ರಾಜ್ಯ ಪದ್ಧತಿಯನ್ನು ಇದ್ದುದಿದ್ದಂತೆ ಸ್ವೀಕರಿಸಿದುದರಿಂದ ಈ ಪ್ರಮಾದವು ಘಟಿಸಿತೆಂದು ಹೇಳಬಹುದು. ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯದ ಆಂದೋಲನಕ್ಕೆ ಪ್ರೋತ್ಸಾಹ ದೊರೆತದ್ದೇ ಪಾಶ್ಚಾತ್ಯ ಶಿಕ್ಷಣವನ್ನು ಹೊಂದಿದ ಬುದ್ಧಿವಂತರಿಂದ—ಎಂಬುದನ್ನು ನೆನೆದರೆ, ಈಗಿನ ನಮ್ಮ ಆಡಳಿತ ಪದ್ಧತಿಯು ಅದರ ಸ್ವಾಭಾವಿಕ ಪರಿಣಾಮವೇ ಆಗಿದೆಯೆಂದು ಸ್ಪಷ್ಟವಾಗುತ್ತದೆ. ವ್ಯಕ್ತಿಧರ್ಮಕ್ಕೆ, ನಾಗರಿಕರ ಕರ್ತವ್ಯ ಪಾರಾಯಣತೆಗೆ ಕೊಡುತಿದ್ದ ಪ್ರಾಧಾನ್ಯವೂ ಮಹತ್ವವೂ ಔದ್ಯೋಗಿಕ ವಿಪ್ಲವದ ದೆಸೆಯಿಂದಾಗಿ ದಿನೇ ದಿನೇ ಕಡಿಮೆಯಾಗತೊಡಗಿತು. ಹಿಂದಿನ ಸಂಪ್ರದಾಯಗಳು ಪ್ರಯೋಜನವಿಲ್ಲವೆಂಬ ಜುಗುಪ್ಸೆಯೂ ತಿರಸ್ಕಾರವೂ ತಲೆದೋರಿದ ಮತ್ತು ಸಾಮಾಜಿಕ ವಾತಾವರಣವು ಬದಲ್ಗೊಂಡ ಗಳಿಗೆಯಲ್ಲಿ ನವೀನ ಆವರಣಕ್ಕೆ ಒಪ್ಪುವ ಸಿದ್ಧಾಂತವೊಂದನ್ನು ಹುಡುಕುವ ಪ್ರಮೇಯ ಬಂದೊದಗಿತು. ವ್ಯಕ್ತಿಯಲ್ಲಿ ಸುಪ್ತವಿರುವ ದುಷ್ಟ ಬುದ್ಧಿಗಳಿಗೆಯೇ ಔದ್ಯೋಗಿಕ ವಿಪ್ಲವವು ಪ್ರತ್ಯಕ್ಷ ಪ್ರತ್ಯಕ್ಷ ವಿಧಾನಗಳಿಂದ ಪ್ರೋತ್ಸಾಹ ಕೊಟ್ಟುದರಿಂದ ಧರ್ಮನಿಷ್ಠೆ ಹಾಗು ಕರ್ತವ್ಯಗಳು ಗೊಡ್ಡು ಸಂಪ್ರದಾಯಗಳಾಗಿ ಹೀಗಳೆಯಲ್ಪಟ್ಟು, ಮನುಷ್ಯನ ಹಕ್ಕು ಬಾಧ್ಯತೆಗಳನ್ನು ವರ್ಣಿಸುವ ದೊಡ್ಡದೊಂದು ಪಟ್ಟಿಯು ಅದರ ಸ್ಥಾನವನ್ನು ಆಕ್ರಮಿಸಿತು.

ನಮ್ಮ ಘಟನೆಯಲ್ಲಿರುವ ನಾಗರಿಕನ ಮೂಲ ಭೂತ ಹಕ್ಕುಗಳ ಕಲಮಿಗೆ ಇದೇ ನಿಜವಾದ ತಳಹದಿಯಾಗಿದೆ - ಹಳೆಯವರ ಸ್ಥಾನದಲ್ಲಿ ಹೊಸತನ್ನು ಪ್ರತಿಷ್ಠೆಪಿಸುವ ಹವ್ಯಾಸದಲ್ಲಿ ಹೊಸ ರೀತಿ ನೀತಿಗಳ ಸಾಧಕ ಬಾಧಕ ಅಂಶಗಳನ್ನು ವಿಮರ್ಶಿಸುವ ಗೊಡವೆಗೇನೂ ನಾವು ಹೋಗಲಿಲ್ಲ—ಅಷ್ಟು ಅವಕಾಶವೂ ಇರಲಿಲ್ಲವೆಂದು ಕಾಣುತ್ತದೆ. ತಿಲಕ, ಗೋಖಲೆ, ಗಾಂಧೀಜಿಯಂಥವರು ಭಾರತೀಯರ ಸಾಮಾಜಿಕ ಜೀವನದಲ್ಲಿಯೂ ಸಂಸ್ಕೃತಿಯಲ್ಲಿಯೂ ಧರ್ಮವು ಮಹತ್ವದ ಪಾತ್ರವನ್ನು ವಹಿಸುತ್ತದೆಯೆಂದು ವ್ಯಕ್ತಿಸಿ ಮನಗಂಡಿದ್ದರು. ಆದರೆ ಭಾರತೀಯರ ವ್ಯಕ್ತಿತ್ವವನ್ನೆ ಸಮೂಲ ನಾಶಮಾಡಿದ ಬ್ರಿಟಿಷರ ಆಳಿಕೆಯಲ್ಲಿ ಎಲ್ಲಿಯೋ ಬೀಜ ರೂಪದಲ್ಲಿ ಮಾತ್ರ ಉಳಿದಿರಬಹುದಾದ ಪ್ರಾಚೀನ ಸಂಸ್ಕೃತಿಯ ಕಿಡಿಯನ್ನು ಹೊತ್ತಿಸಲು ತಮ್ಮ ಮುಂದಿದ್ದ ಸಮಯವು ಸಾಲದೆಂದು ಅವರು ಭಾವಿಸಿದರು. ಎಂತಲೇ ಮೊದಲು ಸ್ವಾತಂತ್ರ್ಯ; ಹಿಂದಿನಿಂದ ನವಭಾರತದ ನಿರ್ಮಾಣ ಕಾರ್ಯವೆಂದು ಅವರು ಸಾರಿದರು. ಇಂದು ಸ್ವಾತಂತ್ರ್ಯವನ್ನೇನೊ ಅನುಭವಿಸುತ್ತಿದ್ದೇವೆ; ಆದರೆ ಮುಂದಿನ ಗುರಿಯ ಗತಿಯೇನು?

ಒಳ್ಳೆಯದನ್ನು ಕೆಟ್ಟದರಿಂದ ಪ್ರತ್ಯೇಕವಾಗಿ ಗುರುತಿಸಬಲ್ಲ, ಇವೆರಡರ ನಡುವೆ ವ್ಯತ್ಯಾಸವನ್ನು ಕಂಡು ಹಿಡಿಯಬಲ್ಲ ಯೋಗ್ಯತೆಯನ್ನೆ ಧರ್ಮಜ್ಞಾನವೆಂಬುದಾಗಿ ಸಾಮಾನ್ಯವಾಗಿ ಗ್ರಹಿಸಬಹುದು. ಪ್ರಾಚೀನ ಭಾರತದಲ್ಲಿ ಧರ್ಮದ ಈ ವ್ಯಾಖ್ಯೆಯ ಮೇಲೆಯೇ ರಾಜ್ಯ ಶಾಸ್ತ್ರವು ಬೆಳೆದಂತೆ ಭಾಸವಾಗುತ್ತದೆ. ಆದರೆ ಒಳ್ಳೆಯವರನ್ನು ಕೆಟ್ಟವರಿಂದ ಹಾಗು ಹಿತವನ್ನು ಅಹಿತದಿಂದ ಬೇರ್ಪಡಿಸುವ ಕೌಶಲ್ಯ ಹಾಗು ಜ್ಞಾನಸಂಪತ್ತು ಕೆಲವೇ ಜನರಿಗೆ ಮಾತ್ರ ಇರುತ್ತದೆ. ಮನುಷ್ಯನ ಹಕ್ಕುಗಳ ಪಟ್ಟಿಯನ್ನು ಮುಂದೆ ಮಾಡಿ ನಾವು ಈ ಅಪೂರ್ವ ಶಕ್ತಿಯನ್ನು ಸಂಪಾದಿಸಲು ಸಾಧ್ಯವಾಗುವುದಿಲ್ಲ - ಇದಕ್ಕೆ ಆಚಾರ ಸಂಸ್ಕಾರ ಬೇಕು; ಚೈತನ್ಯ ಬೇಕು; ಪ್ರತಿಭೆಯೊಡನೆ ದೈವೀಕೃಪೆಯೂ ಬೇಕು. ಇಂತಹ ಗುಣಭರಿತರಾದ ಸಜ್ಜನರು ವಿರಳವಾಗಿಯೇ ಸಮಾಜದಲ್ಲಿ ಸಿಗುತ್ತಾರೆ—ಅವರನ್ನು ಗುರುತಿಸಿ, ಮನ್ನಿಸುವ ಪರಿಪಾಟವನ್ನು ತೊಡಗಿದರೆ ಮಾತ್ರ ಸಮಾಜ ವಿಕಾಸ ಕಾರ್ಯ ಸುಗಮವಾದೀತು. ಹಿಂದೆ ಗ್ರಾಮದ ಪಂಚಾಯತದಾರರನ್ನು ಈ ಯೋಗ್ಯತೆಯ ಮೇಲಿಂದಲೇ ಚುನಾಯಿಸುತಿದ್ದರು. ಇಂದು ಸಜ್ಜನರ ವರ್ಚಸ್ಸು ಕುಗ್ಗಿಹೋಗಿದೆ; ದುರ್ಜನರ ಪ್ರಭಾವವೇ ವಿಪರೀತವಾಗಿದೆ. ದುರ್ಜನರು ಹಿಂದೆಯೂ ಇದ್ದರು; ಆದರೆ ಅವರಿಗೆ ಪ್ರೋತ್ಸಾಹ ಸಿಗುತ್ತಿರಲಿಲ್ಲ. ಇಂದು ಅಂತಹ ಪ್ರೋತ್ಸಾಹವು ಸ್ವಾತಂತ್ರ್ಯ, ಸಮಾನತೆ ಹಾಗು ಹಕ್ಕು ಬಾಧ್ಯತೆಗಳ ಹೆಸರಿನಲ್ಲಿ ದೊರಕುತ್ತಿರುವುದನ್ನು ನೋಡುತ್ತೇವೆ

ಇದನ್ನೆ ನಾವು ದೋಷದ ಮೂಲವೆಂದು ಹೇಳುತಿದ್ದೇವೆ— ಮಹಾತ್ಮಾ

[...ನೇ ಪುಟ ನೋಡಿರಿ]

ಉಡುಪಿಗೆ ಬಂದಾಗ ಯುವಕ, ಯುವತಿಯರಿಗೆ ಮೆಚ್ಚಿಗೆಯಾಗುವ ಅತ್ಯಾಧುನಿಕವಾದ ಕೈಗಡಿಯಾರಗಳು ಎಲ್ಲಿ ಸಿಗುತ್ತವೆ ಒಲ್ಲಿರಾ?



ಶ್ರೀ ಕೃಷ್ಣಾ ವಾಚ್ ವರ್ಕ್ಸ್,

ಸಂತೆಕಟ್ಟೆ, ಉಡುಪಿ.

ಅತೀ ಅಗ್ಗ ದರದಲ್ಲಿ ಗ್ರಾಮಫೋನ್ ಸಾಮಗ್ರಿಗಳು ಮತ್ತು ಕನ್ನಡಕಗಳು ದೊರೆಯುತ್ತವೆ.
ಗ್ಯಾರಂಟಿಯಾಗಿ ರಿಪೇರಿ ವಗೈರೆಗಳನ್ನೂ ಶೀಘ್ರದಲ್ಲಿ ಮಾಡಿಕೊಡಲಾಗುವುದು.

SRI KRISHNA WATCH WORKS,
Santhekatte, **UDIPI.**

ಚಿನ್ನದ ಆಭರಣಗಳು!
ಅತ್ಯಾಧುನಿಕ ರೀತಿಯ ನಾಜೂಕಾದ ಚಿನ್ನ ಬೆಳ್ಳಿಯ ಆಭರಣಗಳು! ಗ್ರಾಹಕರಿಗೆ ತೃಪ್ತಿಯಾಗುವ ಮಾದರಿಯಲ್ಲಿ ಒಡವೆಗಳನ್ನು ನಾಜೂಕಾಗಿಯೂ ಶೀಘ್ರವಾಗಿಯೂ ತಯಾರಿಸಿ ಕೊಡಲಾಗುವುದು.

20 ವರ್ಷಗಳ ಪರಿಪಕ್ವ ಅನುಭವ

ಎನ್. ಜಿ. ಗೋಪಾಲಕೃಷ್ಣ ಶೇಟ್,

ಜ್ಯುವೆಲ್ಲರ್, ನವಯುಗ ಪ್ರೆಸ್ಸಿನ ಎದುರು, ಸಂತೆಕಟ್ಟೆ, ಉಡುಪಿ.

N. G. GOPALKRISHNA SHET,
Jeweller, Opposite Navayuga Press, SANTHEKATTE, **UDIPI.**

ನ ವ ಯು ಗ

ಉಡುಪಿ, ಗುರುವಾರ ೧೨-೮-'೫೪

ದುಡಿಮೆಯೇ ಪೂಜೆ

ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟದ ಮಜಲೊಂದನ್ನು ಮುಟ್ಟಿದ ದಿನವೇ ಆಗೋಸ್ತು ೧೫—ಮುಂದಿನ ಆದಿತ್ಯವಾರ ನಾವು ಸಂಭ್ರಮದಿಂದ ಈ ಉತ್ಸವವನ್ನು ಆಚರಿಸುತ್ತೇವೆ. ಆಂದೋಲನದಲ್ಲಿ ಅತ್ಯುತ್ಸಾಹದಿಂದ ಭಾಗ ವಹಿಸಿ ಭಾರತ ಮಾತೆಯನ್ನು ಪರಕೀಯ ಆಡಳಿತೆಯ ಬಂಧನದಿಂದ ಮುಕ್ತಮಾಡಲು ಪ್ರಾಣವನ್ನು ಬಲಿದಾನವಾಗಿ ನೀಡಿದ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇವೆ. ಅವರು ರಕ್ತ ಧಾರೆಯನ್ನು ಸುರಿದು ನಮಗಾಗಿ, ನಮ್ಮ ಮುಂದಿನ ಪೀಳಿಗೆಯವರಿಗಾಗಿ, ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ರಕ್ಷಿಸಲು ನಾವೂ ರಕ್ತ ಬಸಿಯಲು ಸಿದ್ಧರೆಂದು ಪ್ರತಿಜ್ಞೆ ಮಾಡುತ್ತೇವೆ ಆದರೆ ಇಷ್ಟರಿಂದಲೇ ನಮ್ಮ ಅಭ್ಯುದಯವು ಸಾಧಿಸಲಾರದೆಂದು ಇಲ್ಲಿ ಸೂಚಿಸುವುದು ಸೂಕ್ತ—ರಕ್ತ ಧಾರೆಗಿಂತಲೂ ಹೆಚ್ಚಾಗಿ ಬೆವರು ಸುರಿಸುವ ಆವಶ್ಯಕತೆಯು ಸ್ವಾತಂತ್ರ್ಯೋತ್ತರದಲ್ಲಿ ಬಹಳಷ್ಟು ಕಂಡು ಬರುತ್ತದೆ. ಪರಕೀಯರ ಆಕ್ರಮಣ ಅಥವಾ ದಾಳಿಯ ಪ್ರಸಂಗಗಳು ಬಂದಾಗ ನಾವು ರಕ್ತ ಸುರಿದು ಹೋರಾಡಲು ಸಿದ್ಧರಾಗಬೇಕಾದೀತು, ನಿಜ. ಆದರೆ ಭಾರತೀಯರ ಪಾಲಿಗೆ ಅಂತಹ ದಿನಗಳು ನಿಕಟ ಭವಿಷ್ಯದಲ್ಲಿ ಬರಲಾರವೆಂದೇ ಹೇಳಬಹುದು. ಏಕೆಂದರೆ ಇಂತಹ ಆಕ್ರಮಣ ಪ್ರವೃತ್ತಿಗೆ ಜಗತ್ತಿನ ಯಾವ ಕಡೆಯಲ್ಲೂ ಪ್ರೋತ್ಸಾಹವು ದೊರಕುವುದಿಲ್ಲ—ರಾಷ್ಟ್ರೀಯ ಭಾವನೆಯನ್ನು ಸಾಮ್ರಾಜ್ಯಶಾಹಿ ಮನೋವೃತ್ತಿಯವರೂ ಮನ್ನಿಸಬೇಕಾದ ಕಾಲವು ಇದು ಬಂದಿದ್ದು, ಸ್ವತಂತ್ರ ರಾಷ್ಟ್ರಗಳನ್ನು ಸೈನ್ಯ ಸಹಾಯದಿಂದ ತಮ್ಮ ಮುಷ್ಟಿಯೊಳಗೆ ಸೇರಿಸಿಕೊಳ್ಳುವ ದಾರ್ಷ್ಟ್ಯಕ್ಕೂ ಔದ್ಧತ್ಯಕ್ಕೂ ಮನಸ್ಸು ಮಾಡುವುದು ಗಂಡಾಂತರವೆಂದು ಎಲ್ಲರ ತಿಳುವಳಿಕೆಗೂ ಬಂದಿರುವುದು. ಆದುದರಿಂದ ಭಾರತ ಭೂಮಿಯ ಮೇಲೆ ಹೊರಗಿನವರು ಸೈನ್ಯ ಹಾಗು ಶಸ್ತ್ರಾಸ್ತ್ರ ಸಜ್ಜಿತರಾಗಿ ಮುನ್ನುಗ್ಗಿಯಾರೆಂದು ನಾವು ಭಾವಿಸುವುದು ಈಗ ಅಪ್ರಸ್ತುತ. ಸ್ವಾತಂತ್ರ್ಯದ ಏಳನೇ ವರ್ಷದಲ್ಲಿ ಪಾಕಿಸ್ತಾನವು ಅಮೇರಿಕೆಯೊಡನೆ ಸೈನಿಕ ಒಪ್ಪಂದವನ್ನು ಮಾಡಿಕೊಂಡಿದೆ; ಮತ್ತು ಅದರನ್ವಯ ಅಪಾರ ಯುದ್ಧ ಸಾಮಗ್ರಿಗಳನ್ನು ಅದು ತರಿಸಿಕೊಳ್ಳುವುದರಲ್ಲಿ ತನ್ಮಯವಾಗಿದೆಯೆಂಬುದು ನಿಜವಿದ್ದರೂ—ಭಾರತದ ವಿರುದ್ಧ ಒಳಸಂಚು ಹೂಡುವ ಎದೆಗಾರಿಕೆಯನ್ನದು ಮಾಡುವಂತಿಲ್ಲ. ಏಕೆಂದರೆ ಅಮೇರಿಕ ಹಾಗು ಪಾಕಿಸ್ತಾನಗಳ ಮನೋಭಿಪ್ರಾಯ ಕಲುಷಿತವಿದ್ದ ಪಕ್ಷದಲ್ಲಿ ಜಗತ್ತು ಅವೆರಡೂ ರಾಷ್ಟ್ರಗಳ ಕೈಬಿಡುವುದು ನಿಶ್ಚಯ. ಆಕಸ್ಮಿಕವಾಗಿ ಏನಾದರೂ ಅನರ್ಥ ಸಂಭವಿಸಿದರೆ ನಮ್ಮ ಸೈನ್ಯಗಳು ತತ್ಕಾಲ ಅವನ್ನು ಪ್ರತಿಭಟಿಸಲು ಸಜ್ಜುಗೊಂಡೇ ನಿಂತಿರುವುದರಿಂದ ಸಾಮಾನ್ಯ ನಾಗರಿಕರಮೇಲೆ ಸೈನಿಕಯುದ್ಧದ ಭೂತ ಸವಾರಿ ಮಾಡಬೇಕಾಗಿಲ್ಲ. ಅವರು ಹೂಡಬೇಕಾದ ಯುದ್ಧದ ಸ್ವರೂಪವೇ ಬೇರೆಯಾಗಿದೆ- ಮೊದಲೇ ಸೂಚಿಸಿದಂತೆ ರಕ್ತ ಧಾರೆಯನ್ನಲ್ಲ, ಬೆವರ ಹನಿಯನ್ನು ಸುರಿಸುವ ತತ್ವವನ್ನು ಸಾಮಾನ್ಯ ನಾಗರಿಕರು ಸ್ವೇಚ್ಛೆಯಿಂದ ಸ್ವೀಕರಿಸಬೇಕು. ನವಭಾರತದ ನಿರ್ಮಾಣ ಕಾರ್ಯದಲ್ಲಿ ಪ್ರತಿಯೊಬ್ಬ ರಾಷ್ಟ್ರಿಕನೂ ತತ್ಪರತೆಯಿಂದ ಸಹಭಾಗಿಯಾಗಬೇಕು. ಅವನ ಸಹಕಾರ ದೊರೆಯುವುದಕ್ಕೆ ಅನುಕೂಲತೆಯನ್ನು ಸರಕಾರವೇ ಕಲ್ಪಿಸಿಕೊಟ್ಟಿರುವುದು. ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣಾ ಕಾರ್ಯ, ಭಾರತ ಸೇವಕ ಸಮಾಜ ಮುಂತಾದ ಸಂಘಟನೆಗಳ ಮೂಲಕ ಅವನು ಕ್ರಿಯಾತ್ಮಕ ರೀತಿಯಲ್ಲಿ ಭಾರತವನ್ನು ಮರಳಿ ಕಟ್ಟುವ ಕೆಲಸದಲ್ಲಿ ಪ್ರವೃತ್ತನಾಗುವಂತೆ ಸರಕಾರ ಉತ್ತೇಜನೆಯನ್ನು ಕೊಡುತ್ತದೆ. ಸ್ವಾತಂತ್ರ್ಯವು ರಾಜಕೀಯ ವ್ಯಾಪ್ತಿಯನ್ನಷ್ಟೇ ಪಡೆದಿಲ್ಲ— ಆರ್ಥಿಕ ಸ್ವಾತಂತ್ರ್ಯವು ಅಷ್ಟೇ ಮುಖ್ಯ; ಮುಂದೆ ಸಾಂಸ್ಕೃತಿಕ ಹಾಗು ಆಧ್ಯಾತ್ಮಿಕ ಮೆಟ್ಟಲುಗಳು ಬರುತ್ತವೆ. ಹಸಿವಿನ ಗೋಳಿನ ಮುಂದೆ ಸಂಗೀತದ ರಾಗಾಲಾಪನೆ ರುಚಿಸಲಾರದೆಂಬ ಮಾನವ ಸಹಜ ಸ್ವಭಾವವೇ ಆರ್ಥಿಕ ಪುನಾರಚನೆಗೆ ಪ್ರಾಶಸ್ತ್ಯವನ್ನು ಕೊಡಲು ನಮ್ಮ ಧುರೀಣರನ್ನೂ ನಮ್ಮನ್ನೂ ಒತ್ತಾಯಿಸಿರುವುದು ಪ್ರಧಾನ ಮಂತ್ರಿ ನೆಹರೂರವರೂ ಇತರ ಧುರೀಣರೂ ನಮಗೆ ಇದನ್ನೆ ತಿಳಿಸಿ ಹೇಳುತ್ತಿರುವರು ಈ ವರ್ಷ ಜನತೆಗೆ ನೀಡಿದ ಸಂದೇಶಗಳಲ್ಲೆಲ್ಲ ಅತ್ಯಂತ ಮಹತ್ವದ ಹಾಗು ಪವಿತ್ರವಾದ ವಾಕ್ಯವೆಂದರೆ "ಆರಾಮ್ ಹರಾಮ್ ಹೈ" ಎಂಬ ನೆಹರೂರ ಉದ್ಗಾರ: ವಿಶ್ರಾಂತಿಯು ಸರ್ವನಾಶವನ್ನು ತರುತ್ತದೆ ಎಂದಿದರ ಮಥಿತಾರ್ಥ. ನಮಗೆ ಸುಮ್ಮನೆ ಕುಳಿತಿರಲು ಬಿಡುವಿಲ್ಲ—ವಿಧಾಯಕ ಕಾರ್ಯಗಳಲ್ಲಿ ಮಗ್ನರಾಗಬೇಕಾದ ಆವಶ್ಯಕತೆ ಉಂಟು. ಸ್ವತಂತ್ರ ಭಾರತವು ಎಷ್ಟು ಉನ್ನತಿಯನ್ನು ಹೊಂದಿತೆಂದು ಕುತೂಹಲವಶರಾಗಿ ಕೇಳಲು ಅಥವಾ ನೋಡಲು ಬಂದವರಿಗೆ ರಾಷ್ಟ್ರಪತಿ ಭವನದ ವೈಭವವನ್ನು ತೋರಿಸಿದರೆ, ಅದರ ವರ್ಣನೆಯನ್ನು ಮಾಡಿದರೆ ತೃಪ್ತಿಯಾಗಲಿಕ್ಕಿಲ್ಲ. ರಾಜಮಾರ್ಗವನ್ನು ಬಿಟ್ಟು ಹಳ್ಳಿಯ ಕೊಂಪೆಯನ್ನು ಸಂದರ್ಶಿಸಿದಾಗ ಅಲ್ಲಿ ನೇಗಿಲು ಹಿಡಿದು ಉಳುತ್ತಿರುವ ಅರೆ ಬತ್ತಲೆ ಫಕೀರತನದ ಸಾಕಾರ ಮೂರ್ತಿಯಾದ ರೈತನ ಸ್ಥಿತಿಯೇ ಈ ಸಂದರ್ಶಕನನ್ನು ಹೆಚ್ಚು ಆಕರ್ಷಿಸುತ್ತದೆ; ರೈತನ ದಯನೀಯ ಸ್ಥಿತಿಯು ಮರುಕವನ್ನುಂಟು ಮಾಡುತ್ತದೆ. ಭಾರತದ ಪ್ರಗತಿಯ ನಿಜವಾದ ಚಿತ್ರವನ್ನು ಹಳ್ಳಿಗಳಲ್ಲಿ ಪ್ರವೇಶಿಸಿ ಅಂಕಿಸಬೇಕಾಗಲಿ, ದಿಲ್ಲಿಯ ಮಟ್ಟವನ್ನು ಕಂಡಲ್ಲವೆಂದು ನೆಹರೂರವರು ಡಾಲಹೌಸಿ ನಗರದಲ್ಲಿ ಕಳೆದವಾರ ಅಭಿಪ್ರಾಯಪಟ್ಟರು. ಶಂಖದಿಂದ ಬಂದದ್ದೇ ತೀರ್ಥ ಎಂಬ ಸಂಪ್ರದಾಯದಂತೆ ನೆಹರೂರವರ ಮಾತೇ ವೇದ ವಾಕ್ಯವೆಂದು ನಾವು ಪುನರುಚ್ಚರಿಸುತ್ತಿದ್ದೇವೆಂದು ಯಾರೂ ತಿಳಿದುಕೊಳ್ಳಲಾಗದು—ಎಲ್ಲ ವಿಚಾರಕರೂ ಎಲ್ಲ ಸುಧಾರಕರೂ ದುಡಿಮೆಯೇ ದೇವರ ಪೂಜೆ ಎನ್ನುತ್ತಾ ಜನಜೀವನ ಹಾಗು ಸಮಾಜದ ವಿಕಾಸ ಮಾರ್ಗವನ್ನು ರೂಪಿಸುತ್ತಿದ್ದರೆಂಬುದನ್ನು ನೆನೆಯಬೇಕು. ಅವರ ಉಪದೇಶವು ಸನಾತನ ಸತ್ಯದಿಂದ ಕೂಡಿರುವುದು—ಎಂತಲೇ ನಿತ್ಯ ನೂತನವೂ ಆಗಿರುವುದು. ಈ ಸತ್ಯವನ್ನು ಅದೆಷ್ಟು ಸಲ ಪುನರುಚ್ಚರಿಸಿದರೂ ಕಡಿಮೆಯೇ ಆಗುವುದು. ನೆಹರೂರವರು ಗಾಂಧೀಜಿಯ ಹಿರಿತನದಲ್ಲಿ ಇಪ್ಪತ್ತು ವರ್ಷಗಳಿಗಿಂತಲೂ ದೀರ್ಘಕಾಲ ಸಾಮಾಜಿಕ ಶಿಕ್ಷಣವನ್ನು ಹೊಂದಿದವರು. ಸೆರೆಮನೆಯ ಹೊರಗೆ ಅನೇಕ ರಚನಾತ್ಮಕ ಕಾರ್ಯಗಳನ್ನು ಮಾಡಿದರು. ನೆಹರೂರವರೇ ಹೇಳಿದಂತೆ ಗಾಂಧೀಜಿಯವರು ಎಲ್ಲರನ್ನೂ ಪ್ರೀತಿಸುತ್ತಿದ್ದರೂ ಜನರಿಂದ ಕೆಲಸ ಮಾಡಿಸುವ ವಿಷಯದಲ್ಲಿ ನಿರ್ದಯರಾಗಿಯೇ ವರ್ತಿಸುತ್ತಿದ್ದರು. ಆದರೆ ಇಂದಿನ ತರುಣ ತರುಣಿಯರು ಮೈಮುರಿದು ಕೆಲಸಮಾಡಲು ಬಯಸುವುದಿಲ್ಲ - ಹಿರಿಯರ ಮಾರ್ಗದರ್ಶನವೆಂದರೆ ಅವರಲ್ಲಿ ಜುಗುಪ್ಸೆ ಮೂಡುತ್ತದೆ ಕಾಲೇಜಿನ ಶಿಕ್ಷಣ ತಮ್ಮನ್ನು ಸುಸಂಸ್ಕೃತರನ್ನಾಗಿ, ನಾಗರಿಕರನ್ನಾಗಿ, ಸರ್ವಶಕ್ತಿಸಂಪನ್ನರಾಗಿ ಮಾಡಿದೆಯೆಂದು ಅವರೆಣಿಕೆಯುದ್ಧತೆ ಕಾಣುತ್ತದೆ. ಇದು ತಪ್ಪೆಂದು ಸ್ವಾತಂತ್ರ್ಯ ದಿನದಂದು ಅವರು ಅರಿತುಕೊಳ್ಳುವುದು ಅಪೇಕ್ಷಣೀಯ ಚೀನಾಂಬರ ಧರಿಸಿದ, ಸೌಂದರ್ಯವರ್ಧಕಗಳ ಸಹಾಯದಿಂದ ಸುಂದರಿಯರಾಗಿ ಕಾಣುವ ಸ್ತ್ರೀಯರೂ ಕೋಟು ನೆಕ್‌ಟೈ ಧರಿಸಿದ ಪುರುಷರೂ ಹಳ್ಳಿಗಳ ಕಡೆಗೆ ತಮ್ಮ ಪಾದ ಬೆಳೆಸಿ, ಗ್ರಾಮಾಂತರ ಪ್ರದೇಶದ ಏಳ್ಗೆಯನ್ನು ಸಾಧಿಸಬೇಕೆಂಬ ದೃಢ ಸಂಕಲ್ಪ ಕೈಗೊಳ್ಳಬೇಕೆಂದು ಸ್ವಾತಂತ್ರ್ಯ ದಿನೋತ್ಸವದ ಶುಭಸಂದರ್ಭದಲ್ಲಿ ನಾವು ವಿನಂತಿಸುತ್ತೇವೆ. ಈ ದಿಸೆಯಲ್ಲಿ ಈ ವರೆಗೆ ಮಾಡಿದ ಅಲ್ಪಸ್ವಲ್ಪ ಪ್ರಯತ್ನಗಳು ನೀಡಿದ ಸತ್ಫಲವನ್ನು ವಿಮರ್ಶಿಸಿದರೆ, ನಮ್ಮ ಉದ್ಧಾರದ ಮಾರ್ಗವೆಂದರೇನೆ ಇದೆಂದು ಮನವರಿಕೆಯಾಗುತ್ತದೆ. ಭಾರತವು ಎಷ್ಟರ ಮಟ್ಟಿಗೆ "ದುಡಿಮೆಯೇ ಪೂಜೆ" ಎಂಬ ವಿಧಾನವನ್ನು ಅನುಸರಿಸಿ ಪ್ರಗತಿ ಹೊಂದಿತೆಂಬುದರ ಸಾಮಾನ್ಯ ಕಲ್ಪನೆಯನ್ನೂ ನಮ್ಮಮುಂದಿನ ಮಾರ್ಗ ಹೇಗಿರಬೇಕೆಂಬ ಬಗ್ಗೆ ದಿಗ್ದರ್ಶನವನ್ನೂ ಈ ವಿಶೇಷ ಸಂಚಿಕೆಯಲ್ಲಿ ಪ್ರಕಟಗೊಂಡ ಲೇಖನಗಳ ಮನನವು ಮಾಡಿಕೊಟ್ಟೀತೆಂದು ನಾವು ನಂಬುತ್ತೇವೆ ಈ ಸಾಧನೆಗಳಿಂದ ಆತ್ಮವಿಶ್ವಾಸವನ್ನು ಗಳಿಸಿಕೊಂಡು ಪ್ರಗತಿ ಪಥದಲ್ಲಿ ಹೆಜ್ಜೆ ಮುಂದಿಟ್ಟು ಮುಂದಿನ ಸ್ವಾತಂತ್ರ್ಯದಿನೋತ್ಸವದ ಹೊತ್ತಿಗೆ ಇನ್ನೊಂದು ಮೆಟ್ಟಲನ್ನೇರಿ ನಿಲ್ಲುವುದು ನಮಗೆ ಶಕ್ಯವಾದೀತೆಂದೂ ಭಾವಿಸುತ್ತೇವೆ.

ಸ್ವವಿಷಯ

ಇಪ್ಪತ್ತನಾಲ್ಕು ಪುಟಗಳ ಸ್ವಾತಂತ್ರ್ಯದಿನೋತ್ಸವ ವಿಶೇಷ ಸಂಚಿಕೆಯನ್ನು ಕೊಡುವುದೆಂದಿದ್ದ ನಾವು ಅನಿವಾರ್ಯವಾಗಿ ಮೂವತ್ತೆರಡು ಪುಟಗಳ ಸಂಚಿಕೆಯನ್ನೇ ಹೊರಡಿಸ ಬೇಕಾಯಿತು. ಇದನ್ನು ಓದುಗರು ಗಮನಿಸುವರೆಂದು ನಂಬಿದ್ದೇವೆ. ನಮ್ಮೀ ಉದ್ಯಮದಲ್ಲಿ ಸಹಕರಿಸಿ ಅತಿಶಯವಾದ ಪ್ರೋತ್ಸಾಹವನ್ನಿತ್ತ ಜಾಹೀರಾತುದಾರರಿಗೂ ಲೇಖಕರಿಗೂ ಮುದ್ರಣಾಲಯದ ಕೆಲಸಗಾರರಿಗೂ ನಾವು ಕೃತಜ್ಞತೆ ಸೂಚಿಸುತ್ತೇವೆ.

ಭಾರತೀಯರ ಪಾಲಿಗೆ

ಆಗೋಸ್ತು ೧೫ನೇ ತಾರೀಕಿನ ಶುಭ ದಿನವನ್ನು ಸಂತೋಷದಿಂದಲೇ ಬರಮಾಡಿಕೊಳ್ಳುವ ರೀತಿಯಲ್ಲಿ ಕಳೆದ ಏಳು ವರ್ಷಗಳ ನಮ್ಮ ಸಾಧನೆಯು ಇರುತ್ತದೆ. ಕಲ್ಯಾಣ ರಾಷ್ಟ್ರವನ್ನು ಕಟ್ಟುವ ಧ್ಯೇಯಕ್ಕೆ ಚೆನ್ನಾಗಿ ಒಪ್ಪುವ ರೀತಿಯಲ್ಲಿ ನಮ್ಮ ಸರಕಾರದ ಹಾಗು ಸರಕಾರೇತರ ರೀತಿಯ ವಿಧಾಯಕ ಕಾರ್ಯಗಳು ಕೈಗೂಡಿರುತ್ತವೆ. ಸಂಪನ್ನ ಭಾರತದ ಅಂಗಾಂಗವನ್ನು ಪೋಷಿಸುವ ಈ ವಿವಿಧ ಕ್ಷೇತ್ರಗಳಲ್ಲಿ ಮುಖ್ಯವಾದ ಕೆಲವು ಸಂಗತಿಗಳನ್ನು ಈ ಕೆಳಗಿನಂತೆ ವಿವರಿಸಬಹುದು.

ಪುಷ್ಕಳ ಆಹಾರ ಧಾನ್ಯ

ಆಹಾರ ಮುಖದಲ್ಲಿ ನಾವು ಕಳೆದ ವರ್ಷ ದೃಢವಾದ ಹೆಜ್ಜೆಯೊಂದನ್ನು ಮುಂದಿಟ್ಟಿದ್ದೇವೆ. ೧೯೪೩ನೇ ಇಸವಿಯಲ್ಲಿ ಬಂಗಾಲದಲ್ಲಿ ಬರಗಾಲವು ದೇಶಾದ್ಯಂತ ಹಾಹಾಕಾರವನ್ನು ಹುಟ್ಟಿಸಿದಾಗ, ಆಹಾರ ಪದಾರ್ಥಗಳ ಸಮಾನ ಹಂಚಿಕೆಯ ಕ್ರಮವನ್ನು ಜ್ಯಾರಿಗೆ ತಂದು ಎಲ್ಲರಿಗೂ ಹೊಟ್ಟೆಗೊಂದಿಷ್ಟು ಹಿಟ್ಟು ದೊರೆಕುವಂತೆ ಮಾಡುವ ಪ್ರಯತ್ನ ನಡೆಯಿತು. ಯುದ್ಧೋತ್ತರದಲ್ಲಿಯೂ ಪರಿಸ್ಥಿತಿ ಸುಧಾರಿಸದುದರಿಂದ, ಹಸುಗೆ ಪದ್ಧತಿಯನ್ನು ಜೀವಂತವಾಗಿ ಇಡಬೇಕಾಯಿತು. ಪಂಚವಾರ್ಷಿಕ ಯೋಜನೆಯನ್ನು ಆಚರಣೆಗೆ ತಂದ ಹಿಂದಿನ ವರ್ಷಗಳಲ್ಲಿಯೂ ನಮ್ಮ ಆಹಾರ ಪರಿಸ್ಥಿತಿ ತೃಪ್ತಿಕರವಿರಲಿಲ್ಲ. ಪ್ರಾಕೃತಿಕ ವಿಪತ್ಪರಂಪರೆಗಳು ಆಗಿಂದಾಗ್ಗೆ ನಮ್ಮನ್ನು ಹತಾಶರಾಗಿ ಮಾಡಿದವು. ೧೯೫೧ನೇ ಇಸವಿಯಲ್ಲಿ ಈ ಸಂಕಟಗಳು ಪರಮಾವಧಿ ಮಟ್ಟವನ್ನು ಮುಟ್ಟಿದವು. ಆಹಾರ ಪದಾರ್ಥಗಳ ಬೆಲೆಯು ವಿಷದಂತೆ ಸಾರ್ವತ್ರಿಕವಾಗಿ ಏರತೊಡಗಿತು.

ಇಂತಹ ಕಗ್ಗತ್ತಲೆಯ ಹಿನ್ನೆಲೆಯಲ್ಲಿ ಸೋಲನ್ನೊಪ್ಪಿಕೊಳ್ಳಬಾರದೆಂಬ ದೃಢ ಸಂಕಲ್ಪವೊಂದೇ ಮಿಂಚಿನ ಹೊಳಪಾಗಿ ಕಾಣಿಸುತ್ತಿದ್ದಿತು. ಪಂಚವಾರ್ಷಿಕ ಯೋಜನೆಯು ಕಾರ್ಯರೂಪಕ್ಕೆ ತರಲ್ಪಟ್ಟ ಬಳಿಕ ಆಹಾರದ ತುಟಾಗ್ರತೆಯು ನಿಧಾನವಾಗಿ ಮಾಯವಾಯಿತು ಬಹಳ ಬೇಗ ಫಲಿತಾಂಶಗಳನ್ನು ಕೊಡುವ ಸಣ್ಣ ಪುಟ್ಟ ನೀರಾವರಿ ಯೋಜನೆಗಳಿಗೆ ಮಹತ್ವವನ್ನು ಕೊಟ್ಟು ವ್ಯವಸಾಯಾಭಿವೃದ್ಧಿಗೆ ಮೀಸಲಿರಿಸಿದ ಹಣದಲ್ಲಿ ನೂರಕ್ಕೆ ೪೦ ಅಂಶವನ್ನು ಈ ಕೆಲಸಕ್ಕೆಯೇ ಬಳಸಲಾಯಿತು. ಜಗತ್ತಿನಲ್ಲಿಯೇ ಅಗಾಧವೆನಿಸಿದ ಕೊಳವೆ ಬಾವಿಗಳ ಕೆಲಸ ನಮ್ಮ ದೇಶದಲ್ಲಿ ನಡೆಯಿತು; ರೈತರಿಗೆ ಹೆಚ್ಚು ಬೆಳೆ ಬೆಳೆಯುವುದಕ್ಕೆ ಪ್ರೋತ್ಸಾಹ ರೂಪದಲ್ಲಿ ಸ್ಪರ್ಧೆಗಳನ್ನು ಏರ್ಪಡಿಸ

ಸಂತೋಷ ಕೊಡುವ ಕೆಲವು ವಿಷಯಗಳು

ಸ್ವಾತಂತ್ರ್ಯದ ಸತ್ಫಲವನ್ನು ಉಣ್ಣಲು ತೊಡಗಿದ್ದೇವೆ!

ಲಾಯಿತು. ಜಾಪಾನು ದೇಶದ ಭತ್ತದ ಕೃಷಿಯನ್ನು ಅಳವಡಿಸಲಾಯಿತು. ಒಳ್ಳೆಯ ಗೊಬ್ಬರ ಮತ್ತು ಸುಧಾರಿತ ಬೀಜಗಳ ಪ್ರಯೋಗವೂ ಜರಗಿತು. ಸಮಾಜ ವಿಕಾಸ ಯೋಜನೆಯೂ ರಾಷ್ಟ್ರೀಯ ವಿಸ್ತರಣಾ ಕಾರ್ಯವೂ ರೈತರಿಗೆ ನವೀನ ಜ್ಞಾನವನ್ನು ಒದಗಿಸಿಕೊಟ್ಟವು. ಇದರಿಂದ ಆಹಾರ ಮುಖದಲ್ಲಿ ಬೇಗನೆ ವಿಜಯ ದೊರಕುವ ಭರವಸೆ ಉಂಟಾಯಿತು

ನಿಯಂತ್ರಣ ರದ್ದತಿ

ನಿಯಂತ್ರಣಗಳು ಅಗಲೂ ಇದ್ದವು: ಇವನ್ನು ತೆಗೆದು ಹಾಕಿದರೆ ಗಂಡಾಂತರ ವಾದೀತೆಂದು ತಜ್ಞರು ಸರಕಾರವನ್ನು ಹೆದರಿಸುತ್ತಿದ್ದರು. ಆಗ, ೧೯೫೦ನೇ ಜೂನಿನಲ್ಲಿ, ಮದ್ರಾಸಿನಲ್ಲಿ ರಾಜಗೋಪಾಲಾಚಾರಿಯವರು ಧೈರ್ಯದಿಂದ ನಿಯಂತ್ರಣವನ್ನು ಸಾರಲು ಮುಂಬಾದರು. ಭಾರತ ಸರಕಾರವು ಇದನ್ನೊಂದು ಪ್ರಯೋಗವಾಗಿ ತಿಳಿದು, ಅವರಿಗೆ ಅನುಮತಿಯನ್ನು ನೀಡಿತು. ಇದನ್ನು ಅಪಾಯಕರ ಸಾಹಸವೆಂದು ಆಗ ಟೀಕಿಸಿದವರು ಇಂದು ಅದರ ಸತ್ಪರಿಣಾಮವನ್ನು ಕಂಡು ಆಶ್ಚರ್ಯ ಪಡುವರು. ಉತ್ತಮ ಫಲಿತಾಂಶಗಳನ್ನು ವಿನಿಯಂತ್ರಣವು ತಂದುದರಿಂದ ೧೯೫೧ನೇ ಮಾರ್ಚಿಯಲ್ಲಿ ಆಹಾರ ಸಚಿವರು ನಾವು "ಆಹಾರ ಸಮಸ್ಯೆಯನ್ನು ಬೇಗನೆ ಮರೆತು ಬಿಡಲಿದ್ದೇವೆ" ಎಂಬ ಆಶಾಜನಕ ಮಾತನ್ನಾಡಿದರು. ಕಳೆದ ಸಪ್ಟಂಬರದಲ್ಲಿ ಗೋಧಿಯ ಮೇಲಿನ ನಿಯಂತ್ರಣಗಳು ಸಡಿಲುಗೊಂಡವು. ನವೆಂಬರದಲ್ಲಿ ಅಂತರ್ ರಾಜ್ಯ ಸಾಗಾಟದ ವಿನಹ ಉಳಿದೆಲ್ಲ ನಿರ್ಬಂಧಗಳನ್ನು ಒರಟು ಧಾನ್ಯಗಳ ವಿಷಯದಲ್ಲಿ ತೆಗೆಯಲಾಯಿತು. ಈ ಜನವರಿಯಲ್ಲಿ ಬೆಲೆಗಳು ಇಳಿಯುತ್ತಿರುವುದನ್ನು ಕಂಡು ಉಳಿದ ಅಲ್ಪ ಸ್ವಲ್ಪ ನಿಯಂತ್ರಣಗಳನ್ನೂ ತೆಗೆದು ಹಾಕಲಾಯಿತು. ಮೊನ್ನೆ ಜೂಲೈ ಮಾಸದಲ್ಲಿ ಅಕ್ಕಿಯ ಮೇಲಿನ ನಿರ್ಬಂಧವೂ ದೂರವಾಯಿತು.

ನಮ್ಮ ಅಕ್ಕಿಯ ಬೆಳೆಯು ೪೭.೪ ಲಕ್ಷ ಟನ್ನುಗಳನ್ನು ಮುಟ್ಟಬೇಕೆಂದಿದ್ದ ಗುರಿಯನ್ನು ಈ ವರ್ಷ ಸಾಧಿಸಿದ್ದೇವೆ. ೧೯೫೦ನೇ ವರ್ಷದಕ್ಕಿಂತ ಈ ಪ್ರಮಾಣವು ೧೭% ಹೆಚ್ಚಾಗಿರುವುದು. ಭತ್ತ ಬೆಳೆಯುವ ಪ್ರದೇಶವು ಈ ಅವಧಿಯಲ್ಲಿ ೩% ಅಧಿಕಗೊಂಡಿರುವುದು. ಯೋಜನೆಯ ಐದು ವರ್ಷಗಳಲ್ಲಿ ಆಹಾರಧಾನ್ಯಗಳೆಲ್ಲ ಒಟ್ಟು ೧೪% ಹೆಚ್ಚಬೇಕೆಂದು ಕೈಗೊಂಡ ಸಂಕಲ್ಪವು ಈಗಲೇ ಪೂರ್ತಿಯಾಗಿರುವುದು. ಕಳೆದ ವರ್ಷ ವಿದೇಶಗಳಿಂದ ಆಯಾತಮಾಡಿಕೊಳ್ಳುವ ಪ್ರಸಂಗ ಬಾರದೆ, ನಾವು ಸುಭಿಕ್ಷೆಯನ್ನು ಹೊಂದಿದೆವು-ಮಳೆರಾಯನ ಕರುಣೆಯು ನಮ್ಮನ್ನು ಸಂತುಷ್ಟರಾಗಿ ಮಾಡಿತು. ಅಲ್ಲದೆ ಧಾನ್ಯಗಳ ಬೆಲೆಯೂ ಇಳಿಮುಖವಾಯಿತು. ಆದರೆ ಈ ವರ್ಷದ ಮಳೆಗಾಲದಲ್ಲಿ ಉತ್ತರ ಭಾರತದಲ್ಲಿ ನೆರೆ ಹಾವಳಿಯ ವಾರ್ತೆ ಕೇಳುತ್ತಿದ್ದೇವೆ. ಆಹಾರ ನಷ್ಟವು ಸಂಭವಿಸಿರುವುದೆಂದು ತಿಳಿಯುತ್ತದೆ. ಆದುದರಿಂದ ನಾವು ಇನ್ನಷ್ಟು ಸಂಗ್ರಹವನ್ನು ಮಾಡಿಟ್ಟುಕೊಂಡು ಆಪತ್ಕಾಲದಲ್ಲಿ ವಿನಿಯೋಗಿಸುವಂತೆ ಬೆಳೆ ಹೆಚ್ಚಿಸುವ ಆವಶ್ಯಕತೆ ಕಾಣುತ್ತದೆ.

ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ

ಆಹಾರದಷ್ಟೇ ಪ್ರಾಮುಖ್ಯತೆಯನ್ನು ಆರೋಗ್ಯಕ್ಕೂ ಕೊಡಬೇಕಾಗಿರುವುದು. ಕಳೆದ ವರ್ಷ ಈ ದಿಸೆಯಲ್ಲಿ ಅನೇಕ ವ್ಯವಸ್ಥಿತ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಯಿತು. ರಾಷ್ಟ್ರವ್ಯಾಪಿಯಾದ ಈ ಚಟುವಟಿಕೆಗಳು ದೇಶ ಬಾಂಧವರ ನರಳಾಟ ಹಾಗು ಸಾವಿನ ಭಯಗಳನ್ನು ಕೆಲಮಟ್ಟಿಗೆ ಕಡಿಮೆಮಾಡಿದವು. ಪ್ರತಿಯೊಂದು ನಿಮಿಷಕ್ಕೆ ಒಬ್ಬನು ಕ್ಷಯರೋಗದ ದೆಸೆಯಿಂದ ಸಾಯುತ್ತಿರುವ ಭಾರತದಲ್ಲಿ ಈ ಪಿಡುಗಿನ ವಿರುದ್ಧ ಬಿಸಿಜಿ ಟಾಕುಗಳನ್ನು ಹಾಕಿ ಸಂರಕ್ಷಣೆಕೊಡುವ ವ್ಯವಸ್ಥೆಯನ್ನು ಸರಕಾರ ಮಾಡಿತು. ೧೧೧ ಲಕ್ಷ ಜನರಿಗೆ ಟಾಕು ಹಾಕಿದ್ದಲ್ಲದೆ ೩೨ ಲಕ್ಷ ಕ್ಷಯರೋಗಿಗಳ ಪರೀಕ್ಷೆಯೂ ನಡೆಯಿತು. ಸುಗ್ಗಿಯ ಕಾಲದಲ್ಲಿ ಉಲ್ಬಣಾವಸ್ಥೆಯನ್ನು ಹೊಂದಿ ರೈತರನ್ನು ಹಾಸಿಗೆಹಿಡಿಸುವ ಮಲೇರಿಯಾದ ಹತೋಟಿಯ ಕೆಲಸ ಒತ್ತಡದಿಂದ ಮುಂದೊತ್ತಲ್ಪಟ್ಟಿತು. ವಿಶ್ವದ ಇನ್ನೆಲ್ಲಿಯೂ ಕೈಗೊಂಡಿರದಷ್ಟು ದೊಡ್ಡ ಪ್ರಮಾಣದಲ್ಲಿ ಭಾರತವು ಮಲೇರಿಯಾ ನಿರೋಧ ಚಟುವಟಿಕೆಗಳನ್ನು ತೊಡಗಿರುತ್ತದೆ.

ಕುಷ್ಠ ರೋಗದ ವಿರುದ್ಧವೂ ಯುದ್ಧ ಹೂಡಲು ನಿರ್ಧರಿಸಿದ್ದು ಈ ಸಂಬಂಧದ ಶಿಕ್ಷಣ ಮತ್ತು ಸಂಶೋಧನಾ ಕೇಂದ್ರವೊಂದು ಮದ್ರಾಸಿನ ಚಿಂಗಲ್ಪೇಟೆಯಲ್ಲಿ ಇಷ್ಟರಲ್ಲೇ ತೆರೆಯಲ್ಪಡುತ್ತದೆ. ಆನೆಕಾಲಿನ ವಿಷಯದಲ್ಲಿ ಪರಿಣಾಮಕಾರಿ ನಿಯಂತ್ರಣವನ್ನು ಕೈಗೊಳ್ಳಲು ತಜ್ಞರಿಂದ ಸಲಹೆಗಳನ್ನು ಸ್ವೀಕರಿಸಲಾಗುತ್ತದೆ. ಅಲ್ಪಾವಧಿಯ ವೈದ್ಯಕೀಯ ಶಿಕ್ಷಣವನ್ನು ಕೊಡಲು ಸರಕಾರವು ಸಹಾಯಕ ವೈದ್ಯರ ಶಿಕ್ಷಣ [illegible] ರೂಪಿಸಿರುವುದು. ಗ್ರಾಮಾಂತರ ಪ್ರದೇಶಗಳಲ್ಲಿ ದುಡಿಯಲು ಸನ್ನದ್ಧರಾದ ಯುವಕರನ್ನು ಸರಕಾರ ಆರಿಸುತ್ತಿರುವುದು ಹೊಸ ಹೊಸ ವೈದ್ಯಕೀಯ ಕೇಂದ್ರಗಳು ತೆರೆಯಲ್ಪಟ್ಟವು. ಆಸ್ಪತ್ರೆಗಳ ವಿಸ್ತರಣೆ, ಹೊಸ ವಾರ್ಡುಗಳ ಸಂಯೋಜನೆ ಮುಂತಾದ ಕೆಲಸಗಳೂ ಅಲ್ಲಲ್ಲಿ ಜರಗಿದವು ಭಾರತ ಸರಕಾರವು ಹಳ್ಳಿಗಳಲ್ಲಿ ದುಡಿಯಲು ಸಿದ್ಧರಾದ ದಾದಿಯರ ಮತ್ತು ಸೂಲಗಿತ್ತಿಯರ ಶಿಕ್ಷಣ ಹೊಂದಲು ಇಷ್ಟವುಳ್ಳ ಸಾವಿರಾರು ಮಹಿಳೆಯರಿಗೆ ಸ್ವಾಗತ ಬಯಸುತ್ತದೆ. ಇಷ್ಟಲ್ಲದೆ ಸಂಶೋಧನೆ, ಶುದ್ಧ ನೀರಿನ ಪೂರೈಕೆ ಮತ್ತು ಉತ್ತಮ ಔಷಧ ದ್ರವ್ಯಗಳ ಸಿದ್ಧತೆ ಮುಂತಾದ ಇತರ ವಿಭಾಗಗಳಲ್ಲಿಯೂ ಸಾಕಷ್ಟು ಶ್ರದ್ಧಾಪೂರ್ವಕ ದುಡಿಯುತ್ತಿರುವಂತೆಯೂ ತೋರುತ್ತದೆ.

ಸಂಪರ್ಕ ವ್ಯವಸ್ಥೆಯ ಮುನ್ನಡೆ

ಆಧುನಿಕ ಜೀವನದಲ್ಲಿ ನಾಡಿಗೆ ಸಂಪರ್ಕದ ವ್ಯವಸ್ಥೆಗೆ ತನ್ನದೇ ಆದ ವಿಶಿಷ್ಟ ಸ್ಥಾನವು ಪ್ರಾಪ್ತವಾಗುತ್ತವೆ. ಸ್ವಾತಂತ್ರ್ಯೋತ್ತರದಲ್ಲಿ ಒಂದು ಸಾವಿರ ಮೈಲುಗಳಷ್ಟು ರೈಲು ಮಾರ್ಗಗಳನ್ನು ವಿಸ್ತರಿಸಿದ್ದಲ್ಲದೆ, ಮತ್ತೆ ಒಂದು ಸಾವಿರ ಮೈಲುಗಳಷ್ಟು ದೀರ್ಘವಾದ ರೈಲ್ವೇ ಮಾರ್ಗ ರಚನೆಯ ಪರಿಶೀಲನೆಯನ್ನು ಸರಕಾರ ನಡೆಸುತ್ತಲಿದೆ. ಯುದ್ಧ ಕಾಲದಲ್ಲಿ ಕಿತ್ತು ಹಾಕಲಾದ ರೈಲ್ವೆ ಮಾರ್ಗಗಳನ್ನು ಪುನಃ ಹಾಕಿಸುವ ಕಡೆಗೂ ದೇಶದ ವಿಭಜನೆಯಿಂದಾಗಿ ಭಾರತದ ನೆಲದೊಡನೆ ಸಂಪರ್ಕವನ್ನು ಕಡಿದುಕೊಂಡ ಅಸ್ಸಾಮು ಪಂಜಾಬುಗಳನ್ನು ಜೋಡಿಸುವುದಕ್ಕೂ ಆರ್ಥಿಕೋನ್ನತಿಗೆ ನೆರವಾಗುತ್ತಿರುವ ಯೋಜನಾ ಕೇಂದ್ರಗಳೊಡನೆ ಸಂಪರ್ಕ ಸ್ಥಾಪಿಸುವುದಕ್ಕೂ, ದುಡಿದು ಸವೆದ ಯಂತ್ರೋಪಕರಣಗಳ ಸ್ಥಾನದಲ್ಲಿ ಹೊಸತನ್ನು ಪ್ರತಿಷ್ಠಾಪಿಸುವುದಕ್ಕೂ ಸರಕಾರವು ವಿಶೇಷ ಲಕ್ಷ್ಯವನ್ನು ಕೊಡುತ್ತಿದೆ. ದಕ್ಷಿಣ ಭಾರತದ ನಮಗೆ, ಅದರಲ್ಲೂ ಕರ್ನಾಟಕದವರಿಗೆ, ರೈಲ್ವೆಗಳ ವಿಸ್ತರಣೆಯ ಅನುಭವವಾಗಿರಲಿಕ್ಕಿಲ್ಲ. ಆದರೂ ತಿಪಟೂರಿನಲ್ಲಿ ರಚಿಸಲ್ಪಡುತ್ತಿರುವ ಮಾರ್ಗವನ್ನೂ ಹಾಸನ ಮಂಗಳೂರು ರೈಲ್ವೆಯ ಪ್ರಸ್ತಾಪ ಹಾಗು ಮುಂಬಯಿ-ಮಂಗಳೂರು ಮಾರ್ಗದ ಜೋಡಣೆಯನ್ನೂ ಉಲ್ಲೇಖಿಸಬಹುದು. ಮಾರ್ಗಗಳ ವಿಸ್ತರಣೆಯನ್ನೇ ಪ್ರಾಮುಖ್ಯತೆಯು ಪ್ರವಾಸಿಕರ ಸೌಕರ್ಯಕ್ಕೂ ಕೊಡಲ್ಪಟ್ಟಿರುವುದು.

ಸಂಪರ್ಕದ ಇನ್ನೊಂದು ಸಾಧನವಾದ ಅಂಚೆ ಮತ್ತು ತಂತಿ ವಿಭಾಗವು ಕಳೆದ ನೂರು ವರ್ಷಗಳಲ್ಲಿ ಸಾಧಿಸಿದರಷ್ಟು ಅಗಾಧವಾದ ಕೆಲಸವನ್ನು ಸ್ವಾತಂತ್ರ್ಯೋತ್ತರದ ಅರೇಳು ವರ್ಷಗಳಲ್ಲಿಯೇ ಮುಗಿಸಿರುವುದು. ಗ್ರಾಮಾಂತರ ಪ್ರದೇಶದಲ್ಲಿ ಐನೂರು ಜನರಷ್ಟೇ ಇರಬಹುದಾದ ಹಳ್ಳಿಯ ಮೂಲೆಗೂ ಟಪ್ಪಾಲು ಪೇದೆಯು ಹೋಗಿ ಬರುತ್ತಿರುವಂತೆ ಸೌಕರ್ಯ ಕಲ್ಪಿಸಿರುವುದನ್ನು ಕಾಣುತ್ತೇವೆ. ಗುಡ್ಡಗಾಡು ಪ್ರದೇಶಗಳು ಸ್ವಾತಂತ್ರ್ಯಪೂರ್ವದಲ್ಲಿ ಉಳಿದ ಭಾರತದಿಂದ ಬೇರೆಯೇ ಆಗಿದ್ದವು—ಈಗ ಅಲ್ಲೆಲ್ಲ ಟಪ್ಪಾಲು ಕಟ್ಟೆಗಳು ತಲೆಎತ್ತಿದ್ದು ಹೊರಜಗತ್ತಿನೊಡನೆ ಬೆರೆಯುವ ದಾರಿಯನ್ನು ತೆರೆಯುತ್ತವೆ ಇದಲ್ಲದೆ ತಂತಿಯ ಮೂಲಕ ಸಂಪರ್ಕವನ್ನು ಸ್ಥಾಪಿಸಲೂ ಸಾಧ್ಯವಾಗಿರುವುದು.

ಇವರ ಜೊತೆಗೆ ಟೆಲಿಫೋನುಗಳ ಸೌಕರ್ಯವೂ ಹೆಚ್ಚಿ ಕೊಂಡಿದೆ. ಭಾರತ ವಿಭಜನೆಯ ಕಾಲಕ್ಕೆ ದೇಶದಲ್ಲಿ ೩೨೬ ಟೆಲಿಫೋನು ಕೇಂದ್ರಗಳು ಇದ್ದರೆ ಈಗ ೬೩೬ ಕೇಂದ್ರಗಳು ಸ್ಥಾಪಿಸಲ್ಪಟ್ಟಿರುತ್ತವೆ ಕನಿಷ್ಟ ೩೦೦೦೦ ಜನರಿರುವ ಪ್ರತಿಯೊಂದೂ ವಿಭಾಗಕ್ಕೆ ಟೆಲಿಫೋನು ಸೌಕರ್ಯವನ್ನು ಕಲ್ಪಿಸಲು ಸರಕಾರ ಪ್ರಯತ್ನಿಸುತ್ತದೆ. ಹಿಂದಿಯಲ್ಲಿ ತಂತಿಗಳನ್ನು ಕಳಿಸುವ, ದೇವನಾಗರಿ ಲಿಪಿಯಲ್ಲಿ ತಂತಿ ವಿಳಾಸವನ್ನು ದಾಖಲು ಮಾಡುವ "ವಯರ್‌ಲೆಸ್" ಹಾಗು ಕೇಬಲುಗಳ ಮೂಲಕ ಸಾಗರೋತ್ತರ ಸಂಪರ್ಕ ವ್ಯವಸ್ಥೆಯನ್ನು ವಿಸ್ತರಿಸುವ ವಿಷಯಗಳನ್ನು ಸರಕಾರ ತತ್ಪರತೆಯಿಂದ ಕಾರ್ಯಗತಗೊಳಿಸುತ್ತಲಿದೆ. ನಮ್ಮ ಹಡಗು ನಾವೆಯು ಬಹಳಷ್ಟು ಅಭಿವೃದ್ಧಿ ಹೊಂದಿದೆಯಲ್ಲದೆ ವಿಮಾನ ಸಾರಿಗೆಯನ್ನು ರಾಷ್ಟ್ರೀಕರಿಸಿಯೂ ವಿಮಾನ ಮೂಲಕ ಟಪ್ಪಾಲುಗಳನ್ನು ಸಾಗಿಸುವ ವ್ಯವಸ್ಥೆಯನ್ನೇ ಪಡಿಸಿಯೂ ಸುಖ ಜೀವನಕ್ಕೆ ಅನುಕೂಲತೆಯನ್ನು ಕಲ್ಪಿಸಿ ಕೊಡಲಾಗಿರುವುದು.

ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂತಸದ ಸುದ್ದಿ

ಈ ವರೆಗೆ ಹೈಸ್ಕೂಲು ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿದ್ದ ಕನ್ನಡ ವ್ಯಾಕರಣ ಪುಸ್ತಕದ ಕೊರತೆಯೊಂದು ನೀಗಲ್ಪಟ್ಟಿತು.

ಸರಕಾರದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಶಾಂತಯ್ಯ. ವಿದ್ವಾನ್ ಇವರು ಬರೆದಿರುವ

ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ

ಎಂಬ

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಸಲುವಾಗಿ ಬರೆದ ವ್ಯಾಕರಣ ಪುಸ್ತಕವು ಪ್ರಕಟವಾಗಿರುವುದು.

ಪುಟಗಳು ೨೫೦ ಬೆಲೆ: ೧—೧೨—೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಜಯ ಮುದ್ರಣಾಲಯ, ಮೂಡುಬಿದಿರೆ, (ದ. ಕ.)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 121/1951

ವಾದಿ. ಸೀತ್ರಾಪತಿ ಅಮ್ಮ.

ಪ್ರತಿವಾದಿಯು. ಪದ್ಮಾವತಿ ಅಮ್ಮಕೂಡಾ.

ಪ್ರತಿವಾದಿಯ:-5. ದಯಾನಂದ. ನಕ್ವಾ ಮಿರಾ ಸಾಹೇಬರ ರಘವ. 6. ರುಕಿಯಾ. ನಕ್ವಾ ಮಿರಾ ಸಾಹೇಬರ ಮಗಳು. ಕುಂದಾಪುರ ತಾಲ್ಲೂಕು ಗಂಗೊಳ್ಳಿ ಗ್ರಾಮ.

Post. Gangulli.

ಇವರಿಗೆ.

ವಾದಿಳು ಮೇಲ್ಕಂಡ ಪ್ರತಿವಾದಿಯ ಮನ್ನೆರ ಮೇಲೆ ಬಿನಾ ನಿಜಾಮು ಸಂ ರದ ಬಾಬ್ತು ಆರನಾದ ಅಕ್ಕಿ ಮೂಡೆಗೆ ತಕ್ಕ ಮೇಲ್ಕಂಡ ದಾವಾ ಹೂಡಿರುವುದರಿಂದ ಆ ಕುರಿತು ನಿಮ್ಮ ದೇನಾದರು ಆಕ್ಷೇಪವಿದ್ದರೆ ತಾರೀಕು 16—8—1951ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರು ಆಗಿ ವ್ಯಾಜ್ಯವಾದಿ ಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಬಗ್ಗೆ ತೀರ್ಮಾನ ಏಕಪಕ್ಷವಾಗಿ ತೀರ್ಮಾನಿಸಲಾಗುವುದು ಎಂಬ ಸಂಗತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸಲಾಗುತ್ತದೆ.

Coondapoor K. Raghunatha Shenai

1—8—1951 *Pleader for Plaintiff.*

ಪ್ರಜಾಪ್ರಭುತ್ವದಲ್ಲಿ ಕರ್ತವ್ಯಜ್ಞಾನದ ಮಹತ್ವ

[೧೨(a) ಪುಟದಿಂದ]

ಗಾಂಧೀಯವರೂ ಇದನ್ನುಒಪ್ಪುತಿದ್ದರು. ಧರ್ಮವು ಬೇರೆ, ರಾಜ ಕಾರಣವು ಬೇರೆ, ಸಾಮಾಜಿಕ ವಿಕಾಸವು ಬೇರೆ ಎನ್ನುವ ತತ್ವವೇ ಅವರಿಗೆ ಮಾನ್ಯವಿರಲಿಲ್ಲ. ಎಲ್ಲವೂ ಮಾನವ ನಾಗರಿಕತೆಯೊಡನೆ, ಅವನ ಸತ್ಪ್ರವೃತ್ತಿಯೊಡನೆ, ಆತ್ಮಿಕ ವಿಕಾಸದೊಡನೆ ಹೊಂದಿಕೊಂಡ ಅಂಗವೆಂದು ಅವರು ಭಾವಿಸುತಿದ್ದರು. ಪಾಶ್ಚಾತ್ಯ ರಾಜಕೀಯ ನೀತಿಯು ಭಾರತದ ನೆಲಕ್ಕೆ ಒಗ್ಗಲಾರದೆಂದು ಅವರು ಆಗಿಂದಾಗ್ಗೆ ಎಚ್ಚರವನ್ನು ಕೊಡುತಿದ್ದರು.ರಾಮರಾಜ್ಯವೆಂದು ಅವರು ಭಾರತೀಯರ ಮುಂದಿಟ್ಟಆದರ್ಶವನ್ನು ಧರ್ಮರಾಜ್ಯವೆಂದು ಭಾವಿಸಿದರೆಯೇ ಹೆಚ್ಚುಅರ್ಥವತ್ತಾಗುತ್ತದೆ.ಔದ್ಯೋಗಿಕ ವಿಪ್ಲವವು ಮನುಷ್ಯನ ಧರ್ಮಬುದ್ಧಿಯನ್ನು ಕೆಡಿಸಿ, ಶೋಷಣೆಗೂ ವರ್ಗ ಸಮರಕ್ಕೂ ಎಡೆಮಾಡಿ ಕೊಟ್ಟಿತು; ಯಂತ್ರಗಳು ಪರಿಶ್ರಮವೇ ಜೀವಾಳವಾದ ಮನುಷ್ಯನ ಶೀಲವನ್ನು ಕೆಡಿಸಿ ಬಿಟ್ಟು "ಆಯಾಸ ಯುಗ"ದ ನಾಗರಿಕನನ್ನಾಗಿ ಅವನನ್ನು ಪರಿವರ್ತಿಸಿದವು. ಕರ್ತವ್ಯ ಪರಾಙ್ಮುಖತೆಗೆ ಪ್ರಾಯಶ್ಚಿತ್ತ ರೂ ಪದ ದಂಡನೆಯನ್ನು ವ್ಯಕ್ತಿಯು ಅನುಭೋಗಿಸುವ ಬದಲು ವೈಯಕ್ತಿಕ ಹಕ್ಕುಬಾಧ್ಯತೆಗಳ ಹೆಸರಲ್ಲಿ ಅವನು ತಪ್ಪು ಮುಚ್ಚಿಕೊಳ್ಳುವ ಅವಕಾಶವು ಏರ್ಪಟ್ಟಿತು. ಮನುಷ್ಯನ ಭಾವನೆಗಳನ್ನು ಉದ್ರೇಕಗೊಳಿಸಿ,ಅವನ ವಿದ್ರೋಹ ಪ್ರವೃತ್ತಿಯನ್ನು ಭುಗಿಲ್ಲೆನಿಸಲು ಪಕ್ಷಸಂಗದಗಳಾಗಿ ಹೋರಾಡುವ ಕಲ್ಪನೆಯು ಉದಿಸಿತು. ಇಂದು ಅಧಿಕಾರದಲ್ಲಿರುವ ಪಕ್ಷ ಜನತೆಗೆ ಕರ್ತವ್ಯ ತತ್ಪರತೆಯ ಒಣ ಉಪದೇಶವನ್ನು ಮಾಡುತ್ತಿದ್ದರೆ, ಆ ಅಧಿಕಾರ ಸ್ಥಾನಕ್ಕಾಗಿ ಹಾತೊರೆಯುತ್ತಿರುವ ಪ್ರತಿ ಪಕ್ಷಗಳು "ಅವರು ಸರಿಯಾದ ಮೇಲೆಯೇ ನಾವು ಸರಿಯಾಗುವವರು" ಎಂದು ಜನತೆಯಿಂದ ಹೇಳಿಸಲು ನೋಡುತ್ತವೆ.

ಈ ಪರಿಸ್ಥಿತಿಯಲ್ಲಿ ವ್ಯಕ್ತಿಯ ಹಕ್ಕುಬಾಧ್ಯತೆಗಳ ಸಂರಕ್ಷಣೆಗೆ ನ್ಯಾಯ ಸ್ಥಾನಗಳು ಇದ್ದರೂ ಅವು ಶಾಸನ ಬದ್ಧ ಕರ್ತವ್ಯವನ್ನಷ್ಟೇನಿರ್ವಹಿಸಲು ಶಕ್ತವಾಗುತ್ತವೆ ಹೊರತು ಧರ್ಮ ದೃಷ್ಟಿಯಿಂದ ಪ್ರಶ್ನೆಯ ಸೂರ್ಣಪರವನ್ನು ವಿವೇಚಿಸಲು ಅವುಗಳನ್ನಾರೂ ಅಶ್ರಯಿಸುವಂತಿಲ್ಲ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಸರಕಾರವು ಏನು ಶಾಸನವನ್ನು ವಿಧಿಸುತ್ತದೋ ಯಾವ ಕಾಯಿದೆ ಮಾಡುತ್ತದೋ ಅದರ ಪಾಲನೆಯಷ್ಟೇ ನ್ಯಾಯಾಲಯದ ಹೊಣೆಯಾಗಿ ಪರಿಣಮಿಸುವುದಾಗಲಿ—ಇಲ್ಲಿ ಧರ್ಮ ಶಬ್ದದ ವ್ಯಾಪ್ತಿಗೊಳಪಡುವ ಭಾವನೆಗಳಿಗೆ ಅವಕಾಶವಿರುವುದಿಲ್ಲ ರಾಜ್ಯದ ಶಾಸನಗಳು ಸಾಮಾನ್ಯವಾಗಿ ಅಧಿಕಾರ ಸ್ಥಾನವನ್ನು ವಹಿಸಿರುವ ಗುಂಪಿನ ಅಥವಾ ಪಕ್ಷದ "ರಾಜಕೀಯ" ಉದ್ದೇಶಗಳನ್ನು ಸಾಧಿಸಲು ನೋಡುತ್ತವೆ. ಪ್ರತಿ ಪಕ್ಷದ ಗುಂಪಿನ ಇಷ್ಟಕ್ಕೆ ಅದು ವಿರೋಧವಾಗಿರಬಹುದು. ಪರಿಣಾಮವಾಗಿ ಆ ಗುಂಪಿನ ಅನುಯಾಯಿಗಳು ಈ ಶಾಸನವನ್ನು ಸ್ವೇಚ್ಛೆಯಿಂದ ಮುರಿಯ ಬಹುದು. ಅಭಿಪ್ರಾಯ ಸ್ವಾತಂತ್ರ್ಯ, ವ್ಯಕ್ತಿ ಸ್ವಾತಂತ್ರ್ಯ ಇದಕ್ಕಾಗಿಯೇ ಕೊಡಲ್ಪಟ್ಟಿವೆಯೆಂದರೂ ಸಲ್ಲುತ್ತವೆ. ಇಲ್ಲಿ ಸಮಷ್ಟಿಯ ವಿಚಾರ ಬರುವುದೇ ಇಲ್ಲ. ಎಲ್ಲವೂ ಸಂಕುಚಿತ ಮತ್ತು ಹಸಿ ಬಿಸಿಯಲ್ಲಿಯೇ ನಡೆಯುತ್ತದೆ. ಸನಾತನವಾದ ತಳಹದಿ ಇಲ್ಲ—ಎಂತಲೇ ಅದು ಅಶಾಶ್ವತ.

ಸಮಾಜದ ಮೂಲಭೂತ ಅಂಶಗಳನ್ನು ಅಲಕ್ಷಿಸಿ ಇಂತಹ ಶಾಸನ ವಿಧಾನಕ್ಕೆ ಒಪ್ಪಿರುವುದರಿಂದಲೇ ನಾವು ತಜ್ಜನಿತ ದುಷ್ಪರಿಣಾಮಗಳನ್ನು ಸ್ವೀಕರಿಸಬೇಕಾಗಿ ಬಂದಿರುವುದು. ರಾಜ್ಯವು ಧರ್ಮದ ಚೌಕಟ್ಟಿನಲ್ಲಿ ನೇರುತಿದ್ದರೆ ಇಂತಹ ತೊಡಕುಗಳೇ ಉದ್ಭವಿಸುತ್ತಿರಲಿಲ್ಲ. ಏಕೆಂದರೆ ಆಗ ತಿಳಿದವರು ತಿಳಿಯದವರಿಗೆ ಮಾರ್ಗದರ್ಶನ ಮಾಡುವುದಕ್ಕೆ ಆತಂಕ ಬರುತ್ತಿರಲಿಲ್ಲ; ಮತ್ತು ಸಜ್ಜನರು ಕತ್ತಲೆ ಕೋಣೆಯೊಳಗೆ ಕೊಳೆಯುತ್ತಿರ ಬೇಕಾದ ಸಂದರ್ಭವೂ ಒದಗುತ್ತಿರಲಿಲ್ಲ ಇಂದು ಪ್ರತಿ ಪಕ್ಷದ ಸಾಧುವಾದ ಸೂಚನೆಯನ್ನೂ ಮಾನ್ಯ ಮಾಡಲು ಅಧಿಕಾರದಲ್ಲಿರುವ ಪಕ್ಷಕ್ಕೆ ಬಿಂಕ ಬಿಡುವುದಿಲ್ಲ. ಸರಕಾರದೊಡನೆ ಉತ್ತಮ ವಿಷಯಗಳಲ್ಲಿಯಾದರೂ ಸಹಕರಿಸಲು, ವಿಧಾಯಕ ಟೀಕೆಗಳನ್ನಷ್ಟೇ ಮಾಡಲು ಪ್ರತಿಪಕ್ಷಕ್ಕೆ ಮನಸ್ಸಾಗುವುದಿಲ್ಲ. ಏಕೆಂದರೆ ಈ ಪಕ್ಷ ಪಂಗಡಗಳ ಭಾವನೆಯ ಮೂಲದಲ್ಲಿ ಸ್ವಾರ್ಥವೂ ಕುಹಕವೂ ಕುತಂತ್ರವೂ ಅಡಗಿರುವುದು. ಇಂಥದರಲ್ಲಿ ಗ್ರಾಮ ಪಂಚಾಯತುಗಳಿಂದ ತೊಡಗಿ ಕೇಂದ್ರ ಸರಕಾರದ ವರೆಗೂ ದೋಷವು ವಿಷ ದಂತೆ ಸರ್ವವ್ಯಾಪಿ ಯಾಗುತ್ತದೆ.

"ಸತ್" ಎಂಬ ಶಬ್ದಕ್ಕೆ ಸ್ಥಾನವೇ ಇಲ್ಲದ ಪಾಶ್ಚಾತ್ಯ ರಾಜ್ಯ ಪದ್ಧತಿಯನ್ನು—ಭಾರತೀಯ ಪರಂಪರೆಯೊಂದು ಮಾರ್ಗದರ್ಶನ ಮಾಡುವಂತಿದ್ದರೂ—ನಕಲು ತೆಗೆದುದು ಸರಿಯಾಗಲಿಲ್ಲ. ಮಹಾತ್ಮಾ ಗಾಂಧೀಯವರು ತಮ್ಮ "ಹಿಂದ್ ಸ್ವರಾಜ್ಯ" ಎಂಬ ಪುಸ್ತಕದಲ್ಲಿ ಬ್ರಿಟಿಷ ರಾಜ್ಯ ಪದ್ಧತಿಯನ್ನು ಭಾರತದಲ್ಲಿ ಅನುಕರಣ ಮಾಡುವುದರಿಂದ ಸರ್ವನಾಶವಾಗುತ್ತದೆ ಎಂದು ಬರೆದಿದ್ದರು. ಅದರೆ ಆ ವಾಕ್ಯವನ್ನು ಇಂದಿನ ಪರಿಸ್ಥಿತಿಯಲ್ಲಿ ಯಾರೂ ನೆನಪಿನಲ್ಲಿಟ್ಟುಕೊಂಡಂತೆ ಕಾಣುವುದಿಲ್ಲ. ಏಕೆಂದರೆ ನಮಗೆ ಲೋಕದ ಇತರರೊಡನೆ ಹೊಂದಿಕೊಳ್ಳುವ ಸ್ಪರ್ಧೆಯನ್ನು ಹೂಡುವುದು ಅನಿವಾರ್ಯವೆಂದು ಕಂಡು ಬಂತು: ಪಾಶ್ಚಾತ್ಯ ತತ್ವಜ್ಞಾನದ ದೋಷವನ್ನು ತಿದ್ದಿಕೊಳ್ಳುವಷ್ಟು ವ್ಯವಧಾನವಿಲ್ಲದೆ ನಾವು ಸ್ವತಂತ್ರರಾದೆವು; ಮತ್ತು ಪ್ರಜಾಪ್ರಭುತ್ವ ಪದ್ಧತಿಯನ್ನು ಸಾರಿದೆವು. ಪ್ರಗತಿಶೀಲರೆಂದೂ ಸಂಭಾವಿತರೆಂದೂ ನಮ್ಮನ್ನು ನಾವೇ ಹೇಳಿಕೊಂಡೆವು. ಪರಿಣಾಮದಲ್ಲಿ ಪಾನನಿರೋಧ ಕಾಯಿದೆಯನ್ನು ಮಾಡಿದರೆ, ಅದನ್ನು ಮುರಿಯುವವರಂತೂ ಸರಿ, ಸರಕಾರದ ನೌಕರ ವರ್ಗವೂ ಲಂಚ ತಿಂದು ಕಾಯಿದೆಯ ಉದ್ದೇಶವನ್ನು ಕೆಡಿಸುತ್ತದೆ. ಹಕ್ಕುಗಳ ಮೇಲೆ ಗದಾ ಪ್ರಹಾರವಾಯಿತೆನ್ನುತ್ತಾ, ಹಕ್ಕುಗಳ ರಕ್ಷಣೆಗೆ ಶಾಸನ ಸಭೆ ಹಾಗು ನ್ಯಾಯಾಲಯಗಳ ಒಳಗೂ ಹೊರಗೂ ಹೋರಾಡುವ ಮನಃ ಪ್ರವೃತ್ತಿಯನ್ನು ನಮ್ಮ ಶಾಯಿದೆಗಳು ಉಂಟು ಮಾಡುತ್ತವೆ. ಕರ್ತವ್ಯದ ಅರಿವಿಲ್ಲದ ಜನತೆಯ ಕೈಗೆ ಕೊಟ್ಟ ಹಕ್ಕುಬಾಧ್ಯತೆಗಳು ನುಂಗಲಾರದ ತುತ್ತಾಗಿ ಪೀಡೆ ಕೊಡುತ್ತವೆ.

ಸ್ವಾತಂತ್ರ್ಯ ದಿನೋತ್ಸವದ ಸಂಭ್ರಮದಲ್ಲಿ ವ್ಯವಹರಿಯದೆ. ಭಾರತೀಯ ವಿಚಾರಕರು ಇಲ್ಲಿ ಪ್ರಸ್ತಾಪಿಸಿದ ವಿಷಯಗಳನ್ನು ಮನನಮಾಡಿ, ತಮ್ಮ ಪ್ರತಿಕ್ರಿಯೆಗಳನ್ನು ಸಾರ್ವಜನಿಕವಾಗಿ ಪ್ರಚುರ ಪಡಿಸಿ, ನಮ್ಮ ರಾಜ್ಯ ಪದ್ಧತಿಯ ಲೋಪ ದೋಷಗಳ ನಿವಾರಣೆಗೆ ಮುಂಬರುವುದು ಅಪೇಕ್ಷಣೀಯ. ಪುಣ್ಯದಿಂದ-ಚುನಾವಣಾ ರೀತಿಯಲ್ಲಿ ದೋಷ ಸಹಸ್ರಗಳಿದ್ದರೂ—ರಾಷ್ಟ್ರದ ಸುಸಂಸ್ಕೃತ ವರ್ಗಕ್ಕೆ ಮೇಲ್ಮನೆಗಳಲ್ಲಿ ಸ್ಥಾನ ಕಲ್ಪಿಸಿ ಕೊಡಲಾಗಿರುವುದು. ಇಲ್ಲಿಯ ಸದಸ್ಯರು ಸಾಮಾನ್ಯ ಜನತೆಯ ಮುಂದೆ ಮರೆತು ಹೋದ ಆದರ್ಶವನ್ನು ತಂದು ನಿಲ್ಲಿಸುವ ಪ್ರಯಾಸಕರವಾದ ಪ್ರಯತ್ನದಲ್ಲಿ ತೊಡಗುವರೆಂದು ಹಾರೈಸುತ್ತೇನೆ.

(ಬರೆದು ಬಂದುದು)

ಜಗದ್ಗುರು ಶ್ರೀಮನ್ಮಧ್ವಾಚಾರ್ಯರ ಮೂಲತತ್ತ್ವ—ಶಿಷ್ಟಾಚಾರ, ಧರ್ಮಶಾಸ್ತ್ರೋಕ್ತ ರೀತ್ಯಾ— ಜ್ಯೋತಿಃಶಾಸ್ತ್ರ-ಗಣಿತ- ಸೂಕ್ಷ್ಮ ಶೋಧನೆಯಿಂದ ಏಕಾದಶ್ಯಾದಿ ವ್ರತೋಪವಾಸಗಳಿಗೆ ಪರಿಶುದ್ಧವಾದ ಏಕಮಾತ್ರ

ಉಡುಪಿ ಪಂಚಾಂಗ

ಜಯನಾಮ ಸಂವತ್ಸರ 1954-1955

ಧರ್ಮಾಭಿಮಾನಿಗಳಿಗೆ 12 ತಿಂಗಳ ಪ್ರತ್ಯೇಕವಾಗಿ

○ ಶುದ್ಧ ದೃಕ್ ಪಂಚಾಂಗವನ್ನು—

○ ಮಾಸಂಪ್ರತಿ ವಿಸ್ತಾರವಾದ ನಿಮ್ಮ ಭವಿಷ್ಯತ್ ಫಲಗಳು ಅಲ್ಲದೆ ಅನೇಕ ಶಾಸ್ತ್ರವಿಷಯಗಳು ಸಹ ಕೊಡಲ್ಪಟ್ಟಿವೆ.

ಕನ್ನಡ ಪ್ರತಿ 1ಕ್ಕೆ 6 ಆಣೆ] [ತಮಿಳು ಪ್ರತಿ 1ಕ್ಕೆ 9 ಆಣೆ.

ಶ್ರೀ ರವಿಪ್ರಸಾದ ಜ್ಯೋತಿಷಾಲಯ, ಕೊಯಮುತ್ತೂರು.

THE POPULAR BOOK DEPOT,
Lamington Road, BOMBAY 7.

ಮುಚ್ಚಿದರೆ ಮುಗುಳು! ಬಿಚ್ಚಿದರೆ ಅರಳು!!

ಚಿಕ್ಕ ಮಕ್ಕಳ ಅಕ್ಕರೆಯ ಕವಿತಾ ಕುಸುಮವೇ—

ಶ್ರೀ. ಕೆ. ಹೊನ್ನಯ್ಯ ಶೆಟ್ಟರ—

ಮುಗುಳು

ದಿ! ಶ್ರೀ. ಕಡೆಕಾರು ರಾಜಗೋಪಾಲ ಕೃಷ್ಣ ರಾಯರ ಮುನ್ನುಡಿ.

ಶಾಲೆಗಳ ಉಪಯೋಗಾರ್ಥವಾಗಿ ಮಂಜೂರಾತಿ ಪಡೆದ ಚೊಕ್ಕ ಪುಸ್ತಕ.

ವಿದ್ಯಾರ್ಥಿಗಳು ನಲಿ ನಲಿದು ಓದುವುದು, ಓದಿ ಓದಿ ನಲಿವುದರಿಂದ

ಈಗ ೨ನೇ ಮುದ್ರಣವನ್ನು ಕಂಡಿದೆ—

ಅಭಿನಯಕ್ಕೆ, ಕೋಲಾಟಕ್ಕೆ, ನರ್ತನಕ್ಕೆ ಅನುಕೂಲವಾದ ಪದ್ಯಗಳು, ತ್ರಿವರ್ಣ ಮುಖಪತ್ರ, ಇಷ್ಟಾದರೂ ಬೆಲೆ: ೦—೬—೦ (ಟ. ಖರ್ಚು ಬೇರೆ.)

. ಪ್ರತಿಗಳು ಎಲ್ಲ ಪುಸ್ತಕ ವ್ಯಾಪಾರಿಗಳಲ್ಲೂ ದೊರೆಯುತ್ತವೆ.

ವಿಕ್ರಯಾಧಿಕಾರಿಗಳು:— ನವಭಾರತ ಪುಸ್ತಕ ಭಂಡಾರ, ಉಡುಪಿ. ದ. ಕ.

ಕಥೆ, ಕಾದಂಬರಿ,ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು.

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾದ ಕತೆಗಳು	0	3
4	ಕುಶಲನ	0	8
5	ಶಾನ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	3	8
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	4
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾವತಾರ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮಾನ್ದಾರ	1	8
33	ಬಾಳಿನ ಬೆಡಗು	1	4
34	ಲೋಕಾನುಭವ	1	0
35	ಚಿಗುರು	0	10
36	ನನ್ನ ಕಥೆಗಳು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಏಜೆಂಟರು ಬೇಕಾಗಿದ್ದಾರೆ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಾಹಿತ್ಯದಲ್ಲಿ ಪ್ರಗತಿ

ಸಾಹಿತ್ಯದ ಪ್ರಗತಿಯನ್ನು ನಿಷ್ಕರ್ಷಿಸುವುದಕ್ಕೆ ಸಾಂಪ್ರದಾಯಿಕ ದೃಷ್ಟಿಯೇ ಒಳಿತಲ್ಲ. ವಾಸ್ತವತೆಯ ಪ್ರಮೋದವು ಸಾತ್ವಿಕ ಮನೋರಂಜನೆ, ಸಂತೋಷ ಹಾಗು ಅಂತರಂಗ ಪರಿಪಾಕಕ್ಕೆ ಪೋಷಕವಾಗಿರದಿದ್ದರೆ ತ್ಯಾಜ್ಯವಾಗುತ್ತದೆ

ಲೇಖಕರು. ಪ್ರಿನ್ಸಿಪಾಲ ಎಚ್. ಸುಂದರರಾಯರು ಎಂ.ಎ

ಸಾಹಿತ್ಯವನ್ನು ಸಾಮಾನ್ಯವಾಗಿ ಎರಡು ದೃಷ್ಟಿಯಿಂದ ಅಳೆಯಬಹುದಾಗಿದೆ: (೧) ಮನುಷ್ಯನ ಅಂತರಂಗಿಕವಾದ ಆಕಾಂಕ್ಷೆ; ಜೀವನದಲ್ಲಿಲ್ಲದ ಯಾವುದೋ ಸೌಂದರ್ಯವನ್ನು, ಅತೃಪ್ತವಾದ ಯಾವುದೋ ಬಯಕೆಯನ್ನು ಶೋಧಿಸುವ ಚೇತನಶೀಲ ಪ್ರವೃತ್ತಿಯ ಪ್ರಯತ್ನ—ಎಂಬ ಪೂರ್ಣ ದೃಷ್ಟಿಗೆ ಮಾತ್ರ ಗೋಚರವಾಗುವ ಮೌಲ್ಯಗಳು. (೨) ಸೃಷ್ಟಿಯಲ್ಲಿರುವ ಸಕಲ ಚರಾಚರಗಳಲ್ಲಿ ಮನುಷ್ಯನೊಬ್ಬನಿಗೇ ಇರುವ 'ಕೌಶಲ'ವನ್ನು ಪಕ್ಷೀಕರಣೆ, ಸಮನ್ವಯ, ಸೃಷ್ಟಿ ಶೀಲತೆಗಳಿಂದ ವ್ಯಕ್ತಗೊಳಿಸಿ, ಹರಿತವಾಗಿಸುವುದು—ಎಂಬ ಶಾಂತ್ರಾತ್ಮಕ ಮೌಲ್ಯಗಳು—ಎಂದಿವನ್ನು ವರ್ಣಿಸಬಹುದು.

ಸಾಹಿತ್ಯವು ಒಂದು ಜನಪದದ ಪ್ರತಿಭೆಯ ಅಭಿವ್ಯಕ್ತಿ ಎಂಬುದನ್ನು ಹಲವು ಉದಾಹರಣೆಗಳಿಂದ ಸಮರ್ಥಿಸಬಹುದು. ಸಮರೂಪತ್ವ, ಸಂಯಮಶೀಲತೆ, ಸಾಮರಸ್ಯ ಮತ್ತು ಲಾವಣ್ಯದಲ್ಲಿ ಅಂತರ್ಗತವಾದ ಸೌಂದರ್ಯದ ಶೋಧನೆಯನ್ನು ಗ್ರೀಕ ಜನಾಂಗದವರು ತಮ್ಮ ಭಾವಗೀತಗಳಲ್ಲಿಯೂ, ದುರಂತ ನಾಟಕಗಳಲ್ಲಿಯೂ ಮಾಡಿರುವುದನ್ನು ನಾವು ಕಾಣುತ್ತೇವೆ. ಜೀವನದಲ್ಲಿ ಅಪರಿವರ್ತನೀಯವಾದ, ಅಜರಾಮರವಾದ, ಮತ್ತು ಸರ್ವಸಂಪುಷ್ಟಿಯುಳ್ಳ ಸ್ಥಿರತತ್ತ್ವವನ್ನು—'ತತ್ತ್ವ'ವನ್ನು—ಆರ್ಯರು ಭಾರತದಲ್ಲಿ ಸ್ಥಾಪಿಸಲು ಯತ್ನಿಸಿದರು. ನಿಸರ್ಗದ ವಿರುದ್ಧ ಹೋರಾಟವೆಸಗಿ ಸುಖವಿಲ್ಲದ ಪರಿಸ್ಥಿತಿಯಲ್ಲಿದ್ದ ಜನತೆಯನ್ನು ಪ್ರಾಚೀನ ಹಿಬ್ರೂ ಸಾಹಿತ್ಯವು ವರ್ಣಿಸುತ್ತದೆ. ನವೋನವವಾದ ಅನುಭವಗಳಿಗೂ ಆಳಿಕೆಗೂ ಹಾತೊರೆದ ಜನಪದದ ಸಾಹಸದ ಕತೆಗಳನ್ನು ಐಸ್‌ಲೆಂಡಿನ 'ಸಾಗ'ಗಳಲ್ಲಿಯೂ, ಸ್ಕೇಂಡಿನೇವಿಯ ಮತ್ತು ಜರ್ಮನಿಯ ಪುರಾಣ ಮತ್ತು ಗೀತಗಳಲ್ಲಿಯೂ ನಾವು ಕಾಣುತ್ತೇವೆ. ಲ್ಯಾಟಿನ ಲೋಕ ಗೀತಗಳಲ್ಲಿ ಗ್ರಾಮಾಂತರಗಳ ನಿಸರ್ಗ ರಮಣೀಯವಾದ ಲಾವಣ್ಯದ ಹೊಳಪಿದ್ದರೆ, ಫ್ರೆಂಚ ಸಾಹಿತ್ಯದ ಜನಪದ ಗೀತಗಳಲ್ಲಿ ರೋಮ್ಯಾಂಟಿಕ ಉತ್ಸಾಹವು ತುಂಬಿ ತುಳುಕುತ್ತದೆ. ಇಂಗ್ಲೆಂಡಿನಲ್ಲಿ ವಿಕ್ಟೋರಿಯನ್ ಯುಗದ ಸಾಹಿತ್ಯದಲ್ಲಿ ಸಮಕಾಲೀನ ಸಂದೇಹಗಳೂ, ಸಂಘರ್ಷಗಳೂ, ಜೀವನವು ಭದ್ರವಾಗಿರಬೇಕೆಂಬ ಹಂಬಲವೂ ತಮ್ಮ ಪ್ರಭಾವವನ್ನು ಬೀರದೆ ಇಲ್ಲ. ಇಪ್ಪತ್ತನೆಯ ಶತಮಾನದಲ್ಲಿ ನಾವು ಆಧ್ಯಾತ್ಮ ಶೂನ್ಯವಾದ ಈ ಪ್ರಪಂಚದ ಬರಡುತನವನ್ನು ನಿಷ್ಠುರವಾಗಿಯೂ, ಕಟುವಾಗಿಯೂ, ಸತ್ಯವಾಗಿಯೂ ಬಣ್ಣಿಸುವ ಇಲಿಯಟ್, ಮೆಕ್‌ನೀಸ್, ಮತ್ತು ಆಡೆನ್ ಅಪರ ಅತ್ಯಾಧುನಿಕ ಘಟ್ಟವನ್ನು ಮುಟ್ಟಿದ್ದೇವೆ.

ಪಾಶ್ಚಾತ್ಯ ಕಾವ್ಯದ ಪರಂಪರೆ ಯುಗದಿಂದ ಯುಗಕ್ಕೆ ಪರಿವರ್ತನೆಗೊಂಡು, ಯುಗ ಧರ್ಮಕ್ಕೆ ಪ್ರತಿಯಾಗಿ ಧ್ವನಿಯನ್ನು, ಸ್ಪಂದನವನ್ನು ವ್ಯಕ್ತಗೊಳಿಸಿರುವುದನ್ನೂ ಸಾಹಿತ್ಯಕ ಮೌಲ್ಯಗಳು ಬದಲಾವಣೆ ಹೊಂದಿರುವುದನ್ನೂ ಈ ಸ್ಥೂಲ ಪರಿಚಯದಿಂದ ನಾವು ನಿಷ್ಕರ್ಷಿಸಬಲ್ಲೆವು. ಕವಿ ತನ್ನ ಪರಂಪರೆಯಿಂದ ಪ್ರಭಾವಿತನಾಗುವುದು ಎಷ್ಟು ಸತ್ಯವೋ, ನೈಸರ್ಗಿಕವೋ ತನ್ನ ಕಾಲದ ಪರಿಸರದಿಂದಲೂ ಪರಿಣತನಾಗುವುದು ಅಷ್ಟು ನೈಸರ್ಗಿಕ. ಕವಿಯು ಪರಂಪರೆ ಮತ್ತು ಯುಗಮಾನಗಳ ಕೂಸು.

ಕವಿಯ ಸತ್ಯಾನುಭವ ಅಥವಾ ಸತ್ಯದರ್ಶನವು ಕವಿತೆಯ ಮೂಲ ಸ್ರೋತವೆಂದಾದರೆ ನಾವು ಅವನ ದೃಷ್ಟಿಯನ್ನರಿತು ಅದರಿಂದಲೇ ಸಕಲ ಕಲೆಗಳನ್ನು ಅಳೆಯಬೇಕಾಗುತ್ತದೆ. ಕವಿಯ ಮಾನಸ ಲೋಕದ ವಿಸ್ತಾರವನ್ನು, ಅಭ್ಯುದಯವನ್ನು, ಸಮುನ್ನತಿಯನ್ನು, ಚೇತನಶೀಲತೆಯನ್ನು ಅಳವಡಿಸಿಕೊಂಡ ಕವಿ ಸೃಷ್ಟಿಯೇ ಕವಿತೆ ಎಂದು ಕರೆಸಿಕೊಳ್ಳಲರ್ಹವಾದದ್ದು. ಸದಾ ಪ್ರವಹಿಸುತ್ತಿರುವ ಈ ಮಾನವ ಜೀವನದ ಮಹಾನದಿಗೆ ತಟಸ್ಥವಾದ ಸಾಹಿತ್ಯದಿಂದ ಯಾವ ಬಗೆಯ ನೆರವೂ ಒದಗಲೊಲ್ಲದು.

ಕನ್ನಡ ಸಾಹಿತ್ಯವನ್ನು ಅಖಿಲ ಭಾರತೀಯ ಸಾಹಿತ್ಯದ ಒಂದು ಅಂಗವಾಗಿ ಸ್ವೀಕರಿಸಿದರೆ ನಮ್ಮ ಭಾರತದಲ್ಲಿ ಸಂಚರಿಸಿದ ಎಲ್ಲ ಬಗೆಯ ಸಾಹಿತ್ಯಕ 'ಗಾಳಿ'ಗಳೂ ನಮ್ಮ ಸಾಹಿತ್ಯದ ಮೇಲೆ ಪರಿಣಾಮ ಬೀರಿರುವುದನ್ನು ನಾವು ನೋಡುತ್ತೇವೆ. ಕಾದಂಬರಿ, ಪ್ರಬಂಧ, ಭಾವಗೀತ, ಸಣ್ಣ ಕತೆ ಮುಂತಾಗಿ ಪಡುವಲ್ಲಿ ರೂಢವಾದ ಅನೇಕ ಲೇಖನ ಪ್ರಕಾರಗಳು ನಮ್ಮ ಸಾಹಿತ್ಯದಲ್ಲಿಯೂ ಏನೋ ಹೊಸತನ್ನು ತಂದಿವೆ ಎಂಬುದನ್ನು ಎಲ್ಲರೂ ಒಪ್ಪಲೇಬೇಕು. ಆಧುನಿಕ ಸಮಸ್ಯೆಗಳನ್ನು ನೇರವಾದ ರೀತಿಯಲ್ಲಿ, ನಿಷ್ಠುರವಾಗಿ, ಬಹು ಸಾಹಸದಿಂದ ವ್ಯಕ್ತಗೊಳಿಸುವ ತಂತ್ರವನ್ನೂ ನಾವು ಬೇಕಾದಷ್ಟು ಉಪಯೋಗಿಸಿಕೊಂಡಿದ್ದೇವೆ. ಆದರೆ ವಾಸ್ತವತೆಯ ಹಂಬಲದಿಂದ ಅಪಕ್ವ ಬುದ್ಧಿಯ ತರುಣ ತರುಣಿಯರ ಮನಸ್ಸನ್ನು ಒಮ್ಮೊಮ್ಮೆ ಕೆಟ್ಟ ದಾರಿಗೆ—ಅಥವಾ ಓಣಿಗೆ, ಒಯ್ಯುವ ಚಾಳಿಯು ಮಾತ್ರ, ಲೇಖಕನು ನಿಜವಾದ ಕಲೆಗಾರನಾದರೆ ಖಂಡಿತವಾಗಿಯೂ ತ್ಯಾಜ್ಯವೆನಿಸುತ್ತದೆ. ಲೋಕದಲ್ಲಿ,ಸಮಾಜದಲ್ಲಿ ಇರತಕ್ಕ ನೀತಿಯ ಮಾನ ದಂಡದಿಂದ ಸಾಹಿತ್ಯದಲ್ಲಿ 'ನೀತಿ' ಎಂಬುದು ಇರಬೇಕಾದ್ದೇನೂ ಇಲ್ಲವಾದರೂ, ಸಾಹಿತ್ಯಕ್ಕೆ ಒಂದು ಸ್ವಧರ್ಮವಿಲ್ಲವೇ? ಸ್ವನೀತಿ ಇಲ್ಲವೇ? ಸಮಾಜದಿಂದ ಅಥವಾ ಸಾಮಾಜಿಕನಾದ ಒಬ್ಬ ವ್ಯಕ್ತಿಯಿಂದ ಸೃಷ್ಟಿಯಾಗುವ ಸಾಹಿತ್ಯವು ನಿರಪೇಕ್ಷವಾಗಿರಲು ಸಾಧ್ಯವೇ? ಸಮಾಜದ ಆಯಾ ಘಟಕಗಳು ಅಥವಾ ವರ್ಗಗಳು ಅವುಗಳ 'ಧರ್ಮ'ದಿಂದಲೇ ನಡೆಯುವಂತೆ, ಸಾಹಿತ್ಯಕ್ಕೂ ಒಂದು ಒಳ ಧರ್ಮವುಂಟೆಂಬುದನ್ನು ನಾವು ಮರೆಯಬಾರದು.

ಒಟ್ಟಿನಲ್ಲಿ ಸಾಹಿತ್ಯವು ಸೌಂದರ್ಯಕ್ಕೆ ಉತ್ತರವಾದಿಯಾಗಿ ನಡೆಯತಕ್ಕದ್ದು. ಸಾಹಿತ್ಯದಲ್ಲಿ ಪ್ರವೇಶಿಸುವ ಎಲ್ಲ ವಿಚಾರಗಳನ್ನು ಈ ಸೌಂದರ್ಯವೆಂಬ ಒರೆಗಲ್ಲಿನಲ್ಲಿ ಹಚ್ಚಿಯೇ ನಾವು ಪರೀಕ್ಷಿಸಬೇಕಾಗುತ್ತದೆ. ಆದುದರಿಂದ ಇನ್ನಾವುದೂ—ಒಂದು ಕ್ಷುದ್ರ ಉದ್ದೇಶದಿಂದ ಪ್ರೇರಿತವಾಗಿಯೂ, ಪೂರಿತವಾಗಿಯೂ ಕವಿ ಕೃತಿಯೊಳಗೆ ನುಗ್ಗುವ ಅಂಶಗಳೆಲ್ಲವೂ—ತ್ಯಾಜ್ಯವಾಗುವುವು. ಮನೋರಂಜನೆ, ಸಂತೋಷವೆಂಬುದರ ಅರ್ಥವನ್ನು ಕೇವಲ ಬಾಹ್ಯ ಪರಿಣಾಮದಿಂದಲೇ ಅಲ್ಲದ ಅಂತರಂಗ ಪರಿಪಾಕದ ದೃಷ್ಟಿಯಿಂದಲೂ ನಾವು ನೋಡಬೇಡವೇ? ನಮ್ಮ ನಾಡಿನಲ್ಲಿ ಒಂದು ಹೊಸ ಯುಗವೇ ಆವಿರ್ಭವಿಸುವಾಗ ಎಚ್ಚೆತ್ತ ಕವಿಗೆ ವಸ್ತುವಿನ ಕೊರತೆಯುಂಟೇ? ವಿಜ್ಞಾನದ ವಿವಿಧ ವಿನ್ಯಾಸಗಳು ನಮ್ಮ ಜೀವನವನ್ನು ಕ್ಷಿಪ್ರಗತಿಯಿಂದ ಬದಲಾಯಿಸುತ್ತಿರುವ ವೇಳೆ ನೋಡುವ ಕಣ್ಣು, ಕೇಳುವ ಕಿವಿ, ಅರಿಯುವ ಹೃದಯವುಳ್ಳ ಕವಿಯು 'ಒಣ'ಗನ್ನು ಏಕೆ ಅರಸಿಕೊಂಡು ಹೋಗಬೇಕು? ನಮ್ಮ ಜನರನ್ನು ನಿರ್ವೀರ್ಯರನ್ನಾಗಿ ಮಾಡುವ ಸಾಹಿತ್ಯದ ಸ್ಥಾನದಲ್ಲಿ ನಮ್ಮ ತರುಣರ ಸಾಹಸ ಬುದ್ಧಿಯನ್ನು ಜಾಗೃತಗೊಳಿಸಿ, ಅವರು ಉನ್ನತ ಜೀವನವನ್ನು ನಡೆಸಲು ಪ್ರೇರಕವಾದ ಸಾಹಿತ್ಯವನ್ನು ನಾವು ಕೊಡಲಾರೆವೇ ಎಂದು ಕನ್ನಡದ ಮಹನೀಯ ಲೇಖಕರು ವಿಚಾರಿಸುವುದು ಶ್ರೇಯಸ್ಕರ.

Modern Studio

OPP: SANSKRIT COLLEGE,

UDIPI, S. KANARA.

Skilled Photographers

Portrait & Enlargement work

Our Speciality.

M. S. SHIRALI.

ಶ್ರೀ ಮನ್ಮಧ್ವಸಿದ್ಧಾಂತ ಗ್ರಂಥಾಲಯ

ಧಾರ್ಮಿಕ ಗ್ರಂಥಗಳಿಗೆ ತವರುಮನೆಯೆಂದು ಅರ್ಧಶತಮಾನದ ಖ್ಯಾತಿಯಿದೆ!

ಕನ್ನಡ ಯಕ್ಷಗಾನ ಪ್ರಸಂಗಗಳು
ಸಂಸ್ಕೃತ ಪುಸ್ತಕಗಳು
ಸ್ತೋತ್ರ ಪುಸ್ತಕಗಳು
ಹೆಂಗುಸರ ಹಾಡಿನ ಪುಸ್ತಕಗಳು
ಹಿಂದೀ ಪುಸ್ತಕಗಳು
ಇನ್ನೂ ಅನೇಕ ವಿಷಯಗಳ ಪುಸ್ತಕಗಳು.

* * *

ಒಡೆಯರು:
ಪಾವಂಜೆ ಗುರು ರಾವ್ ಅಂಡ್ ಸನ್ಸ್,
ಅಂಚೆ ಪೆಟ್ಟಿಗೆ ೧೬. ಉಡುಪಿ.

ನಿರೀಕ್ಷಿಸಿರಿ!

ನಕ್ಕರೂ ನಗಬಹುದು

ನವೀನ ಕಥಾ ಸಂಗ್ರಹ

ಯೋಜನೆಯಲ್ಲಿ ವಾಸ್ತವಿಕ ದೃಷ್ಟಿ ಮತ್ತು ಮುನ್ನೋಟ

(೧೧ನೇ ಪುಟದಿಂದ)

ಯೋಜನೆಯ ಕೆಲಸದ ಪರಿಣಾಮವಾಗಿ ರಾಷ್ಟ್ರೀಯ ಉತ್ಪನ್ನದಲ್ಲಿ ೬೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಮೊತ್ತವು ಮರಳಿ ಬಂಡವಾಳ ವಿನಿಯೋಗಕ್ಕೆ ದೊರಕಬಹುದು. ಆದರೆ ನಿಜವಾಗಿ ಇಷ್ಟು ಹಣವು ಸಿಗುತ್ತದೋ ಎಂಬ ಬಗ್ಗೆ ತಜ್ಞರು ಈಗಾಗಲೇ ಸಂಶಯತೋರಿಸಿರುತ್ತಾರೆ. ಸರಕಾರವು ಎತ್ತುತ್ತಿರುವ ಸಾಲಕ್ಕೆ ಜನರು ನೀಡುವ ಚಂದಾವು ಹಿಂದಿನ ಊಹೆಯೇ ಆಗಿದೆಯಾಗಲಿ, ಈಗ ಹೊಸದಾಗಿ ಕೇಳಬಿಸಿದ ಊಹೆಯಾಯವಲ್ಲ ಎಂದವರು ಎಚ್ಚರ ಹೇಳುತ್ತಾರೆ ಆದುದರಿಂದ ವಾಸ್ತವ ಅಂಶಗಳ ತಳಹದಿಯ ಮೇಲೆಯೇ ಮುಂದಿನ ಯೋಜನೆಯನ್ನು ರೂಪಿಸಬೇಕೆಂದು ಅವರು ಹೇಳುತ್ತಿ ಉಳಿಕೆ ಮತ್ತು ಬಂಡವಾಳ ಸಂಗ್ರಹಣೆ ಕಡೆಗೂ ಹೀಗೆ ಕೂಡಿಸಿದ ಹಣವನ್ನು ಆದಷ್ಟು ಬೇಗ ಅತಿ ಹೆಚ್ಚು ಪ್ರತಿಫಲ ಕೊಡುವ ಕೆಲಸದಲ್ಲಿ ವಿನಿಯೋಗಿಸಲೂ ಬೇಕೆಂದು ಸಲಹೆ ಮಾಡುತ್ತಾರೆ ಇದನ್ನು ಒಪ್ಪಿಕೊಂಡರೆ ರಾಷ್ಟ್ರೀಯ ಉತ್ಪನ್ನವನ್ನು ಅಧಿಕಗೊಳಿಸುವ ಹಾಗು ತನ್ಮೂಲಕ ಬಂಡವಾಳ ಶೇಖರಣೆಗೆ ಅನುಕೂಲವಾದ ವಾತಾವರಣವನ್ನು ಕಲ್ಪಿಸುವ ಕಾರ್ಯವೇ ನಮ್ಮ ಮುಂದಿನ ಮೂರು ನಾಲ್ಕು ಪಂಚವಾರ್ಷಿಕ ಯೋಜನೆಗಳ ಧ್ಯೇಯವಾಗಬೇಕಾಗುತ್ತದೆ. ಸಾಮಾಜಿಕ ಕಲ್ಯಾಣ ಮತ್ತು ನಿರುದ್ಯೋಗದ ಸಮಸ್ಯೆಗಳು ಗಂಭೀರವಿದ್ದರೂ ಪ್ರಕೃತ ಗೌಣ ವಿಷಯಗಳಾಗುತ್ತವೆ. ಏಕೆಂದರೆ ಇವಕ್ಕೆ ವ್ಯಯಿಸಿದ ಹಣವು ಮರಳಿ ಬಂಡವಾಳವಾಗಿ ಪರಿವರ್ತಿಸಲ್ಪಡುವ ಸಂಭವ ಅತ್ಯಲ್ಪವೇ ಆಗಿದೆ.

ಈ ಹಿನ್ನೆಲೆಯಲ್ಲಿಯೇ ಜಿಲ್ಲೆ ಅಥವಾ ಗ್ರಾಮಗಳ ಮಟ್ಟದಲ್ಲಿ ಮುಂದಿನ ಯೋಜನೆಯನ್ನು ಪುನರ್ಘಟಿಸಬೇಕೆನ್ನುವ ಸಾಮಾನ್ಯ ಅಭಿಪ್ರಾಯವನ್ನು ವಿಮರ್ಶೆಯ ಒರೆಗಲ್ಲಿಗೆ ಹಚ್ಚಬೇಕಾಗುತ್ತದೆ: ಭಾರತದಲ್ಲಿ ೩೦೦ ಜಿಲ್ಲೆಗಳಿವೆಯೆಂದೂ ೫ ಲಕ್ಷ ಹಳ್ಳಿಗಳಿವೆಂದೂ ಅಂದಾಜು. ಮುಂಬಯಿ ಕರ್ನಾಟಕದ ನಾಲ್ಕು ಕನ್ನಡ ಜಿಲ್ಲೆಗಳಿಗಾಗಿ ಒಟ್ಟು ೧೨೦ ಕೋಟಿ ರೂಪಾಯಿಗಳ ಯೋಜನೆಯ ಬೇಡಿಕೆಯನ್ನು ಈಚೆಗೆ ಅರ್ಥ ಸಚಿವರ ಮುಂದೆ ಪ್ರಾಥಮಿಕ ಆವಶ್ಯಕತೆಯಾಗಿ ಮಂಡಿಸಿರುವುದನ್ನು ನೋಡಿದರೆ, ಭಾರತವು ಪಂಚವಾರ್ಷಿಕ ಯೋಜನೆಗಳನ್ನು ಇನ್ನು ಹತ್ತಿಪ್ಪತ್ತು ವರ್ಷಗಳವರೆಗೆ ಪ್ರಾಶಸ್ತ್ಯಯುಕ್ತ ಮಟ್ಟದಲ್ಲಿ ಕಾರ್ಯಗತಗೊಳಿಸುತ್ತಾ ಹೋಗಬೇಕಾಗುವುದೆಂದು ಮನವರಿಕೆಯಾಗುತ್ತದೆ. ಹೀಗಿರುವುದರಿಂದ, ಉತ್ಪಾದಕ ವಿಷಯಗಳ ಕಡೆಗೆಯೇ ಪ್ರಾಧಾನ್ಯವನ್ನು ಸಲ್ಲಿಸಿ ಅವುಗಳಿಗೆ ಪ್ರಾಶಸ್ತ್ಯ ದೊರಕುವಂತೆಯೇ ನಾವು ಮೊದಮೊದಲು ನೋಡಬೇಕೆಂದು ಹೇಳಬಹುದು. ನಮ್ಮ ಸ್ಥಳೀಯ ಆವಶ್ಯಕತೆಗಳ ಪ್ರಾಶಸ್ತ್ಯಾನುಕ್ರಮವನ್ನು ನಾವೇ ಪರಸ್ಪರ ವಿಚಾರ ವಿನಿಮಯದಿಂದ ನಿರ್ಧರಿಸಿಕೊಂಡು ಅನುಭೋಗಕ್ಕಿಂತಲೂ ಬಂಡವಳ ನಿಯೋಜನೆಗೆ ಮಹತ್ವವನ್ನು ಸಲ್ಲಿಸಬೇಕೆಂದು. ಇದರ ಅರ್ಥ ಸುಖ ಸೌಕರ್ಯಗಳನ್ನು ಬಯಸುವವರು ಮೊದಲು ಸಮೃದ್ಧ ಪರಿಸ್ಥಿತಿಯನ್ನು ಸೃಷ್ಟಿಸಬೇಕೆಂಬ ವ್ಯಾವಹಾರಿಕ ತತ್ವಜ್ಞಾನವನ್ನು ನಾವಿಲ್ಲಿ ಧ್ಯೇಯವಾಗಿ ಪರಿಗ್ರಹಿಸುವುದೊಳಿತು.

— ಸಂಕಲಿತ.

The New Guardian of India
Life Insurance Company, Limited.
Head Office: **MADRAS.**
Estd· 1934.

BUSINESS IN FORCE exceeds 3¼ Crores.
EXCELLENT VALUATION RESULTS.

BONUS DECLARED:
Rs. 12 per thousand per annum on Wholelife with profit Policies.
&
Rs. 10 per thousand per annum on Endowment with profit Policies·

A Policy in this progressive Life Office is an excellent asset; its Agency is a valuable business connection.

For representation please apply to:
THE BRANCH MANAGER,
DIAMOND BUILDING,
HAMPANKATTA: **MANGALORE, S. K.**

ಮುದ್ದಾದ ಮುದ್ರಣಕ್ಕೆ
ಶಾರದಾ ಛಾಪಖಾನೆ
ಮಂಗಳೂರು ೧.

ಆಯುರ್ವೇದ ಔಷಧಗಳಿಂದ ತಯಾರು ಮಾಡಿದ
ರಾಮತೀರ್ಥ ಬ್ರಾಹ್ಮೀ ತೈಲ

ಆಯುರ್ವೇದ ಔಷಧ

ಸ್ಪೆಶ್ಯಲ್ ನಂ. ೧ (ರಜಿಸ್ಟರ್ಡ)

ಪ್ರಖ್ಯಾತ ಡಾಕ್ಟರರು, ವೈದ್ಯರು, ವಿದ್ವಾಂಸರು ಮತ್ತು ಅನೇಕ ಸ್ತ್ರೀ-ಪುರುಷರು ಈ ತೈಲದ ಪ್ರಶಂಸೆ ಮಾಡುತ್ತಾರೆ.

ಯಾಕೆಂದರೆ ಈ ತೈಲವು ಅನೇಕ ಬಗೆಯ ಲಾಭಗಳನ್ನು ಕೊಡುತ್ತದೆ. ಕಿವಿಯಲ್ಲಿ ಹಾಕಿದರೆ ಕಿವಿಯ ನರಗಳು ಸಶಕ್ತವಾಗಿ ಕಿವಿಯ ಕೆಲವು ರೋಗಗಳು ಗುಣವಾಗುತ್ತವೆ. ಶಾಂತವಾದ ನಿದ್ದೆ ಬರುತ್ತದೆ. ತಲೆನೋವು ನಿಲ್ಲುತ್ತದೆ. ಮಿದುಳು ಮತ್ತು ಕೂದಲಿಗೆ ಶ್ರೇಷ್ಠ.

ಸೂಚನೆ: ಪ್ರತಿಯೊಬ್ಬ ಸ್ತ್ರೀ, ಪುರುಷ ಮತ್ತು ಮಕ್ಕಳಿಗೆ ಈ ತೈಲವು (ಎಲ್ಲಾ ಋತುಗಳಲ್ಲಿ) ಅನುಕೂಲವಿದೆ. ಎಲ್ಲಾ ಕಡೆಯಲ್ಲಿ ಸಿಕ್ಕುತ್ತದೆ. ಇದೇ ಹೆಸರನ್ನೇ ಕೇಳಿರಿ.

ತೈಲದ ಕ್ರಯ: ದೊಡ್ಡ ಬಾಟ್ಲಿ ರೂ. ೩-೮-೦. ಸಣ್ಣ ಬಾಟ್ಲಿ ರೂ. ೨-೦-೦
ಪೋಸ್ಟ ಮುಖಾಂತರ ತರಿಸುವವರು ದೊಡ್ಡ ಬಾಟ್ಲಿಗೆ ರೂ. ೫-೧೨-೦ ಸಣ್ಣ ಬಾಟ್ಲಿಗೆ ರೂ. ೩-೧೩-೦ (ಪೇಕಿಂಗ ಖರ್ಚು ಮತ್ತು ಅಂಚೆವೆಚ್ಚ ಸೇರಿ) ಮನಿಯಾರ್ಡರಿನಿಂದ ಕಳುಹಿಸಬೇಕು. ವಿ. ಪಿ. ಮಾಡುವದಿಲ್ಲ.

ಶ್ರೀ ರಾಮತೀರ್ಥ ಯೋಗಾಶ್ರಮ
ದಾದರ (ಸೆಂಟ್ರಲ ರೇಲ್ವೆ) ಮುಂಬಯಿ, ೧೪.
Tl. N. 62809. ಟೆಲಿಗ್ರಾಮ: PRANAYAMA.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.
ಪ್ರಧಾನ ಕಚೇರಿ,] [ಮಂಗಳೂರು, ದ. ಕನ್ನಡ.

ನಿಮ್ಮ ಸಂಪಾದನೆಗೆ ಸಾಧ್ಯವಿರುವ ಮೊತ್ತಕ್ಕೆ ವಿಮೆ ಮಾಡಲು ಅನುಕೂಲವಿರುವ ಜಿಲ್ಲೆಯ ಏಕಮಾತ್ರ ಜನತಾ ಪ್ರೊವಿಡೆಂಟ್ ವಿಮಾ ಸಂಸ್ಥೆ.

ಆಕರ್ಷಕ ಶರ್ತಗಳಲ್ಲಿ ಏಜಂಟರು, ಸ್ಪೆಶ್ಯಲ್ ಏಜಂಟರು, ಆರ್ಗನೈಜರರು ಮತ್ತು ಇನ್ಸ್‌ಪೆಕ್ಟರರು ಎಲ್ಲೆಲ್ಲಿಯೂ ಬೇಕಾಗಿದ್ದಾರೆ.
ವಿವರಕ್ಕೆ ಬರೆಯಿರಿ:
ಬಿ. ಬಿ. ಶೆಟ್ಟಿ, ಬಿ.ಎ.,ಎಲ್‌ಎಲ್.ಬಿ.,
ಚೆಯರ್‌ಮೇನ್.

THE NEW KARNATAKA PROVIDENT
Insurance Co· Ltd.,
PAIS' BUILDING, **MANGALORE 1.**

ರಾಷ್ಟ್ರೀಯ ಸಂಸ್ಕೃತಿ - ಸ್ವಾತಂತ್ರ್ಯದ ಅಡಿಗಲ್ಲು

ಕೇವಲ ಭೌತಿಕ ವಿಕಾಸದಿಂದಲೇ ರಾಷ್ಟ್ರವು ಉನ್ನತಿಯನ್ನು ಹೊಂದಲಾರದು;
ತನ್ನ ಸ್ವಾತಂತ್ರ್ಯವನ್ನೂ ಕೊನೆಯವರೆಗೆ ಕಾಪಾಡಿಕೊಂಡು ಉಳಿಯಲಾರದು.
ಹೊಟ್ಟೆಯ ಪ್ರಶ್ನೆಯಷ್ಟೇ ಪ್ರಾಮುಖ್ಯತೆಯನ್ನು ಸಾಂಸ್ಕೃತಿಕ
ಪುನರುತ್ಥಾನಕ್ಕೂ ನಾವು ಕೊಡಬೇಕಾಗುವುದು.

ಹೊಟ್ಟೆ ಬಟ್ಟೆಯ ಚಿಂತೆಯೇ ಹೆಚ್ಚಾಗಿರುವ ಇಂದಿನ ಭಾರತದಲ್ಲಿ ಲಲಿತಕಲೆ, ನಾಟಕ, ಸಂಗೀತ, ಸಾಹಿತ್ಯಗಳ ಅಭಿವೃದ್ಧಿಯನ್ನು ಒತ್ತಾಯಿಸುವಾತ ತಪ್ಪು ಮಾಡುತ್ತಾನೆಂದೇ ಭಾವಿಸಲಾಗುತ್ತದೆ. ಆದರೆ, ರಾಷ್ಟ್ರದ ಪ್ರಗತಿಯ ಸುಂದರ ಚಿತ್ರವನ್ನು ನಿರೀಕ್ಷಿಸುವ ಯಾರೇ ಆದರೂ ಭೌತಿಕ ಸುಖದೊಡನೆ ಆಧ್ಯಾತ್ಮಿಕ ತೃಪ್ತಿಯನ್ನು ನೀಡುವ ಸಾಂಸ್ಕೃತಿಕ ಚಟುವಟಿಕೆಗಳನ್ನು ದುರ್ಲಕ್ಷಿಸುವುದು ಸಾಧ್ಯವಿಲ್ಲ. ಸ್ವತಂತ್ರ ಭಾರತದಲ್ಲಿ ಸರಕಾರದ ಗಮನ ಇತ್ತ ಎಷ್ಟು ಮಟ್ಟಿಗೆ ಹರಿದಿದೆ, ಭಾರತೀಯರು ಎಷ್ಟು ಮಟ್ಟಿಗೆ ಈ ಕ್ಷೇತ್ರದಲ್ಲಿ ಆಸಕ್ತಿ ವಹಿಸುತ್ತಿರುವರು ಎಂಬುದನ್ನು ವಿವೇಚಿಸಿದರೆ ಅಪ್ರಸ್ತುತವಾಗಲಾರದು.

ಭಾರತೀಯ ಧುರೀಣರು ತಮ್ಮ ಸಾರ್ವಜನಿಕ ಭಾಷಣಗಳಲ್ಲಿಯೂ ಲೇಖನಗಳಲ್ಲಿಯೂ ಭಾರತದ ಪ್ರಾಚೀನ ವೈಭವವನ್ನು ವರ್ಣಿಸುವ ಹುಮ್ಮಸ್ಸಿನಲ್ಲಿ ಇಲ್ಲಿಯ ಚಿತ್ರ, ವಾಸ್ತು ಶಿಲ್ಪ, ಸಂಗೀತ ಸಾಹಿತ್ಯ. ನಾಟ್ಯಕಲೆಗಳ ವಿಷಯದಲ್ಲಿ ತುಂಬ ಒಳ್ಳೆಯ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಕಲಾವಿದರಿಗೆ ಸಾಹಿತಿಗಳಿಗೆ, ಸಂಗೀತಗಾರರಿಗೆ, ನರ್ತಕರಿಗೆ ಪ್ರೋತ್ಸಾಹ ದೊರಕಬೇಕೆಂದು ಅಭಿಪ್ರಾಯ ಪಡುತ್ತಾರೆ. ಪ್ರಸಿದ್ಧ ಕಲಾಕೋವಿದರ ಚಿತ್ರ ಸಂಗ್ರಹದ ಉದ್ಘಾಟನೆಯನ್ನು ಮಾಡಲು ಮಂತ್ರಿ ಮಹೋದಯರು ಅಭಿಮಾನ ಪಡುತ್ತಾರೆ. ಸಾಹಿತ್ಯ ಕೃತಿಗಳಿಗೆ ಮುನ್ನುಡಿಯ ಕುಂಕುಮ ಬೊಟ್ಟನ್ನಿಡಲು, ಸಂಗೀತ ಕಚೇರಿಯ ಅಧ್ಯಕ್ಷತೆಯನ್ನು ವಹಿಸಲು ನಮ್ಮ ಜನನಾಯಕರು ನಾಚುವುದಿಲ್ಲ. ನಾಟಕ ಗೃಹದ ಅಡಿಗಲ್ಲನ್ನು ಇಡುವ ಕೆಲಸ ತಮಗೊಂದು ಭೂಷಣವೆಂದೇ ಅವರ ಗ್ರಹಿಕೆ. ಹೀಗಿದ್ದರೂ ಮುಕ್ತಹಸ್ತದಿಂದ ನೆರವು ನೀಡುವ ಮಾತು ಬಂದಾಗಲೆಲ್ಲ ತಾವು ಸಿಕ್ಕಿ ಬೀಳದೆ, ಸರಕಾರವನ್ನೂ ಪೇಚಿನಲ್ಲಿ ಸಿಲುಕಿಸದೆ "ಜನತೆಯ ಪ್ರೋತ್ಸಾಹ"ದ ಆವಶ್ಯಕತೆಗೆ ಜೋರು ಕೊಡುತ್ತಾರೆ. ತಾವಾಗಿ ಒಂದು ಚಿತ್ರ ಸಂಗ್ರಹವನ್ನು ಕೊಂಡುಕೊಳ್ಳುವುದಿಲ್ಲ; ಸಂಗೀತ ಸಾಧಕನಿಗೆ ಗೌರವ ಹಣ ಕೊಡುವುದಿಲ್ಲ; ಸಾಹಿತ್ಯ ಕೃತಿಯನ್ನು ಕೊಂಡು ಓದುವುದಿಲ್ಲ.

—ಸಾಮಾನ್ಯವಾಗಿ ಮೇಲಿನ ಮಾತುಗಳನ್ನು ಟೀಕಾಕಾರರಿಂದ ಕೇಳುತ್ತಿದ್ದೇವೆ. ಇದರಲ್ಲಿ ಸತ್ಯಾಂಶ ಇಲ್ಲವೆನ್ನಲಾಗುವುದಿಲ್ಲ. ತಮ್ಮ ವ್ಯಕ್ತಿಗತ ಪ್ರತಿಷ್ಠೆಯನ್ನು ವ್ಯಕ್ತಗೊಳಿಸುವುದಕ್ಕಾಗಿಯೇ ಮಂತ್ರಿಗಳೂ ಸಾರ್ವಜನಿಕ ಧುರೀಣರೂ ಇಂತಹ ಚಟುವಟಿಕೆಗಳಲ್ಲಿ ಭಾಗವಹಿಸುವರೇ ಹೊರತು, ನಿಜವಾದ ಆಸಕ್ತಿ ಅವರಲ್ಲಿಲ್ಲ ಎಂಬ ಮಾತಾದರೂ ನಿಜವಿದ್ದೀತು. ಆದರೆ ನಾವಿಲ್ಲಿ ಕೆಲವೇ ಜನರನ್ನು ದೂರಿದರೆ ಪ್ರಯೋಜನವಾಗದು. ರಾಷ್ಟ್ರದ ಒಟ್ಟು ಪರಿಸ್ಥಿತಿಯನ್ನು ವಿಮರ್ಶಿಸಬೇಕು. ರಾಷ್ಟ್ರಜೀವನದ ಒಲವು ಪ್ರವಹಿಸುತ್ತಿರುವ ದಿಕ್ಕನ್ನು ಗುರುತಿಸಬೇಕು. ಆಗ ನಮಗೆ ನೂರೈವತ್ತು ವರ್ಷಗಳ ಬ್ರಿಟಿಷ ಆಡಳಿತವು ನಮ್ಮ ದೇಶದ ಕಲಾವಿದರನ್ನು ಮೂಲೆಗುಂಪು ಮಾಡಿತೆಂದು ಗೊತ್ತಾಗುತ್ತದೆ. ಜೀವನದ ಪ್ರಾಥಮಿಕ ಆವಶ್ಯಕತೆಗಳ ಪೂರ್ತಿಯಾದ ಬಳಿಕವೇ ಸಾಹಿತ್ಯ ಸಂಸ್ಕೃತಿಯ ರಸವ್ಯಂಜಕತೆಯನ್ನು ಅರ್ಥ ಮಾಡಿಕೊಳ್ಳಲು ನಮಗೆ ಸಾಧ್ಯವಾಗುತ್ತದೆ. ಹಸಿವಾಗುವಾಗ ಕಣ್ಣು ಕತ್ತಲೆ ಬರುತ್ತದೆಯೇ ಹೊರತು, ಸಂಜೆಯ ಸೊಬಗನ್ನು ಕಣ್ಣು ನೋಡಲಾರದು. ಹೊಟ್ಟೆಯ ಆ ಕ್ರಂದನವೇ ಕೇಳುವುದಲ್ಲದೆ ಸಂಗೀತಗಾರನ ರಾಗಾಲಾಪನೆಯಲ್ಲ. ನಡುಗುತ್ತಿರುವ ತನ್ನ ಕೈಕಾಲುಗಳಿಗಾಗಿ ಅವನು ಮರುಗುವನೇ ಹೊರತು, ನರ್ತಕಿಯ ಮೋಹಕ ಭಂಗಿಯನ್ನು ಆತ ಗಮನಿಸುವುದಿಲ್ಲ. ಸಾಮಾನ್ಯ ಭಾರತೀಯನ ಪರಿಸ್ಥಿತಿಯನ್ನು ಇಂದಿನ ದಯನೀಯ ಮಟ್ಟಕ್ಕೆ ಬ್ರಿಟಿಷರೇ ತಂದು ಮುಟ್ಟಿಸಿದರು. ಅವರು ನಮ್ಮ ವಿದ್ಯೆಯನ್ನು ಸಂಸ್ಕೃತಿಯನ್ನು, ಸೌಂದರ್ಯ ಸೃಷ್ಟಿಯೇ ಮೂಲವಾದ ಆಧ್ಯಾತ್ಮಿಕ ಭಾವನೆಯನ್ನು ಸುಟ್ಟು ಕಮರಿಸಿದರು.

ಇದನ್ನು ಕಂಡು ದ್ವೇಷದಿಂದ ನಾವು ಹಾಗೆ ಹೇಳುತ್ತಿದ್ದೇವೆಂದು ತೋರೀತು — ಬ್ರಿಟಿಷರೊಡನೆ ನಾವು ಸ್ನೇಹದಿಂದಲೇ ಇರುತ್ತೇವೆ; ಆದರೆ ಪರಕೀಯ ಆಡಳಿತೆ ನಮ್ಮ ಸರ್ವಸ್ವವನ್ನು ನಾಶ ಮಾಡಿತೆಂದು ಸ್ಪಷ್ಟವಾಗಿಯೇ ದೂರುತ್ತೇವೆ, ಎಂದು ಈ ಆಕ್ಷೇಪವನ್ನು ಉತ್ತರಿಸುವುದು ಸೂಕ್ತ. ನಮ್ಮ ಇಂದಿನ ಶಿಕ್ಷಣ ಕಾರಕೂನಿಕೆಯ ಮೋಹವನ್ನು ಹುಟ್ಟಿಸುತ್ತಿದೆಯೇ ಹೊರತು ಸೌಂದರ್ಯ ಪ್ರಜ್ಞೆಯನ್ನು ಪೋಷಿಸುವುದಿಲ್ಲ. ನಮ್ಮ ಬಡತನ ಮತ್ತು ದಾರಿದ್ರ್ಯಗಳು ಹಳ್ಳಿಯ ಕಲಾವಿದರ ವಸ್ತುಗಳನ್ನು ಕೊಂಡು ಪ್ರೋತ್ಸಾಹಿಸುವುದಕ್ಕೆ ಆತಂಕವನ್ನೊಡ್ಡುತ್ತವೆ. ವೇದ ಕಾಲದಲ್ಲಿ ಸಂಸ್ಕೃತಿಯ ಪೋಷಕರಾಗಿದ್ದ ಋಷಿ ಮುನಿಗಳ ಹೊಟ್ಟೆ ಬಟ್ಟೆಯ ವ್ಯವಸ್ಥೆಯನ್ನು ರಾಜನೂ ಪ್ರಜೆಗಳೂ ಕೂಡಿಯೇ ಮಾಡುತ್ತಿದ್ದರು. ಎಂತಲೇ ದ್ಯುಲೋಕಕನ್ನು ಸೃಷ್ಟಿಗೊಳಿಸುವ ನಾದ ಸಂಚಾರದಿಂದ ಉನ್ಮಾದವನ್ನುಂಟು ಮಾಡುವ ಸಂಗೀತಗಾರನ ಕೌಶಲ್ಯವನ್ನು ಹಾಡಲು ವೈದಿಕ ಋಷಿಗಳಿಗೆ ಸಾಧ್ಯವಾಯಿತು. ಬ್ರಿಟಿಷರ ಕಾಲಕ್ಕೆ ಮುಂಚೆ ದೇಶವನ್ನು ಆಳುತ್ತಿದ್ದ ಅನೇಕ ರಾಜ ಮಹಾರಾಜರು ತಮ್ಮ ಆಸ್ಥಾನದಲ್ಲಿ ಕಲಾವಿದರನ್ನೂ ಸಾಹಿತಿಗಳನ್ನೂ ಗೌರವಿಸಿ, ಅವರನ್ನು ಜೀವಮಾನವಿಡೀ ಸಾಕುತ್ತಿದ್ದರು. ಎಂತಲೇ ಅಜಂತದ ಭಿತ್ತಿ ಚಿತ್ರಗಳು, ಬೇಲೂರಿನಲ್ಲಿ ಶಿಲಾಬಾಲಿಕೆಗಳು, ನಾಟ್ಯ ಹಾಗು ಸಂಗೀತ ಶಾಸ್ತ್ರಗಳು ನಶಿಸದೆ ಬದುಕಿಕೊಂಡವು. ನಿತ್ಯ ಸ್ಫೂರ್ತಿಯ ಸ್ರೋತಗಳಾದ ಸಾಹಿತ್ಯಕೃತಿಗಳು ಆವಿರ್ಭವಿಸಿದವು. ಇತಿಹಾಸದ ಪುಟಗಳನ್ನು ಸಾಂಸ್ಕೃತಿಕ ಪರಂಪರೆಯೇ ಬರೆಯಿತೆನ್ನಬಹುದು—ಶಿಲೆಯಲ್ಲಿ ಧರ್ಮಚಕ್ರವನ್ನೂ ಸಿಂಹ ಮುಖವನ್ನೂ ಕೆತ್ತಿದ ಎರಡು ಸಾವಿರಕ್ಕೂ ಹಿಂದಿನ ಶಿಲ್ಪಿ ಇಂದಿನ ಭಾರತೀಯರ ಮುಂದೆ ಅಶೋಕನ ಆದರ್ಶವನ್ನು ಮಂಡಿಸಲು ಸಮರ್ಥನಾದನು.

ರಾಷ್ಟ್ರೀಯ ಚಾರಿತ್ರ್ಯವನ್ನು ಈ ರೀತಿ ಪರಂಪರಾಗತವಾಗಿ ಬೆಳೆಸಿಕೊಂಡು ಬರುವುದೇ ಸಂಸ್ಕೃತಿಯ ವೈಶಿಷ್ಟ್ಯ: ವಾಲ್ಮೀಕಿ ಈಗ ಇಲ್ಲ—ಆದರೆ ಅವನ ರಾಮಾಯಣ ಕಲ್ಪಾಂತದ ವರೆಗೆ ಬಾಳುತ್ತದೆ. ಜಕಣಾಚಾರಿ ಎಂದೋ ತೀರಿ ಹೋದನು — ಅವನ ಶಿಲ್ಪ ಕೌಶಲ್ಯ ಚಿರಾಯುವಾಗಿ ಉಳಿಯುತ್ತದೆ. ತಾನಸೇನನ ದಿನಗಳು ಸಂದವು—ಆದರೆ ಸಂಗೀತ ಎಂದೆಂದಿಗೂ ಚೇತನದಾಯಿಯಾಗುತ್ತದೆ. ಭರತ ಮುನಿಯು ಪ್ರವರ್ತಿಸಿದ ನಾಟ್ಯ ಅವನ ಬಳಿಕದ ಸಾವಿರಾರು ವರ್ಷಗಳಲ್ಲಿ ಅಭಿನಯಿಸಲ್ಪಟ್ಟು ನೇತ್ರಾನಂದವನ್ನುಂಟು ಮಾಡುತ್ತದೆ. ತಕ್ಕ ಆವರಣವನ್ನು ನಾವು ರೂಪಿಸಿಕೊಂಡರೆ ಮಾತ್ರ ನಾವು ಸಂಸ್ಕೃತಿಯ ರಕ್ಷಣೆ ಮಾಡಲು ಸಮರ್ಥರಾಗುತ್ತೇವೆ. ಬ್ರಿಟಿಷ ಕಾಲ ಸಂದ ಮೇಲಿನ ಈ ದಿನದಲ್ಲಿ ಭಾರತ ಮುನ್ನಡೆಯ ಕಲ್ಪನೆಯನ್ನು ಮಾಡಬಲ್ಲ ಸರಕಾರ ಹುಟ್ಟಿದರೂ ಸಿಗಲಿಕ್ಕಿಲ್ಲ. ಶುಷ್ಕ ನಾರವಟ್ಟೆಯಂತೆ ಬೋಧನ ಕೊಡುವ ನಮ್ಮ ಶಾಲಾ ಕಾಲೇಜುಗಳು ರಸಿಕತೆಯ ಭಾವನೆಯನ್ನು ಸ್ವಲ್ಪವೂ ಪೋಷಿಸುವುದಿಲ್ಲ. ಸಂಗೀತವೆಂದರೆ ಸಿನೆಮಾ ಹಾಡು, ನರ್ತ

(೨೦ನೇ ಪುಟ ನೋಡಿರಿ)

ಚಂದಾದಾರರಲ್ಲಿ ಬಿನ್ನಹ

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 33ನೆಯ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ 34ನೆಯ ಹೊಸ ವರ್ಷವು ಆರಂಭವಾಗುತ್ತದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಚಂದಾಹಣವನ್ನು (ಬಾಕಿ ಇದ್ದರೆ ಅದನ್ನು ಕೂಡ) ಕಳುಹಿಸಿ ಕೊಡುವಂತೆ ಕೋರುತ್ತೇವೆ. ವಿ. ಪಿ. ಪಿ ಮಾಡುವುದರಿಂದ ಹತ್ತು ಆಣೆಯಷ್ಟು ನಷ್ಟ ಸಂಭವಿಸುತ್ತದಾದ್ದರಿಂದ ಸರ್ವರೂ ಬಾಕಿಯನ್ನು ಮುಂದಾಗಿ ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ROYAL MAHAL
(REGD.)
UDIPI, S. K.
BOARDING & LODGING HOUSE.
If ever you require a comfortable stay and delicious Vegetarian meal at Udipi,
Contact us:
PROPRIETOR:
K. VENKATRAMANA BHAT.
ಪ್ರವಾಸಿಕರಿಂದೆಲ್ಲ ಮೆಚ್ಚಿಗೆ ಪಡೆದ
ಉಡುಪಿಯ
ಅತ್ಯುತ್ತಮವೂ ಅತ್ಯಾಧುನಿಕವೂ ಆದ
ಭೋಜನ ಮತ್ತು ವಸತಿಗೃಹ.
ರಾಯಲ್ ಮಹಲ್,
ಉಡುಪಿ.
ಕೆ. ವೆಂಕಟ್ರಮಣ ಭಟ್ಟ,
ಮ್ಹಾಲಕ.

(೧ನೇ ಪುಟದಿಂದ)

ಅದಕ್ಕೆ ಸರಿಯಾಗಿ ತಾತ್ವಿಕವಾಗಿ ವಸಾಹತು ವಿರೋಧಿಯಾಗಿರುವ ಕೂಲಿಕಾರರ ಪಕ್ಷವೂ ಅಧಿಕಾರಕ್ಕೆ ಬಂತು. ತಮ್ಮ ಮನೆಯೇ ಸರಿಯಿಲ್ಲದಿದ್ದಾಗ ಇತರರ ಹೊಣೆಗಾರಿಕೆಯನ್ನು ಹೊರುವುದು ಅಸಾಧ್ಯವಾಗಿ ಅವರಿಗೆ ತೋರಿತು. ಆಗ ಭಾರತದಲ್ಲಿ ಉಗ್ರವಾದ ರಾಷ್ಟ್ರೀಯವಾದ ತಲೆದೋರಿತ್ತು. ಬರ್ಮಾವಂತೂ ಜಪಾನಿನ ಆಡಳಿತೆಯೊಳಗಿದ್ದ ದೇಶ. ಎಂತಲೇ ಕೂಲಿಕಾರ ಪಕ್ಷ ಸಿಂಹಳ, ಭಾರತ (ಪಾಕಿಸ್ತಾನ ಕೂಡಾ), ಬರ್ಮಾಗಳಿಗೆ ಸ್ವರಾಜ್ಯವನ್ನಿತ್ತಿತು.

ಇದಕ್ಕೆ ಸ್ವಲ್ಪ ಸಮಯಕ್ಕೆ ಹಿಂದೆ ಇಂಗ್ಲೆಂಡಿನ ಮಹಾರಾಜರ ಸಾಮ್ರಾಜ್ಯವನ್ನು ದಿವಾಳಿ ಮಾಡುವುದಕ್ಕೆ ತಾನು ಕಾರಣನಾಗಲಾರೆ ಎಂದಿದ್ದ ಪ್ರಧಾನಿ ಚರ್ಚಿಲ್ಲರು, ಈ ಮಸೂದೆಯು ಚರ್ಚೆಯಾಗುವಾಗ ತಾನು ಕೇವಲ ಹತ್ತಿಪ್ಪತ್ತು ಸಾವಿರ ಸೈನಿಕರ ಬಲದಲ್ಲಿ ಇನ್ನೂ ಭಾರತವನ್ನು ಆಳುತ್ತಿದ್ದೆ ಎಂದು ಅರಣ್ಯರೋದನ ಮಾಡಿದರು.

ಅಷ್ಟರಲ್ಲಿ ಇಂಡೋನೇಷಿಯಾದಲ್ಲಿದ್ದ ಡಚ್ಚರ ವಿರುದ್ಧ ಅಲ್ಲಿಯ ರಾಷ್ಟ್ರೀಯ ಚಳವಳ ಆರಂಭವಾಯಿತು. ಕೊನೆಗೆ ಡಚ್ಚರು ಅಲ್ಲಿಂದ ಕಾಲು ಕಿತ್ತರು.

ಫ್ರೆಂಚರ ಆಡಳಿತೆಯ ಇಂಡೋಚೀನದಲ್ಲಿ ಏಳು ವರ್ಷಗಳಿಂದ ಯುದ್ಧ ನಡೆಯುತ್ತಿತ್ತು. ರಾಷ್ಟ್ರೀಯ ಚಳವಳವು ಕಮ್ಯುನಿಸ್ಟ್ ನಾಯಕ ಹೋಚಿಮಿನ್‌ರ ಮುಂದಾಳತ್ವದಲ್ಲಿ ನಡೆಯಿತು. ಫ್ರೆಂಚರ ಸಾಮರ್ಥ್ಯ ಅಲ್ಲಿಯೂ ಪೂರ್ಣ ಬಾಳಿಯಾದರೂ ಅಮೇರಿಕ ಅವರ ಸಹಾಯಕ್ಕೆ ಬಂತು. ಕಳೆದ ತಿಂಗಳಲ್ಲಿ ಹೇಗೋ ಅಲ್ಲಿ ಯುದ್ಧ ವಿರಾಮವಾಗಿದೆ. ಫ್ರೆಂಚರು ಜಾಗೃತಗೊಂಡ ರಾಷ್ಟ್ರೀಯ ಚಳವಳವನ್ನು ಮನ್ನಿಸಿ ಇಂಡೋಚೀನದ ಸ್ವಾತಂತ್ರ್ಯಕ್ಕೆ ತಲೆಬಾಗಬೇಕಾಗಿ ಬಂದಿದೆ.

ಬ್ರಿಟಿಷರಿಗೆ [illegible] ವಸಾಹತುಗಳ [illegible] ಕೇಳಿಲ್ಲ. ಮಲಯಾದಲ್ಲಿ [illegible] ರಬ್ಬರ್ ಮತ್ತು ತವರಗಳ ಉತ್ಪತ್ತಿಗಳನ್ನು ಕಾಯುವುದಕ್ಕಾಗಿ ದೊಡ್ಡ ಸನ್ನಾಹವನ್ನೇ ಮಾಡುತ್ತಿದ್ದಾರೆ. ಆದರೆ ಅಲ್ಲಿಯೂ ಅವರು ಸೋಲುವ ಹೋರಾಟವನ್ನೇ ನಡೆಸುತ್ತಾರೆನ್ನಲು ಅಡ್ಡಿಯಿಲ್ಲ. ಇಂಡೋಚೀನ ಯುದ್ಧವು ಮುಕ್ತಾಯವಾದ ಬಳಿಕ ಚೀನೀ ಕಮ್ಯುನಿಸ್ಟರು ಮಲಯದ ಮೇಲೆ ಕಣ್ಣು ಹಾಕದಿರಲಿಕ್ಕಿಲ್ಲ.

ಫ್ರೆಂಚರು ಇಂಡೋಚೀನವನ್ನು ಕೈಬಿಟ್ಟ ಬಳಿಕ ಭಾರತದಲ್ಲಿರುವ ಪಾಂಡಿಚೇರಿ, ಕರೈಕಲ್‌ಗಳನ್ನು ಬೇಗನೆ ತೊಲಗದಿರಲಿಕ್ಕಿಲ್ಲ. ಮಾಹೆಯನ್ನಂತೂ ಅವರು ಮೌನವಾಗಿ ಬಿಟ್ಟುಕೊಟ್ಟರು. ಪೋರ್ತುಗೀಸರು ಮಾತ್ರ ಗೋವೆ ಮತ್ತಿತರೆಡೆ ಜೀವಸ್ತ್ರರು ಹೋರಾಟಕ್ಕೆ ಸಿದ್ಧರಿರುವರೋ ನೋಡಬೇಕು.

ಏಷ್ಯಾದ ಮೇಲೆ ಯುರೋಪಿನ ವರ್ಚಸ್ಸು ಮಾಯವಾಗುತ್ತಿರುವಾಗ ಅಮೇರಿಕಕ್ಕೆ ಏಷ್ಯವು ಕಮ್ಯುನಿಸ್ಟರ ಪಾಲಾಗುತ್ತದಲ್ಲಾ ಎಂಬ ಹೆದರಿಕೆ ಹಿಡಿದಿದೆ. ಅಮೇರಿಕವು ಏಷ್ಯದಲ್ಲಿ ತನ್ನ ಪ್ರಭಾವವನ್ನು ಹೆಚ್ಚಿಸಲು ಹತ್ತಿಪ್ಪತ್ತು ವರ್ಷಗಳಿಂದ ಹವಣಿಸಿದೆ. ಅತ್ಯಂತ ಅಪ್ರಿಯ ವ್ಯಕ್ತಿಗಳ ಸಹವಾಸವನ್ನು ಮಾಡಿದೆ. ಚಿಯಾಂಗ್ ಕೈಷೇಕ್, ಬಾವೊ ಡಾಯಿ ಮುಂತಾದವರಿಗೆ ಕೋಟಿಗಟ್ಟಲೆ ಡಾಲರುಗಳ ಸೈನ್ಯ, ಶಸ್ತ್ರಾಸ್ತ್ರ ಸಹಾಯವನ್ನು ಕೊಟ್ಟಿದೆ. ಆದರೆ ಈ ತನಕ ಅದರ ಯತ್ನ ಒಂದೂ ಫಲಕಾರಿಯಾಗಿಲ್ಲ. ಚಿಯಾಂಗ್ ಕೈಷೇಕ್ ಚೀಣವನ್ನು ಬಿಟ್ಟು ಓಡಿಹೋಗಿ ಫಾರ್ಮೋಸಾ ದ್ವೀಪವನ್ನು ಆಶ್ರಯಿಸಿದ್ದಾರೆ - ಐದು ವರ್ಷಗಳ ಹಿಂದೆ. ಆದರೂ ಅಮೇರಿಕವು ಅವರೇ ತಾಜಾ ಚೀಣೀ ಮುಖಂಡನೆಂದು ಹೇಳುತ್ತಿದೆ; ಮಾತ್ರವಲ್ಲ, ಕಮ್ಯುನಿಸ್ಟ್ ಚೀಣಕ್ಕೆ ಸಂಯುಕ್ತ ರಾಷ್ಟ್ರ ಸಭೆಯಲ್ಲಿ ಕೂಡಾ ಪ್ರಾತಿನಿಧ್ಯ ದೊರಕದಂತೆ ಉಷ್ಟ್ರ ಪಕ್ಷಿಯ ವಾದವನ್ನು ಮಾಡುತ್ತಿದೆ. ಇಂಡೋಚೀಣಾ ಒಪ್ಪಂದದ ಕುರಿತೂ ಅದು ತನ್ನ ಅಸಮಾಧಾನವನ್ನು ವ್ಯಕ್ತಪಡಿಸಿದೆ.

ಮುಕ್ತ ಜಗತ್ತಿನ ನಾಯಕನೆಂದು ಹೇಳಿಕೊಳ್ಳುವ ಈ ಅಮೇರಿಕಕ್ಕಿರುವ ಏಷ್ಯದ ಮೇಲಿನ ಆಸಕ್ತಿಯು ಹಿತಕರವಲ್ಲವೆಂಬುದು ನಮಗೆ ಗೊತ್ತಾಗಿದೆ. ನಮಗೂ ಪಾಕಿಸ್ತಾನಕ್ಕೂ ಕಾಶ್ಮೀರವೇ ಮೊದಲಾದ ಹಲವು ಸ್ಫೋಟಕ ಸ್ವಭಾವದ ಕಲಹಗಳಿರುವಾಗ ಅಮೇರಿಕ ಒಮ್ಮೆಲೇ ತನ್ನ ಸೈನ್ಯ ಸಹಾಯವನ್ನು ಪಾಕಿಸ್ತಾನಕ್ಕೆ ಅರ್ಪಿಸಿ ಬಿಟ್ಟಿದೆ. ಈಗಾಗಲೇ ಅದು ಪಾಕಿಸ್ತಾನಕ್ಕೆ ತನ್ನ ಸೇನಾನಿಗಳನ್ನು ಕಳಿಸಿರಬೇಕು ಅಲ್ಲದೆ ಈಗೀಗ ಪ್ರತ್ಯಕ್ಷವಾಗಿ ಅದು ಪಾಕಿಸ್ತಾನಕ್ಕೆ ಭಾರತದ ವಿರುದ್ಧ ಪಕ್ಷಪಾತ ಮಾಡುತ್ತಲಿರುವುದು ಸ್ಪಷ್ಟವಾಗಿದೆ. ಪಾಕಿಸ್ತಾನವಂತೂ ಅಮೇರಿಕದ ಕೈಗೊಂಬೆಯಾಗಿ ಬಿಟ್ಟಿದೆ. ಈಗಲೇ, ಅಲ್ಲಿಂದ ಸೇನಾನಿಗಳು ಬರುತ್ತಾರೆಂಬ ಸುದ್ದಿಯಾಗುವಾಗಲೇ, ಪಾಕಿಸ್ತಾನ ಸರಕಾರ ಪಶ್ಚಿಮ ಪಾಕಿಸ್ತಾನದಲ್ಲಿ ಅಮೇರಿಕನ್ನರ "ಶತ್ರು"ವಾದ ಕಮ್ಯುನಿಸ್ಟ್ ಪಕ್ಷವನ್ನು ನ್ಯಾಯಬಾಹಿರವೆಂದು ಸಾರಿದೆ. ತನ್ಮಧ್ಯೆ ಕಾಶ್ಮೀರವನ್ನು ತನ್ನ ಕೈಯೊಳಗೆ ಸೇರಿಸಿಕೊಳ್ಳಬೇಕೆಂದು ಅಮೇರಿಕವು ಮಾಡಿದ ಒಳಸಂಚೂ ಅದರ ಧ್ಯೇಯ—ಉದ್ದೇಶಗಳ ಸೂಚನೆಯಾಗಿದೆ, ಮಾದರಿಯಾಗಿದೆ. ಎಲ್ಲ ಬಿಟ್ಟು ಗೋವೆಗೆ ಕೂಡಾ ಅಮೇರಿಕದಿಂದ ಶಸ್ತ್ರಾಸ್ತ್ರ ಸಾಮಾಗ್ರಿಗಳು ಬಂದಿದ್ದುವೆಂದು ವರ್ತಮಾನವಿದೆ!

ಏಷ್ಯ ಖಂಡವು ಏಷ್ಯನರಿಗೇ ಆಗುವ ಕಾಲ ಈಗ ಬಂದಿದೆ. ಪರರಾಷ್ಟ್ರಗಳೆಷ್ಟು ಕುತಂತ್ರಗಳನ್ನು ಮಾಡಲಿ, ಏಷ್ಯದ ಮೇಲಿದ್ದ ಅವುಗಳ ಸಂಮೋಹಿನಿ ಶಕ್ತಿಯು ಮಾಯವಾಗಿ ಹೋಗಿದೆಯೆಂಬುದು ಸ್ವತಃ ಸಿದ್ಧ. ಅಲ್ಲದೆ ಏಷ್ಯದ ರಾಷ್ಟ್ರಗಳು ಶೀಘ್ರವಾಗಿ ಜಾಗೃತಗೊಂಡು ಬೆಳೆಯುತ್ತಿವೆ ಎಂಬುದೂ ಗಮನಾರ್ಹ. ಹಾಗೂ ಇತರರಿಗೆ ಎಚ್ಚರಿಕೆಯ ಸಂಗತಿ.

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

"ಏಶಿಯದಿಂದ ತೊಲಗಿರಿ"

ಭಾರತವು ಸ್ವತಂತ್ರಗೊಳ್ಳುವುದಕ್ಕೆ ಮುಂಚೆಯೇ - ಪ್ರಾಯಶಃ ೧೯೪೫ರಲ್ಲಿ - ಸೆರೆಮನೆಯಿಂದ ಹೊರಗೆ ಬಂದ ಬಳಿಕ ಸರದಾರ ಪಟೇಲರು ಒಂದು ಭಾಷಣದಲ್ಲಿ ಭಾರತದಿಂದ ತೊಲಗಿರಿ ಎಂಬುದರ ಬದಲು ಏಶಿಯದಿಂದ ತೊಲಗಿರಿ ಎಂಬುದೇ ಈಗ ನಮ್ಮ ಘೋಷಣೆಯಾಗಬೇಕೆಂದು ಸಾರಿದರು. ಭಾರತದ ಉಕ್ಕಿನ ಮನುಷ್ಯನ ಈ ಹೇಳಿಕೆಯನ್ನು ಆಶ್ಚರ್ಯಕಾರಕವೆಂದು ಮಾತ್ರವಲ್ಲ, ಸತ್ಯವೆಂದೆನಿಸಲಾರದಷ್ಟು ಕಾಲ್ಪನಿಕವೆಂದು ಆಗ ಹೆಚ್ಚಿನವರು ಭಾವಿಸಿದರು. ಇಂದು ನಮಗೆ ಅದು ಹಾಗಿದ್ದಿಲ್ಲವೆಂದೂ ಸಂಪೂರ್ಣ ಸತ್ಯವನ್ನೆ ಸರದಾರರು ನುಡಿದರೆಂದೂ ಸ್ಪಷ್ಟವಾಗಿ ಕಂಡುಬರುತ್ತದೆ.

ಏಶಿಯದ ಮೇಲೆ ಪಾಶ್ಚಿಮಾತ್ಯ ಜಗತ್ತಿನ ಆಕ್ರಮಣವು ಹದಿನಾರನೇ ಶತಮಾನದಲ್ಲಿ ತೊಡಗಿತು. ಇಂಗ್ಲಿಷರು ಭಾರತವನ್ನು, ಫ್ರೆಂಚರು ಇಂಡೋಚೀನವನ್ನು, ಡಚ್ಚರು ಇಂಡೋನೇಶಿಯವನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ವಸಾಹತು ಪಾಳೆಯಗಾರಿಕೆಯನ್ನು ಸ್ವಚ್ಛಂದವಾಗಿ ನಡೆಸಹತ್ತಿದರು. ವ್ಯಾಪಾರ ಮತ್ತು ಕ್ರೈಸ್ತ ಮತೋಪದೇಶದ ಉದ್ದೇಶದಿಂದ ಬಂದ ಈ ಪರಕೀಯರು ಚೀನ ಮತ್ತು ಜಪಾನು ದೇಶಗಳ ಮೇಲೂ ಗಾಢವಾದ ಪರಿಣಾಮವನ್ನು ಉಂಟು ಮಾಡಿದರು. ಆ ಯುಗವು ಜಗತ್ತಿನ ಇತಿಹಾಸದಲ್ಲಿಯೇ ಒಂದು ಹೊಸ ಅಧ್ಯಾಯವನ್ನು ಬರೆಯಿತು. ಇದರಿಂದಲೇ ಈಗ ಹೊಸ ಯುಗವೊಂದು ಆವಿರ್ಭವಿಸುತ್ತಿದೆ. "ಏಶಿಯದಿಂದ ತೊಲಗಿರಿ" ಎಂಬುದೇ ಅದರ ಬೀಜ ಮಂತ್ರವೆಂದು ಗೊತ್ತಾಗುತ್ತದೆ.

ಯುರೋಪ್ಯರ ಒಡೆತನಕ್ಕೆ ಸೇರಿದ ವಸಾಹತುಗಳು ಏಶಿಯದಲ್ಲಿರುವುದು ಜಾಗತಿಕ ಶಾಂತಿಗೂ ಮಾನವತೆಯ ಮರ್ಯಾದೆಗೂ ದೊಡ್ಡ ಗಂಡಾಂತರವೆಂಬ ಅಭಿಪ್ರಾಯವು ದಿನೇ ದಿನೇ ಬಲಿಯುತ್ತಿರುವುದು. ದೀವ, ದಮನ, ಗೋವಾ, ಪಾಂಡಿಚೇರಿ, ಕಾರೈಕಲ ಮುಂತಾದ ಚಿಕ್ಕಪುಟ್ಟ ವಸಾಹತುಗಳು ಸಹ ಭಾರತದ ಮುಖ್ಯ ನೆಲಕ್ಕೆ ಸಾಕಷ್ಟು ಗಂಡಾಂತರವನ್ನು ಕಾಲಾಂತರದಲ್ಲಿ ಮಾಡಬಲ್ಲವು. ಇಲ್ಲಿಯ ಪರಕೀಯ ಪ್ರಭುತ್ವವು ಹಿಂಸಾತ್ಮಕ ಮಾರ್ಗಗಳಿಂದ ವಿಲೀನೀಕರಣದ ಚಳವಳವನ್ನು ಪ್ರತಿಭಟಿಸಿ ಹತ್ತಿಕ್ಕುವ ಬೆದರಿಕೆಯನ್ನು ತೋರಿಸುತ್ತಿರುವುದು. ಆದರೆ ಇದು ಹೆಚ್ಚು ಸಮಯದ ವರೆಗೆ ನಡೆಯಲಾರದೆಂದು ಪಶ್ಚಿಮದ ಮುತ್ಸದ್ದಿಗಳಿಗೆ ನಿಧಾನವಾಗಿ ಮನವರಿಕೆಯಾಗುತ್ತಿದೆ. ಸರ್ ಮಾಲಕಂ ಮ್ಯಾಕ್ಡೊನಾಲ್ಡರು ಸದ್ಯದ ಏಶಿಯದ ಪರಿಸ್ಥಿತಿಯನ್ನು ವರ್ಣಿಸುತ್ತ "ಆಗ್ನೇಯ ಏಶಿಯದ ಇತಿಹಾಸವು ಜಾಗೃತಗೊಂಡ ಈ ನಿಮಿಷದಲ್ಲಿ ಅಲ್ಲಿಯ ಜನತೆಯು ಮಹತ್ವದ ಕ್ರಾಂತಿಯಲ್ಲಿ ತನ್ನ ಪಾತ್ರವನ್ನು ವಹಿಸುತಿದ್ದು, ತನ್ನ ಸಂರಕ್ಷಣೆಯ ಹಾಗು ಕೆಲ ರೀತಿಯಲ್ಲಿ ನಿರ್ಬಂಧಕರವಾದ ವಿದೇಶೀ ಸರಕಾರಗಳ ಆಡಳಿತವನ್ನು ಕಿತ್ತೆಗೆಯುವುದರಲ್ಲಿ ತೊಡಗಿದೆ. ರಾಷ್ಟ್ರೀಯ ಜಾಗೃತಿಯ ಜನರು ರಾಜಕೀಯ ಸ್ವಾತಂತ್ರ್ಯ ಹಾಗು ಏಶಿಯದ ಜನತೆಯ ಜೀವನ ಮಟ್ಟವನ್ನು ಎತ್ತರಿಸುವ ಆರ್ಥಿಕ ಅಭಿವೃದ್ಧಿ ಎಂಬೆರಡು ಮಹಾ ಸಾಧನೆಗೋಸ್ಕರ ತಮ್ಮನ್ನು ಅರ್ಪಿಸಿಕೊಳ್ಳುತಿದ್ದಾರೆ" ಎಂದಿರುವರು.

ವಸಾಹತು ಸಾಮ್ರಾಜ್ಯ ಶಾಹಿ ರಾಷ್ಟ್ರಗಳಾದ ಫ್ರಾನ್ಸ್, ಪೋರ್ತುಗಾಲ ಅಥವಾ ಇತರ ರಾಷ್ಟ್ರಗಳು ಮೇಲಿನ ಮಾತನ್ನು ಅರಿತಿರುವುದೊಳಿತು. ಆ ದೇಶಗಳು ಜಾಗತಿಕ ಇತಿಹಾಸದ ವಸಾಹತು ಸಾಮ್ರಾಜ್ಯ ಯುಗದಲ್ಲಿ ಏಶಿಯದ ಮೇಲೆ ಆಕ್ರಮಣ ನಡೆಸಿ ಕಾಲೂರಿದವು. ಆಗೇನೂ ಅವುಗಳು ಈಗ ಹೇಳಿಕೊಳ್ಳುವಂತೆ ಪರೋಪಕಾರ ಬುದ್ಧಿಯೂ ನಿಃಸ್ವಾರ್ಥವೂ ಇರಲಿಲ್ಲ. ವಸಾಹತುಗಳ ಸಂಪಾದನೆ ಮತ್ತು ಮೋಹವು ಇನ್ನೂ ಅವರಲ್ಲಿ ಕಂಡು ಬರುತ್ತಿರುವುದಕ್ಕೆ ಭಾರತದಲ್ಲಿರುವ ತಮ್ಮ ವಸಾಹತುಗಳಿಗೆ ಫ್ರಾನ್ಸು ಮತ್ತು ಪೋರ್ತುಗಾಲಗಳು ಅಂಟಿರುವ ಬಗೆಯೇ ನಿದರ್ಶನ. ಬ್ರಿಟಿಷರು ಸಹ ಆಸ್ಟ್ರೇಲಿಯ ಮತ್ತು ಆಫ್ರಿಕೆಯ ಕೆಲ ಪ್ರದೇಶಗಳನ್ನು ಗೆದ್ದುಕೊಂಡಿದ್ದು, ಕೇವಲ ಬಿಳಿಯರಿಗೆ ಮಾತ್ರ ಅಲ್ಲಿಗೆ ಹೋಗಗೊಡುವರು; ಮತ್ತು ಸ್ಥಳೀಯರ ಹಕ್ಕುಗಳನ್ನು ಅಲ್ಲಗಳೆಯುವರು. ಇಂಥ ಪಕ್ಷಪಾತ ಧೋರಣೆಗೆ ಅಮೇರಿಕವು ಬೆಂಬಲ ಕೊಡುವುದು ಆಶ್ಚರ್ಯವೇ ಸರಿ. ಕಮ್ಯುನಿಜಂದ ಬೆಳವಣಿಗೆಯನ್ನು ತಡೆಯುವುದಕ್ಕೋಸ್ಕರ ವಸಾಹತು ಸಾಮ್ರಾಜ್ಯವಾದಕ್ಕೆ ಎಡೆಕೊಡಬೇಕೆನ್ನುವವರು ತಮ್ಮ ವಾದವನ್ನು ಎಷ್ಟೇ ಬಲವಾಗಿ ಸಮರ್ಥಿಸಿಕೊಂಡರೂ ಅದಕ್ಕೆ ನೈತಿಕ ಬೆಲೆಯು ಇಂದಿನ ವಾತಾವರಣದಲ್ಲಿ ದೊರೆಯಲಿಕ್ಕಿಲ್ಲ. ಶಸ್ತ್ರ ಮತ್ತು ಯುದ್ಧದ ಮೂಲಕ ಕಮ್ಯುನಿಜಂದ ಮಾರಣ ಹೋಮ ಮಾಡಿ ವಸಾಹತುಗಳ ಜನರನ್ನು ಉಳಿಸ ಬಯಸುವ ಪ್ರವೃತ್ತಿಗಳೂ ಮಹಾರಾಷ್ಟ್ರಗಳೂ ಏಶಿಯದ ಶಾಂತಿ ಮತ್ತು ಸ್ವಾತಂತ್ರ್ಯವನ್ನು ಗಂಡಾಂತರದಲ್ಲಿ ನೂಕುವ ಪೇಚನ್ನು ತಂದೊಡ್ಡುವವೆಂದು ಹೇಳಬೇಕಾಗುತ್ತದೆ. ಈ ರಾಷ್ಟ್ರಗಳು ಇಂದಿನ ಯುಗಕ್ಕೆ ತ್ಯಾಜ್ಯವಾದ ವಸಾಹತು ಸಾಮ್ರಾಜ್ಯವಾದಿ ಧೋರಣವನ್ನು ಸರ್ವ ಪ್ರಥಮವಾಗಿ ಬಿಟ್ಟುಗೊಡಬೇಕೆಂಬುದೇ ಏಶಿಯದ ಜನತೆಯ ನಿರೀಕ್ಷೆಯಾಗಿದ್ದು, ಮುಂದಿನ ಇತಿಹಾಸ ಈ ನಿರೀಕ್ಷೆಗೆ ಸಾಕ್ಷಿ ಹೇಳುವುದು ನಿಶ್ಚಯ.

ಸಚೇತನ ಸಾಹಿತ್ಯದ ಆವರಣ

ಪ್ರೇರಕವೂ ಸ್ಫೂರ್ತಿಯನ್ನು ಹುಟ್ಟಿಸಿ, ಜಾಡ್ಯವನ್ನು ಪರಿಹರಿಸಿ, ಚೈತನ್ಯವನ್ನು ತುಂಬಬಲ್ಲ ಸಾಹಿತ್ಯ ಕೃತಿಗಳು ಇಂದು ಸೃಷ್ಟಿಯಾಗುತ್ತಿಲ್ಲ. ರಾಷ್ಟ್ರ ಜೀವನದಲ್ಲಿ ಉತ್ತಮತ್ವವನ್ನು ಉದಯಿಸಲು ಶಕ್ತವಾದ ಆದರ್ಶ ಆವರಣದ ನಿರ್ಮಿತಿಯಲ್ಲಿ ಸ್ವತಂತ್ರ ಭಾರತದ ಸಾಹಿತ್ಯ ಸಂಸ್ಥೆಗಳ ಪಾತ್ರ ಅತ್ಯಧಿಕ ಮಹತ್ವವನ್ನು ಪಡೆಯುತ್ತದೆ.

ಬರೆದವರು: ಬಿ. ಎಚ್. ಶ್ರೀಧರ, ಎಂ. ಎ.

ರಾಷ್ಟ್ರದ ವಿವಿಧ ರಾಜ್ಯಗಳ ಆಧುನಿಕ ಸಾಹಿತ್ಯ ಚಟುವಟಿಕೆ ಕೆಲ ಮಟ್ಟಿಗೆ ಭಿನ್ನವಾಗಿರುವುದಾದರೂ ಒಟ್ಟಿನಲ್ಲಿ ಒಂದು ವಿಧದ ಮಾಂದ್ಯದಿಂದ ತುಂಬಿದೆ ಎಂದು ಕಾಣಿಸುತ್ತದೆ. ಸಾಹಿತ್ಯವು ಜೀವನವನ್ನಲಂಬಿಸಿರುತ್ತದೆ. ಜೀವನ ಮಂದಪ್ರಭವಾಗಿರುವಾಗ ಸಾಹಿತ್ಯವಾದರೂ ಅಚೇತನವಾಗುವುದು ಸ್ವೈಸರ್ಗಿಕ. ತಾರುಣ್ಯದ ಹೊಸ ಹುರುಪಿನ ಲೇಖಕನಿಗೆ ಜಗತ್ತೆಲ್ಲ ಹಸಿರಾಗಿ ಕಂಡರೂ ಬಹು ಬೇಗ ಇಂದಿನ ಬಾಳಿನಲ್ಲಿ ಅವನಿಗೆ ಭ್ರಮನಿರಸನವಾಗಿ ಬಿಡುತ್ತದೆ.

ಜೀವನದ ಯೌವನ ಉಳಿಯುವುದು ಧ್ಯೇಯಕ್ಕಾಗಿ ಹೋರಾಡುವ ಚಿರತನ ಸಮಾಜದಲ್ಲಿ ಉಳಿದಿರುವ ವರೆಗೆ. ನಮ್ಮ ತರುಣರಿಗೆ ಸಿಗುತ್ತಿರುವ ವಿದ್ಯಾಭ್ಯಾಸದಲ್ಲಿಂದು ಧ್ಯೇಯಾರಾಧನೆಯ ಸ್ಫೂರ್ತಿ ಹುಟ್ಟುತ್ತಿಲ್ಲ. ಪಾಶ್ಚಾತ್ಯ ಪೌರಸ್ತ್ಯ ವಿಚಾರ ಪ್ರಣಾಲಿಗಳ ಇದಮಿತ್ಥಮಿಲ್ಲದ ಗೊಂದಲಗೇಡಿತನ ಅಭ್ಯಾಸದಲ್ಲಿ ಕಂಡು ಬರುತ್ತಿರುವುದಲ್ಲದೆ ನಮ್ಮ ನೇತೃಗಳ ಭಾಷಣ, ಲೇಖನ, ಉಪದೇಶಗಳಲ್ಲೂ 'ಆರು ದೋಸೆ ಕೊಟ್ಟರೆ ಅತ್ತೆಯ ಕಡೆ, ಮೂರು ದೋಸೆ ಕೊಟ್ಟರೆ ಸೊಸೆಯ ಕಡೆ' ಎಂಬಂತಹ ಚಂಚಲಬುದ್ಧಿಯೇ ತೋರುತ್ತಿದೆ. ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲ ಎಂಬಂತೆ ಕಿರಿಯರಾದರೂ ಅದೇ ಮೇರೆಗೆ ಯಾವ ತತ್ವಕ್ಕೂ ಅಂಟಿಕೊಳ್ಳದ ತತ್ವಪಾಲಕರಾಗಿ ಪದ್ಮ ಪತ್ರದ ಜಲಬಿಂದುವಿನಂತೆ ಅನಾಸಕ್ತ ಯೋಗ ಹಿಡಿಯುವುದನ್ನು ಕಲಿತಿದ್ದಾರೆ. ಇಂಥ stagnant ನಾರು ಬಾಳಿನ ನೀರಿನಲ್ಲಿ ಕಮಲೋದಯವೆಂತಾದೀತು?

ವಿದ್ಯಾಭ್ಯಾಸದ ಮುಖ್ಯ ಸಿದ್ಧಿ ನಿಷ್ಠಾವಂತಿಕೆ. ಅದನ್ನು ಬಿಟ್ಟು ಅನಿಷ್ಠೆಯೇ ಗುಣ ಎಂಬ ಅಭಿಪ್ರಾಯಕ್ಕೆ ಬರುವಂತಹ ಪರಿಣಾಮವನ್ನು ಆವರಣ ಉಂಟು ಮಾಡುತ್ತಿದ್ದರೆ ಧ್ಯೇಯ ನಿಷ್ಠೆಗೆ ಸ್ಥಾನವೆಲ್ಲಿ ಬಂತು? ಮಾನವನು ಮಾನವನಾಗಿ ಉಳಿಯುವುದು ಧ್ಯೇಯ ಸಾಧನೆಯಿಂದ. ಧ್ಯೇಯರಾಹಿತ್ಯವೇ ಪಾಶವ ಜೀವನ. Ideal is a creative force behind action, even when there is a failure to realize it in conduct—ಕಾರ್ಯದಲ್ಲೊಮ್ಮೆ ಸಾಧಿಸಲಾಗದಾಗ ಕೂಡ ಆದರ್ಶವು ಕಾರ್ಯದ ಹಿಂದೆ ಇರುವ ರಚನಾತ್ಮಕ ಶಕ್ತಿ ಎಂಬುದು ಸತ್ಯ. ಜೀವನದ ವಿವಿಧ ಕ್ಷೇತ್ರಗಳ ಚಟುವಟಿಕೆಗಳ ಆಧಾರವಾಗಿ ಅದವರ ಧ್ಯೇಯ, ಧರ್ಮ ಇರಬೇಕು. ಅಲ್ಲಿ ಆಗ ಉತ್ಸಾಹದ ಆವರಣ ಉಂಟಾಗುತ್ತದೆ. ಜೀವನದಲ್ಲಿ ಉತ್ಸಾಹ ಉಂಟಾದ ಸಮಾಜದಲ್ಲಿ ಸಚೇತನ ಸಾಹಿತ್ಯ ಉದಯವಾಗುವುದು.

ಸಾಹಿತಿಗಳ ಬಾಳು ದಾರಿದ್ರ್ಯ, ದುರ್ವ್ಯಸನ, ದುರ್ದಾನ್ಯ, ದುರಹಂಕಾರಗಳಿಂದಲೂ ಸಾಮಾಜಿಕ ಪ್ರೋತ್ಸಾಹಾಭಾವದಿಂದಲೂ ಜರ್ಜರಿತವಾಗುತ್ತಿರುವಾಗ ಕೃತಿ ರಚನೆಗೆ ಮೂಲವಾದ ಅವರ ಮನೋಧರ್ಮ, ಕಾರ್ಯ ಶಕ್ತಿಗಳು ದುಃಸ್ಥಿತಿಗೊಳಪಡುವುದು ಅನುಭವಸಿದ್ಧ. ಇನ್ನು ಹುಟ್ಟು ಕಲೆಗಾರಿಕೆಯ ವಾಸನಾಬಲವಿಲ್ಲದ ಜನಕ್ಕೆ ಪುರಸ್ಕಾರ ದೊರಕುತ್ತ ಹೋದರೂ ಹಾಗೇ ಮೃತಕೃತಿಗಳೂ ಅಚೇತನ ಕೃತಿಗಳೂ ಹೊರ ಬೀಳುವುವು. ಸಾಮಾಜಿಕರ ಸಾಮೂಹಿಕ ಜೀವನ ದೃಷ್ಟಿ, ಅಭಿರುಚಿ, ರಸಗ್ರಹಣ ಶಕ್ತಿ, ಹಿತಸಾಧಕ ನ್ಯಾಯ ಬುದ್ಧಿ ಆವರಣ ನಿರ್ಮಾಪಕವಾಗಿರುವುದರಿಂದ ಒಂದು ಕಾಲದಲ್ಲಿ ಒಂದು ಕಡೆ ಸುಸಾಹಿತ್ಯದ ಬೆಳೆ ಹೆಚ್ಚುವುದು ಅಥವಾ ಕಡಿಮೆಯಾಗುವುದು ಆ ಆವರಣವನ್ನೇ ಅವಲಂಬಿಸಿವೆ. ಇನ್ನು ಅಪ್ರಾಕೃತ ವಿಕ್ರಮರಾದ ಅಭೂತಪೂರ್ವ ಸಿದ್ಧಹಸ್ತರ ಮಾತು ಬೇರೆ. ಅವರ ಪಂಕ್ತಿ ಅಪವಾದ ರೂಪದ್ದು. ಒಂದು ದೇಶದ ಆಡಳಿತ ಚೆನ್ನಾಗಿರುವಾಗ ಆ ಜನಕ್ಕೆ ತಕ್ಕ ಸರಕಾರ ಅಲ್ಲಿ ಆಳುತ್ತಿದೆ ಎಂಬಂತೆ ಸಾಹಿತ್ಯದಲ್ಲಾದರೂ ಆ ಜನಕ್ಕೆ ತಕ್ಕ ಸಾಹಿತ್ಯ ಹುಟ್ಟಿದೆ ಎಂದರೆ ತಪ್ಪಾದೀತೇ?

Poverty is the root of all sins ಎಲ್ಲ ಪಾಪಗಳಿಗೂ ದಾರಿದ್ರ್ಯವೇ ಮೂಲ ಎಂಬ ಗಾದೆಯಾದರೂ ಸಾಮಾನ್ಯವಾಗಿ ಸರ್ವತ್ರ ಅನ್ವಯಿಸುವಂಥದು. ಅರ್ಥದಾರಿದ್ರ್ಯ ಸಂಸ್ಕಾರ ದಾರಿದ್ರ್ಯದಷ್ಟೇ ಗಣ್ಯ ವಿಷ್ಣ. ಈ ಎರಡೂ ಹೆಚ್ಚಿದ್ದಲ್ಲಿ ಕೇಳುವುದೇ ಬೇಡ. ನಮ್ಮ ಅರ್ಥನೀತಿ, ಧರ್ಮನೀತಿಗಳು ಅವ್ಯವಸ್ಥಿತವಾಗಿರುವುದು ಜನತೆಯಲ್ಲಿ ಸ್ಫೂರ್ತಿ ಹುಟ್ಟಿಸದಿರುವ ಕೃತಿಗಳ ಬೆಳೆಗೆ ಕಾರಣ. ನೆಲ, ಗೊಬ್ಬರ ಮುಂತಾದ ಪೋಷಕ ದ್ರವ್ಯಗಳ ಪ್ರಾಧಾನ್ಯ ಬೆಳೆಗೆ ಹೇಗೋ ಹಾಗೇ ಸಾಹಿತ್ಯಕ್ಕೂ ಅಗತ್ಯ. ಅದೇ ಮೇರೆಗೆ ದುರ್ಬೀಜವನ್ನು ದೂರ ಎಸೆಯುವ ಕಳೆಗೆಲಸ ಹೇಗೋ ಹಾಗೇ ಕೃತಿಗಳ ಸವಿಮರ್ಶೆ ನಡೆಯುವುದೂ ಅಗತ್ಯವಾದ ಕಾರ್ಯ. ಜೀವನ ಮತ್ತು ಸಾಹಿತ್ಯಗಳು ಪರಸ್ಪರಾವಲಂಬಿಗ[illegible] ಕೃತಿಗಳ ಪ್ರತಿನಿಧಿಗಳು ಅವನ್ನಾಗಲಿ ಇವನ್ನಾಗಲಿ ಏಕಪಕ್ಷೀಯವಾಗಿ ದೂರುವುದು ನ್ಯಾಯವಾಗದು. ಆದರೆ ಅವುಗಳ ಉತ್ಪಾದನೆಯಲ್ಲಿ ಜೀವನ ಮೊದಲು ಬರುವುದರಿಂದ ಅದರ ಹೊಣೆ ಸ್ವಲ್ಪ ಅಧಿಕವೆಂದೇ ಹೇಳಬೇಕು.

ಸಚೇತನ ಸಾಹಿತ್ಯ ಸಂವರ್ಧಿಸಲು ನಮ್ಮಗ್ ಜೀವನ ಅಗತ್ಯ. ಜೀವನದ ಸರ್ವಕ್ಷೇತ್ರಕ್ಕೆ ನಮ್ಮ ಹೊಸ ರಾಷ್ಟ್ರವಿಂದು ತಳಹದಿಯನ್ನು ಹಾಕಬೇಕು. ಅಂಥ ತಳಹದಿ ಹಾಕಲು ನಮ್ಮ ರಾಜಕೀಯ ಮುಖಂಡರು ಮುಂದಾದಾರೆಂದು ಜನ ನಿರೀಕ್ಷಿಸಿತು. ಆದರೆ ಅವರು ಆ ನಿರೀಕ್ಷೆಯನ್ನು ಸಫಲಗೊಳಿಸಲಿಲ್ಲ. ಆದುದರಿಂದ ತದಿತರ ಮುಖಂಡರನ್ನು ನಮ್ಮ ಸಮಾಜವಿಂದು ಕಾರ್ಯರಂಗಕ್ಕೆ [illegible] ತುಗೊಳಿಸಿ ಮುಂದಿಟ್ಟಬೇಕು. ಈ ದಿಶೆಯಲ್ಲಿ ಒಂದು ಪ್ರಯತ್ನ ನಡೆಸಲು ಉಡುಪಿಯ ಶ್ರೀವಿಶ್ವೇಶತೀರ್ಥರು ಮುಂದಾದುದು ಮಿಕ್ಕವರಿಗೊಂದು ಮಾರ್ಗದರ್ಶನ. ನಮ್ಮ ಪ್ರಚಾರಕರ್ತ ಮುಖಂಡರು ತಮ್ಮ ಕಾರ್ಯದ ಸಾಫಲ್ಯ ವೈಫಲ್ಯಗಳನ್ನು Practical Conversion ಸಾಕ್ಷಾತ್ ಮತಾಂತರವಾದವರ (ಧರ್ಮಾಂತರವಲ್ಲ!) ಸಂಖ್ಯೆಯಿಂದ ನಿರ್ಧರಿಸಬೇಕು. ಹತ್ತು ಜನರ ಹಿತದ ಒಂದು ಕಾರ್ಯಯೋಜನೆಯ ದರ್ಶನವನ್ನು ಕಂಡು ಜನತೆಯು ಮುಂದಿಡುವ ಉಮೇದುವಾರರಿಂದು ಹೆಚ್ಚಬೇಕು. ಅಂಥ ಯೋಜನೆಗಳ ಲಾಭಾಲಾಭಗಳ ತುಲನಾತ್ಮಕ ವಿಮರ್ಶೆಗೆ ಜನ ಸಿದ್ಧವಾಗಬೇಕು. ಆಗ ನಮ್ಮಲ್ಲಿ ನವೋದಯವಾಗುವ ಮಂಗಲ ಚಿಹ್ನೆ ಮೂಡೀತು.

ವಿವೇಕಾನಂದರ, ಬಂಕಿಂಚಂದ್ರರ, ರವೀಂದ್ರರ, ಅರವಿಂದರ ಸಾಹಿತ್ಯ ಸಚೇತನ ಸಾಹಿತ್ಯಕ್ಕೆ ಉತ್ತಮ ಉದಾಹರಣೆ. ಅಂಥ ಸಾಹಿತ್ಯ ಕೃತಿಗಳು ಹುಟ್ಟಿದಾಗ ಮಾತ್ರ Pen is mightier than sword ಲೆಕ್ಕಣಿಕೆ ಕತ್ತಿಗಿಂತ ಬಲಿಷ್ಠ ಎಂದು ಧಾರಾಳವಾಗಿ ಹೇಳಬಹುದು. ಒಂದು ಹೊಸ ಜೀವನ ಪದ್ಧತಿಯನ್ನು, ಪಂಥವನ್ನು, ಧ್ಯೇಯಾರಾಧನೆಯನ್ನು, ಉತ್ಸಾಹಿ ಸಂಘವನ್ನು ನಿರ್ಮಿಸುವ ಪ್ರೇರಣಾಬಲವುಳ್ಳ ಮಹಾ ಕೃತಿಗಳಿಂದು ನಮಗೆ ಬೇಕಾಗಿವೆ. ನಮ್ಮ ಸಾಹಿತ್ಯಪತ್ರಿಕೆಯ Wanted Column ಅವುಗಳಿಗಾಗಿಯೇ ಮೀಸಲಾಗಿವೆ. ಆದರೆ ಅರ್ಜಿದಾರ ಕೃತಿಗಳ ಸಂಖ್ಯೆ ವಿರಳ.

ಬಸವಣ್ಣನವರು ನಮ್ಮಲ್ಲಿ ಆಗಿಹೋದರು. ಕುಮಾರವ್ಯಾಸ ಲಕ್ಷ್ಮೀಶರು ಗತಿಸಿದರು. ಪುರಂದರ ಕನಕಾದಿಗಳು ಕಳೆದ ಕಾಲಕ್ಕೆ ಸೇರಿದರು. ಅಂಥವರ ಕೃತಿಗಳು ನಾಡನ್ನು ಕಟ್ಟಬಲ್ಲವು. ಅವು ರಾಷ್ಟ್ರ ಸಾಹಿತ್ಯ ಕೃತಿಗಳು. ನಮ್ಮ ಜೀವನದಲ್ಲಿ ನವೋತ್ಸಾಹ, ನವಸ್ಫೂರ್ತಿಗಳನ್ನು ಹುಟ್ಟಿಸಿ ಗತಾನುಗತಿಕ ನ್ಯಾಯದ ಜಾಡ್ಯವನ್ನು ಪರಿಹರಿಸಿ ಅವು ಅನೇಕಕಾಲ ಬೆಳಕು ಬೀರಿದವು. ಈಗಲೂ ಹಳೆಯದರತ್ತ ಕಣ್ಣು ಹಾಕುವ ರಸಿಕರಿಗೆ ಅವು ಬೆಳಕು ಬೀರುತ್ತಿವೆ. ಆದರೆ ಲೋಕ ಧರ್ಮಾನುಸಾರವಾಗಿ ಹಳೆಯ ಬೆಳಕುಗಳು ಹಳೆಯವೇ ಆಗುವುದರಿಂದ ಹೊಸ ಹುಟ್ಟಿನ ಕಾಯ್ತಂದೆಯರಾಗಲು ಹೊಸ ಕೃತಿಗಳು ಅವಶ್ಯಕ. ಕರ್ನಾಟಕದ ಆದ್ಯಂತವಾಗಿ ಅಂಥ ಚೈತನ್ಯದ ಬಲವಾದ ಗಾಳಿಯನ್ನು ಬೀಸುವ ಕೃತಿಗಳಿಂದು ಕಂಡುಬರುತ್ತಿಲ್ಲ. ಕೆಲವಕ್ಕೆ ಅಂಥ ಶಕ್ತಿ ಕೆಲಮಟ್ಟಿಗಿದ್ದರೂ ಸುಶಿಕ್ಷಿತರ ಮತ್ತು ವಿದ್ಯಾವಂತರ ಅರುಚಿ, ಅಗ್ನಿಮಾಂದ್ಯ, ಅಗ್ರಗಳ ದೆಸೆಯಿಂದ ಅವು ಜನತೆಯನ್ನು ಮುಟ್ಟುತ್ತಿಲ್ಲ. ಅಂದರೆ ನಮ್ಮ ತಿಳಿವಳಿಕೆಗಾರರಲ್ಲಿ ವಿಮರ್ಶೆ, ಗಮಕಗಳನ್ನು ಆಶ್ರಯಿಸುವುದು ಉತ್ತಮ ರಸಿಕತೆಯ ಕುರುಹೆಂಬುದು ಮೂಡಲಿಲ್ಲ. ಭಾರತ ಸಂಸ್ಕೃತಿಯನ್ನು ಜನತೆಯಲ್ಲಿ ಜೀವಂತ ಉಳಿಸಿದ ಗಮಕಿ ವಿಮರ್ಶಕರೆಂದರೆ ನಮ್ಮ ಪುರಾಣಿಕರು. ಅವರ ಪ್ರತಿಷ್ಠೆ ಸಮಾಜದಲ್ಲಿ ಅಗ್ರಗಣ್ಯವಾಗಿದ್ದರೂ ಸಾಂಸ್ಕೃತಿಕ ಇತಿಹಾಸಕಾರನ ದೃಷ್ಟಿಯಲ್ಲಿ ಅವರಿಗೆ ಅಗ್ರಸ್ಥಾನ ಸಲ್ಲಬೇಕು. ಪುರಾಣಿಕರೂ ಕೀರ್ತನಕಾರರೂ ಕಥನಕವನಕಾರರೂ ಜನಜೀವನದಲ್ಲಿ ಹಾಸುಹೊಕ್ಕಾಗಿ ಸಮರಸಭಾವದಿಂದ ಬಾಳಿದ್ದರಿಂದ ಪ್ರಾಚೀನ ಸಾಹಿತ್ಯದ ರಸಘಟ್ಟಗಳು ಜನತಾ ಜನಾರ್ದನನ ನೈವೇದ್ಯಕ್ಕೆ ಇಡಲ್ಪಟ್ಟವು. ಅಂಥ ಹೊಸ ಹೊಂದಿಕೆ ಇಂದಿನ ಹೊಸ ಜನತೆಗೂ ಹೊಸ ವಿದ್ವದ್ರಸಿಕರಿಗೂ ಉಂಟಾಗಿಲ್ಲ. *ತಾನೇ ಓದಿ

(೨೦ನೇ ಪುಟ ನೋಡಿರಿ)

ಸೈಂಟ್ ಜೋರ್ಜರ

ಹೋಮಿಯೋಪತಿಕ್ ಫಾರ್ಮಸಿ

"ಜಯಂತ ಬಿಲ್ಡಿಂಗ್" – ಸೆಂಟ್ರಲ್ ಕೋಫಿ ಹೌಸಿನ ಎದುರು,
ಮೈದಾನು ಕ್ರೊಸ್ ರೋಡು, ಮಂಗಳೂರು–1.
ವ್ಯಾಪಾರಿಕರು ಮತ್ತು ಗಮನಿಸುವ ಚಿಕಿತ್ಸಕರು:
ಡಾ. ಜೋಸೆಫ್ ಜಕರಿಯಸ್ (ಹೋಮಿಯೋಪಥ್)

ಅಮೇರಿಕದ ಬೋರಿಕ್ ಮತ್ತು ಟಾಫೆಲ್ ಕಂಪೆನಿಯ ಹೋಮಿಯೋಪತಿ ಔಷಧಗಳ ಮೂಲದ್ರಾವಕಗಳೂ, ಪುಡಿಗಳೂ, ತೆಳುವಿಕೆಗಳೂ, ಗುಳಿಗೆಗಳೂ ಟಿಶ್ಯೂ ಔಷಧಗಳ ಪುಡಿಗಳೂ, ಮಾತ್ರೆಗಳೂ; ಅಮೇರಿಕದ ಲೂಟಿಸ್ ಕಂಪೆನಿಯವರ ಮತ್ತು ಜರ್ಮನಿಯ ವಿಲ್ಮಾರ್ ಶೋಭೆಯವರ ಸಿದ್ಧ ಔಷಧಗಳೂ ಯಾವಾಗಲೂ ದೊರೆಯುತ್ತವೆ.

ಸಾಮಾನ್ಯ ದಿನನಿತ್ಯದ ಎಲ್ಲಾ ರೋಗಗಳನ್ನು ಗುಣಪಡಿಸಲು ಅನುಕೂಲವಾಗುವಂತೆ ಹೋಮಿಯೋಪತಿ ಅಥವಾ ಟಿಶ್ಯೂ ಔಷಧಗಳನ್ನೊಳಗೊಂಡ ಗೃಹೋಪಯೋಗದ ಸಾಗುವಾನಿಯ ಪೆಟ್ಟಿಗೆಗಳೂ, ಚಿಕಿತ್ಸಾ ಕ್ರಮವನ್ನು ಸುಲಭವಾಗಿ ತಿಳಿಸುವ ಕನ್ನಡ ಮತ್ತು ಇತರ ಭಾಷೆಗಳ ಪುಸ್ತಕಗಳೂ ದೊರೆಯುತ್ತವೆ.

ವಿ. ಸೂ: ಎಲ್ಲರಿಗೂ ಅನುಕೂಲವಾಗುವಂತೆ ನಮ್ಮ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳ ಚಿಕಿತ್ಸಾಕ್ರಮಗಳ ವಿವರಗಳನ್ನೂ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳ ಚಿಕಿತ್ಸಾ ಕ್ರಮಗಳನ್ನೂ ಒಳಗೊಂಡ "ಸೈಂಟ್ ಜೋರ್ಜರ ಹೋಮಿಯೋಪತಿ ಮತ್ತು ಟಿಶ್ಯೂ ಔಷಧಗಳ ಗೃಹವೈದ್ಯ" ಎಂಬ ಪುಸ್ತಕವು ಬರೇ ರೂ. 0—12—0 ಗೆ ದೊರೆಯುವುದು.

—: ಒಮ್ಮೆ ಸಂದರ್ಶಿಸಿರಿ :—

ಸ್ವತಂತ್ರ ಭಾರತದ

ವಿದ್ವನ್ಮಣಿ ರಾಧಾಕೃಷ್ಣ

ದೊಡ್ಡ ಮುಂಡಾಸಿನ, ಉದ್ದ ನಿಲುವಂಗಿಯ, ಹೊಳೆಯುವ ಕನ್ನಡಕದ ರಾಧಾಕೃಷ್ಣನ್ನರು ಭಾರತೀಯರಿಗೆ ಹೇಗೋ ಪಾಶ್ಚಾತ್ಯರಿಗೂ ಪ್ರಿಯವಾದ ಮಹಾಜೀವ—ಇವರ ವಿಲಕ್ಷಣ ಉಡುಪು ಮಕ್ಕಳಿಂದ ಹಿಡಿದು ಮುದುಕರ ವರೆಗೂ ಕುತೂಹಲವನ್ನು ಹುಟ್ಟಿಸುತ್ತದೆ. ಈ ಕುತೂಹಲ ರಾಧಾಕೃಷ್ಣನ್ನರ ವಿಚಾರ ಸರಣಿಯ ಸೆರಗನ್ನು ಮುಟ್ಟಿದಾಗ, ಅಲ್ಲಿ ಅದ್ಭುತ ಪ್ರಪಂಚವೊಂದರ ದರ್ಶನವಾಗುತ್ತದೆ. ಪಾಶ್ಚಾತ್ಯ—ಪೌರಸ್ತ್ಯ ಸಂಸ್ಕೃತಿ ವೈಶಿಷ್ಟ್ಯಗಳ ಖನಿಯೇ ರಾಧಾಕೃಷ್ಣನ್ನರೆಂದು ಗೊತ್ತಾಗುತ್ತದೆ. ಈ ಮಹತಿಯ ಪರಿಚಯವಾಗಬೇಕಾದರೆ ಹೆಚ್ಚಿನ ಪರಿಶ್ರಮ ಅಗತ್ಯ—ಏಕೆಂದರೆ ಹೇಳುತ್ತಿರುವವರು ಯಾರಾದರೂ ಬಳಿಯಲ್ಲಿದ್ದರೆ ತಾವೇನೂ ನಡುವೆ ಮಾತನಾಡದೆ ಸುಮ್ಮನೆ ಕೇಳುತ್ತಿರುವಷ್ಟು ಸೌಮ್ಯ ಮನಸ್ಸು ರಾಧಾಕೃಷ್ಣನ್ನರದು.

ಡಾ. ಸರ್ವಪಳ್ಳಿ ರಾಧಾಕೃಷ್ಣನ್ನರು ಜ್ಞಾನ ಪಿಪಾಸುವಿನ ಹಂತವನ್ನು ಮೀರಿ ಈಗ ಜ್ಞಾನಯೋಗಿಯ ಸ್ಥಾನಕ್ಕೆ ಏರಿದ್ದಾರೆ. ಇವರು ಹೀಗಾದಾರೆಂದು ಜಾಣಾಕ್ಷರು ಆಗಲೇ ಹೇಳಬಹುದಾಗಿದ್ದಂತೆ ರಾಧಾಕೃಷ್ಣನ್ನರ ವಿದ್ಯಾಭ್ಯಾಸ ನಡೆಯಿತು. ವೆಲ್ಲೋರಿನಲ್ಲಿ ಮೆಟ್ರಿಕ್ ಪರೀಕ್ಷೆಯನ್ನು ಕೊಟ್ಟಂದಿನಿಂದ ಮದ್ರಾಸಿನಲ್ಲಿ ಎಂ. ಎ. ಪದವಿ ಗಳಿಸುವ ವರೆಗೂ ಅನಂತರವೂ ಪ್ರಥಮ ಶ್ರೇಣಿಯನ್ನು ಇವರು ಬಿಟ್ಟುಗೊಡಲಿಲ್ಲ. ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿದ್ದಾಗ ಮನೋವಿಜ್ಞಾನ ಎಂಬ ಗ್ರಂಥ ಬರೆದು ಪ್ರಕಟಿಸಲು, ಕಾಲೇಜಿನ ಅಧಿಕಾರಿಗಳನ್ನೊಳಗೊಂಡು ವಿದ್ವತ್ಪ್ರಪಂಚದ ಎಲ್ಲರಕಣ್ಣನ್ನೂ ಅದು ಕುಕ್ಕಿ ಸೆರೆಯಿಸಿತು. ಕೂಡಲೇ ಇವರು ಪ್ರಾಧ್ಯಾಪಕ ಸ್ಥಾನಕ್ಕೆ ಏರಿದರು. ಮೈಸೂರು ವಿಶ್ವವಿದ್ಯಾಲಯವು ತೊಡಗಿದಾಗ ಅಲ್ಲಿ ತತ್ತ್ವದರ್ಶನ ಶಾಸ್ತ್ರದ ಪ್ರಾಧ್ಯಾಪಕ ಸ್ಥಾನವು ರಾಧಾಕೃಷ್ಣನ್ನರಿಗೆ ಕೊಡಲ್ಪಟ್ಟಿತು

ಇಲ್ಲಿರುವಾಗ ಅವರು "ದಿ ರೈನ್ ಆಫ್ ರಿಲೀಜನ್ ಇನ್ ಕಂಟೆಂಪರರಿ ಫಿಲಾಸಫಿ" ಎಂಬ ಉದ್ಗ್ರಂಥವನ್ನು ಬರೆದರು. ಇದು ಲೋಕೋತ್ತರವಾದ ಕೀರ್ತಿಯನ್ನು ಸಂಪಾದಿಸಿತು. ಆಗಲೇ ಕಲ್ಕತ್ತೆಯ ವಿಶ್ವವಿದ್ಯಾಲಯದಲ್ಲಿ ದೊಡ್ಡ ಸ್ಥಾನವನ್ನು ಅಲಂಕರಿಸಲು ಸರ್ ಅಶುತೋಷರು ಆಹ್ವಾನ ನೀಡಿದರು. ರಾಧಾಕೃಷ್ಣನ್ನರ ವ್ಯಾಸಂಗಕ್ಕೆ ಇದು ಹೆಚ್ಚು ಚೆನ್ನಾದ ವಾತಾವರಣವನ್ನು ಒದಗಿಸಿತು. ಪಾಶ್ಚಾತ್ಯ ದೇಶಗಳ ಪರಿಭ್ರಮಣದ ಸಂದರ್ಭವೂ ಅವರಿಗೆ ಬಂತು ಭಾರತವು ಚಮತ್ಕಾರಗಳ ದೇಶ ಎಂದು ಮಾತ್ರ ತಿಳಿದಿದ್ದ ಪಶ್ಚಿಮದ ಜನತೆ ರಾಧಾಕೃಷ್ಣನ್ನರಲ್ಲಿ ಜೀವನದಲ್ಲಿಯೇ ಅದ್ಭುತ ಹಾಗು ವಿಚಿತ್ರವೆನಿಸಿದ ದರ್ಶನಶಾಸ್ತ್ರಗಳ ಸಂಗಮವನ್ನು ಗುರುತಿಸಿತು. ಆಕ್ಸ್‌ಫರ್ಡ್ ವಿಶ್ವವಿದ್ಯಾಲಯವು ತನ್ನ ಸ್ನಾತಕರಾಗಿರದವರನ್ನು ಪ್ರಾಧ್ಯಾಪಕರಾಗಿ ಸ್ವೀಕರಿಸದ ಪರಂಪರೆಯನ್ನು ತ್ಯಜಿಸಿ ಭಾರತದ ಈ ಮಹಾನುಭಾವನನ್ನು ಪ್ರೀತಿಯಿಂದ ಸ್ವಾಗತಿಸಿ, ಆಲಂಗಿಸಿಕೊಂಡಿತು.

ಮದನ ಮೋಹನ ಮಾಲವೀಯರ ದೇಹಾಂತದ ಬಳಿಕ ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಕುಲಪತಿಯಾಗಿ ಇವರು ವ್ಯವಹಾರ ಕೌಶಲ್ಯವನ್ನು ತೋರಿಸಿದರು. ಬ್ರಿಟಿಷ ಅಧಿಕಾರಿಗಳ ಅಪ್ರಿಯ ವರ್ತನೆಯನ್ನು "ಶಠಂ ಪ್ರತಿ ಶಾಠ್ಯಂ" ಎಂಬ ನೀತಿಯನ್ನನುಸರಿಸಿಯೇ ಖಂಡಿಸುವ ಎದೆಗಾರಿಕೆ ಈ ಸೌಮ್ಯ ಮೂರ್ತಿಯಲ್ಲಿ ತೋರಿದರೆ ಆಶ್ಚರ್ಯವಾದೀತು. ಈ ವ್ಯಾವಹಾರಿಕ ಜ್ಞಾನಯೋಗಿಯು ಕನಸು ಕಾಣುತ್ತಿಲ್ಲ; ದರ್ಶನದ ಆಕರ್ಷಣೆಗೊಳಪಟ್ಟು, ಲೋಕವನ್ನು ಮಾಯೆಯೆಂದು ತಿಳಿಯುವುದಿಲ್ಲ; ಕರ್ಮಕ್ಷೇತ್ರದಲ್ಲಿ ಶ್ರದ್ಧೆ ಹಾಗು ನಿಷ್ಠೆಯಿಂದ ಬಾಳುವ ನಾಗರಿಕ ಭಾವನೆ ರಾಧಾಕೃಷ್ಣನ್ನರಲ್ಲಿ ತುಂಬಿರುತ್ತದೆ. "ಧರ್ಮ" ಎಂಬ ಭಾರತೀಯ ಶಬ್ದಕ್ಕೆ ಸರಿದೊರೆಯಾದ, ಅಷ್ಟು ವ್ಯಾಪಕವಾದ ಪದವು ಪ್ರಪಂಚದ ಬೇರಾವುದೇ ಭಾಷೆಯಲ್ಲಿಲ್ಲವೆಂದು ಸಾರಿದ ಈ ರಸಋಷಿಯು ಧರ್ಮಸೂತ್ರಗಳಿಗೆ ವಿರುದ್ಧ ನಡೆದಾತನೇ ಅಲ್ಲ.

ನೈತಿಕ ಆದರ್ಶವನ್ನು ಇಟ್ಟುಕೊಂಡಿರುವ ಸ್ವತಂತ್ರ ಭಾರತವು ರಶಿಯದಲ್ಲಿ ರಾಧಾಕೃಷ್ಣನ್ನರನ್ನು ರಾಯಭಾರಿಯಾಗಿ ನೇಮಿಸಿ ತನ್ನ ಸ್ವಾರ್ಥವನ್ನು ಸಾಧಿಸಿದಂತೆ ಜಗತ್ಕಲ್ಯಾಣಕ್ಕೂ ನೆರವಾಯಿತು. ಪೂರ್ವ-ಪಶ್ಚಿಮಗಳ ತಿಕ್ಕಾಟವನ್ನು ನಿವಾರಿಸುವಲ್ಲಿ ರಾಧಾಕೃಷ್ಣನ್ನರ ವ್ಯಕ್ತಿತ್ವದಿಂದ ದೊರಕಿದ ಪ್ರಯೋಜನವನ್ನು ಚರ್ಚಿಲ್ಲರೂ ಸ್ಟಾಲಿನ್ನರೂ ಕೂಡಿಯೇ ನೆನೆದಿದ್ದಾರೆ—ಯುನೆಸ್ಕೋದ ಅಧ್ಯಕ್ಷ ಸ್ಥಾನಕ್ಕೆ ಜಗತ್ತಿನ ರಾಷ್ಟ್ರಗಳು ಅವರನ್ನು ಚುನಾಯಿಸಿ, ಅವರ ಮಾರ್ಗ ದರ್ಶನವನ್ನು ಸ್ವೀಕರಿಸಿ, ತಮ್ಮ ಪ್ರಗತಿಯ ಮಾರ್ಗವನ್ನು ರೂಪಿಸುತಿದ್ದಾವೆ. ರಾಧಾಕೃಷ್ಣನ್ನರ ಕಂಠಶ್ರೀಯಿಂದ ಹೊರ ಹೊಮ್ಮುವ ವಾಗ್ಝರಿಯು ಎಲ್ಲರನ್ನೂ ಮುಗ್ಧಗೊಳಿಸುತ್ತದೆ. ಭಾರತೀಯರಾದ ನಾವು ಅವರನ್ನು ಉಪರಾಷ್ಟ್ರಪತಿಯೆಂದು ಮನ್ನಿಸಿ, ನಮ್ಮನ್ನೇ ಗೌರವಿಸಿ ಕೊಂಡಿದ್ದೇವೆ. ಸ್ವತಂತ್ರ ರಾಷ್ಟ್ರದ ಸಾರ್ವಭೌಮ ನೀತಿಯನ್ನು ಇಲ್ಲಿಯ ಪ್ರಜೆಗಳಿಗೂ ಲೋಕದ ಜನತೆಗೂ ತಿಳಿಸಿ ಹೇಳುವಲ್ಲಿ ರಾಧಾಕೃಷ್ಣನ್ನರಷ್ಟು ಸಫಲತೆಯನ್ನು ಹೊಂದಿದ ನಾಯಕರು ವಿರಳ.

ಸ್ತ್ರೀ ರತ್ನ ವಿಜಯಲಕ್ಷ್ಮಿ

ಒಳ್ಳೆಯ ಹೆಸರಿದ್ದರೆ ಸಾಲದು—ಅದನ್ನು ಅನ್ವರ್ಥನಾಮವಾಗಿ ಮಾಡಿಕೊಳ್ಳುವ ಯೋಗ್ಯತೆಯೂ ವ್ಯಕ್ತಿಯಲ್ಲಿರಬೇಕು. ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ತಮ್ಮ ಹೆಸರಿನ ಗೌರವವನ್ನು ಚೆನ್ನಾಗಿಯೇ ಕಾಪಾಡಿಕೊಂಡು ಬಂದಿದ್ದಾರೆ. ಅವರು ಭಾರತೀಯ ಸ್ತ್ರೀ ಪ್ರಪಂಚಕ್ಕೆ ವ್ಯವಹಾರದ ಅನೇಕ ಕ್ಷೇತ್ರಗಳಲ್ಲಿ "ಪ್ರಥಮ" ಸ್ಥಾನವನ್ನು ದೊರಕಿಸಿಕೊಟ್ಟರು. ೧೯೩೭ರಲ್ಲಿ ಅವರು ಸಂಯುಕ್ತ ಪ್ರಾಂತದ ಆರೋಗ್ಯ ಮಂತ್ರಿಯಾದರು: ಅದಕ್ಕೆ ಮುಂಚೆ ಭಾರತದ ಯಾವ ಸ್ತ್ರೀಯೂ ಮಂತ್ರಿಯಾಗಿರಲಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ರಾಷ್ಟ್ರ ಸಂಘದ ಭಾರತೀಯ ನಿಯೋಗದ ನಾಯಿಕೆಯಾದರು: ಈ ಹೊಣೆಗಾರಿಕೆಯೂ ಭಾರತೀಯ ಸ್ತ್ರೀಯರಿಗೆ ಹೊಸತು. ಮುಂದೆ ರಶಿಯಾ—ಅಮೇರಿಕಗಳಲ್ಲಿ ರಾಯಭಾರಿಯಾಗಿ ನೇಮಕ ಗೊಂಡರು: ಕಳೆದ ವರ್ಷ ಸಂಯುಕ್ತ ರಾಷ್ಟ್ರಸಂಘದ ಸಾಮಾನ್ಯ ಸಭೆಯ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು. ಇವೆರಡೂ ಪದವಿಗಳು ಭಾರತೀಯ ಸ್ತ್ರೀಯರ ಮಟ್ಟಿಗಷ್ಟೇ ಅಲ್ಲ—ಇಡೀ ಮಹಿಳಾ ಲೋಕಕ್ಕೆ ವಿಜಯಲಕ್ಷ್ಮಿಯವರ ಮೂಲಕವೇ ಮೊದಲನೇ ಸಲ ದೊರಕಿತು.

ವಿಜಯಲಕ್ಷ್ಮಿಯವರ ವ್ಯಕ್ತಿಗತ ಜೀವನವು, ನೆಹರೂ ಕುಟುಂಬದ ಚರಿತ್ರೆಯೊಂದಿಗೆ, ಭಾರತದ ಸ್ವಾತಂತ್ರ್ಯ ಸಮರದ ಇತಿಹಾಸದೊಂದಿಗೆ, ಸೇರಿ ಹೋಗುತ್ತದೆ. ಅಲಹಾಬಾದಿನ ಆನಂದ ಭವನದಲ್ಲಿ ಅವರು ಜೀವನದ ಹೆಚ್ಚು ವರ್ಷಗಳನ್ನು ಕಳೆದರು: ಬಾಲ್ಯದಲ್ಲಿ ಕಠೋರ ಶಿಸ್ತು ಹಾಗು ಪರಿಶ್ರಮಕ್ಕೆ ಗುರಿಮಾಡಿಸುತಿದ್ದ ಕುಮಾರಿ ಹೂಪರಳ ಪ್ರಿಯಶಿಷ್ಯೆಯಾದರು. ಆಂಗ್ಲ ಸಭ್ಯತೆಯ ಗಾಳಿಯೇ ಅವರನ್ನು ಹೆಚ್ಚಾಗಿ ಸೋಂಕಿತು—ಅವರ ಇಂದಿನ ಉಡುಪು ಅಲಂಕಾರಗಳಲ್ಲಿ "ಭಾರತೀಯ" ವಾದದ್ದೆಂದರೆ ಅವರುಡುವ ಸೀರೆ ಮಾತ್ರ! ಗಾಂಧೀಜಿಯ ಕಾರ್ಯದರ್ಶಿ ಮಹಾದೇವ ದೇಸಾಯಿಯವರು ೧೯೨೦ರ ಸುಮಾರಿನಲ್ಲಿ "ಮಾಡರ್ನ್ ರಿವ್ಯೂ" ದಲ್ಲಿ ಬಂದೊಂದು ಲೇಖವನ್ನು ಹೊಗಳುತ್ತಾ ಅದನ್ನು ಬರೆದವನ ಪರಿಚಯವನ್ನು ವಿಜಯಲಕ್ಷ್ಮಿಯವರಿಗೆ ಮಾಡಿಕೊಟ್ಟರು. ಕಾಠೇವಾಡದ ಈ ಮಹಾನುಭಾವ ರಣಜಿತ ಪಂಡಿತನನ್ನೇ ಮುಂದೆ ಇವರು ವಿವಾಹವಾಗಿ ಮೂರು ಹೆಣ್ಣು ಮಕ್ಕಳನ್ನು ಹಡೆದರು. ಗೃಹಲಕ್ಷ್ಮಿಯಾಗಿ ಬಾಳುತಿದ್ದ ಇವರಿಗೆ ಬ್ರಿಟಿಷ ಸರಕಾರದ ವಕ್ರದೃಷ್ಟಿಯ ಕೊಳ್ಳೆಯಾಗಬೇಕಾಯಿತು—ಕೊನೆಯ ಮಗು ರೀತಾಳನ್ನು ಮನೆಯಲ್ಲಿ ಬಿಟ್ಟೇ ಇವರು ಅಸಹಕಾರ ಚಳವಳದ ಕಾಲದಲ್ಲಿ ಜೈಲನ್ನು ಸೇರಿದರು. ಮುಂದೆ ವೈಯುಕ್ತಿಕ ಸತ್ಯಾಗ್ರಹದಲ್ಲೂ "ಭಾರತ ತೊಲಗಿರಿ" ಆಂದೋಲನದಲ್ಲೂ ವಿಜಯಲಕ್ಷ್ಮಿಗೆ ಸೆರೆಮನೆ ವಾಸ ದೊರಕಿತು.

ಜವಾಹರಲಾಲರ ತಂಗಿ ಎಂಬುದರಿಂದಲೇ ವಿಜಯಲಕ್ಷ್ಮಿಗೆ ಇಷ್ಟು ಸಮ್ಮಾನವೆಂದು ಅನೇಕರು ಭಾವಿಸುತ್ತಿರಬಹುದು—ಆದರೆ ಇದು ಗೌಣವೇ ಹೊರತು ಪ್ರಧಾನ ಅಂಶವಲ್ಲ. ವಿಜಯಲಕ್ಷ್ಮಿ ಮಂತ್ರಿಸ್ಥಾನದಲ್ಲಿರುವಾಗಲೂ ಅಖಿಲ ಭಾರತ ಮಹಿಳಾ ಪರಿಷತ್ತಿನ ಮತ್ತು ಮಹಿಳೆಯರ ಶಾಂತಿ ಹಾಗು ಸ್ವಾತಂತ್ರ್ಯದ ಅಂತಾರಾಷ್ಟ್ರೀಯ ಮಂಡಳದ ಅಧ್ಯಕ್ಷ ಸ್ಥಾನದಲ್ಲಿರುವಾಗಲೂ ತನ್ನ ಯೋಗ್ಯತೆಯೇನೆಂಬುದನ್ನು ಸ್ಪಷ್ಟವಾಗಿ ಲೋಕಕ್ಕೆ ಮನವರಿಕೆ ಮಾಡಿಸಿಕೊಟ್ಟರು. ಆದರೆ ನಿಜವಾಗಿ ಅವರ ಪ್ರತಿಭೆ, ವಾಕ್ಚಾತುರ್ಯ, ಹಾಗು ವ್ಯಕ್ತಿತ್ವ ಪ್ರಕಟಗೊಂಡದ್ದು ೧೯೪೪ರಲ್ಲಿ—ಅಮೇರಿಕೆಯಲ್ಲಿ ಕಲಿಯುತಿದ್ದ ತನ್ನ ಮಕ್ಕಳನ್ನು ನೋಡಲೆಂದು ಸೆರೆ ಮನೆಯಿಂದ ಹೊರ ಬಿದ್ದವರೇ ಅಲ್ಲಿಗೆ ಹಾರಿ ಹೋದಾಗ. ಸಾನ್ ಫ್ರಾನ್ಸಿ



(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ಕೈನ್‌ಸ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ. ವಿ. ಯೆಸ್. ಪ್ರಭು.

ಅನರ್ಘ್ಯ ರತ್ನಗಳು

ಸ್ಕೋದಲ್ಲಿ ಆಗ ಸಂಯುಕ್ತ ರಾಷ್ಟ್ರ ಸಂಘಕ್ಕೆ ಬುನಾದಿ ಹಾಕುತಿದ್ದರು. ಭಾರತದ ಪ್ರತಿನಿಧಿಗಳೆಂದು ಬ್ರಿಟಿಷ ಸರಕಾರದ ಗೊಂಬೆಗಳು ಬಂದಿದ್ದರು. ವಿಜಯಲಕ್ಷ್ಮಿ ಇಲ್ಲಿ ಬ್ರಿಟಿಷರ ವಿರುದ್ಧ ರಣಕಹಳೆಯನ್ನೂದಿದರು. ಭಾರತೀಯ ಸ್ವಾತಂತ್ರ್ಯದ ಬೇಡಿಕೆಯನ್ನು ಜಗತ್ತಿನ ಮುತ್ಸದ್ದಿಗಳ ಮುಂದಿಟ್ಟು ಸಹಾನುಭೂತಿಗಳಿಸಿದರು. ಅಮೇರಿಕದ ಭಾರತೀಯ ಸಂಘದ ವಕ್ತಾರರಾಗಿ ಎಲ್ಲರಿಂದಲೂ ಹೊಗಳಿಸಿ ಕೊಂಡರು. ಕ್ಯಾಲಿಫೋರ್ನಿಯದ ಭಾಷಣದಲ್ಲಿ ಏಶ್ಯಾದ ಸ್ವಾತಂತ್ರ್ಯವನ್ನು ಅವರು ಪ್ರಸ್ತಾಪಿಸಿದರು.

ಗಾಂಧೀಜಿಗೆ ವಿಜಯಲಕ್ಷ್ಮಿಯ ಈ ಕಾರ್ಯ ತುಂಬ ಮೆಚ್ಚುಗೆಯಾಯಿತು. "ವಿಜಯಲಕ್ಷ್ಮಿ ಕುಸ್ತಿಯಲ್ಲಿ ಬ್ರಿಟಿಷ ಪ್ರತಿನಿಧಿಗಳನ್ನು ನೆಲಕ್ಕೆಸೆದಳು" ಎಂದವರು ಮುಕ್ತಕಂಠದಿಂದ ಪ್ರಶಂಸಿಸಿದರು. ಭಾರತದ ಕುರಿತು ಅಮೇರಿಕದ ಸಹಾನುಭೂತಿ ದೊರಕುವಂತೆ ಮಾಡಿದ ಶ್ರೇಯಸ್ಸು ವಿಜಯಲಕ್ಷ್ಮಿಗೇ ಸಲ್ಲುತ್ತದೆ. ಮುಂದೆ ಇವರು ರಾಷ್ಟ್ರಸಂಘದಲ್ಲಿ ದಕ್ಷಿಣ ಆಫ್ರಿಕೆಯ ಭಾರತೀಯರ ಪ್ರಶ್ನೆಯನ್ನು ಮುಂಡಿಸಿ, ಮಾನವತೆಗೆ ಕಲಂಕ ಪ್ರಾಯವಾದ ವರ್ಣದ್ವೇಷವನ್ನು ಖಂಡಿಸಿದಾಗ ನಂದಾದೀಪದ ನಂದಿನಿ ಎಂದು ಅಲ್ಲಿಯ ಪತ್ರಿಕೆಗಳು ವಿಜಯಲಕ್ಷ್ಮಿಯವರನ್ನು ವರ್ಣಿಸಿದವು. ರಾಷ್ಟ್ರಸಂಘದ ಅಧ್ಯಕ್ಷ ಸ್ಥಾನಕ್ಕೇರಿದ ಬಳಿಕ ಕೈಗೊಂಡ ಲೋಕ ಸಂಚಾರದಲ್ಲಿ ಇವರಿಗೆ ಹೋದಲ್ಲೆಲ್ಲ ಸಂಭ್ರಮದ ಸ್ವಾಗತ ದೊರೆಯಿತು. ತಿರುಗಾಟದಲ್ಲಿ ತುಂಬ ಆಸಕ್ತಿಯುಳ್ಳ ಇವರು ಕಳೆದ ವರ್ಷ ಚೀನವನ್ನೂ ಸಂದರ್ಶಿಸಿದ್ದರು.

ಹೆಂಗಸಿಗೆ ಸಹಜವಾದ ತಾಯ್ತನದ ಮಮತೆಯೂ ಸೌಂದರ್ಯ ದೃಷ್ಟಿಯೂ ವಿಜಯಲಕ್ಷ್ಮಿಯಲ್ಲಿ ಕಂಡುಬರುತ್ತವೆ. ವಸ್ತ್ರಾಲಂಕಾರಗಳಲ್ಲಿ ಅವರ ಅಭಿರುಚಿ ರಸಿಕತೆಯನ್ನು ಸೂಸುತ್ತದೆ.

ಮೇಹರಚಂದ ಮಹಾಜನ *(ಶೀರ್ಷಿಕೆ: ಮೇಹರಚಂದ)*

ಹುಟ್ಟಿದ್ದು ಕೆಟ್ಟ ಗಳಿಗೆಯಲ್ಲಿ ಎಂದು ಜ್ಯೋತಿಷಿಯೊಬ್ಬನು ಸಲಹೆ ಕೊಟ್ಟುದರಿಂದ ತಂದೆ ತಾಯಿಗಳು ಆ ಮಗುವನ್ನು ಆರು ವರ್ಷಗಳ ವರೆಗೆ ಸಮೀಪದ ಹಳ್ಳಿಯೊಂದರಲ್ಲಿ ಬೇರೆಯೇ ಇಟ್ಟರು. ಕಾಂಗ್ರಾದ ಬಳಿಯ ರಜಪೂತ ಕುಟುಂಬವೊಂದರ ಆಶ್ರಯದಲ್ಲಿ ಲೋಕದ ಬೆಳಕನ್ನು ಕಾಣಲು ಬಳೆಯುತಿದ್ದ ಈ ಮಗು ಮುಂದೆ ಭಾರತದ ವರಿಷ್ಠ ನ್ಯಾಯಾಧೀಶನ ಸ್ಥಾನವನ್ನು ಅಲಂಕರಿಸುವನೆಂದು, ಪಾಪ, ಜಾತಕ ಮಾಡಲು ಬಂದ ಆ ಜೋಯಿಸರು ತಿಳಿಯಲಾರದೆ ಹೋದರು. ಮೆಹರಚಂದ ಮಹಾಜನರ ಲೋಕಾನುಭವದ ಪ್ರಥಮಾಧ್ಯಾಯ ಈ ಘಟನೆಯನ್ನು ವಿವರಿಸುತ್ತದೆ. ಆದರೆ ಇದರಿಂದ ಅವರು ನೊಂದುಕೊಂಡು ಲೋಕದ ಮೇಲಿ ಸೇಡನ್ನು ತೀರಿಸಿ ಕೊಳ್ಳುವ ವಿಚಾರವನ್ನೇನು ಮಾಡಲಿಲ್ಲ. ಬದಲು ನ್ಯಾಯದ ತಕ್ಕಡಿಯಲ್ಲಿ ಪ್ರತಿಯೊಂದೂ ವಿಷಯದ ಯೋಗ್ಯತೆಯನ್ನು ತೂಗಲು ಅವರು ನೋಡುತ್ತಾರೆ.

ಮೆಹರಚಂದರು ಮೃದು ಹೃದಯಿ: ಆದರೆ ಅವರು ತೀರ ನಿಷ್ಠುರ ವಾಕ್ಕುಗಳಾಗಿ ತೋರುವ ಗಳಿಗೆಯೂ ಅನೇಕ. ಕೆಲಸದಲ್ಲಿ ಇವರು ಎಂದಿಗೂ ವೈಗಳ್ಳತನ ತೋರಿಸಿದವರಲ್ಲ; ಅಪ್ರಾಮಾಣಿಕತೆಯ ಸೋಂಕುತಗಲಿದವರಲ್ಲ. ತಮ್ಮ ಮೂವತ್ತು ವರ್ಷಗಳ ವಕಾಲತಿನ ಅನುಭವಹಾಗು ಉಚ್ಚಯೋಗ್ಯತೆಯ ನ್ಯಾಯಾಧೀಶರಾಗಿ, ಸಮರ್ಥ ಆಡಳಿತಗಾರನಾಗಿ ನಿರ್ವಹಿಸಿದ ಹೊಣೆಗಾರಿಕೆಗಳ ಬಲದಿಂದ ಅವರು ಅಯೋಗ್ಯರ ಹಾಗು ಅಕರ್ಮಣ್ಯರ ಕಾರುಭಾರನ್ನು ಹೀಗಳೆಯುವುದುಂಟು: ಕರ್ತವ್ಯ ಪರಾಙ್ಮುಖರು ಸಮಾಜಕ್ಕೆ ಮಾಡುವ ಹಾನಿಯನ್ನು ಉಗ್ರವಾಗಿ ಖಂಡಿಸಿದ್ದುಂಟು. "ನ್ಯಾಯಾಂಗದಲ್ಲಿ ದೋಷವೇನೂ ಇಲ್ಲ--ಆದಳಿತ ಯಂತ್ರವೇ ಕೆಟ್ಟಿರುತ್ತದೆ" ಎಂದು ವ್ಯಕ್ತಗೊಳಿಸಿದ ಅಭಿಪ್ರಾಯ ಅವರ ವ್ಯಕ್ತಿತ್ವದ ಔನ್ನತ್ಯವನ್ನು ಪ್ರಕಟಪಡಿಸುತ್ತದೆ.

ಧರ್ಮಶಾಲೆಯ ಜಿಲ್ಲಾ ನ್ಯಾಯಸ್ಥಾನದ ವಕೀಲರಾಗಿ ತಮ್ಮ ವೃತ್ತಿಯನ್ನು ಪ್ರಾರಂಭಿಸಿದಾಗ ಹಾಗು ಮುಂದಕ್ಕೆ ಗುರುದಾಸಪುರದಲ್ಲಿ ದಿವಾನ ಸಂತರಾಮರ ಕೈಕೆಳಗೆ ದುಡಿಯುತಿದ್ದಾಗ ಅವರ ಯೋಗ್ಯತೆ ಹೊರಸೂಸತೊಡಗಿತು. ತಮ್ಮ ಅದೃಷ್ಟ ಪರೀಕ್ಷೆಗಾಗಿ ಅವರು ಲಾಹೋರು ಹೈಕೋರ್ಟಿನಲ್ಲಿ ಪ್ರವೇಶಿಸಿದ ಬಳಿಕ, ಭಾಗ್ಯೋದಯವಾಗಲು ಹೆಚ್ಚು ದಿನ ಹಿಡಿಯಲಿಲ್ಲ. ವ್ಯವಹರಣಾ ಚಾತುರ್ಯವು ಅವರೆಡೆಗೆ ಎಲ್ಲರನ್ನೂ ಆಕರ್ಷಿಸಿದರೆ, ವೃತ್ತಿ ಗಾಂಭೀರ್ಯವನ್ನು ಉಳಿಸಿಕೊಂಡು ನ್ಯಾಯ ರಕ್ಷಣೆಗಾಗಿ ಹೋರಾಡುವ ಮೂಲಕ ಜನಸೇವೆ ಮಾಡಲು ಇವರು ಚಡಪಡಿಸುತಿದ್ದರು. ಎಳೆಂಟು ವರ್ಷಕಾಲ ಇವರು ಗೌರವ ಪ್ರಾಧ್ಯಾಪಕರಾಗಿ ಶಿಕ್ಷಣ ರಂಗಕ್ಕೆ ಸೇವೆಸಲ್ಲಿಸಿದರು. ಪಂಜಾಬ ವಿಶ್ವ ವಿದ್ಯಾಲಯದ ಉನ್ನತಿಗೆ ಇವರಿಂದ ದೊರೆತ ನೆರವು ಅವರಿಗೆ ಗೌರವ ಪದವಿಯನ್ನು ಸಂಪಾದಿಸಿ ಕೊಟ್ಟಿತು.

ನ್ಯಾಯಾಧೀಶನಾಗಿ ಅವರು ೧೯೪೩ರಲ್ಲಿ ನೇಮಕ ಗೊಂಡಂದಿನಿಂದ ಅವರ ತೀರ್ಪುಗಳಲ್ಲಿ ಅನೇಕ ಎಂದೆಂದಿಗೂ ಮನ್ನಣೆಯನ್ನು ಪಡೆಯುವ ಮಹತ್ವದಿಂದ ಕೂಡಿರುತ್ತವೆ. ಭಾರತ ವಿಭಜನೆಯ ಕಠಿಣ ದಿನಗಳಲ್ಲಿ ಪಂಜಾಬಿನ ಗಡಿ ಸಮಿತಿಯ ಸದಸ್ಯರಾಗಿ ಇವರು ನಿರ್ವಹಿಸಿದ ಹೊಣೆಗಾರಿಕೆಯನ್ನು ನಾವೆಲ್ಲರೂ ಮೆಚ್ಚಬೇಕು. ಗುರುದಾಸಪುರ ಜಿಲ್ಲೆಯ ಒಂದು ಭಾಗವನ್ನು ಭಾರತದಲ್ಲಿ ಉಳಿಸಿಕೊಳ್ಳುವುದಕ್ಕೆ ಮೆಹರಚಂದರ ಪರಿಶ್ರಮವೇ ಕಾರಣವೆಂದರೂ ಸಲ್ಲುತ್ತದೆ. ಮೆಹರಚಂದರ ಕಾರ್ಯಕ್ಷಮತೆಯಿಂದ ತೃಪ್ತಿಗೊಂಡ ಸರ್ದಾರ ವಲ್ಲಭಭಾಯಿ ಪಟೇಲರು ಇವರನ್ನು ಕಾಶ್ಮೀರದಲ್ಲಿ ವಿಷಮ ಪರಿಸ್ಥಿತಿ ತಲೆದೋರಿದಾಗ ಪ್ರಧಾನ ಮಂತ್ರಿಯಾಗಿ ನೇಮಿಸಿದರು. ಅಲ್ಲಿ ತೋರಿಸಿದ ಬುದ್ಧಿವಂತಿಕೆಯು ಆ ರಾಷ್ಟ್ರವನ್ನು ಉಳಿಸಿತು. ಪಠಾಣರ ಸೈನಿಕರ ಕಾಯಿದೆ ಸಲಹೆಗಾರರಾಗಿ ಇವರು ಮಾಡಿದ ಕೆಲಸವು ಆಡಳಿತ ನೈಪುಣ್ಯಕ್ಕೆ ಇನ್ನೊಂದು ಮಾದರಿಯಾಯಿತು.

ಫೆಡರಲ್ ಕೋರ್ಟು ಭಾರತೀಯ ಗಣರಾಜ್ಯದ ವರಿಷ್ಠ ನ್ಯಾಯಾಲಯವಾದಾಗ ಇವರು ಅಲ್ಲಿ ನ್ಯಾಯಾಧೀಶರಾಗಿದ್ದರು. ಈ ವರ್ಷ ವರಿಷ್ಠ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿ ಭಡತಿ ಹೊಂದಿದರು. ಇವರ ದೃಢಕಾಯವಾದ ಮೈಕಟ್ಟು, ಸಂಭಾಷಣಾ ಮಾಧುರ್ಯ, ಅದ್ಭುತ ಸ್ಮರಣ ಶಕ್ತಿ, ಆಯಾಸವೇ ಕಾಣದ ದುಡಿಮೆ ಎಲ್ಲರನ್ನೂ ಬೆರಗುಗೊಳಿಸುತ್ತದೆ; ಮನುಷ್ಯನ ಯೋಗ್ಯತೆ ಹೆಚ್ಚುವ ದಾರಿಯನ್ನೂ ನಿರ್ದೇಶಿಸುತ್ತದೆ.

—ಕು.

ಬಂತು ಪ್ರಳಯ...

ಕತ್ತಲೆ ಕಪ್ಪಿನ ಮುಗಿಲಿನ ಮೋರೆಯ
ಮುಚ್ಚಿದೆ ಬೆಳಗಿನ ಬೆಳ್ಳಿ—
ಕಲ್ಲಿನ ಗೋಡೆಯ ಬಿರುಕಿನ ತುಟಿಯನು
ಕಚ್ಚಿದೆ ಹೂವಿನ ಬಳ್ಳಿ!
ಮುಗ್ಗಿದ ಕಗ್ಗವ ಕೆಸರಿನ ಕುಲದಲಿ
ತರಳದ ನೀರಿನ ಬುಗ್ಗೆ—
ಮುಳ್ಳಿನ ಕಳ್ಳಿಯ ಬೇಲಿಯ ಬೇಟೆಕೆ
ಹಾಡಿದೆ ಹಕ್ಕಿಯ ಒಗ್ಗೆ!
ಸುಳ್ಳಿನ ಕಲ್ಲಿಯ ಕಣ್ಣಲಿ ಹೊಳೆದಿದೆ
ಸತ್ಯದ ಬೆಳಕಿನ ಬಿತ್ತು—
ಆಯುಧ ರಾಶಿಯ ಹಾಸಿನೊಳೊರಗಿದೆ,
ಶಾಂತಿಯು ತೂಕಡಿಸಿತ್ತು!
ಗಾಳಿಯ ವೇಗಕೆ ಕಲಿಸಿತು ಕಬ್ಬಿಣ
ಬಾಸಿನ ಬಟ್ಟೆಯ ಗುಟ್ಟು—
ಸಾವಿರ ಮೈಲಿನ ಸಾಗರ ವ್ಯೋಮನು
ನಟಿಸಿತು ಅಣುವಿನ ಸಿಟ್ಟು!
ಹೂವಿನ ಪರಿಮಳ ಬೆಂಕಿಯ ಕಾರಿತು,
ಹೀರಿತು ಕಾಮ ವಿರಕ್ತಿ—
ಕವಿಹೃದಯದ ಕರುಣೆಯ ನೆರೆಯಾರಿತು
ತೋರಿತು ಕ್ರೌರ್ಯದಿ ಭಕ್ತಿ!
ಮಿಂಚಿನ ಮಳೆಯೇ ಸೂಸಿತು, ಬೀಸಿತು
ನಾಶದ ಝುಂಝಾವಾತ—
ಪೂರ್ಣ ಸಮುದ್ರದಿ ಮುಳುಗಿತು ದೃಶ್ಯದ
ನೌಕಾ ರೂಪ ಸ್ವಾತ!

× × ×

ಅಮೃತದ ಬೀಜದೊಳಡಗಿತು ಮೃತ್ಯುವ
ಹೆಮ್ಮರಗಳ ಕಾಡು—
ಬೆಳಕಿನ ಮೌನದಿ ಲಯಿಸಿತು ಸೃಷ್ಟಿಯ
ಕತ್ತಲೆಗಳ ಹಾಡು!

ಜಿ. ಆರ್. ಪಾಂಡೇಶ್ವರ.

ಇದೀಗ ಪ್ರಕಟವಾಗಿದೆ---

-ಕನ್ನಡದಲ್ಲಿ ಹೊಸ ಬಗೆಯ ಗ್ರಂಥ-

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

● ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯ ಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
● ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ಪ್ರತಿಗಳಿಗೆ ಬರೆಯಿರಿ:- ನವಯುಗ ಪ್ರೆಸ್, ಉಡುಪಿ.
ಅಥವಾ
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ದಿವಸ ತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ 5/- ಸ್ಪೆಶಲ್ ರೂ. 8/-

Mrs. P. DEVEE, F. Ds (N. J.) (ವಿ.ಪಿ.ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ದಾಸ್ ಕಂಪೆನಿ, ಮಂಗಳೂರು.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ದಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಸಚೇತನ ಸಾಹಿತ್ಯದ ಆವರಣ

(೧೬ನೇ ಪುಟದಿಂದ)

ಕೊಂಬುದು ಬಹಳ ಬೆಸ್ಟು" ಎಂಬ ಪಾಶ್ಚಾತ್ಯ ಬುದ್ಧಿ ಓದಿದ ಅತ್ಯಲ್ಪ ಸಂಖ್ಯೆಯಲ್ಲಿ ಮೂಡಿದ್ದರಿಂದ ಅವರು ತಾವು ಕೂಲಂಕಷ ರಸಾಸ್ವಾದಕ್ಕೆ ಬೇಕಾಗುವ ಬಗೆಯಿಂದ ಓದುವುದೂ ಇಲ್ಲ, ತಮ್ಮ ಬಂಧುಮಿತ್ರರೊಡನೆ ಉತ್ತಮ ಕೃತಿಗಳ ಆಸ್ವಾದವನ್ನು ಸಹಕರಿಸಿ ಸವಿಯುವುದೂ ಇಲ್ಲ, ಜನತೆಯ ಮುಂದೆ ಅವರಿಗೊಗ್ಗುವ ಬಗೆಯಿಂದ ಕೃತಿಮಥನ ಮಾಡುವುದೂ ಇಲ್ಲ. ಜೊತೆಗೆ ಜನತೆಗಾದರೋ ತಾವೇ ಓದಿಕೊಂಬ ಶಕ್ತಿಯೂ ಅಭಿರುಚಿಯೂ ಬುದ್ಧಿಯೂ ಅನುಕೂಲ್ಯವೂ ಸಾಕಷ್ಟು ಒದಗಿಲ್ಲ. ಆದುದರಿಂದ ಗರ್ಭಗುಡಿ, ಮುಕ್ತದ್ವಾರ, ಚೋಮನದುಡಿ, ದೇವದೂತರು, ಗ್ನಾನ ಮುಂತಾದ (ಕಾರಂತರ) ಕ್ರಾಂತಿಕಾರಕ ಪುಸ್ತಕಗಳು ಹಾಳುಬಿದ್ದ ದೇಗುಲದಲ್ಲಿ ಪೂಜೆಯಿಲ್ಲದೆ ನಿಂತಿರುವ ವಿಗ್ರಹಗಳಂತೆ ಜನಜೀವನದಲ್ಲಿ ಯಾವ ಸ್ಪಂದನವನ್ನೂ ಗಣ್ಯವಾಗಿ ಮಾಡಲಾರದಾಗಿವೆ ಇಂದು. ಸಿನೆಮ ನೋಡಿ ಮರೆತುಬಿಡುವಂತಹ ಆದರ ನಮ್ಮ ಕ್ರಾಂತಿಕಾರಕ ಕೃತಿಗಳಿಗೆ ದೊರಕಿದರೆ ಅವುಗಳೇನು ಮಾಡಿಯಾವು? ಉತ್ತಮ ಕೃತಿಗಳ ಗಂಭೀರ ಅಭ್ಯಾಸದ ಕೇಂದ್ರಗಳು ವರ್ಷಗಟ್ಟಲೆ ನಡೆಯುತ್ತಿದ್ದಲ್ಲಿ ಮಾತ್ರ ಅವುಗಳ ಉತ್ತಮತ್ವ ಜೀವನದಲ್ಲಿ ಉತ್ತಮತೆಯನ್ನು ಉದಯಿಸಲು ಶಕ್ತವಾದೀತು.

ಸಚೇತನ ಸಾಹಿತ್ಯ ಸೃಷ್ಟಿಗೆ ಮೇಲೆ ಹೇಳಿದ ವಿದ್ವದ್—ವಿದ್ವದೇತರರ ಸಮರಸ ಜೀವನವೂ ಅವಶ್ಯಕ. ಹಾಗಾಗಲು ವಿದ್ವಜ್ಜನರ ದೃಷ್ಟಿಯಲ್ಲಿ ಪರಿವರ್ತನವಾಗಬೇಕು; ತಮ್ಮ ಜಾತಿಯೊಂದು ಬೇರೆ, ಉಚ್ಚತರ ಎಂಬಂತೆ ವ್ಯವಹರಿಸುವುದು ಅವರಲ್ಲಿ ಕಡಿಮೆಯಾಗಬೇಕು. ಅಂಥ ದೃಷ್ಟಿ ಮೂಡಲು ನಮ್ಮ ವಿದ್ಯಾರ್ಜನೆಯ ಪದ್ಧತಿ, ಪರಿಸರ, ಪ್ರಕಾರಗಳಲ್ಲಿ ಮೂಲಭೂತ ಬದಲಾವಣೆಯಾಗಬೇಕು. ನಮ್ಮ ವಿದ್ಯೆಯಿಂದು ನೌಕರಿಎಂಬ ಪುರುಷಾರ್ಥದ ಸಾಧನವೆಂದು ಗಣಿತವಾಗಲು ಆ ವಿದ್ಯೆಯ ಲಕ್ಷಣ, ನಾಳಿನ ಹಂಗಾವ ಯೋಜಕರ ವ್ಯವಹಾರ ನಿಂಬಾಧನೆ, ತ್ಪಾದಕ ಉದ್ಯೋಗಗಳ ಅಭಾವ, ರಾಷ್ಟ್ರಜೀವನ ಸುಧಾರಕ ಆರ್ಥಿಕ ಸುಧಾರಣೆಯಾಗದಿರುವುದು ಕಾರಣ.

ನಮ್ಮ ಪಂಚವಾರ್ಷಿಕ ಯೋಜನೆಯ ಸಾಪ್ಪಷ್ಟಿಗಾಮ ಈ ಭಾಗದ ಕನ್ನಡ ಜನತೆಯ ಜೀವನದ ಮೇಲೆ ಎಷ್ಟರ ಮಟ್ಟಿಗಾಗಿದೆ ಎಂಬುದು ಸರ್ವವೇದ್ಯ. ಅಖಿಲ ಭಾರತದ ರಾಜಕೀಯ ಐಕ್ಯದ ಹೆಸರಿನಲ್ಲಿ ನಮ್ಮಲ್ಲಿ ಯಾವ ಅಭಿವೃದ್ಧಿ ಪರಿಣಮಿಸದಾಗಲೂ ಎಲ್ಲಾದರೂ ಏನಾದರೂ ಸಾಧಿಸಲ್ಪಟ್ಟಿದ್ದರೆ ಅತ್ಯಂತ ಅವನ್ನೇ ಹೊಗಳಿ ಸಂತೃಪ್ತಿಯನ್ನು ಪಡಿಸಿಸಲು ನಮ್ಮಲ್ಲಿಯ ಯಾವ 'ಇಜಂ'ನ ಮುಖಂಡರೂ ಮುಂದಾಗತಕ್ಕವರಲ್ಲ ಎಂಬ ಗಮನಾರ್ಹ ವಿಚಾರ ಕನ್ನಡಿಗರಲ್ಲುದಯವಾಗಬೇಕಾಗಿದೆ. ಕನ್ನಡಿಗರಿಂದು ಮೊದಲು ಕನ್ನಡಿಗರು, ಅನಂತರ ಆ ಈ ರಾಜಕೀಯ ಪಕ್ಷದ ಸದಸ್ಯರು ಎಂದು ಕೊಂಡಿಲ್ಲ. ಪಕ್ಷ ನಿಷ್ಠೆ, ಜಾತಿ ನಿಷ್ಠೆ, ಪ್ರದೇಶ ನಿಷ್ಠೆ, ಸ್ವಾರ್ಥ ನಿಷ್ಠೆಗಳ ದಾಳಿಯಲ್ಲಿ ಕರ್ನಾಟಕ ನಿಷ್ಠೆ ಮುಳುಗಿ ಹೋಗಿರುವುದು ಸುವೇದ್ಯ. ಸ್ಥಳದ ದೃಷ್ಟಿಯಿಂದ ಒತ್ತಟ್ಟಿಗಿರುವ ಜನರ ಒಗ್ಗಟ್ಟು, ಒಕ್ಕೂಟ, ಪುಸ್ತಕಗಳು ಜೀವನದಲ್ಲಿ ಪ್ರಾಥಮಿಕ ಆವಶ್ಯಕತೆ ಎಂಬುದನ್ನಾದರೂ ನಮ್ಮ ಜನ ತಿಳಿದುಕೊಳ್ಳಬಾರದೆ? ಆ ಒತ್ತಟ್ಟೆಂದರೆ ತನ್ನ ಕಾಲ ಮೇಲೆ (ಆರ್ಥಿಕವಾಗಿ) ತಾನು ನಿಲ್ಲಬಲ್ಲ ಒಂದು ರಾಜ್ಯಘಟಕವಲ್ಲದೆ, ಒಂದು ಚಿಕ್ಕ ಪ್ರದೇಶವೆಂದಾಗದು. ಇಂಥ ಹಿತಕಾರಿಯಾದ ಕಾರ್ಯಕ್ರಮಗಳನ್ನಿಟ್ಟು ಕೊಂಡು ದುಡಿಯಲು ನಮ್ಮ ತರುಣರಿಂದು ಮುಂದೆ ಬರಬೇಕು. ಅಂಥ Current topic ವರ್ತಮಾನ ಕಾಲೀನ ವಸ್ತುವನ್ನು ಪ್ರತ್ಯಕ್ಷಾಪ್ರತ್ಯಕ್ಷ ರೀತಿಯಿಂದ ಬಳಸಿಕೊಂಬ ಕಥೆ, ಕವನ, ಕಾದಂಬರಿ ವೀರಸ್ಫೂರ್ತಿದಾಯಕವಾಗಿ ರಚಿತವಾಗಬೇಕು. ನಮ್ಮ ಸಾಹಿತ್ಯಕ ಚಟುವಟಿಕೆಗಳ ಕೇಂದ್ರಗಳು (ಸಣ್ಣವಿರಲಿ, ದೊಡ್ಡವಿರಲಿ) ಇಂಥ ಒಂದು ಆದರ್ಶ ಆವರಣ ನಿರ್ಮಿತಿಗೆ ಬೇಕಾದ ಕಾರ್ಯಗಳನ್ನು ಸಂಯೋಜಿಸುವುದು ಅತ್ಯಗತ್ಯ.

ದಕ್ಷಿಣ ಕನ್ನಡದ ನವಯುವಕರು ಇಂಥ ಉತ್ಸಾಹದ ಆವರಣವನ್ನು ನಿರ್ಮಿಸುವಲ್ಲಿ ಆಸಕ್ತರಾದಾರೆಂಬ ಎಣಿಕೆ. ಅದರಿಂದ ಕರ್ನಾಟಕದ ಎಲ್ಲ ಭಾಗಗಳಲ್ಲೂ ಅಂಥ ಯುವಕ ಸಂಘಗಳು ಹುಟ್ಟಿ ಸತ್ಸಾಹಿತ್ಯ ನಿರ್ಮಿತಿ ಇನ್ನೂ ಹೆಚ್ಚಾಗಿ ನಡೆದು ನವಚೈತನ್ಯ ನಾಡಿನ ಎಲ್ಲೆಲ್ಲೂ ಜೀವನ-ಸಾಹಿತ್ಯ ಕ್ಷೇತ್ರಗಳಲ್ಲಿ ತುಂಬಿ ಹರಿಯಲೆಂದು ಹಾರಯಿಕೆ.

ಭಾರತದ ವಿದೇಶಾಂಗ ನೀತಿ

(೮ನೇ ಪುಟದಿಂದ)

ನೆ ಮತ್ತು ಪ್ರಸಾರಗಳಿಗಾಗಿ ರಾಷ್ಟ್ರಗಳು ತಾವೇ ನಿರ್ಮಿಸಿಕೊಂಡ ಯುಕ್ತ ರಾಷ್ಟ್ರಸಂಘಕ್ಕೆ ನೆರವಾಗುವುದೂ, ಅದರ ಸಂಘರ್ಷಮಯವಾದ ವಾತಾವರಣವನ್ನು ಶಾಂತಗೊಳಿಸಲು ಯತ್ನಿಸುವುದೂ, ನಮ್ಮ ವಿದೇಶಾಂಗ ನೀತಿಯ ಪರಮ ಕರ್ತವ್ಯವಾಗಿದೆ. ಈಚೆಗೆ ಅಮೇರಿಕದ ರಾಜನೈತಿಕ ವರ್ತುಲಕ್ಕೂ ಸಿಲುಕದೆ, ಆಚೆಗೆ ರಶಿಯದ ಜಟಿಲ ರಾಜಕೀಯ ಧೋರಣೆಯನ್ನೂ ಒಲ್ಲದೆ, ಮಧ್ಯಮಾರ್ಗವನ್ನು ಅವಲಂಬಿಸುವ ರಾಷ್ಟ್ರಗಳಿಗೆ ಭಾರತವು ನಾಯಕಸ್ಥಾನದಲ್ಲಿದೆ ಎಂದೂ ಸಲ್ಲುವುದು. ಗೋಡೆಯ ಮೇಲಿನ ದೀಪದಂತೆ ಈ ನೀತಿ ಎರಡು ಬಣಗಳಿಂದಲೂ ಮನ್ನಣೆಯನ್ನು ಪಡೆದಿದೆ. ಭಾರತದ ತಾಟಸ್ಥ್ಯವು ಕೇವಲ ಅಂಜುಬುರುಕತನವಲ್ಲ ಎಂಬುದನ್ನು ಪಾಕಿಸ್ತಾನವು ಅಮೇರಿಕಕ್ಕೆ ತನ್ನನ್ನು ಮಾರಿಕೊಂಡ ಪ್ರಚಲಿತ ದುರ್ಘಟನೆಯ ಪ್ರಸಂಗದಲ್ಲಿ ಪಂಡಿತ ನೆಹರೂ ಅವರು ಅಮೇರಿಕಕ್ಕೆ ಕೊಟ್ಟ ಎಚ್ಚರಿಕೆಯ ಮಾತಿನ ಬಂಟತನದಿಂದ ಗುರುತಿಸಬಹುದು. 'ಡಿಪ್ಲೊಮೆಸಿ' (ರಾಜಕೀಯ ಕೌಟಿಲ್ಯ) ಯನ್ನು ಬಳಸದೆ ಋಜುವಾದ ಮಾರ್ಗದಲ್ಲಿ ವಿದೇಶಾಂಗ ನೀತಿಯನ್ನೂ ನಡೆಸುವ ರಾಷ್ಟ್ರವು ಪ್ರಾಯಃ ಭಾರತ ಒಂದೇ ಎಂದು ಕಾಣುತ್ತದೆ. ಇಡೀ ಪ್ರಪಂಚವೇ ದುರ್ಮಾರ್ಗದಲ್ಲಿ ನಡೆಯುತ್ತಿರುವಾಗ ನಾವು ಒಬ್ಬರೇ ಒಳ್ಳೆಯ ದಾರಿ ಹಿಡಿಯುವುದು ಸಾಹಸವೇನೋ ಸರಿಯೆ, ಆದರೆ ಇದರಿಂದ ನಮ್ಮ ಸ್ವಾರ್ಥಕ್ಕೇ ಅನೇಕವೇಳೆ ಹಾನಿಯೊದಗಿದ್ದುಂಟು. ಐದು ವರ್ಷಗಳ ಕೆಳಗೆ ಪಾಕಿಸ್ತಾನವು ಭಾರತದ ಒಂದು ರಾಜ್ಯದ—ಕಾಶ್ಮೀರದ—ಮೇಲೆ ಧಾಳಿಮಾಡಿದಾಗ ಯುದ್ಧ ವಿರಾಮಕ್ಕೆ ಒಪ್ಪಿ ಈ ವಿವಾದವನ್ನು ವಿಶ್ವಸಂಸ್ಥೆಯ ಮುಂದೆ ಚರ್ಚಿಸಲು ಅನುವಾದುದು ನಮ್ಮ ಅಕಲಂಕವಾದ ರಾಜನೀತಿ ಮತ್ತು ವಿದೇಶಾಂಗ ನೀತಿಯ ಒಂದು ಮುಖ್ಯ ನಿದರ್ಶನ. ಇದೇ ರೀತಿಯಾಗಿ ಕಾಲುವೆ ನೀರಿನ ಜಗಳವನ್ನೂ ಅಂತಾರಾಷ್ಟ್ರೀಯ ಬ್ಯಾಂಕಿನ ಕೈಗೊಪ್ಪಿಸಿ ಅದರ ತೀರ್ಮಾನಕ್ಕೆ ಬದ್ಧರಾಗಲು ಒಪ್ಪಿದುದನ್ನು ನಾವು ಗಮನಿಸಬೇಕು. ಈ ಎರಡು ವಿವಾದಗಳಲ್ಲಿ ಪಾಕಿಸ್ತಾನವು ನಮಗೆ ಅಪಪ್ರಚಾರದ ಮಾಲೆಗಳನ್ನೇ ಉಡುಗೊರೆಯಾಗಿ ಕೊಟ್ಟರೂ ತಾಳ್ಮೆಯಿಂದ ಅವನ್ನು ಸಹಿಸಿ, ಸ್ವಂತ ಸ್ವಾರ್ಥವನ್ನೇ ಎಷ್ಟೋ ಸಲ ಬದಿಗೊತ್ತಿ ನ್ಯಾಯದ ಪರಾಕಾಷ್ಠೆಯನ್ನು ಎತ್ತಿ ತೋರಿಸುವುದು ಮಹಾತ್ಮಾ ಗಾಂಧಿ ಜನಿಸಿದ ದೇಶಕ್ಕೆ ತಾನೇ ಸಾಧ್ಯ? ಆದರೆ ನಾವು ಇಂಥ ನೀತಿಯಿಂದ ಕಾಶ್ಮೀರದ ಪ್ರಶ್ನೆ ಬಿಡಿಸಿದ್ದೇವೆಯೋ, ಕಾಲುವೆನೀರಿನ ತಂಟೆ ಬಗೆಹರಿಸಿದ್ದೇವೆಯೋ? ಎಂದರೆ ಆ ಮಾತು ಬೇರೆ. ನಮ್ಮ ಕರ್ತವ್ಯದ ದೃಷ್ಟಿಯಿಂದ ಧರ್ಮದ ದಾರಿಯಾಗಿ ಇವನ್ನು ಪರಿಹರಿಸಲು ನಾವು ಯತ್ನಿಸಿದ್ದಷ್ಟೇ ಸಾಕು. ಅಲ್ಲದೆ ಆಧುನಿಕ ರಾಜಕೀಯ ಸಮಸ್ಯೆಗಳನ್ನು ದಂಡನೀತಿ ಅಥವಾ ಯುದ್ಧದ ದಾರಿಯಾಗಿ ಬಿಡಿಸಲು ಎಳಸಿದವರು ಎಲ್ಲಿ ಯಶಸ್ವಿಯಾಗಿದ್ದಾರೆ? ಸಂಧಾನ, ಮಾತುಕತೆ, ವಿಶ್ವ ಸಂಸ್ಥೆಯೊಳಗಿನ ವಾಗ್ಯುದ್ಧಗಳು—ಇವೆಲ್ಲ ವಿಫಲವೆಂಬಂತೆ ಕಣ್ಣಿಗೆ ಕಂಡರೂ ಪ್ರಾದೇಶಿಕ ಅಥವಾ ಜಾಗತಿಕ ಸಮರಗಳು ಸ್ವಲ್ಪ ದಿನವಾದರೂ ತಡೆಹಿಡಿಯಲ್ಪಟ್ಟುದನ್ನು ನಾವು ಯಶಸ್ಸಿನ ಸಾಲಿಗೇ ಸೇರಿಸಬೇಕಾಗುತ್ತದೆ. ಜಂಘದ ಕೋಳಿಗಳಂತೆ ಕಾಲು ಕೆರೆದು ಜಗಳಕ್ಕೆ ವೀಳೆಯ ಕೊಡುವ ಪಾಕಿಸ್ತಾನದೊಡನೆ ಹುಚ್ಚು ಯುದ್ಧಕ್ಕೆ ಅಥವಾ ಯುದ್ಧದ ಹುಚ್ಚಿಗೆ ಇಳಿಯದೆ ನಾವು ಈ ಏಳು ವರ್ಷ ಕಾಲ ಕಳೆವೆನಲ್ಲಾ? —ಅಷ್ಟು ಸಾಲದೇ?

ಇಡಿಯ ಪ್ರಪಂಚವೇ ಒಂದು ಕುರುಕ್ಷೇತ್ರವಾಗಿ ಮಾರ್ಪಟ್ಟಿರುವ ಈ ಕಾಲದಲ್ಲಿ ನಾವು ಶ್ರೀಕೃಷ್ಣನ ಪಾತ್ರವನ್ನು ಇದುತನಕವಂತೂ ನಿರ್ವಹಿಸಿದ್ದೇವೆಂದು ಧೈರ್ಯವಾಗಿ ಹೇಳಬಹುದು. ಇತ್ತಂಡದವರಿಗೂ ನಾವು ಹೇಳುವ ಬುದ್ಧಿವಾದವನ್ನು ಕೇಳುವ ಬುದ್ಧಿಯನ್ನು ಭಗವಂತನು ದಯಪಾಲಿಸದಿದ್ದರೆ ಸರ್ವನಾಶ ಹೊರತು ಬೇರೇನು ಸಿದ್ಧಿಸುವುದೂ ಸಾಧ್ಯವಿಲ್ಲ. ನಮ್ಮ ನಿಷ್ಪಕ್ಷಪಾತದ ಧೋರಣೆಯನ್ನು ಮೊದಮೊದಲು ಶಂಕೆಯಿಂದ ನೋಡುತ್ತಿದ್ದ 'ದೊಡ್ಡ' ರಾಷ್ಟ್ರಗಳೂ ಈಗ—ತಮಗೆ ಅಗತ್ಯ ಬಿದ್ದಾಗ—ನಮ್ಮನ್ನೇ ಮಧ್ಯಸ್ಥಿಕೆಗೆ ನೇಮಿಸುವುದನ್ನು ಕಂಡರೆ ಅವರ ಶಂಕೆಯು ವರ್ಷೇ ವರ್ಷೇ ಕಡಿಮೆಯಾಗುತ್ತಿರುವ ಲಕ್ಷಣವು ಕಂಡು ಬರುತ್ತಿದೆ. ಕೊರಿಯಾದ ಸಂಧಾನದ ಕಾಲದಲ್ಲಿ ನಮ್ಮ ಕೆಲಸವನ್ನು ಪ್ರಪಂಚವೇ ಮೆಚ್ಚಿ ಕೊಂಡಾಡಿದೆ. ಇಂಡೋ ಚೀನದಲ್ಲಿ ಯುದ್ಧ ವಿರಾಮ ಸಮ್ಮೇಳನವು ಜಿನೇವಾದಲ್ಲಿ ನಡೆಯುತ್ತಿದ್ದಾಗ ಅತಿಥಿಗಳಾಗಿ ಹೋದ ಕೃಷ್ಣ ಮೆನನರು ತಮ್ಮ ದೌತ್ಯವನ್ನು ಬಹಳ ಯುಕ್ತಿಯಿಂದಲೂ, ವಿವೇಕದಿಂದಲೂ ಸಾಧಿಸಿ ಭಾರತಕ್ಕೆ ಕೀರ್ತಿಯನ್ನು ಮಾತ್ರವಲ್ಲ, ಯುದ್ಧ ಜರ್ಜರಿತ ವೀಟನಾಮ ದೇಶದಲ್ಲಿ ಶಾಂತಿ ಸ್ಥಾಪನೆ ಮಾಡುವ ಮುಖ್ಯ ಪಾತ್ರವನ್ನೂ ತಂದು ಕೊಟ್ಟಿದ್ದಾರೆ. ಅಭ್ಯಾಗತರು ಸೋಲುವಾಗ ಅತಿಥಿಯೊಬ್ಬನು ನೆರವಾಗಿ ಸಮ್ಮೇಳನದ ಯಶಸ್ಸಿಗೆ ಕಾರಣನಾದನು.

ನಮ್ಮ ಪ್ರಪಂಚವೇ ನಮಗೆ ದೊಡ್ಡದು, ಇತರರ ಪ್ರಪಂಚವೇಕೆಂದು ನಮ್ಮ ಪಾಡಿಗೆ ನಾವಿರುವ ತಾಟಸ್ಥ್ಯವು ಭಾರತದ ತಾಟಸ್ಥ್ಯವಲ್ಲ. ೧೯೨೦ರಿಂದ '೪೦ರ ವರೆಗೆ ಅಮೇರಿಕದ ಸಂಯುಕ್ತ ರಾಜ್ಯವು ವಹಿಸಿದ ಇಂತಹ ನಿಷೇಧಾತ್ಮಕವಾದ ತಾಟಸ್ಥ್ಯದಿಂದ ಹಿಟ್ಲರನ ರೆಕ್ಕೆ ಬಲಿಯುವುದಕ್ಕೆ ಸಾಕಷ್ಟು ಸಹಾಯವಾಗಿತ್ತು. ಇಂಥ ತಾಟಸ್ಥ್ಯದಿಂದ ಜಗತ್ತಿಗೆ ತೊಂದರೆಯೇ ಹೊರತು ಉಪಕಾರವಿಲ್ಲ. ಭಾರತೀಯ ವಿದೇಶಾಂಗ ನೀತಿಯು ಜೀವಾಳವೆನಿಸುವ ತಾಟಸ್ಥ್ಯವನ್ನು ತಾಟಸ್ಥ್ಯವೆನ್ನುವುದಕ್ಕಿಂತಲೂ ಶಾಂತಿ ಶೋಧನೆ ಎನ್ನುವುದು ಮೇಲು: ಮಹಾತ್ಮಾ ಗಾಂಧೀಯವರು ಸತ್ಯ ಶೋಧಕರಾದರೆ, ನೆಹರೂ ಈಗ ಶಾಂತಿ ಶೋಧಕರಾಗಿದ್ದಾರೆ ಎಂದು ಹೇಳ ಬಹುದು. ಅವರು ಅನುಸರಿಸುವ ಪಕ್ಷದ ಹಿತವಾದ ವಿದೇಶಾಂಗ ನೀತಿಯು ಸ್ವದೇಶದ ಆರ್ಥಿಕ ಅಭ್ಯುದಯಕ್ಕೂ ಲೋಕದ ಜನರ ಉನ್ನತಿಗೂ ಸಾಧಕವಾದ ಧೋರಣೆಯಾಗಿದೆ.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟಾನಿಕ್ ಆಹಾರವಾಗಿದೆ. 1 ರಾತ್ತಲ್: ರೂ. 6—8—0 ¼ ರಾತ್ತಲ್: ರೂ. 1—14—0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ. ಪಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎನ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town—MADRAS-3.

ಸ್ವಾತಂತ್ರ್ಯೋತ್ತರದಲ್ಲಿ ನಮ್ಮ ಕೈಗಾರಿಕಾ ಕ್ಷೇತ್ರ

(೧೦ನೇ ಪುಟದಿಂದ)

ಸ್ವಾತಂತ್ರ್ಯ ಪೂರ್ವದಲ್ಲಿ (೧೯೪೬) ಒಂದೆಂದು ಲೆಕ್ಕಕ್ಕೆ ಹಿಡಿದರೆ, ಸ್ವಾತಂತ್ರ್ಯೋತ್ತರದ ಏಳು ವರ್ಷಗಳಲ್ಲಿ (೧೯೫೧) ನಾವು ಕೆಲವು ವಿಶಿಷ್ಟ ಕೈಗಾರಿಕೆಗಳಲ್ಲಿ ಸಾಧಿಸಿದ ಪ್ರಗತಿಯು ಸಾಮಾನ್ಯವಾಗಿ ೫ ರಿಂದ ೧೦ ಪಾಲಿನಷ್ಟಾಗುತ್ತದೆ. ರಸಾಯನ ಪದಾರ್ಥಗಳ ಉತ್ಪಾದನೆಯಲ್ಲಿ ಕೈಗೂಡಿಸಿದ ಹೆಚ್ಚಳವು ಭಾರತವು ಕೈಗಾರೀಕರಣದತ್ತ ಧಾವಿಸುತ್ತಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ವಿದ್ಯುಚ್ಛಕ್ತಿಯ ಕ್ಷೇತ್ರದಲ್ಲಿ ಮಾತ್ರ ಸರಕುಗಳ ಆಯಾತ ಪ್ರಮಾಣವನ್ನು ಗಣನೀಯವಾಗಿ ತಗ್ಗಿಸಲು ನಮಗೆ ಸಾಧ್ಯವಾಗಿಲ್ಲ; ಆದರೂ ಕೆಲವೇ ವರ್ಷಗಳಲ್ಲಿ ಪರಿಸ್ಥಿತಿಯು ಸುಧಾರಿಸಬಹುದೆಂಬ ಲಕ್ಷಣ ಕಂಡುಬರುತ್ತದೆ. ಸರಕಾರವು ರಚಿಸತೊಡಗಿದ ಅನೇಕ ಅಣೆಕಟ್ಟುಗಳು ಸಿಮೆಂಟಿನ ಉತ್ಪಾದನೆಯನ್ನು ಮೂರು ಪಾಲಿನಷ್ಟು ಹೆಚ್ಚಿಸಿದ್ದಲ್ಲದೆ ನೀರಾವರಿಯ ಸೌಕರ್ಯದಿಂದ ಹತ್ತಿ ಮತ್ತು ಸಕ್ಕರೆಯ ಉದ್ದಿಮೆಯೂ ಬೆಳೆದುಕೊಂಡಿತು. ಉಕ್ಕು ಮತ್ತು ಕಬ್ಬಿಣದ ಉತ್ಪಾದನೆಯಲ್ಲಿ ಸರಕಾರದ ನೆರವು ಧಾರಾಳವಾಗಿ ದೊರಕುತಿದ್ದರೂ ಕಳೆದ ವರ್ಷದ ಕೆಲಸಗಾರರ ಸಂಪು ಉತ್ಪಾದನೆಯನ್ನು ತಗ್ಗಿಸಿತು. ಈ ಮುಷ್ಕರ ಪ್ರಸಂಗಗಳು ಉತ್ಪಾದನೆಗೆ ಅಡಚಣೆಯೊದಗದಂತೆ ಮಾಲಕ—ಮಜೂರ ಸಂಬಂಧ ಊರ್ಜಿತ ಹೊಂದಬೇಕಾದ ಅವಶ್ಯಕತೆಯನ್ನು ತೋರಿಸಿ ಕೊಡುತ್ತವೆ.

ಖಾಸಗೀ ಬಂಡವಾಳವು ತನ್ನದೇ ಆದ ರೀತಿಯಲ್ಲಿ ವಿಕಾಸ ಹೊಂದುತಿದ್ದಂತೆ ಸರಕಾರವೂ ತನ್ನ ಚಟುವಟಿಕೆಗಳನ್ನು ಗಣನೀಯವಾಗಿ ವಿಸ್ತರಿಸುತ್ತಾ ಬಂದಿರುವುದು. ಸ್ವಾತಂತ್ರ್ಯೋತ್ತರದಲ್ಲಿ ಬೇರೆ ಬೇರೆ ಭಾಗಗಳಲ್ಲಿ ತಲೆ ಎತ್ತಿದ ಅನೇಕ ಉತ್ಪಾದಕ ಕಾರ್ಖಾನೆಗಳಲ್ಲಿ ಪ್ರತಿಯೊಂದನ್ನೂ ಪ್ರಗತಿಯ ಮೈಲುಗಲ್ಲೆಂದು ಅಭಿಮಾನದಿಂದ ಕರೆಯಬಹುದು. ಸಿಂಧ್ರಿಯ ಗೊಬ್ಬರ ಕಾರ್ಖಾನೆ, ಚಿತ್ತರಂಜನದ ರೈಲ್ವೆ ಯಂತ್ರದ ಕಾರ್ಖಾನೆ, ಜಾಲಹಳ್ಳಿ ಮತ್ತು ಅಂಬರನಾಥದ ಶಸ್ತ್ರೋತ್ಪಾದಕ ಕಾರ್ಖಾನೆ, ರೂಪನಾರಾಯಣ ಪುರದ ಕೇಬಲು ಕಾರ್ಖಾನೆ, ಬೆಂಗಳೂರಿನ ಟೆಲಿಫೋನು ಕಾರ್ಖಾನೆ, ಕಲ್ಕತ್ತೆಯ ರಾಷ್ಟ್ರೀಯ ಸರಕುಗಳ ಕಾರ್ಖಾನೆ, ಪಿಂಪ್ರಿಯ ಪೆನಿಸಿಲಿನ್ ದ್ರವ್ಯದ ಕಾರ್ಖಾನೆ, ದೆಹಲಿಯ ಡಿಡಿಟಿ ಕಾರ್ಖಾನೆ, ಪೆರಂಬೂರಿನ ರೈಲ್ವೆ ಗಾಡಿಗಳ ಕಾರ್ಖಾನೆ ಮುಂತಾದ ಕೇಂದ್ರಗಳೂ ಭಾರತದ ೧೨ ರಾಷ್ಟ್ರೀಯ ಪ್ರಯೋಗಾಲಯಗಳೂ ಪವಿತ್ರವಾದ ಪೂಜಾಸ್ಥಾನಗಳೆಂದರೆ ಅತಿಶಯೋಕ್ತಿಯಾಗದು. ಸರಕಾರವು ವಿಶಾಖಪಟ್ಟಣದ ಹಡಗು ನಿರ್ಮಾಣ ಕೈಗಾರಿಕೆಯಲ್ಲಿಯೂ ದೇಶದ ಒಳ ಹೊರಗಿನ ವಿಮಾನ ಸಾರಿಗೆಯಲ್ಲಿಯೂ ನೇರವಾದ ಆಸಕ್ತಿಯನ್ನು ವಹಿಸುತ್ತದೆ.

ಭಾರತದಲ್ಲಿ ಬೇರೆ ಅನೇಕ ಕೈಗಾರಿಕೆಗಳೂ ನಿಧಾನವಾಗಿ ನೆಲೆಗೊಳ್ಳುತ್ತಲಿವೆ. ಮುಂಬಯಿ ಮತ್ತು ವಿಶಾಖಪಟ್ಟಣಗಳಲ್ಲಿ ತೈಲ ಶುದ್ಧೀಕರಣ ಗೃಹಗಳು ತಲೆ ಎತ್ತುತಿದ್ದರೆ, ರೂರಕೇಲಾದಲ್ಲಿ ಇನ್ನೊಂದು ಉಕ್ಕಿನ ಕಾರ್ಖಾನೆ ನಿರ್ಮಾಣವೊಂದುತ್ತದೆ. ಹಿರಾಕುಡದ ಬಳಿ ಅಲುಮಿನಿಯಂ ಕಾರ್ಖಾನೆ ಹುಟ್ಟುವುದರಲ್ಲಿದ್ದರೆ, ಸಿಂಧ್ರಿ ಮತ್ತು ದಾಮೋದರ ಕಣಿವೆಗಳಲ್ಲಿ ಹೊಸ ಕೈಗಾರಿಕೆಗಳು ಇಷ್ಟರಲ್ಲೇ ಬೇರಿಳಿಯ ಬಿಡುತ್ತವೆ. ಕ್ಷಯ ರೋಗ ನಿರೋಧಕ, ಆ್ಯರೋಮೈಸಿನ್ ಮುಂತಾದ ಉಪಯುಕ್ತವಾದ ಔಷಧ ದ್ರವ್ಯಗಳು ಈಗ ಭಾರತದಲ್ಲಿ ಪ್ರಥಮಬಾರಿ ತಯಾರಾಗುತ್ತವೆ. ಸಂರಕ್ಷಣಾ ಶಾಖೆಯ ಉಪಯೋಗಕ್ಕೆ ಬೇಕಾಗುವ ರೇಡಿಯೋ ಹಾಗು ರಾಡರುಗಳ ಕ್ಷೇತ್ರದಲ್ಲಿ ಭಾರತ್ ಇಲೆಕ್ಟ್ರಾನಿಕ್ಸ್ ಕಂಪೆನಿ ಮುಖ್ಯ ಪಾತ್ರವನ್ನು ವಹಿಸುತ್ತದೆ. ದಕ್ಷಿಣ ಆರ್ಕಾಟಿನ ಕಂದು ಕಲ್ಲಿದ್ದಲು ತಮಿಳು ನಾಡಿನ ಭಾಗ್ಯವನ್ನು ತೆರೆಯಿಸುತ್ತದೆ.

ಸಾಮಾನ್ಯವಾಗಿ ಖಾಸಗಿ ಬಂಡವಾಳದಲ್ಲಿ ಪ್ರತಿ ವರ್ಷ ೯೦ರಿಂದ ೧೦೦ ಕೋಟಿ ರೂಪಾಯಿ ತೊಡಗಿಸಲ್ಪಡುತ್ತದೆ. ಸರಕಾರವು ಪಂಚವಾರ್ಷಿಕ ಯೋಜನೆಯಂತೆ ಐದು ವರ್ಷಗಳಲ್ಲಿ ೨೨೦೦ ಕೋಟಿ ರೂಪಾಯಿಗಳನ್ನು ವ್ಯಯಿಸುತ್ತದೆ. ಈ ಜತೆಗೆ ಖಾಸಗಿ ಕ್ಷೇತ್ರದ ಅಭಿವೃದ್ಧಿಯ ಕುರಿತಾಗಿ ಸರಕಾರದ ಗಮನ ಹರಿಯ ತೊಡಗಿದ್ದು ಔದ್ಯಮಿಕ ಹಣ ಕಾಸಿನ ಸಂಸ್ಥೆಯನ್ನಲ್ಲದೆ ಈ ವರ್ಷಾಂತ್ಯದೊಳಗೆ ಔದ್ಯಮಿಕ ಅಭಿವೃದ್ಧಿ ಮಂಡಳವೊಂದನ್ನು ಘಟಿಸುವ ವಿಚಾರವೂ ಅದಕ್ಕುಂಟು. ಖಾಸಗಿ ಕ್ಷೇತ್ರಕ್ಕೆ ಈ ಸಂಸ್ಥೆಗಳಿಂದ ಯೋಗ್ಯ ನೆರವು ದೊರಕುತ್ತಿದ್ದರೆ ನಾವು ಇನ್ನಷ್ಟು ಅಭಿವೃದ್ಧಿಯನ್ನು ನಿರೀಕ್ಷಿಸಬಹುದು.

—ಸಂಕಲಿತ.

ರಾಷ್ಟ್ರೀಯ ಸಂಸ್ಕೃತಿ - ಸ್ವಾತಂತ್ರ್ಯದ ಅಡಿಗಲ್ಲು

(೧೫ನೇ ಪುಟದಿಂದ)

"ಎಕ್ಸ್ಪಿನದೇನಾಟ್ಯ, ಸಾಹಿತ್ಯ ಕೃತಿಯೆಂದರೆನೇ ನಗ್ನ ಸತ್ಯ, ಚಿತ್ರವೆಂದರೆಯೇ ಜಾಹೀರಾತಿನ ನಟಿ ಎಂಬಲ್ಲಿ ವರೆಗೆ ನಮ್ಮ ಅಭಿರುಚಿಯು ಇಳಿದಿರುತ್ತದೆ.

ಸ್ವತಂತ್ರ ಭಾರತದ ರಾಷ್ಟ್ರೀಯ ಸರಕಾರ ಇಲ್ಲಿ ಹಸ್ತಕ್ಷೇಪವನ್ನು ಮಾಡಬಲ್ಲುದು—ಹಸಿವು ದಾರಿದ್ರ್ಯಗಳ ವಿರುದ್ಧ ಯುದ್ಧ ಹೂಡಿ ತಾತ್ಕಾಲಿಕ ಯಶಸ್ಸನ್ನು ಗಳಿಸಿದಂತೆ, ಸಾಂಸ್ಕೃತಿಕ ಅಧಃಪತನಕ್ಕೂ ತಡೆಯೊಡ್ಡಿ ರಾಷ್ಟ್ರೀಯ ಚಾರಿತ್ರ್ಯವನ್ನು ಸಂವರ್ಧಿಸಲು ಅದು ಪ್ರಯತ್ನಿಸಬೇಕು. ಸರ್ವ ಪ್ರಥಮವಾಗಿ ವಿದ್ಯಾಭ್ಯಾಸದ ಪದ್ಧತಿಯನ್ನು ಸಂಪೂರ್ಣ ಪರಿವರ್ತಿಸಬೇಕು. ಎರಡನೆಯದಾಗಿ ಸಾಂಸ್ಕೃತಿಕ ಅಭಿರುಚಿಯನ್ನು ಅಭಿವೃದ್ಧಿಗೊಳಿಸುವುದಕ್ಕೆ ಯೋಗ್ಯ ಕಾರ್ಯಕ್ರಮಗಳನ್ನು ರೂಪಿಸಬೇಕು. ರೇಡಿಯೋ ಕಲಾವಿದರಿಗೆ ಅಧಿಕ ವೇತನ, ಚಿತ್ರಗಾರರಿಗೆ ವಿಸ್ತಾರವಾದ ಪೇಟೆ, ಸಾಹಿತಿಗಳ ಮೂಲಕ ರಾಷ್ಟ್ರೀಯ ಪ್ರಚಾರ ಕಾರ್ಯ, ಸರಕಾರದ ಸಮಾರಂಭಗಳಲ್ಲಿ ಶಾಸ್ತ್ರೀಯ ನಾಟ್ಯದ ವ್ಯವಸ್ಥೆ ಮುಂತಾದುವನ್ನು ಮಾಡಿದರೆ ಒಳಿತು. ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಭಾಗವಹಿಸುವ ಸಾಮಾಜಿಕ ಧುರೀಣರು ಬಾಯಿಮಾತಿನಿಂದಲೇ ಭಾಷಣ ಮುಗಿಸದೆ, ಯೋಗ್ಯತೆಗೆ ತಕ್ಕ ಪುರಸ್ಕಾರವನ್ನೂ ಕಲಾವಿದರಿಗೆ ಕೊಡಬೇಕು.

ಭಾರತ ಸರಕಾರ ಈಚೆಗೆ ಈ ವಿಷಯಗಳ ಕಡೆಗೆ ಗಮನ ಹರಿಯಿಸಿರುವುದನ್ನು ಉಲ್ಲೇಖಿಸದಿದ್ದರೆ ತಪ್ಪಾಗುತ್ತದೆ. ಸರಕಾರವು ವಿದೇಶಗಳಿಗೆ ಸಾಂಸ್ಕೃತಿಕ ಮಂಡಳಗಳನ್ನು ಕಳಿಸಿಕೊಟ್ಟದ್ದುಂಟು. ಚಿತ್ರ ಸಂಗ್ರಹಗಳ ಪ್ರದರ್ಶನ ವ್ಯವಸ್ಥೆಯನ್ನು ಮಾಡಿದ್ದುಂಟು. ಅಲ್ಲದೆ, ಕಳೆದ ವರ್ಷ ಸಂಗೀತ ನಾಟಕ ಅಕಾಡೆಮಿಯನ್ನೂ ಈ ವರ್ಷ ಸಾಹಿತ್ಯ ಅಕಾಡೆಮಿ ಮತ್ತು ಲಲಿತಕಲಾ ಅಕಾಡೆಮಿಗಳನ್ನೂ ಸ್ಥಾಪಿಸಿ, ಸಾಂಸ್ಕೃತಿಕ ಚಟುವಟಿಕೆಗಳ ಸಂಘಟನೆಗೆ ನೆರವಾಗಿರುವುದು. ರಾಷ್ಟ್ರಪತಿಗಳು ಸಂಗೀತ ದಿಗ್ಗಜರನ್ನು ಗೌರವಿಸುವ ಸಂಪ್ರದಾಯ ಹಾಕಿಕೊಟ್ಟಿದ್ದಾರೆ. ಕೆಲವು ರಾಜ್ಯ ಸರಕಾರಗಳು ರಾಷ್ಟ್ರಕವಿಗಳನ್ನು ನೇಮಿಸಿ ಗೌರವಿಸುತ್ತವೆ. "ನಿರಾಲಾ" ದಂತಹ ಸಾಹಿತಿಗಳಿಗೆ ಮಾಸಿಕ ವೇತನ ಕೊಡುವ ಪದ್ಧತಿಯೊಂದೂ ರೂಢಿಗಿರುವುದು. ಮೈಸೂರಿನಲ್ಲಿ ಸಾಹಿತ್ಯ ಕಾರ್ಖಾನೆಯೊಂದು ತಲೆ ಎತ್ತಿತು. ಗ್ರಂಥಗಳಿಗೆ ಪಾರಿತೋಷಕಗಳು ಹಂಚಲಾದವು. ನಮ್ಮ ಘಟನೆಯು ಪೋಲ್ಯನೆಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿತು. ಸಾಂಸ್ಕೃತಿಕ ಪ್ರವೃತ್ತಿಗಳ ಮಹತ್ವವನ್ನು ವಿಧ್ಯುಕ್ತ ರೀತಿಯಲ್ಲಿ ಮನ್ನಿಸಿತು.

ಇಷ್ಟಾದರೂ ಸಮಸ್ಯೆಯು ನೆರಗನ್ನೂ ಮುಟ್ಟಿಲ್ಲವೆಂಬುದು ನಿಜ. ನಮ್ಮದು ಪ್ರಾರಂಭಿಕ ಹೆಜ್ಜೆಯೇ ಆಗಿದೆ. ಆದರೂ ಸರಿಯಾದ ರೀತಿಯಲ್ಲಿ ಮುಂದರಿಯುತಿದ್ದೇವೆಂದು ಹೇಳಬಹುದು. ಪ್ರತಿಯೊಂದು ಹಳ್ಳಿಗೂ ರಾಷ್ಟ್ರೀಯ ವಿಸ್ತರಣಾ ಯೋಜನೆ, ಸಮಾಜ ವಿಕಾಸ ಯೋಜನೆಗಳನ್ನು ಅನ್ವಯಿಸುವ ಸರಕಾರವು ಪ್ರತಿಯೊಂದೂ ಹಳ್ಳಿಯಲ್ಲಿ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವೊಂದನ್ನು ಸಂಘಟಿಸುವ ದಿನ ಬೇಗನೆ ಬಂದೀತು. ಆಗ ಮಾತ್ರ ಸ್ವಾತಂತ್ರ್ಯದ ಅಡಿಗಲ್ಲೆನಿಸಿದ ರಾಷ್ಟ್ರೀಯ ಸಂಸ್ಕೃತಿಯನ್ನು ಪೋಷಿಸಿದ ಪುರುಷಾರ್ಥಿಗಳಾದೇವು.

— ಕಾರ್ತಿಕೇಯ

ಪ್ರಕಟಣೆ

ಸಾಕೂರು ಶ್ರೀ ದುರ್ಗಾಪರಮೇಶ್ವರಿ ಅಮ್ಮನವರ ಸನ್ನಿಧಿಯಿಂದ ವರ್ಷಂಪ್ರತಿ ತಿರುಗುವ ದಶಾವತಾರ ಮೇಳವನ್ನು ವಹಿಸಿಕೊಂಡು ನಡಿಸುವ ಸಲುವಾಗಿ ಮನಸು ಉಳ್ಳವರು ಬರುವ ತಾರೀಕು 15-10-51ರ ಒಳಗೆ ಬಂದು ಆಡಳ್ತೆ ಮೊಕ್ತೇಸರರ ಸಮಕ್ಷಮ ಮಾತಾಡಿ ವಹಿಸಿಕೊಳ್ಳಬಹುದು.

ಬಿ. ಸೂ. ಮೇಳದ ವೇಷ ಭೂಷಣಕ್ಕೆ ಬೇಕಾದ ಸಕಲ ಸಲಕರಣೆಗಳನ್ನು ದೇವಸ್ಥಾನದ ವತಿಯಿಂದ ಮರಸ್ತು ಮಾಡಿಸಿ ಕೊಡಲಾಗುವುದು.

ಸಾಕೂರು. ತಾ. 3-8-51

ಎಸ್. ಅಂತಯ್ಯ ಶೆಟ್ಟಿ,
ಆಡಳ್ತೆ ಮೊಕ್ತೇಸರ
ಪಟೇಲ್ ಕಾವಡಿ.

ನೆನಪಿರಲಿ!

ಜನತೆಯ ಆರೋಗ್ಯವೇ ದೇಶದ ಸಂಪತ್ತೆಂಬ ಹಿರಿದಾದ ವಾಕ್ಯ. ಈ ಸ್ವತಂತ್ರದ ದಿನದಂದು ನಿಮ್ಮ ಮುದ್ದು ಮಕ್ಕಳನ್ನು ಆರೋಗ್ಯದಿಂದ ಬೆಳೆಸಿ ಭಾರತ ಮಾತೆಯ ದಾರಿದ್ರ್ಯವನ್ನು ಹೋಗಲಾಡಿಸುವಿರೆಂದು ಪ್ರತಿಜ್ಞೆ ಮಾಡಲು ಇದೇ ಸುದಿನವಲ್ಲವೇ?

ಮಾರ್ಗರೇಟರ
ಫಿಟ್ಸ್ ಕ್ಯೂರ್

ಭಯಂಕರ ಬಾಲಗ್ರಹ ವ ಇನ್ನಿತರ ಕಾಯಿಲೆಗಳನ್ನು ಕ್ಷಿಪ್ರದಲ್ಲಿ ಗುಣಪಡಿಸುವುದಲ್ಲದೆ ಇದರ ಪ್ರಯೋಗವು ಮಕ್ಕಳಲ್ಲಿ ರೋಗಬಾಧೆಯನ್ನು ಸಹಿಸುವ ಯಥೇಷ್ಟ ಶಕ್ತಿಯನ್ನುಂಟುಮಾಡುತ್ತದೆ.

ಮಾರ್ಗರೇಟ್ಸ್ ಪ್ರೊಡಕ್ಟ್ಸ್ ಕಂಪೆನಿ,
ಪೋಸ್ಟ್ ಬಾಕ್ಸ್ ನಂಬ್ರ 20, ಉಡುಪಿ.

Margaret's Products Company,
Post Box No 20, UDIPI.

ಪ್ರಜಾಸತ್ತಾತ್ಮಕ ಸಾಮ್ಯವಾದದ ರಹಸ್ಯ

(೪ನೇ ಪುಟದಿಂದ)

ನತೆಯು ಸಮಾಜ ರಚನೆಯೇ ನಮ್ಮ ಉದ್ದೇಶ. ಈ ಕಾರ್ಯಗಳನ್ನು ಶಾಂತ ರೀತಿಯಿಂದ, ಪ್ರಜಾಸತ್ತಾತ್ಮಕ ರೀತಿಯಿಂದ, ಸಾಧಿಸಬೇಕು. ಇದೇ ಇಂದಿನ ಕಾಂಗ್ರೆಸ್ ಸಂದೇಶ—ಎಂಬುದನ್ನು ಶ್ರೀ ನೆಹರೂ ಅತ್ಯಂತ ಸ್ಪಷ್ಟ ಶಬ್ದಗಳಲ್ಲಿ ಸಾರಿದ್ದಾರೆ.

ನಿರ್ಣಯಗಳಲ್ಲಿ ಈ ರೀತಿಯ ವಿಚಾರ ಸರಣಿ ಇದ್ದ ಮಾತ್ರಕ್ಕೆ ಸಾಲದು. ಅದು ಕಾರ್ಯಕ್ಷೇತ್ರದಲ್ಲಿ ರೂಪುಗೊಳ್ಳಬೇಕು. ಇದಕ್ಕಾಗಿಯೇ ಇಂದು ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಹಾಕಿಕೊಟ್ಟ ರಚನಾತ್ಮಕ ಕಾರ್ಯಗಳಲ್ಲಿ ನಿರತರಾಗಬೇಕೆಂದು ಸಾರುವ ಇನ್ನೊಂದು ನಿರ್ಣಯವೂ ಮಂಜೂರಾಗಿದೆ. ಇದನ್ನೇ ಶ್ರೀ ನೆಹರು ಪುನಃ ಪುನಃ ಒತ್ತಿ ಹೇಳಿಯೂ ಇದ್ದಾರೆ.

ನಮ್ಮ ರಾಷ್ಟ್ರದ ಪರವಾಗಿ ಕಾಂಗ್ರೆಸು ಇಟ್ಟುಕೊಂಡಿರುವ ಈ ಕಾರ್ಯದ ಸಾಧನೆ ಕಾಂಗ್ರೆಸಿಗರ ಕರ್ತವ್ಯಮಾತ್ರನೆಂಬ ಭಾವ ಎಲ್ಲಿಯೂ ಬಂದಿಲ್ಲ; ಬರಬಾರದು. ಕಾಂಗ್ರೆಸ್ ತೋರಿದ ದಾರಿಯಲ್ಲಿ ಹೊಸ ರಾಷ್ಟ್ರ ಕಟ್ಟುವ ಈ ಮಹಾಕಾರ್ಯ ಇಡೀ ಜನತೆಗೆ ಸೇರಿದ ಕಾರ್ಯವೆಂಬ ಬಗ್ಗೆ ಸಂಶಯವಿಲ್ಲ. ಹೀಗಾಗಿ ರಚನಾತ್ಮಕ ಕಾರ್ಯದಲ್ಲಿ ಯಾವ ರಾಜಕೀಯ ಪಕ್ಷ ಪಂಗಡಗಳನ್ನೂ ತಡೆಬೇಕಾಗಿಲ್ಲ. ಈ ಕಾರ್ಯಸಾಧನೆ ಸರಕಾರೀ ಆಡಳಿತೆಯಿಂದಷ್ಟೇ ಆಗುವ ಕೆಲಸವೇ ಅಲ್ಲ. ಜನರ ಜಾಗ್ರತಿಯಿಂದ, ಉತ್ಸಾಹದಿಂದ ಆಗತಕ್ಕ ಕಾರ್ಯವಿರುತ್ತದೆ.

ಕಾಂಗ್ರೆಸ್ ಸರಕಾರಗಳು ಇಂದು ಜನರ ಬಗ್ಗೆ ಹಲವು ಕಾರ್ಯಗಳನ್ನು ಮಾಡಿದ್ದಾವೆ. ಆದರೆ ಇದರಿಂದಲೇ ಕಾಂಗ್ರೆಸ್ ಕರ್ತವ್ಯ ತೀರಿತೆಂದು ಕಾಂಗ್ರೆಸಿಗರು ಭಾವಿಸಿದರೆ ಅದಕ್ಕಿಂತ ದೊಡ್ಡ ಪ್ರಮಾದ ಬೇರೇನೂ ಇರಲಾರದು. ರಸ್ತೆಗಳನ್ನು ಮಾಡಬಹುದು; ಸಂಕಗಳನ್ನು ಮಾಡಬಹುದು; ವಿಮಾನ ನಿಲ್ದಾಣಗಳನ್ನು ಮಾಡಬಹುದು. ಆದರೆ ಇವುಗಳಿಂದಲೇ ಜನಜೀವನ ಸುಧಾರಿಸಲು ಶಕ್ಯವಿಲ್ಲ.

ಜನ ಜಾಗ್ರತಿಯಾಗಬೇಕು ಜನರು ಸ್ವಾವಲಂಬನದಿಂದ ತಮ್ಮ ಉನ್ನತಿ ಸಾಧಿಸಲು ಉತ್ಸಾಹದಿಂದ ದುಡಿಯುವಂತಾಗಬೇಕು. ಇದನ್ನು ಸಾಧ್ಯ ಮಾಡಿದರೇನೇ ಮುಂದೆ ನಮಗೆ ಯಶಸ್ಸು ಸಿಕ್ಕುವುದು. ಶಾಂತ ರೀತಿಯ ಕ್ರಾಂತಿ ಸಾಧ್ಯವಾಗುವುದು. ಭಾರತವು ಸರ್ವಸಮಾನತೆಯ ಘನ ತತ್ವವನ್ನು ಅಹಿಂಸಾತ್ಮಕ ಹಾಗು ಪ್ರಜಾಸತ್ತಾತ್ಮಕ ದಾರಿಯಲ್ಲಿ ಕಾರ್ಯಗತಗೊಳಿಸಿ, ಸಂಪೂರ್ಣಸಮೃದ್ಧಿಯನ್ನು ಸಾಧಿಸಿದರೆ, ಎಲ್ಲರೂ ಸ್ವತಂತ್ರರಾಗಿ ಬದುಕಿ ಬಾಳುವ ದೃಶ್ಯವನ್ನು ನಾವು ಜಗತ್ತಿಗೆ ತೋರಿಸಲು ಆಗ ಸಾಧ್ಯವಾಗುವುದು. ಕಮ್ಯೂನಿಸ್ಟ ರಾಷ್ಟ್ರಗಳೂ ಪಾಶ್ಚಾತ್ಯ ರಾಷ್ಟ್ರಗಳೂ ಶಾಂತಿಯ ದಾರಿ ಕಾಣುವುವು. ಭಾರತದ ತ್ರಿವರ್ಣ ರಾಷ್ಟ್ರಧ್ವಜ ಆಗ ವಿಶ್ವವಿಜಯಿಯಾಗುವುದು ನಿಶ್ಚಯ.

ಅಂತಾಗುವಂತೆ ಮಾಡಲು ನಮ್ಮ ಜೀವನ ದಾನ ಕೊಡಲು ಭಾರತೀಯರು ಈ ಸ್ವಾತಂತ್ರ್ಯ ದಿನದಂದು ನಿರ್ಧಾರ ಮಾಡಬೇಕಾಗಿದೆ.

ಭಾರತೀಯ ಶಾಸನ ಕರ್ತರು

ಪ್ರಜಾಪ್ರಭುತ್ವದಲ್ಲಿ ಜನತೆಯ ಯೋಗ್ಯತೆಗೆ ಸರಿಯಾದ ಧುರೀಣರೇ ಶಾಸನ ಕರ್ತರಾಗುತ್ತಾರೆ ಎಂದು ಹೇಳಲಾಗುತ್ತದೆ. ನಮ್ಮ ಶಾಸನ ಕರ್ತರ ಯೋಗ್ಯತೆಯನ್ನು ತಿಳಿಯಲು ಈ ಸೂತ್ರವನ್ನು ಅನುಸರಿಸಬಹುದಾದರೂ—ಬೇರೊಂದು ವಿಧದಿಂದಲೂ ಅದನ್ನು ನಿರ್ಣಯಿಸಬಹುದು. ಶಾಸನ ಕರ್ತರಾಗಿ ನಾವು ಆರಿಸಿ ಕಳುಹಿಸಿದ ಜನರ ವಯಸ್ಸು, ರಾಜಕೀಯ ಅನುಭವ, ಸೇವಾ ಜೀವನ, ವಿದ್ಯೆ ಮತ್ತು ವೃತ್ತಿಗಳನ್ನು ಅಭ್ಯಸಿಸಿದರೆ ಯೋಗ್ಯತೆಯನ್ನು ಹೆಚ್ಚು ನಿರ್ದಿಷ್ಟ ರೂಪದಲ್ಲಿ ಗುರುತಿಸಬಹುದು.

ಈ ದಿಸೆಯಲ್ಲಿ ನಡೆಸಿದ ಪರಿಶೀಲನೆಗಳಿಂದ ನಮ್ಮ ಶಾಸನ ಕರ್ತರಲ್ಲಿ ಹೆಚ್ಚಿನವರು ಮಧ್ಯ ವಯಸ್ಸನ್ನು ಮೀರಿ,ವಾರ್ಧಕ್ಯದ ಮೆಟ್ಟಲೇರುತ್ತಿರುವ ಮಹಾನುಭಾವರೆಂದು ಗೊತ್ತಾಗುತ್ತದೆ. ಸರಕಾರವನ್ನು ನಡೆಸುವ ಕಾಂಗ್ರೆಸು ಸದಸ್ಯರ ಮಟ್ಟಿಗಂತೂ ಈ ಮಾತು ಚೆನ್ನಾಗಿ ಅನ್ವಯಿಸುತ್ತದೆ. ಇವರಲ್ಲಿ ೪೦—೫೫ ವಯಸ್ಸಿನವರೇ ಅಧಿಕ ಸಂಖ್ಯಾಕರು. ಪ್ರತಿ ಪಕ್ಷಗಳಲ್ಲಿ ಹುರುಪಿನ ಹಾಗು ಅತಿರೇಕವಾದದ ಕಡೆಗೆ ಒಲವುಳ್ಳ ೩೦—೪೫ ವರ್ಷಗಳ ತರುಣರನ್ನು ಕಾಣಬಹುದು.

ಶಾಸನ ಕರ್ತರ ರಾಜಕೀಯ ಅನುಭವವೂ ಕಾಂಗ್ರೆಸು ಪಕ್ಷದ ಸದಸ್ಯರ ಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ಇತರರಿಗಿಂತ ಹೆಚ್ಚು ಕಾಂಗ್ರೆಸು ಸದಸ್ಯರಿಗೆ ರಾಜಕೀಯ ನೆಂದರೇನೆಂದು ಗೊತ್ತುಂಟು—ಆದರೆ ಪ್ರತಿ ಪಕ್ಷಗಳಲ್ಲಿ ಚುನಾವಣೆಗೋಸ್ಕರವೇ ಜನತೆಯ ನಾಯಕತನವಹಿಸಲು ಮುಂಬಂದ ಅನುಭವ ಹೀನರನ್ನೇ ಹೆಚ್ಚು ನೋಡುತ್ತೇವೆ. ಶಾಸನ ಸಭೆಯ ಕಾರ್ಯಕಲಾಪಗಳಲ್ಲಿ ಕಾಂಗ್ರೆಸು ಸದಸ್ಯರು ತೋರಿಸುವಷ್ಟು ಶ್ರದ್ಧೆ ಮತ್ತು ಪರಿಶ್ರಮವನ್ನು ಪ್ರತಿ ಪಕ್ಷದವರು ವಿರಳವಾಗಿಯೇ ಪ್ರಕಟಿಸುವರು.

ಉಚ್ಚ ಶಿಕ್ಷಣವನ್ನು ಹೊಂದದವರಿಗೆ ಸಹ ರಾಜಕೀಯದಲ್ಲಿ ಯಶಸ್ಸು ದೊರೆತ ಉದಾಹರಣೆ ಹಲವು ಇದ್ದರೂ ಭಾರತದ ಶಾಸನ ಕರ್ತರಲ್ಲಿ ಅಧಿಕ ಸಂಖ್ಯಾಕರು ಸುಶಿಕ್ಷಿತರೇ ಆಗಿದ್ದಾರೆ. ಮಾತಿನ ಮಲ್ಲರ ರಂಗಭೂಮಿಯಾದ ಶಾಸನ ಸಭೆಯಲ್ಲಿ ವಕೀಲ ಸದಸ್ಯರ ಸಂಖ್ಯೆ ಅತ್ಯಧಿಕವಿದ್ದಂತೆ ತೋರುತ್ತದೆ. ಅವರಷ್ಟೇ ಯೋಗ್ಯತೆಯನ್ನು ಪತ್ರಿಕೋದ್ಯಮಿ, ಶಿಕ್ಷಕ, ನಿವೃತ್ತ ಅಧಿಕಾರಿ ಹಾಗು ಸಾಮಾಜಿಕ ಕಾರ್ಯಕರ್ತರು ತೋರಿಸುತ್ತಾರೆ. ಪ್ರತಿ ಪಕ್ಷಗಳೊಂದಿಗೆ ತುಲನೆ ಮಾಡಿದಾಗ ಕಾಂಗ್ರೆಸಿನಲ್ಲಿ ಸಾಮಾಜಿಕ ಕಾರ್ಯಕರ್ತ ಸದಸ್ಯರ ಅಭಾವವಿದ್ದಂತೆ ತೋರುತ್ತದೆ. ಎಲ್ಲ ವರ್ಗಗಳ ಪ್ರತಿನಿಧಿಗಳು ಕಂಡು ಬಂದರೂ ರೈತರಿಗೆ ದೊರೆತ ಪ್ರಾತಿನಿಧ್ಯ ಕಡಿಮೆಯೆಂದೇ ಭಾಸವಾಗುತ್ತದೆ. ರೈತರಲ್ಲಿ ಸುಶಿಕ್ಷಿತರ ಪ್ರಮಾಣವು ಕಡಿಮೆ ಇರುವುದು ಇದಕ್ಕೆ ಕಾರಣವಾಗಿರಬಹುದು: ಅಥವಾ ಸುಶಿಕ್ಷಿತರು ತಾವು ರೈತರೆಂದು ಹೇಳಿಕೊಳ್ಳಲು ನಾಚುತ್ತಿರಬಹುದು

ಯಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ 1876ನೇ ಇಸವಿಯಿಂದಲೂ ಪ್ರಸಿದ್ಧಿ ಹೊಂದಿದ ಔಷಧಿಗಳು

ಧಾತುಪುಷ್ಟಿ ಲೇಹ

ಡಬ್ಬಿ 1ರ ರೂ. 3—8—0.

(ಸುವರ್ಣ, ಸಾಲಾಮಿಶ್ರಿ ಕಲ್ಮದ ಮಿಶ್ರಿತ) ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಮೂತ್ರದೊಡನೆ ಧಾತು ಹೋಗುವಿಕೆ, ಸೊಂಟ ನೋವು, ಕೈಕಾಲು ಬಚ್ಚುವುದು, ಒಳಜ್ವರ, ಅಶಕ್ತತೆ, ಮಲಬದ್ಧತೆ ಹೋಗಲಾಡಿಸಿ ವೀರ್ಯ ವೃದ್ಧಿಸುತ್ತದೆ.

ಕಸ್ತೂರಿ ಮಿಶ್ರಣ ದಶಮೂಲ

ಬಾಣಂತಿಯರ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನರುದ್ದೀಪ್ತಿಸಿ, ರಕ್ತ ಧಾತುವು ಅಭಿವೃದ್ಧಿಯಾಗಿ ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು.

24 ಔನ್ಸ್ ಬಾಟ್ಲಿ 1ರ ರೂ. 5—0—0. 12 ಔನ್ಸು ರೂ. 2—12—0.

ಚ್ಯವನಪ್ರಾಶ ಲೇಹ

(ಬಂಗಾರ ಮಿಶ್ರಿತ). ಅತ್ಯಂತ ಶಕ್ತಿವರ್ಧಕ. ಕೆಮ್ಮು, ಉಬ್ಬಸ ಇವುಗಳ ಮೇಲೆ ದಿವ್ಯ ಔಷಧಿ. ರಾತ್ಲ 1ರ ರೂ. 5—8—0. ½ ರಾ. ರೂ. 3—0—0.

ಮೇಹಕುಠಾರ

ಪ್ರಮೇಹ, ಮೂತ್ರಕೃಚ್ಛ್ರ, ಮೂತ್ರ ಮಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವಿಕೆ, ಧಾತು ಹೋಗುವುದು, ಸೊಂಟನೋವು ಇವುಗಳ ಮೇಲೆ ದಿವ್ಯ ಔಷಧಿ.

ಡಬ್ಬಿ 1ರ ರೂ. 3—8—0.

ಅಶೋಕಾರಿಷ್ಟ ಮತ್ತು ಮಾತ್ರೆ

ಬಾಟ್ಲಿ 1ರ ರೂ. 3—8—0.

ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ, ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ ಕಡಿಮೆಯಾಗಿಯೂ ಹೋಗುವುದು, ಬಿಳಿ ಸೆರಗು, ಸಂತಾನಹೀನತೆ, ರಕ್ತಹೀನತೆ, ಋತುಶೂಲೆ ಮುಂತಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು.

ಗರ್ಭ ರಕ್ಷಕ

ಗರ್ಭಿಣಿಯರಿಗೆ ಉಂಟಾಗುವ ವಾಂತಿ, ಅರುಚಿ, ಅಶಕ್ತತೆ, ಚಳಿರೋಗ, ವಾಯು ಉಪದ್ರ, ಮಲಬದ್ಧತೆ ಇವುಗಳನ್ನೆಲ್ಲಾ ಹೋಗಲಾಡಿಸಿ ಗರ್ಭಕ್ಕೆ ಶಕ್ತಿಯನ್ನು ಉಂಟುಮಾಡುವುದು.

ಬಾಟ್ಲಿ 1ರ ರೂ. 3—8—0

ಬಾಲಗ್ರಹ ಗುಟಿಕೆ

ಬಾಟ್ಲಿ 1ರ ಆಣೆ 14

ಮಕ್ಕಳ ಚೇಷ್ಟೆ, ಕಫ, ಕೆಮ್ಮು, ಜ್ವರ, ಉಬ್ಬಸ, ಮಲಬದ್ಧತೆಗಳಿಗೆ ದಿವ್ಯ ಔಷಧಿ.

ಭೃಂಗರಾಜ ತೈಲ

ಬಾಟ್ಲಿ 1ರ ರೂ. 2—0—0

ನಿದ್ರಾಹೀನತೆ, ತಲೆ ಬಿಸಿಯಾಗುವಿಕೆ, ಕಣ್ಣು ಉರಿ, ತಲೆತಿರುಗುವಿಕೆ, ಜ್ಞಾಪಕಶಕ್ತಿ ಕಮ್ಮಿಯಾಗುವಿಕೆ, ಕೂದಲು ಉದುರುವಿಕೆ ಇವುಗಳನ್ನು ಗುಣಪಡಿಸುವುದು.

ಜ್ವರಹಾರಿ ಗುಟಿಕೆ

ಬಾಟ್ಲಿ 1ರ ರೂ. 1—0—0

ಶೀತ ಜ್ವರ, ಚಳಿ ಜ್ವರ, ವಾಕಳಿಕೆ, ಮೈ ನೋವು, ಜೀರ್ಣ ಜ್ವರ. ವಿಷಮ ಜ್ವರ ಇನ್‌ಫ್ಲೂಯೆಂಜಾ, ನಿಮೋನಿಯಾ ಮುಂತಾದವುಗಳಿಗೆ ದಿವ್ಯ ಔಷಧಿ.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ.

ಔಷಧಿ ಬರಿಯುವವರು ಔಷಧಿ ಕ್ರಯ ಮತ್ತು ಆಣೆ 8 ಮುನಿಯೋರ್ಡರ ಮಾಡಿದರೆ ಲೋರಿಯದ್ದಲ್ಲಿ ಯಾ ಬಸ್ ಸರ್ವಿಸ್‌ಯದ್ದಲ್ಲಿ ಮೋಟರ್ ಪಾರ್ಸೆಲ್ ಮಾಡಬಹುದು.

ಔಷಧಿ ಸಿಕ್ಕುವ ಸ್ಥಳ: (1) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, G. I. P. ಮಾಟುಂಗಾ. (2) ಕುಮಟಾ ಫಾರ್ಮೆಸಿ, ಕುಮಟಾ. (3) ನವಯುಗ ಪ್ರೆಸ್, ಉಡುಪಿ. (4) ಮಂಗ್ಳೂರು ಸ್ಟೋರ್ಸ್, ಮಡಿಕೇರಿ. (5) ಯೆ. ಗಣಪತಿ ನ್ಯಾಕ್ ಮರ್ಚೆಂಟ್, ಕಾಸರಗೋಡು. (6) ಪೈ ಫಾರ್ಮೆಸಿ, ಪುತ್ತೂರು. (7) ಶ್ರೀಧರ ಭಟ್ ಬ್ರದರ್ಸ್, ಪುತ್ತೂರು. (8) ಕಾಂತಾವರ ವಾಸ್ದೇವ ಕಂಮ್ತಿ, ಬೆಳ್ತಂಗಡಿ. (9) ಕೆ. ವೆಂಕಟೇಶ ನ್ಯಾಕ್, ಗುರುವಾಯನ ಕೆರೆ. (10) ಬಿ. ಗೋಪಾಲ ಶೆಣೈ, ಬೆಳ್ಪಾರೆ (11) ಎಚ್. ನರಸಿಂಹ ನ್ಯಾಕ್, ಶಂಕರನಾರಾಯಣ. (12) ಜೇಮ್ ರಾಸ್ಕಿಂಞ, ವಿಟ್ಲ. (13) ಶೆಣೈ ಮೆಡಿಕಲ್ ಸಪ್ಲಾಯ್ಸ್ ಬದಿಯಡ್ಕ (14) ಹೋಮ್ಯೊಪೆಥಿಕ್ ಡಿಸ್ಪೆನ್ಸರಿ, ಪಂಜ. (15) ಎಮ್. ಚಿನ್ನಪ್ಪ ಗೌಡ, ವಳಲಂಬೆ, ಗುತ್ತಿಗಾರು.

ವಿಶ್ವದ ರಾಜಕೀಯ ರಂಗದಲ್ಲಿ ಭಾರತದ ಸ್ಥಾನ

[೧೨ನೇ ಪುಟದಿಂದ]

ರೀತಿಯಲ್ಲಿಯೂ ನಿಷ್ಪಕ್ಷಪಾತವಾಗಿಯೂ ನಿರ್ವಹಿಸಿದ್ದಕ್ಕೆ ಇತ್ತಂಡದವರಿಂದ ದೊರೆತ ಪ್ರಶಂಸಾವಾಕ್ಯಗಳು ಶಾಂತಿಗೆ ನಾವು ನೀಡಿದ ಕಾಣಿಕೆಯ ದ್ಯೋತಕ.

ಇನ್ನು ಇಂಡೋಚೀನದತ್ತ ಹೊರಳಿದರೂ ಇದೇ ಮಾತು ಮನವರಿಕೆಯಾಗುತ್ತದೆ. ಎಂಟು ವರ್ಷಗಳಿಂದ ನಡೆಯುತಿದ್ದ ಅಲ್ಲಿಯ ಯುದ್ಧ ಗೊಂದಲ ಮಯ ಸಂಕಟವಾಗಿದ್ದಿತು: ಅದು ರಾಷ್ಟ್ರೀಯ ಹಾಗು ಸಾಮ್ರಾಜ್ಯಶಾಹಿ ಮನೋಭಾವನೆಯ ಘರ್ಷಣೆಯೇ ನಿಜ; ಅಲ್ಲದೆ ಪರಸ್ಪರ ವಿರುದ್ಧವಾದ ಎರಡು ಆದರ್ಶವನ್ನು ಅನುಸರಿಸಿದ್ದ ಹೊರಗಿನೆರಡು ರಾಷ್ಟ್ರಗಳು ಇಲ್ಲಿ ಕಾರ್ಯಪ್ರವೃತ್ತವಾಗಿದ್ದವು. ತಮಗೆ ಬೇಕಾಗಿಯೇ ಇರದ ಯುದ್ಧಾಗ್ನಿಯಲ್ಲಿ ಅಲ್ಲಿಯ ಜನತೆ ಬಿದ್ದು ಬಲಿದಾನಕ್ಕೂ ತ್ಯಾಗಕ್ಕೂ ಸಿದ್ಧವಾಗಬೇಕಾಯಿತು. ಪರಿಸ್ಥಿತಿ ವಿಶೇಷಗಳಿಂದಾಗಿ ಇತ್ತಂಡದವರಿಗೂ ಇಂಡೋಚೀನದಲ್ಲಿ ಶಾಂತಿ ಪ್ರಸ್ಥಾಪಿಸುವ ಲವಲವಿಕೆಯುಂಟಾಯಿತು. ಇದಕ್ಕಾಗಿ ಜಿನೇವಾದಲ್ಲಿ ಸಭೆಕರೆದರೂ ಭಾರತದ ಪ್ರತಿಷ್ಠೆಯ ವಿಷಯದಲ್ಲಿ ಅಸೂಯೆಯಿಂದಿದ್ದ ಮಹಾರಾಷ್ಟ್ರಗಳು ಅದಕ್ಕೆ ಭಾಗವಹಿಸಗೊಡಲಿಲ್ಲ. ಸಮ್ಮೇಳನದಲ್ಲಿ ತೊಂದರೆಗಳ ಮೇಲೆ ತೊಂದರೆಗಳು ಕಾಣಿಸಿಕೊಂಡು, ನಿರಾಶೆಯ ಛಾಯೆ ಕವಿದಾಗ ಭಾರತೀಯ ಪ್ರಧಾನ ಮಂತ್ರಿಗಳ ಖಾಸಗಿ ಪ್ರತಿನಿಧಿಗಳ ಕೆಲಸವು ಆಶೋದಯಕ್ಕೆ ಅವಕಾಶ ಕಲ್ಪಿಸಿತು. ಶ್ರೀ ಕೃಷ್ಣಮೆನೊನ್ನರ ನೆರವಲ್ಲದಿದ್ದರೆ ಜಿನೇವಾದ ಸಮ್ಮೇಳನ ಒಂದು ಹೆಜ್ಜೆಯೂ ಮುಂದಿಡುವಂತಿರಲಿಲ್ಲ. ನಮ್ಮ ಸಹಕಾರವು ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಜಗತ್ತಿಗೆ ಬೇಕಾಗಿರುವುದೆಂದು ಇದು ತೋರಿಸಿಕೊಟ್ಟಿತು. ಇಲ್ಲಿಯೂ ತಟಸ್ಥ ರಾಷ್ಟ್ರ ಮಂಡಳದ ಅಧ್ಯಕ್ಷ ಸ್ಥಾನವು ನಮ್ಮ ಹೆಗಲಿಗೆ ಕರ್ತವ್ಯಭಾರವಾಗಿ ಬಿದ್ದಿರುವುದು. ಕಷ್ಟ ಸಹಸ್ರಗಳಿದ್ದರೂ ದೇವರ ಮೇಲಿನ ನಂಬಿಕೆ ಹಾಗು ನಮ್ಮ ಧ್ಯೇಯಾದರ್ಶಗಳಲ್ಲಿ ಅಚಲ ಶ್ರದ್ಧೆಯಿಟ್ಟುಕೊಂಡು ನಡೆಯುತ್ತಾ ಕಷ್ಟಗಳನ್ನು ನೀಗಿಕೊಂಡು ಮುನ್ನುಗ್ಗುತ್ತಿದ್ದೇವೆ. ಹಾಗಿಲು ಮುಚ್ಚಿಕೊಂಡ, ರಹಸ್ಯಮಯ ರಾಜಕೀಯ ಕೌಟಿಲ್ಯದಲ್ಲಿ ನಮಗೆ ವಿಶ್ವಾಸವಿಲ್ಲ. ನಮಗೆ ನಿರ್ದಿಷ್ಟ ಆದರ್ಶ ತತ್ವಗಳೇ ಮಾರ್ಗದರ್ಶನ ಮಾಡುತ್ತವೆ. ಧ್ಯೇಯವನ್ನು ಮಣ್ಣು ಮುಕ್ಕಿಸುವಂತೆ ಯಾವ ಪ್ರಸಂಗವೂ ನಮ್ಮನ್ನು ವಿವಶ ಮಾಡಲಾರದು. ರಾಷ್ಟ್ರಪಿತನು ನಿರ್ದೇಶಿಸಿದ ರೀತಿಯಲ್ಲಿ ಅಹಿಂಸೆಯ ಅನುಷ್ಠಾನ ಮಾಡುತಿದ್ದೇವೆಂದು ನಾವೇನು ಹೇಳುತ್ತಿಲ್ಲ— ಆದರೆ ಅನೇಕ ಕಾರಣಗಳ ಜೊತೆಯಿಂದ ಮಿತಿಬದ್ಧವಾಗಿಯಾದರೂ ಆ ತತ್ವವನ್ನು ಕಾರ್ಯರೂಪಕ್ಕೆ ಇಳಿಸುತಿದ್ದೇವೆಂದು ಮಾತ್ರ ಧೈರ್ಯದಿಂದ ನುಡಿಯಬಹುದು. ನಾವು ತಾತ್ಕಾಲಿಕವಾಗಿ ನಿಂದಾವಾದಿ ಟೀಕಾಕಾರರ ಹಾಗು ಸ್ನೇಹಿತರ ಕಟು ನುಡಿಗಳನ್ನು ಕೇಳಲು ಹಿಂಜರಿಯುವುದಿಲ್ಲ. ಏಕೆಂದರೆ, ನಮ್ಮದು ಶಾಶ್ವತವಾದ ಧ್ಯೇಯ. ಜಗತ್ತಿಗೆ ಬಾಪೂಜಿಯವರ ಸಂದೇಶವನ್ನು ಮುಟ್ಟಿಸುವ ಭಾರ ನಮ್ಮ ಮೇಲಿದೆಯಾಗಿ ಅದಕ್ಕೆ ಸರಿಯಾಗಿ ನಮ್ಮ ಹಾಗು ಜಾಗತಿಕ ವಾತಾವರಣವನ್ನು ರೂಪಿಸುವ ಮುನ್ನೋಟದಿಂದಲೇ ನಾವು ನಡೆದುಕೊಳ್ಳುತಿದ್ದೇವೆ.

ದೇಶಬಾಂಧವರೊಡನೆ ಬೆರೆಯಿರಿ

ನಾನೊಬ್ಬ ಆಶಾವಾದಿ: ಏಕೆಂದರೆ ನನ್ನಿಂದ ಅನೇಕ ಕೆಲಸಗಳಾಗಬಲ್ಲವೆಂದು ನಾನು ಭಾವಿಸುತ್ತೇನೆ. ನಾನಿನ್ನೂ ಪೂರ್ಣನಾಗಿಲ್ಲವೆಂತಲೇ ಅವೆಲ್ಲ ಆಗದೆ ಉಳಿದಿವೆಯೆಂದು ನನಗನಿಸುತ್ತದೆ. ನಾನು ಸಿದ್ಧ ಪುರುಷನಾಗಿರುತಿದ್ದರೆ ನಾನು ಹೇಳುವುದೇ ತಡ, ಎಲ್ಲವೂ ಕೈಗೂಡಬಹುದು. ನಾನು ಜನತೆಯ ಸೇವೆಯ ಮೂಲಕವೇ ಆ ಸಿದ್ಧತ್ವವನ್ನು ಪಡೆಯಲು ಆಶಿಸುತ್ತೇನೆ.

ನನ್ನ ಕೋಟ್ಯಾಂತರ ದೇಶಬಾಂಧವರೊಡನೆ ನಾನು ಸತತವೂ ಇರುತ್ತೇನೆ. ಅವರನ್ನೆ ನಾನು ಮೊದಲು ಸೇವಿಸಬೇಕೆನ್ನುತ್ತೇನೆ. ಈ ಕೊಟ್ಯಾಂತರ ಮೂಕ ಮಾನವರ ಅಂತಃಕರಣದಲ್ಲಿ ಇರುವ ದೇವರನ್ನಲ್ಲದೆ ನಾನು ಬೇರೆ ದೇವರನ್ನೇನೂ ಕಾಣುವುದಿಲ್ಲ. ಸತ್ಯ ರೂಪಿಯಾದ ದೇವರನ್ನು ಅಥವಾ ದೇವ ರೂಪಿಯಾದ ಸತ್ಯವನ್ನು ಈ ಮಾನವ ಬಾಂಧವರ ಸೇವೆಯ ಮೂಲಕ ನಾನು ಪೂಜಿಸುತ್ತೇನೆ.

ಭಾರತವಲ್ಲಿಯು, ಅದೇಕೆ, ನನ್ನಲ್ಲಿ ಸಾಮರ್ಥ್ಯವಿದ್ದರೆ ಸಮಸ್ತ ಜಗತ್ತಿನಲ್ಲಿಯ ಹೀನ ದೀನರ ಸುಖ ದುಃಖದೊಡನೆ ಸಮರಸನಾಗಲು ನಾನು ಹಾತೊರೆಯುತಿದ್ದೇನೆ. ಅವರ ಪಾಪದೊಡನೆಯೂ ನಾನು ಸಮರಸನಾಗಿಒಂದು ದಿನ ದೇವರನ್ನು–ಸತ್ಯವನ್ನು–ಸಾಕ್ಷಾತ್ಕರಿಸುತ್ತೇನೆ.

ನಮ್ಮ ಆವಶ್ಯಕತೆಗಳನ್ನು ಅಥವಾ ಭೋಗವಿಲಾಸವನ್ನು ಹೆಚ್ಚಿಸುವುದರ ಮೇಲೆ ನಮ್ಮ ಸಂಸ್ಕೃತಿ, ಸುಧಾರಣೆ, ಸ್ವರಾಜ್ಯ ಇವು ಅವಲಂಬಿಸಿಲ್ಲ. ನಮ್ಮ ಆವಶ್ಯಕತೆಗಳ ತ್ಯಾಗದಲ್ಲಿಯೇ ಜೀವನದ ರಹಸ್ಯವಡಗಿರುತ್ತದೆ.

ಪ್ರತಿಯೊಂದು ಹೋರಾಟಕ್ಕೆ ತ್ಯಾಗಬೇಕು: ಆ ತ್ಯಾಗ ಮಾರ್ಗವನ್ನೆ ಅನುಸರಿಸಿರೆಂದು ನಾನು ಭಾರತೀಯ ಸಹೋದರರಿಗೆ ಹೇಳುತ್ತೇನೆ.

—ಮೋ. ಕ. ಗಾಂಧಿ.

ದಿ ಕೋಮನ್‌ವೆಲ್ತನವರ ಪ್ರಖ್ಯಾತಿಪಟ್ಟ
ಉತ್ತಮ ತರಗತಿಯದೆಂದು ಸರ್ವತ್ರವೂ ತೃಪ್ತಿಪಡಿಸಿದ

ಬಾಸೆಲ್ ಮಿಶನ್ ಹಂಚು ದಂಬೆ

ಇತ್ಯಾದಿಗಳನ್ನು ನನ್ನ ಮುಖಾಂತ್ರ ಕೊಂಡುಕೊಳ್ಳಿರಿ.

ಕಾರ್ನಾಡ್ ಪಾಂಡುರಂಗ ರಾವ್,
ಕಮಿಶನ್ ಏಜಂಟ್, ಬಸ್ ಸ್ಟೇಂಡಿನ ಹತ್ತಿರ, ಉಡುಪಿ, ದ. ಕ.

KARNAD PANDURANGA RAO,
Commission Agent, Near Bus Stand, UDIPI, S.K.

ಪೂರ್ಣ ಪರೀಕ್ಷೆಗಳಿಗೆ ನಿಲ್ಲುವ ಬಾಸೆಲ್ ಮಿಶನ್ ಹಂಚುಗಳನ್ನು ಕೊಂಡುಕೊಳ್ಳಿರಿ.

The Mysore Type Foundry,
LETTER FOUNDERS,
GANDHI NAGAR, **BANGALORE-2.**

ಆಧುನಿಕ ಯಂತ್ರ ಸಾಧನಗಳಿಂದ ಸುಸಜ್ಜಿತವಾದ
ಮೈಸೂರು ಟೈಪ್ ಫೌಂಡ್ರಿಯಲ್ಲಿ
ಪ್ರಿಂಟಿಂಗ್ ಟೈಪುಗಳನ್ನು (ಕನ್ನಡ) ರೀಕಾಸ್ಟ್
ಮಾಡಿಸುವುದರಿಂದ ವಿಶೇಷ ಉಳಿತಾಯವಾಗುತ್ತದೆ.

ದಕ್ಷಿಣ ಕನ್ನಡದ ಹಲವು ಮುದ್ರಣಾಲಯಗಳಿಗೆ ನಾವು
ಟೈಪು ರೀಕಾಸ್ಟು ಮಾಡಿಕೊಡುತ್ತಿದ್ದೇವೆ.

ಇಂದೇ ವಿವರಗಳಿಗೆ ಬರೆಯಿರಿ:
ಮೆನೇಜರ್,
ಮೈಸೂರು ಟೈಪ್ ಫೌಂಡ್ರಿ,
ಬೆಂಗಳೂರು–2.

ತಂತಿ: ಲಕ್ಷ್ಮಿನಿವಾಸ್. ಟೆಲಿಫೋನ್: 82 & 95.

ಮಂಗಳೂರನ್ನು ಸಂದರ್ಶಿಸಿದಾಗ ನೆನಪಿರಲಿ!

"ಜಯಕೆಫೆ - ಲಕ್ಷ್ಮಿನಿವಾಸ್"

ಅತ್ಯಾಧುನಿಕವಾದ ಸಕಲ ಸೌಕರ್ಯಗಳಿಂದೊಡಗೂಡಿದ
ಬೋರ್ಡಿಂಗ್ ಲಾಜಿಂಗ್—ಊಟ ಮತ್ತು ವಸತಿಗೃಹ.

For entirely modernised and self-contained rooms:

JAYA CAFE-LAXMI NIVAS
K. S. Rao Road, MANGALORE. (S. K.)
H. O. COIMBATORE. Prop: N. V. BHAT.

NAVAYUGA WEEKLY
* * * * *
ADVERTISEMENT RATES

Display Advertisements:— Rs. 2/- per column inch for contracts of 50" or more and Rs. 3/- per column inch for casual advertisements.

Classified Advertisements: – As. 8/- per line (minimum 8 lines).

For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

SCHOOL BOOK COMPANY,

Book Sellers, Publishers & Stationers,

Post Box No. 93, Car Street,

MANGALORE-1

Tel: SCHOOL BOOK | Phone: 229

Distributors:

MYSORE PAPER MILLS, LIMITED, BHADRAVATHI, &

THE GANGES PRINTING INK FACTORY, LIMITED, HOWRAH.

ಶಾಲಾ ಕಾಲೇಜು ಪಠ್ಯ ಪುಸ್ತಕ—ಕಾಗದ ಮತ್ತು ಮುದ್ರಕರ ಸಾಹಿತ್ಯಗಳಿಗೆ—

ಸ್ಕೂಲ್ ಬುಕ್ ಕಂಪೆನಿ,

ಪೋಸ್ಟ್ ಬಾಕ್ಸ್ ನಂಬ್ರ 93, ಕಾರ್ ಸ್ಟ್ರೀಟ್, ಮಂಗಳೂರು—1

OUR FINANCIAL OPERATIONS IN 1953 AT A GLANCE!

OUR POLICYHOLDERS NUMBER ...	1,16,923
LIFE ASSURANCE IN FORCE over Rs.	26,96,57,000
TOTAL ASSETS .... ,, ,,	8 37,53 000
TOTAL INCOME .... ,, ,,	1,48 69,000
LIFE ASSURANCE FUND ... ,, ,,	7,48 98,000
TOTAL CLAIMS PAID in 1953 ,, ,,	40,00,000

POLICYHOLDERS' FUNDS VESTED IN THE OFFICIAL TRUSTEE OF MADRAS EXCEED

RS. 8 CRORES.

****

DISABILITY BENEFITS FREE ACCIDENT BENEFIT AT RS. 1/8 PER THOUSAND EXTRA.)

****

Ask for particulars of our

ESTATE DUTY POLICY.

THE UNITED INDIA

LIFE ASSURANCE COMPANY, LIMITED.

(Established 1906)

HEAD OFFICE: **MADRAS 1.**

KARKERA BANKING CO.,

WEST MAIDAN ROAD MANGALORE-1

PIGMY DEPOSITS:—By paying four annas per day into the Bank will bring you a lump sum of Rs. 500/ at the end of 5 years.

CASH CERTIFICATES:—Our Cash Certificates bear interest of 5% per annum repayable after 3 years.

CHIT FUND:—The membership of our Chit Fund is beneficial and profitable.

Fixed, Savings and Current Deposits are received on reasonable terms.

GOLD LOANS A SPECIALITY

All kinds of Banking Business undertaken

For Particulars Apply to:— **B. R. KARKERA,** Mangalore.

ಬೇಕು 'ನವಯುಗ'ಕ್ಕೆ ಚಂದಾದಾರರನ್ನು ಒದಗಿಸಿಕೊಡಲು, ಮಾಸಿಕ ವೇತನ, ಯಾ ಕಮಿಶನಿನ ಮೇಲೆ ಪ್ರಭಾವಶಾಲಿ ಹಾಗೂ ಉತ್ಸಾಹೀ ತರುಣರು ಬೇಕಾಗಿದ್ದಾರೆ ಕೇಶ್ ಸೆಕ್ಯುರಿಟಿ ಕೊಡಬಲ್ಲವರು ವಿವರಕ್ಕೆ— ಮೆನೇಜರ್, ನವಯುಗ, ಪೋಸ್ಟ್ ಬಾಕ್ಸ್ ನಂಬ್ರ 22, ಉಡುಪಿ.

ಬಾಲಚಂದ್ರ

ಶಾಲೆಗಳಿಗೆ ಉಪಯುಕ್ತವಾದ ಶೈಕ್ಷಣಿಕ ಮಾಸಪತ್ರಿಕೆ

ಉಡುಪಿ, ದ. ಕ.

ಸಂಪಾದಕರು:
ಕೆ. ಆರ್. ಶೆಣೈ.
ಕೆ. ಎಚ್. ಶೆಟ್ಟಿ.

ವಾರ್ಷಿಕ ಚಂದಾ:
3-0-0

ವಾಚನಾಲಯಗಳಿಗೆ ಮಾತ್ರ!

ಎರಡಾಣೆಯಿಂದ ಹಿಡಿದು ಎರಡು ರೂಪಾಯಿ ಬೆಲೆ ವರೆಗಿನ ಸುಮಾರು 35 ರೂಪಾಯಿ ಕ್ರಯದ 100 ಉತ್ತಮ ಪುಸ್ತಕಗಳನ್ನು ವಾಚನಾಲಯಗಳಿಗೆ ಬರೇ ರೂ. 25/-ಕ್ಕೆ ಕೊಡಲಾಗುವುದು. ಈ ರಿಯಾಯತಿಯು ಸ್ವಾತಂತ್ರ್ಯೋತ್ಸವದ ನಿಮಿತ್ತ ಇದೇ ಆಗೋಸ್ತು 15ರಿಂದ ಒಂದು ತಿಂಗಳ ವರೆಗೆ ಮಾತ್ರ ದೊರಕುವುದು.

ಅಂತರಂಗ ಕಾರ್ಯಾಲಯ, ಉಡುಪಿ.

ಏಜಂಟರು:—

Navabharat Book Depot Udipi

ಏಲಂ ನೋಟೀಸು

ದಿ. ಕೆಥೋಲಿಕ್ ಬ್ಯಾಂಕ್ ಲಿಮಿಟೆಡ್, ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ಸದರಿ ಬ್ಯಾಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಪಡೆದುಕೊಂಡ ಸಾಲವನ್ನು ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಕೊಟ್ಟಲ್ಲಿಯೂ ಸದರಿಯವರು—ಬಿಡಿಸಿಕೊಂಡು ಹೋಗದೆಯೂ ಕೆಲವರು ವಿಳಾಸದಲ್ಲಿ ಇಲ್ಲದೆ ರಿಜಿಸ್ಟ್ರಿ ನೋಟೀಸು ವಾಪಾಸು ಬಂದಿರುವುದರಿಂದಲೂ, ಸದರಿಯವರಿಗೆ, ವ ಅವರ ವಾರೀಸುದಾರರಿಗೆ ಈ ಮೂಲಕ ತಿಳಿಸುವುದೇನೆಂದ್ರೆ ಸದರಿಯವರು, ಈಡಿಟ್ಟ ನಗಗಳನ್ನು 1954ನೇ ಅಗೋಸ್ತು ತಿಂಗಳ 25ರ ಒಳಗೆ ಬಿಡಿಸಿಕೊಂಡು ಹೋಗಲಿಕ್ಕೆ ತಪ್ಪಿದ್ರೆ ತಾರೀಕು 28-8-1954ನೇ ಶನಿವಾರ ಘಂಟೆ-2ಕ್ಕೆ ಬ್ಯಾಂಕಿನ ಆಫೀಸಿನಲ್ಲಿ ಯಾ ಇನ್ನಿತರ ದಿನಗಳಲ್ಲಿ ಪುನಹಾ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ಮಾಡಲಾದೀತು. ತಿಳಿದಿರಲಿ:-

ಜಂಬ್ರಾ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
26/1265	U. ಹರಿದಾಸ್ S/o ರಾಮಕೃಷ್ಣ ಭಟ್ ಭಂಡಾರ್ ಪ್ಯೇಟೆ, ಉಡುಪಿ P.O.	70 0 0
29/116	ಸುಬ್ಬ ಪೂಜಾರಿ ಗುರುವ ಪೂಜಾರಿ ಅಕಿಂಬ ಬೊಳ್ಳ ಉದಿಯಾವರ P.O.	20 0 0
28/1036	ಸ್ಟ್ಯಾನಿ ಲುವೀಸ್ S/o ಆಂದ್ರು ಲುವೀಸ್ ಪಿತ್ರೋಡಿ, ಉದಿಯಾವರ P.O.	70 0 0
28/1098	ಬಾಪ್ತಿಸ್ತ ಲುವೀಸ್ S/o ಜಾಕಿ ಲುವೀಸ್ ಉದಿಯಾವರ, P.O.	40 0 0
28/1111	C. L. ಕಾರ್ಡೋಜ, S/o ಲೋರೆನ್ಸ್ ಕಾರ್ಡೋಜ ಉದಿಯಾವರ P.O.	20 0 0
28/1444	K. V. ಕೃಷ್ಣಾಚಾರ್ಯ S/o K. ಸುಬ್ಬಣ್ಣ ಭಟ್ಟ ಕೊಡವೂರು, ಮಲ್ಪೆ P.O.	150 0 0
29/680	B. K. ಸುಂದರ ಶೆಟ್ಟಿ ಪರೇಲ್ ಬೊಮ್ಮರ್ ಬೆಟ್ಟು ಹಿರಿಯಡ್ಕ P.O,	300 0 0

Office of The Catholic Bank Ltd., Udipi

V. ANDRADE, Agent.

Visit

K. R. K. SHET DIAMOND MART

Opposite Government College, MANGALORE.

For all your requirements in Diamonds and Jewellery Lucky Birth Stones are also available.

Prop: **K. K. R. SHET.**

ಬಟ್ಟೆಗಳ ಸ್ವಚ್ಛತೆಗೆ

'ನಂದಿ ಬಾರ್ ಸೋಪ್'

ಪ್ರಕಟಣೆ

ಸುವರ್ಣ ಸಂಧಿ

ದಿ ಬೆಂಗಳೂರ ಪ್ರಾವಿಡೆಂಟ ಇನ್ಸುರನ್ಸ ಕಾರ್ಪೋರೇಶನ್ ಲಿ.,

ಮುಖ್ಯ ಕಚೇರಿ: 'ಸತ್ಯನಾರಾಯಣ' ೬೫, ಸೆಕಂಡ ಕ್ರಾಸ್ ಗಾಂಧಿನಗರ, ಬೆಂಗಳೂರು.

ಈ ವರೆಗಿನ ಪ್ರಗತಿ

೧. ತೆತ್ತ ಕ್ಲೇಮುಗಳ ಹಣ ಮಿಕ್ಕಿದೆ ರೂ. ೮೦,೦೦೦

೨. ಜೀವ ನಿಧಿ ಮೀರಿದೆ . . . ರೂ. ೪,೩೦,೦೦೦

೩. ಅತಿ ಇತ್ತೀಚಿನ ಮೌಲ್ಯಮಾಪನವು ತೋರಿಸಿದ ಹೆಚ್ಚಳವು ಮಿಕ್ಕಿದೆ . ರೂ. ೩೦,೦೦೦

ನಮ್ಮ ನಾಡಿನ ಜನತೆಯಲ್ಲಿ ಮಿತವ್ಯಯದ ಚಟವನ್ನು ಕೆದಲು ಮತ್ತು ನಮ್ಮ ಸಂಸ್ಥೆಯನ್ನು ವಿಶಾಲವಾಗಿ ಮಾಡಲು ಬೋನಸ ಅನುಕೂಲತೆಯಿಂದ ಕೂಡಿಕೊಂಡ ಸಂಬಳದ ತಳವದಿಯ ಮೇರೆ ಏಜನ್ಸಿಗಳಿಗಾಗಿ ಅರ್ಜಿಗಳನ್ನು ಕರೆದಿದ್ದೇವೆ. ಸರ್ವರಿಗೂ ಇದೊಂದು ಅಪೂರ್ವ ಸಂಧಿ; ಈ ಉದಾರ ಉದ್ಯೋಗ ವ್ಯವಸಾಯದ ಬಗ್ಗೆ ಕಾರ್ಯಪ್ರವೃತ್ತರಾಗಿ ನಿರುದ್ಯೋಗ ಸಮಸ್ಯೆಯನ್ನು ಹಿಡಿಸಿರಿ. ಹಾಗೂ ರಾಷ್ಟ್ರೀಯ ಸಂಪತ್ತನ್ನು ನಿರ್ಮಿಸಿರಿ.

ಬೇಕಾಗಿದ್ದಾರೆ:- ಭಾರತದ ಒಕ್ಕೂಟದಲ್ಲಿ ಎಲ್ಲಾ ಕಡೆಗೂ ೧೦೦ ರೂ. ಮಾಸಿಕ ಸಂಬಳ ಹಾಗೂ ಏಕೀಕೃತ ಮಾಸಿಕ ಬತ್ತೆ ರೂ. ೫೦ರ ಮೇಲೆ ಏಜಂಟರು ಬೇಕು. ಈ ಏಜಂಟರು ಪ್ರಾರಂಭಿಕ ವಿಮಾ ಕಂತುಗಳ ತಿಂಗಳೊಂದಕ್ಕೆ ೧೦೦೦೦ ರೂ. ಕಾರ್ಯದ ಗ್ಯಾರಂಟಿ ಕೊಡಬೇಕು. ಅಲ್ಲದೆ ಅವರಿಗೆ ಪೂರ್ಣ ವರ್ಷದ ವಿಮಾ ಕಂತುಗಳ ಪ್ರತಿ ೧೦೦೦ ಕೇಸುಗಳಿಗೆ ಬೋನಸ ರೂ. ೧೦ ಕೊಡಲಾಗುವದು. ಇದು ರೂ. ೧೨೦ರಷ್ಟಾಗುವದು. ರಿನೆವಾಲ್ ಕಮೀಷನ್ ೫% ಸಹ ಕೊಡಲಾಗುವದು.

ಮ್ಯಾನೇಜಿಂಗ ಡೈರೆಕ್ಟರರಿಗೆ ಬರೆಯಿರಿ.

ದಿ ವಿಜಯ ಬೇಂಕ್, ಲಿಮಿಟೆಡ್.

ಸ್ಥಾಪನೆ: 1931. ಪ್ರಧಾನ ಕಛೇರಿ. ಮಂಗಳೂರು 3.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ ರೂ. **11,11,000**

ಜುಮ್ಲಾ ವಹಿವಾಟು .... ರೂ. **63,06,000**

ಕಾಯಂ ಠೇವಣಾತಿಯ ಈಗಿನ ದರಗಳು

1 ತಿಂಗಳಿಗೆ	2%
2 ,,	2½%
3 ತಿಂಗಳಿಂದ 6 ತಿಂಗಳ ವರೆಗೆ	3¼%
7 ,, 12 ,,	3½%
24 ತಿಂಗಳಿಗೆ	4%

ರೂಪಾಯಿ 15,000 ವ, ಮೇಲಿನ ಠೇವಣಾತಿಗೆ ¼% ದರ ಬಡ್ಡಿ ಹೆಚ್ಚಿಗೆ ಕೊಡಲಾಗುವುದು.

ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ,
ಬಿ. ಎ., ಬಿ. ಯಲ್., ವಕೀಲ್,
ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

Sri Ramakrishna Theatre Limited,

UDIPI, S. K.

- ದಿನ ದುಡಿದು ದಣುವಾರಿಸಿ ವಿನೋದ ಪಡೆಯಲು ಹೊಸ ಹೊಸ ಚಿತ್ರಗಳ ಪ್ರದರ್ಶನ—
- ಅನುದಿನದ ವ್ಯಾಪಾರ ವ್ಯವಹಾರಗಳ ಪ್ರಚಾರಕ್ಕಾಗಿ ಸ್ಲೈಡು ಪ್ರದರ್ಶನ—
- ಮೋಟಾರು, ರೇಡಿಯೋ ಇತ್ಯಾದಿ ಸ್ಟೋರೇಜ್ ಬೆಟರಿ ಚಾರ್ಜಿಂಗ್ ಅನುಕೂಲತೆ—
- ಸಾವಿರಾರು ಮಂದಿ ಕೇಳಲನುಕೂಲವಾಗುವ ಭಾಷಣ, ಉಪನ್ಯಾಸಗಳ ಧ್ವನಿವರ್ಧನೆಗೆ ಬೇಕಾದ (ಲೌಡ್ ಸ್ಪೀಕರ್) ಧ್ವನಿವರ್ಧಕ ಯಂತ್ರ—

ಜಾಹೀರಾತು ಮತ್ತು ವಾಚನಕ್ಕೆ ಯೋಗ್ಯವಾದ 'ಪ್ರಕಾಶ ವಾರಪತ್ರಿಕೆ'—

ಇಷ್ಟು ಮಾತ್ರವಲ್ಲದೆ ನಿಮ್ಮ ಕಾಮಧೇನುವಾದ ದನಗಳ ಪೀಳಿಗೆಯ ಅಭಿವೃದ್ಧಿಗಾಗಿ ಸಿಂಧಿ ಬೀಜದೆತ್ತುವಿನ ಉಪಯೋಗ—

— ಇವನ್ನೆಲ್ಲಾ ಪಡೆಯಲು —

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್,

ಉಡುಪಿ, ದ. ಕ.

ಮನಸ್ಸಿಗೆ ಶಾಂತಿ ಬೇಕೇ?

ಮೂಲ ಶ್ಲೋಕಗಳೊಂದಿಗೆ ತಿಳಿಗನ್ನಡದಲ್ಲಿ ಹೊಸಕೆರೆ ಚಿದಂಬರಯ್ಯನವರಿಂದ ಅನುವಾದಿಸಲ್ಪಟ್ಟ 400 ಪುಟಗಳಿಗೆ ಮಿಕ್ಕಿದ 'ಗೀತೆಯ ಕೈಗನ್ನಡಿ'ಎಂಬ ಭಗವದ್ಗೀತೆಯನ್ನು ಓದಿರಿ.

*"ಬೇರೆ ಶಾಸ್ತ್ರಗಳನ್ನೆಷ್ಟೋದಿದರೇನು? ಗೀತೆಯನ್ನು ಚೆನ್ನಾಗಿ ಓದಬೇಕು'
—ವರಾಹಪುರಾಣ.

*"ಹಿಂದೂ ಧರ್ಮದ ಮತ್ತು ನೀತಿಶಾಸ್ತ್ರದ ಮೂಲತತ್ವವನ್ನು ತಿಳಿಯ ಬೇಕಾದರೆ ಮೊತ್ತಮೊದಲು ಈ ಅಪೂರ್ವ ಗ್ರಂಥವನ್ನು ಓದಬೇಕು."
—ಲೋಕಮಾನ್ಯ ತಿಲಕ.

*"ನನಗೆ ಸಂದೇಹಗಳು ಬಂದಾಗ, ನಿರಾಶೆಯು ನನ್ನ ಮುಂದೆ ನಿಂತಾಗ ಮತ್ತು ಆಕಾಶಮಂಡಲದಲ್ಲಿ ಯಾವ ಜ್ಯೋತಿಯೂ ಗೋಚರಿಸದಿರುವಾಗ ನಾನು ಗೀತೆಯನ್ನು ಓದುತ್ತೇನೆ. ಆಗ ನನ್ನ ಮನಸ್ಸಿಗೆ ಶಾಂತಿಯನ್ನು ಕೊಡುವಂತಹ ಶ್ಲೋಕವು ಒಂದಿಲ್ಲದಿದ್ದರೆ ಮತ್ತೊಂದು ಸಿಕ್ಕುವುದು."
—ಮಹಾತ್ಮಾ ಗಾಂಧಿ.

*"ಯಾವ ಸಮಾಜವೇ ಆಗಲಿ ಉನ್ನತಿಯ ಶಿಖರವನ್ನು ಹೊಂದಬೇಕಾದರೆ ಭಗವದ್ಗೀತೆಯ ಉಪದೇಶವು ಅತ್ಯುತ್ತಮವಾದದ್ದು."
—ವಾರನ್ ಹೇಸ್ಟಿಂಗ್ಸ್.

ಎಂದ ಮೇಲೆ ಗೀತೆಯ ಮಹತ್ವದ ವಿಷಯ ಪ್ರತ್ಯೇಕ ಹೇಳಬೇಕಾದ್ದೇನೂ ಇಲ್ಲ. ಗೀತಾ ಧರ್ಮವು ಎಲ್ಲಾ ದೇಶದವರಿಗೂ ಎಲ್ಲಾ ಜಾತಿಯವರಿಗೂ ಅನುಸರಣೀಯವಾದುದರಿಂದ ಪ್ರಪಂಚದಲ್ಲಿ ಗೀತೆಗೆ ಮೊದಲನೆಯ ಸ್ಥಾನವಿದೆ.

ಗೀತೆಯ ಕೈಗನ್ನಡಿ

ಬೆಲೆ: **0—12—0**

ಪ್ರತಿಗಳು ಪುಸ್ತಕ ವ್ಯಾಪಾರಿಗಳಲ್ಲೆಲ್ಲ ಸಿಗುತ್ತವೆ

ವಿ. ಪಿ.— ರೂ1.-0-0 ಕಳಿಸಿದರೆ ಪ್ರತಿಯೊಂದನ್ನು ಬುಕ್ ಪೋಸ್ಟಿನಿಂದ ಕಳಿಸಬಹುದು.

ನವಯುಗ ಪ್ರೆಸ್, ಉಡುಪಿ, ದ ಕ.

NAVAYUGA 12-8-54

Regd. No. M. 3618

LICENCE NO. 31
Licensed to Post without Prepayment

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ದಿ [illegible] ಬ್ಯಾಂಕಿಂಗ್ [illegible]

ಲೆಖ್ಖ ಪರಿಶೋಧನೆಗೆ ಒಳಪಟ್ಟು ತಾರೀಕು 30-6-1954ರಲ್ಲು ಬ್ಯಾಂಕಿನ ಸಾಲಮೂಲಗಳ ಸಂಕ್ಷಿಪ್ತ ತಃಖ್ತೆ

ಮೂಲಧನ ಮತ್ತು ಸಾಲಗಳು	ರೂ.	ಸೊತ್ತು ಮತ್ತು ಮೂಲಗಳು	ರೂ.
ಚಂದಾ ಅರ್ಪಿಸಿ, ತೆತ್ತು ಬಂದ ಭಂಡವಾಳ	20,00,000	ಬೇಂಕುಗಳಲ್ಲಿ ಮತ್ತು ಕೈಯಲ್ಲಿ ರುವ ಶಿಲ್ಕು	48,63,355
ಕ್ಷೇಮನಿಧಿ	10,50,000	ಕೇಂದ್ರ ಮತ್ತು ಪ್ರಾಂತ್ಯ ಸರಕಾರಗಳ ಭದ್ರತಾ ಪತ್ರಗಳು	1,43,88,834
ಠೇವಣಾತಿಗಳು	3,23,58,137	ಸಾಲ ರೂಪದಲ್ಲಿ ಕೊಟ್ಟ ಮೊಬಲಗು	1,68,77,880
ವಸೂಲಿಗೆ ಪಡೆದ ಹುಂಡಿಗಳು, ಚೆಕ್ಕುಗಳು, ವಗೈರೆ	26,37,372	ವಸೂಲಿಗೆ ಪಡೆದ ಹುಂಡಿಗಳು, ಚೆಕ್ಕುಗಳು ವಗೈರೆ .. .	26,37,372
ಇತರ ಸಾಲಗಳು	31,21,139	ಇತರ ಮೂಲಗಳು	23,99,207
ಜುಮ್ಲಾ	4,11,66,648	ಜುಮ್ಲಾ	4,11,66,648

ಚಿನ್ನಾಭರಣ, ಸರಕಾರಿ ಭರವಸೆ ಪತ್ರಗಳು, ಮತ್ತಿನ್ನಿತರ ಬ್ಯಾಂಕಿಗೆ ಯುಕ್ತಕಂಡ ಭದ್ರತೆಗಳ ಮೇಲೆ ಯೋಗ್ಯ ಬಡ್ಡಿ ದರಗಳಲ್ಲಿ ಸಾಲಗಳನ್ನು ಕೊಡೋಣಾಗುವುದು. "ಸೇಫ್ ಡಿಪೊಜಿಟ್ ವೋಲ್ಟ್" ಸೌಕರ್ಯಗಳು ಬ್ಯಾಂಕಿನ ಮಂಗಳೂರು ಮತ್ತು ಮಡಿಕೇರಿ ಶಾಖೆಗಳಲ್ಲಿ ಸಿಗುವುವು. ಎಲ್ಲಾ ವಿಧದ ಆಧುನಿಕ ಬ್ಯಾಂಕಿಂಗ್ ವಹಿವಾಟುಗಳನ್ನು ಮದ್ರಾಸು, ಆಂಧ್ರ, ಮೈಸೂರು, ಮುಂಬಾಯಿ, ಕೊಡಗು ಮತ್ತು ತಿರುಕೊಚ್ಚಿ ಸಂಸ್ಥಾನಗಳಲ್ಲಿ ಪಸರಿಸಿರುವ ಬ್ಯಾಂಕಿನ **38** ಶಾಖೆಗಳು ನಡೆಸುವುವು. ವಿಶೇಷ ಮಾಹಿತಿಗೆ, ನಿಮಗೆ ಸಮೀಪವಿರುವ ಬ್ಯಾಂಕಿನ ಶಾಖೆಯಲ್ಲಿ ವಿಚಾರಿಸಿರಿ.

[illegible]

Estd: 1906] [H. O.: **UDIPI** (S. India).

ಡಾ। ಯು. ಸುಂದರ ರಾಮ ಪೈ,
ಎಂ. ಬಿ., ಬಿ ಎಸ್.,
ಅಧ್ಯಕ್ಷ.

ವಿ. ಆರ್. ಕಾಮತ್,
ಬಿ ಎ., ಎಲ್‌ಎಲ್. ಬಿ.,
ಜನರಲ್ ಮೆನೇಜರ್.

Edited, Printed & Published by K. H. Shetty at the Navayuga Press, Udipi, S. India.

Licensed to Post without Prepayment

ನವಯುಗ

Founder.- Sri A B. Shetty, Minister for Public Health, Govt. of Madras.

Vol.33 No 50 19-8-1954 ವರ್ಷ ೩೩ ವಾರ ೫೦

ಅಪಾಯಕರ ಚಪಲ

ತನ್ನ ಗಂಡನಿಗೆ ತಾನು ಸದಾ ಸುಂದರಿಯಾಗಿಯೇ ಕಾಣುತ್ತಿರಬೇಕೆಂದು ಪ್ರತಿಯೊಬ್ಬ ಹೆಂಡತಿ ಬಯಸುತ್ತಾಳೆ. ಗಂಡಂದಿರೂ ಹಾಗೆಯೇ. ಇತರ ಸ್ತ್ರೀ ಪುರುಷರೂ ಶೃಂಗರಿಸಿಕೊಂಡು ಜನರನ್ನು ತಮ್ಮೆಡೆಗೆ ಆಕರ್ಷಿಸಿಕೊಳ್ಳುತ್ತಿರಬೇಕೆಂದು ಅಪೇಕ್ಷಿಸುತ್ತಾರೆ. ಈ ಬಯಕೆ ಮನುಷ್ಯನ ಸಹಜ ಪ್ರವೃತ್ತಿಯೇ ಆಗಿದೆ. ಮನಸ್ಸಿನ ಆಶೆಗಳಿಗೊಂದು ವ್ಯಕ್ತ ಸ್ವರೂಪವನ್ನು ಶೃಂಗಾರದ ವ್ಯಾಮೋಹವು ಒದಗಿಸಿಕೊಡುತ್ತದೆ. ಸಾಮಾಜಿಕ ವರ್ತುಲದಲ್ಲಿ ವರ್ಚಸ್ಸನ್ನು ಸ್ಥಾಪಿಸಬೇಕೆಂಬ ಸಾಮಾನ್ಯವಾದ ಅಭಿಲಾಷೆಯೇ ಮನುಷ್ಯನನ್ನು ಸೌಂದರ್ಯವರ್ಧಕ ಸಾಧನಗಳನ್ನು ಆಶ್ರಯಿಸುವಂತೆ ಮಾಡುತ್ತದೆ.

ನೈಸರ್ಗಿಕವಾದುದರ ಸ್ಥಾನದಲ್ಲಿ ಕೃತ್ರಿಮತೆಯನ್ನು ಪ್ರತಿಷ್ಠೇಪಿಸುವುದು ಎಷ್ಟೋ ಮಂದಿಗೆ ಒಪ್ಪಿಗೆಯಿಲ್ಲ: ದೇವರು ಕೊಟ್ಟ ರೂಪವೇ ಸಾಕು—ಮನುಷ್ಯನ ಯೋಗ್ಯತೆ ಅವನು ಎಷ್ಟು ಚಂದ ಕಾಣುವನೆಂಬುದರ ಮೇಲಿಂದ ನಿಷ್ಕರ್ಷಿಸಲ್ಪಡುವುದಿಲ್ಲ–ನಮಗೆ ಗುಣಶೀಲವೇ ಮುಖ್ಯವಲ್ಲದೆ ಆಡಂಬರದ ಉಡಿಗೆ ತೊಡಿಗೆಯಲ್ಲ ಎಂದವರು ಹೇಳುತ್ತಾರೆ. ಆದರೆ ಕೃತಕ ಸೌಂದರ್ಯ ವರ್ಧಕಗಳ ಉತ್ಪಾದನೆಯ ಮೇಲೆ ಈ ಉಪದೇಶಗಳಿಂದ ಏನೂ ತಡೆ ಬಿದ್ದಿರುವುದಿಲ್ಲ. ಪ್ರತಿ ವರ್ಷ ವಿಲಾಸೋಪಭೋಗದ ಈ ಸಾಮಗ್ರಿಗಳ ಉತ್ಪಾದನೆಯೂ ಆಯಾತವೂ ಹೆಚ್ಚುತ್ತಿರುತ್ತಲಿದ್ದು, ನಾಗರಿಕ ಜೀವನವು ಸೌಂದರ್ಯ ವರ್ಧಕಗಳಿಲ್ಲದೆ ಒಂದು ದಿನವನ್ನೂ ಕಳೆಯಲಾರದೆಂಬಲ್ಲಿವರೆಗೆ ಈಗ ಮುಟ್ಟಿರುವುದು.

ಇದನ್ನು ಅಪಾಯಕರ ಚಪಲವೆಂದು ಅಧಿಕಾರ ಪೂರ್ವಕ ಹೇಳಬಲ್ಲವರು ವಿರಳ: ಇಂಥ ಅಪರೂಪದ ಸ್ವರವೊಂದು ಜರ್ಮನಿಯ ಬಾನ್ ಎಂಬ ಪಟ್ಟಣದಿಂದ ಬಿತ್ತರಿಸಲ್ಪಟ್ಟಿರುವುದು. ೪೫ ವರ್ಷ ಪ್ರಾಯದ ಮಹಿಳಾ ಡಾಕ್ಟರರಾದ ಇಂಗಬರ್ಗ ನಿಮಾಂಡ ಅಂಡರ್ಸನರೆಂಬವರು ಉಗುರು, ತುಟಿ, ಹುಬ್ಬು ಮುಂತಾದವುಗಳಿಗೆ ಹಚ್ಚುವ ಬಣ್ಣ, ಮುಖಕ್ಕೆ ಹಚ್ಚುವ ಪೌಡರು, ಕೂದಲಿಗೆ ತಿಕ್ಕುವ ಸುವಾಸನೆಯ ಎಣ್ಣೆ, ಕೃತಕ ನೂಲು ಹಾಗು ಪ್ಲಾಸ್ಟಿಕುಗಳ ಉಡಿಗೆ ತೊಡಿಗೆ ಮುಂತಾದವುಗಳ ಉಪಯೋಗವು ಆರೋಗ್ಯಕ್ಕೆ ಗಂಡಾಂತರ ಪ್ರಾಯವೆಂಬುದಾಗಿ ಎಚ್ಚರಿಸುತ್ತಾರೆ. ಪಶ್ಚಿಮ ಜರ್ಮನಿಯ ಅನೇಕ ಪತ್ರಿಕೆಗಳಲ್ಲಿ ತಾನು ಎರಡು ವರ್ಷಗಳಿಂದ ನಡೆಸಿದ ನಿರೀಕ್ಷಣೆಗಳ ಪರಿಣಾಮವನ್ನು ಈಕೆ ವಿವರಿಸಿ ಬರೆದಿರುವಳೆಂದು ರಾಯ್ಟರ ಸುದ್ದಿ ಸಂಸ್ಥೆಯ ವರದಿಯೊಂದು ಹೇಳುತ್ತದೆ

ಸೌಂದರ್ಯ ವರ್ಧಕ ಸಾಧನಗಳನ್ನು ತಯಾರಿಸುತ್ತಿರುವವರಿಗೆ ನಷ್ಟವನ್ನುಂಟು ಮಾಡಬೇಕೆಂಬುದು ಈ ಮಹಿಳೆಯ ಉದ್ದೇಶವಾಗಿರಲಿಲ್ಲ—ಮಹಿಳೆಯರಲ್ಲಿ ಬಹಳಷ್ಟು ಹೆಚ್ಚಾಗಿ ಕಂಡುಬಂದ ಚರ್ಮ ಹಾಗು ಶ್ವಾಸ ಸಂಬಂಧವಾದ ರೋಗಗಳ ಮೂಲವನ್ನು ಪತ್ತೆ ಮಾಡಲು ಆಕೆ ಹೊರಟಾಗ, ಸೌಂದರ್ಯವರ್ಧಕ ಸಾಧನಗಳ ಮೇಲಿನ ಮೋಹವೇ ಈ ರೋಗಗಳಿಗೆ ಮಹಿಳೆಯರನ್ನು ಆಹುತಿ ತೆಗೆದುಕೊಳ್ಳುತ್ತದೆಯೆಂದು ಅವಳಿಗೆ ಖಚಿತವಾಯಿತು.

ಕೃತಕ ನೂಲಿನ ಅರಿವೆ, ಪ್ಲಾಸ್ಟಿಕಿನ ಹಿಡಿಯುಳ್ಳ ಕೊಡೆ, ಕೈಚೀಲ, ಆಭರಣ ಮುಂತಾದವುಗಳಿಂದ ರೋಗ ಸಂಭವಿಸುವುದಕ್ಕೆ ಆ ವಸ್ತುಗಳ ತಯಾರಿಕೆಯಲ್ಲಿ ಉಪಯೋಗಿಸುವ ರಾಸಾಯನಿಕ ಪದಾರ್ಥಗಳೇ ಕಾರಣವೆಂದು ಹೇಳಲಾಗುತ್ತದೆ. ಉದಾಹರಣೆಗೆ ಕೃತಕ ನೂಲಿನ ತಯಾರಿಕೆಯಲ್ಲಿ ಗಂಧಕ, ತಾಮ್ರ ಮುಂತಾದ ದ್ರವ್ಯಗಳು ಬಳಸಲ್ಪಡುತ್ತವೆ. ಇವುಗಳ ಸಂಪರ್ಕದಿಂದ ಚರ್ಮ ವ್ಯಾಧಿಗಳೂ ಶ್ವಾಸ ರೋಗಗಳೂ ಕಾಲಾಂತರದಲ್ಲಿ ಕಾಣಿಸಿಕೊಂಡು ಆರೋಗ್ಯವನ್ನು ಕಬಳಿಸಿ ಬಿಡುತ್ತವೆ.

ಸ್ತ್ರೀಯರಲ್ಲಿ ಮಾಡಿದ ಪರಿಣಾಮವನ್ನೇ ಸೌಂದರ್ಯ ವರ್ಧಕಗಳು ಪುರುಷರ ಮೇಲೂ ಮಾಡುತ್ತವೆ

ಆಧುನಿಕ "ಫ್ಯಾಶನ್ನು"ಗಳು ನೋಟಕ್ಕೆ ಆಕರ್ಷಕವಾಗಿ ಕಂಡುಬರಬಹುದು; ಆದರೆ ಅವುಗಳಿಂದಾಗುವ ದುಷ್ಪರಿಣಾಮವು ಬಹಳ ಹೆಚ್ಚು. ಪ್ರಾರಂಭದಲ್ಲಿ ಸೌಂದರ್ಯವರ್ಧಕಗಳ ಸಹಾಯದಿಂದ ಚೆಲುವೆಯರಾಗಿ ಕಂಡುಬಂದವರೇ ಮುಂದೆ ಒರಟಾದ, ಸಂವೇದನಾ ರಹಿತ ಚರ್ಮವನ್ನೂ ಇತರ ರೋಗಗಳನ್ನೂ ಹೊಂದಿ, ಕಷ್ಟಕ್ಕೆ ಗುರಿಯಾಗುವರು ಎಂಬುದಾಗಿ ನಿಮಾಂಡ ಅಂಡರ್ಸನ ಹೇಳುತ್ತಾಳೆ. ಚರ್ಮರೋಗಗಳನ್ನಲ್ಲದೆ ದಮ್ಮಿನ ಉಪದ್ರವನ್ನೂ ಕೃತಕ ಸೌಂದರ್ಯ ವರ್ಧಕ ಸಾಮಗ್ರಿಗಳು ಉಂಟುಮಾಡುತ್ತವೆ. ಸುವಾಸನಾಭರಿತವಾದ ಸಾಬೂನುಗಳೂ ಅತ್ತರಗಳೂ ಆರೋಗ್ಯಕ್ಕೆ ಅಪಾಯವನ್ನು ತರುತ್ತವೆ.

ಕಲಾತ್ಮಕ ರೀತಿಯಲ್ಲಿ ಸೌಂದರ್ಯ ವೃದ್ಧಿ ಮಾಡುವುದಕ್ಕೆ ಕೃತಕ ವಸ್ತುಗಳಿಂದ ಏನೇನೂ ಪ್ರಯೋಜನವಿಲ್ಲವೆಂದೂ ಬದಲಿಗೆ ಮನುಷ್ಯನನ್ನು ರೋಗದ ಆಕರವಾಗಿಯೇ ಅವು ಪರಿವರ್ತಿಸುತ್ತವೆಂದೂ ಇದರಿಂದ ನಿರ್ಣಯಿಸಬಹುದು. ನಾವು ಸೌಂದರ್ಯವರ್ಧಕಗಳ ಮೋಹವನ್ನು ಬೆಳೆಸಿಕೊಳ್ಳುವುದು ಅಪೇಕ್ಷಣೀಯವೇ, ಅನಿವಾರ್ಯವೇ, ಅಗತ್ಯವೇ ಎಂದು ಮುಂತಾಗಿ ಈಗ ವಿಚಾರಿಸುವುದೊಳಿತು. ವೈಜ್ಞಾನಿಕ ಅನುಸಂಧಾನಗಳ ಫಲವಾಗಿ ಹುಟ್ಟಿಕೊಂಡ ಸ್ನೋ ಪೌಡರು, ಬ್ರಿಲಿಯಂಟೈನುಗಳ ಉಪಯೋಗದ ಬದಲು ಪ್ರಾಚೀನ ಭಾರತದಲ್ಲಿ ಉಪಯೋಗಿಸುತ್ತಿದ್ದ ಅರಸಿನ, ಕುಂಕುಮ, ಗಂಧ ಚಂದನಾದಿಗಳ ಒಳಿಕೆಯು ಹೆಚ್ಚು ಪ್ರಯೋಜನಕಾರಿಯೆಂದೂ ಈ ಸಂದರ್ಭದಲ್ಲಿ ಹೇಳಬಹುದು.

ಇದನ್ನು ಆಧುನಿಕ ಸಮಾಜದ ಸ್ತ್ರೀ ಪುರುಷರು ಒಮ್ಮೆಗೆ ಒಪ್ಪಲಿಕ್ಕಿಲ್ಲ—ಕೃತಕ ಸೌಂದರ್ಯ ವರ್ಧಕಗಳಿಂದ ಚರ್ಮ ರೋಗಾದಿಗಳು ಕಾಣಿಸಿಕೊಂಡಾಗ ಅವುಗಳನ್ನು ಇನ್ನೊಂದು ಲೇಪದಿಂದ ಮುಚ್ಚಿಕೊಳ್ಳಲು ಸಾಧ್ಯವೆಂದು ಅವರು ಕುತರ್ಕವನ್ನು ಮುಂದಿಡಬಹುದು, ರೋಗ ನಿವಾರಣೆಗೆ ಹೊಸ ಔಷಧಗಳು ಕಂಡು ಹಿಡಿಯಲ್ಪಟ್ಟು ಸೌಂದರ್ಯ ಸಾಧನ ರೋಗಗಳ ತಜ್ಞರ ಕೈಯಿಂದ ಅವನ್ನು ಉಪಯೋಗಿಸುತ್ತಿರಬಹುದೆಂದೂ ಅವರು ಸೂಚಿಸಬಹುದು. ಪರ್ಯಾಯದಲ್ಲಿ ಇದು ಔದ್ಯೋಗಿಕ ಅಭಿವೃದ್ಧಿ ಮತ್ತು ನಿರುದ್ಯೋಗ ನಿವಾರಣೆಗೆ ನೆರವಾದೀತೆಂದೂ ವಾದಿಸಬಹುದು. ಆದರೆ ನಿಷ್ಪ್ರಯೋಜಕವಾದ ವಿಚಾರ ಸರಣಿಯಿಂದೇ ಇವೆಲ್ಲ ತರ್ಕವನ್ನು ತಿರಸ್ಕರಿಸುವುದು ವಿಹಿತ.

ಆಧುನಿಕ ಯುಗದಲ್ಲಿ ಸೌಂದರ್ಯ ವರ್ಧಕ ಸಾಧನಗಳು ಔದ್ಯೋಗಿಕ ಹಾಗು ಆರ್ಥಿಕ ಪರಿಣಾಮವನ್ನುಂಟುಮಾಡುತ್ತವೆಂಬುದನ್ನೇನು ಅಲ್ಲಗಳೆಯಲಾಗದು—ಪಶ್ಚಿಮ ಜರ್ಮನಿಯೊಂದೇ ಕಳೆದ ವರ್ಷ ೩೩೦೦೦೦೦೦ ಪವನು ಬೆಲೆ ಬಾಳುವ ಸೌಂದರ್ಯವರ್ಧಕಗಳನ್ನು ಉತ್ಪಾದಿಸಿತಲ್ಲದೆ, ೪೬೬೦೦೦ ಪವನು ಬೆಲೆಯ ಸೌಂದರ್ಯ ಸಾಮಗ್ರಿಗಳನ್ನು ಬೇರೆ ದೇಶಗಳಿಂದ ತರಿಸಿಕೊಂಡಿತು. ಭಾರತದ ಫ್ರೆಂಚ್ ವಸಾಹತು ಪಾಂಡಿಚೇರಿಯ ಅಧಿಕಾರ ಹಸ್ತಾಂತರ ಕಾರ್ಯ ನಡೆಯುವುದೆಂಬ ವಾರ್ತೆ ಕೇಳಿದಾಗ, ಜನರೆಲ್ಲ ವಿದೇಶಗಳಿಂದ—ಮುಖ್ಯವಾಗಿ ಫ್ರಾನ್ಸಿನಿಂದ—ಆಮದಾಗುವ ಸೌಂದರ್ಯ ಸಾಧನಗಳ ಸಂಗ್ರಹವನ್ನು ಮಾಡತೊಡಗಿದರೆಂದು ಕೇಳಿದ್ದೇವೆ. ಹೀಗೆ ಅಪಾರ ಹಣವನ್ನು ಸೌಂದರ್ಯವೃದ್ಧಿಯ ಮೋಹವು ಬಲಿಯಾಗಿ ತೆಗೆದುಕೊಳ್ಳುತ್ತದೆ

ಇದನ್ನು ತಡೆಗಟ್ಟುವ ಕಡೆಗೆ ಸಾರ್ವಜನಿಕ ಅಭಿಪ್ರಾಯವನ್ನು ಸಂಘಟಿಸಲು ರಚನಾತ್ಮಕ ಕಾರ್ಯಕರ್ತರು ದುಡಿಯಬೇಕಾಗಿದೆ ಎಂದು ಸೂಚಿಸಲು ಬಯಸುತ್ತೇವೆ. ಮನುಷ್ಯನ ಆರೋಗ್ಯಕ್ಕೆ ಹಾನಿಯನ್ನೇ ಮಾಡುವ ಸೌಂದರ್ಯ ವರ್ಧಕಗಳಿಗಾಗಿ ನೀರಿನಂತೆ ಹಣ ಸುರಿಯುವವರು ತಪ್ಪು ಮಾಡುತಿದ್ದಾರೆಂದು ಸಕಾಲದಲ್ಲಿಯೇ ಎಚ್ಚರಿಕೆಯನ್ನು ಕೊಡುವುದು ಅಗತ್ಯ. ನಗರಗಳಲ್ಲಿಯಷ್ಟೇ ಸೌಂದರ್ಯವರ್ಧಕಗಳ ಉಪಯೋಗ ಹೆಚ್ಚುತ್ತಿರುವುದಲ್ಲ – ಹಳ್ಳಿಯಲ್ಲೂ ಇವುಗಳ ಪ್ರಚಾರ ಭರದಿಂದ ಸಾಗುತ್ತಿರುವುದು. ಕಲಾತ್ಮಕ ದೃಷ್ಟಿಯನ್ನು ನಷ್ಟಯಾಗಿಯೂ ಕೆಡಿಸುವ ಈ ವ್ಯಾಮೋಹವನ್ನು ಎಷ್ಟು ಬೇಗ ಒದ್ದೋಡಿಸಿದರೆ ಅಷ್ಟು ಮಟ್ಟಿಗೆ ಕ್ಷೇಮವಾಗುತ್ತದೆ.

— ಕಾರ್ತಿಕೇಯ.

THE CANARA INDUSTRIAL & BANKING SYNDICATE LTD.

Estd: 1925 H. O. UDIPI, S India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಠೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ. ಕುಟುಂಬದ ಹಾಗೂ ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡೆಕೊಳ್ಳಬೇಕಾಗಿ ವಿನಂತಿ. ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ: ೧೯೨೫] [ಪ್ರಧಾನ ಕಚೇರಿ. ಉಡುಪಿ, ದ. ಭಾರತ.

ಮಾನಸಿಕ ಆರೋಗ್ಯ ಸಂರಕ್ಷಣಾ ಮಂಡಳಿ

ಏಶ್ಯಾದಲ್ಲಿಯೇ ಹಿರಿದೆನಿಸಿದ ಬೆಂಗಳೂರಿನ ಕೇಂದ್ರ

ಮನುಷ್ಯನು ಸುಖಾಕಾಂಕ್ಷಿ—ಆವನೆಂದೂ ತನಗೆ ನೋವು ಬೇನೆಗಳಾಗಬೇಕೆಂದೂ ಅವನು ದುಃಖ ಸಾಗರದಲ್ಲಿ ತೇಲುತ್ತಿರಬೇಕೆಂದೂ ಬಯಸುವುದಿಲ್ಲ. ಪ್ರಾಚೀನ ಋಷಿ ಮುನಿಗಳು ಪ್ರತಿಪಾದಿಸಿದ ಸಚ್ಚಿದಾನಂದ ಸ್ವರೂಪಿಯನ್ನು ಸಾಕ್ಷಾತ್ಕರಿಸಿಕೊಳ್ಳುವ ತತ್ವವಾಗಲೀ ಪಾಶ್ಚಾತ್ಯ ಮನೋವಿಜ್ಞಾನಿಗಳ "ಸುಖ ದುಃಖ ತತ್ವ"ವಾಗಲೀ ಮನುಷ್ಯನ ಧ್ಯೇಯವು ತನ್ನ ಸುಖವೆಂಬುದನ್ನೇ ಖಚಿತ ಪಡಿಸುತ್ತವೆ. ಮಾನವನು ಹಾತೊರೆಯುತ್ತಿರುವ ಸುಖಕ್ಕೆ ಆತಂಕವೊಡ್ಡುವವುಗಳಲ್ಲಿ ಆಧಿ ವ್ಯಾಧಿಗಳು ಉಲ್ಲೇಖನೀಯ. ವ್ಯಾಧಿಯನ್ನು, ಅರ್ಥಾತ್ ದೈಹಿಕ ರೋಗವನ್ನು, ಗುಣಪಡಿಸುವುದು ಹೆಚ್ಚು ಕಷ್ಟವಲ್ಲ—ಮತ್ತು ಈ ಉದ್ದೇಶದಿಂದ ನಮ್ಮಲ್ಲಿಂದು ಸಾವಿರಾರು ಆಸ್ಪತ್ರೆಗಳು ತೆರೆದಿರುತ್ತವೆ. ಲಕ್ಷಾಂತರ ವೈದ್ಯರು ಜನರ ಶಾರೀರಿಕ ನೋವು ಬೇನೆಗಳ ನಿವಾರಣಾರ್ಥ ಹಗಲೂ ರಾತ್ರಿ ಶ್ರಮಿಸುತಿದ್ದಾರೆ. ಆದರೆ ಆಧಿ ಎಂದು ಹೆಸರಿಸಲಾದ ಮನೋರೋಗಗಳ ಉಪಶಮನ ಕಾರ್ಯವು ಕಷ್ಟಕರವಿರುವುದರಿಂದ, ಈ ದಿಸೆಯಲ್ಲಿ ಪ್ರಯತ್ನಗಳೂ ವಿರಳವಾಗಿ ಕಂಡು ಬರುತ್ತವೆ.

ಕಳೆದ ಆರನೇ ತಾರೀಕಿನಂದು ಬೆಂಗಳೂರಿನಲ್ಲಿ ಇಂತಹ ಅಪರೂಪದ ಪ್ರಯತ್ನವೊಂದಕ್ಕೆ ಬುನಾದಿಯನ್ನು ಹಾಕಲಾಯಿತು. ಅಂದು ಕೇಂದ್ರದ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ಮಾನಸಿಕ ಆರೋಗ್ಯ ಮಂಡಳಿದ ಉದ್ಘಾಟನಾ ಕಾರ್ಯವನ್ನು ನೆರವೇರಿಸಿದರು. ಬೆಂಗಳೂರಿನಲ್ಲಿ ಮನೋರೋಗಿಗಳಿಗೆ ಚಿಕಿತ್ಸೆಯನ್ನು ನಡೆಸುವ ಆಸ್ಪತ್ರೆಯೊಂದು ಈಗಾಗಲೇ ಕೆಲಸ ನಡೆಸುತ್ತಿರುವುದು. ಮೊನ್ನೆ ಉದ್ಘಾಟಿಸಲಾದ ಮಂಡಳವು ಈ ಆಸ್ಪತ್ರೆಯ ಸಹಕಾರವನ್ನು ತೆಗೆದುಕೊಂಡು ತನ್ನ ಚಟುವಟಿಕೆಗಳನ್ನು ನಡೆಸುವುದು. ಸುಯೋಜಿತ ಕಾಲುವೆಯ ಪೂರ್ವಕ್ಕಿರುವ ಏಶ್ಯಾದಲ್ಲಿ ಮಾನಸಿಕ ಆರೋಗ್ಯ ರಕ್ಷಣೆಗಾಗಿ ಇರುವುದೇ ಇವೆರಡು ಹಿರಿಯ ಕೇಂದ್ರಗಳೆಂದು ಹೇಳಿದರೆ ಭಾರತೀಯರಾದ ನಮಗೆ ಅಭಿಮಾನವೆನಿಸುವುದು ನಿಶ್ಚಯ. ಭಾರತವು ವೈಜ್ಞಾನಿಕ ಕ್ಷೇತ್ರದಲ್ಲಿ ಪ್ರಗತಿ ಹೊಂದುತ್ತಿರುವುದಕ್ಕೆ ಇದು ಪ್ರತ್ಯಕ್ಷ ನಿದರ್ಶನ. ಮಾನಸಿಕ ರೋಗಿಗಳ ಶುಶ್ರೂಷೆ ನಡೆಸುವ ಈ ಕೇಂದ್ರವು ಅತ್ಯಾಧುನಿಕವಾದರೀಯ ಕಟ್ಟಡಗಳಲ್ಲಿ ನೆಲಸಿರುವುದು. ೧೯೩೭ರಲ್ಲಿ ಆಗ ಮೈಸೂರಿನ ದಿವಾನರಾಗಿದ್ದ ಸರ್ ಮಿರ್ಜಾಇಸ್ಮಾಯೀಲರ ದೂರದರ್ಶಿತ್ವದಿಂದ ಈ ಆಸ್ಪತ್ರೆಯು ಇಂದಿನ ಚೊಕ್ಕ ಆವರಣವನ್ನು ಪ್ರವೇಶಿಸುವಂತಾಯಿತು.

ಸುಮಾರು ೩೦ ಎಕ್ರೆ ಜಾಗದಲ್ಲಿ ವಿಸ್ತರಿಸಿದ ಈ ಆಸ್ಪತ್ರೆಯು ದೂರದಲ್ಲಿ ಅತ್ಯಂತ ಸುಂದರವಾದ ನೋಟವನ್ನೊದಗಿಸುತ್ತದೆ. ಅದನ್ನು ಸಮೀಪಿಸುತಿದ್ದಂತೆಯೇ ಮನಸ್ಸು ಪ್ರಫುಲ್ಲಿತಗೊಳ್ಳುತ್ತದೆ. ಕೇಂದ್ರದಲ್ಲಿ ಆಡಳಿತ ನಿರ್ವಹಿಸುವ ಕಾರ್ಯಾಲಯವೂ ರೋಗಿಗಳಿಗಾಗಿ ನಿರ್ಮಿಸಿದ ಭವನಗಳೂ ಇವೆ. ಸಾಮಾನ್ಯ ಕೋಣೆಗಳಲ್ಲಿ ೪-೨೦ ಹಾಸಿಗೆಗಳನ್ನು ಕಾಣುತ್ತೇವೆ. ತೀವ್ರ ಮನೋರೋಗದಿಂದ ಬಳಲುವವರಿಗೆ ಪ್ರತ್ಯೇಕ ಕೋಣೆಗಳವೆಯಲ್ಲದೆ, ಹೆಚ್ಚು ಹಣವನ್ನು ವೆಚ್ಚಮಾಡಬಲ್ಲವರಿಗಾಗಿ ವಿಶೇಷ ಕೋಣೆಗಳ ವ್ಯವಸ್ಥೆಯೂ ಕಂಡುಬರುತ್ತದೆ. ಮಾನಸಿಕ ವಿಕಾರಗಳನ್ನು ಹಿಂದಿನ ಕಾಲದ ಜನಸಾಮಾನ್ಯರು ಗುಣಪಡಿಸಲಾರದ ಪಿಡುಗೆಂದು ಭಾವಿಸುತಿದ್ದರು. ಒಬ್ಬನಿಗೆ "ಹುಚ್ಚು" ತಗಲಿದರೆ, ಅವನ ವ್ಯಕ್ತಿತ್ವವೇ ನಷ್ಟವಾಯಿತೆಂದೂ ಆಶೆ ಬಿಡುತಿದ್ದರು. ಆದರೆ ಮನೋವಿಜ್ಞಾನವು ಈಚೆಗೆ ಪ್ರಗತಿಪರ ವಿಧಾನಗಳನ್ನು ಚಿಕಿತ್ಸೆಗಾಗಿ ಅಳವಡಿಸಿಕೊಂಡಿರುವುದು— ಪರಿಣಾಮವಾಗಿ ಮನೋರೋಗಗಳನ್ನು ಪ್ರಾರಂಭದಲ್ಲಿ ಯಶಸ್ವಿಯಾಗಿಯೇ ನಿಯಂತ್ರಿಸಿ, ಪರಿಹರಿಸಲು ಸಾಧ್ಯವೆಂದು ಭರವಸೆ ಮೂಡಿರುವುದು. ಬೆಂಗಳೂರಿನ ಕೇಂದ್ರವು ಅರ್ವಾಚೀನ ಸಂಪ್ರದಾಯಗಳನ್ನು ಶುಶ್ರೂಷೆಗಾಗಿ ಬಳಸುತಿದ್ದು, ಪಶ್ಚಿಮ ಜಗತ್ತಿನಲ್ಲಿ ಲಭ್ಯವಿರುವ ಉತ್ಕೃಷ್ಟ ಯಂತ್ರೋಪಕರಣಗಳ ಸಹಾಯವನ್ನೂ ತೆಗೆದು ಕೊಳ್ಳುತ್ತದೆ. ಇದರಿಂದ ನೂರಕ್ಕೆ ೩೫—೪೦ ರೋಗಿಗಳು ಸುಧಾರಿಸಲ್ಪಟ್ಟು ನಾಗರಿಕ ಜೀವನವನ್ನು ಮರಳಿ ನಡೆಸಬಲ್ಲವರಾಗಿ ಹೊರ ನಡೆಯುವರು.

ಸರಕಾರದವರು ಕೆಲವು ವರ್ಷಗಳ ಹಿಂದೆ ನೇಮಿಸಿದ ಭೋರ್ ಸಮಿತಿಯ ವರದಿಯಂತೆ, ಇಂಗ್ಲೆಂಡಿನಲ್ಲಿ ಹತ್ತು ಸಾವಿರ ಜನರಲ್ಲಿ ೩.೨ ಮಂದಿ ಮನೋರೋಗ ಪೀಡಿತರು ಕಂಡು ಬಂದರೆ, ಭಾರತದಲ್ಲಿ ೨೦ ಮಂದಿ ಮನೋ ರೋಗಿಗಳನ್ನು ಕಾಣುತ್ತೇವೆ. ಅಮೇರಿಕದಲ್ಲಿ ಈ ಸಂಖ್ಯೆಯು ಭಾರತದ ಇಮ್ಮಡಿಯಷ್ಟಾದರೂ ಇದೆಯೆಂದು ಹೇಳಲಾಗುತ್ತದೆ. ಪಾಶ್ಚಾತ್ಯ ದೇಶಗಳಲ್ಲಿ ಔದ್ಯೋಗಿಕ ವಿಪ್ಲವವು ಮಾಡಿದ ದುಷ್ಪರಿಣಾಮಗಳಲ್ಲಿ ಮನುಷ್ಯನ ಮನಶ್ಶಾಂತಿಯನ್ನು ಕೆಡಿಸಿ, ಮನೋವಿಕಾರಗಳ ಮೂರ್ತಿಯಾಗಿ ಅವನನ್ನು ಪರಿವರ್ತಿಸಿರುವುದೇ ಮುಖ್ಯವಾದುದೆಂದು ಎಲ್ಲ ವಿಜ್ಞಾನಿಗಳೂ ಒಪ್ಪುತ್ತಾರೆ. ಭಾರತದಲ್ಲಿ ಔದ್ಯೋಗೀಕರಣವು ಪಶ್ಚಿಮದಷ್ಟು ಭರದಿಂದ ನಡೆದಿಲ್ಲವಾಗಿ, ಮತ್ತು ಭಾರತದ ಪ್ರಾಚೀನ ಸಂಪ್ರದಾಯಗಳು ಇನ್ನೂ ಪೂರ್ಣ ಸಡಿಲಗೊಂಡಿಲ್ಲವಾಗಿ, ನಮ್ಮಲ್ಲಿ ಮನೋವಿಕಾರ ಹೊಂದಿದ ದುರ್ದೈವಿಗಳ ಪ್ರಮಾಣವು ಕಡಿಮೆ ಎಂದು ಹೇಳಲಾಗುತ್ತದೆ. ರಾಜಕುಮಾರಿ ಅಮೃತಕೌರರ ಮಾತಿನಲ್ಲಿ, "ಜೀವನವು ಸುಲಭ ರೀತಿಯದಿದ್ದ ಹಿಂದಿನ ಕಾಲಕ್ಕಿಂತ ಈಗಿನ ದಿನಗಳು ಜಟಿಲ

(೧೨ನೇ ಪುಟ ನೋಡಿರಿ)

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ: 1906.

* * * * *

(31-12-1953 ರಲ್ಲಿದ್ದಂತೆ ಸಾವಿರಗಳಿಗೆ ಸರಿಯಾದ ರೂಪಾಯಿಗಳು.)

ಚಂದಾ ಅರ್ಪಿಸಿ ತೆತ್ತು ಬಂದ ಪಾಲು ಭಂಡವಾಳ	ರೂ. 29,00,000/-
ಕ್ಷೇಮ ನಿಧಿ	ರೂ. 21,00,000/-
ಠೇವಣಾತಿಗಳು	ರೂ. 7,31,85,000/-
1953ನೆ ವರ್ಷದ ಲಾಭ	ರೂ. 8,67,000/-

ವಿದೇಶ ವಿನಿಮಯ ವ್ಯವಹಾರವನ್ನು ಮಾಡಲಾಗುತ್ತದೆ.

ಜಗತ್ತಿನ ಎಲ್ಲೆಡೆಗಳಲ್ಲೂ ಪ್ರತಿನಿಧಿಗಳಿದ್ದಾರೆ.

ಶಾಖೆಗಳು:

ಬೆಂಗಳೂರು ನಗರ (3 ಕಚೇರಿಗಳು), ಮುಂಬಯಿ ನಗರ (5 ಕಚೇರಿಗಳು), ಮದ್ರಾಸು (2 ಕಚೇರಿಗಳು), ಮೈಸೂರು, ಮಂಗಳೂರು, ಧಾರವಾಡ, ಹುಬ್ಬಳ್ಳಿ, ಹೈದರಾಬಾದ್ (ಡೆಕ್ಕನ್), ಸಿಕಂದರಾಬಾದ್ (ಡೆಕ್ಕನ್), ಇತ್ಯಾದಿ, ಇತ್ಯಾದಿ.

ಪೋರ್ಚುಗೀಜರ ವಶವಿರುವ ಪುಟುಕು ನೆಲ-ಗೋವೆ

ಭಾರತದ ಸಂಬಂಧ ಕಡಿದುಕೊಂಡು ಈ ವಸಾಹತು ದಿನಗಳೆಯಲಾರದು

ಪೋರ್ಚುಗೀಜ ಸಾಮ್ರಾಜ್ಯಶಾಹಿಗಳ ವಸಾಹತು ಆಳಿಕೆಗೆ ಗುರಿಯಾಗಿರುವ ಭಾರತದ ದೀವ್, ದಮನ ಹಾಗು ಗೋವೆಗಳು ಈಗ ವಿಮೋಚನಾ ಹೋರಾಟದ ರಂಗಭೂಮಿಯಾಗಿ ಪರಿಣಮಿಸುತ್ತಿವೆ. ವಮನದಲ್ಲಿ ಪ್ರಾರಂಭಿಸಲ್ಪಟ್ಟ ಸಾಮ್ರಾಜ್ಯಶಾಹಿಯ ಮರ್ದನ ಕಾರ್ಯವು ಇದೇ ಆಗೋಸ್ತು ೧೫ರಿಂದ ಗೋವೆಯನ್ನೊಳಗೊಂಡು ಮೂರೂ ವಸಾಹತುಗಳಲ್ಲಿ ಅತ್ಯುಗ್ರ ಸ್ವರೂಪವನ್ನು ಧರಿಸಿರುವುದು.

ಭಾರತದಲ್ಲಿರುವ ಪೋರ್ಚುಗೀಜ ವಸಾಹತುಗಳಲ್ಲಿ ಗೋವೆಯೇ ದೊಡ್ಡ ತುಣುಕು. ಕಾರವಾರದಿಂದ ಹತ್ತೇ ಮೈಲು ಗಳ ಅಂತರದಲ್ಲಿ ಗೋವೆಯ ದಕ್ಷಿಣ ಗಡಿ ಬರುತ್ತದೆ. ಪಶ್ಚಿಮದಲ್ಲಿ ಅರಬಿ ಸಮುದ್ರ ಮತ್ತು ಉತ್ತರ, ಪೂರ್ವ ಹಾಗು ದಕ್ಷಿಣಗಳಲ್ಲಿ ಮುಂಬಯಿ ರಾಜ್ಯದ ಸಾವಂತವಾಡಿ, ಬೆಳಗಾಂವಿ ಹಾಗು ಉತ್ತರ ಕನ್ನಡ ಜಿಲ್ಲೆಗಳಿಂದ ಆವೃತವಾದ ಗೋವೆಯು ಭಾರತದಲ್ಲಿಯೇ ಅತಿ ಚಿಕ್ಕ ರಾಜ್ಯವೆನಿಸಿದ ಕೊಡಗಿಗಿಂತಲೂ ಸಣ್ಣದು. ಮುಂಬಯಿಯಿಂದ ೨೦೦ ಮೈಲುಗಳ ದಕ್ಷಿಣದಲ್ಲಿರುವ ಈ ವಸಾಹತುಕರಾವಳಿಯ ಉದ್ದಕ್ಕೆ ೬೨ ಮೈಲುಗಳಷ್ಟು. ಹಾಗು ಪೂರ್ವದಿಂದ ಪಶ್ಚಿಮಕ್ಕೆ ಅತಿ ಹೆಚ್ಚೆಂದರೆ ೪೦ ಮೈಲುಗಳಷ್ಟು ಇದ್ದು ಒಂದು ತ್ರಿಕೋಣವನ್ನು ಹೋಲುತ್ತದೆ. ಒಟ್ಟು ವಿಸ್ತೀರ್ಣ ೧೩೦೦ ಚದರ ಮೈಲು; ಜನಸಂಖ್ಯೆ ಸುಮಾರು ಆರೂವರೆ ಲಕ್ಷ. ಇದರಲ್ಲಿ ನೂರಕ್ಕೆ ೫೧ ಹಿಂದುಗಳು; ೪೭ ಕ್ರೈಸ್ತರು; ಉಳಿದವರಲ್ಲಿ ಮುಸ್ಲಿಮರೇ ಅಧಿಕ. ೪೫೦ ವರ್ಷಗಳ ಪೋರ್ಚುಗೀಜ ಆಳಿಕೆ, ಬಲಾತ್ಕಾರದ ಮತಾಂತರ ಮತ್ತು ಸಂತ ಜೇವಿಯರನ ಮತಾಂಧ ತಂತ್ರಗಳ ಬಳಿಕವೂ ಹಿಂದುಗಳು ತಮ್ಮ ಬಾಹುಲ್ಯವನ್ನು ಉಳಿಸಿಕೊಂಡದ್ದು ಅವರ ಪ್ರತಿಭಟನಾ ಶಕ್ತಿಯನ್ನು ಸೂಚಿಸುತ್ತದೆ.

ಗೋವೆಯನ್ನು ಸಂದರ್ಶಕನೊಬ್ಬ ಪ್ರವೇಶಿಸಿದರೆ ಆತನಿಗೆ ಇದಿನ್ನೂ ಇಪ್ಪತ್ತನೆಯ ಶತಮಾನದಲ್ಲಿ ಕಾಲಿರಿಸಿಲ್ಲವೆಂದು ಭಾಸವಾಗುತ್ತದೆ. ಇಲ್ಲಿರುವ ನಾಲ್ಕು ದೊಡ್ಡ ನಗರಗಳು ಹಾಗು ಏಳು ಸಣ್ಣ ಪಟ್ಟಣಗಳು ಪೋರ್ಚುಗೀಜ ಆಳಿಕೆಗೆ ಸಾಕ್ಷಿಯನ್ನು ಹೇಳುತ್ತವೆ. ನಿಸರ್ಗ ಸುಂದರವಾದ ರಮ್ಯ ಪ್ರದೇಶ ಇದಾಗಿದ್ದರೂ ಈ ಶತಮಾನ ನೀಡಬಹುದಾದ ಸುಖ ಸೌಕರ್ಯಗಳಿಂದ ಈ ಸೌಂದರ್ಯವನ್ನು ವರ್ಧಿಸಿದಂತೆ ಕಾಣುವುದಿಲ್ಲ. ನೋವಾ ಗೋವಾ ಅಥವಾ ಪಣಜಿ* ಎಂಬುದು ಗೋವೆಯ ರಾಜಧಾನಿ. ಇದಕ್ಕೆ ಚಿಕ್ಕ ಆದ ನೈಸರ್ಗಿಕವೃಷ್ಟಿಯಲ್ಲಿ ಅತ್ಯುತ್ತಮವಾದ ಬಂದರವೂ ಇದೆ. ಬಿಜಾಪುರದಲ್ಲಿ ಆಳುತ್ತಿದ್ದ ಆದಿಲಶಾಹಿಗಳ ಕೈಯಿಂದ ಹದಿನಾರನೇ ಶತಮಾನದ ಪ್ರಾರಂಭದಲ್ಲಿಯೇ ಈ ನಗರವೂ ಪಣಜಿಯ ಪುರಾತನ ಕೋಟೆಯೂ ಅಲ್ಬುಕರ್ಕನ ವಶಕ್ಕೆ ಬಂತು. ಪಣಜಿಯ ಕೋಟೆಯಲ್ಲೀಗ ಹಿರಿಯ ಅಧಿಕಾರಿಗಳ ಕಾರ್ಯಾಲಯವಿದೆ. ಹಳೆಯ ಗೋವೆಯು ಬೇಂಕಲೂ ನಿಲಿಸಿತೆ. ಹಳೆಯ ಗೋವೆಯಲ್ಲಿ ಇಗರ್ಜಿಗಳೂ ಹಳೆಯ ಕೋರ್ಟು ಮುಂತಾದವು ನೆಲಸಿದ್ದ ಭವ್ಯ ಕಟ್ಟಡಗಳೂ ಇದ್ದು ಜವುನೇತ್ರಾನಂದವನ್ನುಂಟುಮಾಡುತ್ತವೆ. ಅಲ್ಬುಕರ್ಕನ ಮತ್ತು ಸಂತ ಜೇವಿಯರನ ಸಮಾಧಿಯೂ ಇಲ್ಲೇ ಇವೆ. ಆದರೆ ಈ ಸುಂದರ ಭವನಗಳನ್ನು ನೋಡಿಕೊಳ್ಳುವವರೇ ಇಲ್ಲದೆ ಅವು ದಿನದಿಂದ ದಿನಕ್ಕೆ ಹಾಳಾಗುತ್ತಿರುವುದು ಶೋಚನೀಯ.

ಪಣಜಿಯಿಂದ ಐದು ಮೈಲುಗಳ ದೂರದಲ್ಲಿ ನಿಸರ್ಗರಮ್ಯವಾದ ಶಿಖರವೊಂದರಲ್ಲಿ ಗವರ್ನರ ಜನರಲನ ನಿವಾಸಸ್ಥಾನವಿರುವುದು. ಇವನು ಮಾಡುವ ನೇಮಕಗಳಿಂದಲೇ ಗೋವೆಯಲ್ಲಿ ಸರಕಾರ ನಡೆಯುತ್ತದೆ. ಇಲ್ಲಿಯ ಜನರಿಗೆ ರಾಜಕೀಯದಲ್ಲಿ ಯಾವ ತರದ ವಿಶೇಷ ಅನುಭವವೂ ಇರುವುದಿಲ್ಲ. ಪೋರ್ಚುಗೀಜ ಅಧ್ಯಕ್ಷನ ಆಯ್ಕೆಯಲ್ಲಿ ಗೋವೆಯ ನಾಗರಿಕರಿಗೆ ಮತದಾನದ ಅಧಿಕಾರವಿದ್ದರೂ ಅದು ಪ್ರಜಾಪ್ರಭುತ್ವಕ್ಕೆ ವಿಶಿಷ್ಟವಾದ ಯಾವ ಲಕ್ಷಣವನ್ನೂ ಹೊಂದಿಲ್ಲ. ಪ್ರಜಾಭಿಪ್ರಾಯವನ್ನು ಹೊರಹೊಮ್ಮುವುದಕ್ಕೆ ಸರಕಾರದ ಸರ್ವಾಧಿಕಾರಿ ಮನೋಭಾವವು ತಡೆಯೊಡ್ಡುತ್ತದೆ. ಸಾರ್ವಜನಿಕ ಸಭೆಯೊಂದರಲ್ಲಿ ಯಾರೋ ಭಾಷಣಗಾರನು ಗೋವೆಯು ಪೋರ್ಚುಗಾಲದ ಭಾಗವೆಂದು ಹೇಳಿದಾಗ "ನಾನು ಈ ಹೇಳಿಕೆಯನ್ನು ಪ್ರತಿಭಟಿಸುತ್ತೇನೆ" ಎಂದು ಕೆಲವೇ ಶಬ್ದಗಳನ್ನು ಉಚ್ಚರಿಸಿದ್ದಕ್ಕೆ ಡಾ. ಗಾೈತೊಂಡೆಯವರಿಗೆ ಲಿಸ್ಬನಿನ ಕಾರಾಗೃಹದಲ್ಲಿ ಕೊಳೆಯುತ್ತಿರುವ, ರಾಜದ್ರೋಹದ ಅಪಾದನೆಯ ಮೇರೆಗೆ ವಿಚಾರಣೆಗೆ ಗುರಿಯಾಗುವ, ದುರ್ದೈವ ಪ್ರಾಪ್ತವಾಯಿತು.

ಇದರಿಂದಾಗಿ ಸಾಮಾನ್ಯ ವ್ಯಕ್ತಿ ಪ್ರೈವರನೂ ರಾಜಕೀಯದ ಕುರಿತು ಮಾತೆತ್ತುವುದಿಲ್ಲ—ಬಹಳವಾದರೆ ತನ್ನ ಆಚಾರ-ವಿಚಾರಗಳ ಮೇಲೆ ಹೇರಲಾದ ನಿಯಂತ್ರಣ ಮತ್ತು ಸಣ್ಣದೊಂದು ತಪ್ಪಿಗೂ ಹೊರಿಸಲಾಗುವ ದೊಡ್ಡ ದಂಡದ ಪ್ರಸ್ತಾಪವನ್ನಾತ ಮಾಡಬಹುದು. ವಿಮೋಚನಾ ಚಳವಳಿ ಅಥವಾ ಬೇರೇನಾದರೂ ಮಾತನ್ನೆತ್ತಿದರೆ ಆತನ ಕೈ ನಡುಗುತ್ತದೆ—ಪರಿಣಾಮದಲ್ಲಿ ಮೋಟಾರು ಗಾಡಿ ಚರಂಡಿಗೆ ಬಿದ್ದರೂ ಬಿದ್ದೀತು. ಇಂತಹ ಜನಸಾಮಾನ್ಯರ ನಡುವೆ ರಾಷ್ಟ್ರೀಯ ಮನೋವೃತ್ತಿಯ ತರುಣರು ಕೆಲಸಮಾಡುತ್ತಿರುವುದೇ ಆಶ್ಚರ್ಯ. ಅವರು ರಹಸ್ಯವಾಗಿ ತಮ್ಮ ಚಟುವಟಿಕೆಗಳನ್ನು ಕೈಗೊಂಡು, ಬಿಡುಗಡೆಯ ಅಪೇಕ್ಷೆಯನ್ನು ಜನರಲ್ಲಿ ಮೂಡಿಸಲು ನೋಡುತ್ತಿರುವರು. ಆದರೆ ಇದು ಬಹಳ ಪ್ರಮಾದದ ಕೆಲಸ. ಗೋವೆಯ ಒಳಗೆ ರಾಜಕೀಯ ಆಂದೋಲನಕ್ಕೆ ಸಿದ್ಧತೆ ಮಾಡಿಕೊಳ್ಳುವುದು ಎಷ್ಟಕ್ಕೂ ಸುಲಭವಲ್ಲ.

ಉದ್ಯೋಗಕ್ಕಾಗಿ ಭಾರತದಲ್ಲಿ ಬಂದು ನೆಲಸಿದ ಗೋಮಾಂತಕರೇ ಈ ವಿಷಯದ ಕುರಿತು ಅಧಿಕ ಆಸ್ಥೆಯನ್ನು ತೋರಿಸುವರೆಂದರೆ ತಪ್ಪುತ್ತದೆ. ಸಾಮಾನ್ಯವಾಗಿ ಆರರಲ್ಲಿ ಒಬ್ಬ ಗೋಮಾಂತಕನು ಭಾರತದಲ್ಲಿ ಏನಾದರೊಂದು ವೃತ್ತಿಯನ್ನು ಕೈಗೊಂಡು, ಗೋವೆಯಲ್ಲಿರುವ ತನ್ನವರ ಹೊಟ್ಟೆಬಟ್ಟೆಗಾಗಿ ನಾಲ್ಕು ಕಾಸು ಸಂಪಾದಿಸುವನು. ಮುಂಬಯಿಯೊಂದರಲ್ಲೇ ೮೦೦೦೦ ಗೋಮಾಂತಕರಿದ್ದು ಇವರನ್ನು ದೇಶಪ್ರೇಮಿಗಳೆಂದು ಕರೆದರೆ ತಪ್ಪಾಗದು. ಸ್ವಾತಂತ್ರ್ಯವನ್ನು ಅಪೇಕ್ಷಿಸಿ, ವಿಮೋಚನಾ ಚಳವಳಿಯನ್ನು ಅಹಿಂಸಾತ್ಮಕ ರೀತಿಯಲ್ಲಿ ಸಂಘಟಿಸಲು ಇವರೇ ಪ್ರಯತ್ನ ಕೈಗೊಂಡರು. ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಕಚೇರಿ ಮುಂಬಯಿಯಿಂದಲೇ ತನ್ನ ಕೆಲಸವನ್ನು ಮಾಡುತ್ತದೆ.

ಸ್ವಾತಂತ್ರ್ಯ ಪ್ರಿಯರು ಗೋವೆಯು ಆರ್ಥಿಕ, ರಾಜಕೀಯ, ಶೈಕ್ಷಣಿಕ, ವೈಜ್ಞಾನಿಕ ಮುಂತಾದ ಪ್ರತಿಯೊಂದು ಕ್ಷೇತ್ರದಲ್ಲಿ ಹಿಂದುಳಿದಿದೆಯೆಂದು ದೂರುವರು. ಮುಂಬಯಿ, ದಿಲ್ಲಿ, ಕಲ್ಕತ್ತಾ, ಮದ್ರಾಸುಗಳನ್ನು ಕಂಡು ಬಂದವರಿಗೆ ಗೋವೆಯ ನಗರಗಳ ಪರಿಸ್ಥಿತಿ ಏನೇನೂ ಸಂತೋಷವನ್ನುಂಟುಮಾಡುವುದಿಲ್ಲ. ಆಸ್ಪತ್ರೆಯೊಂದಕ್ಕೆ ವಿದ್ಯುತ್ತಿನ ಹೃದಯ ಪರೀಕ್ಷಕ ಯಂತ್ರವೊಂದು ತರಲ್ಪಟ್ಟಾಗ, ಅದನ್ನು ನಡೆಸಬಲ್ಲವರು ದೊರೆಯದೆ, ಅದನ್ನು ಕೈಗೆ ಬಂದ ಬೆಲೆಗೆ ಮಾರುವ ಪ್ರಸಂಗ ಬಂದೊದಗಿತ್ತೆಂಬ ಉದಾಹರಣೆಯೊಂದೇ ಇಲ್ಲಿಯ "ಪ್ರಗತಿಯ" ಕುರಿತಾದ ಅಭಿಪ್ರಾಯವನ್ನು ಮೂಡಿಸಬಲ್ಲುದು. ಪಣಜಿಯಲ್ಲಿ ಮಾತ್ರ ಮೂರು ಹೈಸ್ಕೂಲುಗಳು ಇವೆ— ಇವು ಮುಂಬಯಿ ವಿಶ್ವವಿದ್ಯಾಲಯದೊಡನೆ ಸೇರ್ಪಡೆ ಹೊಂದಿವೆ. ಗೋವೆಯ ಜನರಲ್ಲಿ ಬಹುಶ್ಯಾಗಿ ಎಲ್ಲರೂ ಕೊಂಕಣಿ ಮಾತಾಡುತ್ತಾರೆ ಆದರೆ ಪೋರ್ತುಗೀಜ ಭಾಷೆ ಅಲ್ಲಿ ಕಡ್ಡಾಯದ್ದು—ಭಾರತದಲ್ಲಿ ನೌಕರಿ ಪಡೆಯುವ ಅಭಿಲಾಷೆಯಿಂದ ಹಿಂದಿ ಮತ್ತು ಇಂಗ್ಲೀಷು ಭಾಷೆಗಳ ಅಭ್ಯಾಸವೂ ನಾಕಷ್ಟು ನಡೆಯುತ್ತದೆ.

ಒಟ್ಟು ೫೯೦ ಹಳ್ಳಿಗಳಿರುವ ಗೋವೆಯಲ್ಲಿ ಹೆಚ್ಚಿನ ಪ್ರದೇಶವೆಲ್ಲ ಪರ್ವತದಿಂದ ತುಂಬಿದ್ದರೂ ರಾಜ್ಯದ ನೆಲದಲ್ಲಿ ಶೇಕಡ ೪೦ರಷ್ಟು ಭಾಗದಲ್ಲಿ ಕೃಷಿಯಾಗುತ್ತಿದೆ ವರ್ಷಕ್ಕೆ ಎರಡು ಸಲ ಭತ್ತದ ಬೆಳೆಯಾಗುತ್ತದೆ. ಮಾವು ಮುಂತಾದ ಹಣ್ಣು ಹಂಪಲು, ಗೇರುಬೀಜ, ತೆಂಗಿನ ಕಾಯಿ, ಕಾಯಿಪಲ್ಲೆಗಳು ಚೆನ್ನಾಗಿ ಬೆಳೆಯುತ್ತವೆ ಆದರೆ ಅಲ್ಲಿಯ ಕೃಷಿಯು ಜನರ

(೧೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಕೊಟ್ಟ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುದ್ಧಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—೦
ಸಣ್ಣ ಬಾಟ್ಲಿಗೆ ರೂ. 2—0 - 0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಸಮೃದ್ಧ ಭಾರತವನ್ನು ಕಟ್ಟುವ ದೃಢ ಸಂಕಲ್ಪ

ಭಾರತದಲ್ಲೆಲ್ಲ ಸ್ವಾತಂತ್ರ್ಯ ದಿನೋತ್ಸವದ ಸಂಭ್ರಮ

ನಮ್ಮ ಸ್ವಾತಂತ್ರ್ಯವರ್ಧಂತಿಯು ಆಗೋಸ್ತು ಹದಿನೈದರಂದು ದೇಶದ ಮೂಲೆ ಮೂಲೆಯಲ್ಲೂ ಅನೇಕ ಬಗೆಯ ವಿಶೇಷ ಕಾರ್ಯಕ್ರಮಗಳಿಂದ ಅತ್ಯುತ್ಸಾಹದಿಂದ ಆಚರಿಸಲ್ಪಟ್ಟಿತು. ಏಳು ವರ್ಷಗಳ ಸ್ವಾತಂತ್ರ್ಯ ನಮಗೆ ತಂದು ಕೊಟ್ಟ ಸುಖ, ನಮ್ಮ ಮುಂದಿರುವ ಕರ್ತವ್ಯಪಥದ ಪರಿಜ್ಞಾನವನ್ನು ಅನೇಕ ಮಂದಿ ಕಾರ್ಯಕರ್ತರು ಜನಸಾಧಾರಣಕ್ಕೆ ಭಾಷಣಾದಿಗಳ ಮೂಲಕ ಮಾಡಿಸಿ ಕೊಟ್ಟರು. ಎಲ್ಲೆಡೆಯೂ ತ್ರಿವರ್ಣ ರಾಷ್ಟ್ರ ಧ್ವಜವು ಹಾರಿಸಲ್ಪಟ್ಟಿತು; ಮತ್ತು ಆ ಧ್ವಜಕ್ಕೆ ನಿಷ್ಠೆ ಪ್ರಕಟಿಸಲ್ಪಟ್ಟಿತು. ರಾಜ್ಯಗಳ ವರಿಷ್ಠರ ಸಂದೇಶಗಳನ್ನು ಆಕಾಶವಾಣಿ ಕೇಂದ್ರಗಳು ಬಿತ್ತರಿಸಿದ್ದಲ್ಲದೆ, ಸ್ವಾತಂತ್ರ್ಯ ಹೋರಾಟದ ಕಲ್ಪನೆಯನ್ನು ಮಾಡಿಕೊಡುವ ಅನೇಕ ಕಾರ್ಯಕ್ರಮಗಳಿಂದ ಅವು ಜನರಲ್ಲಿ ರಾಷ್ಟ್ರಾಭಿಮಾನವನ್ನು ಉಕ್ಕೇರಿಸಿದುವು.

ಜನತೆಗೆ ಸಂದೇಶ

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಈ ವರ್ಧಂತಿಯ ಸಂದರ್ಭದಲ್ಲಿ ಮೈಸೂರಿನಲ್ಲಿದ್ದರು. ಅವರು ಜನತೆಗೊಂದು ಸಂದೇಶವನ್ನು ನೀಡುತ್ತಾ ಸ್ವಾತಂತ್ರ್ಯ ದಿನವನ್ನು ನಾವು ಕೃತಜ್ಞತಾ ಸಮರ್ಪಣೆಯ ದಿನವೆಂದೂ ದೇಶ ಸೇವೆಯ ಪ್ರತಿಜ್ಞೆಯನ್ನು ಪುನರುಚ್ಚರಿಸಬೇಕಾದ ಸಂದರ್ಭವೆಂದೂ ತಿಳಿದುಕೊಳ್ಳಬೇಕಾಗಿ ಸೂಚಿಸಿದರು. ಸುದೈವದ ಚಕ್ರವು ಅನುಕೂಲವಾದಂತೆಲ್ಲ ದೇಶದ ದಾರಿದ್ರ್ಯ, ಅಜ್ಞಾನ ಮುಂತಾದವುಗಳನ್ನು ನಿವಾರಿಸುವ ಮತ್ತು ದೀನದಲಿತರ ಉದ್ಧಾರ ಮಾಡುವ ಹೊಣೆಗಾರಿಕೆ ಹೆಚ್ಚುತ್ತದೆ. ಅನರತ್ತ ಲಕ್ಷ್ಯ ಪೂರೈಸಿ, ದೇಶದಲ್ಲಿ ಸುಖ ಸಮೃದ್ಧಿಗಳು ನೆಲೆಸುವಂತೆ ನಾವು ಪ್ರಯತ್ನಿಸುವುದಲ್ಲದೆ ರಾಷ್ಟ್ರ ರಾಷ್ಟ್ರಗಳಲ್ಲಿ ಪರಸ್ಪರ ತಿಳಿವಳಿಕೆ ಹೆಚ್ಚಿಸಿ ಮಾನವ ಜನಾಂಗದ ಶಾಂತಿ ನೆಮ್ಮದಿಗಳಿಗೆ ನೆರವಾಗುವ ಪ್ರತಿಜ್ಞೆಯನ್ನೂ ನಾವು ಕೈಗೊಳ್ಳಬೇಕು ಎಂದು ರಾಷ್ಟ್ರಪತಿಗಳು ಹೇಳಿದರು. ಅವರು ರಾಷ್ಟ್ರದ ಪ್ರಗತಿಯ ವೇಗವನ್ನು ಕುರಿತು ತೃಪ್ತಿಯನ್ನು ವ್ಯಕ್ತ ಪಡಿಸಿದರು. ಆದರೆ ಇಷ್ಟರಿಂದಲೇ ಸಮಾಧಾನ ಹೊಂದಲಾಗದೆಂದು ಹೇಳುತ್ತಾ ಈಶಾನ್ಯ ಹಾಗು ಉತ್ತರ ಭಾರತದಲ್ಲಿ ನೆರೆ ಹಾವಳಿಯು ನಡೆದುದಕ್ಕೆ ವಿಷಾದಿಸಿದರು. ಮಹಾಪೂರದ ಭೀಕರ ಅನಾಹುತಗಳನ್ನು ಯೋಗ್ಯ ಅಣೆಕಟ್ಟುಗಳ ಮೂಲಕ ಶಾಶ್ವತವಾಗಿ ತಪ್ಪಿಸಬೇಕೆಂಬ ಇಚ್ಛೆಯನ್ನು ಅವರು ಪ್ರಕಟಿಸಿದರು.

ನೆಹರೂರ ಕರೆ

ಬೆಂಗಳೂರಿನ ರೇಸ್ ಕೋರ್ಸ್ ಮೈದಾನದಲ್ಲಿ ರಾಷ್ಟ್ರಪತಿಗಳು ಎರಡು ಲಕ್ಷಕ್ಕೂ ಹೆಚ್ಚು ನೆರೆದಿದ್ದ ಜನರ ನಡುವೆ ಸಶಸ್ತ್ರ ಬಲಗಳ ವಂದನೆಯನ್ನು ಸ್ವೀಕರಿಸಿದರು. ಇತ್ತ ದೆಹಲಿಯಲ್ಲಿ ಇತಿಹಾಸ ಪ್ರಸಿದ್ಧ ಕೆಂಪು ಕೋಟೆಯ ಮೇಲೆ ಪ್ರಧಾನ ಮಂತ್ರಿ ನೆಹರೂರವರು ಧ್ವಜ ಸೂತ್ರವನ್ನೆಳೆದು ರಾಷ್ಟ್ರ ಧ್ವಜವನ್ನು ಅರಳಿಸಿದಾಗ, ನೆರೆದಿದ್ದ ಒಂದು ಲಕ್ಷ ಜನಸ್ತೋಮವು ಹರ್ಷೋದ್ಗಾರ ಮಾಡಿತು. ಈ ಸಂದರ್ಭದಲ್ಲಿ ನೆಹರೂರವರು ಅರ್ಧ ತಾಸಿನ ವರೆಗೆ ಭಾಷಣ ಮಾಡುತ್ತಾ ಭಾರತೀಯರು ಜಾತಿಭೇದ, ಪ್ರಾಂತೀಯತೆ ಮುಂತಾದ ಸಂಕುಚಿತ ಭಾವನೆಗಳಿಗೆ ಬಲಿಯಾಗದೆ ಒಗ್ಗಟ್ಟಿನಿಂದ ಸಮೃದ್ಧ ಭಾರತವನು ಕಟ್ಟುವ ದೃಢ ಸಂಕಲ್ಪ ಕೈಗೊಂಡು ಪ್ರಗತಿ ಹೊಂದ ಬೇಕೆಂದು ವಿನಂತಿಸಿದರು. ಗೋವೆ ಮತ್ತಿತರ ವಸಾಹತುಗಳ ವಿಷಯದಲ್ಲಿ ಭಾರತದ ಅಭಿಪ್ರಾಯವನ್ನು ಪುನಃ ಸ್ಪಷ್ಟ ಪಡಿಸಿದ್ದಲ್ಲದೆ, ಪಾಕಿಸ್ಥಾನದೊಡನೆ ಸ್ನೇಹದಿಂದಿರುವ ಆಕಾಂಕ್ಷೆಯನ್ನೂ ಮರಳಿ ವ್ಯಕ್ತಗೊಳಿಸಿದರು

ರಾಷ್ಟ್ರಪತಿಗಳ ಪ್ರಶಸ್ತಿ

ರಾಷ್ಟ್ರೀಯ ಸ್ವಾತಂತ್ರ್ಯ ದಿನದ ಶುಭ ಸಂದರ್ಭದಲ್ಲಿ ರಾಷ್ಟ್ರಪತಿಗಳು ಕಲೆ, ಸಾಹಿತ್ಯ ಹಾಗು ವಿಜ್ಞಾನಗಳ ಪ್ರಗತಿಗಾಗಿಯೂ ಉಚ್ಚ ಮಟ್ಟದ ಸಾರ್ವಜನಿಕ ಸೇವೆ ಸಲ್ಲಿಸಿದುದಕ್ಕಾಗಿಯೂ ದಯಪಾಲಿಸಲಾಗುವ "ಭಾರತ ರತ್ನ" ಎಂಬ ಪ್ರಶಸ್ತಿಯನ್ನು ಮದ್ರಾಸಿನ ಹಿಂದಿನ ಮುಖ್ಯ ಮಂತ್ರಿ ಶ್ರೀ ಚಕ್ರವರ್ತಿ ರಾಜಗೋಪಾಲಾಚಾರಿ, ಭಾರತದ ಉಪರಾಷ್ಟ್ರಪತಿ ಡಾ. ರಾಧಾಕೃಷ್ಣನ್ ಹಾಗು ವಿಶ್ವವಂದ್ಯ ವಿಜ್ಞಾನಿ ಡಾ. ಸಿ. ವಿ. ರಾಮನ್ ಈ ಮೂವರಿಗೆ ಕೊಡ ಮಾಡಿರುವರು. ಇದಲ್ಲದೆ ಯಾವುದೇ ವಿಶಿಷ್ಟ ಕ್ಷೇತ್ರದಲ್ಲಿ ವಿಶೇಷ ಸೇವೆ ಸಲ್ಲಿಸಿದವರಿಗೆ ಕೊಡಲಾಗುವ "ಪದ್ಮ ವಿಭೂಷಣ" ಎಂಬ ಪ್ರಶಸ್ತಿಯು ಅನೇಕ ಮಹನೀಯರಿಗೆ ದಯಪಾಲಿಸಲ್ಪಟ್ಟಿರುವುದು. ಪ್ರಥಮ ವರ್ಗದ ಪದ್ಮ ವಿಭೂಷಣ ಪ್ರಶಸ್ತಿಯನ್ನು ಶ್ರೀ ಬಿ. ಜಿ. ಖೇರ, ಶ್ರೀ ವಿ. ಕೆ ಕೃಷ್ಣ ಮೇನನ್, ಕಲಾವಿದ ನಂದಲಾಲ ಬಸು, ವಿಜ್ಞಾನಿ ಸತ್ಯೇಂದ್ರನಾಥ ಬಸು, ಶಿಕ್ಷಣ ತಜ್ಞ ಡಾ. ಝಾಕಿರ್ ಹುಸೇನರಿಗೆ ದಯಪಾಲಿಸಲಾಗಿರುವುದು. ಎರಡನೆ ವರ್ಗದ ಪ್ರಶಸ್ತಿ ಪಡೆದವರಲ್ಲಿ ಅಣುಶಕ್ತಿ ಆಯೋಗದ ಅಧ್ಯಕ್ಷ ಡಾ. ಎಚ್. ಜೆ. ಭಾಭಾ, ನೈಸರ್ಗಿಕ ಸಂಪತ್ತು ಮತ್ತು ಸಂಶೋಧನಾ ಖಾತೆಯ ಕಾರ್ಯದರ್ಶಿ ಡಾ. ಎಸ್. ಎಸ್. ಭಟನಾಗರ್, ಹಿಂದೀ ಕವಿ ಮೈಥಿಲಿ ಶರಣ ಗುಪ್ತ, ಮಲೆಯಾಳಿ ಕವಿ ವಲ್ಲಥೋಲ್ ನಾರಾಯಣ ಮೇನನ್, ಮದ್ರಾಸು ವಿಶ್ವ ವಿದ್ಯಾಲಯದ ಉಪ ಕುಲಪತಿ ಡಾ. ಎ. ಲಕ್ಷ್ಮಣ ಸ್ವಾಮಿ ಮುದಲಿಯಾರ್, ಸುಪ್ರಸಿದ್ಧ ಗಾಯಕಿ ಶ್ರೀಮತಿ ಎಂ. ಎಸ್. ಸುಬ್ಬಲಕ್ಷ್ಮಿ ಮುಂತಾದ ೧೯ ಮಂದಿ ಇರುವರು. ತೃತೀಯ ವರ್ಗದ ಪ್ರಶಸ್ತಿ ಪಡೆದ ೧೮ ಮಂದಿಯಲ್ಲಿ ಸಮಾಜ ವಿಕಾಸ ಯೋಜನೆಗಳ ಆಡಳಿತದಾರರಾದ ಶ್ರೀ ಎಸ್. ಕೆ. ಡೇ, ವ್ಯಂಗ್ಯ ಚಿತ್ರಕಾರ ಶ್ರೀ ಶಂಕರ ಪಿಳ್ಳೆ ಮತ್ತಿತರ ಪ್ರಸಿದ್ಧ ಸಾಮಾಜಿಕ ಕಾರ್ಯಕರ್ತರು ಇರುವರು.

ಪತ್ರಿಕೆಗಳ ಪಾತ್ರ

ಹೊಸ ದೆಹಲಿಯಲ್ಲಿ ನಡೆಯುವ ಸ್ವಾತಂತ್ರ್ಯ ದಿನೋತ್ಸವದಲ್ಲಿ ಭಾಗವಹಿಸಲು ಅನುಕೂಲವಾಗಬೇಕೆಂದು ಈ ಬಾರಿಯ ಅಖಿಲ ಭಾರತ ವೃತ್ತ ಪತ್ರಿಕಾ ಸಂಪಾದಕರ ಪರಿಷತ್ತನ್ನು ದಿನಾಂಕ ೧೩—೧೪ ರಂದು ಅಲ್ಲಿಯ ಕಾನ್‌ಸ್ಟಿಟ್ಯೂಶನ್ ಭವನದಲ್ಲಿ ಜರಗಿಸಿದ್ದರು ಇದನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿ ನೆಹರೂರವರು ಪತ್ರಿಕಾ ಸ್ವಾತಂತ್ರ್ಯವನ್ನು ಕುರಿತು ಪ್ರಸ್ತಾಪಿಸುತ್ತಾ ಯಾವುದೇ ಸ್ವಾತಂತ್ರ್ಯದೊಂದಿಗೆ ನಾವು ಹೊರಬೇಕಾದ ಹೊಣೆಗಾರಿಕೆಯ ಕಲ್ಪನೆಯೂ ಇರಬೇಕಾಗುತ್ತದೆ ಎಂದರು. ಪತ್ರಿಕೆಗಳು ಭಾರತದಲ್ಲಿ ನಡೆಯುತ್ತಿರುವ ಅದ್ಭುತ ಕಾರ್ಯದಲ್ಲಿ ಪಾಲುಗಾರರಾಗಬೇಕೆಂದು ಅವರು ಆಶಿಸಿದರು. ಜನತೆಯಲ್ಲಿ ಹಾರ್ದಿಕ ಐಕ್ಯವನ್ನು ಸಾಧಿಸಿ, ಪ್ರಗತಿಗೆ ಪೋಷಕವಾದ ಭಾವನೆಯನ್ನು ಹುಟ್ಟಿಸುವಲ್ಲಿ ಪತ್ರಿಕೆಗಳು ನಿರ್ವಹಿಸುವ ಪಾತ್ರದ ಮಹತ್ವವನ್ನು ಅವರು ಮೆಚ್ಚಿದರು. ಸರಕಾರದ ಟೀಕೆಯು ಯಥಾರ್ಥದ್ದಿರಬೇಕೆಂದೂ ಅದು ಭಾವೋದ್ರಿಕ್ತ ಹಾಗು ಭೀಭತ್ಸವಾಗಿರಕೂಡದೆಂದೂ ನೆಹರೂ ಅಭಿಪ್ರಾಯ ಪಟ್ಟರು. ಲೋಪದೋಷಗಳನ್ನು ಟೀಕಿಸುವ ಬಾಯಿಂದಲೇ ಸಾಧಿಸಿದ ಪ್ರಗತಿಯನ್ನು ಕುರಿತು ಪ್ರಶಂಸಿಸುವ ಅಭ್ಯಾಸವನ್ನೂ ಮಾಡಿಕೊಳ್ಳಿರೆಂದು ಅವರು ಹೇಳಿದರು.

ದೇಶ ಭಾಷೆಯ ಅಂಗ

ಅಧ್ಯಕ್ಷ ಸ್ಥಾನದಲ್ಲಿದ್ದ ಶ್ರೀ ಎ. ಡಿ. ಮಣಿಯವರು ತಮ್ಮ ಮುದ್ರಿತ ಭಾಷಣವನ್ನು ಓದಿ ಹೇಳದೆ "ನನ್ನ ಮುದ್ರಿತ ಭಾಷಣವನ್ನು ಓದಿದಂತಾಯಿತೆಂದೇ ತಿಳಿದುಕೊಳ್ಳಿ" ಎನ್ನುತ್ತ ನಾಲ್ಕಾರು ಮಾತುಗಳಲ್ಲಿ ತಮ್ಮ ಸ್ಥಾನವನ್ನು ಅಲಂಕರಿಸಿದರು. ಈ ಹೊಸ ಪದ್ಧತಿಯನ್ನು ಮೆಚ್ಚಿಕೊಂಡೇ ಇರಬೇಕು, ಪ್ರಧಾನ ಮಂತ್ರಿಗಳೂ ಕೈತಟ್ಟಿದರು. ಒಟ್ಟು ೧೭೦ ಪ್ರತಿನಿಧಿಗಳು ಬಂದಿದ್ದ ಈ ಪರಿಷತ್ತು ಪತ್ರಿಕಾ ಕಾಯಿದೆಯಂತಹ ಕ್ರಮವು ಅನಾವಶ್ಯಕವೆಂದು ಗೊತ್ತುವಳಿ ಸ್ವೀಕರಿಸಿತು. ದುಡ್ಡಿನ ಬಲದಿಂದ ಪತ್ರಿಕೆಗಳ ಅಂತಸನ್ನು ಕೆಡಿಸುವ ಮತ್ತು ಸಂಪಾದಕ ಮಂಡಳಿ ಮೇಲೆ ಒತ್ತಾಯ ಹೇರುವ ಪ್ರವೃತ್ತಿಯನ್ನು ಖಂಡಿಸಲಾಯಿತು. ಸ್ವಾಗತಾಧ್ಯಕ್ಷರಾದ ರಣಬೀರ ಸಿಂಗರು ಸಾಮಾನ್ಯ ಜನತೆಯ ಮೇಲೆ ಇಂಗ್ಲೀಷು ಪತ್ರಿಕೆಗಳಿಗಿಂತಲೂ ದೇಶ ಭಾಷಾ ಪತ್ರಿಕೆಗಳು ಹೆಚ್ಚು ಪರಿಣಾಮ ಬೀರುತ್ತವೆಂದು ಹೇಳಿ, ಅವುಗಳು ಇದಿರಿಸುತ್ತಿರುವ ಸಂಕಟಮಯ ಪರಿಸ್ಥಿತಿಯನ್ನು ವಿವರಿಸಿದರು. ಸರಕಾರವೂ ಜಾಹೀರಾತುದಾರರೂ ದೇಶ ಭಾಷಾ ಪತ್ರಿಕೆಗಳು ಸ್ಥಳೀಯ ವ್ಯಾಪ್ತಿಯನ್ನಷ್ಟೇ ಪಡೆದಿವೆಯೆಂದು ಉಪೇಕ್ಷಿಸಬಾರದೆಂದೂ ಯೋಗ್ಯ ಪ್ರೋತ್ಸಾಹ ಕೊಡುತ್ತಿರಬೇಕೆಂದೂ ಅವರು ವಿನಂತಿಸಿದರು.

ಮಹಾಪೂರದ ದುರಂತ

ಕೇಂದ್ರ ಸಂಪರ್ಕ ಖಾತೆಯ ಮಂತ್ರಿ ಜಗಜೀವನ ರಾಮರ ಅಭಿಪ್ರಾಯದಂತೆ ೧೯೩೪ರಲ್ಲಿ ಬಿಹಾರದಲ್ಲಿ ಜರಗಿದ ಭೂಕಂಪಕ್ಕಿಂತಲೂ ಹೆಚ್ಚು ಹಾನಿಯನ್ನು ಈ ವರ್ಷದ ನೆರೆ ಹಾವಳಿಯು ಮಾಡಿರುತ್ತದೆ. ರೈಲು ಮಾರ್ಗಗಳೂ ಸೇತುವೆಗಳೂ ಕೊಚ್ಚಿಹೋಗಿವೆ; ಮನೆಗಳು ಉರುಳಿ ಬೀಳುತ್ತಿವೆ; ದನಕರುಗಳು ನೀರಿನ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ದಿ ಕೆನರಾ ಬ್ಯಾಂಕಿಂಗ್ ಕೊಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	... ರೂ.	25,00,000
ಚಂದಾ ಆಹಿಸಿ, ತೆತ್ತು ಬಂದ ಭಂಡವಾಳ	... ರೂ.	20,00,000
ಕ್ಷೇಮ ನಿಧಿ ...	... ರೂ.	10,50,000
ಠೇವಣಾತಿಗಳು ...	... ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

ನೆಳೆತಕ್ಕೆ ಸಿಕ್ಕಿ ಹೋಗುತ್ತಿವೆ; ಬೆಳೆಯೆಲ್ಲ ನಾಶವಾಗಿದೆ. ಸಂಪರ್ಕದ ಯಾವ ಸಾಧನವೂ ಉಳಿದಿರದೆ, ಜನರು ಸಂಕಟಗ್ರಸ್ತರಾಗಿದ್ದಾರೆ. ಕೊಳೆತ ಹೆಣಗಳಿಂದ ದುರ್ವಾಸನೆ ಹುಟ್ಟುತಿದ್ದು, ಸಾಂಕ್ರಾಮಿಕ ಜಾಡ್ಯಗಳು ಪಸರಿಸುತ್ತಿರುವ ವರದಿಯು ಬರುತ್ತಿದೆ. ನೆರೆ ಇಳಿಮುಖವಾಗುತಿದ್ದರೂ ಆಹಾರ, ಬಟ್ಟೆ ಮತ್ತು ಔಷಧದ ಅಗತ್ಯ ಹೇಳಿ ತೀರದಷ್ಟಿದೆ. ಇಂಥ ಹೃದಯ ವಿದ್ರಾವಕ ಪರಿಸ್ಥಿತಿ ಇದ್ದರೂ ನಮ್ಮ ಆಹಾರ ಧಾನ್ಯಗಳ ಸಮೃದ್ಧಿ ಸ್ಥಿತಿಯ ಮೇಲೆ ಇದರಿಂದ ವಿಪರೀತ ಪರಿಣಾಮವೇನೂ ಆಗದೆಂದು ಕಿಡ್ವಾಯಿಯವರು ಅಭಿಪ್ರಾಯ ಪಡುತ್ತಾರೆ ಪ್ರತಿವರ್ಷ ಇಂತಹ ನೆರೆ ಹಾವಳಿ ದೇಶದ ಒಂದಲ್ಲ ಒಂದು ಪ್ರದೇಶದಲ್ಲಿ ಇದ್ದೇ ಇರುತ್ತದೆ ನಮ್ಮ ಆಹಾರ ಸಮಸ್ಯೆಯು ಅದಕ್ಕೆ ತಕ್ಕ ಇಂಬುಕೊಟ್ಟೇ ಸುಧಾರಿಸಿರುವುದು ಎಂದವರು ಹೇಳಿದ್ದಾರೆ.

ಅತಿರೇಕ ವರ್ತನೆ

ಕಳೆದವಾರ ತಿರುವಾಂಕೂರು—ಕೊಚ್ಚಿ ರಾಜ್ಯದ ತಮಿಳು ಪ್ರದೇಶಗಳನ್ನು ತಮಿಳು ನಾಡಿನಲ್ಲಿ ಸೇರಿಸಬೇಕೆಂದು ಪ್ರತಿಪಾದಿಸುತಿದ್ದ ತಿರು–ತಮಿಳು ಕಾಂಗ್ರೆಸು ವರ್ಗವು ವಿಮೋಚನಾ ಚಳವಳವನ್ನು ಹೂಡಿ ಅಕ್ರಮಸಭೆ ನಡೆಸಿದಾಗ ಪೋಲೀಸರು ಗುಂಡು ಹಾರಿಸಿದರು. ಇದರಿಂದ ನಾಲ್ವರು ಮಂದಿ ಮರಣಗೊಂಡರೆಂದು ತಿಳಿಯುತ್ತದೆ. ಚಳವಳಗಾರರ ಮುಂದಾಳಾದ ಶ್ರೀ. ಎ. ಕೆ. ನಾಡರರು ಪರಿಸ್ಥಿತಿಯ ವಿಮರ್ಶೆಗೋಸ್ಕರ ಹೋರಾಟವನ್ನು ತಾತ್ಕಾಲಿಕವಾಗಿ ತಡೆಹಿಡಿದರು. ಆದರೆ ಹಿಂದಿನಿಂದ ಅವರನ್ನು ಹಿಂಸೆ ಮತ್ತು ಗಲಭೆಗೆ ಪ್ರಚೋದನೆ ಕೊಟ್ಟರೆಂದೂ ಕಾಯಿದೆ ಭಂಗಿಸಿದರೆಂದೂ ಆಪಾದನೆ ಹೊರಿಸಿ ಬಂಧಿಸಲಾಯಿತು. ಭಾಷಾಪ್ರೇಮದ ಈ ಅತಿರೇಕ ವರ್ತನೆಯು ಎಷ್ಟು ಮಾತ್ರಕ್ಕೂ ಸರಿಯಲ್ಲವೆಂದೂ ಚಳವಳ ನಡೆಸುವುದು ತೀರಾ ಪ್ರಜಾರ್ಜಿತನವೆಂದೂ ನೆಹರೂರವರು ಪತ್ರಮುಖೇನ ಎಚ್ಚರಿಸಿದ ಬಳಿಕವೂ ಚಳವಳಗಾರರಿಗೆ ಸಮಾಧಾನವಾಗಲಿಲ್ಲ. ಫಜಲ ಅಲಿ ಆಯೋಗದ ನೇಮಕವಾಗಿರುವುದನ್ನೂ ಅವರು ಗಮನಕ್ಕೆ ತಂದುಕೊಳ್ಳಲಿಲ್ಲ.

ತೋಟಗಳ ಮೇಲೆ ತೆರಿಗೆ

ತಿರುಕೊಚ್ಚಿಯ ಮುಖ್ಯ ಮಂತ್ರಿ ಪಟ್ಟಂತಾನು ಪಿಳ್ಳೆಯವರು ತಮಿಳು ತಾಲೂಕುಗಳು ಬೇರ್ಪಡುವುದಕ್ಕೆ ತಮ್ಮ ಅಸಮ್ಮತಿ ವ್ಯಕ್ತಪಡಿಸಿದ್ದರೆಂದು ಚಳವಳಗಾರರ ಪರವಾಗಿ ಹೇಳಲಾಗುತ್ತದೆ. ಆದರೆ ಮದ್ರಾಸು ಸರಕಾರವು ತಮಿಳು ನಾಡಿಗೇ ಈ ತಾಲೂಕುಗಳು ಸೇರ್ಪಡೆಹೊಂದಬೇಕೆಂದು ಆಯೋಗಕ್ಕೆ ಹೇಳಿರುವುದಾಗಿ ಶಾಸನ ಸಭೆಯಲ್ಲಿ ಸುಬ್ರಹ್ಮಣ್ಯಮರು ಕೊಟ್ಟ ಉತ್ತರದಿಂದ ಗೊತ್ತಾಗುತ್ತದೆ. ಮದ್ರಾಸಿನ ಶಾಸನ ಸಭೆಯು ಕಳೆದ ವಾರ ತೋಟಗಳ ಮೇಲೆ ತೆರಿಗೆ ಹೊರಿಸುವ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಿ ಕೊಡಲು ನಿರ್ಣಯಿಸಿತು ಕಂದಾಯ ಮಂತ್ರಿಗಳು ಮಸೂದೆಯು ಪ್ರಾಯೋಗಿಕ ಸ್ವರೂಪದ್ದಿರುವುದೆಂದೂ ಸಾಕಷ್ಟು ಒಳ್ಳೆಯ ಫಲಿತಾಂಶಗಳು ದೊರೆತರೆ ಇತರ ಬೆಳೆಗಳಿಗೂ ಮಸೂದೆ

(೭ನೇ ಪುಟ ನೋಡಿರಿ)

ಗೋವೆಯಲ್ಲಿ ಸತ್ಯಾಗ್ರಹಿಗಳ ಪ್ರವೇಶ

ಪ್ರಾರಂಭಿಕ ಘಟ್ಟದಲ್ಲಿ ಸಾಮಾನ್ಯ ಯಶಃ ಪ್ರಾಪ್ತಿ

ಗೋವೆಯಲ್ಲಿ ಆಗೋಸ್ತು ೧೫ರಂದು ತೊಡಗುವುದೆಂದಿದ್ದ ವಿಮೋಚನಾ ಹೋರಾಟವು ತನ್ನ ಪ್ರಾರಂಭಿಕ ಘಟ್ಟದಲ್ಲಿ ಸಾಕಷ್ಟು ಯಶಸ್ಸು ಹೊಂದಿರುವುದು. ಅಂದು ಮುಂಜಾನೆ ಗೋವೆಯ ಮೇಲೆ ಸತ್ಯಾಗ್ರಹಿಗಳ ಗುಂಪುಗಳು ಉತ್ತರದಲ್ಲಿ ಬಾಂದಾ ಮತ್ತು ತೇರ ಖೋಲದಿಂದಲೂ ದಕ್ಷಿಣದಲ್ಲಿ ಮಜಾಳಿಯಿಂದಲೂ ಗೋವೆಯ ಗಡಿಯನ್ನು ಪ್ರವೇಶಿಸಿದವು. ಈ ಸ್ವಯಂ ಸೇವಕರು ಕೈಯಲ್ಲಿ ಭಾರತದ ರಾಷ್ಟ್ರ ಧ್ವಜವನ್ನು ಹಿಡಿದು ಕೊಂಡಿದ್ದರು. ಇವರೆಲ್ಲರೂ ಗೋಮಾಂತಕರೇ ಆಗಿದ್ದು ಕ್ರೈಸ್ತ ಸಮಾಜಕ್ಕೆ ಸೇರಿದ ಧುರೀಣರೇ ದಳದ ನಾಯಕತ್ವವನ್ನು ವಹಿಸಿದ್ದರು. ಇದರಿಂದ ಗೋವೆಯ ವಿಮೋಚನೆಯ ಆದರ್ಶ ಹಾಗು ಸ್ವಾತಂತ್ರ್ಯದ ಅಪೇಕ್ಷೆ ಕೇವಲ ಹಿಂದುಗಳಿಗಷ್ಟೇ ಸೀಮಿತವಾಗಿದೆಯೆಂಬ ಆಪಾದನೆಯನ್ನು ಅಲ್ಲಗಳೆದಂತಾಯಿತು.

ಮೊದಲ ವಿಜಯ

ಅಹಿಂಸಾತ್ಮಕ ಸತ್ಯಾಗ್ರಹವನ್ನು ನಡೆಸುವ ದೃಢ ಸಂಕಲ್ಪದಿಂದ ಮುಂದೊತ್ತುತಿದ್ದ ಈ ಸ್ವಯಂಸೇವಕರನ್ನು ಹಳ್ಳಿಗರು ಆದರದಿಂದ ಬರಮಾಡಿಕೊಳ್ಳುತಿದ್ದರು ಗಡಿಗೆ ಸಮೀಪದಲ್ಲಿ ಅವರಿಗೆ ಪೋರ್ಚುಗೀಜ ಸೈನಿಕರಿಂದ ಯಾವುದೇ ತಡೆಯಾಗಲಿಲ್ಲ. ಸ್ವಯಂಸೇವಕರು ತಮ್ಮ ಪರ್ಚಸ್ಸಿನಿಂದ ಒಂದೇ ದಿನದಲ್ಲಿ ಆರು ಗ್ರಾಮಗಳನ್ನು ಸ್ವತಂತ್ರಗೊಳಿಸಲು ಶಕ್ತರಾದರು. ಆದರೆ ಮುಂದೆ ಇವರಲ್ಲಿ ಹೆಚ್ಚಿನವರು ಪೋಲೀಸರಿಂದ ಬಂಧಿಸಲ್ಪಟ್ಟು ಎಲ್ಲಿಗೋ ಅಜ್ಞಾತಸ್ಥಳಕ್ಕೆ ಒಯ್ಯಲ್ಪಟ್ಟರು ಆದರೆ ಸತ್ಯಾಗ್ರಹಿಗಳ ತಂಡವು ಒಂದರ ಹಿಂದೊಂದೆಂಬಂತೆ ನುಗ್ಗುತ್ತಿರಲು ಸಿದ್ಧವಾಗಿಯೇ ಇವೆ. ಗೋವೆಯ ರಾಷ್ಟ್ರೀಯ ಧುರೀಣರು ಹುರಿದುಂಬಿಸುವ ಮಾತುಗಳಿಂದ ಇವರಲ್ಲಿ ಸ್ಫೂರ್ತಿಯನ್ನು ತುಂಬುತಿದ್ದು, ಗೋವೆಯ ವಿಮೋಚನೆಯಾಗದೆ ಹಿನ್ನಡೆಯುವ ಮಾತೇ ಇಲ್ಲವೆಂದು ಹೇಳುತಿದ್ದಾರೆ. ಐದು ಸಾವಿರಕ್ಕಿಂತಲೂ ಹೆಚ್ಚು ಸ್ವಯಂಸೇವಕರು ಈಗ ಸೇರಿರುವರೆಂದೂ ಇನ್ನೂ ಕೆಲವು ಸಹಸ್ರ ಮಂದಿ ಮುಂಬಯಿಯಿಂದ ಬರುವರೆಂದೂ ವರದಿಗಳು ತಿಳಿಸುತ್ತವೆ.

ಗೋಮಾಂತಕರದೇ ಹೋರಾಟ

ಈ ಚಳವಳದಲ್ಲಿ ಗೋಮಾಂತಕರಲ್ಲದ ಭಾರತೀಯರು ಭಾಗ ವಹಿಸತಕ್ಕದ್ದಲ್ಲವೆಂದು ನಿರ್ಬಂಧವು ಹೇರಲ್ಪಟ್ಟಿರುವುದು. ಎಂತಲೇ ಭಾರತದ ಗೋರೆ, ದೇಸಾಯಿ ಮುಂತಾದ ನಾಯಕರು ಗಡಿ ಪ್ರವೇಶದವರೆಗೆ ಮಾತ್ರ ಸ್ವಯಂ ಸೇವಕ ದಳಗಳ ನೇತೃತ್ವವನ್ನು ವಹಿಸುವುದು ಸಾಧ್ಯವಾಗಿರುವುದು. ದೇಸಾಯಿಯವರು ದಮಣದ ಮೇಲೆ ದೌಡು ಮಾಡಲು ೫೦೦ ಸ್ವಯಂ ಸೇವಕರನ್ನು ಕಟ್ಟಿಕೊಂಡು ಹೊರಟಾಗ, ಭಾರತೀಯ ಪೋಲೀಸರೇ ಅವರನ್ನು ವಸಾಹತಿನೊಳಗೆ ಪ್ರವೇಶಿಸಬಾರದೆಂದು ತಡೆದು, ವಾಪಿಗೆ ಕರೆ ತಂದು ಬಿಟ್ಟರು. ಭಾರತ ಸರಕಾರವು ಈ ಮಟ್ಟದಲ್ಲಿ ಭಾರತೀಯ ನಾಗರಿಕರು ಗೋವೆ ಮುಂತಾದ ವಸಾಹತುಗಳಲ್ಲಿ ಪ್ರತ್ಯಕ್ಷ ಸತ್ಯಾಗ್ರಹ ಕೈಗೊಳ್ಳುವುದು ಅಪೇಕ್ಷಣೀಯವಲ್ಲವೆಂದು ಹೇಳುತ್ತದೆ. ವಸಾಹತಿನ ನಿಜವಾದ ಜನರೇ ತಮ್ಮ ಹೋರಾಟವನ್ನು ಪ್ರಾರಂಭಿಸಿ ಸಾಗಿಸಬೇಕೆಂದು ಭಾರತ ಅಭಿಪ್ರಾಯ ಪಡುತ್ತದೆ. ಹೋರಾಟಕ್ಕೆ ತನ್ನ ನೈತಿಕ ಬೆಂಬಲದ ಭರವಸೆಯನ್ನು ಅದು ಎಂದೋ ಕೊಟ್ಟಿರುತ್ತದೆ.

ಸಂಧಾನದ ಮಾರ್ಗ

ಪ್ರಧಾನ ಮಂತ್ರಿಗಳು ಗೋವೆಯನ್ನು ಪೋಲೀಸು ಕ್ರಮದಿಂದ ಕ್ಷಣಮಾತ್ರದಲ್ಲಿ ಆಕ್ರಮಿಸಬಹುದೆಂದು ಹೇಳಿದರೂ ಅದೇ ಕಾಲಕ್ಕೆ ಭಾರತ ಸರಕಾರವು ಶಾಂತಿಯುತವಾದ ಹಾಗು ಅಹಿಂಸಾತ್ಮಕವಾದ ಮಾರ್ಗದಿಂದಲೇ ನಡೆದುಕೊಳ್ಳುವುದೆಂದು ಸ್ಪಷ್ಟಗೊಳಿಸಿದರು. ಗೋಮಾಂತಕರಂದರೂ ಅಹಿಂಸೆಯನ್ನು ಬಿಟ್ಟುಗೊಡತಕ್ಕದ್ದಲ್ಲವೆಂದು ಎಚ್ಚರ ನುಡಿದರು. ಪೋರ್ಚುಗಾಲವು ನಿಷ್ಪಕ್ಷಪಾತ ನಿರೀಕ್ಷಕರ ಮೂಲಕ ವಸಾಹತುಗಳ ನಿಜ ಪರಿಸ್ಥಿತಿಯ ವಿಮರ್ಶೆ ಮಾಡಿಕೊಳ್ಳಬೇಕೆಂದು ಮಾಡಿದ ಸೂಚನೆಯನ್ನು ಪ್ರಧಾನ ಮಂತ್ರಿಗಳು ತತ್ವತಃ ಒಪ್ಪಿ, ವಿವರಗಳನ್ನು ನಿರ್ಣಯಿಸಲು ಪ್ರತಿನಿಧಿಗಳನ್ನು ನೇಮಿಸಿದರೆಂದು ಪ್ರತಿ ಸೂಚನೆ ಮಾಡಿರುವರು. ಭಾರತದ ಈ ನಿಲುಮೆಗೆ ಜಗತ್ತಿನ ಎಲ್ಲ ವಿವೇಕ ಶೀಲರ ಬೆಂಬಲವಿದೆಯೆಂಬುದಕ್ಕೆ ಕನಿಷ್ಠದಿಂದ ಹಿಡಿದು ಆಸ್ಟ್ರೇಲಿಯದ ವರೆಗಿನ ಪತ್ರಿಕೆಗಳು ವ್ಯಕ್ತಪಡಿಸುವ ಅಭಿಪ್ರಾಯವೇ ನಿದರ್ಶನ.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policyholders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ZANDU KESARI JIVAN
ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ ಕೇಸರಿ ಜೀವನವು ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ತಲ್: ರೂ. 6—8—0 ¼ ರಾತ್ತಲ್: ರೂ. 1—14—0.

ದೊರೆಯುವ ಸ್ಥಳಗಳು:
1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್. ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ, ಮಂಗಳೂರು.
ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರತಿನಿಧಿಗಳು ಎಲ್ಲ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS-3.

ಬೇಂಕಿನ ಬೆಳವಣಿಗೆ

	1933	1943	1953
ಅಧಿಕೃತ ಭಂಡವಾಳ	5,00,000	5,00,000	20,00,000
ತೆತ್ತ ಭಂಡವಾಳ	12,000	1,90,000	9,00,000
ಕ್ಷೇಮನಿಧಿ	—	12,000	2,00,000
ಒಟ್ಟು ಠೇವಣಿ	77,000	15,60,000	60,30,000

ಕಾಲಾವಧಿ ಠೇವಣಾತಿ— 3 ತಿಂಗಳಿಗೆ 3½% ಬಡ್ಡಿ.
ಕಾಯಂ ಠೇವಣಾತಿ— 1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು. 24 ತಿಂಗಳಿಗೆ—3¾% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ರೂಪಾಯಿ ಐವತ್ತು ಸಾವಿರ ವ, ಮೇಲಿನ ಠೇವಣಾತಿಗೆ 4¼% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮದ್ರಾಸು ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.
ಸ್ಥಾಪನೆ: 1931 ದಿ ವಿಜಯ ಬ್ಯಾಂಕ್ ಲಿಮಿಟೆಡ್ ಪ್ರಧಾನ ಕಛೇರಿ ಮಂಗಳೂರು 3.

ನವಯುಗ

ಉಡುಪಿ, ಗುರುವಾರ ೧೯-೮-'೫೪

ಗೋಮಾಂತಕರ ಹೋರಾಟ

ಏಳು ವರ್ಷಗಳ ಹಿಂದೆ ಭಾರತವನ್ನು ಬ್ರಿಟನ ಸಾಮ್ರಾಜ್ಯ ಶಾಹಿಗಳು ಆಗೋಸ್ತು ೧೫ರಂದು ಶಾಂತರೀತಿಯಲ್ಲಿ ತ್ಯಜಿಸಿ ಹೋದಾಗ ಅವರು ತಮ್ಮ ಮುತ್ಸದ್ದಿತನದ ಪರಾಕಾಷ್ಠೆಯನ್ನೇ ತೋರಿಸಿದರೆಂದು ಹೇಳಬಹುದು. ಸೂರ್ಯ ಮುಳುಗದ ಸಾಮ್ರಾಜ್ಯದ ವೈಭವಕ್ಕೆ ಚ್ಯುತಿತರಲು ಚರ್ಚಿಲ್ಲರು ಎಷ್ಟುಮಾತ್ರಕ್ಕೂ ಸಿದ್ಧರಿರಲಿಲ್ಲ; ಆದರೆ ಅವರಿಗಿಂತ ಹೆಚ್ಚು ವಾಸ್ತವವಾದಿಗಳಾದ ಕೂಲಿಕಾರ ಧುರೀಣರು ಭಾರತಕ್ಕೆ ಸ್ವಾತಂತ್ರ್ಯವನ್ನು ದಯಪಾಲಿಸಿ, ಶಾಶ್ವತವಾಗಿ ಸ್ನೇಹವನ್ನು ಉಳಿಸಿಕೊಂಡರು. ಭಾರತದ ಮುಖ್ಯ ನೆಲವು ಸ್ವತಂತ್ರಗೊಂಡ ಕೆಲವೇ ದಿನಗಳಲ್ಲಿ ಕರಾವಳಿಯಲ್ಲಿ ಫ್ರೆಂಚ ಹಾಗು ಪೋರ್ಚುಗೀಜರ ವಶವಿರುವ ವಸಾಹತುಗಳ ಕುರಿತು ತನ್ನ ನಿಲುವೆಯನ್ನು ಸ್ಪಷ್ಟಗೊಳಿಸಿ,ಅವುಗಳನ್ನು ಭಾರತಸರಕಾರದ ಅಧಿಕಾರಕ್ಕೆ ವರ್ಗಾಯಿಸಲು ಮಾತುಕತೆ ನಡೆಸಬೇಕೆಂದು ನೆಹರೂ ಸೂಚಿಸಿದರು. ಫ್ರೆಂಚರು ಅಧಿಕಾರ ಹಸ್ತಾಂತರದ ತತ್ವವನ್ನು ಒಪ್ಪಿಕೊಂಡು ಚಂದ್ರನಗರವನ್ನು ಭಾರತಕ್ಕೆ ಒಪ್ಪಿಸಿಕೊಟ್ಟರು. ಆದರೆ ಹಿಂದಿನಿಂದ ಕಣ್ಣು ಮುಚ್ಚಾಲೆ ಆಡಲು ತೊಡಗಿದ್ದರಿಂದ ಫ್ರೆಂಚ ಸ್ವಾಸ್ಥ್ಯಗಳು ಭಾರತದೊಡನೆ ಸೇರದೆ ಪ್ರತ್ಯೇಕವಾಗಿಯೇ ಉಳಿಯುವಂತಾಯಿತು. ಆದರೆ ಈಚೆಗೆ ಇಂಡೋಚೀನದಲ್ಲಿ ತಿಂದ ಹೊಡೆತ ಹಾಗು ಸ್ವಾಸ್ಥ್ಯದ ಪ್ರಜೆಗಳ ಸತ್ಯಾಗ್ರಹಗಳ ಪ್ರಭಾವದಿಂದ—ಹೊಸ ಫ್ರೆಂಚ ಪ್ರಧಾನಿ ಮೆಂಡೆಸರು ಈ ಪ್ರಶ್ನೆಯನ್ನು ಇಷ್ಟರಲ್ಲೇ ಕೊನೆಯದಾಗಿ ತೀರ್ಮಾನಿಸಿ ಬಿಡಲು ಪ್ರಯತ್ನಿಸಿರುವರು. ಫ್ರೆಂಚ ಅಧಿಕಾರಿಗಳು ತಮ್ಮ ಕೈಯಲ್ಲಿ ಈಗ ಉಳಿದಿರುವ ಪಾಂಡಿಚೆರಿ ಮತ್ತು ಕರೈಕಲುಗಳೆಂಬ ಎರಡೂ ವಸಾಹತುಗಳನ್ನು ತ್ಯಜಿಸುವ ಎಲ್ಲ ಸಿದ್ಧತೆಯನ್ನೂ ಮಾಡಿದ್ದು, ಕೆಲವೇ ದಿನಗಳಲ್ಲಿ ಅಧಿಕಾರ ಹಸ್ತಾಂತರದ ಘೋಷಣೆಯು ಹೊರಬೀಳುವುದೆಂದು ವಿಶ್ವಾಸನೀಯ ವರ್ಗಗಳು ಹೇಳುತ್ತವೆ. ಬ್ರಿಟಿಷರೂ ಫ್ರೆಂಚರೂ ಕಾಲಗತಿಯನ್ನು ಅನುಸರಿಸಿ ಕೈಗೊಂಡ ಜಾಣತನದ ನಿರ್ಣಯದ ಮಹತ್ವವನ್ನೇ ತಿಳಿಯದೆ ಮಧ್ಯಯುಗೀನ ಮನೋಭಾವವನ್ನೆ ತೋರಿಸುತ್ತಿರುವ ಪೋರ್ಚುಗೀಜ ಪ್ರಭೃತಿಗಳನ್ನು ಕಂಡು ಮರುಕವಾಗುತ್ತದೆ. ಆದರೆ ಭಾರತವಲ್ಲ- ಗೋಮಾಂತಕರೇ ಪೋರ್ತುಗೀಜ ಅಧಿಕಾರಿಗಳ ಮುಬ್ಬನ್ನು ದೂರಗೊಳಿಸುವ ಎತ್ತುಗಡೆ ನಡೆಸಿದ್ದಾರೆ: ದಮನಕ್ಕೆ ಸೇರಿದ ದಾದ್ರಾದಲ್ಲಿ ಸತ್ಯಾಗ್ರಹಿಗಳು ಹೊಂದಿದ ವಿಜಯವು ಪೋರ್ತುಗೀಜ ವಸಾಹತಿನ ಎಲ್ಲ ಸ್ವಾತಂತ್ರ್ಯ ಪ್ರಿಯರಿಗೂ ಸ್ಫೂರ್ತಿಯನ್ನು ತಂದು ಕೊಟ್ಟು, ಅವರು ಸ್ವಯಂ ಪ್ರೇರಣೆಯಿಂದ ವಸಾಹತುವಾದದ ವಿರುದ್ಧ ಹೋರಾಡುವಂತೆ ಮಾಡಿರುವುದು. ಲಿಸ್ಬನದಲ್ಲಿರುವ ಪೋರ್ತುಗಾಲದ ಮಂತ್ರಿ ಮಂಡಳವು ಭಾರತದ ಸೈನ್ಯ ಮತ್ತು ಸಕ್ರಿಯ ಸಹಾಯಗಳಿಂದಲೇ ಸ್ವಯಂ ಸೇವಕರ ಆಕ್ರಮಣ ನಡೆಯುತ್ತಿದೆಯೆಂದು ಸುಳ್ಳನ್ನು ಸಾರಿ, ಭಾರತದ ಧವಳ ಕೀರ್ತಿಗೆ ಕಪ್ಪು ಬಳಿಯಲು ನೋಡಿದರೂ, ಇದಕ್ಕೆ ಯಶಸ್ಸು ದೊರೆತಿಲ್ಲ. ಪೋರ್ತುಗೀಜರ ಮಾತಿನ ಮೋಡಿಗೆ ಬಲಿಯಾಗಿ "ಸೈನಿಕ ಯುದ್ಧಕ್ಕೇನೂ ಹೋಗದೆ, ಶಾಂತ ರೀತಿಯಿಂದಲೇ ಸಮಸ್ಯೆಯ ಇತ್ಯರ್ಥ ಮಾಡುವುದೊಳಿತು" ಎಂಬುದಾಗಿ ಭಾರತಕ್ಕೆ ಬುದ್ಧಿ ಹೇಳಲು ಬಂದ ಬ್ರಿಟನು ತಾನು ಏಕ ಪಕ್ಷೀಯವಾಗಿ ವರ್ತಿಸಿದೆನೆಂದು ಒಪ್ಪಿಕೊಂಡಂತೆಯೇ ಆಗಿದೆ ಏಕೆಂದರೆ ಭಾರತವು ಶಾಂತಿಯ, ಸಂಧಾನದ ಮಾರ್ಗವನ್ನು ಬಿಟ್ಟುಗೊಟ್ಟದ್ದೇ ಇಲ್ಲವೆಂದು ಬ್ರಿಟನಿನ ಉಪದೇಶಕ್ಕೆ ತನ್ನ ಉತ್ತರವನ್ನುಕೊಟ್ಟು, ಈ ಸತ್ಯವನ್ನು ಪೋರ್ಚುಗೀಜರಿಗೆ ಮನವರಿಕೆ ಮಾಡಿಕೊಡಬೇಕೆಂದು ಸೂಚಿಸಿದೆ; ಮತ್ತು ಬ್ರಿಟನಿಗೆ ಇದರಿಂದ "ಸಂತೋಷ" ವಾಗಿದೆ. ಇದರ ಪ್ರಭಾವವೋ ಎಂಬಂತೆ —ತಟಸ್ಥ ನಿರೀಕ್ಷಕರ ಮೂಲಕ ವಸಾಹತುಗಳ ಪರಿಸ್ಥಿತಿಯ ವಿಮರ್ಶೆ ಮಾಡಬೇಕೆಂಬ ಸೂಚನೆಯೊಂದನ್ನು ಪೋರ್ಚುಗಾಲವು ಮುಂದಿಟ್ಟಿತು: ಇದು ಆ ಸರಕಾರದ ನಿಲುಮೆಯಲ್ಲಿ ಕಂಡು ಬಂದ ಮಹತ್ವದ ಬದಲಾವಣೆಯಾಗಿದ್ದು, ಭಾರತವು ಕೂಡಲೇ ಈ ತತ್ವಕ್ಕೆ ಒಪ್ಪಿಗೆ ನೀಡಿತು. ಆದರೆ ಈಗ ಸಾಲಾಜಾರರು ತಮ್ಮದೇ ಸೂಚನೆಯನ್ನು ಹಿಂದೆಗೆದು ಕೊಳ್ಳುತ್ತಿರುವಂತೆ ತೋರುತ್ತದೆ—ಬದಲು ಸೈನಿಕ ಶಕ್ತಿಯನ್ನು ಉಪಯೋಗಿಸಿ –ಗೋಮಾಂತಕರನ್ನು ಸದೆಬಡೆಯಲು ಸಾಧ್ಯವೆಂದು ಅವರು ಭಾವಿಸಿದಂತೆ ಭಾಸವಾಗುತ್ತದೆ. ಯುದ್ಧದ ಹಡಗುಗಳು ಮರ್ಮಗೋವೆಯಲ್ಲಿ ಇಳಿದಿದ್ದು, ಹತ್ತು ಸಾವಿರ ನೀಗ್ರೊ ಹಾಗು ಪೋರ್ಚುಗೀಜ ಸೈನಿಕರು ಗೋವೆಯಲ್ಲಿ ಅತ್ಯಾಚಾರ ಮಾಡುತ್ತಿದ್ದಾರೆ. ಗೋವೆಯ ಮಕ್ಕಳಿಗೆ ಸೈನಿಕ ಶಿಕ್ಷಣ ಕೊಡಲಾಗುತ್ತದೆಯಲ್ಲದೆ, ಯುವಕರನ್ನು ಒತ್ತಾಯದಿಂದ ಸೈನ್ಯಕ್ಕೆ ಸೇರಿಸುವ ಪ್ರಯತ್ನವೂ ನಡೆಯುತ್ತದೆ. ಗೋವೆ ಬಿಟ್ಟು ಓಡಿಹೋಗಬೇಕಾಗಿ ಬಂದರೆ, ಎಲ್ಲವನ್ನೂ ಧ್ವಂಸಮಾಡಿಯೇ ತೀರಬೇಕೆಂಬ ಇರಾದೆಯಿಂದ ಕಂದಕಗಳನ್ನು ತೋಡಿ ಸಿಡಿಮದ್ದುಗಳನ್ನು ಅದರಲ್ಲಿ ತುಂಬಿಸಿಟ್ಟಿರುವರು. ಗೋವೆಯಲ್ಲಿ ಬಹಳ ದಿನಗಳಿಂದ ಇದ್ದು, ಆದರೆ ವಸತಿಯ ಅನುಮತಿ ಚೀಟು ಇಲ್ಲದ, ಭಾರತೀಯರನ್ನು ಬಲಾತ್ಕಾರವಾಗಿ ಹೊರಕ್ಕೆ ದಬ್ಬಲಾಗುತ್ತದೆ. ಇವರಲ್ಲದೆ, ಪರಿಸ್ಥಿತಿಯ ಕ್ಷೋಭೆಯಿಂದ ಭಾರತಕ್ಕೆ ಹೊರಟು ಬರುವವರ ಸಂಖ್ಯೆ ಈಗಾಗಲೇ ೧೫ ಸಾವಿರವನ್ನು ಮೀರುತ್ತದೆ. ಪೋರ್ಚುಗೀಜರು ಗೋವೆಯಲ್ಲಿರುವ ಹಿಂದುಗಳ ದೇವಾಲಯದ ಬೊಕ್ಕಸಕ್ಕೆ ಕೈಹಾಕಿ ಅವನ್ನು ಬರಿದುಮಾಡಿರುವರಲ್ಲದೆ ಭಾರತವು ಕ್ರೈಸ್ತ ಧರ್ಮ ಸಂಸ್ಥೆಗಳ ನಿರ್ನಾಮ ಮಾಡುತ್ತದೆಯೆಂಬ ಅಂಥ ಅಪಪ್ರಚಾರಕ್ಕೂ ಕೈಯಿಕ್ಕಿರುವರು: ಆದರೆ ಭಾರತವು ಅಂಥ ಅನಾಹುತವನ್ನೇನೂ ಮಾಡಲಾರದೆಂಬ ನಂಬಿಕೆಯು ಪದೇ ಪದೇ ಪುನರುಜ್ಜೀವಿಸಲ್ಪಟ್ಟಿರುವುದು. ಭಾರತೀಯ ಕ್ರೈಸ್ತ ಪಾದ್ರಿಗಳೂ ಪೋರ್ಚುಗೀಜರ ಹೇಳಿಕೆಯಲ್ಲಿ ಹುರುಳೇನೂ ಇಲ್ಲವೆಂದು ಪ್ರಕಟಣೆ ಹೊರಡಿಸಿರುವರು. ಸ್ವಯಂಸೇವಕರು ಕೈಗೊಂಡ ಸತ್ಯಾಗ್ರಹವು ವಸಾಹತುಗಳ ವಿಮೋಚನೆಯಾಗುವ ವರೆಗೂ ಮುಂದುವರಿಯುವುದು: ಸೈನಿಕ ಶಕ್ತಿಯ ವಿರುದ್ಧ ಅಹಿಂಸೆಯ ಹೋರಾಟ ನಡೆಯುವುದು. ಸಾಲಾಜಾರರ ಸರಕಾರವು ಎಷ್ಟು ದಬ್ಬಾಳಿಕೆಯನ್ನು ಬೇಕಾದರೆ ನಡೆಸಲಿ ಸ್ವಾತಂತ್ರ್ಯದ ಅಪೇಕ್ಷೆಯನ್ನು ಮಣ್ಣುಗೂಡಿಸುವುದು ಅದಕ್ಕೆ ಸಾಧ್ಯವಾಗಲಾರದು. ಏಶ್ಯಾದಲ್ಲಿ ನಶಿಸಿ ಹೋಗುತ್ತಿರುವ ಸಾಮ್ರಾಜ್ಯಶಾಹಿತ್ವದ ಹಿನ್ನೆಲೆಯಲ್ಲಿ ಗೋವೆ ಮುಂತಾದವುಗಳು ಪೋರ್ಚುಗಾಲದ ಅವಿಚ್ಛಿನ್ನ ಭಾಗಗಳೆಂದು ಹೇಳುವ ಸಾಲಜಾರರ ಮೌಢ್ಯ ಕಂಡು ಲೋಕದ ಜಾಣರೆಲ್ಲ ನಗುತಿದ್ದಾರೆ. ಅನ್ಯೋನ್ಯತೆ ಮತ್ತು ಮೈತ್ರಿಯನ್ನು ಶಾಶ್ವತವಾಗಿ ಉಳಿಸಿಕೊಳ್ಳಲು ನೇರವಾದ ಸಂಧಾನ ಮಾತುಕತೆಗಳನ್ನು ಭಾರತದೊಡನೆ ತೊಡಗುವ ಬದಲು, ನ್ಯಾಟೋ ರಾಷ್ಟ್ರಗಳಿಗೆ ಭಾರತದ ವಿರುದ್ಧ ಆಕ್ರಮಣದ ಪ್ರಚೋದನೆ ಕೊಡುವ ಲಿಸ್ಬನ ಸರಕಾರ ಪ್ರಮಾದವನ್ನೇ ಮಾಡುತ್ತದೆ. ಪೋರ್ತುಗಾಲವು ತಪ್ಪು ಹಾದಿಯನ್ನು ಬಿಟ್ಟುಗೊಡುವಂತೆ ಬ್ರಿಟನು ಮುಂತಾದ ಅದರ "ಆಪ್ತಮಿತ್ರ" ರಾಷ್ಟ್ರಗಳು ಪ್ರಯತ್ನಿಸಿ, ನೆರವಾಗಬೇಕೆಂದೂ ವಸಾಹತುಗಳ ವಿಮೋಚನೆಯಾಗದೆ ಭಾರತ ವಿರಮಿಸದೆಂದೂ ಜನಾಭಿಪ್ರಾಯ ಸ್ಪಷ್ಟವಾಗಿ ಹೇಳುತ್ತದೆ.

ಆಗ್ನೇಯ ಏಶಿಯದ ಸಂರಕ್ಷಣೆ

ಕೊಲೊಂಬೋ ರಾಷ್ಟ್ರಗಳಲ್ಲಿ ನಾಲ್ಕರ ತೀವ್ರ ವಿರೋಧ

ಹೊಸದೆಹಲಿಯಲ್ಲಿ ಇಂಡೋಚೀನ ಸಮರನಿಲುಗಡೆಯ ಮೇಲ್ವಿಚಾರಣಾ ಮಂಡಳಗಳ ಕುರಿತು ಪ್ರಾಸ್ತಾವಿಕ ರೂಪದಲ್ಲಿ ನಡೆಸಿದ ಮಾತುಕತೆಗಳಲ್ಲಿ ಪರಸ್ಪರ ಸಹಕಾರದ ಭರವಸೆಯು ದೊರೆತು, ಭಾರತದ ಪ್ರತಿನಿಧಿಯೇ ಪ್ರತಿಯೊಂದರಲ್ಲೂ ಅಧ್ಯಕ್ಷನಾಗಿರುವ ಮೂರು ಪ್ರತ್ಯೇಕ ಮಂಡಳಗಳು ವೀಟನಾಂ, ಲಾವೋಸ ಮತ್ತು ಕಂಬೋಡಿಯಾಗಳಿಗಾಗಿ ರಚಿಸಲ್ಪಟ್ಟವು. ವೀಟನಾಂದಲ್ಲಿ ಕೆಲವು ಹಂತಗಳಲ್ಲಿ ನಿಲ್ಲಬೇಕಾಗಿದ್ದ ಯುದ್ಧವು ಇದೇ ಆಗೋಸ್ತು ೧೧ರಲ್ಲಿ ಸಂಪೂರ್ಣ ನಿಂತಿತು. ಮೇಲ್ವಿಚಾರಕ ಮಂಡಳಗಳ ಕೆಲಸವು ಇಷ್ಟರಲ್ಲೇ ತೊಡಗಿದ್ದು ಇವು ಸುಸೂತ್ರವಾಗಿ ತಮ್ಮ ಹೊಣೆಯನ್ನು ನಿರ್ವಹಿಸುತ್ತವೆಂದು ಹೇಳಬಹುದು. ದಿನಾಂಕ ೧೭ರಂದು ಸೈನಿಕ ವರ್ಗದ ಪ್ರತಿನಿಧಿಗಳ ಮೊದಲನೇ ತಂಡವು ಹೊಸದೆಹಲಿಯಿಂದ ಇಂಡೋಚೀನಕ್ಕೆ ಪ್ರಯಾಣ ಹೊರಟಿರುವುದು. ಇಂಡೋಚೀನದಲ್ಲಿ ಶಾಂತಿಯನ್ನು ನೆಲೆಗೊಳಿಸುವುದಕ್ಕೋಸ್ಕರ ಭಾರತವುಮಾಡಿದ ಪ್ರಯತ್ನಗಳನ್ನು ವೀಟಮಿನ ಧುರೀಣರಾದ ಹೋಚಿಮಿನರು ಬಹಳವಾಗಿ ಪ್ರಶಂಸಿಸಿದರೆಂದೂ ಮಂಡಳಗಳೊಡನೆ ಸಂಪೂರ್ಣವಾಗಿ ಸಹಕರಿಸುವ ಆಶ್ವಾಸನೆಯನ್ನು ನೀಡಿದರೆಂದೂ ತಿಳಿಯುತ್ತದೆ.

ಸಂರಕ್ಷಣಾ ವ್ಯೂಹ

ಹೀಗೆ ಶಾಂತ ಸಾಗರದ ಕರಾವಳಿಯಲ್ಲಿ ಯುದ್ಧ ಜ್ವಾಲೆಯನ್ನು ಶಮನಗೊಳಿಸಿದ ಬೆನ್ನಿಗೆಯೇ "ಮಿತ್ರ ರಾಷ್ಟ್ರ"ಗಳೆಂದೇ ಹೇಳಬಹುದಾದ ಅಮೇರಿಕ, ಬ್ರಿಟನು ಮುಂತಾದವುಗಳು ಆಗ್ನೇಯಏಶ್ಯಾದ ಸಂರಕ್ಷಣೋಪಾಯವನ್ನು ಕೈಗೊಳ್ಳಬೇಕೆಂಬ ತಮ್ಮ ಹಲವು ದಿನಗಳ ವಿಚಾರಕ್ಕೆ ಒಂದು ನಿಶ್ಚಿತ ರೂಪವನ್ನು ಕೊಡಲು ಪ್ರಯತ್ನಿಸಿರುವುವು.ಉತ್ತರ ಅಟ್ಲಾಂಟಿಕ ಒಡಂಬಡಿಕೆಯ ಮೂಲಕ ಯುರೋಪಿನಲ್ಲಿ "ಕಮ್ಯುನಿಸ್ಟ ಆಕ್ರಮಣ"ದ ವಿರುದ್ಧ "ಸಂರಕ್ಷಣಾ ವ್ಯೂಹ"ವನ್ನು ಕಟ್ಟಿಕೊಂಡ ಈ ಮಹಾ ರಾಷ್ಟ್ರಗಳು ಆಗ್ನೇಯಏಶ್ಯ ದೇಶಗಳನ್ನೂ ಕಮ್ಯುನಿಸ್ಟರ ಬಲಿಯಿಂದ ತಪ್ಪಿಸಲು ಇಂತಹ ಸೈನಿಕ ಒಪ್ಪಂದ ಅಗತ್ಯವೆಂದು ಭಾವಿಸುತ್ತವೆ. ಅಮೇರಿಕವು ಆಸ್ಟ್ರೇಲಿಯಾ ಮತ್ತು ನ್ಯೂಜಿಲೇಂಡಗಳೊಡನೆ ಸೇರಿಕೊಂಡು "ಅಂಜಸ" ಒಪ್ಪಂದವನ್ನು ಎರಡು ವರ್ಷ ಪೂರ್ವದಲ್ಲಿ ಮಾಡಿಕೊಂಡಾಗಲೇ ಆಗ್ನೇಯ ಏಶ್ಯಾ ಸಂರಕ್ಷಣೆಯ ಒಪ್ಪಂದಕ್ಕೆ ತಳಹದಿಯನ್ನು ಹಾಕಿದಂತೆಯೇ ಎಂದೆಲ್ಲರೂ ಭಾವಿಸಿದ್ದರು. ಈಗ ಈ ವ್ಯೂಹವನ್ನು ಪಶ್ಚಿಮದಲ್ಲಿ ಪಾಕಿಸ್ತಾನದಿಂದ ತೊಡಗಿ ಪೂರ್ವದಲ್ಲಿ ಫಿಲಿಪೀನದ ವರೆಗೆ ವಿಸ್ತರಿಸುವ ಉದ್ದೇಶವು ಕಂಡು ಬರುತ್ತದೆ.

ಫಿಲಿಪೀನದ ಪರಿಷತ್ತು

ಸಪ್ಟಂಬರ ೬ನೇ ತಾರೀಕಿನಂದು ಫಿಲಿಪೀನದಲ್ಲಿ ಈ ಕುರಿತು "ಮಾತುಕತೆಗಳನ್ನು ನಡೆಸಲು ಬ್ರಿಟನು, ಅಮೇರಿಕಾ, ಪಾಕಿಸ್ತಾನ, ನ್ಯೂಜೀಲೆಂಡ, ಆಸ್ಟ್ರೇಲಿಯಾ, ಥ್ಯಾಲೇಂಡ್, ಫ್ರಾನ್ಸ್ ಮತ್ತು ಫಿಲಿಪೀನದ ವಿದೇಶ ಮಂತ್ರಿಗಳು ಸಭೆ ಸೇರುವರು.ಕಮ್ಯುನಿಸ್ಟರ ವರ್ಚಸ್ಸಿನಿಂದ ಪಾರಾಗಲು ಬಯಸುವ ಕೊಲೊಂಬೋ ರಾಷ್ಟ್ರಗಳು ಈ ಮಾತುಕತೆಯಲ್ಲಿ ಭಾಗವಹಿಸಬೇಕೆಂದು ಬ್ರಿಟನು ಕೇಳಿಕೊಂಡಿತ್ತು. ಸಿಂಹಳದ ಪ್ರಧಾನ ಮಂತ್ರಿಗಳು ಕೊಲೊಂಬೋ ರಾಷ್ಟ್ರಗಳಿಗೆ ಇದನ್ನು ತಿಳಿಸಿದ್ದಲ್ಲದೆ, ತಮ್ಮ ನಿಲುವೆಯನ್ನು ನಿಶ್ಚಿತವಾಗಿ ಸಾರಲು ರಂಗೂನಿನಲ್ಲಿ ಬೇಗನೇ ಸಭೆ ಸೇರುವುದೊಳಿತೆಂದೂ ಹೇಳಿದ್ದರು. ಆದರೆ ಭಾರತದ ಪ್ರಧಾನ ಮಂ

ಚಂದಾದಾರರಲ್ಲಿ ಬಿನ್ನಹ

ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ನವಯುಗದ 33ನೆಯ ವರ್ಷವು ಕೊನೆಗೊಂಡು ಸಪ್ಟಂಬರ ಆದಿಯಿಂದ 34ನೆಯ ಹೊಸ ವರ್ಷವು ಆರಂಭವಾಗುತ್ತದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ನಮ್ಮ ಚಂದಾದಾರರು ತಮ್ಮ ಚಂದಾಹಣವನ್ನು (ಬಾಕಿ ಇದ್ದರೆ ಅವನ್ನು ಕೂಡ) ಕಳುಹಿಸಿ ಕೊಡುವಂತೆ ಕೋರುತ್ತೇವೆ. ವಿ. ಪಿ. ಪಿ ಮಾಡುವುದರಿಂದ ಹತ್ತು ಆಣೆಯಷ್ಟು ನಷ್ಟ ಸಂಭವಿಸುತ್ತದಾದ್ದರಿಂದ ಸರ್ವರೂ ಬಾಕಿಯನ್ನು ಮುಂದಾಗಿ ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್
ನವಯುಗ, ಉಡುಪಿ.

ತ್ರಿಗಳು ಕೊಲೊಂಬೋ ರಾಷ್ಟ್ರಗಳು ಈ ಮೊದಲೇ ಆಗ್ನೇಯ ಏಶ್ಯಾ ಸಂರಕ್ಷಣೆಯ ವಿಷಯದಲ್ಲಿ ತಮ್ಮ ಅಭಿಪ್ರಾಯ ಸಾರಿರುವುದರಿಂದ ಈಗ ಪುನಃ ಸಭೆ ಸೇರುವುದು ಪ್ರಶಸ್ತವಲ್ಲವೆಂದೂ ಅಕಾಲಿಕವೆಂದೂ ಹೇಳಿದರು. ಆಗೋಸ್ತು ಮೂರನೇ ವಾರದಲ್ಲಿ ಭಾರತದ ಪಾರ್ಲಿಮೆಂಟಿನ ಅಧಿವೇಶನ ಜರಗುವುದರಿಂದ ಹೊಸ ದಿಹಲಿಯನ್ನು ಬಿಟ್ಟು ಹೊರಗೆ ಹೋಗುವುದು ಅನಾನುಕೂಲವೆಂದೂ ಬರೆದರು.

ವಿರೋಧದ ಕಾರಣ

ಕೋಟೆಲವಾಲರು ಸಭೆಯ ಸ್ಥಳವನ್ನು ರಂಗೂನಿನಿಂದ ಹೊಸ ದೆಹಲಿಗೆ ವರ್ಗಾಯಿಸಲೂ ಮುಂಬಂದರು—ಆದರೆ ನೆಹರೂರವರು ಈ ಕುರಿತು ಏನೂ ಆಸ್ಥೆಯನ್ನು ವಹಿಸಲಿಲ್ಲ. ಆಗ್ನೇಯ ಏಶ್ಯಾ ಸಂರಕ್ಷಣೆಯ ವಿಷಯದಲ್ಲಿ ಭಾರತದ ನಿಲುವೆ ಸ್ಪಷ್ಟವಿರುತ್ತದೆ: ಅದು ಅಂತಹ ಒಪ್ಪಂದವನ್ನು ವಿರೋಧಿಸುತ್ತದೆ. ಆಗ್ನೇಯ ಏಶ್ಯದ ಒಂಕೋಟಿ ಜನ ಸಮುದಾಯ ಪಾಶ್ಚಾತ್ಯ ರಾಷ್ಟ್ರಗಳ ಗುಂಪಿಗೆ ಸೈನಿಕ ಮಟ್ಟದಲ್ಲಿ ಸೇರಿಕೊಂಡದ್ದಾದರೆ, ರಶಿಯಾ ಮುಂತಾದ ಕಮ್ಯುನಿಸ್ಟ ರಾಷ್ಟ್ರಗಳಿಗೂ ಪಾಶ್ಚಾತ್ಯ ದೇಶಗಳಿಗೂ ಈಗಿರುವ ಸಮತೋಲವು ತಪ್ಪುತ್ತದೆ. ಪರಿಣಾಮತಃ ಪಶ್ಚಿಮ ರಾಷ್ಟ್ರಗಳು ಕಮ್ಯುನಿಸ್ಟರ ಮೇಲೆ ದಾಡು ಮಾಡಬಹುದು. ಕ್ಷುದ್ರ ಕಾರಣಕ್ಕಾದರೂ ಮಹಾಯುದ್ಧದ ಕಿಡಿ ಹೊತ್ತಿಕೊಂಡೀತು. ಕಮ್ಯುನಿಸ್ಟ ಆಕ್ರಮಣವೆಂದು ಹೇಳುವವರು ಸಾಮ್ರಾಜ್ಯಶಾಹಿತ್ವದ ದಾಸ್ಯಕ್ಕೆ ಆಗ್ನೇಯ ಏಶ್ಯಾದ ರಾಷ್ಟ್ರಗಳನ್ನು ತಾವೇ ನೂಕಿದ್ದೇವೆಂದು ಮರೆಯುತ್ತಾರೆ. ಈ ರಾಷ್ಟ್ರಗಳು ರಾಜಕೀಯ ಸ್ವಾತಂತ್ರ್ಯ ಪಡೆಯಲು ನಡೆಸುವ ಹೋರಾಟದಲ್ಲಿ ಕಮ್ಯುನಿಸ್ಟರೂ ಭಾಗ ವಹಿಸುತ್ತಿರುವುದರಿಂದ ಅವರು ಜನಪ್ರೀತಿ ಸಂಪಾದಿಸುವರು. ರಾಷ್ಟ್ರಗಳನ್ನು ಸ್ವತಂತ್ರಗೊಳಿಸಿದರೆ, ಕಮ್ಯುನಿಸ್ಟರ ಮೇಲಿನ ಪ್ರೀತಿ ಬೆಳೆಯುವುದಕ್ಕೆ ಅವಕಾಶವಿಲ್ಲ. ಏಶ್ಯಾದ ಬಡತನದ ನಿವಾರಣೆಗೆ ಕ್ರಮ ಕೈಗೊಳ್ಳುವುದರಿಂದಲೂ ಕಮ್ಯುನಿಸ್ಟರ ಪ್ರಭಾವವನ್ನು ತಗ್ಗಿಸಬಹುದು; ಸೈನಿಕ ಒಪ್ಪಂದ ಅನಾವಶ್ಯಕ.

ಅಭದ್ರ ತಳಗಟ್ಟು

ಭಾರತದ ಮೇಲಿನ ನಿಲುಮೆಯನ್ನು ಇಂಡೋನೇಶಿಯಾ, ಬರ್ಮಾ ಮತ್ತು ಸಿಂಹಳಗಳು ಒಪ್ಪಿಕೊಂಡು, ಫಿಲಿಪೀನದ ಪರಿಷತ್ತಿನಲ್ಲಿ ಭಾಗವಹಿಸುವುದಿಲ್ಲವೆಂದು ಸಾರಿರುತ್ತವೆ. ಕೊಲೊಂಬೋ ರಾಷ್ಟ್ರಗಳಲ್ಲಿ ಪಾಕಿಸ್ತಾನವೊಂದೇ ಪಾಶ್ಚಾತ್ಯ ರಾಷ್ಟ್ರಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತದೆ. ಸೈನಿಕ ಒಪ್ಪಂದವನ್ನು ಮಾಡಿಕೊಳ್ಳುವುದರ ಮೂಲಕ ಈಗಾಗಲೇ ಅಮೇರಿಕದ ಪ್ರಭಾವಲಯದೊಳಗೆ ಬಿದ್ದಿರುವ ಪಾಕಿಸ್ತಾನ ಹಾಗೆ ಮಾಡುವುದೆಂದು ಮೊದಲೇ ಗೊತ್ತಿದ್ದಿತು. ಆಗ್ನೇಯ ಏಶ್ಯಾದ ಸಂರಕ್ಷಣೆಯ ಕುರಿತ ವಿವರಗಳು ತಿಳಿದಿಲ್ಲ—ಆದರೆ ಫಿಲಿಪೀನವು ರಾಷ್ಟ್ರಗಳ ಸ್ವಯಂ ನಿರ್ಣಯಾಧಿಕಾರಕ್ಕೆ ಮಾನ್ಯತೆ, ಸದಸ್ಯ ರಾಷ್ಟ್ರಗಳಲ್ಲಿ ಯಾವುದರ ಮೇಲೆ ಆಕ್ರಮಣವಾದರೂ ಅದರ ವಿರುದ್ಧ ಸಾಮೂಹಿಕ ಹೋರಾಟ ಮತ್ತು ಸೈನಿಕ ಜಂಟಿಕವಷ್ಟೇ ಆರ್ಥಿಕ ಮುಖಕ್ಕೂ ಪ್ರಾಧಾನ್ಯ ಎಂಬೀ ಮೂರು ತತ್ವಗಳನ್ನು ಒಪ್ಪಂದದಲ್ಲಿ ಕಾಣಿಸಬೇಕೆಂದು ಸೂಚಿಸಿರುವುದು. ಅದೇನೇ ಇರಲಿ—ಕೊಲೊಂಬೋ ರಾಷ್ಟ್ರಗಳಲ್ಲಿ ನಾಲ್ಕರ ವಿರೋಧ ಕಟ್ಟಿಕೊಂಡ ಈ ಪರಿಷತ್ತು ಏಶ್ಯದ ಪ್ರಬಲ ರಾಷ್ಟ್ರಗಳನ್ನು ನಿರ್ಲಕ್ಷಿಸಿ ಏಶ್ಯಾದ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುತ್ತಿದೆಯೆಂದೂ ಶಾಂತಿವಲಯದ ಸ್ಥಾನದಲ್ಲಿ ಸೈನಿಕ ವ್ಯೂಹವೊಂದನ್ನು ಕಟ್ಟುವುದೆಂದೂ ಪರ್ಯಾಯದಲ್ಲಿ ಕಮ್ಯುನಿಸ್ಟರನ್ನು ಉದ್ರೇಕಿಸಲು ನೆಪ ಒದಗಿಸಿಕೊಡುವುದೆಂದೂ ಹೇಳಿದರೆ ತಪ್ಪಾಗದು.

(೫ನೇ ಪುಟದಿಂದ)

ಯ ವ್ಯಾಪ್ತಿಯನ್ನು ವಿಸ್ತರಿಸಲಾಗುವುದೆಂದೂ ಹೇಳಿದರು. ಸಾಮಾನ್ಯವಾಗಿ ಮಸೂದೆಗೆ ಸದಸ್ಯರೆಲ್ಲರೂ ಬೆಂಬಲ ಕೊಟ್ಟರು.

ರೈತರ ಉತ್ಕರ್ಷ

ಶಾಸನ ಸಭೆಯ ಮುಂದೆ ಕಮ್ಯುನಿಸ್ಟ ಸದಸ್ಯರು ತಂದ, ರೈತರಿಗೆ ತಮ್ಮ ಬೇಸಾಯದ ಭೂಮಿಯ ಮೇಲೆ ಶಾಶ್ವತ ಅಧಿಕಾರವಿರಬೇಕೆನ್ನುವ, ಉತ್ಪತ್ತಿಯಲ್ಲಿ ಮುಕ್ಕಾಲಂಶ ತಮ್ಮ ಉಪಯೋಗಕ್ಕೆ ಬಳಸಲು ಬಿಡಬೇಕೆನ್ನುವ, ಸರಕಾರದ ಜಾಗವನ್ನು ಭೂಮಿ ಇಲ್ಲದವರಿಗೆ ಕೊಡಬೇಕೆನ್ನುವ, ರೈತರ ಸಾಲ ವಸೂಲಿಗೆ ಹೇರಲಾಗಿರುವ ತಡೆಯಾಜ್ಞೆಯನ್ನು ಇನ್ನು ಮೂರು ವರ್ಷಗಳಿಗೆ ಬೆಳೆಸಬೇಕೆನ್ನುವ, ಗೊತ್ತುವಳಿಯನ್ನು ತಿರಸ್ಕರಿಸಿತು ಸರಕಾರವು ಬೇಗನೇ-ಸಮಸ್ಯೆಯ ಪೂರ್ವಾಪರವೆಲ್ಲವನ್ನೂ ವಿಮರ್ಶಿಸಿ—ಉಚಿತ ಮಸೂದೆಯನ್ನು ತರಲಿರುವುದೆಂದು ಕಂದಾಯ ಮಂತ್ರಿಗಳು ಕೊಟ್ಟ ಭರವಸೆಯ ಮೇಲೆ ಸಭೆ ವಿಶ್ವಾಸ ವ್ಯಕ್ತಪಡಿಸಿತು. ದಕ್ಷಿಣ ಕನ್ನಡ ಜಿಲ್ಲೆಗೆ ಅನ್ವಯವಾಗುವ ಶಾಶ್ವತ ಒಕ್ಕಲು ಹಿತ ಮಸೂದೆ ಈ ಅಧಿವೇಶನದಲ್ಲಿ ಬರಲಿತ್ತು. ಆದರೆ ಅದು ಮಂಡಿಸಲಾಗಿಲ್ಲ—ಈ ವಿಷಯದಲ್ಲಿ ವಿಳಂಬ ಸಲ್ಲದೆಂದು ನಮ್ಮ ಪ್ರತಿನಿಧಿಗಳು ಮುಖ್ಯ ಮಂತ್ರಿಗಳನ್ನು ಕಂಡು ನಿವೇದಿಸಿದರೆಂದೂ, ತ್ವರೆಯಾಗಿ ಮಸೂದೆ ತರುವ ಆಶ್ವಾಸನ ದೊರಕಿದೆಯೆಂದೂ ತಿಳಿದು ಬರುತ್ತದೆ.

ಧಾರ್ಮಿಕ ಉಂಬಳಿಗಳು

ಹಿಂದಿನ ಧಾರ್ಮಿಕ ಉಂಬಳಿಗಳ ಮಸೂದೆಯ ಕೆಲವು ಕಲಮುಗಳು ಘಟನೆಗೆ ವಿರುದ್ಧವಿರುತ್ತವೆಂದು ವರಿಷ್ಠ ನ್ಯಾಯಾಲಯವು ತೀರ್ಮಾನಿಸಿದ್ದರಿಂದ, ಈ ನ್ಯೂನತೆಗಳನ್ನು ಹೋಗಲಾಡಿಸಲು ಸರಕಾರವು ತಿದ್ದುಪಡಿ ಮಸೂದೆಯೊಂದನ್ನು ತಂದಿತು. ಮಠಾಧಿಪತಿಗಳಿಗೆ ಒಪ್ಪಿಸಲ್ಪಡುವ "ಪಾದ ಕಾಣಿಕೆ"ಯ ಕುರಿತು ತೀಕ್ಷ್ಣ ವಾಗ್ಯುದ್ಧವು ನಡೆಯಿತು. ಕಿರಿಯ ಶಾಸನ ಸಭೆಯು ತಿದ್ದುಪಡಿಗಳೇನೂ ಇಲ್ಲದೆ ಮಸೂದೆಯನ್ನು ಮನ್ನಿಸಿ ಮೇಲ್ಮನೆಗೆ ಕಳಿಸಿದಾಗ, ಅಲ್ಲಿ ಸರಕಾರೇತರರ ತಿದ್ದುಪಡಿಗಳಿವು ಮಂಜೂರಾದವು. ಪರಿಣಾಮದಲ್ಲಿ ಕಿರಿಯ ಶಾಸನ ಸಭೆಗೆ ಮಸೂದೆ ಮರಳಿ ಚರ್ಚೆಗೆ ಬಂತು—ಇಲ್ಲಿ ತಿದ್ದುಪಡಿಗಳನ್ನು ಚರ್ಚಿಸಿ, ನಿರಾಕರಿಸಲಾಯಿತು. ಇನ್ನೊಮ್ಮೆ ತನ್ನ ಮುಂದೆ ಮಸೂದೆ ಚರ್ಚೆಗೆ ಬಂದಾಗ, ಹಿರಿಯ ಸಭೆಯು ಹಿಂದಿನ ತಿದ್ದುಪಡಿಗಳನ್ನು ಬಿಟ್ಟುಗೊಟ್ಟು, ಕಿರಿಯ ಶಾಸನ ಸಭೆಯು ಸ್ವೀಕರಿಸಿದಂತೆಯೇ ಮಸೂದೆಗೆ ಒಪ್ಪಿಗೆ ಕೊಟ್ಟಿತು.

ಉಡುಪಿ

ಸ್ವಾತಂತ್ರ್ಯ ದಿನಾಚರಣೆಯು— ತಾ. 15ರಲ್ಲು ಬೆಳಗ್ಗೆ ಪ್ರಭಾತ ಫೇರಿಯಿಂದ ಪ್ರಾರಂಭವಾಯಿತು. ಅಜ್ಜರಕಾಡು ಮೈದಾನಿನಲ್ಲಿ ಡಾ। ಎಸ್. ಆರ್. ಪೈಗಳೂ, ಸರ್ಕಲ್ ಕಾಂಗ್ರೆಸ್ ಕಮಿಟಿ ಕಚೇರಿಯಲ್ಲಿ ಡಾ। ಕೆ. ಎಲ್. ಐತಾಳರೂ ಧ್ವಜಾರೋಹಣ ಮಾಡಿದರು. ಸಂಜೆ ರಥಬೀದಿಯಲ್ಲಿ ಶ್ರೀ ಉಗ್ರಾಣ ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಎ. ಜೆ. ಆಳ್ವ, ಕೌಲಗಿ ಶೇಷಾಚಾರ್ಯ, ಕೆ. ಶ್ರೀನಿವಾಸ ಪೈಗಳವರು ಭಾಷಣವಿತ್ತರು. ಶ್ರೀ ಕೆ. ಸಂಜೀವ ಪೈಗಳು ಧನ್ಯವಾದಗಳನ್ನಿತ್ತರು.

ಎಮ್. ಜಿ. ಎಮ್. ಕಾಲೇಜಿ— ನಲ್ಲಿ ಸ್ವಾತಂತ್ರ್ಯ ದಿನಾಚರಣೆ ನಿಮಿತ್ತ ಬೆಳಗ್ಗೆ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಧ್ವಜಾರೋಹಣ ಮಾಡಿದರು. ನಂತರ ಸಭೆ ಜರಗಿ ಹಲವು ವಿನೋದ ಕಾರ್ಯಕ್ರಮಗಳಾದುವು. ಹಳದೀಪುರ ಸ್ಕಾಲರ್ ಶಿಪ್ಪನ್ನು ಡಾ। ಟಿ. ಮಾಧವ ಪೈಗಳವರು ಶ್ರೀ ರಾಮಚಂದ್ರ ನ್ಯಾಕರಿಗೆ ವಿತರಣೆ ಮಾಡಿದರು. ಅಂತರ್ ಕುಶಲ ಪಂದ್ಯಾಟಗಳಲ್ಲಿ ಗೆದ್ದವರಿಗೆ ಪಾರಿತೋಷ ವಿತರಣೆ ನಡೆಯಿತು.

ಎಮ್. ಜಿ. ಎಮ್. ಕಾಲೇಜಿನ ಭಾಷಾ ಸಂಘದ— ಉದ್ಘಾಟನೆಯು ಶ್ರೀ ಉಗ್ರಾಣ ಕೃಷ್ಣರಾಯರಿಂದ ನೆರವೇರಿಸಲ್ಪಟ್ಟಿತು. ಶ್ರೀ ಕು. ಶಿ. ಹರಿದಾಸ ಭಟ್ಟರು ಎಮ್. ಹರಿದಾಸ ರಾಯರ ನಿಧನಕ್ಕಾಗಿ ದುಃಖ ಸೂಚಿಸಿ ಮಾತನಾಡಿದರು. ಅಧ್ಯಕ್ಷರು 'ಸಾಹಿತ್ಯದಲ್ಲಿ ಪ್ರಗತಿ' ಕುರಿತೂ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರೂ ಸಾಹಿತ್ಯದ ಸಮ್ಯಗ್ದರ್ಶನದ ಕುರಿತು ಮಾತನಾಡಿದರು. ಶ್ರೀ ಬಿ. ಸುಬ್ಬರಾಯರು ಧನ್ಯವಾದಗಳನ್ನಿತ್ತರು.

ಶ್ರೀ ವಿಟ್ಠಲ ಶೆಣ್ಯೆಯವರ ಅಮೇರಿಕಾ ಪ್ರವಾಸ— ದ. ಕ. ಜಿಲ್ಲಾ ಬೋರ್ಡ್ ಹೈಸ್ಕೂಲಿನಲ್ಲಿ ಕೆಲವು ವರ್ಷ ಉಪಾಧ್ಯಾಯರಾಗಿದ್ದು ನಂತರ ಮದ್ರಾಸ್ ಎಜ್ಯುಕೇಶನಲ್ ಸರ್ವಿಸಿಗೆ ಸೇರಿ ಬಳ್ಳಾರಿ ಜಿಲ್ಲೆಯ ವಿದ್ಯಾಧಿಕಾರಿಗಳಾಗಿದ್ದುಕೊಂಡು ಆ ಮೇಲೆ ಮೂಲ್ಕಿ ಸರಕಾರಿ ಹೈಸ್ಕೂಲ್ ಮುಖ್ಯೋಪಾಧ್ಯಾಯರಾಗಿ ಕೆಲಸ ಮಾಡಿದ, ಗ್ರಂಥಕರ್ತರೂ ಪ್ರತಿಭಾ ಸಂಪನ್ನ ಉತ್ಸಾಹಿ ತರುಣರೂ ಉಡುಪಿಯ ಶ್ರೀ ಕೆ. ವಿಠಲ ಶೆಣ್ಯೆ, ಬಿ. ಎ. ಎಲ್. ಟಿ. ಯವರು ಅಂತರ್ ರಾಷ್ಟ್ರೀಯ ವಿದ್ಯಾಕ್ರಮ ಪರಿಶೀಲನೆ ಮಾಡಲು ಅಮೇರಿಕಕ್ಕೆ ಇದೇ ತಾ. 25ರಲ್ಲು ಮುಂಬಯಿಯಿಂದ ಪ್ರಯಾಣ ಬೆಳೆಸುವರು. ಶ್ರೀ ಶೆಣ್ಯೆಯವರು ಆರು ತಿಂಗಳ ಕಾಲ ಅಲ್ಲಿ ಇರುವರು ಎಂದು ಗೊತ್ತಾಗಿದೆ.

ಶ್ರೀ ಶೆಣ್ಯೆಯವರನ್ನು ಬೀಳ್ಕೊಡುವ ಸಮಾರಂಭವೊಂದು ತಾ. 12ರಂದು ಸಿಂಡಿಕೇಟ್ ಬ್ಯಾಂಕಿನ ವತಿಯಿಂದ ಜರಗಿ, ಶ್ರೀಗಳಾದ ಆರ್. ಫೆರ್ನಾಂಡಿಸ್, ಟಿ. ರಮೇಶ ಪೈ, ಡಾ। ಟಿ. ಎಂ. ಎ. ಪೈ ಇವರ ಭಾಷಣಗಳಾದುವು.

ಭಜನ ಸಪ್ತಾಹ— ಸ್ಥಳೀಯ ಶ್ರೀ ವೆಂಕಟರಮಣ ದೇವಸ್ಥಾನದಲ್ಲಿ ವರ್ಷಂಪ್ರತಿ ಜರಗುವ ಭಜನ ಸಪ್ತಾಹವು ನಾಗರಪಂಚಮಿ ದಿವಸ ಪ್ರಾರಂಭವಾಗಿ ತಾ. 11ರಂದು ವಿಶೇಷ ಸಂತರ್ಪಣೆಯೊಂದಿಗೆ ವಿಜೃಂಭಣೆಯಿಂದ ಕೊನೆಗೊಂಡಿತು.

ಬೊಂಬಾಯಿ ಮಂತ್ರಿಗಳ ಆಗಮನ— ಬೊಂಬಾಯಿ ಸರಕಾರದ ವಿದ್ಯಾ ಹಾಗು ನ್ಯಾಯ ಮಂತ್ರಿ ಶ್ರೀ ದಿನಕರ ರಾವ್ ಎಸ್. ದೇಸಾಯಿಯವರು ಇದೇ ತಾ. 20ನೇ ಸಂಜೆ 3-20ಕ್ಕೆ ಎಮ್. ಜಿ. ಎಮ್. ಕಾಲೇಜಿನ ಅನಂತ ಬಾಳಿಗಾ ಮೆಮೋರಿಯಲ್ ಹಾಲನ್ನೂ ಮರುದಿನ ಸಂಜೆ 3 ಗಂಟೆಗೆ ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ನೂತನ ಹೊಸ್ಟೆಲನ್ನೂ ಉದ್ಘಾಟಿಸುವರು. ಕಾಲೇಜು ಆಸ್ಪತ್ರೆಯ ಶಂಕು ಸ್ಥಾಪನೆಯನ್ನು ಡಾ। ಎ. ವಿ. ಬಾಳಿಗರು ಮಾಡುವರು. ಬೊಂಬಾಯಿ ಲೆಜಿಸ್ಲೇಟಿವ್ ಕೌನ್ಸಿಲಿನ ಪ್ರೆಸಿಡೆಂಟ್ ಶ್ರೀ ಆರ್. ಎಸ್. ಹುಕ್ಕೇರಿಕರರು ಸಮಾರಂಭಗಳ ಅಧ್ಯಕ್ಷತೆ ವಹಿಸುವರು. ಉಡುಪಿ ನಗರ ಸಭೆಯವರು ತಾ. 20ರಲ್ಲು ಆಸರೀರ್ವರಿಗೂ ಮಾನಪತ್ರವೀಯಲು ನಿರ್ಧರಿಸಿರುವರು.

ವಾರ್ಷಿಕೋತ್ಸವ— ಸ್ಥಳೀಯ ಕಲಾವೃಂದದ ವಾರ್ಷಿಕೋತ್ಸವವು ಇದೇ ತಾ. 13 ಮತ್ತು 14ರಲ್ಲು ಸಂಸ್ಕೃತ ಕಾಲೇಜಿನಲ್ಲಿ ಜರಗಿತು. ಉತ್ಸವವನ್ನು ಶ್ರೀ ಕೌಲಗಿ ಶೇಷಾಚಾರ್ಯರು ಉದ್ಘಾಟಿಸಿದರು. ಸಭಾಧ್ಯಕ್ಷತೆಯನ್ನು ಶ್ರೀ ಉಗ್ರಾಣ ಕೃಷ್ಣರಾಯರು ವಹಿಸಿದ್ದರು. ವರದಿವಾಚನವಾದ ಬಳಿಕ ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಕನ್ನಡದ ಸಮಸ್ಯೆಗಳ ಕುರಿತು ಮಾತನಾಡಿದರು. ಎರಡನೆ ದಿವಸದ ಸಭಾಧ್ಯಕ್ಷತೆಯನ್ನು ಮಂಗಳೂರು ನಗರ ಸಭಾಧ್ಯಕ್ಷ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ವಹಿಸಿದ್ದರು. ಶ್ರೀಗಳಾದ ಟಿ. ಗೋಪಾಲಕೃಷ್ಣ ಭಟ್, ಕು. ಶಿ. ಹರಿದಾಸ ಭಟ್ಟರು ಯಕ್ಷಗಾನ ಕಲೆ ಮತ್ತು ರಾಜಕಾರಣಗಳು ಎಂಬೀ ವಿಷಯದಲ್ಲಿ ಅನುಕ್ರಮವಾಗಿ ಭಾಷಣವಿತ್ತರು.

ಭಾಷಣ— ಸ್ಥಳೀಯ ಆರ್ಯ ಸಮಾಜದ ಆಶ್ರಯದಲ್ಲಿ ತಾ. 14 ಮತ್ತು 15ರಲ್ಲು ಅನುಕ್ರಮವಾಗಿ ಶ್ರೀಗಳಾದ ಪಿ. ರಾಘವೇಂದ್ರ ರಾವ್ ಮತ್ತು ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆಗಳು ಜರಗಿ ಸ್ವತಂತ್ರ ಭಾರತದಲ್ಲಿ ನಮ್ಮ ಕರ್ತವ್ಯಗಳೇನು ಎಂಬಿತ್ಯಾದಿ ಕುರಿತು ಭಾಷಣಗಳಾದುವು.

ಬಾತ್ಮಿಗಳು – ಬೇರೆ ಬೇರೆ ಕಡೆಗಳಿಂದ ಬಂದ ಸ್ವಾತಂತ್ರ್ಯ ದಿನಾಚರಣೆ ಮತ್ತಿತರ ಕೆಲವು ಸುದ್ದಿಗಳನ್ನು ಸ್ಥಳಾಭಾವದಿಂದ ಈ ಬಾರಿ ಪ್ರಕಟಿಸಲಿಲ್ಲ. (ಸಂ. ನ.)

ನಡೆಯುವ ಚಿತ್ರ:— ಫಿಲ್ಮಿಸ್ಥಾನದವರ ಸುಮನೋಹರ ಸಂಗೀತ ಚಿತ್ರ.

ಶರ್ತ್

ಶ್ಯಾಮ, ಶಶಿಕಲಾ, ಮೋಹನಾ ಮತ್ತು ದೀಪಕ್.

ಬರುವ ಚಿತ್ರ:- ಹೈದರಾಬಾದ್-ಕೀ-ನರ್ಗೀಸ್.

ನಿರೀಕ್ಷಿಸಿ-- ಬಹುಕಾಲದ ನಿಮ್ಮ ಆಸೆ ಪೂರೈಸಲು, ಜೀವನದ ನೈಜ ದೃಶ್ಯಗಳನ್ನು ಕಾಣಲು "ಬೇದಿಂಗ್ ಬ್ಯೂಟಿ" (Bathing Beauty) ಬರಲಿದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಕನ್ನಡದಲ್ಲಿ ಹೀರ ಹೊಸಬಗೆಯ ಪುಸ್ತಕ—

ಕುಮಾರಸ್ವಾಮಿ ಯವರ

ಬದುಕು ಬಂಗಾರ

(ಜೀವನ ದರ್ಶನ)

ಬೆಲೆ: 1—8—0

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ

ಬೆಲೆ: ನಾಮಾತ್ರ 1—8—0

ನವಯುಗ ಪ್ರೆಸ್, ಉಡುಪಿ.

ಕಾರ್ಕಳ— ದ. ಕ. ಜಿಲ್ಲಾ ಲ್ಯಾಂಪ್ರಿಂ ಅಥೋರಿಟಿಯ ನೇತೃತ್ವದಲ್ಲಿ ಆನಂತರಯನದ 'ಪ್ರಸಾದ ಭವನ'ದಲ್ಲಿ ಸಾರ್ವಜನಿಕ ವಾಚನಾಲಯ ಹಾಗೂ ಪುಸ್ತಕಾಲಯವೊಂದು ಇದೇ ತಾ. 15ರಲ್ಲು ತೆರೆಯಲ್ಪಟ್ಟಿತು. ಸಮಾರಂಭದ ಅಧ್ಯಕ್ಷತೆಯನ್ನು ಸ್ಥಳೀಯ ಡಿ. ಮುನ್ಸಿಫ್ ಶ್ರೀ. ಎ. ಎಮ್. ದೇಸಾರವರು ವಹಿಸಿದ್ದರು. ಶ್ರೀಗಳಾದ ನೀಲಾಂಬರ ರಾವ್, ಯು. ಕಣ್ಣಪ್ಪ, ಕೆ. ಸಂಜೀವ ಭಟ್ ಮೊದಲಾದವರ ಭಾಷಣಗಳಾಗಿ ಬಿ. ಶ್ಯಾಮರಾಯ ಸಟ್ಟರು ಧನ್ಯವಾದಗಳನ್ನಿತ್ತರು.

ಬೈಂದೂರು— ಸ್ಥಳೀಯ ಕಲಾವೃಂದದ ಬಳಗದವರ ಆಶ್ರಯದಲ್ಲಿ ನಡೆಯುತ್ತಿರುವ 'ಸಾರ್ವಜನಿಕ ಧರ್ಮಾರ್ಥ ವಾಚನಾಲಯಕ್ಕೆ' ಸ್ಥಳೀಯ ಮಹನೀಯರನೇಕರು ಉಚಿತವಾಗಿ ಪತ್ರಿಕೆಗಳನ್ನು ಒದಗಿಸುತ್ತಿರುವರು.

ಶಿರ್ವ— ತಾ. 7ರಲ್ಲು ಶಿರ್ವ ಪಂಚಾಯತ ಬೋರ್ಡಿನ ಆಶ್ರಯದಲ್ಲಿ ಬಂಟಕಲ್ಲಿನಲ್ಲಿ ಧರ್ಮಾರ್ಥ ವಾಚನಾಲಯವೊಂದನ್ನು ಕೆಪ್ಟನ್ ಯು. ಎಸ್. ನಾಯ್ಕರು ತೆರೆದರು. ಶ್ರೀ ಎಸ್. ಎ. ಹೆಗ್ಡೆಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಗುಡ್ಡೆ ಅಂಗಡಿ (ಕುಂದಾಪುರ)— ಕಳೆದ ಜುಲಾಯಿ ತಾ. 1ರಲ್ಲು ಸ್ಥಾಪನೆಯಾದ ಗುಡ್ಡೆ ಅಂಗಡಿ ರೋಡ್ ಡೆವಲಪ್‌ಮೆಂಟ್ ಕಮಿಟಿಯ ಪ್ರಥಮ ಮಹಾ ಸಭೆಯು ಇದೇ ತಾ. 1ರಲ್ಲು ಜರಗಿತು. ಶ್ರೀಗಳಾದ ಸಿ. ರಾಮಕೃಷ್ಣ ಹೆಬ್ಬಾರ್, ಬಾಬಣ್ಣ ಆಚಾರಿ, ಕೆ. ವೆಂಕಪ್ಪ ಸಟ್ಟಿ, ನೈಲಾಡಿ ಸೂರಪ್ಪ ಸಟ್ಟಿ ರು, ಅಧ್ಯಕ್ಷ, ಉಪಾಧ್ಯಕ್ಷ, ಕೋಶಾಧಿಕಾರಿ ಮತ್ತು ಕಾರ್ಯದರ್ಶಿಗಳಾಗಿ ಅನುಕ್ರಮದಿಂದ ಆರಿಸಲ್ಪಟ್ಟರು. ಕಾರ್ಯಕಾರೀ ಸಮಿತಿಗೆ ಇತರ ಸದಸ್ಯರೂ ಆರಿಸ್ಪಟ್ಟರು.

ಮೂಲ್ಕಿ— ಸ್ಥಳೀಯ ಸರಕಾರಿ ಹ್ಯಾಸ್ಕೂಲಿನ ಮುಖ್ಯೋಪಾಧ್ಯಾಯರಾದ ಶ್ರೀ ಕೆ. ವಿಠಲ ಶೆಣೈಯವರು ಹೆಚ್ಚಿನ ವ್ಯಾಸಂಗಕ್ಕಾಗಿ ಅಮೇರಿಕಕ್ಕೆ ಇದೇ ತಾ. 25ರಲ್ಲು ಪ್ರಯಾಣ ಬೆಳೆಸಲಿರುವುದರಿಂದ ಅವರನ್ನು ಬೀಳ್ಕೊಡುವ ಸಮಾರಂಭವು ಇದೇ ತಾ. 1ರಲ್ಲು ಯೂನಿಯನ್ ಕ್ಲಬ್ಬಿನ ಆಶ್ರಯದಲ್ಲಿ ಡಾ। ಯಸ್. ಚಂದ್ರ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಆರ್. ಎಚ್. ಪೂಂಜರು ಸ್ವಾಗತ ಭಾಷಣ ಮಾಡಿದರು. ಡಾ। ಎಮ್. ರಾಯಪ್ಪ ಕಾಮತ್, ಪಿ. ತಿಮ್ಮಪ್ಪಯ್ಯ, ವೈ. ವಿ. ಸುಬ್ರಾಯ ಭಟ್. ಬಿ. ಭೋಜರಾವ್, ಎಮ್. ಕೆ. ಎಲ್ಲಪ್ಪ, ಎಮ್. ಪಿ. ದೇವರಾವ್ ಮತ್ತು ಎಮ್. ರಾಮಣ್ಣ ಸಟ್ಟರು ಅತಿಥಿಯ ಗುಣಗಾನ ಮಾಡಿದರು. ಕಾರ್ಯದರ್ಶಿ ಶ್ರೀ ಜಿ. ಎಲ್. ಮೂಲ್ಕಿಯವರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ಎಮ್. ಆರ್. ಎಚ್. ಪೂಂಜರು ಏರ್ಪಡಿಸಿದ ಮೇರೆಗೆ ಇತ್ತೀಚೆಗೆ ಮೂಲ್ಕಿ ಮಿಶನ್ ಕಂಪೌಂಡಿನಲ್ಲಿ ಮತ್ತು ಹಳೆಯಂಗಡಿ ಶಾಲೆಯಲ್ಲಿ ಶ್ರೀ ನಯಂಪಳ್ಳಿ ರಾಮರಾಯರು ಜಪಾನು ವ್ಯವಸಾಯ ಕ್ರಮದ ಕುರಿತು ಭಾಷಣವಿತ್ತರು. ಈ ಸಂದರ್ಭದಲ್ಲಿ ಕಮ್ಯೂನಿಟಿ ಪ್ರೊಜೆಕ್ಟಿನ ಅಸಿಸ್ಟೆಂಟ್ ಆಫೀಸರ್ ಶ್ರೀ ಕೆ. ಎಲ್. ಸೂರ್ಯನಾರಾಯಣನವರು ಮೂಲ್ಕಿ ಹಾಲು ಸರಬರಾಯಿ ಸೊಸೈಟಿಯ ಡಿಪೋವನ್ನು ಹಳೆಯಂಗಡಿಯಲ್ಲಿ ಉದ್ಘಾಟಿಸಿದರು.

ಸ್ವಾತಂತ್ರ್ಯ ದಿನಾಚರಣೆಗಳು

ಫಲಿಮಾರು— ಬೋರ್ಡು ಹಾ। ಎ। ಶಾಲೆಯಲ್ಲಿ ಪಂಚಾಯತ ಬೋರ್ಡು ಆಶ್ರಯದಲ್ಲಿ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ವಾಸುದೇವ ಆಚಾರಿಯವರ ಅಧ್ಯಕ್ಷತೆಯಲ್ಲಿ ಧ್ವಜ ವಂದನೆ, ಸಭೆ ಭಾಷಣಗಳಾದುವು.

ಶಿರ್ವ: ಹಿಂದೂ ಹಾ। ಎ। ಶಾಲೆಯಲ್ಲಿ ಶ್ರೀ। ಜಗನ್ನಾಥ ಸಟ್ರಿ ಅಧ್ಯಕ್ಷತೆಯಲ್ಲಿ ಸಭೆ, ಸಂಗೀತ ಕಾರ್ಯಕ್ರಮಗಳಾದವು.

ಅಜೆಕಾರು: ಬೋರ್ಡು ಹಾ। ಎ। ಶಾಲಾ ಕಟ್ಟೋಣದ ಶಂಕು ಸ್ಥಾಪನೆಯನ್ನು ಪಂಚಾಯತ ಬೋರ್ಡು ಅಧ್ಯಕ್ಷ ಶ್ರೀ. ಕೆ. ನಾರಾಯಣ ಅತಿಕಾರಿಗಳು ನೆರವೇರಿಸಿದರು. ಶ್ರೀಗಳಾದ ಕೆ. ಚನ್ನಪ್ಪ, ಡಿ. ಅಣ್ಣಪ್ಪ ನಾಯಕ್, ಸಣ್ಣಯ್ಯ ಕಲ್ಯಾರ್, ಡಾ. ಯು. ಕೃಷ್ಣ, ರೆ। ಫಾ॥ ಎಸ್. ಫೆರ್ನಾಂಡೀಸ್ ಮೊದಲಾದವರು ಮಾತನಾಡಿದರು.

ಪಳ್ಳಿ— ಗ್ರಾಮ ಪಂಚಾಯತ ವತಿಯಲ್ಲಿ ಶ್ರೀ ಸದಾಶಿವ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ಅಡಮಾರು— ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಎಸ್. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಧ್ವಜವಂದನೆ, ಎಮಾರ್ಳು ಯಕ್ಷಗಾನ ಮಂಡಳಿಯವರಿಂದ ಯಕ್ಷಗಾನ, ಪಿ. ಎಲ್. ರಾಘವೇಂದ್ರ ರಾಯರಿಂದ ಹರಿಕಥೆ ನಡೆಸಲ್ಪಟ್ಟಿತು.

ಕುಂಬಳೆ— ಬೋರ್ಡು ಹಾ। ಎ। ಶಾಲೆಯಲ್ಲಿ ಶ್ರೀ ಬಿ. ಮಾಧವ ಮೈಗಳ ಅಧ್ಯಕ್ಷತೆಯಲ್ಲಿ ಪಂಚಾಯತ ಬೋರ್ಡಿನಲ್ಲಿ ಶ್ರೀ ಬಿ. ದೇವಪ್ಪ ಆಳ್ವರ ಅಧ್ಯಕ್ಷತೆಯಲ್ಲಿ, ಫಿರ್ದೌಸ್ ಶಾಲೆಯಲ್ಲಿ ಶ್ರೀ ಟಿ. ಕೆ. ಮಹಮ್ಮದ್ ಕುಂಞಾಯರ ನೇತೃತ್ವದಲ್ಲೂ ರಾಷ್ಟ್ರ ಧ್ವಜ ವಂದನೆ ಮೊದಲಾದ ಕಾರ್ಯಕ್ರಮಗಳಾದುವು.

ಯಡನೀರು— ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ವೈ. ಸೂದು ಸಟ್ಟರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣವಾಗಿ, ಶ್ರೀ. ವಾಸುದೇವ ಕಾಮತರಿಂದ ತಿಂಡಿ ಹಂಚಿದರು.

ಬೈಲೂರು— ಸ್ಥಳೀಯ ಪಂಚಾಯತ ಬೋರ್ಡಿನಲ್ಲಿ ಶ್ರೀ. ಎನ್. ಎಸ್. ಹರ್ಕಳರ ಅಧ್ಯಕ್ಷತೆಯಲ್ಲಿ ಶ್ರೀ. ಮುಖ್ಯಪ್ರಾಣ ತಂತ್ರಿಗಳು ರಾಷ್ಟ್ರ ಧ್ವಜವನ್ನು ಹಾರಿಸಿದರು. ಬಳಿಕ, ಸಭಿಕರ ಭಾಷಣಗಳಾದುವು.

ಹೊಂಬಾಡಿ — ಮಂಡಾಡಿ— ವಿವೇಕೋದಯ ಶಾಲೆಯಲ್ಲಿ ಡಾ। ಕೆ. ಎಚ್. ರಾಮಣ್ಣ ಸಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಕಾಪು ಸಂಜೀವ ಸಟ್ಟರ ಭಾಷಣವಾಯಿತು.

ಬೆಳ್ವೆ— ಹಾ। ಎ। ಶಾಲೆಯಲ್ಲಿ ಶ್ರೀ ಎಚ್. ಎಲ್. ಹಂದೆಯವರು ರಾಷ್ಟ್ರಧ್ವಜವನ್ನು ಅರಳಿಸಿದ ಬಳಿಕ ಶ್ರೀ ಎಸ್. ಕೃಷ್ಣರಾಯ ಹಾಲಂಬಿಯವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಭಾಷಣಗಳಾದುವು.

ಜಾನುವಾರು ಕಟ್ಟೆ— ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಪಟೇಲ್ ಶ್ರೀ. ಮಂಜಯ್ಯ ಹೆಗ್ಡೆಯವರ ನೇತೃತ್ವದಲ್ಲಿ ಧ್ವಜವಂದನೆಯಾಗಿ ಶ್ರೀ. ಅನಂತ ಉಪಾಧ್ಯಯರ ಭಾಷಣವಾಯಿತು. ಶ್ರೀ. ಬಿ. ಸುಬ್ಬಣ್ಣ ಹೆಗ್ಡೇರು ಅಧ್ಯಕ್ಷತೆ ವಹಿಸಿದ್ದರು.

ಹೆಗ್ಗುಂಜೆ— ಸ್ಥಳೀಯ ಬಿ. ಟಿ. ಹಾ। ಎ। ಶಾಲೆಯಲ್ಲಿ ಪ್ರಭಾತ ಫೇರಿ, ಧ್ವಜವಂದನೆ ಸಭೆ, ಭಾಷಣಗಳಾದುವು.

In the High Court of Judicature at Madras.

In the matter of the Indian Companies Act, 1913 and In the matter of the Homes & Estates Ltd.

* * * * *

"The share capital of Rs. 1,00,000/- was by virtue of a special resolution dated 29th December, '49 of the above Company and the sanction of an order of the High Court of Judicature at Madras in its Ordinary Civil Jurisdiction dated 5th April, 1954 rêduced from Rs. 1,00,000/- divided into fully paid up shares of 100 each to 1000 fully paid up shares of 50 each. At the date of registration of this minute all the said shares have been issued and are deemed to be fully paid up. The share capital of the Company is accordingly on the registration of this minute Rs. 50,000/- divided into 1000 fully paid up shares of Rs 50/- each."

True Copy.

Sd. M. R. Karnad,
Managing Director.

Certificate of Registration of Order of Court confirming reduction of Capital.

(Pursuant to section 61(4) of the Indian Companies Act, 1913.)

* * * * *

THE HOMES AND ESTATES LIMITED

(and reduced) having by special resolution reduced its capital, and such reduction having been confirmed by an order of the High Court of Judicature at Madras bearing date, the 12th day of April 1954, I hereby certify that a copy of the said order and a minute approved by the court showing particulars of the capital and shares of the company as altered by the said order have this day been registered.

Given under my hand at Mangalore this ninth day of August one thousand nine hundred and fiftyfour.

THE SEAL

K. S. Rao.
Assistant Registrar of
Joint Stock Companies.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೊ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.



ಮಂಗಳೂರು

ಹೆಮ್ಮಕ್ಕಳ ಉಳಿತಾಯ ಚಳವಳಿಯ ಉದ್ಘಾಟನೆಯನ್ನು— ತಾ. 8ರಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆ, ಅವರು ನೆರವೇರಿಸುತ್ತ, ಹೆಂಗಸರು ಈ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಬೇಕೆಂದರು. ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ. ಅವರು ಸಭಾಧ್ಯಕ್ಷತೆ ವಹಿಸಿದ್ದು ಸರ್ವರ ಸಹಕಾರವೂ ಈ ಚಳವಳಿಗೆ ಅವಶ್ಯಕವಿದೆ ಎಂದರು. ಶ್ರೀಮತಿಯರಾದ ಲೀಲಾಬಾಯಿ ಬಾಳಿಗ, ಪಾರ್ವತಿ ಪ್ರಭು, ರಾಂಭವಿ ವಿ. ಆರ್. ಸೂಂಜ ಮೊದಲಾದವರು ಮಾತನಾಡಿದರು. ಶ್ರೀಮತಿ ಕಲ್ಯಾಣಿ ರೆಡ್ಡಿಯವರು ಧನ್ಯವಾದಗಳನ್ನರ್ಪಿಸಿದರು.

ಕವಿ ರವೀಂದ್ರ ದಿನಾಚರಣೆಯು ತಾ. 9ರಲ್ಲಿ ಶ್ರೀ ಯು. ಶ್ರೀನಿವಾಸ ಕಿಣಿಯರ ಅಧ್ಯಕ್ಷತೆಯಲ್ಲಿ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಜರಗಿತು.

ಡಾ| ಎಚ್. ದೇವದಾಸ ಅಡಪರು ಇದೇ ತಾ. 5ರಲ್ಲಿ ಸ್ಥಳೀಯ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಕೆನಡಾ ಮತ್ತು ಸಂಯುಕ್ತ ಅಮೇರಿಕದಲ್ಲಿಯ ತನ್ನ ಪ್ರವಾಸದ ಕುರಿತು ಭಾಷಣವಿತ್ತರು.

ಶ್ರೀ ಎಚ್. ವಿ. ಕಾಮತರು— ಇದೇ ತಾ. 12ರಲ್ಲಿ ಸ್ಥಳೀಯ ಬೆಸೆಂಟ್ ಮಂದಿರದಲ್ಲಿ ಸೇರಿದ ಸಾರ್ವಜನಿಕ ಸಭೆಯಲ್ಲಿ ಭಾರತ ಸರಕಾರದ ವಿದೇಶ ಧೋರಣೆ ಕುರಿತು ಮಾತನಾಡಿದರು. ಗೋವೆ ಮತ್ತು ಪೋಂಡಿಚೇರಿಗಳ ಕುರಿತು ಭಾರತ ಸರಕಾರದ ನೀತಿ ಸರಿಯಲ್ಲವೆಂದರು. ಅಧ್ಯಕ್ಷಸ್ಥಾನ ವಹಿಸಿದ ಶ್ರೀ ಕೆ. ಆರ್. ಕಾರಂತರು ಗೋವೆಯಂತಹ ಮಹಾ ಪ್ರಶ್ನೆಗಳನ್ನು ಶ್ರೀ ನೆಹರೂರವರು ತನ್ನ ಇಚ್ಛೆ ಪ್ರಕಾರ ಮಾಡುತ್ತಿರುವುದು ಶೋಚನೀಯವೆಂದರು.

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಸಮಿತಿಗೆ— ಅಧ್ಯಕ್ಷ ಡಾ| ಯು. ಪಿ. ಮಲ್ಯರು ಈ ಕೆಳಗಿನವರನ್ನು ನಾಮಕರಣ ಮಾಡಿರುವರು. ಶ್ರೀಗಳಾದ ಎಫ್. ಎಕ್ಸ್. ಡಿ. ಪಿಂಟೋ ಮತ್ತು ಕೆ. ಆರ್. ಆಚಾರ್ಯ (ಉಪಾಧ್ಯಕ್ಷರು), ಶ್ರೀ ಕೆ. ಸದಾನಂದ ಹೆಗ್ಡೆ (ಪ್ರಧಾನ ಕಾರ್ಯದರ್ಶಿ), ಶ್ರೀಗಳಾದ ಬಿ. ಬಿ. ಶೆಟ್ಟಿ ಮತ್ತು ಡಾ| ಎಮ್. ಎಸ್. ಹೆಗ್ಡೆ (ಜತೆ ಕಾರ್ಯದರ್ಶಿಗಳು), ಶ್ರೀ ಡಿ ಆರ್. ಕರ್ಕೇರ (ಖಜಾಂಚಿ), ಶ್ರೀಗಳಾದ ಕೆ. ಕೆ. ಶೆಟ್ಟಿ, ಪಿ. ವೈಕುಂಠ ಬಾಳಿಗ, ಟಿ. ಎ. ಪೈ, ಎಮ್. ಕೆ. ತಿಂಗಳಾಯ, ಕೊಳ್ಕೆಬೈಲು ಸೂರಪ್ಪ ಶೆಟ್ಟಿ, ಎ. ಲಕ್ಷ್ಮಪ್ಪ ರೈ, ಬಿ. ದೇವಪ್ಪ ಆಳ್ವ ಮತ್ತು ಕೆ. ವೇಣುಗೋಪಾಲ ನಾಯಕ್ (ಇತರ ಸದಸ್ಯರು).

ನಗರ ಸಭೆಯು— ತಾ. 7ರಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ರಥಬೀದಿಯಲ್ಲಿರುವ ಮುಸ್ಲಿಂ ಬಾಲಿಕಾ ಪಾಠಶಾಲೆಯನ್ನು ವಿದ್ಯಾಸಮಿತಿಯ ನಿರ್ಣಯದಂತೆ ಜನರಲ್ ಶಾಲೆಯಾಗಿ ಮಾರ್ಪಡಿಸುವ ಠರಾವಾಯಿತು. ನಗರಸಭೆಯ ಕ್ಷೇತ್ರದೊಳಗೆ ಆಹಾರಕ್ಕಾಗಿ ಕೊಲ್ಲುವ ಹಂದಿಗಳಿಗೆಲ್ಲ 'ಆಹಾರಯೋಗ್ಯ' ವೆಂಬ ಮುದ್ರೆ ಹಾಕಬೇಕೆಂಬ ಚರ್ಚೆಗೊಳಗಾಗಿ ಕೊನೆಗೆ ಒಂತೆಗೆಯಲ್ಪಟ್ಟಿತು.

ಮದ್ರಾಸು ಸರಕಾರಕ್ಕೆ ಮನವಿ— ಮಂಗಳೂರು ನಾಗರಿಕರ ಸಂಘದ ಕಡೆಯಿಂದ ಶ್ರೀಗಳಾದ ಡಿ. ಮೋಹನ ರಾವ್ ಮತ್ತು ಎ. ಕೆ. ಸೇವಕರು, ಎಮ್. ಎಲ್. ಎ. ಗಳಾದ ಶ್ರೀಯುತರು ಎಲ್. ಸಿ. ಪಾಯಸ್, ವೈಕುಂಠ ಬಾಳಿಗ ಮತ್ತು ಎನ್. ಎಸ್. ಸುವರ್ಣರು ತಾ. 9ರಲ್ಲಿ ಸ್ಥಳೀಯ ಸಂಸ್ಥೆಗಳ ಮಂತ್ರಿಗಳನ್ನು ಮದ್ರಾಸಿನಲ್ಲಿ ಕಂಡು ಮಂಗಳೂರು ಮುನಿಸಿಪಾಲಿಟಿಯಲ್ಲಿ ಈಚಿಗಿನ ತೆರಿಗೆ ವಿಮರ್ಶೆಯಿಂದಾದ ಅನ್ಯಾಯಗಳನ್ನು ವಿವರಿಸಿ ಮನವಿಯನ್ನೊಪ್ಪಿಸಿದರು. ಸರಕಾರವು ಈ ಮನವಿಯ ವಿಚಾರದಲ್ಲಿ ತಕ್ಕ ಕಾರ್ಯ ಕೈಕೊಳ್ಳಬಹುದೆಂಬ ನಿರೀಕ್ಷೆಯಿದೆ ಎನ್ನಲಾಗುತ್ತಿದೆ.

ಸ್ವಾತಂತ್ರ್ಯ ದಿನೋತ್ಸವವು— ಮಂಗಳೂರಲ್ಲಿ ತಾ. 15ರಲ್ಲಿ ಜಿಲ್ಲಾ ಕಲೆಕ್ಟರರ ನೇತೃತ್ವದಲ್ಲಿ ಬೆಳಿಗ್ಗೆ ಕೇಂದ್ರ ಮೈದಾನದಲ್ಲಿ ಧ್ವಜವಂದನೆಯಿಂದ ಪ್ರಾರಂಭವಾಯಿತು. ಸಂಜೆ ಸ್ಥಳೀಯ ಪ್ರಮುಖ ವ್ಯಾಯಾಮ ಶಾಲೆಗಳ ವಿದ್ಯಾರ್ಥಿಗಳಿಂದ ಅಂಗಸಾಧನೆ ಮತ್ತು ಶಕ್ತಿ ಪ್ರದರ್ಶನ, ಗಾಯನ, ವಿವಿಧ ವಿನೋದಾವಳಿ ಕಾರ್ಯಕ್ರಮಗಳಾದುವು. ಬಳಿಕ ಡಾ| ಯು. ಪಿ. ಮಲ್ಯರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಜರಗಿ ಶ್ರೀಗಳಾದ ಜೇರೆಗದ್ದೆ ಅಪ್ಪಯ್ಯ, ಅಣ್ಣಪ್ಪ, ಡಿ. ಆರ್. ಕರ್ಕೇರ, ಭಾಷಣಗಳಾದುವು. ಅಧ್ಯಕ್ಷರು ಸ್ವತಂತ್ರ ಭಾರತದಲ್ಲಿ ಜನತೆಯ ಕರ್ತವ್ಯವೇನೆಂಬುದನ್ನು ತಿಳಿಸಿ ಭಾಷಣಮಾಡಿದ ಮೇಲೆ ಕೆ. ಕೆ. ಶೆಟ್ಟಿ ಇವರು ಧನ್ಯವಾದಿಸಿದರು.

ಸರಕಾರೀ ಸ್ಥಳದ ಪರಾಭಾರೆಗೆ ಆಕ್ಷೇಪ— ಮಾರ್ಗಗಳ ಅಂಚುಗಳಲ್ಲಿ ಟೌನ್ ಪ್ಲಾನಿಂಗ್ ಯೋಜನೆಯಂತೆ ಕಟ್ಟಡಗಳನ್ನು ಕಟ್ಟಬಹುದಾದ ಮಿತಿಯನ್ನು ನಿಶ್ಚಯಿಸುವ ತನಕ ಮಾರ್ಗಗಳ ಅಂಚುಗಳ ಬಳಿಯಲ್ಲಿರುವ ಪೊರೊಂಬೋಕ್ ಸ್ಥಳಗಳನ್ನು ಲಗ್ತೀಪಟ್ಟೆದಾರರಿಗೆ ಮಾಡಕೂಡದೆಂಬದಾಗಿ ಮಂಗಳೂರು ನಗರಸಭೆಯಲ್ಲಿ ನಿರ್ಧಾರವಾಗಿದೆ.

ಮುಂಬಾಯಿ— ಜಗುನ ನಾಡಹಬ್ಬಕ್ಕೆ ಮುಂಬಾಯಿಯಿಂದ ಕನ್ನಡ ಸೀಪಲ್ಸ ಪಬ್ಲಿಕೇಶನ್ಸವರು ಹೊಸ ಹಾಟ ಎಂಬ ವೈನಿಕ ಮತ್ತು ವಾರ್ತಪತ್ರಗಳನ್ನೂ, ಜ್ಯೋತಿರಲಿಂಗ (Light & Power) ಎಂಬ ಮಾಸಿಕವನ್ನೂ ಬೇಸಿಕ್ ಸಂಸ್ಕೃತ ಪಬ್ಲಿಕೇಶನ್ಸವರು "ದಿವ್ಯಭಾರತಂ" ಎಂಬ ಸಂಸ್ಕೃತ ವಾರಪತ್ರವನ್ನೂ ಹೊರಡಿಸುವ ಸಿದ್ಧತೆ ನಡೆಸಿದ್ದಾರೆ.

ಈ ಎಲ್ಲ ಪತ್ರಗಳ ಮುಖ್ಯ ಸಂಪಾದಕರು ಇಂಡಿಯನ್ ಮಾರ್ಕೆಟಿನ ಸುಪ್ರಸಿದ್ಧ ಸಂಪಾದಕರಾದ ಮ. ಗು. ಮುದ್ಗಲರು.

ಉತ್ತಮ ಕನ್ನಡ ಗ್ರಂಥಗಳಿಗೆ ಬಹುಮಾನ

ಮದ್ರಾಸು ಸರಕಾರವು ಕನ್ನಡದಲ್ಲಿ ಉತ್ತಮ ಗ್ರಂಥಗಳಿಗೆ 1954ರಲ್ಲಿ ಕೊಡುವ ಬಹುಮಾನದ ಬಗ್ಗೆ ಗ್ರಂಥಗಳನ್ನು ಕಳುಹಿಸುವುದು. ತಾ. 15—9—1954ರ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕಾಗಿ ವಿನಂತಿ. ಪುಸ್ತಕಗಳು 1948ರಲ್ಲಿ ಅಥವಾ ಆ ಮೇಲೆ ಪ್ರಕಟವಾದವುಗಳಾಗಬೇಕು. ಕೈಬರಹದ ಪ್ರತಿಗಳನ್ನೂ ಕಳುಹಿಸಬಹುದು.

ವಿಷಯ:- ೧. ಶಿಶು ಸಾಹಿತ್ಯ; ೨. ಸಣ್ಣಕಥೆ; ೩. ನಾಟಕ.

ನಿಯಮಗಳು:- ೧. ಮದ್ರಾಸು ಸಂಸ್ಥಾನದಲ್ಲಿರುವ ಗ್ರಂಥಕರ್ತರು ಮಾತ್ರ ಪುಸ್ತಕಗಳನ್ನು ಕಳುಹಿಸತಕ್ಕದ್ದು. ೨. ಅಚ್ಚಾದ ಪುಸ್ತಕಗಳಾದರೆ ಮೂರು ಪ್ರತಿಗಳನ್ನು ಕಳುಹಿಸಬೇಕು. ಕೈಬರಹದ ಪುಸ್ತಕವಾದರೆ ಒಂದೇ ಪ್ರತಿ ಸಾಕು. ಆದರೆ ಕಳುಹಿಸಿದ ಪ್ರತಿಗಳನ್ನು ಹಿಂದಕ್ಕೆ ಕೊಡಲಾಗುವುದಿಲ್ಲ. ೩. ಈ ಮೇಲಿನ ವಿಷಯಗಳಲ್ಲಿ ಉತ್ತಮವೆಂದು ಪರಿಗಣಿಸಲ್ಪಟ್ಟ ಒಂದೊಂದು ಪುಸ್ತಕಕ್ಕೆ ರೂ. 500/-ರಂತೆ ಬಹುಮಾನ ಕೊಡಲ್ಪಡುವುದು. ೪. ಈ ಸ್ಪರ್ಧೆಗೆ ಈ ಹಿಂದೆ ಮದ್ರಾಸು ಸರಕಾರದಿಂದ ಬಹುಮಾನಪಡೆದ ಕೃತಿಗಳನ್ನು ಸ್ವೀಕರಿಸಲಾಗುವುದಿಲ್ಲ. ೫. ಪುಸ್ತಕಗಳು ಅನುವಾದಗಳಾಗಿರಬಾರದು.

ಕಾರ್ಯದರ್ಶಿ, ಕರ್ನಾಟಕ ಸಂಘ, 16 ವೀರಸ್ವಾಮಿ ಪಿಳ್ಳೆ ಬೀದಿ ಎಗ್ಮೋರು, ಮದ್ರಾಸು, ೮.

ರಾಮು: ಏನು ಮಾರಾಯ,—ಮಂಗಳೂರಲ್ಲಿ ಏನು ವಿಶೇಷ?
ತೋಮು: ನಿನಗೆ ಗೊತ್ತಿಲ್ಲವೆ

ಟ್ಯಾಕ್ಸಿ ಡ್ರೈವರ್

ಇಲ್ಲಿಗೆ ಬಂದಿದ್ದಾನೆ!

ನಿನ್ನನ್ನು ನೋಡಲೇಬೇಕೆಂತ ಹೇಳಿದ್ದಾನೆ! ಏನು ಚಾತುರ್ಯ! ಸಾಹಸ! ಪ್ರೇಮ!
ದೇವಾನಂದ್—ಕಲ್ಪನಾ ಕಾರ್ತಿಕ್ ಜೀವನದ ಜೋಡಿ!
ಶೀಲಾರಮಣಿಯ ನೃತ್ಯ, ವಿಪುಲ ಪ್ರೇಮ! ಜಾನ್ನಿವಾಕರ್‌ನ ಅತ್ಯದ್ಭುತ ಕುಡುಕತನ!

14—8—1954ರಿಂದ ಪ್ರಭಾತ ಟಾಕೀಸ್, ಮಂಗಳೂರು.
19ನೇ ವಾರ ಹಿಮಾಲಯ ಬೆಂಗಳೂರು!

ರಿಜಿಸ್ಟರ್ಡ್ ನಂಬ್ರ 990.] **ಗೆಲ್ಲಿರಿ 25,000 ಗೆಲ್ಲಿರಿ** [ಸ್ಪರ್ಧೆ ನಂಬ್ರ A-1.

ಮದ್ರಾಸಿನ 'ದಿ ಪ್ರೀಮಿಯರ್ ಬೇಂಕ್ ಒಫ್ ಇಂಡಿಯಾ'ದಲ್ಲಿ ನಮ್ಮ ಸ್ಪರ್ಧೆಯ ಉತ್ತರವು ಮೊಹರು ಮಾಡಿ ಭದ್ರವಾಗಿರಿಸಲ್ಪಟ್ಟಿದ್ದು, ಅವರ ಅಧಿಕಾರಕ್ಕೆ ಒಳಪಟ್ಟು ಪ್ರಕಟಿಸಲ್ಪಡುವುದು. ಎಲ್ಲಾ ಸರಿಯಾದ ಉತ್ತರಕ್ಕೆ 1ನೇ ಬಹುಮಾನ ರೂ. 12,500. ಪ್ರಥಮದ ಎರಡು ಸಾಲುಗಳ ಸರಿಯಾದ ಉತ್ತರಕ್ಕೆ 2ನೆ ಬಹುಮಾನ ರೂ. 6,250. ಪ್ರಥಮದ ಒಂದು ಸಾಲಿನ ಉತ್ತರ ಸರಿಯಾದುವಕ್ಕೆ 3ನೆ ಬಹುಮಾನ ರೂ. 3,750. ಪ್ರಥಮದ ಎರಡು ಸಂಖ್ಯೆಗಳು ಸರಿಯಾದ ಉತ್ತರಕ್ಕೆ 4ನೆ ಬಹುಮಾನ ರೂ. 2,500. (ನಮ್ಮ 34ನೆ ಸ್ಪರ್ಧೆಯ ಫಲಿತಾಂಶದಂತೆ ಉದ್ದಕ್ಕೂ ನೀಟಕ್ಕೂ.)

50

ಟಪ್ಪಾಲಿಗೆ ಹಾಕುವ ಕೊನೆಯ ದಿನ ತಾ. 27—8—54.
ಫಲಿತಾಂಶ ಪ್ರಕಟಣೆ ತಾ. 10—9—54.

ಪ್ರವೇಶಧನ: ಪ್ರತಿ ಉತ್ತರಕ್ಕೆ ರೂ. 1/-. 6 ಉತ್ತರಗಳಿಗೆ ರೂ. 5/-. 15 ಉತ್ತರಗಳಿಗೆ ರೂ. 10/-.

34

5	10	3	16
15	4	9	6
12	7	14	1
2	13	8	11

ನಿಬಂಧನೆಗಳು: ಮೇಲೆ ಸೂಚಿಸಿದ ಚೌಕದಲ್ಲಿ 5ರಿಂದ 20ರ ವರೆಗಿನ ಅಂಕೆಗಳನ್ನು ಉದ್ದಕ್ಕೆ ಅಡ್ಡಕ್ಕೆ ಅಥವಾ ಮೂಲೆಯಿಂದ ಮೂಲೆಗೆ ಕೂಡಿಸುವಾಗ ಉತ್ತರ 50 ಬರುವಂತೆ ತುಂಬಿಸಿರಿ. ಒಂದು ಅಂಕೆಯನ್ನು ಒಮ್ಮೆ ಮಾತ್ರ ಉಪಯೋಗಿಸತಕ್ಕದ್ದು. ಮೇಲೆ ನಮೂದಿಸಿದ ದರದಲ್ಲಿ ಪ್ರವೇಶಧನದೊಂದಿಗೆ ಖಾಲಿ ಕಾಗದದಲ್ಲಿ ಎಷ್ಟೂ ಉತ್ತರ ಕಳುಹಿಸಬಹುದು. ಪ್ರತಿಯೊಂದು ಉತ್ತರದಲ್ಲಿ ಇಂಗ್ಲಿಷ್ ಅಂಕೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು. ಉತ್ತರ ಕಳುಹಿಸುವವರು ತಂತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ಇಂಗ್ಲಿಷಿನಲ್ಲಿ ಬರೆಯಬೇಕು. ಉತ್ತರದೊಂದಿಗೆ ಮನಿಯಾರ್ಡರ್ ರಶೀದಿ, ಪೋಸ್ಟಲ್ ಆರ್ಡರ್ ದ್ವಾರ ಹಣ ಕಳುಹಿಸಬಹುದು. ಮನಿಯಾರ್ಡರ್ ಕೂಪನಿನಲ್ಲಿ ಹೆಸರು ವಿಳಾಸಗಳನ್ನು ಇಂಗ್ಲಿಷಿನಲ್ಲಿ ಬರೆಯಬೇಕು. ಪರರಾಷ್ಟ್ರದವರು ಬ್ರಿಟಿಷ್ ಪೋಸ್ಟಲ್ ಆರ್ಡರ್ ಮೂಲಕವೇ ಪ್ರವೇಶಧನ ಕಳುಹಿಸತಕ್ಕದ್ದು. ಪ್ರವೇಶ ಧನದ ಮೊತ್ತವನ್ನು ಹೊಂದಿಕೊಂಡು ಬಹುಮಾನ ಕೊಡಲಾಗುವುದು. ಮೆನೇಜರರ ತೀರ್ಮಾನವು ಕಡೆಯದು ಮತ್ತು ನ್ಯಾಯಬದ್ಧವಾದುದು. ನಮ್ಮ ನಿಬಂಧನೆಗಳು ಮತ್ತು ಶರ್ತಗಳು ಗೊತ್ತಿದ್ದವರು ಮಾತ್ರ ಸ್ಪರ್ಧಿಸಬೇಕು. ಫಲಿತಾಂಶ ಉತ್ತರ ಬೇಕಿದ್ದರೆ ವಿಳಾಸ ಬರೆದು ಸ್ಟಾಂಪು ಹಚ್ಚಿದ ಕವರನ್ನು ಉತ್ತರದೊಂದಿಗೆ ಕಳುಹಿಸಬಹುದು.

ಉತ್ತರ ಮತ್ತು ಹಣ ಇವರಿಗೆ ಕಳುಹಿಸಿರಿ: **AJANTA COMPETITIONS NO. A-1,**
4/37, (A) Savarimuthu Street, MADRAS—1.

ಅಪೂರ್ವ ಸಂದರ್ಭ!

ಇದೇ ಸ್ವಾತಂತ್ರ್ಯೋತ್ಸವ ದಿನದಿಂದ ದರ ಇಳಿಸಲಾಗಿದೆ-

ಗೀತೆಯ ಕೈಗನ್ನಡಿ

ಹೊನಕೆರೆ ಚಿದಂಬರಯ್ಯನವರ ಸರಳ ಕನ್ನಡ ಅರ್ಥಸಹಿತವಾದ

ಭಗವದ್ಗೀತೆ

ಬೆಲೆ: ೧-೮-೦

ನವಯುಗ ಪ್ರೆಸ್, ಉಡುಪಿ.

(೧ನೇ ಪುಟದಿಂದ)

ಹೊಟ್ಟೆ ಬಟ್ಟೆಯ ವ್ಯವಸ್ಥೆಯನ್ನು ಮಾಡಿಕೊಳ್ಳಲು ಏನೇನೂ ಸಾಲಾಗುವುದಿಲ್ಲ. ಭಾರತದಿಂದ ಅಕ್ಕಿ, ಬಟ್ಟೆ ಮುಂತಾಗುವನ್ನು ಹೇರಳವಾಗಿ ಆಮದು ಮಾಡಿಕೊಳ್ಳಬೇಕಾಗುತ್ತದೆ. ಗೋವೆಯ ಆಯಾತ—ನಿರ್ಯಾತ ವ್ಯಾಪಾರಗಳೆರಡೂ ಭಾರತದೊಡನೆಯೇ ನಡೆಯುತ್ತವೆಂದರೆ ಅತಿಶಯೋಕ್ತಿಯಾಗದು. ಈ ವ್ಯಾಪಾರೋದ್ಯಮದ ದಾರಿಯು ಮುಚ್ಚಲ್ಪಟ್ಟದ್ದೇ ಆದರೆ, ಗೋವೆಯು ಪೋರ್ಚುಗಾಲದ ಸಾಮ್ರಾಜ್ಯವಾದಿಗಳ ಮೇಲೆ ಹೊರಲಾರದ ಆರ್ಥಿಕ ಭಾರವಾಗಿ ಬೀಳುವುದು ನಿಶ್ಚಯ. ಆಗ ಅವರಿಗೆ ಈ ವಸಾಹತವನ್ನು ಉಳಿಸಿಕೊಳ್ಳುವ ಆಶೆ ಎಷ್ಟುಕಾಲ ಉಳಿಯಲಿಕ್ಕಿಲ್ಲ.

ಆರ್ಥಿಕ ಜೀವನದಲ್ಲಿ ತೀರ ಹಿಂದುಳಿದಿರುವ ಗೋವೆಯಲ್ಲಿ ಇಂದು ಕಂಡು ಬರುವಷ್ಟಾದರೂ ಸಮೃದ್ಧಿಯು ಕೈಗೂಡುವುದಕ್ಕೆ ಭಾರತವೇ ಕಾರಣವಾಗಿರುತ್ತದೆ—ಯಾವ ತರದ ಉದ್ದಿಮೆಯೂ ಇಲ್ಲದ ಈ ವಸಾಹತಿನಲ್ಲಿ ಸುಂಕ ಮುಕ್ತ ಬಂದರ, ಹಾಡು ಹೇಳುವ ಆಕಾಶವಾಣಿ ಮತ್ತು ಮೆಂಗನೀಜ ಅದುರನ್ನು ವ್ಯಾಪಾರದ ಸರಕುಗಳನ್ನೂ ಒಯ್ಯುವ ರೈಲ್ವೇ—ಇವು ಮೂರು ಆದಾಯದ ಮುಖ್ಯ ಸ್ರೋತಗಳು. ಗೋವೆಯ ಆಕಾಶವಾಣಿಗೆ ಮುಂಬಯಿಯ ಸೇಠಿಯೇ ಕಪ್ತಾನನು, ಭಾರತೀಯ ಆಕಾಶವಾಣಿಗಳು ಪ್ರಸಾರ ಮಾಡದ ಚಲಚ್ಚಿತ್ರ ಸಂಗೀತವನ್ನು ಬಿತ್ತರಿಸುತ್ತಾ, ವ್ಯಾಪಾರಿ ಸಾಮಗ್ರಿಗಳ ಜಾಹೀರಾತುಗಳನ್ನು ನಡುನಡುವೆ ಸಾರುವ ಮೂಲಕ ಇದು ಕೆಲವು ಲಕ್ಷ ರೂಪಾಯಿಗಳನ್ನು ಸಂಪಾದಿಸುತ್ತದೆ. ಧರ್ಮಾಂಧರಾದ ಪಾದ್ರಿಗಳ ಭೂಮಿಯಾದ ಗೋವೆಯಲ್ಲಿ ಆಕಾಶವಾಣಿಯ ಮೂಲಕ ಕ್ರೈಸ್ತ ಧರ್ಮ ಪ್ರಚಾರದ ಪುಣ್ಯಕಾರ್ಯವೂ ಧಾರಾಳವಾಗಿ ನಡೆಯುತ್ತಿರುತ್ತದೆ.

ಗೋವೆಯ ಉತ್ಕರ್ಷಕ್ಕೆ ಭಾರತವೇ ಹೇತುವೆಂದೆವಲ್ಲ—ಅದರ ಮೂಲವನ್ನು

ಪೋರ್ಚುಗೀಜರ ಮಮವಿರು ತುಟುಕುವ ನೆಲ—ಗೋವೆ

ಗೋವೆಯಲ್ಲಿರುವ ೫೧ ಮೈಲು ಉದ್ದದ ರೈಲ್ವೆ ಮತ್ತು ಸುಂದರವಾದ ರೇವಿನಲ್ಲಿ ಗುರುತಿಸಬಹುದು. ಬ್ರಿಟಿಷ ಆಳಿಕೆಯ ಕಾಲದಲ್ಲಿ ತಮ್ಮ ಪ್ರಾಚೀನ ಆಪ್ತಮಿತ್ರರಾದ ಪೋರ್ಚುಗೀಜರಿಗೆ ಆಳರಸರು ಬೇಕು ಬೇಕಾದ ನೆರವನ್ನು ನೀಡಿದರು. ವೆಸ್ಟ ಆಫ್ ಇಂಡಿಯಾ ಪೋರ್ಚುಗೀಜ ರೈಲ್ವೆ ಕಂಪೆನಿಯೆಂಬ ಬ್ರಿಟಿಷ ಸಂಸ್ಥೆಯು ೧೮೮೮ರಲ್ಲಿ ಮರ್ಮುಗೋವಾ ಬಂದರದಿಂದ ಪೂರ್ವಕ್ಕೆ ಗೋವೆಯ ಗಡಿಯ ವರೆಗೆ ರೈಲುದಾರಿಯನ್ನು ನಿರ್ಮಿಸಿದ್ದಲ್ಲದೆ, ಕ್ಯಾಸಲರಾಕದಿಂದ ಪಶ್ಚಿಮಕ್ಕೆ ೨ ಮೈಲು ಸದರ್ನ ಮರಾಠಾ ರೈಲ್ವೆಯನ್ನು ಬೆಸಸಿ, ಭಾರತದೊಡನೆ ಅದನ್ನು ಜೋಡಿಸುವ ಕೆಲಸವೂ ಸಾಂಗವಾಗಿ ನೆರವೇರಿತು. ಅಲ್ಲದೆ ಮರ್ಮುಗೋವಾ ಬಂದರವನ್ನೂ ಬ್ರಿಟಿಷ ತಜ್ಞರು ಕಟ್ಟಿಕೊಟ್ಟರು. ತತ್ಪರಿಣಾಮವಾಗಿ ಪುಣೆಯಿಂದ ಬೆಂಗಳೂರಿನ ವರೆಗೆ ಹಾಗು ಹುಬ್ಬಳ್ಳಿಯಿಂದ ಗುಂಟಕಲ್ಲಿನ ವರೆಗೆ ಹಬ್ಬಿದ ವಿಸ್ತಾರವಾದ ಹಿನ್ನೆಲೆಯ ವ್ಯಾಪಾರವೆಲ್ಲ ಗೋವೆಯ ಮೂಲಕ ನಿರ್ವಹಿಸಲ್ಪಡುವುದಕ್ಕೆ ಅವಕಾಶ ಏರ್ಪಟ್ಟಿತು.

ಈ ಬಂದರ ಮತ್ತು ರೈಲ್ವೆಗಳು ಭಾರತದ ಮುಂಬಯಿ ಬಂದರಕ್ಕೂ ಆಗಿನ ಜಿ. ಐ. ಪಿ. (ಮತ್ತು ಈಗಿನ ಮಧ್ಯ) ರೈಲ್ವೆಗೂ 'ಹಾನಿ'ಯನ್ನು ಮಾಡಿದವು. ಸರಕುಗಳನ್ನು ಮರ್ಮುಗೋವೆಯ ಮೂಲಕ ಸಾಗಿಸುವವರಿಗೆ ಸುಂಕ ಮುಕ್ತ ಬಂದರದ ಸೌಕರ್ಯ ದೊರೆತದ್ದಲ್ಲದೆ, ಮುಂಬಯಿ ಮತ್ತು ಕೊಚ್ಚಿ ಬಂದರಗಳಲ್ಲಿರುವುದಕ್ಕಿಂತ ಇಲ್ಲಿಯ ಬಂದರ ದರವನ್ನು ಕಡಿಮೆ ಮಾಡಿದ್ದರಿಂದ ವ್ಯಾಪಾರಿಗಳು ತಮಗೆ ಲಾಭ ಮಾಡಿಕೊಡುವ ಗೋವೆಯ ಬಂದರದ ಪೂರ್ಣ ಉಪಯೋಗವನ್ನು ಮತ್ತಷ್ಟು ಭರದಿಂದ ಮಾಡಿಕೊಳ್ಳುವಂತಾಯಿತು. ಮರ್ಮುಗೋವಾ ಬಂದರವು ಸಮುದ್ರ ಮತ್ತು ಸಾಗರಗಾಮಿ ಹಡಗುಗಳಿಗೆ ನಿಲ್ಲುವುದಕ್ಕೆ ಅತ್ಯಂತ ಪ್ರಶಸ್ತವಾದ ಸಕಲ ಸೌಕರ್ಯಗಳನ್ನೂ ಒಳಗೊಂಡಿರುವುದರಿಂದ ಎಲ್ಲ ಸಾರಿಗೆ ಮತ್ತು ಪ್ರವಾಸಿಕರ ಹಡಗುಗಳೂ ಮಾಂಡವಿ, ಮಚ್ವೆಗಳೂ ಇಲ್ಲಿ ತಂಗುತ್ತವೆ. ಇತರ ಬಂದರಗಳಿಗೆ ಕತ್ತರಿ ಹಾಕಿ ನಡೆಯುವ ಇಲ್ಲಿಯ ವ್ಯಾಪಾರವು ದಿನದಿನಕ್ಕೆ ಹೆಚ್ಚುತ್ತಿರುವುದಕ್ಕೆ ತಂಗಿದ ಸಾಗರಗಾಮಿ ಹಡಗುಗಳ ಸಂಖ್ಯೆಯು ೧೯೫೩ರಲ್ಲಿ ೧೬೫೫ ಇದ್ದದ್ದು ಕಳೆದ ವರ್ಷ ೩೪೫೫ ಆದುದೇ ಪ್ರಮಾಣ. ಈ ಬಂದರದ ದೆಸೆಯಿಂದಾಗಿ ಗೋವೆಯ ಸರಕಾರಕ್ಕೆ ೧೦ರಿಂದ ೧೨ ಲಕ್ಷ ರೂಪಾಯಿಗಳ ವಾರ್ಷಿಕ ಆದಾಯ ದೊರಕುತ್ತದೆ.

ಭಾರತಕ್ಕೆ ಆಹಾರ ಧಾನ್ಯಗಳನ್ನು ಆಮದುಮಾಡಿಕೊಳ್ಳುತಿದ್ದ ಕಾಲದಲ್ಲಿ ಗೋವೆಯ ರೈಲ್ವೆಯ ಆದಾಯವು ಇಪ್ಪತ್ತು ಲಕ್ಷ ರೂಪಾಯಿಗಳ ವರೆಗೂ ಹೋದದ್ದುಂಟು—ಆದರೆ ಈಚೆಗೆ ಈ ಲಾಭ ಇಳಿಮುಖವಾಗುತ್ತಾ ವರ್ಷಕ್ಕೆ ನಾಲ್ಕಾರು ಲಕ್ಷ ರೂಪಾಯಿಗಳಿಗೆ ಬಂದಿರುವುದು. ಈ ರೈಲ್ವೆಯ ಒಡೆತನವು ಅದನ್ನು ನಿರ್ಮಿಸಿದ ಕಂಪೆನಿಗೆ ಸೇರಿದ್ದರೂ ಪ್ರತಿ ಐದು ವರ್ಷಗಳಿಗೆ ಪುನರುಜ್ಜೀವಿಸಲ್ಪಡಬೇಕಾದ ಒಪ್ಪಂದವನ್ವಯ ಭಾರತ ಸರಕಾರದ ದಕ್ಷಿಣ ರೈಲ್ವೆಯೇ ಇದನ್ನು ನಡೆಸುತ್ತದೆ. ಈಗ ನಡೆಯುತ್ತಿರುವ ಆಂದೋಲನವು ಮಾತ್ರ ಪರಿಸ್ಥಿತಿಯ ಮೇಲೆ ವಿಪರೀತ ಪರಿಣಾಮ ಮಾಡಿರುವುದು. ಎಲ್ಲ ಸಾರಿಗೆ ಸಂಪರ್ಕದ ಮಾರ್ಗಗಳೂ ಹೆಚ್ಚು ಕಡಿಮೆ ಮುಚ್ಚಿ ಹೋಗಿರುವುದು ಎಲ್ಲರ ಗಮನಕ್ಕೂ ಬಂದಿರಬೇಕು.

ಸುಂಕ ತಪ್ಪಿಸಿ ಕಳ್ಳತನದಿಂದ ವ್ಯಾಪಾರ ಸಾಗಿಸಲು ಗೋವೆಯು ಅನುಕೂಲತೆಯನ್ನು ಒದಗಿಸಿ ಕೊಡುತ್ತಿರುವುದು ನಿಜ—ಆದರೆ ಅಲ್ಲಿಯ ಸಂಪತ್ತನ್ನು ಹೆಚ್ಚಿಸುವ ಇನ್ನೊಂದು ಮುಖ್ಯ ಸಾಧನವೂ ಇದೆ. ಹೇರಳವಾಗಿ ಮೆಂಗನೀಜ ಹಾಗು ಕಬ್ಬಿಣದ ಅದುರನ್ನು ಒದಗಿಸುವ ಗಣಿಗಳು ಈಚೆಗೆ ಗೋವೆಯಲ್ಲಿ ಕಂಡುಬಂದಿದ್ದು, ಚೌಗಲೆ ಎಂಬ ಶ್ರೀಮಂತರು ಇವುಗಳ ಒಡೆತನ ಹಾಗು ವ್ಯಾಪಾರದಿಂದ ಲಕ್ಷಾಂತರ ರೂಪಾಯಿಗಳನ್ನು ಸಂಪಾದಿಸುತ್ತಿರುವರು. ಗೋವೆಯು ಭಾರತದೊಡನೆ ಸೇರುವುದನ್ನು ಬಯಸದವರಲ್ಲಿ ಇವರು ಮುಖ್ಯರೆಂದು ಹೇಳಬಹುದು. ಸಾಲಾಜಾರರ ಸರಕ್ಕೆ ಪೂಜೆ ಮಾಡುತ್ತಾ ಗವರ್ನರ ಜನರಲರಿಗೆ ಸಲಾಮು ಮಾಡುತ್ತಿರಬಲ್ಲ ಭಾರತೀಯ ಮೂಲದ ಈ ಹಿಂದು ಹಿಂದೆ ಮುಂದೆ ನೋಡುವುದಿಲ್ಲ; ಸಂಕೋಚದ ತಿಲಾಂಶ ಅನುಭವವೂ ಅವರಿಗಾಗುವುದಿಲ್ಲ. ಈ ವಸಾಹತಿನ ಇನ್ನೊಂದು ಚೋದ್ಯವೆಂದರೆ, ಪೋರ್ಚುಗೀಜರ ಕೈಕೆಳಗೆ ಚಿಕ್ಕದೊಂದು ಸಂಸ್ಥಾನವನ್ನು ಆಳುತ್ತಿರುವ ಸ್ವಿಸ ದೊರೆ: ಬ್ರಿಟಿಷ ಭಾರತದಲ್ಲಿ ಅನೇಕ ಸಾಮಂತರಾಜರು ಇದ್ದಂತೆ ಸಾಲಬಾರರ ಗೋವೆಯಲ್ಲಿ ಈ ಪಾಳೆಯಗಾರನ ದರ್ಬಾರು ನಡೆಯುತ್ತದೆ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಯಾಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ಕ್ಕೆ ರೂ. 3-8-0.

ಗರ್ಭ ರಕ್ಷಕ—ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧ. ಜಠರದೋಷ, ಗರ್ಭಪಾತವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ಕ್ಕೆ ರೂ 3-8-0.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಯುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಮಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller. Tenkapet, UDIPI, S. Kanara.

ಫೋನು ನಂಬ 66

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರೆ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಬಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಜಡತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ. ರೂ 5/- ಸ್ಪೆಶಲ್ ರೂ 8/-

Mrs. P. DEVEE, F. D. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA - 40 ಸ್ಟಾಕಿಸ್ಟರು: ರಘು ಕಂಪೆನಿ, ಮಂಗಳೂರು.



ಸ್ವೀಕಾರ—ವಿಮರ್ಶೆ

ಏಶಿಯದ ಸಂಪತ್ತು—

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ. ಪ್ರಕಾಶಕರು: ನವಯುಗ ಸೆಂಟರ್ ಪ್ರೆಸ್, ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ. ಬೆಲೆ: ರೂ. ೨—೦—೦.

ಏಶಿಯದ ರಾಜಕೀಯ, ಜಾಗತಿಕ ಕುತೂಹಲವು ಕೆರಳಿರುವ ಈ ಕಾಲದಲ್ಲಿ ಈ ಪ್ರದೇಶದ—ಮುಖ್ಯವಾಗಿ ದೂರ ಪ್ರಾಚ್ಯ ದೇಶಗಳಿಗೆ ಸಂಬಂಧಿಸಿದ ಆರ್ಥಿಕ ಸಂಬಂಧದ ಕಕ್ಷೆಯಲ್ಲಿ ಬರುವ ರಾಷ್ಟ್ರಗಳ—ಆರ್ಥಿಕ ಸ್ಥಿತಿಗತಿಯನ್ನು ಪರಿಚಯಿಸುವ ಅಪೂರ್ವ ಪುಸ್ತಕವೊಂದು ಪ್ರಕಟಗೊಂಡಿರುವುದು ಸ್ವಾಗತಾರ್ಹ. ಮಾನವ ಸಂಸ್ಕೃತಿ ವಿಕಾಸದ ಜನ್ಮಭೂಮಿಯಾದ ಏಶಿಯದಲ್ಲಿ "ಸಾಮ್ರಾಜ್ಯ ಭಕ್ಷಕರು" ಕಾಲಿರಿಸಿ, ಸಾಮ್ರಾಜ್ಯಶಾಹಿತ್ವವನ್ನು ಹೇರಿ, ಏಶಿಯದ ಜನತೆಯ "ಉದ್ಧಾರ" ಕಾರ್ಯವನ್ನು ಕೈಗೊಂಡಂದಿನಿಂದ ರಾಜಕೀಯ ತುಮುಲದ ಜೊತೆಗೆ ಅದಕ್ಕೆ ಪೋಷಕವಾದ, ನೂರಾರು ವರ್ಷಗಳ ದುಸ್ಥಿತಿಯನ್ನು ಹೊತ್ತು ಬಂದಿದ್ದ ಆರ್ಥಿಕ ಸಮಸ್ಯೆಯೂ ಉಲ್ಬಣಗೊಂಡಿತು. ಏಶಿಯದ ರಾಷ್ಟ್ರಗಳಲ್ಲಿ ಸಾಂಸ್ಕೃತಿಕ ಬಾಂಧವ್ಯವಿದೆಯೆಂದು ಹೇಳುವಷ್ಟು ಬಿಗಿಯಾಗಿಯೂ ಒಡೆತನದ ಸಂಬಂಧ ಗಾಢವಾಗಿ ಬೆಳೆಸಿದ್ದರೆ ಆರ್ಥಿಕ ಶಕ್ತಿಯು ಮಾತ್ರ ಹೆಚ್ಚು ಸಂಘಟಿಸಬಹುದೆಂದು ತೋರುತ್ತದೆ. ಇಲ್ಲಿ ಕೃಷಿ ಮುಖ್ಯ ಜೀವನಾಧಾರವಾದರೂ ಆಧುನಿಕ; ಇವರೆಲ್ಲರೂ ಹಳೆಯ ಪದ್ಧತಿಯನ್ನು ಉಪಯೋಗಿಸುವುದರಿಂದ ಯುರೋಪಿನ ಕೃಷಿಯಲ್ಲಿ ಬಂದವುಗಳ ಅಭಿವೃದ್ಧಿ ಕಂಡು ಬಂದರೆ, ಇಲ್ಲಿಯ ಕೃಷಿಯಲ್ಲಿ ಕ್ರಮದ ಪಾಲೇ ಹೆಚ್ಚುತ್ತದೆ. ಇದರಿಂದಾಗಿ ಉತ್ಪನ್ನದ ವೇಗ ಕಡಿಮೆಯಾಗುತ್ತದೆ. ಈ ಉತ್ಪನ್ನವೂ ತಿಂದೇ ಕರಗಿ ಹೋಗುತ್ತದರಿಂದ ಮೂಲಧನದ ಶೇಖರಣೆಯಿಲ್ಲ. ಪರದೇಶದ ಹಂಚಿಕೆಯಿಂದಲೂ ಸೂಕ್ತವಾದ ಕ್ರಮವಿಲ್ಲ. ರೈತರ ಕಷ್ಟಗಳಿಗಂತೂ ಲೆಕ್ಕವಿಲ್ಲ—ಬಾಳೆಹಣ್ಣೂ ಇಲ್ಲದ ಉತ್ಪಾದನೆಯಲ್ಲಿ ತೊಡಗಿಸಿದ ಸಾಲದ ಹೊರೆ ಅವರನ್ನು ಇರಿಯುತ್ತಿದೆಯಲ್ಲದೆ, ತಮ್ಮ ಪರಿಶ್ರಮದ ಸಮ ಅರ್ಧವನ್ನು "ಜಮೀನ್ದಾರ"ನೊಬ್ಬನಿಗೆ ಗೇಣಿಯಾಗಿ ಒಪ್ಪಿಸಬೇಕಾಗುತ್ತದೆ. ಕೆಲವು ದೇಶಗಳು ಅಪಾರ ಉತ್ಪತ್ತಿಯನ್ನು ಕೊಡುವ ತೋಟಗಳನ್ನು ಹೊಂದಿದ್ದರೂ ಅಲ್ಲಿಯ ಪರಿಸ್ಥಿತಿಯೂ ತೃಪ್ತಿಕರವಾಗಿಲ್ಲ. ರೈತರ ಸಂಪಾದನೆಗೆ ಸ್ವಲ್ಪವಾದರೂ ಬಲ ಕೊಡುವ ಸಾಧನವೆಂದರೆ ಸಾಂಪ್ರದಾಯಿಕ ಉದ್ಯೋಗ. ಆದರೆ ಮಹೋದ್ಯಮಗಳೊಂದಿಗೆ ಸ್ಪರ್ಧೆ ಹೂಡಲಾರದ ಈ ಗೃಹೋದ್ಯಮಗಳು ತೀರ ಸಂಕಟ ಪರಿಸ್ಥಿತಿಯಲ್ಲಿ ಹೊಯ್ದಾಡುತ್ತವೆ. ಏಶಿಯದಲ್ಲಿ ಸಾಮ್ರಾಜ್ಯ ಸ್ಥಾಪಿಸಿದ ಪಾಶ್ಚಾತ್ಯ ಮಹಾಪ್ರಭುಗಳು ಯಾವ ಉದ್ಯೋಗೀಕರಣಕ್ಕೆ ವಿಫುಲವಾದ ಅವಕಾಶವಿದ್ದರೂ ಸಹ ಚೀನ ಮತ್ತು ಭಾರತಗಳಲ್ಲಿ ಮಾತ್ರ ಪ್ರಾರಂಭಿಕ ಪ್ರಯತ್ನಗಳು ಕೈಗೊಳ್ಳಲ್ಪಟ್ಟಂತೆ ಕಂಡು ಬರುತ್ತದೆ. ಏರೋಪ್ಯ ವಸಾಹತುಗಾರರ ಮುಷ್ಟಿಯು ಬಿಗಿ ಅಧಿಕವಿರುವುದರಿಂದ ಏಶಿಯದ ಒಡೆಯರನ್ನು ಕನಿಷ್ಠ ಮಜೂರಿಗೆ ದುಡಿಸುವುದೇ ಲಾಭದಾಯಕವೆಂದು ಬಂಡವಾಳಗಾರರುಗಳು ಕೈಗೊಂಡ ಯೋಜನೆಯನ್ನು ನಾವಿಲ್ಲಿ ಕಾಣಬಹುದು. ನಾವು ಮುನ್ನುಗ್ಗಿಗೊಂದು ನೋಡುವುದಕ್ಕೆ ಜನಾಭಿಪ್ರಾಯ ಒಂದು ಕಾರಣ. ಸ್ವಾತಂತ್ರ್ಯದ ನಂತರ ದೇಶದಲ್ಲಿ ಸ್ವತಂತ್ರ ಕೊಟ್ಟಂತೆಲ್ಲ ಜನಸಂಖ್ಯೆಯು ಒತ್ತಡವು ಕಡಿಮೆಯಾದದ್ದು ಗೋಚರಿಸುತ್ತದೆ. ಕೃಷಿಯಲ್ಲಿ ನೇರವಾದ ಜನರನ್ನು ಇತರ ಉದ್ಯೋಗಿಕ ಕ್ಷೇತ್ರಗಳಿಗೆ ಬದಲಿಸುವ ವ್ಯವಸ್ಥೆಯನ್ನು ನಾವೀಗ ಕೈಗೊಂಡರೆ ಅದು ಪ್ರಗತಿಯ ಚಿಹ್ನೆಯಾಗುತ್ತದೆ. ಕೂಲಿಕಾರರ ಆಗಮನದಿಂದಾಗಿಯೇ ಉತ್ಪಾದಕ ಶಕ್ತಿಯು ಹೆಚ್ಚಾಗುವಂತಹ ಉದ್ಯಮಗಳನ್ನು ನಾವು ಸ್ಥಾಪಿಸಬೇಕಲ್ಲದೆ, ಜನತೆಗೆ ತಾಂತ್ರಿಕ ಶಿಕ್ಷಣವನ್ನು ನೀಡುವ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಅದೂ ದೇಶದ ವಾತಾವರಣಕ್ಕೆ ಸರಿಯಾಗಿ ಹೊಂದಿಕೊಳ್ಳುವಂತೆ ಆಧುನಿಕ ತಂತ್ರವನ್ನು ಅಳವಡಿಸಿಕೊಳ್ಳುವ ಜಾಣ್ಮೆಯನ್ನು ನಾವು ತೋರಬೇಕು. ಕೃಷಿ ಯೋಗ್ಯವಾದ ಭೂಮಿಯನ್ನು ಹೊಸದಾಗಿ ಸಾಗು ಮಾಡುವುದಲ್ಲದೆ, ಸಾರಿಗೆ ಸಂಪರ್ಕವನ್ನು ಸ್ಥಾಪಿಸುವ ಜೊತೆಗೆ ಸಾಲಸೌಕರ್ಯವನ್ನು ಒದಗಿಸುವ, ಮತ್ತು ಗೃಹೋದ್ಯಮಗಳನ್ನು ಸಂಘಟಿಸುವ ಮೂಲಕ ಜನ ಜೀವನದ ಸಮತೋಲನವನ್ನು ಒಪ್ಪಿಗೆ ನಾವು ನಿರ್ವಹಿಸುವಂತೆ ಉತ್ತಮ ಸ್ಥಿತಿಗೆ ಎಡೆ ಮಾಡಿಕೊಡಬೇಕು. ಇದೇನು ಕನಸಿನ ಆದರ್ಶವಲ್ಲ—ನಮ್ಮ ಕಣ್ಣ ಮುಂದೆಯೇ ಸೋವಿಯಟ್ ಏಶಿಯದಲ್ಲಿ ಈ ಅದ್ಭುತ ಕೈಗೂಡಿದೆ. ಕಮ್ಯೂನಿಸ್ಟರ ನೀತಿ ನಮಗೆ ಸರಿಕಾಣದಿದ್ದರೆ ಜಪಾನಿನ ಆರ್ಥಿಕ ವಿಕಾಸದ ನಕಾಶೆಯನ್ನು ಅಭ್ಯಸಿಸ ಬಹುದು. ಈ ಕೆಲಸವು, ಒಂದು ದೇಶದ ವಿವಿಧ ಪಂಗಡಗಳಲ್ಲಿ ಕಾರ್ಯೋನ್ಮುಖರಾಗಿರುವ ರಾಜಕೀಯ ಧುರೀಣರೂ ಶಿಕ್ಷಕರೂ ಶಿಲ್ಪಿಗಳೂ ಬುದ್ಧಿಜೀವಿಗಳೂ ಟ್ರೇಡ್ ಯೂನಿಯನ್ನುಗಳೂ ಪತ್ರಿಕೋದ್ಯಮಿಗಳೂ ಎಲ್ಲರೂ ಒಕ್ಕೂಟದಿಂದ ಆರ್ಥಿಕ ಪ್ರಗತಿಯನ್ನು ಉದ್ದೇಶಿಸದೆ ಸಾಗಲಾರದೆಂಬುದು ಸ್ಪಷ್ಟ. ಅಧಿಕಾರದಲ್ಲಿರುವ ಸರಕಾರದವರೂ ಸಾಮಾಜಿಕರೂ ಈ ಕುರಿತು ಚಿಂತನೆ, ಚರ್ಚೆ ನಡೆಸಿ ಕಾರ್ಯಕ್ರಮವನ್ನು ತ್ವರಿತದಲ್ಲಿಯೇ ರೂಪಿಸಿಕೊಳ್ಳಬೇಕಾದದ್ದು ಅಗತ್ಯ. ಈ ಸಂದೇಶವನ್ನು ನೀಡುವ ಕು. ಶಿ. ಅವರ ಈ ಪುಸ್ತಕವು ನಮ್ಮ ಜನಕ್ಕೆ ಮೊದಲ ಬಾರಿಗೆ ಏಶಿಯದ ಸಂಪತ್ತಿನ ಕಲ್ಪನೆಯನ್ನು ಮಾಡಿಕೊಡುತ್ತದೆ. ಇಂದಿನ ಸ್ಥಿತಿಗೆ ಈ ಪ್ರದೇಶ... ರಂಗ ಕಾರಣಗಳ ವಿವೇಚನೆಯೂ ಇಲ್ಲಿದೆಯಲ್ಲದೆ ಏಳಿಗೆಯ ಸರಳ ಉಪಾಯಗಳು ಸೂಚಿಸಲ್ಪಟ್ಟಿರುವುದನ್ನು ಕಾಣುತ್ತೇವೆ. ಶ್ರೀ ಭಟ್ಟರ ಉತ್ತಮ ವಿಚಕ್ಷಣತೆ, ಆಳವಾದ ಅಧ್ಯಯನ, ಸ್ವತಂತ್ರ ವಿಚಾರ ಶಕ್ತಿಗಳು ಈ ಗ್ರಂಥದಲ್ಲಿಯೂ ಸ್ಫುಟವಾಗಿ ಪ್ರತಿಫಲಿಸುತ್ತವೆ. ವಿಷಯಕ್ಕೆ ಒಪ್ಪುವ ಹಲವಾರು ಚಿತ್ರಗಳು ಪುಸ್ತಕದ ಸೌಂದರ್ಯವನ್ನು ಹೆಚ್ಚಿಸಿರುತ್ತವೆ. ತಿಳಿಗನ್ನಡದಲ್ಲಿ ಬರೆದ "ಏಶಿಯದ ಸಂಪತ್ತು" ಕನ್ನಡ ಕೃಷ್ಣೀ ಅಲ್ಲ—ಭಾರತೀಯ ಸಾಹಿತ್ಯಕ್ಕೆ ಸಹ ಒಂದು ಸಮಯೋಚಿತ ಕಾಣಿಕೆ ಎಂದರೂ ಸಲ್ಲುತ್ತದೆ. ಇದಕ್ಕಾಗಿ ಲೇಖಕರನ್ನೂ ಪ್ರಕಾಶಕರನ್ನೂ ಮನಸಾರೆ ಅಭಿನಂದಿಸುತ್ತೇನೆ.

—ಕುಮಾರಸ್ವಾಮಿ.

ಪ್ರಕಟಣೆ

ತಾ. ೯—೮—1951.

ಕುಂದಾಪುರ ತಾಲೂಕು ನಂಬ್ರ 101ನೇ ಕೆದೂರು ಗ್ರಾಮದಲ್ಲಿರುವ ಅರೆಕ್ಯ್ ಮನೆ ಮಂಜಮ್ಮ ಶೆಡ್ತಿ ಮಗ ಅಂಗಪ್ಪ ಶೆಟ್ಟಿಯು ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ

ನನ್ನ ತಾಯಿ ಮೇಲ್ಕಂಡ ಮಂಜಮ್ಮ ಶೆಡ್ತಿಗೆ ನಾನು ಕೂಡಾ 6 ಜನ ಮಕ್ಕಳು ಇರುತ್ತೇವೆ. ಅವಳಿಗೆ ಈಗ ಸುಮಾರು 80 ರಷ್ಟು ವಯಸ್ಸು ನಡೆಯುತ್ತದೆ. ಸದರಿ ಮಂಜಮ್ಮ ಶೆಡ್ತಿಯ ಗಂಡ ವ, ನನ್ನ ತಂದೆಯವರಾದ ದಿವಂಗತ ಶ್ರೀ ಕುಂದಾಪುರ ಸುಬ್ಬಯ್ಯ ಶೆಟ್ರು ಅವರ ಧನ ಸಹಾಯದಿಂದ ವಡೇರಹೋಬಳಿ, ವಳ್ಳೂರು, ಕೆದೂರು ವಗೈರೆ ಗ್ರಾಮಗಳಲ್ಲಿ ತೀರ್ವೆ ಹೋಗ್ತ ಸುಮಾರು 100 ಮುಡಿ ಅಕ್ಕಿ ಹುಟ್ಟುವಳಿ ದೊರೆಯುವಂಥಾ ಆಸ್ತಿಗಳನ್ನು ತನ್ನ ಹೆಂಡ್ತಿ ಮಕ್ಕಳ ಪ್ರಯೋಜನಕ್ಕಾಗಿ ಸದರಿ ಮಂಜಮ್ಮ ಶೆಡ್ತಿ ಹೆಸರಲ್ಲಿ ದಸ್ತಾವೇಜುಗಳನ್ನು ಮಾಡಿಸಿ ಇಟ್ಟಿರುತ್ತಾರೆ. ಸದರಿ ಆಸ್ತಿಗಳೆಲ್ಲಾ ಸದರಿ ಸುಬ್ಬಯ್ಯ ಶೆಟ್ರು ಸ್ವಂತ ಸಂಪಾದನೆಯವುಗಳಾಗಿರುತ್ತವೆ. ವಿನಹ ಮಂಜಮ್ಮ ಶೆಡ್ತಿಯ ಸ್ವಂತ ಸಂಪಾದನೆಯು ಬಾಬ್ತು ಎಷ್ಟನ್ನಾದರೂ ದ್ರವ್ಯಾನುಕೂಲಗಳು ಸದರಿ ಆಸ್ತಿಗಳನ್ನು ಒದಗಿಸುವ ಬಗ್ಗೆ ಬಿದ್ದಿಲ್ಲ ವ, ಅವಳ ಸ್ವಂತಕ್ಕೆ ಬೇರೇನೂ ದ್ರವ್ಯಾನುಕೂಲಗಳು ಸಹ ಇರುತ್ತಿದ್ದಿಲ್ಲ. ಈಗ ಜ್ಯಾರಿಯಲ್ಲಿರುವ ಮದ್ರಾಸು ಅಳಿಯ ಸಂತಾನ ಕಾನೂನು ಮೇರೆಗೆ ನಮ್ಮ ತಂದೆಯ ಪಕ್ಕಿನವರ್ದಾಗಿರುವ ಮೇಲೆ ಹೇಳಿದ ಏರಿಸ್ತ ಆಸ್ತಿಗಳಿಂದ ಅವರ ಮಕ್ಕಳಾದ ನಾನು ಕೂಡಾ 6 ಜನರು 1/6 ಅಂಶ ಪ್ರಕಾರ ಇಚ್ಛಾನುಸಾರವಾದ ವಿಭಾಗವನ್ನು ಹೊಂದಲಿಕ್ಕೆ ಅರ್ಹರಾಗಿರುತ್ತೇವೆ. ಹೀಗಿದ್ದಾಗ್ಯೂ ... ಕಾಯಿಲೆಯಲ್ಲಿದ್ದು ಹಾಸಿಗೆ ಹಿಡಿದಿರುವ, ಬುದ್ಧಿ ಸ್ವಾಸ್ಥತೆಯಿಲ್ಲದ ವಯೋವೃದ್ಧಳಾಗಿರುವ ನನ್ನ ತಾಯಿ ಮಂಜಮ್ಮ ಶೆಡ್ತಿಯಿಂದ ಅವಳ ಕೆಲವು ಮಕ್ಕಳು ವ, ಅಳಿಯಂದಿರು ಸೇರಿ ನನಗೆ ಮೋಸಗೊಳಿಸುವ ಬಗ್ಗೆ ಬೇರೆ ಬೇರೆ ರೀತಿಯಲ್ಲಿ ದಸ್ತಾವೇಜುಗಳನ್ನು ಮಾಡಿಸುವ ಇರಾದೆಯಲ್ಲಿ ಇರುತ್ತಾರಾಗಿ ನಾನು ತಿಳಿಯುತ್ತೇನೆ. ಆ ರೀತಿ ಅವರೆಲ್ಲರೂ ನನ್ನ ಇಚ್ಛಾನುಸಾರವಾದ ಪಕ್ಕಿಗೆ ಲೋಪಗೊಳಿಸಿ ಯೇನಾದರೂ ದಸ್ತಾವೇಜುಗಳನ್ನು ಮಾಡಿಸಿದ ಪಕ್ಷಕ್ಕೆ ಅಂತಾ ದಸ್ತಾವೇಜುಗಳು ಯಾವ ಸಂದರ್ಭದಲ್ಲಿಯೂ ನನ್ನ ಮೇಲೆ ಬಾಧಿಸ ತಕ್ಕವುಗಳಲ್ಲ, ವ, ಕಾನೂನು ಪ್ರಕಾರ ಸಿಂಧು ಆಗತಕ್ಕವುಗಳೂ ಆಗಿರುವುದಿಲ್ಲ. ಸದ್ರಿ ಆಸ್ತಿಗಳಿಗೆ ಈ ವರೇಗೆ ಯಾವ ತರದ ಸಾಲ ವಗೈರೆ ಇರುವುದಿಲ್ಲ. ಮತ್ತು ಹಿತಾಹಿತಗಳನ್ನು ತಿಳಿಯುವಷ್ಟು ಬುದ್ಧಿ ಶಕ್ತಿಯಿಲ್ಲದ ಪರಾಧೀನಳಾಗಿರುವ ಹೆಂಗಸಿನಿಂದ ಮಾಡಿಸಬಹುದಾದ ಯಾವತ್ತೂ ರಿಕಾರ್ಡುಗಳು ತನ್ನಿಂದಲೇ ರದ್ದಾಗಿರುತ್ತವೆ.

ಈ ಎಡ ಹೆಬ್ಬೆಟ್ಟು ಗುರ್ತು

ಅಂಗಪ್ಪ ಶೆಟ್ಟಿ ರುಜು.

THE VIJAYA BANK LTD.,
COONDAPOOR.
ದಿ ವಿಜಯಾ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮನುಷ್ಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದ ಸದ್ರಿಯವರ ಸಾಲವನ್ನು ಬರಪಾಡಿಕೊಳ್ಳುವರೆ ರಿಜಿಸ್ಟ್ರೀ ನೋಟೀಸು ಕೊಟ್ಟಾಗ್ಯೂ ಅವರು ತಮ್ಮ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ. 28-8-54ರಲ್ಲು ಹಗಲು ಘಂಟೆ 2ಕ್ಕೆ ಸರಿಯಾಗಿ ಅಥವಾ ಬೇಂಕಿಗೆ ಯುಕ್ತ ಕಂಡ ಯಾವುದೇ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೆ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ಏಲಂನಲ್ಲಿ ಹುಟ್ಟಿಬಂದ ಹಣವು ಸಾಲದ ಮೊಬಲಗಿಗೆ ಕಡಿಮೆಯಾದಲ್ಲಿ ಸಂಬಂಧಪಟ್ಟವರ ದೇಹ ಜವಾಬ್ದಾರಿಯಿಂದ ಬೇಂಕಿನ ಹಣವನ್ನು ವಸೂಲುಮಾಡಲಾಗುವದೆಂಬುದನ್ನು ಈ ಮೂಲಕ ತಿಳಿಸಲಾಗಿದೆ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು	
562/51	ವಿ. ಆನಂದ ಶೆಟ್ಟಿ, ಹಿಲಿಯಾಣ ಚಂದಯ್ಯ ಶೆಟ್ರ ಮಗ, ಹಿಲಿಯಾಣ ಗ್ರಾಮ, ಪೋಸ್ಟು ಬೆಳ್ವೆ.	717	10
344/-	— do —	863	1
675/-	ಬಿ. ಬಾಲಚಂದ್ರ ಸೇಟ್, ಪಾಂಡುರಂಗ ಸೇಟರ ಮಗ, ಕ್ಲಾರ್ಕ್ ಕೆಥೋಲಿಕ್ ಬೇಂಕ್, ಕುಂದಾಪುರ.	255	12
673/-	ಕೆ. ರಘುನಾಥ ಶೆಟ್ಟಿ, ಕಂದಾವರ ರಾಮಣ್ಣ ಶೆಟ್ರ ಮಗ, ಕೊಂಗನಕ್ಳ ಮನೆ, ಕಂದಾವರ, ಪೋಸ್ಟು ಬಸ್ರೂರು.	85	13
556/-	ಎಸ್. ನಾಗಪ್ಪ ಶೆಟ್ಟಿ, ಮೊಳಹಳ್ಳಿ ರಾಮಣ್ಣ ಶೆಟ್ರ ಮಗ, ಮೊಳಹಳ್ಳಿ ಗ್ರಾಮ, ಪೋಸ್ಟು ಮೊಳಹಳ್ಳಿ.	411	1
165/-	ಕೆ. ವಿಠಲ ಶೆಟ್ಟಿ, ಕೆ. ಮಹಾಬಲ ಶೆಟ್ರ ಅಳಿಯ ಬಳ್ಕೂರ್ ಗ್ರಾಮ, ಪೋಸ್ಟು ಬಸ್ರೂರ್.	422	11
207/-	ಆಲ್ಬಾಡಿ ಕೃಷ್ಣಯ್ಯ ಶೆಟ್ಟಿ, ಅಂಕಯ್ಯ ಶೆಟ್ರ ಅಳಿಯ ಆಲ್ಬಾಡಿ, ದೊಡ್ಡ ಮನೆ, ಪೋಸ್ಟು ಬೆಳ್ವೆ.	207	11
838/53	ಕೆ. ಪ್ರಭಾಕರ್ ರಾವ್, ಕೆ. ಗಣಪತಿ ಸೇಟರ ಮಗ, ಕುಂದಾಪುರ.	159	13
754/-	— do —	123	13
788/-	— do —	143	7
105/54	— do —	231	5
670/53	ತೇಜಪ್ಪ ಶೆಟ್ಟಿ, ಸಿದ್ದಮ್ಮ ಸೆಡ್ತೀರ ಮಗ, ತಲ್ಲೂರು ದೊಡ್ಡ ಮನೆ, ಪೋಸ್ಟು ತಲ್ಲೂರ್.	65	5
688/-	ಮುತ್ತಯ್ಯ ಶೆಟ್ಟಿ, ಚಿಕ್ಕಯ್ಯ ಶೆಟ್ರ ಅಳಿಯ ಆಲೂರ್ ಗ್ರಾಮ, ಪೋಸ್ಟು ಗಂಗೊಳ್ಳಿ.	81	12
611/-	ಮ್ಯಾಡಿನ್ ಯೂಸುಫ್, ಮುಖ್ಯ ರೋಡ್ ಕುಂದಾಪುರ.	163	11
556/-	ಕೆ. ಸುಂದರ್ ರಾವ್ ಸೇಟ್, ಅನಂತ ಸೇಟರ ಮಗ ಜ್ಯುವೆಲ್ಲರ್, ಕುಂದಾಪುರ.	71	5
89/-	— do —	29	12
333/-	ಕೆ. ರಾಮ ಸೇಟ್, ಪುಟ್ಟು ಮಾಣಿ ನಾರಾಯಣ ಸೇಟರ ಮಗ, ಜ್ಯುವೆಲ್ಲರ್, ಕುಂದಾಪುರ.	354	3
202/-	ವಿಠಲ ಶೆಟ್ಟಿ, ಪುಟ್ಟಮ್ಮ ಸಡ್ತೀರ ಮಗ, ಕೊಪ್ಪಾಡಿ ದೊಡ್ಡಮನೆ ಪೋಸ್ಟು ಶಂಕರನಾರಾಯಣ ವ. ಕ.	190	5
41/-	ಹಾಲಾಡಿ ನರಸಿಂಹ ಶೆಟ್ಟಿ, ಸುಬ್ಬಣ್ಣ ಶೆಟ್ರ ಅಳಿಯ, ಪೋಸ್ಟು ಹಾಲಾಡಿ.	256	3
81/	ಗುಲ್ವಾಡಿ ಗೋವಿಂದ ಶೆಟ್ಟಿ, ಮಂಜಮ್ಮ ಸೆಡ್ತೀರ ಮಗ, ಕೆಳ ಮನೆ, ಪೋಸ್ಟು ಬಸ್ರೂರ್.	114	1
85/-	ಶೇಷಮ್ಮ, ಅಯ್ಯಾ ಸ್ವಾಮಿಯ ಹೆಂಡತಿ, ಶಿರೂರ್ ಗ್ರಾಮ, ಪೋಸ್ಟು ಹಕ್ಲಾಡಿ.	134	14
131/-	ತೇಜಪ್ಪ ಶೆಟ್ಟಿ, ತಿಮ್ಮಪ್ಪ ಶೆಟ್ರ ಅಳಿಯ, ಸೂರ್ಗೊಳ್ಳಿ, ಪೋಸ್ಟು ಬೆಳ್ವೆ.	82	14

Office of the Bank - Coondapur. Dated. 7-8-1954.

B. R. Adyanthaya,
Agent.

ಲಘು ಪರಿಚಯ

ಮೈಸೂರು ಸರಕಾರದ ಪ್ರಸಿದ್ಧ ಶಾಸಕರೊಬ್ಬರು ಈಗ ಬಿಜಾಪುರ ಜಿಲ್ಲೆಯಲ್ಲಿ ಪ್ರಥಮ ಪಂಚವಾರ್ಷಿಕ ಯೋಜನೆಯಂತೆ ನೆರವೇರುತ್ತಿರುವ ಕಾರ್ಯಗಳ ವಿವರವನ್ನೊಳಗೊಂಡ ೩೨೦ ಪುಟಗಳ ಪುಸ್ತಕವನ್ನು ಕೇವಲ ನಾಲ್ಕಾಣೆ ಬೆಲೆಗೆ ಒದಗಿಸಿದವರು. ಇದನ್ನು ಓದಿದರೆ ಆ ಪ್ರದೇಶದ ಸಾರ್ವಜನಿಕ ಜನರಿಗೆ ಸರಕಾರೀ ಮುಖ್ಯರಿಂದ ಕೈಗೊಳ್ಳಲಾದ ಚಟುವಟಿಕೆ ... ಇದು ವರೆಗೆ ... ಪ್ರಗತಿಯ ... ಅಂಕಿಸಂಖ್ಯೆಗಳ ಸಹಿತ ... ಸಾರ್ವಜನಿಕರ ... ಮುಂದೆ ...

(೩ನೇ ಪುಟದಿಂದ)

ನಾವ ಹೊಸ ಸಮಸ್ಯೆಗಳನ್ನು ಮನುಷ್ಯನ ಮುಂದಿಡುತ್ತವೆ. ವ್ಯಕ್ತಿಯು ಇಂದು ಸಾಮಾಜಿಕ ವಿಪ್ಲವಕ್ಕೆ ಆಹುತಿಯಾಗಿದ್ದು ತನ್ನ ಅಸ್ತಿತ್ವಕ್ಕೋಸ್ಕರ ಅನಿವಾರ್ಯವಾಗಿ ಹೋರಾಡುತ್ತಿರುವ ಪರಿಸ್ಥಿತಿ ಬಂದಿರುವುದು ಎಲ್ಲಕ್ಕೂ ಹೆಚ್ಚಿಗೆ ದೇವರ ಮೇಲಿನ ಭರವಸೆಯು ಹಾರಿಹೋಗಿ ಭೌತಿಕ ವಿಷಯಗಳ ಲಾಲಸೆಯೇ ಹೆಚ್ಚಿಕೊಂಡಿರುವುದು. ಇವೆಲ್ಲ ಒಟ್ಟುಗೂಡಿ ಶಾಂತ ಮನಸ್ಸಿಗೆ ಆಧಾರ ಭೂತವಾದ ಆಧ್ಯಾತ್ಮಿಕ ಪ್ರವೃತ್ತಿಯನ್ನು ನಾಶ ಪಡಿಸಿರುವುದರಿಂದ, ಮನುಷ್ಯನು ಮನೋವಿಕಾರಗಳಿಗೆ ಬಲಿಯಾಗಿರುವನು"

ಈ ಮಾತಿನಲ್ಲಿ ಬಹಳಷ್ಟು ಸತ್ಯವು ಹುದುಗಿರುತ್ತದೆ, ಮತ್ತು ಮನಶ್ಶಾಂತಿಯನ್ನು ಬಯಸುವವರು ಆಧ್ಯಾತ್ಮಿಕ ತತ್ವಗಳನ್ನು ಆಶ್ರಯಿಸಬೇಕೆಂದು ಇದು ಸ್ಪಷ್ಟಗೊಳಿಸುತ್ತದ "ಆಧ್ಯಾತ್ಮಿಕ ತತ್ವಗಳನ್ನು ಜೀವನದಲ್ಲಿ ಅಳವಡಿಸಿಕೊಂಡವನೇ ಅತ್ಯಂತ ಸುಖಿ" ಎಂಬುದಾಗಿ ಅವ್ಯತಕೌರರು ಸಾರಿದುದು ನಮ್ಮ ಪ್ರಾಚೀನ ಪರಂಪರೆಯ ಔನ್ನತ್ಯಕ್ಕೆ ತಕ್ಕುದಾದ ಪ್ರಶಂಸೋದ್ಗಾರ. ಭಾರತದ ಋಷಿಮುನಿಗಳು ಐಹಿಕಾಮುಷ್ಮಿಕ ಶ್ರೇಯಸ್ಸನ್ನು ಪಡೆಯುವುದಕ್ಕೋಸ್ಕರ ದೈಹಿಕ ಹಾಗು ಮಾನಸಿಕ ಆರೋಗ್ಯದ ಕಡೆಗೆ ವಿಶೇಷ ಗಮನವನ್ನು ಕೊಡುತಿದ್ದರು ಧರ್ಮಸಾಧನೆಗಾಗಿಯೇ ಮನಸ್ಸನ್ನೊಳಗೊಂಡ ಶರೀರದ ರಕ್ಷಣೆ ಮಾಡಬೇಕೆಂದು ಅವರು ಹೇಳುತಿದ್ದರು. ಬೆಂಗಳೂರಿನಲ್ಲಿ ಮೊನ್ನೆ ಸ್ಥಾಪನೆಗೊಂಡ ಮಂಡಳವು ಬೌದ್ಧ ಧರ್ಮ ತತ್ವಗಳಲ್ಲಿ ತಂತ್ರ ವಿಭಾಗಗಳಲ್ಲಿ, ಪತಂಜಲಿ ಪ್ರಭೃತಿಗಳ ಯೋಗ ಸೂತ್ರಗಳಲ್ಲಿ ವರ್ಣಿಸಲ್ಪಟ್ಟ ಆಧ್ಯಾತ್ಮಿಕ ಸಾಧನಗಳನ್ನು ಶಾಸ್ತ್ರೀಯ ದೃಷ್ಟಿಕೋಣದಿಂದ ವಿಶ್ಲೇಷಿಸಿ, ವಿವರಿಸಿ, ಇಂದಿನ ವಾತಾವರಣಕ್ಕೆ ಅವುಗಳನ್ನು ಹೊಂದಿಸಿಕೊಳ್ಳುವ ಬಗೆಯನ್ನು ಕಂಡು ಹಿಡಿಯುತ್ತದೆ ಈ ಪ್ರಕಾರ ಪಾಶ್ಚಾತ್ಯ ಪದ್ಧತಿಯ ಅನುಸರಣೆಯೊಡನೆ ಭಾರತೀಯ ಪರಂಪರೆಯ 'ಪುನರುಜ್ಜೀವನ ಕಾರ್ಯವನ್ನು ಕೈಗೊಳ್ಳುತ್ತದೆ

ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಭಾರತದಲ್ಲಿ ನಡೆದ ಕೆಲಸಗಳು ಏನೇನೂ ತೃಪ್ತಿಯನ್ನು ಕೊಡುವುದಿಲ್ಲ ಇಂಗ್ಲೆಂಡಿನಲ್ಲಿ ಜನಸಂಖ್ಯೆಯ ಪ್ರತಿ ೩೦೦೦ಕ್ಕೆ ಒಂದರಂತೆ ಮನೋರೋಗಿಗಳ ಆಸ್ಪತ್ರೆಯಲ್ಲಿ ಹಾಸಿಗೆ ಇವೆಯೆಂದು ಲೆಕ್ಕ ಹಾಕಿದರೆ, ಭಾರತದಲ್ಲಿ—ಇಂಗ್ಲೆಂಡಿಗಿಂತ ಮನೋರೋಗಿಗಳು ೩.೭% ಕಡಿಮೆ ಇದ್ದಾಗಲೂ-ಜನಸಂಖ್ಯೆಯ ೩೬೦೦೦ಕ್ಕೆ ಒಂದು ಹಾಸಿಗೆಯನ್ನು ಮಾತ್ರ ಕಾಣುತ್ತೇವೆ ಆಸ್ಪತ್ರೆಯಲ್ಲಿ ಉಳಕೊಳ್ಳದೆ ಹೊರಗಿನಿಂದಲೇ ಔಷಧೋಪಚಾರ ಮಾಡಿಸಿ ಕೊಳ್ಳ ಬಯಸುವವರಿಗೆ ಇರುವ ಸೌಲಭ್ಯವೂ ತೃಪ್ತಿಯನ್ನೊದಗಿಸುವುದಿಲ್ಲ ಮಾದರು, ಮಂಕರು ಮುಂತಾದವರನ್ನು ಉಚಿತ ಶಿಕ್ಷಣ ಮೂಲಕ ಯೋಗ್ಯ ಮನುಷ್ಯರಾಗಿ ಮಾಡುವ ಮತ್ತು ಮನೋವಿಕಾರಿಗಳನ್ನು ಸುಖಜೀವನ ನಡೆಸಬಲ್ಲ ಮನುಷ್ಯರಾಗಿ ಮಾಡುವ ಅವಕಾಶಗಳು ಸಾಕಷ್ಟಿಲ್ಲವಲ್ಲ ಎಂದು ಬೇಸರವಾಗುತ್ತದೆ. ಇದಕ್ಕೆ ನಮ್ಮಲ್ಲಿ ಮನೋರೋಗಗಳ ಚಿಕಿತ್ಸೆ ಮಾಡಬಲ್ಲ ಪರಿಣತರ ಅಭಾವವಿರುವುದೂ ಮುಖ್ಯ ಕಾರಣ—ಮನೋರೋಗಗಳ ಉಪಶಮನ ಮಾಡಬಲ್ಲ ವೈದ್ಯರು ಪ್ರತಿಭಾನ್ವಿತರಾಗಿರುವುದು ಆಗತ್ಯ ಇಂಥವರು ದೊರಕುವುದೇ ವಿರಳ. ಚುರುಕು ಬುದ್ಧಿಯ ಮೇಧಾವಿಗಳನ್ನು ನಾವು ಹುಡುಕಿ ತೆಗೆಯ ಬೇಕಾಗುತ್ತದ ಈ ಕೆಲಸ ತುಂಬಾ ಪ್ರಯಾಸದ್ದು, ಮತ್ತು ಸಹನೆಯಿಂದಲೇ ಅದನ್ನು ಮಾಡಬೇಕು.

ಆರೋಗ್ಯ ಸಂಸ್ಥೆಯವರು ವಿಶ್ವ ಎರವಲು ಕೊಟ್ಟ ತಜ್ಞರಾದ ಪ್ರೊಫೆಸರ್ ಮೇಯರ್ ಗ್ರೋಸ್ ಅವರು ಬೆಂಗಳೂರಿನ ಮಂಡಳದ ಸ್ಥಾಪನೆಗೆ ಅಗತ್ಯವಾದ ಹಿನ್ನೆಲೆಯ ಕೆಲಸವನ್ನು ಮಾಡಿದರು. ಭೋರ್ ಸಮಿತಿಯು ರಾಜ್ಯಗಳ ಹಾಗು ಕೇಂದ್ರದ ಸರಕಾರಗಳು ಮಾನಸಿಕ ಆರೋಗ್ಯದ ಕಡೆಗೆ ಅಧಿಕಾಧಿಕ ಗಮನವನ್ನು ಪೂರೈಸಬೇಕಾದ ದಿನ ಈಗ ಬಂದಿರುವುದೆಂದು ಕಂಠೋಕ್ತವಾಗಿ ಸಾರಿ, ಒತ್ತಾಸೆಯನ್ನು ಕೊಟ್ಟಿತು. ಕೇಂದ್ರ ಸರಕಾರದ ಧಾರಾಳವಾದ ನೆರವಿನದೆಸೆಯಿಂದಅಸ್ತಿತ್ವಕ್ಕೆಬಂದ ಈ ಮಂಡಳವು ಸ್ನಾತಕೋತ್ತರ ಸಂಶೋಧನೆಗೂ ಪದವಿಗೂ ಅವಕಾಶ ಕಲ್ಪಿಸಿ ಕೊಡುತ್ತದೆ ಯೋಜನಾ ಬದ್ಧವಾಗಿ ವಿಸ್ತರಿಸಿದಾಗ ಇದರಲ್ಲಿ ಮನೋರೋಗ ಚಿಕಿತ್ಸಾ ವಿಧಾನದ ಹಲವಾರು ವಿಭಾಗಗಳು ನೆಲೆಗೊಳ್ಳುತ್ತವೆ ಮನೋವಿಕಾರಗಳು ದೈಹಿಕ ಬೇನೆಯನ್ನೂ ದೈಹಿಕಬೇನೆಗಳು ಮನೋವಿಕಾರಗಳನ್ನೂ ಹುಟ್ಟಿಸಬಲ್ಲವಾದುದರಿಂದ —ಈ ವಿಷಯದ ಕಡೆಗೂ ವಿಶೇಷ ವಿಭಾಗವೊಂದು ಗಮನವನ್ನು ಪೂರೈಸುವುದು. ಈ ಪ್ರಕಾರ ಭಾರತೀಯರು ವೇದೋಪನಿಷತ್ತುಗಳ ಕಾಲದಲ್ಲಿ ಅತ್ಯಂತ ಮಹತ್ವವನ್ನು ಕೊಟ್ಟ ನಿರ್ಮಲ ಮನಸ್ಸಿನ ರಚನೆಯಲ್ಲಿ ಬೆಂಗಳೂರಿನ ಮಂಡಳವು ತನ್ನ ಪಾತ್ರವನ್ನು ನಿರ್ವಹಿಸುವುದು, ಮತ್ತು ವ್ಯಕ್ತಿಗಳಿಗೆ ಮನಶ್ಶಾಂತಿಯನ್ನು ನೀಡಿ ಸಾಮಾಜಿಕ ವಾತಾವರಣವನ್ನು ಮಂಗಳಮಯವಾಗಿಸಲು ನೋಡುವುದು.

ಸ್ವಾತಂತ್ರ್ಯದ ಸಪ್ತಮ ವರ್ಷದಲ್ಲಿ ಮದ್ರಾಸು

ಮದ್ರಾಸು ರಾಜ್ಯದ ಮಟ್ಟಿಗೆ ಸ್ವಾತಂತ್ರ್ಯದ ಸಪ್ತಮ ವರ್ಷದಲ್ಲಿ ಎರಡು ಮಹತ್ವದ ಘಟನೆಗಳು ಜರಗಿದವು. ೧೯೫೩ನೇ ಅಕ್ಟೋಬರ ೧ರಂದು ಆಂಧ್ರ ರಾಜ್ಯವು ಸ್ಥಾಪನೆಗೊಂಡುದು ಮೊದಲನೆಯದಾದರೆ, ೧೯೫೪ನೇ ಎಪ್ರಿಲು ೧೪ನೇ ತಾರೀಕಿನಂದು ರಾಜಗೋಪಾಲಾಚಾರಿಯವರು ಮುಖ್ಯ ಮಂತ್ರಿಯ ಅಧಿಕಾರವನ್ನು ತ್ಯಜಿಸಿ, ಕಾಮರಾಜನಾಡರರ ಒಂಭತ್ತು ಸದಸ್ಯರ ಮಂತ್ರಿ ಮಂಡಳ ಅಧಿಕಾರ ಗ್ರಹಣ ಮಾಡಿದುದು ಎರಡನೆಯದು.

ರಾಜಾಜಿಯ ನೇತೃತ್ವದ ಅವಧಿಯಲ್ಲಿ ರಾಜ್ಯದ ಆಹಾರ ಮತ್ತಿತರ ಕ್ಷೇತ್ರಗಳಲ್ಲಿ ಗಣನೀಯ ಪ್ರಗತಿಯು ಸಾಧಿಸಲ್ಪಟ್ಟಿತು ಧೈರ್ಯದಿಂದ ಮುಂದಿಟ್ಟ ವಿನಿಯಂತ್ರಣದ ಹೆಜ್ಜೆಯು ಉತ್ತಮ ಫಲಿತಾಂಶಗಳನ್ನು ಕೊಟ್ಟಿತಲ್ಲದೆ, ಆಹಾರ ಧಾನ್ಯಗಳ ಸಮೃದ್ಧಿಯ ದೆಸೆಯಿಂದ ಬೆಲೆಯ ಇಳಿಕೆಯು ಈಗ ಕಂಡು ಬರುತ್ತಿದೆ.

ಈಗಿನ ಮದ್ರಾಸು ರಾಜ್ಯಕ್ಕೆ ಒಟ್ಟು ೯೩ ಕೋಟಿ ರೂಪಾಯಿಗಳ ವೆಚ್ಚವುಳ್ಳ ಪಂಚವಾರ್ಷಿಕ ಯೋಜನೆಯು ಬರುತಿದ್ದು, ಮೊದಲಿನ ಮೂರು ವರ್ಷಗಳಲ್ಲಿ ವರ್ಷಕ್ಕೆ ೧೫ ಕೋಟಿಯಂತೆ ಒಟ್ಟು ೪೫ ಕೋಟಿ ರೂಪಾಯಿಗಳು ವ್ಯಯವಾಗಿವೆ. ಯೋಜನೆಯ ಬಹ್ವಂಶವು (೫೦ ಕೋಟಿ ರೂಪಾಯಿ) ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಅಭಿವೃದ್ಧಿಗಾಗಿ ವಿನಿಯೋಗ ಹೊಂದುವುದು. ಕೃಷಿ ಮತ್ತಿತರ ತತ್ಸಂಬಂಧ ವಿಭಾಗಗಳಾದ ಪಶು ಸಂಗೋಪನೆ, ಅರಣ್ಯ ಸಂರಕ್ಷಣೆ, ಮತ್ಸ್ಯ ವ್ಯವಸಾಯ, ಸಮಾಜ ವಿಕಾಸ ಯೋಜನೆ, ರಾಷ್ಟ್ರೀಯ ವಿಸ್ತರಣೆ ಇತ್ಯಾದಿಗಳಿಗಾಗಿ ೧೮ ಕೋಟಿ ರೂಪಾಯಿಯೂ ಸಾಮಾಜಿಕ ಸೇವೆ, ಶಿಕ್ಷಣ ಪ್ರಸಾರ, ವೈದ್ಯಕೀಯ ಸೌಲಭ್ಯ, ಹರಿಜನೋದ್ಧಾರ ಮುಂತಾದವುಗಳಿಗೆ ೧೯ ಕೋಟಿ ರೂಪಾಯಿಯೂ ವೆಚ್ಚವಾಗುತ್ತದ.

ಕೆಳಗಿನ ಭವಾನಿ ಯೋಜನೆ (ವೆಚ್ಚ ಸುಮಾರು ೧೦ ಕೋಟಿ ರೂಪಾಯಿ) ಯಂತಹ ದೊಡ್ಡ ಕೆಲಸಗಳಲ್ಲದೆ ಹಳ್ಳಿಯ ಕೆರೆಬಾವಿಗಳ ದುರಸ್ತಿಯೇ ಮುಂತಾದ ಸಣ್ಣ ಮಟ್ಟದ ನೀರಾವರಿ ಕೆಲಸಗಳಿಗಾಗಿ ೯೪ ಲಕ್ಷ ರೂಪಾಯಿ ಖರ್ಚಾಗುವುದು ಸುಮಾರು ಏಳೂವರೆ ಲಕ್ಷ ರೂಪಾಯಿ ವೆಚ್ಚದಲ್ಲಿ ೫೮ ಕೇಂದ್ರಗಳಲ್ಲಿ ರಾಷ್ಟ್ರೀಯ ವಿಸ್ತರಣಾ ಯೋಜನೆಯು ಕಾರ್ಯಗತಗೊಳ್ಳುತ್ತಿದೆಯಲ್ಲದೆ ಸಮಾಜವಿಕಾಸ ಯೋಜನೆಯು ಹಳ್ಳಿಗಳಿಗೆ ಹೊಸ ಜೀವನದ ಸಂದೇಶವನ್ನು ಮುಟ್ಟಿಸುತ್ತದೆ

ಕೇಂದ್ರ ಸರಕಾರವು ಮದ್ರಾಸಿಗೆ ೧,೯೯,೦೦೦ ರೂಪಾಯಿಗಳನ್ನು ಕೊಟ್ಟು ಅಸ್ಪೃಶ್ಯತೆಯ ನಿವಾರಣಾರ್ಥ ಹಳ್ಳಿಗಳಲ್ಲಿ ರಭಸದ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕೆಂದು ಅಪೇಕ್ಷಿಸಿರುವುದು. ಇದಲ್ಲದೆ ಸರಕಾರದವರು ಹರಿಜನರ ಹಿತಚಿಂತನೆಯ ಧ್ಯೇಯದಿಂದ ಒಂದು ಕೋಟಿ ರೂಪಾಯಿಗಳ ಪ್ರತ್ಯೇಕ ನಿಧಿಯನ್ನು ಏರ್ಪಡಿಸಿದ್ದಾರೆ

ಈ ಲಾಭಗಳೊಂದಿಗೆ ತುಲನೆ ಮಾಡುವಾಗ ನಮಗೆ ತೋರುವ ನಷ್ಟವೆಂದರೆ ರಾಜಾಜಿಯ ಪರಿಷ್ಕೃತ ಪ್ರಾಥಮಿಕ ಶಿಕ್ಷಣ ಪದ್ಧತಿಯನ್ನು ಬಿಟ್ಟುಗೊಟ್ಟದ್ದೊಂದೇ ಆಗಿದೆ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು, ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ ೦-೧೪-೦

—: ವಿಳಾಸ —

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಇದೀಗ ಹೊರಬಿದ್ದಿದೆ

[illegible]

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಲೇಖಕರು. ಕು. ಶಿ ಹರಿದಾಸ ಭಟ್ಟ, ಎಂ ಎ.

*

ಇ [illegible] ಜಗತ್ತಿನಲ್ಲಿ [illegible] ಪ್ರಬಲವಾದ ಏಶಿಯದ ರಾಜಕೀಯ [illegible] ಆರ್ಥಿಕ [illegible] ಚಿತ್ರವನ್ನು ಸರಳವಾಗಿಯೂ, [illegible] ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ ಬೆಲೆ ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದ್ದು.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ ವಾಚನಾಲಯ, ಶಾಲಾ, ಕಾಲೇಜುಗಳಿಗೆ ನಾವು ಕೊಡುವ ಕಮಿಶನ್ ದರಕ್ಕೂ ಬರೆಯಿರಿ.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.



Edited, Printed & Published By K. H Shetty at the Navayuga Press, Udipi, S. India

ನವಯುಗ

Founder:- Sri A. B. Shetty, Minister for Public Health, Govt of Madras.

Vol.33 No 51 26-8-1954 ವರ್ಷ ೩೩ ವಾರ ೫೧

ಜನತೆಯೊಡನೆ ಯಾಚನೆ

ಭಾರತ ಸರಕಾರದವರು ಪ್ರವರ್ತಿಸಿದ ರಾಷ್ಟ್ರೀಯ ಯೋಜನಾ ಸಾಲವು ಇದೇ ಸಪ್ಟೆಂಬರ ೧೫ನೇ ತಾರೀಕಿಗೆ ಮುಕ್ತಾಯಗೊಳ್ಳುವುದೆಂದು ತಿಳಿದು ಬರುತ್ತದೆ. ಕಳೆದ ಏಪ್ರೀಲು ೧೯ನೇ ತಾರೀಕಿನಂದು ಈ ಸಾಲಕ್ಕೆ ಚಂದಾವನ್ನು ಸಂಗ್ರಹಿಸಲು ಪ್ರಾರಂಭಿಸಿದಾಗ, ಅನಿರ್ದಿಷ್ಟ ಅವಧಿಯ ವರೆಗಲ್ಲದಿದ್ದರೂ ಸಾಕಷ್ಟು ದೀರ್ಘಕಾಲದ ವರೆಗೆ ಸಾಲವನ್ನು ತೆರೆದಿಡಲಾಗುವುದೆಂದು ಊಹಿಸಿದ್ದೆವು ಮೊದಲಿನ ಎರಡು ವಾರಗಳಲ್ಲಿ ಸಾಲಕ್ಕೆ ಒಳ್ಳೆಯ ಯಶಸ್ಸು ದೊರಕಿತು-ಒಟ್ಟು ೪೫.೫ ಕೋಟಿ ರೂಪಾಯಿಗಳು ಸಂಗ್ರಹವಾದವು. ಆದರೆ ಮುಂದೆ ಸಾಲಕ್ಕೆ ಶೇಖರವಾದ ಹಣದ ಮೊತ್ತವು ಇಳಿಮುಖವಾಗುತ್ತಾ ಹೋಯಿತು. ಮೇಯಲ್ಲಿ ೩೯.೫ ಕೋಟಿ, ಜೂನಿನಲ್ಲಿ ೨೪.೫ ಕೋಟಿ ಮತ್ತು ಜುಲಾಯಿಯಲ್ಲಿ ೨೦ ಕೋಟಿಯಷ್ಟು ಹಣವು ಸಂಗ್ರಹವಾಯಿತು ಮುಂದೆ ಅಕ್ಟೋಬರ ತಿಂಗಳ ಹೊತ್ತಿಗೆ ವ್ಯಾಪಾರೋದ್ಯಮಗಳಲ್ಲಿ ಹಣಕ್ಕೆ ಹೆಚ್ಚಿನ ಬೇಡಿಕೆ ಬರುವುದರಿಂದ ಸರಕಾರದ ಯಾಚನೆಗೆ ಆಗ ಸಾರ್ವಜನಿಕರಿಂದ ಅಧಿಕ ಪ್ರೋತ್ಸಾಹ ದೊರೆಯುವುದು ಸಂಶಯ. ಆದುದರಿಂದ ಅದಕ್ಕೆ ಮುಂಚೆಯೇ ಸಾಲವನ್ನು ಮುಕ್ತಾಯಗೊಳಿಸಲು ಭಾರತ ಸರಕಾರ ನಿರ್ಧರಿಸಿದುದರಲ್ಲಿ ತಪ್ಪೇನೂ ಇಲ್ಲ.

ಹಾಗೆಂದು, ಸಾಲಕ್ಕೆ ಜನರ ವಂತಿಗೆ ಬೇಡವೆಂದು ಯಾರೂ ಅರ್ಥ ಮಾಡಿಕೊಳ್ಳಲಾಗದು— ಸಾಲಕ್ಕೆ ಎಷ್ಟು ಹೆಚ್ಚು ವಂತಿಗೆಯು ಬಂತೋ ಅಷ್ಟು ಮಟ್ಟಿಗೆ ರಾಷ್ಟ್ರಾಭ್ಯುದಯ ಕಾರ್ಯಕ್ಕೆ ಸಹಾಯ ದೊರೆತಂತಾಗುವುದು. ನಮ್ಮ ಪಂಚವಾರ್ಷಿಕ ಯೋಜನೆಯು ಸುಮಾರು ೨೫೫೦ ಕೋಟಿ ರೂಪಾಯಿಗಳ ವೆಚ್ಚವನ್ನು ಒಳಗೊಳ್ಳುತ್ತದೆ ನಮ್ಮ ಸಾಮರ್ಥ್ಯಕ್ಕಿಂತಲೂ ೧೦೦೦ ಕೋಟಿ ರೂಪಾಯಿಗಳಷ್ಟು ಹೆಚ್ಚಾದ ಯೋಜನೆ ಇದಾಗಿದ್ದು, ವಿದೇಶಗಳಿಂದ ದೊರಕಬಹುದಾದ ಸಹಾಯವು ಪರಿಮಿತವಾಗಿದೆ. ಈ ವರೆಗೆ ಸುಮಾರು ೨೫೦ ಕೋಟಿ ರೂಪಾಯಿಗಳಷ್ಟು ಮೊತ್ತವು ಪೇರಿ ದೇಶಗಳಿಂದ ನೆರವಾಗಿ ದೊರೆತಿರುವುದೇನೋ ನಿಜ. ಆದರೆ ಮುಂದಿನ ವರ್ಷಗಳಲ್ಲಿ ಇಂಥ ನೆರವು ದೊರಕುವ ಭರವಸೆ ಏನೇನೂ ತೋರುವುದಿಲ್ಲ. ಆದುದರಿಂದ ಸುಮಾರು ೯೦೦ ಕೋಟಿ ರೂಪಾಯಿಗಳ ಕೊರತೆಯನ್ನು ನಾವು ಅನುಭವಿಸಬೇಕಾಗುತ್ತದೆ ಯೋಜನೆಯ ಮುಂದಿನ ೨೦ ತಿಂಗಳುಗಳ ಅವಧಿಯಲ್ಲಿ ನಾವು ಇಷ್ಟು ಹಣವನ್ನು ಸಂಗ್ರಹಿಸುವುದು ಹೇಗೋ—ದೇಶಮುಖರ ಹೇಳಿಕೆಯನ್ನು ನೋಡಿದರೆ, ಸಾಧ್ಯವಾದಷ್ಟು ಹೆಚ್ಚು ಹಣವನ್ನು ಸಾಲ ರೂಪದಲ್ಲಿ ಸಂಗ್ರಹಿಸಿ, ಉಳಿದ ಮಟ್ಟಿಗೆ ಕರಾಕರಣೆ ಹಾಗು ಕೊರತೆ ಧನವಿನಿಯೋಗ ಪದ್ಧತಿಗಳನ್ನು ಆಶ್ರಯಿಸಬೇಕಾಗಬಹುದು.

ಈ ಕ್ರಮಗಳು, ಮುಖ್ಯವಾಗಿ ಕೊರತೆ ಧನ ವಿನಿಯೋಗ ಪದ್ಧತಿಯು, ಕೆಲವು ಅನಿಷ್ಟ ಪರಿಣಾಮಗಳನ್ನೂ ತರಬಹುದು: ಸಾಕಷ್ಟು ದಕ್ಷತೆ ವಹಿಸದಿದ್ದಲ್ಲಿ ಜನರು ತೊಂದರೆಗೆ ಒಳಗಾಗುವ ಪ್ರಸಂಗ ಬಂದೀತು. ಈ ಅನಿಷ್ಟ ಸಂಭವವನ್ನು ಕಡಿಮೆ ಮಾಡುವುದಕ್ಕೆ ಇರುವ ಸಾಧನವೆಂದರೆ, ರಾಷ್ಟ್ರೀಯ ಯೋಜನಾ ಸಾಲಕ್ಕೆ ಆದಷ್ಟು ಹೆಚ್ಚು ವಂತಿಗೆಯನ್ನು ನೀಡುವುದೊಂದೇ ಆಗಿದೆ ಕೆಲವರು ನಮ್ಮ ದೇಶದಲ್ಲಿ ತಾಂಡವವಾಡುವ ದಾರಿದ್ರ್ಯವನ್ನು ನೆನೆಯದೆ, ದೇಶದಲ್ಲಿ ತುಂಬ ಹಣವು ಉತ್ಪಾದಕ ಕಾರ್ಯಗಳಲ್ಲಿ ನಿಕ್ಷೇಪಿಸಲ್ಪಡದೆ, ಕೊಳೆಯುತ್ತಾ ಬಿದ್ದಿದೆಯೆಂದೂ ಹಣವನ್ನು ಉದ್ದಿಮೆ ವ್ಯವಹಾರಗಳಲ್ಲಿ ತೊಡಗುವ ಯೋಗ್ಯ ಸಂದರ್ಭವೊಂದು ದೊರೆತರೆ, ಈ ಹಣದ ಹೊಳೆಯೆಲ್ಲ ಹರಿದು ಬರಬಹುದೆಂದೂ ಹೇಳುತಿದ್ದರು ಇಂಥವರ ಕಲ್ಪನೆಯು ಭ್ರಾಮಕವಾದುದೆಂದು ಸರಕಾರ ಪ್ರವರ್ತಿಸಿದ ಯೋಜನಾ ಸಾಲವು ತೋರಿಸಿಕೊಟ್ಟಿದೆ ಬಡತನದಿಂದ ದಿನಗಳೆಯುವ ನಾಗರಿಕರ ಉಳಿತಾಯ ಪ್ರಮಾಣ ತೀರ ಕಡಿಮೆ ಎಂದು ಈಗ ಸ್ಪಷ್ಟವಾಗಿರುತ್ತದೆ. ಆದರೆ ಇವರ ಜೊತೆಗೆ ಇನ್ನೊಂದು ಸಂಗತಿಯೂ ಬೆಳಕಿಗೆ ಬಂದಿದೆ— ಅದೆಂದರೆ, ಜನಸಾಮಾನ್ಯರು ರಾಷ್ಟ್ರಾಭಿವೃದ್ಧಿ ಕಾರ್ಯದಲ್ಲಿ ಅಧಿಕ ಉತ್ಸಾಹವನ್ನು ತೋರಿಸುತಿದ್ದು, ತಮ್ಮ ಅನುಕೂಲಕ್ಕೆ ಒಪ್ಪುವಂತಿದ್ದರೆ, ಸರಕಾರದ ಸಾಲಕ್ಕೆ ತಮ್ಮಿಂದಾದ ಸಹಾಯವನ್ನು ಮಾಡಲು ಹಿಂಜರಿಯುವುದಿಲ್ಲ. ಹಿಂದಿನ ಸಾಲಗಳಿಗೆ ಸರಕಾರದವರು ಆಯಾ ವರ್ಷ ಸಂದಾಯ ಮಾಡಲಿದ್ದ ಸಾಲ ಪತ್ರಗಳ ಹಣವೇ ತಿರುಗಿ ವಂತಿಗೆಯಾಗಿ ಬರುತಿತ್ತು: ಈ ಸಲದ ಸಾಲಕ್ಕೆ ಅಂಥ ಹಣಕ್ಕಿಂತಲೂ ಜನತೆಯಿಂದ ನೇರವಾಗಿ ಬಂದ ಉಳಿತಾಯವೇ ಅಧಿಕ.

ಯೋಜನಾ ಸಾಲವನ್ನು ಜನಪ್ರಿಯವಾಗಿಸಲು ಸರಕಾರದವರು ಕೆಲವು ಆಕರ್ಷಣೆಗಳನ್ನು ಕಲ್ಪಿಸಿ ಕೊಟ್ಟಿರುವರು— ಇದಕ್ಕೆ 3½% ಬಡ್ಡಿಯು ಸಿಗುತ್ತದೆ, ಹತ್ತು ವರ್ಷಗಳಲ್ಲಿ ಮರುಪಾವತಿಯಾಗುತ್ತದೆ, ಆದಾಯ ತೆರಿಗೆಯಿಂದ ವಿನಾಯತಿ ದೊರಕಿಸುವ ಕ್ರಮವು ಸರಳಗೊಳಿಸಲ್ಪಟ್ಟಿದೆ, ಭಾರತದ ಆರು ಕೋಟಿ ಮನೆಗಳಲ್ಲಿರುವ ಗೃಹಿಣಿಯರಿಗೆ ತಮ್ಮ ಕೈಯಲ್ಲಿರುವ ಚಿನ್ನಾಭರಣಗಳನ್ನು ಹಣಕ್ಕೆ ಪರಿವರ್ತಿಸಿ ಸಾಲಕ್ಕೆ ವಂತಿಗೆ ಕೊಡಲಾಗುವಂತೆ ವ್ಯವಸ್ಥೆಯೂ ಏರ್ಪಟ್ಟಿದೆ. ಇದರ ಹೊರತು, ಬಡ ಹಾಗು ಮಧ್ಯಮ ವರ್ಗದ ನಾಗರಿಕರಿಗೆ ತಮ್ಮ ಶಕ್ತ್ಯಾನುಸಾರ ವಂತಿಗೆ ನೀಡಲು ಅನುಕೂಲವಾಗುವಂತೆ ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟುಗಳನ್ನು ಕೊಂಡುಕೊಳ್ಳುವ ಸೌಲಭ್ಯವೂ ಒದಗಿಸಲ್ಪಟ್ಟಿದೆ. ಈ ಸರ್ಟಿಫಿಕೇಟುಗಳು ೨೫ ರೂಪಾಯಿಯ ಕನಿಷ್ಠ ವಂತಿಗೆಯ ಮೇಲೆ ಸಿಗುತ್ತವೆ. ಬಡ್ಡಿ ದರವು 4½% ಆಗಿದೆ, ಆದಾಯ ತೆರಿಗೆಯಿಂದ ಇದು ವಿನಾಯತಿ ಹೊಂದಿದೆ. ಈ ಸರ್ಟಿಫೀಕೇಟುಗಳ ಮೂಲಕ ಸರಕಾರಕ್ಕೆ ಒಂದೂವರೆ ಕೋಟಿ ರೂಪಾಯಿ ಜಮೆಯಾಗಿದೆ. ಒಬ್ಬನು ಕೊಂಡುಕೊಳ್ಳಬಹುದಾದ ಈ ಸರ್ಟಿಫಿಕೇಟುಗಳ ಬೆಲೆಯು ಒಟ್ಟು ಒಂದು ಸಾವಿರ ರೂಪಾಯಿಗಳನ್ನು ಮೀರಬಾರದೆಂಬ ನಿಯಮವಿಲ್ಲದಿದ್ದರೆ ಇನ್ನೂ ಹೆಚ್ಚು ಹಣ ದೊರಕುವುದು ಸಾಧ್ಯವಿತ್ತೆಂದು ಹೇಳಲಾಗುತ್ತದೆ.

ಭಾರತದಲ್ಲಿ ಇಂದು ಯೋಜನಾಬದ್ಧವಾಗಿ ಅನೇಕ ಮಹತ್ವದ ನೀರಾವರಿ ಹಾಗು ವಿದ್ಯುಚ್ಛಕ್ತಿ ಕೆಲಸಗಳೂ ಏಶ್ಯಾದಲ್ಲಿಯೇ ಹಿರಿದೆನಿಸಿದ ಕೈಗಾರಿಕೆಗಳೂ ನಡೆಯುತ್ತಿದ್ದು, ಉತ್ಪಾದಕ ಶಕ್ತಿಯನ್ನು ಅಭಿವೃದ್ಧಿಗೊಳಿಸುವ ಮತ್ತು ಜನರ ಜೀವನ ಮಟ್ಟವನ್ನು ಎತ್ತರಿಸುವ ದ್ವಿಮುಖ ಉದ್ದೇಶವನ್ನು ಇವು ವ್ಯಕ್ತಗೊಳಿಸುತ್ತವೆ ಭರದಿಂದ ಬೆಳೆಯುತ್ತಿರುವ ಜನಸಂಖ್ಯೆಯು ಮುಂದೆ ಸುಖಜೀವನದ ಅನುಭವ ನಮಗೆ ಮಾಡಿಸಿಕೊಡಬೇಕಾದರೆ, ಅಭಿವೃದ್ಧಿಯ ವೇಗವೂ ಬಹಳ ಹೆಚ್ಚಿಕೊಳ್ಳಬೇಕಾಗುತ್ತದೆ ಅಭಿವೃದ್ಧಿಯನ್ನು ಸಾಧಿಸಲು ಅಪಾರವಾದ ತ್ಯಾಗವು ಆಗತ್ಯ ಅನುಭೋಗವನ್ನು ಕಡಿಮೆಮಾಡಿ ತ್ಯಾಗಕ್ಕೆ ಮನಸ್ಸುಗೊಟ್ಟರೆ ಮಾತ್ರ ಕಾಲಾಂತರದಲ್ಲಿಯಾದರೂ ಸುಖ ಜೀವನವನ್ನು ನಡೆಸುವ ಆಶೆಯನ್ನು ಕಟ್ಟಿಕೊಳ್ಳಬಹುದು. ಇಂತಹ ತ್ಯಾಗಕ್ಕೆ ಪ್ರೇರಣೆಯನ್ನು ಒದಗಿಸುವುದಕ್ಕೆ ಯೋಜನಾ ಸಾಲವು ನೆರವಾಗುತ್ತದೆ

ನಮ್ಮ ಪ್ರಧಾನ ಮಂತ್ರಿಗಳ ಮಾತಿನಲ್ಲಿ "ಈ ಸಾಲವು ನವಭಾರತ ನಿರ್ಮಾಣ ಕಾರ್ಯದಲ್ಲಿ ತಮ್ಮ ಶಕ್ತ್ಯಾನುಸಾರ ಭಾಗವಹಿಸಲು ಪ್ರತಿಯೊಬ್ಬ ನಾಗರಿಕನಿಗೂ ನೀಡಲಾದ ಕರೆಯಾಗಿದೆ." ಇಲ್ಲಿ ಕೇವಲ ವ್ಯಾಪಾರೀ ವ್ಯವಹಾರದ ಮನೋಭಾವ ಮಾತ್ರ ಇರುವುದಲ್ಲ—ಸಾಲಕ್ಕೆ ವಂತಿಗೆ ಕೊಡುವ ಪ್ರತಿಯೊಬ್ಬನೂ ತನ್ನ ಹಣವನ್ನು ಬಡ್ಡಿಯಲ್ಲಿ ತೊಡಗಿಸಿ, ನಾಲ್ಕು ಕಾಸು ಹೆಚ್ಚು ಸಂಪಾದಿಸುವವನು ಮಾತ್ರ ಆಗಿರದೆ ಭಾರತದ ಪುರೋಗತಿಗೋಸ್ಕರ ಸಕ್ರಿಯ ಸಹಾಯವನ್ನು ನೀಡಿದ, ರಾಷ್ಟ್ರದ ಅಭಿವೃದ್ಧಿಯಲ್ಲಿ ಹೃತ್ಪೂರ್ವಕ ವಿಶ್ವಾಸವನ್ನು ಪ್ರಕಟಿಸಿದ, ಸಂಪನ್ನ ಭಾರತವನ್ನು ಕಟ್ಟುವೆನೆಂಬ ಪ್ರತಿಜ್ಞೆಯನ್ನು ಕೈಗೊಂಡ ಮಹಾ

(೧೧ನೇ ಪುಟ ನೋಡಿ)

THE CANARA INDUSTRIAL & BANKING SYNDICATE LTD

Estd: 1925 H. O UDIPI, S- India

ಖರ್ಚಿಲ್ಲದೆ ಹಣ ಕಳುಹಿಸಬೇಕೆ?

ಮುಂಬಯಿಯ ನಾಗರಿಕರು ಈ ಕಡೆ ಗಮನಿಸಿರಿ.

ರತ್ನಗಿರಿ, ಉತ್ತರ ಕನ್ನಡ, ದಕ್ಷಿಣ ಕನ್ನಡ ಮತ್ತು ಮಲಬಾರು ಜಿಲ್ಲೆಗಳ ಪ್ರಾಮುಖ್ಯ ನಗರಗಳಲ್ಲಿರುವ ತಮ್ಮ ಬಂಧು ಮಿತ್ರರಿಗೆ ಕಾಲಕಾಲಕ್ಕೆ ಹಣ ಕಳುಹಿಸುವ ಮುಂಬಯಿಯ ನಮ್ಮ "ಸೇವಿಂಗ್ಸ್ ಬೇಂಕ್ ಲೇವಣಾತಿ"ದಾರರ ಅನುಕೂಲತೆಗಾಗಿ ಖರ್ಚಿಲ್ಲದೆ ಹಣ ಕಳುಹಿಸುವ ವ್ಯವಸ್ಥೆ ಮಾಡಲಾಗಿರುವುದೆಂಬುದನ್ನು ಬಲ್ಲಿರಾ? ಹಣ ಕಳುಹಿಸುವ ಕಷ್ಟನಷ್ಟಗಳನ್ನು ನಮ್ಮ ಗಿರಾಕಿಗಳಿಗೆ ತಪ್ಪಿಸಬೇಕೆಂಬುದೇ ಈ ಏರ್ಪಾಡಿನ ಉದ್ದೇಶ ಕುಟುಂಬದ ಹಾಗು ಸ್ವಂತ ಉಪಯೋಗಕ್ಕಾಗಿ ಮಾತ್ರ ಈ ಧರ್ಮಾರ್ಥ ಸವಲತ್ತನ್ನು ಪಡಕೊಳ್ಳಬೇಕಾಗಿ ವಿನಂತಿ ಹೆಚ್ಚಿನ ಮಾಹಿತಿಯನ್ನು ಸಮೀಪದ ನಮ್ಮ ಯಾವುದೇ ಶಾಖೆಯಿಂದ ಪಡೆದುಕೊಳ್ಳಿರಿ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್

ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್,

ಸ್ಥಾಪನೆ ೧೯೨೫] [ಪ್ರಧಾನ ಕಚೇರಿ ಉಡುಪಿ, ದ. ಭಾರತ

ಔದ್ಯೋಗಿಕ ಕ್ಷೇತ್ರದ ಅಭಿವೃದ್ಧಿ ಮತ್ತು ವಿಜ್ಞಾನ

ರಾಷ್ಟ್ರೀಯ ಪ್ರಯೋಗಶಾಲೆಗಳ ಮಹತ್ವಪೂರ್ಣ ಪಾತ್ರ

ಪಶ್ಚಿಮದಲ್ಲಿ ಅಮೇರಿಕ, ಜರ್ಮನಿ, ಬ್ರಿಟನು, ಕೆನಡಾ, ರಶಿಯಾ ಮುಂತಾದ ರಾಷ್ಟ್ರಗಳ ಅಭಿವೃದ್ಧಿಯನ್ನು ಸಾಧಿಸಿ, ಜನರ ಸುಖ ಸೌಕರ್ಯಗಳನ್ನು ಹೆಚ್ಚಿಸುವುದಕ್ಕೆ ವೈಜ್ಞಾನಿಕ ಸಂಶೋಧನೆಯು ತುಂಬ ಸಹಾಯವಾಗಿದೆ. ಸಮಾಜದ ಪ್ರತಿಯೊಂದೂ ಅಂಗದಲ್ಲಿ—ವೈಜ್ಞಾನಿಕ ಪ್ರಗತಿ, ಔದ್ಯೋಗಿಕ ಅಭಿವೃದ್ಧಿ, ಸರಕಾರದ ಚಟುವಟಿಕೆ ಮತ್ತು ಜನತಾ ಸಹಕಾರ ಇವುಗಳಲ್ಲಿ—ನಿರಂತರವಾಗಿ ಪರಸ್ಪರ ಪೂರಕಭಾವವಿದ್ದರೆ ಮಾತ್ರ ಕೆಲವು ವರ್ಷಗಳ ಅಂತ್ಯದಲ್ಲಿ ಅದರ ಸತ್ಫಲವನ್ನು ಉಣ್ಣುತ್ತಾ, ಸಮೃದ್ಧ ಜೀವನವನ್ನು ನಡೆಸುವುದು ಸಾಧ್ಯವಾಗುತ್ತದೆ.

ವೈಜ್ಞಾನಿಕ ಹಾಗು ಔದ್ಯೋಗಿಕ ಸಂಶೋಧನಾ ಮಂಡಳವೆಂದು ಕರೆಯಲ್ಪಡುವ ಸಂಸ್ಥೆಯು ಭಾರತ ಸರಕಾರದಿಂದ ಸ್ಥಾಪಿಸಲ್ಪಟ್ಟು ಇನ್ನೂ ಹನ್ನೆರಡು ವರ್ಷಗಳಾಗಿಲ್ಲ—ಆದರೆ ಇಷ್ಟು ಅಲ್ಪ ಕಾಲದಲ್ಲಿಯೇ ಅದು ಭಾರತದ ಜನಜೀವನದ ಮೇಲೆ ಪರಿಣಾಮಮಾಡಬಲ್ಲ ರೀತಿಯಲ್ಲಿ ಕೆಲಸ ನಿರ್ವಹಿಸಿರುವುದು. ಅದರ ವಿಸ್ತರಣೆ ಮತ್ತು ಅಭಿವೃದ್ಧಿ ಕಾರ್ಯದಲ್ಲಿರುವ ಮಹತ್ವದ ಸಂಗತಿಯೆಂದರೆ ಸ್ವಾತಂತ್ರ್ಯೋತ್ತರದಲ್ಲಿ ನಮ್ಮ ಪ್ರಧಾನ ಮಂತ್ರಿಗಳಾದ ನೆಹರೂರವರು ಈ ಮಂಡಳದ ಚಟುವಟಿಕೆಗಳಿಗೆ ಕೊಡುತ್ತಿರುವ ಪ್ರೋತ್ಸಾಹವೇ ಆಗಿದೆ. ನವಭಾರತದ ನಿರ್ಮಾಣ ಕಾರ್ಯದಲ್ಲಿ ವೈಜ್ಞಾನಿಕ ಹಾಗು ತಾಂತ್ರಿಕ ಶಾಸ್ತ್ರ ವಿಭಾಗವು ಪರಿಣಾಮಕಾರಿಯಾದ ಪಾತ್ರವನ್ನು ವಹಿಸಬಲ್ಲುದೆಂಬ ನೆಹರೂರ ಅಚಲ ವಿಶ್ವಾಸವೇ ಮಂಡಳಕ್ಕೆ ಸ್ಫೂರ್ತಿಯನ್ನೊದಗಿಸುತ್ತಿದೆಯೆಂದರೆ ಅತಿಶಯೋಕ್ತಿಯಾಗದು.

ಭಾರತದಲ್ಲಿ ವಿಜ್ಞಾನದ ವಿಶಿಷ್ಟ ಕ್ಷೇತ್ರಗಳಲ್ಲಿ ಸಂಶೋಧನೆ ಮುಂತಾದುವನ್ನು ನಡೆಸಲು ಸ್ವಾತಂತ್ರ್ಯೋತ್ತರದಲ್ಲಿ ೧೨ ರಾಷ್ಟ್ರೀಯ ಪ್ರಯೋಗ ಶಾಲೆಗಳನ್ನು ಸ್ಥಾಪಿಸಲಾಯಿತು ಇವುಗಳಲ್ಲಿ ಕೆಲವು ಕೆಲಸ ಮಾಡ ತೊಡಗಿ ಒಂದು ವರ್ಷವೂ ಸಂದಿಲ್ಲ. ಆದುದರಿಂದ ಈ ಕೇಂದ್ರಗಳ ಐತಿಹಾಸಿಕ ದಾಖಲೆಯು ಕಡಿಮೆಯೇ ಆಗಿದೆ—ಹಾಗೆಂದು, ಕೆಲವು ಕೇಂದ್ರಗಳು ಇಷ್ಟು ಅಲ್ಪಾವಧಿಯಲ್ಲಿಯೇ ಔದ್ಯೋಗಿಕ ಹಾಗು ವಾಣಿಜ್ಯ ಕ್ಷೇತ್ರಗಳಿಗೆ ಸಂಬಂಧಿಸಿದ ಕೆಲವು ಜಟಿಲ ಪ್ರಶ್ನೆಗಳನ್ನು ಬಿಡಿಸುವಲ್ಲಿ ನೆರವಾಗಿರುವುದು ಅಭಿಮಾನವನ್ನು ಹುಟ್ಟಿಸುವಂತಿದೆ. ಮೂಲ ಭೂತ ಸ್ವರೂಪದ ಸಂಶೋಧನೆಯೂ ಸಾಕಷ್ಟು ಭರದಿಂದ ಮುಂದೊತ್ತಲ್ಪಡುತ್ತಿದೆ

ಕೇವಲ ಮೂಲಭೂತ ಸಂಶೋಧನೆಯಿಂದಲೇ ನಾವು ಹೆಚ್ಚಿನ ಪ್ರಯೋಜನವನ್ನು ಪಡೆಯುವುದು ಸಾಧ್ಯವಿಲ್ಲ—ಸಂಶೋಧನೆಗಳು ಔದ್ಯೋಗಿಕ ಕ್ಷೇತ್ರ, ಕೃಷಿ ವಲಯ, ಗಣಿಗಾರಿಕೆ, ಸಾರಿಗೆ ಸಂಪರ್ಕ, ವಾಣಿಜ್ಯ ವ್ಯವಹಾರ ಮತ್ತಿತರ ಸಾಮಾಜಿಕ ಮಹತ್ವದ ರಂಗಗಳಲ್ಲಿಯೂ ನಿತ್ಯ ಜೀವನದಲ್ಲಿಯೂ ಕ್ರಿಯಾತ್ಮಕ ಭಾಗವನ್ನು ವಹಿಸುವುದು ಸಾಧ್ಯವಾದರೆ ಮಾತ್ರ ನಮಗೆ ಅವುಗಳ ಮಹತ್ವದ ತಿಳಿವಳಿಕೆಯಾಗುತ್ತದೆ. ಜನರು ವೈಜ್ಞಾನಿಕ ಮನೋಭಾವವನ್ನು ಪ್ರದರ್ಶಿಸಿ, ಸಂಶೋಧನಾ ಕೇಂದ್ರಗಳ ಕಾರ್ಯಕಲಾಪಗಳಲ್ಲಿ ಆಸಕ್ತಿಯನ್ನು ಎಷ್ಟು ಮಟ್ಟಿಗೆ ತೋರಿಸುತ್ತಾರೋ ಅಷ್ಟು ಮಟ್ಟಿಗೆ ರಾಷ್ಟ್ರಾಭ್ಯುದಯ ಕಾರ್ಯವು ಕೈಗೂಡುತ್ತದೆಂದು ಹೇಳಬಹುದು.

ವೈಜ್ಞಾನಿಕ ಚಮತ್ಕಾರಗಳನ್ನು ನಿತ್ಯ ಜೀವನದಲ್ಲಿ ಸಾಧ್ಯವಾದಷ್ಟು ಹೆಚ್ಚಾಗಿ ಬಳಸಿಕೊಳ್ಳಿರೆಂದೇ ಸುಖಜೀವನ ಬಯಸುವ ಜನರಿಗೆ ಹೇಳಬೇಕಾಗುತ್ತದೆ. ಹೊಲದಲ್ಲಿ ದುಡಿಯುವಾಗಲಾಗಲೀ ಪೇಟೆಯ ಪ್ರಪಂಚದಲ್ಲಿ ವ್ಯವಹರಿಸುವಾಗಲಾಗಲೀ ಆರೋಗ್ಯ ರಕ್ಷಣೆ, ವಸತಿ ಆಹಾರ ಮುಂತಾದ ಇತರ ವಿಷಯಗಳ ಮಟ್ಟಿಗಾಗಲೀ ವಿಜ್ಞಾನವು ಕೊಡಮಾಡಿದ ಸೌಲಭ್ಯಗಳ ಪೂರ್ಣ ಲಾಭವನ್ನು ಮಾಡಿಕೊಳ್ಳುವುದು ನಮಗೆ ಸೇರಿದ ವಿಷಯವಾಗಿದೆ. ಇದಕ್ಕೋಸ್ಕರ ಹೊಸ ಸಂಶೋಧನೆಗಳ ಕುರಿತು ಜನಸಾಧಾರಣರಿಗೆ ಅಧಿಕಾಧಿಕ ಮಾಹಿತಿಯನ್ನು ಒದಗಿಸಿಕೊಡುವುದು ಅಗತ್ಯ: ವೈಜ್ಞಾನಿಕ ಕೇಂದ್ರಗಳು ಮಾಡಿದ ಸಂಶೋಧನೆಗಳ ವಿವರವನ್ನು ಜನತೆಗೂ ಔದ್ಯೋಗಿಕ ಕ್ಷೇತ್ರಕ್ಕೂ ಸಕಾಲದಲ್ಲಿ ಪೂರೈಸುವುದರಿಂದ ಹೆಚ್ಚಿನ ಪ್ರಯೋಜನ ಲಭಿಸುತ್ತದೆ.

ಈಗ ಜನರು ವಿಜ್ಞಾನದ ಅದ್ಭುತ ಚಮತ್ಕಾರಗಳನ್ನು ಕುತೂಹಲದಿಂದ ಕಾಣುತ್ತಾರೆ—ಅವುಗಳ ಬಗ್ಗೆ ಜನರಲ್ಲಿ ಒಂದು ತೆರನಾದ ಮೋಹವುಂಟಾಗಿದೆ ಎಂದರೂ ಸಲ್ಲುತ್ತದೆ ಹೊಸ ಪ್ರಯೋಗಗಳೂ ಅವುಗಳ ಫಲಿತಾಂಶಗಳೂ ಜನರ ಮನಸ್ಸನ್ನು ತಮ್ಮೆಡೆಗೆ ಆಕರ್ಷಿಸಿ ಕೊಳ್ಳುತ್ತವೆ. ಆದುದರಿಂದ ವೈಜ್ಞಾನಿಕ ಕೇಂದ್ರಗಳು ಜನರೊಡನೆ ನಿಕಟ ಸಂಪರ್ಕವನ್ನು ಸಾಧಿಸಿಕೊಳ್ಳಲು ಪ್ರಯತ್ನಿಸುವುದು ಅಪೇಕ್ಷಣೀಯ. ಜನ ಸಾಮಾನ್ಯರ ಜೀವನದಲ್ಲಿ ಕಂಡು ಬರುವ ಅಡಚಣೆಗಳನ್ನು ವಿಜ್ಞಾನವು ಯಾವ ರೀತಿಯಿಂದ ನಿವಾರಿಸಬಹುದು, ಸಮಸ್ಯೆಗಳ ಪರಿಹಾರಕ್ಕೋಸ್ಕರ ಹೇಗೆ ಪ್ರಯತ್ನಿಸಬಹುದು ಎಂದು ವೈಜ್ಞಾನಿಕ ಕೇಂದ್ರಗಳು ನೋಡುವುದು ಇಷ್ಟವಾಗಿದೆ.

ಆಗಿಂದಾಗ್ಗೆ ಪ್ರಕಟಣೆಗಳನ್ನು ಹೊರಡಿಸುವ ಮೂಲಕ ವೈಜ್ಞಾನಿಕ ಕೇಂದ್ರಗ

(೧೧ನೇ ಪುಟ ನೋಡಿರಿ)

ಕೆನರಾ ಬೇಂಕ್ ಲಿಮಿಟೆಡ್.

ಸ್ಥಾಪನೆ: 1906.

* * * * *

(31–12–1953 ರಲ್ಲಿದ್ದಂತೆ ಸಾವಿರಗಳಿಗೆ ಸರಿಯಾದ ರೂಪಾಯಿಗಳು.)

ಚಂದಾ ಅರ್ಪಿಸಿ ತೆತ್ತು ಬಂದ ಪಾಲು ಭಂಡವಾಳ	ರೂ.	29,00,000/-
ಕ್ಷೇಮ ನಿಧಿ	ರೂ.	21,00,000/-
ಠೇವಣಾತಿಗಳು	ರೂ.	7,31,85,000/-
1953ನೆ ವರ್ಷದ ಲಾಭ	ರೂ.	8,67,000/-

ವಿದೇಶ ವಿನಿಮಯ ವ್ಯವಹಾರವನ್ನು ಮಾಡಲಾಗುತ್ತದೆ.

ಜಗತ್ತಿನ ಎಲ್ಲೆಡೆಗಳಲ್ಲೂ, ಪ್ರತಿನಿಧಿಗಳಿದ್ದಾರೆ.

ಶಾಖೆಗಳು:

ಬೆಂಗಳೂರು ನಗರ (3 ಕಚೇರಿಗಳು), ಮುಂಬಯಿ ನಗರ (5 ಕಚೇರಿಗಳು), ಮದ್ರಾಸು (2 ಕಚೇರಿಗಳು), ಮೈಸೂರು, ಮಂಗಳೂರು, ಧಾರವಾಡ, ಹುಬ್ಬಳ್ಳಿ, ಹೈದರಾಬಾದ್ (ಡೆಕ್ಕಾನ್), ಸೆಕುಂದರಾಬಾಡ್ (ಡೆಕ್ಕಾನ್), ಇತ್ಯಾದಿ, ಇತ್ಯಾದಿ.

ಯೋಗೀಶ್ವರ ಶ್ರೀಕೃಷ್ಣ

ಭಾರತೀಯ ಕಾವ್ಯ ಪ್ರಪಂಚದ ಜನಪ್ರಿಯ ನಾಯಕ

ಮನುಷ್ಯ ಮಾತ್ರನಾದವನು ಧರ್ಮದಲ್ಲಿ ವಿಶ್ವಾಸವನ್ನು ಸ್ವಾಭಾವಿಕವಾಗಿಯೇ ತೋರಿಸುತ್ತಾನೆ—ಎಷ್ಟೋ ಮಂದಿ ತಾವು ಹಿಂದೂ, ಕ್ರೈಸ್ತ ಅಥವಾ ಬೇರಾವುದೇ ವಿಶಿಷ್ಟ ಮತವನ್ನು ಅವಲಂಬಿಸುತ್ತಿಲ್ಲವೆಂದೂ ಅಂತಃಕರಣವೇ ಸರ್ವಸ್ವವೆಂದೂ ಹೇಳಬಹುದು; ನಾಸ್ತಿಕರು ದೇವರಿಲ್ಲವೆಂದು ಸಾರಬಹುದು; ಆದರೆ ಜೀವನ ಸಂಗ್ರಾಮದಲ್ಲಿ ಕಷ್ಟ ಸಹಸ್ರಗಳು ಕಾಣಿಸಿಕೊಂಡಾಗ ಅವುಗಳನ್ನು ಇದಿರಿಸಿ ಮುನ್ನುಗ್ಗುವುದಕ್ಕೆ ಅಂತಃ ಶಕ್ತಿ ಉಂಟಾಗಲೆಂದು ಅವರೂ ಹಂಬಲಿಸುತ್ತಾರೆ. ನಿಂತಲ್ಲೆ ಕಾಲು ಕಂಪಿಸತೊಡಗಿದಾಗ, ಸೂರ್ಯ ಪ್ರಭೆಯ ಬೆಳಕಿನಲ್ಲೂ ತೆರೆದ ಕಣ್ಣು ಏನನ್ನೂ ಕಾಣದಿದ್ದಾಗ, ಮನುಷ್ಯ ಲುಪ್ತ ಚೇತನನೆಂದು ತನ್ನನ್ನೆ ತಿಳಿದುಕೊಂಡಾಗ ಧರ್ಮ ಮೂಲವಾದ ಶ್ರದ್ಧೆಯು ಅವನಲ್ಲಿ ಉತ್ಪನ್ನವಾಗಿ ಮನಸ್ಸು ಪರಮಾತ್ಮ ಚೈತನ್ಯವನ್ನರಸುವಂತೆ ಮಾಡುತ್ತದೆ. ಧರ್ಮದಲ್ಲಿ ಜನರ ವಿಶ್ವಾಸವು ನಶಿಸುವ ಲಕ್ಷಣಗಳು ಕಂಡುಬಂದಾಗಲೆಲ್ಲ, ಅಧರ್ಮಿಗಳ ಅವಾಂತರವನ್ನು ದಮನಿಸಿ, ದುಷ್ಟರನ್ನು ಶಿಕ್ಷಿಸಲೂ ಶಿಷ್ಟರನ್ನು ಪರಿಪಾಲಿಸಲೂ ಪರಮಾತ್ಮನೇ ಸ್ವೇಚ್ಛೆಯಿಂದ ಅವತಾರವೆತ್ತುವನೆಂದು ಗೀತೆಯು ಹೇಳುತ್ತದೆ. ಗೀತಾಚಾರ್ಯನ ಅವತಾರಕ್ಕಾದರೂ ನಾವು ಇದೇ ಉದ್ದೇಶವನ್ನು ವಿವರಣೆಯಾಗಿ ಕೊಡಬಹುದು. ಭಾರತವು ದೇವ ಭೂಮಿಯೆಂದೇ ಪ್ರಾಚೀನ ಕಾಲದಿಂದ ಪ್ರಸಿದ್ಧವಾಗಿದ್ದು ರಾಮ, ಕೃಷ್ಣ, ಬುದ್ಧರಿಂದ ಹಿಡಿದು ಮಹಾತ್ಮ ಗಾಂಧೀಜಿಯ ವರೆಗೆ ಎಲ್ಲರೂ ಧರ್ಮ ಸ್ಥಾಪನಾರ್ಥವಾಗಿಯೇ ಜನ್ಮಕ್ಕೆ ಬಂದು, ಮಾನವತೆಯ ಮುಂದೆ ಸನಾತನವಾದ ಆದರ್ಶವನ್ನು ಪುನಃ ಪುನಃ ಮಂಡಿಸಿದರು.

ಈ ವಾರ ನಾವು ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಿದ್ದೇವೆ. ಉತ್ತರ ಭಾರತದಲ್ಲಿ ಭಾದ್ರಪದ ಬಹುಳ ಅಷ್ಟಮಿಯಷ್ಟು ದೊಡ್ಡದಾದ ಹಬ್ಬವೇ ಹಿಂದುಗಳಿಗಿಲ್ಲ. ಚೌತಿ, ದೀಪಾವಳಿ, ಹೋಳಿ, ರಾಮ ನವಮಿಗಳಿಗಿಂತಲೂ ಜನ್ಮಾಷ್ಟಮಿಯೇ ಉತ್ತರ ಭಾರತೀಯರಿಗೆ ಪ್ರಿಯವಾದ ಉತ್ಸವವಾಗಿದ್ದು, ಮಥುರಾ, ವೃಂದಾವನ, ಗೋಕುಲ, ಗೋವರ್ಧನ ಮತ್ತಿತರ ವ್ರಜ ಭೂಮಿಯ ಚಿಕ್ಕ ಚಿಕ್ಕ ಹಳ್ಳಿಗಳಲ್ಲೆಲ್ಲ ಮಂದಿರಗಳ ಮುಂದೆ ಯಾತ್ರಿಕರ ಹಾಗು ಭಕ್ತರ ಗುಂಪು ಸಹಸ್ರ ಸಂಖ್ಯೆಯಲ್ಲಿ ಬಂದು ಸೇರುತ್ತದೆ. ಶ್ರೀ ಕೃಷ್ಣನ ಲೀಲಾ ಭೂಮಿಯಾದ ದೇಶದ ಆ ಭಾಗವು ಆಗ ದ್ವಾಪರಯುಗದ ವಿಭೂತಿ ಪುರುಷನ ಆರಾಧನಾ ಭಾವನೆಯಿಂದ ತುಂಬಿ ತುಳುಕುವ ವಾತಾವರಣವನ್ನು ಹೊಂದಿರುತ್ತದೆ. ಭಕ್ತರಲ್ಲಿ ಅನುಕೂಲವಿದ್ದವರು ರೈಲು, ಮೋಟರು, ಗಾಡಿ ಮುಂತಾದವುಗಳಲ್ಲಿ ಬಂದರೆ, ಬಡ ಜನರೆಲ್ಲರೂ ಪಾದಚಾರಿಗಳಾಗಿಯೇ ಈ ಮಂದಿರಗಳಿಗೆ ಯಾತ್ರೆ ಬೆಳೆಸುತ್ತಾರೆ. ದಾರಿಯುದ್ದಕ್ಕೂ ರಾಧಾಕೃಷ್ಣರ ರಾಸ ಲೀಲೆಯನ್ನು ಕುರಿತಾದ ಹಾಗು ಕೃಷ್ಣ ಪರಮಾತ್ಮನ ಸ್ತುತಿ ಪರವಾದ ಕರ್ಣ ಮಧುರವಾದ ಗೀತೆಗಳನ್ನು ಹಾಡುತ್ತಿರುತ್ತಾರೆ; ಆಗ ಉಂಟಾಗುವ ಭಾವಾನಂದವು ಪ್ರಯಾಣದ ಆಯಾಸವನ್ನೆಲ್ಲ ಮರೆಸುವಂತಿರುತ್ತದೆ.

ಜನ್ಮಾಷ್ಟಮಿಯಂದು ಉಪವಾಸ ವ್ರತವನ್ನು ಆಚರಿಸಿ, ರಾತ್ರಿ ಚಂದ್ರೋದಯದ ವೇಳೆಗೆ ಮರಳಿ ಮಿಂದು, ಮಡಿ ಉಟ್ಟು, ಅರ್ಘ್ಯವನ್ನು ನೀಡಿ, ದೇವರನ್ನು ನೆನೆದು ಹಾಡುವುದು ಸಂಪ್ರದಾಯ. ಮಥುರೆಯಲ್ಲಿ ಅಂದು ಯಮುನಾ ನದಿಯ ಎರಡು ಮೈಲುಗಳಷ್ಟು ಉದ್ದವಾದ ಸ್ನಾನ ಘಟ್ಟಗಳಲ್ಲಿ ಸೂರ್ಯೋದಯದಿಂದ ಹಿಡಿದು ಕತ್ತಲು ಮುಸುಕುವ ವರೆಗೂ ಸ್ನಾನ ಮಾಡುತ್ತಿರುವ ಶ್ರೀ ಕೃಷ್ಣ ಭಕ್ತರನ್ನು ಕಾಣಬಹುದು. ಏಳು ವರ್ಷದ ಹುಡುಗನಿಂದ ಹಿಡಿದು ಎಪ್ಪತ್ತು ತುಂಬಿದ ಅಜ್ಜಿಯ ವರೆಗೆ ಎಲ್ಲರೂ ಇಲ್ಲಿ ಕೃಷ್ಣ ದರ್ಶನಾಕಾಂಕ್ಷಿಗಳಾಗಿ ಬಂದಿರುತ್ತಾರೆ. ಹೊರಗಣ್ಣಿಗೆ ಏನೂ ಕಾಣಿಸದಿದ್ದರೂ ಅಂತಃಚಕ್ಷುವಿನಿಂದ ಕೃಷ್ಣ ದರ್ಶನ ಲಾಭವನ್ನು ಪಡೆದುಕೊಂಡು ಆನಂದಾಶ್ರು ಸುರಿಸುತ್ತಿರುವ ಭಕ್ತ ವೃಂದವನ್ನು ಕಂಡು ಸಾಮಾನ್ಯ ಸಂದರ್ಶಕನಿಗೆ ಆಶ್ಚರ್ಯವಾದೀತು. ದ್ವಾರಕಾಧೀಶನ ಮಂದಿರದಲ್ಲಿ ಚಂದ್ರೋದಯದ ವೇಳೆಗೆ ತೂಗುವ ತೊಟ್ಟಿಲಲ್ಲಿ ಪವಡಿಸಿದ ಬಾಲಕೃಷ್ಣನ ಮುದ್ದು ಮೂರ್ತಿಯನ್ನು ಕಂಡಾಕ್ಷಣ, ಜನಸ್ತೋಮವು ನಭೋ ಮಂಡಲ ಭೇದಿಸುವಂತೆ ಜಯಕಾರ ಗೈದು ನರ್ತಿಸುತ್ತದೆ; ಹುಚ್ಚೆದ್ದು ಕುಣಿಯುತ್ತಾ ಹಾಡುತ್ತದೆ.

ಭಾರತೀಯರ ಮಟ್ಟಿಗೆ ಶ್ರೀ ಕೃಷ್ಣನು ಅದ್ಭುತ ಚೈತನ್ಯ ಸ್ವರೂಪನಾದ ದೇವರ ಅವತಾರವಾಗಿದ್ದಾನೆ-ಅವನು ನರಳುವ ಮಾನವ ಪ್ರಪಂಚಕ್ಕೆ ಗೀತೆಯನ್ನು ಕರುಣಿಸಿ ಯೋಗೀಶ್ವರನೆಂದೆನಿಸಿ ಕೊಂಡಿದ್ದಾನೆ; ಪ್ರೇಮ ಸ್ವರೂಪಿಯಾಗಿ ರಾಧಾಕೃಷ್ಣನೆಂಬ ಅಭಿದಾನವನ್ನು ಹೊಂದಿದ್ದಾನೆ; ದುಷ್ಟ ಶಿಕ್ಷಕನಾಗಿಯೂ ಅಸುರ ಮರ್ದನನಾಗಿಯೂ ಸಹಸ್ರ ನಾಮಗಳಿಂದ ಸ್ತುತಿಸಲ್ಪಡುತ್ತಾನೆ. ಇಂದ್ರ ಯಜ್ಞವನ್ನು ನಿಲ್ಲಿಸಿ, ಗೋವರ್ಧನ ಗಿರಿಯ ಪೂಜೆಯನ್ನು ಗೋಕುಲದ ಗೋಪಗೋಪಿಯರಿಂದ ಮಾಡಿಸಿದ ಶ್ರೀ ಕೃಷ್ಣ ಕ್ರಾಂತಿ ಪುರುಷನೆಂದರೂ ಸಲ್ಲುತ್ತದೆ; ಕಾಳಿಂದಿಯ ಮಡುವಿಗೆ ಹಾರಿ, ಕಾಳೀಯನ ಹೆಡೆಯನ್ನು ತುಳಿದು ನರ್ತಿಸಿ, ವಿಷ ಸರ್ಪನ ಅಹಂಕಾರವನ್ನು ಮರ್ದಿಸಿದ ಶ್ರೀ ಕೃಷ್ಣ, ಕೆಟ್ಟವರ ವಿರುದ್ಧ ಕತ್ತಿ ಮಸೆದು ನಿಂತ ಕಡುಗಲಿಯಾಗಿ ತೋರುತ್ತಾನೆ; ಅವನು ರಾಜನೀತಿ ವಿಶಾರದನೆಂಬುದಕ್ಕೆ ಮಹಾಭಾರತದಲ್ಲಿ ಬರುವ ಕೃಷ್ಣನ ಚರಿತ್ರವೇ ನಿದರ್ಶನ—ಧರ್ಮವನ್ನು ರಕ್ಷಿಸಿದಾತನನ್ನು ಧರ್ಮವೇ ರಕ್ಷಿಸುವುದು ಎಂಬ ಸೂಕ್ತಿಯನ್ನು ತನ್ನ ಪ್ರಾಣವೆಂದರೇನೆ ಪಾಂಡವರೆಂದು ಹೇಳಿ, ಎತ್ತಿ ಹಿಡಿದಿದ್ದಾನೆ. ಗೀತೆಯ ಕೊನೆಯಲ್ಲಿ ವ್ಯಾಸರು ಸಂಜಯನಿಂದ ಎಲ್ಲಿ ಯೋಗೀಶ್ವರನಾದ ಶ್ರೀಕೃಷ್ಣನಿದ್ದಾನೆಯೋ ಅಲ್ಲಿ ಸಮಸ್ತ ಧರ್ಮ, ರಾಜ್ಯ, ಸಂಪತ್ತು, ನ್ಯಾಯಗಳು ಶಾಶ್ವತವಾಗಿ ನೆಲೆಸಿರುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಶ್ರೀಕೃಷ್ಣನ ವ್ಯಕ್ತಿತ್ವದ ವೈಶಿಷ್ಟ್ಯಕ್ಕೆ ಕನ್ನಡಿ ಹಿಡಿದಿದ್ದಾರೆ.

ತತ್ವಜ್ಞಾನಿಗಳ ಮಟ್ಟಿಗೆ ಶ್ರೀಕೃಷ್ಣನು ಗೀತಾಚಾರ್ಯನೂ ಯೋಗೀಶ್ವರನೂ ಆಗಿದ್ದಾನೆ ನಿಜ. ಆದರೆ, ಜನಸಾಧಾರಣರಿಗೆ ಅವನು ಮುರಲೀ ಮೋಹನನಾಗಿದ್ದಾನೆ; ರಾಸಲೀಲಾ ವಿನೋದಿಯಾಗಿದ್ದಾನೆ. ಶ್ರೀಕೃಷ್ಣನ ಬಾಲ ಲೀಲೆಗಳನ್ನು ಕಂಡು ಮುಗ್ಧರಾದಷ್ಟು ಅವನ ಪ್ರಬುದ್ಧ ಜೀವನದ ಕಡೆಗೆ ಆಕರ್ಷಿಸಲ್ಪಟ್ಟವರು ವಿರಳ. ಈ ಬಾಲ ಲೀಲೆಗಳ ವರ್ಣನೆಯು ನಮ್ಮ ಸಾಹಿತ್ಯವನ್ನು ಸಜೀವವಾಗಿ ಮಾಡಿದೆ; ಹಳ್ಳಿಯ ಜನರ ನಾಲಿಗೆಯಲ್ಲಿ ಶ್ರೀಕೃಷ್ಣ ನಾಮವು ನಲಿಯುತ್ತಿರುವಂತೆ ನೋಡಿಕೊಂಡಿದೆ. ಕರ್ನಾಟಕದಲ್ಲಿ ಪುರಂದರ ದಾಸರು "ಕೃಷ್ಣ ಮೂರ್ತಿ ಕಣ್ಣ ಮುಂದೆ ನಿಂತಿದಂತಿದೆ" ಎಂದು ಉಡುಪಿಯ ಕಡೆಗೋಲು ಕೃಷ್ಣನನ್ನು ಕುರಿತು ಹಾಡಿದರು. ಅವರ ಕೀರ್ತನೆಗಳಲ್ಲಿ ಬಾಲ ಕೃಷ್ಣನ ಬಹುಮುಖಲೀಲೆಗಳನ್ನು ವರ್ಣಿಸುವ ಪದ್ಯಗಳು ಸಾವಿರಾರು ಇವೆ. ಬೆಣ್ಣೆಗಳ್ಳನಿಂದ ಸೆಂಗೆಳೆಯುವ ಜಾರನ ವರೆಗಿನ ಉಲ್ಲೇಖವನ್ನು ನಾವಲ್ಲಿ ಕಾಣಬಹುದು. ಇತರ ಹರಿದಾಸರೂ ರಾಮನಿಗಿಂತಲೂ ಹೆಚ್ಚಾಗಿ, ಶ್ರೀ ಕೃಷ್ಣ ಪರಮಾತ್ಮನನ್ನೆ ಆರಾಧ್ಯ ದೈವವಾಗಿ ಸ್ವೀಕರಿಸಿ ಕೀರ್ತನೆಗಳಿಂದ ಸೇವಿಸಿದಂತೆ ತೋರುತ್ತದೆ.

ಉತ್ತರ ಭಾರತದಲ್ಲಿ ವೈಷ್ಣವ ಸಂಪ್ರದಾಯವು ಹದಿನಾರನೇ ಶತಮಾನದಲ್ಲಿ ಪ್ರಾದುರ್ಭಾವಕ್ಕೆ ಬಂದ ಬಳಿಕ, ಹಳ್ಳಿಯ ಜನರ ಮಾತಿನಲ್ಲಿ ಪರಮಾತ್ಮನ ಮನುಷ್ಯ ಜೀವನದ ರಸ ನಿಮಿಷಗಳನ್ನು ಬಣ್ಣಿಸುವ ಕವಿತೆಗಳನ್ನು ಭಕ್ತ ವೃಂದದ ಮಹಾತ್ಮರು ಕಟ್ಟಿ ಕುಣಿದರು. ಕಾಮದೇವನಷ್ಟು ಸುಂದರನಾಗಿಯೂ ನಿರ್ಮೋಹಿ ಎನಿಸಿದ, ಸಾಂಸಾರಿಕನಾಗಿಯೂ ಅವಿನಾಶಿಯಾದ, ಪ್ರೇಮಜಾಲದಲ್ಲಿ ಜನರನ್ನು ಬಂಧಿಸಿಯೂ ಪೂರ್ಣ ಬ್ರಹ್ಮನಾಗಿ ವ್ಯಾಪಿಸಿದ ಅದ್ಭುತ ಚೈತನ್ಯ ಸ್ವರೂಪಿಯಾದ ಶ್ರೀ ಕೃಷ್ಣನು ಎಲ್ಲ ಕವಿಗಳಿಗೂ ನಾಯಕನಾದನು. ಕರ್ಮ ಯೋಗಿಯೂ ಜ್ಞಾನ ಯೋಗಿಯೂ

(೧೦ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಉಪಾಧ್ಯಾಯರು ಬೇಕು

ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ಶಾಲೆಗೆ ಹಾಯರ್ ಗ್ರೇಡ್ ತರಬೇತಾದ ಉಪಾಧ್ಯಾಯರೊಬ್ಬರು ಬೇಕಾಗಿದ್ದಾರೆ ಕೂಡಲೇ ಬರಕೊಳ್ಳುವೆವು.

ಕೆ. ವಿಶ್ವೇಶ್ವರ ರಾವ್,
ಮೆನೇಜರ್,
ಎಲ್ಲೂರು ಕಸ್ಬಾ ಎಯಿಡೆಡ್ ಎಲಿಮೆಂಟರಿ ಸ್ಕೂಲ್, ಎಲ್ಲೂರು, ದ. ಕ.

ಗೋವೆಯ ಕುರಿತು ಪೋರ್ಚುಗಾಲದೊಡನೆ ಮಾತುಕತೆ

ಸ್ವಾತಂತ್ರ್ಯ ಪ್ರಾಪ್ತಿಗೆ ಮೊದಲು ಸತ್ಯಾಗ್ರಹ ನಿಲ್ಲುವಂತಿಲ್ಲ

ಸ್ವಾತಂತ್ರ್ಯ ದಿನದಂದು ಗೋವೆಯಲ್ಲಿ ಪ್ರವೇಶಿಸಿದ್ದ ಸ್ವಯಂಸೇವಕರ ತಂಡಗಳ ಪ್ರಾರಂಭಿಕ ವಿಜಯದ ಬಳಿಕ, ಕಲವು ದುರಂತ ಪ್ರಸಂಗಗಳನ್ನು ಇದಿರಿಸಬೇಕಾಯಿತು ಸಾವಂತವಾಡಿಗೆ ಸಮೀಪದ ತೆರೆಖೋಲದ ಆರು ಚದರ ಮೈಲು ಪ್ರದೇಶವನ್ನು ಇವರು ತಮ್ಮ ಕೈಗೆ ತೆಗೆದುಕೊಂಡು ಅಲ್ಲಿ ಭಾರತದ ರಾಷ್ಟ್ರಧ್ವಜವನ್ನು ಏರಿಸಿದರೇನೊ ನಿಜ ಆದರೆ ಮುಂದ ೧೮ ತಾಸುಗಳಲ್ಲಿ ೧೫೦ ಮಂದಿ ಪೋರ್ಚುಗೀಜ ಸೈನಿಕರು ಇಲ್ಲಿದ್ದ ೧೫ ಸತ್ಯಾಗ್ರಹಿಗಳ ಮೇಲೆ ಗುಂಡಿನ ಮಳೆಗರೆದು, ಹಳ್ಳಿಯನ್ನು ತಮ್ಮ ವಶ ಪಡಿಸಿಕೊಂಡರು ಈ ಚಕಮಕಿಯಲ್ಲಿ ಒಬ್ಬ ಸತ್ಯಾಗ್ರಹಿಯು ಗುಂಡಿನೇಟಿಗೆ ಬಲಿಯಾದನು ಸತ್ಯಾಗ್ರಹದ ಸಂಬಂಧದಲ್ಲಿ ಮುನ್ನೂರಕ್ಕೂ ಹೆಚ್ಚು ಬಂಧನಗಳಾಗಿದ್ದು ಬಂಧಿತ ಸ್ವಯಂ ಸೇವಕರನ್ನು ಎಲ್ಲಿಗೆ ಒಯ್ದಿರುವರೆಂದು ಗೊತ್ತಾಗಿಲ್ಲ

ವಿಮೋಚನಾ ಆಂದೋಲನ

ಸತ್ಯಾಗ್ರಹದ ಪರಿಣಾಮವಾಗಿ ಗೋವೆಯ ಸರಕಾರ ತೀರ ಗಲಿಬಿಲಿಗೊಂಡಿರುವುದು ವ್ಯಕ್ತವಾಗುತ್ತದೆ—ಗೋವೆಯ ನಾಗರಿಕರು ವಿಷಣ್ಣ ಮೌನವನ್ನು ತೋರಿಸುತಿದ್ದರೂ ಸತ್ಯಾಗ್ರಹಿಗಳಿಗೆ ಬೆಂಬಲ ಕೊಡಬೇಕೆಂದು ತಂತಮ್ಮಲ್ಲಿಯೇ ಮಾತನಾಡಿಕೊಳ್ಳುತ್ತಿರುವರೆಂದು ಸುದ್ದಿ ಸಂಸ್ಥೆಗಳ ವರದಿ ತಿಳಿಸುತ್ತದೆ. ಪೋರ್ಚುಗೀಜ ಸರಕಾರವು ಸುದ್ದಿಗಳನ್ನು ಹೊರಗೆ ಕಳಿಸುವ ವಿಷಯದಲ್ಲಿ ಉಗ್ರ ನಿಯಂತ್ರಣವನ್ನು ಹೇರಿದ್ದು, ಸತ್ಯಾಂಶ ಪ್ರಕಟಣೆಗೆ ಆತಂಕವನ್ನೊಡ್ಡುತ್ತಿದೆ. ಇದರಿಂದ ವಿದೇಶಗಳ ಸುದ್ದಿಗಾರರೂ ರೋಸಿ ಹೋಗಿದ್ದಾರೆ. ಸತ್ಯಾಗ್ರಹಿಗಳು ತಮ್ಮಲ್ಲಿಯೇ ಒಬ್ಬನನ್ನು ಗುಂಡಿಕ್ಕಿ ಕೊಂದ ಸುದ್ದಿಯಿಂದ ಹೊಸ ಸ್ಫೂರ್ತಿಯನ್ನು ಹೊಂದಿದ್ದು, ಮುಂದಿನ ತಿಂಗಳ ೧೮ನೇ ತಾರೀಕಿನಂದು ತೆರೆಖೋಲದಲ್ಲಿ ಇನ್ನೊಂದು ತಂಡವು ಪ್ರವೇಶಿಸುವುದೆಂದು ತಿಳಿದು ಬರುತ್ತದೆ. ಸತ್ಯಾಗ್ರಹಿಗಳು ಲೊಂಡಾಕ್ಕೆ ಮೂರು ಮೈಲು ದೂರವಿರುವ ಎರಡು ಹಳ್ಳಿಗಳನ್ನು ವಿಮೋಚನೆಗೊಳಿಸಿರುವರೆಂದೂ ಪೋರ್ಚುಗೀಜ ಸೈನಿಕರ ಪ್ರತಿಭಟನೆಯನ್ನು ಲೆಕ್ಕಿಸದೆ ಅಹಿಂಸಾತ್ಮಕ ಸತ್ಯಾಗ್ರಹವನ್ನು ಮುಂದರಿಸಿ ಹೋಗುತ್ತಿರುವರೆಂದೂ ಕೇಳುತ್ತೇವೆ

ಭಾರತಕ್ಕೆ ಬೆಂಬಲ

ಪೋರ್ಚುಗೀಜರು ಸೈನಿಕ ಬಲವನ್ನು ಹೆಚ್ಚಿಸುತಿದ್ದಂತೆ, ಭಾರತದ ವಿರುದ್ಧ ಅಪಪ್ರಚಾರವನ್ನೂ ಮಾಡುತಿದ್ದಾರೆ ಡೆನ್ಮಾರ್ಕ, ಬರ್ಮಾ ಮುಂತಾದ ರಾಷ್ಟ್ರಗಳು ಪೋರ್ಚುಗಾಲದ ನಿಲುವೆಯನ್ನು ಸಮರ್ಥಿಸುತ್ತವೆಂದು ಲಿಸ್ಬನದ ಸುದ್ದಿ ಸಂಸ್ಥೆಗಳು ಸುಳ್ಳು ಪ್ರಚಾರವನ್ನು ಮಾಡಿದಾಗ, ಈ ದೇಶಗಳ ವಕ್ತಾರರು ಅದನ್ನು ಅಲ್ಲಗಳೆದ, ಪೋರ್ಚುಗಾಲದ ಧೋರಣೆಗೆ ತಮ್ಮ ಒಪ್ಪಿಗೆ ಎಷ್ಟು ಮಾತ್ರಕ್ಕೂ ಇಲ್ಲವೆಂದು ಸ್ಪಷ್ಟ ಪಡಿಸಿದರು ಏಶ್ಯದ ಇನ್ನೂ ಅನೇಕ ಪ್ರಸಿದ್ಧ ಪತ್ರಿಕೆಗಳು ತಮ್ಮಲ್ಲಿಯ ಸಾರ್ವಜನಿಕ ಅಭಿಪ್ರಾಯವನ್ನು ಪ್ರಕಟಗೊಳಿಸುತ್ತಾ, ವಸಾಹತುವಾದವು ಅಂತ್ಯವಾಗಲೇಬೇಕೆಂದೂ ಭಾರತ ಸರಕಾರದ ನಿಲುಮೆಯೇ ಸರಿಯಾದುದೆಂದೂ ತಿಳಿಸಿರುತ್ತವೆ ಗೋವೆಯ ಸತ್ಯಾಗ್ರಹದ ವಿಷಯದಲ್ಲಿ ಭಾರತವು ತೋರಿಸುತ್ತಿರುವ ಸಂಯಮವನ್ನು ಲೋಕದ ನಯವಿದರೆಲ್ಲರೂ ಮೆಚ್ಚಿಕೊಂಡಿದ್ದಾರೆ ಗೋವಾಂತಕರಲ್ಲದವರು ವಿಮೋಚನಾ ಚಳವಳದಲ್ಲಿ ಭಾಗ ವಹಿಸುವುದು ಅಪೇಕ್ಷಣೀಯವಲ್ಲವೆಂದು ಭಾರತ ಸರಕಾರವು ಈ ಸತ್ಯಾಗ್ರಹದಲ್ಲಿ ಧುಮುಕ ಬಯಸಿದ ಭಾರತೀಯ ಧುರೀಣರಿಗೆ ತಿಳಿಸಿರುವುದು, ಅಲ್ಲದೆ ಭಾರತದಲ್ಲಿ ಪೋರ್ಚುಗೀಜ ವಸಾಹತುಗಳು ವಿಲೀನಹೊಂದಿದರೆ ಅವುಗಳ ಸಾಂಸ್ಕೃತಿಕ ವೈಶಿಷ್ಟ್ಯಕ್ಕೇನೂ ಧಕ್ಕೆ ಸಂಭವಿಸಲಾರದೆಂದೂ ಹೇಳಿರುವುದು.

ತಟಸ್ಥ ನಿರೀಕ್ಷಕರು

ಸಾಮಾನ್ಯವಾಗಿ ಭಾರತೀಯ ವರ್ತುಲಗಳು ಸಂಯಮವನ್ನೆ ತೋರಿಸುತ್ತಿರುವಾಗ ಲಿಸ್ಬನದ ಸುದ್ದಿ ಸಂಸ್ಥೆಗಳೂ ಪೋರ್ಚುಗೀಜ ವಲಯಗಳೂ ಭಾರತದ ವಿರುದ್ಧ ದ್ವೇಷಪೂರಿತ ಮಾತುಗಳನ್ನು ಆಡುತ್ತಿರುವುದನ್ನು ಖಂಡಿಸದಿರಲಾಗುವುದಿಲ್ಲ "ಶಾಂತಿಯ ಸೋಗು ಹಾಕಿಕೊಂಡು ಭಾರತವು ಪೋರ್ಚುಗೀಜ ವಸಾಹತುಗಳ ಮೇಲೆ ಧಾಳಿ ನಡೆಸಿರುವುದು" ಎಂಬುದೇ ಅಂತಾರಾಷ್ಟ್ರೀಯ ರಂಗದಲ್ಲಿ ಪೋರ್ಚುಗಾಲವು ಮಾಡುತ್ತಿರುವ ಅಪಪ್ರಚಾರದ ತಿರುಳು. ಈ ಆರೋಪದಲ್ಲಿ ಏನೇನೂ ಹುರುಳಿಲ್ಲವೆಂಬುದು ನಮಗಂತೂ ಗೊತ್ತೇ ಇದೆ—ಲೋಕಕ್ಕೂ ಇದು ತಿಳಿಯುವಂತೆ ನಿಷ್ಪಕ್ಷಪಾತ ನಿರೀಕ್ಷಕರನ್ನು ಪೋರ್ಚುಗೀಜ ವಸಾಹತುಗಳ ಒಳಗೂ ಹೊರಗಿನ ಭಾರತ ಪ್ರದೇಶದಲ್ಲಿಯೂ ಬರಗೊಟ್ಟು ಅವರಿಗೆ ನಿಜಸ್ಥಿತಿಯ ಪರಿಶೀಲನೆಯನ್ನು ಒಪ್ಪಿಸಿ ಕೊಡಬಹುದು. ಈ ಕುರಿತು ಮಾತುಕತೆಯನ್ನು ಇದೇ ತಿಂಗಳಿಂದು ಹೊಸ ದಿಹಲಿಯಲ್ಲಿ ನಡೆಸಲು ಭಾರತ ಸರಕಾರ ಸೂಚಿಸಿದೆಯಲ್ಲದೆ ಶ್ರೀಗಳಾದ ಎನ್ ಆರ್. ಪಿಳ್ಳೆ ಮತ್ತು ಆರ್. ಕೆ. ನೆಹರೂರನ್ನು ತನ್ನ ಪ್ರತಿನಿಧಿಯಾಗಿ ನೇಮಿಸಿರುವುದು. ಪೋರ್ಚುಗಾಲವೂ ಮಾತುಕತೆಗಳಲ್ಲಿ ಭಾಗ ವಹಿಸಲು ಮೂವರು ಪ್ರತಿನಿಧಿಗಳನ್ನು ನೇಮಿಸಿರುವುದು.

ಪರಿಹಾರ ಮಾರ್ಗ

ಸಂಧಾನದ ಈ ಪ್ರಯತ್ನವು ತನ್ನದೇ ಇತಿಮಿತಿಯನ್ನೊಳಗೊಂಡಿದ್ದರೂ ವಸಾಹತುಗಳ ಕುರಿತು ಏನನ್ನೂ ಕೇಳಲು

ಬ್ರೂಕ್ ಬಾಂಡ್ ಚಹಾ

— ಪ್ರತಿದಿನವೂ ಲಕ್ಷೋಪಲಕ್ಷ ಜನರ ಬಯಸಿದ ಆಯಿಕೆ!

ಇತರ ಯಾವದೇ ಚಹಾಗಿಂತಲೂ

ಬ್ರೂಕ್ ಬಾಂಡ್ ಚಹಾವನ್ನೇ

ಹೆಚ್ಚು ಜನರು ಕೊಳ್ಳುತ್ತಾರೆ!

BB 59 D

ಪಾರ್ಲಿಮೆಂಟು ಅಧಿವೇಶನದ ಪುನರಾರಂಭ

ತಿರು-ಕೊಚ್ಚಿಯ ಪರಿಸ್ಥಿತಿಯ ಬಗ್ಗೆ ಪ್ರಸವಾ ಧುರೀಣರಲ್ಲಿ ಭಿನ್ನಾಭಿಪ್ರಾಯ

ಭಾರತದ ಪಾರ್ಲಿಮೆಂಟು ಇದೇ ೨೩ನೇ ತಾರೀಕಿನಿಂದ ತನ್ನ ಅಧಿವೇಶನವನ್ನು ತೊಡಗಿರುವುದು. ಲೋಕಸಭೆಯ ಅಧಿವೇಶನವು ಪ್ರಾರಂಭಿಸಲ್ಪಟ್ಟಾಗ ಸದಸ್ಯರಿಂದ ಹತ್ತು ನಿಲುವಳಿ ಸೂಚನೆಗಳು ಮಂಡಿಸಲ್ಪಟ್ಟವು: ಇವುಗಳಲ್ಲಿ ಹೆಚ್ಚಿನವು ಗೋವೆ ಮುಂತಾದ ಪೋರ್ಚುಗೀಜ ವಸಾಹತುಗಳ ಪರಿಸ್ಥಿತಿಯನ್ನು ವಿಚಾರಿಸಬೇಕೆಂಬುದಕ್ಕೆ ಸಂಬಂಧಿಸಿದ್ದು ಇನ್ನುಳಿದವುಗಳಲ್ಲಿ ನೆರೆಹಾವಳಿಯ ಕುರಿತು ಕಳವಳ ಸೂಚಿಸುವ ಗೊತ್ತುವಳಿ ಮುಖ್ಯವಾದದ್ದು. ಅಧ್ಯಕ್ಷರು ಇವೆಲ್ಲವನ್ನೂ ತಳ್ಳಿ ಹಾಕುತ್ತಾ ಮಂತ್ರಿಗಳು ಸದ್ಯದಲ್ಲಿಯೇ ಈ ಕುರಿತು ವಿವರಣೆಯನ್ನು ಕೊಡಲಿರುವುದರಿಂದ ಅಲ್ಲಿಯ ವರೆಗೆ ಸದಸ್ಯರು ಕಾಯಬೇಕೆಂದು ಅಭಿಪ್ರಾಯಪಟ್ಟರು

ಆ ಬಳಿಕ ಆಹಾರದ ಕಲಬೆರಕೆಯನ್ನು ಪ್ರತಿಬಂಧಿಸುವ ಮಸೂದೆಯ ಮೇಲೆ ಚರ್ಚೆ ತೊಡಗಿತು: ಆರೋಗ್ಯಕ್ಕೆ ಹಾನಿಕರವಾದ ಮತ್ತು ವ್ಯಾಪಾರದಲ್ಲಿ ನಷ್ಟವನ್ನುಂಟು ಮಾಡುವ ಈ ಪ್ರವೃತ್ತಿಯನ್ನು ತಡೆಗಟ್ಟಲು ಮಸೂದೆಯಲ್ಲಿ ಹೇಳಿದುದಕ್ಕಿಂತಲೂ ಪರಿಣಾಮಕಾರಿಯೂ ಉಗ್ರವೂ ಆದ ಕ್ರಮಗಳನ್ನು ಕೈಗೊಳ್ಳಬೇಕೆಂದು ಸದಸ್ಯರು ಒತ್ತಾಯಿಸಿದರು. ಅಲ್ಲದೆ ಈ ವಿಷಯದಲ್ಲಿ ಸಾಮಾಜಿಕ ಅಭಿಪ್ರಾಯವನ್ನು ಸಂಘಟಿಸುವ ಕಡೆಗೂ ಸದಸ್ಯರು ಲಕ್ಷ್ಯವನ್ನೆಳೆದರು.

ಪ್ರಗತಿಪರ ಹೆಜ್ಜೆ

ರಾಜ್ಯ ಪರಿಷತ್ತಿನಲ್ಲಿ ಅಪ್ರಬುದ್ಧ ಮಗುವಿನ ವಾರೀಸು ಹಕ್ಕಿನ ವಿಷಯದಲ್ಲಿ ತಾಯಿಗೆ ಸಹ ಸಮಾನಾಧಿಕಾರವನ್ನು ಕೊಡುವ ಮಸೂದೆಯನ್ನು ಪರಿಶೀಲಕ ಸಮಿತಿಗೆ ಒಪ್ಪಿಸಬೇಕೆಂದು ಕಾಯಿದೆ ಮಂತ್ರಿಗಳು ಹೇಳಿದರು, ಕಳೆದ ಎರಡು ಪೀಳಿಗೆಗಳ ಪ್ರಗತಿಪರ ಅಭಿಪ್ರಾಯವನ್ನು ಕ್ರೋಢೀಕರಿಸಿದ ಈ ಮಸೂದೆಗೆ ಸಾರ್ವಜನಿಕರಿಂದ ಪ್ರಬಲವಾದ ಪ್ರೋತ್ಸಾಹ ದೊರಕಿದೆಯೆಂದು ಅವರು ತಿಳಿಸಿ ಪಡಿಸಿದರು. ಎಲ್ಲ ಸದಸ್ಯರೂ ಇದನ್ನು ಸ್ವಾಗತಿಸಿದರಲ್ಲದೆ ಮಹಿಳಾ ಸದಸ್ಯರು ವಿಶೇಷವಾದ ಆಸಕ್ತಿಯನ್ನು ತೋರಿಸಿದರು

ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿ ಒಂದು ಸಭೆಯ ಸದಸ್ಯರು ಇನ್ನೊಂದರ ಅಪಮಾನಮಾಡಿದರೆ ಆಗ ಅನುಸರಿಸಬೇಕಾದ ಕ್ರಮಗಳ ವಿಷಯದಲ್ಲಿ ತೃಪ್ತಿಕರ ತೀರ್ಮಾನಕ್ಕೆ ಬರಲಾಗಿರುವುದು-ಇದರಂತೆ ಇನ್ನೊಂದು ಸಭೆಯ ಅಪಮಾನ ಮಾಡಿದ ಸದಸ್ಯನು ಯಾವ ಸಭೆಯಲ್ಲಿರುವನೋ ಆ ಸಭೆಯ ಅಧ್ಯಕ್ಷರು ತಮ್ಮ ಸಮ್ಮುಖದ ಸಭೆಯ ಅಪಮಾನವನ್ನೆ ಆ ಸದಸ್ಯನು ಮಾಡಿದನೆಂದು ತಿಳಿದು ವರ್ತಿಸಬೇಕು.

ನೆಹರೂರ ಕರೆ

ಉತ್ತರ ಭಾರತದಲ್ಲಿ ನೆರೆ ಹಾವಳಿಗೆ ತುತ್ತಾಗಿರುವ ಲಕ್ಷಾಂತರ ಜನರಿಗೆ ಅನ್ನ ವಸ್ತ್ರಗಳ ಉದಾರ ದಾನವನ್ನಿತ್ತು ನೆರವಾಗಬೇಕೆಂದು ಪ್ರಧಾನಮಂತ್ರಿಗಳು ಬಿನ್ನವಿಸಿದ್ದಾರೆ. ಮಹಾ ಜನರು ಮುಕ್ತ ಹಸ್ತದಿಂದ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಗೆ ಹಣವನ್ನೂ ಕಳಿಸಬಲ್ಲರು ಗಿರಣಿಯೊಡೆಯರು ಧರ್ಮಾರ್ಥವಾಗಿ ಬಟ್ಟೆಗಳನ್ನು ಒದಗಿಸಬೇಕೆಂದೂ ನೆಹರೂ ಕೇಳಿಕೊಂಡಿದ್ದಾರೆ ನೆರೆಹಾವಳಿಯಿಂದ ಜನರು ಮನೆಮಾರುಗಳನ್ನೂ ಜಾನುವಾರುಗಳನ್ನೂ ಕಳೆದುಕೊಂಡಿದ್ದು, ತಮ್ಮ ಕಳೆದು ಹೋದ ಸಂಪತ್ತನ್ನು ಮರಳಿ ಗಳಿಸುವದಕ್ಕೆ ಇಂತಹ ನೆರವು ಅಗತ್ಯವಾಗಿ ಬೇಕಾಗಿದೆ. ಪುಣ್ಯದಿಂದ ಸರ್ಕಾರದ ಆಹಾರ ಸಂಗ್ರಹವು ತೃಪ್ತಿಕರವಿದೆಯಾಗಿ, ಅನ್ನಕ್ಕಾಗುವ ಅಂಜಿಕೆಗೆ ಎಡೆ ಇರುವುದಿಲ್ಲ ಕಾಂಗ್ರೆಸ ಹಾಗು ಇತರ ಸಾಮಾಜಿಕ ಕಾರ್ಯಕರ್ತರು ೫೦ ಲಕ್ಷ ಸಂತ್ರಸ್ತರುಳ್ಳ ಬಿಹಾರಿನಲ್ಲೂ ಅಸ್ಸಾಂ ಮತ್ತು ಬಂಗಾಲಗಳಲ್ಲಿಯೂ ದುಃಖಾತರಿಗೆ ಸಮಾಧಾನವನ್ನುಂಟು ಮಾಡುತ್ತಿದ್ದಾರೆ. ಈ ಜಲಪ್ರಳಯದ ಸಂಭವವನ್ನು ಶಾಶ್ವತವಾಗಿ ತಡೆಗಟ್ಟುವ ಉಪಾಯಗಳನ್ನು ಯೋಜಿಸಬೇಕೆಂದು ಕೇಂದ್ರ ಸರಕಾರವು ನಿರ್ಧರಿಸಿರುವುದು ಆದರೆ ಇದು ಎಣಿಸಿದಷ್ಟು ಸುಲಭದ ಕೆಲಸವಲ್ಲವೆಂದು ಮಾತ್ರ ಹೇಳಬೇಕಾಗುವುದು.

ಲೋಹಿಯರ ರಾಜೀನಾಮೆ

ದಕ್ಷಿಣದ ತಿರುಕೊಚ್ಚಿಯಲ್ಲಿ ತಿರು-ತಮಿಳು ಕಾಂಗ್ರೆಸಿಗರು ಹೂಡಿದ ಸತ್ಯಾಗ್ರಹವು ಪ್ರಕೋಪಕ್ಕೆ ಹೋಗಿ ಗುಂಡಿನೆಸೆಯಬೇಕಾಗಿ ಬಂದ ಪ್ರಸಂಗದಿಂದ ಪ್ರಜಾ ಸಮಾಜವಾದಿ ಪಕ್ಷದಲ್ಲಿ ಮತಭೇದ ಉಂಟಾದಂತೆ ತೋರುತ್ತದೆ. ಈಗ ಅಲಹಾಬಾದಿನಲ್ಲಿ ಜರುಗಲಿರುವ ಪಕ್ಷದ ಕಾರ್ಯದರ್ಶಿಗಳು ತಿರುಕೊಚ್ಚಿಯ ಮುಖ್ಯ ಮಂತ್ರಿಗಳಿಗೆ ತಂತಿಯೊಂದನ್ನು ಕಳುಹಿಸಿ, ಗೋಳೀಬಾರು ನಡೆಸಿದುದರ ಔಚಿತ್ಯದ ಕುರಿತು ವಿಚಾರಣೆ ನಡೆಸಲು ಸಮಿತಿಯೊಂದನ್ನು ನೇಮಿಸಿ, ಮಂತ್ರಿ ಮಂಡಳವು ರಾಜೀನಾಮೆ ಕೊಡಬೇಕೆಂದು ಹೇಳಿದರು. ಈ ಕುರಿತು ಮುಖ್ಯ ಮಂತ್ರಿಗಳು ಪ್ರಸವಾ ಪಕ್ಷದ ಅಧ್ಯಕ್ಷರ ಅಭಿಪ್ರಾಯವನ್ನು ಸಲಹೆ ಕೇಳಿದಾಗ, ಲೋಹಿಯಾರ ವಿಚಾರವನ್ನು ಅವರು ಒಪ್ಪಲಿಲ್ಲ. ಆಚಾರ್ಯ ಕೃಪಲಾನಿಯವರು ವಿಚಾರಣೆಯ ಫಲಿತಾಂಶವಾಗಿ ಸರಕಾರ ತಪ್ಪು ಮಾಡಿದಯೆಂದು ಸಿದ್ಧಗೊಂಡರೆ ಪೋಲೀಸು ಖಾತೆಯ ಮಂತ್ರಿಯೊಬ್ಬನು ಮಾತ್ರ ರಾಜೀನಾಮೆ ಕೊಡಬೇಕಾದೀತು ಎಂದು ಹೇಳಿದರು. ಈ ವಿವರಣೆಗೆ ಒಪ್ಪದೆ ಲೋಹಿಯಾರು ಪಕ್ಷದ ಕಾರ್ಯದರ್ಶಿ ಸ್ಥಾನಕ್ಕೆ ತಮ್ಮ ರಾಜೀನಾಮೆ ನೀಡಿದ್ದಾರೆ. ಅದನ್ನು ಸ್ವೀಕರಿಸುವ ವಿಷಯದಲ್ಲಿ ಪಕ್ಷಗ ಕಾರ್ಯಕಾರಿಣಿಯು ಇಷ್ಟರಲ್ಲಿ ಅಂತಿಮ ನಿರ್ಣಯಕೈಗೊಳ್ಳುವ ನಿರೀಕ್ಷೆಇದೆ.

ಮುಂದಿನ ಯೋಜನೆ

ಯೋಜನಾ ಆಯೋಗದವರು ದ್ವಿತೀಯ ಪಂಚವಾರ್ಷಿಕ ಯೋಜನೆಯ ಕುರಿತು ಅನೇಕರೀತಿಯ ಅಧ್ಯಯನ ನಡೆಸಿರುವರೆಂದು ಗೊತ್ತಾಗಿದೆ. ಜನತೆಯಿಂದ ಅತ್ಯಧಿಕ ಸಹಾಯವನ್ನು ಹೇಗ ಪಡೆಯಬಹುದೆಂಬುದು ಅವರು ಮುಖ್ಯವಾಗಿ ವಿಚಾರಿಸುತ್ತಿದ್ದಾರೆ. ಮೊದಲನೆಯ ಯೋಜನೆಯಲ್ಲಿ ಕಂಡುಬಂದುದರ ಇಷ್ಟುದಿಯತ್ತ್ವದಲ್ಲೂ ಕೊರತೆಯು. ಮುಂದಿನ ಯೋಜನೆಯನ್ನು ಕಾರ್ಯಗತಗೊಳಿಸುವಾಗ ಅನುಭವಕ್ಕೆ ಬರಬಹುದೆಂದು ಅಂದಾಜು ಮಾಡಲ್ಪಟ್ಟಿರುವುದರಿಂದ, ಜನತೆಯ ಸ್ಫೂರ್ತಿಯನ್ನು ಆಕರ್ಷಿಸಿಕೊಳ್ಳದ ಆಯೋಗವು ಯಾವ ಕಾರ್ಯಕ್ರಮವನ್ನೂ ಕೈಗೊಳ್ಳುವುದು ಸಾಧ್ಯವಾಗಲಿಕ್ಕಿಲ್ಲ. ಸರ್ವಾಧಿಕಾರಿ ರಾಷ್ಟ್ರಗಳ ಮಾರ್ಗವನ್ನು ಬಿಟ್ಟುಕೊಟ್ಟು ಪ್ರಜಾಸತ್ತಾತ್ಮಕ ರೀತಿಯಲ್ಲಿ ರಾಷ್ಟ್ರದ ಪುನಾರಚನೆಯನ್ನು ಕೈಗೊಳ್ಳಬೇಕೆಂಬ ಹಂಬಲವನ್ನು ಯೋಜನಾ ಆಯೋಗ ಇಟ್ಟುಕೊಂಡಿರುವುದರಿಂದ, ಜನತೆಯು ಸರವೇ ಯೋಜನೆಯ ತಿರುಳಾಗುತ್ತದೆ. ಆ ದೃಷ್ಟಿಯಿಂದ ಈ ವರೆಗಿನ ಅನುಭವವನ್ನು ಎಷ್ಟರಮಟ್ಟಿಗೆ ಆಧರಿಸಬಹುದೆಂದು ಅದು ವಿಚಾರಿಸುತ್ತಿದೆ.

ಹಳ್ಳಿಯ ಪುನರುಜ್ಜೀವನ

ಜನತೆಯಲ್ಲಿ ಯೋಜನಾ ಮನೋಭಾವವನ್ನು ರೂಪಿಸುವದಕ್ಕೆ ಒಮ್ಮೆಲೆ ನೆರವಾದ ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕಕ್ಷೆಯಲ್ಲಿ ಈ ವರ್ಷ ಇನ್ನೂ ೨೪೦ ಕ್ಷೇತ್ರಗಳನ್ನು ಸೇರಿಸಬೇಕೆಂದು ಭಾರತ ಸರಕಾರ ನಿರ್ಧರಿಸಿದೆ. ಈ ವಿಸ್ತರಣಾ ಕಾರ್ಯಕ್ರಮದಿಂದಾಗಿ ಈಗ ಕೆಲಸ ನಡೆಯುತ್ತಿರುವ ೪೩ ಲಕ್ಷ ಜನವಸತಿಯುಳ್ಳ ೬೦೦೦ ಹಳ್ಳಿಗಳಿಗೆ ೧೬೦ ಲಕ್ಷ ಜನವಸತಿಯುಳ್ಳ ೨೪೦೦೦ ಹಳ್ಳಿಗಳನ್ನು ಮತ್ತೆ ಜೋಡಿಸಿ, ಮುನ್ನ

(೭ನೇ ಪುಟ ನೋಡಿರಿ)

ಇಚ್ಛಿಸದಿದ್ದ ಪೋರ್ಚುಗೀಜರು ತಟಸ್ಥ ನಿರೀಕ್ಷಕರ ಕೈಗೆ ಪರಿಸ್ಥಿತಿಯ ಪರಿಶೀಲನೆಯನ್ನೊಪ್ಪಿಸುವಷ್ಟು ಮುಂದಾದದ್ದು ಅಂತಾರಾಷ್ಟ್ರೀಯ ಅಭಿಪ್ರಾಯದ ಒತ್ತಾಯದ ಫಲವೆಂದು ಭಾವಿಸಬಹುದು ಈ ಪ್ರಾರಂಭಿಕ ಪರಿವರ್ತನೆಯ ವಸಾಹತುಗಳ ಸಮಸ್ಯೆಯ ನಿವಾರಣೆಗಿರುವ ಒಂದೇ ಒಂದಾದ ಕ್ರಮವನ್ನು—ಅದೆಂದರೆ ಭಾರತದಲ್ಲಿ ವಿಲೀನೀಕರಣ—ತ್ವರೆಗೊಳಿಸಬೇಕೆಂದೂ ಅಂತರಾಷ್ಟ್ರೀಯ ಮುತ್ಸದ್ದಿಗಳು ಹೇಳುತ್ತಾರೆ. ಹೊಸ ದೆಹಲಿಯ ಮಾತುಕತೆ ಈ ವಿಷಯದಲ್ಲಿ ಎಷ್ಟು ಮಟ್ಟಿಗೆ ನೆರವಾಗುತ್ತದೋ ಹೇಳಲು ಬಾರದು—ಇಲ್ಲಿ ಏನೇ ನಡೆಯಲಿ, ಸ್ವಯಂ ಸೇವಕರು ಕೈಗೊಂಡ ಸತ್ಯಾಗ್ರಹವು ಮುಂದಕ್ಕೂ—ಸ್ವಾತಂತ್ರ್ಯ ದೊರೆಯುವ ವರೆಗೆ—ಕ್ರಮಬದ್ಧವಾಗಿ ನಡೆಯುತ್ತಾ ಹೋಗುವುದಂತೂ ನಿಶ್ಚಯ ನಿರ್ದಿಷ್ಟ ಯೋಜನೆಯಂತೆ ಆಂದೋಲನವು ಮುಂವರಿಯುವುದೆಂದೂ ಗೋವೆಯ ವಿಮೋಚನೆಯು ಇದೇ ದಸಂಬರ ೩೧ನೇ ದಿನಾಂಕದ ಒಳಗೆ ಪೂರ್ಣಗೊಳ್ಳಲಾರದೆಂದೂ ಪೀಟರ ಅಲ್ವಾರೀಸರ ಹೇಳಿಕೆಯೊಂದು ತಿಳಿಸುತ್ತದೆ ಇವರಿಗೆ ಈಗ ಬಾಕಿಸ್ತಾನದಲ್ಲಿರುವ ೮೦೦೦ ಗೋವಾನಂತಕರ ಬೆಂಬಲವೂ ಸಿಗುವ ಲಕ್ಷಣ ಕಾಣಿಸುತ್ತದೆ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ
ಮೈಸೂರು ಸ್ಯಾಂಡಲ್ ಸೋಪಿನಲ್ಲಿ
ಇವೆ ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —
ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

Member: I. S. T. M. A.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ಕೈನ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಒಂಬ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ. ವಿ. ಯಸ್. ಪ್ರಭು



ನ ವ ಯು ಗ

ಉಡುಪಿ, ಗುರುವಾರ ೨೬-೮-'೫೪

ಸ್ತುತ್ಯ ಪ್ರಯತ್ನ

ರಾಷ್ಟ್ರದ ಪ್ರಗತಿಗೆ ಬಾಧಕವಾದ ಸಂಗತಿಗಳಲ್ಲಿ ದಾರಿದ್ರ್ಯವೂ ಅದಕ್ಕೆ ಹೇತುವಾದ ಅಜ್ಞಾನ ಮತ್ತು ಅನಾರೋಗ್ಯವೂ ಪ್ರಧಾನವಾದದ್ದೆಂದು ಎಲ್ಲರೂ ಒಪ್ಪುವರು. ರಾಷ್ಟ್ರದ ಪುನಾರಚನೆಯ ಪ್ರಯತ್ನಗಳೇನಿದ್ದರೂ ಶಿಕ್ಷಣ ಮತ್ತು ಆರೋಗ್ಯಕ್ಕೆ ಪ್ರಾಶಸ್ತ್ಯವನ್ನು ಕೊಟ್ಟೇ ತೀರಬೇಕೆಂದು ಇದರಿಂದ ಸಿದ್ಧವಾಗುತ್ತದೆ. ಭಾರತವು ತೀರ ಹಿಂದುಳಿದಿರುವ ಔದ್ಯಮಿಕ ಕ್ಷೇತ್ರದಲ್ಲಿ ಉನ್ನತಿಯನ್ನು ಸಾಧಿಸಬೇಕಾದರೆ ನಮ್ಮ ಶಿಕ್ಷಣ ವ್ಯವಸ್ಥೆಯನ್ನು ಆಮೂಲಾಗ್ರವಾಗಿ ಪರಿಷ್ಕರಿಸಿ, ಪುಸ್ತಕೀಯ ಜ್ಞಾನಕ್ಕಿಂತಲೂ ಪರಿಶ್ರಮಪೂರ್ವಕವಾದ ದುಡಿಮೆಗೂ ತಾಂತ್ರಿಕ ತರಬೇತಿಗೂ ಪ್ರಾಧಾನ್ಯವನ್ನು ಸಲ್ಲಿಸುವುದು ಅಗತ್ಯ. ಆದರೆ ಇಷ್ಟರಿಂದಲೇ ಸಂಪತ್ಸಮೃದ್ಧಿಯನ್ನು ಸಾಧಿಸಲು ಸಾಧ್ಯವಾಗದು— ಭೀಕರ ಅನಾರೋಗ್ಯವು ಜನತೆಯ ಒಂದಂಶವನ್ನು ಸದಾ ಆಹುತಿ ತೆಗೆದುಕೊಳ್ಳುತ್ತಿದ್ದರೆ, ರಾಷ್ಟ್ರದ ಪುನಾರಚನೆಗೆ ಅದರಿಂದ ಆತಂಕವೇ ಆಗುತ್ತದೆ. ಭಾರತದಲ್ಲಿ ಶಿಕ್ಷಣ ಪ್ರಸಾರದ ಆವಶ್ಯಕತೆಯಿದ್ದಷ್ಟೇ ಆರೋಗ್ಯ ರಕ್ಷಣೋಪಾಯಗಳನ್ನು ಕೈಗೊಳ್ಳುವ ಆಗತ್ಯವೂ ಉಂಟು. ನಮ್ಮಲ್ಲಿ ಪ್ರತಿ ಹತ್ತರಲ್ಲಿ ಒಬ್ಬನು ಸದಾ ಏನಾದರೊಂದು ರೋಗದ ದೆಸೆಯಿಂದ ನರಳುತ್ತಿರುತ್ತಾನೆ—ಇವನ ಆರೈಕೆಗಾಗಿ ದಿನಕ್ಕೆ ಎರಡು ರೂಪಾಯಿಗಳಷ್ಟು ಕಡಿಮೆ ವೆಚ್ಚವನ್ನು ಹಿಡಿದರೂ ಸಮಸ್ತ ಭಾರತಕ್ಕಾಗುವಾಗ ಈ ಹಣವು ವರ್ಷಕ್ಕೆ ಮೂರು ಸಾವಿರ ಕೋಟಿ ರೂಪಾಯಿಗೆ ಸಮೀಪವಾಗುತ್ತದೆ! ಜನರು ಆರೋಗ್ಯವಂತರಾಗಿದ್ದರೆ ಇಷ್ಟು ದೊಡ್ಡ ಮೊತ್ತವನ್ನು ರಾಷ್ಟ್ರದ ಪುನಾರಚನೆಯಲ್ಲಿ ವಿನಿಯೋಗಿಸುವುದು ಕಷ್ಟವಾಗುತ್ತಿರಲಿಲ್ಲ. ಆದುದರಿಂದ ಆರೋಗ್ಯ ರಕ್ಷಣೆಗಾಗಿ ಎಂಥ ಪ್ರಯತ್ನಗಳು ನಡೆದರೂ ಅದನ್ನು ಸ್ವಾಗತಿಸುವುದು ಅಪೇಕ್ಷಣೀಯ—ಈ ದೃಷ್ಟಿಯಿಂದ, ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯು ದೇಶದ ಪ್ರಗತಿಗೆ ಪೋಷಕವಾದದ್ದೆಂದು ಕಂಡುಬರುವುದು. ನರಳುವ ರೋಗಿಗಳಿಗೆ ನಿರೋಗಿಯಾಗಿ ಬದುಕುವ ಆಸೆಯನ್ನು ತೋರಿಸಬಲ್ಲ ವೈದ್ಯಕೀಯ ಶಿಕ್ಷಣ ಸಂಪನ್ನರು ಭಾರತದಲ್ಲಿ ಇನ್ನೂ ಸಾಕಷ್ಟು ಸಂಖ್ಯೆಯಲ್ಲಿ ಕಂಡು ಬರುತ್ತಿಲ್ಲ—ಮಾನಸಿಕ ರೋಗಗಳ ಶುಶ್ರೂಷೆಯಂತಿರಲಿ; ದೈಹಿಕ ವ್ಯಾಧಿಗಳ ಉಪಶಮನ ಮಾಡಬಲ್ಲ ವೈದ್ಯರ ಹಾಗು ಅವರಿಗೆ ನೆರವಾಗುವ ದಾದಿಯರ ಅಭಾವವು ತೀವ್ರವಾಗಿರುವುದು ಎಲ್ಲರ ಅನುಭವಕ್ಕೂ ಬಂದಿರುವ ವಿಷಯ. ಸರಕಾರವು ಸಮಾಜ ವಿಕಾಸ ಯೋಜನಾ ಕ್ಷೇತ್ರಗಳಲ್ಲಿ ದುಡಿಯುವುದಕ್ಕೋಸ್ಕರ ದಾದಿಯರನ್ನು ತರಬೇತಿಗೊಳಿಸಲು ವಿಶಿಷ್ಟ ಕಾರ್ಯಕ್ರಮಗಳನ್ನು ಕೈಗೊಂಡಿರುವುದು. ಹಾಗೆಯೇ ವೈದ್ಯಕೀಯ ಶಿಕ್ಷಣವನ್ನೊದಗಿಸಬಲ್ಲ ಕೇಂದ್ರಗಳನ್ನು ಸ್ಥಾಪಿಸುವ ಕಡೆಗೂ ನಿಧಾನವಾಗಿ ಗಮನವನ್ನು ಹರಿಸುತ್ತಿರುವುದು. ಮದ್ರಾಸಿನ ಮಧುರೆಯಲ್ಲಿ ಕಳೆದ ತಿಂಗಳಲ್ಲಿ ೫೦ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಿದ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಇದಕ್ಕೆ ನಿದರ್ಶನವಾಗಿ ಕೊಡಬಹುದು. ಆದರೆ ನಮ್ಮ ದೇಶದ ವೈಶಾಲ್ಯಕ್ಕೂ ಇಲ್ಲಿ ತಾಂಡವವಾಡುತ್ತಿರುವ ಅನಾರೋಗ್ಯದ ಭೀಕರತೆಗೂ ಸರಕಾರೀ ಮಟ್ಟದಲ್ಲಿ ಕೈಗೊಂಡ ಪ್ರಯತ್ನಗಳಿಂದಲೇ ತೃಪ್ತಿಕರವಾದ ಪರಿಹಾರವು ದೊರಕುವಂತಿಲ್ಲ—ಸರಕಾರದ ಕೆಲಸಗಳು ಪರಿಮಿತಿಗೊಳಪಟ್ಟವೆ; ಪ್ರಾಶಸ್ತ್ಯಾನುಕ್ರಮ ನಿರ್ಣಯದ ಮೇರೆಗೆ ನಡೆಯುತ್ತವೆ; ಕರ-ಕಂದಾಯಗಳ ಮೂಲಕ ದೊರೆಕಬಹುದಾದ ಆರ್ಥಿಕ ಆದಾಯವನ್ನು ಅವು ಹೊಂದಿಕೊಂಡಿವೆ. ಮೇಲಾಗಿ ವೈದ್ಯಕೀಯ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯಲ್ಲಿ ವಿಶಾಲವಾದ ಆಸ್ಪತ್ರೆಯೂ ಆಧುನಿಕ ಪ್ರಯೋಗ ಶಾಲಾ ಸಾಮಗ್ರಿಗಳೂ ಬೇಕಾಗುತ್ತವೆ. ಇವೆಲ್ಲವನ್ನು ಒದಗಿಸಿಕೊಳ್ಳುವುದಕ್ಕೆ ಕನಿಷ್ಠ ಒಂದು ಕೋಟಿ ರೂಪಾಯಿ ವರೆಗಿನ ಮೂಲ ವೆಚ್ಚವನ್ನಾದರೂ ಹೊರಬೇಕಾಗುವುದು. ಅನ್ನ ವಸ್ತ್ರಗಳೇ ಮುಂತಾದ ಪ್ರಾಥಮಿಕ ಆವಶ್ಯಕತೆಗಳನ್ನು ಪೂರೈಸಿ, ಸ್ವಾವಲಂಬಿಯಾಗಲು ಮನಸ್ಸುಗೊಟ್ಟ ರಾಷ್ಟ್ರವು ಶಿಕ್ಷಣ-ಅದರಲ್ಲೂ ವೈದ್ಯಕೀಯ ಶಿಕ್ಷಣ–ಕ್ಷೇತ್ರಕ್ಕೆ ಹೆಚ್ಚು ಗಮನ ನೀಡುವಲ್ಲಿ ವಿಳಂಬ ಸಹಜವಾಗಿಯೇ ಸಂಭವಿಸುತ್ತದೆ. ಈ ವಿಳಂಬದ ಬಳಿಕವಾದರೂ ಸರಕಾರಕ್ಕೆ ಇಂಥ ಕೇಂದ್ರಗಳನ್ನು ದೇಶಾದ್ಯಂತ ತೆರೆಯುವುದು ಸಾಧ್ಯವಾಗಲಿಕ್ಕಿಲ್ಲ—ಆದುದರಿಂದ ಸರಕಾರದ ಆಂಶಿಕ ಸಹಾಯವನ್ನಷ್ಟೇ ಅವಲಂಬಿಸಿ, ಖಾಸಗಿ ಪ್ರಯತ್ನವೇ ಮಹತ್ವದ ಪಾತ್ರ ನಿರ್ವಹಿಸುವ ಸಾಹಸ ಕಾರ್ಯಕ್ಕೆ ಇಲ್ಲಿ ಅವಕಾಶ ಮಾಡಿಕೊಟ್ಟರೆ ತಪ್ಪಾಗಲಾರದು. ಸಾಮಾನ್ಯ ಶಿಕ್ಷಣ ಸಂಸ್ಥೆಗಳನ್ನು ಖಾಸಗಿ ಜನರೇ ಸರಕಾರದ ನಿಯಮಗಳಿಗೆ ಹೊಂದಿಕೊಂಡು, ತೃಪ್ತಿಕರವಾಗಿ ನಡೆಸುತ್ತಾ ಬರುತ್ತಿರುವುದನ್ನು ನಾವೆಲ್ಲರೂ ನೋಡಿದ್ದೇವೆ; ವೈದ್ಯಕೀಯ ಶಿಕ್ಷಣ ಸಂಸ್ಥೆಗಳನ್ನು ಕೂಡ ಇದೇ ರೀತಿಯಲ್ಲಿ ಸಂಘಟಿಸುವುದು ಸಾಧ್ಯವಿದೆಯೆಂದು ಮಣಿಪಾಲದ ಕಸ್ತೂರ್ಬಾ ಮೆಡಿಕಲ್ ಕಾಲೇಜು ತನ್ನ ಕಳೆದ ಒಂದು ವರ್ಷಕ್ಕೆ ತುಸು ಹೆಚ್ಚಿನ ಅಸ್ತಿತ್ವ ಕಾಲದಲ್ಲಿ ತೋರಿಸಿಕೊಟ್ಟಿರುವುದು. ಶಿಕ್ಷಣ ಪ್ರಸಾರದ ಉದಾತ್ತಧ್ಯೇಯವನ್ನು ಹೊಂದಿದ ದಿ ಎಕಾಡೆಮಿ ಆಫ್ ಜನರಲ್ ಎಜುಕೇಶನ್ನಿನ ಸಮರ್ಥ ರಿಜಿಸ್ಟ್ರಾರೂ ಸ್ವತಃ ನಿಷ್ಣಾತ ಡಾಕ್ಟರರೂ (ವಾಣಿಜ್ಯ ಕ್ಷೇತ್ರದಲ್ಲಿ ಅನುಭವ ಸಂಪನ್ನರೂ) ಆದ ಡಾ. ಟಿ. ಮಾಧವ ಪೈಗಳ ಕುಶಲ ಕಲ್ಪನೆಯೂ ಮುನ್ನೋಟವೂ ಸಹಕಾರ ತತ್ವದ ತಳಹದಿಯ ಮೇಲೆ ಇಂಥದೊಂದು ಕಾಲೇಜನ್ನು ತೆರೆಯುವುದು ಸಾಧ್ಯವೆಂದು ನಮ್ಮ ಧುರೀಣರಿಗೂ ಜನತೆಗೂ ಮನವರಿಕೆ ಮಾಡಿಕೊಟ್ಟಿರುವುದು. ವೈದ್ಯಕೀಯ ಶಿಕ್ಷಣ ಸಂಸ್ಥೆಗಳಿಗೆ ಸೇರಬಯಸಿ ಪ್ರವೇಶ ಸಿಗದೆ ನಿರಾಶರಾಗುತ್ತಿರುವ ಯುವಕ—ಯುವತಿಯರಿಗೆ ಈ ಸಂಸ್ಥೆಯು ಹೊಸ ಆಶೆಗೆ ಎಡೆಮಾಡಿಕೊಟ್ಟಿದೆಯೆಂದು ಕಳೆದ ವಾರ ಇಲ್ಲಿಗೆ ಆಗಮಿಸಿದ ಮುಂಬಯಿ ಸರಕಾರದ ಶಿಕ್ಷಣ ಮಂತ್ರಿ ಶ್ರೀ ದಿನಕರ ರಾವ ದೇಸಾಯಿಯವರು ಸಾರಿದರು. ಭಾರತದಲ್ಲಿಯೇ ಅಭೂತಪೂರ್ವವೆನಿಸಿದ ಈ ಖಾಸಗಿ ಪ್ರಯತ್ನವು ಯಶಸ್ಸು ಹೊಂದಿದರೆ, ರಾಷ್ಟ್ರದ ಪುನಾರಚನೆಯ ವಿಷಯದಲ್ಲಿ ನೂತನ ಆದರ್ಶವೊಂದನ್ನು ಹಾಕಿಕೊಟ್ಟಂತಾಗುವುದು. ವೈದ್ಯಕೀಯ ಶಿಕ್ಷಣಸಂಸ್ಥೆಯಂಥ ಈ ದೊಡ್ಡ ಉದ್ಯಮವು ಖಾಸಗಿ ಜನರ ಕೈಯಲ್ಲಿ ಎಷ್ಟು ನ್ಯೂನಾತಿರೇಕಗಳಿಗೆ ಮತ್ತು ಲೋಪದೋಷಗಳಿಗೆ ಬಲಿಯಾಗುವುದೋ ಎಂದು ಇದ್ದ ಸಂಶಯವು ನಿರಾಧಾರವಾದುದೆಂಬ ಬಗ್ಗೆ ತನಗೆ ಸಂಪೂರ್ಣ ಸಮಾಧಾನವಾಯಿತೆಂದು ಮಂತ್ರಿಗಳು ಹೇಳಿದುದನ್ನು ಗಮನಿಸಿದರೆ, ಈ ಸಂಸ್ಥೆಯ ಸ್ಥಾಪಕರ ಕ್ರಿಯಾತ್ಮಕ ಸಾಮರ್ಥ್ಯ ಏನೆಂದು ಸ್ಪಷ್ಟವಾಗುವುದು. ಈ ಸಂಸ್ಥೆಯ ನಿರ್ಮಾಣ ಕಾರ್ಯದಲ್ಲಿ ತುಂಬ ಮಿತವ್ಯಯವನ್ನು ಸಾಧಿಸಿರುವುದಾಗಿಯೂ ಆದಾಗ್ಯೂ ಶಿಕ್ಷಣ ಸೌಲಭ್ಯಗಳ ಮಟ್ಟಿಗೆ ಭಾರತದ ಬೇರಾವುದೇ ಪ್ರಥಮ ಶ್ರೇಣಿಯ ಕಾಲೇಜಿನೊಡನೆ ಇದು ಸ್ಪರ್ಧಿಸಬಲ್ಲುದೆಂದೂ ಡಾ| ಎ. ವಿ. ಬಾಳಿಗರು ಹೇಳಿದ ಮಾತು ಡಾ| ಪೈಗಳ ಕರ್ತೃತ್ವ ಶಕ್ತಿಯ ಯಥಾರ್ಥ ಪ್ರಶಂಸೆಯೇ ಆಗಿದೆ. ಇಲ್ಲಿಯ ಶಿಕ್ಷಕವೃಂದವೂ ಉಪಕರಣಗಳೂ ಕಟ್ಟಡಗಳೂ ಇಷ್ಟರಲ್ಲೇ ರೂಪುಗೊಳ್ಳಲಿರುವ ಆಸ್ಪತ್ರೆಯೂ ಶಿಕ್ಷಣ ಹೊಂದುತ್ತಿರುವ ವಿದ್ಯಾರ್ಥಿಗಳಿಗೆ ಪೂರ್ಣ ಸೌಕರ್ಯವನ್ನು ಒದಗಿಸುವಂತಿವೆಯಲ್ಲದೆ— ಮಣಿಪಾಲದ ಕಾಲೇಜಿಗೆ ಕೆಲವು ಸ್ವಂತ ವೈಶಿಷ್ಟ್ಯಗಳೂ ಇವೆಯೆಂದು ಸನ್ಮಾನ್ಯ ಅತಿಥಿಗಳು ಹೇಳಿದ್ದಾರೆ: ಮಂತ್ರಿಗಳು ಉಡುಪಿಯ ಶ್ರೀಕೃಷ್ಣನ ಅನುಗ್ರಹದ ಪ್ರಸ್ತಾಪವನ್ನು ಮಾಡಿದರೆ, ಡಾ| ಬಾಳಿಗರು ಮಣಿಪಾಲದ ನಿಸರ್ಗ ರಮಣೀಯತೆಯನ್ನೂ ವೈದ್ಯಕೀಯ ವಿದ್ಯಾರ್ಥಿಗಳು ಅಗತ್ಯ ಗಮನಿಸಬೇಕಾದ ಗ್ರಾಮಾಂತರ ಪ್ರದೇಶಗಳ ಆವರಣವನ್ನೂ ಉಲ್ಲೇಖಿಸಿದರು. ಇಲ್ಲಿ ಕಲಿಯುವ ಪ್ರತಿಯೊಬ್ಬ ವಿದ್ಯಾರ್ಥಿಯೂ ದೇವರ ದಯೆಯಿಂದ ಲಭಿಸಿದ ಈ ಅಪೂರ್ವ ವಾತಾವರಣದ ಸದುಪಯೋಗ ಪಡೆಯುವನೆಂದು ನಾವು ಸಹ ಆಶಿಸುತ್ತೇವೆ. ಮದ್ರಾಸು ಸರಕಾರದವರು ೩೨ ಲಕ್ಷ ರೂಪಾಯಿಗಳ ಕರ್ಚಿನಿಂದ ಮಂಗಳೂರಿನ ಆಸ್ಪತ್ರೆಯ ವಿಸ್ತಾರಣಾ ಕಾರ್ಯವನ್ನು ಈ ಕಾಲೇಜಿಗಾಗಿ ಕೈಗೊಂಡಿರುವರಲ್ಲದೆ, ಮದ್ರಾಸು ರಾಜ್ಯದಿಂದ ಬಂದ ವಿದ್ಯಾರ್ಥಿಗಳ ಮಟ್ಟಿಗೆ ಗ್ರಾಂಟು ಕೊಡಲೂ ಒಪ್ಪಿದ್ದಾರೆ. ಈ ರೀತಿಯ ಸಹಾಯವನ್ನು ಮುಂಬಯಿ ಮತ್ತು ಇತರ ರಾಜ್ಯಗಳಿಂದಲೂ ನಿರೀಕ್ಷಿಸುತ್ತೇವೆ. ಕೇಂದ್ರ ಸರಕಾರದಿಂದಲೂ ಸಹಾಯ ದೊರಕ ಬೇಕಾದದ್ದು ನ್ಯಾಯ. ಮಾನ್ಯ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತಕೌರರು ಈ ಸಂಸ್ಥೆಯನ್ನು ಪ್ರತ್ಯಕ್ಷ ಕಂಡಲ್ಲಿ—ಇತರ ನೂರಾರು ಸಂದರ್ಶಕರಿಗೆ ಮನವರಿಕೆಯಾದಂತೆ—ಅವರಿಗೂ ಸಂಸ್ಥೆಯ ಪ್ರಗತಿಯು ತೃಪ್ತಿಯನ್ನೊದಗಿಸುವುದು ನಿಶ್ಚಯ. ಉದಾರವಾದನೆರವು ಎಷ್ಟು ಹೆಚ್ಚು ಪ್ರಮಾಣದಲ್ಲಿ ಎಷ್ಟು ತ್ವರೆಯಿಂದ ದೊರಕಿತೋ ಅಷ್ಟು ಮಟ್ಟಿಗೆ ಇಲ್ಲಿ ಪ್ರವೇಶ ಬಯಸುವ ವಿದ್ಯಾರ್ಥಿಗಳು ೩೦೦೦ ರೂಪಾಯಿಗಳನ್ನು ದಾನವಾಗಿ ಅರ್ಪಿಸಬೇಕೆನ್ನುವ ಅನಿವಾರ್ಯ ನಿಯಮವನ್ನು ಸಡಲಿಸುವುದು ಸಾಧ್ಯವಾದೀತು.

ಫೋರ್ಮೋಸಾದ ವಿಮೋಚನೆ ಮಾಡುವ ಹಂಬಲ

ಚೀನೀ ಕಮ್ಯೂನಿಸ್ಟರ ರಭಸದ ಪ್ರಚಾರ

ಆಗ್ನೇಯ ಏಶ್ಯಾದಲ್ಲಿ ಶಾಂತಿ ಸ್ಥಾಪನೆಯಾಯಿತೆಂದು ಸಂತೋಷವನ್ನು ಹೊಂದಿದ ಗಳಿಗೆಯಲ್ಲೆ ಆಗ್ನೇಯ ಏಶ್ಯಾದ ಸಂರಕ್ಷಣೆಯ ನೆಪದಲ್ಲಿ ಅಮೇರಿಕವೂ ಅದರ ಏಳು ಮಿತ್ರ ರಾಷ್ಟ್ರಗಳೂ ಶಾಂತಿಯ ವಾತಾವರಣವನ್ನು ಕದಡುವ ದುಷ್ಪ್ರಯತ್ನದಲ್ಲಿ ತೊಡಗಿರುವುದು ವಿಷಾದಕರ: ಇಷ್ಟೇ ಚಿಂತೆಯನ್ನು ಹುಟ್ಟಿಸುವ ಇನ್ನೊಂದು ಹೇಳಿಕೆಯೂ ಕಳೆದ ವಾರ ಪ್ರಕಟಗೊಂಡಿರುವುದು. ಇದು ಚೀನೀ ಪ್ರಧಾನ ಮಂತ್ರಿ ಚೌ ಎನ್ ಲಾಯರಿಂದ ಬಂದಿದ್ದು, ಫೋರ್ಮೋಸಾದ "ವಿಮೋಚನೆ"ಗೆ ಸಂಬಂಧಿಸಿದೆ. ಚೀನದ ಪತ್ರಿಕೆಗಳೂ ಸುದ್ದಿ ಸಂಸ್ಥೆಗಳೂ ಚಿಯಾಂಗರ ಕೈಯಿಂದ ಫೋರ್ಮೋಸಾ ದ್ವೀಪವನ್ನು ವಶಪಡಿಸಿಕೊಳ್ಳುವ ಕುರಿತು ಉದ್ರೇಕಪೂರಿತವೂ ಪ್ರಚಾರದ ಅಂಶವೇ ಅಧಿಕವಾಗಿರುವಂಥವೂ ಆದ ಮಾತುಗಳನ್ನು ಆಡುತ್ತವೆ.

ಅಮೇರಿಕದ ನೌಕಾಪಡೆ

ಚೀನೀಯರ ಫೋರ್ಮೋಸಾ ಧೋರಣೆಯು ಇಂದು ನಿನ್ನೆಯಷ್ಟೇ ರೂಪಿತವಾದುದಲ್ಲ—೧೯೪೯ರಷ್ಟು ಹಿಂದೆಯೇ "ವಿಮೋಚನೆ"ಯ ಕನಸನ್ನು ಅವರು ಕಾಣುತ್ತಿದ್ದರು. ನಡುವೆ ಕೊರಿಯಾದ ಕದನ ಸಂಭವಿಸದಿರುತ್ತಿದ್ದರೆ, ಫೋರ್ಮೋಸಾದ ಮೇಲೆ ಅವರ ದಾಳಿ ನಡೆಯುತ್ತಿತ್ತು.

ಎರಡು ಮಾತು

ಈ ಸಂಚಿಕೆಗೆ ನಮ್ಮ ಮೂವತ್ತಮೂರನೆಯ ವರ್ಷವು ಮುಗಿಯುತ್ತದೆ: ನಡೆದು ಬಂದ ದಾರಿಯನ್ನು ಕಂಡು ನಮಗೂ ನಿಮಗೂ ಕೂಡಿಯೇ ಸಂತೋಷವಾದೀತು. ಇದರಂತೆ ನಮ್ಮ ಕಷ್ಟದಲ್ಲೂ ನಿಮ್ಮ ಪಾಲನ್ನು ಬೇಡುತಿದ್ದೇವೆ: ನಮ್ಮ ಚಂದಾದಾರರಲ್ಲಿ ಹಣ ಬಾಕಿ ಇರುವವರು ಅದನ್ನು ಕೂಡಲೇ ಸಲ್ಲಿಸಿ, ನಮಗೆ ಆರ್ಥಿಕ ಬೆಂಬಲವನ್ನು ನೀಡುವುದಲ್ಲದೆ, ನಮ್ಮ ಅಭಿಮಾನಿಗಳಲ್ಲಿ ಪ್ರತಿಯೊಬ್ಬನೂ ತನ್ನ ಸ್ನೇಹಿತರ ಬಳಗದಲ್ಲಿ ಒಬ್ಬಿಬ್ಬರನ್ನಾದರೂ ನಮಗೆ ಚಂದಾದಾರರಾಗಿ ಒದಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಈ ಸಂದರ್ಭದಲ್ಲಿ ನಮಗೆ ವಿವಿಧ ಬಗೆಯಿಂದ ನೆರವಾದ ಜಾಹೀರಾತುದಾರರಿಗೂ ಲೇಖಕರಿಗೂ ಎಲ್ಲಕ್ಕೂ ಮಿಗಿಲಾಗಿ "ನವಯುಗ"ವನ್ನು ಪ್ರೀತಿಯಿಂದ ಸ್ವಾಗತಿಸುವ ಚಂದಾದಾರರಿಗೂ ಅವರ ಅಭಿಮಾನಗಳಿಗಾಗಿ ಹೃತ್ಪೂರ್ವಕವಾದ ಕೃತಜ್ಞತೆಯನ್ನು ಸೂಚಿಸುತ್ತಾ ಮುಂದಕ್ಕೂ ಅವರ ಸ್ನೇಹಪಾತ್ರರಾಗಿರುವ ಪ್ರತಿಜ್ಞೆಯನ್ನು ಸ್ವೀಕರಿಸುತ್ತೇವೆ

ಕೊರಿಯಾ ಕದನದ ಕಾಲದಲ್ಲಿ ಚೀನೀಯರು ಇಂತಹ ದಾಳಿ ನಡೆಸಿಯಾರೆಂಬ ಭೀತಿ ಅಮೇರಿಕಕ್ಕೂ ಇತ್ತು—ಆದುದರಿಂದ ಅದು ತನ್ನ ಏಳನೇ ನೌಕಾ ಪಡೆಯನ್ನು ಚಿಯಾಂಗರ ರಕ್ಷಣೋದ್ದೇಶದಿಂದ ಫೊರ್ಮೋಸಾಕ್ಕೆ ಕಳಿಸಿ ಕೊಟ್ಟಿತು ಈ ನೌಕಾ ಪಡೆ ಈಗಲೂ ಅಲ್ಲಿರುವುದು—ಮತ್ತು ಇದರ ಬೆಂಬಲದ ಭರವಸೆಯಿಂದ ಚೀನದ ಕಡಲಲ್ಲಿ ಮೀನು ಹಿಡಿಯಲು ಬಂದ ಬೆಸ್ತರನ್ನೂ ಓಡಿಯಾಡುವ ಇತರ ನೌಕೆಗಳನ್ನೂ ಹಿಂಸಿಸಲು ಚಿಯಾಂಗ ಸರಕಾರ ಪ್ರವೃತ್ತವಾಗಿರುವುದು.

ಕಮ್ಯುನಿಸ್ಟರ ಸಿದ್ಧತೆ

ಇದು ಸಹಜವಾಗಿಯೇ ಚೀನದ ಕಮ್ಯುನಿಸ್ಟ ಪ್ರಭುತ್ವವನ್ನು ರೊಚ್ಚಿಗೆಬ್ಬಿಸಿದೆ—ಫೊರ್ಮೋಸಾದ ವಿಮೋಚನೆ ಮಾಡಿ ಚಿಯಾಂಗರ ಪೌರುಷವನ್ನು ನಷ್ಟಪಡಿಸಿದರೆ ಮಾತ್ರ ತನಗೆ ನೆಮ್ಮದಿಯಿಂದು ಅದು ಭಾವಿಸುವುದು. ನ್ಯಾಯವೂ ಅದರ ಬೆಂಬಲಕ್ಕುಂಟು—ಏಕೆಂದರೆ ಫೊರ್ಮೋಸಾ ದ್ವೀಪವು ಪ್ರಾಚೀನ ಕಾಲದಿಂದಲೂ ಚೀನಕ್ಕೆ ಸೇರಿದ ಪ್ರದೇಶ: ಕಳೆದ ಮಹಾಯುದ್ಧದಲ್ಲಿ ಜಪಾನೀಯರ ಕೈಗೆ ಸಿಕ್ಕಿಬಿದ್ದ ಈ ನಡುಗಡ್ಡೆಯನ್ನು ಅಮೇರಿಕನ್ನರು ಕೈವಶಪಡಿಸಿಕೊಂಡು, ನೆಲೆ ಇಲ್ಲದೆ ಒದ್ದಾಡುತಿದ್ದ ಚಿಯಾಂಗರಿಗೆ "ತ್ರಿಶಂಕು ಸ್ವರ್ಗ"ವಾಗಿ ಇದನ್ನು ಮಾರ್ಪಡಿಸಿದರು ಕಮ್ಯುನಿಸ್ಟರ ಕಟು ವಿರೋಧಿಗಳಾದ ಅಮೇರಿಕನ್ನರು ಚೀನದ ದಕ್ಷಿಣ ಕರಾವಳಿಯ ಮೇಲೆ ಚಿಯಾಂಗರನ್ನು ಮುಂದೆ ಮಾಡಿ ದಾಳಿ ನಡೆಸದಿರರೆಂಬ ಸಂಶಯವಿದ್ದುದರಿಂದಲೇ ಚೀನದ ಪ್ರಬಲ ಸೈನ್ಯವು ದಕ್ಷಿಣ ತೀರದಲ್ಲಿ ಬೀಡು ಬಿಟ್ಟಿರುವುದು. ಚಿಯಾಂಗರು ಒಮ್ಮೆ ಚೀನದ ನೆಲದಲ್ಲಿ ಪ್ರವೇಶಿಸಿದರೆ, ಮುಂದೇನಾದೀತೋ ಎಂಬ ಅಂಜಿಕೆ ಕಮ್ಯುನಿಸ್ಟರನ್ನು ಇನ್ನೂ ಬಿಟ್ಟಿಲ್ಲ.

ಐಸೆನ ಹೋವರರ ಹೇಳಿಕೆ

ಆದುದರಿಂದ ಚಿಯಾಂಗರ ಅಸ್ತಿತ್ವಕ್ಕೆ ಆಧಾರ ಭೂತವಾದ ಫೊರ್ಮೋಸಾದ ವಿಮೋಚನೆ ಮಾಡುವ ಅಗತ್ಯ ಅವರಿಗೆ ಸ್ಪಷ್ಟವಾಗಿ ಗೋಚರಿಸುತ್ತದೆ - ಆದರೆ ಇದು ಅಷ್ಟು ಸುಲಭದ ಕೆಲಸವಲ್ಲ. ನ್ಯಾಯ ದೃಷ್ಟಿಯಿಂದ ಚೀನೀಯರ ನಿಲುಮೆ ಸರಿಯಾಗಿದ್ದರೂ ಅಮೇರಿಕದ ನೌಕಾ ಪಡೆಯು ಚಿಯಾಂಗರ ರಕ್ಷಣೆಗೆ ಧಾವಿಸಿ ಬರುವುದರಿಂದ ಇನ್ನೊಂದು ಮಹಾ ಯುದ್ಧದ ಕಿಡಿ ಇಲ್ಲಿ ಹೊತ್ತಿಕೊಳ್ಳುವುದು ನಿಶ್ಚಯ. ಇದನ್ನು ಲೋಕದ ಹೆಚ್ಚಿನವರು ಅಪೇಕ್ಷಿಸುವುದಿಲ್ಲ. ಫೊರ್ಮೋಸಾವನ್ನು ಕಮ್ಯುನಿಸ್ಟರ ಕೈಗೆ ಬಿಟ್ಟುಗೊಡದಿದ್ದರೂ ಅಲ್ಲಿಂದ ಅಮೇರಿಕದ ನೌಕಾಪಡೆಯನ್ನು ಹಿಂದೆ ಕರೆಸಿ ತಟಸ್ಥೀಕರಣವನ್ನು ಸಾಧಿಸುವುದೊಳಿತೆಂದು ಬ್ರಿಟನು ಮುಂತಾದ ಹಿತ ಚಿಂತಕ ರಾಷ್ಟ್ರಗಳು ಸೂಚಿಸುತ್ತವೆ. ಆದರೆ ಇದರಿಂದ ಕೆಂಪು ಚೀನದ ಕಮ್ಯುನಿಸ್ಟರಿಗೆ ವಿಮೋಚನಾ ಆಂದೋಲನ ನಡೆಸಲು ಪ್ರೋತ್ಸಾಹ ದೊರಕಿದಂತಾಗುವುದೆಂದು ಅಧ್ಯಕ್ಷ ಐಸೆನಹೋವರರ ಅಭಿಪ್ರಾಯ.

(೫ನೇ ಪುಟದಿಂದ)

ರಚನೆಗಾಗಿ ಪರಿಶ್ರಮಪೂರ್ವಕ ದುಡಿಯುವಂತೆ ನೋಡಿದ ಹಾಗಾಗುವುದು. ಹಳ್ಳಿಗರಲ್ಲಿ ಸ್ಫೂರ್ತಿಯನ್ನು ತುಂಬಬಲ್ಲ ಗ್ರಾಮಸೇವಕರ ತರಬೇತಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡಲು ಸರಕಾರ ತೀರ್ಮಾನಿಸಿದ್ದು, ಈ ಬಗ್ಗೆ ಹೆಚ್ಚು ಕೇಂದ್ರಗಳನ್ನು ತೆರೆಯಲಿರುವುದು.

ಗೊಬ್ಬರ ಕೇಂದ್ರಗಳು

ಹಳ್ಳಿಗರಿಗೆ ಕೃಷಿಯೇ ಮುಖ್ಯವಾಗಿದ್ದು, ಉತ್ತಮ ಗೊಬ್ಬರದ ಪೂರೈಕೆಯು ಅವರ ಪ್ರಧಾನ ಅವಶ್ಯಕತೆಯಾಗಿದೆ. ಸಿಂಧ್ರಿಯಲ್ಲಿ ಸ್ಥಾಪಿತವಾಗಿರುವ ಕಾರ್ಖಾನೆಯು ಈಗ ದಿನಕ್ಕೆ ಒಂದು ಸಾವಿರ ಟನ್ನುಗಳಿಗಿಂತಲೂ ಹೆಚ್ಚು ಗೊಬ್ಬರವನ್ನು ಉತ್ಪಾದಿಸುತ್ತದೆ. ಆದರೆ ಇದು ದೇಶದ ಆವಶ್ಯಕತೆಯ ದೃಷ್ಟಿಯಿಂದ ಸಾಲದಾಗಿರುವುದರಿಂದ, ಭಾರತ ಸರಕಾರವು ಮತ್ತೆ ಎರಡು ಗೊಬ್ಬರದ ಕಾರ್ಖಾನೆಗಳನ್ನು ತೆರೆಯಲು ಬಯಸಿದೆ. ಇದರಲ್ಲಿ ಒಂದು ನಾಂಗಲದಲ್ಲಿ ನೆಲೆಗೊಳ್ಳುವುದು; ಇನ್ನೊಂದನ್ನು ದಕ್ಷಿಣ ಭಾರತದಲ್ಲಿ ಸ್ಥಾಪಿಸಬೇಕೆಂದು ಸರಕಾರದ ಯೋಜನೆಯಾಗಿದ್ದು ನಾಲ್ಕಾರು ಕೇಂದ್ರಗಳಲ್ಲಿ ಯಾವುದಾಗಬಹುದೆಂದು ಪರಿಶೀಲನೆಯನ್ನು ನಡೆಸಿರುವುದಾಗಿ ಉತ್ಪಾದನಾ ಮಂತ್ರಿ ಶ್ರೀ. ಕೆ. ಸಿ. ರೆಡ್ಡಿಯವರಿಂದ ತಿಳಿದು ಬರುತ್ತದೆ. ಉಕ್ಕು, ಪೆನ್ಸಿಲಿನ್ ಮುಂತಾದ ಇತರ ಕೈಗಾರಿಕೆಗಳ ಅಭಿವೃದ್ಧಿಯನ್ನೂ ಸರಕಾರವು ಮಹತ್ವ ಕೊಟ್ಟು ವಿಚಾರಿಸುತ್ತದೆ.

ವಿದ್ಯಾರ್ಥಿಗಳ ಕರ್ತವ್ಯ

ಮದ್ರಾಸು ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದ ಭಾಷಣ ಮಾಡುತ್ತಾ ಡಾ. ಅಲಗಪ್ಪ ಚೆಟ್ಟಿಯಾರರು ವಿದ್ಯಾರ್ಥಿಗಳ ಕರ್ತವ್ಯವನ್ನು ಕುರಿತು ಮಹತ್ವದ ಮಾತುಗಳನ್ನಾಡಿದ್ದಾರೆ— "ನೀವು ಇಂದಿನ ವರೆಗೆ ಹೊಂದಿದ ಶಿಕ್ಷಣವು ಮುಂದಿನ ಜೀವನದಲ್ಲಿ ನೀವು ಕಾಯಿದೆ ಕಾನೂನುಗಳ ಮತ್ತು ಧರ್ಮದ ರಕ್ಷಣೆಗಾಗಿ ನಿಮ್ಮ ವರ್ಚಸ್ಸನ್ನು ಉಪಯೋಗಿಸಿದರೆ, ಶಕ್ತಿ ಸರ್ವಸ್ವದಿಂದ ಉತ್ಪಾದನೆಯನ್ನು ಹೆಚ್ಚಿಸಲು ಪ್ರಯತ್ನಿಸಿದರೆ, ಸರಕುಗಳ ವಿತರಣೆಯಲ್ಲಿ ಸಮಾನತೆಯಿಂದ ವರ್ತಿಸಿ ನ್ಯಾಯವನ್ನು ಎತ್ತಿ ಹಿಡಿದರೆ ಮತ್ತು ಪ್ರತಿಯೊಬ್ಬ ನಾಗರಿಕನ ಹಕ್ಕುಬಾಧ್ಯತೆಗಳನ್ನು ಸಹಾನುಭೂತಿಯಿಂದ ಕಾಣುತಿದ್ದರೆ ಮಾತ್ರ ಸಾರ್ಥಕವಾಗುವುದು" ಎಂದವರು ನುಡಿದರು. ಪಾಶ್ಚಾತ್ಯ ಹಾಗು ಪೌರಸ್ತ್ಯ ತತ್ವ ಪ್ರಣಾಳಿಗಳ ಸಂಯೋಜನಾ ಕಾರ್ಯವನ್ನು ಮಾಡಿಕೊಂಡು ಪ್ರಗತಿ ಸಾಧಿಸಲು ಪದವೀಧರರು ನೋಡಬೇಕೆಂದೂ ಹೇಳಿದರು.

ಬೇಂಕುಗಳ ತಂಟೆ

ಬೇಂಕು ನೌಕರರ ತಂಟೆಯ ವಿಷಯದಲ್ಲಿ ನ್ಯಾಯಮಂಡಳವು ಕೊಟ್ಟ ತೀರ್ಪು ಭಾರತ ಸರಕಾರದ ಪುನರ್ವಿಮರ್ಶೆಗೆ ಗುರಿಯಾಗಿರುವುದು. ಸಣ್ಣ ಪಟ್ಟಣಗಳಲ್ಲಿಯೂ ಹಳ್ಳಿಗಳಲ್ಲಿಯೂ ತಮ್ಮ ವ್ಯವಹಾರಗಳನ್ನು ಸಾಗಿಸಿಕೊಂಡು ಹೋಗಲು ತೀರ ಅಸಾಧ್ಯವಾಗುವಂತಹ ರೀತಿಯಲ್ಲಿ ಆರ್ಥಿಕ ಭಾರವನ್ನು ಬೇಂಕುಗಳ ಮೇಲೆ ನ್ಯಾಯಮಂಡಳದ ತೀರ್ಪು ಹೇರಿದೆಯೆಂಬ ಅಪವಾದವನ್ನು ಹೋಗಲಾಡಿಸಲು ಅದು ಪ್ರಯತ್ನಿಸಿ, ಒಂದು ಲಕ್ಷಕ್ಕಿಂತ ಕಡಿಮೆ ಜನ ವಸತಿಯುಳ್ಳ ಕ್ಷೇತ್ರಗಳನ್ನು ಒಂದೇಯಾಗಿ ಪರಿಗಣಿಸದೆ ೩೦,೦೦೦ಕ್ಕಿಂತ ಕಡಿಮೆ ಮತ್ತು ಹೆಚ್ಚು ಎಂಬುದಾಗಿಯೂ ಹಿಂದಿನ ಅಶ್ರಿತ ಸಂಸ್ಥಾನಗಳು ಮತ್ತು ಹಾಗಲ್ಲದವುಗಳೆಂಬುದಾಗಿಯೂ ಪುನರ್ವಿಂಗಡಣೆ ಮಾಡಿರುವುದು; ಮತ್ತು ಸಂಬಳದ ಪ್ರಮಾಣದಲ್ಲಿ ವ್ಯತ್ಯಾಸವನ್ನು ಮಾಡಿರುವುದು. ಇದನ್ನು ಬೇಂಕು ನೌಕರರು ಪ್ರತಿಭಟಿಸುತ್ತಿರುವರೇನೋ ನಿಜ—ಆದರೆ ಸರಕಾರವು ಉಭಯತರಿಗೂ ನ್ಯಾಯ ಮಾಡಿದ್ದೇನೆಂದು ಭಾವಿಸಿರುವುದು.

ಉಡುಪಿ

ಅನಾವರಣ ಸಮಾರಂಭ—1954

ನೇ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಜಿಲ್ಲೆಯ ಬೋರ್ಡು ಹೈಸ್ಕೂಲುಗಳಲ್ಲಿ ಅತ್ಯಧಿಕ (ಶೇಕಡಾ 86) ಫಲಿತಾಂಶ ಪಡೆದಿದ್ದ ಸ್ಥಳೀಯ ಬೋರ್ಡು ಹೈಸ್ಕೂಲಿಗೆ ಬೋರ್ಡಿನ 'ಗುರಾಣಿ' (SHEILD) ದೊರಕಿದ್ದು ಅದರ ಅನಾವರಣ ಸಮಾರಂಭವು ತಾ. 23ರಂದು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಗಳ ಅಧ್ಯಕ್ಷತೆಯಲ್ಲಿ ಶಾಲಾ ವಠಾರದಲ್ಲಿ ನೆರವೇರಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ರಾಮಕೃಷ್ಣ ರಾಯರು ಸಂದೇಶಗಳನ್ನು ಓದಿ ಮಾನ್ಯ ಅತಿಥಿಗಳನ್ನು ಸ್ವಾಗತಿಸಿದರು. ಅಧ್ಯಕ್ಷರು ಗುರಾಣಿಯ ಅನಾವರಣ ಮಾಡಿದರು. ಶ್ರೀಗಳಾದ ಎ. ಜಿ. ಅಲ್ಸೆ, ಮೋಹನರಾವ್ ಮೊದಲಾದವರು ಶಾಲೆಯನ್ನು ಹರಸಿ ಮಾತನಾಡಿದರು. ಅಧ್ಯಕ್ಷರು ತಮ್ಮ ವಿಚಾರ ಪ್ರಚೋದಕ ಭಾಷಣದಲ್ಲಿ ವಿದ್ಯಾರ್ಥಿಗಳಲ್ಲಿ ಉತ್ತಮ ಗುಣಶೀಲತೆಯನ್ನು ಬೆಳಗಿಸಿ ರಚನಾತ್ಮಕ ಜನತಾಸೇವೆ, ದೇಶಸೇವೆ ಮಾಡಿಸುವುದೇ ಶಾಲೆಗಳಿಗೆ ಪರೀಕ್ಷೆಯ ಫಲಿತಾಂಶಕ್ಕಿಂತ ಪ್ರಾಮುಖ್ಯವಾದುದು ಎಂದರು. ಧನ್ಯವಾದದೊಂದಿಗೆ ಸಭೆ ಮುಕ್ತಾಯವಾಯಿತು.

ಮಂಗಳೂರು

ಶ್ರೀ ಕೆ. ಎಸ್. ಹೆಗ್ಡೆ, ಎಂ. ಪಿ. ಅವರು ಯುಕ್ತ ರಾಷ್ಟ್ರ ಸಂಘದ ಜನರಲ್ ಎಸೆಂಬ್ಲಿಯ ಅಧಿವೇಶನಕ್ಕೆ ತೆರಳಲಿರುವ ಭಾರತೀಯ ಶಿಷ್ಟ ಮಂಡಲದ ಸದಸ್ಯರಲ್ಲಿ ಒಬ್ಬರಾಗಿ ಭಾರತ ಸರಕಾರದಿಂದ ನಿಯುಕ್ತರಾಗಿರುವರು.

ಉರ್ವ ಕೆನರಾ ಹೈಸ್ಕೂಲಿನ— ಸೆಕೆಂಡರಿ ತರಬೇತಿ ಕ್ಲಾಸಿನ ಉದ್ಘಾಟನಾ ಸಮಾರಂಭವನ್ನು ತಾ. 18ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ನೆರವೇರಿಸಿದರು. ಡಾ| ಯು. ಪಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀ ಕೆ. ವಾಸುದೇವ ಕಿಣಿಯರು ಧನ್ಯವಾದಗಳನ್ನರ್ಪಿಸಿದರು.

ಗವರ್ನಮೆಂಟ್ ಕಾಲೇಜ್ ಯೂನಿಯನ್— ಉದ್ಘಾಟನಾ ಸಮಾರಂಭವನ್ನು ತಾ 18ರಲ್ಲು ಕೊಡಗು ವಿಧಾನ ಸಭೆಯ ಸ್ಪೀಕರ್ ಶ್ರೀ. ಬಿ. ಎಸ್. ಕುಶಾಲಪ್ಪನವರು ನೆರವೇರಿಸುತ್ತಾ, ವಿದ್ಯಾರ್ಥಿಗಳು ರಾಜಕೀಯದಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಯುವ ತನಕ ಪ್ರವೇಶಿಸಬಾರದು ಎಂದು ಉಪದೇಶವಿತ್ತರು. ಕಾಲೇಜು ಪ್ರಿನ್ಸಿಪಾಲ್ ಶ್ರೀ. ಸಿ. ವಿ. ರೋಜೋರವರು ಸ್ವಾಗತ ಮಾತುಗಳನ್ನಾಡಿದರು. ಯೂನಿಯನ್ ಅಧ್ಯಕ್ಷ ಶ್ರೀ. ವಿಶ್ವನಾಥ ರೈಗಳು ಅತಿಥಿಗಳ ಪರಿಚಯಮಾಡಿಕೊಟ್ಟರು. ಕಾರ್ಯದರ್ಶಿ ಶ್ರೀ. ಸುಂದರ ಜೆ. ಅವರು ಧನ್ಯವಾದಗಳನ್ನರ್ಪಿಸಿದರು.

ರೋಟರಿ ವಿದ್ಯಾರ್ಥಿ ವೇತನ— ಅಮೇರಿಕದ ಕೊಲಂಬಸ್ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಜೋರ್ಜಿಯಾ ವಿದ್ಯಾರ್ಥಿ ನಿಧಿಯಿಂದ ನಿರ್ಮಿಸಿದ ವಿದ್ಯಾರ್ಥಿ ವೇತನವನ್ನು ಸಾರ್ವಜನಿಕ ಕಾಮಗಾರೀ ಇಲಾಖೆಯಲ್ಲಿ ಜೂನಿಯರ್ ಇಂಜಿನಿಯರರಾಗಿರುವ ಶ್ರೀ ಸಿ. ಭಗವಾನ್‌ದಾಸ ರೈಗಳಿಗೆ ಕೊಡಲಾಗಿದೆ. ವೇತನವು ಒಂದು ವರ್ಷದ ಬಗ್ಗೆ 'ಜೋರ್ಜಿಯಾ ಸ್ಕೂಲ್ ಆಫ್ ಟೆಕ್ನಾಲಜಿ'ಯಲ್ಲಿ ಆರ್ಕಿಟೆಕ್ಟರ್ (ಸೌಧ ರಚನಾ ವಿಭಾಗ) ನಲ್ಲಿ ವಿಶೇಷ ತರಬೇತಿಯ ಬಗ್ಗೆ ಆಗಿರುವುದು.

ಶ್ರೀ ರೈಗಳು ತಾ. 19ರಲ್ಲು ಈ ಬಗ್ಗೆ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಸೇರಿದ ರೋಟರಿ ಕ್ಲಬ್ಬಿನ ಸಭೆಯಲ್ಲಿ ಅಭಿನಂದಿಸಲ್ಪಟ್ಟರು.

ಗೋವಾ ವಿಮೋಚನಾ ಚಳವಳಿಗೆ ಬೆಂಬಲ ವನ್ನು ವ್ಯಕ್ತಪಡಿಸುವ ಠರಾವನ್ನು ತಾ. 20ರಲ್ಲಿ ಶ್ರೀ. ಪಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಸೇರಿದ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಆಪತ್ಕರದ ಸಭೆಯಲ್ಲಿ ಮಂಜೂರುಮಾಡಲಾಯಿತು ಅಲ್ಲದೆ ಈ ಕುರಿತು ಜನ ಬೆಂಬಲವನ್ನು ಸಂಪಾದಿಸುವ ಕುರಿತು ಇದೇ 29ನೇ ಸಂಜೆ6 ಗಂಟೆಗೆ ಸಾರ್ವಜನಿಕ ಸಭೆ ಜರಗಿಸಬೇಕೆಂದಾಯಿತು.

ಕುಂದಾಪುರ— ಸೇನಾಪುರ ಗ್ರಾಮದ ಗುಡ್ಡಮ್ಮದಿ ದೇವಸ್ಥಾನಕ್ಕೆ ಹೋಗಲು ಪತ್ರ ಮುಖ್ಯ ದಾರಿಯಲ್ಲಿ ಹೊಳೆಗೆ ಸಂಕ ಮಾಡಿಸಲು ಪಕ್ಕಾಡಿ ಪಂಚಾಯತ ಬೋರ್ಡಿನವರು ಮುಂದಾಗಬೇಕೆಂದೂ ಬೆಳ್ವಾಡಿ ಹೊಳೆಯಲ್ಲಿ ಮಾಡಿಸಿದ ಸಂಕದಿಂದ ಸಾರ್ವಜನಿಕರಿಗೆ ಅಷ್ಟೊಂದು ಪ್ರಯೋಜನವಿಲ್ಲೆಂದೂ ಊರಿನವರೊಬ್ಬರು ಬರೆಯುತ್ತಾರೆ.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೊನಿಕ್ ಆಹಾರವಾಗಿದೆ. 1 ರಾತ್ಲು: ರೂ. 6–8–0 ¼ ರಾತ್ಲು: ರೂ. 1–14–0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.
2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.
3 ರಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.
4 ಎಲ್. ಎನ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,
Nainiappa Naicken Street, Park Town-MADRAS-3.

ಕಸ್ತೂರ್ಬಾ ಮೆಡಿಕಲ್ ಕಾಲೇಜು ಸರ್ವಸಜ್ಜಿತವಾಗಿದೆ

ಮುಂಬೈ ಮಂತ್ರಿ ದೇಸಾಯಿ ಮತ್ತು ಡಾ| ಬಾಳಿಗರಿಂದ ಅಧಿಕಾರಪೂರ್ಣ ಪ್ರಶಂಸೆ

ಮುಂಬಯಿ ಸರಕಾರದ ಶಿಕ್ಷಣ ಮತ್ತು ನ್ಯಾಯಾಂಗ ಮಂತ್ರಿ ಶ್ರೀ ದಿನಕರ ರಾವ್ ಎನ್. ದೇಸಾಯಿ, ಉಪಮಂತ್ರಿ ಕುಮಾರಿ ಇಂದುಮತಿ ಚಮನ್‌ಲಾಲ್ ಮತ್ತು ಡಾ| ಎ. ವಿ. ಬಾಳಿಗ ಅವರು ತಾ. 20ರಲ್ಲು ಬೆಳಿಗ್ಗೆ ಮುಂಬಯಿಯಿಂದ ವಿಮಾನ ಮೂಲಕ ಬಜ್ಪೆಗೆ ಆಗಮಿಸಿದರು. ವಿಮಾನ ನಿಲ್ದಾಣದಲ್ಲಿ ಡಾ| ಟಿ. ಎಮ್. ಎ. ಪೈ, ಡಾ| ಯು. ಪಿ. ಮಲ್ಯ, ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ; ಶ್ರೀ ಟಿ. ಎ. ಪೈ, ಎಮ್. ಎಲ್. ಎ; ಟಿ. ರಮೇಶ ಪೈ, ಶ್ರೀ ಕೆ. ಎಸ್. ಅಡಿಗ, ಶ್ರೀ ಪಿ. ಆರ್. ಆರ್ ಪ್ರೊಂಜ, ಶ್ರೀ ಬಿ. ಎ. ಮುತ್ತುಸ್ವಾಮಿ ಅಯ್ಯರ್, ಶ್ರೀ ಎ. ಲಕ್ಷ್ಮೀನಾರಾಯಣ ರಾಯರು ಸ್ವಾಗತಿಸಿತ್ತರು. (ಶ್ರೀ ಆರ್. ಎಸ್. ಮಕ್ಕೇರಿಕರ್, ಅವರು ಅಸೌಖ್ಯ ನಿಮಿತ್ತ ಬರಲಿಲ್ಲ) ಬಜ್ಪೆಯಿಂದ ನೇರಾಗಿ ಉಡುಪಿಗೆ ಆಗಮಿಸಿದರು. ಮಧ್ಯಾಹ್ನ ಮುಕುಂದ ನಿವಾಸದಲ್ಲಿ ಅತಿಥಿಗಳೆಲ್ಲರಿಗೂ ಆತಿಥ್ಯ ಕಮಿಟಿಯವರಿಂದ ಭೋಜನ ಸತ್ಕಾರ ನಡೆಯಿತು.

ಎಂ. ಜಿ. ಎಂ. ಕಾಲೇಜಿನಲ್ಲಿ

ಅಪರಾಹ್ನ ಶ್ರೀ ದೇಸಾಯಿ, ಕುಮಾರಿ ಇಂದುಮತಿ ಮತ್ತು ಡಾ ಬಾಳಿಗರು ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿಗೆ ಬಂದು ಡಾ| ಬಾಳಿಗರ ಧರ್ಮಾರ್ಥ ಸೇವೆಯಾದ ಅನಂತ ಬಾಳಿಗ ಮೆಮೋರಿಯಲ್ ಹಾಲನ್ನು ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೊಬ್ಬಿಕಾರ್ ಪದ್ಮನಾಭ ಪೈಗಳು ವಹಿಸಿದ್ದರು. ಡಾ| ಎಸ್. ಆರ್. ಪೈಗಳು ಮಾನ್ಯ ಅತಿಥಿಗಳ ಪರಿಚಯ ಮಾಡಿದರು. ಯೂನಿಯನ್ ಅಧ್ಯಕ್ಷ ಶ್ರೀ ಭಾಸ್ಕರ ಶೆಟ್ಟರು ಸ್ವಾಗತ ನೀಡಿದರು. ಡಾ| ಟಿ. ಎಮ್. ಎ. ಪೈಗಳು ಕಾಲೇಜಿನ ವರದಿಯನ್ನೊಪ್ಪಿಸಿದರು. ಮಂತ್ರಿ ಶ್ರೀ ದೇಸಾಯಿಯವರು ದ. ಕ. ಜಿಲ್ಲೆ ಹಾಗು ಉಡುಪಿಯಲ್ಲಿ ಸಾರ್ವಜನಿಕ ಬೆಂಬಲದಿಂದ ಎಂತಹ ಕಾರ್ಯಗಳು ನಡೆಯುತ್ತಿವೆ ಎಂಬುದು ಇಲ್ಲಿಗೆ ಬಂದ ನಂತರ ಮನವರಿಕೆಯಾಯಿತು. ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕುರಿತು ತನಗಿದ್ದ ಕೆಲವು ಸಂಶಯಗಳು ಕೂಡಾ ಮಾಯವಾದುವು ಎಂದರು. ಸ್ವತಂತ್ರ ಭಾರತದ ಭವಿಷ್ಯವು ಇಂದಿನ ವಿದ್ಯಾರ್ಥಿಗಳನ್ನು ಅವಲಂಬಿಸಿರುವುದರಿಂದ ವಿದ್ಯಾರ್ಥಿಗಳು ಶಿಸ್ತಿನ ಜೀವನವನ್ನು ನಡೆಸಬೇಕಾಗಿದೆ. ಕೆಲವು ಕಡೆಗಳಲ್ಲಿ ವಿದ್ಯಾರ್ಥಿಗಳು ತುಂಟ ಮನೋವೃತ್ತಿಯಲ್ಲಿರುವುದು ಬೇಸರದ ಸಂಗತಿ. ವಿದ್ಯಾರ್ಥಿಗಳು ಸನ್ಮಾರ್ಗದಲ್ಲಿದ್ದುಕೊಂಡು ಭಾರತಕ್ಕೆ ಕೀರ್ತಿ ತರುವಂತವರಾಗಬೇಕೆಂದರು. ಡಾ| ಬಾಳಿಗರು ಕಾಲೇಜಿಗೆ ಸಲ್ಲಿಸಿದ ಸೇವೆಯು ಆದರ್ಶನೀಯವು. ವಿದ್ಯಾಕ್ಷೇತ್ರದಲ್ಲಿ ಅವರಿಗಿರುವ ಅಭಿಮಾನ ಎಷ್ಟೆಂಬುದಕ್ಕೆ ಇದೇ ಸಾಕ್ಷ್ಯವಾಗಿದೆ ಎಂದು ಮೊದಲಾಗಿ ಹೇಳಿ ಭಾಷಣ ಮುಗಿಸಿದರು.

ನಂತರ ಸಂಸ್ಕೃತಕಾಲೇಜು, ವೆಂಕಟ್ರಮಣ ದೇವಸ್ಥಾನ, ಮಲ್ಪೆ ಬಂದರು, ಶ್ರೀ ಕೃಷ್ಣ ಮಠಗಳನ್ನು ಸಂದರ್ಶಿಸಿದರು. ರಾತ್ರಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟಿನವರು ಮಾನ್ಯ ಮಂತ್ರಿಗಳೇ ಮೊದಲಾದವರಿಗೆ ಭೋಜನವಿತ್ತು ಗೌರವಿಸಿದರು. ಮರುದಿವಸ ಬೆಳಿಗ್ಗೆ ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯ ಕಡೆಯಿಂದ ಚಹಾ ಸತ್ಕಾರವಾಯಿತು.

ನಗರ ಸಭೆಯ ಮಾನಪತ್ರ

ಪೂರ್ವಾಹ್ನ ಮುನಿಸಿಪಲ್ ಹೈಸ್ಕೂಲ್ ಶಾಲೆಯಲ್ಲಿ ಶಿಕ್ಷಣ ಮತ್ತು ಉಪಮಂತ್ರಿಗಳಿಬ್ಬರಿಗೆ ಮಾನಪತ್ರವನ್ನು ನಗರ ಸಭೆಯ ಕಡೆಯಿಂದ ವೈಸ್ ಚೇರ್‌ಮೆನ್ ಡಾ| ಪಿ. ವಿ. ವ್ಯಾಸರಾಯರು ಒಪ್ಪಿಸಿದರು. ಶ್ರೀ ದೇಸಾಯಿಯವರು ತಮಗಿತ್ತ ಗೌರವಕ್ಕೆ ಆಭಾರ ಸೂಚಿಸಿದರು. ಶ್ರೀಮತಿ ಇಂದುಮತಿಯವರು ಈ ನಗರ ಸಭೆಯಲ್ಲಿ ಹೆಂಗಸರು ಸದಸ್ಯರಿರುವುದು ಸಂತೋಷಕರವೆಂದು ಹೇಳಿದರು. ನಗರ ಕ್ಷೇತ್ರದಲ್ಲಿ ವಿದ್ಯಾವಯಸ್ಕ ಹೆಂಗಸರಿಗೆ ಶಿಕ್ಷಣವೀಯುವ ಕೇಂದ್ರಗಳನ್ನು ತೆರೆಯಬೇಕೆಂದು ಸೂಚಿಸಿದರು. ಕಮಿಶನರ್ ಶ್ರೀ ಕೆ. ಗೋಪಾಲ ಮೆನೋನರು ಧನ್ಯವಾದಗಳನ್ನರ್ಪಿಸಿದರು.

ಯುವಕ ಕಾಂಗ್ರೆಸ್ಸಿನಲ್ಲಿ

ನಂತರ ಮಂತ್ರಿಗಳು ಯುವಕ ಕಾಂಗ್ರೆಸ್ಸಿಗೆ ಭೇಟಿಯಿತ್ತರು. ಯುವಕ ಕಾಂಗ್ರೆಸಿನಲ್ಲಿ ಶ್ರೀ. ಟಿ. ಎ. ಪೈ, ಎಮ್. ಎಲ್. ಎ ಅವರು ಸ್ವಾಗತಿಸಿದರು. ಯುವಕ ಕಾಂಗ್ರೆಸಿಗರು ಸಮಾಜ ಸೇವೆಯಲ್ಲಿ ನಿರತರಾಗಿರಬೇಕೆಂದು ಉಪದೇಶಿಸುತ್ತ, ಮುಂಬಯಿ ಕ್ಷೇತ್ರದಲ್ಲಿನ ವಿದ್ಯಾ ಯೋಜನೆಯ ಕುರಿತು ಮಾತನಾಡುತ್ತಾ ರಾಷ್ಟ್ರದಲ್ಲಿ ಕಡ್ಡಾಯ ಶಿಕ್ಷಣದ ಕುರಿತು ಪ್ರಸ್ತಾಪಿಸಿ ಅದನ್ನು ಯಶಸ್ವಿಗೊಳಿಸಲು ಮುಂದಿನ ರಾಜ್ಯ ಸಭಾಧಿವೇಶನದಲ್ಲಿ ಒಂದು ಮಸೂದೆಯನ್ನು ತರಲಿರುವೆನೆಂದು ತಿಳಿಸಿದರು. ನಂತರ ಮಂತ್ರಿಗಳು ಮಣಿಪಾಲಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ಭೋಜನ ತೀರಿಸಿದರು.

ಮೆಡಿಕಲ್ ಕಾಲೇಜಿನಲ್ಲಿ

ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿ ಭವನದ ಉದ್ಘಾಟನೆಯನ್ನು ಮಾನ್ಯ ಮಂತ್ರಿ ದೇಸಾಯಿಯವರು ಅಪರಾಹ್ನ ನಡೆಸಿದರು. ಡಾ| ಎ. ವಿ. ಬಾಳಿಗರು ಕಾಲೇಜಿನ ಆಸ್ಪತ್ರೆಯ ಶಂಕು ಸ್ಥಾಪನಾ ಕಾರ್ಯವನ್ನು ನೆರವೇರಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಏಕೆಡಮಿ ಒಫ್ ಜನರಲ್ ಎಜ್ಯುಕೇಶನ ಅಧ್ಯಕ್ಷ ಶ್ರೀ. ಬಿ. ವೈಕುಂಠ ಬಾಳಿಗರು ವಹಿಸಿದ್ದರು. ಕಾಲೇಜು ಸ್ಥಾಪಿಸಲು ಕಾರಣೀಭೂತರಾದ ಡಾ| ಟಿ. ಮಾಧವ ಪೈಗಳವರು ಕಾಲೇಜಿನ ಪೂರ್ವೋತ್ತರ ವಿಚಾರಗಳನ್ನೊಳಗೊಂಡ ವರದಿಯನ್ನೋದಿದರು. ಮದ್ರಾಸು ಮತ್ತು ಮುಂಬಯಿ ಸರಕಾರಗಳು ಈ ಕಾಲೇಜಿಗೆ ತೋರಿಸಿದ ಸಹಾನುಭೂತಿ ಮತ್ತು ಸಹಕಾರಗಳು ವರದಿಯಲ್ಲಿ ಸೂಚಿಸಲಾಗಿತ್ತು. ಅಲ್ಲದೆ ವಿದ್ಯಾರ್ಥಿ ನಿಲಯ ಮತ್ತಿತರ ಕಾಲೇಜು ವೈಶಿಷ್ಟ್ಯಗಳು ಕೂಡಾ ಉಲ್ಲೇಖಿಸಲ್ಪಟ್ಟಿದ್ದವು.

ಮಂತ್ರಿಗಳು ತಮ್ಮ ಹಿತಮಿತ ಭಾಷಣದಲ್ಲಿ ಈ ಕಾಲೇಜಿನ ಕುರಿತು ತನಗಿದ್ದ ತುಸು ಸಂಶಯವು ಇಂದು ಮಾಯವಾಯಿತೆಂದರು. ಕಾಲೇಜು ಸಕಲ ಸಲಕರಣೆ, ವ್ಯವಸ್ಥೆಗಳಿಂದ ಸರ್ವಸಜ್ಜಿತವಾಗಿದೆ ಎಂದರು. ಡಾ| ಪೈಗಳು ತಮ್ಮ ಕಾರ್ಯವನ್ನು ಮುಂದೊತ್ತಿದಂತೆ ಹಣವು ತನ್ನಷ್ಟಕ್ಕೇನೇ ಬರುವುದು. ಇತರ ಕಾಲೇಜುಗಳಲ್ಲಿ ಪ್ರವೇಶ ಸಿಕ್ಕದಿದ್ದವರಿಗೆ ಈ ಕಾಲೇಜು ತುಂಬಾ ಸಹಕಾರಿಯಾಗಿರುವುದು. ಇಲ್ಲಿ ವಿದ್ಯಾರ್ಥಿಗಳು ಉಳಕೊಳ್ಳಲು ಯೋಗ್ಯ ವಿದ್ಯಾರ್ಥಿ ಭವನವಿದೆ. ಈ ವ್ಯವಸ್ಥೆಯಿಂದ ಅಧ್ಯಾಪಕ ಹಾಗೂ ವಿದ್ಯಾರ್ಥಿಗಳೊಳಗೆ ಹೆಚ್ಚಿನ ಬಾಂಧವ್ಯ ಬೆಳೆದು ಬರುವಂತಾಗಿ ವಿದ್ಯಾರ್ಥಿಗಳು ಯೋಗ್ಯ ಡಾಕ್ಟರರಾಗುವರು. ಡಾಕ್ಟರರಾಗಿ ಕೆಲಸ ಪ್ರಾರಂಭಿಸುವಾಗ ಮಾನವೀಯತೆ ಮತ್ತು ಸಹಾಯಕ ಮನೋವೃತ್ತಿಯುಳ್ಳವರಾಗಿರಲು ವಿದ್ಯಾರ್ಥಿಭವನದ ಜೀವನವು ಅತ್ಯಾವಶ್ಯಕವು. ಮುಂಬಯಿ ಸರಕಾರದ ಸಹಾಯಧನದ ಬಗ್ಗೆ ಅರ್ಜಿ ಬಂದಾಗ ಅದನ್ನು ಸಹಾನುಭೂತಿಯಿಂದ ಪರಿಶೀಲಿಸಲು ಯತ್ನಿಸುವೆನು. ಕೊನೆಯದಾಗಿ ಈ ಕಾಲೇಜಿನಿಂದ ಹೊರಬೀಳುವ ಡಾಕ್ಟರರು ರಾಷ್ಟ್ರಕ್ಕೂ ಕಾಲೇಜಿಗೂ ಯಶಸ್ಸು ತರುವಂತಾಗಲೆಂದು ಹಾರೈಸಿದರು.

ಡಾ| ಬಾಳಿಗರು ತಮ್ಮ ಓಜಸ್ವಿ ಭಾಷಣದಲ್ಲಿ ತನಗೂ ಈ ಸಂಸ್ಥೆಯ ಮೇಲಿನ ಕೆಲವೊಂದು ಸಂಶಯಗಳು ಇಂದು ದೂರಾದವು ಎಂದರು. ಒಂದು ರಾಷ್ಟ್ರದ ಪುನರುಜ್ಜೀವ ಯೋಜನೆಯಲ್ಲಿ ಶಿಕ್ಷಣ ಮತ್ತು ಆರೋಗ್ಯಕ್ಕೆ ಪ್ರಥಮ ಸ್ಥಾನ ದೊರಕಬೇಕಾಗಿದೆ. ಆ ದೃಷ್ಟಿಯಿಂದ ಏಕೆಡಮಿ ಒಫ್ ಜನರಲ್ ಎಡ್ಯುಕೇಶನ್ ತನ್ನ ಕರ್ತವ್ಯವನ್ನು ಧೈರ್ಯದಿಂದ ಮುಂದೆ ಸಾಗಿಸಿದೆ. ಈ ಖಾಸಗೀ ಸಾಹಸವು ಅಭಿನಂದನೀಯವು. ಹಣದ ಅಭಾವವು ಜಿಲ್ಲೆಯ ಧರ್ಮ ಸಂಸ್ಥೆಗಳ ಸಹಕಾರದಿಂದ ನೀಗಬಹುದು. ಕಾಲೇಜು ಫಂಡಿಗಾಗಿ ವಿದ್ಯಾರ್ಥಿಗಳ ಹೆತ್ತವರಿಂದ ರೂ. 8000 ಪಡೆಯುವ ಪದ್ಧತಿ ಬೇಗನೆ ಹೋಗುವಂತಾಗಲೆಂದು ಪ್ರಾರ್ಥಿಸುತ್ತೇನೆ. ಕೊನೆಯದಾಗಿ ಈ ಮಣಿಪಾಲದಲ್ಲಿ ಗ್ರಾಮ ವಿಶ್ವವಿದ್ಯಾಲಯ ಸ್ಥಾಪಿಸುವಂತಾಗಲೆಂದು ಆಶಿಸುತ್ತೇನೆಂದು ಹೇಳಿದರು.

ಶ್ರೀ ಸೋದೆ ಸ್ವಾಮಿಯವರ ಪರವಾಗಿ ಶ್ರೀ ಶ್ರೀಪತಿ ಆಚಾರ್ಯರು ರೂ. 20,000/- ಧನ ಸಹಾಯವನ್ನು ಜಾಹೀರು ಮಾಡಿದರು. ಸಭಾಧ್ಯಕ್ಷರು, ಶ್ರೀಮತಿ ಪ್ರೇಮಾ. ಎ. ಪೈಗಳವರ ರೂಪಾಯಿ 10,000/- ಸಹಾಯ ಧನವನ್ನು ಸಭೆಗೆ ತಿಳಿಸಿದರು.

ಎಮ್. ಜಿ. ಎಮ್. ಕಾಲೇಜಿನಲ್ಲಿ ಡಾ| ಬಾಳಿಗರ ಭಾಷಣ— ತಾ. 21ರಲ್ಲು ಪೂರ್ವಾಹ್ನ ಡಾ| ಎ. ವಿ. ಬಾಳಿಗರು ಮಹಾತ್ಮಾಗಾಂಧಿ ಸ್ಮಾರಕ ಕಲಾಶಾಲೆಯಲ್ಲಿಯ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುತ್ತಾ ಸಿನೆಮಾ ತಾರೆಯರನ್ನು ಪೂಜಿಸಬಾರದಾಗಿ ವಿನಂತಿಸಿದರು. ವಿದ್ಯಾರ್ಥಿಗಳು ಶಿಸ್ತು ಮತ್ತು ಕಾರ್ಯಾಸಕ್ತಿಯಿಂದ ರಾಷ್ಟ್ರಸೇವೆಯನ್ನು ಸಲ್ಲಿಸಲು ಮುಂದಾಗಬೇಕೆಂದು ಕೇಳಿಕೊಂಡರು. ಸಭಾಧ್ಯಕ್ಷತೆ ವಹಿಸಿದ್ದ ಶ್ರೀಮತಿ ಇಂದುಮತಿಯವರು ಈ ಕಾಲೇಜಿನಲ್ಲಿ ಹೆಣ್ಣು ಮಕ್ಕಳು ಹೆಚ್ಚು ಸಂಖ್ಯೆಯಲ್ಲಿರುವುದು ಸಂತೋಷಕರವೆಂದರು. ಮಹಿಳೆಯರು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡ ಬೇಕಾದುದು ಆವಶ್ಯಕವೆಂಬುದಕ್ಕೆ ಈ ಕಾಲೇಜಿನ ವಿದ್ಯಾರ್ಥಿನಿಯರೇ ಸಾಕ್ಷಿಯಾಗಿರುವರು ಎಂದು ಮುಂತಾಗಿ ಹೇಳಿದರು. ಸಭಾರಂಭದಲ್ಲಿ ಪ್ರಿನ್ಸಿಪಾಲ್ ಎಚ್. ಸುಂದರರಾಯರು ಸ್ವಾಗತ ಭಾಷಣ ಮಾಡಿದರು. ಕೊನೆಯಲ್ಲಿ ಶ್ರೀ. ತ್ಯಾಗ ರಾಜನರು ಧನ್ಯವಾದ ಸಲ್ಲಿಸಿದರು.

ಮಂಗಳೂರಲ್ಲಿ

ಮರುದಿವಸ ತಾ. 22ರಲ್ಲು ಬೆಳಿಗ್ಗೆ ಮಂಗಳೂರು ನಗರ ಸಭೆಯವರು ಶ್ರೀ ದೇಸಾಯಿ ಮತ್ತು ಶ್ರೀಮತಿ ಇಂದುಮತಿಯವರಿಗೆ ಮಾನಪತ್ರವಿತ್ತು ಗೌರವಿಸಿದರು. ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರು ಸ್ವಾಗತ ಮಾತುಗಳನ್ನಾಡಿದರು. ಮಂತ್ರಿಗಳು ಉತ್ತರಿಸುತ್ತಾ ರಾಷ್ಟ್ರದ ಐಕ್ಯತೆಗೆ ಹಿಂದೀ ಭಾಷೆಯು ಆವಶ್ಯಕವಿದೆಯಾದುದರಿಂದ ಹಿಂದೀ ಶಿಕ್ಷಣವನ್ನು ಪ್ರೋತ್ಸಾಹಿಸಬೇಕೆಂದರು. ಸ್ಥಳೀಯ ವೆನ್‌ಲಾಕ್ ಆಸ್ಪತ್ರೆ, ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ಶಾಖೆಗಳಿಗೂ ಮಂತ್ರಿಗಳು ಸಂದರ್ಶನವಿತ್ತರು. ಬಳಿಕ ಕಾಂಗ್ರೆಸ್ ಕೆಲಸಗಾರರೊಡನೆ ವಿಚಾರವಿನಿಮಯ ನಡೆಸಿದರು.

ಡಾ| ಎ. ವಿ. ಬಾಳಿಗರು ತಾ. 22ರಲ್ಲು ಬೆಳಿಗ್ಗೆ ಭಾರತ—ರಷ್ಯಾ ಸಾಂಸ್ಕೃತಿಕ ಸಂಘದ ದ. ಕ. ಜಿಲ್ಲಾ ಶಾಖೆಯನ್ನು ಉದ್ಘಾಟಿಸುತ್ತಾ ಸಂಘದ ಉದ್ದೇಶಗಳನ್ನು ವಿವರಿಸಿದರು. ಭಾರತದ ಸಂಸ್ಕೃತಿ ಮತ್ತು ಕಲೆಗಳನ್ನು ಪುನರುಜ್ಜೀವಿಸುವುದು, ಭಾರತ—ರಷ್ಯಾಗಳೊಳಗೆ ಆಗಾಗ ಸಾಂಸ್ಕೃತಿಕ, ವೈಜ್ಞಾನಿಕ ಶಿಷ್ಟ ಮಂಡಲಗಳನ್ನು ಬದಲಾಯಿಸಿ ಕೊಳ್ಳುವ ವ್ಯವಸ್ಥೆ ಮಾಡುವುದು ಇತ್ಯಾದಿ ಸಂಘದ ಉದ್ದೇಶಗಳಾಗಿರುವುವು ಎಂದು ಸೂಚಿಸಿದರು. ಡಾ| ಎಮ್. ಉಮೇಶರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ. ಶಶಿಧರರಾಯರು ಧನ್ಯವಾದಗಳನ್ನರ್ಪಿಸಿದರು.

ಸಂಜೆ ಡಾ| ಬಾಳಿಗರೂ ಮಂತ್ರಿಗಳೂ ವಿಮಾನ ಮೂಲಕ ಮುಂಬಯಿಗೆ ತೆರಳಿದರು.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು 3.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ	ರೂ. 11,11,000
ಜಮಾ ವಹಿವಾಟು	ರೂ. 63,00,000

ಕಾಯಂ ಠೇವಣಾತಿ-1 ತಿಂಗಳಿಂದ 24 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು
24 ತಿಂಗಳಿಗೆ=3½% ಬಡ್ಡಿ.
ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.
ವಿಜಯ ಕೇಶ್ ಸರ್ಟಿಫಿಕೇಟು— ಮೂರು ವರುಷದ ಅವಧಿ = 4¼% ಬಡ್ಡಿ.
ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.
ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ, ಬಿ. ಎ., ಬಿ. ಎಲ್., ವಕೀಲ್,
VIJAYA BANK LTD. ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

ಸಿನೆಮಾ ಪ್ರಪಂಚದ ಕಲೆಗಾರರೆಲ್ಲರೊಂದಾಗಿ ಜನತೆಗೊಂದು ರತ್ನ ಸಂಪುಟದ ಉಡುಗೊರೆ ಕೊಟ್ಟರು. ಇದು

ರಾಜ ರತ್ನ

ಜಯರಾಜ್, ಉಲ್ಲಾಸ್, ಸಪ್ರು, ನಿರೂಪರ್‍ಯಾ, ಸ್ಮೃತಿ, ಮೊದಲಾದವರು.

ತಾ. 27-8-54ರಿಂದ ನಿಮ್ಮ ನಿರೀಕ್ಷೆಯ ಎಡೆಯಿಲ್ಲದ ಅದ್ಭುತ ವಿನೋದ ಚಿತ್ರ
ಬೇದಿಂಗ್ ಬ್ಯೂಟಿ M. G. M's BATHING BEAUTY
(Technicolor)
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾ. 15ರ ಸ್ವಾತಂತ್ರ್ಯ ದಿನಾಚರಣೆಗಳು

ತಣ್ಣೀರುಪಂತ— ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಮೆರವಣಿಗೆಯಾಗಿ, ಶ್ರೀ ಕುಂಞಪ್ಪ ಬ್ಯಾರಿಯವರಿಂದ ಧ್ವಜಾರೋಹಣ, ಶ್ರೀ ತಿಮ್ಮಪ್ಪ ಸಾಹುಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಕೆ. ದರ್ಣಪ್ಪನವರ ಭಾಷಣವಾಯಿತು.

ಕೆದಿಂಜೆ— ಮನೋರಮ ಹೋಟಲಿನಲ್ಲಿ ಎಡ್ವಕೇಟ್ ಶ್ರೀ ಹರಿಶ್ಚಂದ್ರ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಡಾ| ಎನ್. ಎಚ್. ಜಗನ್ನಾಥ ಸೆಟ್ಟಿ, ಡಾ| ವಿ. ಆರ್. ಕೊರೆಟ್ಕರ್ ಮೊದಲಾದವರ ಕೂಡುವಿಕೆಯಿಂದ ಸಭೆ ಜರಗಿತು. ಸಹಕಾರ ಸಂಘದ ಅಧ್ಯಕ್ಷ ಶ್ರೀ ಕೆ. ಮಂಜಯ್ಯ ಹೆಗ್ಡೆಯವರನ್ನು ಈ ಮತದಾರ ಕ್ಷೇತ್ರದಿಂದ ಜಿಲ್ಲಾ ಬೋರ್ಡಿಗೆ ಕಾಂಗ್ರೆಸ್ ಉಮೇದ್ವಾರರಾಗಬೇಕೆಂದೂ ಕೇಳಿಕೊಳ್ಳಲಾಯಿತು.

ಕಿದಿಯೂರು— ಎಯಿಡೆಡ್ ಹಾ| ಎ| ಶಾಲೆಯಲ್ಲಿ ಶ್ರೀ ಶ್ರೀಶ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀ ಎ. ಎನ್. ವಿ. ಶಂತ್ರಿ, ರಘುನಾಥ ಸೆಟ್ಟಿ ಮೊದಲಾದವರ ಭಾಷಣಗಳಾಗಿ ಮಕ್ಕಳಿಗೆ ಸಿಹಿ ತಿಂಡಿ ಹಂಚಲಾಯಿತು.

ಮುಂಡ್ಕೂರು— ಸಂಕಲ ಕರಿಯ ಎಯಿಡೆಡ್ ಶಾಲೆಯಲ್ಲಿ ಧ್ವಜವಂದನೆ, ಶ್ರೀಗಳಾದ ಸೇಮು ಸೆಟ್ಟಿ, ಕೆ. ಭೋಜ ಸೆಟ್ಟಿ, ನರಸಿಂಹ ಕಾಮ್ತಿ ಮೊದಲಾದವರ ಭಾಷಣಗಳಾದುವು. ವಯಸ್ಕರ ಶಾಲಾ ನೇತೃತ್ವದಲ್ಲಿ ಮೊದಲರಾತ್ರಿ ಯಕ್ಷಗಾನ ಸಮಾರಂಭವಿತ್ತು.

ಕುಂದಾಪುರ— ಆಮಾಸೆಬೈಲು ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಟಿ. ಗೋಪಾಲ ಕೋಳ್ವಾರರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಎಚ್. ನಾರಾಯಣ ಸೆಟ್ಟಿ, ವೆಂಕಟ್ರಮಣ ಭಟ್, ಸರ್ವೋತ್ತಮ ರಾವ್ ಕೊಡ್ಗಿ ಮೊದಲಾದವರ ಭಾಷಣಗಳಾದುವು. ಗಾಯನವೂ ಇತ್ತು.

ಪಡುಬಿದ್ರೆ— ಶ್ರೀ ವೈ. ಶಾಂತಿ ರಾಜಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ಎಸ್. ಆರ್. ಬೈಲ್, ಕೆ. ಕರಿಯಣ ಸೆಟ್ಟಿ, ಪಿ. ಎಸ್. ಹೆಗ್ಡೆ, ಎಮ್. ಎಮ್. ಪ್ರಭು, ಟಿ. ಎಲ್. ರಾವ್, ಬಿ. ಎ. ಎಲ್. ಟಿ. ಮೊದಲಾದವರ ಭಾಷಣಗಳಾದುವು. ಯಕ್ಷಗಾನವೂ ಇತ್ತು.

ಬ್ರಹ್ಮಾವರ— ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಶ್ರೀ. ರಂಗಾ ಜೋಯಿಸರಿಂದ ಧ್ವಜಾರೋಹಣ, ಭಾಷಣ ಸ್ಪರ್ಧೆ, ಶ್ರೀ. ನಾನೋಜಿರಾಯರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ. ಬೈಕಾಡಿ ವೆಂಕಟಕೃಷ್ಣರಾಯರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು.

ಮಟ್ಟಿಕೊಪ್ಲ— ಹದಿನಾಲ್ಕು ಪಟ್ಟಣ ಮೊಗವೀರ ಸಭೆಯ ಆಶ್ರಯದಲ್ಲಿ ಶ್ರೀ. ಬಿ. ಮೋಹನಪ್ಪ ತಿಂಗಳಾಯರ ಅಧ್ಯಕ್ಷತೆಯಲ್ಲಿ ಸಭೆ ಶ್ರೀ. ನರ್ಸ ಸಾಹುಕಾರರಿಂದ ಧ್ವಜಾರೋಹಣ ಶ್ರೀಗಳಾದ ಡೊಂಬಪ್ಪ ಸಾಹುಕಾರ್, ಎಮ್. ಹರಿದಾಸ್ ರಾವ್, ಕೆ. ತನಿಯಪ್ಪ ಅಮೀನ್, ಪಿ. ಬಾಲಕೃಷ್ಣ ನಾಯಕ್, ಬಿ. ಎ. ಎಲ್. ಟಿ., ಪಿ. ಗೋಪಾಲಕೃಷ್ಣ ನಾಯಕ್, ಮೊದಲಾದವರ ಭಾಷಣಗಳಾದುವು.

ನಿಡ್ಡೋಡಿ— ಬಾಪೂಜಿ ಪ್ರಾಥಮಿಕ ಶಾಲೆಯಲ್ಲಿ ಶ್ರೀ. ಸೀತಾರಾಮ ಶರ್ಮರಿಂದ ಧ್ವಜ ವಂದನೆ, ಶ್ರೀ. ಎಸ್. ರಾಮಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣ, ಯಕ್ಷಗಾನಗಳಾದುವು.

ಬದಿಯಡ್ಕ— ಶ್ರೀ ಕಳ್ಳಿಗೆ ಮಹಾಬಲ ಭಂಡಾರಿಯವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ಶ್ರೀ ಎಮ್. ಉಮೇಶರಾಯರಿಂದ ಸಂಚಾರಿ ವಾಚನಾಲಯ ಉದ್ಘಾಟನೆ ಶ್ರೀಗಳಾದ ಎಚ್. ಎಂ. ನಾರಾಯಣ ಭಟ್, ಖಂಡಿಗೆ ಶ್ಯಾಮ ಭಟ್ಟ, ಡಾ| ಪಿ. ಎಸ್. ಶಾಸ್ತ್ರಿಗಳ ಭಾಷಣಗಳಾದುವು.

ಬೆಳ್ವಾರೆ— ಹೈಸ್ಕೂಲಿನಲ್ಲಿ ಶ್ರೀ ಬಿ. ಶಿಟ್ಟಣ್ಣ ರೈಗಳು ಧ್ವಜಾರೋಹಣ ಮಾಡಿದರು. ಶ್ರೀ ಕೆ. ನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ವಿದ್ಯಾರ್ಥಿಗಳ ವಿನೋದಾವಳಿಗಳಾದುವು.

ಕಳಂಜ ಬಾಳಿಲ— ಯುವಕ ಸಂಘದ ವತಿಯಲ್ಲಿ ಶ್ರೀ ಕೋಟಿ ಸುಬ್ರಾಯ ಭಟ್ಟರಿಂದ ಧ್ವಜಾರೋಹಣ, ಶ್ರೀ ಕೆಪ್ಲ ಸುಬ್ರಾಯ ಭಟ್ಟರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಶ್ರೀಗಳಾದ ವಿ. ಕೃಷ್ಣಯ್ಯ, ಎಸ್. ಗೋವಿಂದಯ್ಯ, ಕೆ. ಗಣೇಶ ಸುಬ್ಬಪ್ಪಯ್ಯ, ಕೆ. ವಸಂತ ಕುಮಾರ ಮೊದಲಾದವರ ಭಾಷಣಗಳಾದುವು.

ಕುದಿಗ್ರಾಮ— ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ ಕೆ. ದೇವಪ್ಪ ನಾಯ್ಕರ ಅಧ್ಯಕ್ಷತೆಯಲ್ಲಿ ಶ್ರೀ ಕೆ. ಎಚ್. ಕಾಮತರಾಯ ಮೊದಲಾದವರ ಭಾಷಣಗಳಾದುವು.

ಹುಣ್ಸೆಮಕ್ಕಿ— ಶಾಲೆಯಲ್ಲಿ ಶ್ರೀ ಮುತ್ತಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಭಾಷಣಗಳಾದುವು.

ನಿಡ್ಡೋಡಿ— ಶ್ರೀ ಸತ್ಯನಾರಾಯಣ ಹಾ| ಎ| ಶಾಲೆಯಲ್ಲಿ ಡಾ| ಬಾಲಕೃಷ್ಣ ರೈಗಳು ಧ್ವಜಾರೋಹಣ ನಡೆಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಶಿವರಾಮ ಹೆಗ್ಡೆಯವರು ವಹಿಸಿದ್ದರು.

ಕಡಬ— ಶ್ರೀ ಪಿ. ಶೇಷಪ್ಪ ಆರಿಗರವರ ಅಧ್ಯಕ್ಷತೆಯಲ್ಲಿ ಸ್ಥಳೀಯ ಯುವಕ ಸಂಘದ ಹೊಸ ಪುಸ್ತಕ ಭಂಡಾರ ಉದ್ಘಾಟನವಾಯಿತು ಯಕ್ಷಗಾನ ಮೊದಲಾದ ಕಾರ್ಯಕ್ರಮಗಳಿದ್ದುವು.

ಮುದರಂಗಡಿ— ಮಾರ್ಕೆಟ್ ಬಳಿಯ ಮೈದಾನಿನಲ್ಲಿ ಡಾ| ಆನಂದ ರಾಯರು ಧ್ವಜವಂದನೆ ಕಾರ್ಯವನ್ನು ನೆರವೇರಿಸಿದರು. ಶ್ರೀ ಬಿ. ಜಿ. ಸೆಟ್ಟರು ಕಾಲೋಚಿತ ಮಾತುಗಳನ್ನಾಡಿದರು.

ಪೊಳಲಿ— ಶ್ರೀಮತಿ ವಿಶಾಲಾಕ್ಷಿ ಅಮ್ಮನವರ ಅಧ್ಯಕ್ಷತೆಯಲ್ಲಿ ರಾತ್ರಿ ಶಾಲೆ ಉದ್ಘಾಟಿಸಲ್ಪಟ್ಟಿತು. ಪುರಾಣ ಪ್ರವಚನ, ಯಕ್ಷಗಾನ ಇತ್ಯಾದಿ ಕಾರ್ಯಕ್ರಮಗಳಾದುವು.

ನಡೂರು— ಶ್ರೀ ಮಹಾಲಿಂಗೇಶ್ವರ ಶಾಲೆಯಲ್ಲಿ ಧ್ವಜವಂದನೆಯಾಗಿ ಶ್ರೀ ಎನ್. ತೇಜಪ್ಪ ಸೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು.

ಮೂಲ್ಕಿ— ಬೆಳಿಗ್ಗೆ ಪ್ರಚಂಡ ಮೆರವಣಿಗೆಯಾಗಿ ಗಾಂಧಿ ಮೈದಾನಿನಲ್ಲಿ ಸಭೆ ಸೇರಿ ಡಾ| ರಾಯಪ್ಪ ಕಾಮತರಿಂದ ಧ್ವಜಾರೋಹಣವಾಯಿತು. ಸಂಜೆ ಶ್ರೀ ಎನ್. ಎನ್. ಸುವರ್ಣರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀ ಕೆ. ಸದಾನಂದ ಹೆಗ್ಡೆ, ಯಂ. ಪಿ. ಅವರು ಮೂಲ್ಕಿ ಕಮ್ಯೂನಿಟಿ ಹೋಲಿನ ಶಂಕು ಸ್ಥಾಪನೆ ಮಾಡಿದರು. ಡಾ| ಎಸ್. ಚಂಪ, ಶ್ಯಾಮರಾಯ ಶೆಟ್ಟಿ, ಕೆ. ಶಂಶುದ್ದೀನ್, ಎಚ್. ನರಸಿಂಹ ಮೊದಲಾದವರ ಭಾಷಣಗಳಾದುವು.

ಹಿರಿಬೆಟ್ಟು— ಪಟ್ಲ ಯುಲ್. ಟಿ. ಹಾ| ಎ| ಶಾಲೆ ಮತ್ತು ಯಸ್. ಬಿ. ಎ. ಶಾಲೆಗಳು ಶ್ರೀ ಯಂ ಸದಾನಂದ ಶೆಟ್ಟರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯ ದಿನವನ್ನು ಆಚರಿಸಿದವು.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂತಸದ ಸುದ್ದಿ

ಈ ವರೆಗೆ ಹೈಸ್ಕೂಲು ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿದ್ದ ಕನ್ನಡ ವ್ಯಾಕರಣ ಪುಸ್ತಕದ ಕೊರತೆಯೊಂದು ನೀಗಲ್ಪಟ್ಟಿತು.

ಸರಕಾರದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕಾಂತಶೆಟ್ಟಿ, ವಿದ್ವಾನ್ ಇವರು ಬರೆದಿರುವ

ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ

ಎಂಬ

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಸಲುವಾಗಿ ಬರೆದ ವ್ಯಾಕರಣ ಪುಸ್ತಕವು ಪ್ರಕಟವಾಗಿರುವುದು.

ಪುಟಗಳು ೨೫೦ ಬೆಲೆ: ೧—೧೨—೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಜಯ ಮುದ್ರಣಾಲಯ, ಮೂಡುಬಿದಿರೆ, (ದ. ಕ.)

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯವೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೇಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಕುಕ್ಕಾಜೆ— ಕುಂಜಾರು ಗಿರಿಜಾ ಹಾ| ಎ| ಶಾಲೆಯಲ್ಲಿ ಶ್ರೀ. ಯಂ. ಬಾಬು ಶೆಟ್ಟರ ಧ್ವಜಾರೋಹಣವಾಗಿ ಬ್ಯಾಂಡುವಾಲಗದ ಮೆರವಣಿಗೆಯಾಗಿ ಶ್ರೀ. ಬೆಳ್ಳೆ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿಯೂ ಕುಕ್ಕಾಜೆ ಶಾಲೆಯಲ್ಲಿ ಶ್ರೀ. ಎಂ. ಚಂದು ಶೆಟ್ರಿಂದ ಧ್ವಜಾರೋಹಣವಾಗಿ ಶ್ರೀ. ಎಂ. ದೇಜಪ್ಪ ಶೆಟ್ರ ಅಧ್ಯಕ್ಷತೆಯಲ್ಲಿಯೂ ಸ್ವತಂತ್ರ ದಿನಾಚರಣೆ ಜರಗಿ ಹಲವರ ಭಾಷಣಗಳಾಗಿ ಸಿಹಿತಿಂಡಿ ಹಂಚಲ್ಪಟ್ಟಿತು.

ಮಣಿಪಾಲ— ಹೈಸ್ಕೂಲಿನಲ್ಲಿ ಶ್ರೀ ಯು. ಎ. ಪೈಗಳು ಧ್ವಜವನ್ನರಳಿಸಿದರು. ಶ್ರೀ ಯು. ಪುಂಡಲೀಕ ಶೆಣೈಯವರು ಭಾಷಣ ಮಾಡಿದರು. ಕಸ್ತೂರಿಬಾ ಮೆಡಿಕಲ್ ಕಾಲೇಜಿನಲ್ಲಿ ಡಾ| ಟಿ. ಎಂ. ಎ. ಪೈಗಳು ಧ್ವಜಾರೋಹಣ ಮಾಡಿ ವಿದ್ಯಾರ್ಥಿಗಳ ಕರ್ತವ್ಯವನ್ನು ವಿವರಿಸಿದರು. ಡಾ| ಮುಂಡಾಸರ ಭಾಷಣ, ವಿದ್ಯಾರ್ಥಿಗಳ ಮಾರ್ಚ್ ಫಾಸ್ಟ್ ನಡೆಯಿತು. ಬಡಬಗ್ಗರಿಗೂ ಉಡುಪಿ ಸರಕಾರಿ ಮತ್ತು ಬಾಸೆಲ್‌ಮಿಶನ್ ಆಸ್ಪತ್ರೆಗಳ ಒಳರೋಗಿಗಳಿಗೂ ವಿದ್ಯಾರ್ಥಿಗಳಿಂದ ಊಟದ ವ್ಯವಸ್ಥೆಯಿತ್ತು.

ಮಲ್ಪೆ— ಫಿಶ್ಚರೀಸ್ ಹೈಸ್ಕೂಲಿನಲ್ಲಿ ಸ್ವಾತಂತ್ರ್ಯದಿನವು ಶ್ರೀಮತಿ ಸಾರಾಲಿಮಿನ್, ಕು| ಬಿ. ದೇಸ, ಶ್ರೀ ಬಾಲಕೃಷ್ಣರಾವ್ ಮೊದಲಾದವರ ಭಾಷಣಗಳಿಂದಲೂ ನಾಟಕಾಭಿನಯದಿಂದಲೂ ಆಚರಿಸಲಾಯಿತು.

ಕಾರ್ಕಳ— ತಾ. 19ರಲ್ಲಿ ಬೋರ್ಡು ಹೈಸ್ಕೂಲಿನಲ್ಲಿ ಎಂ. ಜಿ. ಎಂ. ಕಾಲೇಜಿನ ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಪ್ರಜಾಸತ್ತೆಯಲ್ಲಿ ವಿದ್ಯಾರ್ಥಿಗಳ ಜವಾಬ್ದಾರಿಕೆಯ ಕುರಿತು ಭಾಷಣ ಮಾಡಿದರು. ಎಚ್. ಕೆ. ರಾಮಚಂದ್ರ ಮೂರ್ತಿಯವರು ಕೆಲವು ಕವಿತೆಗಳನ್ನೋದಿದರು. ಶ್ರೀ ಟಿ. ಎನ್. ಆಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಹೆ| ಮಾ. ಮೋಹನ ಪೈಗಳು ಸ್ವಾಗತಿಸಿದರು. ಶ್ರೀ ಬಿ. ಶ್ಯಾಮರಾಯ ಶೆಟ್ಟರು ಅತಿಥಿಗಳ ಪರಿಚಯ ಮಾಡಿದರು. ಕಾರ್ಕಳ ಎಸೆಂಬ್ಲಿ ಮತ್ತು ಪಾರ್ಲಿಮೆಂಟ್ ಮತದಾರ ಕ್ಷೇತ್ರದ 1954ರ ಪರಿಷ್ಕೃತ ವೋಟರರ ಪಟ್ಟಿಯು ತಾ. 11—8—54ರಲ್ಲಿ ಪ್ರಕಟಿಸಲ್ಪಟ್ಟಿದೆ. ಆಕ್ಷೇಪಗಳೇನಾದರೂ ಇದ್ದರೆ ತಾ. 1—9—54ರ ಮೊದಲು ತಿಳಿಸಬೇಕಾಗಿದೆ.

ಸಾಲಿಗ್ರಾಮ— ಶ್ರೀ ವಾಣೀವಿಲಾಸಿನೀ ಸಂಸ್ಕೃತ ಪಾಠಶಾಲೆಯ ನೂತನ ಕಟ್ಟಡದ ಪ್ರವೇಶ ಸಮಾರಂಭವು ತಾ. 18ರಲ್ಲಿ ಶ್ರೀ ಕಕ್ಕುಂಜೆ ಚಂದ್ರಶೇಖರ ಅಡಿಗರ ನೇತೃತ್ವದಲ್ಲಿ ಶ್ರೀ ವೆಂಕಟಕೃಷ್ಣ ಸೋಮಯಾಜಿಗಳಿಂದ ನೆರವೇರಿಸಲ್ಪಟ್ಟಿತು. ಸಂಜೆ ಶ್ರೀ ಬೈಲೂರು ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಶಾಲಾ ಕಮಿಟಿಯ ಮಹಾ ಸಭೆಯು ಮರುದಿನ ಶ್ರೀ ಎ. ವಿ. ಎಸ್. ಹೆಬ್ಬಾರರ ಅಧ್ಯಕ್ಷತೆಯಲ್ಲಿ ಪ್ರಾಕ್ತನ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವೂ ವಿವಿಧ ಕಾರ್ಯಕ್ರಮಗಳಿಂದ ಜಯಶೀಲವಾಗಿ ನೆರವೇರಿತು.

ಮೂಡುಬಿದ್ರೆ— ಶ್ರೀ ಕೆ. ಸದಾನಂದ ಹೆಗ್ಡೆ ಎಂ. ಪಿ. ಅವರು ತಾ. 15ರಂದು ಸ್ಥಳೀಯ ಸಮಾಜ ಮಂದಿರದ ಶಂಕು ಸ್ಥಾಪನೆ ಮಾಡಿದರು. ಡಾ| ಯು. ಪಿ. ಮಲ್ಯರು ಸಭಾಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಕೆ. ಸಿ. ಮುಕುಂದ ಪ್ರಭು, ಎಚ್. ನರಸಿಂಹ, ಬಿ. ಆರ್. ಕರ್ಕೇರ, ಎಸ್. ಧರ್ಮಸಾಮ್ರಾಜ್ಯ ಮೊದಲಾದವರು ಭಾಷಣವಿತ್ತರು.

ಕಟಪಾಡಿ— ತಾ. 17ರಂದು ಎಸ್. ವಿ. ಎಸ್. ಹೈಸ್ಕೂಲಿನಲ್ಲಿ ಶ್ರೀ ಪಿ. ರಾಮದಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಅಮೇರಿಕಕ್ಕೆ ತೆರಳಲಿರುವ ಶ್ರೀ ಕೆ. ವಿಟ್ಠಲ ಶೆಣೈಯವರಿಗೆ ಗೌರವ ಸತ್ಕಾರ ಕೂಟವೊಂದು ಜರಗಿ ಶ್ರೀಗಳಾದ ಮಾರ್ಸೆಲ್ ಅಲ್ವ, ಕೆ. ಆರ್. ಅನಂತ ಪುರಾಣಿಕ, ವೈ. ಶಂಕರ ಹೆಗ್ಡೆ ಮೊದಲಾದವರು ಶೆಣೈಯವರ ಗುಣ ಕಥನ ಮಾಡಿದರು.

ಸಾಂಗಾಳ ಪಣಗುತ್ತೆ ಮಂಜಾಪುತ ಕೋರ್ಟಿನ ಮಾಜಿ ಮೆಂಬರರೂ ಗ್ರಾಮ ದೇವಸ್ಥಾನದ ಏಳಿಗೆಗಾಗಿ ಶ್ರಮ ಪಟ್ಟವರೂ ಆದ ಶ್ರೀ ಸಾಂಗಾಳ ಸುಬ್ಬರಾಯರು ತಮ್ಮ ೮೩ನೇ ವಯಸ್ಸಿನಲ್ಲಿ ಮೃತರಾದುದು ವಿಷಾದಕರವಿದೆ. ಮೃತರು ಉದಾರಿಗಳೂ ಜನಪ್ರಿಯರೂ ಆಗಿದ್ದರು.

ಸ್ವೀಕಾರ—ವಿಮರ್ಶೆ

ಪಾಶ್ಚಿಮಾತ್ಯ ಮಹಾಪುರುಷರು—

ಬರೆದವರು: ಗೌರೀಶ ಕಾಯ್ಕಿಣಿ. ಪ್ರಕಾಶಕರು: ಮಿಂಚಿನಬಳ್ಳಿ, ಧಾರವಾಡ. ಬೆಲೆ: ರೂ. ೫—೦—೦.

ಜನತೆಯ ಜ್ಞಾನವನ್ನು ವರ್ಧಿಸಿ, ವಿಚಾರ ಶಕ್ತಿಯನ್ನು ಕೆರಳಿಸುವ ಪುಸ್ತಕಗಳನ್ನು ಒದಗಿಸುತ್ತಾ ಬಂದ ಮಿಂಚಿನ ಬಳ್ಳಿಯವರು "ಪಶ್ಚಿಮದ ಪ್ರತಿಭೆ" ಎಂಬುದಾಗಿ ಮೂರು ಭಾಗಗಳಲ್ಲಿ ಪ್ರಕಟಿಸಿದ ಗ್ರಂಥವು ಈಗ ಮೇಲಿನ ಹೆಸರಿನಲ್ಲಿ ಇಡಿಯಾಗಿ ದೊರಕುತ್ತದೆ. ಪಾಶ್ಚಾತ್ಯ ಸಂಸ್ಕೃತಿಯನ್ನು ಕಳೆದ ಎರಡು ಸಾವಿರ ವರ್ಷಗಳಿಗಿಂತಲೂ ಹೆಚ್ಚು ಕಾಲ ತಮ್ಮ ನಾನಾ ಮುಖವಾದ ಪ್ರತಿಭೆಯಿಂದ ಪೋಷಿಸಿ, ಬೆಳಗಿದ ೨೪ ಮಹಾಪುರುಷರ ಸಂಕ್ಷಿಪ್ತ ಜೀವನ ಚಿತ್ರವನ್ನು ಕಾಯ್ಕಿಣಿಯವರು ತಮ್ಮ ಉತ್ತುಂಗವೂ ಉತ್ಕೃಷ್ಟವೂ ಓಜಸ್ವಿಯೂ ಆದ ಶೈಲಿಯಲ್ಲಿ ಮನಮುಟ್ಟುವಂತೆ ಪರಿಣಾಮಕಾರಿಯಾಗಿ ಕೊಟ್ಟಿದ್ದಾರೆ. ತಮ್ಮ ವ್ಯಕ್ತಿತ್ವದ ಮುದ್ರೆಯಿಂದ ಸಂಸ್ಕೃತಿಯ ಮೇಲೆ ಅವ್ಯಾಹತವಾದ ನಿರಂತರವಾದ ಅಧಿಕಾರ ನಡೆಸುತ್ತಾ ಬಂದ ವಿಭೂತಿಗಳ ಜೀವನವು ರಾಷ್ಟ್ರದ ಪುನಾರಚನೆಯಲ್ಲಿ ಪ್ರವೃತ್ತರಾಗಿರುವ ಭಾರತೀಯರಿಗೆ ಸ್ಫೂರ್ತಿಯನ್ನೂ ಆತ್ಮವಿಶ್ವಾಸವನ್ನೂ ಉಂಟು ಮಾಡಬಲ್ಲದು; ನಮ್ಮ ಪೂರ್ವಜರ ಉಜ್ವಲ ಜೀವನದ ನೆನಪನ್ನು ತಂದು ಕೊಟ್ಟು ಅವರು ನಿರ್ದೇಶಿಸಿದ ಮಾರ್ಗದಲ್ಲಿ ನಾವು ನಡೆಯುವಂತೆ ಪ್ರೇರಿಸಬಲ್ಲುದು. ತತ್ವಜ್ಞಾನದಿಂದ ರಾಜಕೀಯ, ಸಾಹಿತ್ಯ, ಶಿಲ್ಪ, ಕಲೆ, ವಿಜ್ಞಾನ ಮುಂತಾದ ನಾನಾ ವಿಭಾಗಗಳಲ್ಲಿ ದುಡಿದ ಮಹನೀಯರ ಜೀವನವನ್ನು ಈ ಪುಸ್ತಕದಲ್ಲಿ ಓದಿದಂತೆ ಮಾನವನ ಪ್ರಗತಿಗೆ ಪೋಷಕವಾದ ಸಂದೇಶವು ಕಿವಿಯಲ್ಲಿ ನಿನದಿಸ ಹತ್ತುವುದು. ಜೀವನದಲ್ಲಿ ವಿರೋಧಾಭಾಸವುಂಟು; ದ್ವಂದ್ವವುಂಟು; ಸಾಹಸವುಂಟು; ನಾವೀನ್ಯವುಂಟು; ಕೆಚ್ಚು ಇದ್ದಂತೆ ಸೌಂದರ್ಯಾಪೇಕ್ಷೆಯೂ ಉಂಟು ಎಂದು ಇಲ್ಲಿ ಮನವರಿಕೆಯಾಗುತ್ತದೆ. ಈ ಬಗೆಯ ಪ್ರಗಲ್ಭ ಗ್ರಂಥವನ್ನು ಕನ್ನಡಿಗರಿಗೆ ಒದಗಿಸಿ ಕೊಟ್ಟ ಮಿಂಚಿನಬಳ್ಳಿಯವರಿಗೆ ನಾವು ಕೃತಜ್ಞತೆ ವ್ಯಕ್ತಪಡಿಸುವುದಲ್ಲದೆ ಪಶ್ಚಿಮಾರ್ಧ ಗೋಲದ ತೇಜಃಪುಂಜಗಳ ಪರಿಚಯ ಮಾಡಿಕೊಡುವ ಈ ಚರಿತ್ರ ಪುಷ್ಪಗಳ ಸೌರಭ ನಾಡಿನ ನಾಲ್ದೆಸೆಯಲ್ಲೂ ಪರಿಮಳಿಸಲೆಂದು ಹಾರೈಸುತ್ತೇವೆ.

ಕಾಂತೆಯರ ಕನಸು—

ಬರೆದವರು: ಜನಾರ್ಧನ ಗುರ್ಕಾರ್. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೮—೦.

ತಮ್ಮ ಹಿಂದಿನೆರಡು ಕಾದಂಬರಿಗಳಿಂದ ಕನ್ನಡ ಸಾಹಿತ್ಯಾಭ್ಯಾಸಿಗಳಿಗೆ ಪರಿಚಿತರಾಗಿರುವ ಶ್ರೀ ಜನಾರ್ಧನ ಗುರ್ಕಾರರು ತುಸು ಅಪೂರ್ವವೆಂದು ಭಾಸವಾದರೂ ಉತ್ತಮವಾದ ಕಥಾವಸ್ತುವೊಂದನ್ನು ಈ ಕಾದಂಬರಿಗೆ ಆರಿಸಿಕೊಂಡಿದ್ದಾರೆ. "ಮೂರು ಮನೆ ಹೊನ್ನಪ್ಪಯ್ಯನವರಿಗೆ ಒಬ್ಬ ಅಳಿಯ, ಎಡಹಿತ್ತಲು ಅಣ್ಣಪ್ಪಯ್ಯನವರಿಗೂ ಒಬ್ಬ ಅಂಥವನೇ ಅಳಿಯ"ನೆಂಬ ಅವರ ಆಕರ್ಷಕ ಪ್ರಥಮ ವಾಕ್ಯವು ಕಾರಂತರ "ಚೋಮನ ದುಡಿ"ಯ ಪ್ರಾರಂಭವನ್ನು ನೆನಪಿಗೆ ತಂದು ಕೊಡುತ್ತದೆ. ಮೇಲಿನೀರ್ವರು ಸಹೋದರರ ಮಗಳಂದಿರಾದ ಸುಮತಿ ಮತ್ತು ಸಂಜೀವಿ—ಇವರ ಬಾಳಿನ ಗೋಳು ಕತೆಯುದ್ದಕ್ಕೂ ಹೊನಲಾಗಿ ಹರಿಯುತ್ತದೆ. ಸುಮತಿಯು ಗಂಡ ಹಣ ಸಂಪಾದನೆಗಾಗಿ ಹೆಂಡತಿಯನ್ನು ಬಿಟ್ಟು ಓಡಿದರೆ, ಸಂಜೀವಿಯ ಗಂಡನಿಗೆ ಸನ್ಯಾಸಿಯಾಗುವ ಹುಚ್ಚು. ಇವರಿಬ್ಬರ ಪ್ರತೀಕ್ಷೆಯಲ್ಲಿ ಕಾಲಕಳೆಯುತಿದ್ದ ಈ ಕಾಂತೆಯರು ಬಂಧುಗಳ ಪ್ರಯತ್ನದಿಂದ ಪತಿಸಮಾಗಮ ಲಾಭವನ್ನು ಹೊಂದಿದರೂ ಅದು ಸುಖ ಕೊಡುವುದಿಲ್ಲ. ಗುಹ್ಯರೋಗದಿಂದ ಬಳಲಿ ಆತ್ಮಹತ್ಯೆ ಮಾಡಿಕೊಂಡ ಪತಿರಾಯನ ದೆಸೆಯಿಂದ ಸುಮತಿ ಆಸ್ಪತ್ರೆ ಸೇರಬೇಕಾಗಿ ಬಂದರೆ, ಪುತ್ರ ಸಂತಾನದ ಸಂತೋಷದಿಂದಿದ್ದ ಗಳಿಗೆಯಲ್ಲೆ ಮರಳಿ ಪತಿವಿಯೋಗದ ದುಃಖಕ್ಕೆ ಸಂಜೀವಿ ಗುರಿಯಾಗುತ್ತಾಳೆ. ಹೀಗೆ ಸಾಗುವ ಕತೆಯಲ್ಲಿ ನಮ್ಮ ಹಳ್ಳಿಯ ಚಿತ್ರಣವು ರಮ್ಯವಾದ ಹಿನ್ನೆಲೆಯನ್ನು ಒದಗಿಸುತ್ತದೆ. ಪೋಷಕ ಪಾತ್ರಗಳಲ್ಲಿ ಶಾಂತಪ್ಪನನ್ನು ಹಳ್ಳಿಯ ಪ್ರತಿನಿಧಿ ಎಂದು ನಿಶ್ಚಯವಾಗಿಯೂ ಹೇಳಬಹುದು. ಆದರೆ ಶಂಕರನೆಂಬ ಸುಮತಿಯ ಸ್ನೇಹಪಾತ್ರನ ಜೀವನವು ಹೊಸ ಆದರ್ಶವನ್ನು ಕಣ್ಣೆದುರು ಇಡುತಿದ್ದರೂ ವಾಸ್ತವಿಕತೆಯ ದೃಷ್ಟಿಯಿಂದ ದೋಷ ಗ್ರಸ್ತವಾಗಿದೆ. ಇದರಂತೆ ಅಲ್ಲಲ್ಲಿ ಬರುವ ಎರಡು—ಮೂರು "ಪ್ರಣಯ ಪ್ರಸಂಗ"ಗಳು ಕಥಾವಸ್ತುವಿಗೇನೂ ಪೋಷಣೆಯೊದಗಿಸದೆ, ಕತೆಯ ಓಟಕ್ಕೆಯೇ ಆತಂಕ ಮಾಡುತ್ತವೆ. ತುಸು ಅವಾಸ್ತವವೆಂದು ಕಂಡು ಬರುವ ಇನ್ನೊಂದು ಅಂಶವೆಂದರೆ, ಸುಮತಿಯ ಮನೋಭಾವನೆಯಲ್ಲಾದ ಪರಿವರ್ತನೆ. ಈ ಬದಲಾವಣೆಗೆ ಅಗತ್ಯವಾದ, ಸಾಕಷ್ಟು ಬಲವಾದ, ಆತ್ಮ ಸಂಸ್ಕಾರ ಅವಳಲ್ಲಿತ್ತೆಂದು ಊಹಿಸುವುದು ಕಷ್ಟ. ಇದೇನಿದ್ದರೂ ಗುರ್ಕಾರರು ಕಾದಂಬರಿ ಬರೆಯುವ ಕಲೆಯನ್ನು ಚೆನ್ನಾಗಿಯೇ ಕರಗತ ಮಾಡಿಕೊಂಡಿರುವರೆಂದು ಹೇಳುವುದಕ್ಕೆ ಅಡ್ಡಿ ಇಲ್ಲ. ಹಳ್ಳಿಯ ವಾಸ್ತವ ಚಿತ್ರವನ್ನು ಅವರು ಇನ್ನಷ್ಟು ಯಶಸ್ವಿಯಾಗಿ ಮುಂದಿನ ಕಾದಂಬರಿಗಳಲ್ಲಿ ಕೊಡಲೆಂದು ಹಾರೈಸುತ್ತೇವೆ.

ಗೀತಾದರ್ಶ—

ಬರೆದವರು ಹಾಗು ಪ್ರಕಾಶಕರು: ಉಡುಪಿಯ ಶ್ರೀ ಶೀರೂರು ಮಠಾಧೀಶರಾದ ಶ್ರೀ ಮಲ್ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು. (ಪ್ರತಿಗಳು ಸಿಗುವ ಸ್ಥಳ: ಅಗ್ರಹಾರ ನಾರಾಯಣ ತಂತ್ರಿ, ಪಂಡಿತ, ಸಂಸ್ಕೃತ ಕಾಲೇಜು, ಉಡುಪಿ). ಬೆಲೆ: ಧರ್ಮಾರ್ಥ.

ಮಹರ್ಷಿ ವೇದವ್ಯಾಸರು "ಪಂಚಮ ವೇದ"ವೆಂದು ಕರೆಯಲ್ಪಡುವ ಮಹಾಭಾರತವನ್ನು ಬರೆಯದೆ, ಶ್ರೀಮದ್ಭಗವದ್ಗೀತೆಯನ್ನು ಮಾತ್ರ ಲೋಕಕ್ಕೆ ಅನುಗ್ರಹಿಸಿದ್ದರೂ ಸಾಕು—ಅವರು ಲೋಕ ವಂದ್ಯರಾಗುತಿದ್ದರು. ಏಕೆಂದರೆ ಜಗತ್ಕಲ್ಯಾಣಕ್ಕೆ ನೆರವಾದ ಗ್ರಂಥ ಸಮುದಾಯಗಳಲ್ಲಿ, ಪ್ರಸ್ಥಾನ ತ್ರಯಗಳಲ್ಲಿ ಒಂದೆನಿಸಿದ ಗೀತೆಯಷ್ಟು ಲೋಕಪ್ರಿಯವಾದದ್ದು ಬೇರೊಂದಿಲ್ಲ. ಮನುಷ್ಯ ಜೀವನದ ಸಾರ್ಥಕ್ಯಕ್ಕೆ ಗೀತೆಯು ಮಾರ್ಗದರ್ಶನ ಮಾಡುತ್ತಿರುವುದರಿಂದ ಎಲ್ಲರಿಗೂ ಗೀತೆಯ ತಿರುಳನ್ನು ತಿಳಿದುಕೊಳ್ಳಬೇಕೆಂಬ, ಅದರಲ್ಲಿ ಪ್ರತಿಪಾದಿಸಿದ ಆದರ್ಶದ ಕಲ್ಪನೆ ಮಾಡಿಕೊಳ್ಳಬೇಕೆಂಬ, ಕುತೂಹಲವು ಸಹಜವಾಗಿಯೇ ಉಂಟಾಗುತ್ತದೆ. ಆಚಾರ್ಯತ್ರಯರೂ ಇತರ ಪ್ರಾಜ್ಞರೂ ಗೀತೆಯ ಉಪದೇಶವನ್ನು ತಿಳಿಯಪಡಿಸುವ ಭಾಷ್ಯಗಳನ್ನೂ ಗ್ರಂಥಗಳನ್ನೂ ಬರೆದು ಜನಸಾಮಾನ್ಯರಿಗೆ ಜಟಿಲವಾದ ತತ್ವಗಳ ಬೋಧೆಯಾಗುವಂತೆ ಮಾಡಿದ್ದಾರೆ. ಶ್ರೀ ಶೀರೂರು ಮಠಾಧೀಶರು ಮಾಧ್ವ ಸಂಪ್ರದಾಯಕ್ಕೆ ಅನುಗುಣವಾಗಿ, ಗೀತೆಯು ಏನು ಹೇಳುತ್ತದೆಂದೂ ಯಾವ ತತ್ವವನ್ನು ಪ್ರತಿಪಾದಿಸುತ್ತದೆಂದೂ ಈ ಪುಸ್ತಕದಲ್ಲಿ ವಿಶದವಾಗಿ ವಿವರಿಸಿದ್ದಾರೆ. ವಿಷ್ಣು ಸರ್ವೋತ್ತಮತ್ವ, ಭಕ್ತಿಯಿಂದಲೇ ಮುಕ್ತಿ ಮುಂತಾದ ಮಧ್ವಾಚಾರ್ಯರ ತತ್ವಗಳು ಗೀತೆಯಲ್ಲಿಯೇ ಪ್ರತಿಪಾದಿಸಲ್ಪಟ್ಟವೆಯೆಂಬ ಅಂಶವನ್ನು ಅವರು ಮನಗಾಣಿಸಿಕೊಡಲು ಪ್ರಯತ್ನಿಸಿದ್ದಾರೆ. ಗೀತೆಯ ಶ್ಲೋಕಗಳನ್ನು ಮೇಲೆ ದಪ್ಪ ಅಕ್ಷರದಲ್ಲಿ ಕೊಟ್ಟು, ಕೆಳಗಡೆ, ವಿವರಣಾತ್ಮಕ ಭಾಷಾಂತರವನ್ನು ತಿಳಿಯಾದ ಕನ್ನಡದಲ್ಲಿ ಕೊಟ್ಟಿರುವರು. ಸಂಸ್ಕೃತ ಭಾಷೆಯಲ್ಲಿ ಅಧಿಕಾರವುಳ್ಳವರು ಬೆರಳೆಣಿಕೆಯಷ್ಟು ಕಂಡು ಬರುವ ಈ ಕಾಲದಲ್ಲಿ ಇಂಥ ಪ್ರಕಟನೆಯು ಸ್ವಾಗತಾರ್ಹವೂ ಉಪಯುಕ್ತವೂ ಆಗಿದೆ. ದಿವ್ಯ ಜ್ಞಾನಾಪೇಕ್ಷಿಗಳಾದ ಕನ್ನಡಿಗರಿಗೆ ಧರ್ಮಾರ್ಥವಾಗಿಯೇ ಈ ಪುಸ್ತಕವನ್ನೊದಗಿಸಲು ಶ್ರೀ ಶ್ರೀಗಳವರು ಮುಂಬಂದುದಂತೂ ಅನುಕರಣೀಯ ಸಾಹಸವಾಗಿದ್ದು ಧರ್ಮ ಪ್ರಚಾರೋದ್ದೇಶಕ್ಕೆ ಇದರಿಂದ ಸಹಾಯವಾಗುವುದು ನಿಶ್ಚಯ.

(೩ನೇ ಪುಟದಿಂದ)

ಆಗ ಗೀತೆಯಲ್ಲಿ ವ್ಯಕ್ತಗೊಂಡ ಶ್ರೀಕೃಷ್ಣನು ಈ ಕವಿಪುಂಗವರಿಗೆ ಭಕ್ತಪ್ರಿಯನಾಗಿ ಕಾಣಿಸಿಕೊಂಡನು. ಸೂರದಾಸನಂಥ ಅಂಧ ಕವಿಯೂ ಚಿನ್ಮಯ ಮೂರ್ತಿಯನ್ನು ತನ್ನ ಹೃತ್ಕಮಲದಲ್ಲಿ ಕುಳಿತಿರುವಂತೆ ಕಂಡನು. ಗೋಪಾಲನು ತನ್ನನ್ನು ಕೈಹಿಡಿದು ಮುನ್ನಡೆಸುತ್ತಿರುವಂತೆ ಭಾವಿಸಿದನು. ಮಹಾ ಕವಿ ವಿಜಯ ದೇವನ "ಗೀತ ಗೋವಿಂದಂ" ಎಲ್ಲ ಕಾಲಕ್ಕೂ ಎಲ್ಲ ಜನರಿಗೂ ಪ್ರಿಯವೆನಿಸಿದ ಮಹಾ ಕಾವ್ಯ: ಅದನ್ನು ಜಾಗರೂಕತೆಯಿಂದ ಓದಿದರೆ ಇಂದಿನ ವೈಜ್ಞಾನಿಕ ಮನುಷ್ಯನು ಪೌರುಷಹೀನ ಕಾಮುಕ ಸಿದ್ಧಾಂತವನ್ನೇ ಹೊರತು ತತ್ವನಿಷ್ಠ ಸ್ಥಿತಪ್ರಜ್ಞನಲ್ಲವೆಂದು ಸ್ಪಷ್ಟವಾಗುತ್ತದೆ.

ಭಾಗವತವು ಶ್ರೀಕೃಷ್ಣಚರಿತಾಮೃತವನ್ನು ಉಣ್ಣಿಸುವ ಪರಮ ಪವಿತ್ರ ಗ್ರಂಥ: ಶುಕಮುನಿ ವಿರಚಿತವಾದ ಈ ಕಾವ್ಯವು ಕನ್ನಡದಲ್ಲಿ ಚಾಟು ವಿಠಲನಾಥನಿಂದ ಭಾಮಿನೀ ಷಟ್ಪದಿಯಲ್ಲಿ ಮನೋಹರವಾಗಿ ಬರೆಯಲ್ಪಟ್ಟಿರುವುದು. ಕನ್ನಡದಲ್ಲಿ ಶ್ರೀಕೃಷ್ಣನನ್ನು ಲೋಕಗೀತೆಗಳಲ್ಲಿ ಹೊಗಳುವ ಸಂಪ್ರದಾಯ ಹುಟ್ಟಿಲ್ಲ: ಅದು ಉತ್ತರ ಭಾರತಕ್ಕೆ—ಶ್ರೀಕೃಷ್ಣನ ಪರಿಭ್ರಮಣ ಭೂಮಿಗೆ—ಸೀಮಿತವಾಗಿದೆ. ಆದರೆ, ಕೃಷ್ಣ ಪರಮಾತ್ಮನ ಭಕ್ತಿ ಭಾವನೆಯು ಮಾತ್ರ ಭಾರತಾದ್ಯಂತ ವಿಸ್ತರಿಸಿರುವುದು; ಸಮಸ್ತ ಭಾರತೀಯರನ್ನೂ ಮಹೋನ್ನತರಾಗಿ ಮಾಡಿರುವುದು.

THE VIJAYA BANK, LTD., BRAHMAVAR.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹನೀಯರು ನಮ್ಮ ಶಾಖೆಯಿಂದ ಚಿನ್ನಾಭರಣ ನಗಗಳ ಆಧಿನ ಮೇಲೆ ಪಡೆದ ಸಾಲವನ್ನು ಮರುಪಾವತಿ ಮಾಡುವರೆ, ರಿಜಿಸ್ಟ್ರಿ ನೋಟೀಸು ಮೂಲಕ ಕೇಳಿಕೊಂಡಾಗ್ಯೂ ಅಸಲು ವ ಬಡ್ಡಿ ಯಾವುದನ್ನೂ ಈ ತನಕವೂ ಕೊಡದೆ ಬಾಕಿ ಮಾಡಿಕೊಂಡಿರುವುದರಿಂದಲೂ, ಸದ್ರಿಯವರು ನಮ್ಮಲ್ಲಿ ಆಧಿಟ್ಟ ನಗಗಳನ್ನು ಇದೇ ಬರುವ ತಾರೀಕು 4—9—'54ನೇ ಶನಿವಾರ ಅಪರಾಹ್ನ ಗಂಟೆ 3ಕ್ಕೆ ಸರಿಯಾಗಿ ಯಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು, ಬಡ್ಡಿ ಸಮೇತ 30—6—'51ರ ವರೆಗೆ		
474/52	ಕೆ. ತೇಜಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಮಗ, ಕೂರಾಡಿ ಮೆಟ್‌ಕಲ್ ಮನೆ, ಪೋಸ್ಟು ಕೂರಾಡಿ.	159	15	0
514/ ,,	ಶೇಕ್ ಹೈದರ್ ಸಹೇಬ, ಶೇಕ್ ಹಯಾತ್ ಸಹೇಬರ ಮಗ, ವಾರಂಬಳ್ಳಿ ಗ್ರಾಮ ಪೋಸ್ಟು ಬ್ರಹ್ಮಾವರ.	49	8	0
930/ ,,	ಶೀನಪ್ಪ ಶೆಟ್ಟಿ, ಸುಬ್ಬಯ್ಯ ಸೆಟ್ರ ಮಗ, ಹನೆಹಳ್ಳಿ ಗ್ರಾಮ, ಪೋಸ್ಟು ಕೊಕ್ಕರ್ಣೆ.	142	3	0
70/53	ಗ್ರೆಗೋರಿ ಲೋಬೋ, ಎಲೆಕ್ಸ್ ಲೋಬೋರ ಮಗ, ಬೈಕಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ.	152	14	0
74/ ,,	ಮಗ್ಗಪ್ಪ ಸೆಟ್ಟಿ, ಶೀನ ಸೆಟ್ರ ಅಳಿಯ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	110	2	0
77/ ,,	ಪುಟ್ಟಯ್ಯ ಸೆಟ್ಟಿ, ತೇಜಪ್ಪ ಸೆಟ್ರ ಅಳಿಯ, ಹೊಸಾಳ ಗ್ರಾಮ, ಸಾಗರ ಮಠ ಪೋಸ್ಟು ಬಾರ್ಕೂರು.	45	13	0
331/53	ವೆಂಕ್ಟ ಪೂಜಾರಿ, ಶೀನ ಪೂಜಾರಿ ಮಗ, ಕಚ್ಚೂರು ಗ್ರಾಮ, ಪೋಸ್ಟು ಬಾರ್ಕೂರು.	144	1	0
361/ ,,	ಶೀನಪ್ಪ ಸೆಟ್ಟಿ, ನಾರಾಯಣ ಸೆಟ್ರ ಅಳಿಯ, ಗಿಳಿಯಾರು ಗ್ರಾಮ, ಪೋಸ್ಟು ಕೋಟ.	401	9	0
156/ ,,	ಶೇಕ್ ಅಬ್ದುಲ್ ಸಹೇಬ, ಶೇಕ್ ಅಲ್ಲಿ ಸಹೇಬರ ಮಗ, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	32	1	0
536/ ,,	ಜಿ. ಆನಂದ ಹೆಗ್ಡೆ, ನಾಗಪ್ಪ ಸೆಟ್ರ ಅಳಿಯ, ಕುಮ್ರಗೋಡು ಗ್ರಾಮ, ಮುಕ್ಕಮಾರ್ ಕಟ್ಟು ಬ್ರಹ್ಮಾವರ.	49	14	0
693/ ,,	ಜಿ. ಶೀನ ಸೆಟ್ಟಿ, ಗಿರಿಯಮ್ಮ ಶೆಡ್ತಿಯರ ಮಗ, ಗುಡೆಬೆಟ್ಟು, ವಾರಂಬಳ್ಳಿ ಗ್ರಾಮ, ಪೋಸ್ಟು ಬ್ರಹ್ಮಾವರ.	314	8	0
669/ ,,	ಕಪ್ರ ಪೂಜಾರಿ, ಅಣ್ಣಯ್ಯ ಪೂಜಾರಿ ಅಳಿಯ, ಮಟ್ಪಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	15	0	0
889/ ,,	ಕೆ. ತೇಜಪ್ಪ ಸೆಟ್ಟಿ, ಸುಬ್ಬಯ್ಯ ಸೆಟ್ರ ಮಗ, ಕೂರಾಡಿ, ಮೆಟ್‌ಕಲ್ ಮನೆ, ಪೋಸ್ಟು ಕೂರಾಡಿ	577	9	0
917/ ,,	ಐ. ಪ್ರಭಾಕರ ಹೆಗ್ಡೆ, ಐ. ನಾರಾಯಣ ಸೆಟ್ರ ಅಳಿಯ, ಕಂಬಾಲು	284	12	0
969/ ,,	ಯಮ್. ಸಂಜೀವ ಸೆಟ್ಟಿ, ತಿಮ್ಮಪ್ಪ ಸೆಟ್ರ ಅಳಿಯ, ಮಟ್ಪಾಡಿ ಗ್ರಾಮ, ಪೋಸ್ಟು ಬ್ರಹ್ಮಾವರ	577	5	0

Brahmavar, 20-8-54. (Sd.) ಬಿ. ಬಾಸ್ಕರ ಸೆಟ್ಟಿ, Agent, Brahmavar.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಔದ್ಯೋಗಿಕ ಕ್ಷೇತ್ರದ ಅಭಿವೃದ್ಧಿ ಮತ್ತು ವಿಜ್ಞಾನ

(೩ನೇ ಪುಟದಿಂದ)

ಳು ತಮ್ಮ ಕೆಲಸಗಳ ಮಾಹಿತಿಯನ್ನು ಕೊಡಲು ನೋಡುತ್ತಿದ್ದರೂ ಜನತೆಯ ವರೆಗೆ ಈ ಪ್ರಕಟಣೆಗಳು ಮುಟ್ಟುವುದು ವಿರಳವೆಂಬ ವಿಷಯ ಅನುಭವ ಸಿದ್ಧವಾಗಿದೆ. ಔದ್ಯೋಗಿಕ ಆವಶ್ಯಕತೆಗಳನ್ನು ಒಡನೆಯೇ ಪೂರೈಸಬಲ್ಲ ಸಂಶೋಧನೆಗಳನ್ನು ಈ ಕೇಂದ್ರಗಳು ಮಾಡಿ, ತಕ್ಕ ಮಾಹಿತಿಯನ್ನು ಕೈಗಾರಿಕಾ ಕ್ಷೇತ್ರದ ಪ್ರಭೃತಿಗಳಿಗೆ ಮಾಡಿಕೊಡುತ್ತವೆ, ನಿಜ. ಆಗೊಮ್ಮೆ, ಈಗೊಮ್ಮೆ ರಾಷ್ಟ್ರೀಯ ಪ್ರಯೋಗಶಾಲೆಗಳ ಮತ್ತು ಇತರ ವೈಜ್ಞಾನಿಕ ಕೇಂದ್ರಗಳ ಕುರಿತು ಪತ್ರಿಕೆಗಳಲ್ಲಿ ಸಚಿತ್ರ ಲೇಖನಗಳು ಪ್ರಕಟವಾಗುತ್ತಿರುವುದೂ ಉಂಟು. ಒಂದು ನಿರ್ದಿಷ್ಟ ವಿಷಯದ ಕುರಿತು ವಿಚಾರಗೋಷ್ಠಿಯನ್ನು ನಡೆಸಿ ವೈಜ್ಞಾನಿಕರ ಅಭಿಪ್ರಾಯ ಸಂಕಲನಕ್ಕೂ ತನ್ಮೂಲಕ ವಿಶೇಷ ಅನುಸಂಧಾನಕ್ಕೂ ಪ್ರಯತ್ನಿಸಲಾಗುವುದೆಂಬ ಸಂಗತಿಯನ್ನೂ ಅಲ್ಲಗಳೆಯಲು ಬರುವುದಿಲ್ಲ. ಆದರೆ, ಈ ರೀತಿಯ ಕೆಲಸಗಳು ಇನ್ನಷ್ಟು ಹೆಚ್ಚು ಪ್ರಮಾಣದಲ್ಲಿ ಜರಗುತ್ತಿರಬೇಕಾದ ಆವಶ್ಯಕತೆಯನ್ನು ನಾವು ಮರೆಯಬಾರದು. ಭಾರತದಲ್ಲಿ ಮೂವತ್ತಾರು ಕೋಟಿ ನಾಗರಿಕರು ಇದ್ದು, ಇಷ್ಟೂ ಮಂದಿಗೆ ವೈಜ್ಞಾನಿಕ ಕೇಂದ್ರಗಳ ಕಲ್ಪನೆ ಮಾಡಿಕೊಡುವ ಕೆಲಸ ಸಾಮಾನ್ಯ ಪ್ರಯತ್ನದಿಂದಲೇ ಸಾಧ್ಯವಾಗಲಾರದು. ದೃಢವಾದ, ಒಳ-ಹೊರ ಮುಟ್ಟಬಲ್ಲ, ಪ್ರಚಾರ ಕಾರ್ಯವನ್ನು ಒತ್ತರದಿಂದ ಕೈಗೊಳ್ಳಬೇಕಾಗುವುದು.

ಔದ್ಯೋಗಿಕ ಕ್ಷೇತ್ರಕ್ಕೂ ವೈಜ್ಞಾನಿಕ ಕೇಂದ್ರಗಳಿಗೂ ನಿಕಟ ಸಂಪರ್ಕವನ್ನು ಏರ್ಪಡಿಸುವುದಕ್ಕೋಸ್ಕರ ಸರಕಾರವೇ ಕೆಲವು ಮಂಡಳಗಳನ್ನು ಸ್ಥಾಪಿಸಿರುತ್ತದೆ. ಕೈಗಾರಿಕೆಗಳನ್ನು ನಡೆಸುವವರು ಕಡಿಮೆ ವೆಚ್ಚದಲ್ಲಿ ಹಾಗು ಶೀಘ್ರದಲ್ಲಿ ಅಧಿಕ ಉತ್ಪಾದನೆಯಾಗಬೇಕೆಂದು ಬಯಸುತ್ತಾರೆ. ಇದಕ್ಕೆ ಹೊಂದಿಕೊಳ್ಳುವಂತೆ ಸಂಶೋಧನೆಗಳನ್ನು ಅಳವಡಿಸಿಕೊಳ್ಳುವುದಕ್ಕಿದೆ, ತಾಂತ್ರಿಕ ಸಲಹೆಗಳನ್ನೂ ನೀಡಬೇಕಾಗುವುದು. ಈ ಕೆಲಸವನ್ನು ಸಾಕಷ್ಟು ತೃಪ್ತಿಕರವಾಗಿಯೇ ಸರಕಾರದವರು ಸ್ಥಾಪಿಸಿದ ಮಂಡಳಗಳು ಮಾಡುತ್ತವೆ.

ವೈಜ್ಞಾನಿಕ ಹಾಗು ಔದ್ಯೋಗಿಕ ಸಂಶೋಧನಾ ಮಂಡಳವು ಸುಮಾರು ಮುನ್ನೂರಕ್ಕಿಂತಲೂ ಹೆಚ್ಚು "ಪೇಟೆಂಟ್" ಸಂಶೋಧನೆಗಳನ್ನು ನಡೆಸಿರುವುದಲ್ಲದೆ, ಔದ್ಯೋಗಿಕ ಕ್ಷೇತ್ರಗಳು ಅಳವಡಿಸಿಕೊಂಡಿರುವ ಬೇರೆ ಅನೇಕ ಅನುಸಂಧಾನವನ್ನೂ ನಡೆಸಿದೆ. ಕಳೆದ ವರ್ಷ ಸರಕಾರವು ರಾಷ್ಟ್ರೀಯ ಸಂಶೋಧನಾ ಅಭಿವೃದ್ಧಿ ಸಂಸ್ಥೆ ಎಂಬ ಕಂಪೆನಿಯನ್ನು ಸ್ಥಾಪಿಸಿ, ತನ್ನಾಳಿಕ ಪೇಸದ ವೈಜ್ಞಾನಿಕ ಕೇಂದ್ರಗಳು, ವಿಶ್ವ ವಿದ್ಯಾಲಯಗಳು, ಸಂಶೋಧನಾಲಯಗಳು ಮುಂತಾದುವುಗಳಿಂದ ಒಪ್ಪಿಸಲ್ಪಟ್ಟ ಫಲಿತಾಂಶಗಳ ತಳಹದಿಯ ಮೇಲೆ ಜನಸಾಮಾನ್ಯರಿಗೂ ಬುದ್ಧಿವಂತರಿಗೂ ಪ್ರಯೋಜನಕ್ಕೆ ಬರುವ ಅಭಿವೃದ್ಧಿ ಕಾರ್ಯವನ್ನು ನಡೆಸಲು ತಳಹದಿಯನ್ನು ಹಾಕಿತು. ತನ್ನ ಅಸ್ತಿತ್ವದ ಒಂದು ವರ್ಷದಲ್ಲಿ ಈ ಸಂಸ್ಥೆಯು ಒಂದು ನೂರಕ್ಕಿಂತಲೂ ಹೆಚ್ಚು ಸಂಶೋಧನೆಗಳ ಅಭಿವೃದ್ಧಿ ಕಾರ್ಯದಲ್ಲಿ ಆಸಕ್ತಿಯನ್ನು ವಹಿಸಿರುವುದೆಂದು ತಿಳಿದು ಬರುತ್ತದೆ.

ಮೊನ್ನೆ ಜನವರಿ ತಿಂಗಳಲ್ಲಿ ಹೊಸ ದೆಹಲಿಯಲ್ಲಿ ಅಂತರರಾಷ್ಟ್ರೀಯ ಗೃಹ ಪ್ರದರ್ಶನ ನಡೆದಾಗ, ಅಲ್ಲಿ ನಮ್ಮ ಕಟ್ಟಡ ಸಂಶೋಧನಾ ಕೇಂದ್ರವು ತಯಾರಿಸಿದ ಮಾದರಿಯು ಎಲ್ಲರ ಕುತೂಹಲವನ್ನೂ ಕೆರಳಿಸಿತು. ಅಗ್ಗದರದಲ್ಲಿ ಉತ್ಕೃಷ್ಟ ಸೌಕರ್ಯಗಳನ್ನು ಒದಗಿಸಿಕೊಡಬಲ್ಲ ಮನೆಗಳನ್ನು ಕಟ್ಟುವ ವಿಷಯದಲ್ಲಿ ಸಾಧಿಸಿದ ಪ್ರಗತಿಯು ಎಲ್ಲರನ್ನೂ ವಿಸ್ಮಯಗೊಳಿಸಿತು. ರಾಷ್ಟ್ರೀಯ ಭೌತ ಶಾಸ್ತ್ರ ಸಂಶೋಧನಾ ಕೇಂದ್ರವು ಶಾಯಿಯ ತಯಾರಿಕೆ ಮತ್ತಿತರ ಬೇರೆ ಕೆಲವು ಜಟಿಲ ವಿಷಯಗಳಲ್ಲಿ ಅತ್ಯಮೂಲ್ಯವಾದ ಮಾಹಿತಿಯನ್ನು ಕೂಡಿಸಿದೆ. ಆಹಾರ ಸಂಶೋಧನಾ ಕೇಂದ್ರವು ಸಸ್ಯಗಳಿಂದ ಹಾಲು ಮತ್ತು ಮೊಸರುಗಳನ್ನು ತಯಾರಿಸುವ ವಿಧಾನ ಹಾಗು ಇತರ ಅನೇಕ ಪದಾರ್ಥಗಳ ಉತ್ಪಾದನೆಯ ರೀತಿಯನ್ನು ಕಂಡು ಹಿಡಿದಿದೆ. ಕ್ಯಾಲ್ಸಿಯಂ ಗ್ಲುಕೊನೇಟ್, ಸಿಟ್ರಿಕ್ ಎಸಿಡ್ ಮುಂತಾದ ದ್ರವ್ಯಗಳನ್ನು ತಯಾರಿಸುವ ಕ್ರಮವನ್ನು ರಾಷ್ಟ್ರೀಯ ರಾಸಾಯನಿಕ ಪ್ರಯೋಗ ಶಾಲೆಯು ಶೋಧಿಸಿದೆ. ರಾಷ್ಟ್ರೀಯ ಲೋಹ ಸಂಶೋಧನಾ ಮಂಡಳವು ಮ್ಯಾಂಗನೀಜ ಧಾತುವನ್ನು ಉಪಯುಕ್ತ ರೀತಿಯಲ್ಲಿ ಬಳಸುವುದರಲ್ಲಿ ಯಶಸ್ವಿಗಳಾಗಿವೆ. ಗಾಜು ಮತ್ತು ಪಿಂಗಾಣಿಗಳ ಕುರಿತು ನಡೆಸಿದ ಸಂಶೋಧನೆಗಳ ಫಲವಾಗಿ ಶೀತೋಷ್ಣ ವ್ಯವಸ್ಥೆಯಲ್ಲಿ ಹೊಸ ಅಧ್ಯಾಯವನ್ನೇ ತೆರೆಯಬಲ್ಲ ಗಾಜಿನ ಹಾಳೆಗಳ ನಿರ್ಮಾಣವು ಸಾಧ್ಯವೆಂದು ಗೊತ್ತಾಗಿದೆ.

ನಮ್ಮ ಸಂಶೋಧನೆಗಳಲ್ಲಿ "ಸೂರ್ಯಪಾತ್ರೆ"ಯು ಪ್ರತಿಯೊಂದೂ ಮನೆಯನ್ನು ಮುಟ್ಟಬಲ್ಲುದು. ಸೂರ್ಯನ ಬಿಸಿಲನ್ನೇ ಇಂಧನವಾಗಿ ಉಪಯೋಗಿಸಿ ಅಡಿಗೆ ಮಾಡುವ ಈ ಒಲೆಯು ಉಷ್ಣವಲಯದಲ್ಲಿರುವ ನಮ್ಮ ದೇಶದಲ್ಲಿ ಹೆಂಗಸರ ಕೆಲಸವನ್ನು ತುಂಬ ಹಗುರಮಾಡಬಹುದು. ಆದರೆ ಸೂರ್ಯನ ಬಿಸಿಲು ಇಲ್ಲದ ರಾತ್ರಿಯ ಹೊತ್ತು ಈ ಒಲೆಯನ್ನು ಉಪಯೋಗಿಸಲು ಬರುವುದಿಲ್ಲ – ವಿಜ್ಞಾನಿಗಳು ಈ ನ್ಯೂನತೆಯನ್ನು ಹೋಗಲಾಡಿಸುವುದಕ್ಕೋಸ್ಕರ ಸಂಶೋಧನೆಗಳನ್ನು ನಡೆಸುತ್ತಿದ್ದಾರೆ. ಸೂರ್ಯನ ಬಿಸಿಲಿನ ಶಾಖವನ್ನು ಸಂಗ್ರಹಿಸಿ ಇಟ್ಟು ಬೇಕಾದಾಗ ಅದನ್ನು ಉಪಯೋಗಿಸುವ ತಂತ್ರವನ್ನು ಕರಗತಮಾಡಿಕೊಳ್ಳಲು ಅವರು ಸಾಹಸ ಪಡುತ್ತಾರೆ. ಬಿಸಿಲಡಿಗೆ ಮಾಡುವ ಈ ಒಲೆಯ ರಚನೆಯನ್ನು ಪರಿಷ್ಕರಿಸಿ, ಸಾಮಾನ್ಯ ಗೃಹಿಣಿಯ ಕೈಯಳವಿಗೂ ನಿಲುಕುವಂತೆ ಅಗ್ಗದರದಲ್ಲಿ ಇದನ್ನು ಪೂರೈಸಬೇಕೆಂದೂ ಪ್ರಯತ್ನಿಸಲಾಗುತ್ತಿದೆ.

ಅಮೇರಿಕದ ಇಲಿನೋಯಿ ವಿಶ್ವವಿದ್ಯಾಲಯದ ಮಸಾಚುಸೆಟ್ಸ್ ತಂತ್ರ ವಿಜ್ಞಾನ ಸಂಸ್ಥೆಯು ಸೂರ್ಯಶಕ್ತಿಯನ್ನು ನಿತ್ಯೋಪಯೋಗಕ್ಕೆ ಬಳಸುವ ವಿಷಯದಲ್ಲಿ ತುಂಬ ಸಾಹಸದಿಂದ ಕೆಲಸ ಮಾಡುತ್ತಿದೆ. ಮನೆಗಳನ್ನು ಸೂರ್ಯನ ಬಿಸಿಲಿನಿಂದ ಬೆಚ್ಚಗಿರಿಸುವ ಮಾದರಿಯೊಂದನ್ನು ಅದು ಕಂಡುಕೊಂಡಿದೆ— ಆದರೆ ಇಂತಹ ಗೃಹ ನಿರ್ಮಾಣಕ್ಕೆ ಬಹಳ ವೆಚ್ಚ ಬೀಳುತ್ತದೆ; ಅಲ್ಲದೆ ಆ ಮನೆಯ ಸ್ವರೂಪ ಮನಸ್ಸಿಗೆ ಹಿಡಿಯುವುದಿಲ್ಲ. ಅಮೇರಿಕ ಮತ್ತು ರಶಿಯಗಳಲ್ಲಿ ಸೂರ್ಯಶಕ್ತಿಯನ್ನು ಶಾಶ್ವತವಾಗಿ ದ್ರವರೂಪದಲ್ಲಿಯಾಗಲೀ ಹರಳುಗಳ ರೂಪದಲ್ಲಿಯಾಗಲೀ ಸಂಗ್ರಹಿಸಿಟ್ಟು ಬೇಕಾದ ಹಾಗೆ ಅದನ್ನು ಶಾಖ,ಬೆಳಕು, ಇಂಧನ ಅಥವಾ ವಿದ್ಯುಚ್ಛಕ್ತಿ ಮುಂತಾದ ಶಕ್ತಿಯಾಗಿ ಪರಿವರ್ತಿಸಲು ಬರುವಂತೆ ಮಾಡಲು ವಿಜ್ಞಾನಿಗಳು ಹೆಣಗುತ್ತಿದ್ದಾರೆ. ಅವರ ಪ್ರಯತ್ನಕ್ಕೆ ಕಡಿಮೆಯಾಗದ ಉತ್ಸಾಹದಿಂದ ನಮ್ಮ ವಿಜ್ಞಾನಿಗಳೂ ಈ ದಿಸೆಯಲ್ಲಿ ತಮ್ಮ ಬುದ್ಧಿ ಕೌಶಲ್ಯವನ್ನೆಲ್ಲ ಖರ್ಚು ಮಾಡುತ್ತಿದ್ದಾರೆ.

ಜನಸಾಮಾನ್ಯರ ಪ್ರೋತ್ಸಾಹ ಮತ್ತು ಔದ್ಯೋಗಿಕ ಕ್ಷೇತ್ರದ ವಿಶ್ವಾಸಗಳಿದ್ದರೆ ವೈಜ್ಞಾನಿಕ ಕೇಂದ್ರಗಳು ಕೆಲಸವನ್ನು ಒತ್ತರದಿಂದ ಸಾಗಿಸುತ್ತಿರುವುದು ಅಸಾಧ್ಯ ಇದಕ್ಕೋಸ್ಕರ ವಿಜ್ಞಾನಿಗಳು ಮನುಷ್ಯನ ನಿತ್ಯ ವ್ಯವಹಾರಕ್ಕೆ ಉಪಯುಕ್ತವಾದ ಸಂಶೋಧನೆಗಳಿಗೆ ಪ್ರಾಧಾನ್ಯವನ್ನು ಕಲ್ಪಿಸ ಬೇಕಾದದ್ದು ಅತಿ ಮುಖ್ಯ ವಿಷಯ. ಎಷ್ಟೇ ಅಮೂಲ್ಯ ಹಾಗು ಅದ್ಭುತ ಸಂಶೋಧನೆ ಮಾಡಿದರೂ ಅದು ಮನುಷ್ಯನ ಜೀವನದಲ್ಲಿ ಪ್ರತಿಫಲಿಸುವಂತಿಲ್ಲವಾದರೆ ನಿಷ್ಪ್ರಯೋಜಕವಾಗುತ್ತದೆ. ಹೀಗೆ ಜರಗುವ ಸಂಶೋಧನೆಗಳು ಕಡಿಮೆಯಾಗಿ ಉಪಯುಕ್ತ ಅಂಶಗಳೇ ಹೆಚ್ಚಿಕೊಂಡರೆ ರಾಷ್ಟ್ರದ ಪುನಾರಚನೆಯ ಉದ್ದೇಶವನ್ನು ಸಾಧಿಸುವುದಕ್ಕೆ ಅಧಿಕ ಸಹಾಯ ದೊರೆತಂತಾಗುವುದು.

ಎಂ. ಗಣಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ– ಹೆಂಗಸರ ಗರ್ಭಕೋಶ ರೋಗಗಳಿಗೆ ಸಂಜೀವನ. ಅಕಾಲ ಬಿಳಿಸ್ರಾವ, ಮುಟ್ಟಿನ ಸ್ರಾವ ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಮಾಸ ನೊಂದಿಲ್ಲದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಗರ್ಭಸ್ರಾವ, ಗರ್ಭಪಾತವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈ ಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇವಲ್ಲದೆ ಇನ್ನು ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕಾಗದ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8 –

Mrs. P. DEVEE, F. D.S (N. J.) (ವಿ. ಪಿ. ಪ್ರತ್ಯೇಕ)

CALCUTTA–10 ಸ್ಟಾಕಿಸ್ಟರು: ಶ್ಯಾಂ ಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

(೧ನೇ ಪುಟದಿಂದ)

ಸಂಭಾವನನಾಗುತ್ತಾನೆ ನಮ್ಮ ಸ್ವಂತ ಶಕ್ತಿ ಸಾಮರ್ಥ್ಯಗಳಿಂದಲೇ ನಾವು ಭಾರತವನ್ನು ಕಟ್ಟಬಲ್ಲೆವೆಂಬ ಎದೆಗಾರಿಕೆಯನ್ನು ತೋರಿಸುವ ಸಾಹಸಿಗನಾಗುತ್ತಾನೆ. ಈ ಭಾವನೆಯು ಹಣಕ್ಕೆ ಸಿಗುವ ಬಡ್ಡಿಯು ಕಲ್ಪನೆಗಿಂತಲೂ ದೊಡ್ಡದು; ಮತ್ತು ಉದಾತ್ತವಾದದ್ದು. ನಾವು ಬಡತನದ ವಿರುದ್ಧ ಘನಘೋರವಾದ ಸಂಗ್ರಾಮವನ್ನು ಸಾರಿದ್ದೇವೆ—ಯುದ್ಧ ಕಾಲದಲ್ಲಿ ನಮ್ಮೆಲ್ಲರ ಬಳಕೆಯೂ ಸಹಜವಾಗಿ ಕಡಿಮೆಯಾಗುತ್ತದೆ. ಶಕ್ತಿ ಸರ್ವಸ್ವದಿಂದ ಶತ್ರುವನ್ನು ಸೋಲಿಸುವ ಹುಮ್ಮಸ್ಸು ಮೂಡುತ್ತದೆ. ದಾರಿದ್ರ್ಯದ ವಿರುದ್ಧ ಸಾರಲ್ಪಟ್ಟ ಈ ಯುದ್ಧದಲ್ಲಿ ಸಹ ಭಾರತೀಯರು ಅದೇ ಸ್ಫೂರ್ತಿ ಮತ್ತು ಉತ್ಸಾಹವನ್ನು ಪ್ರದರ್ಶಿಸಬೇಕೆಂದು ಹೇಳಿದರೆ ತಪ್ಪಾಗದು.

ಇದನ್ನು ಭಾರತೀಯರಿಗೆ ಮನವರಿಕೆ ಮಾಡಿಸಿಕೊಡುವ ಕಾರ್ಯವನ್ನು ಕಳೆದ ವಾರ ಅರ್ಥಸಚಿವರಾದ ದೇಶಮುಖರು ತಮ್ಮ ಆಕಾಶವಾಣಿ ಭಾಷಣದಲ್ಲಿ ನೆರವೇರಿಸಿದರು. ಅವರು ದೇಶದ ಧನಾಢ್ಯ ವರ್ಗಕ್ಕೂ ಸಂಸ್ಥೆಗಳಿಗೂ ರಾಷ್ಟ್ರದ ಪುನಾರಚನೆಯಲ್ಲಿ ನೆರವು ನೀಡಲು ಪ್ರಾರ್ಥಿಸಿದರು; ಬಡವರನ್ನೂ ಮಧ್ಯಮ ವರ್ಗದವರನ್ನೂ ಮರೆಯದೆ, ಕೈಲಾದಷ್ಟು ವಂತಿಗೆಯನ್ನು ನೀಡಬೇಕೆಂದು ಅವರು ವಿನಂತಿಸಿದರು. ಬಡವರಲ್ಲಿ ಬಡವನಾದವನೂ ಸಹ, ತನಗೆ ಮನಸ್ಸಿದ್ದರೆ, ಟಪ್ಪಾಲುಕಟ್ಟೆಯಲ್ಲಿ ನಾಲ್ಕಾಣೆಟಿಕೆಟ್ಟಿಗೆ ದೊರಕುವ ಯೋಜನಾ ಉಳಿತಾಯ ಚೀಟುಗಳನ್ನು ಕೊಂಡುಕೊಂಡು, ಒಟ್ಟು ೫ ರೂಪಾಯಿಗಳಷ್ಟು ಆದಾಗ ಅದನ್ನು ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟಿಗೆ ವಿನಿಮಯಮಾಡಬಲ್ಲನು. ಈ ಸಂದರ್ಭದ ಸದುಪಯೋಗವನ್ನು ಪಡೆದುಕೊಳ್ಳುವಲ್ಲಿ ಯಾರೂ ಹಿಂದುಳಿಯಬಾರದು. ಮಹಿಳೆಯರ ಚಿನ್ನಾಭರಣದ ವಂತಿಗೆಗೆ ಸಾಕಷ್ಟು ಪ್ರೋತ್ಸಾಹ ದೊರಕಿಲ್ಲವೆಂದು ಕೇಳುತ್ತೇವೆ—ನಮ್ಮ ಗೃಹಿಣಿಯರು ಗಾಂಧೀಜಿ ಹರಿಜನೋದ್ಧಾರ ಮುಂತಾದ ರಚನಾತ್ಮಕ ಕಾರ್ಯಗಳಿಗೆ ಸಹಾಯ ಮಾಡಲು ಆಹ್ವಾನ ಕೊಟ್ಟಾಗ, ತುಂಬಿದ ಸಭೆಯಲ್ಲಿಯೇ ತನ್ನ ಬೆಲೆಬಾಳುವ ಒಡವೆಗಳನ್ನು ದಾನಮಾಡಿದ್ದರು. ಅಂತಹ ತ್ಯಾಗ ಬುದ್ಧಿಯನ್ನು ಈಗ ಮರಳಿ ತೋರಿಸುವ ಅಗತ್ಯ ಕಾಣುತ್ತದೆ. ಇನ್ನುಳಿದ ಮೂರು ವಾರಗಳ ಕಾಲದಲ್ಲಿ ಎಲ್ಲರೂ ಅದನ್ನು ಹೆಚ್ಚು ಪ್ರಮಾಣದಲ್ಲಿ ಯೋಜನಾ ಸಾಲಕ್ಕೆ ವಂತಿಗೆಯನ್ನು ನೀಡಿ, ಸಂಗ್ರಹವಾದ ಸಾಲದ ಮೊತ್ತವು ಕನಿಷ್ಠ ೧೫೦ ಕೋಟಿಗಳನ್ನಾದರೂ ಮುಟ್ಟುವಂತೆ ಮಾಡಬೇಕು. ಪ್ರತ್ಯೇಕ ಸಾಲವನ್ನೆತ್ತದೆ, ಕೇಂದ್ರದಿಂದಲೇ ಪಾಲು ಪಡೆಯುವ ರಾಜ್ಯ ಸರಕಾರಗಳೂ ಇತರ ಕಾರ್ಯಕರ್ತರೂ ಇನ್ನುಳಿದ ಅಲ್ಪಾವಧಿಯಲ್ಲಿ ಭರದಿಂದ ಪ್ರಚಾರವನ್ನು ಕೈಗೊಂಡು ಯೋಜನಾ ಸಾಲದ ವಿಷಯದಲ್ಲಿ ಜನರ ಸದ್ಭಾವನೆಯನ್ನು ಜಾಗೃತಗೊಳಿಸಬೇಕೆಂದೂ ಸೂಚಿಸುತ್ತೇವೆ.

ಈಶಾನ್ಯ ಭಾರತದಲ್ಲಿ ಸುಧಾರಣಾ ಕ್ರಮಗಳು

ಭಾರತದ ಈಶಾನ್ಯ ಗಡಿಪ್ರದೇಶವು ಭದ್ರತೆಯ ದೃಷ್ಟಿಯಿಂದ ಬಹಳ ಮಹತ್ವಪೂರ್ಣವಿರುವುದರಿಂದ, ಮತ್ತು ಅಲ್ಲಿಯ ಜನರನ್ನು ಇತರ ನಾಗರಿಕರ ಮಟ್ಟಕ್ಕೆ ತರುವುದು ಅತ್ಯಗತ್ಯವಾದುದರಿಂದ, ಸರ್ಕಾರದವರು ಅನೇಕ ಸುಧಾರಣೆಗಳನ್ನು ಕೈಗೊಂಡಿದ್ದಾರೆ. ಆಧುನಿಕ ಸಭ್ಯತೆಯ ಸೋಂಕೂ ತಗಲದ, "ಕಾಡುಜನರ ನಾಡು" ಎಂದು ಹೆಸರಾದ, ಈ ಗಡಿಪ್ರದೇಶವು 99000 ಚದರ ಮೈಲು ವಿಸ್ತೀರ್ಣವಿದ್ದು, ಹನ್ನೆರಡು ಮುಖ್ಯ ಪಂಗಡಗಳಿಗೆ ಸೇರಿದ 800000 ಜನರು ಇಲ್ಲಿ ವಾಸಿಸುತ್ತಾರೆ.

1947ರ ವರೆಗೆ ಈ ಪ್ರದೇಶವೆಲ್ಲಾ ಸಂಪೂರ್ಣವಾಗಿ ನಿರ್ಲಕ್ಷಿಸಲ್ಪಟ್ಟು ಸರ್ಕಾರವು ಕೇವಲ ಶಿಸ್ತು ಕಾಯಿದೆಗಳನ್ನು ಜಾರಿಗೆ ತರುವುದರಲ್ಲೇ ತೃಪ್ತವಾಗಿತ್ತು. ಅದರಲ್ಲೂ ಜನಸಂಚಾರಕ್ಕೆ ಸೌಕರ್ಯವಿಲ್ಲದ ಪ್ರದೇಶಗಳಲ್ಲಿ ಸರ್ಕಾರದ ಯಾವ ಕಾರ್ಯ ಕಲಾಪಗಳೂ ಇದ್ದಿಲ್ಲ. ಕೇವಲ 6000 ಚದರ ಮೈಲುಗಳ ವಿಸ್ತೀರ್ಣವು ಸರ್ಕಾರದ ಹತೋಟಿಯಲ್ಲಿದ್ದಿತು. 1947ರ ಮೇಲೆ ಭಾರತ ಸರ್ಕಾರವು ತನ್ನ ಆಡಳಿತವನ್ನು ಸುಧಾರಿಸಿತು. ಈಗ 25,000 ಚದರ ಮೈಲುಗಳಿಗಿಂತಲೂ ಹೆಚ್ಚಿನ ವಿಸ್ತೀರ್ಣದಲ್ಲಿ ಸರ್ಕಾರದ ಆಡಳಿತ ನಡೆಯುತ್ತದೆ. ಇಲ್ಲಿ ಶಿಕ್ಷಣ, ವೈದ್ಯಕೀಯ ಸಹಾಯ, ಕೃಷಿ, ಮಾರ್ಗ ಸೌಕರ್ಯ, ವಾರ್ತಾ ಸೌಕರ್ಯವೆಂದು ನಾನಾ ಕ್ಷೇತ್ರಗಳಲ್ಲಿ ಹೆಚ್ಚಿನ ಪ್ರಯತ್ನ ನಡೆಯುತ್ತಿದೆ.

ಗುಡ್ಡಗಾಡುಗಳಲ್ಲಿ ವಾಸಿಸುತ್ತಿರುವ ಈ ಜನರನ್ನು ಇತರ ಜನರ ಮಟ್ಟಕ್ಕೆ ತರುವುದೇ ಭಾರತ ಸರ್ಕಾರದ ನೀತಿಯಾಗಿದೆ. ಇದಕ್ಕೆ ಇವರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು. ಇತರರು ಇವರನ್ನು ಸುಲಿಗೆ ಮಾಡದಂತೆ ನೋಡಿಕೊಳ್ಳಬೇಕು. ತಮ್ಮಷ್ಟಕ್ಕೆ ತಾವೇ ಅಭಿವೃದ್ಧಿಯಾಗಲು ಅವಕಾಶವನ್ನು ಕಲ್ಪಿಸಬೇಕು. ಅಲ್ಲದೆ ಇವರ ವಂಶಾನುಗತವಾದ ಸಂಸ್ಕೃತಿಯನ್ನೂ ವರ್ಗೀಯ ಜೀವನವನ್ನೂ ಮುಂದುವರಿಯುವಂತೆ ಮಾಡಬೇಕು.

ಇವನ್ನೆಲ್ಲಾ ಆಲೋಚಿಸಿಕೊಂಡೇ ಸರ್ಕಾರವು ಒಂದು ಹೊಸ ಆಡಳಿತ ಯೋಜನೆಯನ್ನು ಆರಂಭಿಸಿತು. ಅಖಿಲ ಭಾರತ ದೃಷ್ಟಿಯಿಂದ ಗುಡ್ಡಗಾಡು ಜನರ ಅಭಿವೃದ್ಧಿಯಲ್ಲಿ ಹೆಚ್ಚು ಆಸಕ್ತಿಯುಳ್ಳ ಅಧಿಕಾರಿಗಳನ್ನು ಆರಿಸಿಕೊಂಡಿತು. ಅಲ್ಲದೆ ಇಂತಹ ಗಡಿನಾಡುಗಳಲ್ಲಿ ಕೆಲಸ ಮಾಡಿ ಅನುಭವವುಳ್ಳ ಹಿರಿಯ ಅಧಿಕಾರಿಗಳನ್ನು ಅಸ್ಸಾಮಿನ ಗವರ್ನರರಿಗೆ ಸಲಹೆಕೊಡುವುದಕ್ಕಾಗಿಯೂ ನೇಮಿಸಿತು.

ಈ ಪ್ರದೇಶವನ್ನು ಆರು ಭಾಗಗಳನ್ನಾಗಿ ವಿಂಗಡಿಸಿ ಪ್ರತಿಯೊಂದನ್ನೂ ಒಬ್ಬ ರಾಜಕೀಯ ಅಧಿಕಾರಿಯ ವಶದಲ್ಲಿರಿಸಲಾಗಿದೆ. ಇವರ ಅಧೀನದಲ್ಲಿ ಇಂಜನಿಯರುಗಳು, ವಿದ್ಯಾಧಿಕಾರಿಗಳು, ಕೃಷಿ ಶಾಖೆಯ ಅಧಿಕಾರಿಗಳು, ವೈದ್ಯಾಧಿಕಾರಿಗಳು ಮೊದಲಾದವರು ಕೆಲಸ ಮಾಡುತ್ತಿರುವರು.

ಮಾರ್ಗ ಸೌಕರ್ಯವಿಲ್ಲದಿರುವುದು ಇಲ್ಲಿಯ ಮುಖ್ಯ ಸಮಸ್ಯೆಯಾಗಿದೆ. ಆದುದರಿಂದ ರಸ್ತೆಗಳ ರಚನೆಗೆ ಹೆಚ್ಚಿನ ಗಮನಕೊಡಲ್ಪಡುತ್ತದೆ. ಕೃಷಿಯೇ ಇಲ್ಲಿಯ ಮುಖ್ಯ ವೃತ್ತಿಯಾಗಿದೆ. ಯುವಕರಿಗೆ ತಮ್ಮ ಮಾತೃ ಭಾಷೆ ಹಾಗು ಹಿಂದಿಯೊಡನೆ ಬುಟ್ಟಿಗಳ ತಯಾರಿಕೆ, ನೇಯ್ಗೆ, ಚರ್ಮದ ಕೆಲಸ ಇತ್ಯಾದಿಗಳನ್ನು ಕಲಿಸಲಾಗುತ್ತಿದೆ.

ಮೊದಲ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರದೇಶದ ಅಭಿವೃದ್ಧಿಗಾಗಿ 3 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ. ಇದರಿಂದ 1951ರಲ್ಲಿ 7 ಆಸ್ಪತ್ರೆಗಳೂ 30 ಔಷಧಾಲಯಗಳೂ 25 ಸಂಚರಿಸುವ ಆರೋಗ್ಯ ಘಟಕಗಳೂ ಕೆಲಸ ಮಾಡುವಂತಾಯಿತು. ಇವಲ್ಲದೆ 27 ಮಲೇರಿಯಾ ನಿರೋಧ ಕೇಂದ್ರಗಳೂ ಇವೆ. 1951ರಲ್ಲಿ ಈ ಹಿಂದುಳಿದ ಪ್ರದೇಶಗಳಲ್ಲಿ ಕೆಲಸ ಮಾಡುತ್ತಿದ್ದ ಡಾಕ್ಟರುಗಳ ಸಂಖ್ಯೆ 42; ಕಾಂಪೌಂಡರುಗಳ ಸಂಖ್ಯೆ 22, ದಾದಿ 1. ಆದರೆ ಈಗ 117 ಜನ ಡಾಕ್ಟರರೂ, 112 ಜನ ಕಾಂಪೌಂಡರೂ 19 ಜನ ಸೂಲಗಿತ್ತಿಯರೂ ಕೆಲಸಮಾಡುತ್ತಿದ್ದಾರೆ. ಕ್ಷಯರೋಗ ಆಸ್ಪತ್ರೆಯೊಂದನ್ನು ಇಲ್ಲಿ ತೆರೆಯುವ ಆಲೋಚನೆಯೂ ಇದೆ.

ಶಿಕ್ಷಣ ವಿಭಾಗದಲ್ಲಿ ಮೊದಲು ಶಾಲೆಗಳ ಸುಳಿವೇ ಇರಲಿಲ್ಲ. ಈಗ 170 ಶಾಲೆಗಳಲ್ಲಿ 6,500 ಮಕ್ಕಳು ಓದುತ್ತಿದ್ದಾರೆ. ಯೋಗ್ಯ ವಿದ್ಯಾರ್ಥಿಗೆ ಪುಸ್ತಕ, ಊಟ, ಬಟ್ಟೆಗಳನ್ನು ಉಚಿತವಾಗಿ ಸರ್ಕಾರವು ಕೊಡುತ್ತದೆ. ಎಂಟು ಕೈಗಾರಿಕಾ ಶಾಲೆಗಳಿವೆ. ಇಲ್ಲಿ ಮರಗೆಲಸ, ಕಮ್ಮಾರ ಕೆಲಸ, ನೂಲುವುದು, ನೇಯ್ಗೆ, ಹೊಲಿಗೆ, ಚಿತ್ರ, ಬಿದಿರು ಮತ್ತು ಚರ್ಮದ ಕೆಲಸಗಳನ್ನು ಕಲಿಸಲಾಗುತ್ತದೆ. ಪ್ರತಿವರ್ಷ ಸುಮಾರು 250 ಜನರು ಈ ಶಾಖೆಯಲ್ಲಿ ತರಬೇತಿ ಹೊಂದುತ್ತಿದ್ದಾರೆ.

ಕೃಷಿಯು ಈ ಪ್ರದೇಶದಲ್ಲಿ ಮುಖ್ಯ ವೃತ್ತಿಯಾಗಿರುವ ಕಾರಣ ಈ ವಿಷಯದಲ್ಲಿ ಹೆಚ್ಚಿನ ಗಮನ ಕೊಡಲಾಗಿದೆ. ಭತ್ತದ ವ್ಯವಸಾಯವನ್ನು ಕಾಯಂ ಕೈಗೊಳ್ಳುವುದು, ವ್ಯಾಪಾರಿ ಬೆಳೆಗಳನ್ನು ಬೆಳೆಸುವುದು, ಸುಧಾರಿತ ಬೀಜಗಳನ್ನು ಒದಗಿಸುವುದು, ಬೇಸಾಯಗಾರರಿಗೆ ತರಬೇತಿ ಕೊಡುವುದು ಇವಕ್ಕೆಲ್ಲಾ ಪ್ರೋತ್ಸಾಹ ಕೊಡಲಾಗುತ್ತದೆ. ಭೂಸುಧಾರಣೆಗಾಗಿ ಈ ವರೆಗೆ ಸುಮಾರು 5 ಲಕ್ಷ ರೂಪಾಯಿ ವೆಚ್ಚ ಮಾಡಲಾಗಿದೆ. ಈ ಪ್ರದೇಶದಲ್ಲಿ ಎರಡು ಸಾಮುದಾಯಿಕ ಅಭಿವೃದ್ಧಿ ಕ್ಷೇತ್ರಗಳಲ್ಲಿ ಜನರ ಸಹಕಾರದಿಂದ ಯಶಸ್ವಿಯಾಗಿ ಕೆಲಸ ನಡೆಯುತ್ತಿದೆ.

1956ರ ವರೆಗಿನ 5 ವರ್ಷಗಳ ಅವಧಿಯಲ್ಲಿ 20000 ಮೈಲುಗಳಿಗಿಂತಲೂ ಹೆಚ್ಚು ರಸ್ತೆ ನಿರ್ಮಿಸುವ ಆಲೋಚನೆಯಿದೆ. ಕಳೆದ ವರ್ಷದ ವರೆಗೆ 290 ಮೈಲುಗಳಷ್ಟು ರಸ್ತೆ ತಯಾರಾಗಿದೆ.

ಈ ಪರ್ವತ ಪ್ರದೇಶ ವಾಸಿಗಳ ಕುರಿತು ಪರಿಶೀಲನೆ ನಡೆಸಲು ಮಿ॥ ವೆರಿಯರ್ ಇಲ್ವಿನ್ ಎಂಬ ಸುಪ್ರಸಿದ್ಧ ಮಾನವ ವಿಜ್ಞಾನಿಯನ್ನು ಭಾರತ ಸರ್ಕಾರವು ನೇಮಿಸಿದೆ. ಇಂಫಾಲದಲ್ಲಿ ನಾಟಕ, ನಾಟ್ಯ, ಸಂಗೀತಗಳ ಅಭ್ಯಾಸ ಮತ್ತು ಅಭಿವೃದ್ಧಿಗಳಿಗಾಗಿ ಹಾಗೂ ಭಾರತದ ಇತರ ಕಡೆಗಳಲ್ಲಿ ಪ್ರಚಾರಗೊಳಿಸುವ ಉದ್ದೇಶದಿಂದ ಒಂದು ಶಾಲೆ ಇಷ್ಟರಲ್ಲೇ ಸ್ಥಾಪಿಸಲ್ಪಡುವುದು.

ಹೊಸದಿಲ್ಲಿಯಲ್ಲಿ ನಡೆದ ಸ್ವಾತಂತ್ರ್ಯ ದಿನೋತ್ಸವದಲ್ಲಿ ಭಾಗವಹಿಸಲು ಈ ಪ್ರದೇಶದಿಂದ ಅನೇಕ ಕಲಾವಿದರು ಕರೆಯಲ್ಪಟ್ಟರು. ಷಿಲ್ಲಾಂಗ್‌ದಲ್ಲಿ ಪ್ರತಿವರ್ಷವೂ, ಇಲ್ಲಿಯ ಜಾನಪದ ಕಲೆ, ಸಂಗೀತ, ನಾಟ್ಯಗಳ ಉತ್ಸವವು ನಡೆಯುತ್ತದೆ. ಭಾರತದ ಇತರ ರಾಜ್ಯಗಳಿಂದ ಇಲ್ಲಿಗೂ ಇಲ್ಲಿಂದ ಇತರ ರಾಜ್ಯಗಳಿಗೂ ಕಲಾವಿದರನ್ನು ವಿನಿಮಯ ಮಾಡುವ ಸೂಚನೆ ಇದೆ.

ಈ ಪರ್ವತ ವಾಸಿಗಳನ್ನು ಭಾರತ ಸರ್ಕಾರ ಹಾಗೂ ಇತರ ರಾಜ್ಯ ಸರ್ಕಾರದ ನೌಕರಿಗಳಲ್ಲಿ ಸೇರಿಸಲಾಗುತ್ತಿದೆ. ಒಬ್ಬ ರಾಜಕೀಯ ಅಧಿಕಾರಿಯೂ, ಆರು ಮಂದಿ ಸಹಾಯಕ ಅಧಿಕಾರಿಗಳೂ ಈ ಪಂಗಡಕ್ಕೆ ಸೇರಿದವರೇ ಆಗಿದ್ದಾರೆ.

ಈ ಪಂಗಡಕ್ಕೆ ಸೇರಿದ ಕುಮಾರಿ ಹರಾಲು ಎಂಬವರನ್ನು ವಿದೇಶಾಂಗ ಸಚಿವಾಲಯವು ಇತ್ತೀಚೆಗೆ ಕೆಲಸಕ್ಕೆ ನೇಮಿಸಿಕೊಂಡು ಮಹಿಳೆಯರಿಗೆ ಪ್ರೋತ್ಸಾಹ ಕೊಡುವುದರಲ್ಲಿ ಹೆಜ್ಜೆಯನ್ನು ಮುಂದಿಟ್ಟಿರುವುದು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkapet, UDIPI, S. Kanara.

ಫೋನು ನಂಬ್ರ 66

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ನಿಮ್ಮಷ್ಟಕ್ಕೇ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ —
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ —
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ —
ಬಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ —

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧—೮—೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:— 1) ನವಭಾರತ ಪುಸ್ತಕ ಭಂಡಾರ, ಉಡುಪಿ, ದ ಕ.
2) ನವಯುಗ ಪ್ರೆಸ್, ಉಡುಪಿ, ದ. ಕ.

Edited, Printed & Published By K. H. Shetty at the Navayuga Press, Udipi, S. India

ನವಯುಗ

Sl. No.	Weeks	No. of pages.
1)	2-9-1954	12
2)	9-9-1954	12
3)	16-9-1954	12
4)	23-9-1954	12
5)	30-9-1954	12
6)	7-10-1954	12
7)	14-10-1954	12
8)	21-10-1954	12
9)	28-10-1954	12
10)	4-11-1954	12
11)	11-11-1954	12
12)	18-11-1954	12
13)	25-11-1954	12
14)	2-12-1954	10
15)	9-12-1954	12
16)	23-12-1954	12
17)	30-12-1954	12
18)	6-1-1955	12
19)	13-1-1955	12
20)	20-1-1955	12
		238

gd. No. M. 3618

Licence No. :
Licensed to Post without Prepayment

ನವಯುಗ

ಸಂಪುಟ ೩೪
VOL. 34

ಉಡುಪಿ, 2—9—1954

ಸಂಚಿಕೆ ೧
NO. 1

ಹಿತನುಡಿ

* *

ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಹೂಡಿದ್ದಾಗ ನಾವು ಹಿಂಸಾ ಪ್ರವೃತ್ತಿಗೆ ವಿರೋಧವನ್ನು ತೋರಿಸುತಿದ್ದೆವು. ಸ್ವಾತಂತ್ರ್ಯಪ್ರಾಪ್ತಿಯ ಬಳಿಕ ನಮಗೆ ಪ್ರಜಾಪ್ರಭುತ್ವ ಪದ್ಧತಿಯ ಮೂಲಕ ಶಾಂತ ರೀತಿಯಿಂದ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವು ತೆರದಿರುತ್ತವ ತತ್ಪರಿಣಾಮ ನಾವು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಿಂಸಾ ಪ್ರವೃತ್ತಿಯನ್ನು ವಿರೋಧಿಸುವುದು ಅಪೇಕ್ಷಣೀಯವೂ ಅಗತ್ಯವೂ ಆಗಿದೆ.

—ನೆಹರೂ.

ಇಲ್ಲಿದೆ ಸ್ವಾರಸ್ಯ

* *

ಒಬ್ಬ ವಿದ್ಯಾರ್ಥಿ ಪುಸ್ತಕ ಭಂಡಾರದ ಅಧಿಕಾರಿಯೊಡನೆ ಮಾತನಾಡುತ್ತಾ "ನಿಮ್ಮಲ್ಲಿ ಇದಕ್ಕೂ ಉತ್ತಮವಾದ ಅಸ್ಥಿಪಂಜರ ರಚನಾ ಶಾಸ್ತ್ರದ ಪುಸ್ತಕವಿಲ್ಲವೆ?" ಎಂದು ದೂರಿದ. "ಇದನ್ನು ಬರೆದು ಹತ್ತು ವರ್ಷವಾಯಿತು" ಎಂಬುದೇ ಅವನ ಆಕ್ಷೇಪ.

"ಆದರೆ ಸ್ವಾಮಿ, ಕಳೆದ ಹತ್ತು ವರ್ಷಗಳಲ್ಲಿ ಮನುಷ್ಯ ಶರೀರದಲ್ಲಿ ಹೊಸ ಎಲುಬುಗಳನ್ನೇನೂ ಸೇರಿಸಿಲ್ಲವಲ್ಲ!" ಎಂದು ಅಧಿಕಾರಿ ಉತ್ತರವನ್ನು ಕೊಡಲು, ವಿದ್ಯಾರ್ಥಿ ತನ್ನ ಅಭಿಪ್ರಾಯವನ್ನು ಪುನಃ ವಿಮರ್ಶಿಸಿಕೊಳ್ಳಬೇಕಾಯಿತು.

ಶಾಸನ ಹಾಗು ಸಂಯಮ

ಪುಣೆಯಿಂದ ಬಂದ ಸುದ್ದಿಯೊಂದು ಮುಂಬಯಿ ಸರಕಾರವು ಮಾಧ್ಯಮಿಕ ಶಾಲೆಗಳಲ್ಲಿ ಹತ್ತನೇ ತರಗತಿಯ ವರೆಗಿನ 'ದ್ಯಾರ್ಥಿ – ವಿದ್ಯಾರ್ಥಿನಿಯರು ಯಾರೂ ಫೌಂಟನ್ ಪೆನ್ನುಗಳನ್ನು ಬರೆಯುವುದಕ್ಕಾಗಿ ಉಪಯೋಗಿಸಕೂಡದೆಂದು ನಿರ್ಬಂಧವನ್ನು ಹೇರಿದೆಯಾಗಿ ತಿಳಿಸುತ್ತದೆ ಒಳ್ಳೆಯ ಫೌಂಟನ್ ಪೆನ್ನುಗಳು ತುಟ್ಟಿಯಾಗಿವೆಯೆಂಬುದೂ ಇವುಗಳನ್ನು ಉಪಯೋಗಿಸುವುದರಿಂದ ಕೈ ಬರೆಹ ಸುಧಾರಿಸುವುದಿಲ್ಲವೆಂಬುದೂ ಸರಕಾರವು ಈ ಆಜ್ಞೆಯನ್ನು ಹೊರಡಿಸುವುದಕ್ಕೆ ಕಾರಣ. ಶಾಸನ ಸಭೆಯ ಸದಸ್ಯರು ಇದನ್ನು ಮೆಚ್ಚಿದ್ದಾರೆ; ಕೆಲವು ಹೆತ್ತವರೂ ಸಂತೋಷಗೊಂಡಿದ್ದಾರೆ. ಮಕ್ಕಳಿಗೆ ಬಹು ಬೆಲೆ ಬಾಳುವ ಫೌಂಟನ್ ಪೆನ್ನುಗಳನ್ನು ತೆಗೆದುಕೊಡುವುದೆಂದರೆ ಆರ್ಥಿಕ ದೃಷ್ಟಿಯಿಂದ ಭಾರವಾಗುತ್ತದೆ; ಅಲ್ಲದೆ ಅಂತಹ ಪೆನ್ನುಗಳನ್ನು ಹೇಗೆ ಉಪಯೋಗಿಸಬೇಕೆಂದು ಅವರಿಗೆ ತಿಳಿದಿಲ್ಲ; ಕಡಿಮೆ ಬೆಲೆಯ ಫೌಂಟನ್ ಪೆನ್ನುಗಳನ್ನು ಉಪಯೋಗಿಸುವಾಗ, ಶಾಯಿಯು ಹೊರಬಂದು ವೈಕೈ ಅಂಗಿ ಪುಸ್ತಕಗಳಲ್ಲೆಲ್ಲ ಶಾಯಿ ಬಿದ್ದು ಅಂದ ಕೆಡುತ್ತದೆ–ಎಂದು ಮುಂತಾಗಿ ಈ ಆಜ್ಞೆಯ ಸಮರ್ಥಕರು ಪ್ರತಿಪಾದಿಸುತ್ತಾರೆ.ಆದರೆ ನಾವಿಲ್ಲಿ ಮೂಲಭೂತವಾದ ಪ್ರಶ್ನೆಯೊಂದನ್ನು ವಿಚಾರಿಸಬೇಕಾಗಿದೆಯೆಂದು ಹೇಳುವುದೊಳಿತು: ಫೌಂಟನ್ ಪೆನ್ನುಗಳ ಉಪಯೋಗದಂತಹ ಒಂದು ಸಂಗತಿಯ ಮೇಲೂ ಸರಕಾರೀ ಮಟ್ಟದಲ್ಲಿ ಕಾಯಿದೆಯ ನಿಯಂತ್ರಣ ಹೇರಹೊರಟ ನಾವು ಎಲ್ಲಿಗೆ ಮುಟ್ಟಬಹುದು?

ಇದಕ್ಕೆ ದೊರೆಯುವ ಉತ್ತರದ ಮೇಲೆಯೇ ನಮ್ಮ—ಅಂದರೆ ಭಾರತದ–ಭವಿಷ್ಯವು ನಿಂತಿದೆಯೆಂದರೆ ತಪ್ಪಾಗದು. ನಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತೇವೆ. ಆದರೆ ಪ್ರಜೆಗಳಿಗೆ ಪ್ರಭುತ್ವದಲ್ಲಿ ನಿಜವಾಗಿ ದೊರೆತ ಅವಕಾಶವು 'ಶೂನ್ಯಕ್ಕೆ ಸಮೀಪಗತವಾಗುತ್ತಾ ಹೋಗುತ್ತಲಿದೆ. ಪ್ರಜಾಪ್ರಭುತ್ವವನ್ನು ಅನ್ವರ್ಥವಾಗಿಸಬೇಕೆನ್ನುವ ಯಾರೇ ಆದರೂ "ಲೋಕ ನೀತಿ"ಯನ್ನು ಅನುಸರಿಸಬೇಕಾಗುವುದು, ಆದರೆ ನಾವು "ರಾಜನೀತಿ"ಯನ್ನೆ ಇನ್ನಷ್ಟು ದೃಢವಾಗಿ ಅಪ್ಪಿಕೊಳ್ಳಲು ಮುಂದಾಗುತಿದ್ದೇವೆ. "ಜನಶಕ್ತಿ"ಯನ್ನು ಪರಿವರ್ತನೆಗಳಿಗೆ ಹೇತುವಾಗಿಸುವ ಬದಲು "ದಂಡ ಶಕ್ತಿ' ಯಿಂದ ಚಮತ್ಕಾರಗಳನ್ನು ಸಾಧಿಸುವ ಚಪಲವನ್ನು ತೋರಿಸುವ ಪ್ರವೃತ್ತಿಯೂ ಒಮ್ಮೊಮ್ಮೆ ನಮಗಾಗುತ್ತದೆ. ಜನರ ಮನವೊಲಿಸುವಿಕೆ ಅಥವಾ ಹೃದಯ ಪರಿವರ್ತನೆಯೆಂಬ ಸಾತ್ವಿಕ ಅಂಶಗಳ ಕಡೆಗಾಗಲೀ ಮನುಷ್ಯ ವ್ಯಕ್ತಿತ್ವದ ವರ್ಚಸ್ಸಿನ ಕಲ್ಪನೆಯಾಗಲೀ ಇಲ್ಲದನೇ ನಾವು ನಾನಾ ಪ್ರಕಾರದ ಧೋರಣೆಯನ್ನು ರೂಪಿಸಿಕೊಳ್ಳುತ್ತಾ ಶಾಸನಗಳನ್ನು ರಚಿಸುತಿದ್ದೇವೆ.

ಇದರ ಸಹಜ ಪರಿಣಾಮವು ನಮ್ಮ ಕಾಯಿದೆಗಳ ಕಂತೆಯೇ ಆಗಿದೆ–ಜನತೆಯೇ ತಾನಾಗಿ ಲೋಕ ನೀತಿಯೊಂದನ್ನು ಅನುಸರಿಸುವ ಸ್ಥಾನವಲ್ಲಿ ಜನತೆಯ ಪ್ರತಿನಿಧಿಗಳೆಂದು ಕರೆಯಲ್ಪಡುವ ಕೆಲವು ಪ್ರಭೃತಿಗಳು ತಮ್ಮ ಮನಸ್ಸಿಗೆ ಬಂದ ಕಾಯಿದೆಗಳನ್ನು ರಚಿಸಿ, ಜನರ ಮೇಲೆ ಹೇರುತ್ತಾರೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಮಾತಿನಲ್ಲಿಯೇ ಹೇಳುವುದಾದರೆ, ಸರ್ವಾಧಿಕಾರ ತತ್ವದ ತಳಹದಿಯ ಮೇಲೆ ನಡೆಯುವ ರಾಷ್ಟ್ರಗಳು ನಾಗರಿಕ ವ್ಯಕ್ತಿಗಳ ಪ್ರತಿಯೊಂದೂ ಹೆಜ್ಜೆಯ ಮೇಲೆ ನಿಯಂತ್ರಣವನ್ನು ಹೇರುತ್ತವೆ. ಸರ್ವಾಧಿಕಾರ ತತ್ವವನ್ನು ಒಪ್ಪದ ರಾಷ್ಟ್ರಗಳೂ ನಿಧಾನವಾಗಿ ನಿಯಂತ್ರಣಗಳನ್ನು ವಿಸ್ತರಿಸುವ ಕಡೆಗೆ ಒಲಿಯುತ್ತಿವೆ. ಈ ದೇಶದಲ್ಲಿಯೇ ನಾವು ವ್ಯಕ್ತಿಯ ಮೇಲೆ ಆಡಳಿತದ ನಿಯಂತ್ರಣವು ಬೆಳೆಯುತ್ತಿರುವುದನ್ನು ಕಾಣುತಿದ್ದೇವೆ–ಪ್ರತಿ ದಿನವೆಂಬಂತೆ ನಮ್ಮ ಶಾಸನ ಸಭೆಗಳೂ ಪಾರ್ಲಿಮೆಂಟೂ ಚರ್ಚಿಸಿ ಪಾಸು ಮಾಡುವ ಕಾಯಿದೆಗಳ ರಾಶಿಯೇ ಇದಕ್ಕೆ ಪ್ರತ್ಯಕ್ಷ ನಿದರ್ಶನ. ಕಾಯಿದೆಗಳ ಆವಶ್ಯಕತೆಗೊಂದು ಕೊನೆಯೇ ಕಾಣುವುದಿಲ್ಲ. ಕಾನೂನು ಮಾಡಿದರೆ ಸಾಕು, ಸಮಸ್ಯೆಗಳ ಪರಿಹಾರವಾಗಿ ಬಿಡುವುದೆಂದು ತಿಳಿದುಕೊಂಡಂತೆ ಭಾಸವಾಗುತ್ತದೆ. ಆದುದರಿಂದ ನಾವು ವರದಕ್ಷಿಣೆಯನ್ನು ಪ್ರತಿಬಂಧಿಸಲು, ಜಮೀನುದಾರಿಯನ್ನು ನಿರ್ಮೂಲಗೊಳಿಸಲು, ಹರಿಜನರಿಗೆ ದೇವಾಲಯದಲ್ಲಿ ಪ್ರವೇಶಿಸಗೊಡಲು, ದೇವಾಲಯಗಳಿಗೆ ಸಂಬಂಧಿಸಿದ ಆಸ್ತಿಪಾಸ್ತಿಗಳ ಸಂರಕ್ಷಣೆ ಮಾಡಲು, ಮಾಲಕ– ಮಜೂರ ಸಂಬಂಧವನ್ನು ಊರ್ಜಿತಗೊಳಿಸಲು, ಹೆಚ್ಚು ಕಡಿಮೆ ನಿತ್ಯ ವ್ಯವಹಾರದ ಪ್ರತಿಯೊಂದೂ ಕ್ಷೇತ್ರದಲ್ಲಿ ಕಾಯಿದೆಗೆ ಇಂಬು ಕೊಡುತಿದ್ದೇವೆ.

ಇದರಿಂದ ಲಾಭವೇನಾದರೂ ಆಗುವುದೋ ಎಂಬುವನ್ನು ವಿಮರ್ಶಿಸದಿರಲಾಗುವುದಿಲ್ಲ— ಕಾಯಿದೆ ಪಂಡಿತರು "ಜನಹಿತ"ವಾಗಬೇಕೆಂಬ ಘನವಾದ ಮತ್ತು ಉದಾತ್ತವಾದ ಭಾವನೆಯಿಂದ ಹಲವಾರು ಬಗೆಯ ವಿಧೇಯಕಗಳನ್ನು ಸಿದ್ಧಗೊಳಿಸುತ್ತಿರುವರೆಂಬುದೇನೊ ನಿಜ; ಆದರೆ ಈ ಕಾಯಿದೆಗಳ ಕಾರ್ಯಾಚರಣೆಯಲ್ಲಿ ಯಾವ ದೋಷವನ್ನು ನಿವಾರಿಸಲು ಕಾಯಿದೆಗಳನ್ನು ರಚಿಸಿದೆವೋ, ಅದಕ್ಕೂ ಹತ್ತುಪಾಲು ಹೆಚ್ಚು ಹಾನಿಕಾರಕ ಪರಿಣಾಮವು ಕಂಡು ಬರುತ್ತದೆ. ಕಾಯಿದೆಯ ಬಲದಿಂದ ಅಸ್ಪೃಶ್ಯತೆಯನ್ನು ಅಪರಾಧವಾಗಿ ಪರಿಗಣಿಸಿದ ಮಾತ್ರಕ್ಕೆ, ಸಾಮಾಜಿಕ ಸ್ಥಾನಮಾನಗಳೇನು ಹರಿಜನರಿಗೆ ದೊರೆತಂತಾಗಲಿಲ್ಲ; ಜನರಿನ್ನೂ ಆ ಕಾಯಿದೆಯನ್ನು ನಿತ್ಯವ್ಯವಹಾರದಲ್ಲಿ ಮನ್ನಿಸಿದಂತೆ ಕಾಣುವುದಿಲ್ಲ ನಾವು ರೂಪಿಸಿದ ಎಷ್ಟೋ ಶಾಸನಗಳು ನಮ್ಮ ಪವಿತ್ರವಾದ ರಾಜ್ಯಘಟನೆಯ ಯಾವುದಾದರೊಂದು ಕಲಮನ್ನು ಉಲ್ಲಂಘಿಸುತ್ತವೆಂದು ನ್ಯಾಯಾಲಯಗಳು ತೀರ್ಪು ಕೊಟ್ಟದುಂಟು.ಘಟನೆಯ ಒಂದು ಕಲಮಿನ ಆವಶ್ಯಕತೆಯನ್ನು ಪೂರೈಸಲೆಂದು ಮಾಡಿದ ಕಾಯಿದೆಯು ಅದೇ ಘಟನೆಯ ಬೇರೆ ಯಾವುದೋ ಇನ್ನೊಂದು ಕಲಮಿನ ಆಶಯಕ್ಕೆ ವಿರುದ್ಧವಾಗಿರುವುದೂ ಉಂಟು! ಘಟನಾತ್ಮಕವಾಗಿ ಬಂದ ಈ ತೊಡಕುಗಳ ಪರಿಹಾರಾರ್ಥ ನಾವು ತಿದ್ದುಪಡಿಗಳನ್ನು ಕೈಗೊಳ್ಳುವ ಹವ್ಯಾಸವನ್ನೂ ತೋರಿಸುತಿದ್ದೇವೆ. ಘಟನೆಯ ತಿದ್ದುಗೆಯಲ್ಲಿ ಭಾವನಾತ್ಮಕ ವಿಚಾರಗಳಿಗೇನೂ ಪ್ರಾಧಾನ್ಯವಿಲ್ಲ; ವ್ಯಾವಹಾರಿಕ ದೃಷ್ಟಿಕೋಣವೇ ಇಲ್ಲಿ ಮುಖ್ಯವೆಂದು ಹೇಳಲಾಗುತ್ತದೆ. ಇದರ ಮೇಲೆ, ನ್ಯಾಯಮಂಡಳಿಗಳ ತೀರ್ಪನ್ನು ಸಹ ಸರಕಾರವು ಬದಲಿಸುವ ಪ್ರಸಂಗಗಳು ನಮ್ಮ ಅನುಭವಕ್ಕೆ ಬಂದಿವೆ—ಬ್ಯಾಂಕು ನೌಕರರ ತಂಟೆಯ ಕುರಿತು ಭಾರತ ಸರಕಾರ ತಳೆದ ಧೋರಣೆಯು ಇದಕ್ಕೆ ಉದಾಹರಣೆಯಾಗಿದೆ.

ಪರಿಸ್ಥಿತಿ ಹೀಗಿರುವಾಗ ಕಾಯಿದೆಗಳನ್ನು ಅಮಲಿಗೆ ತರುವುದು ಬಹಳ ಕಷ್ಟದ ಕೆಲಸ—ಜನ ಅದನ್ನು ಒಪ್ಪುವುದಿಲ್ಲ; ನಮ್ಮ ಸಂಪ್ರದಾಯಗಳು ಮನ್ನಿಸುವುದಿಲ್ಲ; ಸಾಮಾಜಿಕ ದೃಷ್ಟಿಯಲ್ಲಿ ಕಾಯಿದೆಗಳಿಗೆ ಸ್ಥಾನಮಾನವೇ ದೊರೆಯುವುದಿಲ್ಲ. ಏಕೆಂದರೆ ಪ್ರಜಾಪ್ರಭುತ್ವದ ರಕ್ಷಣೆ ಮಾಡುವ ಸಾಮರ್ಥ್ಯವುಳ್ಳ ನ್ಯಾಯಸ್ಥಾನಗಳ ಪಾವಿತ್ರ್ಯದಲ್ಲಿಯೂ ವಿಶ್ವಾಸವು ಹಾರಿಹೋಗುವಂತೆ ಇಂದಿನ ವಿಚಾರಧಾರೆಯು

(೯ನೇ ಪುಟ ನೋಡಿರಿ)

21)	17- 2- 1955	12
22)	24- 2- 1955	12
23)	3- 3- 1955	12
24)	10- 3- 1955	12
25)	17- 3- 1955	12
26)	24- 3- 1955	12
27)	31- 3- 1955	12
28)	7- 4- 1955	12
29)	14- 4- 1955	12
30)	21- 4- 1955	14
31)	28 4- 1955	12
32)	5- 5- 1955	12
33)	12- 5- 1955	12
34)	19- 5- 1955	12
35)	2- 6- 1955	14
36)	9- 6- 1955	10
37)	27- 1- 1955	36 [illegible]
38)	3- 2- 1955	12
39)	10- 2- 1955	12
40)	16- 6- 1955	12
		266

34 ನೆಯ ವರ್ಷಾರಂಭ

Rd. No. M. 3618

Licence No. 3
Licensed to Post without Prepayment.

ನವಯುಗ

ಸಂಪುಟ ೩೪
VOL. 34

ಉಡುಪಿ, 2—9—1954

ಸಂಚಿಕೆ ೧
NO. 1

ಹಿತನುಡಿ

* *

ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಹೂಡಿದ್ದಾಗ ನಾವು ಹಿಂಸಾ ಪ್ರವೃತ್ತಿಗೆ ವಿರೋಧವನ್ನು ತೋರಿಸುತ್ತಿದ್ದೆವು. ಸ್ವಾತಂತ್ರ್ಯಪ್ರಾಪ್ತಿಯ ಬಳಿಕ ನಮಗೆ ಪ್ರಜಾಪ್ರಭುತ್ವ ಪದ್ಧತಿಯ ಮೂಲಕ ಶಾಂತ ರೀತಿಯಿಂದ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವು ತೆರೆದಿರುತ್ತದೆ. ತತ್ಪರಿಣಾಮ ನಾವು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಿಂಸಾ ಪ್ರವೃತ್ತಿಯನ್ನು ವಿರೋಧಿಸುವುದು ಅಪೇಕ್ಷಣೀಯವೂ ಅಗತ್ಯವೂ ಆಗಿದೆ.

—ನೆಹರೂ.

ಶಾಸನ ಹಾಗು ಸಂಯಮ

ಪುಣೆಯಿಂದ ಬಂದ ಸುದ್ದಿಯೊಂದು ಮುಂಬಯಿ ಸರಕಾರವು ಮಾಧ್ಯಮಿಕ ಶಾಲೆಗಳಲ್ಲಿ ಹತ್ತನೇ ತರಗತಿಯ ವರೆಗಿನ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಯಾರೂ ಫೌಂಟನ್ ಪೆನ್ನುಗಳನ್ನು ಬರೆಯುವುದಕ್ಕಾಗಿ ಉಪಯೋಗಿಸಕೂಡದೆಂದು ನಿರ್ಬಂಧವನ್ನು ಹೇರಿದೆಯಾಗಿ ತಿಳಿಸುತ್ತದೆ. ಒಳ್ಳೆಯ ಫೌಂಟನ್ ಪೆನ್ನುಗಳು ತುಟ್ಟಿಯಾಗಿವೆಯೆಂಬುದೂ ಇವುಗಳನ್ನು ಉಪಯೋಗಿಸುವುದರಿಂದ ಕೈ ಬರೆಹ ಸುಧಾರಿಸುವುದಿಲ್ಲವೆಂಬುದೂ ಸರಕಾರವು ಈ ಆಜ್ಞೆಯನ್ನು ಹೊರಡಿಸುವುದಕ್ಕೆ ಕಾರಣ. ಶಾಸನ ಸಭೆಯ ಸದಸ್ಯರು ಇದನ್ನು ಮೆಚ್ಚಿದ್ದಾರೆ; ಕೆಲವು ಹೆತ್ತವರೂ ಸಂತೋಷಗೊಂಡಿದ್ದಾರೆ. ಮಕ್ಕಳಿಗೆ ಬಹು ಬೆಲೆ ಬಾಳುವ ಫೌಂಟನ್ ಪೆನ್ನುಗಳನ್ನು ತೆಗೆದುಕೊಡುವುದೆಂದರೆ ಆರ್ಥಿಕ ದೃಷ್ಟಿಯಿಂದ ಭಾರವಾಗುತ್ತದೆ; ಅಲ್ಲದೆ ಅಂತಹ ಪೆನ್ನುಗಳನ್ನು ಹೇಗೆ ಉಪಯೋಗಿಸಬೇಕೆಂದು ಅವರಿಗೆ ತಿಳಿದಿಲ್ಲ; ಕಡಿಮೆ ಬೆಲೆಯ ಫೌಂಟನ್ ಪೆನ್ನುಗಳನ್ನು ಉಪಯೋಗಿಸುವಾಗ, ಶಾಯಿಯು ಹೊರಬಂದು ಮೈಕೈ ಅಂಗಿ ಪುಸ್ತಕಗಳಲ್ಲೆಲ್ಲ ಶಾಯಿ ಬಿದ್ದು ಅಂದ ಕೆಡುತ್ತದೆ–ಎಂದು ಮುಂತಾಗಿ ಈ ಆಜ್ಞೆಯ ಸಮರ್ಥಕರು ಪ್ರತಿಪಾದಿಸುತ್ತಾರೆ.ಆದರೆ ನಾವಿಲ್ಲಿ ಮೂಲಭೂತವಾದ ಪ್ರಶ್ನೆಯೊಂದನ್ನು ವಿಚಾರಿಸಬೇಕಾಗಿದೆಯೆಂದು ಹೇಳುವುದೊಳಿತು: ಫೌಂಟನ್ ಪೆನ್ನುಗಳ ಉಪಯೋಗದಂತಹ ಒಂದು ಸಂಗತಿಯ ಮೇಲೂ ಸರಕಾರೀ ಮಟ್ಟದಲ್ಲಿ ಕಾಯಿದೆಯ ನಿಯಂತ್ರಣ ಹೇರ ಹೊರಟ ನಾವು ಎಲ್ಲಿಗೆ ಮುಟ್ಟಬಹುದು?

ಇದಕ್ಕೆ ದೊರೆಯುವ ಉತ್ತರದ ಮೇಲೆಯೇ ನಮ್ಮ—ಅಂದರೆ ಭಾರತದ–ಭವಿಷ್ಯವು ನಿಂತಿದೆಯೆಂದರೆ ತಪ್ಪಾಗದು. ನಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತೇವೆ. ಆದರೆ ಪ್ರಜೆಗಳಿಗೆ ಪ್ರಭುತ್ವದಲ್ಲಿ ನಿಜವಾಗಿ ದೊರೆತ ಅವಕಾಶವು ಶೂನ್ಯಕ್ಕೆ ಸಮೀಪಗತವಾಗುತ್ತಾ ಹೋಗುತ್ತಲಿದೆ. ಪ್ರಜಾಪ್ರಭುತ್ವವನ್ನು ಅನ್ವರ್ಥವಾಗಿಸಬೇಕೆನ್ನುವ ಯಾರೇ ಆದರೂ "ಲೋಕ ನೀತಿ"ಯನ್ನು ಅನುಸರಿಸಬೇಕಾಗುವುದು; ಆದರೆ ನಾವು "ರಾಜನೀತಿ"ಯನ್ನೇ ಇನ್ನಷ್ಟು ದೃಢವಾಗಿ ಅಪ್ಪಿಕೊಳ್ಳಲು ಮುಂದಾಗುತಿದ್ದೇವೆ. "ಜನಶಕ್ತಿ"ಯನ್ನು ಪರಿವರ್ತನೆಗಳಿಗೆ ಹೇತುವಾಗಿಸುವ ಬದಲು "ದಂಡ ಶಕ್ತಿ"ಯಿಂದ ಚಮತ್ಕಾರಗಳನ್ನು ಸಾಧಿಸುವ ಚಪಲವನ್ನು ತೋರಿಸುವ ಪ್ರವೃತ್ತಿಯೂ ಒಮ್ಮೊಮ್ಮೆ ನಮಗಾಗುತ್ತದೆ. ಜನರ ಮನವೊಲಿಸುವಿಕೆ ಅಥವಾ ಹೃದಯ ಪರಿವರ್ತನೆಯೆಂಬ ಸಾತ್ವಿಕ ಅಂಶಗಳ ಕಡೆಗಾಗಲೀ ಮನುಷ್ಯ ವ್ಯಕ್ತಿತ್ವದ ವರ್ಚಸ್ಸಿನ ಕಲ್ಪನೆಯಾಗಲೀ ಇಲ್ಲದೆನೇ ನಾವು ನಾನಾ ಪ್ರಕಾರದ ಧೋರಣೆಯನ್ನು ರೂಪಿಸಿಕೊಳ್ಳುತ್ತಾ ಶಾಸನಗಳನ್ನು ರಚಿಸುತಿದ್ದೇವೆ.

ಇದರ ಸಹಜ ಪರಿಣಾಮವು ನಮ್ಮ ಕಾಯಿದೆಗಳ ಕಂತೆಯೇ ಆಗಿದೆ–ಜನತೆಯೇ ತಾನಾಗಿ ಲೋಕ ನೀತಿಯೊಂದನ್ನು ಅನುಸರಿಸುವ ಸ್ಥಾನದಲ್ಲಿ ಜನತೆಯ ಪ್ರತಿನಿಧಿಗಳೆಂದು ಕರೆಯಲ್ಪಡುವ ಕೆಲವು ಪ್ರಭೃತಿಗಳು ತಮ್ಮ ಮನಸ್ಸಿಗೆ ಬಂದ ಕಾಯಿದೆಗಳನ್ನು ರಚಿಸಿ, ಜನರ ಮೇಲೆ ಹೇರುತ್ತಾರೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಮಾತಿನಲ್ಲಿಯೇ ಹೇಳುವುದಾದರೆ, ಸರ್ವಾಧಿಕಾರ ತತ್ವದ ತಳಹದಿಯ ಮೇಲೆ ನಡೆಯುವ ರಾಷ್ಟ್ರಗಳು ನಾಗರಿಕ ವ್ಯಕ್ತಿಗಳ ಪ್ರತಿಯೊಂದೂ ಹೆಜ್ಜೆಯ ಮೇಲೆ ನಿಯಂತ್ರಣವನ್ನು ಹೇರುತ್ತವೆ. ಸರ್ವಾಧಿಕಾರ ತತ್ವವನ್ನು ಒಪ್ಪದ ರಾಷ್ಟ್ರಗಳೂ ನಿಧಾನವಾಗಿ ನಿಯಂತ್ರಣಗಳನ್ನು ವಿಸ್ತರಿಸುವ ಕಡೆಗೆ ಒಲಿಯುತ್ತಿವೆ. ಈ ದೇಶದಲ್ಲಿಯೇ ನಾವು ವ್ಯಕ್ತಿಯ ಮೇಲೆ ಆಡಳಿತದ ನಿಯಂತ್ರಣವು ಬೆಳೆಯುತ್ತಿರುವುದನ್ನು ಕಾಣುತಿದ್ದೇವೆ–ಪ್ರತಿ ದಿನವೆಂಬಂತೆ ನಮ್ಮ ಶಾಸನ ಸಭೆಗಳೂ ಪಾರ್ಲಿಮೆಂಟೂ ಚರ್ಚಿಸಿ ಪಾಸು ಮಾಡುವ ಕಾಯಿದೆಗಳ ರಾಶಿಯೇ ಇದಕ್ಕೆ ಪ್ರತ್ಯಕ್ಷ ನಿದರ್ಶನ. ಕಾಯಿದೆಗಳ ಆವಶ್ಯಕತೆಗೊಂದು ಕೊನೆಯೇ ಕಾಣುವುದಿಲ್ಲ. ಕಾನೂನು ಮಾಡಿದರೆ ಸಾಕು, ಸಮಸ್ಯೆಗಳ ಪರಿಹಾರವಾಗಿ ಬಿಡುವುದೆಂದು ತಿಳಿದುಕೊಂಡಂತೆ ಭಾಸವಾಗುತ್ತದೆ. ಆದುದರಿಂದ ನಾವು ವರದಕ್ಷಿಣೆಯನ್ನು ಪ್ರತಿಬಂಧಿಸಲು, ಜಮೀನುದಾರಿಯನ್ನು ನಿರ್ಮೂಲಗೊಳಿಸಲು, ಹರಿಜನರಿಗೆ ದೇವಾಲಯದಲ್ಲಿ ಪ್ರವೇಶಿಸಗೊಡಲು, ದೇವಾಲಯಗಳಿಗೆ ಸಂಬಂಧಿಸಿದ ಆಸ್ತಿಪಾಸ್ತಿಗಳ ಸಂರಕ್ಷಣೆ ಮಾಡಲು, ಮಾಲಕ– ಮಜೂರ ಸಂಬಂಧವನ್ನು ಊರ್ಜಿತಗೊಳಿಸಲು, ಹೆಚ್ಚು ಕಡಿಮೆ ನಿತ್ಯ ವ್ಯವಹಾರದ ಪ್ರತಿಯೊಂದೂ ಕ್ಷೇತ್ರದಲ್ಲಿ ಕಾಯಿದೆಗೆ ಇಂಬು ಕೊಡುತಿದ್ದೇವೆ.

ಇದರಿಂದ ಲಾಭವೇನಾದರೂ ಆಗುವುದೋ ಎಂಬುದನ್ನು ವಿಮರ್ಶಿಸದಿರಲಾಗುವುದಿಲ್ಲ— ಕಾಯಿದೆ ಪಂಡಿತರು "ಜನಹಿತ"ವಾಗಬೇಕೆಂಬ ಘನವಾದ ಮತ್ತು ಉದಾತ್ತವಾದ ಭಾವನೆಯಿಂದ ಹಲವಾರು ಬಗೆಯ ವಿಧೇಯಕಗಳನ್ನು ಸಿದ್ಧಗೊಳಿಸುತ್ತಿರುವರೆಂಬುದೇನೊ ನಿಜ; ಆದರೆ ಈ ಕಾಯಿದೆಗಳ ಕಾರ್ಯಾಚರಣೆಯಲ್ಲಿ ಯಾವ ದೋಷವನ್ನು ನಿವಾರಿಸಲು ಕಾಯಿದೆಗಳನ್ನು ರಚಿಸಿದೆವೋ, ಅದಕ್ಕೂ ಹತ್ತುಪಾಲು ಹೆಚ್ಚು ಹಾನಿಕಾರಕ ಪರಿಣಾಮವು ಕಂಡು ಬರುತ್ತದೆ. ಕಾಯಿದೆಯ ಬಲದಿಂದ ಅಸ್ಪೃಶ್ಯತೆಯನ್ನು ಅಪ

ಇಲ್ಲಿದೆ ಸ್ವಾರಸ್ಯ

* *

ಒಬ್ಬ ವಿದ್ಯಾರ್ಥಿ ಪುಸ್ತಕ ಭಂಡಾರದ ಅಧಿಕಾರಿಯೊಡನೆ ಮಾತನಾಡುತ್ತಾ "ನಿಮ್ಮಲ್ಲಿ ಇದಕ್ಕೂ ಉತ್ತಮವಾದ ಅಸ್ಥಿಪಂಜರ ರಚನಾ ಶಾಸ್ತ್ರದ ಪುಸ್ತಕವಿಲ್ಲವೆ?" ಎಂದು ದೂರಿದ. "ಇದನ್ನು ಬರೆದು ಹತ್ತು ವರ್ಷವಾಯಿತು" ಎಂಬುದೇ ಆತನ ಆಕ್ಷೇಪ.

"ಆದರೆ ಸ್ವಾಮಿ, ಕಳೆದ ಹತ್ತು ವರ್ಷಗಳಲ್ಲಿ ಮನುಷ್ಯ ಶರೀರದಲ್ಲಿ ಹೊಸ ಎಲುಬುಗಳನ್ನೇನೂ ಸೇರಿಸಿಲ್ಲವಲ್ಲ!" ಎಂದು ಅಧಿಕಾರಿ ಉತ್ತರವನ್ನು ಕೊಡಲು, ವಿದ್ಯಾರ್ಥಿ ತನ್ನ ಅಭಿಪ್ರಾಯವನ್ನು ಪುನಃ ವಿಮರ್ಶಿಸಿಕೊಳ್ಳಬೇಕಾಯಿತು.

ರಾಧವಾಗಿ ಪರಿಗಣಿಸಿದ ಮಾತ್ರಕ್ಕೆ, ಸಾಮಾಜಿಕ ಸ್ಥಾನಮಾನಗಳೇನು ಹರಿಜನರಿಗೆ ದೊರೆತಂತಾಗಲಿಲ್ಲ; ಜನರಿನ್ನೂ ಆ ಕಾಯಿದೆಯನ್ನು ನಿತ್ಯವ್ಯವಹಾರದಲ್ಲಿ ಮನ್ನಿಸಿದಂತೆ ಕಾಣುವುದಿಲ್ಲ ನಾವು ರೂಪಿಸಿದ ಎಷ್ಟೋ ಶಾಸನಗಳು ನಮ್ಮ ಪವಿತ್ರವಾದ ರಾಜ್ಯಘಟನೆಯ ಯಾವುದಾದರೊಂದು ಕಲಮನ್ನು ಉಲ್ಲಂಘಿಸುತ್ತವೆಂದು ನ್ಯಾಯಾಲಯಗಳು ತೀರ್ಪು ಕೊಟ್ಟದ್ದುಂಟು.ಘಟನೆಯ ಒಂದು ಕಲಮಿನ ಆವಶ್ಯಕತೆಯನ್ನು ಪೂರೈಸಲೆಂದು ಮಾಡಿದ ಕಾಯಿದೆಯು ಅದೇ ಘಟನೆಯ ಬೇರೆ ಯಾವುದೋ ಇನ್ನೊಂದು ಕಲಮಿನ ಆಶಯಕ್ಕೆ ವಿರುದ್ಧವಾಗಿರುವುದೂ ಉಂಟು! ಘಟನಾತ್ಮಕವಾಗಿ ಬಂದ ಈ ತೊಡಕುಗಳ ಪರಿಹಾರಾರ್ಥ ನಾವು ತಿದ್ದುಪಡಿಗಳನ್ನು ಕೈಗೊಳ್ಳುವ ಹವ್ಯಾಸವನ್ನೂ ತೋರಿಸುತಿದ್ದೇವೆ. ಘಟನೆಯ ತಿದ್ದುಗೆಯಲ್ಲಿ ಭಾವನಾತ್ಮಕ ವಿಚಾರಗಳಿಗೇನೂ ಪ್ರಾಧಾನ್ಯವಿಲ್ಲ; ವ್ಯಾವಹಾರಿಕ ದೃಷ್ಟಿಕೋನವೇ ಇಲ್ಲಿ ಮುಖ್ಯವೆಂದು ಹೇಳಲಾಗುತ್ತದೆ. ಇದರ ಮೇಲೆ, ನ್ಯಾಯಮಂಡಳಿಗಳ ತೀರ್ಪನ್ನು ಸಹ ಸರಕಾರವು ಬದಲಿಸುವ ಪ್ರಸಂಗಗಳು ನಮ್ಮ ಅನುಭವಕ್ಕೆ ಬಂದಿವೆ—ಬೇಂಕು ನೌಕರರ ತಂಟೆಯ ಕುರಿತು ಭಾರತ ಸರಕಾರ ತಳೆದ ಧೋರಣೆಯು ಇದಕ್ಕೆ ಉದಾಹರಣೆಯಾಗಿದೆ.

ಪರಿಸ್ಥಿತಿ ಹೀಗಿರುವಾಗ ಕಾಯಿದೆಗಳನ್ನು ಅಮಲಿಗೆ ತರುವುದು ಬಹಳ ಕಷ್ಟದ ಕೆಲಸ—ಜನ ಅದನ್ನು ಒಪ್ಪುವುದಿಲ್ಲ; ನಮ್ಮ ಸಂಪ್ರದಾಯಗಳು ಮನ್ನಿಸುವುದಿಲ್ಲ; ಸಾಮಾಜಿಕ ದೃಷ್ಟಿಯಲ್ಲಿ ಕಾಯಿದೆಗಳಿಗೆ ಸ್ಥಾನಮಾನವೇ ದೊರೆಯುವುದಿಲ್ಲ. ಏಕೆಂದರೆ ಪ್ರಜಾಪ್ರಭುತ್ವದ ರಕ್ಷಣೆ ಮಾಡುವ ಸಾಮರ್ಥ್ಯವುಳ್ಳ ನ್ಯಾಯಸ್ಥಾನಗಳ ಪಾವಿತ್ರ್ಯದಲ್ಲಿಯೂ ವಿಶ್ವಾಸವು ಹಾರಿ ಹೋಗುವಂತೆ ಇ[illegible] [illegible]ಯು

(೯ನೇ ಪುಟ ನೋಡಿರಿ)

ವಾರ್ಷಿಕ ಚಂದಾ: NAVAYUGA WEEKLY, UDIPI ಬಿಡಿ ಸಂಚಿಕೆ:

23-6-1955	12
30 6 1955	10
7-7-1955	12
14-7-1955	12
21-7-1955	12
28 7-1955	12
4-8-1955	12
11-8-1955	12
18-8-1955	23 [illegible]
25-8-1955	12
	129

1) 238
2) 266
3) 129

633

೩೪ ನೆಯ ವರ್ಷಾರಂಭ

…d. No. M. 3618

Licence No
Licensed to Post without Prepayme…

ನವಯುಗ

ಸಂಪುಟ ೩೪
VOL. 34

ಉಡುಪಿ, 2—9—1954

ಸಂಚಿಕೆ ೧
NO. 1

ಹಿತನುಡಿ

* *

ರಾಷ್ಟ್ರೀಯ ಸ್ವಾತಂತ್ರ್ಯದ ಹೋರಾಟ ಹೂಡಿದ್ದಾಗ ನಾವು ಹಿಂಸಾ ಪ್ರವೃತ್ತಿಗೆ ವಿರೋಧವನ್ನು ತೋರಿಸುತ್ತಿದ್ದೆವು. ಸ್ವಾತಂತ್ರ್ಯಪ್ರಾಪ್ತಿಯ ಬಳಿಕ ನಮಗೆ ಪ್ರಜಾಪ್ರಭುತ್ವ ಪದ್ಧತಿಯ ಮೂಲಕ ಸೌಮ್ಯ ರೀತಿಯಿಂದ ಸಮಸ್ಯೆಗಳನ್ನು ಪರಿಹರಿಸುವ ಮಾರ್ಗವು ತೆರೆದಿರುತ್ತದೆ. ತತ್ಪ್ರಯುಕ್ತ ನಾವು ಹಿಂದಿಗಿಂತಲೂ ಹೆಚ್ಚಾಗಿ ಇಂದು ಹಿಂಸಾ ಪ್ರವೃತ್ತಿಯನ್ನು ವಿರೋಧಿಸುವುದು ಅಪೇಕ್ಷಣೀಯವೂ ಅಗತ್ಯವೂ ಆಗಿದೆ.

—ನೆಹರೂ.

ಶಾಸನ ಹಾಗು ಸಂಯಮ

ಪುಣೆಯಿಂದ ಬಂದ ಸುದ್ದಿಯೊಂದು ಮುಂಬಯಿ ಸರಕಾರವು ಮಾಧ್ಯಮಿಕ ಶಾಲೆಗಳಲ್ಲಿ ಹತ್ತನೇ ತರಗತಿಯ ವರೆಗಿನ ವಿದ್ಯಾರ್ಥಿ – ವಿದ್ಯಾರ್ಥಿನಿಯರು ಯಾರೂ ಫೌಂಟೆನ್ ಪೆನ್ನುಗಳನ್ನು ಬರೆಯುವುದಕ್ಕಾಗಿ ಉಪಯೋಗಿಸಕೂಡದೆಂದು ನಿರ್ಬಂಧವನ್ನು ಹೇರಿದೆಯಾಗಿ ತಿಳಿಸುತ್ತದೆ. ಒಳ್ಳೆಯ ಫೌಂಟೆನ್ ಪೆನ್ನುಗಳು ತುಟ್ಟಿಯಾಗಿವೆಯೆಂಬುದೂ ಇವುಗಳನ್ನು ಉಪಯೋಗಿಸುವುದರಿಂದ ಕೈ ಬರೆಹ ಸುಧಾರಿಸುವುದಿಲ್ಲವೆಂಬುದೂ ಸರಕಾರವು ಈ ಆಜ್ಞೆಯನ್ನು ಹೊರಡಿಸುವುದಕ್ಕೆ ಕಾರಣ. ಶಾಸನ ಸಭೆಯ ಸದಸ್ಯರು ಇದನ್ನು ಮೆಚ್ಚಿದ್ದಾರೆ, ಕೆಲವು ಹೆತ್ತವರೂ ಸಂತೋಷಗೊಂಡಿದ್ದಾರೆ. ಮಕ್ಕಳಿಗೆ ಬಹು ಬೆಲೆ ಬಾಳುವ ಫೌಂಟೆನ್ ಪೆನ್ನುಗಳನ್ನು ತೆಗೆದುಕೊಡುವುದೆಂದರೆ ಆರ್ಥಿಕ ದೃಷ್ಟಿಯಿಂದ ಭಾರವಾಗುತ್ತದೆ; ಅಲ್ಲದೆ ಅಂತಹ ಪೆನ್ನುಗಳನ್ನು ಹೇಗೆ ಉಪಯೋಗಿಸಬೇಕೆಂದು ಅವರಿಗೆ ತಿಳಿದಿಲ್ಲ; ಕಡಿಮೆ ಬೆಲೆಯ ಫೌಂಟೆನ್ ಪೆನ್ನುಗಳನ್ನು ಉಪಯೋಗಿಸುವಾಗ, ಶಾಯಿಯು ಹೊರಬಂದು ಮೈಕೈ ಅಂಗಿ ಪುಸ್ತಕಗಳಲ್ಲೆಲ್ಲ ಶಾಯಿ ಬಿದ್ದು ಅಂದ ಕೆಡುತ್ತದೆ–ಎಂದು ಮುಂತಾಗಿ ಈ ಆಜ್ಞೆಯ ಸಮರ್ಥಕರು ಪ್ರತಿಪಾದಿಸುತ್ತಾರೆ. ಆದರೆ ನಾವಿಲ್ಲಿ ಮೂಲಭೂತವಾದ ಪ್ರಶ್ನೆಯೊಂದನ್ನು ವಿಚಾರಿಸಬೇಕಾಗಿದೆಯೆಂದು ಹೇಳುವುದೊಳಿತು: ಫೌಂಟೆನ್ ಪೆನ್ನುಗಳ ಉಪಯೋಗದಂತಹ ಒಂದು ಸಂಗತಿಯ ಮೇಲೂ ಸರಕಾರೀ ಮಟ್ಟದಲ್ಲಿ ಕಾಯಿದೆಯ ನಿಯಂತ್ರಣ ಹೇರ ಹೊರಟ ನಾವು ಎಲ್ಲಿಗೆ ಮುಟ್ಟ ಬಹುದು?

ಇದಕ್ಕೆ ದೊರೆಯುವ ಉತ್ತರದ ಮೇಲೆಯೇ ನಮ್ಮ—ಅಂದರೆ ಭಾರತದ–ಭವಿಷ್ಯವು ನಿಂತಿದೆಯೆಂದರೆ ತಪ್ಪಾಗದು. ನಾವು ಪ್ರಜಾಪ್ರಭುತ್ವವಾದಿಗಳೆಂದು ಹೇಳಿಕೊಳ್ಳುತ್ತೇವೆ ಆದರೆ ಪ್ರಜೆಗಳಿಗೆ ಪ್ರಭುತ್ವದಲ್ಲಿ ನಿಜವಾಗಿ ದೊರೆತ ಅವಕಾಶವು ಶೂನ್ಯಕ್ಕೆ ಸಮೀಪಗತವಾಗುತ್ತಾ ಹೋಗುತ್ತಲಿದೆ. ಪ್ರಜಾಪ್ರಭುತ್ವವನ್ನು ಅನ್ವರ್ಥವಾಗಿಸಬೇಕೆನ್ನುವ ಯಾರೇ ಆದರೂ "ಲೋಕ ನೀತಿ"ಯನ್ನು ಅನುಸರಿಸಬೇಕಾಗುವುದು, ಆದರೆ ನಾವು "ರಾಜನೀತಿ"ಯನ್ನೇ ಇನ್ನಷ್ಟು ದೃಢವಾಗಿ ಅಪ್ಪಿಕೊಳ್ಳಲು ಮುಂದಾಗುತಿದ್ದೇವೆ. "ಜನಶಕ್ತಿ"ಯನ್ನು ಪರಿವರ್ತನೆಗಳಿಗೆ ಹೇತುವಾಗಿಸುವ ಬದಲು "ದಂಡ ಶಕ್ತಿ"ಯಿಂದ ಚಮತ್ಕಾರಗಳನ್ನು ಸಾಧಿಸುವ ಚಪಲವನ್ನು ತೋರಿಸುವ ಪ್ರವೃತ್ತಿಯೂ ಒಮ್ಮೊಮ್ಮೆ ನಮಗಾಗುತ್ತದೆ. ಜನರ ಮನವೊಲಿಸುವಿಕೆ ಅಥವಾ ಹೃದಯ ಪರಿವರ್ತನೆಯೆಂಬ ಸಾತ್ವಿಕ ಅಂಶಗಳ ಕಡೆಗಾಗಲೀ ಮನುಷ್ಯ ವ್ಯಕ್ತಿತ್ವದ ವರ್ಚಸ್ಸಿನ ಕಲ್ಪನೆಯಾಗಲೀ ಇಲ್ಲದೆನೇ ನಾವು ನಾನಾ ಪ್ರಕಾರದ ಧೋರಣೆಯನ್ನು ರೂಪಿಸಿಕೊಳ್ಳುತ್ತಾ ಶಾಸನಗಳನ್ನು ರಚಿಸುತಿದ್ದೇವೆ.

ಇದರ ಸಹಜ ಪರಿಣಾಮವು ನಮ್ಮ ಕಾಯಿದೆಗಳ ಕಂತೆಯೇ ಆಗಿದೆ–ಜನತೆಯೇ ತಾನಾಗಿ ಲೋಕ ನೀತಿಯೊಂದನ್ನು ಅನುಸರಿಸುವ ಸ್ಥಾನದಲ್ಲಿ ಜನತೆಯ ಪ್ರತಿನಿಧಿಗಳೆಂದು ಕರೆಯಲ್ಪಡುವ ಕೆಲವು ಪ್ರಭೃತಿಗಳು ತಮ್ಮ ಮನಸ್ಸಿಗೆ ಬಂದ ಕಾಯಿದೆಗಳನ್ನು ರಚಿಸಿ, ಜನರ ಮೇಲೆ ಹೇರುತ್ತಾರೆ. ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಮಾತಿನಲ್ಲಿಯೇ ಹೇಳುವುದಾದರೆ, ಸರ್ವಾಧಿಕಾರ ತತ್ವದ ತಳಹದಿಯ ಮೇಲೆ ನಡೆಯುವ ರಾಷ್ಟ್ರಗಳು ನಾಗರಿಕ ವ್ಯಕ್ತಿಗಳ ಪ್ರತಿಯೊಂದೂ ಹೆಜ್ಜೆಯ ಮೇಲೆ ನಿಯಂತ್ರಣವನ್ನು ಹೇರುತ್ತವೆ. ಸರ್ವಾಧಿಕಾರ ತತ್ವವನ್ನು ಒಪ್ಪದ ರಾಷ್ಟ್ರಗಳೂ ನಿಧಾನವಾಗಿ ನಿಯಂತ್ರಣಗಳನ್ನು ವಿಸ್ತರಿಸುವ ಕಡೆಗೆ ಒಲಿಯುತ್ತವೆ. ಈ ದೇಶದಲ್ಲಿಯೇ ನಾವು ವ್ಯಕ್ತಿಯ ಮೇಲೆ ಆಡಳಿತದ ನಿಯಂತ್ರಣವು ಬೆಳೆಯುತ್ತಿರುವುದನ್ನು ಕಾಣುತ್ತಿದ್ದೇವೆ–ಪ್ರತಿ ದಿನವೆಂಬಂತೆ ನಮ್ಮ ಶಾಸನ ಸಭೆಗಳೂ ಪಾರ್ಲಿಮೆಂಟೂ ಚರ್ಚಿಸಿ ಪಾಸು ಮಾಡುವ ಕಾಯಿದೆಗಳ ರಾಶಿಯೇ ಇದಕ್ಕೆ ಪ್ರತ್ಯಕ್ಷ ನಿದರ್ಶನ. ಕಾಯಿದೆಗಳ ಆವಶ್ಯಕತೆಗೊಂದು ಕೊನೆಯೇ ಕಾಣುವುದಿಲ್ಲ. ಕಾನೂನು ಮಾಡಿದರೆ ಸಾಕು, ಸಮಸ್ಯೆಗಳ ಪರಿಹಾರವಾಗಿ ಬಿಡುವುದೆಂದು ತಿಳಿದುಕೊಂಡಂತೆ ಭಾಸವಾಗುತ್ತದೆ. ಆದುದರಿಂದ ನಾವು ವರದಕ್ಷಿಣೆಯನ್ನು ಪ್ರತಿಬಂಧಿಸಲು, ಜಮೀನುದಾರಿಯನ್ನು ನಿರ್ಮೂಲಗೊಳಿಸಲು, ಹರಿಜನರಿಗೆ ದೇವಾಲಯದಲ್ಲಿ ಪ್ರವೇಶಿಸಗೊಡಲು, ದೇವಾಲಯಗಳಿಗೆ ಸಂಬಂಧಿಸಿದ ಆಸ್ತಿಪಾಸ್ತಿಗಳ ಸಂರಕ್ಷಣೆ ಮಾಡಲು, ಮಾಲಕ– ಮಜೂರ ಸಂಬಂಧವನ್ನು ಊರ್ಜಿತಗೊಳಿಸಲು, ಹೆಚ್ಚು ಕಡಿಮೆ ನಿತ್ಯ ವ್ಯವಹಾರದ ಪ್ರತಿಯೊಂದೂ ಕ್ಷೇತ್ರದಲ್ಲಿ ಕಾಯಿದೆಗೆ ಇಂಬು ಕೊಡುತಿದ್ದೇವೆ.

ಇದರಿಂದ ಲಾಭವೇನಾದರೂ ಆಗುವುದೋ ಎಂಬುದನ್ನು ವಿಮರ್ಶಿಸದಿರಲಾಗುವುದಿಲ್ಲ— ಕಾಯಿದೆ ಪಂಡಿತರು "ಜನಹಿತ"ವಾಗಬೇಕೆಂಬ ಘನವಾದ ಮತ್ತು ಉದಾತ್ತವಾದ ಭಾವನೆಯಿಂದ ಹಲವಾರು ಬಗೆಯ ವಿಧೇಯಕಗಳನ್ನು ಸಿದ್ಧಗೊಳಿಸುತ್ತಿರುವರೆಂಬುದೇನೊ ನಿಜ; ಆದರೆ ಈ ಕಾಯಿದೆಗಳ ಕಾರ್ಯಾಚರಣೆಯಲ್ಲಿ ಯಾವ ದೋಷವನ್ನು ನಿವಾರಿಸಲು ಕಾಯಿದೆಗಳನ್ನು ರಚಿಸಿದೆವೋ, ಅದಕ್ಕೂ ಹತ್ತುಪಾಲು ಹೆಚ್ಚು ಹಾನಿಕಾರಕ ಪರಿಣಾಮವು ಕಂಡು ಬರುತ್ತದೆ. ಕಾಯಿದೆಯ ಬಲದಿಂದ ಅಸ್ಪೃಶ್ಯತೆಯನ್ನು ಅಪರಾಧವಾಗಿ ಪರಿಗಣಿಸಿದ ಮಾತ್ರಕ್ಕೆ, ಸಾಮಾಜಿಕ ಸ್ಥಾನಮಾನಗಳೇನು ಹರಿಜನರಿಗೆ ದೊರೆತಂತಾಗಲಿಲ್ಲ; ಜನರಿನ್ನೂ ಆ ಕಾಯಿದೆಯನ್ನು ನಿತ್ಯವ್ಯವಹಾರದಲ್ಲಿ ಮನ್ನಿಸಿದಂತೆ ಕಾಣುವುದಿಲ್ಲ. ನಾವು ರೂಪಿಸಿದ ಎಷ್ಟೋ ಶಾಸನಗಳು ನಮ್ಮ ಪವಿತ್ರವಾದ ರಾಜ್ಯಘಟನೆಯ ಯಾವುದಾದರೊಂದು ಕಲಮನ್ನು ಉಲ್ಲಂಘಿಸುತ್ತವೆಂದು ನ್ಯಾಯಾಲಯಗಳು ತೀರ್ಪು ಕೊಟ್ಟದ್ದುಂಟು. ಘಟನೆಯ ಒಂದು ಕಲಮಿನ ಆವಶ್ಯಕತೆಯನ್ನು ಪೂರೈಸಲೆಂದು ಮಾಡಿದ ಕಾಯಿದೆಯು ಅದೇ ಘಟನೆಯ ಬೇರೆ ಯಾವುದೋ ಇನ್ನೊಂದು ಕಲಮಿನ ಆಶಯಕ್ಕೆ ವಿರುದ್ಧವಾಗಿರುವುದೂ ಉಂಟು! ಘಟನಾತ್ಮಕವಾಗಿ ಬಂದ ಈ ತೊಡಕುಗಳ ಪರಿಹಾರಾರ್ಥ ನಾವು ತಿದ್ದುಪಡಿಗಳನ್ನು ಕೈಗೊಳ್ಳುವ ಹವ್ಯಾಸವನ್ನೂ ತೋರಿಸುತಿದ್ದೇವೆ. ಘಟನೆಯ ತಿದ್ದುಗೆಯಲ್ಲಿ [illegible]ಗಳಿಗೇನೂ ಪ್ರಾಧಾನ್ಯವಿಲ್ಲ; ವ್ಯಾವಹಾರಿಕ ದೃಷ್ಟಿಕೋಣವೇ ಇಲ್ಲಿ ಮುಖ್ಯವೆಂದು ಹೇಳಲಾಗುತ್ತದೆ. ಇದರ ಮೇಲೆ, ನ್ಯಾಯಮಂಡಳಿಗಳ ತೀರ್ಪನ್ನು ಸಹ ಸರಕಾರವು ಬದಲಿಸುವ ಪ್ರಸಂಗಗಳು ನಮ್ಮ ಅನುಭವಕ್ಕೆ ಬಂದಿವೆ—ಬ್ಯಾಂಕು ನೌಕರರ ತಂಟೆಯ ಕುರಿತು ಭಾರತ ಸರಕಾರ ತಳೆದ ಧೋರಣೆಯು ಇದಕ್ಕೆ ಉದಾಹರಣೆಯಾಗಿದೆ.

ಪರಿಸ್ಥಿತಿ ಹೀಗಿರುವಾಗ ಕಾಯಿದೆಗಳನ್ನು ಅಮಲಿಗೆ ತರುವುದು ಬಹಳ ಕಷ್ಟದ ಕೆಲಸ—ಜನ ಅದನ್ನು ಒಪ್ಪುವುದಿಲ್ಲ; ನಮ್ಮ ಸಂಪ್ರದಾಯಗಳು ಮನ್ನಿಸುವುದಿಲ್ಲ; ಸಾಮಾಜಿಕ ದೃಷ್ಟಿಯಲ್ಲಿ ಕಾಯಿದೆಗಳಿಗೆ ಸ್ಥಾನಮಾನವೇ ದೊರೆಯುವುದಿಲ್ಲ. ಏಕೆಂದರೆ ಪ್ರಜಾಪ್ರಭುತ್ವದ ರಕ್ಷಣೆ ಮಾಡುವ ಸಾಮರ್ಥ್ಯವುಳ್ಳ ನ್ಯಾಯಸ್ಥಾನಗಳ ಪಾವಿತ್ರ್ಯದಲ್ಲಿಯೂ ವಿಶ್ವಾಸವು ಹಾರಿ ಹೋಗುವಂತೆ ಇಂದಿನ ವಿಚಾರಧಾರೆಯು

([illegible]ನೇ ಪುಟ ನೋಡಿರಿ)

ಇಲ್ಲಿದೆ ಸ್ವಾರಸ್ಯ

* *

ಒಬ್ಬ ವಿದ್ಯಾರ್ಥಿ ಪುಸ್ತಕ ಭಂಡಾರದ ಅಧಿಕಾರಿಯೊಡನೆ ಮಾತನಾಡುತ್ತಾ "ನಿಮ್ಮಲ್ಲಿ ಇದಕ್ಕೂ ಉತ್ತಮವಾದ ಅಸ್ಥಿಪಂಜರ ರಚನಾ ಶಾಸ್ತ್ರದ ಪುಸ್ತಕವಿಲ್ಲವೇ?" ಎಂದು ದೂರಿದ. "ಇದನ್ನು ಬರೆದು ಹತ್ತು ವರ್ಷವಾಯಿತು" ಎಂಬುದೇ ಅವನ ಆಕ್ಷೇಪ.

"ಆದರೆ ಸ್ವಾಮಿ, ಕಳೆದ ಹತ್ತು ವರ್ಷಗಳಲ್ಲಿ ಮನುಷ್ಯ ಶರೀರದಲ್ಲಿ ಹೊಸ ಎಲುಬುಗಳನ್ನೇನೂ ಸೇರಿಸಿಲ್ಲವಲ್ಲ!" ಎಂದು ಅಧಿಕಾರಿ ಉತ್ತರವನ್ನು ಕೊಡಲು, ವಿದ್ಯಾರ್ಥಿ ತನ್ನ ಅಭಿಪ್ರಾಯವನ್ನು ಪುನಃ ವಿಮರ್ಶಿಸಿಕೊಳ್ಳಬೇಕಾಯಿತು.

ಸರಕುಗಳ ಯೋಗ್ಯತಾ ಪ್ರಮಾಣ ನಿರ್ಣಯ

ಪ್ರಾಮಾಣಿಕ ವ್ಯವಹಾರವನ್ನು ಪೋಷಿಸುವ ಭಾರತೀಯ ಮಾನಕ ಸಂಸ್ಥೆ

ನಮ್ಮ ದೇಶದಲ್ಲಿರುವ ಸಹಸ್ರಾರು ಚಿಕ್ಕ ಹಾಗು ದೊಡ್ಡ ಉತ್ಪಾದಕರನ್ನು ಕುರಿತು ನೆಹರೂರವರು ಕಳೆದ ವಾರ ಹೀಗೆ ಹೇಳಿದರು—"ನೀವೆಲ್ಲರೂ ಶಾಶ್ವತ ಬೆಲೆ ಬಾಳುವ ಉತ್ತಮ ಸರಕುಗಳನ್ನೇ ಸಿದ್ಧಗೊಳಿಸಬೇಕು. ಭಾರತದ ದೊಡ್ಡ ಉದ್ದಿಮೆಗಳಲ್ಲಾಗಲೀ ಗ್ರಾಮೋದ್ಯೋಗಗಳಲ್ಲಾಗಲೀ ಉತ್ಪಾದಿತ ಸರಕುಗಳನ್ನು ಕೊಂಡುಕೊಳ್ಳುವಾಗ ಗ್ರಾಹಕರಿಗೆ ತಾವು ತಮ್ಮ ಬೆಲೆಗೆ ಉಚಿತವಾದ ಸಾಮಗ್ರಿಯನ್ನೇ ಖರೀದಿ ಮಾಡುತಿದ್ದೇವೆಂಬ ಸಂತೋಷವೂ ವಿಶ್ವಾಸವೂ ಹುಟ್ಟುವ ಹಾಗೆ ಇರಬೇಕು. ನಮ್ಮ ತಯಾರಿಕೆಗಳು ದ್ವಿತೀಯ ಅಥವಾ ತೃತೀಯ ಶ್ರೇಣಿಯವಿರದೆ ಸದಾ ಪ್ರಥಮ ವರ್ಗಕ್ಕೆ ಸೇರಿರುವಂತೆ ನೋಡಿಕೊಳ್ಳಬೇಕು. ಅವುಗಳು ಆಕರ್ಷಕವಾಗಿರುವುದೂ ಪ್ರಾಮಾಣಿಕ ರೀತಿಯಲ್ಲಿ ಉತ್ಪಾದಿಸಲ್ಪಟ್ಟಿರುವುದೂ ಅಗತ್ಯ: ಎಷ್ಟೋ ಸಲ ಉತ್ಪಾದಕರು ತಾವು ಮೊದಲು ತೋರಿಸಿದ ಮಾದರಿಗಳಿಗೆ ಸರಿ ಹೊಂದದ ಸರಕುಗಳನ್ನು ಪೂರೈಸುತ್ತಾರೆ. ಇಂಥ ಅಪ್ರಾಮಾಣಿಕವಾದ ಮತ್ತು ಮೋಸದ ವ್ಯವಹಾರವನ್ನು ಈಗಿಂದೀಗಲೇ ನಿಲ್ಲಿಸಬೇಕು. ಭಾರತೀಯರಲ್ಲಿ ಸ್ವದೇಶದ ವಸ್ತುಗಳನ್ನು ಕೊಂಡುಕೊಳ್ಳುವ ಮೋಹವು ಕಡಿಮೆಯಾಗುತ್ತಿದ್ದರೂ ಕೆಲವರಲ್ಲಿಯಾದರೂ ಇರುವ ಈ ಅಭಿಮಾನದ ದುರುಪಯೋಗವನ್ನು ಉತ್ಪಾದಕರು ಮಾಡಿಕೊಳ್ಳುವುದು ನಿಂದನೀಯ. ಏಕೆಂದರೆ ಕಡಿಮೆ ದರ್ಜೆಯ ಸರಕುಗಳನ್ನು ಜಾಗತಿಕ ಪೇಟೆಯಲ್ಲಿ ಮೂಸಿ ಕೂಡ ನೋಡುವುದಿಲ್ಲ. ಆದುದರಿಂದ ಉತ್ಪಾದಕರು ದೇಶದ ಒಳಗಾಗಲೀ ಹೊರಗಾಗಲೀ ತಾವು ಜಾಹೀರು ಮಾಡಿದ ದರ್ಜೆಯ ಸರಕುಗಳನ್ನೇ ಪೇಟೆಯಲ್ಲಿ ಒದಗಿಸುವಂತೆ ನೋಡುವುದು ಅಗತ್ಯವಾಗಿದೆ.

ಅಪ್ರಾಮಾಣಿಕ ವ್ಯವಹಾರ

ಮೇಲಿನ ಮಾತುಗಳನ್ನಾಡುವಾಗ ನೆಹರೂರವರು ಹೊಸ ದಿಹಲಿಯ ಮಥುರಾ ರೋಡಿನಲ್ಲಿ "ಭಾರತೀಯ ಮಾನಕ ಸಂಸ್ಥೆ"ಯ ಶಂಕು ಸ್ಥಾಪನೆಯನ್ನು ಮಾಡುತಿದ್ದರು. ಔದ್ಯಮಿಕ ಹಾಗು ವಾಣಿಜ್ಯ ಕ್ಷೇತ್ರಕ್ಕೆ ಆಧಾರವಾದ ಸೇವೆಯನ್ನು ಸಲ್ಲಿಸುವ ಈ ಸಂಸ್ಥೆಯು ೧೯೪೭ರಲ್ಲಿ ಸ್ಥಾಪಿಸಲ್ಪಟ್ಟಿತು. ತನ್ನ ಏಳು ವರ್ಷಗಳ ಅಸ್ತಿತ್ವದ ಕಾಲದಲ್ಲಿ ಈ ಸಂಸ್ಥೆಯು ಐನೂರಕ್ಕೂ ಹೆಚ್ಚು ಸಾಮಗ್ರಿಗಳ ಯೋಗ್ಯತಾ ಪ್ರಮಾಣವನ್ನು ನಿರ್ಣಯಿಸಿದ್ದು ಅಪ್ರಾಮಾಣಿಕ ವ್ಯವಹಾರವನ್ನು ತಗ್ಗಿಸಲು ಇದರಿಂದ ಸಹಾಯವಾಗಿದೆ. ಸರಕುಗಳ ಯೋಗ್ಯತಾ ಪ್ರಮಾಣವನ್ನು ಗೊತ್ತುಪಡಿಸದಿದ್ದರೆ ಪೇಟೆಯಲ್ಲಿ ವ್ಯಾಪಾರವನ್ನು ಸಾಗಿಸುವುದು ಕಷ್ಟವಾಗುತ್ತದೆ. ಅದರಲ್ಲೂ ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ವ್ಯಾಪಾರ ವ್ಯವಹಾರವನ್ನು ಕೈಗೊಳ್ಳುವಾಗ ಯೋಗ್ಯತಾ ಪ್ರಮಾಣ ತತ್ವವನ್ನು ಅನುಸರಿಸಲೇ ಬೇಕಾಗುವುದು— ಇಲ್ಲದಿದ್ದರೆ, ನಮ್ಮ ಸರಕುಗಳ ಗುಣಾಂಶಗಳ ವಿಷಯದಲ್ಲಿ ಇತರರಿಗೆ ಮನವರಿಕೆಯಾಗುವುದಿಲ್ಲ. ನಮ್ಮ ಉತ್ಪಾದನೆಗಳನ್ನು ಹಡಗುಗಳಲ್ಲಿ ಆ ದೇಶಗಳಿಗೆ ತುಂಬಿಕೊಂಡು ಹೋಗಿ, ಅಲ್ಲಿಯ ವ್ಯಾಪಾರಿಗಳ ಪ್ರತ್ಯಕ್ಷ ಅವಗಾಹನೆಗೆ ಅವುಗಳನ್ನು ಒಪ್ಪಿಸಿ, ಅವರ ತೃಪ್ತಿಯನ್ನು ಗಳಿಸಿ, ಮಾರಾಟಮಾಡುವ ಪ್ರಮೇಯ ಬಂದೊದಗುತ್ತದೆ. ಅಂತಾರಾಷ್ಟ್ರೀಯ ಪೇಟೆಗೆ ಒಪ್ಪಿತವಾದ ಯೋಗ್ಯತಾ ಪ್ರಮಾಣ ತತ್ವದ ತಳಹದಿಯಲ್ಲಿ ಸರಕುಗಳನ್ನು ಸಿದ್ಧಗೊಳಿಸಿದರೆ, ಈ ಕಷ್ಟ ದೂರವಾಗುವುದು; ಮತ್ತು ಕೇವಲ ತಂತಿ— ಟೆಲಿಫೋನುಗಳ ಮೇಲಿಂದಲೇ ಲಕ್ಷಾಂತರ ರೂಪಾಯಿಗಳ ವ್ಯವಹಾರ ನಡೆಸುವಷ್ಟು ವಿಶ್ವಾಸವು ಮೂಡುವುದು. ಭಾರತೀಯ ಮಾನಕ ಸಂಸ್ಥೆಯು ನಮ್ಮ ಸರಕುಗಳ ವಿಷಯದಲ್ಲಿ ಗ್ರಾಹಕನ ಅಥವಾ ವ್ಯಾಪಾರಿಯ ವಿಶ್ವಾಸವನ್ನು ಹೆಚ್ಚಿಸಲು ಪ್ರಯತ್ನಗಳನ್ನು ಕೈಗೊಂಡು ಮಾರ್ಗದರ್ಶನ ಮಾಡುತ್ತಿರುವುದು.

ಜಾಗತಿಕ ರಂಗ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಭಾರತದ ಈ ಸಂಸ್ಥೆ ಈಗಾಗಲೇ ಮನ್ನಣೆಯನ್ನು ಗಳಿಸಿರುವುದು. ಜಾಗತಿಕ ಪೇಟೆಗೆ ಮಾರ್ಗದರ್ಶನ ಮಾಡುವ ಉದ್ದೇಶದಿಂದ ಪ್ರಥಮ ಮಹಾ ಯುದ್ಧಕ್ಕೆ ಮುಂಚೆ ಸ್ಥಾಪನೆಗೊಂಡ ಅಂತಾರಾಷ್ಟ್ರೀಯ ಮಂಡಳಕ್ಕೆ ಈಗ ಇರುವ ೩೩ ಸದಸ್ಯ ರಾಷ್ಟ್ರಗಳಲ್ಲಿ ಭಾರತವೂ ಒಂದಾಗಿದೆ—ಮಾತ್ರವಲ್ಲ, ಆಡಳಿತ ಹಾಗು ತಾಂತ್ರಿಕ ವಿಭಾಗಗಳಲ್ಲಿ ಅದು ಸಾಕಷ್ಟು ಯಶಸ್ವಿ ಪಾತ್ರವನ್ನೂ ನಿರ್ವಹಿಸಿದೆ. ಭಾರತೀಯ ಮಾನಕ ಸಂಸ್ಥೆಯ ದಿಗ್ದರ್ಶಕರು ಎಡೆಬಿಡದ ಎರಡು ಅಧಿಕಾರಾವಧಿಯಲ್ಲಿ ಅಂತಾರಾಷ್ಟ್ರೀಯ ಪ್ರಮಾಣ ಸಂಸ್ಥೆಯ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟುದನ್ನೂ ಅಭ್ರಕ ಮತ್ತು ಅರಗುಗಳ ಅಂತಾರಾಷ್ಟ್ರೀಯ ಯೋಗ್ಯತಾ ಪ್ರಮಾಣ ನಿರ್ಣಯದಲ್ಲಿ ಭಾರತವು ಅಪೂರ್ವ ಸಂಶೋಧನೆಗಳಿಂದ ನೆರವಾಗಿರುವುದನ್ನೂ ಇಲ್ಲಿ ಉಲ್ಲೇಖಿಸಬಹುದು. ಹೀಗೆ ಸಿದ್ಧ ವಸ್ತುಗಳ ಯೋಗ್ಯತೆಗೊಂದು ಮಾನದಂಡವನ್ನು ಹಾಕುವಲ್ಲಿ ಭಾರತೀಯ ಮಾನಕ ಸಂಸ್ಥೆಯು ನಮ್ಮ ದೇಶದಲ್ಲಿರುವ ರಾಷ್ಟ್ರೀಯ ಪ್ರಯೋಗ ಶಾಲೆಗಳ ಮತ್ತಿತರ ವೈಜ್ಞಾನಿಕ ಸಂಶೋಧನಾ ಸಂಸ್ಥೆಗಳ ಸಹಕಾರವನ್ನು ಪಡೆಯುತ್ತದೆ. ಸರಕುಗಳ ಗಾತ್ರ, ಅಂದಚಂದ, ಗುಣಾಂಶ ಮುಂತಾದವುಗಳನ್ನು ನಿಶ್ಚಿತಗೊಳಿಸದಿದ್ದರೆ ಉತ್ಪಾದನಾ ಕ್ಷೇತ್ರದಲ್ಲಿ ಗೊಂದಲಮಯ ಪರಿಸ್ಥಿತಿಯುಂಟಾಗುವುದು. ನಿತ್ಯೋಪಯೋಗದ ಬಟ್ಟೆ ಮುಂತಾದ ವಸ್ತುಗಳಿಂದ ಹಿಡಿದು ಯಂತ್ರಗಳ ವರೆಗೆ ಯಾವುದಾದರೊಂದು ಭಾಗ ಕಳೆದು ಹೋದಾಗ ಅದನ್ನು ಪ್ರತಿಕ್ಷೇಪಿಸುವುದೇ ಕಷ್ಟವೆನಿಸುವುದು. ಆದುದರಿಂದ ಕೈಗಾರಿಕೆಗಳಲ್ಲಿ ನಿರ್ದಿಷ್ಟ ರೀತಿಯಲ್ಲಿಯೇ ವಿಶಿಷ್ಟ ಸರಕುಗಳನ್ನು ಸಿದ್ಧಪಡಿಸಬೇಕೆಂಬ ಅಭಿಪ್ರಾಯವು ಸಮರ್ಥಿಸಲ್ಪಟ್ಟಿರುವುದು. "ಸರಕುಗಳನ್ನು ಹೀಗೆಯೇ ತಯಾರಿಸಬೇಕು" ಎಂದು ಕಟ್ಟುನಿಟ್ಟಾದ ನಿರ್ಬಂಧವನ್ನು ಹೇರುವುದರಿಂದ ಕ್ರಿಯಾತ್ಮಕ ಹಾಗು ಕಲಾತ್ಮಕ ಪ್ರವೃತ್ತಿಯನ್ನು ನಿರ್ಬಂಧಿಸಿದಂತಾಗುವುದೆಂದು ದೂರಲಾಗುತ್ತದೆ. ಸಿದ್ಧ ವಸ್ತುಗಳ ಯೋಗ್ಯತೆಯ ಪ್ರಮಾಣವನ್ನು ನಿಷ್ಕರ್ಷಿಸುವ ತಜ್ಞರು, ಅತ್ಯಧುನಿಕ ಮಾದರಿಯನ್ನೆ ಲಕ್ಷ್ಯದಲ್ಲಿಟ್ಟುಕೊಂಡಿರುವರೆಂದೂ ದೇಶ ಕಾಲಗಳಿಗನುಸಾರವಾಗಿ ತಮ್ಮ ನಿರ್ಣಯಗಳನ್ನು ಪರಿಷ್ಕರಿಸಲು ಅವರು ಹಿಂಜರಿಯುವುದಿಲ್ಲವೆಂದೂ ಈ ಆಕ್ಷೇಪಕ್ಕೆ ಸಮಾಧಾನ ಕೊಡಬಹುದು. ಅಂತಾರಾಷ್ಟ್ರೀಯ ವೈಜ್ಞಾನಿಕ ಕ್ಷೇತ್ರದ ಇತ್ತೀಚಿನ ಅಭಿವೃದ್ಧಿಯನ್ನೂ ಅವರು ಮರೆಯುವುದಿಲ್ಲವೆಂದರೂ ತಪ್ಪಾಗದು.

ಸಂಶೋಧನಾಲಯಗಳ ಸಹಾಯ

ಸುದೈವದಿಂದ, ಮೊದಲೇ ಸೂಚಿಸಿದಂತೆ, ಭಾರತದ ವೈಜ್ಞಾನಿಕ ಪ್ರಯೋಗ ಶಾಲೆಗಳು ಈ ಕೆಲಸದಲ್ಲಿ ಸಹಾಯ ಸಹಕಾರವನ್ನು ನೀಡುತ್ತಲಿವೆ. ಈ ನೆರವು ಹರಿದುಬರುವ ರೀತಿಯನ್ನು ಕೆಲವು ಉದಾಹರಣೆಗಳಿಂದ ಖಚಿತಗೊಳಿಸಬಹುದು: ಶಾಯಿಯ ತಯಾರಿಕೆಯು ನಮ್ಮ ದೇಶದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಉದ್ದಿಮೆಯಾಗಿದ್ದು ಶಾಯಿಯ ಯೋಗ್ಯತೆಯು ಅದನ್ನು ತುಂಬಿಸಿ ಇಡುವ ಗಾಜಿನ ಬುರುಡೆಗಳ ಗುಣ ವೈಶಿಷ್ಟ್ಯಗಳನ್ನೂ ಹೊಂದಿಕೊಂಡಿದೆ. ಕೇಂದ್ರ ಗಾಜಿನ ಹಾಗು ಪಿಂಗಾಣಿಯ ಸಂಶೋಧನಾಲಯವು ಭಾರತದಲ್ಲಿ ತಯಾರಾಗುವ ಶಾಯಿಯ ಯೋಗ್ಯತೆಯನ್ನು ಕೆಡಿಸದೆ ತುಂಬಿಡಬಹುದಾದ ಗಾಜಿನ ಬಗ್ಗೆ ಅನುಸಂಧಾನಗಳನ್ನು ನಡೆಸಿತು. ತತ್ಪರಿಣಾಮವಾಗಿ ಈ ಬುರುಡೆಗಳ ಯೋಗ್ಯತೆಯ ಕುರಿತು ಒಂದು ಮಟ್ಟವನ್ನು ಹಾಕಿ ಕೊಡುವುದು ಸಾಧ್ಯವಾಯಿತು. ಇಂಥವೇ ಪ್ರಮೇಯಗಳು ಸಿಮೆಂಟು, ಬಣ್ಣ ಮುಂತಾದ ವಿಷಯಗಳಲ್ಲಿ ಕಾಣಿಸಿಕೊಂಡವು. ನಮ್ಮ ರಾಷ್ಟ್ರ ಧ್ವಜದಲ್ಲಿ ಕಂಡು ಬರುವ ಕೇಸರಿ, ನೀಲಿ ಮತ್ತು ಹಸುರು ಬಣ್ಣಗಳು ಬಿಸಿಲಿಗೂ ಗಾಳಿಗೂ ಬೇಗನೇ ಮಸುಕಾಗುತ್ತವೆ. ಇದಕ್ಕೆ ಬಣ್ಣದ ತಯಾರಿಕೆಯಲ್ಲಿರುವ ದೋಷಗಳಷ್ಟೇ ಧ್ವಜಕ್ಕೆ ಉಪಯೋಗಿಸಿದ ಬಟ್ಟೆಯ ತಯಾರಿಕೆಯಲ್ಲಿ ವ್ಯಕ್ತಗೊಂಡ ನ್ಯೂನತೆಗಳೂ ಕಾರಣವೆಂದು ಕಂಡುಬಂದಿತು. ಕೇಂದ್ರ ರಾಸಾಯನಿಕ ಪ್ರಯೋಗಶಾಲೆಯೂ ಕಾನ್ಪುರದ ಅರಳಿ ಬಟ್ಟೆಯ ಅಭಿವೃದ್ಧಿ ಮಂಡಳವೂ ಈ ಕೊರತೆಗಳನ್ನು ನಿವಾರಿಸುವುದರಲ್ಲಿ ಯಶಸ್ಸು ಹೊಂದಿ, ರಾಷ್ಟ್ರಧ್ವಜ ತಯಾರಿಯಲ್ಲಿ ಯೋಗ್ಯತಾ ಪ್ರಮಾಣವನ್ನು ಹಾಕಿಕೊಡುವುದಕ್ಕೆ ಭಾರತೀಯ ಮಾನಕ ಸಂಸ್ಥೆಯೊಡನೆ ಸಹಕರಿಸಿದವು. ಕ್ರಿಮಿಕೀಟಗಳಿಂದ ಪೈರು ಪಚ್ಚೆಗಳಿಗೂ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office. UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ
ಸ್ಪೆಶಲ್ ನಂ ೧] [ಮೆಡಿಕೇಟೆಡ್
ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.
ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0
ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಗೋವೆಯ ಜಾನಪದ ಗೀತಗಳ ಸೊಬಗು

ನಿತ್ಯ ಜೀವನಕ್ಕೆ ಕನ್ನಡಿ ಹಿಡಿಯುವ ಸಾಹಿತ್ಯ

ಗೋವೆಯಲ್ಲಿ ನಡೆಯುತ್ತಿರುವ ಆಂದೋಲನದಲ್ಲಿ ಜನರು ಭಾಗ ವಹಿಸುವುದನ್ನು ತಡೆಯುವುದಕ್ಕೋಸ್ಕರ ಪೋರ್ಚುಗೀಜ ಅಧಿಕಾರಿಗಳು ಭಾರತದ ವಿರುದ್ಧ ಬಗೆ ಬಗೆಯ ಅಪಪ್ರಚಾರಗಳನ್ನು ಮಾಡುತಿದ್ದಾರೆ. ಇಂಥ ವಿಪರೀತ ಮಾತುಗಳಲ್ಲಿ ಭಾರತದೊಡನೆ ವಿಲೀನ ಹೊಂದುವುದರಿಂದ ಗೋವೆಯ ಸಾಂಸ್ಕೃತಿಕ ವೈಶಿಷ್ಟ್ಯವು ಅರಕ್ಷಿತವಾಗಿ ಕೆಡುವುದೆಂಬ ಹುಯಿಲೂ ಒಂದಾಗಿದೆ. ಕ್ರೈಸ್ತ ಧರ್ಮದ ಸರ್ವ ನಾಶವಾಗುತ್ತದೆನ್ನುವುದು ಇನ್ನೊಂದು ತೆರನ ಆರೋಪ. ಇವಾವುದರಲ್ಲಿಯೂ ತಿಲಾಂಶವೂ ಸತ್ಯವಿಲ್ಲವೆಂದು ಭಾರತ ಸರಕಾರ ಆಶ್ವಾಸನೆಯನ್ನು ಕೊಡುತ್ತಿದ್ದರೂ ಗೋವೆಯ ಜನ ಸಮುದಾಯದ ಮೇಲೆ ಈ ಹುರುಳಿಲ್ಲದ ಕಲ್ಪನೆಗಳ ದುಷ್ಪರಿಣಾಮವಾಗುವುದು ಅಸಂಭವವೇನಲ್ಲ. ಏಕೆಂದರೆ ಗೋವೆಯ ನಾಗರಿಕರು—ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳ ಪ್ರಜೆಗಳು—ತಮ್ಮ ಸಂಸ್ಕೃತಿಯ ಕುರಿತು ತುಂಬ ಅಭಿಮಾನವನ್ನು ಪ್ರದರ್ಶಿಸುತ್ತಾರೆ. ಭಾರತದ ರಾಜಧಾನಿಯಾದ ಹೊಸದೆಹಲಿಯಲ್ಲಿ ಪ್ರಜಾರಾಜ್ಯ ದಿನದಂದು ಜಾನಪದ ಗೀತ ಹಾಗು ನರ್ತನಗಳ ಸಮಾರಂಭ ಜರಗಿದಾಗ ಗೋವೆಯ ಹರೆಯದ ಹುಡುಗಿಯೋರ್ವಳು ಸ್ವಚ್ಛಂದ ನೃತ್ಯ ಮಾಡುತ್ತಾ ಘೂಮಟದ ಆಕರ್ಷಣೆಯಿಂದ ಉದ್ರಿಕ್ತಳಾಗಿ ಹಾಡುತ್ತಾ ಇದ್ದ ಚಿತ್ರವನ್ನು ನಾವೆಲ್ಲರೂ ನೋಡಿದ್ದೇವೆ. ಗೋವೆಯ ಹಳ್ಳಿಗಳಲ್ಲಿ ಇಂತಹ ತರುಣಿಯರೂ—ತರುಣರೂ—ಎಲ್ಲೆಲ್ಲೂ ಕಂಡು ಬರುತ್ತಾರೆ: ಜಾನಪದ ಗೀತ ನರ್ತನಗಳೆಂದರೆ ಅವರ ಪ್ರಾಣವಾಗಿರುತ್ತದೆ.

ಜಾನಪದ ಗೀತಗಳು ಗ್ರಾಮೀಣ ಸಂಸ್ಕೃತಿಗೆ ಕನ್ನಡಿ ಹಿಡಿಯುತ್ತವೆ—ಸಾಮಾನ್ಯ ಪ್ರಜೆಗಳ ಆಶೋತ್ತರಗಳನ್ನೂ ವಿಚಾರ ಧಾಟಿಯನ್ನೂ ಒಲವು ನಿಲವುಗಳನ್ನೂ ಅವು ಸ್ಪಷ್ಟವಾಗಿ ಪ್ರಕಟಿಸುತ್ತವೆ. ಗೋವೆಯ ಜನರೊಡನೆ ನಿಕಟ ಸಂಪರ್ಕವನ್ನಿಟ್ಟುಕೊಂಡ ಶ್ರೀ. ವಿ. ಎಸ್. ಸುಕ್ಥಣಕರರು ಈಚೆಗೆ ಬರೆದೊಂದು ಲೇಖನದಲ್ಲಿ ಗೋವೆಯ ಜಾನಪದ ಗೀತಗಳ ಮಹತ್ವವು ಅಲ್ಲಿಯ ಜನಜೀವನದ ಎರಡು ಪ್ರಮುಖ ವಿಚಾರಗಳಿಗೆ ಸಂಬಂಧಿಸಿದೆಯೆಂದು ಅಭಿಪ್ರಾಯ ಪಡುತ್ತಾರೆ. ಗೋವೆಯಲ್ಲಿ ಶ್ರೀಮಂತರ ಮತ್ತು ಬಡವರ ನಡುವೆ ಅಂತರವು ಹೆಚ್ಚಾಗಿಲ್ಲ. ಆದುದರಿಂದ ಮಾನವೀಯ ಭಾವನೆಗಳು ಧನಿಕರ ಅಥವಾ "ಉಚ್ಚವ" ರಕ್ಷೋಪಡೆಗೊಳಗಾದ ಪ್ರಸಂಗ ಬಹಳ ವಿರಳ. ಗೋವೆಯ ಹಳ್ಳಿಗರ ನಿತ್ಯಜೀವನದಲ್ಲಿ ಸ್ಫೂರ್ತಿಯ ಹಾಗು ಸೌಂದರ್ಯದ ನೆಲೆಯಾಗಿ ಮಾನವೀಯ ಭಾವನೆಯು ತುಂಬಿ ತುಳುಕುತ್ತಿರುವುದಕ್ಕೆ ಇದೇ ಕಾರಣ. ಇಷ್ಟೇ ಮಹತ್ವದ ಇನ್ನೊಂದು ಅಂಶವೆಂದರೆ, ವಿದ್ವಾಂಸರು ನಮ್ಮಲ್ಲಿಯ ಹಾಗೆ "ಮಾರ್ಗ" ಪದ್ಧತಿಯು ಮೇಲಕ್ಕೆ ಬಲಿಬೀಳದೆ ಪ್ರಾಚೀನ ಸಂಪ್ರದಾಯಗಳನ್ನೆ ಆದರದಿಂದ ಕಾಣುತ್ತಾ ಬಂದದ್ದು: ಗೋವೆಯ ಚರ್ಚುಗಳಲ್ಲಿ ಪಾಶ್ಚಾತ್ಯ ಗಾಯನವು ಕೇಳಿಸಬಹುದು; ದೇಗುಲಗಳಲ್ಲಿ ವೀಣಾವಾದನವು ನಡೆಯಬಹುದು—ಆದರೆ ಸಾಮಾನ್ಯ ಪ್ರಜೆಗಳ ವ್ಯಾಮೋಹವು ಜಾನಪದ ಗೀತಗಳ ಪರಂಪರೆಯೊಂದಿಗೆ ಮೇಳವನ್ನು ಸಾಧಿಸುವುದರಲ್ಲಿ ತನ್ಮಯತೆ ಹೊಂದುತ್ತದೆ.

ಕೊಂಕಣಿಯು ಗೋವೆಯ ಜನರು ಆಡುವ ಭಾಷೆ. ಇದಕ್ಕೆ ಲಿಪಿ ಇಲ್ಲ: ಆದುದರಿಂದ ನುಡಿಯ ಮೇಲೆ ಅಭಿಮಾನವುಳ್ಳ ಶಿಕ್ಷಿತ ವರ್ಗಕ್ಕೆ ತಮ್ಮ ಭಾವನೆಗಳನ್ನು ವಿಸ್ತರಿಸುವುದಕ್ಕೆ ಜಾನಪದ ಗೀತರಚನಾ ಪದ್ಧತಿಯನ್ನೇ ಆಶ್ರಯಿಸಬೇಕಾಗುವುದು. ಪೋರ್ಚುಗೀಜ ಹಾಗು ಮರಾಠಿ ಭಾಷೆಗಳನ್ನಾಡುವವರನ್ನು ನಾವಿಲ್ಲಿ ಕಾಣಬಹುದು—ಆದರೆ, ಕೆಲವೇ "ಶ್ರೀಮಂತ ಕ್ರೈಸ್ತರು ಹಾಗು ಹಿಂದುಗಳನ್ನು ಬಿಟ್ಟರೆ ಉಳಿದ ಜನ ಸಾಧಾರಣಕ್ಕೆ ಕೊಂಕಣಿಯೇ ಪ್ರಿಯವೆನಿಸುತ್ತದೆ. ಕೊಂಕಣಿ ಭಾಷೆಯಲ್ಲಿಯೇ ಅವರು ಜೀವನದ ನವರಸಗಳನ್ನು ಹೊರ ಹೊಮ್ಮುವಂತೆ ಹಾಡುತ್ತಾರೆ; ಕುಣಿಯುತ್ತಾರೆ. ಗೋವಾನೀಯರ ಈ ಜಾನಪದ ಗೀತಗಳು ಬದುಕಿನ ಅನುಭವಗಳನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತವೆ. ಇಲ್ಲಿ ಉಲ್ಲಾಸವುಂಟು; ಪ್ರೇಮವುಂಟು; ಪ್ರಣಯವುಂಟು; ವಿರಹವುಂಟು; ವಿಷಾದವುಂಟು; ಹಾಸ್ಯವುಂಟು; ಶೌರ್ಯವುಂಟು; ಸಂತೋಷವುಂಟು. ಎಲ್ಲಕ್ಕೂ ಮಿಗಿಲಾಗಿ ಪೌರಸ್ತ್ಯ ಹಾಗು ಪಾಶ್ಚಾತ್ಯ ಸಂಸ್ಕೃತಿಯ ಕಲಬೆರಕೆಯ ಸುಂದರ ಉದಾಹರಣೆಯನ್ನೂ ನಾವು ಈ ಜಾನಪದ ಗೀತಗಳಲ್ಲಿ ಗುರುತಿಸಬಹುದು.

ಇಷ್ಟು ಹೇಳಿದ ಬಳಿಕ, ಜಾನಪದ ಗೀತಗಳ ಮಾದರಿಯನ್ನು ಮುಂದಿಡದಿದ್ದರೆ ಸರಿಯಾಗದು—ಹಾಸ್ಯದ ಹೊನಲು ಹರಿಸುವ ಒಂದು ಗೀತೆಯು ಗುಡ್ಡದ ತುದಿಯಲ್ಲಿ "ಉಕ್ಕಿ ನಾರಿ" ಎಂಬ ಕೀಳು ದರ್ಜೆಯ ಬೀಜವನ್ನು ಬಿತ್ತಿದ ರೈತರ ಭಿನ್ನಭಿನ್ನ ಮನೋಭಾವವನ್ನು ವರ್ಣಿಸುತ್ತಾ ಕರಿಯ ಹೆಣ್ಣಿನ ಗಂಡ ರಾತ್ರಿ ಹೊತ್ತು ಹೊಲ ಕಾಯಲು ಹೋದನೆಂದೂ ಚೆಲುವೆಯ ಗಂಡ ಮನೆಯಲ್ಲಿಯೇ ಉಳಿದು ನಲಿದನೆಂದೂ ನುಡಿಯುತ್ತದೆ. ವಿರಸ ಹಾಗು ಸರಸ ಪ್ರಣಯ ವಸ್ತುಗಳನ್ನು ಒಳಗೊಂಡ ಇಂತಹ ಹಲವು ಗೀತೆಗಳನ್ನು ಉಲ್ಲೇಖಿಸಬಹುದು. ತಾನು ಬಯಸಿದ ಪತಿಯ ಸಮಾಗಮ ಲಾಭದಿಂದ ಆನಂದ ತುಂದಿಲಳಾದ ರಮಣಿಯು "ಹಗಲಿರುಳೂ ಕಣ್ಣೀರು ಕರೆದೆ, ಆದರೆ ಆಸೆಯನ್ನು ಬಿಡಲಿಲ್ಲ, ಪ್ರಿಯ: ದೇವರ ಕೃಪೆಯಿಂದ ನಾವಿಂದು ವೈವಾಹಿಕ ಬಂಧನದಲ್ಲಿ ಬಿಗಿಯಲ್ಪಟ್ಟಿದ್ದೇವೆ" ಎಂದು ಕೃತಜ್ಞತೆ ತೋರುತ್ತಾಳೆ. ಆದರೆ ತನ್ನ ಸಂಗಾತಿಯನ್ನು ಪರಿಸರಿಸಲಾರದ ಅಭಿಸಾರಿಕೆಯೊಬ್ಬಳು "ಇನ್ನು ಮುಂದೆ ನಿನ್ನನ್ನು ಕನಸಿನಲ್ಲಿ ಕಾಣುವುದೆ ನನ್ನ ಅದೃಷ್ಟವೆ, ಪ್ರಿಯಾ?" ಎಂದೊರಲುತ್ತಾಳೆ. ಮುಳುಗುವ ಸೂರ್ಯ, ಮೂಡುವ ಚಂದ್ರ, ಮುಸ್ಸಂಜೆಯ ಸೌಂದರ್ಯ ಇವೆಲ್ಲವೂ ಆವಳಿಗೆ ಇನಿಯನ ಮನಮೋಹಕ ಮೂರ್ತಿಯ ಹಾಗು ಮಧುರ ಮಾತುಗಳ ನೆನಪನ್ನು ತಂದುಕೊಡುತ್ತವೆ. ಆದರೆ ಕೆಲವು ದಿಟ್ಟೆಯರು ಪತಿಯ ನಿಧನ ಹೊಂದಿದ ಬಳಿಕ-ತಮ್ಮ ನವಪ್ರಾಯದಲ್ಲಿ ಸಹ-ಪುನರ್ವಿವಾಹವಾಗದೆ ಇಲ್ಲ. ಇಂಥದೊಂದು ಪ್ರಸಂಗವನ್ನು ವಿಡಂಬನಾತ್ಮಕ ದೃಷ್ಟಿಯಿಂದ ಒಣ್ಣಿಸುವ ಪದ್ಯವು ವಧು-ತಾಯಿಯ ಹನ್ನೆರಡು ವರ್ಷ ಪ್ರಾಯದ ಮಗಳ ಬಾಯಿಂದ ಹೀಗೆ ಹೇಳಿಸುತ್ತದೆ—"ನನ್ನ ತಾಯಿ ಮತ್ತೆ ಮದುವೆಯಾದಳು—ನನ್ನ ತಂದೆ ನನಗಿಂತ ಆರಿಸಿದ್ದ ಪುರುಷನನ್ನು ವರಿಸಿದಳು!" ಮುದುಗಿ ಸ್ವರ್ಗದಲ್ಲಿರುವ ತಂದೆಗೆ ಈ ಸುದ್ದಿಯನ್ನು ಮುಟ್ಟಿಸಿರೆಂದು ದೇವತೆಗಳನ್ನು ಬೇಡುತ್ತಾಳೆ: ಈ ದಂಪತಿಗಳ ಜೀವನವನ್ನು ನೋಡಿರೆಂದು ಆಹ್ವಾನ ಕೊಡುತ್ತಾಳೆ.

ಮದುವೆಯು ಇಂತಹ ವಿಪರೀತ ಪ್ರಸಂಗಗಳನ್ನು ತಂದೊಡ್ಡುತ್ತದೆಂದೋ ಏನೋ—ಗೋವೆಯ ಕ್ರೈಸ್ತ ತರುಣಿಯರಲ್ಲಿ ಹೆಚ್ಚಿನವರು "ಕನ್ಯೆ"ಯರಾಗಿ ಉಳಿಯಲು ಹಾರೈಸುತ್ತಾರೆ. ಅವರ ಮನೋಭೂಮಿಯ ಮೇಲೆ ಬೆಳಕು ಚೆಲ್ಲುವ ಜಾನಪದ ಗೀತೆಯೊಂದು "ಧಿಕ್ಕಾರವಿರಲಿ ಮದುವೆಗೆ, ಪುರುಷ ಸಂಗಕ್ಕೆ" ಎಂದು ಸಾರುತ್ತದೆ. ಮದುವೆಯಾದವರ ಕಷ್ಟಗಳನ್ನು ಸ್ಪಷ್ಟವಾಗಿ ಕಾಣುತಿದ್ದೇವೆಂದೂ ವಿಧವೆಯರಿಗೆ ದೊರೆತಿರುವುದಂತೂ ಅನುಕಂಪ ಮಾತ್ರವೆಂದೂ ಹೀಗಳೆದು ಕನ್ಯತನವನ್ನು ಪ್ರೀತಿಸುತ್ತೇನೆಂದು ಹೇಳಿಸುತ್ತದೆ. ಗೋವೆಯ ಜನರಲ್ಲಿ—ಕ್ರೈಸ್ತರಲ್ಲಿ— ಹಿಂದೂಗಳಲ್ಲಿರುವಷ್ಟಕ್ಕೆ ಕಡಿಮೆಯಿರದಷ್ಟು—ಜಾತಿಭೇದವುಂಟು. ಇವರಲ್ಲಿ ಊಟಉಪಚಾರಗಳಿಗೆ

[ಮುಂದೆ] (೧೩ನೇ ಪುಟ ನೋಡಿರಿ)

ದಿ ಸಿಟಿ ಟೈಪ್ ಫೌಂಡರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

* * * * *

ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಷಿನ್‌ಗಳೂ, ಪರಾಲ್ಡುಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.

ವಿವರಗಳಿಗೆ ಇಂದೇ ಬರೆಯಿರಿ.

THE CITY TYPE FOUNDRY

CHICKPET, BANGALORE CITY.

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟಾನಿಕ್ ಆಹಾರವಾಗಿದೆ. 1 ರಾತ್ಲು: ರೂ 6–8–0 ¼ ರಾತ್ಲು: ರೂ. 1–14–0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ್ ಎಂಡ್ ಡ್ರಗ್ಗಿಸ್ಟ್ಸ್, ಉಡುಪಿ.

2 ಶ್ರೀ. ವಿ. ವಿ. ಶೆಟ್ಟಿ, ಕೆಮಿಸ್ಟ್, ಕಾರ್ಕಳ.

3 ವಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎನ್. ರಮಣ್, ದಜಾರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ವ್ಯಾಪಾರಿ ಶರತ್ತುಗಳಿಗೆ ಬರೆಯಿರಿ.

DAMODAR & CO.,

Nainiappa Naicken Street, Park Town-MADRAS-3.



ನೆರೆಯಿಂದ ಎರಡು ಕೋಟಿ ಜನರಿಗೆ ಪೀಡೆ

ಪಾರ್ಲಿಮೆಂಟಿನಲ್ಲಿ ಸದಸ್ಯರು ವ್ಯಕ್ತಗೊಳಿಸಿದ ಕಳವಳ

ಇಂದಿನ, ಇಪ್ಪತ್ತನೆಯ ಶತಮಾನದಲ್ಲಿ ಹಿಂದೆಂದೂ ಕಂಡಿರದಷ್ಟು ಭೀಕರ ವಾದ, ನೆರೆಹಾವಳಿಯು ದೇಶದ ಎಲ್ಲೆಡೆಯಲ್ಲೂ ತಳಮಳವನ್ನು ಹುಟ್ಟಿಸಿದೆ. ಮಹಾಪೂರದಿಂದ ಸಂತ್ರಸ್ತಗೊಂಡ ಸುಮಾರು ಎರಡು ಕೋಟಿ ಬಾಂಧವರ ವಿಷಯದಲ್ಲಿ ಉಳಿದ ಭಾರತೀಯರ ಮನಸ್ಸು ಉದ್ವಿಗ್ನಗೊಂಡಿದ್ದು, ಎಲ್ಲ ಆಂತರಿಕ ಮತಭೇದವನ್ನೂ ಮರೆತು, ಸಹಾನುಭೂತಿಪರ ಕಾರ್ಯಗಳನ್ನು ಕೈಗೊಳ್ಳುವಂತೆ ಪ್ರೇರೇಪಿಸಿರುವುದು.

ಪರಿಸ್ಥಿತಿಯ ನೈಜಚಿತ್ರ

ಪಾರ್ಲಿಮೆಂಟಿನಲ್ಲಿ ಸದಸ್ಯರು ನೆರೆಯ ಕುರಿತು ವಿವರಗಳನ್ನು ಕೇಳಿದರು. ಗೃಹ ಮಂತ್ರಿಗಳು ಪರಿಸ್ಥಿತಿಯ ನೈಜಚಿತ್ರವನ್ನು ಮುಂದಿಟ್ಟು ಸರಕಾರವು ಸಾಧ್ಯವಿದ್ದೆಲ್ಲ ಉಪಾಯಗಳನ್ನು ಕೈಗೊಂಡು ಪರಿಹಾರ ಕ್ರಮಗಳನ್ನು ತ್ವರೆಗೊಳಿಸುವುದಾಗಿ ಆಶ್ವಾಸನವಿತ್ತರು. ಆಸಾಮದಲ್ಲಿಯ ಸಾದಿಯಾದಿಂದ ಬಿಹಾರದಲ್ಲಿಯ ದೇಪೋರಿಯಾ ವರೆಗಿನ ಒಟ್ಟು ೨೫ ಸಾವಿರ ಚದರ ಮೈಲು ಪ್ರದೇಶವು ನೀರಿನಲ್ಲಿ ಮುಳುಗಿರುವುದೆಂದು ತಿಳಿದುಬರುತ್ತದೆ. ಗಂಗಾ ಮತ್ತು ಬ್ರಹ್ಮಪುತ್ರಾ ನದಿಗಳ ಫಲವತ್ತಾದ ಸಾಗುವಳಿ ನೆಲವು ಇಂದು ಸಾಗರವನ್ನು ಹೋಲುತ್ತದೆ. ಜುಲಾಯಿ ತಿಂಗಳಲ್ಲಿ ತೊಡಗಿದ ಮಳೆಯು ಒಮ್ಮೆ ನಿಂತಂತೆ ಕಂಡು ಬಂದರೂ ಕಳೆದ ವಾರ ಇದ್ದಕ್ಕಿದ್ದಂತೆ ನೆರೆಯು ಉಕ್ಕಿ ಹರಿಯಿತು. ಆಸ್ತಿಪಾಸ್ತಿ ಹಾಗು ಜನ ಜಾನುವಾರುಗಳಿಗೂ ಸಾರಿಗೆ ಸಂಪರ್ಕ ಸಾಧನಗಳಿಗೂ ಅಪಾರ ಹಾನಿಯುಂಟಾಯಿತು. ಬಂಗಾಳದಲ್ಲಿ ಕಳೆದೊಂದೇ ವಾರದಲ್ಲಿ ೧೫೫ ಮಂದಿ ಒಮ್ಮೆಗೆಯೇ ಜಲಸಮಾಧಿಹೊಂದಿದ್ದಲ್ಲದೆ ೧೩ ಕೋಟಿ ರೂಪಾಯಿಯ ನಷ್ಟ ಸಂಭವಿಸಿತು. ಉಳಿದ ಪ್ರದೇಶಗಳಲ್ಲಿ ಈವರೆಗೆ ಸುಮಾರು ೬೪ ಮರಣಗಳಾದ ವರದಿ ಬಂದಿದೆ. ಪತ್ತೈವತ್ತು ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಹಾನಿಯಾಗಿರಬಹುದೆಂದು ಊಹಿಸಲಾಗುತ್ತದೆ.

ಕ್ಷಿಪ್ರ ಸಹಾಯದ ಅಗತ್ಯ

ಸಂತ್ರಸ್ತರಿಗೆ ಕ್ಷಿಪ್ರ ಸಹಾಯವನ್ನು ನೀಡಬೇಕೆಂಬ ಸರಕಾರದ ಅಪೇಕ್ಷೆಯಲ್ಲಿ ನೈಸರ್ಗಿಕ ಬಾಧೆಯು ಕಾಣಿಸಿಕೊಂಡಿದೆ. ರೈಲು ಹಾಗು ವಿಮಾನಗಳ ಸಂಚಾರಕ್ಕೆ ನೆರೆಯಿಂದ ತೊಡಕುಂಟಾಗಿದೆ. ಸಂತ್ರಸ್ತರು ನೆರೆಯ ನಡುವೆ ಎಲ್ಲಿ ಅವಿತಿರುವರೆಂಬುದನ್ನು ಗೊತ್ತು ಹಚ್ಚುವುದೂ ಕಷ್ಟಸಾಧ್ಯವೆನಿಸಿದೆ. ಕಳೆದ ವಾರ ಕೇಂದ್ರ ಸರಕಾರದ ಯೋಜನಾ ಸಚಿವ ನಂದಾರೂ ಆಹಾರ ಸಚಿವ ಕಿಡ್ವಾಯಿಯವರೂ ವಿಮಾನದಮೇಲಿಂದ ಇಲ್ಲೆಲ್ಲ ಸುತ್ತಾಡಿ ಬಂದರು. ಇದೇ ೪ನೇ ತಾರೀಕಿನಂದು ಪ್ರಧಾನ ಮಂತ್ರಿ ನೆಹರೂರವರೇ ಸ್ವತಃ ಪರಿಸ್ಥಿತಿಯ ಪರಿಶೀಲನೆ ನಡೆಸುವರು. ಸಂಕಟ ಪೀಡಿತರನ್ನು ನೌಕೆಗಳ ಸಹಾಯದಿಂದ ಸುರಕ್ಷಿತ ಪ್ರದೇಶಕ್ಕೆ ಸಾಗಿಸುವ, ಸಾಂಕ್ರಾಮಿಕ ರೋಗಗಳಿಂದ ಅವರಿಗೆ ಸಂರಕ್ಷಣೆಯೊದಗಿಸುವ, ಅಗ್ಗ ಬೆಲೆಗೆ ಧಾನ್ಯಗಳನ್ನು ಪೂರೈಸುವ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ. ಆದರೆ ದವಸ ಧಾನ್ಯಗಳನ್ನು ಕೊಂಡುಕೊಳ್ಳುವ ಚೇತನವನ್ನೆ ರೈತರು ಕಳೆದು ಕೊಂಡಂತೆ ತೋರುತ್ತದೆ. ಅವರಿಗೆ ಆದಾಯದ ಯಾವ ಉದ್ಯೋಗವೂ ಇಲ್ಲ. ಇದನ್ನು ಕಂಡ ವಿನೋಬಾ ಭಾವೆಯವರು "ಗಾಂಧೀಜಿಯಂತೆ ನೀವು ನೂಲುವುದನ್ನಾದರೂ ಕಲಿಯುತಿದ್ದರೆ," ಎಂದು ಉದ್ಗರಿಸಿದರು. ಗ್ರಾಮೋದ್ಯೋಗಗಳನ್ನು ಕೈಗೊಂಡು ದುಡಿಯುವುದೇ ಈಗಿನ ಉಪಾಯವೆಂದು ಅವರು ಬೋಧಿಸಿದರು.

ಲೋಹಿಯಾರ ಬಿಡುಗಡೆ

ಪ್ರಕೃತ ನೆರೆಹಾವಳಿಗೆ ಗುರಿಯಾಗಿರುವ ಉತ್ತರ ಪ್ರದೇಶದಲ್ಲಿ ನೀರಾವರಿ ತೆರಿಗೆಯನ್ನುಕೊಡಬೇಡಿರೆಂದು ಜನರನ್ನು ಪ್ರಚೋದಿಸಿ ಸಾರ್ವಜನಿಕ ಶಾಂತಿಗೆ ಭಂಗ ತಂದರೆಂದು ಕೆಲದಿನಗಳ ಹಿಂದೆ ಬಂಧಿಸಿದ್ದ ಪ್ರಸಮಾ ಪಕ್ಷದ ಶ್ರೀ ಲೋಹಿಯಾರನ್ನು ಈಗ ಬಿಡುಗಡೆ ಮಾಡಲಾಗಿದೆ. ಅಲಹಾಬಾದಿನ ಹೈಕೋರ್ಟಿನಲ್ಲಿ ಉತ್ತರ ಪ್ರದೇಶದ ವಿಶೇಷ ಅಧಿಕಾರ ಕಾಯಿದೆಯ ಕ್ರಮ ಬದ್ಧತೆಯನ್ನು ಪ್ರಶ್ನಿಸಿ ಲೋಹಿಯರು ಅರ್ಜಿಮಾಡಿಕೊಂಡ ಪರಿಣಾಮವೆ ಇದು—ಅರ್ಜಿಯನ್ನು ಮೊದಲು ವಿಚಾರಿಸಿದ ಇಬ್ಬರು ನ್ಯಾಯಾಧೀಶರಲ್ಲಿ ಶ್ರೀ ಚತುರ್ವೇದಿಯವರು ನಿರ್ದಿಷ್ಟ ಕಾನೂನೊಂದು ರೂಢಿಗೆ ಬಂದಿರುವಾಗ ಅದನ್ನು ಮನ್ನಿಸಬೇಡಿರೆಂದು ಹೇಳುವುದು ನೆಮ್ಮದಿ ಭಂಗವೇ ನಿಜವೆಂದು ಹೇಳಿದ್ದರು; ಶ್ರೀ. ಅಗರ್ವಾಲರು ತೆರಿಗೆಯನ್ನು ಕೊಡುವುದು ನಾಗರಿಕನ ಹೊಣೆಯಾಗಿದ್ದರೂ ಅದನ್ನು ಕೊಡಬೇಡಿರೆಂದು ಹೇಳುವುದಕ್ಕೂ ಸಾರ್ವಜನಿಕ ಶಾಂತಿಗೂ ಸಂಬಂಧವಿಲ್ಲ ಎಂದಿದ್ದರು. ಇದರಿಂದಾಗಿ ಮೂರನೇ ನ್ಯಾಯಾಧೀಶರಾದ ಶ್ರೀ. ದೇಸಾಯಿಯವರ ಮುಂದೆ ಅರ್ಜಿಯು ವಿಚಾರಣೆಗೆ ಬಂತು—ಅವರು ಲೋಹಿಯರ ಬಂಧನವು ಸಂವಿಧಾನದ ೧೯(೧)(ಅ) ಕಲಮಿನಲ್ಲಿ ಹೇಳಲಾದ ವಾಕ್-ಸ್ವಾತಂತ್ರ್ಯಕ್ಕೆ ವಿರುದ್ಧವಿದೆಯೆಂದೂ ಲೋಹಿಯರ ಹೇಳಿಕೆಯಿಂದ ರಾಜ್ಯದ ಭದ್ರತೆಗೆ ಘಾತಕ ತೊಡಕುಂಟಾಗಿಲ್ಲವೆಂದೂ ಅಭಿಪ್ರಾಯ ನೀಡಿದರು. ಲೋಹಿಯಾರ ಬಿಡುಗಡೆಯ ಬೆನ್ನಿಗೆ, ಸರಕಾರವು ಇತರ ೧೬೪ ಮಂದಿ ಸತ್ಯಾಗ್ರಹಿಗಳನ್ನೂ ಸ್ವೇಚ್ಛೆಯಿಂದ ಬಂಧಮುಕ್ತಗೊಳಿಸಿತು.

ಕನ್ನಡಿಗರ ಬಿನ್ನಹ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಆಲಿ ಆಯೋಗದ ಮುಂದೆ ಮುಂಬಯಿ ವಿಧಾನ ಸಭೆಯ ೨೦ ಕನ್ನಡಿಗರು ಶ್ರೀ. ಎಸ್. ಆರ್. ಕಂಠಿಯವರ ನೇತೃತ್ವದಲ್ಲಿ ಕನ್ನಡ ರಾಜ್ಯ ನಿರ್ಮಾಣದ ಬಗ್ಗೆ ಒತ್ತಾಯ ಮಾಡುವ ಮನವಿಯನ್ನು ಅರ್ಪಿಸಿದರು. ಆರು ರಾಜ್ಯಗಳಲ್ಲಿ ವಿಭಕ್ತವಾಗಿರುವ ಕನ್ನಡ ಪ್ರದೇಶಗಳ ಪ್ರಗತಿಗೆ ಮೊದಲನೆಯ ಪಂಚವಾರ್ಷಿಕ ಯೋಜನೆಯು ಮಹತ್ವವನ್ನೇ ಕೊಟ್ಟಿಲ್ಲ - ಮುಂದಿನ ಯೋಜನೆಯಲ್ಲಾದರೂ ಈ ತಪ್ಪು ಸುಧಾರಿಸಲ್ಪಡುವಂತೆ ಮಾಡಲು ಅಷ್ಟರೊಳಗೆ ಕರ್ನಾಟಕ ಏಕೀಕರಣವನ್ನು ಸಾಧಿಸಬೇಕೆಂದು ಅವರು ತಿಳಿಸಿದರು. ಫಜಲ ಆಲಿ ಆಯೋಗವು ಇದೇ ೯ನೇ ತಾರೀಕಿನಂದು ಬಳ್ಳಾರಿಗೆ ಆಗಮಿಸುವದೆಂದೂ ಆಗ ಬಳ್ಳಾರಿಯ ಭವಿಷ್ಯದ ಪ್ರಶ್ನೆಯನ್ನು ಮರಳಿ ಎತ್ತಲು ಆಂಧ್ರ ಸರಕಾರವೂ ಧುರೀಣರೂ ಪ್ರಯತ್ನಿಸುತ್ತಿರುವರೆಂದೂ ತಿಳಿಯುತ್ತದೆ. ರಾಯಲ ಸೀಮೆಯ ಜಿಲ್ಲೆಗಳೊಂದಿಗೆ ಸಂಪರ್ಕವನ್ನು ಹೊಂದಿದ್ದ ಬಳ್ಳಾರಿಯು 'ಆರ್ಥಿಕ ಕಾರಣ'ಗಳಿಗಾದರೂ ಆಂಧ್ರದೊಡನೆ ಸೇರ್ಪಡೆ ಹೊಂದುವುದು ಅಗತ್ಯವೆಂದು ತೆಲುಗರ ಪರವಾಗಿ ವಾದಿಸಲಾಗುವುದೆಂದೂ ಕೇಳುತ್ತೇವೆ. ಕನ್ನಡಿಗರು ಮರಳಿ "ಅಗ್ನಿ ಪ್ರವೇಶ" ಪರೀಕ್ಷೆಯನ್ನು ಇದಿರಿಸಬೇಕಾಗಿ ಬಂದಿರುವ ಈ ಪರಿಸ್ಥಿತಿಯಲ್ಲಿಯೂ ಮೈಸೂರು ಸರಕಾರದ ಧೋರಣೆಯು "ಮೃದು"ವಾಗಿದೆಯೆಂದು ಹೇಳಲಾಗುತ್ತದೆ. ಇದರಿಂದ ಉತ್ತೇಜನ ಹೊಂದಿದಂತೆ ಕಾಣುವ ಆಂಧ್ರರ ವಾದವನ್ನು ಖಂಡಿಸಲು ಕನ್ನಡದ ಪಂಡಿತರ ನೆರವು ಅಗತ್ಯವೆಂದು ತಿಳಿಯಲ್ಪಡುತ್ತದೆ.

ಶೋಚನೀಯ ಘಟನೆ

ಪ್ರಾಂತೀಯ, ಜಾತಿಯ ಮುಂತಾದ ಭೇದಗಳು ಅಪೇಕ್ಷಣೀಯವಲ್ಲವೆಂದು ಧುರೀಣರು ಹೇಳುತಿದ್ದಾರೆ--ಆದರೆ ಅವುಗಳನ್ನು ಲಕ್ಷಿಸುವವರು ಮಾತ್ರ ಕಡಿಮೆ: ಬದಲು ರಾಷ್ಟ್ರ ದ್ರೋಹದ ಭಾವನೆಯನ್ನು ಪ್ರದರ್ಶಿಸುವಲ್ಲಿ ವರೆಗೂ ಕಿಡಿಗೇಡಿಗಳು ಮುಂದೆ ಹೋಗುತ್ತಾರೆ—ಆಗೋಸ್ತು ಹದಿನೈದರಂದು ಭಾರತದಲ್ಲೆಲ್ಲ ಸ್ವಾತಂತ್ರ್ಯ ದಿನೋತ್ಸವವು ಆಚರಿಸಲ್ಪಡುತಿದ್ದಾಗ ಹೈದರಾಬಾದಿನ ನಿಜಾಮಾಬಾದದಲ್ಲಿ ಮಹಾತ್ಮಾ ಗಾಂಧಿಯ ಪುತ್ಥಳಿಯ ಮೇಲೆ ಯಾರೋ ಪುಂಡರು ಪಾಕಿಸ್ತಾನದ ಧ್ವಜವನ್ನು ಆರಳಿಸಿದರು. ಇದರಿಂದ ಗಲಭೆಯುಂಟಾಗಿ ಹಾನಿ ಸಂಭವಿಸಿತು. ಕಳೆದ ವಾರ ಗುಲ್ಬರ್ಗದಲ್ಲಿರುವ ಗಣೇಶ ಮಂದಿರದ ಮೇಲೆ ಪಾಕಿಸ್ತಾನದ ಧ್ವಜವನ್ನೇರಿಸಿದ ಪರಿಣಾಮವಾಗಿ ಎರಡು ಗುಂಪುಗಳ ನಡುವೆ ಘರ್ಷಣೆ ನಡೆಯಿತು. ಇದರಲ್ಲಿ ಏಳು ಮಂದಿ ಮರಣಹೊಂದಿದರು. ೧೯ ಜನರಿಗೆ ಗಾಯವಾಯಿತು. ಅನೇಕ ಅಂಗಡಿಗಳಿಗೆ ಬೆಂಕಿ ಕೊಡಲ್ಪಟ್ಟಿತು. ಇಂತಹ ದುರ್ಘಟನೆಗಳನ್ನು ತಪ್ಪಿಸುವ ಬಗ್ಗೆ ಕರ್ಫ್ಯೂ ಆಜ್ಞೆಯನ್ನು ಈಗ ಹೇರಲಾಗಿದೆಯಲ್ಲದೆ ಪ್ರಮುಖ ನಾಗರಿಕರು, ಶಾಸನಸಭಾ ಸದಸ್ಯರು ಮತ್ತು ಪತ್ರಿಕಾ ಪ್ರತಿನಿಧಿಗಳ ಮಂಡಳವೊಂದು ರಾಜ್ಯದಾದ್ಯಂತ ಸೌಹಾರ್ದ ಸಂದೇಶವನ್ನು ಬೀರುವುದಕ್ಕಾಗಿ ಸಂಘಟಿಸಲ್ಪಟ್ಟಿರುವುದು.

ಹಿಂಸಾಚಾರವು ಅನುಚಿತ

ಹಿಂಸಾ ಪ್ರವೃತ್ತಿಗೆ ಪ್ರಚೋದನೆಯನ್ನು ಕೊಡುವ ಈ ತೆರನಾದ ಘಟನೆಗಳ ವಿಷಯದಲ್ಲಿ ಸಾರ್ವಜನಿಕರ ವರ್ತನೆ ಹೇಗಿರಬೇಕೆಂಬುದನ್ನು ಕಾಂಗ್ರೆಸಾಧ್ಯಕ್ಷ ನೆಹರೂರವರು ಪರಿಪತ್ರ ಮುಖೇನ ತಿಳಿಸಿದ್ದಾರೆ. ಅವರ ಅಭಿಪ್ರಾಯದಂತೆ ಶಾಂತಿಯಿಂದ ಕೆಲಸ ನಿರ್ವಹಿಸುವುದೇ ಪ್ರಜಾಪ್ರಭುತ್ವದ ಜೀವಾಳ. ಸಮಸ್ಯೆಗಳು ಎಷ್ಟೇ ಜಟಿಲವಿರಲಿ, ಅವುಗಳನ್ನು ಪರಸ್ಪರ ವಿಚಾರ ವಿನಿಮಯ, ಮನವೊಲಿಸುವಿಕೆ,

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE

POPULAR INSURANCE CO. LTD.

"POPULAR BUILDINGS" MANGALORE-1

ಗೋವೆಯ ಕುರಿತು ನೆಹರೂರ ಹೇಳಿಕೆ

ಬಲೆಯಲ್ಲಿ ಬೀಳುವ ದುಡುಕುತನ ಸಲ್ಲದೆಂಬ ಅಭಿಪ್ರಾಯ

ಮತ್ತು ಸಂಧಾನ ಮಾರ್ಗಗಳಿಂದಲೇ ಬಿಡಿಸಬೇಕು. ತಮ್ಮ ಗುರಿಯನ್ನು ಸಾಧಿಸಬೇಕೆಂದು ಚಳವಳ ನಡೆಸುವರು ಸಂಯಮವನ್ನು ಮೀರಬಾರದು. ಪ್ರಜಾಪ್ರಭುತ್ವದಲ್ಲಿ ಸತ್ಯಾಗ್ರಹವು ಅನಿವಾರ್ಯ ಆವಶ್ಯಕತೆಯೇನೂ ಅಲ್ಲ—ಇನ್ನು ಹಿಂಸಾಚಾರಕ್ಕಂತೂ ಎಂಥ ಪರಿಸ್ಥಿತಿಯಲ್ಲೂ ಅವಕಾಶವಿಲ್ಲ. ಯಾರೋ ಒಬ್ಬ ಕಿಡಿಗೇಡಿಯು ಪಾಕಿಸ್ತಾನದ ಧ್ವಜವನ್ನು ಹಾರಿಸಿದನೆಂದ ಮಾತ್ರಕ್ಕೆ ಜನರು ಕಾಯಿದೆಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಕೊಳ್ಳಿ ಹಿಡಿದು ಕೂಗಾಡುತ್ತಾ ಹೊರಡುವುದು ಇಷ್ಟವಲ್ಲ: ಏಕೆಂದರೆ ಹಾಗೆ ಮಾಡುವ ನಾವು ಕಿಡಿಗೇಡಿಯ ಇಚ್ಛೆಯಂತೆ ನಡೆಯುವ ಮೂರ್ಖರಾಗುತ್ತೇವೆ

ಗೋವೆಯ ಆಂದೋಲನ

ನಮ್ಮ ಪ್ರಧಾನ ಮಂತ್ರಿಗಳು ಯಾವ ಪ್ರಸಂಗದಲ್ಲೂ ಭಾರತೀಯರು ಅವಿವೇಕದ ಹಾಗು ಗಂಡಾಂತರಕಾರಿಯಾದ ಮಾರ್ಗದ ಅನುಸರಣೆ ಮಾಡಬಾರದೆಂದು ಅಪೇಕ್ಷಿಸುತ್ತಾರೆ. ಕಳೆದ ವಾರ ಅವರು ಪಾರ್ಲಿಮೆಂಟಿನ ಉಭಯ ಸಭೆಗಳಲ್ಲಿ ವಿದೇಶ ಧೋರಣೆಯನ್ನು ವಿವರಿಸಿದಾಗ--ಮುಖ್ಯವಾಗಿ ಗೋವೆಯ ಪರಿಸ್ಥಿತಿಯನ್ನು ಪ್ರಸ್ತಾಪಿಸಿದಾಗ-ಉದ್ವೇಗದ ಬದಲು ಸಂಯಮವನ್ನೇ ತೋರಿಸುವಷ್ಟು ದಕ್ಷತೆಯಿಂದ ನಡೆದು ಕೊಂಡರು. ಗೋವೆ ಮತ್ತಿತರ ಪೋರ್ಚುಗೀಜ ವಸಾಹತುಗಳಲ್ಲಿ ವಿಮೋಚನಾ ಚಳವಳವು ಬಲಿಯುತ್ತಿದೆಯೆಂದು ಸಾರುತ್ತಾ ನೆಹರೂರವರು ಅದು ಸಂಪೂರ್ಣವಾಗಿ ಗೋವಾನೀಯರ ಆಂದೋಲನವಾಗಿದೆಯೆಂದು ಹೇಳಿದರು. ಈ ಹೋರಾಟದಲ್ಲಿ ಹೊರಗಿನಿಂದ ಅಲ್ಲಿಗೆ ಹೋಗಿ ತೊಂದರೆಯುಂಟು ಮಾಡುವ ಇತರ ಜನರಿಗಿಂತ ಗೋವಾನೀಯರ ಸತ್ಯಾಗ್ರಹಕ್ಕೆಯೇ ಹೆಚ್ಚು ಮಹತ್ವವುಂಟು. ಗೋವೆಯಲ್ಲಿರುವ ಇಂದಿನ ವಿಚಿತ್ರ ಹಾಗು ವಿಶಿಷ್ಟ ಪರಿಸ್ಥಿತಿಯಲ್ಲಿ ಗೋವಾನೀಯರಲ್ಲದವರು ಅಲ್ಲಿಗೆ ಹೋದರೆ ಅವರು ಎಷ್ಟೇ ಶಾಂತ ಮನಸ್ಸಿನವರಾಗಿದ್ದರೂ ಅಹಿಂಸಾತ್ಮಕ ರೀತಿಯಲ್ಲಿ ನಡೆದುಕೊಳ್ಳುವರೆಂದು ನಂಬುವಂತಿಲ್ಲ ಎಂದು ನೆಹರೂ ಅಭಿಪ್ರಾಯ ಪಟ್ಟರು.

ನೆಹರೂರ ಭರವಸೆ

ಪೋರ್ಚುಗೀಜರು ದಬ್ಬಾಳಿಕೆ, ಅಪಪ್ರಚಾರ ಮುಂತಾದ ಹಳೆಯ ಕಾಲದ ಉಪಾಯಗಳಿಂದ ಚಳವಳವನ್ನು ಇದಿರಿಸುತಿದ್ದಾರೆ; ಜನತೆಯ ನ್ಯಾಯವಾದ ಸ್ವಯಂ ನಿರ್ಣಯಾಧಿಕಾರದ ಬೇಡಿಕೆಯನ್ನೂ ಸ್ವಾತಂತ್ರ್ಯವನ್ನೂ ನಿರಾಕರಿಸುತಿದ್ದಾರೆ. ಭಾರತ ಸರಕಾರದ ಧೋರಣೆಯು ಕ್ರೈಸ್ತರಿಗೆ ವಿರೋಧವಾಗಿದೆ; ಅದು ಆಕ್ರಮಣ ಶೀಲತೆಯನ್ನು ವ್ಯಕ್ತಗೊಳಿಸುತ್ತದೆ ಎಂದೆಲ್ಲ ಪೋರ್ಚುಗಾಲವು ಸುಳ್ಳು ನುಡಿಯುತ್ತದೆ. ಆದರೆ ಇಂತಹ ಪ್ರಯತ್ನಗಳೆಲ್ಲ ವಿಫಲಗೊಂಡಿರುವುವು. ಗೋವೆಯು ಭಾರತದ ಘಟಕವಾದಲ್ಲಿ ನಮ್ಮ ಘಟನೆಯನ್ವಯ ಪ್ರಾಪ್ತವಾದ ಎಲ್ಲ ಮೂಲಭೂತ ಹಕ್ಕುಗಳನ್ನು ನಾಗರಿಕರಿಗೆ ಕೊಡಲಾಗುವುದು; ಐತಿಹಾಸಿಕ ಕಾರಣದಿಂದ ಗೋವೆಯಲ್ಲಿ ಬೆಳೆದು ಬಂದ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಉಳಿಸಿಕೊಳ್ಳಲಾಗುವುದು; ಅಲ್ಲಿಯ ರೂಢಿ ಸಂಪ್ರದಾಯಗಳನ್ನು ಘಟನೆಯ ವ್ಯಾಪ್ತಿಗೊಳಪಟ್ಟು ಗೌರವಿಸಲಾಗುವುದು ಎಂದು ಮುಂತಾಗಿ ನೆಹರೂ ತಿಳಿಸಿದರು. ಭಾರತವು ಪೋರ್ಚುಗಾಲದ ವೈರಿಯಲ್ಲ; ಆದರೆ ಸ್ವಾತಂತ್ರ್ಯವು ಗೋವಾನೀಯರ ಜನ್ಮಸಿದ್ಧ ಹಕ್ಕು ಎನ್ನುತ್ತದೆ. ಈ ವಿಷಯದಲ್ಲಿ ತನ್ನ ಸೈನ್ಯ ಬಲದ ಉಲ್ಲೇಖವನ್ನು ಭಾರತವು ಎಂದೂ ಮಾಡುವುದಿಲ್ಲ. ಪೋರ್ಚುಗೀಜರು ತಮ್ಮ ಸೈನ್ಯವನ್ನು ಗೋವೆ ಮುಂತಾದ ಭಾರತದಲ್ಲಿಯ ವಸಾಹತುಗಳಲ್ಲಿ ತಂದಿಡುವುದು ಮತ್ತು ಭಾರತದ ಕರಾವಳಿಯಲ್ಲಿ ಯುದ್ಧ ನೌಕೆಗಳನ್ನು ಓಡಾಡಿಸುವುದು ನಮ್ಮ ರಾಷ್ಟ್ರೀಯ ಹಾಗು ಅಂತರಾಷ್ಟ್ರೀಯ ಹಕ್ಕು ಬಾಧ್ಯತೆಗಳಿಗೆ ವಿರುದ್ಧವೆಂದು ತೋರಿದರೆ ಸೂಕ್ತ ಕ್ರಮಗಳನ್ನು ನಾವು ತೆಗೆದುಕೊಳ್ಳುತ್ತೇವೆ ಎಂದು ಪ್ರಧಾನ ಮಂತ್ರಿಗಳು ಭರವಸೆ ನೀಡಿದರು.

ನಿರಾಧಾರ ಸಂಶಯ

ಗೋವೆಯ ಪರಿಸ್ಥಿತಿಯನ್ನು ಕುರಿತು ಕಳೆದ ೩೧ನೇ ತಾರೀಕಿನಂದು ನಡೆಯಬೇಕಿದ್ದ ಸಂಧಾನವು ಪೋರ್ಚುಗೀಜರ ಅಸಮ್ಮತಿಯ ದೆಸೆಯಿಂದ ಜರಗದಾಯಿತು. ಮೊದಲು ಮಾತುಕತೆಗಳನ್ನು ನಡೆಸಲು ಒಪ್ಪಿದ್ದ ಪೋರ್ಚುಗಾಲವು ಕೊನೆಯ ಗಳಿಗೆಯಲ್ಲಿ ಅಂತಾರಾಷ್ಟ್ರೀಯ ನಿರೀಕ್ಷಣೆಯ ವಿಷಯದಲ್ಲಿ ಯಾವ್ಯಾವ ವಿಚಾರಗಳನ್ನು ಚರ್ಚಿಸಬೇಕೆಂದು ಸ್ಪಷ್ಟವಾಗಿ ತಿಳಿಸಬೇಕೆಂದು ಪತ್ರಮುಖೇನ ಹೇಳಿತು. ಲಿಸ್ಬನದಲ್ಲಿಯೇ ಸಂಧಾನ ಮಾತುಕತೆಗಳು ಜರಗಬೇಕೆಂದೂ ಅದು ತಿಳಿಸಿತು. ಭಾರತ ಸರಕಾರವು ಇದಕ್ಕೆ ಕೂಡಲೇ ಉತ್ತರ ಕಳಿಸಿ ಪೋರ್ಚುಗಾಲದ ಯಾವ ಶಂಕೆಗೂ ಆಧಾರವಿಲ್ಲೆಂದು ಸ್ಪಷ್ಟಗೊಳಿಸಿತು. ಅನವಶ್ಯಕವಾಗಿ ಕಾಲ ವಿಳಂಬ ಮಾಡುವ, ತಪ್ಪು ತಿಳಿವಳಿಕೆಗೆ ಆಸ್ಪದ ಕಲ್ಪಿಸುವ ಅಥವಾ ಮಾತುಕತೆಗಳು ನಿರ್ಣಾಯಕ ಘಟ್ಟದಲ್ಲಿ ಕೊನೆ ಹೊಂದುವ ಪರಿಸ್ಥಿತಿಯನ್ನುಂಟು ಮಾಡುವುದು ಭಾರತದ ಇಚ್ಛೆಯಲ್ಲವೆಂದು ಹೇಳಿ ಭಾರತವು ತನ್ನ ಪ್ರಾಮಾಣಿಕತೆಯನ್ನು ಪ್ರದರ್ಶಿಸಿರುವುದು. ಇದಕ್ಕೆ ಪ್ರತಿಯಾಗಿ ಪೋರ್ಚುಗಾಲದಿಂದ ಸೌಜನ್ಯ ಪೂರ್ಣ ವರ್ತನೆಯು ಕಂಡು ಬಂದಿಲ್ಲ—ನೆಹರೂ ಜಗತ್ತಿನಲ್ಲಿಯೇ ದೊಡ್ಡ ಕಮ್ಯುನಿಸ್ಟರು; ಭಾರತವು ಕಮ್ಯುನಿಸ್ಟ ರಾಷ್ಟ್ರ; ಸತ್ಯಾಗ್ರಹಿಗಳೆಲ್ಲರೂ ಪುಂಡರು ಎಂದು ಮುಂತಾದ ದುರುದ್ದೇಶಪೂರಿತ ವಾಕ್ಯಗಳನ್ನೆ ಅಲ್ಲಿಯ ಆಕಾಶವಾಣಿಯು ಪ್ರಸಾರ ಮಾಡುತ್ತದೆ.

ಅಳ್ವಾರೀಸರ ಅಭಿಪ್ರಾಯ

ಪೋರ್ಚುಗಾಲದ ಈ ಉದ್ಧಟ ತನವು ಭಾರತದ ಕಾಂಗ್ರೆಸ್ಸೇತರ ಧುರೀಣರಲ್ಲಿ ಹಲವರನ್ನು ನೆಹರೂರ ಧೋರಣೆಯನ್ನು ಟೀಕಿಸುವಂತೆ ಮಾಡಿದೆ. ಭಾರತೀಯರು ಪ್ರತ್ಯಕ್ಷವಾಗಿ ಸತ್ಯಾಗ್ರಹದಲ್ಲಿ ಧುಮುಕತಕ್ಕದಲ್ಲವೆಂಬ ನೆಹರೂರ ಆದೇಶವು ಸರಿಯಲ್ಲವೆಂದು ಪ್ರಸಪಾ, ಕಮ್ಯುನಿಸ್ಟ ಹಾಗು ಜನಸಂಘದ ಧುರೀಣರು ಅಭಿಪ್ರಾಯ ಪಡುತ್ತಾರೆ. ಗೋವೆಯ ಧುರೀಣರಿಗೂ ನೆಹರೂರ ನಿಲುವು ನಿರಾಶೆಯನ್ನುಂಟು ಮಾಡಿದಂತೆ ತೋರುತ್ತದೆ. ಗೋವೆಯ ರಾಷ್ಟ್ರೀಯ ಕಾಂಗ್ರೆಸಿನ ಅಧ್ಯಕ್ಷ ಶ್ರೀ ಪೀಟರ ಅಳ್ವಾರೀಸರು ಗೋವೆಯ ವಿಮೋಚನಾ ಆಂದೋಲನವು ಭಾರತೀಯರೆಲ್ಲರಿಗೆ ಸಂಬಂಧಿಸಿದ ವಿಷಯವೆಂದು ಸಾರ್ವಜನಿಕ ಭಾಷಣವೊಂದರಲ್ಲಿ ಹೇಳುತ್ತಾ ಹೈದರಾಬಾದ ಮುಂತಾದೆಡೆ, ಮಾಡಿದಂತೆ ಸೈನ್ಯವನ್ನು ಪಡೆಗಿಸಿ ಈ ಪ್ರಶ್ನೆಯನ್ನು ಪರಿಹರಿಸಬೇಕೆಂದೂ ಪ್ರತಿಪಾದಿಸಿದರು. ಗೋವಾನೀಯರು ಕಳೆದ ೭೫೦ ವರ್ಷಗಳಲ್ಲಿ ಸುಮಾರು ೭೦ ಸಲ ದಂಗೆ ಎದ್ದಿದ್ದಾರೆ—ಅವರನ್ನು ದಬ್ಬಾಳಿಕೆಯಿಂದ ಹತ್ತಿಕ್ಕಲಾಯಿತು. ಜಗತ್ತಿನ ಬೇರೆ ಯಾವುದೇ ಭಾಗದಲ್ಲಿ ಕಾದಾಟ ಪ್ರಾರಂಭವಾದರೆ ಅತ್ತ ಶಾಂತಿಸ್ಥಾಪನೆಗಾಗಿ ಹೋಗುವ ನೆಹರೂರವರು ಗೋವೆಯ ಅಹಿಂಸಾತ್ಮಕ ಹೋರಾಟಕ್ಕೆ ಭಾರತ ಸರಕಾರದ ಬೆಂಬಲ ಕೊಡದಿರುವುದು ಆಶ್ಚರ್ಯವಾಗಿದೆ. ಗೋವಾನೀಯರೇ ಅಲ್ಲಿ ತ್ಯಾಗ ಮಾಡಲಿ ಎಂದು ಬಿಟ್ಟಿದ್ದರೆ, ಅದು ಸಶಸ್ತ್ರ ಯುದ್ಧದಲ್ಲಿಯೂ ಪರಿಣಮಿಸಬಹುದು. ಬದಲು ಅಹಿಂಸಾತ್ಮಕ ಸತ್ಯಾಗ್ರಹದಲ್ಲಿ ಸಹಕರಿಸುವ ಮೂಲಕ ಭಾರತೀಯರೆಲ್ಲ ಒಕ್ಕೊರಲಿನಿಂದ ಪೋರ್ಚುಗೀಜರನ್ನು ತೊಲಗಿ ಹೋಗಿರೆಂದು ಸಾರಿದರೆ ಅಲ್ಲಿ ಅವರು ಕ್ಷಣ ಕಾಲವೂ ನಿಲ್ಲುವಂತಿಲ್ಲ ಎಂದು ಅಳ್ವಾರೀಸರ ಅಭಿಪ್ರಾಯ.

ಸಹನೆಗೆಡಬಾರದು

ಭಾರತೀಯರ ಮನಸ್ಸಿನಲ್ಲಿ ಆಗುತ್ತಿರುವ ಹೊಯ್ದಾಟವನ್ನು ನೆಹರೂ ಕಂಡುಕೊಂಡಿದ್ದಾರೆ—ಅವರು ರಾಜ್ಯಸಭೆಯಲ್ಲಿ ಚರ್ಚೆಗೆ ಉತ್ತರ ಕೊಡುತ್ತಾ, ಕೈಯಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದುಕೊಂಡು ಗೋವೆಯಲ್ಲಿ ನುಗ್ಗಬೇಕೆಂದು ನನಗೂ ತೋರುತ್ತದೆ; ಭಾರತೀಯರನ್ನು ಅಲ್ಲಿಗೆ ಹೋಗದಂತೆ ಪ್ರತಿಬಂಧಿಸಬಾರದೆಂದೂ ಕಾಣುತ್ತದೆ. ಆದರೆ ಅಂತಾರಾಷ್ಟ್ರೀಯ ವಿಷಯಗಳಲ್ಲಿ ಸಂಯಮದಿಂದ ವರ್ತಿಸುವುದು ಆಗತ್ಯವಾಗಿದೆ. ಗೋವೆಯ ಬಗ್ಗೆ ತಪ್ಪು ಹೆಜ್ಜೆ ಇಡುವಂತೆ ನಮ್ಮನ್ನು ಪ್ರಚೋದಿಸುವದಕ್ಕಾಗಿಯೇ ಪೋರ್ಚುಗಾಲವು ಈ ಸಂದರ್ಭದಲ್ಲಿ ತನ್ನ ಸೈನ್ಯ ಬಲವನ್ನು ತಂದು ನಿಲ್ಲಿಸುತ್ತಿದೆ; ಅಪಪ್ರಚಾರದ ವೈಖರಿಯನ್ನೂ ವಿಸ್ತರಿಸುತ್ತಿದೆ. ಆದರೆ ನಾವು ಈ ಪ್ರಚೋದನೆಯ ಬಲೆಯೊಳಕ್ಕೆ ಬಿದ್ದು ತಾಳ್ಮೆಗೆಟ್ಟು ವರ್ತಿಸಬಾರದು. ಇಷ್ಟರಿಂದ ನಾವು ಎಲ್ಲವನ್ನು ಸಹಿಸುತ್ತೇವೆಂದು ಮತ್ತು ನಿಷ್ಕ್ರಿಯರಾಗಿ ಕುಳಿತಿರುತ್ತೇವೆಂದು ಅರ್ಥಮಾಡಲಾಗದು. ನಾವು ತಕ್ಕ ಸಿದ್ಧತೆಗಳನ್ನು ಸೂಕ್ತ ಸಮಯದಲ್ಲಿ ಮಾಡಿಕೊಳ್ಳುತ್ತೇವೆ ಎಂದರು. ಒಮ್ಮೆಗೇ ದುಡುಕುವುದರಿಂದ ಯುದ್ಧದ ಕಿಡಿಯು ಭುಗ್ಗೆಂದು ಹತ್ತಿಕೊಳ್ಳಬಹುದು. ಇದು ಅಂತಾರಾಷ್ಟ್ರೀಯ ವಾತಾವರಣದಲ್ಲಿ ಅಲ್ಲೋಲ ಕಲ್ಲೋಲವನ್ನುಂಟು ಮಾಡಬಹುದು. ಭಾರತವು ಇಂತಹ ಪರಿಣಾಮಗಳನ್ನು ಇಚ್ಛಿಸುವುದಿಲ್ಲ. ಸತ್ಯಾಗ್ರಹದಲ್ಲಿ ಈ ವರೆಗೆ ಬಂಧಿಸಲ್ಪಟ್ಟ ೭೦೦ ಚಳವಳಗಾರರೂ ಯುದ್ಧದ ದುರಂತವನ್ನು ಅಪೇಕ್ಷಿಸಲಾರರು.

ನಮ್ಮ ಸಂಸತ್ತಿನಲ್ಲಿ

ಯುದ್ಧದ ಮಾತೆತ್ತದೆ ಶಾಂತಿಯುತ ಸಹಜೀವನದ ಆದರ್ಶವನ್ನು ಮುನ್ನಿಡಿಸುವ ಭಾರತವು ಇಂದು ತನ್ನ ಪ್ರಗತಿಯ ದಾರಿಯನ್ನು ರೂಪಿಸಿಕೊಳ್ಳುವುದಕ್ಕೆ ಮಹತ್ವವನ್ನು ಕೊಡಬೇಕಾಗಿದೆ—ವಿದೇಶ ನೀತಿಯಾಗಲೀ ಆಂತರಿಕ ವಿಷಯಗಳಾಗಲೀ ಮೂಲ ಧೋರಣೆಯನ್ನು ಬಿಟ್ಟು ಬಿಡುವಂತಿಲ್ಲ. ನಮ್ಮ ಪಾರ್ಲಿಮೆಂಟು, ರಾಷ್ಟ್ರೀಯ ಮಹತ್ವದ

(೬ನೇ ಪುಟ ನೋಡಿರಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ ...	... ರೂ.	25,00,000
ಚಂದಾ ಆರ್ಸಿ, ತೆತ್ತು ಬಂದ ಭಂಡವಾಳ	... ರೂ.	20,00,000
ಕ್ಷೇಮ ನಿಧಿ ...	... ರೂ.	10,50,000
ಠೇವಣಾತಿಗಳು ...	... ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ	..	ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು ...	...	38

(31—12—1953ರಲ್ಲು)

THE CANARA BANKING CORPORATION LIMITED

Estd:- 1906] [H. O. UDIPI (S. India).

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/-8. per column inch for contracts of 50″ or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

NAVAYUGA

Popular Kannada Weekly,

Founder:—

Sri. **A. B. SHETTY**, *M.L.A.*

Minister for Public Health, Govt. of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨-೯-೧೯೫೪	೧

ಬೇಂಕು ನೌಕರರ ತಂಟೆ

ಕಳೆದ ಸೋಮವಾರ (ದಿನಾಂಕ ೩೦) ಲೋಕಸಭೆಯಲ್ಲಿ ಬೇಂಕು ನೌಕರರ ತಂಟೆಯ ಕುರಿತು ಅಪೀಲು ನ್ಯಾಯಮಂಡಳವು ಕೊಟ್ಟಿದ್ದ ತೀರ್ಪನ್ನು ಸರಕಾರವು ಕೆಲಮಟ್ಟಿಗೆ ಬದಲಾಯಿಸಿದ ವಿಷಯದಲ್ಲಿ ಎರಡೂವರೆ ತಾಸುಗಳ ಚರ್ಚೆಯು ನಡೆಯಿತು. ಇದರಿಂದ ಸರಕಾರದ ವರ್ತನೆಯ ವಿರೋಧಕರಿಗೂ ಸಮರ್ಥಕರಿಗೂ ತಮ್ಮ ವಾದವನ್ನು ಯಶಸ್ವಿಯಾಗಿಯೇ ಮಂಡಿಸುವ ಅವಕಾಶವು ದೊರೆಯಿತು. ಕಮ್ಯುನಿಸ್ಟ ಮುಖಂಡ ಶ್ರೀ ಹಿರೇನ ಮುಖರ್ಜಿಯವರೂ ಪ್ರಸವಾ ಧುರೀಣ ಶ್ರೀ ಅಶೋಕ ಮೆಹತಾರೂ ಬೇಂಕು ನೌಕರರ ಪರವಾಗಿ ವಾದ ಮಾಡಿದರೆ, ಶ್ರೀ. ಎನ್. ವಿ. ಗಾಡಗೀಳರೂ ಅರ್ಥಸಚಿವ ಶ್ರೀ. ಚಿಂತಾಮಣ ದೇಶಮುಖರೂ ಸರಕಾರದ ನಿಲುವೆಯನ್ನು ಎತ್ತಿಹಿಡಿದರು. ನ್ಯಾಯಮಂಡಳದ ತೀರ್ಪನ್ನು ಬದಲಾಯಿಸಿದುದರಿಂದ ಬೇಂಕುಗಳ ನೌಕರರಿಗೆ ನಷ್ಟವೇ ಆಗುತ್ತದೆನ್ನುವುದು ವಿರೋಧಕರ ಸಾಮಾನ್ಯ ಅಭಿಪ್ರಾಯ. ಏಕೆಂದರೆ ಸರಕಾರದ ತಿದ್ದುಪಡಿಯ ದೆಸೆಯಿಂದ ಕೆಲವು ಪ್ರದೇಶಗಳು ತೀರ್ಪಿನ ಹೊರಗುಳಿಯುತ್ತವೆ; ಇನ್ನು ಕೆಲವು ಪ್ರದೇಶಗಳಲ್ಲಿ ಕೊಡಬೇಕಾದ ತುಟ್ಟಿ ಭತ್ತೆಯು ಕಡಿಮೆಯಾಗುತ್ತದೆ. ಬೇಂಕು ನೌಕರರು ಇದಕ್ಕೆ ತೆರೆದ ಹೃದಯದ ಒಪ್ಪಿಗೆ ಕೊಡಲು ಸಿದ್ಧರಿಲ್ಲವೆಂಬ ಸಂಗತಿ ಅವರು ನಡೆಸಿದ ಮತಪ್ರದರ್ಶನ ಹಾಗು ಕೊಟ್ಟ ಹೋರಾಟದ ಕರೆಯಿಂದ ಸ್ಪಷ್ಟವಾಗುತ್ತದೆ. ಸರಕಾರವು ಹಳ್ಳಿಗಳ ಆರ್ಥಿಕ ಪರಿಸ್ಥಿತಿಯು ಕೆಟ್ಟು, ಸಾಲ ಸೌಲಭ್ಯಗಳು ಮಾಯವಾಗದಂತೆ ಮಾಡುವ ಉದ್ದೇಶದಿಂದ ತಿದ್ದುಪಡಿಯನ್ನು ತರಬೇಕಾಯಿತೆಂಬ ವಾದವನ್ನು ಬೇಂಕು ನೌಕರರು ನಿರಾಕರಿಸುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸ ಮಾಡುವ ಶಾಖೆಗಳಲ್ಲಿ ನೌಕರರ ಸಂಖ್ಯಾಪ್ರಮಾಣವು—ಜಿಲ್ಲೆಯ ವ್ಯವಹಾರಕ್ಕೆ ತಕ್ಕಂತೆ—ಕಡಿಮೆಯಾಗಿದೆಯೆಂದೂ ಕಾರಣ, ವೆಚ್ಚದ ಪ್ರಮಾಣಕ್ಕೂ ಆದಾಯದ ಮಿತಿಗೂ ಇರುವ ಸಂಬಂಧವು ಉಳಿದೆಡೆಯಂತೆಯೂ ಇರುವುದೆಂದೂ ಅವರು ಹೇಳುತ್ತಾರೆ. ಇದಕ್ಕೂ ಮುಖ್ಯವಾದ ಬೇರೆ ಎರಡು ಅಂಶಗಳನ್ನೂ ವಿರೋಧಕರು ಚರ್ಚೆಯ ಕಾಲದಲ್ಲಿ ಮುಂದಿಟ್ಟಿದ್ದಾರೆ-ಅವುಗಳಲ್ಲಿ ಒಂದು, ಸರಕಾರದ ತಿದ್ದುಪಡಿಯ ದೆಸೆಯಿಂದ ನ್ಯಾಯವ್ಯವಸ್ಥೆಯಲ್ಲಿ ಉದ್ಯೋಗಸ್ಥರಿಗೆ ವಿಶ್ವಾಸ ಉಳಿಯುವುದಿಲ್ಲವೆಂಬ ಅಭಿಪ್ರಾಯ. ಹೀಗೆ ತಿದ್ದುಪಡಿ ಮಾಡುವ ಅಧಿಕಾರ ಸರಕಾರಕ್ಕೆ ಪಾರ್ಲಿಮೆಂಟಿನಿಂದಲೇ 'ಬಂದಿದೆಯೆಂದು ಇದಕ್ಕೆ ಉತ್ತರ ಕೊಡಲಾಯಿತು. ಆದರೆ ಎರಡೂ ಪಕ್ಷಕ್ಕೂ ಸಮ್ಮತವಾದ "ಸಾಮಾಜಿಕ ನ್ಯಾಯ"ದ ಸ್ಥಾಪನೆಯಲ್ಲಿ ಸರಕಾರ ಏಕ ಪಕ್ಷೀಯವಾಗಿ ವರ್ತಿಸಿದೆಯೆಂಬ ಇನ್ನೊಂದು ಆರೋಪಕ್ಕೆ ಸಮಾಧಾನ ದೊರಕಲಿಲ್ಲ—ಬೇಂಕುಗಳಲ್ಲಿ ದೊಡ್ಡ ಮೊತ್ತದ ಸಂಬಳ ಪಡೆಯುವ ಅಧಿಕಾರಿಗಳ ಸಂಖ್ಯೆಯು ಅನಾವಶ್ಯಕವೆನಿಸುವಷ್ಟು ಹೆಚ್ಚು ಪ್ರಮಾಣದಲ್ಲಿ ಕಂಡು ಬರುತ್ತಿದೆಯೆಂದೂ ಆದರೆ ನೌಕರರಿಗೆ ಅಧಿಕ ಸಂಬಳ ಕೊಡಬೇಕಾಗಿ ಬರುವಾಗ ಮಾತ್ರ ಬೇಂಕುಗಳು ಆಕ್ಷೇಪವೆತ್ತುತ್ತವೆಂದೂ ಹೇಳಲಾಗಿರುವುದು. ಇದರಲ್ಲಿ ತಥ್ಯಾಂಶವಿಲ್ಲದೆ ಇಲ್ಲ—ಸರಕಾರಕ್ಕೆ ಮನವರಿಕೆಯಾಗಿರದ ವಿಷಯವೂ ಇದಾಗಿರಲಿಕ್ಕಿಲ್ಲ: ಶ್ರೀ ತ್ರಿಪಾಠಿಯವರು ಹೇಳಿದಂತೆ, ಬೇಂಕುಗಳ ದೂರನ್ನು ವಿಚಾರಿಸಲು ಹೊರಟ ಸರಕಾರವು ನೌಕರರ ವಾದವನ್ನೂ ಕೇಳಿಕೊಂಡು ಆ ಮೇಲೆಯೇ ತಿದ್ದುಪಡಿಯನ್ನು ಮಾಡಲು ಮುಂದಾಗುತ್ತಿದ್ದರೆ ಇಷ್ಟು ಉಗ್ರ ಟೀಕೆಗಳಿಗೆ ಅವಕಾಶ ದೊರೆಯುತ್ತಿರಲಿಲ್ಲ. ಆದಾಗ್ಯೂ ಬೇಂಕು ನೌಕರರು ಸಾರ್ವತ್ರಿಕ ಮುಷ್ಕರ ಹೂಡುವ ಅಥವಾ ಹೋರಾಟ ನಡೆಸುವ ಅಗತ್ಯವನ್ನು ಬಿಂಬಿಸುವಷ್ಟು ಸರಕಾರದ ತಿದ್ದುಪಡಿಗಳು ಬಲವಾಗಿಲ್ಲ—ಏಕೆಂದರೆ ಬೇಂಕು ನೌಕರರ ತುಟ್ಟಿ ಭತ್ತೆಯ ಪ್ರಮಾಣದಲ್ಲಿಯಷ್ಟೇ ಇಳಿತಾಯವಾಗಿರುವುದು; ಅದೂ ಮುಂದೊಂದು ವರ್ಷದ ವರೆಗೆ ಈಗಿನಷ್ಟೇ ಉಳಿದು, ಆ ನಂತರದ ಮೂರು ವರ್ಷಗಳಲ್ಲಿ ಸಮಪ್ರಮಾಣದಲ್ಲಿ ಇಳಿಸಲ್ಪಡುವುದು. ಅಷ್ಟು ಹೊತ್ತಿಗೆ ಬೇಂಕು ನೌಕರರಿಗೆ ಹೆಚ್ಚಿನ ಭಡ್ತಿ ದೊರೆಯುವ ವ್ಯವಸ್ಥೆ ಮಾಡಿರುವ ಪ್ರಯುಕ್ತ, ಈಗಿನ ಆದಾಯವೇ ಮುಂದಿನ ಮೂರು ವರ್ಷಗಳಲ್ಲೂ ಉಳಿದೀತೆನ್ನಬಹುದು. ತಿದ್ದುಪಡಿಗೊಳಗಾದ ಈಗಿನ ಕೊಡುಗೆಯು ಸೇನ ಮಂಡಲದ ತೀರ್ಪಿಗಿಂತ ತುಂಬ ಉದಾರವಾಗಿದೆ—ಬೇಂಕು ನೌಕರರಿಗೆ ಬೇರೆ ಅನೇಕ ಸೌಲಭ್ಯಗಳನ್ನೂ ನೀಡಿದೆ. ಇವುಗಳ ದೆಸೆಯಿಂದ ತತ್ಸಮಾನ ಕ್ಷೇತ್ರಗಳಲ್ಲಿ ದುಡಿಯುವ ಬೇರೆ ನೌಕರರಿಗಿಂತ ಬೇಂಕುಗಳ ಕೆಲಸಗಾರರಿಗೆ ಅನುಕೂಲತೆ ಹೆಚ್ಚಾಗಿದೆ. ಆದುದರಿಂದ ಸಹನೆಗೆಟ್ಟು ವಿದ್ರೋಹ ಪ್ರವೃತ್ತಿಯನ್ನು ಪ್ರಕಟಿಸುವುದು ಅಪೇಕ್ಷಣೀಯವಾಗಲಾರದು: ಸರಕಾರವು ತಿದ್ದುಪಡಿ ತಂದುದರ ಕಾರಣಗಳನ್ನು ಬೇಂಕು ನೌಕರರು ನಿರ್ವಿಕಾರ ಚಿತ್ತದಿಂದ ಪರಿಶೀಲಿಸಿದರೆ, ರಾಷ್ಟ್ರೀಯ ಮಹತ್ವದ ಸಮಸ್ಯೆಯೊಂದರ ಪರಿಹಾರದಲ್ಲಿ ತಮ್ಮ ಅಲ್ಪ ತ್ಯಾಗವೂ ಮಹಾಪಾತ್ರವನ್ನು ವಹಿಸುತ್ತದೆಂಬ ಸಮಾಧಾನವನ್ನು ಹೊಂದಬಲ್ಲರು. ಇಂದಿನ ಬದಲಾಯಿಸಿದ ವಾತಾವರಣದಲ್ಲಿ ಬೇಂಕುಗಳೇ ಸಾಲ ಸೌಲಭ್ಯವನ್ನೊದಗಿಸುವ ಕೇಂದ್ರಗಳಾಗಿದ್ದು, ಗ್ರಾಮಾಂತರ ಪ್ರದೇಶಗಳಲ್ಲಿ ಬೇಂಕಿಂಗ ವಹಿವಾಟು ವಿಸ್ತರಿಸಲ್ಪಡುವ ಆವಶ್ಯಕತೆ ತುಂಬಾ ಕಾಣುತ್ತದೆ. ಕಾರಣ ನೌಕರ ವರ್ಗಕ್ಕೆ ಅಧಿಕ ವೇತನ ಕೊಡಬೇಕಾದ ಪ್ರಮೇಯ ಬಂದು, ಹಾಗೆ ಮಾಡಲಾರದೆ, ಹನ್ನೆರಡು ಬೇಂಕುಗಳ ೫೪೧ ಶಾಖೆಗಳು ಮುಚ್ಚಿಹೋಗುವ ಪರಿಸ್ಥಿತಿಗೆ ಅವಕಾಶ ಮಾಡಿಕೊಡುವುದು ಎಷ್ಟುಮಾತ್ರಕ್ಕೂ ಇಷ್ಟವಾಗಲಾರದು. ನಮಗೆ ೬೫ ಸಾವಿರ ನೌಕರರ ಸುಖಕ್ಕಿಂತಲೂ ೬೫ ಲಕ್ಷ ಗ್ರಾಹಕರ ಹಿತದೃಷ್ಟಿಯು ಮಹತ್ವದ್ದು. ಈ ಯೊಂದೇ ಕಾರಣಕ್ಕಾಗಿಯಾದರೂ ಸರಕಾರದ ತಿದ್ದುಪಡಿಯನ್ನು ಸಮರ್ಥಿಸಬೇಕಾಗುವುದು.

ಐರೋಪ್ಯ ಸಂರಕ್ಷಣಾ ವ್ಯವಸ್ಥೆ

ಫ್ರಾನ್ಸಿನ ನಿಲುವೆಯು ಇನ್ನೂ ಅನಿಶ್ಚಿತ

ಫ್ರೆಂಚ ಪ್ರಧಾನಿ ಮೆಂಡೆಸ್ ಫ್ರಾನ್ಸರು ಇಂಡೋಚೀನದಲ್ಲಿ ಕದನ ನಿಲುಗಡೆಯನ್ನು ಸಾಧಿಸಿ, ಎಲ್ಲರ ಪ್ರೀತ್ಯಾದರಗಳನ್ನು ಗಳಿಸಿದರು. ಇದರಿಂದ ತಮ್ಮ ವರ್ಚಸ್ವಿಯಾದ ವ್ಯಕ್ತಿತ್ವದ ಬಲದಿಂದ ಇವರು ಐರೋಪ್ಯ ಸಂರಕ್ಷಣಾ ವ್ಯವಸ್ಥೆಯನ್ನು ಮನ್ನಿಸುವಂತೆ ರಾಷ್ಟ್ರೀಯ ಸಭೆಯನ್ನು ಮನವೊಲಿಸುವುದರಲ್ಲಿ ಯಶಸ್ಸು ಗಳಿಸಿಯಾರೆಂದು ಅಮೇರಿಕ ಹಾಗು ಬ್ರಿಟನುಗಳು ಭಾವಿಸಿದ್ದರೆ ತಪ್ಪೇನಿಲ್ಲ. ಆದರೆ ಕಳೆದ ವಾರ, ಈ ಕೆಲಸವು ಎಣಿಸಿದಷ್ಟು ಸುಲಭದ್ದಲ್ಲವೆಂದು ಸ್ಪಷ್ಟವಾಯಿತು.

ಜರ್ಮನಿಯ ಭಯ

ಐರೋಪ್ಯ ಸಂರಕ್ಷಣಾ ವ್ಯವಸ್ಥೆಯ ಮೂಲಕಲ್ಪನೆಯನ್ನು ಮುಂದಿಟ್ಟ ರಾಷ್ಟ್ರ ಫ್ರಾನ್ಸೇ ಆಗಿದೆ. ಆದರೆ ಇಂದು ಅದೇ ಫ್ರಾನ್ಸು ತಾನು ಸೂಚಿಸಿದ ವ್ಯವಸ್ಥೆಯ ಬಂಧನದಿಂದ ಹೊರಗುಳಿಯಲು ಬಯಸುತ್ತಿರುವುದು ವಿಚಿತ್ರವೆಂದು ತೋರೀತು. ಇದರ ಹಿಂದೆ ಪ್ರಬಲವಾದ ಕಾರಣವುಂಟು—ರಶಿಯಾದ ಸೇನಾಬಲವನ್ನು ಪ್ರತಿಭಟಿಸುವಷ್ಟು ಶಕ್ತಿ ಸಂಪನ್ನವಾದ ಐರೋಪ್ಯ ರಾಷ್ಟ್ರಗಳ ಸೈನ್ಯವನ್ನು ಕಟ್ಟಿಕೊಳ್ಳಬೇಕೆಂದು ಬಯಸುತಿದ್ದ ಫ್ರಾನ್ಸಿಗೆ ಇಂದು ಜರ್ಮನಿಯ ಶಸ್ತ್ರೀಕರಣಕ್ಕೆ ಅವಕಾಶ ಕೊಡುವುದು ಅಪಾಯಕರವೆಂದು ಕಾಣುತ್ತದೆ. ಒಂದೇ ತಲೆ ಮಾರಿನಲ್ಲಿ ಎರಡು ಸಲ ಜರ್ಮನಿಯ ಮಹತ್ವಾಕಾಂಕ್ಷೆಯ ಅತಿರೇಕಕ್ಕೆ ಬಲಿ ಬೀಳಬೇಕಾಗಿ ಬಂದ ಫ್ರಾನ್ಸು—ದ್ವಿತೀಯ

ಅಮೇರಿಕದ ಆತುರ

ಮುಂದಿನ ಸೋಮವಾರ (ದಿನಾಂಕ ೬) ಮನಿಲಾದಲ್ಲಿ ಆಗ್ನೇಯ ಏಶ್ಯಾ ಸಂರಕ್ಷಣಾ ವ್ಯವಸ್ಥೆಯ ಕುರಿತು ಮಾತುಕತೆಗಳು ನಡೆಯುತ್ತವೆ. ಇಲ್ಲಿ ಸ್ವತಂತ್ರ ರಾಷ್ಟ್ರಗಳ ಮೇಲೆ ಕಮ್ಯುನಿಸ್ಟ ಆಕ್ರಮಣವಾಗುವುದನ್ನು ತಡೆಗಟ್ಟುವ ಉಪಾಯವು ಚರ್ಚಿಸಲ್ಪಡುವುದೆಂದು ಹೇಳಲಾಗುತ್ತದೆ. ಜಿನೇವಾ ಪರಿಷತ್ತು ಕೊರಿಯದ ಮಟ್ಟಿಗೆ ವಿಫಲವಾದರೂ ಇಂಡೋಚೀನದಲ್ಲಿ ಸಮರ ನಿಲುಗಡೆಯನ್ನು ಸಾಧಿಸಿದ ಪ್ರಯುಕ್ತ ಆಗ್ನೇಯ ಏಶ್ಯಾದಲ್ಲಿ ಪ್ರಜ್ವಲಿಸುತ್ತಿದ್ದ ಯುದ್ಧಾಗ್ನಿಯು ಶಮನವಾಗಲು ಇಂಬು ದೊರೆಯಿತು. ಬಯಸುತ್ತಿದ್ದರೆ, ಯುದ್ಧ ವಿರಾಮಕ್ಕೆ ಒಪ್ಪದೆ, ಇಂಡೋಚೀನವನ್ನು ಪೂರ್ತಿಯಾಗಿ ನುಂಗುವುದು "ಕಮ್ಯುನಿಸ್ಟ"ರೆಂದು ಹೇಳಲಾದ ವೀಟಮಿನರಿಗೆ ಅಸಾಧ್ಯವಾಗಿರಲಿಲ್ಲ. ಆದರೆ ಅವರು ಯುದ್ಧವನ್ನು ಮುಂದೊತ್ತುವ ಪಕ್ಷದಲ್ಲಿರದೆ, ಸಂಧಾನ ಮಾತುಕತೆಗಳ ಕಡೆಗೆಯೇ ಒಲಿದರೆಂಬುದೂ ಕೆಂಪು ಚೀನವು ಕದನ ವಿರಾಮಕ್ಕಾಗಿ ಬಗೆ ಬಗೆಯಿಂದ ನೆರವಾಯಿತೆಂಬುದೂ ಕಮ್ಯುನಿಸ್ಟರನ್ನು ಸದಾ ಸಂಶಯ್ಯುಚಿತ್ತದಿಂದಲೇ ನೋಡುತ್ತಿರಬೇಕೆಂಬ ಅಮೇರಿಕದ ಅಭಿಪ್ರಾಯಕ್ಕೆ ಸಮ್ಮತಿಸುವುದು ತಪ್ಪೆಂದು ತೋರಿಸುತ್ತವೆ. ಕೆಂಪು ಚೀನವು ಬಯಸುತಿದ್ದರೆ, ಭಾರತ ಹಾಗು ಬರ್ಮಾಗಳ ಗಡಿಯನ್ನು ಮೀರಿ ಆಕ್ರಮಣ ನಡೆಸುವುದು ಅಶಕ್ಯವಿರಲಿಲ್ಲ—ಹಾಗೆ ಮಾಡದೆ, ಪರಸ್ಪರರ ಸಾರ್ವಭೌಮಾಧಿಕಾರಕ್ಕೆ ಮನ್ನಣೆಯೇ ಮುಂತಾದ ಪಂಚ ಸೂತ್ರಗಳ ಒಪ್ಪಂದವನ್ನು ಮಾಡಿಕೊಳ್ಳಲು ಅದು ಮುಂದಾಗಿರುವುದು. ಆದುದರಿಂದ ಆಕ್ರಮಣದ ಕೃತಕ ಭಯವನ್ನು ಸೃಷ್ಟಿಸಿ, ಆ ಭಯದ ನಿವಾರಣೆಗಾಗಿ ಸಂರಕ್ಷಣಾ ವ್ಯೂಹವನ್ನು ನಿರ್ಮಿಸುವ ಅಮೇರಿಕದ ಬುದ್ಧಿವಂತಿಕೆಯನ್ನು ಭಾರತವೇ ಮುಂತಾದ—ಆದರೆ ಪಾಕಿಸ್ತಾನವನ್ನು ಹೊರತಾದ—ಕೊಲೊಂಬೋ ರಾಷ್ಟ್ರಗಳು ಮೆಚ್ಚುವುದಿಲ್ಲ. ಏಶ್ಯದ ಸಂರಕ್ಷಣೆ ಮಾಡುತ್ತೇನೆನ್ನುವ ಅಮೇರಿಕವು ಪ್ರಬಲ ಏಶ್ಯಾ ರಾಷ್ಟ್ರಗಳ ಅಭಿಪ್ರಾಯಕ್ಕೆ ವಿರುದ್ಧವಾಗಿಯೇ ನಡೆದುಕೊಳ್ಳುತ್ತಿದೆ. ಮೇಲಾಗಿ ರಾಜ್ಯಸಭೆಯಲ್ಲಿ ನೆಹರೂ ಹೇಳಿದಂತೆ, ಇನ್ನೊಂದು ರಾಷ್ಟ್ರಕ್ಕೆ ಬೇಕಾಗಲಿ, ಬಿಡಲಿ, "ನಿನ್ನ ರಕ್ಷಣೆಯನ್ನು ನಾನು ಮಾಡುತ್ತೇನೆ" ಎಂದು ಒಂದು ರಾಷ್ಟ್ರವು ಅಥವಾ ರಾಷ್ಟ್ರಸಮುದಾಯವು ಹೊರಡುವುದೆಂದರೆ ಅತಿರೇಕವೆನಿಸುತ್ತದೆ. ರಾಷ್ಟ್ರಸಂಘದ ತಾಪ್ರಪಟದಲ್ಲಿ ಪ್ರಾದೇಶಿಕ ಸಂರಕ್ಷಣಾ ವ್ಯೂಹಗಳ ನಿರ್ಮಾಣಕ್ಕೆ ಅವಕಾಶವುಂಟೆಂಬುದು ನಿಜ— ಆದರೆ ಭದ್ರತಾಮಂಡಳದ ಆದೇಶದ ಮೇಲೆಯೇ ಈ ವ್ಯೂಹಗಳು ಯುದ್ಧವನ್ನು ನದೆಸಬಲ್ಲವು. ಉತ್ತರ ಅಟ್ಲಾಂಟಿಕ ಒಡಂಬಡಿಕೆಯಾಗಲೀ, ಆಗ್ನೇಯ ಏಶ್ಯಾ ಸಂರಕ್ಷಣಾ ವ್ಯವಸ್ಥೆಯಾಗಲೀ ರಾಷ್ಟ್ರಸಂಘದ ನಿಯಂತ್ರಣವನ್ನೇನು ಒಪ್ಪುವುದಿಲ್ಲ ಎಂದ ಮೇಲೆ ಅಮೇರಿಕದ, ಮತ್ತದರ ಹಿಂಬಾಲಕರ, ಅನುಚಿತ ಮಹತ್ವಾಕಾಂಕ್ಷೆಯೇ ಶಾಂತಿವಲಯದ ಪ್ರಸ್ಥಾಪನಾ ಕಾರ್ಯದಲ್ಲಿ ಆತಂಕ ಒಡ್ಡುತ್ತಿದೆಯೆಂದರೆ ತಪ್ಪಾಗದು.

ನಮ್ಮ ಚಂದಾದಾರರಲ್ಲಿ ವಿನಂತಿ

ಇದೇ ಸಪ್ಟಂಬರ ತಿಂಗಳಿಂದ ನವಯುಗದ 34ನೆಯ ಹೊಸ ವರ್ಷಾರಂಭವಾಗಿದೆ. ಈಗಲಾದರೂ ನಮ್ಮ ಚಂದಾದಾರರಲ್ಲಿ ಹಣ ಬಾಕಿ ಇರುವವರು ಅದನ್ನು ಕೂಡಲೇ ಸಲ್ಲಿಸಿ ನಮಗೆ ಆರ್ಥಿಕ ಬೆಂಬಲ ನೀಡುವುದಲ್ಲದೆ ನಮ್ಮ ಅಭಿಮಾನಿಗಳಲ್ಲಿ ಪ್ರತಿಯೊಬ್ಬರೂ ತಮ್ಮ ಸ್ನೇಹಿತರ ಬಳಗದಲ್ಲಿ ಒಬ್ಬಿಬ್ಬರನ್ನಾದರೂ ನಮಗೆ ಚಂದಾದಾರರಾಗಿ ಒದಗಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇವೆ.

ವಿ. ಪಿ. ಪಿ. ಮಾಡುವುದರಿಂದ ಪತ್ರಿಕೆಯಷ್ಟು ನಷ್ಟ ಸಂಭವಿಸುತ್ತದಾದ್ದರಿಂದ ಸರ್ವರೂ ಬಾಕಿಯನ್ನು ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ.

ಮೆನೇಜರ್, **ನವಯುಗ**, ಉಡುಪಿ.

ಮಹಾ ಯುದ್ಧ ಅಂತ್ಯಗೊಂಡ ಎಂಟು ಹತ್ತು ವರ್ಷಗಳಲ್ಲಿಯೇ—ಆದರೊಡನೆ ಮೈತ್ರಿಯ ಸಲುಗೆಯನ್ನು ಬೆಳೆಸಿಕೊಳ್ಳಲು ಇಷ್ಟ ಪಡುವುದಿಲ್ಲ.

ಫ್ರೆಂಚರ ತಿದ್ದುಪಡಿ

ಜರ್ಮನಿಯ ಪ್ರತಾಪವನ್ನು ತಗ್ಗಿಸಲು ಸಾಧ್ಯವಾದರೆ ಮಾತ್ರ ಫ್ರಾನ್ಸು ಐರೋಪ್ಯ ಸಂರಕ್ಷಣಾ ವ್ಯವಸ್ಥೆಯಲ್ಲಿ ಸೇರಲು ಅವಕಾಶವಾದೀತು. ಆದರೆ ಈ ದಿಸೆಯಲ್ಲಿ ಆಶಾದಾಯಕ ಫಲಿತಾಂಶವೇನೂ ಕಂಡು ಬಂದಿಲ್ಲ. ಕಳೆದ ವಾರ ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಲಕ್ಸೆಂಬರ್ಗ್, ಇಟಲಿ ಮತ್ತು ಪಶ್ಚಿಮ ಜರ್ಮನಿಯ ಪ್ರತಿನಿಧಿಗಳು ಬ್ರುಸೆಲ್ಸದಲ್ಲಿ ಸೇರಿ, ಒಪ್ಪಂದಕ್ಕೆ ಸರ್ವಾನುಮತದ ಮನ್ನಣೆ ದೊರಕಿಸಲು ಪ್ರಯತ್ನ ನಡೆಸಿದರು. ಮುಖ್ಯವಾಗಿ ಫ್ರೆಂಚ ಪ್ರಧಾನರು ತಮ್ಮ ರಾಷ್ಟ್ರೀಯರ ಬೆಂಬಲವನ್ನು ದೊರಕಿಸಿಕೊಳ್ಳುವಂತೆ ಸಂರಕ್ಷಣಾ ವ್ಯವಸ್ಥೆಯನ್ನು ಬದಲಿಸಲು ಕೆಲವು ತಿದ್ದುಪಡಿಗಳನ್ನು ಸೂಚಿಸಿದರು. ಅಧಿರಾಷ್ಟ್ರೀಯ ಸ್ವರೂಪದ ಐರೋಪ್ಯ ಸಂರಕ್ಷಣಾ ಸೈನ್ಯವನ್ನು ಕಟ್ಟಿಕೊಳ್ಳುವ ಮೂಲಭೂತ ತತ್ವದ ಬದಲು ಸೈನ್ಯವನ್ನು ಕೊಟ್ಟ ಪ್ರತಿಯೊಂದು ರಾಷ್ಟ್ರಕ್ಕೂ ನಿಷೇಧಾಧಿಕಾರ (ವಿಟೋ) ಇರಬೇಕೆಂಬುದು ಇವುಗಳಲ್ಲಿ ಮುಖ್ಯ. ಈ ಹಾಗು ಇತರ ಶರ್ತಗಳನ್ನು ಉಳಿದವರು ಒಪ್ಪಲಿಲ್ಲ. ಹೀಗಾಗಿ ಪರಿಷತ್ತು ವಿಫಲವಾಯಿತು.

ಅಂತಿಮ ನಿರ್ಣಯ

ಹಾಗೆಂದು ಇಷ್ಟರಿಂದಲೇ ಸಮಸ್ಯೆ ತೀರ್ಮಾನವಾಗಲಿಲ್ಲ— ಜರ್ಮನಿಯ ಕುರಿತು ಫ್ರಾನ್ಸು ತೋರಿಸುತ್ತಿರುವ ಭಯವು ಬ್ರಿಟಿಷರಿಗೂ ಅಮೇರಿಕನರಿಗೂ ಅರ್ಥವಾಗುವುದಿಲ್ಲ. ರಶಿಯವೊಂದೇ ಅವರಿಗೆ ಕಾಣುವ ಶತ್ರು—ರಶಿಯದ ದಮನಕ್ಕಾಗಿ ಕಟಿಬದ್ಧವಾದ ಈ ರಾಷ್ಟ್ರಗಳು ಪಶ್ಚಿಮ ಜರ್ಮನಿಯನ್ನು ಸ್ವತಂತ್ರಗೊಳಿಸಿ ಅರ್ಥಾತ್ ತಮ್ಮ ಸೈನ್ಯಗಳನ್ನು ಹಿಂದೆಗೆದು—ಹಿಟ್ಲರನ ಕಾಲದ ನಾಜಿ ಶಕ್ತಿಯನ್ನು ಪ್ರಜ್ವಲಿಸಗೊಡುತ್ತೇವೆಂದು ಫ್ರಾನ್ಸನ್ನು ಹೆದರಿಸುತ್ತವೆ. ಆದುದರಿಂದ ತನ್ನ ನೀತಿಯನ್ನು ವಿವರಿಸಿ ಹೇಳುವುದು ಫ್ರಾನ್ಸಿಗೆ ಅಗತ್ಯವೆಂದು ತೋರಿದೆ. ಪರಿಣಾಮವಾಗಿ ಮೆಂಡೆಸರು ಚರ್ಚಿಲರನ್ನು ಭೇಟಿಮಾಡಿ ವಿಚಾರ ವಿನಿಮಯ ನಡೆಸಿದರು. ಇಲ್ಲಿಯ ಪರಿಣಾಮ ಮಾತ್ರ ಫ್ರೆಂಚರಿಗೆ ಅನುಕೂಲವಾಗಲಿಲ್ಲವೆಂದು ಅಂದಾಜು—ಏಕೆಂದರೆ, ಫ್ರಾನ್ಸಿಗೆ ಮರಳಿದವರೇ ಐರೋಪ್ಯ ಸಂರಕ್ಷಣಾ ವ್ಯವಸ್ಥೆಯ ಬಗ್ಗೆ ತನ್ನ ನಿಲುಮೆಯನ್ನು ಫ್ರಾನ್ಸು ಈಗಿಂದೀಗ—ಕೊನೆಯದಾಗಿ ನಿರ್ಧರಿಸಬೇಕೆಂದು ಮೆಂಡೆಸರು ಹೇಳಿದ್ದಾರೆ. ಈ ವಾರಾಂತ್ಯದೊಳಗೆ ರಾಷ್ಟ್ರೀಯ ಸಭೆಯಲ್ಲಿ ಈ ಕುರಿತು ನಿರ್ಣಯವಾದೀತು.

(೧ನೇ ಪುಟದಿಂದ)

ಕೆಲವು ಪ್ರಶ್ನೆಗಳನ್ನು ಕಳೆದ ವಾರ ವಿಚಾರಿಸಿತು. ಆಹಾರ ಕಲಬೆರಕೆಯನ್ನು ನಿಷೇಧಿಸುವ ಮಸೂದೆಯನ್ನು ಲೋಕ ಸಭೆಯು ವಿಚಾರಿಸಿ, ಕೆಲವು ಉಪಯುಕ್ತ ತಿದ್ದುಪಡಿಗಳೊಡನೆ ಸ್ವೀಕರಿಸಿತು. ಗೃಹ ಮಂತ್ರಿ ಕಟಜೂರವರು ಆ ಬಳಿಕ ಅಸ್ಪೃಶ್ಯತೆಯ ಆಚರಣೆಯನ್ನು ಅಪರಾಧವಾಗಿ ಪರಿಗಣಿಸಬೇಕೆನ್ನುವ ಮಸೂದೆಯನ್ನು ಪಾರ್ಲಿಮೆಂಟಿನ ಉಭಯ ಸಭೆಗಳ ಪರಿಶೀಲಕ ಸಮಿತಿಗೆ ಒಪ್ಪಿಸಬೇಕೆಂದು ಹೇಳಿದರು. ಈ ವರ್ಷಾಂತ್ಯದಲ್ಲಿ ಇದು ಕಾಯಿದೆಯಾಗುವ ನಿರೀಕ್ಷೆ ಇದೆ. ಹಿಂದು ಅಲ್ಪವಯಿ ಮತ್ತು ಪಾಲಕ ಮಸೂದೆಯನ್ನು ಉಭಯ ಸಭೆಗಳ ಪರಿಶೀಲಕ ಸಮಿತಿಗೆ ಒಪ್ಪಿಸಿಕೊಡಬೇಕೆಂದು ಮುಂದಿಡಲಾದ ಸೂಚನೆಯೂ ಸ್ವೀಕರಿಸಲ್ಪಟ್ಟಿದೆ. ಬ್ಯಾಂಕು ನೌಕರರ ಕುರಿತು ಕೊಡಲಾದ ನ್ಯಾಯ ಮಂಡಳದ ತೀರ್ಪನ್ನು ಸರಕಾರವು ಬದಲಿಸಿದ ವಿಷಯವೂ ಚರ್ಚೆಗೆ ಗುರಿಯಾಗಿರುವುದು. ಎರಡು ಖಾಸಗಿ ವಿಧೇಯಕಗಳೂ ಚರ್ಚಿಸಲ್ಪಟ್ಟವು: ಇವುಗಳಲ್ಲಿ ಕೈಮಗ್ಗಗಳಿಗೆಯೇ ಸೀರೆ ಮತ್ತು ಧೋತರಗಳನ್ನು ನೇಯುವ ಗುತ್ತಿಗೆ ಕೊಡಬೇಕೆಂಬ ವಿಧೇಯಕವನ್ನು ಕಾನುಂಗೋ ಸಮಿತಿಯ ವರದಿಯು ಇಷ್ಟರಲ್ಲೇ ಲಭ್ಯವಾಗುತ್ತದೆಂಬ ಕಾರಣಕ್ಕಾಗಿ ನಿರಾಕರಿಸಲಾಯಿತು. ಪಾಕಿಸ್ತಾನಕ್ಕೆ ಅಮೇರಿಕವು ಕೊಡಮಾಡಿದ ಸೈನಿಕ ಸಹಾಯವನ್ನು ಕುರಿತಾದ ಇನ್ನೊಂದು ವಿಧೇಯಕವು ಪಾರ್ಲಿಮೆಂಟನ್ನು ಬಿಟ್ಟು ರಾಜಕೀಯ ಪಕ್ಷಗಳ ಪ್ರತಿನಿಧಿಗಳೊಡನೆ ಚರ್ಚೆ ನಡೆಸುವ ಪ್ರವೃತ್ತಿಯು ಇಷ್ಟವಲ್ಲವೆಂಬುದಕ್ಕಾಗಿ ತಿರಸ್ಕೃತಗೊಂಡಿತು.

ಪ್ರಶ್ನೋತ್ತರ ಕಾಲದಲ್ಲಿ

ಭಾರತವು ತನ್ನ ಸೈನ್ಯ ಪಡೆಗೆ ಅಗತ್ಯವೆನಿಸಿದ ಉಪಕರಣ ಮತ್ತು ಯಾಂತ್ರಿಕ ಸಾಧನಗಳ ಮಟ್ಟಿಗೆ ಸ್ವಾವಲಂಬಿಯಾಗಬೇಕೆಂದು ಬಯಸುತ್ತಿದೆಯಾಗಿಯೂ ತತ್ಪ್ರಯುಕ್ತ ಟ್ಯಾಂಕುಗಳನ್ನು ಉತ್ಪಾದಿಸುವ ಕಾರ್ಖಾನೆಯೊಂದನ್ನು ತೆರೆಯಲು ಕೆಲವು ಜರ್ಮನ್ ಕಂಪೆನಿಗಳೊಡನೆ ವ್ಯವಹಾರ ನಡೆಯುತ್ತಿದೆಯೆಂದೂ ಪ್ರಶ್ನೋತ್ತರಕಾಲದಲ್ಲಿ ತಿಳಿದುಬಂತು. ಆಹಾರ ಧಾನ್ಯಗಳ ಬೆಲೆಯಲ್ಲಿ ಕಂಡು ಬರುವ ಇಳಿತವನ್ನು ತಡೆಗಟ್ಟಲು ಸರಕಾರವು ಕ್ರಮ ತೆಗೆದುಕೊಳ್ಳುವುದೋ ಎಂಬ ಪ್ರಶ್ನೆಗೆ ಲಾಭದಾಯಕವೆನಿಸದ ಮಟ್ಟಕ್ಕೆ ಬೆಲೆಗಳು ಇಳಿದರೆ ಆಗ ಸಮರ್ಪಕ ನೀತಿಯನ್ನು ಅನುಸರಿಸಲಾಗುವುದೆಂಬ ಉತ್ತರವು ದೊರಕಿತು. ಚಲಚ್ಚಿತ್ರಗಳಲ್ಲಿ ಕಂಡುಬರುವ ಅನುಚಿತ ಅಲ್ಪವುಗಳ ಉಚ್ಚಾಟನೆ ಮಾಡಲು ಘಟನಾತ್ಮಕ ತೊಡಕುಗಳಿವೆಯೆಂದೂ ಸಾಮಾಜಿಕ ಏಳಿಗೆಗಾಗಿ ಘಟನೆಗೆ ತಿದ್ದುಪಡಿಗಳನ್ನು ಮಾಡುವ ಅಗತ್ಯವನ್ನು ಸಂಸತ್ತು ನಿರ್ಧರಿಸಬೇಕಾಗಿದೆಯೆಂದೂ ಮಂತ್ರಿ ಕೇಸ್ಕರರು ತಿಳಿಸಿದರು. ಪ್ರಾಥಮಿಕ ಶಿಕ್ಷಕರ ಸಂಬಳ ಪ್ರಮಾಣವು ಅತೃಪ್ತಿಕರವಿದ್ದು ಅವುಗಳನ್ನು ಹೆಚ್ಚಿಸಬೇಕೆಂದು ರಾಜ್ಯ ಸರಕಾರಗಳಿಗೆ ಕೊಟ್ಟ ಸೂಚನೆಯು ಸಂತೋಷಪ್ರದ ಪರಿಣಾಮವೇನನ್ನೂ ಮಾಡಿಲ್ಲ; ರಾಜ್ಯ ಸರಕಾರಗಳಿಗೆ ಈ ವಿಷಯದಲ್ಲಿ ಕೇಂದ್ರ ಸರಕಾರವು ಧನ ಸಹಾಯ ನೀಡಲು ಸಾಧ್ಯವೋ ಏನೆಂಬ ವಿಚಾರ ಪರಿಶೀಲನೆಯಲ್ಲಿದೆಯೆಂದು ಪ್ರಶ್ನೋತ್ತರ ಕಾಲದಲ್ಲಿ ತಿಳಿದು ಬಂತು.

ಉಡುಪಿ

"ಡಿ. ವಿ. ಜಿ." ಯವರ ಕೃತಿಗಳ ಕುರಿತು ಭಾಷಣ— ಸ್ಥಳೀಯ ಮಹಾತ್ಮಾ ಗಾಂಧಿ ಮೆಮೋರಿಯಲ್ ಕಾಲೇಜಿನ ಭಾಷಾ ಸಂಘದ ವತಿಯಲ್ಲಿ ತಾರೀಕು 30ರಂದು ಮೈಸೂರಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಜಿ. ಪಿ. ರಾಜರತ್ನಂರು "ಡಿ. ವಿ. ಜಿ." ಯವರ ಕೃತಿಯ ಕುರಿತು ವಿಚಾರ ಪೂರಿತ ಭಾಷಣ ಮಾಡಿದರು. ಸಭಾಧ್ಯಕ್ಷತೆಯನ್ನು ಶ್ರೀ ಕೆ. ಶಿವರಾಮಕಾರಂತರು ವಹಿಸಿದ್ದರು. ಶ್ರೀ ನಾರಾಯಣ ಅಯ್ಯಂಗಾರರು ಅತಿಥಿಗಳನ್ನು ಸ್ವಾಗತಿಸಿದ ಬಳಿಕ ಶ್ರೀ ಶ್ರೀನಿವಾಸ ರಾವ್ ರಾಮಚಂದ್ರ ಮೂರ್ತಿಯವರೂ "ಅಂತಃಪುರ ಗೀತೆ'ಯ ಕೆಲವು ಗೀತೆಗಳನ್ನು ಹಾಡಿದರು. ಸಂಘದ ಕಾರ್ಯದರ್ಶಿಗಳು ಧನ್ಯವಾದವನ್ನರ್ಪಿಸಿದರು.

ಮೆಡಿಕಲ್ ಕಾಲೇಜಿಗೆ ಮುಖ್ಯ ಮಂತ್ರಿಗಳ ಭೇಟಿ — ಹೈದರಾಬಾದಿನ ಮುಖ್ಯ ಮಂತ್ರಿಗಳಾದ ಮಾನ್ಯ ಶ್ರೀ ರಾಮಕೃಷ್ಣ ರಾಯರು ತಾ. 30ರಂದು ಕಸ್ತೂರ್ಬಾ ಮೆಡಿಕಲ್ ಕಾಲೇಜನ್ನು ಸಂದರ್ಶಿಸಿದರು. ಡಾ॥ ಮಾಧವ ಪೈ, ಡಾ॥ ಸುಂದರರಾಮ ಪೈ, ಡಾ॥ ಕೆ. ಎಲ್. ಐತಾಳ ಮತ್ತು ಶ್ರೀ ಟಿ. ಎ. ಪೈ, ಎಂ. ಎಲ್. ಎ. ಮೊದಲಾದವರು ಅತಿಥಿಗಳನ್ನು ಸ್ವಾಗತಿಸಿದರು. ಕಾಲೇಜಿನ ವಿವಿಧ ವಿಭಾಗಗಳನ್ನು ಸಂದರ್ಶಿಸಿ ತೃಪ್ತಿಗೊಂಡ ಮಾನ್ಯ ಮಂತ್ರಿಗಳು ವಿದ್ಯಾರ್ಥಿಗಳನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಕಾಲೇಜಿನ ಪ್ರಗತಿಯ ಕುರಿತು ತುಂಬಾ ಪ್ರಶಂಸಿಸಿ, ಇದರ ಸ್ಥಾಪಕರನ್ನು, ನೆರವಾದ ವಿದ್ಯಾರ್ಥಿಗಳನ್ನೂ ಅಭಿನಂದಿಸಿದರು. ತಾರೀಕು 31ರಂದು ಮುಂಜಾನೆ ಮಾನ್ಯ ಮಂತ್ರಿಗಳು ಮಂಗ್ಳೂರಿಗೆ ತೆರಳಿದರು.

ಉಡುಪಿ ಮುನ್ಸಿಪಲ್ ಕೌನ್ಸಿಲು ಸಭೆಯು— ತಾ. 28ರಲ್ಲು ವೈಸ್ ಚೆರ್ಮನ್ ಡಾ। ವ್ಯಾಸರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಆರಂಭದಲ್ಲಿ ಶ್ರೀ ಬಿ. ಎಸ್. ಆಚಾರ್ಯರ ಪ್ರಶ್ನೆಗಳಿಗೆ ಉತ್ತರವೀಯಲಾಯಿತು. ನಗರ ಸಭೆಯ ಆಡಳಿತ ವರದಿಯ ಕುರಿತು ಕಲೆಕ್ಟರರಿಂದ ಬಂದ ವಿಮರ್ಶೆಯನ್ನು ರಿಕಾರ್ಡು ಮಾಡಲಾಯಿತು. ನಗರ ಕ್ಷೇತ್ರದಲ್ಲಿ ಕ್ಷಯರೋಗ ನಿವಾರಣಾ ಚಳವಳಿ ಪ್ರಚಾರ ಕಾರ್ಯವನ್ನೆಸಬೇಕೆನ್ನುವ ನಿರ್ಧಾರದಾಗಿ ಆ ಬಗ್ಗೆ ಡಾ। ವ್ಯಾಸ ರಾವ್ ಮತ್ತು ಡಾ। ಕೆ. ಎಲ್. ಐತಾಳರಿರುವ ಕಮಿಟಿ ನೇಮಿಸಲಾಯಿತು. ಈ ಕಾರ್ಯದಲ್ಲಿ ಖರ್ಚಾಗುವ ಹಣವನ್ನು ಸರಕಾರವೇ ಸಹಾಯ ರೂಪದಲ್ಲಿ ಕೊಡುವಂತೆ ಸರಕಾರವನ್ನು ವಿನಂತಿಸಲಾಯಿತು. ಇಂಡಿಯನ್ ರೆಡ್‌ಕ್ರಾಸ್ ಸೊಸೈಟಿಯವರು ಧರ್ಮಾರ್ಥ ಕೊಡಲಿರುವ ಹಾಲಿನ ಪುಡಿಯನ್ನು ಸ್ವೀಕರಿಸುವುದೆಂದಾಯಿತು. ಅಲ್ಲದೆ ಆ ಸೊಸೈಟಿಯ ಮೆಂಬರಿಕೆಗಾಗಿ ರೂಪಾಯಿ ಹನ್ನೆರಡು ಪ್ರವೇಶ ಹಾಕಲು ಮಂಜೂರಾಯಿತು. ಮುನಿಸಿಪಲ್ ಕ್ಷೇತ್ರದಲ್ಲಿರುವ ಸರಕಾರಿ ಖಾಲಿ ಜಾಗದ ಬಾಬ್ತು ಟೇಕ್ಸನ್ನು ಸರಕಾರವು ಇನ್ನೂ ನಗರ ಸಭೆಗೆ ಕೊಡದಿದ್ದುದರಿಂದ ಆ ಹಣವನ್ನು ಲೆಖ್ಖದಿಂದ ವಜಾ ಬರೆಯಬೇಕೆನ್ನುವ ಆಫೀಸು ಸೂಚನೆ ವಿಮರ್ಶಿಸಲಾಯಿತು. ಕೊನೆಗೆ ಸಿವಿಲ್ ನ್ಯಾಯ್ಯ ಹೂಡಲು ಅಸ್ಪದವಿದೆಯೇ ಎಂಬುದನ್ನು ತಿಳಿದುಕೊಳ್ಳುವರೆ ಈ ವಿಷಯವನ್ನು ಮದ್ರಾಸಿನ ವಕೀಲರ ವಿಮರ್ಶೆಗೆ ಕಳುಹಿಸುವುದೆಂದಾಯಿತು. ಅಲ್ಲದೆ ನಗರ ಸಭೆಗೆ ಬರಲಿರುವ ಸರಕಾರಿ ಟೇಕ್ಸನ್ನು ಕೊಡುವ ಕುರಿತು ಪುನರಾಲೋಚಿಸುವಂತೆ ಮದ್ರಾಸಿನ ಮುಖ್ಯ ಮಂತ್ರಿಗಳನ್ನು ಪ್ರಾರ್ಥಿಸಬೇಕೆಂದಾಯಿತು.

ಉದ್ಘಾಟನಾ ಸಮಾರಂಭ — ಎಮ್. ಜಿ. ಎಮ್. ಕಾಲೇಜಿನ ಸಾಯನ್ಸ್ ಸಂಘದ ಉದ್ಘಾಟನೆಯನ್ನು ತಾ. 27ರಲ್ಲು ಡಾ। ರಾಮಚಂದ್ರ ರಾಯರು ನೆರವೇರಿಸಿದರು. ಪ್ರಿನ್ಸಿಪಾಲ್ ಎಚ್. ಸುಂದರ ರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಬಿ. ಸೀತಾರಾಮನವರು ಧನ್ಯವಾದಗಳನ್ನರ್ಪಿಸಿದರು.

ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ— ಇದೇ ತಾ. 15ರಿಂದ ಹೊಸತಾಗಿ ಮಧ್ಯಮಾ, ರಾಷ್ಟ್ರಭಾಷಾ, ಪ್ರವೇಶಿಕಾ ಮತ್ತು ವಿಶಾರದ ವರ್ಗಗಳು ಪ್ರಾರಂಭವಾಗಲಿದ್ದು, ಈ ವರ್ಗಗಳಿಗೆ ಸೇರ ಬಯಸುವವರು ಚಿತ್ತರಂಜನ ಭವನದಲ್ಲಿರುವ 'ಶಿಬಿರ'ದ ಆಫೀಸಿನಲ್ಲಿ ಹೆಚ್ಚಿನ ಮಾಹಿತಿ ಪಡೆಯ ಬಹುದು.

ನಗರದಲ್ಲಿ ವಿಷಮಜ್ವರ— ಸೋಂಕಣೆ ಪ್ರಾರಂಭವಾಗಿದ್ದು ಅದನ್ನು ತಡೆಗಟ್ಟುವರೆ ಮುನಿಸಿಪಲ್ ಹೆಲ್ತ್ ಆಫೀಸರರು ಇನೊಕ್ಯುಲೇಶನ್ ಮೊದಲಾದ ತಡೆಗಟ್ಟುವ ಸರ್ವ ಕಾರ್ಯಗಳನ್ನು ಕೈಗೊಂಡಿರುವರೆಂದು ತಿಳಿದು ಬರುತ್ತದೆ.

ಕರ್ನಾಟಕ ಸಂಘದ— ಕಾರ್ಯನಿರ್ವಾಹಕ ಸಮಿತಿಯು 29ನೇ ಆದಿತ್ಯವಾರ ಡಾ। ಕೆ. ಎಲ್ ಐತಾಳರ "ಹರಿ ನಿವಾಸ"ದಲ್ಲಿ ಸಂಘದ ಅಧ್ಯಕ್ಷ ಶ್ರೀ ಪಿ. ನಾರಾಯಣ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಸೇರಿತು. ಸಭೆಯಲ್ಲಿ 1953—54ನೇ ವರ್ಷದ ಆಯವ್ಯಯ ಪತ್ರವು ಮಂಡಿಸಲ್ಪಟ್ಟು ಮಂಜೂರಾಯಿತು. ಸಂಘದ ವಾರ್ಷಿಕ ಮಹಾಧಿವೇಶನವನ್ನು 12—9—1954ಕ್ಕೆ ಜರಗಿಸಬೇಕೆಂದು ನಿರ್ಣಯವಾಯಿತು.

ಮಂಗಳೂರು

ಶ್ರೀ. ಕೆ. ಎಸ್. ಹೆಗ್ಡೆ, ಎಂ. ಪಿ. ಅವರಿಗೆ ಸತ್ಕಾರ—ಅಮೇರಿಕದಲ್ಲಿ ಜರಗಲಿರುವ ಸಂಯುಕ್ತ ರಾಷ್ಟ್ರ ಸಂಘದ ಮಹಾಧಿವೇಶನ ಪ್ರತಿನಿಧಿಯಾಗಿ ಆರಿಸಲ್ಪಟ್ಟ ಶ್ರೀ. ಕೆ. ಸದಾನಂದ ಹೆಗ್ಡೆಯವರನ್ನು ಗೌರವಿಸಲು ತಾ. 30ರಂದು ಶ್ರೀ. ವಿ. ಎಸ್. ಕುಡ್ವರು ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಶ್ರೀ ಕುಡ್ವರು ಶ್ರೀ. ಹೆಗ್ಡೆಯವರ ಗುಣಗಳನ್ನು ಕೊಂಡಾಡಿ ಅವರು ಜಿಲ್ಲೆಗೆ ಇಷ್ಟರಲ್ಲೇ ಸಲ್ಲಿಸಿದ ಗಣನೀಯ ಸೇವೆಗಳನ್ನು ಪ್ರಶಂಸಿಸಿದರು. ಬಳಿಕ ಶ್ರೀ. ಬಿ. ವೈಕುಂಠ ಬಾಳಿಗ, ಎಂ. ಎಲ್. ಎ., ಪಿ. ಆರ್. ಆರ್. ಪೂಂಜ, ಬಿ. ಆರ್. ಕರ್ಕೇರ, ಎಸ್. ನರಸಪ್ಪಯ್ಯ, ಎಂ. ಎಲ್. ಸಿ., ಮಿಜಾರು ಗೋವಿಂದ ಪೈಗಳು ಹೆಗ್ಡೆಯವರಿಗೆ ಶುಭಾಕಾಂಕ್ಷೆ ಮಾಡಿದರು. ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಶ್ರೀ. ಕೆ. ಸೂರ್ಯನಾರಾಯಣ ಅಡಿಗರು ಶ್ರೀ. ಹೆಗ್ಡೆಯವರ ರಾಜಕೀಯ ಜೀವನದ ಯಶಸ್ಸಿಗೆ ಅವರ ನಿಷ್ಠೆ, ಅಚಲ ನಿರ್ಧಾರಗಳೇ ಕಾರಣವೆಂದರು. ಸರ್ಕಲ್ ಕಾಂಗ್ರೆಸ್ ಕಮಿಟಿಯವರೂ ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀ ಹೆಗ್ಡೆಯವರನ್ನು ಸತ್ಕರಿಸಿ ಗೌರವಿಸಿದರು. ಇದೇ ತಾ. 1ರಂದು ಶ್ರೀ ಹೆಗ್ಡೆಯವರು ಅಮೇರಿಕಕ್ಕೆ ಹೋಗಲು ದಿಲ್ಲಿಗೆ ತೆರಳುತ್ತಾರೆ.

ತಾ. 2—9—54ರಿಂದ
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಚಿತ್ರಪ್ರೇಮಿಗಳೆಲ್ಲರ ಭಾಗ್ಯೋದಯವೆಂದರೂ ಅತಿಶಯೋಕ್ತಿಯಾಗಲಾರದು.
"ಭಾಗ್ಯವಾನ್"
ನಿರೂಪರಾಯ್, ರಾಜಾನೆನೆ, ಅಘಾ, ರತ್ನಕುಮಾರ್ ಮೊದಲಾದವರು.
ಮುಂದಿನ ಚಿತ್ರ: "ನಯಾಘರ್" ಶೇಖರ್ ಮತ್ತು ಗೀತಾಬಾಲಿ.
ತಾ. 5—9—54ನೇ ಆದಿತ್ಯವಾರ ಬೆಳಿಗ್ಗೆ
LET US MAKE IT LEGAL

ಅಪೂರ್ವ ಸಂದರ್ಭ!
ದರ ಇಳಿಸಲಾಗಿದೆ.
ಗೀತೆಯ
ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: 0-8-0
ನವಯುಗ ಪ್ರೆಸ್, ಉಡುಪಿ.

ಸುರತ್ಕಲ್— ಸ್ಥಳೀಯ ಹಿಂದೂ ವಿದ್ಯಾದಾಯಿನೀ ಸಂಘವು 1916ರಲ್ಲಿ ಜನ್ಮತಾಳಿ ಪ್ರಾಥಮಿಕ ಶಾಲೆಗಳನ್ನು ಸ್ಥಾಪಿಸಿ ವಿದ್ಯಾದಾನ ಮಾಡುತ್ತಾ ಬಂದು 1911ರಲ್ಲಿ ವಿದ್ಯಾದಾಯಿನೀ ಹ್ಯಾಸ್ಕೂಲನ್ನು ಸ್ಥಾಪಿಸಿತು.

ಈ ಹ್ಯಾಸ್ಕೂಲು ದಿನೇ ದಿನೇ ಬೆಳೆಯುತ್ತ ಬಂದಂತೆ ಕಟ್ಟಡ, ಸಾಮಾಗ್ರಿಸಲಕರಣಗಳು ಕೂಡಾ ಜಾಸ್ತಿಯಾಗಬೇಕಾಗಿದೆ. ಸಂಘವು ಎಲಿಮೆಂಟರಿ ಶಾಲೆಗಳನ್ನೂ ಹ್ಯಾಸ್ಕೂಲನ್ನೂ ತುಂಬಾ ಹಣವ್ಯಯಿಸಿ ಮುಂದೆತಂದುದೇನೋ ನಿಜ. ಆದರೆ ಈ ಎಲ್ಲಾ ಶಾಲೆಗಳ ಮುಂದಿನ ಮೇಲ್ಮೆ ಬೆಳವಣಿಗೆಗಳಿಗೂ, ಸಂಘದ ಆರ್ಥಿಕ ಭದ್ರತೆಗೂ ಇನ್ನು ರೂಪಾಯಿ75,000 ವಾದರೂ ಸಂಗ್ರಹವಾಗಬೇಕಾಗಿದೆ. ಈ ಉದ್ದೇಶವು ಸಫಲವಾಗಬೇಕಾದರೆ ವಿದ್ಯಾಭಿಮಾನಿಗಳ ಉದಾರಪ್ರೋತ್ಸಾಹ ಅತ್ಯಗತ್ಯವಿದೆ. ಮಹಾಜನರು ತನುಮನ ಧನಗಳಿಂದ ಸಂಘದೊಡನೆ ಸಹಕರಿಸಿ ವಿದ್ಯಾದೇವಿಯ ಕೃಪಾ ಕಟಾಕ್ಷಕ್ಕೆ ಪಾತ್ರರಾಗಬೇಕಾದುದು ಸಂದರ್ಭೋಚಿತವಿದೆ. ಸಹಾಯ ಧನವನ್ನು 'ಕೋಶಾಧಿಕಾರಿ, ಹಿಂದೂ ವಿದ್ಯಾದಾಯಿನೀ ಸಂಘ, ಸುರತ್ಕಲ್, ದ. ಕ. ಇವರಿಗೆ ಕಳುಹಿಸುವುದು.

ಕಾರ್ಕಳ— ಸ್ಥಳೀಯ ಬೋರ್ಡು ಹ್ಯಾಸ್ಕೂಲಿನ ಸ್ಕೌಟ್ಸ್ ದಳದ ಪುನರ್ವ್ಯವಸ್ಥೆಯಾಗಿ ಶ್ರೀಗಳಾದ ಎ. ಡಿ'ಸೋಜ, ಬಿ. ವೆಂಕಟೇಶ ಶೆಣೈ ಮತ್ತು ಎ. ಪಿ. ಟೀಕಲ್ ರವರು ಅನುಕ್ರಮವಾಗಿ ದಳನಾಯಕ, ಕೋಶಾಧಿಕಾರಿ ಮತ್ತು ಕ್ಯಾಂಪ್ ಮುಖಂಡರಾಗಿ ಆರಿಸಲ್ಪಟ್ಟಿರುವರು.

ಬೊಂಬಾಯಿ

ಬ್ರಹ್ಮ ಶ್ರೀ ನಾರಾಯಣ ಗುರುವರ್ಯರ ಶತಾಬ್ಧಿ ಪೂರ್ತಿ ಮಹೋತ್ಸವ— ಮುಂಬಯಿಯ ಬಿಲ್ಲವರ ಎಸೋಸಿಯೇಶನ್‌ನವರು ಇದೇ ಸಪ್ಟಂಬರ ತಿಂಗಳ ತಾ. 12ರಲ್ಲು ಕೋಟೆಯೊಳಗಿನ ಸರ್ ಕವಾಸ್ಜಿ ಜಹಾಂಗೀರ್ ಸಭಾ ಸದನದಲ್ಲಿ ಬ್ರಹ್ಮ ಶ್ರೀ ನಾರಾಯಣ ಗುರುದೇವರ ಶತಾಬ್ಧಿ ಪೂರ್ತಿ ಮಹೋತ್ಸವವನ್ನು ಆಚರಿಸಲಿರುವರು. ಅಲ್ಲದೆ ಆ ದಿನ ಶ್ರೀ ಗುರುವಿನ ಜೀವನಕ್ಕೆ ಸಂಬಂಧಿಸಿದ ವಿವಿಧ ವಿಷಯಗಳನ್ನೊಳಗೊಂಡ ಲೇಖನಗಳಿಂದ ಕೂಡಿದ ಸುಂದರ 'Souvenir' ಪ್ರಕಟಿಸಲಿರುವರು. ಹಲವು ಪಂಡಿತರ ಉಪನ್ಯಾಸಗಳ ವ್ಯವಸ್ಥೆ ಮಾಡಲಾಗಿದೆ. ಸರ್ವ ಧರ್ಮೀಯರೂ ಭಾಗವಹಿಸಬೇಕಾಗಿ ವಿನಂತಿಸಲಾಗಿದೆ.

ಓದಲೇಬೇಕಾದ ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎನ್. ಎಸ್. ಕಿಲ್ಲೆ ಮತ್ತು ಎನ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನಪಾತ್ರವನ್ನು ನೋಡಿದವರಿಗೇ ಗೊತ್ತು.. ಆ ದುಂತರ. ಕರ್ಣನ ಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು'. (ಪ್ರೊ। ಎಂ. ಆರ್ ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ.

ಬೆಲೆ 0-12-0.

(ಮುನ್ನುಡಿಕಾರರು. ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಮೂರೂ ಪುಸ್ತಕಗಳನ್ನೂ ದಿ। ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ಗೋಮಟೇಶ್ವರನ ದರ್ಶನಾರ್ಥವಾಗಿ ಬರುವ ಯಾತ್ರಿಕರಿಗೆ ರಾಮ ಸಮುದ್ರದಲ್ಲಿ ಸ್ನಾನ ಮಾಡಲು ಅನುಕೂಲವಾಗುವಂತೆ ಚೈನ ಮಠದ ಮಾರ್ಗವಾಗಿ ರಾಮಸಮುದ್ರಕ್ಕೆ ಇಳಿಯುವಲ್ಲಿ ಸ್ನಾನದ ಘಟ್ಟವನ್ನು ಕಟ್ಟುವ ಯೋಜನೆ ನಡೆದಿದೆ. ಇದಕ್ಕೆ ಸಾರ್ವಜನಿಕರ ಸಹಕಾರ ಅಪೇಕ್ಷಿಸಲಾಗಿದೆ.

ಬಡಗ ಎಡಪದವು— ಕಳೆದ ತಾ. 21ರಲ್ಲು ಸ್ಥಳೀಯ ದಯಾಸ್ವರ ಶಾಲಾ ವತಿಯಿಂದ ಶ್ರೀ ಕೃಷ್ಣ ಜಯಂತಿ ಆಚರಿಸಲಾಯಿತು. ಮರುದಿವಸ ಶ್ರೀ ಕೆ. ಕೆ. ರೈ, ವಿದ್ವಾನ್, ಅವರ ಅಧ್ಯಕತೆಯಲ್ಲಿ ಮೊಸರು ಕುಡಿಕೆ ಹಬ್ಬವು ಆಚರಿಸಲ್ಪಟ್ಟಿತು. ಶಾಲಾ ಮಕ್ಕಳ ವಿವಿಧ ವೇಶ ಪ್ರದರ್ಶನಗಳಿದ್ದುವು.

ಮೂಡು ಬೆಳ್ಳೆ— ಜಿಲ್ಲಾ ಪಂಚಾಯತ ಬೋರ್ಡಿಗೆ ನಡೆದ ಉಪಚುನಾವಣೆಯಲ್ಲಿ ಶ್ರೀ ರೋಬರ್ಟ್ ಆಳ್ವರು ಮೂಡು ಬೆಳ್ಳೆ ಕ್ಷೇತ್ರದಿಂದಲೂ ಶ್ರೀಗಳಾದ ಸೈಮನ್ ಮಿನೇಜಸ್ ಮತ್ತು ಸಲ್ವದೋರ್ ಫೆರ್ನಾಂಡರು ಕಟ್ಟಿಂಗೆರೆ ಕ್ಷೇತ್ರದಿಂದಲೂ ಆರಿಸಿ ಬಂದಿರುವರು.

ಫಲಿಮಾರು— ಸ್ಥಳೀಯ ದೇವಾಲಯದ ಮುಂಭಾಗದಲ್ಲಿ ತಾ. 22ರಲ್ಲು ವಿಟ್ಲಪಿಂಡಿ ಉತ್ಸವವು ವಿಜೃಂಭಣೆಯಿಂದ ಜರಗಿತು.

ಪಾದೆಬೆಟ್ಟು— ಸ್ಥಳೀಯ ಎಯಿಡೆಡ್ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ. 15ರಲ್ಲು ಸ್ವಾತಂತ್ರ್ಯ ದಿನಾಚರಣೆಯು ಬೆಳಿಗ್ಗೆ ಪಟೇಲ್ ಶ್ರೀ ದೇಜು ಸೆಟ್ಟರಿಂದ ಧ್ವಜವಂದನೆಯಿಂದ ಆರಂಭವಾಯಿತು. ನಂತರ ಸಾರ್ವಜನಿಕ ಸಭೆಯು ಶ್ರೀ ಪಿ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಭಾಷಣಗಳಾದವು. ಬಳಿಕ ಮಕ್ಕಳಿಗೆ ಸಿಹಿತಿಂಡಿ ಹಂಚಲಾಯಿತು.

ಪುತ್ತೂರು— ದ. ಕ. ಜಿಲ್ಲಾ ಹರಿಜನ ವೆಲ್‌ಫೇರ್ ಕಮಿಟಿ ಸಭೆಯು ಕಳೆದ ತಾ. 25ರಲ್ಲು ಪುತ್ತೂರು ತಾಲೂಕು ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪೋಲೀಸು ವಿದ್ಯೆ ಮತ್ತು ಆರೋಗ್ಯ ಖಾತೆಗೆ ಸಂಬಂಧಿಸಿದ ಜಿಲ್ಲಾಧಿಕಾರಿಗಳು ಈ ಸಭೆಗೆ ಹಾಜರಿದ್ದರು. ಕಳೆದ ಜೂನ್ ತಿಂಗಳಿಗೆ ಅಂತ್ಯವಾದ ತ್ರೈಮಾಸಿಕ ವರದಿಯ ಪರಿಶೀಲನೆಯಾಯಿತು ನಂತರ ಇತರ ವಿಷಯಗಳು ಚರ್ಚಿಸಲ್ಪಟ್ಟವು. ಕೆಲವು ಕೆಲಸಗಳಿಗೆ ಹಣ ಮಂಜೂರು ಮಾಡಲಾಯಿತು.

ಸ್ಥಳೀಯ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ, 28ರಲ್ಲು ಶ್ರೀ ಜಿ.ಪಿ. ರಾಜರತ್ನಂ, ಅವರ ಭಾಷಣ ನಡೆಯಿತು.

ಕುಂಬಳೆ— ಈ ಕೇಂದ್ರದ ಉಪಾಧ್ಯಾಯರ ಸಭೆಯು ಕಳೆದ ತಾ. 28ರಲ್ಲು ಬಿ. ಎಚ್. ಇ ಶಾಲೆಯಲ್ಲಿ ಶ್ರೀ ಎಮ್. ರಾಮಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಶಂಕರ ಭಟ್ಟರು ವರದಿಯನ್ನೋದಿದರು. ಶ್ರೀಗಳಾದ ಗುರುವ ಮತ್ತು ಎನ್. ಅಬ್ದುಲ್ಲರವರು ಮಾದರಿ ಪಾಠಗಳನ್ನಿತ್ತರು. ಅಧ್ಯಕ್ಷರ ಭಾಷಣಾನಂತರ ಶ್ರೀ ಶಂಕರ ಭಟ್ಟರು ಧನ್ಯವಾದ್ಯಗಳನ್ನರ್ಪಿಸಿದರು.

ಕಾಸರಗೋಡು— ಸಹಕಾರಿ ಸಂಘಗಳ ಜಾಯಿಂಟ್ ರಿಜಿಸ್ಟ್ರಾರ್ ಮತ್ತು ಡಿಪ್ಯುಟಿ ಕಮಿಶನರ್ ಒಫ್ ಪ್ರೊಹಿಬಿಶನ್ ಶ್ರೀ ಎ. ಪಳನಿಯಪ್ಪನ್, ಅವರು ತಾ. 25ರಲ್ಲು ಕಾಸರಗೋಡಿಗೆ ಆಗಮಿಸಿದರು. ಸ್ಥಳೀಯ ಟೌನ್ ಬೇಂಕನ್ನು ಸಂದರ್ಶಿಸಿದರಲ್ಲದೆ ತೆಂಗಿನ ಮಾರ್ಕೆಟಿಂಗ್ ಸಹಕಾರಿ ಸಂಘ ಸ್ಥಾಪನೆ ಕುರಿತು ವಿಚಾರವಿನಿಮಯ ನಡೆಸಿದರು.

ಮುಂಡ್ಕೂರು— ಸಮಾಜ ವಿಕಾಸ ಯೋಜನೆಯ ನೇತೃತ್ವದಲ್ಲಿ ತಾ. 26ರಲ್ಲು ಮಾತೃತ್ವ ಮತ್ತು ಶಿಶು ಸಂರಕ್ಷಣಾ ಹಾಲಿನ ಕೇಂದ್ರವೊಂದು ತೆರೆಯಲ್ಪಟ್ಟಿತು

ಕುಕ್ಕಾಲು— ಸ್ಥಳೀಯ ಪಂಚಾಯತ ಬೋರ್ಡಿನ ಉಪಚುನಾವಣೆಯು ತಾ. 24ರಲ್ಲು ಜರಗಿ ಶ್ರೀಗಳಾದ ಕೆ. ಕೃಷ್ಣ ಸೆಟ್ಟಿ, ನಾರಾಯಣ ಸೆಟ್ಟಿ ಮತ್ತು ಫ್ರಾನ್ಸಿಸ್ ಕಸ್ತೆಲೀನ, ಅವರು ಆರಿಸಲ್ಪಟ್ಟಿರುವರು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ:— ಸಾಧಾರಣ ಪ್ರತಿ— ರೂ ೧-೮-೦. (ಟಪ್ಪಾಲು ಖರ್ಚು ಬೇರೆ)

ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:—1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	8
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭಾರತೀಯ ಕತೆಗಳು	1	12
19	ಪ್ರಕಾಶ	3	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	0
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ನನ್ನ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.

ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.

ಕಿರಿಯರ ಪ್ರಪಂಚ ಉಡುಪಿ.

ಗೆಲ್ಲಿರಿ 25,000 ಗೆಲ್ಲಿರಿ

ರಿಜಿಸ್ಟರ್ಡ್ ನಂಬ್ರ 990. ಸ್ಪರ್ಧೆ ನಂಬ್ರ A-2.

ನಮ್ಮ ಸೀಲಾದ ಸರಿಯುತ್ತರವು ಪ್ರೀಮಿಯರ್ ಬೇಂಕ್ ಒಫ್ ಇಂಡಿಯಾ, ಮದ್ರಾಸ್‌ನಲ್ಲಿಡಲಾಗಿದೆ ಮತ್ತು ಅವರಿಂದ ಅಧಿಕೃತವಾಗಿ ಪ್ರಕಟಿಸಲ್ಪಡುತ್ತದೆ. 1ನೇ ಬಹುಮಾನ ಎಲ್ಲಾ ಸರಿಯುತ್ತರಕ್ಕೆ ರೂ. 12,500; ಮೊದಲ 2 ಸಾಲು ಸರಿಯುತ್ತರಕ್ಕೆ 2ನೇ ಬಹುಮಾನ ರೂ. 6,250; ಮೊದಲ 1 ಸಾಲು ಸರಿಯಿದ್ದರೆ 3ನೇ ಬಹುಮಾನ ರೂ. 3,750; ಮೊದಲ 2 ಅಂಕೆ ಸರಿಯುತ್ತರಕ್ಕೆ 4ನೇ ಬಹುಮಾನ ರೂ. 2,500. ಉದ್ದ ಮತ್ತು ಅಡ್ಡವಾಗಿ ನಮ್ಮ ಸರಿಯುತ್ತರಕ್ಕೆ ಹೋಲಬೇಕು

ಕೊನೆಯದಿನ: 10—9—'54. ಫಲಿತಾಂಶ. 25—9—'54.

54

ಪ್ರವೇಶಧನ: ಒಂದು ಚದರಕ್ಕೆ ರೂ. 1/-, 6 ಚದರಕ್ಕೆ ರೂ 5/-, 14 ಚದರಕ್ಕೆ ರೂ. 10/-.

ಸ್ಪರ್ಧೆ ಬಿಡಿಸುವ ವಿಧಾನ:- 6ರಿಂದ 21ರ ವರೆಗೆ ಸಂಖ್ಯೆಗಳನ್ನು ಚದರದಲ್ಲಿ ಉಪಯೋಗಿಸಿ, ಉದ್ದವಾಗಿ ಅಡ್ಡವಾಗಿ ಮತ್ತು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಕೂಡಿಸಿದರೆ 54 ಬರುವಂತೆ ಬರೆಯಿರಿ. ಒಂದು ಸಂಖ್ಯೆಯನ್ನು ಒಮ್ಮೆ ಮಾತ್ರ ಉಪಯೋಗಿಸಿರಿ. ಬಿಳಿಯ ಹಾಳೆಯ ಮೇಲೆ ಎಷ್ಟು ಚದರಗಳನ್ನಾದರೂ ಕಳುಹಿಸಬಹುದು ಪ್ರತಿ ಚದರದ ಕೆಳಗೂ ತನ್ನ ಹೆಸರು. ವಿಳಾಸಗಳನ್ನು ಮತ್ತು ಅಂಕೆಗಳನ್ನು ಇಂಗ್ಲಿಷಿನಲ್ಲಿ ಸ್ಪಷ್ಟವಾಗಿ ಬರೆಯಬೇಕು. ಪ್ರವೇಶಧನವನ್ನು ಕ್ರಾಸ್‌ಮಾಡಿದ ಇಂಡಿಯನ್ ಪೋಸ್ಟಲ್ ಆರ್ಡರ್ ಮತ್ತು ಮನಿಯಾರ್ಡರು ಮೂಲಕ ಕಳುಹಿಸಿರಿ. ಚದುರಗಳೊಂದಿಗೆ ಮನಿಯಾರ್ಡರ್ ಕೂಪನ್ ಕಳುಹಿಸಬೇಕು ಪರದೇಶದವರು ಬ್ರಿಟಿಷ್ ಪೋಸ್ಟಲ್ ಆರ್ಡರು ಮೂಲಕವೇ ಪ್ರವೇಶಧನ ಕಳುಹಿಸಿರಿ. ಸಂದಾಯವಾದ ಹಣಕ್ಕನುಗುಣವಾಗಿ ಬಹುಮಾನದ ಮೊತ್ತ ಬದಲಾಗುವುದು. ಮೆನೇಜರರ ತೀರ್ಮಾನವೇ ಕೊನೆಯದು ಮತ್ತು ನ್ಯಾಯಬದ್ಧವಾದುದು ನಮ್ಮ ಪ್ರತ್ಯೇಕ ನಿಯಮಗಳನ್ನು ಪೂರ್ಣ ತಿಳುವಳಿಕೆಯುಳ್ಳವರು ಮಾತ್ರ ಸ್ಪರ್ಧಿಸಬೇಕು 2 ಆಣೆ ಇಂಡಿಯನ್ ಪೋಸ್ಟೇಜು ಸ್ಟಾಂಪು ಕಳುಹಿಸಿದರೆ ಫಲಿತಾಂಶ ಕಳುಹಿಸಲಾಗುವುದು.

38

7	10	5	16
4	17	6	11
14	3	12	9
13	8	15	2

ನಿಮ್ಮ ಚದುರಗಳನ್ನಿಲ್ಲಿಗೆ ಕಳುಹಿಸಿರಿ **AJANTA COMPETITIONS No. A—2**
4/37, (A) SAVARIMUTHU STREET, MADRAS-1.

ಮಂಗಳೂರು

ಪೊಲಿಟೆಕ್ನಿಕ್ ವಿದ್ಯಾರ್ಥಿ ಸಂಘ- ಮಂಗಳೂರಿನ ಕರ್ನಾಟಕ ಪೊಲಿಟೆಕ್ನಿಕ್ ಒಟೋ ಮೊಬೈಲ್ ಎಂಜಿನಿಯರಿಂಗ್ ವಿದ್ಯಾರ್ಥಿ ಸಂಘವನ್ನು ಕಳೆದ ತಾ. ೨೩ರಲ್ಲಿ ಶ್ರೀ ಪಿ. ಎಸ್. ಕುಡ್ವರು ಉದ್ಘಾಟಿಸಿದರು. ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪುಸ್ತಕ ಅಭ್ಯಾಸದೊಂದಿಗೆ ಹೊಸ ಹೊಸ ಪ್ರಯೋಗಗಳ ಬಗ್ಗೆ ಆಸಕ್ತಿ ತೋರಿಸಬೇಕೆಂದು ಸೂಚಿಸಿಯಿತ್ತರು.

ವನಮಹೋತ್ಸವದಲ್ಲಿ ದ. ಕ. ಜಿಲ್ಲೆಗೆ ಪಾರಿತೋಷ— ಸಸಿಗಳನ್ನು ನೆಡುವುದು ಮತ್ತು ಅವುಗಳನ್ನು ಸಾಕುವ ಕಾರ್ಯವನ್ನು ಪ್ರೋತ್ಸಾಹಿಸುವ ಬಗ್ಗೆ ಕೇಂದ್ರ ಸರಕಾರವು ವನಮಹೋತ್ಸವದ ಪಾರಿತೋಷಗಳನ್ನು ಕೊಡುವ ಯೋಜನೆ ಮಾಡಿವೆಯಷ್ಟೆ. ಅದರಂತೆ ಪ್ರತಿವರ್ಷವೂ ನಾಲ್ಕು ಅಖಿಲ ಭಾರತ 'ಗುರಾಣಿ' ಮತ್ತು ಅನೇಕ ಪ್ರಾಂತಿಕ ಗುರಾಣಿಗಳನ್ನು ಯೋಗ್ಯತೆ ಪಡೆದವರಿಗೆ ಕೊಡಲಾಗುವುದು. ಒಂದು ಪ್ರಾಂತಿಕ ಗುರಾಣಿಯನ್ನು ಮದ್ರಾಸು ಮತ್ತು ಕೊಡಗು ಪ್ರಾಂತಗಳಲ್ಲಿ ಹೆಚ್ಚಿನ ಮರಗಿಡಗಳನ್ನು ನೆಟ್ಟು ಪೋಷಿಸಿದ ಜಿಲ್ಲೆಗೆ ಕೊಡಲಾಗುವುದು. ಈ ಯೋಜನೆ ಜ್ಯಾರಿಗೆ ಬಂದ ಪ್ರಥಮ ವರ್ಷದಲ್ಲಿ ಅಂದರೆ 1950ರಲ್ಲಿ ದಕ್ಷಿಣ ಕನ್ನಡವು ಈ ಪಾರಿತೋಷ ಪಡೆದಿದೆ. 1951ರ ಬಹುಮಾನ ಕೂಡಾ ದ. ಕ. ಜಿಲ್ಲೆಗೆ ಕೊಡುವುದೆಂದು ಭಾರತ ಸರಕಾರ ನಿರ್ಧರಿಸಿಯದೆ. ಬೆಳ್ಳಿಯ ಗುರಾಣಿಯು ದ. ಕ. ಜಿಲ್ಲಾ ಕಲೆಕ್ಟರರಿಗೆ ವಿಶೇಷ ಸಮಾರಂಭದಲ್ಲಿ ಕೊಡಲಾಗುವುದು.

(೧ನೇ ಪುಟದಿಂದ)

ಪ್ರವಹಿಸುತ್ತಿದೆ. ವ್ಯಕ್ತಿಯು ಸಿಕ್ಕಾಬಟ್ಟೆ ವರ್ತಿಸದಂತೆ ಹೇರತೊಡಗಿದ ನಿರ್ಬಂಧಗಳೇ ಇಂದು ಸಾರ್ವತ್ರಿಕ ನೈತಿಕ ಆದರ್ಶವಾಗಲಿಕ್ಕೆ ಕಾರಣವಾಗಿ ಪರಿಣಮಿಸಿವೆ. ವ್ಯಕ್ತಿ ಸ್ವಾತಂತ್ರ್ಯವು ಆಡಳಿತ ನಿಯಂತ್ರಣಗಳ ಬಲೆಯಿಂದ ಹೊರ ಬೀಳಲು ಹಾತೊರೆಯುತ್ತಿದೆ. ನಿಯಂತ್ರಣವಾಗಲೀ ವ್ಯಕ್ತಿ ಸ್ವಾತಂತ್ರ್ಯವಾಗಲೀ "ಅತಿರೇಕ" ಮಹತ್ವವನ್ನು ಹೊಂದಿದಾಗ ಹಾನಿಯು ಕಟ್ಟಿಟ್ಟದ್ದು. ಇಂತಹ ವೈಪರೀತ್ಯಕ್ಕೆ ಎಡೆ ಇಲ್ಲದಂತೆ ಮಾಡುವ ಉಪಾಯವನ್ನೇ ನಾವು ಯೋಚಿಸಬೇಕಾಗಿದೆ-ಆಗ ನಮಗೆ 'ಸಂಸ್ಕೃತಿ'ಯ ಕಲ್ಪನೆಯೇ ಮಾನವ ವಿಕಾಸಕ್ಕೆ ಆಧಾರ ಭೂತವಾಗಬಲ್ಲುದೆಂದು ಹೊಳೆಯುತ್ತದೆ.

ಭಾರತೀಯ ಸಂಸ್ಕೃತಿಯು ಸಂಯಮದ ಮೇಲೆ ದೃಢವಾಗಿ ನಿಂತಿದೆ. ಸ್ವನಿಯಂತ್ರಣವೇ ಎಲ್ಲಕ್ಕೂ ಮಿಗಿಲಾದುದೆಂದು ಅದು ಬೋಧಿಸುತ್ತದೆ. ವ್ಯಕ್ತಿ ಸ್ವಾತಂತ್ರ್ಯಕ್ಕಾಗಲೀ ಆಡಳಿತದ ನಿಯಂತ್ರಣಕ್ಕಾಗಲೀ ಮಹತ್ವವನ್ನು ಸಲ್ಲಿಸದೆ, ವ್ಯಕ್ತಿಯ ಹಾಗು ಸಮಷ್ಟಿಯ ಶ್ರೇಯಸ್ಸನ್ನೇ ಉದ್ದೇಶವಾಗಿಟ್ಟುಕೊಂಡ ಆತ್ಮ ಸಂಯಮವು ಅಪಾಯರಹಿತವಾದ ಕಲ್ಯಾಣ ಮಾರ್ಗ. ನಾವು ಸಂಯಮಧನರಾಗಬೇಕೆಂಬುದೇ ಭಾರತೀಯ ನಾಗರಿಕತೆಯ ಸಂದೇಶವಾಗಿದೆ-ಸಂಯಮ ರಹಿತವಾದ ಸಮಾಜ ಅಥವಾ ವ್ಯಕ್ತಿಯ ಮೇಲೆ ಶಾಸನಿಕ ನಿಯಂತ್ರಣಗಳಿಂದ ಶಾಶ್ವತ ಪರಿಣಾಮವಾಗಲಾರದು. ಇದನ್ನು ಮರೆತು "ಇವೆಲ್ಲ ಹಳೆಯ ಕಾಲದ ಉಪದೇಶ— ನಮಗೀಗ ಹೊಸತು ಬೇಕು" ಎನ್ನುವವರಿಗೆ ಮಾನವನ ಮೂಲಭೂತ ಅಂತರಗಳೇನೂ ಬದಲಾಗಿಲ್ಲೆಂಬ ಸಂಗತಿಯನ್ನು ನೆನಪಿಗೆ ತಂದು ಕೊಡಬೇಕಾಗುತ್ತದೆ. —ಕಾರ್ತಿಕೇಯ.

ಶ್ರೀ ಜಿತೇಂದ್ರ ಮೋಹನ ಸೆಟ್ಟರು ರಷ್ಯಕ್ಕೆ— ಮದ್ರಾಸಿನ ಪ್ರಸಿಡೆನ್ಸಿ ಕಾಲೇಜಿನ ವಿದ್ಯಾರ್ಥಿ ಯೂನಿಯನ್ ಅಧ್ಯಕ್ಷ ಮಂಗಳೂರಿನ ಶ್ರೀ ಜಿತೇಂದ್ರ ಮೋಹನಸೆಟ್ಟರನ್ನು (ಮಾಜಿ ಜಿಲ್ಲಾ ಬೋರ್ಡಿನ ಅಧ್ಯಕ್ಷಕೀರ್ತಿಶೇಷ ಡಾ| ವಿಠಲ ಸೆಟ್ಟರ ಪುತ್ರ) ರಷ್ಯಾ ದೇಶಕ್ಕೆ ಹೋಗಲಿರುವ ಭಾರತೀಯ ಶಿಷ್ಟ ಮಂಡಲದ ಸದಸ್ಯರನ್ನಾಗಿ ನೇಮಿಸಲಾಗಿದೆ ಎಂದು ತಿಳಿದು ಬರುತ್ತದೆ.

ನಳ್ಳಿ ನೀರಿನ ಸರಬರಾಯಿ— ಮಂಗಳೂರಿಗೆ ನೇತ್ರಾವತಿಯಿಂದ ನಳ್ಳಿ ನೀರನ್ನು ಒದಗಿಸುವ ಕೆಲಸವು ಭರದಿಂದ ಸಾಗುತ್ತಿದ್ದು ಈ ಮಾದರಿಯಲ್ಲೇ ಕೆಲಸ ಶೀಘ್ರಗತಿಯಿಂದ ಮುಂದರಿದರೆ ಇನ್ನು ಮೂರು ವರ್ಷಗಳಲ್ಲಿ ಮಂಗಳೂರಿನ ಎಲ್ಲಾ ಕಡೆಗಳಿಗೂ ನೀರೊದಗಿಸಲು ಸಾಧ್ಯವಾಗಬಹುದು ಎಂದು ಮದ್ರಾಸಿನ ಸೆಸಿಟರಿ ಇಂಜಿನಿಯರ್ ಶ್ರೀ ಎಸ್. ರಾಜಗೋಪಾಲನ್, ಅವರು ಈಚೆಗೆ ಜರಗಿದ ನಗರ ಸಭೆಯಲ್ಲಿ ಹೇಳಿದರು. ಈ ನಗರದ ಭೂರಚನೆಯು ವಿಷಯಿಂದಾಗಿ ಇಲ್ಲಿಗೆ ಭೂಗತ ಚರಂಡಿ ವ್ಯವಸ್ಥೆಯನ್ನು ಕೈಕೊಳ್ಳುವುದು ಬಹು ಪ್ರಯಾಸಕರವಾದುದರಿಂದ ಬಂದರದ ಜನಸ್ತೋಮ ಕ್ಷೇತ್ರದಲ್ಲಿ ಮಾತ್ರ ಈ ವ್ಯವಸ್ಥೆ ಕೈಕೊಳ್ಳುವದೆಂದು ಸರಕಾರವು ನಿರ್ಧರಿಸಿದ್ದು, ಆ ಕೆಲಸವನ್ನು ಆದಷ್ಟು ತ್ವರೆ ಕೈಕೊಳ್ಳಲಾಗುವುದೆಂದೂ ಅವರು ತಿಳಿಸಿದರು.

ಮಾರ್ಕೇಟಿನ ಪುನನಿರ್ಮಾಣಕ್ಕಾಗಿ ಸಾಲ— ಕಳೆದ ತಾ. 28ರಲ್ಲಿ ಜರಗಿದ ಮಂಗಳೂರು ನಗರ ಸಭೆಯ ಸಾಮಾನ್ಯ ಸಭೆಯಲ್ಲಿ ಸೆಂಟ್ರಲ್ ಮಾರ್ಕೆಟನ್ನು ಪುನರ್ನಿರ್ಮಿಸುವ ಬಗ್ಗೆ 8 ಲಕ್ಷ ರೂಪಾಯಿ ಸಾಲವನ್ನು ಎತ್ತುವಂತೆ ಅನುಮತಿ ಕೊಡಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವಾಗಿದೆ.

ಸ್ವಾಗತ ಸತ್ಕಾರ— ಕಳೆದ ತಾ 28ರಲ್ಲಿ ಸ್ಥಳೀಯ ಗವರ್ನಮೆಂಟ್ ಆರ್ಟ್ಸ್ ಕಾಲೇಜಿನ ಕಳೆದ ವರ್ಷ ಜರಗಿದ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸ್ವಾಗತ ವಿದಾಯ ಸಮ್ಮೇಳನ ಕೂಟವೊಂದು ಜರಗಿತು. ಕಾಲೇಜು ಯೂನಿಯನ್ನಿನ ಅಧ್ಯಕ್ಷ ಶ್ರೀ ಬಿ. ವಿಶ್ವನಾಥ ರೈಗಳು ಹೊಸ ಬಂದವರನ್ನು ಸ್ವಾಗತಿಸಿ ಮಾತನಾಡಿದರು. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಟಿ. ಕೆ. [illegible] ಅವರು ಪರಿಚಯ ಮಾಡಿಸಿದರು. [illegible] ಶ್ರೀ [illegible] [illegible] ಶ್ರೀ [illegible] [illegible] [illegible] ಶ್ರೀ ವಿ. [illegible] ಗಳನ್ನರ್ಪಿಸಿದರು.

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಶಾಲಾಕಾಲೇಜುಗಳಿಗೆ ನಾವು ಕೊಡುವ ಕಮಿಶನ್ ದರಕ್ಕೂ ಬರೆಯಿರಿ.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಏಲಂ ನೋಟೀಸು

ದಿ ಕಥೋಲಿಕ್ ಬೇಂಕ್ ಲಿಮಿಟೆಡ್, ಕುಂದಾಪುರ.

ಈ ಕೆಳಗೆ ಹೆಸರು ಕಾಣಿಸಿದವರು ನಂನು ಬ್ಯಾಂಕಿನಲ್ಲಿ, ಚಿನ್ನದ ನಗಗಳ ಆಧಾರದ ಮೇಲೆ, ಸಾಲ ಪಡೆದುಕೊಂಡು ಕ್ಲಪ್ತ ವ್ಯಾಯದೆ ಅಸಲು ಬಡ್ಡಿ ಸಗ್ಯರೆ ಸಲ್ಲಿಸದೆ, ಬಾಕಿ ಮಾಡಿಕೊಂಡಿರುವುದರಿಂದ, ಸದ್ರಿ ಸಾಲವನ್ನು ಬರಮಾಡಿಕೊಳ್ಳವರೇ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ನಗಗಳನ್ನು ಬಿಡಿಸಿಕೊಂಡು ಹೋಗದೆ ಇರುವುದರಿಂದ, ಅಂತವರ ನಗಗಳನ್ನು ಇದೇ ಸಪ್ಟೆಂಬರ ತಿಂಗಳ ತಾರೀಕು 11ಕ್ಕೆ (ಮಂಗಳವಾರ) ಮಧ್ಯಾಹ್ನ ಗಂಟೆ 3ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು—ಅಗತ್ಯ ಬಿದ್ದಲ್ಲಿ ಏಲಮನ್ನು ಮುಂದಿನ ನೋಟೀಸಿನ ಹೊರತು ಮುಂದರಿಸಲಾದೀತು—

ಸಾಲ ಪಡೆದ ತಾರೀಕು ಮತ್ತು ನಂಬ್ರ	ಹೆಸರು ಮತ್ತು ವಿಳಾಸ	ತಾ. 30.6.1954ರ ವರೆಗೆ ಬಡ್ಡಿ ಕೂಡಿ ಸಲ್ಲಬೇಕಾದ ಮೊಬಲಗು. ರೂ.	ಅ.	ಪೈ.
28/479 3-5-1952	M ಕೃಷ್ಣಪ್ಪ ಸೆಟ್ಟಿ, ಅಂತ್ಯ ಸೆಟ್ರ ಅಳಿಯ, ಕಕುಂಜೆ, ಕುಂದಾಪುರ	624	15	0
28/741 2-7-1952	ಕಲಿಫಾ ಬ್ಯಾರಿ ಸಾಹೇಬ್, ಬುಡಾನ್ ಸಾಹೇಬರ ಮಗ, ಗಂಗೊಳ್ಳಿ	52	10	0
28/859 29-7-1952	ತಿಂಮಪ್ಪ ಸೆಟ್ಟಿ, ಗೋವಿಂದ ಸೆಟ್ರ ಅಳಿಯ, ಕಾಡಿಮನೆ, ತಲ್ಲೂರು	11	14	0
28/939 20-8-1952	ನಾರಾಯಣ ಹೊಳ್ಳ, ವೆಂಕಟ್ರಮಣ ಹೊಳ್ಳರ ಮಗ, ಉಪ್ಪಿನ ಕುದ್ರು	118	15	0
28/1115 8-10-1952	ಫಿಲಿಪ್ ಡಿಸೋಜಾ, ಸಾವೆರ್ ಡಿಸೋಜರ ಮಗ, ಟೈಲರ್ ಮಚ್ಚಟ್ಟೆ. ಕುಂದಾಪುರ	313	8	0
29/664 22-7-1954	ಇಬ್ರಾಹಿಮ್ ಸಾಹೇಬ್, ಮೈದಿನ್ ಸಾಹೇಬರ ಮಗ, ಮೀನು ವ್ಯಾಪಾರಿ, ಕೋಡಿ ಪೋಸ್ಟ್—ಕುಂದಾಪುರ	60	8	0
29/810 25-8-1953	ಕಾಲಿಫಾ ಬ್ಯಾರಿ ಸಾಹೇಬ್, ಬುಡಾನ್ ಸಾಹೇಬರ ಮಗ ಮೀನು ವ್ಯಾಪಾರಿ, ಗಂಗೊಳ್ಳಿ—P.O.	23	6	0
29/1036 28-10-'53	ಶೀನಪ್ಪ ಸೆಟ್ಟಿ, ಗೋವಿಂದ ಸೆಟ್ರ ಅಳಿಯ, ಬೀಜಾಡಿ ಕೋಟ ಪೋಸ್ಟ್—	22	3	0
29/719 3-8-1953	G. ಕಾಂಚನೋಜಿ ತಾಂಡೆಲ, ಕಾಂಚನೋಜಿ ಗೋವಿಂದ ತಾಂಡೆಲ ಮಗ, ಮೀನುವ್ಯಾಪಾರಿ, ಗಂಗೊಳ್ಳಿ P.O.	2017	5	0

Office of the Catholic Bank Ltd,
Coondapoor. 26-8-1954.

I. Menezes.
Agent

ನಗರ ಸಭೆಯ— ತಾ. [illegible] ಶ್ರೀ ಕೆ. [illegible] ಅಧ್ಯಕ್ಷತೆಯಲ್ಲಿ ಜರಗಿ, [illegible] [illegible] ಸೆಂಟ್ರಲ್ ಮಾರ್ಕೆಟು [illegible] ಮಾರುಕಟ್ಟೆ [illegible] ಸಮಾಜವಾದಿ [illegible] [illegible] [illegible] ಮಂಜೂರಾಯಿತು.

ಫಿಲ್ಟರ್ ಪಾಯಿಂಟ್ ಬಾವಿಗಳು— ಈ ಕುರಿತು ಜಿಲ್ಲಾ [illegible] ಪತ್ರಿಕಾ ಪ್ರಕಟನೆಯ ಸಾರಾಂಶವು [illegible]—

ಮದ್ರಾಸ ಸರಕಾರವು [illegible] ಈ ವರ್ಷ ಕೂಡಾ [illegible] ಜಿಲ್ಲೆಗಳಲ್ಲಿ ಫಿಲ್ಟರ್ ಪಾಯಿಂಟ್ ಬಾವಿಗಳನ್ನು [illegible] [illegible] [illegible] [illegible] ವಿವರಗಳನ್ನು ಕೊಡಲಾಗಿದೆ—

ಈ ಫಿಲ್ಟರ್ ಪಾಯಿಂಟ್ [illegible] [illegible] [illegible] ಯಲ್ಲಿ ಕೆಲಸಮಾಡುತ್ತವೆ.

ಫಿಲ್ಟರ್ ಪಾಯಿಂಟ್ ಬಾವಿಗಳನ್ನು [illegible] ಕೊಳ್ಳುವ ಪ್ರತಿಯೊಬ್ಬ ರೈತನಿಗೆ ಒಂದು [illegible] [illegible] [illegible] ಸಾಲ ಕೊಡಲಾಗುವುದು.

[illegible] ರೈತರು ತಮ್ಮ ಅರ್ಜಿಗಳನ್ನು ತಾಲೂಕು [illegible] ಆಫೀಸರವರಿಗೆ [illegible] [illegible] ಸರ್ಟಿಫಿಕೇಟುಗಳನ್ನು [illegible] ಕಾಲಕ್ಕೆ ಪಡೆಯಲು [illegible].

ಜ್ಯೋತಿ ಕಲಾ ಕರ್ನಾಟಕನಾಟಕ ಸಭಾ, ಮುಂಬಾಯಿ. [illegible] "[illegible]" [illegible], ಕರ್ನಾಟಕ [illegible] [illegible]. 11.9.೫೪ನೇ [illegible] 7-೩೦ಕ್ಕೆ [illegible] [illegible] ಭಿನಯಿಸಲಿರುವರು.

ಸ್ವೀಕಾರ--ವಿಮರ್ಶೆ

ಅಯೋಧ್ಯಾ ಕಾಂಡಂ—

(ವೆಂಕಾಮಾತ್ಯ ಕವಿ ವಿರಚಿತ ಶ್ರೀಮ ದ್ರಾಮಾಯಣದಿಂದ)

ಸಂಪಾದಕರು ಹಾಗು ಪ್ರಕಾಶಕರು: ಟಿ. ಚಂದ್ರಶೇಖರನ್, ಸರಕಾರದ ಪ್ರಾಚೀನ ಹಸ್ತ ಲಿಖಿತ ಪುಸ್ತಕ ಭಾಂಡಾಗಾರ, ಮದ್ರಾಸು ೫. ಬೆಲೆ: ರೂ. ೬—೮—೦

ಕನ್ನಡದಲ್ಲಿ ವಾಲ್ಮೀಕಿ ರಾಮಾಯಣವನ್ನು ಅನುಸರಿಸಿ ಬರೆಯಲಾದ ತೊರವೆ ರಾಮಾಯಣವು ತುಂಬ ಜನಪ್ರೀತವಾಗಿದ್ದರೂ ಪ್ರೌಢಿಮೆಯಲ್ಲಿ ಇವಕ್ಕೂ ಹೆಚ್ಚು ಯೋಗ್ಯತೆಯನ್ನು ತೋರಿಸುವ ಗ್ರಂಥಗಳೂ ಇವೆ. ವೆಂಕಾಮಾತ್ಯನು ವಾರ್ಧಿಕ ಷಟ್ಪದಿಯಲ್ಲಿ ಬರೆದಿರುವ ರಾಮಾಯಣವನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು. ಹನುಮದ್ವಿಲಾಸ ಎಂಬ ಷಟ್ಪದಿ ಗ್ರಂಥವನ್ನೂ ಇಂದಿರಾಭ್ಯುದಯವೆಂಬ ಚಂಪೂ ಕಾವ್ಯವನ್ನೂ ಬರೆದಿರುವ ಈ ಬ್ರಾಹ್ಮಣ ಕವಿಯು ಹೈದರಲಿ ಖಾನನಲ್ಲಿ ಮುಖ್ಯ ಮಂತ್ರಿಯಾಗಿದ್ದಂತೆ ತಿಳಿಯುತ್ತದೆ. ಇದರಿಂದಾಗಿ ಈತನ ಕಾಲವು ೧೭೭೦ ರಷ್ಟು ಈಚೆಗಿರಬೇಕೆಂದು ಊಹಿಸಲಾಗುತ್ತದೆ. ಲಕ್ಷ್ಮೀಶನು ಬರೆದ ಜೈಮಿನಿ ಭಾರತದೊಂದಿಗೆ ತುಲನೆ ಮಾಡಿದರೆ, ೧೯೫ ಸಂಧಿಗಳನ್ನೂ ಒಟ್ಟು ೯೮೬೫ ಪದ್ಯಗಳನ್ನೂ ಒಳಗೊಂಡ ವೆಂಕಾಮಾತ್ಯನ ರಾಮಾಯಣವು ಗಾತ್ರದಲ್ಲಿಯೂ ಬಹು ದೊಡ್ಡದೆನಿಸುವುದು. ಇದರಲ್ಲಿ "ಸುಂದರ ಕಾಂಡ"ವನ್ನು ಮದ್ರಾಸು ಸರಕಾರದ ಪರವಾಗಿ ಈಗಾಗಲೇ ಪ್ರಕಟಿಸಲಾಗಿದೆ—ಇದೀಗ ಅಯೋಧ್ಯಾಕಾಂಡವನ್ನು ಕನ್ನಡಿಗರಿಗೆ ಒಪ್ಪಿಸಲು ಸರಕಾರ ಪ್ರಯತ್ನಿಸಿರುವುದು. ಇದರಲ್ಲಿ ಮೂವತ್ತಾರು ಸಂಧಿಗಳಲ್ಲಿ ೧೬೬೪ ಪದ್ಯಗಳು ೩ ನೇ—ಕತೆಯನ್ನು ಶಿವನು ಪಾರ್ವತಿಗೆ ಹೇಳಿದಂತೆಯೂ ಇದನ್ನೆ ಆ ಮೇಲೆ ಸೂತನು ಋಷಿಮುನಿಗಳಿಗೆ ತಿಳಿಸಿದಂತೆಯೂ ಬರೆಯಲಾಗಿದೆ. ವೆಂಕಾಮಾತ್ಯನು ಕುಶಲ ಕತೆಗಾರನಷ್ಟೇ ಅಲ್ಲ—ಲಕ್ಷಣಕಾರರನ್ನು ಮುಗ್ಧಗೊಳಿಸುವಷ್ಟು ಪ್ರತಿಭಾ ಸಂಪನ್ನನಾದ ಮೇಲ್ಪಟ್ಟದ ಕವಿಯೂ ಹೌದೆಂಬುದನ್ನು ಮತ್ತು ಆತನಿಗೆ ವೇದಾಂತ ಹಾಗು ಇತರ ಶಾಸ್ತ್ರ ಗ್ರಂಥಗಳಲ್ಲಿ ಅಗಾಧ ಪಾಂಡಿತ್ಯವಿತ್ತೆಂಬುದನ್ನು ಈ ಕೃತಿಯು ಸ್ಪಷ್ಟಗೊಳಿಸುತ್ತದೆ. ಕತೆಯ ಓಟಕ್ಕೆ ಕುಂದಿಲ್ಲದಂತೆ ಸನಾತನವಾದ ಭಾರತೀಯ ಧರ್ಮವನ್ನು ಕಾಂತಾ ಸಮ್ಮಿತ ವಿಧಾನದಿಂದ ಬೋಧಿಸುವ ವೆಂಕಾಮಾತ್ಯನ ರಾಮಾಯಣವು ಪಂಡಿತರಂತೆ ಪಾಮರರೂ ಮನನ ಮಾಡಬೇಕಾದ ಗ್ರಂಥ. ಛಂದೋಬಂಧವು ಬಿಗಿಯಾಗಿದ್ದರೂ ಶೈಲಿಯು ಸುಲಲಿತವಾಗಿರುವುದರಿಂದ, ಕಾವ್ಯಪ್ರವಾಹವು ನಿರರ್ಗಳವಾಗಿ ಹರಿಯುವುದರಿಂದ, ಮತ್ತು ಪ್ರಾಸಾಲಂಕಾರಾದಿಗಳು ಆಹ್ಲಾದಕರವಿರುವುದರಿಂದ ಗಮಕಿಗಳಿಗೂ ಇದು ಅಭ್ಯಾಸ ಯೋಗ್ಯವಾದ ಕಾವ್ಯವೆಂದು ಹೇಳಬಹುದು. ಕಾರಣ—ಲಭ್ಯವಿದ್ದ ಮೂಲ ಪ್ರತಿಗಳನ್ನೆಲ್ಲ ತುಲನೆಮಾಡಿ ಪರಿಷ್ಕರಿಸಿ, ಈ ಕೃತಿಯನ್ನು ಅಚ್ಚುಹಾಕಿಸಿ ಕನ್ನಡಿಗರಿಗೆ ಒದಗಿಸಿಕೊಟ್ಟ ಸರಕಾರದ ಪ್ರಯತ್ನವನ್ನು ನಾವು ಮನಸಾರೆ ಶ್ಲಾಘಿಸುತ್ತೇವೆ.

ನವವಿಧಾನ—

ಮೂಲ ಲೇಖಕರು ದಿವಂಗತ ಶರಚ್ಚಂದ್ರ ಚಟರ್ಜಿ. ಅನುವಾದಕರು: ಮಹಾಬಲೇಶ್ವರ ಬಂಕಿಕೊಡ್ಲ. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಬೆಲೆ: ಹನ್ನೆರಡಾಣೆ.

ಬಂಗಾಳದ ಶರಚ್ಚಂದ್ರರು ಅಂತಾರಾಷ್ಟ್ರೀಯ ಸಾಹಿತ್ಯಕಾರರಲ್ಲಿ ಧ್ರುವನಕ್ಷತ್ರದಂತೆ ಮಿರುಗುತ್ತಿರಬಲ್ಲ ಭಾರತೀಯ ಸಾಹಿತಿಗಳಲ್ಲಿ ಒಬ್ಬರು. ಅವರ ಕೃತಿಗಳು ನೀಡುವ ಆನಂದವನ್ನು ಓದಿ ಸವಿದೇ ಅನುಭವಿಸಬೇಕು. ಆದರೆ ಸಾತ್ವಿಕವಾದ ಆನಂದವನ್ನು ನೀಡುವುದಷ್ಟೇ ಲೇಖಕನ ಕರ್ತವ್ಯವಾಗಲಾರದು—ಸಮಕಾಲೀನ ಸಮಾಜಕ್ಕೆ ಮಾರ್ಗದರ್ಶನ ಮಾಡುವುದೂ ಪ್ರಚಲಿತ ಸಮಸ್ಯೆಗಳ ವಿಶ್ಲೇಷಣೆಮಾಡಿ ಶ್ರೇಯಸ್ಸಿನ ಗೋಪುರವನ್ನು ಕಟ್ಟುವುದೂ ಆತನ ಹೊಣೆಗಾರಿಕೆಗಳಲ್ಲಿ ಬರುತ್ತದ. ಶರಚ್ಚಂದ್ರರು ತಮ್ಮ ಕೃತಿರತ್ನಗಳಲ್ಲಿ—ಅದು ಬೇಕಾದರೆ ಹದಿನೈದು ಪುಟದ ಸಣ್ಣ ಕತೆಯೇ ಆಗಲಿ—ಈ ಉದ್ದೇಶವನ್ನು ಯಶಸ್ವಿಯಾಗಿ ಕೈಗೂಡಿಸಿದ್ದಾರೆ. 'ನವ ವಿಧಾನ' ಎಂಬ ಅವರ ಈ ನೀಳ್ಗತೆಯಲ್ಲಿ ಹಿಂದೂ ಧರ್ಮದಲ್ಲಿ ದೋಷವಿದೆಯೆಂದು ತಿಳಿದು ಪಾಶ್ಚಾತ್ಯ ಸಭ್ಯತೆಯ ಮೋಹಕ್ಕೆ ಬಲಿಬಿದ್ದವರ ಚಿತ್ರವನ್ನು ಕಾಣುತ್ತೇವೆ. ಶೈಲೇಶ, ಅವನ ಭಗಿನಿ ವಿಭಾ ಸಮಾಜದ ಈ ವರ್ಗವನ್ನು ಪ್ರತಿನಿಧೀಕರಿಸುತ್ತಾರೆ. ಆದರೆ ಇವರು ರೂಢಿಯ ದಾಸರಿಗಿಂತಲೂ ಎಷ್ಟೋ ವಿಷಯಗಳಲ್ಲಿ ಕೀಳಾಗಿದ್ದರೆಂಬುದು ಕಣ್ಣಿಂದ ಮರೆಯಾಗುವುದಿಲ್ಲ. ದೋಷವಿದೆಯೆಂದು ದೂರುವುದಕ್ಕಿಂತಲೂ ಅವುಗಳನ್ನು ಹೋಗಲಾಡಿಸಲು ಹೆಣಗಬೇಕು—ಹೀಗೆ ಪ್ರಯತ್ನಿಸುವ ಹಿಂದೂ ರಮಣಿಯೇ ಶೈಲೇಶನ ಮೊದಲನೆಯ ಹೆಂಡತಿ ಉಷೆ. ನಮ್ಮ ಶಾಸ್ತ್ರ ಗ್ರಂಥಗಳು ಪ್ರತಿಪಾದಿಸುವ ಗೃಹಿಣಿಯ ಸಕಲ ಸಲ್ಲಕ್ಷಣಗಳನ್ನೂ ನಾವು ಇವಳಲ್ಲಿ ಕಾಣುತ್ತೇವೆ. ಶರಚ್ಚಂದ್ರರ ಕೈಯಲ್ಲಿ ಕೌಟುಂಬಿಕ ಸಮಸ್ಯೆಗಳ ಚಿತ್ರಣವೂ ಪಾತ್ರಗಳ ಬೆಳವಣಿಗೆಯೂ ಸಹಜವಾಗಿ, ಸವ್ಯರಾಗಿ ನೆರವೇರಿವೆ. ಅನುವಾದವು ಸರಳವೂ ಸುಂದರವೂ ಆಗಿದ್ದು ಕನ್ನಡಿಗರನ್ನು ಆಕರ್ಷಿಸಿಕೊಳ್ಳುತ್ತದೆ.

ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ—

ಬರೆದವರು: ಕೆ ಕಾಂತ ರೈ. ಪ್ರತಿಗಳು ದೊರೆಯುವ ಸ್ಥಳ: ಜಯ ಮುದ್ರಣ ಪ್ರಕಟನಾಲಯ, ಮೂಡಬಿದ್ರಿ, ದಕ್ಷಿಣ ಕನ್ನಡ. ಬೆಲೆ: ರೂ. ೧—೧೦—೦

ವಾಙ್ಮಯ ಕ್ಷೇತ್ರದಲ್ಲಿ ಕೈ ಪಳಗಬೇಕಾದರೆ ಸಾಹಿತ್ಯ ಕೃತಿಗಳ ಅಭ್ಯಾಸದಷ್ಟೇ ವ್ಯಾಕರಣ ಜ್ಞಾನವೂ ಅಗತ್ಯವಾಗಿದೆ. ತಪ್ಪು ಅಥವಾ ಅಲಿದ್ಧ ಪ್ರಯೋಗಗಳಿಂದ ಕೂಡಿದ ಬರೆಹಗಳು ಎಷ್ಟು ಸಾರವತ್ತಾದ ವಿಷಯವನ್ನು ವರ್ಣಿಸುತ್ತಿದ್ದರೂ ಸಹೃದಯರಿಗೆ ರುಚಿಸಲಾರವೆಂದೇ ಹೇಳಬಹುದು. ಭಾಷೆಗೊಂದು ಚಂದವನ್ನು ಕೊಡುವ ವ್ಯಾಕರಣ ಶಾಸ್ತ್ರವನ್ನು ತಿಳಿಯಲು ಅಪೇಕ್ಷಿಸುವವರು ಮಾತ್ರ ವಿರಳವಾಗಿಯೇ ಕಂಡು ಬರುತ್ತಾರೆ. ಹಾಗೆ ಕಲಿಯಬಯಸುವವರಿಗಾದರೂ ಲಕ್ಷಣ ಗ್ರಂಥಗಳೆಂದರೆ ಉಕ್ಕಿನ ಕಡಲೆಯೇ ಆಗುತ್ತದೆ. ಅವುಗಳನ್ನೋದಿ, ಅರ್ಥವಿಸಿ, ಅರಗಿಸಿಕೊಳ್ಳುವುದು ಕಷ್ಟವೆನಿಸುತ್ತದೆ. ಮೇಲಾಗಿ ವ್ಯಾಕರಣವು ನೀರಸವಾದ ವಿಷಯವೆಂದು ಮೂದಲಿಕೆಗೂ ಗುರಿಯಾಗಿರುತ್ತದೆ. ಇಂಥ ಪರಿಸ್ಥಿತಿಯಲ್ಲಿ ಪ್ರೌಢಶಾಲೆಗಳಲ್ಲಿ ಒತ್ತಾಯಕ್ಕೆ ಕಟ್ಟುಬಿದ್ದು ವ್ಯಾಕರಣ ಶಾಸ್ತ್ರವನ್ನು ಕಲಿಯಬೇಕಾಗಿ ಬಂದ ವಿದ್ಯಾರ್ಥಿಗಳೂ ಅರೆಮನಸ್ಸಿನಿಂದಲೇ ವ್ಯಾಕರಣವನ್ನು ನೋಡುತ್ತಾರೆ. ಅವರನ್ನು ಆಕರ್ಷಿಸಿಕೊಳ್ಳುವಂತೆ ಚಮತ್ಕಾರವಾಗಿಯೂ ಮುಖ್ಯೋದ್ದೇಶಕ್ಕೆ ಭಂಗಬರದಂತೆ ಸುಲಭವಾಗಿಯೂ ಸರಳವಾಗಿಯೂ ಬರೆಯಲಾದ ಈ ಗ್ರಂಥಕ್ಕೆ ನಾವು ಸ್ವಾಗತ ಕೋರುತ್ತೇವೆ. ಇದರಲ್ಲಿ ಅಕ್ಷರ ಪ್ರಕರಣ, ಶಬ್ದ ಪ್ರಕರಣ, ಸಂಧಿ ಪ್ರಕರಣ ಮತ್ತು ಸಮಾಸ ಪ್ರಕರಣಗಳನ್ನೊಳಗೊಂಡ ಪ್ರಥಮ ಭಾಗವು ಹೈಸ್ಕೂಲಿನ ನಾಲ್ಕನೇ ಫೋರ್ಮಿಗೂ ಪದಸ್ವರೂಪ ಪ್ರಕರಣ, ನಾಮಪದ ಪ್ರಕರಣ, ಕ್ರಿಯಾಪದ ಪ್ರಕರಣ, ಕೃದಂತ ಮತ್ತು ತದ್ಧಿತಾಂತ ಪ್ರಕರಣ ಮತ್ತು ಅವ್ಯಯ ಪ್ರಕರಣಗಳು ಐದನೇ ಫೋರ್ಮಿಗೂ ವಾಕ್ಯ ಪದ್ಧತಿ ಪ್ರಕರಣ, ಅಸಾಧಾರಣ ಲಕ್ಷಣ ಪ್ರಕರಣ, ಛಂದೋ ಪ್ರಕರಣ, ಅಲಂಕಾರ ಪ್ರಕರಣ ಮತ್ತು ಕಾವ್ಯಧರ್ಮ ಪ್ರಕರಣಗಳು ಆರನೇ ಫೋರ್ಮಿಗೂ ಕಲಿಸಲು ಯೋಗ್ಯವಿರುವಂತೆ ಬರೆಯಲ್ಪಟ್ಟಿರುತ್ತವೆ. ಲೇಖಕರು ಕನ್ನಡ ವ್ಯಾಕರಣ ಹಾಗು ಲಕ್ಷಣ ಗ್ರಂಥಗಳನ್ನು ಅಭ್ಯಸಿಸಿ ಈ ಪುಸ್ತಕವನ್ನು ಬರೆದಿದ್ದಾರೆ. ಹೊಸಗನ್ನಡದ ಒಲವನ್ನು ಸಹಾನುಭೂತಿಯಿಂದ ಕಂಡಿದ್ದಾರೆ. ಸರಕಾರದ ಪಾಠಪಟ್ಟಿಯ ಆವಶ್ಯಕತೆಯನ್ನೂ ಪೂರೈಸಿದ್ದಾರೆ. ಆದುದರಿಂದ ಅವರ ಈ ಕೃತಿಗೆ ಶಾಲಾ ವರ್ತುಲಗಳಿಂದ ಪ್ರೋತ್ಸಾಹ ದೊರಕುವ ಭರವಸೆಯನ್ನು ಹೊಂದಬಹುದು.

ಲಘು ಪರಿಚಯ

❀ "ರಾಜೇಶ" ಎಂಬ ಕಾವ್ಯ ನಾಮದಲ್ಲಿ ಶ್ರೀ ಜಿ. ಸೀತಾರಾಮರಾಯರು ಬರೆದ "ದಾನಶೂರ ಕರ್ಣ" ಎಂಬ ಯಕ್ಷಗಾನ ಪ್ರಬಂಧವನ್ನು ಕಾರ್ಕಳದ ಪುಸ್ತಕ ವ್ಯಾಪಾರಿಗಳಾದ ಆರ್. ವಿಟ್ಠಪ್ಪ ಶೆಣೈ ಎಂಡ್ ಸನ್ಸ್ ಅವರು ಆರಾಣೆ ಬೆಲೆ ಇಟ್ಟು ಪ್ರಕಟಿಸಿರುವರು. ಕರ್ಣನ ಜನನದಿಂದ ಹಿಡಿದು ಮರಣದವರೆಗಿನ ಕಥಾನಕವನ್ನು ಒಳಗೊಂಡ ಈ ಪ್ರಸಂಗವು ಹಳ್ಳಿಯ ರಸಿಕರಿಗೆ ರುಚಿಸೀತೆಂದು ಹೇಳಬಹುದು. ಲಾಕ್ಷಣಿಕವಾಗಿ ನೋಡಿದರೆ ಇಲ್ಲಿಯ ಪದ್ಯಗಳ ಪದಸಂಯೋಜನೆಯಲ್ಲಿ ಅನೇಕ ಸ್ಖಾಲಿತ್ಯಗಳು ಕಂಡು ಬರುತ್ತವೆ; ಅಲ್ಲದೆ ಮುದ್ರಣ ದೋಷವೂ ಹೇರಳವಾಗಿದೆ. ಮುಂದಿನ ಆವೃತ್ತಿಯಲ್ಲಿ ಇವನ್ನು ಪರಿಷ್ಕರಿಸುವುದು ಅಪೇಕ್ಷಣೀಯ.

❀ ಹೊಸದಿಲ್ಲಿಯ ರಾಷ್ಟ್ರಪತಿ ಭವನದಲ್ಲಿರುವ ಯೋಜನಾ ಸಮಿತಿಯ ಪರವಾಗಿ ಮೊದಲನೆಯ ಪಂಚವಾರ್ಷಿಕ ಯೋಜನೆಯ ಸ್ಥೂಲ ಪರಿಚಯವನ್ನು ಒದಗಿಸಿ ಕೊಡುವ "ಪ್ರಶ್ನೆಗಳು ಮತ್ತು ಉತ್ತರಗಳು" ಎಂಬ ಪುಸ್ತಕವು ನಾಲ್ಕಾಣೆ ಬೆಲೆಗೆ ಪ್ರಕಟಗೊಂಡಿರುವುದು. ಯೋಜನೆಯ ಹಿನ್ನೆಲೆಯನ್ನೊದಗಿಸುವ ಸಾಮಾನ್ಯ ವಿಚಾರಗಳನ್ನೂ ಬಂಡವಾಳ ನಿಯೋಜನೆಯ ಉಪಾಯಗಳನ್ನೂ ಅಭಿವೃದ್ಧಿ ಕೆಲಸಗಳ ವಿವರಣೆಯನ್ನೂ ನೀಡುವ ಪುಸ್ತಕ ಓದುವುದರಿಂದ ಕನ್ನಡಬಲ್ಲ ಎಲ್ಲರಲ್ಲೂ ಪಂಚವಾರ್ಷಿಕ ಯೋಜನೆಯ ಕುರಿತು ಉತ್ಸಾಹ ಉಂಟಾಗಬಲ್ಲುದು; ಸರಕಾರದೊಡನೆ ಸಹಕರಿಸಬೇಕೆಂಬ ಮನೋಭಾವವನ್ನು ರೂಪಿಸುವಲ್ಲೂ ಇಂಥದ ಪ್ರಕಟಣೆ ನೆರವಾದೀತು.

❀ ಹುಬ್ಬಳ್ಳಿಯ ಕನ್ನಡ ದೈನಿಕವಾದ "ನವಯುಗ"ದ ಹನ್ನೆರಡಾಣೆ ಬೆಲೆಯ ಆಗಸ್ಟ ವಾರ್ಷಿಕ ಸಂಚಿಕೆಯಲ್ಲಿ ವಾಣಿಜ್ಯ ವ್ಯವಹಾರ, ಸಾಹಿತ್ಯ, ಕಲೆ, ರಾಜಕೀಯ, ಶಿಕ್ಷಣ, ರಾಷ್ಟ್ರೀಯ ಸಮಸ್ಯೆ ಮತ್ತು ಪುನಾರಚನೆ ಮುಂತಾದ

(೧೨ನೇ ಪುಟ ನೋಡಿರಿ)

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ. 1931] [ಪ್ರಧಾನ ಕಛೇರಿ: ಮಂಗಳೂರು 3.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ .... ರೂ. 11,11,000

ಜುಮ್ಲಾ ವಹಿವಾಟು .... ರೂ. 63,06,000

ಕಾಯಂ ಠೇವಣಾತಿ-1 ತಿಂಗಳಿಂದ 21 ತಿಂಗಳ ವಾಯಿದೆ ವರೆಗೆ ಸ್ವೀಕರಿಸಲ್ಪಡುವುದು

24 ತಿಂಗಳಿಗೆ=3¾% ಬಡ್ಡಿ.

ರೂಪಾಯಿ ಹತ್ತು ಸಾವಿರ ವ, ಮೇಲಿನ ಠೇವಣಾತಿಗೆ 4% ಬಡ್ಡಿ ಕೊಡಲಾಗುವುದು.

ವಿಜಯ ಕೇಶ್ ಸರ್ಟಿಫಿಕೇಟು—ಮೂರು ವರುಷದ ಅವಧಿ = 4¼% ಬಡ್ಡಿ.

ಸಾಲ ಸವಲತ್ತುಗಳಿಗೆ ಬೇಕಾದ ಅನುಕೂಲತೆಗಳನ್ನು ವಿಳಂಬವಿಲ್ಲದೆ ಒದಗಿಸಲಾಗುವುದು.

ಹೆಚ್ಚಿನ ಮಾಹಿತಿಗೆ ನಿಮ್ಮ ಸಮೀಪದ ನಮ್ಮ ಏಜಂಟರೊಡನೆ ವಿಚಾರಿಸಿರಿ. ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ, ಬಿ ಎ., ಬಿ ಎಲ್., ವಕೀಲ್,
ಬೇಂಕಿನ ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

VIJAYA BANK LTD.

ಮುಖ್ಯ ಪ್ರಕಟಣೆ

"ಆನಂದ ಸುಧ" ನಮ್ಮ ಆನಂದ ಸುಧ ಸಮಸ್ತ ಜನಗಳಿಗೆ ಬಲವನ್ನು ತಿಂಡ ಪುಷ್ಟಿಯನ್ನು ಕಲಗಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿ ಹೋಗುವ ೮ ಔ. ಸೀಸೆ ೧ಕ್ಕೆ ರೂ 3—0—0.

"ಸ್ತ್ರೀ ಸುಧ" ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಗಿಸುವುದು. ಒಂದು ತಿಂಗಳಿಗೆ ಸರಿಹೋಗುವ ೧ ತೊಲದ ಔಷಧಿ ರೂ. 4—0—0.

"ಬಾಲ ಸುಧ" ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ನಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿ ಹೋಗುವ ೨೪೦ ಮಾತ್ರೆಗಳ ಸೀಸೆ ೧ಕ್ಕೆ ರೂ 1—0—0.

ಹೆಡ್ಡಾಫೀಸ್:

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್, ರಾಜಮಂಡ್ರಿ.

ಬೆಂಗಳೂರು ಏಜನ್ಸಿ:

ಸುದರ್ಶನ ಆಯುರುವೇದ ವೈದ್ಯಶಾಲ, ನಗರ್ತರ ಪೇಟೆ, ಬೆಂಗಳೂರು-2.



ಸರಕುಗಳ ಯೋಗ್ಯತಾ ಪ್ರಮಾಣ ನಿರ್ಣಯ

(೨ನೇ ಪುಟದಿಂದ)

ಮಾನವನಿಗೂ ಒದಗುವ ಅಪಾರ ಹಾನಿಯನ್ನು ತಪ್ಪಿಸಲು ನಾವೀಗ ಡಿ. ಡಿ. ಟಿ. ಮತ್ತಿತರ ಅನೇಕ ರಸಾಯನ ಪದಾರ್ಥಗಳನ್ನೂ, ಔಷಧಗಳನ್ನೂ ಉಪಯೋಗಿಸುತ್ತೇವಷ್ಟೇ! ಇವುಗಳ ತಯಾರಿಯಲ್ಲಿ ದ್ರವ್ಯಗಳ ಮಿಶ್ರಣವು ಜಾಗರೂಕತೆಯಿಂದ ನಡೆಯುವುದು ಅಗತ್ಯ. ಇದನ್ನು ಹೇಗೆ ನಡೆಸಬೇಕೆಂಬ ಭಾರತೀಯ ಮಾನಕ ಸಂಸ್ಥೆಯು ಸಂಬಂಧಿಸಿದ ಕೈಗಾರಿಕೆಗಳವರಿಗೆ ಹೇಳಿದುವುದರಿಂದ ನಕಲಿ ವಸ್ತುಗಳ ಹಾವಳಿಯು ಕೆಲಮಟ್ಟಿಗೆ ಕಡಿಮೆಯಾಗಿದೆ.

ಸಮಿತಿಗಳ ಕಾರ್ಯ

ಹೀಗೆ ಪ್ರಮಾಣವನ್ನು ಗೊತ್ತುಪಡಿಸಿ, ನಕಲಿ ಸರಕುಗಳ ಹಾವಳಿಯನ್ನು ನಿಯಂತ್ರಿಸುವುದು ಹೇಳಿದಷ್ಟು ಸುಲಭದ ಕೆಲಸವಲ್ಲ—ಯೋಗ್ಯತಾ ಪ್ರಮಾಣವನ್ನು ನಿರ್ಣಯಿಸುವಾಗ ಆ ದೇಶದಲ್ಲಿ ಲಭ್ಯವಿರುವ ಕಚ್ಚಾ ಸರಕನ್ನೂ ತಯಾರಿಕೆಯಲ್ಲಿ ಅನುಸರಿಸುವ ವಿಧಾನಗಳನ್ನೂ ಬಳಸುವ ಯಂತ್ರೋಪಕರಣಗಳನ್ನೂ ಜನರ ಅಭಿರುಚಿಯನ್ನೂ ಜಾಗತಿಕ ಪೇಟೆಯ ಒಲವನ್ನೂ ದೃಷ್ಟಿಯಲ್ಲಿಟ್ಟು ಕೊಳ್ಳಬೇಕಾಗುವುದು. ತಜ್ಞರು ಸಿದ್ಧ ವಸ್ತುಗಳ ಪ್ರತಿಯೊಂದೂ ಎಳೆಯನ್ನು ಸೂಕ್ಷ್ಮವಾಗಿ ಹಿಂಜಿ ಹಿಂಜಿ ಪರಿಶೀಲಿಸಿ ತಮ್ಮ ಅಂತಿಮ ಅಭಿಪ್ರಾಯವನ್ನು ರೂಪಿಸಬೇಕಾಗುವುದು. ಇದಕ್ಕಾಗಿ ಭಾರತವು ಈಗ ೪೨೦ ಸಮಿತಿಗಳನ್ನು ನೇಮಿಸಿರುವುದು ಇದರ ಸದಸ್ಯತನವು ನಾಲ್ಕು ಸಾವಿರಷ್ಟೈನೂರನ್ನೂ ಮೀರುತ್ತದೆ. ಈ ಸಮಿತಿಗಳು ಇಂಜಿನಿಯರಿಂಗ ವಿಭಾಗ, ಕಟ್ಟಡ ನಿರ್ಮಾಣ ವಿಭಾಗ, ಬಟ್ಟೆಬರೆಯ ವಿಭಾಗ ಮತ್ತು ರಸಾಯನ ವಿಭಾಗಗಳೆಂಬ ನಾಲ್ಕು ಅಂಗಗಳ ಕೆಳಗೆ ಕೆಲಸ ಮಾಡುತ್ತವೆ. ಸದ್ಯದಲ್ಲೇ ಕೃಷಿ ಮತ್ತು ಆಹಾರ ಕ್ಷೇತ್ರದ ಉತ್ಪಾದನೆಗಳ ಬಗ್ಗೆಯೂ ಒಂದು ವಿಭಾಗವನ್ನು ತೆರೆಯಲಾಗುವುದು. ಈ ಸಮಿತಿಗಳಲ್ಲಿ ಉತ್ಪಾದಕರೂ ವ್ಯಾಪಾರಿಗಳೂ ಗ್ರಾಹಕರೂ, ತಾಂತ್ರಿಕ ವಿಷಯಗಳಲ್ಲಿ ತಜ್ಞರೂ ಇದ್ದು, ಸಮಷ್ಟಿಯ ಹಿತದೃಷ್ಟಿಯಿಂದ ವಸ್ತುಗಳ ಯೋಗ್ಯತಾ ಪ್ರಮಾಣವು ನಿರ್ಣಯಿಸಲ್ಪಡುತ್ತದೆ. ಸಂಸ್ಥೆಯ ಮಾರ್ಗದರ್ಶನವನ್ನು ಸ್ವೀಕರಿಸಿ, ನಡೆದ ಕೈಗಾರಿಕೆಗಳು ತಮ್ಮ ಸರಕುಗಳ ಯೋಗ್ಯತೆಯ ಬಗ್ಗೆ ಸಂಸ್ಥೆಯ ಸರ್ಟಿಫಿಕೇಟನ್ನು ೧೯೫೨ನೇ ಇಸವಿಯಲ್ಲಿ ಮಾಡಿಕೊಂಡು ಕಾನೂನಿನ ದೆಸೆಯಿಂದ ಪಡೆಯಬಲ್ಲುವು. ಇದರಿಂದ ಗ್ರಾಹಕನು ತಾನು ಯೋಗ್ಯತೆಯಲ್ಲಿ ಕೇಳಿದ ಸರಕನ್ನು ಕೊಂಡುಕೊಳ್ಳುತ್ತಿಲ್ಲವೆಂದು ತೃಪ್ತಿಪಡುವುದಕ್ಕೂ ಉತ್ಪಾದಕ ಹಾಗು ವ್ಯಾಪಾರಿಗೆ ಅನುಚಿತವಾದ ಸ್ಪರ್ಧೆಯ ಜಾಲದಿಂದ ಹೊರಗುಳಿಯುವುದಕ್ಕೂ ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಕೇಂದ್ರ ಹಾಗು ರಾಜ್ಯ ಸರಕಾರಗಳು ಭಾರತದಲ್ಲಿ ಉಪಲಬ್ಧವಿರುವ ಪ್ರಮಾಣೀಕೃತ ಸಿದ್ಧ ವಸ್ತುಗಳನ್ನೇ ತಮ್ಮ ದೈನಂದಿನ ಆವಶ್ಯಕತೆಗೆ ಕೊಂಡುಕೊಂಡು ಬಳಸುತ್ತವೆ.

ಸ್ವದೇಶ ಪ್ರೇಮದ ಮಹತ್ವ

ಹಾಗೆಂದು ಭಾರತೀಯರಲ್ಲಿ ಹೆಚ್ಚಿನವರು ಸ್ವದೇಶದಲ್ಲಿಯೇ ಸಿದ್ಧವಾದ ಸರಕುಗಳ ಕುರಿತು ಅಧಿಕ ಆಸಕ್ತಿಯನ್ನು ವಹಿಸುತ್ತಿಲ್ಲ—ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸಿದ ಕಾಲದಲ್ಲಿ ಸ್ವದೇಶೀ ವ್ರತವನ್ನು ಕೈಗೊಳ್ಳಿರೆಂದು ಗಾಂಧೀಜಿ ಉಪದೇಶಿಸಿದಾಗ ಈ ತತ್ವದಲ್ಲಿ ನಿಷ್ಠೆಯನ್ನು ಪ್ರಕಟಿಸಿದವರೂ ಈಗ ತಮ್ಮ ಪ್ರತಿಜ್ಞೆಯನ್ನು ಪಾಲಿಸುತಿದ್ದಾರೆನ್ನುವುದು ಸಂಶಯ. ಸ್ವಾತಂತ್ರ್ಯ ಪ್ರಾಪ್ತಿಯ ಬಳಿಕ ಪರಿಸ್ಥಿತಿಯು ತೀರ ಬದಗಿದ್ದು. ಸ್ವದೇಶೀ ವಸ್ತುಗಳೆಂದರೆ ಯೋಗ್ಯತೆ ಏನೇನೂ ಇಲ್ಲದವುಗಳೆಂದು ತಿಳಿಯಲಾಗುತ್ತದೆ. ನಮ್ಮ ಒಳ್ಳೆಯದಿದ್ದರಲಿ, ಕೆಟ್ಟದಕ್ಕೇ ಆಗಲಿ—ಪರದೇಶಗಳಿಂದ ಬಂದ ಸರಕುಗಳು ಉತ್ತಮವಾದವುಗಳೆಂಬ ಭ್ರಾಂತಿಯು ಭಾರತೀಯರಲ್ಲಿ ಕಂಡು ಬರುತ್ತದೆ. ನಮ್ಮಲ್ಲಿಯ ಕೆಲವು ಉತ್ಪಾದಕರು ತಯಾರಿಕೆಯಲ್ಲಿ ದಕ್ಷತೆಯನ್ನು ವಹಿಸದೆ ಗ್ರಾಹಕರಿಗೆ ಮೋಸ ಮಾಡುವ ಉದ್ದೇಶದಿಂದ ಸರಕುಗಳ ಯೋಗ್ಯತೆಯ ಮಟ್ಟವನ್ನು ಕೆಳಗಿಳಿಸಿದುದರಿಂದ ಇಂಥ ಅನಪೇಕ್ಷಿತ ಪರಿಣಾಮವಾಯಿತೆಂದು ಹೇಳಬಹುದು. ಇದರಿಂದ ಪ್ರಾಮಾಣಿಕ ರೀತಿಯಲ್ಲಿ ವ್ಯವಹಾರ ನಿರ್ವಹಿಸಿಕೊಂಡು ಹೋಗುವವರಿಗೂ ನಷ್ಟವುಂಟಾಯಿತು. ಇದನ್ನು ತ [illegible] ಪ್ರಮಾಣಿತ [illegible] ಭಾರತೀಯ [illegible] ಸರಕುಗಳನ್ನು [illegible] ಪ್ರಪಂಚದ [illegible] ಕೇಂದ್ರ ಹಾಗು ರಾಜ್ಯ ಸರಕಾರಗಳೂ [illegible] ಸಂಸ್ಥೆಗಳೂ [illegible] ಪ್ರಗತಿಯು [illegible] ಈ ಸಂಸ್ಥೆ [illegible] ಅನೇಕ್ಷಣೀಯವಲ್ಲ. ಏಕೆಂದರೆ, ವಸ್ತುಗಳ ಯೋಗ್ಯತಾ ಪ್ರಮಾಣವನ್ನು ನಿಷ್ಕರ್ಷಿಸುವುದೆಂದರೆ [illegible] ಲಕ್ಷಣ.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮುರಾರ ಗಲ್ಲಿ, ಹುಬ್ಬಳ್ಳಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ಫೈನ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಹಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkapet, UDIPI, S. Kanara.

ಫೋನು ನಂಬ 66

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. D.s (N. J.) (ವಿ.ಪಿ.ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ರಘುಕಂಪೆನಿ, ಮಂಗಳೂರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ ಪಾತ್ರೆ ಭಂಡಾರ, ರಥಬೀದಿ ಉಡುಪಿ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.

Moolky, S. K.

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ,

ಮಗ್ಗಿ ಪುಸ್ತಕಗಳು

ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

100 ಯ 500ಕ್ಕೆ ಅತೀ ರಿಯಾಯತಿ ಇದೆ.

ಕೋರ್ಟು ಮತ್ತು ಸೊಸೈಟೀ ಫೋರ್ಮುಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ



(೩ನೇ ಪುಟದಿಂದ)

ಆತಂಕವಿಲ್ಲದಿದ್ದರೂ ಮದುವೆ ಮಾತ್ರ ನಡೆಯಲಾರದು. ಆದರೆ ಎಷ್ಟೋ ಪ್ರಸಂಗಗಳಲ್ಲಿ ದುಡ್ಡಿನಾಶೆಗೆ ಬಲಿಬಿದ್ದು, ಬೇರೆ ಜಾತಿಯ ಹುಡುಗನೊಡನೆ ಮದುವೆಯಾಗಲು ಹೆತ್ತವರು ಒತ್ತಾಯಿಸುತ್ತಾರೆ. ಇದನ್ನು ಯಾರೂ ಸುಲಭದಲ್ಲಿ ಒಪ್ಪುವುದಿಲ್ಲ. ಬಲಾತ್ಕಾರದಿಂದ ನಡೆದ ಈ ಮದುವೆಗಳು ವಧುವಿಗೆ ಏನೇನೂ ಸಮಾಧಾನ ಕೊಡುವುದಿಲ್ಲ. "ನಾನು ಹೊರ ಜಾತಿಯವನನ್ನು ಮದುವೆಯಾದೆ; ಇದರಿಂದಹೆತ್ತವರು ಹಣದರಾಶಿಯನ್ನು ಹೊತ್ತು ತಂದರು. ಇಂದಿನ ಜಗದ ನೀತಿಯೇ ಅಷ್ಟು: ಹಣದ ಮೇಲೆಯೇ ಅದಕ್ಕೆ ಕಣ್ಣು" ಎಂದವಳು ಸಿಟ್ಟಿನಿಂದ ಕಿಡಿಯುಗುಳುತ್ತಾಳೆ.

ವಸಾಹತು ಸಾಮ್ರಾಜ್ಯವಾದದ ವಿರುದ್ಧ ಪ್ರಚಂಡ ಪ್ರತಿಭಟನೆಯೊಡ್ಡುವ ಗೋವೆಯ ಜನರು ಮೊದಲಿಂದಲೂ ಪರಕೀಯ ಪ್ರಭುತ್ವವನ್ನು ಧಿಕ್ಕರಿಸುತ್ತಿದ್ದರು. ೧೭೪೦ನೇ ಇಸವಿಯಷ್ಟು ಹಿಂದಿನಿಂದ ೧೯೧೨ನೇ ಇಸವಿಯಷ್ಟು ಈಚೆಗಿನ ಕಾಲದಲ್ಲಿ ಪ್ರಭುತ್ವದ ವಿರುದ್ಧ ಹಲವು ದಂಗೆ ನಡೆದವು. ಪೋರ್ಚುಗೀಜರ ಆರ್ಥಿಕ ಶೋಷಣೆ ಹಾಗು ಪಾಳೆಯಗಾರಿಕೆಯನ್ನು ಜನರು ಸ್ವಲ್ಪವೂ ಮೆಚ್ಚುತ್ತಿರಲಿಲ್ಲ. ರಾಣೇಸದ ದಂಗೆಯು ಗೋವಾನೀಯರ ಸುಪ್ತ ಚೇತನವನ್ನು ಜಾಗೃತಗೊಳಿಸಿ, ರಾಷ್ಟ್ರೀಯ ಭಾವನೆಗೆ ನೀರನ್ನೆರೆದು ಪೋಷಿಸಿತು: ದೀಪುರಾಣೆ ಎಂಬ ನಾಯಕನ ಶೌರ್ಯ ಸಾಹಸಗಳನ್ನು ವರ್ಣಿಸುವ ಗೀತೆಯು ಯುದ್ಧದ ಕಹಳೆಯನ್ನು ಮೊಳಗಿಸುವಂತೆ, ಜಯಭೇರಿಯನ್ನು ಬಾರಿಸುವಂತೆ ತೋರಿ ಬರುತ್ತದೆ—ಸಾವಂತವಾಡಿಯ ರಾಜರಿಂದ ಕೈ ಬಿಡಲ್ಪಟ್ಟ ಸತ್ತರ ತಾಲೂಕಿನ ೬೦ ಹಳ್ಳಿಗಳನ್ನು ವಶಪಡಿಸಿಕೊಂಡ ಈ ವೀರನ ದೆಸೆಯಿಂದ "ಬಿಳಿ ಸಿಪಾಯಿಗಳು ಜೀವದ ಆಸೆಬಿಟ್ಟು ಓಡಿದರು; ಕಷ್ಟದಿಂದ ನಿಟ್ಟುಸಿರನ್ನು ಬಿಡುತ್ತಾ ಓಡಿದರು; ಓಡುತ್ತಿರುವಾಗ, ದೋಣಿಗೆ ನೆಗೆಯುತ್ತಿರುವಾಗ, ಬಲುಕಷ್ಟದಿಂದ ನಿಟ್ಟುಸಿರು ಬಿಟ್ಟರು." ಐವತ್ತು ವರ್ಷಗಳ ಹಿಂದೆ ಗಲ್ ಹಾರ್ದೋ ಎಂಬ ಗವರ್ನರನ ನೇತೃತ್ವದಲ್ಲಿ ನಡೆದೊಂದು ಚುನಾವಣೆಯನ್ನು ಕುರಿತಾದ ಗೀತೆಯು "ಜನರನ್ನು ಸಿಪಾಯಿಗಳು ಕೋವಿಯ ಮೊನೆಯಿಂದ ಚುಚ್ಚಿದರು; ಅವರ ಮೇಲೆ ಗುಂಡಿನ ಮಳೆಗರೆದರು. ಚರ್ಚಿನ ಅಂಗಳದಲ್ಲಿಯೇ ರಕ್ತವಾಹಿನಿ ಪ್ರವಹಿಸಿತು. ತಿರುಗೆಯನ್ನು ಹೆಚ್ಚಿಸಿ ಜನರನ್ನು ಗೋಳಿಗೀಡುಮಾಡಿದ ಆ ಗವರ್ನರ ಶುದ್ಧ ಕೋಣ; ಜನದ ಶಾಪ ಅವನ ತಲೆಯ ಮೇಲಿಂದ ತಪ್ಪದು' ಎನ್ನುತ್ತದೆ.

೧೯೧೦ರಲ್ಲಿ ಗೋವೆಯ ಜನಗಳಿಗೆ "ಪ್ರಜಾರಾಜ್ಯ" ದೊರೆತಾಗ— ಎಲ್ಲರೂ ಅದನ್ನು ಸಂತೋಷದಿಂದ ಸ್ವಾಗತಿಸಿ, ಹೊಗಳಿ ಹಾಡಿದರು. "ಹೋರಾಟದ ಮೇಲೆ ಹೋರಾಟವನ್ನು ಬಿಟ್ಟು ಪೋರ್ಚುಗೀಜರು ಪ್ರಜಾರಾಜ್ಯ ನೀಡಿದ್ದಾರೆ; ನಮ್ಮೆದೆ ಹರ್ಷದಿಂದ ಉಕ್ಕೇರಿ ನಲಿಯುತ್ತಿದೆ" ಎಂದವರು ಕುಣಿದರು. ಆದರೆ ಈ ಸಂತಸ ಬಹುಕಾಲ ಬಾಳಲಿಲ್ಲ. ಪೋರ್ಚುಗಾಲದಲ್ಲಿ ಸಾಲಾಜಾರರ ಸರ್ವಾಧಿಕಾರ ನಡೆಯತೊಡಗಿದ ಕಳೆದ ೩೦ ವರ್ಷಗಳಲ್ಲಿ ಗೋವೆಯಲ್ಲಿ "ಪ್ರಜಾರಾಜ್ಯ" ಉಳಿಯಲಿಲ್ಲ! ಎಂತಲೇ ಪರಕೀಯರ ನೊಗವನ್ನು ಕೊನೆಯದಾಗಿ ಎಸೆದು ಬಿಟ್ಟು ಸ್ವತಂತ್ರ ಹೊಂದಲು ಗೋವೆಯ ನಾಗರಿಕರು ಎದೆ ಸೆಟೆದು ನಿಂತಿದ್ದಾರೆ: ಗಾಂಧೀಜಿ ಪ್ರತಿಪಾದಿಸಿದ ಅಹಿಂಸಾತ್ಮಕ ಸತ್ಯಾಗ್ರಹದ ಪವಿತ್ರ ಮಾರ್ಗವನ್ನು ಅವರು ಅವಲಂಬಿಸುತ್ತಿದ್ದಾರೆ. ಅವರ ಜಾನಪದ ಗೀತಗಳ ಸರಮಾಲೆಯಲ್ಲಿ ಇಂದು ಅವರು ಹಾಡುವ ಪದಗಳು ಹೊಸ ಅಧ್ಯಾಯವನ್ನೆ ತೆರೆಯಬಹುದು; ಸ್ವರ್ಣಾಕ್ಷರಗಳಿಂದ ಬರೆಯಬೇಕಾದ ಇತಿಹಾಸವನ್ನು ಅವು ರಚಿಸಬಹುದು.

—ಸಂಕಲಿತ.

ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂತಸದ ಸುದ್ದಿ

ಈ ವರೆಗೆ ಹೈಸ್ಕೂಲು ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿದ್ದ ಕನ್ನಡ ವ್ಯಾಕರಣ ಪುಸ್ತಕದ ಕೊರತೆಯೊಂದು ನೀಗಲ್ಪಟ್ಟಿತು.

ಸರಕಾರದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಶಾಂತರೈ, ವಿದ್ವಾನ್ ಇವರು ಬರೆದಿರುವ

ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ

ಎಂಬ

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಸಲುವಾಗಿ ಬರೆದ ವ್ಯಾಕರಣ ಪುಸ್ತಕವು ಪ್ರಕಟವಾಗಿರುವುದು.

ಪುಟಗಳು ೨೫೦ ಬೆಲೆ: ೧—೧೦—೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಜಯ ಮುದ್ರಣಾಲಯ, ಮೂಡುಬಿದಿರೆ, (ದ. ಕ.)

ಉಡುಪಿ ನವಭಾರತ ಪುಸ್ತಕ ಭಂಡಾರದಲ್ಲಿ ಪ್ರತಿಗಳು ಮಾರಾಟಕ್ಕಿವೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. I. A. No: 1054/1954.
O. P. No: 49/1951.

1. ಬಿಬಿಜಾನ್—ಅಬ್ದುಲ್ ಗಫೂರ್ ಸಾಹೇಬರ ವಿಧವೆ. 2. ರಹೀಮಬಾನು 3. ನಜೀರ್ ಅಹ್ಮದ್. 4. ಮಮ್ಮದಾಲಿ. 5. ಒಬೆದುಲ್ಲಾ. 6. ನಿಸಾರ್ ಅಹ್ಮದ್. ಅಬ್ದುಲ್ ಗಫೂರ್ ಸಾಹೇಬರ ಮೈನರ್ ಮಕ್ಕಳು. ಉಡ್ಪಿ ಕಸಬಾ ಮೂಡನಿಡಂಬೂರು ಗ್ರಾಮದಲ್ಲಿರುವವರು. ... ... ಅರ್ಜಿದಾರರು.

ಈ ಮೂಲಕ ಸರ್ವರಿಗೂ ತಿಳುಹಿಸುವದೇನೆಂದರೆ:

1ನೇ ಅರ್ಜಿದಾರಳ ಗಂಡ ವ ಮಿಕ್ಕೆ ಅರ್ಜಿದಾರರ ತಂದೆ ಅಬ್ದುಲ್ ಗಫೂರ್ ಸಾಹೇಬರು ತಾ. 7—8—1951ರಲ್ಲು ಉಡ್ಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದಲ್ಲಿ ಮರಣಪಟ್ಟಿರುತ್ತಾ ಅವರಿಗೆ ಸೇಲ್ಸ್‌ಟೇಕ್ಸ್ ರಿಫಂಡ್ ಬಾಬ್ತು ಸಿಗತಕ್ಕ ರೂಪಾಯಿ 257—10—10ನ್ನು ಪಡೆಯುವರೆ ವಮಗೆ ವಾರೀಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಖಲು ಮಾಡಿದ ಅರ್ಜಿಯು ತಾ. 18—9—54ಕ್ಕೆ ತನ್ನಿಗೆ ಇಟ್ಟದೆ. ಈ ಬಾಬಿನಲ್ಲಿ ಆಕ್ಷೇಪ ಉಳ್ಳವರು ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರರ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣ ರಾವ್.
ಅರ್ಜಿದಾರರ ಎಡ್ವೊಕೇಟ್.

ಉಡ್ಪಿ, ತಾ. 27—8—1954.

ಲಘುಪರಿಚಯ

(೧೦ನೇ ಪುಟದಿಂದ)

ಅನೇಕ ವಿಷಯಗಳ ಕುರಿತು ತಜ್ಞರಿಂದ ಬರೆಯಲಾದ ಮಹತ್ವದ ಲೇಖನಗಳನ್ನು ಕಾಣುತ್ತೇವೆ. ಭಾರತೀಯರು ಗಮನಿಸಬೇಕಾದ ಹಲವಾರು ಮಹತ್ವದ ಸಂಗತಿಗಳ ಕಡೆಗೆ ಇವು ನಮ್ಮನ್ನು ಸೆಳೆಯುತ್ತವೆ. ವಿಶೇಷ ಸಂಚಿಕೆಯ ಮುದ್ರಣವು ಮಾತ್ರ ಅಷ್ಟು ಚೆನ್ನಾಗಿಲ್ಲ. ಮುಖಪುಟದ ತ್ರಿವರ್ಣ ಚಿತ್ರದಲ್ಲಿ ಗಾಂಧೀಜಿಯ ರೂಪವಿಕಾರವಾಗಿರುವುದೂ ಒಂದು ಮುಖ್ಯ ದೋಷ.

❁ ಎರ್ನಾಕುಳಂದಲ್ಲಿರುವ ಭಾರತದ ಕೇಂದ್ರ ತೆಂಗಿನ ಕಮಿಟಿಯವರು ತಮ್ಮ ಆಗೋಸ್ತು ಸಂಚಿಕೆಯನ್ನು ಸ್ವಾತಂತ್ರ್ಯ ವಿಶೇಷಾಂಕವಾಗಿ ಹೊರಡಿಸಿದ್ದಾರೆ. ಇದರಲ್ಲಿ ತೆಂಗಿನ ಕೃಷಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಮೇಲೆ ಅಧಿಕಾರ ಪೂರ್ಣವಾಗಿ ಬರೆಯಲಾದ ಲೇಖನಗಳಲ್ಲದೆ, ತೆಂಗಿನ ತೋಟಗಳಲ್ಲಿ ಮಾಡಬಹುದಾದ ಇತರ ಕೃಷಿಗಳನ್ನೂ ಸಸ್ಯ ವಿಜ್ಞಾನಕ್ಕೆ ಸಂಬಂಧಿಸಿದ ಅಂಶಗಳನ್ನೂ ವಿವರಿಸುವ ಬರೆಹಗಳನ್ನು ಕಾಣುತ್ತೇವೆ. ಪಡುಕರಾವಳಿಯ ಕೃಷಿಕರಿಗೆ—ಮುಖ್ಯವಾಗಿ ತೆಂಗಿನ ತೋಟಗಾರರಿಗೆ—ಇದರಿಂದ ಪ್ರಯೋಜನ ದೊರಕಬಲ್ಲುದು.

❁ ಶ್ರೀ ಬೆಳ್ತಂಗಡಿ ನರಸಿಂಹ ಭಟ್ಟರ ಸಂಪಾದಕತ್ವದಲ್ಲಿ "ಶೋಭಾ" ಎಂಬ ತ್ರೈಮಾಸಿಕ ಪತ್ರಿಕೆಯು ಮಂಗಳೂರಿನ ರಥಬೀದಿಯಿಂದ ಪ್ರಕಟವಾಗುತ್ತಿದೆ. ಬಿಡಿ ಸಂಚಿಕೆಗೆ ಎಂಟಾಣೆ ಬೆಲೆ. ಇದರ ಪ್ರಥಮ ಸಂಚಿಕೆಯಲ್ಲಿ ಲಘು ಬರೆಹಗಳ ಆಧಿಕ್ಯ ಕಂಡು ಬರುತ್ತವೆ. ಇನ್ನು ಮುಂದಕ್ಕೆ ಸಾಂಸ್ಕೃತಿಕ ಹಾಗು ವಿಚಾರಾತ್ಮಕ ಬರೆಹಗಳನ್ನೂ ನೀಡುವರೆಂದು ಆಶಿಸುತ್ತೇವೆ.

ವರದಿಗಳು

ಅಭಿವೃದ್ಧಿ ಸೂಚಕವಾದ ಈ ಕೆಳಗಿನ ಸಂಘ ಸಂಸ್ಥೆಗಳ ವರದಿಗಳನ್ನು ಸಾದರದಿಂದ ಸ್ವೀಕರಿಸಿದ್ದೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ, ಅರವಟಗಿ ಇದರ 1—4—೫೦ರಿಂದ 31—3—51ರ ವರೆಗಿನ ಐದನೆಯ ವಾರ್ಷಿಕ ವರದಿ.

ಗಂಗಯ ಸ್ಮಾರಕ ಫಂಡು, ಮುಂಬಯಿ ಇದರ 1953ರ ಹನ್ನೊಂದನೆ ವಾರ್ಷಿಕ ವರದಿ.

ಶ್ರೀ ರಜಕ ಸಂಘ, ಮುಂಬಯಿ ಇದರ 1953ರ ಹದಿನೇಳನೆ ವಾರ್ಷಿಕ ವರದಿ.

1953ರಲ್ಲಿ ಉಡುಪಿಯಲ್ಲಿ ಜರಗಿದ ಅಖಿಲ ಭಾರತೀಯ ಮಾಧ್ವ ತತ್ವಜ್ಞಾನ ಸಮ್ಮೇಳನದ ವರದಿ.

ಬಂಟರಯಾನೆ ನಾಡವರ ಸಂಘ, ಮುಂಬಯಿ ಇದರ 1953ರ ಇಪ್ಪತ್ತಾರನೆಯ ವಾರ್ಷಿಕ ವರದಿ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ–ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಜನಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ನ ವ ಯು ಗ ವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡ್ಯಾರೆಕ್ಟರ್ ಓಫ್ ಪಬ್ಲಿಕ್ ಇನ್‌ಸ್ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

34 ನೆಯ ವರ್ಷಾರಂಭ

LICENCE NO. 31

ನವಯುಗ

ಸಂಪುಟ ೩೪
VOL. 34

ಉಡುಪಿ, 9—9—1954

ಸಂಚಿಕೆ ೨
NO. 2

ಹಿತನುಡಿ

* * *

[illegible]

— [illegible]

ಗುಜರಾದ ಮತ್ತು [illegible] ಸಾಂಸ್ಕೃತಿಕ ಪ್ರತಿಷ್ಠೆಯನ್ನು [illegible] ಸಂಪ್ರದಾಯಗಳನ್ನು [illegible] ಬರುವ ಉದ್ದೇಶದಿಂದ ಸ್ಥಾಪನೆಗೊಂಡ ಅಹಮದಾಬಾದಿನ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು [illegible] ದಿನಾಂಕ ೩ರಂದು ಜರಗಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಶ್ರೀ ಬಾಜಪೇಯಿಯವರು “ಪದವೀಧರರಾದ ತರುಣ-ತರುಣಿಯರಿಗೆ ಜೀವನವನ್ನು [illegible]ಕಾಗುತ್ತವೆ. ಆದರೆ ಈ ಸಂದರ್ಭದಲ್ಲಿ ಕೊಡಲಾಗುವ ಭಾಷಣಗಳು ಜೀವನದ ಇತರ ವಿಷಯಗಳನ್ನು ಉಪೇಕ್ಷಿಸಿ ಕೇವಲ ಶಿಕ್ಷಣದ ಪ್ರಶ್ನೆಗೆಯೇ ಮಹತ್ವ ಕೊಡುತ್ತವೆ. ಇದು ದುರ್ದೈವದ ವಿಷಯ” ಎಂದರು. ಅನರೆ ಇದಕ್ಕೆ ಮಿಗಿಲಾದ ಆಶ್ಚರ್ಯವನ್ನು ಪದವೀದಾನ ಭಾಷಣವನ್ನಿತ್ತ ಡಾ. ಸಿ. ಪಿ. ರಾಮಸ್ವಾಮಿ ಅಯ್ಯರರು ಉಂಟುಮಾಡಿದರು. “ದೇಶ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯವೂ ಉಚಿತ ಸಾಹಿತ್ಯವೂ ಸಂಪೂರ್ಣ ಅಭಿವೃದ್ಧಿ ಹೊಂದುವ ವರೆಗೆ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷನ್ನು ಬೋಧಭಾಷೆಯಾಗಿಡದೆ ಕಡೆಗಣಿಸುವುದು ಕ್ರಮವಾದ ವಾದವೇ?” ಎಂದವರು ಎಚ್ಚರಿಕೆ ಕೊಟ್ಟರು.

ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಯಾಗಿರುವ ಈ ಮಹಾನುಭಾವರು ಇಂಗ್ಲೀಷನ್ನು ಕಡೆಗಣಿಸುವ ಮತ್ತು ಹೀಯಾಳಿಸುವ ಪ್ರವೃತ್ತಿಯು ಆಂಗ್ಲ ಪ್ರಭುತ್ವವನ್ನು ನಿರಾಕರಿಸುವ ರಾಜಕೀಯ ವೈಷಮ್ಯದಿಂದಲೇ ಪ್ರೇರಿತವಾದದ್ದೆಂದು ಅಭಿಪ್ರಾಯಪಟ್ಟರು. ಜಗತ್ತಿನ ಪ್ರಗತಿ ಪಥದಲ್ಲಿ ನಾವು ಮುಂದಾಳಾಗಿರಬೇಕಾದರೆ, ಶಾಸ್ತ್ರೀಯ ಹಾಗು ತಾಂತ್ರಿಕ ವಿಷಯಗಳ ಮೇಲೆ ಒಡೆತನವನ್ನು ಪಡೆಯಬೇಕಾದರೆ, ನಮ್ಮ ಸಾಹಿತ್ಯ ಮತ್ತು ಕಲೆಗಳಿಗೆ ಸ್ಫೂರ್ತಿ ಬೇಕೆಂದಿದ್ದರೆ ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮ

[illegible]

ಬೋಧ ಭಾಷೆಯ ತಂಟೆ

[illegible]

[illegible]

[illegible]

(೪ನೇ ಪುಟದಿಂದ)

ಆತಂಕವಿಲ್ಲದಿದ್ದರೂ ಮದುವೆ ಮಾತ್ರ ನಡೆಯಲಾರದು. ಆದರೆ ಎಷ್ಟೋ ಪ್ರಸಂಗಗಳಲ್ಲಿ ದುಡ್ಡಿನಾಶೆಗೆ ಬಲಿಬಿದ್ದು, ಬೇರೆ ಜಾತಿಯ ಹುಡುಗನೊಡನೆ ಮದುವೆಯಾಗಲು ಹೆತ್ತವರು ಒತ್ತಾಯಿಸುತ್ತಾರೆ. ಇದನ್ನು ಯಾರೂ ಸುಲಭದಲ್ಲಿ ಒಪ್ಪುವುದಿಲ್ಲ. ಬಲಾತ್ಕಾರದಿಂದ ನಡೆದ ಈ ಮದುವೆಗಳು ವಧುವಿಗೆ ಏನೇನೂ ಸಮಾಧಾನ ಕೊಡುವುದಿಲ್ಲ. "ನಾನು ಹೊರ ಜಾತಿಯವನನ್ನು ಮದುವೆಯಾದೆ; ಇವರಿಂದವೆತ್ತವರು ಹಣದರಾಶಿಯನ್ನು ಹೊತ್ತು ತಂದರು. ಇಂದಿನ ಜಗದ ನೀತಿಯೋ ಅಷ್ಟು: ಹಣದ ಮೋಡಿಯೋ ಅದಕ್ಕೆ ಕಣ್ಣು" ಎಂಬವಳು ಸಿಟ್ಟಿನಿಂದ ಕಿಡಿಯುಗುಳುತ್ತಾಳೆ.

ವಸಾಹತು ಸಾಮ್ರಾಜ್ಯವಾದದ ವಿರುದ್ಧ ಪ್ರಚಂಡ ಪ್ರತಿಭಟನೆಯೊಡ್ಡುವ ಗೋವೆಯ ಜನರು ಮೊದಲಿಂದಲೂ ಪರಕೀಯ ಪ್ರಭುತ್ವವನ್ನು ಧಿಕ್ಕರಿಸುತ್ತಿದ್ದರು. ೧೮೪೦ನೇ ಇಸವಿಯಷ್ಟು ಹಿಂದಿನಿಂದ ೧೯೧೨ನೇ ಇಸವಿಯಷ್ಟು ಈಚೆಗಿನ ಕಾಲದಲ್ಲಿ ಪ್ರಭುತ್ವದ ವಿರುದ್ಧ ಹಲವು ದಂಗೆ ನಡೆದವು. ಪೋರ್ಚುಗೀಜರ ಆರ್ಥಿಕ ಶೋಷಣೆ ಹಾಗು ಪಾಳೆಯಗಾರಿಕೆಯನ್ನು ಜನರು ಸ್ವಲ್ಪವೂ ಮೆಚ್ಚುತ್ತಿರಲಿಲ್ಲ. ರಾಣೇಸದ ದಂಗೆಯು ಗೋವಾನೀಯರ ಸುಪ್ತ ಚೇತನವನ್ನು ಜಾಗೃತಗೊಳಿಸಿ, ರಾಷ್ಟ್ರೀಯ ಭಾವನೆಗೆ ನೀರನ್ನೆರೆದು ಪೋಷಿಸಿತು: ದೀಪುರಾಣೆ ಎಂಬ ನಾಯಕನ ಶೌರ್ಯ ಸಾಹಸಗಳನ್ನು ವರ್ಣಿಸುವ ಗೀತೆಯು ಯುದ್ಧದ ಕಹಳೆಯನ್ನು ಮೊಳಗಿಸುವಂತೆ, ಜಯಭೇರಿಯನ್ನು ಬಾರಿಸುವಂತೆ ತೋರಿ ಬರುತ್ತದೆ—ಸಾವಂತವಾಡಿಯ ರಾಜರಿಂದ ಕೈ ಬಿಡಲ್ಪಟ್ಟ ಸತ್ತರ ತಾಲೂಕಿನ ೬೦ ಹಳ್ಳಿಗಳನ್ನು ವಶಪಡಿಸಿಕೊಂಡ ಈ ವೀರನ ದೆಸೆಯಿಂದ "ಬಿಳಿ ಸಿಪಾಯಿಗಳು ಜೀವದ ಆಸೆಬಿಟ್ಟು ಓಡಿದರು; ಕಷ್ಟದಿಂದ ನಿಟ್ಟುಸಿರನ್ನು ಬಿಡುತ್ತಾ ಓಡಿದರು; ಓಡುತ್ತಿರುವಾಗ, ದೋಣಿಗೆ ನೆಗೆಯುತ್ತಿರುವಾಗ, ಬಲುಕಷ್ಟದಿಂದ ನಿಟ್ಟುಸಿರು ಬಿಟ್ಟರು." ಐವತ್ತು ವರ್ಷಗಳ ಹಿಂದೆ ಗಲ್ ಹಾಡೋರ್ ಎಂಬ ಗವರ್ನರನ ನೇತೃತ್ವದಲ್ಲಿ ನಡೆದೊಂದು ಘಟನಾವಳಿಯನ್ನು ಕುರಿತಾದ ಗೀತೆಯು "ಜನರನ್ನು ಸಿಪಾಯಿಗಳು ಕೋವಿಯ ಮೊನೆಯಿಂದ ಚುಚ್ಚಿದರು; ಅವರ ಮೇಲೆ ಗುಂಡಿನ ಮಳೆಗರೆದರು. ಚರ್ಚಿನ ಅಂಗಳದಲ್ಲಿಯೇ ರಕ್ತವಾಹಿನಿ ಪ್ರವಹಿಸಿತು. ತೆರಿಗೆಯನ್ನು ಹೆಚ್ಚಿಸಿ ಜನರನ್ನು ಗೋಳಿಗೀಡುಮಾಡಿದ ಆ ಗವರ್ನರ ಬುದ್ಧ ಕೋಣ; ಜನದ ಶಾಪ ಅವನ ತಲೆಯ ಮೇಲಿಂದ ತಪ್ಪದು" ಎನ್ನುತ್ತದೆ.

೧೯೧೦ರಲ್ಲಿ ಗೋವೆಯ ಜನಗಳಿಗೆ "ಪ್ರಜಾರಾಜ್ಯ" ದೊರೆತಾಗ— ಎಲ್ಲರೂ ಅದನ್ನು ಸಂತೋಷದಿಂದ ಸ್ವಾಗತಿಸಿ, ಹೊಗಳಿ ಹಾಡಿದರು. "ಹೋರಾಟದ ಮೇಲೆ ಹೋರಾಟವನ್ನು ಬಿಟ್ಟು ಪೋರ್ಚುಗೀಜರು ಪ್ರಜಾರಾಜ್ಯ ನೀಡಿದ್ದಾರೆ; ನಮ್ಮೆದೆ ಹರ್ಷದಿಂದ ಉಕ್ಕೇರಿ ನಲಿಯುತ್ತದೆ" ಎಂದವರು ಕುಣಿದರು. ಆದರೆ ಈ ಸಂತಸ ಬಹುಕಾಲ ಬಾಳಲಿಲ್ಲ. ಪೋರ್ಚುಗಾಲದಲ್ಲಿ ಸಾಲಾಜಾರರ ಸರ್ವಾಧಿಕಾರ ನಡೆಯತೊಡಗಿದ ಕಳೆದ ೨೦ ವರ್ಷಗಳಲ್ಲಿ ಗೋವೆಯಲ್ಲಿ "ಪ್ರಜಾರಾಜ್ಯ" ಉಳಿಯಲಿಲ್ಲ! ಎಂತಲೇ ಪರಕೀಯರ ನೊಗವನ್ನು ಕೊನೆಯದಾಗಿ ಎಸೆದು ಬಿಟ್ಟು ಸ್ವತಂತ್ರ ಹೊಂದಲು ಗೋವೆಯ ನಾಗರಿಕರು ಎದೆ ಸೆಟೆದು ನಿಂತಿದ್ದಾರೆ: ಗಾಂಧೀಜಿ ಪ್ರತಿಪಾದಿಸಿದ ಅಹಿಂಸಾತ್ಮಕ ಸತ್ಯಾಗ್ರಹದ ಪವಿತ್ರ ಮಾರ್ಗವನ್ನು ಅವರು ಅವಲಂಬಿಸುತ್ತಿದ್ದಾರೆ. ಅವರ ಜಾನಪದ ಗೀತಗಳ ಸರಮಾಲೆಯಲ್ಲಿ ಇಂದು ಅವರು ಹಾಡುವ ಪದಗಳು ಹೊಸ ಅಧ್ಯಾಯವನ್ನೆ ತೆರೆಯಬಹುದು; ಸ್ವರ್ಣಾಕ್ಷರಗಳಿಂದ ಬರೆಯಬೇಕಾದ ಇತಿಹಾಸವನ್ನು ಅವು ರಚಿಸಬಹುದು.

—ಸಂಕಲಿತ.

ಹೈಸ್ಕೂಲು ವಿದ್ಯಾರ್ಥಿಗಳಿಗೆ ಸಂತಸದ ಸುದ್ದಿ

ಈ ವರೆಗೆ ಹೈಸ್ಕೂಲು ವಿದ್ಯಾರ್ಥಿಗಳಿಗೆ ತೊಂದರೆ ಕೊಡುತ್ತಿದ್ದ ಕನ್ನಡ ವ್ಯಾಕರಣ ಪುಸ್ತಕದ ಕೊರತೆಯೊಂದು ನೀಗಲ್ಪಟ್ಟಿತು.

ಸರಕಾರದವರು ಪ್ರಕಟಿಸಿದ ನೂತನ ಪಾಠಪಟ್ಟಿಗನುಸಾರವಾಗಿ ಜೈನ್ ಹೈಸ್ಕೂಲಿನ ಕನ್ನಡ ಪಂಡಿತರಾದ ಶ್ರೀ ಕೆ. ಕಾಂತಯ್ಯ, ವಿದ್ವಾನ್ ಇವರು ಬರೆದಿರುವ

ಪ್ರೌಢಶಾಲಾ ವ್ಯಾಕರಣ ಮತ್ತು ಛಂದೋಲಂಕಾರ ಸಾರ

ಎಂಬ

ಹೈಸ್ಕೂಲಿನ IV, V, VI ನೇ ಫಾರ್ಮಿನ ವಿದ್ಯಾರ್ಥಿಗಳ ಸಲುವಾಗಿ ಬರೆದ ವ್ಯಾಕರಣ ಪುಸ್ತಕವು ಪ್ರಕಟವಾಗಿರುವುದು.

ಪುಟಗಳು ೨೫೦ ಬೆಲೆ: ೧—೧೦—೦

ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ:

ಜಯ ಮುದ್ರಣಾಲಯ, ಮೂಡುಬಿದಿರೆ, (ದ. ಕ.)

ಉಡುಪಿ ನವಭಾರತ ಪುಸ್ತಕ ಭಂಡಾರದಲ್ಲಿ ಪ್ರತಿಗಳು ಮಾರಾಟಕ್ಕಿವೆ.

ಲಘುಪರಿಚಯ

(೧೦ನೇ ಪುಟದಿಂದ)

ಅನೇಕ ವಿಷಯಗಳ ಕುರಿತು ತಜ್ಞರಿಂದ ಬರೆಯಲಾದ ಮಹತ್ವದ ಲೇಖನಗಳನ್ನು ಕಾಣುತ್ತೇವೆ. ಭಾರತೀಯರು ಗಮನಿಸಬೇಕಾದ ಹಲವಾರು ಮಹತ್ವದ ಸಂಗತಿಗಳ ಕಡೆಗೆ ಇವು ನಮ್ಮನ್ನು ಸೆಳೆಯುತ್ತವೆ. ವಿಶೇಷ ಸಂಚಿಕೆಯ ಮುದ್ರಣವು ಮಾತ್ರ ಅಷ್ಟು ಚೆನ್ನಾಗಿಲ್ಲ. ಮುಖಪುಟದ ತ್ರಿವರ್ಣ ಚಿತ್ರದಲ್ಲಿ ಗಾಂಧೀಜಿಯ ರೂಪವಿಕಾರವಾಗಿರುವುದೂ ಒಂದು ಮುಖ್ಯ ದೋಷ.

❁ ಎರ್ನಾಕುಳಂದಲ್ಲಿರುವ ಭಾರತದ ಕೇಂದ್ರ ತೆಂಗಿನ ಕಮಿಟಿಯವರು ತಮ್ಮ ಆಗೋಸ್ತು ಸಂಚಿಕೆಯನ್ನು ಸ್ವಾತಂತ್ರ್ಯ ವಿಶೇಷಾಂಕವಾಗಿ ಹೊರಡಿಸಿದ್ದಾರೆ. ಇದರಲ್ಲಿ ತೆಂಗಿನ ಕೃಷಿಗೆ ಸಂಬಂಧಿಸಿದ ಅನೇಕ ಸಮಸ್ಯೆಗಳ ಮೇಲೆ ಅಧಿಕಾರ ಪೂರ್ಣವಾಗಿ ಬರೆಯಲಾದ ಲೇಖನಗಳಲ್ಲದೆ, ತೆಂಗಿನ ತೋಟಗಳಲ್ಲಿ ಮಾಡಬಹುದಾದ ಇತರ ಕೃಷಿಗಳನ್ನೂ ಸಸ್ಯ ವಿಜ್ಞಾನಕ್ಕೆ ಸಂಬಂಧಿಸಿದ ಅಂಶಗಳನ್ನೂ ವಿವರಿಸುವ ಬರೆಹಗಳನ್ನು ಕಾಣುತ್ತೇವೆ. ಪಡುಕರಾವಳಿಯ ಕೃಷಿಕರಿಗೆ—ಮುಖ್ಯವಾಗಿ ತೆಂಗಿನ ತೋಟಗಾರರಿಗೆ—ಇದರಿಂದ ಪ್ರಯೋಜನ ದೊರಕಬಲ್ಲುದು.

❁ ಶ್ರೀ ಬೆಳ್ತಂಗಡಿ ನರಸಿಂಹ ಭಟ್ಟರ ಸಂಪಾದಕತ್ವದಲ್ಲಿ "ಶೋಭಾ" ಎಂಬ ತ್ರೈಮಾಸಿಕ ಪತ್ರಿಕೆಯು ಮಂಗಳೂರಿನ ರಥಬೀದಿಯಿಂದ ಪ್ರಕಟವಾಗುತ್ತಿದೆ. ಬಿಡಿ ಸಂಚಿಕೆಗೆ ಎಂಟಾಣೆ ಬೆಲೆ. ಇದರ ಪ್ರಥಮ ಸಂಚಿಕೆಯಲ್ಲಿ ಲಘು ಬರೆಹಗಳ ಆಧಿಕ್ಯ ಕಂಡು ಬರುತ್ತದೆ. ಇನ್ನು ಮುಂದಕ್ಕೆ ಸಾಂಸ್ಕೃತಿಕ ಹಾಗು ವಿಚಾರಾತ್ಮಕ ಬರೆಹಗಳನ್ನೂ ನೀಡುವರೆಂದು ಆಶಿಸುತ್ತೇವೆ.

ವರದಿಗಳು

ಅಭಿವೃದ್ಧಿ ಸೂಚಕವಾದ ಈ ಕೆಳಗಿನ ಸಂಘ ಸಂಸ್ಥೆಗಳ ವರದಿಗಳನ್ನು ಸಾದರದಿಂದ ಸ್ವೀಕರಿಸಿದ್ದೇವೆ.

ಧಾರವಾಡ ಜಿಲ್ಲಾ ಸರ್ವೋದಯ ಯೋಜನೆ, ಅದರಗುಂಚಿ ಇದರ 1—4—53ರಿಂದ 31—3—54ರ ವರೆಗಿನ ಐದನೆಯ ವಾರ್ಷಿಕ ವರದಿ.

ಗಂಗೆಯ ಸ್ಮಾರಕ ಫಂಡು, ಮುಂಬಯಿ ಇದರ 1953ರ ಹನ್ನೊಂದನೆ ವಾರ್ಷಿಕ ವರದಿ.

ಶ್ರೀ ರಜಕ ಸಂಘ, ಮುಂಬಯಿ ಇದರ 1953ರ ಹದಿನೇಳನೆ ವಾರ್ಷಿಕ ವರದಿ.

1953ರಲ್ಲಿ ಉಡುಪಿಯಲ್ಲಿ ಜರಗಿದ ಅಖಿಲ ಭಾರತೀಯ ಮಾಧ್ವ ತತ್ವಜ್ಞಾನ ಸಮ್ಮೇಳನದ ವರದಿ.

ಬಂಟರಯಾನೆ ನಾಡವರ ಸಂಘ, ಮುಂಬಯಿ ಇದರ 1953ರ ಇಪ್ಪತ್ತಾರನೆಯ ವಾರ್ಷಿಕ ವರದಿ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. I. A. No: 1054/1954.
O. P. No: 49/1951.

1. ಬಿಬಿಜಾನ್—ಅಬ್ದುಲ್ ಗಫೂರ್ ಸಾಹೇಬರ ವಿಧವೆ. 2. ರಶೀದಬಾನು. 3. ನಜೀರ್ ಅಹ್ಮದ್. 4. ಹಮ್ಮರ್ ಆಲಿ. 5. ಒಬೆದುಲ್ಲಾ. 6. ನಿಸಾರ್ ಅಹ್ಮದ್. ಅಬ್ದುಲ್ ಗಫೂರ್ ಸಾಹೇಬರ ಮೈನರ್ ಮಕ್ಕಳು. ಉಡ್ಪಿ ಕಸಬಾ ಮೂಡನಿಡಂಬೂರು ಗ್ರಾಮದಲ್ಲಿರುವವರು. ... ... ಅರ್ಜಿದಾರರು.

ಈ ಮೂಲಕ ಸರ್ವರಿಗೂ ತಿಳುಹಿಸುವದೇನೆಂದರೆ:

1ನೇ ಅರ್ಜಿದಾರಳ ಗಂಡ ವ ಮಿಕ್ಕ ಅರ್ಜಿದಾರರ ತಂದೆ ಅಬ್ದುಲ್ ಗಫೂರ್ ಸಾಹೇಬರು ತಾ. 7—8—1951ರಲ್ಲು ಉಡ್ಪಿ ತಾಲ್ಲೂಕು ಮೂಡನಿಡಂಬೂರು ಗ್ರಾಮದಲ್ಲಿ ಮರಣಪಟ್ಟಿರುತ್ತಾ ಅವರಿಗೆ ಸೇಲ್ಸ್‌ಟೇಕ್ಸ್ ರಿಫಂಡ್ ಬಾಬ್ತು ಸಿಗತಕ್ಕ ರೂಪಾಯಿ 257—10—10ನ್ನು ಪಡೆಯುವರೆ ತಮಗೆ ವಾರೀಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ದಾಕಲು ಮಾಡಿದ ಅರ್ಜಿಯು ತಾ. 18—9—54ಕ್ಕೆ ತನ್ನಿಗೆ ಇಟ್ಟಿದೆ. ಈ ಬಾಬಿನಲ್ಲಿ ಆಕ್ಷೇಪ ಉಳ್ಳವರು ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ವಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರರ ಅಪೇಕ್ಷೆ ಮೇರೆಗೆ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣ ರಾವ್.
ಅರ್ಜಿದಾರರ ಎಡ್ವೊಕೇಟ್.

ಉಡ್ಪಿ, ತಾ. 27—8—1954.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿದೋಷ, ಗರ್ಭಪತನವಾಗುವಿಗೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ನವಯುಗವು

ಸೆಕೆಂಡ್ರಿ ಶಾಲೆಗಳ ಉಪಯೋಗಾರ್ಥವಾಗಿ ಡೈರೆಕ್ಟರ್ ಓಫ್ ಪಬ್ಲಿಕ್ ಇನ್ಸ್‌ಟ್ರಕ್ಷನ್, ಮದ್ರಾಸು ಅವರಿಂದ ಮಂಜೂರಾತಿ ಪಡೆದಿರುವುದರಿಂದ ಎಲ್ಲಾ ಹೈಸ್ಕೂಲುಗಳೂ ಅದಕ್ಕೆ ಚಂದಾದಾರರಾಗಬಹುದಾಗಿದೆ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

34 ನೆಯ ವರ್ಷಾರಂಭ

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪
VOL. 34

ಉಡುಪಿ, 9—9—1954

ಸಂಚಿಕೆ ೨
NO. 2

ಹಿತನುಡಿ

* * *

ಸದ್ಯದ ಶಿಕ್ಷಣ ಪದ್ಧತಿಯು ನಮ್ಮ ಜೀವದ ಆವಶ್ಯಕತೆಗಳನ್ನು ಯಾವ ಸ್ವರೂಪದಲ್ಲೇ ಆಗಲಿ, ಪೂರೈಸುವುದಿಲ್ಲ. ಉಚ್ಚ ಶಿಕ್ಷಣದಲ್ಲಿ ಇಂಗ್ಲೀಷನ್ನು ಮಾಧ್ಯಮವಾಗಿಟ್ಟದರಿಂದ ಉಚ್ಚ ಶಿಕ್ಷಣ ಹೊಂದಿದ ಕೆಲವರು ಹಾಗು ಆಷ್ಟು ಶಿಕ್ಷಣವಿಲ್ಲದ ಅಸಂಖ್ಯಾತ ಜನರಲ್ಲಿ ಅಂತರವುಂಟಾಗುವುದು. ಇದರ ದೆಸೆಯಿಂದ ಸಾಮಾನ್ಯರಿಗೆ ದೊರಯುವ ಜ್ಞಾನ ಪ್ರಸಾರಕ್ಕೆ ಪ್ರತಿಬಂಧಿಸಲ್ಪಟ್ಟಿರುವುದು.

— ಗಾಂಧೀಜಿ

ಇಲ್ಲಿದೆ ಸ್ವಾರಸ್ಯ

* * *

ಸ್ವಪ್ನಕ್ಕೆ ಅವನನ್ನು ಸೇರಿಸಿಕೊಳ್ಳುವಾಗ ಶಸ್ತ್ರಚಿಕಿತ್ಸೆ ನಡೆಸುತ್ತಿದ್ದ ವೈದ್ಯರು "ನಿನ್ನದೊಂದು ಕಿವಿಯನ್ನು ತುಂಡರಿಸಿದರೆ ಏನಾಗುವುದು?" ಎಂದು ಕೇಳಿದರು.

"ನನಗೆ ಕಿವಿ ಕೇಳಿಸುವುದಿಲ್ಲ."

"ಸರಿ, ಎರಡೂ ಕಿವಿ ಕತ್ತರಿಸಿದರೆ?

ಆಗ ನನಗೆ ಕಣ್ಣು ಕಾಣಿಸುವುದಿಲ್ಲ."

"ಹಾಗೇ ಹೇಗೆ, ನಿನ್ನ ಕಣ್ಣು ಕತ್ತರಿಸುವುದಿಲ್ಲವಲ್ಲ. ನಾನು ಕೇಳಲಿಲ್ಲ—ಎರಡೂ ಕಿವಿ ಹೋದರೆ?'

"ನಾನೂ ಅದನ್ನೇ ಹೇಳುವುದು—ಕಿವಿಗಳೇ ಇಲ್ಲದಿದ್ದರೆ, ತಲೆಯ ಮೇಲಿನ ಟೊಪ್ಪಿ ಸರಕ್ಕನೆ ಕೆಳಗಿಳಿದು, ಕಣ್ಣು ಕಟ್ಟುತ್ತದೆ."

ಬೋಧ ಭಾಷೆಯ ತಂಟೆ

ಗುಜರಾಥ ಮತ್ತು ಸೌರಾಷ್ಟ್ರಗಳ ಸಾಂಸ್ಕೃತಿಕ ವೈಶಿಷ್ಟ್ಯವನ್ನೂ ಉದಾತ್ತ ಸಂಪ್ರದಾಯಗಳನ್ನೂ ಬೆಳೆಸಿಕೊಂಡು ಬರುವ ಉದ್ದೇಶದಿಂದ ಸ್ಥಾಪನೆಗೊಂಡ ಅಹಮದಾಬಾದಿನ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಮೊನ್ನೆ ದಿನಾಂಕ ೩ರಂದು ಜರಗಿತು. ಈ ಸಂದರ್ಭದಲ್ಲಿ ಕುಲಪತಿಗಳಾದ ಶ್ರೀ ಬಾಜಪೇಯಿಯವರು "ಪದವೀಧರರಾದ ತರುಣ-ತರುಣಿಯರಿಗೆ ಜೀವನವನ್ನು ಇದಿರಿಸಬೇಕಾಗುತ್ತದೆ. ಆದರೆ ಈ ಸಂದರ್ಭದಲ್ಲಿ ಕೊಡಲಾಗುವ ಭಾಷಣಗಳು ಜೀವನದ ಇತರ ವಿಷಯಗಳನ್ನು ಲಕ್ಷಿಸದ ಕೇವಲ ಶಿಕ್ಷಣದ ಪ್ರಶ್ನೆಗೆಯೇ ಮಹತ್ವ ಕೊಡುತ್ತವೆ. ಇದು ಆಶ್ಚರ್ಯದ ವಿಷಯ" ಎಂದರು. ಆದರೆ ಇದಕ್ಕೂ ಮಿಗಿಲಾದ ಆಶ್ಚರ್ಯವನ್ನು ಪದವೀದಾನ ಭಾಷಣವನ್ನಿತ್ತ ಡಾ. ಸಿ. ಪಿ. ರಾಮಸ್ವಾಮಿ ಅಯ್ಯರರು ಉಂಟುಮಾಡಿದರು. "ದೇಶ ಭಾಷೆಗಳಲ್ಲಿ ವಿಜ್ಞಾನ ಸಾಹಿತ್ಯವೂ ಲಲಿತ ಸಾಹಿತ್ಯವೂ ಸಂಪೂರ್ಣ ಅಭಿವೃದ್ಧಿ ಹೊಂದುವವರೆಗೆ ವಿಶ್ವವಿದ್ಯಾಲಯಗಳಲ್ಲಿ ಇಂಗ್ಲೀಷನ್ನು ಬೋಧಭಾಷೆಯಾಗಿಡದೆ ಕಡೆಗಣಿಸುವುದು ಪ್ರಮಾದವಾದೀತು" ಎಂದವರು ಎಚ್ಚರಿಕೆ ಕೊಟ್ಟರು.

ಕಾಶಿಯ ಹಿಂದೂ ವಿಶ್ವವಿದ್ಯಾಲಯದ ಉಪಕುಲಪತಿಯಾಗಿರುವ ಈ ಮಹಾನುಭಾವರು ಇಂಗ್ಲೀಷನ್ನು ಕಡೆಗಣಿಸುವ ಮತ್ತು ಹೀಯಾಳಿಸುವ ಪ್ರವೃತ್ತಿಯು ಆಂಗ್ಲ ಪ್ರಭುತ್ವವನ್ನು ನಿರಾಕರಿಸುವ ರಾಜಕೀಯ ವೈಷಮ್ಯದಿಂದಲೇ ಪ್ರೇರಿತವಾದದ್ದೆಂದು ಅಭಿಪ್ರಾಯಪಟ್ಟರು. ಜಗತ್ತಿನ ಪ್ರಗತಿ ಪಥದಲ್ಲಿ ನಾವು ಮುಂದಾಳಾಗಿರಬೇಕಾದರೆ, ಶಾಸ್ತ್ರೀಯ ಹಾಗು ತಾಂತ್ರಿಕ ವಿಷಯಗಳ ಮೇಲೆ ಒಡೆತನವನ್ನು ಪಡೆಯಬೇಕಾದರೆ, ನಮ್ಮ ಸಾಹಿತ್ಯ ಮತ್ತು ಕಲೆಗಳಿಗೆ ಸ್ಫೂರ್ತಿ ಬೇಕೆಂದಿದ್ದರೆ ವಿಶ್ವವಿದ್ಯಾಲಯಗಳ ಶಿಕ್ಷಣ ಕ್ರಮದಲ್ಲಿ ಇಂಗ್ಲೀಷಿಗೆ ಬೋಧಭಾಷೆಯ ಪಟ್ಟವನ್ನು ಕೊಡುವುದು ಅತ್ಯಗತ್ಯವೆಂಬ ದಾರಿಯನ್ನು ಹಿಡಿದು ಅವರು ಸಾಗಿದರು. ಅದೇ ಸಮಯ "ವಿಶ್ವವಿದ್ಯಾಲಯಗಳಲ್ಲಿ ದೇಶ ಭಾಷೆಗಳು ಅನಿವಾರ್ಯವಾಗಿ ಮತ್ತು ಆದಷ್ಟು ಶೀಘ್ರದಲ್ಲಿ ಬೋಧಭಾಷೆಯಾಗಿ ಒಳಸಲ್ಪಟ್ಟು ಪರಭಾಷೆಗಳನ್ನು ಆ ಸ್ಥಾನದಿಂದ ಕಿತ್ತು ಹಾಕಬಲ್ಲವು, ಮತ್ತು ಹಾಕಿಯೂ ಹಾಕುತವೆ' ಎಂಬ ಭವಿಷ್ಯವಾಣಿಯನ್ನೂ ಉದ್ಗರಿಸಿದರು. ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಮಾತೃ ಭಾಷೆ ಅಥವಾ ಪ್ರಾದೇಶಿಕ ಭಾಷೆಯ ಮೂಲಕ ಕೊಡುವುದರಲ್ಲಿ ತಪ್ಪೇನೂ ಇಲ್ಲವೆಂದೂ ಹೇಳಿದರು.

ಮೇಲಿನ ಅಭಿಪ್ರಾಯಗಳನ್ನು ವಿಮರ್ಶಾತ್ಮಕ ದೃಷ್ಟಿಯಿಂದ ನೋಡಿದ್ದಾದರೆ, ವಿರೋಧಾಭಾಸಗಳು ಸ್ವಯಂವ್ಯಕ್ತವಾಗುತ್ತವೆ. ಅಯ್ಯರರ ವಿಚಾರ ಸರಣಿ ಮುಗ್ಗರಿಸಿ ಬೀಳುತ್ತಿರುವುದು ನಿಚ್ಚಳಗೊಳ್ಳುತ್ತದೆ. ಅವರು ದೇಶ ಭಾಷೆಗಳು ಶಿಕ್ಷಣ ಮಾಧ್ಯಮವಾಗಬಲ್ಲವೆಂದೂ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಕೂಡ ಅವು ಇಂಗ್ಲೀಷಿನ ಸ್ಥಾನವನ್ನು ಆಕ್ರಮಿಸುವುದು ನಿಶ್ಚಯವೆಂದೂ ಹೇಳುತ್ತಾರೆ. ಆದರೆ ಉಚ್ಚ ಶಿಕ್ಷಣಕ್ಕಾಗಿ ಇಂಗ್ಲೀಷನ್ನು ಆಶ್ರಯಿಸದೆ ಬಿಡಬಾರದೆಂದೂ "ಜಗತ್ತಿನ ಮುಂದಾಳ್ತನ" ವಹಿಸಿಕೊಳ್ಳುವುದಕ್ಕೆ ಇದು ಬೇಗದ ದೈಯೆಂದೂ ಉಪದೇಶಿಸುತ್ತಾರೆ. ನಾವು ಜಗತ್ತಿನ ದುರೀಣತ್ವವನ್ನು ಅಪೇಕ್ಷಿಸಬೇಕೋ ಅಥವಾ ಸ್ವಂತ ರಾಷ್ಟ್ರದ ಕಲ್ಯಾಣವನ್ನು ಮಾಡಿಕೊಳ್ಳಬೇಕೋ ಎಂಬುದೇ ಸಮಸ್ಯೆಯ ಪರಿಹಾರದಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತದೆಂದು ಹೇಳಬಹುದು. ಆದುದರಿಂದ ಇದನ್ನು ತುಸು ವಿವರವಾಗಿ ಚರ್ಚಿಸಿದರೆ ತಪ್ಪಾಗದು.

ಶಿಕ್ಷಣ ಮಾಧ್ಯಮವನ್ನು ಕುರಿತಾದ ತಿಕ್ಕಾಟವು ನೂರು ವರ್ಷಗಳ ಹಿಂದಿನಿಂದ—ಸರಿಯಾಗಿ ಹೇಳುವುದಾದರೆ ಬ್ರಿಟಿಷರು ಇಲ್ಲಿ ತಮ್ಮ ಆಡಳಿತ ನಿಯಂತ್ರಣವನ್ನು ಹೇರಿದಂದಿನಿಂದ—ಇದ್ದಿತು. ಭಾರತದ ಜನಸಾಮಾನ್ಯರಲ್ಲಿ 'ಜ್ಞಾನ ಪ್ರಸಾರ" ಮಾಡುವುದಕ್ಕಾಗಿ ಐರೋಪ್ಯ ಕಲೆ ಮತ್ತು ಶಾಸ್ತ್ರಗಳನ್ನು ಇಂಗ್ಲೀಷು ಭಾಷೆಯ ಮೂಲಕ ಕಲಿಯಬೇಕಾದದ್ದು ಅಗತ್ಯವೆಂದು ಬ್ರಿಟಿಷ ಪ್ರಭೃತಿಗಳು ಅಪೇಕ್ಷಿಸಿದ್ದರು. ಆದರೆ ಅವರಲ್ಲಿಯೇ ಕೆಲವು ವಿಚಾರಕರು ಈ ಅನುಚಿತ ಚಪಲವನ್ನು ಖಂಡಿಸಿದ್ದರು—'ಭಾರತೀಯರಲ್ಲಿ ನಾವು ಇಂಗ್ಲೀಷು ಭಾಷೆಯ ಮೂಲಕ ಜ್ಞಾನೋದಯವನ್ನುಂಟು ಮಾಡುವುದು ಸಾಧ್ಯವಿಲ್ಲ. ಅವರಿಗೆ ಗೊತ್ತಿರುವ ಭಾಷೆಯಲ್ಲಿಯೇ ಆ ಜ್ಞಾನವನ್ನು ಒದಗಿಸಬಹುದು. ಜನರಿಗೆ ಒಂದು ಸಾಹಿತ್ಯ ಬೇಕೆಂದಿದ್ದರೆ ಅದು ಅವರದೇ ಆಗಿರಬೇಕು. ಲೆಂಕೇಶಯರಿನ ಹತ್ತಿಯ ವಸ್ತ್ರದೊಡನೆ ಇಂಗ್ಲೀಷು ಭಾಷೆಯನ್ನೂ ಭಾರತಕ್ಕೆ ನಿರ್ಯಾತಮಾಡುವ ವಿಚಾರ ಕೇವಲ ಮೂರ್ಖತನ" ಎಂದು ಪ್ರೊ. ವಿಲ್ಸನ್ನರೇ ಮುಂತಾದವರು ಎದುರಂಗವಾಗಿ ವಿರೋಧವನ್ನು ಸೂಚಿಸಿದ್ದರು.

ಬ್ರಿಟಿಷರು ಇಂಗ್ಲೀಷು ಕಲಿತ ಭಾರತೀಯರಿಗೆ ಸರಕಾರದಲ್ಲಿ ನೌಕರಿಯನ್ನು ಕೊಡುವ ಆಮಿಷವನ್ನು ತೋರಿಸುತ್ತಿದ್ದುದರಿಂದ ಮಧ್ಯಮವರ್ಗಕ್ಕೆ ಆ ಪರಕೀಯ ಭಾಷೆಯನ್ನು ಕಲಿಯಬೇಕೆಂಬ ವ್ಯಾಮೋಹವನ್ನು ತಡೆಯುವುದಾಗಲಿಲ್ಲ. ಆಕರ್ಷಕ ಸಂಬಳ ಮತ್ತು ವಿರಾಮ ವೇತನವೇ ಮುಂತಾದ ಅನುಕೂಲತೆಗಳು ಅವರಿಗೆ ಇಂಗ್ಲೀಷನ್ನು ಕಷ್ಟಪಟ್ಟು ಕಲಿಯುವಂತೆ ಉತ್ತೇಜನ ಕೊಟ್ಟವು. ಇಂಗ್ಲೀಷು ಭಾಷೆಯನ್ನು ಈ ಪ್ರಕಾರ ಭಾರತೀಯರ ಮೇಲೆ ಹೇರಬೇಕೆಂಬ ಪ್ರವೃತ್ತಿಯನ್ನು ವಿರೋಧಿಸುತ್ತಿದ್ದ ಶ್ರೀ ಶಂಕರ ಸೇಠರೇ ಮುಂತಾದ ಭಾರತೀಯರಿಗೆ ಪ್ರಭುತ್ವದ ತಿರಸ್ಕಾರದೊಡನೆ ಮಧ್ಯಮ ವರ್ಗದ ಬಾಂಧವರ ಅಪ್ರಸನ್ನತೆಯನ್ನೂ ಇದಿರಿಸಬೇಕಾಯಿತು. ಅವರ ಪ್ರಯತ್ನಗಳು ಯಾವುವೂ ಫಲಿಸವು. ಮುಂದೊಂದು ದಿನ ಶಿಕ್ಷಣ ಮಾಧ್ಯಮವಾಗಿ ಇಂಗ್ಲೀಷು ಮೆರೆಯತೊಡಗಿತು. ಅಂದಿನಿಂದ ನೂರಕ್ಕೆ ೮೦ ಮಂದಿ ಸಾಕ್ಷರರಿದ್ದ ನಮ್ಮ ದೇಶದ ಪರಿಸ್ಥಿತಿಯು ನಿಧಾನವಾಗಿ ಬದಲುಗೊಂಡು ಇಂದಿನ ನೂರಕ್ಕೆ ೮೦ ಮಂದಿ ನಿರಕ್ಷರ ಕುಕ್ಷಿಗಳಲ್ಲಿ ಪರಿಣಮಿಸಿತು.

ಇದು ಏಕೆ ಹೀಗಾಯಿತು?— ಎಂಬ ಪ್ರಶ್ನೆಗೆ ಉತ್ತರ ಕೊಡುವಾಗ ಇಂಗ್ಲೀಷನ್ನು ಬ್ರಿಟಿಷ ಸಾಮ್ರಾಜ್ಯಶಾಹಿಗಳು ನಾಡ ಮೇಲೆ ಹೇರಿದ್ದರ ಕಾರಣವನ್ನು ವಿವರಿಸುವುದು ಅಗತ್ಯವೆನಿಸುತ್ತದೆ. ಪಾಶ್ಚಾತ್ಯ ಶಿಕ್ಷಣ ಪದ್ಧತಿಯೇ ಒಪ್ಪುವಂತೆ, ವ್ಯಕ್ತಿ-ವ್ಯಕ್ತಿಗಳಲ್ಲಿರುವ ಭಿನ್ನ ಗುಣಗಳ ತತ್ವದ ಮೇಲೆಯೇ ಈ ಪದ್ಧತಿ ರಚಿಸಲ್ಪಟ್ಟಿರುವುದು, ಮತ್ತು ಸಮಾನ ದರ್ಜೆಯನ್ನು ನಿರ್ಲಕ್ಷಿಸಿ ತನ್ನ ವ್ಯಕ್ತಿಗತ ಶ್ರೇಷ್ಠತೆಯನ್ನು ಪ್ರಸ್ಥಾಪಿಸಲು ಹುರಿದುಂಬಿಸುವುದು. ಪರಿಣಾಮವಲ್ಲಿ, ಉಚ್ಚ ಶಿಕ್ಷಣ ಸಂಪನ್ನರಾದ ಭಾರತೀಯರು ತಮ್ಮ ಇತರ ಬಾಂಧವರನ್ನು ಕಣ್ಣೆತ್ತಿಯೂ ನೋಡದಂತಹ ಮನೋಭಾವವನ್ನು ಸಾ

(೮ನೇ ಪುಟ ನೋಡಿರಿ)

ಸಸ್ಯ ಜಾತಿಗಳ ಅಪೂರ್ವ ಸಂಗ್ರಹ

ವೈಜ್ಞಾನಿಕ ಪ್ರಗತಿಗೆ ದೊರಕುತ್ತಿರುವ ಪ್ರಯೋಜನ

ಮದ್ರಾಸು, ಮುಂಬಯಿಯಂತಹ ದೊಡ್ಡ ನಗರಗಳಲ್ಲಿ ಪ್ರಪಂಚದಲ್ಲಿರುವ ವಿವಿಧ ವಸ್ತುಗಳನ್ನೆಲ್ಲ ಸುಸಜ್ಜಿತ ರೀತಿಯಲ್ಲಿ ಶೇಖರಿಸಿದ ಸಂಗ್ರಹಾಲಯಗಳನ್ನು ಕಾಣುತ್ತೇವೆ. ಇವುಗಳು ಮಕ್ಕಳಿಂದ ಹಿಡಿದು ಮುದುಕರ ವರೆಗೆ ಎಲ್ಲರ ಮನಸ್ಸನ್ನೂ ಮೋಹಿಸಿ, ಮುಗ್ಧಗೊಳಿಸುತ್ತವೆ. ಮನುಷ್ಯನ ಪ್ರಗತಿಯನ್ನರಿಯ ಬಯಸುವವನಿಗೆ, ಜಗತ್ತಿನ ಕೌತುಕವನ್ನು ತಿಳಿಯಲಿಚ್ಛಿಸುವ ಕುತೂಹಲಿಗೆ ಇದು ಆರಾಧ್ಯ ಕೇಂದ್ರ. ವಸ್ತು ಸಂಗ್ರಹಾಲಯಗಳ ಉಪಯುಕ್ತತೆಯು ಈಗ ಹೆಚ್ಚಿನವರಿಗೆ ಮನವರಿಕೆಯಾಗಿದ್ದು ಪ್ರತಿಯೊಂದು ಶೈಕ್ಷಣಿಕ ಕೇಂದ್ರದಲ್ಲಿಯೂ "ಚಿಕ್ಕ" ವಸ್ತುಸಂಗ್ರಹಾಲಯವಿರುವಂತೆ ಪ್ರಯತ್ನಗಳು ನಡೆಯುತ್ತವೆ. ಇಂಥ ಸಂಗ್ರಹಗಳು ಎಲ್ಲ ವಸ್ತುಗಳನ್ನು ಒಳಗೊಳ್ಳಬಹುದು: ಅಥವಾ ಮೃಗಾಲಯ, ಸಸ್ಯಾಲಯ ಮುಂತಾದವುಗಳಂತೆ ಯಾವುದಾದರೊಂದು ವಿಶಿಷ್ಟ ಕ್ಷೇತ್ರಕ್ಕೆ ಮಾತ್ರ ಪ್ರಾಧಾನ್ಯ ಕೊಡಬಹುದು.

ಕಳೆದ ತಿಂಗಳ ೨೦ನೇ ದಿನಾಂಕ ಮದ್ರಾಸಿನ ಕೊಯಮುತ್ತೂರಿನಲ್ಲಿ "ಮದ್ರಾಸು ರಾಜ್ಯದ ಸಸ್ಯ ಸಂಗ್ರಹಾಲಯ"ದ ಶತ ಸಾಂವತ್ಸರಿಕೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ಆಗ ಈ ಸಂಸ್ಥೆಯ ಹುಟ್ಟು ಹಾಗು ಬೆಳವಣಿಗೆಗೆ ಸಂಬಂಧಿಸಿದ ಅನೇಕ ಭಾಷಣಗಳು ನಡೆದವು. ಜನರಿಗೆ ಇಂತಹ ಕೇಂದ್ರಗಳಿಂದಾಗುವ ಸಹಾಯವೇನೆಂಬುದನ್ನು ವಿವರಿಸಲಾಯಿತು. ಸಸ್ಯ ಸಂಗ್ರಹಾಲಯವು—ಹೆಸರೇ ಸೂಚಿಸುವಂತೆ—ನಾನಾ ಜಾತಿಯ ಸಸ್ಯಗಳನ್ನು ಶೇಖರಿಸಿ, ಜೋಪಾನವಾಗಿಡುವ ಕೇಂದ್ರ. ಅರಣ್ಯಗಳಿರಲಿ, ಹಳ್ಳಿಗಳಿರಲಿ, ಮೈದಾನವಿರಲಿ, ಮರು ಭೂಮಿಯಿರಲಿ, ನದಿಯಿರಲಿ, ಕೆರೆಯಿರಲಿ, ಬಾವಿಯಿರಲಿ, ಸಾಗರವಿರಲಿ—ಅಲ್ಲೆಲ್ಲ ಬೆಳೆಯುವ ಸಸ್ಯ ಜಾತಿಯನ್ನು ಜಾಗರೂಕತೆಯಿಂದ ಸಂಗ್ರಹಿಸಿ, ವಿವಿಧ ವರ್ಗಗಳಾಗಿ ವಿಂಗಡಿಸಿ, ವೈಜ್ಞಾನಿಕ ಸಂಶೋಧನೆಗೆ ನೆರವನ್ನೊದಗಿಸಿ ಕೊಡುವುದು ಈ ಕೇಂದ್ರದ ಕರ್ತವ್ಯ. ಇಲ್ಲಿ ಹೂಗಳನ್ನೂ ಹಣ್ಣುಗಳನ್ನೂ ಒಣಗಿಸಿ ಕೆಡದಂತೆ ಇಡಲಾಗುತ್ತದೆ. ಇವುಗಳನ್ನು ನೋಡಹೋದವರಿಗೆ ಪ್ರತಿಯೊಂದೂ ಸಸ್ಯ ಜಾತಿಯ ಹೆಸರು, ಅದನ್ನು ಸಂಗ್ರಹಿಸಿದ ಸ್ಥಳ ಮತ್ತು ತಾರೀಕು, ಅದು ಹೂ ಬಿಡುವ ಹಾಗು ಫಲ ಕೊಡುವ ಸಮಯ, ನಮಗೆ ಅದರಿಂದ ಏನು ಪ್ರಯೋಜನವಿದೆಯೆಂಬ ವಿಚಾರಗಳನ್ನೊಳಗೊಂಡ ಪಟ್ಟಿಯು ಓದಲು ಸಿಗುತ್ತದೆ.

ಭಾರತದಲ್ಲಿ ಕಲ್ಕತ್ತೆಯಲ್ಲಿರುವ ಸಸ್ಯ ಸಂಗ್ರಹಾಲಯವೇ ಅತಿ ದೊಡ್ಡದು. ಆನಂತರ ಕೊಯಮುತ್ತೂರಿನ ಕೇಂದ್ರವು ಬರುತ್ತದೆ. ಇಲ್ಲಿ ಈಗ ೧,೭೦,೦೦೦ ಸಸ್ಯ ಜಾತಿಗಳ ಸಂಗ್ರಹವುಂಟು: ಇದರಲ್ಲಿ ೧,೨೫,೦೦೦ ಜಾತಿಗಳು ಮದ್ರಾಸು, ಮೈಸೂರು, ಕೊಡಗು, ತಿರು-ಕೊಚ್ಚಿಗಳಲ್ಲಿ ನೋಡಸಿಗುವ ಸಸ್ಯಗಳಿಂದ ಸಂಗ್ರಹಿಸಲ್ಪಟ್ಟವು; ೨೫,೦೦೦ ಜಾತಿಗಳು ಉತ್ತರ ಭಾರತ, ಬರ್ಮಾ, ಮಲಯಾ, ಸಿಂಹಳ ಮತ್ತಿತರ ಭಾಗಗಳಿಂದ ಸಂಗ್ರಹಿಸಲ್ಪಟ್ಟವು. ಉಳಿದವುಗಳು ತೋಟಗಾರಿಕೆ ಹಾಗು ಅಲಂಕಾರ ಸಸ್ಯಗಳ ಮಾದರಿಯಾಗಿವೆ. ಡೆಹರಾಡೂನಿನಲ್ಲಿ ಭಾರತದಲ್ಲಿ ಮೂರನೆಯ ಸ್ಥಾನವನ್ನು ಹೊಂದಿದ ಸಸ್ಯ ಸಂಗ್ರಹಾಲಯವಿದ್ದರೂ ಅಲ್ಲಿ ಅರಣ್ಯಗಳಲ್ಲಿ ದೊರೆಯುವ ಸಸ್ಯ ಜಾತಿಗಳ ಆಧಿಕ್ಯವೇ ಕಂಡುಬರುತ್ತದೆ. ದೇಶದ ಇತರ ಕೆಲವು ನಗರಗಳಲ್ಲಿಯೂ ಚಿಕ್ಕ ಚಿಕ್ಕ ಸಸ್ಯ ಸಂಗ್ರಹಾಲಯಗಳು ಇವೆ—ಇವಾವುದೂ ಕಲ್ಕತ್ತೆ ಅಥವಾ ಕೊಯಮುತ್ತೂರಿನ ಕೇಂದ್ರಗಳಷ್ಟು ಮಹತ್ವವನ್ನು ಪಡೆದಿಲ್ಲ.

ಕೊಯಮುತ್ತೂರಿನಲ್ಲಿ ಈ ಸಂಸ್ಥೆ ನೆಲೆಗೊಂಡದ್ದು ೧೯೦೯ನೇ ಇಸವಿಯಲ್ಲಿ—ಅದಕ್ಕೆ ಮುಂಚೆ ಮದ್ರಾಸಿನಲ್ಲಿಯೇ ಈ ಕೇಂದ್ರವಿತ್ತು. ಮದ್ರಾಸಿನ ವೈದ್ಯಕೀಯ ಕಾಲೇಜಿನಲ್ಲಿ ಶಿಕ್ಷಕರಾಗಿದ್ದ ಡಾ. ಕ್ಲೆಗಾರ್ನ್ ಎಂಬವರು ಇತರ ಅನೇಕ ಮಂದಿಯ ಸಹಕಾರದಿಂದ ೧೮೫೩ರಲ್ಲಿ ಈ ಸಂಗ್ರಹಾಲಯವನ್ನು ಸ್ಥಾಪಿಸಿದರು. ೧೮೫೩ರ ಸುಮಾರಿನಲ್ಲಿ ಕರ್ನಲ್ ಬೆಡೋಮ್ ಎಂಬವರು ಯುರೋಪಿಗೆ ಮರಳಿದಾಗ, ತಮ್ಮೊಡನಿದ್ದ ಅಪೂರ್ವ ಸಸ್ಯ ಸಂಗ್ರಹವನ್ನು ೧೫೦೦ ರೂಪಾಯಿಗಳಿಗೆ ಪ್ರತಿಯಾಗಿ ಈ ಕೇಂದ್ರಕ್ಕೆ ಒಪ್ಪಿಸಿಕೊಟ್ಟರು. ದಕ್ಷಿಣ ಭಾರತದ ಅರಣ್ಯ ಹಾಗು ಗುಡ್ಡ ಬೆಟ್ಟಗಳಲ್ಲಿ ಲಭ್ಯವಿರುವ ಮರ ಗಿಡ, ಮೂಲಿಕೆ, ನಾರು ಬೇರು ಮುಂತಾದವುಗಳನ್ನೊಳಗೊಂಡ ೬೦೦೦ ಸಸ್ಯ ಜಾತಿಗಳು ಅವರ ಸಂಗ್ರಹದಲ್ಲಿದ್ದವು. ಇವುಗಳಲ್ಲಿ ೧೫೯೭ ಜಾತಿಯ ಸಸ್ಯಗಳು ಈ ಕೇಂದ್ರಕ್ಕೆ ತೀರ ಹೊಸತಾಗಿದ್ದವು. ಉಳಿದವು ಜಗತ್ತಿನ ಬೇರೆ ಸಸ್ಯ ಸಂಗ್ರಹಾಲಯಗಳೊಡನೆ ವಿನಿಮಯ ಮಾಡಿಕೊಳ್ಳುವುದಕ್ಕೆ ಅನುಕೂಲವಿದ್ದವು. ಮುಂದೆ ಪ್ರೊ. ಲಾಸನ್ ಎಂಬವರು ಪ್ರತ್ಯೇಕವಾಗಿ ಸಂಗ್ರಹಿಸಿದ್ದ ಸಸ್ಯ ಜಾತಿಗಳನ್ನೂ ಈ ಸಂಗ್ರಹದೊಂದಿಗೆ ಸೇರಿಸಲಾಯಿತು. ಮದ್ರಾಸಿನಿಂದ ಈ ಕೇಂದ್ರವು ಕೊಯಮುತ್ತೂರಿಗೆ ಒಯ್ಯಲ್ಪಟ್ಟಿತು.

ಆಗ ದಕ್ಷಿಣ ಭಾರತದ ಸಸ್ಯ ಜಾತಿಗಳೇ ಹೆಚ್ಚಾಗಿದ್ದು ೪೦,೦೦೦ ಮಾದರಿಯನ್ನೊಳಗೊಂಡ ಈ ಕೇಂದ್ರವು ರಂಗಾಚಾರಿ, ವೆಂಕಟರಮಣ, ಚಂದ್ರಶೇಖರನ್, ಜಾಕೋಬ್ ಮುಂತಾದ ಭಾರತೀಯ ಸಸ್ಯ ವಿಜ್ಞಾನಿಗಳ ಪ್ರಯತ್ನದಿಂದ ಇಂದಿನ ಈ ವಿಶಾಲ ಸ್ವರೂಪವನ್ನು ಹೊಂದುವಂತಾಯಿತು. ಈ ಕೆಲಸದಲ್ಲಿ ಇವರು ತೋರಿಸಿದ ಶ್ರದ್ಧೆಯು ಸ್ಪೃಹಣೀಯವಾಗಿತ್ತು. ದಕ್ಷಿಣ ಭಾರತದ ಹುಲ್ಲುಗಳು ಮುಂತಾದ ಅಪೂರ್ವ ಕೈಪಿಡಿಗಳನ್ನು ಇವರು ಪ್ರಕಟಿಸಿ, ಸಸ್ಯವಿಜ್ಞಾನ ಸಾಹಿತ್ಯಕ್ಕೆ ಅನುಪಮ ಕಾಣಿಕೆ ನೀಡಿದರು. ದೇಶದ ಸಸ್ಯ ಸಂಪತ್ತನ್ನು ಯಾವ ಪ್ರಕಾರ ಉಪಯೋಗಿಸಿಕೊಳ್ಳಬೇಕೆಂದು ಇಲ್ಲಿ ದುಡಿಯುವ ಸಸ್ಯ ವಿಜ್ಞಾನಿಗಳು ಪರಿಶ್ರಮ ಪೂರ್ವಕ ಅನುಸಂಧಾನಗಳನ್ನು ನಡೆಸುತಿದ್ದಾರೆ. ಸಸ್ಯ ಜಾತಿಯ ಬಗ್ಗೆ ಕೇಳಲಾದ ಮಾಹಿತಿಯನ್ನು ಪೂರೈಸಲು ಇವರು ನೋಡುತ್ತಾರೆ. ಪ್ರಾದೇಶಿಕ ಸ್ವರೂಪದ ಅನುಸಂಧಾನಗಳನ್ನೂ ಈ ಕೇಂದ್ರವು ನಡೆಸುತಿದ್ದು, ತಿರುನೆಲ್ವೇಲಿ ಜಿಲ್ಲೆಯಲ್ಲಿ ಕೆಲಸವನ್ನು ಮುಗಿಸಿ, ಇದೀಗ ರಾಮನಾಥಪುರಂ ಹಾಗು ಕೊಯಮುತ್ತೂರು ಜಿಲ್ಲೆಗಳನ್ನು ಕೈಗೆತ್ತಿಕೊಂಡಿದ್ದಾರೆ. ನಮ್ಮ ರಾಜ್ಯವೂ ದೇಶವೂ ಬಹಳ ಆಶ್ಚರ್ಯಕರವಾದ ಹವಾಮಾನವನ್ನು ಹೊಂದಿದೆ—ಸಾಗರದ ಗಾಳಿ ಬೀಸುವ ತಂಪು ನೆಲದಿಂದ ಉರಿಸೆಕೆಯಿಂದ ಬೆಂದು ಹೋಗುವ ಮರು ಭೂಮಿಯ ವರೆಗೂ ಛಳಿಯಿಂದ ನಡುಗಬೇಕಾದ ಪರ್ವತಗಳ ವರೆಗೂ ನಾನಾ ಪ್ರಕಾರದ ವಾತಾವರಣವುಂಟು. ಇಲ್ಲಿ ಬೆಳೆಯುವ ಸಸ್ಯಗಳಲ್ಲಿ ವೈವಿಧ್ಯವು ಸ್ವಾಭಾವಿಕವಾಗಿಯೇ ಕಂಡು ಬರುತ್ತದೆ. ಅವುಗಳ ವಿಶಿಷ್ಟ ಗುಣಲಕ್ಷಣಗಳನ್ನು ಕಂಡುಹಿಡಿದು ಮನುಷ್ಯನ ಉಪಯೋಗಕ್ಕೆ ಬಳಸಿಕೊಳ್ಳುವ ತಂತ್ರವನ್ನು ಕರಗತಮಾಡಿಕೊಳ್ಳುವುದೇ ಸಸ್ಯ ವಿಜ್ಞಾನಿಗಳ ಮಹತ್ವಾಕಾಂಕ್ಷೆಯಾಗಿದೆ. ತೋಟಗಾರಿಕೆ, ಕೃಷಿ ಹಾಗು ಔಷಧ ವಿಜ್ಞಾನದ ಕ್ಷೇತ್ರಗಳಲ್ಲಿ ಇಂತಹ ಸಂಶೋಧನೆಗಳಿಂದ ದೊರಕಬಹುದಾದ ಸಹಾಯವನ್ನು ವರ್ಣಿಸಿ ಮುಗಿಯದು.

ಫ್ಲೆಮಿಂಗನು ಪೆನ್ಸಿಲಿನ್ ದ್ರವ್ಯವನ್ನು ಅಕಸ್ಮಾತ್ತಾಗಿ ಕಂಡುಹಿಡಿದಂತೆ, ನಮ್ಮಲ್ಲಿಯ ಸಸ್ಯ ವಿಜ್ಞಾನಿಗಳೂ ಏನಾದರೊಂದು ಅದ್ಭುತ ಗಿಡಮೂಲಿಕೆಯನ್ನು ನಿಕಟ ಭವಿಷ್ಯದಲ್ಲಿಯೇ ಕಂಡುಹಿಡಿಯಬಹುದು. ಇದಲ್ಲದಿದ್ದರೂ ನಮ್ಮ ಆಯುರ್ವೇದ ಶಾಸ್ತ್ರದಲ್ಲಿ ಹೇಳಲಾದ ನಾರು ಬೇರುಗಳ ಉಪಯುಕ್ತತೆಯನ್ನು ಆಧುನಿಕ ವಿಜ್ಞಾನ ಶಾಸ್ತ್ರದ ಬೆಳಕಿನಲ್ಲಿ ನಿರೀಕ್ಷಿಸಬಹುದು. ಎಷ್ಟೋ ನದಿಗಳಲ್ಲಿ ಸ್ನಾನಮಾಡುವುದರಿಂದ ರೋಗಗಳು ನಿವಾರಣೆಹೊಂದುವ ವಿಚಿತ್ರವನ್ನು ಕೇಳುತ್ತೇವೆ— ಈ ನದಿಗಳು ಹರಿದು ಬರುವ ಪ್ರದೇಶದಲ್ಲಿ ಯಾವುದೋ ರೋಗ ನಿವಾರಕ ಗುಣವನ್ನೊಳಗೊಂಡ ಸಸ್ಯ ಸಂಪತ್ತು ಹುದುಗಿದೆಯೆಂದೂ ಇದರಿಂದಲೇ ಈ ಅದ್ಭುತ ಜರಗುತ್ತದೆಂದೂ ಹೇಳಲಾಗುತ್ತದೆ. ತುಳಸಿಗೂ ಅಶ್ವತ್ಥ ವೃಕ್ಷಕ್ಕೂ ಸುತ್ತು ಬರುವುದರಿಂದ ಶ್ವಾಸ ಹಾಗು ರಕ್ತ ಸಂಬಂಧದ ದೋಷಗಳು ಪರಿಹಾರವಾಗುತ್ತವೆಂದು ನಾವು ಕೇಳಿದ್ದೇವೆ. ನಮ್ಮ ಉಪವನ ಹಾಗು ಹೂದೋಟಗಳಲ್ಲಿ ಇಂತಹ ಚಮತ್ಕಾರ ಮೂಡಿ ಬರುವಂತೆ ಸಸ್ಯ ವಿಜ್ಞಾನಿಗಳು ಪ್ರಯತ್ನವನ್ನು ನಡೆಸಬಲ್ಲರು. ಅನ್ನಾಭಾವದ ಈ ಕಾಲದಲ್ಲಿ ಮಾತ್ರೆಯೊಂದನ್ನು ನುಂಗಿ, ನೀರು ಕುಡಿದಷ್ಟಕ್ಕೆ ಹಸಿವಿನ ಬಾಧೆ ನಿವಾರಣೆ ಹೊಂದುವ ಸಸ್ಯ ಜಾತಿಯನ್ನೂ ಅವರು ಶೋಧಿಸಬಹುದು. ಕೈಗಾರಿಕೆಗಳಿಗೆ ಹೊಸ ಹೊಸ ಕಚ್ಚಾ ವಸ್ತುಗಳನ್ನು ಒದಗಿಸಿ ಕೊಡಬಹುದು; ಇಂಥದೆಲ್ಲ ಕೆಲಸಗಳಿಗೆ ಸಸ್ಯ ಸಂಗ್ರಹಾಲಯಗಳಿಂದಲೇ ಹೆಚ್ಚಿನ ಸಹಾಯ ದೊರಕುತ್ತದೆ.

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶೆಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತನೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. 3—8—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾಸಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ

ಆಂಧ್ರ ಕೇಸರಿ ಪ್ರಕಾಶಮರಿಂದ ಪ್ರಾರಂಭೋತ್ಸವ

ಮೊನ್ನೆ ದಿನಾಂಕ ೨ರಂದು ಆಂಧ್ರ ರಾಜ್ಯದ ಇತಿಹಾಸದಲ್ಲಿ ಮಹತ್ವಪೂರ್ಣವಾದ ಘಟನೆಯೊಂದು ನಡೆಯಿತು. ತೆಲುಗರ ಬಹು ದಿನಗಳ ಆಕಾಂಕ್ಷೆಯಾಗಿದ್ದ, ತಿರುಪತಿಯಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಚಾರವು ಅಂದು ಮೂರ್ತಿಸ್ವರೂಪವನ್ನು ಹೊಂದಿತು. ಆಂಧ್ರಕೇಸರಿ ಪ್ರಕಾಶಮರು "ಆಂಧ್ರ ರಾಜ್ಯದ ಸಾಂಸ್ಕೃತಿಕ ಪ್ರಗತಿಯಲ್ಲಿ ಈ ವಿಶ್ವವಿದ್ಯಾಲಯದ ಸ್ಥಾಪನೆಯು ಒಂದು ಮೈಲುಗಲ್ಲು" ಎಂದು ಸಾರುತ್ತಾ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಭಾರತದ ಉಳಿದ ವಿಶ್ವವಿದ್ಯಾಲಯಗಳು ಸರಕಾರದ ಇಲಾಖೆಗಳಲ್ಲಿ ದುಡಿಯುವುದಕ್ಕೆ ಹೇಳಿಸಿದ ನೌಕರ ವರ್ಗವನ್ನು ಮಾತ್ರ ರೂಪಿಸುತ್ತವೆಂದೂ ಆದರೆ ಶ್ರೀಕ್ಷೇತ್ರ ತಿರುಪತಿಯಲ್ಲಿ ವೆಂಕಟೇಶ್ವರನ ಹೆಸರಿನಲ್ಲಿ ತಲೆಯೆತ್ತಿದ ಈ ಶಿಕ್ಷಣ ಕೇಂದ್ರವು ರಾಷ್ಟ್ರೀಯ ಜಾಗೃತಿಯನ್ನುಂಟು ಮಾಡಿ ಸನ್ಮಾರ್ಗ ಪ್ರವೃತ್ತರಾದ ಯುವಕ—ಯುವತಿಯರನ್ನೆ ಹೊರತರುವುದೆಂದೂ ಪ್ರಕಾಶಮರು ಹೇಳಿದರು. ರಾಷ್ಟ್ರಪತಿ ರಾಜೇಂದ್ರ ಪ್ರಸಾದ, ಉಪರಾಷ್ಟ್ರಪತಿ ರಾಧಾಕೃಷ್ಣನ್, ಪ್ರಧಾನಿ ನೆಹರೂ, ಚಕ್ರವರ್ತಿ ರಾಜಗೋಪಾಲಾಚಾರಿ ಮುಂತಾದ ಪ್ರಭೃತಿಗಳಿಂದ ಬಂದ ಶುಭ ಸಂದೇಶಗಳಲ್ಲಿಯೂ ಶಿಕ್ಷಣ ಕ್ಷೇತ್ರದಲ್ಲಿ ಹೊಸ ವೈಶಿಷ್ಟ್ಯವನ್ನು ಸ್ಥಾಪಿಸಲು ಈ ಸಂಸ್ಥೆ ಪ್ರಯತ್ನಿಸಿ ಜಯಶೀಲವಾಗಲೆಂಬ ಹಾರೈಕೆ ಇದ್ದಿತು.

ದಕ್ಷಿಣ ಭಾರತದವರಿಗೆ ಮೊದಲು ಇದ್ದದ್ದು ಮದ್ರಾಸು ವಿಶ್ವವಿದ್ಯಾಲಯ ಮಾತ್ರ—ಆದರೆ ಅದು ಇಂದು ತನ್ನ ಐದನೇ ಶಿಶುವಿಗೆ ಜನನವನ್ನು ಕೊಟ್ಟಿರುವುದು ಆಂಧ್ರರ ಪಾಲಿಗೆ ವಾಲ್ಟೇರದಲ್ಲಿ ಈಗಾಗಲೇ ಒಂದು ವಿಶ್ವವಿದ್ಯಾಲಯವುಂಟು. ಆದರೆ ರಾಯಲ ಸೀಮೆಯ ಆವಶ್ಯಕತೆಗಳನ್ನು ಪೂರೈಸುವುದಕ್ಕೋಸ್ಕರ ರಾಜ್ಯದ ಪಶ್ಚಿಮ ಭಾಗದಲ್ಲಿ—ಶ್ರೀ ವೆಂಕಟೇಶ್ವರನ ಸನ್ನಿಧಿಯಲ್ಲಿ—ಪೌರಸ್ತ್ಯ ಸಂಸ್ಕೃತಿಯ ರಕ್ಷಣೆ ಹಾಗು ಅಭಿವೃದ್ಧಿಯೇ ಧ್ಯೇಯವಾಗುಳ್ಳ ಮತ್ತು ಮಾನವೀಯ ಧರ್ಮಕ್ಕೆ ಪ್ರೋತ್ಸಾಹ ಕೊಡುವ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ೫೦ ವರ್ಷಗಳಿಂದ ಚಳವಳವನ್ನು ತೆಲುಗರು ನಡೆಸುತಿದ್ದರು. ಮದ್ರಾಸಿನಲ್ಲಿ ೧೯೪೬ರಲ್ಲಿ ಪ್ರಕಾಶಮರ ಮಂತ್ರಿ ಮಂಡಳವು ಅಧಿಕಾರದಲ್ಲಿದ್ದಾಗ ತಿರುಪತಿಯ ದೇವಳದವರು ೨೫ ಲಕ್ಷ ರೂಪಾಯಿಗಳ ಸಹಾಯವನ್ನು ಕೊಡಲೊಪ್ಪಿ ಗೊತ್ತುವಳಿಯನ್ನು ಸ್ವೀಕರಿಸಿದರು. ಪ್ರಕಾಶಮರು ಶಾಸನ ಸಭೆಯಲ್ಲಿ ತಿರುಪತಿಯಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಚಾರವನ್ನು ಪ್ರಕಟಪಡಿಸಿದರು; ಆಗಿನ ಹಿಂದೂ ಧಾರ್ಮಿಕ ಋಬಳಿಗಳ ಸಚಿವ ಶ್ರೀ ಕೋಟಿ ರೆಡ್ಡಿಯವರು ತಿರುಪತಿಯಲ್ಲಿ ಯೋಗ್ಯ ಸ್ಥಳದ ಆಯ್ಕೆಗೆಂದು ಹೊರಟರು. ಆದರೆ ಅಷ್ಟರಲ್ಲಿ ಪ್ರಕಾಶಮರ ಮಂತ್ರಿ ಮಂಡಳಿ ರಾಜೀನಾಮೆಯನ್ನು ಕೊಟ್ಟದ್ದರಿಂದ, ಈ ವಿಷಯದಲ್ಲಿ ಪ್ರಯತ್ನಗಳು ಮುಂದೊತ್ತಲ್ಪಡಲಿಲ್ಲ.

ಆದರೆ ಆಂಧ್ರರು ತಮ್ಮ ಆಕಾಂಕ್ಷೆಗೆ ತಿಲಾಂಜಲಿಯನ್ನು ಕೊಟ್ಟಿರಲಿಲ್ಲ—ಅವರ ಪುಣ್ಯದಿಂದ ಕಳೆದ ಅಕ್ಟೋಬರದಲ್ಲಿ ಆಂಧ್ರ ರಾಜ್ಯವು ಅಸ್ತಿತ್ವಕ್ಕೆ ಬಂತು; ಮತ್ತು ಪ್ರಕಾಶಮರೇ ಮುಖ್ಯ ಮಂತ್ರಿಯಾಗಿ ಅಧಿಕಾರವನ್ನು ವಹಿಸಿದರು. ತಿರುಪತಿಯಲ್ಲಿ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ವಿಚಾರವು ಮರಳಿ ಮಹತ್ವವನ್ನು ಪಡೆಯಿತು. ಇದೇ ಫೆಬ್ರುವರಿಯಲ್ಲಿ ಸಚಿವ ಸಂಪುಟದ ಉಪಸಮಿತಿಯೊಂದು ಶ್ರೀಗಳಾದ ರಂಗನಾಥ ರಾವ್ ಹಾಗು ಗೋವಿಂದ ರಾಜುಲು ನಾಯಿಡೂರವರು ಒಪ್ಪಿಸಿದ ವರದಿಯನ್ನು ಪರಿಶೀಲಿಸಿ, ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಸಂಕಲ್ಪಿಸಿತು. ಶಾಸನ ಸಭೆಯಲ್ಲಿ ವಿಧೇಯಕವನ್ನೂ ತರಲಾಯಿತು—ಅದು ಜೂಲೈಯಲ್ಲಿ ವಾಲ್ಟೇರ ಅಧಿವೇಶನದಲ್ಲಿ ಮಂಜೂರಾಯಿತು. ಪ್ರಾರಂಭಿಕ ವ್ಯವಸ್ಥೆಗಳನ್ನು ತ್ವರೆಗೊಳಿಸಿದ್ದರಿಂದ ಇಷ್ಟು ಬೇಗನೆ ಭಾರತದಲ್ಲಿ ಮೂವತ್ತೊಂದನೆಯ ವಿಶ್ವವಿದ್ಯಾಲಯವು ತಲೆ ಎತ್ತುವುದು ಸಾಧ್ಯವಾಯಿತು.

ತಿರುಪತಿಯಲ್ಲಿಯೇ ಈ ಕೇಂದ್ರವನ್ನು ನೆಲೆಗೊಳಿಸಲಿಕ್ಕೆ ವಿಶಿಷ್ಟ ಕಾರಣಗಳುಂಟು—ಶ್ರೀ ವೆಂಕಟೇಶ್ವರ ದೇವಸ್ಥಾನದ ಸಮಿತಿಯು ೧೬ ಲಕ್ಷ ರೂಪಾಯಿ ಬೆಲೆ ಬಾಳುವ ಕಟ್ಟಡಗಳನ್ನೂ ಭೂಮಿಯನ್ನೂ ಇತರ ಸಲಕರಣೆಗಳನ್ನೂ ಕೊಡಲೊಪ್ಪಿದೆಯಲ್ಲದೆ ಪ್ರತಿವರ್ಷ ಎರಡೂವರೆ ಲಕ್ಷ ರೂಪಾಯಿಗಳ ಸಹಾಯಧನವನ್ನು ನೀಡಲೂ ಮುಂಬಂದಿರುವುದು. ಇದು ಶಿಕ್ಷಣಕೇಂದ್ರವನ್ನು ಸ್ಥಾಪಿಸುವಲ್ಲಿ ಮಹತ್ವದ ಆಕರ್ಷಣೆಯಾಯಿತು. ತಿರುಪತಿಯು ಭಾರತದಲ್ಲಿಯೇ ಪ್ರಸಿದ್ಧವಾದ ತೀರ್ಥಕ್ಷೇತ್ರವಾಗಿದ್ದು, ಸಾಂಸ್ಕೃತಿಕ ದೃಷ್ಟಿಯಲ್ಲಿ ಉನ್ನತಿಯನ್ನು ಹೊಂದಿದ ಸ್ಥಳ, ಇಲ್ಲಿ ಘನ ಪಂಡಿತರೂ ಕೀರ್ತನಕಾರರೂ ಆಗಿ ಹೋಗಿದ್ದಾರೆ. ಸಂಸ್ಕೃತ ಶಿಕ್ಷಣದ ಕೇಂದ್ರವಾಗಿಯೂ ಇದು ಹೆಸರುಗೊಂಡಿದೆ. ದೇವಳದ ವಶದಲ್ಲಿರುವ ಪ್ರಾಚೀನ ಪುಸ್ತಕ ಭಂಡಾರವು ಅತ್ಯಪೂರ್ವವಾದ ಸಂಗ್ರಹ. ಪೌರಸ್ತ್ಯ ಸಂಸ್ಕೃತಿಯ ಜಿಜ್ಞಾಸುವಿಗೆ ಇವುಗಳು ಅಧ್ಯಯನಕ್ಕಾಗಿ ದೊರೆಯುವುದು ಸುದೈವವೆಂದೇ ಹೇಳಬಹುದು.

ವಿಧೇಯಕದಲ್ಲಿ ಹೇಳಲಾದಂತೆ ಈ ವಿಶ್ವವಿದ್ಯಾಲಯವು ಉಚ್ಚಮಟ್ಟದ ಶಿಕ್ಷಣಕ್ಕೂ ಸಂಶೋಧನೆಗೂ ಪ್ರೋತ್ಸಾಹ ಕೊಡುವುದು; ಮುಖ್ಯವಾಗಿ ಪೌರಸ್ತ್ಯ ಸಂಸ್ಕೃತಿ, ಸಂಸ್ಕೃತ, ಪ್ರಾಚೀನ ಭಾರತೀಯ ಕಲೆ ಮತ್ತು ನಾಗರಿಕತೆ, ಶಿಲ್ಪ ಹಾಗು ಲಲಿತ ವಿದ್ಯೆಗಳನ್ನು ಅಭಿವೃದ್ಧಿಪಡಿಸುವುದು. ಮಾನವೀಯ ಧರ್ಮದ ಬೆಳವಣಿಗೆಗೆ ನೆರವಾಗುವುದೂ ಮುಖ್ಯ ಕರ್ತವ್ಯವೆಂದು ಹೇಳಲ್ಪಟ್ಟಿರುವುದು. ತಿರುಪತಿಯ ಬೆಟ್ಟಗಳ ಬುಡದಲ್ಲಿ, ನಗರಸಭೆಯ ಆವರಣದ ಹೊರಗೆ, ೧೦೦೦ ಎಕ್ರೆ ಜಾಗದಲ್ಲಿ ಈ ವಿಶ್ವವಿದ್ಯಾಲಯ ನೆಲೆಗೊಳ್ಳುತ್ತದೆ. ಇದಲ್ಲದೆ ಆಟದ ಮೈದಾನಕ್ಕಾಗಿ ೩೦ ಎಕ್ರೆ ಭೂಮಿಯನ್ನೂ ಕೊಡಲಾಗಿರುವುದು. ವಿಶ್ವವಿದ್ಯಾಲಯವು ಬೆಳೆದ.ಕೊಂಡಂತೆಲ್ಲ ಅದನ್ನು ಸುತ್ತಲೂ ವಿಸ್ತರಿಸಲು ಸಾಧ್ಯವಾದಷ್ಟು ಸ್ಥಳವು ಇಲ್ಲಿ ಕಂಡು ಬರುವುದು. ಇಲ್ಲಿ ಐದು ಭವ್ಯ ಕಟ್ಟಡಗಳು ಇವೆ. ೩೦೦ ಅಡಿ ಚಚ್ಚೌಕದ ಮುಖ್ಯ ಕಟ್ಟಡವು (ಇದಕ್ಕೆ ೧೦ ಲಕ್ಷ ರೂಪಾಯಿಗಳ ವೆಚ್ಚ ಬಂದೀತು) ಮಾಳಿಗೆಯುಳ್ಳ ಕೂಡಿದ್ದು, ಕೆಳಗಿನ ಅಂತಸ್ತಿನಲ್ಲಿ ರಸಾಯನ ಶಾಸ್ತ್ರ, ಭೌತ ಶಾಸ್ತ್ರ, ಪ್ರಾಣಿಗಳ ಉತ್ಪತ್ತಿ ಶಾಸ್ತ್ರಗಳಲ್ಲಿ ಶಿಕ್ಷಣ ಕೊಡುವ ಪ್ರಯೋಗ ಶಾಲೆಗಳಿಂದ ಸುಸಜ್ಜಿತವಾಗಿದೆ. ಉಪ್ಪರಿಗೆಯಲ್ಲಿ ಗಣಿತ, ಅರ್ಥಶಾಸ್ತ್ರ ಮತ್ತು ತತ್ವಜ್ಞಾನಗಳನ್ನು ಕಲಿಸುವ ಕಲಾ ವಿಭಾಗವು ನಡೆಸಲ್ಪಡುತ್ತವೆ.

ಇದಕ್ಕೆ ಪೂರ್ವದಲ್ಲಿ ಎರಡು ಕಟ್ಟಡಗಳು ವಿದ್ಯಾರ್ಥಿ ಭವನಗಳಾಗಿ ಕೆಲಸ ಮಾಡುತ್ತವೆ. ಪಶ್ಚಿಮದಲ್ಲಿರುವ ಶ್ರೀ ವೆಂಕಟೇಶ್ವರ ಹುಡುಗಿಯರ ಕಾಲೇಜು ೨೭೦ ಅಡಿ ಉದ್ದವಿದ್ದು ಎಂಟು ವಿಶಾಲವಾದ ಭವನಗಳನ್ನು ಹೊಂದಿರುವುದರಿಂದ, ಇಲ್ಲಿ ವಿಶ್ವವಿದ್ಯಾಲಯದ ಪುಸ್ತಕ ಭಂಡಾರವನ್ನೂ ಕಾರ್ಯಾಲಯವನ್ನೂ ತಾತ್ಪೂರ್ತಿ

[೧೨ನೇ ಪುಟ ನೋಡಿರಿ]

ZANDU KESARI JIVAN

ಝಂಡೂ ಕೇಸರಿ ಜೀವನ

ಕೆಮ್ಮು, ನೆಗಡಿ, ರಾಜಯಕ್ಷ್ಮ, ಮಿದುಳ ನಿತ್ರಾಣ, ಅಕಾಲಿಕ ವೃದ್ಧಾಪ್ಯ, ಸರ್ವಸಾಮಾನ್ಯ ಬಲಹೀನತೆಗಳಿಗೆಲ್ಲಾ **ಕೇಸರಿ ಜೀವನವು** ಹೆಸರುವಾಸಿಯಾದದ್ದು ಅಲ್ಲದೆ ದೇಹಾರೋಗ್ಯವನ್ನು ಸಮತೂಕದಲ್ಲಿರಿಸಲು ಆದರ್ಶ ಟೋನಿಕ್ ಆಹಾರವಾಗಿದೆ. 1 ರಾತ್ಲ: ರೂ. 6–8–0 ¼ ರಾತ್ಲ: ರೂ. 1–14–0.

ದೊರೆಯುವ ಸ್ಥಳಗಳು:

1 ದಿ ಕೆನರಾ ಮೆಡಿಕಲ್ ಎಂಡ್ ಸರ್ಜಿಕಲ್ ಇನ್‌ಸ್ಟಿಟ್ಯೂಟ್, ಲಿಮಿಟೆಡ್, ಕೆಮಿಸ್ಟ್ಸ ಎಂಡ್ ಡ್ರಗ್ಗಿಸ್ಟ್ಸ, ಉಡುಪಿ.

2 ಶ್ರೀ. ವಿ. ವಿ. ಶೆಣೈ, ಕೆಮಿಸ್ಟ್, ಕಾರ್ಕಳ.

3 ಶಾ ಕಂಪೆನಿ, ಹಂಪನಕಟ್ಟೆ, ಮಂಗಳೂರು.

4 ಎಲ್. ಎನ್. ಶರ್ಮ, ಹಜೂರು ರಸ್ತೆ, ಮಂಗಳೂರು.

ಮತ್ತಿತರ ಸೇಲ್ ಏಜಂಟರಲ್ಲಿ.

ಪ್ರಾತಿನಿಧ್ಯವಿಲ್ಲದ ಸ್ಥಳಗಳಲ್ಲಿ ಸ್ಟಾಕಿಸ್ಟರು ಬೇಕಾಗಿದ್ದಾರೆ. ನ್ಯಾಮಾಣಿ ಶರತ್ತು ವಗೈರೆಗಳಿಗೆ ಬರೆಯಿರಿ.

DAMODAR & CO.,
Naimappa Naicken Street, Park Town–MADRAS-3.

७० वर्षों से जगप्रसिद्ध और विजयी होनेवाला।
प्रत्येक स्टोर में और सब स्थानों पर मिलता है।
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डो. एच. एल. बाटलीवाला सन्स एण्ड कं. लि
बाटलीवाला बिल्डिंग, ९२ बी. पोर्तुगीझ चर्च स्ट्रीट,
Tele. Add "CAWASHABAD" दादर, बम्बई २८.

ದಿ ಸಿಟಿ ಟೈಪ್ ಫೌಂಡರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

* * * * *

ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಶಿನ್‌ಗಳೂ, ಸಾಲ್ಲುಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.

ವಿವರಗಳಿಗೆ ಇಂದೇ ಬರೆಯಿರಿ.

THE CITY TYPE FOUNDRY
CHICKPET, BANGALORE CITY.

ದಕ್ಷಿಣ ಭಾರತದಲ್ಲಿ ಕಾಂಗ್ರೆಸಿನ ಸ್ಥಾನಮಾನ

ತಾತ್ವಿಕ ಧ್ಯೇಯ ಮತ್ತು ವ್ಯಾವಹಾರಿಕ ಕ್ಷೇತ್ರಗಳಲ್ಲಿ ತಿಕ್ಕಾಟ

ಅಖಿಲ ಭಾರತ ಕಾಂಗ್ರೆಸಿನ ಪ್ರಧಾನ ಕಾರ್ಯದರ್ಶಿಗಳಲ್ಲೊಬ್ಬರಾದ ಶ್ರೀ. ಬಳವಂತರಾವ ಮೆಹತಾರು ಕಳೆದ ವಾರ ಮದ್ರಾಸಿಗೆ ಆಗಮಿಸಿದರು. ಅವರು ಪತ್ರಿಕಾ ಪರಿಷತ್ತೊಂದರಲ್ಲಿ ಸಾಮಾನ್ಯವಾಗಿ ದಕ್ಷಿಣ ಭಾರತದಲ್ಲಿ ಕಾಂಗ್ರೆಸು ಸಂಸ್ಥೆಯ ಸ್ಥಾನಮಾನವೇನೆಂಬುದನ್ನು ಕುರಿತಾಗಿ ಕೇಳಲಾದ ಅನೇಕ ಪ್ರಶ್ನೆಗಳಿಗೆ ಉತ್ತರವನ್ನುಕೊಟ್ಟರು.ಅವರ ವಿವರಣೆಗಳು ಎಲ್ಲರಿಗೂ ಸಮಾಧಾನವನ್ನುಂಟು ಮಾಡಲಿಕ್ಕಿಲ್ಲವೆಂಬುದೇನೊ, ನಿಜ. ಮುಖ್ಯವಾಗಿ ತಾತ್ವಿಕ ಧ್ಯೇಯಕ್ಕೂ ವ್ಯಾವಹಾರಿಕ ಹಿತಸಂಬಂಧಕ್ಕೂ ನಡೆದಿರುವ ತಿಕ್ಕಾಟದ ಕುರಿತು ಕಾಂಗ್ರೆಸ ಕಾರ್ಯದರ್ಶಿಗಳ ಹೇಳಿಕೆಯು ತೃಪ್ತಿಯನ್ನೊದಗಿಸುವುದಿಲ್ಲ. ಈ ದೃಷ್ಟಿಯಿಂದ ನಾವು ದೇಶದ ಈ ಭಾಗದಲ್ಲಿ ಕಾಂಗ್ರೆಸು ಸಂಸ್ಥೆಯ ಕುರಿತು ಜನತೆಗಿರುವ ಅಭಿಪ್ರಾಯವನ್ನು ವಿಮರ್ಶಿಸುವುದು ಸೂಕ್ತ.

ಪ್ರಕಾಶಂ ಮಂತ್ರಿ ಮಂಡಳ

ಪ್ರಜಾಸತ್ತಾತ್ಮಕ ಶಕ್ತಿಗಳಿಗೂ ಕಾಂಗ್ರೆಸಿನ ತತ್ವಗಳಿಗೂ ಘರ್ಷಣೆ ಏಳುತ್ತಿರುವ ಮುಖ್ಯ ಕ್ಷೇತ್ರವೆಂದರೆ ಆಂಧ್ರ ಇಲ್ಲಿ ಪ್ರಕಾಶಮರ ಮಂತ್ರಿ ಮಂಡಳವು ಅಸ್ತಿತ್ವಕ್ಕೆ ಬರಬೇಕಾದರೆ ಬಹಳ ಚಾತುರ್ಯದಿಂದ ನಡೆದುಕೊಳ್ಳಬೇಕಾಯಿತು ಆಂಧ್ರ ರಾಜ್ಯವು ನಿಶ್ಚಿತ ತಾರೀಕಿನಂದು ಅಸ್ತಿತ್ವಕ್ಕೆ ಬರಲೇ ಬೇಕು, ಮತ್ತು ಹೇಗಾದರೂ ಮಾಡಿ ರಾಷ್ಟ್ರಪತಿಗಳ ಆಳಿಕೆಗೆ ಅವಕಾಶ ಕೊಡಬಾರದು ಎಂಬ ಆಶಯವಲ್ಲದಿದ್ದರೆ, ಪ್ರಕಾಶಮರು ಕಾಂಗ್ರೆಸಿನ ಸಹಕಾರಿ ಸದಸ್ಯತನವನ್ನು ಸ್ವೀಕರಿಸುತ್ತಿರಲಿಲ್ಲ. ಇಲ್ಲಿ ಕಾಂಗ್ರೆಸು ಪಕ್ಷಕ್ಕೆ ನಿಶ್ಚಿತ ಬಹುಮತವಿಲ್ಲ—ಅದುದರಿಂದ ಅಂದಿನಿಂದ ಇಂದಿನ ವರೆಗೂ ಸಮ್ಮಿಶ್ರ ಮಂತ್ರಿ ಮಂಡಳವು ನಾನಾ ಆತಂಕಗಳನ್ನು ಎದುರಿಸುವುದು ಅನಿವಾರ್ಯವಾಯಿತು. ಪ್ರಜಾ ಸಮಾಜವಾದಿ ಪಕ್ಷ, ಕೃಷಿಕರ ಲೋಕ ಪಕ್ಷ ಹಾಗು ಕಮ್ಯುನಿಸ್ಟ ಪಕ್ಷಗಳು ಪ್ರಕಾಶಮರ ಮಂತ್ರಿ ಮಂಡಳದ ನೀತಿಯನ್ನು ಒಪ್ಪುತ್ತಿಲ್ಲ; ಮಾತ್ರವಲ್ಲ, ಮಂತ್ರಿಮಂಡಳದ ವಿರುದ್ಧ ಅವಿಶ್ವಾಸ ಸೂಚಿಸುವ ಗೊತ್ತುವಳಿಯನ್ನು ತರಬೇಕೆನ್ನುವಷ್ಟು ಈ ಪಕ್ಷಗಳು ಮುಂದೆ ಹೋಗಿರುತ್ತವೆ.

ಪಾನನಿರೋಧ ಧೋರಣೆ

ಇಲ್ಲಿಯ ತಿಕ್ಕಾಟ ಕೇಂದ್ರೀಕೃತಗೊಂಡಿರುವುದು ಪಾನನಿರೋಧ ಧೋರಣೆಯ ಮೇಲೆ—ರಾಮ ಮೂರ್ತಿ ಸಮಿತಿಯ ನೇಮಕವನ್ನು ಮಾಡಿ, ಅದರ ವರದಿ ಹೊರಬಿದ್ದಂದಿನಿಂದ ಕುಡುಕರ ಪಕ್ಷಪಾತಿಗಳು ಸಾಮಾನ್ಯ ಜನಾಭಿಪ್ರಾಯದ ಹೆಸರಿನಲ್ಲಿ ಮಂತ್ರಿಮಂಡಳದ ಮೇಲೆ ಒತ್ತಾಯವನ್ನು ಹೇರುತಿದ್ದಾರೆ. ಕಾಂಗ್ರೆಸು ಪಾನನಿರೋಧ ಧೋರಣೆಗೆ ತಿಲಾಂಜಲಿಯನ್ನು ಕೊಡುವಂತಿಲ್ಲ: ಕಾರಣ ಉಪ ಮುಖ್ಯಮಂತ್ರಿ ಶ್ರೀ. ಸಂಜೀವ ರೆಡ್ಡಿಯವರು ನೀರಾ ಯೋಜನೆಯ ಸಾಧಕಾಂಶಗಳನ್ನು ವಿವರಿಸುವುದರಲ್ಲಿ ಹುರುಪು ತೋರಿಸುತ್ತಾರೆ ಆದರೆ ಪ್ರತಿಪಕ್ಷಗಳು ತಮ್ಮ ವಿರುದ್ಧ ಪ್ರಚಾರವನ್ನು ಬಿಟ್ಟುಗೊಡುವುದಿಲ್ಲ. ಮೂರ್ತೆದಾರರ ಸತ್ಯಾಗ್ರಹ ಹಾಗು ಪಾನನಿರೋಧ ಕಾಯಿದೆಯ ಉಲ್ಲಂಘನೆಗಳು ಸುಸಂಘಟಿತ ರೂಪದಲ್ಲಿ ನಡೆಯುತ್ತಿದ್ದು, ಸಾವಿರಾರುಮಂದಿ ಬಂಧನ ಗೃಹದಲ್ಲಿದ್ದಾರೆ. ಇದರೊಂದಿಗೆ ಆಂಧ್ರದ ಇನಾಂದಾರರ ಒಕ್ಕಲುಗಳಿಗೆ ರಕ್ಷಣೆ ಕೊಡಬೇಕೆಂದೂ ವಾದಿಸಲಾಯಿತು· ಇದಕ್ಕಾಗಿ ಸರಕಾರವು ತಂದ ಆಜ್ಞೆಯು ಈಗ ಟೀಕೆಗೆ ಗುರಿಯಾಗಿರುವುದು. ಇದು ರೈತರ ಹಿತ ಸಂಬಂಧಗಳನ್ನು ತೃಪ್ತಿಕರವಾಗಿ ರಕ್ಷಿಸುವುದಿಲ್ಲವೆಂದು ಪ್ರಸವಾ ಪಕ್ಷ ಹೇಳುತ್ತದೆ.

ಪ್ರಜಾಸತ್ತಾತ್ಮಕ ಶಕ್ತಿ

ಇಂತಹ ಆಂದೋಲನದ ನಡುವೆ ಆಂಧ್ರದ "ಕಾಂಗ್ರೆಸು ಸರಕಾರ" ಏನು ಮಾಡಬೇಕೆಂಬುದು ವಿಚಾರಣೀಯ ಅಂಶ- ಕಾಂಗ್ರೆಸು ಕಾರ್ಯದರ್ಶಿಗಳೇ ಒಪ್ಪಿಕೊಂಡಂತೆ, ಇಲ್ಲಿ ಅಧಿಕಾರದ ಹೊಣೆ ಹೊತ್ತುದರಿಂದ ಕಾಂಗ್ರೆಸಿನ ಪ್ರತಿಷ್ಠೆಯಾಗಲೀ ವರ್ಚಸ್ಸಾಗಲೀ ಬೆಳೆಯಲಿಲ್ಲ. ಪಾನನಿರೋಧ ಧೋರಣೆಯ ವಿಷಯದಲ್ಲಿ ಉಂಟಾದ ತಿಕ್ಕಾಟವು ಅದಕ್ಕೆ ಒಂದೇ ದಾರಿಯನ್ನು ತೋರಿಸುತ್ತದೆ: ಅದೆಂದರೆ, ಜನರ ಮನವೊಲಿಸುವುದ., ಅಥವಾ ರಾಜೀನಾಮೆ ಕೊಟ್ಟು ಹೊರಬರುವುದು. ಇದನ್ನು ಮೆಹತಾರಿಗೆ ಸೂಚಿಸಿದಾಗ, ಘಟನಾತ್ಮಕವಾಗಿ ಅವಿಶ್ವಾಸ ವ್ಯಕ್ತಪಡಿಸುವ ಗೊತ್ತುವಳಿಯನ್ನು ಮಂಡಿಸಿ ಈ "ಮಹತ್ವದ ಪ್ರಶ್ನೆ"ಯನ್ನು ಶಾಸನ ಸಭೆ ಕೊನೆಯದಾಗಿ ಇತ್ಯರ್ಥಗೊಳಿಸುವ ಪಕ್ಷದಲ್ಲಿ ತಾವೇನೂ ಹೇಳುವಂತಿಲ್ಲ ಎಂದರು ಆದರೆ ಪ್ರಶಾಂತ ಚಿತ್ತದಿಂದಲೂ ನಿರ್ವಿಕಾರ ಮನೋಭಾವದಿಂದಲೂ ವಿಚಾರಿಸಿದರೆ, ಆಂಧ್ರದಲ್ಲಿ ವಿದ್ಯಮಾನವಿರುವ ವಿಶಿಷ್ಟ ಪರಿಸ್ಥಿತಿಯಲ್ಲಿ ಕಾಂಗ್ರೆಸು ತಾನಾಗಿ ರಾಜೀನಾಮೆ ಕೊಡುವುದು ಇಷ್ಟವಲ್ಲವೆಂದು ಅಭಿಪ್ರಾಯಪಟ್ಟರು. ಕಾಂಗ್ರೆಸು ಅಧಿಕಾರವನ್ನು ಬಿಟ್ಟುಗೊಟ್ಟರೆ ಪ್ರಜಾಸತ್ತಾತ್ಮಕ ರಾಜ್ಯಭಾರವು ಅನಿಷ್ಟಪ್ರದ ಶಕ್ತಿಗಳ ಕೈಗೆ ಹೋಗಬಹುದೆಂದೂ ಇದು ರಾಷ್ಟ್ರಕ್ಕೆ ಘಾತಕವಾದದ್ದೆಂದೂ ಅವರು ಕಾಂಗ್ರೆಸಿನ ನಿಲುವೆಯನ್ನು ಪ್ರಕಟಪಡಿಸಿದರು.

ಶಾಶ್ವತ ಕ್ಷೇಮದ ದೃಷ್ಟಿ

ಕಾಂಗ್ರೆಸಿಗೆ ರಾಷ್ಟ್ರವನ್ನು ಗಂಡಾಂತರದಲ್ಲಿ ನೂಕುವುದು ಬೇಕಿಲ್ಲ—ಆದುದರಿಂದ ಅದು ಜಾತೀಯ ಹಾಗು ಕಮ್ಯುನಿಸ್ಟ ಪಕ್ಷಗಳೊಂದಿಗೆ ಯಾವ ವಿಧದ ಸಂಪರ್ಕವನ್ನೂ ಸ್ನೇಹವನ್ನೂ ಬಯಸುವುದಿಲ್ಲ. ಇತರ ಪ್ರಜಾಸತ್ತಾತ್ಮಕ ಪಕ್ಷಗಳಲ್ಲಿ (ಉದಾಹರಣೆಗೆ ಪ್ರಸವಾ) ಕಾಂಗ್ರೆಸಿಗೆ ಅಷ್ಟು ಅನಿಷ್ಟ ಕಾಣಿಸುವುದಿಲ್ಲ. ಆದುದರಿಂದ ಅದು ತಿರುವಾಂಕೂರು—ಕೊಚ್ಚಿಯಲ್ಲಿ ಕಮ್ಯುನಿಸ್ಟರ ಕೈಗೆ ರಾಜ್ಯಭಾರ ಒಪ್ಪಿಸುವ ಬದಲು, ಪ್ರಸವಾ ಮಂತ್ರಿಮಂಡಳದ ರಚನೆಗೆ ತನ್ನ ಸಹಕಾರವನ್ನು ಸೂಚಿಸಲು ಮುಂದಾಯಿತು. ಆದರೆ ಇಲ್ಲಿ ಸಹ ಕಾಂಗ್ರೆಸು ಹಾಗು ಪ್ರಸವಾ ಪಕ್ಷಗಳ ಧ್ಯೇಯದಲ್ಲಿ ತಿಕ್ಕಾಟ ಸಂಭವಿಸದಿಲ್ಲ— ಈಚೆಗೆ ಮುಂಗಡ ಪತ್ರದ ಚರ್ಚೆಯ ಕಾಲದಲ್ಲಿ ತಾನು ಪಿಳ್ಳೆಯವರ ಮಂತ್ರಿಮಂಡಳದ ವಿರುದ್ಧ ಕಾಂಗ್ರೆಸು ಪಕ್ಷ ಮತದಾನ ಮಾಡಿತು. ಇದರಿಂದ ಮಂತ್ರಿಮಂಡಳ ಕುಸಿಯುವುದೇ 'ನಿಶ್ಚಿತವೆಂದು ಹೇಳಲಾಯಿತು ಆದರೆ ಹಿಂದಿನಿಂದ ಕಾಂಗ್ರೆಸು ತಾತ್ಕಾಲಿಕ ಕ್ಷೇಮಕ್ಕಿಂತ ಮುಂದಿನ ಹಿತವನ್ನು ದೃಷ್ಟಿಯಲ್ಲಿಟ್ಟುಕೊಂಡು ವಿಶ್ವಾಸ ಸೂಚಕ ಗೊತ್ತುವಳಿಗೆ ಬೆಂಬಲ ಕೊಟ್ಟಿತು. ಹೀಗಿದ್ದರೂ ಪ್ರಸವಾ ಮಂತ್ರಿಮಂಡಳದೊಡನೆ ಹೊಂದಿಕೊಳ್ಳುವುದು ಅದಕ್ಕೆ ಸುಲಭವೆನಿಸುವುದಿಲ್ಲ ಈಚೆಗೆ ದೇವಿಕುಲಂದಲ್ಲಿ ನಡೆದ ಗೋಳಿಬಾರಿನ ಪ್ರಕರಣ ಕಾಂಗ್ರೆಸು ಧುರೀಣರನ್ನೂ ನೋಯಿಸಿದ್ದು, ಅವರು ವ್ಯಾವಹಾರಿಕ ಮಾರ್ಗದಲ್ಲಿ ಕಂಡುಬಂದ ಈ ಆತಂಕವನ್ನು ತತ್ವದ ಮೇಲಿನ ಪ್ರೀತಿಯಿಂದ ಸಹಿಸುವುದಕ್ಕ ಪ್ರಯತ್ನಸೈದರು

ಜಾತೀಯತೆಯ ವಿಷ

ಮೆಹತಾರೊಡನೆ ಪ್ರಸ್ತಾಪಿಸಿದ ಇನ್ನೊಂದು ತಿಕ್ಕಾಟವೆಂದರೆ— ಗುಡಯಾಟಮಿನಲ್ಲಿ ಈಚೆಗೆ ನಡೆದ ಚುನಾವಣೆ. ಇಲ್ಲಿ ಮದ್ರಾಸಿನ ಮುಖ್ಯಮಂತ್ರಿ ಶ್ರೀ. ಕಾಮರಾಜ ನಾಡರರು ಕಾಂಗ್ರೆಸು ಪಕ್ಷದ ಪರವಾಗಿ ಸ್ಪರ್ಧಿಸಿ, ಜಯಪಡೆದರು. ಇವರ ಹುರಿಯಾಳ್ತನಕ್ಕೆ ದ್ರಾವಿಡ ಕಜಗಂ ಹಾಗು ಮುಸ್ಲಿಂ ಲೀಗುಗಳ ಬೆಂಬಲವು ದೊರಕಿತ್ತು. ಜಾತೀಯ ವಾದಿಗಳೊಡನೆ ಸೇರೆನೆಂದು ಹೇಳುವ· ಕಾಂಗ್ರೆಸು ಈ ಬೆಂಬಲದ ವಿಷಯದಲ್ಲಿ ಏನು ಹೇಳುತ್ತದೆ? ಮೆಹತಾರು ತನಗೆ ಇಲ್ಲಿಯ ಪರಿಸ್ಥಿತಿಯ ಪರಿಚಯವಿಲ್ಲವೆಂದು ಉಪಾಯವಾಗಿ ಜಾರಿ ಕೊಳ್ಳಲು ನೋಡಿದರು. ಆದರೆ ಅದು ಸರಿಯಾದುದಲ್ಲ— ತತ್ವ ದೃಷ್ಟಿಯಿಂದ ನೋಡಿದರೆ, "ನೀವೇಕೆ ನನಗೆ ಸಹಾಯ ಮಾಡುತ್ತೀರಿ? ನಾನು ನಿಮ್ಮನ್ನು ಬೆಂಬಲಿಸುವಂತಿಲ್ಲ" ಎಂದು ಆ ಪಕ್ಷಗಳಿಗೆ ಕಾಂಗ್ರೆಸು ಹೇಳುವುದು ಉಚಿತವೆಂದು ಮೆಹತಾರು ಅಭಿಪ್ರಾಯಪಟ್ಟರು ಆದರೆ ಚುನಾವಣೆಯ ಕಾಲದಲ್ಲಿ ಹಾಗೆ ಹೇಳುವ ಗೊಡವೆಗೆ ಯಾರೂ ಹೋದದ್ದಿಲ್ಲ—ಅಷ್ಟು ನೈತಿಕ ಸಾಮರ್ಥ್ಯ ಇರಲಿಲ್ಲವೆಂದು ಕಾಣುತ್ತದೆ. ಇಷ್ಟಾಗಿಯೂ ಸ್ವೇಚ್ಛೆಯಿಂದ ಕೊಡಲ್ಪಡುವ ಸಹಕಾರವನ್ನು ನಿರಾಕರಿಸುವಲ್ಲಿ ಆ ಸಹಾಯದ ಉದ್ದೇಶವನ್ನು ಗಮನಿಸಬೇಕಾಗುತ್ತದೆಂದು ಅವರು ಹೇಳಿದರು- ಈ ಉದ್ದೇಶ ಸಂಸ್ಥೆಯ ಪ್ರತಿಷ್ಠೆಗೆ ಕುಂದುಂಟು ಮಾಡುವುದು, ಅಥವಾ ತಮ್ಮ ಸ್ವಂತ ಲಾಭಮಾಡಿಕೊಳ್ಳುವುದು ಆಗಿದ್ದರೆ, ಅದು ತಿರಸ್ಕಾರ ಯೋಗ್ಯವೆಂದು ಮೆಹತಾರ ಅಭಿಪ್ರಾಯ. ಈ ಸಾಮಾನ್ಯ ತ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂ ಗ ಳೂ ರು.

Member: I. S. T. M. A.

THE JUPITER GENERAL INSURANCE CO, LTD.

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

1919ರಲ್ಲುಸ್ಥಾಪಿತ] [ಪ್ರಧಾನ ಕಾರ್ಯಾಲಯ. ಬೇಂಕ್ ಸ್ಟ್ರೀಟ್, ಬೊಂಬ್ಯಾ 1.

ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ

ತೆತ್ತ ಪಾಲು ಬಂಡವಳ.	..	ರೂ. 23,74,800
ಒಟ್ಟು ಮೂಲಗಳು ...	.: (ಮಿಕ್ಕಿದೆ)	ರೂ. 3,35,00,000
ಊರ್ಜಿತದಲ್ಲಿರುವ ವಿಮಾವ್ಯವಹಾರ	,,	ರೂ 7 50,00,000
1953ರಲ್ಲಿ ಪೂರ್ಣವಾದ ವಿಮಾವ್ಯವಹಾರ ..	,,	ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರಂಟಿ ಭದ್ರತೆ, ಕೆಲಸಗಾರರ ಪರಿಹಾರ ಟ್ರ್ಯಾನ್ಸ್ ಕೂಲತೆ, ಕಳ್ಳಕಾಕರ ಪಾಲಾಗುವಿಕೆ, ಪ್ರಾಣಿಜಂತುಗಳು ಇತ್ಯಾದಿ ಸಂಬಂರ್ಕಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ ಸಿಲೋನ್, ಬ್ರಿಟಿಶ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ.—

ಶ್ರೀ ಎಸ್. ವಿ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,

ದಿ ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ಬೇಂಕುಗಳ ನೌಕರರಿಗೆ ನೆಹರೂರ ಭರವಸೆ

ಗುಂಡು ಹಾರಿಸಿದ ತಪ್ಪಿಗೆ ಪ್ರಸವಾ ಪಕ್ಷದ ಕ್ಷಮಾಯಾಚನೆ

ಬೇಂಕುಗಳ ನೌಕರರ ವೇತನ ಸಂಬಂಧವಾದ ವಿಷಯಗಳಲ್ಲಿ ಅಪೀಲು ನ್ಯಾಯ ಮಂಡಳದ ನಿರ್ಣಯವನ್ನು ಸರಕಾರವು ಬದಲಿಸಬೇಕಾಗಿ ಬಂದ ಕಾರಣಗಳನ್ನು ಪ್ರಧಾನ ಮಂತ್ರಿ ನೆಹರೂರವರು ಕಳೆದ ವಾರ ರಾಜ್ಯಸಭೆಗೆ ವಿದಿತಪಡಿಸಿದರು. "ಇಂತಹ ತಿದ್ದುಪಡಿಯಲ್ಲದಿದ್ದರೆ ದೇಶದ ಅರ್ಥ ಮಂಡಳದ ಮೇಲೆ ವಿಪರೀತ ಪರಿಣಾಮವಾಗುವುದೆಂಬ ಭಯ ಸರಕಾರಕ್ಕೆ ತೋರಿತು; ಹೆಚ್ಚಿನ ಪರಿಶೀಲನೆ ನಡೆಸಿದಲ್ಲಿ ನಮ್ಮ ಹೆದರಿಕೆಗೆ ಬುಡವಿಲ್ಲವೆಂದು ಕಂಡುಬರಬಹುದು; ಆದರೆ ಒಂದೊಮ್ಮೆ ಅವಧಿ ಹಚ್ಚಿಸಲು ಕೇಳಿಕೊಂಡ ಸರಕಾರವು ಮರಳಿ ಅವಧಿಯನ್ನು ಬೆಳೆಸಲು ವಿನಂತಿಸುವುದು ಇಷ್ಟವಲ್ಲವೆಂದು ಭಾವಿಸಿ, ಈಗಿನ ತಿದ್ದುಪಡಿಗಳನ್ನು ಜ್ಯಾರಿಗೆ ತಂದಿತು. ಇದರಿಂದ ೧೯೫೫ನೇ ಎಪ್ರೀಲು ತಿಂಗಳ ವರೆಗೆ ಬೇಂಕುಗಳ ನೌಕರರ ಪರಿಸ್ಥಿತಿಯಲ್ಲಿ ಬದಲಾವಣೆಯೇನೂ ಆಗುವುದಿಲ್ಲ; ಅಷ್ಟರೊಳಗೆ ಸರಕಾರವು ಎಲ್ಲ ಅಂಶಗಳನ್ನೂ ಕೂಲಂಕಷವಾಗಿ ವಿಚಾರಿಸಿ, ಈ ವಿಷಯದಲ್ಲಿ ಸರಕಾರಕ್ಕೂ ಸಂಸತ್ತಿಗೂ ಸೂಕ್ತಕಂಡ ರೀತಿಯಲ್ಲಿ ಮುಂದುವರಿಯಲು ಮಾರ್ಗ ಕಲ್ಪಿಸಲಾಗುವುದು" ಎಂದವರು ಭರವಸೆ ನೀಡಿದರು.

ಗಿರಿಯವರ ರಾಜೀನಾಮೆ

ಆವರೆ ಅಲ್ಲಿಯ ವರೆಗೆ ದೊಡ್ಡ ಹಾಗು ಸಮರ್ಥ ಬೇಂಕುಗಳು ಅಪೀಲು ನ್ಯಾಯ ಮಂಡಳದ ನಿರ್ಣಯದಂತೆ ನಡೆಯಬಾರದೆಂದೇನು ನಿಯಮವಿಲ್ಲ: ನೌಕರರಿಗೆ ಅಧಿಕ ವೇತನ ಮುಂತಾದುವನ್ನು ಕೊಡಲು ಶಕ್ಯವುಳ್ಳ ಸಂಸ್ಥೆಗಳು ಹಾಗೆ ಮಾಡುವುದೇ ಶ್ರೇಯಸ್ಕರ ಎಂದೂ ನೆಹರೂ ಹೇಳಿದರು. ಆದರೆ ಇದನ್ನು ಉದಾರ ಮನೋಭಾವದಿಂದ ಕಾಣುವ ಬೇಂಕುಗಳು ವಿರಳ—ಏಕೆಂದರೆ, ಅವು ತಮ್ಮ ಲಾಭವನ್ನೇ ನೋಡುವುದಕ್ಕೆ ಹವಣಿಸುತ್ತವೆ. ಇದು ನೌಕರ ವರ್ಗದ ದ್ವೇಷವನ್ನು ಮತ್ತಷ್ಟು ಹೆಚ್ಚಿಸದಿರದು. ಈಗಾಗಲೇ ಅವರು ಮದ್ರಾಸಿನಲ್ಲಿ ಇದೇ ೧೮-೨೦ನೇ ದಿನಾಂಕಗಳಲ್ಲಿ ಸೇರುವ ಸಭೆಯಲ್ಲಿ ಸಾರ್ವತ್ರಿಕ ಮುಷ್ಕರ ಹೂಡುವ ವಿಚಾರವನ್ನು ಪರಿಶೀಲಿಸಬೇಕೆಂದು ಹೇಳುತಿದ್ದಾರೆ. ಸರಕಾರದ ತಿದ್ದುಪಡಿಯು ಅಸಮರ್ಥನೀಯವಿದೆಯೆಂದು ಸಾರುವುದಕ್ಕೆ ಅವರಿಗೊಂದು ಬಲವಾದ ಆಧಾರವೂ ದೊರೆತಿದೆ—ಅದೆಂದರೆ, ಕೂಲಿಕಾರ ಸಚಿವ ಗಿರಿಯವರ ರಾಜೀನಾಮೆ. ಕಳೆದ ವಾರ ಅವರು ಲೋಕ ಸಭೆಯಲ್ಲಿ ತಿದ್ದುಪಡಿಯನ್ನು ಸಮರ್ಥಿಸಿ ಮಾತನಾಡುತಿದ್ದಾಗ, ಕಿಸೆಯಲ್ಲಿ ರಾಜೀನಾಮೆಯ ಪತ್ರವನ್ನು ಇಟ್ಟುಕೊಂಡಿದ್ದರು. ಮಂತ್ರಿಮಂಡಳದಲ್ಲಿ ತಿದ್ದುಪಡಿಯ ಕುರಿತು ಭಿನ್ನಾಭಿಪ್ರಾಯವನ್ನು ಹೊಂದಿ ಗಿರಿಯವರು ಹೊರಬಿದ್ದರು. ಈ ಕೂಲಿಕಾರರ ಕೈವಾರಿಯ ರಾಜೀನಾಮೆಯನ್ನು ಬೇಂಕುಗಳ ನೌಕರವರ್ಗ ಹೃತ್ಪೂರ್ವಕ ಸ್ವಾಗತಿಸಿ, ಪ್ರಶಂಸಿಸಿತು.

ಮದುವೆಯ ವಯೋಮಾನ

ಲೋಕ ಸಭೆಯ ಮುಂದೆ ಈಗ ವಿಶೇಷ ವಿವಾಹ ವಿಧೇಯಕವು ಮಂಡಿಸಲ್ಪಟ್ಟಿದ್ದು ಅದರ ವಿವರವಾದ ಪರಿಶೀಲನೆಯು ನಡೆಯುತ್ತಿದೆ. ವಿವಾಹವಾಗುವ ವಯಸ್ಸು ಎಷ್ಟಿರಬೇಕೆಂಬ ವಿಷಯದಲ್ಲಿ ಕಳೆದ ವಾರ ಸುದೀರ್ಘವಾದ-ವಿವಾದ ನಡೆಯಿತು. ಸಾಮಾನ್ಯವಾಗಿ ಹೆಂಗಸರಿಗೆ ೧೮ ಮತ್ತು ಗಂಡಸರಿಗೆ ೨೧ ವರ್ಷದ ಮಿತಿಯನ್ನು ಹಾಕುವುದೊಳಿತೆಂಬ ಅಭಿಪ್ರಾಯ ವ್ಯಕ್ತಗೊಂಡಿತು. ಪಾಲಕರ ಸಮ್ಮತಿಯನ್ನು ಪಡೆಯುವುದು ಈ ವಿಧೇಯಕದ ಉದ್ದೇಶಕ್ಕೆ ಪೋಷಕವಾದುವಲ್ಲವೆಂದು ಕೆಲವು ಸದಸ್ಯರು ಹೇಳಿದರು. ಗಂಡ ಹಾಗು ಹೆಂಡತಿ ಇವರಿಬ್ಬರ ಸಮ್ಮತಿಯಿಂದ ವಿಚ್ಛೇದನೆ ಹೊಂದ ಬಹುದೆಂಬ ಕಲಮನ್ನು ಅರ್ಥ ಸ್ಪಷ್ಟವಾಗುವಂತೆ ಬರೆಯಲು ಸರಕಾರ ಸಿದ್ಧವಿದೆಯೆಂದು ಕಾಯಿದೆ ಮಂತ್ರಿಗಳು ತಿಳಿಸಿದರು. ಇದರಂತೆ ಒಂದು ವರ್ಷ ಒಬ್ಬರಿನ್ನೊಬ್ಬರಿಂದ ದೂರವಿದ್ದ ಗಂಡ ಹೆಂಡಂದಿರು ನ್ಯಾಯಾಲಯಕ್ಕೆ ವಿಚ್ಛೇದನೆಗಾಗಿ ಅರ್ಜಿ ಹಾಕಿದ ತರುವಾಯ ಒಂದು ವರ್ಷದಷ್ಟು ಅವಧಿಯನ್ನು ತಮ್ಮ ನಿರ್ಣಯ ಅವಸರದ್ದೊ ಹೇಗೆಂದು ವಿಚಾರಿಸಲು ಕೊಡಲಾಗುತ್ತದೆ. ಆ ಬಳಿಕವೂ ವಿಚ್ಛೇದನೆಯನ್ನೇ ದಂಪತಿಗಳು ಇಚ್ಛಿಸಿದರೆ, ನ್ಯಾಯಾಲಯವು ಇದಕ್ಕೆ ಅನುಮತಿ ನೀಡುವುದು.

ಭೂಸುಧಾರಣೆಯ ಬೇಡಿಕೆ

ಖಾಸಗಿ ವಿಧೇಯಕಗಳಲ್ಲಿ ವೇಶ್ಯಾವ್ಯಾಪಾರವನ್ನು ಪ್ರತಿಬಂಧಿಸುವ ಮತ್ತು ಮಕ್ಕಳ ಕಲ್ಯಾಣ ಮಾಡಬೇಕೆನ್ನುವವುಗಳ ವಿಷಯದಲ್ಲಿ ಸರಕಾರವೇ ಇಂತಹ ಮಸೂದೆಯನ್ನು ಬೇಗನೇ ತರಲಿಕ್ಕೆಯಾಗಿ ಹೇಳಲಾಯಿತು. ಕಮ್ಯುನಿಸ್ಟ ಪಕ್ಷದ ಧುರೀಣರಾದ ಶ್ರೀ ಸುಂದರಯ್ಯನವರು ಪಂಚವಾರ್ಷಿಕ ಯೋಜನೆಯ ಯಶಸ್ಸಿಗೋಸ್ಕರ ಭೂಸುಧಾರಣಾ ಕಾಯಿದೆಯನ್ನು ಕೂಡಲೇ ಜ್ಯಾರಿಗೆ ತರಬೇಕೆಂಬ ಗೊತ್ತುವಳಿಯನ್ನು ತಂದರು. "ಏಳು ವರ್ಷಗಳ ಸ್ವಾತಂತ್ರ್ಯ ಹಾಗು ಮೂರೂವರೆ ವರ್ಷಗಳ ಯೋಜನೆಯ ಬಳಿಕವೂ ಭೂಸುಧಾರಣೆಯ ಪ್ರಶ್ನೆಯನ್ನು ಮಹತ್ವಪೂರ್ವಕ ವಿಚಾರಿಸಿಲ್ಲ. ಜಮೀನುದಾರಿ ನಿರ್ಮೂಲನದ ಹೆಸರಿನಲ್ಲಿ ೫೨೦ ಕೋಟಿ ರೂಪಾಯಿಗಳನ್ನು ಭೂಮಾಲಕರಿಗೆ ಕೊಡಬೇಕಾಗಿ ಬಂತು. ರೈತರ ಹಿತಕ್ಕೆಂದು ಮಾಡಲಾದ ಕೆಲವು ಕಾಯಿದೆಗಳು ಅವರ ಕಷ್ಟವನ್ನೇ ಹೆಚ್ಚಿಸಿದವು. ಹಿಡುವಳಿಯ ಪರಮಾವಧಿ ಮಿತಿಯನ್ನು ನಿರ್ಣಯಿಸಿದ ತಪ್ಪು ರೀತಿಯಿಂದ, ಭೂಮಿ ಇಲ್ಲದವರಿಗೆ ಹಂಚಲು ಬಹಳ ಸ್ವಲ್ಪವೇ ಜಮೀನು ಸಿಕ್ಕಿತು. ರೈತರ ಪರಿಸ್ಥಿತಿಯನ್ನು ಸುಧಾರಿಸದಿದ್ದರೆ ಅವರ ಕ್ರಯಶಕ್ತಿ ಹೆಚ್ಚುವುದಿಲ್ಲ; ಕ್ರಯಶಕ್ತಿ ಹೆಚ್ಚದಿದ್ದರೆ ಅದರ ದುಷ್ಪರಿಣಾಮ ಕೈಗಾರಿಕಾ ಕ್ಷೇತ್ರದ ಮೇಲೂ ಬೀಳುತ್ತದೆ" ಎಂದವರು ಹೇಳಿದರು.

ಮದ್ರಾಸು ರಾಜ್ಯದಲ್ಲಿ

ಸುಂದರಯ್ಯನವರ ಭೂಸುಧಾರಣೆಗಾಗಿ ಆಗ್ರಹಪಡಿಸುವ ಮೇಲಿನ ಗೊತ್ತುವಳಿಯಾಗಲೀ ವಿಧುರರು ವಿಧವೆಯರನ್ನೇ ಮದುವೆಯಾಗಬೇಕೆಂದು ಮುಂತಾಗಿ ಹೇಳುವ ಬೇರೆ ಕೆಲವು ಖಾಸಗಿ ಠರಾವುಗಳಾಗಲೀ ಸ್ವೀಕಾರಹೊಂದುವ ಸಂಭವ ಅತ್ಯಲ್ಪವಿರುತ್ತದೆ. ಖಾಸಗಿ ಗೊತ್ತುವಳಿಗಳಲ್ಲಿ ಹೆಚ್ಚಿನವು ಚರ್ಚೆಗೆ ಬರುವುದೇ ಇಲ್ಲ—ಬಂದರೂ ಅವು ಸರಕಾರಕ್ಕೆ ಜನಮತವನ್ನು ತಿಳಿಸುವ ರೀತಿಯಲ್ಲಿವೆಯೆಂದು ಮಾತ್ರ ಸಾಮಾನ್ಯವಾಗಿ ಸ್ವೀಕರಿಸಲಾಗುತ್ತದೆ. ನಿಜವಾಗಿ ಏನಾದರೂ ಕೆಲಸವಾಗಬೇಕಿದ್ದರೆ ಮಂತ್ರಿಮಂಡಳವೇ ಕಾಯಿದೆಯನ್ನು ಮಂಡಿಸಬೇಕು. ಮದ್ರಾಸಿನ ಮಟ್ಟಿಗೆ ಹೇಳುವುದಾದರೆ ಸಪ್ಟಂಬರದಲ್ಲಿ ಶಾಸನ ಸಭೆಯ ಅಧಿವೇಶನವನ್ನು ಕರೆದಾಗ, ಭೂಸುಧಾರಣಾ ಮಸೂದೆಯನ್ನು ಮಂಡಿಸಲಾದೀತೆಂದು ತಿಳಿಯುತ್ತದೆ. ಕಳೆದ ವಾರ ನಾಡರರ ಸಚಿವ ಸಂಪುಟವು ಮಸೂದೆಯ ಪರಿಶೀಲನೆಯನ್ನು ನಡೆಸಿತು. ಅದು ಪೂರ್ಣವಾಗಿಲ್ಲ; ಮುಂದಿನ ಎರಡು ಮೂರು ತಿಂಗಳ ಅವಧಿಯಲ್ಲಿ ಕೂಲಂಕಷ ಪರಿಶೀಲನೆಯನ್ನು ನಡೆಸಿ, ಶಾಸನ ಸಭೆಯ ಮುಂದೆ ಮಂಡಿ

(೭ನೇ ಪುಟ ನೋಡಿರಿ)

ತ್ವಕ್ಕೆ ವಿರುದ್ಧ ನಡೆದ ಕಾಂಗ್ರೆಸಿಗರ ವಿಷಯದಲ್ಲಿ ಕ್ರಮ ತೆಗೆದುಕೊಳ್ಳುವ ಅಗತ್ಯ ಬಂದೀತೆಂಬ ಅವರ ಮಾತು ಗುಡಿಯಾಟಂ ಚುನಾವಣೆಯ ಕುರಿತು ಎಷ್ಟು ಮಟ್ಟಿಗೆ ಅನ್ವಯಿಸುತ್ತದೋ ತಿಳಿದು ಬಂದಿಲ್ಲ.

ಈ ಕೆಟ್ಟ ವಿಷಯಗಳ ದೆಸೆಯಿಂದ ಕಾಂಗ್ರೆಸು ಸಂಸ್ಥೆಯ ಎಲ್ಲ ಒಳ್ಳೆಯ ಕೆಲಸಗಳೂ ಜನರ ದೃಷ್ಟಿಯಿಂದ ದೂರಗೊಳ್ಳುತ್ತವೆ. ಹೀಗಾಗದಂತೆ ಮಾಡುವುದಕ್ಕೂ ಪ್ರಜಾಪ್ರಭುತ್ವವನ್ನು ಪೋಷಿಸುವುದಕ್ಕೂ ಭರದಿಂದ ಪ್ರಚಾರ ಕಾರ್ಯವು ನಡೆಯ ಬೇಕಾದ ತೀವ್ರ ಅವಶ್ಯಕತೆ ಕಂಡು ಬರುತ್ತದೆ.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಬಿಂದ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

The Indian Mutual Life Association Ltd.,

H. O.— 10 MOUNT ROAD, MADRAS.

Purely Mutual Concern! Lowest Rate of Premium!!
Highest Rate of Bonus!!!

Solicites applications for Representation from South Kanara, Malabar, Coorg and Mysore State.

For further particulars please apply to:

Organising Secretary, Bank Road, Kasaragod, S. K.

Or

Secretary, Mangalore Branch, Maruthi Building, K. S. Rao Road, Mangalore, 1. S. K.

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No. 22, UDIPI, S. K.

NAVAYUGA

Popular Kannada Weekly,
Founder:—
Sri. A. B. SHETTY, *M.L.A.*
Minister for Public Health,
Govt. of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೯-೯-೧೯೫೪	೨

ನೆರೆ ನಿಯಂತ್ರಣ ವ್ಯವಸ್ಥೆ

ಉತ್ತರ ಮತ್ತು ಪೂರ್ವ ಭಾರತದಲ್ಲಿ ಈ ವರ್ಷ ಉಂಟಾದ ಭೀಕರ ನೆರೆ ಹಾವಳಿಯು ನಿಜಕ್ಕೂ ದುರ್ದೈವದ ಮಾತಾಗಿದೆ-- ನೆರೆ ಪೀಡಿತರಾದ ಎರಡು ಕೋಟಿ ಬಾಂಧವರಿಗೆ ಶೀಘ್ರ ಸಹಾಯವನ್ನು ಮುಟ್ಟಿಸುವುದಕ್ಕೋಸ್ಕರ ಏನು ಮಾಡಬೇಕೆಂಬುದನ್ನು ನಿರ್ಣಯಿಸಲು ಕೇಂದ್ರದ ಮಂತ್ರಿಗಳೂ ಆಯಾ ರಾಜ್ಯ ಸರಕಾರಗಳ ಮಂತ್ರಿ ಮತ್ತಿತರ ಅಧಿಕಾರಿಗಳೂ ಸಂಚಾರವನ್ನು ಕೈಗೊಂಡು, ಜನರಿಗೆ ಸಹಾಯದ ಭರವಸೆಯನ್ನು ಕೊಟ್ಟರು: ಮೊನ್ನೆ ದಿನಾಂಕ ೪-೯ರಂದು ೨೨ ಮಂದಿ ಸಂಸತ್ತಿನ ಸದಸ್ಯರೊಡನೆ ಆಕಾಶ ಸಂಚಾರ ಮಾಡಿ ಬಂದ ಪ್ರಧಾನ ಮಂತ್ರಿ ನೆಹರೂರವರು ನೆರೆಯ ಹಾವಳಿಯನ್ನು ನಿಯಂತ್ರಿಸುವುದಕ್ಕೆ ಪರಿಹಾರ ಮಾರ್ಗಗಳನ್ನು ವಿಳಂಬವಿಲ್ಲದೆ ಕೈಗೊಳ್ಳಲಾಗುವುದೆಂದು ಹೇಳಿದರು. ಸುಮಾರು ೫೫ ಕೋಟಿ ರೂ.ಗಳ ನಷ್ಟವು ಈ ನೆರೆಯಿಂದ ಸಂಭವಿಸಿತು—ಬಿಹಾರ ಒಂದರಲ್ಲಿಯೇ ಕಳೆದ ಮೂರು ವರ್ಷಗಳಲ್ಲಿ ಸುಮಾರು ೧೧೦ ಕೋಟಿ ರೂಪಾಯಿ ನಷ್ಟವು ನೆರೆಯ ದೆಸೆಯಿಂದ ಉಂಟಾಯಿತು. ಉತ್ತರ ಅಸಾಮಿನಲ್ಲಿ ಚಹದ ತೋಟಗಳಿಗೆ ಹೆಸರಾದ ದಿಬ್ರೂಗಡ ನಗರವು ಈಗ ಬ್ರಹ್ಮಪುತ್ರೆಯ ಆಕ್ರೋಶಕ್ಕೆ ಆಹುತಿಯಾಗಿರುವುದು—ನದಿಯ ಪ್ರವಾಹದಿಂದ ಉಂಟಾಗುವ ಭೂಸವೆತವನ್ನು ತಪ್ಪಿಸಲು ಕಟ್ಟಿದ ಕಲ್ಲಿನ ದಂಡೆಯನ್ನು ಕುಸಿದು ರೌದ್ರ ನೃತ್ಯವನ್ನು ಮಾಡುತ್ತಾ ಬ್ರಹ್ಮಪುತ್ರೆ ಈ ನಗರವನ್ನು ಛೇದಿಸಿ ಮುನ್ನುಗ್ಗುತ್ತಿರುವುದು. ತೀರ ವಿಷಾದಕರವಾದ ಈ ಸುದ್ದಿಗಳು ಎಷ್ಟೇ ಕಷ್ಟವಾಗಲಿ, ವೆಚ್ಚ ಬರಲಿ—ನೆರೆಯ ಹಾವಳಿಯನ್ನು ಹತೋಟಿಗೊಳ ಪಡಿಸಬೇಕೆಂಬ ಸಂಕಲ್ಪವನ್ನು ನಮ್ಮಲ್ಲಿ ಹುಟ್ಟಿಸದಿರವು. ನಿಜ ಹೇಳಬೇಕೆಂದರೆ, ಪೀಡಿತರಿಗೆ ಸಹಾಯವನ್ನೊದಗಿಸುವುದು ಇಂದು ಎಷ್ಟು ಅಗತ್ಯದ ಕೆಲಸವಾಗಿದೆಯೋ ಅದಕ್ಕೂ ಹೆಚ್ಚಿನ ಮಹತ್ವವನ್ನು ನಾವೀಗ ನೆರೆ ನಿಯಂತ್ರಣ ಯೋಜನೆಗಳಿಗೆ ಕೊಡುವುದು ಸಮಂಜಸ. ದುರದೃಷ್ಟವು ಬೆನ್ನು ಹತ್ತಿದ ಉತ್ತರಭಾರತದ ರೈತರಿಗೆ ಕಡಿಮೆ ಬೆಲೆಯಲ್ಲಿ ಅಕ್ಕಿಯನ್ನೂ ಇತರ ದವಸ ಧಾನ್ಯಗಳನ್ನೂ ಪೂರೈಸಲಾಗುತ್ತದೆ. ತಗಾವಿ ಸಾಲಗಳನ್ನು ಕೊಡಲಾಗುತ್ತದೆ. ರೈಲ್ವೆ ನೌಕರರೇ ಮುಂತಾದವರಿಗೆ ಮುಂಗಡ ಸಂಬಳವನ್ನೂ ನೀಡಲಾಗುತ್ತದೆ. ವೈದ್ಯಕೀಯ ಉಪಚಾರದ ವ್ಯವಸ್ಥೆ,ದನ ಕರುಗಳಿಗೆ ಮೇವಿನ ಏರ್ಪಾಡು, ಮುಂದಿನ ಸುಗ್ಗಿಗೆ ಬೀಜದ ಪೂರೈಕೆ, ಮರಳಿ ಮನೆಕಟ್ಟಿಕೊಳ್ಳುವ ಅನುಕೂಲತೆ-- ಎಲ್ಲದರ ಕಡೆಗೂ ವಿಶೇಷ ಲಕ್ಷ್ಯವನ್ನೀಯಲಾಗುವುದು ಇದೆಲ್ಲ ಸರಿ—ಆದರೆ ಇದು ತಾತ್ಕಾಲಿಕ ಕ್ರಮವಾಯಿತು. ಬಿಹಾರ ರಾಜ್ಯಕ್ಕಾಗಲೀ, ಉತ್ತರ ಭಾರತದ ಇತರ ರಾಜ್ಯಗಳಿಗಾಗಲೀ ನೆರೆ ಹಾವಳಿಯು ಅನಿರೀಕ್ಷಿತವಾದುದಲ್ಲ—ಹಿಮಾಲಯದ ತಪ್ಪಲಿನಲ್ಲಿರುವ ಈ ಪ್ರದೇಶಗಳು ಉಕ್ಕಿ ಹರಿಯುವ ನದಿಗಳಿಂದ ಕೂಡಿದ್ದು, ಅನೇಕ ಶತಮಾನಗಳಿಂದ ಪ್ರತಿ ವರ್ಷ ನೆರೆಯಿಂದ ಜನರನ್ನು ಸಂತ್ರಸ್ತರಾಗಿ ಮಾಡುತ್ತವೆ. ಅಸಾಮಿನಲ್ಲಿ ಬ್ರಹ್ಮಪುತ್ರೆ, ಉತ್ತರ ಬಿಹಾರದಲ್ಲಿ ಗೋಗ್ರಾ, ಗಂಡಕಿ, ಭಾಗಮತಿ, ಕೋಸಿ ಮುಂತಾದ ನದಿಗಳ ಪಾತ್ರ ಆಳವಾಗಿಲ್ಲದಿರುವುದರಿಂದ, ಹಿಮಾಲಯದಲ್ಲಿ ಸಾಧಾರಣ ಮಳೆಯಾದರೂ ಸಾಕು—ಮಹಾಪೂರದ ದುರಂತವನ್ನು ತರುತ್ತವೆ. ಫಲವತ್ತಾದ ಮಣ್ಣನ್ನು ಇವು ಕೊಚ್ಚಿಕೊಂಡು ಹೋಗುವುದಲ್ಲದೆ, ಅನೇಕ ವೇಳೆ ಪ್ರವಾಹದ ದಿಕ್ಕನ್ನೂ ಬದಲಿಸುತ್ತವೆ. ಅಸಾಮಿನಲ್ಲಿ ೧೯೫೦ರಲ್ಲಿ ನಡೆದ ಭೂಕಂಪದ ದೆಸೆಯಿಂದ ನದಿಯ ಪಾತ್ರವು ತೀರ ಮೇಲಕ್ಕೆ ಬಂದಿರುವುದು. ಆದುದರಿಂದ, ನೆರೆ ಹಾವಳಿಯನ್ನು ನಿಯಂತ್ರಿಸುವುದಕ್ಕಾಗಿ ಈ ನೀರು ಬೇಗನೇ ದೂರ ದೂರ ಒಯ್ಯಲ್ಪಡುವಂತೆ ವ್ಯವಸ್ಥೆ ಮಾಡಬೇಕಾಗುವುದು. ಮೊದಲಾಗಿ ನದಿಯಲ್ಲಿ ತುಂಬಿದ ಉಸುಬನ್ನೂ ಮಣ್ಣನ್ನೂ ತೆಗೆಯಬೇಕು; ದಂಡೆಗಳನ್ನು ಬಲಪಡಿಸಬೇಕು; ಮತ್ತು ಸುವ್ಯವಸ್ಥಿತ ರೀತಿಯಲ್ಲಿ ಒಡ್ಡುಗಳನ್ನೂ ಅಣೆಕಟ್ಟುಗಳನ್ನೂ ನಿರ್ಮಿಸಿ, ನೀರನ್ನು ಸಂಗ್ರಹಿಸಿ, ಕಾಲುವೆಗಳ ಮೂಲಕ ದೂರದ ಹಳ್ಳಿಗಳಿಗೆ ವ್ಯವಸಾಯಕ್ಕಾಗಿ ನೀರನ್ನೊಯ್ದು ಬಿಡುವ ಅನುಕೂಲತೆಯನ್ನು ಏರ್ಪಡಿಸಬೇಕು. ಇದರಿಂದ ಹೆಚ್ಚು ಭೂಮಿಯನ್ನು ಸಾಗು ಮಾಡಲು ಸಾಧ್ಯವಾಗುವುದಲ್ಲದೆ, ನೆರೆಯ ಭೀಕರ ಪರಿಣಾಮಗಳನ್ನೂ ದೂರಗೊಳಿಸಿದಂತಾಗುವುದು. ಉತ್ತರ ಬಿಹಾರದ ಮಟ್ಟಿಗೆ ಸಿದ್ಧಪಡಿಸಿದ ಒಂದು ಯೋಜನೆಯನ್ನು ಕಾರ್ಯಗತಗೊಳಿಸುವ ಪಕ್ಷದಲ್ಲಿ ಸುಮಾರು ೨೫ ಕೋಟಿ ರೂಪಾಯಿಗಳ ವೆಚ್ಚ ಬರಬಹುದೆಂದು ಕೇಳುತ್ತೇವೆ—ಪ್ರತಿ ವರ್ಷ ಸಂಭವಿಸುವ ನಷ್ಟದ ಪ್ರಮಾಣವನ್ನು ನೋಡಿದರೆ ಈ ವೆಚ್ಚವನ್ನು ಸಹಿಸಿಯಾದರೂ ಯೋಜನೆಗಳನ್ನು ಬೇಗನೆ ಕಾರ್ಯಗತಗೊಳಿಸುವುದು ಇಷ್ಟವೆಂದು ಹೇಳಬಹುದು. ಪ್ರಧಾನ ಮಂತ್ರಿಗಳು ಕೋಸಿ ನದಿಯ ಯೋಜನೆಯನ್ನು "ಮುಂದಿನ ಮಳೆಗಾಲದೊಳಗೆ ಪ್ರಾರಂಭಿಸಲಾಗುವುದೆಂದು ಹೇಳಿದ್ದಾರೆ—ಅಲ್ಲದೆ ನೆರೆ ನಿಯಂತ್ರಣ ವ್ಯವಸ್ಥೆಯಲ್ಲಿ ಚೀನದ ಇಂಜಿನಿಯರರ ಸಹಕಾರವನ್ನು ಪಡೆಯುವ ಹಾಗು ಅಲ್ಲಿಯ ಮಾದರಿಯನ್ನು ಅನುಸರಿಸುವ ಉತ್ಸುಕತೆಯನ್ನು ಭಾರತ ಸರಕಾರ ತೋರಿಸುತ್ತದೆ. ಈ ಪ್ರಯತ್ನಗಳು ಜಯಪ್ರದವಾಗಲೆಂದು ಪ್ರತಿಯೊಬ್ಬ ಭಾರತೀಯನೂ ಆಶಿಸುತ್ತಾನೆ. ಕೇವಲ ಕೋಸಿ ಯೋಜನೆಯೊಂದೇ ಸಮಸ್ಯೆಗೆ ಮದ್ದಲ್ಲ— ಇತರ ಅನೇಕ ಕಾರ್ಯಕ್ರಮಗಳೂ ಅಗತ್ಯ. ಯೋಜನಾ ಸಚಿವ ನಂದಾರು ಮೂರು ಘಟ್ಟಗಳಲ್ಲಿ ಕೈಗೊಳ್ಳಬಹುದಾದ ನೆರೆ ನಿಯಂತ್ರಣ ವ್ಯವಸ್ಥೆಯನ್ನು ಸಂಸತ್ತಿನಲ್ಲಿ ವಿವರಿಸಿದ್ದು, ಅವನ್ನು ಈಗಿಂದೀಗ ಕಾರ್ಯಗತಗೊಳಿಸುವುದು ಅಗತ್ಯ. ಕೋಟ್ಯಾಂತರ ಜನರ ವಿತ್ತ ಜೀವಿತಗಳ ಪ್ರಶ್ನೆ ಇದಾಗಿದ್ದು,ವಿಳಂಬವು ಎಷ್ಟೇ ಕಡಿಮೆ ಹಾಗು ಅನಿವಾರ್ಯವೆನಿಸಿದರೂ, ಅದರ ಪರಿಣಾಮವು ಕಣ್ಣೀರನ್ನು ತರಿಸುತ್ತದೆ. ಇದು ಅನಪೇಕ್ಷಿತವಾದ ವಿಷಯ.

ಆಗ್ನೇಯ ಏಶ್ಯಾ ಸಂರಕ್ಷಣಾ ಒಪ್ಪಂದ

ಅಷ್ಟ ರಾಷ್ಟ್ರಗಳ ಪರಿಷತ್ತಿನ ಪ್ರಾರಂಭ

ಫಿಲಿಪೀನದ ರಾಜಧಾನಿ ಮನಿಲಾದಲ್ಲಿ ಮೊನ್ನೆ ಸೋಮವಾರ ವಿಧ್ಯುಕ್ತ ರೀತಿಯಲ್ಲಿ ಆಗ್ನೇಯ ಏಶ್ಯಾದ ಸಂರಕ್ಷಣಾ ಒಪ್ಪಂದದಲ್ಲಿ ಆಸ್ಥೆಯುಳ್ಳ ಅಷ್ಟ ರಾಷ್ಟ್ರಗಳ ಪರಿಷತ್ತು ಪ್ರಾರಂಭವಾಯಿತು. ಕಮ್ಯುನಿಸ್ಟರ ಸಂಭಾವ್ಯ ಆಕ್ರಮಣದ ವಿರುದ್ಧ ಸಾಮೂಹಿಕ ಕಾರ್ಯಾಚರಣೆಯ ಸಿದ್ಧತೆ ಮಾಡಿಕೊಳ್ಳುವ ಮೂಲಕ ಸ್ವತಂತ್ರ ಜಗತ್ತಿನ ಭದ್ರ ಭವಿಷ್ಯಕ್ಕೆ ಅಡಿಗಲ್ಲನ್ನು ಹಾಕುವುದೇ ಈ ಪರಿಷತ್ತಿನ ಉದ್ದೇಶವೆಂದು ಲೋಕಕ್ಕೆ ಸಾರಲಾಯಿತು. ಫಿಲಿಪೀನದ ಅಧ್ಯಕ್ಷರು ಪರಿಷತ್ತನ್ನು ಉದ್ಘಾಟಿಸುತ್ತಾ ಆಕ್ರಮಣವಾಗದಂತೆ ನೋಡುವುದು; ಆಕ್ರಮಣವಾಗುವ ಸಂಭವವಿದ್ದರೆ ಅದನ್ನು ಪ್ರತಿಭಟಿಸಲು ಉಪಾಯ ಯೋಜಿಸುವುದು; ಪ್ರತ್ಯಕ್ಷ ಆಕ್ರಮಣವಾದಾಗ ಈ ಉಪಾಯಗಳನ್ನು ಕಾರ್ಯಗತಗೊಳಿಸುವುದು; ಆಗ್ನೇಯ ಏಶ್ಯಾ ಸಂರಕ್ಷಣಾ ಒಪ್ಪಂದದ ಧ್ಯೇಯವಾಗಬೇಕೆಂದು ಹೇಳಿದರು. ಪರಿಷತ್ತಿನಲ್ಲಿ ಭಾಗವಹಿಸುವ ಇತರ ರಾಷ್ಟ್ರಗಳ ಪ್ರತಿನಿಧಿಗಳು ಆಕ್ರಮಣವನ್ನು ಪ್ರತಿಭಟಿಸುವ ತಮ್ಮ ಪ್ರತಿಜ್ಞೆಯನ್ನು ಪುನರುಚ್ಚರಿಸಿದರು.

ಪಾಕಿಸ್ತಾನದ ಅಭಿಪ್ರಾಯ

ಪರಿಷತ್ತಿನಲ್ಲಿ ಪ್ರೇಕ್ಷಕನ ಸ್ಥಾನದಿಂದ ಭಾಗವಹಿಸುವ ಪಾಕಿಸ್ತಾನದ ಪ್ರತಿನಿಧಿ ಜಾಫರುಲ್ಲ ಖಾನರು ಆಕ್ರಮಣವು ಕಮ್ಯುನಿಸ್ಟರಿಂದಲೇ ಆಗಬೇಕೆಂದಿಲ್ಲ; ಆಗ್ನೇಯ್ಯ

ಮಾಧ್ಯಮಿಕ ಶಿಕ್ಷಣ

ಮದ್ರಾಸು ವಿಶ್ವವಿದ್ಯಾಲಯದ ಮುಂದೆ ಬರುವ ೧೯೫೬-೫೭ನೇ ಶಾಲಾ ವರ್ಷದಿಂದ ಮಾಧ್ಯಮಿಕ ಶಿಕ್ಷಣ ಆಯೋಗವು ಮಾಡಿದ ಕೆಲವು ವಿಶಿಷ್ಟ ಸೂಚನೆಗಳನ್ನು ಕಾರ್ಯಗತಗೊಳಿಸುವ ವಿಚಾರ ಬಂದಿದ್ದು ಇದು ಹೈಸ್ಕೂಲುಗಳಲ್ಲಿ ಏಳನೇ ಫೋರ್ಮನ್ನು ತೆರೆಯುವ ಮತ್ತು ಬಿ. ಎ. ಮತ್ತಿತರ ಪದವಿಗಳಿಗಾಗಿ ಕಲಿಯಬೇಕಾದ ಅವಧಿಯನ್ನು ಮೂರು ವರ್ಷ ಮಾಡುವ ವಿಷಯಕ್ಕೆ ಸಂಬಂಧಪಟ್ಟಿರುವುದು.ಮೇಲಿನಶಿಫಾರಸುಗಳನ್ನು ಮಾಡುವಾಗ ಆಯೋಗದವರು ದೇಶದ ಮಕ್ಕಳಲ್ಲಿ ಹೆಚ್ಚಿನವರಿಗೆ ಮಾಧ್ಯಮಿಕ ಶಿಕ್ಷಣವನ್ನು ಮೀರಿ ಜ್ಞಾನಾರ್ಜನೆ ಮಾಡುವುದು ಅಶಕ್ಯವೆಂಬ ಅಂಶವನ್ನು ಗಮನಿಸಿದ್ದರು; ಮತ್ತು ಹೀಗೆ ಜೀವನರಂಗವನ್ನೆ ನೇರಾಗಿ ಪ್ರವೇಶಿಸಬೇಕಾದ ವಿದ್ಯಾರ್ಥಿಗಳಿಗೆ, ಭವಿಷ್ಯವು ಆಶಾದಾಯಕವಾಗಿ ಕಾಣುವಂತೆ, ತಾಂತ್ರಿಕ ಹಾಗು ವೃತ್ತಿಪರ ಶಿಕ್ಷಣದ ವ್ಯವಸ್ಥೆಯನ್ನು ಏರ್ಪಡಿಸಬೇಕೆಂದೂ ಹೇಳಿದ್ದರು. ಹೈಸ್ಕೂಲುಗಳಲ್ಲಿ ಏಳನೇ ಫೋರ್ಮ ತೆರೆಯುವ ಉದ್ದೇಶ ಇಂತಹ ಶಿಕ್ಷಣವನ್ನು ಒದಗಿಸುವುದೇ ಆಗಿದೆ. ಇದರಿಂದ ವಿದ್ಯಾರ್ಥಿಗಳು ಹೈಸ್ಕೂಲುಗಳಲ್ಲಿ ಒಂದು ವರ್ಷ ಹೆಚ್ಚು ಕಲಿಯಬೇಕಾದರೂ ಈಗಿನ ನಿರುಪಯುಕ್ತವಾದ—ಕೇವಲ ಕಾರಕೂನಿಕೆಗಷ್ಟೇ ಹೇಳಿಸಿದ—ವಿದ್ಯಾಭ್ಯಾಸಕ್ಕಿಂತ ಒಳ್ಳೆಯ ಶಿಕ್ಷಣವನ್ನು ಅವರು ಹೊಂದುವುದು ಸಾಧ್ಯ. ಕಾರಣ, ವಿಶ್ವವಿದ್ಯಾಲಯದವರು ಇದನ್ನು ಕಾರ್ಯಗತಗೊಳಿಸಲು ನಿರ್ಧರಿಸುವುದು ಯೋಗ್ಯ. ಇಲ್ಲಿ ಕಾಣುವ ತೊಂದರೆಯೆಂದರೆ, ನಾವೀಗಲೇ ತಕ್ಕ ಸಿದ್ಧತೆಗಳನ್ನು ಮಾಡಿದ್ದೇವೆಯೆ, ಅಥವಾ ನಿರ್ದಿಷ್ಟ ಕಾಲವಲ್ಲಿಯಾದರೂ ಅಂತಹ ಸಿದ್ಧತೆಗಳನ್ನು ಮಾಡಬಲ್ಲೆವೆ ಎಂಬುದು. ಈಗಿನ ಹೈಸ್ಕೂಲುಗಳಲ್ಲಿ ವೃತ್ತಿಪರ ಹಾಗು ತಾಂತ್ರಿಕ ಶಿಕ್ಷಣವನ್ನು ಕಲಿಸುವ ವ್ಯವಸ್ಥೆಯಾಗಬೇಕು; ಇದರ ಹೊರತು ಕಾಲೇಜುಗಳಲ್ಲಿ ಇಂಟರಮೀಡಿಯೇಟ ತರಗತಿಯನ್ನು ರದ್ದುಗೊಳಿಸುವುದರಿಂದುಂಟಾಗುವ ಸಮಸ್ಯೆಯನ್ನೂ ಇದಿರಿಸಬೇಕು. ಇದಕ್ಕೆ ಬೇಕಾದ ಹಣವನ್ನು ಮತ್ತು ಸಾಧನ ಸಲಕರಣೆಗಳನ್ನು ಸಂಗ್ರಹಿಸುವುದು ಹೇಗೆಂದು ವಿಶ್ವವಿದ್ಯಾಲಯವು ಪರ್ಯಾಲೋಚಿಸಬೇಕಾಗುತ್ತದೆ. ಈ ಅಡಚಣೆಗಳನ್ನು ಕಂಡು ಯಾರೂ ನಿರಾಶೆಗೊಳ್ಳಬೇಕಾಗಿಲ್ಲ—ಏಕೆಂದರೆ ಇದು ಒಳ್ಳೆಯ ಯೋಜನೆ: ಮತ್ತು ಕರ್ತೃತ್ವ ಶಕ್ತಿ ಹಾಗು ಮುನ್ನೋಟಗಳೂ ಜನತಾ ಸಹಕಾರವೂ ಜೊತೆಗೂಡಿ ಕೆಲಸ ಮಾಡಿದ ಪಕ್ಷದಲ್ಲಿ ಎರಡು ಕೋಟಿ ರೂಪಾಯ್ಯಿಗಳ ಈ ವೆಚ್ಚ ದೊಡ್ಡ ಮಾತಾಗದು.

ನಮ್ಮ ಚಂದಾದಾರರಲ್ಲಿ ವಿನಂತಿ

ಇದೇ ಸಪ್ಟಂಬರ ತಿಂಗಳಿಂದ ನವಯುಗದ 34ನೆಯ ಹೊಸ ವರ್ಷಾರಂಭವಾಗಿದೆ. ಈಗಲಾದರೂ ನಮ್ಮ ಚಂದಾದಾರರಲ್ಲಿ ಹಣ ಬಾಕಿ ಇರುವವರು ಅದನ್ನು ಕೂಡಲೇ ಸಲ್ಲಿಸಿ ನಮಗೆ ಆರ್ಥಿಕ ಬೆಂಬಲ ನೀಡುವುದಲ್ಲದೆ ನಮ್ಮ ಅಭಿಮಾನಿಗಳಲ್ಲಿ ಪ್ರತಿಯೊಬ್ಬರೂ ತನ್ನ ಸ್ನೇಹಿತರ ಬಳಗದಲ್ಲಿ ಒಬ್ಬಿಬ್ಬರನ್ನಾದರೂ ನಮಗೆ ಚಂದಾದಾರರಾಗಿ ಒದಗಿಸಿ ಕೊಡಬೇಕೆಂದು ಪ್ರಾರ್ಥಿಸುತ್ತೇವೆ. ಯಾರಿಗಾದರೂ ಪತ್ರಿಕೆ ಬೇಡವಾಗಿದ್ದರೆ ದಯಮಾಡಿ ಬಾಕಿಯನ್ನು ಕಳಿಸಿ ಹಾಗೆಯೇ ತಿಳಿಸಬಹುದು.

ವಿ. ಪಿ. ಪಿ. ಮಾಡುವುದರಿಂದ ಹತ್ತಾಣೆಯಷ್ಟು ನಷ್ಟ ಸಂಭವಿಸುತ್ತಿದ್ದುದರಿಂದ ಸರ್ವರೂ ಬಾಕಿಯನ್ನು ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ. ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದರೆ ಕ್ರಮಶಃ ವಿ. ಪಿ. ಪಿ. ಮಾಡುವೆವು.

ಮೆನೇಜರ್, ನವಯುಗ, ಉಡುಪಿ.

ಏಶ್ಯಾ ಸಂರಕ್ಷಣಾ ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳ ಮೇಲೆ ಹೊರಗಿನ ಯಾವ ರಾಷ್ಟ್ರ ಆಕ್ರಮಣ ಮಾಡಿದರೂ ಅದರ ವಿರುದ್ಧ ಸಾಮೂಹಿಕ ಕಾರ್ಯಾಚರಣೆಯಾಗಬೇಕೆಂದು ತಮ್ಮ ಭಾಷಣದಲ್ಲಿ ಧ್ವನಿಸಿದರು. ಇದಕ್ಕಾಗಿ ಕಮ್ಯುನಿಸ್ಟ ಎಂಬ ಶಬ್ದವನ್ನು ಕರಡಿನಿಂದ ತೆಗೆದು ಹಾಕಬೇಕೆಂಬ ಸೂಚನೆಯೂ ಮಂಡಿಸಲಾಗಿರುವುದು. ಭಾರತದ ಆಕ್ರಮಣ ಭಯ ಪಾಕಿಸ್ತಾನಕ್ಕೆ ಇದೆಯೆಂದು ತೋರಿಸಿಕೊಡುವುದೇ ಈ ತಿದ್ದುಪಡಿಯ ಉದ್ದೇಶವೆಂದು ರಾಜಕೀಯ ತಜ್ಞರ ಅಭಿಪ್ರಾಯ. ಆದರೆ ಅಮೇರಿಕಕ್ಕೆ ಈ ತಿದ್ದುಪಡಿ ಬೇಕಿಲ್ಲವೆಂದು ಹೇಳಲಾಗುತ್ತದೆ.

ಒಪ್ಪಂದದ ಪ್ರದೇಶ

ಮನಿಲಾದ ಪತ್ರಿಕೆಯೊಂದು ಪರಿಷತ್ತು ಸೇರುವುದಕ್ಕೆ ಮೊದಲೇ ಒಪ್ಪಂದದ ಕರಡನ್ನು ಪ್ರಸಿದ್ಧಿಸಿದ್ದರಿಂದ ಅಮೇರಿಕ ಫಿಲಿಪೀನಗಳು ಗೊಂದಲದಲ್ಲಿ ಬಿದ್ದವು. ಆಗ್ನೇಯ ಏಶ್ಯಾ ಮತ್ತು ನೈಋತ್ಯ ಶಾಂತ ಸಾಗರ ವಲಯದಲ್ಲಿ ಕಮ್ಯುನಿಸ್ಟ ಆಕ್ರಮಣವನ್ನು ತಡೆಯಬೇಕೆಂದೂ ಇದಕ್ಕಾಗಿ ಸಂರಕ್ಷಣ ಮಂಡಳವೊಂದು ಏರ್ಪಡಬೇಕೆಂದೂ ಈ ಕರಡು ಹೇಳುತ್ತದೆ. ಒಪ್ಪಂದಕ್ಕೊಳಪಡುವ ಪ್ರದೇಶದಲ್ಲಿ ಫೋರ್ಮೋಸಾ ದ್ವೀಪವೂ ಇಂಡೋಚೀನದಲ್ಲಿ ಟಾಂಕಿಂಗಿಗೆ ದಕ್ಷಿಣದ ಭಾಗವೂ ಸೇರುತ್ತದೆ. ಇದರಿಂದ ಇಂಡೋಚೀನದ ಕುರಿತು ಜಿನೇವಾದಲ್ಲಿ ನಡೆದ ಸಂಧಾನದ ಕರಾರನ್ನು ಮುರಿದಂತಾಗದೆ ಎಂಬ ಪ್ರಶ್ನೆ ಏಳುತ್ತದೆ.

ಆರ್ಥಿಕ ಪುನಾರಚನೆ

ಪರಿಷತ್ತಿನಲ್ಲಿ ಭಾಗವಹಿಸಿದ ಏಶ್ಯಾರಾಷ್ಟ್ರಗಳನ್ನು ನಿರಾಶೆಗೊಳಿಸಿದ ಅಂಶವೆಂದರೆ, ಆರ್ಥಿಕ ಪುನಾರಚನೆಗೆ ಯೋಗ್ಯ ವ್ಯವಸ್ಥೆ ಕರಡಿನಲ್ಲಿ ಇಲ್ಲದಿರುವುದೇ ಆಗಿದೆ. ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬೇಕೆಂದು ಕರಡಿನಲ್ಲಿರುವ ಕಲಮೊಂದು ಹೇಳುತ್ತದಾದರೂ ಇದಕ್ಕಾಗಿ ಉಪಾಯ ಯೋಚಿಸಲು ಯಾವುದೇ ಮಂಡಳದ ನೇಮಕವಾಗಬೇಕೆಂದು ಅದು ಹೇಳುವುದಿಲ್ಲ. ಇದರಿಂದ ಆಗ್ನೇಯ ಏಶ್ಯಾದ ವಾಸ್ತವಿಕ ಪರಿಸ್ಥಿತಿಯನ್ನು ಉಪೇಕ್ಷಿಸಿ, ಕೇವಲ ಸೈನಿಕ ಸಿದ್ಧತೆಗೆ ಮಹತ್ವಕೊಟ್ಟಂತಾಗುವುದೆಂದು ಆಕ್ಷೇಪಿಸಲಾಗಿದ್ದು, ತಿದ್ದುಪಡಿಯೂ ಮಂಡಿಸಲ್ಪಟ್ಟಿರುವುದು.

ಚೀನೀಯರ ದಾಳಿ

ಇತ್ತ ಫೋರ್ಮೋಸಾದಲ್ಲಿ ತೀರ ಗೊಂದಲಮಯ ವಾತಾವರಣ ಉಂಟಾಗಿರುವುದು—ಫಿಲಿಪೀನದ ಪರಿಷತ್ತು ಚೀನದ ಮನಸ್ಸಿಗೆ ಸ್ವಲ್ಪವೂ ಬಂದಿಲ್ಲ. ಆದುದರಿಂದ ಅದು ತನ್ನ ಪೌರುಷ ಪ್ರದರ್ಶನಕ್ಕೆ ಇದೇ ಸಂದರ್ಭವೆಂದು ಕೊಂಡು, ಫೋರ್ಮೋಸಾದ ವಿಮೋಚನೆ ಮಾಡುವ ತನ್ನ ಹಂಬಲದ ಸಾಧನೆಯಲ್ಲಿ ಪ್ರಥಮ ಹೆಜ್ಜೆಯನ್ನು ಇಟ್ಟಿರುವುದು. ಕಳೆದ ಶುಕ್ರವಾರ ಚೀನಾದ ಕರಾವಳಿಯಿಂದ ಮೂರು ಮೈಲು ದೂರವಿರುವ ರಾಷ್ಟ್ರೀಯ ಚೀನದ ಅಧಿಕಾರಕ್ಕೊಳಪಟ್ಟ ಕ್ವೆಮೋಯ ದ್ವೀಪದ ಮೇಲೆ ತೋಪುಗಳ ಮೂಲಕ ಗುಂಡಿನ ಮಳೆಗರೆಯಿತು. ಇದರಿಂದ ಚಿಯಾಂಗರ ಜಲಾಂತರ್ಗಾಮಿ ನಾವೆ ಹಾಗು ತೋಪಿನ ಹಡಗುಗಳೂ ಮೂರು ವಿಮಾನಗಳೂ ನಷ್ಟಗೊಂಡುವಲ್ಲದೆ ಇಬ್ಬರು ಅಮೇರಿಕದ ಸೈನಿಕ ಅಧಿಕಾರಿಗಳನ್ನೊಳಗೊಂಡು ಬೇರೆ ಕೆಲವರೂ ಮರಣ ಹೊಂದಿದರು.

(೫ನೇ ಪುಟದಿಂದ)

ಸಲು ಸಾಧ್ಯವಾದೀತೆಂಬ ಆಶಯವನ್ನು ಮುಖ್ಯ ಮಂತ್ರಿಗಳು ವ್ಯಕ್ತಪಡಿಸಿದರು.

ಜನತೆಯ ಕ್ಷಮಾಯಾಚನೆ

ದಕ್ಷಿಣ ತಿರುವಾಂಕೂರಿನಲ್ಲಿ ಕಳೆದ ತಿಂಗಳು ಪ್ರಸಮಾ ಸರಕಾರದ ಹೆಸರಿನಲ್ಲಿ ನಡೆಸಲಾದ ಗೋಳಿಬಾರಿನ ವಿಷಯದಲ್ಲಿ ಹೊಸ ದೆಹಲಿಯಲ್ಲಿ ಸೇರಿದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ತತ್ವಕ್ಕೆ ವಿರೋಧವಾಗಿ ನಡೆದುಕೊಂಡ ತಪ್ಪನ್ನು ಒಪ್ಪಿಕೊಂಡು, ಜನತೆಯ ಕ್ಷಮೆ ಕೇಳಲು ನಿರ್ಣಯಿಸಿತು. ತಾನು ಕಾರ್ಯದರ್ಶಿಯಾಗಿರುವಷ್ಟು ಒಳ್ಳೆಯ ಪಕ್ಷ ಇದಲ್ಲವೆಂದು ಹೇಳುತಿದ್ದ ರಾಮ ಮನೋಹರ ಲೋಹಿಯರ ರಾಜೀ ನಾಮೆಯನ್ನು ಸ್ವೀಕರಿಸಲಾಯಿತು. ಲೋಹಿಯರು ಇನ್ನು ಮುಂದೆ ಕಾರ್ಯಕಾರಿ ಸಮಿತಿಯ ಸದಸ್ಯರಾಗಿಯಷ್ಟೇ ಉಳಿಯುವರು. ಗೋವೆಯ ವಿಮೋಚನಾ ಚಳವಳದಲ್ಲಿ ಭಾರತೀಯರು ಭಾಗವಹಿಸದಂತೆ ನಿರ್ಬಂಧಿಸುವ ಸರಕಾರದ ಧೋರಣೆಯು ಭಾರತೀಯರಿಂದ ಗೋಮಾಂತಕರನ್ನು ಪ್ರತ್ಯೇಕಿಸುತ್ತದೆ. ಅಪಾಯಕರವಾದ ಈ ಭೇದವು ಇಷ್ಟವಾದುದಲ್ಲ. ಭಾರತದ ವಿದೇಶೀ ವಸಾಹತುಗಳ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತೀಯ ನಾಗರಿಕರಿಗೆ ಭಾಗ ವಹಿಸಗೊಡುವುದೇ ಶ್ರೇಯಸ್ಕರ ಎಂದು ಸಮಿತಿಯು ಸರಕಾರವನ್ನು ಒತ್ತಾಯಿಸಿತು.

ಪೋರ್ಚುಗಾಲದ ಸೂಚನೆ

ಪೋರ್ಚುಗಾಲವು ಕಳೆದ ವಾರ ಭಾರತ ಸರಕಾರಕ್ಕೆ ಇದೇ ೭ನೇ ತಾರೀಕಿನಂದು ಗೋವೆಯ ಪರಿಸ್ಥಿತಿಯನ್ನು ಅಭ್ಯಸಿಸುವುದಕ್ಕೋಸ್ಕರ ನಿಷ್ಪಕ್ಷಪಾತ ನಿರೀಕ್ಷಕರನ್ನು ನೇಮಿಸಬೇಕೆಂಬ ತತ್ವದ ಕುರಿತು ಮಾತುಕತೆ ನಡೆಸುವ ಸೂಚನೆಯನ್ನು ಪುನಃ ಮಾಡಿತು. ಇದನ್ನು ಭಾರತ ಸರಕಾರ ಹೃತ್ಪೂರ್ವಕ ಸ್ವಾಗತಿಸಿತಲ್ಲದೆ, ಸರ್ವಸಮ್ಮತವಾದ ತತ್ವದ ತಳಹದಿಯ ಮೇಲೆ ಪ್ರಾರಂಭವಾಗಲಿರುವ ಮಾತುಕತೆಗಳಿಗೆ ಆತಂಕಪ್ರಾಯವಾದ ಕರಾರುಗಳಿಗೆ ಮುಂಗಡವಾಗಿ ಒಪ್ಪುವಂತೆ ಉಭಯ ಪಕ್ಷದವರೂ ಕೇಳಿಕೊಳ್ಳಬಾರದೆಂದು ಸೂಚಿಸಿತು. ಭಾರತದಲ್ಲಿಯ ಪೋರ್ಚುಗೀಜ ನಡುಗಡ್ಡೆಗಳಿಗೆ ಹೋಗಲು ಅನುಮತಿ ನೀಡಬೇಕೆಂಬ ವಿಷಯದಲ್ಲಿ ಮಾತ್ರ ಆಕ್ರಮವಾಗಿ ಗಡಿಯನ್ನು ಉಲ್ಲಂಘಿಸಲು ಬಿಡುವಂತಿಲ್ಲವೆಂದು ಭಾರತ ಸರಕಾರ ಹೇಳಿತು. ಇದು ಪೋರ್ತುಗಾಲಕ್ಕೆ ಪಥ್ಯವಾಗಲಿಲ್ಲ. ನಿಷ್ಪಕ್ಷೀಯ ನಿರೀಕ್ಷಕರನ್ನು ನೇಮಿಸಬೇಕೆಂಬ ಸೂಚನೆಯನ್ನು ಭಾರತ ನಿಜಸ್ಥಿತಿಯಲ್ಲಿ ಸ್ವೀಕರಿಸಿಲ್ಲಿಲ್ಲವೆಂದು ಹೇಳುತ್ತಾ ಮಾತುಕತೆಯನ್ನು ಅದು ಮುಂದೆ ಹಾಕಿತು.

ಗೋವೆಯ ವಾತಾವರಣ

ಗೋವೆಯಲ್ಲಿ ಸತ್ಯಾಗ್ರಹಿಗಳನ್ನು ಉಪವಾಸ ನರಳುವಂತೆ ಮಾಡಿಯೂ ಚಿತ್ರಹಿಂಸೆಯನ್ನು ಕೊಟ್ಟೂ ಇನ್ನುಮುಂದೆ ವಿಮೋಚನಾ ಆಂದೋಲನದಲ್ಲಿ ಭಾಗವಹಿಸುವುದಿಲ್ಲೆಂಬ ಆಶ್ವಾಸನೆಯನ್ನು ಅವರಿಂದ ಒತ್ತಾಯಪೂರ್ವಕ ಪಡೆಯಲಾಗುತ್ತಿದೆಯಾಗಿ ಕೇಳುತ್ತೇವೆ. ಪೋರ್ಚುಗೀಜರು ಕಳೆದ ವಾರ ೫೦೦೦ ಸಶಸ್ತ್ರ ಸೈನಿಕರನ್ನು ಗೋವೆಯಲ್ಲಿ ಇಳಿಸಿದ್ದು, ಅವರ ವಾಸ್ತವ್ಯಕ್ಕೋಸ್ಕರ ಗಣಿಯೊಡೆಯ ಶ್ರೀಮಂತ ಚೌಗುಲೆ ಮುಂತಾದ ನಾಗರಿಕರ ಕಟ್ಟಡಗಳನ್ನು ಉಪಯೋಗಿಸಲಾಗುತ್ತದೆ. ಆಹಾರದ ಅಭಾವವು ಕಾಣಿಸಿಕೊಂಡಿದ್ದು, ಬಂದರಗಳಲ್ಲಿ ಸರಕುಗಳನ್ನು ಇಳಿಸಲು ಜನರೇ ಸಿಗುವುದಿಲ್ಲ. ಪಾಕಿಸ್ತಾನದಿಂದ ತರಿಸಲ್ಪಡುವ ಅಕ್ಕಿ ಮತ್ತಿತರ ಆಹಾರ ಸಾಮಾಗ್ರಿಗಳನ್ನು ನೀಗ್ರೋ ಸೈನಿಕರ ಸಹಾಯದಿಂದ ಇಳಿಸಿ, ಪೂರೈಸಲಾಗುತ್ತದೆ. ಈ ಪರಿಸ್ಥಿತಿಯಲ್ಲಿ ಆಂದೋಲನವನ್ನು ಬಲಗೊಳಿಸಿದರೆ, ವಿಜಯ ಲಾಭವಾಗುವುದೆಂದು ಹೇಳಲಾಗುತ್ತದೆ. ಇದಕ್ಕಾಗಿ ಶ್ರೀ ಪೀಟರ್ ಅಳ್ವಾರೀಸರು ಹೊಸದೆಹಲಿಗೆ ಬಂದು ಪ್ರಧಾನ ಮಂತ್ರಿಗಳನ್ನು ಕಂಡು ಭಾರತೀಯರಿಗೂ ಸತ್ಯಾಗ್ರಹದಲ್ಲಿ ಭಾಗವಹಿಸಗೊಡಬೇಕೆಂದು ವಿನಂತಿಸಿದರು. ಇದು ಶಕ್ಯವಿಲ್ಲವೆಂದು ನೆಹರೂ ಉತ್ತರಿಸಿದುದರಿಂದ ಅವರು ನಿರಾಶರಾಗಬೇಕಾಯಿತು.

ಉಡುಪಿ

ಭಾಷಣಗಳು— ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿ ಆಶ್ರಯದಲ್ಲಿ ಸಿಂಡಿಕೇಟ್ ಬ್ಯಾಂಕಿನ ಲೆಕ್ಚರ್ ಹಾಲಿನಲ್ಲಿ ಕರ್ನಾಟಕ ಭೂದಾನ ಯಜ್ಞ ಪ್ರಧಾನ ಕಾರ್ಯಕರ್ತರಾದ ಶ್ರೀ ತಿಮ್ಮಪ್ಪ ಶ್ರೀನಿವಾಸ ನಾಯಕರು ಭೂದಾನ ಯಜ್ಞ ಚಳವಳಿಯ ಕುರಿತು ಭಾಷಣವೀಯುತ್ತಾ ಸಿರಿವಂತರು ಆಸ್ತಿವಂತರು ಈ ಮಹಾಕಾರ್ಯದಲ್ಲಿ ಸಹಕಾರವೀಯಬೇಕೆಂದು ಕೇಳಿಕೊಂಡರು. ಎಮ್. ಜಿ. ಎಮ್. ಕಾಲೇಜಿನ ಶ್ರೀ ಭಕ್ತ ಪ್ರಿಯ ವೇದಾಲಂಕಾರ, ಅವರು ಸಭಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ನಾಗಯ್ಯನವರು ಮಾನ್ಯ ಅತಿಥಿಯ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಶ್ರೀ ಎ. ಜಿ. ಆಳ್ವೆಯವರು ಧನ್ಯವಾದಗಳನ್ನರ್ಪಿಸಿದರು.

ಶ್ರೀ ರಾಮಕೃಷ್ಣ ಮಿಶನಿನ ಶ್ರೀಆದಿದೇವಾನಂದಜೀಯವರು ತಾ 1ರಲ್ಲೂ ಇದೇ ಹಾಲಿನಲ್ಲಿ ಉಪನಿಷತ್ತಿನ ಕುರಿತುಭಾಷಣವಿತ್ತರು. ಶ್ರೀ ಟಿ. ಎ. ಪೈ. ಎಮ್. ಎಲ್. ಎ. ಅವರು ವಂದನೆಗಳನ್ನರ್ಪಿಸಿದರು.

ಬೋರ್ಡ್ ಹೈಸ್ಕೂಲಿನ— ಮುಖ್ಯೋಪಾಧ್ಯಾಯರಾಗಿದ್ದ ಶ್ರೀ ಸಿ. ರಾಮಕೃಷ್ಣರಾಯರು ನಿವೃತ್ತರಾಗಿ ಅವರ ಸ್ಥಾನಕ್ಕೆ ಶ್ರೀ ಅನಂತಕೃಷ್ಣ ಸಾಮಗರು ನೇಮಿಸಲ್ಪಟ್ಟಿದ್ದಾರೆ. ಶ್ರೀ ರಾಯರನ್ನು ಬೀಳ್ಕೊಡುವ ಸತ್ಕಾರಕೂಟವೊಂದು ಇತ್ತೀಚೆಗೆ ನೆರವೇರಿತು.

ಸಂಸ್ಕೃತ ಕಾಲೇಜಿನ— ಪ್ರಧಾನ ಅಧ್ಯಾಪಕರಾಗಿ ಬೋರ್ಡ್ ಸರ್ವಿಸಿನಿಂದ ನಿವೃತ್ತರಾದ ಶ್ರೀ ರಾಮಕೃಷ್ಣ ರಾಯರು ನೇಮಿಸಲ್ಪಟ್ಟಿರುವರೆಂದು ತಿಳಿದು ಬರುತ್ತದೆ.

ಕಲಾವೃಂದದ— ಅಧಿಕಾರಿಗಳ ಚುನಾವಣೆಯು ತಾ. 4ರಲ್ಲಿ ಜರಗಿತು. ಶ್ರೀಗಳಾದ ಕೆ. ಹರಿದಾಸ ಉಪಾಧ್ಯಾಯ, ಕೆ. ವಾದಿರಾಜ ಆಚಾರ್ಯ, ಟಿ. ಹರಿದಾಸ ಸಾಮಗ, ಸಿ. ರಾಮಕೃಷ್ಣ ಐತಾಳರು ಅನುಕ್ರಮವಾಗಿ ಅಧ್ಯಕ್ಷ, ಉಪಾಧ್ಯಕ್ಷ, ಕಾರ್ಯದರ್ಶಿ ಉಪಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಶ್ರೀ ಎಮ್. ರಾಮಕೃಷ್ಣ ಆಚಾರ್ಯರು ಕೋಶಾಧಿಕಾರಿಗಳಾಗಿಯೂ ಆರಿಸಲ್ಪಟ್ಟರು. ಪತ್ರಿಕಾ ಸಂಪಾದಕ, ವಾಚನಾಲಯ ಕಾರ್ಯದರ್ಶಿ ಮತ್ತು ಕಲಾಕಾರ್ಯದರ್ಶಿಗಳಾಗಿ ಶ್ರೀಗಳಾದ ಕೆ. ಗಣಪತಿ ಸೋಮಯಾಜಿ, ಎಚ್. ಸುಬ್ರಾಯ ಭಟ್ ಮತ್ತು ಕೆ. ಶ್ಯಾಮ ಭಟ್ಟರು ಅನುಕ್ರಮವಾಗಿ ಚುನಾಯಿಸಲ್ಪಟ್ಟರು. ಕಾರ್ಯಕಾರಿ ಮಂಡಲಿಗೆ ಇತರಸದಸ್ಯರ ಆಯ್ಕೆಯೂ ನಡೆಯಿತು.

ದ. ಕ. ಜಿಲ್ಲಾ ಬೋರ್ಡ್ ಚುನಾವಣೆ— ಇದೇ ಸಪ್ಟಂಬರ ತಾ. 13 ಮತ್ತು 14ರಲ್ಲಿ ಉಮೇದುವಾರರು ನಾಮಪತ್ರಗಳನ್ನು ಸಲ್ಲಿಸಬೇಕಾಗಿರುತ್ತದೆ. ನಾಮಪತ್ರಗಳ ಪರಿಶೀಲನೆ 15—9—54ಕ್ಕೆ ನಡೆದು ಕ್ರಮಬದ್ಧವಾಗಿರುವ ನಾಮಪತ್ರಗಳ ಬಗ್ಗೆ ಆಪೀಲು ಇಲ್ಲವಾದರೆ ಅವುಗಳ ಪ್ರಕಟಣೆ ತಾ. 20—9—54. ಜಿಲ್ಲೆಯ ೧ನೇ ಭಾಗದಲ್ಲಿ ಅಂದರೆ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ತಾ. 17—10—54ರಂದು ಮತದಾನ. ಜಿಲ್ಲೆಯ ೨ನೇ ಭಾಗದಲ್ಲಿ ಅಂದರೆ ಮಂಗಳೂರು, ಪುತ್ತೂರು, ಕಾಸರಗೋಡು ತಾಲೂಕುಗಳಲ್ಲಿ ತಾ. 20—10—54ರಲ್ಲಿ ಮತದಾನ. ಒಂದನೆ ಭಾಗದ ಮತಗಣನೆ ತಾ. 21—10—54 ಮತ್ತು ಎರಡನೆ ಭಾಗದ ಮತಗಣನೆ ತಾ. 23—10—54ರಲ್ಲು.

'ಗೀತಾದರ್ಶ'— ಶ್ರೀ ಶೀರೂರು ಶ್ರೀಪಾದಂಗಳವರಿಂದ ಬರೆಯಲ್ಪಟ್ಟ ಈ ಪುಸ್ತಕವು ಧರ್ಮಾರ್ಥ ಸಿಗುವುದಾದರೂ ಪ್ರತಿಯನ್ನು ಅಪೇಕ್ಷಿಸುವವರು ಅಂಚೆ ವೆಚ್ಚಕ್ಕಾಗಿ0-12-0ನ್ನು ಕಳಿಸಬೇಕಾಗಿರುತ್ತದೆ. ಅಗ್ರಹಾರ ನಾರಾಯಣತಂತ್ರಿ, ಪಂಡಿತ ಸಂಸ್ಕೃತ ಕಾಲೇಜು, ಉಡುಪಿ.

ಹಿಂದೂ ಕೋಡು ಅಳಿಯಸಂತಾನ ಸಮಿತಿ, ಮಂಗಳೂರು:- ಇದರ ಸಭೆಯು— ತಾ. 19—9—54ರಲ್ಲು ಬೆಳಿಗ್ಗೆ 10 ಗಂಟೆಗೆ ವಕೀಲ್ ಎ. ಶಂಕರ ಆಳ್ವರ ಆಫೀಸಿನಲ್ಲಿ ಸೇರುವದೆಂದೂ ಸಂಬಂಧ ಪಟ್ಟವರು ಸಭೆಗೆ ಬಂದು ಸಹಕರಿಸಬೇಕೆಂದೂ ಅಪೇಕ್ಷಿಸಲಾಗಿದೆ.

In the Court of the Subordinate Judge of S. Kanara.

R. E. P. 416/1953.

S. M. V. S. Muthuswami Chettiar & Co. ... Petitioner.
and
Sri. Rama Cloth Store ... Respondent.

To
2. A. Vittal Pai, Son of Ganapathy Pai, Merchant, Koteswar Village Coondapur Tq.

The abovenamed petitioner has applied to the above Court for sale of the attached properties and fully described in the sale proclamation filed in the above execution, and that 16th day of September 1954 has been fixed to settle the terms of the sale proclamation.

Yours faithfully,
K. Balakrishna Rao,
Advocate for Petitioners.
Mangalore, 27-8-'54.

In the Court of the District Munsif of Mangalore.

S. C. 243/1954

B. Seetharama Rao ... Plaintiff.
S. Babu Shetty & others ... Defendants.

To
S. Babu Shetty } Sons of Nokke
S. Narsu Shetty } Hengsu, residing at Suratkal village—and next at Rama Bhavan, Top Floor, Dadar Galli-Kumberwada, Dadar —Bombay 8

The abovenamed plaintiff has filed the above suit for recovery of the mulgeni rent due on 3—4—1954 and the said suit is posted to 13—9—1954 for your appearance. You are hereby informed to appear in the said Court failing which the suit will be decided exparte.

Yours faithfully,
K. Balakrishna Rao,
Advocate for Pltf.
Mangalore, 27-8-'54.

ಮುಲ್ಕಿ—ಇಲ್ಲಿಯ ಸರಕಾರೀ ಹಿರಿಯ ಪ್ರಾಥಮಿಕ ಶಾಲೆಯ 'ವಿಜ್ಞಾನ ಸಂಘದ' ಉದ್ಘಾಟನೆಯನ್ನು ಕಳೆದ ತಾ. 20ರಲ್ಲಿ ಎಮ್. ಜಿ. ಎಮ್. ಕಾಲೇಜಿನ ಪ್ರೊಫೆಸರ್ ಶ್ರೀ ಯು. ಲಕ್ಷ್ಮೀನಾರಾಯಣಾಚಾರ್ಯರು ನೆರವೇರಿಸಿದರು. ಶಾಲಾ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಾರಾ, ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಕುಮಾರಿ ಬಿ. ದೇವಕಿಯವರು ಅತಿಥಿಗಳ ಪರಿಚಯ ಮಾತುಗಳನ್ನಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಕೃಷ್ಣ ನಾಯ್ಕರು ವಂದನೆಗಳನ್ನರ್ಪಿಸಿದರು.

ಪಣಿಯೂರು—ಇದೇ ತಾ 2ರಲ್ಲಿ ಪಣಿಯೂರು ಗ್ರಾಮಸ್ಥರ ಸಭೆಯೊಂದು ಡಾ! ಯು. ಶೇಷರಾಯರ ಅಧ್ಯಕ್ಷತೆಯಲ್ಲಿ ಜರಗಿ ಈ ಗ್ರಾಮಕ್ಕೊಂದು ಗ್ರಾಮಸಂಘ ಸ್ಥಾಪಿಸಲ್ಪಟ್ಟಿತು. ಸಂಘದ ಉದ್ದೇಶಗಳನ್ನು ಸಾಧಿಸಲು ಶ್ರೀಗಳಾದ ಕೃಷ್ಣಮೂರ್ತಿ ರಾವ್, ಅಧ್ಯಕ್ಷ; ಕೆ. ಶ್ರೀನಿವಾಸ ರಾವ್, ಕೋಶಾಧಿಕಾರಿ; ಬಿ. ಶಂಕರ ಶೆಟ್ಟಿ, ಕಾರ್ಯದರ್ಶಿ; ಬಿ. ಕೃಷ್ಣರಾವ್, ಜತೆಕಾರ್ಯದರ್ಶಿಗಳಾಗಿರುವ ಕಾರ್ಯನಿರ್ವಾಹಕ ಕಮಿಟಿ ರಚಿಸಲಾಯಿತು.

ವಕ್ವಾಡಿ—ಕುಂದಾಪುರ ತಾಲೂಕಿನ ವಕ್ವಾಡಿಯಲ್ಲಿ ಗಾಂಧಿ ಸ್ಮಾರಕ ನಿಧಿಯ ಪತಿಯಿಂದ ಕಳೆದ ತಾ. 30ರಲ್ಲಿ ಕರ್ನಾಟಕ ಪ್ರಾಂತಿಕ ಗಾಂಧಿ ಸ್ಮಾರಕ ನಿಧಿಯ ಸಂಚಾಲಕರಾದ ಶ್ರೀ ನಾಯಕ ಮಾಸ್ತರರು ಗ್ರಾಮ ಸೇವಾ ಕೇಂದ್ರದ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಶ್ರೀ ಕೆ. ಎಸ್. ಉರಾಳರು ಅಧ್ಯಕ್ಷತೆ ವಹಿಸಿದ್ದರು. ಶ್ರೀಗಳಾದ ಯಡ್ತರೆ ಮಂಜಯ್ಯ ಶೆಟ್ಟಿ, ಎಮ್. ಎಲ್ ಎ; ಎನ್. ಎಸ್. ಪರಮೇಶ್ವರಯ್ಯ, ರಾಮಣ್ಣ ಶೆಟ್ಟಿ, ಪಟೇಲ್ ನಾರಾಯಣ ಶೆಟ್ಟಿ ಮೊದಲಾದವರು ಮಾತನಾಡಿದರು. ಶ್ರೀ ನಾರಾಯಣ ಮಾಸ್ತರರು ಧನ್ಯವಾದಗಳನ್ನರ್ಪಿಸಿದರು.

ಕಾಸರಗೋಡು—ಈ ತಾಲೂಕಿನ ಬೋರ್ಡು ಪ್ರಾಥಮಿಕ ಶಾಲಾ ಉಪಾಧ್ಯಾಯರ ಯೂನಿಯನ್ ಕೌನ್ಸಿಲಿನ ಸಭೆಯು ತಾ. 2ರಲ್ಲಿ ಶ್ರೀ ಸಿ. ಶಿವರಾಮ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾಥಮಿಕ ಶಾಲೆಗಳಲ್ಲಿ ಕೆಲಸ ಮಾಡುವ ವಿವಿಧ ಮತದವರಿಗೆ, ಅವರವರ ಮತ ಸಂಬಂಧವಾದ ವಿಶೇಷಪರ್ವ ದಿನಗಳಲ್ಲಿ ಸೆಕ್ಷನಲ್ ರಜೆಕೊಡಬೇಕು. ಇಲ್ಲವೆ ಪಬ್ಲಿಕ್ ರಜಾ ದಿವಸಗಳನ್ನು ಶಾಲಾ ರಜಾ ಪಟ್ಟಿಯಲ್ಲಿ ಸೇರಿಸಬೇಕು ಎಂದು ಜಿಲ್ಲಾ ಬೋರ್ಡು ಸ್ಪೆಶಲ್ ಆಫೀಸರರನ್ನು ಕೇಳಿಕೊಳ್ಳುವ ಇತ್ಯಾದಿ ನಿರ್ಣಯಗಳಾದುವು.

ಪುತ್ತೂರು—ಈ ತಾಲೂಕು ಟೀಚರ್ಸ್ ಯೂನಿಯನ್ನ ಆಶ್ರಯದಲ್ಲಿ ತಾ. 29ರಲ್ಲಿ 'ಅಧ್ಯಾಪಕರ ಶಾಸನಾದಿನ'ವು ಶ್ರೀಮತಿ ಸುನಂದಾ ಬಾಳಿಗರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಶ್ರೀಗಳಾದ ಎನ್. ಮಹಾಬಲೇಶ್ವರ ಭಟ್, ಪಿ. ಎನ್. ಶ್ರೀನಿವಾಸ ರಾವ್, ಪಿ. ರಾಮಕೃಷ್ಣ ರಾವ್. ಕುಮಾರಿ ಲೂಸಿ ಮಿನೇಜಸ್ ಮೊದಲಾದವರು ಶಾಸನದ ಕುರಿತು ಮಾತನಾಡಿದರು. ಶ್ರೀ ಬಿ. ವಿ. ಜಿ. ಮೊಳ್ಳರು ವಂದನೆಗಳನ್ನರ್ಪಿಸಿದರು.

ಆಲೂರು—ಶ್ರೀ ಪಕರ್ಣರು ಸಂಜೀವ ಶೆಟ್ಟರು ಹೊಸತಾಗಿ ತೆರೆಯಲ್ಪಟ್ಟ ಸರಸ್ವತಿ ಎಯಿಡೆಡ್ ಎಲಿಮೆಂಟರಿ ಶಾಲೆಯ ಪ್ರಾರಂಭೋತ್ಸವವನ್ನು ಇದೇ ತಾ. 3ರಲ್ಲಿ ಕುಂದಾಪುರ ರೇಂಜ್ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಕೃಷ್ಣ ರಾಯರು ನೆರವೇರಿಸಿದರು, ಶ್ರೀಗಳಾದ ಪಕರ್ಣರು ನರಸಿಂಹ ಶೆಟ್ಟಿ ಮತ್ತು ವೀರಭದ್ರ ನಾಯ್ಕರು ಶಾಲಾ ಏಳಿಗೆಯ ಕುರಿತು ಮಾತನಾಡಿ ಊರವರ ಸಹಕಾರವನ್ನು ಬಯಸಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯು. ಜಗನ್ನಾಥ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಮಣಿಪಾಲ—ಸ್ಥಳೀಯ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ವಿದ್ಯಾರ್ಥಿಗಳು ಇದೇ ತಾ. 1ರಿಂದ 3ರ ತನಕ ಗಣೇಶ ಹಬ್ಬವನ್ನು ಯಶಸ್ವಿಯಾಗಿ ಆಚರಿಸಿದರು. ಪ್ರಾರಂಭ ದಿನ ಶ್ರೀ ರಾಮಕೃಷ್ಣ ಮಿಶನಿನ ಶ್ರೀ ಆದಿದೇವಾನಂದಜೀಯವರು ಗಣೇಶ ವಿಗ್ರಹವನ್ನು ಸ್ಥಾಪಿಸಿ ಈ ಉತ್ಸವ ಆಚರಣೆ ಮಹತ್ವವನ್ನು ವಿವರಿಸಿದರು. ಡಾ! ಕೆ. ಪಿ. ಆನಂದನ್ ಅವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಸಂಜೆ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಉತ್ಸವ ಸಭೆ ಜರಗಿತು. ಶ್ರೀ ಎ. ಆರ್. ಆಚಾರ್ಯರು ಕಾಲೋಚಿತ ಮಾತುಗಳನ್ನಾಡಿದರು. ಬಳಿಕ ವಿದ್ಯಾರ್ಥಿ, ವಿದ್ಯಾರ್ಥಿನಿಯರ ವಿನೋದಾವಳಿಗಳಾದುವು. ಎರಡನೆ ದಿವಸದ ಕಾರ್ಯಕ್ರಮದ ಅಂಗವಾಗಿ ಶ್ರೀ ರತ್ನಾಕರ ಭಟ್ಟರ ಪಿಟೀಲು ವಾದನವೂ ಶ್ರೀ ಜಿ. ಸಿ. ರೇಗೋರವರ ಪಾಶ್ಚಿಮಾತ್ಯ ಸಂಗೀತ ಕಾರ್ಯಕ್ರಮಗಳಾದುವು. ಕೊನೆಯ ದಿವಸದ ಅಧ್ಯಕ್ಷತೆಯನ್ನು ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರು ವಹಿಸಿದ್ದು 'ಜೀವನದಲ್ಲಿ ಮತಧರ್ಮಗಳ ಸ್ಥಾನ' ಎಂಬ ವಿಷಯದಲ್ಲಿ ಭಾಷಣವಿತ್ತರು. ಚಲಚಿತ್ರ ಪ್ರದರ್ಶನ ನಡೆದು ಸಮಾರಂಭ ಕೊನೆಗೊಂಡಿತು.

ಕೊಯಮುತ್ತೂರು—ಸ್ಥಳೀಯ ಕರ್ನಾಟಕ ಸಂಘದ ವಾರ್ಷಿಕೋತ್ಸವವು ಕಳೆದ ತಾ. 29ರಲ್ಲಿ ಶ್ರೀ. ಇ. ಆಂತೋನಿ ಲೋಬೋ, ಡಿಸ್ಟ್ರಿಕ್ಟ್ ಮತ್ತು ಸೆಶನ್ಸ್ ಜಡ್ಜ್ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ನಾಟಕ, ಸಂಗೀತ, ನಾಟ್ಯ, ಕ್ರೀಡಾ ಮೊದಲಾದ ವಿನೋದಾವಳಿಗಳಾದುವು ಡಿಪ್ಯುಟಿ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ ಕೆ. ಬಾಲಕೃಷ್ಣನವರು ಕನ್ನಡದಲ್ಲಿಯೂ, ಅಧ್ಯಕ್ಷರು ಇಂಗ್ಲಿಷಿನಲ್ಲಿಯೂ ಸಂಘದ ಆವಶ್ಯಕತೆ, ಚಟುವಟಿಕೆ, ಕರ್ತವ್ಯ ಇತ್ಯಾದಿ ವಿಷಯ ಮಾತನಾಡಿದರು ಶ್ರೀಮತಿ ಲೋಬೋರವರು ಬಹುಮಾನವಿತರಣೆ ಮಾಡಿದರು. ಕಾರ್ಯದರ್ಶಿಗಳು ಧನ್ಯವಾದಗಳನ್ನರ್ಪಿಸಿದರು.

ವಿಜಯವಾಡಾ—ಕನ್ನಡ ಸೇವಾ ಸಂಘದ ವಾರ್ಷಿಕೋತ್ಸವವು ತಾ. 26ರಲ್ಲಿ ಶ್ರೀ ನರಸಿಂಹ ಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಕಾರಿ ಸಮಿತಿ ರಚನೆಯಾಯಿತು. ರಾತ್ರಿ ನಾಟಕವಿತ್ತು.

ಜಿಲ್ಲಾ ಬೋರ್ಡು ಚುನಾವಣೆ—ಜಿಲ್ಲಾ ಬೋರ್ಡು ಚುನಾವಣೆಗೆ ನಿಂತವರು ತಮ್ಮ ನಾಮಪತ್ರಗಳನ್ನು ಹಿಂತೆಗೆಯಲಿಚ್ಛಿಸುವುದಾದರೆ, ಆ ರೀತಿ ಮಾಡಲು ಅವರಿಗೆ 2 ಸಂದರ್ಭಗಳನ್ನು ಕೊಡಲಾಗುವುದು. ಮೊದಲ ಸಂದರ್ಭದಲ್ಲಿ ನಾಮಪತ್ರ ಹಿಂತೆಗೆದುಕೊಳ್ಳುವವರಿಗೆ ಭದ್ರತಾ ಹಣವನ್ನು ತಿರುಗಿ ಕೊಡಲಾಗುವುದು. 2ನೇ ಸಂದರ್ಭದಲ್ಲಿ ಹೆಸರು ಹಿಂತೆಗೆಯುವವರು ಭದ್ರತಾ ಗಂಟನ್ನು ಕಳೆದುಕೊಳ್ಳುವರು. ಮೊದಲನೆ ಸಂದರ್ಭವು ನಾಮಪತ್ರಗಳ ಪರಿಶೀಲನೆಗೆ ನಿರ್ಧರಿಸಿದ ದಿನದಿಂದ 3 ದಿನಗಳ ವರೆಗೆ ಇದ್ದು ಅಂದು ಅಪರಾಹ್ನ 3 ಗಂಟೆಯೊಳಗೆ ಹೆಸರು ಹಿಂತೆಗೆದುಕೊಳ್ಳಬೇಕು. 2ನೇ ಸಂದರ್ಭವು ನಾಮಪತ್ರ ಪರಿಶೀಲನಾ ದಿನದಿಂದ 11 ದಿನಗಳ ವರೆಗೆ ಇದ್ದು 11ನೇ ದಿನ ಅಪರಾಹ್ನ 5 ಗಂಟೆಯ ವರೆಗೆ ಇರುವುದು. ಉದಾಹರಣೆಗಾಗಿ-ನಾಮಪತ್ರ ಪರಿಶೀಲನಾ ದಿನವು 26—8—54 ಎಂದ್ದರೆ ಮೊದಲನೆ ಸಂದರ್ಭವು 29—8—54 ಅಪರಾಹ್ನ 3 ಗಂಟೆಯ ವರೆಗೂ, 2ನೇ ಸಂದರ್ಭವು 6—9—54 ಸಂಜೆ 5 ಗಂಟೆಯ ವರೆಗೂ ಇರುವುದು. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಹಿಂದೆ ಚುನಾವಣಾ ದಿನದ 1 ವಾರದ ಮೊದಲು, ಭದ್ರತಾ ಹಣ ಕಳೆದುಕೊಂಡು ಹೆಸರು ಹಿಂತೆಗೆಯಲು ಸಾಧ್ಯವಿತ್ತು. ಆ ಕ್ರಮವನ್ನೀಗ ರದ್ದು ಮಾಡಲಾಗಿದೆ.

ಬ್ಲಾಕು ಸಲಹಾ ಸಮಿತಿ ಸರಕಾರೇತರ ಸದಸ್ಯರು—ರಾಷ್ಟ್ರವಿಸ್ತರಣಾ ಯೋಜನೆಯಲ್ಲಿ ಡೆವಲಪ್‌ಮೆಂಟ್ ಬ್ಲಾಕುಗಳ ಸಲಹಾ ಸಮಿತಿಗೆ ಈ ಕೆಳಗಿನವರನ್ನು ದಕ್ಷಿಣ ಕನ್ನಡದಿಂದ ಸರಕಾರವು ಸರಕಾರೇತರ ಸದಸ್ಯರನ್ನಾಗಿ ನೇಮಿಸಿರುವುದು.

ಸುಳ್ಯ ಬ್ಲಾಕು—1) ಶ್ರೀ ಪಿ. ಆರ್. ರಂಗನಾಥ ಪ್ರಭು. 2) ಶ್ರೀ ಕೆ. ವಿ. ಕುಶಾಲಪ್ಪ. 3) ಶ್ರೀ ದಿ. ವೀರಪ್ಪ. 4) ಶ್ರೀ ಎಮ್. ವಿತಪ್ಪ ರೈ.

ಮಂಜೇಶ್ವರ ಬ್ಲಾಕು—1) ಶ್ರೀ ಟಿ. ನಾರಾಯಣ ಭಟ್, 2) ಶ್ರೀ ಎ. ಎ. ಶಿರೂರ್. 3) ಶ್ರೀ ಅಡೆಕ್ಕಳ ರಾಮಯ್ಯ ನಾಯ್ಕ. 4) ಶ್ರೀ ಬಂಬ್ರಾಣ ಸಾಂತಪ್ಪ ರೈ.

ಮೊಸ್ಕೋದಲ್ಲಿ ಭಾರತೀಯ ನೃತ್ಯ ಪ್ರದರ್ಶನ

ರಶಿಯಕ್ಕೆ ಭಾರತದಿಂದ ಈಚೆಗೆ ಹಲವು ಶಿಷ್ಟಮಂಡಳಿಗಳು ಹೋಗಿದ್ದು, ಉಭಯ ರಾಷ್ಟ್ರಗಳ ಸಾಂಸ್ಕೃತಿಕ ಹಾಗು ಆರ್ಥಿಕ ಸಂಬಂಧವನ್ನು ಬಿಗಿಗೊಳಿಸುವುದರಲ್ಲಿ ಇವು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಕೇಂದ್ರದ ಆರೋಗ್ಯ ಶಾಖೆಯ ಉಪಮಂತ್ರಿ ಶ್ರೀಮತಿ ಮರಕತಂ ಚಂದ್ರಶೇಖರನ್ನರ ನೇತೃತ್ವದಲ್ಲಿ ೨೨ ಮಂದಿ ಭಾರತೀಯ ನೃತ್ಯ ಹಾಗು ಸಂಗೀತ ಕಲಾವಿದರು ರಶಿಯದಲ್ಲೀಗ ಸಂಚರಿಸುತಿದ್ದು ಆಗೋಸ್ತು ೩ಿರಂದು ಮೋಸ್ಕೊದ ಪ್ರಸಿದ್ಧ ಬೋಲ್ಶೆವಿ ಥಿಯೇಟರಿನಲ್ಲಿ ಅವರ ಕಾರ್ಯಕ್ರಮವು ನಡೆಯಿತು. ರಶಿಯದ ಸುಪ್ರಸಿದ್ಧ ನಟನಟಿಯರನ್ನೊಳಗೊಂಡು ಎರಡು ಸಾವಿರ ಪ್ರೇಕ್ಷಕರು ಥಿಯೇಟರಿನಲ್ಲಿ ಕಿಕ್ಕಿರಿದು ನೆರೆದಿದ್ದರು.

ರಶಿಯದ ಯುದ್ಧಮಂತ್ರಿ ಮಾರ್ಶಲ್ ನಿಕೊಲ್ಯಾ ಬಲ್ಗೇನಿನ್ನರೂ ಮೂರು ಮಂದಿ ಉಪಮಂತ್ರಿಗಳೂ ಮೂರು ತಾಸುಗಳ ವರೆಗೆ ಈ ಎಂಟು ಅಂಕಗಳ ಜಾನಪದ ಗೀತಾ ನಾಟಕವನ್ನು ನೋಡಿದರು. ಮಧ್ಯಂತರ ಅವಧಿಯಲ್ಲಿ ಅವರು ಭಾರತದ ರಾಯಭಾರಿ ಶ್ರೀ. ಕೆ. ಪಿ. ಎಸ್. ಮೆನನ್ನರನ್ನೂ ಶ್ರೀಮತಿ ಮೆನನ್ನರನ್ನೂ ಸರಕಾರದವರಿಗಾಗಿ ಮೀಸಲಾದ ಸ್ಥಾನದಲ್ಲಿಯೇ ಕುಳ್ಳಿರುವಂತೆ ವಿನಂತಿಸಲು ತಮ್ಮ ಅಂಗರಕ್ಷಕನನ್ನು ಕಳಿಸಿದರು.

ಸರಕಾರದ ಅಧಿಕಾರಿಗಳು ಇವರಿಗೆ ಜಾಗ ಬಿಟ್ಟುಗೊಡಲು ತಮ್ಮ ಸ್ಥಾನಗಳನ್ನು ಪುನಃ ಸರಿಪಡಿಸಿಕೊಳ್ಳಬೇಕಾಯಿತು. ಶ್ರೀಮತಿ ಮೆನೊನ್ನರು ಬಲ್ಗೇನಿನ್ನರ ಬಲಬದಿಯಲ್ಲಿ ಕುಳಿತು ಭಾರತೀಯ ನರ್ತನದ ಜಟಿಲ ಅಂಶಗಳನ್ನು ವಿವರಿಸುತಿದ್ದರು. ರಶಿಯಾದ ಉಪ ವಿದೇಶಮಂತ್ರಿ ಆ್ಯಂಡ್ರಿ ಗ್ರೊಮಿಕೋ ದುಭಾಷಿಯಾಗಿ ಕೆಲಸ ಮಾಡಿದರು.

ಪ್ರಚಂಡ ಕರತಾಡನ ಹಾಗು ಅಭಿನಂದನಗಳ ಜೊತೆಗೆ ಸುಪ್ರಸಿದ್ಧ ಬ್ಯಾಲೆ ನೃತ್ಯಗಾತಿ ಗಲೀನಾ ಉಲಾನೊವಾರ ಮುಂದಾಳ್ತನದಲ್ಲಿ ರಶಿಯದ ನಟನಟಿಯರು ಭಾರತೀಯ ಕಲಾವಿದರಿಗೆ ಪುಷ್ಪಗುಚ್ಛವನ್ನು ಅರ್ಪಿಸಿದರು. "ನಮ್ಮೆರಡು ರಾಷ್ಟ್ರಗಳ ಸಾಂಸ್ಕೃತಿಕ ಬಾಂಧವ್ಯ ಅಭಿವೃದ್ಧಿ ಹೊಂದಲಿ" ಎಂದು ರಶಿಯದ ಜಾನಪದ ನರ್ತನ ವಿಭಾಗದ ದಿಗ್ದರ್ಶಕರು ಆಶಿಸಿದರು. ಶ್ರೀಮತಿ ಚಂದ್ರಶೇಖರನ್ನರು ರಶಿಯದ ಗೆಳೆಯರಿಗೆ ಭಾರತದ ಪ್ರೀತ್ಯಾದರಗಳಿಂದ ತುಂಬಿದ ಸಂದೇಶವನ್ನು ಅರುಹಿದರು.

ಪರದೆ ಬಿದ್ದು ಕಲಾವಿದರು ನೇಪಥ್ಯದಲ್ಲಿ ಸೇರಿದಾಗ ರಶಿಯದ ಉಪಸಾಂಸ್ಕೃತಿಕ ಮಂತ್ರಿಗಳು ಓಡಿಯೋಡಿ ಬಂದು "ಸರಕಾರದ ಅಧಿಕಾರಿಗಳೊಂದಿಗೆ ನೀವು ಭೋಜನ ಸ್ವೀಕರಿಸಬೇಕು" ಎಂದರು. ಕಲಾವಿದರು ಬಣ್ಣ ತೊಳೆದುಕೊಳ್ಳಲೆಂದು ಅವಸರಮಾಡಲು, "ಏನೂ ಬೇಡ, ಹೀಗೆಯೇ ಬಂದುಬಿಡಿ" ಎಂದು ಆಹ್ವಾನಕೊಟ್ಟರು.

ನಡಿಯುವ ಚಿತ್ರ
ನಯಾ ಘರ್
ಗೀತಾಬಾಲಿ— ಬೇಗಂಪಾರಾ— ಶೇಖರ್ ಮೊದಲಾದವರು
ಬರುವ ಚಿತ್ರ: ಜಗ್ನೂ: (ಶಾಮಾ, ಕುಲ್‌ದೀಪ್, ಕಮಲ್ ಕಪೂರ್)
ತಾ. 12—9—54ನೇ ಆದಿತ್ಯವಾರ ಬೆಳಿಗ್ಗೆ 10ಕ್ಕೆ
REBECCA
ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮನದಲ್ಲಿ ನಗುವಿದೆ! ನಗುವಿದ್ದಲ್ಲಿ ಸ್ವರ್ಗವಿದೆ!
ದಣಿದ ಮನವನ್ನು ತಣಿಸಿ ನಗಿಸಲು—
ನಗೆ ನೋಟಗಳು
(೧೧ ವಿನೋದ ಚಿತ್ರಗಳ ಅಪೂರ್ವ ಸಂಗ್ರಹ)
ಲೇಖಕರು: ಕೆ. ವಿಟ್ಠಲ ಶೆಣೈ, ಬಿ. ಎ., ಎಲ್. ಟಿ.
(ಮುಳಿಯ ತಿಮ್ಮಪ್ಪಯ್ಯನವರ ಮುನ್ನುಡಿಯೊಡನೆ)
ನೀವೂ ನಕ್ಕು ಅನ್ಯರನ್ನೂ ನಗಿಸಬೇಕಾದರೆ ಈ ಪುಸ್ತಕದ ಪ್ರತಿಯೊಂದು ನಿಮ್ಮ ಒಳಿಯಲ್ಲಿರಲಿ.
ಬೆಲೆ: ೧—೪—೦ (ಟಿ. ಖರ್ಚು ಬೇರೆ)
O
ಇಗ್ನೇಜಿಯೋ ಸಿಲೋನೆಯ ಪ್ರಖ್ಯಾತ ಇಟಾಲಿಯನ್ ಕಾದಂಬರಿ.
ಫಂಟಮಾರಾ
ಅನುವಾದಕರು: ಶ್ರೀ. ಕು. ಶಿ. ಹರಿದಾಸ ಭಟ್ಟರು, ಎಂ. ಎ.
ಮರ್ಮಸ್ಪರ್ಶಿ ಕಾದಂಬರಿ. ಬೆಲೆ: ರೂ. 2—0—0.
ಸಿಗುವ ಸ್ಥಳಗಳು:— ಕಿರಿಯರ ಪ್ರಪಂಚ, ಉಡುಪಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಹೈದರಾಬಾದಿನ ಮುಖ್ಯ ಮಂತ್ರಿಗಳು— ಉಡುಪಿಗೆ ಬಂದಿದ್ದ ಹೈದರಾಬಾದಿನ ಮುಖ್ಯ ಮಂತ್ರಿ ಮಾನ್ಯ ಶ್ರೀ ಬಿ. ರಾಮಕೃಷ್ಣ ರಾಯರು ತಾ. 31ರಲ್ಲು ಮಂಗಳೂರಿಗೆ ಬಂದು ಅಲ್ಲಿಯ ಕಾಂಗ್ರೆಸ್ ಕಾರ್ಯಕರ್ತರನ್ನು ಭೇಟಿಯಾದರು. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ| ಯು. ಪಿ. ಮಲ್ಯರು ಮುಖ್ಯ ಮಂತ್ರಿಗಳನ್ನು ಸ್ವಾಗತಿಸಿದರು. ಶ್ರೀ ರಾಯರು ಕಾಂಗ್ರೆಸ್ ಕೆಲಸಗಾರರಿಗೆ ಹಿತವಚನಗಳನ್ನೀಯುತ್ತಾ, ಈಗೀಗ ಕಾಂಗ್ರೆಸ್ ಕೆಲಸಗಾರರಲ್ಲಿ ಬಹುತೇಕ ಮಂದಿಗೆ ಒಂದು ತರದ ಖಿನ್ನತೆಯು ಬಂದಿರುವುದು ಸರಿಯಲ್ಲವೆಂದರು. ನಮ್ಮ ದೇಶದ ಭವಿತವ್ಯವು ಉಜ್ವಲವಿರುವುದರಿಂದ ಕಾಂಗ್ರೆಸ್ ಸಾಧಿಸಿದ ಮಹತ್ಕಾರ್ಯಗಳನ್ನು ಜನತೆಯಲ್ಲಿ ಹೆಚ್ಚು ಹೆಚ್ಚಾಗಿ ಪ್ರಚಾರ ಮಾಡಿ ಕಾಂಗ್ರೆಸಿನ ಬಲವನ್ನು ದೃಢಗೊಳಿಸುವ ಹೊಣೆಗಾರಿಕೆಯು ಕಾಂಗ್ರೆಸಿಗರಲ್ಲಿದೆ ಎಂದೂ ಹೇಳಿದರು.

ಭಾಷಾವಾರು ಪ್ರಾಂತ್ಯ ವಿಭಜನೆಯ ಕುರಿತು ಪ್ರಸ್ತಾಪಿಸುತ್ತಾ, ಈ ತತ್ವವು ಹಿತಮಿತವಾಗಿರಬೇಕೆಂದು ಅಭಿಪ್ರಾಯ ಪಟ್ಟರು. 9 ತೆಲುಗು, 5 ಮರಾಠಿ ಮತ್ತು 3 ಕನ್ನಡ ಜಿಲ್ಲೆಗಳಿರುವ ಹೈದರಾಬಾದು ರಾಜ್ಯದ ಎಸೆಂಬ್ಲಿಯಲ್ಲಿ ಹಿಂದೂಸ್ಥಾನಿ ಭಾಷೆಯೇ ಉಪಯೋಗಿಸಲಾಗುತ್ತಿದೆ. ಇದರಿಂದಾಗಿ ಹಲವು ಭಾಷೆಗಳನ್ನು ಮಾತನಾಡುವ ಪ್ರದೇಶಗಳ ಜನರೂ ಒಕ್ಕಟ್ಟಿನಿಂದ ಇರಲು ಸಾಧ್ಯವಿದೆ ಎಂಬುದನ್ನು ಹೈದರಾಬಾದ ಮಾರ್ಗದರ್ಶನ ಮಾಡಿದೆ. ದಕ್ಷಿಣ ಕನ್ನಡ ಜಿಲ್ಲೆ ಕೂಡಾ ಇದಕ್ಕೊಂದು ದೃಷ್ಟಾಂತವಿದೆ. ಭಾಷಾವಾರು ಪ್ರಾಂತ ವಿಭಜನೆಯನ್ನು ಪ್ರತಿಪಾದಿಸುವಾಗ ಇತರ ಪ್ರಾಂತಗಳ ಮಧುರ ಬಾಂಧವ್ಯದ ಊರ್ಜಿತಕ್ಕಾಗಿ ನೆರೆ ಪ್ರಾಂತಗಳ ಭಾಷೆಗಳನ್ನು ಕಲಿತುಕೊಳ್ಳುವುದು ಆವಶ್ಯವಿದೆಯಾಗಿ ಹೇಳಿದರು. ಶ್ರೀ ಬಿ. ಬಿ. ಸೆಟ್ಟರು ಧನ್ಯವಾದಗಳನ್ನರ್ಪಿಸಿದರು. ಮುಖ್ಯ ಮಂತ್ರಿಗಳು ನಗರದ ಪ್ರಾಮುಖ್ಯ ಸಂಸ್ಥೆಗಳಿಗೆ ಸಂದರ್ಶನವಿತ್ತರು

ಸತ್ಕಾರಕೂಟ— ರಾಷ್ಟ್ರಸಂಘದ ಪ್ರತಿನಿಧಿ ಸಭೆಯ ಸದಸ್ಯರಾಗಿ ಅಮೇರಿಕಕ್ಕೆ ಹೋಗಲಿದ್ದ, ಜಿಲ್ಲಾ ಸ್ಕೌಟ್ ದಳದ ಅಧ್ಯಕ್ಷ ಹಾಗೂ ರಾಜ್ಯಸಭಾ ಸದಸ್ಯರಾದ ಶ್ರೀ ಕೆ. ಎಸ್. ಹೆಗ್ಡೆಯವರನ್ನು ಬೀಳ್ಕೊಡುವ ಸತ್ಕಾರ ಕೂಟವೊಂದು ಕಳೆದ ತಾ. 28ರಲ್ಲು ಶ್ರೀಮತಿ ಶಾಂತೇರಿ. ಜೆ. ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಸ್ಕೌಟ್ ಕಮಿಷನರ್ ಡಾ| ಕೆ. ಗಿರಿಧರ ರಾವ್ ಮತ್ತು ಶ್ರೀಗಳಾದ ಹರಿಶ್ಚಂದ್ರಾಚಾರ್ಯ, ಪಿ. ಸಿ. ಶರ್ಮಯವರು ಶ್ರೀ ಹೆಗ್ಡೆಯವರಿಗೆ ಶುಭವನ್ನು ಕೋರಿ ಮಾತನಾಡಿದರು. ಶ್ರೀ ಹೆಗ್ಡೆಯವರು ಉತ್ತರವೀಯುತ್ತಾ ತಾನು ಬಾಲವೀರನಂತೆಯೂ ದಕ್ಷ ಕನ್ನಡಿಗನಂತೆಯೂ ಭಾರತದ ಪ್ರತಿಷ್ಠೆಯನ್ನು ಕಾಪಾಡಲು ಪ್ರಯತ್ನಿಸುವುದಾಗಿ ಅಭಯವಚನವಿತ್ತರು. ಅಧ್ಯಕ್ಷ ಭಾಷಣಾನಂತರ ಕಾರ್ಯದರ್ಶಿಗಳಾದ ಶ್ರೀ ಬಿ. ಡಿ. ಪಿಲಿಪ್ಸ್‌ರವರು ವಂದನೆಗಳನ್ನರ್ಪಿಸಿದರು.

ಸಂಘ ಉದ್ಘಾಟನೆ— ಕರ್ನಾಟಕ ಪೊಲಿಟೆಕ್ನಿಕ್ ಸಿವಿಲ್ ಎಂಜಿನಿಯರಿಂಗ್ ಎಸೋಸಿಯೇಶನಿನ ಉದ್ಘಾಟನೆಯನ್ನು ತಾ. 25ರಲ್ಲು ಶ್ರೀ ಸಿ. ಆರ್. ರಂಗನಾಥ ಪೂಂಜರ ಅಧ್ಯಕ್ಷತೆಯಲ್ಲಿ, ಸರಕಾರೀ ಕಲಾ ಶಾಲೆಯ ಪ್ರಿನ್ಸಿಪಾಲ್ ಶ್ರೀ ಟಿ. ಕೆ. ಲಕ್ಷ್ಮಣನವರು ನೆರವೇರಿಸಿದರು. ಪೊಲಿಟೆಕ್ನಿಕ್ ಪ್ರಿನ್ಸಿಪಾಲ್ ಶ್ರೀ ಎಸ್. ಕೃಷ್ಣಸ್ವಾಮಿಯವರು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಎಸೋಸಿಯೇಶನಿನ ಉಪಾಧ್ಯಕ್ಷ ಶ್ರೀ ಬಿ. ಎಸ್. ಸಪ್ರೂರವರು ವಂದನೆಗಳನ್ನರ್ಪಿಸಿದರು.

ಲೋಕನಾಥ ಸೆಟ್ಟರ ಕೊಲೆ ಪ್ರಕರಣ-ಮೂವರಿಗೆ ಮರಣದಂಡನೆ—ಒಬ್ಬರ ಬಿಡುಗಡೆ— ಜಿಲ್ಲಾ ನ್ಯಾಯಾಧೀಶರಾದ ಶ್ರೀ ಪಿ. ಕಂದ ನರಸಿಂಹ ಚೆಟ್ಟಿಯಾರರ ಕೋರ್ಟಿನಲ್ಲಿ ಲೋಕನಾಥ ಸೆಟ್ಟಿಯವರ ಕೊಲೆ ವಿಚಾರಣೆ ಈಚೆಗೆ ಕೆಲವು ದಿವಸಗಳಿಂದ ನಡೆಯುತ್ತಲಿದ್ದು ಇದೇ ತಾ. 3ರಲ್ಲು ತಮ್ಮ ತೀರ್ಪನ್ನು ಕೊಟ್ಟರು. 1ನೇ ಅಪಾದಿತ ಮುತ್ತಪ್ಪ 2ನೇ ಅಪಾದಿತ ವೆಂಕಪ್ಪ ಮತ್ತು 3ನೇ ಅಪಾದಿತ ಬಾಬು ಪೂಜಾರಿ ಇವರ ಮೇಲೆ ಇಂಡಿಯನ್ ಪೆನಲ್ ಕೋಡಿನ 302ರೊಂದಿಗೆ 34ನೇ ಪ್ರಕರಣದ ಮೇರೆಗೆ ಲೋಕನಾಥ ಸೆಟ್ಟರನ್ನು ಕೊಲೆಗೈದ ಆರೋಪವು ರುಜುಪಡಿಸಲಾಗಿದೆಯೆಂದು ಅಭಿಪ್ರಾಯ ಪಟ್ಟು, ಹೈಕೋರ್ಟಿನ ಸಮ್ಮತಿಗೊಳಪಡಿಸಿ, ಮರಣದಂಡನೆ ವಿಧಿಸಿದರು. 4ನೇ ಅಪಾದಿತ ಸಿಂಪ್ಸನ್ ಸೋನ್ಸರ ಮೇಲಿನ ಆರೋಪಗಳು ರುಜುವಾತು ಆಗಿಲ್ಲವೆಂದು ಅಭಿಪ್ರಾಯ ಪಟ್ಟು ಅವರನ್ನು ಬಿಡುಗಡೆ ಮಾಡಿರುವರು. ಪಬ್ಲಿಕ್ ಪ್ರಾಸಿಕ್ಯೂಟರ್ ಶ್ರೀ ಎಮ್. ಪ್ರಭುಗಳು ಇನ್ಸ್‌ಪೆಕ್ಟರ್ ಕೆ. ವಿ ಮಲ್ಯರ ಸಹಕಾರದೊಡನೆ ಪ್ರಾಸಿಕ್ಯೂಶನ್ ನಡೆಸಿದರು. 1 ಮತ್ತು 2ನೇ ಅಪಾದಿತರ ಪರವಾಗಿ ತಲಚೇರಿ ವಕೀಲ್ ಶ್ರೀ ಬಿ. ಆರ್. ಕೃಷ್ಣ ಅಯ್ಯರರೂ, 3 ಮತ್ತು 4ನೇ ಅಪಾದಿತರ ಪರವಾಗಿ ಬೆಳಗಾಂವಿಯ ಶ್ರೀ ರಂಗರಾವ್ ತಲಚೇರಿಕರರೂ ವಾದಿಸಿದ್ದು ಇವರಿಗೆ ಮಂಗಳೂರಿನ ವಕೀಲರಾದ ಶ್ರೀಯುತರು ಬಿ. ಎಸ್. ಭಾಸ್ಕರ ರೈ, ಮತ್ತು ಪಿ. ಎಮ್. ಎನ್. ಮೂರ್ತಿಯವರು ಸಹಕರಿಸಿದ್ದರು.

ರಕ್ತದಾನ— ಮಂಗಳೂರು ಸೇವಾ ಸಮಾಜದ ಸದಸ್ಯೆಯರಾದ ಶ್ರೀಮತಿಯರು ಹೀರಾಸೆಟ್ಟಿ, ಎಚ್. ಎನ್. ಹೊಬ್ಸ್, ಶಾಂತೇರಿ ಪ್ರಭು, ಡೀ. ಅಡಪ್ಪ ಅವರು ಸ್ಥಳೀಯ ಬ್ಲಡ್ ಬೇಂಕಿಗೆ ಒಂದೊಂದು ಪೈಂಟ್ ರಕ್ತವನ್ನು ದಾನವಿತ್ತಿರುವರೆಂದೂ ಈ ಬಗ್ಗೆ ದೊರೆತ ಹಣವನ್ನು ಸೇವಾ ಸಮಾಜದ ಕಟ್ಟಡನಿಧಿಗೆ ದಾನವಿತ್ತಿರುವರೆಂದೂ ತಿಳಿಯಲಾಗಿದೆ.

ಮಿಜಾರ್‌ಕಾರ್ ಬಂಗ್ಲೆ— ಕರ್ನಲ್ ಮಿಜಾರ್‌ಕಾರರು ಬಿಜೈಯಲ್ಲಿ ಕಟ್ಟಿಸಿದ ಬಂಗ್ಲೆಯಲ್ಲಿ ವಸ್ತುಪ್ರದರ್ಶನಾಲಯ, ಪಿವಾರೆಯಾ ಆಸ್ಪತ್ರೆ ಮೊದಲಾದ ಜನಹಿತ ಕಾರ್ಯಕ್ಕಾಗಿ ದಾನವಾಗಿ ಕೊಡಲಿಚ್ಛಿಸಿರುವರೆಂದು ತಿಳಿಯಲಾಗಿದೆ.

ಜಿಲ್ಲೆಯಲ್ಲಿ ಭೂದಾನಯಜ್ಞ ಕಾರ್ಯವು— ಸುಗಮವಾಗಿ ಜರಗುವಂತೆ ಜಿಲ್ಲೆಯ ಹಾಗೂ ತಾಲೂಕು ಸಮಿತಿಗಳು ನೇಮಿಸಲ್ಪಟ್ಟಿವೆ. ಈ ಕಾರ್ಯವು ಯಶಸ್ವಿಯಾಗಬೇಕಾದರೆ ಮಹಾಜನರ ಸಹಕಾರವು ಅತ್ಯಗತ್ಯ. ಕಳೆದ ವರ್ಷ ದ. ಕ. ಜಿಲ್ಲೆಯಲ್ಲಿ ಈ ಭೂದಾನ ಯಜ್ಞಕ್ಕೆ ಸಾಕಷ್ಟು ಭೂಮಿ ಸಂಗ್ರಹವಾಗಿಲ್ಲ. ಮುಂದಿನ ಅಕ್ಟೋಬರ ತಿಂಗಳ ತಾ. 2ರಲ್ಲು ಬಾಪೂಜಿ ಜನ್ಮದಿನಾಚರಣೆ ಎಲ್ಲೆಡೆಗಳಲ್ಲೂ ಆಚರಿಸಲ್ಪಡುವುದು. ಈ ಶುಭಮುಹೂರ್ತದೊಳಗಾಗಿ ಭೂದಾನ ಸಂಪತ್ತು ದಾನಯಜ್ಞಕ್ಕೆ ತಂತಮ್ಮ ಷಷ್ಠಭಾಗವನ್ನು ಸಮರ್ಪಿಸಲಪೇಕ್ಷಿಸುವವರು ಸಮಿತಿಗಳೊಡನೆ ಸಹಕರಿಸಿ ಈ ಭೂದಾನಯಜ್ಞ ಕಾರ್ಯವನ್ನು ಯಶಸ್ವಿಗೊಳಿಸಬೇಕಾಗಿದೆ ಎಂದು ದ. ಕ. ಜಿಲ್ಲಾ ಭೂದಾನ ಸಮಿತಿ ಕಾರ್ಯದರ್ಶಿ ಶ್ರೀ ಎಸ್. ಯು. ರಾಮಚಂದ್ರ ರಾಯರು ವಿನಂತಿ ಮಾಡಿರುವರು.

ರೋಟರಿ ಕ್ಲಬ್ಬಿನ ಸಭೆಯು— ತಾ. 2ರಲ್ಲು ಕ್ಲಬ್ಬಿನ ಅಧ್ಯಕ್ಷ ಶ್ರೀ ವಿ. ಎಸ್. ಕುಡ್ವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಕೆ. ವಿಶ್ವನಾಥ ಕಾಮತರು ವರದಿಯನ್ನೋದಿದರು ದ. ಕ. ಜಿಲ್ಲಾ ಮೆಜಿಸ್ಟ್ರೇಟ್ ಶ್ರೀ ಪಿ. ಎಲ್. ಸುಂದರಂ, ಅವರು 'ಯಶಸ್ಸಿನ ಹಾದಿ ಮನಃಶುದ್ಧಿಯೇ'—ಸಿದ್ಧ ಸಂಪ್ರದಾಯ ಎಂಬ ವಿಷಯದಲ್ಲಿ ಭಾಷಣವಿತ್ತರು. ಸಿದ್ಧಿಯಿಂದ ಶರೀರದ ಸಂಪೂರ್ಣವಾದ ಸ್ವಾಮಿತ್ವವನ್ನು ಸಾಧಿಸಿ ದೇಹವನ್ನು ಬೇಕಾದಾಗ ತ್ಯಜಿಸಲು ಅಥವಾ ದೇಹ ಸಹಿತ ಅದೃಶ್ಯ ಹೊಂದುವ ಪರಿಸ್ಥಿತಿಯನ್ನು ಹೊಂದಲು ಸಾಧ್ಯವಿದೆ ಎಂದು ಹೇಳಿದರು. ಶ್ರೀಗಳಾದ ಎಚ್. ಕೃಷ್ಣಮೂರ್ತಿ, ಸಿ. ಆರ್. ಆರ್. ಪೂಂಜ, ಡಾ| ಆರ್. ಎಸ್. ಕೇಶವರಾಜ್, ಅಬೂಬಕರ್ ಮೊದಲಾದವರು ತಂತಮ್ಮ ಅಭಿಪ್ರಾಯಗಳನ್ನಿತ್ತರು.

ತೆರಿಗೆದಾರರ ಸಭೆಯು— ತಾ. 1ರಲ್ಲು ಪುರಜನರ ಸಂಘದ ಆಶ್ರಯದಲ್ಲಿ ಶ್ರೀ ಡಿ. ಪುಟ್ಟುಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಬಿ. ಮೋಹನ ರಾವ್ ಮತ್ತು ಎ. ಕೆ. ಸೇನರು ಇತ್ತೀಚೆಗೆ ಜರಗಿದ ಪಂಚವಾರ್ಷಿಕ ತೆರಿಗೆ ಪುನರ್ವಿಮರ್ಶೆಯಿಂದಾಗಿ ಜನರಿಗಾದ ಅನ್ಯಾಯದ ಕುರಿತು ಮಾತನಾಡಿದರು. ಶ್ರೀಗಳಾದ ಎಸ್. ಶಂಕರ ಆಳ್ವ, ಬಿ. ಎಚ್. ನಜರೆತ್ ಮೊದಲಾದವರು ಮಾತನಾಡಿದ ಬಳಿಕ ತೆರಿಗೆ ಪುನರ್ವಿಮರ್ಶೆಯನ್ನು ರದ್ದುಗೊಳಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು.

ದ. ಕ. ಜಿಲ್ಲೆಗೆ ಜೋಗಿನ ವಿದ್ಯುತ್ ಸರಬರಾಯಿ. ವಾಯರಿಂಗ್ ಪ್ರಾರಂಭ— ದ. ಕ. ಜಿಲ್ಲೆಗೆ ಜೋಗಿನಿಂದ ಒದಗಿಸಲಿರುವ ವಿದ್ಯುತ್ ಸರಬರಾಯಿಯ ಕಾರ್ಯಕ್ರಮದ ಪ್ರಥಮಾಂಗವಾಗಿ ನಡೆಯುತ್ತಲಿರುವ ಟ್ರಾನ್ಸ್‌ಮಿಶನ್ ಟವರುಗಳ ಕೆಲಸವು ಮಂಗಳೂರಿನ ವರೆಗೆ ಮುಗಿದಿದ್ದು ತಾ. 4ರಲ್ಲು ಬೆಳಿಗ್ಗೆ ಮಂಗಳೂರಿನ ಕಡೆಯಿಂದ ವಾಯರ್ ಹಾಕುವ ಕಾರ್ಯ ಪ್ರಾರಂಭವಾಗಿ ವಿದ್ಯುತ್ ಇಲಾಖೆಯ ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ಪಾರ್ಥಸಾರಥಿಯವರು ಈ ಕಾಲದಲ್ಲಿ ಹಾಜರಿದ್ದ ಪತ್ರಿಕಾ ಪ್ರತಿನಿಧಿಗಳಿಗೂ ಪುರ ಪ್ರಮುಖರಿಗೂ ಮಾಹಿತಿಯನ್ನಿತ್ತರು. ಈ ತನಕ ಮಂಗಳೂರಿನಿಂದ ದ. ಕ. ಜಿಲ್ಲೆಯ ಗಡಿಯ ವರೆಗೆ 68 ಮೈಲುಗಳ ಉದ್ದಕ್ಕೆ ಮಂಗಳೂರು ಕಾರ್ಕಳ, ಹಿರಿಯಡ್ಕ, ಪೆರ್ಡೂರು, ಶಂಕರನಾರಾಯಣ ದಾರಿಯಾಗಿ ಹುಲ್ಕಲ್ ವರೆಗೆ 429 ಟವರುಗಳನ್ನು ಕಟ್ಟಲಾಗಿದೆ. ವಾಯರುಗಳನ್ನು ಹಾಕುವ ಕೆಲಸವು ಹುಲ್ಕಲ್ ಕಡೆಯಿಂದಲೂ ಆರಂಭವಾಗಿದೆ. ಟ್ರಾನ್ಸ್‌ಮಿಶನ್ ವಾಯರುಗಳಲ್ಲಿ 110 ಸಾವಿರ ವೋಲ್ಟುಗಳಷ್ಟು ವಿದ್ಯುತ್ ಒತ್ತಡವಿದ್ದು 300 ಕಿಲೋವಾಟ್ ಶಕ್ತಿಯನ್ನು ಹರಿಸಲಾಗುವುದು. ದಕ್ಷಿಣ ಕನ್ನಡ ವಿಭಾಗದ ಕೆಲಸವು ನವಂಬರ ತಿಂಗಳ ಅಂತ್ಯದೊಳಗೆ ಮುಗಿಯಬಹುದೆಂದು ನಿರೀಕ್ಷಿಸಲಾಗಿದೆ.

ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷತೆ— ದ. ಕ. ಜಿಲ್ಲೆಯ ನಿವಾಸಿಗಳಾದ ಈಗ ಜಪಾನಿನಲ್ಲಿ ಗ್ಲಾಸ್ ಟೆಕ್ನಾಲಜಿಯಲ್ಲಿ ಉಚ್ಚ ಶಿಕ್ಷಣ ಪಡೆಯುತ್ತಿರುವ ಶ್ರೀ ಬಿ. ಬಿ ಸೆಟ್ಟರು ಈ ಬಾರಿ ಟೋಕಿಯೋದಲ್ಲಿ ಜರಗಲಿರುವ ಅಂತರ್‌ರಾಷ್ಟ್ರೀಯ ವಿದ್ಯಾರ್ಥಿ ಪರಿಷತ್ತಿನ ಅಧ್ಯಕ್ಷತೆಯನ್ನು ಅಲಂಕರಿಸುವರು.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಅಪೂರ್ವ ಸಂದರ್ಭ!
ದರ ಇಳಿಸಲಾಗಿದೆ.
ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: 0-8-0
ನವಯುಗ ಪ್ರೆಸ್, ಉಡುಪಿ.

ಹೊಸ ಪುಸ್ತಕ!
ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನಾಟಕಗಳು—
ನಕ್ಕರೂ ನಗಬಹುದು
ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಪಾಠ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಊಟ ಕೂಟದ ಮರ್ಮವನ್ನೂ, ನಿಶ್ಚಯಿಸಿದ್ದ 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0,
ಕಿರಿಯರ ಪ್ರಪಂಚ, ಉಡುಪಿ.

–ಕನ್ನಡದಲ್ಲಿ ಹೊಸ ಬಗೆಯ ಗ್ರಂಥ–
ಬದುಕು ಬಂಗಾರ
(ಬರೆದವರು: ಕುಮಾರಸ್ವಾಮಿ)
● ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ
● ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಜೀವನದ ಕೈಗನ್ನಡಿ.
ಬೆಲೆ: ಒಂದೂವರೆ ರೂಪಾಯಿ
ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಪಟ್ಟಿಗಾಗಿಯೂ, ವಾಚನಾಲಯ, ಶಾಲಾಕಾಲೇಜುಗಳಿಗೆ ಕೊಡುವ ಕಮಿಶನ್ ದರಕ್ಕೂ ಬರೆಯಿರಿ.
1. ನವಯುಗ ಪ್ರೆಸ್, ಉಡುಪಿ. 2 ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವೀಕಾರ—ವಿಮರ್ಶೆ

ನನ್ನ ಆರಂಭ ಜೀವನ—

ಕನ್ನಡಿಸಿದವರು. ಮ. ಗೋವಿಂದ ರಾಯರು. ಪ್ರಕಾಶಕರು ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಬೆಲೆ. ರೂ. ೧—೪—೦.

ಮಹಾತ್ಮಾಗಾಂಧಿಯವರು ಇಂಗ್ಲೀಷಿನಲ್ಲಿ ಬರೆದ ಮೂಲ ಗ್ರಂಥವನ್ನು ಅವರ ಕಾರ್ಯದರ್ಶಿಗಳಾಗಿದ್ದ ದಿವಂಗತ ಮಹಾದೇವ ಭಾಯಿಯವರು ಶಾಲಾ ಮಕ್ಕಳಿಗೋಸ್ಕರ ಸಂಗ್ರಹಿಸಿ ಪ್ರಕಾಶನಕ್ಕೆ ಅಣಿಗೊಳಿಸಿದ್ದರು. ಅದರ ಕನ್ನಡ ಅನುವಾದವು ಹನ್ನೆರಡು ವರ್ಷಗಳ ತರುವಾಯ ಮೊದಲ ಸಲಕ್ಕೆ ೧೯೪೪ರಲ್ಲಿ ಸಾಹಿತ್ಯ ಭಂಡಾರದ ಶ್ರೀ ಗೋವಿಂದ ರಾಯರ ಪ್ರಯತ್ನದಿಂದ ಪ್ರಕಟಗೊಂಡಿತು. ಕನ್ನಡದ ಮಕ್ಕಳಿಗೆ ಓದಲು ಒದಗಿಸಲ್ಪಡಲೇ ಬೇಕಾದ ಗ್ರಂಥಗಳಲ್ಲಿ ಈ ಪುಸ್ತಕಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಸಂದೇಹದ ಲವಲೇಶವಿಲ್ಲದೆ ಕೊಡಬಹುದು ಏಕೆಂದರೆ, ಇದು ಒಬ್ಬ ಮಹಾಸಾಧಕನ ಆರಂಭ ಜೀವನದ ನೈಜ ಚಿತ್ರವನ್ನು ಅವನದೇ (ಆಪ ಕಥ್ ಗಾಂಧೀಜಿಯವರ) ಮಾತಿನಲ್ಲಿ ಪ್ರಾಮಾಣಿಕವಾದ ರೀತಿಯಲ್ಲಿ ನೀಡುತ್ತದೆ. ಚಿಕ್ಕ ಮಕ್ಕಳ ಮನಸ್ಸಿಗೆ ನಿಲುಕದ ಸೂಕ್ಷ್ಮ ವಿಷಯಗಳೂ ಚರ್ಚೆಗಳೂ ಈ ಸಂಕ್ಷಿಪ್ತ ಹಾಗು ಪರಿಷ್ಕೃತ ಗ್ರಂಥದಲ್ಲಿ ಬಿಟ್ಟು ಕೊಡಲಾಗಿರುವುದರಿಂದ ಗಾಂಧೀಜಿಯ ಜೀವನದ ಸಂಗತಿಗಳನ್ನೆಲ್ಲ ಕತೆಯೋದಿದಂತೆ ಸರಸವಾಗಿ ಓದುವುದು ಸಾಧ್ಯ. ಹೀಗೆಂದ ಮಾತ್ರಕ್ಕೆ ಪುಸ್ತಕದ ಜೀವಾಳವಾದ ನೈತಿಕ ಅಂಶಗಳನ್ನು ಉಪೇಕ್ಷಿಸಲಾಗಿದೆಯೆಂದು ತಿಳಿಯಬಾರದು—"ಎಲ್ಲ ಕಾಲಕ್ಕೂ ರುಚಿಸುವ ನಿರಂತರ ನೈತಿಕ ಸತ್ವವುಳ್ಳ ಪ್ರಸಂಗಗಳನ್ನು ಉಳಿಸಿಕೊಂಡಿದ್ದೇವೆ" ಎಂಬುದಾಗಿ ಮಹದೇವ ಭಾಯಿಯವರ ಅಧಿಕಾರಪೂರ್ಣ ವಾಣಿಯು ಭರವಸೆ ಕೊಡುತ್ತದೆ. ಸರಳವಾದ, ಕನ್ನಡ ಶೈಲಿ ಹಾಗು ಮಾಧುರ್ಯಕ್ಕೆ ಒಪ್ಪುವ, ಈ ಸುಂದರ ಭಾಷಾಂತರವು ನಾಲ್ಕನೇ ಮುದ್ರಣವನ್ನು ಕಂಡುದು ಅಭಿಮಾನದ ವಿಷಯ. ಪಠ್ಯ ಪುಸ್ತಕವಾಗಿ ಇದನ್ನು ಅಧ್ಯಯನ ನಡೆಸಬೇಕಾದ ಮಕ್ಕಳಿಗೆ ಅರ್ಥಗ್ರಹಣವು ಸುಲಭವಾಗುವಂತೆ "ಶಬ್ದಕೋಶವು" ಕೊನೆಯಲ್ಲಿ ಕೊಡಲಾಗಿರುವುದು ಸಂತೋಷ.

ಮಕ್ಕಳ ಮುದ್ದು—

ಲೇಖಕ ಹಾಗು ಪ್ರಕಾಶಕ ಪಳಕಳ ಸೀತಾರಾಮ ಭಟ್ಟ, ಎತ್ತ ಬೈಲು, ದಕ್ಷಿಣ ಕನ್ನಡ. ಬೆಲೆ ಮೂರಾಣೆ.

ಮಕ್ಕಳ ಸಾಹಿತ್ಯದ ರಚನೆಯಲ್ಲಿ ಆಸಕ್ತಿಯನ್ನು ತೋರಿಸುತ್ತಿರುವ ತರುಣರಲ್ಲಿ ಶ್ರೀ ಸೀತಾರಾಮ ಭಟ್ಟರೂ ಒಬ್ಬರು. ಮಕ್ಕಳಿಗೆಂದು ಬರೆದ ಪದ್ಯಗಳು ಸರಳವಾಗಿರಬೇಕು, ಲಯ ಹಾಗು ಪ್ರಾಸಬದ್ಧವಾಗಿರಬೇಕು, ಅಭಿನಯಕ್ಕೆ ಅನುಕೂಲವಿರಬೇಕು; ನಿತ್ಯ ಜೀವನದಲ್ಲಿ ಅನುಭವಕ್ಕೆ ಬರುವ ವಿಷಯಗಳನ್ನೇ ಚಿತ್ರಿಸಬೇಕು, ಬುದ್ಧಿಗೆ ಒಪ್ಪವಿಡುವ ಕೆಲಸವೂ ನಡೆಯಬೇಕು. ಇಲ್ಲಿರುವ ೨೭ ಚಿಕ್ಕ ಪದ್ಯಗಳು ಸಾಮಾನ್ಯವಾಗಿ ಮೇಲಿನ ಗುಣಗಳಿಂದ ಕೂಡಿದ್ದು, ಶಾಲಾ ಮಕ್ಕಳಿಗೆ ಕಲಿಸಲು ಉಪಯುಕ್ತವೆಂದು ಸಿದ್ಧವಾಗಬಹುದು. ಪ್ರಾಥಮಿಕ ಶಾಲೆಗಳಲ್ಲಿ ಇದಕ್ಕೆ ಸ್ವಾಗತ ದೊರಕುವುದೆಂದು ಆಶಿಸುತ್ತೇವೆ.

ಆಯುರ್ವೇದವೂ ಪಾಶ್ಚಾತ್ಯ ವಿಜ್ಞಾನ ಶಾಸ್ತ್ರವೂ—

ಬರೆದವರು ಆಯುರ್ವೇದ ವಿದ್ವಾನ್ ಅರಗಂ ವೆಂಕಟರಾಮ ಪಂಡಿತ. ಪ್ರಕಾಶಕರು ಆಯುರ್ವೇದ ಕಾರ್ಯಾಲಯ, ಕಾರ್ಕಳ, ದಕ್ಷಿಣ ಕನ್ನಡ. ಬೆಲೆ ಆರಾಣೆ

ಪಾಶ್ಚಾತ್ಯ ವಿಜ್ಞಾನ ಶಾಸ್ತ್ರವನ್ನು ಭಾರತೀಯ ವೇದಾಂತ ವಿಚಾರಗಳೊಂದಿಗೆ ತುಲನೆ ಮಾಡಿ ನೋಡುವ ಈ ಚಿಕ್ಕ ಪುಸ್ತಕವು ತುಂಬ ಗಂಭೀರವಾದ ವಿಷಯಗಳನ್ನು ಸ್ಪರ್ಶಿಸುತ್ತದೆ. ಪಾಶ್ಚಾತ್ಯರು ಹೊರಗಣ್ಣಿನಿಂದ ದೃಶ್ಯ ವಸ್ತುವಿನ ಪರೀಕ್ಷೆಯನ್ನು ಮಾಡುತ್ತಾ ಮುಂದೆ ಹೋಗಿ ಅದರ ಮೂಲ ತತ್ವವೇನೆಂದು ತಿಳಿಯದೆ ಸಂದಿಗ್ಧದಲ್ಲಿ ಬೀಳುತ್ತಾರೆ. ಅತೀಂದ್ರಿಯವಾಗಿಯೂ ಅವಾಙ್ಮನೋಗೋಚರವಾಗಿಯೂ ಇರುವ ಮೂಲ ವಸ್ತುವನ್ನು ಗುರುತಿಸುವುದಕ್ಕೆ ಆರ್ಯನಾಗರಿಕತೆಯು ಹಾಕಿಕೊಟ್ಟ ಅಂತಃ ನಿರೀಕ್ಷಣೆಯೇ ಯೋಗ್ಯ ವಿಧಾನ. ಭಾರತೀಯ ವೇದಾಂತ ಹಾಗು ದರ್ಶನ ಶಾಸ್ತ್ರದಲ್ಲಿ ಉಕ್ತವಾದ ಈ ಮಾತಿನ ಸತ್ಯವನ್ನು ಈಗೀಗ ಪಾಶ್ಚಾತ್ಯ ವಿಜ್ಞಾನಿಗಳೂ ಗಮನಿಸುತ್ತಿದ್ದಾರೆ. ಅವರು ಮೊದಲು ಅನ್ನಮಯವಾದ ಭೌತಿಕ ವಾದದಿಂದ ತೊಡಗಿದರು; ಮುಂದೆ ಪ್ರಾಣಮಯವಾದ ಶಕ್ತಿ ಪ್ರಪಂಚಕ್ಕೆ ಕಾಲಿಟ್ಟರು. ಈಗ ಮನೋಮಯವಾದ ವಿಚಾರಾನುಭವವನ್ನು ವಿವರಿಸುತ್ತಿದ್ದರೂ ಅವರಲ್ಲಿಯೇ ಕೆಲವರು ಪೌರಸ್ತ್ಯ ಸಂಸ್ಕೃತಿಯ ವೈಶಿಷ್ಟ್ಯವಾದ ವಿಜ್ಞಾನಮಯ ಕೋಶದ ಅಸ್ತಿತ್ವವನ್ನು ತಿಳಿಯ ತೊಡಗಿದ್ದಾರೆ. ಮುಂದೆ ಇವರು ಆನಂದಮಯ ಕೋಶದ ಅನುಭವವನ್ನೂ ಹೊಂದಿ ಆತ್ಮಸಾಕ್ಷಾತ್ಕಾರ ಮಾಡಿಕೊಳ್ಳಬಹುದು ಮತ್ತು ಭಾರತೀಯ ಸಂಸ್ಕೃತಿಯು ಎಂದೋ ಮನ್ನಿಸಿದ ತತ್ವಗಳ ಘನತೆಯನ್ನು ಮನಗಾಣಬಹುದು. ಇದನ್ನು ವಿವರಿಸುವಾಗ ಲೇಖಕರು ಪ್ರಸಿದ್ಧ ವಿಜ್ಞಾನಿಗಳ ವಿಚಾರಗಳಿಂದಲೂ ಭಾರತೀಯ ಶಾಸ್ತ್ರ ಗ್ರಂಥಗಳಿಂದಲೂ ಅನೇಕ ಮಾತುಗಳನ್ನು ಉದ್ಧರಿಸಿರುವರು. ಆದರೆ ಅವುಗಳ ಅನುವಾದವನ್ನು—ಮುಖ್ಯವಾಗಿ ಪುಟ ಪುಟಗಳನ್ನೆ ತುಂಬುವ ಇಂಗ್ಲೀಷು ಪರಿಚ್ಛೇದಗಳ ಅರ್ಥವನ್ನು—ಕನ್ನಡದಲ್ಲಿ ಕೊಡದಿದ್ದುದು ಉಚಿತವಾಗಲಿಲ್ಲ ಏಕೆಂದರೆ ಕನ್ನಡವನ್ನಷ್ಟೇ ಬಲ್ಲವನಿಗೆ ಈ ಪುಸ್ತಕವನ್ನು ಅನುಸರಿಸಲಾಗುವುದಿಲ್ಲ.



ಲಘು ಪರಿಚಯ

ಮಂಗಳೂರಿನ ರಥಬೀದಿಯಿಂದ ಶ್ರೀ ಕಾಪ್ಡಿ ವಾಸುದೇವ ಶೆಣೈಯವರ ಸಂಪಾದಕತ್ವದಲ್ಲಿ ಹೊರಡುವ "ಪ್ರಭಾತ"ದ ೧೯೫೪ನೇ ವಾರ್ಷಿಕ ವಿಶೇಷ ಸಂಚಿಕೆಯು ವಿಷಯ ವೈವಿಧ್ಯದಲ್ಲಿ ಓದುಗರ ಅಭಿರುಚಿಯನ್ನು ತಣಿಸುವಂತಿರುವುದು ಸಂತೋಷದ ಸಂಗತಿ. ವೇದಾಂತದಿಂದ ರಾಜಕೀಯದ ವರೆಗಿನ ಹಲವಾರು ವಿಷಯಗಳ ಮೇಲೆ ಅಭ್ಯಾಸಪೂರ್ಣ ಬರೆಹಗಳನ್ನು ನಾವಿಲ್ಲಿ ಕಾಣುತ್ತೇವೆ. ಸಾಮಾನ್ಯ ಓದುಗರಿಗೆ ರುಚಿಸಬಹುದಾದ ಸಣ್ಣ ಕತೆಗಳಿಗೂ ಹರಟೆಗಳಿಗೂ ಸ್ಥಾನ ಕೊಡಲಾಗಿದೆಯಲ್ಲದೆ ಕೆಲವು ಸುಂದರ ಕವನಗಳೂ ಮಿಂಚಿನ ಹೊಳಪು ಬೀರುತ್ತವೆ. ವೈಶಿಷ್ಟ್ಯಪೂರ್ಣವಾದ ಈ ಸಂಚಿಕೆಯನ್ನು ಕನ್ನಡಿಗರು ಆದರದಿಂದ ಬರಮಾಡಿಕೊಂಡು ಓದುವರೆಂದು ಹಾರೈಸುತ್ತೇವೆ.

ಇದೇ ಸ್ವಾತಂತ್ರ್ಯದಿನೋತ್ಸವದಂದು ವಿಶೇಷ ಸಂಚಿಕೆಯಾಗಿ ಪ್ರಕಟಗೊಂಡಿರುವ ಉಡುಪಿಯ ಹಸ್ತಲಿಖಿತ ತ್ರೈಮಾಸಿಕ ಪತ್ರಿಕೆ "ಚರಖಾ" ತನ್ನ ಹಿಂದಿನ ದಾಖಲೆಗಳನ್ನು ಮೀರಿಸುವಷ್ಟು ಸುಂದರವಾಗಿಯೂ ವಿಷಯ ಪುಷ್ಟಿಯಿಂದಲೂ ಹೊರಬಂದಿರುವುದು ಹೆಮ್ಮೆಯ ವಿಷಯ. ಸಂಪಾದಕರಾದ ಶ್ರೀ ಕೆ ಸತ್ಯೇಂದ್ರ ಶೆಣೈ ಹಾಗು ಪಂಡಿತ ಕೆ ಎ. ದೇವದಾಸರು ಪರಿಶ್ರಮ ಪೂರ್ವಕ ಉಪಯುಕ್ತವಾದ ಉತ್ತಮ ಲೇಖನಗಳನ್ನು ಸಂಗ್ರಹಿಸಿದ್ದಾರೆ. ಅಧ್ಯಾತ್ಮ, ಮನೋವಿಜ್ಞಾನ, ಸಾಧಕ ಜೀವನ, ಇತ್ಯಾದಿ ಪರಿಚಯಾತ್ಮಕ ಹಾಗು ವಿಚಾರ ಪ್ರಚೋದಕ ಲೇಖನಗಳೂ ಕತೆಯೇ ಮುಂತಾದ ಲಘು ಬರೆಹಗಳೂ ಓದುಗರನ್ನು ಆಕರ್ಷಿಸಬಲ್ಲವು. ಸಂಚಿಕೆಯ ಚಿತ್ರ ಕೌಶಲ್ಯವಂತೂ ಅವರನ್ನು ಮುಗ್ಧಗೊಳಿಸುವುದು ನಿಶ್ಚಯ. ಚರಖಾದ ಭವಿಷ್ಯ ಜೀವನವು ಇನ್ನಷ್ಟು ಉಜ್ವಲವಾಗಲೆಂದು ಕೋರುತ್ತೇವೆ.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ. 1931] [ಪ್ರಧಾನ ಕಛೇರಿ ಮಂಗಳೂರು 1.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ .... ರೂ. 11,11,000
ಜುಮ್ಲಾ ವಹಿವಾಟು .. ರೂ. 63,06,000

ಕಾಯಂ ಠೇವಣಾತಿಯ ಈಗಿನ ದರಗಳು

1 ತಿಂಗಳಿಗೆ	2%
2 ,,	2¼%
3 ತಿಂಗಳಿಂದ 6 ತಿಂಗಳ ವರೇಗೆ	3¼%
7 ,, 12 ,,	3½%
24 ತಿಂಗಳಿಗೆ	4%

ರೂಪಾ 15,000 ವ, ಮೇಲಿನ ಠೇವಣಾತಿಗೆ ⅛ ದರ ಬಡ್ಡಿ ಹೆಚ್ಚಿಗೆ ಕೊಡಲಾಗುವುದು.

ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ

ಕೆ. ಸುಂದರರಾಮ ಶೆಟ್ಟಿ, ಬಿ ಎ, ಬಿ ಎಲ್., ವಕೀಲ್,
ಡೈರೆಕ್ಟರ ಮಂಡಳಿಯ ಅಧ್ಯಕ್ಷರು

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವಂಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಇದನ್ನು ಇಂದೇ ಖರೀದಿಸಿಕೊಳ್ಳಿರಿ

ಬೆಲೆ – ಸಾಧಾರಣ ಪ್ರತಿ - ರೂ ೧ ೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು -1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ರುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಶಾಸ್ತ್ರಿ ಚಿನ್ನದ ನೆಕ್‌ಲೇಸ್ ತರಹವಾರು ಚೈನುಗಳು, ಪೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ. ಉಡುಪಿ, ದ ಭಾರತ

U. RAGHAVENDRA KRISHNA BHAT

Jeweller, Tenkapet, UDIPI, S Kanara.

ಫೋನು ನಂಬ್ರ 66

ಆಕಾಶಯಾನದ ದೇವತೆಗಳು!

ವಿಮಾನ ಮೂಲಕ ಪ್ರಯಾಣಿಸುವ ಸೌಭಾಗ್ಯ ನಮ್ಮಲ್ಲಿ ಕೆಲವರಿಗೇ ಬಂದಿರಬಹುದು—ಆದರೆ ಹಾಗೊಮ್ಮೆ ಆಕಾಶಯಾನದಲ್ಲಿ ಸಂಚರಿಸಿದವರು ಮಾತ್ರ "ಆಕೆ"ಯ ಮುಗುಳ್ನಗೆಯನ್ನು ಎಂದಿಗೂ ಮರೆಯಲಾರರು: ಅವಳೇ ಆಕಾಶಯಾನದಲ್ಲಿ ಅತಿಥಿಗಳನ್ನು ಸ್ವಾಗತಿಸಲು ನೇಮಕಗೊಂಡ ಚೆಲುವೆಯಾದ ಮಹಿಳೆ. ಪರಿಚಾರಿಕೆ ಎಂಬುದಾಗಿ ಅವಳನ್ನು ನಾವು ಕರೆಯುವುದು ಸರಿಯಾಗದು—ಏಕೆಂದರೆ ಅವಳ ಕೆಲಸ ಅಷ್ಟು ನಿಕೃಷ್ಟವಾದುದಲ್ಲ. ಮನೆ ಬಿಟ್ಟು ಬಂದ ನಮ್ಮನ್ನು ಸ್ವಂತ ಮನೆಯಲ್ಲಿದ್ದಷ್ಟೇ ಆರಾಮದಲ್ಲಿ ದಿನಗಳೆಯುವಂತೆ ಮಾಡುವ ಹೊಣೆ ಹೊತ್ತವಳೇ ಅವಳು.

ಅವಳ ಕುರಿತು ತಿಳಿಯಲು ನಮಗೆ ಸಹಜವಾಗಿಯೇ ಕುತೂಹಲವಾಗುತ್ತದೆ: ಆಕೆ ನೋಡಲು ಸುರೂಪಿಯಾಗಿ ಕಾಣುತ್ತಾಳೆ; ಅಷ್ಟೇ ಚುರುಕಾಗಿಯೂ ತೋರುತ್ತಾಳೆ; ನಾವು ಎಂಥವರೇ ಇದ್ದರೂ ಅವಳು ತನ್ನ ನಸು ನಗೆಯ ಸಮ್ಮೋಹನಾಸ್ತ್ರದಿಂದ ನಮ್ಮನ್ನು ಮುಗ್ಧಗೊಳಿಸುತ್ತಾಳೆ. "ಇಲ್ಲಿ ಏನೂ ಇಲ್ಲ; ಸಮಯ ಹೋಗುವುದಿಲ್ಲ" ಎಂದು ಭಾವಿಸುವವರಿಗೆ ಎಲ್ಲವೂ ಉಂಟೆಂಬ ಸೂಚನೆಯನ್ನು ಅವಳು ಕೊಡುತ್ತಾಳೆ. ಕಗ್ಗತ್ತಲೆಯ ಗುಹೆಯನ್ನು ಹೊಕ್ಕವರಂತೆ ವಿಮಾನವನ್ನು ಪ್ರವೇಶಿಸಿದವರಿಗೆ ಈಕೆಯ ಮುಗುಳ್ನಗೆಯು ಮಿಂಚಿನ ಹೊಳವು ಉಲ್ಲಾಸವನ್ನು ನೀಡುತ್ತದೆ.

ಅತಿಥಿಗಳನ್ನು ಸತ್ಕರಿಸುವ ಆಕೆಯ ಉದ್ಯಮ ಎಣಿಸಿದಷ್ಟು ಸುಲಭವೇನಲ್ಲ—ಪ್ರಯಾಣಿಕರಲ್ಲಿ ಕೆಲವರು ದಿನವಿಡೀ ನಿದ್ದೆಯಲ್ಲಿರಬಹುದು; ಅಂಥವರಿಂದ ಆಕೆಗೆ ಕಷ್ಟವಾಗುವುದಿಲ್ಲ. ಆದರೆ ಉಳಿದವರ ರೀತಿ ನೀತಿಗಳೇ ಬೇರೆ—ಅಡುಗೆ ಮನೆಯಲ್ಲಿ ಏನೆಲ್ಲ ಸಂಗ್ರಹವಿದೆಯೋ ಅವೆಲ್ಲದರ ರುಚಿ ನೋಡಬಯಸುವ ತಿಂಡಿಬಾಕರಿದ್ದಾರೆ; ಅವರಿಗೆ ಬೇಕಾದುದನ್ನು ಒದಗಿಸಿ ಮುಗಿಯದು. ಇಂಜಿನು ಕೋಣೆಯನ್ನು ಹೊಕ್ಕು ತಿರುಗಿ ಬರುವ ಚಪಲಚಲವರಿಗೆ—ಅವರಿಗೆ ಸ್ವತಃ ಏನೂ ಗೊತ್ತಿಲ್ಲ—ಪ್ರಶ್ನೆಯ ಮೇಲೆ ಪ್ರಶ್ನೆಗಳನ್ನು ಹಾಕುತ್ತಿರುತ್ತಾರೆ. ಆದರೆ ಅವುಗಳಿಗೆ ಈಕೆ ಕೊಡುವ ಉತ್ತರದಿಂದ ಅವರಿಗೆ ಸಮಾಧಾನವಾಗುವುದಿಲ್ಲ. ಈಕೆಗೇನೂ ತಿಳಿಯದೆಂದೇ ಅವರು ಭಾವಿಸುತ್ತಾರೆ. ಇನ್ನು ಪತ್ರಿಕಾಕರ್ತರೂ ಸಂಚಾರಿಗಳೂ ವಿಮಾನದ ಪ್ರತಿಯೊಂದು ವಿಭಾಗದ ಕುರಿತಾಗಿಯಷ್ಟೇ ಅಲ್ಲ—ಅದು ಹೋಗುವ, ಇಳಿಯುವ ಊರುಗಳ ಕುರಿತಾಗಿಯೂ ಕುತೂಹಲ ತೋರಿಸುತ್ತಾರೆ. ಇವರಿಗೆ ಎಷ್ಟು ವಿವರಿಸಿದರೂ ಸಾಲುವುದಿಲ್ಲ.

ಪ್ರವಾಸಿಗಳ ಉತ್ತರಗಳನ್ನು ನಿರ್ಲಕ್ಷಿಸುವುದಾಗಲೀ ಅವರನ್ನು ಆಕ್ಷೇಪಿಸುವುದಾಗಲೀ ಅವಳ ಮಟ್ಟಿಗೆ ಸಲ್ಲದು—ಅವಳು ಎಲ್ಲ ಬಗೆಯ ಜನರನ್ನೂ ತನ್ನ ಸಹಜವಾದ ಪ್ರೀತಿ ತುಂಬಿದ ಹಾಗು ಮಧುರವಾದ ಮಾತುಗಳಿಂದ ಮನವೊಲಿಸಿಕೊಳ್ಳಲು ನೋಡುತ್ತಾಳೆ. ತನಗೇನೂ ತಿಳಿಯದಾಗ ನಕ್ಕು ಬಿಟ್ಟು, ಸುಮ್ಮನಾಗಿಸುತ್ತಾಳೆ. ಹರೆಯದ ತರುಣರು ಬಲೆಗೆ ಸಿಕ್ಕಿಸಿಕೊಳ್ಳುವುದು ; ತಮ್ಮ ಪೌರುಷಕ್ಕುಂಟೆಂದು ಭಾವಿಸುವುದುಂಟು. ಅವರನ್ನು ಪುಸಲಾಯಿಸಬೇಕಾದರೆ ಸಾಕಾಗಿ ಹೋಗುತ್ತದೆ. ಆದರೆ ವಿಮಾನವು ಒಮ್ಮೊಮ್ಮೆ ಕುಕ್ಕರಿಸಿದಂತೆ ಕಂಡಾಗ ಅವರು ವೈಮಾನಿಕನಿಗೆ ಬೈಯುತ್ತಾರೆ. ವಿಮಾನ ಅಪಘಡಕ್ಕೆ ಈಡಾದ ಪಕ್ಷದಲ್ಲಿ ಹಾರಿ ಕೆಳಗಿಳಿಯಲು ಕೊಡೆಗಳ ಏರ್ಪಾಡು ಸರಿಯಿದೆಯಷ್ಟೇ ಎಂದು ಕೇಳುತ್ತಾರೆ! ತಾವು ತುಂಬಬೇಕಾದ ಹಲವಾರು ಬಗೆಯ ಫಾರ್ಮುಗಳ ಬಗ್ಗೆ ಮಾಹಿತಿ ಕೇಳಲು ಆಕೆಯನ್ನು ಸುತ್ತುವರಿಯುವವರೂ ಅನೇಕ. ಎಷ್ಟೋ ಮಂದಿ ಯುವಕರು ಅವಳ ನಸುನಗೆಯಿಂದ ಪ್ರೋತ್ಸಾಹಿತರಾಗಿ, ವಿಲಾಸ ಕೇಳುವಷ್ಟು ಔದ್ಧತ್ಯವನ್ನೂ ತೋರಿಸುತ್ತಾರೆ!

ಆಕಾಶಯಾನದ ಈ ದೇವತೆಗಳು ಎಷ್ಟು ಪ್ರಸಂಗಾವಧಾನತೆಯನ್ನು ಪ್ರದರ್ಶಿಸಿದರೂ ಸಾಲುವುದಿಲ್ಲ—ಎಷ್ಟೋ ತರುಣಿಯರಲ್ಲಿ ತಾವು ಸುಂದರಿಯರಿದ್ದರೆ ಸಾಕು, ಪ್ರಯಾಣಿಕರ ಮನವೊಲಿಸಬಹುದೆಂಬ ಭಾವನೆ ಇರುತ್ತದೆ. ಆದರೆ ಇಷ್ಟು ಯೋಗ್ಯತೆಯಿಂದಲೇ ಕೆಲಸವಾಗುದಿಲ್ಲ—ಚಾತುರ್ಯವೂ ಬುದ್ಧಿ ಸೂಕ್ಷ್ಮತೆಯೂ ತುಂಬ ಅಗತ್ಯ. ಅಂಗ ಸೌಷ್ಠವದ ಕಡೆಗೆ ಗಮನ ಕೊಟ್ಟಷ್ಟೇ ಚುರುಕಾಗಿ ಕೆಲಸ ನಿರ್ವಹಿಸುವ ಲವಲವಿಕೆಯೂ ಬೇಕಾಗುತ್ತದೆ. ಮೊದಲಿಗೇ ಆಕಾಶಯಾನದಲ್ಲಿ ಪ್ರವೇಶಸಿಗುವುದಿಲ್ಲ — ಕಠಿಣ ತರಬೇತಿಯನ್ನು ಹೊಂದಬೇಕು; ಆ ಮೇಲೆ ಹಿರಿಯ ಪರಿಚಾರಿಕೆಯೊಬ್ಬಳ ಕೆಲಸವನ್ನು ಪ್ರತ್ಯಕ್ಷ ನಿರೀಕ್ಷಿಸಬೇಕು. ಮುಂದೆ ಪರೀಕ್ಷಾರ್ಥ ಪ್ರಯೋಗದಲ್ಲಿ ಹಾರಿದಾಗ, ಚೊಕ್ಕ ರೀತಿಯಲ್ಲಿ ಕರ್ತವ್ಯವನ್ನು ನಿರ್ವಹಿಸಿ ಸಮಾಧಾನ ಪಡಿಸಿದರೆ, ಅವಳ "ಭಾಗ್ಯದ್ವಾರ" ತೆರೆಯಬಹುದು.

ಭಾರತದಲ್ಲಿ ೧೯೪೬ನೇ ಇಸವಿಯಲ್ಲಿ ಸರ್ವ ಪ್ರಥಮವಾಗಿ ಪರಿಚಾರಿಕೆಯರ ವರ್ಗವು ಪ್ರಾರಂಭಿಸಲ್ಪಟ್ಟಿತು: ಅಮೇರಿಕದ ಮಹಿಳೆಯೋರ್ವಳ ಮಾರ್ಗದರ್ಶನದಲ್ಲಿ ಇದು ನಡೆಯಿತು. ಇಂದು ನಮ್ಮ ಆಕಾಶಯಾನದ ದೇವತೆಗಳು ಇತರ ದೇಶಗಳ ವಿಮಾನಗಳಲ್ಲಿ ಕಂಡು ಬರುವ ಪರಿಚಾರಿಕೆಯರಿಗಿಂತ ಯೋಗ್ಯತೆಯಲ್ಲಿ ಕಡಿಮೆ ಇರುವುದಿಲ್ಲ. ಇದು ವಿಮಾನದಲ್ಲಿ ಹಾರಾಡಿ ಬಂದವರ ಅನುಭವಕ್ಕೆ ಬಂದ ಮಾತು. ಮೊದಲೇ ಸೂಚಿಸಿದಂತೆ, ಅವಳ ನಸುನಗು ಇನ್ನೊಮ್ಮೆ ಬನ್ನಿರೆಂದು ನಮ್ಮನ್ನು ಕರೆಯುವಂತಿರುತ್ತದೆ. ಆಕೆ ಮುಗುಳು ನಗೆಯೊಡನೆ ಕಾಫಿಯ ಬಟ್ಟಲು ತಂದಿಡುವಾಗ—ಅದಕ್ಕೆ ಸಕ್ಕರೆ ಹಾಕಬೇಕಾದ ಆವಶ್ಯಕತೆ ನಮಗೆ ಕಾಣುವುದಿಲ್ಲ. ಅವಳ ಮುಖದರ್ಶನವೇ ಮಧು ಸಮಾನವೆನಿಸುತ್ತದೆ.

ಉಡುಪಿ ದಿ. ಮು. ಕೋರ್ಟಿನಲ್ಲಿ

ಕ್ರಿಮು ನಂಬ್ರ 925/1951

ದಿ. ಕೆನರಾ ಇಂಡಸ್ಟ್ರೀಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಉಡುಪಿ ಕಡೆಯಿಂದ ರಿಕವರಿ ಆಫೀಸರ್ ಎಮ್. ಎಸ್. ಭಂಡಾರಿ ... ... ವಾದಿ.

ಮತ್ತು

1. ಕೆ. ದೊಡ್ಡಣ್ಣ ಸೆಟ್ಟಿ—ಜಂಬು ಸೆಟ್ರ ಮಗ 2. N. ವಿಟ್ಠಲ ಸೆಟ್ಟಿ—ತಿಮ್ಮಪ್ಪ ಸೆಟ್ರ ಮಗ. ಉಡುಪಿ ತಾಲೂಕು ಕೊರಂಗ್ರಪಾಡಿ ಗ್ರಾಮದಲ್ಲಿರುವವರು ..ಪ್ರತಿವಾದಿರು.

ಇವರೊಳಗೆ

ಸದರಿ ಪ್ರತಿವಾದಿರಿಗೆ—

ಪ್ರತಿವಾದಿರು ವಾದಿ ಬೇಂಕಿಗೆ ತಾರೀಕು 26—11—1953ರಲ್ಲಿ ರೂಪಾಯಿ 100/-ಕ್ಕೆ ಬರೆಕೊಟ್ಟ ಪ್ರೊಮಿಸರಿ ನೋಟಿನ ಬಾಬ್ತು ಪ್ರತಿವಾದಿಂದ ವಾದಿ ಬೇಂಕಿಗೆ ಬರಬೇಕಾದ ಅಸಲು, ಬಡ್ಡಿ, ರಿಜಿಸ್ಟ್ರಿ ನೋಟೀಸುಗಳ ಖರ್ಚು ಕೂಡಾ ರೂಪಾಯಿ 434—0—0ಕ್ಕೆ ವಾದಿಯು ಪ್ರತಿವಾದಿರ ಮೇಲೆ ಹಾಕಿದ ಸದರಿ ವ್ಯಾಜ್ಯವು ತಾರೀಕು 20—9—1954ಕ್ಕೆ ವಿಚಾರಣೆ ಬಗ್ಗೆ ಇಡೋಣಾಗಿಯದೆ. ಆದಿನ್ನ ಪ್ರತಿವಾದಿರು ಸ್ವತಹಾ ಯಾ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗದೆ ಇದ್ದರೆ ಆವರ ಗೈರ್ ಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನವಲ್ಲದೆ.ವೆಂದು ಈ ಮೂಲಕ ಸದರಿ ಪ್ರತಿವಾದಿರಿಗೆ ತಿಳಿಯಪಡಿಸೋಣಾಗಿಯದೆ.

M. Damoder Kamath
Advocate for Pltf.

ಉಡುಪಿ. ತಾ. 1-9-54.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್ಡ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ.8/-

Mrs. P. DEVEE, F. D.s (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40
ಸ್ಟಾಕಿಸ್ಟರು: ರಘಾ ಕಂಪೆನಿ, ಮಂಗಳೂರು.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ-ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುತ್ತಿದ್ದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುರೋಗ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಳಿಮೋಶ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೋಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೋಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯ ಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯ

[೩ನೇ ಪುಟದಿಂದ]

ಕವಾಗಿ ನೆಲೆಗೊಳಿಸಲಾಗುವುದು ಹುಡುಗಿಯರಿಗೆ ಹೇಳಿಸಿ ಮಾಡಿಸಿದ ಈ ಕೇಂದ್ರವು ಗೃಹ ವಿಜ್ಞಾನ ಶಿಕ್ಷಣವನ್ನು ಕೊಡಿಸಲು ಉಪಯುಕ್ತವೆಂದು ಭಾವಿಸಲಾಗಿರುವುದು. ಆದರೆ ಅದು ಈಗಲೇ ನೆರವೇರಲಾರದು–ತಜ್ಞರ ಅಭಿಪ್ರಾಯದಲ್ಲಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯವು ೧೩ ಕಲಾ ವಿಭಾಗಗಳಲ್ಲಿ ಹಾಗು ೫ ಮೂಲ ವಿಜ್ಞಾನ ಶಾಖೆಗಳಲ್ಲಿ "ಆನರ್ಸ್" ಪದವಿಗೂ ಸ್ನಾತಕೋತ್ತರ ಅಧ್ಯಯನಕ್ಕೂ ಶಿಕ್ಷಣ ವ್ಯವಸ್ಥೆ ಮಾಡಬಹುದು. ಆದರೆ ಈಗ ಮೂರು ಕಲಾವಿಭಾಗಗಳಲ್ಲಿಯೂ ಮೂರು ವಿಜ್ಞಾನ ಶಾಖೆಗಳಲ್ಲಿಯೂ ಕಲಿಸುವ ಏರ್ಪಾಡು ಮಾಡುವುದಷ್ಟೇ ಸಾಧ್ಯವಾಗಿದೆ ಉಪಕುಲಪತಿಗಳು ಈ ಕೂಡಲೇ ಮಾಡಬೇಕಾದ ಕೆಲಸಗಳಲ್ಲಿ ಸಂಗೀತ, ಕಲೆ, ಮತ್ತು ಪೌರಸ್ತ್ಯ ಸಂಸ್ಕೃತಿಗಳ ಶಿಕ್ಷಣಕ್ಕೆ ಅನುಕೂಲತೆ ಕಲ್ಪಿಸುವುದನ್ನು ವಿಚಾರಿಸುವ ಒಗೆ ಸಮಿತಿಗಳನ್ನು ನೇಮಿಸುವದೇ ಮಹತ್ವದ್ದು.

ಪ್ರಕೃತ ಈ ಕೇಂದ್ರವು "ರೆಸಿಡೆನ್ಸಿಯಲ್" (ಸ್ಥಳೀಯ) ವಿಶ್ವವಿದ್ಯಾಲಯವಾಗಿ ಕೆಲಸ ಮಾಡುತ್ತದೆ. ೧೯೫೬ರಲ್ಲಿ ಬೇರೆ ಕಾಲೇಜುಗಳಿಗೂ ಮನ್ನಣೆಯನ್ನು ಕೊಡುವುದು ಆಗ ಅನಂತಪುರ ಕಡಪಾ, ಕರ್ನೂಲು ಚಿತ್ತೂರು ಮತ್ತು ನೆಲ್ಲೂರು ಜಿಲ್ಲೆಗಳಲ್ಲಿಯ ಶಿಕ್ಷಣ ಸಂಸ್ಥೆಗಳು ಇದರ ಅಧೀನಕ್ಕೆ ಬರುತ್ತವೆ ಅನಂತಪುರದಲ್ಲಿರುವ ಇಂಜನಿಯರಿಂಗ ಕಾಲೇಜವೂ ಈ ವಿಶ್ವವಿದ್ಯಾಲಯದ ಕಕ್ಷೆಗೊಳಪಡುವುದರಿಂದ ಸ್ನಾತಕೋತ್ತರ ತಾಂತ್ರಿಕ ಶಿಕ್ಷಣದ ಕಡೆಗೂ ಆಗ ಸಾಕಷ್ಟು ಗಮನಕೊಡಬೇಕಾಗಿ ಬರಬಹುದು ಶಿಕ್ಷಣದ ಮಟ್ಟವನ್ನು ಇಳಿಸದೆ, ಇಷ್ಟೆಲ್ಲ ವಿಸ್ತರಣಾ ಕಾರ್ಯವನ್ನು ಕೈಗೂಡಿಸಬೇಕಾದರೆ ಆಷ್ಟಿಷ್ಟು ಹಣವು ಸಾಲದು. ಆಂಧ್ರ ಸರಕಾರದವರು ಮೂರೂವರೆ ಲಕ್ಷ ರೂಪಾಯಿಗಳ ವಾರ್ಷಿಕ ಸಹಾಯವನ್ನು ಕೊಡಲು ಒಪ್ಪಿದ್ದಾರೆ. ಆದರೆ ಬೆಳೆದು ಬಾಳಬೇಕಾದ ಈ ಕೇಂದ್ರಕ್ಕೆ ಇದು ಕಡಿಮೆಯಾಯಿತು. ಎಂತಲೇ, ಉದಾರಮನೋಭಾವದ ತೆಲುಗರು-ತಿರುಪತಿಯ ದೇವಳದವರು ನೀಡಿದಂತಹ ಉಂಬಳಿಯನ್ನೂ ಧರ್ಮವನ್ನೂ ನೀಡಿ ಪೋಷಿಸಬೇಕೆಂದು ಆಂಧ್ರದ ಶಿಕ್ಷಣ ಮಂತ್ರಿ ಶ್ರೀ ಪಟ್ಟಾಬಿ ರಾಮರಾಯರು ವಿನಂತಿಸಿರುವರು. ಕೇಂದ್ರ ಸರಕಾರ ಮತ್ತು ವಿಶ್ವವಿದ್ಯಾಲಯಕ್ಕೆ ಧನ ಸಹಾಯ ಕೊಡುವ ಸಮಿತಿಯೂ ಉದಾರವಾಗಿ ವರ್ತಿಸಬೇಕಾದದ್ದು ಅಗತ್ಯ ಹಾಗೆ ಮಾಡುವುದರಿಂದಲೇ–ಆಂಧ್ರ ವಿಶ್ವವಿದ್ಯಾಲಯ ಸ್ಥಾಪನೆಯಾದ ೨೮ ವರ್ಷಗಳ ಬಳಿಕ ತಲೆ ಎತ್ತಿದ–ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯವು ಉನ್ನತಿಯನ್ನು ಹೊಂದಿ ಪೌರಸ್ತ್ಯ ಸಂಸ್ಕೃತಿಯ ಪ್ರಕಾಶವನ್ನು ಭಾರತದಲ್ಲೆಲ್ಲ ಬೀರಬಲ್ಲುದು.

ಬೋಧ ಭಾಷೆಯ ತಂಟೆ

(೧ನೇ ಪುಟದಿಂದ)

ಮಾನ್ಯವಾಗಿ ಈ ಶಿಕ್ಷಣ ಉಂಟುಮಾಡುತ್ತದೆ ಉಳಿದವರಿಗಿಂತ ತಾವು ಶ್ರೇಷ್ಠರೆಂಬ ಪ್ರತ್ಯೇಕತಾ ಭಾವನೆಗೆ ಅವಕಾಶ ನೀಡುತ್ತದೆ. ಅಧಿಕಾರ ಸ್ಥಾನಗಳನ್ನು ಏರುವ "ಸುಶಿಕ್ಷಿತ ವರ್ಗ" ಇಂಗ್ಲೀಷನ್ನು ಬಿಟ್ಟು ಬೇರೆ ಮಾತೇ ಬರುವುದಿಲ್ಲವೊ ಎಂಬಂತೆ ಜನಸಾಮಾನ್ಯರ ಮುಂದೆ ನಡೆದುಕೊಳ್ಳುತ್ತದೆ. ಇಂಥವರು ಕಲ್ಯಾಣ ರಾಷ್ಟ್ರವನ್ನು ಕಟ್ಟುವುದೇ ಧ್ಯೇಯವಾಗುಳ್ಳ ಸ್ವತಂತ್ರ ರಾಜ್ಯಭಾರದಲ್ಲಿ ಜನತೆಯ ಹಿತಸಂಬಂಧಗಳ ರಕ್ಷಕರಾಗುವುದು ಅಶಕ್ಯ ಕೋಟಿಯೊಳಗಿನ ಮಾತು. ಜನಸಾಮಾನ್ಯರ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನೂ ಸತ್ಸಂಪ್ರದಾಯಗಳನ್ನೂ ಕಾಪಾಡುವುದು ಇವರ ಕೈಯಿಂದಾಗದು.

ದೇಶಭಾಷೆಗಳಿಗೆ— ರಾಷ್ಟ್ರಭಾಷೆಯೆಂದು ಅಂಗೀಕರಿಸಿದ ಹಿಂದಿಗಿಂತಲೂ ಅಧಿಕ—ಪ್ರಾಶಸ್ತ್ಯವನ್ನು ಕೊಡಬೇಕೆಂದೂ ಅವನ್ನೆ ಉಚ್ಚ ಶಿಕ್ಷಣವೇ ಮುಂತಾದ ಪ್ರತಿಯೊಂದು ಉದ್ದೇಶಕ್ಕೂ ಬಳಸಬೇಕೆಂದೂ ಹೇಳುವವರು ಇಂಗ್ಲೀಷಿನ ಮೇಲೆ ಅಸೂಯೆ ಪಡುವರೆಂದು ಭಾವಿಸುವುದು ಸರಿಯಲ್ಲ ಹಾಗೆ ನೋಡಿದರೆ, ನಮ್ಮ ಜ್ಞಾನ ತೃಷೆಯನ್ನು ಹಿಂಗಿಸಲು ನಾವು ಇಂಗ್ಲೀಷನ್ನೆ ಏಕಾಗಿ ಆಶ್ರಯಿಸಬೇಕು? ಚೀನ, ಜಪಾನುಗಳಂತಹ ಪೌರಸ್ತ್ಯ ದೇಶಗಳೂ ರಶಿಯಾ, ಜರ್ಮನಿ, ಫ್ರಾನ್ಸ್, ಇಟಲಿಗಳಂತಹ ಪಾಶ್ಚಾತ್ಯ ದೇಶಗಳೂ ಇಂಗ್ಲೀಷನ್ನು ಬೋಧಭಾಷೆಯಾಗಿ ಅಂಗೀಕರಿಸದೆ ತಂತಮ್ಮ ನಾಡಿನಲ್ಲಿ ಬಳಕೆಯಲ್ಲಿದ್ದ ನುಡಿಯನ್ನೆ ಉಪಯೋಗಿಸಿಕೊಂಡು, ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಮೆರೆದಾಡುತ್ತವೆ. ಚೀನದ ಪ್ರಧಾನ ಮಂತ್ರಿ ಚಾ ಎನ್ ಲಾಯರು ಹೊಸದೆಹಲಿಗೆ ಬಂದಿದ್ದಾಗ ಚೀನದ ಭಾಷೆಯಲ್ಲಿಯೇ ಮಾತನಾಡಿದರು ಸಂಯುಕ್ತ ರಾಷ್ಟ್ರ ಸಂಘದ ಸಭೆಗಳಲ್ಲಿ ಇಂಗ್ಲೀಷಿಗಿಂತಲೂ ಬೇರೆ ಭಾಷೆಗಳಲ್ಲಿ ಮಾತನಾಡುವವರೇ ಅಧಿಕ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಹೆಚ್ಚಿನವು ಫ್ರೆಂಚರ ಭಾಷೆಯನ್ನು ಪ್ರೀತಿಸುತ್ತಿವೆಯೆಂಬುದು ಅನುಭವಸಿದ್ಧವಾದ ವಿಷಯ.

ಸತ್ಯವು ಹೀಗಿರುತ್ತಾ ಇಂಗ್ಲಿಷಿಲ್ಲದೆ ದಿನಗಳೆಯುವುದು ಸಾಧ್ಯವಿಲ್ಲೆಂದು ಹೇಳುವವರು ದೂರ ದೃಷ್ಟಿಯ ವಿಮರ್ಶೆ ಮಾಡಿಲ್ಲವೆಂದು ತೋರುತ್ತದೆ. ದೇಶ ಭಾಷೆಗಳಲ್ಲಿ ವಿಜ್ಞಾನ ಹಾಗು ಕಲಾ ಸಾಹಿತ್ಯದ ವಿಕಾಸ ಸಾಕಷ್ಟು ಕೈಗೂಡಿಲ್ಲವೆಂದು ದೂರುವ ಮಹನೀಯರೂ ಅವುಗಳಿಗೆ ಅವಕಾಶ ಕೊಟ್ಟು ನೋಡಿಲ್ಲ: ಅನ್ನದ ಒದಗಿಸಿದ ಪಕ್ಷದಲ್ಲಿ ದೇಶ ಭಾಷೆಗಳು ಇಂಗ್ಲೀಷಿಗೆ ಯಾವ ದೃಷ್ಟಿಯಿಂದಲೂ ಕಡಿಮೆಯಲ್ಲವೆಂದು ಮನವರಿಕೆಯಾದೀತು. ಕನ್ನಡದ ಉದಾಹರಣೆಯನ್ನೆ ಕೊಡುವುದಾದರೆ "ಗರ್ಭಿಣಿ ಮತ್ತು ಶಿಶು" "ಅವ್ಯಕ್ತ ಮಾನವ" ಎಂಬ ಶಾಸ್ತ್ರೀಯ ಗ್ರಂಥಗಳ ಅನುವಾದ ಕಾರ್ಯಮೂಲಕ್ಕೆ ಯಾವ ವಿಷಯದಲ್ಲಿಯೂ ಕುಂದಿಸಗದಂತೆ ಮಾಡಲ್ಪಟ್ಟಿರುವುದು. ಪದ್ಯ ಸಾಹಿತ್ಯದಲ್ಲಿ "ಉಮರನ ಒಸಗೆ' ಹಾಗು "ಇಂಗ್ಲೀಷ್ ಗೀತಗಳು" ಉತ್ಕೃಷ್ಟವಾದ ನಿದರ್ಶನ. ಶಬ್ದ ದಾರಿದ್ರ್ಯ ಈ ಮಹಾ ಸಾಹಸದಲ್ಲಿ ಅಡ್ಡಿಯೆಂದು ಕಂಡು ಬರಲಿಲ್ಲ. ಸ್ವತಂತ್ರ ಕೃತಿಗಳ ಮಟ್ಟಿಗೂ ನಾವು ಅಭಿಮಾನ ಶೂನ್ಯರಾಗ ಬೇಕಿಲ್ಲ. ಅವಕಾಶವಿಲ್ಲ ಎಂಬುದೊಂದೇ ದೇಶ ಭಾಷೆಗಳ ವಿಕಾಸಕ್ಕೆ ಈಗಿರುವ ಆತಂಕ ಇದನ್ನು ಕಲ್ಪಿಸಿ ಕೊಡದೆ "ಸಂಪೂರ್ಣ" ವಿಕಾಸ ಹೊಂದುವ ವರೆಗೆ ದೇಶ ಭಾಷೆಗಳನ್ನು ಮೂಲೆ ಗುಂಪು ಮಾಡಿ, ಇಂಗ್ಲೀಷನ್ನು ಶಿಕ್ಷಣ ಮಾಧ್ಯಮಕ್ಕೆಂದು ಮುಂದಕ್ಕೂ ಬಳಸುವ ಪಂಡಿತರು ದೇಶಭಾಷಾಭಿಮಾನಿಗಳ ನಿಲುಮೆಯ ಕುರಿತು ಶಂಕಿಸುವ ಬದಲು ತಮ್ಮಿಂದಲೇ ತಪ್ಪಾಗಿರುವುದನ್ನು ತಿಳಿದು ತಿದ್ದಿ ಕೊಳ್ಳುವುದು ಲೇಸು.

—ಕಾರ್ತಿಕೇಯ.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವ್ಸ ಸೇವಿಸಿದರೆ ಮುಂದ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟ ಖರ್ಚ ರೂ. ೦–೧೪–೦

—:ವಿಳಾಸ —

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.



(ಏಸಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು, ಕು. ಶಿ. ಹರಿದಾಸ ಭಟ್ಟ, ಎ ಎ

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ... ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ... ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಸಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ ಬೆಲೆ ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು

[illegible]

1 ನವಯುಗ ಪ್ರೆಸ್, ಉಡುಪಿ 2 ... ಪುಸ್ತಕ ಭಂಡಾರ, ಉಡುಪಿ

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ 5-12-0 ಮಾತ್ರ. ನವಯುಗ, ಉಡುಪಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. P. 22/54.

ದೇವಕಿ . . . . ಅರ್ಜಿದಾರ.

Vs.

ಮೊಹುಕ್ಕೆ ಕೂಡಾ 7 ಜನರು ಎದ್ರಿರು.

1ನೇ ಎದ್ರಿ—ಮೊಹುಕ್ಕೆ. ವೆಂಕಟರಮಣ ಕೊರಗಪ್ಪ ರೈ ಸೊಸೆ. ಆದೂರು ಗ್ರಾಮ ಈಗ ಹಾಲಿ ಕಾಸರಗೋಡು ತಾಲ್ಲೂಕು ಪಡ್ಡಾಲ ಗ್ರಾಮದ ಬದಿಯಡ್ಕ ಹೈಸ್ಕೂಲಿನ ಪಡು ಬಡಗು ಇರುವ ಪೆರ್ಡಾಲ ಆಕ್ಕಾರಿ ಬಂಟನ ಮನೆಯಲ್ಲಿ ... ರೀಗೆ.

ಮೇಲಿನ ಅರ್ಜಿಯಲ್ಲಿ ತನ್ನಿಂದ ಸಲುವ ಮುಲಗೇಣಿ ರೂ. 377-0-0ನ್ನು 13-4-54ನೇ 1 ವರ್ಷದ ಮೂಲಗೇಣಿಯ ಪೂರ್ಣ ಸಂದಾಯಕ್ಕೆ ಡಿಪೋಜಿಟ್ ಮಾಡಿ ಆ ಮಟ್ಟಿಗೆ ಪೂರ್ಣ ಸಂದಾಯ ಬರಿಸಬೇಕಾಗಿ ಅರ್ಜಿದಾರಳು ಕೊಟ್ಟ ಮೇಲಿನ ಅರ್ಜಿಯು ತಾರೀಕು 16—9—54ಕ್ಕೆ ಇಟ್ಟಿದೆ. ನಿಮ್ಮ ಆಕ್ಷೇಪ ಇದ್ರೆ ಆ ದಿನ ಬೆಳಿಗ್ಗೆ ಘಂಟೆ 10ಕ್ಕೆ ಹಾಜರಾಗಿ ಉಪಪಂಸದಿದ್ರೆ ಶಿವ್ಯಾ ತೀರ್ಮಾನವಾದೀತೆಂತ ಈ ಮೂಲಕ ತಿಳಿಸಿಯದೆ.

Sd/ H. Pundarik Bhat.
Vakil for petr.

ಪುತ್ತೂರು 26—8—54.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

Edited, Printed & Published By K. H. Shetty at the Navayuga Press, Udipi, S. India

M. 3818

ನವಯುಗ

ಸಂಪುಟ ೩೪
VOL. 34

ಉಡುಪಿ, 16—9—1954

ಸಂಚಿಕೆ ೩
NO. 3

ಹಿತ ನುಡಿ

ನಮ್ಮ ಈ ವರ್ಷದ ಅಕ್ಕಿ ಬೆಳೆಯ ಅಂದಾಜು ಭಾರತದಲ್ಲಿ ೧೯೫೦ನೇ ವರ್ಷ ವಿದ್ದಿರಬಹುದಾದ ಜನರನ್ನು ಉಣ್ಣಿಸಲು ಸಾಕಷ್ಟಾಗುವುದೆಂದು ಕಂಡುಬರುತ್ತದೆ. ಇದನ್ನು ಉಚಿತವಾದ ಮಾನದಂಡವಾಗಿ ಪರಿಗಣಿಸುವುದಾದರೆ, ನಾವೀಗ ಸ್ವಾವಲಂಬಿಗಳಾಗಿದ್ದೇವೆಂದು ಹೇಳುವುದಕ್ಕೆ ಏನೇನೂ ಅಡ್ಡಿಯಿಲ್ಲ. ನೆರೆಯ ದೆಸೆಯಿಂದ ದೇಶದೊಳಗೆ ಅಕ್ಕಿಯ ಅಭಾವ ತಲೆದೋರುವುದೆಂದೂ ಬೆಲೆಗಳು ಏರಬಹುದೆಂದೂ ಯಾರೂ ಭಾವಿಸುವುದು ಬೇಡ. ಹಾಗಾಗದೆಂದು ನಾನು ಭರವಸೆ ಕೊಡುತ್ತೇನೆ.

— ಕಿದ್ವಾಯಿ

ಅಕ್ಕಿಯ ಸಮೃದ್ಧಿ

ನಮ್ಮ ಸಂಸತ್ತಿನ ಎರಡೂ ಸಭೆಗಳಲ್ಲಿ ಕಳೆದ ವಾರ "ಅಕ್ಕಿಯ ಸಮೃದ್ಧಿ"ಯನ್ನು ಕುರಿತಾದ ಚರ್ಚೆ ನಡೆಯಿತು. ವಾಣಿಜ್ಯ ಮಂತ್ರಿ ಶ್ರೀ ಕೃಷ್ಣಮಾಚಾರಿಯವರು ವಿದೇಶಗಳಿಗೆ ನಿರ್ಯಾತವಾಗುವ ಅಕ್ಕಿಯ ಮೇಲೆ ನೂರಕ್ಕೆ ಇಪ್ಪತ್ತರಷ್ಟು ಸುಂಕವನ್ನು ಹೇರುವುದಕ್ಕೆ ಅಧಿಕಾರ ಕೊಡುವ ಮಸೂದೆಯನ್ನು ತಂದಾಗ ನಮ್ಮ ಆಹಾರ ಧಾನ್ಯಗಳ, ಮುಖ್ಯವಾಗಿ ಅಕ್ಕಿಯ, ಪರಿಸ್ಥಿತಿಯ ಬಗ್ಗೆ ನಿಜವಾದ ಸಂಗತಿಗಳನ್ನು ಅನೇಕ ಸದಸ್ಯರು ತಿಳಿಯ ಬಯಸಿದರು. ಈಶಾನ್ಯ ಮತ್ತು ಉತ್ತರ ಭಾರತದಲ್ಲಿ ನೆರೆ ಹಾವಳಿಯು ಬೆಳೆಗಳಿಗೆ ಅಪಾರ ಹಾನಿಯನ್ನು ಮಾಡಿರುವಾಗ, ಒಡಿಸಾ, ದಕ್ಷಿಣ ಬಿಹಾರ ಮುಂತಾದ ಪ್ರದೇಶಗಳಲ್ಲಿ ಅನಾವೃಷ್ಟಿಯ ದೆಸೆಯಿಂದ ಬೆಳೆಗಳು ಒಣಗಿರುವಾಗ ನಾವು ಅಕ್ಕಿಯ ನಿರ್ಯಾತ ವ್ಯಾಪಾರಕ್ಕೆ ಅವಕಾಶ ಕೊಡುವುದು ಸರಿಯೆ? ಎಂದು ಸರಕಾರವನ್ನು ಪ್ರಶ್ನಿಸಲಾಯಿತು.

ಮಸೂದೆಯ ಉದ್ದೇಶವನ್ನು ವಿವರಿಸಿದ ಮಂತ್ರಿಗಳು ಸುಮಾರು ಎರಡು ಲಕ್ಷ ಟನ್ನುಗಳಷ್ಟು ಉತ್ತಮ ತರಗತಿಯ ಅಕ್ಕಿಯನ್ನು ನಿರ್ಯಾತ ಮಾಡುವ ಗುರಿಯನ್ನು ಸರಕಾರ ಇಟ್ಟುಕೊಂಡಿದೆಯೆಂದು ಹೇಳಿದರು. ಭಾರತವು ನಿಯಂತ್ರಣಗಳು ಬರುವುದಕ್ಕೆ ಮುಂಚೆ ಕಡಿಮೆ ತರಗತಿಯ ಅಕ್ಕಿಯನ್ನು ತರಿಸಿಕೊಂಡು ಉತ್ತಮ ತರಗತಿಯಲ್ಲಿ ಕೆಲವಂಶವನ್ನು ನಿರ್ಯಾತ ಮಾಡುತಿತ್ತು. ಹೆಚ್ಚಾಗಿ ವಿದೇಶಗಳಲ್ಲಿರುವ ಭಾರತೀಯರಿಗೆ ಇದು ಕಳಿಸಲ್ಪಡುತಿತ್ತು. ಹಿಂದಿನ ಈ ಪೇಟೆಗಳನ್ನು ಮರಳಿ ದೊರಕಿಸುವ ಪ್ರಯತ್ನ ನಡೆಸಲು ಈಗಿನ ಸಮಯ ಅನುಕೂಲವಾಗಿದೆ. ಏಕೆಂದರೆ ವಿದೇಶಗಳ ಪೇಟೆಯಲ್ಲಿ ಉತ್ತಮ ಜಾತದ ಅಕ್ಕಿಗೆ ಟನ್ನಿಗೆ ೬೦-೬೫ ಪೌಂಡುಗಳ ಬೆಲೆ ಸಿಗುತ್ತದೆ. ಭಾರತದೊಳಗೆ ಈ ಬೆಲೆ ೪೦-೫೦ ಪೌಂಡುಗಳಷ್ಟಿದ್ದು, ಮಿತವಾಗಿ ನಿರ್ಯಾತ ವ್ಯಾಪಾರ ಮಾಡುವುದರಿಂದ, ಸ್ವಲ್ಪ ಅಪಾಯವು ಬರಬಹುದು. ದಕ್ಷಿಣ ಭಾರತದಲ್ಲಿ ಅಕ್ಕಿಯ ಪರಿಸ್ಥಿತಿ ಅಷ್ಟು ಒಳ್ಳೆಯದಿಲ್ಲ. ಆದುದರಿಂದ ಮುಂಬಯಿ ಹಾಗು ಕಲ್ಕತ್ತೆಯ ಬಂದರಗಳ ಮೂಲಕ ಮಾತ್ರ ನಿರ್ಯಾತ ವ್ಯಾಪಾರಕ್ಕೆ ಅಪ್ಪಣೆ ಕೊಡಲಾಗುವುದು.

ಯ ಅರ್ಥವಲ್ಲ — ಸುಂಕದ ದರವನ್ನು ಏರಿಸುವುದೇ ಅದರ ಉದ್ದೇಶ. ನಿರ್ಯಾತ ಮಾಡುತ್ತಿದ್ದೇವೆಂದ ಮಾತ್ರಕ್ಕೆ ಹೊರಗಿನಿಂದ ತರಿಸಬೇಕೆಂದಿರುವ ಅಕ್ಕಿಯನ್ನು ಬಿಟ್ಟುಕೊಡುತ್ತೇವೆಂದೂ ಹೇಳಲಾಗದು. ಬರ್ಮಾ ದೇಶದಿಂದ ಟನ್ನಿಗೆ ೩೦ ಪೌಂಡು ಬೆಲೆಯಲ್ಲಿ ೯ ಲಕ್ಷ ಟನ್ನು ಅಕ್ಕಿಯನ್ನು ನಾವು ತರಿಸುತ್ತಿದ್ದು, ಇದರಿಂದ ನಮ್ಮ ಅಕ್ಕಿಯ ಸಂಗ್ರಹವು

ಜುಲೈ ೨೧ರಿಂದ ಜ್ಯಾರಿಗೆ ತಂದ ಸುಗ್ರೀವಾಜ್ಞೆಯ ಬಳಿಕ ಆಗೋಸ್ತು ೩೧ರ ತನಕ ಕಲ್ಕತ್ತೆಯಲ್ಲಿ ೩,೭೩೦ ಟನ್ನು, ಮುಂಬಯಿಯಲ್ಲಿ ೫೪೦೦ ಟನ್ನುಗಳಷ್ಟು ಅಕ್ಕಿಯ ನಿರ್ಯಾತಕ್ಕೆ ಪರವಾನಿಗೆ ಕೊಡಲ್ಪಟ್ಟಿತು ಎಂದು ತಿಳಿಸಿದರು.

ಇದರಿಂದ ದೇಶದೊಳಗಿನ ಆಹಾರ ಪರಿಸ್ಥಿತಿಯು ಸ್ವಲ್ಪವೂ ಕೆಡುವುದಿಲ್ಲೆಂದು ಕಿದ್ವಾಯಿಯವರು ಭರವಸೆ ನೀಡಿದರು. ನೆರೆ ಹಾವಳಿ, ಅನಾವೃಷ್ಟಿ ಮುಂತಾದ ನೈಸರ್ಗಿಕ ಆಪತ್ತುಗಳು ನಮ್ಮ ದೇಶಕ್ಕೆ ಹೊಸತಲ್ಲ, ಅವುಗಳನ್ನು ಲೆಕ್ಕಕ್ಕೆ ಕಟ್ಟಿಕೊಂಡೇ, ನಮ್ಮ ಸ್ವಾವಲಂಬನದ ಪ್ರಯತ್ನಗಳನ್ನು ಮುಂದೊತ್ತಬೇಕಾಗುತ್ತದೆ. ಅಕ್ಕಿಯ ವಿಷಯದಲ್ಲಿ ನಮಗೆ ಚಿಂತೆ ಇಲ್ಲವೆಂದು ಹೇಳುವಾಗ ಈ ಆಪತ್ತುಗಳನ್ನೂ ಗಮನಿಸಲಾಗಿದೆ. ಕಳೆದ ವರ್ಷ ಹಿಂದೆಂದೂ ಇರದಷ್ಟು ಹೆಚ್ಚು, ಎಂದರೆ ೨೭೪ ಲಕ್ಷ ಟನ್ನು ಅಕ್ಕಿಯನ್ನು ಬೆಳೆಯಲಾಯಿತು. ಸರಕಾರವು ನಿರ್ಯಾತಕ್ಕೆ ಪ್ರೋತ್ಸಾಹ ಕೊಡುವುದೆಂದು ಈ ಮಸೂದೆ

೨೨ ಲಕ್ಷ ಟನ್ನುಗಳಿಗೆ ಏರುತ್ತದೆ. ಅನಿರೀಕ್ಷಿತ ಗಂಡಾಂತರಗಳು ಎಷ್ಟು ಉಗ್ರವಾಗಿದ್ದರೂ ಅವನ್ನು ಈ ಸಂಗ್ರಹದ ಬಲದಿಂದ ಯಶಸ್ವಿಯಾಗಿ ಇದಿರಿಸಬಹುದು ಎಂದವರು ಧೈರ್ಯ ಕೊಟ್ಟರು. ಮಸೂದೆಯು ಸಂಸತ್ತಿನ ಉಭಯ ಸಭೆಗಳ ಮನ್ನಣೆಯನ್ನು ಪಡೆಯಿತು.

ಅಕ್ಕಿಯ ವಿಷಯದಲ್ಲಿ ಸಮೃದ್ಧಿಯನ್ನು ಸಾಧಿಸಿದ್ದೇವೆಂಬ ಸುದ್ದಿಯಿಂದ ನಾವು ಸಂತೋಷಹೊಂದುವುದು ಸಹಜ. ಆದರೆ ಇಲ್ಲಿ ಇನ್ನೊಂದು ಪ್ರಶ್ನೆಯನ್ನು ವಿಚಾರಿಸುವುದು ಅಪೇಕ್ಷಣೀಯ. ಅದೆಂದರೆ, ಪೋಷಕಾಂಶಗಳು ಏನೇನೂ ನಷ್ಟಹೊಂದಿರದ ಅತ್ಯುತ್ತಮ ಅಕ್ಕಿಯನ್ನೇ ಅದನ್ನು ಉಣ್ಣುವವರಿಗೆ ಒದಗಿಸುವ ವಿಷಯ. ಸಾಮಾನ್ಯವಾಗಿ ಅಕ್ಕಿಯನ್ನು ಉಣ್ಣುವವರು ಗೋಧಿ, ಜೋಳ ಮುಂತಾದ ಇತರ ಧಾನ್ಯಗಳನ್ನು ಉಪಯೋಗಿಸುವವರಿಗಿಂತ ದುರ್ಬಲರೆಂದು ಹೇಳಲಾಗುತ್ತದೆ. ಅಕ್ಕಿಯಲ್ಲಿ ಪೋಷಕಾಂಶ ಕಡಿಮೆ ಎಂದು ದೂರಲಾಗುತ್ತದೆ. ಆದರೆ ನಿಜಸ್ಥಿತಿಯು ಹೀಗಿಲ್ಲ— ಅಕ್ಕಿಯಲ್ಲಿ ಗೋಧಿ, ಜೋಳಗಳಷ್ಟೇ ಉತ್ತಮ ಪೋಷಕಾಂಶಗಳು ಇವೆಯೆಂದು ಸಂಶೋಧನೆಗಳು ತಿಳಿಸುತ್ತವೆ. ಹೀಗಿದ್ದರೂ ಅಕ್ಕಿಯನ್ನು ಉಣ್ಣುವವರು ದುರ್ಬಲರಾಗಿದ್ದರೆ ಅದರ ಕಾರಣ ಬೇರೆಯೇ ಆಗಿದೆ.

ಅಕ್ಕಿಯನ್ನು ಸುಲಭವಾಗಿ ಹೊರ ಆವರಣದಿಂದ ಬೇರ್ಪಡಿಸಲಾಗುವ ಧಾನ್ಯ ಬೇರೊಂದಿಲ್ಲ— ಅಕ್ಕಿಯ ಹೊರ ಆವರಣದಲ್ಲಿಯೇ ಅದರ ಎಲ್ಲ ಪೋಷಕಾಂಶಗಳು ಇವೆಯೆಂದು ವಿಜ್ಞಾನಿಗಳ ಅಭಿಪ್ರಾಯ. ಕುಟ್ಟುವಾಗ, ಅಥವಾ ಗಿರಣಿಗಳಲ್ಲಿ ಅಕ್ಕಿಯನ್ನು ಮಾಡುವಾಗ ಈ ಹೊರ ಆವರಣ ನಷ್ಟಹೊಂದುತ್ತದೆ. ತೂಕದಲ್ಲಿ ಈ ನಷ್ಟವು ನೂರಕ್ಕೆ ೧೦ ಇರಬಹುದು. ಆದರೆ ಪೋಷಕಾಂಶಗಳ ದೃಷ್ಟಿಯಿಂದ ನೋಡಿದರೆ, ನೂರರಲ್ಲಿ ೩೦ ಪಾಲು ಸಾರಜನಕವೂ ೫೦ ಪಾಲು ಖನಿಜ ಪದಾರ್ಥವೂ ಮತ್ತು ಥಯಾಮಿನ್ ಮುಂತಾದ ಜೀವ ಸತ್ವಗಳೂ ಮಾಯವಾಗುತ್ತವೆ. ಬೆಳ್ತಿಗೆ ಅಕ್ಕಿಯಲ್ಲಿ ಈ ನಷ್ಟ ಮತ್ತಷ್ಟು ಹೆಚ್ಚುತ್ತದೆ. ಕುಚ್ಚಿಗೆ ಅಕ್ಕಿಯನ್ನು ಮಾಡುವಾಗ ಮೊದಲೊಮ್ಮೆ ಭತ್ತವನ್ನು ಬೇಯಿಸುವುದರಿಂದ, ಹೊರ ಆವರಣವು ಅಕ್ಕಿಯ ಮೈಗೆ ತಾಗಿ ಉಳಿದುಕೊಳ್ಳುತ್ತದೆ. ಆದರೆ ಇದೂ ಸಹ ಗಿರಣಿಯಲ್ಲಿ ಹಾಕಲ್ಪಟ್ಟಾಗ ಸಂಪೂರ್ಣ ಕಳೆಯುತ್ತದೆ. ಇದರ ಹೊರತು ಗಿರಣಿಗಳಲ್ಲಿ ನೂರಕ್ಕೆ ೩ ಪಾಲಿನಷ್ಟು ಅಕ್ಕಿಯು ಎಂದ ಕಡಿಮೆ ದೊರೆಯುತ್ತದೆ. ಈ ನಷ್ಟ ಇಡೀ ದೇಶಕ್ಕಾಗುವಾಗ ೩,೫೦೦೦ ಟನ್ನುಗಳಷ್ಟಾಗುವುದೆಂದು ಅಂಕೆ ಸಂಖ್ಯೆಗಳು ತಿಳಿಸುತ್ತವೆ.

(೧೦ನೇ ಪುಟ ನೋಡಿರಿ)

ಇಲ್ಲಿದೆ ಸ್ವಾರಸ್ಯ

ಕೊರಿಯದ ಯುದ್ಧಭೂಮಿಗೆ ಸೈನ್ಯದೊಂದಿಗೆ ಹೋಗಿದ್ದ ಅಮೆರಿಕನೊಬ್ಬ ತನ್ನ ಪ್ರೇಯಸಿಗೆ ಒಂದು ಪತ್ರ ಬರೆಯಬೇಕೆಂದು ಯೋಚಿಸಿದ. ನಿಜಸ್ಥಿತಿಯನ್ನು ಮುಚ್ಚಿಡುವುದು ಅವನಿಗೆ ಸರಿ ತೋರಲಿಲ್ಲ. ಆದರೆ, ಇದ್ದುದನ್ನು ಇದ್ದಂತೆ ಹೇಗೆ ಬರೆಯಲಿ ಎಂದು ಸಂಕೋಚ.

ಕೊನೆಗೊಮ್ಮೆ ಶತ್ರುಗಳನ್ನು ದೊಡ್ಡ ದಬ್ಬಮಾಡಿ ಒದೆಯುತಿದ್ದಾಗ ಅವನಿಗೆ ಸಮಸ್ಯೆಯ ಪರಿಹಾರ ಮಾರ್ಗ ಗೋಚರಿಸಿತು. "ಪ್ರಿಯೆ, ನಾನಿದನ್ನು ಬರೆಯುತ್ತಿದ್ದಂತೆ ನನ್ನ ಕಿವಿಗೆ ಡುಳುಂ, ಡುಳುಂ ಎಂಬ ಶಬ್ದ ಕೇಳಿಸುತ್ತದೆ' ಎಂದವನು ಬರೆದು, ಕಾಗದವನ್ನು ಮಡಚಿ ಲಕೋಟೆಯಲ್ಲಿ ತುಂಬಿಸಿದ.

ವಾರ್ಷಿಕ ಚಂದಾ:

NAVAYUGA WEEKLY, UDIPI.

ಬಿಡಿ ಸಂಚಿಕೆ: ಎರಡಾಣೆ

ಸರ್ವಾಧಿಕಾರಿ ಸಾಲಾಝಾರರ ಆಡಳಿತ ವಿಧಾನ

ವ್ಯಕ್ತಿ ಸ್ವಾತಂತ್ರ್ಯದ ಸಮಾಧಿಯ ಮೇಲೆ ನಿಂತ ಸುಭದ್ರ ಪ್ರಭುತ್ವ

ಭಾರತೀಯರಾದ ನಮಗೆ ಗೋವೆ ಮತ್ತಿತರ ಪೋರ್ಚುಗೀಜ ವಸಾಹತುಗಳ ಕುರಿತಿರುವಷ್ಟು ಆಸಕ್ತಿಯು ಪೋರ್ಚುಗಾಲದ ಆಡಳಿತ ಕ್ರಮವನ್ನು ತಿಳಿದುಕೊಳ್ಳುವುದರ ಬಗ್ಗೆ ಇರಲಿಕ್ಕಿಲ್ಲ—ಹಾಗೆಂದು ಈ ವಸಾಹತುಗಳ ಪ್ರಶ್ನೆಯನ್ನು ಇತ್ಯರ್ಥಗೊಳಿಸುವಲ್ಲಿ ಪೋರ್ಚುಗಾಲದ ಸಾಲಾಝಾರರು ನಿರ್ವಹಿಸಬೇಕಾದ ಪಾತ್ರ ಮಹತ್ವದ್ದಿರುವುದರಿಂದ, ಮತ್ತು ಸಮಸ್ಯೆಯ ಪರಿಹಾರವೇ ಅವರ ಕೈಯಲ್ಲಿರುವುದರಿಂದ, ಅಲ್ಲಿಯ ಸಾಮಾನ್ಯ ಆಡಳಿತ ಪದ್ಧತಿಯನ್ನು ಅಭ್ಯಸಿಸುವುದರಿಂದ ಲಾಭವಾದೀತು.

ಗೋವೆ ಮುಂತಾದವುಗಳು ವಸಾಹತುಗಳೆಂಬ ತತ್ವವನ್ನೆ ಒಪ್ಪದೆ, ಪೋರ್ಚುಗಾಲದ ಅವಿಭಾಜ್ಯ ಅಂಗಗಳೆಂದು ಸಾಧಿಸುವ ಸಾಲಾಝಾರರ ಆಡಳಿತ ಇಲ್ಲಿ ೧೯೨೮ರಿಂದ ನಡೆಯುತ್ತಾ ಬಂದಿದೆ. "ಪಾಶ್ಚಾತ್ಯ ದೇಶಗಳ ಸಾಹಸ ಮತ್ತು ಸಂಸ್ಕೃತಿಯ ಪ್ರತೀಕವಾಗಿ ಪೂರ್ವದಲ್ಲಿ ಗೋವೆ ಚಿರಕಾಲದ ವರೆಗೆ ಇರಲೆಂದು ನಾವು ಹೋರಾಟ ಮಾಡುತಿದ್ದೇವೆ" ಎಂದು ಈ ಸರ್ವಾಧಿಕಾರಿ ತನ್ನ ಜನರನ್ನು ಈಗ ಹುರಿದುಂಬಿಸುತಿದ್ದಾರೆ.

ಜನತೆ ಅವರ ಮಾತನ್ನು ಕೇಳುತ್ತದೋ ಇಲ್ಲವೋ ಎಂಬ ವಿಷಯದಲ್ಲಿ ನಿಶ್ಚಿತವಾಗಿ ಏನನ್ನೂ ಹೇಳಲು ಬರುವುದಿಲ್ಲ-ಆದರೆ ಇದಿಷ್ಟು ಸತ್ಯ: ಎಲ್ಲ ಜನರಿಗೂ ಈ ಸರ್ವಾಧಿಕಾರ ಹಿಡಿಸುವುದಿಲ್ಲ. ಸರಕಾರದ ಅಂಕೆ ಸಂಖ್ಯೆಗಳಿಗನುಸಾರ ನಾಲ್ಕರಲ್ಲಿ ಒಬ್ಬನು ಸಾಲಾಝಾರರನ್ನು ವಿರೋಧಿಸುತ್ತಾನೆ. ಈ ವಿರೋಧಕರಲ್ಲಿಯೇ ಒಬ್ಬನನ್ನು ಕೇಳಿದರೆ, ಪೋರ್ಚುಗಾಲದ ನೂರರಲ್ಲಿ ಐವತ್ತು ಮಂದಿಗೆ ಸಾಲಾಝಾರರ ಆಡಳಿತದಲ್ಲಿ ಸಮ್ಮತಿ ಇಲ್ಲವೆಂಬ ಉತ್ತರ ಬರುತ್ತದೆ.

ಹೀಗಿದ್ದರೂ ಶಾಂತಿ ಮತ್ತು ಭದ್ರತೆಯನ್ನು ಸಾಲಾಝಾರರು ಕಾಯ್ದುಕೊಂಡು ಹೋಗುವರೆಂದರೆ ಆಶ್ಚರ್ಯವಾದೀತು: ಇದನ್ನು ಸಾಧಿಸಿದ್ದು ಅವರು ಅನುಸರಿಸುವ ಕಟುವಾದ ಧೋರಣೆ. ೧೯೨೮ರಲ್ಲಿ ಅಧ್ಯಕ್ಷ ಮೆಕ್ಯಾಡೋರನ್ನು ಬುಡಮೇಲು ಮಾಡಿದ ಸಾಹಸಿಗರೇ ಸಾಲಾಝಾರರನ್ನು ಕಂದಾಯ ಮಂತ್ರಿಗಳಾಗಿರೆಂದು ಆಹ್ವಾನಿಸಿದರು. ಜನರಲ್ ಕಾರ್ಮೊನಾ ಪೋರ್ಚುಗಾಲದ ಅಧ್ಯಕ್ಷರಾಗಿ ಆಯ್ಕೆ ಹೊಂದಿದ ಬಳಿಕ, ಸಾಲಾಝಾರರಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಡುತ್ತಾ ಹೋದರು. "ಹೊಸ ರಾಜ್ಯ"ವು ಜ್ಯಾರಿಗೆ ಬಂದಾಗ ಮುಖ್ಯ ಮಂತ್ರಿ ಸಾಲಾಝಾರರೇ "ಸರ್ವಾಧಿಕಾರಿ"ಯಾದರು; ಅಧ್ಯಕ್ಷರ ವಶದಲ್ಲಿ ಏನೂ ಅಧಿಕಾರ ಉಳಿಯಲಿಲ್ಲ.

ಕಳೆದ ಇಪ್ಪತ್ತು ವರ್ಷಗಳಿಗಿಂತ ತುಸು ಹೆಚ್ಚಿನ ಅವಧಿಯಲ್ಲಿ ಸಾಲಾಝಾರರು ಜ್ಯಾರಿಗೆ ತಂದ ೪೦,೦೦೦ ಕಾಯಿದೆಗಳೇ ಅವರ ಆಡಳಿತದ ನೀತಿಯನ್ನು ಪ್ರಕಟಿಸುತ್ತವೆ. ಇಷ್ಟಲ್ಲದೆ, ಉದ್ಯಾನವನಗಳ ರಕ್ಷಕರು, ಟ್ಯಾಕ್ಸಿ ಡ್ರೈವರರು ಮುಂತಾಗಿ ಸಾರ್ವಜನಿಕರ ಸಂಪರ್ಕಕ್ಕೆ ಬರುವ ಎಲ್ಲರಿಗೂ ಅನ್ವಯಿಸುವ ಬೇರೆ ನೂರಾರು ನಿಯಮಗಳೂ ಇವೆ. ಪೋರ್ಚುಗಾಲದ ವಯಸ್ಕರಲ್ಲಿ ಅರೆವಾಸಿಗೆ ಓದು ಬರಹ ತಿಳಿದಿಲ್ಲ. ಅಕ್ಷರಸ್ಥರಿಗೆ ಸಹ, ಲೋಕದ ವಾರ್ತೆಯನ್ನು ಇದ್ದುದಿದ್ದಂತೆ ತಿಳಿದುಕೊಳ್ಳುವ ಸ್ವಾತಂತ್ರ್ಯವಿಲ್ಲ—ಏಕೆಂದರೆ, ಪ್ರತಿಯೊಂದು ಪ್ರಕಟಣೆಯೂ ಸರಕಾರದ ಅಧಿಕಾರಿಗಳ ಉಗ್ರವಾದ ಪೂರ್ವ ಪರಿಶೀಲನೆಯ ಹೊರತು, ಜನರ ಕೈಸೇರುವಂತಿಲ್ಲ.

ಪೋರ್ಚುಗಾಲದಲ್ಲಿ ಕಂಡುಬರುವ ಪೋಲೀಸರ ಸಂಖ್ಯೆಯನ್ನು ನೋಡಿದರೆ, ಸಾಲಾಝಾರರ ಉಕ್ಕಿನ ಕೈ ಹೇಗೆ ಆಳುತ್ತಿದೆಯೆಂದು ಸ್ಪಷ್ಟವಾಗುತ್ತದೆ. ಜನರ ನೂಕು ನುಗ್ಗಲು ಅಷ್ಟೇನೂ ಇಲ್ಲದ ತಿರುಗಿನಲ್ಲಿಯೂ ಪೋಲೀಸರ ದಂಡೊಂದು ಕಾಣಿಸುತ್ತದೆ; ಪ್ರತಿಯೊಂದು ಟ್ರಾಮಿನಲ್ಲಿ ಎರಡು—ಮೂರು ಮಂದಿಯಾದರೂ ಪೋಲೀಸರು ಪುಕ್ಕಟೆ ಪ್ರವಾಸದ ಸುಖವನ್ನು ಅನುಭವಿಸುತ್ತಿರುತ್ತಾರೆ.

ಮರಣ ದಂಡನೆಯು ೧೮೬೭ರಷ್ಟು ಹಿಂದೆ ರದ್ದುಗೊಳಿಸಲ್ಪಟ್ಟಿದ್ದರೂ ಏನೂ ಕಾರಣ ತೋರಿಸದೆ, ಸೆರೆಮನೆಯಲ್ಲಿ ನಾಗರಿಕರನ್ನು ಬಂಧಿಸಿಡುವುದಕ್ಕೆ ಕಾಯಿದೆಗಳು ಅವಕಾಶ ಕೊಡುತ್ತವೆ. ಸಾಲಾಝಾರರ ರಾಜಕೀಯ ವಿರೋಧಕರು ಸೆರೆಮನೆಯ ಹೊರಗೆ ಕಳೆಯುವ ದಿನಗಳು ಅತ್ಯಲ್ಪ—ಗೋಮಾಂತಕರಾದ ಶ್ರೀ. ಟಿ. ಬಿ. ಕುನ್ಹಾರು ಪೋರ್ಚುಗಾಲದ ಸೆರೆಮನೆಗಳಲ್ಲಿ ಅನೇಕ ವರ್ಷಗಳನ್ನು ಕಳೆದಿದ್ದರು: "ಕಾರಾಗಾರಗಳಲ್ಲಿ ಕೊಲೆಪಾತಕಿಗಳು, ಕಳ್ಳರು, ಮೋಸಗಾರರು ಮುಂತಾದವರು ಇರಬಹುದೆಂದು ನಾನು ಎಣಿಸಿದ್ದೆ—ಆದರೆ ಸುದೈವದಿಂದ ನನಗೆ ಇಲ್ಲಿ ಕಲಾವಿದರು, ಪತ್ರಿಕೋದ್ಯಮಿಗಳು, ತತ್ವಜ್ಞಾನಿಗಳು ಮತ್ತು ರಾಜನೀತಿ ವಿಶಾರದರೇ ತೋರಿ ಬಂದರು: ಹೀಗೆ ಬುದ್ಧಿಶಾಲಿಗಳ ಸಹವಾಸ ಲಾಭವೇ ನನಗೆ ದೊರೆಯಿತು" ಎಂದವರು ಹೇಳುತ್ತಾರೆ.

ಸರ್ವಾಧಿಕಾರವನ್ನು ನಿರಾತಂಕಗೊಳಿಸಲು ನಾಗರಿಕರನ್ನು ಸೆರೆಮನೆಗೆ ದೂಡಿದರೂ ಅಲ್ಲಿ ಎಲ್ಲ ಬಗೆಯ ಉಪಚಾರ ವ್ಯವಸ್ಥೆಯನ್ನು ಮಾಡಲಾಗುತ್ತದೆಯಂತೆ-ಉದಾಹರಣೆಗಾಗಿ, ಇಂಗ್ಲೀಷಿನಲ್ಲಿ ಪತ್ರ ವ್ಯವಹಾರ ಮಾಡುವುದನ್ನು ಕಲಿಯಬೇಕೆಂದು ಬಯಸುವವರಿಗೆ ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಲಿಸ್ಬನಿನಲ್ಲಿರುವ ಬ್ರಿಟಿಷ ಪ್ರತಿನಿಧಿ ಮಂಡಳಕ್ಕೆ ರಾಜಕೀಯ ಕೈದಿಗಳಿಂದ ದಿನಾಲೂ ಇಂತಹ ಪ್ರಾರ್ಥನೆಗಳು ಬರುತ್ತಿವೆಯೆಂದು ಹೇಳಲಾಗುತ್ತದೆ.

ಬ್ರಿಟಿಷರಿಗೆ ಪೋರ್ಚುಗಾಲದಲ್ಲಿ ಇರುವಷ್ಟು ಆಸ್ಥೆ ಬೇರಾವುದೇ ರಾಷ್ಟ್ರಕ್ಕೆ ಇರಲಿಕ್ಕಿಲ್ಲ. ತಮ್ಮ "ಪ್ರಾಚೀನ ಮಿತ್ರ ರಾಷ್ಟ್ರ"ವಾದ ಪೋರ್ಚುಗಾಲದ ಪರವಾಗಿ ವಕಾಲತು ವಹಿಸಿ ಭಾರತಕ್ಕೆ ಬುದ್ಧಿ ಹೇಳಲು ಬ್ರಿಟನು ಮುಂದೆ ಬಂದದ್ದು ನಮ್ಮ ನೆನಪಿನಿಂದ ಇಷ್ಟು ಬೇಗನೆ ಮಾಯವಾಗಿರಲಾರದು. ಹಾಗೆ ಉಪದೇಶಿಸುವಂತೆ ಮಾಡಿದ್ದು ಬ್ರಿಟಿಷರು ಪೋರ್ಚುಗಾಲದಲ್ಲಿ ಸುರುವಿರುವ ಬಂಡವಾಳ. ಬ್ರಿಟಿಷ ವ್ಯಾಪಾರಿಗಳ ಕೈಯಲ್ಲಿ ಇಲ್ಲಿಯ ಮದ್ಯದ ಸಂಸ್ಥೆಯುಂಟು; ವಿದ್ಯುಚ್ಛಕ್ತಿಯ ಪೂರೈಕೆ, ಅತ್ಯಾಧುನಿಕ ಆಸ್ಪತ್ರೆ, ಜಗತ್ತಿನಲ್ಲಿಯೇ ಹಿರಿದೆನಿಸಿದ ಪಶುವಧಶಾಲೆ, ದೊಡ್ಡ ಅಣೆಕಟ್ಟು—ಎಲ್ಲದರಲ್ಲಿಯೂ ಬ್ರಿಟಿಷರ ಬಂಡವಾಳವು ತನ್ನ ವರ್ಚಸ್ಸನ್ನು ತೋರಿಸುತ್ತಿದೆ.

ಸಂಪತ್ಸಮೃದ್ಧವಾದ ರಾಷ್ಟ್ರವೆಂದು ಪೋರ್ಚುಗಾಲವನ್ನು ಕರೆಯಲು ಬಾರದು. ಇಲ್ಲಿಯ ೯೦ ಲಕ್ಷ ಜನರಲ್ಲಿ ಕೆಲವೇ ನೂರು ಮಂದಿ ಶ್ರೀಮಂತರನ್ನು ಬಿಟ್ಟರೆ ಉಳಿದೆಲ್ಲರೂ ಬಡವರು. ಆದರೆ ಅಧಿಕಾರದ ಪೀಠವನ್ನು ಏರುವುದಕ್ಕೆ ಮುಂಚೆ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿದ್ದ ಡಾ. ಸಾಲಾಝಾರರು ತನ್ನೆಲ್ಲ ಬುದ್ಧಿವಂತಿಕೆಯನ್ನುಪಯೋಗಿಸಿ, ಆರ್ಥಿಕ ಸಮತೋಲವನ್ನು ಕಾಯ್ದುಕೊಳ್ಳಲು ಪ್ರಾಮಾಣಿಕವಾಗಿ ಹೆಣಗಿದ್ದಾರೆ. ೧೯೩೮-೩೯ರಲ್ಲಿ ಮುದ್ರಿಸಲ್ಪಟ್ಟ ಬೆಲೆಗಳ ಪಟ್ಟಿಯನ್ನು ಇಂದಿಗೂ ಉಪಯೋಗಿಸುವಷ್ಟು ಭದ್ರವಾದ ಬೇರೊಂದು ರಾಷ್ಟ್ರ ಯುರೋಪಿನಲ್ಲಿ ಮಾತ್ರವಲ್ಲ—ಜಗತ್ತಿನ ಯಾವ ಭಾಗದಲ್ಲೂ ನೋಡ ಸಿಗಲಾರದು.

ಪ್ರಜಾಸತ್ತಾತ್ಮಕ ಮಾರ್ಗವನ್ನು ಅನುಸರಿಸಿಯಾಗಲಿ, ಘೋಷಣೆ ಮತ್ತು ಪಲ್ಲವಿಗಳ ಬಲದಿಂದಲಾಗಲಿ ಈ ಭದ್ರತೆಯನ್ನು ಸಾಲಾಝಾರರು ಸ್ಥಾಪಿಸಲಿಲ್ಲ-ತನ್ನ ಮೂವರು ಸಹೋದ್ಯೋಗಿಗಳನ್ನು ಬಿಟ್ಟರೆ, ಬೇರೆ ಯಾರ ಮುಂದೆಯೂ ಇವರು ಕಾಣಿಸಿಕೊಳ್ಳುವುದು ಅಪೂರ್ವ. ಉಗ್ರ ಸಂಯಮದಿಂದ ನಡೆದುಕೊಳ್ಳುವ ತಪಸ್ವಿಯಂತೆ ಇವರಿದ್ದಾರೆಂದು ಎಂದಾದರೊಮ್ಮೆ ಇವರ ದರ್ಶನ ಲಾಭ ಪಡೆದ ಮುತ್ಸದ್ಧಿಗಳು ಹೇಳುತ್ತಾರೆ. ೧೮೮೯ರಲ್ಲಿ ಹುಟ್ಟಿದ ಇವರು ತನ್ನ ಮುಖದಲ್ಲಿ ವಯಸ್ಸಿನ ಆಘಾತವಾಗಿರುವುದನ್ನು ತಪ್ಪಿಸಲು ಪ್ರಯತ್ನಿಸುವುದಿಲ್ಲ: ಜನರನ್ನು ಸುಖಿಯಾಗಿಡಲು ತಾವಿನ್ನೂ ಕೆಲವು ದಶಕಗಳು ಬಾಳಿಯೇನೆಂದು ಅವರ ಭಾವನೆ ಇದ್ದಂತೆ ತೋರುತ್ತದೆ.

ಸಾಲಾಝಾರರು ರಾಜಕೀಯ ರಂಗದಿಂದ ವಿಮುಖರಾಗಬೇಕೆಂದು ಜನರು ಅಪೇಕ್ಷಿಸುವುದಿಲ್ಲ — ಬಡತನ ತಮ್ಮನ್ನು ಪೀಡಿಸುತ್ತಿರುವುದನ್ನು ಜನರು ಅಲ್ಲಗಳೆವುದಿಲ್ಲ. ಆದರೆ ಸಾಲಾಝಾರರಿಲ್ಲದೆ ದಿನಗಳೆಯಲು ಸಾಧ್ಯವೆ ಎಂದವರು ಯೋಚಿಸುತ್ತಾರೆ. ನೂರು ವರ್ಷಗಳ ದುರಾಡಳಿತದ ಬಳಿಕ ಸಾಲಾಝಾರರ ಎರಡು ದಶಕಗಳ ಸರ್ವಾಧಿಕಾರವೇ ಪೋರ್ಚುಗಾಲದ ನಾಗರಿಕರಿಗೆ ಶಾಂತಿಯ ಸುಖವನ್ನು ಕೊಟ್ಟಿತು. ಹೊಟ್ಟೆಪಾಡಿಗೆ ದುಡಿಯಬೇಕಿದ್ದರೂ ಆಂತರಿಕ ಕಲಹಗಳು ಕ್ರೂರವಾಗಿ ಹತ್ತಿಕ್ಕಲ್ಪಟ್ಟವು.

ವ್ಯಾಪಾರೋದ್ಯಮ ಬೆಳೆಯುವುದಿಲ್ಲ-ಆದರೆ ಶ್ರೀಮಂತರ ವಿಲಾಸ ಅಧಿಕವಾಗು

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: **UDIPI**, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

UDIPI, S. India.

ಆಗ್ನೇಯ ಏಶ್ಯಾದ ಸಂರಕ್ಷಣಾ ಒಪ್ಪಂದ

ಮಹಾರಾಷ್ಟ್ರಗಳ ವಿಚಾರಕ್ಕೂ ಆಚಾರಕ್ಕೂ ಹೊಂದಿಕೆ ಇಲ್ಲದ ಹೊಯ್ದಾಟ

ನಮ್ಮ ಧ್ಯೇಯವು ಎಷ್ಟು ಉನ್ನತವಿದೆಯೋ ಅದನ್ನು ಸಾಧಿಸುವ ವಿಧಾನವೂ ಅಷ್ಟೇ ಪವಿತ್ರವಿರಬೇಕೆಂಬ ಪ್ರಾಚೀನ ಭಾರತೀಯ ಸುಭಾಷಿತವನ್ನು ಗಾಂಧೀಜಿಯವರು ತಮ್ಮ ಜೀವಮಾನದ ಅವಧಿಯಲ್ಲಿ ನಮಗೆ ಕಲಿಸಿಕೊಟ್ಟರು. ಹಿಂದಿನ ಕಾಲದಲ್ಲಿ ಜನರು ಹೆಚ್ಚು ಪುಸ್ತಕಗಳನ್ನು ಓದುತ್ತಿರಲಿಲ್ಲ: ಹಾಗೆ ಓದುವ ಅಗತ್ಯವೂ ಕಾಣುವುದಿಲ್ಲ ಪಶ್ಚಿಮದ ಪ್ರವೃತ್ತಿಗಳಲ್ಲಿ ಒಬ್ಬರಾದ ಎರಾಸ್ಮಾಸರ ಪುಸ್ತಕ ಭಂಡಾರದಲ್ಲಿ ಕೇವಲ ಐವತ್ತು ಗ್ರಂಥಗಳು ಮಾತ್ರವಿದ್ದರೂ ಅವರು ಶ್ರೇಷ್ಠ ತತ್ವಜ್ಞಾನಿಯೆಂದು ಹೆಸರು ಪಡೆದರು. ಇದಕ್ಕೆ ಕಾರಣ, ಅವರು ಕೆಲವು ಮೂಲಭೂತವಾದ ಅಂಶಗಳಿಗೆ ಅಂಟಿಕೊಂಡದ್ದೇ ಆಗಿದೆ. ಮನುಷ್ಯನು ಧಾರ್ಮಿಕ, ನೈತಿಕ ಅಥವಾ ಬೌದ್ಧಿಕ ನಿಯಮಗಳನ್ನೂ ಆದರ್ಶಗಳನ್ನೂ ಹಾಕಿಕೊಂಡು ಕೆಲಸಮಾಡದಿದ್ದರೆ ಸರ್ವನಾಶವಾಗುತ್ತದೆ. ತತ್ವಗಳಿಗೆ ತಿಲಾಂಜಲಿಯನ್ನಿತ್ತು ಉಚ್ಛೃಂಖಲ ವೃತ್ತಿಯನ್ನು ಪ್ರದರ್ಶಿಸುವುದರಿಂದಲೇ ಎಲ್ಲ ಅನಾಹುತಗಳೂ ಉಂಟಾಗುತ್ತವೆ. ಸಾಮಾನ್ಯ ಜನರಲ್ಲಿನ ಪ್ರಾಚೀನತತ್ವಗಳ ಕುರಿತಾದ ಅಶ್ರದ್ಧೆಯು ರಾಜಕಾರಣಿಗಳ ಬುದ್ಧಿಯಮೇಲೂ ಈಗ ದುಷ್ಪರಿಣಾಮಗಳನ್ನು ಮಾಡಿದಂತೆ ಕಾಣುತ್ತದೆ ಇದಕ್ಕೆ ತೀರ ಇತ್ತೀಚಿನ ಉದಾಹರಣೆಯಾಗಿ "ಸೀಟೊ" ಎಂದು ಹೆಸರಾದ ಆಗ್ನೇಯ ಏಶ್ಯದ ಸಂರಕ್ಷಣಾ ಒಪ್ಪಂದವನ್ನು ಕೊಡಬಹುದು.

ಸಂರಕ್ಷಣೆ ಮತ್ತು ಭದ್ರತೆಗಳ ಭರವಸೆಯನ್ನು ಕೊಡುವ ಘನವಾದ ಉದ್ದೇಶದಿಂದ ಪ್ರವರ್ತಿಸಲ್ಪಟ್ಟ ಈ ಒಪ್ಪಂದವು ಪರಿಣಾಮದಲ್ಲಿ ಅಸುರಕ್ಷಿತತೆಯನ್ನೂ ವಿವಂಚನೆಯನ್ನೂ ಮಾಡಿದೆಯೆಂಬ ನೆಹರೂರ ಅಭಿಪ್ರಾಯದಲ್ಲಿ ಸತ್ಯಾಂಶವುಂಟು. ಸಂಭಾವ್ಯ ಆಕ್ರಮಣಗಳನ್ನೂ ಶಾಂತಿಗೆ ಗಂಡಾಂತರಕಾರಿಯಾದ ಪ್ರಸಂಗಗಳನ್ನೂ ಪ್ರತಿಭಟಿಸಲು ಅವಕಾಶ ಮಾಡಿಕೊಡುವ ಈ ಒಪ್ಪಂದದಲ್ಲಿ ಹಾಸ್ಯಾಸ್ಪದವಾದ ಬೇರೆ ಸಂಗತಿಗಳೂ ಇವೆ. ಮನಿಲಾದಲ್ಲಿ ಮೂರು ದಿನ ಸಭೆ ಸೇರಿ ೮ನೇ ದಿನಾಂಕ ಅಂಕಿತ ಹಾಕಲಾದ ಈ ಒಪ್ಪಂದದಲ್ಲಿ ಏಶಿಯದ ಆಗ, ಹೋಗುಗಳ ಕುರಿತಾಗಿ ಉದ್ಭವವಾದ ಮಾತುಗಳನ್ನು ಕಾಣುತ್ತೇವೆ-- ಆದರೆ ಈ ಚರ್ಚೆಯಲ್ಲಿ ಭಾಗವಹಿಸಿ ಪ್ರಭಾವವನ್ನು ಬೀರಿದ ರಾಷ್ಟ್ರಗಳು ಪಶ್ಚಿಮದ ಫ್ರಾನ್ಸ್, ಬ್ರಿಟನ ಹಾಗು ಅಮೆರಿಕಗಳೇ ಆಗಿವೆ ಆಗ್ನೇಯ ಏಶ್ಯಾ ಮತ್ತು ನೈಋತ್ಯ ಶಾಂತಿಸಾಗರವನ್ನೊಳಗೊಂಡ ಪ್ರದೇಶವು ಈ ಒಪ್ಪಂದದ ಕಕ್ಷೆಯಲ್ಲಿ ಬರುತ್ತದೆ ಆದರೆ ೫೦ ಕೋಟಿ ನಾಗರಿಕರನ್ನೊಳಗೊಂಡ ಭಾರತ, ಸಿಂಹಳ, ಬರ್ಮ ಹಾಗು ಇಂಡೋನೇಶಿಯಗಳು ಇಂತಹ ಒಪ್ಪಂದವನ್ನು ವಿರೋಧಿಸುತ್ತಿವೆಯೆಂಬುದನ್ನು ಅಲಕ್ಷಿಸಲಾಯಿತು, ಅವುಗಳ ನಿಲುವೆಯನ್ನು ಅರ್ಥ ಮಾಡಿಕೊಳ್ಳುವ ಪ್ರಯತ್ನಕ್ಕೆ ಹೋಗದೆ ಅವಸರ ಮಾಡಲಾಯಿತು.

ಒಪ್ಪಂದ ಎಷ್ಟು ಟೊಳ್ಳಾಗಿದೆ ಮತ್ತು ಅನಿಷ್ಟಪ್ರದವಾಗಿದೆ ಎಂಬುದರ ಕಲ್ಪನೆಯನ್ನು ಅದರ ಕಲಮುಗಳ ಮೇಲಿಂದಲೇ ಮಾಡಿಕೊಳ್ಳಬಹುದು: ಹನ್ನೊಂದು ಕಲಮುಗಳಿರುವ ಈ ಒಪ್ಪಂದದಲ್ಲಿ ರಾಷ್ಟ್ರಸಂಘದ ನೇತೃತ್ವವನ್ನು ಒಪ್ಪಿಕೊಳ್ಳುವ ಪ್ರತಿಜ್ಞೆಯುಂಟು, ರಾಷ್ಟ್ರ ಸಂಘವು ಪ್ರಾದೇಶಿಕ ಸಂರಕ್ಷಣಾ ವ್ಯೂಹಗಳನ್ನು ಮನ್ನಿಸುತ್ತದೆನ್ನುವುದೇ ಇದರ ಮೂಲ. ಆದರೆ ಭಾರತ ಮತ್ತಿತರ ಮೂರು ಕೊಲೊಂಬೋ ರಾಷ್ಟ್ರಗಳು ಸೇರಿರದ ಈ ಒಪ್ಪಂದವು ನಿಜಾರ್ಥದಲ್ಲಿ ಪ್ರಾದೇಶಿಕ ಸಂರಕ್ಷಣಾ ವ್ಯವಸ್ಥೆಯಾಗಲಾರದು ಇದರಂತೆ ಒಪ್ಪಂದದ ಪ್ರದೇಶದಲ್ಲಿ ಬರುವ ವಸಾಹತುಗಳ ಪ್ರಜೆಗಳಿಗೆ ಸ್ವಯಂ ನಿರ್ಣಯಾಧಿಕಾರವಿದೆಯೆಂದೂ ಆ ಜನರು ಬಯಸಿದರೆ ಮತ್ತು ಅವರಿಗೆ ಹೊಣೆಗಳನ್ನು ಹೊರುವ ಸಾಮರ್ಥ್ಯವಿದೆಯೆಂದು ಸಿದ್ಧಗೊಂಡರೆ ಸ್ವರಾಜ್ಯವನ್ನೂ ಸ್ವತಂತ್ರ್ಯವನ್ನೂ ಕೊಡಲಾಗುವುದೆಂದೂ ಹೇಳುವ ವಾಕ್ಯ ಬಣಕವೇ ನಿಜ ತಮ್ಮನ್ನು ಆಳಿಕೊಳ್ಳಲು ವಸಾಹತುಗಳ ಜನರಿಗೆ ಶಕ್ತಿ ಇಲ್ಲವೆಂಬ ಸಾಮ್ರಾಜ್ಯಶಾಹಿ ರಾಷ್ಟ್ರಗಳ ವಾದವು ಈ ಕಾಲದಲ್ಲಿ ಅಸಂಬದ್ಧವಾದುದೆಂದು ರಾಷ್ಟ್ರ ಸಂಘದ ತಾಮ್ರ ಪಟದ ತತ್ವಗಳೇ ಧ್ವನಿಸುತ್ತವೆ

ಆರ್ಥಿಕ ವಿಕಾಸ ಕಾರ್ಯಕ್ರಮಗಳ ಪ್ರಸ್ತಾಪವು ಮೂಗಿಗೆ ಹಚ್ಚಿದ ತುಪ್ಪಕ್ಕಿಂತ ಹೆಚ್ಚು ಆಕರ್ಷಕವಾಗಿಲ್ಲ, ಏಕೆಂದರೆ ಈ ಪ್ರಶ್ನೆಗೆ ಸೈನಿಕ ಉದ್ದೇಶಗಳಿಗೆ ನೀಡಿದಷ್ಟು ಪ್ರಾಮುಖ್ಯತೆಯನ್ನು ಕೊಟ್ಟಂತೆ ಕಾಣುವುದಿಲ್ಲ. ಒಪ್ಪಂದಕ್ಕೆ ಸಹಿ ಹಾಕಿದ ಎಂಟು ರಾಷ್ಟ್ರಗಳು ಸೈನಿಕ ಉದ್ದೇಶಕ್ಕೆಯೇ ಮಹತ್ವ ಕೊಟ್ಟಿವೆಯೆಂಬುದನ್ನು ನಾಲ್ಕನೇ ಕಲಮು ಸ್ಪಷ್ಟವಾಗಿ ವ್ಯಕ್ತಗೊಳಿಸುತ್ತದೆ. ಇದರನ್ವಯ ಇನ್ನು ಮುಂದೆ ಈ ಒಪ್ಪಂದದ ಪ್ರದೇಶದಲ್ಲಿ ಎಲ್ಲಿಯೇ ಆಗಲಿ ಸಶಸ್ತ್ರ ಆಕ್ರಮಣವಾದರೆ, ಅದನ್ನು ಒಪ್ಪಂದಕ್ಕೆ ಅಂಕಿತ ಹಾಕಿದ ರಾಷ್ಟ್ರಗಳು ಸಾಮೂಹಿಕವಾಗಿ ಪ್ರತಿಭಟಿಸಲು ಘಟನಾತ್ಮಕ ಕ್ರಮಗಳನ್ನು ಕೈಗೊಳ್ಳುತ್ತವೆ, ಅಲ್ಲದೆ ಈ ಪ್ರದೇಶದ ಶಾಂತಿಗೆ ಭಂಗವೊದಗುವಂತೆ, ಸ್ವಾತಂತ್ರ್ಯಕ್ಕೂ ರಾಜಕೀಯ ಸಾರ್ವಭೌಮತೆಗೂ ಪ್ರಾದೇಶಿಕ ಐಕ್ಯಕ್ಕೂ ಕುಂದಾಗುವಂತೆ, ಬೇರೆ ಯಾವುದೇ ಪ್ರಕಾರದ ಘಟನೆಗಳು ಸಂಭವಿಸಿದರೂ ಈ ವಲಯದ ಶಾಂತಿ ರಕ್ಷಣೆಗಾಗಿ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು ಕ್ರಮಗಳನ್ನು ಯೋಜಿಸುತ್ತವೆ. ಒಪ್ಪಂದಕ್ಕೆ ಸಹಿ ಹಾಕದ ರಾಷ್ಟ್ರಗಳ ರಕ್ಷಣೆಗಾಗಿ ಧಾವಿಸುವ ಈ ಮನೋಭಾವವು ಸೈನಿಕ ಕಾರ್ಯಾಚರಣೆಯ ಮಟ್ಟಿಗೆ "ಅಪಾಯಕ್ಕೆ ಗುರಿಯಾದ ರಾಷ್ಟ್ರದ ವಿನಂತಿ ಬರಬೇಕು' ಎಂಬ ನಿರ್ಬಂಧಕ್ಕೆ ಒಳಗಾಗಿರುವುದು.

ಇದರಿಂದ ನಾವೇನೂ ಸಮಾಧಾನ ಪಟ್ಟುಕೊಳ್ಳುವಂತಿಲ್ಲ. ಸಶಸ್ತ್ರ ಆಕ್ರಮಣವಲ್ಲದೆಯೂ ಅನೇಕ ಘಟನೆಗಳು ಈ ಪ್ರದೇಶಕ್ಕೆ ಸೇರಿದ-ಆದರೆ ಒಪ್ಪಂದಕ್ಕೆ ಸಹಿಯನ್ನು ಹಾಕದ—ರಾಷ್ಟ್ರಗಳಲ್ಲಿ ನಡೆದೇ ನಡೆಯುತ್ತವೆ ಇವುಗಳಲ್ಲಿ ಯಾವುದಾದರೂ ಒಂದು ಘಟನೆಯು ಒಪ್ಪಂದಕ್ಕೆ ಸಹಿಹಾಕಿದ ರಾಷ್ಟ್ರಗಳಲ್ಲಿ ಒಂದಕ್ಕೆ "ಶಾಂತಿಗೆ ಅಪಾಯಕರ"ವೆಂದು ಕಂಡರೆ ಸಾಕು, ಒಪ್ಪಂದದನ್ವಯ ಈ "ಗಂಡಾಂತರ'ವನ್ನು ದೂರೀಕರಿಸುವ ಉಪಾಯಗಳನ್ನು ಯೋಜಿಸಲಾಗುತ್ತದೆ ತತ್ಪರಿಣಾಮವಾಗಿ, ಭಾರತದಂತಹ ತಟಸ್ಥ ರಾಷ್ಟ್ರದ ಆಂತರಿಕ ವ್ಯವಹಾರಗಳಲ್ಲೂ ಒಪ್ಪಂದಕ್ಕೆ ಸಹಿ ಹಾಕಿದ ರಾಷ್ಟ್ರಗಳು ಕೈಹಾಕಲು ಎಡೆಸಿಗಬಹುದು. ನೆಹರೂರ ಧೋರಣೆಯು ಅಮೇರಿಕದ ಮನಸ್ಸಿಗೆ ಸರಿಬರುವುದಿಲ್ಲವಾದರೆ, ಇದು ಕಮ್ಯೂನಿಸ್ಟರ ಪರವಾದ ನಿಲುವೆಯೆಂದೂ ಶಾಂತಿಗೆ ಅಪಾಯಕರವಾದುದೆಂದೂ ಅಭಿಪ್ರಾಯವನ್ನು ವ್ಯಕ್ತಗೊಳಿಸಿ ಒಪ್ಪಂದದ ಇತರ ರಾಷ್ಟ್ರಗಳನ್ನು ಇದಕ್ಕೆ ಸೈಗುಟ್ಟುವಂತೆ ಮಾಡಿ, ಅಮೇರಿಕವು ಹೆಜ್ಜೆ ಮುಂದಿಡಬಹುದು. ನಾವಾಗಲೀ ಬೇರೆ ಯಾರೇ ಆಗಲೀ ಇಂತಹ ಪರಿಸ್ಥಿತಿಯನ್ನು ಸ್ವಾಗತಿಸುವುದು ಅಥವಾ ಸಹಿಸುವುದು ಸಾಧ್ಯವೆ' ಎಂಬುದು ಇಲ್ಲಿ ವಿಚಾರಣೀಯವಾದ ಅಂಶ.

ಇಷ್ಟು ದೂರ ಹೋಗಬೇಕಾದ ಆವಶ್ಯಕತೆಯೂ ಇಲ್ಲ—ಸನಿಹದ ಉದಾಹರಣೆಗಳೇ ಒಪ್ಪಂದದ ಅನರ್ಥ ಪರಿಣಾಮಗಳನ್ನು ಸೂಚಿಸುತ್ತವೆ. ಕಾಶ್ಮೀರ ಪ್ರಶ್ನೆಯನ್ನು ಪಾಕಿಸ್ತಾನವು ಶಾಂತಿ ಮತ್ತು ಭದ್ರತೆಯ ಹೆಸರಿನಲ್ಲಿ ಮರಳಿ ಕೆದಕಬಹುದು, ಪೂರ್ವ ಬಂಗಾಲದಲ್ಲಿ ಪ್ರಜಾಸತ್ತಾತ್ಮಕ ತತ್ವಗಳಿಗೆ ಅನುಸಾರವಾಗಿ ನಡೆದ ಚುನಾವಣೆಗಳನ್ನೂ ಅಧಿಕಾರಕ್ಕೆ ಬಂದ ಸರಕಾರವನ್ನೂ ಹತ್ತಿಕ್ಕಿದ ಮಹಮ್ಮದಾಲಿಯವರ ಸರಕಾರ ದೇಶದೊಳಗೆ ಆಫಗಿಸ್ತಾನದಲ್ಲಿನ ಯಾವುದೇ ಘಟನೆ ನಡೆದರೂ ಅದನ್ನು ಶಾಂತಿಗೆ ಅಪಾಯಕರವೆಂದು ಸಾರಿ, ತನ್ನ ಸ್ಥಾನವನ್ನು ಸ್ಥಿರವಾಗಿ ಬದ್ರಪಡಿಸಿಕೊಳ್ಳಬಹುದು. ಗೋವೆಯ ಆಂದೋಲನವು ನ್ಯಾಟೋ ಸಂಸ್ಥೆಯ ಕಕ್ಷೆಯಲ್ಲಿ ವಿಚಾರಣೀಯವಾದ ಅಂಶವಾಗುತ್ತದೆಂದು ಪಶ್ಚಿಮದ ಪ್ರವೃತ್ತಿಗಳು ಹೇಳುತ್ತಿರುವುದನ್ನು ನೋಡಿದರೆ, ಮತ್ತು ಗಾಟಿಮಾಲಾದಲ್ಲಿ ಅಮೇ

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೇಜ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ ಬೆಲೆ: ಕಾಲು ತೊಲೆಗೆ ರೂ. 8—0—0

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ, ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುಗಳಿಗೆ ಅತ್ಯಂತ ಪರಿಣಾಮಕಾರಿ
ಬೆಲೆ 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ ಕ ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು
ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Naniappa Naicken Street, P. T.-MADRAS-3.

ದಿ ಸಿಟಿ ಟೈಪ್ ಫೌಂಡರಿ
ಚಿಕ್ಕಪೇಟೆ, ಬೆಂಗಳೂರು ಸಿಟಿ.
* * * * *
ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಷಿನ್‌ಗಳೂ, ಪಾಲ್ಟುಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.
ವಿವರಗಳಿಗೆ ಇಂದೇ ಬರೆಯಿರಿ.
THE CITY TYPE FOUNDRY.
CHICKPET, BANGALORE CITY.

ರಿಕ ನಡೆಸಿದ ಕೈವಾಡದ ರಹಸ್ಯವನ್ನು ವಿಶ್ಲೇಷಿಸಿದರೆ ಪ್ರಾದೇಶಿಕ ಸಂರಕ್ಷಣಾ ವ್ಯವಸ್ಥೆಯ ಹೆಸರಿನಲ್ಲಿ ಮಾಡಿಕೊಂಡ ಈ ಒಪ್ಪಂದವು ಈ ಪ್ರದೇಶದ ಅಭಿವೃದ್ಧಿಗೂ ವಿಕಾಸಕ್ಕೂ ಆತಂಕಪ್ರಾಯವಾಗಿದೆ ಯೆಂದು ಖಚಿತವಾಗುತ್ತದೆ.

ಇತರ ದೇಶಗಳ ಮೇಲೆ ತಮ್ಮ ಅಭಿಪ್ರಾಯವನ್ನು ಹೇರಲು ಹೊರಡುವ ಅಮೇರಿಕ ಮತ್ತಿತರ ರಾಷ್ಟ್ರಗಳು ಸಂರಕ್ಷಣೆಯ ಹೆಸರಿನಲ್ಲಿ ವಿಪತ್ಪರಂಪರೆಗಳನ್ನೆ ತರುತ್ತವೆ. ಶಾಂತಿಯ ಕುರಿತು ಆತುರವನ್ನು ತೋರಿಸುವ ಈ ರಾಷ್ಟ್ರಗಳು ಈಗ ಮಾಡಿದ್ದೇನು! ಫ್ರಾನ್ಸಿನ ವರ್ಚಸ್ಸಿಗೆ ಬಿದ್ದಿರುವ ಇಂಡೋ ಚೀನದ ಮೂರು ಆಶ್ರಿತ ರಾಜ್ಯಗಳಾದ ಲಾವೋಸ್, ಕಂಬೋಡಿಯಾ ಮತ್ತು ವೀಟನಾಮುಗಳಿಗೂ ಒಪ್ಪಂದವು ಅನ್ವಯಿಸುತ್ತದೆಂದೂ ಅವುಗಳ ರಕ್ಷಣಾ ಭಾರವನ್ನು ತಮ್ಮ ಮೇಲೆ ತೆಗೆದುಕೊಳ್ಳಲಾಗುವುದೆಂದೂ ನಿರ್ಣಯಿಸಿ, ಜಿನೇವಾ ಒಡಂಬಡಿಕೆಯ ಆಶಯಕ್ಕೆ ವಿರುದ್ಧವಾದ ರೀತಿಯಲ್ಲಿ ನಡೆದುಕೊಂಡಿವೆ ಜಿನೇವಾ ಒಡಂಬಡಿಕೆಯನ್ನು ಸಾಧಿಸುವಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದ ಮತ್ತು ಅದರ ಕಾರ್ಯಾಚರಣೆಗೆ ಹೊಣೆಯಾಗಿರುವ, ಬ್ರಿಟನು ಹಾಗು ಫ್ರಾನ್ಸುಗಳೇ ಹೀಗೆ ಘಾತಕವಾದ ರೀತಿಯಲ್ಲಿ ವರ್ತಿಸುವುದು ಆಶ್ಚರ್ಯದ ವಿಷಯ. ಇದನ್ನು ಕಮ್ಯುನಿಸ್ಟ ರಾಷ್ಟ್ರಗಳು ತೀವ್ರವಾಗಿ ನಿಷೇಧಿಸಿದ್ದು ಪರಿಣಾಮವಲ್ಲಿ ಇಂಡೋಚೀನದಲ್ಲಿ ಬಹಳ ಪ್ರಯತ್ನಪಟ್ಟು ಸ್ಥಾಪಿಸಿದ ಶಾಂತಿಯು ಹೆಚ್ಚು ಸಮಯ ಉಳಿಯದೆ, ಮರಳಿ ಯುದ್ಧದ ಜ್ವಾಲೆ ಹೊತ್ತಿ ಕೊಳ್ಳುವ ಸಂಭವ ಕಾಣಿಸುತ್ತದೆ. ಇದಕ್ಕಾಗಿಯೇ ಶಾಂತಿಯ ಸೋಗಿನಲ್ಲಿ ಯುದ್ಧಕ್ಕೆ ಪ್ರಚೋದನೆ ಕೊಡುವ ಈ ಹವ್ಯಾಸವನ್ನು ಶಾಂತಿ ಪ್ರಿಯ ರಾಷ್ಟ್ರಗಳು ಖಂಡಿಸುತ್ತವೆ.

ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳ ಸಾಮೂಹಿಕ ಪ್ರತಿಭಟನಾ ಶಕ್ತಿಯೂ ಅನಿಶ್ಚಿತವಿದೆಯೆಂದು ಹೇಳಿದರೆ ತಪ್ಪಾಗದು. ಇಂಡೋ ಚೀನದಲ್ಲಿ ಏಳೂವರೆ ವರ್ಷಗಳಲ್ಲಿ ಕದನನಡೆದಾಗ ಫ್ರೆಂಚರಿಗೆ ಅಮೇರಿಕದಿಂದ ದೊರೆತದ್ದು ವೈಮಾನಿಕ ಸಹಾಯ ಮಾತ್ರ; ಬ್ರಿಟನು ಮತ್ತಿತರ ರಾಷ್ಟ್ರಗಳು ಯಾವ ನೆರವನ್ನೂ ಪ್ರತ್ಯಕ್ಷವಾಗಿ ಕೊಡಲಿಲ್ಲ. ಕೊರಿಯದಲ್ಲಿ ಸಹ ಅಮೇರಿಕದ ಪಾತ್ರವೇ ದೊಡ್ಡದು—ಉತ್ತರ ಅಟ್ಲಾಂಟಿಕ ಒಪ್ಪಂದದಲ್ಲೂ ಇದೇ ಅಂಶ ಒಡೆದು ಕಾಣುತ್ತದೆ. ಎಂದ ಮೇಲೆ, ಪಶ್ಚಿಮಾರ್ಧಗೋಲದಲ್ಲಿರುವ ಅಮೇರಿಕ ತಮ್ಮ ಸಹಾಯಕ್ಕೆ ಇದೆಯೆಂದು ನಂಬಿಕೊಂಡು ಒಪ್ಪಂದಕ್ಕೆ ಸಹಿ ಹಾಕಿದ ಏಶ್ಯಾದ ರಾಷ್ಟ್ರಗಳು ಕುಳಿತಿರುವ ಪ್ರಸಂಗ ಬರುತ್ತದೆ. ಇಂಥ ಪರಿಸ್ಥಿತಿಯಲ್ಲಿ, ಪ್ರತಿಭಟನಾ ಸಾಮರ್ಥ್ಯವನ್ನು ಪ್ರದರ್ಶಿಸಿ ಯುದ್ಧವನ್ನು ನಿಲ್ಲಿಸುವುದೇ ಸಾಧ್ಯವಾಗದು: ಕೊರಿಯಾ, ಇಂಡೋಚೀನಗಳಲ್ಲಿ ಮಾಡಿದಂತೆ, ಭಾರತದಂತಹ ಉದಾತ್ತ ಮನೋಭಾವದ ರಾಷ್ಟ್ರದ ಸಹಾಯ ಪಡೆದು ಸಂಧಾನ ಮಾರ್ಗದಿಂದಲೇ ಶಾಂತಿಯನ್ನು ನೆಲೆಗೊಳಿಸಬೇಕಾದೀತು. ಕೈಸುಟ್ಟುಕೊಂಡ ಅನುಭವವಿದ್ದೂ ಬೆಂಕಿಯೊಡನೆ ಆಟವಾಡುವ ಅಮೇರಿಕದ ಧೋರಣೆಯೇ ಈಗಿನ ಅಪಾಯವೆಂಬುದನ್ನು ಇದು ತೋರಿಸುತ್ತದೆ. ನೆಹರೂರವರು "ದ್ವಿಮುಖ ವಿಚಾರ ಪ್ರಣಾಳಿ" ಎಂದು ಹೇಳಿದ್ದಾದರೂ ಇದನ್ನೆ—ಪ್ರಮುಖ ರಾಷ್ಟ್ರಗಳ ಆಚಾರ ವಿಚಾರಗಳಲ್ಲಿ ತಾಳ ಮೇಳವಿಲ್ಲವೆಂಬುದೇ ಇದರ ಅರ್ಥ.

ಶಾಂತಿಯನ್ನು ಬಯಸುವವರು ಇಂತಹ ತೊಡಕುಗಳಿಗೆಅವಕಾಶಕೊಡಲಾರರು —"ನಿಮ್ಮ ಸಹಾಯ ನಮಗೆ ಬೇಡ" ಎಂದು ಹೇಳುತ್ತಿದ್ದರೂ "ನಿಮ್ಮ ರಕ್ಷಣೆ ನಮ್ಮ ಕರ್ತವ್ಯ; ನೀವು ಬೇಡವೆಂದರೆ ನಾವು ಕೇಳುವಂತಿಲ್ಲ" ಎನ್ನುವ ಪಶ್ಚಿಮದ ರಾಷ್ಟ್ರಗಳ ಮತ್ತು ಅವುಗಳ ಹಿಂಬಾಲಕರ ದೆಸೆಯಿಂದ ಕ್ಷೇಮದಿಂದ ಇರುವುದು ನಮಗೆ ಕಷ್ಟವೇ ಆಗಿದೆ. ಈ ರಕ್ಷಕರಿಂದ ನಮ್ಮನ್ನು ರಕ್ಷಿಸಿಕೊಳ್ಳುವುದೆಂತೋ—ಹೇಳಲು ಬಾರದು. ಕೆಲವೇ ಜಗಳಗಂಟ ರಾಷ್ಟ್ರಗಳ ನೇತೃತ್ವದಲ್ಲಿ ನಡೆಯುವ ಪ್ರಾದೇಶಿಕ ಸಂರಕ್ಷಣಾ ವ್ಯವಸ್ಥೆಗಳಿಂದ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳಿಗೂ ಸುಖವಿಲ್ಲ: ಏಕೆಂದರೆ, ಸಂಕೋಲೆಯ ಗೊಣಸಿನಂತೆ ಪ್ರತಿಯೊಂದು ರಾಷ್ಟ್ರವೂ ಒಂದು ಇನ್ನೊಂದರ ಬಾಲ ಹಿಡಿದು ಸಾಗುತ್ತಾ ಪ್ರತಿಯೊಂದೂ ರಾಷ್ಟ್ರದ ವ್ಯವಹಾರದಲ್ಲಿ ತನ್ನ ಕೈವಾಡವನ್ನು ತೋರಿಸುತ್ತಾ, ಸೈನ್ಯ ಸಹಾಯವನ್ನೊದಗಿಸುತ್ತಾ ದಿನಗಳೆಯಬೇಕಾಗುತ್ತದೆ. ಅಮೇರಿಕದ್ದೇ ಪತ್ರಿಕೆಯೊಂದು ಹೇಳಿದಂತೆ, ಪ್ರತಿಯೊಂದೂ ಕಲಹದಲ್ಲಿ ಪ್ರವೇಶಿಸಲು ಆತುರಗೊಂಡ ಡಲ್ಲೆಸರ ಬೆನ್ನು ಚಪ್ಪರಿಸುವ ಕೆಲಸವನ್ನು ಇಂಥ ಒಪ್ಪಂದಕ್ಕೆ ಸೇರಿದ ರಾಷ್ಟ್ರಗಳು ಮಾಡಬೇಕಾಗುತ್ತದೆ. ಆಗ "ಶಾಂತಿ" ಮಾತಿನಲ್ಲಿಯಷ್ಟೇ ಉಳಿದೀತು; ಕೃತಿಯಲ್ಲಿ ವ್ಯಕ್ತಗೊಳ್ಳಲಾರದು.

ಅತಿರೇಕವಾದಿಗಳಿಗೆ ಸಂಯಮದ ಉಪದೇಶ

ಕರ್ನಾಟಕ ಏಕೀಕರಣ : ಹಿಂದಿ ಭಾಷೆಯ ಮೋಹ

ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ವಿಚಾರಿಸುತ್ತಿರುವ ಫಜಲ ಅಲಿ ಆಯೋಗದ ಇಬ್ಬರು ಸದಸ್ಯರಾದ ಸರದಾರ ಪಣಿಕ್ಕರ ಹಾಗು ಪಂಡಿತ ಕುಂಝ್ರುರೂರವರು ಕಳೆದ ವಾರ ಬಳ್ಳಾರಿ, ಹೊಸಪೇಟೆ, ಗುಂಟೂರು ಮುಂತಾದಪ್ರದೇಶಗಳಿಗೆ ಭೇಟಿಯನ್ನಿತ್ತು, ಮನವಿಗಳನ್ನು ಕೇಳಿಕೊಂಡರು. ನ್ಯಾಯಮೂರ್ತಿ ಮಿಶ್ರಾರ ವರದಿಯಂತೆ ಒಮ್ಮೆ ತೀರ್ಮಾನವಾದ ಬಳ್ಳಾರಿಯ ಪ್ರಶ್ನೆಯನ್ನು ಈಗ ಪುನಃ ಎತ್ತುವ ಕುತೂಹಲವನ್ನು ಆಂಧ್ರದ ರಾಜಕಾರಣಿಗಳು ತೋರಿಸಿದ್ದರಿಂದ, ಕನ್ನಡಿಗರ ಪಕ್ಷವನ್ನು ಮರಳಿ ಸಮರ್ಥಿಸಿಕೊಳ್ಳುವುದು ಅನಿವಾರ್ಯವಾಯಿತು. ಅಸಂದಿಗ್ಧವಾಗಿ ತೆಲುಗು ಮಾತನಾಡುವ ಪ್ರದೇಶಗಳಿಂದಲೇ ಆಂಧ್ರ ರಾಜ್ಯವನ್ನು ರಚಿಸಲಾಗುವುದೆಂದು ಹೇಳಿದ್ದ ಪ್ರಧಾನ ಮಂತ್ರಿಗಳು, ಬಳ್ಳಾರಿ ಜಿಲ್ಲೆಯನ್ನು ವಿಭಜಿಸಿ, ವಿವಾದಗ್ರಸ್ತವಾದ ಮೂರು ತಾಲೂಕುಗಳನ್ನು ಆಂಧ್ರಕ್ಕೆ ಸೇರಿಸಿದ ವಿಷಯದಲ್ಲಿ ಆಯೋಗದ ಮುಂದೆ ಅಭಿಪ್ರಾಯವನ್ನು ವ್ಯಕ್ತಪಡಿಸಲೂ ಕನ್ನಡಿಗರು ಈ ಸಂದರ್ಭವನ್ನು ಉಪಯೋಗಿಸಿಕೊಂಡರು.

ಬಳ್ಳಾರಿಯ ಪ್ರಶ್ನೆ

ಹೆಚ್ಚು ಕಡಿಮೆ ಇದೇ ಹೊತ್ತಿಗೆ ಮೈಸೂರಿನ ಶಾಸನ ಸಭೆಯ ಕಾಂಗ್ರೆಸು ಸದಸ್ಯರ ಅಧಿವೇಶನವೊಂದು ಹೊಸಪೇಟೆಯಲ್ಲಿ ನಡೆಯಿತು. ಅರೆವಾಸಿಗಿಂತ ಹೆಚ್ಚು ಮಂದಿ ಇದರಲ್ಲಿ ಭಾಗವಹಿಸಲಿಲ್ಲ —ಮುಖ್ಯವಾಗಿ ಮೈಸೂರಿನ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ವೀರಣ್ಣ ಗೌಡರ ಗುಂಪು ದೂರವೇ ಉಳಿಯಿತು. ಪಕ್ಷದ ಈ ಸಭೆಯಲ್ಲಿ ಬಳ್ಳಾರಿ ತಾಲೂಕನ್ನು ಮೈಸೂರಿನಲ್ಲಿಯೇ ಉಳಿಸಿಕೊಳ್ಳಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಆಂಧ್ರಕ್ಕೆ ಸೇರಿಸಲಾಗಿರುವ ಬಳ್ಳಾರಿಯ ಮೂರು ತಾಲೂಕುಗಳೂ ಮೈಸೂರಿನೊಡನೆ ಹೊಂದಿಕೊಳ್ಳುವಂತೆ ಪ್ರಯತ್ನ ನಡೆಸಬೇಕೆಂದೂ ಗೊತ್ತುವಳಿ ಸ್ವೀಕರಿಸಲ್ಪಟ್ಟಿತು.

ಪತ್ರಿಕಾ ಪರಿಷತ್ತೊಂದು ಈ ಸಂದರ್ಭದಲ್ಲಿ ಜರಗಿದಾಗ ಮುಖ್ಯ ಮಂತ್ರಿ ಹನುಮಂತಯ್ಯನವರು ಬಳ್ಳಾರಿಯ ಪ್ರಶ್ನೆಯನ್ನು ಆಯೋಗವು ತಿರುಗಿ ಎತ್ತಿದರೆ ನೆಟ್ಟಗಾಗಲಿಕ್ಕಿಲ್ಲವೆಂದು ಎಚ್ಚರಿಕೆಯನ್ನು ಕೊಟ್ಟರು. ಗೃಹ ಮಂತ್ರಿಗಳೂ ಪ್ರಧಾನ ಮಂತ್ರಿಗಳೂ ಸಂಸತ್ತಿನಲ್ಲಿ ಆಂಧ್ರ ರಾಜ್ಯ ವಿಧೇಯಕದ ಚರ್ಚೆ ನಡೆದಿದ್ದ ಕಾಲದಲ್ಲಿ ಕೊಟ್ಟ ಹೇಳಿಕೆಗಳನ್ನೇ ಹನುಮಂತಯ್ಯನವರ ನಿಶ್ಚಿತ ಅಭಿಪ್ರಾಯ ಅವಲಂಬಿಸಿದೆಯೆಂಬುದು ಸ್ಪಷ್ಟ. ಹೀಗಿದ್ದರೂ ಆಯೋಗವು ಅಗತ್ಯ ಕಂಡರೆ, ಬಳ್ಳಾರಿಯ ಪ್ರಶ್ನೆಯನ್ನು ಎತ್ತುವ ಹಕ್ಕು ಪಡೆದಿದೆಯೆಂದು ಪಂಡಿತ ಕುಂಝ್ರುರೂರವರು ಹನುಮಂತಯ್ಯನವರ "ಎಚ್ಚರಿಕೆ"ಗೆ ಉತ್ತರ ರೂಪದಲ್ಲಿ ಹೇಳಿದರು. ಆದರೆ ಕನ್ನಡಿಗರ ಮನಸ್ಸಿಗೆ ಕುಂಝ್ರುರೂರವರು ಆಂಧ್ರಕ್ಕೆ ಸೇರಿಸಲಾಗಿರುವ ಬಳ್ಳಾರಿಯ ವಿವಾದಗ್ರಸ್ತ ತಾಲೂಕುಗಳ ಕುರಿತು ಏನೂ ಹೇಳದೆ, ಮೈಸೂರಿನೊಂದಿಗೆ ಸೇರಿರುವ ಬಳ್ಳಾರಿಯ ವಿಷಯವನ್ನಷ್ಟೆ ಪ್ರಸ್ತಾಪಿಸಿದ್ದು ಸರಿಕಾಣುವುದಿಲ್ಲ. . ಇದು ಹೇಗೇ ಇರಲಿ—ಆಯೋಗದ ಮುಂದೆ ಕನ್ನಡಿಗರ ಪಕ್ಷವನ್ನು ಬಲವಾಗಿಯೇ ಮಂಡಿಸಲಾಗಿದೆಯೆಂದು ವರದಿಗಳು ಹೇಳುತ್ತವೆ.

ಮುನ್ನೋಟದ ಅಗತ್ಯ

ಬಳ್ಳಾರಿಯನ್ನು ಉಳಿಸಿಕೊಳ್ಳುವ ಬಗ್ಗೆ ಪ್ರಯತ್ನ ನಡೆಯುತಿದ್ದ ಹಾಗೆಯೇ ಕರ್ನಾಟಕ ಏಕೀಕರಣದ ಕುರಿತಾಗಿ ಹನುಮಂತಯ್ಯನವರು ದೀರ್ಘವಾದ ಹೇಳಿಕೆಗಳನ್ನೂ ಕೊಟ್ಟರು: ಹೊಸಪೇಟೆಯ ಸಭೆಯೊಂದರಲ್ಲಿ ಅವರು ಏಕೀಕರಣದ ದಿಸೆಯಲ್ಲಿ ಪ್ರಯತ್ನಿಸುವ ಮುಂದಾಳುಗಳು ಭಿನ್ನಾಭಿಪ್ರಾಯವಿದ್ದವರನ್ನು ಲಘುವಾಗಿ ಹೀಯಾಳಿಸದೆ, ಪ್ರಚೋದನಾತ್ಮಕವಾಗಿ ಟೀಕೆ ಮಾಡದೆ, ಅವರ ಮನವೊಲಿಸಿ ಪ್ರೇಮದಿಂದ ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳಲು ಪ್ರಯತ್ನಿಸಬೇಕೆಂದು ಹೇಳಿದರು. ಕನ್ನಡಿಗರ ಹೃದಯಗಳು ಐಕ್ಯಹೊಂದದೆ ಏಕೀಕರಣವನ್ನು ಸಾಧಿಸಲಾರೆವೆಂದೂ ಅವರು ಅಭಿಪ್ರಾಯಪಟ್ಟರು. ಇಷ್ಟು ಘನವಾದ ಉದ್ದೇಶಕ್ಕಾಗಿ ಶ್ರಮಿಸುವವರಲ್ಲಿ ರಾಜಕೀಯ ಮುಂದಾಳುತನವೂ ಮುನ್ನೋಟವೂ ಸಹನೆಯೂ ಕಂಡು ಬರುತ್ತಿಲ್ಲವೆಂದು ಅವರು ವಿಷಾದಿಸಿದರು.

ಹನುಮಂತಯ್ಯನವರು ಮುಂಬಯಿಗೆ ಕಳೆದ ವಾರ ಭೇಟಿ ಕೊಟ್ಟಾಗ ಅಲ್ಲಿಯೂ ಏಕೀಕರಣವಾದಿಗಳು ಸಂಯಮಿಗಳಾಗಬೇಕೆಂದು ಉಪದೇಶಿಸಿದರು. ಮೈಸೂರಿನ ವೈಶಿಷ್ಟ್ಯವನ್ನು ಪ್ರಸ್ತಾಪಿಸುತ್ತಾ ತೆಲುಗರ, ತಮಿಳರ ಹಾಗು ಕನ್ನಡಿಗರ ಸಾಮೂಹಿಕ ಪ್ರಯತ್ನಗಳ ದೆಸೆಯಿಂದಲೇ ಮೈಸೂರಿನ ಅಭಿವೃದ್ಧಿ ಸಾಧಿಸಲ್ಪಟ್ಟಿತೆಂದೂ ಮೈಸೂರು ಕೇವಲ ಕನ್ನಡಿಗರದಲ್ಲವೆಂದೂ ಅದು ಸಮ್ಮಿಶ್ರ ರಾಜ್ಯವೆಂದೂ ಅಭಿಪ್ರಾಯ ವ್ಯಕ್ತಗೊಳಿಸಿದರು. ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ಆಡಳಿತ ಮತ್ತು ಆರ್ಥಿಕ ಮುಖಗಳನ್ನು ಮ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

The Indian Mutual Life Association Ltd.,

H. O.– 10 MOUNT ROAD, MADRAS.

Purely Mutual Concern! Lowest Rate of Premium!!
Highest Rate of Bonus!!!

Solicites applications for Representation from South Kanara, Malabar, Coorg and Mysore State.

For further particulars please apply to:

Organising Secretary, Bank Road, Kasaragod, S. K. Or Secretary, Mangalore Branch, Maruthi Building, K. S. Rao Road, Mangalore 1. S. K.

ರೆತು ಬಿಟ್ಟು ಕೇವಲ ಭಾಷೆಯ ಮೋಹ ದಿಂದ ಮಾತ್ರ ವಿಚಾರಿಸುವ ಪ್ರವೃತ್ತಿಯು ಒಬ್ಬರನ್ನೊಬ್ಬರನ್ನು ಯುದ್ಧಕ್ಕೆ ಆಹ್ವಾನಿಸುವಷ್ಟು ಭೀಕರವಾಗಿದೆಯೆಂದೂ ಅಸಂಬದ್ಧವಾದ ತಲೆ ತಿರುಕ ಪ್ರಚಾರಗಳು ಈಗಿಂದೀಗ ನಿಲ್ಲುವುದು ಇಷ್ಟವೆಂದೂ ಹೇಳಿದರು.

ಮೈಸೂರು ಸರಕಾರವು ನೇಮಿಸಿದ ಶೇಷಾದ್ರಿ ಸಮಿತಿಯು ಆರ್ಥಿಕ ಹಾಗು ಆಡಳಿತ ವಿಷಯಕ್ಕೆಯೇ ಪ್ರಾಧಾನ್ಯವನ್ನು ಸಲ್ಲಿಸುವುದಾಗಲಿ, ಭಾಷೆಯ ಮೇಲಿನ ಮೋಹದಿಂದ ಕಣ್ಣು ಕಟ್ಟಿದಂತೆ ನಡೆಯಬಾರದೆಂದು ಹನುಮಂತಯ್ಯನವರ ಭಾಷಣಗಳಿಂದ ತಿಳಿದುಕೊಳ್ಳಬಹುದು. ನಿಜ ಹೇಳಬೇಕೆಂದರೆ ಕರ್ನಾಟಕ ಏಕೀಕರಣವಾಗುವುದೇ ಮೈಸೂರು ಕಾಂಗ್ರೆಸಿನ ಬಹುಸಂಖ್ಯಾಕ ಸದಸ್ಯರಿಗೆ ಬೇಕಾಗಿದೆ. ಇವರ ಅಪೇಕ್ಷೆಯನ್ನು ಪೂರೈಸುವುದೇ ಶೇಷಾದ್ರಿ ಸಮಿತಿಯ ಕೆಲಸವೆಂದರೂ ಸಲ್ಲುತ್ತದೆ. ಈಚೆಗೆ ಕರ್ನಾಟಕ ಪ್ರದೇಶ ಕಾಂಗ್ರೆಸಿನ ಅಧ್ಯಕ್ಷ ನಿಜಲಿಂಗಪ್ಪನವರಿಗೂ ಮೈಸೂರಿನ ಹನುಮಂತಯ್ಯನವರಿಗೂ ಮನಸ್ತಾಪವೂ ಉಂಟಾದಂತೆ ಭಾಸವಾಗುತ್ತದೆ. ಧುರೀಣರಲ್ಲಿ ನಡೆದಿರುವ ಕಚ್ಚಾಟ ಹಾಗು ವ್ಯಕ್ತಗೊಳ್ಳುವ ಭಿನ್ನಾಭಿಪ್ರಾಯಗಳು ಕರ್ನಾಟಕದ ಒಟ್ಟು ಹಿತದ ದೃಷ್ಟಿಯಿಂದ ದುಃಖದಾಯಕವಾಗಿವೆಯೆಂದು ಅನಿಸುತ್ತದೆ ಪರಿಸ್ಥಿತಿ ಹೀಗಿರುತ್ತಾ ಜನತೆ ಸಂಯಮವನ್ನು ಪ್ರದರ್ಶಿಸಬೇಕೋ, ಅಥವಾ ಧುರೀಣರೋ ಎಂದು ನಿಷ್ಕರ್ಷಿಸುವ ಆಗತ್ಯ ಕಾಣುತ್ತದೆ.

ಹಿಂದಿ ಭಾಷೆಯ ಮೋಹ

ಸಂಯಮದ ಪ್ರಶ್ನೆ ಬಂದಾಗ, ಹಿಂದಿಯ ಕುರಿತು ಉತ್ತರ ಭಾರತದವರು ತೋರಿಸುವ ಅತ್ಯುತ್ಸಾಹವು ನೆನಪಿಗೆ ಬರುತ್ತದೆ. ಕಳೆದ ವಾರ ನೆಹರೂರವರು ಸಂಸತ್ತಿನ ಹಿಂದಿ ಸಂಘದಲ್ಲಿ ಮಾತನಾಡುತ್ತಾ ಅತಿರೇಕ ಉತ್ಸಾಹವನ್ನು ತೋರಿಸಿ, ಹಿಂದಿಯನ್ನು ಒತ್ತಾಯದಿಂದ ಪ್ರಚಾರ ಮಾಡುವವರು ತಪ್ಪು ಮಾಡುತ್ತಾರೆಂದು ಎಚ್ಚರಿಸಿದರು. ಕೈಯಲ್ಲಿ ದೊಣ್ಣೆ ಹಿಡಿದುಕೊಂಡು ಹಿಂದಿಯ ಪ್ರಚಾರ ಕಾರ್ಯ ಮಾಡುವ ಜನರು ಭಾಷೆಯ ಶತ್ರುಗಳೆಂದು ಸಾರಿದರು. ಅದೇ ಸಮಯ, ಹಿಂದಿ ಅಥವಾ ಇತರ ಭಾರತೀಯ ಭಾಷೆಗಳನ್ನು ಕಡೆಗಣಿಸಿ ಕೇವಲ ಇಂಗ್ಲೀಷನ್ನೆ ಮಾತನಾಡುವುದಕ್ಕೂ ಬರೆಯುವುದಕ್ಕೂ ನಾವು ಬಳಸುವ ಪ್ರವೃತ್ತಿಯನ್ನು ಅವರು ಖಂಡಿಸಿದರು. "ಭಾರತೀಯರ ಮುಂದಷ್ಟೆ ಅಲ್ಲ, ವಿದೇಶೀಯರ ಮುಂದೆಯೂ ಇಂಗ್ಲಿಷಿನಲ್ಲಿ ಮಾತನಾಡುವುದು ನನಗೆ ಗೌರವಪ್ರದವೆಂದು ತೋರುವುದಿಲ್ಲ" ಎಂದವರು ಸ್ಪಷ್ಟವಾಗಿ ಹೇಳಿದರು.

ನೆಹರೂರವರು ತೋರಿಸಿದ ಸ್ವಭಾಷಾಭಿಮಾನವು ಕನ್ನಡಿಗರಿಗೆ ರುಚಿಸಬೇಕಾದದ್ದು ಅಗತ್ಯ. ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಮಿತಿಯ ಹೇಳಿಕೆಯಿಂದ ದಕ್ಷಿಣ ಭಾರತದಲ್ಲಿ ಹಿಂದಿಯನ್ನು ಕಲಿಯುವವರಲ್ಲಿ ಕನ್ನಡಿಗರೇ ಅತ್ಯಧಿಕವೆಂದು ತಿಳಿದು ಬರುತ್ತದೆ. ದ್ವಿತೀಯ ಸ್ಥಾನವು ಆಂಧ್ರಕ್ಕೆ ಸಲ್ಲುತ್ತದೆ. ರಾಷ್ಟ್ರಭಾಷೆಯಾದ ಹಿಂದಿಯನ್ನು ಕಲಿಯುವುದು ಇಷ್ಟವೇ ಆದರೂ ನಮ್ಮ ಪ್ರಾದೇಶಿಕ ಭಾಷೆಯಾದ ಕನ್ನಡವನ್ನು ಮಾತಿನಲ್ಲಿಯೂ ವ್ಯವಹಾರದಲ್ಲಿಯೂ ಮರೆತು ಬಿಟ್ಟು ಹಿಂದಿ ಅಥವಾ ಇಂಗ್ಲಿಷನ್ನು ಆಶ್ರಯಿಸುವುದು ಅಪೇಕ್ಷಣೀಯವಾಗಲಾರದು. ಈಚೆಗೆ ಇಂಗ್ಲಿಷಿನ ಬದಲು ಹಿಂದಿಯನ್ನೆ ನಾವು ಬಹಳಷ್ಟು ಬಳಸಿಕೊಳ್ಳುತಿದ್ದೇವೆ—ಕನ್ನಡಕ್ಕೆ ಮಹತ್ವವನ್ನೆ ಕೊಡುವುದಿಲ್ಲ ಈ ತಪ್ಪನ್ನು ತಿದ್ದಿಕೊಳ್ಳದಿದ್ದರೆ ಅನ್ಯಾಯ ಮಾಡಿದಂತಾಗುತ್ತದೆ.

— — —

ನೆರೆ ಹಾವಳಿಯ ಹತೋಟಿಗೆ ಮಂಡಳಿಗಳ ನೇಮಕ

ಬೇಂಕು ನೌಕರರಿಗೆ ಖಂಡೂಭಾಯಿ ದೇಸಾಯರ ಕರೆ

ಉತ್ತರ ಭಾರತದಲ್ಲಿ ನೆರೆ ಹಾವಳಿಯನ್ನು ಪರಿಣಾಮಕಾರಿಯಾಗಿ ನಿಯಂತ್ರಿಸುವ ಯೋಜನೆಗಳ ಕಡೆಗೆ ಈಗ ಕೇಂದ್ರ ಹಾಗು ರಾಜ್ಯ ಸರಕಾರಗಳ ಗಮನ ಹರಿದಂತೆ ಕಾಣುತ್ತದೆ ನೆರೆಪೀಡಿತ ಪ್ರದೇಶಗಳಲ್ಲಿ ಸುತ್ತಾಡಿಕೊಂಡು ಬಂದ ಪ್ರಧಾನ ಮಂತ್ರಿಗಳು ನೆರೆಗಳು ಫಲವತ್ತಾದ ಮಣ್ಣನ್ನು ತರುವುದರಿಂದ ಅವುಗಳಿಂದ ಲಾಭವಾಗುವುದೆಂದು ಹೇಳಿದರೂ ಜನರ ಪೀಡೆಯನ್ನು ಕಡಿಮೆ ಮಾಡಲು ಸರಕಾರವು ತೀವ್ರ ಕ್ರಮಗಳನ್ನು ತೆಗೆದುಕೊಳ್ಳುವ ಅಗತ್ಯವನ್ನು ತಿಳಿದವರಂತೆಯೇ ಮಾತನಾಡಿದರು ದೀರ್ಘಾವಧಿಯ ಯೋಜನೆಗಳನ್ನಲ್ಲದೆ, ಮುಂದಿನ ಮಳೆಗಾಲದಲ್ಲಿ ತೊಂದರೆಗಳು ಈಗಿನಷ್ಟು ಹೆಚ್ಚದಂತೆ ತಾತ್ಕಾಲಿಕ ವ್ಯವಸ್ಥೆಯನ್ನೂ ಕೈಗೊಳ್ಳುವ ವಿಚಾರವನ್ನು ಅವರು ಪ್ರಕಟಪಡಿಸಿದರು

ಮಂಡಳಿಗಳ ನೇಮಕ

ಇದರನ್ವಯ ಗಂಗಾನದಿಗೊಂದು ಹಾಗೂ ಬ್ರಹ್ಮಪುತ್ರೆಗೆ ಇನ್ನೊಂದು ನದಿ ಮಂಡಳಿಗಳು ಕೇಂದ್ರ ಸರಕಾರದಿಂದ ನೇಮಕವಾಗಿವೆ. ಲಭ್ಯವಿರುವ ಹಣಕಾಸು ಹಾಗು ತಂತ್ರಜ್ಞರನ್ನು ಅನುಲಕ್ಷಿಸಿ, ನೆರೆ ಹತೋಟಿಯ ಕಾರ್ಯಕ್ರಮಗಳನ್ನು ಸುಸಂಘಟಿತ ರೂಪದಲ್ಲಿ ಕೈಗೊಳ್ಳುವುದೇ ಈ ಮಂಡಳಿಗಳ ಉದ್ದೇಶ ಇದಲ್ಲದೆ ರಾಜ್ಯ ಸರಕಾರಗಳೂ ಇಂತಹ ಮಂಡಳಿಗಳನ್ನು ಇಷ್ಟರಲ್ಲೇ ರಚಿಸುತ್ತವೆ. ನೆರೆಯ ಹಾವಳಿಯ ಹತೋಟಿಗಾಗಿ ವ್ಯಾಪಕವಾದ ಯೋಜನೆಗಳನ್ನು ಸಿದ್ಧಪಡಿಸುವ, ಅವುಗಳ ಪ್ರಾಶಸ್ತ್ಯಾನುಕ್ರಮವನ್ನು ನಿರ್ಧರಿಸಿ ಕಾರ್ಯಗತಗೊಳಿಸುವ ಹೊಣೆ ಇವುಗಳ ಮೇಲೆ ಬೀಳುತ್ತದೆ.

ಸಂಚಾರ ವಿಚಾರ

ಲೋಕ ಸಭೆಯಲ್ಲಿ ನಾಲ್ಕು ತಾಸುಗಳ ಚರ್ಚೆಯೊಂದು ನೆರೆ ಹಾವಳಿಯ ವಿಷಯವಾಗಿ ನಡೆದಾಗ, ಯುದ್ಧದ ತಳಹದಿಯ ಮೇಲೆ ನೆರೆ ಹತೋಟಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದೆಂದು ಯೋಜನಾ ಸಚಿವರು ಭರವಸೆ ನೀಡಿದರು ನಾವು ಮಳೆಯನ್ನೂ ಹಿಮಕರಗುವಿಕೆಯನ್ನೂ ತಡೆಯಲಾರೆವಾದರೂ ನೆರೆ ಹಾವಳಿಯ ತೀವ್ರತೆಯನ್ನು ಕಡಿಮೆಮಾಡಬಹುದು ಈಗ ಕೆಲವು ವರ್ಷಗಳಿಂದ ಪ್ರತಿ ಎರಡ ವರ್ಷಕ್ಕೊಮ್ಮೆ ನೆರೆ ಪೀಡಿತ ಪ್ರದೇಶವನ್ನು ಬಿಟ್ಟು ಜನರು ಬೇರೆಲ್ಲಿಗಾದರೂ ಹೋಗ ಬೇಕಾಗುವುದು ಜನತೆಗಾಗುವ ಈ ಸಂಕಷ್ಟವನ್ನು ಪರಿಹರಿಸುವುದೇ ದೊಡ್ಡ ಕೆಲಸ. ದಿಬ್ರುಗಡದಂತಹ ನಗರಗಳು ಪ್ರವಾಹದ ಕೊರೆಯುವಿಕೆಯಿಂದ ಕೆಡದಂತೆಯೂ ವ್ಯವಸ್ಥೆ ಮಾಡಬೇಕಾಗಿದೆ ಎಂದವರು ತಿಳಿಸಿದರು.

ವಿವಾಹ ವಿಧೇಯಕ

ಬಹಳ ಹುರುಪಾದ ಚರ್ಚೆಯ ಬಳಿಕ ಲೋಕಸಭೆಯು ವಿಶೇಷ ವಿವಾಹ ವಿಧೇಯಕದ ಇನ್ನೂ ಕೆಲವು ಕಲಮುಗಳನ್ನು ಅಂಗೀಕರಿಸಿತು. ವಿವಾಹಕ್ಕೆ ಅರ್ಹರಾದ ತರುಣರ ಕನಿಷ್ಠ ವಯಸ್ಸನ್ನು ೨೧ ಎಂಬುದಾಗಿಯೂ ತರುಣಿಯರ ಕನಿಷ್ಠ ವಯಸ್ಸನ್ನು ೧೮ ಎಂಬುದಾಗಿಯೂ ಬಹುಮತದಿಂದ ನಿರ್ಣಯಿಸಲಾಯಿತು. ೨೧ ವರ್ಷ ವಯಸ್ಸಿಗಿಂತ ಕಡಿಮೆಯ ತರುಣಿಯರು ಈ ವಿಧೇಯಕದಂತೆ ವಿವಾಹವಾಗ ಬಯಸಿದಾಗ ಪಾಲಕರ ಅನುಮತಿಯನ್ನು ಪಡೆಯಬೇಕೆಂಬ ತಿದ್ದುಪಡಿಯನ್ನು ಸಭಾಧ್ಯಕ್ಷರು ತಳ್ಳಿಹಾಕಿದರು. ನಿಷಿದ್ಧ ಸಂಬಂಧಗಳಲ್ಲಿಯೂ ವಿವಾಹವಾಗಲು ಕೆಲವು ಅವಕಾಶಗಳನ್ನು ಕೊಡಬೇಕೆಂಬ ಇನ್ನೊಂದು ತಿದ್ದುಪಡಿಯನ್ನು ಸಭೆಯು ನಿರಾಕರಿಸಿತು. ವಿವಾಹೇಚ್ಛುಗಳು ತಮ್ಮ ಸುಸ್ಥಿತಿಯ ಬಗ್ಗೆ ವೈದ್ಯಕೀಯ ಸಿಫಾರಸು ಪತ್ರವನ್ನು ಹಾಜರುಪಡಿಸಬೇಕೆಂದು ಪಂಡಿತ ಠಾಕೂರದಾಸ ಭಾರ್ಗವರು ತಿದ್ದುಪಡಿಯನ್ನು ತಂದರು ಸುದೀರ್ಘ ಚರ್ಚೆಯ ಬಳಿಕ ಅದೂ ನಿರಾಕೃತವಾಯಿತು ಈ ಕಾಯಿದೆಯಂತೆ ಮದುವೆಯಾಗುವವರು ತಾವು ಕನಿಷ್ಠ ೩೦ ದಿನಗಳ ವರೆಗಾದರೂ ಆ ಊರಲ್ಲಿ ವಾಸವಾಗಿದ್ದೆವೆಂಬ ಶಿಫಾರಸು ಪತ್ರವನ್ನು ಹಾಜರು ಪಡಿಸಬೇಕೆಂಬ ಬೇರೊಂದು ತಿದ್ದುಪಡಿಯು ಸ್ವೀಕಾರಗೊಂಡಿತು ಮನೆ ಬಿಟ್ಟು ಓಡಿ ಹೋಗಿ ಎಲ್ಲಿಯಾದರೂ ಮದುವೆಯಾಗು

(೭ನೇ ಪುಟ ನೋಡಿರಿ)

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ಸಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ಶೂಲೆ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು ಸಂತಾನವನ್ನು ಕಲಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ ೩ ೦ ೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.

(2) ಷಾ ಕಂಪೆನಿ—ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ

ದಿ ಕೆನರಾ ಬ್ಯಾಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಅಧಿಕೃತ ಬಂಡವಾಳ	ರೂ.	25,00,000
ಚಂದಾ ಆರ್ಜಿಸಿ, ತೆತ್ತು ಬಂದ ಬಂಡವಾಳ	ರೂ.	20,00,000
ಕ್ಷೇಮ ನಿಧಿ	ರೂ.	10,50,000
ಠೇವಣಾತಿಗಳು	ರೂ.	2,98,19,000
ಒಟ್ಟು ಚಲಾವಣೆ ಬಂಡವಾಳ	ಸುಮಾರು ರೂಪಾಯಿ ೪ ಕೋಟಿ	
ಒಟ್ಟು ಶಾಖೆಗಳು	38	

(31—12—1953ರಲ್ಲು)

THE CANARA BANKING CORPORATION LIMITED

Estd - 1906] [H. O UDIPI (S. India).

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR

THE POPULAR INSURANCE CO. LTD.

"POPULAR BUILDINGS" MANGALORE-1

NAVAYUGA

Popular Kannada Weekly,
Founder —
Sri A B SHETTY, *M L A.*
Minister for Public Health,
Govt of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೬-೯-೧೯೫೪	೩

ಆಹಾರ ದೂಷಣ

ಆಹಾರ ವಸ್ತುಗಳ ಶುದ್ಧತೆಯನ್ನು ಕಾಪಾಡಿಕೊಳ್ಳುವ ಸ್ಪೃಹಣೀಯವಾದ ಉದ್ದೇಶದಿಂದ ಕಳೆದ ತಿಂಗಳು ಲೋಕಸಭೆಯಲ್ಲಿ ಮಂಡಿಸಲ್ಪಟ್ಟು ಅಂಗೀಕೃತವಾದ ಮಸೂದೆಗೆ ಇದೇ ದಿನಾಂಕ ೧೪ರಂದು ರಾಜ್ಯ ಸಭೆಯೂ ಸಮ್ಮತಿ ಮುದ್ರೆಯನ್ನು ಒತ್ತಿತು. ಜನತೆಯ ಹಿತದೃಷ್ಟಿಯಿಂದ ಮಾಡಲಾದ ಅನೇಕ ಪ್ರಮುಖ ಕಾಯಿದೆಗಳಲ್ಲಿ ಇದನ್ನು ನಾವು ಪರಿಗಣಿಸಬಹುದು. ಏಕೆಂದರೆ, ನಿತ್ಯ ಜೀವನಕ್ಕೆ ನೇರಾಗಿ ಅನ್ವಯಿಸುವ ಕಾನೂನು ಇದಾಗಿದೆ, ಸಾರ್ವಜನಿಕರ ಆರೋಗ್ಯ ರಕ್ಷಣೆಗೂ ಇದು ನೆರವಾಗುತ್ತದೆ; ಎಲ್ಲಕ್ಕಿಂತ ಹೆಚ್ಚಾಗಿ ಆಹಾರ ವಸ್ತುಗಳಲ್ಲಿ ಏನೇನೋ ತತ್ಸದೃಶ ವಸ್ತುಗಳನ್ನು ಬೆರಕೆ ಮಾಡಿ, ಶುದ್ಧತೆಯನ್ನು ಕೆಡಿಸುವ ಪ್ರವೃತ್ತಿಯನ್ನು ಇದು ನಿಯಂತ್ರಿಸುವುದರಿಂದ ಜನರಿಗಾಗುವ ಮೋಸ ಹಾಗು ನಷ್ಟ ಬಹಳಷ್ಟು ನಿಲ್ಲುತ್ತದೆ. ಆಹಾರ ದೂಷಣಕ್ಕೆ ಪ್ರಯತ್ನಿಸುವವರ ವಿಷಯದಲ್ಲಿ ಈ ಕಾಯಿದೆಯು ತೀರ ನಿಷ್ಠುರ ರೀತಿಯಲ್ಲಿ ನಡೆದುಕೊಂಡು ಅತ್ಯುಗ್ರ ಶಿಕ್ಷೆಯನ್ನು ನೀಡುತ್ತದೆ ೧೯೧೮ರಷ್ಟು ಹಿಂದೆಯೇ ಆಹಾರದ ಕಲಬೆರಕೆಯನ್ನು ದೂರಗೊಳಿಸಲು ಒಂದು ಶಾಸನವು ರಚಿಸಲ್ಪಟ್ಟಿತ್ತು. ಅದರನ್ವಯ ಮೊದಲನೇ ತಪ್ಪಿಗೆ ನೂರು ರೂಪಾಯಿಗಳ ಹಾಗು ಮುಂದಿನದಕ್ಕೆ ಐನೂರು ರೂಪಾಯಿಗಳ ದಂಡ ವಿಧಿಸಲ್ಪಡುತಿತ್ತು. ಆದರೆ ಸೆರೆಮನೆವಾಸದ ಶಿಕ್ಷೆ ಇರಲಿಲ್ಲ ಕಾನೂನನ್ನು ಉಲ್ಲಂಘಿಸುವವರು ದಂಡ ತೆತ್ತು ಪ್ರಾಯಶ್ಚಿತ್ತ ಮಾಡಿಸಿ ಕೊಂಡರೆ ಸಾಲದು ಎಂದು ಈಗಿನ ವಿಧೇಯಕ ಹೇಳುತ್ತದೆ ಅಂತೆಯೇ ಶಿಕ್ಷೆಯೂ ಕಠಿಣವಾಗಿದೆ—ಮೊದಲನೇ ತಪ್ಪಿಗೆ ಒಂದು ವರ್ಷದ ಸೆರೆಮನೆ, ಅಥವಾ ಎರಡು ಸಾವಿರ ರೂಪಾಯಿಗಳ ದಂಡ, ಎರಡನೇ ತಪ್ಪಿಗೆ ಸೆರೆಮನೆ ಹಾಗು ದಂಡ, ಆ ಮೇಲೆ ತಪ್ಪುಗಳ ಪುನರಾವೃತ್ತಿಯಾದರೆ ನಾಲ್ಕು ವರ್ಷದ ಸೆರೆಮನೆ ಹಾಗು ಮೂರು ಸಾವಿರ ರೂಪಾಯಿಗಳ ದಂಡ ಮುಂತಾಗಿ ಶಿಕ್ಷೆ ಏರುತ್ತದೆ. ಇದರ ಭಯದಿಂದಲಾದರೂ ಆಹಾರ ವಸ್ತುಗಳ ಶುದ್ಧತೆಯನ್ನು ಕೆಡಿಸುವ ಹವ್ಯಾಸವು ನಿಯಂತ್ರಿಸಲ್ಪಟ್ಟರೆ ಜನರಿಗೆ ಸುಖವಾದೀತು. ಈ ಕಾಯಿದೆಯಂತೆ ಚಿಲ್ಲರೆ ಮಾರಾಟಗಾರರು ಸಹ ತಮಗೆ ತಿಳಿದೋ ತಿಳಿಯದೋ ದೂಷಿತ ಆಹಾರ ವಸ್ತುಗಳನ್ನು ಮಾರಿದರೆ ಶಿಕ್ಷೆಗೆ ಒಳಪಡುವರಾದುದರಿಂದ ಇನ್ನು ಮುಂದೆ ಗ್ರಾಹಕರಿಗೆ ತಾವು ಒದಗಿಸುವ ಆಹಾರ ವಸ್ತುಗಳ ಯೋಗ್ಯತೆಯ ವಿಷಯದಲ್ಲಿ ಅವರು ಮೊದಲೇ ಎಚ್ಚರಿಕೆಯನ್ನು ವಹಿಸಬೇಕಾಗುತ್ತದೆ. ಲಾಭವನ್ನು ಗಳಿಸುವ ದೃಷ್ಟಿಯಿಂದ ಆಹಾರವಸ್ತುಗಳಿಗೆ ಅಗ್ಗವಾದ ತತ್ಸದೃಶ ವಸ್ತುಗಳನ್ನು ಮಿಶ್ರ ಮಾಡಿ ಮಾರುವ ಪ್ರವೃತ್ತಿ ಮೊದಲಿಂದ ಇದ್ದರೂ ಕಳೆದ ಯುದ್ಧ ಕಾಲದಲ್ಲಿಯೇ ಅದು ಮುಗಿಲು ಮುಟ್ಟಿತು ಆಹಾರಾಭಾವ ಕಾಣಿಸಿಕೊಂಡ ಆ ದಿನಗಳಲ್ಲಿ ಶುದ್ಧ ವಸ್ತುಗಳು ಯಾವುವೂ ಸಿಗಲಾರದೆ ಹೋದವು ಈಗಲೂ ಅಂದಿನ ಮನೋಭಾವವನ್ನು ವ್ಯಾಪಾರಿಗಳು ಬಿಟ್ಟುಗೊಟ್ಟಿಲ್ಲ—ಒಳ್ಳೆಯ ತುಪ್ಪ ಕೇಳಿದರೆ, ವನಸ್ಪತಿ ಬೆರಕೆ ಮಾಡಿಕೊಡಲಾಗುತ್ತದೆ ಹೀಗೆಯೆ ಇನ್ನೆಷ್ಟೋ—ಲೋಕಸಭೆಯಲ್ಲಿ ಮಾನ್ಯ ಸದಸ್ಯರೊಬ್ಬರು ವಿನೋದವಾಗಿ ಹೇಳಿದಂತೆ, ಶುದ್ಧ ವಿಷವೂ ಪೇಟೆಯಲ್ಲಿ ಸಿಗುವುದಿಲ್ಲ! ಹೊಸ ಕಾಯಿದೆಯು ಇಂಥ ತಪ್ಪು ಮಾಡಿದವರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸುವುದರಿಂದ ಹಾಗು ಆಹಾರ ಗುಣ ಶೋಧಕರನ್ನು ಹೆಚ್ಚು ಹೆಚ್ಚಾಗಿ ನೇಮಿಸಿ, ಆಹಾರ ವಸ್ತುಗಳ ಯೋಗ್ಯತಾ ನಿರ್ಣಯಕ್ಕೆ ಅನುಕೂಲತೆಯನ್ನೊದಗಿಸುವುದರಿಂದ ಸಾಕಷ್ಟು ಹೆಚ್ಚು ಪ್ರಯೋಜನ ದೊರಕುವುದೆಂದು ಆಶಿಸಬಹುದು.

ರೈಲ್ವೆ ಪ್ರವಾಸ

ರೈಲ್ವೆ ಬೋರ್ಡಿನ ಸದಸ್ಯರಾದ ಶ್ರೀ ವಸಿಷ್ಠರ ನೇತೃತ್ವದಲ್ಲಿ ರಶಿಯ ಹಾಗು ಇತರ ಯುರೋಪ್ಯ ರಾಷ್ಟ್ರಗಳಲ್ಲಿ ಸುತ್ತಾಡಿ, ರೈಲ್ವೆ ವ್ಯವಸಾಯದ ಪರಿಶೀಲನೆಯನ್ನು ನಡೆಸಿ ಬಂದಿರುವ ಭಾರತೀಯ ಶಿಷ್ಟಮಂಡಳವು ಕೆಲವು ಅತ್ಯಮೂಲ್ಯವಾದ ಸಲಹೆಗಳನ್ನು ಮಾಡಿದೆ ಇದರಿಂದ ರೈಲ್ವೆಯಲ್ಲಿ ಪ್ರಯಾಣಿಸುವವರಿಗೆ ಹೆಚ್ಚಿನ ಸೌಕರ್ಯಗಳು ದೊರಕುತ್ತವೆ. ಮುಖ್ಯವಾಗಿ ಮೂರನೇ ವರ್ಗದ ಸೌಕರ್ಯಗಳು ಅಧಿಕಗೊಳ್ಳಬೇಕೆಂದು ಶಿಷ್ಟಮಂಡಳವು ಸೂಚಿಸಿರುತ್ತದೆ. ದೂರ ಪ್ರವಾಸ ಮಾಡುವ ಜನಸಾಮಾನ್ಯರ ಸಲುವಾಗಿ ಜನತಾ ಗಾಡಿಗಳಲ್ಲಿ ಮಲಗಲು ಸ್ಥಳಗಳನ್ನು ಏರ್ಪಡಿಸಬೇಕು, ಊಟದ ಅನುಕೂಲತೆಗಳನ್ನು ಒದಗಿಸಿಕೊಡಬೇಕು; ಏನಾದರೂ ಮಾಹಿತಿ ಬೇಕಾದರೆ, ಅದು ತ್ವರಿತದಲ್ಲಿಯೇ ಪ್ರಯಾಣಿಕರಿಗೆ ಸಿಗುವಂತಾಗಬೇಕು ಎಂದು ಮುಂತಾಗಿ ಶಿಷ್ಟಮಂಡಳವು ಅಭಿಪ್ರಾಯಪಟ್ಟಿರುವುದು. ಭಾರತ ಸರಕಾರದವರು ಇವುಗಳನ್ನು ಸಹಾನುಭೂತಿಯಿಂದ ವಿಚಾರಿಸುವ ಲಕ್ಷಣಗಳು ಕಂಡುಬರುತ್ತವೆ ಈಚೆಗೆ ಕೆಲವು ವರ್ಷಗಳಿಂದ ರೈಲ್ವೆಯಲ್ಲಿ ಪ್ರತಿಕ್ಷೇಪಣಾ ಕಾರ್ಯಕ್ಕೆಯೇ ಮಹತ್ವವನ್ನು ಕೊಡಲಾಯಿತಾದರೂ ಮೂರನೇ ವರ್ಗದ ಪ್ರಯಾಣಿಕರ ಸೌಕರ್ಯಗಳನ್ನು ಪೂರಾ ಕಡೆಗಣಿಸಲಿಲ್ಲ—ಸುಖ ಪ್ರಯಾಣಕ್ಕೆ ಹೇಳಿಸಿದ ವಿಶಾಲವಾದ ಡಬ್ಬಿಗಳು, ಬೀಸಣಿಗೆಗಳು ಮುಂತಾದುವನ್ನೆಲ್ಲ ಒದಗಿಸುವ ಪ್ರಯತ್ನಗಳು ನಡೆದವು ಈಗ ನಮ್ಮಲ್ಲಿ ಕಟ್ಟಲ್ಪಡುವ ಹಾಗು ವಿದೇಶಗಳಿಂದ ತರಿಸಲಾಗುವ ಡಬ್ಬಿಗಳು ಪ್ರಯಾಣಿಕರ ಹಿತದೃಷ್ಟಿಯನ್ನಿಟ್ಟುಕೊಂಡಿವೆಯೆಂದು ಸಂತೋಷದಿಂದ ಹೇಳಬಹುದು. ಆದರೆ ಪುನಾರಚನೆಯ ವೇಗವು ಬಹಳ ಕಡಿಮೆಯಾಗಿದೆಯೆಂಬುದೇ ನಿಜವಾದ ದೂರು. ರೈಲ್ವೆ ಬೋರ್ಡಿನವರು ಇಂತಹ ಆಕ್ಷೇಪಗಳು ಮುಂದಕ್ಕೆ ಬಾರದಂತೆ ಸಾಕಷ್ಟು ದಕ್ಷತೆಯಿಂದಲೂ ಶೀಘ್ರವಾಗಿಯೂ ಪ್ರಯಾಣಿಕರ, ಮುಖ್ಯವಾಗಿ ತೃತೀಯ ಶ್ರೇಣಿಯವರ, ಸುಖಕ್ಕಾಗಿ ಕ್ರಮ ತೆಗೆದುಕೊಳ್ಳಲಿ!

ಪೋರ್ಚುಗಾಲಿಗೆ ಸಂಧಾನ ಬೇಡವಾಗಿದೆಯೆ?

ಸ್ಪಷ್ಟ ಉತ್ತರ ಕೊಡಬೇಕೆಂದು ಭಾರತದ ಬಿನ್ನಹ

ಗೋವೆಯ ಆಂದೋಲನವು ಇದೇ ೧೬ನೇ ತಾರೀಕಿನಂದು ಎರಡನೆಯ ಘಟ್ಟವನ್ನು ಮುಟ್ಟುತ್ತದೆ ಅಂದು ಇನ್ನೊಂದು ಸತ್ಯಾಗ್ರಹಿಗಳ ತಂಡವು ಗೋವೆಯನ್ನು ಪ್ರವೇಶಿಸುತ್ತದೆ. ಗೋವೆಯಿಂದ ಬಂದ ಸುದ್ದಿಗಳ ಮೇಲಿಂದ ಹೇಳುವುದಾದರೆ, ಅಲ್ಲಿ ಯುದ್ಧದ ಭಯವನ್ನು ಹುಟ್ಟಿಸುವ ವಾತಾವರಣವನ್ನು ಪೋರ್ಚುಗೀಜರು ನಿರ್ಮಿಸುತಿದ್ದಾರೆ ಪೋರ್ಚುಗೀಜ ಅಧಿಕಾರಿಗಳ ಪರಿವಾರಕ್ಕೆ ಪೋರ್ಚುಗಾಲಕ್ಕೆ ಹೊರಟುಹೋಗಬೇಕೆಂದು ಪರಿಪತ್ರಗಳನ್ನು ಕಳಿಸಲಾಗುತ್ತದೆ. ರಕ್ತದಾನ ಪಡೆದುಕೊಳ್ಳುವುದಕ್ಕಾಗಿ ರೂಪಾಯಿಗಳ ಆಮಿಷವನ್ನು ತೋರಿಸಲಾಗುತ್ತದೆ. ಸೈನ್ಯ ಬಲವನ್ನು ವಿಸ್ತರಿಸುವ, ಗೋವೆಯ ತರುಣರಿಗೆ ಒತ್ತಾಯದ ಸೈನಿಕ ಶಿಕ್ಷಣ ಕೊಡಿಸುವ ಕ್ರಮಗಳೂ ಕೈಗೊಳ್ಳಲ್ಪಟ್ಟಿರುತ್ತವೆ.

ಅನುಚಿತ ಬೇಡಿಕೆ

ಪೋರ್ಚುಗೀಜ ಸರಕಾರದೊಡನೆ ಸಂಧಾನ ನಡೆಯಬಹುದೆಂದಿದ್ದ ಆಶೆಯು ಈಗ ಮಣ್ಣುಪಾಲಾಗಿದೆಯೆಂದರೂ ತಪ್ಪಲ್ಲ. ಭಾರತದ ಮೇಲೆ ದೋಷಾರೋಪಣೆಯನ್ನು ಹೇರುವುದೇ ಉದ್ದೇಶವಾಗುಳ್ಳ ಪೋರ್ಚುಗಾಲವು ತನ್ನ ಮೂಲ ಸೂಚನೆಗಳಿಗೆ ವಿರುದ್ಧವಾದ— ಆ ಮಿತಿಯನ್ನು ಮೀರಿದ—ಹೊಸ ಬೇಡಿಕೆಗಳನ್ನು ಮುಂದೆ ಮಾಡುತ್ತದೆ ತಟಸ್ಥ ನಿರೀಕ್ಷಕರ ಮಂಡಳ ನೇಮಿಸುವ ತತ್ವವನ್ನು ಮುಂದಿಟ್ಟ ಪೋರ್ಚುಗಾಲವೇ ಈಗ ದಾದ್ರಾ ಮತ್ತು ನಗರ ಹವೇಲಿಗಳ ಮಟ್ಟಿಗೆ ತಾನು ನೇಮಿಸುವ ನಿರೀಕ್ಷಕ ಮಂಡಳಕ್ಕೆ ಭಾರತ ಸರಕಾರ ಒಪ್ಪಿಗೆ ನೀಡಬೇಕೆಂದು ಹೇಳುತ್ತದೆ.

ಸ್ಪಷ್ಟ ಉತ್ತರ ಅಗತ್ಯ

ಇನ್ನು ಭಾರತ ಸರಕಾರ ಮನ್ನಿಸಿಲ್ಲ ಬೇರೆ ದೇಶದವರಿಗೆ ಸಂಚಾರಕ್ಕಾಗಿ ಅನುಮತಿಯನ್ನು ಕೊಡಬೇಕೆಂಬ ಪೋರ್ಚುಗಾಲದ ಕೇಳಿಕೆಯು ಅನುಚಿತವೆಂದೂ ಭಾರತ ಸರಕಾರವನ್ನು ಅದು ಹೀಗೆ ನಿರ್ಬಂಧಿಸಲಾರದೆಂದೂ ಖಚಿತವಾಗಿ ಉತ್ತರ ಕೊಡಲಾಗಿರುವುದು. ಅಲ್ಲದೆ ಮೊದಲು ಮಾಡಿದ ಸೂಚನೆಯಂತೆ ಸಂಧಾನಕ್ಕಾಗಿ ಪ್ರತಿನಿಧಿ ಮಂಡಳವನ್ನು ಪೋರ್ಚುಗಾಲವು ಕಳಿಸುವುದಾದರೆ ಬೇಗನೇ ಹಾಗೆ ಮಾಡಬೇಕು; ಸಂಧಾನದ ಮನಸ್ಸಿಲ್ಲದಿದ್ದರೆ ಹಾಗೆ ಸ್ಪಷ್ಟವಾಗಿ ಹೇಳಬೇಕು, ಇದರಿಂದ ತಪ್ಪು ತಿಳುವಳಿಕೆ ಯಾವದರೂ ದೂರವಾದೀತು ಎಂದೂ ತಿಳಿಸಿದೆ.

ಮೊದಲಿನದೇ ಆರೋಪ

ಲಿಸ್ಬನದ ಸರಕಾರವು ಈ ಬಿನ್ನಹ ಪತ್ರದ ಆಶಯವನ್ನು ಗಂಭೀರವಾಗಿ ಗ್ರಹಿಸಿರುವುದಿಲ್ಲ. ಬದಲಿಗೆ, ಭಾರತದ ಮೇಲೆಯೇ ದೋಷಾರೋಪಣೆ ಮಾಡುವ ಹುಚ್ಚು ಹವ್ಯಾಸವನ್ನು ಅದು ತೋರಿಸಿದೆ. ಬೇಕೆನಿಸಿದ ಕ್ಷಣದಲ್ಲಿ ಸಂಧಾನವನ್ನು ಪ್ರಾರಂಭಿಸಲು ಹೊಸ ದೆಹಲಿಯಲ್ಲಿ ಪೋರ್ಚುಗಾಲದ ಪ್ರತಿನಿಧಿ ಮಂಡಳ ಸಿದ್ಧಗೊಂಡುನಿಂತಿದೆಯಾಗಿಯೂ ಆದರೆ ಭಾರತ ಸರಕಾರವು ತಟಸ್ಥ ನಿರೀಕ್ಷಕರ ಪ್ರವೇಶಕ್ಕೆ ಅನುಮತಿ ನಿರಾಕರಿಸಿರುವುದರಿಂದ, ಸಂಧಾನಕ್ಕೆ ಅದು ವಿರೋಧವಿದೆಯೆಂದೂ ಹೇಳಲಾಗಿರುವುದು. ಪೋರ್ಚುಗೀಜರು ವಿಮಾನ ಮೂಲಕ "ನಿರೀಕ್ಷಕ"ರನ್ನು ಇಳಿಸುವ ಎತ್ತುಗಡೆಯಲ್ಲಿದ್ದಾರೆಂದೂ ಒಂದು ವರದಿ ತಿಳಿಸುತ್ತದೆ.

ಸೀಟೋ ಒಡಂಬಡಿಕೆ

ಮನಿಲಾದಲ್ಲಿ ಸೇರಿದ ಎಂಟು ರಾಷ್ಟ್ರಗಳು "ಸೀಟೋ' ಒಡಂಬಡಿಕೆಗೆ ಸಹಿಯನ್ನು ಹಾಕಿದ್ದಲ್ಲದೆ, ಇತರ ರಾಷ್ಟ್ರಗಳ ಪ್ರವೇಶಕ್ಕೂ ಬಾಗಿಲನ್ನು ತೆರೆದಿಟ್ಟಿವೆ. ಫೊರ್ಮೋಸಾ ಮತ್ತು ಹಾಂಗಕಾಂಗಗಳು ಒಡಂಬಡಿಕೆಯಿಂದ ಹೊರಗುಳಿಯುತ್ತವೆ ಇಲ್ಲಿ ಮಾಡಲಾದ ಒಪ್ಪಂದವು ತೀರ ಅಪಾಯಕರವಾದುದೆಂದೂ ಯುದ್ಧಕ್ಕೆ ಪ್ರಚೋದನೆಯನ್ನೂ ವಸಾಹತು ಸಾಮ್ರಾಜ್ಯಶಾಹಿತ್ವಕ್ಕೆ ರಕ್ಷಣೆಯನ್ನೂ ಕೊಡುವಂಥದೆಂಬುದರಲ್ಲಿ ಯಾವ ಸಂದೇಹವೂ ಉಳಿದಿಲ್ಲ.

ಆರ್ಥಿಕ ಸಹಾಯದ ಆಮಿಷ

ಪಾಕಿಸ್ತಾನವನ್ನು ಬಿಟ್ಟುಳಿದ ನಾಲ್ಕು ಕೊಲೊಂಬೋ ರಾಷ್ಟ್ರಗಳಲ್ಲಿ ಸಿಂಹಳದ ಮನವೊಲಿಸಬಹುದೆಂದು ಅಮೇರಿಕ ಭಾವಿಸಿದಂತೆ ಕಾಣುತ್ತದೆ ಬ್ರಿಟಿಷರ ಮಹತ್ವದ ಸೈನಿಕ ಠಾಣ್ಯಗಳಲ್ಲಿ ಒಂದೆನಿಸಿದ

ದಯಮಾಡಿ ಚಂದಾಹಣ ಸಲ್ಲಿಸಿ ನೆರವಾಗಿರಿ!

ಇದೀಗ ನವಯುಗದ 34ನೆಯ ಹೊಸ ವರ್ಷಾರಂಭವಾಗಿದೆಯಷ್ಟೆ! ಈಗಲಾದರೂ ನಮ್ಮ ಚಂದಾದಾರರಲ್ಲಿ ಹಣ ಬಾಕಿ ಇರುವವರು ಅದನ್ನು ಕೂಡಲೇ ಸಲ್ಲಿಸುವಂತೆ ಪ್ರಾರ್ಥಿಸುತ್ತೇವೆ ನಮ್ಮ ವಿನಂತಿಯನ್ನು ನೋಡಿದೊಡನೆ ಕೆಲವು ಮಹನೀಯರು ಚಂದಾ ಹಣವನ್ನು ಕಳುಹಿಸಿದ್ದಾರೆ. ಅವರಿಗೆ ನಾವು ಚಿರ ಋಣಿಗಳಾಗಿದ್ದೇವೆ. ಉಳಿದವರೂ ಆದಷ್ಟು ತ್ವರ್ಯ ಚಂದಾ ಕಳುಹಿಸುವಂತೆ ಇನ್ನೊಮ್ಮೆ ವಿನಂತಿಸುತ್ತೇವೆ

ವಿ ಪಿ ಪಿ. ಮಾಡುವುದರಿಂದ ಹತ್ತಾಣೆಯಷ್ಟು ನಷ್ಟ ಸಂಭವಿಸುತ್ತದಾದ್ದರಿಂದ ಸರ್ವತ್ರ ಬಾಕಿಯನ್ನು ಮನಿಯಾರ್ಡರು ಮಾಡುವಂತೆ ಕೇಳಿಕೊಳ್ಳುತ್ತೇವೆ ಅಂತೂ ಸಕಾಲದಲ್ಲಿ ಚಂದಾ ಬಾರದಿದ್ದರೆ ಕ್ರಮಶ: ವಿ ಪಿ ಪಿ. ಮಾಡುವೆವು

ಮೆನೇಜರ್, **ನವಯುಗ** ಉಡುಪಿ.

ಸಿಂಹಳವು ಆರ್ಥಿಕ ವಿಕಾಸದ ಆವಿಸಷದಿಂದಲಾದರೂ ಸೀಟೋ ಒಡಂಬಡಿಕೆಗೆ ಸಹಿ ಹಾಕಬಹುದೆಂದು ಅಭಿಪ್ರಾಯ ಪಡಲಾಗುತ್ತದೆ. ಕೋಟೆಲವಾಲರು ಇದೇ ನವಂಬರದಲ್ಲಿ ಅಮೇರಿಕಕ್ಕೆ ಹೋಗಲಿದ್ದು, ಅಕ್ಟೋಬರದ ಪ್ರಾರಂಭದಲ್ಲಿ ಕೊಲೆಂಬೋ ರಾಷ್ಟ್ರಗಳ ಪರಿಷತ್ತೊಂದನ್ನು ಸೇರಿಸಿ ಸಿಂಹಳದ ನಿಲುಮೆಯನ್ನು ಕೊನೆಯದಾಗಿ ಖಚಿತಪಡಿಸಲು ಹೊತೊರೆಯುತ್ತಿರುವಂತೆ ಭಾಸವಾಗುತ್ತದೆ.

(೭ನೇ ಪುಟದಿಂದ)

ವ ಪ್ರವೃತ್ತಿಯನ್ನು ಇದರಿಂದ ತಡೆಗಟ್ಟಬಹುದೆಂದು ತಿದ್ದುಪಡಿಯ ಪುರಸ್ಕರ್ತರು ಹೇಳಿದರು.

ಬೇಂಕು ನೌಕರರ ತಂಟೆ

ಮಂತ್ರಿ ಮಂಡಳದೊಡನೆ ಭಿನ್ನಾಭಿಪ್ರಾಯ ಉಂಟಾದ ಪ್ರಯುಕ್ತ ರಾಜೀನಾಮೆಯನ್ನು ಕೊಟ್ಟ ಶ್ರೀ. ಗಿರಿಯವರು ಮದ್ರಾಸಿಗೆ ಹಿಂತಿರುಗಿದ್ದು, ತಮ್ಮನ್ನು ಕಾಣಲು ಬಂದ ಎಲ್ಲ ಮಜೂರ ಮುಖಂಡರಿಗೂ ನೆಹರೂರವರ ಮನವೊಲಿಸಲು ಕೇಳಿ ಕೊಂಡಿದ್ದಾರೆ. ಅವರು ಮತಭೇದದ ಕಾರಣಗಳನ್ನು ವಿವರಿಸಿ ಬರೆದ ಪತ್ರದಲ್ಲಿ ತನ್ನ ಅಧೀನದಲ್ಲಿರುವ ಉದ್ದಿಮೆ ವ್ಯವಸಾಯಗಳಲ್ಲಿ ದುಡಿಯುವ ಕೆಲಸಗಾರರಿಗೆ ಅನುಕೂಲತೆಗಳನ್ನು ಒದಗಿಸಿಕೊಟ್ಟು ಖಾಸಗಿ ಸಂಸ್ಥೆಗಳಿಗೆ ಮಾದರಿ ಹಾಕಿಕೊಡಬೇಕೆಂಬ ವಿಚಾರವು ಸರಕಾರಕ್ಕೆ ಒಪ್ಪಿಗೆಯಾಗಲಿಲ್ಲವೆಂದು ಹೇಳಿದ್ದಾರೆ. ಗಿರಿಯವರ ಸ್ಥಾನದಲ್ಲಿ ಈಗ ಪ್ರಸಿದ್ಧ ಕೂಲಿಕಾರ ಧುರೀಣ ಶ್ರೀ. ಖಂಡೂಭಾಯಿ ದೇಸಾಯಿಯವರು ಮಂತ್ರಿ ಮಂಡಳದಲ್ಲಿ ಪ್ರವೇಶ ಪಡೆದಿದ್ದಾರೆ. ಅವರು ತಮ್ಮ ಪ್ರಥಮ ಆಕಾಶವಾಣಿ ಭಾಷಣದಲ್ಲಿ ಪ್ರಧಾನ ಮಂತ್ರಿಗಳ ಆಶ್ವಾಸನೆಯತ್ತ ಬೇಂಕು ನೌಕರರ ಗಮನವನ್ನು ಸೆಳೆದು ಸಮಸ್ಯೆಯನ್ನು ಸಮಾಧಾನಕರವಾಗಿ ಬಗೆಹರಿಸುವ ವಿಧಾಯಕ ಮನೋಭಾವದಿಂದ ಅಗತ್ಯವಿದ್ದ ಅಂಕೆಸಂಖ್ಯೆಗಳನ್ನೆಲ್ಲ ಸಂಗ್ರಹಿಸಿ ಸರಕಾರಕ್ಕೆ ಒಪ್ಪಿಸಬೇಕೆಂದೂ ಪ್ರತ್ಯಕ್ಷ ಹೋರಾಟದ ಯೋಜನೆ ಮುಂತಾದ ಉದ್ರೇಕ ಕಾರ್ಯಗಳಿಗೆ ನುಗ್ಗಲಾರದೆಂದೂ ವಿನಂತಿಸಿದ್ದಾರೆ. ಅರ್ಥಸಚಿವರು ಈ ತಂಟೆಯ ವಿಷಯದಲ್ಲಿ ಕೂಲಂಕಷವಾದ ವಿಚಾರಣೆಯನ್ನು ಸರಕಾರೀ ಅಧಿಕಾರಿಗಳು ರಿಜರ್ವ ಬೇಂಕಿನ ಅಧಿಕಾರಿಗಳ ಸಹಾಯದಿಂದ ಮರಳಿ ನಡೆಸುವರೆಂದು ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ತಿಳಿಸಿದ್ದಾರೆ.

ಆಯಾತ ಸುಂಕ

ಭಾರತ ಸರಕಾರದವರು ಇಲ್ಲಿಗೆ ಆಯಾತವಾಗುವ ಪೆನ್ಸಿಲುಗಳು, ಮದ್ಯಗಳು, ಉಣ್ಣೆಯ ಬಟ್ಟೆಗಳು, ಬ್ಲೇಡುಗಳು ಮುಂತಾದ ಸರಕುಗಳ ವಿಷಯದಲ್ಲಿ ಕರವನ್ನು ಹೆಚ್ಚಿಸಲು ನಿರ್ಧರಿಸಿರುವರೆಂದು ಅರ್ಥಸಚಿವರು ಹೇಳಿದ್ದಾರೆ. ವಾಣಿಜ್ಯ ಮಂತ್ರಿಗಳು ಈ ಬಗ್ಗೆ ಸುಂಕದ ಕಾಯಿದೆಯಲ್ಲಿ ತಿದ್ದುಪಡಿ ಮಾಡುವ ಮಸೂದೆಯೊಂದನ್ನು ಮಂಡಿಸಿದ್ದು ಇದರಿಂದ ಸರಕಾರಕ್ಕೆ ನಾಲ್ಕೂವರೆ ಕೋಟಿ ರೂಪಾಯಿಗಳ ಆದಾಯವಾದೀತೆಂದು ಅಂದಾಜು. ಇದು ವರೆಗೆ ಆಯಾತ ಪ್ರಮಾಣವನ್ನು ನಿರ್ಬಂಧಿಸಿ ಸ್ವದೇಶದ ಉದ್ದಿಮೆಗಳಿಗೆ ರಕ್ಷಣೆಯನ್ನು ಕೊಡುತ್ತಿದ್ದರೆ, ಇನ್ನು ಮುಂದೆ ಆಯಾತದ ಸುಂಕವನ್ನು ಏರಿಸುವ ಮೂಲಕ ಈ ಸಂರಕ್ಷಣೆಯನ್ನೊದಗಿಸಲಾಗುವುದು; ಅಲ್ಲದೆ, ಆಯಾತ ಪ್ರಮಾಣದ ಮೇಲಿನ ನಿರ್ಬಂಧವೂ ತೆಗೆಯಲ್ಪಡುವುದು ಎಂದು ದೇಶಮುಖರು ಮಸೂದೆಯನ್ನು ವಿವರಿಸಿದರು.

ರಾಜ್ಯ ಘಟನೆಗೆ ತಿದ್ದುಪಡಿ

ಕೆಲವೊಂದು ಆವಶ್ಯಕ ವಸ್ತುಗಳ ನಿಯಂತ್ರಣದ ಅಧಿಕಾರವನ್ನು ರಾಜ್ಯ ಸರಕಾರಗಳ ಕೈಯಿಂದ ಕೇಂದ್ರಕ್ಕೆ ವರ್ಗಾಯಿಸುವ ಘಟನಾ ತಿದ್ದುಪಡಿಯ ವಿಧೇಯಕವನ್ನು ಪ್ರಧಾನಿ ನೆಹರೂ ಹಾಗು ಕಿಡ್ವಾಯಿಯವರೂ ಸೇರಿದ ಉಭಯ ಸಭೆಗಳ ಸಂಯುಕ್ತ ಪರಿಶೀಲಕ ಮಂಡಳಕ್ಕೆ ಒಪ್ಪಿಸಬೇಕೆನ್ನುವ ಸೂಚನೆಯು ಮಾನ್ಯ ಮಾಡಲ್ಪಟ್ಟಿತು. ಕೈಗಾರಿಕಾ ಕ್ಷೇತ್ರಗಳಲ್ಲಿ ಈಚೆಗೆ ಕಾಣಿಸಿಕೊಂಡ ನವೀಕರಣ ಧೋರಣೆಯಿಂದ ಕೂಲಿಕಾರರಿಗೆ ತೊಂದರೆಯಾಗದಂತೆ ನವೀಕರಣ ಮಾಡಿದ ಘಟಕಗಳ ಮೇಲೆ ಒಂದು ರೀತಿಯ ಕರಾಕರಣೆ ಮಾಡುವುದು ಇಷ್ಟವೆಂಬ ಅಭಿಪ್ರಾಯವನ್ನು ವಾಣಿಜ್ಯ ಮಂತ್ರಿಗಳು ವ್ಯಕ್ತಗೊಳಿಸಿದರು. ಭಾರತ ಸರಕಾರದ ನೌಕರರು ಮೊದಲನೆ ಹೆಂಡತಿ ಜೀವದಿಂದಿರುವಾಗ ಇನ್ನೊಬ್ಬಳನ್ನು ಸರಕಾರದ ಪೂರ್ವಸಮ್ಮತಿ ಇಲ್ಲದೆ ಮದುವೆಯಾಗಬಾರದೆನ್ನುವ, ತಮ್ಮ ಹಣ, ಆಸ್ತಿ, ಆಭರಣ ಮುಂತಾದವುಗಳ ಕುರಿತು ಸರಕಾರಕ್ಕೆ ಕಾಲಕಾಲಕ್ಕೆ ವರದಿ ಒಪ್ಪಿಸಬೇಕೆನ್ನುವ ಕೆಲವು ಬದಲಾವಣೆ ಮಾಡಿದುದನ್ನು ಗೃಹಶಾಖೆಯ ಉಪಮಂತ್ರಿ ದಾತಾರರು ಸಾದರಪಡಿಸಿದರು. ಸರಕಾರದ ನೌಕರಿಯಲ್ಲಿರುವ ಸ್ತ್ರೀಯರು ಮದುವೆಯಾದರೆ, ಶಾಖೆಯ ದಕ್ಷತೆಯನ್ನು ಕಾಯುವುದಕ್ಕೋಸ್ಕರ ಅವರನ್ನು ರಾಜಿನಾಮೆ ಕೊಡುವಂತೆ ಸರಕಾರ ಕೇಳಬಹುದೆಂಬುದೂ ಈ ನಿಯಮಗಳಲ್ಲಿ ಒಂದು.

ಕಾಂಗ್ರೆಸಿನ ಯಶಸ್ಸು

ಮದ್ರಾಸು ರಾಜ್ಯದಲ್ಲಿ ಜಿಲ್ಲಾ ಬೋರ್ಡುಗಳಿಗೆ ಚುನಾವಣೆಗಳು ನಡೆಯುತ್ತವೆ; ತಮಿಳುನಾಡಿನ ರಾಮನಾಡು, ಮಧುರೆ ಮತ್ತು ತಿರುನೆಲ್ವೇಲಿ ಜಿಲ್ಲೆಗಳಲ್ಲಿ ಕಾಂಗ್ರೆಸು ಪಕ್ಷದ ಹುರಿಯಾಳುಗಳು ಸರಾಸರಿ ನೂರಕ್ಕೆ ಎಪ್ಪತ್ತರಷ್ಟು ಸ್ಥಾನಗಳನ್ನು ಗಳಿಸಿ, ಪ್ರಚಂಡ ಯಶಸ್ಸನ್ನು ಸಂಪಾದಿಸಿದರು. ಕಾಮರಾಜ ನಾಡರರ ಧುರೀಣತ್ವದಲ್ಲಿ ತಮಿಳರಿಗೆ ಇರುವ ವಿಶ್ವಾಸವನ್ನು ಇದು ವ್ಯಕ್ತಪಡಿಸುತ್ತದೆ. ಇನ್ನುಳಿದ ಸ್ಥಾನಗಳಲ್ಲಿ ಕಾಂಗ್ರೆಸ್ಸೇತರ ರಾಜಕೀಯ ಪಕ್ಷಗಳಿಗೆ ಸಿಕ್ಕಿದುದಕ್ಕಿಂತಲೂ ಸ್ವತಂತ್ರ ಉಮೇದ್ವಾರರದಲ್ಲಿಯೇ ಹೆಚ್ಚಿನವು ಹಂಚಿ ಹೋಗಿರುತ್ತವೆ.

ಉಡುಪಿ

ಕರ್ನಾಟಕ ಸಂಘದ ಮಹಾ ಸಭೆಯು—ತಾ. 12ರಲ್ಲು 'ಹರಿ ನಿವಾಸ'ದಲ್ಲಿ ಶ್ರೀ ಪಿ. ಎನ್. ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಜರಗಿತು. ವರದಿವಾಚನ, ಬಜೆಟ್ ಮಂಜೂರಾತಿಯಾದ ಬಳಿಕ ಕಾರ್ಯನಿರ್ವಾಹಕ ಮಂಡಳಿಗೆ ಶ್ರೀಗಳಾದ ಪಿ. ಎನ್. ಅಯ್ಯಂಗಾರ್, ಡಾ। ಕೆ. ಎಲ್. ಐತಾಳ್, ಕು. ಶಿ. ಹರಿದಾಸ ಭಟ್, ಕೆ. ಎಸ್. ಉಪಾಧ್ಯಾಯ, ಪುಂಡಲೀಕ ಶೆಣೈ, ಕುಮಾರ ಸ್ವಾಮಿ, ಕೆ. ಹರಿದಾಸ ಉಪಾಧ್ಯಾಯ, ಎಮ್. ಎಸ್. ಶಿರಾಲಿ, ಪಿ. ಶೀನ ಸೆಟ್ಟಿ, ಎಸ್. ಕೆ. ಶ್ರೀಪತಿ ಆಚಾರ್, ಕೆ. ಪ್ರಭಾಕರ ಪೈ ಮತ್ತು ಟಿ. ಎ. ಪೈ ಅವರು ಆರಿಸಲ್ಪಟ್ಟರು. ಆರಂಭದಲ್ಲಿ ಡಾ। ಕೆ. ಎಲ್. ಐತಾಳರ ಉಪನ್ಯಾಸವಿತ್ತು.

ಕ್ರಿಕೆಟ್—ಕಸ್ತೂರ್ಬಾ ಮೆಡಿಕಲ್ ಕಾಲೇಜು ಮತ್ತು ಉಡುಪಿ ಕ್ರಿಕೆಟ್ ಟೀಮುಗಳೊಳಗೆ ತಾ. 12ರಲ್ಲು ಕ್ರಿಕೆಟ್ ಪಂದ್ಯಾಟ ನಡೆದು ಉಡುಪಿ ಕ್ರಿಕೆಟ್ ಟೀಮಿನವರು ಗೆದ್ದರು.

ಶ್ರೀ. ಟಿ. ಎ. ಪೈ, ಎಂ. ಎಲ್. ಎ. ಅವರು ಬ್ಯಾಂಕ್ ಎವಾರ್ಡಿನ ವಿಚಾರ ವಿನಿಮಯಕ್ಕಾಗಿ ಕೇಂದ್ರ ಸರಕಾರದ ಮಜೂರ ಮಂತ್ರಿ ಖಂಡೂಭಾಯಿ ದೇಸಾಯಿಯವರ ಕರೆಯಂತೆ ತಾ. 14ರಂದು ದಿಲ್ಲಿಗೆ ತೆರಳಿರುತ್ತಾರೆ.

ಓಣಂ ದಿನಾಚರಣೆ—ಸ್ಥಳೀಯ ಕೇರಳ ಸಮಾಜದ ಬಂಧುಗಳು ತಾ. 10ರಲ್ಲು ಬೋರ್ಡ್ ಹಾ। ಎ। ಎಲಿಮೆಂಟರಿ ಶಾಲೆಯಲ್ಲಿ ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಕುರುಪ್, ಅವರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀ ಕೆ. ವಿ. ನಾರಾಯಣ ಪುದುವಾಳರಿಂದ ಪ್ರಾರ್ಥನೆಯಾದ ಬಳಿಕ ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಡಾ। ಆನಂದನ್, ಅವರು ಸ್ವಾಗತ ಭಾಷಣಮಾಡಿದರು. ಶ್ರೀಗಳಾದ ಕೆ. ಎ. ದೇವದಾಸ, ಕೆ. ಜಿ. ಪಣಿಕ್ಕರ್ ಮೊದಲಾದವರು ಓಣಂ ಹಬ್ಬದ ಮಹತ್ವವೇನೆಂಬುದನ್ನು ವಿವರಿಸಿ ಭಾಷಣವಿತ್ತರು. ಶ್ರೀಮತಿ ಕೆ. ಗೋಪಾಲ ಮೆನೊನರು ಮಲೆಯಾಳಿ ಪದ್ಯಗಳನ್ನು ಹಾಡಿದರು. ಕುಮಾರಿ ರಾಜೇಶ್ವರಿಯು ನೃತ್ಯ ಪ್ರದರ್ಶಿಸಿದಳು. ಚಿತ್ತಾಕರ್ಷಕ 'ಓಟಂ ತುಳ್ಳಲ್' ಎಂಬ ಭಾವನೃತ್ಯವಾದ ಮೇಲೆ ಶ್ರೀ ಕಣ್ಣ ನೇರಿಸ್ತಿ ಮತ್ತು ಕೂಟದವರು ಕೋಲಾಟ ಪ್ರದರ್ಶನ ನಿತ್ತರು. ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ಮಲೆಯಾಳಿಗಳು ಎಲ್ಲಿದ್ದರೂ ಒಕ್ಕಟ್ಟಿನಿಂದ ಇತರರೊಡನೆ ಮೈತ್ರಿ ಭಾವದಿಂದಿರಬೇಕೆಂದರು. ಶ್ರೀ ಕೆ. ಗೋಪಾಲ ಮೆನೊನರು ವಂದನೆಗಳನ್ನರ್ಪಿಸಿದರು. ರಾತ್ರಿ ಓಣಂ ಹಬ್ಬದ ಭೋಜನ ಕೂಟ ಜರಗಿತು. ಜನಪ್ರಿಯ ವೈದ್ಯ ಟಿ. ಎನ್. ಕೇಳು ನಂಬಿಯಾರರ ಸಮರ್ಥ ಸೂತ್ರಧಾರಿತ್ವವೂ ಮಲೆಯಾಳಿ ಬಂಧುಗಳ ಸ್ವಾಭಾವಿಕ ಉತ್ಸಾಹವೂ ಸ್ತುತ್ಯ.

ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿಯು ಅತ್ಯುತ್ತಮ ಫಲಕಾರಿಯಾದ ೬ನೇ ವೆಲ್ಯುವೇಶನ್ ವರದಿಯ ವಿಮರ್ಶೆಯನ್ನು ಬರುವ ವಾರ ಕೊಡಲಾಗುವುದು.

(ಸಂ.)

ದ. ಕ. ಜಿಲ್ಲಾ ಬೋರ್ಡಿಗೆ

ನಾಮಪತ್ರಗಳು

ಉಡುಪಿ ತಾಲೂಕು

ಕೊಡವೂರು ಸರ್ಕಲ್—ಶ್ರೀಗಳಾದ ಕಲ್ಮಾಡಿ ರಾಮರಾವ್, ಡಾ। ಪಿ. ಜಿ. ಆಚಾರ್, ಟಿ. ರಾಮಚಂದ್ರ ರಾವ್, ಎ. ಜಿ. ಆಳ್ವ (ಕಾ), ಫೆಲಿಕ್ಸ್ ಡಿ'ಸೋಜ (ಕಾ).

ಬ್ರಹ್ಮಾವರ ಸರ್ಕಲ್—ಶ್ರೀಗಳಾದ ಜಗನ್ನಾಥ ಸೆಟ್ಟಿ, ಪಿ. ವೆಂಕಟರಾವ್, ಶ್ರೀಮತಿ ಫ್ಲೋರಾ ಲೂವಿಸ್, ಶ್ರೀಮತಿ ರಮಣಿ ಎಸ್. ನಾಯಕ್, ಎ. ನಾರಾಯಣ ಹೆಗ್ಡೆ (ಕಾ) ಶ್ರೀಮತಿ ಬ್ಲಾಂಚ್ ಎಸ್. ಪಿಂಟೊ (ಕಾ) ಎ. ಜಿ. ಆಳ್ವ (ಕಾ).

ಹಿರಿಯಡ್ಕ ಸರ್ಕಲ್—ಶ್ರೀಗಳಾದ ಎಮ್. ಗೋವಿಂದ ಸೆಟ್ಟಿ, ಯೋಬು ಅಮ್ಮಣ್ಣ, ಡಾ। ಕೆ. ಕೆ. ಹೆಗ್ಡೆ (ಕಾ).

ಕಟಪಾಡಿ ಸರ್ಕಲ್—ಶ್ರೀಗಳಾದ ಎಸ್. ಅಣ್ಣಯ್ಯ ಹೆಗ್ಡೆ, ಪಿ. ಪುಂಡಲೀಕ ನಾಯಕ್, ಪಿ. ಎಸ್. ನಾಯಕ್, ಕೆ. ಕೆ. ಸೆಟ್ಟಿ (ಕಾ).

ಕಾಪು ಸರ್ಕಲ್—ಶ್ರೀಗಳಾದ ಅನಂತಯ್ಯ ಮಾಮನ, ಪದ್ಮನಾಭ ಸೆಟ್ಟಿ, ಆರ್. ಆರ್. ಕುಂಜೂರು (ಕಾ).

ಕೋಟ ಸರ್ಕಲ್—ಶ್ರೀಗಳಾದ ಜನಾರ್ದನ ಪಂಡ, ಹರಿದಾಸ ಉಪಾಧ್ಯ, ಕೆ. ರಾಮಪ್ಪಯ್ಯ, ಡಾ। ಸಂಜೀವನಾಥ, ಬಿ. ಸಂಜಯ್ಯ ಹೆಗ್ಡೆ (ಕಾ).

ಕಾರ್ಕಳ ತಾಲೂಕು

ಕಾರ್ಕಳ—ಶ್ರೀ। ಬಿ. ಎಸ್. ಭಾಸ್ಕರ ರೈ, ಶ್ರೀ। ಬಿ. ವೆಂಕಟೇಶ ಭಟ್ಟ.

ಮೂಡಬಿದ್ರೆ—ಶ್ರೀ। ಎಸ್. ಧರ್ಮಸಾಮ್ರಾಜ್ಯ, ಶ್ರೀ। ಎಂ. ಧರ್ಮಸಾಮ್ರಾಜ್ಯ, ಶ್ರೀ। ರವಿರಾಜ ಪಟವಾಳ, ಶ್ರೀ ಸುಂದರ.

ಅಜೆಕಾರು—ಡಾ॥ ಯು. ಕೃಷ್ಣ, ಶ್ರೀ। ಧರಣಪ್ಪ ಅತಿಕಾರಿ.

ನೇಣೂರು—ನಾಗರಾಜ ಹೆಗ್ಡೆ, ಐ. ಶ್ರೀಧರ ಹೆಗ್ಡೆ.

ಮಂಗಳೂರು ತಾಲೂಕು

ಮಂಗಳೂರು ಹೊರಗಿನ ಕ್ಷೇತ್ರ—ಶ್ರೀ। ಡೆನಿಸ್ ಪಿಂಟೊ, ಶ್ರೀ। ಬಿ. ವಿ. ಕಕ್ಕಿಲ್ಲಾಯ, ಡಾ॥ ಎಮ್. ಎಸ್. ಎ. ದಮಾರ್, ಶ್ರೀ। ಎಂ. ಶ್ರೀನಿವಾಸ ನ್ಯಾಕ, ಶ್ರೀ। ದೇವ ಆಳ್ವ.

ಕೋಟೆಕಾರು—ಶ್ರೀ। ಯು. ವೆಂಕಟ್ರಾಯ ಶೆಣೈ, ಶ್ರೀ ಎ. ಕೃಷ್ಣ ಶೆಟ್ಟಿ, ಡಾ॥ ಎಂ. ಎಸ್. ಶಾಸ್ತ್ರಿ.

ಮುಲ್ಕಿ—ಶ್ರೀಮತಿ ಮ್ಯುರಿಯಲ್ ಪಿಂಟೊ, ಶ್ರೀ। ರಾಜೀವ ಭಂಡಾರಿ, ಶ್ರೀ। ಬಿ. ಆರ್. ಕರ್ಕೇರ,, ಶ್ರೀ। ಎಂ. ಶ್ರೀನಿವಾಸ ನ್ಯಾಕ್, ಶ್ರೀ ಸುಂದರಕೃಷ್ಣ ಕಾಮತ್, ಶ್ರೀಮತಿ ಮೇಬೆಲ್ ಬ್ರಿಟೊ, ಕುಮಾರಿ ಮಾರ್ಸೆಲ್ ಡಿ'ಸೋಜ.

ಸುರತ್ಕಲ್—ಡಾ॥ ಪುರುಷೋತ್ತಮ ಕಾಮತ್, ಶ್ರೀ। ಯೆಕ್ಕಾರು ಕುಬ್ಬಯ್ಯ ಹೆಗ್ಡೆ.

ಗುರುಪುರ—ಶ್ರೀ। ಪದ್ಮನಾಭ ಆಳ್ವ, ಡಾ॥ ನಾಗಪ್ಪ ಆಳ್ವ ಮತ್ತು ಮೋನಪ್ಪ ಶೆಟ್ಟಿ.

ಪುತ್ತೂರು ತಾಲೂಕು

ಪುತ್ತೂರು—ಶ್ರೀಮತಿ ಬಿ. ಕಮಲಾಬಾಯಿ, ಶ್ರೀಮತಿ ಲೀಲಾ ಕಾರಂತ, ಶ್ರೀ। ಪಿ. ಸದಾಶಿವ ರಾವ್, ಶ್ರೀ। ಪಿ. ಭಾಸ್ಕರ ಪೈ, ಶ್ರೀ। ವಿಠಲ ಶೆಟ್ಟಿ, ಶ್ರೀ। ಚತ್ರಪ್ಪ ರೈ, ಶ್ರೀ। ಸಂಜೀವ ಶೆಣೈ.

ಸುಳ್ಯ—ಶ್ರೀ। ಬಾಲಕೃಷ್ಣ, ಎಸ್. ಎಂ., ಶ್ರೀ। ಯು. ಕುಡಲಪ್ಪ.

ವಿಟ್ಲ—ಶ್ರೀ। ಎ. ಭೀಮ ಭಟ್ಟ, ಶ್ರೀ ಪಿ. ಸುಬ್ರಾಯ ಭಟ್ಟ.

ಉಪ್ಪಿನಂಗಡಿ—ಶ್ರೀ। ಕೆ. ವೇಣುಗೋಪಾಲ ನಾಯಕ್, ಡಾ॥ ಬಿ. ರಾಮ ಭಟ್ಟ.

[ಅಪೂರ್ಣ]

ರೂ. 1000 ದ ವರೆಗೆ ಸಾಲಗಳು

ಮಾಸದೀ ಆದಷ್ಟ ಯಾ ಜಾಮೀನಿಲ್ಲದೆ ನಿಮ್ಮ ದಸ್ತಕದಿಂದ ದೊರೆಯುತ್ತವೆ. ವಿವರಗಳಿಗೆ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆಯಿರಿ: ಬೊಂಬೇ ಮರ್ಕಂಟೈಲ್ ಕೊ, ಬೊಂಬಾಯಿ-೨೮.

ನಡಿಯುವ ಚಿತ್ರ:

ನೀವು ಬಹುದಿನಗಳಿಂದ ನಿರೀಕ್ಷಿಸುತಿದ್ದ ವಿಜ್ಞಾನಕ್ಕೇ ಸವಾಲು ಹಾಕಿದ ಭಯಾನಕ ಚಿತ್ರ—

WAR OF THE WORLDS

ಮೊದಲಿಂದ ಕೊನೆಯ ತನಕವೂ ಈ ಚಿತ್ರದ ರೋಮಾಂಚಕಾರಿ ದೃಶ್ಯಾವಳಿ, ಘಟನೆಗಳನ್ನು ಕಂಡು ದಂಗುಬಡಿಯುವಿರಿ. (ಪ್ರಖ್ಯಾತ ಬರಹಗಾರ H. G. WELLS ರ ಕಾದಂಬರಿಯ ಆಧಾರದ ಮೇಲೆ ಚಿತ್ರಿತವಾದುದು.)

ಬರುತ್ತದೆ:— ದೀದಾರ್, ಔರತ್, ಅನ್ನದಾತಾ ಮತ್ತು ಟ್ಯಾಕ್ಸಿಡ್ರೈವರ್.

19—9—1954 Sunday Morning at 10

PEOPLE WILL TALK (20th Century)

ಶ್ರೀ ಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮೂಲೂರು— ಬಿಕ್ರಿಗುತ್ತು ಅಂತಯ ಶೆಟ್ರಿ ತನ್ನ 80ನೇ ವಯಸ್ಸಿನಲ್ಲಿ ವೃದ್ಧಾಪ್ಯದ ದೆಸೆಯಿಂದ ತಾ. 2—9—1951ರಂದು ಸ್ವರ್ಗಸ್ಥರಾದುದು ವಿಷಾದಕರವಿದೆ. ಬಂಟ ಸಮಾಜದ ಬಡ ಕುಟುಂಬದಲ್ಲಿ ಜನಿಸಿ, ಬಾಲ್ಯದಾರಿದ್ರ್ಯ ತನ್ನ ಬುದ್ಧಿಶಕ್ತಿಯಿಂದ ಗಳಿಸಿದ ಸ್ವಯಾರ್ಜಿತದಲ್ಲಿ, ಕುಟುಂಬಕ್ಕೂ ಹೆಂಡತಿ ಮಕ್ಕಳಿಗೂ, ತಮ್ಮ ಬಾಳೀ ಜೀವನವು ಸುಖಮಯವಾಗುವಂತೆ ಬೇಕಾದ ಅನುಕೂಲ ಸೌಕರ್ಯ ಒದಗಿಸಿ ಕೊಟ್ಟಿದ್ದರು. ಮೃತರು ಸರ್ವರ ಮನ್ನಣೆಗೂ ಪ್ರೀತಿಗೂ ಪಾತ್ರರಾಗಿ ಯಾರಿಗೂ ಯಾವ ತರದ ಉಪದ್ರವಗಳನ್ನು ಕೊಡದೆ, ಕ್ಷಮಾಶೀಲರಾಗಿ ಬಡವರ ಬಂಧುಗಳಾಗಿ ಆದರ್ಶ ವ್ಯಕ್ತಿಗಳಾಗಿದ್ದರು.

ಕಟಪಾಡಿ— ಸ್ಥಳೀಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 'ಶಾಲಾ ಸ್ಥಾಪಕರ ದಿನ'ವು ಡಾಕ್ಟರ್ ಕೆ. ಆರ್. ಕೊರನ್ನಲ್ಲರ ಅಧ್ಯಕ್ಷತೆಯಲ್ಲಿ ದಿನಾಂಕ 12ರಂದು ಆಚರಿಸಲ್ಪಟ್ಟಿತು. ದೇವತಾ ಪ್ರಾರ್ಥನೆಯಾದ ಬಳಿಕ ಶಾಲಾ ಮುಖ್ಯೋಪಾಧ್ಯಾಯ ಶ್ರೀ ಯು. ಆರ್ ಮಯ್ಯರು ಶಾಲೆಯ ಪ್ರಗತಿಪರ ಸಂಕ್ಷಿಪ್ತ ವರದಿಯನ್ನು ಓದಿದರು. ಶ್ರೀಗಳಾದ ಮಾರ್ಸೆಲ್ ಅಲ್ವ, ಕೆ. ಗಣಪತಿ ಶೆಣೈ, ಕೆ. ಕೃಷ್ಣಾನಂದ ಹೆಗ್ಡೆ, ಯು ವಾಸುದೇವ ಶೆಣೈ ಮತ್ತು ಕೆ. ಆರ್. ಶೆಣೈಯವರು ದಿವಂಗತ ಬಾಂಗಾಳೆ ಶ್ರೀನಿವಾಸ ನಾಯಕರ ಗುಣಕಥನವನ್ನು ಮಾಡಿದರು. ಈ ಸಮಾರಂಭದ ಸಲುವಾಗಿಯೇ ಏರ್ಪಡಿಸಿದ ಭಾಷಣ ಸ್ಪರ್ಧೆಯಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಪಾರಿತೋಷಕ ವಿತರಣೆ, ಅಧ್ಯಕ್ಷರ ಭಾಷಣ, ಧನ್ಯವಾದಾರ್ಪಣೆಗಳಾದ ಬಳಿಕ ಮಕ್ಕಳಿಂದ ವಿವಿಧ ವಿನೋದಾವಳಿಗಳ ಪ್ರದರ್ಶನವಾಯಿತು. ತರುವಾಯ ಎಸ್. ವಿ. ಎಸ್. ವಿದ್ಯಾವರ್ಧಕ ಸಂಘದ ಶಾಲೆಗಳ ಅಧ್ಯಾಪಕರ ಕೂಡುವಿಕೆಯಿಂದ "ಕಾರ್ತವೀರ್ಯಾರ್ಜುನನ ಕಾಳಗ" ಎಂಬ ಯಕ್ಷಗಾನ ತಾಳ-ಮದ್ದಳೆಯೂ ಜರಗಿ ಸಮಾರಂಭವು ಕೊನೆಗೊಂಡಿತು.

ಹೆಜಮಾಡಿ ಕೋಡಿ— ಸ್ಥಳೀಯ ಸಹಕಾರಿ ಫಿಶರೀಸ್ ಹಾ| ಎ| ಶಾಲಾ ವಿದ್ಯಾಪ್ರಸಾರ ಸಂಘದ ಮುಂದಾಳುತ್ವದಲ್ಲಿ ಕಳೆದ ಮೇ ತಿಂಗಳ 16ರಲ್ಲು ಮೂಲ್ಕಿ ಮೊಗವೀರ ಸಮಾಜದ ಕಟ್ಟಡದಲ್ಲಿ ಸದ್ರಿ ಶಾಲಾ ಹುಡುಗಿಯರು ಅಭಿನಯಿಸಿದ ನಾಟಕದಿಂದ ಜಮೆಯಾದ ಹಣದಿಂದ ಇದೇ ತಾ. 6ರಿಂದ ಸುಮಾರು 150 ಶಾಲೆಯ ಬಡ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಗಂಜಿ ಊಟ ಕೊಡುವ ಏರ್ಪಾಡು ಮಾಡಲಾಗಿದೆ. ಇದೇ ಸಂಘದ ಕಡೆಯಿಂದ ಕಮ್ಯುನಿಟಿ ಪ್ರೊಜೆಕ್ಟಿನ ರೂ. 5000ರ ಧನಸಹಾಯದಿಂದ 300 ಮಕ್ಕಳಿಗೆ ಸಾಕಾಗುವಷ್ಟು ದೊಡ್ಡ ಶಾಲಾ ಕಟ್ಟಡವನ್ನು ರೂ. 22,000 ಖರ್ಚಿನಿಂದ ಕಟ್ಟಿಸಲಾಗುವುದು. ಇದರ ಶಂಕುಸ್ಥಾಪನೆಯು ಇದೇ ತಾ. 9ರಲ್ಲು ಮುಂಜಾನೆ ಜರಗಿತು.

ಕುಂಬಳೆ— ದ. ಕ. ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆಯವರು ತಾ. 10ರಲ್ಲು ಇಲ್ಲಿಯ ಸಮುದ್ರ ಆಕ್ರಮಣದಿಂದಾದ ಸ್ಥಳವನ್ನು ಸಂದರ್ಶಿಸಿದರು. ಕಷ್ಟಕ್ಕೀಡಾದವರನ್ನು ನೋಡಿ ವಿಚಾರ ವಿನಿಮಯ ನಡೆಸಿದರು.

ಸೂರತ್ಕಲ್— ಸ್ಥಳೀಯ ಬೋರ್ಡ್, ಸುಬ್ರಹ್ಮಣ್ಯ ದಾಯರ ಮತ್ತು ಸೈಂಟ್ ಆಂತೋನಿ ಎಲಿಮೆಂಟರಿ ಶಾಲಾ ಮಕ್ಕಳು ತಾ. 9ರಲ್ಲು ಕುಂಜಾರುಗಿರಿಯ ಪ್ರವಾಸ ಕೈಕೊಂಡಾಗ ಕುರ್ಕಾಲು ಪಟೇಲ್ ಬಂಧುಗಳು ಮಕ್ಕಳಿಗೆ ಊಟ ಉಪಾಹಾರಗಳ ವ್ಯವಸ್ಥೆ ಮಾಡಿದ್ದರು.

ಬೈಲೂರು— ನೀರೆ ಬೈಲೂರು ಎಡ್ಯುಕೇಶನಲ್ ಸೊಸೈಟಿಯವರು ಹೈಸ್ಕೂಲು ತೆರೆಯುವ ಬಗ್ಗೆ ತಾ. 10ರಲ್ಲು ಬ್ಯಾಂಕಿನಲ್ಲಿ ರೂ. 11,392ನ್ನು ಡಿಪಾಜಿಟ್ ಮಾಡಿರುವರು. ಮುಂದಿನ ಜೂನ್ ತಿಂಗಳಲ್ಲಿ ಹೈಸ್ಕೂಲು ಪ್ರಾರಂಭವಾಗಬಹುದಾಗಿದೆ.

ಹಿರಿಯಡಕ— ಸ್ಥಳೀಯ ಜಮೀನ್ದಾರ್ ಶ್ರೀ ಕೆ. ಮಹಾಬಲ ಹೆಗ್ಡೆಯವರು ಸ್ಥಳೀಯ ಬೋರ್ಡ್ ಹೈಸ್ಕೂಲಿನ IV, V ಮತ್ತು VI ನೆ ಫಾರ್ಮುಗಳಲ್ಲಿ ವರ್ಷಾವಧಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆಯುವ ಪ್ರತಿಯೊಬ್ಬ ವಿದ್ಯಾರ್ಥಿಗೆ ರೂ. 4½ ಬೆಲೆಯ ಬಹುಮಾನ ಕೊಡುವರೆ ಜಿಲ್ಲಾ ಬೋರ್ಡಿನ ಅಧ್ಯಕ್ಷರ ಹೆಸರಿನಲ್ಲಿ ರೂ. 153/ ಠೇವಣಾತಿ ಇರಿಸಿರುವುದು ಅಭಿನಂದನೀಯ ಅನುಸರಣೀಯವೂ ಇದೆ.

ಉಳ್ಳೂರು— ಕುಂದಾಪುರ ತಾಲೂಕಿನ ಉಳ್ಳೂರು ಬೋರ್ಡ್ ಎಲಿಮೆಂಟರಿ ಶಾಲಾ ವಠಾರದಲ್ಲಿ ತಾ. 5ನೇ ರಾತ್ರಿ ಗ್ರಾಮಸ್ಥರ ಕೂಡುವಿಕೆಯಿಂದ ಯಕ್ಷಗಾನ ಕಲಾ ಸಂಘವೊಂದು ಸ್ಥಾಪಿಸಲ್ಪಟ್ಟು ಅದಕ್ಕೆ 'ಬನಶಂಕರೀ' ಕಲಾ ಕೂಟವೆಂದು ನಾಮಕರಣ ಮಾಡಲಾಯಿತು.

ಕುಂದಾಪುರ— ಆಚಾರ್ಯ ವಿನೋಬಾ ಭಾವೆಯವರ ಜನ್ಮದಿನವಾದ ತಾ. 11ರಲ್ಲು ಕುಂದಾಪುರ ತಾಲೂಕಿನ ಕುಂಬಾಶಿಯಿಂದ ಪೂರ್ವಕ್ಕೆ ವಕ್ವಾಡಿಗೆ ಮತ್ತು ಮಾಲಾಡಿಗೆ ಹೋಗುವ ಮಾರ್ಗ ನಿರ್ಮಾಣ ಕಾರ್ಯದಲ್ಲಿ ಊರ ಒಕ್ಕಲಿಗರೇ ಮುಂದಾಗಿ ಭಾಗವಹಿಸಿದರು. ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ; ಕುಶಲ ಹೆಗ್ಡೆ ರಾಮಣ್ಣ ಸೆಟ್ಟಿ, ಎನ್. ಎಸ್ ಪರಮೇಶ್ವರಯ್ಯ, ಎಮ್. ಎಸ್. ವೆಂಕಟರಮಣಯ್ಯ ಹಾಗೂ ಕೋಟೇಶ್ವರ ಹೈಸ್ಕೂಲಿನ ಅಧ್ಯಾಪಕ ಮತ್ತು ವಿದ್ಯಾರ್ಥಿಗಳು ಈ ರಚನಾತ್ಮಕ ಕಾರ್ಯದಲ್ಲಿ ಭಾಗವಹಿಸಿದ್ದರು.

ಮಂಜೇಶ್ವರ— ತಾ. 8ರಲ್ಲು ಶ್ರೀ ಮಹಾಲಿಂಗೇಶ್ವರ ಶಾಲಾ ವತಿಯಿಂದ ವಯಸ್ಕರ ಶಿಕ್ಷಣ ಪ್ರಚಾರ ಕಾರ್ಯವು ಶಾಲಾ ಮಕ್ಕಳ ಮೆರವಣಿಗೆ ಮೂಲಕ ನಡೆಯಿತು.

ಗುಡ್ಡೆ ಅಂಗಡಿ— ಕುಂದಾಪುರ ತಾಲೂಕಿನ ನಾಡಾ ಗ್ರಾಮದ ಗುಡ್ಡೆ ಅಂಗಡಿ ರೋಡ್ ಡೆವಲಪ್‌ಮೆಂಟ್ ಕಮಿಟಿಗೆ ಕಲಕತ್ತೆಯಲ್ಲಿರುವ ಈ ಊರಿನ ಶ್ರೀ ನಾರಾಯಣ ಡಿ. ಕಾಂಚಾನ್‌ರವರು ರೂಪಾಯಿ 40/- ಧನಸಹಾಯ ಮಾಡಿರುವುದು ಅಭಿನಂದನೀಯ.

ಗುಂಡಿಬೈಲು— ಉಡುಪಿ ಪೇಟೆಯ ಸಮೀಪದ ಗುಂಡಿಬೈಲು ಬ್ರಹ್ಮ ಬೈದರ್ಕಳ ದೂಮಾವತಿ ಯಕ್ಷಗಾನ ಸಂಘದವರ ವಿದ್ಯಾಪೂಜಾ ಸಮಾರಂಭವು ಇದೇ ತಾ. 8ರಲ್ಲು ಜರಗಿತು. ಶ್ರೀ ಪಿ. ಶೀನ ಸೆಟ್ಟರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಉತ್ಸವದ ಅಂಗವಾಗಿ ತಾಳಮದ್ದಳೆ ನಡೆಯಿತು.

ಕೊಳಂಬೈಲು (ಹಳೆಯಂಗಡಿ)— ಇಲ್ಲಿಯ ಸರ್ವೋದಯ ಮಿಶನ್ ಎಲಿಮೆಂಟರಿ ಶಾಲೆಗೆ ಕಟ್ಟಿಸಿದ ನೂತನ ಕಟ್ಟಡವನ್ನು ಅಖಿಲ ಭಾರತ ಸಂಯುಕ್ತ ಬಾಸೆಲ್ ಮಿಶನ್ ದೇವಾಲಯಗಳ ಅಧ್ಯಕ್ಷ ಪೂಜ್ಯ ಶ್ರೀ ರೊಸ್ಸೆಲ್‌ರವರು ಉದ್ಘಾಟಿಸಿದರು. ಶ್ರೀಗಳಾದ ಭಾಸ್ಕರ ಆಚಾರ್ಯ, ಮಹಾಬಲ ಸೆಟ್ಟಿ, ಶ್ರೀಮತಿ ಡಿ. ಆರ್. ಸಾಲಿನ್ಸ್ ಮೊದಲಾದವರು ಮಾತನಾಡಿದರು.

ಕದಿಯೂರು— ಸ್ಥಳೀಯ ಎಯಿಡೆಡ್ ಹಾ| ಎ| ಶಾಲೆಯ ಮಕ್ಕಳ ತಿಂಗಳ ಹಬ್ಬವು ತಾ. 1ರಲ್ಲು ಶ್ರೀ ಕೆ. ರಘು ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಭಾಸ್ಕರ ಸೆಟ್ಟರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎ. ಎಸ್. ತಂತ್ರಿ, ಎಚ್. ವೆಂಕಟಗಿರಿ, ಸುಂದರ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಮಕ್ಕಳ ವಿನೋದಾವಳಿ, ಅಧ್ಯಕ್ಷ ಭಾಷಣ, ವಂದನಾರ್ಪಣೆಗಳಾಗಿ ಸಮಾರಂಭ ಮುಕ್ತಾಯವಾಯಿತು.

ಬಿ. ಸಿ ರೋಡ್-ತರುಣರ ಶ್ರಮದಾನ— ಬಿ. ಸಿ. ರೋಡಿನಿಂದ ಬಂಟ್ವಾಳ ಎಸ್. ವಿ. ಎಸ್. ಹೈಸ್ಕೂಲಿಗೆ ಸೀದಾ ಹೋಗತಕ್ಕ ಮೂರು ಅಡಿ ಅಗಲದ ಮುಕ್ಕಾಲು ಮೈಲು ಉದ್ದದ ರಸ್ತೆಯನ್ನು ಸಾರ್ವಜನಿಕರ ಉಪಯೋಗಕ್ಕಾಗಿ ಶ್ರೀಗಳಾದ ಪದ್ಮನಾಭ ಉಪಾಧ್ಯಾಯ, ರಂಗಯ್ಯ, ಕೆ. ಎಲ್. ರಾವ್, ಮುಂಡಪ್ಪ ಮೊದಲಾದವರು ತಮ್ಮ ಶ್ರಮದಾನದಿಂದ ತಾ. 5ರಲ್ಲು ರಚಿಸಿದರು.

ಕಾರ್ಕಳ— ಸ್ಥಳೀಯ ವಕೀಲ ಕೂಟದವರು ತಮ್ಮ ಪ್ರಥಮ ಕಾಣಿಕೆಯಾಗಿ ನೆರೆಹಾವಳಿಗೆ ಪರಿಹಾರ ನಿಧಿಯ ಸಲುವಾಗಿ ರೂಪಾಯಿ 71/-ನ್ನು ತಾ. 7ರಂದು ಪ್ರಧಾನ ಮಂತ್ರಿ ಪಂಡಿತ ನೆಹರೂರವರಿಗೆ ಕಳುಹಿಸಿರುತ್ತಾರೆ. ಇನ್ನು ಹೆಚ್ಚಿನ ಹಣವನ್ನು ಸಂಗ್ರಹಿಸಿ ಕಳುಹಿಸುವ ಏರ್ಪಾಡು ನಡೆಯುತ್ತದೆ.

ಹಾಲು ಸರಬರಾಯಿ ಸಂಘದ ಮಹಾಸಭೆಯು ತಾ. 5ರಲ್ಲು ಡಾ| ಎನ್. ಎಮ್. ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಳೆದ ಸಹಕಾರಿ ವರ್ಷಾಂತ್ಯದೊಳಗೆ ಈ ಮಹಾ ಸಭೆಯು ಜರಗಿ ಡೈರೆಕ್ಟರರ ಚುನಾವಣೆಯಾಗಬೇಕಾಗಿದ್ದರೂ, ಅದು ಸಕಾಲದಲ್ಲಿ ಜರಗದಿದ್ದುದರಿಂದ ಮುಂದಿನ ಚುನಾವಣೆ ನಡೆಯುವ ವರೆಗೆ ಈಗಿರುವ ಡೈರೆಕ್ಟರ ಮಂಡಳಿಯನ್ನೇ ಮಾನ್ಯಮಾಡಬೇಕೆಂದು ಡಾ| ಡಿ| ರಿಜಿಸ್ಟ್ರಾರರನ್ನು ಕೇಳಿಕೊಳ್ಳುವ ನಿರ್ಣಯವಾಗಿದೆ.

ಪೊಳಲಿ— ಶ್ರೀ ರಾಜರಾಜೇಶ್ವರೀ ದೇವಸ್ಥಾನಕ್ಕೆ ಶ್ರೀ ಜಿ. ಅಚ್ಯುತ ಭಟ್ಟರು ಮೆನೇಜರರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿಯ ರಸ್ತೆಯ ಕೆಲಸವು ಭರದಿಂದ ಸಾಗುತ್ತಿದ್ದು ಬರುವ ಜಾತ್ರೆಯೊಳಗೆ ಪೂರ್ತಿಯಾಗಬಹುದು.

ಅಶ್ವತ್ಥಪುರ— ಸ್ಥಳೀಯ ಮಹಾತ್ಮಾ ಗಾಂಧಿ ಧರ್ಮಾರ್ಥ ವಾಚನಾಲಯದ ವಿಶೇಷ ಮಹಾ ಸಭೆಯು ತಾ. 12ರಲ್ಲು ಶ್ರೀ ಎನ್. ಸುಬ್ಬಣ್ಣ ಭಟ್ಟರ ಅಧ್ಯಕ್ಷತೆಯಲ್ಲಿ ಶ್ರೀ ವಾಣಿ ವಿಲಾಸ ಹಾ| ಎ| ಶಾಲೆಯಲ್ಲಿ ಜರಗಿತು. ಸೋಶಿಯಲ್ ಎಡ್ಯುಕೇಶನಲ್ ಆರ್ಗನೈಜರ್ ಶ್ರೀ ಯು ದಯಾನಂದ ರಾಯರು ಗ್ರಾಮ ಸುಧಾರಣಾ ಸಂಘದ ಆವಶ್ಯಕತೆಯ ಕುರಿತು ಭಾಷಣವಿತ್ತರು. ಬಳಿಕ ಈ ವಾಚನಾಲಯವನ್ನು ಗ್ರಾಮ ಸುಧಾರಣಾ ಸಂಘ ಅಶ್ವತ್ಥಪುರ ಎಂದು ಮಾರ್ಪಡಿಸಿ ಅದರ ಆಶ್ರಯದಲ್ಲಿ ವಾಚನಾಲಯ ನಡೆಯಬೇಕೆಂದಾಯಿತು. ಗ್ರಾಮ ಸಂಘಕ್ಕೆ ಶ್ರೀಗಳಾದ ವಿ. ಪಾಂಡುರಂಗ ರಾವ್, ಟಿ. ಎಸ್. ನಾಗೇಶ್ ಭಟ್, ವಿ. ಕೃಷ್ಣ ರಾವ್, ಕೆ. ಸುಂದರ ಸೆಟ್ಟಿ, ವಿ. ತಿಮ್ಮಪ್ಪ ಗೌಡ, ವಿ. ಅಶ್ವತ್ಥಾಮ ಭಟ್ಟರು ಕಾರ್ಯಕಾರಿ ಮಂಡಳಿಗೆ ಆರಿಸಲ್ಪಟ್ಟರು.

ಸುವರ್ಣ ಸಂದರ್ಭ!



ಬರೇ ರೂ 16/-ಕ್ಕೆ ಜ್ಯುವೆಲ್‌ಗಳುಳ್ಳ ರಿಸ್ಟ್‌ವಾಚು. ಪ್ರತಿಯೊಂದು ರಿಸ್ಟುವಾಚಿಗೆ ಯು. ಎಸ್. ಎ. ಪೇಟಂಟ್ ಕೇಸು ಉಚಿತ. ಸರಿಯಾಗಿ ಸಮಯವನ್ನು ಕೊಡುವ ಸ್ವಿಸ್ ತಯಾರಿಕೆಯ ವಾಚುಗಳು. 10 ವರ್ಷ ಗಾರಂಟಿ ಜುವೆಲುಗಳಿರುವ ಕ್ರೋಮ್ ಕೇಸಿನವು ರೌಂಡ್ ಯಾ ಚೌಕ ಆಕಾರದ್ದಕ್ಕೆ ರೂ 16/- ಉತ್ತಮದಕ್ಕೆ ರೂ 17/- ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 18-8-0 ಹೆಚ್ಚುಗುಣದ ಉಪಯೋಗಿಸುವ 8 ಜುವೆಲುಗಳುಳ್ಳದಕ್ಕೆ ರೂ 21/- ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 23/- ಚೌಕ ಕೃತಿಯ 10 ಜುವೆಲುಗಳುಳ್ಳ ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 30/- ಚಪ್ಪಟೆ ಆಕಾರದ 15 ಜುವೆಲುಗಳುಳ್ಳದಕ್ಕೆ ರೂ 31/- ಉತ್ತಮ ತರದಕ್ಕೆ ರೂ 36/- ಉತ್ತಮ ತರದ 15 ಜುವೆಲುಗಳುಳ್ಳ ಕ್ರೋಮ್ ವಾಟರ್ ಪ್ರೂಫ ಉಳ್ಳದಕ್ಕೆ ರೂ 40/- ರೋಲ್ಡ್ ಗೋಲ್ಡ್ ಉಳ್ಳದಕ್ಕೆ ರೂ 50/- ಅಲಾರಾಮ್ ಟಾಯಿಂಪೀಸು ರೂ 16/- ಟ ಖ. ರೂ 1-1-0 ಪ್ರತ್ಯೇಕ

The Syma Watch Co (N J)
Post Box No. 11141, CALCUTTA—6

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ **ಭುವನೇಂದ್ರ** ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾರ ಗಲ್ಲಿ, ಹುಬ್ಬಳ್ಳಿ.

ಡಿ. ಕೆ. ಭಾರದ್ವಾಜರ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಸನರಿ
ಬೆಲೆ. ರೂ. 5—6—0

ಶಿವರಾಮ ಕಾರಂತರ
ಕನ್ನಡ × ಕನ್ನಡ
ಸಿರಿಗನ್ನಡ ಅರ್ಥಕೋಶ
ಬೆಲೆ: ರೂ. 4—0—0
ನವಭಾರತ ಬುಕ್ ಡಿಪೋ, ಉಡುಪಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ವಿಶೇಷ ಕಮಿಶನ್ ದರಕ್ಕೂ ಬರೆಯಿರಿ.
1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಂಗಳೂರು

ಬ್ರಿಟನಿನ ವಿದ್ಯಾರ್ಥಿ ವೇತನ— ಲಂಡನ್ ವಿಶ್ವವಿದ್ಯಾಲಯದಲ್ಲಿ, ವಿದೇಶ ಭಾಷೆಯಾಗಿ ಇಂಗ್ಲಿಷನ್ನು ಬೋಧನೆಯ ಅಧ್ಯಯನ ಮಾಡುವುದಕ್ಕಾಗಿ ದಕ್ಷಿಣ ಭಾರತದ ಇಬ್ಬರು ವಿದ್ಯಾರ್ಥಿನಿಯರಿಗೆ, ಗುಂಟೂರಿನ ಸ್ಯೆಂಟ್ ಜೋಸೆಪ್ಸ್ ಟ್ರೈನಿಂಗ್ ಶಾಲೆಯ ಮಿಸ್. ಡಿ. ಟಿ. ಡಿ'ರುಸಾರಿಯೋ ಮತ್ತು ಮಂಗಳೂರು ಸ್ಯೆಂಟ್ ಏನ್ಸ್ ಟ್ರೈನಿಂಗ್ ಕಾಲೇಜಿನ ಪ್ರಾಧ್ಯಾಪಿಕೆ ಸಿಸ್ಟರ್ ಎಂ. ಫ್ಲೋರಿಯನ್ ಇವರಿಗೆ ಬ್ರಿಟಿಷ್ ಕೌನ್ಸಿಲಿನಿಂದ ವಿದ್ಯಾರ್ಥಿ ವೇತನ ದೊರೆತಿದ್ದು ಅವರು ಇಷ್ಟರಲ್ಲಿ ಇಂಗ್ಲೆಂಡಿಗೆ ತೆರಳಿರುತ್ತಾರೆ.

ಜಿಲ್ಲಾ ರೈತ ಸಂಘದ— ಮಹಾಸಮಿತಿ ಸಭೆಯು ತಾ. ೬ರಲ್ಲು ಶ್ರೀ ಎ. ಕೃಷ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಒಕ್ಕಲು ಹಿತ ಮಸೂದೆಯು ಮತ್ತು ಸಾಲ ತಡೆ ಹಿಡಿಯುವ ಕಾನೂನನ್ನು ನೂರಕ್ಕೆ ವರ್ಷಗಳವರೆಗೆ ಜ್ಯಾರಿಯಲ್ಲಿ ಇರಿಸುವಂತೆ ಪ್ರಾಂತ ಸರಕಾರವನ್ನು ಕೇಳಿಕೊಳ್ಳುವ ನಿರ್ಣಯವಾಯಿತು. ಈ ವಿಚಾರದಲ್ಲಿ ಜಿಲ್ಲೆಯ ಪ್ರತಿನಿಧಿಗಳೆಲ್ಲರ ಸಹಕಾರ ಸಹಾಯ ಪಡೆಯಲು ಒಂದು ಕಮಿಟಿ ರಚಿಸಲ್ಪಟ್ಟಿತು.

ಕಾಲೇಜು ವಿದ್ಯಾರ್ಥಿಯ ಅರ್ಜಿ— 1953ರ ಜೂನ್ ತಿಂಗಳಿಂದ ಮಂಗಳೂರಿನ ಸರಕಾರೀ ಕಾಲೇಜಿನ ಇಂಟರ್ ಮಿಡಿಯೇಟ್ ತರಗತಿಯಲ್ಲಿ ಕಲಿಯುತ್ತಲಿದ್ದ ವಿದ್ಯಾರ್ಥಿಯೊಬ್ಬನ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟನ್ನು ಇತ್ತೀಚೆಗೆ ರದ್ದುಗೊಳಿಸಿ, ಕಾಲೇಜು ಶಿಕ್ಷಣ ಪಡೆಯಲು ಅನರ್ಹನೆಂದು ತಿಳಿಸಿದ ಯೂನಿವರ್ಸಿಟಿ ಆಜ್ಞೆಯನ್ನು ರದ್ದು ಮಾಡಬೇಕೆಂದು ಮದ್ರಾಸು ಹೈಕೋರ್ಟಿಗೆ ಮಾಡಿದ ಅರ್ಜಿಯು ಸ್ವೀಕರಿಸಲಾಗಿದೆ.

ಮಂಗಳೂರು ಬಂದರದಲ್ಲಿ ಅಮೇರಿಕದ ಹಡಗುಗಳು— ಇಂಗುವಂತಾಗಲು ಅಮೇರಿಕದ 'ದಿ ಅಮೇರಿಕನ್ ಪ್ರೆಸಿಡೆಂಟ್ ಲ್ಯಾನ್ಸ್ ಇನ್‌ಕೋ' ಎಂಬ ಹಡಗು ಸಂಸ್ಥೆಯವರು ಮಂಗಳೂರಿನ 'ಯುನೈಟೆಡ್ ಶಿಪ್ಪಿಂಗ್ ಕೋರ್ಪರೇಶನ್ ಲಿಮಿಟೆಡ್' ಸಂಸ್ಥೆಯನ್ನು ತಮ್ಮ ಮಂಗಳೂರು ಏಜಂಟರನ್ನಾಗಿ ನೇಮಿಸಿರುತ್ತಾರೆ. ಇದೇ ತಾ. 19ರಲ್ಲು 'ಪ್ರೆಸಿಡೆಂಟ್ ಪಿಯರ್ಸ್' ಎಂಬ ಹಡಗವು ಮಂಗಳೂರು ಬಂದರಕ್ಕೆ ಬರುವುದಾಗಿ ತಿಳಿದುಬರುತ್ತದೆ.

ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರರೊಡನೆ ಭೇಟಿ— ಮಂಗಳೂರು ನಾಗರಿಕರ ಸಂಘದ ಕಡೆಯಿಂದ ಶ್ರೀಗಳಾದ ಟಿ. ಎಮ್. ಆಳ್ವಾ, ಶಂಕರ ಆಳ್ವ, ಡಿ. ಎಚ್. ಸಜರಿಕ್, ಡಿ. ಸೋಮನ ರಾವ್ ಮತ್ತು ಎ. ಕೆ. ಸೇನರು ಮಂಗಳೂರಲ್ಲಿ ಮೊಕ್ಕಾಂ ಮಾಡಿರುವ ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರರನ್ನು ಭೇಟಿಯಾಗಿ, ನಗರದಲ್ಲಿ ಇತ್ತೀಚೆಗೆ ಮಾಡಲಾದ ತೆರಿಗೆ ಪುನರ್ನಿರ್ಮರ್ಣಯಿಂದಾಗಿ ಅನ್ಯಾಯ, ಅಸಮತೆಗಳನ್ನು ವಿವರಿಸಿ, ಮುಖ್ಯವಾಗಿ ಮುನಿಸಿಪಾಲಿಟಿಗೆ ಇತ್ತೀಚೆಗೆ ಸೇರಿಸಿಕೊಳ್ಳಲಾದ ಬಿಜೈ, ದೇರೆಬೈಲ್, ಜಪ್ಪು, ಬೋಳೂರು ವಾರ್ಡುಗಳ ತೆರಿಗೆದಾರರಿಗಾದ ಅನ್ಯಾಯಗಳನ್ನು ವಿವರಿಸಿ ಈ ಪುನರ್ನಿರ್ಮರ್ಣಯನ್ನು ರದ್ದುಗೊಳಿಸುವಂತೆ ಮದ್ರಾಸು ಸರಕಾರಕ್ಕೆ ಶಿಫಾರಸು ಮಾಡಬೇಕೆಂದು ವಿನಂತಿಸಿದರು. ಇನ್ಸ್‌ಪೆಕ್ಟರರು ಶಿಫಾರಸು ಮಾಡುವುದಾಗಿ ಭರವಸೆ ಕೊಟ್ಟಿರೆನ್ನಲಾಗಿದೆ.

ನಾಟಕ ಪ್ರದರ್ಶನಕ್ಕೆ ನಿರ್ಬಂಧ— ಮಂಗಳೂರಿನ ಶ್ರೀ ಎಚ್. ರೊಡ್ರಿಗ್ಸ್ ಮತ್ತು ಪಂಗಡದವರು ಅಭಿನಯಿಸುತ್ತಿದ್ದ 'ಅಂತುಕ್ರಿಸ್ತ' ಎಂಬ ನಾಟಕವು ಕಳಂಕವಿಲ್ಲದ ಮತ್ತು ನಿಂದೆಯ ಸ್ವರೂಪದ್ದೆಂದು ಮದ್ರಾಸು ಸರಕಾರವು ಈ ನಾಟಕವನ್ನು ಮದ್ರಾಸು ರಾಜ್ಯದ ಯಾವ ಸಾರ್ವಜನಿಕ ಸ್ಥಳದಲ್ಲಿಯೂ ಅಭಿನಯಿಸುವುದನ್ನು ನಿಷೇಧಿಸಿಯದೆ.

ನಗರ ಸಭೆಯು— ತಾ. 11ರಲ್ಲು ಸಂಜೆ ಚೆರ್ಮನ್ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರದ ತೆರಿಗೆದಾರರ ಪಾಲನಾರು ಆಪೀಲುಗಳು ಇತ್ಯರ್ಥಗೊಳ್ಳದುವು ಆಪೀಲುಗಳು ಶಾಸನ ಸಭಾಕ್ರಮದಲ್ಲಿಯೇ ತೀರ್ಮಾನಿಸತಕ್ಕದ್ದಲ್ಲದೆ, ನಗರಸಭೆಯು ನ್ಯಾಯಸ್ಥಾನದ ರೂಪ ತಾಳಬಾರದೆಂದು 'ಇನ್ಸ್‌ಪೆಕ್ಟರ್ ಒಫ್ ಲೋಕಲ್ ಬೋರ್ಡ್, ಅವರು ಹೇಳಿರುವುದಾಗಿ ಸಭಾಪತಿಗಳು ಸಭೆಗೆ ತಿಳಿಸಿದರು. ಜಪ್ಪು ಹರಿಗೆಯ ಕೇಂದ್ರದ ಕಟ್ಟಡ ವಿಸ್ತರಣಕ್ಕೆ ರೂ. 1800/- ಮಂಜೂರು ಮಾಡಲಾಯಿತು. ಮುನಿಸಿಪಲ್ ಔಷಧಾಲಯದ ಡಾಕ್ಟರು ಮತ್ತು ಕಂಪೌಂಡರುಗಳಿಗೆ ಕೈಮುಗ್ಗ ಅಥವಾ ಗಿರಣಿ ಬಟ್ಟೆ ಒದಗಿಸಿದರೆ ಸಾಕೆಂದು ತೀರ್ಮಾನವಾಯಿತು. 1954—55ರಲ್ಲು ನಗರ ಸಭೆಯ ವತಿಯಿಂದ ಒಂದು ಕಲಾ ಮತ್ತು ಔದ್ಯೋಗಿಕ ಪ್ರದರ್ಶನವನ್ನು ಏರ್ಪಡಿಸುವುದೆಂದು ನಿರ್ಣಯವಾಗಿ ಆ ವಿಚಾರ ಪರಿಶೀಲಿಸಲು ಆರ್ಥಿಕ ಉಪಸಮಿತಿಗೆ ಬಿಟ್ಟು ಕೊಡಲಾಯಿತು.

ಜಿಲ್ಲಾ ಟ್ರೇಡ್ ಯೂನಿಯನ್ ಕೌನ್ಸಿಲು— ಸಭೆಯು ತಾ. ೨ರಲ್ಲು ಶ್ರೀ ಶಾಂತಾರಾಂ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಸೋಮಪ್ಪ ಶೆಟ್ಟರು ವರದಿಯನ್ನೋದಿದರು. ಬಳಿಕ ಶ್ರೀ ಬಿ. ವಿ. ಕಕ್ಕಿಲ್ಲಾಯರು ಪ್ರಾಮುಖ್ಯ ವಿಷಯಗಳ ತೀರ್ಮಾನದ ಬಗ್ಗೆ ತಂದ 18 ನಿರ್ಣಯಗಳ ಪರಿಶೀಲನೆಯಾಯಿತು. ಅಪ್ಪೆಲೇಟ್ ಟ್ರಿಬ್ಯೂನಲಿನ ಬೇಂಕ್ ನೌಕರರಿಗೆ ಸಂಬಂಧಪಟ್ಟ ಎವಾರ್ಡ್ ತಿದ್ದುಪಡಿಗಳನ್ನು ವಿರೋಧಿಸಲಾಯಿತು. ನವಂಬರ ಅಥವಾ ಡಿಸೆಂಬರ ತಿಂಗಳ ಮೊದಲನೇ ವಾರದಲ್ಲಿ ಜಿಲ್ಲಾ ಮಜೂರರ ಐದನೇ ಸಮ್ಮೇಳನವನ್ನು ಕರೆಯಬೇಕೆಂದು ನಿರ್ಧಾರವಾಯಿತು.

ಬಳ್ಳಾರಿ— ತಾರಾನಾಥ ಆಯುರ್ವೇದ ವಿದ್ಯಾಪೀಠದ ಶಾಖೆಯನ್ನು "ಲಲಿತ ಮಹಾಲ್"ಗೆ ಬದಲಿಸುವ ಸಮಾರಂಭವು ಇಲ್ಲಿಯ ಡಿಪ್ಯುಟಿ ಕಮಿಶನರ್ ಶ್ರೀ ಕೆ. ಶೇಷಗಿರಿ ರಾಯರ ಅಧ್ಯಕ್ಷತೆಯಲ್ಲಿ 2—9—54ರಲ್ಲಿ ಜರಗಿತು. ಜಿಲ್ಲಾ ಸರ್ಜನ್ ಡಾ| ಎಸ್. ಆರ್. ಗೋರೂರು ಇವರು ಇದೇ ಸಂದರ್ಭದಲ್ಲಿ ವಿದ್ಯಾರ್ಥಿ ಸಂಘದ ಉದ್ಘಾಟನೆಯನ್ನು ಜರಗಿಸಿದರು.

ಡಾ| ಬಿ. ಕೆ. ಮಾರ್ಳರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಿನ್ಸಿಪಾಲ್ ಡಾ| ಅಚ್ಚುಮ್ಯನವರು ವಿದ್ಯಾಪೀಠದ ಸಂಕ್ಷಿಪ್ತ ವರದಿಯನ್ನು ಓದಿದರು. ಶ್ರೀ ಆನಂದ ಹೆಗ್ಡೆಯವರು ವಿದ್ಯಾರ್ಥಿ ಸಂಘದ ವರದಿ ಓದಿದರು. ಆ ವೇಳೆ ಡಾ| ಎಸ್. ಆರ್. ಗೋರೂರು ಇವರು ವಿದ್ಯಾರ್ಥಿ ಸಂಘದ ಉದ್ಘಾಟನಾ ಭಾಷಣ ಮಾಡುತ್ತಾ, ಚಿಕಿತ್ಸಾ ಸೇವೆಯನ್ನು ಮಾಡುವಾಗ, ತಾವು ಅಭ್ಯಸಿಸಿದ ಮಾರ್ಗದ ಮೋಹವಿಡದೆ, ಭಾರತದಲ್ಲಿ ಪ್ರಚಲಿತವಿರುವ ಆಯುರ್ವೇದ—ಯುನಾನಿ—ಎಲೋಪತಿ—ಹೋಮಿಯೋಪತಿ ಇತ್ಯಾದಿ ಸಿದ್ಧಾಂತ ಪಂಥಗಳವರು ಅನ್ಯೋನ್ಯತೆಯಿಂದ ಜನತೆಯ ಶುಶ್ರೂಷಾರ್ಥವಾಗಿ ತತ್ಪರರಾಗಬೇಕೆಂದರು.

ಆ ವೇಳೆ ಅಧ್ಯಕ್ಷ ಸ್ಥಾನದಿಂದ ಶ್ರೀ ಕೆ. ಶೇಷಗಿರಿ ರಾಯರು ಈ ವಿದ್ಯಾಪೀಠವು ತಾರಾನಾಥರು ಹಾಕಿಕೊಟ್ಟ ಮಾರ್ಗದಲ್ಲಿ ಮುಂದರಿದು ಮಾಡುತ್ತಿರುವ ಸೇವಾ ಕಾರ್ಯವನ್ನು ಶ್ಲಾಘಿಸಿ, ಇದಕ್ಕೆ ಸರಕಾರಕ್ಕಿಂತಲೂ ಜನತೆಯ ನಿಸ್ವಾರ್ಥ ಸಹಾಯ ಮುಖ್ಯವೆಂದು ಒತ್ತಿ ಹೇಳಿದರು. ಮಹಾಜನರು ಮುಂದೆ ಬಂದು ತ್ಯಾಗಪೂರ್ಣವಾಗಿ ಸಹಾಯ ನೀಡಬೇಕೆಂದು ಮನವಿಮಾಡಿದರು. ಆಯುರ್ವೇದವು ವಿವಿಧ ಶೋಧನೆ-ಸಂಸ್ಕಾರಗಳಿಂದ ಚಿಕಿತ್ಸಾ ಪ್ರಪಂಚದ ಉತ್ಕೃಷ್ಟ ಪದ್ಧತಿಯಾಗುವಂತೆ ಈ ವಿದ್ಯಾಪೀಠದ ಸ್ನಾತಕರು ಆದರ್ಶ ಭಾವದಿಂದ ಅಭ್ಯಾಸ ಮಾಡಬೇಕೆಂದರು.

ಆ ವೇಳೆ ಡಾ| ಕೋಲಾರ್ ಶ್ರೀನಿವಾಸ ರಾಯರು ವಂದನಾರ್ಪಣೆ ಮಾಡಿದರು.

ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಅ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ) (ಅಚ್ಚಿನಲ್ಲಿದೆ)	೧೦	೦
ಕೊಲಂಬೊ ಇಂದ ಆಲ್ಮೋರಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಮಾಲೆ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರಡಿಗೆ (ಕುವೆಂಪು)	೪	೦
ರಾಜಯೋಗ	೨	೧೦
ಶ್ರೀ ಶಾರದಾದೇವಿ ಸಂಭಾಷಣೆ	೨	೮
ಗೀತಾ ಪತ್ರಗಳು	೨	೮
ಮಿಂಚುನೋಟಕೆ ಹಿಂದೂಧರ್ಮ	೨	೮
ಶ್ರೀ ಶಾರದಾದೇವಿ	೨	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ: ಗೌಣೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೦
ವಿದ್ಯಾಭ್ಯಾಸ	೦	೧೦
ಹಿಂದೂ ಧರ್ಮಸಾರ	೦	೧೦
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಈಶ್ವರಾನುರಾಗ	೦	೪
ನೊಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನ	೦	೪
ಪವಹಾರಿಬಾಬ	೦	೪
ದೇವದೂತ ಕ್ರಿಸ್ತ	೦	೪
ಹೈಮಾಚಲ ಸಾನ್ನಿಧ್ಯದಲ್ಲಿ (ಹರಿದ್ವಾರದಿಂದ ಕೇದಾರ ಬದರಿಗೆ)	೧	೮

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.



ಹೈಸ್ಕೂಲಿನ IV, V, VI ಫಾರ್ಮಿನ ವಿದ್ಯಾರ್ಥಿಗಳಿಗಾಗಿ

ಕನ್ನಡ ಪಂಡಿತ ಶ್ರೀ ಕೆ. ಕಾಂತ ರೈ, ವಿದ್ವಾನ್ ಇವರು ಬರೆದ

ಪ್ರೌಢ ಶಾಲಾ ವ್ಯಾಕರಣ ಮತ್ತು ಛಂದೋಲಂಕಾರ

ಸಿಗುತ್ತದೆ. ಬೆಲೆ: ೧—೧೦—೦.

ನವಭಾರತ ಪುಸ್ತಕ ಭಂಡಾರ, ಉಡುಪಿ.

-ಕನ್ನಡದಲ್ಲಿ ಹೊಸ ಬಗೆಯ ಗ್ರಂಥ-

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ. —ಪ್ರಜಾವಾಣಿ.

ಈ ಬರಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು; ಆದರೆ ಅವನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರಹದ ಆರಂಭದಲ್ಲಿ ಅದರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. —ರಾಷ್ಟ್ರಮತ.

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ. ಕನ್ನಡ ಜನತೆ, ಅದರಲ್ಲೂ ವಿದ್ಯಾರ್ಥಿವೃಂದ ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲುಖೋವಿದಂತಿದೆ ಇಲ್ಲಿಯ ವಿಷಯ ಸಂಪತ್ತು. —ಜನಪ್ರಗತಿ.

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒತ್ತುನೀಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ವಿಶೇಷ ಕಮಿಶನ್ ವರೆಕ್ಕೂ ಬರೆಯಿರಿ.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಕ್ಕಿಯ ಸಮೃದ್ಧಿ

(೧ನೇ ಪುಟದಿಂದ)

ಗಿರಣಿಗಳಲ್ಲಿ ಸಿದ್ಧವಾದ ಅಕ್ಕಿಯು ಆರೋಗ್ಯಕ್ಕೂ ದೇಹ ಪುಷ್ಟಿಗೂ ಪೋಷಕವಾಗಿಲ್ಲವೆಂದು ಗೊತ್ತಿದ್ದರೂ ಕೈಯಿಂದ ಕುಟ್ಟಿ ಅಕ್ಕಿ ಮಾಡುವ ಅಭ್ಯಾಸ ದಿನೇ ದಿನೇ ಕಡಿಮೆಯಾಗುತ್ತಾ ಹೋಗುತ್ತಿರುವುದು ಆಶ್ಚರ್ಯ! ಗೋಧಿ ಮುಂತಾದುವುಗಳನ್ನು ಬೀಸಿದಾಗ ಅವು ಬಿಳಿಯಾಗುತ್ತವೆ; ಈ ಹಿಟ್ಟನ್ನೆ ಬ್ರೆಡ್, ಅಥವಾ ರೊಟ್ಟಿಯಾಗಿ ಬೇಯಿಸಿ ತಿನ್ನಲಾಗುತ್ತದೆ ಅದನ್ನು ಕಂಡ ಸೊಗಸುಗಾರರು ಬಿಳಿಯಾಗಿ ಹೊಳೆಯುವ ಅಕ್ಕಿಯನ್ನು ಬಳಸ ತೊಡಗಿದರೆಂದೂ ಇದರಿಂದ ಗಿರಣಿಗಳಿಗೆ ಉತ್ತೇಜನ ದೊರಕಿತೆಂದೂ ಹೇಳಬಹುದು. ಗಿರಣಿಗಳಿಗೆ ಪ್ರೋತ್ಸಾಹ ಕೊಟ್ಟ ಇನ್ನೊಂದು ಅಂಶವೆಂದರೆ ವ್ಯಾಪಾರಿಗಳಿಗಾಗುವ ಲಾಭ—ಇದು ಅಗ್ಗ ದರದಲ್ಲಿ ಕುಟ್ಟುವ ಕೆಲಸವನ್ನು ನೆರವೇರಿಸುತ್ತದೆ, ಹೆಚ್ಚಿನ ಪೋಷಕಾಂಶಗಳು ನಷ್ಟಹೊಂದಿ, ಹುಳು ಹುಪ್ಪಟೆಗಳು ಈ ಅಕ್ಕಿಯ ಸುದ್ದಿಗೆ ಹೋಗುವುದಿಲ್ಲವಾದುದರಿಂದ, ಇದನ್ನು ದೀರ್ಘ ಕಾಲದವರೆಗೆ ಸಂಗ್ರಹಿಸಿ ಇಡುವುದೂ ಸಾಧ್ಯ.

ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳದ ಹೇಳಿಕೆಗನುಸಾರ ಸಾಧಾರಣ ರೀತಿಯ ಗಿರಣಿಯೊಂದು ಹಳ್ಳಿಯ ಐವತ್ತು ಸ್ತ್ರೀಯರ ಹೊಟ್ಟೆಗೆ ಪೆಟ್ಟು ಕೊಡುತ್ತದೆ. ಗಿರಣಿಗಳ ದೆಸೆಯಿಂದ ಹಳ್ಳಿಯ ಹೆಂಗಸರಲ್ಲಿ ನಿರುದ್ಯೋಗವು ತಾಂಡವವಾಡುತಿದ್ದು, ಅಖಿಲ ಭಾರತಕ್ಕಾಗುವಾಗ ಭತ್ತ ಕುಟ್ಟುವ ಜನರಿಗೆ ಕೂಲಿಯಾಗಿ ಸಲ್ಲುತಿದ್ದ ೫೦ಕೋಟಿ ರೂಪಾಯಿ ಹಣವನ್ನು ಗಿರಣಿಗಳೇ ಶೋಷಿಸುತ್ತವೆ. ಆರೋಗ್ಯಕ್ಕೆ ಅಪಾಯವನ್ನೂ ಆರ್ಥಿಕ ಸಂಕಟವನ್ನೂ ನಿರುದ್ಯೋಗದ ಸಮಸ್ಯೆಯನ್ನೂ ಉಂಟುಮಾಡಿ, ಕೆಲವೇ ಹಣವಂತರ ಹಿತ ಸಾಧಿಸುವ ಗಿರಣಿಗಳನ್ನು ಮುಚ್ಚಿ ಬಿಡುವುದು ಇಷ್ಟವೆಂದು ಬಲವಾದ ಚಳವಳ ನಡೆಯುತ್ತದೆ. ಪ್ರತಿಯೊಂದು ರಾಜ್ಯ ಸರಕಾರವೂ ಗಿರಣಿಗಳ ಹಾವಳಿಯನ್ನು ನಿಯಂತ್ರಿಸುವ ಕುರಿತು ಯೋಜನೆಗಳನ್ನು ಪರಿಶೀಲಿಸುತ್ತಿದೆ.

ಗಿರಣಿಗಳನ್ನು ನಡೆಸದಂತೆ, ಅಕ್ಕಿಯನ್ನು ಕೈಯಿಂದಲೇ ಕುಟ್ಟಿ ತಯಾರಿಸುವಂತೆ, ನಿರ್ಬಂಧಿಸುವುದರಿಂದ ಘಟನೆಯ ನ್ವಯಕೊಡಲಾದ ಮೂಲ ಭೂತ ಹಕ್ಕುಗಳನ್ನು ಉಲ್ಲಂಘಿಸಿದಂತಾಗಬಹುದು ಆದರೆ ಸಾರ್ವಜನಿಕರಿಗೆ ಗಂಡಾಂತರಕಾರಿಯಾದ ರೀತಿಯಲ್ಲಿ ಗಿರಣಿ ನಡೆಸುವುದನ್ನು ನಿಯಂತ್ರಿಸಲು ಸರಕಾರದ ಅಧಿಕಾರವನ್ನು ಪ್ರವರ್ತಿಸುವುದು ಅಪೇಕ್ಷಣೀಯ. ಹೊಸ ಗಿರಣಿಗಳಿಗೆ ಅನುಮತಿ ಕೊಡುವಾಗ, ಹಾಗು ಹಳೆಯ ಗಿರಣಿಗಳ ಪರವಾನಿಗೆಯನ್ನು ಪುನರುಜ್ಜೀವಿಸುವಾಗ, ಆ ಪ್ರದೇಶದ ಜನರಿಗಾಗುವ ಆರ್ಥಿಕ ಸಂಕಟವನ್ನೂ ಇತರ ಅಂಶಗಳನ್ನೂ ಗಮನಿಸುವುದು ಇಷ್ಟವೆಂದು ಹೇಳಬಹುದು. ಈ ಪ್ರಶ್ನೆಯು ಎಷ್ಟು ಮಹತ್ವ ಪಡಿದಿದೆಯೆಂದರೆ, ಭಾರತ ಸರಕಾರದವರು ವಿಶೇಷ ಸಮಿತಿಯೊಂದಕ್ಕೆ ಗಿರಣಿಗಳ ಹಾವಳಿಯನ್ನು ತಡೆಗಟ್ಟಲು ಏನು ಉಪಾಯ ಕೈಗೊಳ್ಳಬೇಕೆಂದು ಕೇಳುವರಾಗಿ ತಿಳಿಯುತ್ತದೆ ಈ ಸಮಿತಿಯು ಕೈಯಿಂದ ಭತ್ತ ಕುಟ್ಟಿ ಅಕ್ಕಿ ತಯಾರಿಸುವ ವಿಧಾನ, ಗ್ರಾಹಕರ ಹಿತದೃಷ್ಟಿ, ಪೋಷಕಾಂಶಗಳ ವಿಚಾರ, ಅರ್ಥಮಂಡಳದಲ್ಲಿ ಇದಕ್ಕಿರುವ ಸ್ಥಾನ, ಹಳ್ಳಿಗಳಲ್ಲಿಯ ಸ್ತ್ರೀಯರಿಗ ಇದು ಕೊಡುವ ಉದ್ಯೋಗದ ಪ್ರಮಾಣ ಮುಂತಾದುವನ್ನು ಪರ್ಯಾಲೋಚಿಸುವುದು.

ಈ ಸಮಿತಿಯ ಸೂಚನೆಗಳೇನೆಂದು ತಿಳಿಯುವ ವರೆಗೆ ನಮ್ಮಲ್ಲಿ ಹೆಚ್ಚಿನವರಿಗೆ ಗಿರಣಿಗಳ "ಬಿಳಿ" ಅಕ್ಕಿಯನ್ನೇ ತಿನ್ನಬೇಕಾದೀತು: ಆದುದರಿಂದ ಇರುವ ಅಲ್ಪಸ್ವಲ್ಪ ಪೋಷಕಾಂಶಗಳನ್ನಾದರೂ ಉಳಿಸಿಕೊಳ್ಳುವಂತೆ ನಾವು ಅನ್ನ ಮಾಡುವ ಕ್ರಮವನ್ನು ಸುಧಾರಿಸುವುದು ಒಳ್ಳೇದು ಅಕ್ಕಿಯನ್ನು ಮೂರು ಸಲ ತೊಳದು ಬೇಯಿಸಿದ್ದರಿಂದ ೧೧%, ಪಾತ್ರೆಯ ಬಾಯಿಯನ್ನು ಮುಚ್ಚದೆ ಬೇಯಿಸಿ, ತಿಳಿಯನ್ನು ಸೋಸಿದ್ದರಿಂದ ೫೦% ಪೋಷಕಾಂಶಗಳು ನಷ್ಟವಾಗುತ್ತವೆ ಪಾತ್ರೆಯನ್ನು ಮುಚ್ಚಿ ನೀರನ್ನೆಲ್ಲ ಹೀರುವಂತೆ ಅಕ್ಕಿಯನ್ನು ಬೇಯಿಸಿದರೆ, ಆಗ ನಷ್ಟದ ಅಂಶ ಇಷ್ಟಾಗುವುದಿಲ್ಲ ಚೆಳ್ತಿಗೆ ಅಕ್ಕಿಯನ್ನು ಹೀಗೆ ಬೇಯಿಸುವ ಪದ್ಧತಿ ನಮ್ಮಲ್ಲುಂಟು—ಹಾಗೆ ಮಾಡಿ, ನಾವು ಕುಟ್ಟುವಾಗ ಉಂಟಾದ ನಷ್ಟವನ್ನು ಭರ್ತಿ ಮಾಡಿಕೊಳ್ಳುತ್ತೇವೆ ಇಷ್ಟರಿಂದಲೇ ಕೆಲಸವಾಗದೆಂದೂ ಕ್ರಮಗಳನ್ನು ಇನ್ನಷ್ಟು ಪರಿಷ್ಕರಿಸುವುದು ಹಿತವೆಂದೂ ವೈಜ್ಞಾನಿಕ ಶೋಧನೆಗಳು ಆಗ್ರಹಪಡಿಸುತ್ತವೆ. ಇತ್ತ ಲಕ್ಷ್ಯಕೊಡದಿದ್ದರೆ ನಾವು ಅಕ್ಕಿಯ ಸಮೃದ್ಧಿಯ ವಿಷಯ ಎಷ್ಟು ಮಾತಾಡಿದರೂ ಸತ್ವವನ್ನು ಮುಚ್ಚಿಟ್ಟಂತಾಗುತ್ತದೆ: ನಷ್ಟವಾಗುತಿದ್ದರೂ ಲಾಭವೇ ಎಂದು ವ್ಯರ್ಥ ಹೇಳಿಕೊಂಡಂತಾಗುತ್ತದೆ.

—ಕಾರ್ತಿಕೇಯ.

ಸ್ವೀಕಾರ—ವಿಮರ್ಶೆ

ಪಾಣಿನೀಸೂತ್ರವ್ಯಾಖ್ಯಾ—

ಪ್ರಕಾಶಕರು: ಟಿ. ಚಂದ್ರಶೇಖರನ್, ಸರಕಾರದ ಪುರಾತನ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ ರೂ. ೧೪—೧೨—೦.

ಎಲ್ಲ ಭಾರತೀಯ ಭಾಷೆಗಳಿಗೂ ಮಾತೃಸ್ಥಾನದಲ್ಲಿರುವ ಮತ್ತು ವಿಶ್ವದಲ್ಲಿ ಅತ್ಯಂತ ಉನ್ನತಿಯನ್ನು ಹೊಂದಿದ ಭಾಷೆ ಸಂಸ್ಕೃತ. ಇದರಷ್ಟು ವ್ಯಾಪಕವಾದ, ಸುಸಂಬದ್ಧವಾದ, ಅರ್ಥಗರ್ಭಿತವಾದ ಹಾಗು ಸುಂದರವಾದ ಭಾಷೆ ಇನ್ನೊಂದಿರಲಾರದು. ಸಂಸ್ಕೃತದ ಪ್ರತಿಯೊಂದು ಅಂಗೋಪಾಂಗವೂ ಪರಿಪುಷ್ಟವಾಗಿದೆ, ವ್ಯಾಕರಣ ಕ್ಷೇತ್ರವೂ ಇದಕ್ಕೆ ಹೊರತಲ್ಲ. ವಿಸ್ತಾರವಾದ ಮತ್ತು ಕಲಿಯಲು ತೀರ ಜಟಿಲವೆನಿಸಿದ ಸಂಸ್ಕೃತ ವ್ಯಾಕರಣ ಸೂತ್ರಗಳು ಮಾತ್ರ ವಿದ್ಯಾರ್ಥಿಗಳಿಗೆ ಅಷ್ಟಾಗಿ ರುಚಿಸಲಿಕ್ಕಿಲ್ಲ. ಆದರೆ ಇಷ್ಟಕ್ಕಾಗಿಯೇ ಭಾಷೆಯ ಆಳವಾದ ಅಧ್ಯಯನ ನಡೆಸುವುದಕ್ಕೆ ಹಿಂಜರಿಯುವುದೂ ಇಷ್ಟವಲ್ಲ. ವ್ಯಾಕರಣ ಶಾಸ್ತ್ರವನ್ನು ಸಿದ್ಧಾಂತಗಳಿಗೂ ಸೂತ್ರಗಳಿಗೂ ವ್ಯತ್ಯಯ ಬಾರದಂತೆ ಕಲಿಯುವ ವಿಧಾನವನ್ನು ರೂಪಿಸಿಕೊಳ್ಳುವುದೇ ಯೋಗ್ಯವಾದ ಮಾರ್ಗ. ಇಂತಹ ಪ್ರಯತ್ನವೊಂದು "ಪಾಣಿನೀಸೂತ್ರವ್ಯಾಖ್ಯಾ" ಎಂಬ ಮೇಲಿನ ಸಂಸ್ಕೃತ ಗ್ರಂಥದ ರೂಪದಲ್ಲಿ ನಡೆದಿರುವುದು ಸ್ವಾಗತಾರ್ಹವಾಗಿದೆ. ಮಣಲೂರಿನ ವೀರರಾಘವಾಚಾರ್ಯರಿಂದ ವಿರಚಿಸಲ್ಪಟ್ಟ ಈ ಗ್ರಂಥವು ಮುಖ್ಯವಾಗಿ "ಸಿದ್ಧಾಂತ ಕೌಮುದಿ" ಎಂಬ ಇನ್ನೊಂದು ವ್ಯಾಕರಣ ಶಾಸ್ತ್ರ ಗ್ರಂಥವನ್ನು ಹೋಲುತ್ತದೆ. ಸಂಜ್ಞಾ ಪ್ರಕರಣ, ಸಂಧಿತ್ರಯ ಪ್ರಕರಣ, ಶಬ್ದಾಧಿಕಾರ ಪ್ರಕರಣಗಳನ್ನು ಬಿಟ್ಟುಗೊಟ್ಟು ಸ್ತ್ರೀ ಪ್ರತ್ಯಯ ಪ್ರಕರಣದಿಂದ ದ್ವಿರುಕ್ತಿ ಪ್ರಕರಣದ ವರೆಗೆ ಸಮಾಸವೇ ಮುಂತಾದ ವ್ಯಾಕರಣ ವಿಷಯಗಳನ್ನು ಇದು ವಿಶುದ್ಧ ರೀತಿಯಲ್ಲಿ ವಿವರಿಸುತ್ತದೆ. ಈ ಗ್ರಂಥದ ವಿಶೇಷ ಆಕರ್ಷಣೆಯೆಂದರೆ ಪ್ರತಿಯೊಂದು ಸೂತ್ರಕ್ಕೂ ಪ್ರಸಿದ್ಧ ಸಂಸ್ಕೃತ ಕಾವ್ಯ ಹಾಗು ಗದ್ಯಗಳಿಂದ ಶ್ಲೋಕಗಳನ್ನೂ ವಾಕ್ಯಗಳನ್ನೂ ಉದಾಹರಣೆಯಾಗಿ ಎತ್ತಿಕೊಟ್ಟಿದ್ದು: ಇದು ಸಂಸ್ಕೃತ ವಿದ್ಯಾರ್ಥಿಗಳಿಗೆ ಬಹಳವಾದ ಪ್ರಯೋಜನವನ್ನುಂಟುಮಾಡುವುದರಲ್ಲಿ ಸಂದೇಹವಿಲ್ಲ ಸಂಪಾದಕರ ಪ್ರಾಸ್ತಾವಿಕ ಮಾತುಗಳಿಂದ, ಈ ಗ್ರಂಥದ ಉತ್ತರಾರ್ಧವು ಇಷ್ಟರಲ್ಲಿಯೇ ಪ್ರಕಟಗೊಳ್ಳಲಿದೆಯಾಗಿಯೂ ಅದರಲ್ಲಿ ಅಕಾರಾದಿ ಸೂಚಿಗಳನ್ನೊಳಗೊಂಡ ಅನುಬಂಧವು ಸೇರಿಸಲ್ಪಡುವುದೆಂದೂ ತಿಳಿದು ಬರುತ್ತದೆ ಹೀಗೆ ಪೂರ್ಣವಾಗುವ ಗ್ರಂಥವು ಪ್ರತಿಯೊಬ್ಬ ಸಂಸ್ಕೃತಾಭ್ಯಾಸಿಗೂ ಅತ್ಯಂತ ಉಪಯುಕ್ತವೆಂದು ಸಿದ್ಧಗೊಳ್ಳುವುದು ನಿಶ್ಚಯ.

ಪ್ರೇಮಾಶ್ರಮ—

ಅನುವಾದಕರು: ಮೋವುಂಡಿ ಮಲ್ಲಾರಿ. ಪ್ರಕಾಶಕರು: ಮಿಂಚಿನ ಬಳ್ಳಿ ಕಾರ್ಯಾಲಯ, ಜಪಳೀ ಪೇಟೆ, ಧಾರವಾಡ. ಬೆಲೆ: ರೂ. ೧—೮—೦.

ಹಿಂದೀ ಸಾಹಿತ್ಯ ಕ್ಷೇತ್ರದಲ್ಲಿ ಪ್ರೇಮಚಂದರ ಹೆಸರನ್ನು ಚಿರಸ್ಥಾಯಿಯಾಗಿಸಿದ ಕಾದಂಬರಿಯೇ "ಪ್ರೇಮಾಶ್ರಮ". ಇಲ್ಲಿಯ ಕತೆ—ಭಾರತದ ರೈತರ ಮತ್ತು ಹಳ್ಳಿಗಳ ದಾರುಣ ಪರಿಸ್ಥಿತಿಯನ್ನು ವರ್ಣಿಸುತ್ತದೆ, ಆದರ್ಶವಾದಿ ಪ್ರೇಮಶಂಕರನ ಪಾತ್ರದ ಮೂಲಕ ಲೇಖಕರು ಉದ್ಧಾರದ ಮಾರ್ಗವೇನೆಂಬುದನ್ನೂ ತೋರಿಸಿಕೊಡುತ್ತಾರೆ ವಾಸ್ತವಿಕತೆಯನ್ನು ಆದರ್ಶವಾದಿತ್ವದೊಡನೆ ಜೋಡಿಸಿ, ಸಮಸ್ಯೆಯ ವಿಶ್ಲೇಷಣೆಯನ್ನು ಕಲಾತ್ಮಕವಾಗಿ ಮಾಡುವುದರಲ್ಲಿ ಪ್ರೇಮಚಂದರು ಯಶಸ್ವಿಯಾಗಿದ್ದಾರೆ ಪಾತ್ರ ಪೋಷಣೆಯೂ ಸನ್ನಿವೇಶ ಚಿತ್ರಣವೂ ಕುಂದಿಲ್ಲದಂತೆ ಆಕರ್ಷಕವಾಗಿ ಮಾಡಲ್ಪಟ್ಟಿರುವುದು. "ಮುನ್ನುಡಿ"ಯಲ್ಲಿ ಹೇಳಿದಂತೆ ಗಾಯತ್ರಿಯ ಪಾತ್ರವು ಮನೋವಿಶ್ಲೇಷಣೆಯ ಅಭ್ಯಾಸಕ್ಕೂ ಯೋಗ್ಯವಾಗಿದೆ. ಕಾದಂಬರಿಯನ್ನು ಕನ್ನಡಕ್ಕೆ ಅನುವಾದಿಸಿದ ಮಲ್ಲಾರಿಯವರು ಮೂಲಕ್ಕೆ ನ್ಯಾಯವಾಗಿಯೇ ನಡೆದುಕೊಂಡಿದ್ದಾರೆ; ಆದರೆ ಅಲ್ಲಲ್ಲಿ ಹಿಂದಿಯಲ್ಲಿ ರೂಢವಾದ ಶಬ್ದಗಳನ್ನೆ ಉಪಯೋಗಿಸಲು ಹೋಗಿ, ಕನ್ನಡದ ಚಂದಕ್ಕೆ ಕೊರತೆ ತಂದರೋ ಎನಿಸುತ್ತದೆ. ಆದರೆ ಈ ದೋಷ ಪುಸ್ತಕದ ಯೋಗ್ಯತೆಗೆ ಹೆಚ್ಚಿನ ಹಾನಿ ಮಾಡಲಾರದು. ನಮ್ಮ ಹಳ್ಳಿಗಳ ಸಮಸ್ಯೆಯಲ್ಲಿ ಮತ್ತು ಉದ್ಧಾರದಲ್ಲಿ ಆಸಕ್ತಿಯುಳ್ಳ ಎಲ್ಲರೂ ಓದಿ, ಮನನ ಮಾಡಬೇಕಾದ ಪುಸ್ತಕ "ಪ್ರೇಮಾಶ್ರಮ".

ಬಾಳಿನ ಗಿಡ—

ಬರೆದವರು: ಎಂ. ಹರಿದಾಸ ರಾಯರು. ಪ್ರಕಾಶಕರು: ಸಾಹಿತ್ಯ ಭಂಡಾರ, ಹುಬ್ಬಳ್ಳಿ. ಬೆಲೆ: ರೂ. ೨—೮—೦.

ಮೊನ್ನೆ ತಾನೆ ಅವಘಡಕ್ಕೀಡಾಗಿ ಮರಣ ಗೊಂಡ ಹರಿದಾಸ ರಾಯರು ಕನ್ನಡ ಸಾರಸ್ವತ ಪ್ರಪಂಚಕ್ಕೆ ಕೊಟ್ಟ ಸುಂದರವಾದ ಕಾದಂಬರಿಗಳಲ್ಲಿ "ಬಾಳಿನ ಗಿಡ"ವೇ ಉತ್ತಮವಾದದ್ದು. ಮಲೆನಾಡಿನ ಮಣ್ಣಿನಲ್ಲಿ ಕೃಷಿ ಮಾಡಿ ಹೊನ್ನಿನ ಪೈರನ್ನು ತೆಗೆದ ಕರ್ಮಯೋಗಿ ಅಧ್ಯಾಪಕನೊಬ್ಬನ ಚಿತ್ರವನ್ನಿಲ್ಲಿ ಕಾಣುತ್ತೇವೆ. ದಕ್ಷಿಣ ಕನ್ನಡದ ವನ್ಯ ಶ್ರೀಯರನ್ನು ಹಿನ್ನೆಲೆಯಲ್ಲಿ ಕುತೂಹಲವನ್ನು ಕೆರಳಿಸುವಂತೆಯೂ ಭಾವನೆಗಳನ್ನು ಉದಾತ್ತೀಕರಿಸುವಂತೆಯೂ ಬರೆಯಲಾದ ಈ ಕಾದಂಬರಿ ದ್ವಿತೀಯ ಮುದ್ರಣವನ್ನು ಕಾಣುವಂತಾದದ್ದೇ ಅದರ ಜನಪ್ರಿಯತೆಯ ದ್ಯೋತಕ.

ಭರ್ತ ಕಂಟ್ರೋಲ

[ಮಕ್ಕಳನ್ನು ಪಡೆಯುವುದು ಸಾಕು]

ದಿನಕ್ಕೆ ಮೂರು ಸಾರ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—: ವಿಳಾಸ:—

ಹಾಲಪ್ಪಾ ಡಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಕುಮಾರಿ ಬಿಲ್ಲೆಗಳು (ಸರಕಾರಿ ರಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ. ರೂ. 5/- ಸ್ಪೆಶಲ್ ರೂ. 8/-

Mrs. P. DEVEE, P. Ds (N. J) (ವಿ ಪಿ ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು ಶಹಾಕಂಪೆನಿ, ಮಂಗಳೂರು.

ತಾರು: ಯುಗ] ಸ್ಥಾಪನೆ, ೧೯೪೭ [ಫೋನ: ೫೪

ಕನ್ನಡಿಗರ ಕಹಳೆ

ನವಯುಗ

ಸಂಪಾದಕರು: ಟಿ ಆರ್. ನೆಸ್ವಿ, ಬಿ. ಎಜಿ., ಎಂ. ಪಿ.

ನವನವೀನ ಸುದ್ದಿ ಪ್ರಕಟನೆ

ವರ್ತಮಾನ ಸಾರ

ಯುಕ್ತ ಸಂಪಾದಕೀಯ

ಗಂಭೀರ, ಪ್ರಬೋಧಕ ಲೇಖನಗಳು

ಇವೆಲ್ಲವೂ ಅಲ್ಲದೆ

ಜಾಹೀರಾತುದಾರರ ಸುವರ್ಣ ಸಾಧನ.

'ನವಯುಗ' ನಿಮಗಾಗಿ, ನೀವದರವರಾಗಿ.

ವಿವರಗಳಿಗೆ

ಜಾಹೀರಾತು ವ್ಯವಸ್ಥಾಪಕ,

ನವಯುಗ ಕನ್ನಡ ದಿನಪತ್ರಿಕೆ

ಹುಬ್ಬಳ್ಳಿ. (ಕರ್ನಾಟಕ)

ಅಪರೂಪದ ಕಥೆ—

ಕೇವಲ ಎರಡಾಣೆ!

ಮನುಷ್ಯ ಬುದ್ಧಿ ಪೂರ್ವಕ ಅಪರಾಧ ಮಾಡುವನೆಂದು ಹೇಳುತ್ತೇವೆ. ಆದರೆ ಪರಿಸ್ಥಿತಿಯೂ ಅವನನ್ನು ಅಪರಾಧಿಯಾಗಿ ರೂಪಿಸಬಲ್ಲುದು. ರಾಮರಾಯರ ಮನಸ್ಸಿನಲ್ಲಿ ಎರಡು ಗಳಿಗೆಯಿಂದ ಹೊಯ್ದಾಡುವ ವಿಚಾರವೇ ಇದು. ಮಲ್ಪೆಯ ಸಮುದ್ರ ಸೌಂದರ್ಯ, ಮುಳುಗುವ ಸೂರ್ಯನ ಸೊಬಗು, ಉಕ್ಕುತ್ತಿರುವ ತರಂಗಗಳ ಉಲ್ಲಾಸ, ಬೀಸುವ ಮಂದ ಮಾರುತಗಳ ಸವಿಯನ್ನು ಮನಸಾರೆ ಆಸ್ವಾದಿಸಬೇಕೆಂದು ಅವರು ಇಂದು ಸಂಜೆ ಮನೆಯಿಂದ ಹೊರಟಿದ್ದರು. ಆದರೆ—ನಿರ್ಮಲ ಭಾವನೆಗಳನ್ನು ಮೀಟಿ, ಆನಂದದ ರಸಾನುಭವನನ್ನು ಮಾಡಿಕೊಡಬೇಕಿದ್ದ ಈ ಸಂಜೆ, ಅವರಿಗೆ ವರ್ಣನಾತೀತ ವೇದನೆಯನ್ನೇ ತಂದಿತು.

...ಅವರು ಯೋಚಿಸುತಿದ್ದರು: "ನಾನು ಹೊರಟ ಗಳಿಗೆಯೇ ಒಳ್ಳೆಯದಿರಲಿಲ್ಲ." ಮೆಜಿಸ್ಟ್ರೇಟನಾಗಿ, ನ್ಯಾಯದಾನವನ್ನು ಮಾಡಬೇಕಾದ ಹೊಣೆಯನ್ನು ಹೊತ್ತು, ಅಪರಾಧಿಯ ಪಾತ್ರವನ್ನು ನಿರ್ವಹಿಸುತಿದ್ದೇನಲ್ಲ ಎಂದವರ ಮನಸ್ಸು ಹೊಯ್ದಾಡಿತು. ಕಾರು ಕೆಟ್ಟಿತೆಂದು ಅವಸರದಿಂದಲೇ ಅವರು ಸಿಟಿ ಬಸ್ಸಿಗಾಗಿ ಹೊರಟು ನಿಂತರು. ಅವರ ಐದು ವರ್ಷದ ಮಗನೂ ತಾನೂ ಬರುವೆನೆಂದು ಹಟ ಮಾಡಿದರೂ ಕೇಳದೆ ಅವನನ್ನು ಮನೆಯಲ್ಲಿ ನಿಲ್ಲಿಸಿದರು. ಸಿಟಿಬಸ್ಸಿನ ನಿಲ್ದಾಣಕ್ಕೆ ಬರುವಾಗಲೇ ಐದು ಹೊಡೆದು ಐದು ನಿಮಿಷ ಸಂದಿತ್ತು. ಆದರೂ ಐದರ ಬಸ್ಸು ಇನ್ನೂ ಬಂದಿರಲಿಲ್ಲ.

ರಾಯರಿಗೆ ಸಿಟ್ಟುಬಂತು: "ಬೋರ್ಡಿನ ಮೇಲೆ ಹಾಕಿದ ಸಮಯಕ್ಕೆ ಸರಿಯಾಗಿ ಇವರೇಕೆ ಬಸ್ಸು ಬಿಡುವುದಿಲ್ಲ? ಎಂದವರು ಆಲೋಚಿಸಿದರು. ಎಷ್ಟು ಜನ ಕಾಯುತ್ತಿದ್ದಾರೆ, ಎಷ್ಟು ಸಮಯ ಹಾಳಾಯಿತು ಎಂದವರ ಮನಸ್ಸು ಉದ್ವಿಗ್ನವಾಯಿತು. ಕಾನೂನಿನ ಪ್ರಕಾರ ಹೀಗೆ ಜನರನ್ನು ತೊಂದರೆಗೀಡು ಮಾಡುವುದಕ್ಕೆ ಎಷ್ಟು ತಿಂಗಳ ಶಿಕ್ಷೆ ಕೊಡುವುದು ಯೋಗ್ಯ ಎಂದೂ ಅವರು ವಿಚಾರಕ್ಕೆ ಗುರಿಯಾದರು. ಆದರೆ ಅಷ್ಟರಲ್ಲೇ ಬಸ್ಸು ಬಂದುದರಿಂದ ಪ್ರಶ್ನೆಗೆ ಉತ್ತರ ಹುಡುಕುವ ಅಗತ್ಯ ಬೀಳಲಿಲ್ಲ.

ಫ್ರಂಟ್ ಸೀಟನ್ನು ಹುಡುಕಬೇಕಾದರೆ ಹೋರಾಡಬೇಕೆಂದು ಅವರು ಭಾವಿಸಿರಲಿಲ್ಲ—ಆದುದರಿಂದ ನಿಧಾನವಾಗಿ ಹೆಜ್ಜೆ ಇಡುತ್ತ ಇವರು ಮುಂದೆ ಹೋಗುವುದರೊಳಗೆಯೇ ಅದು ತುಂಬಿಕೊಂಡಿತು. ಇಬ್ಬರು ಹುಡುಗರು ಅದರಲ್ಲಿ ಕುಕ್ಕರಿಸಿದ್ದರು—ಈ ಮೆಜಿಸ್ಟ್ರೇಟರ ಕಣ್ಣಿಗೆ ಅವರು ಉಡಾಳರಿಗಿಂತ ಹೆಚ್ಚು ಸಭ್ಯರೆಂದು ತೋರಲಿಲ್ಲ. "ಒಂದೆ ಹೀಗಿರಲಿಲ್ಲ--" ಎಂದವರು ತನ್ನಲ್ಲೆ ನುಡಿದು ಹೆಂಗಸರ ಸಾಲಿನ ಹಿಂಬದಿಯ ಸೀಟಿನಲ್ಲಿ ಕುಳಿತುಕೊಂಡರು.

ಯಾರೋ ಮಹನೀಯರು ಅವರ ಪಕ್ಕದಲ್ಲಿ ಬಂದು ಕುಳಿತರು: ಅಸಹ್ಯ ವಾಸನೆಯನ್ನು ಕಂಡಂತೆ ಮೆಜಿಸ್ಟ್ರೇಟರು ಮೂಗು ಮುರಿದರು. ಅವರನ್ನು ಇಲ್ಲಿ ಕುಳಿತುಕೊಳ್ಳಬೇಡಿ ಎಂದು ಹೇಳಲು ಅವರು ತುಟಿ ತೆರೆದರು ಆದರೆ ಇದು ಕಾನೂನಿಗೆ ಸರಿಯಾಗದೆಂದು—ಅರಳಿಸಿದ ತುಟಿಯನ್ನು ಮುಚ್ಚಿಕೊಂಡರು.

ಪಕ್ಕದ ಮಹನೀಯರು ಇವನ್ನು ಸ್ವಾಗತವೆಂದು ಬಗೆದರು: "ಮಲ್ಪೆ ಎಷ್ಟು ದೂರ?" ಎಂದು ಪ್ರಶ್ನಿಸಿದರು. ಉತ್ತರ ಕೊಡಬೇಕೇ ಎಂಬ ವಿಚಾರದಲ್ಲಿ ರಾಯರು ಬಿದ್ದರಾಗಲಿ. "ಮೂರು ಮೈಲು" ಎನ್ನಲಿಲ್ಲ. ಹಾಗೆ ಹೇಳುವ ಅಗತ್ಯವೂ ಬೀಳಲಿಲ್ಲ. ಕಂಡಕ್ಟರ ಟಿಕೇಟಿನ ಹಣ ಕೇಳತೊಡಗಿದ. ಪಕ್ಕದ ಮಹಾನುಭಾವರು ಕಿಸೆಯಿಂದ ನಾಲ್ಕಾಣೆಯ ಪಾವಲಿ ತೆಗೆದು ಅವನ ಕೈಗೆ ಕೊಟ್ಟು "ಮಲ್ಪೆ" ಎಂದರು. ಅವನು ಟಿಕೇಟು ಹರಿದು ನೀಡಿದ—ಆದರೆ ಅದು ಗಾಳಿಯಲ್ಲಿ ಹಾರಿ ಹೋಯಿತು. "ಬಂತಿಲ್ಲ" ಎಂದು ಸುಮ್ಮನಾದರು.

ಮೆಜಿಸ್ಟ್ರೇಟರಿಗೆ "ಇದೆಂತಹ ಉದಾಸೀನತೆ" ಎಂದು ತೋರಿತು. ಟಿಕೇಟು ಎಲ್ಲಿಯೆಂದು ಯಾರಾದರೂ ಕೇಳಿದರೆ ತೋರಿಸಬೇಡವೆ ಎಂದವರ ಕಾನೂನು ಕಲಿತ ಮನಸ್ಸು ಕೇಳಿತು. ಆದರೆ, ತನ್ನ ಟಿಕೇಟಿನ ಕಾಸು ಕೊಟ್ಟಿಲ್ಲವೆಂಬುದು ನೆನಪಾಗಲು ಅವರು ಕಿಸೆಯೊಳಕ್ಕೆ ಕೈ ಹಾಕಿದರು. ಎದೆ ಧಸಕ್ಕೆಂದಿತು: ಇಲ್ಲ, ಅಲ್ಲಿ ಹಣದ ಪಾಕೀಟು ಇರಲಿಲ್ಲ.

"ಇದೇನಾಯಿತು?" ಎಂದವರಿಗೆ ಆಶ್ಚರ್ಯ: ಪಕ್ಕದ ಸಭ್ಯ ಮನುಷ್ಯ ಕಿಸೆಗಳ್ಳನೋ ಹೇಗೆ ಎಂದವರು ಉದ್ಯೋಗಕ್ಕೆ ತಕ್ಕುದಾದ ಅಭ್ಯಾಸಬಲದಿಂದ ದುರದುರನೆ ನೋಡಿದರು: ಆಗ ಅವರ ಕಣ್ಣ ಮುಂದೆ, ಅವರ ಹುಡುಗನು ಮನೆಯಲ್ಲಿ ಮುಂಜಾನೆ ಹಣದ ಪಾಕೀಟಿನೊಡನೆ ಆಡುತಿದ್ದ ಚಿತ್ರ ಬಂದು ನಿಂತಿತು. "ಓ, ಹಾಗಾದರೆ ಪಾಕೀಟು ಮನೆಯಲ್ಲಿಯೇ ಉಳಿಯಿತು" ಎಂದವರು ತನ್ನಲ್ಲೆ ಹೇಳಿಕೊಂಡರು. ಆದರೆ ಈಗ ಎರಡಾಣೆ ಕೊಡಬೇಕಲ್ಲವೆ ಎಂಬ ಪ್ರಶ್ನೆ ಮತ್ತೊಮ್ಮೆ ಅವರ ಮುಂದೆ ನಿಂತಿತು.

ಬಸ್ಸು ಓಡುತಿತ್ತು. ಕಂಡಕ್ಟರ ಉಳಿದವರಿಂದ ಟಿಕೇಟಿನ ಹಣ ವಸೂಲು ಮಾಡುತಿದ್ದ. ತನ್ನನ್ನು ಅವನು ಕೇಳಲಿಲ್ಲ. ಏಕೆ ಎಂದವರಿಗೆ ತಿಳಿಯದು—ಬಹುಶಃ ತನ್ನ ಗುರುತಿರಬೇಕು. ದೊಡ್ಡ ಸ್ಥಾನದಲ್ಲಿರುವ ತನ್ನನ್ನು ಟಿಕೇಟಿಗಾಗಿ ಬೇಡುವುದು ಸರಿಯಲ್ಲವೆಂದು ಅವನ ಎಣಿಕೆ ಇದ್ದೀತು ಎಂದವರು ಭಾವಿಸಿದರು. ಆದರೆ ಈಗ ಎರಡಾಣೆ ಬೇಕು—ಎಲ್ಲಿದೆ? ರಾಯರು ಕಿಸೆಗಳಲ್ಲೆಲ್ಲ ಕೈ ಹಾಕಿ ನೋಡಿದರು. ಟವಲು ತೆಗೆದು ಕಿಸೆಯಲ್ಲಿ ಹುಡುಕಿದರು. ಅರ್ಧಾಣೆಯ ಪಾವಲಿಯೊಂದು ತೋರಿತು.

ಕೇವಲ ಅರ್ಧಾಣೆ—ಇನ್ನೂ ಆರು ಕಾಸಾಗಬೇಕು: ಏನು ಮಾಡೋಣ. ಇಲ್ಲಿಯೇ ಇಳಿದು ಬಿಡುವ ಎಂದು ತೋರಿತು. ಆದರೆ ಒಂದಾಣೆಯನ್ನಾದರೂ ಕಂಡಕ್ಟರನ ಕೈಗೆ ಕೊಡದೆ ಇಳಿಯುವುದು ಸಾಧ್ಯವಿಲ್ಲ "ಓ ದೇವರೇ, ನನ್ನ ಮರ್ಯಾದೆ ಹೋಗುತ್ತಿದೆ—ಅದನ್ನು ಉಳಿಸಿ ಕೊಡು." ಎಂದು ಅವರು ಬೇಡ ಹತ್ತಿದರು.

ಆದರೆ ಮಾಡುವುದೇನೆಂದು ಅವರಿಗೆ ಖಚಿತವಾಗಿ ಹೊಳೆಯಲಿಲ್ಲ—ಚರ್ಚಿನ ರಸ್ತೆಯಲ್ಲಿ ಬಸ್ಸು ನಿಂತಾಗ ಇಬ್ಬರು ಸ್ಫುರದ್ರೂಪಿ ಹುಡುಗಿಯರು ಅದನ್ನು ಹತ್ತಿದರು. ಕೈಯಲ್ಲಿ ವ್ಯಾನಿಟಿ ಬೇಗು, ಉಗುರಿಗೆ ಕೆಂಪು; ಆಂಗ್ಲ ಪದ್ಧತಿಯಲ್ಲಿ ತಲೆ ಬಾಚಿದ್ದರು. ಎರಡು ಕ್ಷಣ ಅವರ ಕಡೆಗೆ ರಾಯರ ಕಣ್ಣು ತಿರುಗಿತು. ಕಂಡಕ್ಟರ ಹುಡುಗಿಯರಿಂದ ಹಣ ಕೇಳಲು ಹತ್ತಿರ ಬಂದಾಗ, ತನ್ನನ್ನೆ ಅವನು ಹುಡುಕುತ್ತಿರುವನೆಂದು ರಾಯರು ಹೆದರಿ ಕೊಂಡರು.

ಕೇವಲ ಎರಡಾಣೆ—ಅದರಿಂದ ಮರ್ಯಾದೆ ಹೋಗುವುದು! ಛೆ, ಇದೆಲ್ಲಿಯಾದರೂ ಉಂಟೆ? ತಾಲೂಕು ಆಫೀಸಿನ ಮುಂದೆ ಬಸ್ಸು ಓಡುವಾಗ ಯಾರೋ ಇಬ್ಬರನ್ನು ಪೋಲೀಸರು ಕೋಳ ಹಾಕಿ ಕರೆದೊಯ್ಯುತ್ತಿದ್ದರು: ನಾಳೆ ಇವರು ತನ್ನ ಮುಂದೆ ನಿಲ್ಲಿಸಲ್ಪಡುವರು; ವಿಚಾರಣೆಯಾಗುವುದು; ಬಹುಶಃ ಶಿಕ್ಷೆಯೂ ಆಗುವುದು. ಸಮಾಜ ಅವರನ್ನು ಅಪರಾಧಿಯೆಂದು ಹೀಗಳೆಯುತ್ತದೆ. ಸರ್ವನಾಶವಾಗುತ್ತದೆ—ಎಂದೆಲ್ಲ ಅವರು ಎಣಿಸಿದರು. ಆದರೆ ತಾನು? ತಾನೇನು ಮಾಡುತಿದ್ದೇನೆ? ಟಿಕೇಟಿಲ್ಲದ ಪ್ರವಾಸ!

ಮುಖವೆಲ್ಲ ಬೆವರಿನಿಂದ ತುಂಬಿಕೊಂಡಿತು: ಅಜ್ಜರಕಾಡಿನ ತಂಪು ಗಾಳಿ ಬೀಸುತಿದ್ದರೂ ಅವರು ಟವೆಲಿನಿಂದ ಮುಖ ಒರಸಿಕೊಂಡರು. ಅಲ್ಲಿ ಯಾರೋ ಮೂವರು ಬಸ್ಸು ನಿಲ್ಲಿಸಿದರು. ಮೆಲ್ಲಗೆ ಇಳಿದು ಬಿಡೋಣವೇ ಎಂದು ರಾಯರಿಗೆ ತೋರಿತು—ಆದರೆ ಯಾರಿಗೂ ಕಾಣದೆ ಇಳಿಯುವಂತಿರಲಿಲ್ಲ. ಮೆಲ್ಲನೆ ಎದ್ದವರು ಮರಳಿ ಅಲ್ಲಿಯೇ ಕುಳಿತರು.

ಬಸ್ಸು ಮುಂದೆ ಓಡಿತು. ಕಂಡಕ್ಟರ ಟಿಕೇಟಿನ ಲೆಕ್ಕ ಹಾಕುತಿದ್ದ. "ಯಾರಿಗೆ ಟಿಕೇಟಾಗಲಿಲ್ಲ" ಎಂದು ಕೇಳುತಿದ್ದ. ರಾಯರು ಮಾತನಾಡಲಿಲ್ಲ—ಅದನ್ನು ಕೇಳಿಯೇ ಇಲ್ಲದವರಂತೆ ಸುಮ್ಮನಿದ್ದರು. ಯಾರೋ ಹಳ್ಳಿಯ ಹೆಂಗಸೊಬ್ಬಳು ಇಷ್ಟರ ವರೆಗೆ ಸಂಕೋಚದಿಂದ ಸುಮ್ಮನಿದ್ದವಳು "ಮಲ್ಪೆ" ಎಂದು ಎರಡಾಣೆಯ ಪಾವಲಿ ಹಿಡಿದು ಕೈ ಹಿಂದೆ ನೀಡಿದಳು. ಅದನ್ನು ಮೆಲ್ಲನೆ ಕಸಿದರೆ... ರಾಯರು ಹೇಳಿಕೊಂಡರು. "ಇದು ಸರಿಯಲ್ಲ—ಸಿಕ್ಕಿ ಬೀಳುವುದೇ ನಿಶ್ಚಯ" ಎಂದು ವಿವೇಕ ಹೇಳಿತು. ಕಂಡಕ್ಟರ "ಇನ್ನು ಯಾರಿಗೆ ಟಿಕೇಟಾಗಲಿಲ್ಲ?" ಎಂದು ಯಾವಾಗಲೂ

(೨ನೇ ಪುಟದಿಂದ)

ತ್ತಾ ಹೋಗುತ್ತಿದೆ. ಇದನ್ನು ಕಂಡು ಕಿಡಿಯುಗುಳುವ ಜನರಿಗೆ ಸಾಲಾಝಾರರು, ಪ್ರೂಟ್ ಬಾಲ್ ಆಟ, ಫಾಡೋಸ್ ಎಂಬ ಜಾನಪದ ಗೀತ ಹಾಗು ಫಾತಿಮಾ ಎಂಬ ತೀರ್ಥ ಕ್ಷೇತ್ರದ ಸುಂದರ ಸ್ಮರಣೆ ಮಾಡಿ ಕೊಡುತ್ತಾರೆ. ಧರ್ಮದ ಬಲೆಯಲ್ಲಿ ಪೋರ್ಚುಗಾಲದ ನಾಗರಿಕರನ್ನು ಕೆಡವಿ, ಅವರು ರಾಜಕೀಯ ಹಾಗು ಆರ್ಥಿಕ ನೋವುಗಳನ್ನು ಮರೆಯುವಂತೆ ಸಾಲಾಝಾರರು ಮಾಡುತ್ತಾರೆ. ಹೀಗೆ, ವ್ಯಾಪಾರೋದ್ಯಮಕ್ಕೆ ನೆರವಾಗುವ ಲಾರಿಗಳಿಗಿಂತ ವಿಲಾಸಕ್ಕೆ ಉಪಯುಕ್ತವಾದ ಕಾರುಗಳ ಆಯಾತ ಪ್ರಮಾಣವೇ ಹೆಚ್ಚಾಗುತ್ತಿರುವುದನ್ನು ಜನರು ಗಮನಿಸದಂತೆ ಸಾಲಾಝಾರರು ಜಾಗ್ರತೆ ವಹಿಸುತ್ತಾರೆ. ವಾಸ್ತವದಲ್ಲಿರುವ ಅನಿಶ್ಚಿತತೆಯ ಮೇಲೆ ಇದು ಪರದೆಯನ್ನೆಳೆಯುತ್ತದೆ.

ಸಾಲಾಝಾರರ ಆಡಳಿತ ಪದ್ಧತಿಯಿಂದ ಜುಗುಪ್ಸೆ ಹೊಂದಿ ಸತ್ಯಾಗ್ರಹವನ್ನು ತೊಡಗಿರುವ ಗೋವಾಂತಕರ ಸ್ವಾತಂತ್ರ್ಯದ ಅಪೇಕ್ಷೆಯು ಪೋರ್ಚುಗಾಲದಲ್ಲಿ ಹೆಚ್ಚಿನ ಜನಕ್ಕೆ ಅರ್ಥವಾಗುವುದಿಲ್ಲ--ಅವರ ರಾಜಕೀಯ ಅನಭಿಜ್ಞತೆಯೂ ಧರ್ಮಾಂಧತೆಯೂ ಗೋವೆಯ ವಿಮೋಚನಾ ಆಂದೋಲನವನ್ನು ವಿರೋಧಿಸುವ ಸಾಲಾಝಾರರ ಕೈಯನ್ನು ಬಲಪಡಿಸುತ್ತಿವೆಯೆಂದೇ ಹೇಳಬಹುದು.

ಖಾತ್ರಿ ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಉ. ರಾಘವೇಂದ್ರ ಕೃಷ್ಣ ಭಟ್,

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkapet, UDIPI, S. Kanara.

ಫೋನು ನಂಬ 66



Stockist: V. N. SHENOY, BOMBAY. 12.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು 3.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ .... ರೂ. **11,11,000**

ಜುಮ್ಲಾ ವಹಿವಾಟು .... ರೂ. **63,06,000**

ಕಾಯಂ ಠೇವಣಾತಿಯ ಈಗಿನ ದರಗಳು

1 ತಿಂಗಳಿಗೆ	2%
2 ,,	2¼%
3 ತಿಂಗಳಿಂದ 6 ತಿಂಗಳ ವರೇಗೆ	3½%
7 ,, 12 ,,	3¾%
24 ತಿಂಗಳಿಗೆ	4%

ರೂಪಾಯಿ 15,000 ವ, ಮೇಲಿನ ಠೇವಣಾತಿಗೆ ¼% ದರ ಬಡ್ಡಿ ಹೆಚ್ಚಿಗೆ ಕೊಡಲಾಗುವುದು.

ಜಿಲ್ಲೆಯ **10** ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ. ಸುಂದರರಾಮ ಶೆಟ್ಟಿ, ಬಿ.ಎ., ಬಿ.ಎಲ್., ವಕೀಲ್,
ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

ಕೇಳುವ ರೀತಿಯಲ್ಲೇ ವಿಚಾರಿಸಿದ—ಯಾರೂ ಮಾತನಾಡಲಿಲ್ಲ. ರಾಯರೂ ಮೌನ!

ನ್ಯಾಯದಾನ ಮಾಡುವಾತನೇ ಮೋಸಗಾರನಾಗುವುದು—ತಿಳಿದೂ ತಿಳಿದೂ ತಪ್ಪು ಮಾಡುವುದು—ಕಾನೂನಿನ ಯಾವ ಕಲಮು ಎಷ್ಟು ಶಿಕ್ಷೆ ವಿಧಿಸುತ್ತದೆ—ರಾಯರು ಯೋಚನೆಯಲ್ಲಿ ಬಿದ್ದು ಮಾಡುವುದೇನೆಂದು ತಿಳಿಯದೆ ಕುಳಿತರು. ಆದಿ ಉಡುಪಿ ಸಮೀಪಿಸಿದಾಗ ಬಸ್ಸು ಸರಕ್ಕನೆ ತಿರುಗಿತು—ಅಲ್ಲಿಯೊಂದು ಮಗು ಓಡುತ್ತಿತ್ತು: ಡ್ರೈವರ ಚುರುಕಾಗಿ ನಡೆದುಕೊಂಡುದರಿಂದ ಆ ಜೀವ ಉಳಿಯಿತು. "ಕಂಡಾಬಟ್ಟೆ ಬಸ್ಸು ನಡೆಸುತ್ತಿದ್ದ ಅಪರಾಧಕ್ಕೆ ಬಿಟ್ಟು ಹಾಕಿದರೆಯೇ ಇವರಿಗೆ ಬುದ್ಧಿ ಬರುವುದು" ಎಂದು ಅವರಿಗೆ ಹೊಳೆಯಿತು. ಆದರೆ—ಟಿಕೇಟಿನ ಎರಡಾಣೆಯ ನೆನಪು ಮುಖದಲ್ಲಿ ವಿಷಾದದ ರೇಖೆಯನ್ನು ಮೂಡಿಸಿತು.

ರಾಯರ ಮನಸ್ಸಿಗೇನೂ ಸಮಾಧಾನವಿಲ್ಲ—ಬಸ್ಸಿನ ವೇಗ ಹೆಚ್ಚಿದಂತೆ ಅವರ ಮನೋವೇದನೆ ಹೆಚ್ಚಿಕೊಂಡಿತು; ಎದೆ ಢವಢವನೆ ಹೊಡೆದುಕೊಳ್ಳಲಾರಂಭಿಸಿತು. ಒಂದಾಣೆ ಆರು ಕಾಸಿಗಾಗಿ ತಾನು ಚಡಪಡಿಸುತ್ತಿದ್ದೇನೆ; ಜೀವನದ ಸರ್ವನಾಶಮಾಡಿಕೊಳ್ಳುತ್ತಿದ್ದೇನೆ ಎಂದವರು ದುಃಖಿತರಾದರು. ನಡುವೆ ಇಳಿಯುವುದು ಸಾಧ್ಯವಿದ್ದರೆ—ಎಂದೋ ಹಾಗೆ ಮಾಡುತ್ತಿದ್ದರು.

ಆದಿಉಡುಪಿಯನ್ನು ಬಿಟ್ಟು ಬಸ್ಸು ಮುಂದೆ ಓಡಿತು—ಕಂಡಕ್ಟರ ಹಣದ ಲೆಕ್ಕಮಾಡಿಕೊಳ್ಳುತ್ತಿದ್ದ. ಪಕ್ಕದ ಮಹಾನುಭಾವರು ಕುಳಿತು 'ಬೇಸರ ಬಂತೆಂದೋ ಏನೋ—ಕಿಸೆಯಿಂದ ಸಿಗಾರೇಟು ಹೊರ ತೆಗೆದು, ರಾಯರಿಗೊಂದು ನೀಡಿದರು. ರಾಯರು ಅತ್ತ ತಿರುಗಿದಾಗ ಕಣ್ಣು „ಹೊಗೆ ಬತ್ತಿ ಸೇದ ಬಾರದು" ಎಂದು ಬರೆದಿದ್ದ ಫಲಗೆಯ ಮೇಲೆ ಕೇಂದ್ರೀಕೃತವಾಯಿತು. ಅದನ್ನು ತೋರಿಸಿ, ನಕ್ಕರು: ಐದು ನಿಮಿಷ ಹಿಂದಾಗುತ್ತಿದ್ದರೆ, ಕಾನೂನಿನ ಕಲಮನ್ನು ಕುರಿತು, ಶಿಕ್ಷೆಯ ಅವಧಿಯನ್ನು ಕುರಿತು ಅವರು ವಿಚಾರಿಸುತ್ತಿದ್ದರು. ಈಗ, ತಿಳಿವಳಿಕೆ ಇಲ್ಲದವರಿಗೆ ಕಲಿಸುವ ಸೌಮ್ಯತೆ ಮುಖದಲ್ಲಿ ಕಂಡುಬಂತು.

ಅವರ ಎದೆ ಹಾರುವುದೇನು ನಿಲ್ಲಲಿಲ್ಲ. ಪಂದುಬೆಟ್ಟಿನ ಬೈಲಿನಬಳಿಬಂದಾಗ ಯಾರೋ ಕುಡುಕನೊಬ್ಬ ಕೈ ಎತ್ತಿದ. ಕಂಡಕ್ಟರ ರಾಯರನ್ನು ತೋರಿಸಿ, ಸನ್ನೆಯಿಂದಲೇ ಹತ್ತಬೇಡವೆಂದು ಸೂಚಿಸಿ. "ರೈಟ್" ಎಂದ. "ಕಾಸಿಲ್ಲದ ಹುಚ್ಚನ ವೈಭವ ನೋಡಿ" ಎಂದು ಕಿಸಕ್ಕನೆ ನಕ್ಕು ಸತ್ಯಕ್ಕೆ ಮುಸುಕು ಎಳೆದ.

ರಾಯರು ಅದನ್ನು ಗಮನಿಸಲಿಲ್ಲ—ಎರಡಾಣೆಯ ಚಿಂತೆ ಅವರ ಮನಸ್ಸನ್ನು ಕೊರೆಯುತ್ತಿತ್ತು. ಯಾರೂ ಗುರುತಿನವರು ತೋರಲಿಲ್ಲ—ತೋರಿದರೂ ಎರಡಾಣೆ ಕೇಳುವ ಹಾಗಿರಲಿಲ್ಲ. ಕಂಡಕ್ಟರ ಪೆನ್ಸಿಲು ಒಡಿದು ಕೊಂಡು ಆಲೋಚಿಸುತ್ತಿದ್ದ. ಜನರೆಷ್ಟು ಇದ್ದಾರೆಂದು ಲೆಕ್ಕ ಮಾಡಲು ಎದ್ದು ನಿಂತ. ಅಷ್ಟರಲ್ಲಿ ಕಲ್ಮಾಡಿ ಸಂಕ ಬಂತು. ಬಸ್ಸಿನಲ್ಲಿದ್ದವರು ಇಳಿಯ ಹತ್ತಿದರು. ರಾಯರಿಗೆ ಏನು ಹೊಳೆಯಲೇ ಇಲ್ಲ. ಎದುರಿನ ಹೆಂಗಸರು ಕುಳಿತೇ ಇದ್ದರು—'ಇಳಿಯಿರಲ್ಲ" ಎಂದು ಪಕ್ಕದಲ್ಲಿದ್ದ ಮನುಷ್ಯ ರಸ್ತೆಯಿಂದ ಕೇಳಿದಾಗಲೇ ಅವರಿಗೆ ಎಚ್ಚರವಾಯಿತು. ಅಷ್ಟರಲ್ಲಿ ಬಸ್ಸು ಹೆಂಗಸರನ್ನೆಳೆದುಕೊಂಡು ಹೋಯಿತು. ರಾಯರೂ ದಸಕ್ಕನೆ ನೆಗೆದು ಕುಳಿತರು.

ಸಂಕದ ಆಚೆ ಪಂಡೆಯಲ್ಲಿ ಜನರು ಬಸ್ಸನ್ನು ಹತ್ತಲು ನುಗ್ಗಿದರು. ಯಾರೋ ನುಗ್ಗಿ ಬರುವಾಗ ಕಿಸೆಯಿಂದ ಕೆಲವು ನಾಣ್ಯ ಬಸ್ಸಿನಲ್ಲಿ ಬಿದ್ದಿತು: ರಾಯರ ತಲೆಗೆ ತಟ್ಟನೆ ವಿಚಾರವೊಂದು ಹೊಳೆದು, ಎರಡಾಣೆ ಪಾವಲಿಯೊಂದನ್ನು ಹೆಕ್ಕಿ ಮುಷ್ಟಿಯಲ್ಲಿಟ್ಟುಕೊಂಡರು. ಮತ್ತೆ ಬೇರೆ ಕೆಲವು ನಾಣ್ಯವನ್ನು ಕೂಡಿಸಿ ಅವನ ಕೈಗಿತ್ತರು. ಅವನು ಕೃತಜ್ಞತೆಯಿಂದ ಇವರನ್ನು ನೋಡಿ ಮುಗುಳು ನಕ್ಕ: ರಾಯರು ಶಿಷ್ಟಾಚಾರಕ್ಕಾದರೂ ತುಟಿ ಅರಳಿಸಲಿಲ್ಲ. ಅವರಿಗೆ ತಲೆಕಾದಂತೆ ತೋರಿತು: ಎರಡಾಣೆ ತನ್ನ ಕೈಯಲ್ಲುಂಟು; ಅದು ಅವನದು. ತಾನು ಅಪಹರಿಸುತ್ತಿದ್ದೇನೆ ಎಂದು ಕಳವಳಗೊಂಡರು.

ಅವನಿಗೆ ಕೊಡಲೇ ಎಂದು ಕೈ ಮುಂದೆ ಮಾಡಬೇಕೆಂಬ ವಿಚಾರ ಬಂದಾಗ—"ಇಷ್ಟು ತಡಮಾಡಿದ್ದು ಸರಿಯಾಗಲಿಲ್ಲ—ಆದುದರಿಂದ ಸುಮ್ಮನೆ ಕುಳಿತಿರು" ಎಂದು ವಿವೇಕ ನುಡಿಯಿತು. ಕಂಡಕ್ಟರನ ಕೈಗೆ ಎರಡಾಣೆ ಕೊಟ್ಟು ಟಿಕೇಟು ಪಡೆದುಕೊಳ್ಳಬೇಕೆಂದು ತೋರಿದಾಗಲೂ, ತಾನು ತಡಮಾಡಿದೆನೆಂದು ತೋರಿ, ಸಂಕೋಚವಾಯಿತು. "ಬೇಡ—ಅವನಾಗಿ ಕೇಳಲಿ—ಆಗ ಕೊಟ್ಟರಾಯಿತು" ಎಂದು ಈಗ—ಹಣ ಕೈಯಲ್ಲಿರುವಾಗ—ಅವರು ಆಲೋಚಿಸಿದರು.

ಕಂಡಕ್ಟರ ಹಣ ಕೇಳಲಿಲ್ಲ. ಏಕೆಂದು ರಾಯರಿಗೆ ಆಶ್ಚರ್ಯ. ಅವನು ತಪ್ಪು ಮಾಡುತ್ತಿದ್ದಾನೆ—ಕಂಪೆನಿಗೆ ಮೋಸ ಮಾಡುತ್ತಿದ್ದಾನೆ ಎಂದವರು ಒಮ್ಮೆ ಭಾವಿಸಿದರು. ಆದರೆ ತನ್ನನ್ನು ಅವನು ಅಪಮಾನದಿಂದ ರಕ್ಷಿಸಿದನೆಂಬ ಕೃತಜ್ಞತಾಭಾವ ಅವರಿಗೆ ತೃಪ್ತಿಯನ್ನು ನೀಡಿತು. ಅವರು ಮಂದಹಾಸದಿಂದ, ಸಮುದ್ರದ ಮೇಲೆ ಬಿದ್ದ ಸೂರ್ಯನ ಹೊಂಗಿರಣಗಳನ್ನು ನೋಡುತ್ತಿದ್ದಾಗ—ಪಕ್ಕದಲ್ಲಿ ಕುಳಿತಿದ್ದ ಆ ಮಹಾನುಭಾವರು ಹತ್ತಿರ ಬಂದು "ಮುಲ್ಕಿಗೆ ನಾಲ್ಕಾಣೆ ಹೆಚ್ಚಾಗಲಿಲ್ಲವೆ?" ಎಂದು ಅವರನ್ನು ಕೇಳುತ್ತಿದ್ದರು! ಕಂಡಕ್ಟರ ಅವರಿಗೆ ಎರಡಾಣೆ ಹಿಂದೆ ಕೊಟ್ಟೇ ಇರಲಿಲ್ಲ.

—ಕು.

ಅಪೂರ್ವ ಸಂದರ್ಭ!
ದರ ಇಳಿಸಲಾಗಿದೆ-
ಗೀತೆಯ
ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: 0-8-0
ನವಯುಗ ಪ್ರೆಸ್, ಉಡುಪಿ.

NAVAYUGA WEEKLY
* * * * *
ADVERTISEMENT RATES
Display Advertisements:— Rs. 2/-8 per column inch for contracts of 50" or more and Rs. 3/- per column inch for casual advertisements.
Classified Advertisements:— As. 8/- per line (minimum 8 lines).
For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ವಿವಿಧ ಪಾತ್ರೆಗಳು

ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.
ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಎಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ
ಅಶೋಕಾರಿಷ್ಟ ಮತ್ತು ಮಾತ್ರೆ–ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.
ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಳಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.
ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಹೊಸ ಪುಸ್ತಕ!
ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—
ನಕ್ಕರೂ ನಗಬಹುದು
ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಸಾರಿ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟದ ಮರ್ಮವನ್ನೂ. ನಿಶ್ಚಯಿಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ? ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0,
ಕಿರಿಯರ ಪ್ರಪಂಚ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ...
ವ್ಯಾಕರಣಬದ್ಧವಾಗಿ ಇಂಗ್ಲಿಷ್ ...
25 ವರುಷಗಳ ಅನುಭವ ...
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸ ...
[ENGLISH MADE EA...
ಯನ್ನು ಇಂದೇ ತರಿಸಿ...
ಬೆಲೆ:– ಸಾಧಾರಣ ಪ್ರತಿ– ರೂ. ...
ಉತ್ತಮ ಪ್ರತಿ– ರೂ. ...
ದೊರಕುವ ಸ್ಥಳಗಳು:–1) ನವಭಾರತ ಪ್ರೆಸ್ಸ್ ...
2) ನವಯುಗ ಪ್ರೆಸ್, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

Licensed to Post without Prepayment.

ನವಯುಗ

ಸಂಪುಟ ೩೪
VOL. 34

ಉಡುಪಿ, 23—9—1954

ಸಂಚಿಕೆ ೪
NO. 4

ಮಿತ್ರ ನುಡಿ

ಪ್ರಜಾಪ್ರಭುತ್ವ ಪದ್ಧತಿಯ ರಾಜ್ಯದಲ್ಲಿ ಜಾತೀಯತೆಯ ಪ್ರಸ್ತಾಪವನ್ನೆ ಮಾಡಲಾಗದು. ಜಾತಿಯ ಹೆಸರನ್ನು ಮುಂದಿಟ್ಟು ಚುನಾವಣೆಯ ಕಾಲದಲ್ಲಿ ಮತಗಳನ್ನು ಗಳಿಸುವುದು ಪ್ರಜಾಪ್ರಭುತ್ವಕ್ಕೆ ವಿರೋಧವಾದ ಕ್ರಮ. ಇದು ಅನುಚಿತ ಮತ್ತು ಸರ್ವಥಾ ಅನಪೇಕ್ಷಣೀಯ

—ಕಾಮರಾಜ ನಾಡರ.

ಬೋರ್ಡಿಗೆ ಚುನಾವಣೆ

ಮದ್ರಾಸು ರಾಜ್ಯದಲ್ಲೀಗ ಜಿಲ್ಲಾ ಬೋರ್ಡುಗಳಿಗೆ ನಡೆಯುವ ಚುನಾವಣೆಗಳದೇ ವಿಶೇಷ ಮಾತು. ತಮಿಳುನಾಡಿನ ಕೆಲವು ಜಿಲ್ಲೆಗಳಲ್ಲಿ ಕಾಂಗ್ರೆಸು ಪಕ್ಷದ ಹುರಿಯಾಳುಗಳೇ ಹೆಚ್ಚಿನ ಸಂಖ್ಯೆಯಲ್ಲಿ ಆರಿಸಿ ಬಂದಿದ್ದಾರೆ. ಇದಕ್ಕೆ ಕಾಮರಾಜ ನಾಡರರ ಧುರೀಣತ್ವದ ಮೇಲಿರುವ ಜನತೆಯ ವಿಶ್ವಾಸವೇ ಕಾರಣವೆಂದು ಹೇಳಬಹುದು. ತಮಿಳು ನಾಡಿನಲ್ಲಿ ಇತರ ರಾಜಕೀಯ ಪಕ್ಷಗಳಿಗೆ ಜನತೆಯ ಬೆಂಬಲ ಸಾಕಷ್ಟು ಕಂಡುಬರಲಿಲ್ಲ— ಬದಲು ಸ್ವತಂತ್ರ ಉಮೇದ್ವಾರರನ್ನೆ ಜನತೆ ಕೆಲ ಮಟ್ಟಿಗೆ ಪುರಸ್ಕರಿಸಿತು.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇದೇ ಆಕ್ಟೋಬರ ತಿಂಗಳ ೧೭ ಮತ್ತು ೨೦ನೇ ತಾರೀಕುಗಳಲ್ಲಿ ಬೋರ್ಡಿಗೆ ಚುನಾವಣೆಗಳು ನಡೆಯುತ್ತವೆ. ನಾಮಪತ್ರಗಳ ಪರಿಶೀಲನೆಯು ಇಷ್ಟರಲ್ಲೆ ಮುಗಿದಿದ್ದು ಕಾಂಗ್ರೆಸಿನ ಕೆಲವು ಉಮೇದ್ವಾರರು ಅವಿರೋಧವಾಗಿ ಆಯ್ಕೆ ಹೊಂದಿದ್ದಾರೆ. ಇದನ್ನು ಪ್ರಥಮ ವಿಜಯವೆಂದು ಕರೆಯಬಹುದು. ನಮ್ಮಲ್ಲಿ ಕಾಂಗ್ರೆಸಿಗೆ ಪ್ರಬಲ ವಿರೋಧವನ್ನು ಪ್ರದರ್ಶಿಸುತ್ತಿರುವ ರಾಜಕೀಯ ಪಕ್ಷವೆಂದರೆ ಪ್ರಜಾಸಮಾಜವಾದಿಗಳದು. ಸ್ವತಂತ್ರ ಉಮೇದ್ವಾರರೂ ಅಲ್ಲಲ್ಲಿ ಕಂಡುಬರುತ್ತಾರೆ. ಇವರು ನಿಜವಾದ ಅರ್ಥದಲ್ಲಿ ಸ್ವತಂತ್ರರೋ ಅಥವಾ ಯಾವುದಾದರೂ ರಾಜಕೀಯ ಪಕ್ಷದ ಬೆಂಬಲದಿಂದ ಮುಂದೆ ಬಂದವರೋ ಎಂಬುದನ್ನು ಸಮಯವೇ ತಿಳಿಸುತ್ತದೆ.

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಶಾಸನ ಸಭೆಗಳಿಗೂ ಪಾರ್ಲಿಮೆಂಟಿಗೂ ನಡೆಯುವ ಚುನಾವಣೆಗಳಷ್ಟೇ ಪ್ರಾಧಾನ್ಯವನ್ನು ಸ್ಥಳೀಯ ಸಂಸ್ಥೆಗಳ ಚುನಾವಣೆಗಳಿಗೂ ಕೊಡಬೇಕಾಗುತ್ತದೆ. ಗ್ರಾಮ ಪಂಚಾಯತುಗಳಿಗೆ ಒಮ್ಮತದ ಆಯ್ಕೆಗಳಾಗಬೇಕೆಂದು ಸಾಮಾನ್ಯವಾಗಿ ಹೇಳಲ್ಪಡುತ್ತಿದ್ದರೂ ಇದನ್ನೂ ಪಕ್ಷದ ನೆಲಗಟ್ಟಿನ ಮೇಲೆ ಸಂಘಟಿಸುವುದರಿಂದ ಪ್ರಜಾಪ್ರಭುತ್ವದ ಆಡಳಿತ ವಿಧಾನದಲ್ಲಿ ಜನರಿಗೆ ಬಹಳ ಹತ್ತಿರದಿಂದ ಪಾಠ ಹೇಳಿಕೊಟ್ಟಂತಾಗುತ್ತದೆಂದು ಭಾವಿಸಲು ಅಡ್ಡಿಯಿಲ್ಲ. ಈಗಿನ ಪರಿಸ್ಥಿತಿಯಲ್ಲಿ ಜನತೆಯೊಡನೆ ನಿಕಟ ಸಂಪರ್ಕವನ್ನು ಇಟ್ಟುಕೊಂಡು ನಾಗರಿಕರ ಸುಖದುಃಖದ ತಿಳಿವಳಿಕೆಯುಳ್ಳ, ಅವರಿಗೇನಾದರೂ ಪ್ರಯೋಜನವನ್ನು ಮಾಡಲು ದುಡಿಯಬಲ್ಲ ರಾಜಕೀಯ ಪಕ್ಷಗಳೇ ಬೆಳೆದು ಬಾಳುವುದು ಅಪೇಕ್ಷಣೀಯ. ಇಂಥ ಬೆಂಬಲದ ಪರೀಕ್ಷೆಗಾಗಿ ಸ್ಥಳೀಯ ಸಂಸ್ಥೆಗಳಿಗೆ ನಡೆಯುವ ಚುನಾವಣೆಗಳನ್ನು ಅಳವಡಿಸಿಕೊಂಡರೆ ತಪ್ಪಾಗದು.

ಚುನಾವಣೆಯಲ್ಲಿ ಸ್ಪರ್ಧೆಗೆ ಇಳಿಯುವವರು ಈಗ ಬಹಳ ಜಾಗರೂಕತೆಯಿಂದ ನಡೆದುಕೊಳ್ಳಬೇಕಾಗುತ್ತದೆ. ಅವರ ಪ್ರತಿಯೊಂದೂ ವರ್ತನೆಯನ್ನು ಟೀಕಿಸುವ ಅನೇಕ ಬಾಯಿಗಳಿರುತ್ತವೆ. ಮೇಲಾಗಿ ಚುನಾವಣಾ ಪ್ರಚಾರಾರ್ಥ ಸಂಬಂಧಿಸಿರುವ ರೂಪಾಯಿಗಳನ್ನು ವ್ಯಯಿಸಬೇಕಾಗುತ್ತದೆ. ಇದರಿಂದಾಗಿ ಆರ್ಥಿಕ ಭಾರವನ್ನು ಹೊರಬಲ್ಲ ಕೀರ್ತಿಕಾಮಿಗಳಷ್ಟೇ ಹುರಿಯಾಳುಗಳಾಗಿ ನಿಲ್ಲಲು ಸಾಧ್ಯವಾಗುತ್ತದಾಗಲಿ, ನಿಷ್ಠೆಯಿಂದ ರಚನಾತ್ಮಕ ಕಾರ್ಯಗಳನ್ನು ಮಾಡಬಲ್ಲ ಕಾರ್ಯಕರ್ತರಿಗೆ ಚುನಾವಣಾ ರಂಗದಲ್ಲಿ ಕಾಲಿಡಲು ಕಷ್ಟವೆನಿಸುತ್ತದೆ. ಹೀಗಾಗಿ, ಎಷ್ಟೋ ವೇಳೆ, ಸಮರ್ಥರೆಂದೆನಿಸಿಕೊಂಡ ಹುರಿಯಾಳುಗಳು ಧನಿಕರೇ ಎಂಬ ಕಲ್ಪನೆ ಹುಟ್ಟಬಹುದು; ಸರ್ವಜನಿಕರ ಸುಖದುಃಖದಲ್ಲಿ ಅವರಿಗೆ ನಿಜವಾದ ಆಸಕ್ತಿ ಇದೆಯೆಂದು ತಿಳಿಯಲು ಬಾರದು.

ಇದನ್ನು ನಮ್ಮ ಚುನಾವಣೆಗಳ ಪ್ರಧಾನ ದೋಷವೆಂದು ಪರಿಗಣಿಸಬಹುದು. ಈ ನ್ಯೂನತೆಯನ್ನು ಹೋಗಲಾಡಿಸುವುದಕ್ಕೆ ಇರುವ ದಾರಿಯೆಂದರೆ ಪಕ್ಷದಲ್ಲಿ ನಿಷ್ಠೆಯುಳ್ಳ ಪ್ರತಿಯೊಬ್ಬನೂ ತನ್ನ ನಿತ್ಯ ಜೀವನದ ಕ್ಷೇತ್ರದಲ್ಲಿ ಸಂಪರ್ಕಕ್ಕೆ ಬರುವ ಪ್ರತಿಯೊಬ್ಬನಲ್ಲಿಯೂ ತನ್ನ ಪಕ್ಷದ ಪರವಾಗಿ ಸದ್ಭಾವವನ್ನು ಜಾಗೃತಗೊಳಿಸಿ ಪೋಷಿಸಲು ಪ್ರಯತ್ನಶೀಲನಾಗಿರುವುದೇ ಆಗಿದೆ. ಚುನಾವಣೆಗಳಿಗೆ ಎರಡು ವಾರ ಇದೆಯೆನ್ನುವಾಗ ಎಷ್ಟು ರಭಸದ ಪ್ರಚಾರ ಕಾರ್ಯವನ್ನು ಕೈಗೊಂಡರೂ ಅದು ತಾತ್ಕಾಲಿಕ ಸ್ಫೂರ್ತಿಗಿಂತ ಹೆಚ್ಚಿನ ಸಂಗತಿಯನ್ನು ಸಾಧಿಸುವುದಿಲ್ಲ. ಪಕ್ಷದ ಬೆಳವಣಿಗೆಗೆ ಅದು ಸಹಾಯಕವೆನಿಸುವುದಿಲ್ಲ—ಏಕೆ ದರೆ ಒಂದು ಚುನಾವಣೆಯಲ್ಲಿ ಸಮಯ ಸ್ಫೂರ್ತಿಯಿಂದ ಕಾಂಗ್ರೆಸನ್ನು ಬೆಂಬಲಿಸಿದ ಜನರೇ ಇನ್ನೊಂದು ಚುನಾವಣೆಯ ಹೊತ್ತಿಗೆ ಅದಕ್ಕೆ ವಿರೋಧವಾಗಿ ನಿಲ್ಲಬಹುದು. ಅದರೆ, ಕಾಂಗ್ರೆಸಿನಲ್ಲಿ ಜನರ ಶ್ರದ್ಧೆಯೂ ನಿಷ್ಠೆಯೂ ಶಾಶ್ವತವಾಗಿ ನೆಲೆಗೊಳ್ಳುವಂತೆ ಕಾರ್ಯಕರ್ತರು ಸದಾ ಕಾಲ ತಮ್ಮ ನಿಕಟವಾದ ಆವರಣದಲ್ಲಿ ಹಿತವಾದ ರೀತಿಯಲ್ಲಿಯೇ ಆದರೂ ಪ್ರಯತ್ನಿಸುತ್ತಿದ್ದರೆ, ಇಂತಹ ವಿಪರೀತ ಪರಿಣಾಮಗಳಾಗಲಾರವು.

ತಮ್ಮ ಪಕ್ಷದ ಧ್ಯೇಯಾದರ್ಶಗಳ ಕುರಿತು ಜನರ ಪ್ರೀತಿಯನ್ನು ಸ್ಥಿರವಾಗಿ ಮೂಡಿಸಲು ಸಮರ್ಥರಾದ ಕಾರ್ಯಕರ್ತರು ಚುನಾವಣೆಗಾಗಿ ಹೆಚ್ಚಿನ ಹಣವನ್ನು ವ್ಯಯಿಸುವ ಪ್ರಮೇಯ ಬರುವುದಿಲ್ಲ. ಬದಲು ಹುರಿಯಾಳಿಗೆ ಜನರೇ ಸಹಾಯ ನೀಡಲು ಮುಂದೆ ಬರುವರು. ನಮ್ಮ ರಾಜಕೀಯ ಪಕ್ಷಗಳು ಇದನ್ನು ಗಮನಿಸುವುದು ಶ್ರೇಯಸ್ಕರ. ಮುಖ್ಯವಾಗಿ ಕಾಂಗ್ರೆಸು ಸಂಸ್ಥೆ ಇತ್ತ ಲಕ್ಷ್ಯವನ್ನು ಹರಿಸಬೇಕು. ಏಕೆಂದರೆ ಕಾಂಗ್ರೆಸು ಸಂಸ್ಥೆಯ ಕುರಿತು—ಅದು ಅಧಿಕಾರಸ್ಥಾನದಲ್ಲಿರುವ ರಾಜಕೀಯ ಪಕ್ಷವಾದುದರಿಂದ—ಬಹಳವಾದ ಟೀಕೆಗಳನ್ನು ಮಾಡಲಾಗುತ್ತದೆ. ಇಂತಹ ದೂರುವ ಮಾತುಗಳನ್ನು ಕೆಲವರು ಬಿಸಿ ಕೇಳುವ ಹವ್ಯಾಸವು ಜನರಲ್ಲಿ ದಿನದಿನಕ್ಕೂ ಹೆಚ್ಚಾಗುತ್ತಿದೆ. ತಪ್ಪು ತಿಳಿವಳಿಕೆಗಳನ್ನು ಹೋಗಲಾಡಿಸಿ, ಕಾಂಗ್ರೆಸಿನ ವಿಷಯದಲ್ಲಿ ಜನರ ಸದ್ಭಾವವನ್ನು ಜಾಗ್ರತಗೊಳಿಸದಿದ್ದರೆ, ತುಕ್ಕು ಹಿಡಿದ ಕಬ್ಬಿಣದಂತೆ ಕಾಂಗ್ರೆಸು ಮೂಲೆ ಗುಂಪಾದೀತು. ಚಿಕ್ಕವನನ್ನಾದರೂ ಆಗಿಂದಾಗ ಬೆಳಗುತ್ತಿರಬೇಕಾಗುವಂತೆ, ಕಾಂಗ್ರೆಸಿನ ಕುರಿತು ಜನರ ನಿಷ್ಠೆಯನ್ನು ಸದಾ ಕಾಲ ಎಚ್ಚರದಲ್ಲಿಟ್ಟುಕೊಳ್ಳುವುದೂ ಇಷ್ಟವೆಂದು ಹೇಳಬಹುದು.

ಜಿಲ್ಲಾ ಬೋರ್ಡುಗಳು ಶಿಕ್ಷಣಿಕ, ವೈದ್ಯಕೀಯ ಹಾಗೂ ನೀರಿನ ಸಂಪರ್ಕದ ಕ್ಷೇತ್ರಗಳ ಸೇವೆಯನ್ನು ಸಲ್ಲಿಸುತ್ತವೆ. ಆದರೆ ಇತ್ತೀಚೆ ಆದಾಯವು ಬಹಳ ಮಿತವಿರುವಂತೆ ಕಾಣುತ್ತದೆ. ವಿಸ್ತಾರವಾದ ಪಟ್ಟಣವನ್ನು ಕಾರ್ಯಕ್ಷೇತ್ರವಾಗುಳ್ಳ ಜಿಲ್ಲಾ ಬೋರ್ಡುಗಳು ಸರಕಾರದ ನೆರವಿನಿಂದಲೇ ಈ ಸಾಮಾಜಿಕ ಅಭಿವೃದ್ಧಿಗೆ ನೆರವಾಗುವ ಕೆಲಸಗಳನ್ನು ಮಾಡಬೇಕಾಗುತ್ತದೆ. ಹೆಚ್ಚು ಕಡಿಮೆ ಮಧ್ಯವರ್ತಿ ಸಂಸ್ಥೆಯೊಂದಕ್ಕಿಂತ ಹೆಚ್ಚು ಪ್ರಯೋಜನಕರವಾದ ಪಾತ್ರವನ್ನು ಜಿಲ್ಲಾ ಬೋರ್ಡು ನಿರ್ವಹಿಸುತ್ತಿರುವಂತೆ ಕಾಣುವುದಿಲ್ಲ. ಸರಕಾರದವರಿಗೂ ಇದು ಹೊಳೆದಿರಬೇಕು—ಎಂತಲೇ ಜಿಲ್ಲಾ ಬೋರ್ಡುಗಳ ಮೂಲಕ ಮೊದಲು ಮಾಡಿಸುತ್ತಿದ್ದ ಕೆಲಸಗಳಲ್ಲಿ ಒಂದೊಂದನ್ನೆ ಈಗ ನೇರವಾಗಿ ಸರಕಾರದ ಇಲಾಖೆಯಿಂದಲೇ ನೆರವೇರಿಸಲಾಗುತ್ತದೆ. ಪ್ರಮುಖ ಮಾರ್ಗಗಳ ಮೇಲ್ವಿಚಾರಣೆಯನ್ನು ಇದಕ್ಕೆ ಉದಾಹರಣೆಯಾಗಿ ಕೊಡಬಹುದು.

ಆಡಳಿತದಲ್ಲಿ ವಿಕೇಂದ್ರೀಕರಣವನ್ನು ಸಾಧಿಸಬೇಕೆನ್ನುವ ಆದರ್ಶಕ್ಕೂ ವ್ಯವಹಾರದಲ್ಲಿ ಅಳವಡಿಸಿಕೊಳ್ಳಲ್ಪಡುವ ನೀತಿಗೂ ಕಂಡು ಬರುವ ಈ ವ್ಯತ್ಯಾಸವು

(೧೦ನೇ ಪುಟ ನೋಡಿರಿ)

ಪಂಚಾಯತುಗಳ ಚುನಾವಣೆಯಲ್ಲಿ ಆರಿಸಿಬರಲಿಲ್ಲ ... ಸುದ್ದಿಗಾರರ ಪ್ರಶ್ನೆ ... ಎಂದು ಹೇಳಿದರು ... ಉತ್ತರಿಸಿದರು.

ಏನೆಂದು ಹೇಳಲಿ! ಮತಗಳನ್ನು ಅಷ್ಟು ಸರಿಯಾಗಿ ಲೆಕ್ಕಮಾಡಿದರೆ ಯೋಗ್ಯರಾದವರು ಆರಿಸಿಬರುವುದಾದರೂ ಹೇಗೆ?" ಎಂದ ಹುರಿಯಾಳು

ವಾರ್ಷಿಕ ಚಂದಾ: NAVAYUGA WEEKLY, UDIPI. ಬಿಡಿ ಸಂಚಿಕೆ:

ಭಾರತದ ಅಂಚೆ ತಿಕೇಟುಗಳ ಇತಿಹಾಸ

ಸಾಂಸ್ಕೃತಿಕ ಹಾಗು ಶೈಕ್ಷಣಿಕ ಮಹತ್ವ

ಇದೇ ಬರುವ ಅಕ್ಟೋಬರದಲ್ಲಿ ಭಾರತದಲ್ಲಿ ಅಂಚೆ ತಿಕೇಟುಗಳ ಶತ ಸಾಂವತ್ಸರಿಕೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಡುವುದು. ಅಂತಾರಾಷ್ಟ್ರೀಯ ಅಂಚೆ ತಿಕೇಟುಗಳ ಪ್ರದರ್ಶನವೊಂದನ್ನು ಭಾರತ ಸರಕಾರವು ಹೊಸದೆಹಲಿಯಲ್ಲಿ ಏರ್ಪಡಿಸುವುದು. ಇವರಲ್ಲಿ ಇಪ್ಪತ್ತೈದು ದೇಶಗಳು ಭಾಗವಹಿಸುವವೆಂದು ತಿಳಿಯುತ್ತದೆ. ಅಂಚೆ ಇಲಾಖೆಯವರು ಈ ಕುರಿತು ಪ್ರಕಟಿಸಿದ ಪುಸ್ತಿಕೆಯೊಂದು: ಈ ಪ್ರದರ್ಶನದ ದೆಸೆಯಿಂದ ಅಂಚೆ ತಿಕೇಟುಗಳನ್ನು ಸಂಗ್ರಹಿಸುವ ಹವ್ಯಾಸಕ್ಕೆ ಭಾರತದಲ್ಲಿ ಉತ್ತೇಜನೆ ದೊರಕುವಂತಾದೀತೆಂದು ಹೇಳುತ್ತದೆ. ಅಂಚೆ ತಿಕೇಟುಗಳು ಸಾಂಸ್ಕೃತಿಕ ಪ್ರಚಾರ ಕಾರ್ಯವನ್ನು ಮಾಡುತ್ತವೆಂದೂ ಅವಕ್ಕೆ ಶೈಕ್ಷಣಿಕ ಮಹತ್ವವೂ ಉಂಟೆಂದೂ ಸರಕಾರ ಒಪ್ಪಿಕೊಂಡಿದೆ.

ನಮ್ಮ ನಿತ್ಯ ವ್ಯವಹಾರದಲ್ಲಿ ಈಗ ಅಂಚೆ ತಿಕೇಟುಗಳು ತೀರ ಸಾಮಾನ್ಯ ವಸ್ತುಗಳಾಗಿರುವುದರಿಂದ ಅವು ನಿರ್ವಹಿಸುವ ಮಹತ್ವದ ಪಾತ್ರವನ್ನು ನಾವು ಗಮನಿಸುವುದಿಲ್ಲ. ಆದರೆ ಮುಕ್ಕಾಲಾಣೆಯ ಅಂಚೆ ತಿಕೇಟಿನ ಬಲದಿಂದ ನಮ್ಮ ಕ್ಷೇಮ ಸಮಾಚಾರವನ್ನು ಕನ್ಯಾಕುಮಾರಿಯಿಂದ ಹಿಮಾಲಯದ ವರೆಗಿನ ಭಾರತದಲ್ಲಿ ಎಲ್ಲಿಗೆ ಬೇಕೆಂದರಲ್ಲಿಗೆ ಮುಟ್ಟಿಸಬಲ್ಲೆವೆಂಬ ಚಮತ್ಕಾರವನ್ನು ಯೋಚಿಸಿದರೆ ನಾವು ಅಂಚೆ ತಿಕೇಟುಗಳಿಗೆ ಎಷ್ಟು ಕೃತಜ್ಞರಾಗಿರಬೇಕೆಂದು ಹೊಳೆಯುತ್ತದೆ. ಅಂಚೆ ತಿಕೇಟುಗಳ ಬಲದಿಂದಲೇ ನಾವು ಇಂದು ಜಗತ್ತಿನೊಡನೆ ಸಂಪರ್ಕವನ್ನು ಇಟ್ಟುಕೊಂಡು ವ್ಯವಹಾರವನ್ನು ಸಾಗಿಸುತ್ತಿರಲು ಸಾಧ್ಯವಾಗಿದೆ. ಇದನ್ನೇ ಅಂಚೆ ತಿಕೇಟುಗಳಿಂದಾಗುವ ಪ್ರಮುಖ ಪ್ರಯೋಜನವೆಂದು ಹೇಳಬಹುದು.

ಸರಕಾರದ ಕಾಗದ ಪತ್ರಗಳನ್ನು ಟಪ್ಪಾಲು ಪೇದೆಗಳ ಮೂಲಕ ಅವುಗಳ ನಿರ್ದಿಷ್ಟ ಸ್ಥಾನಕ್ಕೆ ಮುಟ್ಟಿಸುವ ಪದ್ಧತಿಯು ಭಾರತದಲ್ಲಿ ಹಿಂದಿನ ಕಾಲದಿಂದಲೂ ಇತ್ತು. ಪ್ರಾಚೀನ ಸಾಹಿತ್ಯದಲ್ಲಿ ಹಂಸ, ಪಾರಿವಾಳ ಮುಂತಾದ ಪಕ್ಷಿಗಳ ಕಾಲಿಗೆ ಕಾಗದವನ್ನು ಕಟ್ಟಿ ಅವು ಯಾರಿಗೆ ಸೇರಬೇಕೋ ಅಲ್ಲಿಗೆ ಮುಟ್ಟಿಸುತಿದ್ದ ವಿಚಾರವನ್ನು ನಾವು ಓದಿದ್ದೇವೆ. ಆದರೆ ದ್ವಾಪರಯುಗದಲ್ಲಿ ಕುಲರಮಣಿಯರು ತಮ್ಮ ಪ್ರಿಯನಿಗೆ ಮನೋಗತವನ್ನು ಅರುಹಬಯಸಿದಾಗ ಅಪಾಯಕರವಾದ ಈ ಉಪಾಯವನ್ನು ಬಿಟ್ಟು ಗೊಟ್ಟು ಬ್ರಾಹ್ಮಣರನ್ನೆ ಅಂಚೆಯಾಳಿನಂತೆ ಉಪಯೋಗಿಸಿದರೆಂದು ಕೇಳುತ್ತೇವೆ. ರುಕ್ಮಿಣಿಯು ಕೃಷ್ಣನನ್ನು ಬರಮಾಡಿಕೊಂಡದ್ದು ಈ ವಿಧಾನದಿಂದಲೇ. ಮೊಗಲ ಅರಸರು ಸರಕಾರದ ಕಾಗದ ಪತ್ರಗಳನ್ನೊಯ್ದು ಮುಟ್ಟಿಸುವುದಕ್ಕೆ ಪೇದೆಗಳನ್ನು ನೇಮಿಸಿದ್ದರು. ಶೇರಶಾಹನ ಕಾಲದಲ್ಲಿ ಬಂಗಾಳದಿಂದ ಸಿಂಧದ ವರೆಗಿನ ಎರಡು ಸಾವಿರ ಮೈಲುಗಳ ಉದ್ದಕ್ಕೂ ಕಾಗದ ಪತ್ರಗಳ ಸಾಗಾಟದಲ್ಲಿ ನಿರತರಾದ ಕುದುರೆ ಸವಾರರು ಇರುತಿದ್ದರು. ಇವರು ಉಳಿಕೊಳ್ಳುವುದಕ್ಕಾಗಿ ಅಲ್ಲಲ್ಲಿ ಬಂಗಲೆಗಳನ್ನು ಕಟ್ಟಿಸಿದ್ದರು—ಇವುಗಳಿಗೆ "ಡಾಕ ಬಂಗಲೆ" ಎನ್ನುತಿದ್ದ ಮಾತು ಇಂದಿಗೂ ರೂಢಿಯಲ್ಲಿರುವುದು

ಸಾರ್ವಜನಿಕರಿಗೆ ಮಾತ್ರ ಈ ಅಂಚೆಯಾಳುಗಳಿಂದ ಪ್ರಯೋಜನ ಸಿಗುತ್ತಿರಲಿಲ್ಲ. ಸರಕಾರದ ಕಾರ್ಯವನ್ನಷ್ಟೇ ಅಂಚೆಯಾಳುಗಳು ನೆರವೇರಿಸುತಿದ್ದರು. ಶ್ರೀಮಂತರು ವಿಶೇಷ ವಾರ್ತಾವಾಹಕರನ್ನು ನೇಮಿಸಿ, ಸುದ್ದಿಗಳನ್ನು ಮುಟ್ಟಿಸುತಿದ್ದರು. ಸಾರ್ವಜನಿಕರ ಉಪಯೋಗಾರ್ಥ ಅಂಚೆ ವ್ಯವಸ್ಥೆಯನ್ನು ಸಂಘಟಿಸಿ ನೂರು ವರ್ಷಗಳಾದವು. ಭಾರತದಲ್ಲಿ ರಾಜ್ಯವನ್ನು ಸ್ಥಾಪಿಸಿದ ಕಂಪೆನಿಯು ತನ್ನ ಕೆಲಸಗಳಿಗಾಗಿ ಹಿಂದಿನ ಟಪ್ಪಾಲು ಪೇ ಳನ್ನು ಉಪಯೋಗಿಸಿತು. ಹಿಂದಿನಿಂದ ಬ್ರಿಟಿಷ್ ಸರಕಾರವು ಕಾಯಿದೆಯ ಮೂಲಕ ಅಂಚೆ ಸಾಗಿಸುವ ಕಾರ್ಯದ ಸರ್ವಾಧಿಕಾರವನ್ನು ತಾನೇ ಪಡೆಕೊಂಡಿತು.

ಅಂಚೆ ತಿಕೇಟುಗಳ ಕಲ್ಪನೆಯನ್ನು ವ್ಯವಹಾರದಲ್ಲಿ ಒಡಮೂಡಿಸಿದ ಶ್ರೇಯಸ್ಸು ಎಡ್ವರ್ಡ್ ಲೀಫ್‌ಕೊಫೆ ಎಂಬವರಿಗೆ ಸಲ್ಲುತ್ತದೆ. ಇವರು ೧೮೫೨ರಲ್ಲಿ ಸಿಂಧ ಪ್ರಾಂತ್ಯದಲ್ಲಿ ಉಪಯೋಗಕ್ಕೆಂದು ಅಂಚೆ ತಿಕೇಟುಗಳ ಕೆಲವು ಮಾದರಿಯನ್ನು ರೂಪಿಸಿದರು. ಇವು ಕೆಂಪು, ಹಸುರು ಹಾಗು ಬಿಳಿ ಬಣ್ಣಗಳಲ್ಲಿ ಮುದ್ರಿಸಲ್ಪಡುತಿದ್ದವು. ಈ ತಿಕೇಟುಗಳ ರಚನೆಯಲ್ಲಾಗಲೀ ಮುದ್ರಣದಲ್ಲಾಗಲೀ ಸೂಕ್ಷ್ಮತ್ಕ್ಯವಾದವೇನೂ ಇಲ್ಲದ್ದರಿಂದ ಖಾಸಗಿ ಜನರು ಗುಟ್ಟಿನಲ್ಲಿ ಅಸಂಖ್ಯಾತ ತಿಕೇಟುಗಳನ್ನು ಹಿಂದಿನಿಂದ ತಾವೇ ಮುದ್ರಿಸಿಕೊಂಡರು. ಹೀಗಾಗಿ ಆಗಿನ ನಿಜವಾದ ಅಂಚೆ ತಿಕೇಟುಗಳನ್ನು ನಕಲಿ ತಿಕೇಟುಗಳಿಗಿಂತ ಪ್ರತ್ಯೇಕಿಸುವುದು ಈಗ ಕಷ್ಟದಾಯಕವೆನಿಸುತ್ತದೆ.

ಆದರೂ ಅಂಚೆ ತಿಕೇಟುಗಳನ್ನು ಹಚ್ಚಿ ಕಾಗದ ಪತ್ರಗಳನ್ನು ಒಯ್ಯುವ ಸಿಂಧದ ಪ್ರಯೋಗವು ಯಶಸ್ಸನ್ನೆ ಗಳಿಸಿತು. ಕಂಪನಿ ಸರಕಾರದವರು ತಮ್ಮ ಅಧಿಕಾರ ಕ್ಷೇತ್ರದಲ್ಲೆಲ್ಲ ಇಂಥ ತಿಕೇಟುಗಳನ್ನು ಬಳಕೆಯಲ್ಲಿ ತರಲು ನಿರ್ಧರಿಸಿ ಅರ್ಧಾಣೆ, ಒಂದಾಣೆ, ನಾಲ್ಕಾಣೆ ಮತ್ತು ಎಂಟಾಣೆಯ ಅಂಚೆ ತಿಕೇಟುಗಳನ್ನು ಮುದ್ರಿಸಿದರು. ಇದರಲ್ಲಿ ವಿಕ್ಟೋರಿಯಾ ರಾಣಿಯ ಶಿರೋಭಾಗವನ್ನು ಕಾಣಬಹುದು. ೧೮೫೪ರಲ್ಲಿ—ಅಂದರೆ ಇಂದಿಗೆ ಸರಿಯಾಗಿ ನೂರು ವರ್ಷಕ್ಕೆ ಹಿಂದೆ—ಕಲ್ಕತ್ತೆ, ಮುಂಬಯಿ ಮತ್ತು ಮದ್ರಾಸು ನಗರಗಳಲ್ಲಿ ಸಾರ್ವಜನಿಕರಿಗೆ ಈ ತಿಕೇಟುಗಳನ್ನು ಉಪಯೋಗಿಸಲು ಅವಕಾಶ ಕೊಡಲ್ಪಟ್ಟಿತು.

ಕಲ್ಕತ್ತೆಯಲ್ಲಿದ್ದ ಬ್ರಿಟಿಷ್ ಟಂಕಸಾಲೆಯಲ್ಲಿಯೇ ಈ ಅಂಚೆ ತಿಕೇಟುಗಳನ್ನೂ ಮುದ್ರಿಸುತಿದ್ದರು. ನ್ಯೂಮರದೀನ ಎಂಬ ಒಬ್ಬ ಭಾರತೀಯನಿಗೂ ಅಂಚೆ ತಿಕೇಟಿನ ಮುದ್ರೆಯ ಮಾದರಿಯನ್ನು ತಯಾರಿಸುವ ಕೆಲಸವನ್ನು ಒಮ್ಮೆ ಒಪ್ಪಿಸಿದ್ದರು. ೧೮೫೫ರಲ್ಲಿ ಭಾರತದ ಅಂಚೆ ತಿಕೇಟು ಮುಂತಾದುವನ್ನು ಲಂಡನ್ನಿನ ಕಂಪೆನಿಯೊಂದಕ್ಕೆ ಮುದ್ರಣಕ್ಕಾಗಿ ವಹಿಸಿ ಕೊಡಲಾಯಿತು. ೧೯೨೫ರಲ್ಲಿ ನಾಸಿಕ ರೋಡಿನಲ್ಲಿ ಭಾರತ ಸರಕಾರದ ಮುದ್ರಣಾಲಯವು ಸ್ಥಾಪಿಸಲ್ಪಟ್ಟ ಬಳಿಕ ಅಂಚೆ ತಿಕೇಟುಗಳನ್ನು ಇಲ್ಲಿಯೇ ಮುದ್ರಿಸಲಾಗುತ್ತದೆ. ಇವುಗಳನ್ನು ಯಾರೂ ನಕಲು ತೆಗೆಯಬಾರದೆಂದು ಈಗ ಅಂಚೆ ತಿಕೇಟುಗಳ ರಚನೆಯಲ್ಲಿ ಅನೇಕ ಸೂಕ್ಷ್ಮವಾದ ಗುರುತುಗಳನ್ನು ರೇಖಿಸುತ್ತಾರೆ. ಮುದ್ರಣ ಕಾರ್ಯದಲ್ಲೂ ಬಣ್ಣ ಮುಂತಾದವುಗಳ ಬಗ್ಗೆ ದಕ್ಷತೆಯನ್ನು ವಹಿಸಲಾಗುತ್ತದೆ.

ಅಂಚೆ ತಿಕೇಟುಗಳ ಸಂಗ್ರಹವು ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ವ್ಯಾಪಿಸಿರುವ ಹವ್ಯಾಸಗಳಲ್ಲಿ ಒಂದಾಗಿದೆ. ವಿರಾಮ ಕಾಲದ ಸದುಪಯೋಗ ಮಾಡಿಕೊಳ್ಳುವ ನಮ್ಮ ಎಷ್ಟೋ ತರುಣ ತರುಣಿಯರು ದೇಶ—ವಿದೇಶಗಳ ಅಂಚೆ ತಿಕೇಟುಗಳನ್ನು ಜತನದಿಂದ ಶೇಖರಿಸಿ ಸುಂದರವಾದ ಆಲ್ಬಮುಗಳಲ್ಲಿ ಹಚ್ಚಿಡುತ್ತಾರೆ. ಇಂಥ ಸಂಗ್ರಹಗಳನ್ನು ಮಾಡುವುದಕ್ಕೆ ಅಪಾರ ಸಹನೆಬೇಕು; ಅಭಿರುಚಿ ಬೇಕು; ಹಣವನ್ನು ವ್ಯಯಿಸುವ ಬುದ್ಧಿಯೂ ಸ್ವಲ್ಪ ಮಟ್ಟಿಗೆ ಇರಬೇಕಾಗುವುದು. ಪಾಶ್ಚಾತ್ಯ ದೇಶಗಳಲ್ಲಿ ಲಕ್ಷಗಟ್ಟಳೆ ಅಂಚೆ ತಿಕೇಟುಗಳನ್ನು ಸಂಗ್ರಹಿಸಿ, ದೇಶ-ವಿದೇಶಗಳ ತರುಣ-ತರುಣಿಯರಿಗೆ ಮುಟ್ಟಿಸುವ ಕೆಲವು ಸಂಸ್ಥೆಗಳೂ ಇವೆ. ಲಂಡನಿನಲ್ಲಿದ್ದ ಜೆ. ಎ. ವಾಲೇಸ್ ಎಂಬ ಅಂಚೆ ತಿಕೇಟುಗಳ ಮಾರಾಟಗಾರನೊಡನೆ ಹತ್ತು ಕೋಟಿಗಿಂತಲೂ ಹೆಚ್ಚು ಸಂಗ್ರಹವಿತ್ತು! ಇವನು ೧೦೦, ೧೦೦೦ ಹಾಗು ೧೨,೦೦೦ ಅಂಚೆ ತಿಕೇಟುಗಳ ಪುಟ್ಟ ಸಂಗ್ರಹದ ವ್ಯಾಪಾರವನ್ನು ಮಾಡುತಿದ್ದನು. ಭಾರತದಲ್ಲಿ ಕಂಪೆನಿಯ ಆಡಳಿತ ಕಾಲದಲ್ಲಿ ಉಪಯೋಗಿಸಿದ ಅಂಚೆ ತಿಕೇಟುಗಳೂ ಇವನಲ್ಲಿದ್ದುವು.

ವಿದೇಶಗಳಲ್ಲಿರುವಷ್ಟು ದೊಡ್ಡ ಪ್ರಮಾಣದಲ್ಲಿ ಅಲ್ಲವಾದರೂ ನಮ್ಮಲ್ಲೂ ಕೆಲವು ಸಂಸ್ಥೆಗಳೂ ವ್ಯಕ್ತಿಗಳೂ ಅಂಚೆ ತಿಕೇಟುಗಳನ್ನು ಸಂಗ್ರಹಿಸಿ ಬೇಕಾದವರಿಗೆ ಒದಗಿಸಿ ಕೊಡುವ ಕಾರ್ಯದಲ್ಲಿ ಬಿದ್ದಿರುವುದನ್ನು ಕಾಣಬಹುದು. "ಫಿಲಾಟೆಲಿಕ್ ಸೊಸೈಟಿ ಆಫ್ ಇಂಡಿಯ" ಹಾಗು "ಎಂಪಾಯರ್ ಆಫ್ ಇಂಡಿಯ ಫಿಲಟೆಲಿಕ್ ಸೊಸೈಟಿ" ಎಂಬ ಎರಡು ಸಂಘಗಳು ಭಾರತದಲ್ಲಿ ಅಂಚೆ ತಿಕೇಟು

(೧೧ನೇ ಪುಟ ನೋಡಿರಿ)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0 - 0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ದಿ ಸಿಟಿ ಟೈಪ್ ಫೌಂಡರಿ
ಚಿಕ್ಕಪೇಟೆ, ಬೆಂಗಳೂರು ಸಿಟಿ.

* * * * *

ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಶಿನ್‌ಗಳೂ, ಪೆರೌಲ್ಡುಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.

ವಿವರಗಳಿಗೆ ಇಂದೇ ಬರೆಯಿರಿ.

THE CITY TYPE FOUNDRY
CHICKPET, BANGALORE CITY.

ಪ್ರಜಾಪ್ರಭುತ್ವ ಪದ್ಧತಿಯಂತೆ ರಾಜ್ಯಭಾರ ನಡೆಯುವ ಭಾರತದಲ್ಲಿ ಶಾಸನ ಸಭೆಗಳೂ ಪಾರ್ಲಿಮೆಂಟೂ ಜನಹಿತದ ಘನವಾದ ಉದ್ದೇಶದಿಂದ ಅನೇಕ ಕಾಯಿದೆಗಳನ್ನು ಮಾಡುತ್ತವೆ. ಪ್ರಗತಿಪರ ಹೆಜ್ಜೆಯನ್ನಿಡುವುದೇ ಇವುಗಳ ಧ್ಯೇಯ. ನಮ್ಮ ಪ್ರತಿನಿಧಿಗಳು ಜೀವನದ ಪ್ರತಿಯೊಂದೂ ರಂಗದಲ್ಲಿ ಪರಿವರ್ತನೆಯನ್ನು ತರಲು ಅಪೇಕ್ಷಿಸುತ್ತಾರೆ. ಆದುದರಿಂದ, ಭೂಸುಧಾರಣೆಯ ಕುರಿತು ತೋರಿಸಿದ ಉತ್ಸಾಹ ಹಾಗು ಅವಸರವನ್ನು ವಿವಾಹ ಸಂಬಂಧದ ವಿಷಯದಲ್ಲೂ ಅವರು ಸಂಕೋಚವಿಲ್ಲದೆ ಪ್ರದರ್ಶಿಸುತ್ತಾರೆ; ಬಿಚ್ಚು ಮನಸ್ಸಿನ ಚರ್ಚೆ ನಡೆಸುತ್ತಾರೆ. ಆದರೆ ಭೂ ಸುಧಾರಣೆಯಲ್ಲಿ ವ್ಯಾವಹಾರಿಕ ಅಂಶಕ್ಕೆ ಪ್ರಾಧಾನ್ಯವಿದೆ; ಮದುವೆಯಲ್ಲಿ ಭಾವನಾತ್ಮಕ ವಿಚಾರಗಳಿಗೇ ಮಹತ್ವ. ಇವೆರಡಕ್ಕೂ ಮಾನವೀಯ ದೃಷ್ಟಿಕೋಣವು ಸಮವಾಗಿ ಅನ್ವಯಿಸುತ್ತಿದ್ದರೂ ಆದರ್ಶವಾದಿಗಳಾದ ಶಾಸನಕರ್ತರು ಭಾವನಾಪರವಶರಾಗುವುದೇ ಹೆಚ್ಚು.

ಹೀಗೆ ಭಾವೋದ್ರಿಕ್ತರಾಗುವಂತೆ ಶಾಸನಕರ್ತರನ್ನು ಪ್ರೇರಿಸಿದ ಮಸೂದೆಗಳಲ್ಲಿ ವಿಶೇಷ ವಿವಾಹ ವಿಧೇಯಕವನ್ನು ಹೆಸರಿಸಬಹುದು. ಪಾರ್ಲಿಮೆಂಟಿನ ಹಿಂದಿನ ಅಧಿವೇಶನ ಕಾಲದಲ್ಲಿ ರಾಜ್ಯಸಭೆಯ ಮುಂದೆ ಇದನ್ನು ಮಂಡಿಸಿದ್ದರು. ಅಲ್ಲಿ ಅನಿರೀಕ್ಷಿತವಾದ ಕೆಲವು ವಾದಗ್ರಸ್ತ ತಿದ್ದುಪಡಿಗಳು ಸೂಚಿಸಲ್ಪಟ್ಟು, ಸ್ವೀಕಾರಗೊಂಡವು. ಈ ಮಸೂದೆಯನ್ನು ಕಳೆದ ತಿಂಗಳ ಕೊನೆಯ ವಾರದಲ್ಲಿ ಲೋಕಸಭೆಯ ಮುಂದೆ ತಂದರು. ಮೂರು ವಾರಗಳ ವರೆಗೆ ಸ್ವಾರಸ್ಯವಾದ ಚರ್ಚೆಗಳು ನಡೆದು, ಸದಸ್ಯರಿಂದ ಬಂದ ಅನೇಕ ತಿದ್ದುಪಡಿಗಳಲ್ಲಿ ಮಹತ್ವದ ಕೆಲವನ್ನು ಸ್ವೀಕರಿಸಲಾಯಿತು. ಪವಿತ್ರವಾದ ನಮ್ಮ ಘಟನೆಯ ನಿರ್ದೇಶಕ ತತ್ವಗಳಲ್ಲಿ ಒಂದು ಸರಕಾರವು ನಾಗರಿಕರಿಗೆ ಏಕರೂಪವಾದ ಸಾಮಾಜಿಕ ನಿಯಮಾವಳಿಯನ್ನು ರಚಿಸಲು ಪ್ರಯತ್ನಿಸಬೇಕೆಂದು ಆದೇಶಿಸುತ್ತದೆ. ವಿಶೇಷ ವಿವಾಹ ವಿಧೇಯಕವು ಇದಕ್ಕೆ ಅನುಗುಣವಿರುತ್ತದೆ. ಇದು ಒತ್ತಾಯದ ಕಾಯಿದೆಯಲ್ಲ- ಬೇಕೆನ್ನಿಸಿದವರು ಇದರ ಪ್ರಯೋಜನವನ್ನು ಪಡೆಯಬಲ್ಲರು. ಆದುದರಿಂದ ಪ್ರಾಚೀನವಿವಾಹ ಸಂಪ್ರದಾಯದ ಇಂದಿನ ಅವಶೇಷಗಳಲ್ಲಿ ಶ್ರದ್ಧೆ ಇರುವವರು ಭಯಪಡುವ ಅಗತ್ಯ ಕಾಣುವದಿಲ್ಲ.

ಐವತ್ತು ಪರಿಚ್ಛೇದಗಳೂ ಐದು ಅನುಬಂಧಗಳೂ ಉಳ್ಳ ಈ ಮಸೂದೆಯ ಚರ್ಚೆಯಲ್ಲಿ ಅನೇಕ ಸದಸ್ಯರು ಉತ್ಸಾಹದಿಂದ ಭಾಗವಹಿಸಿದರು. ಪ್ರಧಾನ ಮಂತ್ರಿ ನೆಹರೂರವರೂ ಇವರಲ್ಲಿ ಸೇರಿದ್ದು ಎರಡು ಸಂದರ್ಭಗಳಲ್ಲಿ ಅವರು ಒಳ್ಳೆಯ ಸ್ಫೂರ್ತಿಯಿಂದ ಭಾಷಣ ಮಾಡಿದರು. "ನಮ್ಮ ಸಾಮಾಜಿಕ ನಡವಳಿಕೆಯಲ್ಲಿ ಏಕರೂಪತೆಯನ್ನು ತರಲು ಇದು ಸ್ವಯಂಪ್ರೇರಿತವಾದ ಪ್ರಥಮ ಪ್ರಯತ್ನವಾಗಿದೆ. ನಾನು ಈ ವಿಧೇಯಕವನ್ನು ಕಾಯಿದೆ ದೃಷ್ಟಿಯಿಂದಷ್ಟೇ ನೋಡದೆ, ಸಾಮಾಜಿಕ ಸುಧಾರಣೆಯ ಮನೋಭಾವದಿಂದಲೂ ಕಾಣುತ್ತೇನೆ. ಇದು ಹೇಳಿಕೊಳ್ಳುವಷ್ಟು ದೊಡ್ಡ ಪ್ರಯತ್ನವಲ್ಲದಿದ್ದರೂ ಇಂದಿನ ಪರಿವರ್ತಿತ ವಾತಾವರಣಕ್ಕೆ ಹೊಂದಿಕೊಳ್ಳುವ ಪ್ರಯತ್ನ" ಎಂದವರು ಹೇಳಿದರು.

ವಿಶೇಷ ವಿವಾಹ ವಿಧೇಯಕ

ನಮ್ಮ ಪ್ರತಿನಿಧಿಗಳ ಸ್ವಾರಸ್ಯಪೂರ್ಣ ಅಭಿಪ್ರಾಯ

ನೆಹರೂರ ಮಾತುಗಳು ಬಹಳ ಮಾರ್ಮಿಕವಾಗಿದ್ದವು: ಅವರು ಸಮಾಜವು ಬದಲಾವಣೆ ಹೊಂದಿದೆಯೆಂದು ಬಲವಾಗಿ ಪ್ರತಿಪಾದಿಸಿ, ಸುಧಾರಣೆಯನ್ನು ಸ್ವಾಗತಿಸಿದರು. ರಾಷ್ಟ್ರೀಯ ಐಕ್ಯದ ರಕ್ಷಣೆಗೋಸ್ಕರ ಏಕರೂಪತೆಯು ಅಗತ್ಯವಿದೆಯೆಂದೂ ಜಾತೀಯತೆಯ ನಿರ್ಮೂಲನವೇ ಇದಕ್ಕೆ ಉಪಾಯವೆಂದೂ ಹೇಳುತ್ತಾ ವಿಶೇಷ ವಿವಾಹ ವಿಧೇಯಕವು ಜಾತೀಯ ಬಂಧನವನ್ನು ಕಳಚುವ ಸಾಧನವೆಂದು ಸಾರಿದರು. ಇಲ್ಲಿ ಧರ್ಮದ ಪ್ರಶ್ನೆಯೇ ಏಳುವುದಿಲ್ಲ ಎಂದವರು ಅಭಿಪ್ರಾಯಪಟ್ಟರು. ಹಿಂದೂ ಧರ್ಮವು ಪ್ರಾಚೀನ ಕಾಲದಿಂದಲೂ ಸ್ಥಿತ್ಯಂತರಗಳನ್ನು ಸ್ವಾಗತಿಸಿ, ಬಾಳಿರುತ್ತದೆ ಎಂಬುದಕ್ಕೆ ಅವರು "ಮೃಚ್ಛಕಟಿಕ" (ಅಥವಾ 'ವಸಂತ ಸೇನೆ') ಎಂಬ ಪ್ರಸಿದ್ಧ ಸಂಸ್ಕೃತ ನಾಟಕವನ್ನು ನಿದರ್ಶನವಾಗಿ ಕೊಟ್ಟರು. ಭಾರತಕ್ಕೆ ಆಗಮಿಸಿದ ಪ್ರತಿಯೊಂದೂ ಹೊಸ ಧರ್ಮಗಳ ಜನರು ಪಂಡಿತರಿಂದಲೂ ಪುರೋಹಿತರಿಂದಲೂ ಮಾನ್ಯತೆ ದೊರೆತಾಗ ಅವರು ಶೀಘ್ರ ತನ್ನದಾಗಿಸಿದ ಶಾಸ್ತ್ರ ಗ್ರಂಥಗಳ ಪ್ರಾಮಾಣ್ಯವನ್ನೇ ಒಪ್ಪಿದರು—ಹೀಗಾಗಿ ಪ್ರಗತಿಯು ಕುಂಠಿತವಾಯಿತು ಎಂದು ನೆಹರೂ ಹೇಳಿದರು.

ಒಂದೇ ಕುಟುಂಬದ ಸದಸ್ಯರಾಗಿದ್ದುಕೊಂಡೂ ವೈಯಕ್ತಿಕವಾಗಿ ಬೇರೆ ಬೇರೆ ಧರ್ಮಗಳನ್ನು ಅನುಸರಿಸಲಾಗುವುದೆಂಬುದಕ್ಕೆ ನೆಹರೂ ಸಿಂಹಳದ ಉದಾಹರಣೆಯಿತ್ತರು. ವಿಶೇಷ ವಿವಾಹ ವಿಧೇಯಕವು ಈಗ ನಡೆಯುವ ವಿವಾಹ ಪದ್ಧತಿಯ ಸ್ಥಾನವನ್ನು ಆಕ್ರಮಿಸುವುದಿಲ್ಲವೆಂದೂ ಬದಲಿ ಸುಧಾರಣೆಯನ್ನು ತೀವ್ರವಾಗಿ ಇಚ್ಛಿಸುವವರಿಗೆ ತೃಪ್ತಿಯನ್ನೊದಗಿಸುತ್ತದೆಂದೂ ನೆಹರೂ ತಿಳಿಸಿದರು. ಹಾಗೆ ನೋಡಿದರೆ ಭಾರತದಲ್ಲಿ ೧೮೭೨ನೇ ಇಸವಿಯಷ್ಟು ಹಿಂದೆಯೇ ಈ ಬಗ್ಗೆ ಒಂದು ಕಾಯಿದೆಯನ್ನು ಮಾಡಿದ್ದರು. ತಾವು ಯಾವ ಜಾತಿ ಧರ್ಮಗಳಿಗೂ ಸೇರಿದವರಲ್ಲವೆಂದು ಹೇಳುತ್ತಿದ್ದವರು ಈ ಕಾಯಿದೆಯಂತೆ ವಿವಾಹವಾಗುತ್ತಿದ್ದರು; ಆದರೆ ಈ ಹೇಳಿಕೆಯನ್ನು ಅಧಿಕರು ಕೊಡುತ್ತಿರಲಿಲ್ಲ. ೧೯೨೩ರಲ್ಲಿ ಹೊಸ ಕಾಯಿದೆಯನ್ನು ಮಾಡಲಾಯಿತು– ಏಕಮತಾವಲಂಬಿಗಳು ಪರಸ್ಪರ ವಿವಾಹವಾಗುವುದಕ್ಕೆ ಇದು ಅವಕಾಶವನ್ನು ಕಲ್ಪಿಸಿತು. ಆದರೆ ಇಷ್ಟರಿಂದಲೇ ನಮ್ಮಲ್ಲಿಯ ಪ್ರಗತಿಪರ ವರ್ಗಕ್ಕೆ ಸಮಾಧಾನವಾಗಲಿಲ್ಲ. ಕಾರಣ ಜಾತಿ ಭೇದವನ್ನಷ್ಟೇ ಅಲ್ಲ—ಮತ

ಇತರ ಯಾವದೇ ಚಹಾಗಿಂತಲೂ
ಬ್ರೂಕ್ ಬಾಂಡ್ ಚಹಾವನ್ನೇ
ಹೆಚ್ಚು ಜನರು ಕೊಳ್ಳುತ್ತಾರೆ

ಒಂದು ಕಾರಣ – ಹಸನಾಗಿರುವಿಕೆ!
ಫ್ಯಾಕ್ಟರಿಯಿಂದ ಅಂಗಡಿಗೆ ತ್ವರಿತದಿಂದ ತಲುಪಿಸಲ್ಪಡುವುದರಿಂದ ಬ್ರೂಕ್ ಬಾಂಡ್ ಚಹಾ ಅತ್ಯಂತ ಹಸನಾಗಿರುವುದನ್ನು ಖಂಡಿತಗೊಳಿಸುತ್ತದೆ.

ಇನ್ನೊಂದು ಕಾರಣ – ಶುದ್ಧತೆ!

ಹಾಗು ಧರ್ಮಗಳ ಭೇದವನ್ನೂ ಲಕ್ಷಿಸದ ವಿಶೇಷ ವಿವಾಹ ವಿಧೇಯಕವನ್ನು ಸರಬೇಕಾಯಿತು ಈಗಿನ ತರುಣ ತರುಣಿಯರು ಭಾವನಾತರಂಗಗಳಲ್ಲಿ ತೇಲುತ್ತಿದ್ದು, ಅವರನ್ನು ತಡೆಯುವುದು ಸಾಧ್ಯವಾಗುವುದಿಲ್ಲ. ಆದಕ್ಕಾಗಿಯೇ ಈ ಮಸೂದೆ ಎಂದು ಕಾಯಿದೆ ಮಂತ್ರಿಗಳು ಹೇಳಿದುದನ್ನು ಇಲ್ಲಿ ಗಮನಿಸಬಹುದು.

ಲೋಕ ಸಭೆಯ ಪ್ರತಿನಿಧಿಗಳು ಚರ್ಚೆ ನಡೆಸುತ್ತಿದ್ದಾಗ ರಾಜ್ಯಸಭೆಯ ಸದಸ್ಯರು ಒಳ್ಳೆಯ ಆಸಕ್ತಿಯಿಂದ ಇದನ್ನು ನಿರೀಕ್ಷಿಸುತ್ತಿದ್ದರು. ನಮ್ಮ ಪ್ರತಿನಿಧಿಗಳು ಪುರಾತನ ಋಷಿಮುನಿಗಳ ಹೆಸರನ್ನು ತಮ್ಮ ವಾದದ ಸಮರ್ಥನೆಗಾಗಿ ಎತ್ತುತ್ತಿದ್ದರು; ಶಾಸ್ತ್ರ ಗ್ರಂಥಗಳನ್ನು ಉದಾಹರಿಸುತ್ತಿದ್ದರು; ದೇಶ ವಿದೇಶಗಳ ದಾಂಪತ್ಯಜೀವನ ಪದ್ಧತಿಯನ್ನು ವರ್ಣಿಸುತ್ತಿದ್ದರು. ಮಸೂದೆಯ ಬೆಂಬಲಿಗರನ್ನು ಖಂಡಿಸುವಾಗ 'ಈ ಕಾಯಿದೆ ಬೇಕೆನ್ನುವುದಕ್ಕೆ ಮುಂಚೆ ನಿಮ್ಮ ಶ್ರೀಮತೀಜಿಯನ್ನೊಮ್ಮೆ ಕೇಳಿ ನೋಡಿರಿ!" ಎಂದು ಆಹ್ವಾನ ಕೊಡುವಷ್ಟು ಬಿಚ್ಚು ಮನಸ್ಸಿನಿಂದ ವರ್ತಿಸುತ್ತಿದ್ದರು. ಚರ್ಚೆಯಲ್ಲಿ ವ್ಯಕ್ತಗೊಳಿಸಲಾದ ಅಭಿಪ್ರಾಯಗಳು ಪಕ್ಷದ ಶಿಸ್ತಿನ ಉಸ್ತುವಾರಿಗೆ ಒಳಪಟ್ಟಂತೆ ಕಾಣಲಿಲ್ಲ. ಪರಿಣಾಮದಲ್ಲಿ, ಕಾಯಿದೆ ಮಂತ್ರಿ ಶ್ರೀ ಬಿಸ್ವಾಸರು ತುಸು ಮುಂದಗಾಮಿಗಳಾಗಿ ಕಂಡುಬಂದರೆ, ಪ್ರಧಾನ ಮಂತ್ರಿಗಳು ತೀವ್ರ ಸುಧಾರಣಾಪೇಕ್ಷಿಗಳಾಗಿ ತೋರಿದರು. ಪ್ರತಿಪಕ್ಷದವರಲ್ಲಿ ಆಚಾರ್ಯ ಕೃಪಲಾನಿ, ಎನ್. ಸಿ. ಚಟರ್ಜಿ ಮುಂತಾದವರು ವಿಧೇಯಕದ ಕೆಲವು ಕಲಮುಗಳನ್ನು ಕಟುವಾಗಿ ಟೀಕಿಸಿದರು. ಮಹಿಳಾ ಸದಸ್ಯರಂತೂ ತುಂಬ ಉತ್ಸಾಹವನ್ನು ತೋರಿಸುತ್ತಿದ್ದರು.

ವಾದಗ್ರಸ್ತ ವಿಷಯಗಳಲ್ಲಿ ವಿವಾಹದ ವಯಸ್ಸು ಹಾಗು ಪರಸ್ಪರ ಸಮ್ಮತಿಯಿಂದ ದಾಂಪತ್ಯ ವಿಚ್ಛೇದನ ಇವೆರಡು ಉಲ್ಲೇಖನೀಯ. ಮಸೂದೆಯನ್ನು ಸಾರ್ವಜನಿಕ ಅಭಿಪ್ರಾಯ ಸಂಗ್ರಹಾರ್ಥವಾಗಿ ಪ್ರಕಟಿಸಿದ್ದಾಗ ಅದರಲ್ಲಿ ವಿವಾಹೇಚ್ಛುಗಳ ವಯೋಮಾನವು ಕನಿಷ್ಠ ೧೮ ಆಗಿರಬೇಕೆಂದು ಹೇಳಿದ್ದರು. ರಾಜ್ಯಸಭೆಯು ಇದನ್ನು ಮೂರು ವರ್ಷಗಳಿಂದ ಏರಿಸಿತು. ಮಾತ್ರವಲ್ಲ, ಮೂಲ ಮಸೂದೆಯಲ್ಲಿ ಇದ್ದಿರದ ಪರಸ್ಪರ ಸಮ್ಮತಿಯ ದಾಂಪತ್ಯ ವಿಚ್ಛೇದನದ ಕಲಮನ್ನೂ ಸೇರಿಸಿತು. ಇದು ಅನಿರೀಕ್ಷಿತ ತಿದ್ದುಪಡಿಯಾಗಿತ್ತಲ್ಲದೇ ಅಲ್ಲಿ-ವಾಕ್ಯ ರಚನೆಯಲ್ಲಿಯೂ ದೋಷವಿದ್ದು, ಪರಿಣಾಮವು ನೆಟ್ಟಗಾಗುತ್ತಿರಲಿಲ್ಲ. ಲೋಕ ಸಭೆಯು ತಕ್ಕ ತಿದ್ದುಪಡಿಯಿಂದ ಈ ಕಲಮನ್ನು ಕೆಲಮಟ್ಟಿಗೆ ಸುಧಾರಿಸಿ,ಅಪಾಯವನ್ನು ಕಡಿಮೆ ಮಾಡಿರುವುದು.

ಮದುವೆಯ ಕನಿಷ್ಠ ವಯೋಮಿತಿಯು ಸ್ತ್ರೀ ಪುರುಷರಿಬ್ಬರಿಗೂ ೨೧ ಆಗಿರಬೇಕೆಂದು ಕೆಲವು ಸದಸ್ಯರು ಹೇಳಿದಾಗ, ತಮ್ಮ ಮಕ್ಕಳಿಗೆ ೧೫ ವರ್ಷದಲ್ಲಿಯೇ ಮದುವೆ ಮಾಡಿರುವ ಮಹಾನುಭಾವರು ಇಷ್ಟು ಮುಂದೆ ಹೋಗುವುದು ಸರಿಯಲ್ಲ ಎಂದೊಬ್ಬರು ಮಾರ್ನುಡಿದರು. ಕಾಯಿದೆ ಮಂತ್ರಿಗಳು ಶಾಸ್ತ್ರ ಗ್ರಂಥಗಳಲ್ಲಿ ಪುರುಷನು ೨೫ನೇ ವರ್ಷದಲ್ಲಿ ಮದುವೆಯಾಗುವುದು ಪ್ರಶಸ್ತವೆಂದು ಹೇಳಿದೆಯಾಗಿ ತಿಳಿಸಿದರು. ಬೇರೆ ಕೆಲವರು ೧೮ ವರ್ಷದಲ್ಲಿ ಒಬ್ಬನು ಸೈನ್ಯಕ್ಕೆ ಸೇರಲು ಹಾಗು ಆಸ್ತಿಯನ್ನು ಪರಭಾರೆ ಮಾಡಲು ಅರ್ಹನಾಗುತ್ತಿದ್ದರೆ ಹೃದಯವನ್ನು ಹುಡುಗಿಯೊಬ್ಬಳಿಗೆ ಅರ್ಪಿಸುವುದಕ್ಕೆ ಏಕೆ ಅವಕಾಶವಿರಕೂಡದು? ಎಂದು ಪ್ರಶ್ನಿಸಿದರು. ಹುಡುಗನು ದೃಢಕಾಯನೂ ಆರೋಗ್ಯವಂತನೂ ಆಗಿದ್ದರೆ, ಸಮಪ್ರಾಯದ ಹುಡುಗಿಯನ್ನೂ ಮದುವೆಯಾಗಬಹುದೆಂದು ಕೆಲವರು ಅಭಿಪ್ರಾಯಪಟ್ಟರು. ಹುಡುಗಿಯ ಸೌಂದರ್ಯವು ೧೯ ವರ್ಷ ಪ್ರಾಯದ ಒಳಗೆ ಆಕರ್ಷಣ ರಹಿತವಾಗುವುದೆಂದು ಒಬ್ಬ ಸದಸ್ಯರು ಉದ್ಗರಿಸಿದಾಗ ನಾಲ್ಕೂ ಸುತ್ತಲಿಂದ "ಇಲ್ಲ" ಎಂಬ ಕೂಗೆದ್ದಿತು.

ಮತದಾನದ ಕಾಲದಲ್ಲಿ ನೆಹರೂ, ಆಝಾದ ಮತ್ತಿತರ ಕೆಲವು ಮಂತ್ರಿಗಳು ಸ್ತ್ರೀ ಪುರುಷರಿಬ್ಬರ ವಯಸ್ಸೂ ೨೧ ಆಗಿರಬೇಕೆಂದು ಹೇಳಿ, ಹುಡುಗಿಗೆ ೧೮ ಹಾಗು ಹುಡುಗನಿಗೆ ೨೧ ವಯಸ್ಸಾಗಿರಬೇಕೆಂಬ ಕಮ್ಯುನಿಸ್ಟರ ತಿದ್ದುಪಡಿಯನ್ನು ವಿರೋಧಿಸಿದರು. ಆದರೆ ಜಗಜೀವನರಾಮ ಮತ್ತಿತರ ಹಲವು ಕಾಂಗ್ರೆಸಿಗರೂ ಪ್ರತಿಪಕ್ಷದವರೂ ತಿದ್ದುಪಡಿಗೆ ಬೆಂಬಲ ನೀಡಿದರು. ಹನ್ನೆರಡು ಬಹುಮತಗಳಿಂದ ತಿದ್ದುಪಡಿಯು ಸ್ವೀಕಾರಗೊಂಡಿತು. ಮುಂದೆ ಡಾ. ರಾಮರಾಯರೆಂಬವರು ದಕ್ಷಿಣ ಭಾರತದಲ್ಲಿ ಮಾವನ ಸೊಸೆಯನ್ನು ಮದುವೆಯಾಗುವುದೇ ಮುಂತಾದ ಸಂಪ್ರದಾಯವುಂಟೆಂದೂ ಇಂಥ ಮದುವೆಗಳಿಗೂ ವಿಧೇಯಕದಲ್ಲಿ ಅವಕಾಶಕೊಡಬೇಕೆಂದೂ ಪ್ರತಿಪಾದಿಸಿದರು. ಆದರೆ ಭಾರತದಲ್ಲಿ ಒಂದೊಂದು ಕಡೆಯಲ್ಲಿ ಒಂದೊಂದು ಪದ್ಧತಿ ರೂಢಿಯಲ್ಲಿರುವುದರಿಂದ ಏಕರೂಪವಾದ ಕಾಯಿದೆ ಅಸಾಧ್ಯವಾಗುವುದೆಂದೂ ಆದುದರಿಂದ ಕನಿಷ್ಠ ಅಡಚಣೆಯಾಗುವಂತೆ ನಿಷಿದ್ಧ ಸಂಬಂಧದ ಪಟ್ಟಿಯನ್ನು ಸಿದ್ಧಗೊಳಿಸಲಾಗಿದೆಯೆಂದೂ ಹೇಳಿ, ಇದನ್ನು ತಿರಸ್ಕರಿಸಲಾಯಿತು. ಸಮಷ್ಟಿ ಕುಟುಂಬದಲ್ಲಿ ನಿಕಟ ಸಂಬಂಧಿಗಳಾದ ಸ್ತ್ರೀ ಪುರುಷರು ಒಟ್ಟಾಗಿ ವಾಸಿಸುತ್ತಿರುವಾಗ ಲೈಂಗಿಕ ಹಾಗು ನೈತಿಕ ತಪ್ಪುಗಳಾಗಬಾರದೆಂದು ಋಷಿಮುನಿಗಳು ನಿಷಿದ್ಧ ಸಂಬಂಧವನ್ನು ಏರ್ಪಡಿಸಿದರೆಂದೂ ಇದರಲ್ಲಿ ವೈಜ್ಞಾನಿಕ ಮಹತ್ವದ ವಿಚಾರವೂ ಅಡಕವಾಗಿದೆಯೆಂದೂ ಕಾಯಿದೆ ಮಂತ್ರಿಗಳು ಹೇಳಿದರು.

ಮುಂದಿನ ತಿದ್ದುಪಡಿಗಳನ್ನು ಮಂಡಿಸುವಲ್ಲಿ ಕಾಂಗ್ರೆಸಿನ ಶ್ರೀ ವೆಂಕಟರಾಮನ್ನರು ಕ್ರಿಯಾತ್ಮಕ ಪಾತ್ರವನ್ನು ವಹಿಸಿದರು. ಓಡಿ ಹೋಗಿ ಮದುವೆಯಾಗುವ ಪ್ರವೃತ್ತಿಯನ್ನು ತಡೆಗಟ್ಟುವುದಕ್ಕಾಗಿ ಮದುವೆಯಾಗುವ ಜಿಲ್ಲೆಯಲ್ಲಿ ಹುಡುಗಿ ಅಥವಾ ಹುಡುಗನಲ್ಲಿ ಯಾರಾದರೊಬ್ಬರು ಕನಿಷ್ಠ ೩೦ ದಿನಗಳಾದರೂ ನೆಲಸಿರಬೇಕೆಂಬ ತಿದ್ದುಪಡಿ ಸ್ವೀಕಾರಗೊಂಡಿತು. ಇಂಥ ಮದುವೆಯ ನೋಟೀಸನ್ನು ತಂದೆತಾಯಿಗಳಿಗೆ ಕೊಡಬೇಕಾಗುವುದು; ಆದರೆ ಪತ್ರಿಕೆಗಳಲ್ಲಿ ಇದನ್ನು ಪ್ರಕಟಿಸಬೇಕೆನ್ನುವ ಸೂಚನೆ ತಿರಸ್ಕರಿಸಲ್ಪಟ್ಟಿತು. ಡಾ. ರಾಮರಾಯರು ವಿದೇಶಗಳಲ್ಲಿರುವ ಭಾರತೀಯರಿಗೂ ಈ ಕಾಯಿದೆಯಂತೆ ಮದುವೆಯಾಗಗೊಡಬೇಕೆಂದು ಹೇಳಿದಾಗ, ಕಾಯಿದೆ ಮಂತ್ರಿಗಳು ಇದರಿಂದ ಅನೇಕ ಶಾಸನಿಕ ತೊಡಕುಗಳುಂಟಾಗುತ್ತವೆಂದೂ ಹಾಗಾಗದಂತೆ ವಿದೇಶ ವಿವಾಹ ಮಸೂದೆಯೊಂದನ್ನು ತಾವು ತರಲಿರುವುದಾಗಿಯೂ ಸೂಚಿಸಿದರು. ಪಂಡಿತ ಭಾರ್ಗವರು ವಿವಾಹೇಚ್ಛುಗಳಲ್ಲಿ ಪುರುಷರು ತಾವು ಷಂಢರಲ್ಲವೆಂದೂ ಸ್ತ್ರೀಯರು ತಾವು ಗರ್ಭಿಣಿಯರಲ್ಲವೆಂದೂ ಇಬ್ಬರೂ ನಾವು ತಲೆತಿರುಕರು ಅಥವಾ ಗುಹ್ಯ ವ್ಯಾಧಿ ಪೀಡಿತರು ಅಲ್ಲವೆಂಬ ವೈದ್ಯಕೀಯ ಪ್ರಶಸ್ತಿಯನ್ನು ಹಾಜರು ಪಡಿಸಬೇಕೆಂದು ತಿದ್ದುಪಡಿಯ ಮೂಲಕ ಕೇಳಿಕೊಂಡರು. ಆಗ ವಿರೋಧಿಯವರು ವೈದ್ಯರಲ್ಲಿ ಅಪ್ರಮಾಣಿಕರು ಹಣ ಸಂಪಾದನೆಗಾಗಿ ಈ ತಿದ್ದುಪಡಿಯ ದುರುಪಯೋಗ ಪಡಿಸಬಹುದೆಂದು ಎಚ್ಚರವಿತ್ತರು. ಕೃಪಲಾನಿಯವರು ಮಾತನಾಡುತ್ತಾ ಮದುವೆಯಲ್ಲಿ ಮೂರು ಉದ್ದೇಶಗಳುಂಟು: ಶಾರೀರಿಕ ಸುಖ, ಮಕ್ಕಳ ಅಪೇಕ್ಷೆ ಹಾಗು ಸಾಹಚರ್ಯ. ಇದರಲ್ಲಿ ಕೊನೆಯದಕ್ಕೆ ವೈದ್ಯಕೀಯ ಪ್ರಶಸ್ತಿ ಪತ್ರ ಅನಗತ್ಯ. ಮದುವೆಯ ನಿಜವಾದ ಉದ್ದೇಶವನ್ನು ವಿವರಿಸದೆ ಕಾಯಿದೆ ಮಂತ್ರಿಗಳು ತಪ್ಪು ಮಾಡಿದರು ಎಂದರು. ತಿದ್ದುಪಡಿಯು ಮತದಾನದಲ್ಲಿ ಬಿದ್ದು ಹೋಯಿತು.

ಅವಿಭಕ್ತ ಕುಟುಂಬದ ಸದಸ್ಯರು ಈ ಕಾಯಿದೆಯಂತೆ ಮದುವೆಯಾದರೆ, ಅವರು ತಮ್ಮ ಪಾಲಿನ ಮೇಲೆ ಪ್ರತ್ಯೇಕ ಅಧಿಕಾರವನ್ನು ಪಡೆಯುತ್ತಾರೆ — ಇದು

(೮ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

७० वर्षों से जगप्रसिद्ध और विजयी होनेवाला।
प्रत्येक स्टोर में और सब स्थानों पर बिकता है।
वाटलीवाला फ्युमिक्चर
औरिऐंटोलीया
मलेरिया इन्फ्लुएंजा और प्रत्येक प्रकारके बुखार के लिये।
सोल मेन्युफेक्चरर: डो. एच. एल. वाटलीवाला सन्स एण्ड कं. लि.
वाटलीवाला बिल्डिंग, ९३ बी. पोर्तुगीझ चर्च स्ट्रीट,
Tele. Add. "CAWASHABAD" दादर, बम्बई २८.

ZANDU'S THREE GEMS of AYURVEDIC MEDICINES
ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತ್ರಾಣ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.
ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.
ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.
ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು
ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.
DAMODAR & CO.,
113 Nainiappa Naicken Street, P. T.-MADRAS-3.

ಚಂದ್ರನಗರದ ವಿಲಯನಕ್ಕೆ ಒಪ್ಪಿಗೆ

ವಸಾಹತುಗಳ ಹಸ್ತಾಂತರದಲ್ಲಿ ಪ್ರಥಮ ವಿಜಯ

ಫ್ರೆಂಚ ಸರಕಾರವು ಭಾರತದಲ್ಲಿಯ ತನ್ನ ವಸಾಹತುಗಳ ಜನರಿಗೆ ಭಾರತದಲ್ಲಿ ಸೇರಬೇಕೋ ಬಿಡಬೇಕೋ ಎಂಬ ವಿಷಯದಲ್ಲಿ ಸಾರ್ವತ್ರಿಕ ಮತಗಣನೆಯ ಮೂಲಕ ಅಭಿಪ್ರಾಯ ನಿರ್ಣಯಕ್ಕೆ ಅವಕಾಶವನ್ನು ೧೯೪೯ರಲ್ಲಿ ಕಲ್ಪಿಸಿಕೊಟ್ಟಾಗ, ಚಂದ್ರನಗರದ ಜನರು ತಾವು ಭಾರತದೊಡನೆಯೇ ಸೇರ್ಪಡೆ ಹೊಂದುವದಾಗಿ ಹೇಳಿದ್ದರು. ತದನುಸಾರ ೧೯೫೦ರಲ್ಲಿ ಭಾರತ ಸರಕಾರಕ್ಕೆ ಚಂದ್ರನಗರದ ಆಡಳಿತವು ಹಸ್ತಾಂತರಿಸಲ್ಪಟ್ಟಿತು. ಆದರೆ ಈ ಪ್ರದೇಶದ ಮುಂದಿನ ಸ್ವರೂಪ ಹೇಗಿರಬೇಕೆಂಬುದನ್ನು ಆಗ ನಿರ್ಣಯಿಸಿರಲಿಲ್ಲ. ಕಳೆದ ನವೆಂಬರದಲ್ಲಿ ಅಮರನಾಥ ಝಾರ ಅಧ್ಯಕ್ಷತೆಯಲ್ಲಿ ಈ ಕುರಿತು ನೇಮಿಸಲಾದ ಆಯೋಗವು ಪಶ್ಚಿಮ ಬಂಗಾಲದಲ್ಲಿ ಚಂದ್ರನಗರವನ್ನು ವಿಲೀನಗೊಳಿಸಬೇಕೆಂದು ಸೂಚಿಸಿತು. ಸರಕಾರವು ಇದನ್ನು ಒಪ್ಪಿ, ಕಳೆದ ವಾರ ಒಂದು ವಿಧೇಯಕವನ್ನು ಲೋಕಸಭೆಯ ಮುಂದೆ ಮಂಡಿಸಿತು.

ಶಾಂತಿಯ ಮಾರ್ಗ

ಇದರ ಚರ್ಚೆ ನಡೆದಾಗ ಅನೇಕ ಸದಸ್ಯರು ವಸಾಹತುಗಳು ಭಾರತದೊಡನೆ ಸೇರ್ಪಡೆ ಹೊಂದುವ ವಿಷಯದಲ್ಲಿ ಆಗುತ್ತಿರುವ ವಿಳಂಬ ಧೋರಣೆಯನ್ನು ಟೀಕಿಸಿದರು. ಮುಖ್ಯವಾಗಿ ಪೋರ್ಚುಗೀಜ ವಸಾಹತುಗಳ ಪರಿಸ್ಥಿತಿಯನ್ನು ಅವರು ಪ್ರಸ್ತಾಪಿಸಿದರು. ಚರ್ಚೆಗೆ ಉತ್ತರಕೊಟ್ಟ ಪ್ರಧಾನ ಮಂತ್ರಿಗಳು ಸರಕಾರವು ಇತರರಿಗೆ ಮಾದರಿಯಾಗುವ ರೀತಿಯಲ್ಲಿ ಶಾಂತ ರೀತಿಯ ಮಾರ್ಗವನ್ನು ಅನುಸರಿಸುತ್ತಿದೆಯೆಂದು ಹೇಳಿದರು. ಚಂದ್ರನಗರದ ವಿಲಯನವು ಈ ದಿಸೆಯಲ್ಲಿ ಪ್ರಥಮ ಹೆಜ್ಜೆಯೆಂದು ಬಣ್ಣಿಸಿದರು. ಶಾಸನಿಕ ಹಾಗು ಘಟನಾತ್ಮಕ ರೀತಿಯಲ್ಲಿ ಈ ವಸಾಹತು ಭಾರತದೊಡನೆ ಸೇರ್ಪಡೆ ಹೊಂದುತ್ತಿರುವುದನ್ನು ಕಂಡು ಭಾರತೀಯರಿಗೆ ಸಂತೋಷವಾಗದಿರದೆಂದು ಹೇಳಿದರು. ವಿಧೇಯಕಕ್ಕೆ ಲೋಕಸಭೆಯು ಸೋಮವಾರ (ದಿನಾಂಕ ೩೦) ಒಪ್ಪಿಗೆಯನ್ನು ವ್ಯಕ್ತಪಡಿಸಿತು.

ಹೊಸ ಆಯೋಗ

ಭಾರತ ಸರಕಾರವು ಬೇಂಕು ನೌಕರರ ತಂಟೆಯ ಸಂಬಂಧದಲ್ಲಿ ನ್ಯಾಯಮಂಡಳವು ಕೊಟ್ಟ ತೀರ್ಪಿನ ತಿದ್ದುಪಡಿಯಿಂದ ಉದ್ಭವಿಸಿದ ಪರಿಸ್ಥಿತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಇನ್ನೂ ಹೆಚ್ಚಿನ ಪರಿಶೀಲನೆಯನ್ನು ನಡೆಸಬೇಕಾದ ಆವಶ್ಯಕತೆಯುಂಟೆಂಬ ನಿರ್ಣಯಕ್ಕೆ ಬಂದಿರುವುದು. ಅರ್ಥಸಚಿವರು ಇಲಾಖೆಯ ಮಟ್ಟದಲ್ಲಿ ಅಧಿಕಾರಿಗಳೇ ಈ ವಿಷಯದಲ್ಲಿ ಯೋಗ್ಯ ಕ್ರಮಗಳನ್ನು ಕೈಗೊಳ್ಳುವರೆಂದು ಹೇಳಿದ್ದರೂ, ಕಳೆದ ವಾರ ಹೊಸ ಕೂಲಿಕಾರ ಮಂತ್ರಿ ಶ್ರೀ ಖಂಡೂಭಾಯಿ ದೇಸಾಯಿಯವರು. ಮುಂಬಯಿ ಹೈಕೋರ್ಟಿನ ನ್ಯಾಯಮೂರ್ತಿ ಶ್ರೀ ರಾಜಾಧ್ಯಕ್ಷರನ್ನು ಈ ಕೆಲಸಕ್ಕೆ ನೇಮಿಸಿರುವುದಾಗಿ ತಿಳಿಸಿದರು. ನ್ಯಾಯಮೂರ್ತಿ ರಾಜಾಧ್ಯಕ್ಷರು ವಿಷಯದ ಸಂಪೂರ್ಣ ವಿಚಾರಣೆಯನ್ನು ನಡೆಸಿ ಸರಕಾರವು ತಿದ್ದುಪಡಿ ಮಾಡಿದ ನಿರ್ಣಯದಂತೆ ನಡೆದುಕೊಳ್ಳಬೇಕೋ, ಅಥವಾ ಯಾವುದೇ ಬದಲಾವಣೆಗಳಿಲ್ಲದೆ ಪೂರ್ಣವಾಗಿ ಅಥವಾ ಅಂಶತಃ ನ್ಯಾಯಮಂಡಳದ ತೀರ್ಪನ್ನು ಕಾರ್ಯಗತಗೊಳಿಸಬೇಕೋ ಎಂದು ಸಲಹೆ ಕೊಡುವರು ಬೇರೇನಾದರೂ ಬದಲಾವಣೆ ಅಗತ್ಯವೆನಿಸಿದರೆ ಅದನ್ನೂ ಸೂಚಿಸುವರು.

ಸಂಪು ನಡೆಯುವುದು

ಇದರಿಂದ ಬೇಂಕು ನೌಕರರ ನಿಲುವಿನಲ್ಲೇನೂ ಪರಿವರ್ತನೆಯಾಗಿಲ್ಲ. ಮುಂಬಯಿ, ಮದ್ರಾಸು ಮುಂತಾದೆಡೆಯ ಬೇಂಕು ನೌಕರ ಮಂಡಳದ ಧುರೀಣರು ಸರಕಾರದವರು ತಾವು ತಪ್ಪು ಹಜ್ಜೆ ಇಟ್ಟಿದ್ದೇವೆಂಬುದು ಇದರಿಂದ ಸಾಬೀತಾಯಿತೆಂದೂ ಅವರೂ ತಮ್ಮ ಹೆಜ್ಜೆಯನ್ನು ಹಿಂದೆಗೆದುಕೊಳ್ಳುದುದನ್ನು ನೋಡಿದರೆ ಸರಳ ಮಾರ್ಗದ ಬದಲು ವಕ್ರ ಮಾರ್ಗವನ್ನು ಅನುಸರಿಸುತ್ತಿರುವಂತೆ ಕಾಣುವುದಾಗಿಯೂ ಹೇಳಿದ್ದಾರೆ. ರಾಜಾಧ್ಯಕ್ಷ ಸಮಿತಿಯು ಬೇಂಕಿನ ವ್ಯವಹಾರದಲ್ಲಿ ನವೀಕರಣವನ್ನು ಸಾಧಿಸಿ, ನೌಕರರನ್ನು ಮನೆಗೆ ಅಟ್ಟಿ ಬಹುದೆಂಬ ಸಂದೇಹವನ್ನು ವ್ಯಕ್ತಗೊಳಿಸಿದರು. ತತ್ಕ್ಷಣವೇ ಇದೇ ಮಾಸ ತಾರೀಕಿನಂದು ದೇಶದ ಎಲ್ಲ ಬೇಂಕು ನೌಕರರಿಂದ ಹರತಾಳ ನಡೆಸುವುದೆಂದೂ ಸಂಪು ನಡೆಸಬೇಕೆಂದೂ ಅವರು ಹೇಳಿದರು.

ಅಸ್ಪೃಶ್ಯತೆ

ರಾಜ್ಯ ಸಭೆಯಲ್ಲಿ ಅಸ್ಪೃಶ್ಯತೆಯನ್ನು ಅಪರಾಧವೆಂದು ಸಾರುವ ವಿಧೇಯಕವನ್ನು ಉಭಯ ಸಭೆಗಳ ಸಂಯುಕ್ತ ಪರಿಶೀಲಕ ಸಮಿತಿಗೆ ಒಪ್ಪಿಸಬೇಕೆಂಬ ಗೃಹ ಮಂತ್ರಿಗಳ ಸೂಚನೆಯು ಮನ್ನಿಸಲ್ಪಟ್ಟಿತು. ಡಾ. ಅಂಬೇಡ್ಕರರೂ ಪರಿಶೀಲಕ ಸಮಿತಿಯ ಸದಸ್ಯರಾಗಿರಬೇಕೆಂದು ಗೃಹಮಂತ್ರಿಗಳು ಸೂಚಿಸಿದ್ದರು. ಆದರೆ ಸಭೆಯ ನಿಯಮಗಳಿಗೆ ಸಂಬಂಧಿಸಿದ ತಾಂತ್ರಿಕ ಅಡಚಣೆಯೊಂದು ಉಂಟಾದುದರಿಂದ ಅಂಬೇಡ್ಕರರು ಪರಿಶೀಲಕ ಸಮಿತಿಯಲ್ಲಿ ಸೇರದೆ ಹೊರಗೋದರು. ಅವರ ಬದಲು ಕಾಕಾ ಕಾಲೇಲಕರರನ್ನು ನೇಮಿಸಲಾಯಿತು. ಅಂಬೇಡ್ಕರರು ವಿಧೇಯಕದ ಮೇಲೆ ಮಾತನಾಡುತ್ತಾ ಕನಿಷ್ಠ ಸೆರೆಮನೆಯ ವಾಸದ ಶಿಕ್ಷೆಯನ್ನಾದರೂ ವಿಧಿಸದಿದ್ದರೆ ಅಸ್ಪೃಶ್ಯತೆಯ ಕಳಂಕ ದೂರವಾಗಲಾರದೆಂದು ಅಭಿಪ್ರಾಯಪಟ್ಟರು. ಇನ್ನೊಬ್ಬ ಸದಸ್ಯರು ಅಸ್ಪೃಶ್ಯತೆಯನ್ನು ಯಾವುದೇ ವಿಧದಲ್ಲಾದರೂ ಆಚರಿಸುವವರನ್ನು ಶಾಸನ ಸಭೆ, ಸ್ಥಳೀಯ ಸಂಸ್ಥೆ ಮುಂತಾದವುಗಳ ಸದಸ್ಯತ್ವದಿಂದ ಅನರ್ಹರಾಗಿ ಮಾಡಬೇಕೆಂದು ಕೇಳಿಕೊಂಡರು.

ರಶಿಯದ ಸಹಾಯ

ಭಾರತದ ಔದ್ಯಮಿಕ ಅಭಿವೃದ್ಧಿಯಲ್ಲಿ ಬ್ರಿಟನು ಅಮೇರಿಕಗಳಂತೆ ಇದೀಗ ರಶಿಯವೂ ಆಸಕ್ತಿಯನ್ನು ವಹಿಸುತ್ತಿರುವಂತೆ ಕಾಣುತ್ತದೆ. ಜರ್ಮನಿಯ ಕಂಪನಿಯೊಡನೆ ನಾವು ಈಗಾಗಲೇ ಒಂದು ಒಪ್ಪಂದವನ್ನು ಮಾಡಿಕೊಂಡು ರೂರಕೇಲಾದಲ್ಲಿ ಉಕ್ಕಿನ ಕಾರ್ಖಾನೆಯನ್ನು ಸ್ಥಾಪಿಸಲು ಪ್ರಯತ್ನಿಸುತ್ತಿರುವಾಗ, ರಶಿಯಾ ದೇಶವು ತನ್ನ ತಾಂತ್ರಿಕರ ಸಹಾಯದಿಂದ ಭಾರತದಲ್ಲಿ ಇನ್ನೊಂದು ಉಕ್ಕಿನ ಕಾರ್ಖಾನೆಯನ್ನು ಕೇವಲ ಕೆಲ ತಿಂಗಳುಗಳ ಅವಧಿಯಲ್ಲಿ ಕಟ್ಟಿ ಕೊಡುವುದಾಗಿ ಹೇಳಿರುತ್ತದೆ. ಈ ಕಾರ್ಖಾನೆಯನ್ನು ಎಲ್ಲಿ ನೆರೆಗೊಳಿಸಲಾಗುವುದೆಂದು ತಿಳಿದಿಲ್ಲ. ಐದು ಲಕ್ಷ ಟನ್ನುಗಳಷ್ಟು ಉಕ್ಕನ್ನು ಉತ್ಪಾದಿಸುವ ಈ ಕಾರ್ಖಾನೆಯ ಕುರಿತು ಹೆಚ್ಚಿನ ಮಾಹಿತಿಯನ್ನು ಸಂಗ್ರಹಿಸಿ ಸಲಹೆ ಕೊಡಲು ಇದೇ ನವೆಂಬರದಲ್ಲಿ ರಶಿಯದ ಮಂಡಳವೊಂದು ಬರಲಿರುವುದು. ಅಲ್ಲದೆ, ಬೇಕೆನಿಸಿದ ಬಂಡವಾಳವನ್ನು ಬಹಳ ಸುಲಭ ಬಡ್ಡಿಯ ಮೇಲೆ ಪೂರೈಸಲೂ ರಶಿಯಾ ಒಪ್ಪಿರುವುದು. ಭಾರತ ಸರಕಾರವು ವಿಚಾರಿಸಿ ಬೇರೆಯವರ ಪ್ರವೇಶಕ್ಕೆ ಅವಕಾಶವಿಲ್ಲವೆಂದು ಮನಗಂಡೇ ರಶಿಯದ ಈ ಔದಾರ್ಯವನ್ನು ಸ್ವಾಗತಿಸಿದೆಯಾಗಿ ತಿಳಿಯುತ್ತದೆ.

ಹೊಸ ಶಾಲೆಗಳು

ಮದ್ರಾಸು ಸರಕಾರವು ಒಬ್ಬನೇ ಒಬ್ಬ ಅಧ್ಯಾಪಕರಿರುವ ೧೨೩೦ ಪ್ರಾಥಮಿಕ ಶಾಲೆಗಳನ್ನು ರಾಜ್ಯದಲ್ಲಿ ಶಾಲೆಗಳಿಲ್ಲದ ಪ್ರದೇಶಗಳಲ್ಲಿ ತೆರೆಯಲು ನಿರ್ಧರಿಸಿದ್ದು, ಪ್ರತಿಯೊಂದೂ ಕೇಂದ್ರಕ್ಕೆ ೧೨೦೦ ರೂಪಾಯಿಗಳ ಅದ್ಯಾಪಕರ ಸಂಬಳ ತುಟ್ಟಿಭತ್ತೆ. ಶಾಲೆಯ ಸಲಕರಣೆ ಮುಂತಾದವುಕ್ಕೆ ಕೊಡುವುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೭೬ ಇಂತಹ ಶಾಲೆಗಳು ತೆರೆಯಲ್ಪಡುತ್ತವೆ. ಶಾಲೆಗೆ ಕಟ್ಟಡವನ್ನು ಆಯಾ ಊರಿನವರೇ ಕಟ್ಟಿಸಿಕೊಡಬೇಕೆಂದು ಸರಕಾರ ಅಪೇಕ್ಷಿಸುತ್ತದೆ. ಒಂದು ವೇಳೆ ಇದು ಏನೇನೂ ಸಾಧ್ಯವಿಲ್ಲದಿದ್ದರೆ ಸರಕಾರವು ೩೦೦ ರೂಪಾಯಿಗಳ ಸಹಾಯವನ್ನು ಕೊಡುತ್ತದೆ. ಹೈಸ್ಕೂಲು ಶಿಕ್ಷಣ ಮುಗಿಸಿದವರೂ ಕಾಲೇಜು ಶಿಕ್ಷಣ ಹೊಂದಿದವರೂ ಉದ್ಯೋಗ ವಿನಿಮಯ ಕಚೇರಿಗಳಲ್ಲಿ ತಮ್ಮ ಹೆಸರನ್ನು ದಾಖಲು ಮಾಡಿಸಿ, ಈ ಅಧ್ಯಾಪಕರ ಕೆಲಸಕ್ಕೆ ಸೇರಬಲ್ಲರು.

ಸತ್ಯಾಗ್ರಹದ ಮುಕ್ತಾಯ

ಆಂಧ್ರದಲ್ಲಿ ಇನಾಂ ಒಕ್ಕಲುಗಳಿಗೆ ರಕ್ಷಣೆಯನ್ನೊದಗಿಸುವ ವಿಷಯದಲ್ಲಿ ಪ್ರಜಾ ಸಮಾಜವಾದಿ ಪಕ್ಷದವರು ಆಗೋ

(೭ನೇ ಪುಟ ನೋಡಿರಿ)

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ



ಬಾಲ ಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ, ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವುದು, ಈ ಎಲ್ಲಾ ವ್ಯಾಧಿಗಳಿಗೆ ಪರಿಹಾರವಾಗಿದೆ. ಹೀಗಿರುವ ಔಷಧಿ ಇನ್ನೊಂದು ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವುದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೭೦ ಮಾತ್ರೆಗಳ ಸೀಸೆ ೧ ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.

(2) ಷಾ ಕಂಪನಿ— ಮಂಗಳೂರು 1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.

NAVAYUGA

Popular Kannada Weekly,
Founder: —
Sri **A. B. SHETTY**, *M.L.A.*
Minister for Public Health,
Govt. of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೨೪	೨೩-೯-೧೯೫೪	೪

ಯಾಂತ್ರಿಕ ಶಕ್ತಿಗೆ ಪ್ರತಿಬಂಧ

ಲೋಕ ಸಭೆಯು ಕಳೆದ ವಾರ ಯಂತ್ರಗಳಲ್ಲಿ ತಯಾರಿಸಲ್ಪಟ್ಟ ಪ್ರತಿ ಸಾವಿರ ಬೀಡಿಗಳಿಗೆ ಮೂರು ರೂಪಾಯಿ ಅಬಕಾರಿ ಸುಂಕವನ್ನು ಹೇರುವ ವಿಧೇಯಕವನ್ನು ಸ್ವೀಕರಿಸಿದೆ. ಬೀಡಿ ಕಟ್ಟುವ ಗ್ರಾಮೋದ್ಯೋಗದಲ್ಲಿ ನಿರತರಾದ ಜನರು ಯಾಂತ್ರಿಕ ಶಕ್ತಿಯೊಡನೆ ಸ್ಪರ್ಧೆ ಮಾಡಲಾರದೆ ನಿರುದ್ಯೋಗಿಗಳಾಗುವ ಅನುಚಿತ ಪ್ರಸಂಗವನ್ನು ತಪ್ಪಿಸುವುದೇ ಈ ವಿಧೇಯಕದ ಉದ್ದೇಶ. ಸಾಮಾನ್ಯವಾಗಿ ಎಲ್ಲ ಸದಸ್ಯರೂ ವಿಧೇಯಕವನ್ನು ಸ್ವಾಗತಿಸಿದರು—ಭಾರತದಲ್ಲಿ ಪ್ರತಿಯೊಬ್ಬನಿಗೂ ಕೆಲಸವನ್ನು ಒದಗಿಸಿಕೊಡುವುದು ಸಾಧ್ಯವಾಗ.ವವರೆಗೆ ಜನರನ್ನು ನಿರುದ್ಯೋಗಿಗಳಾಗಿಮಾಡುವಂಥ ಯಾಂತ್ರಿಕ ಸಲಕರಣೆಗಳಉಪಯೋಗದಿಂದಉತ್ಪಾದನೆ ಕೈಗೊಳ್ಳುವುದಕ್ಕೆ ಅವಕಾಶ ಕೊಡಕೂಡದೆಂದು ಹೇಳಲಾಯಿತು. ಬೀಡಿ ಕಟ್ಟುವ ಉದ್ದಿಮೆಯಲ್ಲಿ ಯಂತ್ರಗಳಿಗೆ ಪ್ರವೇಶಕೊಟ್ಟ ಪಕ್ಷದಲ್ಲಿ ನೂರಕ್ಕೆ ೯೫ ಜನರು ಕೆಲಸಗೇಡಿಗಳಾಗಿ ನರಳಬಹುದೆಂಬ ಅಂಜಿಕೆಯೂ ವ್ಯಕ್ತಗೊಳಿಸಲ್ಪಟ್ಟಿತು. ಆದರೆ ಅಶೋಕ ಮೆಹತಾರಂಥವರು ಸಹಕಾರಿ ತತ್ವದ ಮೇಲೆ ಕೆಲಸ ಮಾಡುವ ಸಂಘಗಳಿಗೆ ಯಂತ್ರಗಳನ್ನು ಉಪಯೋಗಿಸಗೊಡಬೇಕೆಂದೂ ಬೀಡಿಗಳ ನಿರ್ಯಾತ ವ್ಯಾಪಾರ ಮಾಡುವುದಕ್ಕೆ ಇದರಿಂದ ಅಧಿಕ ಪ್ರೋತ್ಸಾಹ ದೊರಕಬಹುದೆಂದೂ ಹೇಳಿದರು. ಹಣಕಾಸಿನ ಉಪಮಂತ್ರಿಗಳು ನಿರ್ಯಾತ ವ್ಯಾಪಾರವು ಅಧಿಕಗೊಳ್ಳುವುದಕ್ಕೆ ಇರುವ ಕ್ಷೇತ್ರವು ಬಹಳ ಮಿತವಾಗಿದೆಯೆಂದೂ ಆದ ಕಾರಣ ನಾವು ಹೆಚ್ಚಿನದನ್ನೇನೂ ನಿರೀಕ್ಷಿಸುವಂತಿಲ್ಲವೆಂದೂ ಇದಕ್ಕೆ ಉತ್ತರಕೊಟ್ಟರು. ಒಟ್ಟಿನಲ್ಲಿ ಮನುಷ್ಯ ಶಕ್ತಿಯ ಉಪಯೋಗವನ್ನು ಚೆನ್ನಾಗಿ ಮಾಡಿ ಕೊಳ್ಳಬಲ್ಲ ಔದ್ಯೋಗಿಕ ವಲಯದಲ್ಲಿ ಯಾಂತ್ರಿಕ ಶಕ್ತಿಯನ್ನು ಬಳಸುವುದಕ್ಕೆ ವಿರೋಧ ಸೂಚಿಸಲ್ಪಟ್ಟಿತೆಂದು ಹೇಳಬಹುದು. ಈ ವಿರೋಧ ಬೀಡಿ ಕೈಗಾರಿಕೆಗೆ ಮಾತ್ರ ಸೀಮಿತವಿದೆಯೆಂದು ಯಾರೂ ತಿಳಿಯಲಾಗದು. ನಿತ್ಯ ವ್ಯವಹಾರದ ಪ್ರತಿಯೊಂದೂ ಕ್ಷೇತ್ರಕ್ಕೆ ಇದನ್ನು ಅನ್ವಯಿಸುವುದು ಶ್ರೇಯಸ್ಕರ. ಪ್ರಗತಿ ಮತ್ತು ವೇಗದ ಹೆಸರಿನಲ್ಲಿ ಮನುಷ್ಯನ ಶಕ್ತಿಯನ್ನು ಕೊಳೆಯಗೊಡುವುದು ಸರ್ವಥಾ ಅನಪೇಕ್ಷಣೀಯ. ಬೀಡಿ ಕಟ್ಟುವ ಕೈಗಾರಿಕೆಗಿಂತಲೂ ಹೆಚ್ಚು ಪ್ರಾಮುಖ್ಯವಾದ ಇನ್ನೊಂದು ವಿಷಯದ ಕುರಿತು ಸರಕಾರ ವಿಶೇಷ ಲಕ್ಷ್ಯವನ್ನು ತೋರಿಸುತ್ತಿಲ್ಲವೋ ಎಂದೆನಿಸುತ್ತದೆ: ಅದೆಂದರೆ ಭತ್ತದ ಗಿರಣಿಗಳ ಹಾವಳಿ. ಪ್ರತಿಯೊಂದು ಹಳ್ಳಿಯ ಆರ್ಥಿಕ ವ್ಯವಸ್ಥೆಯ ಮೇಲೂ ಭತ್ತದ ಗಿರಣಿಗಳು ದುಷ್ಪರಿಣಾಮವನ್ನು ಮಾಡಿವೆಯಲ್ಲದೆ, ಕೋಟ್ಯಾಂತರ ಗ್ರಾಮೀಣ ಮಹಿಳೆಯರ ಉದ್ಯೋಗವನ್ನು ಕಸಿದುಕೊಂಡು ಅವರ ಹೊಟ್ಟೆಗೆ ಪೆಟ್ಟುಕೊಡುತ್ತವೆ. ಭತ್ತವನ್ನು ಕೈಯಿಂದ ಕುಟ್ಟಿ ತಯಾರಿಸಿದ ಅಕ್ಕಿಗಿಂತ ಗಿರಣಿಗಳಲ್ಲಿ ಉತ್ಪಾದನೆಗೊಂಡ ಹೊಳೆಯುವ ಅಕ್ಕಿ ಜನಾರೋಗ್ಯಕ್ಕೆ ಪೋಷಕವಾಗಿಲ್ಲವೆಂದೂ ಹೇಳಲ್ಪಡುತ್ತದೆ. ಹೀಗಿರುತ್ತಾ ಈ ಪ್ರಶ್ನೆಯನ್ನು ಮೊದಲಾಗಿ ವಿಚಾರಿಸಿ, ಭತ್ತದ ಗಿರಣಿಗಳನ್ನು ಪ್ರತಿಬಂಧಿಸಲು, ಕನಿಷ್ಠ ಪಕ್ಷ ಅವುಗಳ ಮೇಲೆ ಉಗ್ರನಿಯಂತ್ರಣವನ್ನಾದರೂ ಹೇರಲು, ಪ್ರಯತ್ನಿಸದಿರುವುದು ಶೋಚನೀಯ. ಬೀಡಿಕಟ್ಟುವ ಕೈಗಾರಿಕೆಯಲ್ಲಿ ಯಾಂತ್ರಿಕ ಶಕ್ತಿಯ ಪ್ರವೇಶವನ್ನು ನಿರಾಕರಿಸಲು ನಮಗೆಷ್ಟು ಪ್ರಬಲ ಕಾರಣಗಳುಂಟೋ ಅದಕ್ಕೂ ಉತ್ತಮವಾದ ಸಮರ್ಥನೆಗಳನ್ನು ಭತ್ತದ ಗಿರಣಿಗಳ ನಿಯಂತ್ರಣ ಅಥವಾ ಪ್ರತಿಬಂಧಕ್ಕೆ ಕೊಡಬಹುದು. ಸರಕಾರದವರು ಈ ವಿಷಯವನ್ನು ಬೇಗನೇ ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಆಗ್ರಹದಿಂದ ಸೂಚಿಸುತ್ತೇವೆ.

ಶ್ರಮದಾನ ಯಜ್ಞ

ಮನುಷ್ಯ ಶಕ್ತಿಯ ಸದುಪಯೋಗದ ಮಾತನ್ನಾಡುವಾಗ ಶ್ರಮದಾನ ಯಜ್ಞದ ಕಾರ್ಯಕ್ರಮವನ್ನೂ ನಾವು ನೆನಪಿಗೆ ತಂದು ಕೊಳ್ಳುವುದು ಶ್ರೇಯಸ್ಕರ. ಪಂಚ ವಾರ್ಷಿಕ ಯೋಜನೆಯನ್ನು ಯಶಸ್ವಿಗೊಳಿಸಲು ಜನತಾಸಹಕಾರವು ಅತ್ಯಗತ್ಯವೆಂದು ಮನಗಂಡ ಧುರೀಣರು ಶ್ರಮದಾನ ಯಜ್ಞದ ಕಲ್ಪನೆಯನ್ನು ದೇಶದ ಮುಂದಿಟ್ಟರು. ಹಳ್ಳಿಯ ಹಾಗು ನಗರದ ಜನರು ತಮ್ಮಲ್ಲಿ ನಡೆಯುವ ಅಭಿವೃದ್ಧಿ ಹಾಗು ಪುನಾರಚನೆಯ ಕಾರ್ಯಕ್ರಮಗಳಲ್ಲಿ ಸ್ವೇಚ್ಛೆಯಿಂದ ಭಾಗ ವಹಿಸಿ ಉತ್ಸಾಹ ಪೂರ್ವಕ ದುಡಿಯುವುದೇ ಈ ಯಜ್ಞದ ಮುಖ್ಯಾಂಗ. ಇದಕ್ಕೆ ಬಲವಾದ ಸ್ಥಳೀಯ ನೇತೃತ್ವವಿರಬೇಕಾದ ಆವಶ್ಯಕತೆಯುಂಟು: ಸಾಮಾನ್ಯವಾಗಿ ವಿಧಾಯಕ ಕಾರ್ಯಕರ್ತರೂ ರಚನಾತ್ಮಕ ಕೆಲಸಗಳಲ್ಲಿ ಆಸಕ್ತಿಯುಳ್ಳ ರಾಜಕೀಯ ಪಟುಗಳೂ ಇಂಥ ಉಪಕ್ರಮಕ್ಕೆ ಮುಂದಾಗುತ್ತಾರೆ ಅವರ ನೇತೃತ್ವದಲ್ಲಿ ಹಳ್ಳಿಗೆ ಹಳ್ಳಿಯೇ ಅಥವಾ ನಗರಕ್ಕೆ ನಗರವೇ ಕೆಲಸಮಾಡುತ್ತದೆ.ಸಮಾಜ ವಿಕಾಸ ಯೋಜನಾ ಕ್ಷೇತ್ರದಲ್ಲಿ ಇಂಥ ಸ್ವಯಂಪ್ರೇರಿತ ಸಹಕಾರಕ್ಕೆ ಅತಿ ಹೆಚ್ಚಿನ ಅವಕಾಶ ಸಿಗುತ್ತದೆ. ಇತರೆಡೆಯಲ್ಲೂ ಜನರು ತುಂಬಿದ ಉತ್ಸಾಹದಿಂದ ಕೆಲಸ ಮಾಡುತ್ತಿರುವರೆಂದು ಸ್ವಾರಸ್ಯವಾದ ವರದಿಗಳು ಬರುತ್ತವೆ. ಉತ್ತರ ಭಾರತದವರು ಈ ಮಟ್ಟಿಗೆ ದಕ್ಷಿಣ ಭಾರತದ ಜನರನ್ನು ಮೀರುತ್ತಾರೆಂದು ಹೇಳಬಹುದು—ಕಾಂಗ್ರೆಸು ಸಂಸ್ಥೆಯುತ್ತರದಲ್ಲಿ ಬಲವಾಗಿರುವುದೂ ಜನತಾ ಧುರೀಣರ ಕೊರತೆ ಇಲ್ಲದಿರುವುದೂ ಇದಕ್ಕೆ ಕಾರಣವಾಗಿದ್ದೀತು. ಪರಿಣಾಮ, ವಾಗಿ ಮಾರ್ಗಗಳ ರಚನೆ, ಕಾಲುವೆಗಳನ್ನು ತೋಡುವುದು, ಶಾಲಾಭವನ ಮುಂತಾದುವುಗಳ ನಿರ್ಮಾಣ ಇತ್ಯಾದಿ ಕೆಲಸಗಳು ಪ್ರತಿಯೊಂದೂ ಹಳ್ಳಿಯಲ್ಲಿ ನೆರವೇರುತ್ತಿವೆ. ಹೀಗೆ ನಡೆದ ಸ್ವಯಂಪ್ರೇರಿತ ಕೆಲಸಗಳು ಕೆಲವು ಕೋಟಿ ರೂಪಾಯಿಗಳ ವೆಚ್ಚವನ್ನು ಉಳಿಸಿವೆ. ಇತ್ತೀಚೆಗೆ ಬಂದ ವರದಿಯಂತೆ ಆಗ್ರಾಕ್ಕೆ ೨೫ ಮೈಲು ದೂರದ ಫತ್ತೇಪುರ ಸಿಕ್ರಿಯಲ್ಲಿ ಆರು ಸಾವಿರ ಹಳ್ಳಿಗರು ಐದು ದಿನಗಳಲ್ಲಿ ಆರು ಮೈಲುದ್ದದ ರಸ್ತೆಯನ್ನು ನಿರ್ಮಿಸಿದರು. ಉತ್ತರ ಪ್ರದೇಶದ ಸಹರಾಣಪುರ ಜಿಲ್ಲೆಯಲ್ಲಿ ಹಳ್ಳಿಗರು, ಪಟ್ಟಣಿಗರು, ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಕಾಂಗ್ರೆಸ ಕಾರ್ಯಕರ್ತರು ಮುಂತಾಗಿ ಇಪ್ಪತ್ತು ಸಾವಿರ ಕೆಲಸಗಾರರು ಯಮುನಾನದಿಯ ಪೂರ್ವ ಕಾಲುವೆಯನ್ನು ಶ್ರಮದಾನದಿಂದ ೪೦ ಮೈಲುಗಳಷ್ಟು ವಿಸ್ತರಿಸಿದ್ದಾರೆ. ಕಳೆದವಾರ ಈ ಪ್ರದೇಶಕ್ಕೆ ಭೇಟಿಕೊಟ್ಟ ಪ್ರಧಾನ ಮಂತ್ರಿಗಳು ಜನರ ಸ್ಪೃಹಣೀಯ ಸಾಹಸವನ್ನು ಕಂಡು ತುಂಬಾ ಸಂತೋಷವನ್ನು ವ್ಯಕ್ತಪಡಿಸಿದರು. "ಎಲ್ಲ ದೊಡ್ಡ ಕೆಲಸಗಳನ್ನೂ ಶ್ರಮದಾನದಿಂದ ಸಾಧಿಸಲಾಗುವುದೆಂದಲ್ಲ—ಆದರೆ ಹಳ್ಳಿಗಳ ಪರಿಸ್ಥಿತಿಯನ್ನು ಸುಧಾರಿಸುವುದರಲ್ಲಿ ಶ್ರಮದಾನಯಜ್ಞದ ತತ್ವವನ್ನು ಅನುಷ್ಠಾನಕ್ಕೆ ತಂದು ಪ್ರಯೋಜನಹೊಂದಬಹುದು. ಇಂಥ ಪ್ರಯತ್ನಗಳು ಹಳ್ಳಿಗರನ್ನೂ ಪಟ್ಟಣಿಗರನ್ನೂ ಒತ್ತಟ್ಟಿಗೆ ಆಕರ್ಷಿಸಿ ಅವರಲ್ಲಿಯ ಅಂತರವನ್ನು ಕಡಿಮೆಮಾಡಲು ಹಾಗು ದುಡಿಮೆಯ ಕುರಿತು ಆದರಭಾವವನ್ನು ಹುಟ್ಟಿಸಲು ನೆರವಾಗುತ್ತವೆ. ಶಾಲಾ ಕಾಲೇಜುಗಳ ಅಭ್ಯಾಸ ಕ್ರಮದಲ್ಲಿ ಶ್ರಮದಾನವನ್ನೂ ಸೇರಿಸಬೇಕೆಂದೂ ನನಗೆ ತೋರುತ್ತದೆ" ಎಂದು ನೆಹರೂ ನುಡಿದರು. ಶ್ರಮದಾನ ಯಜ್ಞದಿಂದ ಆರೋಗ್ಯ ಸುಧಾರಿಸುತ್ತದೆ; ಶಿಸ್ತಿನ ಅಭ್ಯಾಸವಾಗುತ್ತದೆ. 'ಬಾಬೂ' ಗಳಿಲ್ಲದ ಭಾರತವನ್ನು ಕಟ್ಟುವುದಕ್ಕೆ ಸಾಧ್ಯವಾಗುತ್ತದೆ ಎಂದು ನೆಹರೂರ ಅಭಿಪ್ರಾಯ ಇದು ಕೇವಲ ಉತ್ತರ ಭಾರತದ ಜನರಿಗಷ್ಟೇ ಹೇಳಿಸಿದ ನೀತಿಯಲ್ಲ—ದಕ್ಷಿಣದವರೂ ಈ ಕಾರ್ಯಕ್ರಮದಲ್ಲಿ ಮಹತ್ವದ ಪಾತ್ರವನ್ನು ವಹಿಸಬೇಕು ನಮ್ಮ ಜಿಲ್ಲೆಯವರೂ ಇದಕ್ಕೆ ಹೊರತಲ್ಲ—ಅವರ ಮುಂದೆ ಈಗ ಅಂಥ ಅವಕಾಶವೊಂದು ಬಂದಿರುವುದು: ಸರಕಾರದವರು ಶಾಲೆಗಳಿಲ್ಲದ ಹಳ್ಳಿಗಳಲ್ಲಿ ಹೊಸ ಶಾಲೆಗಳನ್ನು ತೆರೆಯಲು ನಿರ್ಣಯಿಸಿದ್ದು, ಶಾಲಾ ಕಟ್ಟಡವನ್ನು ಊರವರೇ ನಿರ್ಮಿಸಬೇಕೆಂದು ಅಪೇಕ್ಷಿಸುತ್ತಾರೆ. ನಮ್ಮ ಜನರ ಕಾರ್ಯಶಕ್ತಿ ಇಂಥ ವಿಧಾಯಕ ಕೆಲಸದಲ್ಲಿ ಪರಿಣತವಾಗಲೆಂದು ಹೃತ್ಪೂರ್ವಕ ಹಾರೈಸುತ್ತೇವೆ.

The Deepak General
Insurance Co. Ltd.
Head Office: **Fort, Bombay**

NOTICE

Intimation of loss of Policy No. 5048 on the life of Sri. Badu Marakala residing at Kote Village, P. O Katapadi, Udipi Taluk, South Kanara having been received by the Company, a duplicate policy will be issued if no objection is lodged with the Company within one month from the date hereof.

Sd. **R. C. Godiawala.**
Managing Director.

Bombay, Dated 13-9-'54.

"ಕೆನರಾ ಮ್ಯೂಚುವಲ್"
ಐದನೇ ವಿಮಾಗಣನೆಯ ವಿಮರ್ಶೆ.

ಉಡುಪಿಯ ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್—ಇವರ ಐದನೇ ವಿಮಾಗಣನೆಯ ವರದಿಯು ನಮ್ಮ ಕೈಸೇರಿದೆ. ಇದನ್ನು ಪರಿಶೀಲಿಸಿದಲ್ಲಿ ಕಂಪೆನಿಯ ವ್ಯವಹಾರವು ಅತ್ಯುತ್ತಮ ಸ್ಥಿತಿಯಲ್ಲಿರುವುದೆಂಬ ಸಂಪೂರ್ಣ ಭರವಸೆ ಮೂಡುವುದಲ್ಲದೆ, ಪಾಲಿಸಿದಾರರಿಗೆ ಈ ಕಂಪೆನಿಯು ಅತಿ ಹೆಚ್ಚಿನ ಲಾಭವನ್ನು ನುಂಟುಸುತ್ತಿದೆಯೆಂದೂ ಮನವರಿಕೆಯಾಗುವುದು.

೧೯೫೧ರಿಂದ ೧೯೫೩ನೇ ಇಸವಿಯ ವರೆಗಿನ ಮೂರು ವರ್ಷಗಳ ಈ ವಿಮಾಗಣನೆಗೆ ಆಧಾರವಾಗಿ ಇಟ್ಟುಕೊಂಡ ಸಂಗತಿಗಳಿಗಿಂತ ಕಂಪೆನಿಯ ನಿಜವಾದ ಅನುಭವವು ಎಷ್ಟೋ ಉತ್ತಮ ರೀತಿಯಲ್ಲಿದೆ: ಉದಾಹರಣೆಗೆ, ಬಡ್ಡಿ ದರವನ್ನು 2¾% ಎಂದು ಲೆಕ್ಕಕ್ಕೆ ತೆಗೆದುಕೊಂಡಿದ್ದರೂ ಕಂಪೆನಿಯ ನಿಜವಾದ ಬಡ್ಡಿ ಆದಾಯವು (ಸರಾಸರಿ) 3¼% ವನ್ನೂ ಮೀರುತ್ತದೆ; ಮರಣ ಪ್ರಮಾಣವು ಇಲ್ಲಿ ಲೆಕ್ಕಕ್ಕೆ ಹಿಡಿದುದಕ್ಕಿಂತ ಸುಮಾರು 40% ಕಡಿಮೆಯೇ ಇದೆ; ಕಂಪೆನಿಯನ್ನು ನಡೆಸುವ ವೆಚ್ಚದ (ಸರಾಸರಿ) ಪ್ರಮಾಣವು ಪ್ರೀಮಿಯಂ ಆದಾಯದ 12% ಆಗಿದ್ದು, ಇದು ವಿಮಾ ಶಾಸನದಲ್ಲಿ ಹೇಳಿದ ಮಿತಿ ಹಾಗು ವಿಮಾಗಣಕರು ಇಲ್ಲಿ ಆಧಾರವಾಗಿ ಹಿಡಿದ ಪ್ರಮಾಣಕ್ಕಿಂತ ತುಂಬಾ ಕಡಿಮೆಯಾಗಿದೆ.

ಇಷ್ಟು ಕಠಿಣವಾದ—ಆದರೆ ಕಂಪೆನಿಯ ಪರಿಸ್ಥಿತಿಯನ್ನು ತುಂಬಾ ಭದ್ರಗೊಳಿಸುವ—ತಳಹದಿಯ ಮೇಲೆ ನಡೆಸಿದ ವಿಮಾಗಣನೆಯ ಪರಿಣಾಮವಾಗಿಯೂ ಆಜೀವ ವಿಮೆ ಮತ್ತು ಉಂಬಳಿ ವಿಮೆಗಳಿಗೆ ಪ್ರತಿ ಸಾವಿರ ರೂಪಾಯಿಗೆ ವರ್ಷವೊಂದಕ್ಕೆ ಅನುಕ್ರಮವಾಗಿ ರೂ. 18 ಮತ್ತು ರೂ. 15ರಂತೆ ಬೋನಸನ್ನು ಕೊಡಲು ಸಾಧ್ಯವಾಗಿರುವುದೂ ಇದೇ ದರದ ನಡುಗಾಲದ ಬೋನಸಿನ ನಿರ್ಧಾರವನ್ನು ಮಾಡಿರುವುದೂ ಅತ್ಯಂತ ಅಭಿಮಾನಾಸ್ಪದವಾದ ವಿಷಯ. ಇಂದಿನ ವಿಮಾಕ್ಷೇತ್ರದಲ್ಲಿ ಇಷ್ಟು ಕಠಿಣ ತಳಹದಿಯ ಮೇಲೆ ವಿಮಾಗಣನೆ ನಡೆಸಿ, ಇಷ್ಟು ಹೆಚ್ಚು ಪ್ರಮಾಣದಲ್ಲಿ ಲಾಭಾಂಶ ವಿತರಿಸಿದ ಬೇರೆ ಕಂಪೆನಿಗಳು ಕಾಣುವುದಿಲ್ಲ.

ಕಂಪೆನಿಯು ಸ್ಥಾಪಿತವಾದಂದಿನಿಂದಲೂ ಬೋನಸನ್ನು ಹಂಚದೆಯಲ್ಲದೆ ಈಚೆಗೆ ಪ್ರೀಮಿಯಂ ದರವನ್ನು ಸಹ ಇಳಿಸಿದೆಯೆಂದು ಕೇಳುತ್ತೇವೆ. ಹೀಗೆ ಪಾಲಿಸಿದಾರರಿಗೆ ಅತ್ಯಧಿಕ ಪ್ರಯೋಜನವನ್ನು ಸಲ್ಲಿಸುವ ಘನವಾದ ಧ್ಯೇಯದಿಂದ ಹೆಣಗುತ್ತಿರುವ ಮೆನೇಜಿಂಗ್ ಡೈರೆಕ್ಟರ್ ಶ್ರೀ. ಟಿ. ಆರ್. ಎ. ಪೈಗಳ ಕಾರ್ಯದಕ್ಷತೆಯು ಇತರ ಕಂಪೆನಿಗಳಿಗೆ ಮಾದರಿಯಾಗಿರುವುದು. ಇದಕ್ಕಾಗಿ ಕಂಪೆನಿಯನ್ನೂ ಅದರ ಪಾಲಿಸಿದಾರರನ್ನೂ ಮನಃಪೂರ್ವಕ ಶ್ಲಾಘಿಸಿ, ಉತ್ತರೋತ್ತರ ಶ್ರೇಯಸ್ಸನ್ನು ಕೋರುತ್ತೇವೆ.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ದರ ಇಳಿಸಲಾಗಿದೆ.

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ ಸರಳ ಕನ್ನಡ ಅರ್ಥಸಹಿತವಾದ ಭಗವದ್ಗೀತೆ

ಬೆಲೆ: 0-8-0

ನವಯುಗ ಪ್ರೆಸ್, ಉಡುಪಿ.

ದ. ಕ. ಜಿಲ್ಲಾ ಬೋರ್ಡಿಗೆ ನಾಮಪತ್ರಗಳು

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಮಂಜೇಶ್ವರ—ಶ್ರೀ ಟಿ. ನಾರಾಯಣ ಭಟ್ಟ, ಎ. ಸುಬ್ಬರಾವ್, ಶ್ರೀ ಯು. ಕೆ. ಅಬ್ದುಲ್ ಖಾದರ್.

ಕುಂಬಳೆ—ಶ್ರೀ ಬಿ. ಬಾಲಕೃಷ್ಣ ಅಡ್ಯಂತಾಯ, ಶ್ರೀ ಕೆ. ಸಿ. ಆಳ್ವ, ಶ್ರೀ ಎ. ಎ. ಶಿರೂರ್.

ಕಾಸರಗೋಡು—ಶ್ರೀ ಕೆ. ಗಣೇಶ ರಾವ್, ಶ್ರೀ ಪಿ. ಅಹಮ್ಮದ್, ಡಾ॥ ಪಿ. ಎಸ್. ಭಟ್, ಎಸ್. ಗೋವಿಂದ ನಂಬಿಯಾರ್.

ಮುಳಿಯಾರು—ಶ್ರೀ ಸಿ. ಎಚ್. ಕುಂಞಿ ಕಲಂದರ್, ಶ್ರೀ ಕೆ. ಎನ್. ಕೃಷ್ಣನ್ ನಂಬ್ಯಾರ್, ಶ್ರೀ ಬಿ. ಕೆ. ನಂಬ್ಯಾರ್, ಶ್ರೀ ಕೆ. ಮಾಧವನ್ ನಾಯರ್.

ಬೆಳ್ತಂಗಡಿ—ಡಾ॥ ಬಿ. ನಾರಾಯಣ ರಾವ್, ಶ್ರೀ ಎನ್. ಬಿ. ಪಟವರ್ಧನ್, ಶ್ರೀ ಉಜ್ರೆ ಜನಾರ್ದನ ಪ್ರಭು.

ಕೊಕ್ಕಡ—ಶ್ರೀ ದಂಬೆ ಸುಬ್ರಾಯ, ಶ್ರೀ ಬಿ. ಜಗನ್ನಾಥ ರೈ, ಶ್ರೀ ಬಿ. ಶ್ರೀನಿವಾಸ ರೈ, ಶ್ರೀ ಬಿ. ರಾಜವರ್ಮ ರೈ.

ಹೊಸದುರ್ಗ—ಶ್ರೀ ಪಿ. ಕೆ. ಮಹಮ್ಮದ್, ಶ್ರೀ ಕುಂಞರಾಮನ್, ಶ್ರೀ ಕಲ್ಲಾಲನ್, ಶ್ರೀ ಎಚ್. ಎಸ್. ಜಗನ್ನಿವಾಸ್, ಶ್ರೀ ಎನ್. ಕುಂಞಂಬು ನಾಯರ್, ಶ್ರೀ ಕುಂಞಂಬು, ಶ್ರೀ ಕೆ. ಕುಂಞಿ ಕಣ್ಣನ್.

ಚೆರುವತ್ತೂರ್—ಶ್ರೀ ಎಸ್. ಗಣಪತಿ ಕಾಮತ್—ಶ್ರೀ ಅಂಬು, ಶ್ರೀ ಕುಂಞಿ ಮಾಧವನ್, ಶ್ರೀ ಕೃಷ್ಣನ್ ಮತ್ತು ಶ್ರೀ ರಾಮನ್, ಶ್ರೀ ಕೆ. ಸಿ. ಉದಯವರ್ಮ ರಾಜ, ಶ್ರೀ ದಾಮೋದರನ್.

ಬಂಟವಾಳ— ಐರ್ಯಲಕ್ಷ್ಮೀನಾರಾಯಣ ಆಳ್ವ, ಶಾಂತಿರಾಜ, ಪೂವಣಿ ವೀರಪ್ಪ ಸಾಲಿಯಾನ್.

ಪಾಣೆಮಂಗಳೂರು — ಎನ್. ಉಪೇಂದ್ರ ನಾಯಕ್, ಎಸ್. ಎಸ್. ಹೊಳ್ಳ.

ಕುಂದಾಪುರ—ಶ್ರೀಗಳಾದ ಎಸ್. ಎಸ್. ಪರಮೇಶ್ವರಯ್ಯ ಮತ್ತು ಶ್ರೀಮತಿ ಉಷಾ. ವಿ. ಕಾಮತ್

ಬಸ್ರೂರು—ಶ್ರೀ ಎಮ್. ಎಮ್. ಹೆಗ್ಡೆ

ಬೈಂದೂರು—ಶ್ರೀಗಳಾದ ಸಂಜೀವ ರಾವ್ ಆರ್. ಕೆ; ಯೋಗೀಶ್ವರ ಹೊಳ್ಳ.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ಸಂಖ್ಯೆ 342/1954

ಶ್ರೀ ಉತ್ತರಾದಿ ಮಠದ ಶ್ರೀ. ರಾಮಚಂದ್ರ ಮೂರ್ತಿ ದೇವರು ಭಂಡಾರದ ಅಧಿಪತಿಗಳು ಶ್ರೀ ಸತ್ಯಪ್ರಮೋದತೀರ್ಥ ಸ್ವಾಮಿಗಳು. ಇವರ ಬಗ್ಗೆ ಇವರ ಜನರಲ್ ಪವರ್ ಆಫ್ ಎಟೋರ್ನಿ ಹೋಲ್ಡರ್ ಕಟ್ಟೆ ಶ್ರೀನಿವಾಸಾಚಾರ್ಯ —ವಾದಿರು.

ಮತ್ತು

ಶೇಕ್ ಪೀರು ಸಾಹೇಬ, ಶೇಕ್ ಹುಸೇನ್ ಸಾಹೇಬರ ಮಗ, ಉಡುಪಿ ತಾಲ್ಲೂಕು ನಂಬ್ರ 76ನೇ ಬಡಗಬೆಟ್ಟು ಗ್ರಾಮದ ಬೈಲೂರಲ್ಲಿರುವವ —ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ—

ವಾದಿರ ಮರಕ್ಕೆ ಪ್ರತಿವಾದಿಯಿಂದ ಬರತಕ್ಕ ನಿಜಯ ಸಂ॥ರದ ಗೇಣಿ ವ ಬಡ್ಡಿ ಕೂಡಾ ರೊಪ್ಪ್ಯ 452—5—8ಕ್ಕೆ ವಾದಿರು ಪ್ರತಿವಾದಿಯ ಮೇಲೆ ಮಾಡಿರುವ ಈ ದಾವೆಯು ತಾರೀಕು 30—9—1954ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಪ್ರತಿವಾದಿಯು ಸದ್ರಿ ತಾ. 30—9—54ನೇ ದಿವಸ ಬೆಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗಿ ಉಪಪಾದಿಸಲಿಕ್ಕೆ ತಪ್ಪಿದ್ರೆ ಈ ದಾವೆಯು ಸದ್ರಿ ಪ್ರತಿವಾದಿಯ ಗೈರುಹಾಜರಿಯಲ್ಲಿ ತೀರ್ಮಾನಿಸಲಾಗುವುದು.

V. R. Kidiyur,
Advocate for Plaintiff.

ಉಡುಪಿ, ತಾ. 21-9-1954.

ಪಂಡ್ಸೆ—ಶ್ರೀಗಳಾದ ವೈ. ತೇಜಪ್ಪ ಸೆಟ್ಟಿ ಮತ್ತು ವಿ. ಶ್ರೀನಿವಾಸ ಸೆಟ್ಟಿ.

ಬಸರೂರು, ಸುಳ್ಳ ಸರ್ಕಲುಗಳಲ್ಲಿ ಕಾಂಗ್ರೆಸ್ ಉಮೇದ್ವಾರರಾದ ಎಂ. ಎಂ. ಹೆಗ್ಡೆ ಮತ್ತು ಎಸ್. ಎಮ್. ಬಾಲಕೃಷ್ಣ ಅವರೂ ಕಾಪು ಸರ್ಕಲಿನಲ್ಲಿ ಸ್ವತಂತ್ರ ಹುರಿಯಾಳು ಪದ್ಮನಾಭ ಶೆಟ್ಟರೂ ಅವಿರೋಧ ಆಯ್ಕೆ ಹೊಂದಿದ್ದಾರೆ.

ಉಡುಪಿ

ಸಾಹಿತ್ಯಸಭೆ—ಸ್ಥಳೀಯ ಕ್ರಿಶ್ಚಿಯನ್ ಹೈಸ್ಕೂಲಿನ ಸಾಹಿತ್ಯಸಭೆಯು ತಾ. 12ರಲ್ಲು ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಸ್. ಎಸ್. ಮತಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ತರಬೇತಿ ಶಾಲಾ ಹೆಡ್ಮಾಸ್ಟರ್ ಶ್ರೀ ಯು. ಕೃಷ್ಣ ರಾಯರು 'ಸಮಾಜ ಮತ್ತು ಸಂಸ್ಕೃತಿ' ವಿಷಯದಲ್ಲಿ ಭಾಷಣವಿತ್ತರು. ಶಾಲಾ ವಿದ್ಯಾರ್ಥಿ ಮುಖಂಡ ಶ್ರೀ ಸೀತಾರಾಮ ಭಟ್ಟರು ಧನ್ಯವಾದಗಳನ್ನರ್ಪಿಸಿದರು.

ಕಲಾನ್ಯಂದವಲ್ಲಿ—ತಾ. 17ರಲ್ಲು ಪೇಜಾವರ ಮಠದ ಶ್ರೀ ವಿಶ್ವೇಶ ತೀರ್ಥ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಧಾರ್ಮಿಕ ಗೋಷ್ಠಿ ಜರಗಿತು.

ಅಕ್ಕಿ ಹಂಚೋಣ—ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರು ಇದೇ ತಾ. 26ನೇ ಆದಿತ್ಯವಾರ ಪಾಂಗಾಳ ನಾಯಕ್ ಬೇಂಕಿನ ವಠಾರದಲ್ಲಿ ಬಡಬಗ್ಗರಿಗೆ ಅಕ್ಕಿ ಮತ್ತು ದುಡ್ಡು ಹಂಚಲಿರುವರು.

ನೆರೆಪೀಡಿತರಿಗೆ ನೆರವು—ಶ್ರೀ ಯು. ಎಸ್. ನಾಯಕ್, ಡಾ ಪಿ. ಆರ್. ನಾಯಕ್, ಬ್ರದರ್ ಅಂಡ್ರ್ಯೂ, ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರುಗಳ ನಾಯಕತ್ವದಲ್ಲಿ ಉಡುಪಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಬಿಹಾರ್ ಅಸ್ಸಾಮ್ ಕಡೆಗಳಲ್ಲಿ ಉಂಟಾದ ನೆರೆಯಿಂದ ನಿರಾಶ್ರಿತರಾದವರಿಗೆ ನೆರವು ನೀಡಲು ಹಣ ಸಂಗ್ರಹಿಸುತ್ತಿರುವರು. ಇನ್ನವರೆಗೆ ರೂ. 508ಕ್ಕೂ ಮಿಕ್ಕಿ ಸಂಗ್ರಹವಾಗಿರುವುದು.

ಮುನಿಸಿಪಲ್ ಕೌನ್ಸಿಲಿನ ಅರ್ಜಂಟ್ ಸಭೆಯು—ತಾ. 20ರಲ್ಲು ವೈಸ್ ಚೇರ್ಮನ್ ಡಾ। ಪಿ. ವಿ. ವ್ಯಾಸ ರಾಯರ ಅಧ್ಯಕ್ಷತೆಯಲ್ಲಿ ಜರಗಿ ಮುನಿಸಿಪಲ್ ಲ್ಯಾಬ್ರೇರಿಯನ್ನು ಮಂಗಳೂರಿನ ಲೋಕಲ್ ಲ್ಯಾಬ್ರೆರಿ ಅಥೋರಿಟಿಗೆ ಅಕ್ಟೋಬರ್ ತಾ. 1ರಿಂದ ಬಿಟ್ಟು ಕೊಡುವುದೆಂದು ನಿರ್ಣಯವಾಯಿತು. ಕಾಂಗ್ರೆಸ್ ಪಕ್ಷದ ಸದಸ್ಯ ವಕೀಲ್ ಶ್ರೀ ಪಿ. ವಿ. ಆಚಾರ್ಯರು ಸದಸ್ಯರಿಗೆ ಚಹಾ ಸತ್ಕಾರವಿತ್ತರು.

ಕಿರಿಯರಲ್ಲೊಂದು ವಿನಂತಿ—ಜನಪ್ರಿಯ 'ಚರಖಾ' ಹಸ್ತಲಿಖಿತ ಪತ್ರಿಕೆಯವರು ಸದ್ಯ ತಮ್ಮ ದೀಪಾವಳಿ ಸಂಚಿಕೆಯನ್ನು ಕೇವಲ ಕಿರಿಯರ ಕಲೆ, ಬರಹಗಳ ಪ್ರಕಾಶನಕ್ಕಾಗಿಯೇ ಮೀಸಲಿರಿಸಿದ್ದಾರೆ. ಉತ್ತಮವಾದ ಕತೆ, ಲೇಖನ, ಚಿತ್ರಗಳಿಗೆ ಬಹುಮಾನದ ಏರ್ಪಾಡು ಮಾಡಲಾಗಿದೆ. ಕಿರಿಯರು ತಮ್ಮ ಸ್ವಂತ ಕೃತಿಗಳನ್ನು ತಾ. 8-10 51ರೊಳಗೆ ಕಳುಹಿಸಿ ನೆರವಾಗಬೇಕೆಂದು ಸೂಚಿಸ ಬಯಸುತ್ತೇವೆ. ಬರಹಗಳು ಫುಲ್ಸ್‌ಕೇಪ್ ಸೈಜಿನ 3 ಯಾ 4 ಪುಟಕ್ಕೆ ಮೀರಬಾರದು. ಅಕ್ಷರಗಳು ಅಂದವಾಗಿರಬೇಕು. ಬರಹ, ಚಿತ್ರಗಳನ್ನು ಈ ಕೆಳಗಣ ವಿಳಾಸಕ್ಕೆ ಕಳುಹಿಸಬೇಕಾಗಿದೆ.—ಕೆ. ಸತ್ಯೇಂದ್ರ ಪೈ, ಸಂಪಾದಕ, 'ಚರಖಾ', ಕೋರ್ಟು ರಸ್ತೆ, ಉಡುಪಿ.

ದೆಹಲಿಗೆ ಇಬ್ಬರು ಪ್ರತಿಷ್ಠಿತರ ಆಗಮನ

ರಾಷ್ಟ್ರಸಂಘದ ಸಾಮಾನ್ಯಾಧಿವೇಶನದ ಪ್ರಾರಂಭ

ಅಂತಾರಾಷ್ಟ್ರೀಯ ರಂಗದಲ್ಲಿ ಕಂಡುಬರುವ ದ್ವೇಷಮಯ ವಾತಾವರಣವನ್ನು ಸುಧಾರಿಸುವ ಉದ್ದೇಶದಿಂದ ಪ್ರಧಾನ ಮಂತ್ರಿ ನೆಹರೂರವರು ಕೆಲಸ ಮಾಡುತ್ತಿರುವುದು ಶಾಂತಿ ಪ್ರಿಯವಾದ ಇತರ ಕೆಲವು ರಾಷ್ಟ್ರಗಳ ಪರಸ್ಪರ ಸದ್ಭಾವನನ್ನು ಜಾಗೃತಗೊಳಿಸಿದೆ. ಸಿಂಹಳದ ಪ್ರಧಾನ ಮಂತ್ರಿಗಳು ಕೊಲೊಂಬೋದಲ್ಲಿ ಆಗ್ನೇಯ ಏಶ್ಯದ ಐದು ಮಹಾ ರಾಷ್ಟ್ರಗಳ ಪರಿಷತ್ತನ್ನು ಸೇರಿಸಿದ್ದೂ ಈಗ ಇಂಡೋನೇಶಿಯದ ಪ್ರಧಾನ ಮಂತ್ರಿ ಡಾ। ಅಲಿ ಸಾಸ್ತ್ರೋಮಿ ಜೋಜೋರವರು ಏಶ್ಯ—ಆಫ್ರಿಕ ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವನ್ನು ಕರೆಯಬೇಕೆಂದಿರುವುದೂ ಇದಕ್ಕೆ ನಿದರ್ಶನ. ಡಾ. ಅಲಿಯವರು ಇದೇ ಬುಧವಾರ (ದಿನಾಂಕ ೨೨) ಹೊಸ ದೆಹಲಿಗೆ ಸಪತ್ನೀಕರಾಗಿ ಆಗಮಿಸಿದ್ದು, ನಾಲ್ಕು ದಿನಗಳ ಕಾಲ ಇಲ್ಲಿ ಉಳಿಯುವರು. ಅವರು ತಮ್ಮ ಗೌರವಾರ್ಥ ಏರ್ಪಡಿಸಲಾದ ಅನೇಕ ಕಾರ್ಯಕ್ರಮಗಳಲ್ಲಿ ಭಾಗ ವಹಿಸುವರಲ್ಲದೆ, ನೆಹರೂರೊಡನೆ ಉಭಯ ರಾಷ್ಟ್ರಗಳಿಗೂ ಸಾಮಾನ್ಯವಾದ ಕೆಲವು ಮಹತ್ವದ ವಿಷಯಗಳನ್ನು ಚರ್ಚಿಸುವರು. ಆಗ್ನೇಯ ಏಶ್ಯ ಸಂರಕ್ಷಣಾ ಒಪ್ಪಂದವೂ ಚರ್ಚಿಸಲ್ಪಡಬಹುದೆಂದು ಹೇಳಲಾಗುತ್ತದೆ.

ಟಿಟೋರ ಸಂದರ್ಶನ

ಭಾರತಕ್ಕೆ ಆಗಮಿಸಲಿರುವ ಇನ್ನೊಬ್ಬ ಪ್ರತಿಷ್ಠಿತ ಪುರುಷರಲ್ಲಿ ಯುಗೊಸ್ಲಾವದ ಅಧ್ಯಕ್ಷ ಟಿಟೋರವರೂ ಒಬ್ಬರು: ರಶಿಯದ ಕಮ್ಯುನಿಸಮ್ಮಿನ ವಿರುದ್ಧ ಪ್ರತಿಭಟನೆಯೊಡ್ಡಿ ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ರಾಜ್ಯಭಾರವನ್ನು ನಿರ್ವಹಿಸುತ್ತಿರುವ ಟಿಟೋರವರು ಯಾವ ಬಣಗಳಿಗೂ ಸೇರದಿರುವ ಧೋರಣೆಯನ್ನು ವಹಿಸುತಿದ್ದಾರೆ. ಭಾರತದ ಅಂತಾರಾಷ್ಟ್ರೀಯ ಧೋರಣೆಯ ಬಗ್ಗೆ ಅವರಿಗಿರುವ ಮೆಚ್ಚಿಗೆಗೆ ಇದೇ ಕಾರಣ. ಬರ್ಮಾದ ಪ್ರಧಾನ ಮಂತ್ರಿಗಳ ಆಹ್ವಾನವನ್ನು ಮನ್ನಿಸಿ ರಂಗೂನಿಗೆ ಈ ಚಳಿಗಾಲದಲ್ಲಿ ಪ್ರಯಾಣಸಲಿರುವ ಇವರನ್ನು ಭಾರತಕ್ಕೂ ಭೇಟಿಕೊಡಬೇಕೆಂದು ನೆಹರೂರವರು ಕೇಳಿಕೊಂಡರು. ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯ ಅಧ್ಯಕ್ಷೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಈಚೆಗೆ ಯುಗೊಸ್ಲಾವಕ್ಕೆ ಹೋದಾಗ ಈ ಆಮಂತ್ರಣವನ್ನು ಟಿಟೋರಿಗೆ ಒಪ್ಪಿಸಿದರು. ಟಿಟೋರವರು ಬರುವ ಜನವರಿ ತಿಂಗಳಲ್ಲಿ ಪ್ರಜಾ ರಾಜ್ಯದಿನೋತ್ಸವದ ಹೊತ್ತಿಗೆ ಹೊಸದೆಹಲಿಗೆ ಬರಬಹುದು.

ಸಂಯುಕ್ತ ರಾಷ್ಟ್ರ ಸಂಘ

ಶ್ರೀಮತಿ ವಿಜಯ ಲಕ್ಷ್ಮಿಯವರು ಈಗ ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನಕ್ಕಾಗಿ ಅಮೇರಿಕಕ್ಕೆ ಹೋಗಿದ್ದಾರೆ. ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಇದೇ ಮಂಗಳವಾರ ಸೇರಿದ್ದು, ಹಿಂದಿನ ಹಲವು ಸಮಸ್ಯೆಗಳಲ್ಲದೆ ಹೊಸತಾಗಿ ಮೂರು ಪ್ರಶ್ನೆಗಳೂ ಕಾರ್ಯಕ್ರಮ ಪಟ್ಟಿಯಲ್ಲಿವೆ: ಸೈಪ್ರಸ್ ದ್ವೀಪದ ಮೇಲೆ ಗ್ರೀಸು ಅಧಿಕಾರವನ್ನು ಕೇಳುತಿದ್ದರೆ, ನ್ಯೂಗಿನಿಯ ಪೂರ್ವಾರ್ಧದ ಮೇಲೂ ತನಗೆ ಅಧಿಕಾರವಿರಬೇಕೆಂದು ಇಂಡೋನೇಶಿಯಾ ಬಯಸುತ್ತದೆ. ಆಫ್ರೋ ಮತ್ತು ಕಂಬೋಡಿಯಾಗಳಿಗೆ ರಾಷ್ಟ್ರ ಸಂಘದ ಸದಸ್ಯತ್ವ ಸಿಗಬೇಕೆಂದು ಆಸ್ಟ್ರೇಲಿಯಾ ಹೇಳುತ್ತದೆ. ಇದರ ಕುರಿತು ಚರ್ಚೆ ನಡೆಯುವುದಕ್ಕೆ ಮೊದಲೇ ಕೆಂಪು ಚೀನಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ಸಿಗಬೇಕೆಂಬ ತಗಾದೆ ಪಕ್ಷವನ್ನು ರಶಿಯ ಮುಂದೆ ಎತ್ತಬಹುದು: ಚೀನವು ಈಗ ಯಾವುದೇ ಯುದ್ಧದಲ್ಲಿ ಭಾಗ ವಹಿಸುತ್ತಿಲ್ಲವಾದುದರಿಂದ, ಅಮೇರಿಕಕ್ಕೆ ರಶಿಯದ ಬೇಡಿಕೆಯನ್ನು ವಿರೋಧಿಸುವುದು ಹೇಗೆ ಎಂಬ ಚಿಂತೆ ಕಾಡುತ್ತಿದೆ. ಇದರಿಂದ ಬಿಡುಗಡೆ ಹೊಂದಲು ಚೀನವು ಕಳೆದ ನಾಲ್ಕು ವರ್ಷಗಳಲ್ಲಿ ಯುದ್ಧದಲ್ಲೇ ಅಪಾಯಕರವಾದ ೩೯ ಅಪರಾಧಗಳನ್ನು ಮಾಡಿದೆಯೆಂದು ಹೇಳುವ ಪಟ್ಟಿಯೊಂದನ್ನು ಅಮೇರಿಕದ ರಾಜನೀತಿ ನಿಪುಣರು ತಯಾರಿಸಿ ಪ್ರಕಟಿಸಿದ್ದಾರೆ.

(೫ನೇ ಪುಟದಿಂದ)

ಸ್ತಾರಿಂದ ನಡೆಸುತಿದ್ದ ಸತ್ಯಾಗ್ರಹವು ಇದೀಗ ಕೊನೆಗೊಂಡಿರುವುದು. ಸರಕಾರವು ಕಳೆದ ಅಕ್ಟೋಬರದಿಂದ ಒಕ್ಕಲೆಬ್ಬಿಸಲ್ಪಟ್ಟವರನ್ನು ಮರಳಿ ನೆಲೆಗೊಳಿಸಬೇಕೆಂದು ತನ್ನ ಆಜ್ಞೆಯಲ್ಲಿ ಹೇಳಿದ್ದನ್ನು ವಿರೋಧಿಸಿದ ಈ ಸತ್ಯಾಗ್ರಹಿಗಳು ೧೯೪೭ರಿಂದ ಒಕ್ಕಲೆಬ್ಬಿಸಲ್ಪಟ್ಟ ಎಲ್ಲರಿಗೂ ಇಂತಹ ಆಜ್ಞೆ ಅನ್ವಯಿಸತಕ್ಕದ್ದೆಂದು ಹೇಳುತಿದ್ದರು. ಆಂಧ್ರ ಪ್ರದೇಶ ಕಾಂಗ್ರೆಸು ಸಮಿತಿಹಾಗು ಶಾಸನಸಭೆಯ ಕಾಂಗ್ರೆಸು ಪಕ್ಷದ ಸದಸ್ಯರ ಸಂಯುಕ್ತ ಸಭೆಯೊಂದು ತಿರುಪತಿಯಲ್ಲಿ ಜರಗಿ, ಪ್ರಜಾ ಸಮಾಜವಾದಿಗಳ ಬೇಡಿಕೆಯಂತೆಯೇ ನಡೆಯುವುದು ವಿಹಿತವೆಂದು ತೀರ್ಮಾನಿಸಿತು. ಇದರಿಂದ ತೃಪ್ತಿಹೊಂದಿ, ಸತ್ಯಾಗ್ರಹವನ್ನು ಮುಕ್ತಾಯಗೊಳಿಸಲಾಯಿತು.

ಕುಂಬಳೆ—ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಬಿ. ಎನ್. ಹೆಗ್ಡೆಯವರು ತಾ. 18ರಲ್ಲು ಆರಿಕಾಡಿ, ಮೊಗ್ರಾಲ್ ಗ್ರಾಮಗಳನ್ನು ಸಂದರ್ಶಿಸಿದರು.

ರಾಷ್ಟ್ರೀಯ ವಿಸ್ತರಣಾ ಯೋಜನೆಯನ್ನು ವಿವರಿಸುವರೆ ತಾ. 19ರಲ್ಲು ಎಡನಾಡು ಗ್ರಾಮಸ್ಥರ ಸಭೆಯು ನಾರಂಪ್ಪಾಡಿ ಶಾಲೆಯಲ್ಲಿ ಜರಗಿತು. ಶ್ರೀಗಳಾದ ಮುಹಮ್ಮದ್ ಸೆಟ್ಟಿ, ಗೋಪಿನಾಥ ಕಾಮತ್ ಮೊದಲಾದವರು ರಾಷ್ಟ್ರೀಯ ವಿಸ್ತರಣಾ ಯೋಜನೆಯ ಕುರಿತು ಮಾತನಾಡಿದರು.

ನಡೆಯುವ ಚಿತ್ರ:-

ಜಗ್ಗೂ

ತಾರಾಗಣ:— ಜಗದೀಶ್ ಸೇಥಿ, ಕಮಲ್ ಕಪೂರ್. ಶ್ಯಾಮಾ, ಕುಲದೀಪ್ ಮೊದಲಾದವರು.

ಶ್ರೀ ರಾಮಕೃಷ್ಣ ಥಿಯೇಟರ್, ಲಿ., ಉಪ್ಪಿಂಗುಡಿ

ಬರುವ ಚಿತ್ರ. ಔರತ್ [ಹಿಂದಿ] AURAT

ಶಾಂಸನ್ & ಡಿಲೈಲಾ ದ ಭವ್ಯ ಹಿಂದೀಕರಣ.
ಪ್ರೇಮನಾಥ್, ಬೀನಾರಾಯ್ ಪೂರ್ಣಿಮಾ ಮತ್ತು ಉಲ್ಲಾಸ್.

ವಿಶೇಷ ವಿವಾಹ ವಿಧೇಯಕ

(೪ನೇ ಪುಟದಿಂದ)

ಅವಿಭಕ್ತ ಕುಟುಂಬದ ಸಮಷ್ಟಿ ಕಲ್ಪನೆಗೆ ಕುಠಾರಪ್ರಾಯವಾಗಿದೆ. ಆದುದರಿಂದಲೇ ಈ ಕಾಯಿದೆ-ಜ್ಯಾರಿಗೆ ಬರುವುದಕ್ಕೆ ಮುಂಚೆ ಧಾರ್ಮಿಕ ವಿಧಿಯಿಂದ ನೆರವೇರಿದ ಮದುವೆಗಳಿಗೂ ದಂಪತಿಗಳಿಬ್ಬರೂ ೨೧ ವರ್ಷ ವಯಸ್ಸಿನವರಾಗಿ, ಕೆಲವು ಶರ್ತಗಳನ್ನು ಪೂರೈಸಿದ ಪಕ್ಷದಲ್ಲಿ, ಈ ಕಾಯಿದೆಯಂತೆ ಮನ್ನಣೆ ಕೊಡಬಹುದೆಂಬ ಕಲಮು ಚರ್ಚೆಗೆ ಬಂದಾಗ ವಾಗ್ಯುದ್ಧವು ತೀವ್ರವಾಯಿತು. ಇದು ಹಿಂದುಗಳ ಮೇಲೆ ಅನಪೇಕ್ಷಿತವಾದ ದಾಳಿಯೆಂದು ಕೆಲವರು ಹೇಳಿದರೆ, ಸಂಪ್ರದಾಯಾನುಸಾರ ನಿಷಿದ್ಧ ಸಂಬಂಧದಲ್ಲಿ ಮಾಡಿಕೊಂಡ ವಿವಾಹಗಳಿಗೂ ಮನ್ನಣೆಯನ್ನೀಯುವ ಪ್ರಸ್ತುತ ಉಪಕ್ರಮವು ಕಾಯಿದೆಯ ಉದ್ದೇಶಕ್ಕೆ ವ್ಯತಿರಿಕ್ತವಾಗಿದೆಯೆಂದು ಬೇರೆ ಕೆಲವರು ವಿರೋಧಿಸಿದರು. ಯಾರನ್ನೂ ಒತ್ತಾಯದಿಂದ ಅವಿಭಕ್ತ ಕುಟುಂಬದಿಂದ ಬೇರ್ಪಡಿಸುವ ಪ್ರಶ್ನೆಯೇ ಇಲ್ಲವೆಂದು ಕಾಯಿದೆ ಮಂತ್ರಿಗಳು ಕಲಮನ್ನು ಸಮರ್ಥಿಸಿಕೊಂಡಬಳಿಕ, ಬಹುಮತದಿಂದ ಅದು ಸ್ವೀಕರಿಸಲ್ಪಟ್ಟಿತು.

ವೈವಾಹಿಕ ಸಂಬಂಧದ ಹಕ್ಕುಗಳು ಮುಂದೆ ಚರ್ಚಿಸಲಾದವು, ಕೃಪಲಾನಿಯವರು ಇದನ್ನು ಬಲವಾಗಿ ವಿರೋಧಿಸುತ್ತಾ ತಾನು ಒಲ್ಲದ ಹೆಂಡತಿಯೊಡನೆ ಒತ್ತಾಯಕ್ಕಾಗಿ ಇರಬೇಕಾದವನು ವ್ಯಭಿಚಾರಿಯಾಗಬಹುದೆಂದು ಎಚ್ಚರವಿತ್ತರು ಪ್ರಾಚೀನ ಋಷಿಗಳು ೫೦ವರ್ಷಗಳ ಬಳಿಕ ವಾನಪ್ರಸ್ಥಾಶ್ರಮವನ್ನು ಸ್ವೀಕರಿಸಬೇಕೆಂದು ಹೇಳುತಿದ್ದರು. ಆದರೆ ಇಂದು ವೈವಾಹಿಕ ಹಕ್ಕಿಗೆ ಮನ್ನಣೆ ಕೊಡುವ ಈ ಕಲಮನ್ನು ಮುಂದೆ ಮಾಡಿ ಗಂಡನು ಒಲ್ಲದ ಹೆಂಡತಿಯನ್ನು, ಹೆಂಡತಿಯು ಮನಸ್ಸಿಲ್ಲದ ಗಂಡನನ್ನು ಬಲಾತ್ಕರಿಸಲು ಸಾಧ್ಯವಾಗುವುದು ಎಂದವರು ಟೀಕಿಸಿದರು

ಡಾ| ಜಯಸೂರ್ಯರು ಯೆಹೂದಿಯರ ಈ ಅಧಿಕಾರದ ಕಲ್ಪನೆಯು ಬ್ರಿಟಿಷರಿಂದ ಇಲ್ಲಿಗೆ ತರಲ್ಪಟ್ಟಿತು ಎಂದರು. ಆಕ್ಷೇಪಗಳನ್ನು ನಿರಾಕರಿಸಿದ ಸಚಿವರು ಕೇವಲ ಶಾರೀರಿಕ ಸಂಬಂಧ ಬೆಳೆಯಿಸುವುದೇ ವೈವಾಹಿಕ ಹಕ್ಕಲ್ಲ: ಅಸನಾರ್ಥ ಮುಂತಾದ ಅಧಿಕಾರಗಳೂ ಇದರ ಕಕ್ಷೆಯಲ್ಲಿ ಬರುತ್ತವೆ ಎಂದು ಹೇಳಿದರು.

ದಾಂಪತ್ಯ ವಿಚ್ಛೇದನ ಸಂಬಂಧದ ಕಲಮಿನ ಮೇಲೆ ಬಹಳ ತೀಕ್ಷ್ಣವಾದ ವಾದ ಪ್ರತಿವಾದಗಳಾದವು: ಶ್ರೀ. ಕೆ. ಆರ್. ಶರ್ಮಾ ಎಂಬವರು ಗಂಡನು ಸಂಜೆ ಬಹಳ ಹೊತ್ತಿನ ವರೆಗೆ ಯಾರಾದರೊಬ್ಬ ಹೆಂಗಸಿನ ಸಹವಾಸದಲ್ಲಿದ್ದರೆ ಅಥವಾ "ಲಿಪ್‌ಸ್ಟಿಕ್" ಹಚ್ಚಿಕೊಳ್ಳಬೇಡವೆಂಬ ಗಂಡನ ಮಾತನ್ನು ಹೆಂಡತಿ ತಳ್ಳಿಹಾಕಿದರೆ ಆಗ ದಾಂಪತ್ಯವನ್ನು ಮುರಿದುಕೊಳ್ಳಲು ಅವಕಾಶ ಕೊಡಬೇಕು ಎಂದು ಸೂಚಿಸಿದರು! ಪರಸ್ಪರ ಸಮ್ಮತಿಯಿಂದ ದಾಂಪತ್ಯವಿಚ್ಛೇದನ ಮಾಡಿಕೊಳ್ಳಬಹುದೆಂಬ ರಾಜ್ಯಸಭೆಯ ಸೂಚನೆಯನ್ನು ಕೆಲವು ಕನಿಷ್ಠ ಶರ್ತಗಳ ಮೇಲೆ ಸ್ವೀಕರಿಸಬೇಕೆನ್ನುತ್ತಾ ಶ್ರೀ ವೆಂಕಟರಾಮನ್ನರು ತಿದ್ದುಪಡಿಯನ್ನು ಮಂಡಿಸಿದರು. ಇದರನ್ವಯ ಗಂಡ ಹೆಂಡಿರು ಒಂದು ವರ್ಷ ಕಾಲ ಒಬ್ಬರಿನ್ನೊಬ್ಬರಿಂದ ಬೇರೆಯೇ ಉಳಿದ ಬಳಿಕ, ಜಿಲ್ಲಾ ಕೋರ್ಟಿಗೆ ವಿಚ್ಛೇದನಕ್ಕಾಗಿ ಅರ್ಜಿ ಮಾಡಬಹುದು; ನ್ಯಾಯಾಧೀಶರು ಅವರಿಗೆ ಒಂದು ವರ್ಷದ ಅವಧಿಯನ್ನು ಕೊಟ್ಟು ದಾಂಪತ್ಯವು ಮರಳಿ ಕೂಡಿ ಬರುವಂತೆ ಪ್ರಯತ್ನಿಸುವರು. ಭಾವೋದ್ರಿಕ್ತರಾದಗಳಿಗೆಯಲ್ಲಿ ವಿವಾಹವನ್ನು ಮುರಿದುಕೊಂಡು ಹಿಂದಿನಿಂದ ಪಶ್ಚಾತ್ತಾಪ ಪಡದಂತೆ ಮಾಡುವುದೇ ಇದರ ಉದ್ದೇಶ. ಇಷ್ಟು ಅವಧಿಯನ್ನು ಕೊಟ್ಟ ಬಳಿಕವೂ ಗಂಡ ಹೆಂಡಿರ ಮನಸ್ಸು ಕೂಡಿ ಬರದಿದ್ದರೆ, ವಿಚ್ಛೇದನವನ್ನು ನೀಡಲಾಗುವುದು.

ಪ್ರಧಾನ ಮಂತ್ರಿ ನೆಹರೂರವರು ದಾಂಪತ್ಯ ವಿಚ್ಛೇದನದ ಕಲಮನ್ನು ಬಹಳವಾಗಿ ಸಮರ್ಥಿಸಿದರು. ಇದರಿಂದ ಮನಸ್ತಾಪಗೊಂಡ ದಂಪತಿಗಳು ಬಿಡುಗಡೆ ಹೊಂದಿ, ಹಿಂದಿನಿಂದ ಸುಖ ಜೀವನ ನಡೆಸಲು ಸಾಧ್ಯವಾಗುವುದೆಂದು ಅವರು ಅಭಿಪ್ರಾಯಪಟ್ಟರು. ವಿವಾಹವೆಂದರೆ ಸ್ನೇಹ ಸಂಬಂಧ, ಸಾಹಚರ್ಯ ಮತ್ತು ಜೀವನ ಹೋರಾಟದಲ್ಲಿ ಪರಸ್ಪರ ಸಹಕಾರದ ಮಾರ್ಗ. ಅದು ಹಾಸಿಗೆಯಲ್ಲಿ ದಂಪತಿಗಳು ಯಾವಾಗಲೂ ಹೊರಳಾಡುತ್ತಿರಬೇಕೆಂದು ಹೇಳುವುದಿಲ್ಲ. ಆ ರೀತಿ ವಿಚಾರ ಮಾಡುವುದು ನನಗೆ ಒಪ್ಪಿಗೆಯಾಗದು. ಆದರೆ ಮನಸ್ಸು ಕೂಡಿ ಬಾರದವರನ್ನು ಮನುವಿನ ನಿರ್ಬಂಧವನ್ನು ಹೇರಿ ಒತ್ತಾಯದಿಂದ ಒಟ್ಟಗಿರಿಸುವುದು ಸರಿಯಲ್ಲ. ಹಿಂದೂ ಸಮಾಜದ ಕಲ್ಪನೆಗೆ ದಾಂಪತ್ಯ ವಿಚ್ಛೇದನವು ಹೊಸತಲ್ಲ. ಕೆಲವು ಮೇಲ್ವರಗತಿಯಜನರಿಗಷ್ಟೇ ಇದು ರುಚಿಸಲಿಕ್ಕಿಲ್ಲ. ಸಾಮಾಜಿಕ ಸುಧಾರಣೆಯ ವಿಷಯ ಬಂದಾಗ ನಾವು ಬಹು ಜನರ ನಡವಳಿಕೆಯನ್ನು ಮರೆತರೆ ತಪ್ಪಾದೀತು ಎಂದರು. "ಹೆಂಡತಿಯನ್ನು ಒದ್ದು ಅವಳ ಸಮ್ಮತಿಯನ್ನು ಪಡೆಯುವ ಕ್ರೂರಿಗಳೂ ಕೆಲವರಿರಬಹುದು. ಹಾಗಿದ್ದರೆ, ಅಂಥ ಗಂಡನಿಂದ ಎಷ್ಟು ಬೇಗ ಅವಳು ದೂರಾಗುವಳೋ ಅಷ್ಟೂ ಶ್ರೇಯಸ್ಕರ" ಎಂದು ನೆಹರೂ ಹೇಳಿದರು.

ಹಿಂದೂ ಮಹಾಸಭೆಯ ದೇಶಪಾಂಡೆ ಹಾಗು ಚಟರ್ಜಿಯವರೂ ಪ್ರಜಾ ಸಮಾಜವಾದೀ ಧುರೀಣ ಕೃಪಲಾನಿಯವರೂ ಪ್ರಧಾನ ಮಂತ್ರಿಗಳ ನಿಲುಮೆಯನ್ನು ಟೀಕಿಸಿದರು. ಸಾಮಾಜಿಕ ಸಮಾನತೆಯ ಹೆಸರಿನಲ್ಲಿ ದಾಂಪತ್ಯವಿಚ್ಛೇದನಕ್ಕೆ ಅನುಮತಿ ಕೊಡುವ ವಿಚಾರ ಈಗ ಹಿತವಲ್ಲ- ಏಕೆಂದರೆ ಆರ್ಥಿಕ ಹಾಗು ಸಾಮಾಜಿಕ ಸಮಾನತೆಯನ್ನು ಪುರುಷರಷ್ಟೇ ಸ್ತ್ರೀಯರೂ ಅನುಭವಿಸುತ್ತಿಲ್ಲ. ಗಂಡನಿಂದ ತುಳಿಯಲ್ಪಟ್ಟು ಬೇರ್ಪಡುವ ಹೆಂಡತಿ ತನ್ನ ಮಕ್ಕಳ ಹಾಗು ಮುಂದಿನ ಜೀವನದ ವಿಚಾರವನ್ನು ಮಾಡಬೇಕಾಗುವುದು. ಆದರೆ ಪ್ರಧಾನ ಮಂತ್ರಿಗಳ ಸಮರ್ಥನೆ ದೊರೆತ ಬಳಿಕ ನಾವೇನು ಹೇಳಿದರೂ ಅರಣ್ಯರೋದನವಾಗುತ್ತದೆ ಎಂದರು ಕೃಪಲಾನಿ. ಅವರು ಮದುವೆ ಮುರಿಯದಂತೆ ತಡೆಯಲು ೪೫ ವರ್ಷಕ್ಕಿಂತ ಹೆಚ್ಚು ವಯಸ್ಸಿನ ಮೂವರು ವಿವಾಹಿತರ ಮಂಡಳಿಗಳನ್ನು ನೇಮಿಸಬೇಕೆಂದು ಸೂಚಿಸಿದರು. ಕಾಂಗ್ರೆಸಿನ ಶ್ರೀ ಅನಂತಶಯನ ಅಯ್ಯಂಗಾರರು ವಿಚ್ಛೇದನವು ಘಾತಕವಾದದ್ದೆಂದು ಅಭಿಪ್ರಾಯಪಟ್ಟರು. ಇದರಿಂದ ಅವಿವಾಹಿತ ಸ್ತ್ರೀ ಪುರುಷರ ಮತ್ತು ಅನಾಥ ಮಕ್ಕಳ ಸೈನ್ಯವೇ ಉಂಟಾದೀತು. ಬಹುಪತ್ನೀತ್ವ ಮುಂತಾದ ಪದ್ಧತಿಗೆ ವಿರೋಧ ಸೂಚಿಸುತ್ತೇವೆ. ಆದರೆ ಮನಸ್ಸು ಬದಲಾದಂತೆಲ್ಲ ಮದುವೆ ಮುರಿಯಲು ಅವಕಾಶ ನೀಡುವ ಈ ಕಲಮು ಸ್ವೈರಾಚಾರಕ್ಕೆ ಪ್ರೋತ್ಸಾಹ ಕೊಡುವುದಿಲ್ಲವೇ? ಎಂದವರು ಪ್ರಶ್ನಿಸಿದರು.

ಕಾಯಿದೆ ಮಂತ್ರಿಗಳು ರಶಿಯಹಾಗು ಚೀನಗಳಲ್ಲಿ ಪರಸ್ಪರ ಸಮ್ಮತಿಯ ದಾಂಪತ್ಯ ವಿಚ್ಛೇದನ ಕ್ರಮವಿರುವುದನ್ನು ಪ್ರಸ್ತಾಪಿಸಿದರು. ಆದರೆ ಅಲ್ಲಿ ಇದಿನ್ನೂ ಪ್ರಾಯೋಗಿಕಾವಸ್ಥೆಯಲ್ಲಿದೆಯೆಂದು ಒಪ್ಪಿದರು. ಬರ್ಮಾ ಮತ್ತು ಇಂಡೊನೇಶಿಯಗಳಲ್ಲೂ ಇಂತಹ ಪದ್ಧತಿ ಉಂಟೆಂದು ಹೇಳಲಾಯಿತು. ತರುಸಿನ ಚರ್ಚೆ ಮುಗಿದು ಮತದಾನದ ಸಮಯ ಬಂದಾಗ ಧ್ವನಿ ಮತದಿಂದಲೇ ಇದು ಸ್ವೀಕಾರಗೊಂಡಿತು. ಯಾರೋ ಮೂಲೆಯಲ್ಲಿ ಕುಳಿತ ಸದಸ್ಯರೊಬ್ಬರು "ಬೇಡ" ಎಂದು ಬೊಬ್ಬಿಟ್ಟರಂತೆ—ಆದರೆ ಸರ್ವಾನುಮತದ ಒಪ್ಪಿಗೆಯೇ ವಿಧೇಯಕಕ್ಕೆ ದೊರಕಿತೆನ್ನಬಹುದು. ಇದು ಈ ವಾರ ರಾಜ್ಯಸಭೆಯ ಮುಂದೆ ಮರಳಿ ಮಂಡಿಸಲ್ಪಡುವುದು ಹೆಚ್ಚಿನ ಬದಲಾವಣೆ ಏನೂ ಇಲ್ಲದೆ ಇದಿಲ್ಲಿ ಸ್ವೀಕರಿಸಲ್ಪಡಬೇಕೆಂದು ಕಾಂಗ್ರೆಸು ವರ್ಗಗಳು ಅಪೇಕ್ಷಿಸುತ್ತವೆ. ಇದಕ್ಕಾಗಿ ಪಕ್ಷದ ಸದಸ್ಯರ ಸಭೆಯನ್ನು ನೆಹರೂರವರು ಸೇರಿಸಿದ್ದು, ಈ ಅಧಿವೇಶನದಲ್ಲೇ ವಿಧೇಯಕವು ಕೊನೆಯದಾಗಿ ಮಂಜೂರು ಮಾಡಲ್ಪಡುವುದೆಂದು ಹೇಳಲಾಗುತ್ತದೆ.

ಪಾದೆಬೆಟ್ಟು—ಸ್ಥಳೀಯ ಎಲಿಮೆಂಟರಿ ಶಾಲೆಯಲ್ಲಿ ತಾ. 17ರಲ್ಲು ಮಕ್ಕಳ ಹೆತ್ತವರ ಕೂಟವು ಶ್ರೀ ಕೆ. ಕೃಷ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ವೈ. ರಾಜು ಸೆಟ್ಟರ ಭಾಷಣವಾಯಿತು.

ಪ್ರಕಟಣೆ

ಉಡ್ಪಿತಾಲೂಕು ವಾರಂಬಳ್ಳಿ ಗ್ರಾಮದ ಬಸ್ಯಾಂವಾಲ್ಮೇದರ ಮಗಗಂದಿರು ವಿಲಿಯಾಂ ಡಾಲ್ಮೇದ ಮತ್ತುಗ್ರೆಗೋರಿ ಡಾಲ್ಮೇದ ನಾವಿಬ್ಬರು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವದೇನೆಂದರೆ. ನಮ್ಮತಂದೆ ಬಸ್ಯಾಂ ಡಾಲ್ಮೇದರು ವೃದ್ಧಾಪ್ಯದ ದೆಸೆಯಿಂದ ಬುದ್ಧಿ ಸ್ವಾಸ್ಥ್ಯವಿಲ್ಲದವರಾಗಿರುವುದರಿಂದ ಕೆಲವರ ದುಭೋರ್ಧನೆಗೆ ಒಳಪಟ್ಟುತನ್ನಹೆಸರಿನಲ್ಲಿರುವ ಸ್ಥಿರಚರ ಸೊತ್ತು ಮನೆ ಮತ್ತು ಪಡುಬಿದ್ರೆಯಲ್ಲಿರುವ ತಾವ್ರುದ ಅಂಗಡಿಯನ್ನು ಕೂಡಾ ಪರಾಧೀನ ಮಾಡುತ್ತಾರೆ ಎಂಬವರ್ತಮಾನ ಕೇಳಿರುತ್ತೇವೆ. ಹಾಗೆಮಾಡಿದರೆ ಅದು ಸಿಂಧು ಆಗತಕ್ಕದಲ್ಲ; ನಮ್ಮ ಕುಟುಂಬಕ್ಕೆ ಈ ವರೆಗೆ ಸಾಲ ಇರುವುದಿಲ್ಲ, ಎಂಬದಾಗಿ ಜಾಹೀರು ಮಾಡಿಕೊಳ್ಳುತ್ತೇವೆ.

ಗ್ರೆಗೋರಿ ಡಾಲ್ಮೇದ.
ವಿಲಿಯಾಂ ಡಾಲ್ಮೇದ.

ತಾ. 21-9-54 ಬ್ರಹ್ಮಾವರ.

WANTED a H. E. trained lady teacher and a Sec. grade trained teacher to work in Sri Kunjar Girija H. E. School, Kukal. The posts are temporary The candidates must be prepared to live in the school zone. Apply to the manager before 30—9—'54. Copy of the application to be sent to the Dy. Ins. Udipi, South Range.

MANAGER.

Kunjargiri, 14-9-54.



(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ- ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ, ಋತುಶೂಲೆ ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ- ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿನೋವು, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವುದು ಇವುಗಳನ್ನೆಲ್ಲ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇದಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರೆಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಮಂಗಳೂರು

ಭಗಿನೀ ಸಮಾಜದ ಸಭೆಯು— ತಾ. 11ರಲ್ಲು ಶ್ರೀಮತಿ ಎಮ್. ಶಾಂತೇರಿ ಪ್ರಭುಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಮತಿ ಎಮ್. ಎಸ್. ಲೀಲಾ ಬಾಯಿಯವರು ಅಖಿಲ ಭಾರತ ಮಹಿಳಾ ಪರಿಷತ್ತಿನ ವಿಷಯ ಪಸ್ತಿತ್ತಿ ಮಾತನಾಡುತ್ತಾ, ಹೆಂಗಸರ, ತಾಯ್ ಭಗಿನಿಯರ ಸಂಕಷ್ಟ ನಿವಾರಣೆಯಲ್ಲಿ ನಿರತರಾಗಬೇಕೆಂದು ಅಪೇಕ್ಷಿಸಿದರು. ಹಿಂದೂ ವಿವಾಹ ಮತ್ತು ವಿವಾಹ ವಿಚ್ಛೇದನ ಮಸೂದೆಗಳನ್ನೂ ವಾರೀಸು ಹಕ್ಕಿನ ಮಸೂದೆಯನ್ನೂ ಆದಷ್ಟು ಬೇಗನೆ ಕಾನೂನಾಗಿ ಮಾಡಬೇಕೆಂದು ಕೇಳಿಕೊಳ್ಳುವ ನಿರ್ಣಯವಾಯಿತು. ಅಧ್ಯಕ್ಷಿಣಿಯರ ಮಾತುಗಳಾದ ನಂತರ ಶ್ರೀಮತಿ ವತ್ಸಲಾ ದೇಹಿಯಿಂದ ಸಂಗೀತ ಕಾರ್ಯಕ್ರಮ ನಡೆಯಿತು. ಶ್ರೀಮತಿ ಲೀಲಾ ಬಾಯಿ ಬಾಳಿಗರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 20./1951

ಡಾಕ್ಟರ್ ಪಿ ರಾಧಾಕೃಷ್ಣ ರಾವ್. ಇವರ ಜನರಲ್ ಪವರ್ ಆಫ್ ಎಟೋರ್ನಿ ಹೋಲ್ಡರ್ ಕಲ್ಯಾಡಿ ರಾಮ ರಾವ್. ವಾದಿ.

ಮತ್ತು

ರೈಮಂಡ್ ಮಾರ್ಟಿಸ್. ಸಿಕಾಲೋಸ್ ಮಾರ್ಟಿಸರ ಮಗ. ಉಡುಪಿ ತಾಲ್ಲೂಕ ಕೊಡವೂರು ಗ್ರಾಮದ ಮಲ್ಪೆ. ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿರೀಗೆ.

ವಾದಿರ ಪ್ರತ ತಂದೆಗೆ ಪ್ರತಿವಾದಿಯು ತಾ. 13—4—1951ರಲ್ಲಿ ಬರ್ಸಿ ಕೊಟ್ಟಿರುವ ಚಾಲಗೇಣಿ ಎದ್ರು ನುಡಿಗೆ ಕಾರಣದಿಂದ ಆಸ್ತಿಗಳ ಸ್ವಾಧೀನತೆಗೂ ನಿಜಯ ಸಂಬಂಧ ಗೇಣಿ ವ ಮುಟ್ಟುವಳ್ಳಿ ವಸ್ತೈರಿಗೂ ವಾದಿಯು ಮಾಡಿರುವ ಈ ವಾದೆಯು ತಾರೀಕು 11—10—1954ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಇಟ್ಟಿರುತ್ತದೆ. ಪ್ರತಿವಾದಿಯು ಸ್ವತಹಾ ವ ವಕೀಲರ ಮುಖಾಂತ್ರ ಪೇಲ್ಯಾಸ್ಪದ ಕೋರ್ಟಿನಲ್ಲಿ ಸದ್ರಿ ತಾರೀಕು 11—10—1954ನೇ ದಿನ್ನ ಬೆಳಿಗ್ಗೆ ಹತ್ತು ಗಂಟೆಗೆ ಹಾಜರಾಗಿ ಉತ್ತರಿಸಲಿಕ್ಕೆ ತಪ್ಪಿದ್ರೆ ಈ ವಾದೆಯನ್ನು ಸದ್ರಿಯವರ ಗೈರು ಹಾಜರಿಯಲ್ಲಿ ತೀರ್ಮಾನಿಸಲಾಗುವದು.

V. R. Kidyur.
Advocate for Plaintiff.

ಉಡುಪಿ, ತಾ. 16—9—'54.

ಸೇಮಕ— ಮಂಗಳೂರ, ಸರಕಾರಿ ಕಾಲೇಜಿನ ಕನ್ನಡ ಲ್ಯಕ್ಚರರಾಗಿದ್ದ ಶ್ರೀ ಎಮ್. ನಾರಾಯಣ ಪೂಜಾರಿಯವರು ಮದ್ರಾಸಿನ ಪ್ರೆಸಿಡೆನ್ಸಿ ಕಾಲೇಜಿನ ಕನ್ನಡ ಅಸಿಸ್ಟೆಂಟ್ ಆಗಿ ಸೇರುವ ಹೊಂದಿರುವರು.

ಕೆರಾವಳಿ ಬೆಳಗು— ಬೊಂಬಾಯಿಯಿಂದ ಮಂಗಳೂರಿಗೆ ಬಂದು, ಪ್ರಾರಂಭಿಸಿದ ಪ್ರಸಾರಿಕದ ಕರಾವಳಿ ಬಳಗ. ಇನ್ನು ಮುಂದೆ ಗೋಕರ್ಣದಲ್ಲಿ ತಂಗುವುದಿಲ್ಲವೆನ್ನಲಾಗಿದೆ.

ರಜತಮಹೋತ್ಸವ ಸಮಾರಂಭ— ಶ್ರೀ ನಾರಾಯಣ ಗುರುಗಳ ರಜತ ಮಹೋತ್ಸವವು ತಾ 12ರಲ್ಲಿ ಸ್ಥಳೀಯ ಗೋಕರ್ಣನಾಥ ದೇವಾಲಯದಲ್ಲಿ ವಿಜೃಂಭಣೆಯಾಗಿ ಜರಗಿತು. ಶ್ರೀ ಎಮ್. ಎಸ್. ಸುವರ್ಣರ ಮನೆಯಿಂದ ಗುರುಗಳ ಭಾವಚಿತ್ರವನ್ನು ಮೆರವಣಿಗೆಯಿಂದ ದೇವಸ್ಥಾನಕ್ಕೆ ತರಲಾಯಿತು. ಡ. ಕ. ಜಿಲ್ಲಾ ಸಂಘದಲ್ಲಿ ಜರಗಿದ ಉತ್ಸವದ ಅಧ್ಯಕ್ಷತೆಯನ್ನು ಮುನಿಸಿಪಲ್ ಕಮಿಶನರ್ ಶ್ರೀ ಎ. ಕೆ. ರಾಘವನ್, ಅವರು ವಹಿಸಿದ್ದರು. ಪ್ರಿನ್ಸಿಯೂನೈಟೆಡ್ ಕ್ಲಬ್ಬಿನ ನೇತೃತ್ವದಲ್ಲಿ ನಡೆದ ಸಮಾರಂಭಕ್ಕೆ ಶ್ರೀ ಎಮ್. ವಿಶ್ವನಾಥ ರಾಯರು ಅಧ್ಯಕ್ಷರಾಗಿದ್ದರು.

ನೆರೆ ಸಹಾಯ ನಿಧಿ ಸಂಗ್ರಹ— ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಮಹಾಸಭೆಯು ತಾ. 14ರಲ್ಲು ಶ್ರೀ ಬಿ. ಆರ್. ಕರ್ಕೇರರ ಅಧ್ಯಕ್ಷತೆಯಲ್ಲಿ ಜರಗಿ ಕೆಳಗಿನ ನಿರ್ಣಯವನ್ನು ಮಂಜೂರು ಮಾಡಿತು. 'ಉತ್ತರ ಭಾರತದಲ್ಲಿ ಮಹಾ ಪೂರದಿಂದಾಗಿ ಕಷ್ಟ ನಷ್ಟಕ್ಕೀಡಾದ ಲಕ್ಷಾಂತರ ಜನತೆಯ ಬಗ್ಗೆ ಈ ಹಾರ್ದಿಕ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ. ಅಸ್ಸಾಮ್, ಬಿಹಾರ್, ಪಶ್ಚಿಮ ಬಂಗಾಳ ಮೊದಲಾದ ಕಡೆಗಳಲ್ಲಿನ ಜನತೆಗೆ ಎಲ್ಲಾ ರೀತಿಯ ಸಹಾಯವನ್ನು ಕಳುಹಿಸಿಕೊಡಬೇಕಾಗಿ ಈ ಸಭೆಯು ಕೇಳಿಕೊಳ್ಳುತ್ತದೆ. ಹೊಸ ಮತ್ತು ಹಳೆ ಬಟ್ಟೆಗಳು, ಹಣಕಾಸು, ಆಹಾರ ವಸ್ತುಗಳನ್ನು ಕಾಂಗ್ರೆಸ್ ಕಮಿಟಿಯಿಂದ ಅಧಿಕಾರ ಹೊಂದಿದ ಸ್ವಯಂ ಸೇವಕರೊಡನೆಯಾಗಲೀ 'ಜನರಲ್ ಕಾರ್ಯದರ್ಶಿ, ಮಂಗಳೂರು ಸರ್ಕಲ್ ಕಾಂಗ್ರೆಸ್, ಕಮಿಟಿ, ಬಾವುಟಗುಡ್ಡೆ, ಮಂಗಳೂರು—ಈ ವಿಳಾಸಕ್ಕೆ ಕಳುಹಿಸಬೇಕಾಗಿ ಕಾರ್ಯದರ್ಶಿಯರ ವಿನಂತಿಯಿದೆ.

ನಾಗರಿಕ ಸಂಘದ ಸಭೆಯು— ತಾ. 12ರಲ್ಲು ಕದ್ರಿ ವಿದ್ಯಾಬೋಧಿನಿ ಶಾಲೆಯಲ್ಲಿ ಶ್ರೀ ವಿ. ಸಿ. ರಾಮಿಸರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಆರ್. ಆಚಾರ್, ಕ್ರಿಸ್ಟನ್ ಅಲೆನ್ಸ್ ಮತ್ತು ಬಂಟ ಕ್ಕಿಗಳು ಮಾತನಾಡುತ್ತ ತೆರಿಗೆ ಜರದ ತಿದ್ದುಪಡಿ ಅತ್ಯವಶ್ಯಕವೆಂದು, ತೆರಿಗೆ ಹೊರಿಸುವಲ್ಲಿ ಒಂದು ಕ್ರಮವನ್ನು ಅನುಸರಿಸಿಲ್ಲ, ಬಿಡದೆ ಹೋದ ಮನೆಗಳಿಗೂ ತೆರಿಗೆ ಹಾಕಲಾಗಿದುದು ಅಶ್ಚರ್ಯಕರವಾದ ಒಂದು ಹೇಳಿದರು. ಶ್ರೀ ಕೆ. ಎಸ್. ಆಚಾರರು ಮಾತನಾಡುತ್ತಾ ನಗರ ಸಭೆಯು ತೆರಿಗೆ ತಿದ್ದುಪಡಿಯ ಕುರಿತಾದ ತನ್ನ ಅಭಿಪ್ರಾಯದ ನಿರ್ಣಯಗಳನ್ನು ಸರಕಾರಕ್ಕೆ ಕಳುಹಿಸುವುದೆ ಎಂದೂ ತೆರಿಗೆದಾರರಿಗೆ ಅನ್ಯಾಯವಾಗದಂತೆ ನಗರ ಸಭೆಯು ಪ್ರಯತ್ನಿಸುತ್ತಿದೆ ಎಂದೂ ಸೂಚಿಸಿದರು. ಸರಕಾರದವರು ನಿಶ್ಚಯ ಮಾಡದೆ ಹೊಸ ತೆರಿಗೆ ಪುನರಾವರ್ತನೆಯನ್ನು ರದ್ದುಗೊಳಿಸಬೇಕೆಂದೂ ಪುನರಾವರ್ತನೆಗನುಸಾರವಾಗಿ ಮಾಡಿದ ಆಜ್ಞೆಯನ್ನು ಅನಾದರಿಸಿ, ಇದಕ್ಕಾಗಿಯೂ ಸರಕಾರವನ್ನು ಕೇಳಿಕೊಳ್ಳುವ ಗೊತ್ತುವಳಿಯಾಯಿತು.

ಪ್ರಬಂಧ ಸ್ಪರ್ಧೆ

ಅಭ್ಯಾಸಪೂರ್ಣ ಲೇಖಕರಿಗೆ ಸುಸಂದರ್ಭ

ಪ್ರಬಂಧ ವಿಷಯ: "ಕರ್ನಾಟಕ (ಸಮಗ್ರ) ವ್ಯಾಪಾರೋದ್ಯಮಗಳ ಬೆಳವಣಿಗೆ ಮತ್ತು ಆರ್ಥಿಕ ಉನ್ನತಿ". ಲೇಖಕರು ಕರ್ನಾಟಕದ ವ್ಯಾಪಾರ (Trade) ಉದ್ಯಮ (Commerce) ಹಣಕಾಸು (Finance) ಮತ್ತು ಸಂಪರ್ಕ ಸಾಧನೆ (Communications) ವಿಷಯವನ್ನೊಳಗೊಂಡು ಇಡೀ ಚಿತ್ರವನ್ನು ಕೊಡಬಹುದು. ಅಥವಾ ನಾಲ್ಕರಲ್ಲಿ ಒಂದು ವಿಷಯವನ್ನೇ ತೆಗೆದು ಕೊಂಡು ವಿವರವಾಗಿ ಬರೆದು ಕಳಿಸಬಹುದು. ತಮ್ಮ ಪ್ರಬಂಧವು ಅಧಿಕೃತ ಅಂಕಿ ಸಂಖ್ಯೆಗಳಿಂದ ಪುಷ್ಟೀಕರಿಸಲ್ಪಟ್ಟಿರಬೇಕು. ಪ್ರಬಂಧವು ಸ್ವಂತ ಕೃತಿಯಾಗಿರಬೇಕು. ಪ್ರಬಂಧವು ೪೦೦೦ ೫೦೦೦ ಶಬ್ದಗಳನ್ನು ಮೀರಬಾರದು. ಅಂದರೆ ಸಾಧಾರಣವಾಗಿ ಪುಲ್ಸ್ಕೇಪ ಕಾಗದದ ಅರ್ಧದಲ್ಲಿ ಒಂದೇ ಮಗ್ಗುಲಲ್ಲಿ ಬರೆದ ಸುಮಾರು ೨೦ ಪುಟಗಳನ್ನು ಮೀರಬಾರದು.

ಬಹುಮಾನಗಳ ಮೊತ್ತ: ಒಟ್ಟು ರೂ. ೧೦೦; ಅವರಲ್ಲಿ ನಾಲ್ಕು ವಿಭಾಗ ಮಾಡಿ ಪ್ರತಿ ರೂಪಾಯಿಯ ನಾಲ್ಕು ಸಮಾನ ಬಹುಮಾನಗಳನ್ನು ಅಲ್ಲದೆ ಕೆಲವು ಪ್ರೋತ್ಸಾಹಕರ ಬಹುಮಾನಗಳನ್ನು ಕೊಡಲಾಗುವುದು.

ಸ್ಪರ್ಧೆಯ ನಿಯಮ: ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಎಲ್ಲರಿಗೂ ಸಮಾನಾವಕಾಶವಿದೆ. ಸ್ಪರ್ಧಾಳುಗಳು ಒಂದು ರೂಪಾಯಿ ಪ್ರವೇಶ ಧನವನ್ನು ಕಳಿಸಬೇಕು. ಹೆಚ್ಚಿಗೆ ಪ್ರಬಂಧಗಳನ್ನು ಕಳಿಸಬಯಸುವರರು ಪ್ರತಿಯೊಂದಕ್ಕೆ ಒಂದು ರೂ. ಹೆಚ್ಚಿಗೆ ಕಳಿಸಬೇಕು. ಪ್ರವೇಶ ಧನವನ್ನು ಕಳಿಸಲು ಪತ್ರಿಕೆಯವರು ಆಯಾ ಊರ ಇದ್ದರು ಪ್ರತಿಷ್ಠಿತ ವ್ಯಕ್ತಿಗಳಿಂದ ಬರವಣಿಗೆ ಬಗ್ಗೆ ರಶೀದಿ ಕಳಿಸಬೇಕು. ಪ್ರಬಂಧಗಳ ಪ್ರಕಟಣ ಸ್ವಾಮ್ಯವನ್ನು 'ಕನ್ನಡಿಗ' ವಾರ ಪತ್ರಿಕೆಯು ಸಂಪಾದಕರು ತಮ್ಮ ಕಡೆಗೆ ಇಟ್ಟುಕೊಂಡಿರುವರು. ಪ್ರಬಂಧಗಳನ್ನು ತಿರುಗಿ ಕೊಡಲಾಗುವುದಿಲ್ಲ.

ಪ್ರಬಂಧಗಳನ್ನು ಪರೀಕ್ಷಿಸಿದ ನಂತರ ಪರೀಕ್ಷಾ ಮಂಡಳಿಯವರು ಒಪ್ಪಿಸಿದ ವರದಿಯನ್ನು ಹಾಗು ಬಹುಮಾನ ಪಡೆದ ಪ್ರಬಂಧಗಳನ್ನು 'ಕನ್ನಡಿಗ' ಪತ್ರಿಕೆಯಲ್ಲಿ ದೀಪಾವಳಿಗೆ ಪ್ರಸಿದ್ಧಿಸಲಾಗುವುದು.

ಪ್ರಬಂಧಗಳನ್ನು ೧೯೫೪ನೇ ಅಕ್ಟೋಬರ ೧೦ನೇ ದಿನಾಂಕದೊಳಗಾಗಿ ಕಳುಹಿಸಿ ಕೊಡಬೇಕು. ಅನಂತರ ಬಂದವುಗಳನ್ನು ಸ್ಪರ್ಧೆಯಲ್ಲಿ ತೆಗೆದುಕೊಳ್ಳುವುದಿಲ್ಲ. ಪ್ರವೇಶ ಧನವನ್ನು ಮನಿಯಾರ್ಡರ, ಪೋಸ್ಟಲ್ ಸರ್ಟಿಫಿಕೇಟು ಅಥವಾ ಅಂಚೆ ತಿಕೀಟುಗಳ ಮುಖಾಂತರ ಕಳಿಸಬಹುದು. ವಿಳಾಸ: ಪ್ರಬಂಧ ಸ್ಪರ್ಧಾ ವಿಭಾಗ, 'ಕನ್ನಡಿಗ' ವಾರಪತ್ರಿಕೆ, ಹುಬ್ಬಳ್ಳಿ.

ಚಿತ್ರಕೋಟ್ ಆಸ್ತಮ ಔಷಧಿ

(ರಿಜಿಸ್ಟರ್ಡ್ ಮತ್ತು ಶುದ್ಧವಾದುದು)

ನೂರಾರುವರ್ಷಗಳ ಜಗದ್ವಿಖ್ಯಾತವಾದ ಈ ಔಷಧಿಯು ಒಂದು ಡೋಸನ್ನು ತಾ. 12.10.54ನೇ ಶಾರದಾ ಪೂರ್ಣಿಮಾ (ಹುಣ್ಣಿಮೆ) ದಿನ ಸೇವಿಸಿದರೆ ಎಂತಹ ಹಳೆ ಆಸ್ತಮವೂ ಪೂರ್ತಿ ಗುಣಹೊಂದುವುದು. ಕೂಡಲೇ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡಿರಿ.

Kr. Badri Nath Singh,
Shubh Chintak Karyalava,
Chitrakot Dist Banda U. P.

ಪ್ರಕಟಣೆ

ಉಡುಪಿ ತಾಲೂಕು ಹೆಗ್ಗುಂಜೆ ಗ್ರಾಮದ ಮಂದಾರ್ತಿ ಶ್ರೀ ದುರ್ಗಾ ಪರಮೇಶ್ವರಿ ಅಮ್ಮನವರ ಭಂಡಾರದ ದಶಾವತಾರ ಮೇಳವನ್ನು ಇದೇ 1954-1955ನೇ ಇಸವಿಯಲ್ಲಿ ನಡೆಸತಕ್ಕ ಹಕ್ಕನ್ನು ದೇವಸ್ಥಾನದ ಆಫೀಸಿನಲ್ಲಿ ಇದೇ ತಾ. 10-10-54ನೇ ದಿನ ಅಪರಾಹ್ನ ಗಂಟೆ 3ಕ್ಕೆ ಆಫೀಸಿನಿಂದ ಏಲಂ ಕರೆಯಲಾಗುವದು. ಬಾಯಸುಳ್ಳವರು ಸದ್ರಿ ಸಮಯ ಹಾಜರಾಗಿ ಏಲಂನಲ್ಲಿ ಪಡಕೊಳ್ಳಬಹುದು. ಏಲಂ ಶರ್ತವನ್ನು ಏಲಂ ಮುಂಚೆ ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಮಂದಾರ್ತಿ ದೇವಸ್ಥಾನದ ಆಫೀಸು. | (Sd) N. R. Bolar.
ತಾ. 9-9-54. | Executive officer.

ಶುದ್ಧ ಚಿನ್ನದ ನೆಕ್‌ಲೇಸ್ ತರಹೆವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT

Jeweller, Tenkapet, UDIPI, S. Kanara.

ಫೋನು ನಂಬ್ರ 66

ದಿ ಬೊಂಬೆಲೈಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10-) ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8) ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ
ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
ಬೊಂಬೆ ಲೈಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ
ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ದವತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ 5/- ಸ್ಪೆಶಲ್ ರೂ. 8/-

Mrs. P. DEVEE, F. Ds. N. J.
CALCUTTA—40

(ಸಿ. ಪಿ. ಪ್ರತ್ಯೇಕ)
ಪ್ರತಿನಿಧಿ: ಪಿಎ. ಪಿಂಟೋ, ಮಂಗಳೂರು.

ಬೋರ್ಡಿಗೆ ಚುನಾವಣೆ

(೧ನೇ ಪುಟದಿಂದ)

ಜನರಲ್ಲಿ ಗೊಂದಲವನ್ನು ಮಾಡಬಹುದು. ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಡದಿದ್ದರೆ, ಇದ್ದ ಅಧಿಕಾರಗಳನ್ನೂ ಉಪೇಕ್ಷಿಸಿ ನಡೆದರೆ, ಅವುಗಳನ್ನು ಅಸ್ತಿತ್ವದಲ್ಲಿರಿಸುವುದರಿಂದ ಲಾಭವೇನೂ ಆಗಲಾರದು. ಜಿಲ್ಲಾ ಬೋರ್ಡುಗಳಿಗೆ ಆಯ್ಕೆ ಗೊಂಡುವ ಪ್ರತಿನಿಧಿಗಳು ಈ ವಿಚಾರವನ್ನು ಆಗತ್ಯವಾಗಿ ವಿಮರ್ಶಿಸಿ, ಸೂಕ್ತಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿದರೆ ತಪ್ಪಾಗದು. ಜಿಲ್ಲಾ ಬೋರ್ಡು ಸ್ವಲ್ಪ ಮಟ್ಟಿಗಾದರೂ ಒಳ್ಳೆಯ ಕೆಲಸ ಮಾಡುತ್ತಿದ್ದರೆ, ಅದು ಶಿಕ್ಷಣ ಕ್ಷೇತ್ರದಲ್ಲಿ ಮಾತ್ರ ಎಂದು ಹೇಳಬಹುದು - ಆದರೆ ಇಲ್ಲಿ ಸಹ ಆರ್ಥಿಕ ಅಡಚಣೆಗಳ ದೆಸೆಯಿಂದಲೋ ಏನೊ, ಪ್ರಗತಿಯ ವೇಗ ನಿಧಾನವಾಗಿದೆ.

ಆರ್ಥಿಕ ಭಾರವು ವಿಪರೀತವೆನಿಸಿದರೂ ಜಿಲ್ಲಾ ಬೋರ್ಡುಗಳು ಏನಾದರೂ ಉಪಯುಕ್ತವಾದ ಕೆಲಸಗಳನ್ನು ಸಾಧಿಸಲೇ ಬೇಕೆಂಬ ಪ್ರತಿಜ್ಞೆಯನ್ನು ಕೈಗೊಳ್ಳುವುದು ಅಪೇಕ್ಷಣೀಯ .. ಹೀಗೆ ದೃಢ ಸಂಕಲ್ಪವನ್ನು ಸ್ವೀಕರಿಸಲು ಬದ್ಧರಾದವರನ್ನೆ ಜನತೆ ಚುನಾವಣೆಯಲ್ಲಿ ಬೆಂಬಲಿಸುವುದು ಕರ್ತವ್ಯ. ಸಾಧ್ಯವಾದಷ್ಟು ಮಟ್ಟಿಗೆ ಹಳ್ಳಿಗಳಲ್ಲಿ ಮಾರ್ಗಗಳ ಮೂಲಕ ಸಂಪರ್ಕ ವ್ಯವಸ್ಥೆಯನ್ನು ಅಭಿವೃದ್ಧಿಗೊಳಿಸುವುದು, ಆರೋಗ್ಯ ರಕ್ಷಣಾ ಕೇಂದ್ರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ವಿಸ್ತರಿಸುವುದು, ಸಾರ್ವತ್ರಿಕ ಶಿಕ್ಷಣವನ್ನು ಪ್ರೋತ್ಸಾಹಿಸುವುದಕ್ಕೋಸ್ಕರ ಹಳ್ಳಿಯು ಎಷ್ಟೇ ಸಣ್ಣದಾಗಿದ್ದರೂ ಅಲ್ಲಿ ಪ್ರಾಥಮಿಕ ಶಾಲೆ ಇಲ್ಲದಿದ್ದರೆ, ಅದನ್ನು ತೆರೆಯುವುದು ಮುಂತಾದ ವಿಧಾಯಕ ಕಾರ್ಯಗಳನ್ನು ಚುನಾಯಿತರಾಗಿ ಅಧಿಕಾರಕ್ಕೆ ಬರುವ ಹುರಿಯಾಳುಗಳು ನೆರವೇರಿಸುವ ಭರವಸೆಕೊಡಬೇಕು; ಅಲ್ಲದೆ, ಅದಕ್ಕಾಗಿ ಮನಃಪೂರ್ವಕ ಕೆಲಸವನ್ನೂ ಮಾಡಬೇಕು. ಇದೇ ಮತದಾನ ಮಾಡುವ ನಾಗರಿಕರ ಅಪೇಕ್ಷೆ.

—ಕಾರ್ತಿಕೇಯ.

ಸ್ವೀಕಾರ—ವಿಮರ್ಶೆ

ಶಂಕರವಿಜಯ—

ಸಂಪಾದಕರು ಹಾಗು ಪ್ರಕಾಶಕರು: ಶ್ರೀ ಟಿ. ಚಂದ್ರಶೇಖರನ್, ಸರಕಾರದ ಪುರಾತನ ಹಸ್ತಪ್ರತಿಗಳ ಭಂಡಾರ, ಮದ್ರಾಸು. ಬೆಲೆ: ರೂ. ೯—೨—೦.

ದಕ್ಷಿಣ ಭಾರತದಲ್ಲಿ ಹುಟ್ಟಿ ಆಸೇತುಹಿಮಾಚಲಪರ್ಯಂತವಾದ ಕೀರ್ತಿಯನ್ನು ಸಂಪಾದಿಸಿದ ಆಚಾರ್ಯತ್ರಯರಲ್ಲಿ ಶ್ರೀಮಚ್ಛಂಕರಾಚಾರ್ಯರೇ ಮೊದಲಿಗರು. ಕೇರಳದ ಕಾಲಡಿ ಎಂಬ ಊರಿನಲ್ಲಿ ಹುಟ್ಟಿದ ಇವರು ಬಾಲ್ಯದಲ್ಲಿಯೇ ಸನ್ಯಾಸ ದೀಕ್ಷೆಯನ್ನು ಕೈಗೊಂಡು, ಭಾರತೀಯ ತತ್ವಶಾಸ್ತ್ರದ ಗಹನವಾದ ಅಧ್ಯಯನವನ್ನು ನಡೆಸಿ, ಪ್ರಸ್ಥಾನತ್ರಯಗಳೇ ಮುಂತಾದ ವೇದಾಂತ ಗ್ರಂಥಗಳಿಗೆ ಪ್ರಖರ ಪಾಂಡಿತ್ಯದಿಂದ ಕೂಡಿದ ಹಾಗು ಉದ್ಬೋಧಕವಾದ ಭಾಷ್ಯಗಳನ್ನು ಬರೆದರು; ಘನಪಂಡಿತರಾದ ತಾರ್ಕಿಕರನ್ನೂ ಮಹಾ ಮಹಾ ಮೀಮಾಂಸಕರನ್ನೂ ಸೋಲಿಸಿದರು; ಭಿನ್ನ ಭಿನ್ನ ಮತಸಂಪ್ರದಾಯಗಳಲ್ಲಿ ಸಮನ್ವಯವನ್ನುಂಟು ಮಾಡಿ, ಹಿಂದೂ ಧರ್ಮದ ಪುನರುತ್ಥಾನಕ್ಕೆ ಪ್ರಯತ್ನಿಸಿದರು. ಆವರು ಮೂವತ್ತೆರಡು ವರ್ಷಗಳಷ್ಟು ಅಲ್ಪಕಾಲ ಬಾಳಿದರೂ ಚಿರಂತನವಾದ ಅಧ್ಯಾತ್ಮ ಜ್ಯೋತಿಯನ್ನು ಹೊತ್ತಿಸಿ ಹೋದರು. ಭಗವಾನ್ ಶಂಕರಾಚಾರ್ಯರ ಜೀವನದಲ್ಲಿ ಕೌತುಕವುಂಟು; ಚಾತುರ್ಯವುಂಟು; ಧರ್ಮ ಮೂಲವಾದ ವಿಚಾರವುಂಟು; ಆಧ್ಯಾತ್ಮಿಕ ಜಿಜ್ಞಾಸೆಯುಂಟು. ವಿಶುದ್ಧ ಭಾರತೀಯ ಮನೋಭಾವನೇ ಆಚಾರ್ಯರ ಜೀವನದಲ್ಲಿ ಪ್ರತಿಫಲಿಸುತ್ತಿತ್ತೆಂದರೆ ತಪ್ಪಾಗದು. ಆದುದರಿಂದ ಅವರ ಜೀವನ ದರ್ಶನ ಮಾಡಿಸುವ ಹಲವಾರು ಅನೇಕ ಕಾವ್ಯಗಳು ರಚಿಸಲ್ಪಟ್ಟಿರುವುದು ಸಹಜವೇ ಆಗಿದೆ. ಇವುಗಳಲ್ಲಿ ಕೆಲವು ಆಧ್ಯಾತ್ಮಿಕ ವಿಚಾರಗಳಿಗೆ ಪ್ರಾಧಾನ್ಯ ಕೊಟ್ಟಿದ್ದರೆ ಮತ್ತೆ ಕೆಲವು ಅವರ ಜೀವನದ ಘಟನೆಗಳಿಗೆ ಮಹತ್ವ ಕೊಟ್ಟಂತೆ ತೋರುತ್ತದೆ. ಪ್ರಸ್ತುತ ಸಂಸ್ಕೃತ ಗ್ರಂಥವನ್ನು ವ್ಯಾಸಾಚಲನೆಂಬಾತನು ಬರೆದನು. ಹನ್ನೆರಡು ಸರ್ಗಗಳಿಂದ ಕೂಡಿದ ಈ ಕಾವ್ಯವು ಶಂಕರಾಚಾರ್ಯರ ತಂದೆ ಶಿವಗುರುವಿನ ಗುರುಕುಲವಾಸದ ದಿನಗಳಿಂದ ತೊಡಗಿ ಶ್ರೀಮಚ್ಛಂಕರ ಭಗವತ್ಪಾದರು ಸರ್ವಜ್ಞ ಪೀಠಾರೋಹಣ ಗೈಯುವಲ್ಲಿನ ಘಟನೆಗಳನ್ನು ಲಲಿತವಾದ ಶೈಲಿಯಲ್ಲಿ ಸುಂದರವಾಗಿ ನಿರೂಪಿಸುತ್ತದೆ. ಕವಿಯು ಧಾರ್ಮಿಕ ವಿಚಾರಗಳನ್ನು ವಿವೇಚಿಸಿದಷ್ಟೇ ಸಮರ್ಥ ರೀತಿಯಲ್ಲಿ ನಿಸರ್ಗವರ್ಣನೆಯೇ ಮುಂತಾದುವನ್ನೂ ಮಾಡಿರುವುದು ಅವನ ಕೌಶಲ್ಯದ ದ್ಯೋತಕ. ಸಂಪಾದಕರು ಆರು ಹಸ್ತಪ್ರತಿಗಳ ಸಹಾಯದಿಂದ ಈ ಆವೃತ್ತಿಯನ್ನು ಪ್ರಕಟಿಸಿದ್ದಾರೆ. ಲಭ್ಯವಿರುವ ಪಾಠಾಂತರಗಳನ್ನು ಸೂಚಿಸಿರುವರಲ್ಲದೆ ಕೊನೆಯಲ್ಲಿ ಶ್ಲೋಕಾನುಕ್ರಮಣಿಕೆಯನ್ನೂ ಕೊಟ್ಟಿದ್ದಾರೆ. ಇದು ಗ್ರಂಥಾಭ್ಯಾಸಿಗಳಿಗೆ ಉಪಯುಕ್ತವೆನಿಸದಿರದು. ಆದರೆ ಗ್ರಂಥಕರ್ತನ ವಿಷಯದಲ್ಲಿ ಅವರು ಯಾವದೇ ಸಂಶೋಧನಾತ್ಮಕ ವಿವರಗಳನ್ನು ಕೊಟ್ಟಿಲ್ಲ; ಶ್ರೀ ಅತ್ರೇಯ ಕೃಷ್ಣ ಶಾಸ್ತ್ರಿಗಳ ತಮಿಳು ಗ್ರಂಥವಾದ "ಶಂಕರಗುರು ಪರಂಪರೆ"ಯಲ್ಲಿ ಉಲ್ಲೇಖಿಸಿದ ಅಂಶವನ್ನು ಉದ್ಧರಿಸುತ್ತಾ ವ್ಯಾಸಾಚಲನ ಕಾಲ ಕ್ರಿ. ಶ. ೧೫೦೭ ಆಗಿರಬಹುದೆಂದೂ ಅವನು ಕಾಂಚಿಯಲ್ಲಿ ಹುಟ್ಟಿ ಕಾಮಕೋಟಿ ಪೀಠದ ಮುಖ್ಯಸ್ಥನಾದನೆಂದೂ ಹೇಳುತ್ತಾರೆ. ಆದರೆ ೧೪ನೇ ಶತಮಾನದಲ್ಲಿದ್ದ ಮಾಧವಾಚಾರ್ಯರು ವ್ಯಾಸಾಚಲನ ಗ್ರಂಥದ ಪ್ರಶಂಸೆ ಮಾಡಿರುವುದನ್ನೂ ಕೆಲವು ಶ್ಲೋಕಗಳನ್ನು ತಮ್ಮ ಕೃತಿಯಲ್ಲಿ ಇದ್ದುದಿದ್ದಂತೆ ಇಳಿಸಿರುವುದನ್ನೂ ನೋಡಿದರೆ ಈ ಕಾಲ ನಿರ್ಣಯವು ಸರಿಯೆಂದು ಕಾಣುವುದಿಲ್ಲ. ಇದೇನೇ ಇರಲಿ—ಬಹಳ ಸುಂದರವಾದ ಈ ಕಾವ್ಯ ಗ್ರಂಥವನ್ನು ಜತನದಿಂದ ಸಂಶೋಧಿಸಿ ಪ್ರಕಟಿಸಿದ ಸಾಹಸವನ್ನು ಮನಸಾರೆ ಕೊಂಡಾಡುತ್ತೇವೆ; ಮತ್ತು ಜನತೆಯಿಂದ ಯೋಗ್ಯ ಸ್ವಾಗತ ದೊರೆಯಲೆಂದೂ ಹಾರೈಸುತ್ತೇವೆ.

ಮೃಗಜಲ—

ಅನುವಾದಕರು: ಪೆರ್ಣಾಜೆ ಸದಾಶಿವ ಭಟ್ಟ. ಪ್ರಕಾಶಕರು: ಪ್ರತಿಭಾ ಗ್ರಂಥಮಾಲೆ, ಧಾರವಾಡ. ಬೆಲೆ: ರೂ. ೧—೮—೦.

ಕಲಾವಿದನ ಜೀವನವನ್ನು ಕುರಿತಾದ ಈ ಕಾದಂಬರಿಯು ಮಹತ್ವದ ಸಮಸ್ಯೆಯೊಂದನ್ನು ವಿವೇಚಿಸುತ್ತದೆ: ಅದೆಂದರೆ, ಸ್ತ್ರೀ ಮತ್ತು ಕಲೆ—ಇವೆರಡರ ಸಫಲ ಸಮನ್ವಯ ಸಾಧ್ಯವಾದೀತೆ? ಅಶೋಕನು ಪ್ರತಿಭಾನ್ವಿತನಾದ ಚಿತ್ರಕಾರನೆಂಬುದರಲ್ಲಿ ಸಂದೇಹವಿಲ್ಲ: ಅವನ ಜೀವನದಲ್ಲಿ ಸ್ವೈರಿಣಿಗಿಂತ ಉಚ್ಚ ಚಾರಿತ್ರ್ಯವನ್ನು ಹೊಂದಿರದ ಮಾಯಾದೇವಿ ಪ್ರವೇಶಿಸ ಬಯಸುತ್ತಾಳೆ; ಇವಳ ಆಕರ್ಷಣೆಗೆ ಬೀಳದೆ ಶತಪುತ್ರ ಪರ್ವತ ಪ್ರದೇಶಕ್ಕೆ ಅಶೋಕನು ಹೋದಾಗ ಅಲ್ಲಿ ಮರಿಯಮಳ ಸಾತ್ವಿಕ ಪ್ರೇಮಕ್ಕೆ ಪಾತ್ರನಾಗುತ್ತಾನೆ; ಆದರೆ ವಿವಾಹ ಬಂಧನದಲ್ಲಿ ಆತ್ಮೀಯತೆಯನ್ನು ಚಿರಸ್ಥಾಯಿಯಾಗಿಸುವ ವಿಚಾರ ಅವನಿಗೆ ಬರುವುದಿಲ್ಲ: ಇದು ವಿಚಿತ್ರವೆನಿಸುತ್ತದೆ. ರೋಣಾವಳದಲ್ಲಿ ಶವವೀಥರೆಯಾದ ಅರುಣೆಯ ಕೈಹಿಡಿಯುವಾಗ ಅವನಿಗೆ ಮರಿಯಮಳ ವಿಷಯದಲ್ಲಿ ತಾನು ಅಪರಾಧಿಯಾಗಿರುವೆನೆಂಬ ಭಾವನೆ ಬರುವುದಿಲ್ಲ: ಇದೂ ಅಸಹಜವೆನಿಸುತ್ತದೆ. ಅರುಣೆಯೊಡನೆ ಹೂಡಿದ ದಾಂಪತ್ಯ ಮುರಿದುಹೋದರಲ್ಲಿ ಆಶ್ಚರ್ಯವಿಲ್ಲವಾದರೂ ಮಾಯಾದೇವಿಯ ಹೃದಯ ಪರಿವರ್ತನೆಯ ರಹಸ್ಯ ಅರ್ಥವಾಗುವುದಿಲ್ಲ. ಮರಿ ಅಶೋಕನಿಗೆ ಜನ್ಮ ಕೊಟ್ಟ ಮರಿಯಮಳು ತನ್ನ ಪ್ರಿಯನ ಸಮಾಗಮ ಲಾಭವನ್ನು ಪಡೆದಾಗ ಸಮಗುಂಟಾದ ಸಂತೋಷ ಅವಳ ಆಕಸ್ಮಿಕ ಅವಸಾನದ ದೆಸೆಯಿಂದ ಮಾಯವಾಗುತ್ತದೆ. ಸಂಗಾತಿಯ ಆಯ್ಕೆಯಲ್ಲಿ ತಪ್ಪಿ ಬಿದ್ದುದಕ್ಕೆ ಕಲಾವಿದನು ಪಡುವ ಪಶ್ಚಾತ್ತಾಪದಲ್ಲಿಯೇ ಸಮಸ್ಯೆಯ ಪರಿಹಾರವನ್ನು ಗುರುತಿಸಬೇಕೆಂದು ಕಾಣುತ್ತದೆ. ಇದು ಸಮಗೆ ಒಪ್ಪಿಗೆಯಾಗದಿರಬಹುದು; ಹಾಗೆಯೇ ಮೇಲೆ ಸೂಚಿಸಿದ ಕೆಲವು ದೋಷಗಳೂ ಕಾದಂಬರಿಯಲ್ಲಿರಬಹುದು—ಆದರೆ ಇಷ್ಟರಿಂದಲೇ ಕೃತಿಯನ್ನು ಉಪೇಕ್ಷಿಸುವಂತಿಲ್ಲ. ಪಾತ್ರ ಸೃಷ್ಟಿಯಲ್ಲಿ ತಪ್ಪಿದಂತೆ ಕಂಡ ಕೈ ಸನ್ನಿವೇಶ ಚಿತ್ರಣದ ವಿಷಯದಲ್ಲಿ ತುಂಬ ದಕ್ಷತೆಯಿಂದ ನಡೆದುಕೊಂಡಿದೆ: ಓದುಗರ ಕುತೂಹಲವನ್ನು ಕೆರಳಿಸುವಂತೆ ರೋಚಕವಾಗಿ ಬರವಣಿಗೆ ಸಾಗುತ್ತದೆ. ಪ್ರಾಸಂಗಿಕವಾಗಿ ಭಾರತೀಯ ಕಲಾ ಪರಂಪರೆಯ ಮೀಮಾಂಸೆಯೂ ಮಧ್ಯ ಪ್ರದೇಶದ ನಿಸರ್ಗ ಸೌಂದರ್ಯದ ವರ್ಣನೆಯೂ ಬರುತ್ತದೆ. ಶ್ರೀಅನಂತ ಗೋಪಾಲ ಶೇವಡೆಯವರ ಮೂಲ ಕೃತಿಗೆ ಕುಂದಿಲ್ಲದಂತೆ, ಸುಂದರವಾದ, ಗಂಭೀರವಾದ ಶೈಲಿಯಲ್ಲಿ ಶ್ರೀಸದಾಶಿವಭಟ್ಟರು ಅನುವಾದವನ್ನು ನೆರವೇರಿಸಿದ್ದಾರೆ. ಒಟ್ಟಿನಲ್ಲಿ ಎಲ್ಲ ಬಗೆಯ ಓದುಗರಿಗೂ ಮೆಚ್ಚಿಗೆಯಾಗುವ ಕಾದಂಬರಿಇದೆಂದು ಹೇಳಬಹುದು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. No. 205/1954.

ವಾದಿ. ಮುತ್ತಯ್ಯ ಸೆಟ್ಟಿ.
ಪ್ರತಿವಾದಿರು. ಮುತ್ತಕ್ಕ ಶೆಡ್ತಿ ಕೂಡಾ.
ಪ್ರತಿವಾದಿರು: 5. ನೀಲಮ್ಮ ಶೆಡ್ತಿ. 6. ಶಿವರಾಮ ಸೆಟ್ಟಿ. 7. ಗುಲಾಬಿ ಶೆಡ್ತಿ. ಬಾಗಿ ಶೆಡ್ತಿರ ಮಕ್ಕಳು. 8. ಅಂಣಪ್ಪ ಸೆಟ್ಟಿ, ಕೋರಾತಿ ಶೆಡ್ತಿರ ಮಗ. ಕುಂದಾಪುರತಾಲ್ಲೂ ನಂಬ್ರ 74ನೇ ಕುಳಂಜಿ ಗ್ರಾಮದಲ್ಲಿರುವವರು. P.O.Shankernarayana.
ಇವರಿಗೆ.

ವಾದಿಗೆ ಪ್ರತಿವಾದಿರಿಂದ ತಾರೀಕು 9-10-1952ರ ರಿಜಿಸ್ತ್ರ ಹಿಕೆ ಪಟ್ಟಿ ಪ್ರಕಾರ ವರುಷ 1ರ ತೊಳ್ಸಲು ಅಕ್ಕಿ ಮಾನಿಗೆ 38 ಸೇರು 7ರ ಪ್ರಕಾರ ಬರತಕ್ಕ ವಿಜಯ ಸಂ।ರದ ಬಾಕಿಗೆ ಮೇಲ್ಕಂಡ ದಾವಾ ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪವಿದ್ದಲ್ಲಿ ತಾರೀಕು 27-9-1954ನೇ ದಿವಸ ಹಗಲು 11 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರ ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕ ಪಕ್ಷವಾಗಿ ತಿರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟಿನ ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai.
Pleader for Plaintiff
Coondapoor. 10-9-1954.



ತಾರು: ಯುಗ] ಸ್ಥಾಪನೆ: ೧೯೪೭ [ಫೋನ: ೫೪

ಕನ್ನಡಿಗರ ಕಹಳೆ

ನವಯುಗ

ಸಂಪಾದಕರು: ಟಿ ಆರ್. ನೆಸ್ವಿ, ಬಿ. ಎಜಿ., ಎಂ. ಪಿ.

ನವನವೀನ ಸುದ್ದಿ ಪ್ರಕಟನೆ
ವರ್ತಮಾನ ಸಾರ
ಯುಕ್ತ ಸಂಪಾದಕೀಯ
ಗಂಭೀರ, ಪ್ರಬೋಧಕ ಲೇಖನಗಳು
ಇವೆಲ್ಲವೂ ಅಲ್ಲದೆ
ಜಾಹೀರಾತುದಾರರ ಸುವರ್ಣ ಸಾಧನ.
'ನವಯುಗ' ನಿಮಗಾಗಿ, ನೀವದರವರಾಗಿ.
ವಿವರಗಳಿಗೆ
ಜಾಹೀರಾತು ವ್ಯವಸ್ಥಾಪಕ,
ನವಯುಗ ಕನ್ನಡ ದಿನಪತ್ರಿಕೆ
ಹುಬ್ಬಳ್ಳಿ (ಕರ್ನಾಟಕ)

ಭಾರತದ ಅಂಚೆ ತಿಕೇಟುಗಳ ಇತಿಹಾಸ

(೨ನೇ ಪುಟದಿಂದ)

ಗಳ ಸಂಗ್ರಾಹಕರಿಗೆ ಹೆಚ್ಚಿನ ನೆರವೆಯನ್ನು ಸಲ್ಲಿಸುತ್ತಿವೆ. ಪ್ರಮುಖ ನಗರಗಳಲ್ಲಿ ಅನೇಕ ಮಂಡಳಗಳು ಕೆಲಸ ಮಾಡುತ್ತಿದ್ದು ಅಂಚೆ ತಿಕೇಟುಗಳ ಸಂಗ್ರಾಹಕರಿಗೆ ಯೋಗ್ಯ ಮಾಹಿತಿಯನ್ನೊದಗಿಸುತ್ತವೆ. ಆದರೆ ಚೊಕ್ಕ ರೀತಿಯಲ್ಲಿ ಇಲ್ಲಿಯ ಕೆಲಸ ನಡೆಯುವುದಿಲ್ಲವೆಂದೂ ಎಷ್ಟೋ ವೇಳೆ ಸಂಗ್ರಾಹಕರು ನಿರಾಶರಾಗಬೇಕಾಗುವುದೆಂದೂ ದೂರು ಕೇಳಿಬರುತ್ತದೆ. ಬೇರೆ ದೇಶಗಳಿಂದ ಅಂಚೆ ತಿಕೇಟುಗಳನ್ನು ತರಿಸಲು ಅವಕಾಶವಿಲ್ಲವೆಂಬುದೂ ಸಂಗ್ರಾಹಕರ ಆಕ್ಷೇಪಗಳಲ್ಲಿ ಒಂದಾಗಿದ್ದು ಇಂತಹ ಅಡಚಣೆಗಳನ್ನು ನಿವಾರಿಸುವುದು ಸರಕಾರದ ಕರ್ತವ್ಯ.

ಸುಮಾರು ಮೂರು ಲಕ್ಷ ರೂಪಾಯಿ ಬೆಲೆ ಬಾಳುವ ಅಂಚೆ ತಿಕೇಟುಗಳು ವಿದೇಶಗಳಿಂದ ಪ್ರತಿ ವರ್ಷ ಭಾರತಕ್ಕೆ ಬರುತ್ತವೆ. ಆದರೆ ಅತ್ಯುತ್ತಮವಾದ ಅಂಚೆ ತಿಕೇಟುಗಳ ಸಂಗ್ರಹವೊಂದರ ಬೆಲೆಯನ್ನು ಇಷ್ಟೇ ಎಂದು ಹೇಳುವಂತಿಲ್ಲ. ಇಂಥ ಸಂಗ್ರಹಗಳ ಬೆಲೆಯು ಎಂದೂ ಇಳಿದದ್ದಿಲ್ಲ. ಯುದ್ಧಕಾಲದಲ್ಲಿ ಪಾಶ್ಚಾತ್ಯ ದೇಶಗಳ ತರುಣ ತರುಣಿಯರು ಶೇಖರಿಸಿದ ಅಂಚೆ ತಿಕೇಟುಗಳೆಲ್ಲ ಕಳೆದು ಹೋದುದರಿಂದ, ಯುದ್ಧಾನಂತರ ಇಂಥ ಸಂಗ್ರಹಗಳ ಬೆಲೆಯು ತಟ್ಟನೆ ಏರಿತು. ಯುದ್ಧದ ಭೀಕರ ವಾತಾವರಣದಿಂದ ಶಾಂತಿಯ ವಿರಾಮವನ್ನು ಅನುಭವಿಸಲು ಸಿದ್ಧರಾದ ಜನರಿಗೆ ಅಂಚೆ ತಿಕೇಟುಗಳ ಸಂಗ್ರಹವು ಒಂದು ಉತ್ತಮ ಹವ್ಯಾಸವೆಂದು ತೋರಿತು. ಯುದ್ಧ ಕಾಲದಲ್ಲಿ ಅಗ್ಗದ ನೋಟುಗಳನ್ನು ಧಾರಾಳವಾಗಿ ಮುದ್ರಿಸಿದ್ದರಿಂದಲೂ ಅವುಗಳನ್ನು ನಿತ್ಯ ಜೀವನದಲ್ಲಿ ಉಪಯೋಗಕ್ಕೆ ಬೇಕಾಗುವ ಆವಶ್ಯಕ ವಸ್ತುಗಳಿಗಾಗಿ ಉಪಯೋಗಿಸಲು ಅಂಥ ಸಾಮಗ್ರಿಗಳ ಕೊರತೆ ಕಂಡು ಬಂದುದರಿಂದಲೂ ಹಣವನ್ನೆಲ್ಲ ಅಂಚೆ ತಿಕೇಟುಗಳ ಶೇಖರಣೆಗಾಗಿ ವಿನಿಯೋಗಿಸಲು ಉತ್ತೇಜನೆ ಸಿಕ್ಕಿತು. ಹೀಗಾಗಿ, ಒಂದಕ್ಕೆ ಹತ್ತರಷ್ಟು, ಹದಿನೈದರಷ್ಟು ಅಂಚೆ ತಿಕೇಟುಗಳ ಸಂಗ್ರಹದ ಬೆಲೆ ಏರಿಕೊಂಡಿತು. ಮಾರಾಟಗಾರರು ತುಂಬಾ ಲಾಭ ಸಂಪಾದಿಸಿದರು.

ಇಂದಿಗೂ ಅಂಚೆ ತಿಕೇಟುಗಳ ಸಂಗ್ರಹ ತುಂಬಾ ಲಾಭವನ್ನು ತರುತ್ತದೆ. ಏಕೆಂದರೆ ತೀರ ಹಳೆಯ ಅಂಚೆ ತಿಕೇಟುಗಳು ಸಿಗುವುದೇ ಇಲ್ಲ. ಎಷ್ಟೋ ವೇಳೆ ಪೂರೈಕೆಗಿಂತ ಬೇಡಿಕೆಯೇ ಅಧಿಕವೆನಿಸಿ, ಬೆಲೆಗಳು ಏರುತ್ತವೆ. ಭಾರತದ ಉದಾಹರಣೆಯನ್ನೆ ತೆಗೆದುಕೊಳ್ಳುವುದಾದರೆ, ೧೮೫೪ರಲ್ಲಿ ಹೊರಡಿಸಿದ ಅಂಚೆ ತಿಕೇಟುಗಳು ಹೆಚ್ಚಿನವರ ಸಂಗ್ರಹದಲ್ಲಿ ಇರಲಿಕ್ಕಿಲ್ಲ. ಸ್ವಾತಂತ್ರ್ಯ ಪ್ರಾಪ್ತಿಯ ಮೊದಲು ಭಾರತದಲ್ಲಿದ್ದ ಹೆಚ್ಚಿನ ದೇಶೀಯ ಸಂಸ್ಥಾನಗಳು ತಮ್ಮದೇ ಅಂಚೆ ತಿಕೇಟುಗಳನ್ನು ಮುದ್ರಿಸುತ್ತಿದ್ದವು—ಅವುಗಳನ್ನು ತಮ್ಮ ಸಂಗ್ರಹದಲ್ಲಿ ಪಡೆದಿರುವವರೂ ವಿರಳ. ಆ ಅಂಚೆ ತಿಕೇಟುಗಳ ಇತಿಹಾಸವೂ ಈಗ ಕತ್ತಲೆಯಲ್ಲಿ ಉಳಿದಿರುವುದು. ಸರಕಾರದವರು ಇತ್ತ ಬೆಳಕು ಚೆಲ್ಲಿದರೆ ಸಂಗ್ರಾಹಕರಿಗೆ ಆಕರ್ಷಕವೆನಿಸಿದ ಎಷ್ಟೋ ಕುತೂಹಲದಾಯಕ ಸಂಗತಿಗಳು ಹೊರಬೀಳಬಹುದು.

ಭಾರತ ಸರಕಾರದವರು ಗಮನಿಸಬೇಕಾದ ಬೇರೆ ಕೆಲವು ಮುಖ್ಯ ಸಂಗತಿಗಳೂ ಇವೆ—ಸ್ವಾತಂತ್ರ್ಯ ಪ್ರಾಪ್ತಿಯ ಸಂಭ್ರಮದ ನೆನಪಿಗಾಗಿ ಹೊಸ ಅಂಚೆ ತಿಕೇಟುಗಳು ಮೂರು—ನಾಲ್ಕು ತಿಂಗಳುಗಳಷ್ಟು ತಡವಾಗಿ ಹೊರಡಿಸಲಾದವು. ಗಣರಾಜ್ಯದ ಶುಭ ಸಂದರ್ಭದಲ್ಲಿ ಹೊರಡಿಸಿದ ಅಂಚೆ ತಿಕೇಟುಗಳು ಬೆಂಕಿ ಪೆಟ್ಟಿಗೆಗೆ ಹಚ್ಚುವ ಪಟ್ಟಿಗಳಿಗಿಂತ ಹೆಚ್ಚು ಆಕರ್ಷಕವಾಗಿರಲಿಲ್ಲ. ಇಂಥ ನ್ಯೂನಾತಿರೇಕಗಳನ್ನು ಸರಿಪಡಿಸುವುದು ಅಪೇಕ್ಷಣೀಯ. ಎಷ್ಟೋ ವೇಳೆ, ಟಪ್ಪಾಲು ಕಚೇರಿಯಲ್ಲಿ ಮೊದಲನೇ ದಿನದ ಲಕೋಟೆಗಳು ಸಿಗುವುದಿಲ್ಲ, ಇದರಿಂದ ಎಷ್ಟೋ ಸಂಗ್ರಾಹಕರು ನಿರಾಶರಾಗಬೇಕಾಗುವ ಪ್ರಸಂಗ ಬರುತ್ತದೆ. ಇದಲ್ಲದೆ, ಸರಕಾರದ ಆದಾಯಕ್ಕೂ ಹಾನಿಯೊದಗುತ್ತದೆ

ಅಂಚೆ ತಿಕೇಟುಗಳ ಸಾಂಸ್ಕೃತಿಕ ಹಾಗು ಶೈಕ್ಷಣಿಕ ಮಹತ್ವವನ್ನೂ ಭಾರತ ಸರಕಾರ ಕಡೆಗಣಿಸಿದಂತೆ ಭಾಸವಾಗುತ್ತದೆ: ಪಂಚ ವಾರ್ಷಿಕ ಯೋಜನೆಯು ಜ್ಯಾರಿಗೆ ಬಂದು ಮೂರೂವರೆ ವರ್ಷಗಳಾದ ಬಳಿಕ, ಮುಂದಿನ ಗಣರಾಜ್ಯ ದಿನೋತ್ಸವದ ಹೊತ್ತಿಗೆ, ಯೋಜನೆಗೆ ಸಂಬಂಧಿಸಿದ ಅಂಚೆ ತಿಕೇಟುಗಳನ್ನು ಹೊರಡಿಸುವ ವಿಚಾರವು ಸರಕಾರಕ್ಕೆ ಉಂಟಾಯಿತು. ಇಲ್ಲಿ ನಾವು ಮಾಡಿದ ವಿಳಂಬವು ಯಾರಿಂದಲೂ ಕ್ಷಮಿಸಲ್ಪಡುವಂತದಲ್ಲ—ಏಕೆಂದರೆ, ಯೋಜನೆಗೆ ಜನತಾ ಸಹಕಾರವನ್ನು ಪಡೆಯುವುದು ಅಗತ್ಯವೆಂದು ಎಲ್ಲರೂ ಹೇಳುತಿದ್ದರು. ಜನತೆಗೆ ಯೋಜನೆಯ ಲಾಭಗಳ ಪರಿಚಯ ಮಾಡಿಕೊಡುವ ಅಂಚೆ ತಿಕೇಟುಗಳನ್ನು ಇಷ್ಟು ತಡೆದು ಹೊರಡಿಸುವುದಕ್ಕೆ ಕಾರಣಗಳೇನೊ ತಿಳಿದಿಲ್ಲ. ಇದೇನೇ ಇರಲಿ—ಮುಂದೆ ಇಂಥ ತಪ್ಪುಗಳಿಗೆ ಸರ್ವಥಾ ಅವಕಾಶ ಕೊಡಲಾಗದು.

ಸಾಂಸ್ಕೃತಿಕ ಪ್ರಚಾರದಲ್ಲಿ ಅಂಚೆ ತಿಕೇಟುಗಳು ವಹಿಸುವ ಪಾತ್ರವನ್ನು ಮನಗಂಡೋ ಏನೋ—ಭಾರತ ಸರಕಾರ ಕೆಲವು ವರ್ಷಗಳ ಹಿಂದೆ ಸ್ಥಾಪತ್ಯ ಕೌಶಲ್ಯದ ಚಿತ್ರಗಳನ್ನೊಳಗೊಂಡ ಅಂಚೆ ತಿಕೇಟುಗಳನ್ನು ಹೊರಡಿಸಿತು. ಇಂದೂ ಅವು ಬಳಕೆಯಲ್ಲಿವೆ. ವಿದೇಶಗಳಿಂದ ಪ್ರವಾಸಿಕರನ್ನು ಆಕರ್ಷಿಸುವುದಕ್ಕೆ ಹಾಗು ಭಾರತದ ವೈಭವವನ್ನು ಪ್ರದರ್ಶಿಸುವುದಕ್ಕೆ ಇಷ್ಟು ಮಾತ್ರ ಸಾಲದು. ನಮ್ಮ ದೇಶದಲ್ಲಿ ಪ್ರೇಕ್ಷಣೀಯವಾದ ಸ್ಥಳಗಳು ತುಂಬಾ ಇವೆ; ನಮ್ಮ ನಿಸರ್ಗ ಶೋಭೆಯಾಗಲೀ ವನ್ಯಶ್ರೀಯಾಗಲೀ ಪ್ರಾಣಿ ಹಾಗು ಪಕ್ಷಿ ಸಂಕುಲವಾಗಲೀ ಪ್ರವಾಸಿಗೆ ಅಚ್ಚುಮೆಚ್ಚಿನದಾಗುತ್ತದೆ. ಇವುಗಳ ಕಲ್ಪನೆಯನ್ನು ಮಾಡಿಕೊಡುವ ಅಂಚೆ ತಿಕೇಟುಗಳನ್ನೂ ವಿವರಣಾ ಪುಸ್ತಿಕೆಗಳನ್ನೂ ಹೊರಡಿಸಿದರೆ ಪ್ರಯೋಜನವಾದೀತು. ಅಂತಾರಾಷ್ಟ್ರೀಯ ಅಂಚೆ ತಿಕೇಟುಗಳ ಪ್ರದರ್ಶನಗಳನ್ನು ಆದಷ್ಟು ಹೆಚ್ಚು ಸಲ ಬೇರೆ ಬೇರೆ ನಗರಗಳಲ್ಲಿ ಏರ್ಪಡಿಸುವ ಯೋಜನೆ ಮಾಡಿದರೆ ಅದರಿಂದಲೂ ಲಾಭವಾದೀತು.

ಶಂಖದ ಬಳೆಯ ಮೇಲೆ ಬಂಗಾಲಿ ಮಹಿಳೆಯರ ಮೋಹ

ಶ್ರೀಮದ್ಭಗವದ್ಗೀತೆಯ ಪ್ರಥಮಾಧ್ಯಾಯದಲ್ಲಿ ಧರ್ಮ ಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಯುದ್ಧ ಸನ್ನದ್ಧರಾಗಿ ನಿಂತ ಕೌರವ ಹಾಗು ಪಾಂಡವರ ಸೇನೆಯಲ್ಲಿರುವ ಮಹಾವೀರರು ವಿಶೇಷವಾದ ಹೆಸರುಗಳುಳ್ಳ ತಂತಮ್ಮ ಶಂಖಗಳನ್ನು ಊದಿದ ವಿವರಣೆಯು ಸಿಗುತ್ತದೆ. ಯುದ್ಧದ ಕೋಲಾಹಲದಲ್ಲಿ ಶಂಖನಾದಕ್ಕೆ ವಿಶಿಷ್ಟವಾದ ಮಹತ್ವವನ್ನು ಕೊಡುತಿದ್ದರು ಅದು ಎಚ್ಚರಿಕೆಯ ಸಂಕೇತವಾಗಿತ್ತೆಂದರೂ ಸಲ್ಲುತ್ತದೆ.

ಆದರೆ ಈಗ ಯುದ್ಧ ಭೂಮಿಯಲ್ಲಿ ಶಂಖವನ್ನು ಯಾರೂ ಉಪಯೋಗಿಸುವದಿಲ್ಲ—ದೇವರ ಪೂಜೆಯ ಕಾಲದಲ್ಲಿ ಅದನ್ನು ಮೊಳಗಿಸಲಾಗುತ್ತದೆ. ಭಾರತದಲ್ಲೆಲ್ಲ ಈ ಕ್ರಮವನ್ನು ಕಾಣುತ್ತೇವೆ. ಬಂಗಾಳದಲ್ಲಿ ಶಂಖವನ್ನು ಇನ್ನೂ ಹೆಚ್ಚು ಪವಿತ್ರ ದೃಷ್ಟಿಯಿಂದ ನೋಡಲಾಗುತ್ತದೆ. ಬಂಗಾಳದ ಹಿಂದೂ ಮಹಿಳೆಯರು ಸೌಭಾಗ್ಯದ ಚಿಹ್ನೆಯಾಗಿ ಶಂಖದಿಂದ ನಿರ್ಮಿಸಲಾದ ಬಳೆಗಳನ್ನು ತೊಡುತ್ತಾರೆ: ಗೃಹಿಣಿಯು ತನ್ನ ಒಡವೆ ಎಲ್ಲವನ್ನೂ ಮಾರಬಹುದು; ಅಥವಾ ಅಡವಿಡಬಹುದು. ಆದರೆ ಯಾವ ಸಂದರ್ಭದಲ್ಲೇ ಆಗಲಿ, ತನಗೆ ಮದುವೆಯ ಕಾಲದಲ್ಲಿ ದೊರೆತ ಶಂಖದ ಬಳೆಗಳನ್ನು ಅವಳು ಎಷ್ಟೇ ಜೀರ್ಣವಾಗಿದ್ದರೂ ಬಿಟ್ಟು ಕೊಡಲಾರಳು. ಹೊಸತಾಗಿ ಶಂಖದ ಬಳೆಗಳು ಬಂದರೆ ಮಾತ್ರ ಹಳೆಯದನ್ನು ತೆಗೆದಿಟ್ಟುಕೊಂಡಾಳು.

ಬಂಗಾಲ ಹಾಗು ಆಸಾಮುಗಳಲ್ಲಿ ಶಂಖದ ಬಳೆ, ಉಂಗುರ, ಬೆಂಡೋಲೆ ಮುಂತಾದ ವಸ್ತುಗಳ ಕುರಿತು ಸ್ತ್ರೀಯರಲ್ಲಿ ತುಂಬ ಪ್ರೀತಿ ಇರುವಂತೆ ಕಾಣುತ್ತದೆ. ಇವರ ದೆಸೆಯಿಂದ ಸುಮಾರು ೧೫ ಸಾವಿರ ಮಂದಿ ಕಲಾವಿದರು ಈ ಗುಡಿಕೈಗಾರಿಕೆಯಲ್ಲಿ ನಿರತರಾಗಿದ್ದಾರೆ. ವಿಭಜನೆಗೆ ಮುಂಚೆ, ಢಾಕ್ಕಾ ಹಾಗು ಇತರ ಈಗಿನ ಪೂರ್ವಬಂಗಾಲ ಪ್ರದೇಶದಲ್ಲಿ ಈ ಕೈಗಾರಿಕೆಯು ಸುಪ್ರಸಿದ್ಧವಾಗಿತ್ತು. ಆದರೆ ಈಚೆಗೆ, ಪೂರ್ವಬಂಗಾಲದಿಂದ ಕಲಾವಿದರ ಕುಟುಂಬಗಳು ಮುರ್ಶಿದಾಬಾದ, ಬರ್ದ್ವಾನ ಹಾಗು ನಾಡಿಯಾ ಜಿಲ್ಲೆಗಳಿಗೆ ವಲಸೆ ಬಂದಿರುತ್ತವೆ.

ಈ ಕಲಾವಿದರು ತುಂಬ ಸೂಕ್ಷ್ಮವಾದ ಹಾಗು ನಾಜೂಕಾದ ಕೆಲಸಗಳನ್ನು ಮಾಡಬೇಕಾಗುತ್ತದೆ. ಶಂಖದ ಚಿಪ್ಪನ್ನು ಸೀಳಿ, ಬಳೆಗಳನ್ನಾಗಲೀ ಉಂಗುರವನ್ನಾಗಲೀ ಮಾಡುವುದು ಬಹಳ ಕಠಿಣವಾದ ಕೆಲಸ. ಇದಕ್ಕೋಸ್ಕರ ಅರ್ಧಚಂದ್ರಾಕೃತಿಯ ಆಯುಧವನ್ನು ಉಪಯೋಗಿಸಲಾಗುತ್ತದೆ: ಬಹಳ ಬಲಿಷ್ಠವಾದ ಸ್ನಾಯುಗಳುಳ್ಳ ಭುಜಬಲಿಗಳನ್ನೆ ಈ ಕೆಲಸಕ್ಕೆ ಹಚ್ಚಲಾಗುತ್ತದೆ. ನಿಪುಣ ಕಲಾವಿದರು ಶಂಖದ ವರ್ತುಲಗಳನ್ನು ನಯಗೊಳಿಸಿ, ಸಾದಾ ಅಥವಾ ಬಣ್ಣಬಣ್ಣದ ಕುಸುರುಗಳನ್ನು ರೇಖಿಸುತ್ತಾರೆ. ಹೆಂಗಸರೂ ಮಕ್ಕಳೂ ಈ ಉದ್ಯೋಗದಲ್ಲಿ ಮನೆಯ ಗಂಡಸರೊಡನೆ ಸಹಕರಿಸುತ್ತಾರೆ.

ಮದ್ರಾಸು ರಾಜ್ಯದ ತಿರುನೆಲ್ವೇಲಿ ಜಿಲ್ಲೆಯ ಕರಾವಳಿಯಿಂದಲೇ ವರ್ಷಕ್ಕೆ ಒಂದು ಲಕ್ಷದಷ್ಟು ಶಂಖದ ಚಿಪ್ಪುಗಳು ಬಂಗಾಲಕ್ಕೆ ಕಳಿಸಲ್ಪಡುತ್ತವೆ. ಸೌರಾಷ್ಟ್ರದಿಂದ ವರ್ಷಕ್ಕೆ ಐದಾರು ಸಾವಿರ ಚಿಪ್ಪುಗಳನ್ನು ಸಂಗ್ರಹಿಸಲಾಗುತ್ತದೆ. ಬಂಗಾಳ ಕೊಲ್ಲಿಯಲ್ಲಿ ಶಂಖದ ಚಿಪ್ಪುಗಳನ್ನು ಹಿಡಿಯುವ ಉದ್ಯಮವು ಇನ್ನೂ ಪ್ರಾರಂಭಿಸಲ್ಪಟ್ಟಿಲ್ಲ. ಸಿಂಹಳದಿಂದ ಚಿಪ್ಪುಗಳನ್ನು ತರಿಸುವುದಕ್ಕೆ ಭಾರತ ಸರಕಾರದ ವಾಣಿಜ್ಯ ನಿರ್ಬಂಧಗಳು ಅವಕಾಶ ಕೊಡುವುದಿಲ್ಲ. ಹೀಗಾಗಿ, ಮದ್ರಾಸಿನ ಪೂರೈಕೆಯನ್ನೇ ಹತ್ತು ಸಾವಿರ ಕಲಾವಿದರ ಶ್ರೇಷ್ಠ ಗುಡಿಕೈಗಾರಿಕೆಯು ಅವಲಂಬಿಸಿರುತ್ತದೆ.

ದಿ ವಿಜಯ ಬೇಂಕ್ ಲಿಮಿಟೆಡ್.

ಸ್ಥಾಪನೆ: 1931] [ಪ್ರಧಾನ ಕಛೇರಿ: ಮಂಗಳೂರು 3.

ತೆತ್ತ ಭಂಡವಾಳ ಮತ್ತು ಕ್ಷೇಮನಿಧಿ .... ರೂ. 11,11,000

ಜುಮ್ಲಾ ವಹಿವಾಟು .... ರೂ. 63,06,000

ಕಾಯಂ ಠೇವಣಾತಿಯ ಈಗಿನ ದರಗಳು

1 ತಿಂಗಳಿಗೆ	2%
2 ,,	2¼%
3 ತಿಂಗಳಿಂದ 6 ತಿಂಗಳ ವರೇಗೆ	3½%
7 ,, 12 ,,	3¾%
24 ತಿಂಗಳಿಗೆ	4%

ರೂಪಾ 15,000 ದ, ಮೇಲಿನ ಠೇವಣಾತಿಗೆ ¼% ದ ಜಾಸ್ತಿ ಬಡ್ಡಿ ಕೊಡಲಾಗುವುದು.

ಜಿಲ್ಲೆಯ 10 ಕೇಂದ್ರಗಳಲ್ಲಿಯೂ, ಮಡಿಕೇರಿ ಮತ್ತು ಮುಂಬಾಯಿಯಲ್ಲಿಯೂ ನಮ್ಮ ಶಾಖೆಗಳಿರುತ್ತವೆ.

ಕೆ.ಸುಂದರರಾಮ ಶೆಟ್ಟಿ, ಬಿ.ಎ., ಬಿ.ಎಲ್., ವಕೀಲ್,
ಡೈರೆಕ್ಟರರ ಮಂಡಳಿಯ ಅಧ್ಯಕ್ಷರು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ ೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟ್ ಖರ್ಚು ರೂ. ೦-೧೪-೦

—:ವಿಳಾಸ:—

ಮಾಲಿನ್ನಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ನಮ್ಮ ಗ್ರಾಮಗಳ ಪುನರುಜ್ಜೀವನ

ನಮ್ಮ ಹಳ್ಳಿಗರು ಈಗ ಸ್ವರಾಜ್ಯವೆಂದರೇ ನೆಂಬುದನ್ನು ಚೆನ್ನಾಗಿ ತಿಳಿಯ ತೊಡಗಿದ್ದಾರೆ. ಸ್ವರಾಜ್ಯವೆಂದರೆ ತಮ್ಮ ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವುದೆಂಬುದನ್ನು ಹಳ್ಳಿಗರು ಮನಗಂಡಿದ್ದಾರೆ. ನಾವು ಹಳ್ಳಿಗರೊಂದಿಗೆ ಮಾತನಾಡಿದರೆ ಅವರು ಉತ್ಸಾಹದಿಂದ ಪ್ರೀತಿಪೂರ್ವಕವಾಗಿ ನಮ್ಮೊಡನೆ ಮಾತನಾಡುತ್ತಾರೆ. ಅವರು ಕಷ್ಟಪಟ್ಟು ಕೆಲಸ ಮಾಡುತ್ತಾರೆ. ತುಂಬಾ ಬುದ್ಧಿಶಾಲಿಗಳಾಗಿದ್ದು ಕೃಷಿ ವಿಷಯಗಳಲ್ಲಿ ಹೆಚ್ಚಿನ ಅನುಭವ ಪಡೆದಿದ್ದಾರೆ.

ಹಳ್ಳಿಗಳ ನಿಜವಾದ ವೈಭವಗಳನ್ನು ನೋಡ ಬೇಕಿದ್ದರೆ ಹಿಂದಿನ ಕಾಲದಂತೆ ಉಚ್ಚಾಸನದಿಂದ ಹಳ್ಳಿಗರನ್ನು ಕುರಿತು ಭಾಷಣ ಮಾಡಿದರೆ ಪ್ರಯೋಜನವಿಲ್ಲ. ಅವರೊಂದಿಗೆ ಸಮಾನತೆಯಿಂದ ವರ್ತಿಸಿ ಅವರ ಸಹೋದರರಲ್ಲಿ ಒಬ್ಬರೆಂಬ ಭಾವನೆಯನ್ನು ಹುಟ್ಟಿಸಿದರೇನೇ ಅವರಲ್ಲಿ ಆದರ ಸೌಹಾರ್ದಗಳನ್ನು ಕಾಣಬಹುದು ಅವರ ಕಣ್ಣುಗಳು ಸಂತೋಷ ಹಾಗೂ ಕುತೂಹಲದಿಂದ ಹೊಳೆಯುವುದನ್ನು ನೋಡಬಹುದು.

ಮೇಲಿಂದ ಮೇಲೆ ನೋಡಿದಾಗ ಈ ಹಳ್ಳಿಗರು ನಿರಕ್ಷರಕುಕ್ಷಿಗಳೆಂದು ಭಾವಿಸಬಹುದು ಆದರೆ ಅವರು ಚುರುಕು ಬುದ್ಧಿಯವರಾಗಿದ್ದು ಹೆಚ್ಚಿನ ಲೋಕಾನುಭವವುಳ್ಳವರಾಗಿದ್ದಾರೆ ಯಾವುದಾದರೂ ವಿಷಯವನ್ನು ಅವರ ಮುಂದಿಟ್ಟರೆ ಅದರಿಂದ ಅವರಿಗೆ ಲಾಭವಾಗುವಂತಿದ್ದರೆ ಅದರಂತೆ ನಡೆಯಲು ಕುಶಲಬುದ್ಧಿಯ ರೈತರು ಹಿಂಜರಿಯುವುದಿಲ್ಲ.

ಹಳ್ಳಿಯ ಗುಡಿಕೈಗಾರಿಕೆಗಳು ಹಳ್ಳಿಯ ಆರ್ಥಿಕ ಪರಿಸ್ಥಿತಿಯೊಡನೆ ನಿಕಟ ಸಂಬಂಧವುಳ್ಳವುಗಳಾಗಿವೆ. ಹಳ್ಳಿಗಳಲ್ಲಿ ಅತ್ಯಂತ ಹೀನ ಪರಿಸ್ಥಿತಿಯಲ್ಲಿ ತಮ್ಮ ಗುಡಿಸಲುಗಳಲ್ಲಿಯೇ ಕೆಲಸ ಮಾಡುವ ನೇಕಾರರಿದ್ದಾರೆ ಇವರು ತಮ್ಮ ಗುಡಿಸಲುಗಳಲ್ಲಿ ಅತ್ಯಂತ ಹೀನವಾದ ವಾತಾವರಣದಲ್ಲಿ ಕೆಲಸ ಮಾಡುತ್ತಿರುವುದನ್ನು ಕಂಡು ನನಗೆ ನೋವಾಗುತ್ತದೆ. ಹೀಗೆಯೇ ತನ್ನ ಕೋಣ ಅಥವಾ ಎತ್ತಿನಿಂದ ಎಳೆಸುತ್ತ ತನ್ನ ಮನೆಯಲ್ಲಿ ದಿನ ನೂಕುವ ಗಾಣಿಗನನ್ನು ಕಾಣುತ್ತೇವೆ. ಇದರಂತೆಯೇ ಬಡಗಿ, ಕಮ್ಮಾರ ಹಾಗೂ ಇತರ ಕೆಲಸಗಾರರೂ ಇದ್ದಾರೆ. ಇವರ ಮನೆಯು ಚಿಕ್ಕದಾಗಿದ್ದು ಬಗೆ ಬಗೆಯ ಸಲಕರಣೆಗಳಿಂದ ತುಂಬಿ ಹೋಗಿರುತ್ತದೆ ಇದರಿಂದ ವಾಸಕ್ಕೆ ಬೇಕಾದಷ್ಟು ಸ್ಥಳವಿಲ್ಲದೆ ಹಳ್ಳಿಗರು ಕಷ್ಟಪಡುತ್ತಾರೆ.

ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಅನೇಕ ಕಡೆಗಳಲ್ಲಿ ಗ್ರಾಮದ ಮೂಲೆಯಲ್ಲಾಗಲೀ, ಸ್ಥಳವಿದ್ದರೆ ಗ್ರಾಮದ ಮಧ್ಯದಲ್ಲಾಗಲೀ ಸುಮಾರು ಅರ್ಧ ಎಕರೆ ಸ್ಥಳವನ್ನು ಕೈಗಾರಿಕಾ ಪ್ರದೇಶವನ್ನಾಗಿ ಏರ್ಪಡಿಸಿಕೊಳ್ಳುವಂತೆ ನಾನು ಸೂಚನೆ ಕೊಟ್ಟಿದ್ದೇನೆ. ಈ ಪ್ರದೇಶವು ಪ್ರತಿಯೊಬ್ಬ ಕಸಬುದಾರನಿಗೂ ಅನುಕೂಲವಾಗಿದ್ದು ತನ್ನ ಮಗ್ಗ ಅಥವಾ ಗಾಣ ಇಲ್ಲವೇ ಕುಲುಮೆ ಇವುಗಳನ್ನು ಅಲ್ಲಿಗೆ ಒಯ್ದು ಪ್ರತಿದಿನವೂ ರುಚಿಯಾದ ಹಾಗೂ ಆರೋಗ್ಯಕರವಾದ ವಾತಾವರಣದಲ್ಲಿ ಶುದ್ಧ ಗಾಳಿಯಲ್ಲಿ ತನ್ನ ಸಹೋದ್ಯೋಗಿಗಳಾದ ಹಳ್ಳಿಗರೊಡನೆ ಉತ್ಸಾಹದಿಂದ ಕೆಲಸ ಮಾಡುವ ಅನುಕೂಲದಿಂದ ಕೂಡಿರಬೇಕು. ಇಲ್ಲಿ ರಕ್ಷಣೆಯ ಪ್ರಶ್ನೆಯೇ ಇರುವುದಿಲ್ಲ ಏಕೆಂದರೆ ಈ ಪ್ರದೇಶವು ಹಳ್ಳಿಯ ಒಂದು ವಿಭಾಗವಾಗಿದೆ.

ಗ್ರಾಮಾಂತರಗಳಿಗೆ ವಿದ್ಯುಚ್ಛಕ್ತಿಯ ಪೂರೈಕೆಯು ಈಗ ಸೌಕರ್ಯ ಮಾತ್ರವೆಂದು ಹೇಳುವಂತಿಲ್ಲ. ನಮ್ಮ ಗುಡಿಕೈಗಾರಿಕೆಗಳು ತಮ್ಮ ಭಯಂಕರವಾದ ವಿಪತ್ತುಗಳನ್ನು ಯಶಸ್ವಿಯಾಗಿ ಎದುರಿಸಬೇಕೆಂದಿದ್ದರೆ ವಿದ್ಯುಚ್ಛಕ್ತಿ ಅತ್ಯಗತ್ಯ. ಪ್ರತಿಯೊಂದು ರಾಜ್ಯ ಸರ್ಕಾರವೂ ಹಳ್ಳಿಗಳಿಗೆ ವಿದ್ಯುಚ್ಛಕ್ತಿಯನ್ನು ಒಯ್ಯಲು ತುಂಬ ಪ್ರಯತ್ನಿಸುತ್ತಿದೆ. ಆದರೆ ಸದ್ಯದಲ್ಲಿ ಕೆಲವು ಹಳ್ಳಿಗಳಿಗೆ ಮಾತ್ರ ವಿದ್ಯುಚ್ಛಕ್ತಿಯನ್ನು ಪೂರೈಸಲು ಸಾಧ್ಯವಾಗುವುದು. ವಿದ್ಯುತ್ ಪ್ರೇಕ್ಷಕ ತಂತಿಗಳ ಹಾಗೂ ಕಂಬಗಳ ಬೆಲೆಯು ಹೆಚ್ಚಾಗಿಯೂ ಹಳ್ಳಿಗಳು ಚಿಕ್ಕದಾಗಿಯೂ ಇರುವುದರಿಂದ ಮುಖ್ಯ ವೆಚ್ಚ ಹೆಚ್ಚಾಗುವುದಲ್ಲದೆ ಈಗಾಗ ಮಾಡಬೇಕಾದ ಹಾಗೂ ನಡೆಸಿಕೊಂಡು ಬರುವ ವೆಚ್ಚಗಳೂ ಮಿತಿ ಮೀರುತ್ತವೆ.

ಆದುದರಿಂದ ವಿದ್ಯುಚ್ಛಕ್ತಿ ದೊರೆತಿರುವ ಹಳ್ಳಿಯಲ್ಲಿಯೇ ಸುತ್ತ ಮುತ್ತಲಿನ ಹಳ್ಳಿಗಳು ತಮ್ಮ ಕೈಗಾರಿಕಾ ಪ್ರದೇಶವನ್ನು ಸ್ಥಾಪಿಸುವುದು ಉತ್ತಮವೆಂದು ನಾನು ಭಾವಿಸುತ್ತೇನೆ. ಸುತ್ತ ಮುತ್ತಲ ಹಳ್ಳಿಗರು ವಿದ್ಯುಚ್ಛಕ್ತಿ ಪೂರೈಸುವ ಹಳ್ಳಿಗೆ ಬೆಳಗ್ಗೆ ಹೋಗಿ ಸುಮಾರು 6 ರಿಂದ 8 ಘಂಟೆಗಳ ಕಾಲ ಕೆಲಸ ಮಾಡಿ ಸಾಯಂಕಾಲ ಮನೆಗೆ ಬರಲು ಸಾಧ್ಯವಿದೆ. ಯಾವ ಕೆಲಸಗಾರನಾದರೂ ತನ್ನ ಹಿರಿಯರ ಹಳ್ಳಿಯನ್ನು ಬಿಟ್ಟು ವಿದ್ಯುಚ್ಛಕ್ತಿ ಇರುವ ಹಳ್ಳಿಗೆ ನೆಲಸೆ ಹೋಗಬೇಕೆಂದೇನು ಇದರ ಅರ್ಥವಲ್ಲ. ಹಾಗೆ ಮಾಡಿದರೆ ಅದರಿಂದ ಒಳಿತಿನ ಬದಲು ಕೇಡೇ ಆದೀತು.

ಜಮೀನ್‌ದಾರಿ ಪದ್ಧತಿಯನ್ನು ನಿರ್ಮೂಲ ಮಾಡಿದ ಕಾರಣ ಅನೇಕ ಜಮೀನುದಾರರು ಹಳ್ಳಿಗಳನ್ನು ಬಿಟ್ಟರು. ಹಾಗೇ ಅನೇಕ ವಿದ್ಯಾವಂತ ತರುಣರೂ ತಮ್ಮ ಹಳ್ಳಿಗಳನ್ನು ಬಿಟ್ಟು ಪಟ್ಟಣಗಳ ಕಡೆಗೆ ಸಾಗಿದರು ಇದರಿಂದ ಹಳ್ಳಿಗಳಿಗೆ ಹೆಚ್ಚಿನ ಹಾನಿಯಾಗಿ ನಮ್ಮ ಗ್ರಾಮಗಳ ಆರ್ಥಿಕ ಪರಿಸ್ಥಿತಿಯು ತುಂಬಾ ಹಾಳಾಗಿದೆ ಎಷ್ಟೋ ಸಲ ನನಗೆ ಈ ಪರಿಸ್ಥಿತಿಯನ್ನು ನೆನಸಿದಾಗ ಆಂಗ್ಲ ಕವಿ ಗೋಲ್ಡ್ ಸ್ಮಿತ್ ಬರೆದ "ಡೆಸರ್ಟೆಡ್ ವಿಲೇಜ್" (ನಿರ್ಜನವಾದ ಹಳ್ಳಿ) ಎಂಬ ಕವನದ ನೆನಪಾಗುತ್ತದೆ ನಮ್ಮ ಹಳ್ಳಿಗಳ ಪುನರುಜ್ಜೀವನ ಆಗಬೇಕು, ವಿದ್ಯಾವಂತರಾದ ಹಳ್ಳಿಯ ಹುಡುಗರು ಹಳ್ಳಿಗಳಿಗೇ ಹಿಂತಿರುಗಿ ಅಲ್ಲಿ ನೆಲಸಿ ಆಧುನಿಕ ಹಾಗೂ ಸುಧಾರಿತ ಪದ್ಧತಿಯ ಬೇಸಾಯವನ್ನು ಕೈಗೊಂಡು ಸುಖದಿಂದ ಬದುಕಿ ಬಾಳಬೇಕಲ್ಲದೆ ನಗರ ಪಟ್ಟಣಗಳಲ್ಲಿ ನೌಕರಿಗಾಗಿ ಅಲೆಯಬಾರದೆಂದು ನಾನು ಆಶಿಸುತ್ತೇನೆ.

ನಮ್ಮ ಹಳ್ಳಿಗಳ ಅಭಿವೃದ್ಧಿಗೆ ಸಹಕಾರ ಪದ್ಧತಿಯಿಂದ ಬೇಸಾಯ ಮಾಡುವುದು ಒಂದು ಮುಖ್ಯ ಸಾಧನವಾಗಬಹುದು. 10 ಅಥವಾ 20 ಮಂದಿ ತಮ್ಮ ಭೂಮಿಗಳನ್ನು ಸುಮಾರು 100 ಎಕರೆಗಳಾಗುವಂತೆ ಒಂದುಗೂಡಿಸಿ ಆಧುನಿಕ ರೀತಿಯಲ್ಲಿ ಸುಧಾರಿತವಾದ ವ್ಯವಸಾಯದ ಸಲಕರಣೆಗಳಿಂದ ರಾಸಾಯನಿಕ ಹಾಗೂ ಇತರ ಗೊಬ್ಬರಗಳನ್ನು ಉಪಯೋಗಿಸಿ ಬೇಸಾಯ ಮಾಡಿದರೆ ಇದರಿಂದ ಉತ್ಪತ್ತಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಹಳ್ಳಿಗಳಲ್ಲಿ ವೈದ್ಯಕೀಯ ಸೌಕರ್ಯವಿಲ್ಲದಿರುವುದನ್ನು ನೋಡಿ ತುಂಬಾ ವ್ಯಸನವಾಗುತ್ತದೆ. ಹಳ್ಳಿಗರು ವೈದ್ಯಕೀಯ ಸೌಕರ್ಯ ದೊರಕ ಬೇಕಾದರೆ 10—12 ಮೈಲುಗಳ ದೂರ ನಡೆದು ಹೋಗ ಬೇಕಾಗುತ್ತದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸಲು ಔಷಧಿ ಪೆಟ್ಟಿಗೆಗಳನ್ನು ಈ ಹಳ್ಳಿಗಳಲ್ಲಿ ಅಧ್ಯಾಪಕನ ಅಥವಾ ಇನ್ನ್ಯಾರಾದರೂ ಒಬ್ಬನ ವಶದಲ್ಲಿ ಕೊಟ್ಟರೆ ಅವನು ಹಳ್ಳಿಗರಿಗೆ ವೈದ್ಯಕೀಯ ಸೌಕರ್ಯವನ್ನೊದಗಿಸುವನು. ಈ ಔಷಧ ಪೆಟ್ಟಿಗೆಯಲ್ಲಿ ಸಾಮಾನ್ಯ ರೋಗಗಳಿಗೆ ಬೇಕಾದ ಔಷಧಗಳನ್ನೆಲ್ಲಾ ತುಂಬಿರಬೇಕು. ಈ ಪೆಟ್ಟಿಗೆಯೊಂದಿಗೆ ಮುದ್ರೆ ಹಾಕಿದ ಒಂದು ಹಣದ ಪೆಟ್ಟಿಗೆ ಇರಬೇಕು. ಉಪಕಾರಿಗಳು ಇದರಲ್ಲಿ ಒಂದು ಅಥವಾ ಎರಡು ಆಣೆಗಳನ್ನು ಹಾಕುವುದರಿಂದ ಔಷಧದ ಪೆಟ್ಟಿಗೆ ಬರಿದಾದಾಗ ಈ ಪೆಟ್ಟಿಗೆಯು ಔಷಧಗಳನ್ನು ಕೊಂಡುಕೊಳ್ಳುವುದಕ್ಕೆ 3 ಅಥವಾ 4 ರೂಪಾಯಿಗಳನ್ನು ಒದಗಿಸದಿರಲಾರದು ಆದರೆ ಈ ವಿಷಯದಲ್ಲಿ ವೈದ್ಯಕೀಯ ವೃತ್ತಿಯಲ್ಲಿರುವವರೂ ನಮ್ಮ ಸಹಾಯಕ್ಕೆ ಬಾರದೆ ಉಪಾಯವಿಲ್ಲ ಭಾರತೀಯ ವೈದ್ಯ ವೃತ್ತಿಯಲ್ಲಿರುವವರನ್ನು ನಿಸ್ವಾರ್ಥ ಕೆಲಸಗಾರರೆಂದು ನಾನು ಭಾವಿಸುತ್ತೇನೆ.

ಮಕ್ಕಳಿಗೆ ಈ ಹಳ್ಳಿಗಳಲ್ಲಿ ವೈದ್ಯಕೀಯ ಸೌಕರ್ಯವಿಲ್ಲದುದನ್ನು ನೋಡಿದಾಗ ಖಾಸಗಿ ಹಾಗೂ ಸರ್ಕಾರಿ ನೌಕರಿಯಲ್ಲಿರುವ ಎಲ್ಲಾ ವೈದ್ಯರೂ ಜಿಲ್ಲಾಧಿಕಾರಿಗಳೂ ಒಟ್ಟಾಗಿ ಹಳ್ಳಿಗಳಿಗೆ ವೈದ್ಯಕೀಯ ಚಿಕಿತ್ಸೆಯನ್ನೊದಗಿಸುವ ಈ ಮಹಾಕಾರ್ಯದಲ್ಲಿ ಭಾಗಿಗಳಾಗಬೇಕೆಂದು ನನಗೆ ತೋರಿತು.

ಜಿಲ್ಲಾಧಿಕಾರಿಗಳು ಡಾಕ್ಟರಿಗೆ 10 ಅಥವಾ 12 ಮೈಲು ದೂರ ತನಗೆ ಇಷ್ಟಬಂದ ನೆರೆಯ ಹಳ್ಳಿಗೆ ವಾರಕ್ಕೊಮ್ಮೆ ಅಥವಾ ಎರಡು ಸಾರಿ ಹೋಗಿ ಬರುವ ವಾಹನ ಸೌಕರ್ಯಗಳನ್ನೊದಗಿಸಬಹುದು

ಡಾಕ್ಟರರು ನಿರ್ದಿಷ್ಟವಾದ ಸಮಯದಲ್ಲಿ ಹಳ್ಳಿಗಳನ್ನು ಸಂದರ್ಶಿಸಬಹುದು ಆಗ ನೆರೆಯ ಹಳ್ಳಿಗರೂ ಬಂದು ಚಿಕಿತ್ಸೆ ಪಡೆದುಕೊಳ್ಳಬಹುದು.

ಗ್ರಾಮಪಂಚಾಯತು ಭವನಗಳಲ್ಲಿ ಗ್ರಾಮ ಜೀವನದ ನಾನಾ ಚಟುವಟಿಕೆಗಳನ್ನು ನಡೆಸಬಹುದು. ಈ ಭವನದಲ್ಲಿ ವಾಚನಾಲಯ ತೆರೆಯಬಹುದು. ಅನೇಕ ಪತ್ರಿಕೆಗಳನ್ನು ತರಿಸಬಹುದು ಆಗ ಜನರು ಇಲ್ಲಿಗೆ ಬಂದು ಜ್ಞಾನಾರ್ಜನೆ ಮಾಡಬಹುದಲ್ಲದೆ ನ್ಯಾಯ ಹಾಗೂ ಆಡಳಿತದ ಬಗ್ಗೆ ಪಂಚಾಯತು ಪದ್ಧತಿಯಿಂದ ದೊರೆಯುವ ಪ್ರಯೋಜನವನ್ನೂ ಮನಗಾಣಬಲ್ಲರು

ಕೊನೆಯದಾಗಿ ನಗರಗಳಲ್ಲಿರುವ ಪ್ರತಿಯೊಬ್ಬನೂ ತನ್ನ ಕುಟುಂಬದೊಡನೆ ಸಾಧ್ಯವಿದ್ದಷ್ಟು ಸಲ ಹಳ್ಳಿಗಳಿಗೆ ಹೋಗಿ ತನ್ನ ಉದ್ಧಾರಕ್ಕೆ ಪ್ರಯತ್ನಿಸಬೇಕೆಂದು ನಾನು ಸೂಚಿಸ ಬಯಸುತ್ತೇನೆ. ಆಗ ಅವನು ಹಳ್ಳಿಗಳಲ್ಲಿರುವ ನಮ್ಮ ಸೋದರ ಸೋದರಿಯರ ನಡೆನುಡಿಗಳಲ್ಲಿರುವ ಶ್ರೇಷ್ಠತೆ ಹಾಗೂ ಅವರಿಂದ ದೊರೆಯುವ ಪ್ರೀತಿ ಸೌಹಾರ್ದಗಳ ಮಹಾ ಸಂಪತ್ತನ್ನು ಮನಗಾಣದೆ ಇರಲಾರನು

—ಕೈಲಾಸನಾಥ ಕಟ್ಜು.
(ಕೇಂದ್ರ ಗೃಹಮಂತ್ರಿ)

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ರೂ. 1000 ದ ವರೆಗೆ ಸಾಲಗಳು

ಯಾವದೇ ಅಡವು ಯಾ ಜಾಮೀನಿಲ್ಲದೆ ನಿಮ್ಮ ದಸ್ಕತಿನಿಂದ ದೊರೆಯುತ್ತವೆ ವಿವರಗಳಿಗ ಕೆಳಗಿನ ವಿಳಾಸಕ್ಕೆ ಇಂಗ್ಲಿಷಿನಲ್ಲಿ ಬರೆಯಿರಿ: ಬೊಂಬೇ ಮರ್ಕಂಟೈಲ್ ಕೊ, ಬೊಂಬಾಯಿ-23.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ವಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೂಟದ ಮರ್ಮವನ್ನೂ, ನಿಶ್ಚೈಸಿದ್ದು 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ? ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ: 0—10—0,

ಕಿರಿಯರ ಪ್ರಪಂಚ, ಉಡುಪಿ.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆ, ...
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೇ? ...
25 ವರುಷಗಳ ಅನುಭವ ಪರಿಶ್ರಮದಿಂದ [illegible]
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ [illegible]

[illegible]

ENGLISH MADE EASY
ಯನ್ನು ಇಂದೇ ತರಿಸಿಕೊಳ್ಳಿರಿ

ಬೆಲೆ:- ಸಾಧಾರಣ ಪ್ರತಿ- ರೂ [illegible] (ಟಪ್ಪಾಲು [illegible])
ಉತ್ತಮ ಪ್ರತಿ— ರೂ. [illegible] (ಟಪ್ಪಾಲು [illegible])
ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ
2) ನವಯುಗ ಪ್ರೆಸ್, ಉಡುಪಿ, ದ. ಕ.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

೨೫ ನಯ ಯಿಂ ಬ

Licensed to Post without Prepaymen

ನವಯುಗ

ಸಂಪುಟ ೩೪ ಸಂಚಿಕೆ ೫

VOL. 34 ಉಡುಪಿ, 30—9—1954 NO. 5

ಚಿತ್ರನುಡಿ

ಹಲವಾರು ವಿಷಯಗಳ ಕುರಿತು ಇಂದು ಜನರು ಒಮ್ಮತದಿಂದ ನೋಡುವುದಿಲ್ಲ ಜಾಗತಿಕ ಆರೋಗ್ಯವುಂಡಳವು ರಾಜಕೀಯ ರಂಗದ ಜಟಿಲ ಸಮಸ್ಯೆಗಳಲ್ಲಿ ಕೈ ಪ್ರತ್ಯಕ್ಷ ಹಾಕಿದವರೂ ವಾತಾವರಣವನ್ನು ತಿಳಿಗೊಳಿಸುವಲ್ಲಿ ಕ್ರಿಯಾತ್ಮಕ ಪಾತ್ರವನ್ನು ನಿರ್ವಹಿಸುವರೆಂದು ನಂಬುತ್ತೇನೆ ದೇಹಾರೋಗ್ಯದಷ್ಟೇ ಮನಸ್ಸಿನ ಸ್ವಾಸ್ಥ್ಯವೂ ಮಹತ್ವದ ವಿಷಯ

— ನೆಹರೂ

ನಗೆಹನಿ

"ಈಗಾದಷ್ಟು ಅನುಭವ ನನಗೆ ಸಾಕು ಇನ್ನು ನಗು ಎಂದೆಂದಿಗೂ ಅಂಥ ಕಟ್ಟಿನ ಹಣ್ಯಾಸಕ್ಕೆ ಹೋಗುವುದಿಲ್ಲ"

"ಬಿಡು, ಸಂಘ ಕಟ್ಟುವುದೇ ನಿನ್ನ ರಕ್ತಗತ ಗುಣವಾಗಿರುವಾಗ, ಹಾಗೆ ಮಾಡುವುದಿಲ್ಲವೆಂದು ಹೇಳುತ್ತಿರುವುದು ನನಗೆ ಸತ್ಯವೇ ಇಲ್ಲ"

"ಸಾಧ್ಯವಿಲ್ಲ? ನಾನು ಇನ್ನು ಎಂದೆಂದಿಗಾ ಸಂಘ ಕಟ್ಟಿದ್ದರೆ ಏನು ಕೊಡುತ್ತಿ, ಹೇಳು!"

ಮೊನ್ನೆ ರಾಜ್ಯಸಭೆಯಲ್ಲಿ ಕೇಂದ್ರ ಆರೋಗ್ಯ ಮಂತ್ರಿ ರಾಜಕುಮಾರಿ ಅಮೃತ ಕೌರರು "ಮಾನಸಿಕ ಆರೋಗ್ಯ ಸಂಸ್ಥೆಯೊಂದನ್ನು ಇದೇ ವರ್ಷದಲ್ಲಿ ದೆಹಲಿಯಲ್ಲಿ ಸ್ಥಾಪಿಸಲಾಗುವುದು" ಎಂದು ತಿಳಿಸಿದಾಗ ಸಭಾಪತಿ ಡಾ| ರಾಧಾಕೃಷ್ಣನ್ನರು "ಈ ಸಂಸ್ಥೆಯಲ್ಲಿ ಸಂಸತ್ತಿನ ಸದಸ್ಯರಿಗೆ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಿಕೊಡಲಾಗುವುದೇ" ಎಂದು ವ್ಯಂಗ್ಯೋಕ್ತಿಯನ್ನಾಡಿದರು "ಸಭೆ ಹಾಗೆ ಬಯಸುವುದಾದರೆ." ಎಂದು ರಾಜಕುಮಾರಿಯವರು ಮಾರ್ನುಡಿದರು. ಕಳೆದ ಮೇ ತಿಂಗಳಲ್ಲಿ ಮದ್ರಾಸು ಶಾಸನ ಸಭೆಯಲ್ಲಿ "ಮಾನ್ಯ ಸದಸ್ಯರ ಪ್ರಯೋಜನದ ಬಗ್ಗೆ ಸಭಾಭವನದ ಸಮೀಪದಲ್ಲಿಯೇ ಆಸ್ಪತ್ರೆಯೊಂದನ್ನು ಕಟ್ಟಿಸುವ ವಿಚಾರವನ್ನು ಸರಕಾರ ಮಾಡುತ್ತಿದೆ' ಎಂದು ಮಂತ್ರಿ ಶ್ರೀ ಎ. ಬಿ ಶೆಟ್ಟಿಯವರು ವಿದಿತಪಡಿಸಿದರು ಆದರೆ 'ಹತ್ತಿರವೇ ಆಸ್ಪತ್ರೆ ಇರಬೇಕಾಗಷ್ಟು ನಮ್ಮ ಶಾಸನ ಸಭಾ ಸದಸ್ಯರ ಆರೋಗ್ಯ ಕಟ್ಟಿದೆಯೆ'' ಎಂದು ಆಗ ಯಾರೂ ಕೇಳಲಿಲ್ಲ. ಪಶ್ಚಿಮ ಬಂಗಾಳದ ಶಾಸನಸಭೆಯಲ್ಲಿ ಕಳೆದ ವಾರ "ಪ್ರತಿಪಕ್ಷದ ಸದಸ್ಯರ ಕೆನ್ನೆಗ ಹೊಡೆಯಬೇಕು" ಎಂದು ಕೋಪದಿಂದ ಆಡಿದ ಕಾಂಗ್ರೆಸು ಸದಸ್ಯರಿಗೂ "ಮೆಟ್ಟಿನ ಪೆಟ್ಟನ್ನು ಕಾಂಗ್ರೆಸು ಸದಸ್ಯರಿಗೆ ತಿನ್ನಿಸಬೇಕು" ಎಂದು ವಾದ ರಕ್ಷೆಯನ್ನು ಕೈಗೆತ್ತಿಕೊಂಡ ಕಮ್ಯುನಿಸ್ಟ ಪ್ರಭೃತಿಗಳಿಗೂ ಬುದ್ಧಿ ಸ್ವಾಸ್ಥ್ಯವುಂಟೆಂದು ಹೇಳುವಂತಿಲ್ಲ.

ನಮ್ಮ ಶಾಸನ ಕರ್ತರ ಹಾಗು ರಾಜಕಾರಣಪಟುಗಳ ಮಾನಸಿಕ ಸ್ವಾಸ್ಥ್ಯದ ಕುರಿತು ಜನತೆ ಚಿಂತೆಯನ್ನು ವ್ಯಕ್ತಪಡಿಸುವುದು ಸಹಜವೇ ಆಗಿದೆ. ಪಕ್ಷ ಪಕ್ಷಗಳಲ್ಲಿ ಮಾತ್ರ ತಿಕ್ಕಾಟ, ಕ್ಲೇಶಗಳಿರುವುದಲ್ಲ— ಒಂದೇ ಪಕ್ಷದಲ್ಲೂ ತೀವ್ರ ಭಿನ್ನಾಭಿಪ್ರಾಯಗಳಿವೆ. ಕಾಮರಾಜ ನಾಡರರೂ ರಾಜಗೋಪಾಲಾಚಾರಿಯವರೂ ತಿರುವಾಂಕೂರಿನ ತಮಿಳು ತಾಲೂಕುಗಳ ಸ್ಥಿತಿಗತಿಯನ್ನು ಜೊತೆಯಾಗಿ ಪರಿಶೀಲಿಸಲೆಂದು ಸಲಹೆಯನ್ನು ಮುಂದಿಟ್ಟವರು ಪ್ರಾಮಾಣಿಕವಾಗಿ ಹಾಗೆ ಮಾಡಿದ್ದರೆ ಸೂರ್ಯ— ಚಂದ್ರರು ಒಟ್ಟಾಗಿ ಒದಲಾರದಷ್ಟು ಅಶಕ್ಯವಾದ ಮಾತು ಅದೆಂಬುದು ತಿಳಿಯದುದಲ್ಲ ಭಾರತಕ್ಕೆ ಮಾತ್ರ ಹೊಸಲೆಂದ ಸಮಸ್ಯ ಇದಲ್ಲ - ಜಾಗತಿಕ ರಂಗದಲ್ಲಿ ಸಹ ಮಾನಸಿಕ ಸತ್ವಸವೆಂಬ ರೋಗ ಬಹಳಷ್ಟು ವ್ಯಾಪಕವಾಗಿದೆ "ಶಾಂತಿಗಾಗಿ ಸಮರ" ಎನ್ನುವ ಅಸಂಬದ್ಧ ಹಲ್ಲಿವಿಯೇ ಇದನ್ನು ಸ್ಪಷ್ಟಗೊಳಿಸುತ್ತದೆ. ಬಡವನಪೊಡನೆ ಕಾಳಗ ಕೊಡುವೆವನ್ನುವ ನೆಹರೂರ ವಾಣಿಗೂ ಶಾಂತಿಗಾಗಿ ಸಮರವೆಂಬ ಪಾಶ್ಚಾತ್ಯ ಮುತ್ಸದ್ದಿಗಳ ಉಪಾಲಿಯಮಮ ಹೇಳುತಿದ್ದರು ಈ ಮಾತನ್ನಾಡುವವರಿಗೆ ಇದಿರ ಲಿಗಮನೋರೋಗ ತಗುಲಿದೆ ಎಂದು ಭಾವಿಸುವುದು ಮನೋರೋಗದ ಲಕ್ಷಣಗಳಲ್ಲಿ ಒಂದು ಎಂಬ ವಿಷಯ ಅವರಿಗೆ ಗೊತ್ತಿಲ್ಲ! ಮುಂದ ಇನ್ನು ಜೀವದ್ದದ ಸಂಗತಿ ನಡೆಯಿತು ಹಕ್ಕರು ರಾಜಕಾರಣದಿಂದ ಶಾಶ್ವತವಾಗಿ ನಿವೃತ್ತರಾಗಬಯಸಿದರು ಆದುದ ಕಾರಣದ್ದ ಸನು ಹೇಳುತ್ತೇನೆ ಎಂದು ತಿಳಿಯದೆ ದುಡುಕಿದಂತಾಯಿತು" ಎಂದವರು ಅರಿಯುವರಿಗ ಜಾಗದ ಒಳವರು ಆದರ ಇದನ್ನಾದರೂ ಅವರು ತಿಳಿಯರು ಬರದವೆಂದು ನಂಬುವುದು ಹೇಗೋ ತಿಳಿಯುವುದಿಲ್ಲ.

ಶಾಂತಿಗಾಗಿ ಸಮರ!

ಪ್ರಾಯಕ್ಕೂ ಮೂಲ ಭೂತವಾದ ವ್ಯತ್ಯಾಸವಿದೆ, ಮತ್ತು ಎರಡನೆಯವರ ನಿಲುವೆಯಲ್ಲಿ ವ್ಯಕ್ತಗೊಳ್ಳುವ ವಿರೋಧಾಭಾಸವೇ ಮನೋರೋಗದ ಪ್ರಥಮ ಹಾಗು ಪ್ರಮುಖ ಲಕ್ಷಣ.

ನೆರೆ ರಾಷ್ಟ್ರವಾದ ಪಾಕಿಸ್ತಾನವನ್ನ ನೋಡೋಣ— ಕಾಶ್ಮೀರದ ಪ್ರಜೆಗಳು ಸ್ವಯಂ ನಿರ್ಣಯಾಧಿಕಾರವನ್ನು ಪಡೆಯುವವರೆಗೆ ಪಾಕಿಸ್ತಾನ ಸರಕಾರವು ವಿರಮಿಸುವಂತಿಲ್ಲವೆಂದು ಮಹಮ್ಮದಾಲಿಯವರು ಹೇಳುತ್ತಾರೆ. ಆದರೆ ಪೂರ್ವ ಪಾಕಿಸ್ತಾನಿಗಳ ಸ್ವಯಂ ನಿರ್ಣಯಾಧಿಕಾರದ ಹಕ್ಕನ್ನು ಅವರೇ ಅಲ್ಲಗಳೆದು, ಸೈನಿಕ ಗವರ್ನರರ ರಾಜ್ಯ ಭಾರವನ್ನು ಹೇರಿದ್ದಾರೆ! ಅಲ್ಲಿ ಮುಖ್ಯ ಮಂತ್ರಿಯಾಗಿದ್ದ ಹಕ್ಕರು ದೇಶ ದ್ರೋಹಿಗಳೆಂಬುದು ನಿಶ್ಚಯ ಆದರೆ ಅವರನ್ನು ತಕ್ಷೀರಿಗೆ ಒಳಪಡಿಸಬೇಕೆ?, ಅದಾ ಮಾನಸಿಕ ಸ್ವಾಸ್ಥ್ಯಕ್ಕಾಗಿ ಶುಶ್ರೂಷ ನಡಸಬೇಕ ಎಂಬುದಿನ್ನೂ ನಿರ್ಣಯಿಸಿಲ್ಲ ಎಂದು ಮಹಮ್ಮದಾಲಿಯವರು ಹೇಳುತಿರುವುದಿಲ್ಲ. ಏಕೆಂದರೆ, ರಾಜಕೀಯ ಪಟುಗಳ ಲಕ್ಷಣದಲ್ಲಿ ವಿರೋಧಾಭಾಸವೇ ಮುಖ್ಯವಾದದ್ದು.

ಪ್ರಜ್ವಲಿಸುತ್ತಿರುವ ಜಾಗತಿಕ ಸಮಸ್ಯೆಗಳಲ್ಲಿ ಹಚ್ಚಿನವು ರಾಜಕಾರಣಿಗಳ ಮಂಗ್ರಹದ ಪರಿಣಾಮವಾಗಿಯೇ ಹುಟ್ಟಿಕೊಂಡವುಗಳೆಂದು ಭಾಸವಾಗುತ್ತದೆ ಅಮೇರಿಕದ ಅಧ್ಯಕ್ಷ ಐಸೆನಹೋವರರು ಭಕ್ತಿ-ಧ್ಯಾನ-ಶ್ರದ್ಧೆಗಳ ಆವಶ್ಯಕತೆಯನ್ನು ಕ್ರೈಸ್ತ ಮಂದಿರಗಳ ಸಭೆಯೊಂದರಲ್ಲಿ ಮಾತನಾಡುವ ಸಂದರ್ಭವೊಂದು ಅವರಿಗೆ ಮೊನ್ನೆ ತಾನೆ ಒದಗಿದಾಗ ಪ್ರಸ್ತಾಪಿಸಿದರು. ಜಲಜನಕ ಬಾಂಬು, ಅಣು ಬಾಂಬು ಮುಂತಾದ ಶಸ್ತ್ರಾಸ್ತ್ರಗಳ ಉತ್ಪಾದನೆಯಷ್ಟೇ ಮಹತ್ವವನ್ನು ಆಧ್ಯಾತ್ಮಿಕ ತತ್ವಗಳಿಗೂ ಅವರು ಕೊಟ್ಟಂತೆ ತೋರಿತು ರಶಿಯಾವೂ ಪ್ರಾರ್ಥನೆಗಳ ತಂತ್ರವನ್ನು ಅನುಸರಿಸಿದರೆ ಐಸೆನಹೋವರರ ಕೈಯನ್ನು ಕಟ್ಟಿದಂತಾದೀತು! ರಶಿಯಾವು ಅಂಥ ಉಪಾಯಕ್ಕೇನೂ ಕೈಹಾಕಲಿಲ್ಲವೆಂದು ಐಕರಿಗೆ ಬರವಸೆ ಇರುವಂತೆ ಕಾಣುತ್ತದೆ. ಏಕೆಂದರ ರಶಿಯಾ ಪೀಗ ಫ್ರಾರ್ಮೋಸಾದ ಮೇಲೆ ದಾಳಿ ಮಾಡಲಿರುವ ಕೆಂಪು ಚೀನಕ್ಕೆ ಹಡಗುಗಳ ಸಹಾಯವನ್ನು ಒದಗಿಸುವುದರಲ್ಲಿ ಮಗ್ನವಾಗಿದೆ ಅಮೇರಿಕ ಚಿಯಾಂಗರಿಗೆ ಏಳನೇ ನೌಕಾಪಡೆಯನ್ನೊದಗಿಸಿದೆಯಲ್ಲದೆ ಶಾಂತಿಗಾಗಿ ಹೂಡುವ ಈ ಸಮರದಲ್ಲಿ ಜಯಲಾಭದೊರಕಿಸಿಕೊಡೆಂದು ಪ್ರಾರ್ಥನೆಗಳನ್ನು ಸಲ್ಲಿಸುತ್ತಿದೆ.

ಹಾಗೆಂದು ಶಾಂತಿಗಾಗಿ ಮಾಡುವ ಯಾವ ವಿಧಾಯಕ ಸೂಚನೆಗಳನ್ನೂ ಅಮೇರಿಕ ಗಮನಿಸುವುದಿಲ್ಲ. ಐರೋಪ್ಯ ಸಂರಕ್ಷಣಾವ್ಯವಸ್ಥೆಯಲ್ಲಿ ತಾನೂ ಸೇರಿಕೊಳ್ಳುತ್ತೇನೆ ಎಂದು ರಶಿಯಾ ಪಶ್ಚಿಮದ ರಾಷ್ಟ್ರಗಳಿಗೆ ಸೂಚಿಸಿದಾಗ "ಬೇಡ ಎಂಬ ಉತ್ತರವನ್ನು ಅದಕ್ಕೆ ಕೊಡಲಾಯಿತು. ರಶಿಯವನ್ನೂ ಸಂರಕ್ಷಣಾ ವ್ಯವಸ್ಥೆಯಲ್ಲಿ ಸೇರಿಸಿದರೆ, ಆಗ ಯಾರನ್ನು ಯಾರೂ ಕಾಪಾಡುವ ಪ್ರಮೇಯ ಉಳಿಯುವುದಿಲ್ಲ. ಭಾರತವು ಚೀನದೊಡನೆ ಪಂಚತತ್ವಗಳ ಒಪ್ಪಂದ ಮಾಡಿಕೊಂಡು ಕಮ್ಯುನಿಸ್ಟ ಆಕ್ರಮಣದ ಭೀತಿಯನ್ನು ನಿವಾರಿಸಿದುದರಿಂದ ಶಸ್ತ್ರಾಸ್ತ್ರಗಳ ಉತ್ಪಾದನೆಯಲ್ಲಿ ನಿರತರಾಗುವುದಾಗಿದ್ದ ಜನರನ್ನು ನಿರುದ್ಯೋಗಿಗಳಾಗಿ ಕೆಡವಿದೆಂದು ಅಮೇರಿಕದ ಅಭಿಪ್ರಾಯ. ಏಶ್ಯಾದ ಉಳಿದ ರಾಷ್ಟ್ರಗಳು ಇಂಥ ಹೆಡ್ಡತನದ ಹೆಜ್ಜೆ ಇಡಬಾರದೆಂಬ ಸದುದ್ದೇಶದಿಂದಲೇ ಜಗತ್ತಿನ ಯಾವ ಮೂಲೆಯಲ್ಲಿ ಜಗಳವಾದರೂ ಸೈನ್ಯ ಸಮೇತ ಧಾವಿಸಲು ಅವಕಾಶಮಾಡಿಕೊಡುವ ಸಂಧಿಯೊಂದನ್ನು ಅದು ಸಾಧಿಸಿತು ಕಾಶ್ಮೀರಕ್ಕೆ ಹಚ್ಚಿನ "ಸಂರಕ್ಷಣ"ಯನ್ನು ಈ ಟ್ರಿಟಿ ಪಾಕಿಸ್ತಾನದ ಬಾಪಸರುಲ್ಲಾಖಾನರು 'ಭಾರತವು ಅಗ್ನೇಸ್ಯ ಒಪ್ಪಂದದಿಂದ ಹೆದರಬೇಕಾಗಿಲ್ಲ—ಆದರ ಕಷ್ಟ ಕಾಲದಲ್ಲಿ ನಾವು ಸೈನ್ಯಸಹಾಯ ಮಾಡುತ್ತೇವೆ' ಎಂದರು

ಅಣು ಬಾಂಬುಗಳ ರಚನೆಯಲ್ಲಿ ತೊಡಗಿದ ಪಶ್ಚಿಮ ರಾಷ್ಟ್ರಗಳ ಮನೋಭಾ

(೭ನೇ ಪುಟ ನೋಡಿರಿ)

The Canara Industrial & Banking Syndicate Ltd.

ಕೃತಜ್ಞತೆಯ ಒಂದು ಮಾತು-

ತಮ್ಮ ಆಶ್ರಯವನ್ನು ನೀಡಿ ನಮ್ಮ ಸ್ಥಿರ ಪ್ರಗತಿಯು ಸಾಧ್ಯವಾಗುವಂತೆ ಮಾಡಿದುದಕ್ಕಾಗಿ ನಮ್ಮ ಎಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ನಾವು ಕೃತಜ್ಞರು ಹಿಂದಿನಂತೆ ಅವರ ಸಂಪೂರ್ಣ ತೃಪ್ತಿಗಾಗಿಯೂ ಅವರ ಸದ್ಭಾವ ಮತ್ತು ಸ್ನೇಹದ ಗಳಿಕೆಗಾಗಿಯೂ ಅವರನ್ನು ಸೇವಿಸಲು ನಾವು ಮುಂದಕ್ಕೂ ಎದುರು ನೋಡುತ್ತಿದ್ದೇವೆ.

ಚಲಾವಣೆಯ ಭಂಡವಾಳ	6½ ಕೋಟಿಗಳ ಮಿಕ್ಕಿದೆ.
ಠೇವಣಾತಿಗಳು	5 ಕೋಟಿಗೂ ಮಿಕ್ಕಿದೆ
ಗ್ರಾಹಕರ ಸಂಖ್ಯೆ	2 ಲಕ್ಷಕ್ಕೂ ಮಿಗಿದೆ

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ ೧೯೦೬] [ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ

ಕೊಳೆ ತೆಗೆಯುವ ಸಾಬೂನಿನ ತಯಾರಿಕೆ

ಸ್ವದೇಶೀ ಚಳವಳಿದಿಂದ ಬಲಿತುಕೊಂಡ ಉದ್ಯಮ

ಮೈಸೂರಿನ ಮುಖ್ಯ ಮಂತ್ರಿಗಳಾದ ಹನುಮಂತಯ್ಯನವರು ಕಳೆದ ವಾರ (ದಿನಾಂಕ ೨೦) ಬೆಂಗಳೂರಿನಲ್ಲಿ ಸೇರಿದ ಭಾರತೀಯ ಸಾಬೂನು ಹಾಗು ಪ್ರಸಾಧನ ದ್ರವ್ಯಗಳ ಉತ್ಪಾದಕರ ಸಂಘದ ಇಪ್ಪತ್ತನೆಯ ವಾರ್ಷಿಕ ಪರಿಷತ್ತನ್ನು ಉದ್ಘಾಟಿಸಿ, ಕೆಲವು ಅಮೂಲ್ಯವಾದ ಸಲಹೆಗಳನ್ನು ನೀಡಿದರು. ಅಲ್ಲಿಯ ಕೈಗಾರಿಕಾ ಮಂತ್ರಿ ಸಿದ್ಧವೀರಪ್ಪನವರೂ ಉತ್ಪಾದಕರ ಮುಂದಿರುವ ಕೆಲವು ಕಠಿಣ ಸಮಸ್ಯೆಗಳ ವಿಶ್ಲೇಷಣೆಯನ್ನು ಮಾಡಿ, ಅವರು ಕೈಗೊಳ್ಳಬೇಕಾದ ಉಪಾಯಗಳನ್ನು ಸೂಚಿಸಿದರು. ಪರಿಷತ್ತಿನ ಅಧ್ಯಕ್ಷತೆ ವಹಿಸಿದ್ದ ಡಾ. ಬಾದಾಮಿಯವರು ಸಾಬೂನು ಹಾಗು ಅದಕ್ಕೆ ಸಂಬಂಧಿಸಿದ ಇತರ ದ್ರವ್ಯಗಳ ಭಾರತೀಯ ಉತ್ಪಾದಕರು ಇದಿರಿಸಬೇಕಾಗಿ ಬಂದಿರುವ ಜಟಿಲವಾದ ಪ್ರಶ್ನೆಗಳನ್ನು ಪ್ರಸ್ತಾಪಿಸಿ, ಸರಕಾರದ ಸಹಾನುಭೂತಿಯನ್ನು ಯಾಚಿಸಿದರು.

ನಿತ್ಯೋಪಯೋಗಕ್ಕೆ ನಾವು ಬಳಸುವ ವಸ್ತುಗಳಲ್ಲಿ ಸಾಬೂನು ತನ್ನದೇ ಆದ ವಿಶಿಷ್ಟ ಸ್ಥಾನವನ್ನು ಪಡೆದಿದೆ. ಸುಶಿಕ್ಷಿತ ವರ್ಗಕ್ಕೆ ಸೇರಿದ ಜನರು ಸಾಬೂನಿಲ್ಲದ ಒಂದು ದಿನವನ್ನೂ ಕಳೆಯಲಾರರು. ಬಟ್ಟೆ ಬರೆಗಳನ್ನು ಒಗೆದು ಶುಭ್ರವಾಗಿ ಡುವುದಕ್ಕೂ ಮೈ ತೊಳೆದುಕೊಂಡು ಶರೀರ ಸೌಂದರ್ಯವನ್ನು ಸಂವರ್ಧಿಸುವುದಕ್ಕೂ ಸಾಬೂನು ಅತ್ಯವಶ್ಯಕವಾಗಿದೆ. ಇದರ ಹೊರತಾಗಿ ಪರಿಮಳದೆಣ್ಣೆ ಮುಂತಾದ ಪ್ರಸಾಧನ ದ್ರವ್ಯಗಳ ಉಪಯೋಗವನ್ನೂ ಮಾಡಿಕೊಂಡು ಚೆನ್ನಿಗರೆನಿಸುವ ಹವ್ಯಾಸವೂ ನಮ್ಮ ತರುಣ-ತರುಣಿಯರಲ್ಲಿ ಈಗ ಬಲಿಯುತ್ತಿದೆ.

ಹೀಗೆ ಜನರು ಬಿಡದೆ ಬಳಸುವ ಸಾಬೂನು ಮುಂತಾದವುಗಳನ್ನು ಭಾರತದಲ್ಲಿ ಮೂರುಘಟಕಗಳಲ್ಲಿ ಉತ್ಪಾದಿಸಲಾಗುತ್ತದೆ. ಸುಮಾರು ೩೦೦೦—೪೦೦೦ ಗುಡಿ ಕೈಗಾರಿಕಾ ಕೇಂದ್ರಗಳು ೭೬,೦೦೦ ಟನ್ನುಗಳಷ್ಟು, ಭಾರತೀಯ ಬಂಡವಾಳವನ್ನೊಳಗೊಂಡ ಸಂಸ್ಥೆಗಳು ೧೫೦೦೦೦ ಟನ್ನುಗಳಷ್ಟು ಹಾಗು ಭಾರತದಲ್ಲಿರುವ ಅಂತಾರಾಷ್ಟ್ರೀಯ ಉತ್ಪಾದಕ ವರ್ಗಗಳು ೫೦,೦೦೦ ಟನ್ನುಗಳಷ್ಟು ಸಾಬೂನನ್ನು ಪ್ರತಿ ವರ್ಷ ಉತ್ಪಾದಿಸುವ ಸಾಮರ್ಥ್ಯವನ್ನು ಹೊಂದಿವೆ. ಆದರೆ ಮೊದಲಿನೆರಡು ಘಟಕಗಳಲ್ಲಿ ನಿಜವಾದ ಉತ್ಪಾದನೆಯು ಕ್ರಮವಾಗಿ ೪೦% ಹಾಗು ೨೫% ಕಡಿಮೆಯೇ ಇದ್ದು, ಅಂತಾರಾಷ್ಟ್ರೀಯ ಉತ್ಪಾದಕ ವರ್ಗಗಳು ಮಾತ್ರ ತಮ್ಮ ಚಟುವಟಿಕೆಯನ್ನು ವಿಸ್ತರಿಸುವ ಸಲುವಾಗಿ ಹೊಸ ಯಂತ್ರೋಪಕರಣಗಳನ್ನು ತರಿಸಲು ಹಂಬಲಿಸುತ್ತಿವೆ.

ನಮ್ಮ ದೇಶದಲ್ಲಿ ಸಾಬೂನು ಕಾಲಿಟ್ಟದ್ದು ಈ ಶತಮಾನದ ಪ್ರಾರಂಭದಲ್ಲೆಂದು ಹೇಳಬಹುದು. ಮದ್ರಾಸು ಮತ್ತು ಮೈಸೂರುಗಳಲ್ಲಿ ಮೊತ್ತಮೊದಲಾಗಿ ಉತ್ಪಾದನೆಯನ್ನು ಬಹಳ ಮಿತವಾಗಿಯೇ ಪ್ರಾರಂಭಿಸಲಾಯಿತು. ಬೆಂಗಳೂರಲ್ಲಿ ೧೯೧೮ರಲ್ಲಿ ಸ್ಥಾಪಿಸಲ್ಪಟ್ಟ ಸರಕಾರದ ಸಾಬೂನು ಕಾರಖಾನೆಯ ಉತ್ಪಾದನೆ ದೇಶದಾದ್ಯಂತ ಪ್ರಸಿದ್ಧಿಯನ್ನು ಪಡೆಯಿತು. ಇದಕ್ಕೆ ಪೇಟೆಯಲ್ಲಿರುವ ಬೇಡಿಕೆಯು ಎಷ್ಟು ಹೆಚ್ಚಿದೆಯೆಂದರೆ ಕಾರಖಾನೆಯನ್ನು ಬೇಗನೆ ವಿಸ್ತರಿಸಿ, ಉತ್ಪಾದನಾ ಪ್ರಮಾಣವನ್ನು ಈಗಿನ ೭೦೦ ಟನ್ನುಗಳಿಗಿಂತ ೩,೦೦೦ ಟನ್ನುಗಳಿಗೆ ಏರಿಸುವ ಅಗತ್ಯವಿದೆಯೆಂದು ಮಂತ್ರಿಗಳ ಅಭಿಪ್ರಾಯ.

ಸಾಬೂನನ್ನು ತಯಾರಿಸುವ ಪ್ರಥಮ ಭಾರತೀಯ ಪ್ರಯತ್ನಗಳು ಯಶಸ್ವಿಯಾದುದರಿಂದ, ಮೊದಲನೇ ಮಹಾಯುದ್ಧಾನಂತರ ಬೇರೆ ಕಾರಖಾನೆಗಳೂ ತಲೆ ಎತ್ತಿದವು. ಭಾರತದಲ್ಲಿ ಪ್ರಬಲಿಸುತ್ತಿದ್ದ ಸ್ವದೇಶೀ ಚಳವಳಿವು ಕಾರಖಾನೆಗಳ ಪರಿಸ್ಥಿತಿಯನ್ನು ತುಂಬಾ ಭದ್ರಗೊಳಿಸಿತು. ಬೇರೆ ದೇಶಗಳಿಂದ ಸಾಬೂನುಗಳ ಆಯಾತವಾಗುವುದು ಕಡಿಮೆಯಾಯಿತು. ಇದರಿಂದ ತಮ್ಮ ವ್ಯಾಪಾರಕ್ಕೆ ಉಂಟಾದ ನಷ್ಟವನ್ನು ತಡೆಯುವುದಕ್ಕಾಗಿ ವಿದೇಶದ ಬಂಡವಾಳಿಗರು ಭಾರತದಲ್ಲಿಯೇ ಅಂತಾರಾಷ್ಟ್ರೀಯ ಸಂಯುಕ್ತ ಮಂಡಳದ ಹೆಸರಿನಲ್ಲಿ ಕಾರಖಾನೆಯನ್ನು ಸ್ಥಾಪಿಸಿದರು. ಇಂದು ನಿಜವಾದ ಭಾರತೀಯ ಕಾರಖಾನೆಗಳಿಗೆ ಈ ಮಂಡಳದೊಡನೆ ಸ್ಪರ್ಧಿಸುವುದೇ ಕಠಿಣವೆನಿಸುವಷ್ಟು ಇವರ ಚಟುವಟಿಕೆಗಳು ಹೆಚ್ಚಿರುತ್ತವೆ.

ಪ್ರಥಮ ಮಹಾಯುದ್ಧಕ್ಕೆ ಮುಂಚೆ ವರ್ಷಕ್ಕೆ ೩೪೦೦೦ ಟನ್ನುಗಳಷ್ಟಿದ್ದ ಸಾಬೂನಿನ ಉತ್ಪಾದನೆಯು ದ್ವಿತೀಯ ಮಹಾಯುದ್ಧಕ್ಕೆ ಮುಂಚೆ ೭೦೦೦೦ ಟನ್ನುಗಳಿಗೆ ಏರಿತು. ಮೊನ್ನಿನ ಯುದ್ಧದ ಬಳಿಕ ಆಯಾತ ಪ್ರಮಾಣವು ಗಣನೀಯವಾಗಿ ತಗ್ಗಿಕೊಂಡುದರಿಂದ ದೇಶದೊಳಗಿನ ಉತ್ಪಾದನೆಯು ಬಹಳಷ್ಟು ಹೆಚ್ಚಿಕೊಂಡು ೧೯೪೪ರಲ್ಲಿ ೧,೪೦,೦೦೦ ಟನ್ನುಗಳ ಶಿಖರ ಪ್ರಮಾಣವನ್ನು ಮುಟ್ಟಿತು. ಭಾರತದಲ್ಲಿ ವರ್ಷಕ್ಕೆ ೩ ಲಕ್ಷ ಟನ್ನುಗಳಷ್ಟಾದರೂ ಸಾಬೂನು ತಯಾರಿಸಲ್ಪಡಬೇಕೆಂದು ೧೯೪೭ರಲ್ಲಿ ಒಂದು ಮಂಡಳವು ಸೂಚಿಸಿತು. ಯೋಜನಾ ಆಯೋಗವು ೨,೮೦,೦೦೦ ಟನ್ನುಗಳನ್ನು ಉತ್ಪಾದಿಸಬಲ್ಲ ರೀತಿಯಲ್ಲಿ ಕಾರ್ಖಾನೆಯ ವಿಸ್ತರಣೆಯಾಗಬೇಕೆಂದೂ ಕನಿಷ್ಟ ೨ ಲಕ್ಷ ಟನ್ನುಗಳಷ್ಟಾದರೂ ಸಾಬೂನನ್ನು ಇವು ಪ್ರತಿ ವರ್ಷ ಉತ್ಪಾದಿಸಬೇಕೆಂದೂ ತೀರ್ಮಾನಿಸಿತು.

ಇಷ್ಟು ಮಾಡಿದರೂ ಭಾರತದಲ್ಲಿ ೧೯೫೬ನೇ ಇಸವಿಗಾಗುವಾಗ ಒಬ್ಬೊಬ್ಬನು ಉಪಯೋಗಿಸುವ ಸಾಬೂನಿನ ಪ್ರಮಾಣವು ವರ್ಷಕ್ಕೆ ಎರಡು ರಾತಲುಗಳೂ ಆಗುವುದಿಲ್ಲ. ಇಷ್ಟು ಕಡಿಮೆ ಸಾಬೂನನ್ನಾದರೂ ಒದಗಿಸುವುದಕ್ಕೆ ಸಂಘಟಿತ ಪ್ರಯತ್ನಗಳು ಯೋಜನೆಯು ಕಳೆದ ಮೂರೂವರೆ ವರ್ಷಗಳಲ್ಲಿ ನಡೆದಂತೆ ಕಾಣುವುದಿಲ್ಲ. ಕೈಗಾರಿಕೆಯ ವಿಸ್ತರಣೆ ನಡೆಯುವ ಬದಲು, ಉತ್ಪಾದನೆಯ ಪ್ರಮಾಣವೇ ತಗ್ಗುತ್ತಿರುವಂತೆ ಕಾಣಿಸುತ್ತಿದೆ. ಇದರ ಕಾರಣವನ್ನು ವಿಚಾರಿಸಿ, ಪರಿಹಾರೋಪಾಯಗಳನ್ನು ಸೂಚಿಸಲು ಅಭಿವೃದ್ಧಿ ಮಂಡಳವೊಂದನ್ನು ನೇಮಿಸಬೇಕೆಂದು ಭಾರತೀಯ ಸಾಬೂನು ಕಾರಖಾನೆವಾರರು ಸರಕಾರವನ್ನು ಬಿನ್ನವಿಸಿದರೂ ನಿಷ್ಪ್ರಯೋಜಕವಾಗಿದೆ. ಕೈಗಾರಿಕೆಯ ಒಂದು ಘಟಕಕ್ಕೆ ಮಾತ್ರ ವಿಚಾರಣಾ ಸಮಿತಿಯನ್ನು ನೇಮಿಸುವುದು ಇಷ್ಟವಲ್ಲವೆಂದು ಸರಕಾರ ಹೇಳುತ್ತದೆ. ಆದರೆ ಭಾರತೀಯ ಬಂಡವಾಳವಿರುವ ಈ ಘಟಕವೇ ಇಲ್ಲಿಯ ಕಾರಖಾನೆಗಳಲ್ಲಿ ನೂರಕ್ಕೆ ತೊಂಭತ್ತೊಂಭತ್ತರಷ್ಟನ್ನು ಒಳಗೊಂಡದೆಯೆಂಬ ಅಂಶ ಸರಕಾರದ ಗಮನಕ್ಕೆ ಬಂದಿಲ್ಲ.

ಅಬಕಾರಿ ಸುಂಕ, ಮಾರಾಟ ತೆರಿಗೆ ಮುಂತಾದ ಕೆಲವು ವಿಷಯಗಳೂ ಭಾರತೀಯ ಉತ್ಪಾದಕರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುವುದಿಲ್ಲ. ಈಚೆಗೆ ಏರಿಸಿದ ಅಬಕಾರಿ ಸುಂಕದಲ್ಲಿ ತುಸು ರಿಯಾಯತಿಯನ್ನು ತೋರಿಸಲಾಗಿದೆಯೇನೋ ನಿಜ; ಆದರೆ ಇದು ಕಷ್ಟವನ್ನು ಸಂಪೂರ್ಣ ಪರಿಹರಿಸಿಲ್ಲ. ಮಾರಾಟ ತೆರಿಗೆಯಂತೂ ಒಂದೊಂದು ರಾಜ್ಯದಲ್ಲಿ ಒಂದೊಂದು ರೀತಿಯಾಗಿದ್ದು ಅಂತರ್—ರಾಜ್ಯ ವ್ಯಾಪಾರ ಮಾಡುವಾಗ ಬಹಳ ತೊಡಕುಗಳು ಉದ್ಭವಿಸುತ್ತವೆ. ರಾಜ್ಯ ಸರಕಾರಗಳು ತಮ್ಮ ಆದಾಯದ ಬಾಬುಗಳಲ್ಲಿ ಮುಖ್ಯವಾದ ಈ ತೆರಿಗೆಯ ವಿಷಯದಲ್ಲಿ ಸ್ವೇಚ್ಛೆಯಿಂದ ವರ್ತಿಸಲು ತಮಗಿರುವ ಅಧಿಕಾರವನ್ನು ಬಿಟ್ಟುಗೊಡಲು ಸಿದ್ಧವಿಲ್ಲವೆಂದು ತೋರುತ್ತದೆ—ಹೀಗಿದ್ದರೂ ಕೇಂದ್ರ ಸರಕಾರವು ಸಾಧಾರಣ ರೀತಿಯ ಏಕರೂಪತೆಯನ್ನಾದರೂ ತರಲು ಪ್ರಯತ್ನಿಸಬೇಕೆಂದು ಇಷ್ಟವೆಂದು ಕೈಗಾರಿಕಾ ವಲಯಗಳು ಹೇಳುತ್ತವೆ.

ಇದೆಲ್ಲಕ್ಕಿಂತಲೂ ಶೋಚನೀಯವಾದ ಒಂದು ಅಂಶವೂ ಉಂಟು—ಅದೆಂದರೆ, ಸ್ವದೇಶೀವ್ರತದಲ್ಲಿ ನಿಷ್ಠೆ ಕಡಿಮೆಯಾಗಿರುವುದು. ಇತರ ಕೈಗಾರಿಕೆಗಳಂತೆ ಸಾಬೂನಿನ ಕೈಗಾರಿಕೆಯೂ ಬೆಳೆಯುವು

(೧೧ನೇ ಪುಟ ನೋಡಿರಿ.)

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತವೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತವೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:
THE COMMERCIAL CORPORATION OF INDIA, LTD.,
UDIPI, S. India.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:-

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪ್ಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಇಂಡೋನೇಶಿಯ–ಭಾರತದ ಪುರಾತನ ಗೆಳೆಯ

ಸಾಂಸ್ಕೃತಿಕ ಬಾಂಧವ್ಯವೇ ಮೈತ್ರಿಯ ತಳಗಟ್ಟು

ರಾಮಾಯಣವನ್ನು ಓದಿದವರಿಗೆ ಶ್ರೀ ರಾಮಚಂದ್ರನು ಸೀತಾ ಮಾತೆಯ ಅನ್ವೇಷಣಕ್ಕಾಗಿ ದಶದಿಕ್ಕುಗಳಿಗೂ ವಾನರವೀರರನ್ನು ಕಳಿಸುವಾಗ, ಯವದ್ವೀಪಕ್ಕೂ ಅವರನ್ನು ಅಟ್ಟಿದ್ದನೆಂದು ತಿಳಿದಿರಬಹುದು. ಪ್ರಾಚೀನ ಸಾಹಿತ್ಯದಲ್ಲಿ ಭಾರತದ ದಕ್ಷಿಣಾರ್ಧವನ್ನು ಜಂಬೂ ದ್ವೀಪವೆಂದು ಕರೆಯುತಿದ್ದರು. ಇಲ್ಲಿಂದ ಪೂರ್ವಕ್ಕೆ ಚೀನದ ವರೆಗೆ ವ್ಯಾಪಿಸಿದ್ದ ಪ್ರದೇಶದಲ್ಲಿ ಕಂಗೊಳಿಸುವ ಅನೇಕ ದ್ವೀಪ ಸಮುದಾಯಗಳನ್ನು "ನೂಸಾ" ಎಂದು ಹೇಳುತ್ತಿದ್ದರು. ಇಲ್ಲಿರುವ ದ್ವೀಪಗಳೆಲ್ಲ ಭಾರತದೊಡನೆ ನಿಕಟ ಸಂಬಂಧವಿಟ್ಟುಕೊಂಡವುಗಳೆಂದು ಪಾಶ್ಚಾತ್ಯರಿಗೆ ಮನವರಿಕೆಯಾದಾಗ ಅವರು ಗ್ರೀಕ ವ್ಯುತ್ಪತ್ತಿಯ ಈ ಶಬ್ದವನ್ನೇ ಉಪಯೋಗಿಸಿಕೊಂಡು "ಇಂಡೋನೇಶಿಯಾ" ಎಂಬುದಾಗಿ ಈ ಪ್ರದೇಶವನ್ನು ಹೆಸರಿಸಿದರು. ಪ್ರಕೃತ ಭೌಗೋಲಿಕ ನಕ್ಷೆಯಲ್ಲಿ ಮಲಯಾ ಅರ್ಧದ್ವೀಪದಿಂದ ತೊಡಗಿ, ಆಸ್ಟ್ರೇಲಿಯದ ಬಡಗು ಅಂಚಿನವರೆಗೂ ವಿಶಾಲವಾಗಿ ಹರಡಿರುವ ದ್ವೀಪ ಸಮುದಾಯಗಳು ಇಂಡೋನೇಶಿಯದ ವಿಸ್ತಾರವನ್ನು ಸೂಚಿಸುತ್ತವೆ. ಕಳೆದ ವಾರ ಈ ದೇಶದ ಪ್ರಧಾನ ಮಂತ್ರಿಗಳು ಹೊಸದೆಹಲಿಗೆ ಸಪತ್ನೀಕರಾಗಿ ಆಗಮಿಸಿ, ಉಭಯ ರಾಷ್ಟ್ರಗಳ ಪ್ರಾಚೀನ ಬಾಂಧವ್ಯವನ್ನು ಪುನರುಜ್ಜೀವನ ಗೊಳಿಸಿದರು.

ಇಂಡೋನೇಶಿಯದ ಚರಿತ್ರೆಯನ್ನು ನಮ್ಮ ಇತಿಹಾಸದೊಂದಿಗೆ ಹೋಲಿಸಿದರೆ ತಪ್ಪೇ ಆಗದು. ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದಿನಿಂದ ನಮ್ಮೆರಡು ರಾಷ್ಟ್ರಗಳಲ್ಲಿ ಮೈತ್ರಿ ಬೆಳೆದು ಬಂದಿರುವುದು. ದಕ್ಷಿಣ ಭಾರತದ ರಾಜರುಗಳು ಪೂರ್ವಾಭಿಮುಖರಾಗಿ ದಿಗ್ವಿಜಯವನ್ನು ಕೈಗೊಂಡು ಮುಂದೆ ಸಾಗುತ್ತಾ ಯವ (ಜಾವಾ) ಸುಮಾತ್ರಾ, ಬೋರ್ನಿಯೋ ಮುಂತಾದ ದ್ವೀಪಗಳ ಮೇಲೆ ಒಡೆತನವನ್ನು ಸ್ಥಾಪಿಸಿದ್ದರು. ನಮ್ಮ ಚಕ್ರಾಧಿಪತಿಗಳ ಅಂಗ ರಾಜ್ಯವಾಗಿ ವಿಕಸಿತ ಹೊಂದಿದ ಇಂಡೋನೇಶಿಯದ ಸಂಸ್ಕೃತಿಯಲ್ಲಿ ಭಾರತೀಯ ಲಕ್ಷಣಗಳು ಇಂದಿಗೂ ಒಡೆದು ಕಾಣುತ್ತವೆ. ಭಾರತೀಯ ಇತಿಹಾಸಕಾರರಿಗೆ ಬಲಿ ಮುಂತಾದ ಇಂಡೋನೇಶಿಯದ ದ್ವೀಪಗಳು ಅಧ್ಯಯನಕ್ಕೂ ಅನುಸಂಧಾನಕ್ಕೂ ಅತ್ಯಂತ ಉಪಯುಕ್ತವಾದ ಅನೇಕ ಸಂಗತಿಗಳನ್ನು ಒದಗಿಸುತ್ತವೆ. ಭಾರತದ ಪ್ರಾಚೀನ ವೈಭವ ಪರಂಪರೆಯ ಸ್ಪಷ್ಟ ಕಲ್ಪನೆಯನ್ನು ಮಾಡಿಕೊಳ್ಳಬೇಕೆನ್ನುವಾತನು ಇಂಡೋನೇಶಿಯದ ಸಂದರ್ಶನ ಮಾಡದಿದ್ದರೆ, ಕೃತ ಕೃತ್ಯನಾಗಲಾರನೆಂದು ಹೇಳುವಷ್ಟು ಮಹತ್ವವು ಇಲ್ಲಿಯ ಸಂಸ್ಕೃತಿಗೆ ಪ್ರಾಪ್ತವಾಗಿದೆ.

ಜಾವಾ, ಸುಮಾತ್ರಾ ದ್ವೀಪಗಳಲ್ಲಿ ತಿರುಗಾಡಿದಂತೆಲ್ಲ ನಮಗೆ ಪುರಾತನಕಾಲದ ಹಿಂದೂ ರಾಜರ ಕೈವಾಡಕ್ಕೆ ಸಾಕ್ಷ್ಯಗಳು ನೋಡಸಿಗುತ್ತವೆ. ಶಿಲ್ಪ ಹಾಗು ಚಿತ್ರಸೌಂದರ್ಯಕ್ಕೆ ಪ್ರಸಿದ್ಧಿ ಹೊಂದಿದ ಅನೇಕ ದೇವಾಲಯಗಳು ಇಲ್ಲಿರುತ್ತವೆ. ರಾಮಾಯಣ, ಭಾಗವತ ಮುಂತಾದ ಭಾರತೀಯ ಸಾಹಿತ್ಯ ಗ್ರಂಥಗಳಿಂದ ತೆಗೆದುಕೊಂಡ ಅನೇಕ ಸುಂದರ ಸನ್ನಿವೇಶಗಳನ್ನು ಕಲ್ಲಿನಲ್ಲಿ ಕೊರೆದು ಮೋಹಕವಾಗಿ ನಿಲ್ಲಿಸಿರುವುದನ್ನು ಕಂಡು ಭಾರತೀಯ ಸಂಸ್ಕೃತಿಯ ಅಭಿಮಾನಿಗಳಿಗೆ ಊಹಣವನ್ನುಂಡಷ್ಟು ಸಂತೋಷವಾಗುತ್ತದೆ. ಒಂದು ಕಡೆ ಕುಂಭಕರ್ಣನನ್ನು ನಿದ್ರೆಯಿಂದ ಎಚ್ಚರಿಸುವುದಕ್ಕೋಸ್ಕರ ಶಂಖ ಊದುತ್ತಿರುವುದನ್ನೂ ಆನೆಗಳು ಘೀಳಿಡುತ್ತಿರುವುದನ್ನೂ ಕಾಣಬಹುದು. ಇಲ್ಲಿ ವ್ಯಂಗ್ಯಕ್ಕೆ ಎಷ್ಟು ಪ್ರಾಧಾನ್ಯವನ್ನು ಕೊಡಲಾಗಿದೆಯೋ ಅಷ್ಟೇ ಶಿಲ್ಪ ಕೌಶಲ್ಯಕ್ಕೂ ಮನ್ನಣೆ ನೀಡಲ್ಪಟ್ಟಿದೆ. ಶಿಲ್ಪ ಚೂಡಾಮಣಿ ಎನಿಸಬಹುದಾದ ಅನೇಕ ಬೌದ್ಧ ಮಂದಿರಗಳೂ ಹಿಂದೂ ದೇವಾಲಯಗಳೂ ಅಲ್ಲಲ್ಲಿ ಕಣ್ಣಿಗೆ ಬೀಳುತ್ತವೆ.

ಮಹಾರಾಜ ಮೂಲವರ್ಮನು ಕ್ರಿ. ಶ. ಐದನೇ ಶತಮಾನದಲ್ಲಿ ಬೋರ್ನಿಯೋದಲ್ಲಿ ಅಶ್ವಮೇಧ ಯಜ್ಞವನ್ನು ಕೈಗೊಂಡನೆಂದು ಸಂಸ್ಕೃತದಲ್ಲಿ ಬರೆಯಲಾದ ಶಿಲಾ ಲೇಖವೊಂದು ತಿಳಿಸುತ್ತದೆ. ಈ ಸಂದರ್ಭದಲ್ಲಿ ಅವನು ದಕ್ಷಿಣೆಯ ರೂಪದಲ್ಲಿ ಇಪ್ಪತ್ತು ಸಹಸ್ರ ದನಗಳನ್ನು ಕೊಟ್ಟನು! ಇಲ್ಲಿಗೆಲ್ಲ ಮುಂದೆ ಅರಬರೂ ಚೀನೀಯರೂ ಬಂದು ನೆರೆದು, ನಾಕಷ್ಟು ಪರಿವರ್ತನೆಯನ್ನು ಸಾಧಿಸಿದ್ದರೂ ಭಾರತೀಯ ಮುದ್ರೆಯು ಪೂರಾ ಕೆಟ್ಟು ಹೋಗಿಲ್ಲ. ಮುಖ್ಯವಾಗಿ ಬಲಿ ದ್ವೀಪದಲ್ಲಿ ಹಿಂದೂ ವೈಭವದ ಅವಶೇಷಗಳು ಈಗಲೂ ಸ್ಪಷ್ಟವಾಗಿ ದೃಗ್ಗೋಚರವಾಗುತ್ತವೆ. ಬ್ರಾಹ್ಮಣರು ಮಂತ್ರಗಳನ್ನು ಹೇಳುತ್ತಾರೆ: ಗಾಯತ್ರಿ ಮಂತ್ರದಲ್ಲಿ "ಭರ್ಗೋ ದೇವಸ್ಯಧೀಮಹಿ" ಎಂಬ ಅಂಶ ಅವರಿಗೆ ಮರೆತುಹೋಗಿದ್ದರೂ ಮಂತ್ರದ ಮೊದಲ ಅಂಶವನ್ನೂ ಅಂತ್ಯ ಭಾಗವನ್ನೂ ಸ್ಪಷ್ಟವಾಗಿ ಉಚ್ಚರಿಸುತ್ತಾರೆ.

ಬ್ರಾಹ್ಮಣರಿಗೆ ಸಮಾಜದಲ್ಲಿ ಅತ್ಯಂತ ಪೂಜ್ಯವಾದ ಸ್ಥಾನ ಕೊಡಲ್ಪಟ್ಟಿರುವುದು: ಧರ್ಮ ಹಾಗು ನ್ಯಾಯದ ಪರಿಪಾಲನೆಯಲ್ಲಿ ಅವರು ಸದಾ ನಿರತರಾಗಿರಬೇಕೆಂದು ಸಾಮಾಜಿಕರು ಅಪೇಕ್ಷಿಸುತ್ತಾರೆ. ದೇವ ದೇವತೆಗಳಿಗೆ ಹಾಗು ಪಿತೃಗಳಿಗೆ ತಪ್ಪದೆ ಪೂಜೆಗಳನ್ನು ಸಲ್ಲಿಸಿ, ಬಗೆ ಬಗೆಯ ನೈವೇದ್ಯವನ್ನು ಅರ್ಪಿಸಿ, ಸಂಪ್ರೀತರಾಗಿಸಲು ಜನರು ತಪ್ಪುವುದಿಲ್ಲ. ನೃತ್ಯ ಹಾಗು ಸಂಗೀತಗಳೆಂದರೆ ಅವರೆಲ್ಲರಿಗೂ ಅಚ್ಚುಮೆಚ್ಚು: ಗಂಡಸರಿರಲಿ, ಹೆಂಗಸರಿರಲಿ, ಪದ ಹೇಳುತ್ತಾ ಕುಣಿಯುವುದನ್ನು ನೋಡಿದರೆ ಮನಸ್ಸು ಆನಂದತುಂದಿಲವಾಗುತ್ತದೆ. ಬಲಿಯ ತರುಣಿಯರು ದೇವಾಲಯಗಳಿಗೆ ಹೋಗಿ ಪೂಜೆ ಮಾಡಿ ನರ್ತನದಿಂದ ಭಗವಂತನನ್ನು ಸೇವಿಸುವಾಗ ಮನಸ್ಸು ನಿಜಕ್ಕೂ ಪ್ರಫುಲ್ಲವಾಗುತ್ತದೆ. ೮—೧೨ ವರ್ಷ ವಯಸ್ಸಿನ ಈ ದೇವ ನರ್ತಕಿಯರಲ್ಲಿ ಪ್ರಿಯಂವದಾ, ಪ್ರಿಯಚಿತ್ರ, ಲಕ್ಷ್ಮಿ ಮುಂತಾದ ಭಾರತೀಯರಿಗೆ ಸುಪರಿಚಿತವೆನಿಸಿದ ಹೆಸರುಗಳುಳ್ಳವರೆಷ್ಟೋ ಇದ್ದಾರೆ.

ಹಬ್ಬ ಹುಣ್ಣಿಮೆಗಳು ಜನರನ್ನು ಉತ್ತೇಜಿತರನ್ನಾಗಿ ಮಾಡುತ್ತವೆ. ಹೊಸ ವರ್ಷದ ಶುಭದಿನದಂದು ಮನೆಯ ದೇವರಿಗೆ ಇಪ್ಪತ್ತು–ಮೂವತ್ತು ಮೈಲುಗಳಷ್ಟು ನಡೆದಾದರೂ ಸಮುದ್ರ ಸ್ನಾನ ಮಾಡಿಸಲಾಗುತ್ತದೆ. ಗಾಯನ – ನರ್ತನಗಳೂ ಪೂಜೆ ಪುರಸ್ಕಾರಗಳೂ ನೆರವೇರುತ್ತವಲ್ಲದೆ ಕೋಳಿ ಅಂಕ, ಕಂಬಳದ ಓಟ ಮುಂತಾದುವುಗಳನ್ನೂ ಜರಗಿಸಲಾಗುತ್ತದೆ. ಕುಟುಂಬದಲ್ಲಿ ಯಾರಾದರೊಬ್ಬರು ಸತ್ತರೆ, ಅವರ ಅಂತ್ಯ ಸಂಸ್ಕಾರವನ್ನು ಒಳ್ಳೇ ವಿಜೃಂಭಣೆಯಿಂದ ಮಾಡಲಾಗುತ್ತದೆ. ಶ್ರೀಮಂತ ಕುಟುಂಬಗಳಾದರೆ ೨೦—೩೦ ಸಾವಿರ ರೂಪಾಯಿಗಳ ವೆಚ್ಚ ಬಂದರೂ ಬಂದೀತು. ಸತ್ತೊಡನೆಯೇ ಶವಸಂಸ್ಕಾರ ಮಾಡುವುದಿಲ್ಲ. ಕೆಲವು ವಾರಗಳ ವರೆಗಾದರೂ ಶವವನ್ನು ಇಡಲಾಗುವುದು; ಮತ್ತು ಪೂಜಾದಿಗಳನ್ನು ಮಾಡಲಾಗುವುದು. ಬಡವರಾದರೆ, ಆ ವೇಳೆ ಅಂತ್ಯ ಸಂಸ್ಕಾರ ಕೈಗೊಳ್ಳುತ್ತಾರೆ. ಶ್ರೀಮಂತರಾದರೆ ಕುಟುಂಬದ ನಾಲ್ಕಾರು ಹೆಣಗಳು ಒಟ್ಟಾದ ಬಳಿಕ ಅಂತ್ಯ ಸಂಸ್ಕಾರವಾಗುತ್ತದೆ. "ನವಮೇರು" ಎಂಬ ವಿಶೇಷ ಮಂದಿರವು ಇದಕ್ಕಾಗಿ ರಚಿಸಲ್ಪಡುತ್ತದೆ.

ಹಿಂದುಗಳ ಬಳಿಕ ವ್ಯಾಪಾರಕ್ಕಾಗಿ ಅರಬರೂ ಚೀನೀಯರೂ ಈ ಪ್ರದೇಶವನ್ನು ಉಪಯೋಗಿಸಿಕೊಂಡರು. ೧೭ ಹಾಗು ೧೮ನೇ ಶತಮಾನಗಳಲ್ಲಿ ಡಚ್ಚರ ಈಸ್ಟ್ ಇಂಡಿಯಾ ಕಂಪೆನಿಯು ವ್ಯಾಪಾರಕ್ಕಾಗಿ ಈ ಪ್ರದೇಶದಲ್ಲಿ ನೆಲೆಯೂರಿತು. ಕಂಪೆನಿ ಆಡಳಿತ ವ್ಯವಸ್ಥೆಯಲ್ಲಿ ಕೈಹಾಕುತ್ತಿರಲಿಲ್ಲ. ಅದರ ಮುಖ್ಯ ಕೇಂದ್ರವು ಜಾವಾ ಆಗಿದ್ದಿತು. ಅಲ್ಲಿಯ ಫಲವತ್ತಾದ ಭೂಮಿಯಿಂದ ಎಷ್ಟು ಹೆಚ್ಚು ಲಾಭ ಪಡೆಯಬಹುದೋ ಅಷ್ಟನ್ನೂ ಶೋಷಿಸಲು ಕಂಪೆನಿ ನಿರ್ಧಾರ ಮಾಡಿದ್ದಂತೆ ಕಾಣುತ್ತದೆ. ಇಲ್ಲಿ ಪ್ರಪಂಚದಲ್ಲಿ ಉತ್ಪಾದನೆಯಾಗುವ ರಬ್ಬರಿನಲ್ಲಿ ೩೩%. ತವರಿನಲ್ಲಿ ೧೭%, ಚಹದಲ್ಲಿ ೧೭%, ಸಕ್ಕರೆಯಲ್ಲಿ ೯%, ಅಕ್ಕಿಯಲ್ಲಿ ೭%, ಪೆಟ್ರೋಲಿನಲ್ಲಿ ೩%, ದೊರೆಯುತ್ತದೆ. ಚಿನ್ನದ ಈನಾಡನ್ನು ಡಚ್ಚರು ಬಿಟ್ಟೂ ಬಿಡದೆ ಶೋಷಿಸಿದ ಪರಿಣಾಮವಾಗಿ ಕೊನೆಕೊನೆಗೆ ದೇಶದಲ್ಲಿ ಅಶಾಂತ ವಾತಾವರಣ ಹುಟ್ಟಾಯಿತು. ಭೂಸಾರವು ತಗ್ಗಿ ಕೊಂಡು, ರೈತ ವರ್ಗ ಚಿಂತೆಯ ಕೊಳ್ಳೆಯಾಯಿತು.

ಶೋಷಣೆಯೇ ಅಲ್ಲಿಯ ಜನರಲ್ಲಿ ಸ್ವಾತಂತ್ರ್ಯದಾಹವನ್ನು ಹುಟ್ಟಿಸಿತೆಂದರೆ ತಪ್ಪಾಗದು. ಪ್ರಜೆಗಳ ಈ ಹೋರಾಟವು ಡಚ್ಚರ ಸ್ವದೇಶವಾದ ಹೊಲ್ಲೆಂಡಿನ ಹಿತಕ್ಕೆ ಅನುಕೂಲವಿರಲಿಲ್ಲ. ಆದುದರಿಂದ ಈ ದೇಶವನ್ನು ಬಿಟ್ಟು ಹೋಗುವುದು ಅವರಿಗೆ ಪ್ರಿಯವೆನಿಸಲಿಲ್ಲ. ಇಲ್ಲಿಯ ದ್ವೀಪಗಳ ಆರ್ಥಿಕ ಉನ್ನತಿಗಾಗಿ ಸಾಲಗಳನ್ನು

(೯ನೇ ಪುಟನೋಡಿ.)

ZANDU'S THREE GEMS of AYURVEDIC MEDICINES

ಝಾಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.

ಝಾಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಾಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಾಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-MADRAS-3.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ಫೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Col) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು

ನೆಹರೂ-ಜೊಜೊ ಸಮಾಲೋಚನೆ

ವಿಶ್ವಶಾಂತಿ ಸಾಧಿಸುವ ಹೆಬ್ಬಯಕೆ

ಇಂಡೋನೇಶಿಯದ ಪ್ರಧಾನ ಮಂತ್ರಿ ಡಾ. ಅಲಿ ಸಾಸ್ತ್ರಾ ಅಮಿಡೊ ಜೊಜೊರವರು ತಮ್ಮ ಪತ್ನಿ ಮತ್ತು ಇತರ ಕೆಲವರೊಡನೆ ದಿನಾಂಕ ೨೨ರಂದು ಹೊಸದೆಹಲಿಯಲ್ಲಿ ನೆಹರೂರೊಡನೆ ಸಮಾಲೋಚನೆ ನಡೆಸುವ ಉದ್ದೇಶದಿಂದ ಬಂದಿಳಿದರು. ವಿಮಾನ ನಿಲ್ದಾಣದಲ್ಲಿ ಅವರಿಗೆ ಸಂಭ್ರಮದ ಸ್ವಾಗತವನ್ನು ಕೋರಲಾಯಿತು ಗೌರವ ರಕ್ಷೆಯನ್ನು ಸ್ವೀಕರಿಸಿದ ಬಳಿಕ ಜೊಜೊರವರು ಸುದ್ದಿಗಾರರೊಡನೆ ಮಾತನಾಡುತ್ತಾ "ನಾವಿನ್ನೂ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದ್ದಾಗ ೧೯೪೭ರಲ್ಲಿ ಏಶ್ಯಾ ರಾಷ್ಟ್ರಗಳ ಪರಿಷತ್ತಿಗೆಂದು ಇಲ್ಲಿಗೆ ಬಂದದ್ದುಂಟು. ಅಂದಿನಿಂದ ಇಂದಿನವರೆಗೂ ಉಭಯ ರಾಷ್ಟ್ರಗಳ ಸ್ನೇಹಬಾಂಧವ್ಯವು ಹೆಚ್ಚುತ್ತಲೇ ಬಂದಿರುವುದು" ಎಂದರು "ಜಗತ್ತಿನಲ್ಲಿ ಶಾಂತಿ ಪ್ರದೇಶವನ್ನು ವಿಸ್ತರಿಸುವುದಕ್ಕಾಗಿ ನಾನೂ ನೆಹರೂರವರೂ ವಿಶ್ವಪ್ರಯತ್ನ ಮಾಡುತ್ತೇವೆ" ಎಂದವರು ಹೇಳಿದರು.

ರಾಜ ಘಾಟಿಗೆ ಭೇಟಿ

ಜೊಜೊರವರು ಪರಿವಾರ ಸಮೇತ ಮಹಾತ್ಮಾ ಗಾಂಧೀಜಿಯ ಸಮಾಧಿ ಇರುವ ರಾಜ ಘಾಟಿಗೆ ಹೋಗಿ ಪುಷ್ಪ ಗುಚ್ಛವನ್ನು ಅರ್ಪಿಸಿದರು. ಮುಂದೆ ಅವರು ರಾಷ್ಟ್ರಪತಿ ರಾಜೇಂದ್ರ ಪ್ರಸಾದರನ್ನೂ ಉಪರಾಷ್ಟ್ರಪತಿ ರಾಧಾಕೃಷ್ಣನ್ನರನ್ನೂ ಕಂಡರು. ಅವರ ಗೌರವಾರ್ಥ ರಾಷ್ಟ್ರಪತಿಗಳು ಚಹಾಕೂಟವನ್ನೂ ಪ್ರಧಾನ ಮಂತ್ರಿಗಳು ಭೋಜನ ಸಮಾರಂಭವನ್ನೂ ಏರ್ಪಡಿಸಿದ್ದರು. ಇಲ್ಲಿ ಮಾತನಾಡಿದ ಜೊಜೊರವರು "ಜಗತ್ತಿನ ಇತರ ಭಾಗಕ್ಕಿಂತಲೂ ಏಶ್ಯದಲ್ಲಿ ಈಗ ನವಇತಿಹಾಸವು ರೂಪಿಸಲ್ಪಡುತ್ತಿದೆ. ಈ ಸ್ಥಾನಾಂತರವನ್ನು ಏಶ್ಯಾದ ದೃಷ್ಟಿಕೋಣದಿಂದ ಗಮನಿಸುವ ಕಾಲ ಪ್ರಾಪ್ತವಾಗಿದೆ" ಎಂದರು.

ಸ್ವಾತಂತ್ರ್ಯ ಯೋಧ

ತಮ್ಮ ನಾಲ್ಕು ದಿನಗಳ ವಾಸ್ತವ್ಯದಲ್ಲಿ ಜೊಜೊರವರು ಶಿಕ್ಷಣ ಸಂಸ್ಥೆಗಳಿಗೆ ಭೇಟಿ, ತಾಜಮಹಾಲದ ಸಂದರ್ಶನ ಮುಂತಾದ ಕಾರ್ಯಕ್ರಮಗಳನ್ನಿಟ್ಟು ಕೊಂಡಿದ್ದರು. ಹೊಸದೆಹಲಿಯಲ್ಲಿ ನೀಡಲಾದ ಪೌರಸತ್ಕಾರದಲ್ಲಿಯೂ ಇವರು ಭಾಗವಹಿಸಿದ್ದರು. ಅಲ್ಲಿ ಅವರಿಗೆ ಅರ್ಪಿಸಲಾದ ಮಾನಪತ್ರದಲ್ಲಿ "ಒಂದು ರಾಷ್ಟ್ರದ ಪ್ರಧಾನ ಮಂತ್ರಿಗಳೆಂದಷ್ಟೇ ಅಲ್ಲ—ಸ್ವಾತಂತ್ರ್ಯ ಯೋಧರಲ್ಲಿ ಅಗ್ರಗಣ್ಯರೆಂದೂ ನಿಮಗೆ ಸ್ವಾಗತ ಕೋರುತ್ತೇವೆ" ಎಂದು ಹೇಳಿದ್ದರು. ನೆಹರೂರವರು ಮಾತನಾಡುತ್ತಾ "ಇಂಡೋನೇಶೀಯದ ಭಾಷೆ ನಮಗೆ ಬರದಿದ್ದರೂ ಅಲ್ಲಿ ಆಂದೋಲನ ನಡೆದಾಗ ಪದೇ ಪದೇ ಬಳಸಲ್ಪಡುತಿದ್ದ "ಮರ್ಡೆಕಾ" (ಅಂದರೆ ಶೂರ) ಎಂಬ ಶಬ್ದವನ್ನು ಮಾತ್ರ ಎಲ್ಲ ಭಾರತೀಯರೂ ತಿಳಿದಿದ್ದಾರೆ" ಎಂದು ನುಡಿದು ಸಭಿಕರಿಂದಲೂ "ಮರ್ಡೆಕಾ" ಎಂಬ ಉದ್ಘೋಷವನ್ನೆಬ್ಬಿಸಿದರು.

ಸಂಯುಕ್ತ ಪ್ರಕಟಣೆ

ಇವೆಲ್ಲಕ್ಕಿಂತಲೂ ಮಹತ್ವದ ವಿಷಯವೆಂದರೆ ನೆಹರೂರೊಡನೆ ಜೊಜೊ ನಡೆಸಿದ ಸಮಾಲೋಚನೆ: ಈ ಸಂಬಂಧದಲ್ಲಿ ಹೊರಡಿಸಲಾದ ಸಂಯುಕ್ತ ಪ್ರಕಟಣೆಯು ಹೀಗೆ ಹೇಳುತ್ತದೆ –"ಉಭಯ ರಾಷ್ಟ್ರಗಳಿಗೆ ಸಂಬಂಧಿಸಿದ ಅನೇಕ ವಿಷಯಗಳ ಕುರಿತು ಅನೌಪಚಾರಿಕ ಮಾತುಕತೆಗಳನ್ನು ನಡೆಸಲಾಯಿತು. ಕೊಲೊಂಬೋ ಪರಿಷತ್ತಿನ ಮುಂದಿನ ಘಟ್ಟವಾಗಿ ನಡೆದ ಈ ಮಾತುಕತೆಗಳು ಬಿಚ್ಚುಮನಸ್ಸಿನ ವಾತಾವರಣದಲ್ಲಿ ಅತ್ಯಂತ ಸ್ನೇಹಪೂರ್ಣ ರೀತಿಯಲ್ಲಿ ಜರಗಿದವು. ಜಗತ್ತಿನಲ್ಲಿ, ಅದರಲ್ಲೂ ಆಗ್ನೇಯ ಏಶ್ಯಾದಲ್ಲಿ, ಶಾಂತಿಯನ್ನು ಕಾಪಾಡಿಕೊಳ್ಳುವ ವಿಷಯದಲ್ಲಿ ಉಭಯ ಪ್ರಧಾನರೂ ಆತುರವನ್ನು ತೋರಿಸಿದರು. ಇದನ್ನು ಸಾಧಿಸುವ ಕ್ರಮಗಳ ಬಗ್ಗೆಯೂ ಒಮ್ಮತವೇರ್ಪಟ್ಟಿತು. ಶಾಂತಿ ಸಾಧನೆಗಾಗಿ ಮತ್ತು ಇತರ ಸಮಸ್ಯೆಗಳ ಪರಿಶೀಲನೆಗಾಗಿ ಏಶ್ಯಾ-ಆಫ್ರಿಕ ರಾಷ್ಟ್ರಗಳ ಪ್ರಧಾನಮಂತ್ರಿಗಳ ಸಮ್ಮೇಳನವನ್ನು ಬೇಗನೆ ನೆರೆಯಿಸಬೇಕೆಂದೂ ತತ್ಪೂರ್ವದಲ್ಲಿ ಜಕಾರ್ತದಲ್ಲಿ ಕೊಲೊಂಬೋ ರಾಷ್ಟ್ರಗಳ ಸಭೆ ಕರೆಯಬೇಕೆಂದೂ ಅವರು ಅಭಿಪ್ರಾಯ ಪಟ್ಟರು."

ಪರಿಷತ್ತಿನ ಉದ್ದೇಶ

ಪತ್ರಿಕಾ ಪರಿಷತ್ತಿನಲ್ಲಿ ಜೊಜೊರವರು ಏಶ್ಯ—ಆಫ್ರಿಕಾ ರಾಷ್ಟ್ರಗಳ ಪರಿಷತ್ತಿನ ಕುರಿತು ಕೇಳಲಾದ ಅನೇಕ ಪ್ರಶ್ನೆಗಳನ್ನು ಉತ್ತರಿಸಿದರು. ಈ ಪರಿಷತ್ತಿನ ಪರಿಣಾಮವಾಗಿ ಶಾಂತಿ ವಲಯವನ್ನು ಇಡೀ ಜಗತ್ತಿನಲ್ಲಿ ಅಲ್ಲದಿದ್ದರೂ ಕೈರೋದಿಂದ ಪಿಲಿಪೀನದ ವರೆಗೆ ವಿಸ್ತರಿಸಲಾದೀತೆಂದು ಅವರು ಹಾರೈಸಿದರು. ಅಲ್ಲದೆ ಪರಸ್ಪರ ಆರ್ಥಿಕ ವಿಕಾಸ ಕಾರ್ಯಕ್ರಮಗಳನ್ನು ಯೋಜಿಸಲೂ ಸಹಕಾರ ಮನೋಭಾವವನ್ನು ಮೂಡಿಸಲೂ ಇದು ನೆರವಾದೀತೆಂದು ಅವರು ಆಶಿಸಿದರು. ಈ ಪರಿಷತ್ತಿನಲ್ಲಿ ಕೆಂಪು ಚೀನಕ್ಕೆ ಭಾಗ ವಹಿಸಗೊಡಲಾಗುವುದೇ ಏನೆಂಬ ವಿಷಯವನ್ನು ಅವರು ಸ್ಪಷ್ಟವಾಗಿ ಸೂಚಿಸದಿದ್ದರೂ, ಅದು ಅಸಂಭವವೇನಲ್ಲ ಎಂದು ತಿಳಿಯಲಾಗುತ್ತದೆ.

ಏಶ್ಯಾದ ಭವಿಷ್ಯ

ಭಾರತದ ಸಂಸತ್ತಿನ ಸದಸ್ಯರನ್ನು ಉದ್ದೇಶಿಸಿಯೂ ಜೊಜೊ ಮಾತನಾಡಿದರು. ಅಖಿಲ ಭಾರತ ಆಕಾಶವಾಣಿಯಿಂದಲೂ ಪ್ರಸಾರ ಭಾಷಣ ಮಾಡಿದರು. ಇಲ್ಲೆಲ್ಲ ಏಶ್ಯಾ-ಆಫ್ರಿಕಾ ರಾಷ್ಟ್ರಗಳು ನೆರೆಹೊರೆಯವರೊಡನೆ ಸಹಕರಿಸುತ್ತಿರಬೇಕೆಂದೂ ಮೈತ್ರಿಯನ್ನು ಪ್ರಕಟಿಸುತ್ತಿರಬೇಕೆಂದೂ ಅವರು ಒತ್ತಿ ಹೇಳಿದರು. "ಯುಗಯುಗಗಳಿಂದ ಭಾರತ ಮತ್ತು ಇಂಡೋನೇಶಿಯಗಳಲ್ಲಿ ಸಾಂಸ್ಕೃತಿಕ ಬಾಂಧವ್ಯವು ಇದ್ದು ಈಚೆಗೆ ಕೆಲವು ವರ್ಷಗಳಿಂದ ಈ ಸಂಬಂಧವು ಮತ್ತಷ್ಟು ನಿಕಟವಾಗಿದೆ. ತತ್ಪರಿಣಾಮವಾಗಿ ಉಭಯ ರಾಷ್ಟ್ರಗಳಲ್ಲಿ ಸದ್ಭಾವನೆಯೂ ಸತ್ಸಂಬಂಧವೂ ಅಭಿವೃದ್ಧಿಹೊಂದಲು ಎಡೆಯಾಯಿತು" ಎಂದರು. ಜೊಜೊರವರು ಸ್ವದೇಶಕ್ಕೆ ಮರಳುವ ಮಾರ್ಗದಲ್ಲಿ ದಿನಾಂಕ ೨೬ರಂದು ದೆಹಲಿಯಿಂದ ರಂಗೂನಿಗೆ ವಿಮಾನವೇರಿದರು. ಅಲ್ಪಾವಧಿಯ ಭಾರತ ವಾಸ್ತವ್ಯ ಕಾಲದ ಸ್ಮರಣೆಯನ್ನು ಮನದುತ್ತಾ ತಾನು ಹೋಗುತ್ತಿರುವೆನೆಂದು ಅವರು ತಿಳಿಸಿದರು. ನೆಹರೂ ಮತ್ತಿತರ ಅಧಿಕಾರಿಗಳು ಅವರನ್ನು ಬೀಳ್ಕೊಟ್ಟರು.

ಶ್ರೀಮತಿ ವಿಜಯಲಕ್ಷ್ಮಿ

ಸಂಯುಕ್ತ ರಾಷ್ಟ್ರ ಸಂಘದ ಅಧ್ಯಕ್ಷೆಯಾಗಿ ಇಂಡೋನೇಶಿಯಾ ಮುಂತಾದ ರಾಷ್ಟ್ರಗಳನ್ನೆಲ್ಲ ಸಂಚರಿಸಿದ್ದ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಇದೇ ದಿನಾಂಕ ೨೧ರಂದು ಹೊಸ ಅಧ್ಯಕ್ಷರಾದ ನೆದರ್ ಲೇಂಡಿನ ಸೆಲ್ಕೊವ್ಯಾನ್ ಕ್ಲಿಫೀನ್ಸರಿಗೆ ಅಧಿಕಾರವನ್ನು ಒಪ್ಪಿಸಿ, ತನ್ನ ತಲೆಯ ಮೇಲೆ ಹೇರಲಾದ ಭಾರವನ್ನು ಇಳಿಸಿ ಕೊಂಡರು. ಅವರನ್ನು ಭಾರತ ಸರಕಾರವು ಬ್ರಿಟನ್ನಿನಲ್ಲಿ ಹೈಕಮಿಶನರರಾಗಿ ನೇಮಿಸಿರುತ್ತದೆ. ಶ್ರೀಮತಿ ವಿಜಯ ಲಕ್ಷ್ಮಿಯವರೀಗ ಜಪಾನು ಮುಂತಾದ ರಾಷ್ಟ್ರಗಳ ಪ್ರವಾಸವನ್ನು ಕೈಗೊಳ್ಳುವದರಲ್ಲಿದ್ದು, ತಮ್ಮ ಹೊಸ ಹುದ್ದೆಯನ್ನು ನವಂಬರ ತಿಂಗಳಲ್ಲಿ ವಹಿಸಿಕೊಳ್ಳಬಹುದು.

ರಾಧಾಕೃಷ್ಣನ್ನರ ಪ್ರವಾಸ

ಭಾರತದ ಉಪರಾಷ್ಟ್ರಪತಿಗಳಾದ ಡಾ. ರಾಧಾಕೃಷ್ಣನ್ನರು ದಕ್ಷಿಣ ಅಮೇರಿಕಾ ರಾಷ್ಟ್ರಗಳ ಪ್ರವಾಸಕ್ಕೆ ತೆರಳಿದ್ದು, ಅಲ್ಲಿ ಅವರು ಭಾರತವನ್ನು ಕುರಿತು ಅನೇಕ ಭಾಷಣಗಳನ್ನು ಮಾಡಿ, ತಿಳಿವಳಿಕೆಯನ್ನು ಹೆಚ್ಚಿಸುವರು. ಈಚೆಗೆ ಶ್ರೀ. ಕೃಷ್ಣ ಮೆನೊನ್ನರೂ ಈ ರಾಷ್ಟ್ರಗಳಲ್ಲಿ ಸಂಚರಿಸಿ ಬಂದಿದ್ದರು. ತಮಗೆ ಹೃತ್ಪೂರ್ವಕ ಸ್ವಾಗತವನ್ನು ನೀಡಲಾಯಿತೆಂದೂ ಭಾರತದ ಬಗ್ಗೆ ಈ ರಾಷ್ಟ್ರಗಳ ಧುರೀಣರಲ್ಲಿ ಅತ್ಯಧಿಕ ಸ್ನೇಹ ಭಾವನೆ ಕಂಡು ಬಂದಿತೆಂದೂ ಅವರು ಹೇಳಿದ್ದಾರೆ. ರಾಧಾಕೃಷ್ಣನ್ನರ ಪ್ರವಾಸವೂ ಇದೇ ಅನುಭವವನ್ನು ತಂದೀತು.

ಮಹತ್ವದ ಅಭಿಪ್ರಾಯ

ಮದ್ಯಪಾನ ಮಾಡಿದವರು ಪ್ರತಿಬಂಧಿತ ಮದ್ಯವನ್ನೆ ಕುಡಿದಿದ್ದಾರೆಂದು ಸಿದ್ಧ ಮಾಡುವ ಹೊಣೆಯು ತಕ್ಸೀರು ನಡೆಸುವವರ ಮೇಲೆ (ಅರ್ಥಾತ್ ಸರಕಾರದ ಮೇಲೆ) ಬೀಳುತ್ತದೆಂದು ವರಿಷ್ಠ ನ್ಯಾಯಾಲಯದ ಸಂವಿಧಾನ ಮಂಡಳವು ಮಹತ್ವದ ಅಭಿಪ್ರಾಯವನ್ನು ಕೊಟ್ಟಿರುವುದು. ಇಷ್ಟರ ವರೆಗೆ ಆರೋಪಿಗಳೇ ತಾವು ಕುಡಿದದ್ದು ಪ್ರತಿಬಂಧಿತ ಮದ್ಯವಲ್ಲವೆಂದು ಸಿದ್ಧಮಾಡಿಕೊಡಬೇಕೆಂದು ಸರಕಾರ ಹೇಳುತಿದ್ದಿತು. ಈಗಿನ ತೀರ್ಪಿನಿಂದ ಸರಕಾರಕ್ಕೆ ತಕ್ಸೀರನ್ನು ನಡೆಸುವುದು ಬಹಳ ಕಷ್ಟವಾದೀತೆಂದು ಕಾಯಿದೆ ತಜ್ಞರ ವಲಯಗಳು ಹೇಳುತ್ತವೆ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ವಿಶೇಷ ಕಮಿಶನ್ ದರಕ್ಕೂ ಬರೆಯಿರಿ.

1. ನವಯುಗ ಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

!!! BECOME PARTNERS IN THE GREAT ART OF SAVING !!!

RECURRING DEPOSITS

Only a Deposit of Rupee One or more, once a month.

Interest at 4½% per annum.

SUITS EVERY PURSE.

Open an Account now at the nearest Office of

THE VIJAYA BANK, LTD.

ಸತ್ಯಾಗ್ರಹಿಗಳ ಮೇಲೆ ಲಾಠಿಯ ಪ್ರಹಾರ

ಪೋರ್ಚುಗೀಜ ಪ್ರದೇಶದಲ್ಲಿ ನುಗ್ಗುವುದಕ್ಕೆ ಪ್ರತಿಬಂಧ

ಭಾರತದಲ್ಲಿರುವ ಪೋರ್ಚುಗೀಜ ವಸಾಹತುಗಳಲ್ಲಿ ಆಂದೋಲನವು ತನ್ನ ಮೊದಲಿನ ವೇಗವನ್ನು ಕಳೆದುಕೊಳ್ಳುತ್ತಿರುವಂತೆ ಕಾಣುವುದೆಂದು ಹೇಳಿದರೆ ತಪ್ಪಾಗದು. ಇದಕ್ಕೆ ಮುಖ್ಯ ಕಾರಣವು ಗೋವಾಂತರರಲ್ಲದ ಭಾರತೀಯರಿಗೆ ಸತ್ಯಾಗ್ರಹದಲ್ಲಿ ಪ್ರವೇಶಿಸಲು ಎಡೆ ಸಿಗದಿರುವುದೇ ಆಗಿದೆ. ಲೋಕ ಸಭೆಯಲ್ಲಿ ಆದ ಸ್ಯರು ಸರಕಾರದ ಧೋರಣೆಯನ್ನು ಕುರಿತು ಪ್ರಸ್ತಾಪಿಸಿದಾಗ, ನೆಹರೂರವರು ಸದ್ಯಕ್ಕೇನೂ ಸರಕಾರವು ತನ್ನ ನಿಲುವು ಯನ್ನು ಬದಲಾಯಿಸುವದಿಲ್ಲವೆಂದೂ ಆದರೆ ಪರಿಸ್ಥಿತಿಯಲ್ಲಿ ಪರಿವರ್ತನೆಗಳೇನಾದರೂ ಘಟಿಸಿದರೆ, ಆಗ ಸರಕಾರವು ಈಗಿನ ನಿಲುವೆಯನ್ನು ಪರಿಷ್ಕರಿಸಬಹುದೆಂದೂ ಅಭಿಪ್ರಾಯ ವ್ಯಕ್ತಪಡಿಸಿದರು.

ಲಾಠಿಯ ಹೊಡೆತ

ಇದು ಸತ್ಯಾಗ್ರಹದಲ್ಲಿ ವಿಶೇಷ ಆಸ್ಥೆಯುಳ್ಳ ವ್ಯಕ್ತಿಗಳಿಗೆ ಸಮಾಧಾನವನ್ನಂತು ಮಾಡಿಲ್ಲ. ಅವರು ಭಾರತ ಸರಕಾರದ ಧೋರಣೆಗೆ ವಿರುದ್ಧವಾಗಿ ಪೋರ್ಚುಗೀಜ ಪ್ರದೇಶದಲ್ಲಿ ನುಗ್ಗಲು ಪ್ರಯತ್ನಿಸುತ್ತಿದ್ದಾರೆ. ದಿನಾಂಕ ೨೫ರಂದು ಸೌರಾಷ್ಟ್ರದಲ್ಲಿ ದೀವ ವಿಮೋಚನಾ ಸಮಿತಿಯು ಸಂಘಟಿಸಿದ ೫೦ ಸ್ವಯಂ ಸೇವಕರ ಒಂದು ತಂಡವು ಸುಮಾರು ೧೫೦ ಭಾರತೀಯ ನಾಗರಿಕರೊಡನೆ ಕಾಲ್ನಡಿಗೆಯಿಂದ ಹೊರಟು ಪೋರ್ಚುಗೀಜ—ಭಾರತ ಗಡಿಯ ಸುಂಕದ ಕಟ್ಟೆಯನ್ನು ಮುಟ್ಟಿದಾಗ ಮುಂದೆ ಹೋಗುವುದನ್ನು ಭಾರತದ ಪೋಲೀಸರು ತಡೆದರು. ಆದರೆ ಇದನ್ನು ಲೆಕ್ಕಿಸದೆ, ಪೋಲೀಸರ ಸರಪಳಿಯನ್ನು ಮುರಿದು ಮುನ್ನುಗ್ಗಲು ಸತ್ಯಾಗ್ರಹಿಗಳು ನೋಡಿದ್ದರಿಂದ, ಪೋಲೀಸರು ಲಾಠಿ ಪ್ರಹಾರವನ್ನು ಪ್ರಾರಂಭಿಸಿದರು. ಇದರಿಂದ ಸುಮಾರು ೭೫ ಮಂದಿ ಗಾಯಗೊಂಡರು. ಅವರಲ್ಲಿ ಕಮ್ಯುನಿಷ್ಟ ಪಕ್ಷದ ಶ್ರೀ ಚಿಮಣ ಮೆಹತಾ ಹಾಗು ಜನಸಂಘದ ಶ್ರೀ ಚಿಮಣ ಶುಕ್ಲರೂ ಇದ್ದರು. ಪೋಲೀಸರ ವರ್ತನೆಯನ್ನು ವಿಮೋಚನಾ ಸಮಿತಿಯ ಸದಸ್ಯರಾದ ಶ್ರೀ ಹರಿಸಿಂಹಜಿ ಗೋಹೆಲರು ಖಂಡಿಸಿ, ನಿಷ್ಪಕ್ಷಪಾತ ವಿಚಾರಣೆಯಾಗಬೇಕೆಂದು ಕೇಳಿದ್ದಾರೆ.

ಗೋಳಿಬಾರಿನ ವಿಚಾರಣೆ

ತಿರುವಾಂಕೂರು ಕೊಚ್ಚಿ ರಾಜ್ಯದಲ್ಲಿ ಕಳೆದ ತಿಂಗಳ ೧೧ ತಾರೀಕಿನಂದು ತಮಿಳುನಾಡು ಕಾಂಗ್ರೆಸಿಗರ ಆಂದೋಲನವನ್ನು ದಮನಿಸಲು ಗೋಳಿಬಾರು ನಡೆಸಿ ನಾಲ್ಕು ಮಂದಿಯ ಪ್ರಾಣ ಹತ್ಯೆ ಮಾಡಿದ ಪ್ರಸಂಗವು ನಿಷ್ಪಕ್ಷಪಾತ ವಿಚಾರಣೆಗೆ ಒಳಗಾಗಬೇಕೆಂದು ಕೇಳಲಾಗಿದ್ದಿತು. ಪ್ರಜಾ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯು ಇದನ್ನು ಅನುಮೋದಿಸಿದ್ದರಿಂದ, ಮುಖ್ಯ ಮಂತ್ರಿ ಶ್ರೀ ಪಿಳ್ಳೆಯವರಿಗೆ ವ್ಯಕ್ತಿಗತವಾಗಿ ಇದು ಅಗತ್ಯವೆನಿಸದಿದ್ದರೂ ತಿರುಕೊಚ್ಚಿ ಹೈಕೋರ್ಟಿನ ನ್ಯಾಯಾಧೀಶ ಶ್ರೀ ಕೆ. ಶಂಕರನ್ನರನ್ನು ವಿಚಾರಣೆಗಾಗಿ ನೇಮಿಸಲಾಗಿರುವುದು.

ಅವಿಶ್ವಾಸ ಗೊತ್ತುವಳಿ

ಆಂಧ್ರ ರಾಜ್ಯದಲ್ಲಿ ಪಾನಪ್ರತಿಬಂಧವನ್ನು ಕುರಿತು ರಾಮಮೂರ್ತಿ ಸಮಿತಿಯು ಒಪ್ಪಿಸಿದ ವರದಿಯನ್ನು ಕಾರ್ಯರೂಪಕ್ಕೆ ಇಳಿಸಲು ಸರಕಾರವು ತಪ್ಪಿದೆಯೆಂಬ ಕಾರಣಕ್ಕಾಗಿ ಪ್ರಕಾಶಮರ ಮಂತ್ರಿಮಂಡಳದ ವಿರುದ್ಧ ಅವಿಶ್ವಾಸ ಗೊತ್ತುವಳಿಯನ್ನು ಮಂಡಿಸಲು ಕೃಷಿಕರ ಲೋಕಪಕ್ಷದ ಕಾರ್ಯಕಾರಿ ಸಮಿತಿಯು ನಿರ್ಧರಿಸಿದೆ. ಸರಕಾರವು ಪಾನಪ್ರತಿಬಂಧ ಧೋರಣೆಯನ್ನು ಬದಲಾಯಿಸುವ ವರೆಗೆ ಈಗ ಎರಡು ತಿಂಗಳಿಂದ ತೊಡಗಿರುವ ಮೂರ್ತಿದಾರರ ಸತ್ಯಾಗ್ರಹವನ್ನು ಮುಂದರಿಸಿಕೊಂಡು ಹೋಗಬೇಕೆಂದೂ ಅದು ತೀರ್ಮಾನಿಸಿದೆ. ಕೃಷಿಕರ ಲೋಕಪಕ್ಷಕ್ಕೆ ಸೇರಿದ ಆರು ಮಂದಿ ಸದಸ್ಯರು ಆಂಧ್ರ ಶಾಸನ ಸಭೆಯಲ್ಲಿ ಇದ್ದಾರೆ. ಇವರಿಗೆ ಪ್ರತಿಪಕ್ಷದ ಬೆಂಬಲವು ಸಿಗಬಹುದು.

ಆಂಧ್ರದ ಒತ್ತಾಯ

ಫಜಲ ಅಲಿ ನಿಯೋಗವು ಕಳೆದ ವಾರ ಆಂಧ್ರ ರಾಜ್ಯಕ್ಕೆ ಬಂದಾಗ ಬಳ್ಳಾರಿಯ ಮುಸ್ಲಿಮರು ಹಾಗು ಆಂಧ್ರರ ಪ್ರತಿನಿಧಿಗಳಿಬ್ಬರು ತುಂಗಭದ್ರಾ ನದಿಗೆ ಕಟ್ಟಿದ ಅಣೆಕಟ್ಟಿನ ಲಾಭವು ಆಂಧ್ರಕ್ಕೆಯೇ ಹೆಚ್ಚಾಗಿ ದೊರಕುತ್ತಿರುವುದರಿಂದ ಬಳ್ಳಾರಿಯನ್ನು ಆಂಧ್ರದಲ್ಲಿ ಸೇರಿಸುವುದೇ ಯುಕ್ತವೆಂದು ಒತ್ತಾಯ ಪಡಿಸಿದರೆಂದು ತಿಳಿದು ಬರುತ್ತದೆ. ಫಜಲ ಅಲಿಯವರು ರಾಜ್ಯಗಳ ಪುನರ್ಘಟನೆಯ ಪ್ರಶ್ನೆಯನ್ನು ಕುರಿತು ಮಾತನಾಡುತ್ತಾ ತಮ್ಮ ಮುಂದೆ ಮಂಡಿಸಲಾದ ಎಲ್ಲ ಅಭಿಪ್ರಾಯಗಳನ್ನು ಸಂಪೂರ್ಣ ವಿಚಾರಿಸಿ ನ್ಯಾಯವಾದ ಸೂಚನೆಗಳನ್ನು ಮಾಡಲಾಗುವುದೆಂದು ಹೇಳಿದ್ದಾರೆ. ದೇಶದ ಹಿತದೃಷ್ಟಿಯಿಂದ ಯಾವುದು ಒಳ್ಳೆಯದೋ ಅದನ್ನೇ ಮಾಡಲು ಆಯೋಗ ಬಯಸುತ್ತದೆ ಎಂದೂ ಅವರು ಹೇಳಿದರು.

ಶಾಸನ ಸಭೆಯ ಅಧಿವೇಶನ

ಮದ್ರಾಸು ಶಾಸನ ಸಭೆಯ ಅಧಿವೇಶನವು ನವೆಂಬರ ತಿಂಗಳ ಕೊನೆಯ ವಾರದಲ್ಲಿ ಜರಗಿ ಸುಮಾರು ೨೦ ದಿನಗಳ ತನಕ ತೋಟಗಳ ಮೇಲೆ ತೆರಿಗೆ, ಅಭಿವೃದ್ಧಿ ತೆರಿಗೆ, ಕೋರ್ಟು ಫೀ ದರ ಹೆಚ್ಚಳ ಮುಂತಾದುವಕ್ಕೆ ಸಂಬಂಧಿಸಿದ ಮಸೂದೆಗಳನ್ನು ಚರ್ಚಿಸುವುದೆಂದು ಶ್ರೀ ಸುಬ್ರಹ್ಮಣ್ಯಂ ಹೇಳಿದ್ದಾರೆ. ಭಾರತ ರಾಷ್ಟ್ರೀಯ ಕಾಂಗ್ರೆಸಿನ ಅರುವತ್ತನೆಯ ವಾರ್ಷಿಕ ಅಧಿವೇಶನವು ಮದ್ರಾಸಿಗೆ ಸಮೀಪದ ಅವಡಿಯಲ್ಲಿ ಮುಂದಿನ ವರ್ಷದ ಜನವರಿ ೧೫ರಿಂದ ೧೬ನೇ ದಿನಾಂಕಗಳ ವರೆಗೆ ನೇರಲಿದೆ. ಅದಕ್ಕೆ ಸಿದ್ಧತೆಗಳನ್ನು ನಡೆಸಬೇಕಾಗುವುದರಿಂದ, ಶಾಸನಸಭಾಧಿವೇಶನವು ಅಲ್ಪಾವಧಿಯದಾಗಿರುವುದು ಅಗತ್ಯವೆನಿಸಿದೆ.

ಕಾಂಗ್ರೆಸು ಸದಸ್ಯರು

ಕಾಂಗ್ರೆಸು ಕಾರ್ಯಕಾರಿ ಸಮಿತಿಯು ಹೊಸದಿಲ್ಲಿಯಲ್ಲಿ ಕಳೆದ ವಾರ ಜರಗಿದಾಗ, ಸಂಘಟನಾತ್ಮಕ ಸಮಸ್ಯೆಗಳನ್ನು ಪರಿಶೀಲಿಸಲಾಯಿತು. ಹೈದರಾಬಾದು ಹಾಗು ಉತ್ತರ ಪ್ರದೇಶಗಳಲ್ಲಿ ಇತ್ತೀಚೆಗೆ ಜಾತೀಯ ದುರ್ಘಟನೆಗಳು ಸಂಭವಿಸಿದಾಗ ಅವುಗಳಿಂದ ಉದ್ಭೂತವಾದ ಪರಿಸ್ಥಿತಿಯನ್ನು ಕಾಂಗ್ರೆಸಿಗರೂ ಅಧಿಕಾರಿಗಳೂ ಯಶಸ್ವಿಯಾಗಿ ಎದುರಿಸಿ, ಸಕಾಲಕ್ಕೆ ಉಚಿತ ಕ್ರಮ ಕೈಗೊಂಡುದಕ್ಕೆ ಕೃತಜ್ಞತೆಯನ್ನು ಸೂಚಿಸಲಾಯಿತು. ಕಾಂಗ್ರೆಸಿನ ಪ್ರಾಥಮಿಕ ಹಾಗು ಕ್ರಿಯಾಶೀಲ ಸದಸ್ಯರ ಸಂಖ್ಯೆಯು ಕಳೆದ ವರ್ಷ ಅನುಕ್ರಮವಾಗಿ ೮೮ ಲಕ್ಷದಿಂದ ೬೧ ಲಕ್ಷ ಹಾಗು ೩ ಲಕ್ಷದಿಂದ ೩೧೦೮೦ ಆದುದಕ್ಕೆ ಕಾರಣ ವಿಮರ್ಶಿಸಲ್ಪಟ್ಟಿತು. ನೋಂದಕ್ಕೆ ಅವಕಾಶವಿಲ್ಲದಂತೆ ಹಾಗು ಕ್ರಿಯಾಶೀಲ ಸದಸ್ಯರಲ್ಲಿ ಪ್ರತಿಯೊಬ್ಬನೂ ಇತರರಿಂದ ೧೨ ರಷ್ಟಾಯು [illegible] ನಿರ್ಬಂಧಗಳನ್ನು [illegible] ಪ್ರಮಾಣ [illegible] ಎಂದು ಕಾಂಗ್ರೆಸ್ಸಿನ ಕಾರ್ಯದರ್ಶಿಗಳು ಹೇಳಿದರು.

[illegible] ನೌಕರರ ಸಂಪು

[illegible] ನೌಕರರ [illegible] ಪ್ರದೇಶದ [illegible] ನೌಕರರ ಸಂಘ [illegible] ದಿನಾಂಕ [illegible] ಸಾಂಕೇತಿಕ ಮುಷ್ಕರವನ್ನು ಹೂಡಿದ [illegible] ಸ್ಥಳದಲ್ಲಿ ಪ್ರತ್ಯಕ್ಷಭಾಗ ವಹಿಸಿದರು. [illegible] ಪ್ರಾರಂಭಿಸುವುದಕ್ಕೆ [illegible] ನೌಕರರ [illegible] ಕೇಳಿಕೊಂಡರು [illegible] ಆ ಮೇಲೆ ಅವರು ಕೆಲಸಕ್ಕೆ ಹೋದರು. [illegible] ಮಾಡಿದ ನೌಕರರು [illegible] ನ್ಯಾಯಮಂಡಳದ [illegible] ದೂ ಅದನ್ನು [illegible] ದೂ ಹೇಳಿಕೊಂಡರು. ಲೋಕಸಭೆಯ [illegible] ಉದ್ಭವಿಸಿದ ಪರಿಸ್ಥಿತಿಯನ್ನು ಕುರಿತು [illegible] ಚರ್ಚಿಸಲ್ಪಟ್ಟಿತು. ಅದರ ಸಭಾಧ್ಯಕ್ಷರು [illegible] ವನ್ನು ಕೇಳಿಕೊಂಡು [illegible] ನ್ನು ಕಳ್ಳಿ [illegible]. ಸರಕಾರವು [illegible] ಗಳನ್ನು ಲೋಕ ಸಭೆಯು [illegible] ಸುತ್ತಿದೆ.

ಸ್ವಾರಸ್ಯ ಪ್ರಸಂಗ

ರಾಜ್ಯಸಭೆಯಲ್ಲಿ ಕೆಲವು ಸ್ವಾರಸ್ಯ ಪ್ರಸಂಗಗಳು ಜರಗಿದವು. [illegible] ನಡೆಸಿರುವ ಸಂಯುಕ್ತ [illegible] ಕೊಡಬೇಕೆಂದು [illegible] ಯನ್ನು ಮಂಡಿಸಿದಾಗ, ಪ್ರಧಾನ ಮಂತ್ರಿಗಳು [illegible] ವರ್ಷ [illegible]" ಎಂದು ವಿರೋಧ ಸೂಚಿಸಿದರು. [illegible] ಮಂತ್ರಿ

(೬ನೇ ಪುಟ ನೋಡಿ)

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	...	ರೂ. 25,00,000
ಚಂದಾ ಆಹ್ವಾನಿ, ತೆತ್ತು ಬಂದ ಭಂಡವಾಳ	..	ರೂ. 20,00,000
ಕ್ಷೇಮ ನಿಧಿ	..	ರೂ. 10,50,000
ಠೇವಣಾತಿಗಳು	..	ರೂ. 2,98,19,000
ಒಟ್ಟು ಚಲಾವಣೆ ಭಂಡವಾಳ	...	ಸುಮಾರು ರೂಪಾ 4 ಕೋಟಿ
ಒಟ್ಟು ಶಾಖೆಗಳು	..	38

(31—12—1953ರಲ್ಲಿ)

THE CANARA BANKING CORPORATION LIMITED

Estd:- 1906] [H. O. UDIPI (S. India).

ದಿ ಸಿಟಿ ಟೈಪ್ ಫೌಂಡರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

* * * * *

ನಮ್ಮಲ್ಲಿ ಟೈಪ್ ಕ್ಯಾಸ್ಟಿಂಗ್ ಮಷಿನ್‌ಗಳೂ, ಮೌಲ್ಡು ಗಳೂ, ಮ್ಯಾಟ್ರಿಸ್‌ಗಳೂ ಮತ್ತು ಎಲ್ಲಾ ಬಗೆಯ ಟೈಪ್ ಫೌಂಡರಿ ಸಲಕರಣೆಗಳೂ ದೊರೆಯುತ್ತವೆ.

ವಿವರಗಳಿಗೆ ಇಂದೇ ಬರೆಯಿರಿ.

THE CITY TYPE FOUNDRY

CHICKPET, BANGALORE CITY.

NAVAYUGA
Popular Kannada Weekly,
Founder:—
Sri A. B. SHETTY, *M.L.A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೨೪	೩೦-೯-೧೯೫೪	೫

ಕೈಮಗ್ಗದ ಉದ್ದಿಮೆ

ಮೊನ್ನೆತಾನೆ ಕೇಂದ್ರದಲ್ಲಿ ವಾಣಿಜ್ಯ ಮತ್ತು ಉದ್ದಿಮೆ ಮಂತ್ರಿಮಂಡಳದಲ್ಲಿ ಗ್ರಾಮೋದ್ಯೋಗ ವಿಭಾಗವನ್ನು ನೋಡಿಕೊಳ್ಳಲು ಉಪಮಂತ್ರಿಗಳಾಗಿ ನೇಮಿಸಲ್ಪಟ್ಟ ಶ್ರೀ ನಿತ್ಯಾನಂದ ಕಾನುಂಗೊರವರು ಇದಕ್ಕೆ ಮುಂಚೆ ಬಟ್ಟೆ ಕೈಗಾರಿಕೆಯನ್ನು ಪರಿಶೀಲಿಸಿ ಕೈಮಗ್ಗಗಳ ಅಭಿವೃದ್ಧಿಗೆ ಉಪಾಯಗಳನ್ನು ಸೂಚಿಸುವ ಸಮಿತಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದರು. ಅವರು ಸರಕಾರಕ್ಕೆ ಒಪ್ಪಿಸಿರುವ ವರದಿಗಳು ಅಧಿಕೃತವಾಗಿ ಪ್ರಕಟಗೊಂಡಿಲ್ಲವಾದರೂ ಕೆಲವು ಮಹತ್ವದ ವಿಷಯಗಳು ಹೊರಬಿದ್ದಿರುತ್ತವೆ. ಕೈಮಗ್ಗಗಳು ಭಾರತದ ಗ್ರಾಮೀಣ ಆರ್ಥಿಕ ಪ್ರಣಾಳಿಯಲ್ಲಿ ಶಾಶ್ವತವಾದ ಸ್ಥಾನವನ್ನು ಪಡೆದಿವೆಯೆಂಬ ತತ್ವವನ್ನು ಸಮಿತಿಯು ಪ್ರತಿಪಾದಿಸಿದೆಯೆಂದು ಗೊತ್ತಾಗುತ್ತದೆ. ಎಷ್ಟೋ ಮಂದಿ ಹೇಳುವಂತೆ, ಕೈಮಗ್ಗಗಳಿಗಿಂತ ಬಟ್ಟೆಯ ಗಿರಣಿಗಳಿಗೆಯೇ ಪ್ರೋತ್ಸಾಹ ಕೊಡುವುದು ಕೈಗಾರೀಕರಣದ ದೃಷ್ಟಿಯಿಂದ ಅಪೇಕ್ಷಣೀಯವೆಂಬ ಅನುಚಿತ ವಾದವನ್ನು ಸಮಿತಿಯು ಎತ್ತಿ ಹಿಡಿದಿಲ್ಲ: ಬದಲಾಗಿ, ಕೈಮಗ್ಗಗಳು ಒಂದೂವರೆ ಕೋಟಿ ನೇಕಾರ ಕುಟುಂಬಗಳಿಗೆ ಜೀವನಾಧಾರವಾಗಿವೆಯೆಂದೂ, ಗ್ರಾಮಾಂತರ ಪ್ರದೇಶದಲ್ಲಿ ಉತ್ತಮ ಸೌಕರ್ಯಗಳನ್ನು ಒದಗಿಸಿಕೊಟ್ಟರೆ ಅವು ಬೆಳೆದು ಬರುವುದಕ್ಕೆ ಉತ್ತೇಜನೆ ದೊರಕುವುದೆಂದೂ ಸಮಿತಿಯು ಹೇಳುತ್ತದೆ. ಗಿರಣಿಯೊಡನೆ ಸ್ಪರ್ಧೆ ಹೂಡಲಾರದ ಅಸಂಘಟಿತ ಕೈಮಗ್ಗದ ಉದ್ದಿಮೆಯನ್ನು ರಕ್ಷಿಸುವ ಘನೋದ್ದೇಶದಿಂದ ಈಚೆಗೆ ತೆಗೆದುಕೊಂಡ ಕ್ರಮಗಳಿಂದ ಬಹಳವಾದ ಲಾಭವುಂಟಾಗಿದೆಯೆಂದು ಸಮಿತಿಯು ಸ್ಪಷ್ಟವಾಗಿ ಅಭಿಪ್ರಾಯ ವ್ಯಕ್ತಪಡಿಸಿರುವುದು. ಕೈಮಗ್ಗಗಳಿಗೆಯೇ ಕೆಲವು ಉತ್ಪಾದನೆಗಳನ್ನು ಮೀಸಲಿಡುವ ಈಗಿನ ಕ್ರಮವನ್ನು ೧೯೬೦ನೇ ವರ್ಷದ ವರೆಗೂ ಮುಂದರಿಸಿಕೊಂಡು ಹೋಗುವುದು ಶ್ರೇಯಸ್ಕರವೆಂದು ಅದು ಹೇಳಿರುವುದು. ಅಲ್ಲಿಯ ವರೆಗೆ ಗಿರಣಿಗಳ ಬಟ್ಟೆ ನೇಯುವ ಶಕ್ತಿಯನ್ನೇನೂ ಹೆಚ್ಚಿಸಗೊಡಲಾಗದೆಂದೂ—ನೂಲನ್ನು ಮಾತ್ರ ಅಧಿಕ ಉತ್ಪಾದಿಸಬಹುದೆಂದು ಸಮಿತಿಯ ಅಭಿಪ್ರಾಯ. ಆಗ, ಕೈಮಗ್ಗಗಳಿಗೆ ಈಗಿನಕ್ಕಿಂತಲೂ ಹೆಚ್ಚು ವಿಸ್ತಾರವಾದ ಪೇಟೆ ದೊರಕುವುದು ನಿಶ್ಚಯವೆಂದೂ ಸಮಿತಿ ಭರವಸೆ ಕೊಡುತ್ತದೆ. ಇದಕ್ಕೆ ಆಧಾರವಾಗಿ ಅದು ಪ್ರಕಟಿಸಿರುವ ಅಂಶಗಳಂತೆ, ಜನ ಸಂಖ್ಯೆಯ ಹೆಚ್ಚಳ ಹಾಗು ಜೀವನ ಮಟ್ಟದ ಸುಧಾರಣೆಗಳ ಪರಿಣಾಮವಾಗಿ ನಮ್ಮ ಬಟ್ಟೆಯ ಆವಶ್ಯಕತೆಯು ೧೯೬೦ನೇ ವರ್ಷದಲ್ಲಿ ತಲಾ ೧೮ ಗಜ, ಅಂದರೆ ಒಟ್ಟು ೭೨೦ ಕೋಟಿ ಗಜ, ಆಗುವುದು; ಮತ್ತು ಗಿರಣಿಗಳಿಗೆ ೫೦೦ ಕೋಟಿ ಗಜ ಬಟ್ಟೆಯನ್ನು ಉತ್ಪಾದಿಸಗೊಟ್ಟು, ಉಳಿದುದನ್ನೆಲ್ಲ ಕೈಮಗ್ಗಗಳಲ್ಲಿಯೇ ತಯಾರಿಸುವುದು ಸಾಧ್ಯ. ಇಷ್ಟು ವಿಸ್ತಾರ ಪೇಟೆಯನ್ನು ಕೈಮಗ್ಗಗಳಿಗೆ ಒದಗಿಸ ಬಯಸುವ ಸಮಿತಿಯು ಇನ್ನೊಂದು ಮುಖ್ಯ ಸೂಚನೆಯನ್ನೂ ಮಾಡಿರುತ್ತದೆ: ಅದು ಕೈಮಗ್ಗಗಳಲ್ಲಿ ತಾಂತ್ರಿಕ ಸುಧಾರಣೆಗೆ ಸಂಬಂಧಿಸಿರುವುದು. ಉತ್ಪಾದನೆಯನ್ನು ಹೆಚ್ಚಿಸುವಂತೆ ಹಾಗು ವೆಚ್ಚವನ್ನು ತಗ್ಗಿಸುವಂತೆ ಕೈಮಗ್ಗಗಳನ್ನು ಪರಿಷ್ಕರಿಸುವುದು ಅಗತ್ಯವೆಂದು ಅದು ಹೇಳುತ್ತದೆ. ವಿದ್ಯುಚ್ಛಕ್ತಿಯಿಂದ ನಡೆಸಲ್ಪಡುವ ಕೈಮಗ್ಗ ಮುಂತಾದುವುಗಳು ಬಳಸಲ್ಪಡಬೇಕೆಂದು ಅದರ ಅಭಿಪ್ರಾಯ. ಇದರಿಂದ ಗ್ರಾಹಕರಿಗೆ ಸುಲಭ ಬೆಲೆಯಲ್ಲಿ ಕೈಮಗ್ಗದ ವಸ್ತ್ರಗಳನ್ನು ಒದಗಿಸಲು ಸಾಧ್ಯವಾದೀತಾದರೂ ನೇಕಾರರಲ್ಲಿ ಸುಮಾರು ಒಂದೂಕಾಲು ಲಕ್ಷದಷ್ಟು ಜನರು ನಿರುದ್ಯೋಗಿಗಳಾದಾರೆಂಬ ಹೆದರಿಕೆಯೂ ಇಲ್ಲದಿಲ್ಲ. ನವೀಕರಣದಿಂದ ತಮ್ಮ ಹಳ್ಳಿಯಲ್ಲಿ ಕೆಲಸ ಕಳೆದುಕೊಂಡ ನೇಕಾರರು ಕೈಮಗ್ಗಗಳಿಲ್ಲದ ನೆರೆಹೊರೆಯ ಹಳ್ಳಿಗಳಿಗೆ ಹೋಗಿ ಅಲ್ಲಿ ತಮ್ಮ ವ್ಯವಸಾಯವನ್ನು ಪ್ರಾರಂಭಿಸಬಹುದೆಂಬುದು ನಿಜವಾದರೂ ಅವಕ್ಕೆ ಇರುವ ಅವಕಾಶವೂ ಅನುಕೂಲತೆಯೂ ಮಿತವಾಗಿದೆಯೆಂಬುದನ್ನು ಮರೆಯುವಂತಿಲ್ಲ. ಸಹಕಾರ ಸಂಘಗಳ ಸದಸ್ಯರಾಗಿ ಕೈಮಗ್ಗದ ನೇಕಾರರನ್ನು ಸೊಂದಾಯಿಸಿಕೊಳ್ಳುವುವೇ ಮುಂತಾದ ಯೋಜನೆಗಳನ್ನು ಇನ್ನಷ್ಟು ವ್ಯಾಪಕವಾಗಿಯೂ ಕ್ಷಿಪ್ರವಾಗಿಯೂ ಕಾರ್ಯಗತಗೊಳಿಸಿದರೆ ಕೆಲಸಗೇಡಿಗಳಾಗುವ ಅನಿಷ್ಟವು ಬಹಳಷ್ಟು ಕಡಿಮೆಯಾದೀತು. ಹಾಗೆಯೇ ಭಾರತೀಯ ನಾಗರಿಕರು ಕೈಮಗ್ಗದ ವಸ್ತ್ರ ಹಾಗು ಖಾದಿಯ ಮೇಲೆ ವಿಶೇಷವಾದ ಪ್ರೀತಿಯನ್ನು ತೋರಿಸುವುದರಿಂದಲೂ ಪರಿಸ್ಥಿತಿಯು ಸುಧಾರಿಸಲ್ಪಡಬಹುದು. ಸ್ವಾತಂತ್ರ್ಯ ಸಂಗ್ರಾಮದ ಪರ್ವದಿನಗಳಲ್ಲಿ ಮನೆಮನೆಗೂ ಖಾದಿಯ ಬಟ್ಟೆಯನ್ನು ಹೊತ್ತು ತಿರುಗಿ ಮಾರುತಿದ್ದ ಕಾಂಗ್ರೆಸು ಕಾರ್ಯಕರ್ತರು ಇಂದು ಹುಮ್ಮಸ್ಸನ್ನು ಕಳೆದುಕೊಂಡು ಕುಳಿತಿರುವಂತೆ ಕಾಣುತ್ತದೆ. ಜನರಲ್ಲಿಯೂ ಅಂದಿನ ರಾಷ್ಟ್ರೀಯ ಮನೋಭಾವನೆಯು ಇಂದು ಮಸುಕಾಗಿರುವಂತೆ ಭಾಸವಾಗುತ್ತದೆ. ಪ್ರಚಾರ ಹಾಗು ಪ್ರೋತ್ಸಾಹದ ಬಲದ ಮೇಲೆಯೇ ಪ್ರತಿಯೊಂದೂ ಕೈಗಾರಿಕೆ ನಿಂತಿದ್ದು, ಕೈಮಗ್ಗದ ಬಟ್ಟೆಯ ಉದ್ದಿಮೆ ಇದಕ್ಕೆ ಹೊರತಲ್ಲ. ಇದೇ ಗಾಂಧೀ ಜಯಂತಿಯ ಶುಭ ಸಂದರ್ಭದಲ್ಲಿ "ಖಾದಿ ಹುಂಡಿ"ಗಳ ಮಾರಾಟವನ್ನು ಸುಸಂಘಟಿತ ರೀತಿಯಲ್ಲಿ ಭಾರತದಾದ್ಯಂತ ಮಾಡುತಿದ್ದು, ಅದಕ್ಕೆ ಹೃತ್ಪೂರ್ವಕ ಬೆಂಬಲ ಕೊಡುವುದೂ ನೇಕಾರ ಬಾಂಧವರ ಜೀವನಕ್ಕೆ ಭದ್ರತೆ ನೀಡುವುದೂ ನಮ್ಮೆಲ್ಲರ ಕರ್ತವ್ಯ.

ರಹಸ್ಯದ ಕೈವಾಡ

ನಮ್ಮ ಸಹೋದರ ರಾಷ್ಟ್ರವಾದ ಪಾಕಿಸ್ತಾನದ ರಾಜಕೀಯ ವಾತಾವರಣವು ಸ್ಫೋಟಕ ಶಕ್ತಿಯಿಂದ ತುಂಬಿರುವುದೋ ಹೇಗೆ ಎಂಬ ಸಂಶಯವನ್ನು ಹುಟ್ಟಿಸುವಂತೆ ಅಲ್ಲಿ ಕೆಲವು ಘಟನೆಗಳು ನಡೆದಿರುತ್ತವೆ. ಪಾಕಿಸ್ತಾನವು ತನ್ನದೇ ಆದ ಘಟನೆಯೊಂದನ್ನು ಸ್ವೀಕರಿಸಿ, ಮುಂಬರುವ ಮಹಮ್ಮದಾಲಿ ಜಿನ್ನಾರವರ ಪುಣ್ಯದಿನದಂದು (ದಶಂಬರ, ೧೯೫೪) ಪ್ರಜಾರಾಜ್ಯವಾಗಿ ಸಂಪೂರ್ಣ ಸ್ವತಂತ್ರ ಅಸ್ತಿತ್ವವನ್ನು ಪಡೆಯುವುದೆಂದು ಅಲ್ಲಿಯ ಪ್ರಧಾನ ಮಂತ್ರಿಗಳು ಹೇಳಿದ್ದಾರೆ. ಇಸ್ಲಾಂ ತತ್ವಗಳನ್ನು ಎತ್ತಿ ಹಿಡಿಯುವ ಈ ಪ್ರಜಾರಾಜ್ಯವು ಅಲ್ಲಿಯ ಅಲ್ಪಸಂಖ್ಯಾಕರ-ಮುಖ್ಯವಾಗಿ ಹಿಂದೂಗಳ—ಶ್ರೇಯಸ್ಸಿಗೆ ಆತಂಕ ಪ್ರಾಯವಾದ ನೀತಿಯನ್ನು ಅನುಸರಿಸುವುದು ಆಧುನಿಕ ಕಾಲಮಾನಕ್ಕೆ ಹೇಳಿಸದಿದ್ದರೂ, ತಮ್ಮ ಪ್ರತಿಭಟನೆಗಳು ವ್ಯರ್ಥಗೊಂಡುದರಿಂದ ನಿರುಪಾಯರಾಗಿ ಕುಳಿತಿರುವ ಹೊರತು ಬೇರೇನೂ ಮಾರ್ಗ ಅವರಿಗೀಗ ತೋರುವುದಿಲ್ಲ. ಮುಸ್ಲಿಂ ವರ್ಗದಲ್ಲಿ ಯಾದರೂ ಒಗ್ಗಟ್ಟಿದೆಯೋ ಎಂದರೆ, ನಕಾರಾತ್ಮಕವಾದ ಉತ್ತರವನ್ನೇ ಕೊಡಬೇಕಾಗುತ್ತದೆ. ಪಂಜಾಬಿ ಮುಸ್ಲಿಮರ ಪ್ರತಿಷ್ಠೆಯನ್ನು ಬೆಳೆಸಲು ಪಾಕಿಸ್ತಾನದಲ್ಲಿ ನಡೆಯುವ ಚಟುವಟಿಕೆಗಳು ಸಿಂಧ ಹಾಗು ಗಡಿನಾಡುಗಳಲ್ಲಿ ತೀವ್ರ ಅಸಂತೋಷವನ್ನು ಹುಟ್ಟಿಸಿರುತ್ತವೆ. ಪೂರ್ವ ಬಂಗಾಲದಲ್ಲಿ ಪಶ್ಚಿಮ ಪಾಕಿಸ್ತಾನಿಗಳು ಪ್ರದರ್ಶಿಸಿದ ಔದ್ಧತ್ಯವೇ ಮುಸ್ಲಿಂ ಲೀಗಿನ ಜನಪ್ರಿಯತೆಗೆ ಕುಠಾರಾಘಾತವಾಗಿ ಪರಿಣಮಿಸಿತು. ಶಾಸನಬದ್ಧವಾಗಿ ಚುನಾಯಿಸಲ್ಪಟ್ಟ ಹಕ್ಕರ ಮಂತ್ರಿಮಂಡಳವನ್ನು ರದ್ದುಗೊಳಿಸಿ, ಸೈನಿಕ ಗವರ್ನರರ ಆಡಳಿತವನ್ನು ಹೇರಿದ್ದು ಯಾವ ಸರಕಾರಕ್ಕೂ ಭೂಷಣಪ್ರಾಯವಾದ ಕೆಲಸವಲ್ಲ. ಅಲ್ಪಸಂಖ್ಯಾಕರಾದ ಪಂಜಾಬಿ ಮುಸ್ಲಿಮರ ಅಹಂಭಾವವೇ ಇಂಥ ಧೋರಣೆಗೆ ಪ್ರೇರೇಪಣೆಯೊದಗಿಸಿತೆಂದರೆ ತಪ್ಪಾಗದು. ಇದರಿಂದ ಮಹಮ್ಮದಾಲಿ ಮಂತ್ರಿಮಂಡಳವು ಜನರ ಸಹಾನುಭೂತಿಯನ್ನು ಕಳೆದುಕೊಂಡಿರುವಂತೆ ಕಾಣುತ್ತದೆ—ಬಹುಶಃ ಇವರನ್ನು ಪದಚ್ಯುತಗೊಳಿಸುವ ಸಿದ್ಧತೆಗಳನ್ನೂ ಗವರ್ನರ ಜನರಲರು ನಡೆಸಿರಬಹುದು. ೧೯೩೫ನೇ ಇಸವಿಯ ಕಾಯಿದೆಯ ಹಕ್ಕನೇ ಕಲಮಿನಂತೆ, ಅವರಿಗೆ ಇಂಥ ಅಧಿಕಾರವು ದೊರಕುತಿದ್ದು, ನಾಜಿಮುದ್ದೀನರ ಮಂತ್ರಿಮಂಡಳವನ್ನು ಅವರು ಇದರ ಬಲದಿಂದಲೇ ಉರುಳಿಸಿದ್ದರು. ತಮ್ಮ ಶಾಶ್ವತ ಅಸ್ತಿತ್ವಕ್ಕೆ ಅಪಾಯವುಂಟೆಂಬ ಬಲವಾದ ಸಂಶಯದ ಹೆಸೆಯಿಂದಲೇ ಇರಬೇಕು—ಗವರ್ನರ ಜನರಲ್ಲರು ಕರಾಚಿಯನ್ನು ಬಿಟ್ಟು ರಾವಳಪಿಂಡಿಯತ್ತ ಪ್ರವಾಸದಲ್ಲಿ ತೊಡಗಿದ್ದ ಗಳಿಗೆಯಲ್ಲಿ, ಮಂತ್ರಿ ಮಂಡಲದ ಹಸ್ತಕರು ಕಾಯಿದೆಗೆ ತಿದ್ದುಪಡಿಯೊಂದನ್ನು ಒಂದೇ ದಿನದ ನೋಟೀಸಿನ ಬಲದಿಂದ ಅವಸರವಾಗಿ ಮಂಡಿಸಿದರು. ಇಪ್ಪತ್ತೈದು ನಿಮಿಷಗಳಲ್ಲಿ ಅದನ್ನು ಅಂಗೀಕರಿಸಲಾಯಿತು! ಈ ತಿದ್ದುಪಡಿಯು ಮಂತ್ರಿ ಮಂಡಳವನ್ನು ಕಿತ್ತು ಹಾಕಲು ಗವರ್ನರ ಜನರಲರಿಗಿದ್ದ ಅಧಿಕಾರವನ್ನು ಕಸಿದುಕೊಂಡಿದೆಯಲ್ಲದೆ, ಪ್ರಧಾನ ಮಂತ್ರಿಯ ಸಲಹೆಯೇ ಗವರ್ನರ ಜನರಲರ ಮೇಲೆ ಬಂಧನಕಾರಿಯಾಗಿರತಕ್ಕದ್ದೆಂದು ವಿಧಿಸುತ್ತದೆ. ಪ್ರಜಾಪ್ರಭುತ್ವದ ಉತ್ತಮ ಸಂಪ್ರದಾಯಕ್ಕನುಗುಣವಾಗಿ ಈ ತಿದ್ದುಪಡಿಯನ್ನು ತರಲಾಗಿದೆಯೆಂದು ಅದನ್ನು ಸಮರ್ಥಿಸಲಾಗಿರುವುದು: ಪೂರ್ವ ಬಂಗಾಲದಲ್ಲಿ ಪ್ರಜಾಪ್ರಭುತ್ವ ಪದ್ಧತಿಯನ್ನು ಸಮಾಧಿಗೊಯ್ದ ಮಹಮ್ಮದಾಲಿ ಮಂತ್ರಿ ಮಂಡಳ ಅಂಥ ಮಾತನ್ನಾಡುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಪಾಕಿಸ್ತಾನವು ಇನ್ನು ಮೂರೇ ತಿಂಗಳುಗಳಲ್ಲಿ ಪ್ರಜಾರಾಜ್ಯವಾಗಿ ಸಾರಲ್ಪಡುವುದರಿಂದ ಈಗಿನ ತಿದ್ದುಪಡಿಯು ಅಲ್ಲಿಯ ವರೆಗೆ ಮಾತ್ರ ಪ್ರಯೋಜನ ಕೊಡಬಲ್ಲುದು. ಕಳೆದ ಏಳು ವರ್ಷಗಳಲ್ಲಿ ನಡೆದು ಬಂದ ಕಾಯಿದೆಯನ್ನು ಇಷ್ಟು ಅಲ್ಪಾವಧಿಯ ಲಾಭಕ್ಕಾಗಿ ತಿದ್ದುಪಡಿ ಮಾಡಿದ್ದರಲ್ಲಿ ಏನೋ ರಹಸ್ಯ ಉಂಟು. ತಿದ್ದುಪಡಿಯ ಸುದ್ದಿ ಕೇಳಿದ ಗವರ್ನರ ಜನರಲ್ಲರು ತಮ್ಮ ಪ್ರವಾಸವನ್ನು ಅರ್ಧದಲ್ಲಿಯೇ ರದ್ದುಗೊಳಿಸಿ, ಕರಾಚಿಗೆ ಓಡಿ ಬಂದುದೇ ಕುತಂತ್ರ ನಡೆದಿದೆಯೆಂಬುದಕ್ಕೆ ಪ್ರತ್ಯಕ್ಷ ನಿದರ್ಶನ.

ಜಿಲ್ಲಾ ಸಂಚಾರ—ಮದ್ರಾಸಿನ ಮುಖ್ಯ ಮಂತ್ರಿ ಶ್ರೀ. ಕಾಮರಾಜ ನಾಡರ್, ಆರೋಗ್ಯ ಮಂತ್ರಿ ಶ್ರೀ. ಎ. ಬಿ. ಶೆಟ್ಟಿ ಮತ್ತು ಕಾಂಗ್ರೆಸ್ ಜನರಲ್ ಸೆಕ್ರೆಟರಿ ಶ್ರೀ. ಯು. ಶ್ರೀನಿವಾಸ ಮಲ್ಯರು ದ. ಕ. ಜಿಲ್ಲೆಯಲ್ಲಿ ಅಕ್ಟೋಬರ್ ತಿಂಗಳ ತಾ. ೩೦ರಿಂದ ೩೧ರ ತನಕ ಸಂಚಾರ ಮಾಡಲಿರುವರೆಂದು ತಿಳಿದುಬರುತ್ತದೆ.

ಕರ್ನಾಟಕ ಯುನಿವರ್ಸಿಟಿ ಕಮಿಶನ್—ಡಾ। ವಿ. ಆರ್. ಗಿಂಡೆ, ಡಾ। ಪೈ ಅಪ್ಪಾಜಿ, ಡಾ। ಜಿ. ಎಸ್. ಪರಮಶಿವಯ್ಯ, ಪ್ರೊ। ರೂಬೆನ್ ಈ ನಾಲ್ವರ ಆಯೋಗವೊಂದು ಕಸ್ತೂರ್ಬಾ ಮೆಡಿಕಲ್ ಕಾಲೇಜಿನ ಕ್ಲಿನಿಕಲ್ ವಿಭಾಗದ ಅಂಗೀಕಾರದ ಕುರಿತು ಪರಿಶೀಲಿಸುವುದಕ್ಕಾಗಿ ತಾ. ೩೧ರಂದು ಮಣಿಪಾಲಕ್ಕೆ ಬಂದಿದ್ದು, ನಾಲ್ಕು ದಿನಗಳವರೆಗೆ ಮಂಗಳೂರು, ಉಡುಪಿ, ಮಣಿಪಾಲಗಳಲ್ಲಿ ಬೇರೆ ಬೇರೆ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಪರಿಶೀಲನೆ ನಡೆಸಿ, ಸಂತೃಪ್ತರಾಗಿ ಹಿಂದೆರಳಿದರು.

ಹುಜೂರು ಟ್ರೆಜರಿ ಮೊಕದ್ದಮೆ

ಪ್ರಾಂತದಲ್ಲೆ ವಿಸ್ಮಯಜನಕ ದ. ಕ. ಜಿಲ್ಲಾ ಟ್ರೆಜರಿ ಮೊಕದ್ದಮೆಯ ತೀರ್ಪನ್ನು ತಾ. ೨೩ರಂದು ಅಸಿಸ್ಟಾಂಟ್ ಸೆಶನ್ಸ್ ಜಡ್ಜರಾದ ಶ್ರೀ. ಡಿ। ನೊರೊನ್ಹರು ಕೊಟ್ಟು ಒಂದನೆ ಅಪಾದಿತ ಡೇವಿಡ್ ರೊಬರ್ಟ್ಸರಿಗೆ 7 ವರ್ಷ ಕಠಿಣ ಸಜೆ ವಿಧಿಸಿ ಉಳಿದ ಆರು ಜನರನ್ನು ಬಿಡುಗಡೆಮಾಡಿದರು.

ಭಾರತ ಜ್ಯೋತಿ ಮಹಾತ್ಮಾ

ಶ್ರೀ ಬಿ. ದಾಮೋದರ ಬಾಳಿಗರಿಂದ ರಚಿತವಾದ ಗಾಂಧಿ ತತ್ವ ಪ್ರಚಾರದ ವಚನ ಕಾವ್ಯವನ್ನು ಸ್ವೀಕರಿಸಿದ್ದೇವೆ. ಇದು ಅಕ್ಟೋಬರ 2ನೇ ಮಧ್ಯಾಹ್ನ 2 ಗಂಟೆಗೆ ಮೈಸೂರು ಆಕಾಶವಾಣಿಯಲ್ಲಿ ಬಿತ್ತರಿಸಲ್ಪಡುವುದು ಮತ್ತು ಅಂದೇ ಪ್ರಕಟವಾಗುವುದು.

ಜಿಲ್ಲಾ ಬೋರ್ಡು
ಚುನಾವಣೆಯಲ್ಲಿ
ಕಾಂಗ್ರೆಸ್ಸಿಗೇ
ಮತದಾನ ಮಾಡಿರಿ.

ಫೊರ್ಮೋಸವು ಕೆಂಪು ಚೀನದ ನೆಲ

ಆ್ಯಟ್ಲಿಯವರ ಸ್ಪಷ್ಟ ಅಭಿಪ್ರಾಯ

ಕ್ವೆಮೋಯಿ ದ್ವೀಪದ ಮೇಲೆ ನಡೆದ ದಾಳಿಯು ಕೆಂಪು ಚೀನಕ್ಕೂ ಫೊರ್ಮೊಸಾ ಸರಕಾರಕ್ಕೂ ಕೈಗೆ ಕೈ ಹತ್ತುವಂತೆ ಪ್ರೇರೇಪಣೆಯನ್ನೊದಗಿಸಿದರೂ ಪ್ರತ್ಯಕ್ಷವಾಗಿ ಗಂಭೀರ ಕ್ರಮಗಳೇನೂ ತೆಗೆದುಕೊಳ್ಳಲ್ಪಡಲಿಲ್ಲ. ಫೊರ್ಮೊಸಾದ ನೆಲವು ನ್ಯಾಯವಾಗಿ ಚೀನದ ಅಧಿಪತ್ಯಕ್ಕೆ ಒಳಗಾಗಬೇಕೆಂಬ ನಿಲುವಿಗೆ ಜಗತ್ತಿನ ಪ್ರತಿಕ್ರಿಯೆ ಯಾವ್ಯಾವ ಪ್ರಕಾರವಾಗಿದೆಯೆಂಬುದನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳುವುದೇ ಚೀನೀಯರು ಚಿಯಾಂಗರ ವಶವಿರುವ ನಡುಗಡ್ಡೆಯ ಮೇಲೆ ನಡೆಸಿದ ದಾಳಿಯ ರಹಸ್ಯವೆಂದು ಸ್ಪಷ್ಟವಾಗಿರುವುದು. ಭಾರತವು ಕರಾವಳಿ ತೀರದ ಫ್ರೆಂಚ ಹಾಗು ಪೋರ್ಚುಗೀಜ ಉಪನಿವೇಶಗಳು ಸೇರ್ಪಡೆಯೊಂದದ ವಿನಾ ಸ್ವಾತಂತ್ರ್ಯವು ಪೂರ್ಣವಾಗಲಿಲ್ಲವೆಂದು ಹೇಗೆ ಭಾವಿಸಿದೆಯೋ, ಅದರಂತೆಯೇ ಕೆಂಪು ಚೀನದ ಸರಕಾರವು ಫೊರ್ಮೊಸಾದ ವಿಮೋಚನೆಯಾಗದೆ ವಿರಮಿಸುವಂತಿಲ್ಲವೆಂದು ಹೇಳುತ್ತದೆ.

ಆ್ಯಟ್ಲಿಯವರ ಅಭಿಪ್ರಾಯ

ಇದನ್ನು ನ್ಯಾಯವಾದಿಗಳೆಲ್ಲರೂ ಒಪ್ಪುತ್ತಾರೆ. ಈಚೆಗೆ ರಶಿಯಾ ಹಾಗು ಚೀನವನ್ನು ಸಂದರ್ಶಿಸಿ ಬಂದ ಬ್ರಿಟಿಷ ಕೂಲಿಕಾರ ಮುಖಂಡ (ಹಾಗು ಮಾಜಿ ಪ್ರಧಾನ ಮಂತ್ರಿ) ಆ್ಯಟ್ಲಿ ಸಾಹೇಬರು, ಫೋರ್ಮೊಸಾವನ್ನು ಇಂದಲ್ಲ ನಾಳೆಯಾದರೂ ಕೆಂಪು ಚೀನಕ್ಕೆ ಬಿಟ್ಟುಕೊಡಬೇಕಾದದ್ದು ನ್ಯಾಯವೆಂದು ಹೇಳುತಿದ್ದಾರೆ. ಅಮೇರಿಕದ ಬಂಧುಗಳಿಗೆ ಇದು ಇಷ್ಟವಾಗಿರಲಾರದಾದರೂ ತಾವು ಕಟುವಾದ ಸತ್ಯವನ್ನೂ ನ್ಯಾಯವಾದ ನಿಲುವನ್ನೂ ವ್ಯಕ್ತಪಡಿಸುತ್ತಿದ್ದೇನೆಂದು ಆ್ಯಟ್ಲಿಯರ ಅಭಿಪ್ರಾಯ. ಚಿಯಾಂಗರನ್ನು ಕಿತ್ತು ಹಾಕದೆ ಕ್ಷೇಮವಿಲ್ಲ ಎನ್ನುವಷ್ಟು ಅವರು ಮುಂದುವರಿದಿದ್ದಾರೆ. ಬ್ರಿಟಿಷ ಕೂಲಿಕಾರ ಪಕ್ಷದ ವಾರ್ಷಿಕ ಸಭೆಯು ಮೊನ್ನೆ ತಾನೆ ಜರಗಿದಾಗ ಅವರು ಕೆಂಪು ಚೀನಕ್ಕೆ ಜಾಗತಿಕ ವ್ಯವಹಾರದಲ್ಲಿ ಮನ್ನಣೆ ಕೊಡಲೇಬೇಕಾಗಿದೆಯೆಂದೂ ಸಾರಿದರು.

ಅಮೇರಿಕದ ವಿರೋಧ

ವಾಸ್ತವವಾದಿಗಳ ಈ ಅಭಿಪ್ರಾಯವನ್ನು ಅಮೇರಿಕದ ಪ್ರಭೃತಿಗಳು ಎಳ್ಳಷ್ಟೂ ಮೆಚ್ಚುವುದಿಲ್ಲ. ರಶಿಯದ ಹಿಂಬಾಲಕ ರಾಷ್ಟ್ರವಾಗಿ ಚೀನವು ಕಾಣಿಸುವುದಿಲ್ಲವೆಂದು ನಿರೀಕ್ಷಕರು ಅಭಿಪ್ರಾಯ ಪಡುತಿದ್ದರೂ ಅಮೇರಿಕಕ್ಕೆ ಸಮಾಧಾನವಾಗುವುದಿಲ್ಲ. ಕೆಂಪು ಚೀನವು "ಕಮ್ಯುನಿಷ್ಟ" ರಾಷ್ಟ್ರವಾಗಿದೆಯೆಂಬುದೇ ಅದರ ವಿರೋಧದ ಗುಟ್ಟು; ಮತ್ತು ಕಮ್ಯುನಿಷ್ಟರು ಚಿಯಾಂಗರ ಚೀನವನ್ನು ಆಕ್ರಮಿಸಿದ್ದಾರೆಂದೇ ಅಮೇರಿಕದ ಅಭಿಪ್ರಾಯ. ಆದುದರಿಂದ ಸಂಯುಕ್ತ ರಾಷ್ಟ್ರ ಸಂಘದಲ್ಲಿ ಕೆಂಪು ಚೀನಕ್ಕೆ ಸ್ಥಾನವನ್ನು ಕೊಡಬೇಕೆಂದು ರಶಿಯದ ವಿಶಿಂಸ್ಕಿಯವರು ಸೂಚನೆಯನ್ನು ಮಂಡಿಸಿದಾಗ ಅಮೇರಿಕದ ಕೆಬೆಟಲಾಜರು ಪ್ರತಿ ಸೂಚನೆಯೊಂದನ್ನು ಮಂಡಿಸಿ, ವಿಷಯವನ್ನು ಮುಂದಿನ ವರ್ಷಕ್ಕೆ ಮುಂದೂಡಬೇಕೆಂದು ಹೇಳಿದರು. ಕಳೆದ ವರ್ಷವೂ ಇದೇ ರೀತಿಯ ಸೂಚನೆ ಮುಂದಿಡಲ್ಪಟ್ಟಿತ್ತು. ಆಗಿನಂತೆ ಈಗಲೂ ಅಮೇರಿಕದ ಸೂಚನೆ ಮಾನ್ಯವಾಯಿತು.

ಪ್ರತಿಷ್ಠೆಯ ಪ್ರಶ್ನೆ

ಭಾರತದಂತೆ ನಾರ್ವೆಯೇ ಮುಂತಾದ ಬೇರೆ ಹಲವು ರಾಷ್ಟ್ರಗಳು ಕೆಂಪು ಚೀನಕ್ಕೆ ರಾಷ್ಟ್ರ ಸಂಘದಲ್ಲಿ ಸ್ಥಾನ ಕಲ್ಪಿಸಿ ಕೊಡುವ ಅಗತ್ಯವನ್ನು ಸ್ಪಷ್ಟವಾಗಿ ಕಾಣುತ್ತವೆ. ಶಾಂತಿ ಮತ್ತು ಯುದ್ಧದ ಪ್ರಶ್ನೆಗಳಲ್ಲಿ ಅದು ಮಹತ್ವದ ಪಾತ್ರವನ್ನು ನಿರ್ವಹಿಸುತ್ತದೆ. ಮೇಲಾಗಿ ಐವತ್ತು ಕೋಟಿ ಜನರನ್ನು ಪ್ರತಿನಿಧೀಕರಿಸುವ ರಾಷ್ಟ್ರ ಕೆಂಪು ಚೀನ. ಅದನ್ನು ರಾಷ್ಟ್ರಸಂಘದ ಹೊರಗುಳಿಸುವುದರಿಂದ ಜಾಗತಿಕ ವ್ಯವಹಾರದಲ್ಲಿ ಸುಸಂಬದ್ಧತೆಯನ್ನು ತರುವ ರಾಷ್ಟ್ರಸಂಘದ ಕೆಲಸವು ತೊಡಕಿನದಾಗುತ್ತದೆ. ಅಲ್ಲದೆ ಸಮಸ್ಯೆಗಳ ಪರಿಹಾರಕ್ಕೆ ಹೊರಗಿನ ಉಪಾಯಗಳನ್ನೇ ಅನುಸರಿಸಬೇಕಾಗುತ್ತದೆ. ಪ್ರತ್ಯೇಕವಾಗಿ ಇಂಥ ವ್ಯವಹಾರ ನಡೆಯುವುದರಿಂದ ರಾಷ್ಟ್ರಸಂಘವು ಇದ್ದೂ ಸತ್ತಂತೆಯೇ ಎಂಬ ಅಪವಾದಕ್ಕೆ ಎಡೆದೊರೆತು ಪ್ರತಿಷ್ಠೆ ಕೆಡುತ್ತದೆ. ಈಗಾಗಲೇ ಕೊರಿಯಾ, ಇಂಡೋಚೀನ ಮುಂತಾದ ಅಂತಾರಾಷ್ಟ್ರೀಯ ಮಹತ್ವದ ಪ್ರಶ್ನೆಗಳಲ್ಲಿ ರಾಷ್ಟ್ರಸಂಘವು ಒಂದು ಪಕ್ಷವಾಗಿ ಕೆಲಸ ನಿರ್ವಹಿಸುವ ಪ್ರಮೇಯ ಬಂತಾಗಲಿ, ತನ್ನ ನೇತೃತ್ವದಲ್ಲಿ ಏನನ್ನೂ ಮಾಡಲಾರದಾಯಿತು. ಭಾರತದಂಥ ರಾಷ್ಟ್ರವನ್ನೇ ಜಗತ್ತು ಆಶ್ರಯಿಸಬೇಕಾಯಿತು.

ರಾಷ್ಟ್ರಸಂಘದಲ್ಲಿ

ತಮ್ಮ ಹಿತಕ್ಕಾಗುವಾಗ ರಾಷ್ಟ್ರಗಳು ವಿಶಾಲ ದೃಷ್ಟಿಯನ್ನು ತೋರಿಸುವುದಿಲ್ಲವೆಂಬುದಕ್ಕೆ ಅಮೇರಿಕದಂತೆ, ಬ್ರಿಟನು, ಹೊಲ್ಲಂಡು, ದಕ್ಷಿಣ ಆಫ್ರಿಕ ಮುಂತಾದ ರಾಷ್ಟ್ರಗಳನ್ನೂ ಹೆಸರಿಸಬಹುದು. ಸೈಪ್ರೆಸ್ ಎಂಬ ಗ್ರೀಕರೇ ಅಧಿಕ ಜನರಿರುವ ದ್ವೀಪದ ಪ್ರಶ್ನೆಯು ರಾಷ್ಟ್ರಸಂಘದ ಮುಂದೆ ಬಂತು. ಆಗ ಇದನ್ನು ತಮ್ಮ ವಶಪಡಿಸಿಕೊಂಡಿರುವ ಬ್ರಿಟಿಷ ಸರಕಾರದ ಪ್ರತಿನಿಧಿಯು ಬ್ರಿಟನ್ನಿನ ಆಂತರಿಕ ಪ್ರಶ್ನೆ ಇದಾಗಿದೆಯೆಂದು ಹೇಳಿದನು. ಗ್ರೀಸು ದೇಶವು ತನ್ನ ಪರಮಮಿತ್ರ ರಾಷ್ಟ್ರವಾದ ಬ್ರಿಟನ್ನಿನೊಡನೆ ಜಗಳಕ್ಕೆ ನಿಂತು, ಅದು ತನಗೆ ಸೇರಬೇಕಾದ ದ್ವೀಪವೆಂದು ಹೇಳಿತು. ಆದರೆ ಯಾರೂ ಸೈಪ್ರಸಿಗೆ ಸ್ವಾತಂತ್ರ್ಯ ಕೊಡುವ ಮಾತನ್ನಾಡಲಿಲ್ಲ. ತಮ್ಮ ವಸಾಹತು ಹಾಗು ನೌಕಾ ಠಾಣ್ಯವಾಗಿಯೇ ಅದನ್ನು ಮುಂದಕ್ಕೂ ಇಟ್ಟುಕೊಳ್ಳುವ ಹಂಬಲ ಕಂಡುಬಂತು. ಇದರಂತೆ, ನ್ಯೂಗಿನಿಯ ಪಶ್ಚಿಮ ಭಾಗವನ್ನು ಇಂಡೋನೇಶಿಯದ ಅಧಿಕಾರಕ್ಕೆ ಬಿಟ್ಟುಕೊಡಬೇಕೆಂಬ ಪ್ರಶ್ನೆಯನ್ನು ಡಚ್ಚರ ಹಾಗು ಆಸ್ಟ್ರೇಲಿಯಾದ ಪ್ರತಿನಿಧಿ ವಿರೋಧಿಸಿದರು. ವರ್ಣ ದ್ವೇಷದ ಪದ್ಧತಿಯ ಭರ್ತ್ಸನೆ ಮಾಡುವ ಸೂಚನೆಯನ್ನು ದಕ್ಷಿಣ ಆಫ್ರಿಕದ ಪ್ರತಿನಿಧಿ ನಿಂದಿಸಿದನು. ಆದರೆ ರಾಷ್ಟ್ರಸಂಘದ ಬಹು ಸಂಖ್ಯಾತ ಸದಸ್ಯರ ಬೆಂಬಲದಿಂದ ಇವೆಲ್ಲ ವಿಷಯಗಳೂ ವಿರೋಧವನ್ನು ಲೆಕ್ಕಿಸದೆ ವಿಷಯ ಪಟ್ಟಿಯಲ್ಲಿ ಸ್ಥಾನ ಹೊಂದಿದವು.

(೭ನೇ ಪುಟದಿಂದ)

ಗಳು ಸಭಾಪತಿಗಳ ಸಲಹೆಯ ಮೇರೆಗೆ ಅಂದು ಸೂಚನೆಯನ್ನು ಹಿಂದೆಗೆದುಕೊಂಡು ೨೪ನೇ ದಿನಾಂಕ ಮರಳಿ ಅದನ್ನು ಮಂಡಿಸಿದರು. ಆಗ ನೆಹರೂರವರು ಮಾತನಾಡುತ್ತಾ ತನ್ನ ಮೊದಲಿನ ಮಾತುಗಳು ಯಾರನ್ನಾದರೂ ನೋಯಿಸುವುದಕ್ಕಾಗಿ ಇರಲಿಲ್ಲವೆಂಬೂ ವಿಧೇಯಕವು ಬೇಗನೆ ಪರಿಶೀಲಿಸಲ್ಪಟ್ಟು ಮಂಡಿಸಲ್ಪಡಬೇಕೆಂಬ ಕಾತರವೇ ತಮ್ಮಿಂದ ಹಾಗೆ ಹೇಳಿಸಿತೆಂದೂ ಕ್ಷಮೆಯಾಚಿಸಿದರು. ನೆಹರೂರ ಉದಾರ ಮನೋಭಾವವನ್ನು ಎಲ್ಲರೂ ಮೆಚ್ಚಿದರು; ನೆಹರೂರ ಮಾತಿನಿಂದ ನೊಂದು ಪರಿಶೀಲಕ ಸಮಿತಿಗೆ ರಾಜೀನಾಮೆ ಕೊಟ್ಟಿದ್ದ ಸದಸ್ಯರೊಬ್ಬರು ಅದನ್ನು ಹಿಂದೆಗೆದು ಕೊಂಡರು. ಕಾಯಿದೆ ಮಂತ್ರಿಗಳ ಸೂಚನೆ ಮಾನ್ಯವಾಯಿತು.

ಮಹಿಳೆಯರ ಅಧಿಕಾರ

ಭಾರತದ ಆಡಳಿತ ಅಧಿಕಾರಿಗಳ ಹುದ್ದೆಗೆ (ಐ. ಎ. ಎಸ್.) ವಿವಾಹಿತ ಸ್ತ್ರೀಯರು ಅರ್ಹರಲ್ಲವೆಂಬ ನಿಯಮವನ್ನು ತೆಗೆದು ಹಾಕಬೇಕೆಂದು ರಾಜ್ಯ ಸಭೆಯಲ್ಲಿ ತಿದ್ದುಪಡಿಯೊಂದು ಮಂಡಿಸಲ್ಪಟ್ಟಿತು. ನಮ್ಮ ಘಟನೆಯು ಸ್ತ್ರೀ-ಪುರುಷರಿಗೆ ಸಮಾನ ಅಧಿಕಾರ ಹಾಗು ಅವಕಾಶಗಳನ್ನು ಕಲ್ಪಿಸಿರುವಾಗ, ಹೀಗೆ ನಿರ್ಬಂಧಿಸುವುದು ಸರಿಯಲ್ಲವೆಂದು ಹೇಳಲಾಯಿತು. ಇದನ್ನು ಉತ್ತರಿಸಿದ ಗೃಹ ಮಂತ್ರಿಗಳು ರಾಯಭಾರಿ ಮುಂತಾದ ಪದವಿಗಳಿಗೆ ವಿವಾಹಿತ ಮಹಿಳೆಯರನ್ನು ನೇಮಿಸಲಾಗುತ್ತಿದೆಯೆಂದೂ ಆದರೆ ಕೈಗೂಸನ್ನು ಕಂಕುಳಲ್ಲಿ ಇಟ್ಟುಕೊಂಡು ಗುಂಡೆಸೆಯಲು ಆಜ್ಞೆ ಕೊಡಬೇಕಾದ ದುರ್ಧರ ಹೊಣೆಯನ್ನು ತಾಯಂದಿರ ಮೇಲೆ ಹೇರುವುದು ಅಪೇಕ್ಷಣೀಯವಲ್ಲವೆಂದೂ ಹೇಳಿದರು. ವಿವಾಹಿತ ಸ್ತ್ರೀಯರಲ್ಲಿ ಗರ್ಭಧಾರಣೆ ಹೆರುವುದು ಮುಂತಾದ ನೈಸರ್ಗಿಕ ಪರಿವರ್ತನೆಗಳು ಜರಗುತ್ತಿರುವುದರಿಂದ ಅದನ್ನು ಅನುಲಕ್ಷಿಸಬೇಕಾಗುವುದೆಂದು ಅವರು ಅಭಿಪ್ರಾಯಪಟ್ಟರು.

ಉಡುಪಿ

ಸತ್ಕಾರ— ಮಣಿಪಾಲದ ಕಸ್ತೂರಬಾ ಮೆಡಿಕಲ್ ಕಾಲೇಜಿನ ಪರಿಶೀಲನೆಗಾಗಿ ಆಗಮಿಸಿದ ಕರ್ನಾಟಕದ ವಿಶ್ವ ವಿದ್ಯಾಲಯದ ಕಮಿಶನ್ ಸದಸ್ಯರಾದ ಡಾ| ವಿ. ಆರ್. ಗಿಂಡೆ, ಪ್ರಿನ್ಸಿಪಲ್ ಜಿ. ಎಸ್. ಪರಮಶಿವಯ್ಯ ಮತ್ತು ಪ್ರೊಫೆಸರ್ ಶ್ರೀ ಟಿ. ರೊಬರ್ಟ್ ಇವರಿಗೆ ತಾ. ೨೪ರಲ್ಲು ಸಂಜೆ ನವಯುಗ ಪ್ರೆಸ್ಸಿನ ಮಹಡಿಯಲ್ಲಿ ಉಡುಪಿ ಕರ್ನಾಟಕ ಸಂಘದವರು ಚಹಾ ಸತ್ಕಾರವಿತ್ತು ಮನ್ನಣೆಯೊಂದನ್ನು ಒಪ್ಪಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರು ಸಭಾಧ್ಯಕ್ಷತೆ ವಹಿಸಿದ್ದರು. ಸಂಘದ ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸ ಭಟ್ಟರು ಮಾನ್ಯ ಅತಿಥಿಗಳಿಗೆ ಸ್ವಾಗತವೆಯನ್ನಿತ್ತು ಮನವಿಯನ್ನೊಪ್ಪಿಸಿದರು. ಶ್ರೀ ಜಿ. ಎಸ್. ಪರಮಶಿವಯ್ಯನವರು ತಮಗಿತ್ತ ಮನ್ನಣೆಗಾಗಿ ಪ್ರಥಮತಃ ಕೃತಜ್ಞತೆ ವ್ಯಕ್ತಪಡಿಸಿದರು. ಡಾ| ಟಿ. ಮಾಧವ ಪೈಗಳ ನೇತೃತ್ವದಲ್ಲಿ ಪ್ರಕಾಶಕ್ಕೆ ಬಂದಿರುವ ಕಸ್ತೂರ್ಬಾ ಮೆಡಿಕಲ್ ಕಾಲೇಜು ಸರ್ವರ ಮೆಚ್ಚುಗೆಗೆ ಪಾತ್ರವಾಗುವ ರೀತಿಯಲ್ಲಿ ಬೆಳೆದು ಬರುತ್ತಿರುವದರಲ್ಲಿ ಸಂದೇಹವೇನೂ ಇಲ್ಲ. ಕರ್ನಾಟಕ ವಿಶ್ವವಿದ್ಯಾಲಯವು ಕೂಡಾ ಕಷ್ಟನಿಷ್ಠುರಗಳನ್ನು ಗಮನಿಸದೆ ಸಹಕಾರವನ್ನು ಕೊಟ್ಟಿದೆ, ಮುಂದೆಯೂ ಕೊಡುವುದು. ಅಂತೆಯೇ ದ. ಕ. ಜಿಲ್ಲೆಯವರು ಕರ್ನಾಟಕ ವಿಶ್ವವಿದ್ಯಾಲಯದೊಡನೆ ಸಹಕರಿಸಬೇಕು ಎಂದು ಮುಂತಾಗಿ ತಮ್ಮ ಭಾಷಣದಲ್ಲಿ ಹೇಳಿದರು. ಕರ್ನಾಟಕ ಪ್ರಾಂತ ರಚನೆಯು ಸಕ್ಕನಿಸ್ದ ಕನ್ನಡ ಜಿಲ್ಲೆಯ ವಿದ್ಯಾ ಸಂಸ್ಥೆಗಳು ಕರ್ನಾಟಕ ವಿಶ್ವವಿದ್ಯಾನಿಲಯಕ್ಕೆ ಸೇರ್ಪಡೆಗೊಳ್ಳುವ ಸೌಭಾಗ್ಯ ಸಮಗಿದೆ ಎಂದು ಅಧ್ಯಕ್ಷ ಶ್ರೀ ಟಿ. ಎ. ಪೈಗಳವರು ಮುಕ್ತಾಯಭಾಷಣದಲ್ಲಿ ಹೇಳಿದರು.

ರಮಾನಾಥ ಪೈ ಮೆಮೋರಿಯಲ್ ಹಾಲ್ ಉದ್ಘಾಟನೆ— ಸ್ಥಳೀಯ ಎಮ್. ಜಿ. ಎಮ್. ಕಾಲೇಜಿನ ಶ್ರೀ ಎಮ್. ರಮಾನಾಥ ಪೈ ಮೆಮೋರಿಯಲ್ ಹಾಲಿನ ಉದ್ಘಾಟನೆಯನ್ನು ತಾ. ೨೭ರಲ್ಲು ಸಂಜೆ ಮಂಗಳೂರಿನ ರಾವ್ ಬಹದೂರ್ ಡಾ| ಎಮ್. ಕೇಶವ ಪೈಗಳವರು ನೆರವೇರಿಸಿದರು. ಉದ್ಘಾಟನಾ ಸಭೆಯು ಶ್ರೀ ಆದಿದೇವಾನಂದ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ಮೆಮೋರಿಯಲ್ ಹಾಲಿನಲ್ಲಿ ಜರಗಿತು. ಪ್ರಾರ್ಥನೆ, ಸ್ವಾಗತ ಗೀತೆಗಳಾದ ನಂತರ ಎಕೆಡಮಿ ಆಫ್ ಜನರಲ್ ಎಡ್ಯುಕೇಶನಿನ ಅಧ್ಯಕ್ಷ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಮೊದಲ ಮಾತುಗಳನ್ನಾಡಿದರು. ಕಾಲೇಜು ಕರೆಸ್ಪಾಂಡೆಂಟ್ ಹಾಗೂ ಎಕೆಡಮಿ ರಿಜಿಸ್ಟ್ರಾರ್ ಡಾ| ಟಿ. ಮಾಧವ ಪೈಗಳವರು ಸ್ವಾಗತ ಭಾಷಣ ಮಾಡಿದರು. ಉದ್ಘಾಟಕರ ಭಾಷಣ, ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರಿಂದ ಧನ್ಯವಾದಾರ್ಪಣೆಯಾಯಿತು.

ಅಕ್ಕಿ ಹಂಚೋಣ— ನಗರ ಸಭಾಧ್ಯಕ್ಷ ಶ್ರೀ ಯು. ಎಸ್. ನಾಯ್ಕರು ತಾ. ೨೦ರಲ್ಲು ಹಿರಿಯರಿಗೆ ½ ಸೇರು ಅಕ್ಕಿ ಮತ್ತು ೨ ಆಣೆ, ಕಿರಿಯರಿಗೆ ¼ ಸೇರು ಅಕ್ಕಿ ಮತ್ತು ೧ ಆಣೆಯಂತೆ ಸಾಧಾರಣ ಐದಾರು ಸಾವಿರಕ್ಕೆ ಮಿಕ್ಕಿದ ಬಡಜನತೆಗೆ ಪಾರಿಗಾರ್ನಾಪುರ್ ಟ್ಯಾಂಕ್ ವಠಾರದಲ್ಲಿ ಧರ್ಮ ಮಾಡಿದರು.

ಅಲೆವೂರು ಸೇವಾ ನಿರ್ಮಾಣ ಸಹಾಯಕ ಕಮಿಟಿ ಸಭೆಯು ತಾ. ೨೬ರಲ್ಲು ಪಂಡಿತ ಟಿ. ಎನ್. ಶೇಣು ನಂದಿಯಾರರ ಆಯುರ್ವೈದ್ಯ ಶಾಲೆಯಲ್ಲಿ ಶ್ರೀ ಟಿ. ಎ. ಪೈ, ಎಮ್.ಎಲ್.ಎ, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಒಂದು ವರ್ಷದಲ್ಲಿ ಈ ಸಮಿತಿಯ ಕಡೆಯಿಂದ ನಡೆದ ಕೆಲಸಗಳನ್ನು ಸಭಾಧ್ಯಕ್ಷರು ವರದಿ ಮಾಡಿದರು. ಈ ಕಮಿಟಿಯ ಕಡೆಯಿಂದ ಜಿಲ್ಲಾ ಬೋರ್ಡಿಗೆ ಸಹಾಯ ಧನವಾಗಿ ಕೊಡತಕ್ಕಿದ್ದ ಹತ್ತು ಸಾವಿರ ರೂಪಾಯಿ ಸಂಗ್ರಹಿಸುವ ಅವಧಿಯನ್ನು ಇನ್ನೊಂದು ವರ್ಷ ವೃದ್ಧಿಸಲಾಯಿತು. ಶ್ರೀ ಕೆ. ಶ್ರೀನಿವಾಸಾಚಾರ್ಯರು ಸಭಿಕರಿಗೆ ಉಪಾಹಾರವಿತ್ತರು. ಕಾರ್ಯದರ್ಶಿ ಶ್ರೀ ಎ. ಬಿ. ಕೃಷ್ಣರಾಜರು ಧನ್ಯವಾದಗಳನ್ನಿತ್ತರು.

ನಗರಸಭೆಯು— ಸಾಮಾನ್ಯ ಸಭೆಯು ತಾ. ೨೫ರಂದು ಚೇರ್‌ಮೇನ್ ಶ್ರೀ. ಯು. ಎಸ್. ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೆಲವು ಸರಕಾರಿ ಹುಕುಂಗಳು ರಿಕಾರ್ಡ್ ಮಾಡಲ್ಪಟ್ಟವು. ಶ್ರೀಮತಿ ಎಸ್. ಮನೋರಮಾ ಬೇವಿಯವರು ತನ್ನ ಸದಸ್ಯತನವನ್ನು ಊರ್ಜಿತಗೊಳಿಸಬೇಕೆಂದು ನಗರಸಭೆಗೆ ಮಾಡಿದ ವಿನಂತಿ ಪತ್ರವು ಚರ್ಚಿಸಲ್ಪಟ್ಟು ಬಹುಮತದಿಂದ ತಿರಸ್ಕರಿಸಲ್ಪಟ್ಟಿತು.

ಶ್ರೀ ಉಪೇಂದ್ರ ನಾಯ್ಕರ ರಾಜಿನಾಮೆ—ತಾ. ೨೫ರಲ್ಲಿ ಜರಗಿದ ಕೌನ್ಸಿಲು ಸಭೆಯಲ್ಲಿ, ಇಬ್ಬರು ಮಕ್ಕಳ ವಿಯೋಗ ನಿಮಿತ್ತ ಸತತವಾಗಿ ೩ ಸಭೆಗೆ ಹಾಜರಾಗದೆ ತನ್ನ ಸದಸ್ಯತನವನ್ನು ಕಳಕೊಂಡ ಶ್ರೀಮತಿ ಎಸ್. ಮನೋರಮಾ ಬೇವಿಯವರ ಸದಸ್ಯತನವನ್ನು ಊರ್ಜಿತಗೊಳಿಸದುದಕ್ಕಾಗಿ ಶ್ರೀ ಪಿ. ಉಪೇಂದ್ರ ನಾಯ್ಕರು ತನ್ನ ನಗರ ಸಭಾಪತಿ ಸ್ಥಾನಕ್ಕೆ ತಾ. ೨೮ರಲ್ಲಿ ರಾಜಿನಾಮೆ ಸಲ್ಲಿಸಿದ್ದಾರೆ. ಆದರೆ ಕೌನ್ಸಿಲರಾಗಿ ಉಳಿಯುವರು.

ಉಪಚುನಾವಣೆ—ಶ್ರೀ. ಐ. ರಘುರಾಮ ಶೆಟ್ಟಿ ಮತ್ತು ಶ್ರೀಮತಿ ಎಸ್. ಮನೋರಮಾ ಬೇವಿ ಇವರ ನಗರ ಸಭಾ ಸದಸ್ಯತನವು ರದ್ದಾದುದರಿಂದ ಅಂಬಲಪಾಡಿ ಮತ್ತು ಗುಂಡಿಬೈಲು ವಾರ್ಡುಗಳಿಗೆ ಸದ್ಯವೇ ಉಪಚುನಾವಣೆ ನಡೆಯಲಿರುವುದೆಂದು ತಿಳಿದು ಬರುತ್ತದೆ.

ಮೂಲ್ಕಿ—ಕಮ್ಯೂನಿಟಿ ಪ್ರೊಜೆಕ್ಟಿನವರ ಸಹಾಯದಿಂದ ಶಂಕರನಾರಾಯಣ ಭತ್ತ ಪರಿಶೋಧನಾ ಕ್ಷೇತ್ರ, ಪಡೀಲ್ ಹಣ್ಣು ವ್ಯವಸಾಯ ಕೇಂದ್ರ ಮತ್ತು ನಯಂಪಳ್ಳಿ ರಾಮರಾಯರ ಜಪಾನು ಪದ್ಧತಿಯಲ್ಲಿ ಮಾಡಿದ ಸುಧಾರಿತ ಬೆಳೆಯನ್ನು ಮೂಲ್ಕಿ ಫಿರ್ಕಾದ 35 ಕೃಷಿಕರು ತಾ. 19ರಲ್ಲು ಸಂದರ್ಶಿಸಿ ಸ್ವಾನುಭವ ಮಾಡಿಕೊಂಡರು. ಕೃಷಿಕರಿಗೂ ಶಿಕ್ಷಣಕ್ಕೆ ಪ್ರವಾಸ ಅತ್ಯಗತ್ಯವಿದೆ.

ಹೊಸೂರು—ಕುಂದಾಪುರ ತಾಲೂಕಿನ ಹೊಸೂರಲ್ಲಿ ಬೋರ್ಡ್ ಎಲಿಮೆಂಟರಿ ಶಾಲೆಯೊಂದು ತಾ. 17ರಲ್ಲು ಸ್ಥಳೀಯ ಶ್ಯಾನುಭಾಗ ಶ್ರೀ ಕೆ. ಲಕ್ಷ್ಮೀನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಸಭಿಕರ ಭಾಷಣ, ಮಕ್ಕಳಿಗೆ ಸಿಹಿತಿಂಡಿ ಹಂಚೋಣ ಮೊದಲಾದ ಕಾರ್ಯಕ್ರಮಗಳಾದುವು.

ಮೊಗ್ರಾಲ್—ಕಾಸರಗೋಡು ತಾಲೂಕಿನ ಮೊಗ್ರಾಲ್ ಗ್ರಾಮದ ಕಡಪ್ಪುರಂ ಹರಿಜನ ಕೊಲನಿಯನ್ನು ತಾ. 20ರಲ್ಲಿ ಜಿಲ್ಲಾ ಹರಿಜನ ವೆಲ್‌ಫೇರ್ ಆಫೀಸರ್ ಶ್ರೀ ನಾಚಿನರು ಸಂದರ್ಶಿಸಿ ಅಲ್ಲಿ ದುರಸ್ತಿಯಾದ ಬಾವಿಯನ್ನು ಪರಿಶೀಲಿಸಿದರು.

ಕುಂಬಳೆ—ಬಾರ್—ಎಟ್—ಲಾ ಕಲಿಯಲು ಶ್ರೀ ಐ. ತ್ಯಾಂಪಣ್ಣ ರೈಗಳು ತಾ. 22ರಲ್ಲು ಹೊರಟು ಹೋದರು ರೈಲ್ವೆ ನಿಲ್ದಾಣದಲ್ಲಿ ಅವರ ಬಂಧುಗಳೂ ಮಿತ್ರ ವರ್ಗದವರೂ ಅವರಿಗೆ ವಿದಾಯವನ್ನಿತ್ತರು.

ನೀಲಾವರ—ಇಲ್ಲಿಯ ಮಹಿಷಮರ್ದಿನಿ ಶಾಲೆಯಲ್ಲಿ 4—10—54ನೇ ಸೋಮವಾರ ಅಪರಾಹ್ನ 3 ಗಂಟೆಗೆ ವರ್ಧಂತಿ (ಶಾರದಾ ಪೂಜಾ) ಸಮಾರಂಭವು ಶಾಲಾ ಇನ್ಸ್‌ಪೆಕ್ಟರ್ ಶ್ರೀ ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಲಿದೆ. ಸರ್ವರಿಗೂ ಸ್ವಾಗತವಿದೆ ಎಂದು ಮ್ಯಾನೇಜರ್ ಶ್ರೀ ಎನ್. ಅಣ್ಣಪ್ಪ ಭಟ್ಟರು ತಿಳಿಸುತ್ತಾರೆ.

ಕಾರ್ಕಳ—ಸ್ಥಳೀಯ ಸರಕಾರಿ ಆಸ್ಪತ್ರೆಯ ಸಲಹಾ ಸಮಿತಿ ಸಭೆಯು ತಾ. 20ರಲ್ಲು ಚುನಾವಣಾ ಡೆಪ್ಯುಟಿ ತಹಶೀಲ್ದಾರರ ಅಧ್ಯಕ್ಷತೆಯಲ್ಲಿ ಜರಗಿತು. ಎಕ್ಸ್‌ರೇ ಯಂತ್ರವನ್ನು ಒದಗಿಸಬೇಕೆನ್ನುವ, ದಂತ ಚಿಕಿತ್ಸಾ ವಿಭಾಗವನ್ನು ಪ್ರತಿ ದಿನ ಮೂರು ಗಂಟೆ ಕಾಲವಾದರೂ ತೆರೆದಿಡಬೇಕೆನ್ನುವ, ರಾತ್ರಿವೇಳೆ ಆಸ್ಪತ್ರೆಯಲ್ಲಿ ಉಳಕೊಳ್ಳುವ ಡಾಕ್ಟರರೇ ಮೊದಲಾದ ಸಿಬಂದಿಗೆ ಶಯನಾಗಾರದ ಸೌಕರ್ಯ ಒದಗಿಸಬೇಕೆನ್ನುವ, ಆಸ್ಪತ್ರೆಗೆ ವಿದ್ಯುತ್ ಪ್ರಕಾಶದ ಅನುಕೂಲತೆ ಸಿಗುವಂತಾಗಬೇಕೆನ್ನುವ ಕುರಿತು ಸರಕಾರಕ್ಕೆ ತಿಳಿಸುವ ನಿರ್ಣಯಗಳಾದುವು.

ಸುರತ್ಕಲ್—ಸ್ಥಳೀಯ ವಿದ್ಯಾದಾಯಿನೀ ಶಾಲೆಯ ಸ್ಥಾಪಕರೂ, ಅಧ್ಯಾಪಕರೂ, ಕವಿಗಳೂ ಆಗಿದ್ದ ಶ್ರೀ ಉಪ್ಪಿನ ವೆಂಕಟ್ರಮಣ ಮಾಸ್ತರರು ಇದೇ ತಾ. 26ರಂದು ರಾತ್ರಿ ತಮ್ಮ 84ನೇ ವಯಸ್ಸಿನಲ್ಲಿ ಪರಂಧಾಮವನ್ನೈದಿದರು. ದಿವಂಗತರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರುವೆವು.

ಮುಂಡ್ಕೂರು—ಇಲ್ಲಿಯ ಸಂಕಲಕರಿಯ ಪ್ರಾಥಮಿಕ ಶಾಲಾ ಕಟ್ಟೋಣಕ್ಕೆ ಹಂಚಿನ ಮಾಡಿಕೆಯನ್ನು ಹಾಕಿ ಜೀರ್ಣೋದ್ಧಾರ ಮಾಡುವ ಕಾರ್ಯದಲ್ಲಿ ಸಮಾಜ ವಿಕಾಸ ಯೋಜನಾ ಪತಿಯಿಂದ ಒಂದು ಸಾವಿರ ರೂಪಾಯಿ ಸಹಾಯ ದೊರೆಯಬಹುದು. ಕಟ್ಟೋಣಕ್ಕೆ ರೂ. 4500 ಅಂದಾಜು ಖರ್ಚು ಮಾಡಬೇಕಾಗಿರುವುದರಿಂದ ಬಾಕಿ ಹಣವನ್ನು ಊರ ಪರವೂರ ಮಹನೀಯರೂ ಹಳೆ ವಿದ್ಯಾರ್ಥಿಗಳೂ ಉದಾರ ಬುದ್ಧಿಯಿಂದ ಕೊಟ್ಟು ಸಹಕರಿಸಬೇಕಾಗಿ ಶಾಲಾ ಸಮಿತಿಯ ಕಾರ್ಯದರ್ಶಿಯರ ವಿನಂತಿಯಿದೆ.

ಜಿಲ್ಲಾ ಬೋರ್ಡು ಚುನಾವಣೆ—ಕೊಕ್ಕಡ ಮತದಾರ ಕ್ಷೇತ್ರದಿಂದ ಸ್ವತಂತ್ರ ಉಮೇದ್ವಾರರಾಗಿ ನಿಂತ ಶ್ರೀ ರಾಜವರ್ಮ ರೈಗಳು ತಮ್ಮ ನಾಮ ಪತ್ರವನ್ನು ಹಿಂತೆಗೆದುಕೊಂಡುದರಿಂದ, ಕಾಂಗ್ರೆಸ್ ಉರಿಯಾಳುಗಳಾದ ಶ್ರೀ ದಂಬೆ ಸುಬ್ರಾಯರು ಪ್ರತಿಕಕ್ಷಿಗಳಿಲ್ಲದೆ ಆರಿಸಿ ಬಂದರು. ಈ ತನಕ ಒಟ್ಟು ಮೂರು ಮಂದಿ ಕಾಂಗ್ರೆಸ್ ಉರಿಯಾಳುಗಳು ಅವಿರೋಧವಾಗಿ ಆಯ್ಕೆ ಹೊಂದಿದಂತಾಯಿತು.

ಕಟಪಾಡಿ ಸರ್ಕಲಿನಿಂದ ಸ್ವತಂತ್ರ ಪಕ್ಷದ ಉಮೇದ್ವಾರರಾದ ಶ್ರೀ ಎಸ್. ಅಣ್ಣಯ್ಯ ಹೆಗ್ಡೆಯವರು ತಮ್ಮ ಉಮೇದ್ವಾರಿಕೆಯನ್ನು ಹಿಂತೆಗೆದುಕೊಂಡಿರುವರು. ಬ್ರಹ್ಮಾವರ ಸರ್ಕಲಿನಿಂದ ಪ್ರಜಾ ಸಮಾಜವಾದೀ ಪಕ್ಷದ ಶ್ರೀ ಜಗನ್ನಾಥ ಸೆಟ್ಟರ ನಾಮಪತ್ರ ಹಿಂತೆಗೆಯುವಿಕೆಯ ಅರ್ಜಿಯು ಅಸಿಂಧುವಾಗಿ ಮಾಡಲಾಗಿದೆ ಎಂದು ತಿಳಿದು ಬರುತ್ತದೆ.

ಟಪ್ಪಾಲು ಸೌಕರ್ಯ—ಬೊಂಬಾಯಿ ಮೊದಲಾದ ಉತ್ತರ ಭಾಗಗಳಿಗೆ ಕಾರ್ಕಳ ಮತ್ತು ಕುಂದಾಪುರದ ಟಪ್ಪಾಲುಗಳು ವಿಮಾನ ಮೂಲಕ ಕಳುಹಿಸಲು ಅನುಕೂಲವಾಗುವಂತೆ ಕುಂದಾಪುರದಲ್ಲಿ ಪ್ರತಿದಿನ ರಾತ್ರಿ 7,45ರ ತನಕ ಮತ್ತು ಕಾರ್ಕಳದಲ್ಲಿ ಬೆಳಿಗ್ಗೆ 9 ಗಂಟೆ ವರೆಗೆ ಹಾಕಲ್ಪಟ್ಟ ಪತ್ರಗಳನ್ನು ಮಂಗಳೂರು ಆರ್. ಎಮ್. ಎಸ್. ಗೆ ಒಯ್ದು ಅಲ್ಲಿಂದ ಅವುಗಳನ್ನು ವಿಮಾನ ನಿಲ್ದಾಣಕೊಯ್ಯುವ ವ್ಯವಸ್ಥೆ ಮಾಡಲಾಗಿದೆ. ಆ ಬಗ್ಗೆ ಕುಂದಾಪುರ ಮತ್ತು ಕಾರ್ಕಳದಿಂದ ಪ್ರತ್ಯೇಕ ಟಪ್ಪಾಲು ಚೀಲವೊಂದನ್ನು ಒಯ್ಯುವ ಏರ್ಪಾಡು ಇದೇ ತಾ. 20ರಿಂದ ಮಾಡಲಾಗಿದೆ. ಅಲ್ಲದೆ ಮಂಗಳೂರಲ್ಲಿಯೂ ಬಸ್ಸುಗಳ ಮೂಲಕ ಕಳುಹಿಸುವ ಪತ್ರಗಳನ್ನು ಮಂಗಳೂರಿನ ಎಲ್ಲಾ ಅಂಚೆಕಚೇರಿಗಳಲ್ಲಿಯೂ ರಾತ್ರಿ 8ರಿಂದ 9 ಗಂಟೆಯೊಳಗೆ ತೆಗೆಯುವಂತೆ ಹೊಸ ವ್ಯವಸ್ಥೆ ಮಾಡಲಾಗುವುದೆಂದು ತಿಳಿದು ಬರುತ್ತದೆ.

ನಮ್ಮ ಹಿತೈಷಿಗಳು

ನಮ್ಮ ವಿನಂತಿಯನ್ನು ಮನ್ನಿಸಿ ನಮ್ಮ ಕೆಲ ಚಂದಾದಾರರು ಸಕಾಲದಲ್ಲಿ ಚಂದಾ ಕಳಿಸಿ ಪ್ರೋತ್ಸಾಹಿಸಿದ್ದಾರೆ; ಕೆಲವರು ಹೊಸದಾಗಿ ಚಂದಾದಾರರಾಗಿ ಸಹಕರಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಧನ್ಯವಾದಗಳನ್ನು ಸಲ್ಲಿಸುತ್ತೇನಲ್ಲದೆ ಉಳಿದವರೂ ತಮ್ಮ ತಮ್ಮ ಬಾಕಿಯನ್ನು ಇನ್ನಾದರೂ ಆದಷ್ಟು ತ್ವರ್ಯ ಕಳಿಸುವಂತೆ ವಿನಂತಿಸುತ್ತೇನೆ.

ಸಕಾಲದಲ್ಲಿ ಚಂದಾ ಪಾವತಿಸಿದ ಹಾಗೂ ಹೊಸದಾಗಿ ಚಂದಾದಾರರಾದ ಕೆಲವು ಹಿತೈಷಿಗಳು:—

ಎಸ್. ಎ. ಟಿ. ಹೈಸ್ಕೂಲ್, ಮಂಜೇಶ್ವರ
ಡಾ| ಕೆ. ಬಿ. ಪಂಡಿತ್, ಸುರತ್ಕಲ್
ವಿವೇಕ ಹೈಸ್ಕೂಲು, ಕೋಟ
ಸಿ. ಕಾಳಿಂಗ ಹೆಬ್ಬಾರ, ನಾಡ
ದಾಸಪ್ಪ ಶ್ಯಾನುಭಾಗ, ಹಿರಿಯಡ್ಕ
ಎನ್. ಎಂ. ಹಿರಿಯಣ್ಣ ಶೆಟ್ಟಿ, ಕಾಪು
ನೇಶನಲ್ ಹೈಸ್ಕೂಲ್, ಬಾರ್ಕೂರು
ಗವರ್ನಮೆಂಟ್ ಫಿಶ್ಶರೀಸ್ ಹೈಸ್ಕೂಲ್, ಮಲ್ಪೆ
ಬಿ. ರಾಘವೇಂದ್ರ ರಾವ್, ಬೊಂಬಾಯಿ
ಡಾ| ಪಿ. ವಿ. ಚಿಗ್ಡ, ಹೊಸನಗರ
ಕೆ. ತಿಮ್ಮಪ್ಪ ಶೆಟ್ಟಿ, ಕೆಂಜೂರು
ಈಶ್ವರ ನಾರಾಯಣ ಪೈಗಳು ಯೇರೂರು ಸಿರ್ಸಿ
ಬೋರ್ಡ್ ಹೈಸ್ಕೂಲ್, ಕಾರ್ಕಳ
ಪಂಚಾಯತ ಬೋರ್ಡ್, ಶಿರ್ವ
ಸಿ. ರಾಮಕೃಷ್ಣ ಹೆಬ್ಬಾರ್, ಪಟೇಲ್, ನಾಡ
ರಾಮಕೃಷ್ಣಯ್ಯ, ತೀರ್ಥಹಳ್ಳಿ
ನಳಪಾಡಿ ಕೃಷ್ಣಯ್ಯ ಶಾನುಭಾಗ, ಶಿರ್ವಾಡಿ
ಕೆ. ಎ. ಶೀನಪ್ಪ ಶೆಟ್ಟಿ ಕೊಪ್ಪ
ಕೆ. ಕಾಂತ ರೈ ಮೂಡಬಿದ್ರಿ
ಜೆ. ಆರ್, ಬಲ್ಲಾಳ, ಕೊಯಮುತ್ತೂರು
ಶ್ರೀಮತಿ ಕೆ. ರತಿ ಹೆಗ್ಗಡ್ತಿ, ಬೈಲೂರು
ಕೆ. ಜಿ. ಬಿ. ತಿಂಗಳಾಯ, ಬಳ್ಳಾರಿ
ಎನ್. ಜಿ. ಗೋಪಾಲಕೃಷ್ಣ ಪೈ, ಉಡುಪಿ
ಎ. ಶಂಕರ ಆಳ್ವ, ವಕೀಲ್, ಮಂಗಳೂರು
ಎ. ಆರ್. ಶೆಟ್ಟಿ, ಮುಂಡ್ಕೂರು
ಯು. ಮಹಾಬಲ ಶೆಟ್ಟಿ, ಶಿರಿಯಾರ
ಹನುಮಾನ್ ಟ್ರಾನ್ಸ್‌ಪೋರ್ಟ್ ಕಂಪೆನಿ, ಲಿ.,
ಕೆ. ಮಹಾಬಲ ಹೆಗ್ಡೆ, ವಕೀಲ್, ಕಾರ್ಕಳ
ಪಟೇಲ್ ಮಾದಯ್ಯ ಶೆಟ್ಟಿ, ತೆಕ್ಕಟ್ಟೆ
ಬಿ. ಎಲ್. ಎಸ್. ರೈ ನಿವೃತ್ತ ಡಿಸ್ಟ್ರಿಕ್ಟ್ ಸೆಸ್ಸನ್ ಜಡ್ಜ್, ಮಂಗಳೂರು
ಮಾನಂಜೆ ಶೇಷಗಿರಿ ರಾವ್, ಉಡುಪಿ.
ಪಟೇಲ್ ತಿಮ್ಮಪ್ಪ ರೈ, ಸವಣೂರು
ಹೆಡ್ಮಾಸ್ತರ್ ಮತ್ತು ಸ್ಟಾಫ್, ಶಾಂಬೂರು
ಕೆಥೋಲಿಕ್ ಸ್ಕೂಲ್, ಮೂಡುಬೆಳ್ಳೆ
ಎಂ. ಆರ್. ವಿ. ನಾಯಕ್, ಬೊಂಬಾಯಿ.
ಕೆ. ದುಗ್ಗಪ್ಪ ಶೆಟ್ಟಿ, ಕುದಿ, ಹಿರಿಯಡ್ಕ
ಎ. ಶ್ರೀಧರ ರಾವ್, ಪಕ್ಲಾಡಿ
ಹೂವಯ್ಯ ಬಿ. ಸಾಲಿಯಾನ್, ಬೊಂಬಾಯಿ
ಎಚ್. ನಾರಾಯಣ ಸೂಡ, ಹಿರಿಯಡ್ಕ
ಶ್ರೀಪತಿ ಆಚಾರ್, ಬಿ. ಎಸ್. ಸಿ. ಏಜೆಂಟ್ ಸೋದೆಮಠ, ಉಡುಪಿ.
ಜೈನ್ ಹೈಸ್ಕೂಲ್, ಮೂಡಬಿದ್ರೆ
ಯು ಆರ್. ರಾವ್, ಮದ್ರಾಸು
ಕೆ. ಎಂ. ಶೆಟ್ಟಿ, ಕೊಲಬ, ಬೊಂಬಾಯಿ
ಕೊಲ್ಲಮೊಗರು ಕೋಪರೇಟಿವ್ ಸೊಸೈಟಿ,
ಎಚ್. ಸಂಜೀವ ಶೆಟ್ಟಿ, ಗಂಗೊಳ್ಳಿ

(ಅಪೂರ್ಣ)

ಇನ್ನಾದರೂ ಚಂದಾಹಣ ಕಳುಹಿ. ಸಹಕರಿಸುವಂತೆ ವಿನಂತಿ.

ಏಲಂ ನೋಟೀಸು

ದಿ ಕಥೋಲಿಕ್ ಬೇಂಕ್ ಲಿಮಿಟೆಡ್, ಶಿರ್ವಾ.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬ್ಯಾಂಕಿನಲ್ಲಿ ಬಿನ್ನದ ನಗಗಳ ಅಡವಿನ ಮೇಲೆ, ಸಾಲ ಪಡೆದುಕೊಂಡು ಕ್ಲಪ್ತ ಮಾಯಿದೆಗೆ ಅಸಲು ಬಡ್ಡಿ, ಇನ್ನೈರೆ ಸಲಾಯಿಸದೆ, ಬಾಕಿಮಾಡಿಕೊಂಡಿರುವುದರಿಂದ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ, ನಗಗಳನ್ನು ಬಿಡಿಸಿಕೊಂಡು ಹೋಗದೆ ಇರುವುದರಿಂದ ಅಂತವರ ನಗಗಳನ್ನು ಅಕ್ಟೋಬರ ತಿಂಗಳ ತಾರೀಕು 9ನೆಲ್ಲು (ಶನಿವಾರ) ಮಧ್ಯಾಹ್ನ ಗಂಟೆ 12ಕ್ಕೆ ಸರಿಯಾಗಿ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾದೀತು, ಅಗತ್ಯ ಬಿದ್ದಲ್ಲಿ ಏಲವನ್ನು ಮುಂದಿನ ನೋಟೀಸಿನ ಶಿವಾಯಿ ಮುಂದರಿಸಲಾದೀತು.

ಸಾಲ ಪಡೆದ ತಾರೀಕು ಮತ್ತು ನಂಬ್ರ	ಹೆಸರು ಮತ್ತು ವಿಳಾಸ	ಸಾಲದ ಮೊಬಲಗು ರೂ.
27/1755 19-9-51	ಜಾಕಿ ಡಾಂತಿ S/o ಪೌಲು ಡಾಂತಿ ಕುಮೇರಿ ಬೆಟ್ಟು, ಮೂಡು ಬೆಳ್ಳೆ.	60 0 0 (ಬಾಕಿ 58 0 0)
28/1001 18-8-52	ಸಿಲ್ವೆಸ್ಟರ್ ಕಾಸ್ತಲೀನೊ S/o ಪಾಸ್ಕಲ್ ಕಾಸ್ತಲೀನೊ, ಕೊರಜ್ಜ್, ಸೂದ.	25 0 0
29/659 5-6-53	ಶಿವಪ್ಪ ಮೂಲ್ಯ S/o ಗುಡ್ಡ ಮೂಲ್ಯ. ದೇವಸ, ಬೆಳ್ಮಣ್,	45 0 0
29/555 19-5-53	ಆಲ್ಬಿ ಸೋರೊಸ್ನ S/o ಇನಾಸ್ ಸೋರೊಸ್ನ ಸಾಂತೂರು ಕೊಪ್ಲ, ಸಾಂತೂರು.	250 0 0

Office of the Catholic Bank Ltd, Shirva 23—9—1954

C. D'SOUZA.
Agent.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

—ನಡಿಯುವ ಚಿತ್ರ—

ನೀನಾಮೋಕರ್, ವೀಣಾ, **ಅನ್ನದಾತ** ಅಜಿತ ಮತ್ತು ಶೇಕ್ ಮುಕ್ತಾರ್.

ತಾ. 1—10—54ರಿಂದ: -

ಕಲ್ಪನಾಕಾರ್ತಿಕ್, ದೇವಾನಂದರ ಅಪೂರ್ವ ಜೋಡಿ ನಟಿಸಿದ

ಟಾಕ್ಸಿ ಡ್ರೈವರ್ [ಹಿಂದಿ]

In the Court of the District Munsif of Mangalore.

R. E. P. No. 352/1954
O. S. No. 413/1951

Between:-

Jayalaxmi Bank Ltd, Mangalore ... Petitioner.

and

M. Bhaskara .. Respondent.

To

Respt. M. Bhaskara, s/o M. Babu, residing at 27 Ready Money Mansion, Worly, Bombay.

Please take notice that the above application filed by the Petitioner for the reliefs claimed in the Execution Petition stands posted to 22—10—1954 at 11 A. M. in the above Court. You are hereby required to appear on that day either in person or through an advocate failing which the Petition is proceeded with declaring you exparte.

(By order of the Court)

G. Narayana Rao,
Vakil for Petitioner

Mangalore, 24-9-1954.

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,
'NAVAYUGA'
Post Box No 22, UDIPI, S. K.

ಮಂಗಳೂರು

ನಗರ ಸಭೆಯು— ತಾ. ೨೧ರಲ್ಲು ಸಭಾಪತಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಗರದ ಆರು ಹೆಂಗೆ ಮತ್ತು ಶಿಶು ಸಂಗೋಪನಾ ಕೇಂದ್ರಗಳಲ್ಲಿಯೂ ಮತ್ತು ಗಂಡಸರಿಗೆ ಐದು ಮುನಿಸಿಪಲ್ ಆಸ್ಪತ್ರೆಗಳಲ್ಲಿಯೂ ಕುಟುಂಬ ಯೋಜನಾ ಕೇಂದ್ರಗಳನ್ನು ತೆರೆಯಬಹುದೆಂದು ಹೆಲ್ತ್ ಕಮಿಟಿಯ ಸೂಚನೆಯನ್ನು ಅಂಗೀಕರಿಸಲಾಯಿತು. ಈಚೆಗೆ ಜರಗಿದ ಪಂಚವಾರ್ಷಿಕ ತೆರಿಗೆ ಪುನರ್ವಿಮರ್ಶೆ ಮೇರೆಗೆ ತಾ. ೩೧—೩—೫೪ ರೊಳಗೆ ಸ್ಪೆಶಲ್ ನೋಟೀಸುಗಳನ್ನು ಕೊಡದಿದ್ದವರಿಗೆ ಎಚ್. ಪಿ. ಎಮ್. ಆಕ್ಟಿನ ಶೆಡ್ಯೂಲ್ ೧೩ ನಿಯಮ (೨)ರಂತೆ ಕಮಿಶನರರು ಕಾರ್ಯಕ್ರಮ ಕೈಕೊಳ್ಳಬಾರದೆಂದೂ, ರಿವಿಜನರ್ ಅರ್ಜಿಗಳನ್ನು ಪರಿಶೀಲಿಸುವ ಕಾರ್ಯದಲ್ಲಿ ಕಮಿಶನರಿಗೆ ಸಹಾಯ ಮಾಡಲು ಎರಡನೇ ಗ್ರೇಡಿನ ಮುನಿಸಿಪಲ್ ಕಮಿಶನರರ ಗ್ರೇಡಿನ ಸ್ಪೆಶಲ್ ಆಫೀಸರರನ್ನು ಮೂರು ತಿಂಗಳ ಮಟ್ಟಿಗೆ ನೇಮಿಸಬಹುದೆಂದೂ, ತೆರಿಗೆ ಪುನರ್ವಿಮರ್ಶೆಯನ್ನು ೧—೧—೧೯೫೫ಕ್ಕೆ ಅಥವಾ ೧—೧೦—೧೯೫೪ಕ್ಕೆ ಮುಂದುವರಿಸಲು ಸರಕಾರವೂ ಮತ್ತು ಮಾಲಕರೇ ವಾಸಿಸುವ ಮನೆಗಳಿಗೆ ೧೯೫೩—೫೪ರ ಮೌಲ್ಯದ ಮೇಲೆ ತೆರಿಗೆ ವಸೂಲು ಮಾಡಲು ಆಕ್ಷೇಪವಿಲ್ಲವೆಂದೂ ತಿಳಿಸಿದ ಸರಕಾರಿ ಹುಕುಮನ್ನು ರಿಕಾರ್ಡು ಮಾಡಲಾಯಿತು. ಬೋಳಾರದ ಲೀವೆಲ್ ಸಿಟಿಬಸ್ ನಿಲ್ಲುವ ಸ್ಥಳದಲ್ಲಿ ಪ್ರಯಾಣಿಕರು ತಂಗುವ ಶೆಡ್ಡನ್ನು ಕಟ್ಟಿಸಬೇಕೆನ್ನುವ ಮತ್ತು ಆ ಸ್ಥಳದಲ್ಲಿರುವ ಮಂಗಳೂರಿನ ಅಗ್ನಿ ಶಾಮಕ ದಳದವರ ಉಪಕರಣವನ್ನು [illegible] ಅವರನ್ನು ಕೇಳಿಕೊಳ್ಳಬೇಕೆನ್ನುವ ಶ್ರೀ ಬಿ. ಕೊರಗಪ್ಪರವರ ನಿರ್ಣಯವು [illegible].

ವಿದಾಯ ಸತ್ಕಾರ— ಮದ್ರಾಸಿನ ವಾರ್ ಕ್ರಾಸಿನ ಇಲಾಖೆಯಲ್ಲಿದ್ದು ಈಗ ಇಂಗ್ಲಂಡಿಗೆ ಬಾರ್—ಎಟ್—ಲಾ, ಕಲಿಯಲು ಹೋಗುವ ಶ್ರೀಗಳಾದ ಬಿ. ಬಾಲಕೃಷ್ಣ ರಾವ್ ಮತ್ತು ಬಿ. ತ್ಯಾಂಪಣ್ಣ ರೈಗಳಿಗೆ ತಾ. ೨೦ರಲ್ಲಿ ಸ್ಥಳೀಯ ಸೋಶಿಯಲ್ ವಿಲಾಸದಲ್ಲಿ ಶ್ರೀ ಬಿ. ಕೆ ಭಂಡಾರಿಯವರು ಸತ್ಕಾರ ಕೂಟವೊಂದನ್ನು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ನಡೆಸಿದ್ದರು. ಶ್ರೀ ಭಂಡಾರಿಗಳ ಸ್ವಾಗತವಾದ ಬಳಿಕ ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿ ಆದಿದೇವಾನಂದರು ಇಬ್ಬರು ಅತಿಥಿಗಳಿಗೂ ಸುಪ್ರಯಾಣವನ್ನು ಬಯಸಿ ಆಶೀರ್ವದಿಸಿದರು. ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ, ಡಾ। ಯು ಪಿ. ಮಲ್ಯ, ಕೆ. ಎಲ್. ಎನ್ ರಾವ್, ಎಮ್ ಆರ್. ಭಟ್ ಮೊದಲಾದವರು ಶುಭವನ್ನು ಕೋರಿ ಮಾತನಾಡಿದರು. ಅತಿಥಿಗಳಿಬ್ಬರೂ ತಮಗಿತ್ತ ಗೌರವಕ್ಕಾಗಿ ಕೃತಜ್ಞತೆಯನ್ನು ವ್ಯಕ್ತಗೊಳಿಸಿದರು.

ತುಫಾನಿನ ಪರಿಣಾಮ— ಅಳಿವೆಯ ಬಳಿ ಸಮುದ್ರದಲ್ಲಿದ್ದ ತುಫಾನಿಗೆ ತುತ್ತಾಗಿ ಸೌರಾಷ್ಟ್ರದ ನಾವೆಯೊಂದು ತಾ. ೨೮ರಲ್ಲು ಸಂಜೆ ಒಡೆದು ಸುಮಾರು ಹತ್ತು ಸಾವಿರ ರೂಪಾಯಿ ಮೌಲ್ಯದ ಸರಕು ನೀರುಪಾಲಾಯಿತೆನ್ನಲಾಗಿದೆ. ವಿಶೇಷ ಮಳೆ ಮತ್ತು ಸಮುದ್ರದ ಅತಿಯ ದೆಸೆಯಿಂದ ಮಂಗಳೂರು ಪ್ರಯಾಣಿಕರನ್ನು ಇಳಿಸದೇನೇ ಹಡಗವು ಕೊಚ್ಚಿಗೆ ಹೋಗಿದೆ.

ಕಲಾಪ್ರದರ್ಶನದವ್ಯವಸ್ಥೆ— ಮಂಗಳೂರಿನ ಸ್ತ್ರೀ ಸೇವಾ ಸಮಿತಿಯ ನೇತೃತ್ವದಲ್ಲಿ ಅಕ್ಟೋಬರ್ ತಾ ೪ರಿಂದ ೬ರ ವರೆಗೆ ಕಲಾಪ್ರದರ್ಶನವೊಂದನ್ನು ಜರಗಿಸುವ ಏರ್ಪಾಡಾಗಿದೆ. ಚಿತ್ರ ಮತ್ತು ಸ್ತ್ರೀಯರ ಕಸೂತಿ ಕೆಲಸಗಳನ್ನೂ ಚಿತ್ರ ಕಲೆಯ ಕೆಲಸಗಳನ್ನೂ ಪ್ರದರ್ಶಿಸಲಾಗುವುದು. ನಗರ ಸಭೆಯ ಹೆಲ್ತ್ [illegible] ಯವರು [illegible] ಪ್ರದರ್ಶನವೀಯಲಿರುವರು. [illegible] ದಿನ ತಿಂಗಳಾಡಿಯಿಂದ [illegible] [illegible] [illegible] [illegible] ಪ್ರೈಜುಗಳನ್ನು ಕೊಡಲಾಗುವುದು. [illegible] ಎಲ್ಲಾ ಕೆಲಸಗಳ [illegible] ಪ್ರೈಜ್ [illegible] [illegible] ಬಹಿಸುವರು.

ಎಮ್. ರಘುನಾಥ ಪೈ ಸ್ಮಾರಕ ಭವನ— ಕೊಡಿಯಾಲಬೈಲಿನ ಕೆನರಾ ಹೈಸ್ಕೂಲಿನ ದಿವಂಗತ ಎಮ್. ರಘುನಾಥ ಪೈಗಳ ಹೆಸರಲ್ಲಿ ಅವರ ಸಹೋದರ ಮತ್ತು ಕುಟುಂಬದವರು ಕಟ್ಟಿಸಿದ ಸ್ಮಾರಕ ಭವನವನ್ನು ತೆರೆಯುವ ಸಮಾರಂಭವು ತಾ. ೨೪ರಲ್ಲಿ ಜಿಲ್ಲಾ ಜಡ್ಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಮ್. ಅಣ್ಣಪ್ಪ ಕಾಮತರು ಸ್ವಾಗತ ಭಾಷಣ ಮಾಡಿದರು. ಶ್ರೀಗಳಾದ ಎಮ್. ಮಾಧವ ರಾವ್, ಎಮ್. ಕೇಶವ ಪೈ, ಎಮ್ ರಾಮಚಂದರ್ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ನಿಸ್ವಾರ್ಥ ಸೇವೆಗೆ ಹಣವು ಬಂದೇ ಬರುವುದೆಂದರು.

ಹಿಂದುಕೊಂಡ ಆಳಿಯ ಸಂತಾಪ— [illegible]

ತಾರಪಾಡ ದಿನಾಚರಣೆ— ಅಖಿಲ ಭಾರತ ಆಂಟಿ ಮತ್ತು ಆರ್. ಎಮ್. ಎಸ್. ಯೂನಿಯನ್ನಿನ ಸ್ಥಾಪಕ ಅಧ್ಯಕ್ಷರಾಗಿದ್ದ ತಾರಪಾದ ಮುಖರ್ಜಿ ದಿನಾಚರಣೆಯು ತಾ. ೨೦ರಲ್ಲು ಸ್ಥಳೀಯ ಹೆಡ್ ಪೋಸ್ಟಾಫೀಸಿನಲ್ಲಿ ಶ್ರೀ ಎಮ್. ವೆಂಕಟರಾಯರ ಅಧ್ಯಕ್ಷತೆಯಲ್ಲಿ ನಡೆಗಿತು. ಶ್ರೀ ಕೆ. ಟಿ. ಆಚಾರ್ಯರು ತಮ್ಮ ಸ್ವಾಗತ ಭಾಷಣದಲ್ಲಿ ಶ್ರೀ ತಾರಪಾದರ ಜೀವನ ಚರಿತ್ರೆಯನ್ನು ವಿವರಿಸಿ, ಅಂಚೆ ತಂತಿ ಕೆಲಸಗಾರರು ಒಗ್ಗಟ್ಟಾಗಬೇಕೆಂದು ಕೋರಿದರು. ಬಳಿಕ ಶ್ರೀಗಳಾದ ಎಚ್. ಜೆ. ಲೋಬೋ ಮತ್ತು ಬಿ. ಸದಾಶಿವ ರಾಯರ ಭಾಷಣಗಳಾದುವು.

ಪೋರ್ಟ್ ಟ್ರಸ್ಟ್— ಮಂಗಳೂರು ಬಂದರದ ಬಗ್ಗೆ ಟ್ರಸ್ಟಿಗಳ ಬೋರ್ಡನ್ನು ಮುಂ

ಯು. ಎನ್. ಜನರಲ್ ಅಸೆಂಬ್ಲಿಯ ಪ್ರತಿನಿಧಿ

(ಸಚಿತ್ರ. ಕೆನರಾ ಪೋಸ್ಟ್ ದ ಕೃಪೆಯಿಂದ)

ಯುಕ್ತರಾಷ್ಟ್ರಗಳ ಜನರಲ್ ಅಸೆಂಬ್ಲಿ ಅಧಿವೇಶನಕ್ಕೆ ಇಂಡಿಯಾದ ಪ್ರತಿನಿಧಿಗಳಲ್ಲೊಬ್ಬರಾದ ಶ್ರೀ ಕೆ. ಸದಾನಂದ ಹೆಗ್ಡೆ, ಎಮ್. ಪಿ ಅವರು ಇದೇ ತಾ. ೧೪ರಲ್ಲು ಏರ್ ಇಂಡಿಯಾ ಇಂಟರ್‌ನೇಶನಲ್ ವಿಮಾನದಲ್ಲಿ ಮುಂಬಾಯಿಯಿಂದ ಹೊರಟು ಲಂಡನಿಗೆ ತೆರಳಿದರು. ಅಲ್ಲಿಂದ ನ್ಯೂಯೋರ್ಕಿಗೆ ತೆರಳುವರು. ಶ್ರೀ. ಹೆಗ್ಡೆಯವರ ಸ್ನೇಹಿತರೂ ಹಿತಚಿಂತಕರೂ ವಿಮಾನ ನಿಲ್ದಾಣದಲ್ಲಿ ಅವರನ್ನು ಬೀಳ್ಕೊಟ್ಟರು. ಚಿತ್ರದಲ್ಲಿ (ಎಡದಿಂದ ಬಲಕ್ಕೆ) ಶ್ರೀ. ಹೆಗ್ಡೆ, ಡಾ। ಎಸ್. ವಿ. ಅಡ್ಯಂತಾಯ, ಸರ್ವ ಶ್ರೀ. ಕೆ ಎಸ್. ಹೆಗ್ಡೆ ಮತ್ತು ಕೆನರಾ ಬೇಂಕಿನ ಶ್ರೀಗಳಾದ ಕೆ. ಎಮ್. ನಾಯಕ್, ಟಿ. ಆರ್. ಬಿ. ಮಲ್ಯ ಆರ್. ಧಿ. ಫಾಟಕ್, ಐ. ಬಿ. ಇವರನ್ನು ಕಾಣಬಹುದು.

(೧ನೇ ಪುಟದಿಂದ)

ಕೊಡಲು ಅವರು ಮುಂದಾದರು. ಆದರೆ ಜನತೆಗೆ ಇದು ತೃಪ್ತಿಯನ್ನೊದಗಿಸಲಾರದಾಯಿತು. ಸುಕರ್ಣೊ ಮುಂತಾದ ಪ್ರಭೃತಿಗಳು ಪ್ರಾಪಂಚ ಗ್ರಾಮದ ರಮಣೀಯ ಸ್ಥಳೋವರದ ನೆರಿಯ ಸೆರೆಮನೆಯಲ್ಲಿ ಕೊಳೆಯುತ್ತಿರಬೇಕಾಯಿತು. ೧೯೪೭ರಲ್ಲಿ ಆಗ ತಾನೇ ಸ್ವಾತಂತ್ರ್ಯವನ್ನು ಗಳಿಸಿದ್ದ ಭಾರತದಲ್ಲಿ ಪ್ರಧಾನ ಮಂತ್ರಿ ನೆಹರೂರವರು ಆಗ್ನೇಯ ಏಶ್ಯಾ ರಾಷ್ಟ್ರಗಳ ಪ್ರಧಾನರ ಪರಿಷತ್ತನ್ನು ನೆರೆಯಿಸಿದರು. ಮಹಾತ್ಮಾ ಗಾಂಧೀಜಿಯವರು ಪ್ರತಿನಿಧಿಗಳನ್ನು ಉದ್ದೇಶಿಸಿ ಭಾಷಣ ಮಾಡಿದರು. ಇಂಡೋನೇಶಿಯದ ಸ್ವಾತಂತ್ರ್ಯ ಚಳವಳಿಕ್ಕೆ ಇಲ್ಲಿ ಹೃತ್ಪೂರ್ವಕ ಬೆಂಬಲವು ವ್ಯಕ್ತಗೊಳಿಸಲ್ಪಟ್ಟಿತು. ಡಚ್ಚರು ಪ್ರಬಲಿಸುತ್ತಿದ್ದ ರಾಷ್ಟ್ರೀಯ ಭಾವನೆಯ ಪ್ರವಾಹವನ್ನು ತಡೆಯಲಾರದೆ ಇಂಡೋನೇಶಿಯಕ್ಕೆ ಸ್ವಾತಂತ್ರ್ಯವನ್ನು ನೀಡಿದರು.

ಭಾರತವು ತಮಗೆ ತೋರಿಸಿದ ಸಹಾನುಭೂತಿಗಾಗಿ ಇಂಡೋನೇಶಿಯದ ಪ್ರಜೆಗಳು ಸದಾ ಕಾಲ ಕೃತಜ್ಞತೆಯನ್ನು ತೋರಿಸುತ್ತಾ ಬಂದಿದ್ದಾರೆ. ಕೆಲವು ವರ್ಷಗಳ ಪೂರ್ವದಲ್ಲಿ ನೆಹರೂರವರು ಇಂಡೋನೇಶಿಯಕ್ಕೆ ಯಾತ್ರೆ ಹೊರಟಿದ್ದರು. ಈ ವರ್ಷ ಸಂಯುಕ್ತ ರಾಷ್ಟ್ರ ಸಂಘದ ಅಧ್ಯಕ್ಷೆಯಾಗಿದ್ದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಲ್ಲಿಗೆ ಹೋಗಿದ್ದರು. ಅವರನ್ನು "ತಾಯಿ" ಎಂಬ ಪ್ರಿಯ ಶಬ್ದದಿಂದ ಇಂಡೋನೇಶಿಯದ ಜನರು ಸಂಬೋಧಿಸಿದರು. ಈಗ ಜೊ ಜೋರವರು ಭಾರತಕ್ಕೆ ಬಂದು ನಮಗೆ ಸ್ನೇಹ ಹಾಗು ಸೌಹಾರ್ದದ ಸಂದೇಶವನ್ನು ಮುಟ್ಟಿಸಿದ್ದಾರೆ, ಮತ್ತು ನಮ್ಮ ಸದಾಶಯಗಳೊಡನೆ ಸ್ವದೇಶಕ್ಕೆ ಮರಳಿದ್ದಾರೆ. ಶಾಂತಿವಲಯದ ವಿಸ್ತರಣೆ ಮಾಡುವ ಹಾಗು ಆಗ್ನೇಯ ಏಶ್ಯದ ಒಡ ರಾಷ್ಟ್ರಗಳ ಅಭಿವೃದ್ಧಿಯನ್ನು ಸಾಧಿಸುವ ಸಾಮಾನ್ಯ ಉದ್ದೇಶವನ್ನು ಇಟ್ಟುಕೊಂಡ ಭಾರತ ಹಾಗು ಇಂಡೋನೇಶಿಯಗಳು ಜಾಗತಿಕ ಕ್ಷೇತ್ರದಲ್ಲಿ ಚಿರಕಾಲ ಸ್ನೇಹಿತರಾಗಿ ಉಳಿಯಲಿ!

ಎಲ್ಲಾ ತರದ ಸಾಹಿತ್ಯಗಳನ್ನೊಳಗೊಂಡ ಉತ್ತಮ ದರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ

ಚಿಲ್ಲರೆಯಾಗಿಯೂ ದೊರೆಯುತ್ತವೆ

೧೦೦ ಕ್ಕೆ ರಿಯಾಯತಿ ಇದೆ

ಕೋರ್ಟು ಮತ್ತು ಸೊಸೈಟೀ

ಫೋರ್ಮುಗಳೂ ದೊರೆಯುತ್ತವೆ.

ನವಯುಗ ಪ್ರೆಸ್ ಉಡುಪಿ

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,

ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ

ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ [illegible] [illegible] ಇವರ ಚಿತ್ರಣದ [illegible] [illegible] ಮರ್ಮವನ್ನೂ, [illegible] ೨೬ [illegible] ಬರೀ ನಗುವಿಕ್ಕಾಗಿ ಇದರ ಚಮತ್ಕಾರ [illegible] ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ ೦-೧೦-೦.

ಕಿರಿಯರ ಪ್ರಪಂಚ, ಉಡುಪಿ

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಸಿಷಿಯನ್ಸ್, ರಥಬೀದಿ, ಮಂಗಳೂರು [illegible]

ಅಶೋಕಾರಿಷ್ಟ ಮತ್ತು ಮಾತ್ರೆ— [illegible]

ಗರ್ಭ ರಕ್ಷಕ— [illegible]

ಶಾಂತಿಗಾಗಿ ಸಮರ!

(೧ನೇ ಪುಟದಿಂದ)

ಷ್ಟವನ್ನು ವ್ಯಕ್ತಪಡಿಸುತ್ತಾ, ಬ್ರಿಟನ್ನಿನ ಹಿಂದಿನ ಪ್ರಧಾನ ಮಂತ್ರಿ ಅ್ಯಟ್ಲಿಯವರು "ನಿಃಶಸ್ತ್ರೀಕರಣದಲ್ಲಿ ರಶಿಯವು ಪ್ರಥಮ ಹೆಜ್ಜೆಯನ್ನಿಟ್ಟು ಆದರ್ಶವನ್ನು ಹಾಕಿ ಕೊಡುವುದು ಉತ್ತಮ" ಎಂದು ಅಭಿಪ್ರಾಯಪಟ್ಟರು. ಶಾಂತಿಯ ರಕ್ಷಣೆಯಲ್ಲಿ ಅಗ್ರಸ್ಥಾನಕ್ಕಾಗಿ ಕಾತರ ತೋರಿಸುವ ಅಮೇರಿಕಕ್ಕೆ ಈ ಮನ್ನಣೆಯನ್ನು ಕೊಟ್ಟರೂ ಅದು ತೆಗೆದುಕೊಳ್ಳಲು ಸಿದ್ಧವಿಲ್ಲವೆಂದು ಕಾಣುತ್ತದೆ. ಬ್ರಿಟನಿಗೂ "ಮಾದರಿ ಪಾಠ" ಕಲಿಸುವ ಉತ್ಸಾಹವಿಲ್ಲ. ಇಂಥ ಅಸಂಬದ್ಧ ಪ್ರಲಾಪಗಳಲ್ಲಿ ತೊಡಗುವ ರಾಜಕಾರಣಿಗಳಿಂದ ಲೋಕಕಲ್ಯಾಣಕ್ಕೆ ಪೋಷಕವಾದ ಯಾವ ಸತ್ಕಾರ್ಯವನ್ನು ನಾವು ನಿರೀಕ್ಷಿಸಬಹುದು? ಜಗಳದಲ್ಲಿಯೂ ಸುಖಾನುಭವವನ್ನು ಹೊಂದುವ ಅಸಾಮಾನ್ಯ ಪ್ರವೃತ್ತಿಯೊಂದಿದೆಯೆಂದು ಮನೋವಿಜ್ಞಾನ ಹೇಳುತ್ತದೆ. ಜಗತ್ತಿನ ಧುರೀಣರಲ್ಲಿ ಇದು ಬಲವಾಗಿ ಬೇರೂರಿದೆಯೆಂದು ನಾವು ಭಾವಿಸುವ ಪ್ರಸಂಗ ಬರುತ್ತದೆ.

ಪ್ರಧಾನ ಮಂತ್ರಿ ನೆಹರೂರವರು ವಿಶ್ವದಲ್ಲಿ ವಿದ್ಯಮಾನವಿರುವ ರಾಜಕೀಯ ಸಮಸ್ಯೆಗಳಿಂದ ಚಿಂತಾಕುಲರಾಗಿ, ಆರೋಗ್ಯ ಸಂಸ್ಥೆಗಳು ದೈಹಿಕ ಬೇನೆಗಳ ಉಪಶಮನಕ್ಕಿಂತಲೂ ಮಾನಸಿಕ ಆರೋಗ್ಯದ ರಕ್ಷಣೆಗಾಗಿ ಪ್ರಯತ್ನಿಸಬೇಕೆಂದು ಕಳೆದವಾರ ಹೊಸದೆಹಲಿಯಲ್ಲಿ ಸಭೆ ಸೇರಿದ ಜಾಗತಿಕ ಆರೋಗ್ಯ ಮಂಡಳದ ಆಗ್ನೇಯ ಏಶ್ಯಾ ಪ್ರಾದೇಶಿಕ ವಿಭಾಗದ ಪ್ರತಿನಿಧಿಗಳನ್ನು ವಿನಂತಿಸಿದರು. ಇದರಲ್ಲಿ ಗಹನವಾದ ಸತ್ಯವು ಅಡಕವಾಗಿದೆ; ದ್ವೇಷವನ್ನು ಕಡಿಮೆಮಾಡಿ, ಸುಖ ಸಂತೋಷಕ್ಕೂ ಶಾಂತಿ ಸಮೃದ್ಧಿಗೂ ಪೋಷಕವಾದ ವಾತಾವರಣವನ್ನು ಉಂಟು ಮಾಡುವುದು ಇಂದು ಪ್ರಯಾಸಕರವಾದರೂ ಶೀಘ್ರದಲ್ಲಿಯೇ ಪೂರೈಸಬೇಕಾದ ಕೆಲಸವಾಗಿದೆ. ಪರಸ್ಪರ ಭರ್ತ್ಸನೆ, ಕಟುವಾದ ಟೀಕೆ ಹಾಗು ಅನುಚಿತ ಚಟುವಟಿಕೆಗಳಲ್ಲಿ ನಿರತರಾದ ರಾಜಕಾರಣಿಗಳ ಕೈಯಲ್ಲಿ ಸಿಕ್ಕಿದ ಅಧಿಕಾರವು ಮಂಗನ ಕೈಯಲ್ಲಿ ಕೊಟ್ಟ ಮಾಣಿಕ್ಯಕ್ಕಿಂತ ಹೆಚ್ಚು ಪ್ರಯೋಜನಕಾರಿಯಾಗದು. ಗಾಂಧೀಜಿಯನ್ನು ಗುಂಡೆಸೆದು ಕೊಂದ ಗೋಡ್ಸೆಗೂ ಜಪಾನಿನ ಮೇಲೆ ಅಣು ಬಾಂಬು ಹಾಕಿಸಿದ ಅಮೇರಿಕದ ಅಧ್ಯಕ್ಷರಿಗೂ ನ್ಯಾಯ ದೃಷ್ಟಿಯಲ್ಲಿ ಯಾವದೇ ವ್ಯತ್ಯಾಸ ಕಾಣುವುದಿಲ್ಲ. ಇಬ್ಬರೂ ಅಪರಾಧಿಗಳು—ಆದರೆ ಮೊದಲಿನವರನ್ನು ಸಾಮಾಜಿಕ ಶಾಸನವು ಶಿಕ್ಷಿಸಿದರೆ, ಎರಡನೆಯವರು ರಾಜಕೀಯದ ಪರದೆಯ ಮುಸುಕಿನಲ್ಲಿ ಆಶ್ರಯ ಪಡೆಯುತ್ತಾರೆ, ಇಷ್ಟೇ ಅಂತರ. ಇದನ್ನು ಹೋಗಲಾಡಿಸದಿದ್ದರೆ, ಭವಿಷ್ಯದಲ್ಲಿ ಯುದ್ಧವಾಗದಂತೆ ಯುದ್ಧದ ಸಿದ್ಧತೆ ನಡೆಸುವ ಇಂದಿನ ಹುಚ್ಚು ಹವ್ಯಾಸವೂ ದೂರವಾಗಲಾರದು.

— ಕಾರ್ತಿಕೇಯ.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳ ಎರಡೆರಡು ಪ್ರತಿಗಳನ್ನು ಕಳುಹಿಸುವಂತೆ ಕೋರಿದೆ.)

ಗೀತಾಭಾಷ್ಯ ಮತ್ತು ಗೀತಾ ತಾತ್ಪರ್ಯ ಸಹಿತ ಶ್ರೀಮದ್ಭಗವದ್ಗೀತೆಯು—

ಟೀಕಾ ಭಾಷಾಂತರಕಾರರು: ಅಗ್ರಹಾರ ನಾರಾಯಣ ತಂತ್ರಿ. ಪ್ರಕಾಶಕರು: ಶ್ರೀ ಮಧ್ವಮುನಿ ಸೇವಾ ಸಂಘ, ಉಡುಪಿ. ಬೆಲೆ: ರೂ. ೧೫—೦—೦.

ಶ್ರೀಮನ್ಮಧ್ವಾಚಾರ್ಯರಿಂದ ವಿರಚಿಸಲ್ಪಟ್ಟ ಗ್ರಂಥರತ್ನಗಳನ್ನು ಕನ್ನಡದಲ್ಲಿ ಅನುವಾದಿಸಿ, ಪ್ರಕಟಿಸಿ, ತನ್ಮೂಲಕ ಆಚಾರ್ಯರು ಪ್ರತಿಪಾದಿಸಿದ ತತ್ವಗಳನ್ನು ಕರ್ನಾಟಕದ ಸಂಸ್ಕೃತ ಜ್ಞಾನವಿಲ್ಲದ ನಾಗರಿಕರ ಅವಗಾಹನೆಗೆ ತಂದು ಕೊಟ್ಟು ಮಹೋಪಕಾರ ಮಾಡುತ್ತಿರುವ ಶ್ರೀಮಧ್ವಮುನಿ ಸೇವಾ ಸಂಘದ ಇತ್ತೀಚಿನ ಸಾಹಸವೇ ಮೇಲಿನ ಗ್ರಂಥವಾಗಿದೆ. ಇದು ಮೂರು ಭಾಗಗಳಲ್ಲಿ ಪ್ರಕಟಗೊಂಡಿದ್ದು, ಕೊನೆಯ ಭಾಗಕ್ಕೆ ಶ್ರೀ ಶೀರೂರು ಮಠಾಧೀಶರಾದ ಶ್ರೀಮುಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರ ಕನ್ನಡ ಮುನ್ನುಡಿ ಹಾಗು ವಿದ್ಯಾಭೂಷಣ ಡಾ. ಬಿ. ಎನ್. ಕೃಷ್ಣಮೂರ್ತಿ ಶರ್ಮರ ಇಂಗ್ಲೀಷು ಪ್ರಸ್ತಾವನೆಗಳು ಜೋಡಿಸಲ್ಪಟ್ಟಿರುತ್ತವೆ. ಮುನ್ನುಡಿಕಾರರಾದ ಶ್ರೀ ಶ್ರೀಪಾದಂಗಳವರು ಶ್ರೀಮದಾಚಾರ್ಯರು ಕುರುಕ್ಷೇತ್ರದಲ್ಲಿ ಶ್ರೀಕೃಷ್ಣನ ಉಪದೇಶವನ್ನು ಕಿವಿಯಿಂದ ಕೇಳುತಿದ್ದ (?) ಹನುಮಂತನ ಪುನರವತಾರವೆಂದೂ ಆದುದರಿಂದ ಅವರ ವ್ಯಾಖ್ಯಾನವೇ ಪ್ರಾಜ್ಞಸಮ್ಮತವಾದುದೆಂದೂ ಒಪ್ಪಿಸಲು ನೋಡಿದ್ದಾರೆ; ಹಾಗೆಯೇ ಅರ್ಜುನನೇ ಜಯತೀರ್ಥ ನಾಮಾಭಿಧಾನದಿಂದ ಜನಿಸಿದ ಪ್ರಯುಕ್ತ ಜಯತೀರ್ಥರ ವ್ಯಾಖ್ಯಾನವೇ ಉತ್ಕೃಷ್ಟವಾದುದೆಂದೂ ಅವರು ಅಭಿಪ್ರಾಯ ಪಡುತ್ತಾರೆ. ಆದರೆ ಶ್ರೀಮದಾಚಾರ್ಯರ ತತ್ವಗಳನ್ನು ಆಸ್ವಾದಿಸುವುದಕ್ಕೋಸ್ಕರ ನಾವು ಇಂಥ ಮಾತುಗಳನ್ನು ನಂಬಬೇಕಾಗಿಲ್ಲ; ಅವನ್ನು ಮುಂದಿಟ್ಟು ಸಮರ್ಥಿಸಿಕೊಳ್ಳುವುದೂ ಹಿತವಲ್ಲ. ವ್ಯಾಪಕಾರ್ಥವಿರುವ ಗೀತೆಯ ನಿಜವಾದ ತಾತ್ಪರ್ಯವನ್ನು ಹೇಳುವಾಗ ಒಬ್ಬೊಬ್ಬರಲ್ಲಿ ಒಂದೊಂದು ರೀತಿಯಾಗುವುದು ಸಹಜ. ಆದುದರಿಂದ ಯಾರದು ಸಯುಕ್ತಿಕ ಹಾಗು ವಿದ್ವಜ್ಜನಸಮ್ಮತವೆನಿಸುವುದೋ ಅದಕ್ಕೆ ಶ್ರೇಷ್ಠ ಸ್ಥಾನವು ತಾನಾಗಿಯೇ ಲಭಿಸುತ್ತದೆ. ಈ ದೃಷ್ಟಿಯಿಂದ ನಾವು ಮಾಧ್ವ ಭಾಷ್ಯವನ್ನು ವಿಮರ್ಶಿಸಿದ ಪಕ್ಷದಲ್ಲಿ, ಎಷ್ಟೋ ತೊಡಕಾದ ವಿಷಯಗಳಿಗೆ ಇಲ್ಲಿ ಸುಲಭವಾದ ಪರಿಹಾರವು ದೊರಕುತ್ತದೆ. ಪರಸ್ಪರ ವಿರೋಧವೆನಿಸುವ ಅಭಿಪ್ರಾಯಗಳು ಇತರ ಭಾಷ್ಯಗಳಲ್ಲಿ ಕಂಡು ಬಂದರೆ, ಇಲ್ಲಿ ಅವುಗಳನ್ನೆಲ್ಲ ಪರಿಹರಿಸಿದ ಸಮಂಜಸವಾದ ವಾದ ಸರಣಿಯನ್ನು ಕಾಣುತ್ತೇವೆ. ಶ್ರೀ ಕೃಷ್ಣಮೂರ್ತಿ ಶರ್ಮರ ವಿದ್ವತ್ಪೂರ್ಣ ಪ್ರಸ್ತಾವನೆಯು ಇದನ್ನು ಹೊರಗೆಡವುತಿದ್ದು ಅವರು ಗೀತೆಯ ತತ್ವಗಳನ್ನು ವಿವರಿಸುವಲ್ಲಿ ಶ್ರೀಮದಾಚಾರ್ಯರದೇ ಎತ್ತಿದ ಕೈ ಎಂದು ಆಗಿದೆಯೆಂಬುದನ್ನು ಚೆನ್ನಾಗಿ ಮನಗಾಣಿಸುತ್ತಾರೆ. ಇಲ್ಲಿಯೂ ಕೆಲವರಿಗೆ ಪ್ರಾಮಾಣಿಕವಾದ ಸಂದೇಹಗಳುಂಟಾದಾವು—ಆದರೆ ಈ ಗ್ರಂಥದ ಮಟ್ಟಿಗೆ ಅವುಗಳು ಮುಖ್ಯವಾದುವಲ್ಲ. ಏಕೆಂದರೆ ಇದು ಶ್ರೀಮದಾಚಾರ್ಯರ ವ್ಯಾಖ್ಯಾನದ ಅನುವಾದವಾಗಿದ್ದು, ಈ ಕೆಲಸವು ಎಷ್ಟರ ಮಟ್ಟಿಗೆ ಯಶಸ್ವಿಯಾಗಿದೆಯೆಂದು ನೋಡುವುದೇ ನಮಗೆ ಸೇರಿದ ವಿಷಯ. ಬಹಳ ಭಾರವಾದ ಈ ಹೊರೆಗೂ ಹೊಣೆಗಾರಿಕೆಗೂ ಹೆಗಲು ಕೊಟ್ಟವರು ಶ್ರೀ ಮನ್ಮಧ್ವಸಿದ್ಧಾಂತ ಪ್ರಬೋಧಿನೀ ಸಂಸ್ಕೃತ ಮಹಾ ಪಾಠಶಾಲೆಯ ಪಂಡಿತರಾದ ಶ್ರೀ ಅಗ್ರಹಾರ ನಾರಾಯಣ ತಂತ್ರಿಗಳು. ಅವರು ಇದಕ್ಕೆ ಸಮರ್ಥರೆಂಬುದರಲ್ಲಿ ಸಂದೇಹವೇ ಇಲ್ಲ. ಗೀತೆಯ ಹಾಗು ಭಾಷ್ಯದ ಪ್ರತಿಯೊಂದೂ ಶ್ಲೋಕದ ಪದವಿಂಗಡಣೆ ಮಾಡಿ ಅವುಗಳಿಗೆ ಬಿಡಿ ಬಿಡಿಯಾಗಿ ಕನ್ನಡದಲ್ಲಿ ಅರ್ಥವನ್ನು ಕೊಟ್ಟು ವಾಕ್ಯರಚನೆಯನ್ನು ಅವರು ಮಾಡಿದ್ದಾರೆ. ಇದು ಸುಲಭಗ್ರಾಹ್ಯವಾಗಿದೆಯಲ್ಲದೆ ಮೂಲದ ಆಶಯವನ್ನು ತಿಳಿಗನ್ನಡದಲ್ಲಿ ಸ್ಪಷ್ಟವಾಗಿ ನಿರೂಪಿಸುವಂತಿದೆ. ದೋಷ ದೂರವಾದ ಅನುವಾದ ಕಾರ್ಯವು ಬಹಳ ಶ್ರಮ ಸಾಧ್ಯವಾಗಿದ್ದರೂ ಅದನ್ನು ಚೊಕ್ಕ ರೀತಿಯಲ್ಲಿ ತಂತ್ರಿಗಳು ನೆರವೇರಿಸಿರುವುದು ಅವರ ಯೋಗ್ಯತೆಯನ್ನು ವ್ಯಕ್ತಪಡಿಸುತ್ತದೆ. ಅವರ ಪಾಂಡಿತ್ಯಕ್ಕೆ ಇಷ್ಟು ಮಾತ್ರ ಮನ್ನಣೆಕೊಟ್ಟರೆ ಸಾಲದು—ಏಕೆಂದರೆ, ಇನ್ನೂ ಹೆಚ್ಚು ಕಠಿಣವಾದ, ಆದರೆ ಅತ್ಯಂತ ಉಪಯುಕ್ತವಾದ, ಕೆಲಸವೊಂದನ್ನೂ ಅವರು ಮಾಡಿದ್ದಾರೆ: ಅದೆಂದರೆ, ಪ್ರತಿಯೊಂದೂ ಶ್ಲೋಕದ ವಿಶೇಷಾಂಶಗಳ ವಿವರಣೆ. ಶ್ರೀಮದಾಚಾರ್ಯರ ವಾಕ್ಸರಣಿಯ ಮೇಲೆ ವಿಶೇಷವಾದ ಬೆಳಕು ಬೀರುವಂತೆಯೂ ಶಾಸ್ತ್ರ ಗ್ರಂಥಗಳ ಪ್ರಮಾಣವನ್ನು ಒದಗಿಸುವಂತೆಯೂ ಈ ವಿವರಣೆ ಇರುತ್ತದೆ. ತಂತ್ರಿಗಳ ಆಳವಾದ ಅನುಭವ, ಶಾಸ್ತ್ರಜ್ಞಾನ, ಸೂಕ್ಷ್ಮ ಬುದ್ಧಿ ಮತ್ತು ಅಧ್ಯಯನಗಳ ದ್ಯೋತಕವೇ ಈ ವಿವರಣೆಯೆಂದರೆ ತಪ್ಪಾಗದು. ಇದರ ದೆಸೆಯಿಂದಲೇ ಅನುವಾದಕ್ಕೆ ವಿಶೇಷವಾದ ಶೋಭೆಯುಂಟಾಗಿದೆ. ಹಿಂದು ಮುಂದಿನ ಸಂಬಂಧಗಳ ಸಮಂಜಸ ತಿಳುವಳಿಕೆಯಾಗುವಂತೆ ಅಗತ್ಯವೆನಿಸಿದಲ್ಲೆಲ್ಲ ಪೀಠಿಕಾ ರೂಪದ ಮಾತುಗಳನ್ನೂ ಹೇಳಿದ್ದಾರೆ. ಗೀತಾ ಶ್ಲೋಕಾನುಕ್ರಮಣಿಕೆಯನ್ನೂ ಕೊಟ್ಟಿದ್ದಾರೆ. ಪರಿಣಾಮವಾಗಿ ಅನುವಾದ ಕಾರ್ಯವು ಅತ್ಯುಪಯುಕ್ತವಾದ ರೀತಿಯಲ್ಲಿ ಯಶಸ್ವಿಯಾಗಿ ಕೈಗೂಡಿದೆಯೆಂದು ಧಾರಾಳವಾಗಿ ಹೇಳಬಹುದು. ಮಾಧ್ವ ತತ್ವಜ್ಞಾನದಲ್ಲಿ ಆಸಕ್ತಿಯುಳ್ಳ ಕನ್ನಡಿಗರಿಗೆ ಇದು ಅತ್ಯಮೂಲ್ಯವಾದ ಕಾಣಿಕೆಯಾಗಿದ್ದು, ಇದಕ್ಕಾಗಿ ದುಡಿದವರ ಶ್ರದ್ಧೆಯೂ ಪರಿಶ್ರಮವೂ ಸ್ತೋತ್ರಾರ್ಹವಾಗಿದೆ.

ನಕ್ಕರೂ ನಗಬಹುದು—

ಬರೆದವರು: ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿ. ಪ್ರಕಾಶಕರು: ಕಿರಿಯರ ಪ್ರಪಂಚ, ಉಡುಪಿ. ಬೆಲೆ: ಪತ್ತಾಣೆ.

ಇಲ್ಲಿಯ ಆರು ಬರೆಹಗಳಲ್ಲಿ ನಾಲ್ಕನ್ನು ವಿನೋದ ಚಿತ್ರವೆಂದು ಕರೆಯಬಹುದು. "ವರದಕ್ಷಿಣೆ ಬೇಕೆ?" ಹಾಗು "ಕರುಳಿನ ಭೇದ" ಎಂಬೆರಡನ್ನು ಕತೆಗಳ ಸಾಲಿಗೆ ಸೇರಿಸಬಹುದು. ವಿನೋದ ಚಿತ್ರಗಳಲ್ಲಿ ವ್ಯಂಗ್ಯವು ಎದ್ದು ಕಾಣುತ್ತದೆ. ಜೊತೆಗೆ ಸಮಾಜದಲ್ಲಿ ಸ್ತ್ರೀಯ ಅಂತಸ್ತನ್ನು ಎತ್ತರಿಸುವ ಉದಾತ್ತ ಭಾವನೆಯೂ ತುಂಬಿರುವಂತೆ ತೋರುತ್ತದೆ. ಆದರೆ ಸನ್ನಿವೇಶ ಚಿತ್ರಣದಲ್ಲಿ ಕೈಪಳಗಬೇಕಾದ ಆವಶ್ಯಕತೆಯುಂಟು. ವಸ್ತು ಹಾಗು ಪಾತ್ರ ಪೋಷಣೆಯ ಮಟ್ಟಿಗೆ "ಕರುಳಿನ ಭೇದ"ವೆಂಬ ಕತೆಯು ಈ ಸಂಗ್ರಹದಲ್ಲಿ ಉಲ್ಲೇಖನೀಯವಾದದ್ದು. ಶ್ರೀಮತಿಯವರ ಲೇಖನ ಶಕ್ತಿಯು ಹೆಚ್ಚಿನ ವ್ಯವಸಾಯ ಹಾಗು ಪರಿಶ್ರಮದ ಬಲದಿಂದ ಬೆಳೆದು, ಇದಕ್ಕೂ ಒಳ್ಳೆಯ ಕೃತಿಗಳನ್ನು ಸೃಷ್ಟಿಸಲೆಂದು ಹಾರೈಸುತ್ತೇವೆ.

ಶ್ರೀಮದ್ಭಗವದ್ಗೀತಾ—

ಅನುವಾದಕರು: ಬನ್ನಂಜೆ ರಾಮಾಚಾರ್ಯ. ಪ್ರಕಾಶಕರು: ಶ್ರೀ ಕೃಷ್ಣ ಪ್ರಕಾಶನ, ಯೋಗೀಂದ್ರಸದನ, ಉಡುಪಿ. ಬೆಲೆ: ಹನ್ನೆರಡಾಣೆ.

ಯೋಗ ಸ್ಫೂರ್ತಿಯ ದೆಸೆಯಿಂದ ಉಣಬಡಿಸಿದ ಗೀತಾಮೃತವನ್ನು ಸವಿಯಲು ಆತುರರಾದ ಜಿಜ್ಞಾಸುಗಳಿಗೆ ಇದು ಹೊಸ ರೀತಿಯ ಸುಲಭ ಕಾಣಿಕೆ — ಶ್ರೀಮನ್ಮಧ್ವಾಚಾರ್ಯರ ಸಿದ್ಧಾಂತಗಳಿಗೆ ಒಪ್ಪುವಂತೆ ಗೀತೆಯ ಶ್ಲೋಕಗಳ ಅರ್ಥವನ್ನು ಸಂಕ್ಷಿಪ್ತವಾಗಿಯೂ ಸರಳವಾಗಿಯೂ ಇದರಲ್ಲಿ ಕೊಡಲಾಗಿರುವುದು. ಇತರ "ಕೈಗನ್ನಡಿ"ಗಳಿಗಿಂತ ಇಲ್ಲಿಯ ಭಾಷೆಯಲ್ಲಿ ಹೆಚ್ಚಿನ ಸೌಂದರ್ಯವುಂಟು; ಶೈಲಿಯಲ್ಲಿ ಲಾವಣ್ಯವುಂಟು; ಆದುದರಿಂದ ಅನುವಾದವು ಆಕರ್ಷಣೀಯವಾಗಿರುವುದು. ಮಾಧ್ವರೆಲ್ಲರೂ ಸಂಗ್ರಹಿಸಿ ಪ್ರೋತ್ಸಾಹಿಸಬಹುದಾದ ಪುಸ್ತಕವಿದು.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ— ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:—1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ಶೀಘ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40
ಸ್ಟಾಕಿಸ್ಟರು: ಶಹಾಕಂಪೆನಿ, ಮಂಗಳೂರು

ಚಿನ್ನದ ನೆಕ್‌ಲೇಸ್, ತರಹವಾರು ಚೈನುಗಳು, ಬೆಂಡೋಲೆ, ಸರಗಳು, ಲೋಲಕ್ಕುಗಳು, ನಮೂನೆವಾರು ಉಂಗುರಗಳು ಯಾವಾಗಲೂ ಸಿದ್ಧವಿವೆ.

ಹೊರ ಊರುಗಳ ಆರ್ಡರುಗಳಿಗೂ ಅತೀ ಹೆಚ್ಚಿನ ಗಮನ ಕೊಡುತ್ತೇವೆ.

ಯು. ರಾಘವೇಂದ್ರ ಕೃಷ್ಣ ಭಟ್

ಜ್ಯುವೆಲರ್, ತೆಂಕಪೇಟೆ, ಉಡುಪಿ, ದ. ಭಾರತ.

U. RAGHAVENDRA KRISHNA BHAT
Jeweller, Tenkapet, UDIPI, S. Kanara.
ಫೋನು ನಂಬ್ರ 66

ಮಹಾತ್ಮರ ವ್ಯಕ್ತಿತ್ವದ ರಹಸ್ಯ

ತಾಯಿಯೇ ಅವರ ಗುರು

ಅಕ್ಟೋಬರ ೨ನೇ ದಿನಾಂಕ ಭಾರತದ ಇತಿಹಾಸದಲ್ಲಿಯೇ ಚಿರಸ್ಮರಣೀಯವಾದದ್ದು: ಅದು ಶ್ರೋಭೆಯಿಂದ ಕಂಗೆಟ್ಟ ಜಗತ್ತಿಗೆ ಅಹಿಂಸೆ ಹಾಗು ಶಾಂತಿಯ ಸಂದೇಶವನ್ನು ಸಾರಿದ ಮಹಾತ್ಮರ ಜನನ ದಿನ. ನಾವೆಲ್ಲರೂ ಗಾಂಧೀಜಿಯ ಪವಿತ್ರ ಸ್ಮರಣೆಯನ್ನು ಅಂದು ಮಾಡಿಕೊಳ್ಳುತ್ತೇವೆ; ಅವರು ಪ್ರಸಿದ್ಧಿಸಿದ ಧ್ಯೇಯಾದರ್ಶಗಳನ್ನೇನಸ್ಸು ಜೀವನದಲ್ಲಿ ರೂಢಿಸಿಕೊಳ್ಳುವೆನೆಂಬ ಪ್ರತಿಜ್ಞೆಯನ್ನು ಸ್ವೀಕರಿಸುತ್ತೇವೆ. ಮಹಾತ್ಮಾ ಗಾಂಧಿಯವರ ಕುರಿತು ನಮಗೆ ಬಹಳಷ್ಟು ಅಭಿಮಾನವೆನಿಸುತ್ತದೆ. ಅವರ ಚರಿತ್ರೆಯ ಅಧ್ಯಯನವೂ ಪ್ರಿಯವೆನಿಸುತ್ತದೆ. ಆದರೆ ಈ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಗಮನಿಸುವುದೂ ಇದೆ: ನಮಗೆ ಮಹಾತ್ಮರ ಕುರಿತು ತಿಳಿದಿರುವಷ್ಟು ಅವರಿಗೆ ಜನ್ಮಕೊಟ್ಟ ಪುತ್ಳೀ ಬಾಯಿಯ ವಿಷಯ ಗೊತ್ತಿದೆಯೆ?

ಮಹಾತ್ಮರ ಮಾತೆಯ ವಿಷಯದಲ್ಲಿ ನಾವು ಹೆಚ್ಚು ಹೆಚ್ಚು ತಿಳಿದುಕೊಳ್ಳಬೇಕಾದ ಆವಶ್ಯಕತೆಯುಂಟು. ಏಕೆಂದರೆ ಗಾಂಧೀಜಿಯವರು ತನ್ನ ತಾಯಿಗೆ ತಾವೆಷ್ಟು ಕೃತಜ್ಞರಿದ್ದೇವೆಂದು ಪ್ರಸಂಗ ಬಂದಾಗಲೆಲ್ಲ ಹೇಳುತ್ತಿದ್ದರು. ತಾಯಿಯೇ ತನಗೆ ಮನುಷ್ಯತ್ವವನ್ನು ದೊರಕಿಸಿ ಕೊಟ್ಟಳೆಂದು ಅವರು ಮನಃ ಪೂರ್ವಕ ನುಡಿಯುತಿದ್ದರು. ರಾಜಕೋಟೆಯ ದಿವಾನರಾಗಿದ್ದ ತನ್ನ ಗಂಡ ಕರಮಚಂದರ ಹಾಗು ಅವರನ್ನು ಅವಲಂಬಿಸಿದ ದೊಡ್ಡ ಕುಟುಂಬದ ಯೋಗಕ್ಷೇಮವನ್ನಷ್ಟೇ ಪುತ್ಳೀ ಬಾಯಿ ತನ್ನ ಹೆಗಲಮೇಲೆ ಹೊತ್ತಿರಲಿಲ್ಲ: ಮೋಹನದಾಸ ಗಾಂಧಿಯನ್ನು ಮಹಾತ್ಮಾಗಾಂಧಿಯಾಗಿ ರೂಪಿಸುವ ಕಾರ್ಯದಲ್ಲೂ ಅವರು ಮಹತ್ವದ ಪಾತ್ರವನ್ನು ನಿರ್ವಹಿಸಿದರು

ದಿವಾನರ ಹೆಂಡತಿಯೆಂಬ ಜಂಭ ಆಕೆಗೆ ಇರಲೇ ಇಲ್ಲ. ಕುಲೀನ ರಮಣಿಯು ಹೇಗಿರಬೇಕೊ ಅದಕ್ಕೆ ತಕ್ಕಂತೆ ಗೃಹಕೃತ್ಯದ ಎಲ್ಲ ಕೆಲಸವನ್ನೂ ಪ್ರೀತಿಯಿಂದ ಮಾಡುತಿದ್ದರು. ಪತಿಯು ಕಾಯಿಲೆಬಿದ್ದಾಗ ಅವರು ತನ್ನ ಚಿಕ್ಕ ಮಗನಾದ ಮೋಹನನ ಸಹಾಯವನ್ನು ಪಡೆದು ಸೇವೆಮಾಡುತಿದ್ದರು. ಆದ್ದರಿಂದ ಮಗನಿಂದ "ಮನೂ, ತಂದೆಯವರಿಗೆ ಮದ್ದು ಕುಡಿಸಿದೆಯಾ?" ಎಂದು ಅವರು ಪ್ರೀತಿಯಿಂದ ಕರೆದು ಕೇಳುತಿದ್ದರು. ಆಗ ಮೋಹನನು ತಂದೆಗೆ ತಾನೊಪ್ಪಿಸಿದ ಸೇವೆಯ ವರದಿಯನ್ನು ಒಪ್ಪಿಸುತಿದ್ದ. ಔಷಧ ಕುಡಿಸಿದೆ, ಊಟಕ್ಕೆ ಸಹಾಯ ಮಾಡಿದೆ, ಕಾಲನ್ನು ಒತ್ತಿದೆ ಎಂದು ಮುಂತಾಗಿ ಅವನು ಹೇಳಿದಾಗ, ತಾಯಿ ನಸುನಗೆಯಿಂದ ತೃಪ್ತಿಯನ್ನು ವ್ಯಕ್ತಪಡಿಸುತಿದ್ದಳು.

ಗಾಂಧೀಜಿಯನ್ನು ಹೆತ್ತವರು ಪ್ರೀತಿಯಿಂದ "ಮನೂ" ಎಂದು ಕರೆಯುತಿದ್ದರು. "ಮನುವು ನಮ್ಮ ಕುಟುಂಬಕ್ಕೆ ಕೀರ್ತಿಯನ್ನು ತಂದೇ ತರುತ್ತಾನೆ" ಎಂದು ಅವನ ಶುಶ್ರೂಷೆಯಿಂದ ಸಂತುಷ್ಟರಾದ ತಂದೆ ಭವಿಷ್ಯ ನುಡಿಯುತ್ತಿದ್ದರು. ಅದು ಸುಳ್ಳಾಗಲಿಲ್ಲ. ತಾಯಿಯು ಪ್ರತಿ ದಿನ ಗೃಹ ಮಂದಿರದಲ್ಲಿ ದೇವರಿಗೆ ಪೂಜೆಯನ್ನು ಒಪ್ಪಿಸಲು ಹೋಗುತಿದ್ದಾಗ ಮನುವನ್ನು ಸಂಗಡ ಕರೆದುಕೊಳ್ಳುತಿದ್ದಳು. ಮಗುವಾಗಿದ್ದಾಗಿನಿಂದಲೂ ಗಾಂಧೀಜಿಗೆ ದೇವರಲ್ಲಿ ಭಕ್ತಿಯಿತ್ತು; ಆದರೆ ದೇವಾಲಯದ ಆಡಂಬರ ಹಾಗು ಗಲಭೆಗಳು ಅವರ ಮನಸ್ಸಿಗೆ ಬರುತಿದ್ದಿಲ್ಲ. ತಾಯಿಯು ಕಟ್ಟಾ ವೈಷ್ಣವಳಾಗಿದ್ದರೂ ಶೈವ ಹಾಗು ಜೈನ ಮಂದಿರಗಳಿಗೂ ಹೋಗುತಿದ್ದಳು. ಇಷ್ಟು ಸಮಾನಭಾವದಿಂದ ನಡೆದುಕೊಳ್ಳುತಿದ್ದ ತಾಯಿಯಿಂದಲೇ ದೇವರು ಎಲ್ಲೆಲ್ಲೂ ಇದ್ದಾನೆಂದೂ ಅಣುವಿನಲ್ಲಿ ವಿಶ್ವವೇ ಪ್ರತಿಫಲಿಸುತ್ತಿದೆಯೆಂದೂ ಗಾಂಧೀಜಿಯವರು ಕಲಿತರು.

ತನ್ನ ಜೀವನದ ಕೊನೆಯ ದಿನದ ವರೆಗೂ ಗಾಂಧೀಜಿ ತಾಯಿಯಿಂದ ಕಲಿತ ಪರಮತ ಸಹಿಷ್ಣುತೆಯ ಹಾಗು ಧರ್ಮಶ್ರದ್ಧೆಯ ಪಾಠವನ್ನು ಮರೆಯಲಿಲ್ಲ. ಹಿಂದು, ಮುಸಲ್ಮಾನ, ಸಿಕ್ಖ, ಪಾರ್ಸಿ, ಕ್ರಿಶ್ಚಿಯನ, ಜೈನ, ಬೌದ್ಧ ಎಲ್ಲರೂ ಅವರ ದೃಷ್ಟಿಯಲ್ಲಿ ಸಮಾನರಾಗಿದ್ದರು. ನಿಯಮದ ತಪ್ಪದೆ ದಿನಕ್ಕೆರಡುಬಾರಿ ಅವರು ಪ್ರಾರ್ಥನೆ ನಡೆಸುತಿದ್ದರು; ಮತ್ತು ಬೇರೆ ಬೇರೆ ಮತ ಗ್ರಂಥಗಳಿಂದ ಉಪದೇಶ ವಾಕ್ಯಗಳನ್ನು ಓದುತಿದ್ದರು.

ದಿವಂಗತ ಸರ್ದಾರ ಪಟೇಲರು ಅವರೊಡನೆ ಒಮ್ಮೆ ನಕ್ಕು ನುಡಿದರು: "ನೀವು ಎಲ್ಲ ದೇವರನ್ನೂ ಸಂತೋಷಗೊಳಿಸಲು ನೋಡುತಿದ್ದೀರಿ." ಅದಕ್ಕೆ ಗಾಂಧೀಜಿ ಅಭಿಮಾನದಿಂದ ಹೇಳಿದರು: "ಹೌದು, ಅದನ್ನೆ ನನ್ನ ತಾಯಿ ನನಗೆ ಕಲಿಸಿದಳು. ಅವಳು ವೈಷ್ಣವ ದೇವಸ್ಥಾನಕ್ಕೆ ಹೋದಂತೆಯೇ ಶೈವ ಮಂದಿರಕ್ಕೂ ತೆರಳುತಿದ್ದಳು. ನನಗೂ ಕಸ್ತೂರಿಗೂ ಮದುವೆಯಾದಾಗ ನಮ್ಮನ್ನು ಹಿಂದು ಮಂದಿರಗಳಿಗಷ್ಟೇ ಅಲ್ಲ, ಒಬ್ಬ ಫಕೀರನ ದರ್ಗಾಕ್ಕೆ ಸಹ ಪೂಜೆಗಾಗಿ ಕರೆದೊಯ್ದರು."

ತಾಯಿಯು ಗಾಂಧೀಜಿಗೆ ಮನಸ್ಫೂರ್ತಿಯಿಂದ ಕೆಲಸ ಸಾಧಿಸುವ ಮರ್ಮವನ್ನು ಕಲಿಸಿದರು. ಗಾಂಧೀಜಿಗೆ ಬಾಲ್ಯದಲ್ಲಿ ನೀರುಳ್ಳಿ ಇಷ್ಟವಾಗಿತ್ತು. ಆದರೆ ವೈಷ್ಣವ ಸಂಪ್ರದಾಯದವರು ಅದನ್ನು ನಿಷಿದ್ಧ ಭಕ್ಷವೆನ್ನುತಿದ್ದರು. ಆದರೆ ತಾಯಿಯು ತಾನು ತಿನ್ನದಿದ್ದರೂ ಮಗನಿಗಾಗಿ ಅದನ್ನು ಪ್ರತ್ಯೇಕವಾಗಿ ಬೇಯಿಸಿ, ಬಡಿಸುತಿದ್ದರು. ಹಾಗೆ ಊಟ ಮಾಡಿಸುವಾಗಲೆಲ್ಲ ನೀನು ಒಬ್ಬ ಮನುಷ್ಯನೆಂದು ಹಿತ ನುಡಿಯುತ್ತಾ ಅದನ್ನು ಬಿಟ್ಟುಕೊಡುವಂತೆ ಮನವೊಲಿಸುತಿದ್ದಳು. ಮಗನು ಕೊನೆಗೊಮ್ಮೆ ತಾಯಿಯ ಉಪದೇಶದ ಮಾತನ್ನು ಗ್ರಹಿಸಿ, ಅವಳ ಮಾತಿಗೆ ಒಪ್ಪಿದನು.

ಪ್ರಾರ್ಥನೆಯನ್ನು ನಡೆಸದೆ ತಾಯಿಯು ಊಟ ಮಾಡುತ್ತಿರಲಿಲ್ಲ. ವ್ರತಗಳನ್ನೂ ಉಪವಾಸಗಳನ್ನೂ ಕೈಗೊಳ್ಳುವುದರಲ್ಲಿ ಅವರು ನಿಸ್ಸೀಮರಾಗಿದ್ದರು. ನವರಾತ್ರಿಯ ಒಂಭತ್ತು ದಿನಗಳಲ್ಲಿ ಅವರು ಅಖಂಡ ಉಪವಾಸವನ್ನು ಮಾಡುತಿದ್ದರು. ತನ್ನ ಮಕ್ಕಳಿಗೂ ಇದನ್ನು ಕಲಿಸುತಿದ್ದರು. ಚಾತುರ್ಮಾಸದ ನ್ನು ಚಾಂದ್ರಾಯಣ ವ್ರತವನ್ನು ಅವರು ಭಕ್ತಿಪೂರ್ವಕ ಕೈಗೊಳ್ಳುತಿದ್ದರು. ಒಂದು ಮಳೆಗಾಲದಲ್ಲಿ ಅವರು ಕಾಯಿಲೆ ಬಿದ್ದಾಗಲೂ ದಿನಕ್ಕೊಂದೇ ಊಟ ಮಾಡುವ ತನ್ನ ನಿಶ್ಚಯವನ್ನು ಬದಲಿಸಲಿಲ್ಲ.

ಕೆಲವೊಮ್ಮೆ ಅವರು ಪ್ರತಿ ಎರಡು ದಿನಕ್ಕೊಮ್ಮೆ ಉಪವಾಸ ಮಾಡಿ, ಸೂರ್ಯನನ್ನು ನೋಡಿದ ಬಳಿಕವೇ ಅನ್ನವನ್ನು ಸ್ವೀಕರಿಸುತಿದ್ದರು. ಮಗುವಿಗೆ ತಾಯಿ ಉಪವಾಸವಿರುವುದು ಬಹಳ ದುಃಖ ತರುತಿತ್ತು: ಅವನು ಮೋಡಗಳ ಎಡೆಯಿಂದ ಸೂರ್ಯ ಬಿಂಬ ಕಾಣಿಸಿಕೊಳ್ಳುವುದನ್ನೆ ಕುತೂಹಲದಿಂದ ದಿಟ್ಟಿಸುತ್ತ ಕುಳಿತುಕೊಳ್ಳುತಿದ್ದ. ಬಿಂಬ ಕಂಡಕೂಡಲೆ ತಾಯಿಯನ್ನು ಕರೆದು "ಸೂರ್ಯನನ್ನು ನೋಡಮ್ಮಾ" ಎನ್ನುತಿದ್ದ. ಮನೆಯೊಳಗಿಂದ ತಾಯಿ ಹೊರ ಬರುವಷ್ಟರಲ್ಲಿ ಸೂರ್ಯ ಮರಳಿ ಮೋಡದೊಳಗೆ ಸೇರಿ ಹೋದಾಗ, ಇವನು ಖಿನ್ನನಾಗುತಿದ್ದ. ಆಗ ತಾಯಿ "ಚಿಂತಿಲ್ಲ ಮನೂ, ದೇವರಿಗೆ ನಾನು ಉಪವಾಸವನ್ನು ಮುರಿಯಬೇಕೆಂದು ಕಾಣುವುದಿಲ್ಲವೆಂದೇ ಇದರ ಅರ್ಥ" ಎಂದು ಸಮಾಧಾನ ಪಡಿಸುತಿದ್ದರು.

ತಾಯಿಯ ಸಾಧು ಮನೋಭಾವವು ಗಾಂಧೀಜಿಯ ಮೇಲೆ ಅತ್ಯಧಿಕ ಪರಿಣಾಮವನ್ನು ಮಾಡಿತು. ಮುಂದೆ ಮನುವು ಮಹಾತ್ಮನಾದಾಗ ದೀರ್ಘ ಕಾಲದ ಉಪವಾಸಗಳನ್ನು ಯಶಸ್ವಿಯಾಗಿ ಕೈಕೊಂಡು, ತಾಯಿಗಿಂತಲೂ ಒಂದು ಕೈ ಮೇಲೆಂದು ಸಿದ್ಧ ಮಾಡಿ ತೋರಿಸದಿರಲಿಲ್ಲ. "ಉಪವಾಸ ಮಾಡುವುದು ನನಗೆ ಬಾಲ್ಯದ ಅಭ್ಯಾಸ. ವ್ರತವನ್ನು ಕೈಗೊಳ್ಳುವುದೆಂದರೆ ಸ್ಥಿರತ್ವವನ್ನು, ಸ್ವನಿಗ್ರಹವನ್ನು ದೃಢ ಸಂಕಲ್ಪ ಶಕ್ತಿಯನ್ನು ಸಂಪಾದಿಸಿ ಗುಣಾಭಿರತನಾಗುವುದೆಂದು ಅರ್ಥ. ಇದಕ್ಕೆ ಧಾರ್ಮಿಕ ಮಹತ್ವವುಂಟು, ಸತ್ಯಾಗ್ರಹದಲ್ಲಿ ಇದು ಅಂತಿಮ ಉಪಾಯ" ಎಂದು ಗಾಂಧೀಜಿ ಹೇಳುತಿದ್ದರು.

ಕೊಳೆ ತೆಗೆಯುವ ಸಾಬೂನಿನ ತಯಾರಿಕೆ

(೨ನೇ ಪುಟದಿಂದ)

ದಕ್ಕೆ ಭಾರತೀಯರ ಸ್ವದೇಶ ನಿಷ್ಠೆಯೇ ಪ್ರಬಲ ಪ್ರೋತ್ಸಾಹವನ್ನು ಕೊಟ್ಟಿತು. ಆದರೆ ಸ್ವಾತಂತ್ರ್ಯೋತ್ತರದಲ್ಲಿ ನಿಧಾನವಾಗಿ ಈ ವಾತ್ಸಲ್ಯ ಕುಂದುತ್ತಿರುವಂತೆ ಭಾಸವಾಗುತ್ತದೆ. ಟಾಟಾರವರು ಹೇಳುವಂತೆ "ಭಾರತದಲ್ಲಿ ಉತ್ಪಾದಿಸಲ್ಪಡುವ ಸರಕು" ಎನ್ನುವುದಕ್ಕೂ "ಭಾರತೀಯ ಬಂಡವಾಳ ಹಾಗು ಮೇಲ್ವಿಚಾರಣೆಯಲ್ಲಿ ಉತ್ಪಾದಿತ ಸರಕು" ಎನ್ನುವುದಕ್ಕೂ ಇರುವ ಮಹತ್ವಾದ ಅಂತರವನ್ನು ಗಮನಿಸದಿರುವುದೇ ಇದಕ್ಕೆ ಕಾರಣ. ನಿಜವಾದ ಸ್ವದೇಶೀ ವಸ್ತುಗಳನ್ನು ಗುರುತಿಸುವುದಕ್ಕೆ ಗ್ರಾಹಕರು ಹೋಗುವಂತೆ ಕಾಣುವುದಿಲ್ಲ: ಇನ್ನು ಮುಂದೆ ವಿಶಿಷ್ಟ ಮುದ್ರೆಯನ್ನೊತ್ತಿ ಸ್ವದೇಶೀ ವಸ್ತುಗಳನ್ನು ಸುಲಭದಲ್ಲಿ ಗುರುತಿಸಲಾಗುವಂತೆ ಮಾಡಲಾಗುವುದು.

ಭಾರತೀಯ ಉತ್ಪಾದಕರಿಗೆ ಅಂತಾರಾಷ್ಟ್ರೀಯ ಮಂಡಳದ ಕಾರಖಾನೆಯೊಂದಿಗೆ ಹಣಗುವುದಕ್ಕೆ ಸಾಧ್ಯವಿಲ್ಲದಿರುವುದಕ್ಕೆ ಕಾರಣಗಳೇನೆಂದು ತಿಳಿದುಕೊಳ್ಳುವುದು ಅಪೇಕ್ಷಣೀಯ--ಅವರ ಕಾರಖಾನೆಗಳಲ್ಲಿ ನುರಿತ ಕೆಲಸಗಾರರಿದ್ದಾರೆ,ಮಿತವಾದ ಬೆಲೆಯಲ್ಲಿ ಅವರು ತಮ್ಮ ಸರಕುಗಳನ್ನು ಗ್ರಾಹಕರಿಗೆ ಒದಗಿಸುತ್ತಾರೆ, ಆಕರ್ಷಣೀಯವಾದ ರೀತಿಯಲ್ಲಿ ಅವು ಪೇಟೆಯಲ್ಲಿ ಮಾರಾಟಕ್ಕೆ ಬರುವಂತೆ ಜಾಗರೂಕತೆ ವಹಿಸುತ್ತಾರೆ. ಅಂತಾರಾಷ್ಟ್ರೀಯ ಪೇಟೆಗೂ ಒಯ್ದು ಮಾರುತ್ತಾರೆ. ಸಿನೆಮಾತಾರೆಯರ ಹೆಸರಿನಲ್ಲಿ ಅವರು ಪ್ರಕಟಿಸುವ ಜಾಹೀರಾತುಗಳೂ ಆಗಾಗ್ಗೆ ಏರ್ಪಡಿಸುವ ಸ್ಪರ್ಧೆಗಳೂ ಗ್ರಾಹಕರ ಮನಸ್ಸನ್ನು ಒಲಿಸುತ್ತವೆ. ಇದು ಇವತ್ತು ಹುಟ್ಟಿಕೊಂಡ ತಂತ್ರವಲ್ಲ—ಹತ್ತಿಪ್ಪತ್ತು ವರ್ಷಗಳ ಹಿಂದಿನಿಂದಲೂ ಅವರು ವ್ಯಾಪಾರದ ಕಲೆಯಲ್ಲಿ ಪಳಗಿದವರಂತೆ ವರ್ತಿಸುತ್ತಾ ಬಂದಿದ್ದಾರೆ.

ತಮ್ಮ ವಿಚಕ್ಷಣತೆ ಹಾಗು ಕೌಶಲ್ಯದ ದೆಸೆಯಿಂದ ಸರಕುಗಳಿಗೆ ಗ್ರಾಹಕರನ್ನು ಹೆಚ್ಚಿಸಿಕೊಂಡುದಕ್ಕೆ ಅವರನ್ನು ದೂಷಿಸಿ ಅಥವಾ ಶಪಿಸಿ ಪ್ರಯೋಜನವಿಲ್ಲ. ಭಾರತೀಯ ಉತ್ಪಾದಕರು ಅವರ ಚಟುವಟಿಕೆಗಳ ಮೇಲೆ ಸರಕಾರ ಉಗ್ರ ನಿಯಂತ್ರಣವನ್ನು ಹೇರಬೇಕೆಂದೂ ಬಯಸ ಬಾರದು. ಹೊಸ ಕಾರಖಾನೆಗಳನ್ನು ವಿದೇಶದ ಬಂಡವಾಳದಿಂದ ತೆರೆಯುವುದಕ್ಕೆ ಸರಕಾರ ಒಪ್ಪದಿರಬಹುದು— ಅದಕ್ಕೂ ಹೆಚ್ಚು ಮುಂದಿಡುವುದೆಂದರೆ ತಾನು ಕೊಟ್ಟ ವಚನವನ್ನು ಮುರಿದಂತಾಗುವುದು ಈ ಪರಿಸ್ಥಿತಿಯು ತಮ್ಮ ಸರಕುಗಳ ಯೋಗ್ಯತೆಯನ್ನು ಹೆಚ್ಚಿಸಿ, ಉತ್ಪಾದನಾ ವೆಚ್ಚವನ್ನು ತಗ್ಗಿಸಿ, ಪ್ರಚಾರ ಕಾರ್ಯವನ್ನು ಭರದಿಂದ ಮುಂದೊತ್ತಿ, ಆಕರ್ಷಕವಾದ ರೀತಿಯಲ್ಲಿ ವ್ಯಾಪಾರ ಕಲೆಯನ್ನು ಪ್ರದರ್ಶಿಸಿ, ಭಾರತೀಯ ನಾಗರಿಕರ ಮನವೊಲಿಸುವುದೇ ಸ್ವದೇಶದ ಉತ್ಪಾದಕರ ಕರ್ತವ್ಯವಾಗಿರುತ್ತದೆ. ಗ್ಲಿಸರಿನ್ ಪ್ಲಾಂಟೇಶನ್ ಮುಂತಾದ ಸಾಧನ ಸಲಕರಣೆಗಳು ನಾಕಷ್ಟು ಇಲ್ಲದಿದ್ದರೂ ಕಾರಖಾನೆ ನಡೆಸುವ ಕಂಪನ್ನಿಗಳನ್ನು ತೋರಿಸುವಬದಲು ಸಂಘಟಿತ ರೀತಿಯಲ್ಲಿ ಕೆಲಸ ಮಾಡಲು ಅವು ಪ್ರಯತ್ನಿಸುವುದೊಳಿತು. ಕಚ್ಚಾ ವಸ್ತುಗಳ ಬೆಲೆಯು ವಿಪರೀತವಾಗಿ ಏರಿಳಿಯುತ್ತಿರದಂತೆ ಮಾತ್ರ ಸರಕಾರ ಜಾಗರೂಕತೆ ವಹಿಸಬಹುದು.

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ- ೧ ಬಾಟ್ಲಿಗೆ — ರೂ. ೩-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

ಗಾಂಧೀಜಿಯ ತಾಯಿಗೆ ಓದು ಬರಹ ಬರುತ್ತಿರಲಿಲ್ಲ. ಹಾಗೆಂದು ಅವರ ಸಾಮಾನ್ಯ ಜ್ಞಾನವೇನೂ ಕಡಿಮೆ ಇದ್ದಿಲ್ಲ. ಅರಮನೆಗೆ ತಾಯಿಯು ತನ್ನನ್ನು ಸಂಗಡ ಕರೆದುಕೊಂಡು ಹೋಗಿ ಅಲ್ಲಿ ಸಾಹೇಬರ ತಾಯಿಯೊಡನೆ ಗಂಭೀರವಾದ ಚರ್ಚೆಗಳಲ್ಲಿ ತೊಡಗುತಿದ್ದುದನ್ನು ಗಾಂಧೀಜಿ ಆಗಾಗ್ಗೆ ಪ್ರಸ್ತಾಪಿಸುತಿದ್ದರು. ಆದರೆ, ತಾಯಿಯು ಅಸ್ಪೃಶ್ಯರನ್ನು ದೂರವಿಡಬೇಕೆಂದು ಹೇಳುತಿದ್ದದ್ದು ಮಾತ್ರ ಅವರಿಗೆ ಪ್ರಿಯವಾಗಲಿಲ್ಲ ಅಸ್ಪೃಶ್ಯ ಶಾಲಾ ಬಾಲಕನೊಬ್ಬನನ್ನು ಮುಟ್ಟುವುದು ಅಪವಿತ್ರವೆಂದು ತಾಯಿ ಮಗುವಿಗೆ ಬುದ್ಧಿ ಹೇಳುತಿದ್ದರು; ಮತ್ತು "ಮಡಿ" ಯಾಗಲು ಸ್ನಾನ ಮಾಡಿಸುತಿದ್ದರು. ಇದನ್ನು ಹನ್ನೆರಡರ ಆ ಹುಡುಗನು ನಗುತ್ತಲೇ ಪ್ರತಿಭಟಿಸುತಿದ್ದ: ರಾಮಾಯಣದ ಕತೆಯನ್ನು ತಾಯಿಯ ನೆನಪಿಗೆ ತಂದುಕೊಟ್ಟು ಗುಹನು ರಾಮನಿಗೆ ಸ್ವಾಗತ ಬಯಸಿದುದನ್ನು ಉದಾಹರಿಸುತಿದ್ದ ಶಬರಿಯ ಆತಿಥ್ಯವನ್ನು ವರ್ಣಿಸುತಿದ್ದ. ಹೀಗೆ ತಾಯಿಗೆ ಅಸ್ಪೃಶ್ಯತೆಗೆ ಧರ್ಮದಲ್ಲಿ ಸ್ಥಾನವಿಲ್ಲವೆಂದು ಮನಗಾಣಿಸುತಿದ್ದ.

ಸಣ್ಣಂದಿನಲ್ಲಿ ತಾಯಿಗೆ ಒಮ್ಮೆ ಗಾಂಧೀಜಿ ಮೋಸಮಾಡಿದ್ದರು. ಭಾರತದ ಸ್ವಾತಂತ್ರ್ಯಕ್ಕಾಗಿ ಹಾತೊರೆಯುತಿದ್ದ ಅವರು "ಮಾಂಸ ತಿನ್ನುವ ಇಂಗ್ಲೀಷಿನವರು ಎತ್ತರವಾಗಿ ಬೆಳೆದು ಚಿಕ್ಕ ಶರೀರದ ಭಾರತೀಯರನ್ನು ಆಳುತ್ತಾರೆ" ಎಂಬ ಕವಿತೆಯ ಸಾಲುಗಳಿಂದ ಆಕರ್ಷಿಸಲ್ಪಟ್ಟರು. ಇಂಗ್ಲೀಷಿನವರಷ್ಟೇ ಪ್ರಬಲ ಶಕ್ತಿ ಸಂಪನ್ನರಾಗಬೇಕೆಂಬ ಬಯಕೆಯಿಂದ ಅವರು ಕಳ್ಳ ರೀತಿಯಲ್ಲಿ ಮಾಂಸ ತಿಂದರು. ವೈಷ್ಣವ ಸಂಪ್ರದಾಯದ ಈ ಹುಡುಗನಿಗೆ ಮಾಂಸದ ರುಚಿ ಹಿಡಿಸಲಿಲ್ಲ ತಾಯಿ "ಊಟ ಮಾಡು, ಮಗೂ" ಎಂದು ಕರೆದಾಗ "ನನಗೆ ಹಸಿವಿಲ್ಲ" ಎಂದು ಹೇಳಿದ ಹೀಗೆ ಕೆಲವು ಸಲ ಸುಳ್ಳು ಹೇಳಿದ ಬಳಿಕ, ತಾನು ತಪ್ಪು ಮಾಡುತಿದ್ದೇನೆಂಬ ಅರಿವಾಯಿತು. ಅವನು ಹಿರಿಯರ ಮುಂದೆ ತಪ್ಪನ್ನು ಒಪ್ಪಿಕೊಂಡ. ಬ್ರಿಟಿಷರನ್ನು ಸೋಲಿಸಲು ಕೊಬ್ಬಿನ ಶಕ್ತಿಯನ್ನಲ್ಲ, ಅದಕ್ಕೂ ಉತ್ಕೃಷ್ಟವಾದ ಸತ್ಯ ಅಹಿಂಸೆಗಳನ್ನು ಆಶ್ರಯಿಸಲಾಯಿತು.

ಮೆಟ್ರಿಕ್ಯುಲೇಶನಾದ ಬಳಿಕ ಕಾಲೇಜಿಗೆ ಗಾಂಧೀಜಿ ದಾಖಲಾದರು ಅವರ ತಂದೆ ತೀರಿ ಹೋಗಿದ್ದರು. ಕುಟುಂಬದ ಸ್ನೇಹಿತರೊಬ್ಬರು ಹಿರಿಯರ ಪಟ್ಟವಾದ ದಿವಾನಗಿರಿಯನ್ನು ಮಗನು ವಹಿಸಬೇಕೆಂದು ಕಾರಣ ತೋರಿಸಿ, ಇದಕ್ಕಾಗಿ ಇಂಗ್ಲಾಂಡಿಗೆ ಹೆಚ್ಚಿನ ಶಿಕ್ಷಣಕ್ಕಾಗಿ ಹೋಗಬೇಕೆಂದು ಸಲಹೆ ನೀಡಿದರು. ದೂರ ದೇಶದಲ್ಲಿ ತನ್ನ ಮಗನು ಅಡ್ಡದಾರಿ ಹಿಡಿಯಬಹುದೆಂಬ ವಿಚಾರವೇ ತಾಯಿಗೆ ಪುತ್ರ ವಿರಹದ ಶೋಕಕ್ಕಿಂತಲೂ ಹೆಚ್ಚು ನೋವನ್ನುಂಟು ಮಾಡಿತು ಆದುದರಿಂದ ಅವರು ಮಗುವಿಗೆ ಹಾವನೊದನೆ ಸಲಹೆ ಕೇಳಲು ಹೇಳಿದರು ಆ ಮಾವ ತನ್ನ ತಲೆಯ ಮೇಲೆ ಯಾವ ಹೊಣೆಯನ್ನೂ ತೆಗೆದುಕೊಳ್ಳದೆ "ನಿನ್ನ ತಾಯಿಗೆ ಒಪ್ಪಿಗೆಯಾದರೆ ನನ್ನದೇನೂ ಆಕ್ಷೇಪವಿಲ್ಲ" ಎಂದರು ಇದನ್ನು ತಾಯಿಗೆ ತಿಳಿಸಿದ ಬಳಿಕವೂ ತಾಯಿ ಹಿಂದೆ ಮುಂದೆ ನೋಡಲು "ನನ್ನಲ್ಲಿ ವಿಶ್ವಾಸವಿಲ್ಲವೆ, ಅಮ್ಮಾ?" ಎಂದು ಮಗ ಕೇಳಿದ. "ನಿನ್ನನ್ನು ನಂಬುತ್ತೇನೆ, ಮಗೂ. ಆದರೆ ಆ ದೇಶದಲ್ಲಿ ನೀನು ಇಲ್ಲಿಯ ನಿಯಮಗಳನ್ನು ಪಾಲಿಸುವುದಾದರೂ ಹೇಗೆ ಸಾಧ್ಯ?" ಎಂದು ತಾಯಿ ಶಂಕೆ ವ್ಯಕ್ತಪಡಿಸಿದರು ಆಗ ಮದ್ಯವನ್ನೂ ಮಾಂಸವನ್ನೂ ಮಹಿಳೆಯನ್ನೂ ಮುಟ್ಟುವುದಿಲ್ಲ" ಎಂದು ಮಗನು ಪ್ರತಿಜ್ಞಾಬದ್ಧನಾದನು

ಇಂಗ್ಲೆಂಡಿಗೆ ಯಾತ್ರೆ ಬೆಳೆಸುವಾಗ ಹಾಗು ಅಲ್ಲಿ ವಾಸಿಸುವಾಗ ಗಾಂಧೀಜಿಗೆ ತಾಯಿಗೆ ಕೊಟ್ಟ ವಚನವನ್ನು ಪೂರೈಸುವಲ್ಲಿ ಎಷ್ಟು ಕಷ್ಟವಿದೆಯೆಂದು ಗೊತ್ತಾಯಿತು ಒಬ್ಬ ಆಂಗ್ಲ ಸ್ನೇಹಿತರು ಸಹಾನುಭೂತಿಪರ ಮಾತುಗಳನ್ನಾಡುತ್ತಾ "ನೀವು ಒಮ್ಮೆ ತೀರ ಅನಗತ್ಯವಾದ ಗಳಿಗೆಯಲ್ಲಿ ಮಾಂಸವನ್ನು ಭಕ್ಷಿಸಿದಿರಿ. ಈಗ ಇಲ್ಲಿ ತಿನ್ನುವುದು ಅನಿವಾರ್ಯವೆನಿಸಿದಾಗ ಹಿಂದೆ ಮುಂದೆ ನೋಡುತ್ತೀರಿ, ಅಕ್ಷರಸ್ಥಳಲ್ಲದ ತಾಯಿಗೆ, ಇಂಗ್ಲೆಂಡಿನ ಪರಿಸ್ಥಿತಿ ಗೊತ್ತಿಲ್ಲದವಳಿಗೆ, ಕೊಟ್ಟ ವಚನವನ್ನು ಮುರಿಯುವುದರಿಂದ ನಷ್ಟವೇನೂ ಆಗದು" ಎಂದರು. ಅದಕ್ಕೆ ಗಾಂಧೀಜಿ ಸಮ್ಮತಿಸಲಿಲ್ಲ. "ಪ್ರತಿಜ್ಞೆಯು ಪ್ರತಿಜ್ಞೆಯೇ ಆಗಿದೆ—ನಾನು ಪರಮಾರ್ಥಿಯೆಂದೂ ಹುಚ್ಚನೆಂದೂ ಬೇಕಾದರೆ ಹೇಳಿ ತಾಯಿಗೆ ಕೊಟ್ಟ ವಚನವನ್ನು ಮುರಿಯುವುದಕ್ಕಿಂತ ನಾನು ಉಪವಾಸ ಸಾಯುವುದೇ ಮೇಲು."

ದೃಢ ಪ್ರತಿಜ್ಞನಾದ ಮಗನು ೧೮೯೧ರಲ್ಲಿ ಸ್ವದೇಶಕ್ಕೆ ಮರಳಿ, ತಾಯಿಯನ್ನು ಕಂಡು "ವಚನ ಪಾಲಿಸಿದೆನಮ್ಮ" ಎಂದು ಹೇಳಬೇಕೆಂದಿದ್ದಾಗ, ಗಾಂಧೀಜಿಯ ಸಹೋದರರು ಮಾತೆ ತೀರಿಹೋದ ಸುದ್ದಿ ತಿಳಿಸಿದರು. ಅವರಿಗೆ ಆಘಾತವಾದಂತಾದರೂ ಶೋಕವನ್ನು ಸಂಯಮಿಸಿಕೊಂಡರು. ಎರಡು ವರ್ಷಗಳ ಬಳಿಕ ಆಫ್ರಿಕಕ್ಕೆ ಹೋದಾಗ ಅಲ್ಲಿ ಅವರ ಕೊರಳಲ್ಲಿ ತೂಗುತಿದ್ದ ತುಳಸಿಯ ಮಾಲೆಯನ್ನು ಕಂಡ ಮಿ. ಕೋಟ್ಸರು "ಇಂಥ ಅಂಧ ಶ್ರದ್ಧೆ ನಿಮಗೆ ಹೇಳಿಸಿದುದಲ್ಲ ಅದನ್ನು ಹರಿದೊಗೆಯುತ್ತೇನೆ" ಎಂದರು. ಗಾಂಧೀಜಿಗೆ ತಾಯಿಯ ನೆನಪಾಯಿತು "ಬೇಡ, ಇದನ್ನು ನನ್ನ ತಾಯಿ ನನಗೆ ಕಾಣಿಕೆಯಾಗಿ ಕೊಟ್ಟಳು. ಇದರ ಆಧ್ಯಾತ್ಮಿಕ ಮಹತ್ವವು ನನಗೆ ತಿಳಿದಿಲ್ಲ ಆದರೆ, ನನ್ನ ತಾಯಿಯು ಪ್ರೀತಿಯಿಂದ ಕೊರಳ ಹಾರವಾಗಿ ತೊಡಿಸಿದ ಇದನ್ನು ಹರಿದೊಗೆಯಲು ಅದು ಬಲವಾದ ಕಾರಣವಾಗಲಾರದು. ಇದು ತಾನಾಗಿ ಕಡಿದು ಹೋಗಲಿ—ಆ ಮೇಲೆ ಹೊಸತನ್ನು ನಾನು ಧರಿಸುವುದಿಲ್ಲ."

ತಮ್ಮ ಇಳಿ ವಯಸ್ಸಿನಲ್ಲಿಯೂ ಗಾಂಧೀಜಿ ಆಗಾಗ್ಗೆ ತಮ್ಮ ತಾಯಿಯನ್ನು ಆದರ ಪೂರ್ವಕ ಸ್ಮರಿಸುತಿದ್ದರು. ಎಪ್ಪತ್ತರ ವಯಸ್ಸಿನಲ್ಲಿ ಅವರು ತಕ್ಷಶಿಲೆಗೆ ಹೋಗಿದ್ದಾಗ ಬೇರೆ ಅನೇಕ ವಸ್ತುಗಳೊಡನೆ ಸಾವಿರ ವರ್ಷ ಪುರಾತನವಾದ ಕಾಲಿನ ಕಡಗಗಳನ್ನೂ ಗಾಂಧೀಜಿಗೆ ತೋರಿಸಲಾಯಿತು. ಅದನ್ನು ನೋಡಿದವರೇ "ನನ್ನ ತಾಯಿ ಇಂಥವೇ ಕಡಗಗಳನ್ನು ತೊಡುತಿದ್ದಳು" ಎಂಬ ಉದ್ಗಾರವನ್ನು ನಿಟ್ಟುಸಿರಿನೊಡನೆ ಗಾಂಧೀಜಿ ಹೊರಗಿಸಿದರು ೧೯೪೭ರಲ್ಲಿ ಅವರು ದೆಹಲಿಯ ನಿರಾಶ್ರಿತರಿಗೆ ಗುಣಶೀಲರಾಗಿರಬೇಕೆಂದು ಹೇಳುತ್ತಾ "ನನ್ನ ತಾಯಿ ಅಕ್ಷರಸ್ಥಳಿರದಿದ್ದರೂ ನಾನು ಸರಿಯಾದ ಕೆಲಸವನ್ನೇ ಮಾಡಬೇಕೆಂದು ಜಾಗರೂಕತೆ ವಹಿಸಿದ್ದಳು ನನ್ನ ನಿಕಟ ಕ್ಷೇತ್ರವನ್ನು ಚೆನ್ನಾಗಿಟ್ಟುಕೊಂಡರೆ, ಲೋಕವು ತನ್ನಷ್ಟಕ್ಕೆ ತಾನೇ ಸುಖಿಯಾಗುತ್ತದೆ" ಎಂದರು

ಮಹಾದೇವ ಭಾಯಿಯವರು "ನಿಮ್ಮ ಆತ್ಮ ಚರಿತ್ರೆಯಲ್ಲಿ ತಾಯಿಯ ಧಾರ್ಮಿಕ ವಿಧಿಗಳನ್ನು ಸದಾಚಾರವೆಂದು ಕರೆದಿದ್ದೀರಿ. ಅದನ್ನು ಉಗ್ರ ತಪಸ್ಸು ಎಂದರೆ ಸರಿಯಾಗದೆ?" ಎಂಬುದಾಗಿ ಗಾಂಧೀಜಿಯನ್ನೊಮ್ಮೆ ಪ್ರಶ್ನಿಸಿದರು "ಇಲ್ಲ. ಆದಾಗದು. ನಾನು ಸದಾಚಾರ ಎಂಬ ಶಬ್ದವನ್ನು ಉದ್ದೇಶ ಪೂರ್ವಕ ಬಳಸಿದ್ದೇನೆ ಅದು ಆತ್ಮದ ಯೋಗ್ಯತೆಯನ್ನು ಪ್ರತಿನಿಧೀಕರಿಸುತ್ತದೆ. ನನ್ನ ತಾಯಿಯು ಅಂತಃಪ್ರೇರಣೆಯಿಂದಲೇ ಧಾರ್ಮಿಕ ವಿಧಿಗಳನ್ನು ನೆರವೇರಿಸುತಿದ್ದಳು ನಾನು ಏನಾದರೂ ನೈರ್ಮಲ್ಯವನ್ನು ಸಂಪಾದಿಸಿದ್ದರೆ ಅದು ನನ್ನ ತಾಯಿಯಿಂದಲೇ ಹೊರತು ತಂದೆಯಿಂದಲ್ಲ ನನ್ನ ತಾಯಿ ನಲುವತ್ತರ ಪುಷ್ಪಿತ ತಾರುಣ್ಯದಲ್ಲಿಯೇ ಪರಂಧಾಮನೈದಿದಳು. ಆವಳೆಂದೂ ಬಟ್ಟೆಬರೆ, ಆಭೂಷಣ, ಜೀವನದ ಸುಖ ಸಾಧನಗಳಿಗಾಗಿ ಹಂಬಲಿಸಲಿಲ್ಲ. ಅವಳ ಸದಾಚಾರದ ಕಲ್ಪನೆಯು ಸದಾಕಾಲ ನನ್ನ ಮನಸ್ಸನ್ನು ಮುಗ್ಧಗೊಳಿಸುತ್ತದೆ."

"ನನ್ನ ತಾಯಿಯ ತೊಡೆಯಲ್ಲಿ ಸಾಯಬೇಕೆಂದು ನನ್ನ ಇಚ್ಛೆ" ಎನ್ನುವಷ್ಟು ಗಾಂಧೀಜಿ ಮುಂದುವರಿದಿದ್ದರು. ಭಾರತ ಮಾತೆಯ ಮಡಿಲಲ್ಲಿ ಅವರಿಗೆ ಈ ಸೌಭಾಗ್ಯ ಪ್ರಾಪ್ತವಾಯಿತು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಸುವರ್ಣ ಸಂದರ್ಭ!



ಬರೇ ರೂ 16/-ಕ್ಕೆ ಜ್ಯುವೆಲ್‌ಗಳುಳ್ಳ ರಿಸ್ಟ್‌ವಾಚು. ಪ್ರತಿಯೊಂದು ರಿಸ್ಟುವಾಚಿಗೆ ಯು ಎಸ್. ಎ. ಫೌಂಟನ್ ಪೆನು ಉಚಿತ. ಸರಿಯಾಗಿ ಸಮಯವನ್ನು ಕೊಡುವ ಸ್ವಿಸ್ ತಯಾರಿಕೆಯ ವಾಚುಗಳು. 10 ವರ್ಷ ಗ್ಯಾರಂಟಿ 6 ಜುವೆಲುಗಳಿರುವ ಕ್ರೋಮ್‌ಕೇಸಿನಲುರುಟು ಯಾ ಚೌಕ ಆಕಾರದಕ್ಕೆ ರೂ 16/- ಉತ್ತಮದಕ್ಕೆ ರೂ 17/- ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 18-8-0 ಹೆಂಗುಸರು ಉಪಯೋಗಿಸುವ 8 ಜುವೆಲುಗಳುಳ್ಳದಕ್ಕೆ ರೂ 21/- ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 23/- ಚೌಕಾ ಕೃತಿಯ 10 ಜುವೆಲುಗಳುಳ್ಳ ರೋಲ್ಡ್ ಗೋಲ್ಡ್ ಕೇಸಿನದಕ್ಕೆ ರೂ 30/- ಚಪ್ಪಟೆ ಆಕಾರದ 15 ಜುವೆಲುಗಳುಳ್ಳದ್ದಕ್ಕೆ ರೂ31/- ಉತ್ತಮ ತರದಕ್ಕೆ ರೂ30/- ಉತ್ತಮತರದ 15 ಜುವೆಲುಗಳುಳ್ಳ ಕ್ರೋಮ್ ವಾಟರ್ ಪ್ರೂಫ ಉಳ್ಳದಕ್ಕೆ ರೂ40/- ರೋಲ್ಡ್ ಗೋಲ್ಡ್ ಉಳ್ಳದಕ್ಕೆ ರೂ50/- ಅಲಾರಾಮ್ ಟಾಯಂಪೀಸು ರೂ16/- ಟ. ಖ. ರೂ 1-4-0 ಪ್ರತ್ಯೇಕ

The Syma Watch Co (N J.)
Post Box No. 11441, CALCUTTA—6.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪ್ರೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

-ಕನ್ನಡದಲ್ಲಿ ಹೊಸ ಬಗೆಯ ಗ್ರಂಥ-

ಬದುಕು ಬಂಗಾರ

(ಬರೆದವರು ಕುಮಾರಸ್ವಾಮಿ)

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

***

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ. —ಪ್ರಜಾಮತ.

ಈ ಬರಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು, ಆದರೆ ಅದನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರಹದ ಆರಂಭದಲ್ಲಿ ಅವರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. —ರಾಷ್ಟ್ರಮತ.

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ ಕನ್ನಡ ಜನತೆ, ಆದರಲ್ಲೂ ವಿದ್ಯಾರ್ಥಿವೃಂದ ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲುಖೋವದಂತಿದೆ ಇಲ್ಲಿಯ ವಿಷಯ ಸಂಪತ್ತು. —ಜನಪ್ರಗತಿ.

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ. ಒಂದೂವರೆ ರೂಪಾಯಿ

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ವಿಶೇಷ ಕಮಿಶನ್ ದರಕ್ಕೂ ಬರೆಯಿರಿ.

೧. ನವಯುಗ ಪ್ರೆಸ್, ಉಡುಪಿ. ೨. ನವಭಾರತ ಪುಸ್ತಕ ಭಂಡಾರ, ಉಡುಪಿ.

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 3?
Licensed to Post without Prepayment.

ನವಯುಗ

ಸಂಪುಟ ೩೪ VOL. 34

ಉಡುಪಿ, 7—10—1954

ಸಂಚಿಕೆ ೬ NO. 6

ಸ್ತ್ರೀ ಪುರುಷರಲ್ಲಿ ಮೂಲತಃ ವ್ಯತ್ಯಾಸವಿದೆಯೆಂಬ ಸತ್ಯವನ್ನು ಉಪೇಕ್ಷಿಸಿ ಕಳೆದ ಮತ್ತು ಈ ಶತಮಾನದ ಹಲವಾರು ಶಿಕ್ಷಣ ತಜ್ಞರೂ ಅಧ್ಯಯನ ಶಾಸ್ತ್ರಜ್ಞರೂ ಸುಧಾರಕರೂ ಅವರಲ್ಲಿ ಸಮಾನತ್ವವಿದೆಯೆಂದೂ ಆದುದರಿಂದ ಇಬ್ಬರಿಗೂ ಸಮಾನ ವಿದ್ಯೆ ಮತ್ತು ಹಕ್ಕು ಬಾಧ್ಯತೆಗಳನ್ನು ಕೊಡಬೇಕೆಂದೂ ವಾದಿಸುತ್ತಾರೆ. ಆದರೆ ನಿಜಸ್ಥಿತಿಗನುಸಾರವಾಗಿ ತನ್ನ ಪ್ರತಿ ಕಣ, ಕಣಜಾಲ ಮತ್ತು ಅಂಗಗಳಲ್ಲಿ ಹೆಂಗಸು ಗಂಡಸಿಗಿಂತ ಪ್ರತ್ಯೇಕ ರಚನೆಯನ್ನೂ ಧರ್ಮವನ್ನೂ ತೋರಿಸುತ್ತಾಳೆ.

—ಡಾ. ಅಲೆಕ್ಸಿಸ್ ಕೆರೆಲ್.

ಸಮಾನಾಧಿಕಾರದ ವಾದ

ಮನುಷ್ಯನಾದವನು ತನ್ನ ಸ್ವಭಾವ ನಿಯತವಾದ ಕರ್ಮ ಹಾಗು ಸ್ವಧರ್ಮದ ಆಚರಣೆಗೆ ಬಹಳ ಮಹತ್ವವನ್ನು ಕೊಡಬೇಕೆಂದು ಶ್ರೀ ಮದ್ಭಗವದ್ಗೀತೆಯು ಬಲವಾಗಿ ಪ್ರತಿಪಾದಿಸುತ್ತದೆ. ಇದನ್ನು ಕಡೆಗಣಿಸಿ ಪರಧರ್ಮವನ್ನು ಕುರಿತು ಕುತೂಹಲವನ್ನು ತೋರಿಸುವುದೂ ಅದಕ್ಕಾಗಿ ಆಗ್ರಹ ಪಡುವುದೂ ಅನಿಷ್ಟಪ್ರದವೆಂದು ಎಚ್ಚರಿಸುತ್ತದೆ. ಆದರೆ ನಮ್ಮ ದೇಶದಲ್ಲಿ ಪಾಶ್ಚಾತ್ಯ ಸಂಪ್ರದಾಯ ಹಾಗು ನಾಗರಿಕತೆಗಳ ಪ್ರಭಾವವು ಬಲವಾಗಿ ಬಿದ್ದಂತೆಲ್ಲ ಉದಾತ್ತವಾದ, ಉನ್ನತವಾದ ಹಾಗು ಸನಾತನವಾದ ನಮ್ಮ ರೂಢಿಗಳನ್ನು ಕಂದಾಚಾರಗಳೆಂದು ಜರೆದು ಮೂಲೆಗುಂಪು ಮಾಡುವ ಹವ್ಯಾಸವು ನಮ್ಮಲ್ಲಿಯ ಸಮಾಜ ಸುಧಾರಕರಲ್ಲಿ ಬಲಿಯತೊಡಗಿರುವುದು.

ತಿಳುವಳಿಕೆ ಕಾಲದ ಸಮಾಜ ಸುಧಾರಕರು ಯಾವಾಗಲೂ ಹಾಡುತ್ತಿರುವ ಪಲ್ಲವಿಗಳಲ್ಲಿ ಸ್ತ್ರೀ ಪುರುಷರಿಗೆ ಸಮಾನಾಧಿಕಾರ ಎಂಬುದೂ ಒಂದಾಗಿದೆ. ನಮ್ಮ ಪವಿತ್ರವಾದ ರಾಜ್ಯ ಘಟನೆಯು ಇಂಥ ಅಧಿಕಾರಕ್ಕೆ ಸಮ್ಮತಿ ಮುದ್ರೆಯನ್ನು ಒತ್ತಿದೆ. ಸರಕಾರವು ತನ್ನ ವ್ಯವಹಾರದಲ್ಲಿ ಭಾಷೆ, ಮತ, ವರ್ಣ ಮುಂತಾದವುಗಳಂತೆ ಲಿಂಗ ಭೇದವನ್ನೂ ಮಾಡತಕ್ಕದ್ದಲ್ಲವೆಂದು ಅದು ವಿಧಿಸುತ್ತದೆ. ಘಟನೆಯಂತೆ ನೀಡಲಾದ ಈ ಅಧಿಕಾರದ ನೆಪದಲ್ಲಿ ಆಗೊಮ್ಮೆ ಈಗೊಮ್ಮೆ ಕಠೋರವಾದ ತುರುಸಾದ ವಾದ—ವಿವಾದಗಳೂ ನಡೆಯುತ್ತವೆ. ಆಗ ಮನುಷ್ಯ ನಿರ್ಮಿತವಾದ ಈ ಶಾಸನಗಳು ದೈವನಿಯತವಾದ ನೈಸರ್ಗಿಕ ತತ್ವಗಳ ಮೇಲೆ ಏನೇನೂ ಅಧಿಕಾರ ಪಡೆದಿಲ್ಲವೆಂದು ಹೇಳಿದರೆ, ಸಮಾಜ ಸುಧಾರಕರು ಸಿಟ್ಟುಗೊಂಡು, ಬೆಂಕಿಯಾಗುತ್ತಾರೆ.

ಲೋಕಸಭೆಯಲ್ಲಿ ಕಳೆದವಾರ ಇಂಥದೊಂದು ಪ್ರಮೇಯ ಘಟಿಸಿತು: ಕೆಲವು ದಿನಗಳ ಪೂರ್ವದಲ್ಲಿ ರಾಜ್ಯ ಸಭೆಯಲ್ಲಿ ಬೀಸಲಿರುವ ಈ ಬಿರುಗಾಳಿಯ ಪೂರ್ವ ಚಿಹ್ನಗಳು ಪ್ರಕಟಗೊಂಡಿದ್ದವು. ಭಾರತದ ಆಡಳಿತ ಅಧಿಕಾರಿಗಳ ಶ್ರೇಣಿಯಲ್ಲಿರುವ ಮಹಿಳೆಯರು ಮದುವೆಯಾದ ಬಳಿಕ ಕಾರ್ಯ ದಕ್ಷತೆಯ ದೃಷ್ಟಿಯಿಂದ ಅವರು ರಾಜೀನಾಮೆ ಕೊಡುವುದೇ ಅಪೇಕ್ಷಣೀಯವೆನಿಸಿದರೆ, ಸರಕಾರಕ್ಕೆ ಹಾಗೆ ಒತ್ತಾಯಿಸಲು ಈಗಿರುವ ನಿಯಮವೊಂದು ಅಧಿಕಾರ ನೀಡುತ್ತದೆ. ಮಹಿಳೆಯರಿಗೆ ಮುಂಬರಲು ಸಮಾನ ಅವಕಾಶಗಳನ್ನು ಕೊಡಬೇಕೆಂದು ಸರಕಾರವು ಗಾಳಿಯಷ್ಟು ಹಿಂದೆ ತೀರ್ಮಾನಿಸಿದಾಗ ಸರದಾರ ಪಟೇಲರು ಕೆಲವೊಂದು ವಿಶಿಷ್ಟ ಹುದ್ದೆಗಳನ್ನು ಮದುವೆಯಾದ ಮಹಿಳೆಯರು ಚೊಕ್ಕ ರೀತಿಯಲ್ಲಿ ನಿರ್ವಹಿಸಲಾರರೆಂದು ಅಭಿಪ್ರಾಯಪಟ್ಟರು. ರಾಜ್ಯ ಸರಕಾರಗಳ ಸಲಹೆಯನ್ನು ಕೇಳಿದಾಗ, ಅವುಗಳಿಂದಲೂ ಇದಕ್ಕೆ ಅನುಮೋದನೆ ದೊರೆಯಿತು. ಪರಿಣಾಮವಾಗಿ ರಚಿತವಾದ ಮೇಲಿನ ನಿಯಮವು ಮಹಿಳಾ ಲೋಕದ ಪ್ರಭೃತಿಗಳ ಅಭಿಮಾನವನ್ನು ಕೆಣಕಿಸಿತು.

ಮಾನ್ಯ ಗೃಹ ಮಂತ್ರಿಗಳು ರಾಜ್ಯಸಭೆಯಲ್ಲಿ ಮಹಿಳೆಯರಿಗೆ ಮನೆಯೇ ಭೂಷಣವೆಂದು ಹೇಳಿದಾಗ ಅದಕ್ಕೆ ಸಾಮಾನ್ಯವಾದ ಅನುಮೋದನೆ ದೊರೆಯಿತು. ಶ್ರೀಮತಿ ಲೀಲಾವತಿ ಮುನ್ಷಿಯಂಥವರು ರೇಗಾಡಿದರೂ ಹೆಚ್ಚು ತಿಳುವಳಿಕೆಯುಳ್ಳ ರಾಜ್ಯ ಸಭೆಯ ಸದಸ್ಯರು ಗೃಹ ಮಂತ್ರಿಗಳ ನಿಲುವಿಗೆ ಒಪ್ಪಿಗೆಯನ್ನು ವ್ಯಕ್ತಪಡಿಸಿದರು. ಆದರೆ ಲೋಕ ಸಭೆಯ ಸ್ತ್ರೀ ಸದಸ್ಯರನ್ನು ಸಮಾಧಾನ ಪಡಿಸಲು ಪ್ರಧಾನ ಮಂತ್ರಿ ನೆಹರೂರವರೇ ಎದ್ದು ನಾಲ್ಕು ಮಾತುಗಳನ್ನು ಹೇಳಬೇಕಾಯಿತು. ಅವರ ಭಾಷಣದಿಂದ ಮಹಿಳೆಯರಿಗೆ ಸಂಪೂರ್ಣ ತೃಪ್ತಿಯಾಯಿತೆಂದೇನಲ್ಲ—ಆದರೆ ಮುಂಜಾನೆ ಕೆಲಸಕ್ಕೆ ಬಂದೊಡನೆಯೇ ಸಂಸತ್ತಿನ ಕಮ್ಯುನಿಸ್ಟ ಹಾಗು ಕಾಂಗ್ರೆಸ ಮಹಿಳಾ ಸದಸ್ಯೆಯರ ನೇತೃತ್ವದಲ್ಲಿ ತನ್ನನ್ನು ಮುತ್ತಿದ್ದ ಗಾಬರಿ ಮಹಿಳೆಯರನ್ನು ಕಂಡು ಗಾಬರಿಗೊಂಡಿದ್ದ ಗೃಹ ಮಂತ್ರಿಗಳು ಮಾತ್ರ ನಿಧಾನವಾಗಿ ಉಸಿರಾಡಿಸುವಂತಾಯಿತು.

ಮಹಿಳೆಯರ ವಾದವನ್ನು ಮಂಡಿಸಿದ ಸಂಸತ್ತಿನ ಸದಸ್ಯೆಯರೆಲ್ಲರೂ ರಾಜ್ಯ ಘಟನೆಯಲ್ಲಿ ನೀಡಲಾದ ಅಭಯ ವಚನವನ್ನು ಬಲವಾಗಿ ತಿವಲಾಬಿಸಿದ್ದರು— ವಿವಾಹಿತ ಮಹಿಳೆಯನ್ನು ಕೆಲಸದಿಂದ ಒತ್ತಾಯ ಪೂರ್ವಕ ನಿವೃತ್ತಿಗೊಳಿಸುವ ನಿಯಮವು ಘಟನೆಗೆ ವಿರುದ್ಧವಿದೆಯೆಂದು ಅವರೆಲ್ಲರೂ ಏಕ ಕಂಠದಿಂದ ಸಾರಿದರು. ಇದಕ್ಕಿಂತ ನಿಕೃಷ್ಟವಾದ ನಿಯಮವೇ ಇಲ್ಲವೆಂದು ಹೇಳಿದರು. ಮಹಿಳೆಯು ಮದುವೆಯ ಬಳಿಕ ಕಾರ್ಯಕ್ಷಮತೆಯನ್ನು ಕಳೆದುಕೊಳ್ಳುವುದಿಲ್ಲವೆಂದೂ ತದ್ವಿರುದ್ಧವಾಗಿ ತನ್ನ ಹೊಣೆಗಾರಿಕೆ ಮತ್ತು ಕರ್ತವ್ಯಗಳ ಬಗ್ಗೆ ಜಾಗೃತ ಶೀಲರಾಗುವರೆಂದೂ ಶ್ರೀಮತೀಜಿಯೊಬ್ಬರು ಅಭಿಪ್ರಾಯಪಟ್ಟರು. ಸ್ವಾತಂತ್ರ್ಯ ಸಂಗ್ರಾಮ ಕಾಲದಲ್ಲಿ ಕಂಕುಳಲ್ಲಿ ಶಿಶುವಿದ್ದ ತಾಯಿಗೂ ತುಂಬಿದ ಬಸಿರಿಗೂ ದೇಶ ಸೇವೆಮಾಡಿ ಸೆರೆಮನೆ ಸೇರಲು ಆತಂಕ ಮಾಡದಿದ್ದವರು ಈಗೇಕೆ ಮಹಿಳೆಯರ ಕುಟುಂಬ ಹಾಗು ಮನೆ ವಾರ್ತೆಯ ಚಿಂತೆಮಾಡುತ್ತಾರೆ—ಎಂದವರು ಪ್ರಶ್ನಿಸಿದರು.

ಶ್ರೀಮತಿ ಸುಚೇತಾ ಕೃಪಲಾನಿಯವರು ದಶಿಯೂ—ಚೀನಾ ಮುಂತಾದ ಪ್ರತಿಯೊಂದೂ ದೇಶದಲ್ಲಿ ಸ್ತ್ರೀಯರು ಪ್ರಮುಖ್ಯ ಪಾತ್ರ ವಹಿಸುತ್ತಿರುವಾಗ ಭಾರತೀಯ ರಮಣಿಯರು ಹಿಂದುಳಿಯಲಾರರೆಂದು ಹೇಳುತ್ತಾ ಸರಕಾರದ ನಿಲುವೆಯನ್ನು ತಮ್ಮ ಹರಿತವಾದ ನಾಲಿಗೆಯಿಂದ ಟೀಕಿಸಿದರು. ಶ್ರೀಮತಿ ತಾರಕೇಶ್ವರಿ ಸಿಂಹರು "ಸಂಸತ್ತಿನ ಸದಸ್ಯೆಯರಷ್ಟೇ ವಿರೋಧವಿದ್ದಾರೆಂದು ಗೃಹಮಂತ್ರಿಗಳು ಭಾವಿಸಬಾರದು. ಭಾರತದ ಕೋಟ್ಯಾಂತರ ಮಹಿಳೆಯರ ವಾಣಿಯೂ ಇದನ್ನೇ ಹೇಳುತ್ತದೆ" ಎಂದು ನುಡಿದು ಅಖಿಲ ಭಾರತದ ತಳಹದಿಯಲ್ಲಿ ಆಂದೋಲನ ನಡೆಸುವ ಮುನ್ಸೂಚನೆಯನ್ನೂ ಕೊಟ್ಟರು. ಅವರ ಅಭಿಪ್ರಾಯದಂತೆ ಪುರುಷರ ಕೈಯಲ್ಲಿ ಸ್ತ್ರೀಯರು ಅಧಿಕಾರಗಳನ್ನೆಲ್ಲ ಕಳೆದುಕೊಂಡು ಒದ್ದಾಡುತ್ತಿದ್ದಾರೆ. ಅಖಿಲ ಭಾರತ ಅಧಿಕಾರಿಗಳ ಶ್ರೇಣಿಯಲ್ಲಾ ಈಗಿರುವ ಮಹಿಳೆಯರು ಕೇವಲ ಏಳು—ಅವರಲ್ಲಿ ಮದುವೆಯಾದವಳು ಒಬ್ಬಳು ಮಾತ್ರ. ಅವಳೊಬ್ಬಳಿಗಾಗಿ ಪ್ರಜಾಪ್ರಭುತ್ವಕ್ಕೆ ಸಮ್ಮತವಲ್ಲದ ನಿಯಮ ರಚಿಸುವುದು ಅಗತ್ಯವೇ ಎಂದವರ ವಾದ.

ಕುಮಾರಿ ಮಾಸ್ಕರೇನಸರ ಅಭಿಪ್ರಾಯದಂತೆ, ವಿವಾಹಿತ ಮಹಿಳೆಯರಿಲ್ಲದ ಅಧಿಕಾರ ವರ್ಗವು ಜನತೆಯ ದೃಷ್ಟಿಯಿಂದ ತನ್ನ ಪ್ರಾತಿನಿಧಿಕ ಸ್ವರೂಪವನ್ನು ಕಳೆದು ಕೊಳ್ಳುತ್ತದೆ. ಶ್ರೀಮತಿ ಜಯಶ್ರೀ ರಾಯಜಿಯವರ ಹೇಳಿಕೆಯಂತೆ ಈ ನಿಯಮವು ಸರಕಾರದ ನೌಕರಿಯಲ್ಲಿರುವ ಮಹಿಳೆಯರು ಕೆಲಸ ಕಳೆದುಕೊಳ್ಳುವ ಭೀತಿಯಿಂದ ದಾಂಪತ್ಯ ಜೀವನವನ್ನು ತಿರಸ್ಕರಿಸುವಂತೆ ಮಾಡುತ್ತದೆ. ಶ್ರೀಮತಿ ಸುಭದ್ರಾ ಜೋಶಿಯವರು ಗೃಹಮಂದಿರದ ಜ್ಯೋತಿಯಾಗಿ ಗೃಹಿಣಿಯು ದಿನಗಳೆಯುವಂತಾಗಲೆಂದು ಭಾ

(ಮುಂದಿನ ಪುಟ ನೋಡಿರಿ)

ಪುರುಷ ಪುಂಗವರ ಪೌರುಷದ ಕುರಿತು ಸ್ವಾರಸ್ಯವಾದ ಚರ್ಚೆ ನಡೆಯುತ್ತಿದ್ದ ಗೋಷ್ಠಿಯಲ್ಲಿ ಒಬ್ಬರು ನಡುವೆ ಎದ್ದು ಹೀಗೆಂದರು—

"ಹೊಸೆ ಇರುವ ಗಂಡಸರೆಂಬ ಅಹಂಕಾರಕ್ಕೆ ಏನೂ ಬೆಲೆ ಇಲ್ಲ. ಮಗು ಹುಟ್ಟಿದೊಡನೆಯೇ ತಾಯಿ ಹೇಗಿದ್ದಾಳೆ ಎಂದೇ ಜನರು ಕೇಳುತ್ತಾರೆ. ಗಂಡಸು ಮದುವೆಯಾದೊಡನೆಯೇ ಹೆಂಡತಿಯ ರೂಪದ ಮೇಲೆಯೇ ಜನರ ಕಣ್ಣೋಡುತ್ತದೆ. ಆತ ಸತ್ತುಹೋದ ಬಳಿಕವೂ ಹೆಂಡತಿಗೆ ಎಷ್ಟು ಆಸ್ತಿ ಬಿಟ್ಟಿದ್ದಾನೆಂಬ ಮಾತೇ ಬರುತ್ತದೆ. ನಿಜವಾಗಿಯೂ ಇದು ಸ್ತ್ರೀಯರ ಜಗತ್ತು."

The Canara Industrial & Banking Syndicate Ltd.

ಕೃತಜ್ಞತೆಯ ಒಂದು ಮಾತು-

ತಮ್ಮ ಆಶ್ರಯವನ್ನು ನೀಡಿ ನಮ್ಮ ಸ್ಥಿರ ಪ್ರಗತಿಯು ಸಾಧ್ಯವಾಗುವಂತೆ ಮಾಡಿದುದಕ್ಕಾಗಿ, ನಮ್ಮ ಎಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ನಾವು ಕೃತಜ್ಞರು. ಹಿಂದಿನಂತೆ ಅವರ ಸಂಪೂರ್ಣ ತೃಪ್ತಿಗಾಗಿಯೂ ಅವರ ಸದ್ಭಾವ ಮತ್ತು ಸ್ನೇಹದ ಗಳಿಕೆಗಾಗಿಯೂ ಅವರನ್ನು ಸೇವಿಸಲು ನಾವು ಮುಂದಕ್ಕೂ ಎದುರು ನೋಡುತ್ತಿದ್ದೇವೆ.

ಚಲಾವಣೆಯ ಭಂಡವಾಳ	... 6½	ಕೋಟಿಗೂ ಮಿಕ್ಕಿದೆ.
ಠೇವಣಾತಿಗಳು	 5	ಕೋಟಿಗೂ ಮಿಕ್ಕಿದೆ.
ಗ್ರಾಹಕರ ಸಂಖ್ಯೆ	... 2	ಲಕ್ಷಕ್ಕೂ ಮೀರಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ವಾರ್ಷಿಕ ಚಂದಾ: NAVAYUGA WEEKLY, UDIPI ಬಿಡಿ ಸಂಚಿಕೆ

ಅಧಿಕ ಆಹಾರ ಬೆಳೆಸುವ ಹೊಸ ಉಪಾಯಗಳು

ವೈಜ್ಞಾನಿಕ ಪ್ರಯೋಗಗಳ ಅದ್ಭುತ ಚಮತ್ಕಾರ

ಅಮೇರಿಕದ ಸಂಯುಕ್ತ ರಾಜ್ಯವು ಸಮೃದ್ಧವಾದ ದೇಶವೆಂದು ಹೊರ ನೋಟಕ್ಕೆ ಕಾಣುತ್ತದಾದರೂ ಅಲ್ಲಿಯ ಸಮಸ್ಯೆಗಳೂ ಅನೇಕ. ಇವನ್ನೆಲ್ಲ ಯಶಸ್ವಿಯಾಗಿ ಪರಿಹರಿಸುವಲ್ಲಿ ಅಮೇರಿಕನ್ನರು ಮುಂದಾದರೆಂದೇ ಲೋಕಕ್ಕೆ ಹೊಸ ಆದರ್ಶವನ್ನು ಹಾಕಿ ಕೊಡುವಂತಾಯಿತು. ಕೃಷಿ ವಿಷಯವೂ ಇದಕ್ಕೆ ಅಪವಾದವಲ್ಲ— ಪುಷ್ಕಳವಾಗಿ ಗೋಧಿಯನ್ನು ಬೆಳೆಸಿ, ನೂರುತ್ತಿರುವ ಈ ದೇಶದಲ್ಲಿ ನೆವಾಡಾದಂಥ ಮರುಪ್ರದೇಶವಿದ್ದಂತೆಯೇ ೧೦–೧೨ ಇಂಚುಗಳಷ್ಟು ಮಾತ್ರ ವಾರ್ಷಿಕ ಮಳೆಯನ್ನು ಹೊಂದುವ ವಿಶಾಲ ಭೂಭಾಗವೂ ಉಂಟು. ಇಲ್ಲಿ ಕೃಷಿಯನ್ನು—ಮುಖ್ಯವಾಗಿ ಗೋಧಿಯನ್ನು ಬೆಳೆಸುವುದು ಹೇಗೆ'

ನೀರು ಸಾಲದೆ ಕಮರಿ ಹೋಗುವ ಪೈರನ್ನು ನೀರಾವರಿ ಕೆಲಸಗಳ ಮುಖಾಂತರ ರಕ್ಷಿಸಬಹುದೆಂದು ತೋರಿದರೂ ಇದಕ್ಕಿರುವ ಅವಕಾಶ ಬಹಳ ಮಿತವಾಗಿದೆ. ಅತ್ಯಲ್ಪ ಮಳೆ ನೀರನ್ನು ಸಂಗ್ರಹಿಸಿ, ಅದನ್ನು ಬೆಳೆಗಳಿಗೆ ಪೂರೈಸುವುದು ಪ್ರಯಾಸದ ಕೆಲಸ. ಆದುದರಿಂದ ಅಲ್ಲಿ "ಒಣ ಬೆಳೆ" ಯನ್ನು ಬೆಳೆಸುವ ಪರಿಪಾಟ ಈಚೆಗೆ ಕೆಲವು ದಶಕಗಳಿಂದ ನಡೆದು ಬಂದಿರುತ್ತದೆ. ಒಣ ಬೆಳೆಯೆಂದರೆ ಗೋಧಿಯೇ ಹೊರತು ಅದಕ್ಕೂ ನಿಕೃಷ್ಟವಾದುದಲ್ಲ. ಗೋಧಿಗೆ ಸಹಜವಾಗಿ ಇಲ್ಲಿ ಬೀಳುವುದಕ್ಕಿಂತ ಹೆಚ್ಚು ನೀರು ಬೇಕಾಗಿದ್ದರೂ, ಕೃಷಿ ಪದ್ಧತಿಯನ್ನು ಮಳೆ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಅಳವಡಿಸಿಕೊಳ್ಳಲಾಗಿರುವುದರಿಂದ ಈ ಚಮತ್ಕಾರ ಸಾಧ್ಯವಾಗಿದೆ.

ಇಲ್ಲಿರುವ ರಹಸ್ಯವೆಂದರೆ ಇಷ್ಟೇ: ಭೂಮಿಯಲ್ಲಿ ನೀರಿನ ಅಂಶ ಬಹಳ ಕಡಿಮೆ ಇರುವುದರಿಂದ ಒಂದು ಸಲ ಪೈರನ್ನು ನಟ್ಟಲ್ಲಿ ಮುಂದೆ ಒಂದು ವರ್ಷದ ವರೆಗೆ ಏನನ್ನೂ ಬೆಳೆಸದೆ, ಖಾಲಿ ಬಿಡಲಾಗುತ್ತದೆ. ಆಗ ನೆಲದಲ್ಲಿಯೇ ಸಾಕಷ್ಟು ಅಧಿಕ ನೀರು ಸಂಗ್ರಹಗೊಳ್ಳುತ್ತದೆ ಆರೇಳು ಅಡಿಗಳಷ್ಟೂ ಆಳವಾಗಿ ಬೇರು ಬಿಡುವ ಗೋಧಿಯ ಸುಧಾರಿತ ಬೀಜವನ್ನು ಬಳಸುವುದರಿಂದ ಹಾಗು ಹೊಲಗಳನ್ನು ಯಂತ್ರಗಳ ಸಹಾಯದಿಂದ ಸಾಕಷ್ಟು ಆಳವಾಗಿ ಉತ್ತು, ಬೇರಿಳಿಯಲು ಹದ ಮಾಡಿ ಕೊಡುವುದರಿಂದ, ನೀರನ್ನು ಬೇರುಗಳು ಬಹಳ ಆಡಿಯಿಂದಲೂ ಹೀರಿಕೊಳ್ಳಲು ಅನುಕೂಲವಾಗುತ್ತದೆ. ಇನ್ನು ಸಾರವರ್ಧಕ ಗೊಬ್ಬರಗಳನ್ನು ಉಪಯೋಗಿಸಿದರೆ, ಹುಲುಸಾದ ಫಸಲು ಕೈಗೆ ಬಂದೇ ತೀರುವುದು.

ಮೇಲಿನ ಪದ್ಧತಿಯನ್ನು ನಮ್ಮ ದೇಶದಲ್ಲಿ ಸಹ ಆವಶ್ಯಕವಾದ ಕೆಲವೊಂದು ಬದಲಾವಣೆಯೊಡನೆ ಯಶಸ್ವಿಯಾಗಿ ಅನುಸರಿಸಬಹುದು. ಪಡ ಭೂಮಿಯು ಸಾಕಷ್ಟು ಹೆಚ್ಚು ಪ್ರಮಾಣದಲ್ಲಿರುವ ನಮ್ಮ ದೇಶದಲ್ಲಿ ಆಹಾರ ಧಾನ್ಯಗಳನ್ನು ಅತ್ಯಧಿಕ ಪ್ರಮಾಣದಲ್ಲಿ ಉತ್ಪಾದಿಸಲು ಈ ಪದ್ಧತಿಯಿಂದ ಸಾಧ್ಯವಾದೀತು. ನಮ್ಮ ಮೈದಾನುಗಳಲ್ಲಿ ಹಾಗು ಗುಡ್ಡಗಳ ಇಳಿಜಾರುಗಳಲ್ಲಿ ಕೃಷಿ ಇಲಾಖೆಯವರೊದಗಿಸಿದ ಬೀಜಗಳನ್ನು ಬಿತ್ತಿ ಪುಷ್ಕಳವಾದ ಪೈರನ್ನು ಕೊಯ್ಯುತ್ತಿರುವ ದೃಶ್ಯವು ಈಗಾಗಲೇ ಕಾಣಿಸತೊಡಗಿದೆ. ನಮ್ಮ ಈಗಿನ ಕ್ರಮವನ್ನು ಇನ್ನಷ್ಟು ಪರಿಷ್ಕರಿಸುವುದ ಇಷ್ಟವೆಂದೂ ಇದರಿಂದ ಪರಿಣಾಮವು ಬಹಳಷ್ಟು ಆಶಾದಾಯಕವಾದೀತೆಂದೂ ಹೇಳಲಾಗುತ್ತದೆ.

ಭಾರತೀಯ ವಿಜ್ಞಾನಿಗಳು ಕೃಷಿ ವಲಯದಲ್ಲಿ ಇನ್ನೂ ಒಂದು ಹೆಜ್ಜೆಯನ್ನು ಮುಂದಿಟ್ಟು ಅಣು ಶಕ್ತಿಯನ್ನು ಉಪಯೋಗಿಸಿ ಕೃಷಿ ಸಂಶೋಧನಾ ಕಾರ್ಯವನ್ನು ನಡೆಸಿ,ಅಧಿಕ ಆಹಾರದ ಉತ್ಪಾದನೆಗ ಪ್ರಯತ್ನಶೀಲರಾಗಿದ್ದಾರೆ. ಹೊಸ ದೆಹಲಿಗ ಸಮೀಪದ ಪೂಸಾ ನಗರದಲ್ಲಿ ಅನ್ವೇಷಕ ಪರಮಾಣು ಪ್ರಯೋಗಶಾಲೆಯೊಂದನ್ನು ನೆಲೆಗೊಳಿಸಲಾಗಿದ್ದು ಇಲ್ಲಿ ಅಮೇರಿಕದಲ್ಲಿ ಆಳವಾದ ಅಧ್ಯಯನ ನಡೆಸಿ ಬಂದ ಭಾರತೀಯ ವಿಜ್ಞಾನಿಗಳು ಮುತುವರ್ಜಿಯಿಂದ ಕೆಲಸ ಮಾಡುತಿದ್ದಾರೆ. ರಂಜಕ ಮುಂತಾದ ಸಾಮಾನ್ಯ ಧಾತುಗಳ ಅನ್ವೇಷಕ ಪರಮಾಣುಗಳಿಂದ ಹೊರ ಹೊಮ್ಮುವ ವಿಕಿರಣ ಕ್ರಿಯಾಶೀಲತೆಯನ್ನು ಉಚಿತ ಉಪಕರಣಗಳ ಮೂಲಕ ಗುರುತಿಸಲು ಬರುತ್ತದೆ. ಇದರ ದೆಸೆಯಿಂದ ಸಸ್ಯಗಳು ಒಂದು ಗೊಬ್ಬರವನ್ನು ಎಷ್ಟರ ಮಟ್ಟಿಗೆ ಬಳಸುತ್ತವೆಂದು ಕಂಡುಹಿಡಿಯಲು ಸಾಧ್ಯವಾಗುತ್ತದೆ. ಕೃತಕ ಗೊಬ್ಬರ ಪೋಷಿತ ಸಸ್ಯದಲ್ಲಿ ಅದು ರಂಜಕಾತ್ಮಕ ಗೊಬ್ಬರದಿಂದ ರಂಜಕವನ್ನು ತೆಗೆದುಕೊಂಡಿದೆಯೋ ಅಥವಾ ಭೂಮಿಯಿಂದಲೇ ರಂಜಕದ ಅಂಶವನ್ನು ಹೀರಿದೆಯೋ ಎಂದು ನಿರ್ಧರಿಸಬಹುದು.

ಇದರಂತೆ ಸಸ್ಯದ ಬೆಳವಣಿಗೆಯಲ್ಲಿ ಯಾವ್ಯಾವ ಮಟ್ಟದಲ್ಲಿ ಅದಕ್ಕೆ ಎಂಥ ಗೊಬ್ಬರ ಬೇಕಾಗುತ್ತದೆಂದೂ ಎಲ್ಲಿ ಮತ್ತು ಹೇಗೆ ಗೊಬ್ಬರ ಹಾಕಿದರೆ ಅದರಿಂದ ಸಸ್ಯಕ್ಕೆ ಪ್ರಯೋಜನವಾದೀತೆಂದೂ ತಿಳಿಯಬಹುದು. ಮಣ್ಣಿನ ಗುಣವನ್ನು ಪರೀಕ್ಷಿಸಿ ಅಲ್ಲಿಗೆ ಯಶಸ್ವಿಯಾಗಿ ಬಳಸಬಹುದಾದ ಕೃತಕ ಗೊಬ್ಬರದ ಪ್ರಮಾಣವನ್ನೂ ಗೊತ್ತುಹಚ್ಚಬಹುದು. ಭಾರತ ಸರಕಾರವು ಹದಿನಾರು ಪ್ರಯೋಗಶಾಲೆಗಳನ್ನೂ ನದಿ ಯೋಜನೆಗಳ ವಲಯದಲ್ಲಿ ಸಂಚರಿಸುವ ಇನ್ನೊಂದು ಪರೀಕ್ಷಾ ಕೇಂದ್ರವನ್ನೂ ಇಷ್ಟರಲ್ಲಿಯೇ ಸ್ಥಾಪಿಸಲಿರುವುದು. ಸಿಂಧ್ರಿಯಲ್ಲಿ ಸಾರಜನಕಾತ್ಮಕ ಗೊಬ್ಬರವನ್ನು ಅಗಾಧ ಪ್ರಮಾಣದಲ್ಲಿ ಈಗಾಗಲೇ ಉತ್ಪಾದಿಸುತ್ತಿರುವ ನಾವು ರಂಜಕಾತ್ಮಕ ಗೊಬ್ಬರ ಕಾರ್ಖಾನೆಯನ್ನು ತೆರೆಯಬೇಕೊ ಹೇಗೆ ಎಂಬುದನ್ನು ಅಣುಶಕ್ತಿಯ ಮಹಾತ್ಮೆಯಿಂದ ಬೇಗನೇ ತೀರ್ಮಾನಿಸಲಿದ್ದೇವೆ.

ಮಣ್ಣಿನ ಗುಣವನ್ನು ಪರಿಶೀಲಿಸಿ, ರೈತರಿಗೆ ತಮ್ಮ ಹೊಲಗಳ ಭೂಮಿಯ ಗುಣದ ಪರಿಚಯ ಮಾಡಿಸಿ ಕೊಡುವುದೂ ಅದರಲ್ಲಿ ಯಾವ ಬೆಳೆ ಚೆನ್ನಾಗಿ ಬಂದೀತೆಂದು ಮತ್ತು ಯಾವ ಗೊಬ್ಬರವನ್ನು ಎಷ್ಟು ಹಾಕಬೇಕೆಂದು ಹೇಳುವುದೂ ಈ ಪ್ರಯೋಗ ಶಾಲೆಗಳ ಉದ್ದೇಶ. ನಮ್ಮ ಕೃಷಿ ಕ್ಷೇತ್ರದಲ್ಲಿ ಅದ್ಭುತ ಪರಿವರ್ತನೆಯನ್ನು ಆಶೆಯ ಕಣ್ಣುಗಳಿಂದ ನಿರೀಕ್ಷಿಸುವಂತೆ ಈ ಕೆಲಸ ನಡೆದೀತು. ವರ್ಷಕ್ಕೆ ಐವತ್ತು ಲಕ್ಷದಷ್ಟು ಏರುತ್ತಿರುವ ಭಾರತದ ಪ್ರಜಾಪ್ರಮಾಣಕ್ಕೆ ಪುಷ್ಕಳವಾದ ಭೋಜನವನ್ನು ಮಾಡಿಸ ಬೇಕಾದರೆ ಇಂಥ ಅದ್ಭುತ ವೈಜ್ಞಾನಿಕ ಪ್ರಯೋಗಗಳನ್ನು ಆಶ್ರಯಿಸಲೇ ಬೇಕಾಗುತ್ತದೆ. ಪ್ರಥಮ ಪಂಚ ವಾರ್ಷಿಕ ಯೋಜನೆಯು ಈ ಮಟ್ಟದಲ್ಲಿ ನಾವು ಆಹಾರ ವಿಷಯದಲ್ಲಿ ಸ್ವಾವಲಂಬಿಗಳಾಗಿದ್ದೇವೆಂದು ಕಂಡು ಬಂದರೂ ಮುಂದಿನ ಮೂವತ್ತು ವರ್ಷಗಳಲ್ಲಿ ೧೫ ಕೋಟಿಯಷ್ಟು ಹೆಚ್ಚಲಿರುವ ಪ್ರಜೆಗಳ ಹೊಟ್ಟೆಗೆ ಹಿಟ್ಟು ನೀಡಲು ಯೋಗ್ಯ ಉಪಾಯಗಳನ್ನು ಇಂದೇ ಯೋಜಿಸಬೇಕಾಗುವುದು.

ಇದನ್ನು ದೃಷ್ಟಿಯಲ್ಲಿಟ್ಟು ಕೊಂಡರೆ, ಈಚೆಗೆ ಎಳೆಂಟು ವರ್ಷಗಳಿಂದ ಜನಪ್ರಿಯವಾಗುತ್ತಿರುವ ಹೊಸ ತೋಟಗಾರಿಕೆಯ ಪದ್ಧತಿಯೊಂದನ್ನು ಲಾಭದಾಯಕವಾಗಿ ಪರಿಗಣಿಸಬಹುದು. ನೀರಿಲ್ಲದೆ ಕೃಷಿಯನ್ನು ಮಾಡುವುದು ಸಾಧ್ಯವಾದಂತೆ, ನೆಲವಿಲ್ಲದೆಯೂ ಸಸ್ಯಗಳನ್ನು ಬೆಳೆಸಬಹುದು! ನೆಲದ ಬದಲು ಧಾರಾಳ ನೀರಿನ ಪೂರೈಕೆಯಾದರೆಯ ಶ್ರೇಷ್ಟವಾಯಿತು. ಅಮೇರಿಕದಲ್ಲಿ ೧೯೩೭ರಲ್ಲಿ ಕಂಡುಕೊಂಡ ಈ ಕ್ರಮವು

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: **UDIPI**, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ. ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS: .

THE COMMERCIAL CORPORATION OF INDIA, LTD.,

UDIPI, S. India

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮಾದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.



ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ದೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ನಾಶಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. 3—8—0

ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,

ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ಪ್ರಥಮ ವರ್ಷದಲ್ಲಿ ಆಂಧ್ರ ರಾಜ್ಯ

ಗೊಂದಲಮಯ ರಾಜಕೀಯದ ನಡುವೆ ನಿರ್ವಹಿಸಿದ ಹೊಣೆಗಾರಿಕೆ

ಭಾಷಾನುಗುಣ ಪ್ರಾಂತ ರಚನೆಯ ತತ್ವದ ತಳಹದಿಯ ಮೇಲೆ ಭಾರತದಲ್ಲಿ ಸರ್ವ ಪ್ರಥಮವಾಗಿ ಅಸ್ತಿತ್ವಕ್ಕೆ ಬಂದ ಆಂಧ್ರ ರಾಜ್ಯವು ಮೊನ್ನೆ ಅಕ್ಟೋಬರ ಒಂದನೇ ದಿನಾಂಕ ತನ್ನ ಹುಟ್ಟು ಹಬ್ಬವನ್ನು ಸಂಭ್ರಮದಿಂದ ಆಚರಿಸಿತು. ಭಾರತದ ರಾಜ್ಯಘಟನೆಯು ಜಾರಿಗೆ ಬಂದ ೧೯೫೦ನೇ ವರ್ಷದಲ್ಲಿಯೇ ಅಸ್ತಿತ್ವಕ್ಕೆ ಬರಬೇಕಾಗಿದ್ದ ಈ ರಾಜ್ಯವು ಮೂರೂವರೆ ವರ್ಷಗಳ ಬಳಿಕ ಶ್ರೀ ರಾಮುಲು ಕೈಗೊಂಡ ಸತ್ಯಾಗ್ರಹದ ಫಲವಾಗಿಯೇ ಎಂಬಂತೆ ರಚಿಸಲ್ಪಟ್ಟಿತು. ಮೊನ್ನೆಗೆ ಮುಗಿದ ಪ್ರಥಮ ವರ್ಷದಲ್ಲಿ ಇದು ಎದುರಿಸಬೇಕಾಗಿ ಬಂದ ರಾಜಕೀಯ ತೊಡಕುಗಳು ಧೈರ್ಯವನ್ನು ಕುಂದಿಸುವಂತಿದ್ದರೂ ಎದೆಗೆಡದೆ ಕೆಲವು ಸಾಹಸದ ಹೆಜ್ಜೆಗಳನ್ನು ಅಲ್ಲಿಯ ಸರಕಾರ ಮುಂದಿಟ್ಟಿರುವುದು.

ಭಾರತದಲ್ಲಿಯೇ ಹೆಚ್ಚು ವಯಸ್ಸಾದ ಮುದುಕ ಶ್ರೀ ಪ್ರಕಾಶಮರ ಸಮ್ಮಿಶ್ರ ಮಂತ್ರಿಮಂಡಳ ಆಂಧ್ರದಲ್ಲಿ ಅಧಿಕಾರದ ಹೊಣೆಯನ್ನು ನಿರ್ವಹಿಸುತ್ತಿದೆ. ಕಾಂಗ್ರೆಸು ಸಂಸ್ಥೆಯ ಸದಸ್ಯರಿಗೆ ಶಾಸನಸಭೆಯಲ್ಲಿ ನಿಚ್ಚಳ ಬಹುಮತವಿಲ್ಲವೆಂಬುದು ಸ್ಪಷ್ಟಗೊಂಡಾಗ ಗವರ್ನರರ ಆಳಿಕೆಯೇ ಆಂಧ್ರಕ್ಕೊದಗುವ ಭಾಗ್ಯವೆಂದು ಎಲ್ಲರೂ ಭಾವಿಸಿದ್ದರು. ಆದರೆ ಶ್ರೀ ಪ್ರಕಾಶಮರು ಕಾಂಗ್ರೆಸಿನ ಸಹಸದಸ್ಯರಾಗಿ ಸೇರಲು ಒಪ್ಪಿದುದರಿಂದ ಮತ್ತು ಕೃಷಿಕರ ಲೋಕ ಪಕ್ಷವೂ ಪ್ರಜಾಸಮಾಜವಾದಿಗಳೂ ಕಾಂಗ್ರೆಸಿನೊಡನೆಯೂ ಪ್ರಕಾಶಮರೊಡನೆಯೂ ಸಹಕರಿಸಲು ಒಡಂಬಟ್ಟು ಗವರ್ನರರ ಆಳಿಕೆಯ ಪ್ರಮೇಯ ದೂರವಾಯಿತು. ಆದರೆ ಅಂದಿನ ದಿವಸಗಳಲ್ಲಿ ರಾಜಕೀಯ ಸೌಹಾರ್ದವೇ ಇಂದು ಉಳಿದಿಲ್ಲ. ಪ್ರಕಾಶಮರೊಡನೆ ಮೊತ್ತಮೊದಲು ಹಾಲು ಮುಂಬಂದ ಕೃಷಿಕರ ಲೋಕ ಪಕ್ಷ ಉಳಿದೆಲ್ಲರಿಗಿಂತ ಮೊದಲಾಗಿ ತನ್ನ ಬೆಂಬಲವನ್ನು ಹಿಂದೆಗೆಯಿತು. ಮಾತ್ರವಲ್ಲ ಮಂತ್ರಿಮಂಡಳದ ಮೇಲೆ ಅವಿಶ್ವಾಸ ವ್ಯಕ್ತಪಡಿಸುವ ಗೊತ್ತುವಳಿಯನ್ನೂ ಅದು ಇತ್ತೀಚೆಗೆ ತರಲಿರುವುದು. ಕಮ್ಯೂನಿಸ್ಟ ಪಕ್ಷದ ಸದಸ್ಯರು ಮಂತ್ರಿಮಂಡಳಕ್ಕೆ ಪ್ರಬಲ ವಿರೋಧ ಕೊಡುತಿದ್ದಾರೆ; ಮಾತ್ರವಲ್ಲ ಅವಿಶ್ವಾಸದ ಗೊತ್ತುವಳಿಯ ಸುದ್ದಿಯನ್ನೂ ಹರಡುತಿದ್ದಾರೆ. ಪ್ರಜಾ ಸಮಾಜವಾದಿ ಪಕ್ಷದ ಕೆಲವರು ಪಿ. ವಿ. ರಾಜುರ ಮುಂದಾಳುತನದಲ್ಲಿ ಸಿಡಿದು ಹೋಗಿ ಮಂತ್ರಿ ಮಂಡಳದ ಕಾರ್ಯಕಲಾಪಗಳನ್ನು ಪ್ರತಿಭಟಿಸುತಿದ್ದಾರೆ. ಹೀಗಾಗಿ ಕೆಲವು ಮಂದಿ ಸ್ವತಂತ್ರ ಸದಸ್ಯರ ಒಲವು ನಿಲುವುಗಳ ಮೇಲೆಯೇ ಪ್ರಕಾಶಮರ ಮಂತ್ರಿ ಮಂಡಳ ನಿಂತಿದೆಯೆಂದರೆ ತಪ್ಪಾಗದು.

ಹೊಸ ಸರಕಾರವು ಒಳ್ಳೆಯ ಕೆಲಸಗಳನ್ನು ಮಾಡಲಿಲ್ಲವೆಂದೇನಲ್ಲ—ಆದರೆ, ವಿರೋಧಿಗಳಿಗೆ ಅಷ್ಟರಿಂದ ತೃಪ್ತಿಯೊದಗಲಿಲ್ಲವೆಂಬುದೇ ಮುಖ್ಯ. ಪಾನನಿರೋಧ ಧೋರಣೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ ಸದಸ್ಯರ ಸಲುವಾಗಿ ರಾಮಮೂರ್ತಿ ಸಮಿತಿಯನ್ನು ಪ್ರಕಾಶಮರು ನೇಮಿಸಿದರು. ಅದು ಇತರ ಸಮಿತಿಗಳಂತೆ ಎರಡು—ಮೂರು ವರ್ಷಗಳ ವರೆಗೆ ವಿಳಂಬಿಸದೆ ಅಲ್ಪಾವಧಿಯಲ್ಲಿಯೇ ಪಾನನಿರೋಧ ಧೋರಣೆಗೆ ವಿರೋಧ ಸೂಚಿಸುವ ವರದಿಯನ್ನು ಒಪ್ಪಿಸಿತು. ಮದ್ರಾಸಿನಲ್ಲಿ ಸಾರ್ವತ್ರಿಕ ಮದ್ಯಪಾನ ಪ್ರತಿಬಂಧವನ್ನು ತಂದು ರಾಜಾಜಿಗಿಂತಲೂ ಒಂದು ಹೆಜ್ಜೆ ಮುಂದಿಟ್ಟಿದ್ದ ಪ್ರಕಾಶಮರಿಗೆ ರಾಮಮೂರ್ತಿ ಸಮಿತಿಯ ವರದಿ ನುಂಗಲಾರದ ತುತ್ತೆನಿಸಿದರೆ, ಕಾಂಗ್ರೆಸು ಮಂತ್ರಿಗಳಿಗೆ ತಾತ್ವಿಕ ಮಹತ್ವದ ಪ್ರಶ್ನೆಯಾಗಿ ಅದು ಪೀಡಿಸುತ್ತಿದೆ. ನೀರಾ ಕೇಂದ್ರಗಳನ್ನು ವಿಸ್ತರಿಸುತಿದ್ದರೂ ಮೂರ್ತಿದಾರರ ಸತ್ಯಾಗ್ರಹದ ಕಾವು ತಪ್ಪಲಿಲ್ಲ. ನಿರುದ್ಯೋಗ ಸಮಸ್ಯೆಯ ಹೆಸರಿನಲ್ಲಿ ಕಮ್ಯೂನಿಸ್ಟರೇ ಮುಂತಾದ ವಿರೋಧಕರು ಸತ್ಯಾಗ್ರಹದ ಆಯುಧವನ್ನು ಸರಕಾರದ ಮೇಲೆ ಪ್ರಯೋಗಿಸಿದರು.

ಭೂಸುಧಾರಣೆಯು ಪ್ರಶ್ನೆ ಇನ್ನೊಂದು ದೊಡ್ಡ ಸಮಸ್ಯೆಯಾಯಿತು—ಮದ್ರಾಸಿನ ಜಮೀನುದಾರಿ ನಿರ್ಮೂಲನ ಕಾಯಿದೆಯು ಆಂಧ್ರದಲ್ಲಿರುವ ಇನಾಂ ಒಕ್ಕಲುಗಳ ಮಟ್ಟಿಗೆ ಪ್ರಯೋಜನಕಾರಿಯಲ್ಲವೆಂದು ವ್ಯಕ್ತಗೊಂಡಾಗ ಸರಕಾರ ಸುಗ್ರೀವಾಜ್ಞೆಯೊಂದನ್ನು ಹೊರಡಿಸಿ, ಒಕ್ಕಲೆಬ್ಬಿಸುವುದನ್ನು ತಡೆಗಟ್ಟಿತು. ಆದರೆ, ಪ್ರತಿ ಪಕ್ಷದವರು ಆಜ್ಞೆಯು ಇನ್ನಷ್ಟು ವ್ಯಾಪಕವಾಗಿರಬೇಕೆಂದು ಸತ್ಯಾಗ್ರಹವನ್ನು ಸಂಘಟಿಸಿದರು. ಬಂಜರು ನೆಲವನ್ನು ಭೂಮಿಯಿಲ್ಲದ ಬಡವರಿಗೆ ಸಾಗುವಳಿಗಾಗಿ ಬಿಟ್ಟುಕೊಡಲೂ ಸರಕಾರ ತೀರ್ಮಾನಿಸಿತು; ರೊಂಪೇರು ಪ್ರದೇಶದ ಸುಮಾರು ಎಂಟು ಸಾವಿರ ಎಕ್ರೆ ಜಮೀನನ್ನು ಹೀಗೆ ಹಂಚಲು ನಿರ್ಧರಿಸಿದ್ದು ನೀರಾವರಿ ಮತ್ತು ಇತರ ಅನುಕೂಲತೆಗಳಿಗಾಗಿ ಇಲ್ಲಿ ೬೦ ಲಕ್ಷ ರೂಪಾಯಿಗಳ ವೆಚ್ಚ ಮಾಡಲಾಗುತ್ತದೆ. ಶ್ರೀ ಲಕ್ಷ್ಮರಾಜು ಸುಬ್ಬರಾಯರ ನೇತೃತ್ವದಲ್ಲಿ ಭೂಸುಧಾರಣಾ ಸಮಿತಿಯೊಂದು ನೇಮಕಗೊಂಡು ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸುತ್ತಿದೆ. ಆದರೂ ರಾಜಕೀಯ ವಿರೋಧಕರಿಗೆ ಮಂತ್ರಿ ಮಂಡಳ ತೀವ್ರಗಾಮಿಯಾಗಿ ತೋರುವುದಿಲ್ಲ.

ಪ್ರಥಮ ಜನ್ಮದಿನೋತ್ಸವದ ಸಂದರ್ಭದಲ್ಲಿ ಪ್ರಕಾಶಮರು ಹತ್ತು ರೂಪಾಯಿಗಿಂತ ಕಡಿಮೆ ಕಂದಾಯ (ಕಿಸ್ತು) ತೆರಬೇಕಾದವರಿಗೆ ಈ ವರ್ಷದಿಂದ ಸಂಪೂರ್ಣ ರಿಯಾಯತಿ ತೋರಿಸಲಾಗುವುದೆಂದು ಹೇಳಿದರು. ಇದರಿಂದ ೪೮ ಲಕ್ಷ ಪಟ್ಟೆಗಳಿರುವ ಸುಮಾರು ೧೫ ಲಕ್ಷ ಸಣ್ಣ ಸಣ್ಣ ಪಟ್ಟೆದಾರರಿಗೆ ಲಾಭವಾಗುತ್ತದೆ. ಆಂಧ್ರ ರಾಜ್ಯದ ಉದ್ಘಾಟನೆಯ ಕಾಲದಲ್ಲಿ ಕೈದಿಗಳನ್ನು ಬಿಡುಗಡೆಮಾಡಿದ್ದರಿಂದ ಎಷ್ಟು ಸಂತೋಷ ವುಂಟಾಗಿ ತೋರಿದಕ್ಕಿಂತ ಎಷ್ಟೋ ಪಾಲು ಹರ್ಷದ ಸಂಗತಿ ಇದೆಂಬುದು ನಿಜ. ಆದರೆ ರಾಜ್ಯದ ಬೊಕ್ಕಸಕ್ಕೆ ಒಂದು ಕೋಟಿ ರೂಪಾಯಿಗಳ ಕೊರತೆಯಾಗುವುದೆಂಬುದನ್ನು ಮರೆಯುವಂತಿಲ್ಲ. ಇದರೊಡನೆ ಪ್ರಾಥಮಿಕ ಶಿಕ್ಷಣಾ ಸುಧಾರಣಾ ಸಮಿತಿಯು ಹೇಳಿಕೆಯಂತೆ, ಅಧ್ಯಾಪಕರ ವೇತನವನ್ನು ಹೆಚ್ಚಿಸುವ ತನ್ನ ನಿರ್ಧಾರವನ್ನು ಸರಕಾರ ಕಾರ್ಯಗತಗೊಳಿಸುವಾಗ ಮೊದಲ ೫೦ ಲಕ್ಷ ರೂಪಾಯಿಗಳ ಕೊರತೆ ಬೀಳುತ್ತದೆ. ಆಂಧ್ರ ರಾಜ್ಯದ ಮುಂಗಡ ಪತ್ರವು ಈಗಲೇ ಮೂರು ಕೋಟಿ ರೂಪಾಯಿಗಳ ಕೊರತೆಯಿಂದ ಕೂಡಿದ್ದು, ಮೇಲಿನ ಕ್ರಮಗಳಿಂದ ಇದು ಐದು ಕೋಟಿ ರೂಪಾಯಿಗಳಿಗೆ ಏರಬಹುದು.

ಆರ್ಥಿಕ ಸ್ಥಿತಿಯು ಇಷ್ಟು ವಿಷಮವಿದ್ದರೂ ಅಭಿವೃದ್ಧಿ ಪ್ರಯತ್ನಗಳ ವಿಷಯದಲ್ಲಿ ಪ್ರಕಾಶಮರ ಮಂತ್ರಿಮಂಡಲ ತುಂಬ ಉತ್ಸಾಹವನ್ನು ತೋರಿಸುತ್ತದೆ. ಮದ್ರಾಸಿನೊಡನೆ ಸೇರಿದ್ದಾಗ ಆಂಧ್ರ ರಾಜ್ಯ ಪ್ರದೇಶಕ್ಕೆ ೪೪ ಕೋಟಿ ರೂಪಾಯಿಗಳ ವೆಚ್ಚ ಬರುವ ಯೋಜನೆಗಳನ್ನು ಅಳವಡಿಸಿದ್ದರು. ಇದರಲ್ಲಿ ಸುಮಾರು ಅರೆವಾಸಿಯಷ್ಟು ಕಠಿನ ಕೆಲಸಗಳನ್ನೂ ಮುಗಿಸಿದ್ದರು. ಆದರೆ, ಮೊದಲು ಸಿದ್ಧಪಡಿಸಿದ ಯೋಜನೆಯು ಕೆಲವು ಪ್ರಾಮುಖ್ಯ ವಿಷಯಗಳನ್ನು ಒಳಗೊಂಡಿಲ್ಲವೆಂದು ಭಾವಿಸಿ, ಸರಕಾರದವರು ಸುಮಾರು ೧೫ ಕೋಟಿ ರೂಪಾಯಿಗಳ ವೆಚ್ಚ ಬರುವ ಯೋಜನೆಗಳನ್ನು ಉಳಿದ ಎರಡೂವರೆ ವರ್ಷಗಳ ಲೆಕ್ಕಕ್ಕೆ ಸೇರಿಸಿದರು. ಇದಕ್ಕೆ ಬಂಡವಾಳವನ್ನು ಕೂಡಿಸುವ ಪ್ರಶ್ನೆ ಇನ್ನೂ ಒಂದು ನಿಲುಗಡೆಗೆ ಬಂದಿಲ್ಲ—ಆದರೆ ಕೆಲಸಗಳು ಮುಂದೊತ್ತಲಾಗುತ್ತವೆ.

ಹೊಸ ರಾಜ್ಯವನ್ನು ಕಟ್ಟುವಾಗ ಸಹಜವಾಗಿಯೇ ಉದ್ಭೂತವಾಗುವ ಅನೇಕ ಪ್ರಶ್ನೆಗಳು ಸಮಾಧಾನಕರವಾಗಿ ಬಿಡಿಸಲ್ಪಟ್ಟುದನ್ನು ನೋಡಿದರೆ ಆಂಧ್ರದ ಸರಕಾರಿ ನೌಕರ ವರ್ಗವು ಬಿಡುವಿಲ್ಲದೆ ಚಟುವಟಿಕೆಯನ್ನು ತೋರಿಸಿದೆಯೆಂದು ಹೇಳಬಹುದು. ಜಿಲ್ಲಾ ಕೇಂದ್ರವಾಗಿದ್ದ ಕರ್ನೂಲು ನಗರವನ್ನು ರಾಜಧಾನಿಯಾಗಿ ಪರಿವರ್ತಿಸುವುದು ಸುಲಭವಾದುದಲ್ಲ—ಇಲ್ಲಿ ಇನ್ನೂ ಅನೇಕ ಕೆಲಸಗಳು ಬಾಕಿ ಇವೆಯಾದರೂ ಒಂದು ವರ್ಷದ ಹಿಂದಿನ ಕರ್ನೂಲಿಗೂ ಇಂದಿನ ರಾಜಧಾನಿಗೂ ಬಹಳ ಅಂತರವಿದೆಯೆಂಬುದನ್ನು ಒಪ್ಪಿ

(೯ನೇ ಪುಟ ನೋಡಿರಿ)

ಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)

ದೀರ್ಘಾವಧಿಯ ಕೆಮ್ಮು, ನರಗಳ ನಿಶ್ಶಕ್ತಿ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ

ಸಿಹಿಮೂತ್ರ, ನಿಶ್ಶಕ್ತ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—

ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರದ ಮತ್ತು ಇತರ ಭಸ್ಮಗಳ ಮಿಶ್ರಣ ವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.

ಬೆಲೆ: 1 ಬಾಟ್ಲಿಗೆ ರೂ. 7—8—0. ಸಣ್ಣ ಬಾಟ್ಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,

113 Nainiappa Naicken Street, P. T.—MADRAS-3.

ರಾಷ್ಟ್ರಪಿತ ಗಾಂಧೀಜಿಗೆ ಭಾರತದ ಶ್ರದ್ಧಾಂಜಲಿ

ಗ್ರಾಮಾಂತರ ಪ್ರದೇಶಗಳಲ್ಲೆಲ್ಲ ಗಾಂಧಿ ಗೃಹ

ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರ ೮೫ನೇ ಜನ್ಮ ದಿನವನ್ನು ಭಾರತದಲ್ಲಿ ಒಳ್ಳೆಯ ಉತ್ಸಾಹದಿಂದ ಮೊನ್ನೆ ದಿನಾಂಕ ೨ರಂದು ಆಚರಿಸಲಾಯಿತು. ಸರಕಾರದವರು ಭಾರತದ ಬೇರೆ ಬೇರೆ ರಾಜ್ಯಗಳಲ್ಲಿ ಗ್ರಾಮಗಳ ಪುನರುಜ್ಜೀವನವೇ ಧ್ಯೇಯವಾಗುಳ್ಳ ೬೦ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳನ್ನು ಹೊಸತಾಗಿ ಪ್ರಾರಂಭಿಸಿ, ವಿಧಾಯಕ ಕಾರ್ಯಗಳ ಬಗ್ಗೆ ಗಾಂಧೀಜಿಯವರು ವಹಿಸಿದ್ದ ನಿಲುವಿಗೆ ಗೌರವವನ್ನು ವ್ಯಕ್ತಪಡಿಸಿದರು. ಮದ್ರಾಸಿನ ಉತ್ತರ ಆರ್ಕಾಟು ಜಿಲ್ಲೆಯಲ್ಲಿ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡರರು ಎರಡೂವರೆ ಕೋಟಿ .ರೂಪಾಯಿಗಳಿಗಿಂತಲೂ ಹೆಚ್ಚು ವೆಚ್ಚ ಬರುವ ಸಾತನೂರು ನೀರಾವರಿ ಯೋಜನೆಯ ಅಡಿಗಲ್ಲನ್ನು ಇಟ್ಟರು. ಪೊನ್ನಿಯಾರ ನದಿಗೆ ಕಟ್ಟಲಾಗುವ ೧೩೪ ಅಡಿ ಎತ್ತರದ ಈ ಅಣೆಕಟ್ಟಿನಿಂದ ಇಪ್ಪತ್ತು ಸಾವಿರ ಎಕರೆ ಭೂಮಿಗೆ ನೀರು ದೊರಕುತ್ತದೆ.

ಹರಿಜನ ದಿನ

ಮುಂಬಯಿ ಹಾಗು ಸೌರಾಷ್ಟ್ರ ರಾಜ್ಯಗಳು ಗಾಂಧೀ ಜಯಂತಿಯನ್ನು ಹರಿಜನ ದಿನವಾಗಿ ಆಚರಿಸಿದರೆ, ಮಧ್ಯ ಪ್ರದೇಶದಲ್ಲಿ ಮದ್ಯಪಾನದ ವಿರುದ್ಧ ಚಳವಳವನ್ನು ಸಂಘಟಿಸಿ ಜನಜಾಗೃತಿಯನ್ನು ಉಂಟು ಮಾಡಲು ಈ ಸಂದರ್ಭವನ್ನು ಉಪಯೋಗಿಸಲಾಯಿತು. ಸ್ವಚ್ಛತೆಯ ಕಾರ್ಯಕ್ರಮವೂ ಸೂತ್ರ ಯಜ್ಞವೂ ಜಯಂತಿಯ ವೈಶಿಷ್ಟ್ಯಗಳಾಗಿದ್ದವು. ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ರಾಜಘಾಟಿನಲ್ಲಿ ಗಾಂಧೀಜಿಯ ಸಮಾಧಿಗೆ ಪುಷ್ಪಗುಚ್ಛವನ್ನು ಅರ್ಪಿಸಿದ್ದಲ್ಲದೆ ಸಾಮೂಹಿಕ ಸೂತ್ರಯಜ್ಞದಲ್ಲಿಯೂ ಭಾಗವಹಿಸಿದರು. ಗಾಂಧೀಜಿಯವರು ಜನಿಸಿದ ಪೋರಬಂದರ ನಗರದ ಮಹಾರಾಣರು ತಮ್ಮ ಖಾಸಗಿ ವೆಚ್ಚಕ್ಕಾಗಿ ಕೊಡಲ್ಪಡುವ ಹಣದಲ್ಲಿ ೪೫೦೦೦ ರೂಪಾಯಿಗಳನ್ನು ಸೌರಾಷ್ಟ್ರದಲ್ಲಿ ಸಾಮಾಜಿಕ ಕಲ್ಯಾಣ ಕಾರ್ಯಗಳಿಗೆ ತೆಗೆದಿರಿಸುವದಾಗಿ ಸಾರಿದರು.

ಖಾದಿಯ ಮಾರಾಟ

ಶ್ರೀ ರಾಜಗೋಪಾಲಾಚಾರಿಯವರು ಗಾಂಧೀ ಜಯಂತಿಯ ಶುಭಸಂದರ್ಭದಲ್ಲಿ ಮದ್ಯಪಾನವನ್ನು ಬಿಟ್ಟುಬಿಡುವ ಹಾಗು ಕೈಮಗ್ಗದ ವಸ್ತ್ರಗಳನ್ನೆ ಧರಿಸುವ ಪ್ರತಿಜ್ಞೆಯನ್ನು ಕೈಗೊಳ್ಳಬೇಕೆಂದು ಜನತೆಯನ್ನು ವಿನಂತಿಸಿದರು. ನೇಕಾರ ಕುಟುಂಬಗಳಿಗೆ ನೆರವು ನೀಡುವುದು ನಮ್ಮೆಲ್ಲರ ಆದ್ಯ ಕರ್ತವ್ಯವೆಂದು ಅವರು ಒತ್ತಿ ಹೇಳಿದರು. ಖಾದಿ ಹುಂಡಿಗಳ ಮಾರಾಟವೂ ಗಾಂಧಿ ಜಯಂತಿಯ ಕಾರ್ಯಕ್ರಮಗಳಲ್ಲಿ ಒಂದಾಗಿದ್ದಿತು.

ಗಾಂಧಿ ಗೃಹ

ಪ್ರಧಾನ ಮಂತ್ರಿ ನೆಹರೂರ ಸಲಹೆಯಂತೆ ಗಾಂಧಿ ಸ್ಮಾರಕ ಸಮಿತಿಯು ಭಾರತದಲ್ಲೆಲ್ಲ ಗ್ರಾಮ ವಿಕಾಸ ಕೇಂದ್ರಗಳಾಗಿ ಕೆಲಸಮಾಡುವ ಗಾಂಧಿ ಗೃಹಗಳನ್ನು ತೆರೆಯಬೇಕೆಂದು ನಿರ್ಧರಿಸಿರುವುದು. ಹಳ್ಳಿಯಲ್ಲಿ ಜನತೆಯ ಪ್ರತಿಯೊಂದೂ ರೀತಿಯ ವಿಧಾಯಕ ಚಟುವಟಿಕೆಗಳ ಕೇಂದ್ರವಾಗಿ, ಅವರ ಸಾಮಾಜಿಕ ಹಾಗು ಸಾಂಸ್ಕೃತಿಕ ಪ್ರಗತಿಗೆ ನೆರವಾಗುವುದೇ ಗಾಂಧೀ ಗೃಹಗಳ ಮುಖ್ಯ ಉದ್ದೇಶ. ಇನ್ನೂ ಪ್ರಾಯೋಗಿಕ ಅವಸ್ಥೆಯಲ್ಲಿರುವ ಈ ಯೋಜನೆಯು ಮುಂದಿನ ವರ್ಷ ಕಾರ್ಯಕಾರಿಯಾಗಬಹುದು. ನೆಹರುಗಳ ಮಾರ್ಗದರ್ಶನದಲ್ಲಿ ಶ್ರೀಮತಿ ಸುಚೇತಾ ಕೃಪಲಾನಿ ಹಾಗು ಶ್ರೀ ಆರ್. ಎಸ್. ಧೋತ್ರೆಯವರು ಯೋಗ್ಯ ಕಟ್ಟಡಗಳ ನಿರ್ಮಾಣ, ಕೇಂದ್ರಗಳನ್ನು ನಡೆಸುವ ವೆಚ್ಚ ಮುಂತಾದ ವಿಷಯಗಳನ್ನು ಪರಿಶೀಲಿಸುವರು.

ಷಷ್ಟ್ಯಬ್ದ್ಯುತ್ಸವ

ಕರ್ನಾಟಕದ ಧುರೀಣದಲ್ಲಿ ಅಗ್ರಗಣ್ಯರಾದ ಬಿಹಾರದ ರಾಜ್ಯಪಾಲ ಶ್ರೀ ರಂಗನಾಥ ದಿವಾಕರರು ತಮ್ಮ ಷಷ್ಟ್ಯಬ್ಧಿಯ ಸಲುವಾಗಿ ಹುಬ್ಬಳ್ಳಿಗೆ ಆಗಮಿಸಿ, ದಿನಾಂಕ ೨೭ರಂದು ಹೋಮ ಹವನಾದಿಗಳೊಂದಿಗೆ ವಿಧ್ಯುಕ್ತವಾಗಿ ಸಮಾರಂಭವನ್ನು ಜರಗಿಸಿದರು. ಇದಂಗೆ ಉತ್ತರ ಕರ್ನಾಟಕದಲ್ಲೂ ಮೈಸೂರು ರಾಜ್ಯದಲ್ಲೂ ಸಂಭ್ರಮದ ಸ್ವಾಗತವನ್ನು ನೀಡಲಾಯಿತು. ಕರ್ನಾಟಕ ಏಕೀಕರಣದ ಕುರಿತು ತಮ್ಮ ನಿಲುವು ಬದಲಾಗಿಲ್ಲವೆಂದೂ ಉತ್ಸಾಹವು ಕುಂದಿಲ್ಲವೆಂದೂ ದಿವಾಕರರು ತಮಗೆ ನೀಡಿದ ಮಾನಪತ್ರಗಳನ್ನು ಉತ್ತರಿಸುತ್ತಾ ಹೇಳಿದರು. ಪ್ರಕೃತ ರಾಜ್ಯಗಳ ಪುನರ್ವಿಂಗಡಣೆಯ ಪ್ರಶ್ನೆಯನ್ನು ವಿಚಾರಿಸುತ್ತಿರ್ಯವ ಆಯೋಗದ ಸದಸ್ಯರಲ್ಲಿ ಒಬ್ಬರಾದ ಸರದಾರ ಪಣಿಕ್ಕರರ ಷಷ್ಟ್ಯಬ್ಧಿ ಸಮಾರಂಭವೂ ಕಳೆದ ದಿನಾಂಕ ೩ರಂದು ನೆರವೇರಿತು. ಅಂತಾರಾಷ್ಟ್ರೀಯ ಖ್ಯಾತಿಯ ರಾಜಕಾರಣಿಯೆಂದಷ್ಟೇ ಅಲ್ಲ, ಏಶ್ಯದ ಪ್ರತಿಭಾನ್ವಿತ ಇತಿಹಾಸಕಾರನೆಂದೂ ಹೆಸರಾಂತ ಮಲೆಯಾಳಿ ಲೇಖಕನೆಂದೂ ಪಣಿಕ್ಕರರನ್ನು ಪ್ರಶಂಸಿಸಲಾಯಿತು.

ಎರಡೂವರೆ ವರ್ಷಗಳೊಳಗೆ

ಫಜಲಅಲಿ ಆಯೋಗವು ೧೮ ತಿಂಗಳ ಅವಧಿಯಲ್ಲಿ ತನ್ನ ಕೆಲಸವನ್ನು ಮುಗಿಸಬೇಕೆಂದು ಯೋಚಿಸಿದ್ದು, ಕಳೆದ ಒಂಭತ್ತು ತಿಂಗಳುಗಳಲ್ಲಿ ಅದು ೩೬೦೦ ಜನರನ್ನು ಸಂದರ್ಶಿಸಿದೆಯಲ್ಲದೆ ೩೩೭೦೦ ಮನವಿಗಳನ್ನೂ ಸ್ವೀಕರಿಸಿರುತ್ತದೆ. ಭಾರತದ ಭಾವಿ ನಕ್ಷೆಯನ್ನು ಹೇಗೆ ಸಿದ್ಧಪಡಿಸಬೇಕೆಂಬ ವಿಷಯದಲ್ಲಿ ಆಯೋಗವು ಮಾಡುವ ಸೂಚನೆಗಳನ್ನು ಸರಕಾರವು ಪರಿಶೀಲಿಸಿ ಮುಂದಿನ ಸಾರ್ವತ್ರಿಕ ಮಹಾ ಚುನಾವಣೆಗೆ ಮುಂಚೆ, ಅಂದರೆ ಇನ್ನು ಎರಡೂವರೆ ವರ್ಷಗಳಲ್ಲಿ, ಕೊನೆಯ ನಿರ್ಣಯವನ್ನು ತೆಗೆದುಕೊಳ್ಳಲಾಗುವುದು ಎಂಬುದಾಗಿ ಲೋಕ ಸಭೆಯಲ್ಲಿ ಗೃಹಶಾಖೆಯ ಪೂರಕ ಬೇಡಿಕೆಯ ವಿಷಯದಲ್ಲಿ ನಡೆದ ಚರ್ಚೆಗೆ ಉತ್ತರಕೊಡುವಾಗ ಕಟ್ಜೂ ತಿಳಿಸಿದರು.

ಹುಟ್ಟು ಹಬ್ಬ

ದಕ್ಷಿಣ ಭಾರತದಲ್ಲಿ ತೀವ್ರವಾಗಿ ನಡೆದ ಆಂದೋಲನದ ಪರಿಣಾಮವಾಗಿ ಸರ್ವ ಪ್ರಥಮವಾಗಿ ಸ್ಥಾಪಿಸಲ್ಪಟ್ಟ ಭಾಷಾನುಗುಣ ರಾಜ್ಯವಾದ ಆಂಧ್ರದಲ್ಲಿ ಹುಟ್ಟು ಹಬ್ಬದ ಸಡಗರವು ದಿನಾಂಕ ೧ರಂದು ಕಂಡು ಬಂತು. ರಾಜಧಾನಿಯಾದ ಕರ್ನೂಲಿನಲ್ಲಿ ತಳಿರು ತೋರಣಗಳಿಂದ ಬೀದಿಗಳನ್ನು ಸಿಂಗರಿಸಿದ್ದರು. ಗವರ್ನರ ಶ್ರೀ ತ್ರಿವೇದಿಯವರು ಪೋಲೀಸರ ಗೌರವ ರಕ್ಷೆಯನ್ನು ಸ್ವೀಕರಿಸಿದ್ದಲ್ಲದೆ, ೧೯೪೮ರಲ್ಲಿ ತೆಲಂಗಾಣದಲ್ಲಿ ಭಯೋತ್ಪಾದಕರ ವಿಧ್ವಂಸಕ ಕೃತ್ಯಗಳನ್ನೆದುರಿಸುವಲ್ಲಿ ಶೌರ್ಯ ಸಾಹಸಗಳನ್ನು ತೋರಿಸಿದುದಕ್ಕಾಗಿ ರಾಷ್ಟ್ರಪತಿಗಳ ಪೋಲೀಸು ಪದಕವನ್ನು ಶ್ರೀ ವೆಂಕಟ ಸುಬ್ಬರಾಯರಿಗೆ ಅರ್ಪಿಸಿದರು. ವಿಜಯವಾಡಾ ಆಕಾಶವಾಣಿಯಲ್ಲಿ ಭಾಷಣ ಮಾಡುತ್ತಾ ರಾಜಕೀಯ ರಂಗದಲ್ಲಿ ಕೆಲ ಮಟ್ಟಿಗೆ ಅಸ್ಥಿರತೆ ಉಳಿದಿರುವುದಕ್ಕೂ ಆರ್ಥಿಕ ಪರಿಸ್ಥಿತಿಯು ಹದಗೆಡುತ್ತಿರುವುದಕ್ಕೂ ಅವರು ವಿಷಾದಿಸಿದರು.ಆದಾಗ್ಯೂ

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines It has built up for itself a record of efficient service sound investment and a personal touch with its Policy holders and Representatives at whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಆನಂದ ಸುಧ

ನಮ್ಮ "ಆನಂದ ಸುಧ" ಸಮಸ್ತ ಜನಗಳಿಗೆ ಬಲವನ್ನು ಖಂಡ ಪುಷ್ಟಿಯನ್ನು ಹೆಚ್ಚಿಸುವುದು. ಅನೇಕ ವ್ಯಾಧಿಗಳನ್ನು ನಾಶಮಾಡುತ್ತೆ. ೧೫ ದಿನಗಳಿಗೆ ಸರಿಹೋಗುವ ೮ ಔನ್ಸ್ ಸೀಸೆ ೧ಕ್ಕೆ ರೂ. ೩—೦—೦.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ—ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು-1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್—ಚಿಂತಾಮಣಿ.

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,
ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ
ನಕ್ಕು ನಗಿಸುವ ಆರು ನಗೆನೋಟಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಸತ್ತು ಪಾರಾ ಕದ್ದು ಪೋಣಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟ್ಟದ ಮರ್ಮವನ್ನೂ, ನಿಶ್ಚೈಸಿದ್ದ 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೇ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ 0—10—0

ಕಿರಿಯರ ಪ್ರಪಂಚ, ಉಡುಪಿ.

ಟಪ್ಪಾಲು ವ್ಯವಸ್ಥೆಯ ಶತಾಬ್ಧಿ ಮಹೋತ್ಸವ

ಅಂತಾರಾಷ್ಟ್ರೀಯ ಅಂಚೆ ಚೀಟುಗಳ ಪ್ರದರ್ಶನ

ಬ ರಾಜ್ಯವು ನಿದಾನವಾಗಿಯೂ ನಿಶ್ಚಿತವಾಗಿಯೂ ಬಲಗೊಳ್ಳುತ್ತಿದೆಯೆಂದು ಹೇಳಿ, ಒಗ್ಗಟ್ಟಿನ ದುಡಿಮೆಗಾಗಿ ಜನತೆಯನ್ನು ಪ್ರಾರ್ಥಿಸಿದರು.

ನಾಲ್ಕನೆಯ ಮಹಾರಾಷ್ಟ್ರ

ಲೋಕ ಸಭೆಯು ಹಾಗು ರಾಜ್ಯ ಸಭೆಯ ಅಧಿವೇಶನವನ್ನು ದಿನಾಂಕ ೩೦ರಂದು ಮುಂದುವರಿಸಲಾಯಿತು ಪ್ರಧಾನ ಮಂತ್ರಿ ನೆಹರೂರವರು ಲೋಕಸಭೆಯಲ್ಲಿ ಸರಕಾರದ ವಿದೇಶ ನೀತಿಯ ಚರ್ಚೆಯನ್ನು ಪ್ರಾರಂಭಿಸಿ ಮಾತನಾಡಿದರು. ಆಗ್ನೇಯ ಏಶ್ಯ ಸಂರಕ್ಷಣಾ ಒಪ್ಪಂದವನ್ನು ಅವರು ಖಂಡಿಸಿದ್ದಲ್ಲದೆ, ಬೇರೆ ಬೇರೆ ರಾಷ್ಟ್ರಗಳಲ್ಲಿಯ ಕಮ್ಯುನಿಸ್ಟ ಪಕ್ಷಗಳ ಪಾತ್ರವನ್ನು ಸಂಸತ್ತಿನಲ್ಲಿ ಸರ್ವಪ್ರಥಮವಾಗಿ ಉಲ್ಲೇಖಿಸುತ್ತಾ ಕಮ್ಯುನಿಸ್ಟ ರಾಷ್ಟ್ರಗಳು ರಹಸ್ಯವಾಗಿ ಕೈಗೊಳ್ಳುತ್ತಿರುವ ಕ್ರಮಗಳ ಬಗ್ಗೆಯೇ ತಮಗೆ ಹೆದರಿಕೆಯಾಗುತ್ತದೆಂದು ಹೇಳಿದರು. ಇದನ್ನು ಕೇಳಿದ ಕಮ್ಯುನಿಸ್ಟರು ರೇಗಾಡಿದರೂ ಆಚಾರ್ಯ ಕೃಪಲಾನಿ ಮುಂತಾದ ಪ್ರಭೃತಿಗಳು ನೆಹರೂರ ಧೋರಣೆಯ ಕೆಲವು ಅಂಶಗಳನ್ನು ಬಹಳವಾಗಿ ಮೆಚ್ಚಿದರು ಪ್ರಧಾನಿಗಳು ಇದಕ್ಕಾಗಿ ಸಂತೋಷ ವ್ಯಕ್ತಪಡಿಸಿದ್ದಲ್ಲದೆ, "ಜಗತ್ತಿನಲ್ಲಿ ಪ್ರಬಲ ರಾಷ್ಟ್ರಗಳಾದ ಅಮೇರಿಕ—ರಶಿಯಾಗಳನ್ನು ಬಿಟ್ಟರೆ, ಚೀನವು ಮೂರನೆಯ ಸ್ಥಾನವನ್ನು ಪಡೆಯುತ್ತದೆ. ವಿಶೇಷ ಘಟನೆಗಳೇನೂ ನಡೆಯದಿದ್ದರೆ. ಭಾರತವು ನಾಲ್ಕನೆಯ ಮಹಾರಾಷ್ಟ್ರವೆನಿಸುವುದೆಂದು ಹೇಳ ಬಯಸತ್ತೇನೆ" ಎಂದರು

ಗೋವೆಯ ಆಂದೋಲನ

ಗೋವೆಯವಿಷಯದಲ್ಲಿ ಭಾರತ ಸರಕಾರವು ಅಲಕ್ಷ್ಯ ತೋರಿಸುತ್ತಿದೆಯೆಂದೂ ಭಾರತೀಯರು ಹಾಗು ಗೋಮಾಂತಕರಲ್ಲಿ ಭೇದಭಾವವನ್ನು ಎಣಿಸುತ್ತಿದೆಯೆಂದೂ ಮಾಡಲಾದ ಟೀಕೆಗೆ ನೆಹರೂರವರು ಸಮಾಧಾನಕರವಾದ ಉತ್ತರವನ್ನು ಕೊಟ್ಟರು: "ಭಾರತೀಯರು ಗೋವೆಯ ಆಂದೋಲನದಲ್ಲಿ ಭಾಗವಹಿಸಬಾರದೆಂದು ಯಾವುದೇ ತತ್ವಗಳ ಮೇಲೆ ನಿರ್ಣಯಿಸಿಲ್ಲ— 'ಗೋಮಾಂತಕರಿಗೆ ಪೋರ್ಚುಗೀಜ ಆಡಳಿತೆ ಬೇಕಾಗಿದೆ; ಆದರೆ ಹೊರಗಿನ ಭಾರತೀಯರು ಬೇಕೆಂದೇ ಚಳವಳ ಎಬ್ಬಿಸುತಿದ್ದಾರೆ' ಎಂಬ ಲಿಸ್ಬನ ಸರಕಾರದ ಅಪಪ್ರಚಾರಕ್ಕೆ ತಡೆಹಾಕಲೆಂದೇ ನಿರ್ಬಂಧವನ್ನು ಹೇರಲಾಯಿತು" ಎಂದವರು ಸ್ಪಷ್ಟೀಕರಣವನ್ನು ಕೊಟ್ಟರು. ಕಳೆದ ವಾರ ದೀವಕ್ಕೆ ಹೊರಟಿದ್ದ ಸ್ವಯಂಸೇವಕರ ಮೇಲೆ ಲಾಠಿಯ ಪ್ರಹಾರ ಮಾಡಿದುದಕ್ಕೆ ಅವರು ವಿಷಾದಿಸಿದವಲ್ಲದೆ ಹೀಗೆ ಹಿಂಸೆಯ ಕೆಲಸ ಮಾಡಲಾಗದೆಂದು ತಾವು ತಿಳಿಸಿರುವುದಾಗಿಯೂ ಹೇಳಿದರು. ಕೊನೆಯದಾಗಿ "ಗೋವೆಯು ಭಾರತದ ಅಂಗ; ಏನೇ ಸಂಭವಿಸಲಿ. ನಾವು ಈ ಅಧಿಕಾರವನ್ನಾಗಲೀ ಅದರ ಸಾಧನೆಗೆ ಪ್ರಯತ್ನಿಸುವುದನ್ನಾಗಲೀ ಬಿಟ್ಟು ಕೊಡುವುದಿಲ್ಲ" ಎಂದು ಸಾರಿದರು.

ಚೀನಕ್ಕೆ ಪ್ರಯಾಣ

ಇದೇ ಅಕ್ಟೋಬರ ೧೫ರಂದು ಪ್ರಧಾನ ಮಂತ್ರಿಗಳು ಚೀನಕ್ಕೆ ಪ್ರಯಾಣ ಬೆಳೆಸಿ ಅಲ್ಲಿ ೧೦ ದಿನಗಳ ಕಾಲ ತಂಗುವರು. ಮಾರ್ಗ ಮಧ್ಯದಲ್ಲಿ ಅವರು ಬರ್ಮಾ, ಕಂಬೋಡಿಯಾ, ವೀಟನಾಮ ದೇಶಗಳ ರಾಜಧಾನಿಯಲ್ಲಿ ಇಳಿಯುವರು ನೆಹರೂರವರು ೧೫ ವರ್ಷಗಳಿಗೆ ಹಿಂದೆ ಚೀನಕ್ಕೆ ಹೋಗಿದ್ದಾಗ ಒಂದು ತಿಂಗಳು ಅಲ್ಲಿದ್ದು ಪ್ರವಾಸ ಮಾಡಬೇಕೆಂದು ಬಯಸಿದ್ದರು. ಆದರೆ ಆಗಲೇ ದ್ವಿತೀಯ ಮಹಾಯುದ್ಧದ ಕಿಡಿ ಹೊತ್ತಿದ್ದರಿಂದ ಚುಂಕಿಂಗ ಹಾಗು ಚೆಂಗಟು ಎಂಬ ಎರಡು ನಗರಗಳನ್ನು ಮಾತ್ರ ನೋಡಿ ಐದೇ ದಿನಗಳಲ್ಲಿ ಹಿಂತಿರುಗಬೇಕಾಯಿತು. ಈ ಸಲ ಚೀನದಲ್ಲಿರುವಾಗ ಏಶ್ಯದರಾಷ್ಟ್ರಗಳ ಸಾರ್ವಭೌಮ ಅಧಿಕಾರಕ್ಕೆ ಧಕ್ಕೆಯಾಗುವ ಕ್ರಮವನ್ನೇನೂ ತೆಗೆದುಕೊಳ್ಳುವುದಿಲ್ಲವೆಂಬ ಭರವಸೆಯನ್ನು ನೆಹರೂ ಚೀನದ ಸರಕಾರದಿಂದ ಪಡೆಯ ಬಯಸುವುದಾಗಿ ತಿಳಿದು ಬರುತ್ತದೆ.

ಅಂಚೆಯ ಚೀಟು

ಸರಿಯಾಗಿ ನೂರು ವರ್ಷಗಳಿಗೆ ಹಿಂದೆ, ಅಂದರೆ ೧೮೫೪ನೇ ಇಸವಿ ಅಕ್ಟೋಬರ ೧ನೇ ತಾರೀಕು, ಭಾರತದಲ್ಲೆಲ್ಲ ಅಂಚೆಯನ್ನು ಸಾಗಿಸುವ ಹೊಣೆಗಾರಿಕೆಯನ್ನು ನಿರ್ವಹಿಸುವ ಸರಕಾರದ ಅಂಚೆ ಇಲಾಖೆಯು ಅಸ್ತಿತ್ವಕ್ಕೆ ಬಂದು, ಅಂಚೆಯ ಚೀಟು ಮುದ್ರಿಸಲ್ಪಟ್ಟಿತು. ಕೇವಲ ೭೦೦ ಟಪ್ಪಾಲು ಕಟ್ಟೆಗಳಿಂದ ಕಾರ್ಯಾರಂಭ ಮಾಡಿದ ಈ ಇಲಾಖೆಯು ಈಗ ೪೫೦೦೦ ಕೇಂದ್ರಗಳನ್ನು ನಡೆಸುತ್ತಿದೆ. ವರ್ಷಕ್ಕೆ ೨೫೦೦೦ ಪತ್ರಗಳನ್ನು ಒಯ್ದು ಮುಟ್ಟಿಸುವಲ್ಲಿಂದ ತೊಡಗಿದ ವ್ಯವಹಾರವು ಈಗ ಪ್ರತಿ ದಿನಕ್ಕೆ ೭೦೦೦೦೦೦ ಪತ್ರಗಳನ್ನು ಹಂಚುವಷ್ಟು ಅಭಿವೃದ್ಧಿಯನ್ನು ಹೊಂದಿರುತ್ತದೆ. ಕಾಗದ ಪತ್ರಗಳ ಬಟವಾಡೆಯನ್ನಷ್ಟೇ ಅಲ್ಲ, ೧೮೮೦ರಲ್ಲಿ ೮೦ ಕೋಟಿಯ ಮೂಲಕ ಹಣವನ್ನು ಕಳುಹಿಸುವ ವ್ಯವಸ್ಥೆ ಹಾಗು ೧೮೮೨ರಲ್ಲಿ ಅಂಚೆಯ ಕಾರ್ಯಾಲಯಗಳಲ್ಲಿ ಚಿಕ್ಕ ಉಳಿತಾಯವನ್ನು ನಿಕ್ಷೇಪಿಸುವ ಸೌಲಭ್ಯಗಳಿಂದಾಗಿ ಅಂಚೆ ಇಲಾಖೆಯ ಹೊಣೆಯು ವಿಸ್ತೃತವಾಯಿತು ಹಿಂದಿನಿಂದ ತಂತಿ ಸಂಪರ್ಕದ ವ್ಯವಹಾರವನ್ನೂ ಅಂಚೆ ಇಲಾಖೆಯಲ್ಲಿ ಸಮಾವೇಶಗೊಳಿಸಿದರು.

ಅದ್ಭುತ ಪ್ರಗತಿ

ಜಗತ್ತಿನ ಅತಿ ದೊಡ್ಡ ಸಂಸ್ಥೆಗಳಲ್ಲಿ ಒಂದೆನಿಸಿದ ನಮ್ಮ ಅಂಚೆ-ತಂತಿ ಇಲಾಖೆಯಲ್ಲಿ ೨,೩೪,೦೦೦ ಜನರು ಕೆಲಸಮಾಡುತಿದ್ದಾರೆ. ಗೆಜ್ಜೆ ಕಟ್ಟಿದ ಭಾಲೆ ಹಾಗು ಭರ್ಚಿಗಳನ್ನು ಹಿಡಿದುಕೊಂಡ ಅಂಚೆಯಾಳುಗಳ ಮೂಲಕ ಟಪ್ಪಾಲನ್ನು ಒಯ್ಯುವ ಪ್ರಾರಂಭದ ಪದ್ಧತಿಯನ್ನು ಉರಾಯಿ ಮತ್ತಿತರ ಗುಡ್ಡಗಾಡು ಪ್ರದೇಶಗಳಲ್ಲಿ ಇಂದಿಗೂ ಕಾಣಬಹುದು. ಅಂಚೆಯ ಗಾಡಿಗೆ ಒಂಟೆಯನ್ನೂ ಎತ್ತು ಅಥವ ಕುದುರೆಯ ಜೋಡಿಯನ್ನೂ ಹೂಡುವ ಸಂಪ್ರದಾಯವೂ ಮಾಯವಾಗಿಲ್ಲ. ಭಾರತಕ್ಕೆಯೇ ವಿಶಿಷ್ಟವೆನಿಸಿದ ಈ ವಿಚಿತ್ರಗಳ ನಡುವೆಯೂ ಉಗಿಗೆ ಮೋಟಾರು, ರೈಲ್ವೆ ಮತ್ತು ವಿಮಾನಗಳ ಮೂಲಕ ಕಾಗದ ಪತ್ರಗಳನ್ನು ಕಳಿಸುವ ಪದ್ಧತಿಯು ಅನುಸರಿಸಲ್ಪಟ್ಟಿರುವುದು. ಸಾಮಾನ್ಯ ದರದಲ್ಲಿ ವಿಮಾನ ಮೂಲಕ ದೇಶದೊಳಗೆ ಟಪ್ಪಾಲನ್ನೊಯ್ಯುವ ಸೌಕರ್ಯ ಭಾರತದಲ್ಲಿ ಹೊರತು ಬೇರೆಲ್ಲೂ ಇರುವುದಿಲ್ಲ. ಸ್ವಾತಂತ್ರ್ಯೋತ್ತರದಲ್ಲಿ ಅತಿ ಹೆಚ್ಚಿನ ಪ್ರಗತಿಯನ್ನು ತೋರಿಸಿದ ಕ್ಷೇತ್ರಗಳಲ್ಲಿ ನಮ್ಮ ಟಪ್ಪಾಲು ವ್ಯವಸ್ಥೆಯು ಪರಿಗಣಿಸಲ್ಪಡುತ್ತದೆ.

ಐಕ್ಯದ ಪ್ರತೀಕ

ಅಂಚೆಯ ಚೀಟುಗಳ ಶತಾಬ್ಧಿಯ ಸಂದರ್ಭದಲ್ಲಿ ನಾಲ್ಕು ಸ್ಮಾರಕ ಚೀಟುಗಳನ್ನು ಹೊರಡಿಸಿದ್ದಲ್ಲದೆ, ಹೊಸದಿಲ್ಲಿಯಲ್ಲಿ ಎಪ್ಪತ್ತನಾಲ್ಕು ರಾಷ್ಟ್ರಗಳಿಂದ ಬಂದ ವಿವಿಧ ಅಂಚೆಯ ಚೀಟುಗಳ ಪ್ರದರ್ಶನವೊಂದು ಏರ್ಪಡಿಸಲ್ಪಟ್ಟಿತು. ಪ್ರಧಾನ ಮಂತ್ರಿ ನೆಹರೂರವರು ಇದನ್ನು ಉದ್ಘಾಟಿಸುತ್ತಾ ಅಂಚೆಯ ವ್ಯವಸ್ಥೆಯು ಮಾನವರನ್ನು ಒಗ್ಗಟ್ಟಿನಲ್ಲಿರಿಸುವುದಕ್ಕೆ ಅತ್ಯುತ್ತಮವಾದ ಸಾಧನವಾಗಿದೆಯೆಂದು ಹೇಳಿದರು. ಕೆಲವು ವೇಳೆ ವಿಚಿತ್ರ ದೋಷಗಳಿಂದಾಗಿ ಕಾಗದ ಪತ್ರಗಳನ್ನು ತಡವಾಗಿ ಮುಟ್ಟಿಸಿದ ಪ್ರಸಂಗವೂ ಉಂಟೆಂದು ಹೇಳುತ್ತಾ, ಮೋತಿಲಾಲರು ಮರಣಗೊಂಡ ಬಳಿಕ, ಐದೂವರೆ ವರ್ಷಗಳ ಹಿಂದೆ ತಮಗೆ ಅವರು ಬರೆದ ಪತ್ರವೊಂದು ಕೈ ಸೇರಿದ ಬಗೆಯನ್ನು ನೆಹರೂ ವಿವರಿಸಿದರು. ಹೀಗಿದ್ದರೂ ಅಂಚೆ ಇಲಾಖೆಯು ಅತ್ಯಮೂಲ್ಯವಾದ ಸೇವೆಯನ್ನು ಸಲ್ಲಿಸುತ್ತಿದೆಯೆಂದು ಶ್ಲಾಘಿಸಿದರು. ಅಂಚೆ ಚೀಟುಗಳ ಸಂಗ್ರಹ ಮುಂತಾದ ಅನೇಕ ವಿಷಯಗಳ ಮೇಲೆ ವಿಚಾರಗೋಷ್ಠಿಯನ್ನೂ ಏರ್ಪಡಿಸಿದ್ದು ಸಂಪರ್ಕ ಖಾತೆಯ ಸಚಿವ ಜಗಜೀವನರಾಮರು ಅಂಚೆ ಚೀಟುಗಳ ಸಾಂಸ್ಕೃತಿಕ ಹಾಗು ಶೈಕ್ಷಣಿಕ ಮಹತ್ವವನ್ನು ಕುರಿತು ಉದ್ಘಾಟನಾ ಭಾಷಣ ಮಾಡಿದರು.

ಭೀಕರ ಅಪಘಾತ

ಸಂಪರ್ಕ ಸಾಧನಗಳಲ್ಲಿ ಅತ್ಯುಪಯುಕ್ತವೆನಿಸಿದ ರೈಲ್ವೆಗಳಲ್ಲಿ ಇತಿಹಾಸದಲ್ಲಿಯೇ ಕರಾಳವಾದ ಘಟನೆಯೊಂದು ಕಳೆದವಾರ ನಡೆದು, ವಿಷಾದಕರ ವಾತಾವರಣವನ್ನು ಉಂಟುಮಾಡಿತು. ಸಿಕಂದರಾಬಾದಿನಿಂದ ಕಾಜಿಪೇಟೆಗೆ ಹೊರಟಿದ್ದ ಪ್ರಯಾಣಿಕರ ರೈಲೊಂದು ಜಸಗಾಂವದ

(೭ನೇ ಪುಟ ನೋಡಿ)

THE JUPITER GENERAL INSURANCE CO, LTD.

ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

೧೯೧೯ರಲ್ಲಿ ಸ್ಥಾಪಿತ] [ಪ್ರಧಾನ ಕಾರ್ಯಾಲಯ: ಬೇಂಕ್ ಸ್ಟ್ರೀಟ್, ಬೊಂಬಾಯಿ 1.

ಸಮರ್ಥ ಸೇವೆ ಮತ್ತು ಸುಭದ್ರತೆಯನ್ನು ಕೊಡುತ್ತದೆ.

ತೆತ್ತ ಪಾಲು ಬಂಡವಳ ..	...	ರೂ. 23,74,800
ಒಟ್ಟು ಮೂಲಗಳು ..	.. (ಸುಮಾರು)	ರೂ. 3,35,00,000
ಊರ್ಜಿತದಲ್ಲಿರುವ ವಿಮಾವ್ಯವಹಾರ ...	,,	ರೂ. 7,50,00,000
1953ರಲ್ಲಿ ಪೂರ್ಣವಾದ ವಿಮಾವ್ಯವಹಾರ ..	,,	ರೂ. 1,06,00,000

ಜೀವ, ಬೆಂಕಿ, ಜಲಯಾನ, ಮೋಟಾರ್, ವಾಯುಯಾನ, ವ್ಯಕ್ತಿಗತ ಕಾಯಿಲೆ, ಆಕಸ್ಮಿಕ ಘಟನೆ, ವಿಶ್ವಾಸಾರ್ಹ ಗ್ಯಾರೆಂಟಿ ಭದ್ರತೆ, ಕೆಲಸಗಾರರ ಪರಿಹಾರ ಪ್ರಯಾಣ ಕೂಲತೆ, ಕಳ್ಳಕಾಕರ ಹಾವಳಿ, ಪ್ರಾಣಿಜಂತುಗಳು ಇತ್ಯಾದಿ ಸಂಪರ್ಕಗಳಲ್ಲಿ ವಿಮೆ ಇಳಿಸಲಾಗುವುದು.

ಹಿಂದೂಸ್ಥಾನ, ಪಾಕಿಸ್ಥಾನ, ಬರ್ಮಾ, ಸಿಲೋನ್, ಬ್ರಿಟಿಷ್ ಪೂರ್ವ ಆಫ್ರಿಕ ಮತ್ತು ಏಡನ್‌ಗಳಲ್ಲಿ ಶಾಖೆಗಳೂ ಏಜನ್ಸಿಗಳೂ ಇವೆ.

ಹೆಚ್ಚಿನ ಮಾಹಿತಿಗೂ ಪ್ರಾತಿನಿಧ್ಯಕ್ಕೂ ಬರೆಯಿರಿ.—

ಶ್ರೀ ಎಸ್. ಎ. ಹೆಗ್ಡೆ, ಸುಪರಿಂಟೆಂಡೆಂಟ್ ಆಫ್ ಏಜನ್ಸೀಸ್,
ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕೊ. ಲಿಮಿಟೆಡ್, ಶಿರ್ವ (ದಕ್ಷಿಣ ಕನ್ನಡ).

ಭರ್ತ ಕಂಟ್ರೋಲ

[ಮಕ್ಕಳನ್ನು ಹಡೆಯುವುದು ಸಾಕು]

ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.

ಬೆಲೆ-೧ ಬಾಟ್ಲಿಗೆ — ರೂ. ೫-೮-೦ .... ಪೋಸ್ಟು ಖರ್ಚು ರೂ. ೦-೧೪-೦

—:ವಿಳಾಸ:—

ಹಾಲಪ್ಪಾ, ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

NAVAYUGA

Popular Kannada Weekly

Founder.—

Sri **A. B. SHETTY**, *M L.A.*

Minister for Public Health,
Govt. of Madras

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ ೩೪	ಉಡುಪಿ ೭-೧೦-೧೯೫೪	ಸಂಚಿಕೆ ೬

ಪ್ರಥಮ ಯೋಜನೆಯ ಭವಿಷ್ಯ

ರಾಷ್ಟ್ರದಲ್ಲಿ ೧೯೫೪ನೇ ಮಾರ್ಚಿ ವರೆಗೆ ಕೈಗೂಡಿದ ಪ್ರಗತಿಯ ಸುಂದರ ಚಿತ್ರವನ್ನು ರೇಖಿಸುವ ೩೩೩ ಪುಟಗಳಷ್ಟು ವಿಸ್ತೃತವಾದ ವರದಿಯೊಂದನ್ನು ಯೋಜನಾ ಆಯೋಗದವರು ಸಿದ್ಧಪಡಿಸಿ, ಒಪ್ಪಿಸಿರುವರು. ಇದನ್ನು ಪರಿಶೀಲಿಸಿದರೆ ಕಳೆದ ವರ್ಷ ಯುದ್ಧೋತ್ತರ ಅವಧಿಯಲ್ಲಿ ಹಿಂದೆಂದೂ ಆಗಿರದಷ್ಟು ಉತ್ಪಾದನೆಯಲ್ಲಿ ಹೆಚ್ಚಳವಾಗಿದೆಯೆಂದು ಕಂಡು ಬರುತ್ತದೆ. ಕೃಷಿ ನೀರಾವರಿ, ವಿದ್ಯುಚ್ಛಕ್ತಿ, ಬಟ್ಟೆ ಮತ್ತು ಕೈಗಾರಿಕಾ ಕ್ಷೇತ್ರಗಳಿಗೆ ಹೆಚ್ಚಳವು ಅನ್ವಯಿಸುತಿದ್ದು ಪಂಚವಾರ್ಷಿಕ ಯೋಜನೆಯ ಗುರಿಯೊಡನೆ ಹೋಲಿಸಿದರೆ ಕಳೆದ ಮೂರು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯು ತುಂಬ ಸಮಾಧಾನವನ್ನುಂಟುಮಾಡುತ್ತದೆ. ರಾಷ್ಟ್ರದ ಆರ್ಥಿಕ ವ್ಯವಹಾರದ ಸ್ಥಿತಿಗತಿಯು ಬಲಗೊಂಡಂತೆಯೂ ಭವಿತವ್ಯದ ದೃಷ್ಟಿಯಿಂದ ಶುಭಪ್ರದವಿರುವಂತೆಯೂ ತೋರುವುದಾಗಿ ವರದಿಯು ತಿಳಿಸುತ್ತದೆ ವರದಿಗೆ ಪ್ರಸ್ತಾವನೆಯನ್ನು ಬರೆದ ಆಯೋಗದ ಉಪಾಧ್ಯಕ್ಷ ಶ್ರೀ ಕೃಷ್ಣಮಾಚಾರಿಯವರು ಯೋಜನೆಯ ಮಹತ್ವವು ಜನರಿಗೆ ಈಗ ಗೊತ್ತಾಗಿದೆಯೆಂದೂ ಪ್ರಸ್ತುತ ನೆಲಗಟ್ಟಿನ ಮೇಲೆ ಹೆಚ್ಚಿನ ಆರ್ಥಿಕ ಪ್ರಗತಿಯನ್ನು ಸಾಧಿಸಲಾದೀತೆಂದೂ ಅಭಿಪ್ರಾಯ ವ್ಯಕ್ತಗೊಳಿಸಿರುವರು. ಐದು ವರ್ಷಗಳಲ್ಲಿ ವೆಚ್ಚ ಮಾಡಬೇಕೆಂದಿರುವ ೨೩೫೬ ಕೋಟಿ ರೂಪಾಯಿಗಳಲ್ಲಿ ಪ್ರಥಮದ ಮೂರು ವರ್ಷಗಳಲ್ಲಿ ೮೮೫ ಕೋಟಿ ರೂಪಾಯಿ (ಅಂದರೆ ಶೇಕಡಾ ೪೦) ಮಾತ್ರ ವೆಚ್ಚವಾಗಿದ್ದು ಈ ಪ್ರಮಾಣ ಕಡಿಮೆಯಲ್ಲವೆ ಎಂದು ತೋರೀತು. ಆದರೆ ಇಲ್ಲಿ ಗಮನಿಸಬೇಕಾದ ಬೇರೆ ಅಂಶಗಳೂ ಉಂಟು: ಯೋಜನೆಯ ಪ್ರಥಮ ವರ್ಷವು ಮುಗಿಯುವ ವರೆಗೂ ಆಯೋಗದ ಕೊನೆಯ ವರದಿ ಸಿದ್ಧವಾಗಿರಲಿಲ್ಲ; ದ್ವಿತೀಯ ವರ್ಷದಲ್ಲಿ ರಾಜ್ಯ ಸರಕಾರಗಳೂ ಕೇಂದ್ರ ಸರಕಾರವೂ ಹೊಸ ಹೊಸ ಯಂತ್ರೋಪಕರಣಗಳನ್ನು ತರಿಸುವ ಮತ್ತು ತರಬೇತಿಗೊಂಡ ತಾಂತ್ರಿಕರನ್ನು ಒದಗಿಸಿಕೊಳ್ಳುವ ಸಮಸ್ಯೆಯತ್ತ ಗಮನವನ್ನು ಹರಿಯಿಸಬೇಕಾಯಿತು. ಎಷ್ಟೋ ರಾಜ್ಯಗಳಲ್ಲಿ ಆಡಳಿತದ ವ್ಯಾಪಕ ಹೊಣೆಯನ್ನು ಹೊರಬಲ್ಲ ಅಧಿಕಾರಿ ವರ್ಗವೇ ಇರಲಿಲ್ಲ ಅದನ್ನು ಸಿದ್ಧಪಡಿಸುವಲ್ಲಿ ತುಸು ವಿಳಂಬವಾಯಿತು. ಹೀಗೆ ಪ್ರಾಥಮಿಕ ಅಡಚಣೆಗಳನ್ನು ದೂರೀಕರಿಸಿ, ಯೋಜನೆಯನ್ನು ಕಾರ್ಯಗತಗೊಳಿಸಲು ಕ್ಷೇತ್ರವನ್ನು ಸಿದ್ಧಪಡಿಸುವ ಪ್ರಯತ್ನಗಳ ನಡುವೆಯೂ ಈಗಿನ ಸಾಧನೆಯಾಗಿರುವುದು ಅಭಿಮಾನದ ವಿಷಯ. ಇದಕ್ಕೆ ನೆರವಾದ ನೇರಾದ ಸಂಗತಿಗಳಲ್ಲಿ ಬಂಡವಾಳದ ನಿರಾತಂಕ ಪೂರೈಕೆಯನ್ನು ಹೆಸರಿಸಬಹುದು. ಕಳೆದ ಮೂರು ವರ್ಷಗಳಲ್ಲಿ ಸರಕಾರಗಳಿಗೆ ಹಣದ ಚಿಂತೆ ಇರಲಿಲ್ಲವೆಂದರೆ ತಪ್ಪಾಗದು. ಮುಂಗಡ ಪತ್ರದ ಅಂದಾಜು, ಸಾರ್ವಜನಿಕ ಸಾಲ, ಕಾದಿಟ್ಟ ಕ್ಷೇಮನಿಧಿ ಮತ್ತು ಕೈಯಲ್ಲಿದ್ದ ಹಣ-ಇವೆಲ್ಲವನ್ನೂ ಯೋಜನೆಯ ಸಾಧನೆಗಾಗಿ ವಿನಿಯೋಗಿಸಲು ಸಾಧ್ಯವಾಯಿತಲ್ಲದೆ, ಒಟ್ಟು ವೆಚ್ಚದ ಶೇಕಡಾ ಹದಿನೈದರಷ್ಟು ಮೊತ್ತವು ವಿದೇಶಗಳಿಂದ ಸಹಾಯದ ರೂಪದಲ್ಲಿ ಒದಗಿ ಬಂತು. ಹಾಗೆಂದು ಯೋಜನೆಯ ನಾಲ್ಕನೇ ಮತ್ತು ಐದನೇ ವರ್ಷಗಳಲ್ಲಿ ಹೊರಗಿನ ಸಹಾಯದ ಭರವಸೆಯು ಏನೇನೂ ಕಾಣಿಸುವುದಿಲ್ಲ; ಅದರಂತೆ ಸರಕಾರದ ಬಂಡವಾಳ ಪೂರೈಸುವ ಸಾಮರ್ಥ್ಯವೂ ಆಶಾದಾಯಕವಾಗಿಲ್ಲ. ಈ ವರ್ಷ ೫೭೭ ಕೋಟಿ ರೂಪಾಯಿಗಳ ವೆಚ್ಚ ಮಾಡಬೇಕೆಂದಿರುವ ಸರಕಾರವು ೨೫೦ ಕೋಟಿ ರೂಪಾಯಿಗಳ ಕೊರತೆ ಧನ ವಿನಿಯೋಗ ಪದ್ಧತಿಯನ್ನು ಅವಲಂಬಿಸುವ ಹಂಚಿಕೆಯಲ್ಲಿರುವುದು; ಮುಂದಿನ ವರ್ಷ ಕೊರತೆ ಧನ ವಿನಿಯೋಗದ ಪ್ರಮಾಣವು ೪೦೦ ಕೋಟಿ ರೂಪಾಯಿಯಾಗುವುದು, ಅಂದರೆ ವೆಚ್ಚದ ಮೂರರಲ್ಲಿ ಎರಡಂಶ ಹೊಸ ನೋಟುಗಳ ಮುದ್ರಣದಿಂದಲೇ ಬರಬೇಕಾಗುವುದು. ಹೀಗ ನೋಟುಗಳನ್ನು ಮುದ್ರಿಸಿದ ಮಾತ್ರಕ್ಕೆ ನಿಜವಾದ ಸಂಪತ್ತು ಏರುವುದೇ ಎಂಬುದು ಮಹತ್ವದ ಪ್ರಶ್ನೆ. ಯೋಜನಾ ಆಯೋಗವೇ ಒಪ್ಪಿಸಿಕೊಳ್ಳುವಂತೆ, ನಾವು ಸಾಧಿಸಿದ ಪ್ರಗತಿಯು ಗಣನೀಯವಾಗಿದ್ದರೂ ಹೆಚ್ಚುತ್ತಿರುವ ಪ್ರಜಾ ಸಂಖ್ಯೆಯ ದೆಸೆಯಿಂದಾಗಿ, ಜೀವನದ ಮಟ್ಟ ಏರಿದ ಅನುಭವವೇ ನಮಗಾಗುತ್ತಿಲ್ಲ. ಯೋಜನೆಯ ವೇಗವು ಜನ ಸಂಖ್ಯೆಯ ಪ್ರಮಾಣದಿಂದ ಹಿಂದೆಯೇ ಬೀಳುತ್ತದೆ. ನಾವು ಯೋಜನೆಯ ವೇಗವನ್ನು ಹೆಚ್ಚಿಸಬೇಕೆಂದು ಕೊರತೆ ಧನ ವಿನಿಯೋಗವನ್ನು ಅವಲಂಬಿಸಿದರೆ, ಅದು ಇಂತಲ್ಲಿಯೇ ನಿಂತೀತು ಎಂಬ ಭರವಸೆ ಇರಲಾರದು. ಕಾರಣ ವಿದೇಶಗಳ ಮುಖ ನೋಡುವದೇ ನಮ್ಮ ಹಣೆಯಲ್ಲಿ ಬರೆದಂತೆ ಕಾಣುತ್ತದೆ; ಜೊತೆಗೆ ಉತ್ಪಾದನೆ ಹೆಚ್ಚಿದರೂ ಅನುಭೋಗವನ್ನು ಕಡಿಮೆ ಮಾಡಿಕೊಂಡು ಉಳಿತಾಯ ಸಾಧಿಸುವ ಸಂಯಮ ನಮಗೆ ಗಂಟ-ಬಿದ್ದಂತೆ ಭಾಸವಾಗುತ್ತದೆ. ಇಷ್ಟು ಉಗ್ರ ತಪಸ್ಸು ಕೈಗೊಂಡರೆಯೇ ಪ್ರಥಮ ಯೋಜನೆಯ ಭವಿಷ್ಯ ಭದ್ರವಾದೀತು.

ಬೆಂಬಲದ ಕೋರಿಕೆ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಬೋರ್ಡಿನ ಚುನಾವಣೆಯು ಇದೇ ಬರುವ ೧೭ನೇ ತಾರೀಕು ಉತ್ತರವಿಭಾಗದಲ್ಲಿಯೂ ೨೦ನೇ ತಾರೀಕು ದಕ್ಷಿಣ ವಿಭಾಗದಲ್ಲಿಯೂ ನಡೆಯುತ್ತದೆ. ಪ್ರೌಢ ಮತದಾನ ಪದ್ಧತಿಯಂತೆ ಜರಗುವ ಈ ಚುನಾವಣೆಯಲ್ಲಿ ಮತದಾರರು ಅತ್ಯಂತಉತ್ಸಾಹವನ್ನು ತೋರಿಸ ಬೇಕಾದದ್ದು ಕರ್ತವ್ಯ. ಏಕೆಂದರೆ ಸ್ಥಾನಿಕ ಆಡಳಿತೆಯ ಭವಿಷ್ಯ ಯಾರ ಕೈಯಲ್ಲಿರಬೇಕೆಂದು ನಿರ್ಣಯಿಸುವ ಮಹತ್ವದ ಅವಕಾಶ ಇದಾಗಿರುತ್ತದೆ. ನಮ್ಮಲ್ಲಿ ಕಾಂಗ್ರೆಸು ಪಕ್ಷವು ಹೆಚ್ಚು ಕಡಿಮೆ ಎಲ್ಲ ಸ್ಥಾನಕ್ಕೂ ತನ್ನ ಹುರಿಯಾಳುಗಳನ್ನು ನಿಲ್ಲಿಸಿರುವುದು ಪ್ರಜಾಸಮಾಜವಾದಿ ಮತ್ತು ಕಮ್ಯೂನಿಸ್ಟ ಪಕ್ಷದ ಹುರಿಯಾಳುಗಳೂ ಸ್ವತಂತ್ರರೂ ಇವರ ಇವರ ಪ್ರತಿಸ್ಪರ್ಧಿಗಳಾಗಿರುವರು. ಕಾಂಗ್ರೆಸನ್ನು ವಿರೋಧಿಸುವವರು ಜನತೆಯ ಮುಂದೆ ಸರಕಾರದ ಲೋಪದೋಷಗಳ ಸುದೀರ್ಘವಾದ ಪಟ್ಟಿಯೊಂದನ್ನು ಇಟ್ಟು ಅಧಿಕಾರಸ್ಥಾನಕ್ಕೆ ಅದು ಅರ್ಹವಲ್ಲವೆಂದು ಸಾಧಿಸಬಹುದು. ಆದರೆ ಇಲ್ಲಿ ನಾವೊಂದು ವಿಷಯವನ್ನು ಗಮನಿಸದಿದ್ದರೆ ತಪ್ಪಾದೀತು: ಪ್ರಗತಿಶೀಲವಾದ ರಾಷ್ಟ್ರದ ಪ್ರಾಥಮಿಕ ಆವಶ್ಯಕತೆಗಳೂ ಸಹ ಬೆಳೆಯುತ್ತಲೇ ಹೋಗುತ್ತವೆಯಾಗಲಿ, 'ಇನ್ನು ಸಾಕು' ಎಂಬ ತೃಪ್ತಿಗೆ ಅಲ್ಲಿ ಎಡೆಯೇ ಇರುವುದಿಲ್ಲ. ಆದುದರಿಂದ ನಮ್ಮ ಸಾಧನೆಯ ಪ್ರಮಾಣವು ನಮ್ಮ 'ಬೇಕು'ಗಳ ಪಟ್ಟಿಯ ಒಂದು ಅಂಶ ಮಾತ್ರ ಆಗುತ್ತದೆಯಾಗಲಿ, ಮಾಡಿ ಮುಗಿಸಿದೆವೆಂದು ನಿಶ್ಚಿಂತೆಯ ನಿದ್ರೆಯಲ್ಲಿರುವುದಕ್ಕೆ ಬರುವುದಿಲ್ಲ. ಕಾಂಗ್ರೆಸು ಸಂಸ್ಥೆಯು ತನ್ನ ಕೈಲಾದಷ್ಟು ಚೊಕ್ಕರೀತಿಯಲ್ಲಿ ಪರಿಸ್ಥಿತಿಯನ್ನು ಸುಧಾರಿಸಿ ಜನತೆಗೆ ಪ್ರಯೋಜನವನ್ನುಂಟುಮಾಡಲು ಪ್ರಯತ್ನಿಸಿರುವುದು; ರಾಷ್ಟ್ರವನ್ನು ಎದುರಿಸುವ ಜಿಗುಟಾದ ಸಮಸ್ಯೆಗಳೇ ಜಿಲ್ಲೆಯನ್ನೂ ಪೀಡಿಸುತಿದ್ದು, ಅವುಗಳ ಸಮಾಧಾನಕರ ಪರಿಹಾರಕ್ಕೆ ತನ್ನ ಪೂರ್ಣ ಶಕ್ತಿಯನ್ನು ಕಾಂಗ್ರೆಸು ಉಪಯೋಗಿಸುತ್ತಿರುವುದು. ನಿಧಾನವಾಗಿಯೇ ಆದರೂ ದೃಢವಾದ ರೀತಿಯಲ್ಲಿ ಪ್ರಗತಿ ಸಾಧಿಸುವ ಅದರ ಪದ್ಧತಿ ಕೆಲವು ತೀವ್ರಗಾಮಿಗಳಿಗೆ ಮೆಚ್ಚುಗೆಯಾಗದಿದ್ದರೂ, ಕಾಂಗ್ರೆಸಿನ ನಿಲುವೇ ಅಪಾಯಕರವಲ್ಲದ ಮಧ್ಯಮಾರ್ಗವೆಂದು ಹಚ್ಚಿನವರ ವಿಶ್ವಾಸ ಇದನ್ನು ಮನವರಿಕೆ ಮಾಡಿಕೊಂಡ ಮತದಾರರು ಚುನಾವಣೆಯಲ್ಲಿ ಕಾಂಗ್ರೆಸಿಗೆ ಹೃತ್ಪೂರ್ವಕವಾದ ಬೆಂಬಲವನ್ನಿತ್ತು, ಅದರಿಂದ ಉತ್ತಮೋತ್ತಮವಾದ ಸೇವೆಯನ್ನು ಮಾಡಿಸಿಕೊಳ್ಳಬೇಕೆಂದು ನಾವು ವಿನಯಪೂರ್ವಕ ಪ್ರಾರ್ಥಿಸುತ್ತೇವೆ.

ಮತದಾರರ ಅವಗಾಹನೆಗೆ

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ನಡೆಯುವ ಚುನಾವಣೆಯಲ್ಲಿ ಭಾಗವಹಿಸುವ ಮತದಾರರು ಕೆಳಗಿನ ವಿಷಯಗಳನ್ನು ಗಮನಿಸುವುದು ಅಪೇಕ್ಷಣೀಯ.

ಕಳೆದ ಮಹಾಚುನಾವಣೆಗಿಂತ ತುಸು ಭಿನ್ನವಾದ ಮತದಾನ ಪದ್ಧತಿಯನ್ನು ಈ ಸಲ ಅನುಸರಿಸಲಾಗುತ್ತದೆ. ಇದರ ಪ್ರಕಾರ ಸ್ಪರ್ಧಿಸುವ ಪ್ರತಿಯೊಬ್ಬ ಉಮೇದ್ವಾರರಿಗೆ ಅವರವರ ಚುನಾವಣಾ ಚಿಹ್ನೆಯನ್ನು ಅಂಕಿಸಿದ ಒಂದೊಂದು ಪೆಟ್ಟಿಗೆ ಇರದೆ, ಎಲ್ಲರ ಮತ ಪತ್ರಗಳನ್ನೂ ಒಂದೇ ಪೆಟ್ಟಿಗೆಗೆ ಹಾಕ ಬೇಕಾಗುತ್ತದೆ. ಇದಕ್ಕೆ ಮುಂಚೆ ತಾವು ಯಾವ ಉಮೇದ್ವಾರರಿಗೆ ಮತ ಕೊಡುತಿದ್ದೇವೆಂಬುದನ್ನು ತಮಗೆ ನೀಡಲಾದ ಮತ ಪತ್ರದಲ್ಲಿಯೇ ಮತದಾರರು ಸೂಚಿಸಬೇಕಾಗುತ್ತದೆ.

ಇದಕ್ಕಾಗಿ ಮತ ಪತ್ರದಲ್ಲಿ ಒಂದರ ಕೆಳಗೊಂದು ಇರುವ ಪ್ರತ್ಯೇಕ ಆವರಣದೊಳಗೆ ಉಮೇದ್ವಾರರ ಚುನಾವಣಾ ಚಿಹ್ನೆಯನ್ನು ಮುದ್ರಿಸಿದ್ದು, ಮತದಾರರು ಮರೆಯೊಳಗೆ ಹೋಗಿ, ಅಲ್ಲಿಟ್ಟಿರುವ ವಿಶಿಷ್ಟ ಪೆನ್ಸಿಲಿನಿಂದ ತಮಗೆ ಬೇಕಾದ ಉಮೇದ್ವಾರನ ಆವರಣದಲ್ಲಿ ಏನಾದರೊಂದು ಗುರುತು ಹಾಕತಕ್ಕದ್ದು. ಮೇಲೆ ಪೆನ್ಸಿಲನ್ನು ಅಲ್ಲಿಯೇ ಇಟ್ಟು ಮತಪತ್ರವನ್ನು ಮಡಚಿ ಹಿಡಿದುಕೊಂಡು ಅಧಿಕಾರಿಗಳಮುಂದೆ ಇಟ್ಟ ಪೆಟ್ಟಿಗೆಯೊಳಗೆ ಹಾಕತಕ್ಕದ್ದು.

ಪೆನ್ಸಿಲಿನ ಗುರುತು ಮಾಡುವಾಗ ಬಹು ಜಾಗರೂಕತೆಯನ್ನು ತೋರಿಸಬೇಕು. ತಾವು ಬಯಸಿದ ಉಮೇದ್ವಾರನ ಚುನಾವಣಾ ಚಿಹ್ನೆಯ ಆವರಣಕ್ಕಿಂತ ಗುರುತು ಹೊರಗೆ ಹೋಗಬಾರದು. ಅಲ್ಲಿಟ್ಟಿರುವ ಪೆನ್ಸಿಲನ್ನು ಬಿಟ್ಟು ಬೇರಾವುದರಿಂದಲೂ ಗುರುತು ಮಾಡಬಾರದು. ಮತಪತ್ರಗಳನ್ನು ಹರಿಯಲೂ ಬಾರದು. ಕಣ್ಣು ಕಾಣದ ಮುದುಕರೂ ಗೆರೆ ಹಾಕಲಾರದ ಅಶಕ್ತರೂ ಸಮೀಪದ ಅಧಿಕಾರಿಗಳ ಸಹಾಯವನ್ನು ತೆಗೆದುಕೊಳ್ಳಬಲ್ಲರು.

ನಮ್ಮ ಹಿತೈಷಿಗಳು

ಸಕಾಲದಲ್ಲಿ ಚಂದಾಹಣ ಸಲಾಯಿಸಿದ ಈ ಕೆಳಗಿನ ಮಹನೀಯರಿಗೆ ನಾವು ನಮ್ಮ ಹಾರ್ದಿಕ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಇತರರೂ ತಮ್ಮ ತಮ್ಮ ಚಂದಾ ಹಣವನ್ನು ಒಡನೆ ಕಳುಹಿಸಿ ನೆರವಾಗಬೇಕೆಂದು ಕೋರುವೆವು.

(ಕಳೆದ ಸಂಚಿಕೆಯಿಂದ ಮುಂದುವರಿಸಿದ್ದು)

ಶ್ರೀ ಶ್ರೀ ಸುಬ್ರಹ್ಮಣ್ಯ ಮಠದ ಶ್ರೀಪಾದಂಗಳವರು.
ಶ್ರೀ ಪಿ ಅಕ್ಕಿ ಶೆಟ್ಟಿ ಬೊಬ್ಬೆಕೇರಿ.
ಬೋರ್ಡು ಹೈಸ್ಕೂಲು, ಕುಂದಾಪುರ.
ಶ್ರೀ ಕೆ ಸುಂದರ ಶೆಟ್ಟಿ, ಬೊಂಬಾಯಿ.
ಶ್ರೀ ಮುದ್ದಣ್ಣ ಶೆಟ್ಟಿ, ಪ್ಲನುಂಡ್ಕೂರು.
ಶ್ರೀ ಬೈಕ್ಲ ಶೆಟ್ಟಿ, ಬೆಳ್ಮಣ್ಣು.
ಶ್ರೀ ಬಡಗಬೆಟ್ಟು ಕೃಷ್ಣಯ್ಯ ಹೆಗ್ಡೆ, ಪರ್ಕಳ.
ಶ್ರೀ ಎಂ ನಂಜನ ಗೌಡ, ಉಜ್ಜಂಗಿದುರ್ಗ

(ಅಪೂರ್ಣ)

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವುದಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇದಕ್ಕೆ ಇದು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ದಾರುಣ ಖಾಹಿಲೆಯ ಮುಖ್ಯ ಲಕ್ಷಣಗಳಾವುವೆಂದರೆ ಹಸಿವು ನೀರಡಿಕೆ ಅತಿ ಹೆಚ್ಚಾಗುವುದು. ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ.

ಈ ಖಾಹಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕುಗಳು.

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾಡ ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಅಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಆರೋಗ್ಯವಾಯಿ ತಂಪ ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ ವಿವರಣಾತ್ಮಕ ಕೈಪಿಡಿಗೆ ಬರೆಯಿರಿ. ೫೦ ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W)
Post box No. 587, CALCUTTA.

ಪಶ್ಚಿಮ ಜರ್ಮನಿಯ ಪುನಃ ಶಸ್ತ್ರೀಕರಣ

ನಿಶ್ಶಸ್ತ್ರೀಕರಣದ ಕುರಿತು ವಿಶಿಂಸ್ಕಿ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಕಳೆದ ವಾರ ತುಂಬ ತೃಪ್ತಿದಾಯಕವಾದ ವಾತಾವರಣ ಉಂಟಾಯಿತು. ಐರೋಪ್ಯ ಸಂರಕ್ಷಣಾ ಒಪ್ಪಂದಕ್ಕೆ ಮನ್ನಣೆಯನ್ನು ಕೊಡಲು ಹಿಂಜರಿಯುತಿದ್ದ ಫ್ರಾನ್ಸು ಪಶ್ಚಿಮ ಜರ್ಮನಿಯ ಪುನಃ ಶಸ್ತ್ರೀಕರಣಕ್ಕೆ ಸಮ್ಮತಿ ಕೊಡುವಂತೆ ಪರಿಸ್ಥಿತಿಯು ಮಾರ್ಪಟ್ಟಿತು. ಲಂಡನಿನಲ್ಲಿ ಒಂಭತ್ತು ರಾಷ್ಟ್ರಗಳ ಪ್ರತಿನಿಧಿಗಳು ಪರಿಷತ್ತಿನಲ್ಲಿ ಸೇರಿ, ಮಹತ್ವದ ಈ ವಿಷಯವನ್ನು ಎಳೆ ಎಳೆಯಾಗಿ ಚರ್ಚಿಸಿದರು ಪರಿಣಾಮವಾಗಿ ಜರ್ಮನಿಯ ಪುನರುತ್ಥಾನಕ್ಕೆ ಪರಿಮಿತವಾದ ಅನುಕೂಲತೆಯನ್ನು ಕಲ್ಪಿಸಿಕೊಟ್ಟು, ಪಾಶ್ಚಾತ್ಯ ರಾಷ್ಟ್ರಗಳ ಸಂರಕ್ಷಣಾ ಯೋಜನೆಯಲ್ಲಿ ಅದು ಪ್ರವೇಶಿಸುವುದಕ್ಕೆ ದಾರಿಮಾಡಿ ಕೊಡಲಾಯಿತು.

ಕರಾರುಗಳು

ಜರ್ಮನಿಯ ಪುನಃ ಶಸ್ತ್ರೀಕರಣಕ್ಕೆ ಬಹಳ ಅಂಜುತಿದ್ದ ಫ್ರಾನ್ಸು ಕೊನೆಯ ಗಳಿಗೆಯ ವರೆಗೂ ಒಪ್ಪಂದದಕುರಿತು ಅನಿಶ್ಚಿತತೆಯನ್ನೇ ತೋರಿಸುತಿತ್ತು. ಜರ್ಮನರು ಕೇಳುವುದನ್ನೆಲ್ಲ ಕೊಡುತ್ತ ಹೋಗುವುದರಿಂದ ಫ್ರಾನ್ಸಿಗೆ ಹೆಚ್ಚಿನ ಗಂಡಾಂತರವಾದೀತೆಂದು ಅದು ಮೊದಲಿಂದಲೂ ಅಂಜಿಕೆಯನ್ನು ತೋರಿಸುತಿದ್ದಿತು ಆದುದರಿಂದ ಜರ್ಮನಿಯ ಪುನಃ ಶಸ್ತ್ರೀಕರಣವು ಫ್ರಾನ್ಸಿನ ಅಸ್ತಿತ್ವಕ್ಕೆ ಧಕ್ಕೆ ತಗುಲದಂತೆ ನಡೆಯಬೇಕೆಂಬ ಇರಾದೆಯಿಂದ, ಕೆಲವು ಕರಾರುಗಳನ್ನು ಅದು ಹಾಕಿತು, ಅಂಕಿತ ಹಾಕಲಾದ ಈಗಿನ ಒಪ್ಪಂದದಂತೆ ಪಶ್ಚಿಮ ಜರ್ಮನಿಯು ಐದು ಲಕ್ಷದಷ್ಟು ಮಾತ್ರ ಸೈನ್ಯವನ್ನು ಕಟ್ಟಬಹುದು;ಆದರೆ ಅಣುಶಸ್ತ್ರಾಸ್ತ್ರಗಳನ್ನೂ ರೋಗ

(೫ನೇ ಪುಟದಿಂದ)

ಹತ್ತಿರ ವಾಸಂತಿ ನದಿಯ ಸೇತುವೆ ಕುಸಿದುದರಿಂದ ಅಪಘಾತಕ್ಕೆ ಗುರಿಯಾಯಿತು. ಏಳು ಡಬ್ಬಿಗಳಲ್ಲಿ ಕೆಲವು ನುಚ್ಚುನೂರಾದರೆ ಇನ್ನು ಕೆಲವು ನೆರೆಯಿಂದ ತುಂಬಿ ಹರಿಯುತಿದ್ದ ನದಿಯಲ್ಲಿ ಮುಳುಗಿದವು. ರೈಲಿನಲ್ಲಿ ಸುಮಾರು ೩೮೦ ಪ್ರಯಾಣಿಕರಿದ್ದು ಅವರಲ್ಲಿ ೧೨೦ ಮಂದಿ ಸೈನಿಕರು ಹಾಗು ೧೮೦ ನಾಗರಿಕರಿದ್ದರು. ಸುಮಾರು ೧೮೦ ಮಂದಿ ಮರಣಗೊಂಡಿದ್ದು ಇನ್ನೂ ಅನೇಕರ ಗತಿಯೇನೆಂದು ತಿಳಿದಿಲ್ಲ. ಗಾಯಗೊಂಡವರಿಗೆ ಪ್ರಥಮ ಚಿಕಿತ್ಸೆಯ ಸೌಕರ್ಯಗಳನ್ನು ಒದಗಿಸಿ ಆಸ್ಪತ್ರೆಗೆ ಸಾಗಿಸಲಾಯಿತು. ರೈಲ್ವೆ ಮಂತ್ರಿಗಳು ಇಲ್ಲಿಗೆ ಧಾವಿಸಿ ಬಂದರಲ್ಲದೆ, ರಾಷ್ಟ್ರಪತಿಗಳೇ ಮುಂತಾದವರು ಸಹಾನುಭೂತಿಪರ ಸಂದೇಶವನ್ನು ಕಳಿಸಿದರು. ನೊಂದವರ ವಿಷಯದಲ್ಲಿ ಪರಿಹಾರ ಧನದ ಬೇಡಿಕೆಯ ಅರ್ಜಿಯ ವಿಚಾರಣೆಗೆ ವ್ಯವಸ್ಥೆ ಮಾಡಲಾಗುವುದೆಂದು ಹೇಳಲಾಯಿತು. ಆದರೆ ಇಷ್ಟೇ ಸಾಲದೆಂದೂ, ಎಲ್ಲ ಸೇತುವೆಗಳ ಪರಿಶೀಲನೆ ಅಗತ್ಯವೆಂದೂ ಹೈದರಾಬಾದು ಧುರೀಣರ ಅಭಿಪ್ರಾಯ.

ಜಂತುಗಳ ಶಸ್ತ್ರಾಸ್ತ್ರಗಳನ್ನೂ ರಾಸಾಯನಿಕ ಆಯುಧಗಳನ್ನೂ ತಯಾರಿಸಲಾರದು. ತನ್ನ ಸೈನ್ಯಬಲವನ್ನು ಜರ್ಮನಿಯ ಏಕೀಕರಣ ಉದ್ದೇಶದಿಂದ ರಶಿಯದ ವಶವಿರುವ ಪೂರ್ವಜರ್ಮನಿಯ ಮೇಲೆ ದಾಳಿ ನಡೆಸಲೂ ಅದು ಉಪಯೋಗಿಸಲಾರದು.

ಸಾರ್ವಭೌಮಾಧಿಕಾರ

ಛಾನ್ಸಲರ ಅಡೆನಾರರು ಇವೆಲ್ಲ ಕರಾರುಗಳಿಗೂ ಸಮ್ಮತಿಯನ್ನು ಕೊಟ್ಟುದರಿಂದ ಫ್ರಾನ್ಸು ಹೆಚ್ಚಿನ ಸಮಾಧಾನವನ್ನು ಹೊಂದಿತು. ಐರೋಪ್ಯ ಸಂರಕ್ಷಣಾ ವ್ಯವಸ್ಥೆಯಲ್ಲಿ ಸೇರಿರದ ಬ್ರಿಟನು ಪದ್ಯದ ಒಪ್ಪಂದದಲ್ಲಿ ಭಾಗಿಯಾಗಿರುವುದು ಫ್ರಾನ್ಸಿಗೆ ಹೊಸ ಭರವಸೆಯ ವಿಷಯವಾಯಿತು. ಜರ್ಮನಿಯನ್ನು ಅಟ್ಲಾಂಟಿಕ ಒಪ್ಪಂದದಲ್ಲಿ ಸೇರಿಸಿ,ಕಮ್ಯುನಿಸ್ಟ ಆಕ್ರಮಣದ ವಿರುದ್ಧ ಬಲವಾದ ಪ್ರತಿಘಟನೆಯನ್ನು ಸಂಘಟಿಸುವ ವಿಚಾರವೂ ಒಪ್ಪಂದಲ್ಲಿ ವ್ಯಕ್ತ ಗೊಂಡಿತು. ಮಾತ್ರವಲ್ಲದೆ ಜರ್ಮನರಿಗೆ ತುಂಬ ಸಂತೋಷದಾಯಕವಾದ, ಸಾರ್ವಭೌಮಾಧಿಕಾರದ ಪ್ರಶ್ನೆಯೂ ಇತ್ಯರ್ಥ ಹೊಂದಿತು.ಇದರಂತೆ,ಜರ್ಮನಿಯನ್ನು ಆಕ್ರಮಿಸಿ ಕುಳಿತಿರುವ ಫ್ರಾನ್ಸು, ಬ್ರಿಟನು ಹಾಗು ಅಮೇರಿಕಗಳು ಆದಷ್ಟು ಬೇಗ ಅಲ್ಲಿಂದ ಕಾಲ್ತೆಗೆಯುತ್ತವೆ; ಮತ್ತು ತಮ್ಮ ಹೈಕಮಿಶನರ ಕಾರ್ಯಾಲಯಗಳನ್ನು ವಿಸರ್ಜಿಸುತ್ತವೆ. ಜರ್ಮನಿಯ ಆಕ್ರಮಣದ ವಿರುದ್ಧ ಮಿತ್ರ ರಾಷ್ಟ್ರಗಳು ೫೦ ವರ್ಷದ ಹಿಂದೆ ಸಂಘಟಿಸಿದ್ದ ಬ್ರುಸೆಲ್ಸ ಒಪ್ಪಂದದಲ್ಲಿ ಕುಸು ಮಾರ್ಪಾಟುಗಳನ್ನು ಮಾಡಿ ಪಶ್ಚಿಮ ಜರ್ಮನಿಗೂ ಅದರಲ್ಲಿ ಭಾಗವಹಿಸಗೊಡುವಔದಾರ್ಯ ತೋರಿಸಲ್ಪಟ್ಟಿರುವುದು.

ನಿಶ್ಶಸ್ತ್ರೀಕರಣ

ಸಂಯುಕ್ತ ರಾಷ್ಟ್ರ ಸಂಘದಲ್ಲಿ ರಶಿಯವು ನಿಶ್ಶಸ್ತ್ರೀಕರಣದ ವಿಷಯದಲ್ಲಿ ಕಳೆದ ವಾರ ಮಾಡಿದ ಸೂಚನೆಗಳು ಪಶ್ಚಿಮ ರಾಷ್ಟ್ರಗಳಿಗೆ ತೃಪ್ತಿಯನ್ನು ಒದಗಿಸುವಷ್ಟು ಹೊಸ ರೂಪದಲ್ಲಿ ಬಂದಿರುತ್ತವೆ. ಕಳೆದ ಜೂನು ತಿಂಗಳಲ್ಲಿ ಪಶ್ಚಿಮ ರಾಷ್ಟ್ರಗಳು ಮುಂದಿಟ್ಟ, ಸೂಚನೆಗಳಿಗೆ ಬಹಳಷ್ಟು ಅನುಕೂಲವಾದ ನಿಲುಮೆಯನ್ನು ರಶಿಯವು ವಹಿಸಿದಂತೆ ತೋರುತ್ತದೆ— ಶೀತಳ ಯುದ್ಧದ ಕುರಿತು ಒಂದೂವರೆ ತಾಸುಗಳಷ್ಟು ದೀರ್ಘಕಾಲ ಭಾಷಣ ಮಾಡಿ, ಪ್ರತಿನಿಧಿಗಳೆಲ್ಲರನ್ನೂ ಬೇಸಂಗೊಳಿಸಿದ ಕೊನೆಯಲ್ಲಿ ವಿಶಿಂಸ್ಕಿಯವರು ತಮ್ಮ "ಹೊಸ" ಸೂಚನೆಗಳನ್ನು ಮುಂದಿಟ್ಟು ಎಲ್ಲರನ್ನೂ ಆಶ್ಚರ್ಯ ಚಕಿತರಾಗಿ ಮಾಡಿದರು. ಪಶ್ಚಿಮ ರಾಷ್ಟ್ರಗಳು ರಶಿಯದ ಸೂಚನೆಗಳು ತಮ್ಮಿಂದಲೇ ಕದಿಯಲ್ಪಟ್ಟು ಪ್ರಚಾರೋದ್ದೇಶದಿಂದ ಮುಂದಿಡಲ್ಪಟ್ಟವೆಂದು ಹೇಳುತಿದ್ದರೂ ನಿರ್ವಿಕಾರ ಚಿತ್ತದಿಂದ ಇದನ್ನು ಪರಿಶೀಲಿಸುವ ಅಗತ್ಯವನ್ನು ಕಡೆಗಣಿಸುವಂತಿಲ್ಲ

ಕಾಶ್ಮೀರದ ಸಮಸ್ಯೆ

ಆದರೆ ವಿಶ್ವದ—ಮುಖ್ಯವಾಗಿ ಭಾರತದ—ಮಟ್ಟಿಗೆ ಶಾಂತಿಯ ಮಾರ್ಗವು ಕಠೋರವಾದ ಪರೀಕ್ಷೆಯನ್ನೊಡ್ಡುತ್ತಿರುವಂತೆ ಭಾಸವಾಗುತ್ತದೆ. ಕಾಶ್ಮೀರದ ಪ್ರಶ್ನೆಯು ಭಾರತದ ಪ್ರತಿಷ್ಠೆಯನ್ನು ಕೆಣಕುತ್ತಿದೆ ಮಾತ್ರವಲ್ಲ, ಶಾಂತಿಯುತ ಮಾರ್ಗದ ಅನುಸರಣೆ ಎಷ್ಟು ಕಷ್ಟದ್ದೆಂಬುದನ್ನೂ ತೋರಿಸಿ ಕೊಡುತ್ತದೆ. ನೆಹರೂ—ಮಹಮ್ಮದಾಲಿ ಪತ್ರ ವ್ಯವಹಾರವು ಇದೀಗ ಪ್ರಕಟನೆಗೆ ಕೊಡಲ್ಪಟ್ಟಿದ್ದು, ಅವುಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿದರೆ ಭಾರತದ ನ್ಯಾಯ ಬದ್ಧವಾದ ನಿಲುಮೆಯನ್ನು ಪಾಕಿಸ್ತಾನವು ಮನ್ನಿಸುವ ಲಕ್ಷಣಗಳೇನೂ ಇಲ್ಲವೆಂದು ಸ್ಪಷ್ಟವಾಗುತ್ತದೆ. ಪಾಕಿಸ್ತಾನಕ್ಕೆ ದೊರೆತ ಅಮೇರಿಕದ ಸೈನಿಕ ಸಹಾಯದಿಂದ ಕಾಶ್ಮೀರದಲ್ಲಿ ಯುದ್ಧ ವಿರಾಮ ರೇಖೆಯ ಇಕ್ಕೆಡೆಯಲ್ಲೂ ನಿಲ್ಲಿಸಬೇಕಾದ ಸೈನ್ಯ ಪ್ರಮಾಣದ ವಿಷಯವು ಮೊದಲಿನಕ್ಕಿಂತಲೂ ಜಟಿಲವಾಗಿ ಪರಿಣಮಿಸಿರುವುದು. ಪಾಕಿಸ್ತಾನವು "ಶ್ವೇತ ಪತ್ರ" ಹೊರಡಿಸಿದುದನ್ನು ಕಂಡರೆ, ರಾಷ್ಟ್ರ ಸಂಘದ ಮುಂದೆ ಕಾಶ್ಮೀರದ ಪ್ರಶ್ನೆ ಮರಳಿ ಮಂಡಿಸಲ್ಪಡುವುದೆಂದೇ ಹೇಳಬೇಕಾಗುತ್ತದೆ.

ಸಿಂಹಳದ ಭಾರತೀಯರು

ಇನ್ನೊಂದು ಪ್ರಾಮುಖ್ಯ ಸಮಸ್ಯೆ ಸಿಂಹಳವಾಸಿ ಭಾರತೀಯರಿಗೆ ಸಂಬಂಧಿಸಿದ್ದು, ನೆಹರೂರ ಬಳಿಗೆ ಸಿಂಹಳದ ಪ್ರಧಾನಿಗಳ ನೇತೃತ್ವದಲ್ಲಿ ಶಿಷ್ಟಮಂಡಳವೊಂದು ಹೊರಟು ಬಂದಿರುವುದು. ಜನವರಿ ತಿಂಗಳಲ್ಲಿ ಆದ ಒಡಂಬಡಿಕೆಯು ಹೆಚ್ಚಿನ ಫಲವನ್ನೇನೂ ಉಂಟುಮಾಡಿಲ್ಲ. ಸಿಂಹಳ ಸರಕಾರವು ಭಾರತೀಯ ವಂಶಜರಿಗೆ ಪೀಡೆಯನ್ನೇ ಕೊಡುತಿದ್ದು, ರಾಷ್ಟ್ರೀಯತ್ವದ ಹಕ್ಕು ಬಾಧ್ಯತೆಗಳನ್ನು ಕೊಡಲು ಬಯಸುತ್ತಿಲ್ಲ. ಶ್ರೀ ಗಿರಿಯವರು ಹೇಳಿದಂತೆ,ಸಿಂಹಳದಲ್ಲಿಹುಟ್ಟಿದವರನ್ನಾದರೂ ತನ್ನ ನಾಗರಿಕರೆಂದು ಮನ್ನಿಸಲು ಅದು ಸಿದ್ಧವಿಲ್ಲ. ಬದಲಿಗೆ ಭಾರತದ ನಾಗರಿಕರಾಗುವಂತೆ ಅವರನ್ನು ಹುರಿದುಂಬಿಸಲು ಹಾಗೆ ಸಿಂಹಳವನ್ನು ಬಿಟ್ಟು ಹೋಗುವವರಿಗೆ ವಷಾ೯ಸನವನ್ನೂ ಬೋನಸನ್ನೂ ಕೊಡಲು ಮುಂಬಂದಿರುವುದು ಒಡಂಬಡಿಕೆಯಲ್ಲಿ ಇಂಥ ಕ್ರಮಕ್ಕೆ ಅವಕಾಶವಿದ್ದರೂ ಅದಷ್ಟು ಹೆಚ್ಚು ಭಾರತೀಯ ವಂಶಜರಿಗೆ ಸಿಂಹಳದ ನಾಗರಿಕಾಧಿಕಾರಗಳನ್ನು ಕೊಡುವ ಮೂಲಭೂತ ಆಶಯಕ್ಕೆ ಸಿಂಹಳ ಸರಕಾರದ ನಿಲುಮೆ ಪೋಷಕವಾಗಿಲ್ಲ.

ಟ್ರೀಸ್ಟೆಯ ಪ್ರಶ್ನೆ

ಒಂಭತ್ತು ತಿಂಗಳುಗಳ ಹಿಂದೆ ಪ್ರಕೋಪಕ್ಕೆ ಹೋದ ಟ್ರೀಸ್ಟೆಯ ಪ್ರಶ್ನೆಯು ಸಮಾಧಾನಕರವಾದ ರೀತಿಯಲ್ಲಿ ಬಗೆಹರಿದ ವಾರ್ತೆ ಬಂದಿರುತ್ತದೆ. ಇದರ ಪ್ರಕಾರವಾಗಿ, "ಅ" ವಿಭಾಗದ ಮೇಲೆ ಇಟಲಿಗೆ ಆಡಳಿತ ಅಧಿಕಾರವು ಮುಂದಕ್ಕೂ ಉಳಿಯುತಿದ್ದರೂ ಯುಗೊಸ್ಲಾವಿಯಕ್ಕೆ ಬಂದರುಗಳನ್ನು ಉಪಯೋಗಿಸಲು ಬಿಡಲಾಗುತ್ತದೆ. ಎಡ್ರಿಯಾಟಿಕ ಸಮುದ್ರದ ಸ್ಫೋಟಕ ಸಮಸ್ಯೆಯೊಂದು ಲಂಡನಿನ ಮಾತುಕತೆಗಳಿಂದಾಗಿ ಶಾಂತ ರೀತಿಯಲ್ಲಿ ಬಗೆಹರಿದುದರಿಂದ ಯುರೋಪಿನ ವಾತಾವರಣವು ತಿಳಿಯಾಗಿರುವುದು.

ಉಡುಪಿ

ಭಾಷಣ—ಸ್ಥಳೀಯ ಭಾರತೀಯ ಜನಸಂಘದ ಆಶ್ರಯದಲ್ಲಿ ತಾ. ೩ರಲ್ಲು ಸಂಜೆ ರಥಬೀದಿಯಲ್ಲಿ ಸಾರ್ವಜನಿಕ ಸಭೆಯು ಡಾ। ಪಿ. ಜಿ. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಗನ್ನಾಥ ರಾವ್ ಜೋಶಿ, ಅವರು ಜನಸಂಘದ ಧ್ಯೇಯಗಳನ್ನೂ ಪ್ರಚಲಿತ ರಾಜಕೀಯ ವಿಷಯಗಳನ್ನೂ ವಿವರಿಸಿದರು.

ಗಾಂಧಿ ಜಯಂತಿಯು—ತಾ. 2ರಲ್ಲು ಬೆಳಗ್ಗೆ ಸ್ಥಳೀಯ ಬೋರ್ಡ ಹ್ಯಾಸ್ಕೂಲಿನಲ್ಲಿ ಶ್ರೀ ಬಿ. ರಾಮಕೃಷ್ಣ ರಾಯರಿಂದ ಧ್ವಜಾರೋಹಣ,ಸೂತ್ರಯಜ್ಞ ಇತ್ಯಾದಿ ಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು. ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀ ಬಿ. ಅನಂತ ನಾಮಗರು ಸ್ವಾಗತ ಮಾಡಿದ ಮೇಲೆ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು, ಗಾಂಧೀಜಿಯವರ ಭಾವಚಿತ್ರ ಅನಾವರಣ ಮಾಡಿದರು. ಅಧ್ಯಕ್ಷರು ಗಾಂಧಿಜಿ ಹಾಕಿಕೊಟ್ಟ ಮಾರ್ಗದಲ್ಲೇ ನಡೆಯಬೇಕೆಂದು ಭಾಷಣವಿತ್ತರು.

ಅನ್ನದಾನ—ಗಾಂಧಿ ಜಯಂತಿಯ ನಿಮಿತ್ತ ತಾ. ೨ರಲ್ಲು ಎಮ್. ಜಿ. ಎಮ್. ಕಾಲೇಜಿನಲ್ಲಿ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ನಾಯಕತ್ವದಲ್ಲಿ ಅಧ್ಯಾಪಕರೂ ವಿದ್ಯಾರ್ಥಿಗಳೂ ಸೇರಿಕೊಂಡು 400ಕ್ಕೂ ಮಿಕ್ಕಿದ ಬಡವರಿಗೆ ಅನ್ನದಾನ ಮಾಡಿದರು.

ಮುನಿಸಿಪಲ್ ಲ್ಯಾಬ್ರೆರಿಯ ಹಸ್ತಾಂತರ—ದ. ಕ. ಜಿಲ್ಲಾ ಲೋಕಲ್ ಲ್ಯಾಬ್ರೆರಿ ಅಥೋರಿಟಿಗೆ ಉಡುಪಿ ಮುನಿಸಿಪಲ್ ಲ್ಯಾಬ್ರೆರಿಯನ್ನು ಬಿಟ್ಟುಕೊಡುವ ಸಮಾರಂಭವು ತಾ. ೨ರಲ್ಲು ಸಂಜೆ ಮಹಾತ್ಮಾಗಾಂಧಿ ಮುನಿಸಿಪಲ್ ಎಲಿಮೆಂಟರಿ ಶಾಲೆಯಲ್ಲಿ ಡಾ। ಎಸ್. ಆರ್. ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಕಮಿಶನರ್ ಶ್ರೀ ಗೋಪಾಲ ಮೆನೊನ್, ಅವರು ಮುನಿಸಿಪಲ್ ಲ್ಯಾಬ್ರೆರಿಯ ಚರಿತ್ರೆಯನ್ನು ಸಂಕ್ಷೇಪದಲ್ಲಿ ತಿಳಿಸಿದರು. ಜಿಲ್ಲಾ ಕಮಿಟಿಯ ಕಾರ್ಯದರ್ಶಿ ಶ್ರೀ ಕೆ ಸಂಜೀವ ಭಟ್ಟರು ದ ಕ. ಜಿಲ್ಲಾ ಎಲ್. ಎಲ್. ಎ. ಕಮಿಟಿಯ ಕಾರ್ಯಕಲಾಪಗಳನ್ನು ವಿವರಿಸಿದರು. ಬಳಿಕ ಎಮ್. ಜಿ ಎಮ್. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರು ಜನತೆಯ ಮೇಲೆ ಲ್ಯಾಬ್ರೆರಿ ಚಳವಳಿಯು ಮಾಡತಕ್ಕ ಪರಿಣಾಮವನ್ನು ವಿವರಿಸಿದರು ಮುನ್ಸಿಪಲ್ ವೈಸ್ ಚೆಯರ್‌ಮ್ಯಾನ್ ಡಾ। ಪಿ ವ್ಯಾಸರಾಯರು ನಗರ ಸಭೆಯ ಪರವಾಗಿ ಲೈಬ್ರೆರಿಯ ಅಧಿಕಾರವನ್ನು ಲೆಕ್ಕಪತ್ರಗಳೊಂದಿಗೆ ಬಿಟ್ಟುಕೊಟ್ಟರು. ಎಲ್. ಎಲ್. ಎ. ಕಮಿಟಿ ಅಧ್ಯಕ್ಷರಾದ ಶ್ರೀ ಎಮ್. ಎಸ್. ಪಿತಾಂಬರ ರಾಯರು ಅಧಿಕಾರ ವಹಿಸುತ್ತ ಜಿಲ್ಲಾ ಕಮಿಟಿಯು ಉಡುಪಿ ಮುನಿಸಿಪಲ್ ಲ್ಯಾಬ್ರೆರಿಯನ್ನು ಸ್ವಾಧೀನ ಪಡಿಸಿಕೊಳ್ಳುವದರಿಂದ ಜಿಲ್ಲಾ ಕಮಿಟಿಯ ವರ್ಚಸ್ಸು ಹೆಚ್ಚಿದಂತಾಯಿತೆಂದು ಹೇಳಿದರು. ಉಡುಪಿ ಲ್ಯಾಬ್ರೆರಿ ಕೇಂದ್ರದಿಂದ ತಾಲೂಕಿನಲ್ಲಿ ಐದಾರು ಲ್ಯಾಬ್ರೆರಿ ಪುಸ್ತಕ ವಿತರಣಾ ಸ್ಟೇಶನುಗಳನ್ನು ಬೇಗನೆ ತೆರೆಯಲಾಗುವುದೆಂದರು. ಡಾ। ಕೆ. ಎಲ್. ಐತಾಳರು ಧನ್ಯವಾದಗಳನ್ನರ್ಪಿಸಿದರು. ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು.

ನಾಡಹಬ್ಬದ ಕಾರ್ಯಕ್ರಮ:—ಕರ್ನಾಟಕ ಸಂಘದ ವತಿಯಿಂದ ನಡೆಯುವ ನಾಡಹಬ್ಬದ ಕಾರ್ಯಕ್ರಮವು ಇದೇ ತಾ. ೬ರಂದು ಪ್ರಾರಂಭವಾಗಿದ್ದು, ಪ್ರಥಮ ದಿನ ಶ್ರೀ ಸೋದೆ ವಾದಿರಾಜ ಮಠಾಧೀಶರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀಗಳವರ ವೀರರಾಘವಾಚಾರ್ಯರು "ಸಾಹಿತ್ಯದಲ್ಲಿ ಜೀವನಾಡಿ" ಎಂಬ ವಿಷಯದ ಮೇಲೂ ಶ್ರೀ ಎನ್. ಪ್ರಹ್ಲಾದ ರಾಯರು "ಭಾರತದ ಮೂರು ಚಿತ್ರಗಳು" ಎಂಬ ಕುರಿತಾಗಿಯೂ ಸುರಸವಾದ ಭಾಷಣ ಮಾಡಿದರು. ಶ್ರೀ ಅಧವಾರು ಮಠಾಧೀಶರು ಆಶೀರ್ವಾದ ರೂಪದ ನಾಲ್ಕು ಮಾತುಗಳನ್ನಾಡಿದರು. ಅಧ್ಯಕ್ಷರು ಸಾಹಿತ್ಯದ ಲಕ್ಷಣಗಳನ್ನು ವಿವರಿಸಿದರು. ತಾ. ೮ರಂದು ಶ್ರೀಗಳವರ ಬಿ. ಕೆ. ತಿರುಮಲಯ್ಯ ಮತ್ತು ವಿ. ಎಚ್. ಶ್ರೀಧರರು ಶ್ರೀ ಕಾಣಿಯರು ಮಠಾಧೀಶರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಭಾಷಣವಿತ್ತರು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ, ಕು. ಶಿ. ಹರಿದಾಸ ಭಟ್ಟರು ಧನ್ಯವಾದವನ್ನು ಅರ್ಪಿಸಿದರು.

ಮಂಗಳೂರು

ಸ್ಥಾಪಕರ ದಿನಾಚರಣೆ— ಭಾರತ ಸ್ಕೌಟ್ ಮತ್ತು ಗೈಡುಗಳ ಸಪ್ತಾಹದ ಅಂಗವಾಗಿ ತಾ. 1ರಲ್ಲಿ ಕೊಡಿಯಾಲ ಬೈಲಿನ ಹ್ಯಾಟ್ ಲೇಂಡ್ ಬಯಲಿನಲ್ಲಿ ಸ್ಥಾಪಕರ ದಿನಾಚರಣೆಯು ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆಯವರ ಅಧ್ಯಕ್ಷತೆಯಲ್ಲಿ ಜರಗಿತು.

ಅಧ್ಯಕ್ಷರ ಆಯ್ಕೆ— ಕೆನರಾ ವಾಣಿಜ್ಯ ಸಂಘದ ಮಹಾಸಭೆಯು ತಾ. 3ರಲ್ಲಿ ಜರಗಿ ಶ್ರೀ ಗಜಾನನ ರಾವ್ ಪಂಡಿತರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ವಾರ್ಷಿಕೋತ್ಸವ— ಬೆಸೆಂಟ್ ಬಾಲಿಕಾ ಪಾಠಶಾಲೆಯ ವಾರ್ಷಿಕೋತ್ಸವ ಮತ್ತು ಬೆಸೆಂಟ್ ಮಾತೆಯ ದಿನಾಚರಣೆಯು ತಾ. 1ರಲ್ಲಿ ಜಿಲ್ಲಾ ಜಡ್ಜರಾದ ಶ್ರೀ ಕಂದನರಸಿಂಹ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಜರಗಿತು. ಡಾ| ಎಮ್. ಕೇಶವ ಪೈಗಳ ಸ್ವಾಗತ ಭಾಷಣ, ಮುಖ್ಯೋಪಾಧ್ಯಾಯಿನಿ ಶ್ರೀಮತಿ ರಾಧಾಬಾಯಿಯವರ ವರದಿವಾಚನ, ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರ ಭಾಷಣ ಇತ್ಯಾದಿ ಕಾರ್ಯಕ್ರಮಗಳಾದುವು

ಸಂತಾಪ ಸೂಚಕ ಸಭೆ— ಶೃಂಗೇರಿ ಮಠದ ಜಗದ್ಗುರುಗಳಾದ ಶ್ರೀ ಚಂದ್ರಶೇಖರ ಭಾರತಿ ಸ್ವಾಮಿಗಳವರು ಪರಂಧಾಮವನ್ನೈದಿದ ಸಲುವಾಗಿ ಸಂತಾಪ ಸೂಚಿಸಲು ತಾ. 1ರಲ್ಲಿ ಅದ್ವೈತ ಸಮಿತಿಯ ಆಶ್ರಯದಲ್ಲಿ ಕೆನರಾ ಹೈಸ್ಕೂಲಿನ ಭುವನೇಂದ್ರ ಹಾಲಿನಲ್ಲಿ ಜಿಲ್ಲಾ ಜಡ್ಜರಾದ ಕಂದನರಸಿಂಹ ಸ್ವಾಮಿ ಚೆಟ್ಟಿಯಾರರ ಅಧ್ಯಕ್ಷತೆಯಲ್ಲಿ ಸಭೆಯೊಂದು ಜರಗಿತು. ಡಾ| ಎಮ್. ಸಿ. ಶಾಸ್ತ್ರಿ, ಡಾ| ಎಮ್. ಎಸ್. ಎ. ಶರ್ಮ, ಮಾರುತಿರಾವ್, ಲಕ್ಷ್ಮೀನಾರಾಯಣ ಐತಾಳ, ಜಿಲ್ಲಾ ಪೋಲೀಸ್ ಸುಪರಿಂಟೆಂಡೆಂಟ್ ಶ್ರೀ ಬಿ ಎ. ಮುತ್ತುಸ್ವಾಮಿ ಅಯ್ಯರ್ ಮೊದಲಾದವರು ಸ್ವಾಮಿಗಳವರ ಗುಣಗಾನ ಮಾಡಿದರು.

ಡಾ| ಕೆ ಆರ್. ಕಿಣಿಯವರ ನಿಧನ— ದ. ಕ. ಜಿಲ್ಲೆಯ ಸುಪ್ರಸಿದ್ಧ ಡಾಕ್ಟರರಾಗಿದ್ದ ಡಾ| ಕೆ. ಆರ್. ಕಿಣಿಯವರು ಕಳೆದ ತಾ. 29ರಂದು ಮಧ್ಯರಾತ್ರಿ ದಾಟಿದ ನಂತರ ಹೃದ್ರೋಗದಿಂದ ಪರಲೋಕವಾಸಿಗಳಾದುದರಿಂದ ಬಹಳ ತುಂಬಾ ವಿಷಾದವೆನಿಸುತ್ತದೆ. 1896ನೆ ಇಸವಿಯಲ್ಲಿ ಜನ್ಮತಾಳಿದ ಇವರು 1920ರಲ್ಲಿ ವೈದ್ಯಕೀಯ ಶಿಕ್ಷಣವನ್ನು ಪೂರ್ಣಗೊಳಿಸಿದರು. ನಂತರ ವೈದ್ಯಕೀಯ ವೃತ್ತಿಗಾರಂಭಿಸಿದರು. ದ. ಕ. ಜಿಲ್ಲಾ ಮೆಡಿಕಲ್ ಎಸೋಸಿಯೇಶನ್ ಸ್ಥಾಪನೆ ಮತ್ತು ಅದನ್ನು ಭಾರತೀಯ ಕೌನ್ಸಿಲಿಗೆ ಸಂಯೋಜನೆಗೊಳಿಸಲು ಡಾ| ಕಿಣಿಯವರೇ ಕಾರಣರು. ಹಲವು ಸಮಾಜ ಸೇವಾ ಕಾರ್ಯಗಳನ್ನು ಮಾಡಿ ಜನಪ್ರೀತಿಯನ್ನು ಗಳಿಸಿದ್ದರು.

ಗೀತೆಯ ಕೈಗನ್ನಡಿ

ಭಗವದ್ಗೀತೆಯ ಸಮೂಲ ಭಾಷಾಂತರ.

ಬೆಲೆ 0-8-0

ಸುಲಭದಲ್ಲಿ ಇಂಗ್ಲಿಷ್

ಆಂಗ್ಲ ಸ್ವಯಂಬೋಧಿನಿ

ಬೆಲೆ: ಸಾದಾಪ್ರತಿ 1—8—0

ನವಯುಗ ಪ್ರೆಸ್, ಉಡುಪಿ.

ಅಧಮಾರು— ಸ್ಥಳೀಯ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ತಾ. 3ರಲ್ಲಿ 'ಶಾರದಾ ಪೂಜಾ' ಸಮಾರಂಭವು ಶ್ರೀ ಶ್ರೀಧರ ಶಾಸ್ತ್ರಿಗಳ ಕೀರ್ತನೆ, ಭಜನೆ ಮೊದಲಾದ ಕಾರ್ಯಕ್ರಮಗಳಿಂದ ಜರಗಿತು.

ಕುಂಬಳೆ— ಸ್ಥಳೀಯ ಪಂಚಾಯತ ಬೋರ್ಡ ಸಭೆಯು ಕಳೆದ ತಾ 29ರಲ್ಲಿ ಶ್ರೀ ಕೆ. ಕಣ್ಣಪ್ಪನವರ ಅಧ್ಯಕ್ಷತೆಯಲ್ಲಿ ಜರಗಿ ಮಲೇರಿಯಾ ನಿವಾರಣೆ ಕೆಲಸ, ಆಸ್ಪತ್ರೆ ತೆರೆಯುವ ಯೋಜನೆ ಇತ್ಯಾದಿ ಕುರಿತು ವಿಚಾರವಿನಿಮಯ ನಡೆಯಿತು.

ಕುಂದಾಪುರ— ಕುಂದಾಪುರ ಮತದಾರ ಕ್ಷೇತ್ರದ ಎಸೆಂಬ್ಲಿ ವೋಟರರ ಆಖೈರು ಪಟ್ಟಿಯು ಕಳೆದ ತಾ 30ರಲ್ಲಿ ಪ್ರಕಟಿಸಲಾಗಿದೆ ಎಂದು ಸಂಬಂಧಪಟ್ಟ ಅಧಿಕಾರಿಗಳು ತಿಳಿಸುತ್ತಾರೆ

ಬೆಳ್ವೆ— ಸ್ಥಳೀಯ ಶಾಲಾ ಭವನದಲ್ಲಿ ಕಳೆದ ತಾ. 28ರಲ್ಲಿ ರಾತ್ರಿ ವಯಸ್ಕರ ಶಾಲಾ ವಿದ್ಯಾರ್ಥಿಗಳ ಮತ್ತು ಊರ ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ 'ಶ್ರೀ ಕೃಷ್ಣ ಸಹಾಯ ಯಾಚನೆ' ಎಂಬ ಯಕ್ಷಗಾನ ಕಥಾಭಾಗವು ಪೂರೈಸಲ್ಪಟ್ಟಿತು

ವಕ್ವಾಡಿ— ಕುಂದಾಪುರ ತಾಲೂಕಿನ ವಕ್ವಾಡಿಯಲ್ಲಿ ಗ್ರಾಮ ಸೇವಾ ಕೇಂದ್ರದ ಕಾರ್ಯಾಲಯದ ಅಡಿಗಲ್ಲು ಇಡುವ ಸಮಾರಂಭವು ಇದೇ ತಾ. 2ರಲ್ಲಿ ಶ್ರೀ ಕೆ. ಎಸ್. ಉರಾಳರ ನೇತೃತ್ವದಲ್ಲಿ ಜರಗಿತು. ಗಾಂಧಿ ಜಯಂತಿ ದಿನವಾದುದರಿಂದ ಸೂತ್ರಯಜ್ಞ ಇತ್ಯಾದಿ ವಿಧಾಯಕ ಕಾರ್ಯಕ್ರಮಗಳಾದುವು

ಬೈಂದೂರು ಸರ್ಕಲಿನಲ್ಲಿ ಕಾಂಗ್ರೆಸ ಪಕ್ಷದ ಜಿಲ್ಲಾ ಬೋರ್ಡ ಚುನಾವಣೆ ಪ್ರಚಾರ ಸಭೆಗಳು— ಕಳೆದ ತಾ. 20ರಲ್ಲಿ **ನಾಗೂರು** ಸಂತೆ ಮಾರ್ಕೆಟಿನಲ್ಲಿ ಶ್ರೀ ಕುಪ್ಪಯ್ಯ ಹೆಬ್ಬಾರರ ಅಧ್ಯಕ್ಷತೆಯಲ್ಲೂ ತಾ. 21ರಲ್ಲಿ **ಉಪ್ಪುಂದ** ಸಂತೆ ಮಾರ್ಕೆಟಿನಲ್ಲಿ ಶ್ರೀ ಸುಬ್ರಾಯ ಕಾಮತರ ಅಧ್ಯಕ್ಷತೆಯಲ್ಲೂ ತಾ. 22ರಲ್ಲಿ **ಗುಡ್ಡೆ ಅಂಗಡಿ** ಸಂತೆ ಮಾರ್ಕೆಟು ವಠಾರದಲ್ಲಿ ಶ್ರೀ ಆಚಾರ್ಯರ ಅಧ್ಯಕ್ಷತೆಯಲ್ಲೂ ತಾ. 24ರಲ್ಲಿ ಬೈಂದೂರು ಸಂತೆ ಮಾರ್ಕೆಟಿನಲ್ಲಿ ಡಿ ಫಾ| ಫರ್ನಾಂಡೀಸರವರ ಅಧ್ಯಕ್ಷತೆಯಲ್ಲೂ ತಾ. 22 ರಲ್ಲಿ **ಕಾಲ್ತೋಡು** ಕೇಂದ್ರದಲ್ಲಿ ಶ್ರೀ ಕೆ. ಗೋವಿಂದ ಸೆಟ್ಟರ ಅಧ್ಯಕ್ಷತೆಯಲ್ಲೂ ಜರಗಿದವು ಶ್ರೀಗಳಾದ ವೈ. ಮಂಜಯ್ಯ ಸೆಟ್ಟಿ, ಎಮ್. ಎಲ್. ಎ, ಎಮ್ ಎಮ್. ಹೆಗ್ಡೆ, ಬಿ ಆರ್. ಕುಂಬಳೆ, ಎನ್. ವಿಶ್ವೇಶ್ವರಯ್ಯ, ಆರ್. ಕೆ. ಸಂಜೀವ ರಾವ್, ಎನ್. ಮಾಧವ ಭಟ್. ಬಿ ಸುಬ್ಬಣ್ಣ ಸೆಟ್ಟಿ, ಕೆ. ಸತೀಶ್ಚಂದ್ರ ರಾವ್ ಮೊದಲಾದವರು ಅಲ್ಲಲ್ಲಿಯ ಸಭೆಗಳ ಪ್ರಮುಖ ಭಾಷಣಗಾರರಿದ್ದರು.

ಮೂಡಬಿದ್ರೆ— ಸಮಾಜ ವಿಕಾಸ ಯೋಜನಾ ವತಿಯಿಂದ ತಾ. 1ರಲ್ಲಿ ಕೃಷಿ ಮತ್ತು ಗುಡಿ ಕೈಗಾರಿಕೆಗಳ ಪ್ರದರ್ಶನವನ್ನು ಜಿಲ್ಲಾ ಕಲೆಕ್ಟರಾ ಶ್ರೀ ವಿ. ಸೀತಾರಾಮ ಸೇರ್ವೆಯವರು ಉದ್ಘಾಟಿಸಿದರು. ಡಾ| ಎಮ್ ವಿ. ಮಲ್ಯರು ಸ್ವಾಗತ ಮಾತುಗಳನ್ನಾಡಿದರು.

ಸ್ಥಳೀಯ ಶ್ರೀ ಸರಸ್ವತೀ ಸೇವಾ ಸಂಘದ ನೇತೃತ್ವದಲ್ಲಿ ಇದೇ ತಾ 1ರಿಂದ 7ರ ತನಕ ದಸರಾ ಸಾಹಿತ್ಯೋತ್ಸವವು ಆಚರಿಸಲ್ಪಟ್ಟಿತು. ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆ, ಸಂಗೀತ ಸ್ಪರ್ಧೆ, ಸಾರ್ವಜನಿಕ ಸಂವಾದ, ಭಾಷಣ, ಯಕ್ಷಗಾನ ಬಯಲಾಟ ಮೊದಲಾದ ಕಾರ್ಯಕ್ರಮಗಳಾದುವು.

ಕುಂಜಾರುಗಿರಿ— ಕಳೆದ ತಾ. 27ರಲ್ಲಿ ಕುಂಜಾರುಗಿರಿ ದೇವಿ ಮಂದಿರದ ವಠಾರದಲ್ಲಿ ಶ್ರೀ ಸಾಣೂರು ಗುತ್ತು ಮುದ್ದಣ್ಣ ಸೆಟ್ಟರ ನಾಯಕತ್ವದಲ್ಲಿ ಏರ್ಪಡಿಸಲಾದ ಸಾರ್ವಜನಿಕ ಸಭೆಯಲ್ಲಿ ಶ್ರೀಗಳಾದ ಕುಕ್ಕಿಲು ಗಣಪಯ್ಯ ಸೆಟ್ಟಿ ಮತ್ತು ಕೆ. ಕೆ. ಸೆಟ್ಟರು ಭಾಷಣ ಮಾಡುತ್ತಾ ಮುಂಬರುವ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳಿಗೇನೇ ಮತದಾನವೀಯಬೇಕೆಂದು ಕೇಳಿಕೊಂಡರು.

ಬೆಳ್ಳೆ— ಕಳೆದ ತಾ. 26ರಲ್ಲಿ ಬೆಳ್ಳೆಯಲ್ಲಿ ಬ್ರಾಂಚ್ ಪೋಸ್ಟಾಫೀಸು ತೆರೆಯುವ ಸಮಾರಂಭವು ಶ್ರೀ ಟಿ. ಎ ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಬಳಿಕ ಚರ್ಚ್ ಶಾಲಾ ವಠಾರದಲ್ಲಿ ಜರಗಿದ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ಸೆಟ್ಟಿ, ಟಿ ಎ. ಪೈ, ಮತ್ತು ಕೆ. ಗಣಪ್ಪಯ್ಯ ಸೆಟ್ಟರು ಕಾಂಗ್ರೆಸು ಪ್ರತಿನಿಧಿಗಳಿಗೇನೇ ಜಿಲ್ಲಾ ಬೋರ್ಡ ಚುನಾವಣೆಯಲ್ಲಿ ಮತದಾರರು ತಮ್ಮ ಮತಗಳನ್ನೀಯಬೇಕೆಂದು ಕೇಳಿಕೊಂಡರು.

ಪೆರಂಪಳ್ಳಿ— ಪೆರಂಪಳ್ಳಿ ಮಾರ್ಗವಾಗಿ ಮಣಿಪಾಲಕ್ಕೆ ಹೋಗುವ ಹೊಸ ರಸ್ತೆಯನ್ನು ಉದ್ಘಾಟಿಸುವ ಸಮಾರಂಭವು ತಾ. 2ರಲ್ಲಿ ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ನೇತೃತ್ವದಲ್ಲಿ ಜರಗಿತು.

ಶ್ರೀ ಶ್ರೀ ಶೃಂಗೇರಿ ಜಗದ್ಗುರುಗಳು ಸಮಾಧಿಸ್ಥರಾದರು.

ಶ್ರೀ ಶ್ರೀ ಶೃಂಗೇರಿ ಜಗದ್ಗುರು ಚಂದ್ರಶೇಖರ ಭಾರತಿ ಸ್ವಾಮಿಗಳವರು ತಾ. 26-9-54ನೇ ಆದಿತ್ಯವಾರ ದಿನ ಬೆಳಿಗ್ಗೆ 5-30ಕ್ಕೆ ನಿತ್ಯದಂತೆ ಸ್ನಾನಕ್ಕಾಗಿ ತುಂಗಾ ನದಿಗೆ ಹೋದವರು ಅಕಸ್ಮಾತ್ ಕಾಲು ಜಾರಿ ಹೊಳೆಯಲ್ಲಿ ಒಂದು ಫರ್ಲಾಂಗು ದೂರ ಬಳಿದುಕೊಂಡು ಹೋದರು. ಅವರನ್ನು ಹಿಂಬಾಲಿಸಿಕೊಂಡು ಹೋಗಿದ್ದ ಸರದಿಯವರಾದ ಮಹಾಬಲಯ್ಯನವರು ಎಷ್ಟೋ ಸಾಹಸಪಟ್ಟರೂ ದಡ ಕಾಣಿಸಲಾಗಲಿಲ್ಲ. ಹೊಳೆಯ ದಡದಲ್ಲಿ ಮುಖಮಾರ್ಜನೆಗಾಗಿ ಬಂದಿದ್ದ ಕೇಶವಾಚಾರ್ ಎಂಬವರ ಸಾಹಸದಿಂದ ಶ್ರೀ ಶ್ರೀಗಳವರನ್ನೂ ಅವರ ಸರದಿಯವರನ್ನೂ ದಡ ಕಾಣಿಸಲ್ಪಟ್ಟಿತು. ಕೂಡಲೇ ಸ್ಥಳಕ್ಕೆ ಸರಕಾರಿ ಆಸ್ಪತ್ರೆ ಡಾ ಗುರುಮೂರ್ತಿ ರಾವ್, ಡಾ| ಎಸ್. ಬಿ. ಎಸ್ ಹೆಗ್ಡೆ, ಡಾ| ಕೆ ಪಿ. ಭಟ್, ಇವರುಗಳು ದಾವಿಸಿ ಮೂರು ಗಂಟೆಗಳ ಕಾಲ ಸಾಧ್ಯವಿದ್ದ ವೈದ್ಯಕೀಯ ಉಪಚಾರಗಳನ್ನು ನಡಿಸಿದಾಗ್ಯೂ ಫಲಕಾರಿಯಾಗಲಿಲ್ಲ. ಮೃತರ ಅಂತ್ಯದರ್ಶನಕ್ಕಾಗಿ ಮೈಸೂರು ಸ್ಟೇಟಿನ ಮೂಲೆ ಮೂಲೆಗಳಿಂದ ಭಕ್ತರು ಧಾವಿಸಿ ಬಂದು ಅಂತ್ಯದರ್ಶನ ಪಡೆದರು. ಪಾಲಕಿ ಮೆರವಣಿಗೆಯಲ್ಲಿ ಊರಿನ ಎಲ್ಲಾ ಬೀದಿಗಳನ್ನು ಸುತ್ತಿಸಿಕೊಂಡು ನರಸಿಂಹ ವನದಲ್ಲಿ ಸಮಾಧಿ ಮಾಡಲಾಯಿತು. ದುಃಖಸೂಚಕವಾಗಿ ಹರತಾಳ ನೇರ್ಪಟ್ಟಿತು.

ಸಂಕ್ಷಿಪ್ತ ಜೀವನ

ಶೃಂಗೇರಿ ಆಸ್ಥಾನ ವಿದ್ವಾಂಸರಾಗಿದ್ದ ಶ್ರೀ ಗೋಪಾಲ ಶಾಸ್ತ್ರಿಗಳು ಹಾಗೂ ಇವರ ಧರ್ಮಪತ್ನಿ ಲಕ್ಷ್ಮಿ ಅಮ್ಮನವರ ಪುತ್ರರೇ ಶ್ರೀ ಜಗದ್ಗುರು ಚಂದ್ರಶೇಖರ ಭಾರತಿಗಳವರು. ಇವರು ನರಸಿಂಹ ಭಾರತಿ ಸ್ವಾಮಿಗಳವರ ಶಿಷ್ಯರು. 1892ನೇ ಇಸವಿ ಅಕ್ಟೋಬರ ತಿಂಗಳ ತಾರೀಕು 16ನೇ ಆದಿತ್ಯವಾರ ಬೆಳಗಿನ ಜಾವದಲ್ಲಿ ಶೃಂಗೇರಿಯಲ್ಲಿ ಜನ್ಮವೆತ್ತಿದರು. ಚಿಕ್ಕಂದಿನಲ್ಲೇ ಅಧ್ಯಾತ್ಮಿಕ ವಿಚಾರದಲ್ಲಿ ಆಸಕ್ತರಾಗಿದ್ದ ಇವರನ್ನು ಕಂಡ ಆಗಿನ ಗುರುಗಳಾದ ನರಸಿಂಹ ಭಾರತಿ ಸ್ವಾಮಿಗಳವರು ಇವರ 12ನೇ ವಯಸ್ಸಿನಲ್ಲೇ ಮಠದ ಸಂಸ್ಕೃತ ಪಾಠಶಾಲೆಗೆ ಸೇರಿಸಿಕೊಂಡು ವಿದ್ಯಾದಾನ ಮಾಡಿದರು. ತದನಂತರ ತನ್ನ ಸಂಚಾರ ಕಾಲದಲ್ಲೂ ಶ್ರೀಗಳನ್ನು ಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಗೆ ಕರಕೊಂಡು ಹೋದರು ಹಾಗೂ ಹೆಚ್ಚಿನ ವಿದ್ಯಾಭ್ಯಾಸಗಳನ್ನು ಬೆಂಗಳೂರಿನ ಶಂಕರ ಮಠದಲ್ಲಿ ಕೊಡಿಸಿದರು. ಶ್ರೀ ಚಂದ್ರಶೇಖರ ಭಾರತಿಗಳವರ ಆಗಿನ ತರ್ಕ, ಮೀಮಾಂಸೆ ಪಾಂಡಿತ್ಯಗಳನ್ನು ಗುರುತಿಸಿಕೊಂಡ ನರಸಿಂಹ ಭಾರತಿಗಳು ಮುಂದೆ ತನ್ನ ಪೀಠವನ್ನಲಂಕರಿಸಲು ಇವರೇ ಯೋಗ್ಯರೆಂದು ಗುರುತಿಸಿಕೊಂಡರು. ಮುಂದೆ ಶ್ರೀಗಳವರ ಮೃತಿ ನಂತರ, 1912ನೇ ಇಸವಿ ಎಪ್ರಿಲ್ ತಿಂಗಳ 7ನೇ ತಾರೀಕಿನಲ್ಲಿ ಚಂದ್ರಶೇಖರ ಭಾರತಿ ಸ್ವಾಮಿಗಳೆಂಬ ಅಭಿದಾನದಿಂದ ಸನ್ಯಾಸದೀಕ್ಷೆ ಪಡೆದು ಶೃಂಗೇರಿ ಜಗದ್ಗುರು ಪೀಠವನ್ನೇರಿದರು (ನರಸಿಂಹ ಶಾಸ್ತ್ರಿ ಪೂರ್ವಾಶ್ರಮದ ಹೆಸರು) 1915ರ ಹೊತ್ತಿಗೆ ಇವರ ಪೂಜ್ಯ ವಿದ್ಯಾಗುರುಗಳಾದ ಬ್ರಹ್ಮ ವಿರೂಪಾಕ್ಷ ಶಾಸ್ತ್ರಿಗಳವರ ಅನುಗ್ರಹದಿಂದ ವೇದಾಂತ ಅಧ್ಯಯನವನ್ನು ಮುಗಿಸಿದರು. ಇವರ ಕಾಲದಲ್ಲೇ ಅಂದರೆ 1916ನೇ ಇಸವಿಗೆ ಶ್ರೀ ಶಾರದಾಂಬೆಯ ದೇವಸ್ಥಾನದ ಜೀರ್ಣೋದ್ಧಾರ ಕೆಲಸಗಳು ಉಗ್ರನರಸಿಂಹ ಭಾರತಿ ಸ್ವಾಮಿಗಳವರ ದೇವಸ್ಥಾನದ ಕೆಲಸಗಳೂ ಪೂರ್ತಿಗೊಂಡವು. ಶ್ರೀ ಶ್ರೀಗಳವರ ಸಂಕಲ್ಪದ ಮೇರೆಗೆ ಮೈಸೂರು ಮಹಾರಾಜರಾದ ಶ್ರೀ ಮುಮ್ಮಡಿ ಕೃಷ್ಣರಾಜ ಪ್ರಭುಗಳವರು ತಮ್ಮ ಪರಿವಾರದೊಡನೆ ಶಾ. ಶಕ. ೧೮೪೯ರಲ್ಲಿ ದಯಮಾಡಿಸಿ ಶಾರದಾಂಬಾ ದೇವಾಲಯದ ಕೆಲಸ ಕಾರ್ಯಗಳ ಉದ್ಘಾಟನೆಗಳನ್ನೂ ಜರಗಿಸಿದರು.

ಶ್ರೀ ಶ್ರೀಗಳವರ ಅದ್ಭುತ ಪವಾಡಗಳೆಷ್ಟೋ ಹೇಳಲಸಾಧ್ಯ. ಮಲೆನಾಡಿನ ಒಂದು ಮೂಲೆಯೂ, ಮೈಸೂರು ಸ್ಟೇಟಿನ ಕೊನೆಯೂ ಆದ ಶೃಂಗೇರಿಯು, ಹಿಂದೂ ದೇಶದ ವಿವಿಧ ಜನಾಂಗದವರಿಂದ, ಹಾಗೂ ರಾಜಕೀಯ, ಧಾರ್ಮಿಕ, ವ್ಯಕ್ತಿಗಳನ್ನು ಸೆಳೆಯುವ ಪುಣ್ಯ ಕ್ಷೇತ್ರವಾಗಿತ್ತು. ಇತ್ತೀಚೆಗೆ, ರಾಷ್ಟ್ರಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರೂ, ಉಪ ರಾಷ್ಟ್ರಪತಿ, ರಾಧಾಕೃಷ್ಣನ್ನರೂ, ಇನ್ನು ಅನೇಕ ಮಂತ್ರಿ ವರ್ಗಗಳನ್ನೂ ರಾಜಕೀಯ ಹಾಗೂ ಧಾರ್ಮಿಕ ಮುತ್ಸದ್ದಿಗಳನ್ನೂ ಸೆಳೆಯುತ್ತಿದ್ದ ಆಕರ್ಷಕ ಶಕ್ತಿಯೊಂದು ಇಂದಿಗೆ ಕಣ್ಮರೆಯಾಯಿತು.

—"ಶ್ರೀಂಗೇರಿ ನಿವಾಸಿ"

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ

ಮಗ್ಗಿ ಪುಸ್ತಕಗಳು

ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

100 ಯಾ 50ಕ್ಕೆ ಅತೀ ರಿಯಾಯತಿ ಇದೆ.

ಕೋರ್ಟ ಮತ್ತು ಸೊಸೈಟೀ ಫೋರ್ಮುಗಳೂ ದೊರೆಯುತ್ತವೆ.

ಡಿ. ಕೆ. ಭಾರದ್ವಾಜ

ಇಂಗ್ಲಿಷ್ × ಇಂಗ್ಲಿಷ್

ಕನ್ನಡ ಡಿಕ್ಸನರಿ

ಬೆಲೆ. ರೂ. 5—6—0

ನವಯುಗ ಪ್ರೆಸ್ ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ—

ಫರೀಬ್ ಶಾಕುಂತಲಾ, ಕಿಶೋರ್, ಲಲಿತಾ ಪವಾರ್.

ಸಂಗೀತ:— ಅನಿಲ್ ಬಿಶ್ವಾಸ್

ಬರುವ ಚಿತ್ರ:— ಜೆಮಿನಿಯವರ

ಮೂವರು ತನಯರು (ತಮಿಳು)

ಕನ್ನಾಂಬ, ಎಂ. ಕೆ. ರಾಧ, ನಾಗೇಂದ್ರ ರಾವ್, ಸೂರ್ಯಪ್ರಭಾ, ಸುಂದರಿ ಬಾಯಿ, ಕುಮಾರಿ ವನಜಾ ಮೊದಲಾದವರು

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಶಾಖೆ: (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕಾಂಗ್ರೆಸ್ ಪಕ್ಷವೂ, ಜಿಲ್ಲಾ ಬೋರ್ಡು ಚುನಾವಣೆಯೂ

ಮತದಾರರಲ್ಲಿ ವಿನಂತಿ

ಕಾಂಗ್ರೆಸು ಜನತಾಸೇವೆಯನ್ನು ಸಾಧ್ಯವಿದ್ದ ಯಾವತ್ತೂ ಕ್ಷೇತ್ರಗಳಲ್ಲಿಯೂ ಪ್ರವೇಶಿಸಿ ಮಾಡಬೇಕೆಂಬ ಘನವಾದ ಉದ್ದೇಶವನ್ನು ಮುಂದಿಟ್ಟುಕೊಂಡು ಇಂದು ಜಿಲ್ಲಾ ಬೋರ್ಡು ಚುನಾವಣಾರಂಗಕ್ಕಿಳಿದಿದೆ. ಆದರಲ್ಲೂ ದೀರ್ಘಕಾಲದಿಂದ ದೇಶದ ಹಾಗೂ ಜನತಾಸೇವೆಯನ್ನು ಮಾಡಿಕೊಂಡು ಬಂದು, ಸ್ವಾತಂತ್ರ್ಯವನ್ನು ಗಳಿಸಿ, ಕೇಂದ್ರ ಮತ್ತು ಪ್ರಾಂತ್ಯಗಳ ಸರಕಾರವನ್ನು ನಡೆಸಿಕೊಂಡು ಬಂದು, ದೇಶದ ಅಭಿವೃದ್ಧಿಗೆ ಬೇಕಾದ ಅನೇಕ ಘನವಾದ ಕಾರ್ಯಗಳನ್ನು ಸ್ವಾತಂತ್ರ್ಯ ದೊರಕಿದ ಅಲ್ಪ ಸಮಯದಲ್ಲೇ ಮಾಡಿ, ನಿಯಂತ್ರಣಗಳ ಹಾವಳಿಯಿಂದ ಜನತೆಯನ್ನು ನೀಗಿಸಿ, ಅನ್ನ ಬಟ್ಟೆಯ ದುಸ್ಥಿತಿಯನ್ನು ಬಹುವಾಗಿ ನಿವಾರಿಸಿ, ಜನಜೀವನವು ಸುಗಮವಾಗುವಂತೆ ಎಡೆಬಿಡದೆ ಹೋರಾಡುತ್ತಿರುವ ಕಾಂಗ್ರೆಸ್ಸಿಗೆ ಜನತೆಯು ಮೇಲಿನ ತನ್ನ ಜವಾಬ್ದಾರಿಯನ್ನು ಮರೆತು, ಚುನಾವಣಾರಂಗದಿಂದ ದೂರನಿಂತು, ವಿರೋಧಪಕ್ಷಗಳಿಗೆ ಎಡೆಕೊಡಲು ಸಾಧ್ಯವೇ? ಕೇಂದ್ರ ಸರಕಾರವು ಪ್ರಥಮ ಪಂಚವಾರ್ಷಿಕ ಯೋಜನೆಯ ಪ್ರಕಾರ ಅನೇಕ ಕೆಲಸಗಳನ್ನು ಮಾಡಿದ್ದು, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಕಾರ ಅನೇಕ ಕೆಲಸಗಳನ್ನು ಮಾಡಲಿರುವಾಗ, ಈ ಪಂಚವಾರ್ಷಿಕ ಯೋಜನೆಗೆ ವಿರೋಧತ್ವವನ್ನು ತೋರಿಸುತ್ತಿರುವ ಪಕ್ಷಗಳಿಗೆ ಸ್ಥಳೀಯ ಸಂಸ್ಥೆಗಳಿಗೆ ಅವಕಾಶ ಕೊಟ್ಟಲ್ಲಿ, ಪಂಚವಾರ್ಷಿಕ ಯೋಜನೆಯು ಸರಾಗವಾಗಿ ನಡೆದೀತೇ?

ಇಷ್ಟರಲ್ಲೇ ಮದ್ರಾಸ್ ಪ್ರಾಂತದ ಮಧುರೆ, ರಾಮ್ನಾಡ್ ಮತ್ತು ತಿರುನೆಲ್‌ವೆಲ್ಲಿ ಜಿಲ್ಲೆಗಳಲ್ಲಿ ನಡೆದ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ದೊರೆತ ಪ್ರಚಂಡ ವಿಜಯವೂ ವಿರೋಧ ಪಕ್ಷಗಳಿಗೆ ದೊರೆತ ಅದ್ಭುತ ಪರಾಜಯವೂ, ಕಾಂಗ್ರೆಸು ಜಿಲ್ಲಾ ಬೋರ್ಡಿನ ಅಧಿಕಾರವನ್ನು ವಹಿಸುವ ಆವಶ್ಯಕತೆಯನ್ನು ವ್ಯಕ್ತಗೊಳಿಸುವದಲ್ಲದೆ ವಿರೋಧಪಕ್ಷಗಳ ಪ್ರಚಾರಕ್ಕೆ ಜನತೆಯು ಮರುಳಾಗುವುದಿಲ್ಲವೆಂಬುದನ್ನೂ ಕಾಂಗ್ರೆಸ್ ಸರಕಾರವು ಎಡೆಬಿಡದೆ ಜನತೆಯ ಕ್ಷೇಮಕ್ಕಾಗಿ ಮಾಡುತ್ತಿರುವ ಕೆಲಸದೆಡೆಗೆ ಸಂಪೂರ್ಣ ಮನವೊಲಿದು ಎಚ್ಚತ್ತಿರುವುದೆಂಬುದನ್ನೂ ಪ್ರತ್ಯೇಕ ಹೇಳಬೇಕಾಗಿಲ್ಲ. ಕಳೆದಬಾರಿ ಜಿಲ್ಲಾ ಬೋರ್ಡಿನ ಆಡಳಿತೆಯನ್ನು ಕಾಂಗ್ರೆಸ್ ಪಕ್ಷವು ವಹಿಸುತ್ತಾ, ಬೋರ್ಡಿನ ಮುಖ್ಯ ಕಾರ್ಯಕ್ಷೇತ್ರವಾದ ವಿದ್ಯಾರಂಗದಲ್ಲಿ ಮಾಡಿದ ಪ್ರಚಂಡ ಕೆಲಸವು ಯಾವ ಕಾಲಕ್ಕೂ ಹೆಮ್ಮೆಯಾಗಿದೆ. ಆ ಮುಂಚೆ ಬರಿಯ ತಾಲೂಕು ಕೇಂದ್ರಗಳಲ್ಲಿ ಆರು ಹೈಸ್ಕೂಲುಗಳಿದ್ದ ಈ ಜಿಲ್ಲೆಯಲ್ಲಿ ಏಳು ಹೈಸ್ಕೂಲುಗಳನ್ನು ಹಳ್ಳಿಯ ಸೌಕರ್ಯಕ್ಕಾಗಿ ಸುಳ್ಯ, ಬೆಳ್ಳಾರೆ, ಹಿರಿಯಡ್ಕ, ಪಂಜ, ಕೋಟೆ, ಆದಮಾರು, ಹೆಜಮಾಡಿ ಈ ಸ್ಥಳಗಳಲ್ಲಿ ತೆರೆದು ಹೈಸ್ಕೂಲು ವಿದ್ಯಾಭ್ಯಾಸದ ಅನುಕೂಲತೆಯನ್ನು ನಮ್ಮ ಹಳ್ಳಿಯ ಜನತೆಗೆ ಒದಗಿಸಿ ಕೊಟ್ಟದ್ದಲ್ಲದೆ, ಅನೇಕ ಪ್ರಾಥಮಿಕ ಶಾಲೆಗಳನ್ನು ಹೊಸತಾಗಿಯೂ ಇನ್ನೂ ಅನೇಕ ಶಾಲೆಗಳನ್ನು ಹಾಯರ್ ಎಲಿಮೆಂಟರಿ ಶಾಲೆಯಾಗಿ ಏರಿಸಿದ್ದೂ ಪ್ರಶಂಸನೀಯವಾಗಿದೆ.

ಬೋರ್ಡಿನ ಆರ್ಥಿಕ ಪರಿಸ್ಥಿತಿಯು ಹೀನಾವಸ್ಥೆಯಲ್ಲಿದ್ದರೂ ಪ್ರಾಂತ್ಯ ಸರಕಾರದೊಡನೆ ಚಲಹಿಡಿದು ಅದರ ಸಹಾಯವನ್ನು ಪಡೆದು ಔಷಧಾಲಯಗಳಿಲ್ಲದ ಮೂಡುಪ್ರಾಂತ್ಯದಲ್ಲಿ ಆದಷ್ಟು ಪುಟ್ಟಗೆ ಔಷಧಾಲಯಗಳನ್ನೂ, ರಸ್ತೆಗಳಿಲ್ಲದ ಹಳ್ಳಿಹಳ್ಳಿಗಳಲ್ಲಿ ರಸ್ತೆಗಳನ್ನೂ, ಚಿಕ್ಕಪುಟ್ಟ ಮೋರಿ ಸಂಕಗಳನ್ನೂ ಮಾಡಿದ ವಿಷಯವು ಜನತೆಗೆ ತಿಳಿದೇ ಇದೆ. ವಿದ್ಯಾಪ್ರಸಾರಕ್ಕಾಗಿ ಕಳೆದ ಬೋರ್ಡಿನ ಕೆಲಸವು ಪ್ರಶಂಸನೀಯವಿದ್ದು ಆ ಕಾರಣದಿಂದ ಈಗಾಗಲೇ ನಮ್ಮ ಜಿಲ್ಲೆಗೆ ಇನ್ನೂ ಹೆಚ್ಚಿನ ವಿದ್ಯಾಪ್ರಸಾರಕ್ಕಾಗಿ ಕಾಂಗ್ರೆಸ್ ಸರಕಾರವು 78 ಏಕಮಾತ್ರ ಉಪಾಧ್ಯಾಯರುಗಳ ಶಾಲೆಗಳನ್ನು ಕೊಟ್ಟಿರುತ್ತದೆ.

ಈ ಸಂದರ್ಭದಲ್ಲಿ ಜನತೆಯು ಇಷ್ಟರಲ್ಲೇ ನಮ್ಮ ಜಿಲ್ಲೆಗೆ ಕಾಂಗ್ರೆಸ್ ಸರಕಾರದಿಂದ ಆದ ಮಹತ್ವದ ಕೆಲಸಗಳಾವುವೆಂಬುದನ್ನು ಜ್ಞಾಪಕಕ್ಕೆ ತಂದುಕೊಂಡರೆ, ಜಿಲ್ಲಾ ಬೋರ್ಡಿನಲ್ಲೂ ಕಾಂಗ್ರೆಸು ಪಕ್ಷವು ಏತಕ್ಕೆ ಆಡಳಿತೆಗೆ ಬರಬೇಕು ಎಂಬುದರ ಆವಶ್ಯಕತೆಯು ಮತ್ತಷ್ಟು ಮಂದಟ್ಟಾಗುವುದು. ಈಗಾಗಲೇ ಆದ ಕಿರೂರು, ಕಂಬ್ಳಬೆಟ್ಟು, ಕಲ್ಲಕಟ್ಟ, ಯೆಕ್ಕಾರು, ಮುತ್ತಿಗೆ ಮತ್ತು ತೆಕ್ಕಿಲ್ ಸಂಕಗಳ ಪ್ರಯೋಜನಗಳೂ, ಈಗಾಗಲೇ ಕೈಕೊಳ್ಳಲಿಕ್ಕಿರುವ ಪಾಣೆಮಂಗಳೂರು, ಮೂಲ್ಕಿ, ಉದ್ಯಾವರ, ಅರುವಾಸೆ ಕರಿಯ ಈ ನದಿಗಳಿಗೆ ಸಂಕಗಳ ವರ್ತಮಾನವು ದಕ್ಷಿಣ ಕನ್ನಡದ ಜನತೆಯನ್ನು ಸಂತೋಷಗೊಳಿಸಿದೆ. ಉಪ್ಪಿಯಿಂದ ಕಾರ್ಕಳಕ್ಕಾಗಿ ಮಂಗಳೂರು, ಮಂಗಳೂರಿನಿಂದ ಬಂಟ್ವಾಳಕ್ಕಾಗಿ ಪುತ್ತೂರು, ಸಂಪಾಜೆಯ ವರೆಗೆ, ಹಾಗೆಯೇ ಮಂಗಳೂರಿನಿಂದ ಕೊಪ್ಪೂರು ಇತ್ಯಾದಿ ಸ್ಥಳಗಳ ರಸ್ತೆಗೆ ಅತೀ ಶೀಘ್ರದಲ್ಲಿ ಡಾಮರು, ಸಿರಿಯಾ ಅಣೆಕಟ್ಟು ಮತ್ತು ಇತರ ನೀರಾವರಿ ಯೋಜನೆಗಳು, ಜೋಗ್ ಇಲೆಕ್ಟ್ರಿಸಿಟಿ, ಹಾಸನ್ ಮಂಗಳೂರು ರೈಲ್ವೆ ಜೋಡಣೆಯ ನಿಶ್ಚಯ, ಮಂಗಳೂರು ಸದಾಕಾಲ ತೆರೆದಿರುವ ಬಂದರಾಗುವಿಕೆ, ಬಜ್ಪೆಯಲ್ಲಿ ವಿಮಾನ ನಿಲ್ದಾಣ, ಮೂಡುಶೆಡ್ಡೆಯಲ್ಲಿ ಕ್ಷಯ ರೋಗಿಗಳ ಆಸ್ಪತ್ರೆ, ಮಂಗಳೂರು ಆಸ್ಪತ್ರೆಯ ಪ್ರಚಂಡ ವಿಸ್ತರಣೆ, ನಮ್ಮ ಜಿಲ್ಲೆಗೆ ಇನ್ನೊಂದು ಬಿ. ಟಿ. ಕಾಲೇಜು, ಗವರ್ನ್‌ಮೆಂಟ್ ಕಾಲೇಜನ್ನು ಬಿ. ಎ., ಬಿ. ಎಸ್‌ಸಿ. ವರ್ಗಗಳಿಗೆ ಏರಿಸುವಿಕೆ, ಇತರ ಕಾಲೇಜುಗಳನ್ನು ಜಿಲ್ಲೆಯಲ್ಲಿ ಮಾಡುವಿಕೆ, ಮಣಿಪಾಲದಲ್ಲಿ ಮೆಡಿಕಲ್ ಕಾಲೇಜಿಗೆ ಆಸ್ಪದ, ಕೈಲಾಸದ ಜಾನುವಾರು ಫಾರ್ಮು, ಮಂಗಳೂರಿನ ಪೋಲಿಟೆಕ್ನಿಕ್ ಶಾಲೆ, ಮೀನುವ್ಯಾಪಾರಿಗಳ ಮೇಲಣ ಸೇಲ್ಸ್‌ಟೇಕ್ಸ್ ತೆಗೆಯೋಣ, ಮೀನು ಹಾಳಾಗದಂತೆ (cold storage) ಅನುಕೂಲತೆ, ಆಹಾರ ನಿಯಂತ್ರಣಗಳ ತೆಗೆಯುವಿಕೆ, ಅನ್ನ—ಬಟ್ಟೆಯ ಪ್ರಶ್ನೆಗಳನ್ನು ಸುಲಭಪಡಿಸಿದ ವಿಷಯ, ಮೂಲ್ಕಿಯಲ್ಲಿ ಹೊಸ ವಿದ್ಯಾಯೋಜನೆಯ ದೃಷ್ಟಿಯಿಂದ ಸರಕಾರಿಯ ಮಾದರಿ ಶಾಲೆ, ಕಾಸರಗೋಡಿನಲ್ಲಿ ಕುರುಡ ಬಾಲಕರಿಗಾಗಿ ಶಾಲೆ, ಮಾಯರ್ಪಾಡಿ, ಉಜ್ರೆ, ಮಂಗಳೂರುಗಳಲ್ಲಿ ಬುನಾದಿ ಶಿಕ್ಷಣ, ಉಡುಪಿಯಲ್ಲಿ ಸೆಕೆಂಡರಿ ಟ್ರೈನಿಂಗ್ ಸ್ಕೂಲು, ಕಮ್ಯೂನಿಟಿ ಪ್ರೊಜೆಕ್ಟ್ ಮತ್ತು ಗ್ರಾಮಾಭಿವೃದ್ಧಿ ಯೋಜನೆಗಳ ಮೂಲಕ ಗ್ರಾಮಸ್ಥ ಜನರ ಬಗ್ಗೆ ನಡೆದ ಸೇವೆ ಹಾಗೂ ಜಿಲ್ಲೆಯ ಮೂರು ಪ್ರದೇಶಗಳಲ್ಲಿಯ ಮಲೇರಿಯಾ ನಿವಾರಣೆಯ ಯಶಸ್ವೀ ಕಾರ್ಯಕ್ರಮ, ಅದಲ್ಲದೆ ಹಳೇ ಗೇಣಿಬಾಕಿ ಮತ್ತು ಒಕ್ಕಲೆಬ್ಬಿಸದಂತೆ ತಡೆಮಸೂದೆ ಇತ್ಯಾದಿ ಇಷ್ಟರಲ್ಲೇ ಆಗಿ ದಕ್ಷಿಣ ಕನ್ನಡದ ಜನತೆಯ ಮನಸ್ಸನ್ನು ಸೂರೆಗೊಳ್ಳುತ್ತಿರುವ ಸಮಯ, ವಿವೇಕಿಗಳೆಂದೆಣಿಸಿಕೊಂಡ ಜನತೆಯು ಈ ಚುನಾವಣೆಯಲ್ಲಿ ವಿರೋಧ ಪಕ್ಷಗಳ ಪ್ರಚಾರಕ್ಕೆ ಬಲಿಬಿದ್ದು ಕಾಂಗ್ರೆಸಿನ ಮೇಲಿನ ಪ್ರೇಮವನ್ನು ಯಾವುದೇ ಕಾರಣದಿಂದಲಾದರೂ ಎಷ್ಟಕ್ಕೂ ಕಮ್ಮಿ ಮಾಡಲಾರರು. ಜಿಲ್ಲೆಯ ಎಲ್ಲಾ ಕಡೆಗಳಲ್ಲೂ ಕಾಂಗ್ರೆಸ್ ಪ್ರಚಂಡ ಬಹುಮತವನ್ನು ಪಡೆದು ಗೆದ್ದು ಬರುವಂತೆ ಮಾಡಬೇಕಾಗಿ ಕೋರಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಸ್ಪರ್ಧಿಸಲು ಆರಿಸಲ್ಪಟ್ಟ ಕಾಂಗ್ರೆಸ್ ಉಮೇದ್ವಾರರು

ಬೈಂದೂರು ಸರ್ಕಲ್—ಶ್ರೀ ಆರ್. ಕೆ. ಸಂಜೀವರಾವ್.

ವಂಡ್ಸೆ—ಶ್ರೀ ವೈ. ತೇಜಪ್ಪ ಶೆಟ್ಟಿ, ಎಡ್ವೊಕೇಟ್.

ಕುಂದಾಪುರ—1. ಶ್ರೀ ಎಚ್. ಎಸ್. ಪರಮೇಶ್ವರಯ್ಯ, ಎಡ್ವೊಕೇಟ್. 2. ಶ್ರೀಮತಿ ಉಮಾ ವಿ. ಕಾಮತ್.

ಬಸ್ರೂರು—ಶ್ರೀ ಎಂ. ಎಂ. ಹೆಗ್ಡೆ, ಎಡ್ವೊಕೇಟ್ (ಅವಿರೋಧ).

ಕೋಟ—ಶ್ರೀ ಬಿ. ಮಂಜಯ್ಯ ಹೆಗ್ಡೆ, ಎಡ್ವೊಕೇಟ್.

ಬ್ರಹ್ಮಾವರ—1. ಶ್ರೀ ಆಲಂಗಾರು ನಾರಾಯಣ ಹೆಗ್ಡೆ, 2. ಶ್ರೀಮತಿ ಬ್ಲಾಂಚ್ ಎಸ್. ಪಿಂಟೊ

ಕೊಡವೂರು—ಶ್ರೀ ಫೆಲಿಕ್ಸ್ ಡಿ'ಸೋಜ.

ಹಿರಿಯಡ್ಕ—ಡಾ| ಕೆ. ಕೆ. ಹೆಗ್ಡೆ.

ಕಟಪಾಡಿ—ಶ್ರೀ ಕೆ. ಕೆ. ಶೆಟ್ಟಿ.

ಅಜೆಕಾರು—ಡಾ| ಯು. ಕೃಷ್ಣ.

ಕಾರ್ಕಳ—ಶ್ರೀ ಬಿ. ಎಸ್. ಭಾಸ್ಕರ ಕೈ, ಎಡ್ವೊಕೇಟ್.

ಮೂಡುಬಿದ್ರಿ—1. ಶ್ರೀ ಎಸ್ ಡಿ. ಸಾಮ್ರಾಜ್ಯ. 2. ಶ್ರೀ ಕೆ. ಸಂದರ್ (ಹರಿಜನ).

ವೇಣೂರು—ಶ್ರೀ ಎ ನಾಗರಾಜ ಹೆಗ್ಡೆ.

ಮೂಲ್ಕಿ—1. ಶ್ರೀ ಬಿ. ಆರ್. ಕರ್ಕೇರ, 2. ಶ್ರೀಮತಿ ಮೇಬಲ್ ಪ್ರಿಟೊ.

ಸುರತ್ಕಲ್—ಡಾ| ಎಂ. ಪುರುಷೋತ್ತಮ ಕಾಮತ್.

ಗುರುಪುರ—ಶ್ರೀ ಕೆ. ಪದ್ಮನಾಭ ಆಳ್ವ.

ಮಂಗಳೂರು—ಶ್ರೀ ಎಫ್. ಎಕ್ಸ್. ಡಿ. ಪಿಂಟೊ.

ಕೋಟೆಕಾರು—ಶ್ರೀ ಯು ವೆಂಕಟಪ್ಪಯ್ಯ ಕಿಣಿ

ಪಾಣೆಮಂಗಳೂರು—ಶ್ರೀ ಎನ್. ಉಪೇಂದ್ರ ನಾಯಕ್.

ಬಂಟ್ವಾಳ—ಶ್ರೀ ಎ. ಲಕ್ಷ್ಮೀನಾರಾಯಣ ಆಳ್ವ.

ಬೆಳ್ತಂಗಡಿ—ಶ್ರೀ ಯು. ಜನಾರ್ಧನ ಪ್ರಭು.

ಕೊಕ್ಕಡ—ಶ್ರೀ ದಂಬೆ ಸುಬ್ರಾಯ.

ಉಪ್ಪಿನಂಗಡಿ—ಶ್ರೀ ಕೆ. ವೇಣು ಗೋಪಾಲ ನಾಯಕ್.



ಜಿಲ್ಲಾ ಬೋರ್ಡು ಚುನಾವಣೆಯಲ್ಲಿ

ಕಾಂಗ್ರೆಸ್ಸಿಗೇ ಮತದಾನ ಮಾಡಿರಿ.

ವಿಟ್ಲ—ಶ್ರೀ ಎ, ಭೀಮ ಭಟ್, ಎಡ್ವೊಕೇಟ್.

ಪುತ್ತೂರು—1. ಶ್ರೀ ವೈ. ಸಂಜೀವ ಶೆಟ್ಟಿ. 2. ಶ್ರೀಮತಿ ಬಿ. ಕಮಲಾ ಬಾಯಿ, ಚಿದಾನಂದ ರಾವ್.

ಸುಳ್ಯ—ಶ್ರೀ ಎನ್. ಎಂ. ಬಾಲಕೃಷ್ಣ (ಅವಿರೋಧ).

ಮಂಜೇಶ್ವರ—ಶ್ರೀ ಟಿ. ನಾರಾಯಣ ಭಟ್, ಬಿ. ಒ. ಎಲ್.

ಕುಂಬಳೆ—ಶ್ರೀ ಬಂಬ್ರಾಣ ಬಾಲಕೃಷ್ಣ ಅಡ್ಯಂತಾಯ.

ಕಾಸರಗೋಡು—ಶ್ರೀ ಕೆ. ಗಣೇಶರಾವ್, ಪ್ಲೀಡರ್.

ಮುಳಿಯಾರು—ಜನಾಬ್ ಸಿ. ಎಚ್. ಕುಂಞಾಹಿ ಕಲಂದರ್.

ಹೊಸದುರ್ಗ—ಶ್ರೀ ಎಚ್. ಎನ್. ಜಗನ್ನಿವಾಸ.

ತಮ್ಮ ನಿರತ ಸೇವಾಸಕ್ತರಾದ,

ಯು. ಪಿ. ಮಲ್ಯ,
ಅಧ್ಯಕ್ಷ

ಬಿ. ಬಿ. ಶೆಟ್ಟಿ,
ಡಾ. ಯಂ. ಯಸ್. ಹೆಗ್ಡೆ,
ಜತೆ ಕಾರ್ಯದರ್ಶಿಗಳು.
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S 192/1954.

H. ರಾಮ ರಾವ್ — ವಾದಿ.

ಎಮ್. ಸಂಕಪ್ಪ ಶೆಟ್ಟಿ ಕೂಡಾ —ಪ್ರತಿವಾದಿರು.

ಎಮ್. ಸಂಕಪ್ಪ ಶೆಟ್ಟಿ, ಮೊಗರೋಡಿ ತಿಂಮಪ್ಪ ರೈ ಅಳಿಯ—ಪುತ್ತೂರು ತಾಲ್ಲೂಕ ಕಣಿಯೂರು ಗ್ರಾಮದ ಮೊಗರೋಡಿ ಎಂಬಲ್ಲಿ — 1ನೇ ಪ್ರತಿವಾದಿ.

ಪ್ರತಿವಾದಿರಿಂದ ವಾದಿಗೆ ಬರ ದಾವಾ ಮೂಲಗೇಣಿಯ ಗೇಣಿಬಾಕಿ ರೂ. 909—8—0ರ ವಸೂಲಿಗೆ ದಾವಾ ಮಾಡಿ ಅದರ ನೋಟೀಸಿನ ತನಿಖೆ ಮ್ಯಾದೆ ತಾ. 22-10-1954ಕ್ಕೆ ಇಟ್ಟಿರುವದರಿಂದ 1ನೇ ಪ್ರತಿವಾದಿಯು ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಆ ದಿವಸ 11 ಘಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ಸ್ವತಹ ಯಾ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ಆ ದಿನ ಹಾಜರಾಗದಿದ್ದರೆ ಆತನನ್ನು ಶಿವಾಯಿ ಎಂತ ಮಾಡಿ ಮುಂದಿನ ತನಿಖೆಯಿಂದ ತೀರ್ಮಾನಿಸಲಾಗುವದು- ಎಂತ ಈ ಕೋರ್ಟ R. I. A. 1434/1954ನೇ ಅರ್ಜಿಯ ಹುಕುಂ ಮೇರೆಗೆ ಸದ ಈ ನೋಟೀಸು ಮಾಡಿಸಿಯದೆ.

B. Ramachandra Rao,
M. A., B. L.,
Pleader for Plaintiff.

ಪುತ್ತೂರು, ದ. ಕ. ತಾ. 2-10-1954.

(೩ನೇ ಪುಟದಿಂದ)

ಬೇಕಾಗುತ್ತದೆ. ರಾಜಧಾನಿ ರಾಜಭವನಗಳ ಜೊತೆಗೆ ವಿಶಾಖ ಪಟ್ಟಣದಲ್ಲಿ ರಾಜ್ಯದ ಹೈಕೋರ್ಟನ್ನು ಸ್ಥಾಪಿಸುವ ಹಾಗು ತಿರುಪತಿಯಲ್ಲಿ ರಾಯಲ ಸೀಮೆಗಾಗಿ ಶ್ರೀ ವೆಂಕಟೇಶ್ವರ ವಿಶ್ವವಿದ್ಯಾಲಯವನ್ನು ತೆರೆಯುವ ಕೆಲಸಗಳೂ ಚುರುಕಾಗಿ ನೆರವೇರಿದವೆಂದು ಹೇಳಬಹುದು. ಇವೆಲ್ಲ ಶೀಘ್ರವಾಗಿಯೂ ಅಚ್ಚುಕಟ್ಟಾಗಿಯೂ ನಡೆದುದು ದಕ್ಷ ಆಡಳಿತೆಯ ದ್ಯೋತಕವೆಂದರೂ ಸಲ್ಲುತ್ತದೆ.

ಪ್ರಕೃತಿಯು ಕಾಲಕಾಲಕ್ಕೆ ಪರ್ಜನ್ಯ ವೃಷ್ಟಿಯನ್ನು ಮಾಡಿದ್ದರಿಂದ ಆಂಧ್ರದ ರೈತರು ತುಸು ಉಲ್ಲಾಸವನ್ನು ತೋರಿಸುತ್ತಾರೆ. ಪ್ರತಿಯೊಂದು ಜಿಲ್ಲೆಯಲ್ಲಿ ಕೆಲಸ ಮಾಡುತ್ತಿರುವ ಎರಡೆರಡು ಗ್ರಾಮಾಭಿವೃದ್ಧಿ ಕೇಂದ್ರಗಳಿಂದ ಅವರು ಸಾಕಷ್ಟು ಆಕರ್ಷಿಸಲ್ಪಟ್ಟಿದ್ದಾರೆ. ರಾಜಕೀಯ ಪಕ್ಷಗಳ ಪ್ರತಿರೋಧ ಹೆಚ್ಚುತಿದ್ದರೂ ಪ್ರಕಾಶಮರ ಮುಖಂಡತ್ವದಲ್ಲಿ ಆಂಧ್ರರಿಗೆ ಸಾಮಾನ್ಯವಾಗಿ ಪ್ರೀತಿಯೇ ಉಂಟು. ಆದುದರಿಂದ ಅವರ ನಾಯಕತನ ಮುಂದಕ್ಕೂ ಆಂಧ್ರರಿಗೆ ಪ್ರಿಯವಾದೀತು. ಕೇಂದ್ರವೂ ಸಾಕಷ್ಟು ಸೌಹಾರ್ದದಿಂದಲೇ ಈ ರಾಜ್ಯವನ್ನು ನಡೆಸಿಕೊಂಡು ಬಂದಿರುವುದರಿಂದ ಹೆಚ್ಚಿನ ತಾಪತ್ರಯಗಳೇನೂ ಕಾಣಿಸಲಿಕ್ಕಿಲ್ಲ. ಸದ್ಯಕ್ಕೆ ಗೊಂದಲಮಯವಾದ ರಾಜಕೀಯ ವಾತಾವರಣ ನಡುವೆ ನಿರ್ವಹಿಸಿದ ಹೊಣೆಗಾರಿಕೆಯ ಗುರುತ್ವವೇ ಆಂಧ್ರರಾಜ್ಯದ ಅಭಿಮಾನಿಗಳನ್ನು ಸಂತುಷ್ಟರಾಗಿ ಮಾಡೀತಾದರೂ ಮುಂದಕ್ಕೆ ಇದಕ್ಕಿಂತಲೂ ಹೆಚ್ಚಿನ-ವಿಸ್ತೃತ ಅಭಿವೃದ್ಧಿ ಪ್ರಯತ್ನಗಳ—ಕಾರ್ಯಕ್ರಮ ಆಗತ್ಯವೆನಿಸೀತು.

ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ಸದಾ ಸುಮಂಗಲೆ—

ಬರೆದವರು: ಸುಜೀರ್ ಗೋವಿಂದ ನಾಯಕ್. ಪ್ರಕಾಶಕರು: ಕಲಾ ಪ್ರಕಟಣಾಲಯ, ಪಂಪನಕಟ್ಟೆ, ಮಂಗಳೂರು ೧. ಬೆಲೆ: ಹತ್ತಾಣೆ.

ಶ್ರೀಯುತ ಉಲ್ಲೂರು ಉಮೇಶರಾಯರ ಸಂಪಾದಕತ್ವದಲ್ಲಿ ಹೊರಡುವ ಕಲಾ ಸಾಹಿತ್ಯಮಾಲೆಯ ಪ್ರಥಮ ಪುಷ್ಪವೇ ಸದಾ ಸುಮಂಗಲೆ ಮತ್ತು ಇತರ ಕತೆಗಳ ಸಂಗ್ರಹ. ಇಲ್ಲಿ ಆಯ್ದುಕೊಂಡ ಹೆಚ್ಚಿನ ವಸ್ತುಗಳಲ್ಲಿ ವೈವಿಧ್ಯವಿದ್ದಂತೆ ಬರವಣಿಗೆಯಲ್ಲಿ ಹೊಸತನವೂ ಕಾಣಿಸುತ್ತದೆ. ಕತೆಗಳು ಸರಳವಾಗಿದ್ದರೂ ಸದಭಿರುಚಿಯನ್ನು ಪೋಷಿಸುತ್ತವೆ. ಹದಿಮೂರರಲ್ಲಿ ಏಳು ಕತೆಗಳು ಶ್ರಮ ಜೀವಿಗಳ ಕುರಿತು ಶ್ರದ್ಧೆಯನ್ನೂ ಬಡವರ ಹೋರಾಟದ ಕುರಿತು ಸಹಾನುಭೂತಿಯನ್ನೂ ಪ್ರಕಟಿಸುತ್ತವೆ. ವಸ್ತು ಹಾಗು ರಸಸ್ಫೋಟಕತೆಯ ದೃಷ್ಟಿಯಿಂದ "ಸದಾ ಸುಮಂಗಲೆ", "ನಾಗಪುರದ ಹುಡುಗಿ" ಮತ್ತು "ತಾಯಿ ಮಗು" ಒಂದಕ್ಕಿಂತ ಒಂದು ಉತ್ತಮವೆನಿಸುತ್ತವೆ. ಆದರೆ "ಬಂಗಾರ", "ಕಾಳನ ಕೋಳಿ–ಕಾಲೇಜು" ಮತ್ತು "ನವೀನ ಸಾವಿತ್ರಿ" ಎಂಬವು ಕೆಲಮಟ್ಟಿಗೆ ಹಾಸ್ಯವನ್ನು ಸೂಸುತಿದ್ದರೂ ಕತೆಗಾರಿಕೆಯ ಕೌಶಲವನ್ನೇನೂ ತೋರಿಸುವುದಿಲ್ಲ. ಅವನ್ನು ಬಿಡುತಿದ್ದರೆ ಸಂಗ್ರಹಕ್ಕೆ ಹಾನಿಯಾಗುತ್ತಿರಲಿಲ್ಲ.

ಯೋಗ ಲಹರಿ—

ಬರೆದವರು: ಅ. ಗೌ. ಕಿನ್ನಿಗೋಳಿ. ಪ್ರಕಾಶಕರು: ಯುಗಪುರುಷ ಪ್ರಕಟಣಾಲಯ, ಕಿನ್ನಿಗೋಳಿ, ದಕ್ಷಿಣ ಕನ್ನಡ. ಬೆಲೆ: ಒಂದು ರೂಪಾಯಿ.

ತಮ್ಮ "ಕ್ಷಾತ್ರದರ್ಶನ" ಎಂಬ ಹೆಸರಿನ ಮಿಶ್ರಛಂದ ಕಾವ್ಯದಿಂದ ರಸಿಕರ ಹೃದಯವನ್ನು ಸೂರೆಗೊಂಡಿರುವ ಕಿನ್ನಿಗೋಳಿಯವರ "ಮೊದಲ ಭಿಕ್ಷೆ" "ಪುನರ್ಮಿಲನ" ಮತ್ತು "ಚಿತಾಗ್ನಿ" ಎಂಬ ಬೇರೆ ಮೂರು ಖಂಡ ಕಾವ್ಯಗಳು ಮೇಲಿನ ಪುಸ್ತಕದ ರೂಪದಲ್ಲಿ ಪ್ರಕಟಗೊಂಡಿರುತ್ತವೆ. ಕಲ್ಪಕತೆಯ ಹೊಸ ದೃಷ್ಟಿಯೊಂದಿಗೆ ಶೈಲಿಯ ಲಾಲಿತ್ಯವನ್ನೂ ಭಾವನೆಯ ಮಾಧುರ್ಯವನ್ನೂ ಹೊಂದಿದ ಕಿನ್ನಿಗೋಳಿಯವರು ಶಾಂತ, ಕರುಣ ಹಾಗೂ ಶೃಂಗಾರ ರಸಗಳ ಛಟ್ಟೆಯನ್ನೆ ನಮ್ಮ ಮುಂದಿಡುತ್ತಾರೆ. ಬುದ್ಧದೇವನು ಯಶೋಧರೆಯ ಶಯ್ಯಾಗಾರಕ್ಕೆ ಬಂದು ಪರಮ ಶ್ರಮಣ ದೀಕ್ಷೆಯನ್ನು ಆವಳಿಗಿತ್ತು ಪೊರೆದ ಕತೆಯೇ "ಮೊದಲ ಭಿಕ್ಷೆ". ಹದಿನಾಲ್ಕು ವರ್ಷಗಳ ವನವಾಸದ ಬಳಿಕ ಲಕ್ಷ್ಮಣನು ಊರ್ಮಿಳೆಯನ್ನು ಸಂಧಿಸುವುದು "ಪುನರ್ಮಿಲನ"ದ ವಸ್ತು. "ನಿನ್ನ ಸಂಸರ್ಗದೀ ನಿಮಿಷ ಪೂರ್ಣಾಯುಷ್ಯ" ಎಂದನ್ನುತ್ತಾ ಮಾದ್ರಿಯನ್ನು ಕೂಡಿ ಪಾಂಡು ರಾಜನು ಮರಣಗೊಂಡ ಸನ್ನಿವೇಶದ ಚಿತ್ರಣವೇ "ಚಿತಾಗ್ನಿ". ಇವೆಲ್ಲ ಕಾವ್ಯಗಳೂ ಓದುಗರ ಹೃದಯವನ್ನು ಮುಟ್ಟಿ ರಸಸ್ಪಂದನವನ್ನುಂಟು ಮಾಡುತ್ತವೆ. ಹೊಸ ಮಾದರಿಯ ಕತೆಗಾರಿಕೆ, ಉಪಮೆಯೇ ಮುಂತಾದ ಅಲಂಕಾರಗಳ ಹೊಳೆ, ತಡೆಯಿಲ್ಲದೆ ಸಾಗುವ ಕಾವ್ಯ ಪ್ರವಾಹ—ಎಲ್ಲವೂ ಕಿನ್ನಿಗೋಳಿಯವರ ಪ್ರತಿಭೆಗೆ ಸಾಕ್ಷಿ ಹೇಳುತ್ತವೆ.

WANTED immediately for the Hindu HIGH SCHOOL, SHIRVA; S. Kanara, (1) a Science B. T. (2) a Mathematics B. T. Raw Graduates may also apply. Please apply to N. S. KUTHYAR, Correspondent; sending a copy to the D. E. O. S. Kanara, Mangalore.

ಲಘು ಪರಿಚಯ

❀ ಶ್ರೀ ಕುಡ್ಪಿ ವಾಸುದೇವ ಶೆಣೈಯವರು ತಮ್ಮ ಮಂಗಳೂರಿನ ರಥಬೀದಿಯಲ್ಲಿರುವ ಪ್ರಭಾತ ಕಾರ್ಯಾಲಯದಿಂದ ಒಂದಾಣೆ ಮಾಲೆಯನ್ನು ಜೋಡಿಸಿ, ಸುಲಭ ಬೆಲೆಗೆ ಉತ್ತಮ ಸಾಹಿತ್ಯವು ಕನ್ನಡಿಗರಿಗೆ ಸಿಗುವಂತಾಗಬೇಕೆಂದು ಪ್ರಯತ್ನಿಸುತಿದ್ದಾರೆ. ದಿವಂಗತ ಎಂ. ಎನ್. ಕಾಮತರ "ಕೆಪ್ಪಟರಾಯ" ಎಂಬ ಕತೆಯನ್ನು ಮೊದಲ ಕುಸುಮವಾಗಿಯೂ ತಾವೇ ಬರೆದ "ನಾರೀಶ್ವರರು" ಎಂಬ ಏಕಾಂಕ ಪ್ರಹಸನವನ್ನು ಎರಡನೆಯ ಕುಸುಮವಾಗಿಯೂ "ಕಳ್ಳನಿಗೆ ಸಂಭಾವನೆ ಮತ್ತು ಇತರ ಕತೆಗಳು" ಎಂಬುದನ್ನು ಮೂರನೆಯ ಕುಸುಮವಾಗಿಯೂ ಪ್ರಕಟಿಸಿದ್ದಾರೆ. ದಿವಂಗತ ಕಾಮತರ ಕತೆ ಅಷ್ಟು ಚೆನ್ನಾಗಿಲ್ಲ. ಆದರೆ ಕುಡ್ಪಿಯವರ ಪ್ರಹಸನ ನಕ್ಕು ನಗಿಸುತ್ತದೆ. ಸಾನೆ ಗುರೂಜಿ, ಮುಕುಲ ಭಾಯಿ, ಮುಕುಂದ ಭಾಯಿ ಮುಂತಾದವರ ಸಣ್ಣ ಸಣ್ಣ ನೀತಿಕತೆಗಳಿರುವ ಮೂರನೆಯ ಕುಸುಮವು ಮಕ್ಕಳ ಮನಸ್ಸನ್ನು ಮಾತ್ರವಲ್ಲ, ಹಿರಿಯರ ಹೃದಯವನ್ನೂ ತಿದ್ದುವುದಕ್ಕೆ ನೆರವಾದೀತು.

❀ ಮುಂಬಯಿ ರಾಜ್ಯದ ಪ್ರಥಮ ಪಂಚವಾರ್ಷಿಕ ಯೋಜನೆಯಂತೆ ಉತ್ತರ ಕನ್ನಡ (ಕಾರವಾರ) ಜಿಲ್ಲೆಯಲ್ಲಿ ಕೈಗೊಂಡ ಹಾಗು ಕೈಗೊಳ್ಳಲಿರುವ ಕಾರ್ಯಕ್ರಮಗಳ ವಿಸ್ತಾರವಾದ ವಿವರಣೆಯನ್ನೊದಗಿಸುವ ಪುಸ್ತಕವೊಂದನ್ನು ಮುಂಬಯಿ ಸರಕಾರದ ಪ್ರಸಿದ್ಧಿ ಶಾಖೆಯವರು ನಾಲ್ಕಾಣೆ ಬೆಲೆಗೆ ಒದಗಿಸಿದ್ದಾರೆ. ಹದಿನೈದು ಪ್ರಕರಣಗಳಲ್ಲಿ ಜಿಲ್ಲೆಯಲ್ಲಿ ನಡೆಯುತ್ತಿರುವ ನಾನಾ ಮುಖವಾದ ಅಭಿವೃದ್ಧಿ ಪ್ರಯತ್ನಗಳ ಸಮಗ್ರ ಚಿತ್ರವನ್ನು ತಿಳಿಯಾದ ಭಾಷೆಯಲ್ಲಿ ರೇಖಿಸಿರುವರಲ್ಲದೆ ಅಂಕೆ–ಅಂಶಗಳ ಪ್ರಮಾಣವನ್ನೂ ಪೂರೈಸಿದ್ದಾರೆ. ಜನತೆಯ ಸಹಾಯ ಹಾಗು ಸಹಕಾರಗಳು ಯೋಜನೆಯ ಪ್ರಗತಿಗೆ ಎಷ್ಟರ ಮಟ್ಟಿಗೆ ಹೊಣೆಯಾಗಿವೆ ಎಂಬುವನ್ನೂ ಈ ಪ್ರಕಟಣೆಯು ಬಿಂಬಿಸುತ್ತದೆ.

❀ "ಸಾಧುರಿ" ಎಂಬ ಹೆಸರಿನ ಮುಂಬಯಿಯ ಮದರ್ ಇಂಡಿಯಾ ಪ್ರೀನ್ಸೈಟ್ ಹೈಸ್ಕೂಲಿನ ವಿದ್ಯಾರ್ಥಿಗಳ ಪತ್ರಿಕೆಯು ೧೯೫೪ನೇ ವಾರ್ಷಿಕಾಂಕವು ಸುಂದರವಾದ ಹಾಗು ಚುಟುಕಾದ ಕತೆಕವನಗಳಿಂದಲೂ ಲೇಖನಗಳಿಂದಲೂ ಪ್ರಕಟವಾಗಿದೆ. ವಿದ್ಯಾರ್ಥಿಗಳ ಕುಶಲ ಲೇಖನಿಯ ಕೈವಾಡವು ಮುದ್ರಿತ ಪತ್ರಿಕೆಯ ರೂಪದಲ್ಲಿ ಪ್ರಕಟಗೊಂಡು, ಕನ್ನಡಿಗರ ಕಣ್ಣಿಗೆ ಬೀಳುವಂತಾದದ್ದು ಅಭಿನಂದನೀಯ.

--- ---

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

In the Court of the District Munsif of Kundapur.

O. P No. 44/1954.

Petitioner: Lalithamma, widow of Shama Bhatta, residing at Airody village, Udipi Taluk.

To all persons concerned:

Please take notice that the petitioner has applied for the issue of a succession certificate for collecting the amounts due and for redeeming the jewels pledged by her husband late Shama Bhatta. The said petition stand posted to 14—10—1954 before the above court. Any person objecting to the issue of a succession certificate in favour of the the petitioner shall appear before the said court at 11 A M. on the said date either in person or through a duly instructed pleader. Failing which a succession certificate will be issued in favour of the petitioner.

By Order of the court.

Sd K. Ramappaya,
B A., B. L.,
Advocate for petitioner.

Coondapur, 21-9-1954.

ಯಂ. ಗಣಪ್ಪಯ್ಯ ಎಂಡ್ ಸನ್ಸ್
ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಠೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3–8–0.

ಗರ್ಭ ರಕ್ಷಕ– ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈ ಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3–8–0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಅಪೂರ್ವ] ಗೀತಾ ಭಾಷ್ಯ, ಗೀತಾ ತಾತ್ಪರ್ಯ ಸಹಿತ [ಗ್ರಂಥ

ಶ್ರೀಮದ್ಭಗವದ್ಗೀತೆಯ ಕನ್ನಡ ಅನುವಾದ

ಭಾಗಗಳು ೧–೨–೩. ಬೆಲೆ ರೂ. ೧೫ ಅಂಚೆ ವೆಚ್ಚ ರೂ ೨–೮–೦ ಪ್ರತ್ಯೇಕ.

ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನೆಲ್ಲ ಕನ್ನಡದಲ್ಲಿ ಅನುವಾದ ಮಾಡಿ ಪ್ರಸಿದ್ಧಪಡಿಸುತ್ತಿರುವ ಉಡುಪಿಯ ಶ್ರೀ ಮಧ್ವಮುನಿ ಸೇವಾ ಸಂಘದವರು ಪ್ರಕಟಿಸಿದ ೩ನೇ ಗ್ರಂಥವಿದು. ಶೀರೂರು ಮಠದ ಶ್ರೀ ಮಲ್ಲಿಕ್ಷೇಂದ್ರತೀರ್ಥರವರ ಕನ್ನಡ ಮತ್ತು ಡಾ. ಬಿ. ಎನ್. ಕೃಷ್ಣಮೂರ್ತಿ ಶರ್ಮಾ ಎಂ ಎ. ಪಿ. ಎಚ್. ಡಿ. ಇವರ ಇಂಗ್ಲಿಷ ಪ್ರಸ್ತಾವನೆ ಮತ್ತು ಶ್ರೀ ನಾರಾಯಣ ತಂತ್ರಿಯವರ ಕನ್ನಡ ಅನುವಾದ. ಸಂಗ್ರಾಹ್ಯ ಗ್ರಂಥ. ರೂ. 17—8—0 ಕಳಿಸಿ ಕೂಡಲೇ ತರಿಸಿಕೊಳ್ಳಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟಿನ ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. P. DEVEE, F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)
CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಬದುಕಿನ ಬಂಗಾರ

(ಬರೆದವರು: ಕುಮಾರಸ್ವಾಮಿ)

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

***

ಜೀವನದ ಪ್ರಸಂಗಾನುಭವಗಳನ್ನು ನೀತಿ ಮತ್ತು ಸಿದ್ಧಾಂತದ ಒರೆಗಲ್ಲಿಗೆ ಹಚ್ಚಿಕೊಂಡು ಜೀವನದರ್ಶನವನ್ನು ಮಾಡಿಕೊಂಡ ಸನ್ನಿವೇಶಗಳ ಚಿತ್ರಣವೇ ಈ ಪುಸ್ತಕ. —ಪ್ರಜಾಮತ.

ಈ ಬರಹಗಳ ಒಳಗೆ ಅಡಗಿರುವ ತತ್ವ ಗಂಭೀರವಾದುದು; ಆದರೆ ಅದನ್ನು ವಿವರಿಸಿದ ರೀತಿ ಆಕರ್ಷಕವಾಗಿದೆ; ಮನೋರಂಜಕವಾಗಿದೆ. ಪ್ರತಿಯೊಂದು ಬರಹದ ಆರಂಭದಲ್ಲಿ ಅದರ ತಿರುಳನ್ನು ಸಂಕೇತಿಸುವ ಪುಟ್ಟ ಕಥೆ, ಸುಲಲಿತವಾದ ಶೈಲಿ, ಮನಸ್ಸನ್ನು ಸೆರೆಹಿಡಿಯುವ ನಿರೂಪಣೆಗಳಿಂದಾಗಿ ಈ ಕೃತಿ ಎಲ್ಲ ಬಗೆಯ ಓದುಗರಿಂದಲೂ ಮನ್ನಣೆ ಪಡೆಯುವುದರಲ್ಲಿ ಸಂದೇಹವಿಲ್ಲ. —ರಾಷ್ಟ್ರಮತ.

ಇದು ಕನ್ನಡ ಸಾರಸ್ವತ ಲೋಕಕ್ಕೆ ಬಹು ಅಮೂಲ್ಯವಾದ ಕಾಣಿಕೆ. ಕನ್ನಡ ಜನತೆ, ಅದರಲ್ಲೂ ವಿದ್ಯಾರ್ಥಿವೃಂದ ಇಂಥ ಪುಸ್ತಕ ಪಡೆಯಲು ಪುಣ್ಯ ಮಾಡಿರಬೇಕು. ಹಾಲಿನ ಸಾರವನ್ನೆಲ್ಲ ಭಟ್ಟಿ ಇಳಿಸಿದ ಹಾಲುಕೋವದಂತಿದೆ ಇಲ್ಲಿಯ ವಿಷಯ ಸಂಪತ್ತು. —ಜನಪ್ರಗತಿ.

● ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.

● ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ಕಮಿಶನ್ ದರಕ್ಕೂ ಬರೆಯಿರಿ
1. ನವಯುಗಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಇದೇ ಗಾಂಧೀ ಜಯಂತಿಯ ಶುಭದಿನದಿಂದ ಅಖಿಲ ಭಾರತ ಆಕಾಶವಾಣಿಯವರೂ ಆಕಾಶವಾಣಿಯ ವ್ಯಾಪಾರದಲ್ಲಿ ನಿರತರಾದವರೂ ಸಂಯುಕ್ತ ರೀತಿಯಲ್ಲಿ "ಆಕಾಶವಾಣಿ ಮಾಸ" ವನ್ನು ಆಚರಿಸುತ್ತಿದ್ದಾರೆ ಪ್ರತಿಯೊಂದು ಮನೆಗೂ ಆಕಾಶವಾಣಿಯ ಸಂದೇಶವನ್ನು ಮುಟ್ಟಿಸಬೇಕೆಂಬುದೇ ಈ ಆಂದೋಲನದ ಉದ್ದೇಶ. ಆಧುನಿಕ ಜೀವನದಲ್ಲಿ ಆಕಾಶವಾಣಿ ಯಂತ್ರವು ನಮ್ಮ ಅವಶ್ಯಕ ಸಾಧನವಾಗಿದೆ ಯೆಂದರೆ ತಪ್ಪಾಗದು ದೇಶ- ವಿದೇಶಗಳ ವಾರ್ತೆಗಳನ್ನು ಅದು ದಿನಪತ್ರಿಕೆಗಳಿಗಿಂತಲೂ ಬೇಗನೆ ತಿಳಿಸುತ್ತದೆ; ವಯಸ್ಸಿನ ಮಹಿಳೆಯರಿಗೆ ಉಪಯುಕ್ತವಾದ ಕಾರ್ಯಕ್ರಮಗಳನ್ನು ಬಿತ್ತರಿಸುತ್ತದೆ; ಮಕ್ಕಳಿಗೆ ಪ್ರಿಯವಾದ ಗೋಷ್ಠಿಗಳನ್ನು ನೆರವೇರಿಸುತ್ತದೆ; ಮೇಲಾಗಿ ಸಾಂಸ್ಕೃತಿಕ ರಾಯಭಾರಿಯ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಸಂಗೀತ ಮುಂತಾದ ಲಲಿತ ಕಲೆಗಳನ್ನು ಪ್ರೋತ್ಸಾಹಿಸಿ, ಪೋಷಿಸುತ್ತದೆ ಒಟ್ಟಿನಲ್ಲಿ ಪ್ರಚಾರ ಹಾಗು ಜ್ಞಾನವರ್ಧಕ ಸಾಧನಗಳಲ್ಲಿ ಆಕಾಶವಾಣಿಯಷ್ಟು ಪ್ರಯೋಜನಕಾರಿಯಾದವುಗಳು ವಿರಳವೆಂದೇ ಹೇಳಬಹುದು.

ಪಾಶ್ಚಾತ್ಯ ವಿಜ್ಞಾನಿಗಳ ಪ್ರಯೋಗ ಫಲವಾದ ಆಕಾಶವಾಣಿಯು ಭಾರತದಲ್ಲಿ ಮೂವತ್ತು ವರ್ಷಗಳ ಹಿಂದೆ ಸರ್ವ ಪ್ರಥಮವಾಗಿ ಪ್ರವೇಶಿಸಿತು. ಸರಕಾರದ ಮಟ್ಟದಲ್ಲಿ ಆಕಾಶವಾಣಿ ಪ್ರಸಾರಗಳನ್ನು ಪ್ರಾರಂಭಿಸಿ ಇಪ್ಪತ್ತನಾಲ್ಕು ವರ್ಷಗಳಾದವು. ಭಾರತದಲ್ಲಿ ಇಂದು ರಾಷ್ಟ್ರೀಯ ಸಂಸ್ಕೃತಿಯ ಭಿನ್ನ ಭಿನ್ನ ಪರಂಪರೆಗಳನ್ನು ಪೋಷಿಸುವ ಸಲುವಾಗಿ ಬೇರೆ ಬೇರೆ ಪ್ರದೇಶಗಳಲ್ಲಿ ಇಪ್ಪತ್ತೆರಡು ಆಕಾಶವಾಣಿ ನಿಲಯಗಳು ಸ್ಥಾಪಿಸಲ್ಪಟ್ಟಿರುತ್ತವೆ. ಇವುಗಳಲ್ಲಿಯೇ ಹಲವು ನಿಲಯಗಳ ಶಕ್ತಿಯನ್ನು ಬಲಗೊಳಿಸುವ ಹಾಗು ಆಕಾಶವಾಣಿಗೆ ಕಿವಿಗೊಡುವವರ ಹಿತ ದೃಷ್ಟಿಯಿಂದ ನಿಲಯದ ಚಟುವಟಿಕೆಗಳನ್ನು ವಿಸ್ತರಿಸುವ ಉದ್ದೇಶವನ್ನು ಪಂಚವಾರ್ಷಿಕ ಯೋಜನೆಯಲ್ಲಿ ಕಾಣುತ್ತೇವೆ ಈಗಾಗಲೇ

ಭಾರತದ ಆಕಾಶವಾಣಿ ನಿಲಯಗಳು

ಸಾಂಸ್ಕೃತಿಕ ಮಹತ್ವದ ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯ

ಕಲ್ಕತ್ತ, ಮುಂಬಯಿ, ಅಹಮದಾಬಾದ ಹಾಗು ಜಲಂಧರಗಳಲ್ಲಿ ಅಭಿವೃದ್ಧಿ ಕಾರ್ಯ ನಡೆದಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಬೇರೆ ಹಲವು ಕೇಂದ್ರಗಳನ್ನೂ ಬಲಪಡಿಸಲಾಗುವುದು.

ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವಾಗ ಆಕಾಶವಾಣಿಯನ್ನು ಆಲಿಸುವವರ ಅಭಿರುಚಿ ಹಾಗು ಅನುಕೂಲತೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ನಮ್ಮ ಆಕಾಶವಾಣಿ ನಿಲಯಗಳಲ್ಲಿ ಹಲವು ಅತ್ಯಲ್ಪ ಶಕ್ತಿಯಿಂದ ಕೂಡಿದವಾಗಿದ್ದು, ಅಲ್ಲಿಂದ ಪ್ರಸಾರಗೊಂಡ ಕಾರ್ಯಕ್ರಮಗಳನ್ನು ಆ ಜಿಲ್ಲೆಯ ಹೊರಗಿನವರಿಗೆ ಕೇಳುವುದು ಸಾಧ್ಯವಾಗುವುದಿಲ್ಲ. ಸಾಮಾನ್ಯವಾಗಿ ಮಧ್ಯಮ ಶ್ರೇಣಿಯ ತರಂಗಗಳಲ್ಲಿ ಕಾರ್ಯಕ್ರಮ ಪ್ರಸಾರ ಮಾಡುವ ನಿಲಯಗಳೇ ಹೆಚ್ಚು ಜನಪ್ರಿಯವಾಗುತ್ತವೆ. ಏಕೆಂದರೆ, ಆಗ ಪ್ರಸಾರವನ್ನು ೫೦೦ ಅಥವಾ ೧೦೦೦ ಮೈಲು ದೂರದವರೂ ಕೇಳಬಲ್ಲರು; ಅಂಥ ಆಕಾಶವಾಣಿ ಯಂತ್ರವನ್ನು ಕೊಂಡು ಕೊಳ್ಳುವುದೂ ಸುಲಭ— ಅಂದರೆ ಅದಕ್ಕೆ ಹೆಚ್ಚು ಬೆಲೆ ಬೀಳುವುದಿಲ್ಲ. ಸಾಮಾನ್ಯ ಅನುಕೂಲವಂತರೂ ಅದನ್ನು ತರಿಸಬಹುದು. ಚಿಕ್ಕ ತರಂಗಗಳಲ್ಲಿ ಪ್ರಸಾರ ಮಾಡಲಾದ ಕಾರ್ಯಕ್ರಮವು ವಿಶ್ವದ ಮೂಲೆ ಮೂಲೆಯನ್ನು ತಲುಪಬಲ್ಲದಾದರೂ, ನಮ್ಮ ಜನರಲ್ಲಿ ಅಂಥ ಯಂತ್ರವನ್ನು ಕೊಂಡು ಕೊಳ್ಳುವಷ್ಟು ಹಣ ಕಾಸಿನ ಬಲ ಇನ್ನೂ ಬಂದಿಲ್ಲ. ಆದುದರಿಂದ ಹೆಚ್ಚಿನ ಶಾಂತಿಯ ಆಕಾಶವಾಣಿ ನಿಲಯಗಳ ಶಕ್ತಿಯನ್ನು ಮಧ್ಯಮ ಮಟ್ಟಕ್ಕೆ ಎತ್ತರಿಸಿ, ತನ್ಮೂಲಕ ರಾಷ್ಟ್ರವಾಣಿಗಳ ಅವುಗಳ ಧ್ವನಿ ಕೇಳಿಸುವಂತೆ ಮಾಡುವುದಕ್ಕೆಯೇ ಪ್ರಾಶಸ್ತ್ಯ ಕೊಡಲಾಗುತ್ತದೆ.

ಆಕಾಶವಾಣಿಗೆ ಕಿವಿಗೊಡುವ ಜನರ ಅಭಿರುಚಿಗಳು ಭಿನ್ನ ಭಿನ್ನ ಪ್ರಕಾರದವಿರುತ್ತವೆ. ಮಾನ್ಯ ಕೇಸ್ಕರರು ಕೇಂದ್ರ ಸುದ್ದಿ ಮತ್ತು ಪ್ರಸಾರ ಖಾತೆಯ ಮಂತ್ರಿಯಾದಂದಿನಿಂದ ಅಗ್ಗದ ಸಿನೆಮಾ ಹಾಡುಗಳ ಪ್ರಸಾರದ ಅಖಿಲ ಭಾರತ ಆಕಾಶವಾಣಿಯಲ್ಲಿ ನಿಲ್ಲಿಸಲ್ಪಟ್ಟಿತು. ಸಿನೆಮಾ ಹಾಡುಗಳು ಜನಪ್ರಿಯತೆಯನ್ನು ಗಳಿಸಿದ್ದರೂ ರಾಷ್ಟ್ರೀಯ ಚಾರಿತ್ರ್ಯ ಹಾಗು ನೈತಿಕ ಶಕ್ತಿಯ ಸಂವರ್ಧನೆಗೆ ಪ್ರೋತ್ಸಾಹಕವಾಗಿರಲಿಲ್ಲವೆಂದು ಸರಕಾರ ಅಭಿಪ್ರಾಯಪಟ್ಟಿತು ಭಾರತದ ಚಲಚ್ಚಿತ್ರ ಸಂಗೀತ ರಸಿಕರಿಗೆ ಈಗ ರೇಡಿಯೋ ಸಿಲೋನಿನ ವ್ಯಾಪಾರ ವಿಭಾಗಕ್ಕೆ ಕಿವಿಗೊಡುವುದರ ಹೊರತು ಬೇರೆ ಮಾರ್ಗ ತೆರೆದಿಲ್ಲ. ಸರಕಾರದ ಅಭಿಪ್ರಾಯ ಹೇಗೇ ಇರಲಿ, ಜನರು ಸಂಗೀತವನ್ನು ಬಹಳ ಮೆಚ್ಚುತ್ತಾರೆಂಬುದಕ್ಕೆ—ಅವರ ಶಾಸ್ತ್ರೀಯ ಸಂಗೀತದ ಪ್ರಸಾರವನ್ನು ತಿರಸ್ಕರಿಸುತ್ತಾರೆಂಬುದಕ್ಕೆ — ಉದಾಹರಣೆಗಳು ಧಾರಾಳವಾಗಿ ಸಿಗುತ್ತವೆ. ಕೆಲವರು 'ದಯವಿಟ್ಟು ಗ್ರಾಮಫೋನು ರಿಕಾರ್ಡಿನ ಲಘು ಸಂಗೀತವನ್ನು ಪ್ರಸಾರ ಮಾಡಿರಿ" ಎಂದು ನಯವಾಗಿ ಪತ್ರ ಮುಖೇನ ವಿನಂತಿಸಿದರೆ ಬೇರೆ ಕೆಲವರು "ನಿಮ್ಮ ಅರ್ಧ ಗಂಟೆಯ ಕಾರ್ಯಕ್ರಮದಲ್ಲಿ ಇಪ್ಪತ್ತೈದು ನಿಮಿಷ ಬಾಯಿ ಹಾಡುಗಾರರ ಆರ್ಭಟೆಗೂ ಮತ್ತೆ ಕೆಲಗಾರರ ವಿದ್ವತ್ ಪ್ರದರ್ಶನಕ್ಕೂ ಸೀನಾವಾದಕರ ಕೈಚಳಕಕ್ಕೂ ಸಂದಿತಾಗಲಿ, ಸಂಗೀತದ ರಸಾನುಭವವೇನೂ ಆಗಲಿಲ್ಲ" ಎಂದು ನಿರ್ದಾಕ್ಷಿಣ್ಯವಾಗಿ ಟೀಕಿಸಬಹುದು.

ಕೇಳುಗರ ಕಾಗದಗಳಿಗೆ ಆಕಾಶವಾಣಿ ನಿಲಯಗಳು ಯಾವಾಗಲೂ ಸ್ವಾಗತವನ್ನು ಬಯಸುತ್ತವೆ. ಎಷ್ಟೋ ಮಂದಿ ಕಾರ್ಯಕ್ರಮವನ್ನು ಕೇಳಿದರೋ ಇಲ್ಲವೋ ತಮ್ಮ ಅಭಿಪ್ರಾಯಗಳನ್ನು—ಅವುಗಳಲ್ಲಿ ಸಾರವಿರಲಿ ಬಿಡಲಿ, ಕಾಗದ ಬರೆದು ತಿಳಿಸಿಯೇ ನಿಲಿಸುತ್ತಾರೆ ಕೆಲವು ವಿಶೇಷ ಕಾರ್ಯಕ್ರಮವನ್ನು ಕೂಲಂಕಷವಾಗಿ ವಿಮರ್ಶಿಸಿ ಪತ್ರ ಬರೆಯುವವರೂ ಇದ್ದಾರೆ. ಅವರಿಗೆ ಎರಡನೆಯ ದರ್ಜೆಯ ಕಾರ್ಯಕ್ರಮ ಹಿಡಿಸುವುದೇ ಇಲ್ಲ—ಎಲ್ಲವೂ ಪ್ರಥಮ ಶ್ರೇಣಿಯದ್ದಾಗಿರಬೇಕೆಂದು ಅವರ ಅಭಿಪ್ರಾಯ. ಅವನ್ನೊದಗಿಸದ ಆಕಾಶವಾಣಿ ನಿಲಯಗಳಿಗಾಗಿ ಲಕ್ಷಾಂತರ ರೂಪಾಯಿಗಳ ವೆಚ್ಚ ಮಾಡ ಪ್ರವರೇಕೆಂದು, ಅವರು ಪ್ರಶ್ನಿಸುತ್ತಾರೆ. ಪ್ರತಿವಾದಾತ್ಮಕವಾದ ಸೂಚನೆಗಳೂ ಬಾರದಿಲ್ಲ— "ಕಿಡುಕಿನಾದದೇ ಒಳಿತು ಮುಟ್ಟುತ್ತದೆ" ಎಂಬ ನೀತಿಯಂತೆ, ಇವರು

ಅಧಿಕ ಆಹಾರ ಬೆಳೆಸುವ ಹೊಸ ಉಪಾಯಗಳು

(೨ನೇ ಪುಟದಿಂದ)

ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಇರಾಕು ಮುಂತಾದ ಮರು ವಲಯಗಳ ಸೈನಿಕರಿಗೆ ಹಸುರುವಾಣಿಯನ್ನೊದಗಿಸುವ ಪ್ರಮೇಯ ಕಾಣಿಸಿಕೊಂಡಾಗ ವಿಸ್ತೃತ ಪ್ರಮಾಣದಲ್ಲಿ ಅನುಸರಿಸಲ್ಪಟ್ಟಿತು ಭಾರತದಲ್ಲಿ ೧೯೪೬ರಲ್ಲಿ ಬಂಗಾಳದಲ್ಲಿ ಪ್ರಥಮವಾಗಿ ಈ ಪ್ರಯೋಗವನ್ನು ಕೈಗೊಳ್ಳಲಾಯಿತು ಈಗಾಗಲೇ ಬೆಂಗಳೂರು, ಮದ್ರಾಸು ಮುಂತಾದ ನಗರಗಳಲ್ಲಿ ಈ ಪದ್ಧತಿಯು ಎಷ್ಟೋ ಜನರ ಮೆಚ್ಚಿಗೆಯನ್ನು ಪಡೆದಿರುವುದು.

ಮಣ್ಣಿಲ್ಲದ ಕೃಷಿಯಿಂದ ಮಾತ್ರಕ್ಕೆ ಬೇರು ಬಿಡದ ಸಸ್ಯಗಳನ್ನೇನಾದರೂ ಬೆಳೆಸಲಾಗುತ್ತದೆಯೇ ಎಂದು ಭಾವಿಸುವುದು ಬೇಡ. ಬೆಂಡೆ, ಮೆಣಸು, ಕೆಬೇಜು, ಟೊಮಾಟೋ ಮುಂತಾದ ತರಕಾರಿ ವಸ್ತುಗಳನ್ನೆ ಕೃಷಿ ಮಾಡಲಾಗುತ್ತದೆ. ಮರ, ಅಥವಾ ಕಲ್ಲುಗಳಿಂದ ಮಾಡಿದ ಒಂದು ತೊಟ್ಟಿಯಲ್ಲಿ ಐದು ಅಂಗುಲದಷ್ಟು ದಪ್ಪಕ್ಕೆ ಸಣ್ಣ ಕಲ್ಲು ಹರಳುಗಳನ್ನೂ ಅದರ ಮೇಲೆ ಎರಡು ಮೂರು ಅಂಗುಲದಷ್ಟು ದಪ್ಪಕ್ಕೆ ಹೊಯಿಗೆ ಅಥವಾ ಕಲ್ಲಿನ ಹುಡಿಯನ್ನೂ ಚೆಲ್ಲಲಾಗುತ್ತದೆ. ಫಲವರ್ಧಕ ಗೊಬ್ಬರಗಳನ್ನು ಹಾಕಿ ಸಸ್ಯಗಳನ್ನು ಪೋಷಿಸಲಾಗುತ್ತದೆ. ಸುಮಾರು ಒಂದು ಚದರ ಗಜ ಪ್ರದೇಶಕ್ಕೆ ಎರಡು ಔನ್ಸುಗಳಷ್ಟು ಗೊಬ್ಬರದ ಮಿಶ್ರಣ ಸಾಕಾಗುತ್ತದೆ. ಮಳೆಗಾಲದಲ್ಲಾದರೆ ಮಳೆ ನೀರೇ ಸಾಕು—ಬೇರೆ ಸಮಯ ಸಸ್ಯಕ್ಕೆ ಜಲಸೇಚನದ ವ್ಯವಸ್ಥೆ ಮಾಡಬೇಕು. ಕಾಲಿಂಚಿಗಿಂತಲೂ ಚಿಕ್ಕದಾದ ಬೀಜಗಳನ್ನು ಬೇರೆಯೇ ಬಿತ್ತಿ ಸಸಿ ಮಾಡಿ, ಆ ಸಸಿಗಳು ೩-೪ ಅಂಗುಲ ಬೆಳೆದಾಗ ಕಿತ್ತು ನಡುವುದು ಶ್ರೇಯಸ್ಕರ.

ತೋಟಗಾರಿಕೆಯ ಈ ರೀತಿಯಲ್ಲಿ ಸುಮಾರು ಒಂದು ಎಕ್ರೆ ಜಾಗವನ್ನು ತಿಂಗಳಿಗೆ ೨೫ ರೂಪಾಯಿಗಳ ಅಲ್ಪ ವೆಚ್ಚದಲ್ಲಿಯೇ ಕೃಷಿ ಮಾಡಬಹುದು., ಮತ್ತು ಸಾಮಾನ್ಯ ಪದ್ಧತಿಯಂತೆ ಪಡೆಯುವ ಲಾಭಕ್ಕಿಂತ ಇಮ್ಮಡಿಯಷ್ಟನ್ನಾದರೂ ಹೊಂದಬಹುದು. ರಾಸಾಯನಿಕ ಗೊಬ್ಬರಗಳ ನಿಕಟ ಸಂಪರ್ಕದಿಂದಲೇ ತರಕಾರಿ ಬೆಳೆದರೂ ಅದರ ರುಚಿಯಲ್ಲಿ ಯಾವ ತರದ ತಾರತಮ್ಯವೂ ಕಂಡು ಬರುವುದಿಲ್ಲ. ಆದುದರಿಂದ ನಗರಗಳಲ್ಲಿ ವಾಸಿಸುವವರು "ಸ್ವಂತ ತೋಟಕ್ಕೆ ಹೊಲವಿಲ್ಲ" ಎಂಬ ಚಿಂತೆ ಮಾಡದೆಯೇ ಗಾಳಿ ಬೆಳಕು ಹಾಗು ನೀರಿನ ವ್ಯವಸ್ಥೆ ಮನೆಯ ಮಾಡು ಹಾಗು ವರಾಂಡದಲ್ಲಿ ಮಾತ್ರದಿಂದಲೇ ತರಕಾರಿ ಬೆಳೆಸಬಲ್ಲರು. ಸಮುದ್ರದ ಹೊರತು ಬೇರೆ ಜಲಾಶ್ರಯ ಕಾಣಿಸದ ಪ್ರದೇಶಗಳಲ್ಲೂ ಸಮುದ್ರದ ನೀರನ್ನೇ ಭಟ್ಟಿ ಇಳಿಸಿ, ಹೊಸ ರೀತಿಯ ಈ ಹೊಲಗಳಿಗೆ ಪೂರೈಸಬಹುದು ಹೀಗೆ ತೋಟಗಾರಿಕೆ ಮಾಡುವುದರಿಂದ ತರಕಾರಿಯ ಖರ್ಚು ಉಳಿಸಬಹುದಷ್ಟೇ ಅಲ್ಲ— ತರಕಾರಿಯನ್ನು ಬೆಳೆಸುವ ಹೊಲಗದ್ದೆಗಳಲ್ಲಿ ಆಹಾರ ಧಾನ್ಯಗಳನ್ನು ಬೆಳೆಸಿ, ತನ್ಮೂಲಕ ಆಹಾರದ ಉತ್ಪಾದನೆಯನ್ನು ಹೆಚ್ಚಿಸುವುದೂ ಸಾಧ್ಯ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ. ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.



ಶ್ರೀ ರಾಮಕೃಷ್ಣಾಶ್ರಮದ ಪ್ರಕಟಣೆಗಳು, ಮೈಸೂರು.

	ರೂ.	ಆ.
ಶ್ರೀ ರಾಮಕೃಷ್ಣ ವಚನವೇದ (ಉತ್ತರಾರ್ಧ) (ಅಚ್ಚಿನಲ್ಲಿದೆ)	೧೨	೦
ಕೊಲಂಬೊ ಇಂದ ಆಲ್ಮೋರಕ್ಕೆ	೫	೦
ಸಂವಾದ ತರಂಗಿಣಿ	೫	೦
ಶ್ರೀ ರಾಮಕೃಷ್ಣ ಉಪದೇಶಾಮೃತ	೪	೮
ಸ್ವಾಮಿ ವಿವೇಕಾನಂದ (ಕುವೆಂಪು)	೪	೮
ಭಗವಾನ್ ಶ್ರೀ ರಾಮಕೃಷ್ಣ	೪	೦
ಪತ್ರಾವಳಿ	೪	೦
ಜ್ಞಾನಯೋಗ	೪	೦
ಗುರುವಿನೊಡನೆ ದೇವರೆಡೆಗೆ (ಕುವೆಂಪು)	೪	೦
ರಾಜಯೋಗ	೩	೧೨
ಶ್ರೀ ಶಾರದಾದೇವಿ ಸಂಭಾಷಣೆ	೩	೮
ಗೀತಾ ಪತ್ರಗಳು	೩	೮
ಹಿಂದೂನೋಟಿಕೆ ಹಿಂದೂಧರ್ಮ	೩	೮
ಶ್ರೀ ಶಾರದಾದೇವಿ	೩	೦
ಸಾಧಕನ ಕೈದೀವಿಗೆ	೨	೦
ಪರಮಾರ್ಥ ಪ್ರಸಂಗ	೨	೦
ಕರ್ಮಯೋಗ	೧	೮
ಬ್ರಹ್ಮಾನಂದ ವಚನ ಸುಧೆ	೧	೪
ಶ್ರೀ ರಾಮಕೃಷ್ಣ ಉಪನಿಷತ್	೧	೪
ಪರಿವ್ರಾಜಕ	೧	೪
ಪ್ರಾಚ್ಯ ಮತ್ತು ಪಾಶ್ಚಾತ್ಯ	೧	೪
ಭಕ್ತಿಯೋಗ	೧	೦
ಭಕ್ತಿ. ಗೌರೀ ಮತ್ತು ಪರಾ	೧	೦
ದಾರಿಯಲ್ಲಿ ದೀಪಧಾರಿ	೧	೦
ಶ್ರೀ ಗುರುದೇವರ ವಚನ	೧	೦
ಅಮರನಾಥ ಯಾತ್ರೆ	೧	೦
ಧನ್ಯತೆಗೆ ದಾರಿ	೧	೦
ಅನುಷ್ಠಾನ ವೇದಾಂತ	೧	೦
ವೇದಾಂತ	೦	೧೨
ವಿದ್ಯಾಭ್ಯಾಸ	೦	೧೨
ಹಿಂದೂ ಧರ್ಮಸಾರ	೦	೧೨
ವರ್ತಮಾನ ಭಾರತ	೦	೧೦
ವಿವೇಕವಾಣಿ	೦	೧೦
ನನ್ನ ಗುರುದೇವ	೦	೮
ಭಕ್ತಿಮಾರ್ಗ	೦	೮
ಚಿಕಾಗೋ ಉಪನ್ಯಾಸ	೦	೬
ಆರತಿ	೦	೬
ಶ್ರೀ ರಾಮಕೃಷ್ಣ (ಸಂಕ್ಷಿಪ್ತ ಜೀವನ ತ್ರಿವೇಣಿಯಿಂದ)	೦	೫
ಸ್ವಾಮಿ ವಿವೇಕಾನಂದ ,, ,,	೦	೫
ಶ್ರೀ ಶಾರದಾದೇವಿ ,, ,,	೦	೫
ಮುಮುಕ್ಷು ಲಕ್ಷಣ	೦	೪
ನನ್ನ ಜೀವನ ಮತ್ತು ಧ್ಯೇಯ	೦	೪
ಊರ್ಧ್ವರಾಮದಾಗ	೦	೪
ನಿಂದ ಜೀವಕ್ಕೆ ಭರವಸೆ	೦	೪
ಭಾರತ ಮಹಿಳೆ	೦	೪
ಕರ್ಮ ರಹಸ್ಯ	೦	೪
ಸಾಧನೆ	೦	೪
ಸಮಾಧಿಜಾಬ	೦	೪
ದೇವದೂತ ಕ್ರಿಸ್ತ	೦	೪
ಪ್ರೇಮಾಂಜಲಿ ಸಾನ್ನಿಧ್ಯದಲ್ಲಿ (ಪರಿಷ್ಕಾರ ಬಿಂದು ಕೇದಾರ ಬದರಿಗೆ)	೨	೦

ಶ್ರೀ ರಾಮಕೃಷ್ಣಾಶ್ರಮ, ಮೈಸೂರು.

ಕಾರ್ಯಕ್ರಮಗಳ ಲೋಪ ದೋಷಗಳನ್ನು ಸಹಾನುಭೂತಿಯಿಂದ ಕಂಡು ತಮ್ಮ ಅಭಿಪ್ರಾಯಗಳನ್ನು ಮುಂದಿಡುತ್ತಾರೆ.

ವಿದೇಶಗಳಿಂದಲೂ ಇಂಥ ಪತ್ರಗಳು ಬರುತ್ತವೆ. ಬಹಳದೂರದಲ್ಲಿರುವಳು ಆಕಾಶವಾಣಿ ಅಭಿಮಾನಿಗಳು ತಾಂತ್ರಿಕ ವ್ಯವಹಾರದಲ್ಲಿ ಸುಧಾರಣೆಯನ್ನು ಒತ್ತಾಯಿಸುತ್ತಾರೆ ಅವರಲ್ಲಿ ಹಲವರಿಗೆ ಭಾರತೀಯ ನಿಲಯಗಳಿಂದ ಬಿತ್ತರಿಸಿದ ಕಾರ್ಯಕ್ರಮಗಳನ್ನು ಕೇಳಲಾಗುವುದಿಲ್ಲ; ಕೇಳಿದರೂ ಸ್ಪಷ್ಟವಾಗಿ ಕೇಳಿಸುವುದಿಲ್ಲ. ಬೇರೆ ನಿಲಯಗಳ ಪ್ರಸಾರ ತರಂಗಗಳು ಇವನ್ನು ಕ್ಷೀಣಿಸುತ್ತವೆ—ಹೀಗೆಯೇ ಹಲವಾರು ತರದ ತೊಂದರೆಗಳನ್ನು ಅವರು ನಿವೇದಿಸುತ್ತಾರೆ. ಅವರಿಗೆ ಆಕಾಶವಾಣಿಯ ಪ್ರಯೋಜನ ಎಷ್ಟೆಂದು ಚೆನ್ನಾಗಿ ಗೊತ್ತಿರುವಂತೆ ಕಾಣುತ್ತದೆ. ಅವರಿಗೆ ಸಾಕಷ್ಟು ಹೆಚ್ಚು ಮಾಹಿತಿಯೂ ಇದೆ. ಆದರೆ, ನಮ್ಮಲ್ಲಿಯ ಕೆಲವರು ಆಕಾಶವಾಣಿ ನಿಲಯಗಳಿಂದ ಬರುವ ಸಂಗತಿಗಳು ವಿನೋದವನ್ನುಂಟುಮಾಡಬಹುದು ನಗರ ಸಭೆಯ ಸದಸ್ಯರೊಬ್ಬರು ಪ್ರಜಾರಾಜ್ಯ ದಿನೋತ್ಸವದಲ್ಲಿ ತಾವು ಭಾಷಣ ಮಾಡಬೇಕಿರುವುದರಿಂದ ನಿಲಯದಿಂದ ಪ್ರಸಾರಗೊಂಡ ಮುಖಂಡರ ಭಾಷಣಗಳ ಪೂರ್ತಿ ಪಾಠವನ್ನು ಪೂರೈಸಿರೆಂದು ಕೇಳುತ್ತಾರೆ!

ಇದಕ್ಕಿಂತ ಹೆಚ್ಚು ಬುದ್ಧಿವಂತಿಕೆಯನ್ನು ಪ್ರಕಟಿಸುವ ಮಹಿಳೆಯೊಬ್ಬಳ ಪತ್ರವೊಂದು ನಿಲಯದ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರಿಗೆ ಪ್ರಾವಿಡೆಂಟ್ ಫಂಡಿನ ಸೌಕರ್ಯವನ್ನು ಏರ್ಪಡಿಸಬೇಕೆಂದು ಸಲಹೆ ಮಾಡುತ್ತದೆ. ವ್ಯವಹಾರದಲ್ಲಿ ಇದನ್ನು ತರುವುದಕ್ಕೆ ಸಾಧ್ಯವಾಗದಿದ್ದರೂ ಆಕಾಶವಾಣಿಯು ಕೇಳುಗರಿಂದ ಬಂದ ಇಂಥ ಪತ್ರಗಳನ್ನು ತುಂಬ ಪ್ರೀತಿಯಿಂದಲೂ ಅಭಿಮಾನದಿಂದಲೂ ಕಾಣುತ್ತದೆ. ಆಕಾಶವಾಣಿ ಇರುವುದೇ ಅದನ್ನು ಆಲಿಸುವವರಿಗಾಗಿ ಎಂದ ಮೇಲೆ, ಅವರ ಅಭಿರುಚಿ, ಅಭಿಪ್ರಾಯಗಳನ್ನು ಪ್ರಕಟಪಡಿಸುವಲ್ಲಿ ಸ್ವಾಗತಿಸುವುದು ಕರ್ತವ್ಯವೇ ಆಗುತ್ತದೆ. ಆದರೆ ನಮ್ಮಲ್ಲಿ ಇನ್ನೂ ಆಕಾಶವಾಣಿಯ ಬಗ್ಗೆ ಜನರಲ್ಲಿ ಅಭಿರುಚಿ ಸಾಕಷ್ಟು ಹೆಚ್ಚು ಬೆಳೆದಿರುವುದಿಲ್ಲ—ಗ್ರಾಮಾಂತರ ಪ್ರದೇಶದವರಿಗಾಗಿ ಕಾರ್ಯಕ್ರಮಗಳ ಪ್ರಸಾರ ಮಾಡಲ್ಪಡುತ್ತಿದ್ದರೂ ಅಲ್ಲಿ ಅವನ್ನು ಕೇಳಗೊಡುವ ಸೌಕರ್ಯಗಳು ಹೆಚ್ಚದಿದ್ದರೆ ಪ್ರಯೋಜನವಾಗದು. ಪ್ರತಿಯೊಂದು ಪಂಚಾಯತ ಬೋರ್ಡಿಗೊಂದು ಆಕಾಶವಾಣಿ ಯಂತ್ರವೆಂಬ ಮಂತ್ರದ ಸ್ಥಾನದಲ್ಲಿ „ಮನೆಗೊಂದು ರೇಡಿಯೋ" ಎಂಬ ಸೊಲ್ಲನ್ನು ಉಚ್ಚರಿಸಿದರೆ ಒಳಿತು ಆಕಾಶವಾಣಿನಾಸದ ಪ್ರವರ್ತಕರು ಇದನ್ನೇ ಅಪೇಕ್ಷಿಸುತ್ತಾರೆ ಅಖಿಲ ಭಾರತ ಆಕಾಶವಾಣಿಯವರು ಅನೇಕ ವಿಶೇಷ ಕಾರ್ಯಕ್ರಮಗಳನ್ನೂ ಸಂಗೀತ ಸ್ಪರ್ಧೆ ಹಾಗು ಸಮ್ಮೇಲನವನ್ನೂ ಇಟ್ಟುಕೊಂಡಿರುವರಲ್ಲದೆ, ಅಕ್ಟೋಬರ ಮಾಸದಲ್ಲಿ ಹೊಸ ರೇಡಿಯೋ ಪಡೆಕೊಂಡ ಪ್ರತಿಯೊಬ್ಬನಿಗೂ ಅವನ ಇಷ್ಟಕ್ಕೊಪ್ಪುವ ಅಖಿಲ ಭಾರತ ಆಕಾಶವಾಣಿ ಪತ್ರಿಕೆಯನ್ನು ಈ ವರ್ಷಾಂತ್ಯದ ವರೆಗೆ ಧರ್ಮಾರ್ಥವಾಗಿ ಕಳುಹಿಸಲು ನಿರ್ಧರಿಸಿದ್ದಾರೆ.

— —

(೧ನೇ ಪುಟದಿಂದ)

ರೈಸಿದರೂ ಮದುವೆಯಾದ ಕೆಲ ಸಮಯದಲ್ಲಿಯೇ ಪತಿ ವಿಯೋಗ ವುಂಟಾದರೆ ಆಗವಳ ಜೀವನ ನಿರ್ವಹಣದ ಗತಿಯೇನ.? ಎಂದು ಕೇಳಿದರು. ಆರ್ಥಿಕ ಸ್ವಾವಲಂಬನಕ್ಕಾಗಿ ಮಹಿಳೆಯರು ದುಡಿಯುವುದರಲ್ಲಿ ತಪ್ಪೇನೂ ಇಲ್ಲವೆಂದೂ ಅದುದರಿಂದ ಮದುವೆಯಾದ ಬಳಿಕ, ಸರಕಾರದ ನೌಕರಿಯಲ್ಲಿ ಉಳಿಯುವುದೂ ಬಿಡುವುದೂ ಅವಳ ಇಚ್ಛೆಯನ್ನೇ ಅವಲಂಬಿಸಬೇಕೆಂದೂ ಹೇಳಿದರು.

ಇದರಲ್ಲಿ ವಿಚಾರಣೀಯವಾದ ಅಂಶಗಳು ಇವೆಯೆಂದು ಒಪ್ಪಬಹುದು- ಗಾಡಗೀಳಮುಂತಾದವರು ಪುರುಷರ ಹೃದಯವನ್ನು ಆಳುವುದರಲ್ಲಿಯೇ ಸ್ತ್ರೀಯರು ಸಂತೋಷ ಹೊಂದಬೇಕಲ್ಲದೆ ದೇಶದ ಆಡಳಿತೆಯ ಚಿಂತೆ ಮಾಡಬಾರದೆಂದು ಹೇಳಿದರೂ ಅವರ ಮಾತನ್ನು ಸುಧಾರಣೆಯ ಅಮಲೇರಿದ ಇಂದಿನ ಜನರು ಸುಲಭದಲ್ಲಿ ಒಪ್ಪಲಿಕ್ಕಿಲ್ಲ. ಅವರಿಗೆ ಹಳೆಯ ಮದ್ಯವನ್ನೇ ಆದರೂ ಹೊಸ ಬಾಟ್ಲಿಯಲ್ಲಿ ತುಂಬಿಸಿ ಕೊಡಬೇಕಾಗುತ್ತದೆ. ಪ್ರಧಾನ ಮಂತ್ರಿ ನೆಹರೂರವರು ತಮ್ಮ ಅಮೋಘವಾದ ಸರಣಿಯಿಂದ ಈ ಕೆಲಸವನ್ನು ನಿರ್ವಹಿಸಿದರು.

ಸರ್ವ ಪ್ರಥಮವಾಗಿ ಅವರು ಮಹಿಳೆಯರಿಂದ ಖಂಡಿಸಲಾದ ಮೇಲಿನ ನಿಯಮವು ಐ. ಎ. ಎಸ್. ಎಂದು ಹೆಸರಾದ ಭಾರತದ ಆಡಳಿತ ಅಧಿಕಾರಿ ಶ್ರೇಣಿಯ ವಿವಾಹಿತ ಮಹಿಳೆಯರಿಗಷ್ಟೇ ಅನ್ವಯಿಸುವುದೆಂದೂ ಬೇರೆಯಾವುದೇ ನೌಕರಿಯಲ್ಲಿರುವ ಹೆಂಗಸರಿಗೂ ಅದು ಬಾಧಕವಾಗಲಾರದೆಂದೂ ಸ್ಪಷ್ಟೀಕರಣ ಕೊಟ್ಟರು. ಇಲ್ಲಿ ಸಹ ನಿಯಮವನ್ನು ಕಡ್ಡಾಯವಾಗಿ ಜ್ಯಾರಿಗೆ ತರಲಾಗುವುದೆಂದೇನೂ ಅರ್ಥವಲ್ಲವೆಂದೂ ವಿದಿತಪಡಿಸಿದರು. ಆದರೆ ಕುಟುಂಬ ಜೀವನವನ್ನು ಹದಗೆಡಿಸುವ ಉಪಕ್ರಮದಲ್ಲಿ ಸರಕಾರವು ಭಾಗಿಯಾಗಲಾರದೆಂದು ಅವರು ಅಭಿಪ್ರಾಯಪಟ್ಟರು ವಿವಾಹಿತ ಮಹಿಳಾ ಅಧಿಕಾರಿಯೊಂದುಕಡೆ ಅವಳ ಗಂಡನು ಇನ್ನೊಂದುಕಡೆ, ಉಳಿಯಬೇಕಾಗುವ ಅಪ್ರಿಯ ಪ್ರಸಂಗಗಳನ್ನು ತಪ್ಪಿಸುವುದರಲ್ಲಿ ಕೆಟ್ಟದೇನೂ ಇಲ್ಲವೆಂದು ಅವರು ಹೇಳಿದರು. ವಿಶೇಷವಾಗಿ ವಿದೇಶಾಂಗ ಆಡಳಿತ ವಿಭಾಗದಲ್ಲಿ ಗಂಡನನ್ನು ಪ್ಯಾರಿಸಿಗೆ ಹಾಗು ಹೆಂಡತಿಯನ್ನು ಟೋಕಿಯೋಗೆ ನೇಮಿಸುವ ಸಂದರ್ಭ ಬರಬಹುದು—ಇದು ಇಷ್ಟವಲ್ಲ ಎಂದವರು ಹಿತ ನುಡಿದರು.

ಸ್ತ್ರೀಯರಿಗೆ ಪುರುಷರಷ್ಟೇ ಅವಕಾಶಗಳು ದೊರಕಬೇಕೆನ್ನುವುದಕ್ಕೆ ಬಹಳ ಪ್ರಾಮುಖ್ಯತೆಯನ್ನೂ ಬೆಲೆಯನ್ನೂ ಕೊಡುತ್ತೇನೆಂದು ಹೇಳುತಿದ್ದಂತೆಯೇ ನೆಹರೂರವರು "ಕೆಲವು ಅನಿವಾರ್ಯ ಸಂಗತಿಗಳಿಂದ ಅಂಥ ಅವಕಾಶಗಳು ಪರಿಮಿತವಾಗಿವೆ" ಎಂಬ ಮಹತ್ವದ ವಿಷಯವನ್ನೂ ಹೊರಗೆಡಹಿದರು. ನಮ್ಮ ಸೈನ್ಯದಲ್ಲಿ ಮಹಿಳೆಯರನ್ನು ಪುರುಷರಷ್ಟೇ ಸಮಪ್ರಮಾಣದಲ್ಲಿ ಭರ್ತಿ ಮಾಡಬೇಕೆಂಬ ಬೇಡಿಕೆ ಮಂಡಿಸಲ್ಪಟ್ಟ ಪಕ್ಷದಲ್ಲಿ ತಮಗೆ ಅದರಿಂದ ಆಶ್ಚರ್ಯವೇ ಆದೀತೆಂದು ನೆಹರೂ ಹೇಳಿದರು. "ಇಲ್ಲಿ ನಾವು ದೈಹಿಕ ಸಾಮರ್ಥ್ಯ ಮುಂತಾದ ನೈಸರ್ಗಿಕ ತತ್ವಗಳನ್ನು ಗಮನಿಸದಿರಲಾಗುವುದಿಲ್ಲ" ಎಂದು ನುಡಿದರು. ಎಲ್ಲ ನೌಕರಿಗಳಿಗಿಂತಲೂ ಐ. ಎ. ಎಸ್. ಶ್ರೇಣಿಯ ಹೊಣೆಗಾರಿಕೆಗಳನ್ನು ನಿರ್ವಹಿಸುವುದು ತ್ರಾಸದಾಯಕವಾದದ್ದು ಎಂಬ ಗೃಹ ಮಂತ್ರಿಗಳ ವಾದವನ್ನೂ ಅವರು ಸಮರ್ಥಿಸಿದರು.

ಇವೆಲ್ಲ ವಿಷಯಗಳೊಂದಿಗೆ ನಾವು ಸಾಮಾಜಿಕ ವಾತಾವರಣವನ್ನೂ ಗಮನಿಸಬೇಕಾಗುತ್ತದೆಂದು ನೆಹರೂ ಹೇಳದೆ ಇರಲಿಲ್ಲ -"ನಾನು ಹಳೆಯ ಸಾಮಾಜಿಕ ಪದ್ಧತಿಗಳಿಂದ ಬಿಗಿಯಲ್ಪಡಬೇಕೆಂದು ಬಯಸುವುದಿಲ್ಲ. ಆದರೆ ಸಾರ್ವಜನಿಕ ಜೀವನದಲ್ಲಿ ಕಾಲಿಡುವ ಮಹಿಳೆಯು ಅನೇಕ ಕಷ್ಟಗಳನ್ನು ಎದುರಿಸ ಬೇಕಾಗುತ್ತದೆ. ಅದು ಅವಳ ತಪ್ಪಲ್ಲ.- ಪುರುಷ ವರ್ಗದ ತಪ್ಪು. ಅವಳು ಎಲ್ಲಬಗೆಯ ನಿಂದೆಗೂ ಪಿಸುಮಾತಿಗೂ ಗುರಿಯಾಗುತ್ತಾಳೆ ದೃಢ ಮನಸ್ಕಳಿದ್ದರೆ ಇದನ್ನು ಕಡೆಗಣಿಸಿ ಮುನ್ನಡೆಯುತ್ತಾಳೆ. ಇಲ್ಲದಿದ್ದರೆ ಕಾಲ್ದೆಗೆಯುತ್ತಾಳೆ. ನಾವು ಮಾಡುವ ಅಥವಾ ಮಾಡದಿರುವ ಕಠೋರ ಶಾಸನಗಳಲ್ಲಿ ಏನೂ ಮಹತ್ವವಿಲ್ಲ— ಸಾಮಾಜಿಕ ಜೀವನದ ನೀತಿಯೇ ಮುಖ್ಯ."

ಭಾರತದ ಸಾಮಾಜಿಕ ನೀತಿಯು ನಮ್ಮ ಸುಧಾರಕರು ಎಣಿಸುವಷ್ಟು ಕ್ಷುದ್ರವಾದುದಲ್ಲ - ಅದು ನೈಸರ್ಗಿಕ ತತ್ವಗಳೊಡನೆ ಬಹಳ ನಿಕಟವಾದ ಸಂಬಂಧವನ್ನು ಹೊಂದಿದೆಯಲ್ಲದೆ ಸಮನ್ವಯವನ್ನೂ ಸಾಧಿಸಿರುತ್ತದೆ. ಹಿಂದಿನ ಕಟ್ಟುಕಟ್ಟಳೆಗಳನ್ನು ಅಜ್ಜ ನೆಟ್ಟ ಆಲದ ಮರವೆಂದು ಹೀಯಾಳಿಸಿ ಮುರಿಯುವವರು ನೆರಳಿನ ಹೊಸ ಆಸರೆಯಂತಿರುವ ಶ್ರೇಯಸ್ಕರವಾದ ನೂತನ ಸಂಪ್ರದಾಯವನ್ನೇನೂ ಹಾಕಿ ಕೊಡುತ್ತಿಲ್ಲ. ಪಾಶ್ಚಾತ್ಯ ರಾಷ್ಟ್ರಗಳ ಸುಸಂಸ್ಕೃತ ವ್ಯಕ್ತಿಯು ಭಾರತದ ಜೋರಿಗೌಡನಷ್ಟು ಚರಿತ್ರಸಂಪನ್ನನಿಲ್ಲದಿರುವಾಗ, ನಾವು ಪಾಶ್ಚಾತ್ಯರಿಂದ ಸ್ಫೂರ್ತಿಪಡೆದು ಅಧಿಕಾರದ ಹೆಸರಿನಲ್ಲಿ ವಾದ—ಪ್ರತಿವಾದ ಹೂಡುವುದು ಉಚಿತವಾಗಲಾರದು. ಭಾರತದ ಉದಾತ್ತ ಸಂಪ್ರದಾಯಗಳನ್ನು ರಾಜ್ಯ ಘಟನೆಯು ಕಡೆಗಣಿಸುವ ಪಕ್ಷದಲ್ಲಿ ಅದನ್ನು ಯೋಗ್ಯ ತಿದ್ದುಪಡಿಗಳ ಮೂಲಕ ಪರಿಷ್ಕರಿಸುವುದೇ ಲೇಸು; ಸಮಾನಾಧಿಕಾರದ ಪ್ರಶ್ನೆಯೂ ಇದಕ್ಕೆ ಹೊರತಲ್ಲ. ಭಾರತದ ಸ್ತ್ರೀಯರೂ ಮುಂಬರಲಿ—ಆದರೆ ಪುರುಷರ ಪಾತ್ರವನ್ನೇ ತಾವು ಪ್ರತಿಯೊಂದೂ ಕ್ಷೇತ್ರದಲ್ಲಿ ನಿರ್ವಹಿಸುತ್ತೇವೆಂದು ಹೇಳಿ ನೈಸರ್ಗಿಕ ತತ್ವಕ್ಕೆ ಪ್ರತಿಕೂಲವಾಗಿ ನಡೆಯುವ ಹವ್ಯಾಸವನ್ನು ಮಾತ್ರ ಬಿಟ್ಟುಬಿಡಲಿ!

— ಕಾರ್ತಿಕೇಯ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಒರ್ರೆ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ

ದಿ ವಿಜಯ ಬೇಂಕ್ ಲಿಮಿಟೆಡ್.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪ | ಉಡುಪಿ, 14—10—1954 | ಸಂಚಿಕೆ ೭

VOL. 34 | NO. 7

ನಾವೆಲ್ಲರೂ ಲೋಕದ ದೃಷ್ಟಿಯಲ್ಲಿ ಸಾಲಗಾರರಾಗಿದ್ದೇವೆ. ಲೋಕಕ್ಕಾಗಿ ನಾವೇನಾದರೂ ಮಾಡುವಂತಿದ್ದರೆ ಅದೇ ನಮ್ಮ ಸೌಭಾಗ್ಯ. ಲೋಕಕ್ಷೇಮಕ್ಕೆ ಸಹಾಯ ಸಲ್ಲಿಸುವ ನಾವು ನಮಗೆಯೇ ನೆರವಾಗುತ್ತಿದ್ದೇವೆ. ಹಣದ ವ್ಯವಹಾರದಲ್ಲಿ ಪ್ರಾಮಾಣಿಕತೆಯನ್ನಿಟ್ಟುಕೊಳ್ಳುವುದೂ ಇದರಲ್ಲಿ ಬರುತ್ತದೆ. —ವಿವೇಕಾನಂದ.

ತೆರಿಗೆಯ ಹಣದ ಬೆಲೆ

ಸಾರ್ವಜನಿಕರಿಂದ ತೆರಿಗೆಯ ಮೂಲಕ ವಸೂಲಾದ ಹಣದ ಬೆಲೆ ಎಷ್ಟೆಂಬುದನ್ನು ನಮ್ಮ ಸರಕಾರದವರು ಗಂಭೀರವಾಗಿ ಪರ್ಯಾಲೋಚಿಸಬೇಕಾದ ಸನ್ನಿವೇಶವು ಈಗ ಬಂದಿರುತ್ತದೆ. ಬಹಳ ಬಡತನದಿಂದ ದಿನಗಳೆಯುವ ನಾಗರಿಕರು ವರ್ಷ ವರ್ಷಕ್ಕೂ ಏರುತ್ತಿರುವ ತೆರಿಗೆಯನ್ನು ಸಂತೋಷದಿಂದ ಕೊಡುತ್ತಿಲ್ಲ. ತಮ್ಮ ಆವಶ್ಯಕತೆಗಳನ್ನು ಪೂರೈಸಿ ಮಿಕ್ಕಿದ ದುಡ್ಡು ಈ ತೆರಿಗೆಯಲ್ಲ—ಬದಲು ರಾಷ್ಟ್ರದ ಅಭಿವೃದ್ಧಿಗಾಗಿ ಜನರು ಮಾಡಿದ ತ್ಯಾಗದ ಒಟ್ಟು ಮೊತ್ತವೆಂದೇ ಇದನ್ನು ಪರಿಗಣಿಸಬಹುದು. ಜನರಿಂದ ವಸೂಲಾದ ಹಣವನ್ನು ಪೋಲು ಮಾಡಲು ಸರಕಾರ ಹಣಿಸಿದರೆ, ಅದು ಅಕ್ಷಮ್ಯ ಅಪರಾಧವಾಗುತ್ತದೆ. ಮಿತವ್ಯಯವು ರಾಜ್ಯದ ಸೂತ್ರಧಾರರ ಧ್ಯೇಯವಾಗಬೇಕೆಂದು ಕೌಟಿಲ್ಯನು ಎರಡು ಸಾವಿರ ವರ್ಷಗಳ ಪೂರ್ವದಲ್ಲಿ ಹೇಳಿದ್ದನೆಂಬುದನ್ನು ನೆನಪಿಗೆ ತಂದು ಕೊಡಬೇಕಾಗುತ್ತದೆ.

ಲೋಕ ಸಭೆಯ ಮುಂದೆ ಲೆಕ್ಕಪತ್ರ ಸಂಶೋಧನ ಸಮಿತಿಯು ಒಪ್ಪಿಸಿದ ವರದಿಯನ್ನು ವಿಮರ್ಶಿಸಿದರೆ ನಮ್ಮ ಸರಕಾರದಲ್ಲಿ ಹಣವನ್ನು ವಂಚಿಸುವ ಉನ್ನತ ಪದಾಧಿಕಾರಿಗಳ ಒಂದು ಗುಂಪು ಕೆಲಸ ಮಾಡುತ್ತಿರುವಂತೆ ಭಾಸವಾಗುತ್ತದೆ. ಇವರಿಗೆ ದೇಶಕ್ಕೆ ತಾವು ಮಾಡುತ್ತಿರುವ ಅಹಿತದ ಕಲ್ಪನೆ ಇದ್ದಂತಿಲ್ಲ—ಸರಕಾರಕ್ಕೆ ಅವರ ಮೇಲೆ ಯಾವ ತರದ ನಿಯಂತ್ರಣವಿದ್ದಂತೆಯೂ ಕಾಣುವುದಿಲ್ಲ. ಅವರನ್ನು ಪತ್ತೆಹಚ್ಚಿ ದಂಡಿಸುವ ಉಪಾಯಗಳನ್ನು ಸರಕಾರ ಕೈಗೊಳ್ಳದಿದ್ದ ಪಕ್ಷದಲ್ಲಿ ವಂಚಕರ ಈ ಕಾರುಬಾರು ಇನ್ನಷ್ಟು ವಿಸ್ತರಿಸುವ ಭಯವುಂಟು.

ಲೆಕ್ಕಪತ್ರ ಸಂಶೋಧನೆಯಿಂದ ದೊರೆತ ಅನುಭವವು ಆಶ್ಚರ್ಯವನ್ನೆ ಹುಟ್ಟಿಸುತ್ತಿದೆ—ವ್ಯಾಪಾರ ವ್ಯವಹಾರದಲ್ಲಿ ಅತ್ಯಗತ್ಯವೆನಿಸಿದ ಚಾತುರ್ಯವನ್ನಾಗಲೀ ಸೂಕ್ಷ್ಮಬುದ್ಧಿಯನ್ನಾಗಲೀ ನಮ್ಮ ಅಧಿಕಾರಿಗಳು ತೋರಿಸುವುದೇ ಇಲ್ಲ. ವೆಚ್ಚದ ಅಂದಾಜನ್ನು ಸಿದ್ಧಪಡಿಸುವಾಗ ಎಷ್ಟು ಹೆಚ್ಚು ಹಣವನ್ನು ಬೇಡಬಹುದೋ ಅಷ್ಟನ್ನೂ ನಮೂದಿಸುತ್ತಾರೆ—ಒಂದೇ ಪೂರೈಕೆಗೆ ಎರಡೆರಡು ಸಲ ಹಣವನ್ನು ಮಂಜೂರು ಮಾಡಲಾಗುತ್ತದೆ ೧೯೪೯—೫೦ನೇ ವರ್ಷದಲ್ಲಿ ಈ ಪ್ರಕಾರ ೧೦೫೬೦೦೦೦ ರೂಪಾಯಿಗಳ ನಷ್ಟವುಂಟಾದ ಸಂಗತಿ ಈಗ ಬೆಳಕಿಗೆ ಬಂದಿದೆ. ನಿಷ್ಕೃಷ್ಟವಾಗಿ ಸಾಧಿಸುವಂತೆ ಅಂದಾಜನ್ನು ಸಿದ್ಧಗೊಳಿಸಬೇಕೆಂದೂ ಅವನ್ನು ಬೇಕು ಬೇಕೆನಿಸಿದಂತೆ ಬೇಕು ಬೇಕಾದವರು ಹೆಚ್ಚಿಸಲು ಅವಕಾಶ ಕೊಡತಕ್ಕದ್ದಲ್ಲವೆಂದೂ ಮಾಡಲಾದ ಉಪದೇಶಕ್ಕೆ ಕಿವಿಗೊಟ್ಟಂತೆಯೇ ಕಾಣುವುದಿಲ್ಲ.

ನಮ್ಮ ದೇಶದೊಳಗೆ ನಡೆಯುವ ಅಭಿವೃದ್ಧಿ ಕೆಲಸಗಳಲ್ಲಿ ಕೋಟ್ಯಾಂತರ ಹಣವು ದುರುಪಯೋಗವಾಗುತ್ತಿದೆಯೆಂದು ಪ್ರತಿಪಕ್ಷದವರು ದೂರಿಡುವಾಗ, ಅದನ್ನು ಅಪಪ್ರಚಾರವೆಂದು ಸರಕಾರದ ಪಕ್ಷವಾತಿಗಳು ಭಾವಿಸುವುದುಂಟು: ಆದರೆ ದಾಮೋದರ ನದಿ ಕಣಿವೆ, ಹಿರಾಕುಡದ ಅಣೆಕಟ್ಟು, ಸಿಂಧ್ರಿಯ ಗೊಬ್ಬರ ಕಾರಖಾನೆ ಮುಂತಾದ ಕಡೆಗಳಲ್ಲಿ ಸರಕಾರದ ಅಜಾಗರೂಕತೆಯ ದೆಸೆಯಿಂದಲೂ ಅಧಿಕಾರಿಗಳ ವಿಶ್ವಾಸಘಾತಕ ಪ್ರವೃತ್ತಿಯಿಂದಲೂ ಲಕ್ಷಾಂತರ ರೂಪಾಯಿಗಳ ಹಾನಿ ಸಂಭವಿಸಿತೆಂದು ಲೆಕ್ಕಪತ್ರಗಳನ್ನು ಪರಿಶೋಧಿಸುವಾಗ ಸ್ಪಷ್ಟವಾಯಿತು. ಇದನ್ನು ಹಿಂದಿನ ಕತೆಯೆಂದು ನಾವು ಉಪೇಕ್ಷಿಸುವಂತಿದೆಯೆ ಎಂಬುದೀಗ ವಿಚಾರಣೀಯವಾದ ಅಂಶ.

ಸಮಾಜವಿಕಾಸ ಯೋಜನೆಯಿಂದ ತೊಡಗಿ ದೊಡ್ಡ ದೊಡ್ಡ ಅಣೆಕಟ್ಟು ಹಾಗು ವಿದ್ಯುಚ್ಛಕ್ತಿ ಕೇಂದ್ರಗಳ ವರೆಗೆ ದೇಶದಲ್ಲಿ ಆಡೆಸ್ಕೋ ಅಭಿವೃದ್ಧಿ ಪ್ರಯತ್ನಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿವೆ. ಇದರಲ್ಲಿ ಅಧಿಕಾರಿಗಳ ಸಂಬಳ, ಕೆಲಸಗಾರರ ಕೂಲಿ, ಅಣೆಕಟ್ಟಿನ ವೆಚ್ಚ ಇವಕ್ಕೆ ವ್ಯಯವಾಗುವುದೆಷ್ಟು, ಗುಟ್ಟಿನಲ್ಲಿ ವಂಚಕರ ಜೇಬಿನೊಳಗೆ ಬೀಳುವುದೆಷ್ಟು ಎಂಬುದನ್ನು ಊಹಿಸಬೇಕೇ ಹೊರತು ಸ್ಪಷ್ಟವಾಗಿ ಯಾವುದೂ ತಿಳಿಯುವುದಿಲ್ಲ. ಅದನ್ನು ಗೊತ್ತಿಗೆ ಹಚ್ಚಲು ಪ್ರಯತ್ನ ನಡೆದದ್ದಾದರೆ, ಸಂಬಂಧಪಟ್ಟ ಎಲ್ಲ ದಾಖಲೆಗಳನ್ನೂ ಸುಟ್ಟು ಬೂದಿ ಮಾಡುವಷ್ಟು ನಮ್ಮ ಅಧಿಕಾರಿಗಳ ವಂಚಕ ಪ್ರವೃತ್ತಿ ಮುಂದರಿದಿರುತ್ತದೆ. ಇಂಗ್ಲೆಂಡಿನಿಂದ ೫೦೦೦೦ ಕಂಬಳಿಗಳನ್ನು ನಮ್ಮ ಸೈನಿಕರ ಚಳಿಗಾಲದ ಉಪಯೋಗಕ್ಕೆಂದು ತರಿಸುವ ನಿರ್ಧಾರವಾಯಿತು. ಆದರೆ ಚಳಿಗಾಲ ಕಳೆದು ಸೆಕೆಗಾಲ ತೊಡಗಿದಾಗ ಆ ಕಂಬಳಿಗಳನ್ನು ಪೂರೈಸಿದರು: ಅದೂ ಎಂಥವು? ಹರಿದುಹೋದ, ನಿರುಪಯುಕ್ತ ಕಂಬಳಿಗಳು! ತಪ್ಪಿಗೆ ಕಾರಣ ಯಾರೆಂದು ವಿಮರ್ಶಿಸುವ ಪ್ರಯತ್ನ ನಡೆದಾಗ, ಸಂಬಂಧಪಟ್ಟ ಕಾಗದ ಪತ್ರಗಳನ್ನು ಮೊದಲೇ ನಷ್ಟಪಡಿಸಿದ್ದಾರೆಂದು ತಿಳಿಯಿತು.

ಸೈನಿಕರು ಉಪಯೋಗಿಸದ ಕಂಬಳಿಗಳನ್ನು ಹೊಸದೆಹಲಿಯಲ್ಲಿ ಸಾರ್ವಜನಿಕರ ಮುಂದೆ ಬಹಿರಂಗವಾಗಿ ಏಲಂ ಮೂಲಕ ಮಾರಾಟ ಮಾಡಿದುದರಿಂದ ನಷ್ಟವು ಸ್ವಲ್ಪ ಮಟ್ಟಿಗೆ ಭರ್ತಿಯಾಯಿತು. ಆದರೆ, ಜೀಪು ಕಾರುಗಳ ಮತ್ತು ಸಿಡಿ ಮದ್ದುಗಳ ಪೂರೈಕೆಯ ವಿಷಯದಲ್ಲಿ ಉಂಟಾದ ನಷ್ಟ ಬಹಳ ಹೆಚ್ಚು. ನಮ್ಮ ಸೈನ್ಯದ ಮೂರೂ ವಿಭಾಗಗಳಲ್ಲಿ ವಂಚಕರು ರಹಸ್ಯವಾಗಿ ಒಳಸಂಚು ನಡೆಸಿದ್ದಾರೆಂಬುದನ್ನು ಈ ಮೋಸದ ಪ್ರಕರಣಗಳು ಎತ್ತಿತೋರಿಸುತ್ತವೆ. ಲಂಡನಿನ ಎರಡೆರಡು ಮಂಡಳಿಗಳು ಜೀಪು ಕಾರನ್ನು ಪೂರೈಸುವ ಕರಾರನ್ನು ಮುರಿದು ನಮ್ಮ ಸರಕಾರಕ್ಕೆ ಅಪಾರ ಹಾನಿಯನ್ನು ಮಾಡಿದ್ದುಂಟು. ಆ ಕಂಪೆನಿಗಳ ಕುಲಗೋತ್ರದ ವಿಚಾರವೇನೂ ತಿಳಿದಿರದಷ್ಟು ಮೂರ್ಖ ರೀತಿಯಲ್ಲಿ ನಮ್ಮ ಅಧಿಕಾರಿಗಳು ವ್ಯವಹಾರವನ್ನು ನಾಗಿಸಿದ್ದರು. ಪೂರೈಕೆಗ ಮುಂಚೆ ಹಿಂಡರುಗಳನ್ನು ಕಳೆಯಲಿಲ್ಲ, ಪೂರೈಕೆಯ ಹೊಣೆಯನ್ನು ಒಪ್ಪಿಸಿಕೊಟ್ಟ ಕಂಪೆನಿಗಳ ಭದ್ರತೆ ಹಾಗು ಸ್ಥಾನಮಾನದ ವಿಷಯ ವಿಚಾರಿಸಲಿಲ್ಲ. "ಹಣಕಾಸಿನ ವಿಷಯದಲ್ಲಿ ನಮಗೆ ಹೆಚ್ಚಿನ ಪರಿಚಯ ವಿಲ್ಲದಿದ್ದರೂ ಒಪ್ಪಿಕೊಂಡ ಹೊಣೆಗಾರಿಕೆಯನ್ನು ನಿರ್ವಹಿಸಬಲ್ಲರೆಂದು ನಮ್ಮ ಅಭಿಪ್ರಾಯ" ಎಂದು ಯಾರದೋ ಕಾಗದ ಪತ್ರವನ್ನು ಮುಂದಿಟ್ಟ ಮಾತ್ರಕ್ಕೆ ನಮ್ಮ ಅಧಿಕಾರಿಗಳು ಆ ಕಂಪೆನಿಗಳಿಗೆ ಕೇಳಿದಷ್ಟು ಹಣವನ್ನು ಮುಂಗಡ ಪಾವತಿ ಮಾಡಿದರು.

ರಹಸ್ಯವಾದ ಸೈನಿಕ ಬೇಡಿಕೆಗಳನ್ನು ವಿದೇಶಗಳಲ್ಲಿರುವ ವಂಚಕರಿಗೆ ತಿಳಿಸಿ, ಅವರಿಂದ ಸರಕಾರಕ್ಕೆ ಮೋಸ ಮಾಡಿಸಿ, ತಾವು ಲಾಭಗಳಿಸುವ ದ್ರೋಹಿಗಳ ಗುಂಪೊಂದು ಭಾರತದಲ್ಲಿ ಕೆಲಸ ಮಾಡುತ್ತಿದೆಯೆಂಬುದನ್ನು ಲೆಕ್ಕಪತ್ರ ಶೋಧಕರು ಸ್ಪಷ್ಟವಾಗಿ ಹೊರಗೆಡವಿದ್ದಾರೆ. ಗೋಪ್ಯವಾದ ವಿಷಯವೊಂದನ್ನು ಎಂಟೇ ದಿನಗಳಲ್ಲಿ ಖಾಸಗಿ ಕಂಪೆನಿಯೊಂದಕ್ಕೆ ತಿಳಿಯಪಡಿಸಿದ ಅದ್ಭುತವನ್ನು ಅವರು ಕಂಡುಹಿಡಿದಿದ್ದಾರೆ. ಸರಕಾರದ ಗುಟ್ಟಿನ ವಿಷಯಗಳನ್ನು ರಟ್ಟುಮಾಡುವ ಜನರನ್ನು ತಕ್ಷಣಕ್ಕೆ ಗುರುತಿಸದಿದ್ದರೆ, ಮತ್ತು ಪೂರ್ವಾಪರ ವಿಚಾರವಿಲ್ಲದೆ, ಸರ್ವತಂತ್ರ ಸ್ವತಂತ್ರರಂತೆ ಆರ್ಡರುಗಳನ್ನು ಕೊಟ್ಟು ಹಾನಿಯುಂಟು ಮಾಡುವವರನ್ನು ವ್ಯಕ್ತಿಗತವಾಗಿ ದಂಡಿಸದಿದ್ದರೆ, ಸರಕಾರದ ಕೆಲಸ ನಡೆಯುವುದೇ ಕಷ್ಟವಾದೀತು.

[೧೧ನೇ ಪುಟ ನೋಡಿರಿ]

ಗಂಡ ಹೆಂಡತಿಗೆ ಹೇಳಿದ—"ಮೊನ್ನೆ ತಾನೆ ತಿಂಗಳ ಸಂಬಳವನ್ನು ಪೂರಾ ಕೊಟ್ಟಿದ್ದೇನೆ. ಇನ್ನೂ ಹತ್ತು ದಿನವಾಗಿಲ್ಲ. ಇಷ್ಟು ಬೇಗ ಹೇಗೆ ಹಣವೆಲ್ಲ ವೆಚ್ಚವಾಯಿತು?"

ಹೆಂಡತಿ ಕೊಟ್ಟ ಉತ್ತರ. "ಅದು ಹೇಗೆ ಖರ್ಚಾಯಿತೆಂದು ಆಲೋಚಿಸುವುದು ನಿಮ್ಮ ಕೆಲಸವಲ್ಲ. ಇನ್ನುಳಿದ ಇಪ್ಪತ್ತು ದಿನಗಳಿಗೆ ಎಲ್ಲಿಂದ ಹಣ ತರಲಿ ಎಂದು ಆಲೋಚಿಸಿದರಾಯಿತು"

The Canara Industrial & Banking Syndicate Ltd.

ಕೃತಜ್ಞತೆಯ ಒಂದು ಮಾತು-

ತಮ್ಮ ಆಶ್ರಯವನ್ನು ನೀಡಿ ನಮ್ಮ ಸ್ಥಿರ ಪ್ರಗತಿಯು ಸಾಧ್ಯವಾಗುವಂತೆ ಮಾಡಿದುದಕ್ಕಾಗಿ ನಮ್ಮ ಎಲ್ಲ ಗ್ರಾಹಕರಿಗೂ ಹಿತೈಷಿಗಳಿಗೂ ನಾವು ಕೃತಜ್ಞರು ಹಿಂದಿನಂತೆ ಅವರ ಸಂಪೂರ್ಣ ತೃಪ್ತಿಗಾಗಿಯೂ ಅವರ ಸದ್ಭಾವ ಮತ್ತು ಸ್ನೇಹದ ಗಳಿಕೆಗಾಗಿಯೂ ಅವರನ್ನು ಸೇವಿಸಲು ನಾವು ಮುಂದಕ್ಕೂ ಎದುರು ನೋಡುತ್ತೇವೆ.

ಚಲಾವಣೆಯ ಭಂಡವಾಳ	.... 6½	ಕೋಟಿಗೂ ಮಿಕ್ಕಿದೆ.
ಠೇವಣಾತಿಗಳು	 5	ಕೋಟಿಗೂ ಮಿಕ್ಕಿದೆ.
ಗ್ರಾಹಕರ ಸಂಖ್ಯೆ	 2	ಲಕ್ಷಕ್ಕೂ ಮಿಗಿಲಿದೆ.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್.

ಸ್ಥಾಪನೆ: ೧೯೨೫] [ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.

ಜಿಲ್ಲಾ ಬೋರ್ಡು ಚುನಾವಣೆಯಲಿ ಕಾಂಗ್ರೆಸಿಗೇ ಮತ ಕೊಡಿರಿ.

ಭಾರತ-ಚೀನಗಳ ನಡುವಣ ಸೌಹಾರ್ದ ಸಂಬಂಧ

ಎರಡು ಸಾವಿರ ವರ್ಷ ಪುರಾತನದಾದ ಪರಿಚಯ

ಜಗತ್ತಿನಲ್ಲಿ ಅತಿ ಪುರಾತನವಾದ ಸಂಸ್ಕೃತಿಯ ಕೇಂದ್ರಗಳಲ್ಲಿ ಭಾರತ ಹಾಗು ಚೀನಗಳು ಹೆಸರಿಸಲ್ಪಡುತ್ತವೆ. ಪ್ರಾಚೀನ ನಾಗರಿಕತೆಯ ಭವ್ಯ ಉದಾಹರಣೆಗಳು ಭಾರತದ ಇತಿಹಾಸದಲ್ಲಿಷ್ಟೇ ಚೀನದ ಚರಿತ್ರೆಯಲ್ಲೂ ಅಷ್ಟೇ ಸಿಗುತ್ತವೆ. ಚೀನದಲ್ಲಿಯೇ ಮೊತ್ತ ಮೊದಲು ಕಾಗದವನ್ನು ರಚಿಸಲಾಯಿತು; ಮುದ್ರಣ ಯಂತ್ರದ ಕಲ್ಪನೆಯೂ ಚೀನೀಯರ ತಲೆಯಲ್ಲಿಯೇ ಸರ್ವ ಪ್ರಥಮವಾಗಿ ಅಂಕಿತಗೊಂಡಿತು. ಜಗತ್ತಿನ ತೀರ ಪುರಾತನವಾದ ಚಿತ್ರ ಲಿಪಿಗೆ ಹೋಲುವ ಚೀನದ ಲಿಪಿಯಲ್ಲಿ ಉಜ್ವಲ ಸಾಹಿತ್ಯ ಕೃತಿಗಳ ನಿರ್ಮಾಣವಾಯಿತು. ಎರಡು ಸಾವಿರ ಮೈಲು ಉದ್ದವಾದ ಚೀನದ ಮಹಾ ಗೋಡೆಯು ಮಹತ್ವಾಕಾಂಕ್ಷಿಯಾದ ಚಿನ್-ಶೀ-ಹ್ವಾಂಗತಿಯ ಕ್ರೌರ್ಯದ ಪ್ರತೀಕವಾಗಿದ್ದರೂ ಸಾವಿರಾರು ಶ್ರಮಜೀವಿಗಳು ಹಲವು ವರ್ಷಗಳ ವರೆಗೆ ನೆತ್ತರು ಹರಿಯಿಸಿ ನಿರ್ಮಿಸಿ ಜಗತ್ತಿನ ಅದ್ಭುತಗಳಲ್ಲಿ ಒಂದೆನಿಸಿತು. ಚೀನದಲ್ಲಿ ಮೂರು ವಿಶಾಲವಾದ ನದಿಗಳು ಹರಿಯುತ್ತವೆ: ಅವುಗಳ ಇಕ್ಕಡೆಯಲ್ಲಿರುವ ಭೂಮಿ ಅತ್ಯಂತ ಫಲವತ್ತಾಗಿದ್ದು, ನಿಬಿಡ ಜನ ಸಂಖ್ಯೆಯಿಂದ ಈ ಪ್ರದೇಶವು ತುಂಬಿ ತುಳುಕುತ್ತದೆ. ಕೆಂಟನ್, ಶಾಂಘೈ, ಪೇಕಿಂಗ್ ಮುಂತಾದ ದೊಡ್ಡ ದೊಡ್ಡ ನಗರಗಳೂ ಬಂದರಗಳೂ ಇಲ್ಲಿರುತ್ತವೆ. ಗುಡ್ಡ ಬೆಟ್ಟಗಳಿಂದ ತುಂಬಿದ ವಿಶಾಲವಾದ ಭೂ ಭಾಗದಲ್ಲಿ ಅತ್ಯಮೂಲ್ಯವಾದ ಖನಿಜ ಸಂಪತ್ತನ್ನು ಕಾಣಬಹುದು. ಈಶಾನ್ಯದಿಂದ ವಾಯುವ್ಯದ ವರೆಗೆ ರಶಿಯದ ಭೂಮಿಯಿಂದಲೂ ಅಲ್ಲಿಂದ ನೈಋತ್ಯದ ವರೆಗೆ ತಿಬೇಟು ಹಾಗು ಭಾರತಗಳಿಂದಲೂ ದಕ್ಷಿಣದಲ್ಲಿ ಬರ್ಮಾ, ಸಯಾಂ, ಇಂಡೋಚೀನಗಳಿಂದಲೂ ಪೂರ್ವ ದಿಸೆಯಲ್ಲಿ ಶಾಂತ ಮಹಾಸಾಗರದಿಂದಲೂ ಆವೃತವಾದ ೬೦ ಕೋಟಿ ಜನಸಂಖ್ಯೆಯುಳ್ಳ ಈ ದೇಶ ಈಗ ಕಮ್ಯುನಿಸ್ಟರ ಕೈಯಲ್ಲಿ ಒಂದೇ ಆಡಳಿತದ ಕೆಳಗೆ ಸಂಘಟಿಸಲ್ಪಟ್ಟು ಪುನರುಜ್ಜೀವನವನ್ನು ಹೊಂದುತ್ತಿದೆ.

ನಮ್ಮ ಪ್ರಧಾನ ಮಂತ್ರಿಗಳು ಇಷ್ಟರಲ್ಲೇ ಸಂದರ್ಶಿಸಲಿರುವ ಚೀನದ ವಿಷಯದಲ್ಲಿ ಭಾರತದ ಆಸ್ಥೆಗೆ ಕಾರಣಗಳೇನೆಂಬುದನ್ನು ಚರ್ಚಿಸಿದರೆ ಅಪ್ರಸ್ತುತವಾಗಲಾರದು. ಮೊದಲೇ ಹೇಳಿದಂತೆ ಚೀನವೂ ಭಾರತವೂ ಪ್ರಾಚೀನ ಸಂಸ್ಕೃತಿಯ ಕೇಂದ್ರ ಸ್ಥಾನಗಳಾಗಿರುತ್ತವೆ. ಸುಮಾರು ಎರಡು ಸಾವಿರ ವರ್ಷಗಳ ಹಿಂದೆ ಭಾರತಕ್ಕೆ ಮಧ್ಯ ಏಶ್ಯಾದಿಂದ ಯೂಎಚೀ ಮತ್ತು ಸಿಥಿಯಾನ ವಂಶಜರು ಆಗಮಿಸಿದರು. ಭಾರತೀಯ ಸಂಸ್ಕೃತಿಯನ್ನು ಸಂಪೂರ್ಣ ರಕ್ತಗತ ಮಾಡಿಕೊಂಡ ಈ ಜನರು ಸ್ವದೇಶಕ್ಕೆ ಮರಳಿದ ಬಳಿಕ ಚೀನದ ವಿಶಾಲವಾದ ಭೂಭಾಗದಲ್ಲಿ ಇದನ್ನು ಪ್ರಸಾರಮಾಡಿದರು. ಇದಾದ ಕೆಲವೇ ಶತಕಗಳಲ್ಲಿ ದಕ್ಷಿಣ ಭಾರತದಲ್ಲಿ ಆಳುತಿದ್ದ ಕುಶಾನ ರಾಜರು ತಮ್ಮ ಮೆಚ್ಚಿಗೆಯ ಬೌದ್ಧ ಧರ್ಮವನ್ನು ಪ್ರಚಾರ ಮಾಡುವುದಕ್ಕೋಸ್ಕರ ಬೌದ್ಧ ಸಾಹಿತ್ಯ ಗ್ರಂಥಗಳನ್ನೂ ಬುದ್ಧ ದೇವನ ಪ್ರತಿಮೆಗಳನ್ನೂ ಕೆಲವು ಮಂದಿ ಧರ್ಮದೂತರ ಮೂಲಕ ಚೀನದ ರಾಜನಲ್ಲಿಗೆ ಕಳುಹಿಸಿದರು. ಇತಿಹಾಸ ಸಂಶೋಧಕರ ಅಭಿಪ್ರಾಯವನ್ನು ಗಮನಿಸಿದರೆ ಭಾರತೀಯರು ನಿರ್ಯಾತ ಮಾಡಿದ ಧಾರ್ಮಿಕ ಭಾವನೆಗಳೂ ಸಾಂಸ್ಕೃತಿಕ ವೈಶಿಷ್ಟ್ಯವುಳ್ಳ ಸಂಪ್ರದಾಯಗಳೂ ಚೀನದಲ್ಲಿ ಹುಟ್ಟಿ ಬೆಳೆದು ಬಂದಿದ್ದ ಲಾವೋಜೆ ಹಾಗು ಕಾಂಫ್ಯೂಶಿಯಸರ ದರ್ಶನದ ಮೇಲೆ ಅಚ್ಚಳಿಯದ ಸಂಸ್ಕಾರವನ್ನು ಗೈದಂತೆ ಭಾಸವಾಗುತ್ತದೆ. ಇಂದಿನ ಚೀನದಲ್ಲಿ ತಾವೋ ಮತೀಯರು ಇದ್ದಾರೆ; ಕ್ರೈಸ್ತರೂ ಇದ್ದಾರೆ; ಆದರೆ ಅವರೆಲ್ಲರ ಮನೋಭಾವನೆಯ ಮೇಲೆ ಪ್ರಭುತ್ವವನ್ನು ಹೇರಬಲ್ಲಂತೆ ಬೌದ್ಧ ಧರ್ಮವು ರಾರಾಜಿಸುತ್ತಿದೆ. ಇದಕ್ಕೆ ಕಾರಣ ಭೂತರಾದ ಭಾರತೀಯ ಧರ್ಮ ದೂತರು ತಮ್ಮ ಪ್ರಾಣವನ್ನೇ ಪಣವಾಗಿಟ್ಟುಕೊಂಡು ಗಿರಿಶಿಖರಗಳನ್ನು ಏರಿ ಇಳಿದು, ಮರುಭೂಮಿಗಳನ್ನು ನಡೆದು, ಪ್ರಾಕೃತಿಕ ವಿಘ್ನಗಳೊಂದನ್ನೂ ಲೆಕ್ಕಿಸದೆ ಚೀನಕ್ಕೆ ಹೋಗಿದ್ದರು.

ಚೀನಕ್ಕೆ ಸೇರಿದ ಮಧ್ಯ ಏಶ್ಯಾದ ಭೂಭಾಗವು ಬೌದ್ಧ ಧರ್ಮದ ಮಹಾ ಕೇಂದ್ರವಾಗಿತ್ತೆಂದು ತಿಳಿದು ಬರುತ್ತದೆ. ತನ್ನ ಮಲತಾಯಿಯ ಮಾತ್ಸರ್ಯ ಹಾಗು ಕ್ರೌರ್ಯದ ದೆಸೆಯಿಂದ ಕಣ್ಣುಗಳನ್ನು ಕಳೆದು ಕೊಂಡ ಅಶೋಕ ಚಕ್ರವರ್ತಿಯ ಮಗ ಕುಣಾಲನು "ಖೋತಾನ"ವೆಂದು ಹೆಸರಾದ ಇಲ್ಲಿಗೆ ತಕ್ಷಶಿಲೆಯಿಂದ ಓಡಿಬಂದನೆಂದೂ ಪ್ರಥಮ ಭಾರತೀಯ ಶಾಸನಕರ್ತನಾಗಿ "ವಿಜಯ ವಂಶ"ವೆಂಬ ಹೊಸ ಪರಂಪರೆಯ ರಾಜರಿಗೆಲ್ಲ ಮೂಲನಾದನೆಂದೂ ಗೊತ್ತಾಗುತ್ತದೆ. ಖೋತಾನ ಎಂಬ ಶಬ್ದವು ಗೋದಾನ ಎಂಬ ಸಂಸ್ಕೃತ ಶಬ್ದದ ಅಪಭ್ರಂಶವೆಂಬುದನ್ನು ಗಮನಿಸಿದರೆ, ಬೌದ್ಧ ಭಿಕ್ಷುಗಳು ಮಧ್ಯ ಏಶ್ಯಾ ಪ್ರದೇಶಕ್ಕೆ ಹೋಗುವ ಮೊದಲೇ ಬ್ರಾಹ್ಮಣ ವಿದ್ವಾಂಸರು ಇಲ್ಲಿ ಪ್ರವೇಶಿಸಿದ್ದರೆಂದು ಅನುಮಾನಿಸಬಹುದು. ಇದಕ್ಕೆ ಪುಷ್ಟಿ ಕೊಡುವಂತೆ, ಸಂಶೋಧಕರಿಗೆ ಬ್ರಾಹ್ಮಣ ಯೋಗಿಗಳ ಚಿತ್ರವೂ, ವಸ್ತ್ರವೂ, ಯಜ್ಞೋಪವೀತವೂ ಸಿಕ್ಕಿರುತ್ತದೆ. ಆದರೆ ಬ್ರಾಹ್ಮಣರ ಪ್ರಚಂಡ ವಿಜಯದ ಕುರಿತು ಇದಕ್ಕೂ ಹೆಚ್ಚಿನ ಮಾಹಿತಿ ದೊರಕುತ್ತಿಲ್ಲ. ಬೌದ್ಧರ ಚೈತ್ರಯಾತ್ರೆಯ ಇತಿಹಾಸವನ್ನು ಮಾತ್ರ ಸ್ಪಷ್ಟವಾಗಿ ರೇಖಿಸಬಹುದು: ಈಗ ತಿಳಿದು ಬಂದಿರುವಂತೆ ಕಾಶ್ಮೀರದಿಂದ ತೆರಳಿದ ವಿರೋಚನನೆಂಬ ಭಿಕ್ಷುವು ಧರ್ಮ ದೂತರಲ್ಲೆಲ್ಲ ಮೊತ್ತ ಮೊದಲಿಗನಾಗಿದ್ದು, ಬೌದ್ಧ ಧರ್ಮವನ್ನು ಭದ್ರ ತಳಹದಿಯ ಮೇಲೆ ಪ್ರಸ್ಥಾಪಿಸಿದನು. ತರುವಾಯ ಅಲ್ಲಿಗೆ ತೆರಳಿದ ವಿಜಯವೀರ್ಯ ಮುಂತಾದವರು ಧರ್ಮಪೀಠಗಳನ್ನೂ ವಿಹಾರಗಳನ್ನೂ ನಿರ್ಮಿಸಿದರು. ಗೌತಮೀ ವಿಹಾರವೆಂಬ ಕೇಂದ್ರವು ಇವುಗಳಲ್ಲೆಲ್ಲ ಪ್ರಸಿದ್ಧವಾಗಿದ್ದು ಮಹಾಯಾನವೆಂಬ ಬೌದ್ಧ ಪರಂಪರೆಯ ಶಿಕ್ಷಣವನ್ನು ಪಡೆಯುವುದಕ್ಕೋಸ್ಕರ ಇಲ್ಲಿಗೆ ಚೀನಾದ ಪೂರ್ವ ಭಾಗದಿಂದಲೂ ಭಾರತದಿಂದಲೂ ಸಹಸ್ರಾರು ವಿದ್ಯಾರ್ಥಿಗಳು ಆಗಮಿಸುತಿದ್ದರು. ಬುದ್ಧಸೇನನೆಂಬ ಪ್ರಾಧ್ಯಾಪಕರ ನೇತೃತ್ವದಲ್ಲಿ ಅನೇಕ ಭಾರತೀಯ ಪಂಡಿತರು ಇಲ್ಲಿ ಅಧ್ಯಾಪಕರಾಗಿ ಕೆಲಸ ಮಾಡುತಿದ್ದರು.

ಚೀನದ ರಾಜ ದೂತರಲ್ಲಿ ಒಬ್ಬನಾದ ಚಾಂಗಶೇಂಗನು ಕ್ರಿ. ಶ. ೩೫೦ರ ಸುಮಾರಿನಲ್ಲಿ ಸಾಂಸಾರಿಕ ಜೀವನದಲ್ಲಿ ವೈರಾಗ್ಯವನ್ನು ಹೊಂದಿ ಗೌತಮೀ ವಿಹಾರಕ್ಕೆ ಆಗಮಿಸಿ, ಬುದ್ಧಸೇನರ ಶಿಷ್ಯನಾಗಿ ನ್ಯಾಯಶಾಸ್ತ್ರವನ್ನು ಕಲಿಯತೊಡಗಿದನೆಂದು ಹೇಳಲಾಗುತ್ತದೆ. ಆ ಮೇಲೆ ನೂರು ವರ್ಷಗಳ ತರುವಾಯ ಇಲ್ಲಿಗೆ ಆಗಮಿಸಿದ ಭಾರತೀಯ ಬೌದ್ಧ ಭಿಕ್ಷು ಪುಬ್ಬನು ಭಾರತದ ವಿಹಾರಗಳಿಗಿಂತಲೂ ಗೌತಮೀ ವಿಹಾರವು ಶ್ರೇಷ್ಠವಾಗಿತ್ತೆಂದು ಅಭಿಪ್ರಾಯಪಟ್ಟಂತೆ ತಿಳಿದು ಬರುತ್ತದೆ. ಬೌದ್ಧ ಧರ್ಮ ಗ್ರಂಥಗಳ ಗಹನ ಅಧ್ಯಯನವನ್ನು ನಡೆಸಿದ ಚೀನೀಯರು ದೇಶದ ಬೇರೆ ಬೇರೆ ಭಾಗಗಳಿಗೆ ತೆರಳಿ ಬುದ್ಧದೇವನ ಅಮರ ಸಂದೇಶವನ್ನು ಮುಟ್ಟಿಸುತಿದ್ದರು. ಬೌದ್ಧ ಧರ್ಮದಲ್ಲಿ ತುಂಬ ಶ್ರದ್ಧೆಇದ್ದ ಬೇರೆ ಕೆಲವರು ಗೌತ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: UDIPI, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಶೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಶೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಶೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

UDIPI, S. India

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್

ರಾಜಮಹೇಂದ್ರಿ — ಇವರ

ಸ್ತ್ರೀ ಸುಧ

ಸ್ತ್ರೀಯರ ಸಮಸ್ತ ವ್ಯಾಧಿಗಳಿಗೆ ನಮ್ಮ ಸ್ತ್ರೀ ಸುಧ ಸ್ತ್ರೀಯರಿಗೆ ಸಂಭವಿಸುವ ಸಮಸ್ತ ಗರ್ಭಾಶಯ ವ್ಯಾಧಿಗಳನ್ನು, ಋತು ದೋಷಗಳನ್ನು, ಋತು ರೋಗ, ಸರಿಯಾಗಿ ಬಹಿಷ್ಠೆ ಆಗದಿರುವುದು ಮೊದಲಾದ ಸಮಸ್ತ ವ್ಯಾಧಿಗಳನ್ನು ನಾಶಮಾಡುವುದು. ಸಂತಾನವನ್ನು ಕಲಿಸುವುದು. ಒಂದು ತಿಂಗಳಿಗೆ ಸರಿ ಹೋಗುವ ೧ ತೊಲದ ಔಷಧಿ ರೂ. ೪-೦-೦

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲ — ಬೆಂಗಳೂರು-2.

(2) ಷಾ ಕಂಪೆನಿ — ಮಂಗಳೂರು-1.

(3) ಅಂಬಿಕಾ ಮೆಡಿಕಲ್ ಸ್ಟೋರ್ಸ್ — ಚಿಂತಾಮಣಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)

ರುಚಿಕರವಾದ ಊಟ— ಹವೇಶೀರ್ (Airy) ವಸತಿ,

ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.

ತಿಂಗಳೊಂದರ ರೂ. 52/- ಮಾತ್ರ.

ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.

ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್

ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.

ವ್ಯವಸ್ಥಾಪಕ: ವಿ. ಯಸ್. ಪ್ರಭು.

ಸಿಂಹಳ ವಾಸಿಗಳಾದ ಭಾರತೀಯ ವಂಶಜರು

ಅವರು ಇದಿರಿಸಬೇಕಾದ ಅಡಚಣೆಗಳು

ಸಿಂಹಳಕ್ಕೆ ವಲಸೆ ಹೋಗಿ ಅಲ್ಲಿ ನೆಲೆನಿಂತ ಭಾರತೀಯ ವಂಶಜರ ರಾಷ್ಟ್ರೀಯತ್ವದ ಪ್ರಶ್ನೆಯು ಇಂದು ಉಭಯ ರಾಷ್ಟ್ರಗಳಲ್ಲಿ ವೈಮನಸ್ಯವನ್ನು ತರುವಷ್ಟು ಮುಂದುವರಿದಿರುವುದು. ಸಮಸ್ಯೆಯನ್ನು ಹೇಗಾದರೂ ಮಾಡಿ ಬಗೆಹರಿಸಬೇಕೆಂದು ಕಳೆದವಾರ ಸಿಂಹಳ ಸರಕಾರದ ಶಿಷ್ಟಮಂಡಳವೊಂದು ಪ್ರಧಾನಿ ಕೋಟಿಲವಾಲರ ಧುರೀಣತ್ವದಲ್ಲಿ ಹೊಸ ದೆಹಲಿಗೆ ಆಗಮಿಸಿತು. ಸಿಂಹಳವಾಸಿ ಭಾರತೀಯರ ನೇರಾದ ಪ್ರತಿನಿಧಿಗಳೂ ಈ ಸಂದರ್ಭದಲ್ಲಿ ಹೊಸದೆಹಲಿಗೆ ಬಂದು ಪ್ರಧಾನಿ ನೆಹರೂರವರಿಗೆ ತಮ್ಮ ನಿಲುಮೆಯನ್ನು ಮನವರಿಕೆಮಾಡಿಕೊಟ್ಟರು. ಇಲ್ಲಿಯ ಮಾತುಕತೆಗಳ ವಿವರವನ್ನು ಬೇರೆ ಪುಟದಲ್ಲಿ ಕೊಟ್ಟಿದ್ದೇವೆ. ಮಾತುಕತೆಗಳಿಗೆ ಹಿನ್ನೆಲೆಯನ್ನು ಒದಗಿಸಿದ ಸಂಗತಿಗಳನ್ನು ಮಾತ್ರ ಸಂಗ್ರಹವಾಗಿ ಕೆಳಗೆ ವಿವರಿಸಿದ್ದೇವೆ.

ಭಾರತಕ್ಕೂ ಸಿಂಹಳಕ್ಕೂ ಪ್ರಾಚೀನ ಕಾಲದಿಂದಲೂ ನಿಕಟ ಸಂಬಂಧವಿದೆಯೆಂಬುದನ್ನು ಪ್ರತ್ಯೇಕ ಹೇಳುವ ಅಗತ್ಯ ಕಾಣುವುದಿಲ್ಲ. ರಾಮನ ಕಾಲದಲ್ಲಿ ರಾವಣನ ನಿವಾಸ ಸ್ಥಾನವಾಗಿದ್ದರೂ ಹಿಂದಿನಿಂದ, ಅಶೋಕ ಚಕ್ರವರ್ತಿಯ ಕೃಪೆಯಿಂದ, ಸಿಂಹಳದಲ್ಲಿ ಬೌದ್ಧ ಧರ್ಮವು ನೆಲೆಯೂರಿತು. ಕೆಂಡಿಯಾನರ ಸಂಸ್ಕೃತಿಯ ಪ್ರಾದುರ್ಭಾವವು ಸಿಂಹಳದಲ್ಲಿ ಕಾಣಿಸುತಿದ್ದರೂ ಭಾರತೀಯ ಪರಂಪರೆಯ ವರ್ಚಸ್ಸು ಅಲ್ಲಿ ಲುಪ್ತವಾಗಿಲ್ಲ. ವ್ಯಾಪಾರೋದ್ದೇಶದಿಂದ ಇಲ್ಲಿಗೆ ಆಗಮಿಸಿದ ಬ್ರಿಟಿಷರ ದೆಸೆಯಿಂದ ಕ್ರೈಸ್ತ ಧರ್ಮಕ್ಕೆ ಇಲ್ಲಿ ಅವಕಾಶ ದೊರೆಯಿತು. ತೆಂಗು, ಚಾ, ರಬ್ಬರು ಮುಂತಾದ ರೊಕ್ಕದ ಪೈರನ್ನು ಇಲ್ಲಿ ಬೆಳೆಯುತಿದ್ದರೂ ಬಟ್ಟೆಬರೆ ಮುಂತಾದ ವಿಷಯಗಳಲ್ಲಿ ಭಾರತವನ್ನು ಅದು ಹೊಂದಿಕೊಂಡಿದ್ದು, ಕೋಟ್ಯಂತರ ರೂಪಾಯಿಗಳ ವ್ಯಾಪಾರವು ನಮ್ಮೊಳಗೆ ನಡೆಯುತ್ತ.

ಕಳೆದ ಶತಮಾನದಲ್ಲಿ ಸಿಂಹಳದಲ್ಲಿ ಹೊಸತಾಗಿ ತೋಟಗಳನ್ನು ನಿರ್ಮಿಸಿ, ಕೃಷಿಯನ್ನು ಕೈಗೊಳ್ಳಲು ಪ್ರಯತ್ನ ನಡೆದಾಗ, ಅಲ್ಲಿ ದುಡಿಯಲು ಕುಶಲರಾದ ಕೆಲಸಗಾರರು ಬೇಕಾದರು. ಆಗ ತಮಿಳುನಾಡಿನ ಸಾವಿರಾರು ಕೂಲಿಗಳು ಅಲ್ಲಿಗೆ ತೆರಳಿದರು. ತಮ್ಮ ನೆತ್ತರಿನಿಂದ ಸಿಂಹಳ ದ್ವೀಪದಲ್ಲಿ ಸಮೃದ್ಧಿಯನ್ನು ತಂದರು. ಅದನ್ನೆ ತಮ್ಮ ನಾಡೆಂದು ತಿಳಿದವರೂ ಇದ್ದರು. ಅಂಥವರ ಮಕ್ಕಳು ಮೊಮ್ಮಕ್ಕಳು ಮರಿಮಕ್ಕಳನ್ನೆ ನಾವೀಗ ಅಲ್ಲಿ ಕಾಣುತಿದ್ದೇವೆ. ಭಾರತದ ದೃಷ್ಟಿಯಲ್ಲಿ ಸುಮಾರು ೯ ಲಕ್ಷದಷ್ಟಿರುವ ಈ ಜನರು ಸಿಂಹಳ ದ್ವೀಪದ ರಾಷ್ಟ್ರೀಯತ್ವಕ್ಕೆ ಯೋಗ್ಯತೆಯನ್ನು ಹೊಂದಿದ ನೆಲದ ಮಕ್ಕಳು. ಆದರೆ ಸಿಂಹಳದ ಸರಕಾರ ಇದನ್ನು ಒಪ್ಪುವುದಿಲ್ಲ.

ಐದು ವರ್ಷಗಳಿಂದ ರಾಷ್ಟ್ರೀಯತ್ವದ ಪ್ರಶ್ನೆಯು ಉಭಯ ಸರಕಾರಗಳಿಗೂ ತಲೆನೋವನ್ನುಂಟು ಮಾಡುತಿದ್ದು ಕಳೆದ ಜನವರಿಯಲ್ಲಿ ನೆಹರೂ- ಕೋಟಿಲವಾಲರೊಡನೆ ಈ ಕುರಿತು ಒಪ್ಪಂದವೊಂದು ನಡೆಯಿತು. ಇದರಂತೆ ಅಕ್ರಮವಾಗಿ ವಲಸೆ ಹೋಗುವುದನ್ನು ತಡೆಯಲು ಭಾರತ ಸರಕಾರ ಪ್ರಯತ್ನಿಸಲು ಬದ್ಧವಾಯಿತು. ಇದರಲ್ಲಿ ಯಶಸ್ಸು ದೊರೆತಿರುವುದರಿಂದ, ರಾಷ್ಟ್ರೀಯರಲ್ಲದ ನಿವಾಸಿಗಳ ಪಟ್ಟಿಯೊಂದನ್ನು ಸಿದ್ಧಗೊಳಿಸುವ ಜವಾಬ್ದಾರಿಯತ್ತ ಸಿಂಹಳ ಸರಕಾರ ಗಮನ ಕೊಡಬೇಕಾಗಲಿಲ್ಲ. ಜನವರಿ ತಿಂಗಳ ಸುಮಾರಿಗೆ ಹೆಚ್ಚು ಕಡಿಮೆ ೨೫ ಸಾವಿರ ಭಾರತೀಯ ವಂಶಜರಿಗೆ ರಾಷ್ಟ್ರೀಯತ್ವದ ಅಧಿಕಾರವನ್ನು ಕೊಟ್ಟಿದ್ದರು. ಅಂದಿನಿಂದ ಸಂದ ಒಂಭತ್ತು ತಿಂಗಳ ಅವಧಿಯಲ್ಲಿ ಮತ್ತೆ ೧೦ ಸಾವಿರ ಜನಕ್ಕೆ ರಾಷ್ಟ್ರೀಯತ್ವವನ್ನು ದಯಪಾಲಿಸಲಾಯಿತು. ಇದೇ ರೀತಿಯಲ್ಲಿ ಮುಂದುವರಿದರೆ, ಒಪ್ಪಂದದಲ್ಲಿ ಎರಡು ವರ್ಷಗಳಲ್ಲಿ ಮುಗಿಯಬೇಕೆಂದಿರುವ ಈ ಕೆಲಸಕ್ಕೆ ಇಪ್ಪತ್ತು ವರ್ಷಗಳಾದರೂ ಬೇಕಾಗಬಹುದು. ಸಿಂಹಳ ಸರಕಾರವು ಇಂಥ ವಿಳಂಬವಾಗದಂತೆ ಯಾವುದೇ ಕ್ರಮವನ್ನು ತೆಗೆದುಕೊಂಡಿಲ್ಲ. ಪರಿಣಾಮವಾಗಿ ಒಟ್ಟು ೫೦ ಸಾವಿರ ಮಂದಿ ಭಾರತೀಯ ವಂಶಜರಿಗಾದರೂ ರಾಷ್ಟ್ರೀಯತ್ವದ ಅಧಿಕಾರ ಸಿಗುವುದು ಸಂಶಯ.

ವಿಳಂಬ ಧೋರಣೆಯೇ ಸಾಕಷ್ಟು ನಿರಾಶಾದಾಯಕವಾಗಿರುವಾಗ ಸಿಂಹಳ ಸರಕಾರವು ನಾಗರಿಕ ಅಧಿಕಾರಗಳಿಗಾಗಿ ಒದಗಿಸಬೇಕಾದ ರುಜುವಾತುಗಳನ್ನು ಬಹಳ ಬಿಗಿಗೊಳಿಸಿರುವುದು ಇನ್ನೊಂದು ದೊಡ್ಡ ಆತಂಕವೆನಿಸಿದೆ. ಯೋಗ್ಯ ಕಾಗದ ಪತ್ರಗಳ ರುಜುವಾತಿಲ್ಲದೆ ಯಾರಿಗೂ ರಾಷ್ಟ್ರೀಯತ್ವದ ಅಧಿಕಾರ ದೊರಕುವಂತಿಲ್ಲ—ಬಡ ಭಾರತೀಯ ವಂಶಜರಲ್ಲಿ ಅಂಥ ರುಜುವಾತುಗಳೇನೂ ಇಲ್ಲ. ಅವರ ಬಾಯ್ದೆರೆ ಹೇಳಿಕೆಗಳಿಗೆ ಬೆಲೆ ಸಿಗುತ್ತಿಲ್ಲ. ಹೀಗಾಗಿ ನಾಗರಿಕ ಅಧಿಕಾರಕ್ಕೆ ಮಾಡಿಕೊಂಡ ಅರ್ಜಿಗಳಲ್ಲಿ ಹೆಚ್ಚಿನವನ್ನು (೮೫ %) ಸುಲಭದಲ್ಲಿ ತಿರಸ್ಕರಿಸಲಾಗುತ್ತದೆ. ಸಿಂಹಳದ ಮಾಜಿ ಪ್ರಧಾನಿಗಳ ಅಭಿಪ್ರಾಯದಂತೆ ಕನಿಷ್ಠ ೪೫೦೦೦೦ ಮಂದಿಗಾದರೂ ನಾಗರಿಕ ಅಧಿಕಾರ ದೊರಕಬೇಕು. ಭಾರತೀಯರ ನಿಲುಮೆಯಂತೆ, ೧೯೪೮ರ ಬಳಿಕ ಭಾರತದ ಪಾಸುಪೋರ್ಟಿನ ಬಲದಿಂದ ಅಲ್ಲಿಗೆ ಹೋದ ೧೫೦೦೦೦ ಜನರನ್ನು ಬಿಟ್ಟರೆ ಉಳಿದೆಲ್ಲರಿಗೂ (ಅಂದರೆ ೮೩೦೦೦೦) ರಾಷ್ಟ್ರೀಯತ್ವ ಪ್ರಾಪ್ತವಾಗಬೇಕು. ಆದರೆ ಸಿಂಹಳದಲ್ಲಿ ಹುಟ್ಟಿದ, ಭಾರತದ ಮುಖವನ್ನೆ ಎಂದೆಂದಿಗೂ ನೋಡಿರದ ಜನರ ಸಂಗತಿಯಲ್ಲೂ ಸಿಂಹಳ ಸರಕಾರ ಕರುಣೆ ತೋರಿಸುತ್ತಿಲ್ಲ.

ನಾಗರಿಕ ಅಧಿಕಾರಗಳಿಗಾಗಿ ಅರ್ಜಿ ಹಾಕಿ ನಿರಾಶೆಗೊಂಡವರು ಇಚ್ಛಿಸಿದ ಪಕ್ಷದಲ್ಲಿ ಭಾರತೀಯ ನಾಗರಿಕತೆಗಾಗಿ ಅರ್ಜಿ ಹಾಕಬಲ್ಲರು. ಆದರೆ ಇಲ್ಲಿ ನಮ್ಮ ರಾಜ್ಯ ಘಟನೆಯಲ್ಲಿ ಹೇಳಲಾದ ಶರ್ತಗಳನ್ನು ಪೂರೈಸಬೇಕಾಗುತ್ತದೆ. ಮಾತ್ರವಲ್ಲ ತಮ್ಮದೆನ್ನುವ ಯಾವುದನ್ನೂ ಹೊಂದಿರದ ಭಾರತಕ್ಕೆ ಇಂಥವರು ಬಂದು ಹೊಸತಾಗಿ ಜೀವನವನ್ನು ತೊಡಗಬೇಕಾಗುತ್ತದೆ. ತರುಣ – ತರುಣಿಯರ ವಿಷಯದಲ್ಲಿ ಇದು ಹೆಚ್ಚಿನ ಕಷ್ಟವೆಂದು ತೋರಲಿಕ್ಕಿಲ್ಲ – ಆದರೆ ಜೀವನದ ಕೊನೆಯ ದಿನಗಳನ್ನು ಕಳೆಯುತ್ತಿರುವ ಮುದುಕರ ವಿಷಯದಲ್ಲಿ ಇದು ಅನ್ಯಾಯಕರವೆನಿಸುತ್ತದೆ. ಆದುದರಿಂದ ಭಾರತೀಯ ನಾಗರಿಕರಾಗಿ ನೊಂದಾಯಿಸಿಕೊಳ್ಳಬಲ್ಲವರ ಪ್ರಮಾಣವು ಬಹಳ ಮಿತವಾಗಿರುತ್ತದೆ. ಸಿಂಹಳ ಸರಕಾರವು ಭಾರತೀಯ ವಂಶಜರು ದ್ವೀಪವನ್ನು ಬಿಟ್ಟು ಹೋಗುವಂತೆ ಎಷ್ಟು ಉತ್ತೇಜನೆ ಕೊಟ್ಟರೂ ಭಾರತಕ್ಕೆ ಕಾಲಿರಿಸಲು ಎಷ್ಟಕ್ಕೂ ಸಾಧ್ಯವಾಗದ ದುರ್ದೈವಿಗಳು ಇದ್ದಾರೆ. ಅವರಿಗೆ ಅರಾಷ್ಟ್ರಕರೆಂದು ನಾಮಕರಣ ಮಾಡುವುದು ಅನ್ಯಾಯವಾದರೂ ಬೇರೆ ಉಪಾಯ ಕಾಣುವುದಿಲ್ಲ.

ಭಾರತ ಸರಕಾರದ ಅಭಿಪ್ರಾಯದಂತೆ, ಸಿಂಹಳದಲ್ಲಿ ಕನಿಷ್ಠ ೫ ವರ್ಷಗಳನ್ನಾದರೂ ಕಳೆದು ಮುಂದಕ್ಕೂ ಅಲ್ಲಿಯೇ ಉಳಿಯಬಯಸುವ ಜನರು ನಾಗರಿಕ ಅಧಿಕಾರವನ್ನು ಹೊಂದುವುದರಲ್ಲಿ ತಪ್ಪೇನೂ ಇಲ್ಲ. ಇದಕ್ಕೆ ಒಪ್ಪದೆ, ಸಿಂಹಳ ಅಥವಾ ಭಾರತದ ನಾಗರಿಕ ಅಧಿಕಾರಗಳನ್ನು ಹೊಂದದ ಜನರಿಗೆ ಆಹಾರ ದೊರೆಯಲಾರದು, ಕೆಲಸ ಸಿಗಲಾರದು, ದ್ವೀಪವನ್ನು ಬಿಟ್ಟು ಅವರು ಹೊರಗೆಲ್ಲಿಗೂ ಹೋಗಲಾರರು ಎಂದು ಮುಂತಾಗಿ ಸಿಂಹಳವು ಕಠಿಣ ನಿರ್ಬಂಧಗಳನ್ನು ಹೇರಿದರೆ, ಅದು ಕ್ರೂರ ಶಾಸನವೆನಿಸುತ್ತದೆ; ಇಷ್ಟು ಹೆಚ್ಚಿನ ಉತ್ಸಾಹವು ಸದ್ಭಾವನೆಯನ್ನು ಕೆಡಿಸುವುದಲ್ಲದೆ ಮಾನವೀಯತೆಯ ಕೊಲೆಯನ್ನು ಮಾಡುತ್ತದೆ.

ಹೊರಗಿನಿಂದ ಬಂದ ಜನರೆಂದು ಕೆಲವು ತಲೆಮಾರುಗಳಿಂದ ಸಿಂಹಳದಲ್ಲಿ ನೆಲೆನಿಂತು ಆ ದ್ವೀಪದ ಶ್ರೇಯಸ್ಸಿಗಾಗಿ ದುಡಿದವರನ್ನು ದೂಷಿಸುವ ನೀತಿಯೇ ಯೋಗ್ಯವಾದುದಲ್ಲ. ತೆರಿಗೆಯನ್ನು ವಸೂಲು ಮಾಡುತ್ತಿದ್ದರೂ ಶಾಲೆಗಳಿಂದ ಭಾರತೀಯ ಮಕ್ಕಳನ್ನು ಹೊರಗೆ ನೂಕಿರೆಂದು ಚಳವಳಿಸುವ ಸಿಂಹಳದ ಧುರೀಣರೂ ಒಳ್ಳೆಯದನ್ನು ಮಾಡುತ್ತಿಲ್ಲ. ಭಾರತೀಯ ವಂಶಜರ ವಿಷಯದಲ್ಲಿ ಸಿಂಹಳವು ಜುಗುಪ್ಸೆ ಹೊಂದುವಂಥ ಕಾರಣವೇನೂ ಇಲ್ಲದಿರುವಾಗ, ಬದಲಾಗಿ ಅಭಿಮಾನ ಹೊಂದುವುದೇ ನ್ಯಾಯವಿದ್ದಾಗ, ಪ್ರಶ್ನೆಯನ್ನು ದೊಡ್ಡದು ಮಾಡಿಕೊಂಡು ಮೈತ್ರಿಯನ್ನು ಕೆಡಿಸಿಕೊಳ್ಳುವುದು ಇಷ್ಟವಾಗಲಾರದು. ಇನ್ನಾದರೂ ಪರಿಸ್ಥಿತಿಯನ್ನು ಊರ್ಜಿತಗೊಳಿಸಲು ಸಿಂಹಳ ಸರಕಾರ ಸಂಕಲ್ಪ ಬದ್ಧವಾಗಲೆಂದು ಆಶಿಸೋಣ.

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:- ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)
ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ವಾರದ ವಾರ್ತೆಯ ಮಹಾನುಭಾವರು

ಖಾನರ ಆನಂದ : ದೇಶಮುಖರ ಸಲಹೆ : ನೆಹರೂರ ಚಿಂತೆ : ರಾಜಾಜಿಯ ಸಂತಾಪ

ಅಂತಾರಾಷ್ಟ್ರೀಯ ನ್ಯಾಯಾಲಯ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ವಾರ್ತಾಪುರುಷರಲ್ಲೆಲ್ಲ ಅಗ್ರೇಸರನಾಗಿ ಮೆರೆಯುವ ಭಾಗ್ಯ ಕಳೆದ ವಾರ ಪಾಕಿಸ್ತಾನದ ವಿದೇಶಾಂಗ ಸಚಿವ ಡಾ. ಜಾಫರುಲ್ಲಾ ಖಾನರಿಗೆ ಬಂದಿತು. ಭಾರತದ ಶ್ರೀ ಬೆನಗಲ್ ನರಸಿಂಗರಾಯರ ನಿಧನದಿಂದ ಅಂತಾರಾಷ್ಟ್ರೀಯ ನ್ಯಾಯಾಲಯದಲ್ಲಿ ಖಾಲಿಬಿದ್ದ ನ್ಯಾಯಮೂರ್ತಿಗಳ ಸ್ಥಾನಕ್ಕೆ ಜಾಫರುಲ್ಲರು ಆಯ್ಕೆ ಹೊಂದಿದರು. ಇವರ ಪ್ರತಿಸ್ಪರ್ಧಿಗಳಾಗಿ ಭಾರತದ ಡಾ. ರಾಧಾ ವಿನೋದ ಪಾಲರು ನಿಂತಿದ್ದರು. ಪ್ರಥಮ ಚುನಾವಣೆಯು ನಡೆದಾಗ ಪಾಲರಿಗೆಯೇ ಖಾನರಿಗಿಂತ ಬಹುಮತ ದೊರೆಯಿತು. ಇಸ್ರೇಲಿಯ ಪ್ರತಿನಿಧಿಯು ವಾಗ್ದಾನ ಕೊಟ್ಟಿದ್ದಂತೆ ಮತದಾನವನ್ನು ಮಾಡುತಿದ್ದರೆ, ಪಾಲರೇ ಆರಿಸಿ ಬರುತಿದ್ದರು. ಆದರೆ ಜಾಗತಿಕ ವಾತಾವರಣದಲ್ಲಿ ನ್ಯಾಯಾಂಗದಂಥ ಪವಿತ್ರ ವಿಷಯದ ಮೇಲೂ ರಾಜಕಾರಣದ ವಿಷಗಾಳಿ ಬೀಸುತ್ತಿರುತ್ತದೆ. ಡಾ. ಪಾಲರು ಅಂತಾರಾಷ್ಟ್ರೀಯ ನ್ಯಾಯ ಕ್ಷೇತ್ರದಲ್ಲಿ ಒಳ್ಳೆಯ ಹೆಸರನ್ನು ಸಂಪಾದಿಸಿದ್ದರು; ಜಪಾನಿ ಯುದ್ಧಾಪರಾಧಿಗಳ ವಿಚಾರಣಾ ಮಂಡಳದ ಅಧ್ಯಕ್ಷರೂ ಆಗಿದ್ದರು. ಹಾಗೆಂದು, ಅಣು-ಬಾಂಬು ಹಾಕಿದವರೇ ಮಹಾಪರಾಧಿಗಳು ಎಂಬುದಾಗಿ ಖಂಡತುಂಡವಾಗಿ ಹೇಳಿದ ಇವರ ಧೈರ್ಯಕ್ಕೆ ಕುತಂತ್ರಿಗಳು ಹೆದರುತ್ತಾರೆ. ಉಪಾಯವಾಗಿ ಇವರ ಆಯ್ಕೆಯಾಗದಂತೆ ತಡೆಯುತ್ತಾರೆ. ಪರಿಣಾಮವಾಗಿ ಇಸ್ರೇಲಿಯ ಪ್ರತಿನಿಧಿ ಮತದಾನ ಕಾಲಕ್ಕೆ ಎಲ್ಲಿಗೋ ಹೊರಗೆ ಹೋದರು. ಎರಡನೆಯ ಸಲ ಮತದಾನವಾಗಬೇಕಾಯಿತು—ಆಗ ಅಮೇರಿಕದ ಬೆಂಬಲ ಖಾನರಿಗೆ ಇರುವುದನ್ನು ನೋಡಿ ಕೆಲವರು ಪಾಲರಿಗೆ ತಾವಿತ್ತ ಬೆಂಬಲವನ್ನು ಹಿಂದೆಗೆದುಕೊಂಡರು.

ಜಾಫ್ರುಲ್ಲರ ವ್ಯಕ್ತಿತ್ವ

ಅಲ್ಪ ಬಹುಮತದಿಂದ ಆರಿಸಿಬಂದರೂ ಖಾನರು ಅಂತಾರಾಷ್ಟ್ರೀಯ ನ್ಯಾಯಮೂರ್ತಿಯಾಗಲು ಪಾಲರಷ್ಟೇ ಯೋಗ್ಯ ವ್ಯಕ್ತಿ ಎಂಬುದರಲ್ಲಿ ಪ್ರತಿಮಾತಿಲ್ಲ. ಪಾಕಿಸ್ತಾನದ ವ್ಯಾಮೋಹದಿಂದ ಅವರು ಭಾರತವನ್ನು ಬಿಡದಿರುತಿದ್ದರೆ, ಫೆಡರಲ್ ಕೋರ್ಟಿನ ನ್ಯಾಯಮೂರ್ತಿಗಳಾಗಿದ್ದ ಇವರು, ಇಂದು ಭಾರತದ ವರಿಷ್ಠ ನ್ಯಾಯಸ್ಥಾನದಲ್ಲಿ ಕುಳ್ಳಿರುತಿದ್ದರು. ಮಹಮ್ಮದಾಲಿ ಜಿನ್ನಾರ ಬಲಗೈ ಬಂಟರಾಗಿ ದುಡಿದು, ಪಾಕಿಸ್ತಾನದ ನಿಲುಮೆಯನ್ನು ಲೋಕದ ಮುಂದೆ ತರ್ಕಪೂರ್ಣವಾಗಿ ಮಂಡಿಸುವಲ್ಲಿ ಯಶಸ್ಸು ಗಳಿಸಿದರು. ಸಂಯುಕ್ತ ರಾಷ್ಟ್ರಸಂಘದಲ್ಲಿ ಅವರ ಮಾತಿಗೆ ಯಾವಾಗಲೂ ಬೆಲೆ ಬರುತ್ತದೆ; ಕಾಶ್ಮೀರ ಪ್ರಶ್ನೆಯಲ್ಲಿ ಲೋಕದ ಸಹಾನುಭೂತಿಯು ಪಾಕಿಸ್ತಾನದ ಕಡೆಗಿರುವಂತೆ ಮಾಡಲು ಅವರಷ್ಟು ಬೇರೆ ಯಾರೂ ಪ್ರಯತ್ನಿಸಲಿಲ್ಲ. ಆದರೆ ಈಚೆಗೆ ಅಹಮದೀಯಾ ವಿರೋಧ ಚಳವಳವೇ ಮುಂತಾದ ಪಾಕಿಸ್ತಾನದ ಗೊಂದಲಮಯ ವಾತಾವರಣದಲ್ಲಿ ಸ್ವದೇಶದಲ್ಲಿ ಅವರ ಪ್ರತಿಷ್ಠೆ ಮಸುಕಾಯಿತು. ಗೌರವದಿಂದ ಕರಾಚಿಯನ್ನು ಬಿಟ್ಟು ಹೊರಗೆಲ್ಲಿಗಾದರೂ ಹೋಗಲು ಅವರು ಬಯಸುತಿದ್ದರು: ಈಗ ವರ್ಷಕ್ಕೆ ಇಪ್ಪತ್ತು ಸಾವಿರ ಡಾಲರುಗಳ ವರಮಾನವಿರುವ ಹೊಸ ಹುದ್ದೆ ದೊರಕಿದ್ದರಿಂದ ಅವರು ಗೆದ್ದರು. ಆದರೆ ಪಾಕಿಸ್ತಾನಕ್ಕೆ ಜಾಫರುಲ್ಲರು ಬಿಟ್ಟು ಹೋದ ಸ್ಥಾನವನ್ನು ತುಂಬಬಲ್ಲ ಸಮರ್ಥರು ಯಾರೂ ಸಿಗುತ್ತಿಲ್ಲ.

ಅಭಿವೃದ್ಧಿ ಪ್ರಯತ್ನ

ಕೊಲಂಬೋ ಯೋಜನೆಯ ಪ್ರಗತಿಯನ್ನು ಕುರಿತು ವಿಚಾರ ವಿನಿಮಯ ನಡೆಸಲು ಒಟ್ಟಾವಾದಲ್ಲಿ ಜರಗಿದ ಸಭೆಗೆ ಹೋಗಿದ್ದ ಭಾರತದ ಅರ್ಥಸಚಿವ ಶ್ರೀ ದೇಶಮುಖರು ಹಿಂದುಳಿದ ರಾಷ್ಟ್ರಗಳ ಪಕ್ಷವನ್ನು ಪ್ರತಿಪಾದಿಸುವಲ್ಲಿ ತುಂಬ ಯಶಸ್ಸನ್ನು ಗಳಿಸಿದರು. ಭಾರತದ ಮಂತ್ರಿಮಂಡಳದಲ್ಲಿ ತನ್ನ ಖಾತೆಯ ಹೊಣೆಗಾರಿಕೆಯು ಸಂಪೂರ್ಣ ಅರಿವಿರುವ ಹಾಗು ಒಳಹೊರಗೆಲ್ಲವನ್ನೂ ತಿಳಿದುಕೊಂಡ ಕೆಲವೇ ಮಂದಿಯಲ್ಲಿ ದೇಶಮುಖರ ಸ್ಥಾನ ಮೊದಲಿಗೆ ಬರುತ್ತದೆ. ಅವರು ಆಡಳಿತ ವರ್ಗದಲ್ಲಿರುವಾಗಲಾಗಲೀ ಮುಂದೆ ರಿಜರ್ವ ಬೇಂಕಿನ ಗವರ್ನರರಾಗಿ ಕೆಲಸ ಮಾಡುವಾಗಲಾಗಲೀ ತಮ್ಮ ಕರ್ತವ್ಯ ಭಾರವನ್ನು ಎಳ್ಳಷ್ಟೂ ತಪ್ಪದೆ ನಿರ್ವಹಿಸುತಿದ್ದರು. ಘನ ವಿದ್ವಾಂಸರಾದ ದೇಶಮುಖರು ವಿಷಯದ ಕೂಲಂಕಷ ಪರಿಚಯವನ್ನು ಮಾಡಿಕೊಳ್ಳದೆ ತೃಪ್ತಿ ಹೊಂದುವುದಿಲ್ಲ. ಆದುದರಿಂದ ಅವರು ಅಧಿಕಾರ ವಾಣಿಯಿಂದ ಮಾತನಾಡುವಾಗ ಎಲ್ಲರೂ ಕಿವಿಗೊಟ್ಟು ಅದನ್ನು ಕೇಳುತ್ತಾರೆ. ಉಳಿದ ಮಂತ್ರಿಗಳು ಮಾತನಾಡುವಾಗ ಸಂಸತ್ತಿನ ಕುರ್ಚಿಗಳು ತುಂಬಿರಲಿಕ್ಕಿಲ್ಲ—ಆದರೆ ದೇಶಮುಖರು ಸ್ವರವೆತ್ತಿದೊಡನೆಯೇ ಸಭಾ ಭವನವು ತುಂಬುತ್ತದೆ. ಒಟ್ಟಾವಾದಲ್ಲಿ ಇವರು ದಕ್ಷಿಣ ಮತ್ತು ಆಗ್ನೇಯ ಏಶ್ಯ ರಾಷ್ಟ್ರಗಳ ಅಭಿವೃದ್ಧಿ ಸಮಸ್ಯೆಯು ನಿರಂತರವಾದದ್ದೆಂದು ಹೇಳಿದರಲ್ಲದೆ, ಸದ್ಯದ ಪೀಳಿಗೆಯವರು ಅಪಾರ ಪರಿಶ್ರಮಕ್ಕೂ ತ್ಯಾಗಕ್ಕೂ ಸಿದ್ಧರಾಗಬೇಕೆಂದು ವಿನಂತಿಸಿದರು. ಜಗತ್ತಿನ ಸಂಪನ್ನ ರಾಷ್ಟ್ರಗಳು ಆರ್ಥಿಕ ಅಭಿವೃದ್ಧಿಯ ಪ್ರಯತ್ನಗಳಿಗೆ ಮನ್ನಣೆ ಕೊಟ್ಟು ಧಾರಾಳವಾಗಿ ಸಹಕರಿಸಬೇಕೆಂದೂ ಸೂಚಿಸಿದರು. ಮುನ್ನೋಟದ ಈ ಅರ್ಥಸಚಿವರು ಕೊಲೊಂಬೋ ಯೋಜನೆಯಲ್ಲಿ ಜಪಾನಿಗೆ ಪ್ರವೇಶಕೊಟ್ಟುದರಿಂದ ಸಾಕಷ್ಟು ತಾಂತ್ರಿಕ ಸಹಾಯ ದೊರಕಿದರೂ, ಭಾರತದ ಪಟ್ಟಿಗೆ ವ್ಯಾಪಾರ ಕ್ಷೇತ್ರದಲ್ಲಿ ಮುಖ್ಯವಾಗಿ ಬಟ್ಟೆಯ ಕೈಗಾರಿಕೆಯಲ್ಲಿ—ತೀಕ್ಷ್ಣ ಸ್ಪರ್ಧೆ ನಡೆದೀತೆಂದು ಭವಿಷ್ಯ ನುಡಿದರು.

ಕೋಟೆಲವಾಲರ ಭರವಸೆ

ಸಿಂಹಳದ ಭದ್ರತೆಗಾಗಿ ಪ್ರಯತ್ನಿಸುತ್ತಾ ವಿರೋಧಿಗಳನ್ನೂ ತನ್ನ ಮುತ್ಸದ್ದಿತನದಿಂದ ಒಲಿಸಿಕೊಂಡು ಹೋಗುವುದರಲ್ಲಿ ಸರ್ ಜೋನ್ ಕೋಟೆಲವಾಲರು ಸಾಕಷ್ಟು ಯಶಸ್ಸು ಸಂಪಾದಿಸಿದ್ದಾರೆ. ಪ್ರಥಮ ಮಹಾ ಯುದ್ಧ ಕಾಲದಲ್ಲಿ ಸೈನಿಕನಾಗಿ ದುಡಿದ ಕೋಟೆಲವಾಲರು ಹಿಂದಿನಿಂದ ರಾಜಕಾರಣದಲ್ಲಿ ಪ್ರವೇಶಿಸಿ, ರಾಷ್ಟ್ರಸಂಘದಲ್ಲಿ ಸಿಂಹಳದ ಪ್ರತಿನಿಧಿಗಳಾದರು. ಡಡ್ಲೆ ಸೇನಾನಾಯಕೆಯವರು ಅಧಿಕಾರವನ್ನು ತ್ಯಜಿಸಿದ ಬಳಿಕ ರಾಜ್ಯಸೂತ್ರವನ್ನು ಕೈಗೆ ತೆಗೆದುಕೊಂಡ ಇವರು ಅಂತಾರಾಷ್ಟ್ರೀಯ ದ್ವೇಷವನ್ನು ತಗ್ಗಿಸಲು ಆಗ್ನೇಯ ಏಶ್ಯದ ಐದು ಪ್ರಮುಖ ರಾಷ್ಟ್ರಗಳ ಪರಿಷತ್ತನ್ನು ಕೊಲೊಂಬೋದಲ್ಲಿ ನೆರೆಯಿಸಿದರು. ಜಿನೆವಾದಲ್ಲಿ ಅಂಕಿತ ಹಾಕಲಾದ ಇಂಡೋಚೀನ ಸಮರ ನಿಲುಗಡೆಯ ಕರಾರಿಗೆ ಇದರಿಂದ ಹೆಚ್ಚಿನ ಸಹಕಾರ ದೊರೆಯಿತು. ಆದರೆ, ಗೃಹಕೃತ್ಯದ ಸಮಸ್ಯೆಗಳನ್ನು ಇತ್ಯರ್ಥಗೊಳಿಸದೆ ಶಾಂತಿ ಸಹಕಾರದ ದೊಡ್ಡ ಮಾತನ್ನಾಡುವುದರಲ್ಲಿ ಅವರು ನೆಹರೂರ ನೆರಳನ್ನೆ ಹಿಡಿದಂತೆ ಭಾಸವಾಗುತ್ತದೆ: ಸಿಂಹಳದಲ್ಲಿಯ ಭಾರತೀಯ ವಂಶಜರ ಪ್ರಶ್ನೆಯನ್ನು ಕೊನೆಯದಾಗಿ ಬಗೆಹರಿಸಿಬಿಡಲು ಅವರು ಸಮರ್ಥರಾಗುತಿದ್ದರೆ ಈ ಆಕ್ಷೇಪ ಬರುತ್ತಿರಲಿಲ್ಲ. ಹೊಸದೆಹಲಿಯಲ್ಲಿ ನೆಹರೂರೊಡನೆ ಅವರು ಮೊನ್ನೆ ತಾನೆ ಸಮಾಲೋಚನೆ ನಡೆಸಿದರು—ಇದು ತೋರಿಕೆಗೆ ತೃಪ್ತಿಕರವಾದ ಪರಿಣಾಮವನ್ನು ಕೊಟ್ಟಿತು. ಆದರೆ ಒಪ್ಪಿಕೊಂಡ ಸಂಗತಿಗಳ ಕಾರ್ಯಾಚರಣೆಯ ಮೇಲೆಯೇ ಎಲ್ಲವೂ ಅವಲಂಬಿಸಿದೆಯೆಂಬುದನ್ನು ಅವರು ಕೊಲೊಂಬೋಗೆ ಮರಳಿದ ಬಳಿಕ ಮರೆಯಲಾಗದು.

ಏಶ್ಯಾ--ಆಫ್ರಿಕಾ ಪರಿಷತ್ತು

ಜಾಗತಿಕ ವರ್ತುಲದಲ್ಲಿ ಹೇಗೋ ರಾಷ್ಟ್ರೀಯ ವ್ಯವಹಾರದಲ್ಲೂ ಪ್ರಧಾನಿ ಜವಾಹರಲಾಲ ನೆಹರೂರ ವ್ಯಕ್ತಿತ್ವದ ವರ್ಚಸ್ಸು ಅಪಾರ. ಒಬ್ಬ ಮನುಷ್ಯನಲ್ಲಿ ಇಷ್ಟು ಹೆಚ್ಚು ಶಕ್ತಿ ಇದೆಯೆ ಎಂದು ಆಶ್ಚರ್ಯಪಡುವಂತೆ ನೆಹರೂ ಇದ್ದಾರೆ. ಅವರು ಚೀನಕ್ಕೆ ಹೋಗಲಿರುವ ಸುದ್ದಿಯನ್ನು ಕೇಳಿ ಅಂತಾರಾಷ್ಟ್ರೀಯ ಮುತ್ಸದ್ದಿಗಳು ಇದರ ಫಲವೇನಾದೀತೆಂದು ಕುತೂಹಲದಿಂದ ನಿರೀಕ್ಷಿಸುತಿದ್ದಾರೆ. "ಮೆಂಚೆಸ್ಟರ್ ಗಾರ್ಡಿಯನ್" "ಟೈಮ್ಸ್" ಮುಂತಾದ ಜಗತ್ಪ್ರಸಿದ್ಧ ಪತ್ರಿಕೆಗಳು ನೆಹರೂರ ಚೀನಾ ಸಂದರ್ಶನ ಜಾಗತಿಕ ಶಾಂತಿಯ ಹೊಸ ಪುಟವನ್ನು ತೆರೆಯಬಹುದೆಂದು ಹೇಳುತ್ತವೆ. ಲೋಕವು ಭಾರತವನ್ನು ಧುರೀಣನೆಂಬ ಗೌರವದಿಂದ ನೋಡುತ್ತಿರುವುದಕ್ಕೆ ಇದು ನಿದರ್ಶನವೆಂದರೂ ತಪ್ಪಾಗದು. ಆದರೆ ನೆಹರೂ ಇದನ್ನು ಬಯಸುವುದಿಲ್ಲ: ಧುರೀಣರಾಗುವುದು ನಮ್ಮ ಬಯಕೆಯಲ್ಲ ಎಂದವರು ಮುಂಬಯಿಯಲ್ಲಿ ಹೇಳಿದರು. ಭಾರತವು ನಾಲ್ಕನೆಯ ಮಹಾರಾಷ್ಟ್ರವಾಗುವುದೆಂಬ ತಮ್ಮ ಹೇಳಿಕೆಯು ಶಸ್ತ್ರಾಸ್ತ್ರ ಬಲವನ್ನು ಹೊಂದಿಕೊಂಡಿಲ್ಲವೆಂದೂ ಆರ್ಥಿಕ ಅಭಿವೃದ್ಧಿ ಪ್ರಯತ್ನದ ಮೇಲೆಯೇ ಅದು ಅವಲಂಬಿಸಿದೆಯೆಂದೂ ಅವರು ಸ್ಪಷ್ಟೀಕರಿಸಿದರು. ಅರಬ ರಾಷ್ಟ್ರಗಳೊಡನೆ ಮಧುರ ಸಂಪರ್ಕ

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೇಜ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ 1 ತೊಲೆಗೆ ರೂ. 9—0—0.

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ. 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಸ್ಯಾಂಪಲಿಗಾಗಿ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Namiappa Naicken Street, P. T.-MADRAS-3.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ: 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	ರೂ.	25,00,000
ಚಂದಾ ಆಗಿಸಿ, ತೆತ್ತು ಬಂದ ಭಂಡವಾಳ	ರೂ.	20,00,000
ಕ್ಷೇಮ ನಿಧಿ	ರೂ.	10,50,000
ಠೇವಣಾತಿಗಳು	ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ		ಸುಮಾರು ರೂಪಾಯಿ 4 ಕೋಟಿ
ಒಟ್ಟು ಶಾಖೆಗಳು		38

(31—12—1953ರಲ್ಲಿ)

THE CANARA BANKING CORPORATION LIMITED
Estd.- 1906] [H. O. UDIPI (S. India)

ವನ್ನು ಏರ್ಪಡಿಸುವ ಉದ್ದೇಶದಿಂದ ಹುಟ್ಟಿಕೊಂಡ ಸಂಘದ ಪ್ರಾರಂಭೋತ್ಸವವನ್ನು ನೆರವೇರಿಸುತ್ತ ಅವರು ಪಾಶ್ಚಾತ್ಯ ರಾಷ್ಟ್ರಗಳ ವಸಾಹತುವಾದದಿಂದಾಗಿ ಭಾರತವು ಕಳೆದುಕೊಂಡ ಮಧ್ಯ ಏಶ್ಯಾ ರಾಷ್ಟ್ರಗಳ ಸಂಬಂಧವನ್ನು ಪುನರುಜ್ಜೀವನಗೊಳಿಸುವುದಕ್ಕೆ ಎಲ್ಲ ರೀತಿಯಿಂದ ಪ್ರಯತ್ನಿಸಲಾಗುವುದೆಂದು ಹೇಳಿದರು. ಆಫ್ರಿಕ-ಏಶ್ಯಾ ಪರಿಷತ್ತು ಸೈನಿಕ ಬಣವನ್ನು ಕಟ್ಟಲು ಉದ್ದೇಶಿಸಿಲ್ಲವೆಂದೂ ಶಾಂತಿಸ್ಥಾಪನೆಗಾಗಿ ವಿಚಾರ ವಿನಿಮಯ ನಡೆಸುವುದೇ ನಮಗೆ ಬೇಕಾಗಿದೆಯೆಂದೂ ನೆಹರೂ ವಿವರಿಸಿದರು.

ರಾಜ್ಯ ಘಟನೆಗೆ ತಿದ್ದುಪಡಿ

ದೇಶದೊಳಗಿನ ವಿದ್ಯಮಾನಗಳ ಕುರಿತು ನೆಹರೂ ಆಡುವ ಮಾತೂ ಇಷ್ಟೇ ಗಂಭೀರವಾಗಿದ್ದಿತು: ಮುಂಬಯಿ ನಗರಕ್ಕೆ ೧೫೦ ಲಕ್ಷ ಗೆಲನ್ನುಗಳಷ್ಟು ಹೊಸ ನೀರನ್ನು ಸದ್ಯ ದೊರಕಿಸುವ ವೈತರಣಾ ಯೋಜನೆಯ ಉದ್ಘಾಟನೆಯಲ್ಲಿ ಭಾಗವಹಿಸುತ್ತ ಅವರು ಹೊಲಸು ಮನೆಗಳಲ್ಲಿ ವಾಸಿಸುವ ಜನರಿಗಾಗಿ ಮರುಗಿದರು. ಕೊಳಕು ಭೂಮಿ ಮುಂತಾದುವನ್ನು ಸಾರ್ವಜನಿಕ ಹಿತದೃಷ್ಟಿಯಿಂದ ವಶಪಡಿಸಿಕೊಳ್ಳುವಾಗ ಪರಿಹಾರ ಧನ ಕೊಡುವ ಅನಿಷ್ಟ ಸಂಪ್ರದಾಯವೊಂದು ಭಾರತದಲ್ಲಿ ರೂಢಿಯಾಗಿದೆಯೆಂದು ಅವರು ವ್ಯಸನಿಸಿದರು. ನಮ್ಮ ಪವಿತ್ರವಾದ ರಾಜ್ಯ ಘಟನೆಯು ಪರಿಹಾರದ ವಾದವನ್ನು ಸಮರ್ಥಿಸುತ್ತದೆ. ಇದರ ಆಶ್ರಯವನ್ನು ಪಡೆದು ಸಮಾಜ ಘಾತಕರಿಂದ ಅನೇಕ ದುಷ್ಟ ಕೃತ್ಯಗಳು ನಡೆಸಲ್ಪಡುತ್ತವೆ. ಇದನ್ನು ಇನ್ನು ಹೆಚ್ಚು ಸಮಯ ಸಹಿಸುವಂತಿಲ್ಲ. ರಾಷ್ಟ್ರದ ಆರ್ಥಿಕ ಪ್ರಗತಿಗೆ ಅಗತ್ಯವೆನಿಸಿದರೆ ಘಟನೆಗೆ ತಿದ್ದುಪಡಿ ಮಾಡಲೂ ಸರಕಾರ ಹಿಂಜರಿಯದು ಎಂದವರು ಸ್ಪಷ್ಟ ಪಡಿಸಿದರು. ಭಾವುಕ ಹೃದಯದ ನೆಹರೂ ಮುಂಬಯಿಯ ವಾಸ್ತವ್ಯ ಕಾಲದಲ್ಲಿ ಎರಡು ಲಕ್ಷ ಮಕ್ಕಳು ತಮಗಾಗಿ ಏರ್ಪಡಿಸಿದ ಸಮಾರಂಭದಲ್ಲಿಯೂ ಭಾಗ ವಹಿಸಿದರು. 'ಮಗಳಿಗೆ ತಂದೆಯ ಓಲೆಗಳು" ಎಂಬ ಜಗತ್ಪ್ರಸಿದ್ಧ ಪುಸ್ತಕದ ಕರ್ತೃವಾದ ನೆಹರೂ ಆ ಪತ್ರಗಳಲ್ಲಿ ತೋರಿಸಿದುದಕ್ಕಿಂತಲೂ ಹೆಚ್ಚು ಕಳಕಳಿಯಿಂದ ಮುಂಬಯಿಯ ಮಕ್ಕಳಿಗೆ ಭಾರತೀಯ ನಾಗರಿಕತೆಯನ್ನು ವಿವರಿಸಿ, ಹೊಣೆಗಾರಿಕೆಗಳ ಅರಿವು ಮಾಡಿಸಿ ಕೊಟ್ಟರು. ಮಕ್ಕಳ ಗುಂಪಿನ ನಡುವೆ ನಡೆದು ಹೋಗಿ ಅವರ ಸಂತೋಷದಲ್ಲಿ ತಾವೂ ಭಾಗಿಗಳಾದರು.

ಚಲಚ್ಚಿತ್ರಗಳ ಪಾತ್ರ

ಮಕ್ಕಳ ಕಲ್ಯಾಣದ ಕುರಿತು ನೆಹರೂರಂಥ ಪ್ರಭೃತಿಗಳು ತುಂಬ ಆಸ್ಥೆಯನ್ನು ತೋರಿಸುತಿದ್ದರೂ ಭಾರತದಲ್ಲಿ ಪ್ರಧಾನ ಮಂತ್ರಿಗಳ ಸುವರ್ಣ ಪದಕಕ್ಕೆ ಅರ್ಹವಾದ ಮಕ್ಕಳ ಚಲಚ್ಚಿತ್ರ ಕಳೆದ ವರ್ಷ ಸಿದ್ಧವಾಗಲಿಲ್ಲವೆಂಬುದು ನಿಜಕ್ಕೂ ಶೋಚನೀಯ. ನಮ್ಮ ಚಲಚ್ಚಿತ್ರಗಳು ಪ್ರೌಢರಿಗೆ ಮನೋರಂಜನೆಯನ್ನೊದಗಿಸುವುದಕ್ಕೆಯೇ ಮಹತ್ವ ಕೊಡುತ್ತಿವೆಯೆಂದು ಇದರಿಂದ ಸಿದ್ಧವಾಗುತ್ತದೆ. ಕಳೆದ ವಾರ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಅತ್ಯುತ್ತಮ ಚಲಚ್ಚಿತ್ರಗಳ ನಿರ್ಮಾಪಕರಿಗೆ ಪದಕಗಳನ್ನೂ ಪ್ರಶಸ್ತಿ ಪತ್ರಗಳನ್ನೂ ನೀಡಿ ಗೌರವಿಸಿದರು. ರಾಜೇಂದ್ರ ಪ್ರಸಾದರು ರಾಷ್ಟ್ರದ ಸಾರ್ವಭೌಮತೆಯ ದ್ಯೋತಕವಾಗಿದ್ದಾರೆ; ಅವರು ಸ್ವಾತಂತ್ರ್ಯ ಯೋಧನಾಗಿ ಹೋರಾಡುತಿದ್ದಾಗ ತಮ್ಮ ವಿನಯದಿಂದ ಜನರ ಮನಸ್ಸನ್ನು ಸೂರೆಗೊಂಡಿದ್ದರೆ, ಈಗ ತಮ್ಮ ಗಾಂಭೀರ್ಯದಿಂದ ಗೌರವ ಸಂಪಾದಿಸುತ್ತಿದ್ದಾರೆ. ಅವರ ಮಾತು ಗರಗರವೆನಿಸುತಿದ್ದರೂ ಅದರಲ್ಲಿ ವ್ಯಕ್ತಗೊಂಡ ಅಭಿಪ್ರಾಯಗಳಿಗೆ ಶಾಶ್ವತ ಬೆಲೆಯುಂಟೆಂದು ಹೇಳಬಹುದು. ಇಂದು ಜನರಿಗೆ ಬೇಕಾದಷ್ಟು ಸಲ ಚಲಚ್ಚಿತ್ರಗಳನ್ನು ನೋಡಲು ಅವಕಾಶ ದೊರಕಿರುವುದರಿಂದ ಒಳ್ಳೆಯದನ್ನು ಅಥವಾ ಕೆಟ್ಟದನ್ನು ಮಾಡುವ ಅವುಗಳ ಶಕ್ತಿಯು ಅಪರಿಮಿತವಾಗಿದೆಯೆಂದೂ ಆದುದರಿಂದ ಅವುಗಳ ತಯಾರಿಕೆಯಲ್ಲಿಯೂ ಉಪಯೋಗದಲ್ಲಿಯೂ ಬಹಳ ಜಾಗರೂಕತೆ ಅಗತ್ಯವೆಂದೂ ಪ್ರಸಾದರು ಹೇಳುತ್ತಾರೆ. ಚಲಚ್ಚಿತ್ರಗಳು ಮನೋರಂಜನೆಯನ್ನು ಒದಗಿಸುವಂತೆ ಶಿಕ್ಷಣ ಮತ್ತು ಪ್ರಚಾರ ಸಾಧನವಾಗಿಯೂ ಕೆಲಸ ಮಾಡುತ್ತವೆ. ಆದುದರಿಂದ ವ್ಯಾಪಾರಿ ಉದ್ದೇಶಕ್ಕೆ ವ್ಯತಿರಿಕ್ತವಿಲ್ಲದ ಜನಸೇವೆಯ ಆದರ್ಶವನ್ನು ಉತ್ಪಾದಕರು ಅಳವಡಿಸಿಕೊಳ್ಳಲಿ ಎಂದು ರಾಷ್ಟ್ರಪತಿಗಳು ಸಲಹೆ ಮಾಡಿದರು.

ಕೈಮಗ್ಗದ ಉದ್ದಿಮೆ

ಪ್ರಸಾದರು ಅಧಿಕಾರವನ್ನು ಸ್ವೀಕರಿಸಿದ್ದು ರಾಜಾಜಿಯಿಂದ ಎಂಬುದನ್ನು ನೆನೆದರೆ, ರಾಜಾಜಿಯ ಹಿರಿಮೆಯನ್ನು ನಾವು ಮನಗಾಣಬಹುದು. ಅವರು ಚತುರರಾದ ಆಡಳಿತಗಾರರೆಂದೂ ಮಹಾ ಮೇಧಾವಿಗಳೆಂದೂ ಹೆಸರಾಗಿದ್ದಾರೆ. ವಕೀಲ ವೃತ್ತಿಯನ್ನು ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿದ ಬಳಿಕ ಗವರ್ನರ ಜನರಲರ ಸ್ಥಾನವನ್ನು ಅಲಂಕರಿಸುವವರೆಗೂ ಅವರ ಮಾತೆಂದರೆ ದೇಶ ಕಿವಿ ನಿಗುರಿಸುತಿದ್ದಿತು. ಉನ್ನತ ಸ್ಥಾನದಿಂದ ಹಿಂದೆ ಬಂದ ಮೇಲೆ, ಕೇಂದ್ರ ಮಂತ್ರಿ ಮಂಡಲದಲ್ಲಿಯೂ ಮದ್ರಾಸಿನ ರಾಜಕಾರಣದಲ್ಲಿಯೂ ಅವರು ನಡೆಸಿದ ಕೈವಾಡವೂ ಹಿನ್ನೊಗವಾಯಿತು. ಅದರ ಮಾನಾಪಮಾನದ ಗೊಡವೆಗೆ ಹೋಗದ ರಾಜಾಜಿ ತಮ್ಮ ಸೋಲು ಗೆಲವುಗಳನ್ನೂ ಲೆಕ್ಕಿಸುವುದಿಲ್ಲ. ಮದ್ರಾಸಿನ

(೮ನೇ ಪುಟ ನೋಡಿರಿ)

ಉಡ್ಪಿ ಡಿ. ಮು. ಕೋರ್ಟಿನಲ್ಲಿ

S. C 228/54.

ಶ್ರೀ. ಕೆ. ನಾರಾಯಣ ರಾವ್ (As receiver) ... ವಾದಿ.

ಮತ್ತು

ಕೊಸ ಬೇಚ-ಬಿಸಾಣಿ, ಕೊಸಳ ಅಳಿಯ, ಉಡ್ಪಿ ತಾಲ್ಲೂಕು, ಕಡೆಕಾರು ಗ್ರಾಮ

.. ಪ್ರತಿವಾದಿ.

ಮೇಲ್ಕಂಡ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

ವಾದಿಗೆ ಪ್ರತಿವಾದಿಯಿಂದ ಕಳೆದ ವಿಜಯ ಸಂವತ್ಸರಕ್ಕೆ ಬರತಕ್ಕ ಗೇಣಿ ಬಾಕಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 21 10-54ಕ್ಕೆ ನೋಟೀಸು ಬಗ್ಗೆ ಇಟ್ಟಿದೆ. ಆತನು ತನ್ನ ಉಪಾಪತಿ ಇದ್ದಲ್ಲಿ ಸದ್ರಿ ತಾರೀಕಿನ ದಿವಸ ಮೇಲ್ಕಂಡ ಕೋರ್ಟಿನ ಮುಂದೆ ಹಾಜರಾಗಿ ಜಾಹೀರು ಮಾಡಿಕೊಳ್ಳತಕ್ಕದ್ದು ಎಂಬುವನ್ನು ಈ ಮೂಲಕ ತಿಳಿಸಲಾಗಿದೆ.

K. J. Ballal,
Pleader for Plaintiff.

ಉಡ್ಪಿ, ತಾ. 11-10-54.

ಕಾಶ್ಮೀರ ಪ್ರಶ್ನೆಯ ಕುರಿತು

ನೆಹರೂ-ಅಲಿ ಪತ್ರವ್ಯವಹಾರ

ವಿವಾದವು ಭದ್ರತಾಮಂಡಳದ ಮುಂದೆ ಮರಳಿ ಮಂಡಿಸಲ್ಪಡುವ ಸಂಭವ

ಭಾರತ ಹಾಗೂ ಪಾಕಿಸ್ತಾನಗಳ ನಡುವೆ ೧೯೪೭ನೇ ಇಸವಿಯಿಂದ ಬಗೆಹರಿಯದ ತಂಟೆಯಾಗಿ ಉಳಿದಿರುವ ಕಾಶ್ಮೀರ ಪ್ರಶ್ನೆಯು ಪುನಃ ಭದ್ರತಾ ಮಂಡಳದ ಮುಂದೆ ಮಂಡಿಸಲ್ಪಡುವ ಸಂಭವ ಕಂಡು ಬರುತ್ತದೆ. ಪರಸ್ಪರ ಸಂಧಾನದಿಂದ ವಿವಾದವನ್ನು ತೀರ್ಮಾನಿಸಬೇಕೆಂದು ಕೈಗೊಂಡ ಪ್ರಯತ್ನಗಳು ಸಂಪೂರ್ಣ ವಿಫಲವಾಗಿವೆಯೆಂದು ಹೇಳುತ್ತಾ ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಭದ್ರತಾ ಮಂಡಳದ ಮೆಟ್ಟಲೇರುವ ಉತ್ಸುಕತೆಯನ್ನು ತೋರಿಸುತಿದ್ದಾರೆ.

ಇದಕ್ಕೆ ಪೂರ್ವಭಾವಿಯಾಗಿ ಲೋಕದ ಜನರ ಮುಂದೆ ಕಾಶ್ಮೀರ ಪ್ರಶ್ನೆಯ ಯಥಾರ್ಥ ಸ್ವರೂಪವನ್ನು ಇಡಬೇಕೆಂದು ಅವರು ಅಪೇಕ್ಷಿಸಿ, ನೆಹರೂರ ಸಮ್ಮತಿಯನ್ನು ಪಡೆದು ತಮ್ಮಿಬ್ಬರಲ್ಲಿ ಕಳೆದ ಒಂದೂವರೆ ವರ್ಷದ ಅವಧಿಯಲ್ಲಿ ನಡೆದ ಪತ್ರ ವ್ಯವಹಾರಗಳನ್ನು ಪ್ರಕಟಿಸಿದ್ದಾರೆ. ನಾಲ್ಕು ತಂತಿ ಹಾಗು ೨೫ ಕಾಗದವನ್ನೊಳಗೊಂಡ ಒಟ್ಟು ೪೦ ಸಾವಿರ ಶಬ್ದಗಳಷ್ಟು ದೀರ್ಘವಾದ ಈ ಪತ್ರ ವ್ಯವಹಾರವು ಮುಖ್ಯವಾಗಿ ಕಾಶ್ಮೀರದ ತಂಟೆಯನ್ನು ಕುರಿತು ನೆಹರೂ—ಅಲಿ ಮನೋಭಾವವನ್ನು ವ್ಯಕ್ತಪಡಿಸುತ್ತದೆಯಲ್ಲದೆ ಆನುಷಂಗಿಕವಾಗಿ ಕಾಲುವೆ ನೀರಿನ ತಂಟೆ, ಯುದ್ಧವಿಲ್ಲವೆಂಬ ಘೋಷಣೆ ಮುಂತಾದುವನ್ನೂ ಪ್ರಸ್ತಾಪಿಸುತ್ತದೆ.

ನಲ್ವತ್ತು ಲಕ್ಷ ಕಾಶ್ಮೀರಿಗಳ ಭವಿಷ್ಯಕ್ಕೆ ಸಂಬಂಧಿಸಿದ ಈ ಪ್ರಶ್ನೆಯನ್ನು ಬಿಡಿಸಲು ಭದ್ರತಾ ಮಂಡಳದಿಂದ ಅಧಿಕಾರ ಹೊಂದಿದ ಡಾ. ಫ್ರಾಂಕ್ ಗ್ರಹಾಮರು ತುಂಬ ಪ್ರಯತ್ನಿಸಿದರು. ತಮ್ಮ ಮೂರನೆಯ ವರದಿಯಲ್ಲಿ ಅವರು ದ್ವಾದಶ ಸೂತ್ರಗಳನ್ನು ಅನುಷ್ಠಾನಕ್ಕೆ ತರುವ ಸಲಹೆಯೊಂದನ್ನು ಮಾಡಿದರು. ಉಳಿದೆಲ್ಲ ವಿಷಯಗಳ ಮಟ್ಟಿಗೆ ಒಮ್ಮತ ಕಂಡುಬಂದರೂ ಜನಾಭಿಪ್ರಾಯ ಸಂಗ್ರಹಣ ಕಾರ್ಯವು ನಡೆಯುವಾಗ ಯುದ್ಧವಿರಾಮ ರೇಖೆಯ ಇಕ್ಕೆಲದಲ್ಲಿ ನಿಲ್ಲಿಸಬೇಕಾದ ಸೈನ್ಯದ ಪ್ರಮಾಣವನ್ನು ಕುರಿತು ಭಿನ್ನಾಭಿಪ್ರಾಯವು ಪರಿಹಾರ ಹೊಂದಲಿಲ್ಲ.

ಕಳೆದ ವರ್ಷ ಮಾರ್ಚ ತಿಂಗಳಲ್ಲಿ ಜಿನೆವಾದಲ್ಲಿ ಉಭಯ ರಾಷ್ಟ್ರಗಳ ಪ್ರತಿನಿಧಿಗಳನ್ನು ಪರಿಷತ್ತಿನಲ್ಲಿ ನೆರೆಯಿಸಿ ಸಮಾಲೋಚನೆ ನಡೆಸಿ, ಅರ್ಪಿಸಿದ ವರದಿಯಲ್ಲಿ ನೇರವಾದ ಮಾತುಕತೆಗಳಿಂದಲೇ ವಿವಾದವನ್ನು ಭಾರತ-ಪಾಕಿಸ್ತಾನ ರಾಷ್ಟ್ರಗಳು ತೀರ್ಮಾನಿಸಲೆಂದು ಗ್ರಹಾಮರು ಕೈಕಟ್ಟಿ ಹೇಳಿದರು. ಮುಂದೆ ಜೂನು ತಿಂಗಳಲ್ಲಿ ಲಂಡನಿನಲ್ಲಿ ಕಾಮನವೆಲ್ತ್ ರಾಷ್ಟ್ರಗಳ ಪ್ರಧಾನಿಗಳ ಪರಿಷತ್ತು ಜರಗಿದಾಗ, ಪಾಕಿಸ್ತಾನದ ಆಗಿನ ಪ್ರಧಾನ ಮಂತ್ರಿಗಳಾದ ನಾಜಿಮುದ್ದೀನ ಹಾಗು ನಮ್ಮ ಪ್ರಧಾನಿ ನೆಹರೂರೊಡನೆ ಪ್ರಾಸ್ತಾವಿಕ ಮಾತುಕತೆಗಳು ನಡೆದವು. ನಾಜಿಮುದ್ದೀನರ ಪತನದ ಬಳಿಕ ಕರಾಚಿ ಹಾಗು ಹೊಸದಿಲ್ಲಿಯಲ್ಲಿ ನೆಹರೂ—ಅಲಿ ಸಮಾಲೋಚನೆಗಳು ಜರಗಿ, ಹೆಚ್ಚಿನ ಆಶೆಗೆ ಎಡೆಯಾಯಿತು.

ಇದಾದ ಕೆಲವೇ ತಿಂಗಳುಗಳಲ್ಲಿ ಪಾಕಿಸ್ತಾನವು ಅಮೇರಿಕದೊಡನೆ ಸೈನಿಕ ಸಹಾಯ ಒಪ್ಪಂದ ಮಾಡಿಕೊಂಡುದರಿಂದ ಕಾಶ್ಮೀರ ಪ್ರಶ್ನೆಯ ಸ್ವರೂಪವೇ ಬದಲ್ಗೊಂಡಿತೆಂದು ಭಾರತವು ಅಭಿಪ್ರಾಯಪಟ್ಟಿತು. ನೆಹರೂರ ಪತ್ರದಿಂದ ವ್ಯಕ್ತಗೊಳ್ಳುವ ಭಾರತದ ನಿಲುಮೆಯನ್ನು ಹೀಗೆ ವಿವರಿಸಬಹುದು—ಕಾಶ್ಮೀರದ ವಿಷಯದಲ್ಲಿ ನ್ಯಾಯ ದೃಷ್ಟಿಯಿಂದಲೂ ಭಾರತಕ್ಕೆ ವಿಶೇಷವಾದ ಹೊಣೆ ಇದೆ. ಅದರ ರಕ್ಷಣೆಯ ಭಾರವನ್ನು ಜಾರಿಸಿಕೊಳ್ಳಲು ಸಾಧ್ಯವಿಲ್ಲ. ಭಾರತ ಸರಕಾರವು ೧೯೪೭ನೇ ಇಸವಿಯ ಅಕ್ಟೋಬರ ಮಾಸದಲ್ಲಿ ಕಾಶ್ಮೀರದ ಮೇಲೆ ಕ್ರೂರ ಆಕ್ರಮಣ ನಡೆದುದನ್ನು ಇನ್ನೂ ಮರೆತಿಲ್ಲ. ಆಗ ಪಾಕಿಸ್ತಾನ ಸರಕಾರವು ತನ್ನದೇನೂ ಅಂಗ ಇದರಲ್ಲಿಲ್ಲವೆಂದು ಸಾಧಿಸಿತು. ಆದರೆ ರಾಷ್ಟ್ರ ಸಂಘದ ನಿರೀಕ್ಷಕರ ಪ್ರಯತ್ನದ ಫಲವಾಗಿ ಪಾಕಿಸ್ತಾನವೇ ಆಕ್ರಮಣ ಮಾಡಿದೆಯೆಂದು ಸ್ಪಷ್ಟವಾಯಿತು. ಸೈನಿಕ ಸಹಾಯದಿಂದ ಶಕ್ತಿಯನ್ನು ಹೆಚ್ಚಿಸಿಕೊಂಡ ಪಾಕಿಸ್ತಾನವು ಪುನಃ ಹಿಂದಿನ ಮಡುಕುತನವನ್ನು ತೋರಿಸದೆಂದು ಭಾವಿಸುವುದು ಸರಿಯಾಗದು. ಪಾಕಿಸ್ತಾನವು ಸಾರ್ವಭೌಮಾಧಿಕಾರ ಸಂಪನ್ನ ರಾಷ್ಟ್ರವೆಂದು ಯಾರೊಡನೆ ಬೇಕಾದರೆ, ಒಪ್ಪಂದ ಮಾಡಿಕೊಳ್ಳಬಹುದು; ಆದರೆ ಅದರ ಪರಿಣಾಮಗಳನ್ನು ಅಲಕ್ಷಿಸಲಾಗದು.

ಮಹಮ್ಮದಾಲಿಯವರ ಅಭಿಪ್ರಾಯವನ್ನು ಹೀಗೆ ಸಂಕ್ಷೇಪಿಸಬಹುದು—ಅಮೇರಿಕದೊಡನೆ ಮಾಡಿಕೊಂಡ ಸೈನಿಕ ಒಪ್ಪಂದಕ್ಕೂ ಕಾಶ್ಮೀರ ಪ್ರಶ್ನೆಗೂ ಏನೇನೂ ಸಂಬಂಧವಿಲ್ಲ. ನಿಷ್ಪಕ್ಷಪಾತ ರೀತಿಯಲ್ಲಿಯೂ ನಿರಾತಂಕವಾಗಿಯೂ ಕಾಶ್ಮೀರ ಪ್ರಶ್ನೆಯು ಇತ್ಯರ್ಥ ಹೊಂದುವಂತೆ ಮತಗಣನೆ ನಡೆಸಲು ಅನುಕೂಲ ವಾತಾವರಣವನ್ನು ಕಲ್ಪಿಸಬೇಕಾದದ್ದೇ ಮುಖ್ಯ. ಯುದ್ಧ ವಿರಾಮ ರೇಖೆಯ ಇಕ್ಕಡೆಯಲ್ಲಿ ನಿಲ್ಲಿಸಬೇಕಾದ ಸೈನ್ಯಗಳ ಪ್ರಮಾಣವನ್ನು ಇದಕ್ಕನುಗುಣವಾಗಿ ನಿಷ್ಕರ್ಷಿಸಬೇಕಾಗಲಿ, ಸೈನಿಕ ಸಹಾಯ ಒಪ್ಪಂದದ ಪ್ರಸ್ತಾಪವನ್ನು ಮಾಡಲಾಗದು. ಅಂತಾರಾಷ್ಟ್ರೀಯ ಮಧ್ಯಸ್ಥಿ

(೭ನೇ ಪುಟ ನೋಡಿರಿ)

NAVAYUGA
Popular Kannada Weekly
Founder:—
Sri **A. B. SHETTY**, *M L A.*
Minister for Public Health,
Govt. of Madras.

ನವಯುಗ
ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೧೪–೧೦–'೫೪	೭

ಕೆಲಸಗಾರರ ವಿಮೆ

ನಮ್ಮ ರಾಜ್ಯಾಂಗ ಘಟನೆಯು ಕಲ್ಯಾಣ ರಾಷ್ಟ್ರವನ್ನು ಕಟ್ಟಲು ಪ್ರಯತ್ನಿಸಬೇಕೆಂದು ನೀಡಿದ ಆದೇಶವನ್ನು ಅನುಸರಿಸಿ, ಭಾರತ ಸರಕಾರದವರು ಒಂದೊಂದೇ ಸುಧಾರಣೆಗಳನ್ನು ನಿಧಾನವಾಗಿಯಾದರೂ ದೃಢವಾದ ತಳಹದಿಯ ಮೇಲೆ ಜ್ಯಾರಿಗೆ ತರುತ್ತಿರುವುದು ಸಂತೋಷದ ವಿಚಾರ. ಔದ್ಯೋಗಿಕ ಕ್ಷೇತ್ರದಲ್ಲಿ ಕಡಿಮೆ ಸಂಬಳ ಪಡೆಯುವ ಕೆಲಸಗಾರರಿಗೆ ವಿಮೆಯ ಸೌಕರ್ಯವನ್ನು ಒದಗಿಸುವ ಯೋಜನೆಯು ಇಂಥ ಕ್ರಮಗಳಲ್ಲಿ ಒಂದಾಗಿದ್ದು ಕಳೆದವಾರ, ಇದನ್ನು ಭಾರತದಲ್ಲಿಯೇ ದೊಡ್ಡ ಕೈಗಾರಿಕಾ ಕೇಂದ್ರವಾದ ಬೃಹತ್ತರ ಮುಂಬಯಿಗೆ ಅನ್ವಯಿಸಲಾಯಿತು. ಯೋಜನೆಯನ್ನು ಉದ್ಘಾಟಿಸಿದ ಪ್ರಧಾನ ಮಂತ್ರಿ ನೆಹರೂಗಳು ಪ್ರಜೆಗಳಿಗೆ ಸಾಮಾಜಿಕ ಭದ್ರತೆಯನ್ನು ನೀಡುವಲ್ಲಿ ಈ ನೂತನ ಸಾಹಸವು ಯಶಸ್ವಿಯಾದರೆ, ಅದನ್ನು ಕ್ರಮವಾಗಿ ವಿಸ್ತರಿಸುತ್ತಾ ಭಾರತದ ಪ್ರತಿಯೊಬ್ಬ ನಾಗರಿಕನಿಗೂ ಅದರ ಲಾಭ ಮಾಡಿಕೊಡಲಾಗುವುದೆಂಬ ಆಕರ್ಷಕ ವಿಚಾರವನ್ನು ವ್ಯಕ್ತಗೊಳಿಸಿದರು. ಜಗತ್ತಿನಲ್ಲಿ— ಅದರಲ್ಲೂ ಭಾರತದಲ್ಲಿ—ಕೈಗಾರಿಕೆಗಳು ಪ್ರಾಬಲ್ಯಕ್ಕೆ ಬಂದ ಗಳಿಗೆಯಿಂದ ಇಲ್ಲಿಗೆ ವಿಶಿಷ್ಟವಾಗಿದ್ದ ಅವಿಭಕ್ತ ಕುಟುಂಬ ಪದ್ಧತಿಯು ನಶಿಸುತ್ತಾ ಹೋಗುತ್ತಿದ್ದು, ತನ್ನ ಕುಟುಂಬದ ರಕ್ಷಣೆಯನ್ನು ತಾನೇ ಮಾಡಿಕೊಳ್ಳುವ ದೊಡ್ಡ ಹೊಣೆಗಾರಿಕೆಯು ವ್ಯಕ್ತಿಯ ಮೇಲೆ ಬಿದ್ದಿರುತ್ತದೆ. ಅವಿಭಕ್ತ ಕುಟುಂಬದಲ್ಲಿ ಯಾರಾದರೊಬ್ಬನು ಅಸ್ವಸ್ಥನಾದರೆ, ಗಾಯಗೊಂಡರೆ, ಊನನಿದ್ದರೆ ಕುಟುಂಬದ ಇತರರು ಅವನ ಯೋಗಕ್ಷೇಮವನ್ನು ವಿಚಾರಿಸಿಕೊಳ್ಳುತ್ತಿದ್ದರು. ಇಂದು ಹೆಂಡತಿ ಮಕ್ಕಳ ಪೋಷಣೆಯ ಭಾರವನ್ನು ಗಂಡನೊಬ್ಬನೇ ಹೊರುತ್ತಿದ್ದು ಅವನು ಕೆಲಸ ಮಾಡಲಾರದ ಪರಿಸ್ಥಿತಿ ಬಂದೊದಗಿದರೆ, ಆ ಕುಟುಂಬದ ಜೀವನ ನಿರ್ವಹಣಕ್ಕೆ ಬೇರಾವುದೇ ಆಧಾರ ತೋರುತ್ತಿಲ್ಲ. ಕೆಲಸಗಾರರು ಹೀಗೆ ಸಂಕಟಕ್ಕೆ ಗುರಿಯಾಗುವುದನ್ನು ಕಂಡ ಭಾರತ ಸರಕಾರದವರು ೧೯೪೮ನೇ ಇಸವಿಯಷ್ಟು ಹಿಂದಿನಿಂದ ಯೋಗ್ಯ ಭದ್ರತೆಯನ್ನು ನೀಡುವ ವಿಮೆಯ ಯೋಜನೆಯನ್ನು ಜ್ಯಾರಿಗೆ ತರುವ ವಿಚಾರವನ್ನು ನಡೆಸಿದ್ದರು. ಜರ್ಮನಿಯ ಬಿಸ್ಮಾರ್ಕನು ಕಳೆದ ಶತಮಾನದ ಅಂತ್ಯದಲ್ಲಿ ಸರ್ವಪ್ರಥಮವಾಗಿ ಜ್ಯಾರಿಗೆ ತಂದ ಇಂಥ ಯೋಜನೆಯು ಯುರೋಪು—ಅಮೇರಿಕಾಗಳಲ್ಲಿಯ ಪ್ರಮುಖ ಔದ್ಯೋಗಿಕ ರಾಷ್ಟ್ರಗಳಲ್ಲಿಯಷ್ಟೇ ಅಲ್ಲ, ಇಜಿಪ್ತ, ಇಸ್ರೇಲ ಮುಂತಾದ ಚಿಕ್ಕ ರಾಷ್ಟ್ರಗಳಲ್ಲೂ ಜನಪ್ರಿಯತೆಯನ್ನು ಗಳಿಸಿರುತ್ತದೆ. ಭಾರತದಲ್ಲಿ ಮಾತ್ರ ಈ ಯೋಜನೆಯನ್ನು ಕಾಂಗ್ರೆಸು ಸರಕಾರವು ಅಸ್ತಿತ್ವಕ್ಕೆ ಬಂದ ಬಳಿಕವೇ ೧೯೪೮ರಲ್ಲಿ ಸ್ವೀಕರಿಸಲಾಯಿತು. ಅಲ್ಲಿಂದೀಚೆಗೆ ಕಾನ್ಪುರ, ಢಿಲ್ಲಿ, ನಾಗಪುರ ವಿಭಾಗಗಳಲ್ಲಿ ಇದನ್ನು ಜ್ಯಾರಿಗೆ ಗೊಳಿಸಿ, ಇದೀಗ ಮುಂಬಯಿಗೆ ಯೋಜನೆಯನ್ನು ಅನ್ವಯಿಸಲಾಯಿತು. ೧೯೫೫ನೇ ವರ್ಷದೊಳಗೆ ಕಲ್ಕತ್ತ, ಮದ್ರಾಸು, ಅಹಮ್ಮದಾಬಾದು, ಕೊಯಮುತ್ತೂರು ಮುಂತಾದ ಇತರ ಭಾಗಗಳಿಗೂ ಯೋಜನೆಯ ಲಾಭವನ್ನು ಮುಟ್ಟಿಸಲಾಗುವುದು. ಇಪ್ಪತ್ತಕ್ಕಿಂತ ಹೆಚ್ಚು ಜನರನ್ನು ಇಟ್ಟುಕೊಂಡ ಕಾರಖಾನೆಗಳಲ್ಲಿರುವ ೪೦೦ ರೂಪಾಯಿಗಳ ವರೆಗಿನ ಸಂಬಳದ ಕೆಲಸಗಾರರಿಗೆ ಯೋಜನೆಯಿಂದ ಉಚಿತ ಔಷಧೋಪಚಾರ, ಕಾಯಿಲೆ ಸಂದರ್ಭದಲ್ಲಿ ೫೬ ದಿನಗಳ ವರೆಗೆ ಅರ್ಧ ಸಂಬಳ, ಸ್ತ್ರೀ ಕೆಲಸಗಾರರಿಗೆ ಹೆರಿಗೆಗೆ ಹಿಂದು ಮುಂದಿನಲ್ಲಿ ಅರ್ಧ ಸಂಬಳದ ಮೇಲೆ ೧೨ ವಾರಗಳ ತನಕ ದಿನಕ್ಕೆ ೧೨ ಆಣೆಯಷ್ಟು ಸಹಾಯ, ತಾತ್ಪೂರ್ತಿಕವಾಗಿ ಊನಗೊಂಡರೆ ಗುಣವಾಗುವವರೆಗೆ ಅರ್ಧ ಸಂಬಳ, ಶಾಶ್ವತವಾಗಿಯಾದರೆ ಅರ್ಧ ಸಂಬಳದಷ್ಟು ನಿವೃತ್ತಿ ವೇತನ, ಗಾಯಗೊಂಡು ಸತ್ತರೆ ಅವನನ್ನು ಅವಲಂಬಿಸಿದವರಿಗೆ ಉಚಿತ ಅವಧಿಯ ತನಕ ಹಣ ಸಹಾಯ ಎಂಬ ಐದು ಬಗೆಯ ಪ್ರಯೋಜನಗಳು ಸಿಗುತ್ತವೆ. ಇದನ್ನು ಕಾರ್ಯಗತಗೊಳಿಸಲು ಬೇಕಾಗುವ ಹಣಕ್ಕಾಗಿ ಕೆಲಸಗಾರನು ತನ್ನ ಸಂಬಳದಲ್ಲಿ ನೂರರಲ್ಲಿ ಎರಡರಷ್ಟು, ಅವನ ಒಡೆಯನು ನಾಲ್ಕೂವರೆಯಷ್ಟು ಕೊಡಬೇಕು; ಔಷಧದ ವೆಚ್ಚದಲ್ಲಿ ಕಾಲು ಭಾಗವನ್ನು ರಾಜ್ಯಸರಕಾರಗಳು ವಹಿಸುತ್ತವೆ; ಕೇಂದ್ರ ಸರಕಾರವು ಆಡಳಿತ ವೆಚ್ಚದ ಮೂರರಲ್ಲಿ ಎರಡಂಶ ವಹಿಸುತ್ತದೆ. ಹೀಗೆ ಅಲ್ಪತ್ಯಾಗದಿಂದ ಅತ್ಯಧಿಕ ಲಾಭವನ್ನು ಪಡೆಯುವ ಸೌಲಭ್ಯವನ್ನು ಕೂಲಿಕಾರರಿಗೆ ಕಲ್ಪಿಸಿಕೊಟ್ಟುದರಿಂದ ಸರಕಾರವು ದುಡಿಯುವ ವರ್ಗದ ಶಾಶ್ವತ ಕೃತಜ್ಞತೆಗೆ ಪಾತ್ರವಾಗಿದೆಯೆಂದರೆ ತಪ್ಪಾಗದು.

ಚಲಚ್ಚಿತ್ರೋದ್ಯಮ

ಮನೋರಂಜನೆಯ ಸಾಧನವೆನಿಸಿದ ಪ್ರೇಕ್ಷಣ ಹಾಗು ಪ್ರಚಾರದ ಮಾಧ್ಯಮವಾಗಿಯೂ ಮಹತ್ವದ ಪಾತ್ರವನ್ನು ವಹಿಸುವ ಚಲಚ್ಚಿತ್ರಗಳ ವಿಷಯದಲ್ಲಿ ಈಗ ಸರಕಾರವು ಹೆಚ್ಚು ಲಕ್ಷ್ಯವನ್ನು ಪೂರೈಸುತ್ತಿರುವುದು ಸ್ತುತ್ಯ. ಚಲಚ್ಚಿತ್ರ ಉದ್ದಿಮೆಯ ಮಹತ್ವವನ್ನು ಮನಗಂಡು, ಒಳ್ಳೆಯ ಚಿತ್ರಗಳನ್ನು ಪ್ರೋತ್ಸಾಹಿಸುವದಕ್ಕೋಸ್ಕರ ಅಖಿಲ ಭಾರತದ ತಳಹದಿಯಲ್ಲಿ ಬಹುಮಾನಗಳನ್ನು ಸಾರುವ ಸಂಪ್ರದಾಯವನ್ನು ಸರಕಾರ ಪ್ರಾರಂಭಿಸಿರುವುದೂ ಕ್ರಮಪ್ರಾಪ್ತ. ಚಲಚ್ಚಿತ್ರಗಳು ಹೆಚ್ಚು ಹೆಚ್ಚು ಜನಪ್ರಿಯತೆಯನ್ನು ಗಳಿಸುತ್ತಿರುತ್ತವೆಯಷ್ಟೇ ಅಲ್ಲ—ಜನಜಂಗುಳಿಯ ಆಚಾರವಿಚಾರಗಳಮೇಲೆ ಗಾಢವಾದ ಪರಿಣಾಮವನ್ನೂ ಮಾಡುತ್ತವೆ. ರಜತ ಪರದೆಯ ಮೇಲೆ ಕಾಣಿಸಿಕೊಂಡ ನಟನಟಿಯರ ಆರಾಧನೆಯಲ್ಲಿಯೇ ಜೀವನ ಸಾಫಲ್ಯವೆಂದು ಭಾವಿಸಿದ ತರುಣ ತರುಣಿಯರೂ ಅಪರೂಪವಲ್ಲ! ನಮ್ಮ ವಿದ್ಯಾರ್ಥಿಗಳಿಗೆ ಗಗನ ಮಂಡಲದಲ್ಲಿರುವ ತಾರೆಗಳಲ್ಲಿ ಭರಣಿಯನ್ನು ಕೃತ್ತಿಕೆಯಿಂದ ಪ್ರತ್ಯೇಕವಾಗಿ ಗುರುತಿಸುವ ಸಾಮರ್ಥ್ಯವಿಲ್ಲದಿದ್ದರೂ ಭೂಲೋಕದ ತಾರಾಗಣದಲ್ಲಿ ಹರಿಣಿಯನ್ನೂ ಕಾರ್ತಿಕಳನ್ನೂ ಸುಲಭದಲ್ಲಿ ಪತ್ತೆಹಚ್ಚಬಲ್ಲರು ಎಂದೊಬ್ಬ ಪ್ರಸಿದ್ಧ ಪುರುಷರು ವ್ಯಂಗೋಕ್ತಿಯನ್ನಾಡುವಂತೆ, ಚಲಚ್ಚಿತ್ರದ ಹುಚ್ಚು ಪ್ರೇರೇಪಿಸುತ್ತದೆ. ನಿತ್ಯಜೀವನದಲ್ಲಿ ನಾವು ಕಾಣಲಾರದ, ಶಿಷ್ಟಾಚಾರಕ್ಕೆ ಸಮ್ಮತವಲ್ಲದ ಘಟನೆಗಳೂ ನಟನೆಗಳೂ ಸಿನೆಮಾ ಮಂದಿರದ ಅಂಧಕಾರದ ನಡುವೆ ಬೆಳಗುವುದೇ ನಮ್ಮ ಚಲಚ್ಚಿತ್ರಗಳ ಜನಪ್ರಿಯತೆಯ ಗುಟ್ಟೆಂದು ಹೇಳಿದರೆ ತಪ್ಪಾಗದು. ವ್ಯಕ್ತಿಯ ಅತೃಪ್ತ ಭಾವನೆಗಳನ್ನು ಕೆರಳಿಸಿ, ತಾತ್ಕಾಲಿಕ ಸುಖಾನುಭವವನ್ನು ಅಪ್ರತ್ಯಕ್ಷ ರೀತಿಯಲ್ಲಿ ಮನೋರಂಜನೆಯ ಹೆಸರಲ್ಲಿ ನೀಡುವುದೇ ನಮ್ಮಲ್ಲಿಯ ಹೆಚ್ಚಿನ ಚಿತ್ರಗಳ ಮುಖ್ಯೋದ್ದೇಶವೆಂದು ಕಾಣುತ್ತದೆ. ಹೀಗೆ ಮಾಡುವಾಗ ರಾಷ್ಟ್ರೀಯ ಚಾರಿತ್ರ್ಯದ ಮೇಲೆ, ನೀತಿ ನಾಗರಿಕತೆಗಳ ಮೇಲೆ ತಾವು ಮಾಡುವ ಆಘಾತ ಹಾಗು ಪ್ರಹಾರ ಎಷ್ಟೆಂಬುದನ್ನು ಹೆಚ್ಚಿನ ಚಲಚ್ಚಿತ್ರಗಳ ಉತ್ಪಾದಕರೂ ನಟನಟಿಯರನ್ನು ಕುಣಿಸುವ ದಿಗ್ದರ್ಶಕರೂ ತಿಳಿಯದಿರುವುದು ಶೋಚನೀಯ. ಪರಿಸ್ಥಿತಿಯು ಇನ್ನಾದರೂ ಸುಧಾರಿಸಿ ಹಣದಾಸೆಗಲ್ಲದೆ, ಗೌರವದ ಅಭಿಲಾಷೆಯಿಂದಲಾದರೂ ಒಳ್ಳೆಯ ಉದ್ಬೋಧಕ ಚಿತ್ರಗಳನ್ನು ಉತ್ಪಾದಿಸುವುದು ಸಾಧ್ಯವಾಗುವಂತೆ ಮಾಡುವಲ್ಲಿ ರಾಷ್ಟ್ರಪತಿಗಳ ಪದಕ, ಪ್ರಶಸ್ತಿಪತ್ರ ಮುಂತಾದ ಬಹುಮಾನಗಳಿಂದ ನೆರವಾದೀತು. ಕಳೆದ ವಾರ ನಡೆಸಿದ ವಿಚಾರ ಸಂಕೀರ್ಣದಿಂದಲೂ ಉದ್ದಿಮೆಗೆ ಯೋಗ್ಯ ಮಾರ್ಗ ದರ್ಶನ ದೊರಕದಿರದು.

ಹೊಸದೆಹಲಿಯ ಒಡಂಬಡಿಕೆ

ಜರ್ಮನಿಯ ಏಕೀಕರಣದ ಆಮಿಷ

ಹೊಸದೆಹಲಿಯಲ್ಲಿ ನೆಹರೂ-ಕೋಟಿಲವಾಲರು ಧುರೀಣರಾಗಿದ್ದ ಭಾರತ—ಸಿಂಹಳ ಶಿಷ್ಟಮಂಡಳಗಳು ೯ ಮತ್ತು ೧೦ನೇ ದಿನಾಂಕ ನಡೆಸಿದ ಸಮಾಲೋಚನೆಯ ಪರಿಣಾಮವಾಗಿ ಕೆಲಮಟ್ಟಿಗೆ ತೃಪ್ತಿಯನ್ನೊದಗಿಸುವ ಸಂಯುಕ್ತ ಪ್ರಕಟಣೆಯೊಂದು ಹೊರಬಿದ್ದಿರುತ್ತದೆ. ಸಿಂಹಳ ಸರಕಾರವು ಜನವರಿ ತಿಂಗಳಲ್ಲಿ ಅಂಕಿತ ಹಾಕಲಾದ ಒಡಂಬಡಿಕೆಗೆ ಏಕಪಕ್ಷೀಯ ಭಾಷ್ಯವನ್ನು ಬರೆದು ಗೊಂದಲವನ್ನುಂಟುಮಾಡಿದ್ದರಿಂದ, ಈ ಸಲ ಅಂಥ ತೊಡಕೇನೂ ಉದ್ಭವಿಸದಂತೆ ಸಾಕಷ್ಟು ಸ್ಪಷ್ಟವಾಗಿ ಅರ್ಥವನ್ನು ಹೊರಡಿಸುವ ಶಬ್ದಗಳುಳ್ಳ ಹೇಳಿಕೆಯನ್ನು ಹೊರಡಿಸಲಾಯಿತು. ಇದನ್ನು ವಿಮರ್ಶಿಸಿದರೆ, ಅರಾಷ್ಟ್ರಿಕರ ಪ್ರಶ್ನೆಯ ವಿಷಯದಲ್ಲಿ ಉಭಯ ಸರಕಾರಗಳೊಳಗಿದ್ದ ಮೂಲಭೂತ ಮತಭೇದವು ಇನ್ನೂ ಪರಿಹಾರಗೊಂಡಿಲ್ಲವೆಂದು ತಿಳಿದುಬರುತ್ತದೆ. ಸಿಂಹಳವಾಸಿ ಭಾರತೀಯರ ಧುರೀಣರಾದ ಧೊಂಡಮಾನರು ಇದಕ್ಕಾಗಿ ವಿಷಾದಿಸಿದ್ದಾರೆ. ಸದ್ಯಕ್ಕೆ ಅರಾಷ್ಟ್ರಿಕರ ಸಂಖ್ಯಾಪ್ರಮಾಣವನ್ನು ಗಣನೀಯವಾಗಿ ಇಳಿಸಲು ಸಾಧ್ಯವಾಗುವಂತೆ ಉಭಯ ರಾಷ್ಟ್ರಗಳು ಒತ್ತರದ ಕ್ರಮಗಳನ್ನು ಕೈಗೊಳ್ಳಬೇಕೆಂಬ ತತ್ವವೇ ಸಮಾಧಾನವನ್ನುಂಟು ಮಾಡುವ ವಿಷಯ. ಇದರೊಂದಿಗೆ ಕೊಲೊಂಬೋ ರಾಷ್ಟ್ರಗಳಲ್ಲಿ ಸೇರಿದ ಭಾರತ ಸಿಂಹಳಗಳು ತಮ್ಮ ಆಂತರಿಕ ಪ್ರಶ್ನೆಯೊಂದನ್ನು ಸಂಧಾನದ ಮೂಲಕವೇ ಬಗೆಹರಿಸಿಕೊಳ್ಳಲು ಶಕ್ಯವಾದುದನ್ನೂ ಅಂತಃರಾಷ್ಟ್ರೀಯ ದೃಷ್ಟಿಕೋಣದಿಂದ ಒಳ್ಳೆಯ ಅಂಶವೆಂದು ಪರಿಗಣಿಸಬಹುದು.

ಒಡಂಬಡಿಕೆಯ ವಿವರ

ಸಿಂಹಳದ ನಾಗರಿಕತೆಗಾಗಿ ಮಾಡಲಾದ ಅರ್ಜಿಗಳಲ್ಲಿ ಹೆಚ್ಚಿನವನ್ನು ತಾಂತ್ರಿಕ ಕಾರಣಗಳಿಗಾಗಿ ನಿರಾಕರಿಸಲಾಗುತ್ತಿದೆಯೆಂದೂ ಅರ್ಜಿಗಳ ಪರಿಶೀಲನೆಯು ಬಹಳ ನಿಧಾನವಾಗಿ ನಡೆಯುತ್ತಿದೆಯೆಂದೂ ಮಾಡಲಾದ ಆರೋಪಕ್ಕೆ ಪ್ರತಿಯಾಗಿ ಇನ್ನೆರಡು ವರ್ಷಗಳಲ್ಲಿ ಎಲ್ಲ ಅರ್ಜಿಗಳನ್ನೂ ಪರಿಶೀಲಿಸಲು ಸಾಧ್ಯವಿದ್ದ ಪ್ರಯತ್ನಗಳು ಕೈಗೊಳ್ಳಲ್ಪಡುತ್ತವೆ; ತಾಂತ್ರಿಕ ವಿಚಾರಣೆಗಳೇನಾದರೂ ಇದ್ದ ಪಕ್ಷದಲ್ಲಿ ಅವು ಹೋಗಲಾಡಿಸಲ್ಪಡುತ್ತವೆ; ಇಷ್ಟರ ವರೆಗೆ ನಿರಾಕರಿಸಿದ ಅರ್ಜಿಗಳೂ ಹೊಸ ಒಡಂಬಡಿಕೆಯ ಬೆಳಕಿನಲ್ಲಿ ಮರಳಿ ಪರಿಶೀಲಿಸಲ್ಪಡುತ್ತವೆ ಎಂದು ಮುಂತಾದ ಭರವಸೆಗಳನ್ನು ಕೋಟಿಲವಾಲರು ಕೊಟ್ಟಿದ್ದಾರೆ. ಭಾರತ ಸರಕಾರವು ನಮ್ಮ ರಾಜ್ಯಾಂಗ ಘಟನೆಯ ೮ನೇ ಸೂತ್ರದಂತೆ ನಾಗರಿಕತೆಗಾಗಿ ಮಾಡಿಕೊಂಡ ಅರ್ಜಿಗಳನ್ನು ಪರಿಶೀಲಿಸಿ, ಅರ್ಹತೆಯೊಂದಿದವರಿಗೆಲ್ಲ ಭಾರತದ ನಾಗರಿಕ ಅಧಿಕಾರಗಳನ್ನು ದಯಪಾಲಿಸುವುದು; ಇಂಥವರು ಈಗ ಸಿಂಹಳದಲ್ಲಿ ಏನಾದರೂ ಉದ್ಯೋಗದಲ್ಲಿದ್ದರೆ, ಅವರು ತಮ್ಮ ೫೫ನೇ ವಯಸ್ಸಿನ ವರೆಗೆ ಸಿಂಹಳದಲ್ಲಿ ಉಳಿಯಬಲ್ಲರು; ಆ ಮೇಲೆ ಅವರು ಭಾರತಕ್ಕೆ ತೆರಳಬೇಕಾಗಿದ್ದು ಆಗ ಸಿಂಹಳ ಸರಕಾರವು ಅವರ ಇಷ್ಟು ವರ್ಷಗಳ ಸೇವೆಯನ್ನು ಲಕ್ಷಿಸಿ ಯೋಗ್ಯ ಪರಿಹಾರ ನೀಡುವುದು. ನಾಗರಿಕತೆಗಾಗಿ ಅರ್ಜಿ ಮಾಡಿದವರು ಅದರ ಪರಿಶೀಲನೆ ನಡೆಯುವುದಕ್ಕೆ ಮುಂಚೆ ಸಿಂಹಳದ ಹೊರಗೆ ಹೋಗಲು ಬಯಸಿದರೆ, ಅಥವಾ ಹಣ ಕಳಿಸಲು ಇಚ್ಛಿಸಿದರೆ, ಅವರಿಗೆ ಸೌಕರ್ಯಗಳು ನೀಡಲ್ಪಡುತ್ತವೆ.

ಮೊಲೊಟೋವರ ಸಲಹೆ

ಪಶ್ಚಿಮ ಜರ್ಮನಿಯ ಪುನಃ ಶಸ್ತ್ರೀಕರಣಕ್ಕೆ ಸಮ್ಮತಿ ಮುದ್ರೆಯನ್ನೊತ್ತಿ ಸಾರ್ವಭೌಮಾಧಿಕಾರವನ್ನೂ ನೀಡಲು ಪಾಶ್ಚಾತ್ಯ ಪ್ರಭೃತಿಗಳು ಮುಂಬಂದ ಗಳಿಗೆಯಲ್ಲಿ ತಾನು ಮೌನವಾಗಿ ಕುಳಿತಿರುವುದು ಅಪಾಯಕರವೆಂದು ರಶಿಯಾ ಭಾವಿಸಿದೆ. ಆದುದರಿಂದ ಮೊಲೊಟೋವರು ಜರ್ಮನಿಯ ಕುರಿತು ವಿಚಾರವಿನಿಮಯ

ನಡೆಸಲು ನಾಲ್ಕು ಮಹಾ ರಾಷ್ಟ್ರಗಳ ಪರಿಷತ್ತು ಕೂಡಲೇ ಸೇರಬೇಕೆಂದು ಹೇಳಿದರು. ಇಲ್ಲಿ ಜರ್ಮನಿಯಿಂದ ವಿದೇಶಗಳ ಸೈನ್ಯವನ್ನು ಹಿಂದೆಗೆದುಕೊಂಡು ಚುನಾವಣೆಗಳನ್ನು ನಡೆಸಿ, ಏಕೀಕರಣವನ್ನು ಸಾಧಿಸುವ ಕ್ರಮಗಳನ್ನು ಪರ್ಯಾಲೋಚಿಸಬಹುದೆಂದು ರಶಿಯದ ಅಭಿಪ್ರಾಯ. ಪಶ್ಚಿಮ ಜರ್ಮನಿಯು ಪುನಃ ಶಸ್ತ್ರೀಕರಣದಿಂದಲೇ ತೃಪ್ತಿಹೊಂದಿ ಏಕೀಕರಣದ ಹಂಬಲವನ್ನು ತೊರೆದು ಬಿಡಬಲ್ಲದೆ ಎಂಬುದೀಗ ಮುತ್ಸದ್ದಿಗಳನ್ನು ಕಾಡುತ್ತಿರುವ ವಿಷಯ. ಒಂಬತ್ತು ರಾಷ್ಟ್ರಗಳ ಒಪ್ಪಂದದಿಂದ ಪಶ್ಚಿಮ ಜರ್ಮನಿಯು ಹೆಚ್ಚು ಕಡಿಮೆ ಸ್ವತಂತ್ರ ರಾಷ್ಟ್ರವೇ ಆಗಿದೆ. ಆದರೆ ಜರ್ಮನ ಪ್ರಭೃತಿಗಳು ಇಷ್ಟು ಸಾಲದು, ಏಕೀಕರಣವಾಗಬೇಕು ಎಂದು ಅಡೆನಾರರನ್ನು ಒತ್ತಾಯಿಸುತ್ತಿದ್ದಾರೆ ಇದರ ಪ್ರಾಬಲ್ಯವನ್ನು ತಿಳಿದೇ, ಪಶ್ಚಿಮ ರಾಷ್ಟ್ರಗಳು ಏಕೀಕರಣದ ವಿಷಯದಲ್ಲಿ ಪಶ್ಚಿಮ ಜರ್ಮನಿ ಏನನ್ನೂ ಹೇಳುವಹಾಗಿಲ್ಲವೆಂದೂ ತಮ್ಮ ಅಭಿಪ್ರಾಯಕ್ಕೆಯೇ ಮನ್ನಣೆ ಸಲ್ಲತಕ್ಕದ್ದೆಂದೂ ಸ್ಪಷ್ಟಗೊಳಿಸಿರುತ್ತವೆ. ಆದರೆ ಪಶ್ಚಿಮ ಜರ್ಮನರಿಗೆ ಏಕೀಕರಣವೇ ಬೇಕಾದರೆ, ಅದಕ್ಕೆ ರಶಿಯ ಪ್ರೋತ್ಸಾಹಕೊಡುತ್ತಿದ್ದರೆ, ಅಡೆನಾರರ ಸಮಾಧಾನವನ್ನು ಕೇಳಿ ಪ್ರಜೆಗಳು ಸುಮ್ಮನುಳಿಯುವುದು ಕಷ್ಟ; ಅವರ ಚಟುವಟಿಕೆಗಳನ್ನು ನಿರ್ಬಂಧಿಸುವುದೂ ಪಶ್ಚಿಮ ರಾಷ್ಟ್ರಗಳಿಗೆ ಸುಲಭ ಸಾಧ್ಯವಲ್ಲ.

(೫ನೇ ಪುಟದಿಂದ)

ಗಳ ನೆರವಿನಿಂದ ಮಾಡಿದ ಪ್ರಯತ್ನಗಳನ್ನೆಲ್ಲ ನಿಷ್ಫಲಗೊಳಿಸಿ, ಹೊಸತಾಗಿ ಕಾಶ್ಮೀರ ಪ್ರಶ್ನೆಯನ್ನು ವಿಚಾರಿಸಬೇಕೆನ್ನುವ ಭಾರತದ ವಾದದಲ್ಲಿ ಏನೇನೂ ಹುರುಳಿಲ್ಲ.

ಆದುದರಿಂದ ಮಹಮ್ಮದಾಲಿಯವರು ಭದ್ರತಾ ಮಂಡಳಿಕ್ಕೆ ಪ್ರಶ್ನೆಯನ್ನು ಮರಳಿ ಒಯ್ಯುವುದೇ ಶ್ರೇಯಸ್ಕರವೆಂದು ಅಭಿಪ್ರಾಯಪಟ್ಟರು. ನ್ಯೂಯಾರ್ಕಿನಲ್ಲಿ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ವ್ಯಕ್ತಗೊಳಿಸಿದ ವಿಚಾರಗಳನ್ನು ನೋಡಿದರೆ, ತಮ್ಮ ನಿಲುವೆಯು ಸರಿಯಾದುದೆಂಬ ಬಗ್ಗೆ ಅವರಿಗೆ ಏನೇನೂ ಸಂಶಯ ತೋರುವುದಿಲ್ಲ. ಭಾರತವು ೧೭ ಸಾವಿರ ಸೈನಿಕರನ್ನೂ ಪಾಕಿಸ್ತಾನವು ೩ರಿಂದ ೬ ಸಾವಿರ ಅಜಾದ ದಳದ ಸಿಪಾಯಿಗಳನ್ನೂ ನಿಲ್ಲಿಸಬೇಕೆಂದು ಅವರು ಬಯಸುತ್ತಾರೆ. ಅಮೇರಿಕೆಯೊಡನೆ ಮಾಡಿಕೊಂಡ ಒಪ್ಪಂದದಿಂದ ಸೈನ್ಯ ಶಕ್ತಿಯನ್ನು ಹೆಚ್ಚಿಸಿಕೊಂಡು ಪಾಕಿಸ್ತಾನ ಕಾಶ್ಮೀರದ ಮೇಲೆ ಮರಳಿ ದಾಳಿಮಾಡಬಹುದೆಂಬ ಭೀತಿಯನ್ನು ಪ್ರಸ್ತಾಪಿಸುತ್ತಾ, ಭಾರತದೊಡನೆ ನಮಗಿಂತ ಹೆಚ್ಚು ಸೈನ್ಯವೂ ಜನಬಲವೂ ಇಲ್ಲವೆ ಎಂದು ಪ್ರಶ್ನಿಸುತ್ತಾರೆ. ಮತಗಣನೆಯ ಅಧಿಕಾರಿಯಾಗಿ ಚಿಕ್ಕ ರಾಷ್ಟ್ರದ ಪ್ರತಿನಿಧಿಯೊಬ್ಬನನ್ನು ನೇಮಿಸಿದರೆ, ಅಂತರಾಷ್ಟ್ರೀಯ ಕ್ಷೇತ್ರದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸುವ ಭಾರತ ಒತ್ತಾಯವನ್ನು ಹೇರಿ ಮತಗಣನೆಯ ನಿಷ್ಪಕ್ಷಪಾತ ಸ್ವರೂಪವನ್ನು ಕೆಡಿಸಬಹುದು ಎಂದವರು ಅಂಜುತ್ತಾರೆ.

ಪರಿಣಾಮವಾಗಿ ಭದ್ರತಾ ಮಂಡಳಿವು ಕಾಶ್ಮೀರ ಪ್ರಶ್ನೆಯನ್ನು ಇನ್ನೊಮ್ಮೆ ಕೈಗೆತ್ತಿಕೊಳ್ಳಲೇ ಬೇಕಾಗಿ ಬಂದರೆ, ಆಗ ತಕ್ಕಡಿಯು ಎತ್ತ ತೂಗಬಹುದೆಂದು ಮುತ್ಸದ್ದಿಗಳು ಯೋಚಿಸುತ್ತಿದ್ದಾರೆ. ಹಿಂದೆಯಾದರೆ ಭದ್ರತಾ ಮಂಡಳಿವು ೧೯೪೮ನೇ ಆಗೋಸ್ತು ೧೩, ಹಾಗು ೧೯೪೯ನೇ ಜನವರಿ ೫ನೇ ತಾರೀಕುಗಳಲ್ಲಿ ಅಂಗೀಕರಿಸಿದ ನಿರ್ಣಯಗಳ ಮೇಲೆಯೇ ಪ್ರಶ್ನೆಯನ್ನು ವಿಚಾರಿಸಬೇಕೆಂದು ಪಾಕಿಸ್ತಾನದ ಪ್ರತಿನಿಧಿಗಳು ಒತ್ತಾಯಿಸುತ್ತಿದ್ದರು. ಕಾಶ್ಮೀರದ ಮೇಲೆ ಆಕ್ರಮಣ ನಡೆಸಿದ ರಾಷ್ಟ್ರ ಪಾಕಿಸ್ತಾನ ಎಂಬ ಭಾರತದ ವಾದಕ್ಕೆ ಯಾರೂ ಕಿವಿಗೊಡುತ್ತಿರಲಿಲ್ಲ. ತಾನು ಒಪ್ಪಿದ ನಿರ್ಣಯಗಳಿಗೆ ಬದ್ಧವಾಗಿರಬು ಭಾರತವು ಒಪ್ಪುತ್ತಿದ್ದರೂ ಪಾಕಿಸ್ತಾನವು ನಿರ್ಣಯಗಳಿಗೆ ಮಾಡಿದ ಭಾಷ್ಯವನ್ನು ಅದು ಒಪ್ಪುತ್ತಿರಲಿಲ್ಲ. ಅಂಥ ಪ್ರಸಂಗದಲ್ಲಿ ಪಾಕಿಸ್ತಾನವು ತನಗೆ ಅನ್ಯಾಯವಾಗಿದೆಯೆಂದು ಆರ್ಭಟಿಸಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಆದರೆ ಅಮೇರಿಕದ ಸೈನಿಕ ಸಹಾಯ, ಸೀಟೋ ಒಡಂಬಡಿಕೆ, ತುರ್ಕಿಯೊಡನೆ ಮಿಲಿಟರಿ ಗೆಳೆತನ ಮುಂತಾದ ಈಚೆಗಿನ ರಾಜಕೀಯ ಬೆಳವಣಿಗೆಯ ದೆಸೆಯಿಂದ ಪಾಕಿಸ್ತಾನವು ಹಿಂದಿನಂತೆ ತಾನು ನಿರಪರಾಧಿಯೆಂದು ಹೇಳಿಕೊಂಡರೆ ಯಾವ ರಾಷ್ಟ್ರವೂ ಮೋಸ ಹೋಗಲಾರದು.

ಎಲ್ಲಕ್ಕಿಂತ ಹೆಚ್ಚಾಗಿ ಅಮೇರಿಕಕ್ಕೆಯೇ ಭದ್ರತಾ ಮಂಡಳಿದ ಮುಂದೆ ಕಾಶ್ಮೀರ ಪ್ರಶ್ನೆ ಮರಳಿ ಮಂಡಿಸಲ್ಪಡುವುದು ಇಷ್ಟವಿಲ್ಲ. ಗ್ರಹಾಮರ ವರದಿಗಳಲ್ಲಿ ಒಂದು ಯುದ್ಧ ವಿರಾಮ ರೇಖೆಯ ಇಕ್ಕೆಲದಲ್ಲಿ ನಿಲ್ಲಿಸಲಿರುವ ಸೈನ್ಯದ ಪ್ರಮಾಣ ನಿರ್ಧಾರದಷ್ಟೇ ಆ ಸೈನ್ಯಗಳು ಏಕೆ ಬೇಕಾಗಿವೆಯೆಂಬ ವಿಷಯವೂ ಮಹತ್ವದ್ದೆಂದು ಹೇಳುತ್ತದೆ. ಈ ಮಾತಿನ ಬೆಳಕಿನಲ್ಲಿ ನೋಡಿದರೆ, ಪಾಕಿಸ್ತಾನವು ಕಾಶ್ಮೀರ ಪ್ರಶ್ನೆಯನ್ನು ಮಹಾರಾಷ್ಟ್ರಗಳ ಆಟದ ಚೆಂಡಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದೆಯೆಂದು ಸ್ಪಷ್ಟವಾಗುತ್ತದೆ. ಅಮೇರಿಕಾದ ಸೈನಿಕ ಸಹಾಯ ಪಡೆಯುವ ಉದ್ದೇಶವನ್ನು ವಿವರಿಸುತ್ತಾ ಇದರಿಂದ ಕಾಶ್ಮೀರ ಸಮಸ್ಯೆಯ ಪರಿಹಾರ ಸುಲಭವಾಗುವುದು ಎಂಬುದಾಗಿ ಅಲಿಯವರು ಹೇಳಿರುವುದನ್ನು ಗಮನಿಸದಿರಲಾಗುವುದಿಲ್ಲ. ಈ ಮಾತನ್ನು ನೆಹರುಗಳಿನ್ನೋ ಅಷ್ಟೇ ಅಮೇರಿಕವನ್ನು ವಿರೋಧಿಸುವ ಗುಂಪಿನ ರಾಷ್ಟ್ರಗಳೂ ಎತ್ತಿಹೇಳಿ, ಖಂಡತುಂಡವಾದ ಟೀಕೆಯನ್ನು ಮಾಡದೆ ಬಿಡಲಿಕ್ಕಿಲ್ಲ. ಭದ್ರತಾಮಂಡಳಿದಲ್ಲಿ ಬಹಿರಂಗವಾಗಿ ಹೀಗೆ ದೂಷಣೆಗೊಳಗಾಗುವುದೂ ಅದನ್ನು ಎದುರಿಸುವುದೂ ಸದ್ಯಕ್ಕೆ ಬೇಡವೆಂದು ಅಮೇರಿಕದ ಅಭಿಪ್ರಾಯ. ಇಷ್ಟರಲ್ಲಿಯೇ ನಡೆಯಲಿರುವ ಅಲಿ-ಐಕ ಭೇಟಿಯಲ್ಲಿ ಇದನ್ನು ವಿದಿತಪಡಿಸಬಹುದು.

ಮಂತ್ರಿ ಎ. ಬಿ. ಶೆಟ್ಟರ ಜಿಲ್ಲಾ ಪ್ರವಾಸ

ಎಲ್ಲೆಲ್ಲಿಯೂ ಕಾಂಗ್ರೆಸಿಗೆ ಬೆಂಬಲದ ಭರವಸೆ

ತಾ. ೮ರಲ್ಲಿ ಮಂತ್ರಿಗಳು ಶ್ರೀಗಳಾದ ಬಿ. ವೈಕುಂಠ ಬಾಳಿಗ, ಎಂ. ಎಲ್. ಎ, ಎಲ್. ಸಿ. ಪಾಯಸ್, ಎಂ. ಎಲ್. ಎ, ಕೆ. ಆರ್. ಆಚಾರ್, ಬಿ. ಬಿ. ಶೆಟ್ಟಿ ಇವರೊಡನೆ ಮಂಗಳೂರಿಂದ ಹೊರಟು ಗುರ್ಪುರ, ಮೂಡಬಿದ್ರೆ, ಅಜೆಕಾರು, ಮುನಿಯಾಲು, ಮುದ್ರಾಡಿ, ಹೆಬ್ರಿ ಮೊದಲಾದ ಸ್ಥಳಗಳಲ್ಲಿ ಜರಗಿದ ಸಭೆಗಳಲ್ಲಿ ಭಾಗವಹಿಸಿ ರಾತ್ರಿ ಕುಂದಾಪುರಕ್ಕೆ ತಲ್ಪಿದರು. ತಾ. ೯ನೇ ಬೆಳಿಗ್ಗೆ ಮಂತ್ರಿಗಳು ಸಂಕ್ಷೆ ಸರ್ಕಲಿನಲ್ಲಿಯೂ ಶ್ರೀ ಬಿ. ವೈಕುಂಠ ಬಾಳಿಗರು ಗಂಗೊಳ್ಳಿ ಮೊದಲಾದ ಸ್ಥಳಗಳಲ್ಲಿಯೂ ಸಂಚರಿಸಿ, ಮಧ್ಯಾಹ್ನ ಕುಂದಾಪುರದಲ್ಲಿ ಶ್ರೀ ಬಿ. ಬಿ. ಶೆಟ್ರ ಅಧ್ಯಕ್ಷತೆಯಲ್ಲಿ ಜರಗಿದ ಪ್ರಚಂಡ ಸಭೆಯನ್ನುದ್ದೇಶಿಸಿ ಉಡುಪಿಯ ಡಾ। ಮಾಧವ ಪೈ, ಶ್ರೀ ಎ. ಬಿ. ಶೆಟ್ಟಿ, ಯಡ್ತರೆ ಮಂಜಯ್ಯ ಶೆಟ್ಟಿ, ಎಂ. ಎಲ್. ಎ, ಕೆ. ಆರ್. ಆಚಾರ್, ಎನ್. ಎಸ್. ಪರಮೇಶ್ವರಯ್ಯ, ಶ್ರೀಮತಿ ರಮಾ ವಿ. ಕಾಮತ್ ಮೊದಲಾದವರು ಕಾಂಗ್ರೆಸಿಗೆ ಬೆಂಬಲ ಕೊಡುವ ಕುರಿತು ಮಾತನಾಡಿದರು. ಸಂಜೆ ಕೋಟದಲ್ಲಿ ಜರಗಿದ ಸಭೆಯಲ್ಲಿ ಮೇಲಿನ ಮಹನೀಯರಲ್ಲದೆ ಮಾಜಿ ಜಿಲ್ಲಾ ಬೋರ್ಡ್ ಅಧ್ಯಕ್ಷ ಶ್ರೀ ಮಂಜಯ್ಯ ಹೆಗ್ಡೆಯವರೂ ಕಾಂಗ್ರೆಸ್ ಸರಕಾರ ಮಾಡಿದ ಕಾರ್ಯಗಳನ್ನು ವಿವರಿಸಿ ವಿರೋಧಿ ಪಕ್ಷದವರ ಅಪಪ್ರಚಾರಗಳಿಗೆ ಉತ್ತರವಿತ್ತರು. ಸಂಜೆ ಬ್ರಹ್ಮಾವರ, ಬೈಕಾಡಿ ಸಭೆಗಳಲ್ಲಿ ಮಾತಾಡಿ, ಬಲಿಷ್ಠ ಧನಾಢ್ಯರನ್ನು ದಾ.ಕ. ಜಿಲ್ಲಾ ಬೋರ್ಡಿಗೆ ಸ್ಪರ್ಧಿಸುವ ಪ್ರಜಾಸೋಶಿಯಲಿಸ್ಟ್ ಪಕ್ಷವು ಬಡಜನರಿಗಾಗಿ ಹೋರಾಡುವ ಪಕ್ಷವಲ್ಲವೆಂದೂ ಕಾಂಗ್ರೆಸೊಂದೇ ಬಡವರ ಸಂಸ್ಥೆಯೆಂದೂ ಸಕಾರಣವಾಗಿ ವಿವರಿಸಿದರು. ಅದೇ ರಾತ್ರಿ ಉದ್ಯಾವರದಲ್ಲಿ ಕೂಡಿದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿ ಉಡುಪಿಗೆ ಬಂದರು. ತಾ. ೧೦ರಲ್ಲು ಮಾನ್ಯ ಮಂತ್ರಿಗಳು ಶ್ರೀಗಳಾದ ಕೆ. ಜೆ. ಬಲ್ಲಾಳ್, ಬಿ. ಬಿ. ಸೆಟ್ಟಿ ಮೊದಲಾದವರೊಂದಿಗೆ ಕಟಪಾಡಿ, ಶಿರ್ವ ಕ್ಷೇತ್ರಗಳನ್ನು ಸಂದರ್ಶಿಸಿ ಮುಂಬರುವ ಜಿಲ್ಲಾ ಬೋರ್ಡ್ ಚುನಾವಣೆಯಲ್ಲಿ ಕಾಂಗ್ರೆಸ್ ಪ್ರತಿನಿಧಿಗಳಿಗೆ ಮತದಾನ ಮಾಡುವ ಆವಶ್ಯಕತೆಯನ್ನು ವ್ಯಕ್ತಪಡಿಸಿದರು. ಶಿರ್ವದಲ್ಲಿ ಶ್ರೀ ಎಲ್. ಸಿ. ಪಾಯಸ್, ಅವರೂ ಮಾತನಾಡಿದರು. ಬಳಿಕ ಮುಂಡ್ಕೂರಿಗೆ ಹೋಗಿ ಅಲ್ಲಿ ಶ್ರೀ ಎಸ್. ಆರ್. ಹೆಗ್ಡೆ ಮೊದಲಾದವರನ್ನು ಕೂಡಿಕೊಂಡು ಶ್ರೀ ಕಿಟ್ಟಣ್ಣ ಸೆಟ್ಟರೇ ಮೊದಲಾದವರಿಂದ ಸ್ವಾಗತ ಪಡೆದು ಪಂಚಾಯತ ಬೋರ್ಡಿನ ಮಾನಪತ್ರ ಸ್ವೀಕರಿಸಿ ನೂತನ ಕಟ್ಟಡದ ಶಂಕು ಸ್ಥಾಪನೆಮಾಡಿದರು. ಐಕಳ ಮತ್ತು ತಿಪಾಡಿ ಗ್ರಾಮಸ್ಥರ ಸಭೆಯಲ್ಲಿ ಮಾನಪತ್ರ ಸ್ವೀಕರಿಸಿ ಕಾಂಗ್ರೆಸಿಗನೇ ಮತದಾನಮೀಯಬೇಕೆಂದರು. ಕಾಂಗ್ರೆಸಿನಿಂದ ದ. ಕ. ಜಿಲ್ಲೆಗೆ ಆದ ವಿಶೇಷ ಕಾರ್ಯಗಳಿಂದ, ಕಾಂಗ್ರೆಸಿನ ಮೇಲೆ ಜನತೆಗೆ ತುಂಬಾ ಪ್ರೀತಿಯುಂಟಾದುದನ್ನು ಕಂಡು ಸರ್ವಚಿತ್ತರಾದ ಮಂತ್ರಿಗಳು ತಾ. ೧೧ರಲ್ಲು ಮದ್ರಾಸಿಗೆ ಹಿಂತಿರುಗಿದರು.

ಉಡುಪಿ

ಭಾಷಣ — ಸ್ಥಳೀಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನಲ್ಲಿ ತಾ. ೪ರಲ್ಲು ಪ್ರಿನ್ಸಿಪಾಲ್ ಶ್ರೀ ಎಚ್. ಸುಂದರ ರಾಯರ ಅಧ್ಯಕ್ಷತೆಯಲ್ಲಿ ಜರುಗಿದ ಭಾಷಾ ಸಂಘದ ಆಶ್ರಯದಲ್ಲಿ ಚಿಕ್ಕಮಗಳೂರು ಕಾಲೇಜಿನ ಶ್ರೀಗಳಾದ ಎಸ್. ಪ್ರಹ್ಲಾದ ರಾವ್ ಮತ್ತು ಬಿ. ಕೆ. ಶಿವರಾಮಯ್ಯನವರು 'ಗ್ರಂಥಪಠನ' ಹಾಗೂ 'ಸಾಹಿತ್ಯಪಗುರಿ'ಗಳ ಕುರಿತಾಗಿಅನು ಕ್ರಮವಾಗಿ ಉಪನ್ಯಾಸ ಮಾಡಿದರು.

ಮಹಿಳಾ ಸಮಾಜ — ಕಾಶ್ಮೀರ ಅಭಿವೃದ್ಧಿ ಯೋಜನೆಯ ಸಫಲತೆಗಾಗಿ ರಚಿತವಾದ ಕಮಿಟಿಗೆ ಉಡುಪಿ ಮಹಿಳಾ ಸಮಾಜದ ಕಡೆಯಿಂದ ಶ್ರೀಮತಿಯರು ಪ್ರೇಮಾ ಎ. ಪೈ ಮತ್ತು ಅನಸೂಯ ಬಿ. ಶೆಟ್ಟಿ; ಜಿಮ್ಮಾಕೃಷ್ಣ ಸಹಕಾರಿ ಸಂಘದ ಪತಿಯಿಂದ ಶ್ರೀಮತಿಗಳಾದ ಮನೋರಮಾ ಆಚಾರ್, ಕೆ. ಕಣ್ಣನ್, ಆರ್. ಫೆರ್ನಾಂಡೀಸರು ಆರಿಸಲ್ಪಟ್ಟಿರುವರು. ಜಿಲ್ಲಾ ಕಲೆಕ್ಟರೂ ಜಿಲ್ಲಾ ವೆಲ್‌ಫೇರ್ ಆಫೀಸರರೂ ಈ ಸಮಿತಿಯ ಖಾಯಂ ಸದಸ್ಯರಿರುವರು. ಈ ಸಮಿತಿಗೆ ಮಂಗಳೂರು ಭಗಿನೀ ಸಮಾಜದ ಕಡೆಯಿಂದ ಶ್ರೀಮತಿಗಳಾದ ಲೀಲಾ ಬಾಯಿ ಏಕಾಂಬರ ರಾವ್ ಮತ್ತು ಕಲ್ಯಾಣಿ. ಡಿ. ಶೆಟ್ಟಿಯವರು ಸದಸ್ಯೆಯರಾಗಿರುವರು. ಇವರಿಬ್ಬರೂ ತಾ. ೨ರಂದು ಸ್ಥಳೀಯ ಸದಸ್ಯೆಯರೊಡನೆ ಯೋಜನೆಯ ರೂಪರೇಷೆಗಳನ್ನು ಕುರಿತು ವಿಚಾರ ವಿನಿಮಯ ನಡೆಸಿದರು. ಸಭಾಂತ್ಯದಲ್ಲಿ ಶ್ರೀಮತಿ ಪ್ರೇಮಾ ಎ. ಪೈಗಳು ವಂದನೆಗಳನ್ನರ್ಪಿಸಿದರು.

ನಗರಸಭೆಯು — ತಾ. ೨ರಲ್ಲು ಶ್ರೀ ಮಂಜುನಾಥ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸರಕಾರಿ ಆರ್ಡರುಗಳು ರಿಕಾರ್ಡು ಮಾಡಲಾದುವು. ಬಳಿಕ ಶ್ರೀ ಯು. ಎಸ್. ನಾಯ್ಕರು ತಮ್ಮ ನಗರ ಸಭಾಧ್ಯಕ್ಷತೆಕ್ಕೆ ಸಲ್ಲಿಸಿದ ರಾಜೀನಾಮೆ ಪತ್ರವನ್ನು ರಿಕಾರ್ಡು ಮಾಡುವ ಕಾಲಕ್ಕೆ ಅದರಲ್ಲಿದ್ದ ಕೆಲವು ಒಕ್ಕಣೆಗಳನ್ನು ನಿಷೇಧಿಸುವ ನಿರ್ಣಯವನ್ನು ಶ್ರೀ ಪಿ. ವಿ. ಆಚಾರ್ಯರು ಸಭೆಯ ಮುಂದಿಡಲು ಬಹುಮತದಿಂದ ಅದು ಪಾಸಾಯಿತು. ಇಬ್ಬರು ಸದಸ್ಯರು ತಟಸ್ಥರಾಗಿದ್ದರು.

ಮುಸ್ಲಿಮ್ ಸೋದರ ಸೋದರಿಯರು ಕಾಂಗ್ರೆಸ್ ಪಕ್ಷದ ಉಮೇದ್ವಾರರಿಗೆ ಮಾತ್ರ ಘನವಾದ ಓಟನ್ನು ಕೊಟ್ಟು ಕಾಂಗ್ರೆಸು ವಿಜಯಿಯಾಗುವಂತೆ ಸಹಕರಿಸಬೇಕೆಂದು ಜನಾಬ್ ಸಯ್ಯದ್ ಯೂಸುಫ್ ಅಹ್ಮದ್ ತಂಗಳ್ ಅವರು ಆತನು ವಿನಂತಿ ಪತ್ರವೊಂದನ್ನು ಪ್ರಕಟಿಸಿರುವರು.

ಬೆಳ್ಳಾರೆ ಜತ್ತಪ್ಪ ರೈಗಳ ನಿಧನ

ಪುತ್ತೂರು ತಾಲೂಕಿನ ಪ್ರಸಿದ್ಧ ಬಂಟರ ಮನೆತನ ನಾದವರ ಮನೆತನಕ್ಕೆ ಸೇರಿದವರೂ ಸತ್ಯಪ್ರಿಯತೆ, ಸರಳ ವರ್ತನೆ, ಔದಾರ್ಯ ಮೊದಲಾದ ಸದ್ಗುಣಗಳಿಂದ ಜನಪ್ರೀತರೂ ಖ್ಯಾತರೂ ಆಗಿದ್ದ ಬೆಳ್ಳಾರೆ ಪಡ್ಡೆಗುತ್ತು ಜತ್ತಪ್ಪ ರೈಗಳು ಇದೇ ತಾ. ೧೧ನೇ ಸೋಮವಾರ ತಮ್ಮ ೯೭ನೇ ವಯಸ್ಸಿನಲ್ಲಿ ನಿಧನಹೊಂದಿದುದು ವಿಷಾದಕರವಿದೆ. ವಯೋವೃದ್ಧರಾದ ಶ್ರೀ ರೈಗಳು ಪಟೇಲ್ ಬಿ. ನಾರಾಯಣ ಶೇಕದಂಪತಿಗಳ ಯೋಗ್ಯ ಆರೈಕೆ ಅನುಪಾನಗಳಿಂದಾಗಿ ಸದಾ ಆರೋಗ್ಯ, ಪಸನ್ನಮುಖಿಗಳಾಗಿಯೇ ಇದ್ದರು. ಕಳೆದ ತಿಂಗಳಲ್ಲಿ ಅವರ ಆರೋಗ್ಯ ಸ್ವಲ್ಪ ಕೆಟ್ಟ ವೇಳೆಯಲ್ಲಿಯೇ ಮಂಗಳೂರು ಸರಕಾರಿ ಆಸ್ಪತ್ರೆಯ ಚಿಕಿತ್ಸೆಗೆ ಬಂದಿದ್ದ, ಅವರ ಏಕಮಾತ್ರ ಪುತ್ರ ಮದ್ರಾಸಿನ ಡಾ। ಕೆ. ಮಂಜುನಾಥ ರೈಗಳು ಅವರ ದರ್ಶನ ಪಡೆದು ಹೋಗಿದ್ದರು. ಅನಂತರ ಯಥಾಪ್ರಕಾರ ಅವರು ಸುಖಿಗಳಾಗಿದ್ದರೇ ಇದ್ದು, ತಾ. ೧೧ನೇ ಮಧ್ಯಾಹ್ನ ೧ ಗಂಟೆಗೆ ಹೃದಯಸ್ತಂಭನವಾಗಿ ಅಕಸ್ಮಾತ್ತಾಗಿ ಮರಣಹೊಂದಿದರು. ಇವರು ರಿಜಿಸ್ಟ್ರೇಶನ್ ಇಲಾಖೆಯಲ್ಲಿ ದಕ್ಷ ನೌಕರರಾಗಿದ್ದು, ಸಾಯುವ ವರೆಗೂ ನಿವೃತ್ತಿ ವೇತನ ಪಡೆಯುತ್ತಿದ್ದರು.

ಜಿಲ್ಲೆಯ

ಉತ್ತರ ಭಾಗದಲ್ಲಿ 17—10—54 ಆದಿತ್ಯವಾರ

ದಕ್ಷಿಣ ಭಾಗದಲ್ಲಿ 20—10—54 ಬುಧವಾರ

ನಡೆಯಲಿರುವ

ದ. ಕ. ಜಿಲ್ಲಾ ಬೋರ್ಡು ಚುನಾವಣೆಯಲ್ಲಿ

ಕಾಂಗ್ರೆಸ್ ಪಕ್ಷದ ಉಮೇದ್ವಾರರಿಗೇನೇ

ತಮ್ಮ ಘನವಾದ ಓಟುಗಳನ್ನು ಕೊಟ್ಟು

ಸರ್ವ ಬೆಂಬಲವೀಯಬೇಕಾಗಿ ವಿನಂತಿ.

ಈ ಸ್ಥಳವು— ನವಭಾರತ ಪುಸ್ತಕ ಭಂಡಾರ, ಉಡುಪಿ ಇವರ ದಾನ.

ನೀಲಾವರ— ಸ್ಥಳೀಯ ಮಹಿಷಮರ್ಧಿನಿ ಶಾಲೆಯ ವರ್ಧಂತಿ ಸಮಾರಂಭವು ತಾ. ೪ರಲ್ಲು ಸಂಜೆ ಉಡುಪಿ ಉತ್ತರ ಶ್ರೇಣಿಯ ಜೂನಿಯರ್ ಡೆಪ್ಯೂಟಿ ಇನ್ಸ್‌ಪೆಕ್ಟರ್ ಶ್ರೀ. ಎಚ್. ಸಂಜೀವ ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ. ಅಣ್ಣಪ್ಪ ಭಟ್ಟರು ಸ್ವಾಗತ ಭಾಷಣ ಮಾಡಿದರು. ಸಭಿಕರ ಭಾಷಣಗಳಾದ ಬಳಿಕ ಬಾಲಾ ಮಕ್ಕಳು "ಅಂಗದ ಸಂಧಾನ" ಎಂಬ ಯಕ್ಷಗಾನ ನಾಟಕವೇ ಮೊದಲಾದ ವಿನೋದಾವಳಿಗಳನ್ನು ಪ್ರದರ್ಶಿಸಿದರು. ಸಭಾಪೂಜೆಯಾಗಿ ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಶಾಂಗಾಳ— ಸ್ಥಳೀಯ ಹಿಂದೂ ಎಲಿಮೆಂಟರಿ ಶಾಲೆಯಲ್ಲಿ ತಾ. ೨ರಲ್ಲಿ ಗಾಂಧಿ ಜಯಂತಿಯು ಶ್ರೀ ಜೆ. ಡಬ್ಲ್ಯು. ಅಮ್ಮಣ್ಣನವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಪಿ. ರಾಮದಾಸ ರಾವ್, ಪಿ. ಗಣಪಯ್ಯ ಸೆಟ್ಟಿ ಮೊದಲಾದವರ ಭಾಷಣಗಳೊಂದಿಗೆ ಜರಗಿತು. ತಾ. ೪ರಲ್ಲು ಶಾರದಾಪೂಜಾ ಸಮಾರಂಭವೂ ಜರಗಿತು.

ಬಂಟಕಲ್ಲು— ಶ್ರೀ ದುರ್ಗಾಪರಮೇಶ್ವರಿ ಹಾ| ಎ| ಶಾಲೆಯಲ್ಲಿ ತಾ. ೪ರಲ್ಲು ಬೆಳಿಗ್ಗೆ ಶಾರದಾಪೂಜಾ ಕಾರ್ಯಕ್ರಮ ನಡೆಯಿತು.

ತಣ್ಣೀರುಪಂತ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ಗಾಂಧಿ ಜಯಂತಿಯು ಶ್ರೀಗಳಾದ ಕೆ. ಧರ್ಣಪ್ಪ, ಸತ್ಯೇಂದ್ರ ಬಂಗೇರ ಮೊದಲಾದವರ ಭಾಷಣಗಳಿಂದ ನೆರವೇರಿತು.

ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. ೭ರಲ್ಲು ಶಾರದಾಪೂಜಾ ಸಮಾರಂಭವು ಶ್ರೀ ಎಮ್. ನೇಮಣ್ಣ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಯು. ವೇಣುಗೋಪಾಲ ನಾಯಕ್, ಎ. ಕೃಷ್ಣ ರೈ ಮೊದಲಾದವರು ಸಂದರ್ಭೋಚಿತ ಮಾತುಗಳನ್ನಾಡಿದರು. ಶಾಲಾ ಹೆಡ್ಮಾಸ್ಟರ್ ಶ್ರೀ ಕೆ. ಧರ್ಣಪ್ಪನವರು ಧನ್ಯವಾದಗಳನ್ನರ್ಪಿಸಿದರು. ಪಂಚಗಜ್ಜಾಯ ಪ್ರಸಾದ ವಿತರಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ಹೊಸದುರ್ಗ— ಸ್ಥಳೀಯ ಬಲ್ಲಾಡುಗಿಯರ ಶಾಲೆಯಲ್ಲಿ ಎಲ್. ಎಲ್. ಎ. ನೇತೃತ್ವದಲ್ಲಿ ಸಾರ್ವಜನಿಕ ವಾಚನಾಲಯವು ತಾ. ೬ರಲ್ಲು ಶ್ರೀ. ಎಮ್. ನಾರಾಯಣನ್ ನಂಬಿಯಾರ್, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಶ್ರೀ ರಾಮಕೃಷ್ಣ ರಾಯರಿಂದ ಉದ್ಘಾಟಿಸಲ್ಪಟ್ಟಿತು. ಶ್ರೀ ಎಮ್. ಎಸ್. ಪಿತಾಂಬರ ರಾಯರು ವಾಚನಾಲಯದ ಮಹತ್ವದ ಕುರಿತು ಭಾಷಣವಿತ್ತರು.

ಕಲ್ಯಾಣಪುರ— ಸ್ಥಳೀಯ ಮಿಲಾಗ್ರಿಸ್ ಹ್ಯಾಸ್ಕೂಲಿನ ವರ್ಧಂತಿ ಸಮಾರಂಭವು ತಾ. ೬ರಲ್ಲು ಶ್ರೀ ಟಿ. ಎ. ಪೈ, ಎಮ್. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ರೆ| ಫಾ| ಡಿ. ಜಿ. ಡಿ. ಸೋಜರು ಶಾಲಾ ವರದಿಯನ್ನೋದಿದರು. ಶ್ರೀಮತಿ ಪ್ರೇಮಾ ಅನಂತ ಪೈಗಳು ಪಾರಿತೋಷ ವಿತರಣೆ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ವಿದ್ಯಾರ್ಥಿಗಳಲ್ಲಿ ಕಾಯಕಷ್ಟ ಮಾಡುವ ಮನೋವೃತ್ತಿಯು ಬೆಳೆದು ಬರಬೇಕೆಂದು ಮೊದಲಾಗಿ ಹೇಳಿದರು. ಇಂಗ್ಲಿಷ್, ಕನ್ನಡ ನಾಟಕ ಪ್ರದರ್ಶನಗಳಾದ ಬಳಿಕ ಶ್ರೀ ಜಿ. ಶ್ರೀನಿವಾಸ ರಾಯರು ವಂದನೆಗಳನ್ನರ್ಪಿಸಿದರು. ಅಲ್ಲಿಗೆ ಸಮಾರಂಭ ಕೊನೆಗೊಂಡಿತು.

ದೊಂಡೆರಂಗಡಿ— ಅದೇ ತಾ. ೭ರಲ್ಲು ಸಮಾಜವಿಕಾಸ ಯೋಜನೆ ಮೇರೆಗೆ ಕಟ್ಟಲಾಗುವ ಬೋರ್ಡು ಎಲಿಮೆಂಟರಿ ಶಾಲಾ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಅಣಂದಾಲು ಲಿಂಗ್ಯೆ ಹೆಗ್ಡೆಯವರು ನೆರವೇರಿಸಿದರು.

ತಲ್ಲೂರು— ತಾ. ೬ರಲ್ಲು ಸ್ಥಳೀಯ ಬೋರ್ಡು ಹಾ| ಎ| ಶಾಲೆಯಲ್ಲಿ ಶ್ರೀ ಎ. ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಶಾರದಾಪೂಜೆ ಸಮಾರಂಭ ಜರಗಿತು. ಶ್ರೀ ಎಚ್. ಅಚ್ಯುತ ಕಾಮತರು ಶಾಲೆಗೆ ಉಚಿತವಾಗಿ ಕೊಟ್ಟ ಗಾಂಧೀಜಿಯವರ ಭಾವಚಿತ್ರವನ್ನು ಅನಾವರಣ ಮಾಡಲಾಯಿತು. ಶ್ರೀ ಪಿ. ರಾಧಾಕೃಷ್ಣ ರಾಯರು ಧನ್ಯವಾದಗಳನ್ನರ್ಪಿಸಿದರು.

ಉಳ್ತೂರು— ಸ್ಥಳೀಯ ಶ್ರೀ ಮಹಾಲಿಂಗೇಶ್ವರ ಪ್ರಾಥಮಿಕ ಶಾಲೆಯಲ್ಲಿ ತಾ. ೬ರಲ್ಲು ಶಾರದಾಪೂಜೆಯು ಶ್ರೀ ಸಿ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ವಿವಿಧ ಕಾರ್ಯಕ್ರಮಗಳಿಂದ ನೆರವೇರಿತು.

ಕುದಿಗ್ರಾಮ— ಇಲ್ಲಿಯ ಖಾಸಗಿ ಪ್ರಾಥಮಿಕ ಶಾಲೆಯಲ್ಲಿ ತಾ. ೭ರಲ್ಲು ಶಾರದಾಪೂಜೆಯು ಶ್ರೀ ಕೆ. ರಾಘವೇಂದ್ರಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ವಿನೋದಾವಳಿಗಳಾದವು.

ಕಾಂತಾವರ— ಸ್ಥಳೀಯ ಕಾಂತೇಶ್ವರ ದೇವಸ್ಥಾನದ ಶ್ರೀ ದುರ್ಗಾಪರಮೇಶ್ವರಿ ಸನ್ನಿಧಿಯಲ್ಲಿ ತಾ. ೬ರಲ್ಲು ನವರಾತ್ರಿ ಮಹೋತ್ಸವ ಆಚರಿಸಲಾಯಿತು. ಸ್ಥಳೀಯ ಶಾಲಾ ಬಾಲಕಿಯರ ಪ್ರೇಕ್ಷಣೀಯ ನೃತ್ಯ ಕಾರ್ಯಕ್ರಮಗಳಿದ್ದವು.

ಕೊಗಿಕ— ಇಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಯಲ್ಲಿ ತಾ. ೬ರಲ್ಲು ಶಾರದಾಪೂಜೆ ಸಮಾರಂಭವು ಡಾ| ರಾಮಣ್ಣ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ರಾಮದಾಸ ಭಂಡಾರಿ, ಎಸ್. ಭೋಜರಾಜ ಸೆಟ್ಟಿ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು.

ಗುರುಪುರ— ತಾ. ೩ರಲ್ಲು ಸ್ಥಳೀಯ ಹಿಂದೂ ಹಾ| ಎ| ಶಾಲೆಯಲ್ಲಿ ಕಮ್ಯೂನಿಟಿ ಪ್ರೊಜೆಕ್ಟ್ ಆಫೀಸರ್ ಶ್ರೀ ಕೆ. ಎಲ್. ಸೂರ್ಯನಾರಾಯಣ ರಾಯರ ಅಧ್ಯಕ್ಷತೆಯಲ್ಲಿ, ಗುರುಪುರ, ಮೂಳೂರು, ಅಡ್ಡೂರು, ಪೊಳಲಿ ಇತ್ಯಾದಿ ಗ್ರಾಮಸ್ಥರ ಸಭೆಯು ಜರಗಿತು. ಕಳ್ಳಿಗೆ ಗುರುಪುರ ರಸ್ತೆಯನ್ನು ಪೊಳಲಿ ದೇವಸ್ಥಾನದ ಬಳಿ ಸಾಡೂರು ಹೊಳೆವರೆಗೆ ಮುಂದರಿಸುವರೆ ಮಾಡ್ಯನ ಕೆಲಸ ಇತ್ಯಾದಿ ಮಾಡುವರೆ ಶ್ರೀ ಉಳಿಬಾಡಿಗುತ್ತು ಟಿ. ರಘುನಾಥ ಮಾರ್ಲರು ಅಧ್ಯಕ್ಷರಾಗಿಯೂ ಶ್ರೀ ಬಿ. ಎನ್. ರೈ, ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಎ. ವೆಂಕಪ್ಪಯ್ಯ ಮತ್ತು ಎನ್. ಎ. ಶೀನಪ್ಪ ಹೆಗ್ಡೇರು ಜತೆಕಾರ್ಯದರ್ಶಿಗಳಾಗಿರುವ ಕಮಿಟಿ ರಚಿಸಲಾಯಿತು.

ಕೆಲೆಂಜೂರು— ಕಮ್ಯೂನಿಟಿ ಪ್ರೊಜೆಕ್ಟ್ ಆಶ್ರಯದಲ್ಲಿ ಇದೇ ತಾ. ೧ರಲ್ಲು ದ. ಕ. ಜಿಲ್ಲಾ ಬೋರ್ಡಿನ ಕಡೆಯಿಂದ ಹೊಸ ಶಾಲೆಯೊಂದು ತೆರೆಯುವ ಸಮಾರಂಭವು ಪಟೇಲ್ ಶ್ರೀ ಕೆ. ಪುಟ್ಟು ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು.

ಸುರತ್ಕಲ್— ಅಗ್ಗಿದಕರಿಯ ಹಾ. ಎ. ಎ. ಶಾಲೆಯ ೫೨ನೇ ವರ್ಧಂತಿ ಮತ್ತು ಶಾರದಾ ಪೂಜಾ ಸಮಾರಂಭವು ತಾ. ೪ರಲ್ಲು ಶ್ರೀ ಪಿ. ದಯಾನಂದ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ವಿವಿಧ ಕಾರ್ಯಕ್ರಮಗಳು ಚಲೋದಾಗಿ ನಡೆದವು.

ಉದ್ಯಾವರ— ಪಂಡರೀನಾಥ ಭಜನಾ ಮಂಡಳಿಯ ಆಶ್ರಯದಲ್ಲಿ ಶ್ರೀ ಯು. ಪೂವಪ್ಪನವರ ನೇತೃತ್ವದಲ್ಲಿ ತಾ. ೭ರಲ್ಲು ಮೊಗವೀರ ವ್ಯಾಯಾಮ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಶ್ರೀ ಕಾಂತಪ್ಪ ಮಾಸ್ತರರು ಸಂಘವನ್ನು ಉದ್ಘಾಟಿಸಿದರು

ಹಂಗಾರಕಟ್ಟೆ— ಇದೇ ತಾ. ೭ರಲ್ಲು ಕರ್ನಾಟಕ ಸಂಘದ ಆಶ್ರಯದಲ್ಲಿ ನಾಡಹಬ್ಬವು ಬೋರ್ಡು ಹಾ. ಎ. ಶಾಲೆಯಲ್ಲಿ ಶ್ರೀ ಬ. ಎಚ್. ಶ್ರೀಧರ ಅವರ ಅಧ್ಯಕ್ಷತೆಯಲ್ಲಿ ಜರಗಿತು.
ಶ್ರೀ ಬಿ. ಲಕ್ಷ್ಮೀನಾರಾಯಣ ಕೆದ್ಲಾಯರು ಪರಿಚಯ ಭಾಷಣ ಮಾಡಿದರು. ವರದಿವಾಚನ, ಬಹುಮಾನ ವಿತರಣೆಗಳಾದ ಬಳಿಕ ಶ್ರೀ ಕೆ. ಬಿ. ರಾಮಕೃಷ್ಣ ರಾಯರು 'ತತ್ವಚಿಂತನೆ' ಕುರಿತು ಮಾತನಾಡಿದರು. ಶ್ರೀ ಎಚ್. ರಾಮಚಂದ್ರ ಮೂರ್ತಿಯವರು ಕಾವ್ಯವಾಚನ ಮಾಡಿದರು. ಶ್ರೀಗಳಾದ ಸುಬ್ರಾಯ ಉರಾಳರ ಭಾಷಣಾನಂತರ ಶ್ರೀಗಳಾದ ಎನ್. ಶ್ರೀನಿವಾಸ ಕಲ್ಕೂರ ಮತ್ತು ಕಾರಂತ ಸಹೋದರರ ಸಂಗೀತ ಕಚೇರಿ ನಡೆಯಿತು. ಶ್ರೀ ಬೈಕಾಡಿ ವೆಂಕಟಕೃಷ್ಣ ರಾಯರು ಕನ್ನಡ ಸಮಸ್ಯೆಗಳ ಕುರಿತು ಭಾಷಣವಿತ್ತರು. ಅಧ್ಯಕ್ಷರು ತಮ್ಮ ವೈವಿಧ್ಯಪೂರ್ಣ ಹಾಗೂ ವಿದ್ವತ್ ಭರಿತ ಭಾಷಣದಲ್ಲಿ, ಕಲಾಕ್ಷೇತ್ರಕ್ಕೆ ಇತರ ಕ್ಷೇತ್ರಗಳಿಗಿಂತ ಹೆಚ್ಚಿನ ಸ್ವಾತಂತ್ರ್ಯ ಅಗತ್ಯವೆಂದೂ ಸಾಹಿತ್ಯವು ಶುದ್ಧವಾಗಿದ್ದು ಅದು ಜನಜೀವನವನ್ನು ಪ್ರತಿಬಿಂಬಿಸಬೇಕಾಗಿದೆ ಎಂದು ಹೇಳಿದರು. ಯಕ್ಷಗಾನ ಕಾಲಕ್ಷೇಪ, ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

ತೊಂಭತ್ತು— ಕುಂದಾಪುರ ತಾಲೂಕಿನ ಹಂಗವಳ್ಳಿ ಗ್ರಾಮದ ತೊಂಭತ್ತು ಶ್ರೀ ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲೆಯಲ್ಲಿ ಇದೇ ತಾ ೧ರಲ್ಲು ವಯಸ್ಕರ ಶಿಕ್ಷಣದ ರಾತ್ರಿ ಶಾಲೆಯೊಂದು ಶ್ರೀ ಸಂಜೀವ ಸೆಟ್ರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಶ್ರೀಗಳಾದ ಟಿ. ಗೋಪಾಲ ತೋಳಾರ್, ಧರ್ಮಯ್ಯ ಹೆಗ್ಡೆ, ಕೃಷ್ಣಯ್ಯ ಹೆಗ್ಡೆ ಮೊದಲಾದವರು ವಯಸ್ಕರ ಶಿಕ್ಷಣದ ಅವಶ್ಯಕತೆಯನ್ನು ಸಮರ್ಥಿಸಿ ಮಾತನಾಡಿದರು.

ಪಡುಬಿದ್ರೆ— ಪಡುಬಿದ್ರೆಯ ಸಂಸ್ಕೃತ ಮಾಧ್ಯಮಿಕ ಶಾಲೆಯ ನೂತನ ಭವನದ ಶಂಕುಸ್ಥಾಪನಾ ಕಾರ್ಯವನ್ನು ತಾ. ೧೧ರಲ್ಲು ಉಡುಪಿ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ನೆರವೇರಿಸಿದರು. ಶ್ರೀ ಶ್ರೀಗಳವರನ್ನು ವಾದ್ಯಘೋಷ, ಜಯಘೋಷಗಳಿಂದ ಶಾಲಾ ಪೋಷಕರಾದ ಶ್ರೀ ಅಧಮಾರು ಮಠದ ಶ್ರೀ ವಿಬುಧೇಶತೀರ್ಥ ಶ್ರೀಪಾದಂಗಳವರು ಸ್ವಾಗತೀಕರಿಸಿದರು. ಶಾಲಾ ಕರೆಸ್ಪಾಂಡೆಂಟ್ ಶ್ರೀ ಸಿ. ಶ್ರೀಪತಿ ರಾಯರು ಸ್ವಾಮಿಗಳವರಿಗೆ ಹಾರತುರಾಯಿಗಳನ್ನರ್ಪಿಸಿದರು.

ಶ್ರೀ ರಾಮಚಂದ್ರ ಆಚಾರ್ಯರು ಶಾಲಾ ವರದಿಯನ್ನೋದಿದರು. ಸಭಿಕರಲ್ಲಿ ಶ್ರೀ ರಾಮಕೃಷ್ಣಾಚಾರ್ಯರೇ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧಮಾರು ಮಠದ ಶ್ರೀ ಪಾದಂಗಳವರು ಧಾರ್ಮಿಕ ಜ್ಞಾನದ ಮಹತ್ವ ಮತ್ತು ಅವಶ್ಯಕತೆ ಇತ್ಯಾದಿ ಕುರಿತು ಉಪನ್ಯಾಸವಿತ್ತರು. ಶ್ರೀ ವಿದ್ಯಾರತ್ನತೀರ್ಥ ಸ್ವಾಮಿಗಳವರು ಬ್ರಹ್ಮವಿದ್ಯೆಯ ಮಹತ್ವ, ಅವಶ್ಯಕತೆ ಇತ್ಯಾದಿ ವಿಚಾರಗಳನ್ನು ಸಭಿಕರ ಗಮನಕ್ಕೆ ತಂದು ಈ ಶಾಲೆಯು ಉತ್ತರೋತ್ತರ ಅಭಿವೃದ್ಧಿ ಹೊಂದುವಂತಾಗಲೆಂದು ಆಶಿಸಿದರು. ವಂದನಾರ್ಪಣೆಯೊಂದಿಗೆ ಸಮಾರಂಭ ಕೊನೆಗೊಂಡಿತು.

"ಕಥೊಲಿಕ್ ಬಂಧುಗಳಲ್ಲಿ ವಿನಂತಿ

ಎಂಬ ಕರಪತ್ರವೊಂದನ್ನು ಶ್ರೀಗಳಾದ ಎಲ್. ಸಿ. ಪ್ಯಾಸ್, ಎಫ್. ಎಕ್ಸ್. ಡಿ'ಪಿಂಟೊ, ಎ. ಎಫ್. ಕೊಯಿಲೊ, ಮೇರಿ ಜೆ. ಬ್ರಿಟೊ, ಬಿ. ವಿ. ಮತಾಯಸ್, ಆರ್. ಬಿ. ಸಿ. ಡಿ. ಅಂದ್ರಾದೆ, ಜೆ. ಪಿ. ರೇಗೊ, ಎಸ್. ಜೆ. ಫೆರ್ನಾಂಡಿಸ್, ಡಬ್ಲ್ಯು. ಇ. ಮಸ್ಕರೆಂಞಸ್‌ರವರು ಹೊರಡಿಸಿ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುಗಳಿಗನೇ ಮತದಾನವೀಯಬೇಕೆಂದು ವಿನಂತಿ ಮಾಡಿರುತ್ತಾರೆ.



ನ೯ನೇ ಪುಟದಿಂದ

ಮುಖ್ಯ ಮಂತ್ರಿಯಾಗಿದ್ದಾಗ ಇವರು ಕೈಮಗ್ಗದ ನೇಕಾರರ ಕೈವಾರಿಯಾಗಿ ಕೇಂದ್ರದ ಕೃಷ್ಣಮಾಚಾರಿಗಳೊಡನೆ ವಾದ ಹೂಡಿ, ಬಹಳ ಮಟ್ಟಿಗೆ ಗೆದ್ದರು. ಕಾನುಂಗೊ ಸಮಿತಿಯ ವರದಿಯನ್ನು ಕುರಿತು ಮೊನ್ನೆ ಅವರ ಅಭಿಪ್ರಾಯವನ್ನು ವಿಚಾರಿಸಿದಾಗ ಕೈಯಲ್ಲಿರುವ ಹಕ್ಕಿ ಒಂದೇಯಾದರೂ ಪೊದರಿನೆಡೆಯ ಎರಡು ಹಕ್ಕಿಗಳಿಗಿಂತಲೂ ಮೇಲು ಎಂಬ ಆಂಗ್ಲ ನಾಣ್ಣುಡಿಯ ನೆನಪುಮಾಡಿಕೊಟ್ಟು ಕೈಮಗ್ಗಗಳನ್ನು ಹೇಗಾದರೂ ಉಳಿಸಲು ಪ್ರಯತ್ನಿಸೋಣ ಎಂದರು. ದೀಪಾವಳಿಯ ಸಲುವಾಗಿ ಹೊಸವಸ್ತ್ರಗಳನ್ನು ಕೊಳ್ಳಲಿರುವ ಮಹಾಜನರು ಕೈಮಗ್ಗದ ನೇಕಾರ ಬಂಧುಗಳ ಶೋಚನೀಯ ಪರಿಸ್ಥಿತಿಯನ್ನು ನೆನೆದು ಅವರಿಗೆ ನೆರವಾಗಲಿ ಎಂದೂ ಅವರು ಹಾರೈಸಿದರು.

ಮಾಲಕ ಮಜೂರ ಸಂಬಂಧ

ಯೋಗ್ಯ ಸ್ಥಾನದಲ್ಲಿರಬೇಕಾಗಿದ್ದರೂ ಆ ಭಾಗ್ಯವನ್ನು ಕಳೆದುಕೊಂಡ ಸಮರ್ಥರಲ್ಲಿ ಭಾರತದ ಹಿಂದಿನ ಕೂಲಿಕಾರ ಸಚಿವ ಶ್ರೀ ವರಾಹ ವೆಂಕಟ ಗಿರಿಯವರು ರಾಜಾಜಿಯ ಸಾಲಿಗೆ ಸೇರತಕ್ಕವರಾಗಿದ್ದಾರೆ. ಕಾರ್ಮಿಕ ಕ್ಷೇತ್ರದಲ್ಲಿ ಅವರಷ್ಟು ಅನುಭವಸಂಪನ್ನರು ಬೇರೆ ಯಾರೂ ಇಲ್ಲ. ಕೂಲಿಕಾರರ ಮಾತೆತ್ತುವುದೆಂದರೆ ಹೊಸ ತಂಟೆಗೆ ನಾಂದಿ ಹಾಕಿದಂತೆಂದು ಭಾವಿಸುವ ಇಂದಿನ ಪರಿಸ್ಥಿತಿಯಲ್ಲೂ ನಿರ್ವಿಕಾರ ಮನೋಭಾವದಿಂದ ವಿಷಯದ ವಿಮರ್ಶೆ ಮಾಡುವ ಮುತ್ಸದ್ದಿಗಳಲ್ಲಿ ಗಿರಿಯವರು ಅಗ್ರಗಣ್ಯ. ಅವರು ಆಡಳಿತ ವಿಷಯದಲ್ಲಿಯೂ ನುರಿತವರು; ಸಿಂಹಳದಲ್ಲಿ ಭಾರತದ ಪ್ರತಿನಿಧಿಗಳಾಗಿದ್ದವರು. ಹೀಗಾಗಿ ಸರಕಾರದ ಹೊಣೆಗಾರಿಕೆಗಳೂ ಅವರ ದೃಷ್ಟಿಯಲ್ಲಿ ಮರೆಯಾಗುವುದಿಲ್ಲ. ಆದುದರಿಂದ ಕೂಲಿಕಾರರ ಹಿತಚಿಂತನೆಯ ಮಾತಾಡುವಾಗ ಮಾನವೀಯ ಮನೋಭಾವವನ್ನು ಅವರು ತೋರಿಸಿ ತಮ್ಮ ಪ್ರಾಮಾಣಿಕತೆಯನ್ನು ಸಿದ್ಧಪಡಿಸುತ್ತಾರೆ. ಮುಂಬಯಿಯಲ್ಲಿ ಅಖಿಲ ಭಾರತ ಕಾರಖಾನೆದಾರರ ಸಂಘದ ಸಭೆಯಲ್ಲಿ ಮಾತನಾಡುತ್ತಾ ಔದ್ಯೋಗಿಕ ಶಾಂತಿ ಹಾಗು ಪ್ರಗತಿಯ ದೃಷ್ಟಿಯಿಂದ ಮಾಲಕ ಮಜೂರರಲ್ಲಿ ಸದ್ಭಾವವಿರಬೇಕೆಂದು ಒತ್ತಿ ಹೇಳಿದವರಲ್ಲದೆ, ಮಾಲಕರು ಕೂಲಿಕಾರರ ಸಹಾಯವಿಲ್ಲದೆ ತಮ್ಮ ಉದ್ಯೋಗವು ಉತ್ಕರ್ಷವನ್ನು ಹೊಂದಲಾರದೆಂಬುದನ್ನು ತಿಳಿದುಕೊಳ್ಳಬೇಕೆಂದೂ ತಮ್ಮ ಲಾಭದಲ್ಲಿ ಕೂಲಿಕಾರರಿಗೆ ಪಾಲು ನೀಡಬೇಕೆಂದೂ ಉಪದೇಶಿಸಿದರು.

ನಡಿಯುವ ಚಿತ್ರ:— ವಕ್ಷಿರಾಜಾರವರ
● ಲಲಿತ-ಪದ್ಮಿನಿ, ○ ನಂಬಿಯಾರ್,
ಕಾಂಚನ
● ಕುಮಾರಿ, ○ ಮನೋಹರ,
ಕೆ. ಆರ್. ರಾಮಸ್ವಾಮಿ ಮೊದಲಾದವರು.

ಬರುವ ಚಿತ್ರ: ಜೆಮಿನಿಯವರ
ಸೌದಾಮಿನಿ, ಚಂದ್ರಲೇಖಾ ಇತ್ಯಾದಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಮಂಗಳೂರು

ಪಕ್ಷ ಧೋರಣೆಗಳ ಸ್ಪಷ್ಟೀಕರಣ- ಮಂಗಳೂರಿನ ವಿವೇಕಾನಂದ ಮಂಡಳಿಯ ಆಶ್ರಯದಲ್ಲಿ ನಡೆಯಲ್ಪಟ್ಟ ಅಂಗವಾಗಿ ತಾ. 6ರಲ್ಲು ಸಂಜೆ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶ್ರೀ ಜಿ. ಸೋಮಶೇಖರ ರಾಯರ ಅಧ್ಯಕ್ಷತೆಯಲ್ಲಿ ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತು ಜನಸಂಘದ ಅಗ್ರ ಕಾರ್ಯಕರ್ತರು ತಂತಮ್ಮ ಪಕ್ಷ ಧೋರಣೆಗಳನ್ನು ಸಮರ್ಥಿಸಿ ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಕಡೆಯಿಂದ ಶ್ರೀ ಎ. ಶಂಕರ ಆಳ್ವರು ಕಾಂಗ್ರೆಸಿನ ವಿದೇಶ ನೀತಿಯನ್ನು ವಿವರಿಸಿದರಲ್ಲದೆ ಗಾಂಧೀಜಿಯವರ ಸರ್ವೋದಯ ಸಮಾಜವನ್ನು ನಿರ್ಮಿಸುವುದು ಕಾಂಗ್ರೆಸಿನ ಧ್ಯೇಯ ಧೋರಣೆಗಳಲ್ಲೊಂದಾಗಿದೆ ಎಂದರು. ಕಾರ್ಮಿಕ ರೈತ, ಮಧ್ಯಮ ವರ್ಗದವರನ್ನು ಪ್ರತಿನಿಧೀಕರಿಸುವ ಜನಹಿತ ಪ್ರಜಾಪ್ರಭುತ್ವವೇ ಕಮ್ಯೂನಿಸ್ಟ್ ಪಕ್ಷದ ಧ್ಯೇಯವಾಗಿರುವುದೆಂದು ಶ್ರೀ ಬಿ. ವಿ. ಕಕ್ಕಿಲ್ಲಾಯರು ಹೇಳಿದರು. ಜನಸಂಘದ ಪರವಾಗಿ ಶ್ರೀ ಪ್ರಭಾಕರ ಘಾಟೆಯವರು ಮಾತನಾಡುತ್ತಾ, ಅಖಂಡ ಭಾರತ ನಿರ್ಮಾಣವೇ ತಮ್ಮ ಪಕ್ಷದ ಮುಖ್ಯ ಧ್ಯೇಯವೆಂದರು. ಸಭಾಧ್ಯಕ್ಷರು ತಮ್ಮ ಮುಕ್ತಾಯ ಭಾಷಣದಲ್ಲಿ, ಎಲ್ಲಾ ಪಕ್ಷಗಳೂ ದೇಶದ ಹಿತದೃಷ್ಟಿಯಿಂದ ತಂತಮ್ಮ ಕಾರ್ಯಕ್ಷೇತ್ರದಲ್ಲಿ ದುಡಿದು ದೇಶದ ಹಿತ ಸಾಧಿಸಬೇಕಾಗಿ ಆಶಿಸಿದರು.

ಹಳೆವಿದ್ಯಾರ್ಥಿ ಸಂಘದ ಯೋಜನೆ— ಮಂಗಳೂರು ಗಣಪತಿ ಹೈಸ್ಕೂಲಿನ ಹಳೆವಿದ್ಯಾರ್ಥಿ ಸಂಘದ ಮಹಾಸಭೆಯು ತಾ. 6ರಲ್ಲು ಶ್ರೀ ಪಿ. ಆರ್. ಕತ್ರಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಗತವರುಷದ ವರದಿವಾಚನ, ಚಾಲ್ತಿ ವರುಷದ ಅಧಿಕಾರಿಗಳ ಚುನಾವಣೆ ನಡೆದ ಬಳಿಕ ಮುಂಬರುವ 1955ನೇ ಇಸವಿಯಲ್ಲಿ ಸಂಘದ ರಜತೋತ್ಸವವನ್ನು ಆಚರಿಸಲು ನಿಶ್ಚಯಿಸಲಾಯಿತು. ಆ ಬಗ್ಗೆ ಶ್ರೀ ಜಿ. ಸೋಮಶೇಖರ ರಾಯರು ಅಧ್ಯಕ್ಷರಾಗಿಯೂ ಶ್ರೀ ಗೋಪಿನಾಥ ಭಟ್ಟರು ಕಾರ್ಯದರ್ಶಿಗಳಾಗಿಯೂ ಇರುವ ಕಮಿಟಿಯೊಂದು ರಚಿಸಲ್ಪಟ್ಟಿತು. ಹೈಸ್ಕೂಲು ಕಟ್ಟಡ ವಿಸ್ತರಣೆಗಾಗಿ ಸಂಘದ ಕಡೆಯಿಂದ ರೂ. 10,000 ಸಂಗ್ರಹಿಸಬೇಕೆಂದು, ಸಭೆಯ ಅಭಿಪ್ರಾಯವಾಯಿತು

ಶ್ರೀ. ಪಿ. ವಿ. ಪ್ರಭುರವರಿಗೆ ಮುಂಬಾಯಿ "ರಾಜಾಪುರ ಸಾರಸ್ವತ ಸಂಘ"ದವರ ಸತ್ಕಾರ.

ಪಿಲಾರ್ ಪೋಸ್ಟ್ ಮಾಸ್ಟರ್ ಶ್ರೀಯುತ ಗೋವಿಂದ ಪ್ರಭುರವರ ಪುತ್ರ- ಶ್ರೀ. ಪಿ. ವಾಸುದೇವ ಪ್ರಭುರವರು ತಾ. 21-9-54ನೇ ಶುಕ್ರವಾರ ಮದ್ರಾಸಿನಿಂದ Air Indiaದಿಂದ ಮುಂಬಯಿಗೆ ಬಂದು ಮರುದಿನ ತಾ. 25ಕ್ಕೆ ಸಾಯಂ. ಘಂಟೆ 7½ಗೆ T. W. A.ದಿಂದ ಮುಂದಿನ ಶಿಕ್ಷಣಕ್ಕೋಸ್ಕರ ಇಂಗ್ಲಂಡಿಗೆ ತೆರಳಿದ್ದಾರೆ. ಶ್ರೀ. ಪ್ರಭುರವರು ಸ್ಕೋಟ್ಲಂಡ್‌ನಲ್ಲಿರುವ "ರೋಯಲ್ ಕಾಲೇಜ್ ಒಫ್ ಎಡಿನ್‌ಬರ್ಗ್"ನಲ್ಲಿ ಒಂದು ವರ್ಷ ಅಭ್ಯಾಸ ಮಾಡಲಿರುವರು. ಮುಂಬಯಿಯಲ್ಲಿರುವ "ರಾಜಾಪುರ ಸಾರಸ್ವತ ಸಂಘ"ದವರು ಸಂತಾಕ್ರೂಜ್ ವಿಮಾನ ತಳದಲ್ಲಿ ಶ್ರೀ. ಪ್ರಭುರವರನ್ನು ಸತ್ಕರಿಸಿ ಅವರಿಗೆ ಸುಯಶಸ್ಸನ್ನು ಕೋರಿದರು.

ಗಾಂಧೀ ಜಯಂತಿ—ಸರ್ಕಲ್ ಕಾಂಗ್ರೆಸ್ಸಿನ ಆಶ್ರಯದಲ್ಲಿ ಧ್ವಜವಂದನೆ, ಸಾಮೂಹಿಕ ನೂಲುವಿಕೆ, ನೆರೆ ಸಂತ್ರಸ್ತರ ಸಹಾಯಾರ್ಥ ಧನಾದಿ ಸಂಗ್ರಹ ಮೊದಲಾದ ಕಾರ್ಯಕ್ರಮಗಳಿಂದ ನೆರವೇರಿತು. ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀ ಕೆ. ಆರ್. ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಶ್ರೀ ಯಸ್. ಎನ್. ಹೊಳ್ಳರು ಭಾಷಣ ಮಾಡಿದರು.

ಕರ್ನಾಟಕ ಪೋಲಿಟೆಕ್ನಿಕಿನ—ಸಿವಿಲ್ ಇಂಜಿನಿಯರಿಂಗ್ ಸಂಘದ ಕಡೆಯಿಂದ ಮದ್ರಾಸ್ ಹೈವೇಸ್ ಚೀಫ್ ಇಂಜಿನಿಯರ ಶ್ರೀ ಕೆ. ಕೆ. ನಂಬಿಯಾರರು ಕಳೆದ ತಾ. 30ರಲ್ಲಿ ಶ್ರೀ ಯಸ್. ನರಸಪ್ಪಯ್ಯ ಎಂ. ಎಲ್. ಸಿ. ಇವರ ಅಧ್ಯಕ್ಷತೆಯಲ್ಲಿ ಸೇತುವೆಗಳೆಂಬ ಕುರಿತು ಉಪನ್ಯಾಸವಿತ್ತರು.

ಬೆಸೆಂಟ್ ಪ್ರಬಂಧ ಸ್ಪರ್ಧೆ— ಡಾ| ಸಿ. ರಾಮ ಕಾಮತ್ ಅವರ ಹೆಸರಿನಲ್ಲಿ ಕೊಡಲ್ಪಡುವ ಬೆಸೆಂಟ್ ಪ್ರಬಂಧ ಸ್ಪರ್ಧೆಯಲ್ಲಿ ಪಾರಿತೋಷಕಗಳು ಉಡುಪಿಯ ಮಹಾತ್ಮಾಗಾಂಧಿ ಮೆಮೋರಿಯಲ್ ಕಾಲೇಜಿನ ಶ್ರೀ ಬಿ. ಕಷ್ಣಾನಂದ ಹೆಗ್ಡೆ ಮತ್ತು ಉಜಿರೆಯ ಕರ್ನಾಟಕ ವಿದ್ಯಾಲಯದ ಶ್ರೀ ರಾಜರಾಮ ಭಟ್ಟ ಇವರಿಗೆ ದೊರಕಿದೆ.

ಸಹಕಾರಿ ಮೀನು ಮಾರಾಟ ಸಂಘ—ದವರು ವ್ಯವಸ್ಥೆಗೊಳಿಸಿದ ಒಣಮೀನು ಮತ್ತು ಮೀನು ಉತ್ಪತ್ತಿಗಳ ಏಲಂ ಮಾರ್ಕೆಟನ್ನು ಶ್ರೀ ಬಿ. ವೈಕುಂಠ ಬಾಳಿಗಾ ಎಂ. ಎಲ್. ಎ. ಅವರು ತಾ. 7ರಲ್ಲಿ ಉದ್ಘಾಟಿಸಿದರು.

ನಾಡಹಬ್ಬ—ತಾ. 9 ಮತ್ತು 10ರಲ್ಲಿ ತರುಣ ಕಲಾವೃಂದದ ಆಶ್ರಯದಲ್ಲಿ ಗಣಪತಿ ಹೈಸ್ಕೂಲಿನ ಸಭಾ ಸದನದಲ್ಲಿ ನಾಡಹಬ್ಬವು ವಿವಿಧಕಾರ್ಯಕ್ರಮಗಳಿಂದ ಆಚರಿಸಲ್ಪಟ್ಟಿತು ಮೊದಲ ದಿನ ಶ್ರೀ ಬಿ. ಶಂಕರ ಭಟ್ಟರೂ ಎರಡನೇ ದಿನ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ ಅಧ್ಯಕ್ಷತೆ ವಹಿಸಿದ್ದರು.

ದ. ಕ. ಜಿಲ್ಲೆಯಲ್ಲಿ ಮಾನ್ಯ ಮಂತ್ರಿ ಎ. ಬಿ. ಶೆಟ್ಟರು—ಮದ್ರಾಸಿನ ಆರೋಗ್ಯಮಂತ್ರಿ ಮಾನ್ಯ ಶ್ರೀ ಎ. ಬಿ. ಶೆಟ್ಟರು ತಾ. 6ರಲ್ಲು ಬೆಳಿಗ್ಗೆ ಕುಂಬಳೆಗೆ ಆಗಮಿಸಿದರು. ಅವರ ಜೊತೆಯಲ್ಲಿ ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಮತ್ತು ಶ್ರೀ ಕೆ. ಸುಂದರರಾಮ ಶೆಟ್ಟರು ಬಂದಿದ್ದರು. ಶ್ರೀಗಳಾದ ಎಮ್. ಎಸ್. ಮೊಗ್ರಾಲ್, ಎಮ್. ಎಲ್. ಎ, ಶ್ರೀಗಳಾದ ಕೆ. ಕಣ್ಣಪ್ಪ, ಬಿ. ದೇವಪ್ಪ ಆಳ್ವ, ಬಿ. ಶಾಂತಪ್ಪ ರೈ, ಬಿ. ಮಾಧವ ಪೈ, ಮೊದಲಾದವರು ಸ್ವಾಗತಿಸಿದರು. ಮಾನ್ಯ ಮಂತ್ರಿಗಳು ಬಂಗಲೆಯಲ್ಲಿ ಸ್ಥಳೀಯ ಕಾಂಗ್ರೆಸ್ ಕಾರ್ಯಕರ್ತರೊಡನೆ ಜಿಲ್ಲಾ ಬೋರ್ಡು ಚುನಾವಣೆಯ ಕುರಿತು ವಿಚಾರ ವಿನಿಮಯ ನಡೆಸಿದರು. ಸರಕಾರವು ದ. ಕ. ಜಿಲ್ಲೆಯಲ್ಲಿ ಸಾಧಿಸಿದ ಕಾರ್ಯಗಳನ್ನು ವಿವರಿಸಿದರಲ್ಲದೆ ಈ ವರ್ಷ ಕುಂದಾಪುರ ತಾಲೂಕಿನ ಪಂಚ್ಸೆ, ಬೈಂದೂರು ಫಿರ್ಕಗಳಲ್ಲೂ ರಾಷ್ಟ್ರೀಯ ವಿಸ್ತರಣಾ ಯೋಜನೆಗಳು ಕಾರ್ಯರೂಪಕ್ಕೆ ಬಂದಿರುವುದಾಗಿ ತಿಳಿಸಿದರು. ಕೊನೆಯಲ್ಲಿ ಜಿಲ್ಲಾ ಬೋರ್ಡಿನ ಚುನಾವಣೆಯಲ್ಲಿ ಕಾಂಗ್ರೆಸಿಗೆ ಸರ್ವರ ಸಹಕಾರವನ್ನು ಬಯಸಿದರು. ಮಧ್ಯಾಹ್ನ ಮಂತ್ರಿಗಳು ಬದಿಯಡ್ಕಕ್ಕೆ ಪ್ರಯಾಣ ಬೆಳೆಸಿದರು.

ಅಡ್ಯನಡ್ಕ ಕೇಂದ್ರಕ್ಕೆ ಮಾನ್ಯಮಂತ್ರಿಗಳು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ಡಾ| ಯು. ಪಿ. ಮಲ್ಯರೊಡನೆ ಸಂಜೆ ಆಗಮಿಸಿದರು. ಎಣ್ಮಕಜೆ ಕೇಪು, ಮುಣಿಯೂರು, ವಾಣಿಲ, ಪೆರುವಾಯಿ ಮೊದಲಾದ ಆಸುಪಾಸಿನ ಗ್ರಾಮಸ್ಥರ ಕೂಡುವಿಕೆಯ ಸಭೆಯಲ್ಲಿ ಶ್ರೀ. ಶೆಟ್ಟರು ಮಾತನಾಡುತ್ತಾ, ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದ್ವಾರರಿಗೆ ಬೆಂಬಲನೀಯಬೇಕಾಗಿ ಕೇಳಿಕೊಂಡರು.

ತಾ. 7ರಲ್ಲು ಶ್ರೀ. ಶೆಟ್ಟರು ಪಳ್ಳಿಯಂಗಡಿ ಪಡುಪಣಂಬೂರು, ಮೂಲ್ಕಿ, ಹೆಜಮಾಡಿ, ಕಿನ್ನಿಗೋಳಿ, ಕಟೀಲು, ಗುರುಪುರ ಮೊದಲಾದ ಊರುಗಳನ್ನು ಸಂದರ್ಶಿಸಿ ಕಾಂಗ್ರೆಸ್ ಸರಕಾರವು ಕೈಕೊಂಡ ಬೇರೆ ಬೇರೆ ಜನೋಪಕಾರಿ ಯೋಜನೆಗಳನ್ನು ವಿವರಿಸಿದ್ದಲ್ಲದೆ ಒಕ್ಕಲು ಹಿತ ಮಸೂದೆಯು ಬೇಗನೇ ಜ್ಯಾರಿಗೆ ಬರುವುದೆಂದು ಹೇಳಿದರು.

ತಾ. 8ರಲ್ಲಿ ಮೂಡಬಿದ್ರೆ, ಕಾರ್ಕಳ, ಹೆಬ್ರಿ. ಕುಂದಾಪುರ ಕಡೆಗಳಲ್ಲಿಯೂ, ತಾ. 9ರಲ್ಲಿ ಕೋಟ, ಬ್ರಹ್ಮಾವರ, ಕಲ್ಯಾಣಪುರ ಮೊದಲಾದ ಸ್ಥಳಗಳಲ್ಲಿಯೂ ಸಂಚರಿಸಿ ಕಾಂಗ್ರೆಸ್ಸಿಗೆ ಬೆಂಬಲ ಕೊಡಬೇಕೆಂದು ಕೇಳಿಕೊಂಡರು.

ಉತ್ತಮ ಬೆಳೆಗೆ ಬಹುಮಾನವೀಯುವ ಸಮಾರಂಭ—ವು ತಾ. 10ರಲ್ಲು ಕಂಕನಾಡಿ ಭತ್ತ ಪರಿಶೋಧನಾ ಕೇಂದ್ರದಲ್ಲಿ ಜರಗಿ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಹಸ್ತದಿಂದ ಬಹುಮಾನವಿತರಣೆ ನಡೆಯಿತು. 1953—54ನೇ ಇಸವಿಯ ದ. ಕ. ಜಿಲ್ಲೆಯ ಭತ್ತ ಬೆಳೆಯ ಸ್ಪರ್ಧೆಯಲ್ಲಿ ಉಡುಪಿ ತಾಲೂಕಿನ ಹಾಲಾಡಿ ಸಂಜೀವ ಶೆಟ್ಟರು ಎಕ್ರೆಗೆ 126 ಮುಡಿ 36¼ ಸೇರು ಭತ್ತ ಬೆಳೆಸಿ ಜಿಲ್ಲಾ ಬಹುಮಾನಕ್ಕೆ ಅರ್ಹತೆ ಪಡೆದಿದ್ದು ಅವರಿಗೆ ರಜತ ಪದಕವನ್ನೂ ಪ್ರಶಸ್ತಿಪತ್ರವನ್ನೂ ಕೊಡಲಾಯಿತು ಮಂತ್ರಿಗಳು ಬಹುಮಾನ ಪಡೆದ ಶ್ರೀ ಸಂಜೀವ ಶೆಟ್ಟರನ್ನು ಪ್ರಶಂಸಿಸಿ ಜಿಲ್ಲೆಯ ರೈತರು ಇವರ ಮಾ ಧ ರಿ ಯ ನ್ನು ಅನುಸರಿಸಬೇಕೆಂದೂ ಉತ್ತಮ ಬೀಜ, ಗೊಬ್ಬರಗಳನ್ನು ಅರಿಸಿ ಅಧಿಕ ಆಹಾರೋತ್ಪಾದನೆಯ ಕಾರ್ಯದಲ್ಲಿ ನೆರವಾಗಬೇಕೆಂದೂ, ಜಪಾನೀ ಕೃಷಿ ಪದ್ಧತಿಯನ್ನೂ ಹೊಸ ಕೃಷಿ ವಿಧಾನಗಳನ್ನೂ ಕಾರ್ಯಗತ ಮಾಡಿಕೊಳ್ಳಬೇಕೆಂದೂ, ಕೈಯಿಂದ ಕುಟ್ಟಿದ ಅಕ್ಕಿಯಲ್ಲಿ ಆರೋಗ್ಯವರ್ಧಕ ಸತ್ವ ಗಳಿರುವುದರಿಂದ ಅದನ್ನೇ ಹೆಚ್ಚಾಗಿ ಉಪಯೋಗಿಸಬೇಕೆಂದೂ, ದ. ಕ. ಜಿಲ್ಲೆಯಲ್ಲಿ ಅಕ್ಕಿ ಮಿಲ್ಲುಗಳು ಹೆಚ್ಚಾಗುತ್ತಿರುವುದು ವಿಷಾದಕರವೆಂದೂ ಹೇಳಿದರು. ಬಹುಮಾನ ಗಳಿಸಿದ ಶ್ರೀ. ಸಂಜೀವ ಶೆಟ್ಟರು ತಾವು ಕೃಷಿ ಮಾಡಿದ ವಿಧಾನಗಳನ್ನು ವಿವರಿಸಿದರು. ಜಿಲ್ಲಾ ಎಗ್ರಿಕಲ್ಚರ್ ಆಫೀಸರ್ ಶ್ರೀ. ಕೆ. ಸಂಜೀವ ಶೆಟ್ಟರು ಆರಂಭದಲ್ಲಿ ಸ್ವಾಗತ ಭಾಷಣ ಮಾಡಿದ್ದಲ್ಲದೆ ಅಂತ್ಯದಲ್ಲಿ ಧನ್ಯವಾದಗಳನ್ನು ಅರ್ಪಿಸಿದರು.

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವುದಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇದಕ್ಕೆ ಈಡು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ದಾರುಣ ವ್ಯಾಧಿಯ ಮುಖ್ಯ ಲಕ್ಷಣಗಳಾವುವೆಂದರೆ ಹಸಿವು ನೀರಡಿಕೆ ಅತಿ ಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ.

ಈ ವ್ಯಾಧಿ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕುಗಳು.

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾಡ ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಅಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆಯಾಗುವುದು, ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಅರ್ಧ ಗುಣವಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ವಿವರಣಾತ್ಮಕ ಕೈಪಿಡಿಗೆ ಬರೆಯಿರಿ. 50 ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W.)
Post Box No. 567, CALCUTTA.

ಮುಂಬಯಿ ಕರ್ನಾಟಕ ಸಂಘದ ವಾರ್ಷಿಕೋತ್ಸವವು

ದಿನಾಂಕ ೩—೧೦—೫೪ರಲ್ಲಿ ಮಾತುಂಗಾ ವಿಭಾಗದಲ್ಲಿ ಪೋದ್ದಾರ ಕಾಲೇಜ ಸಭಾ ಮಂದಿರದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರಾ. ಶ್ರೀ. ಮುಕ್ತೇಶ್ವರ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಮುಂಬಯಿ ನಗರದ ಕಾಂಗ್ರೆಸ್ ಧುರೀಣರಾದ ಶ್ರೀ ಸ. ಕಾ. ಪಾಟೀಲರು ಮುಖ್ಯ ಅತಿಥಿಗಳಾಗಿ ಬಂದು ಸಂಘವು ಮಾಡಿದ ಕೆಲಸಗಳಬಗ್ಗೆ ಸಮಾಧಾನವನ್ನು ವ್ಯಕ್ತಗೊಳಿಸಿದರು.

"ಸಂಘವು ಒಂದು ಸ್ವತಂತ್ರ ಜಾಗೆಯನ್ನು ಈಗಾಗಲೇ ಗಳಿಸಿಕೊಂಡಿದ್ದು ಅದರಲ್ಲಿ ಒಂದು ಹೊಸ ಕಟ್ಟಡವನ್ನು ಕಟ್ಟಿಸುವ ಕಾರ್ಯಕ್ಕೆ ಈಗಾಗಲೇ ಬೆಂಬಲ ದೊರಕಿದೆ. ಕಳೆದ ವರ್ಷ ಸಂಘವು ಚೆನ್ನಾಗಿ ಕಾರ್ಯ ಮಾಡಿದೆ. ಇದೇ ರೀತಿಯಿಂದ ಎಲ್ಲರ ಸಹಾಯ ದೊರೆತರೆ ಸಂಘದ ಕಟ್ಟಡವನ್ನು ಶೀಘ್ರವೇ ನಾವೆಲ್ಲರೂ ನೋಡುವಂತಾಗಬಹುದೆಂದು ಸಂಘದ ಅಧ್ಯಕ್ಷರು ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದರು.

ನಂತರ ಮನರಂಜನೆಯ ಕಾರ್ಯಕ್ರಮವೆಂದು ಕರ್ನಾಟಕ ನಾಟ್ಯ ವಿಲಾಸಿಗಳಿಂದ ಎರಡು ನಾಟಕಗಳನ್ನು ಅಭಿನಯಿಸಲಾಯಿತು. ಚಿಕ್ಕ ಬಾಲಕ ಬಾಲಕಿಯರು ಶ್ರೀ ಕೆ. ಪಿ. ಪುಟ್ಟಪ್ಪನವರ "ನನ್ನ ಗೋಪಾಲ" ಎಂಬ ಭಕ್ತಿರಸ ಪ್ರಧಾನ ಚಿಕ್ಕ ರೂಪಕವನ್ನು ಪ್ರದರ್ಶಿಸಿದರು. ನಂತರ ವಾಡಿಕೆಯಂತೆ ಈ ಸಲವೂ ನಾಟ್ಯ ವಿಲಾಸಿಗಳ ಕಾರ್ಯದರ್ಶಿಯಾದ ಶ್ರೀ ಆರ್. ಡಿ. ಕಾಮತರಿಂದ ಹೊಳಪು ಹಾಕಲ್ಪಟ್ಟ, ಕೀ| ಸರೋಜ ಕಾರ್ಲೇ ಇವರಿಂದ ಸಂವಾದ—ಪದ್ಯಗಳಿಂದ ತುಂಬಿಕೊಂಡ "ತೊಟ್ಲಿಲ್ಲ, ಬಟ್ಲಿಲ್ಲ; ಗುಟುಕ್." ಎಂಬ ಹೊಚ್ಚ—ಹೊಸ ಹಾಸ್ಯಪ್ರಧಾನ ಸಾಮಾಜಿಕ ನಾಟಕದ ಪ್ರಯೋಗವು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ತೇಲಿಸಿತು.

ಇದಕ್ಕೂ ಮೊದಲು ಅದೇ ಸ್ಥಳದಲ್ಲಿ ವಾರ್ಷಿಕ ಸಾಧಾರಣ ಸಭೆ ಜರಗಿ, ಅದರಲ್ಲಿ ಮುಂದು ವರ್ಷಕ್ಕೆ ಶ್ರೀ ರಾ. ಶ್ರೀ. ಮುಕ್ತೇಶ್ವರರು ಅಧ್ಯಕ್ಷರಾಗಿ, ಶ್ರೀ ಯು. ವಿ. ಉಪಾಧ್ಯಾಯ, ಶ್ರೀ ಯು ಜಿ. ಪುತ್ಲಿ, ಶ್ರೀ ನಡಕರ್ಣ ಇವರು ಉಪಾಧ್ಯಕ್ಷರಾಗಿ ಹಾಗು ಶ್ರೀ. ವಿ. ಬಿ. ದೇಶಪಾಂಡೆ ಇವರು ಕಾರ್ಯದರ್ಶಿಯಾಗಿ ಆರಿಸಲ್ಪಟ್ಟರು.

ಡಿ. ಕೆ. ಭಾರದ್ವಾಜ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನರಿ
ಬೆಲೆ: ರೂ. 5—6—0
ಶಿವರಾಮ ಕಾರಂತರ
ಕನ್ನಡ × ಕನ್ನಡ
ಸಿರಿಗನ್ನಡ ಅರ್ಥಕೋಶ
ಬೆಲೆ: ರೂ 4—0—0
ನವಭಾರತ ಬುಕ್ ಡಿಪೋ, ಉಡುಪಿ.



ಸ್ವೀಕಾರ—ವಿಮರ್ಶೆ

(ವಿಮರ್ಶೆಗೆ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿದೆ. —ಸಂ. ನ.)

ತಾಯಿ ಬಯಕೆ—

ಬರೆದವರು: ಎಂ. ವಿ. ಸೀತಾರಾಮಯ್ಯ. ಪ್ರಕಾಶಕರು: ಸುಧಾ ಪ್ರಕಾಶನ, ೨೦೧, ೫ನೇ ರಸ್ತೆ, ಚಾಮರಾಜಪೇಟೆ, ಬೆಂಗಳೂರು ೨. ಬೆಲೆ: ರೂ. ೧—೦—೦.

ಇನ್ನೂರಹದಿನಾರು ಪುಟಗಳ ಈ ಸಾಮಾಜಿಕ ಕಾದಂಬರಿಯು ಸಾಮಾನ್ಯವಾದ ಕಥಾವಸ್ತುವೊಂದನ್ನು ರಸವತ್ತಾಗಿ ನಿರೂಪಿಸುತ್ತದೆ. ಇಲ್ಲಿ ಸುಳಿಯುವ ಪಾತ್ರಗಳು ನಾಲ್ಕಾರು ಮಾತ್ರವಿದ್ದರೂ ಪ್ರತಿಯೊಂದರ ವ್ಯಕ್ತಿಚಿತ್ರಣವನ್ನೂ ಸ್ಫುಟವಾಗಿ ಮೂಡಿಸಿ, ಜೀವಕಳೆಯನ್ನು ತುಂಬಿರುವುದು ಲೇಖಕರ ಪ್ರತಿಭೆಯನ್ನು ವ್ಯಕ್ತಗೊಳಿಸುತ್ತದೆ. ದಾಂಪತ್ಯ ಜೀವನದಲ್ಲಿ ವ್ಯಕ್ತಿಗತ ಮನೋಧರ್ಮದ ಸಾಮರಸ್ಯ ಎಷ್ಟು ಅಗತ್ಯವೆಂಬುದನ್ನು ಇದು ಬಿಂಬಿಸುತ್ತಿದೆಯಲ್ಲದೆ, ದಾಕ್ಷಿಣ್ಯದಿಂದ ಕೈಗೂಡಿದ ಮದುವೆಯು ವಿರಸದಲ್ಲಿ ಹೇಗೆ ಪರ್ಯವಸಾನ ಹೊಂದುವುದೆಂಬ ಅಂಶವನ್ನೂ ವಿಶದೀಕರಿಸುತ್ತದೆ. ತನ್ನ ದೊಡ್ಡ ಮಗನಿಗೆಯೇ ಮಗಳಂತೆ ತಾನು ಬೆಳೆಸಿದ್ದ ರತ್ನಳನ್ನು ಮದುವೆ ಮಾಡಿಸುವ ಸುಂದರಮ್ಮನ ಹಂಬಲದಲ್ಲಿ ಕೃತಕವಾದದ್ದೇನೂ ಇರಲಿಲ್ಲ. ಆದರೆ ಡಾ. ರಘುರಾಂ ಹೇಳಿದಂತೆ ಶಾಮುನಿಗಿಂತಲೂ ಅವನ ತಮ್ಮ ರಾಜನಿಗೆ ರತ್ನಳನ್ನು ತಂದುಕೊಂಡಿದ್ದರೆ ವರಸಾಮ್ಯ ಚೆನ್ನಾಗುತಿತ್ತೆಂಬ ಮೂಲಭೂತ ಅಂಶವನ್ನು ಅವಳು ಗಮನಿಸಲಿಲ್ಲ. ರತ್ನಳನ್ನು ತಾನು ಮದುವೆಯಾಗುವುದಾಗಿ ರಾಜ ಪ್ರಕಟವಾಗಿ ಹೇಳಿದರೂ ಸುಂದರಮ್ಮ ಅದಕ್ಕೆ ಕಿವಿಗೊಡಲಿಲ್ಲ—ಇಲ್ಲಿ ಘಟಿಸಿದ ತಪ್ಪಿನಿಂದ, ಶಾಮುನ ಪ್ರಸ್ತವಾಗುವುದಕ್ಕೆ ಮೊದಲೇ ಅವನ ಹೆಂಡತಿ ರತ್ನಳಿಗೆ ರಾಜನಿಂದ ಗರ್ಭನಿಲ್ಲುವ ಪ್ರಸಂಗ ಬಂದೊದಗಿತು. ತಾಯಿ ಹೌಹಾರಿದಳು; ತಪ್ಪು ಮುಚ್ಚಿಕೊಳ್ಳಲು ಪ್ರಯತ್ನಿಸಿದಳು. ಆದರೆ ಕೊನೆಗೂ ಅದು ಬಯಲಾಯಿತು- ಹೆರಿಗೆಯ ಬೇನೆಯಲ್ಲಿ ಬಳಲುತ್ತಿದ್ದ ರತ್ನಳೇ ಪಶ್ಚಾತ್ತಾಪ ದಗ್ಧಳಾಗಿ ನಿಜವನ್ನು ಹೊರಗೆಡವಿ, ಸತ್ತು ಹೋದಳು. ಶಾಮಣ್ಣ ತನಗಾದ ಅನ್ಯಾಯವನ್ನು ನುಂಗಿಕೊಂಡು "ನಿನಗೆ ಗಂಡು ಮಗುವಾಯಿತು" ಎಂದು ರಾಜನಿಗೆ ಹೇಳುತ್ತಾನೆ: ಮುಂದಿನ ಪ್ರಕರಣವನ್ನು ನಾವು ಓದಬೇಕೆಂದಿಲ್ಲ—ಇಲ್ಲಿಗೆ ಎಲ್ಲವೂ ಸ್ಪಷ್ಟವಾಗುತ್ತದೆ. ವಿಚಾರದ ತೆರೆಗಳು ಮನಸ್ಸಿನಲ್ಲಿ ಏಳುತ್ತವೆ. ಕೌಟುಂಬಿಕ ಹಾಗು ಸಾಮಾಜಿಕ ಸುಖದ ದಾರಿಯಾವುದೆಂಬುದನ್ನು ಕಂಡು ಕೊಳ್ಳುವಲ್ಲಿ ಈ ಕಾದಂಬರಿಯಿಂದ ಸಾಕಷ್ಟು ನೆರವು ಸಿಗುತ್ತದೆ. ಹಳಗಿದ ಲೇಖಕರ ಈ ಸುಂದರ ರಚನೆಯು ಜನಪ್ರಿಯವೆನಿಸುವುದರಲ್ಲಿ ಸಂದೇಹವಿಲ್ಲ.

ಸನ್ಯಾಸಿಗೆ ಸಿಕ್ಕ ಸುಂದರಿ—

ಅನುವಾದಕರು: ಎಂ. ವಿ. ವಾಸುದೇವ ರಾವ್. ಪ್ರಕಾಶಕರು: ರಸಿಕ ಗ್ರಂಥಮಾಲೆ, ಬಸವನ ಗುಡಿ, ಬೆಂಗಳೂರು ೪. ಬೆಲೆ: ಐದಾಣೆ.

ತನ್ನ ಯೌವನ ಕಾಲದಲ್ಲಿ ವಿಷಯಾಸಕ್ತನಂತೆ ಕಾಲವನ್ನು ಕಳೆದಿರುವನೆಂದು ಅನುವಾದಕರೇ ಒಪ್ಪಿರುವ ಇಟಲಿಯ "ವಿದ್ವಾಂಸ" ಗಿಯೋವಾನಿ ಬೊಕಾಶಿಯೋ ಕ್ರೈಸ್ತ ಪಾದ್ರಿಗಳನ್ನೂ ಕಾನ್ವೆಂಟಿನ ಸ್ತ್ರೀಯರನ್ನೂ ಕುಲರಮಣಿಯರನ್ನೂ ಕಾಮುಕರಾಗಿ ಚಿತ್ರಿಸಿದ ಏಳು ಕತೆಗಳ ಈ ಸಂಗ್ರಹವನ್ನು ಅಚ್ಚುಹಾಕಿಸಿ, ವಿಮರ್ಶೆಗೆಂದು ಕಳಿಸಿದವರ ಧೈರ್ಯ ಆಶ್ಚರ್ಯಗೊಳಿಸುವಂತಿದೆ. ಕನ್ನಡಿಗರು ಓದಿ ಆನಂದಿಸಬಹುದಾದ ಯಾವ ಒಳ್ಳೆಯ ವಿಷಯವನ್ನೂ ಹೊಂದಿರದ, ಕನ್ನಡ ಸಾಹಿತ್ಯಕ್ಕೆ ಯಾವ ಪ್ರಯೋಜನವನ್ನೂ ಮಾಡದ, ಈ ಪುಸ್ತಕದ ಕುರಿತು ರಸಿಕ ವಿಮರ್ಶಕರಿಂದ ಪ್ರಕಾಶಕರು ಏನನ್ನು ನಿರೀಕ್ಷಿಸುತ್ತಾರೋ ತಿಳಿಯದು. ಬೊಕಾಶಿಯೋನಿಂದ ಆಧುನಿಕ ಯುರೋಪಿನ ಶೃಂಗಾರ ಸಾಹಿತ್ಯಕ್ಕೆ ಸ್ಫೂರ್ತಿ ದೊರಕಿತೆಂದು ಒಪ್ಪಿಕೊಂಡರೂ ಭಾರತೀಯ ಸಂಸ್ಕೃತಿ ಅದನ್ನು ಅರಗಿಸಿಕೊಳ್ಳಲಾರದು. ಆದುದರಿಂದ ನಮಗದು ತ್ಯಾಜ್ಯವಾದ ವಿಷಯ. ಅನುವಾದಕರು ಒಳ್ಳೆಯ ಪ್ರೇಮಕತೆಗಳನ್ನು ಬೇಕಾದರೆ ಕನ್ನಡದಲ್ಲಿ ತರಲಿ- ಬದಲು ಲೈಂಗಿಕ ಭಾವನೆಗಳನ್ನು ಪ್ರಚೋದಿಸಿ, ಮರುಳುಗೊಳಿಸುವ ಹೊಲಸು ಸಾಹಿತ್ಯವನ್ನು ಅನುವಾದಿಸಲು ಮುಂದಕ್ಕೂ ಪ್ರಯತ್ನಿಸಿದರೆ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ವ್ಯರ್ಥವಾದ ಉದ್ದೇಶಕ್ಕೆ ವ್ಯಯ ಮಾಡಿದಂತಾಗುತ್ತವೆ; ರಾಷ್ಟ್ರದ ನೈತಿಕ ನೆಲಗಟ್ಟಿಗೆ ಪೆಟ್ಟುಕೊಟ್ಟಂತಾಗುತ್ತದೆ. ಕಾಮ ಜೀವನದ ಪರಿಚಯವಿಲ್ಲದೆ ಮನುಷ್ಯನು ಹಾಳಾಗಲಿಲ್ಲ; ಸತ್ತ್ವ ಗುಣದ ಸರಿಯಾದ ಪೋಷಣೆಯ ಕೊರತೆಯೇ ಜನಾಂಗವನ್ನು ಅಧಃಪತನಕ್ಕೆ ನೂಕಿದೆಯೆಂಬುದನ್ನು ಶ್ರೀ ವಾಸುದೇವ ರಾಯರು ದಯವಿಟ್ಟು ತಿಳಿದುಕೊಂಡು, ರಸಿಕತೆಯ ಹೆಸರಿನಲ್ಲಿ ನಡೆಸುವ ಅಕ್ಷರ ವ್ಯಭಿಚಾರವನ್ನು ಇಲ್ಲಿಗೇ ನಿಲ್ಲಿಸಲಿ!

ಭಾರತ ಜ್ಯೋತಿ ಮಹಾತ್ಮ—

ಬರೆದವರು: ದಾಮೋದರ ಬಾಳಿಗ. ಪ್ರಕಾಶಕರು: ನವನಿಧಿ ಕಾರ್ಯಾಲಯ, ರಥಬೀದಿ, ಮಂಗಳೂರು ೧. ಬೆಲೆ: ನಾಲ್ಕಾಣೆ.

ಪುಣ್ಯಶ್ಲೋಕರಲ್ಲಿ ಒಬ್ಬರಾದ ಗಾಂಧೀಜಿಯ ಅನುಕರಣೀಯ ಗುಣಗಳನ್ನು ವರ್ಣಿಸಿ, ಅವರ ಉಪದೇಶ ಸಾರವನ್ನು ಬೋಧಿಸುವ ಪದ್ಯ ಗದ್ಯಗಳ ಸಮ್ಮಿಶ್ರ ರಚನೆಯ ಈ ಪುಟ್ಟ ಪುಸ್ತಕದಿಂದ ಶಾಲೆಯ ಚಿಕ್ಕ ಮಕ್ಕಳು ಪ್ರಯೋಜನವನ್ನು ಹೊಂದಬಲ್ಲರು. ಸಾಮೂಹಿಕ ಹಾಡುಗಾರಿಕೆಗೆ ಇದು ಒಳ್ಳೆಯ ಸಾಧನವಾಗಬಲ್ಲುದು. ಇಲ್ಲಿಯ ಮಾತುಗಳು ಸರಳವಾಗಿವೆ; ಆದರೆ ಕೆಲವೆಡೆ ಪದ್ಯರಚನೆಯಲ್ಲಿ ಮಕ್ಕಳಿಗೆ ಪ್ರಿಯವಾದ ಪ್ರಾಸಬದ್ಧತೆಯಾಗಲೀ ಏಕರೂಪ ಛಂದಸ್ಸಾಗಲೀ ಇಲ್ಲದಿರುವುದರಿಂದ ಹಾಡಲು ತುಸು ಕಷ್ಟವಾದೀತು; ರಾಗ ಹಾಗು ತಾಳಗಳು ತಪ್ಪಬಹುದು. ಇದನ್ನು ಸರಿಪಡಿಸುವುದು ಅಪೇಕ್ಷಣೀಯ. ಪುಸ್ತಕದ ಪ್ರಥಮ ಮುದ್ರಣದ ವಿಕ್ರಯದಿಂದ ಹುಟ್ಟಿಬರುವ ಲಾಭಾಂಶವನ್ನೆಲ್ಲ ನೆರೆಪೀಡಿತರಿಗೆ ಸಹಾಯವಾಗಿ ಕೊಡಲು ನಿರ್ಧರಿಸಿರುವುದು ಸ್ತುತ್ಯ.

ಲಘು ಪರಿಚಯ

❖ ಮಂಗಳೂರಿನಲ್ಲಿರುವ ಜಿಲ್ಲಾ ಸಮಾಜ ವಿಕಾಸ ಯೋಜನೆಯ ಅಧಿಕಾರಿಗಳ ಕಾರ್ಯಾಲಯದಿಂದ ಶ್ರೀ ಕೆ. ಎಲ್. ಸೂರ್ಯನಾರಾಯಣನ್ನರ ಸಂಪಾದಕತ್ವದಲ್ಲಿ ಪ್ರಕಟಗೊಂಡಿರುವ "ವಿಕಾಸವಾಣಿ" ಎಂಬ ಮಾಸಿಕವನ್ನು ಆತ್ಮಾದರದಿಂದ ಸ್ವಾಗತಿಸುತ್ತೇವೆ. ೧೨೫೦ ಚದರ ಮೈಲುಗಳಷ್ಟು ವಿಸ್ತೀರ್ಣದಲ್ಲಿ ವಾಸಿಸುವ ೩೦೩ ಗ್ರಾಮಗಳ ಆರು ಲಕ್ಷ ಜನರಿಗೆ ಸಂಬಂಧಪಟ್ಟ ಜಿಲ್ಲೆಯ ಸಮಾಜ ವಿಕಾಸ ಚಟುವಟಿಕೆಗಳನ್ನು ಸಾರ್ವಜನಿಕರ ಅವಗಾಹನೆಗೆ ತಂದುಕೊಡುವ ಈ ಪ್ರಕಟಣೆಯು ಯೋಜನೆಯನ್ನು ಕಾರ್ಯಗತಗೊಳಿಸತೊಡಗಿ ಎರಡು ವರ್ಷಗಳ ಬಳಿಕವಾದರೂ ಹೊರಟುದು ಸಂತೋಷ. ಇಲ್ಲಿ ಹೇಳಿದ ವಿಷಯಗಳಿಂದ ಜನತೆಯ ಸಹಕಾರ ಪಡೆದು ಅಭಿವೃದ್ಧಿ ಪ್ರಯತ್ನಗಳನ್ನು ಹೇಗೆ ಕೈಗೂಡಿಸಬಹುದೆಂದು ಮನವರಿಕೆಯಾಗುತ್ತದೆ. ಕೇವಲ ಸಂಪಾದಕರ ಮಟ್ಟಿಗೆ ನಮ್ಮದೊಂದು ನಮ್ರ ಸೂಚನೆ: ಪ್ರತಿಯೊಂದು ಪಾರಾದ ಮೊದಲು ೧, ೨, ೩ ಎಂದು ಕ್ರಮ ಸಂಖ್ಯೆಯನ್ನು ಹಾಕುವ ಅಗತ್ಯ ಕಾಣುವುದಿಲ್ಲ.

❖ ಸಾಹಿತ್ಯ ಪತ್ರಿಕೆಗಳಲ್ಲಿ ವಿಶಿಷ್ಟ ಸ್ಥಾನವನ್ನು ಪಡೆದಿರುವ ಕಿನ್ನಿಗೋಳಿಯ "ಯುಗಪುರುಷ" ಮಾಸಿಕದ ದಸರಾ ಸಂಚಿಕೆಯು ವಿಮರ್ಶಾತ್ಮ ಸುಂದರ ಬರೆಹಗಳಿಂದ ಕೂಡಿ, ರಸಿಕ ಓದುಗರನ್ನು ಆನಂದಗೊಳಿಸುವಂತಿದೆ. ಇವುಗಳ ಜೊತೆಗೆ ಕೆಲವು ಒಳ್ಳೆಯ ಕವಿತೆಗಳನ್ನೂ ಲಘು ಬರೆಹಗಳನ್ನೂ ಕಾಣುತ್ತೇವೆ. ಸುಂದರವಾದ ಈ ಸಂಚಿಕೆಯನ್ನು ಹೊರಡಿಸಿದ ಸಂಪಾದಕ ಶ್ರೀ ಕೊಡತ್ತೂರು ಅನಂತ ಪದ್ಮನಾಭ ಉಡುಪರ ಸಾಹಸಕ್ಕೆ ಅಭಿನಂದನೆಗಳು.

❖ ಭಾರತೀಯ ಸಂಸ್ಕೃತಿ ಮತ್ತು ಧರ್ಮದ ರಕ್ಷಣೆಗಾಗಿ ಶ್ರಮಿಸುತ್ತಿರುವ ಬೆಂಗಳೂರು ಚಾಮರಾಜ ಪೇಟೆಯ "ವಿಕ್ರಮ" ಪತ್ರಿಕೆಯ ವಿಜಯ ದಶಮಿ ಸಂಚಿಕೆಯು ವಿಚಾರ ಪ್ರಚೋದಕವಾದ ಉತ್ತಮ ಲೇಖನಗಳಿಂದ ಪ್ರಕಟಗೊಂಡಿದ್ದು, ಭಾರತೀಯ ಪರಂಪರೆಯ ಪರಿಚಯವನ್ನು ಮಾಡಿಸಿಕೊಡುವಂತಿದೆ. ಶ್ರೀಗಳಾದ ಗೊಳ್ವಳಕರ, ಗ. ದಾ. ಖರೆ ಮುಂತಾದವರ ಬರೆಹಗಳ ಧೋರಣೆಯು ಚರ್ಚಾಸ್ಪದವಾಗಿದ್ದರೂ ಒಟ್ಟಿನಲ್ಲಿ ಸಂಚಿಕೆಯು ಸಂಗ್ರಾಹ್ಯವಿದೆಯೆಂದು ಹೇಳಬಹುದು. ಸಂಪಾದಕರಾದ ಶ್ರೀ ಟಿ. ಎಸ್. ಎನ್. ಮಲ್ಯರ ಶ್ರಮಕ್ಕೆ ಧನ್ಯವಾದಗಳು.

ತೆರಿಗೆಯ ಹಣದ ಬೆಲೆ

[೧ನೇ ಪುಟದಿಂದ]

ಸೈನಿಕ ಅವಶ್ಯಕತೆಗಳನ್ನು ಪೂರೈಸುತ್ತೇವೆನ್ನುವ ವಿದೇಶಗಳ ಖಾಸಗಿ ಸಂಸ್ಥೆಗಳ ವಿಷಯದಲ್ಲಿ ಅಲ್ಲಿಯ ಸರಕಾರದ ಕಡೆಯಿಂದ ಯೋಗ್ಯ ಮಾಹಿತಿಗಳನ್ನು ಪಡೆಯಬೇಕಾದದ್ದು ಅತಿ ಅಗತ್ಯ.

ಸರಕಾರದ ದಾಸ್ತಾನುಗಳಿಂದ ಸಾಮಾಗ್ರಿಗಳ ಕಳ್ಳ ಸಾಗಾಟವಾಗುತ್ತಿರುವ ನಿದರ್ಶನಗಳೂ ಹಲವಾರು ಕಂಡು ಬರುತ್ತವೆ. ಇನ್ನೆಷ್ಟೋ ಸಂದರ್ಭಗಳಲ್ಲಿ ಮಾಡಿಟ್ಟ ಸಂಗ್ರಹವು ಹುಳು ತಿನ್ನುತ್ತ ಬಿದ್ದಿರುವುದೂ ಉಂಟು. ಸಂಗ್ರಹವು ಎಷ್ಟಿರಬೇಕು, ಎಲ್ಲಿರಬೇಕು, ಯಾವಾಗ ಅದರ ಅಗತ್ಯವುಂಟು ಎಂಬಿತ್ಯಾದಿ ವಿಷಯಗಳನ್ನು ನಿರ್ಲಕ್ಷಿಸುವುದೇ ಇಂತಹ ತೊಂದರೆಗಳ ಮೂಲ. ಸೈನ್ಯ ಇಲಾಖೆಯಲ್ಲಿ ಸಂಗ್ರಹದ ವಿವರ ಇನ್ನೂ ಸರಿಯಾಗಿ ದೊರಕುತ್ತಿಲ್ಲ—ಯುದ್ಧ ಕಾಲದಲ್ಲಿಯೂ ಆಮೇಲಿನ ಕೆಲವು ವರ್ಷಗಳಲ್ಲಿಯೂ ವಿವರಣೆಗಳು ತಪ್ಪಿದ್ದರೆ, ಲೆಕ್ಕ ಪತ್ರಗಳನ್ನು ಸರಿಯಾಗಿಡುವಷ್ಟು ಪುರುಸೊತ್ತು ಇರಲಿಲ್ಲವೆಂದು ಹೇಳಬಹುದಾಗಿದ್ದಿತು. ಆದರೆ ಇನ್ನೂ ತಪ್ಪುಗಳನ್ನು ತಿದ್ದಿರದಿದ್ದರೆ ಅದಕ್ಕೆ ಆಲಸ್ಯವಷ್ಟೇ ಅಲ್ಲ- ಅಧಿಕಾರಿಗಳ ಸ್ವಾರ್ಥವೂ ಕಾರಣವೆಂದು ಭಾವಿಸಬೇಕಾಗುತ್ತದೆ.

ಹಣದ ವ್ಯವಹಾರದಲ್ಲಿ ನಾವು ಎಷ್ಟು ಜಾಗರೂಕತೆಯನ್ನು ವಹಿಸಿದರೂ ಸಾಲದು; ಪ್ರಾಮಾಣಿಕತೆಯ ಅಗ್ನಿ ಪರೀಕ್ಷೆ ಇಲ್ಲಿ ನಡೆಯುತ್ತದೆಂದರೆ ತಪ್ಪಲ್ಲ. ಹೀಗಿರುತ್ತಾ, ಅಧಿಕಾರಿಗಳು ಲೋಪವಾದ ಬರುವ ರೀತಿಯಲ್ಲಿ ವಂಚನೆಗಳಿಗೆ ಅವಕಾಶ ಕೊಡುವರಾದರೆ ಜನತೆ ಕೆರಳುವುದು ನಿಶ್ಚಯ. ನಾವೆಲ್ಲರೂ ಲೋಕಕಲ್ಯಾಣಕ್ಕಾಗಿ ಕೆಲಸ ಮಾಡಬೇಕು; ಸಾರ್ವಜನಿಕ ಹಣವು ಕೆರೆಯ ನೀರನು ಕೆರೆಗೆ ಚೆಲ್ಲಿ ಎಂಬ ನೀತಿಯಂತೆ ಸಾರ್ವಜನಿಕರ ಉಪಯೋಗಾರ್ಥವಾಗಿಯೇ ವ್ಯಯವಾಗಬೇಕು. ಅದನ್ನು ದುರುಪಯೋಗ ಪಡಿಸುವುದಾಗಲಿ ಅಪವ್ಯಯಕ್ಕೆ ಇಂಬು ಮಾಡಿಕೊಡುವುದಾಗಲೀ ಸರಕಾರದ ಧವಳ ಕೀರ್ತಿಗೆ ಶೋಭೆಯಾಗಲಾರದು. ರಾಷ್ಟ್ರೀಯ ಮಹತ್ವದ ಅಭಿವೃದ್ಧಿ ಪ್ರಯತ್ನಗಳನ್ನು ಕೈಗೊಳ್ಳುತ್ತಿರುವಾಗ ಅಲ್ಲಿ ತ್ಯಾಗ ಭಾವನೆಗೆಯೇ ಪ್ರಾಶಸ್ತ್ಯ ಸಲ್ಲಬೇಕಲ್ಲದೆ, ಸ್ವಾರ್ಥದ ದುರುದ್ದೇಶಗಳಿಗೆ ಸ್ಥಾನ ಸಿಗಬಾರದು. ಇನ್ನಾದರೂ ಹೀಗೆ ಟೀಕಿಸುವ ಪ್ರಸಂಗಗಳು ಕಡಿಮೆಯಾಗಿ ಕೊನೆಗೊಮ್ಮೆ ಆಡಳಿತದಲ್ಲಿ ಶುದ್ಧಿಯಾಗಲೆಂದು ಹಾರೈಸುತ್ತೇವೆ.

—ಕಾರ್ತಿಕೇಯ.

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ದರ ಇಳಿಸಲಾಗಿದೆ-

ಗೀತೆಯ ಕೈಗನ್ನಡಿ

ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: **0-8-0**
ಕೋರ್ಟು ಮತ್ತು ಸೊಸೈಟೀ
ಫೋರ್ಮುಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ **ಭುವನೇಂದ್ರ** ಔಷಧಿಗಳು
ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:-
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ ಕಟಪಾಡಿ, ದ. ಕ.
ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಭರ್ತ ಕಂಟ್ರೋಲ
[ಮಕ್ಕಳನ್ನು ಪಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫—೮—೦ .... ಪೋಸ್ಟು ಖರ್ಚು ರೂ. ೦—೧೪—೦
—: ವಿಳಾಸ :—
ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

(೨ನೇ ಪುಟದಿಂದ)

ವಿೂ ವಿಚಾರದ ಶಿಕ್ಷಣದಿಂದಲೇ ತೃಪ್ತಿ ಹೊಂದದೆ, ಭಾರತಕ್ಕೂ ಆಗಮಿಸಿ, ಇಲ್ಲಿಯ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚಿನ ವ್ಯಾಸಂಗವನ್ನು ಮಾಡಿಯೂ ಬೌದ್ಧ ಧರ್ಮ ಗ್ರಂಥಗಳ ಚೀನೀ ಅನುವಾದವನ್ನು ಸಿದ್ಧಪಡಿಸಿಯೂ, ಧರ್ಮಪ್ರಚಾರಕ್ಕೆ ಹೆಚ್ಚಿನ ಸಿದ್ಧತೆಯನ್ನು ಮಾಡಿಕೊಂಡರು. ಫಾಹಿಯಾನನು ಭಾರತದಲ್ಲಿ ೧೪ ವರ್ಷವಿದ್ದನು; ಹರ್ಷವರ್ಧನನ ಕಾಲದಲ್ಲಿ ಆಗಮಿಸಿದ ಹ್ಯೂಯೆನತ್ಸಾಂಗನು ೧೬ ವರ್ಷಗಳನ್ನು ಭಾರತದಲ್ಲಿಯೇ ಕಳೆದು, ಇಲ್ಲೆಲ್ಲ ಸುತ್ತಾಡಿ ಬೌದ್ಧ ಧರ್ಮಕ್ಕೆ ಸಂಬಂಧಿಸಿದ ಅತ್ಯಮೂಲ್ಯ ಸಂಗ್ರಹದೊಂದಿಗೆ ಸ್ವದೇಶಕ್ಕೆ ಮರಳಿದನು.

ಏಳನೆಯ ಶತಮಾನದಿಂದ ಹತ್ತನೆಯ ಶತಮಾನದ ವರೆಗಿನ ಕಾಲವನ್ನು ಚೀನದ ಸುವರ್ಣ ಯುಗವೆಂದು ಹೇಳಬಹುದು. ಈ ಅವಧಿಯಲ್ಲಿ ಭಾರತ ಹಾಗು ಚೀನಗಳ ನಡುವೆ ಪ್ರಗಾಢವಾದ ಮೈತ್ರಿಯುಂಟಾಯಿತು: ಧರ್ಮ, ವ್ಯಾಪಾರ, ಸಂಸ್ಕೃತಿ ಹಾಗು ರಾಜಕೀಯ ಬಂಧನಗಳು ಬಿಗಿಗೊಂಡವು. ಬೌದ್ಧ ಧರ್ಮ ಭಿಕ್ಷುಗಳಷ್ಟೇ ಚೀನಕ್ಕೆ ಪ್ರಯಾಣ ಹೊರಡುವ ಬದಲು, ಭಾರತೀಯ ವ್ಯಾಪಾರಿಗಳೂ ಶಿಕ್ಷಕರೂ ಕಲಾವಿದರೂ ಶಿಲ್ಪಿಗಳೂ ಸಂಗೀತಗಾರರೂ ವಿಜ್ಞಾನಿಗಳೂ ವೈದ್ಯರೂ ಚೀನಕ್ಕೆ ಹೋದರು. ಇದರ ದೆಸೆಯಿಂದ ಚೀನದ ನಾಗರಿಕತೆಯ ಮೇಲೆ ಭಾರತೀಯ ಸಂಸ್ಕೃತಿಯ ಹೊಳಪು ಬೀಳುವಂತಾಯಿತು. ಚೀನದಲ್ಲಿ ಬಹಳ ಪುರಾತನವಾದ ವಿಶಿಷ್ಟ ಸಂಸ್ಕೃತಿಯೊಂದು ಬೇರು ಬಿಟ್ಟಿದ್ದರಿಂದ ಅಲ್ಲಿಯ ಜೀವನ ಕ್ರಮವನ್ನೆ ಬದಲಿಸಿ ಬಿಡುವಷ್ಟು ಭಾರತೀಯ ಸಂಸ್ಕೃತಿಯ ಪ್ರಭಾವವಾಗಲಿಲ್ಲವೆಂಬುದು ನಿಜ. ಆದರೆ, ನಿಧಾನವಾಗಿಯೇ ಆದರೂ ನಿಶ್ಚಿತ ರೂಪದಲ್ಲಿ ಭಾರತೀಯ ನಾಗರಿಕತೆಯ ಅಚ್ಚಳಿಯದ ಮುದ್ರೆಯನ್ನು ನಾಲ್ಕೈದು ಶತಕಗಳ ಅವಧಿಯಲ್ಲಿ ಒತ್ತುವುದು ಸಾಧ್ಯವಾಯಿತು. ಕೇವಲ ಮರದಿಂದ ಮಂದಿರ ನಿರ್ಮಿಸುವ ಚೀನೀ ನಾಗರಿಕತೆಯ ಸ್ಥಾನದಲ್ಲಿ ಕಲ್ಲನ್ನು ಕೊರೆಯುವ ಭಾರತೀಯ ಶಿಲ್ಪ ವಿದ್ಯೆಯು ಪ್ರಾದುರ್ಭಾವಕ್ಕೆ ಬಂತು. ಪಗೋಡಾ ವರ್ಗಕ್ಕೆ ಸೇರಿದ ಚೀನೀಯರ ಮಂದಿರ ನಿರ್ಮಾಣ ಕಲೆಯಲ್ಲಿ ಭಾರತೀಯ ಕಲ್ಪನೆಯ ಲಾಸ್ಯವನ್ನು ಕಾಣಬಹುದು. ಭಾರತೀಯ ಸಂಗೀತವು ತುಂಬ ಜನಪ್ರಿಯವಾಗುತ್ತಿರುವುದನ್ನು ಕಂಡ ಚೀನೀ ಅರಸು ಕೋಮಾಕೂ ಇದನ್ನು ತಡೆಗಟ್ಟಲು ಉಗ್ರಕ್ರಮಗಳನ್ನು ಕೈಗೊಂಡರೂ ಅದೆಲ್ಲ ವಿಫಲವಾಯಿತು. ಆವನ ಉತ್ತರಾಧಿಕಾರಿಗಳೇ ಭಾರತೀಯ ಸಂಗೀತಗಾರರಿಗೆ ರಾಜ ದರಬಾರಿನಲ್ಲಿ ಗೌರವವನ್ನು ನೀಡಿದರು. ಗೌತಮ, ಕಶ್ಯಪ, ಕುಮಾರ ಮುಂತಾದ ಭಾರತೀಯ ಗಣಿತ ಶಾಸ್ತ್ರ ವಿಶಾರದರು ಚೀನದ ಪಂಚಾಂಗ ನಿರ್ಣಯದಲ್ಲಿ ನೆರವಿತ್ತರು. ಭಾರತೀಯ ವೈದ್ಯ ಗ್ರಂಥಗಳ ಚೀನೀ ಅನುವಾದ ಕಾರ್ಯವೂ ನಡೆಯಿತು.

ಉಭಯ ರಾಷ್ಟ್ರಗಳ ನಡುವಣ ಸಂಬಂಧವು ಭಾರತದಲ್ಲಿ ಮುಸಲ್ಮಾನರ ಪ್ರವೇಶದ ಬಳಿಕ ಕೆಲಮಟ್ಟಿಗೆ ಕ್ಷೀಣಿಸತೆಂದು ಹೇಳಬಹುದು. ಆದರೂ ವ್ಯಾಪಾರ ವ್ಯವಹಾರಗಳು ನಿಲ್ಲಲಿಲ್ಲ. ಭಾರತೀಯರಿಗೆ ಪ್ರಖ್ಯಾತಿಪಟ್ಟ ಚೀನಾಂಬರದ ಮೋಹವು ತೊಲಗಲಿಲ್ಲ. ಹದಿನಾಲ್ಕನೇ ಶತಮಾನದಲ್ಲಿ ದೆಹಲಿಯ ಸಿಂಹಾಸನದಲ್ಲಿ ಮಹಮ್ಮದ ತಘ್ಲಕನು ಏರಿದ್ದಾಗ, ಚೀನಾದ ಯೂವಾನ್ ಶಾಸಕರಿಂದ ನಿಯೋಜಿತನಾದ ವಿಶೇಷ ರಾಜದೂತನೊಬ್ಬನು ಇಲ್ಲಿಗೆ ಬಂದು ಚೀನದಲ್ಲಿ ನಡೆಯಲಿದ್ದ ವಿಶ್ವಶಾಂತಿ ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯನ್ನು ಕಳಿಸಿಕೊಡಬೇಕೆಂದು ತಘ್ಲಕನನ್ನು ಬಿನ್ನವಿಸಿದನು. ಬಾದಶಹ ತಘ್ಲಕನು ಚೀನಕ್ಕೆ ತನ್ನ ರಾಯಭಾರಿಯಾಗಿ ಕಳುಹಲು ಯಾರು ಯೋಗ್ಯರೆಂದು ಆಲೋಚಿಸುತಿದ್ದಾಗ, ಇಬನ್ ಬತೂತನೆಂಬ ಪ್ರವಾಸಿಯ ನೆನಪಾಯಿತು. ಆಫ್ರಿಕಾದಲ್ಲಿ ಹುಟ್ಟಿದ್ದ ಬತೂತನು ಭೂಸಂಚಾರ ಕೈಗೊಂಡು ಭಾರತಕ್ಕೆ ಬಂದು, ಇಲ್ಲಿ ಅನೇಕ ವರ್ಷಗಳವರೆಗೆ ವಾಸವಾಗಿದ್ದನು. ತಘ್ಲಕನು ಚೀನಕ್ಕೆ ಆವನನ್ನು ಕಳುಹಲು ಸಿದ್ಧನಾಗಿ, ಭಾರತಕ್ಕೆಯೇ ವಿಶಿಷ್ಟವಾದ ಅತ್ಯಮೂಲ್ಯ ವಸ್ತ್ರಗಳ ಗಂಟುಗಳನ್ನೂ ಮತ್ತಿತರ ಆಭರಣ ಅಲಂಕಾರಗಳನ್ನೂ ಚೀನದ ರಾಜದರಬಾರಿನಲ್ಲಿ ಒಪ್ಪಿಸಲಿಕ್ಕೆಂದು ಬತೂತನೊಡನೆ ಕೊಟ್ಟಿದ್ದಲ್ಲದೆ ನೃತ್ಯ ಸಂಗೀತಾದಿ ಲಲಿತ ಕಲೆಗಳಲ್ಲಿ ಪ್ರಾವೀಣ್ಯ ಹೊಂದಿದ ಕೆಲವರನ್ನೂ ಮನಃಸಂತೋಷಕ್ಕಾಗಿ ಕಳಿಸಿದನು. ದುರ್ದೈವದಿಂದ ಹಡಗು ಹತ್ತಲೆಂದು ಬತೂತನು ಮಲಬಾರಿನ ಕಲ್ಲಿಕೋಟೆಗೆ ಬಂದಾಗ, ಅವನ ಪರಿವಾರದ ಮೇಲೆ ಉಪದ್ರವಿಗಳ ದಾಳಿಯು ನಡೆದು ಎಲ್ಲ ಸಂಪತ್ತೂ ಲೂಟಿಯಾಯಿತು. ಬಾದಶಹನಿದ್ದಲ್ಲಿಗೆ ಮರಳಿ ಈ ಸುದ್ದಿಯನ್ನು ನಿವೇದಿಸಲು, ಆವನು ಪುನಃ ಎಲ್ಲ ವಸ್ತುಗಳನ್ನೂ ಒದಗಿಸಿ ಕಳುಹಿಸಿದನು. ಈ ಸಲ ಕಲ್ಲಿಕೋಟೆಯಲ್ಲಿ ಏನೂ ಆತಂಕವಿಲ್ಲದೆ ಅವನೂ ಪರಿವಾರದವರೂ ತನ್ನನ್ನು ಕರೆದುಕೊಂಡು ಹೋಗಲು ಬಂದಿದ್ದ ೧೩ ಚೀನೀ ಹಡಗುಗಳನ್ನು ಏರಿದರು. ದುರದೃಷ್ಟವೆಂಬಂತೆ, ಬಿರುಗಾಳಿ ಎದ್ದು ಒಂದನ್ನು ಬಿಟ್ಟು ಬೇರೆಲ್ಲ ಹಡಗುಗಳೂ ನಾಶವಾದವು. ಹಡಗು ನಡೆಸುವುದರಲ್ಲಿ ನಿಪುಣರಾದ ಚೀನೀಯರ ಕೈಯಲ್ಲಿ ಇಷ್ಟು ದೊಡ್ಡ ಗಂಡಾಂತರ ಪ್ರಸಂಗ ಒಂದೆಂದೂ ಘಟಿಸಿರಲಿಲ್ಲ.

ಪುಣ್ಯದಿಂದ ಬತೂತನು ಹೇಗೋ ಜೀವ ಹಿಡಿದುಕೊಂಡು ಹೊನ್ನಾವರದ ಕರಾವಳಿಯನ್ನು ಸೇರಿದನು. ಎಷ್ಟೋ ವರ್ಷಗಳ ಬಳಿಕ ಅವನಿಗೆ ಚೀನಕ್ಕೆ ಮರಳಿ ಹೋಗಬೇಕೆಂಬ ಅಭಿಲಾಷೆಯಾಯಿತು. ಸ್ವಂತ ಪ್ರಯತ್ನಗಳನ್ನೆ ಕೈಗೊಂಡು, ಜಯಶೀಲನಾಗಿ ಅನಾಮಿನಿಂದ ಅರಕಾನ್, ಸುಮಾತ್ರಾ, ಜಾವಾ ಮಾರ್ಗವಾಗಿ ಚೀನದ ದಕ್ಷಿಣ ತೀರವನ್ನು ತಲುಪಿ, ತಾನು ದೆಹಲಿಯ ಬಾದಶಹನ ರಾಯಭಾರಿಯೆಂದು ಸಾರಿದನು. ಆವನೊಡನೆ ಯಾವುದೇ ಅಧಿಕಾರ ಪತ್ರವಿಲ್ಲದಿದ್ದರೂ ದೂರದೇಶದಿಂದ ಬಂದ ಈ ಅತಿಥಿಯನ್ನು ಚೀನಿಯರು ಸನ್ಮಾನಿಸಿದರು. ಪೇಕಿಂಗಿಗೆ ಬತೂತನು ಹೋದಾಗ, ಅಲ್ಲಿ ರಾಜನಿರಲಿಲ್ಲ. ಹೀಗಾಗಿ ರಾಜದರ್ಶನದ ಲಾಭ ಹೊಂದದೆಯೇ ಆವನು ಮರಳಿದ. ಇದಾಗಿ ಇಂದಿಗೆ ಆರುನೂರು ವರ್ಷಗಳು ಸಂದವು — ಈ ಅವಧಿಯಲ್ಲಿ ಚೀನದಲ್ಲಿ ಭಾರತೀಯರ ಪ್ರಭಾವವು ತಗ್ಗುತ್ತ ಬಂದು ವ್ಯಾಪಾರಕ್ಕೆಂದು ಬಂದ ಪಾಶ್ಚಾತ್ಯ ರಾಷ್ಟ್ರಗಳ ವರ್ಚಸ್ಸು ಬೆಳೆಯಿತು. ಬ್ರಿಟಿಷರೂ ಅಮೇರಿಕನ್ನರೂ ಬಡತನದಿಂದ ತತ್ತರಿಸುತಿದ್ದ ಚೀನೀಯರ ರಕ್ತ ಶೋಷಣೆಗೆ ಯುಕ್ತಿಯಿಂದ ತೊಡಗಿ ಎಲ್ಲ ಬಗೆಯ ತಂತ್ರಗಳನ್ನೂ ನಡೆಸಿದರು. ಅಮಲು ಬೇಕೆಂಬ ಆಸೆ ತುಂಬಿದ್ದ ಚೀನೀಯರಿಗೆ ಗಾಂಜಾವನ್ನು ತಿನ್ನ ಕೊಟ್ಟು ಅವರ ವ್ಯಕ್ತಿತ್ವವನ್ನೆ ಬ್ರಿಟಿಷರು ಕಸಿದುಬಿಟ್ಟರು. ಕಳೆದ ಒಂದು ಶತಮಾನದಲ್ಲಿ ಚೀನವು ಹೊರಗಿನವರ ದಾಳಿಯಿಂದ ಜರ್ಜರಿತವಾಯಿತು. ಆಂತರಿಕ ಭದ್ರತೆಯೂ ದೂರಾ ಕೆಟ್ಟು ಹೋದುದರಿಂದ, ವಿಪ್ಲವಕ್ಕೂ ಕ್ರಾಂತಿಗೂ ಅನುಕೂಲವಾದ ವಾತಾವರಣ ನಿರ್ಮಾಣಗೊಂಡಿತು. ದಲಿತ ಹಾಗು ಶೋಷಿತ ಜನತೆಯು ಆಕಾಂಕ್ಷೆಗಳನ್ನು ಸುಲಭದಲ್ಲಿ ಕೈಗೂಡಿಸಲಾರದೆ ಪಾಶ್ಚಾತ್ಯ ಸಂಭಕ್ಷಕ ನಡೆಯಲ್ಲಿ ಸಿಕ್ಕು ಬಿದ್ದ ರಾಜಕೀಯ ಘರ್ಷಣದ ವಿರುದ್ಧ ಜನತೆ ಅತೃಪ್ತಿಯ ಕಹಳೆಯನ್ನು ಮೊಳಗಿತು. ದ್ವಿತೀಯ ಮಹಾಯುದ್ಧದಲ್ಲಿ ಜಪಾನವನ್ನು ಸೋಲಿಸಲು ಬಂದ ರಶಿಯದ ಸೈನ್ಯವು ಚೀನದಲ್ಲಿ ಪ್ರವೇಶಿಸಿ, ಜಯ ಭೇರಿಯನ್ನು ಬಾರಿಸಿದಾಗ, ಚಿಯಾಂಗರ ಪತನಕ್ಕೆ ನಾಂದಿ ಹಾಕಿದಂತಾಗಿ, ಮುಂದೆ ಮೂರೇ ವರ್ಷಗಳಲ್ಲಿ ಚಿಯಾಂಗರ ಚೀನವು ಕೆಂಪು ಚೀನವಾಗಿ ಮಾರ್ಪಟ್ಟಿತು.

ಚೀನವು ಭಾರತಕ್ಕಿಂತಲೂ ದೊಡ್ಡ ದೇಶವಾದ್ದರೂ ಅದು ನೆರೆದೇಶಗಳ ಮೇಲೆ ಬೀರಿದ ಪ್ರಭಾವವು ಅತ್ಯಲ್ಪ. ಅಲ್ಲಿಯ ರಾಜರು ದಿಗ್ವಿಜಯಕ್ಕೆಂದು ಹೊರಗೆ ಸಾಮ್ರಾಜ್ಯವನ್ನು ಬೆಳೆಸಲು ಬೇಕಷ್ಟು ಯುದ್ಧ ಮಾಡಿದರು; ಆದರೆ ತಮ್ಮ ಹೆಸರನ್ನು ಲೋಕದ ಜನತೆ ಸದಾ ಕಾಲವಾಡಿಕೊಳ್ಳುವಂತೆ ಯಾವ ವಿಶೇಷ ಕ್ರಮಗಳನ್ನೂ ಕೈಗೊಳ್ಳಲಿಲ್ಲ. ಭಾರತವು ಎಂದಿಗೂ ಸಾಮ್ರಾಜ್ಯಶಾಹಿವಾದವನ್ನು ಹೇರಿರುತ್ತಿರಲಿಲ್ಲ. ರಾಜಕೀಯ ಅಧಿಕಾರವನ್ನು ಹೇರುವುದಕ್ಕಿಂತಲೂ ಹೃದಯವನ್ನು ಗೆದ್ದುಕೊಂಡು ಅಲ್ಲಿ ಸಾಂಸ್ಕೃತಿಕ ಬಾಂಧವ್ಯದ ಬೀಜವನ್ನು ಬೆಳೆಯುವುದೇ ಶ್ರೇಯಸ್ಕರವೆಂದು ಅದು ಭಾವಿಸಿತು. ಹಿಂದಿನ ಕಾಲದಲ್ಲಿ ಚೀನದ ಪ್ರಭಾವವು ಕಡಲು ದಾಟಿ ಜಪಾನಿನ ಮೇಲೆ ಬೀಳುವುದಿರಲಿ, ನೆರೆಯ ಕೊರಿಯದ ಮೇಲೂ ಬಿದ್ದಿರಲಿಲ್ಲ. ಈ ದೃಷ್ಟಿಯಿಂದ ಭಾರತೀಯರು ಸಾಧಿಸಿದ ಸಂಗತಿಯು ಅಭಿಮಾನದ ವಿಷಯವೆಂದು ಹೇಳಬಹುದು. ಆದರೆ ಈ ಸ್ಥಿತಿಯು ಇನ್ನೂ ಮುಂದುವರಿಯುವುದೇ ಎಂಬ ಬಗ್ಗೆ ಸಂದೇಹ ತಾಳಬೇಕಾಗುತ್ತದೆ: ಅಂತರಾಷ್ಟ್ರೀಯ ಕಮ್ಯುನಿಸ್ಟ ವಿಷನ ಕಪ್ಪು ನೆರಳು ನಮಗೆ ಗೊತ್ತಿಲ್ಲದಂತೆಯೇ ವಿಸ್ತರಿಸುತ್ತಾ ವ್ಯಾಪಕವಾದ ಕ್ಷೇತ್ರಗಳನ್ನು ಆವರಿಸುತ್ತಾ ಹೋಗುತ್ತಿದೆ. ಭಾರತದಿಂದ ಹಿಂದೆ ಪಡೆದುಕೊಂಡುದನ್ನೆಲ್ಲ ಚಕ್ರಬಡ್ಡಿ ಸಮೇತ ತೀರಿಸಲು ಬಂದಿರುವ "ಕೆಂಪು" ಚೀನವು ಕಮ್ಯುನಿಸಮ್ಮನ್ನು ದಾನವಾಗಿ ಕೊಡುವುದೋ ಹೇಗೆ ಎಂಬುದೇ ವಿಚಾರಣೀಯವಾದ ವಿಷಯ. ಚೀನಕ್ಕೆ ಪ್ರಯಾಣ ಹೋಗಲಿರುವ ನೆಹರೂ ಅವರಿಗೆ ಇದು ತಿಳಿಯದ ಮಾತೇನಲ್ಲ: ಏಕೆಂದರೆ, ಕಮ್ಯುನಿಸ್ಟ ರಾಷ್ಟ್ರಗಳು ಪ್ರಕಟವಾಗಿ ಮಾಡುವ ಕೆಲಸಗಳಿಗಿಂತಲೂ ರಹಸ್ಯವಾಗಿ ನಡೆಸುವ ಕೈವಾಡದ ಕುರಿತಾಗಿಯೇ ಎಚ್ಚರದಿಂದಿರಬೇಕಾಗುತ್ತದೆ ಎಂದವರು ಲೋಕಸಭೆಯಲ್ಲಿ ಬಾಯಿಬಿಟ್ಟು ಹೇಳಿದರು. ಹಿಂದಿನವರು ಮಾಡಿದ್ದ ಉಪಕಾರಕ್ಕೆ ಪ್ರತಿಯಾಗಿ ಭಾರತೀಯರು ಕಮ್ಯುನಿಸಮ್ಮನ್ನು ಚೀನದಿಂದ ಉಡುಗೊರೆಯಾಗಿ ಸ್ವೀಕರಿಸುವ ಪ್ರಸಂಗ ಬಂದಲ್ಲಿ ಅದು ದುರ್ದೈವದ ಮಾತಾಗುತ್ತದೆ. ಬದಲು, ಹಿಂದಿನಂತೆ ಈಗಲೂ ಚೀನೀಯರ ಹೃದಯವನ್ನು ಗೆದ್ದುಕೊಂಡು, ಅಲ್ಲಿ ಕಲ್ಯಾಣಕರವಾದ ಭಾವನೆಗಳನ್ನು ಪ್ರೋತ್ಸಾಹಿಸಲು ನಮ್ಮ ಧ್ಯೇಯವಾದರೆ ಹೊಸ ಮನ್ವಂತರವೇ ಪ್ರಾರಂಭವಾದೀತು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

SR QUALITY BEEDIES

ಭಾರತದಲ್ಲಿ ಶೈಕ್ಷಣಿಕ ಕಾರ್ಯಕ್ರಮ

೧೧ ಲೇಖ

ಪ್ರಜಾಪ್ರಭುತ್ವದ ಬೆಳವಣಿಗೆಗೆ ಪೋಷಕವಾದ ವಿಷಯಗಳಲ್ಲಿ ಜನತೆಗೆ ಜ್ಞಾನಾರ್ಜನೆ ಮಾಡಿಕೊಳ್ಳಲು ಇರುವ ಅನುಕೂಲತೆಯು ಪ್ರಥಮ ಸ್ಥಾನವನ್ನು ಪಡೆಯುತ್ತದೆ. ಪ್ರತಿಯೊಬ್ಬ ವ್ಯಕ್ತಿಯೂ ರಾಷ್ಟ್ರದ ಹಿತದೃಷ್ಟಿಯನ್ನು ಅಳವಡಿಸಿಕೊಳ್ಳುವಂತೆ ಮಾಡುವುದೇ ಪ್ರಜಾಪ್ರಭುತ್ವದಲ್ಲಿ ಶಿಕ್ಷಣದ ಧ್ಯೇಯ. ಸುಶಿಕ್ಷಿತ ಜನರನ್ನಾಗಿ ನಾಗರಿಕರನ್ನು ಪರಿವರ್ತಿಸದಿದ್ದರೆ ಪ್ರಜಾಪ್ರಭುತ್ವವು ಯಶಸ್ವಿಯಾಗಲಾರದು. ತಿಳಿಸಿ ಹೇಳಿದರೂ ಅರ್ಥ ಮಾಡಿಕೊಳ್ಳಲಾರದ ಜನತೆಯ ಕೈಯಲ್ಲಿ ಪ್ರಜಾಪ್ರಭುತ್ವವು ಅಪಾಯಕರವಾದ ಆಯುಧದಂತೆ ಗಂಡಾಂತರ ಪ್ರಸಂಗಗಳನ್ನು ತರಬಹುದು.

ನಮಗೆ ಸ್ವಾತಂತ್ರ್ಯವು ದೊರೆತಾಗ ನೂರರಲ್ಲಿ ೮೫ ಮಂದಿ ಭಾರತೀಯರು ನಿರಕ್ಷರಿಗಳಾಗಿದ್ದರು. ಸಾರ್ವಭೌಮಾಧಿಕಾರ ಸಂಪನ್ನವಾದ ಸ್ವತಂತ್ರ ರಾಷ್ಟ್ರಕ್ಕೆ ಉಚಿತವೆನಿಸಿದ ರಾಜ್ಯ ಘಟನೆಯನ್ನು ನಾವು ಸ್ವೀಕರಿಸಿದ ಬಳಿಕ, ಶಿಕ್ಷಣದ ಕಡೆಗೆ ಹೆಚ್ಚಿನ ಲಕ್ಷ್ಯವನ್ನು ಪೂರೈಸಲಾಗುತ್ತಿದೆ. ೧೯೬೦ನೇ ಇಸವಿಯೊಳಗೆ ೧೪ ವರ್ಷ ವಯಸ್ಸಿನೊಳಗಿನ ಪ್ರತಿಯೊಬ್ಬ ಹುಡುಗನಿಗೂ ಹುಡುಗಿಗೂ ಧರ್ಮಾರ್ಥವಾದ ಶಿಕ್ಷಣವನ್ನು ಕೊಡಲು ಸರಕಾರವು ಪ್ರಯತ್ನಿಸಬೇಕೆಂದು ರಾಜ್ಯಘಟನೆಯು ಹೇಳುತ್ತದೆ. ಈಗಾಗಲೇ ನಾಲ್ಕು ವರ್ಷಗಳು ಸಂದು ಹೋಗಿದ್ದು ಇಲ್ಲಿಯ ವರೆಗಿನ ಪ್ರಗತಿಯನ್ನು ನಿರೀಕ್ಷಿಸಿದರೆ, ನಮ್ಮ ಧ್ಯೇಯವು ಎಣಿಸಿದಷ್ಟು ಸುಲಭದಲ್ಲಿ ಕೈಗೂಡಿ ಬರಲಾರದೆಂಬ ಅಂಜಿಕೆ ತೋರುತ್ತದೆ. ಆದರೆ, ಶೈಕ್ಷಣಿಕ ಕ್ಷೇತ್ರದಲ್ಲಿ ನಾವು ಸಾಧಿಸಿದ ಕೆಲಸವು ಅತ್ಯಲ್ಪವೆಂದೇನು ಇದರ ಅರ್ಥವಲ್ಲ.

ರಾಷ್ಟ್ರದ ಸರ್ವಾಂಗಿಕ ಏಳಿಗೆಯ ರೂಪರೇಖೆಗಳನ್ನು ಗುರುತಿಸಲಾದ ನಮ್ಮ ಪ್ರಥಮ ಪಂಚವಾರ್ಷಿಕ ಯೋಜನೆಯು ೧೯೫೬ನೇ ಇಸವಿಯ ಸುಮಾರಿಗೆ ೬-೧೧ ವರ್ಷ ಪ್ರಾಯದ ಮಕ್ಕಳಲ್ಲಿ ನೂರಕ್ಕೆ ೫೫ ಪ್ರಾಥಮಿಕ ಶಾಲೆಗಳಲ್ಲಿ ಶಿಕ್ಷಣ ಹೊಂದುತ್ತಿರುವಂತೆ ಅನುಕೂಲತೆ ಕಲ್ಪಿಸಲಾಗುವುದೆಂದು ಹೇಳುತ್ತದೆ. ಸುಮಾರು ೩೬೦೦೦ ಹೊಸ ಪ್ರಾಥಮಿಕ ಶಾಲೆಗಳನ್ನು ತೆರೆದು ೪೦ ಲಕ್ಷ ಮಕ್ಕಳಿಗೆ ಶಿಕ್ಷಣದ ಏರ್ಪಾಡು ಮಾಡಬೇಕೆಂಬ ಹೆಗ್ಗುರಿಯನ್ನು ಯೋಜನೆ ನಿರ್ದೇಶಿಸುತ್ತದೆ. ಮೊದಲಿನ ಮೂರು ವರ್ಷಗಳಲ್ಲಿ ೧೬೨೫೦ ಹೊಸ ಶಾಲೆಗಳು ತೆರೆಯಲ್ಪಟ್ಟಿದ್ದು ೯ ಲಕ್ಷ ಮಕ್ಕಳು ಇಲ್ಲಿ ವಿದ್ಯಾಭ್ಯಾಸವನ್ನು ಹೊಂದುತಿದ್ದಾರೆ. ಆದರೆ ಪ್ರತಿ ವರ್ಷ ೫೦ ಲಕ್ಷದಷ್ಟು ಹೊಸ ಮಕ್ಕಳು ಹುಟ್ಟುವ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ವೇಗ ಬಹಳ ನಿಧಾನವಾಗಿದೆಯೆಂದು ಹೇಳದಿರಲಾಗುವುದಿಲ್ಲ.

ತಜ್ಞರ ಅಭಿಪ್ರಾಯದಂತೆ ನಾವು ಗುರಿ ಮುಟ್ಟಬೇಕಾದ ಪಕ್ಷದಲ್ಲಿ ಈಗಿನದರ ಆರು ಪಾಲಿನಷ್ಟು ಹೆಚ್ಚು ಹಣವನ್ನು ಶಿಕ್ಷಣಕ್ಕಾಗಿ ವಿನಿಯೋಗಿಸಬೇಕಾಗುತ್ತದೆ. ಆದರೆ ಇದು ಆಗುವ ಹೋಗುವ ಮಾತಲ್ಲ—ಶಿಕ್ಷಣಕ್ಕಾಗಿ ಹಣವನ್ನು ಹೆಚ್ಚಿಗೆ ವ್ಯಯಿಸ ಹತ್ತಿದರೆ, ನೀರಾವರಿ ಯೋಜನೆ, ವಿದ್ಯುಚ್ಛಕ್ತಿ ವಿಸ್ತರಣೆ ಮುಂತಾದ ಇತರ ಅತ್ಯಗತ್ಯದ ಕೆಲಸಗಳಿಗೆ ಹಣ ಸಿಗಲಾರದು. ಶಿಕ್ಷಣವು ಅತ್ಯಗತ್ಯವಾದ ವಿಷಯವಾಗಿದ್ದರೂ ಸಹ, ಹಸಿದ ಹೊಟ್ಟೆಗೆ ತಂಪನ್ನೂ ಕಷ್ಟಗಳೇ ಹೆಚ್ಚಿದ ಜೀವನದಲ್ಲಿ ಒಂದಿಷ್ಟು ಸುಖವನ್ನೂ ನೀಡಲು ಭೌತಿಕ ಮಹತ್ವದ ನೀರಾವರಿಯೋಜನೆಯಂಥವುಗಳಿಗೆ ಮನಸ್ಸು ಕೊಡಬೇಕಾಗುತ್ತದೆ. ಆದುದರಿಂದ ಪಂಚ ವಾರ್ಷಿಕ ಯೋಜನೆಯಲ್ಲಿ ಸೂಚಿಸಿದ ೧೬೧ ಕೋಟಿ ರೂಪಾಯಿಗಳ ವೆಚ್ಚದಿಂದಲೇ ನಾವು ಸದ್ಯಕ್ಕೆ ತೃಪ್ತರಾಗಬೇಕಾಗುತ್ತದೆ. ಇಷ್ಟರವರೆಗೆ ಈ ಹಣದಲ್ಲಿ ೬೭ ಕೋಟಿ ರೂಪಾಯಿಗಳ ಕೆಲಸ ನಡೆದಿರುತ್ತದೆ.

ಶ್ರೀಮನ್ನಾರಾಯಣ ಅಗ್ರವಾಲರು ಹೇಳುವಂತೆ ಮೂಲ ಶಿಕ್ಷಣದ ಹೊರತು ಭಾರತಕ್ಕೆ ಬೇರೆ ಮುಕ್ತಿ ಮಾರ್ಗವಿಲ್ಲ. ಅಕ್ಷರಾಭ್ಯಾಸದೊಂದಿಗೆ ತಾಂತ್ರಿಕ ಶಿಕ್ಷಣವನ್ನೂ ವ್ಯಾವಹಾರಿಕ ಜ್ಞಾನವನ್ನೂ ನೀಡುವ ಮೂಲ ಶಿಕ್ಷಣ ಪದ್ಧತಿಯನ್ನು ನಮ್ಮ ಶಾಲೆಗಳಲ್ಲಿ ಅಳವಡಿಸಲು ಪ್ರಯತ್ನಿಸಬೇಕಾದದ್ದು ನಮ್ಮ ಕರ್ತವ್ಯ. ನಮ್ಮ ಶಾಲೆಗಳ ಪುನರುಜ್ಜೀವನಕ್ಕಾಗಿ ಏನು ಮಾಡಬೇಕೆಂಬ ವಿಷಯವನ್ನು ಡೆನ್ಮಾರ್ಕ ದೇಶದಿಂದ ಕಲಿತುಕೊಳ್ಳುವುದು ಸಾಧ್ಯ. ಸರಕಾರವು ಅಲ್ಲಿಗೊಂದು ತಜ್ಞರ ಮಂಡಳವನ್ನು ಕಳಿಸಿರುತ್ತದೆ; ಹಾಗೆಯೇ ಪಠ್ಯಪುಸ್ತಕಗಳ ಸ್ವರೂಪ ಹೇಗಿರಬೇಕೆಂಬುದನ್ನು ನಿರ್ಣಯಿಸಲು ವಿಶೇಷ ಸಮಿತಿಯೊಂದನ್ನು ನೇಮಿಸಿರುತ್ತದೆ. ಇವುಗಳ ಕೆಲಸದ ಪರಿಣಾಮವಾಗಿ ನಾವು ಪ್ರಗತಿಯ ದಾರಿಯನ್ನು ನಿರ್ಧರಿಸುವಂತಾಗಬಹುದು.

ಪ್ರಾಥಮಿಕ ಶಿಕ್ಷಣದ ಸಮಸ್ಯೆಯನ್ನೇ ಬಿಡಿಸಲಾಗದ ಸರಕಾರಗಳು ಮಾಧ್ಯಮಿಕ ಶಿಕ್ಷಣದಲ್ಲಿ ಹೆಚ್ಚು ಆಸ್ಥೆಯನ್ನು ತೋರಿಸಿರದಿದ್ದರೆ ಆಶ್ಚರ್ಯವಿಲ್ಲ. ಹೀಗಿದ್ದರೂ ಭಾರತದ ಭವಿಷ್ಯದ ದೃಷ್ಟಿಯನ್ನಿಟ್ಟು ಕೊಂಡು ಯೋಗ್ಯ ಮಾರ್ಗ ದರ್ಶನವನ್ನು ಮಾಡುವ ಹೊಣೆಯನ್ನು ಸರಕಾರಗಳು ತಪ್ಪಿಸಿ ಕೊಂಡಿಲ್ಲ. ತತ್ಪರಿಣಾಮವಾಗಿ, ನಮ್ಮ ಮಾಧ್ಯಮಿಕ ಶಾಲೆಗಳಲ್ಲಿ ಇಂಗ್ಲೀಷಿನ ಸ್ಥಾನಮಾನವು ಕಡಿಮೆಯಾಗುತ್ತಾ ಬಂದು ಪ್ರಾದೇಶಿಕ ಭಾಷೆಗಳಿಗೂ ರಾಷ್ಟ್ರ ಭಾಷೆಯಾದ ಹಿಂದಿಗೂ ಹೆಚ್ಚಿನ ಪುರಸ್ಕಾರ ಕಂಡು ಬರುತ್ತದೆ. ಸರಾಸರಿ ೧೧—೧೭ ವರ್ಷ ಪ್ರಾಯದ ಜನರಿಗಾಗಿ ಇರುವ ಮಾಧ್ಯಮಿಕ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಕೃತ ವಿದ್ಯಾಭ್ಯಾಸ ಹೊಂದುವವರು ನೂರರಲ್ಲಿ ಹತ್ತು ಮಕ್ಕಳು ಮಾತ್ರ ಎಂಬುದನ್ನಿಲ್ಲಿ ಗಮನಿಸುವುದೊಳಿತು.

ಬಡತನವು ನಮ್ಮ ಮಕ್ಕಳ ಶಿಕ್ಷಣದಲ್ಲಿ ದೊಡ್ಡ ವಿಘ್ನವೆನಿಸುತ್ತದೆ. ಮಕ್ಕಳು ಮಾಧ್ಯಮಿಕ ಶಿಕ್ಷಣವನ್ನು ಹೊಂದದೆ ನಡುವೆಯೇ ಶಾಲೆ ಬಿಡುವಂತಾಗಲು ಬಡತನವೇ ಕಾರಣ. ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಯು ಇನ್ನೊಂದು ಮಹತ್ವದ ವಿಷಯ. ಸ್ವಾತಂತ್ರ್ಯೋತ್ತರದಲ್ಲಿ ಹನ್ನೆರಡು ಹೊಸ ವಿಶ್ವವಿದ್ಯಾಲಯಗಳು ಭಾರತದಲ್ಲಿ ಸ್ಥಾಪನೆಗೊಂಡಿವೆಯಲ್ಲದೆ ನೂರಾರು ಕಾಲೇಜುಗಳೂ ಹುಟ್ಟಿರುತ್ತವೆ. ಇಲ್ಲಿಲ್ಲ ಕಲಿಯ ಬರುವ ವಿದ್ಯಾರ್ಥಿಗಳಲ್ಲಿ ಕೆಲಸವೇನೂ ಇಲ್ಲದೆ ಸುಮ್ಮನೆ ಮನೆಯಲ್ಲಿ ಕುಳಿತಿರಲಾರದೆ ಬರುವವರೇ ಹೆಚ್ಚೆಂದು ಹೇಳಬಹುದು. ಉಚ್ಚ ಶಿಕ್ಷಣ ಹೊಂದುವವರ ಪ್ರಮಾಣವು ಸ್ವಾತಂತ್ರ್ಯೋತ್ತರದಲ್ಲಿ ೬೦% ಹೆಚ್ಚಾಗಿದ್ದು, ನಿರುದ್ಯೋಗ ಸಮಸ್ಯೆ ಇವರೆಲ್ಲರನ್ನೂ ಕಾಡುತ್ತದೆ. ಭಾರತ ಸರಕಾರವು ತರುಣ ತರುಣಿಯರ ಮನಸ್ಸಿನ ಮೇಲೆ ನಿರುದ್ಯೋಗ ಸಮಸ್ಯೆಯು ಮಾಡಬಹುದಾದ ಅನಿಷ್ಟ ಪರಿಣಾಮವನ್ನು ಮುಂಗಂಡು ೮೦,೦೦೦ ಸುಶಿಕ್ಷಿತರಿಗೆ ಉದ್ಯೋಗ ದೊರಕಿಸಿ ಕೊಡುವ ಹೊಸ ಯೋಜನೆಯನ್ನು ಸಿದ್ಧಗೊಳಿಸಿ, ಜ್ಯಾರಿಗೆ ತಂದಿರುತ್ತದೆ.

ವಿಶ್ವವಿದ್ಯಾಲಯಗಳ ಸಂಖ್ಯಾ ಪ್ರಮಾಣ ಹೆಚ್ಚಿಕೊಂಡಿದ್ದರೂ ಅವುಗಳ ಯೋಗ್ಯತೆಯ ಬಗ್ಗೆ ಸಂದೇಹವಿಲ್ಲದಿಲ್ಲ. ಹೊಸ ಸಂಶೋಧನೆಗಳಿಗೂ ವ್ಯಾಪಕವಾದ ಅಧ್ಯಯನಕ್ಕೂ ಸಾಕಷ್ಟು ಅವಕಾಶವಿಲ್ಲದ ವಿಶ್ವವಿದ್ಯಾಲಯಗಳು ಬೌದ್ಧಿಕ ಆವಶ್ಯಕತೆಯನ್ನು ಪೂರೈಸುವುದು ಅಸಾಧ್ಯ. ತಾಂತ್ರಿಕ ಹಾಗು ವೈಜ್ಞಾನಿಕ ಶಿಕ್ಷಣವು ಅತ್ಯಂತ ಅಗತ್ಯವೆನಿಸಿದ ಇಂದಿನ ಗಳಿಗೆಯಲ್ಲಿ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸಾಕಷ್ಟು ಸೌಕರ್ಯಗಳು ಇಲ್ಲದಿರುವುದು ಶೋಚನೀಯವಾದ ವಿಷಯ. ಸರಕಾರವೇ ನಡೆಸುವ ಕೆಲವು ಕೇಂದ್ರಗಳನ್ನು ವಿಸ್ತರಿಸಿ ಹೆಚ್ಚು ವಿದ್ಯಾರ್ಥಿಗಳಿಗೆ ಅವಕಾಶ ಮಾಡಿ ಕೊಡಲಾಗಿದ್ದರೂ ಅದು ಸಾಲದೆಂಬುದನ್ನು ಸರಕಾರವೇ ಒಪ್ಪಿಕೊಳ್ಳುತ್ತದೆ.

ಇಂದಿನ ಶಿಕ್ಷಣ ಕ್ರಮವು ಇನ್ನೂ ಒಂದು ಹದಕ್ಕೆ ಬಂದಿಲ್ಲವೆನ್ನುವುದು ಇನ್ನೊಂದು ಮುಖ್ಯವಾದ ವಿಷಯ. ನಾವು ಸ್ಥಿತ್ಯಂತರಗೊಳ್ಳುವ ಪರಿಸ್ಥಿತಿಯನ್ನು ಎದುರಿಸುತಿದ್ದು ಇದರೊಡನೆ ಹೊಂದಿಕೊಳ್ಳಲಾರದ ಶಿಕ್ಷಕರೂ ವಿದ್ಯಾರ್ಥಿಗಳೂ ತೀರ ಉದ್ವಿಗ್ನರಾಗುತ್ತಾರೆ. ಹೀಗಾಗಿ ಶಿಸ್ತು ಹೇಳ ಹೆಸರಿಲ್ಲದಂತೆ ಹಾರಿಹೋಗುತ್ತದೆ; ಕಲಿಯುವುದರಲ್ಲಿ ಆಸಕ್ತಿ ಹುಟ್ಟುವುದರ ಬದಲು ಕಲಿತೇನು ಪ್ರಯೋಜನವೆಂಬ ಜುಗುಪ್ಸೆಯೇ ಉಂಟಾಗುತ್ತದೆ. ಭವಿತವ್ಯದ ದೃಷ್ಟಿಯಿಂದ ಇಂಥ ಮನೋಭಾವವು ಘಾತಕವಾದದ್ದು: ಅದನ್ನು ದೂರೀಕರಿಸಲು ಪ್ರಯತ್ನಗಳು ಸಂಘಟಿತ ರೀತಿಯಲ್ಲಿ ನಡೆಯಬೇಕು. ಪರಿವರ್ತನೆ ಅನಿವಾರ್ಯವೆಂಬುದನ್ನು ಮನಗಾಣಿಸಿಕೊಟ್ಟು ಇಂದಿನ ಕಠಿಣ ಕಾಲದಲ್ಲಿ ಸಂಯಮ ಶೀಲರಾಗದೆ ಗತ್ಯಂತರವಿಲ್ಲವೆಂದು ತಿಳಿಸಿ ಹೇಳಬೇಕಾದ ಅಗತ್ಯ ಬಹಳವಾಗಿ ಕಾಣಿಸುತ್ತದೆ. ಜನತೆಯ ಪಾಲಿಗೆ ನೀಡಬೇಕಾದ ಸಾಮಾಜಿಕ ಶಿಕ್ಷಣ ಕಾರ್ಯಕ್ರಮದ ಜೊತೆಗೆ ಈ ಕೆಲಸವನ್ನೂ ಅಳವಡಿಸಿಕೊಳ್ಳುವುದು ತುಂಬ ಅಪೇಕ್ಷಣೀಯ.

ಮೂಲ್ಕಿ ಬೇಂಕ್, ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ದಿ ಬೊಂಬೆಲ್ಯಾಫ್ ಎಶ್ಶೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉಪಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. 10- } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. 12-8 } ರೂ. 1000ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಶೂರೆನ್ಸ್ ಕೊ. ಲಿಮಿಟೆಡ್.
ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂದ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3-8-0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3-8-0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4½%.

ಬಡವ ಬಲ್ಲಿದರೆಂಬ ಭೇದವಿಲ್ಲದೆ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. **P. DEVEE,** F. Ds. (N. J.)
CALCUTTA—40

ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

Edited, Printed & Published By K. H. Shetty at the Navayuga Press, Udipi, S. India

REGD. NO. M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪ VOL. 34

ಉಡುಪಿ, 21—10—1954

ಸಂಚಿಕೆ ೮ NO. 8

ನನಗೆ ಸತ್ಯವೇ ಎಲ್ಲಕ್ಕೂ ಹೆಚ್ಚಿನ, ಎಲ್ಲ ಸಿದ್ಧಾಂತಗಳನ್ನೂ ಒಳಗೊಂಡ ತತ್ವ. ಮಾತಿನಲ್ಲಿಯಷ್ಟೇ ಅಲ್ಲ, ಕೃತಿ ಮತ್ತು ಆಲೋಚನೆಯಲ್ಲೂ ಸತ್ಯವನ್ನು ನಾನು ಆರಾಧಿಸುತ್ತೇನೆ. ನಾನೊಬ್ಬ ನಮ್ರ ಸತ್ಯಶೋಧಕ. ನನ್ನ ಶೋಧನೆಯಲ್ಲಿ ಬೇರೆ ಸತ್ಯಶೋಧಕರನ್ನು ನಾನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತೇನೆ; ಮತ್ತು ತನ್ಮೂಲಕ ನನ್ನ ತಪ್ಪುಗಳನ್ನು ಅರಿತು, ತಿದ್ದಿಕೊಳ್ಳುತ್ತೇನೆ. ನನ್ನ ಅಭಿಪ್ರಾಯ ಮತ್ತು ತೀರ್ಮಾನಗಳಲ್ಲಿ ನಾನು ತಪ್ಪಿದ್ದುಂಟು. ಆದರೆ ತಪ್ಪು ತಿದ್ದಿಕೊಂಡ ಯಾವ ಸಂದರ್ಭದಲ್ಲೇ ಆಗಲಿ, ಹಾನಿಯೇನೂ ಸಂಭವಿಸಲಿಲ್ಲ.

—ಗಾಂಧೀಜಿ.

ನಗೆಹನಿ

ತನ್ನ ಪರಾಕ್ರಮದ ಜಂಭ ಕೊಚ್ಚಿಕೊಳ್ಳುತ್ತಿದ್ದ ಬೇಟೆಗಾರ "ಒಮ್ಮೆ ಹೀಗಾಯಿತು–ನನ್ನ ಎದುರಿಗೊಂದು ಸಿಂಹ ಬಂತು. ನನ್ನಲ್ಲಿ ಬಂದೂಕು ಇರಲಿಲ್ಲ. ನಾನು ಸುಮ್ಮನೆ ಕುಳಿತು ಸಿಂಹವನ್ನೆ ಬಹಳ ಹೊತ್ತು ದಿಟ್ಟಿಸಿನೋಡಿದೆ. ಸಿಂಹ ನನಗೇನೂ ಮಾಡದೆ ಹೊರಟುಹೋಯಿತು." ಎಂದನು.

"ಆಶ್ಚರ್ಯ! ಆದರೆ ಇದರ ಕಾರಣವೇನಿರಬಹುದು?"

ಜೀವವುಳಿಸಿಕೊಳ್ಳಲು ತಾನು ಮರವೇರಿದ್ದರೂ ಅದನ್ನು ಹೊರಗೆಡಹದೆ "ಬಹುಶಃ ನಾನು ಎತ್ತರವಾದ ಮರವನ್ನೇರಿ ಕುಳಿತಿದ್ದೆನೆಂದು ಸಿಂಹ ಭಾವಿಸಿರಬೇಕು" ಎಂದು ಬೇಟೆಗಾರ ಸತ್ಯಕ್ಕೆ ಮುಸುಕೆಳೆದ.

ಇತಿಹಾಸದ ವಿರೂಪ

ರಶಿಯದೊಡನೆ ಸಾಂಸ್ಕೃತಿಕ ಸಂಬಂಧವನ್ನು ಬೆಳೆಸುವ ಹಾಗು ಅಲ್ಲಿಯ ಪ್ರಗತಿಯನ್ನು ನಿರೀಕ್ಷಿಸುವ ಮಹತ್ವದ ಉದ್ದೇಶದಿಂದ ಈಚೆಗೆ ಹಲವಾರು ನಿಯೋಗಗಳು ಭಾರತದಿಂದ ಹೊರಟು ಆ ದೇಶದಲ್ಲಿ ಕೆಲವು ಕಾಲದವರೆಗೆ ಸುತ್ತಾಡಿ ವಾಪಸು ಬಂದಿರುತ್ತವೆ. ಇನ್ನು ಕೆಲವು ಶಿಷ್ಟ ಮಂಡಳಗಳು ಈಗ ಅಲ್ಲಿ ತಿರುಗಾಟದಲ್ಲಿ ತೊಡಗಿರುತ್ತವೆ. ರಶಿಯಕ್ಕೆ ಹೋಗಿಬಂದ ಭಾರತೀಯ ಪ್ರಭೃತಿಗಳೆಲ್ಲ ಅಲ್ಲಿಯ ಸಾಹಸಮಯವಾದ ಸುಖಜೀವನವನ್ನು ಕುರಿತು ಬಹಳ ಮೆಚ್ಚಿಗೆಯ ಮಾತನ್ನಾಡುತ್ತಾರೆ; ಜನರ ಸೌಹಾರ್ದ ಭಾವನೆಯನ್ನೂ ಉತ್ಸಾಹವನ್ನೂ ಪ್ರಶಂಸಿಸುತ್ತಾರೆ. ಕತೃತ್ವ ಶಕ್ತಿಯೂ ಪರಿಶ್ರಮ ಬುದ್ಧಿಯೂ ರಶಿಯದ ಪ್ರತಿಯೊಬ್ಬ ಪ್ರಜೆಯಲ್ಲಿಯೂ ತುಂಬಿ ತುಳುಕುತ್ತಿದೆಯೆಂಬ ಅಭಿಪ್ರಾಯವನ್ನು ಹುಟ್ಟಿಸುತ್ತಾರೆ.

ಸರಕಾರದ ಅತಿಥಿಗಳಾಗಿ ತಿರುಗುವ ಈ ನಿಯೋಗಗಳ ಅಭಿಪ್ರಾಯ ಹೇಗೇ ಇರಲಿ, ಅವರು ಹೇಳುವುದು ಪೂರ್ಣ ಸತ್ಯವಲ್ಲವೆಂಬ ಸಂಶಯ ಮಾತ್ರ ಪ್ರಾಜ್ಞರಲ್ಲಿ ಮೊಳೆಯದಿಲ್ಲ. ಎಷ್ಟಾದರೂ ರಶಿಯದಲ್ಲಿರುವುದು ಕಮ್ಯುನಿಸಮ್ಮನ್ನು ಅಪ್ಪಿಕೊಂಡ ಸರಕಾರ—ಕಮ್ಯುನಿಸ್ಟ ತತ್ವಗಳಿಗೆ ಅನುಗುಣವಾಗಿ ಅಲ್ಲಿನ ಎಲ್ಲ ಕೆಲಸಗಳೂ ನಡೆಯುತ್ತವೆ. ಇದರ ಒಳಿತು-ಕೆಡುಕುಗಳನ್ನು ಶಿಷ್ಟ ಮಂಡಳದ ಯಾವ ಸದಸ್ಯರೂ ವಿಮರ್ಶಿಸಲು ಹೋಗುವುದಿಲ್ಲ. ಹಾಗೆ ವಿಶ್ಲೇಷಿಸುವುದರಿಂದ ಉಭಯ ರಾಷ್ಟ್ರಗಳಲ್ಲಿ ಸೌಹಾರ್ದವು ಕೆಡಬಹುದೆಂದು ಅವರು ಅಂಜುತ್ತಾರೋ ಏನೆಂದು ತಿಳಿಯದು.

ಆದರೆ ಹಾಗೆ ಅಂಜಬೇಕಾದ ಪ್ರಮೇಯವಿಲ್ಲದ ಜನರಿಗೆ, ರಶಿಯದ ಪ್ರತಿಯೊಂದು ಕೃತಿಯಲ್ಲೂ ಪಾವಿತ್ರ್ಯಕಾಣಿಸದೆ, ಕುತಂತ್ರಗಳೂ ಕಣ್ಣಿಗೆ ಬೀಳುತ್ತವೆ. ರಶಿಯವು ಸತ್ಯವನ್ನು ಇದ್ದುದಿದ್ದಂತೆ ಜನರ ಮುಂದೆ ಇಡುವುದಿಲ್ಲ; ತನ್ನ ಅನುಕೂಲಕ್ಕೆ ತಕ್ಕಂತೆ ಅದನ್ನು ವಿರೂಪಗೊಳಿಸುತ್ತದೆ. ಪ್ರಜೆಗಳಿಗೆ ಸತ್ಯವನ್ನು ತಿಳಿದುಕೊಳ್ಳುವ ಎಲ್ಲ ಮಾರ್ಗಗಳನ್ನೂ ಮುಚ್ಚಿಬಿಟ್ಟು, ತಾನು ಸಾರಿದುದೇ ಸತ್ಯವೆಂಬ ಅಸಹನೀಯ ನಿರ್ಬಂಧವನ್ನು ರಶಿಯದ ಸರಕಾರ ಹೇರುತ್ತದೆ. ಅಲ್ಲಿಯ ಪ್ರಜೆಗಳು ಹೊರಗಿನ ಪತ್ರಿಕೆಗಳನ್ನು ತರಿಸಿ ಓದುವಂತಿಲ್ಲ; ಸರಕಾರದ ಅಪ್ಪಣೆ ಇಲ್ಲದೆ, ಹೊರಗಿನವರ ಭಾಷಣವನ್ನೂ ಕೇಳಲಾರರು. ಸಾಹಿತ್ಯ ಕೃತಿಗಳ ಮೇಲೂ ಪತ್ರಿಕೆಗಳ ಮೇಲೂ ಪೂರ್ವಪರಿಶೀಲನಾಕ್ರಮವನ್ನೂ ಉಗ್ರ ನಿಯಂತ್ರಣಗಳನ್ನೂ ಹೇರಿರುವ ರಶಿಯದಲ್ಲಿ ಅವೆಲ್ಲವೂ ಸರಕಾರದ ಅಭಿಮತಕ್ಕೆ ವಿರುದ್ಧವಲ್ಲದುದನ್ನು ಪ್ರಕಟಿಸುವ ಸಾಧನಗಳ ಮಟ್ಟಕ್ಕೆ ಇಳಿದಿರುತ್ತವೆ.

ಪರಿಣಾಮದಲ್ಲಿ ರಶಿಯದ ಪ್ರಜೆಗಳು ಕಮ್ಯುನಿಸ್ಟ ತತ್ವಗಳಲ್ಲಿ ಗಾಢವಾದ ವಿಶ್ವಾಸವನ್ನು ಪ್ರಕಟಿಸುವ ಸರಕಾರವು ಏನನ್ನು ಹೇಳುತ್ತದೋ ಅಷ್ಟನ್ನೆ ಕೇಳಿ ಕುಳಿತಿರುವ, ಏನನ್ನು ತಿಳಿಸುತ್ತದೋ ಅಷ್ಟರಿಂದಲೇ ತೃಪ್ತಿಗೊಂಡುವ ಮಾನಸಿಕ ದಾಸ್ಯಕ್ಕೆ ಗುರಿಯಾಗಿದ್ದಾರೆ. ಅವರ ಸ್ವತಂತ್ರ ವಿಚಾರ ಶಕ್ತಿಯು ಬೆಳೆಯುವುದಕ್ಕೆ ಸರಕಾರದ ಮಟ್ಟದಲ್ಲಿ ಮಿತಿಯನ್ನು ಹೇರಿದ್ದು ಜ್ಞಾನಾರ್ಜನೆಯ ದಾರಿಯಲ್ಲಿ ಇದು ಮಹಾ ಆತಂಕವಾಗಿದೆಯೆಂದರೆ ತಪ್ಪಾಗದು. ರಶಿಯದ ಸರಕಾರ ತನಗೆ, ತನ್ನ ತತ್ವಕ್ಕೆ ಪ್ರಿಯವಾದುದಲ್ಲದ ಯಾವುದನ್ನೂ ಸಹಿಸುವುದಿಲ್ಲ—ಉದಾಹರಣೆಗಾಗಿ, ಜಿನೇವಾದಲ್ಲಿ ಇಂಡೋಚೀನದ ಬಗ್ಗೆ ಒಡಂಬಡಿಕೆಯಾಗುವಂತೆ ಭಾರತದ ಶ್ರೀ ಕೃಷ್ಣಮೆನೊನ್ನರು ಹಿನ್ನೆಲೆಯಲ್ಲಿ ನಿಂತು ಮಹತ್ವದ ಪಾತ್ರ ವಹಿಸಿದರೆಂದು ಲೋಕವೇ ಒಪ್ಪುತ್ತಿರುವಾಗ ಕಬ್ಬಿಣದ ಪರದೆಯೊಳಗಿನ ರಶಿಯದ ಪತ್ರಿಕೆಗಳೂ ಅಲ್ಲಿಯ ಸರಕಾರಿ ಪ್ರಕಟಣೆಗಳೂ ರಶಿಯಾ—ಚೀನಗಳ ಮುತ್ಸದ್ದಿತನವನ್ನು ಹೊಗಳಿದವೇ ಹೊರತು ಭಾರತದ ಪ್ರತಿನಿಧಿಯು ವಹಿಸಿದ ಪಾತ್ರದ ಉಲ್ಲೇಖವನ್ನೆ ಮಾಡಲಿಲ್ಲ. ಆ ಮಟ್ಟಿಗೆ ಅಮೇರಿಕವೇ ಪುಣ್ಯಶಾಲಿ—ಬೈಸಿಕೊಳ್ಳುವ ರೀತಿಯಲ್ಲಾದರೂ ಅಮೇರಿಕದ ಹೆಸರು ಆ ಪತ್ರಿಕೆಗಳಲ್ಲಿ ಪ್ರಕಟವಾಯಿತು!

ಇಲ್ಲಿ ಪ್ರಚಾರೋದ್ದೇಶವೇ ಪ್ರಾಮುಖ್ಯವಾದ ಸಂಗತಿಯಾಯಿತೆಂಬುದನ್ನು ಯಾರೂ ಅಲ್ಲಗಳೆಯಲಾರರು. ಸಾಮಾನ್ಯ ಪ್ರಕಟಣೆಗಳಂತಿರಲಿ, ವೈಜ್ಞಾನಿಕ ರೀತಿಯಲ್ಲಿ ಕ್ರೋಢೀಕರಿಸಿದ ಸಂಪುಟಗಳಲ್ಲಿಯೂ ಕಮ್ಯುನಿಸ್ಟ ತತ್ವದ ವ್ಯಾಮೋಹದಿಂದ ಸತ್ಯದ ಬಣ್ಣ ಕೆಡಿಸುವ ಪ್ರಯತ್ನಗಳು ನಡೆಯುತ್ತಿರುವುದು ಶೋಚನೀಯ. ಅಮೇರಿಕವು ಏನಾದರೊಂದು ಹೊಸ ಶೋಧ ನಡೆಸಿತೆಂದು ಜಾಹೀರು ಮಾಡಿದ ಮರುಕ್ಷಣದಲ್ಲಿಯೇ ರಶಿಯವು ತಾನು ಆ ಸಂಶೋಧನೆಯನ್ನು ಎಂದೋ ಮಾಡಿಯಾಗಿದೆಯೆಂದೂ ಆದುದರಿಂದ ಪ್ರಥಮ ವಿಜಯದ ಹೆಗ್ಗಳಿಕೆ ತನಗೆಯೇ ಸಲ್ಲತಕ್ಕದ್ದೆಂದೂ ಹೊರಜಗತ್ತಿನ ಮುಂದೆ ಸಾರುತ್ತದೆ. ತನ್ನ ದೊಡ್ಡಸ್ತಿಕೆಯನ್ನು ತೋರಿಸುವುದು ಅದರ ಸಂಪ್ರದಾಯಗಳ ವೈಶಿಷ್ಟ್ಯ. ಇದರಲ್ಲಿ ಎಷ್ಟು ಸತ್ಯವಿದೆಯೆಂದು ಹೊರಗಿನವರಾರೂ ತಿಳಿಯುವುದಕ್ಕೆ ಅವಕಾಶವಿಲ್ಲ ಎಂಬುದನ್ನು ಗಮನಿಸಿದರೆ, ರಶಿಯದ ಪ್ರಾಮಾಣಿಕತೆಯ ಕುರಿತು ಸಂದೇಹ ಮೂಡುತ್ತದೆಯಲ್ಲದೆ, ಗೌರವ ಭಾವನೆ ಬೆಳೆಯಲಾರದು.

ಜನತೆಯ ಬೌದ್ಧಿಕ ಶಕ್ತಿಯ ಮೇಲೆ ನಿಯಂತ್ರಣವನ್ನು ಹೇರಲು ಉದ್ದೇಶಿಸಿ ಅದು ಕೈಗೊಳ್ಳುವ ತಂತ್ರಗಳಲ್ಲಿ ಕೆಲವು ತೀರ ಹೇಯವೆನಿಸುತ್ತವೆ. "ರಶಿಯದ ಮಹಾ ವಿಶ್ವಕೋಶ"ದ ಕೆಲವು ಪುಟಗಳನ್ನು ಇದಕ್ಕೆ ಉದಾಹರಿಸಬಹುದು. ಒಂದು ವರ್ಷದ ಹಿಂದಿನ ವರೆಗೆ ರಶಿಯದ ಒಳಾಡಳಿತೆಯ ಸಚಿವರಾಗಿಯೂ ಸ್ಟ್ಯಾಲಿನ್ನರ ಬಲಗೈ ಬಂಟನಾಗಿಯೂ ಕೆಲಸ ಮಾಡುತ್ತಿದ್ದ ಲಾವ್ರೆಂಟಿ ಬೆರಿಯಾರ ಜೀವನವನ್ನು ವರ್ಣಿಸುವ ಲೇಖನವೂ ಬೆರಿಯಾರ ಚಿತ್ರವೂ "ಮಹಾ ವಿಶ್ವಕೋಶ"ದ ಐದನೇ ಸಂಪುಟದ ೨೧ರಿಂದ ೨೪ನೇ ಪುಟಗಳಲ್ಲಿದ್ದಿತು. ದುರ್ದೈವದಿಂದ ರಾಷ್ಟ್ರದ್ರೋಹದ ಅಪಾದನೆಯ ಮೇಲೆ ಬೆರಿಯಾರನ್ನು ಈಚೆಗೆ ಗಲ್ಲಿಗೇರಿಸಲಾಯಿತು ಕಣ್ಣಿನಿಂದ ದೂರಾದ ಬೆರಿಯಾರನ್ನು ರಶಿಯನ್ನರ ಮನಸ್ಸಿನಿಂದಲೂ ದೂರ ಮಾಡ ಬಯಸಿ, ಅಲ್ಲಿಯ ಸರಕಾರವು ವಿಶ್ವಕೋಶದ ಸಂಪುಟದಿಂದ ಅವರ ಕುರಿತಾದ ಲೇಖನವನ್ನೂ ಚಿತ್ರವನ್ನೂ ಹರಿದೊಗೆದು, ಅವರ ಸ್ಥಾನದಲ್ಲಿ ಬೇರೆ ವಿಷಯವನ್ನು ತುಂಬುವಷ್ಟು ಮುಂದೆ ಹೋಯಿತು! ಅವರೆ ಎರಡು ದಶಕಗಳ ವರೆಗೆ ತಮ್ಮಮೇಲೆ ಅಧಿಕಾರವನ್ನು ನಡೆಸಿದ ಧುರೀಣ ಬೆರಿಯಾರನ್ನು ಜನರು ಇಷ್ಟು ಸುಲಭವಾದ ತಂತ್ರದಿಂದಲೇ ಮರೆಯಬಲ್ಲರೆ? ಇದನ್ನು ಸರಕಾರ ಗಮನಿಸಲಿಲ್ಲ; ಪ್ರತೀಕಾರ ಬುದ್ಧಿಯನ್ನಷ್ಟೆ ಪ್ರದರ್ಶಿಸಿತು.

ಈಗ ರಶಿಯವು ಭಾರತದ ವಿಭೂತಿಪುರುಷರಾದ ಮಹಾತ್ಮಾ ಗಾಂಧೀಜಿಯ ಜೀವನವನ್ನೂ ವಿರೂಪಗೊಳಿಸಿ, ತನ್ನ "ಮಹಾ ವಿಶ್ವಕೋಶ"ದಲ್ಲಿ ಪ್ರಕಟಿಸಿದೆ

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

[ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ. ಸ್ಥಾಪನೆ: ೧೯೨೫]

ದೀಪಾವಳಿಯ ಶುಭಾಶಯಗಳು!

ಈ ಶುಭ ಸಮಯದಲ್ಲಿ ನಮ್ಮ ಮಿತ್ರ ಪರಿವಾರಕ್ಕೆ, ಹಿತಚಿಂತಕರ ಬಳಗಕ್ಕೆ ಮತ್ತು ಗ್ರಾಹಕರಿಗೆ ಹಾರ್ದಿಕ ಅಭಿವಂದನೆಗಳನ್ನು ಸಲ್ಲಿಸಲು ನಮಗೆ ಆನಂದವೆನಿಸುತ್ತದೆ. ಅಲ್ಲದೆ ಕಳೆದ ೨೯ ವರುಷಗಳ ನಮ್ಮ ಅವಿರತ ಅನುಭವದ ಸೇವೆಯನ್ನು ನೀಡಿ ೬೩ ಶಾಖೆಗಳ ಮೂಲಕ ತಮ್ಮ ಕಾರ್ಯವನ್ನು ತತ್ಪರವಾಗಿ-ಸುಗಮವಾಗಿ ಪಾಡಿದ್ದನ್ನು ತಿಳಿಸಲು ಅಭಿಮಾನವೆನಿಸುತ್ತದೆ. ತಮ್ಮೆಲ್ಲರ ವಿಶ್ವಾಸ-ನೆರವು ಇದೇ ಬಗೆಯಾಗಿ ಮುಂದೆಯೂ ದೊರೆಯುವುದೆಂದು ಖಚಿತವಾಗಿ ನಂಬಿದ್ದೇವೆ.

ಚಲಾವಣೆ ಭಂಡವಾಳ 6,50,00,000ಗೂ ಮಿಕ್ಕಿದೆ

The Canara Industrial & Banking Syndicate Ltd.

Head Office: UDIPI, S India.] [Estd: 1925.

ದೀಪಾವಳಿಯ ಶುಭಾಶಯಗಳು

ದೀಪ ಜ್ಯೋತಿ-ಮನುಷ್ಯನ ಉತ್ಕರ್ಷ ಹಾಗು ಉತ್ಸರ್ಗದ ಪ್ರತೀಕ

ಲಕ್ಷ್ಮಿಯ ಪೂಜೆಗೆ ಭಾರತೀಯ ಸಂಸ್ಕೃತಿ ಕೊಟ್ಟಿರುವ ಮಹತ್ವ

ದೀಪಾವಳಿಯ ಪರ್ವದಿನ ಸಮೀಪಿಸಿದಂತೆಲ್ಲ ನಮ್ಮೆಲ್ಲರ ತನುಮನಗಳು ಸಹಜವಾಗಿಯೇ ಪುಳಕಗೊಳ್ಳುತ್ತವೆ. ಹೃದಯವು ಸದ್ಭಾವನೆಗಳ ಕೇಂದ್ರ ಸ್ಥಾನವಾಗುತ್ತದೆ; ಸುತ್ತಲೂ ಉಲ್ಲಾಸಮಯವಾದ ವಾತಾವರಣವೇ ಕಂಗೊಳಿಸುತ್ತದೆ. ಉನ್ಮುಕ್ತ ಮನಸ್ಸು ತನ್ನಷ್ಟಕ್ಕೆ ವಿಚಾರ ಮಾಡತೊಡಗಿದಾಗ ಹಣತೆಯ ದೀಪವೊಂದು ಎಂಥ ಅದ್ಭುತವನ್ನು ಪ್ರದರ್ಶಿಸುತ್ತಿದೆಯೆಂದು ಹರ್ಷಿಸುತ್ತೇವೆ. ಕವಿಯೊಬ್ಬನು ಹೇಳಿದಂತೆ, ವಿಶ್ವವನ್ನು ಗಾಢವಾಗಿ ಕವಿದ ಅಂಧಕಾರದಲ್ಲಿಯೂ ಸಾಮಾನ್ಯ ದೀಪ ಜ್ಯೋತಿಯೊಂದನ್ನು ನೊಂದಿಸುವ ಶಕ್ತಿ ಇಲ್ಲ! ನಾವು ಕತೆಗಳಲ್ಲಿ ಕೇಳಿದ ಅಲ್ಲಾವುದ್ದೀನನ ವಿಚಿತ್ರ ದೀಪದ ಮಹಿಮೆಗಿಂತಲೂ ಇದು ಹೆಚ್ಚು ವಿಸ್ಮಯಕರವೆನಿಸುತ್ತದೆ.

ದೀಪವು ಹೊರಗಿನ ಕತ್ತಲೆಯನ್ನು ಹೊಡೆದೋಡಿಸಿ, ಭಯಗ್ರಸ್ತನಾದವನಿಗೆ ಅಭಯವನ್ನೂ, ಭ್ರಮೆಯಲ್ಲಿ ಬಿದ್ದವನಿಗೆ ಸತ್ಯವನ್ನೂ, ನಿರಾಶೆಯನ್ನು ಹೊಂದಿದವನಿಗೆ ಹೊಸ ಭರವಸೆಯನ್ನೂ, ವ್ಯಾಕುಲಚಿತ್ತನಿಗೆ ಸಾಂತ್ವನವನ್ನೂ ನೀಡುತ್ತದೆ. ಇಷ್ಟು ಮಾತ್ರವಲ್ಲ, ನಮ್ಮೊಳಗಿನ ತಮಸ್ಸನ್ನೂ ಕಾಲ್ದೆಗೆಯುವಂತೆ ದೀಪದ ಶುಭ್ರ ಪ್ರಭೆಯು ಪ್ರಚೋದಿಸುತ್ತದೆ. ಮನದ ಮಾಲಿನ್ಯ, ರಾಕ್ಷಸ ಸ್ವಭಾವ, ಆಲಸ್ಯ ಹಾಗು ನಿದ್ರೆ, ದುರ್ವ್ಯಸನ ಮುಂತಾದವುಗಳನ್ನೆಲ್ಲ ದೂರೀಕರಿಸಿ, ಜ್ಞಾನವಂತರಾಗುವಂತೆ ಪ್ರೇರೇಪಿಸುತ್ತದೆ.

ಮನೆಯನ್ನು ಬೆಳಗುವಲ್ಲಿ ದೀಪದ ಪಾತ್ರವು ಬಹಳ ಮಹತ್ವವನ್ನು ಪಡೆಯುತ್ತದೆ: ದೀಪ ಮಾಲೆಗಳಿಂದ ಅಲಂಕೃತವಾದ ಮನೆಯು ಹೊಸ ಶೋಭೆಯನ್ನು ಹೊಂದುತ್ತದೆ. ಮನೆಯಲ್ಲಿ ಕುಣಿಯುವ ಮಕ್ಕಳನ್ನು ನಾವು ಕುಲದೀಪಕರೆಂಬ ಅಭಿಮಾನದ ಹೆಸರಿನಿಂದ ಕರೆಯುತ್ತೇವೆ. "ಸಾಧಾರಣ ದೀಪವು ತನಗೆ ಆಶ್ರಯವಿತ್ತ ಪಾತ್ರವನ್ನು ಬಿಸಿಮಾಡುತ್ತದೆ; ಆದರೆ ಕುಲದೀಪಕನು ಯಾರೊಬ್ಬರೂ ಬಿಸಿಯುಸಿರು ಬಿಡುವಂತೆ ಮಾಡುವುದಿಲ್ಲ. ದೀಪದಲ್ಲಿ ಹೊಗೆ ಇದೆ; ಆದರೆ ಕುಲದೀಪಕನು ನಿರ್ದೋಷಿಯಾಗಿದ್ದಾನೆ. ದೀಪದ ಬತ್ತಿಯು ಉರಿಯುತ್ತಾ ಸಣ್ಣದಾಗುತ್ತದೆ; ಆದರೆ ಕುಲದೀಪಕನ ಸದ್ಗುಣಗಳು ಎಳ್ಳಷ್ಟೂ ನಷ್ಟಹೊಂದದೆ, ವೃದ್ಧಿಯಾಗುತ್ತವೆ.' ಎಂದು ಸುಂತಾಗಿ ಒಂದು ಕವಿತೆಯು ದೀಪದೊಡನೆ ಕುಲದೀಪಕರ ತುಲನೆ ಮಾಡುತ್ತದೆ.

ಸೂರ್ಯ, ಚಂದ್ರ, ನಕ್ಷತ್ರ ಮುಂತಾದುವನ್ನು ನಾವು ದೀಪಗಳೆಂದೇ ಭಾವಿಸಿ, ಆರಾಧಿಸುತ್ತೇವೆ ಹೃದಯಕ್ಕೆ ಪ್ರಸನ್ನತೆಯನ್ನು ಕೊಡುವ ಸಂದರ್ಭಗಳನ್ನೆಲ್ಲ ದೀಪಕ್ಕೆ ಹೋಲಿಸಿ ವರ್ಣಿಸುವುದು ನಮಗೆ ಅಭ್ಯಾಸವೆನಿಸಿರುತ್ತದೆ. "ಆಶಾ ದೀಪ" "ಪ್ರಾಣ ದೀಪ" "ಪ್ರೇಮ ದೀಪ" ಎಂಬಿತ್ಯಾದಿಪ್ರಯೋಗಗಳು ನಮಗೆ ಪ್ರತಿಯೊಂದೂ ಕಾವ್ಯದಲ್ಲಿ ಸಿಗುತ್ತವೆ. ಸೂರ್ಯನನ್ನು ಲೋಕ ದೀಪವೆಂದು ಕರೆದ ನಮ್ಮ ಹಿರಿಯರು ಮನುಷ್ಯನ ಮಟ್ಟಿಗೆ ಜ್ಞಾನದೀಪವೇ ಸರ್ವೋತ್ಕೃಷ್ಟವೆಂದು ಮನ್ನಿಸಿದ್ದಾರೆ. ಸೂರ್ಯ ಪ್ರವೇಶಕ್ಕೂ ಅಸಾಧ್ಯವೆನಿಸಿದ ಮನುಷ್ಯನ ಅಂತಃಕರಣದಲ್ಲಿ ಜ್ಞಾನದೀಪಕ್ಕೆ ಮಾತ್ರ ತನ್ನ ಜ್ಯೋತಿಯನ್ನು ಬೆಳಗಬಲ್ಲ ಸಾಮರ್ಥ್ಯವಿದೆಯೆಂದು ಅವರ ಅಭಿಪ್ರಾಯ. ಜ್ಞಾನದೀಪವನ್ನೇ ಪರ್ಯಾಯವಾಗಿ ಧರ್ಮದೀಪವೆಂದು ಹೆಸರಿಸಬಹುದು.

ಋಗ್ವೇದದ ಅಗ್ನಿ ಸೂಕ್ತಗಳಲ್ಲಿ ಜ್ಞಾನದೀಪದ ಅತ್ಯಂತ ಸುಂದರ ವರ್ಣನೆಯನ್ನು ಕಾಣುತ್ತೇವೆ. ಕಾರ್ತಿಕ ಅಮಾವಾಸ್ಯೆಯ ರಾತ್ರಿ ಕಗ್ಗತ್ತಲಲ್ಲಿ ತಮಸ್ಸು ರೌದ್ರ ನೃತ್ಯವನ್ನು ಮಾಡುತ್ತಿದ್ದಾಗ ದೇವಾಲಯಗಳಲ್ಲಿ ಭಯ ಭೀತರಾದ ಜನರು ಏಕಕಂಠದಿಂದ ಹೀಗೆನ್ನುತ್ತಾರೆ—"ಆದಿತ್ಯಗಣಗಳೇ, ನಮಗೆ ಎಡದಲ್ಲಾಗಲೀ ಬಲದಲ್ಲಾಗಲೀ ಮುಂದುಗಲೀ ಹಿಂದಾಗಲೀ ಏನೂ ಕಾಣಿಸುವುದಿಲ್ಲ. ನಮ್ಮ ನಾಲ್ಕು ಸುತ್ತಲಲ್ಲಿ ಗಾಢವಾದ ಅಂಧಕಾರವೇ ಕವಿದಿರುತ್ತದೆ. ನಾವು ದಾರಿ ಗಾಣದೆ ತಬ್ಬಿಬ್ಬಾಗಿ ತೊಳಲುತಿದ್ದೇವೆ. ಕೃಪೆದೋರಿ ನಮ್ಮನ್ನು ಭಯಮುಕ್ತರಾಗಿ ಮಾಡಿರಿ! ಕತ್ತಲಿನಿಂದ ನಮ್ಮನ್ನು ಬೆಳಕಿನೆಡೆಗೆ ಕರೆದೊಯ್ಯಿರಿ!'

ಮಾನವ ಜನಾಂಗದ ಅಂತಃಕರಣದ ಆರ್ತನಾದ ಇನ್ನೂ ಕೊನೆಹೊಂದದಿರುವಾಗಲೇ ತೇಜೋಪುಂಜವೊಂದು ಅವತೀರ್ಣವಾಯಿತು–ಅದರ ದಿವ್ಯ ಪ್ರಭೆಯಿಂದ ದಶದಿಕ್ಕುಗಳೂ ಬೆಳಗಿದವು. ಎಲ್ಲರೂ ದೀಪಾರಾಧನೆಯಲ್ಲಿ ಮಗ್ನರಾದರು "ಲೋಕ, ಕಾಲಗಳ ಮಿತಿಯಿಂದ ದೂರವಾದ, ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ, ವಿದ್ಯುತ್ತು ಇವಾವುದರ ಪ್ರಕಾಶವೂ ಮುಟ್ಟಲಾರದ ಅಖಂಡ ಜ್ಯೋತಿಯಲ್ಲಿರುವ" ಆ ಮಹಾಪ್ರಭುವನ್ನು ಕುರಿತು ಜನರು ನಾನಾ ರೀತಿಯಿಂದ ಸ್ತೋತ್ರಗೈದರು. ಸಾವಿರ ಸೂರ್ಯರ ಪ್ರಕಾಶವೂ ಅವನ ಬೆಳಕಿನ ಮುಂದೆ ಮಸುಕಾಗುವುದೆಂದು ಹೊಗಳಿದರು; ಅವನಿಂದಲೇ ಎಲ್ಲವೂ ಬೆಳಗುವುದೆಂಬ ಜ್ಞಾನವನ್ನು ಹೊಂದಿದರು. ನಿರ್ಜೀವವಾದ ಮಣ್ಣಿನ ಹಣತೆಯಲ್ಲಿ ಕೂಡ ಚೈತನ್ಯ ತುಂಬಬಲ್ಲ ದಿವ್ಯ ವಸ್ತುವನ್ನು ದೀಪಮಾಲೆ ರಚಿಸಿ ಪೂಜಿಸಿದರು.

ಆರತಿಯನ್ನು ಬೆಳಗುತ್ತಿರುವಾಗ ಮನುಷ್ಯನ ಹೃದಯದಲ್ಲಿರುವ ಆತ್ಮಜ್ಯೋತಿಯೂ ಬೆಳಗಹತ್ತಿತು. ಆತ್ಮಜ್ಞಾನವೆಂಬ ಶುಭ್ರ ಜ್ಯೋತಿಯ ದೆಸೆಯಿಂದ ಮನುಷ್ಯನು ಉತ್ಸರ್ಗ ಹಾಗು ಉತ್ಕರ್ಷದ ಮಾರ್ಗವನ್ನು ಕಂಡುಕೊಳ್ಳುವಂತಾಯಿತು. ವಿಶ್ವಕವಿ ರವೀಂದ್ರರು ವಿಶ್ವಾತ್ಮನ ಪ್ರಭೆಯಲ್ಲಿ ಲೀನ ಹೊಂದ ಬಯಸುವ ಮನುಷ್ಯನ ಹಾರೈಕೆಯನ್ನು ತಮ್ಮ "ಗೀತಾಂಜಲಿ"ಯಲ್ಲಿ ಅತಿ ಸುಂದರವಾದ ರೀತಿಯಲ್ಲಿ ವರ್ಣಿಸಿದ್ದಾರೆ "ವಿಶ್ವದ ಸಹಸ್ರಾರು ಸಾಧಕರು ಉರಿಸಿ ಹೋದ ದೀಪಮಾಲೆಯಲ್ಲಿ ನಾನೂ ನನ್ನ ದೀಪವನ್ನು ಬೆಳಗುತ್ತೇನೆ, ಅದನ್ನು ಸ್ವೀಕರಿಸು" ಎಂದವರು ಪ್ರಾರ್ಥಿಸುತ್ತಾರೆ.

ದೇವರ ಪೂಜೆಯಲ್ಲಿ ಅನೇಕೋಪಚಾರಗಳನ್ನು ಮಾಡಲಾಗುತ್ತದೆ: ದೀಪಾರಾಧನೆಯು ಇವುಗಳಲ್ಲಿ ಒಂದು; ಮತ್ತು ಬಹಳ ಮಹತ್ವವಾದ ಅಂಗ. ಆರತಿಯನ್ನು ಶ್ರದ್ಧೆಯಿಂದ ಬೆಳಗುವ ನಾವು ವಿಶ್ವಾತ್ಮರಲ್ಲಿ ಲೀನರಾಗುವ ಬಯಕೆಯನ್ನೇ ಪ್ರಕಟಗೊಳಿಸುತ್ತಿದ್ದೇವೆ. ಹಣತೆಯ ದೀಪವನ್ನು ಆತ್ಮ ಯಜ್ಞದ ಪ್ರತೀಕವೆಂದು ಹಿಂದೂ ಸಂಸ್ಕೃತಿಯು ಭಾವಿಸುತ್ತದೆ. ವಿಶ್ವಯಜ್ಞ— ಆತ್ಮ ಯಜ್ಞಗಳ ಸುಂದರ ಸಮನ್ವಯವನ್ನು ದೀಪಾರಾಧನೆಯಲ್ಲಿ ನಾವು ಸ್ಪಷ್ಟವಾಗಿ ಗುರುತಿಸಬಹುದು.

ಶಿಲ್ಪಶಾಸ್ತ್ರಾನುಸಾರ ೧೬ ಬಗೆಯ ದೀಪಗಳನ್ನು ನಮ್ಮ ಕಲಾವಿದರು ರಚಿಸಿದ್ದಾರೆ. ಕರ್ನಾಟಕದ ಲಕ್ಷ್ಮೀದೀಪವು ಅತ್ಯಂತ ಕೌಶಲದಿರಿದ ರಚಿಸಲ್ಪಟ್ಟಿರುತ್ತದೆ. ಗಾಳಿ ನೀರುಗಳ ಆತಂಕದಿಂದ ದೀಪಶಿಖೆಯನ್ನು ರಕ್ಷಿಸಲು ಇದರಲ್ಲಿ ವಿಶೇಷ ವ್ಯವಸ್ಥೆ ಮಾಡಲ್ಪಟ್ಟಿರುತ್ತವೆ. ಗುಜರಾಥದಲ್ಲಿ ದೀಪಗಳಲ್ಲಿ ಬಳ್ಳಿ ಮುಂತಾದವುಗಳ ಸುಂದರ ಚಿತ್ರವನ್ನು ಬಿಡಿಸುತ್ತಾರೆ. ಮುಗಲ ಪದ್ಧತಿಯಲ್ಲಿ ರಚಿಸಲಾದ ದೀಪಗಳು ಚತುಷ್ಕೋಣ, ಷಟ್ಕೋಣ, ಅಷ್ಟಕೋಣಗಳ ರಚನೆಯನ್ನು ಹೊಂದಿರುತ್ತವೆ ಮಯೂರ ದೀಪ, ಗರುಡ ದೀಪ, ಗಜ ದೀಪ, ವ್ಯಾಘ್ರ ದೀಪ, ವೃಷಭ ದೀಪ, ಕಿನ್ನರ ದೀಪ ಮುಂತಾದ ಬೇರೆ ಪ್ರಕಾರಗಳೂ ನಮ್ಮ ದೇಶದಲ್ಲಿ ಕಾಣಸಿಗುತ್ತವೆ.

ಹಿಂದುಗಳು ದೀಪವನ್ನು ನೆಲದ ಮೇಲೆ ಇಡುವುದಿಲ್ಲ. ವಿಶ್ವದ ಸಮಸ್ತ ಕಷ್ಟಗಳನ್ನೂ ಸಹಿಸುವ ಪೃಥ್ವಿಯು ದೀಪ ಶಿಖೆಯ ಅಲ್ಪ ತಾಪವನ್ನೂ ಸಹಿಸಲಾರಳೆಂಬುದು ಚೋದ್ಯದ ವಿಷಯ. ನಾವು ನಮ್ಮೆಲ್ಲ ಶುಭ ಕಾರ್ಯಗಳಲ್ಲೂ ದೀಪವನ್ನು ಉರಿಸುವುದು ಅಗತ್ಯವೆಂದು ಭಾವಿಸಿದ್ದೇವೆ. ಕ್ರೈಸ್ತರೂ, ಪಾರ್ಸಿಗಳೂ ಹಿಂದುಗಳಂತೆಯೇ ದೀಪಾರಾಧನೆಯನ್ನು ಮಾಡುತ್ತಾರೆ. ನಮ್ಮಲ್ಲಿ ತುಪ್ಪದ ನಂದಾದೀಪವನ್ನು ಬೆಳಗುವುದು ಸಂಪ್ರದಾಯವಾದರೆ, ಕ್ರೈಸ್ತರು ಮೋಂಬತ್ತಿಯನ್ನು ಉರಿಸುತ್ತಾರೆ; ಪಾರ್ಸಿಗಳು ಅಗ್ನಿಪಾತ್ರದಲ್ಲಿ ಚಂದನವನ್ನು ಉರಿಸುತ್ತಾರೆ.

ಜೀವನ ಜಾಗೃತಿಯ ಸಂಕೇತವಾಗಿ ದೀಪವನ್ನು ಸ್ವೀಕರಿಸಿದ ಭಾರತೀಯ ಸಮಾಜವು ದೀಪೋತ್ಸವವನ್ನು ಅದಕ್ಕೆ ಹೇಳಿಸಿದ ಋತುವಿನಲ್ಲಿಯೇ ಆಚರಿಸುವುದೆಂ

(೧೧ನೇ ಪುಟ ನೋಡಿರಿ)

THE CANARA MUTUAL ASSURANCE COMPANY, LTD.,

Managing Director: T. R. A. PAI

Head Office: **UDIPI**, S. INDIA.] [Estd: 1935

ಅತ್ಯುತ್ತಮ ಬೋನಸ್

ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ

ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ

ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ

31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.

ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್

ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫

ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.

CHIEF AGENTS:

THE COMMERCIAL CORPORATION OF INDIA, LTD.,

UDIPI, S. India

ರಾಮತೀರ್ಥ ಬ್ರಾಹ್ಮೀ ತೈಲ

ಸ್ಪೆಶ್ಯಲ್ ನಂ ೧] [ಮೆಡಿಕೇಟೆಡ್

ಸ್ಮರಣೆ ಹೆಚ್ಚುತ್ತದೆ, ಶಾಂತನಿದ್ರೆ ಬರುತ್ತದೆ, ಕಣ್ಣಿನ ದೃಷ್ಟಿ ಹೆಚ್ಚುತ್ತದೆ, ಬುಕ್ಕಿ ವಾಸಿಯಾಗುತ್ತದೆ, ಕೂದಲು ಕಪ್ಪಾಗುತ್ತದೆ, ಬೆಳೆಯುತ್ತದೆ ಮತ್ತು ನೆತ್ತಿಯಲ್ಲಿ ಕೂದಲು ಬರುತ್ತದೆ ಎಲ್ಲಾ ಋತುಗಳಲ್ಲಿ ಎಲ್ಲರಿಗೂ ಅನುಕೂಲವಿದೆ. ಎಲ್ಲಾ ಕಡೆಯಲ್ಲಿಯೂ ದೊರೆಯುತ್ತದೆ.

ಸ್ಥಾನಿಕ ಕ್ರಯ: ದೊಡ್ಡ ಬಾಟ್ಲಿಗೆ ರೂ. ೩—೮—0
ಸಣ್ಣ ಬಾಟ್ಲಿಗೆ ರೂ. 2—0—0

ಶ್ರೀ ರಾಮತೀರ್ಥ ಯೋಗಾಶ್ರಮ,
ದಾದರ್ (ಸೆಂಟ್ರಲ್ ರೈಲ್ವೆ) ಮುಂಬಯಿ, ೧೪

ರಾಷ್ಟ್ರಕ್ಕೊಂದು ಆಹ್ವಾನ : ನೆಹರೂರ ಬಳಿಕ ಯಾರು?

ತಮ್ಮ ಕಾರ್ಯಭಾರವನ್ನು ಇಳಿಸಿಕೊಳ್ಳಲು ಜವಾಹರಲಾಲರ ಅಪೇಕ್ಷೆ

ಕಳೆದ ವಾರದ ವಿಶೇಷ ವಾರ್ತೆಗಳಲ್ಲಿ ಕೊನೆಗಾದರೂ ನೆಹರೂರವರು ದೇಶದ ವಿದ್ಯಮಾನಗಳನ್ನು ಬಹಳ ಸೂಕ್ಷ್ಮವಾಗಿ ಅವಲೋಕಿಸುವ ಗಂಭೀರ ವಿಚಾರದ ಕೆಲವು ಪ್ರಾಜ್ಞರ ಆಹ್ವಾನವನ್ನು ಸ್ವೀಕರಿಸಿದ್ದು ಉಲ್ಲೇಖನೀಯ. "ನೆಹರೂರ ಬಳಿಕ ಯಾರು" ಎಂಬುದೇ ರಾಷ್ಟ್ರಕ್ಕೆ ನೀಡಲಾದ ಆಹ್ವಾನ. ಸಾಮಾನ್ಯ ಭಾರತೀಯನ ದೃಷ್ಟಿಯಲ್ಲಿ ನೆಹರೂವೆಂದರೇನೆ ಭಾರತನಾಗಿದ ಅವರು ಭಾರತದ ಸ್ವಾತಂತ್ರ್ಯ, ಐಕ್ಯ ಮತ್ತು ಪ್ರಗತಿಯ ಪ್ರತೀಕವೆನಿಸಿದ ಮಹಾಜೀವ. ಭಾರತದ ಭವ್ಯ ಸಂಸ್ಕೃತಿಯೇ ಮೈವೆತ್ತು ಬಂದಂತೆ ಅವರ ವ್ಯಕ್ತಿತ್ವವಿದೆಯೆಂದರೆ ತಪ್ಪಾಗದು. ಭಾರತೀಯನಿಗೋಸ್ಕರ ಅವರಷ್ಟು ಹೆಚ್ಚು ಸಹಾನುಭೂತಿಯನ್ನು ತೋರಿಸುವ ಹಾಗು ಅವರಿಗಿಂತ ಮಿಗಿಲಾಗಿ ಭಾರತದ ಸಾರ್ವಾಂಗೀಣ ಏಳಿಗೆಗಾಗಿ ಶ್ರಮಿಸುವ ಇನ್ನೊಬ್ಬನು ಕಾಣಸುವುದಿಲ್ಲ. ಎಲ್ಲರ ಕಷ್ಟವನ್ನೂ ತಾನೊಬ್ಬನೇ ಹೊತ್ತುಕೊಂಡು ಪ್ರತಿಕೂಲ ಪರಿಸ್ಥಿತಿಯೊಡನೆ ಕೆಚ್ಚೆದೆಯಿಂದ ಹೋರಾಡುವ ನೆಹರೂರಷ್ಟು ಪ್ರತಿಭಾನ್ವಿತರು ಭಾರತದಲ್ಲಿ ಹೆಚ್ಚು ಸಂಖ್ಯೆಯಲ್ಲಿಲ್ಲ.

ನೆಹರೂರವರು ಈಗ ಪ್ರಧಾನ ಮಂತ್ರಿಗಳಾಗಿದ್ದಾರೆ; ವಿದೇಶಾಂಗ ಸಚಿವರಾಗಿದ್ದಾರೆ; ಸಂರಕ್ಷಣಾ ಮಂತ್ರಿಗಳಾಗಿದ್ದಾರೆ; ಅರ್ಥ ಸಚಿವ ದೇಶಮುಖರು ಕೆನಡಾಕ್ಕೆ ಹೋಗಿದ್ದ ಸಂದರ್ಭದಲ್ಲಿ ಅದನ್ನೂ ತಮ್ಮ ಕೈಯಲ್ಲಿಟ್ಟುಕೊಂಡಿದ್ದರು. ಇದಲ್ಲದೆ ಯೋಜನಾ ಆಯೋಗ, ಅಣುಶಕ್ತಿ ಆಯೋಗ ಮುಂತಾದ ಹಲವಾರು ಸಮಿತಿಗಳ ಅಧ್ಯಕ್ಷರಾಗಿಯೂ ಕೆಲಸ ಮಾಡುತ್ತಿದ್ದಾರೆ ಇದರ ಮೇಲೆ ರಾಷ್ಟ್ರವ್ಯಾಪಿ ಚಟುವಟಿಕೆಗಳಲ್ಲಿ ತೊಡಗಿರುವ ಕಾಂಗ್ರೆಸು ಸಂಸ್ಥೆಯ ಅಧ್ಯಕ್ಷ ಸ್ಥಾನವನ್ನೂ ನೆಹರೂ ಹೊತ್ತುಕೊಂಡಿದ್ದಾರೆ ಶ್ರೀ. ಎಸ್. ಕೆ ಪಾಟೀಲರು ಹೇಳುವಂತೆ ನಾಯಕತನದ ಅಪೂರ್ವ ಅರ್ಹತೆಗಳು ನೆಹರೂರಲ್ಲಿ ಸಾವಿರವಿದ್ದರೂ ಇತರರಿಂದ ಚೆನ್ನಾಗಿ ಕೆಲಸ ಮಾಡಿಸಿಕೊಳ್ಳುವ ವಿಶಿಷ್ಟ ಹಾಗು ಅತ್ಯಾವಶ್ಯಕವಾದ ಗುಣವೊಂದು ನೆಹರೂರಲ್ಲಿಲ್ಲ. ಆಧುನಿಕ ಆಡಳಿತ ತಂತ್ರದ ಮಹತ್ವದ ರಹಸ್ಯಗಳಲ್ಲೊಂದಾದ, ಕೆಲಸಗಳನ್ನು ಚೊಕ್ಕ ರೀತಿಯಲ್ಲಿ ಹಂಚಿ ಹಾಕುವ ಕಲೆಯೂ ಕೌಶಲವೂ ನೆಹರೂ ವ್ಯಕ್ತಿತ್ವದಲ್ಲಿ ಎದ್ದು ಕಾಣುವ ಕೊರತೆ ಎಂದು ಹೇಳಬಹುದು.

ತತ್ಪರಿಣಾಮವಾಗಿ, ಅವರು ಎಷ್ಟು ಹೊತ್ತು ದುಡಿದರೂ ಸಾಕಾಗುವುದಿಲ್ಲ. ತಮ್ಮ ಮೇಲೆ ಹೊತ್ತುಕೊಂಡ ಹೊಣೆಗಾರಿಕೆಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ಅವರ ಮೈಮನಗಳು ಜರ್ಜರಿತವಾಗುತ್ತವೆ. ಜನತೆಗೆ ಅವಷ್ಟು ಹೆಚ್ಚು ಸೇವೆಯನ್ನು ಸಲ್ಲಿಸಬೇಕೆಂಬ ಉತ್ಕಟೇಚ್ಛೆಯನ್ನು ಪ್ರಕಟಿಸುವ ನೆಹರೂರವರು ತಮಗೆ ೬೫ನೇ ವಯಸ್ಸು ಈಗ ನಡೆಯುತ್ತಿದೆಯೆಂಬ ಸಂಗತಿಯನ್ನು ಲಕ್ಷಿಸುವುದೇ ಇಲ್ಲ. ಹಸನ್ಮುಖಿಗಳಾಗಿ ಮೂವತ್ತರ ತರುಣನಂತೆ ಕೈಯಲ್ಲಿ ಕಾಗದ ಪತ್ರಗಳನ್ನು ಹಿಡಿದುಕೊಂಡು ಸಂಸತ್ತಿನ ಒಂದು ಮನೆಯಿಂದ ಇನ್ನೊಂದಕ್ಕೆ ಜಿದು ಹೋಗುತ್ತಾರೆ; ಎದುರಿಗೆ ಬಂದೆಲ್ಲರನ್ನೂ ಉಲ್ಲಾಸದಿಂದ ಕಾಣುತ್ತಾರೆ; ಚಿಣ್ಣ ಮೇಲೆ ವಾತ್ಸಲ್ಯದಿಂದ ಕೈಯಾಡಿಸುತ್ತಾರೆ; ಇದನ್ನೆಲ್ಲ ನೋಡುವುದು ಕಣ್ಣಿಗೆ ಹಬ್ಬವೆನಿಸುತ್ತದೆ. ಅವರ ಸಂದರ್ಶನ ತೆಗೆದುಕೊಂಡವರು ಅಪೂರ್ವ ಚೈತನ್ಯದ ಅನುಭವ ಹೊಂದುತ್ತಾರೆ, ಜಟಿಲವಾದ ಪ್ರಶ್ನೆಗಳೂ ನೆಹರೂರ ಮಾತಿನಿಂದ ಸುಲಭದಲ್ಲಿಯೇ ಬಗೆಹರಿಯುತ್ತವೆ. ವಾದ—ವಿವಾದಗಳ ಸ್ಥಾನದಲ್ಲಿ ಸಮಾನ ಮನೋಧರ್ಮವನ್ನು ಒಡಮೂಡಿಸಲು ನೆಹರೂ ಶಕ್ತರಾಗಿದ್ದಾರೆ. ಇವೆಲ್ಲ ಚಟುವಟಿಕೆಗಳಿಂದ ಜನತೆಗೆ ತುಂಬ ಸಂತೋಷವಾಗುತ್ತಿದ್ದರೂ ವ್ಯಕ್ತಿಗತವಾಗಿ ಅವರ ಆಯಾಸ ಹೆಚ್ಚುತ್ತಾ ಹೋಗಿರುತ್ತದೆ.

ಇದನ್ನು ಅವರ ನಿಕಟ ವರ್ತಿಗಳು ಗಮನಿಸುತ್ತಲೇ ಬಂದಿದ್ದು, ರಾಜಧಾನಿಯಿಂದ ಆಗೊಮ್ಮೆ ಈಗೊಮ್ಮೆ ನೆಹರೂರವರು ತಮ್ಮ ಹೊಣೆಗಾರಿಕೆಯನ್ನು ಕಡಿಮೆಮಾಡಿಕೊಳ್ಳಲು ಬಯಸುತ್ತಿರುವರೆಂಬ ವರದಿಗಳು ಬಂದದ್ದುಂಟು. ಅವರು ಕಾಂಗ್ರೆಸಿನ ಅಧ್ಯಕ್ಷ ಸ್ಥಾನವನ್ನು ತ್ಯಜಿಸುವರೆಂಬುದು ಇವುಗಳಲ್ಲೆಲ್ಲ ಮುಖ್ಯವಾದುದಾಗಿದ್ದಿತು. ಅಕ್ಟೋಬರ ಎರಡನೇ ವಾರದಲ್ಲಿ ನೆಹರೂರವರು ಕೊಚ್ಚಿಗೆ ಭಾರತೀಯ ನೌಕಾಪಡೆಯ ಚಟುವಟಿಕೆಗಳನ್ನು ನಿರೀಕ್ಷಿಸಲು ಬಂದಾಗ ಅವರನ್ನು ಸುದ್ದಿಗಾರರು ಈ ವಿಷಯದಲ್ಲಿ ಪ್ರಶ್ನಿಸಿದರು. ಆಗ "ನಾನು ಪ್ರಧಾನ ಮಂತ್ರಿಸ್ಥಾನವನ್ನು ಬಿಡಲು ಆಲೋಚಿಸುತ್ತಿದ್ದೇನೆ" ಎಂದು ನೆಹರೂ ನಸುನಗೆಯೊಡನೆ ಹೇಳಿ, ಹೆಚ್ಚಿನ ಪ್ರಶ್ನೆಗೆ ಅವಕಾಶಕೊಡದೆ ತಪ್ಪಿಸಿಕೊಂಡರು. ಇದು ವಿನೋದವಾಗಿರಬಹುದೆಂದು ಎಣಿಸಿದವರಿದ್ದಂತೆ, ನೆಹರೂ ಹಾಗೆಲ್ಲ ಹಾಸ್ಯದ ಚಟಾಕಿಗಳನ್ನೊಗೆಯುವವರಲ್ಲ, ಇದರ ಹಿಂದೆ ಏನೋ ಮಹತ್ವದ ವಿಚಾರವಿದೆ ಎಂದು ಭಾವಿಸಿದವರೂ ಇದ್ದರು. ಇದನ್ನು ಮನಗಂಡ ನೆಹರೂರವರು ತಾವು ಚೀನಕ್ಕೆ ಪ್ರಯಾಣ ಹೊರಡುವುದಕ್ಕೆ ಮೊದಲು, ದಿನಾಂಕ ೧೨ರಂದು, ತಮ್ಮ ಮನಸ್ಸಿನಲ್ಲಿ ಸುಳಿದಾ

ಪ್ರತಿನಿತ್ಯವೂ ಜನರು 24,90,496
ಬ್ರೂಕ್ ಬಾಂಡ್ ಚಹಾ
ಪೊಟ್ಟಣಗಳನ್ನು ಕೊಳ್ಳುತ್ತಾರೆ!
ಅದೂ ಕೂಡ ಬಹು ಒಳ್ಳೆಯ ಕಾರಣಗಳಿಗಾಗಿ . . .



ಡುತ್ತಿರುವ ವಿಚಾರಗಳೆಲ್ಲವನ್ನೂ ತಮಗೆ ಸಹಜವಾದ ಸರಳತೆ ಹಾಗು ಪ್ರಾಮಾಣಿಕತೆಯಿಂದ ಜನತೆಯ ಮುಂದೆ ಇಟ್ಟರು.

ಪ್ರದೇಶ ಕಾಂಗ್ರೆಸಿನ ಅಧ್ಯಕ್ಷರುಗಳಿಗೆ, ರಾಜ್ಯಗಳ ಮುಖ್ಯ ಮಂತ್ರಿಗಳಿಗೆ, ಕೇಂದ್ರದ ಸಹೋದ್ಯೋಗಿಗಳಿಗೆ ನೆಹರೂರವರು ತಮ್ಮ ವಿಚಾರಗಳನ್ನು ತಿಳಿಸಿದ್ದು, ಸಾರ್ವಜನಿಕರ ಅವಗಾಹನೆಗಾಗಿ ಅವರ ಪೂರ್ತಿಪಾಠವು ಪ್ರಕಟಗೊಂಡಿರುತ್ತದೆ. ಅದರ ಅಭಿಪ್ರಾಯವನ್ನು ಈ ಕೆಳಗಿನಂತೆ ಸಂಗ್ರಹಿಸಬಹುದು—

"ನಾನೀಗ ನಿರ್ವಹಿಸಿಕೊಂಡಿರುವ ಉನ್ನತ ಹುದ್ದೆಗಳ ಭಾರವನ್ನು ಇಳಿಸಿಕೊಳ್ಳುವ ಕುರಿತು ಇತ್ತೀಚಿಗೆ ಕೊಟ್ಟ ಹೇಳಿಕೆಗಳನ್ನು ನೀವು ಪತ್ರಿಕೆಗಳಲ್ಲಿ ಓದಿ ತಿಳಿದಿರಬಹುದು. ಇದರ ಕುರಿತು ಪತ್ರಿಕೆಗಳೂ ನನ್ನ ಹಿತೈಷಿಗಳೂ ವಿವಂಚನೆಯನ್ನು ವ್ಯಕ್ತಮಾಡಿದ್ದಾರೆ. ಆದುದರಿಂದ ಈ ವಿಷಯವನ್ನು ಹೆಚ್ಚು ಸ್ಪಷ್ಟೀಕರಿಸುವುದು ಅಗತ್ಯವೆಂದು ಭಾವಿಸಿದ್ದೇನೆ. ನಾನು ಕಾರ್ಯಭಾರದ ದೆಸೆಯಿಂದ ನನಗೆ ವಿಶೇಷ ಆಯಾಸವಾಗಿದೆಯೆಂದು ಮೇಲಿಂದ ಮೇಲೆ ಹೇಳುತ್ತ ಬಂದಿದ್ದೇನೆ. ಅದು ನಿಜ; ಆದರೆ ಈ ಆಯಾಸವು ಬಹಳ ಕಾಲದ ವರೆಗೆ ಉಳಿಯಲಾರದು. ಸ್ವಲ್ಪ ವಿಶ್ರಾಂತಿಯಿಂದ ಅದು ಪರಿಹರಿಸಲ್ಪಡುತ್ತದೆ. ನನ್ನ ಆರೋಗ್ಯದ ಬಗ್ಗೆ ನಾನೇನೂ ಅಲಕ್ಷ್ಯ ಮಾಡುವುದಿಲ್ಲ. ಪರಿಶ್ರಮದ ದುಡಿತದಿಂದ ದೈಹಿಕ ಅಥವಾ ಮಾನಸಿಕ ಆರೋಗ್ಯ ಕೆಡುವುದಿಲ್ಲೆಂದು ನಾನು ಮನಗಂಡಿದ್ದೇನೆ. ನಾನು ಆರೋಗ್ಯವಂತನಾಗಿದ್ದೇನೆಂದೂ ಮುಂಬರುವ ಅನೇಕ ವರ್ಷಗಳ ವರೆಗೆ ಹೀಗೆ ಉಳಿಯಬಲ್ಲೆನೆಂದೂ ನಿಮಗೆ ಹೇಳ ಬಯಸುತ್ತೇನೆ. ಅನೇಕ ಕೆಲಸಗಳನ್ನು ಇನ್ನೂ ಮಾಡಲಿಕ್ಕಿದೆಯೆಂದು ನನಗೆನಿಸುತಿದ್ದು ಇದಕ್ಕಾಗಿ ನಾನು ನನ್ನ ಆರೋಗ್ಯವನ್ನು ರಕ್ಷಿಸಿಕೊಳ್ಳಲು ದೃಢ ಸಂಕಲ್ಪನಾಗಿದ್ದೇನೆ.

"ಹಾಗಾದರೆ ನನಗೆ ಆಯಾಸವಾಗಿದೆಯೆಂದು ಹೇಳಿದ್ದೇಕೆ? ಮನುಷ್ಯನು ಯಂತ್ರದಂತೆ ಕೆಲಸ ಮಾಡುತ್ತ ಹೋದರೆ ವಿಚಾರಗಳು ಹಳಸುತ್ತವೆ. ಯಂತ್ರದಂತೆ ನಾನೂ ಯಶಸ್ವಿಯಾಗಿ ಕೆಲಸ ಮಾಡಬಹುದು; ಇದರಿಂದ ಹೊಸ ವಿಚಾರ ಮತ್ತು ದೃಷ್ಟಿಕೋನಗಳಿಗೆ ಆತಂಕವಾಗುತ್ತದೆ. ಉನ್ನತನಾದ ಹೊಣೆಗಾರಿಕೆಯನ್ನು ನಿರ್ವಹಿಸುವ ವ್ಯಕ್ತಿಗೆ ನೂತನವಾದ, ರಚನಾತ್ಮಕವಾದ ವಿಚಾರಗಳ ಅವಶ್ಯಕತೆ ಬಹಳಷ್ಟಿದ್ದು, ಇಂಥ ಹೊಸತನವನ್ನೂ ನಿರ್ಮಾಣ ಶಕ್ತಿಯನ್ನೂ ಸಂಪಾದಿಸಲು ನನ್ನ ಸಮಯವನ್ನೆಲ್ಲ ನುಂಗುವ ನಿತ್ಯದ ಕೆಲಸವನ್ನು ಬಿಟ್ಟುಗೊಡಬೇಕೆಂದು ಇಚ್ಛಿಸುತ್ತಿದ್ದೇನೆ. ಇಷ್ಟರಿಂದ ನಾನು ಹೊಣೆ ತಪ್ಪಿಸಿಕೊಂಡು ಓಡಿ ಹೋಗುತ್ತಿದ್ದೇನೆಂದು ಯಾರೂ ಅಭಿಪ್ರಾಯ ಮಾಡಲಾಗದು. ನಾನಿಲ್ಲಿ ಮಾಡಬೇಕಾದ ಕೆಲಸಗಳು ಹಲವಿವೆಯೆಂದು ನಾನು ನಂಬಿದ್ದೇನೆ. ನಮ್ಮ ರಾಷ್ಟ್ರವು ಸ್ವಾತಂತ್ರ್ಯದ ಏಳು ವರ್ಷಗಳಲ್ಲಿ ತನ್ನ ಕರ್ತವ್ಯವನ್ನು ಚೆನ್ನಾಗಿ ನಿರ್ವಹಿಸಿದ್ದು, ಭವಿಷ್ಯತ್ತಿನ ಪ್ರಗತಿಗಾಗಿ ಭದ್ರ ನೆಲಗಟ್ಟನ್ನೂ ಹಾಕಿರುತ್ತದೆ. ಆದುದರಿಂದಲೇ ನಾನು ನನ್ನ ಕೆಲಸದಲ್ಲಿ ತುಸು ಪರಿವರ್ತನೆಯನ್ನು ಮಾಡಲು ಬಯಸುತ್ತೇನೆ.

"ಶ್ರಮವಹಿಸಿ ದುಡಿಯಬೇಕೆಂಬ ಇಚ್ಛೆಯು ನನ್ನಲ್ಲಿ ಬಲವಾಗಿದ್ದಷ್ಟೇ ಓದಲೂ ಆಲೋಚಿಸಲೂ ತುಸು ಅವಕಾಶಬೇಕೆಂಬ ವಿಚಾರವೂ ನನ್ನಲ್ಲಿ ಮೂಡಿರುತ್ತದೆ. ಸರಕಾರದ ಕೆಲಸದಲ್ಲಿ ತೊಡಗಿದವರಿಗೆ ಓದಲೂ ಆಲೋಚಿಸಲೂ ಪರಸ್ಪರ ವಿಚಾರ ವಿನಿಮಯ ನಡೆಸಲೂ ಅವಕಾಶ ಸಿಗುವುದಿಲ್ಲ. ಆದುದರಿಂದ ಕೆಲಕಾಲದ ವರೆಗಾದರೂ ಪ್ರಧಾನ ಮಂತ್ರಿ ಸ್ಥಾನವನ್ನು ತ್ಯಜಿಸಿದರಾಗಬಹುದೆಂದು ನನಗೆ ತೋರುತ್ತದೆ. ಅನಿಶ್ಚಿತ ಅವಧಿಯ ವರೆಗೆ ಒಂದೇ ಕೆಲಸಕ್ಕೆ ಅಂಟಿ ಕುಳಿತಿರುವುದು ನನಗೆ ಸರಿಬರುವುದಿಲ್ಲ ಆದರೆ ಅವಸರದಿಂದ ನಾನು ಯಾವ ನಿರ್ಣಯಕ್ಕೂ ಬರುವುದಿಲ್ಲ. ಪರಿಸ್ಥಿತಿಯಲ್ಲಿ ಆಲ್ಲೋಲ ಕಲ್ಲೋಲ ಮಾಡುವ ವಿಚಾರವೂ ನನಗಿಲ್ಲ. ಹಾಗೆಂದು ನನ್ನ ವಿಚಾರಗಳ ಆಳದಲ್ಲಿ ಇನ್ನೊಂದು ಆಳವಾದ ಅಂಶವೂ ಹುದುಗಿರುತ್ತದೆ. —ಅದೆಂದರೆ "ನೆಹರೂರ ಬಳಿಕ ಯಾರು?" ಎಂಬುದಾಗಿ ಕೇಳಲ್ಪಡುವ ಕೆಣಕಿನ ಪ್ರಶ್ನೆ. ಇದು ನನಗೊಬ್ಬನಿಗೆಯೇ ಅಲ್ಲ, ರಾಷ್ಟ್ರಕ್ಕೂ ಆಹ್ವಾನರೂಪದಲ್ಲಿರುತ್ತದೆ. ಭಾರತದಂಥ ಮಹಾರಾಷ್ಟ್ರವು ಒಬ್ಬಿಬ್ಬ ವ್ಯಕ್ತಿಗಳನ್ನೇ ಅವಲಂಬಿಸಿದೆಯೆಂದು ಭಾವಿಸುವುದು ಮೂರ್ಖತನವಾಗಿದ್ದು, ಇದಕ್ಕಾಗಿ ಆಹ್ವಾನವನ್ನು ಸ್ವೀಕರಿಸಬೇಕೆಂದು ನನ್ನ ಅಭಿಪ್ರಾಯ. ಪ್ರಸಂಗ ಬಂದಾಗ ಎಲ್ಲವೂ ಸರಿಯಾದೀತು.

"ನಾನು ಮೊದಲೇ ಹೇಳಿದಂತೆ ನಾನು ಅವಸರದಿಂದ ಮುಂದಡಿ ಇಡುವುದಿಲ್ಲ. ನನ್ನ ವಿಚಾರಗಳು ಕೊನೆಯವೂ ಬದಲಿಸಲಾರದವೂ ಅಲ್ಲ. ನಮ್ಮ ಪ್ರಯಾಣದಲ್ಲಿ ಒಂದು ಘಟ್ಟವು ಮುಗಿದಿದ್ದು ಎರಡನೆಯದನ್ನು ತೊಡಗಲು ದೇಹ ಮನಸ್ಸುಗಳಲ್ಲಿ ಅಧಿಕ ಶಕ್ತಿ ಮತ್ತು ಚವಲವಿಕೆಯನ್ನು ಪಡೆಯಬೇಕೆಂದು ಇಚ್ಛಿಸುತಿದ್ದೇನೆ. ನಾನು ಪ್ರಧಾನಮಂತ್ರಿಯಾಗಿರದಿದ್ದರೆ ಸರಕಾರದ ಹಾಗು ಅಭಿವೃದ್ಧಿ ಪ್ರಯತ್ನಗಳ ನನ್ನ ಸಂಬಂಧ ತಪ್ಪಿಹೋಗುವುದೆಂದು ಭಾವಿಸಬಾರದು. ಇಷ್ಟರಲ್ಲಿಯೇ ಕಾಂಗ್ರೆಸಾಧ್ಯಕ್ಷ ಪದಕ್ಕೆ ಚುನಾವಣೆಯು ನಡೆಯಲಿದ್ದು, ಇದರಲ್ಲಿ ಸ್ಪರ್ಧಿಸಬಾರದೆಂಬ ನಿರ್ಣಯಕ್ಕೆ ನಾನು ಬಂದಿದ್ದೇನೆ. ಈ ಮಹಾ ಸಂಸ್ಥೆಯ ಧುರೀಣನಾಗಿರಲು ಇನ್ನೊಬ್ಬನನ್ನು ಆರಿಸುವ ಸಮಯ ಬಂದಿರುತ್ತದೆ. ಇದರಿಂದ ನಾನು ಕಾಂಗ್ರೆಸು ಸಂಸ್ಥೆಯ ಸಂಪರ್ಕ ಕಡಿದುಕೊಳ್ಳುವೆನೆಂದು ಅಭಿಪ್ರಾಯವಲ್ಲ—ನನ್ನ ಶಕ್ತಿ ಸರ್ವ ಸಾಮರ್ಥ್ಯಗಳಿಂದ ನಾನು ಕಾಂಗ್ರೆಸಿನಲ್ಲಿ ದುಡಿಯುತ್ತೇನೆ."

ಮೇಲಿನ ಹೇಳಿಕೆಯನ್ನು ಅವಲೋಕಿಸಿದರೆ, ನೆಹರೂರವರು ತಮ್ಮ ಜೀವಮಾನದಲ್ಲಿಯೇ ಭಾರತದ ಮುಂದಿನ ಉತ್ತರಾಧಿಕಾರಿಯನ್ನು ತರಬೇತಿಗೊಳಿಸಲು ಆತುರದಿಂದಿರುವಂತೆ ಭಾಸವಾಗುತ್ತದೆ. ರಾಷ್ಟ್ರಕ್ಕೆ ಆಹ್ವಾನ ಎಂಬ ಪದಸಮುಚ್ಚಯಕ್ಕೆ ಬೇರೆ ಅರ್ಥವಿರುವುದೇ ಸಾಧ್ಯವಿಲ್ಲ. ಇದರ ಜೊತೆಗೆ, ತಮ್ಮ ಹೊಣೆಗಾರಿಕೆಗಳನ್ನು ತುಸು ಕಡಿಮೆಮಾಡಲೂ ಬಯಸುವರೆಂದು ಸ್ಪಷ್ಟವಾಗುತ್ತದೆ. ಹೊಸ ವಿಚಾರಗಳಿಗೆ ಎಡೆಕೊಡುವ ಹಾಗು ಹೆಚ್ಚಿನ ಶಕ್ತಿ ಸ್ಫೂರ್ತಿಗಳನ್ನು ಸಂಪಾದಿಸುವ ಅವರ ಉತ್ಕಟೇಚ್ಛೆಯು ಪ್ರಪಂಚ ಪರ್ಯಟನದಿಂದ ಕೈಗೂಡಬಹುದೆಂದು ಹೊಣೆಗಾರ ಜನರು ತರ್ಕಿಸುತ್ತಾರೆ. ಭಾರತದ ಒಳಗಿದ್ದುಕೊಂಡು ಇಲ್ಲಿಯ ಪರಿಸ್ಥಿತಿಯನ್ನು ಪರೀಕ್ಷಿಸುವುದಕ್ಕಿಂತಲೂ ಹೊರಗೆ ಹೋಗಿ, ಭಾರತದ ಮೇಲೆ ದೃಷ್ಟಿಕ್ಷೇಪ ಮಾಡುವುದರಿಂದ ಲಾಭವಾದೀತೆಂಬ ವಿಚಾರವನ್ನು ನೆಹರೂರವರು ಹಲವು ಸಲ ವ್ಯಕ್ತಗೊಳಿಸಿದ್ದರು. ತಮಗೆ ಅಲ್ಪ ವಿಶ್ರಾಂತಿ ಬೇಕೆಂಬ ಮಾತಿನ ಅಡಿಯಲ್ಲಿ ಈ ವಿಚಾರವೂ ಹುದುಗಿರಬಹುದೆಂದು ಹೇಳಲಾಗುತ್ತದೆ.

ಪರಿಸ್ಥಿತಿಯು ಹೀಗಿರುವಾಗ ಭಾರತವು ಅನುಸರಿಸಬೇಕಾದ ಮಾರ್ಗ ಯಾವುದು? ನೆಹರೂರವರನ್ನು ನಾವು ಹೆಚ್ಚು ದುಡಿಸಿಕೊಳ್ಳುವುದು ಇಷ್ಟವಲ್ಲವೆಂಬುದರಲ್ಲಿ ಯಾರೂ ಭಿನ್ನಾಭಿಪ್ರಾಯಪಡಲಾರರು. ಅವರು ತಮ್ಮ ಕಾರ್ಯಭಾರವನ್ನು ಎಷ್ಟು ಕಡಿಮೆ ಮಾಡಿಕೊಳ್ಳುವರೋ ಅಷ್ಟು ಹೆಚ್ಚು ಅವಧಿಯ ವರೆಗೆ ಅವರನ್ನು ಉಳಿಸಿಕೊಳ್ಳಲು ನಾವು ಸಮರ್ಥರಾಗುತ್ತೇವೆ. ಇದು ಅಶಕ್ಯವಾದದ್ದೂ ಅಲ್ಲ—ಇತರ ರಾಷ್ಟ್ರಗಳಲ್ಲೂ ಪ್ರಧಾನ ಮಂತ್ರಿಗಳಿದ್ದು ಅವರೆಂದೂ ನೆಹರೂರಷ್ಟು ಹೆಚ್ಚು ಕೆಲಸ ಮಾಡುವುದಿಲ್ಲ; ಅರ್ಥಾತ್ ಎಲ್ಲವನ್ನೂ ತಮ್ಮ ಹೆಗಲ ಮೇಲೆ ಹೊತ್ತುಕೊಳ್ಳುವುದಿಲ್ಲ. ಯೋಗ್ಯ ಮಾರ್ಗದರ್ಶನವನ್ನು ಮಾಡುತ್ತಾ ಎಲ್ಲದರ ಮೇಲ್ವಿಚಾರಣೆಯನ್ನಷ್ಟೇ ಅವರು ನೋಡಿಕೊಳ್ಳುತ್ತಾರೆ. ನೆಹರೂರವರೂ ಈ ರೀತಿಯನ್ನು ಅನುಸರಿಸಬಲ್ಲರು. ಕಾಂಗ್ರೆಸು ಸಂಸ್ಥೆಯ ಅಧ್ಯಕ್ಷಸ್ಥಾನವನ್ನಂತೂ ಬೇರೊಬ್ಬ ಸಮರ್ಥರಿಗೆ ವಹಿಸಿಕೊಡಬಹುದು. ಇತರ ಸಮಿತಿಗಳ ಅಧ್ಯಕ್ಷ ಸ್ಥಾನಕ್ಕೂ ಮಂತ್ರಿ ಶಾಖೆಗಳಿಗೂ ಹೊಣೆಗಾರ ಜನರನ್ನು ಹುಡುಕಬಹುದು. ವಿದೇಶಾಂಗ ಸಚಿವಾಲಯವನ್ನು ಬೇಕಾದರೆ ಸದ್ಯದ ಮಟ್ಟಿಗೆ ನೆಹರೂರೇ ತಮ್ಮ ಕೈಯಲ್ಲಿ ಇಟ್ಟುಕೊಳ್ಳಬಹುದು.

ಹೀಗೆ ಮಾಡುವುದರಿಂದ, ಅವರಿಗೆ ಓದಲೂ ಆಲೋಚಿಸಲೂ ಸಾಕಷ್ಟು ವಿಶ್ರಾಂತಿ ಸಿಗಬಹುದೆಂದ, ಇಷ್ಟರ ವರೆಗೆ ವ್ಯಕ್ತಗೊಂಡ ಧುರೀಣರ ಪ್ರತಿಕ್ರಿಯೆಗಳು ತಿಳಿಸುತ್ತವೆ. ಯಾರೊಬ್ಬರೂ ನೆಹರೂರವರು ಪ್ರಧಾನ ಮಂತ್ರಿ ಸ್ಥಾನವನ್ನು ಕೆಲಕಾಲದ ವರೆಗಾದರೂ ತ್ಯಜಿಸಬೇಕೆಂಬ ವಿಚಾರಕ್ಕೆ ಅನುಮೋದನೆ ಕೊಡುವುದಿಲ್ಲ. ಇಂದಿನ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಪರಿಸ್ಥಿತಿಯಲ್ಲಿ ಅವರನ್ನು ನಾವು ಪ್ರಧಾನ ಮಂತ್ರಿ ಸ್ಥಾನದಲ್ಲಿ ಉಳಿಸಿಕೊಳ್ಳಲೇ ಬೇಕೆಂದು ಎಲ್ಲರ ಒಮ್ಮತದ ಅಭಿಪ್ರಾಯ. ಅವರು ಪ್ರಧಾನ ಮಂತ್ರಿ ಸ್ಥಾನವನ್ನು ತ್ಯಜಿಸುವುದರಿಂದ ಘಟನಾತ್ಮಕವಾದ ಪ್ರಶ್ನೆಗಳೂ ಉದ್ಭೂತವಾಗು

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ

ಮೈಸೂರು ಸ್ಯಾಂಡಲ್ ಸೋಪಿನಲ್ಲಿ

ಇರುವವು ಎಂದು ಖಚಿತವಾಗಿ ಹೇಳುತ್ತೇವೆ.

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

Member: I. S. T. M. A.



ಕರ್ನಾಟಕ ಶಾಖೆ:— ಕೊಪ್ಪಿಕರ್ ರಸ್ತೆ, ಹುಬ್ಬಳ್ಳಿ

ತ್ರವೆ—ಈ ಪ್ರಶ್ನೆಗಳನ್ನು ಇದಿರಿಸುವುದು ಇಷ್ಟವೆಂದು ಯಾರೂ ಭಾವಿಸುವುದಿಲ್ಲ. ಮುಂದಿನ ಪ್ರಧಾನ ಮಂತ್ರಿಗೆ ತರಬೇತಿ ಕೊಡಲು ನೆಹರೂ ಬಯಸುತಿದ್ದರೆ, ಅಂಥ ಸಮರ್ಥನೊಬ್ಬನನ್ನು ಉಪ ಪ್ರಧಾನ ಮಂತ್ರಿಯೆಂದು ನಾಮಕರಣ ಮಾಡಲೂ ಬಲ್ಲರು. ಅಂತೂ ನೆಹರೂರವರು ಪ್ರಧಾನ ಮಂತ್ರಿಯಾಗಿ ಉಳಿದು ಮಾರ್ಗದರ್ಶನ ಮಾಡುತ್ತಿರಲಿ; ತಮ್ಮ ಅನುಕೂಲತೆಗಾಗಿ ಹೊಣೆಗಾರಿಕೆಯನ್ನು ಸಮರ್ಥರಲ್ಲಿ ಹಂಚಿ ಹಾಕಲಿ—ಎಂಬುದೇ ಜನತೆಯ ಸಾಮಾನ್ಯ ಅಪೇಕ್ಷೆಯಾಗಿದೆ.

ನೆಹರೂರವರು ತಮ್ಮ ಮನಸ್ಸಿನ ಭಾವನೆಗಳನ್ನು ಎಲ್ಲರ ಮುಂದೆ ಇದ್ದುದಿದ್ದಂತೆ ಮಂಡಿಸಿ, ಜನತೆಯ ಹೊಣೆಗಾರಿಕೆಯನ್ನು ಹೆಚ್ಚಿಸಿದ್ದಾರೆಂದು ಹೇಳಬಹುದು. ಮುಚ್ಚುಮರೆಯನ್ನೇನೂ ಮಾಡದೆ, ಸಾರ್ವಜನಿಕರ ವಿಶ್ವಾಸವನ್ನು ತಮ್ಮ ಕೈಯಲ್ಲಿ ತೆಗೆದುಕೊಳ್ಳುವುದಕ್ಕಾಗಿ ನೆಹರೂ ಪ್ರಯತ್ನಿಸಿದ್ದರಿಂದ ಒಳ್ಳೆಯದೇ ಆಯಿತು. ಅಧಿಕಾರಕ್ಕಾಗಿ ಬೇರೆ ದೇಶಗಳಲ್ಲಿ ಧುರೀಣರು ಹೊಡೆದಾಡುತ್ತಿರುವಾಗ, ಭಾರತದ ಜನನಾಯಕ ನೆಹರೂ ಸ್ವೇಚ್ಛೆಯಿಂದ ಅಧಿಕಾರವನ್ನು ತ್ಯಜಿಸಲು ಮುಂಬಂದದ್ದು ನಮ್ಮ ಸಂಸ್ಕೃತಿಯ ವೈಶಿಷ್ಟ್ಯಕ್ಕೆ ಅನುಗುಣವಾಗಿದೆಯೆಂದರೆ ತಪ್ಪಲ್ಲ. ಮಗನಿಗೆ ಪಟ್ಟಾಭಿಷೇಕವನ್ನು ಮಾಡಿ ತಂದೆಯಾದವನು ವಾನಪ್ರಸ್ಥಾಶ್ರಮ ವಾಸವನ್ನು ಕೈಗೊಳ್ಳುವ ಪ್ರಾಚೀನ ಭಾರತೀಯ ಪರಂಪರೆಯ ನೆನಪನ್ನು ನೆಹರೂರ ಪರಿಪತ್ರ ಮಾಡಿಸಿಕೊಡುತ್ತದೆ.

ಆದರೆ, ಭಾರತದ ಇಂದಿನ ಪರಿಸ್ಥಿತಿಯು ನೆಹರೂರನ್ನು ಕಳೆದುಕೊಳ್ಳುವಷ್ಟು ಪ್ರಬುದ್ಧವಾಗಿಲ್ಲ: ಸ್ವಾತಂತ್ರ್ಯ ದೊರೆತು ಏಳು ವರ್ಷಗಳಷ್ಟೇ ಆಗಿದ್ದು, ಅಭಿವೃದ್ಧಿ ಪ್ರಯತ್ನಗಳಿಗೆ ಬುನಾದಿಯನ್ನು ಮಾತ್ರ ಹಾಕಿರುತ್ತೇವೆ. ಇದರ ಮೇಲೆ ಕಲ್ಯಾಣ ರಾಷ್ಟ್ರದ ಸೌಧವನ್ನು ಕಟ್ಟುವ ಕೆಲಸ ಇನ್ನು ನಡೆಯಬೇಕಾಗಿದ್ದು ಆಗ ನಮ್ಮ ವಿಶ್ವಕರ್ಮನೆನಿಸಿದ ನೆಹರೂ ಮಾರ್ಗದರ್ಶನ ಮಾಡುತ್ತಿರಬೇಕಾದ ಅಗತ್ಯ ಕಂಡು ಬರುತ್ತದೆ. ಅವರು ಪ್ರಧಾನ ಮಂತ್ರಿಯಾಗಿದ್ದರೆ, ರಾಷ್ಟ್ರದ ಐಕ್ಯವನ್ನು ಕಾಯ್ದುಕೊಳ್ಳಲೂ ಹೊರ ದೇಶಗಳಲ್ಲಿ ಭಾರತದ ಗೌರವ ಮಕುಟವನ್ನು ಎತ್ತಿ ಹಿಡಿಯಲೂ ಹೆಚ್ಚಿನ ಶ್ರಮ ಬೇಕಾಗಲಾರದು. ಕಾಂಗ್ರೆಸಿನ ಮಟ್ಟಿಗೆ, ಸುಮಾರು ಏಳು ದಶಕಗಳಿಂದ ಕೆಲಸ ಮಾಡುತ್ತಿರುವ ಈ ಸಂಸ್ಥೆಯು ಇನ್ನು ಮುಂದೆ ತನ್ನ ಕಲ್ಯಾಣದ ದಾರಿಯನ್ನು ತಾನೇ ರೂಪಿಸಿಕೊಳ್ಳಬಲ್ಲುದು. ಸ್ವಾತಂತ್ರ್ಯೋತ್ತರದ ಬದಲಾದ ವಾತಾವರಣದೊಂದಿಗೆ ಹೊಂದಿಕೊಳ್ಳಬೇಕಾದ ಮಟ್ಟಿಗೆ ಜವಾಹರಲಾಲರು ಹಿಂದೆ ಕಾಂಗ್ರೆಸಿನ ಯಾವ ಅಧಿಕಾರ ಸ್ಥಾನದಲ್ಲಿಂದಿದ್ದರೂ ಅದರ ಚಟುವಟಿಕೆಗಳ ಮೇಲೆ ಸಾಕಷ್ಟು ಪ್ರಭಾವ ಬೀರಿದ ಗಾಂಧೀಜಿಯಂತೆ ತಮ್ಮ ವರ್ಚಸ್ಸನ್ನು ಉಪಯೋಗಿಸಬಲ್ಲರು.

ಫ್ರೆಂಚ ಭಾರತದ ಅಧಿಕಾರ ಹಸ್ತಾಂತರ

ಭಾರತದೊಡನೆ ಸೇರಲು ಪ್ರಜಾಪ್ರತಿನಿಧಿಗಳ ತೀರ್ಮಾನ

ಫ್ರೆಂಚರ ಕೈಯಲ್ಲಿ ಕಳೆದ ೨೪೦ ವರ್ಷಗಳಿಂದ ಇದ್ದ ಭಾರತದ ಸುಮಾರು ೧೯೩ ಚದರ ಮೈಲು ಪ್ರದೇಶದ ಭವಿಷ್ಯವು ಇದೇ ದಿನಾಂಕ ೧೮ರಂದು ನಿರ್ಧರಿಸಲ್ಪಟ್ಟಿತು. ಪರಿಣಾಮವಾಗಿ ಅಲ್ಲಿಯ ೩,೨೦,೦೦೦ ಪ್ರಜೆಗಳು ಇನ್ನು ಮುಂದೆ ಸ್ವತಂತ್ರ ಭಾರತದ ನಾಗರಿಕರೆಂದು ಪರಿಗಣಿಸಲ್ಪಡುವರು. ಇಷ್ಟರ ವರೆಗೆ ಅಂಚೆ, ತಂತಿ, ರೈಲ್ವೆ ಮುಂತಾದ ವಿಭಾಗಗಳನ್ನಷ್ಟೇ ನೋಡಿಕೊಳ್ಳುತಿದ್ದ ಭಾರತ ಸರಕಾರವು ಈ ಪ್ರದೇಶದ ಮೇಲೆ ಸಂಪೂರ್ಣ ಅಧಿಕಾರವನ್ನು ಬೇಗನೇ ನಿರ್ಧರಿಸಲ್ಪಡುವ ಒಂದು ದಿನ ಪಡೆಯುತ್ತದೆ. ಹೆಚ್ಚು ಕಡಿಮೆ ನಿತ್ಯ ವ್ಯವಹಾರದ ಎಲ್ಲ ಸಂಗತಿಗಳಿಗೂ ಭಾರತವನ್ನು ಹೊಂದಿಕೊಂಡಿದ್ದು ಆಡಳಿತದ ಮಟ್ಟಿಗೆ ಫ್ರೆಂಚರ ನೊಗಕ್ಕೆ ಹೆಗಲುಕೊಟ್ಟಿದ್ದ ಪ್ರಜೆಗಳೆಲ್ಲ ಸ್ವಾತಂತ್ರ್ಯಕ್ಕಾಗಿ ತಾವು ಕೈಗೊಂಡ ಹೋರಾಟವು ಫಲಪ್ರದವಾದುದಕ್ಕೆ ಸಂತೋಷಿಸುತ್ತಿದ್ದಾರೆ.

ಭಾರತವು ಸ್ವತಂತ್ರಗೊಂಡ ೧೯೪೭ನೇ ಆಗೋಸ್ತು ೧೫ರಂದು ಫ್ರೆಂಚ ವಸಾಹತು ಪ್ರದೇಶಗಳಲ್ಲಿ ಸಾರ್ವಜನಿಕ ಸಭೆಗಳನ್ನು ಜರಗಿಸಿ ಫ್ರೆಂಚರು ವಸಾಹತುಗಳನ್ನು ಬಿಟ್ಟು ಹೋಗಬೇಕೆಂದು ಜನನಾಯಕರು ಹೇಳಿದ್ದರು. ಇತ್ತ ಭಾರತ ಸರಕಾರದವರೂ ಜನತೆಯ ಇಚ್ಛೆಯಂತೆ ವಸಾಹತುಗಳ ಸಂಪೂರ್ಣ ಅಧಿಕಾರವನ್ನು ತಮಗೆ ವಹಿಸಿಕೊಡತಕ್ಕದ್ದೆಂದು ಫ್ರೆಂಚ ಸರಕಾರವನ್ನು ಒತ್ತಾಯಿಸುತ್ತಿದ್ದರು. ಪರಿಣಾಮವಾಗಿ ಬಂಗಾಲದ ಚಂದ್ರ ನಗರದಲ್ಲಿ ಜನಾಭಿಪ್ರಾಯವನ್ನು ತಿಳಿದುಕೊಂಡು, ಭಾರತಕ್ಕೆ ಅಧಿಕಾರ ಹಸ್ತಾಂತರಿಸುವ ಕೆಲಸ ನಡೆಯಿತು. ಆ ಮೇಲೆ ಮಾತ್ರ ಪ್ರಗತಿಯಾಗಲಿಲ್ಲ. ಇದನ್ನು ಕಂಡು ಪಾಂಡಿಚೆರಿಯ ಪ್ರಜಾಪ್ರತಿನಿಧಿಗಳು ಕಳೆದ ಮಾರ್ಚ ತಿಂಗಳಲ್ಲಿ ಚಳವಳವನ್ನು ತೀವ್ರಗೊಳಿಸಿದರು. ಫ್ರೆಂಚರು ವಸಾಹತುಗಳನ್ನು ತ್ಯಜಿಸಬೇಕೆಂದು ಅತ್ಯಧಿಕ ಬಹುಮತದಿಂದ ಅವರು ನಿರ್ಣಯಿಸಿದರಲ್ಲದೆ, ೬೦% ಜನರನ್ನೊಳಗೊಂಡ ೪೦% ಪ್ರದೇಶವನ್ನು ಸ್ವತಂತ್ರಗೊಳಿಸಿದರು. ಹಿಂದಿನಿಂದ ಮಾಹೆ ಮತ್ತು ಯಾನಂಗಳು ಸ್ವತಂತ್ರವಾದವು.

ಜಿನೆವಾ ಒಪ್ಪಂದದ ಬಳಿಕ ಫ್ರೆಂಚ ಪ್ರಧಾನ ಮಂತ್ರಿ ಮೆಂಡೆ ಫ್ರಾನ್ಸರು ಭಾರತದಲ್ಲಿರುವ ಫ್ರೆಂಚ ವಸಾಹತುಗಳ ಕುರಿತು ಹೆಚ್ಚಿನ ಆಸಕ್ತಿಯನ್ನು ಪ್ರದರ್ಶಿಸಿ, ಸಂಧಾನಕ್ಕೆ ವ್ಯವಸ್ಥೆ ಮಾಡಿದರು. ಭಾರತ ಸರಕಾರದೊಡನೆ ಉಚ್ಚ ಮಟ್ಟದ ಮಾತುಕತೆಗಳು ನಡೆದು, ಇದೇ ದಿನಾಂಕ ೧೮ರಂದು ಉಭಯ ರಾಷ್ಟ್ರಗಳ ಪ್ರತಿನಿಧಿಗಳು ಒಪ್ಪಿಕೊಂಡ ತತ್ವಗಳನ್ನು ದಿನಾಂಕ ೧೮ರಂದು ಜರಗಿಸಲ್ಪಡುವ ಪ್ರಜಾಪ್ರತಿನಿಧಿಗಳ ಸಭೆಯಲ್ಲಿ ಓದಿ ಹೇಳಿ, ಅವರ ಅಭಿಪ್ರಾಯವನ್ನು ಸಂಗ್ರಹಿಸಲಾಗುವುದೆಂದೂ ಜನತಾ ಪ್ರತಿನಿಧಿಗಳ ಬಹು ಮತದ ನಿರ್ಣಯವೇ ಬಂಧನಕಾರಿಯಾಗುವುದೆಂದೂ ಹೇಳಿಕೆಯನ್ನು ಹೊರಡಿಸಲಾಯಿತು. ಶಾಂತ ರೀತಿಯಲ್ಲಿ ಮತದಾನ ನಡೆಸಲು ಅನುಕೂಲವಾಗುವಂತೆ ಪಾಂಡಿಚೆರಿಯಿಂದ ೧೩ ಮೈಲು ದೂರದಲ್ಲಿ ಫ್ರೆಂಚ—ಭಾರತ ಗಡಿಯಲ್ಲಿರುವ ಕಿಜೂರದಲ್ಲಿ ಸಿದ್ಧತೆಗಳನ್ನು ನಡೆಸಲಾಯಿತು.

ಫ್ರೆಂಚ ಭಾರತದ ಶಾಸನ ಸಭೆಯ ಅಧ್ಯಕ್ಷ ಶ್ರೀ ಬಾಲಸುಬ್ರಹ್ಮಣ್ಯಮರು ದಿನಾಂಕ ೧೮ರಂದ. ಜರಗಿದ ಮತದಾನ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಫ್ರೆಂಚ ಭಾರತದ ೧೭೮ ಪ್ರಜಾಪ್ರತಿನಿಧಿಗಳಲ್ಲಿ ಮೂವರು ಮಾತ್ರ ಹಾಜರಿರಲಿಲ್ಲ. ಅಧ್ಯಕ್ಷರು ಫ್ರೆಂಚ ಸರಕಾರಕ್ಕೂ ಭಾರತ ಸರಕಾರಕ್ಕೂ ವಸಾಹತುಗಳ ಹಸ್ತಾಂತರವಿಷಯದಲ್ಲಿ ನಡೆದ ಒಪ್ಪಂದವನ್ನು ಓದಿ ಹೇಳಿ, ಪ್ರಜಾಪ್ರತಿನಿಧಿಗಳು ಭವಿಷ್ಯ ನಿರ್ಣಯಕ್ಕಾಗಿ ಚೆನ್ನಾಗಿ ಪರ್ಯಾಲೋಚಿಸಿ ಮತದಾನ ಮಾಡಬೇಕೆಂದು ಹೇಳಿದರು. ಗುಪ್ತರೀತಿಯಲ್ಲಿ ನಡೆದ ಈ ಮತದಾನದಲ್ಲಿ ೧೭೦ ಮಂದಿ ಭಾರತದೊಡನೆ ಸೇರ್ಪಡೆ ಹೊಂದುವ ತಮ್ಮ ನಿಶ್ಚಯವನ್ನು ಪ್ರಕಟಿಸಿದರು. ಅಧ್ಯಕ್ಷರು ಬಹುಮತದ ಈ ನಿರ್ಣಯವನ್ನು ಸಾರುತ್ತಲೇ ನೆರೆಹೊರೆಯ ಗ್ರಾಮಗಳಿಂದ ಜನರು ಸಂತೋಷದ ಮೆರವಣಿಗೆಯನ್ನು ಹೊರಡಿಸಿದರು.

ಹತ್ತು ಪುಟಗಳಷ್ಟಿರುವ ಒಪ್ಪಂದದಲ್ಲಿ ಒಟ್ಟು ೩೫ ನಿಯಮಗಳಿದ್ದು, ಭಾರತ ಸರಕಾರವು ಹಿಂದೆ ವಸಾಹತುಗಳ ಜನರಿಗೆ ನೀಡಿದ ಆಶ್ವಾಸನೆಗಳನ್ನು ಪೂರೈಸುವ ರೀತಿಯಲ್ಲಿ ಅವುಗಳ ಒಕ್ಕಣೆ ಇರುತ್ತದೆ. ತದನುಗುಣವಾಗಿ ಕೆಲವು ಶತಮಾನಗಳಿಂದ ಫ್ರೆಂಚರೊಡನೆ ಇಟ್ಟುಕೊಂಡ ನಿಕಟ ಸಂಪರ್ಕದ ದೆಸೆಯಿಂದ ಬೆಳೆದು ಬಂದ ಸಂಸ್ಕೃತಿಯು ಮುಂದಕ್ಕೂ ಪೋಷಿಸಲ್ಪಡುತ್ತದೆ. ಪ್ರಜಾಪ್ರತಿನಿಧಿಗಳು ವ್ಯತಿರಿಕ್ತವಾಗಿ ನಿರ್ಣಯ ಕೈಗೊಳ್ಳುವ ವರೆಗೆ ಫ್ರೆಂಚ ಭಾಷೆಯೇ ಸರಕಾರದ ಭಾಷೆಯಾಗಿ ಉಳಿಯುತ್ತದೆ. ಸ್ವಾಯತ್ತಾಧಿಕಾರ ಹೊಂದಿದ ವಿಶ್ವವಿದ್ಯಾಲಯವೊಂದನ್ನು ಭಾರತ ಸರಕಾರವು ಭಾಷೆಯ ಬೆಳವಣಿಗೆಯ ಉದ್ದೇಶದಿಂದ ಸ್ಥಾಪಿಸುತ್ತದೆ. ಪ್ರತ್ಯಕ್ಷ ಅಧಿಕಾರದ ಹಸ್ತಾಂತರವಾದ ಒಂದು ವರ್ಷದ ವರೆಗೆ ಆರ್ಥಿಕ ರಚನೆಯಲ್ಲಿ ಬದಲಾವಣೆಯನ್ನೇನೂ ಮಾಡಲಾಗುವುದಿಲ್ಲ. ಈಗ ರೋತ್ತರದಲ್ಲಿರುವ ಇತರ ವಸಾಹತುಗಳೊಡನೆ ಮಾಡುತ್ತಿರುವ ವ್ಯಾಪಾರಕ್ಕೆ ಈಗಿನ ಸೌಕರ್ಯಗಳನ್ನು ಒಂದು ವರ್ಷದ ವರೆಗೆ ಮುಂದುವರಿಸಲಾಗುವುದು. ಫ್ರೆಂಚ ನಾಣ್ಯಗಳನ್ನು ಮಾತ್ರ ಕ್ರಮೇಣ ಹಿಂದೆಗೆದುಕೊಂಡು ಭಾರತದ ನಾಣ್ಯಗಳ ಚಲಾವಣೆಯನ್ನು ತೊಡಗ

(೭ನೇ ಪುಟ ನೋಡಿರಿ)

PLACE YOUR LIFE ASSURANCE WITH A COMPANY OF YOUR OWN - - -

Established in 1929, the POPULAR is progressing on sound lines. It has built up for itself a record of efficient service sound investment and a personal touch with its Policy holders and Representatives At whatever stage We welcome yours association with the POPULAR.

THE
POPULAR INSURANCE CO. LTD.
"POPULAR BUILDINGS" MANGALORE-1

ZANDU'S THREE GEMS of AYURVEDIC MEDICINES

ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ, ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.

ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ, ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿದೆ. ಬೆಲೆ: ಕಾಲು ತೊಲೆಗೆ ರೂ. 8—0—0.

ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮುವಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ತಲಿಗೆ ರೂ. 7—8—0. ಕಾಲು ರಾತ್ತಲಿಗೆ ರೂ. 2—0—0.

ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು

ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ.

DAMODAR & CO.,
113 Nainiappa Naicken Street, P. T.-**MADRAS-3.**

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health, Govt. of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೧-೧೦-'೫೪	೮

ದಯನೀಯ ಜೀವನ

ಎರಡನೆಯ ಪಂಚವಾರ್ಷಿಕ ಯೋಜನೆಯ ಕುರಿತು ಹೆಚ್ಚು ಲಕ್ಷ್ಯ ಪೂರೈಸುತ್ತಿರುವ ಇಂದಿನ ಪರಿಸ್ಥಿತಿಯಲ್ಲಿ ಭಾರತೀಯ ಕೃಷಿ ಮಜೂರರ ಜೀವನದ ಆರ್ಥಿಕ ಮುಖವನ್ನು ಯಥಾರ್ಥ ರೀತಿಯಲ್ಲಿ ಚಿತ್ರಿಸುವ ಪ್ರಕಟಣೆಯೊಂದು ಹೊರಬಿದ್ದಿದ್ದು ಅದರ ಪರಿಶೀಲನೆಯಿಂದ ಭಾರತದ ಪುರೋಗತಿಯ ಮಾರ್ಗವನ್ನು ರೂಪಿಸುವಲ್ಲಿ ಹೆಚ್ಚಿನ ನೆರವು ದೊರಕಬಲ್ಲುದು. ಅಂತಾರಾಷ್ಟ್ರೀಯ ಕೂಲಿಕಾರ ಮಂಡಳ ಹಾಗು ಸಂಯುಕ್ತ ರಾಷ್ಟ್ರ ಸಂಘದ ನೇತೃತ್ವದಲ್ಲಿ ಭಾರತದ ೮೦೦ ಹಳ್ಳಿಗಳಲ್ಲಿಯ ಕೃಷಿ ಮಜೂರರ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ಸಂಗ್ರಹಿಸಿದ ಅಂಶಗಳಿಂದ, ಸಮಾಜದ ಈ ವರ್ಗದಲ್ಲಿರುವ ದಾರುಣ ಬಡತನದ ಹಾಗು ಸಾಲದ ಶೂಲೆಯು ತಿಳಿವಳಿಕೆಯಾಗುತ್ತದೆ. ಸಾಮಾನ್ಯ ಭಾರತೀಯನ ವಾರ್ಷಿಕ ಉತ್ಪನ್ನವು ೨೬೪ ರೂಪಾಯಿಗಳಿರುವಾಗ ಕೃಷಿ ಮಜೂರನ ಆದಾಯ ೧೦೪ ರೂಪಾಯಿಗಳು. ಸಾಮಾನ್ಯ ಕೃಷಿ ಮಜೂರ ಕುಟುಂಬವೊಂದರ ಆದಾಯವು ೪೪೭ ರೂಪಾಯಿಗಳು; ಆದರೆ ವೆಚ್ಚವು ೪೬೮ ರೂಪಾಯಿಗಳು. ನೂರಕ್ಕೆ ೪೫ ಕೃಷಿ ಮಜೂರ ಕುಟುಂಬಗಳು ಸಾಲದಲ್ಲಿ ಮುಳುಗಿದ್ದು, ಪ್ರತಿಯೊಂದು ಕುಟುಂಬದ ಮೇಲೆ ೧೦೫ ರೂಪಾಯಿಗಳ ಸಾಲದ ಹೊರೆ ಬಿದ್ದಿರುತ್ತದೆ. ಭಾರತದಲ್ಲಿ ಮೂರೂವರೆ ಕೋಟಿ ಕೃಷಿ ಮಜೂರರು ಇದ್ದಾರೆ—ಇವರಿಗೆ ಸಾಕಷ್ಟು ಉದ್ಯೋಗವು ದೊರಕುತ್ತಿಲ್ಲ. ಸಾಮಾನ್ಯವಾಗಿ ವರ್ಷಕ್ಕೆ ೧೮೯ ದಿನಗಳಲ್ಲಿ ಬೇಸಾಯದ ಕೆಲಸ ಸಿಗುತ್ತದೆ; ಮತ್ತೆ ೨೯ ದಿನಗಳಲ್ಲಿ ಬೇರೆ ಏನಾದರೂ ಕೆಲಸ ಮಾಡುತ್ತಾರೆ; ಆದರೆ ವರ್ಷದಲ್ಲಿ ಸುಮಾರು ೧೦೦ ದಿನಗಳಷ್ಟು ಯಾವ ಕೆಲಸವೂ ಇಲ್ಲದೆ ಸುಮ್ಮನೆ ಕುಳಿತಿರುತ್ತಾರೆ. ಉತ್ತರ ಭಾರತಕ್ಕಿಂತ ದಕ್ಷಿಣ ಭಾರತದಲ್ಲಿ ನಿರುದ್ಯೋಗಿಗಳಾದ ಕೃಷಿ ಮಜೂರರ ಪ್ರಮಾಣ ಹೆಚ್ಚೆಂದು ಕಂಡುಬರುತ್ತದೆ. ಗಂಡಾಳಿಗೆ ದಿನಕ್ಕೆ ಹದಿನೇಳೂವರೆ ಆಣೆಯಂತೆಯೂ ಹೆಣ್ಣಾಳಿಗೆ ದಿನಕ್ಕೆ ಹತ್ತೂವರೆ ಆಣೆಯಂತೆಯೂ ಸಾಮಾನ್ಯವಾಗಿ ಮಜೂರಿ ಸಿಗುತ್ತದೆ ದಿನಕ್ಕೆ ಹತ್ತಾಣೆಗಿಂತಲೂ ಕಡಿಮೆ ಸಂಬಳ ಪಡೆಯುವ ಗಂಡಾಳುಗಳು ಸಾವಿರದಲ್ಲಿ ೧೫೫; ಮತ್ತು ಹೆಣ್ಣಾಳುಗಳು ೫೫೯. ಇಷ್ಟು ನಿಕೃಷ್ಟವೇತನವನ್ನು ಪಡೆದು ಬದುಕುವ ಮಜೂರ ಕುಟುಂಬವು ಜೀವನದ ಯಾವ ಸುಖ ಸೌಕರ್ಯಗಳ ಪರಿಚಯವನ್ನೂ ಹೊಂದಿರುವುದಿಲ್ಲ. ಸಾಮಾನ್ಯ ಭಾರತೀಯ ಕುಟುಂಬವು ಆದಾಯದಲ್ಲಿ ನೂರಕ್ಕೆ ಎಪ್ಪತ್ತೊಂದರಷ್ಟು ಮಾತ್ರ ಆಹಾರಕ್ಕಾಗಿ ವೆಚ್ಚ ಮಾಡಿದರೆ, ಕೃಷಿ ಮಜೂರ ಕುಟುಂಬವು ಎಂಭತ್ತೈದರಷ್ಟು ಖರ್ಚು ಮಾಡುತ್ತದೆ, ಹಾಗಿದ್ದರೂ ದೈಹಿಕ ದಾರ್ಢ್ಯವನ್ನು ಪೋಷಿಸಲು ಅಗತ್ಯವೆನಿಸಿದ ಹಾಲು, ತರಕಾರಿ, ಮೀನು, ಮಾಂಸ, ದ್ವಿದಳ ಧಾನ್ಯ ಮುಂತಾದ ಅಂಶಗಳು ಬಹಳ ಕಡಿಮೆ ಇದ್ದು, ಕೆಲೊರಿಯ ಮಾನದಿಂದಲೂ ತಿನ್ನುವ ಆಹಾರವು ಕಾಲಂಶದಷ್ಟು ಕಡಿಮೆಯೇ ಆಗಿದೆ. ಹೊಟ್ಟೆಯನ್ನು ತುಂಬಿಸಿಕೊಳ್ಳುವುದೇ ಇಷ್ಟು ಕಷ್ಟವಾದ ಮೇಲೆ ಬಟ್ಟೆ ಮತ್ತಿತರ ವಿಷಯಗಳಿಗಾಗಿ ವೆಚ್ಚ ಮಾಡಲು ಹಣವೆಲ್ಲಿಯದು? ಸಾಮಾನ್ಯಭಾರತೀಯ ಕುಟುಂಬವು ವರ್ಷಕ್ಕೆ ೨೭ ರೂಪಾಯಿಗಳನ್ನು ಬಟ್ಟೆ ಮತ್ತಿತರ ವಸ್ತುಗಳಿಗಾಗಿ ವ್ಯಯಿಸುವಾಗ ಕೃಷಿ ಮಜೂರ ಕುಟುಂಬವು ಆರೂವರೆ ರೂಪಾಯಿಗಳಷ್ಟು ಖರ್ಚು ಮಾಡುತ್ತದೆ. ಒಟ್ಟಿನಲ್ಲಿ ನಮ್ಮ ದೇಶದ ಕುಟುಂಬಗಳಲ್ಲಿ ಸಾವಿರಕ್ಕೆ ೨೨೭ರಷ್ಟಿರುವ ಕೃಷಿ ಮಜೂರ ಕುಟುಂಬಗಳು ಆದಾಯದ ಮಾತು ಬಂದಾಗ ಸಾವಿರಕ್ಕೆ ೮೩ ಅಂಶವನ್ನಷ್ಟೇ ಪ್ರತಿನಿಧೀಕರಿಸುತ್ತವೆ. ಇವರ ಜೀವನಮಟ್ಟವನ್ನು ಎತ್ತರಿಸುವ ಪ್ರಯತ್ನಗಳನ್ನು ನಡೆಸುವಾಗ ಮುಖ್ಯವಾಗಿ ಉದ್ಯೋಗದ ಅವಕಾಶಗಳನ್ನು ಹೆಚ್ಚಿಸುವ ಹಾಗು ಕನಿಷ್ಠವೇತನವನ್ನು ನಿರ್ಣಯಿಸುವ ಕಡೆಗೆ ಗಮನಕೊಡುವುದು ಅಪೇಕ್ಷಣೀಯ. ಗುಡಿ ಕೈಗಾರಿಕೆಗಳನ್ನು ಹಳ್ಳಿಗಳಲ್ಲೇ ಸ್ಥಾಪಿಸಿ, ಅವುಗಳಿಂದ ಕೃಷಿ ಮಜೂರ ಕುಟುಂಬಗಳಿಗೆ ಆಂಶಿಕ ಉದ್ಯೋಗ ದೊರಕುವಂತೆ ಸರಕಾರವು ಪ್ರಯತ್ನಶೀಲವಾದರೆ, ಅದರಿಂದ ಒಳ್ಳೆಯ ಲಾಭವಾದೀತು. ಕನಿಷ್ಠ ಕೂಲಿಯನ್ನು ಸುಗಮ ಜೀವನ ಸಾಗಿಸಲು ಅನುಕೂಲವೆನಿಸಿದ ಮಟ್ಟದಲ್ಲಿ ನಿರ್ಧರಿಸಿದರೆ, ಅದರಿಂದಲೂ ನೆರವು ದೊರಕೀತು. ಇವುಗಳೊಂದಿಗೆ, ಕೃಷಿ ಮಜೂರರಿಗೆ ಸಾಗುಮಾಡಲು ಭೂಮಿಯನ್ನೊದಗಿಸಿಕೊಟ್ಟು, ಅವರೆಲ್ಲರನ್ನೂ ಸ್ವಂತ ಭೂಮಿಯ ಕೃಷಿಕರಾಗಿ ಪರಿವರ್ತಿಸಿದರೆ, ಅದರಿಂದ ಇನ್ನಷ್ಟು ಪ್ರಯೋಜನವಾದೀತು. ಇಂಥ ಉಪಾಯಗಳನ್ನು ಎಷ್ಟು ಶೀಘ್ರವಾಗಿ ಯೋಜಿಸಿ, ಕಾರ್ಯಗತಗೊಳಿಸುತ್ತೇವೆಯೋ ಅಷ್ಟರ ಮಟ್ಟಿಗೆ ಕೃಷಿ ಮಜೂರರ ದಯನೀಯ ಪರಿಸ್ಥಿತಿಯು ಊರ್ಜಿತ ಹೊಂದುತ್ತದೆ. ಆದುದರಿಂದ ಯೋಜನಾ ಆಯೋಗವೂ ಕೇಂದ್ರ ಹಾಗು ರಾಜ್ಯ ಸರಕಾರಗಳೂ ಇತ್ತ ಗಮನ ಪೂರೈಸಬೇಕೆಂದು ಸೂಚಿಸುತ್ತೇವೆ.

ಬೇಡದ ಸಲಹೆ

ನಮ್ಮ ಶಾಲಾ ಕಾಲೇಜುಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳ ವಿಷಯದಲ್ಲಿ ಈಗ ಮುಖಂಡರೆನಿಸಿದವರಿಂದ ಕರುಣಾ ಜನಕವಾದ ಹಾಗು ಸಹಾನುಭೂತಿಪರವಾದ ಮಾತುಗಳು ಕೇಳಿಸುತ್ತವೆ. ಸಮಾಜದ ಸುರಕ್ಷಿತ ವರ್ಗವು ನಿರುದ್ಯೋಗದ ಪಿಡುಗಿಗೆ ಬಲಿಯಾಗಿರುವ ವಿಷಯದಲ್ಲಿ ಕನಿಕರವನ್ನು ತೋರಿಸುವ ಜನರು ಹೆಚ್ಚಿಕೊಂಡಂತೆ, ಪರೀಕ್ಷೆಗಳಲ್ಲಿ ಅನುತ್ತೀರ್ಣರಾಗಿ ನಿರಾಶೆ ಹೊಂದುವ ವಿದ್ಯಾರ್ಥಿಗಳ ವಿಷಯದಲ್ಲಿ ಅನುಕಂಪದ ಮಾತನ್ನಾಡುವವರೂ ಅಧಿಕಗೊಂಡಿದ್ದಾರೆ. ಸುಶಿಕ್ಷಿತ ನಿರುದ್ಯೋಗಿಗಳ ಸಮಸ್ಯೆಯು ನಿಜವಾಗಿಯೂ ರಾಷ್ಟ್ರವ್ಯಾಪಿ ಸ್ವರೂಪದ್ದಿದ್ದು, ಅದರ ನಿವಾರಣೆಗೆ ಶಿಕ್ಷಣ ಪದ್ಧತಿಯ ಆಮೂಲಾಗ್ರ ಪರಿಷ್ಕರಣದ ಹೊರತು ಬೇರಾವ ವ್ಯವಹಾರ್ಯ ಉಪಾಯವೂ ತೋರುತ್ತಿಲ್ಲ. ಕೇವಲ ಕಾರಕೂನರನ್ನಷ್ಟೇ ಸೃಷ್ಟಿಸುವ ಮತ್ತು ಸ್ವತಂತ್ರ ಉದ್ಯೋಗದ ವಿಷಯದಲ್ಲಿ ಏನೇನೂ ತರಬೇತಿಯನ್ನು ಕೊಡದ ಇಂದಿನ ಶಿಕ್ಷಣ ಪದ್ಧತಿಯು ಜಾರಿಯಲ್ಲಿರುವಷ್ಟು ಕಾಲ ಈ ಸಮಸ್ಯೆ ಪರಿಹಾರ ಹೊಂದಲಾರದು. ಸರಕಾರದವರೂ ಶಿಕ್ಷಣವೇತ್ತರೂ ಇದನ್ನು ಗಮನಿಸುವುದೊಳಿತು. ಇನ್ನು, ಪರೀಕ್ಷೆಯ ಕಠಿಣ ಪ್ರಸಂಗದ ಉಲ್ಲೇಖವನ್ನು ಮಾಡುವುದಾದರೆ, ಈಚೆಗೆ ಹಾಸ್ಯಾಸ್ಪದವಾದ ಕೆಲವು ಸೂಚನೆಗಳು ಬರುತ್ತವೆ. ಡಾ. ಸಿ. ಪಿ. ರಾಮಸ್ವಾಮಿ ಅಯ್ಯರರು ವಿದ್ಯಾರ್ಥಿಗಳು ಪ್ರಶ್ನ ಪತ್ರಿಕೆಗಳಿಗೆ ಪಠ್ಯ ಪುಸ್ತಕಗಳನ್ನು ನೋಡಿ ಉತ್ತರ ಬರೆಯುವುದಕ್ಕೆ ಅವಕಾಶ ಕಲ್ಪಿಸಿ ಕೊಡುವುದರಿಂದ ಲಾಭವುಂಟೆಂದು ಹೇಳುತ್ತಾರೆ; ಗೃಹಮಂತ್ರಿ ಕಟಜೂರವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ಶಾಲಾ ಕಾಲೇಜುಗಳಲ್ಲಿ ಇಷ್ಟು ವರ್ಷ ವ್ಯಾಸಂಗ ಮಾಡಿದವನಿಗೆ ಇಂಥಿಂಥ ಪದವಿ ಕೊಟ್ಟುಬಿಡಬೇಕೆಂದೂ ಪರೀಕ್ಷೆಯ ವ್ಯವಸ್ಥೆಯೇ ಬೇಡವೆಂದೂ ಅಭಿಪ್ರಾಯಪಡುತ್ತಾರೆ. ಅಯ್ಯರರ ಸೂಚನೆಯನ್ನಾದರೂ ನಾವು ಪುರಸ್ಕರಿಸಬಹುದು; ಆದರೆ ಕಟಜೂರ ಅಭಿಪ್ರಾಯವನ್ನು ಎಷ್ಟು ಮಾತ್ರಕ್ಕೂ ಸಮರ್ಥಿಸಲಾಗುವುದಿಲ್ಲ. ವಿದ್ಯಾರ್ಥಿಗಳು ಕಷ್ಟಪಟ್ಟು ಜ್ಞಾನಾರ್ಜನೆ ಮಾಡಬೇಕು; ಅವರ ಜ್ಞಾನದ ಮಟ್ಟವನ್ನು ಅಳೆಯುವುದಕ್ಕೆ ಏನಾದರೊಂದು ರೀತಿಯ ಪರೀಕ್ಷಾ ಕ್ರಮವೂ ಬೇಕು. ಶಾಲೆಯಲ್ಲಿ ನಿರ್ದಿಷ್ಟ ಅವಧಿಯ ವರೆಗೆ ಕುಳಿತ ವಿದ್ಯಾರ್ಥಿ ವಿಷಯ ಗ್ರಹಣದಲ್ಲಿ ಆಸಕ್ತಿಯನ್ನು ತೋರಿಸಿರುವನೆಂದಾಗಲೀ ಸಾಕಷ್ಟು ಜ್ಞಾನವನ್ನು ಸಂಪಾದಿಸಿರುವನೆಂದಾಗಲೀ ಭಾವಿಸುವುದು ತಪ್ಪು. ಈಗಿನ ಪರೀಕ್ಷಾಪದ್ಧತಿಯಲ್ಲಿ ದೋಷಗಳಿವೆ, ನಿಜ. ಅವುಗಳನ್ನು ಪರಿಶೀಲಿಸಿ, ತಿದ್ದಿ, ಸರಿಪಡಿಸೋಣ. ಆದರೆ, ಎಲ್ಲಿಯೋ ಕೆಲವು ಅನುತ್ತೀರ್ಣ ವಿದ್ಯಾರ್ಥಿಗಳು ನಿರಾಶೆ ಹೊಂದಿ, ಜೀವನದಲ್ಲಿ ಜುಗುಪ್ಸೆಪಟ್ಟು ಭವಿಷ್ಯವನ್ನೆ ಕೆಡಿಸಿಕೊಳ್ಳುವರೆಂಬುದಕ್ಕಾಗಿ ಅಯೋಗ್ಯರಿಗೂ ಪ್ರಶಸ್ತಿ ಪತ್ರಗಳನ್ನು ನೀಡುವ ಹುಚ್ಚು ಸಾಹಸಕ್ಕೆ ಮಾತ್ರ ಇಳಿಯದಿರೋಣ!

ನೆಹರೂ—ಮಾವ್ರೋ ಭೇಟಿ

ಚೀನದಲ್ಲಿ ಪ್ರಧಾನ ಮಂತ್ರಿಗಳ ಕಾರ್ಯಕ್ರಮ

ಹತ್ತು ಸಾವಿರ ವರ್ಷಗಳಷ್ಟು ಪ್ರಾಚೀನವಾದ ಭಾರತ-ಚೀನ ಸೌಹಾರ್ದ ಸಂಬಂಧವನ್ನು ಪುನರುಜ್ಜೀವನಗೊಳಿಸುವ ಘನವಾದ ಉದ್ದೇಶದಿಂದ ಪ್ರಧಾನ ಮಂತ್ರಿ ನೆಹರೂರವರು ಇದೇ ದಿನಾಂಕ ೧೫ರಂದು ಹತ್ತು ಸಾವಿರ ಮೈಲುಗಳಷ್ಟು ದೀರ್ಘವಾದ ವಿಮಾನ ಪ್ರಯಾಣವನ್ನು ಪ್ರಾರಂಭಿಸಿ ಹೊಸದೆಹಲಿಯಿಂದ ಹೊರಟು, ೧೮ನೇ ದಿನಾಂಕ ಪೇಕಿಂಗವನ್ನು ತಲುಪಿದರು. ನೆಹರೂರೊಂದಿಗೆ ಅವರ ಮಗಳು ಶ್ರೀಮತಿ ಇಂದಿರಾ ಗಾಂಧಿ, ಹಾಗು ಭಾರತದ ವಿದೇಶ ಶಾಖೆಯ ಕಾರ್ಯದರ್ಶಿ ಶ್ರೀ. ಎನ್. ಆರ್. ಪಿಳ್ಳೆಯವರೂ ಪ್ರಯಾಣ ಬೆಳೆಸಿದರು. ಹೊರಡುವಾಗ, ನೆಹರೂರವರ ಆರೋಗ್ಯ ಅಷ್ಟು ಚೆನ್ನಾಗಿರಲಿಲ್ಲ: ಶೀತದ ದೆಸೆಯಿಂದ ಮುನ್ನಾ ದಿನ ಅವರು ಜ್ವರಪೀಡಿತರಾಗಿದ್ದರು; ಹೆಚ್ಚು ಮಾತನಾಡಲು ಆಗುತ್ತಿರಲಿಲ್ಲ. ಆದರೆ, ಒಂದೆರಡು ದಿನದಲ್ಲಿ ಅವರ ಪ್ರಕೃತಿ ಸುಧಾರಿಸಿತು.

ಹೊಸದೆಹಲಿಯ ಪಾಲಂ ವಿಮಾನ ನಿಲ್ದಾಣದಲ್ಲಿ ನೆಹರೂರವರು ತಮ್ಮ ಸಂಗಡಿಗರೊಂದಿಗೆ ವಿಮಾನವನ್ನೇರಿದಾಗ, ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಸ್ವತಃ ಹಾಜರಿದ್ದು ಅವರನ್ನು ಬೀಳ್ಕೊಂಡರು. ರಾಯಭಾರಿ ವರ್ಗದವರೂ ಕಾಶ್ಮೀರದ ಪ್ರಧಾನ ಮಂತ್ರಿ ಬಕ್ಷಿಗುಲಾಂ ಮಹಮ್ಮದರೂ ಅಲ್ಲಿದ್ದು, ಶುಭಕೋರಿದರು. ಮಾರ್ಗ ಮಧ್ಯದಲ್ಲಿ ಅವರು ಮೊತ್ತ ಮೊದಲಾಗಿ ಕಲ್ಕತ್ತೆಯಲ್ಲಿ ಇಳಿದರು. ಪತ್ರಿಕಾ ಪ್ರತಿನಿಧಿಗಳಿಗೆ ಹೆಚ್ಚಿನ ಪ್ರಶ್ನೆಗಳಿಗೇನೂ ಅವಕಾಶ ಕೊಡದೆ "ನಾನು ಆರೋಗ್ಯವಾಗಿದ್ದೇನೆ" ಎಂದಿಷ್ಟೇ ಹೇಳಿದರು. ಸಂಜೆ ಏರ್ಪಡಿಸಿದ್ದ ಪತ್ರಿಕಾ ಪರಿಷತ್ತಿನಲ್ಲಿ ಮಾತನಾಡುತ್ತಾ ಹತ್ತು ಸಾವಿರ ವರ್ಷಗಳಷ್ಟು ಪ್ರಾಚೀನ ಕಾಲದಿಂದ ಸ್ನೇಹಿತರಂತಿರುವ ರಾಷ್ಟ್ರಗಳ ಪ್ರಧಾನಮಂತ್ರಿಗಳ ಭೇಟಿಯು ಚಾರಿತ್ರಿಕ ಮಹತ್ವದ ಘಟನೆಯಾಗಿದೆಯೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಸಹಜೀವನದ ತತ್ವವನ್ನು ನೆಹರೂರವರು ಪ್ರತಿಪಾದಿಸುತ್ತಾ, ಯುದ್ಧದ ವ್ಯಾಮೋಹವನ್ನು ಖಂಡಿಸಿದರು.

ಕಲ್ಕತ್ತೆಯಿಂದ ನೆಹರೂರವರು ರಂಗೂನಿಗೆ ತೆರಳಿದರು. ಅಲ್ಲಿ ವಿಮಾನ ನಿಲ್ದಾಣದಲ್ಲಿ ಬರ್ಮದ ಪ್ರಧಾನ ಮಂತ್ರಿಗಳೂ ಅವರ ಸಹೋದ್ಯೋಗಿಗಳೂ ರಾಯಭಾರಿ ವರ್ಗದವರೂ ಹತ್ತು ಸಾವಿರದಷ್ಟು ಜನಸ್ತೋಮವೂ ಅವರಿಗೆ ಸ್ವಾಗತವನ್ನು ಕೋರಿದರು. ತಮ್ಮನ್ನು ಸುತ್ತುವರಿದಿದ್ದ ಜನರನ್ನು "ಸರಿಯಿರಿ, ನಮಗೆ ಹೋಗಗೊಡಿ" ಎಂದನ್ನುತ್ತಾ ನೆಹರೂರವರು ಜೀಪ ಕಾರನ್ನು ಏರಿದರು. ಆಗ ಅವರಿಗೆ ಅಸಂಖ್ಯ ಹೂಮಾಲೆಗಳನ್ನು ಅರ್ಪಿಸಲಾಯಿತು. ಬರ್ಮದ ಪ್ರಧಾನ ಮಂತ್ರಿಗಳು ಏರ್ಪಡಿಸಿದ್ದ ಭೋಜನ ಸಮಾರಂಭದಲ್ಲಿಯೂ ಅಧ್ಯಕ್ಷರು ಏರ್ಪಡಿಸಿದ್ದ ಚಹಾ ಸತ್ಕಾರದಲ್ಲಿಯೂ ನೆಹರೂ ಭಾಗವಹಿಸಿದರಲ್ಲದೆ, ರಾಮಕೃಷ್ಣ ಮಿಶನಿನವರ ಆಸ್ಪತ್ರೆಯ ದಾದಿಯರ ವಸತಿ ಗೃಹವನ್ನೂ ಉದ್ಘಾಟಿಸಿದರು. "ದಾದಿಯರು ಬೀರುವ ರೋಗಿ ಕಾರಕ ಪ್ರಭಾವವಿಲ್ಲದಿದ್ದರೆ, ಔಷಧಿಗಳು ನಿಷ್ಪ್ರಯೋಜಕ" ಎಂಬುದಾಗಿ ಇಲ್ಲಿ ನೆಹರೂ ವಿನೋದವಾಡಿದರು. ಬೌದ್ಧ ಧರ್ಮ ಗುರುಗಳು ತ್ರಿಪಿಟಕದ ಸಂಸ್ಕರಣಕ್ಕಾಗಿ ಸಭೆ ಸೇರಿದ ಗುಹೆಗೂ ನೆಹರೂರವರು ಭೇಟಿ ಕೊಟ್ಟರು. ಇಲ್ಲೆಲ್ಲ ಅ

ವರಿಗೆ ಸಂಭ್ರಮದ ಸ್ವಾಗತವನ್ನು ನೀಡಲಾಯಿತು.

ಮುಂದೆ ಪ್ರಧಾನ ಮಂತ್ರಿಗಳ ಪರಿವಾರವು ಲಾವೋಸಿನ ರಾಜಧಾನಿಯಾದ ವೀಟೇನಕ್ಕೆ ಪ್ರಯಾಣ ಬೆಳೆಸಿತು. ಅಲ್ಲಿ ಭೋಜನ ತೀರಿಸಿ ಹಾನ್ಯೆಗೆ ವಿಮಾನವು ಹೊರಟಿತು. ಇಲ್ಲಿ ನೆಹರೂರವರು ವೀಟಮಿನ ನಾಯಕರಾದ ಡಾ ಹೋಚಿಮಿನರನ್ನು ಕಂಡು ಮಾತುಕತೆ ನಡೆಸಿದರು ನೆಹರೂರವರ ಗೌರವಾರ್ಥವಾಗಿ ಅವರು ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದು, ಅಲ್ಲಿ ಭಾರತವು ಇಂಡೋಚೀನದ ಕದನ ವಿರಾಮವನ್ನು ಸಾಧಿಸುವಲ್ಲಿ ವಹಿಸಿದ ಮಹತ್ವದ ಪಾತ್ರವನ್ನು ಹೋಚಿಮಿನರು ಉಲ್ಲೇಖಿಸಿ, ಭಾರತವ ಪ್ರತಿನಿಧಿಗಳು ಅಧ್ಯಕ್ಷರಾಗಿರುವ ತಟಸ್ಥ ರಾಷ್ಟ್ರಗಳ ಮಂಡಳಗಳೊಂದಿಗೆ ತಾವು ಸಂಪೂರ್ಣ ಸಹಕರಿಸುವುದಾಗಿ ಭರವಸೆ ನೀಡಿದರು. ಉಭಯ ನಾಯಕರೂ ಪಂಚತತ್ವಗಳ ತಳಹದಿಯ ಮೇಲೆ ಸೌಹಾರ್ದಯುತವಾದ ಸಹಜೀವನವನ್ನು ನಡೆಸುವ ವಿಷಯದಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದರು

ಇಲ್ಲಿಂದ ನೆಹರೂರವರು ಚೀನದ ದಕ್ಷಿಣ ತುದಿಯಲ್ಲಿರುವ ಪ್ರಮುಖ ಪಟ್ಟಣವಾದ ಕೆಂಟನನ್ನು ದಿನಾಂಕ ೧೮ರಂದು ಪ್ರಾತಃಕಾಲ ತಲುಪಿದರು. ಇಲ್ಲಿ ಭಾರತದಲ್ಲಿನ ಚೀನದ ರಾಯಭಾರಿಗಳೂ, ಚೀನದಲ್ಲಿನ ಭಾರತದ ರಾಯಭಾರಿಗಳೂ; ಚೀನೀ ಅಧಿಕಾರಿ ವರ್ಗದ ಮುಖಂಡರೂ, ಅಪಾರ ಜನ ಸಮುದಾಯವೂ ಅವರಿಗೆ ಸ್ವಾಗತವನ್ನು ಬಯಸಿದರು. ಉಪಾಹಾರ ಸ್ವೀಕರಿಸಿದ ಬಳಿಕ ನೆಹರೂರವರು ಹೆನ್ಕೋಗೆ ಹೋಗಿ, ಅಲ್ಲಿ ಭೋಜನ ತೀರಿಸಿ, ಮರುದಿನ ಮುಂಜಾನೆ ಪೇಕಿಂಗದಲ್ಲಿ ಇಳಿದರು. ನೆಹರೂರನ್ನು ಸ್ವಾಗತಿಸಲು ಚೀನದ ಪ್ರಧಾನ ಮಂತ್ರಿ ಚೌಎನ್‌ಲಾಯರೂ, ಶ್ರೀಮತಿ ಸನ್‌ಯಾತ್‌ಸೇನರೂ ಇತರ ಪ್ರಮುಖರೂ ನೆರೆದಿದ್ದರು. ನೆಹರೂರ ಆಗಮನಾರ್ಥವಾಗಿ ಅಂಗಡಿಗಳನ್ನು ಮುಚ್ಚಿದ್ದರಲ್ಲದೆ, ಶೈಕ್ಷಣಿಕ ಸಂಸ್ಥೆಗಳಿಗೆ ರಜೆಯನ್ನೂ ಕೊಟ್ಟಿದ್ದರು. ಸುಮಾರು ೧೦ ಲಕ್ಷ ಜನರು ನೆಹರೂರ ದರ್ಶನದಿಂದ ಪುಳಕಿತರಾಗಿ ಜಯಕಾರವನ್ನು ಮಾಡಿದರು.

ಇಷ್ಟರ ವರೆಗೆ ಯಾವ ಮುತ್ಸದ್ದಿಗೂ ನೀಡದಷ್ಟು ಸಂಭ್ರಮದ ಸ್ವಾಗತವನ್ನು ನೆಹರೂರಿಗೆ ನೀಡಲಾಯಿತೆಂದೂ ಬಂದ ದಿನವೇ ಸಂಜೆ ನೆಹರೂರವರು ಚೀನೀ ಪ್ರಜಾರಾಜ್ಯದ ಅಧ್ಯಕ್ಷರಾದ ಮಾವೋರನ್ನು ಕಂಡರೆಂದೂ ವರದಿ ಬಂದಿರುತ್ತದೆ. ನೆಹರೂರವರು ರಾಜಧಾನಿಯಾದ ಪೇಕಿಂಗದಲ್ಲಿ ಆರು ದಿನಗಳಷ್ಟು ಕಾಲ ಇದ್ದು, ಆ ಮೇಲೆ ನಾಲ್ಕಾರು ದಿನ ಬೇರೆ ನಗರಗಳನ್ನು ಸಂದರ್ಶಿಸುತ್ತಾರೆ ಅವರ ಆಗಮನದಿಂದ ಜಾಗತಿಕ ಮಹತ್ವದ ಪ್ರಶ್ನೆಗಳನ್ನು ಪರಿಹರಿಸುವಲ್ಲಿ ಹೊಸ ಅಧ್ಯಾಯವೇ ತೆರೆಯಲ್ಪಡಬಹುದೆಂದೂ ಏಶ್ಯಾದ ಜಾಗೃತಿಯಲ್ಲಿ ನವಮನ್ವಂತರ ಪ್ರಾರಂಭವಾಗಬಹುವೆಂದೂ ಪತ್ರಿಕೆಗಳು ಅಭಿಪ್ರಾಯ ಪಡುತ್ತವೆ.

(೫ನೇ ಪುಟದಿಂದ)

ಲಾಗುವುದು. ಇದೇ ನವಂಬರ ೧ರಂದು ಫ್ರೆಂಚ ಕಮಿಶನರ ಸ್ಥಾನವನ್ನು ಭಾರತದ ಅಧಿಕಾರಿಗಳೂ ಫ್ರೆಂಚ ನೌಕರ ವರ್ಗದ ಹುದ್ದೆಗಳನ್ನು ಭಾರತದ ನೌಕರ ವರ್ಗವೂ ವಹಿಸಿಕೊಳ್ಳಬಹುದು. ಆ ಮೇಲೆ ಹಸ್ತಾಂತರಗೊಂಡ ಪ್ರದೇಶದ ಮುಂದಿನ ಸ್ಥಾನಮಾನವನ್ನು ಭಾರತದ ಲೋಕ ಸಭೆಯು ಚರ್ಚಿಸಿ ನಿರ್ಧರಿಸುವುದು.

ವಾಣಿಜ್ಯ ಒಪ್ಪಂದ

ಭಾರತವು ಈಗ ಎಲ್ಲ "ಕಮ್ಯೂನಿಸ್ಟ" ರಾಷ್ಟ್ರಗಳೊಡನೆಯೂ ವಾಣಿಜ್ಯ ಒಪ್ಪಂದವನ್ನು ಮಾಡಿಕೊಂಡಿರುವುದು. ಪ್ರಧಾನ ಮಂತ್ರಿ ನೆಹರೂರವರು ಚೀನಕ್ಕೆ ಪ್ರಯಾಣ ಹೊರಡುವ ಮುನ್ನ, ದಿನಾಂಕ ೧೪ರಂದು, ಚೀನ—ಭಾರತ ವಾಣಿಜ್ಯ ಒಪ್ಪಂದಕ್ಕೆ ಅಂಕಿತವನ್ನು ಹಾಕಲಾಯಿತು. ದಿನಾಂಕ ೧೬ರಂದು ಪೂರ್ವ ಜರ್ಮನಿ-ಭಾರತ ವಾಣಿಜ್ಯ ಒಪ್ಪಂದವು ನೆರವೇರಿತು. ಇದರಿಂದ ಈಗ ಸ್ವಲ್ಪ ಮಟ್ಟಿಗೆ ಮಾತ್ರ ನಡೆಯುತ್ತಿರುವ ವ್ಯಾಪಾರವು ಕ್ರಮೇಣ ಅಭಿವೃದ್ಧಿ ಹೊಂದಬಹುದೆಂಬ ಆಶೆ ಮೂಡಿರುತ್ತದೆ. ಎಲ್ಲಕ್ಕಿಂತ ಹೆಚ್ಚಿಗೆ ಭಾರತಕ್ಕೆ ಹೊಸ ಪೇಟೆಗಳು ದೊರಕಿದ್ದು ನಮ್ಮ ಚಟುವಟಿಕೆಗಳನ್ನು ವಿಸ್ತರಿಸಲು ಇದು ನೆರವಾಗುತ್ತದೆ.

ಚೀನದೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ಭಾರತವು ಚೀನಕ್ಕೆ ಅಕ್ಕಿ, ಬೇಳೆಕಾಳುಗಳು, ತಂಬಾಕು, ಲೋಹಗಳ ಅದುರು, ಯಂತ್ರೋಪಕರಣಗಳು, ಸಣಬು, ಹತ್ತಿಯ ಬಟ್ಟೆ ಇತ್ಯಾದಿಗಳನ್ನು ನಿರ್ಯಾತಮಾಡಬಲ್ಲುದು. ಇದಕ್ಕೆ ಪ್ರತಿಯಾಗಿ ಚೀನವು ಅಕ್ಕಿ, ಸೋಯಾ ಬೀನ, ಯಂತ್ರೋಪಕರಣಗಳು, ತೊಗಲು, ಚೀನದ ಮಣ್ಣಿನ ಸರಕುಗಳು, ರೇಶ್ಮೆ ಮುಂತಾದವುಗಳನ್ನು ನಿರ್ಯಾತಮಾಡುವುದು. ವ್ಯಾಪಾರ ವ್ಯವಹಾರವನ್ನು ರೂಪಾಯಿಯಲ್ಲಿ ಮಾಡಬಹುದಾಗಿದ್ದು, ಅಂತ್ಯದ ಶಿಲ್ಕನ್ನು ಸ್ಟರ್ಲಿಂಗಿನಲ್ಲಿ ಪೂರೈಸಬಹುದು.

ಭಾರತವು ಪೂರ್ವಜರ್ಮನಿಯೊಡನೆ ಮಾಡಿಕೊಂಡ ಒಡಂಬಡಿಕೆಯಂತೆ ಆ ದೇಶಕ್ಕೆ ಚಾ, ಕಾಫಿ, ತಂಬಾಕು, ಮಸಾಲೆ ಜಿನಸು, ಕತ್ತ, ಚರ್ಮ, ಹತ್ತಿ, ಉಣ್ಣೆ, ಸಣಬು, ರೇಶ್ಮೆ ಮುಂತಾದುವನ್ನು ನಿರ್ಯಾತ ಮಾಡುವುದು. ಯಂತ್ರೋಪಕರಣಗಳು, ವೃತ್ತ ಪತ್ರ ಕಾಗದ, ಕಚ್ಚಾಫಿಲ್ಮು ಮುಂತಾದುವನ್ನು ಪೂರ್ವ ಜರ್ಮನಿಯಿಂದ ತರಿಸಬಹುದು. ಇಂಥ ವಾಣಿಜ್ಯ ಒಪ್ಪಂದಗಳಿಂದ ಭಾರತದ ವ್ಯಾಪಾರೋದ್ಯಮ ಹೆಚ್ಚುವುದಕ್ಕೂ ಕೈಗಾರಿಕೆಗಳು ಪ್ರಬಲಿಸುವುದಕ್ಕೂ ಹೆಚ್ಚಿನ ಉತ್ತೇಜನೆ ದೊರಕುವುದಲ್ಲದೆ, ಯಂತ್ರೋಪಕರಣಗಳ ಪೂರೈಕೆಯ ವಿಷಯದಲ್ಲಿ ಪಶ್ಚಿಮ ರಾಷ್ಟ್ರಗಳನ್ನಷ್ಟೇ ಹೊಂದಿಕೊಳ್ಳುವ ಪ್ರಸಂಗವೂ ತಪ್ಪಬಹುದು.

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಉಡುಪಿ

ದ. ಕ. ಜಿಲ್ಲಾ ಬೋರ್ಡ್ ಚುನಾವಣೆ— ದಕ್ಷಿಣ ಕನ್ನಡ ಜಿಲ್ಲೆಯ ಉತ್ತರ ಭಾಗದ ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳಲ್ಲಿ ತಾ. 17ರಂದು ಜಿಲ್ಲಾ ಬೋರ್ಡ್ ಚುನಾವಣೆ ನಡೆಯಿತು. ಸರ್ವಸಾಧಾರಣ ಎಲ್ಲಾ ಕಡೆಗಳಲ್ಲಿಯೂ ಮತದಾನವು ಶಾಂತ ರೀತಿಯಿಂದಲೇ ನಡೆಯಿತು. ಉಡುಪಿ ತಾಲೂಕಿನ ಕುಕ್ಕಾಲು ಕೇಂದ್ರದಲ್ಲಿ ಸ್ವಲ್ಪ ಗಲಾಟೆಯಾಯಿತೆಂದೂ ಕಾಂಗ್ರೆಸ್ ಕೆಲಸಗಾರರೊಬ್ಬರ ಮೇಲೆ ಪ್ರಜಾ ಪಕ್ಷದವರೊಬ್ಬರು ಕೈಮಾಡಿದರೆಂದೂ ಈ ಕುರಿತು ಕಾಪು ಸರ್ಕಲ್ ಪೋಲೀಸ್ ಸ್ಟೇಶನಿನಲ್ಲಿ ದೂರು ಕೊಟ್ಟಿರುವರೆಂದೂ ತಿಳಿಯಬರುತ್ತದೆ. ಎಲ್ಲಾ ಮತ ಘಟ್ಟಗಳಲ್ಲಿ ಸುಮಾರು ಅರ್ಧಾಂಶದಷ್ಟು ಮತದಾನವಾಗಿರುವುದಾಗಿ ಹೇಳಲಾಗಿದೆ. ಹೊಸ ಮತದಾನದ ಗುರುತು ಹಾಕುವಿಕೆಯ ಕ್ರಮದ ಅನುಭವವಿಲ್ಲದ ಕೆಲವರು ಮತದಾನ ಕೊಠಡಿಯಲ್ಲಿ ತೂಗ ಹಾಕಲಾದ ಚಿತ್ರಗಳ ಮೇಲೆಯೇ ಗುರುತು ಹಾಕಿರುವರೆಂದೂ ಇದರಿಂದಾಗಿ ಕೆಲವು ಮತಗಳು ಹಾಳಾಗುವ ಸಂಭವವಿದೆಯಾಗಿಯೂ ಕೇಳಿ ಬರುತ್ತದೆ.

ಈ ಭಾಗದ ಮತಗಣನೆಯು ಆಯಾಯ ತಾಲೂಕು ಕಚೇರಿಗಳಲ್ಲಿ ಚುನಾವಣಾಧಿಕಾರಿಗಳ ನೇತೃತ್ವದಲ್ಲಿ ತಾ. 21ರಲ್ಲು ನಡೆಯಲಿದೆ.

ದಕ್ಷಿಣ ಭಾಗದ ಅಂದರೆ ಮಂಗಳೂರು, ಕಾಸರಗೋಡು, ಪುತ್ತೂರು ತಾಲೂಕುಗಳಲ್ಲಿ ತಾ. 20ರಲ್ಲು ಮತದಾನ ನಡೆದು ತಾ. 23ರಲ್ಲು ಮತಗಣನೆ ನಡೆಯಲಿದೆ.

ನಗರ ಸಭಾಧಿಪತಿಗಳ ಚುನಾವಣೆ— ಉಡುಪಿ ನಗರ ಸಭೆಯ ಚೇರ್‌ಮನರ ಚುನಾವಣೆಯು ಇದೇ ತಾ. ೨೮ರಲ್ಲು ಪೂರ್ವಾಹ್ನ 11 ಗಂಟೆಗೆ ನಡೆಯಲಿರುವುದು.

ಆತ್ಮಹತ್ಯೆ— ದಿವಂಗತ ಪಿ. ಎ. ಪೈಗಳ ಪತ್ನಿ ಶ್ರೀಮತಿ ಶಾಂತ ಯಾನೆ ಸುಂದರಿ ಬಾಯಿ ಅವರು ಎರಡು ವರ್ಷಗಳ ಅವಧಿಯೊಳಗೆ ಮಕ್ಕಳಿಬ್ಬರನ್ನು ಕಳೆದುಕೊಂಡು ಇತ್ತೀಚೆಗೆ ರೋಗಗ್ರಸ್ತರಾಗಿಯೂ ಇದ್ದು ಜೀವನದಲ್ಲೇ ವೈರಾಗ್ಯಗೊಂಡು ಇದೇ ತಾ. 10ನೇ ರಾತ್ರಿ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡರೆಂದು ತಿಳಿದು ಬಂದಿದೆ.

—ಕನ್ನಡದಲ್ಲಿ ಹೊಸ ಬಗೆಯ ಗ್ರಂಥ—

ಬದುಕು ಬಂಗಾರ

(ಬರೆದವರು: ಕುಮಾರಸ್ವಾಮಿ)

ಪ್ರಸಿದ್ಧ ಪತ್ರಿಕೆಗಳ ಅಭಿಪ್ರಾಯ

***

- ಬಾಳ್ವೆಯ ಹಲವು ಪ್ರಶ್ನೆಗಳನ್ನು ದಿಟ್ಟತನದಿಂದ ಉತ್ತರಿಸಿ ಚೈತನ್ಯಪೂರ್ಣ ವ್ಯಕ್ತಿತ್ವಕ್ಕೆ ಒಪ್ಪವಿಡುವ ಪುಸ್ತಕ.
- ಪ್ರತಿಯೊಬ್ಬನೂ ಸಂಗ್ರಹಿಸಬೇಕಾದ ಸುಖಜೀವನದ ಕೈಗನ್ನಡಿ.

ಬೆಲೆ: ಒಂದೂವರೆ ರೂಪಾಯಿ

ನಮ್ಮಲ್ಲಿ ದೊರೆಯುವ ಇತರ ಪುಸ್ತಕಗಳ ಕೆಟಲಾಗಿಗೂ, ವಾಚನಾಲಯ, ಹೈಸ್ಕೂಲ್, ಕಾಲೇಜುಗಳಿಗೂ ನಾವು ಕೊಡುವ ಕಮಿಶನ್ ದರಕ್ಕೂ ಬರೆಯಿರಿ
1. ನವಯುಗಪ್ರೆಸ್, ಉಡುಪಿ. 2. ನವಭಾರತ ಪುಸ್ತಕ ಭಂಡಾರ, ಉಡುಪಿ.

ಏಶಿಯದ ಸಂಪತ್ತು

(ಏಶಿಯದ ಆರ್ಥಿಕ ಸ್ಥಿತಿ ಚಿತ್ರ)

ಬರೆದವರು: ಕು. ಶಿ. ಹರಿದಾಸ ಭಟ್ಟ, ಎಂ. ಎ.

*

ಇಂದಿನ ರಾಜಕೀಯದಲ್ಲಿ ಚರ್ಚಾಸ್ಪದ ಭೂಖಂಡವಾದ ಏಶಿಯದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಚಿತ್ರವನ್ನು ಸರಳವಾಗಿಯೂ, ವಿಶದವಾಗಿಯೂ, ಸಚಿತ್ರವಾಗಿಯೂ ವಿವರಿಸುವ ಏಕಮಾತ್ರ ಗ್ರಂಥ

ಏಶಿಯದ ಎಲ್ಲ ವಿದ್ಯಾರ್ಥಿಗಳೂ, ರಾಜಕೀಯಜ್ಞರೂ, ಓದಬೇಕಾದ ಪುಸ್ತಕ. ಬೆಲೆ: ಎರಡು ರೂಪಾಯಿ.

ವಾಚನಾಲಯಗಳಿಗೆ ಅತ್ಯಗತ್ಯವಾದದ್ದು.

ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರೆರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರೆರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಅಥೋರಿಟಿ ಕಮಿಟಿಯವರೂ **'ನವಯುಗ'** ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು, ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ **'ನವಯುಗ'**ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರೆರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ. 5-12-0 ಮಾತ್ರ. **ನವಯುಗ, ಉಡುಪಿ.**

ಬೆಳ್ತಂಗಡಿ— ದ. ಕ. ಜಿಲ್ಲಾ ಲೋಕಲ್ ಲೈಬ್ರೆರಿ ಆಥೋರಿಟಿ ನೇತೃತ್ವದಲ್ಲಿ ತಾ. 6ರಲ್ಲು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು ವಾಚನಾಲಯವೊಂದನ್ನು ತೆರೆದರು. ಶ್ರೀ ಬಿ. ವೈಕುಂಠ ಬಾಳಿಗ, ಎಮ್. ಎಲ್. ಎ. ಅವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಮ್. ಎಸ್. ಏಕಾಂಬರ ರಾಯರು ವಾಚನಾಲಯದ ಉದ್ದೇಶ ಮತ್ತು ಜನತೆಗೆ ಅದರಿಂದ ದೊರೆಯುವ ಪ್ರಯೋಜನ ಮೊದಲಾದ ವಿಷಯಗಳನ್ನೆತ್ತಿ ಭಾಷಣವಿತ್ತರು. ಜಿಲ್ಲಾ ವಿದ್ಯಾಧಿಕಾರಿ ಶ್ರೀ ಕೆ. ಸಂಜೀವ ಭಟ್ಟರು ವಂದನೆಗಳನ್ನು ಸಲ್ಲಿಸಿದರು.

ಪೆರಡಾಲ— ಸ್ಥಳೀಯ ಬುನಾದಿ ಶಾಲೆಯ ಹುಟ್ಟು ಹಬ್ಬವು ತಾ. 4ರಲ್ಲು ಮಾಯಿಪಾಡಿ ಬುನಾದಿ ಶ್ರೇಣಿಯ ಪರೀಕ್ಷಾಧಿಕಾರಿಗಳಾದ ಶ್ರೀ ವಿ. ತಿಮ್ಮಪ್ಪ ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ರೈ, ವಿದ್ವಾನ್, ಎನ್. ಶಂಕರನಾರಾಯಣ ಭಟ್ ಮೊದಲಾದವರು ಬುನಾದಿ ಶಿಕ್ಷಣದ ಕುರಿತು ಉಪನ್ಯಾಸವಿತ್ತರು.

ಕಾರ್ಕಳ— ಶ್ರೀ ಹರಿಹರೇಶ್ವರ ದೇವಸ್ಥಾನದಿಂದ ಹೈಪಾಟಿಗಾಗಿ ಬೊಂಬೆತಡ್ಕದವರೆಗಿನ ಮೂರು ಮೈಲು ಉದ್ದದ ಕಾಲುದಾರಿಯನ್ನು ದುರ್ಗಾ ಗ್ರಾಮಸ್ಥರ ಮತ್ತು ದುರ್ಗಾ ಪಂಚಾಯತ ಬೋರ್ಡಿನ ಸಹಾಯದಿಂದ ಮಾರ್ಗವನ್ನಾಗಿ ಮಾಡಿಸುವ ಪ್ರಾರಂಭೋತ್ಸವವು ತಾ. 7ರಲ್ಲು ಶ್ರೀ ಪಿ. ವೆಂಕಟೇಶ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ ಪ್ರೆಸಿಡೆಂಟ್ ಶ್ರೀ ಡಿ. ವಾಮನ ಭಟ್ಟರು ಶ್ರೀ ಹರಿಹರೇಶ್ವರ ದೇವರ ಸನ್ನಿಧಿಯಲ್ಲಿ ಸ್ವಸ್ತಿವಾಚನ ಮಾಡಿದ ನಂತರ ಮಾರ್ಗವಿಸ್ತಾರ ಕಾರ್ಯ ಆರಂಭವಾಯಿತು.

ವೈಲಂಗಡಿ— ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ತಾ. 7ರಲ್ಲು ಪಂಚಾಯತ ಶಾಲೆಯಲ್ಲಿ ಸೇರಿದ ಸಭೆಯಲ್ಲಿ ತೋಟತ್ತಾಡಿ ಗ್ರಾಮದ ಬೀಜದಪಳ್ಳೆ ಎಂಬಲ್ಲಿ ಕಸ್ತೂರ್‌ಬಾ ಗಾಂಧಿ ಕೇಂದ್ರ ತೆರೆಯೋಣದ ಪ್ರಾರಂಭೋತ್ಸವವನ್ನು ಶ್ರೀಮತಿ ಲೀಲಾಬಾಯಿ ಏಕಾಂಬರರಾಯರು ನೆರವೇರಿಸಿದರು. ಕಸ್ತುರ್ಬಾ ಸಂಘದ ಪ್ರಚಾರಕ ಶ್ರೀ ಎಸ್. ಯು. ರಾಮಚಂದ್ರ ನಾಯ್ಕರು ಸಂಘದ ಉದ್ದೇಶಗಳನ್ನು ವಿವರಿಸಿದರು. ಈ ಕೇಂದ್ರದಿಂದ ಜನತೆಗೆ ದೊರೆಯುವ ಪ್ರಯೋಜನಗಳು, ಜನತೆಯು ಕೇಂದ್ರದೊಡನೆ ಸಹಕರಿಸುವ ಆವಶ್ಯಕತೆ ಮೊದಲಾದ ವಿಷಯಗಳನ್ನೆತ್ತಿ ಸಭಾಪತಿಗಳು ಭಾಷಣವಿತ್ತರು.

ಬಾರ್ಕೂರು— ಸ್ಥಳೀಯ ಬೋರ್ಡ್ ಹಾ। ಎ। ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಸುಬ್ಬಣ್ಣ ಸೆಟ್ಟರಿಗೆ ಬ್ರಹ್ಮಾವರಕ್ಕೆ ವರ್ಗವಾದ ನಿಮಿತ್ತ ಅವರಿಗೆ ವಿದಾಯವನ್ನೀಯುವ ಶಾಲಾ ಬಾಲಕರ ಹಾಗೂ ಊರವರ ಪ್ರತ್ಯ ಪ್ರತ್ಯೇಕ ಸಮಾರಂಭಗಳು ತಾ. 10ರಲ್ಲು ಜರಗಿದವು. ಸ್ಥಳೀಯ ನೇಶನಲ್ ಹ್ಯಾಸ್ಕೂಲಿನ ಹೆಡ್ಮಾಸ್ತರ್ ಶ್ರೀ ಪಿ. ಎನ್. ಬೋಜ ರಾಯರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ಮಾನ್ಯ— ತಾ. 7ರಲ್ಲು ಮಾನ್ಯ ಜ್ಞಾನೋದಯ ಶಾಲೆಯಲ್ಲಿ ಶಾರದಾಪೂಜೆ ಮತ್ತು ಪಿತ್ತವರ ಕೂಟವು ಕಾಸರಕೋಡಿನ ತಂತಿ ಮಾಸ್ತರ್ ಶ್ರೀ ಯು. ವಿ. ಸೆಟ್ಟರ ಅಧ್ಯಕ್ಷತೆಯಲ್ಲಿ ಜರಗಿದವು. ಪೆರ್ಡಾಲ ಕೇಂದ್ರದ ಗ್ರಾಮ ಸೇವಕರಾದ ಶ್ರೀ ಯು. ಕೃಷ್ಣಪ್ಪ ಸೆಟ್ಟಿ, ಶ್ರೀಗಳಾದ ಶ್ರೀನಿವಾಸ ಸೆಟ್ಟಿ, ಪುಂಡಲೀಕ ಮಲ್ಯ ಮೊದಲಾದವರು ಭಾಷಣವಿತ್ತರು. ರಾತ್ರಿ ಗ್ರಾಮಸೇವಕರಿಂದ ಶ್ರೀ ಮೂಕಾಂಬಿಕಾ ಭಜನಾ ಮಂಡಳಿಯ ಉದ್ಘಾಟನಾಸಮಾರಂಭವು ನಡೆಯಿತು.

ಕುಂಬಳೆ— ಮದ್ರಾಸಿನ ಚೀಫ್ ಎಂಜಿನಿಯರ್ (ಸಾರ್ವಜನಿಕ ಖಾತೆ) ರವರು ತಾ. 16ರಲ್ಲು ಆಗಮಿಸಿ ಬಂಬ್ರಾಣದಲ್ಲಿ ಕಟ್ಟಲಿರುವ ಆಣೆಕಟ್ಟಿನ ಸ್ಥಳವನ್ನು ಪರಿಶೋಧಿಸಿದರು. ಅವರೊಂದಿಗೆ ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ವೆಂಕಟ್ರಮಣನ್, ಪುತ್ತೂರು ರೆವಿನ್ಯೂ ಡಿವಿಜನಲ್ ಆಫೀಸರ್ ಶ್ರೀ ಬಿ. ಎನ್. ಹೆಗ್ಡೆ ಮತ್ತು ಎಮ್. ಎಲ್. ಎ. ಗಳಾದ ಶ್ರೀಯುತರು ಎಮ್. ಎಸ್. ಮೊಗ್ರಾಲ್ ಮತ್ತು ಬಿ. ವೈಕುಂಠ ಬಾಳಿಗ ಮೊದಲಾದವರು ಇದ್ದರು.

ಪುತ್ತೂರು— ಸ್ಥಳೀಯ ಕರ್ನಾಟಕ ಸಂಘದ ನೇತೃತ್ವದಲ್ಲಿ ತಾ. 5ರಿಂದ 7ರ ತನಕ ನಾಡಹಬ್ಬವು ಆಚರಿಸಲ್ಪಟ್ಟಿತು. ಪ್ರಾರಂಭ ದಿವಸ ಮಡಿಕೇರಿಯ ಶ್ರೀ ಅನಂತಪದ್ಮನಾಭ ರಾಯರ ಭಾರತ ವಾಚನ ನಡೆಯಿತು. ಎರಡನೆ ದಿವಸ ಶ್ರೀ ಬೆಳ್ಳೆ ರಾಮಚಂದ್ರ ರಾಯರು ಈ ಶತಮಾನದ ಕಳೆದ ಅರ್ಧಭಾಗದ ವಿಶೇಷತೆಗಳನ್ನು ವಿವರಿಸಿದರು. ಕೊನೆಯ ದಿವಸ ಶ್ರೀಗಳಾದ ಕೆ. ಎಸ್. ಮಲ್ಯ, ಎನ್. ಗೋವಿಂದ ಭಟ್ ಮತ್ತು ಡಾ। ಬಿ. ಕೃಷ್ಣ ಭಟ್ಟರು 'ಇಂದಿನ ಪರಿಸ್ಥಿತಿಯಲ್ಲಿ ಭಾರತದ ತಾಟಸ್ಥ್ಯ ಸಾಧುವೇ? ಎಂಬ ವಿಷಯದಲ್ಲಿ ಭಾಷಣವಿತ್ತರು.

ಕನ್ನಡ ನುಡಿ

ಕನ್ನಡ ಸಾಹಿತ್ಯ ಪರಿಷತ್ತಿನ ಮಾಸಪತ್ರಿಕೆ

ಈ ಹತ್ತು ವರ್ಷಗಳಲ್ಲಿ ಪ್ರಕಟವಾದ ಯಾವುದಾದರೂ ಕನ್ನಡ ಸಾಹಿತ್ಯ ಕೃತಿಯನ್ನು ಆರಿಸಿಕೊಂಡು ತಮಗೆ ಅದು ಈ ಗುಣ ವಿಶೇಷದಿಂದ ಮೆಚ್ಚಿಕೆಯಾಗಿದೆ, ತಮ್ಮ ಎಣಿಕೆಯಲ್ಲಿ ಇದು ಶ್ರೇಷ್ಠ ಎಂದು ಕೃತಿಯ ಸ್ವರೂಪ ಪರಿಚಯ ಮಾಡಿಕೊಟ್ಟರೆ, ಅದರ ವಿಮರ್ಶೆಯನ್ನು ಚೆನ್ನಾಗಿ ಮಾಡಿಕೊಟ್ಟರೆ ಅಂಥವುಗಳಲ್ಲಿ ಉತ್ತಮವೆಂದು ನಿರ್ಣಯವಾದ ಕೃತಿಗೆ ಒಂದು ಅಲ್ಪ ಪುರಸ್ಕಾರವನ್ನು ಕೊಡಬೇಕೆಂದು ನುಡಿ ನಿರ್ಣಯಿಸಿದೆ. ಇದೇನು ಸ್ಪರ್ಧೆಯಲ್ಲ. ದೊಡ್ಡ ಬಹುಮಾನವನ್ನು ನಾವು ಕೊಡುತ್ತಿಲ್ಲ.

ಸದ್ಯಕ್ಕೆ ಐವತ್ತು ರೂಪಾಯಿಗಳ ಕಾಣಿಕೆಯನ್ನು ಸಲ್ಲಿಸಬೇಕೆಂದು ನಿಶ್ಚಯಿಸಿದೆ. ನುಡಿ ಅಚ್ಚಾಗುವ ಮೂರು ನಾಲ್ಕು ಪುಟಗಳಷ್ಟು ಮಾತ್ರ ಲೇಖನವಿರತಕ್ಕದು.

ಚೆನ್ನಾಗಿರುವುದೆಂದು ತೀರ್ಮಾನಿಸಿದ ಇನ್ನು ಕೆಲವು ಅಂಥವೇ ಲೇಖನಗಳನ್ನೂ ನುಡಿ ಅಚ್ಚು ಮಾಡಬಹುದು. ಅಂಥ ಲೇಖಕರಿಗೆ ಒಂದು ವರುಷದ ನುಡಿಯ ಸಂಚಿಕೆಗಳನ್ನು ಉಚಿತವಾಗಿ ಕಳಿಸಿ ಕೊಡಲಾಗುತ್ತದೆ. ಇವೊತ್ತಿನ ಉಸಃಸ್ಥಿತಿಯಲ್ಲಿ ಈ ಪತ್ರಿಕೆ ಹೆಚ್ಚು ಮರ್ಯಾದೆಯನ್ನು ಮಾಡಲು ಸಾಧ್ಯವಿಲ್ಲ.

ನಮ್ಮ ಪ್ರಾರ್ಥನೆಯನ್ನು ಲಾಲಿಸಿ ನವೆಂಬರ್ ತಿಂಗಳು ಹತ್ತರ ಒಳಗಾಗಿ ಸಾಹಿತಿಗಳು ದೊಡ್ಡ ಮನಸ್ಸು ಮಾಡಿ ತಮ್ಮ ಮೆಚ್ಚಿನ ಗ್ರಂಥ ವಿಮರ್ಶೆಯನ್ನು ಸಂಪಾದಕರ ಹೆಸರಿಗೆ ಕಳಿಸಿಕೊಡಬೇಕೆಂದು ಬೇಡುತ್ತೇವೆ. ನುಡಿಗೆ ಕಳಿಸಿದ ಒಂದು ಹಸ್ತಪ್ರತಿಯನ್ನು ತಾವೇ ಉಳಿಸಿಕೊಳ್ಳುವುದು ಮೇಲು. ಮೂಲ ಪ್ರತಿಯನ್ನು ಹಿಂದಕ್ಕೆ ಕಳಿಸುವುದರಲ್ಲಿ ತಡ, ತೊಡಕು, ವೆಚ್ಚ ಆದಾವು.

ಸಂಪಾದಕ.

ಬೆಂಗಳೂರು, ತಾ. ೯—೧೦—೫೪.

ಕಥೆ, ಕಾದಂಬರಿ, ಕವಿತೆ, ನಾಟಕ ಮೊದಲಾದ ನಾನಾ ಪುಸ್ತಕಗಳು

1	ಸ್ವತಂತ್ರ ಜೀವನೋಪಾಯ	0	4
2	ಸಂಶಯ ಪಿಶಾಚಿ	0	10
3	ನಾಡ ಕತೆಗಳು	0	3
4	ಕುಶಲವ	0	8
5	ಕಾವ್ಯ ಸಾಮ್ರಾಜ್ಯ	1	8
6	ಮಧುವನ	3	0
7	ಮುಂದಿನ ದೇವರು	0	4
8	ವ್ಯಭಿಚಾರಿಣಿ ಯಾರು	1	4
9	ಹೆಂಡ್ತಿ ಗಂಡನಾದರೆ	0	4
10	ಪುರುಷ ವಧು	0	4
11	ಸನ್ಯಾಸಿಯ ಸೋಗಿನಲ್ಲಿ	0	12
12	ನಂದಾದೀಪ	0	14
13	ದೇಶಭಕ್ತ	1	4
14	ಪ್ರೇಮ ವಿಜಯ	1	0
15	ರಂಗಭೂಮಿ	0	10
16	ಸೇವಾಪಥ	0	8
17	ನಾರೀ ಹೃದಯ	1	8
18	ಭ್ರಾಂತೀಯ ಕತೆಗಳು	1	12
19	ಪ್ರಕಾಶ	2	4
20	ಮೂರು ಪ್ರಹಸನಗಳು	1	4
21	ನಗೆ ನೋಟಗಳು	1	0
22	ಅನ್ನದೇವರು ಮತ್ತು ಕತೆಗಳು	1	0
23	ಭಾರತದಲ್ಲಿ ಜಾತಿಭೇದ	1	0
24	ವಿಷ್ಣುವಿನ ದಶಾಪರಾಧ ಅರ್ಥಾತ್ ದಶಾವತಾರ	0	12
25	ಆಕಾಶ ಗಂಗೆ	2	8
26	ಸ್ವಾತಂತ್ರ್ಯವೀರ ಸಾವರಕರರು	1	4
27	ಜೀವನ ಸಂಗ್ರಾಮ	1	8
28	ಕದಂಬ	1	4
29	ಕವಿತಾಕಾಮಿನಿ	2	0
30	ಸ್ವರಾಜ್ಯ ವಿಜಯ	0	8
31	ಸಪ್ತಸಾಗರ	0	12
32	ಜಮೀನ್ದಾರ	1	8
33	ಬಾಳಿನ ಬೆಡಗು	1	4
34	ಲೋಪಾಮುದ್ರೆ	1	0
35	ಚಿಗುರು	0	10
36	ಸಣ್ಣ ಕಥೆಗಳು	0	10
37	ನಕ್ಕರೂ ನಗಬಹುದು	0	10

ವಿವರವಾದ ಕೆಟಲಾಗಿಗೆ ಬರೆಯಿರಿ.
ಎಲ್ಲೆಲ್ಲಿಯೂ ಸ್ಟಾಕಿಸ್ಟರು ಬೇಕಾಗಿದ್ದಾರೆ.
ಕಿರಿಯರ ಪ್ರಪಂಚ ಉಡುಪಿ.
ಅಥವಾ
[illegible] ಉಡುಪಿ

THE CATHOLIC BANK LTD., KALLIANPUR.

ದಿ ಕೆಥೊಲಿಕ್ ಬ್ಯಾಂಕ್ ಲಿಮಿಟೆಡ್, ಕಲ್ಯಾಣಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬ್ಯಾಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು ಕ್ಲಪ್ತ ವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ, ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ರಿಜಿಸ್ಟ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ, ಈ ಮೂಲಕ ತಿಳಿಯಪಡಿಸುವುದೇನಂದರೆ— ಸದ್ರಿ ನಗಗಳನ್ನು ಇದೇ ಅಕ್ಟೋಬರ ತಿಂಗಳ 30ನೆ ತಾರೀಕಿನ ವಳಗೆ ಬ್ಯಾಂಕಿಗೆ ಸಲ್ಲತಕ್ಕ ಅಸಲು, ಬಡ್ಡಿ, ನೋಟೀಸು ಖರ್ಚು ಇತ್ಯಾದಿಗಳನ್ನು ಸಲಾಯಿಸಿ, ಬಿಡಿಸಿಕೊಂಡು ಹೋಗದೆ ಇದ್ದ ಪಕ್ಷದಲ್ಲಿ, ಬರುವ ನವಂಬರ ತಿಂಗಳ ತಾರೀಕು 6—11—1954ನೇ ಶನಿವಾರ ಪೂರ್ವಾಹ್ನ ಗಂಟೆ 11ಕ್ಕೆ, ಯಾ ಅನಂತರ ನಮಗೆ ಯುಕ್ತ ಕಂಡ ತಾರೀಕಿನಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡೋಣಾಗುವುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸಲು ಮೊಬಲಗು		
27/2173	ಬಿ. ಸೀತಾರಾಮ ಹೆಗ್ಡೆ ಮೆನೇಜಿಂಗ್ ಡೈರೆಕ್ಟರ್ ವಿಜಯಾ ಟೈಲ್ ವರ್ಕ್ಸ್ ಕಲ್ಯಾಣಪುರ P. O.	650	0	0
28/873	Do	1500	0	0
30/601	ಬಿ. ಸೀತಾರಾಮ ಹೆಗ್ಡೆ ಸೇಜಾರ್, ಮೂಡು ತೋನ್ಸೆ ಕಲ್ಯಾಣಪುರ P. O.	950	0	0
28/388	ಬಿ. ಹಿರಿಯಣ್ಣ ಹೆಗ್ಡೆ, ತೇಜಪ್ಪ ಹೆಗ್ಡೆಯವರ ಮಗ ಕಲ್ಯಾಣಪುರ P. O.	188	0	0
29/696	ಬಾಬ ಮರಕಾಲ, ಕುರ್ದ ಮರಕಾಲನ ಅಳಿಯ, ಅರಮನೆ ಹಿತ್ತಲು, ಕಲ್ಯಾಣಪುರ P. O.	50	0	0
28/727	ಲಿಯೋಡಿಸೋಜ, ಸೆಬೇಸ್ಟಿನ್ ಡಿಸೋಜರ ಮಗ ತಿಮ್ಮನ್ ಕುದ್ರು, ತೋನ್ಸೆ, ಕೆಂಮಣ್ಣು P. O.	45	0	0
28/1005	ಗೋವಿಂದ ಪೂಜಾರಿ ಕೋಟಿ ಪೂಜಾರಿಯ ಮಗ ಕುಕ್ಕೆಕುದ್ರು, ಹಾರಾಡಿ, ಸಾಲಿಕೆರೆ P. O.	15	0	0

ಕಲ್ಯಾಣಪುರ,
18-10-1954.

A. Rebello,
ಏಜಂಟ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ:— ಶ್ರೀರಾಜರಾಜೇಶ್ವರಿಯವರ

ನವಜೀವನಂ (ತಮಿಳು)

(ಜೆಮಿನಿ ತಯಾರಿಕೆ)

ತಾರಾಗಣದಲ್ಲಿ:- ವಿ. ನಾಗಯ್ಯ, ಕನ್ನಾಂಬ, ವರಲಕ್ಷ್ಮಿ, ಶ್ರೀರಾಮನ್, ಟಿ. ಆರ್. ರಾಮಚಂದ್ರನ್, ಗಣೇಶನ್, ಟಿ. ಎ. ಜಯಲಕ್ಷ್ಮಿ.

ಬರುವ ಚಿತ್ರ:—

ಅವ್ವೈಯಾರ್ (ತಮಿಳು)

ಓದಲೇಬೇಕಾದ ದಿ। ಕಿಲ್ಲೆಯವರ ಮೂರು ಪುಸ್ತಕಗಳು

ಪ್ರಾಚೀನ ತುಳುನಾಡು

(ಎಸ್. ಎಸ್. ಕಿಲ್ಲೆ ಮತ್ತು ಎಸ್. ಎ. ಶೀನಪ್ಪ ಹೆಗ್ಡೆ)

ಹಿಂದಿನ ತುಳುನಾಡಿನ ಚರಿತ್ರೆಯನ್ನು ವಿವರಿಸುವ ಪುಸ್ತಕ. (ಶ್ರೀ. ಮಂಜೇಶ್ವರ ಗೋವಿಂದ ಪೈಗಳ ಮುನ್ನುಡಿ)

150 ಪುಟಗಳು. ಬಿಳಿ ಕಾಗದ, ಆಕರ್ಷಕ ರಕ್ಷಾಪತ್ರ. ಬೆಲೆ 2-0-0.

ಭಾರತದ ಕರ್ಣ

"ಭಾರತದ ಕರ್ಣನು ದಿ। ಕಿಲ್ಲೆಯವರಿಗೆ ಒಲಿದಿದ್ದ.. ಇದು ಅವರ ಕರ್ಣನಪಾತ್ರವನ್ನು ನೋಡಿದವರಿಗೇ ಗೊತ್ತು. ಆ ದುರಂತ ಕರ್ಣನಚಿತ್ರ ಎಂದೆಂದೂ ಜನಮನದಿಂದ ಮಾಸಿಹೋಗದು". (ಪ್ರೊ। ಎಂ. ಆರ್. ಶಾಸ್ತ್ರಿಗಳ ಮುನ್ನುಡಿಯಿಂದ) ಭಾರತದ ಕರ್ಣನ ಪಾತ್ರವನ್ನು ವರ್ಣಿಸುವ ಪುಸ್ತಕ. ಬೆಲೆ 0-6-0.

ಮುರಲಿ

ಮೇಲ್ತರಗತಿಯ ಕವಿತೆಗಳ ಸಂಗ್ರಹ. ಬೆಲೆ 0-12-0.

(ಮುನ್ನುಡಿಕಾರರು: ಶ್ರೀ. ಕಯ್ಯಾರ ಕಿಞ್ಞಣ್ಣ ರೈ)

ಮೂರೂ ಪುಸ್ತಕಗಳನ್ನೂ ದಿ। ಕಿಲ್ಲೆಯವರ ಧರ್ಮಪತ್ನಿ ಶ್ರೀಮತಿ ಇಂದಿರಾ ಕಿಲ್ಲೆ, ಮಂಗಳೂರು—ಅವರು ಪ್ರಕಟಿಸಿದ್ದಾರೆ.

ನಿಮಗೆ ಬೇಕಾದ ಪ್ರತಿಗಳಿಗೆ ಬರೆಯಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ

ಮಂಗಳೂರು

ನೆರೆ ಪೀಡಿತರ ನಿಧಿ ಸಂಗ್ರಹ: ಬಿಹಾರ್, ಆಸ್ಸಾಮ್, ಪಶ್ಚಿಮ ಬಂಗಾಳದ ನೆರೆ ಪೀಡಿತರ ಸಹಾಯಾರ್ಥವಾಗಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಕಡೆಯಿಂದ ನಡೆದ ಮೆರವಣಿಗೆ ಹಾಗು ಡಬ್ಬಿಗಳ ಮೂಲಕ ರೂ. 857—13—7 ನಗದಿಯಿಂದಲೂ, 101 ಯಾರ್ಡು ಹೊಸ ವಸ್ತ್ರ, 22 ವಾರು ಹೊಸ ಬಾತ್ ಟವೆಲ್‌ಗಳು, 93 ಹಳೆ ವಸ್ತ್ರಗಳು ಸಂಗ್ರಹವಾಗಿವೆ. ಸಹಾಯ ಧನವನ್ನು ಮುಂದೆ ಯಶಸ್ವೀಕರಿಸಲಾಗುವುದು. ಸಹಾಯ ಮಾಡಲಪೇಕ್ಷಿಸುವವರು ಕಾರ್ಯದರ್ಶಿ, ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ, ಬಾವಟೆ ಗುಡ್ಡೆ, ಮಂಗಳೂರು-1, ಅವರಿಗೆ ಕಳುಹಿಸಬಹುದು.

ಜಿಲ್ಲಾ ಬೋರ್ಡಿನ ಸಭೆಯು ತಾ. 15ರಲ್ಲಿ ಸ್ಪೆಶ್ಯಲ್ ಆಫೀಸರ್ ಶ್ರೀ. ಬಿ. ಸೀತಾರಾಮ ಸೇರ್ವೆಯವರ ನಾಯಕತ್ವದಲ್ಲಿ ಜರಗಿತು. ಬೆಳ್ಳಾರೆ ಬೋರ್ಡ್ ಹಾ. ಎ. ಶಾಲೆಯ ಕೈಮುಗ್ಗದ ಕೊಠಡಿಯ ಪುನರ್‍ರಚನೆಗೆ ರೂ. 1650/- ಮಂಜೂರು ಮಾಡಲಾಯಿತು. ಇದಕ್ಕೆ ರಾಷ್ಟ್ರೀಯ ವಿಸ್ತರಣಾ ಯೋಜನೆಯಿಂದ ರೂ. 500/- ಸಹಾಯ ಧನ ದೊರೆಯುವುದು. ಹೆಜ್ಮಾಡಿ ಹಾ. ಎ. ಶಾಲಾ ವಠಾರದಲ್ಲಿ ಫಿಲ್ಟರ್ ಪ್ಲ್ಯಾಂಟ್ ನಳ್ಳಿ ಬಾವಿಯೊಂದನ್ನು ಆಗಿಸಿ, ತಮ್ಮ ತೀರ್ಥರೂಪ ಶ್ರೀ. ಎಚ್. ಅಬ್ಬಯ್ಯ ಶೆಟ್ಟಿಯವರ ಸ್ಮಾರಕಾರ್ಥವಾಗಿ ದಾನ ಮಾಡಿದ ಬಾವಿಯೆಂದು ಅದರ ಮೇಲೆ ಶಾಸನ ಬರೆಯಲು, ಶ್ರೀ. ಎಚ್. ಶ್ರೀನಿವಾಸ ಶೆಟ್ಟಿಯವರಿಗೆ ಕೃತಜ್ಞತೆ ಸೂಚಿಸಿ, ಪರವಾನಗಿ ಕೊಡಲಾಯಿತು. ಉಡುಪಿ ಬೋರ್ಡು ಹ್ಯಾಸ್ಕೂಲಿನ ಪೀಪಲ್ಸ್ ಹಾಲಿನಲ್ಲಿ ಬಾಪೂಜೀಯವರ ಭಾವಚಿತ್ರವೊಂದನ್ನಿರಿಸಲು ಉಡುಪಿಯ ಶ್ರೀ. ಕೆ. ಶ್ರೀನಿವಾಸ ಪೈಗಳಿಗೆ ಅನುಮತಿ ಕೊಡಲಾಯಿತು.

ಕುಂದಾಪುರ ತಾಲೂಕಿನ ವಂಡ್ಸೆ ಮತ್ತು ಪುತ್ತೂರು ತಾಲೂಕಿನ ಅಮರ ಮುಡ್ನೂರು ಗ್ರಾಮಗಳಲ್ಲಿ, ಅಲ್ಲಿನ ಜನರು ಬೇಕಾದ ಕಟ್ಟಡ ಸೌಕರ್ಯ ಮತ್ತು ಸಾಮಗ್ರಿಗಳನ್ನು ಧರ್ಮಾರ್ಥ ಒದಗಿಸಿ ಕೊಟ್ಟಲ್ಲಿ, ಅಲ್ಲಿಯ ಬೋರ್ಡು ಎಲಿಮೆಂಟರಿ ಶಾಲೆಗಳಲ್ಲಿ ಮೇಲಿನ ಕ್ಲಾಸುಗಳನ್ನು ತೆರೆದು ಹಾಯರ್ ಎಲಿಮೆಂಟರಿ ಶಾಲೆಗಳನ್ನಾಗಿ ಮಾರ್ಪಡಿಸುವ ನಿರ್ಧಾರವಾಯಿತು. ಪಡ್ಡೆಯಿಂದ ಚಂದೇರ ರೈಲ್ವೆ ಸ್ಟೇಶನು ತನಕ ಒಂದು ರಸ್ತೆಯನ್ನು ನಿರ್ಮಿಸಿ ಒಂದು ಮೋರಿಯನ್ನು ರಚಿಸುವ ರೂ. 30,000/- ದ ಸೂಚನೆಯನ್ನು ಮಂಜೂರುಮಾಡಲಾಯಿತು. ಆ ಬಗ್ಗೆ ಯುದ್ಧಾನಂತರದ ಪುನರ್ರಚನಾ ಯೋಜನೆಯಂತೆ ಗ್ರಾಂಟು ಮಂಜೂರುಮಾಡುವಂತೆ ಸರಕಾರವನ್ನು ಕೇಳಿಕೊಳ್ಳಲಾಯಿತು.

ರೈತ ದಿನಾಚರಣೆ— ಕಂಕನಾಡಿಯ ಭತ್ತ ಸಂಶೋಧನಾ ಕೇಂದ್ರದಲ್ಲಿ ತಾ. 10ರಲ್ಲು ರೈತ ದಿನಾಚರಣೆಯು ಶ್ರೀ ನಂಬಂಪಳ್ಳಿ ರಾಮರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಭತ್ತ ಸಂಶೋಧನೆಯ ಹಾಗೂ ಸಾಧನೋಪಕರಣಗಳ ಪ್ರದರ್ಶನ ಹಾಗೂ ರೈತರ ಉತ್ಪತ್ತಿ ಪ್ರದರ್ಶನ ಮತ್ತು ಭಾಷಣಗಳ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲಾ ಕೃಷಿ ಅಧಿಕಾರಿ ಶ್ರೀ ಕೆ. ಸಂಜೀವ ಶೆಟ್ಟರು ಧನ್ಯವಾದಗಳನ್ನರ್ಪಿಸಿದರು.

ಸಾಂಸ್ಕೃತಿಕ ಪ್ರದರ್ಶನ— ಭಾರತ-ರಷ್ಯಾ ಸಾಂಸ್ಕೃತಿಕ ಸಂಘದ ಮಂಗಳೂರು ಶಾಖೆಯ ಆಶ್ರಯದಲ್ಲಿ ತಾ. 10ರಲ್ಲು ಶ್ರೀ ಎಮ್. ಎಸ್. ಪೀತಾಂಬರರಾಯರ ಅಧ್ಯಕ್ಷತೆಯಲ್ಲಿ ಸಾಂಸ್ಕೃತಿಕ ಪ್ರದರ್ಶನವೊಂದು ಜರಗಿತು. ಸಂಘದ ಅಧ್ಯಕ್ಷ ಡಾ। ಎಮ್. ಉಮೇಶರಾಯರು ಸ್ವಾಗತ ಭಾಷಣಮಾಡಿದರು. ಬಳಿಕ ಶ್ರೀ ಆರ್. ಎಸ್. ರತ್ನಾಕರ ಭಟ್ಟರ ಪಿಟೀಲುವಾದನ, ಶ್ರೀಮತಿ ರಾಧಾ ಶಾಸ್ತ್ರಿಯವರಿಂದ ಭಾರತ ವಾಚನ, ಕುಮಾರಿ ಎ. ನಳಿನಿ ರಾವ್ ಇವರಿಂದ ನರ್ತನ ಇತ್ಯಾದಿ ಕಾರ್ಯಕ್ರಮಗಳಾದುವು.

ನಾಡಹಬ್ಬ— ತರುಣ ಕಲಾವೃಂದದ ಆಶ್ರಯದಲ್ಲಿ ತಾ. 9 ಮತ್ತು 10ರಲ್ಲು ಗಣಪತಿ ಹ್ಯಾಸ್ಕೂಲಿನ ಶಾರದಾ ಸದನದಲ್ಲಿ ನಾಡಹಬ್ಬವು ಆಚರಿಸಲ್ಪಟ್ಟಿತು. ಶ್ರೀಗಳಾದ ಬಿ. ಶಂಕರ ಭಟ್, ಪಿ. ಕೆ. ನಾರಾಯಣ, ಆರ್. ಎಸ್. ಪೈಲಾಯ, ಕೃಷ್ಣಗೋಪಾಲ ಮೊದಲಾದವರು ಭಾಷಣವಿತ್ತರು. ಎರಡನೆ ದಿವಸದ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಕೆ. ಸೂರ್ಯನಾರಾಯಣ ಅಡಿಗರು ವಹಿಸಿದ್ದರು. ಶ್ರೀ ವಿಶ್ವನಾಥ ರಾಯರ ಭಾಷಣ, ತಾಳಿತ್ತಾಯ ಸಹೋದರಿಯರ ಸಂಗೀತ, ಭಾರತೀಯ ನೃತ್ಯ ಮೊದಲಾದ ಮನರಂಜನ ಕಾರ್ಯಕ್ರಮಗಳಾದುವು.

ಅಂಚೆ ನೌಕರರ ಸಂಘದ— ಮಹಾಸಭೆಯು ತಾ. 10ರಲ್ಲು ಜರಗಿ ಶ್ರೀ ಗಂಗಾಧರದಾಸ್, ಎಡ್ವೊಕೇಟ್ ಅವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು.

ನಿಧನ— ಮಂಗಳೂರಿನ ಪ್ರಸಿದ್ಧ ವ್ಯಾಪಾರಿಗಳಾದ ಮಚೇಲ್ ವೆಂಕಟ್ರಾಯ ನಾಯಕರು ತಾ. 13ರಲ್ಲು ದೈವಾಧೀನರಾದುದು ತುಂಬಾ ವಿಷಾದಕರವಿದೆ.

ಸರ್ಟಿಫಿಕೇಟಿನ ದುರುಪಯೋಗ. ಭಾಗ ಮಂಡಲದ ಎಮ್. ಎನ್. ನಂಜುಂದ ಎಂಬವರು ತನಗೆ ದೊರೆತ ಕೆ. ವಸಂತರಾವ್ ಎಂಬ ಹೆಸರುಳ್ಳ ಎಸ್. ಎಸ್. ಎಲ್. ಸಿ. ಸರ್ಟಿಫಿಕೇಟನ್ನು ಉಪಯೋಗಿಸಿ, ಹೆಸರು ಬದಲಾಯಿಸಿಕೊಂಡು ಮಡಿಕೇರಿಯ ಸರಕಾರಿ ಕಾಲೇಜಿಗೆ ಸೇರಿದರು. ಆ ಮೇಲೆ ತನ್ನ ಹೆಸರನ್ನು 'ಎನ್. ಎಮ್. ವಸಂತ ರಾವ್' ಎಂದು ಬದಲಾಯಿಸಲು ಮದ್ರಾಸ್ ಫೋರ್ಟ್ ಸ್ಯೆಂಟ್ ಜೋರ್ಜ ಗಜೇಟಿನಲ್ಲಿ ಅರ್ಜಿ ಮಾಡಿದರಲ್ಲದೆ ಕೊಲಂಬೋಕ್ಕೆ ಹೋಗಲು ಅನುಮತಿ ಪತ್ರಕ್ಕೆ ಬರೆಕೊಂಡಿದ್ದರು. ಇಷ್ಟರೊಳಗೆ ನಿಜವಾದ ಎನ್. ಎಮ್. ವಸಂತ ರಾಯರು ಮಂಗಳೂರು ರೂಬಾರಿ ಹ್ಯಾಸ್ಕೂಲಿನಲ್ಲಿ 1862ರಲ್ಲು ಎಸ್. ಎಸ್. ಎಲ್. ಸಿ. ಪಾಸಾಗಿ ಸರ್ಟಿಫಿಕೇಟನ್ನು ಕಳಕೊಂಡುದನ್ನು ದನ್ನು ತಿಳಿಸಿ ಪ್ರತ್ಯೇಕ ಸರ್ಟಿಫಿಕೇಟಿಗೆ ಬರೆಕೊಂಡಾಗ ಈ ಮೋಸದ ವಿಚಾರವು ಹೊರಬಿದ್ದು ಶ್ರೀ ಎಮ್. ಎನ್. ನಂಜುಂದ ಅವರು ಮಡಿಕೇರಿ ಪೋಲೀಸರಿಂದ ಬಂಧಿಸಲ್ಪಟ್ಟು ತನಿಖೆಗಾಗಿ ಅವರನ್ನು ಇಲ್ಲಿಗೆ ತಂದಿದ್ದು ತಾ. 11 ರಲ್ಲು ಅವರನ್ನು ಮಡಿಕೇರಿಗೆ ಕೊಂಡು ಹೋಗಿರುತ್ತಾರೆ.

ಹಿಂದ್ ಕುಷ್ಠ ನಿವಾರಣಾ ಸಂಘ ದ ಮಂಗಳೂರು ಶಾಖೆಯ ಆಶ್ರಯದಲ್ಲೊಂದು ಸಭೆಯು ತಾ. 17ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಬಿ. ಸೀತಾರಾಮ ಸೇರ್ವೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಂಘದ ಕಾರ್ಯದರ್ಶಿ ಡಾ। ಎ. ಎಸ್. ಕೊಯಿಪೋರವರು ಸ್ವಾಗತ ಭಾಷಣ ಮಾಡುತ್ತಾ ಈ ಜಿಲ್ಲೆಯಲ್ಲಿ 9000 ಕ್ಕೂ ಮಿಕ್ಕಿ ಕುಷ್ಠರೋಗಿಗಳಿರುವರು. ಈಗ ಬದಿಯಡ್ಕ ಮತ್ತು ಶಿರ್ವ ಸ್ಥಳಗಳಲ್ಲಿ ಚಿಕಿತ್ಸಾ ಕೇಂದ್ರಗಳಿದ್ದು ಅವುಗಳನ್ನು ಕೇಂದ್ರ ಆಸ್ಪತ್ರೆಗಳನ್ನಾಗಿ ಮಾರ್ಪಡಿಸಲು ಸಾಧ್ಯವಿದೆ. ಈಗ ಓಮಂಜೂರಿನಲ್ಲಿ ಒಂದು ಚಿಕಿತ್ಸಾ ಕೇಂದ್ರ ತೆರೆಯಲು ಆಲೋಚನೆಯಿದ್ದು ಅದು ಬೇಗನೆ ಕಾರ್ಯಗತವಾಗುವುದು. ಸಂಘದ ಕಡೆಯಿಂದ ನಡೆಯುವ ಕಾರ್ಯಗಳಿಗೆ ಹಣದ ಆವಶ್ಯಕತೆಯಿರುವುದರಿಂದ ಎಲ್ಲರೂ ಸಂಘಕ್ಕೆ ಸದಸ್ಯರಾಗಿ ಸೇರಿ ಸಹಕರಿಸಬೇಕೆಂದು ಕೇಳಿಕೊಂಡರು. ಶ್ರೀ ಬಿ. ವಿ. ಬಾಳಿಗ, ಎಮ್. ಎಲ್. ಎ. ಅವರು ಮಾತನಾಡುತ್ತಾ ಈ ರೋಗ ತಡೆಗಟ್ಟಲು ಸಮಾಜ ಸೇವಕರ ಆವಶ್ಯಕತೆಯಿದೆ ಎಂದರು. ಜಿಲ್ಲೆಯ ಸಂಘ ಸಂಸ್ಥೆಗಳು, ಸಮಾಜ ಸೇವಾ ಸಂಘಗಳು ಈ ಸಂಘಕ್ಕೆ ಸದಸ್ಯರಾಗಿ ಸೇರಬೇಕೆನ್ನುವ, ಕುಷ್ಠರೋಗ ನಿವಾರಣೆ ಕಾರ್ಯದಲ್ಲಿ ಜನಜಾಗ್ರತಿಯನ್ನುಂಟು ಮಾಡಲು ಸಹಕರಿಸಬೇಕೆನ್ನುವ ನಿರ್ಣಯ ಪಾಸಾಯಿತು. ಈ ಬೇನೆಯಿಂದ ನರಳುತ್ತಿರುವವರಿಗೆ ಸಹಾಯ ಮಾಡುವುದು ಸರ್ವರ ಕರ್ತವ್ಯವೆಂದು ಅಧ್ಯಕ್ಷರು ಹೇಳಿದರು. ಶ್ರೀ ಕೆ. ಆರ್. ಆಚಾರ್ಯರು ವಂದನೆಗಳನ್ನರ್ಪಿಸಿದರು.

ಕಾರಿಗೆ ಡಿಕ್ಕಿ ಹೊಡೆದು ವಿದ್ಯಾರ್ಥಿಯ ದುರ್ಮರಣ— ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಗೆ ಕುಳಿತ್ತ ಶ್ರೀ ರಮಾನಾಥನ್ ಎಂಬ ವಿದ್ಯಾರ್ಥಿಯೊಬ್ಬನು ಮಧ್ಯಾಹ್ನ ಊಟಮಾಡಿ ಮನೆಯಿಂದ ಸೈಕಲಿನಲ್ಲಿ ಬರುವಾಗ ಕರಂಗಲಪಾಡಿಯಲ್ಲಿ ಕಾರೊಂದಕ್ಕೆ ಡಿಕ್ಕಿ ಹೊಡೆದು ಸಾಯಂಗಾಲ ವೆನ್‌ಲಾಕ್ ಆಸ್ಪತ್ರೆಯಲ್ಲಿ ಮೃತನಾದನು.

ಡಿ. ಕೆ. ಭಾರದ್ವಾಜ

ಇಂಗ್ಲಿಷ್ × ಇಂಗ್ಲಿಷ್

ಕನ್ನಡ ಡಿಕ್ಸನೆರಿ

ಬೆಲೆ: ರೂ. 5—6—0

ಶಿವರಾಮ ಕಾರಂತರ

ಕನ್ನಡ × ಕನ್ನಡ

ಸಿರಿಗನ್ನಡ ಅರ್ಥಕೋಶ

ಬೆಲೆ: ರೂ. 4—0—0

ನವಭಾರತ ಬುಕ್ ಡಿಪ್ಪೊ, ಉಡುಪಿ.

NAVAYUGA WEEKLY

* * * * *

ADVERTISEMENT RATES

Display Advertisements:— Rs. 2/-8 per column inch for contracts of 50" or more and Rs. 3/- per column inch for casual advertisements.

Classified Advertisements:— As. 8/- per line (minimum 8 lines).

For rates for advertising in colours and special positions, please write to:

ADVERTISEMENT MANAGER,

'NAVAYUGA'

Post Box No. 22, UDIPI, S. K.

ನಮ್ಮ ವಿಮೆದಾರ, ಸಭಾಸದ ಪ್ರತಿನಿಧಿ ಮತ್ತು ಹಿತಚಿಂತಕ

ಇವರಿಗೆ

ಈ ದೀಪಾವಳಿಯು ಆನಂದ ಮತ್ತು ಸುಖದಾಯಕವಾಗಲಿ

The

ಮೋಟಾರ ಓನರ್ಸ ಮ್ಯೂಚುವಲ ಇನ್ಸ್ಯೂ. ಕಂ.ಲಿ.

ಮುಖ್ಯ ಕಚೇರಿ:- ಫೋರ್ಟ ರೋಡ, ಬೆಳಗಾವಿ.

ಶಾಖೆಗಳು:- ಮುಂಬಯಿ, ಪುಣೆ, ಕೊಲ್ಹಾಪುರ, ನಾಸಿಕ, ಮದ್ರಾಸ.

ಅರ್ಗನಾಯಝರ್ಸ:- ಕಲಕತ್ತಾ, ಕರ್ನೂಲಮುಂತಾದ ಅನೇಕ ಸ್ಥಳಗಳಲ್ಲಿ.

* ಬೇಗನೇ ಆಯುರ್ವಿಮಾ ಕ್ಷೇತ್ರದಲ್ಲಿ ಹೆಜ್ಜೆಯಿಡುವದು. *

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—

ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]

ಯನ್ನು ಇಂದೇ ತರಿಸಿಕೊಳ್ಳಿರಿ.

ಬೆಲೆ:— ಸಾಧಾರಣ ಪ್ರತಿ- ರೂ. ೧-೮-೦. (ಟಪ್ಪಾಲು ಖರ್ಚು ಬೇರೆ)

ಉತ್ತಮ ಪ್ರತಿ— ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)

ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೊಸ ಪುಸ್ತಕ!

ಶ್ರೀಮತಿ ಕೆ. ದೇವಕಿ ಎಂ. ಶೆಟ್ಟಿಯವರು ಬರೆದಿರುವ,

ವಿನೋದದೊಡನೆ ವಿಚಾರವನ್ನೂ ಪ್ರಚೋದಿಸುವ

ನಕ್ಕು ನಗಿಸುವ ಆರು ನಗೆನಾಟಕಗಳು—

ನಕ್ಕರೂ ನಗಬಹುದು

ಯಮನನ್ನು ಸೋಲಿಸಿದ ವೀರ ರಮಣಿ, ಹತ್ತು ಪುಸ್ತಕಗಳಿಂದ ಹತ್ತು ಸಾರಾ ಕಮ್ಮಿ ವ್ರೋಚಿಸಿದ ಸಾಹಿತಿ ಇವರ ಚಿತ್ರವನ್ನೂ ಅಕ್ಕಪಕ್ಕದ ಮನೆಯವರ ಕಾಟ ಕೊಟ್ಟದ ಮರ್ಮವನ್ನೂ, ನಿಶ್ಚೈಸಿದ್ದ 25 ಸಾವಿರ ವರದಕ್ಷಿಣೆ, ಸಿಕ್ಕಿದ್ದು ಬರೀ ವಧುದಕ್ಷಿಣೆ ಇದರ ಚಮತ್ಕಾರ ವೈಖರಿಯನ್ನೂ ತಿಳಿಯಬೇಕೇ- ಹಾಗಿದ್ದರೆ ಇಂದೇ ಪ್ರತಿಯೊಂದನ್ನು ತರಿಸಿಕೊಳ್ಳಿರಿ. ಬೆಲೆ. 0—10—0

ಕಿರಿಯರ ಪ್ರಪಂಚ, ಉಡುಪಿ. ನವಭಾರತ ಪುಸ್ತಕ ಭಂಡಾರ, ಉಡುಪಿ.

ಅಂಚೆ ಕಛೇರಿಯ ಲೇವಾದೇವಿ

ಅಂಚೆ ಕಛೇರಿಯ ಮುಖ್ಯ ಕೆಲಸವು ಅಂಚೆಯ ರವಾನೆಯೇ ಆದರೂ ಅದು ಇತರ ಅನೇಕ ಕೆಲಸಗಳನ್ನು ನಡೆಸುತ್ತದೆ. ಸಣ್ಣ ಪ್ರಮಾಣದ ಉಳಿತಾಯಗಾರರಿಗೆ ಬ್ಯಾಂಕಿಂಗ್ ಸೌಕರ್ಯವನ್ನು ಒದಗಿಸುವುದು ಇವುಗಳಲ್ಲಿ ಮುಖ್ಯವಾದದ್ದು. ಅಂಚೆ ಇಲಾಖೆಯು ಈಗ 480 ಲಕ್ಷ ಉಳಿತಾಯದ ಲೆಖ್ಖಗಳನ್ನಿಟ್ಟು ಕೊಂಡಿದೆ. ಆ ಲೆಖ್ಖದಲ್ಲಿ ಒಟ್ಟು 217·7 ಕೋಟಿ ರೂಪಾಯಿಗಳಿವೆ. ಇದರ ಜೊತೆಗೆ ರಕ್ಷಣಾ ಶಾಖೆಯ 15 ಲಕ್ಷ ಉಳಿತಾಯ ಲೆಖ್ಖಗಳಿವೆ. 1.2 ಕೋಟಿ ರೂಪಾಯಿಗಳು ಅದರಲ್ಲಿವೆ. ಅದು ವರ್ಷಂಪ್ರತಿ 35 ಕೋಟಿ ರೂಪಾಯಿಗಳ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟುಗಳನ್ನು ಮಾರಾಟ ಮಾಡುತ್ತಿದೆ. 1952—53ರಲ್ಲಿ ಅಂಚೆ ಇಲಾಖೆಯು 12 ಕೋಟಿ ರೂಪಾಯಿಗಳನ್ನು ವಿಲೇವಾರಿ ಮಾಡಿದೆ. 560 ಲಕ್ಷ ಮನಿಯಾರ್ಡರುಗಳ ಮೂಲಕ 198 ಕೋಟಿ ರೂಪಾಯಿಗಳನ್ನು ದೇಶದ ನಾನಾ ಭಾಗಗಳಿಗೆ ಕಳುಹಿಸಿದೆ.

ಈ ಬ್ಯಾಂಕಿಂಗ್ ಸೌಕರ್ಯದ ಉದ್ದೇಶವು ಮುಖ್ಯವಾಗಿ ಅಲ್ಪ ಉಳಿತಾಯದವರಿಗಾಗಿ ಇದ್ದು ಜನರಲ್ಲಿ ಮಿತವ್ಯಯ ಬುದ್ಧಿಯನ್ನು ಅದು ಪೋಷಿಸುತ್ತದೆ. ಉಳಿತಾಯದ ಬಗ್ಗೆ ಇರುವ ನಿಯಮಗಳು ವರ್ತಕರಿಗೆ ಅನಾಕರ್ಷಕವಾದ ರೀತಿಯಲ್ಲಿರುವುವು. ಉಳಿತಾಯದ ಲೆಖ್ಖಗಳಲ್ಲಿ ಹಣವನ್ನು ವಾರಕ್ಕೊಂದು ಸಾರಿ ಪಡೆಯಬಹುದೆಂಬ ನಿಯಮವಿದೆ. ಕೇವಲ ನಾಲ್ಕಾಣೆಯನ್ನು ಸಹ ಈ ಲೆಖ್ಖಕ್ಕೆ ಜಮಾ ಮಾಡಬಹುದು. ಉಳಿತಾಯ ಲೆಖ್ಖಗಳ ಸಂಖ್ಯೆ ಹೆಚ್ಚುತ್ತಿರುವುದು ಜನತೆಯಲ್ಲಿ ಮಿತವ್ಯಯದ ಬುದ್ಧಿ ಬಲವಾಗುತ್ತಿರುವುದನ್ನು ಸಂಕೇತಿಸುವಂತಿದೆ. ಭದ್ರವಾದ ಸರ್ಕಾರದಲ್ಲಿ ಜನತೆಯ ನಂಬಿಕೆಯು ಬೆಳೆಯುತ್ತಿರುವ ಅಂಶವೂ ಇದರಿಂದ ಕಂಡುಬರುತ್ತದೆ.

1883ರಲ್ಲಿ ಅಂಚೆಯ ಕಛೇರಿಯಲ್ಲಿ ಪ್ರಾಯೋಗಿಕವಾಗಿ ಸೇವಿಂಗ್ಸ್ (ಉಳಿತಾಯ) ಬ್ಯಾಂಕ್ ಆರಂಭವಾಯಿತು. ಒಂದು ವರ್ಷದಲ್ಲಿ ಉಳಿತಾಯ ಲೆಖ್ಖಗಳ ಸಂಖ್ಯೆ 39,121 ಗಳಿಗೇರಿತು. 2,790,000 ರೂಪಾಯಿಗಳು ಈ ಲೆಖ್ಖದಲ್ಲಿ ಉಳಿದವು. ಈ ಯೋಜನೆಯು ಯಶಸ್ವಿಯಾದ್ದರಿಂದ ದೇಶದ ಎಲ್ಲ ಕಡೆಗಳಿಗೂ ಅದನ್ನು ಅನ್ವಯಿಸಲಾಯಿತು.

35 ವರ್ಷಗಳ ತನಕ ಅಂಚೆ ಕಛೇರಿಯು ಉಳಿತಾಯ ಯೋಜನೆಯೊಂದನ್ನೇ ಇಟ್ಟುಕೊಂಡಿದ್ದಿತು. ಈ ಯೋಜನೆಯು ಯಶಸ್ವಿಯಾದುದರಿಂದ ಹೊಸ ಯೋಜನೆಗಳನ್ನು ಕೈಗೊಂಡಿತು. 1917ರಲ್ಲಿ 5 ವರ್ಷಗಳ ಕ್ಯಾಷ್ ಸರ್ಟಿಫಿಕೇಟುಗಳನ್ನು ಆರಂಭಿಸಲಾಯಿತು. ಇದು ಪ್ರಾರಂಭವಾದ ವರ್ಷದಲ್ಲಿಯೇ 10 ಕೋಟಿ ರೂಪಾಯಿಗಳು ಸಂಗ್ರಹವಾದುವು. 1930ರ ಆರ್ಥಿಕ ಇಳಿತಾಯ ಕಾಲದಲ್ಲಿ ಮಾರಾಟವು ಕೊಂಚ ಕಡಿಮೆಯಾಯಿತು. 1947ರಲ್ಲಿ ಈ ಖಾತೆಯಲ್ಲಿ ಕೇವಲ 3 ಕೋಟಿ ರೂಪಾಯಿಗಳು ಮಾತ್ರ ಇವೆಯೆಂದು ಗೊತ್ತಾದಾಗ ಈ ಯೋಜನೆಯನ್ನು ಸರ್ಕಾರವು ರದ್ದುಗೊಳಿಸಿತು.

ದ್ವಿತೀಯ ಮಹಾಯುದ್ಧದ ಸಮಯದಲ್ಲಿ ರಕ್ಷಣಾ ಉಳಿತಾಯ ಸರ್ಟಿಫಿಕೇಟ್‌ಗಳನ್ನು ಜಾರಿಗೆ ತರಲಾಯಿತು. ಹಿಂದಿನ ಕ್ಯಾಷ್ ಸರ್ಟಿಫಿಕೇಟ್‌ಗಳಿಗಿಂತ ಇದು ಅನುಕೂಲವಾಗಿತ್ತು. 1943ರ ಅಕ್ಟೋಬರ್ 1ರಂದು ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳನ್ನು ಆರಂಭಿಸಲಾಯಿತು. ಈ ಸರ್ಟಿಫಿಕೇಟ್‌ಗಳ ಅವಧಿ 13 ವರ್ಷಗಳು. ಮೂರು ವರ್ಷಗಳ ಮುಂಚೆ ಅವನ್ನು ವಾಪಾಸುಕೊಟ್ಟು ಹಣ ಪಡೆಯುವಂತಿರಲಿಲ್ಲ. ಯುದ್ಧಾನಂತರ 1946—47ರಲ್ಲಿ ಈ ಸರ್ಟಿಫಿಕೇಟ್‌ಗಳಲ್ಲಿ ಹಾಕಿದ್ದ ಬಂಡವಾಳದಲ್ಲಿ ಕೊಂಚ ಇಳಿತಾಯವಾಯಿತು. 1948ರಲ್ಲಿ ಸರ್ಕಾರದವರು 7 ಮತ್ತು 5 ವರ್ಷಗಳ ಅವಧಿಯುಳ್ಳ ಹೊಸ ರಾಷ್ಟ್ರೀಯ ಉಳಿತಾಯ ಸರ್ಟಿಫಿಕೇಟ್‌ಗಳನ್ನು ಹೊರಡಿಸಿದರು. ರಾಷ್ಟ್ರೀಯ ಉಳಿತಾಯ ಕಮೀಷನರನ್ನು ನೇಮಿಸಲಾಯಿತು. ಈ ಸರ್ಟಿಫಿಕೇಟ್‌ಗಳನ್ನು ಮಾರಲು ಅನೇಕ ಏಜಂಟರಿರುವರು. ಅವರಿಗೆ ನೂರಕ್ಕೆ 1¼ ದರದಂತೆ ಕಮೀಷನ್ ಕೊಡಲಾಗುವುದು. ಈ ಸರ್ಟಿಫಿಕೇಟ್‌ಗಳು ಕೆಳ ದರ್ಜೆಯ ಮಧ್ಯಮ ವರ್ಗದ ಜನರಿಗೆ ಅತ್ಯುಪಯುಕ್ತವಾಗಿವೆ.

1950ರಲ್ಲಿ ಸರ್ಕಾರದವರು ಇಲಾಖೆಯ ಅಧಿಕಾರಿಗಳ ಸಮಿತಿಯೊಂದನ್ನು ಅಂಚೆ ಇಲಾಖೆಯು ನಡೆಸುತ್ತಿದ್ದ ಉಳಿತಾಯ ಯೋಜನೆಯ ಬಗ್ಗೆ ವಿಚಾರಣೆ ನಡೆಸಲು ರಚಿಸಿತು. ಈ ಸಮಿತಿಯ ಶಿಫಾರಸಿನ ಮೇರೆ ಉಳಿತಾಯ ಲೆಖ್ಖದಲ್ಲಿಡಬಹುದಾದ ಪರಮಾವಧಿ ಹಣವನ್ನು 15,000ಕ್ಕೂ ಬಡ್ಡಿಯನ್ನು ನೂರಕ್ಕೆ 1½ಗೂ ಏರಿಸಲಾಯಿತು. ಜಂಟೀ ಲೆಖ್ಖಗಳಾದರೆ 20,000 ರೂಪಾಯಿಗಳ ವರೆಗೂ ಇಡಬಹುದು.

ಅಂಚೆ ಕಛೇರಿಯು ಅಲ್ಪ ಉಳಿತಾಯದ ಬ್ಯಾಂಕರಾಗಿರುವುದರಿಂದ, ಇಲ್ಲಿ ಸಿಗುವ ಅಂಕೆ ಅಂಶಗಳು ಕೆಳದರ್ಜೆಯ ಮಧ್ಯಮ ವರ್ಗದವರ ಆರ್ಥಿಕ ಪರಿಸ್ಥಿತಿಯನ್ನು ಅಂದಾಜು ಮಾಡುವುದಕ್ಕೆ ಸಹಾಯವಾಗುತ್ತದೆ.

ಉಳಿತಾಯದ ಬ್ಯಾಂಕ್, ಉಳಿತಾಯ ಸರ್ಟಿಫಿಕೇಟ್‌ಗಳ ಮಾರಾಟ ಇವುಗಳ ಜೊತೆಗೆ ಅಂಚೆ ಕಛೇರಿಯು ಸರಕಾರಿ ಸೆಕ್ಯೂರಿಟಿಗಳ ಮಾರಾಟದ ದಳ್ಳಾಳಿ ಕೆಲಸವನ್ನೂ ಮನಿಯಾರ್ಡರುಗಳ ರವಾನೆ, ಪೋಸ್ಟಲ್ ಆರ್ಡರುಗಳ ವಿಲೆ, ವಿ ಪಿ ಮೂಲಕ ಹಣವನ್ನು ಪಡೆದು ಕೊಡುವುದು ಇತ್ಯಾದಿಗಳನ್ನೂ ನಡೆಸುತ್ತದೆ. ವರ್ಷದಲ್ಲಿ ಸುಮಾರು 198 ಕೋಟಿ ರೂಪಾಯಿಗಳ 560 ಲಕ್ಷ ಮನಿಯಾರ್ಡರುಗಳು ರವಾನೆಯಾಗುತ್ತವೆ. ಅಂಚೆ ವ್ಯವಸ್ಥೆಯು ಗ್ರಾಮಗಳಲ್ಲಿ ವಿಸ್ತರಿಸಿದರೆ ಮತ್ತು ಜನರ ಕೊಳ್ಳುವ ಹಾಗೂ ಮಿತವ್ಯಯ ಶಕ್ತಿ ಹೆಚ್ಚಿದರೆ ಅಂಚೆಕಛೇರಿಗಳು ಇನ್ನೂ ಮಹತ್ವದ ಪಾತ್ರ ವಹಿಸಬಹುದು.

❖ ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟ್‌ಗಳು

ರಾಷ್ಟ್ರೀಯ ಯೋಜನಾ ಸರ್ಟಿಫಿಕೇಟ್‌ಗಳನ್ನು ಈಗ 25 ಹಾಗು 50 ರೂಪಾಯಿಗಳಿಗೆ ಕೊಡಲಾಗುತ್ತಿದೆ. ಆದರೆ 100 ಹಾಗೂ ಅದಕ್ಕೂ ಹೆಚ್ಚು ರೂಪಾಯಿಗಳನ್ನು ನಿಕ್ಷೇಪಿಸುವವರ ಅನುಕೂಲಕ್ಕಾಗಿ ಭಾರತ ಸರ್ಕಾರದವರು 1954ರ ನವೆಂಬರ್ 10ರಿಂದ 100 ಮತ್ತು 500 ರೂಪಾಯಿಗಳ ಸರ್ಟಿಫಿಕೇಟುಗಳನ್ನು ಮಾರಾಟ ಮಾಡಲು ನಿರ್ಧರಿಸಿರುವರು. ಒಬ್ಬನು 1,000 ರೂಪಾಯಿಗಳ ಸರ್ಟಿಫಿಕೇಟ್‌ಗಳನ್ನೂ ಇಬ್ಬರು ಒಟ್ಟುಗೂಡಿ 2,000 ರೂಪಾಯಿಗಳ ಸರ್ಟಿಫಿಕೇಟ್‌ಗಳನ್ನೂ ಮಾತ್ರ ಪಡೆಯಬಹುದೆಂಬ ನಿಯಮವು ಹಾಗೆಯೇ ಜಾರಿಯಲ್ಲಿ ಉಳಿಯುವುದು.

ಸೇವಿಂಗ್ಸ್ ಬ್ಯಾಂಕ್ ವ್ಯವಹಾರ ನಡೆಸುವ ಎಲ್ಲಾ ಅಂಚೆ ಕಛೇರಿಗಳಲ್ಲಿಯೂ ಈ ಹೊಸ ಸರ್ಟಿಫಿಕೇಟ್‌ಗಳು 1954ರ ನವೆಂಬರ್ ತಿಂಗಳ ಮಧ್ಯದಲ್ಲಿ ಮಾರಾಟಕ್ಕೆ ಬರುತ್ತವೆ. ಇದಕ್ಕೆ ಮುಂಚಿತವಾಗಿ ಈ ಹೊಸ ಸರ್ಟಿಫಿಕೇಟ್‌ಗಳನ್ನು ಕೊಂಡುಕೊಳ್ಳಲಿಚ್ಛಿಸುವವರು 1954ರ ನವೆಂಬರ್ 10ರ ಅಂಚೆ ಕಛೇರಿಗಳಲ್ಲಿ ಹಣವನ್ನು ಸಲ್ಲಿಸಿ ತಾತ್ಕಾಲಿಕ ರಶೀದಿಯನ್ನು ಪಡೆಯಬಹುದು. ಹೊಸ ಸರ್ಟಿಫಿಕೇಟುಗಳು ಬಂದ ನಂತರ ಈ ತಾತ್ಕಾಲಿಕ ರಶೀದಿಗಳನ್ನು ಹಿಂದೆ ಕೊಟ್ಟು ಸರ್ಟಿಫಿಕೇಟುಗಳನ್ನು ಪಡೆಯಬಹುದು.

ಸಿಹಿಮೂತ್ರ

ರೋಗ ನಿವಾರಣೆ.

(DIABETES)

ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವ ಪಕ್ಷೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇದಕ್ಕೆ ಇಮ ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ದಾರುಣ ಖಾಹಿಲೆಯ ಮುಖ್ಯ ಲಕ್ಷಣಗಳಾವುವೆಂದರೆ ಹಸಿವು ನೀರಡಿಕೆ ಅತಿ ಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ

ಈ ಖಾಹಿಲೆ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕುಗಳು.

ವೀನಸ್ ಚಾರ್ಮ್ ಅಧುನಿಕ ಕಾಲದ ವೈದ್ಯಕೀಯ ಪವಾಡ ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಅಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು, ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ ನಾಲ್ಕನೆಯ ದಿನದಿಂದ ನೀವು ಅರ್ಧ ಗುಣವಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ವಿವರಣಾತ್ಮಕ ಕೈಪಿಡಿಗೆ ಬರೆಯಿರಿ. 50 ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W.)
Post Box No. 587, CALCUTTA

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ ಹಿತ್ತಾಳಿ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ
ಪಾತ್ರೆ ಭಂಡಾರ,
ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,
ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.
Moolky, S. K.

ಶ್ರೀಪಾದ ಕೃಷ್ಣಮೂರ್ತಿ ಶಾಸ್ತ್ರಿ ಅಂಡ್ ಸನ್ಸ್
ರಾಜಮಹೇಂದ್ರಿ — ಇವರ

ಬಾಲಸುಧ

ಇದು ಸಣ್ಣ ಬಾಲಕರಿಗೆ ಅಜೀರ್ಣ, ಜ್ವರ, ಕೆಮ್ಮು, ಶೀತ, ಮಲಬದ್ಧತೆ, ಹೆಚ್ಚಾಗಿ ಭೇದಿ ಆಗುವಿಕೆ. ಮಕ್ಕಳು ಕ್ಷೀಣವಾಗಿ ಕೈಕಾಲು ಸಣ್ಣವಾಗುವಿಕೆ, ಲಿವರ್ ಬೆಳೆಯುವ್ರವದು, ಈ ಎಲ್ಲಾ ವ್ಯಾಧಿಗಳಿಗೆ ವಜ್ರಾಯುಧವಾಗಿದೆ. ಹೀಗಿರುವ ಔಷಧಿ ಇನ್ನೊಂದ, ಇಲ್ಲವೆಂದು ಹೇಳಬಹುದು. ಈ ಔಷಧಕ್ಕೆ ಮಿತಿ ಇಲ್ಲದ ಯೋಗ್ಯತಾ ಪತ್ರಗಳನ್ನು ಪಡೆದಿರುವದಲ್ಲದೆ ದೇಶದಲ್ಲಿ ಅನೇಕ ವಿಧದಲ್ಲಿ ಅಭಿವೃದ್ಧಿಯಾಗಿರುತ್ತದೆ. ಸುಮಾರು ೧ ತಿಂಗಳಿಗೆ ಸರಿಹೋಗುವ ೫೦ ಮಾತ್ರೆಗಳ ಸೀಸೆ ೧ಕ್ಕೆ ರೂ. 1—0—0.

ನಮ್ಮ ಸ್ಟಾಕಿಸ್ಟರು:

(1) ಸುದರ್ಶನ ಆಯುರ್ವೇದ ವೈದ್ಯಶಾಲಾ— ಬೆಂಗಳೂರು 2.
(2) ಷಾ ಕಂಪೆನಿ—ಮಂಗಳೂರು 1.
(3) ಅಂಬಿಕಾ ಮೆಡಿಕಲ್ ಸ್ಟೋರ್ಸ್— ಚಿಂತಾಮಣಿ.



७० वर्षों से जगप्रसिद्ध
और विजयी
होनेवाला।

प्रत्येक स्टोर मे और
सब स्थानो पर
बिकता है।

बाटलीवाला एग्यूमिक्चर
और गोलीयां
मलेरिया इन्फ्लुएंजा और प्रत्येक
प्रकारके बुखार के लिये।

सोल मेन्युफेक्चरर. डो. एच. एल. बाटलीवाला सन्स एण्ड कं. लि.
बाटलीवाला बिल्डिंग, ९३ वी. पोर्तुगीझ चर्च स्ट्रीट,
Tele. Add. "CAWASHABAD" दादर, बम्बई २८.

ದೀಪ ಜ್ಯೋತಿ— ಮನುಷ್ಯನ ಉತ್ಕರ್ಷ ಹಾಗೂ ಉತ್ಸರ್ಗದ ಪ್ರತೀಕ

(೨ನೇ ಪುಟದಿಂದ)

ದು ಹೇಳಬಹುದು. ಮಳೆಗಾಲವು ಹೋಗಿ ಆಕಾಶವು ಬಿಳಿ ಮುಗಿಲುಗಳಿಂದ ತುಂಬಿದಾಗ, ಪ್ರಕೃತಿಯು ತನ್ನ ವಿಕಾರಗಳನ್ನೆಲ್ಲ ಕಳೆದುಕೊಂಡು ಸಸ್ಯ ಶ್ಯಾಮಲವಾಗಿ ಕಂಗೊಳಿಸುವಾಗ, ಜನರು ದೀಪೋತ್ಸವದ ಸಂಭ್ರಮದಲ್ಲಿ ಮಗ್ನರಾಗುತ್ತಾರೆ. ಆಗ ಕ್ರಿಮಿಕೀಟಗಳೆಲ್ಲೂ ಕಾಣಸಿಗುವುದಿಲ್ಲ; ಉರಗ ಜಾತಿಯು ಆಟೋಪವೂ ಇಳಿದಿರುತ್ತದೆ. ಹೀಗೆ ಪ್ರಕೃತಿ ಮಂಗಲದಾಯಕವಾಗಿರುವ ಗಳಿಗೆಯಲ್ಲಿ ಶ್ರೀ ಲಕ್ಷ್ಮಿಯು ಭೂಮಿಗೆ ಇಳಿದುಬರುತ್ತಾಳೆ ಎಂಬುದಾಗಿ ಭಾವಿಸಲಾಗುತ್ತದೆ.

ಪ್ರಾಚೀನ ವೈದಿಕ ಸಾಹಿತ್ಯವು ಶ್ರೀ ಲಕ್ಷ್ಮಿಯನ್ನು ಶಿವಗುಣದ ಸಂಕೇತವೆಂದು ಹೇಳುತ್ತದೆ. ಲಕ್ಷ್ಮಿಯೆಂಬುದನ್ನು ಸ್ವಭಾವ, ಪ್ರವೃತ್ತಿ ಎಂಬುದಾಗಿ ಶತಪಥ ಬ್ರಾಹ್ಮಣವು ವಿವರಿಸುತ್ತದೆ. ಅಥರ್ವವೇದದಲ್ಲಿ ಮನುಷ್ಯನು ನೂರೊಂದು ಬಗೆಯ ಲಕ್ಷ್ಮಿಗಳೊಂದಿಗೇ (ಅಂದರೆ ಪ್ರವೃತ್ತಿಗಳೊಂದಿಗೆ) ಜನಿಸುವನೆಂಬ ಉಲ್ಲೇಖವುಂಟು. ಈ ಪ್ರವೃತ್ತಿಗಳಲ್ಲಿ ಒಳ್ಳೆಯದನ್ನು ಶ್ರೀ ಮುಂತಾದ ಮಂಗಳ ಸಂಕೇತಗಳಿಂದಲೂ ಕೆಟ್ಟುದನ್ನು ದುಷ್ಟ ಸಂಕೇತಗಳಿಂದಲೂ ವರ್ಣಿಸುತ್ತಿದ್ದರು. ಹೀಗಾಗಿ ಶ್ರೀ ಲಕ್ಷ್ಮಿ, ಮಹಾಲಕ್ಷ್ಮಿ, ವರಲಕ್ಷ್ಮಿ ಮುಂತಾದ ಮಧುರ ವಚನಗಳೊಡನೆ ದರಿದ್ರ ಲಕ್ಷ್ಮಿ, ಕಲಿ ಲಕ್ಷ್ಮಿ ಮುಂತಾದ ಕಠೋರ ಶಬ್ದಗಳೂ ನಮ್ಮ ಮಾತಿನಲ್ಲಿ ಬಂದು ಹೋಗುತ್ತವೆ. ವೈದಿಕ ಸಾಹಿತ್ಯವು ಸೌಂದರ್ಯಕ್ಕೂ ನೈರ್ಮಲ್ಯಕ್ಕೂ ಶುದ್ಧತೆಗೂ ಹೆಸರಾದ ಲಕ್ಷ್ಮಿಯನ್ನು ಶ್ರೀ ಲಕ್ಷ್ಮಿ ಎಂಬ ಸಂಕೇತದಿಂದ ಗೌರವಿಸಿತು.

ದೀಪಾವಳಿಯ ಶುಭ ಸಂದರ್ಭದಲ್ಲಿ ಧನ ಲಕ್ಷ್ಮಿ, ಧಾನ್ಯ ಲಕ್ಷ್ಮಿ ಎಂದು ಮುಂತಾಗಿ ಪೂಜೆಗಳನ್ನು ಒಪ್ಪಿಸುವ ಸಂಪ್ರದಾಯಕ್ಕೆ ಹಿಂದಿನ ಕಾರಣಗಳೇನೆಂಬುದನ್ನು ಮೇಲಿನ ಮಾತುಗಳಿಂದ ತಿಳಿದುಕೊಳ್ಳಬಹುದು. ಭಾಗವತದಲ್ಲಿ ಸಾತ್ವಿಕ ಗುಣಗಳ ಉದಯವಾಗುವುದೇ ಸ್ವರ್ಗವೆಂದು ಹೇಳಲ್ಪಟ್ಟಿರುತ್ತದೆ— ಶ್ರೀ ಲಕ್ಷ್ಮಿಯು ಸದ್ಗುಣ ಸಂಪನ್ನನಾದ ವ್ಯಕ್ತಿಯೊಡನೆ ನೆಲೆಸುತ್ತಾಳೆಂಬ ವಿಷಯದಲ್ಲಿ ಬ್ರಹ್ಮವೈವರ್ತ ಪುರಾಣ, ಸ್ಕಂಧ ಪುರಾಣ ಮುಂತಾದವುಗಳು ಬಹಳ ಚೆನ್ನಾದ ಮಾತುಗಳನ್ನು ಹೇಳುತ್ತವೆ. ಗುಣಾಢ್ಯ ವ್ಯಕ್ತಿಯೇ ಎಲ್ಲರಿಗಿಂತ ಮೇಲೆಂಬುದನ್ನು ಅವು ಪ್ರತಿಪಾದಿಸುತ್ತವೆ.

ಮಹಾಭಾರತವು ಇನ್ನೂ ಒಂದು ಹೆಜ್ಜೆ ಮುಂದಿಟ್ಟು, ಧರ್ಮಕ್ಕೆ ವಿರುದ್ಧವಲ್ಲದ ಸಾಹಸ ಕಾರ್ಯದಲ್ಲಿ ನಿರತರಾದ ಕರ್ಮಠ ಮನುಷ್ಯರನ್ನು ಶ್ರೀ ಲಕ್ಷ್ಮಿಯು ಒಲೈಸುವಳೆಂದು ಹೇಳುತ್ತದೆ. ಭೀಷ್ಮಾಚಾರ್ಯರು ಶರಳ ಮಂಚದ ಮೇಲೆ ಮಲಗಿದ್ದಂತೆಯೇ ಧರ್ಮರಾಯನಿಗೆ ಹೇಳಿದ ಪ್ರಸಂಗವನ್ನು ಇಲ್ಲಿ ನಾವು ಉಲ್ಲೇಖಿಸಿದರೆ ತಪ್ಪಾಗದು. ಲಕ್ಷ್ಮೀ ದೇವಿಯು ಮೊದಲು ಬಲಿಯ ರಾಜ್ಯದಲ್ಲಿ ನೆಲೆನಿಂತಿದ್ದಳು. ಆದರೆ ಒಂದು ದಿನ ಅವಳು ದೇವರಾಜನಾದ ಇಂದ್ರನೊಡನೆ ತನಗೆ ಆಶ್ರಯವನ್ನು ಕೊಡಬೇಕೆಂದು ಪ್ರಾರ್ಥಿಸಿದಳು, ಬಲಿಯು ಭೂಲೋಕದಲ್ಲಿ ತನ್ನ ನಾಲ್ಕೂ ಚರಣಗಳನ್ನಿಡಲು ಸರಿಯಾದ ಸ್ಥಾನವಿಲ್ಲವೆಂದು ಅವಳು ದೂರಿದಳು.

ದೇವರಾಜನಾದ ಇಂದ್ರನು ಲಕ್ಷ್ಮೀದೇವಿಯನ್ನು ಕುರಿತು ಹೀಗೆಂದನು— "ಹಾಗಾದರೆ ಶುಭೆ, ನಿಮ್ಮ ಮೊದಲಿನ ಚರಣವನ್ನು ನಾವೆಲ್ಲರೂ ಜೆಪರಿಸಿಂದ ತೊಯ್ದು ರಾಷ್ಟ್ರಧಾತ್ರೀ ಅನ್ನಪೂರ್ಣೆಯಾಗಿ ಗುರುತಿಸಿದ ಈ ಭೂಮಿಯ ಮೇಲೆ ಇಡಿರಿ. ಎರಡನೆಯದನ್ನು ನಮ್ಮ ಬುದ್ಧಿ ಬಲದಿಂದ ಸುನಿಯಂತ್ರಿತ ರೀತಿಯಲ್ಲಿ ಸಂಗ್ರಹಿಸಿ ಅಮೃತ ತುಲ್ಯ ಮಾಡಿದ ಅಪಾರ ಜಲರಾಶಿಯ ಮೇಲಿಡಿರಿ. ಮೂರನೆಯ ಚರಣವನ್ನು ಅಗ್ನಿಸದೃಶವಾದ ರಾಷ್ಟ್ರದ ಜನಶಕ್ತಿಯ ಮೇಲಿಡಿರಿ; ಏಕೆಂದರೆ ಜನಶಕ್ತಿಯನ್ನು ಉಪಯೋಗಿಸಿ ನಾವು ಸಂಪನ್ನ ರಾಷ್ಟ್ರವನ್ನು ಕಟ್ಟುತಿದ್ದೇವೆ. ಕೊನೆಯ ಚರಣವನ್ನು ನಮ್ಮ ಪರಾಕ್ರಮಿಗಳೂ ದಯಾನಿಧಿಗಳೂ ಸದಾಚಾರಿಗಳೂ ಚರಿತ್ರಸಂಪನ್ನರೂ ಆದ ಪ್ರಜಾ ವರ್ಗದ ಮೇಲೆ ಊರಬಹುದು." ಇದನ್ನು ಕೇಳಿ ಲಕ್ಷ್ಮಿಗೆ ಸಂತೋಷವಾಯಿತು. ಅವಳು ಇಂದ್ರಲೋಕದಲ್ಲಿ ಪ್ರವೇಶಿಸಿದಳು.

ಇದು ಮನುಷ್ಯನ ಕರ್ತೃತ್ವಶಕ್ತಿಗೆ ಕೊಟ್ಟ ಆಹ್ವಾನವಾಗಿ ಪರಿಣಮಿಸಿತೆಂದರೆ ತಪ್ಪಾಗದು. ಜನರು ಮೈ ಬೆವರಿಳಿಸಿ ದುಡಿದು ಭೂಮಿಯನ್ನು ಉತ್ತು ಬಿತ್ತಿದರು. ಉತ್ತಮವಾದ ಫಸಲನ್ನು ಕೊಯ್ದರು. ನದಿಗಳಿಗೆ ಅಣೆಕಟ್ಟನ್ನು ಹಾಕಿ ಬಂಜರು ಭೂಮಿಯಲ್ಲಿ ಸಸ್ಯಾದಿಗಳು ಕಂಗೊಳಿಸುವಂತೆ ಪ್ರಯತ್ನಿಸಿದರು. ವಿದ್ಯುಚ್ಛಕ್ತಿಯ ದೆಸೆಯಿಂದ ನಾನಾ ಕೈಗಾರಿಕೆಗಳನ್ನು ಸ್ಥಾಪಿಸಿದರು. ಹೀಗೆ ನೆಲ, ನೀರು ಹಾಗು ಬೆಂಕಿಗಳ ಮೇಲೆ ತಮ್ಮ ಒಡೆತನವನ್ನು ಸ್ಥಾಪಿಸಿ, ಶ್ರಮಲಕ್ಷ್ಮಿಯನ್ನು ಒಲಿಸಿಕೊಂಡರು.

ಕೆಲವು ಜ್ಞಾನಿಗಳಿಗೆ ಇಷ್ಟನ್ನು ಮಾತ್ರ ಮಾಡಿದುದರಿಂದ ಶ್ರೀಲಕ್ಷ್ಮಿಯನ್ನು ಸ್ಥಿರವಾಗಿ ಭೂಲೋಕದಲ್ಲಿ ನೆಲೆಗೊಳಿಸಲಾರೆವೆಂದು ಹೊಳೆಯಿತು—ಸಾಧಿಸಿದ ಕೆಲಸವು ಅಪಾರವಾಗಿದ್ದರೂ ಜನರು ಚರಿತ್ರಸಂಪನ್ನರಾಗಿರಲಿಲ್ಲ. ಸಮೃದ್ಧಿಯನ್ನು ಸಾಧಿಸಿದರೂ ಒಬ್ಬರಿನ್ನೊಬ್ಬರ ಸಂಪತ್ತನ್ನು ಲೂಟಿಮಾಡುತ್ತಿದ್ದರು; ದ್ವೇಷಿಸುತ್ತಿದ್ದರು; ಹೊಡೆದಾಡುತ್ತಿದ್ದರು; ಯುದ್ಧಕ್ಕೂ ಇಳಿಯುತ್ತಿದ್ದರು. ಕಲ್ಯಾಣಾಕಾಂಕ್ಷೆ ಸಾಕಷ್ಟು ಕಂಡುಬರಲಿಲ್ಲ: ಇಂಥ ಪರಿಸ್ಥಿತಿಯಲ್ಲಿಯೂ ಜ್ಞಾನಿಗಳು ಕೆಲವರು "ವಿಶ್ವ ಕಲ್ಯಾಣವಾಗಲಿ, ಸಮಸ್ತ ಪ್ರಾಣಿಗಳ ಕಲ್ಯಾಣವಾಗಲಿ, ಮನುಷ್ಯನ ಕಾಮನೆಗಳೆಲ್ಲ ಕಲ್ಯಾಣ ಪ್ರದವಾಗಲಿ, ಯಾವ ಪ್ರವೃತ್ತಿಯಿಂದಲೂ ಪೀಡೆಯಾಗದಿರಲಿ, ಎಲ್ಲರೂ ಸುಖದಿಂದ ನೂರು ವರ್ಷ ಬದುಕಲಿ" ಎಂಬ ಅಮರ ಗಾನವನ್ನು ಹಾಡಿದರು. ಇದರಿಂದ ಜನರೆಲ್ಲ ಎಚ್ಚರಗೊಳ್ಳುವಂತಾಯಿತು; ತಪ್ಪನ್ನು ತಿದ್ದಿಕೊಳ್ಳುವಂತಾಯಿತು.

ರವಿವರ್ಮನ ಲಕ್ಷ್ಮಿಯ ಚಿತ್ರವನ್ನು ನಿರೀಕ್ಷಿಸಿದರೆ ಶ್ರೀ ಸೂಕ್ತದಲ್ಲಿ ಉಕ್ತವಾದ ಲಕ್ಷಣಗಳೆಲ್ಲವನ್ನೂ ಸುಂದರವಾಗಿ ರೇಖಿಸಿರುವುದು ಗೊತ್ತಾಗುತ್ತದೆ ನಾಲ್ಕು ಕೈಗಳಿಂದ ಕೂಡಿದ ಲಕ್ಷ್ಮಿಯು ಕಮಲ ಪುಷ್ಪ, ಅಮೃತ ಪಾತ್ರ, ಶಂಖ ಹಾಗು ಬಿಲ್ವಗಳನ್ನು ಹಿಡಿದಿರುತ್ತಾಳೆ. ಅಷ್ಟದಳಗಳ ಕಮಲದ ಮೇಲೆ ನಿಂತಿರುತ್ತಾಳೆ; ಇಬ್ಬದಿಗಳಲ್ಲಿ ಎರಡು ಗಜಗಳು ಸೊಂಡಿಲಲ್ಲಿ ಅಮೃತ ಕಲಶವನ್ನೆತ್ತಿ ಹಿಡಿದು ಅಭಿಷೇಕ ಮಾಡುತ್ತಿರುತ್ತವೆ; ಸುತ್ತಲೂ ಕಮಲ ಪುಷ್ಪಗಳಿಂದ ಕೂಡಿದ ಸರೋವರ ಕಂಗೊಳಿಸುತ್ತದೆ. ವಿಷ್ಣುಧರ್ಮೋತ್ತರದಲ್ಲಿ ಹೇಳಿದ ಪ್ರಕಾರ, ಶಂಖವು ಸಮೃದ್ಧಿ ಹಾಗು ಸೌಭಾಗ್ಯದ, ಬಿಲ್ವವು ಸಮಸ್ತ ಬ್ರಹ್ಮಾಂಡದ, ಕಮಲವು ಜಲರಾಶಿಯ ಅಮೃತ ಪಾತ್ರೆಯು ಚೈತನ್ಯದ ಸಂಕೇತವಾಗಿರುತ್ತದೆ. ಆನೆಗಳು ರಾಜ್ಯ ಲಕ್ಷ್ಮಿಯ ಪ್ರತೀಕವೆನಿಸುತ್ತವೆ.

ಗುಪ್ತರಕಾಲದಲ್ಲಿ ಭಾರತದಲ್ಲಿ ಲಕ್ಷ್ಮಿಯ ಪೂಜೆಯು ಬಹಳ ಪ್ರಾದುರ್ಭಾವಕ್ಕೆ ಬಂದಿತು. ಮುಖ್ಯವಾಗಿ ಸಾಮ್ರಾಜ್ಯ ವಿಸ್ತಾರ, ಉತ್ಪಾದನೆ ಹಾಗು ವ್ಯಾಪರದ ಮೂಲಕ ಸಂಪತ್ತಿನ ಸಂಗ್ರಹ, ನೌಂದರ್ಯಾನುಭವ ಎಂಬ ತ್ರಿವಿಧ ಉದ್ದೇಶಗಳಿಗಾಗಿ ಆಗ ಪೂಜೆಯನ್ನು ಮಾಡುತ್ತಿದ್ದರು. ಭಾರತದ ಅನೇಕ ಮಂದಿರಗಳಲ್ಲಿ ನಾನಾ ರೀತಿಯಾಗಿ ಕೊರೆದ ಲಕ್ಷ್ಮಿಯ ವಿಗ್ರಹಗಳನ್ನು ಕಾಣಬಹುದಾಗಿದ್ದಂತೆ, ಗುಪ್ತ ಕಾಲೀನ ನಾಣ್ಯಗಳಲ್ಲಿಯೂ ಲಕ್ಷ್ಮಿಯ ಚಿತ್ರವನ್ನು ನೋಡಬಹುದು. ಪರಾಕ್ರಮಿಗಳೂ ಚರಿತ್ರ ಸಂಪನ್ನರೂ ಆದ ಪ್ರಜೆಗಳಿರುವ ನಾಡು ಯಾವ ವಿಧದಲ್ಲಿಯೂ ಕೊರತೆಯನ್ನು ಅನುಭವಿಸಲಾರದೆಂಬುದನ್ನೂ ಭಾರತವು ಮೊದಲಿಂದಲೂ ಉದಾತ್ತ ಸಂಪ್ರದಾಯಗಳನ್ನು ಹಾಕಿ ಕೊಂಡು ಬಂದಿತ್ತೆಂದೂ ದೀಪಾವಳಿಯ ಪರ್ವ ದಿನಗಳು ನೆನಪು ಹುಟ್ಟಿಸುತ್ತವೆ ಆಗ ನಮ್ಮ ಬಾಯಿಯಿಂದ "ಈ ಸಂತೋಷ ಕಾಲವು ಎಲ್ಲ ಪ್ರಾಣಿಗಳಿಗೂ ಕಲ್ಯಾಣ ಮಾಡಲಿ, ವಸುಂಧರೆಯು ಮಂಗಳ ಮಯವಾಗಲಿ, ಮನಸ್ಸಿನ ಕಲುಷಿತ ಭಾವನೆಗಳೆಲ್ಲವೂ ತೊಳೆದು ಹೋಗಲಿ, ನಾವೆಲ್ಲರೂ ಇಷ್ಟಷ್ಟು ಸುಖ ಸಮೃದ್ಧಿಯನ್ನು ಹೊಂದುವಂತಾಗಲಿ" ಎಂಬ ಋಗ್ವೇದದ ಋಷಿಗಳ ಹಾಡು ತಾನಾಗಿಯೇ ಹೊರ ಹೊಮ್ಮುತ್ತದೆ.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ, ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುದೂರೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3–8–0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚಪಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅಶಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲು ಬಚ್ಚುವದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3–8–0.

ಇದಲ್ಲದೆ ಇನ್ನು ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.



ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಬಾಧೆಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/- (ವಿ. ಪಿ. ಪಿ. ಪ್ರತ್ಯೇಕ)

Mrs. P. DÈVEE, F. Ds. (N. J.)
CALCUTTA—40

ಸ್ಟಾಕಿಸ್ಟರು: ಶೆಣೈ ಕಂಪೆನಿ, ಮಂಗಳೂರು

(೧ನೇ ಪುಟದಿಂದ)

ಎಂಬ ಸಂಗತಿಯನ್ನು ಕೇಳುತ್ತಿದ್ದೇವೆ. ಗಾಂಧೀಜಿಯು ಕುರಿತು "ಮಹಾತ್ಮ" ಎಂಬ ಜಗತ್ಪ್ರಸಿದ್ಧ ಅಷ್ಟ ಸಂಪುಟಗಳನ್ನು ಬರೆದ ಶ್ರೀ ಡಿ. ಜಿ ತೆಂಡುಲಕರರ ಹೆಸರಲ್ಲಿ ಪತ್ರಿಕೆಗಳಲ್ಲಿ ಪ್ರಕಟಗೊಂಡಿರುವ ಇಂಗ್ಲೀಷು ಪತ್ರವು ಈ ರೀತಿ ಹೇಳುತ್ತದೆ—

"ಭಾರತದ ಪತ್ರಿಕೆಯೊಂದು ರಶಿಯದ ಮಹಾ ವಿಶ್ವಕೋಶದ ೨೦೩/೪ನೇ ಪುಟಗಳಿಂದ ಕೆಳಗಿನ ವಿಷಯವನ್ನು ಉದ್ಧರಿಸುತ್ತದೆ:

'ಪ್ರತಿಗಾಮಿ ಗಾಂಧೀವಾದದ ಮೂಲ ಪುರುಷ–ವ್ಯಾಪಾರ ಹಾಗು ಹೆಚ್ಚು ಬಡ್ಡಿಗೆ ಸಾಲಕೊಡುವ ಬನಿಯ ಜಾತಿಯಲ್ಲಿ ಹುಟ್ಟಿದಾತ.... ಜುಲು ಜನರನ್ನು ಅಮಾನುಷವಾಗಿ ನಾಶಪಡಿಸುತ್ತಿದ್ದ ಬ್ರಿಟಿಷ ಸೈನ್ಯಕ್ಕೆ ಸೇವೆ ಸಲ್ಲಿಸಲು ಭಾರತೀಯ ಆರೋಗ್ಯ ಘಟಕವೊಂದನ್ನು ರಚಿಸಿ, ಅದರ ನಾಯಕನಾಗಿ ಅವನು ಬ್ರಿಟಿಷ ರಾಜಶಾಹಿಗೆ ಕ್ರಿಯಾತ್ಮಕ ಸಹಾಯವನ್ನು ಸಲ್ಲಿಸಿದ.... ಜನತಾ ಚಳವಳವು ಕ್ರಾಂತಿಕಾರ ಚಟುವಟಿಕೆಗಳಲ್ಲಿ ಪರಿಣತಗೊಳ್ಳುವ ಲಕ್ಷಣ ಕಂಡುಬಂದಾಗ ಗಾಂಧಿ ಜನರಿಗೆ ವಂಚನೆಯನ್ನು ಬಗೆದು ಜನರಲ್ಲಿ ತಮ್ಮ ವೈರಿಯನ್ನು ಕಂಡ ರಾಜಶಾಹಿಗಳಿಗೆ ಸಹಾಯವನ್ನು ನೀಡಿದ... ಖಾಸಗಿ ಜೀವನದಲ್ಲಿ ಗಾಂಧಿಯು ವಿರಕ್ತಿಯ ಅನುಕರಣಮಾಡಿದ... ಅವನು ಹಾಸ್ಯಾಸ್ಪದವಾದ ರೀತಿಯಲ್ಲಿ ತಾನು ಭಾರತೀಯ ಸ್ವಾತಂತ್ರ್ಯದ ಪುರಸ್ಕರ್ತನೆಂದೂ ಬ್ರಿಟಿಷರ ವೈರಿಯೆಂದೂ ನಟಿಸಿದ... ಮೇಲಿನ ವರ್ಗಕ್ಕೆ ಕೆಳಗಿನ ವರ್ಗವು ನಿರುಪಾಧಿಕವಾಗಿ ಶರಣೆನ್ನಬೇಕೆಂಬ ಮತ್ತು ದೇವರ ಇಚ್ಛೆಯಂತೆ ಸ್ಥಾಪಿಸಲ್ಪಟ್ಟಿದ್ದೆಂದು ಹೇಳಲಾದ ಈಗಿನ ಜಾತಿಪದ್ಧತಿಯನ್ನು ಬದಲಿಸಲು ಪ್ರಯತ್ನಿಸುವುದೆಂದರೇನೇ "ಪಾಪ"ವೆಂಬ ಹಿಂದು ಸಿದ್ಧಾಂತ ಹಾಗು ಧಾರ್ಮಿಕ ದುರಭಿಮಾನವನ್ನೆ ಗಾಂಧೀ ವಾದವು ಬಹಳಷ್ಟು ಸ್ವಪ್ರಯೋಜನ ದೃಷ್ಟಿಯಿಂದ ಉಪಯೋಗಿಸಿಕೊಳ್ಳುತ್ತದೆ.'

"ಮೇಲಿನ ದೃಷ್ಟಾಂತ ವಾಕ್ಯಗಳು, ಪ್ರಾಮಾಣಿಕ ಅನುವಾಗಿದ್ದರೆ, ಗಾಂಧಿಯ ವಿಷಯದಲ್ಲಿ ರಶಿಯದ ಬರೆಹಗಾರರಿಗೆ ತಪ್ಪು ತಿಳಿವಳಿಕೆಯನ್ನು ಮಾಡಿಕೊಡಲಾಗಿದೆಯೆಂದೂ ಅಥವಾ ಅವರು ಉದ್ದೇಶಪೂರ್ವವಾಗಿ ತಮ್ಮ ಪ್ರಿಯ ತತ್ವಗಳಿಗೆ ಹೊಂದಿಕೊಳ್ಳುವಂತೆ ನಿಜಸಂಗತಿಗಳನ್ನು ವಿರೂಪಗೊಳಿಸುವರೆಂದೂ ಸಿದ್ಧಪಡಿಸುತ್ತವೆ.

"ಆದುದರಿಂದ ರಶಿಯದ ವಿಶ್ವಕೋಶದ ಸಂಪಾದಕರು ಭಾರತೀಯ ಓದುಗರಿಗಾಗಿ ಗಾಂಧಿಯ ಕುರಿತಾದ ತಮ್ಮ ಲೇಖನದ ಪ್ರಾಮಾಣಿಕ ಅನುವಾದವೊಂದನ್ನು ಒದಗಿಸಿಕೊಡುವರೆ?

"ಭಾರತದಲ್ಲಿರುವ ಕಮ್ಯುನಿಸ್ಟರು ಗಾಂಧಿಯ ವಿಷಯದಲ್ಲಿ ರಶಿಯದ ವಿಶ್ವಕೋಶವು ಬರೆದ ರೀತಿಗೆ ತಮ್ಮ ಪ್ರತಿಕ್ರಿಯೆಯನ್ನು ತಿಳಿಸುವರೆ? ಈಚೆಗೆ ಜವಾಹರಲಾಲ ನೆಹರೂಗಳು ಗಮನ ಸೆಳೆದಂತೆ, ಭಾರತದ ಹಾಗು ಅದರ ಮಹಾ ಧುರೀಣನ ಕುರಿತು ತಮ್ಮ ಭಾವನಾತ್ಮಕ ಪ್ರೀತಿಯ ವಿಷಯದಲ್ಲಿ ಅವರಿಗಿದೊಂದು ಪರೀಕ್ಷೆಯಾಗಿರುತ್ತದೆ."

ನಮ್ಮ ಜೀವಮಾನದಲ್ಲಿಯೇ ನಮ್ಮೊಂದಿಗೆಯೇ ಬಾಳಿ ಬೆಳಗಿದ ರಾಷ್ಟ್ರಪಿತ ಗಾಂಧೀಜಿಯ ಕುರಿತಾದ ನಮ್ಮ ಅಭಿಪ್ರಾಯಕ್ಕೂ ರಶಿಯದ ಮಹಾ ವಿಶ್ವಕೋಶದಲ್ಲಿ ಪ್ರಕಟಗೊಂಡ ಲೇಖಕ್ಕೂ ಎಷ್ಟು ವ್ಯತ್ಯಾಸವನ್ನು ಕಾಣುತ್ತೇವೆ! ಪುರಾತನ ಸಂಸ್ಕೃತಿ ಪರಂಪರೆಯುಳ್ಳ ಮಹಾರಾಷ್ಟ್ರವೊಂದರ ಮಹಾ ನಾಯಕನನ್ನು, ವ್ಯಕ್ತಿಗತವಾಗಿ ಅತ್ಯುನ್ನತ ಮಟ್ಟದ ಚಾರಿತ್ರ ಸಂಪನ್ನನನ್ನು, ಎಷ್ಟು ಕ್ಷುದ್ರ ರೀತಿಯಲ್ಲಿ, ಎಷ್ಟು ಅಲ್ಪವಾಗಿ ರಶಿಯದ ವಿಶ್ವಕೋಶ ಚಿತ್ರಿಸುತ್ತದೆ! ಇದನ್ನು ಓದಿದ ರಶಿಯದ ನಾಗರಿಕರು ಗಾಂಧೀಜಿಯ ವಿಷಯದಲ್ಲಿ ಯಾವ ಸದಭಿಪ್ರಾಯವನ್ನೂ ಹೊಂದುವುದು ಅಸಾಧ್ಯ. ಗಾಂಧೀವಾದದ ತಿರುಳನ್ನೆ ತಿರುಗಾ ಮುರುಗಾ ಮಾಡಿರುವ ರಶಿಯದ ಈ ಲೇಖವನ್ನು ಬಿಟ್ಟರೆ ಹೊರಗಿನ ಬೇರಾವ ಬರವಣಿಗೆಯನ್ನೂ ಓದಲು ಅವಕಾಶ ಹೊಂದಿರದ ಸಾಮಾನ್ಯ ರಶಿಯನ್ನನು 'ಗಾಂಧೀಜಿಯ ಜೀವನ ಹೀಗೆಯೇ ಇದ್ದಿರ ಬಹುದು' ಎಂದು ತನ್ನಷ್ಟಕ್ಕೆ ಹೇಳಿಕೊಂಡು ಸುಮ್ಮನಾಗಬೇಕಾಗುತ್ತದೆ. ಹೀಗೆ ಜನರನ್ನು ತಪ್ಪು ಕಲ್ಪನೆಯಲ್ಲಿ ದೂಡುವ ರಶಿಯದ ಸರಕಾರವು ಭಾರತೀಯರ ಸಹಾನುಭೂತಿಯನ್ನು ಉಳಿಸಿಕೊಳ್ಳಲಿಚ್ಛಿಸುತ್ತಿದ್ದರೆ, ಇನ್ನಾದರೂ ತಪ್ಪುತಿದ್ದಿಕೊಳ್ಳಲಿ! ಮತ್ತು ತತ್ವಪ್ರಿಯತೆಗೋಸ್ಕರ ಸತ್ಯದ ಬಣ್ಣಗೆಡಿಸುವ ಹವ್ಯಾಸಕ್ಕೆ ಮುಂದೆಂದೂ ಇಳಿಯದಿರಲಿ.

—ಕಾರ್ತಿಕೇಯ.

In the Court of the Subordinate Judge of South Kanara.

O. S. No. 40/1954.

Between:—

Gulabi Shedthi ... Plaintiff.

and

Soorappa Hegde & others ... Defendants.

To:

5th defendant Raghu Hegde, S/o Rukmini Heggadthi, residing in Gulvadi village, Coondapur Taluk.

Please take notice that plaintiff has filed the above suit for partition of the family immoveable properties under the Aliyasanthana Act and for possession and accounts of mesne profits and the same is posted to 12—11—1954. You are warned to appear on the said date at 11 A. M. and file objections if any. In default the suit will be proceeded with declaring you exparte.

(By order of the Court)

B. P. Holla,
Advocate for Plaintiff.

Mangalore, 14-10-1954.

ಕುಲುಗುಂದ ಜಾನುವಾರು ಸಂತೆ.

ದಕ್ಷಿಣ ಕನ್ನಡಾ ಜಿಲ್ಲಾ ಪುತ್ತೂರು ತಾಲೂಕು ಸುಬ್ರಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಜರಗುವ ಜಾನುವಾರು ಸಂತೆಯು ಇದೇ 1954ನೇ ಇಸವಿ ನವಂಬರ 10ನೇ ತಾರೀಕಿನಿಂದ 25ನೇ ತಾರೀಕಿನ ವರೇಗೆ ಅಂದರೆ ಸಂತೆಯು ಕಾರ್ತೀಕ ಪೂರ್ಣಿಮೆಯ ದಿನ ಪ್ರಾರಂಭವಾಗಿ ಕಾರ್ತೀಕ ಅಮಾವಾಸ್ಯೆ ದಿವಸದ ಅಂದರೆ ಸುಬ್ರಮಣ್ಯ ದೀಪೋತ್ಸವದ ತನಕ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ನಾಲ್ಕಾಣೆಯ ಮೇರೆಗೆ ಫೀಸು ವಸೂಲು ಮಾಡಲಾದೀತು. ಒಂದು ತಿಂಗಳ ಕರುಗಳನ್ನು ಸದ್ರಿ ಫೀಸುಗಳಿಂದ ವಿರಹಿತಪಡಿಸಲಾಗಿಯದೆ. ಸಂದರ್ಭಾನುಸಾರ ಅವಶ್ಯ ಬಿದ್ದಲ್ಲಿ ಸದ್ರಿ ಫೀಸು ಏರಿಸಲೂ ಬಹುದು ಯಾ ಇನ್ನಿತರ ಫೀಸನ್ನು ಹೊರಿಸಲೂ ಬಹುದು.

ಪರಂತು ರೆವಿನ್ಯೂ ಡಿವಿಜನಲ್ ಆಫೀಸರರವರು ಅವಶ್ಯವೆಂದು ತೋರುವ ಯಾವತ್ತು ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ವಿನಾಯತಿ ಪಡಿಸಬಹುದು.

ಬಿ. ಎನ್. ಹೆಗ್ಡೆ,
ರೆವಿನ್ಯೂ ಡಿವಿಜನಲ್ ಆಫೀಸರರು.

ಪುತ್ತೂರು, ತಾ. 9–10–'54.

ಬೆಲೆ ಇಳಿಸಲಾಗಿದೆ
ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: 0-8-0
ಕೋರ್ಟು ಮತ್ತು ಸೊಸೈಟೀ ಫೋರ್ಮುಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯಸ್. ಪ್ರಭು.

BHUVANENDRA PRODUCTS LTD., KATAPADI, S. K.
ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!
ಇವುಗಳಿಂದಲೇ ಭುವನೇಂದ್ರ ಔಷಧಿಗಳು ಜನಪ್ರಿಯವಾಗಿರುವವು.
ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು ನಮ್ಮಲ್ಲಿ ತಯಾರಿಸಲ್ಪಡುತ್ತವೆ.
ವಿವರಗಳಿಗೆ ವಿಚಾರಿಸಿರಿ:—
ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.
ಡಿಪೋ:— (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಚತುರ್ ವಾರ್ಷಿಕ ಯೋಜನೆ.
!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!
!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!
"ರಿಕರಿಂಗ್" ಠೇವಣಾತಿ.
ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ಸೇಕಡಾ 4¼%.
ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.
ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.
ದಿ ವಿಜಯ ಬೇಂಕ್ ಲಿಮಿಟೆಡ್.

ಭರ್ತ ಕಂಟ್ರೋಲ
[ಮಕ್ಕಳನ್ನು ಹಡೆಯುವುದು ಸಾಕು]
ದಿನಕ್ಕೆ ಮೂರು ಸಾರಿ ಏಳು ದಿವಸ ಸೇವಿಸಿದರೆ ಮುಂದೆ ಖಂಡಿತಾ ಮಕ್ಕಳಾಗುವದಿಲ್ಲ. ಗರ್ಭ ಇದ್ದವರು ಸೇವಿಸ ಬಾರದು; ಸೇವಿಸಿದರೆ ಗರ್ಭಪಾತವಾಗುವದು.
ಬೆಲೆ- ೧ ಬಾಟ್ಲಿಗೆ — ರೂ. ೫–೮–೦ .... ಪೋಸ್ಟು ಖರ್ಚು ರೂ. ೦–೧೪–೦
—:ವಿಳಾಸ:—
ಹಾಲಪ್ಪಾ ದಾವಣಗೇರಿ ಆಯುರ್ವೇದ ಔಷಧಾಲಯ, ಗದಗ.

Edited, Printed & Published By K. H. Shetty at the Navayuga Press, Udipi, S. India

REGD. NO.
M. 3618

LICENCE NO. 31
Licensed to Post without Prepayment.

ನವಯುಗ

ಸಂಪುಟ ೩೪ | VOL. 34

ಉಡುಪಿ, 28—10—1954

ಸಂಚಿಕೆ ೯ | NO. 9

ಚಿಂತನ

ಇಂದು ಕಾಂಗ್ರೆಸಿನಲ್ಲಿಯಷ್ಟೇ ಅಲ್ಲ, ಇತರ ಪಕ್ಷಗಳಲ್ಲೂ ದೇಶದ ಸಾಮಾನ್ಯ ಜೀವನದಲ್ಲೂ ಅಧಿಕಾರ ಲಾಲಸೆಯು ಕಂಡು ಬರುತ್ತದೆ. ಶಾಸನ ಸಭಾ ಕಾರ್ಯಕ್ರಮಗಳಿಗಾಗಿಯಾಗಲೀ ಅಧಿಕಾರ ಸ್ಥಾನಗಳಿಗಾಗಲೀ ಮಹತ್ವವು ಕೊಡಲ್ಪಡುತ್ತದೆ ಆದುದರಿಂದ ನೆಹರೂಗಳು ಅಧಿಕಾರ ಸ್ಥಾನದ ಹೊಣೆಗಾರಿಕೆಗಳಿಂದ ಮುಕ್ತರಾಗಿ ಜನರ ನಡುವೆಯೆ ಕೆಲಸಮಾಡಬೇಕೆಂದು ಯೋಚಿಸುತ್ತಾರೆ. ತನ್ಮೂಲಕ ನಿಜವಾದ ಕೆಲಸ ಎಲ್ಲಿ ನಡೆಯಬೇಕೆಂದು ತೋರಿಸುವುದು ಅವರ ಸಂಕಲ್ಪ. ಪ್ರಜಾಪ್ರಭುತ್ವದ ಭದ್ರ ಬುನಾದಿ ಹಾಕುವಲ್ಲಿ ಜನರೊಡನೆ ಬೆರೆಯುವುದೇ ಮುಖ್ಯವಾದ ವಿಷಯ.

—ಅಗರ್ವಾಲ.

ನಗೆಹನಿ

ಒಬ್ಬ ರಾಜಕಾರಣಿಯ ವಿಷಯದಲ್ಲಿ ಇಬ್ಬರು ಗೆಳೆಯರು ಒಳ್ಳೆಯ ಚರ್ಚೆಯನ್ನು ನಡೆಸಿದ್ದರು. ರಾಜಕಾರಣಿಗಳ ಲಕ್ಷಣಗಳೆಲ್ಲ ಅವರು ವರ್ಣಿಸಿದರು. ಅವರು ಏನೇನು ಮಾಡಿಯಾರು, ಏನೇನು ಮಾಡಲಿಕ್ಕಿಲ್ಲವೆಂದೂ ಹೇಳಿಯಾಯಿತು. ಕೊನೆಗೆ ಗೆಳೆಯರಲ್ಲಿ ಒಬ್ಬ ಹೀಗೆಂದ— "ಒಟ್ಟಿನಲ್ಲಿ ರಾಜಕಾರಣಿಗೆ ಏನುಮಾಡಿದರೂ ಬದುಕಿಯಾನು ಕೊಲೆಂಬೇನೆ ಬಂದರೂ ಸಾಯಲಿಕ್ಕಿಲ್ಲ. ಆದರೆ ಏನಾದರೂ ಆಗಿ ನಾಲಿಗೆಯು ದಿಮ್ಮ ಹೋದರೆ ಆಗ ಮಾತ್ರ ಒಂದು ನಿಮಿಷವೂ ಆತ ಉಳಿಯಲಾರ."

ಉದಾರ ನಾಯಕರ ಅಭಾವ

ಧರ್ಮ ಮತ್ತು ಸಾಮಾಜಿಕ ನೀತಿಯೊಡನೆ ಅತಿ ನಿಕಟವಾದ ಸಂಬಂಧವನ್ನು ಹೊಂದಿದ ರಾಜಕಾರಣವನ್ನು ಹೊಲಸು ವ್ಯವಹಾರವೆಂದು ಹೀನೈಸುವ ಕೆಲವರು ಇರಬಹುದಾದರೂ ಹೆಚ್ಚಿನವರಲ್ಲಿ ಗೌರವ ಭಾವನೆಯೂ ಅನಕ್ಕಿಂತ ಹೆಚ್ಚಾಗಿ ಕುತೂಹಲವೂ ಇದೆಯೆಂದರೆ ತಪ್ಪಲ್ಲ. ವಿಲಿಯಂ ವೈಟರಂಥವರು ರಾಜಕಾರಣವನ್ನು ಒಂದು ಅಪೂರ್ವ ಕಲೆಯಾಗಿ ಪರಿಗಣಿಸುತ್ತಾರೆ: ನಾವು ಕಾಳಿದಾಸನ ಕವಿತೆ ಹಾಗು ಉದಯಶಂಕರನ ನೃತ್ಯಗಳಲ್ಲಿ ಕಲಾತ್ಮಕವಾದ ಅಂಶಗಳನ್ನು ಹೇಗೆ ಗುರುತಿಸಬಹುದೋ ಅವುಗಳಿಗಿಂತಲೂ ಉತ್ಕೃಷ್ಟವಾದ ಗುಣಗಳನ್ನು ರಾಜಕಾರಣಿಯ ಜೀವನ ಹಾಗು ನಡೆನುಡಿಗಳಲ್ಲಿ ಕಾಣಲು ಸಾಧ್ಯವೆಂದು ಅವರ ಅಭಿಪ್ರಾಯ. ರಾಜಕಾರಣ ಪಟುವೆನಿಸಿದಾತನು ಕೇವಲ ವೃತ್ತಿ ಕೌಶಲ್ಯವನ್ನು ತೋರಿಸುವ ವಕೀಲ, ವೈದ್ಯ ಮುಂತಾದವರಿಗಿಂತಲೂ ಎಷ್ಟೋ ಮೇಲ್ಮಟ್ಟದವನೆಂದೂ ಪ್ರಭಾವಶಾಲಿಯಾದ ಲೇಖಕನ ಸ್ಥಾನಮಾನಕ್ಕಿಂತಲೂ ರಾಜಕಾರಣಿಯ ವರ್ಚಸ್ಸಿಗೆ ಬೆಲೆ ಹೆಚ್ಚೆಂದೂ ಅವರ ಮಾತುಗಳಿಂದ ತಿಳಿಯುತ್ತದೆ

ಪ್ರಜಾಪ್ರಭುತ್ವ ಪದ್ಧತಿಯಲ್ಲಿ ರಾಜಕಾರಣಿಗಳಿಗೆ ಬಹಳ ಮಹತ್ವವು ಬರುತ್ತದೆ. ನಿರಂಕುಶ ಪ್ರಭುತ್ವದಲ್ಲಾಗಲೀ ನೌಕರಶಾಹಿ ಆಡಳಿತದಲ್ಲಾಗಲೀ ಸಿಗದಿರದ ಅವಕಾಶಗಳು ಪ್ರಜಾಪ್ರಭುತ್ವದಲ್ಲಿ ರಾಜಕಾರಣಿಗಳಿಗೆ ಲಭಿಸುತ್ತವೆ. ಶಾಸನಗಳನ್ನು ರಚಿಸುವ ಅಧಿಕಾರಗಳನ್ನು ಹೊಂದಿದಷ್ಟೇ ರಾಜಕಾರಣಿಗಳಿಗೆ ಅವುಗಳನ್ನು ವಿರೋಧಿಸುವ ಸ್ವಾತಂತ್ರ್ಯವೂ ಸಿಕ್ಕಿರುತ್ತದೆ. ಇದರಿಂದಾಗಿ ರಾಜಕಾರಣಿಗಳು ಪ್ರಾತಿನಿಧಿಕ ಪ್ರಜಾಪ್ರಭುತ್ವದ ಸಂಕೇತವೆನಿಸುವರಲ್ಲದೆ ಅದರ ಮೂಲಭೂತ ಅಂಗಗಳಾದ ಭಿನ್ನಾಭಿಪ್ರಾಯವನ್ನು ವ್ಯಕ್ತಗೊಳಿಸುವ ಅಧಿಕಾರ ಮುಂತಾದವುಗಳ ದ್ಯೋತಕವಾಗಿಯೂ ಭಾವಿಸಲ್ಪಡುವರು. ಪ್ರಜಾಪ್ರಭುತ್ವದಲ್ಲಿ ಸಮಾಜವು ಗತಿಶೀಲವಾಗಿದ್ದು ಯಾವುದನ್ನೂ "ಇದಮಿತ್ಥಂ" ಎಂದು ವಿಧಿಸುವುದಿಲ್ಲ, ಎರಡರಲ್ಲಿ ಒಂದನ್ನು ಸ್ವೀಕರಿಸಿಯೇ ತೀರಬೇಕೆಂದು ಒತ್ತಾಯಿಸಲು ಅದು ಎಡೆಕೊಡುವುದಿಲ್ಲ, ಅರ್ಥಾತ್ ಮನುಷ್ಯನನ್ನು ಯಂತ್ರದಂತೆ ಮಾಡುವುದಿಲ್ಲ; ಬದಲಾಗಿ, ಅವನ ವಿಚಾರ ಶಕ್ತಿಗಳ ಅಭಿವ್ಯಂಜಕತೆಗೆ ಧಾರಾಳ ಸಂದರ್ಭಗಳನ್ನು ಒದಗಿಸಿಕೊಡುತ್ತದೆ.

ಸಂದರ್ಭ ಸಾಧಕರೆಂದು ರಾಜಕಾರಣಿಗಳನ್ನು ಕೆಲವರು ಹಳಿಯಲ್ಪಡುವುದೇ ಹೊಲಸು ವಿಷಯವೆಂದು ರಾಜಕೀಯವನ್ನು ಹೆಸರಿಸುವುದರ ಮೂಲ: ರಾಜಕಾರಣಿಗಳು ಗಾಳಿ ಬಂದಂತೆ ಕೊಡೆಹಿಡಿಯುವವರೆಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಜನಾಭಿಪ್ರಾಯದ ಗತಿಯನ್ನು ಸೂಕ್ಷ್ಮವಾಗಿ ನಿರೀಕ್ಷಿಸುತ್ತಾ ಅದರ ಪ್ರಯೋಜನವನ್ನು ಪಡೆಯುತ್ತಿರುವ ರಾಜಕಾರಣಿಯು ಅಸಾಧಾರಣ ಕೌಶಲವನ್ನು ಪ್ರಕಟಪಡಿಸುತ್ತಿರುವನೆಂಬುದರ ಕಡೆಗೆ ಯಾರ ಗಮನವೂ ಹೋಗದಿರುವುದು ದುರ್ದೈವ. ಅವನು ಮನೋವಿಜ್ಞಾನದ ಪುಸ್ತಕ ಓದಿದವನಲ್ಲ; ತಪಸ್ಸಿನ ಸಾಧನೆ ಮಾಡಿದಾತನೂ ಅಲ್ಲ—ಹೀಗಿದ್ದರೂ ಜನರ ಒಲವು ನಿಲವುಗಳನ್ನು ಗೊತ್ತುಹಚ್ಚಿ, ಅದಕ್ಕೆ ಹೊಂದಿಕೊಂಡು ನಡೆಯುತ್ತಾನೆ ಇದು ಆಶ್ಚರ್ಯಕರವಾದ ವಿಷಯ. ಅವನು ಒಂದು ಚುನಾವಣೆಯಲ್ಲಿ ಸೋಲಬಹುದು—ಆದರೆ ಅಷ್ಟರಿಂದ ನಿರಾಶನಾಗುವುದಿಲ್ಲ, ಜನರು ತನ್ನಲ್ಲಿ ಏನು ಕೊರತೆ ಕಂಡರೆಂದು ವಿಶ್ಲೇಷಿಸಲು ನೋಡುತ್ತಾನೆ; ಜೀವನದಲ್ಲಿ ಜುಗುಪ್ಸೆಯನು ಅವನು ಹೊಂದುವುದಿಲ್ಲ. ಹಾಗೆಯೇ ಹೆಚ್ಚಿನ ಆಸಕ್ತಿಯನ್ನೂ ಅವನು ತೋರಿಸುವುದಿಲ್ಲ; ಏಕೆಂದರೆ ನಿರ್ವಿಕಾರ ಭಾವನೆ ಇಲ್ಲದಿದ್ದರೆ, ಜನರ ಟೀಕಾಟೋಕೆಗಳಿಂದ ಇವನು ನೊಂದುಕೊಂಡು ಆತ್ಮಘಾತ ಮಾಡಿಕೊಳ್ಳುವ ಪ್ರಸಂಗವೇ ಬಂದೀತು.

ಪಕ್ಷ ಪಂಗಡಗಳ ರಾಜಕೀಯವು ಪ್ರಜಾಪ್ರಭುತ್ವದಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ರಾಷ್ಟ್ರದ ರಾಯಭಾರಿಗಳು ವಿದೇಶಗಳಲ್ಲಿ ಹೇಗೆ ಸಾವಿರ ಸುಳ್ಳನ್ನು ಬಿಗಿದಾದರೂ ತಮ್ಮ ನಾಡಿನ ದೊಡ್ಡಸ್ತಿಕೆ ಪ್ರದರ್ಶಿಸುವರೋ ಅದರಂತೆ ಪಕ್ಷದ ಶಿಸ್ತಿಗೊಳಪಟ್ಟ ರಾಜಕಾರಣಿಯು ಸುಳ್ಳಿನ ಅಸ್ತಿವಾರದ ಮೇಲೆಯೇ ಅಸಲಿ, ಪಕ್ಷದ ಸ್ವಾರ್ಥವನ್ನು ಪ್ರಚಾರ ಪಡಿಸುವ ಪ್ರಮೇಯಗಳು ಅನೇಕಸಲ ಬರುತ್ತವೆ. ಆಗ ಪಕ್ಷ—ಪಕ್ಷಗಳೊಳಗಿನ ವಾದ ಮತ್ತು ಪ್ರತಿಪಾದನೆಯಲ್ಲಿ ಹೊರಗಿನವರಿಗೆ ಏನೂ ಹುರುಳಿಲ್ಲವೆಂದು ತೋರಿದರೂ ಆಶ್ಚರ್ಯವಿಲ್ಲ. ಆದರೆ ಎಲ್ಲ ರಾಜಕಾರಣಿಗಳೂ ತಾವು ಜನತೆಯ ಒಂದು ಮುಖವನ್ನು ಪ್ರತಿನಿಧೀಕರಿಸುತ್ತೇವೆಂದು ಹೇಳುವುದೂ ಅವರ ಅಪೇಕ್ಷೆಯನ್ನೇ ವ್ಯಕ್ತಪಡಿಸುತಿದ್ದೇವೆಂದು ಕೊಚ್ಚಿಕೊಳ್ಳುವುದೂ ಪ್ರಜಾಪ್ರಭುತ್ವದ ಪುರಸ್ಕರ್ತರನ್ನು ಸಮಾಧಾನ ಪಡಿಸುತ್ತದೆ.

ನಮ್ಮ ಜನರ ದೃಷ್ಟಿಯಿಂದ ಪ್ರಜಾಪ್ರಭುತ್ವದ ಹಾಗು ಅದರ ಜೀವಂತ ಪ್ರತೀಕವೆನಿಸಿದ ರಾಜಕಾರಣಿಯ ಪಾತ್ರವನ್ನು ವಿಮರ್ಶಿಸಿದರೆ ನಾವು ಇನ್ನು ಕೆಲವು ದಶಕಗಳ ವರೆಗಾದರೂ ಪ್ರಜಾಸತ್ತೆಯ ಪ್ರಥಮ ಪಾಠವನ್ನು ಕಲಿಯುವುದರಲ್ಲಿಯೇ ಸಮಯ ಕಳೆಯುತ್ತಿರಬಹುದೆಂಬ ಅಂಶ ಗೋಚರಿಸುತ್ತದೆ. ರಾಜ್ಯ ವ್ಯವಸ್ಥೆಯ ಪರಿಚಯವಾಗಲೀ ಪ್ರಜಾಪ್ರಭುತ್ವದ ಲಕ್ಷಣ ಹಾಗು ಸಂಪ್ರದಾಯಗಳಾಗಲೀ ಅದನ್ನು ಕುರಿತಾದ ನಿಷ್ಠೆ ಹಾಗು ಶ್ರದ್ಧೆಗಳಾಗಲೀ ನಮ್ಮ ಜನರಲ್ಲಿ ಇನ್ನೂ ಬೇರು ಬಿಟ್ಟಿಲ್ಲ. ಭಾರತದಲ್ಲಿ ನಿರಂಕುಶ ಆಡಳಿತ ನಡೆದ ನಿದರ್ಶನಗಳೇ ಹೆಚ್ಚಾಗಿ ಸಿಗುತ್ತವೆ, ಪ್ರಾಚೀನ ಕಾಲದಲ್ಲಿ ಪ್ರಜಾಸತ್ತೆ ಅಸ್ತಿತ್ವದಲ್ಲಿದ್ದಿರಬಹುದಾದರೂ ಇಂದು ಅದರ ನೆನಪೂ ಉಳಿಯದಷ್ಟು ಅದು ಹಿಂದಿನ ಸಂಗತಿಗಳಾಗಿ ಹೋಗಿರುತ್ತವೆ. ಪರಿಣಾಮದಲ್ಲಿ ರಾಜನೆಂಬ, ಅಥವಾ ಶತ್ರುಮಾನನಾದ, ವ್ಯಕ್ತಿಯೊಬ್ಬನನ್ನು ಗೌರವಿಸಿ ಪೂಜಿಸುವುದು ನಮ್ಮಲ್ಲಿಯ ಹವ್ಯಾಸ. ಪ್ರಧಾನ ಮಂತ್ರಿ ನೆಹರೂಗಳು ಗುಡ್ಡಗಾಡು ಪ್ರದೇಶಗಳಲ್ಲಿ ಸುತ್ತಾಡಿದಾಗ ಎಲ್ಲರೂ ಅವರನ್ನು ಮಹಾರಾಜರೆಂದೇ ಕರೆದರೆಂಬುದು ಈ ಮಾತಿಗೊಂದು ನಿದರ್ಶನ.

ವ್ಯಕ್ತಿಪೂಜೆ ತಪ್ಪು ಎಂದು ಹೇಳುವವರು ಇರಬಹುದು. ಆದರೆ ಜನರ ಮೇಲೆ ರಾತ್ರಿ ಬೆಳಗಾಗುವುದರೊಳಗೆ ಪ್ರಜಾಪ್ರಭುತ್ವವನ್ನು ಹೇರುವಂತಿಲ್ಲ ಎಂಬುದನ್ನೂ ಇಲ್ಲಿ ಗಮನಿಸಬೇಕಾಗುತ್ತದೆ. ವ್ಯಕ್ತಿಪೂಜೆಯ ಅಭ್ಯಾಸವನ್ನು ಕ್ರಮ ಕ್ರಮೇಣವಾಗಿ ಹೋಗಲಾಡಿಸಿ, ಅದರ ಸ್ಥಾನದಲ್ಲಿ ಪ್ರಜಾಪ್ರಭುತ್ವದ ಕುರಿತಾದ ಶ್ರದ್ಧೆಯನ್ನು ಪ್ರತಿಷ್ಠಾಪಿಸುವ ಕೆಲಸ ನಡೆಯಬೇಕಾಗುತ್ತದೆ. ಮಧ್ಯಂತರದ ಈ ಅವಧಿಯಲ್ಲಿ ಪ್ರಜಾಪ್ರಭುತ್ವಕ್ಕೆ ಸಮ್ಮತವಾದ ರೀತಿಯಲ್ಲಿ ಅಧಿಕಾರವನ್ನು ಹೊಂದಿದ ಪಕ್ಷದ ನಾಯಕನಾದವರೂ ಜನತೆಯ ಗೌರವಾದರಗಳನ್ನು ಪಡೆದುಕೊಂಡ ಮಹಾಜೀವಿಗಳಾಗಿರುವುದರಿಂದ ಪ್ರಯೋಜನ

(೧೨ನೇ ಪುಟ ನೋಡಿರಿ)

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್.

[ಪ್ರಧಾನ ಕಾರ್ಯಾಲಯ ಉಡುಪಿ, ದ. ಭಾರತ   ಸ್ಥಾಪನೆ: ೧೯೨೫]

ದೀಪಾವಳಿಯ ಶುಭಾಶಯಗಳು!

ಈ ಶುಭ ಸಮಯದಲ್ಲಿ ನಮ್ಮ ಮಿತ್ರ ಪರಿವಾರಕ್ಕೆ, ಹಿತಚಿಂತಕರ ಬಳಗಕ್ಕೆ ಮತ್ತು ಗ್ರಾಹಕರಿಗೆ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಲು ನಮಗೆ ಆನಂದವೆನಿಸುತ್ತದೆ. ಅಲ್ಲದೆ ಕಳೆದ ೨೯ ವರುಷಗಳ ನಮ್ಮ ಅವಿರತ ಅನುಭವದ ಸೇವೆಯನ್ನು ನೀಡಿ ೬೨ ಶಾಖೆಗಳ ಮೂಲಕ ತಮ್ಮ ಕಾರ್ಯವನ್ನು ತತ್ಪರವಾಗಿ-ಸುಗಮವಾಗಿ ನಡೆದಿದ್ದನ್ನು ತಿಳಿಸಲು ಅಭಿಮಾನವೆನಿಸುತ್ತದೆ ತಮ್ಮೆಲ್ಲರ ವಿಶ್ವಾಸ-ನೆರವು ಇದೇ ಬಗೆಯಾಗಿ ಮುಂದೆಯೂ ದೊರೆಯುವುದೆಂದು ಖಚಿತವಾಗಿ ನಂಬಿದ್ದೇವೆ.

ಚಲಾವಣೆ ಭಂಡವಾಳ 6,50,00,000ಗೂ ಮಿಕ್ಕಿದೆ

The Canara Industrial & Banking Syndicate Ltd.

Head Office UDIPI, S. India]   [Estd 1925.

ಪೋಷಕ ಆಹಾರದ ಕುರಿತು ವಿಶೇಷ ಸಂಶೋಧನೆ

ಆರೋಗ್ಯ ಲಾಭಕ್ಕೋಸ್ಕರ ಆಹಾರಾಭ್ಯಾಸದ ಪರಿಷ್ಕರಣ

ನಾವಿಂದು ಆಹಾರ ಧಾನ್ಯಗಳ ಸಮೃದ್ಧಿಯನ್ನು ಸಾಧಿಸಿದ್ದೇವೆಂದು ಅಂಕೆ ಸಂಖ್ಯೆಗಳು ತಿಳಿಸುತ್ತವೆ. ಪಂಚವಾರ್ಷಿಕ ಯೋಜನೆಯಲ್ಲಿ ಇಟ್ಟುಕೊಂಡ ಗುರಿಯನ್ನು ನಾವೀಗಲೇ ಮೀರಿಸಿದ್ದೇವೆಂದು ಯೋಜನಾ ಆಯೋಗದ ಪ್ರಕಟಣೆಗಳು ಹೇಳುತ್ತವೆ. ಆದರೆ ಜನಸಂಖ್ಯೆಯು ಹೆಚ್ಚುತ್ತಾ ಹೋಗುತ್ತಿರುವ ಮಾನದಿಂದಲೇ ಅಧಿಕ ಆಹಾರೋತ್ಪಾದನೆಯನ್ನೂ ಕೈಗೊಳ್ಳುವುದು ಇಷ್ಟವಾದುದರಿಂದ, ಇನ್ನು ಮುಂದಕ್ಕೂ ಕೃಷಿ ವಿಭಾಗಕ್ಕೆ ಸಾಕಷ್ಟು ಮಹತ್ವವನ್ನು ಕೊಟ್ಟೇ ತೀರಬೇಕಾಗುತ್ತದೆ.

ಆಹಾರ ಸಮೃದ್ಧಿಯ ವಿಷಯವನ್ನು ಮಾತನಾಡುವಾಗ, ಇನ್ನೊಂದು ಮುಖ್ಯ ಸಂಗತಿಯನ್ನೂ ಗಮನಿಸಿದರೆ ಕ್ಷೇಮವಾದೀತು: ನಾವು ಸೇವಿಸುವ ಆಹಾರದ ಪ್ರಮಾಣಕ್ಕಿಂತಲೂ ಅದರ ಗುಣಾಂಶಗಳ ಕಡೆಗೆ ಹೆಚ್ಚು ಲಕ್ಷ್ಯ ಪೂರೈಸಬೇಕೆಂಬ ತತ್ವವೇ ಅದು. ರಾಷ್ಟ್ರದ ಜನಶಕ್ತಿಯ ಸಂವರ್ಧನೆಯಲ್ಲಿ ನಾಗರಿಕರು ಸಮತೂಕದ ಆಹಾರವನ್ನೇ ಉಣ್ಣುವಂತೆ ನಡೆಸುವ ಪ್ರಯತ್ನವು ಮಹತ್ವದ ಪಾತ್ರವನ್ನು ವಹಿಸುತ್ತದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಆಹಾರದ ಗುಣಾಂಶಗಳ ಕುರಿತು ವಿಶೇಷವಾದ ಸಂಶೋಧನೆಗಳನ್ನು ನಡೆಸಿ ಎಲ್ಲ ಜನರೂ ಸತ್ವಯುತವಾದ ಪೌಷ್ಟಿಕ ಆಹಾರವನ್ನೇ ಸೇವಿಸುವಂತೆ ಸರಕಾರವು ಪ್ರಚಾರ ಮತ್ತಿತರ ಸಾಧನಗಳಿಂದ ನೋಡುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ವಿಜ್ಞಾನದ ಈ ವಿಭಾಗವು ತ್ವರಿತ ಗತಿಯಿಂದ ಅಭಿವೃದ್ಧಿಯನ್ನು ಹೊಂದಿರುತ್ತದೆ. ರಾಷ್ಟ್ರದ ಆರೋಗ್ಯ ರಕ್ಷಣೆಯಲ್ಲಿ ಸಮತೂಕದ ಆಹಾರ ಸೇವನೆಯ ಪ್ರಮುಖ ಪಾತ್ರವನ್ನು ಎಲ್ಲ ಪಾಶ್ಚಾತ್ಯ ರಾಷ್ಟ್ರಗಳೂ ತಿಳಿದುಕೊಂಡಿವೆಯೆಂದು ಹೇಳಿದರೆ ತಪ್ಪಲ್ಲ.

ಭಾರತ ಮುಂತಾದ ಏಶಿಯದ ರಾಷ್ಟ್ರಗಳಲ್ಲಿ ಎಷ್ಟು ಅಗತ್ಯವಿದೆಯೊ ಅಷ್ಟು ಗಮನವನ್ನು ಈ ವಿಷಯಕ್ಕೆ ಕೊಟ್ಟಂತೆ ಕಾಣುವುದಿಲ್ಲ. ಇಲ್ಲಿ ನಡೆದ ಹಾಗು ನಡೆಯುತ್ತಿರುವ ಪ್ರಯತ್ನಗಳು ಇನ್ನೂ ಪ್ರಾರಂಭಿಕಾವಸ್ಥೆಯನ್ನು ದಾಟಿಲ್ಲ. ೧೯೪೩ರಲ್ಲಿ ಸಂಯುಕ್ತ ರಾಷ್ಟ್ರ ಸಂಘವು ಆಹಾರ ವಿಷಯದಲ್ಲಿ ಪ್ರತಿಯೊಂದೂ ರಾಷ್ಟ್ರವು ನಿರ್ವಹಿಸಬೇಕಾದ ಹೊಣೆಗಾರಿಕೆಗಳನ್ನು ಒಂದು ಪರಿಷತ್ತಿನಲ್ಲಿ ಚರ್ಚಿಸಿತು. ಅಂದಿನಿಂದ ರಾಷ್ಟ್ರವನ್ನು ಆಹಾರದ ಮಟ್ಟಿಗಾದರೂ ಸ್ವಾವಲಂಬಿಯಾಗಿಸುವ ಹಾಗು ಅರೆಹೊಟ್ಟೆಯಿಂದ ಜನರು ಬಳಲದಂತೆ ನೋಡಿಕೊಳ್ಳುವ ಪ್ರಯತ್ನಗಳನ್ನು ಬಲಗೊಳಿಸಲಾಯಿತು.

ದಾರುಣವಾದ ಬಡತನದಿಂದ ಬಳಲುವ ಆಗ್ನೇಯ ಹಾಗು ಪೂರ್ವ ಏಶಿಯದ ಜನರು ತಮ್ಮ ಅಗತ್ಯಕ್ಕೆ ತಕ್ಕರೀತಿಯ ಆಹಾರಗಳನ್ನು ಸೇವಿಸುವ ಭಾಗ್ಯ ಪಡೆದಿಲ್ಲ. ಅಕ್ಕಿಯೇ ಇವರೆಲ್ಲರ ಮುಖ್ಯ ಆಹಾರವಾಗಿದ್ದು ಕೆಲಮಟ್ಟಿಗೆ ದ್ವಿದಳ ಧಾನ್ಯಗಳನ್ನೂ ಕಾಳು ಬೇಳೆಗಳನ್ನೂ ಉಪಯೋಗಿಸುತ್ತಾರೆ; ಮೀನು ಮತ್ತು ಮಾಂಸವನ್ನೂ ಆಹಾರವಾಗಿ ಸ್ವಲ್ಪಮಟ್ಟಿಗೆ ಬಳಸುತ್ತಾರೆ. ಆದರೆ ಹಾಲು ಮತ್ತು ತಜ್ಜನ್ಯ ಪದಾರ್ಥಗಳನ್ನು ಸೇವಿಸುವವರು ಮಾತ್ರ ಬಹಳ ವಿರಳ. ಇಂಥ ಆಹಾರವು ಶಕ್ತಿಯ ಉತ್ಪಾದನೆಗೆ ಅಗತ್ಯವೆನಿಸಿದ ಕ್ಯಾಲ್ಸಿಯಂ, ಜೀವಸತ್ವ ಮುಂತಾದವುಗಳ ಅಭಾವದಿಂದಲೂ ದೇಹದ ಬೆಳವಣಿಗೆಗೆ ಬೇಕಾದ ಸಾರಜನಕ ಮತ್ತು ಕೊಬ್ಬು ತೈಲಗಳ ಕೊರತೆಯಿಂದಲೂ ತುಂಬಿರುತ್ತದೆ.

ಪರಿಣಾಮವಾಗಿ ಮಲಯ ಮುಂತಾದ ದೇಶಗಳಲ್ಲಿ "ಬೆರಿ ಬೆರಿ" ಎಂಬ ಜೀವಸತ್ವದ ಅಭಾವದಿಂದುಂಟಾಗುವ ರೋಗವು ಪ್ರಬಲಿಸಿದ್ದರೆ, ಸಯಾಂ ಮುಂತಾದ ದೇಶಗಳಲ್ಲಿ "ರಿಕೆಟ್ಸ್" "ಸ್ಕರ್ವಿ" ಎಂಬ ಎಲುಬು ಹಾಗು ರಕ್ತ ಸಂಬಂಧದ ರೋಗಗಳು ಹೆಚ್ಚುತ್ತಿವೆ. ನಮ್ಮ ದೇಶದಲ್ಲಿಯೂ ಪೋಷಕಾಂಶಗಳ ಅಭಾವದಿಂದ ದೈಹಿಕ ದಾರ್ಢ್ಯವನ್ನು ಕಳೆದುಕೊಂಡ (ಪರಿಣಾಮವಾಗಿ ಮಾನಸಿಕ ಬೆಳವಣಿಗೆಯೂ ತಗ್ಗುತ್ತವೆ) ಜನರು ಕೋಟಿಗಟ್ಟಳೆ ಕಾಣಿಸುತ್ತಾರೆ. ಉತ್ತಮ ಆಹಾರವನ್ನು ಕೊಂಡು ಕೊಂಡು ಬಳಸುವಷ್ಟು ಅನುಕೂಲತೆ ಇಲ್ಲದ ಭಾರತದ ಬಡವರು ಹೊಟ್ಟೆ ತುಂಬುವಷ್ಟು ಅನ್ನವನ್ನು ಸಂಪಾದಿಸುವುದಕ್ಕಾಗಿಯೇ ಪಡಬಾರದ ಕಷ್ಟಗಳನ್ನು ಅನುಭವಿಸುತ್ತಿದ್ದು, ಇದರೊಂದಿಗೆ ಸಮತೂಕದ ಆಹಾರದ ಚಿಂತೆಯನ್ನು ಕಟ್ಟಿಕೊಳ್ಳುವುದಕ್ಕೆ ಅವರು ಸಿದ್ಧರಿಲ್ಲ.

ಆದರೆ ಈ ಬಗೆಯ ನಿರಾಶಾ ಸೂಚಕ ಮನೋಭಾವವು ಒಳಿತಲ್ಲವೆಂದು ರಾಷ್ಟ್ರದ ಉಜ್ವಲ ಭವಿಷ್ಯದ ಕನಸುಗಾರರು ಹೇಳುತ್ತಾರೆ. ವೈಜ್ಞಾನಿಕ ಸಂಶೋಧನೆಗಳ ಆಧಾರದಿಂದ ಆಹಾರದ ಕುರಿತು ತೋರಿಸುವ ಅಲಕ್ಷದ ಪರಿಣಾಮವನ್ನು ಕೆಳಗಿನ ಮಾತುಗಳಲ್ಲಿ ವರ್ಣಿಸಬಹುದು—"ಕಾಯಿಲೆಗಳಿಂದುಂಟಾಗುವ ಪರಿಣಾಮಕ್ಕಿಂತಲೂ ಭೀಕರವಾದ ಮತ್ತು ಆಜೀವನ ಕಾಡುತ್ತಿರುವ ನಿಶ್ಶಕ್ತಿಯನ್ನು ಉಂಟು ಮಾಡುತ್ತದೆ; ಕಠಿಣ ಕೆಲಸಗಳನ್ನು ಮಾಡಲಾರದಂತೆ ದೈಹಿಕ ಬೆಳವಣಿಗೆಯನ್ನು ಕುಂಠಿಸುತ್ತದೆ; ಶಾಲೆಗೆ ಹೋಗುವ ಮಕ್ಕಳ ಬುದ್ಧಿ ಸೂಕ್ಷ್ಮತೆಯೂ ಶಾರೀರಿಕ ಬೆಳವಣಿಗೆಯೂ ಗಣನೀಯವಾಗಿ ತಗ್ಗಿಕೊಳ್ಳುತ್ತದೆ; ಪ್ರಾಯಸ್ಥರಲ್ಲಿ ಹೆಚ್ಚು ಕೆಲಸ ಮಾಡಲು ಶಕ್ತಿ ಇರುವುದಿಲ್ಲವಷ್ಟೇ ಅಲ್ಲ, ರೋಗಾಣುಗಳ ಆಕ್ರಮಣವನ್ನು ಯಶಸ್ವಿಯಾಗಿ ಎದಿರಿಸುವ ಸಾಮರ್ಥ್ಯವೂ ಉಳಿಯುವುದಿಲ್ಲ."

ಇವೆಲ್ಲಕ್ಕಿಂತಲೂ ಹೆಚ್ಚಾಗಿ, ಶಿಶು ಮರಣಸಂಖ್ಯೆಯೂ ಹೆರಿಗೆಯ ಕಾಲದಲ್ಲಿ ಮೃತ್ಯುವಶರಾಗುವ ಸ್ತ್ರೀಯರ ಪ್ರಮಾಣವೂ ಹೆದರಿಕೆ ಹುಟ್ಟಿಸುವಷ್ಟು ಹೆಚ್ಚಿಕೊಳ್ಳುತ್ತದೆ. ಆಹಾರದ ಕುರಿತು ಜಾಗರೂಕತೆಯನ್ನು ವಹಿಸಲು ನಡೆಸುವ ಪ್ರಥಮ ಪ್ರಯತ್ನಗಳಲ್ಲಿ ಮೊತ್ತಮೊದಲಾಗಿ ಶಿಶುಗಳ ಹಾಗು ಗರ್ಭಿಣಿಯರ ಆರೋಗ್ಯವನ್ನು ಯೋಗ್ಯ ರೀತಿಯಲ್ಲಿ ಕಾಪಾಡಿಕೊಳ್ಳುವ ಅಂಶಕ್ಕೆ ಪ್ರಾಶಸ್ತ್ಯವನ್ನೂ ಪ್ರಾಧಾನ್ಯವನ್ನೂ ಸಲ್ಲಿಸಬೇಕೆಂದು ವಿಜ್ಞಾನಿಗಳ ಒಮ್ಮತದ ಅಭಿಪ್ರಾಯ. ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಶಾಲಾಪ್ರಾಯದ ಎಲ್ಲ ಮಕ್ಕಳಿಗೂ ನೀಡಲು ಆತುರವನ್ನು ತೋರಿಸುವ ಸರಕಾರವು ಅವರ ಊಟೋಪಚಾರದ ಬಗ್ಗೆಯೂ ಯೋಗ್ಯ ವ್ಯವಸ್ಥೆ ಮಾಡಬೇಕಾಗುತ್ತದೆ. ಆರೋಗ್ಯವಂತ ಮಕ್ಕಳು ಹುಟ್ಟಬೇಕಾದರೆ ಗರ್ಭಿಣಿಯ ಆರೈಕೆಯಲ್ಲಿ ಜಾಗರೂಕತೆಯನ್ನು ವಹಿಸಬೇಕಾಗಿದೆ ಎಂದು ಎಲ್ಲರೂ ಬಲ್ಲರು.

ಚೀನದ ಗಾದೆಯೊಂದು "ನೀವು ಒಂದು ವರ್ಷದ ಯೋಜನೆ ಮಾಡುವಿರಾದರೆ, ಬೀಜಗಳನ್ನು ಬಿತ್ತಿರಿ; ಹತ್ತು ವರ್ಷದ ಯೋಜನೆ ನಿಮ್ಮದಾದರೆ ಮರಗಳನ್ನು ನಟ್ಟು ಬೆಳೆಸಿರಿ; ನೂರು ವರ್ಷದ ಯೋಜನೆಯಾದರೆ ಮನುಷ್ಯರ ಆರೈಕೆಯನ್ನು ಮಾಡಿರಿ" ಎಂದು ಉಪದೇಶಿಸುತ್ತದೆ. ರಾಷ್ಟ್ರವು ಸಾವಿರಾರು ವರ್ಷ ಬಾಳುವ ಸಂಸ್ಥೆಯಾಗಿದ್ದು ನಾವು ಮನುಷ್ಯರ ಆರೈಕೆಯತ್ತ ಗಮನವಿತ್ತರೆ ಮಾತ್ರ ರಾಷ್ಟ್ರವನ್ನು ಕಟ್ಟಲು ಸಮರ್ಥರಾಗುತ್ತೇವೆ. ಆದುದರಿಂದ ಭಾರತದ ಪುನರ್ನಿರ್ಮಾಣ ಕಾರ್ಯದಲ್ಲಿ ಸಮತೂಕದ ಆಹಾರ ಸೇವನೆಯ ಕುರಿತು ಹೆಚ್ಚಿನ ಆಸಕ್ತಿಯನ್ನು ವಹಿಸಲಾಗುತ್ತದೆ. ಸ್ವಾತಂತ್ರ್ಯೋತ್ತರದಲ್ಲಿ ಬೇರೆ ಬೇರೆ ರಾಜ್ಯಗಳ ಸುಮಾರು ೪೭೦೦ ಕುಟುಂಬಗಳ ಆಹಾರಾಭ್ಯಾಸವನ್ನು ನಿರೀಕ್ಷಿಸಿ ಕಂಡು ಹಿಡಿದ ಪರಿಣಾಮಗಳ ಮೇಲಿಂದ,

(೧೧ನೇ ಪುಟ ನೋಡಿರಿ.)

THE CANARA MUTUAL ASSURANCE COMPANY, LTD.,
Managing Director: T. R. A. PAI
Head Office: UDIPI, S. INDIA.] [Estd: 1935
ಅತ್ಯುತ್ತಮ ಬೋನಸ್
ಲಾಭಸಹಿತ ಪೋಲಿಸಿಗಳಿಗೆ ವಿಮಾ ಮೊಬಲಗಿನ ಪ್ರತಿ ಸಾವಿರ ರೂಪಾಯಿಗೆ ವರ್ಷಕ್ಕೆ
ರೂ. 18/- ಹೋಲ್ ಲೈಫ್ ಎಶ್ಯೂರೆನ್ಸಿಗೆ
ರೂ. 15/- ಎಂಡೋಮೆಂಟ್ ಎಶ್ಯೂರೆನ್ಸಿಗೆ
31-12-1953ನೇ ತಾರೀಕಿಗಾದ 1951ರಿಂದ 1953ರ ವರೆಗಿನ ಅವಧಿಯ ವಿಮಾಗಣನೆಯ ಫಲಿತಾಂಶ.
ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ, ಲಿಮಿಟೆಡ್
ಪ್ರಧಾನ ಕಾರ್ಯಾಲಯ: ಉಡುಪಿ, ದ. ಭಾರತ.] [ಸ್ಥಾಪನೆ: ೧೯೩೫.
ಸ್ಥಾಪನೆಯಾದಂದಿನಿಂದಲೂ ಪ್ರತಿಯೊಂದು ವರ್ಷಕ್ಕೂ ಬೋನಸ್ ಹಂಚಿದ ಕಂಪೆನಿ.
CHIEF AGENTS:
THE COMMERCIAL CORPORATION OF INDIA, LTD.,
UDIPI, S. India

(ಉತ್ತಮ ಸಾರಸ್ವತ ಬ್ರಾಹ್ಮಣರ ಅಡಿಗೆ, ಶುಚಿ ರುಚಿಯಾದ ರೈಸ್‌ಪ್ಲೇಟ್)
ರುಚಿಕರವಾದ ಊಟ— ಹವೇಶೀರ್ (Airy) ವಸತಿ,
ಎರಡು ಊಟ, ಕೋಟ್ (Cot) ಇತ್ಯಾದಿ ಸೌಕರ್ಯ.
ತಿಂಗಳೊಂದರ ರೂ. 52/- ಮಾತ್ರ.
ವಿಶೇಷ ಮಾಹಿತಿಗೆ ಪ್ರತ್ಯಕ್ಷ ವಿಚಾರಿಸಿರಿ.
ಸದ್ಗುರು ಬೋರ್ಡಿಂಗ್ ಎಂಡ್ ಲೋಜಿಂಗ್
ಹಿಂದ್‌ಮಾತಾ ಸಿನೇಮದ ಸಮೀಪ, ದಾದರ್, ಮುಂಬಯಿ ೧೪.
ವ್ಯವಸ್ಥಾಪಕ: ವಿ. ಯೆಸ್. ಪ್ರಭು.

ZANDU'S THREE GEMS of AYURVEDIC MEDICINES
ಝಂಡೂರವರ ಮಕರಧ್ವಜ ಪಿಲ್ಸ್ (ಸುವರ್ಣ ಮಿಶ್ರಿತ)
ದೀರ್ಘಾವಧಿಯ ಕೆಮ್ಮು, ನರಗಳ ನಿಸ್ತೂಕ ಮತ್ತು ಸರ್ವಸಾಮಾನ್ಯ ಅಶಕ್ತತೆ ಹಾಗೂ ಇತರ ಎದೆಯ ಬೇನೆಗಳಿಗೆ ಅತ್ಯಧಿಕ ಗುಣಕಾರಿ. ಬೆಲೆ: 1 ತೊಲೆಗೆ ರೂ. 9—0—0.
ಝಂಡೂರವರ ವಸಂತ ಕುಸುಮಾಕರ ರಸ—ಮೂತ್ರಾತಿಸಾರ
ಸಿಹಿಮೂತ್ರ, ನಿಸ್ಸತ್ವ ಇತ್ಯಾದಿ ಬಹುಕಾಲದ ಮೂತ್ರ ದೋಷಗಳಿಗೆ ಡಾಕ್ಟರುಗಳಿಂದ ವಿಶಿಷ್ಟ ತರದಲ್ಲಿ ಶಿಫಾರಸು ಮಾಡಲ್ಪಟ್ಟಿವೆ. ಬೆಲೆ: ಕಾಲು ತೊಲೆಗೆ ರೂ. 8—0—0.
ಝಂಡೂರವರ ಸುವರ್ಣ ಮಿಶ್ರಿತ ಚ್ಯವನಪ್ರಾಶ—
ಸರ್ವರಿಗೂ ರುಚಿಕರವಾದ ಟಾನಿಕ್ ಆಹಾರ. ಬಂಗಾರ ಮತ್ತು ಇತರ ಭಸ್ಮಗಳ ಮಿಶ್ರಣವಿರುವುದರಿಂದ ಶೀತ, ಕಫ, ಕೆಮ್ಮಿನಿಗೆ ಅತ್ಯಂತ ಪರಿಣಾಮಕಾರಿ.
ಬೆಲೆ: 1 ರಾತ್ಲಿಗೆ ರೂ. 7—8—0. ಕಾಲು ರಾತ್ಲಿಗೆ ರೂ. 2—0—0.
ಝಂಡೂರವರ ಔಷಧಿಗಳು ದ.ಕ.ಜಿಲ್ಲೆಯ ಅಧಿಕೃತ ಏಜಂಟರಲ್ಲಿ ದೊರೆಯುವುವು
ಕ್ಯಾಟಲಾಗಿಗೆ ಕೆಳಗಿನ ಸೋಲ್ ಏಜಂಟರಿಗೆ ಬರೆಯಿರಿ,
DAMODAR & CO.,
113 Nainiappa Naicken Street, P. T.-MADRAS-3.

ಸಂಯುಕ್ತ ರಾಷ್ಟ್ರಸಂಘದ ಒಂಬತ್ತು ವರ್ಷಗಳ ಅಸ್ತಿತ್ವ

ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಅದರ ಸ್ಥಾನಮಾನ

"ಮಾನವ ಜನಾಂಗವು ಮುಂದಕ್ಕೂ ಉಳಿಯಬೇಕಾದರೆ ಸಂಯುಕ್ತ ರಾಷ್ಟ್ರ ಸಂಘದ ಆದರ್ಶಗಳನ್ನು ಸಾಧಿಸುವುದಕ್ಕೋಸ್ಕರ ನಿರಂತರ ಪ್ರಯತ್ನಗಳನ್ನು ನಡೆಸುವುದು ಶ್ರೇಯಸ್ಕರ" ಎಂಬ ರಾಷ್ಟ್ರಪತಿ ರಾಜೇಂದ್ರ ಪ್ರಸಾದರ ಮಾತುಗಳನ್ನು ನಾವು ಈ ವಾರ ಜ್ಞಾಪಕದಲ್ಲಿಡುವುದು ಅಪೇಕ್ಷಣೀಯ. ವಿಶ್ವಕಲ್ಯಾಣದ ಧ್ಯೇಯೋದ್ದೇಶದಿಂದ ಒಂಬತ್ತು ವರ್ಷಗಳ ಪೂರ್ವದಲ್ಲಿ ಅಕ್ಟೋಬರ ೨೪ ೧೯೪೫ರಂದು ಸಂಯುಕ್ತ ರಾಷ್ಟ್ರ ಸಂಘವನ್ನು ಸ್ಥಾಪಿಸಲಾಯಿತು. ಅಂದಿನಿಂದ ಇಂದಿನವರೆಗಿನ ತನ್ನ ಅಸ್ತಿತ್ವದ ಕಾಲದಲ್ಲಿ ಅನೇಕ ಅಸಫಲತೆಗಳನ್ನು ಅದು ಹೊಂದಿದ್ದರೂ ಜಾಗತಿಕ ಶಾಂತಿಯ ಬೀಜವು ಅಂತಾರಾಷ್ಟ್ರೀಯ ಸ್ವರೂಪದ ಈ ಮಹಾಮಂಡಳದಲ್ಲಿ ಹುದುಗಿದೆಯೆಂದು ಹೇಳಿದರೆ ತಪ್ಪಾಗಲಾರದು. ವಿಶ್ವ ಬಾಂಧವ್ಯದಲ್ಲಿ ವಿಶ್ವಾಸವುಳ್ಳ ಪ್ರತಿಯೊಬ್ಬನಿಗೂ ರಾಷ್ಟ್ರಸಂಘವು ಭರವಸೆಯನ್ನು ಕೊಡುತ್ತದೆ. ಯುದ್ಧದ ಸ್ಥಾನದಲ್ಲಿ ಶಾಂತಿಯನ್ನೂ ದ್ವೇಷಮಯ ವಾತಾವರಣದ ಬದಲು ಸಹಜೀವನದ ಆದರ್ಶವನ್ನೂ ನೆಲೆಗೊಳಿಸುವ ಸಂಯುಕ್ತ ರಾಷ್ಟ್ರಸಂಘವು ತನ್ನ ಅನೇಕ ಅಸಫಲತೆಗಳ ನಡುವೆಯೂ ಸ್ತುತ್ಯ ಕಾರ್ಯಗಳನ್ನು ನಡೆಸಿರುತ್ತದೆಂದು ನಿಷ್ಪಕ್ಷಪಾತ ನಿರೀಕ್ಷಣೆಯಿಂದ ವ್ಯಕ್ತಗೊಳ್ಳುತ್ತದೆ.

ರಶಿಯ-ಅಮೇರಿಕೆಗಳ ಪರಸ್ಪರ ಭಿನ್ನ ಭಿನ್ನ ವಿಚಾರ ಪ್ರಣಾಳಿಯ ದೆಸೆಯಿಂದಾಗಿ ಸಂಯುಕ್ತ ರಾಷ್ಟ್ರಸಂಘವು ಅನೇಕ ವೇಳೆ ತನ್ನ ಮೂಲೋದ್ದೇಶಗಳಿಗೆ ವ್ಯತಿರಿಕ್ತವಾಗಿ ನಡೆದುಕೊಳ್ಳುವ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ೧೯೪೭ನೇ ಇಸವಿಯಷ್ಟು ಹಿಂದಿನಲ್ಲಿ ಜಗತ್ತಿನ ಎರಡು ಮಹಾರಾಷ್ಟ್ರಗಳ ಭಿನ್ನಾಭಿಪ್ರಾಯದ ಕಾರಣದಿಂದ ಬಣಗಳನ್ನು ರಚಿಸಿಕೊಂಡು ಶೀತ ಯುದ್ಧವನ್ನು ನಡೆಸುವ ದುಷ್ಟ ಹವ್ಯಾಸವೊಂದು ತಲೆದೋರಿತು. ಜರ್ಮನಿಯ ವಿಷಯದಲ್ಲಿ ತಮ್ಮ ವಿವಾದವನ್ನು ಬಗೆಹರಿಸಿಕೊಳ್ಳಲಾರದ ಪಾಶ್ಚಾತ್ಯ ರಾಷ್ಟ್ರಗಳೂ ರಶಿಯವೂ ಸ್ವತಂತ್ರವಾಗಿ ವರ್ತಿಸಿ, ಯುದ್ಧದ ಸಿದ್ಧತೆಗಳನ್ನು ನಡೆಸತೊಡಗಿದವು. ಇದರಿಂದ ಶಾಂತಿಮಯ ವಾತಾವರಣಕ್ಕೆ ಇಂಬು ದೊರೆಯದೆ ಶಸ್ತ್ರಾಸ್ತ್ರಗಳ ರಭಸದ ಉತ್ಪಾದನೆಗೋಸ್ಕರ ಸ್ಪರ್ಧೆ ಹೂಡುವ ಚಪಲವು ಪ್ರಬಲಿಸುವಂತಾಯಿತು. ಸಂಯುಕ್ತ ರಾಷ್ಟ್ರ ಸಂಘದಲ್ಲಿ ನಿಶ್ಶಸ್ತ್ರೀಕರಣದ ವಿವಿಧ ಘಟ್ಟಗಳ ಕುರಿತು ನಡೆದ ತೀಕ್ಷ್ಣ ವಾಗ್ಯುದ್ಧದ ವರದಿಯನ್ನು ನಾವು ಓದಿದ್ದೇವೆ, ಆದರೆ ಯಾರಿಗೂ ತಮ್ಮ ಸೂಚನೆಗಳಲ್ಲಿರುವಷ್ಟೇ ಪ್ರತಿಪಕ್ಷದವರ ಸೂಚನೆಯಲ್ಲಿಯೂ ಹುರುಳಿರಬಹುದೆಂಬ ವಿಶ್ವಾಸ ಮೂಡಿದಂತೆ ಕಾಣುವುದಿಲ್ಲ.

ಇಂಥ ಪರಿಸ್ಥಿತಿಯಲ್ಲಿ ಇದೇ ಜೂಲೈ ೨೯, ೧೯೫೪ರಂದು ರಾಷ್ಟ್ರಸಂಘವು ಅಮೇರಿಕಕ್ಕೆ ಶಾಂತಿ ಸಾಧನೆಯ ದೃಷ್ಟಿಯಿಂದ ಅಗತ್ಯವೆನಿಸಿದರೆ, ಬಿಕಿನಿ ದ್ವೀಪ ಸಮುದಾಯಗಳಲ್ಲಿ ಅಣು ಶಸ್ತ್ರಗಳ ಪ್ರಾಯೋಗಿಕ ಸ್ಫೋಟನವನ್ನು ನಡೆಸಬಹುದೆಂದು ಒಪ್ಪಿಗೆಯನ್ನು ನೀಡಿತು. ಇದು ಬಹಳ ದೊಡ್ಡ ತಪ್ಪೆಂದು ಶಾಂತಿಪ್ರಿಯರಿಗೆ ತೋರುತ್ತದೆ. ಶಸ್ತ್ರ ಸಂಗ್ರಹದ ಹುಚ್ಚು ಸ್ಪರ್ಧೆಯನ್ನು ತಡೆಗಟ್ಟುವುದೂ ವೈರಿಗಳ ಆಕ್ರಮಣವಾದೀತೆಂಬ ಭಯವನ್ನು ನಿವಾರಿಸುವುದೂ ಶಾಂತಿಯ ಸಾಧನೆಗೆ ಮುಖ್ಯವಾದ ಕೆಲಸಗಳಾಗಿರುವಾಗ, ಶಸ್ತ್ರಗಳನ್ನು ಮಿತಿಮೀರಿ ಉತ್ಪಾದಿಸುವುದಕ್ಕೂ ಜಗತ್ತನ್ನು ವಿನಾಶದೆಡೆಗೆಯೇ ಒಯ್ಯುವ ಹವ್ಯಾಸವನ್ನು ಪೋಷಿಸುವುದಕ್ಕೂ ರಾಷ್ಟ್ರಸಂಘ ಹೋದದ್ದು ಉಚಿತವಾಗಲಿಲ್ಲ. ಅಣು ಶಸ್ತ್ರಗಳ ಸ್ಫೋಟನವು ಮಾನವತೆಗೆ ಮಹಾ ಅಪಾಯವನ್ನು ಮಾಡುತ್ತಿದೆಯೆಂದು ಜಪಾನಿನಲ್ಲಿ ಅದಕ್ಕೆ ಬಲಿಯಾದ ಮೀನುಗಾರರ ದಾರುಣವಾದ ಕತೆಯು ತಿಳಿಸುತ್ತದೆ. ಹೀಗಿರುತ್ತ ಮಾನವೀಯತೆಗೆಯೇ ಅಪಮಾನಕರವಾದ ಪ್ರಯೋಗಗಳಿಗೆ ರಾಷ್ಟ್ರಸಂಘವು ಅನುಮೋದನೆಯನ್ನು ಕೊಟ್ಟದ್ದು ಮೆಚ್ಚತಕ್ಕ ವಿಷಯವಾಗಲಾರದು.

ರಾಷ್ಟ್ರ ರಾಷ್ಟ್ರಗಳಲ್ಲಿ ಪ್ರೀತಿಯನ್ನೂ ಸದ್ಭಾವವನ್ನೂ ಸಾಧಿಸಬೇಕೆಂಬ ತನ್ನ ಉದ್ದೇಶಕ್ಕೆ ರಾಷ್ಟ್ರ ಸಂಘವು ಇನ್ನೂ ಪೂರ್ತಿಯಾಗಿ ಅಂಟಿಕೊಂಡಿಲ್ಲವೆನ್ನುವುದು ಇನ್ನೊಂದು ಆಕ್ಷೇಪ. ಇವತ್ತು ಜಗತ್ತಿನ ಅರುವತ್ತಕ್ಕಿಂತಲೂ ಹೆಚ್ಚು ರಾಷ್ಟ್ರಗಳು ರಾಷ್ಟ್ರಸಂಘದ ಸದಸ್ಯತ್ವವನ್ನು ಹೊಂದಿರುತ್ತವೆ. ಆದಾಗ್ಯೂ ಅನೇಕ ರಾಷ್ಟ್ರಗಳು ಇನ್ನೂ ಅದರ ಹೊರಗೆ ಉಳಿದಿರುತ್ತವೆ. ನೇಪಾಳದಂಥ ಚಿಕ್ಕ ರಾಷ್ಟ್ರದಿಂದ "ಕೆಂಪು" ಚೀನದಂಥ ಮಹಾರಾಷ್ಟ್ರದವರೆಗೆ ಪ್ರತಿಯೊಂದೂ ಸಂಯುಕ್ತ ರಾಷ್ಟ್ರ ಸಂಘದ ಸದಸ್ಯತ್ವವನ್ನು ಅಪೇಕ್ಷಿಸುತ್ತದೆ. ಆದರೆ, ಅವುಗಳ ಕೋರಿಕೆಯನ್ನು ಇನ್ನೂ ಮನ್ನಿಸಿರುವುದಿಲ್ಲ. ತಾವು ಪಟದಲ್ಲಿ ಹೇಳಿದ ಹೊಣೆಗಾರಿಕೆಗಳನ್ನೂ ಕರ್ತವ್ಯಗಳನ್ನೂ ಚೊಕ್ಕರೀತಿಯಲ್ಲಿ ನಿರ್ವಹಿಸಿಕೊಂಡು ಹೋಗಲು ಬದ್ಧವಾಗಿದ್ದೇವೆಂದು ಹೇಳುತ್ತಿದ್ದರೂ, ಹಾಗೆ ಭರವಸೆನೀಡಿದ ಪ್ರತಿಯೊಬ್ಬರಿಗೂ ಪ್ರಾತಿನಿಧ್ಯ ಸಿಕ್ಕತಕ್ಕದ್ದೆಂದು ರಾಷ್ಟ್ರಸಂಘದ ಸ್ಥಾಪಕರು ಅಭಿಪ್ರಾಯಪಟ್ಟಿದ್ದರೂ, ಏನೇನೋ ಆತಂಕಗಳನ್ನು ಮುಂದಿಟ್ಟು ಸದಸ್ಯತ್ವವನ್ನು ನಿರಾಕರಿಸಲಾಗುತ್ತದೆ. ತತ್ಪರಿಣಾಮವಾಗಿ ಜಾಗತಿಕ ಮಹತ್ವದ ಅನೇಕ ವಿಷಯಗಳಲ್ಲಿ ರಾಷ್ಟ್ರಸಂಘವು ಮೂಕ ಪ್ರೇಕ್ಷಕನಾಗಿ ಕುಳಿತಿರಬೇಕಾಗುತ್ತದೆ. ಒಂದೊಮ್ಮೆ ಹಸ್ತಕ್ಷೇಪವನ್ನು ಮಾಡಿದರೂ, ಅದರ ನಿರ್ಣಯಗಳಿಗೆ ರಾಷ್ಟ್ರಸಂಘದ ಸದಸ್ಯತ್ವವನ್ನು ಹೊಂದಿರದ ರಾಷ್ಟ್ರಗಳು ಬಂಧನಕಾರಿಯಾಗದ ಪರಿಸ್ಥಿತಿ ಬಂದೊದಗುತ್ತದೆ.

ವರ್ಣದ್ವೇಷವು ಮಾನವತೆಗೆ ಕಲಂಕಪ್ರಾಯವಾದುದೆಂಬ ಭಾರತದ ಅಭಿಪ್ರಾಯವನ್ನು ಎತ್ತಿಹಿಡಿದ ರಾಷ್ಟ್ರಸಂಘವು ಮಲಾನರನು ತನ್ನ ಅಂಕಿತಕ್ಕೊಳಪಡಿಸುವಲ್ಲಿ ವಿಫಲಹೊಂದಿತು. ರಾಷ್ಟ್ರಸಂಘ ನೇಮಿಸಿದ ಕಮಿಶನಿನೊಡನೆ ದಕ್ಷಿಣ ಆಫ್ರಿಕನ್ನ ಸಹಕರಿಸಲೇ ಇಲ್ಲ. ಸದಸ್ಯ ರಾಷ್ಟ್ರವೊಂದರ ಮೇಲೆಯೇ ಹಿಡಿತವನ್ನು ಹೊಂದಿರದ ಸಂಯುಕ್ತ ರಾಷ್ಟ್ರ ಸಂಘವು ಹೊರಗಿನ ಜನರ ಮೇಲೆ ವರ್ಚಸ್ಸನ್ನು ಬೀರುವದು ಹೇಗೆ? ಕೊರಿಯದಲ್ಲಿ, ಇಂಡೋಚೀನದಲ್ಲಿ ನಡೆದ ಕದನಗಳು ಹೇಗೋ ಅಬಗ್ಗೆ ನಡೆಸಲ್ಪಡುವುದೆಂಬ ಡಿಕೇಟಲೂ ರಾಷ್ಟ್ರ ಸಂಘದ ಘನತೆಗೆ ಹೇಳಿದವುಗಳಲ್ಲ. ಯುದ್ಧವು ನಿಂತು ಶಾಂತಿ ಸ್ಥಾಪನೆಯಾಯಿತು— ಯಾರಿಂದಾಗಿ? ಕೊರಿಯದಲ್ಲಿ ರಾಷ್ಟ್ರಸಂಘವು ಕಮ್ಯುನಿಸ್ಟ ಚೀನ ಹಾಗೂ ಉತ್ತರಕೊರಿಯದ ವಿರುದ್ಧ ಯುದ್ಧವನ್ನು ಹೂಡಿದ ಒಂದು ಬಣವಾಗಿತ್ತು, ಭಾರತದಂಥ ನಿಷ್ಪಕ್ಷಪಾತ ದೃಷ್ಟಿಯ ರಾಷ್ಟ್ರವೇ ಉಭಯ ಬಣಗಳಿಗೂ ಒಂದು ಒಪ್ಪಂದಕ್ಕೆ ಬರಲು ಅಗತ್ಯವೆನಿಸಿದ ಆಸ್ಪದವನ್ನೊದಗಿಸಿತು. ಇಂಡೋಚೀನದಲ್ಲಿ ರಾಷ್ಟ್ರ ಸಂಘವನ್ನು ಕೇಳುವವರೇ ಇರಲಿಲ್ಲ, ಎಲ್ಲವೂ ಹೊರಗಿಂದ ಹೊರಗೆಯೇ ನಡೆಯಿತು! ಇಲ್ಲಿಯೂ ಭಾರತವೇ ಶಾಂತಿಸಾಧಕರಿಗೆ ಅನುಕೂಲತೆಯನ್ನೊದಗಿಸಿತು. ಗ್ವಾಟೆಮಾಲದ ಮೇಲೆ ಆಕ್ರಮಣ ನಡೆದಾಗ, ರಾಷ್ಟ್ರಸಂಘವು ತನ್ನ ಕರ್ತವ್ಯದಲ್ಲಿ ಸಾಕಷ್ಟು ನಿಷ್ಠೆಯನ್ನು ತೋರಿಸಲಿಲ್ಲ. ಅಮೇರಿಕದ ಅಭಿಪ್ರಾಯಕ್ಕೆ ಸೈಗುಟ್ಟುವುದೇ ತಮ್ಮ ಕೆಲಸವೆಂದು ತಿಳಿದ ಸದಸ್ಯ ರಾಷ್ಟ್ರಗಳು ಸಂಸ್ಥೆಯ ಕರ್ತವ್ಯದ ಭಾರಕ್ಕೆ ಹೆಗಲು ಕೊಡಲಿಲ್ಲ.

ಪ್ರತಿಯೊಂದೂ ಸ್ವತಂತ್ರ ರಾಷ್ಟ್ರಕ್ಕೆ ಸೇರ್ಪಡೆ ಹೊಂದಲು ಅವಕಾಶವಿರುವ ವಿಶ್ವ ಸಂಸ್ಥೆಯಾಗಿ ರಾಷ್ಟ್ರಸಂಘವನ್ನು ಒಲಗೊಳಿಸಬೇಕೆಂಬ ಹಂಬಲವುಳ್ಳವರಿಗೆ ವಿಶಿಷ್ಟ ದೃಷ್ಟಿಕೋನದ ಎರಡು ಬಣಗಳ ಕದನ ರಂಗವಾಗಿ ರಾಷ್ಟ್ರ ಸಂಘವು ಪರಿವರ್ತನೆ ಹೊಂದುತ್ತಿರುವುದನ್ನು ಕಂಡು ನೋವಾಗುತ್ತದೆ. ಈ ನೋವ ಮರೆಸುವಂತೆ ರಾಷ್ಟ್ರಸಂಘವು ಒಳ್ಳೆಯ

ನಂಬಿಕೆಗೆ ಅರ್ಹತೆ!

ಅತ್ಯುತ್ತಮ ಟಾಯಲೆಟ್ ಸಾಬೂನಿನಲ್ಲಿ ನೀವು
ಏನೇನು ಗುಣಗಳನ್ನು ಅಪೇಕ್ಷಿಸುವಿರೋ ಅವೆಲ್ಲಾ
ಮೈಸೂರು ಸ್ಯಾಂಡಲ್ ಸೋಪಿನಲ್ಲಿ
ಇರುವವು ಎಂದು ಖಚಿತವಾಗಿ ಹೇಳುತ್ತೇವೆ

* * *

— ಎಲ್ಲಾ ಕಡೆಗಳಲ್ಲೂ ದೊರಕುವುದು —

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

Member: I S T. M. A.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ ಉಡುಪಿ (ದ. ಭಾರತ).

ಅಧಿಕೃತ ಭಂಡವಾಳ	ರೂ	25,00,000
ಚಂದಾ ಆರ್ಪಿಸಿ, ತೆತ್ತ ಒಂದೆ ಭಂಡವಾಳ	ರೂ.	20,00,000
ಕ್ಷೇಮ ನಿಧಿ	ರೂ.	10,50,000
ಠೇವಣಾತಿಗಳು	ರೂ.	2,98,19,000
ಒಟ್ಟು ಚಲಾವಣೆ ಭಂಡವಾಳ	ಸುಮಾರು ರೂಪ್ಯ 4 ಕೋಟಿ	
ಒಟ್ಟು ಶಾಖೆಗಳು	38	

(31—12—1953ರಲ್ಲು)

THE CANARA BANKING CORPORATION LIMITED
Estd - 1906] [H O UDIPI (S. India)

BHUVANENDRA PRODUCTS LTD., KATAPADI, S. K.

ಉತ್ತಮ ಪರಿಣಾಮ! ಉಪಯೋಗಿಸುವವರಿಗೆ ತೃಪ್ತಿ!! ವೈದ್ಯರಿಗೆ ವಿಶ್ವಾಸ!!!

ಇವುಗಳಿಂದಲೇ ಭುವನೇಂದ್ರ ಔಷಧಿಗಳು
ಜನಪ್ರಿಯವಾಗಿರುವವು

ಆಯುರ್ವೇದ ಶಾಸ್ತ್ರೀಯ ರೀತ್ಯಾ ವ ಅನುಭವಸಿದ್ಧ ಔಷಧಿಗಳು
ನಮ್ಮಲ್ಲಿ ತಯಾರಿಸಲ್ಪಡುತ್ತವೆ.

ವಿವರಗಳಿಗೆ ವಿಚಾರಿಸಿರಿ:—

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್ ಕಟಪಾಡಿ, ದ. ಕ.

ಡಿಪೋ:- (1) ಉಡುಪಿ (2) ಮರಾಠ ಗಲ್ಲಿ, ಹುಬ್ಬಳ್ಳಿ.

ಕೆಲಸಗಳನ್ನು ಮಾಡಿದ್ದಿದ್ದರೆ ಅದು ರಾಜಕೀಯ ವಲಯದ ಹೊರಗಿನ ಚಟುವಟಿಕೆಗಳಲ್ಲೆಂದು ಹೇಳಬಹುದು. ರಾಜಕಾರಣದಲ್ಲಿ ಪರಸ್ಪರ ಕೆಸರು ಚೆಲ್ಲುವ ಹವ್ಯಾಸವನ್ನಷ್ಟೇ ತೋರಿಸಿದ ದೇಶಗಳು ಸೈನಿಕ ದೃಷ್ಟಿಯಿಂದ ತಮ್ಮ ನಿಲುವೆಯನ್ನು ಬದಲಿಸದಿದ್ದರೂ ತಾಂತ್ರಿಕ ಸಹಾಯ, ಆರ್ಥಿಕ ನೆರವು. ಸಮಾಜ ಕಲ್ಯಾಣಕಾರ್ಯ ಮುಂತಾದ ಬೇರೆ ಅನೇಕ ಕ್ಷೇತ್ರಗಳಲ್ಲಿ ಪ್ರಶಂಸನೀಯವಾದ ಸಹಕಾರವನ್ನು ತೋರಿಸಿರುತ್ತವೆ. ವಿಶ್ವ ಆರೋಗ್ಯ ಸಂಸ್ಥೆ, ಅಂತರರಾಷ್ಟ್ರೀಯ ವ್ಯಾಪಾರ ಸಂಘ, ವಿಮಾನ ಸಾರಿಗೆಯ ಮಂಡಳ, ಜಾಗತಿಕ ಬೇಂಕು ವ ಎಂತಾದವುಗಳ ಮೂಲಕ ಹಿಂದುಳಿದ ದೇಶಗಳಿಗೆ ಮುಂದರಿದ ರಾಷ್ಟ್ರಗಳಿಂದ ವಿಶೇಷವಾದ ಲಾಭವು ದೊರಕಿರುತ್ತದೆ. ಮನುಷ್ಯನ ಜೀವನವನ್ನು ಸುಖಮಯಗೊಳಿಸುವಲ್ಲಿ ಇವುಗಳಿಂದ ಹೆಚ್ಚಿನ ಪ್ರಯೋಜನವು ದೊರಕಿರುತ್ತದೆ. ರಾಷ್ಟ್ರ ಸಂಘದ ಅಂಗವಾಗಿರುವ ಆರ್ಥಿಕ, ಶೈಕ್ಷಣಿಕ ಹಾಗು ವೈಜ್ಞಾನಿಕ ಮಂಡಳವು ತನ್ನ ವ್ಯಾಪಕವಾದ ಚಟುವಟಿಕೆಗಳಿಂದ ಜ್ಞಾನ ಪ್ರಸಾರ ಕಾರ್ಯವನ್ನು ನೆರವೇರಿಸುತ್ತಿದೆ.

ಮಾನವೀಯ ಕಲ್ಯಾಣದ ಈ ಕಾರ್ಯಕ್ರಮಗಳೊಂದಿಗೆ ಕೆಲವು ರಾಜಕೀಯ ಸಾಧನೆಗಳನ್ನೂ ಹೆಸರಿಸಿದರೆ ತಪ್ಪಾಗಲಾರದು. ಅಸಫಲತೆ ಹೊಂದಿದ ಸಂಗತಿಗಳು ವಿಶೇಷವಾಗಿ ರಾಷ್ಟ್ರಗಳ ಸ್ವಾರ್ಥ ದೃಷ್ಟಿಯ ಫಲವಾಗಿದ್ದವೇ ಹೊರತು, ರಾಷ್ಟ್ರ ಸಂಘದ ತಾಮ್ರಪಟದ ದೋಷ ಅವುಗಳಲ್ಲಿರಲಿಲ್ಲ. ರಾಷ್ಟ್ರಗಳು ತಮ್ಮ ದೇಶದ ನಿಲುವೆಯನ್ನು ವಿಶ್ವಬಾಂಧವ್ಯದ ಧ್ಯೇಯಕ್ಕೆ ವ್ಯತ್ಯಯ ಬಾರದಂತೆ ಉದಾತ್ತೀಕರಿಸುವ ಮನಸ್ಸು ಮಾಡದಿದ್ದುದರಿಂದ ರಾಷ್ಟ್ರ ಸಂಘವು ತನ್ನ ಕರ್ತವ್ಯದಲ್ಲಿ ಕೆಲವಟ್ಟಿಗೆ ತಪ್ಪಿತೆಂದು ಹೇಳಬೇಕಾಗುತ್ತದೆ. ಹೀಗಿದ್ದರೂ ಅದು ಇಸ್ರೇಲಿನಲ್ಲಿ ಉರಿಯುತ್ತಿದ್ದ ಭೀಷಣ ಜ್ವಾಲೆಯನ್ನು ನಂದಿಸಿತು; ಗ್ರೀಸಿನಲ್ಲಿ ಶಾಂತಿಯ ವಾತಾವರಣವನ್ನು ಕಾಪಾಡಲು ನೆರವಾಯಿತು; ಲಿಬಿಯಕ್ಕೆ ಸ್ವಾತಂತ್ರ್ಯ ಕೊಡಬೇಕೆಂದು ಹೇಳಿತು; 'ಸೋಮಾಲಿಲೇಂಡಿನ ಸ್ವಾತಂತ್ರ್ಯವನ್ನು [illegible]ತು; ನೆದರ್ಲೆಂಡಿನೊಡನೆ ಇಂಡೋನೇಶಿಯ ಹೂಡಿದ್ದ ಘರ್ಷಣೆಯನ್ನು ನಿವಾರಿಸಿ, ಇಂಡೋನೇಶಿಯದ ಸ್ವಾತಂತ್ರಕ್ಕೆ ನೆರವಾಯಿತು. ಇವುಗಳನ್ನೆಲ್ಲ ನೋಡಿದ ಯಾರಾದರೂ 'ರಾಷ್ಟ್ರ ಸಂಘವನ್ನು ಮುಚ್ಚಿಬಿಡುವುದೊಳಿತು'' ಎಂಬ ಮಲಾನರಂತೆ ಬೊಟ್ಟಿಡುವಂತಿಲ್ಲ ದೋಷಗಳು ಹಲವಿದ್ದರೂ ಅವುಗಳು ಕ್ರಮೇಣ ಸುಧಾರಿಸಲ್ಪಡಬಹುದೆಂಬ ಆಶಾವಾದವನ್ನೆ ಆಶ್ರಯಿಸಬೇಕಾಗುತ್ತವೆ

ಸ್ವಾತಂತ್ರ್ಯದ ದಿಸೆಯಲ್ಲಿ ಇನ್ನೊಂದು ಹೆಜ್ಜೆ

ಭಾರತದೊಡನೆ ಸೇರುವ ಬಂಧುಗಳಿಗೆ ನೆಹರುಗಳ ಶುಭಾಶಯ

ಫ್ರೆಂಚ ಭಾರತದ ಚುನಾಯಿತ ಪ್ರತಿನಿಧಿಗಳು ಭಾರತದಲ್ಲಿ ಈ ವಸಾಹತುಗಳನ್ನು ವಿಲೀನಗೊಳಿಸಬೇಕೆಂದು ಕಿಜೂರಿನಲ್ಲಿ ಸೇರಿದ ಸಭೆಯಲ್ಲಿ ಮತದಾನದ ಮೂಲಕ ಸ್ಪಷ್ಟವಾಗಿ ಸೂಚಿಸಿದುದರಿಂದ, ಅಧಿಕಾರ ಹಸ್ತಾಂತರದ ವಿಷಯದಲ್ಲಿ ಫ್ರಾನ್ಸಿನ ಸರಕಾರಕ್ಕೆ ಇದ್ದ ಕೊನೆಯ ಆತಂಕವೂ ನಿವಾರಣೆ ಹೊಂದಿದಂತಾಯಿತು. ಪ್ರಜಾ ಪ್ರತಿನಿಧಿಗಳ ಸಭೆಯಲ್ಲಿ ಓದಿ ಹೇಳಲಾದ ಒಪ್ಪಂದದ ಕರಡಿಗೆ ಸಂಪೂರ್ಣ ಅನುಮೋದನೆ ದೊರೆತುದನ್ನು ಕಂಡು, ಹೊಸದೆಹಲಿಯಲ್ಲಿ ಫ್ರಾನ್ಸು ಹಾಗು ಭಾರತ ಸರಕಾರಗಳ ಪರವಾಗಿ ದಿನಾಂಕ ೨೧ ರಂದು ಅಂಕಿತವನ್ನು ಹಾಕಲಾಯಿತು.

ಉಭಯ ಸರಕಾರಗಳಲ್ಲಿ ಒಡಂಬಡಿಕೆಯಾದುದಕ್ಕೋಸ್ಕರ ಸಮಾಧಾನಕರವಾದ ಪ್ರತಿಕ್ರಿಯೆಗಳು ವ್ಯಕ್ತಗೊಂಡ ವಗಳು ಬಂದಿರುತ್ತವೆ. ವಿವಾದಗಳನ್ನು ಮಾತುಕತೆಗಳ ಮೂಲಕ ಬಗೆಹರಿಸಲು ಸಾಧ್ಯವೆಂಬ ಭಾರತದ ತತ್ವಕ್ಕೆ ಮನ್ನಣೆ ದೊರೆತ ನಿದರ್ಶನವೆಂದು ಸ್ವಾಸ್ಥ್ಯಗಳ ಹಸ್ತಾಂತರವನ್ನು ಕುರಿತಾದ ಒಪ್ಪಂದವನ್ನು ವರ್ಣಿಸಬಹುದು. ಇದರಿಂದ ಎರಡೂ ರಾಷ್ಟ್ರಗಳ ಸ್ನೇಹ ಸಂವರ್ಧನೆಗೂ ಹೆಚ್ಚಿನ ನೆರವು ದೊರೆತಂತಾಗಿದೆ ಎಂದರೆ ತಪ್ಪಲ್ಲ.

ಒಡಂಬಡಿಕೆಯು ಭಾರತದಲ್ಲಿರುವ ವಿದೇಶಿ ವಸಾಹತುಗಳ ಕುರಿತು ನಮ್ಮ ಸರಕಾರದ ಧೋರಣೆ ಹೇಗಿದೆಯೆಂಬುದನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಅಲ್ಲಿಯ ಜನರ ಸಾಂಸ್ಕೃತಿಕ, ಆರ್ಥಿಕ, ಧಾರ್ಮಿಕ ಹಾಗು ರಾಜಕೀಯ ಭಾವನೆಗಳಿಗೆ ವ್ಯತ್ಯಯವನ್ನುಂಟುಮಾಡುವುದು ಭಾರತ ಸರಕಾರದ ಉದ್ದೇಶವಲ್ಲವೆಂಬುದನ್ನು ಒಡಂಬಡಿಕೆಯು ಮನಗಾಣಿಸುತ್ತದೆ. ಸರಕಾರದಲ್ಲಿದ್ದ ನೌಕರರ ನಿವೃತ್ತಿವೇತನ ಮುಂತಾದವುಗಳ ಸಂಬಂಧದಲ್ಲಿ ಭಾರತ ಸರಕಾರವು ಉದಾರವಾಗಿ ವರ್ತಿಸಿದುದರಿಂದ ಫ್ರೆಂಚ ಭಾರತದ ನಾಗರಿಕರು ಬಹಳ ಸಂತೋಷವನ್ನು ಹೊಂದಿದ್ದಾರೆ. ಭಾರತದಲ್ಲಿ ಕೈಕೊಳ್ಳಲಾಗಿರುವ ಅಭಿವೃದ್ಧಿ ಪ್ರಯತ್ನಗಳನ್ನು ವಸಾಹತುಗಳಿಗೂ ವಿಸ್ತರಿಸಲಾಗುವುದೆಂಬ ಸುದ್ದಿಯು ಅವರ ಉತ್ಸಾಹವನ್ನು ಅಧಿಕಗೊಳಿಸಿದೆ.

ಇದೇ ನವೆಂಬರ ೧ರಂದು ಫ್ರೆಂಚ ಸ್ವಾಸ್ಥ್ಯಗಳ ಅಧಿಕಾರದ ಹಸ್ತಾಂತರವು ನಡೆಯುತ್ತದೆ. ಇಲ್ಲಿಯವರೆಗೆ ಫ್ರೆಂಚ ಭಾರತದಲ್ಲಿ ನಮ್ಮ ರಾಜಕೀಯ ಪ್ರತಿನಿಧಿಗಳಾಗಿ ಕೆಲಸ ಮಾಡುತ್ತಿದ್ದ ಶ್ರೀ ಕೇವಲ ಸಿಂಗರು ಅಂದು ಸ್ವಾಸ್ಥ್ಯಗಳ ಆಡಳಿತ ವ್ಯವಸ್ಥೆಯನ್ನು ನೋಡಿಕೊಳ್ಳುವ ಕಮಿಶನರ ಹುದ್ದೆಯನ್ನು ವಹಿಸುವರು. ಫ್ರೆಂಚ ಆಡಳಿತಾವಧಿಯಲ್ಲಿ ಕಮಿಶನರಾಗಿದ್ದ ಪಿರೆ ಲೇಂಡಿಯವರು ಫ್ರಾನ್ಸಿನ ರಾಜಕೀಯ ಪ್ರತಿನಿಧಿಗಳಾಗಿ ಉಳಿಯುವರು. ಉಳಿದ ಫ್ರೆಂಚ ಅಧಿಕಾರಿಗಳು ಇಷ್ಟರಲ್ಲೇ ಸ್ವಾಸ್ಥ್ಯವನ್ನು ಬಿಟ್ಟು ಹೊರಡುವರು. ಅವರ ಸ್ಥಾನಕ್ಕೆ ಸುಮಾರು ೨೦ ಭಾರತೀಯ ಅಧಿಕಾರಿಗಳು ಬೇಕಾಗುವರೆಂದು ಹೇಳಲಾಗುತ್ತಿದ್ದು, ಯೋಗ್ಯ ವ್ಯವಸ್ಥೆಯು ಇಷ್ಟರಲ್ಲೇ ಮಾಡಲ್ಪಡುವುದು.

ಸ್ವಾಸ್ಥ್ಯಗಳ ಆರ್ಥಿಕ ಪರಿಸ್ಥಿತಿಯನ್ನು ಅಭ್ಯಸಿಸಲು ಭಾರತ ಸರಕಾರದ ಹಣಕಾಸಿನ ಶಾಖೆಯ ಕಾರ್ಯದರ್ಶಿಗಳು ಪಾಂಡಿಚೆರಿಗೆ ಹೋಗಿದ್ದಾರಲ್ಲದೆ, ಸಂರಕ್ಷಣಾ ಶಾಖೆಯ ಉಪಕಾರ್ಯದರ್ಶಿ ಶ್ರೀ ಪಿ. ಎಸ್. ಮಾಥ್ಯೂಸರು ಸ್ವಾಸ್ಥ್ಯಗಳ ಕಾರ್ಯದರ್ಶಿ ಸ್ಥಾನವನ್ನು ವಹಿಸಿಕೊಳ್ಳುವ ಸಿದ್ಧತೆಯಲ್ಲಿದ್ದಾರೆ. ಭಾರತ ಸರಕಾರವು ವಸಾಹತು ಪ್ರದೇಶದ ಪ್ರಜಾ ಪ್ರತಿನಿಧಿಗಳ ಒಮ್ಮತದ ಅಭಿಪ್ರಾಯವನ್ನು ಕೇಳಿದ ಬೆನ್ನಿಗೆ, ಚಳವಳ ಕಾಲದಲ್ಲಿ ಹೇರಿದ್ದ ಆರ್ಥಿಕ ದಿಗ್ಬಂಧನವನ್ನು ಹಿಂದೆಗೆದು, ಸ್ವಾಸ್ಥ್ಯದ ಪ್ರಜೆಗಳು ದೀಪಾವಳಿಯನ್ನು ಸಂಭ್ರಮದಿಂದ ಆಚರಿಸುವಂತೆ ಅನುಕೂಲತೆಯನ್ನೊದಗಿಸಿತು. ಪಾಸು ಪೋರ್ಟಿನ ನಿರ್ಬಂಧಗಳನ್ನೂ ದೂರ ಮಾಡಿತು ನವೆಂಬರ ೧ರಂದು ರಾಜಕೀಯ ಕೈದಿಗಳನ್ನೂ ಬಿಡುಗಡೆ ಮಾಡುವುದು.

ಚಾರಿತ್ರಿಕ ಮಹತ್ವದ ಅಧಿಕಾರ ಹಸ್ತಾಂತರ ಸಮಾರಂಭದಲ್ಲಿ ಭಾಗ ವಹಿಸಲಾಗುವಂತೆ ಅಂದು ಸಾರ್ವಜನಿಕ ರಜೆಯನ್ನು ಸಾರಿದ್ದಾರೆ. ಭಾರತದ ಬಂಧುಗಳೊಡನೆ ಬೆರೆಯಲು ಫ್ರೆಂಚ ಸ್ವಾಸ್ಥ್ಯದ ಪ್ರಜೆಗಳನ್ನು ಸ್ವಾಗತಿಸುವುದರ ಗೌರವ ಸೂಚಕವಾಗಿ ತೋಪುಗಳನ್ನು ಹಾರಿಸುವ, ಮಕ್ಕಳಿಗೆ ಸಿಹಿತಿಂಡಿ ಹಂಚುವ, ಭಾರತ ಸರಕಾರದ ಪ್ರತಿನಿಧಿಗಳಿಗೆ ಪೌರ ಸ್ವಾಗತವನ್ನು ಕೊಡುವ ಕಾರ್ಯಕ್ರಮಗಳನ್ನು ಇಟ್ಟುಕೊಂಡಿರುವರೆಂದು ತಿಳಿಯುತ್ತದೆ. ತಳಿರು ತೋರಣಗಳಿಂದಲೂ ವಿದ್ಯುದ್ದೀಪಗಳಿಂದಲೂ ಪ್ರಮುಖ ನಗರಗಳನ್ನು ಅಲಂಕರಿಸಲಾಗುವುದಲ್ಲದೆ ನೃತ್ಯ ಸಂಗೀತಾದಿ ಸಂತೋಷ ಕೂಟಗಳೂ ಅಂದು ಜರಗುತ್ತವೆ.

ಸದ್ಯಕ್ಕೆ ಅಧಿಕಾರದ ಹಸ್ತಾಂತರವಷ್ಟೇ ನಡೆಯುತ್ತಿದ್ದು, ಮುಂದೆ ಹೆಚ್ಚು ವಿಳಂಬವೇನೂ ಇಲ್ಲದೆ, ವಿಧ್ಯುಕ್ತ ರೀತಿಯಲ್ಲಿ ಸಾರ್ವಭೌಮಾಧಿಕಾರವನ್ನು ಭಾರತಕ್ಕೆ ಒಪ್ಪಿಸುವ ಕೆಲಸಗಳು ನೆರವೇರುತ್ತವೆ. ಇದರಲ್ಲಿ ಯಾವ ತರದ ಅಡಚಣೆಯೂ ಕಾಣಿಸಿಕೊಳ್ಳಲಾರದೆಂದು ಉಭಯ ರಾಷ್ಟ್ರಗಳೂ ವಿಶ್ವಾಸವನ್ನು ಹೊಂದಿವೆ. ಈ ನಡುವೆ, ಸ್ವಾಸ್ಥ್ಯಗಳ ನಗರಸಭೆಯ ರಚನೆಯನ್ನು ಭಾರತ ಸರಕಾರವು ಮುಂದರಿಸಿಕೊಂಡು ಹೋಗಲು ನಿರ್ಧರಿಸಿದ್ದು, ಅಗತ್ಯವೆನಿಸಿದರೆ, ಚುನಾವಣೆಗಳು ಹೊಸತಾಗಿ ನಡೆಸಲ್ಪಡುತ್ತವೆ.

ಪೇಕಿಂಗಿನಲ್ಲಿರುವ ಪ್ರಧಾನ ಮಂತ್ರಿ ನೆಹರೂರವರು ಫ್ರೆಂಚ ಭಾರತದ ಪ್ರಜಾ ಪ್ರತಿನಿಧಿಗಳ ನಿರ್ಣಯವನ್ನು ಕೇಳಿ ಸಂತೋಷಗೊಂಡು ಅಭಿನಂದನಪರ ಸಂದೇಶವನ್ನು ಕಳಿಸಿದ್ದಾರೆ. ಭಾರತದ ಸ್ವಾತಂತ್ರ್ಯವನ್ನು ಸಂಪೂರ್ಣಗೊಳಿಸುವಲ್ಲಿ ಇನ್ನೊಂದು ಮಹತ್ವದ ಹೆಜ್ಜೆ ಇಟ್ಟಂತಾಯಿತೆಂದು ಅವರು ಹೇಳಿದ್ದಾರೆ. ರಾಜಕೀಯ ಪಟುಗಳ ಅಭಿಪ್ರಾಯದಂತೆ ಫ್ರಾನ್ಸಿನ ಸಮಯೋಚಿತ ಔದಾರ್ಯದ ಪರಿಣಾಮವು ಭಾರತದಲ್ಲಿರುವ ಪೋರ್ಚುಗೀಜ ವಸಾಹತುಗಳ ಧೋರಣೆಯ ಮೇಲೂ ಸಾಕಷ್ಟು ಹೆಚ್ಚು ಪ್ರಮಾಣದಲ್ಲಿ ಬೀಳುವುದು ನಿಶ್ಚಯ.

ಕಾರ್ತಿಕ ಬಹುಳ ಅಮಾವಾಸ್ಯೆ ತಾ|| 25—11—54 ಗುರುವಾರ

ಅಮೂಲ್ಯವಾದ ಆರು ಗ್ರಂಥಗಳ ಪ್ರಕಟಣೆ.

ಕನ್ನಡ ಕವಿರತ್ನ ಹೊಸಕೆರೆ ಚಿದಂಬರಯ್ಯನವರ

ಗೀತಾರ್ಥ ಚಂದ್ರಿಕೆ:- ಪ್ರತಿಪದಾರ್ಥ ತಾತ್ಪರ್ಯ ವ್ಯಾಖ್ಯಾನಕ್ರಮ ಮತ್ತು ವಿಷಯಾನುಕ್ರಮಣಿಕೆಯಿಂದ ಕೂಡಿದೆ. ಶ್ರೀಕೃಷ್ಣ ಪರಮಾತ್ಮನು ಅರ್ಜುನನಿಗೆ ಗೀತೋಪದೇಶ ಮಾಡಿದ್ದು ಕಾರ್ತಿಕ ಬಹುಳ ಅಮಾವಾಸ್ಯೆ.
೪೮೦ ಪುಟಗಳು. ಬೆಲೆ: ರೂ. 3-4-0

ನೀತಿಗಳ ನೆಲಗಟ್ಟು ಧರ್ಮ ಮತ್ತು ನೀತಿ ಗ್ರಂಥ
ಪುಟಗಳು ೨೩೦ ಬೆಲೆ: ರೂ. 2-0-0

ವೇದಾಂತದ ರೂಪರೇಖೆ ವೇದಾಂತ ಗ್ರಂಥ
ಪುಟಗಳು ೭೫ ಬೆಲೆ: 0-12-0

— ಎಂ. ವೆಂಕಟಾದ್ರಿ ಶಾಸ್ತ್ರಿಗಳವರ —

ಮಾಯಾವಿ ಅದ್ಭುತ ಪತ್ತೇದಾರಿ ಕಾದಂಬರಿ
ಪುಟಗಳು ೩೩೦ ಬೆಲೆ: ರೂ. 1-8-0

— ವಾಮನಮಲ್ಯರವರ —

ಕಲಾಜ್ಯೋತಿ ಅತ್ಯುತ್ತಮ ಸಾಮಾಜಿಕ ಕಾದಂಬರಿ
ಪುಟಗಳು ೧೬೦ ಬೆಲೆ: ರೂ. 1-4-0

— ಡಾಕ್ಟರ್ ಬಿ. ವಿ. ವೆಂಕಟೇಶಯ್ಯನವರ —

ಪುಷ್ಪಲ ವಿಕ್ಟರ್ ಹ್ಯೂಗೋರವರ ಬ್ಲಾಕ್‌ಟುಲಿಪ್ ಎಂಬ ಶ್ರೇಷ್ಠ ಇಂಗ್ಲೀಷ್ ಕಾದಂಬರಿಯ ಅನುವಾದ
ಪುಟಗಳು ೨೮೦ ಬೆಲೆ. ರೂ. 1-8-0

ದಯವಿಟ್ಟು ನಿಮ್ಮ ಬೇಡಿಕೆಯನ್ನು ಇಂದೇ ಕಳುಹಿಸಿರಿ

ಸಾಹಿತ್ಯ ಕುಟೀರ,
೨೦೧, ೫ನೇ ಕ್ರಾಸ್ ರಸ್ತೆ ಚಾಮರಾಜ ಪೇಟೆ,
ಬೆಂಗಳೂರು ೨.

ಮಾರಾಟಗಾರರು:— ಎಸ್. ಎಸ್. ಎನ್. ಬುಕ್ ಡಿಪೊ, ಬೆಂಗಳೂರು ೨.

ಸಮರದ ಬದಲು ಸಹಜೀವನದ ಆದರ್ಶ

ಯುದ್ಧದ ಕಾರಣಗಳನ್ನೆ ನಿರ್ಮೂಲಿಸಬೇಕೆಂದು ನೆಹರುಗಳ ಅಭಿಪ್ರಾಯ

ಪ್ರಧಾನ ಮಂತ್ರಿ ನೆಹರೂಗಳು ಚೀನಕ್ಕೆ ನೀಡಿದ ಸಂದರ್ಶನವನ್ನು ಅಮೇರಿಕೆಯ ಕೆಲವು ಪತ್ರಿಕೆಗಳು ಕೆಲಮಟ್ಟಿಗೆ ಟೀಕಿಸಿದ್ದರೂ ಭಾರತ ಹಾಗು ಚೀನಗಳ ಸ್ವಹಿತದ ದೃಷ್ಟಿಯಿಂದ ಸುಪರಿಣಾಮವಾಗಬಹುದೆಂಬ ಅಂಶವು ಗೋಚರಿಸುತ್ತಿದೆ. ನೆಹರುಗಳಿಗೆ ಚೀನದ ಸರಕಾರವೂ ಜನತೆಯೂ ಹೊರ ದೇಶದ ಬೇರಾವ ರಾಜಕಾರಣಿಗೂ ಕೊಡದಿಂದಷ್ಟು ಸಂಭ್ರಮದ ಸ್ವಾಗತವನ್ನು ನೀಡಿದುದನ್ನೂ ಭಾರತದೊಡನೆ ಜಾಗತಿಕ ಶಾಂತಿಯ ಘನೋದ್ದೇಶದಿಂದ ಭುಜಕ್ಕೆ ಭುಜಕೊಟ್ಟು ನಡೆಯಲು ಚೌಎನ್‌ಲಾಯರು ಕೊಟ್ಟ ಭರವಸೆಯನ್ನೂ ನೋಡಿದರೆ, ಉಭಯ ರಾಷ್ಟ್ರಗಳ ಸಂಬಂಧವಷ್ಟೇ ಅಲ್ಲ, ಜಗತ್ತಿನಲ್ಲಿ ಚೀನದ ಸ್ಥಾನಮಾನವೂ ಹೆಚ್ಚಿಕೊಳ್ಳಬಹುದೆಂಬ ಆಶೆ ಉಂಟಾಗುತ್ತದೆ.

ಹೊರ ಜಗತ್ತಿನೊಡನೆ ಚೀನದ ಸಂಬಂಧವು ಇಂದು ಏನೇನೂ ಹಿತಕರವಾಗಿಲ್ಲ. ಎಲ್ಲ ರಾಷ್ಟ್ರಗಳೊಡನೆಯೂ ಚೀನವು ಸೌಹಾರ್ದ ಸಂಬಂಧವನ್ನು ಬೆಳೆಸಲು ಇಚ್ಛಿಸುತಿದ್ದರೂ ಈ ಪ್ರಯತ್ನದಲ್ಲಿ ಅದಕ್ಕೆ ಸಾಕಷ್ಟು ಯಶಸ್ಸು ದೊರೆತಿಲ್ಲ. ತನ್ನ ಅಸ್ತಿತ್ವವನ್ನು ದುರ್ಲಕ್ಷಿಸಿ, ಹಿತಾಕಾಂಕ್ಷೆಗಳನ್ನು ಕಡೆಗಣಿಸಿ, ಹೊರಜಗತ್ತು ನಡೆಯುತ್ತಿರುವುದನ್ನು ಕಂಡ ಚೀನದ ಸರಕಾರವು ಕೆಲವು ಕಟು ಮಾತುಗಳನ್ನು ಆಡುತ್ತಿರುವುದಕ್ಕೆ ಮಾನಸಿಕ ಭಾವನೆಯೇ ಮೂಲ ಕಾರಣವೆಂದು ನೆಹರುಗಳ ಅಭಿಪ್ರಾಯ.

ಸಹಜೀವನದ ಆದರ್ಶ

ವಿಶ್ವಶಾಂತಿಯ ಸ್ಥಾಪನೆಗೋಸ್ಕರ ಚೀನದ ಆಶೆಗಳಿಗೊಂದು ವಿಧಾಯಕ ರೂಪವನ್ನು ಕೊಡಲು ನೆಹರುಗಳು ಪ್ರಯತ್ನಿಸುವಂತೆ ತೋರುತ್ತದೆ. ಪೇಕಿಂಗದಲ್ಲಿ ತಮಗೆ ಭೋಜನ ಸಮಾರಂಭ ಮುಂತಾದವುಗಳನ್ನಿತ್ತು ಗೌರವಿಸಿದಾಗ ನೆಹರುಗಳು ಪಂಚತತ್ವಗಳ ಆಧಾರದ ಮೇಲೆ ನಿಂತ ಸಹಜೀವನದ ಆದರ್ಶವನ್ನು ಪ್ರತಿಪಾದಿಸಿ ಮಾತನಾಡಿದರು. ಯಾವುದೇ ರಾಷ್ಟ್ರವು ಬೇರೆ ದೇಶದ ಮೇಲೆ ತನ್ನ ಇಚ್ಛೆಯನ್ನು ಹೇರುವುದಾಗಲೀ ತನ್ನ ಜೀವನದ ರೀತಿ ನೀತಿಗಳನ್ನು ಇತರರೂ ಅನುಸರಿಸಬೇಕೆಂದು ಒತ್ತಾಯಿಸುವುದಾಗಲೀ ಹಿತವಲ್ಲವೆಂದು ಹೇಳುತ್ತಾ ಇಂಥ ಘರ್ಷಣೆಯಿಲ್ಲದೆ ಸುಗಮ ಜೀವನವನ್ನೂ ಸೌಹಾರ್ದ ಸಂಬಂಧವನ್ನೂ ಸಾಗಿಸಿಕೊಂಡು ಹೋಗುವುದಕ್ಕೆ ಪಂಚ ತತ್ವಗಳಿಂದ ನೆರವಾಗುವುದೆಂದು ಸಾರಿದರು.

ಜಗತ್ತಿಗೆ ಅತ್ಯಗತ್ಯವಾಗಿ ಬೇಕಾಗಿರುವ ಶಾಂತಿ ರಕ್ಷಣೆಯ ಕೆಲಸದಲ್ಲಿ ಭಾರತಕ್ಕೆ ಇರುವಷ್ಟೇ ಆಸ್ಥೆಯು ಚೀನಕ್ಕಿದೆಯೆಂದು ತಮಗೆ ಮನವರಿಕೆಯಾಗಿರುವುದಾಗಿ ನೆಹರುಗಳು ಹೇಳಿದ್ದಾರೆ. ಪೇಕಿಂಗ ನಗರದ ಸಾರ್ವಜನಿಕ ಸಭೆಯೊಂದರಲ್ಲಿ ಅವರು ಮಾತನಾಡುತ್ತ ಪಾಶ್ಚಾತ್ಯ ಹಾಗು ಪೌರಸ್ತ್ಯ ಬಣಗಳು ಒಂದರೊಡನೊಂದು ಕಚ್ಚಾಡುತ್ತ ಉಳಿತುಕೊಳ್ಳಲಾಗವೆಂದೂ ಸಹ ಜೀವನವನ್ನು ನಡೆಸುವುದು ಅನಿವಾರ್ಯವಾಗಿದೆಯೆಂದೂ ಹೇಳಿದರು. ಹಿಂದಿನ ಯುದ್ಧಗಳಿಗಿಂತ ಮುಂದಿನ ಯುದ್ಧಗಳು ಹೆಚ್ಚು ಭೀಕರ ಪರಿಣಾಮವನ್ನು ಮಾಡುತ್ತವೆ. ಆದುದರಿಂದ ಯುದ್ಧ ನಡೆಯುದಂತೆ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳುವುದರಿಂದ ಮಾತ್ರ ಪ್ರಯೋಜನ ಲಭಿಸದು; ಯುದ್ಧದ ಕಾರಣಗಳನ್ನು ಕಂಡು ಹಿಡಿದು, ಅವುಗಳ ನಿರ್ಮೂಲ ಮಾಡಬೇಕು ಎಂದರು.

ಶೋಚನೀಯ ದುರಂತ

ತಾವು ವಹಿಸಿರುವ ಅಧಿಕಾರಸ್ಥಾನಗಳನ್ನು ಬಿಟ್ಟುಗೊಟ್ಟು ಕೆಲಕಾಲದ ವರೆಗಾದರೂ ವಿಶ್ರಾಂತಿಯನ್ನು ಹೊಂದಬೇಕೆಂಬ ಇಚ್ಛೆ ಇರುವುದಾಗಿ ನೆಹರುಗಳು ಹೇಳಿದ್ದರಲ್ಲವೆ? ಕೇಂದ್ರ ಸರಕಾರದ ಆಹಾರ ಮಂತ್ರಿ, ರಫಿ ಅಹ್ಮದ ಕಿದ್ವಾಯಿಯವರು ಲಕ್ನೋದ ಕಾಂಗ್ರೆಸು ಕಾರ್ಯಕರ್ತರ ಸಭೆಯೊಂದರಲ್ಲಿ ಮಾತನಾಡುತ್ತಾ "ನನಗೆ ಪ್ರಧಾನಮಂತ್ರಿ ಸ್ಥಾನವು ದೊರೆತರೆ ನೆಹರುಗಳಿಗೆ ಮತ್ತೆ ಎಂದಿಗೂ ಅದು ದೊರಕದಷ್ಟು ಚೆಲುವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತೇನೆ" ಎಂದು ವಿನೋದವಾಡಿದರು. "ಆದುದರಿಂದ ನೆಹರುಗಳು ಅಧಿಕಾರ ತ್ಯಜಿಸುವ ಮುಂಚೆ ಚೆನ್ನಾಗಿ ಆಲೋಚಿಸಲಿ" ಎಂದು ಸೂಚಿಸಿದರು. ಹೀಗೆ ಹೇಳಿ ಹೊಸ ದೆಹಲಿಗೆ ಮರಳಿದ ಮಂತ್ರಿಗಳು ದಿನಾಂಕ ೨೪ರಂದು ದೆಹಲಿ ಜಿಲ್ಲಾ ಕಾಂಗ್ರೆಸು ಸಮಿತಿಯು ಏರ್ಪಡಿಸಿದ ಸಾರ್ವಜನಿಕ ಸಭೆಯೊಂದರಲ್ಲಿ ಮಾತನಾಡಿ, ಮನೆಗೆ ತಲುಪಿದಾಗ ಹೃದಯಸ್ತಂಭನದಿಂದ ಮರಣಹೊಂದಿದರು. ಆಕಸ್ಮಿಕ ರೀತಿಯಲ್ಲಿ ತಮ್ಮ ೬೦ನೇ ವಯಸ್ಸಿನಲ್ಲಿ ನಿಧನರಾದ ಕಿದ್ವಾಯಿಯವರು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಕ್ರಿಯಾತ್ಮಕ ಪಾತ್ರವನ್ನು ವಹಿಸಿದ್ದರು. ಪ್ರಗತಿಗಾಮಿ ಮನೋಭಾವದ ಕಾಂಗ್ರೆಸು ಸದಸ್ಯರಾದ ಇವರು ಸರಕಾರದ ಸಂಪರ್ಕ ಮಂತ್ರಿಯಾಗಿ ಟಪ್ಪಾಲು ವ್ಯವಸ್ಥೆಯಲ್ಲಿ ಅನೇಕ ಸುಧಾರಣೆಗಳನ್ನು ಮಾಡಿದರು. ವಾರಕ್ಕೆ ಒಂದು ದಿನ ರಜೆ ಕೊಡುವ ಪದ್ಧತಿನ್ನೂ ವಿಮಾನ ಮೂಲಕ ಟಪ್ಪಾಲನ್ನೊಯ್ಯುವ ಕ್ರಮವನ್ನೂ ಇವರು ಜಾರಿಗೆ ತಂದರು. ಮುಂದೆ ಆಹಾರ ಸಚಿವರಾಗಿ ಇವರು ನಿಯಂತ್ರಣಗಳನ್ನು ಕಿತ್ತೆಸೆದರು; ಮತ್ತು ಅಕ್ಕಿ ಮತ್ತಿತರ ಧಾನ್ಯಗಳ ವಿಷಯದಲ್ಲಿ ದೇಶವು ಸ್ವಯಂಪೂರ್ಣವಾಗುವಂತೆ ಪ್ರಯತ್ನಿಸಿದರು. ಇವರ ಮರಣದಿಂದ ತಮ್ಮ ಅತ್ಯಂತ ದಕ್ಷ ಸಹೋದ್ಯೋಗಿಗಳಲ್ಲಿ ಒಬ್ಬರ ಕಣ್ಮರೆಯಾದರೆಂದು ನೆಹರೂ ಮರುಗಿದರು.

ಶಿಕ್ಷಕರ ಪರಿಸ್ಥಿತಿ

ಸುಧಾರಣೆಯನ್ನು ಅಪೇಕ್ಷಿಸುವವರಲ್ಲಿ ಶಿಕ್ಷಕರ ಬೇಡಿಕೆಯು ಹೆಚ್ಚು ಮಹತ್ವವನ್ನು ಹೊಂದಿರುತ್ತದೆ. ಶಿಕ್ಷಣ ಕ್ರಮದಲ್ಲಿ ನಾವು ಇಂದು ಎಷ್ಟು ತೀವ್ರ ಪರಿವರ್ತನೆಗಳನ್ನು ಅಪೇಕ್ಷಿಸುತ್ತೇವೆಯೋ ಶಿಕ್ಷಕರ ಪರಿಸ್ಥಿತಿಯನ್ನೂ ಊರ್ಜಿತಗೊಳಿಸುವ ವಿಷಯವು ಅಷ್ಟೇ ತೀವ್ರವಾಗಿ ಪರ್ಯಾಲೋಚಿಸಲ್ಪಡಬೇಕಾದ ಅಗತ್ಯ ಕಾಣುತ್ತದೆ. ಮುಂಬಯಿಯಲ್ಲಿ ದಿನಾಂಕ ೨೩ರಂದು ಅಖಿಲ ಭಾರತ ಮಾಧ್ಯಮಿಕ ಶಿಕ್ಷಕರ ಪರಿಷತ್ತು ನೆರೆದಾಗ ಅಧ್ಯಕ್ಷ ಡಾ. ಅಮರನಾಥ ಝಾರವರು ಇದೇ ಮಾತನ್ನು ಹೇಳಿದರು. ಸರಕಾರವು ರೈಲ್ವೆ, ಅಂಚೆ ಮುಂತಾದ ವಿಭಾಗಗಳಲ್ಲಿರುವ ನೌಕರರಿಗಿಂತಲೂ ಹೀನವಾಗಿ ಶಿಕ್ಷಕರನ್ನು ನಡೆಸಿಕೊಳ್ಳುತ್ತಿದೆ; ಆದರೂ ರಾಷ್ಟ್ರಹಿತದ ದೃಷ್ಟಿಯಿಂದ ಶಿಕ್ಷಕರು ಯಾವುದೇ ಹಾನಿಕಾರಕ ಕೆಲಸವನ್ನು ಮಾಡಿಲ್ಲ. ಅವರು ಸಂಯಮವನ್ನು ತೊರೆದ ಪಕ್ಷದಲ್ಲಿ ಜೀವನದ ಬಾಲ್ಯಾವಸ್ಥೆಯಲ್ಲಿರುವ ಮಕ್ಕಳ ಮನಸ್ಸಿನಲ್ಲಿ ವಿಷವನ್ನು ತುಂಬಬಲ್ಲರು—ಇಂಥ ಕೃತ್ಯಕ್ಕೆ ಅವಕಾಶವಿಲ್ಲದಂತೆ ಶಿಕ್ಷಕರನ್ನು ಸಂತುಷ್ಟಗೊಳಿಸಲು ಸರಕಾರ ಪ್ರಯತ್ನಿಸಬೇಕು ಎಂಬ ಅಭಿಪ್ರಾಯವನ್ನು ಅವರು ವ್ಯಕ್ತಗೊಳಿಸಿದರು. ಮೂಲ ಶಿಕ್ಷಣ, ಔದ್ಯಮಿಕ ಶಿಕ್ಷಣ ಮುಂತಾದ ಪದ್ಧತಿಗಳ ನ್ಯೂನತೆಯನ್ನು ಟೀಕಿಸುತ್ತಾ ನಾವು ವಿದ್ಯಾರ್ಥಿಗಳನ್ನು ದಿನಗೂಲಿಗಳಾಗಿ ಮಾಡಬಯಸುತ್ತೇವೆಯೆ, ಅಥವಾ ಸುಸಂಸ್ಕೃತರೂ ಪರಿಪೂರ್ಣರೂ ಆದ ಮಾನವರನ್ನಾಗಿ ರೂಪಿಸುವುದು ನಮ್ಮ ಉದ್ದೇಶವೇ ಎಂಬುದನ್ನು ನಿರ್ಧರಿಸಬೇಕೆಂದು ಅವರು ಒತ್ತಾಯಿಸಿದರು.

ನೈಸರ್ಗಿಕ ಶಕ್ತಿ

ಮಕ್ಕಳ ಶಕ್ತಿಯನ್ನು ಸಮುಚಿತರೀತಿಯಲ್ಲಿ ಪೋಷಿಸುವುದು ರಾಷ್ಟ್ರದ ಭವಿಷ್ಯತ್ತಿನ ದೃಷ್ಟಿಯಿಂದ ಅಪೇಕ್ಷಣೀಯವೆಂದೂ ಅದಕ್ಕೆ ತಕ್ಕಂತೆ ಶಿಕ್ಷಕರ ಘಾತವನ್ನು ಗೌರವಿಸಬೇಕೆಂದೂ ಒಪ್ಪಬೇಕಾಗುತ್ತದೆ. ಅದೇ ಸಮಯ ನಮ್ಮ ನಿತ್ಯ ವ್ಯವಹಾರದಲ್ಲಿ ನಾವು ನೈಸರ್ಗಿಕ ಶಕ್ತಿಗಳ ಬಳಕೆಯನ್ನೂ ಹೆಚ್ಚಿನ ಪ್ರಮಾಣದಲ್ಲಿ ಮಾಡುತ್ತಿದ್ದೇವೆಂಬುದನ್ನು ಮರೆಯಲಾಗದು. ಕಲ್ಲಿದ್ದಲು, ಪೆಟ್ರೋಲು ಮುಂತಾದ ಇಂಧನ ಶಕ್ತಿಗಳಿಂದ ತೃಪ್ತಿಹೊಂದದ ಮನುಷ್ಯನು ಜಲಪಾತಗಳನ್ನು ವಿದ್ಯುತ್ತಿನ ಉತ್ಪಾದನೆಗಾಗಿ ಉಪಯೋಗಿಸಲು ಪ್ರಯತ್ನಿಸಿ ಯಶಸ್ವಿಗಳಿಸಿದನು. ಅಣುಶಕ್ತಿಯ ರಹಸ್ಯವನ್ನು ಉದ್ಘಾಟಿಸುವುದಕ್ಕೂ ಅವನು ಶಕ್ತನಾದನು. ಆದರೆ ಅಣುಶಕ್ತಿಯಿಂದ ಸಾಕಷ್ಟು ವಿಪುಲ ಪ್ರಯೋಜನ ದೊರಕಲು ಇನ್ನೂ ಹಲವು ವರ್ಷಕಾಲ ಬೇಕಾದೀತು. ಅಷ್ಟು ಹೊತ್ತಿಗೆ ಕಲ್ಲಿದ್ದಲು, ಪೆಟ್ರೋಲು ಮುಂತಾದ ಸಂಗ್ರಹಗಳು ನಾಮ ಶೇಷವಾಗಬಹುದು. ಆದುದರಿಂದ ಸೂರ್ಯಶಕ್ತಿ, ವಾಯುಶಕ್ತಿ ಮುಂತಾದವುಗಳನ್ನು ಬಳಸಿಕೊಳ್ಳುವ ಬಯಕೆಯು ನಮ್ಮಲ್ಲಿ ಹುಟ್ಟಿರುತ್ತದೆ. ಹೊಸದೆಹಲಿಯಲ್ಲಿ ದಿನಾಂಕ ೨೨ರಿಂದ ೨೫ರ ವರೆಗೆ ಈ ಕುರಿತು ಅಂತಾರಾಷ್ಟ್ರೀಯ ಸ್ವರೂಪದ ವಿಚಾರ ಸಂಕೀರ್ಣವೊಂದು ನಡೆಯಿತು. ಭಾರತವು "ಸೂರ್ಯಪಾಕ" ಮುಂತಾದ ಉಪಕರಣಗಳನ್ನು ತಯಾರಿಸಿ, ನೈಸರ್ಗಿಕ ಶಕ್ತಿಯ ಪ್ರಯೋಜನವನ್ನು ಹೇಗೆ ಹೊಂದಬಹುದೆಂದು ತೋರಿಸಿ ಕೊಟ್ಟಿರುವುದಾಗಿಯೂ ಗಾಳಿ ಯಂತ್ರಗಳಿಂದ ಗಿರಣಿಗಳನ್ನು ನಡೆಸುವ ಪ್ರಯತ್ನ ನಡೆದಿದೆಯೆಂದೂ ಡಾ. ಭಟನಾಗರರು ಹೇಳಿದರು.

ಅಪೂರ್ವ ಸಂದರ್ಭ!

ಪುಸ್ತಕ ಮಾಸ

(25-10-54 ರಿಂದ 25-11-54)

ನೇತೃತ್ವ— ನವಯುಗ ವಾರಪತ್ರಿಕೆ, ಉಡುಪಿ.
ಉದ್ಘಾಟಕರು— ಕವಿವರ್ಯ ಶ್ರೀ ದ. ರಾ. ಬೇಂದ್ರೆ, ಎಂ. ಎ.
ಅಧ್ಯಕ್ಷರು— ಶ್ರೀ. ಟಿ. ಎ. ಪೈ, ಎಂ. ಎಲ್. ಎ.

******

ನವಯುಗ ವಾರಪತ್ರಿಕೆಯ

ನೇತೃತ್ವದಲ್ಲಿ ಏರ್ಪಡಿಸಲಾದ

ಪುಸ್ತಕ ಮಾಸದಲ್ಲಿ

ನವಭಾರತ ಪುಸ್ತಕ ಭಂಡಾರದಲ್ಲಿ

ಈ ಕೆಳಗಿನ ಆಕರ್ಷಣೆಗಳಿಂದ ಪುಸ್ತಕಗಳು ದೊರೆಯುವವು.

ರೂ. 1ರಿಂದ ರೂ. 10ರ ತನಕ ರೂ.ಗೆ 0-2-0ಯಂತೆ ಕಮಿಶನ್
ರೂ. 10 ,, ರೂ. 25 ,, 0-2-6
ರೂ. 25 ,, ರೂ. 50 ,, 0-3-0
ರೂ. 50 ,, ರೂ. 100 ,, 0-3-6
ಮತ್ತು 6 ತಿಂಗಳ ವರೆಗೆ ನವಯುಗ.
ರೂ. 100 ,, 0-4-0
ಮತ್ತು 1 ವರ್ಷದ ವರೆಗೆ ನವಯುಗ.

ನವಭಾರತ ಪುಸ್ತಕ ಭಂಡಾರ ಉಡುಪಿ.

ಸೂಚನೆ:— ಕೆಟಲಾಗಿಗೆ ವಿಚಾರಿಸಿರಿ ಯಾ ಬರೆಯಿರಿ.

NAVAYUGA

Popular Kannada Weekly

Founder:—

Sri **A. B. SHETTY**, *M.L.A.*

Minister for Public Health,
Govt. of Madras.

ನ ವ ಯು ಗ

ಜನಪ್ರಿಯ ರಾಷ್ಟ್ರೀಯ ವಾರಪತ್ರಿಕೆ

ಸಂಪುಟ	ಉಡುಪಿ	ಸಂಚಿಕೆ
೩೪	೨೮-೧೦-'೫೪	೯

ದಕ್ಷಿಣ ಆಫ್ರಿಕ

ದಕ್ಷಿಣ ಆಫ್ರಿಕದಲ್ಲಿರುವ ಭಾರತೀಯ ವಂಶಜರ ಪ್ರಶ್ನೆಯು ಇನ್ನೂ ಒಂದು ನಿಲುಗಡೆಗೆ ಬಂದಿಲ್ಲ. ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಈ ಪ್ರಶ್ನೆಯು ಪ್ರತಿ ವರ್ಷ ಮಂಡಿಸಲ್ಪಡುತ್ತದೆ. ಅದು ವರ್ಣಭೇದ ನೀತಿಯನ್ನು ಖಂಡಿಸಿ, ಮಾನವ ಸಮಾಜದಲ್ಲಿ ಸೌಹಾರ್ದವನ್ನು ಕಾಯ್ದುಕೊಳ್ಳಬೇಕೆಂದು ಹೊಸ ಹೊಸ ಸಮಿತಿಗಳನ್ನು ನೇಮಿಸಿ, ತನ್ನಿಂದಾದ ಸಹಾಯವನ್ನು ಸಲ್ಲಿಸುತ್ತದೆ. ಆದರೆ ದಕ್ಷಿಣ ಆಫ್ರಿಕದ ಸರಕಾರವು ರಾಷ್ಟ್ರ ಸಂಘದ ಸದಸ್ಯ ರಾಷ್ಟ್ರವಾಗಿದ್ದರೂ ಅದರ ಆದೇಶವನ್ನು ಮನ್ನಿಸಲು ಸಿದ್ಧವಾಗದೆ, ಅಸಹಕಾರವನ್ನು ತೋರಿಸುತ್ತದೆ. ವರ್ಣಭೇದ ನೀತಿಯ ಚರ್ಚೆಯನ್ನು ಮಾಡುವುದಕ್ಕೆ ಸಂಯುಕ್ತ ರಾಷ್ಟ್ರ ಸಂಘಕ್ಕೆ ಅಧಿಕಾರವಿಲ್ಲವೆಂದೂ ಅದು ದಕ್ಷಿಣ ಆಫ್ರಿಕದ ಆಂತರಿಕ ಪ್ರಶ್ನೆಯಾಗಿದೆಯೆಂದೂ ಮಲಾನ ಸರಕಾರದ ಪ್ರತಿನಿಧಿಗಳ ವಾದ. ರಾಷ್ಟ್ರಸಂಘವಾಗಲೀ, ಈ ಪ್ರಶ್ನೆಗೆ ಸಂಬಂಧಿಸಿದ ಭಾರತವಾಗಲೀ ಇದನ್ನು ಒಪ್ಪುವುದಿಲ್ಲ. ವರ್ಣಭೇದ ನೀತಿಯಿಂದ ಗಾಢವಾದ ಪರಿಣಾಮವನ್ನು ಹೊಂದಿದ ಭಾರತೀಯ ವಂಶಜರ ಪ್ರಶ್ನೆಯನ್ನು ಸೌಹಾರ್ದಯುತವಾದ ರೀತಿಯಲ್ಲಿ ಸದ್ಭಾವ ಮಂಡಳಗಳ ನೇಮಕ, ಪರಸ್ಪರ ಮಾತುಕತೆ ಮುಂತಾದ ರೀತಿಯಲ್ಲಿ ಬಿಡಿಸಲು ಪ್ರಯತ್ನಿಸುವುದೆಂದರೆ ಆಂತರಿಕ ಆಡಳಿತದಲ್ಲಿ ಹಸ್ತಕ್ಷೇಪ ಮಾಡಿದಂತಾಗಲಿಲ್ಲವೆಂದು ಭಾರತವು ಅಭಿಪ್ರಾಯಪಡುತ್ತದೆ. ರಾಷ್ಟ್ರಸಂಘದ ತಾಮ್ರಪಟದಲ್ಲಿ ಹೇಳಲಾದ, ಮತ್ತು ದಕ್ಷಿಣ ಆಫ್ರಿಕದ ಸರಕಾರವೂ ಬದ್ಧವಾದ, ಉದಾತ್ತ ತತ್ವಗಳ ಅನುಷ್ಠಾನಕ್ಕೆ ಯೋಗ್ಯ ಅವಕಾಶವನ್ನು ಕಲ್ಪಿಸಿಕೊಡುವುದೂ ಈ ಕುರಿತು ತಕ್ಕ ಮಾರ್ಗದರ್ಶನವನ್ನು ಮಾಡುವುದೂ ರಾಷ್ಟ್ರಸಂಘದ ಹೊಣೆಯೇ ಆಗಿದ್ದು ಅದನ್ನು ನಿರ್ವಹಿಸುವುದೆಂದರೆ ದಕ್ಷಿಣ ಆಫ್ರಿಕದ ಆಂತರಿಕ ಪ್ರಶ್ನೆಯಲ್ಲಿ ಕೈ ಹಾಕಿದಂತಾಗದು. ತನ್ನ ಧೋರಣೆಯನ್ನು ದಕ್ಷಿಣ ಆಫ್ರಿಕದ ಸರಕಾರವೇ ಬದಲಿಸಬೇಕಾಗಿದ್ದು, ರಾಷ್ಟ್ರಸಂಘವು ತನ್ನ ನೈತಿಕ ವರ್ಚಸ್ಸನ್ನು ಮಾತ್ರ ಬೀರಬಲ್ಲುದು; ಶಾಸನಿಕ ಕಾರ್ಯಕ್ರಮಗಳನ್ನು ಕೈಗೊಳ್ಳುವ ಕೆಲಸವು ದಕ್ಷಿಣ ಆಫ್ರಿಕ ಸರಕಾರದ ಮೇಲೆಯೇ ಬೀಳುತ್ತದೆ ಆದುದರಿಂದ ರಾಷ್ಟ್ರಸಂಘವು ಹದ್ದು ಮೀರಿ ವರ್ತಿಸುತ್ತಿದೆಯೆಂದು ಆರೋಪಿಸುವುದರಲ್ಲಿ ಹುರುಳೇನೂ ಇಲ್ಲ. ರಾಷ್ಟ್ರಸಂಘವು ಕಳೆದ ವರ್ಷ ಕ್ಯೂಬಾ, ಯುಗೊಸ್ಲಾವಿಯಾ ಮತ್ತು ಸಿರಿಯಾದ ಪ್ರತಿನಿಧಿಗಳಿರುವ ಸದ್ಭಾವ ಮಂಡಳವನ್ನು ನೇಮಿಸಿದ್ದಿತು—ಅದರೊಡನೆ ದಕ್ಷಿಣ ಆಫ್ರಿಕದ ಸರಕಾರ ಸಹಕರಿಸದುದರಿಂದ ತನ್ನಿಂದೇನೂ ಮಾಡುವುದಾಗಲಿಲ್ಲವೆಂದು ಮಂಡಳವು ವರದಿಯನ್ನು ಒಪ್ಪಿಸಿರುತ್ತದೆ. ಕ್ಯೂಬಾದ ಪ್ರತಿನಿಧಿಗಳು ತಮ್ಮ ಸದ್ಭಾವ ಮಂಡಳವು ನಿರುಪಯುಕ್ತವಾದರೂ ರಾಷ್ಟ್ರಸಂಘದ ಮುಂದೆ ಸೂಚನೆಯೊಂದನ್ನು ಮಂಡಿಸಿ, ಸಂಬಂಧಿಸಿದ ಎಲ್ಲ ಪಕ್ಷಗಳಿಗೂ ಸಮ್ಮತನಾದ, ವರ್ಚಸ್ವಿ ಮಧ್ಯಸ್ಥನೊಬ್ಬನಿಗೆ ಈ ವಿಷಯವನ್ನು ಬಿಟ್ಟುಕೊಡಬೇಕೆಂದು ಅಭಿಪ್ರಾಯಪಟ್ಟರು. ಲ್ಯಾಟಿನ ಅಮೇರಿಕದ ಏಳು ರಾಷ್ಟ್ರಗಳ ಪ್ರತಿನಿಧಿಗಳು ತಮ್ಮದೊಂದು ಸಂಯುಕ್ತ ಗೊತ್ತುವಳಿಯನ್ನು ಮಂಡಿಸಿ, ದಕ್ಷಿಣ ಆಫ್ರಿಕಕ್ಕೂ ಭಾರತ-ಪಾಕಿಸ್ತಾನಗಳಿಗೂ ನೇರಾದ ಮಾತುಕತೆ ನಡೆಯುವುದೇ ವಿಹಿತವೆಂದು ಸೂಚಿಸಿ, ಕ್ಯೂಬಾದ ಪ್ರತಿನಿಧಿಗಳ ಅಭಿಪ್ರಾಯವನ್ನು ಕೆಲಮಟ್ಟಿಗೆ ಪುಷ್ಟೀಕರಿಸಿದರು. ನೇರಾದ ಮಾತುಕತೆಗಳು ನಡೆಯುವುದಕ್ಕೆ ಸಹಕಾರಿಯಾದ ವಾತಾವರಣವನ್ನು ಉಂಟು ಮಾಡುವ ಸಲುವಾಗಿ ಯಾರಾದರೊಬ್ಬ ವರ್ಚಸ್ವಿ ವ್ಯಕ್ತಿಯ ಅಥವಾ ರಾಷ್ಟ್ರದ ಆಶ್ರಯವನ್ನು ಮೂರೂ ರಾಷ್ಟ್ರಗಳು ಹೊಂದುವುದು ಇಷ್ಟವೆಂದು ಈ ಗೊತ್ತುವಳಿ ಹೇಳುತ್ತದೆ. ಭಾರತದ ಮಟ್ಟಿಗೆ ಪ್ರಶ್ನೆಯನ್ನು ಆದಷ್ಟು ಬೇಗ ಒಗೆಹರಿಸುವುದು ನಮ್ಮ ಇಷ್ಟವಾಗಿದ್ದರೂ ಸಂಧಾನ ಹಾಗು ಮಾತುಕತೆಗಳ ಮಾರ್ಗವನ್ನು ಬಿಡದೆ ಅನುಸರಿಸುವುದರಿಂದ ಸಮಾಧಾನಕರವಾಗಿ ಪ್ರಶ್ನೆ ಬಿಡಿಸಲ್ಪಡುವಂತಿದ್ದರೆ ಎಷ್ಟು ಸಮಯದ ವರೆಗಾದರೂ ತಾಳ್ಮೆ ಕೆಡದೆ ಕುಳಿತಿರುವುದಕ್ಕೂ ನಾವು ಸಿದ್ಧರೇ ಇದ್ದೇವೆ. ಆದರೆ ವಿಳಂಬಕ್ಕೆ ಎಡೆಕೊಡುವುದು ದಕ್ಷಿಣ ಆಫ್ರಿಕದ ಸರಕಾರಕ್ಕೆಯೇ ಅಪಾಯವನ್ನುಂಟುಮಾಡಬಹುದು. ೯೦ ವರ್ಷಗಳ ಹಿಂದೆ ಭಾರತದಿಂದ ಆದೇಶಕ್ಕೆ ವಲಸೆ ಹೋದ ಜನರನ್ನು ಸಂಪತ್ಸಮೃದ್ಧ ನಾಡನ್ನು ಕಟ್ಟುವುದಕ್ಕಾಗಿ ಉಪಯೋಗಿಸಿದ ದಕ್ಷಿಣ ಆಫ್ರಿಕದ ಸರಕಾರ ಅವರ ಮಾನವೀಯ ಅಧಿಕಾರಗಳನ್ನು ಕಡೆಗಣಿಸುವುದರಿಂದ ಶಾಂತಿಗೆ ಭಂಗಮಾಡುವ ಘಟನೆಗಳು ಸಂಭವಿಸಬಹುದು. ಇದಕ್ಕೆ ಆಸ್ಪದವಿರಬಾರದೆಂದು ಭಾರತ ಪ್ರಯತ್ನಿಸುತ್ತಿದ್ದು, ಹಿಂದಿನ ಸದ್ಭಾವಮಂಡಳಗಳು ನಿರುಪಯುಕ್ತವಾಗಿದ್ದರೂ ಜಾಗತಿಕ ಅಭಿಪ್ರಾಯವನ್ನು ದಕ್ಷಿಣ ಆಫ್ರಿಕದ ಸರಕಾರಕ್ಕೆ ಮನಗಾಣಿಸುವಲ್ಲಿ ಹೊಸ ಮಂಡಳ ಅಥವಾ ಮಧ್ಯಸ್ಥಿಗಾರನ ನೇಮಕದಿಂದ ನೆರವಾದೀತೆಂದು ಅದು ಆಶಿಸುತ್ತದೆ.

ಕಾಂಗ್ರೆಸಿನ ಯಶಸ್ಸು

ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿಗೆ ನಡೆದ ಚುನಾವಣೆಯ ಫಲಿತಾಂಶಗಳು ಇದೀಗ ಹೊರಬಿದ್ದಿದ್ದು, ನಲ್ವತ್ತು ಸ್ಥಾನಗಳಿಗೆ ೩೧ ಕಾಂಗ್ರೆಸಿಗರೂ ೨ ಪ್ರಜಾ ಸಮಾಜವಾದಿಗಳೂ ೨ ಕಮ್ಯುನಿಸ್ಟರೂ ೫ ಸ್ವತಂತ್ರರೂ ಆಯ್ಕೆ ಹೊಂದಿರುವರು. ಕಾಂಗ್ರೆಸು ಸಂಸ್ಥೆಯು ೩೬ ಸ್ಥಾನಗಳಿಗೆ ತನ್ನ ಹುರಿಯಾಳುಗಳನ್ನು ನಿಲ್ಲಿಸಿತ್ತು; ಇವರಲ್ಲಿ ಮೂವರು ಚುನಾವಣೆಗೆ ಮೊದಲೇ ಅವಿರೋಧವಾಗಿ ಆಯ್ಕೆ ಹೊಂದಿದ್ದರು. ಉಳಿದವರಲ್ಲಿ ಇಬ್ಬರು ಮಾತ್ರ ಸೋಲುಂಡರು. ಇದೇನು ದೊಡ್ಡ ವಿಷಯವಾಗಲಾರದು— ಏಕೆಂದರೆ ಕಾಂಗ್ರೆಸು ಗೆದ್ದು ಬಂದ ಸ್ಥಳಗಳಲ್ಲಿ ಪ್ರತಿಸ್ಪರ್ಧಿಗಳಿಗಿಂತ ಹೆಚ್ಚು ಕಡಿಮೆ ಇಮ್ಮಡಿ ಮತಗಳನ್ನು ಸಂಪಾದಿಸಿದ್ದರು. ಆದುದರಿಂದ ಕಾಂಗ್ರೆಸನ್ನು ಜನತೆಯು ಪ್ರೀತಿಯಿಂದ ಬೆಂಬಲಿಸುತ್ತಿದೆಯೆಂದೂ ಈ ಸಂಸ್ಥೆಯ ಕಾರ್ಯಕ್ರಮದಲ್ಲಿ ಮತದಾರರಿಗೆ ತುಂಬ ವಿಶ್ವಾಸವಿದೆಯೆಂದೂ ಸ್ವಯಮೇವ ವ್ಯಕ್ತಗೊಳ್ಳುತ್ತದೆ. ಜಿಲ್ಲೆಯ ಉತ್ತರ ಭಾಗದಲ್ಲಿಯಂತೂ ಈ ಮಾತು ಹೆಚ್ಚು ಸ್ಪಷ್ಟವಾಗಿದೆ. ಹೀಗೆ ಜನಪ್ರಿಯತೆಯನ್ನು ಗಳಿಸಿಕೊಂಡಿರುವ ಕಾಂಗ್ರೆಸು ಸಂಸ್ಥೆಯೂ ಜನರಿಂದ ಚುನಾಯಿತರಾದ ಕಾಂಗ್ರೆಸು ಸದಸ್ಯರೂ ಮತದಾರರ ವಿಷಯದಲ್ಲಿ ತಮ್ಮ ಕರ್ತವ್ಯಗಳನ್ನೂ ಹೊಣೆಗಾರಿಕೆಗಳನ್ನೂ ನಿರ್ವಹಿಸುವ ಕಠಿಣವಾದ ಹೊರೆಗೆ ಹೆಗಲು ಕೊಡಬೇಕಾಗಿದೆ. ಚುನಾವಣೆಯಲ್ಲಿ ಗೆದ್ದುಬರುವುದಕ್ಕಿಂತಲೂ ಜನತೆ ತಮ್ಮಲ್ಲಿ ಇಟ್ಟಿರುವ ವಿಶ್ವಾಸವನ್ನು ಅಧಿಕಾರಾವಧಿಯಲ್ಲಿ ಕಾಯ್ದುಕೊಂಡು ಹೋಗುವುದು ಹೆಚ್ಚು ಕಷ್ಟವಾದ ಕೆಲಸ. ಇದನ್ನು ವಿಜಯೀ ಹುರಿಯಾಳುಗಳು ಮರೆಯಬಾರದು; ತಮ್ಮ ಕರ್ತವ್ಯವನ್ನು ಮಾಡುವುದರಲ್ಲಿ ಉದಾಸೀನತೆ, ಪಕ್ಷಪಾತ ಮುಂತಾದ ಕೆಟ್ಟ ಅಂಶಗಳಿಗೆ ಎಡೆಯನ್ನು ಕೊಡಲಾಗದು. ಇದನ್ನು ಮರೆತರೆ, ಮುಂದಿನ ಚುನಾವಣೆಯ ಹೊತ್ತಿಗೆ ಜನತೆಯ ವಿಶ್ವಾಸವು ಸದಸ್ಯರಲ್ಲಿ ಅದಕ್ಕಿಂತಲೂ ಹೆಚ್ಚಾಗಿ ಸಂಸ್ಥೆಯಲ್ಲಿ—ಉಳಿಯದೆ ಹೋದೀತು. ಇಂಥ ಪ್ರಸಂಗವನ್ನು ತಂದು ಕೊಳ್ಳುವುದು ಇಷ್ಟವಲ್ಲವಾದುದರಿಂದ, ಅತ್ಯಧಿಕ ಕಾರ್ಯತತ್ಪರತೆಯನ್ನು ತೋರಿಸಿ ತಮ್ಮ ದಕ್ಷತೆಯನ್ನು ಬಹುಮತ ಹೊಂದಿರುವ ಕಾಂಗ್ರೆಸು ಸದಸ್ಯರು ತೋರಿಸಬೇಕಷ್ಟೆ. ಹೀಗೆ ಮಾಡುವಾಗ ಇನ್ನೊಂದು ಮುಖ್ಯ ವಿಷಯವನ್ನೂ ಗಮನಿಸುವುದು ಶ್ರೇಯಸ್ಕರ: ಜನತೆಯಲ್ಲಿ ಒಂದು ಗುಂಪು ಕಾಂಗ್ರೆಸಿನ ಪ್ರತಿಸ್ಪರ್ಧಿಗಳನ್ನು ಬೆಂಬಲಿಸಿದೆಯೆಂಬ ಅಂಶವೇ ಅದು. ಈ ಗುಂಪಿನ ಪ್ರತಿನಿಧಿಗಳು ಅಲ್ಪಸಂಖ್ಯಾಕರಾಗಿದ್ದರೂ—ಪ್ರಜಾಸಮಾಜವಾದಿ ಪಕ್ಷವು ನಿಲ್ಲಿಸಿದ್ದ ೨೭ ಹುರಿಯಾಳುಗಳಲ್ಲಿ ಕೇವಲ ಇಬ್ಬರು ಮಾತ್ರ ಆರಿಸಿ ಬಂದಿದ್ದರೂ— ಅವರೇನಾದರೂ ವಿಧಾಯಕ ಸೂಚನೆಗಳನ್ನು ಮುಂದಿಟ್ಟರೆ, ಅವನ್ನು ಸಹಾನುಭೂತಿಯಿಂದ ಕಾಂಗ್ರೆಸು ಸದಸ್ಯರು ವಿಚಾರಿಸಿ, ಯೋಗ್ಯ ನಿರ್ಣಯ ಕೈಗೊಳ್ಳಬೇಕು ಏಕೆಂದರೆ, ಚುನಾವಣೆಯು ಬಳಿಕ, ಬೋರ್ಡು ಜನತೆಯದಾಗುತ್ತದೆ, ಮತ್ತು ಜನತೆಯ ಪ್ರಾತಿನಿಧಿಕ ಸ್ವರೂಪವನ್ನು ಉಳಿಸಿಕೊಂಡ ಕಾಂಗ್ರೆಸು ತನ್ನ ಬೆಂಬಲಿಗರಲ್ಲದವರನ್ನೂ ಒಲಿಸಿಕೊಳ್ಳಬೇಕಾದರೆ, ಅವರ ಆಶೋತ್ತರಗಳನ್ನೂ ವಿಚಾರಿಸುವುದು ಇಷ್ಟವಾಗುತ್ತದೆ. ಈ ಮಾತಿನೊಂದಿಗೆ ಯಶಸ್ವಿ ಹುರಿಯಾಳುಗಳನ್ನು ಹೃತ್ಪೂರ್ವಕ ಅಭಿನಂದಿಸುತ್ತೇವೆ

ಪುಸ್ತಕ ಮಾಸದ ಪ್ರಾರಂಭೋತ್ಸವ

ಕರ್ನಾಟಕದಲ್ಲಿಯೇ ಮೊತ್ತಮೊದಲಾಗಿ "ಪುಸ್ತಕ ಮಾಸ" ಎಂಬ ನೂತನ ಉಪಕ್ರಮವನ್ನು "ನವಯುಗ"ದ ನೇತೃತ್ವದಲ್ಲಿ ಇದೇ ದಿನಾಂಕ ೨೫ರಂದು ತೊಡಗಲಾಯಿತು. ನಾಡಿನ ಜನತೆಯಲ್ಲಿ ಜ್ಞಾನಪ್ರಸಾರ ಮಾಡುವ ಉದ್ದೇಶದಿಂದಲೂ ಕನ್ನಡ ಗ್ರಂಥಗಳಿಗೆ ಯುಕ್ತ ಪ್ರಚಾರ ನೀಡುವ ಧ್ಯೇಯದಿಂದಲೂ ಆಚರಣೀಯವಾದ "ಪುಸ್ತಕ ಮಾಸ"ದ ಉದ್ಘಾಟನೆಯನ್ನು ಕನ್ನಡದ ಖ್ಯಾತನಾಮ ಸಾಹಿತಿಗಳೂ ಆಧುನಿಕ ಕವಿಗಳಲ್ಲೆಲ್ಲ ಶ್ರೇಷ್ಠರೂ ಆದ ಸೊಲ್ಲಾಪುರದ ಶ್ರೀ ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಎಂ. ಎ., ಅವರು ನೆರವೇರಿಸಿದರು.

ನವಯುಗ ಪ್ರೆಸ್ಸಿನ ಮಹಡಿಯಲ್ಲಿ ಜರಗಿದ ಈ ಸಮಾರಂಭದ ಅಧ್ಯಕ್ಷತೆಯನ್ನು ಜನಪ್ರೀತ ಎಂ. ಎಲ್. ಎ. ಶ್ರೀ ಟಿ. ಎ. ಪೈಗಳು ವಹಿಸಿದ್ದರು. ಸ್ಥಳೀಯ ಸಾಹಿತಿಗಳು ಪತ್ರಿಕೋದ್ಯೋಗಿಗಳು, ಅಧ್ಯಾಪಕರು, ಮಹನೀಯರು ಹಾಗು ಪುಸ್ತಕ ಪ್ರಿಯರು ಸಮಾರಂಭಕ್ಕೆ ಆಗಮಿಸಿದ್ದರು.

ಜ್ಞಾನ ದೀಪವನ್ನು ಬೆಳಗುವ ಸಾಧನವಾದ ಒಳ್ಳೆಯ ಪುಸ್ತಕಗಳಿಂದ ಶೃಂಗರಿಸಿದ್ದ ಸಭಾ ಭವನದಲ್ಲಿ ಉಪಸ್ಥಿತರಾದ ಅತಿಥಿಗಳನ್ನು ಶ್ರೀ ಕೆ. ಹೊನ್ನಯ್ಯ ಶೆಟ್ಟರು ಸ್ವಾಗತಿಸಿದರು. ಪ್ರಚಾರವೇ ಈಗಿನ ಕಾಲದ ವೈಶಿಷ್ಟ್ಯವೆಂದು ಅವರು ಹೇಳುತ್ತಾ ಒಳ್ಳೆಯ ಪುಸ್ತಕಗಳನ್ನು ಜನಪ್ರಿಯಗೊಳಿಸಲು ಪುಸ್ತಕ ಮಾಸವನ್ನು ಆಚರಿಸುವ ಆಲೋಚನೆ ತಮಗೆ ಹೊಳೆಯಿತೆಂದು ನಿವೇದಿಸಿದರು. ಜಿಲ್ಲೆಯ ಪುಸ್ತಕ ಪ್ರಕಾಶನ ಕ್ಷೇತ್ರದಲ್ಲಿ ತಮ್ಮ ಅನುಭವವನ್ನು ವಿವರಿಸುತ್ತಾ ಪಶ್ಚಿಮ ಘಟ್ಟವನ್ನು ಹತ್ತಿ ಮೈಸೂರು ಹಾಗು ಉತ್ತರ ಕರ್ನಾಟಕಕ್ಕೆ ಇಲ್ಲಿಯ ಪುಸ್ತಕಗಳು ಹೋಗುವುದು ವಿರಳವೆಂದೂ ಆದರೆ ಅಲ್ಲಿಯ ಗ್ರಂಥಗಳು ಮಾತ್ರ ಸುಲಭವಾಗಿ ಇಲ್ಲಿಯ ಪೇಟೆಗೆ ಇಳಿಯುತ್ತವೆಂದೂ ಈ ಪರಿಸ್ಥಿತಿಯನ್ನು ಸುಧಾರಿಸುವುದು ಇಷ್ಟವೆಂದೂ ಅವರು ಅಭಿಪ್ರಾಯ ಪಟ್ಟರು.

ಇದನ್ನು ಶ್ರೀ ಕು. ಶಿ. ಹರಿದಾಸ ಭಟ್ಟರು ಕೆಲಮಟ್ಟಿಗೆ ಸಮರ್ಥಿಸಿ ಮಾತನಾಡಿದರು; ಒಂದೂವರೆ ರೂಪಾಯಿಯ ಪುಸ್ತಕಗಳನ್ನು ಪ್ರಕಟಿಸುವ ಕಾಲಕ್ಕೆ ಮುಂಚೆಯೇ ಶ್ರೀ. ಹೊನ್ನಯ ಶೆಟ್ಟರು ತಮ್ಮ "ಅಂತರಂಗ"ದ ಪ್ರಕಟಣೆಗಳ ಮೂಲಕ ಮೂರು ಅಥವಾ ನಾಲ್ಕು ಆಣೆಗಳಷ್ಟು ಕಡಿಮೆ ಬೆಲೆಗೆ ಉತ್ತಮ ಸಾಹಿತ್ಯವನ್ನು ಒದಗಿಸುತ್ತಿದ್ದರೆಂದು ಅವರು ನೆನಪಿಗೆ ತಂದುಕೊಟ್ಟರು. ಆದರೂ ಈ ಉದ್ಯಮಕ್ಕೆ ಕರ್ನಾಟಕದಲ್ಲಿ ಪ್ರೋತ್ಸಾಹ ದೊರಕಿರದ್ದಕ್ಕೆ ಪ್ರಚಾರದ ಅಭಾವವೇ ಕಾರಣವಾಗಿರಬಹುದೆಂದು ಅವರು ಹೇಳಿದರು ಪ್ರಿನ್ಸಿಪಾಲ ಸುಂದರರಾವ್, ಶ್ರೀ ಬಿ. ಶ್ಯಾಮರಾಯ ಶೆಟ್ಟಿ, ಡಾ. ಯು. ಸುಂದರರಾವ ಪೈ, ಶ್ರೀ ಎ. ಜೆ. ಅಳ್ವೆ ಇವರು ಪುಸ್ತಕಗಳ ಮಹತ್ವವನ್ನೂ ಅವುಗಳನ್ನು ಜನರು ಕೊಂಡುಕೊಂಡು

ಓದಬೇಕಾದ ಅಗತ್ಯವನ್ನೂ ವಿವರಿಸಿ ಮಾತನಾಡಿದರು.

ತಮ್ಮ ಉದ್ಘಾಟನಾ ಭಾಷಣದಲ್ಲಿ ಶ್ರೀ ಬೇಂದ್ರೆಯವರು ಕಾರ್ತಿಕ ದೀಪೋತ್ಸವದ ಶುಭಸಂದರ್ಭದಲ್ಲಿ ಜ್ಞಾನ ಪ್ರಕಾಶವನ್ನು ಚೆಲ್ಲುವುದಕ್ಕೆ ಶ್ರೀ ಶೆಟ್ಟರು ತೊಡಗಿದ ನೂತನ ಸಾಹಸವನ್ನು ಮನಸಾರೆ ಪ್ರಶಂಸಿಸಿದರು. ಕನ್ನಡ ಭಾಷೆಯಲ್ಲಿ ಬರೆಯಲ್ಪಡುವ ಪುಸ್ತಕಗಳನ್ನು ನಾಡಿನ ಎಲ್ಲ ಭಾಗಗಳ ಜನರೂ ಓದುವುದು ಲಾಭದಾಯಕವೆಂಬ ವಿಚಾರವನ್ನು ಅವರು ವ್ಯಕ್ತಪಡಿಸಿದರು. ಓದುವ ಜನರಲ್ಲಿ ಒಳ್ಳೆಯ ಪುಸ್ತಕಗಳನ್ನೆ ಆರಿಸುವ ಅಭಿರುಚಿ ಬೆಳೆಯಬೇಕೆಂದು ಅವರು ಪ್ರತಿಪಾದಿಸಿದರು. ಉತ್ತಮ ಸಾಹಿತ್ಯ ಪ್ರಕಾಶನ ಕಾರ್ಯಕ್ಕೆ ಪ್ರೋತ್ಸಾಹ ಕೊಡುವಲ್ಲಿ ಜನತೆಯ ಕರ್ತವ್ಯವನ್ನು ಕುರಿತು ಅವರು ಉದ್ಬೋಧಕವಾದ ಮಾತುಗಳನ್ನು ಹೇಳಿ ತಮ್ಮ ಓಜಸ್ವಿ ಭಾಷಣವನ್ನು ಮುಗಿಸಿದರು.

ಅಧ್ಯಕ್ಷರು ಓದುಗರಲ್ಲಿ ವಿಮರ್ಶನ ಬುದ್ಧಿ ಬೆಳೆಯಬೇಕೆಂದು ಹೇಳಿ, ಒಳ್ಳೆಯ ಸಾಹಿತ್ಯ ಕೃತಿಗಳಿಗೆ ಪ್ರೋತ್ಸಾಹ ದೊರಕುವುದರಿಂದ ನಾಡಿನ ನವಜಾಗೃತಿಯಾಗುವುದೆಂದು ನುಡಿದರು. ಧನ್ಯವಾದ ನೀಡಿದ ಬಳಿಕ ಸಮಾರಂಭವು ಮುಕ್ತಾಯವಾಯಿತು. ಪುಸ್ತಕ ಮಾಸದ ಅವಧಿಯಲ್ಲಿ ಆಗಿಂದಾಗ್ಗೆ ಒಳ್ಳೆಯ ಉಪನ್ಯಾಸಗಳನ್ನು ಏರ್ಪಡಿಸಿಯೂ ವ್ಯಾಪಾರಿ ಸವಲತ್ತುಗಳನ್ನು ನೀಡಿಯೂ ಪುಸ್ತಕಗಳ ಬಗ್ಗೆ ಪ್ರೀತಿ ಹೆಚ್ಚುವಂತೆ ಯೋಗ್ಯ ಕಾರ್ಯಕ್ರಮಗಳನ್ನು ಇಟ್ಟುಕೊಂಡಿದ್ದು ಮಹಾಜನರೆಲ್ಲರೂ ಈ ಉದ್ಯಮದಲ್ಲಿ ಸಹಕರಿಸುವರೆಂದು ನಂಬುತ್ತೇವೆ.

ಉಡುಪಿ

ಬೇಂದ್ರೆಯವರ ಉಪನ್ಯಾಸ—ಸ್ಥಳೀಯ ಕರ್ನಾಟಕ ಸಂಘದ ಪರವಾಗಿ ಸಂಸ್ಕೃತ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಭೆಯಲ್ಲಿ ತಾ. 24ರಂದು ಶ್ರೀ ದ. ರಾ. ಬೇಂದ್ರೆಯವರು "ಕನ್ನಡ ಅಷ್ಟಾಂಗ ಸಂಸ್ಕೃತಿ" ಎಂಬ ವಿಷಯದ ಕುರಿತು ಹಾಸ್ಯರಸಪೂರಿತವೂ ಉದ್ಬೋಧಕವೂ ಆದ ಉಪನ್ಯಾಸವನ್ನು ಮಾಡಿದರು. "ಮೇಘದೂತ"ಕ್ಕೆ ತಾವು ಬರೆದ ಪ್ರಸ್ತಾವನೆಯ ಕೆಲವು ಪದ್ಯಗಳನ್ನೂ ಸೊಗಸಾಗಿ ಹಾಡಿದರು. ಪ್ರಾರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಕು. ಶಿ. ಹರಿದಾಸ ಭಟ್ಟರು ಅತಿಥಿಗಳ ಪರಿಚಯದ ಮಾತುಗಳನ್ನಾಡಿದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಟಿ. ಎ. ಪೈಗಳು ಸಂಸ್ಕೃತಿಯ ರಕ್ಷಣೆಗಾಗಿ ಪ್ರಯತ್ನಿಸುವುದು ನಮ್ಮ ಕರ್ತವ್ಯವೆಂದು ಹೇಳಿದರು.

ಶ್ರೀಕೃಷ್ಣ ಮಠದ ವಸಂತ ಮಹಲಿನಲ್ಲಿ ತಾ. 25ರಂದು ಬೇಂದ್ರೆಯವರು ಕುಮಾರವ್ಯಾಸನ ಭಾರತದ ಗದಾಯುದ್ಧದ ವೈಶಿಷ್ಟ್ಯಗಳನ್ನು ವರ್ಣಿಸಿ ಮಾತನಾಡಿದರು. ಸಭಿಕರ ಅಪೇಕ್ಷೆಯಂತೆ ತಮ್ಮ ಕವನ ಸಂಗ್ರಹಗಳಿಂದ ಕೆಲವು ಕವಿತೆಗಳನ್ನು ಸುಶ್ರಾವ್ಯವಾಗಿ ಹಾಡಿದರು. ಪರ್ಯಾಯ ಫಲಿಮಾರು ಮಠಾಧೀಶರು ಉಚಿತ ಉಡುಗೊರೆಯನ್ನಿತ್ತು ಬೇಂದ್ರೆಯವರನ್ನು ಗೌರವಿಸಿದರು

ದುಃಖಪ್ರದರ್ಶನ— ಸ್ಥಳೀಯ ಡಿ! ಮು! ಕೋರ್ಟಿನಲ್ಲಿ ವಕಾಲತು ನಡೆಸುತ್ತಿದ್ದು ಈಚೆಗೆ ಮಂಗಳೂರಲ್ಲಿ ನಿಧನ ಹೊಂದಿದ ಶ್ರೀ ಪಿ. ಫೆರ್ನಾಂಡೀಸರ ನಿಧನದ ಬಗ್ಗೆ ಡಿ! ಮು! ಕೋರ್ಟಿನಲ್ಲಿ ದುಃಖ ಪ್ರದರ್ಶಿಸಲಾಯಿತು. ಬಾರ್ ಎಸೋಸಿಯೇಶನಿನ ಅಧ್ಯಕ್ಷ ಶ್ರೀ ಕೆ. ಜಿ. ಬಲ್ಲಾಳ್, ಶ್ರೀ ಇ. ಗೊನ್ಸಾಲ್ವಿಸ್, ಡಿ! ಮುನ್ಸಿಫ್ ಮತ್ತು ಶ್ರೀ ಯು. ಪದ್ಮನಾಭ, ಎಡಿಶನಲ್ ಡಿ! ಮುನ್ಸಿಫ್, ಮೊದಲಾದವರ ಶೋಕೋಚಿತ ಮಾತುಗಳಾಗಿ ದಿವಂಗತರ ಆತ್ಮ ಶಾಂತಿಗಾಗಿ ಕೆಲವು ನಿಮಿಷಗಳ ತನಕ ಕೋರ್ಟು ಕೆಲಸ ನಿಲ್ಲಿಸಲಾಯಿತು.

ಭಾವಚಿತ್ರ ಅನಾವರಣ—ಕಳೆದ ತಾ. 21ರಲ್ಲು ಇಲ್ಲಿಯ ಬಾರ್ ಎಸೋಸಿಯೇಶನಿನಲ್ಲಿ ಅದರ ಅಧ್ಯಕ್ಷ ಶ್ರೀ ಕೆ. ಜಿ. ಬಲ್ಲಾಳರು ದಿವಂಗತ ಶ್ರೀ ಮಟ್ಟಿ ರಾಮಕೃಷ್ಣರಾಯರ ಭಾವಚಿತ್ರವನ್ನು ಅನಾವರಣ ಮಾಡಿದರು. ಈ ಸಂದರ್ಭದಲ್ಲಿ ಎಡಿಶನಲ್ ಡಿ! ಮುನ್ಸಿಫ್ ಶ್ರೀ ಯು. ಪದ್ಮನಾಭ, ಶ್ರೀಗಳಾದ ಜೆ. ಸಿ ರೇಗೊ, ರಾವ್ ಸಾಹೇಬ್ ಕೃಷ್ಣಯ್ಯ ಮೊದಲಾದವರು ಮಾತನಾಡಿದರು. ಶ್ರೀ ಬಿ ಹಿರಿಯಣ್ಣ ಹೆಗ್ಡೆಯವರು ಧನ್ಯವಾದಗಳ ಸಮರ್ಪಿಸಿದರು.

ಸಂಯುಕ್ತರಾಷ್ಟ್ರ ದಿನಾಚರಣೆಯು—ತಾ. 21ರಲ್ಲು ಮುಕುಂದನಿವಾಸದಲ್ಲಿ ಶ್ರೀ ಟಿ. ಎ ಪೈ, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಎಮ್. ಜಿ. ಎಮ್. ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಕು. ಶಿ. ಹರಿದಾಸ ಭಟ್ಟರ ಭಾಷಣಾನಂತರ ತಹಶೀಲ್ದಾರ್ ಶ್ರೀ ಕೆ. ಲಿಂಗಪ್ಪಯ್ಯನವರು ಧನ್ಯವಾದಗಳನ್ನರ್ಪಿಸಿದರು.

ರೇಡಿಯೋ ಕಾರ್ಯಕ್ರಮ—ಇದೇ ತಾ. 29ನೇ ಶುಕ್ರವಾರ ಸಂಜೆ 5.30ರಿಂದ 6.15ರ ವರೆಗೆ ಮೈಸೂರು ಆಕಾಶವಾಣಿಯಲ್ಲಿ ನಡೆಯುವ ಕವಿ ಸಮ್ಮೇಳನದಲ್ಲಿ ಶ್ರೀ ಕೆ. ಕಿಂಞಣ್ಣ ರೈಗಳು 'ನಾನು ಮಣ್ಣಿನ ಮಗ' ಎಂಬ ಕವನವನ್ನು ಹಾಡಲಿರುವರು.

ಕಿನ್ನಿಕಂಬಳ—ಸ್ಥಳೀಯ ರೋಜಾ ಮಿಸ್ತಿಕಾ ಪ್ರೌಢ ಮತ್ತು ಪ್ರಾಥಮಿಕ ಬುನಾದಿ ಮಹಿಳೆಯರ ತರಬೇತಿ ಶಾಲೆಯ ವರ್ಧಂತಿ ಸಮಾರಂಭವು ತಾ. 24ರಲ್ಲು ಸಂಜೆ ಡಾ! ಟಿ. ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು.

ಪಾಕಿಸ್ತಾನದಲ್ಲಿ ತೀವ್ರ ಬಿಕ್ಕಟ್ಟು

ಗವರ್ನರ ಜನರಲರ ಸಕಾಲಿಕ ಆದೇಶ

ಜನತೆಯ ಗಣನೀಯ ಅಂಶವೊಂದು ರಾಷ್ಟ್ರವನ್ನು ಬಿಕ್ಕಟ್ಟಿನಿಂದ ಉಳಿಸಿರಿಂದು ಆರ್ತನಾದ ಗೈಯುವಷ್ಟು ದೇಶದ ರಾಜಕೀಯ ವಾತಾವರಣವು ಕಲುಷಿತಗೊಂಡರೆ, ಆ ರಾಷ್ಟ್ರದ ಭವಿಷ್ಯವನ್ನು ಕುರಿತು ಯಾವದೇ ಆಶೆಯನ್ನು ಇಟ್ಟುಕೊಳ್ಳುವುದು ಕಷ್ಟ. ನಮ್ಮ ಸಹೋದರ ರಾಷ್ಟ್ರವಾದ ಪಾಕಿಸ್ತಾನವನ್ನು ಇಂಥ ಬಿಕ್ಕಟ್ಟುಗಳು ನುಂಗಲು ಹವಣಿಸಿದ ಸಂದರ್ಭಗಳನ್ನು ನೆನೆದರೆ, ಅಲ್ಲಿ ಯಾವುದೂ ಸ್ಥಿರವಿಲ್ಲವೆಂಬ ಸಂಶಯ ಉಂಟಾಗುತ್ತದೆ. ತನ್ನ ಏಳು ವರ್ಷಗಳಿಗಿಂತಲೂ ಹೆಚ್ಚು ದೀರ್ಘ ಕಾಲದ ಅಸ್ತಿತ್ವದಲ್ಲಿ ಪಾಕಿಸ್ತಾನವು ಅನೇಕ ಗಂಭೀರ ಸ್ವರೂಪದ ಸನ್ನಿವೇಶಗಳಿಗೆ ಎಡೆ ಕೊಟ್ಟಿತು. ರಾಜಕೀಯ ಧುರೀಣರ ಸಂಕುಚಿತ ಮನೋಭಾವ, ಸ್ವಾರ್ಥ ಹಾಗು ಪರಸ್ಪರ ಭಿನ್ನಾಭಿಪ್ರಾಯಗಳ ದೆಸೆಯಿಂದ ರಾಷ್ಟ್ರದ ಪ್ರಗತಿಯು ಬಹಳಷ್ಟು ಕುಂಠಿತವಾಯಿತು. ಈ ವರ್ಷಾಂತ್ಯದೊಳಗೆ ರಾಜ್ಯ ಘಟನೆಯನ್ನು ಜಾರಿಗೆ ತರಬಹುದೆಂದು ಕಳೆದ ತಿಂಗಳು ಮೂಡಿದ್ದ ಆಶೆಯು ಕಳೆದವಾರ ಕನಸಿನ ಮಾತಾದುದನ್ನು ಇದಕ್ಕೆ ಉದಾಹರಿಸ ಬಹುದು.

ಘಟನಾ ಸಮಿತಿಯು ಮೂಲಭೂತ ಹಕ್ಕುಗಳ ಕಲಮನ್ನು ಸ್ವೀಕರಿಸಿದ್ದರಿಂದ ಗೆಲುವುಗೊಂಡ ಪಾಕಿಸ್ತಾನದ ಪ್ರಧಾನ ಮಂತ್ರಿ ಮಹಮ್ಮದಾಲಿಯವರು ಸೈನಿಕ ಸಹಾಯದ ವಿಚಾರದಲ್ಲಿ ಪರ್ಯಾಲೋಚನೆ ನಡೆಸಲು ಸಂತೋಷದಿಂದಲೇ ಅಮೇರಿಕಕ್ಕೆ ಹೊರಟಿದ್ದರು. ಅಲ್ಲಿಂದ ಅವರು ಕೆನಡಕ್ಕೂ ಸಂದರ್ಶನವನ್ನು ಕೊಡುವವರಿದ್ದರು. ಅವರಿ ಈ ಕಾರ್ಯಕ್ರಮವನ್ನು ರದ್ದುಮಾಡಿ, ಅಮೇರಿಕದಿಂದಒಡನೆಯೇ ಕರಾಚಿಗೆ ಹಾರಿಬರಬೇಕಾದ ಪ್ರಸಂಗವು ಬಂದೊದಗಿತು. ಅವರ ಮಂತ್ರಿ ಮಂಡಳದಲ್ಲಿ ತೀವ್ರ ಬಿಕ್ಕಟ್ಟು ಉದ್ಭವಿಸಿದ್ದರಿಂದ ಅವರು ಹೀಗೆ ಅವಸರದಿಂದ ಬರಬೇಕಾಯಿತು. ಮಹಮ್ಮದಾಲಿಯವರು ಈಚೆಗೆ ಕೆಲವು ಕುಹಕ ತಂತ್ರಗಳನ್ನು ನಡೆಸಿದ್ದರು. ಪ್ರೊವಿನ್ಸಿಯಲ್ ಶಾಸನವನ್ನು ರದ್ದು ಮಾಡುವ ಹಾಗು ಗವರ್ನರ ಜನರಲ್ಲರಿಗೆ ಮಂತ್ರಿಮಂಡಲವನ್ನು ಕಿತ್ತೊಗೆಯಲು ಇದ್ದ ಅಧಿಕಾರವನ್ನು ಕಸಿದುಕೊಳ್ಳುವ ಮುಂತಾದ ಕಾಯಿದೆಗಳನ್ನು ಅವರು ತರುವ ವಿಷಯ ಮಂತ್ರಿಮಂಡಳದಲ್ಲಿಯೇ ಕೆಲವು ಸದಸ್ಯರಿಗೆ ತಿಳಿದಿರಲಿಲ್ಲ. ಇದರಿಂದ ಮಂತ್ರಿಮಂಡಳದ ಕೆಲವು ಸದಸ್ಯರು ಮಹಮ್ಮದಾಲಿಯವರ ವಿರುದ್ಧ ನಿಂತರು; ಘಟನಾ ಸಮಿತಿಯಲ್ಲಿ ಮುಸ್ಲಿಂ ಲೀಗನ್ನು ವಿರೋಧಿಸುತ್ತಿದ್ದ ಪಕ್ಷದವರೂ ತಮ್ಮ ಧ್ವನಿಯನ್ನು ಎತ್ತರಿಸಿದರು ಮುಸ್ಲಿಂ ಲೀಗಿನೊಳಗೆಯೇ ಘಟನಾ ಸಮಿತಿಯ ಕೆಲಸದಲ್ಲಿ ಭಿನ್ನಾಭಿಪ್ರಾಯವು ಕಂಡು ಬಂತು.

ಇಂಥ ಪರಿಸ್ಥಿತಿಯಲ್ಲಿ ಗವರ್ನರ ಜನರಲರಾದ ಗುಲಾಂ ಮಹಮ್ಮದರು ಮಹಮ್ಮದಾಲಿಗಳನ್ನು ಬರಮಾಡಿಕೊಂಡು, ಅವರೊಡನೆ ಸಮಾಲೋಚನೆ ನಡೆಸಿ, ಮಂತ್ರಿ ಮಂಡಲವನ್ನು ಪುನರ್ಘಟಿಸಬೇಕೆಂಬ ಆಜ್ಞೆಯನ್ನು ದಿನಾಂಕ ೨೪ರಂದು ಹೊರಡಿಸಿದ್ದಲ್ಲದೆ ಈಗಿನ ಘಟನಾ ಸಮಿತಿಯನ್ನು ವಿಸರ್ಜಿಸಿರುವುದಾಗಿಯೂ ಸಾರಿದರು. ದೇಶದಲ್ಲಿ ಬಲಿಷ್ಠವೂ ಭದ್ರವೂ ಸ್ಥಿರವೂ ಆದ ಸರಕಾರವನ್ನು ಸ್ಥಾಪಿಸುವುದಕ್ಕೆ ಇದು ಅಗತ್ಯವೆಂದು ಅವರು ಅಭಿಪ್ರಾಯ ಪಟ್ಟರು ಮಹಮ್ಮದಾಲಿಯವರು ಇದಕ್ಕೆ ಒಪ್ಪಿಕೊಂಡು ತಾವು ಪ್ರಧಾನ ಮಂತ್ರಿಗಳಾಗಿರುವ ಅಷ್ಟ ಸದಸ್ಯರ ಹೊಸ ಮಂತ್ರಿ ಮಂಡಳವೊಂದನ್ನು ಒಡನೆಯೇ ರಚಿಸಿದರು. ಈ ಮಂತ್ರಿ ಮಂಡಳದ ವಿಷಯದಲ್ಲಿ ಆಶಾದಾಯಕ ಪ್ರತಿಕ್ರಿಯೆಗಳೇನೂ ವ್ಯಕ್ತವಾಗಿಲ್ಲ; ಹಾಗೆಂದು ಘಟನಾ ಸಮಿತಿಯನ್ನು ವಿಸರ್ಜಿಸಿದ ಕುರಿತು ಒಳ್ಳೆಯ ಮಾತುಗಳನ್ನು ಪ್ರತಿ ಪಕ್ಷಗಳು ಹೇಳುತ್ತವೆ. ಹೊಸ ಘಟನಾ ಸಮಿತಿಯ ರಚನೆಯಲ್ಲಿ ವಿಳಂಬವಾದರೂ ಅದು ಜನತೆಯ ನ್ಯಾಯವಾದ ಪ್ರಾತಿನಿಧಿಕ ಸ್ವರೂಪವನ್ನು ಬಿಂಬಿಸಬಹುದೆಂದು ಅವು ಅಭಿಪ್ರಾಯ ಪಡುತ್ತವೆ.

ಪಾಕಿಸ್ತಾನದಲ್ಲಿ ಮುಸ್ಲಿಂ ಲೀಗಿನ ವರ್ಚಸ್ಸು ಬಹಳ ಕುಂದುತ್ತಿದೆಯೆಂದೂ ಪ್ರಾಂತೀಯ ಭಾವನೆಗಳು ಬಹಳ ಬಲಿಯುತ್ತಿವೆಯೆಂದೂ ಮೇಲಿನ ಹಾಗು ಇತರ ಘಟನೆಗಳಿಂದ ಸ್ಪಷ್ಟವಾಗುತ್ತದೆ. ಪೂರ್ವ ಬಂಗಾಲಕ್ಕೆ ಹೆಚ್ಚಿನ ಪ್ರಾತಿನಿಧ್ಯವನ್ನು ತಪ್ಪಿಸುವ ಉದ್ದೇಶದಿಂದ ಪ್ರಾದೇಶಿಕ ವಲಯಗಳ ರಚನೆ ಮಾಡಿ ಸಮಪ್ರಾತಿನಿಧ್ಯವನ್ನು ನೀಡಬೇಕೆಂದು ಪಂಜಾಬಿನ ಧುರೀಣರು ಹೇಳುತ್ತಿದ್ದಾರೆ. ಬಲಿಷ್ಠ ಕೇಂದ್ರ ಸರಕಾರವನ್ನು ರಚಿಸಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸುತ್ತಿದ್ದಂತೆಯೇ ಪ್ರಾಂತಗಳಿಗೆ ಹೆಚ್ಚು ಹೆಚ್ಚು ಅಧಿಕಾರಗಳನ್ನು ಕೊಡಬೇಕೆಂಬ ವಾದವೂ ಮಂಡಿಸಲ್ಪಟ್ಟು ಚಳವಳಿವು ನಡೆಯುತ್ತದೆ. ತಮ್ಮ ಧೋರಣೆಯೊಡನೆ ಭಿನ್ನಾಭಿಪ್ರಾಯವನ್ನು ಹೊಂದಿ, ಮುಸ್ಲಿಂ ಲೀಗಿನಲ್ಲಿ ಒಡಕನ್ನು ಉಂಟು ಮಾಡಿದ ಧುರೀಣರನ್ನು ಹೇಗೆ ಸಂತೈಸಬಹುದೆಂಬುದೂ ಪೂರ್ವ ಬಂಗಾಲದ ಜನರ ಭಾವನೆಗಳೊಡನೆ ಪಶ್ಚಿಮ ಪಾಕಿಸ್ತಾನದ ಪ್ರಜೆಗಳ ವಿಚಾರವನ್ನು ಹೇಗೆ ಮೇಳೈಸಬಹುದೆಂಬುದೂ ಮಹಮ್ಮದಾಲಿಗಳ ಪಾಲಿಗೆ ಅಗ್ನಿಪರೀಕ್ಷೆಯಾಗಿದೆಯೆಂದರೆ ಅತಿಶಯೋಕ್ತಿ ಎನಿಸದು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ನಡೆಯುವ ಚಿತ್ರ:-
ಜೆಮಿನಿಯವರ ಕೀರ್ತಿಜ್ಯೋತಿಯನ್ನು ನಾಡ ನಾದ್ಯಂತ ಬೆಳಗಿಸಿದ
★ ಅವ್ವೈಯ್ಯಾರ್ ★
ಮುಖ್ಯ ಭೂಮಿಕೆಯಲ್ಲಿ: ಗಾನಸರಸ್ವತಿ ಕೆ. ಬಿ. ಸುಂದರಂಬಾಳ್.
ಬರುವ ಚಿತ್ರ:-
ಸೌದಾಮಿನಿ, ಮಿಸ್ಟರ್ ಸಂಪತ್, ಚಂದ್ರಲೇಖಾ

ಎಲ್ಲಾ ತರದ ಮಾಹಿತಿಯನ್ನೊಳಗೊಂಡ ಉತ್ತಮ ತರದ
ಮಗ್ಗಿ ಪುಸ್ತಕಗಳು
ರಖಂ ಆಗಿಯೂ
ಚಿಲ್ಲರೆಯಾಗಿಯೂ ದೊರೆಯುತ್ತವೆ
100 ಯೂ 500ಕ್ಕೆ ಅತೀ ರಿಯಾಯತಿ ಇದೆ.
ಡಿ. ಕೆ. ಭಾರದ್ವಾಜ
ಇಂಗ್ಲಿಷ್ × ಇಂಗ್ಲಿಷ್
ಕನ್ನಡ ಡಿಕ್ಷನರಿ
ಬೆಲೆ: ರೂ. 5—6—0
ಶಿವರಾಮ ಕಾರಂತರ
ಕನ್ನಡ × ಕನ್ನಡ
ಸಿರಿಗನ್ನಡ ಅರ್ಥಕೋಶ
ಬೆಲೆ: ರೂ 4—0—0
ನವಭಾರತ ಬುಕ್ ಡಿಪೊ, ಉಡುಪಿ.

ದ. ಕ. ಜಿಲ್ಲಾ ಬೋರ್ಡು ಚುನಾವಣೆ

ಕಾಂಗ್ರೆಸಿಗೆ ಅಭೂತಪೂರ್ವ ಯಶಸ್ಸು

40 ಸ್ಥಾನಗಳಲ್ಲಿ 31 ಸ್ಥಾನ ಕಾಂಗ್ರೆಸ್.

ಉತ್ತರಾರ್ಧದಲ್ಲಿ

ಉಡುಪಿ ತಾಲೂಕು

ಕೋಟ—ಶ್ರೀ ಬಿ. ಮಂಜಯ್ಯ ಹೆಗ್ಡೆ (ಕಾ) 7417. ಶ್ರೀ ಜನಾರ್ಧನ ಹಂದೆ (ಪ್ರ. ಸೊ.) 6628. ನಿಷ್ಪ್ರಯೋಜಕ ಮತಗಳು 1297.

ಬ್ರಹ್ಮಾವರ—ಶ್ರೀ ಎ. ನಾರಾಯಣ ಹೆಗ್ಡೆ (ಕಾ) 8555. ಶ್ರೀಮತಿ ಬ್ಲಾಂಚ್ ಎನ್. ಪಿಂಟೊ (ಕಾ) 8200. ಶ್ರೀ ಜಗನ್ನಾಥ ಸೆಟ್ಟಿ (ಪ್ರ. ಸೊ.) 1518. ಶ್ರೀಮತಿ ಫ್ಲೋರಾ ಲೂವಿಸ್ (ಪ್ರ. ಸೊ.) 4434. ನಿಷ್ಪ್ರಯೋಜಕ ಮತಗಳು 1314.

ಕೊಡವೂರು—(ಉಡುಪಿ ಹೊರ ವಲಯ) ಶ್ರೀ ಫೆಲಿಕ್ಸ್ ಡಿ'ಸೋಜ (ಕಾ) 5475. ಶ್ರೀ ಕಲ್ಮಾಡಿ ರಾಮರಾವ್ (ಪ್ರ. ಸೊ)2208. ನಿಷ್ಪ್ರಯೋಜಕ ಮತಗಳು 712.

ಹಿರಿಯಡಕ—ಡಾ| ಕೆ ಕೆ. ಹೆಗ್ಡೆ (ಕಾ) 5828. ಶ್ರೀ ಮರ್ಣೆ ಗೋವಿಂದ ಸೆಟ್ಟಿ (ಪ. ಸೊ.) 2956. ನಿಷ್ಪ್ರಯೋಜಕ ಮತಗಳು 820.

ಕಟಪಾಡಿ—ಶ್ರೀ ಕೆ. ಕೆ. ಸೆಟ್ಟಿ (ಕಾ) 5264. ಶ್ರೀ ಪಿ. ಸತ್ಯೇಂದ್ರ ನಾಯಕ್ (ಪ್ರ. ಸೊ.) 3018. ಶ್ರೀ ಪುಂಡಲೀಕ ನಾಯಕ್ (ಸ್ವ) 323. ನಿಷ್ಪ್ರಯೋಜಕ ಮತಗಳು 1898.

ಕುಂದಾಪುರ ತಾಲೂಕು

ವಂಡ್ಸೆ—ಶ್ರೀ ವೈ. ತೇಜಪ್ಪ ಸೆಟ್ಟಿ (ಕಾ) 7502. ಶ್ರೀ ವಿ. ಶ್ರೀನಿವಾಸ ಸೆಟ್ಟಿ (ಪ್ರ. ಸೊ.) 7397. ನಿಷ್ಪ್ರಯೋಜಕ ಮತಗಳು 1321.

ಕುಂದಾಪುರ—ಶ್ರೀ ಎನ್. ಎಸ್. ಪರಮೇಶ್ವರಯ್ಯ (ಕಾ) 6572. ಶ್ರೀಮತಿ ಉಮಾ. ಪಿ. ಕಾಮತ್ (ಕಾ) 6115. ಶ್ರೀ ನರಸಿಂಹ ಸುವರ್ಣ (ಪ್ರ. ಸೊ.) 4433. ಶ್ರೀಮತಿ ಶಾಲಿನಿ ಆರ್. ನಾಯಕ್ (ಪ್ರ. ಸೊ.) 4758. ಶ್ರೀ ಮರಿಯಪ್ಪ ಹೊಳ್ಳ (ಸ್ವ) 642. ಶ್ರೀ ಗೋವಿಂದ 548. ನಿಷ್ಪ್ರಯೋಜಕ ಮತಗಳು 3011.

ಬೈಂದೂರು—ಶ್ರೀ ಆರ್. ಕೆ. ಸಂಜೀವ ರಾವ್ (ಕಾ) 7032. ಶ್ರೀ ಬಿ. ಯೋಗೀಶ್ವರ ಹೊಳ್ಳ (ಪ್ರ. ಸೊ) 4681. ನಿಷ್ಪ್ರಯೋಜಕ ಮತಗಳು 1209.

ಕಾರ್ಕಳ ತಾಲೂಕು

ಮೂಡಬಿದಿರೆ—ಶ್ರೀ ಎಸ್. ಡಿ. ಸಾಮ್ರಾಜ್ಯ (ಕಾ) 8180. ಶ್ರೀ ಕೆ. ಸುಂದರ (ಕಾ. ಹರಿಜನ) 7599. ಶ್ರೀ ಎಮ್. ಧರ್ಮಸಾಮ್ರಾಜ್ಯ (ಪ್ರ. ಸೊ.) 1689. ಶ್ರೀ ಎಮ್. ಮಂಜುನಾಥ (ಪ್ರ. ಸೊ.) 1686. ನಿಷ್ಪ್ರಯೋಜಕ ಮತಗಳು 922.

ವೇಣೂರು—ಶ್ರೀ ಎ. ನಾಗರಾಜ ಹೆಗ್ಡೆ (ಕಾ) 3959. ಶ್ರೀ ಐ. ಶ್ರೀಧರ ಹೆಗ್ಡೆ (ಸ್ವ) 1521. ನಿಷ್ಪ್ರಯೋಜಕ ಮತಗಳು 602.

ಕಾರ್ಕಳ—ಶ್ರೀ ಬಿ. ಎಸ್. ಭಾಸ್ಕರ ರೈ (ಕಾ) 7885. ಶ್ರೀ ಡಿ. ವೆಂಕಟೇಶ ಭಟ್ (ಪ್ರ. ಸೊ.) 6731. ನಿಷ್ಪ್ರಯೋಜಕ ಮತಗಳು 1196.

ಅಜೆಕಾರು—ಡಾ| ಯು. ಕೃಷ್ಣ (ಕಾ) 4840. ಶ್ರೀ ವರ್ಣಪ್ಪ ಅತಿಕಾರಿ (ಪ್ರ. ಸೊ.) 2839. ನಿಷ್ಪ್ರಯೋಜಕ ಮತಗಳು 618.

ದಕ್ಷಿಣಾರ್ಧದಲ್ಲಿ

ಮೂಲ್ಕಿ—ಶ್ರೀ ಬಿ. ಆರ್ ಕರ್ಕೇರ (ಕಾ) 10,019. ಶ್ರೀಮತಿ ಮೇಬೆಲ್ ಬ್ರಿಟೊ (ಕಾ) 9822. ಶ್ರೀ ಬಿ. ರಾಜೀವ ಭಂಡಾರಿ (ಪ್ರ. ಸೊ.) 5609. ಶ್ರೀಮತಿ ಮೂರಿಯಲ್ ಪಿಂಟೊ (ಪ್ರ. ಸೊ.) 5863. ನಿಷ್ಪ್ರಯೋಜಕ ಮತಗಳು 814.

ಉಪ್ಪಿನಂಗಡಿ—ಶ್ರೀ ಕೆ. ವೇಣುಗೋಪಾಲ ನಾಯಕ್ (ಕಾ) 6121. ಶ್ರೀ ಬಿ. ರಾಮ ಭಟ್ (ಪ್ರ. ಸೊ) 3158. ನಿಷ್ಪ್ರಯೋಜಕ ಮತಗಳು 781.

ವಿಟ್ಲ—ಶ್ರೀ ಎ. ಭೀಮ ಭಟ್ (ಕಾ) 10836. ಶ್ರೀ ವಿ. ಸುಬ್ರಾಯ ಭಟ್ (ಪ್ರ. ಸೊ.) 4200. ನಿಷ್ಪ್ರಯೋಜಕ ಮತಗಳು 602.

ಕುಂಬಳೆ—ಶ್ರೀ ಬಿ. ಬಾಲಕೃಷ್ಣ ಅದ್ಯಂತಾಯ (ಕಾ) 10201. ಡಾ| ಕೆ. ಪಿ. ಅಳ್ವ (ಪ್ರ. ಸೊ.) 6457. ನಿಷ್ಪ್ರಯೋಜಕ ಮತಗಳು 974.

ಮಂಜೇಶ್ವರ—ಶ್ರೀ ಟಿ. ನಾರಾಯಣ ಭಟ್ (ಕಾ) 4606. ಡಾ| ಎ. ಸುಬ್ಬರಾವ್ (ಸ್ವ) 3451. ಶ್ರೀ ಯು. ಕೆ. ಅಬ್ದುಲ್ ಖಾದರ್ (ಪ್ರ. ಸೊ.) 2447. ನಿಷ್ಪ್ರಯೋಜಕ ಮತಗಳು 701.

ಪಾಣೆಮಂಗಳೂರು—ಶ್ರೀ ಎನ್. ಉಪೇಂದ್ರ ನಾಯಕ್ (ಕಾ) 8200. ಶ್ರೀ ನರಸಿಂಹ ಹೊಳ್ಳ (ಪ್ರ. ಸೊ.) 3364. ನಿಷ್ಪ್ರಯೋಜಕ ಮತಗಳು 806.

ಮಂಗಳೂರು ಹೊರವಲಯ—ಶ್ರೀ ಎಫ್. ಎಕ್ಸ್. ಡಿ. ಪಿಂಟೊ (ಕಾ) 5679. ಶ್ರೀ ಬಿ. ವಿ. ಕಕ್ಕಿಲ್ಲಾಯ (ಕಮ್ಯೂನಿಸ್ಟ್) 5237. ನಿಷ್ಪ್ರಯೋಜಕ ಮತಗಳು 283.

ಸುರತ್ಕಲ್—ಡಾ| ಎಮ್. ಪುರುಷೋತ್ತಮ ಕಾಮತ್ (ಕಾ) 9492. ಶ್ರೀ ವೈ. ಸುಬ್ಬಯ್ಯ ಹೆಗ್ಡೆ (ಪ್ರ. ಸೊ.) 5183. ನಿಷ್ಪ್ರಯೋಜಕ ಮತಗಳು 808.

ಗುರುಪುರ—ಡಾ| ಕೆ. ನಾಗಪ್ಪ ಆಳ್ವ (ಪ್ರ. ಸೊ.) 6861. ಶ್ರೀ ಪದ್ಮನಾಭ ಆಳ್ವ (ಕಾ) 4867. ನಿಷ್ಪ್ರಯೋಜಕ ಮತಗಳು 793.

ಪುತ್ತೂರು—ಶ್ರೀ ವೈ. ಸಂಜೀವ ಶೆಣೈ (ಕಾ) 7860. ಶ್ರೀಮತಿ ಕಮಲಾಬಾಯಿ (ಕಾ) 8637. ಶ್ರೀ ಪಿ. ಭಾಸ್ಕರ ಪೈ (ಸ್ವ) 2019. ಶ್ರೀಮತಿ ಲೀಲಾ ಕಾರಂತ (ಪ್ರ. ಸೊ.) 2102. ನಿಷ್ಪ್ರಯೋಜಕ ಮತಗಳು 614.

ಕಾಸರಗೋಡು—ಶ್ರೀ ಕೆ. ಗಣೇಶರಾವ್ (ಕಾ) 5482. ಶ್ರೀ ಪಿ. ಅಹಮ್ಮದ್ (ಪ್ರ. ಸೊ.) 2739. ಶ್ರೀ ಎನ್. ಗೋವಿಂದ ನಂಬಿಯಾರ್ (ಸ್ವ) 820. ನಿಷ್ಪ್ರಯೋಜಕ ಮತಗಳು 572.

ಮುಳಿಯಾರು—ಶ್ರೀ ಕೆ. ಎನ್. ಕೃಷ್ಣನ್ ನಂಬಿಯಾರ್ (ಸ್ವ) 6293. ಶ್ರೀ ಪಿ. ಎಚ್. ಕುಂಞು ಕಲಂದರ್ (ಕಾ) 4991. ನಿಷ್ಪ್ರಯೋಜಕ ಮತಗಳು 791.

ಹೊಸದುರ್ಗ—ಶ್ರೀ ಎಚ್. ಕುಂಞಂಬು ನಂಬಿಯಾರ್ (ಪ್ರ. ಸೊ.) 10299. ಶ್ರೀ ಕಲ್ಲಾಲನ್ (ಹರಿಜನ ಸ್ವತಂತ್ರ) 9426. ಶ್ರೀ ಪಿ. ಕೆ. ಮಹಮ್ಮದ್ (ಸ್ವ) ^123. ಶ್ರೀ ಇ. ಎಮ್. ಕುಞರಾಮನ್ (ಹರಿಜನ ಕಾಂಗ್ರೆಸ್) 3632. ಶ್ರೀ ಕುಂಞಂಬು (ಹರಿಜನ ಪ್ರ. ಸೊ.) 7649.

ಬೆಳ್ತಂಗಡಿ—ಡಾ| ಬಿ. ನಾರಾಯಣ ರಾವ್ (ಸ್ವ) 3907. ಶ್ರೀ ಯು. ಜನಾರ್ಧನ ಪ್ರಭು (ಕಾ) 2060. ಶ್ರೀ ಎನ್. ಬಿ. ಪಟ್ವರ್ಧನ್ (ಸ್ವ) 617. ನಿಷ್ಪ್ರಯೋಜಕ ಮತಗಳು 550.

ಬಂಟ್ವಾಳ—ಶ್ರೀ ಏರ್ಯ ಲಕ್ಷ್ಮೀನಾರಾಯಣ ಆಳ್ವ (ಕಾ) 5185 ಶ್ರೀ ಶಾಂತಿರಾಜ ಪೂವಣಿ (ಸ್ವ) 3248. ನಿಷ್ಪ್ರಯೋಜಕ ಮತಗಳು 496.

ಕೋಟೆಕಾರು—ಶ್ರೀ ಎ. ಕೃಷ್ಣ ಶೆಟ್ಟಿ (ಕಮ್ಯೂನಿಸ್ಟ್) 5639. ಶ್ರೀ ಯು. ವೆಂಕಟ್ರಾಯ ಹೆಡೆ (ಕಾ) 5339. ನಿಷ್ಪ್ರಯೋಜಕ ಮತಗಳು 390.

ಚೆರ್ವತ್ತೂರು—ಶ್ರೀ ಎನ್. ಗಣಪತಿ ಕಾಮತ್ (ಕಮ್ಯೂನಿಸ್ಟ್) 12177. ಶ್ರೀ ಕೃಷ್ಣನ್ (ಸ್ವತಂತ್ರ ಹರಿಜನ) 12238. ಕ್ಯಾಪ್ಟನ್ ಕೆ. ಪಿ. ಉದಯವರ್ಮ ರಾಜ (ಸ್ವತಂತ್ರ) 10590. ಶ್ರೀ ದಾಮೋದರನ್ (ಸ್ವತಂತ್ರ) 5835. ನಿಷ್ಪ್ರಯೋಜಕ ಮತಗಳು 1251.

ಸೆಕೆಂಡರಿ ಶಾಲೆಗಳೂ ಜಿಲ್ಲಾ ಲೈಬ್ರರಿಗಳೂ

'ನವಯುಗ'ವನ್ನು ತರಿಸಿಕೊಳ್ಳುವಂತೆ ಮಂಜೂರಾಗಿದೆ.

ಸೆಕೆಂಡರಿ ಶಾಲೆಗಳ ಉಪಯೋಗಾರ್ಥವಾಗಿ ಮದ್ರಾಸಿನ ವಿದ್ಯಾಂಗದ ಡೈರೆಕ್ಟರರೂ, ಜಿಲ್ಲೆಯ ಲೈಬ್ರರಿಗಳ ಉಪಯೋಗಾರ್ಥವಾಗಿ ದ. ಕ. ಜಿಲ್ಲಾ ಲೋಕಲ್ ಲೈಬ್ರರಿ ಅಥೋರಿಟಿ ಕಮಿಟಿಯವರೂ 'ನವಯುಗ' ವಾರಪತ್ರಿಕೆಯನ್ನು ಮಂಜೂರು ಮಾಡಿರುತ್ತಾರೆ.

1921ರಲ್ಲಿ ಆರೋಗ್ಯಮಂತ್ರಿ, ಶ್ರೀ ಎ. ಬಿ. ಶೆಟ್ಟರಿಂದ ಸ್ಥಾಪಿಸಲ್ಪಟ್ಟು ಅವಿರತವಾಗಿ ಜನಸೇವೆ ಮಾಡುತ್ತಿರುವ ರಾಷ್ಟ್ರೀಯ ವಾರಪತ್ರಿಕೆ 'ನವಯುಗ'ಕ್ಕೆ ಎಲ್ಲಾ ಸೆಕೆಂಡರಿ ಶಾಲೆಗಳೂ, ಜಿಲ್ಲೆಯ ಎಲ್ಲಾ ಲೈಬ್ರರಿಗಳೂ, ಚಂದಾದಾರರಾಗಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೆನೇಜರ್,

ವಾರ್ಷಿಕ ಚಂದಾ ರೂ 5-12-0 ಮಾತ್ರ. ನವಯುಗ, ಉಡುಪಿ.

ಅಸಾಧಾರಣ ವಾಗ್ಮಿಗಳೂ ಗ್ರಂಥಕರ್ತರೂ ಆದ

ಶ್ರೀ. ಎ. ಎಸ್. ಪಂಚಪಕೇಶ ಐಯ್ಯರ್, ಎಂ. ಎ., ಐ. ಸಿ. ಎಸ್., ಬಾರ್. ಎಟ್ ಲಾ, ಎಫ್. ಎಸ್. ಎಲ್. ಅವರು ಬರೆದ Tales of Ind ಎಂಬ ಕಥಾವಳಿಯ ಅನುವಾದ

ಭಾರತೀಯ ಕತೆಗಳು

ಅನುವಾದಕರು—ಶ್ರೀ. ಕೋಡ್ಗಲ್ ಶ್ರೀನಿವಾಸ ರಾವ್.

ಪ್ರತಿಯೊಬ್ಬನಿಗೂ ತನ್ನ ಸಾಮಾಜಿಕ ಹಾಗೂ ವ್ಯಾವಹಾರಿಕವಾದ ಮಾತುಗಾರಿಕೆಯು ಸ್ವಾರಸ್ಯವಾಗಿ, ಪರಿಣಾಮಕಾರಿಯಾಗಬೇಕೆಂಬ ಹಿರಿಯಾಶೆ ಇದ್ದೇ ಇದೆ. ಇದು ಸಿದ್ಧಿಸಬೇಕಾದರೆ ಮಾತಿನ ನಡುನಡುವೆ ಸಂದರ್ಭೋಚಿತವಾದ ಉಪಮೆ, ಗಾದೆ, ಕಥೆ ದೃಷ್ಟಾಂತ ಇತ್ಯಾದಿಗಳು ಬರಬೇಕು. ಅಂತಹ ಅಮೂಲ್ಯ ಭಂಡಾಗಾರವೇ ಈ ಭಾರತೀಯ ಕತೆಗಳು.

ಎಲ್ಲರೂ ಅವಶ್ಯವಾಗಿ ಓದತಕ್ಕ ಅಪೂರ್ವ ಗ್ರಂಥ

151 ಕತೆಗಳು ಬೆಲೆ ರೂ 1-12-0

ನವಭಾರತ ಪುಸ್ತಕ ಭಂಡಾರ, ಉಡುಪಿ.

ಜಿಲ್ಲಾ ಕಲೆಕ್ಟರರ ಪ್ರಕಟಣೆ

ಕೈಮಗ್ಗದಿಂದ ತಯಾರಿಸಿದ ವಸ್ತ್ರ ಹೆಚ್ಚಾಗಿ ಮಾರಾಟ ಆಗಬೇಕೆಂಬ ಇರಾದೆಯಿಂದ ಸರ್ಕಾರದವರೇ ಇಷ್ಟರ ವರೆಗೆ ಕೊ-ಆಪರೇಟಿವ್ ಸೊಸೈಟಿ ಮೂಲಕ ಮಾರಾಟ ಮಾಡಿಸಿ ವಿಕ್ರಿತದ ಮೇಲೆ ರಿಬೇಟು ಗಿರಾಕಿಗಳಿಗೆ ಕೊಟ್ಟ ಹಾಗೆ ಕೊಟ್ಟು ರಿಬೇಟು (ಕಡಿತ) ಹಣವನ್ನು ಸೊಸೈಟಿಗಳಿಗೆ ಸರಕಾರದವರು ತುಂಬಿಸುವ ಕ್ರಮ ಜ್ಯಾರಿಯಲ್ಲಿರುತ್ತದೆ.

ಈ ರಿಯಾಯಿತಿಯ ಕ್ರಮ ಸೇಲ್‌ಟೇಕ್ಸ್ ಕೊಡುವ ಖಾಸಗಿ ವ್ಯಾಪಾರಸ್ಥರ ಮೂಲಕವೂ ಜಾರಿಗೆ ತರಬೇಕೆಂದು ಸರ್ಕಾರದವರು ಹುಕುಂ ಕೊಟ್ಟಿದ್ದಾರೆ. ಈ ರಿಯಾಯಿತಿಯಿಂದ ಪ್ರಕೃತ 1955ನೇ ಮಾರ್ಚಿಯ ವರೆಗೆ ಜಾರಿಯಲ್ಲಿರುವುದು. ತತ್ಸಂಬಂಧ ಜಿಲ್ಲೆಯ ಮುಖ್ಯ ಮುಖ್ಯ ಕೇಂದ್ರಗಳಲ್ಲಿ ಮಾನ್ಯ ಜಿಲ್ಲಾ ಕಲೆಕ್ಟರರಿಂದ ಆರಿಸಲ್ಪಟ್ಟ ಯೋಗ್ಯ ವ್ಯಾಪಾರಿಗಳಿಗೆ 'ಫೇರ್ ಪ್ರೈಸ್ ಶಾಪು' ತೆರೆಯಲು ಹುಕುಂ ಕೊಡಲಾಗುವುದು. ಈಗ ಇರುವ ವಸ್ತ್ರದ ಅಂಗಡಿಗಳಲ್ಲಿಯೇ ಪ್ರತ್ಯೇಕವಾಗಿ ಕೈವಸ್ತ್ರ ಇಟ್ಟು ಮಾರಾಟ ಮಾಡಬಹುದು. ರೂ. 5ರಿಂದ 50ರ ವರೆಗೆ ಒಬ್ಬ ಗಿರಾಕಿಗೆ ದಿನ ಒಂದರ ಮಾರಾಟವಾದ ಹಣದ ಮೇಲೆ ರೂಪಾಯಿಗೆ ಒಂದಾಣೆಯಂತೆ ಕಡಿತಕೊಟ್ಟು ಹಾಗೆ ಕಡಿತ ಕೊಟ್ಟ ಹಣ ಫೇರ್ ಪ್ರೈಸ್ ಶಾಪಿನವರು ಕಲೆಕ್ಟರರಿಂದ ತಿಂಗಳಿಗೊಮ್ಮೆ ಪಡೆಯತಕ್ಕದ್ದು.

ಫೇರ್ ಪ್ರೈಸ್ ಶಾಪು ತೆರೆಯಲು ಬ್ಯಾಸು ಉಳ್ಳವರು ಅರ್ಜಿ ನಾಮೂನೆ ತಹಸಿಲ್ದಾರರ ಯಾ ಕಲೆಕ್ಟರ ಆಫೀಸು ಟೆಕ್ಸ್‌ಟೈಲ್ ಸೆಕ್ಷನಿನಿಂದ ಪಡೆದು ಕಲೆಕ್ಟರರಿಗೆ ಬರೆಕೊಳ್ಳತಕ್ಕದ್ದು. ಕಲೆಕ್ಟರರಿಂದ ನೇಮಕ ಪಟ್ಟ ಖಾಸಗಿ ವ್ಯಾಪಾರಿಗಳು ಕಲೆಕ್ಟರರು ವಿಧಿಸಿದ ಶರ್ತ, ಲೆಖ್ಖಪತ್ರ ಇಡುವದು ವಗೈರೆಗಳಿಗೆ ಅನುಭಂದಿತರಾಗಿರಬೇಕು.

ಕುಂದಾಪುರ—ಉಡುಪಿ ತಾಲೂಕಿನಲ್ಲಿ ಬೆಲ್ಲ ತಯಾರಿಕೆ ಮತ್ತು ನೀರಾ ಅಂಗಡಿಗಳನ್ನು ತೆರೆಯುವ ವಿಚಾರದಲ್ಲಿ ಮದ್ರಾಸು ಸರಕಾರದ ಸಂಬಂಧಪಟ್ಟ ಅಧಿಕಾರಿಗಳು ಶ್ರೀ ಎಸ್. ಎಸ್ ಕೊಳ್ಕೆಬೈಲ್, ಎಮ್. ಎಲ್. ಎ. ಅವರಿಗೆ ಬರೆದ ಪತ್ರದ ಸಾರಾಂಶ ಹೀಗಿದೆ. "ಉಡುಪಿ ತಾಲೂಕಿನಲ್ಲಿ ಬೆಲ್ಲ ತಯಾರಿಕೆಗೆ ಮರಗಳನ್ನು ಮೂರ್ತೆ ಮಾಡಲು ಅನುಮತಿಯಿರುವುದು. ಆದರೆ ಮೂರ್ತೆ ಮಾಡಲು ಕೇಳಲಾಗುವ ಕೇಂದ್ರಗಳನ್ನು ಪ್ರೊಹಿಬಿಶನ್ ಅಧಿಕಾರಿಗಳು ಆಕಸ್ಮಿಕ ಸಂದರ್ಶಿಸಲು ಅನುಕೂಲವಿರಬೇಕು. ಪಾನನಿರೋಧ ಪ್ರಕ್ಷೇತ್ರಗಳಿಗೆ ಅಸ್ಪದವಿಲ್ಲದ ಸ್ಥಗಳನ್ನು ಹೆಚ್ಚಾಗಿ ಶಿಫಾರಸು ಮಾಡಲಾಗುವುದು

ಪಡುಬಿದ್ರೆ, ಬಾರ್ಕೂರು, ಮಣೂರು, ಕೋಟಿ, ಬ್ರಹ್ಮಾವರ, ಮೂಡುತೋನ್ಸೆ, ಪಡುತೋನ್ಸೆ, ಉದ್ಯಾವರ, ಉಡುಪಿ, ಸಾಲಿಗ್ರಾಮ, ಸಾಸ್ತಾನ್ ಗ್ರಾಮಗಳಲ್ಲಿ ನೀರಾ ಅಂಗಡಿಗಳನ್ನು ತೆರೆಯಲು ಅನುಮತಿ ಕೊಡಲಾಗಿದೆ"

ಚಂದಾಹಣ ಬಾಕಿ ಇರುವವರು ದಯಮಾಡಿ ಕಳುಹಿಸಿಕೊಡಿರಿ.

ಮಂಗಳೂರು

ಬಹುಮಾನ ವಿತರಣೆ— ಸ್ಥಳೀಯ ಸೈಂಟ್ ಎಲೋಸಿಯಸ್ ಕಾಲೇಜಿನ ವಾರ್ಷಿಕ ಬಹುಮಾನ ವಿತರಣಾ ಸಮಾರಂಭವು ತಾ. 16ರಲ್ಲು ಮದ್ರಾಸು ಸರಕಾರದ ರೆವಿನ್ಯೂ ಇಲಾಖೆಯ ಕಾರ್ಯದರ್ಶಿ ಶ್ರೀ ಎಸ್. ಕೆ. ಚೆಟ್ಟೂರ್, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ವಿದ್ಯಾರ್ಥಿ ಸಂಘದ ಅಧ್ಯಕ್ಷ ಶ್ರೀ ಪಿ. ಸಿ. ಭರತನ್ ಅವರು ಅತಿಥಿಗಳಿಗೆ ಪುಷ್ಪಹಾರವನ್ನರ್ಪಿಸಿದರು. ಕಾಲೇಜಿನ ರೆಕ್ಟರ್ ಹಾಗೂ ಪ್ರಿನ್ಸಿಪಾಲರಾದ ರೆ! ಫಾ! ಇ. ಜೆ. ಜೇಕಬ್ಸ್, ಎಸ್. ಜೆ. ಅವರು ವರದಿಯನ್ನೋದಿದರು. ಅಧ್ಯಕ್ಷರು ಬಹುಮಾನ ವಿತರಣೆಮಾಡಿ ಕೆಲವು ಹಿತೋಕ್ತಿಗಳನ್ನಾಡುತ್ತಾ ವಿದ್ಯಾರ್ಥಿಗಳು ಹಾಗೂ ಯುವಕರು ತಮ್ಮ ಜವಾಬ್ದಾರಿಯನ್ನರಿತುಕೊಂಡು ಸರಕಾರದೊಡನೆ ಸಹಕರಿಸಬೇಕೆಂದರು. ಬಳಿಕ ವಿನೋದಾವಳಿಗಳಾದುವು. ಅದೇ ದಿನ ಜರುಗಿದ ರೆಕ್ಟರರ ದಿನಾಚರಣೆಯಲ್ಲಿ ಕಾಲೇಜಿನ ಉಪಾಧ್ಯಾಯರೂ ವಿದ್ಯಾರ್ಥಿಗಳೂ ರೆಕ್ಟರರನ್ನು ಅಭಿನಂದಿಸಿದರು.

ಅಮೇರಿಕದ ಹಡಗಿನ ಆಗಮನ. ಮಂಗಳೂರು ಬಂದರದಲ್ಲಿ ತಾ. 17ರಲ್ಲು ಅಮೇರಿಕದ ಪ್ರೆಸಿಡೆಂಟ್ ಲೈನ್ಸ್ ಸಂಸ್ಥೆಯ "ಎಸ್. ಎಸ್. ಬಕಾನನ್" ಎಂಬ ದೊಡ್ಡ ಹಡಗು ಗೇರುಬೀಜ ಮೊದಲಾದ ರಫ್ತುಗಳನ್ನು ಕೊಂಡೊಯ್ಯಲು ಬಂದು ತಂಗಿತು. ಇಂತಹ ಸಣ್ಣ ಬಂದರಕ್ಕೆ ದೊಡ್ಡ ಹಡಗವು ಬಂದು ಹೋಗುವ ಹೊಸ ದಾಖಲೆಯು ಇದೇ ಪ್ರಥಮವಾಗಿದೆ. ಈ ಸಂದರ್ಭದಲ್ಲಿ ಪೋರ್ಟ ಆಫೀಸಿನಲ್ಲಿ ಈ ಕಂಪೆನಿಯ ಸ್ಥಳೀಯ ಏಜನ್ಸಿ ಸಂಸ್ಥೆಯೊಂದರ ಉದ್ಘಾಟನೆಯನ್ನು ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆಯವರು ನೆರವೇರಿಸಿದರು. ಈ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಮಿಜಾರು ಗೋವಿಂದ ಪೈಗಳು ಸ್ವಾಗತ ಮಾತುಗಳನ್ನಾಡುತ್ತಾ ಈ ಹಡಗದ ಆಗಮನದಿಂದ ಜಿಲ್ಲೆಯಿಂದ ರಫ್ತಾಗುವ ಸರಕುಗಳನ್ನು ನೇರವಾ ಪರದೇಶಗಳಿಗೆ ಒಯ್ಯುವ ಏರ್ಪಾಡು ಮಾಡಿದಂತಾಗಿದೆ, ಎಂದು ಹೇಳಿದರು. ಶ್ರೀಗಳಾದ ವಿ ಎಸ್. ಕುಡ್ವ, ಕೆ. ಸೂರ್ಯನಾರಾಯಣ ಅಡಿಗ ಮತ್ತು ಬಿ. ವೈಕುಂಠ ಬಾಳಿಗಾ, ಎಮ್. ಎಲ್. ಎ. ಅವರು ಮಾತನಾಡುತ್ತಾ ಈ ಹೊಸ ವ್ಯವಸ್ಥೆಯಿಂದಾಗಿ ಬಂದರದ ಬೆಳವಣಿಗೆಗೆ ತುಂಬಾ ಸಹಾಯವಾಗುವುದೆಂದೂ ಹಾಸನ— ಮಂಗಳೂರು ರೈಲು ದಾರಿಯನ್ನು ನಿರ್ಮಾಣದ ಆವಶ್ಯಕತೆಯು ಇನ್ನಷ್ಟು ಹೆಚ್ಚಲಿರುವುದಾಗಿಯೂ ಹೇಳಿದರು.

ಯುದ್ಧ ನೌಕೆಯು—250 ನೌಕಾ ಸಿಬಂಧಿಯನ್ನೊಳಗೊಂಡ ಇಂಗ್ಲೆಂಡಿನ ಯುದ್ಧ ನೌಕೆಯೊಂದು ಮಂಗಳೂರು ಬಂದರದಲ್ಲಿ ತಂಗಿತು. ಮಂಗಳೂರಿನ ಕ್ರಿಕೆಟ್, ಹಾಕ್ಕಿ ಮತ್ತು ಫೂಟ್‌ಬಾಲ್ ಟೀಮುಗಳೊಡನೆ ನೌಕಾ ಸಿಬಂಧಿಯವರು ಕುಶಲ ಪಂದ್ಯಾಟವಾಡಿದರು.

ಕುಮಾರವ್ಯಾಸ ಜಯಂತಿ— ಮಂಗಳೂರು ಸರಕಾರಿ ಕಾಲೇಜಿನ ಕರ್ನಾಟಕ ಸಂಘದ ಆಶ್ರಯದಲ್ಲಿ ತಾ. 22ರಲ್ಲು ಸಂಜೆ ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಕುಮಾರವ್ಯಾಸ ಜಯಂತಿಯು ಆಚರಿಸಲ್ಪಟ್ಟಿತು. ಪ್ರಾರ್ಥನಾನಂತರ ಕುಮಾರಿ ವಿಮಲಾ ಅವರು ಸ್ವಾಗತ ಮಾತುಗಳನ್ನಾಡಿದರು. ಕಾಲೇಜಿನ ಕನ್ನಡ ಉಪನ್ಯಾಸಕರಾದ ಶ್ರೀ ಕೆ. ಕೃಷ್ಣ ಶೆಟ್ಟರು ಇಂದಿನ ಸಭೆಗೆ ಆಗಮಿಸಿದ ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ದ. ರಾ. ಬೇಂದ್ರೆಯವರ ಪರಿಚಯ ಮಾತುಗಳನ್ನಾಡಿದರು. ಶ್ರೀ ಶ್ರೀನಿವಾಸ ಉಡುಪರು ಕುಮಾರವ್ಯಾಸ ಭಾರತದ ನಾಂದಿ ಪದ್ಯಗಳನ್ನೋದಿದರು. ಶ್ರೀ ಬೇಂದ್ರೆಯವರು ಕುಮಾರವ್ಯಾಸನ ಕುರಿತು ಮಾತಾಡುತ್ತಾ ಆತನು 1432—88ರ ಕಾಲದಲ್ಲಿ ಭಾರತವನ್ನು ರಚಿಸಿರಬೇಕು, ವ್ಯಾಸಭಾರತ, ಪಂಪಭಾರತಗಳಲ್ಲಿ ಇಲ್ಲದ ಹಲವು ವೈಶಿಷ್ಟ್ಯಗಳನ್ನು ನಾವು ಕುಮಾರವ್ಯಾಸನ ಭಾರತದಲ್ಲಿ ಕಾಣಬಹುದು. ಆತನು ತನ್ನ ಗ್ರಂಥವೆಲ್ಲವೂ ಈಶ ನಿಯಂತ್ರಿತ ಎಂದಿದ್ದಾನೆ ಎಂದು ಮೊದಲಾಗಿ ಉಪನ್ಯಾಸವಿತ್ತರು.

ಪೋರ್ಟ ಟ್ರಸ್ಟಿನ ಉಪಾಧ್ಯಕ್ಷರ ಆಯ್ಕೆ - ಮಂಗಳೂರಿನ ಪೋರ್ಟ ಟ್ರಸ್ಟಿನ ಉಪಾಧ್ಯಕ್ಷ ಸ್ಥಾನಕ್ಕೆ ತಾ. 22ರಲ್ಲು ಎಕ್ಸ್ ಒಫಿಶಿಯೋ ಅಧ್ಯಕ್ಷರಾದ ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆಯವರ ಅಧ್ಯಕ್ಷತೆಯಲ್ಲಿ ಚುನಾವಣೆ ನಡೆದು ಶ್ರೀ ಗಜಾನನ ರಾವ್ ಪಂಡಿತರು 7 ಮತಗಳನ್ನು ಪಡೆದು ಉಪಾಧ್ಯಕ್ಷರಾಗಿ ಆರಿಸಿ ಬಂದರು. ಇವರ ಪ್ರತಿಸ್ಪರ್ಧಿ ಶ್ರೀ ವಿ. ಎಸ್. ಕುಡ್ವರಿಗೆ 6 ಮತಗಳು ದೊರೆತಿದ್ದುವು.

ನೆರೆಪೀಡಿತರಿಗೆ ಸಹಾಯ— ಆಸ್ಸಾಮ್, ಬಿಹಾರ್ ಮತ್ತು ಬಂಗಾಳದ ನೆರೆಪೀಡಿತರಿಗೆ ಸೈಂಟ್ ಜೊಸೆಫ್ಸ್ ಹೈಸ್ಕೂಲ್, ಬಜ್ಪೆ; ಅಲ್ಲಿಯ ವಿದ್ಯಾರ್ಥಿಗಳಿಂದ ಶಾಲಾ ಮುಖ್ಯೋಪಾಧ್ಯಾಯರ ಮೂಲಕ ರೂ. 100 - ಮತ್ತು ಸರಕಾರಿ ಬುನಾದಿ ಶಿಕ್ಷಣ ಶಾಲೆ, ಮಾಯಿಪಾಡಿ, ಅಲ್ಲಿಯ ವಿದ್ಯಾರ್ಥಿಗಳಿಂದ ಹೆಡ್ಮಾಸ್ತರರ ಮುಖೇನ ರೂ.6-2-0 ಸಹಾಯ ದೊರೆತಿದೆ. ಈ ತನಕ ಒಟ್ಟು ರೂಪಾಯಿ 962—15—7 ಜಮೆಯಾಗಿರುವುದು ಮುಂದೆಯೂ ಸಹಾಯ ಮಾಡಲಪೇಕ್ಷಿಸುವವರು, ಕಾರ್ಯದರ್ಶಿ ಮಂಗಳೂರು ಸರ್ಕಲ್ ಕಾಂಗ್ರೆಸ್ ಕಮಿಟಿ, ಬಾವಟೆಗುಡ್ಡೆ, ಮಂಗಳೂರು—1, ಈ ವಿಳಾಸಕ್ಕೆ ಕಳುಹಿಸಬಹುದು.

ಯುಕ್ತ ರಾಷ್ಟ್ರ ದಿನಾಚರಣೆಯು. ಮಂಗಳೂರಲ್ಲಿ ತಾ. 24ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ವಿ. ಸೀತಾರಾಮ ಸೇರ್ವೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಬಿ. ಬಿ. ಶೆಟ್ಟಿ, ಶ್ರೀಮತಿ ಮಾರ್ಗರೆಟ್ ನೊರೋನ್ಹಾ ಮೊದಲಾದವರು ಯುಕ್ತರಾಷ್ಟ್ರ ದಿನಾಚರಣೆಯ ಮಹತ್ವ ಇತ್ಯಾದಿಗಳ ಕುರಿತು ಮಾತನಾಡಿದರು.

ಕವಿತಾ ವಾಚನ— ಸ್ಥಳೀಯ ವಸಂತ ಮಾಲಿಕೆ, ವಸಂತಪ್ರಿಯ ಮಂಡಲದ ನೇತೃತ್ವದಲ್ಲಿ ತಾ. 23ರಲ್ಲು ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಕವಿ. ದ. ರಾ. ಬೇಂದ್ರೆಯವರು ಭಾವಗೀತೆಗಳ ಕುರಿತಾಗಿ ಭಾಷಣವಿತ್ತರು. ಬಳಿಕ ತಮ್ಮ ಕವಿತೆಗಳನ್ನು ಸುರಸವಾಗಿ ವಾಚಿಸಿದರು. ಶ್ರೀ ಶ್ರೀನಿವಾಸ ಉಡುಪರು ವಂದನೆಗಳನ್ನರ್ಪಿಸಿದರು.

ಭಾರತೀಯ ಜನಸಂಘದ— ಸಭೆಯು ತಾ. 24ರಲ್ಲು ಶ್ರೀ ಎಸ್. ನಾಗರಾಜಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು. ಭಾರತದಲ್ಲಿರುವ ಫ್ರೆಂಚ್ ವಸಾಹತುಗಳ ವಿಲಯನವನ್ನು ಸ್ವಾಗತಿಸುವ, ಗೋವಾ ವಿಮೋಚನಾ ಚಳವಳಿಗೆ ಬೆಂಬಲ ಸೂಚಿಸುವ ಮತ್ತು ಸತ್ಯಾಗ್ರಹಿಗಳ ಮೇಲೆ ಸರಕಾರವು ನಡೆಸಿದ ಅತ್ಯಾಚಾರಗಳನ್ನು ಖಂಡಿಸುವ ನಿರ್ಣಯಗಳಾದುವು. ಧನ್ಯವಾದಾರ್ಪಣೆಯೊಂದಿಗೆ ಸಭೆಯು ಕೊನೆಗೊಂಡಿತು.

ಅಜೆಕಾರು ಫಿರ್ಕಾದ ಮತದಾರರಿಗೆ ಅಭಿವಂದನೆ.

ತಾರೀಕು 17-10-54ರಂದು ನಡೆದ ಡಿ. ಬೋರ್ಡು ಚುನಾವಣೆಯಲ್ಲಿ ನಾನು ಪ್ರಚಂಡ ಬಹುಮತ ಪಡೆದು ಆರಿಸಿ ಬರುವಂತೆ ಮಾಡಿದ ಎಲ್ಲ ಮತದಾರರಿಗೂ ನಾನು ನನ್ನ ಹೃತ್ಪೂರ್ವಕ ವಂದನೆಗಳನ್ನು ಈ ಮೂಲಕ ಅರ್ಪಿಸುತ್ತೇನೆ.

ಡಾ. ಯು. ಕೃಷ್ಣ,
ಮುನಿಯಾಲು.

In the Court of I Additional Subordinate Judge of South Kanara.

O. S. No. 98/1954.

Between:—
Parvathi & others ... Plaintiffs.
and
Kunhanna Rai & others .. Defendants.

To
Defendants

13) Kariyappu, s/o Seethu Hengsu, residing at Ariyadka Village, Puttur Taluk.

31) Narayana, s/o Appechu. residing at Nettanige Mudnur village, Puttur Taluk.

Please take notice that plaintiffs have filed the above suit for partition of the family immoveable properties under the Aliyasanthana Act and for possession and accounts of mesne profits and the same is posted to 19—11—1954. You are warned to appear on the said date at 11 A. M. and file objections if any. In default the suit will be proceeded with declaring you exparte.

(By order of the Court)

B. P. Holla,
Advocate for Plaintiffs.

Mangalore, 21-10-1954.

ಸಿಹಿಮೂತ್ರ ರೋಗ ನಿವಾರಣೆ.
(DIABETES)
ಏಳು ದಿನಗಳಲ್ಲಿ ಗುಣವಾಗುತ್ತದೆ

ಮೂತ್ರದಲ್ಲಿ ಸಕ್ಕರೆ ಹೆಚ್ಚು ಹೋಗುವ ಬಕ್ಕೆ ಸಿಹಿಮೂತ್ರ ರೋಗ (Diabetes) ಎಂದು ಕರೆಯುತ್ತಾರೆ. ಎಂಥ ಭಯಂಕರ ರೋಗವೆಂದರೆ, ಇದಕ್ಕೆ ಇದು ಬಲಿಯಾದ ರೋಗಿಯು ದಿನದಿನಕ್ಕೆ ಸಾವಿನತ್ತ ಸಾಗುತ್ತಿರುತ್ತಾನೆ. ಇದರ ಚಿಕಿತ್ಸೆಗೆ ಡಾಕ್ಟರು ಇಂಜಕ್ಷನ್ ಕಂಡುಹಿಡಿದಿದ್ದಾರೆ. ಆದರೆ ಇದರಿಂದ ರೋಗ ಸಂಪೂರ್ಣವಾಗಿ ವಾಸಿಯಾಗುವುದಿಲ್ಲ. ಇಂಜಕ್ಷನ್ನಿನ ಪರಿಣಾಮ ಇರುವವರೆಗೆ ಸಕ್ಕರೆ ಅಂಶ ಸ್ವಲ್ಪ ಕಡಿಮೆಯಾಗುತ್ತದೆಯಷ್ಟೆ.

ಈ ದಾರುಣ ವ್ಯಾಧಿಯ ಮುಖ್ಯ ಲಕ್ಷಣಗಳಾವುವೆಂದರೆ ಹಸಿವು ನೀರಡಿಕೆ ಅತಿ ಹೆಚ್ಚಾಗುವುದು, ಮೂತ್ರದಲ್ಲಿ ಹೆಚ್ಚು ಸಕ್ಕರೆ ಹೋಗುವಿಕೆ ಮತ್ತು ನವೆಯಾಗುವುದು ಇತ್ಯಾದಿ.

ಈ ವ್ಯಾಧಿ ಉಲ್ಬಣಾವಸ್ಥೆಗೆ ಹೋದಾಗ ಹುಣ್ಣು, ಗುಳ್ಳೆ, ಕಣ್ಣಿನಲ್ಲಿ ಪೊರೆ ಮತ್ತು ಇತರ ತೊಡಕುಗಳು.

ವೀನಸ್ ಚಾರ್ಮ್ ಆಧುನಿಕ ಕಾಲದ ವೈದ್ಯಕೀಯ ಪವಾಡ ಇದರಿಂದ ಸಾವಿರಾರು ಜನರು ಮೃತ್ಯುವಿನ ದವಡೆಯಿಂದ ಪಾರಾಗಿದ್ದಾರೆ, "ವೀನಸ್ ಚಾರ್ಮ್" ಸೇವನೆಯಿಂದ ಎರಡನೆ ಅಥವಾ ಮೂರನೆಯ ದಿನದಿಂದ ಮೂತ್ರದಲ್ಲಿ ಸಕ್ಕರೆ ಹೋಗುವಿಕೆ ಕಡಿಮೆ ಆಗುವುದು. ಹೆಚ್ಚು ಸಲ ಮೂತ್ರಕ್ಕೆ ಹೋಗುವುದು ಕಡಿಮೆಯಾಗುತ್ತದೆ. ನಾಲ್ಕನೆಯ ದಿನದಿಂದ ನೀವು ಅರ್ಧ ಗುಣವಾಯಿತೆಂದು ಭಾವಿಸುವಿರಿ. ನೀವು ಯಾವ ಪಥ್ಯಗಳನ್ನು ಮಾಡಬೇಕಾಗಿಲ್ಲ. ವಿವರಣಾತ್ಮಕ ಕೈಪಿಡಿಗೆ ಬರೆಯಿರಿ. 50 ಮಾತ್ರೆಗಳ ಒಂದು ಶೀಸೆಗೆ, ರೂಪಾಯಿ 6-12-0. ಪ್ಯಾಕಿಂಗ ಮತ್ತು ಅಂಚೆ ವೆಚ್ಚ ಉಚಿತ.

Venus Research Laboratory (N. W.)
Post Box No. 587, CALCUTTA.

ದರ ಇಳಿಸಲಾಗಿದೆ-
ಗೀತೆಯ ಕೈಗನ್ನಡಿ
ಹೊಸಕೆರೆ ಚಿದಂಬರಯ್ಯನವರ
ಸರಳ ಕನ್ನಡ ಅರ್ಥಸಹಿತವಾದ
ಭಗವದ್ಗೀತೆ
ಬೆಲೆ: 0-8-0
ಕೋರ್ಟ ಮತ್ತು ಸೊಸೈಟೀ
ಫೋರ್ಮುಗಳೂ ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

NAVAYUGA WEEKLY
* * * * *
ADVERTISEMENT RATES
Display Advertisements:— Rs. 2/-8 per column inch for contracts of 50" or more and Rs. 3/- per column inch for casual advertisements.
Classified Advertisements:— As. 8/- per line (minimum 8 lines).
For rates for advertising in colours and special positions, please write to:
ADVERTISEMENT MANAGER,
'NAVAYUGA'
Post Box No. 22, UDIPI, S. K.

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
25 ವರುಷಗಳ ಅನುಭವ ಪರಿಶ್ರಮದಿಂದ ಬರೆದಿರುವ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

[ENGLISH MADE EASY]
ಯನ್ನು ಇಂದೇ ತರಿಸಿಕೊಳ್ಳಿರಿ
ಬೆಲೆ:- ಸಾಧಾರಣ ಪ್ರತಿ ರೂ. ೧-೮-೦ (ಟಪ್ಪಾಲು ಖರ್ಚು ಬೇರೆ),
ಉತ್ತಮ ಪ್ರತಿ - ರೂ. ೨—೦—೦. (ಟಪ್ಪಾಲು ಖರ್ಚು ಬೇರೆ)
ದೊರಕುವ ಸ್ಥಳಗಳು:-1) ನವಭಾರತ ಪುಸ್ತಕ ಭಂಡಾರ, ಉಡುಪಿ.
2) ನವಯುಗ ಪ್ರೆಸ್, ಉಡುಪಿ, ದ. ಕ.

ಹೇಗೋ ಸಾಗುತ್ತಿದ್ದ ಗೃಹಜೀವನದಲ್ಲಿ ಹೇಮಲತೆಯೇ ಈ ಬಿರುಗಾಳಿಯ ಬೀಜಾರೋಪಣವನ್ನು ಮಾಡಿದಳು. ಪ್ರತಿ ದಿನ ಅವಳು ಒಂದೊಂದು ಲೋಟ ಹಾಲನ್ನು ಹೆಚ್ಚಾಗಿ ಕೊಂಡುಕೊಳ್ಳ ತೊಡಗಿದಳು. ದಿನಾಲೂ ಒಂದೂವರೆ ಲೋಟದಷ್ಟು ಹಾಲನ್ನು ಅವಳು ಯಾವಾಗಲೂ ಖರೀದಿ ಮಾಡುತ್ತಿದ್ದಳು: ಅದನ್ನು ತನ್ನ ಒಂದೂವರೆ ವರ್ಷದ ಮಗು ಕುಸುಮಳಿಗೆ ಕುಡಿಸುತ್ತಿದ್ದಳು. ಈಗ ತನ್ನ ಪತಿಯ ಪ್ರೀತಿಗೋಸ್ಕರ ಇನ್ನೊಂದು ಲೋಟ ಹಾಲನ್ನು ಹೆಚ್ಚಾಗಿ ತರುವಂತೆ ಹಾಲಿನಾಕೆಗೆ ಹೇಳಿದಳು.

ಅವಳ ಗಂಡ ಮೋಹನನಿಗೆ ಹಾಲಿನ ಪುಡಿಯ ಚಾವನ್ನು ಕುಡಿದು ಕುಡಿದು ಸಾಕಾಯಿತು. ಅವನೊಂದು ದಿನ ಹಾಲಿನಾಕೆ ಹಾಲನ್ನು ಕೊಟ್ಟು ಹೋದ ಬಳಿಕ ಹೇಮಲತೆಯನ್ನು ಕರೆದು ಲೋಟದಲ್ಲಿ ಹಾಲನ್ನೆ ತುಂಬಿ ತರುವಂತೆ ಹೇಳಿದ. "ಅದರೆ, ನೀವು ಏನು ಹೇಳುತ್ತೀರಿ! ಹಾಲನ್ನು ಎಲ್ಲಿಂದ ತರಲಿ? ತೆಗೆದುಕೊಂಡ ಒಂದೂವರೆ ಲೋಟಹಾಲು ಮಗುವಿಗೇ ಸಾಕಾಗುವುದಿಲ್ಲ ಇನ್ನು ನಿಮ್ಮ ಚಾವನ್ನು ಹಾಲಿನಿಂದ ತಯಾರಿಸುವುದು ಹೇಗೆ?" ಎಂದು ಅವಳು ಗಂಡನನ್ನು ಸಮಾಧಾನಪಡಿಸಲು ನೋಡಿದಳು. "ಸರಿ. ಸರಿ...ಆಯಿತು..."ಎಂದವನು ಅಪರಾಧಿಯಂತೆ ಹೇಳಿ, ಸುಮ್ಮನಾದ.

ಆದರೆ ಮುಂದಿನೆರಡು ದಿನಗಳಲ್ಲಿ ಹೇಮಲತೆಗೆ ತನ್ನ ಗಂಡ ಇನ್ನೂ ಅಸಂತುಷ್ಟನಿದ್ದಾನೆಂದು ಮನವರಿಕೆಯಾಯಿತು. ಅವನು ಪರಿಶ್ರಮ ಪೂರ್ವಕ ಕೆಲಸವನ್ನು ಮಾಡುತ್ತಿದ್ದ. ರಾತ್ರಿ ತಡವಾಗಿ ಮನೆಗೆ ಬಂದು, ತಡವಾಗಿಯೇ ಮಲಗುತ್ತಿದ್ದ. ವಿಶೇಷ ಆಯಾಸದ ಅನುಭವವಾಗುತ್ತಿದ್ದರೂ ಅದನ್ನುಲೆಕ್ಕಿಸದೆ ವಿನೋದನ ಕೆಲವು ಮಾತುಗಳನ್ನೂ ಆಡುತ್ತಿದ್ದ. ಅವನ ಶರೀರ ದುರ್ಬಲವಾಗುತ್ತಾ ಹೋಗುತ್ತಿದೆ; ಹಾಲಿನ ಪುಡಿಯ ಚಾವನ್ನು ಕುಡಿದು ನಾಲಿಗೆಯ ರುಚಿಯೂ ಕೆಡುತ್ತಿದೆ. ಅವನು ಎಲ್ಲಿಯಾದರೂ ಹಾಸಿಗೆ ಹಿಡಿದರೆ.... ಹೇಮಲತೆ ಭಯದಿಂದ ಕಂಪಿಸಿದಳು.

ಮೂರನೆಯ ದಿನ ಬೆಳಿಗ್ಗೆ ಅವಳು ಕೈಯಲ್ಲಿದ್ದ ಲೋಟವನ್ನು ಎಂದಿನಂತೆ ಹಿಡಿದುಕೊಂಡು ಪತಿಯೆಡೆಗೆ ಬಂದಳು. ಮೋಹನನು ಸ್ನೇಹ ದೃಷ್ಟಿಯಿಂದ ಬಗ್ಗಿನೋಡಿದ ಅದರಲ್ಲಿ ಹಾಲು ತುಂಬಿತ್ತು. "ಇದೇನು, ನನಗಾಗಿ ಕುಸುಮಳಹಾಲಿಗೆ ಚಕ್ರ ಹಾಕಿದ್ದೀಯೊ?'' ಎಂದವನು ವಿಸ್ಮಯದಿಂದ ಪ್ರಶ್ನಿಸಿದ. "ಇಲ್ಲ, ಇದನ್ನು ನಿಮಗಾಗಿ ತರಿಸಿದ್ದೇನೆ. ಮಗುವಿನ ಹಾಲನ್ನು ನಿಮಗೆ ಹೇಗೆ ಕುಡಿಯಗೊಡಲಿ? ನೀವೂ ದುರ್ಬಲರಾಗಿದ್ದೀರಿ; ಒಂದೆರಡುವಾರ ಹಾಲನ್ನೇ ಕುಡಿಯಿರಿ" ಎಂದು ಹೇಮಲತೆ ಪ್ರೀತಿಯಿಂದ ಒತ್ತಾಯಿಸಿದಳು.

ಮೋಹನನ ಕಣ್ಣಿನಲ್ಲಿ ಹೇಮಲತೆಯ ಮುಖದಲ್ಲಿ ಮೂಡಿದ ದೀಪ್ತಿಯ ಹೊಳಪು ಪ್ರತಿಫಲನಗೊಂಡಿತು. ಹತ್ತು ವರ್ಷಕ್ಕೆ ಹಿಂದೆ ತನ್ನ ಹೃದಯ ಸಿಂಹಾಸನವನ್ನು ಏರಿಕುಳಿತ ಮುಗುದೆ ಹೇಮಲತೆಯ ಚಿತ್ರ ಅವನ ಕಣ್ಣುಗಳಲ್ಲಿ ಹೊಳೆಯತೊಡಗಿತು. ನವ ವಧುವಿನ ಸರ್ವ ಅಲಂಕಾರ ಯುಕ್ತಳಾಗಿ, ಲಜ್ಜೆಯಿಂದ ಮುಖ ತಗ್ಗಿಸಿ, ಕಣ್ಣಂಚಿನಿಂದ ಕುಡಿ ಮಿಂಚನ್ನು ಬೀರುತ್ತಾ ತನ್ನನ್ನು ಸೆಳೆದ ಕಾಮಿನಿಯ ನೆನಪಾಯಿತು. ಈಗ ಹೇಮಲತೆ ಎರಡು ಮಕ್ಕಳ ತಾಯಿ—ಆದರೂ ಅವಳಿಗೆ ತನ್ನ ಪತಿಯ ಮೇಲೆ ಪ್ರೀತಿ ಕುಂದಿರಲಿಲ್ಲ. ಮೋಹನನಿಗೆ ತುಂಬ ಸಂತೋಷವಾಯಿತು. ಆದರೆ ಆದರೊಂದಿಗೆ ತನ್ನ ಹಾಲಿನ ದೆಸೆಯಿಂದ ಖರ್ಚು ಹೆಚ್ಚುವುದಿಲ್ಲವೇ ಎಂಬ ವಿಚಾರವೂ ಬಂತು.

"ನೀವೇನೂ ಯೋಚಿಸಬೇಡಿ; ಸಂಪಾದನೆ ಮಾಡುವವರು ನೀವೇ ಅಲ್ಲವೆ?" ಎಂದು ಹೇಮಲತೆ ಗಂಡನ ಸಂಶಯವನ್ನು ನಿವಾರಿಸಿದಳು. ಇದರಿಂದ ಸಂತುಷ್ಟನಾಗಿ ಮೋಹನ ಹಾಲಿನ ಲೋಟವನ್ನು ತುಟಿಗೆ ತಗುಲಿಸುವಷ್ಟರಲ್ಲಿ ಮಗ ವಿನೋದನ "ಲಯನ್, ಲಯನ್ಸ್ ... ಫಾಕ್ಸ್, ಫಾಕ್ಸಸ್"...ಎಂದು ಮುಂತಾದ ಉರುಹಾಕುವ ಮಾತುಗಳು ಕೇಳಿಸಿದವು. ಅವನು ಅಲ್ಲಿಯೇ ಹೊರ ಜಗಲಿಯಲ್ಲಿ ಕುಳಿತು ಬಾಗಿಲಿನೆಡೆಯಿಂದ ತಂದೆ ಹಾಲು ಕುಡಿಯುವುದನ್ನೆ ಓರೆಗಣ್ಣಿನಿಂದ ನೋಡುತ್ತಿದ್ದ.

ಬಂಗಾಲೀ ಕತೆ—

ಒಂದು ಲೋಟ ಹಾಲು

"ಬಾ, ಇಲ್ಲಿ, ನೀನೂ ಒಂದಿಷ್ಟು ಹಾಲಿನ ರುಚಿನೋಡು" ಎಂದು ಮೋಹನ ಮಗನನ್ನು ಕರೆದ. "ಬೇಡ...ನೀವೇ ಕುಡಿಯಿರಿ" ಎಂದವನು ತನ್ನ ಮನಸ್ಸನ್ನು ನಿಗ್ರಹಿಸಿ ಹೇಳಿದ; ಮತ್ತು "ಲಯನ್, ಲಯನ್ಸ್...ಫಾಕ್ಸ್, ಫಾಕ್ಸಸ್" ಎಂದು ಓದಲು ಸುರುಮಾಡಿದ. ದ್ವಂದ್ವದಲ್ಲಿ ಬಿದ್ದ ಮೋಹನನನ್ನು ಹೇಮಲತೆಯೇ ಪಾರುಮಾಡಬೇಕಾಯಿತು. "ಚಿಂತಿಲ್ಲ, ನೀವೀಗ ಕುಡಿಯಿರಿ. ವಿನೋದ ಮುಂದೆಂದಾದರೂ ಹಾಲು ಕುಡಿದಾನು. ಅವನ ಪರೀಕ್ಷೆ ಹತ್ತಿರ ಬರುವಾಗ ನಾನೇ ಕುಡಿಸುತ್ತೇನೆ" ಎಂದಳು. "ಬೇಡ, ಬೇಡ...ನನಗಾಗಿ ಹಾಲು ತರಿಸುವುದೇ ಬೇಡ...ಡಾಗ್, ಬಿಚ್...ಡಾಗ್, ಬಿಚ್" ಎಂದು ವಿನೋದ ಇದನ್ನು ಕೇಳಿ ಹೊರಗಿನಿಂದಲೇ ಹೇಳಿದ.

ಅಷ್ಟರಲ್ಲಿ "ಅತ್ತಿಗೆ, ನೀವೆಲ್ಲ ಚಾ ಕುಡಿದಾಯಿತೇನು?" ಎಂದು ಮೋಹನನ ತಮ್ಮ ಶೇಖರ ಕೇಳುತ್ತಾ ಅಲ್ಲಿಗೆ ಬರುತ್ತಿರುವುದು ತೋರಿತು. ಇವನು ಬಿ. ಎ. ಪದವೀಧರ. ಆದರೆ, ಕೆಲಸಕ್ಕಾಗಿ ಅಲೆದೂ ಅಲೆದೂ ಸಾಕಾಗಿ, ಈಗ ಒಂದು ತರದ ವಿರಕ್ತಿಯನ್ನೆ ತೋರಿಸುತ್ತಿದ್ದ. ಅಣ್ಣನೊಡನೆ ಇರುತ್ತಿದ್ದ ಅವನಿಗೆ ಬೇಸರ ಕಳೆಯಲು ವಿನೋದನಾಡುವುದು ಅಭ್ಯಾಸವಾಗಿದ್ದಿತು. ಹೇಮಲತೆಯೊಡನೆ ಅವನು ಬಿಚ್ಚು ಮನಸ್ಸಿನಿಂದ ನಡೆದುಕೊಳ್ಳುತ್ತಿದ್ದ. ಅವಳು ಅವನಿಗೆ ಹೇಳಿದಳು. "ಇನ್ನೂ ಕುಡಿದಿಲ್ಲ ಶೇಖರ. ನಿನ್ನನ್ನು ಬಿಟ್ಟು ನಾವೆಂದಾದರೂ ಚಾ ಕುಡಿದದ್ದು ಉಂಟೇನು?"

"ಹಾಗಾದರೆ ಅಣ್ಣ ಕಾಲಿ ಲೋಟವನ್ನೆ ಬಾಯಿಗಿಟ್ಟುಕೊಂಡಿದ್ದಾರೇನು?" ಎಂದವನು ನಸುನಕ್ಕ. ಮೋಹನ ಮತ್ತು ಹೇಮಲತೆ ಒಬ್ಬರಿನ್ನೊಬ್ಬರನ್ನು ನೋಡಿ, ಕಣ್ಣಿನಿಂದಲೇ ಮಾತಾಡಿಕೊಂಡರು. ಶೇಖರ ತಮ್ಮ ಪರಿಹಾಸ್ಯವನ್ನು ಮಾಡುತ್ತಿಲ್ಲವಷ್ಟೆ ಎಂದವರು ತಮ್ಮಲ್ಲೇ ಹೇಳಿಕೊಂಡರು. ಕೊನೆಗೆ ನಿರುಪಾಯನಾಗಿ "ಶೇಖರ, ಇದು ಹಾಲು. ನನಗಾಗಿ ನಿನ್ನ ಅತ್ತಿಗೆ ಒಂದು ಲೋಟ ತರಿಸಿದಳು'' ಎಂದು ಸಂಕೋಚದಿಂದ ಮೋಹನ ಹೇಳಿದ

ಓಹೋ, ಹೀಗೋ! ನೀವು ಅಣ್ಣನಿಗೆ ಕದ್ದು ಮುಚ್ಚಿ ಹಾಲು ಕುಡಿಸುತ್ತೀರೋ, ಅತ್ತಿಗೆ!''

"ಇದನ್ನು ಕೇಳಿ ಮೋಹನನ ಮುಖ ಗಂಟಿಕ್ಕಿತು. ಅವನು ನಾಚಿಕೊಂಡ; ಉತ್ತರಾರ್ಧದಲ್ಲಿ ಎಲ್ಲಿಲ್ಲದ ಗಾಂಭೀರ್ಯವನ್ನು ತಂದುಕೊಂಡು "ನಾಳೆಯಿಂದ ಇವನಿಗೂ ಒಂದು ಲೋಟ ಹಾಲು ತರಿಸಿಬಿಡು" ಎಂದು ಹೇಮಲತೆಗೆ ಅಪ್ಪಣೆ ಮಾಡಿದ. ಅವಳ ಮುಖವೂ ಕೆಂಪಗಾಯಿತು "ಹೂಂ" ಎಂದಿಷ್ಟೇ ಹೇಳಿದಳು. ಅಣ್ಣ—ಅತ್ತಿಗೆ ಇಬ್ಬರೂ ತನ್ನ ಮಾತಿನಿಂದ ನೊಂದುಕೊಂಡರೆಂದು ಶೇಖರನಿಗೆ ಹೊಳೆಯಿತು—"ಇದೇನು ಮಾತು! ನಾನು ವಿನೋದಕ್ಕಾಗಿ ಹೇಳಿದುದರಿಂದ ನೀವೇಕೆ ಕಂಗೆಡುತ್ತೀರಿ? ನನಗೆ ಹಾಲಿನ ಪುಡಿಯ ಚಾ ಹಿಡಿಸಿದಷ್ಟು ಬೇರಾವುದೂ ಸೇರುವುದಿಲ್ಲ" ಎಂದವನು ಅಲ್ಲಿಂದ ಕಾಲ್ತೆಗೆದ.

ಮರುದಿನ ಹೇಮಲತೆ ಗಂಡನಿಗಾಗಿ ಲೋಟದಲ್ಲಿ ಹಾಲು ತುಂಬಿಸಿ ತರುವಾಗ ಒಳ್ಳೆಯ ಜಾಗ್ರತೆಯನ್ನು ವಹಿಸಿದಳು. ಮೋಹನ ಒಂದು ಮೂಲೆ ಹೋಗಿ ನಿಧಾನವಾಗಿ ಹಾಲನ್ನು ಕುಡಿಯ ತೊಡಗಿದ. ಆಗ ಅವನಿಗೆ ಮಗ ವಿನೋದ ಸ್ವಾಸ್ಥ್ಯರಕ್ಷಣೆಯ ಕುರಿತು ಪಾಠ ಓದುತ್ತಿರುವುದು ಕೇಳಿಸಿತು. "ಹಾಲು ಆರೋಗ್ಯಕ್ಕೆ ಬಹಳ ಒಳ್ಳೆಯದು; ದಿನಾಲು ಹಾಲನ್ನು ಕುಡಿಯುವ ಅಭ್ಯಾಸ ಮಾಡಬೇಕು" ಎಂದವನು ಓದುತ್ತಿದ್ದ. ಮಗನು ತಂದೆಯ ಮನಸ್ಸಿಗೆ ನಾಟಲೆಂದು ಈ ಪಾಠವನ್ನು ಓದುತ್ತಿದ್ದನೋ ಯಾರು ಬಲ್ಲರು?

ಕ್ರಮೇಣ ಹಾಲು ಕುಡಿಯುವುದು ಮೋಹನನಿಗೆ ಅಭ್ಯಾಸವಾಯಿತು. ಒಂದೆರಡು ವಾರಗಳ ಮಟ್ಟಿಗೆಂದು ಹೇಮಲತೆ ತೊಡಗಿದ ಈ ಅಭ್ಯಾಸ ಒಂದು ತಿಂಗಳಾದರೂ ನಿಲ್ಲಲಿಲ್ಲ. ಹಾಲಿನಾಕೆ ಏಳೂವರೆ ರೂಪಾಯಿಯನ್ನು ಹೆಚ್ಚಾಗಿ ಕೇಳಿದಾಗ, ಹೇಮಲತೆ ಕಕ್ಕಾಬಿಕ್ಕಿಯಾದಳು. "ನಿನ್ನ ರೂಪಾಯಿ ನಾಲ್ಕು ದಿನ ತಡೆದು ಕೊಡುತ್ತೇನೆ; ಆದರೆ ನಾಳೆಯಿಂದ ಹೆಚ್ಚಿಗೆ ಒಂದು ಲೋಟ ಹಾಲು ತರುವುದನ್ನು ನಿಲ್ಲಿಸಿಬಿಡು" ಎಂದವಳು ಹೇಳದೆ ಉಪಾಯವಿರಲಿಲ್ಲ.

ಕೋಣೆಯಲ್ಲಿ ಕುಳಿತಿದ್ದ ಮೋಹನನಿಗೆ ಹೆಂಡತಿಯ ಮಾತು ಕೇಳಿಸಿತು. ಅವನು ಹೊರಗೆ ಬಂದು "ಹಾಲನ್ನೇನು ನಿಲ್ಲಿಸುವುದು ಬೇಡ" ಎಂದು ಹಾಲಿನವಳನ್ನು ಕಳಿಸಿದ. ಹೇಮಲತೆ ಕೋಪಗೊಂಡಳು "ಇದೇನು ಹೇಳುತ್ತೀರಿ, ರೂಪಾಯಿ ಎಲ್ಲಿಂದ ಬರುವುದು?" ಎಂದಳು. ಮೋಹನನಿಗೆ ರೇಗಿಹೋಯಿತು—"ನೀನು ರೂಪಾಯಿ ಸಂಪಾದಿಸುತ್ತೀಯಾ? ಇಲ್ಲ—ಮತ್ತೆ..ನಿನಗೇಕೆ ಅದರ ಉಸಾಬರಿ? ದಿನದ ಇಪ್ಪತ್ತನಾಲ್ಕು ತಾಸು ಮೈಮುರಿದು ಕೆಲಸ ಮಾಡುತ್ತೇನೆ; ಒಂದು ಲೋಟ ಹಾಲು ಕುಡಿಯಲೂ ಅಧಿಕಾರವಿಲ್ಲವೆ?" ಎಂದು ಆರ್ಭಟಿಸಿದ.

ಹಗಲಿಡೀ ವಿಷಣ್ಣ ವದನಳಾಗಿ ಕುಳಿತ ಹೇಮಲತೆಯನ್ನು ರಾತ್ರಿ ಮನೆಗೆ ಬಂದ ಮೋಹನ ಬಳಿ ಕರೆದು "ನೋಡು, ನಾನು ಬೆಳಗಿನ ಹಾಲನ್ನು ರಾತ್ರಿಯೇ ಕುಡಿಯುತ್ತೇನೆ. ತುಂಬ ಹಸಿವಾಗಿರುತ್ತದೆ; ಹಾಲಿನೊಟ್ಟಿಗೆ ರೊಟ್ಟಿ ತಿಂದರೆ ಕ್ಷೇಮವಾದೀತು" ಎಂದು ಹೇಳಿದ. "ಹೂಂ" ಎಂದಳು ಹೇಮಲತೆ. ಆದರೆ ಮರುದಿನ ರೊಟ್ಟಿಯೊಂದಿಗೆ ಹಾಲು ಬರಲಿಲ್ಲ. "ಏನಾಯಿತು?" ಎಂದು ಮೋಹನ ಉದ್ವಿಗ್ನತೆಯಿಂದ ಕೇಳಿದ. "ವಿನೋದನಿಗೆ ಕುಡಿಸಿದೆ; ಇವತ್ತು ಮೀನು ಸಿಗಲಿಲ್ಲ ಆದುದರಿಂದ ಊಟ ಮಾಡಲಿಕ್ಕೆ ಕೇಳಲಿಲ್ಲ... ಕೊನೆಗೆ ಹಾಲನ್ನ ಉಣಿಸಬೇಕಾಯಿತು. ಬಹಳ ದಿನದಿಂದ ಹಾಲಿಗಾಗಿ ಹಠಮಾಡುತ್ತಿದ್ದ." ಎಂದಳು.

ಕೆಲವು ದಿನಗಳಲ್ಲಿ ಇನ್ನೊಮ್ಮೆ ಹಾಲು ಕುಡಿಯುವುದು ತಪ್ಪಿಹೋಯಿತು. ಗಂಡ ಸಿಡುಕು ಮಾಡುವ ಮೊದಲೇ ಹೇಮಲತೆ "ಇವತ್ತು ನಿಮ್ಮ ಹಾಲನ್ನು ಶೇಖರನಿಗೆ ಕುಡಿಯಗೊಟ್ಟಿದ್ದೇನೆ. ಅವನ ಆರೋಗ್ಯ ಚೆನ್ನಾಗಿರಲಿಲ್ಲ. ಕೆಲಸಕ್ಕಾಗಿ ಅಲೆದು ಸಾಕಾಗಿ ಮನೆಗೆ ಮರಳಿದ. ಕೆಂಡದಂತೆ ತಲೆಕಾಯುತ್ತಿದ್ದುದರಿಂದ ಊಟವನ್ನೆ ಮಾಡಲಿಲ್ಲ" ಎಂದು ವರದಿಯೊಪ್ಪಿಸಿದಳು. "ಆಯಿತು, ಅವನೊಬ್ಬ ಅಕರ್ಮಣ್ಯ! ನಾನು ತರಿಸಿ ಕೊಟ್ಟ ಸಿಫಾರಸು ಪತ್ರಗಳ ಉಪಯೋಗವನ್ನೂ ಮಾಡುವುದಾಗಲಿಲ್ಲ. ಕೇಳಿದರೆ 'ಕೆಲಸ ಕಾಲಿಬಿಟ್ಟಿಲ್ಲ.' ಎಂದು ಉತ್ತರ ಬರುವುದಂತೆ. ಇವನಿಗೆಂದೂ ಕೆಲಸ ಕಾಲಿ ಬೀಳಲಿಕ್ಕಿಲ್ಲ." ಎಂದು ಮುಂತಾಗಿ ಮೋಹನನೇನೊ ಬಡಬಡಿಸಿ, ಊಟದ ಶಾಸ್ತ್ರ ಮಾಡಿ ಎದ್ದು ಕೈತೊಳೆದುಕೊಂಡ.

ಮತ್ತೆ ಕೆಲವು ದಿನ ಏನೂ ವಿಶೇಷ ಗದ್ದಲವಿಲ್ಲದೆ ಹೋಯಿತು. ಮುಂದೆ ಒಮ್ಮೆ ಹೇಮಲತೆ ಹೆದರಿ ಹೆದರಿ ಹೇಳಿದಳು—"ಈಗೀಗ ವಿನೋದ ತುಂಟತನ ತೋರಿಸುತ್ತಿದ್ದಾನೆ—ಅವನು ಮೆಲ್ಲನೆ ಅಡುಗೆ ಮನೆಯನ್ನು ಹೊಕ್ಕು ಹಾಲಿನ ಪಾತ್ರೆಯನ್ನು ತೆಗೆದು ಕುಡಿದು ಬಿಡುತ್ತಾನೆ. ಇವನ ದೆಸೆಯಿಂದ ಹಾಲೇ ಉಳಿಯುವುದಿಲ್ಲ."

"ಹೂಂ"

"ಇವತ್ತು ಅವನಿಗೆ ಬೆತ್ತದ ಏಟಿನ ರುಚಿ ಹಿಡಿಸಿದ್ದೇನೆ. ಮುಂದೆಂದೂ ಹೀಗೆ ಮಾಡಲಿಕ್ಕಿಲ್ಲ."

"ಇಷ್ಟು ಸಣ್ಣ ಪ್ರಾಯದಲ್ಲಿಯೇ ಕಳ್ಳತನದ ಅಭ್ಯಾಸ! ಛಿ:, ಛಿ:"

ಪುನ: ಒಂದು ದಿನ ಹಾಲು ಕುಡಿಯಲು ದೊರಕಲಿಲ್ಲ. "ಏನು, ವಿನೋದ ಇವತ್ತು ಕದ್ದು ಕುಡಿದನೇನು?" ಎಂದು ಮೋಹನ ಕೇಳಿದ.

"ಇಲ್ಲ, ಇವತ್ತು ಆ ಕಾಳ ಬೆಕ್ಕು ಬಂದು ಕುಡಿದು ಹೋಯಿತು."

"ಏನು ಹೇಳುತ್ತಿ, ಹೇಮಾ? ನಿನಗೆ ಇಷ್ಟು ಪ್ರಾಯವಾಯಿತು, ಬೆಕ್ಕು ಹಾಲು ಕುಡಿಯದಂತೆ ಪಾತ್ರೆಯನ್ನು ಮುಚ್ಚಬೇಕೆಂದೂ ತಿಳಿಯದೆ? ಒಂದು ಲೋಟಿಗೆ ನಾಲ್ಕಾಣೆ ಬೀಳುತ್ತದೆ...ನಿನಗೆ ದುಡ್ಡು ಸಂಪಾದನೆಯ ಕಷ್ಟವೇನು ಗೊತ್ತು?"

"ನಾನು ಹಣ ಸಂಪಾದಿಸುವುದಿಲ್ಲ ನಿಜ. ಆದರೆ ಹಾಲಿನ ಬೆಲೆಯನ್ನು ಅರಿತಿದ್ದೇನೆ. ಬೆಕ್ಕು ಹಾಲನ್ನು ಕುಡಿಯಲಿಲ್ಲ: ನಾನೇ ಕುಡಿದಿದ್ದೇನೆ"

"ಸೋತು ಸುಣ್ಣವಾದ ನನ್ನೊಡನೆ ನಿನಗೆ ಪರಿಹಾಸ್ಯವೇ, ಹೇಮಾ?"

ಹೇಮಲತೆ ಸುಮ್ಮಗಾದಳು. ಈಗ ಕೆಲವು ದಿನಗಳಿಂದ ಅವಳು ನಿಶ್ಶಕ್ತಿಯಿಂದ ಬಳಲುತ್ತಿದ್ದಳು ಬಾಯಿಯ ರುಚಿಯೂ ಕೆಟ್ಟುಹೋಗಿತ್ತು. ಹಸಿವೆಯಾಗುತ್ತಿದ್ದರೂ ಬಾಯಿಗೇನೂ ಇಡುವಂತಿರಲಿಲ್ಲ. ನೆರೆಮನೆಯವಳು ಹಾಲಿನೊಂದಿಗೆ ಅನ್ನ ಉಂಡರೆ ಆದೀತೆಂದು ಹೇಳಿದಳು. ಅಂತೆಯೇ ಮೋಹನನ ಹಾಲು ಅವಳ ಹೊಟ್ಟೆಯನ್ನು ಸೇರಿತು. ನಿಜವಾದ ಈ ಸಂಗತಿಯನ್ನು ಕೇಳಿದರೂ ಮೋಹನನಿಗೆ ನಂಬಿಕೆಯಾಗಲಿಲ್ಲ. ಅವನು ಉರಿದುರಿದು "ಹಾಗೆ ಹೇಳು, ನಿನಗೆಯೇ ಹಾಲು ಕುಡಿಯಬೇಕೆಂದು ಮನಸ್ಸಾಗುತ್ತದೆ. ಅದಕ್ಕೆ ಕುಡಿಯುತ್ತಿರುತ್ತಿ—ಬೇಕೆಂಬೇ ವಿನೋದ, ಕಾಳ ಬೆಕ್ಕು ಎಂದು ಮುಂತಾಗಿ ಸುಳ್ಳಾಡುತ್ತಿ" ಎಂದು ಮೂದಲಿಸಿ, ಊಟದ ಬಟ್ಟಲನ್ನು ಎತ್ತಿ ಅತ್ತ ಸರಿಸಿ, ಎದ್ದುಹೋದ.

ರಾತ್ರಿಯಾರಿಗೂ ನಿದ್ದೆ ಬರಲಿಲ್ಲ. "ಒಂದು ಲೋಟ ಹಾಲನ್ನು ಅನಿವಾರ್ಯವಾಗಿ ಕುಡಿದುದಕ್ಕೆ ಈ ರೀತಿಯ ವರ್ತನೆಯೇ?'' ಎಂದು ಲತೆಗೆ ದು:ಖ; "ನಾನು ಹಾಲು ಕುಡಿಯುವುದು ಇವಳ ಮನಸ್ಸಿಗೆ ಬರುವುದಿಲ್ಲ" ಎಂದು ಮೋಹನನ ಸಂತಾಪ. ಅವನು ದೊಡ್ಡ ಬಾಯಿ ಮಾಡಿ "ನಿನ್ನ ಮನಸ್ಸು ಗೊತ್ತಾಯಿತು. ಹಾಲನ್ನು ನಾನು ಮುಟ್ಟಬಾರದೆಂದಲ್ಲವೆ, ನಿನ್ನ ಅಭಿಪ್ರಾಯ?" ಎಂದು ಗರ್ಜಿಸಿದ.

"ನೀವು ಹಾಗೂ ತಿಳಿದುಕೊಳ್ಳಬಹುದು" ಎಂದು ಹೇಮಲತೆಯೂ ಅಷ್ಟೇ ರೋಷದಿಂದ ಹೇಳಿದಳು.

ಗದ್ದಲವನ್ನು ಕೇಳಿ ಎದ್ದು ಬಂದ ಶೇಖರ "ಏನಿದು ಜಗಳ?'' ಎಂದು ವಿಚಾರಿಸಿದ ವಿನೋದನಿಗೆ ಎಲ್ಲವೂ ಗೊತ್ತಿದ್ದಿತು. ಅವನು ಚಿಕ್ಕಪ್ಪನನ್ನು ಕರೆದು ಹೇಳಿದ. "ಅಂದು ನಾನು ಹಾಲು ಕುಡಿದುದಕ್ಕೆ ತಾಯಿ ಬೆತ್ತದ ಪೂಜೆ ಮಾಡಿದಳು; ಇಂದು ಅವಳಿಗೆ ಬೆತ್ತದ ಏಟಿನ ರುಚಿ ಹೇಗಿದೆಯೆಂದು ತಿಳಿದೀತು.''

"ಸುಮ್ಮನಿರೋ, ಸೈತಾನ" ಎಂದ ಶೇಖರ.

—ಕು.

ಅಪೂರ್ವ] ಗೀತಾ ಭಾಷ್ಯ, ಗೀತಾ ತಾತ್ಪರ್ಯ ಸಹಿತ [ಗ್ರಂಥ

ಶ್ರೀಮದ್ಭಗವದ್ಗೀತೆಯ ಕನ್ನಡ ಅನುವಾದ

ಭಾಗಗಳು ೧-೨-೩ ಬೆಲೆ ರೂ. ೧೫ ಅಂಚೆ ವೆಚ್ಚ ರೂ ೨-೮-೦ ಪ್ರತ್ಯೇಕ.

ಶ್ರೀ ಮಧ್ವಾಚಾರ್ಯರ ಗ್ರಂಥಗಳನ್ನೆಲ್ಲ ಕನ್ನಡದಲ್ಲಿ ಅನುವಾದ ಮಾಡಿ ಪ್ರಸಿದ್ಧಪಡಿಸುತ್ತಿರುವ ಉಡುಪಿಯ ಶ್ರೀ ಮಧ್ವಮುನಿ ಸೇವಾ ಸಂಘದವರು ಪ್ರಕಟಿಸಿದ ೩೧ನೇ ಗ್ರಂಥವಿದು. ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥರವರ ಕನ್ನಡ ಮತ್ತು ಡಾ. ಬಿ. ಎನ್. ಕೃಷ್ಣಮೂರ್ತಿ ಶರ್ಮಾ, ಎಂ. ಎ. ಪಿ. ಎಚ್. ಡಿ. ಇವರ ಇಂಗ್ಲಿಷ ಪ್ರಸ್ತಾವನೆ ಮತ್ತು ಶ್ರೀ ನಾರಾಯಣ ತಂತ್ರಿಯವರ ಕನ್ನಡ ಅನುವಾದ. ಸಂಗ್ರಾಹ್ಯ ಗ್ರಂಥ ರೂ. 17—8—0 ಕಳಿಸಿ ಕೂಡಲೇ ತರಿಸಿಕೊಳ್ಳಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪೋಷಕ ಆಹಾರದ ಕುರಿತು ವಿಶೇಷ ಸಂಶೋಧನೆ

(೨ನೇ ಪುಟದಿಂದ)

ಸಾಮಾನ್ಯ ಭಾರತೀಯನ ನಿತ್ಯದ ಆಹಾರದಲ್ಲಿ ತನ್ನ ಕೆಲಸ ನಿರ್ವಹಿಸಲು ಬೇಕಾಗುವಷ್ಟು ಶಕ್ತಿಯನ್ನು ಉತ್ಪಾದಿಸುವ ಅಂಶಗಳ ಕೊರತೆ ಇರುವುದೂ ಆರೋಗ್ಯ ರಕ್ಷಣೆಗೆ ಬೇಕಾದ ಸತ್ವಗಳ ಅಭಾವವಿರುವುದೂ ಕಂಡು ಬಂತು. ಪಾಶ್ಚಾತ್ಯ ರಾಷ್ಟ್ರಗಳಿಂದ ತೀರ ಭಿನ್ನವಾದ ಅಂಶಗಳಲ್ಲಿ, ಹಣ್ಣು ಹಂಪಲುಗಳ ಉಪಯೋಗವನ್ನೇ ಮಾಡಿಕೊಳ್ಳದಿರುವುದೂ ಹಾಲು ಬೆಣ್ಣೆಗಳ ಬಳಕೆ ಕೆಲವೇ ವರ್ತುಲಗಳಿಗೆ ಸೀಮಿತವಾಗಿರುವುದೂ ಉಲ್ಲೇಖನೀಯ.

ತಪ್ಪು ತಪ್ಪಾದ ಆಹಾರಾಭ್ಯಾಸಗಳಿಂದ ಕ್ಷಯರೋಗ, ಕುಷ್ಠರೋಗ, ದಂತವ್ಯಾಧಿ ಮುಂತಾದವುಗಳಲ್ಲದೆ ರಕ್ತಹೀನತೆ, ಗ್ರಂಥಿ ವೈಕಲ್ಯ ಇತ್ಯಾದಿಗಳೂ ಹುಟ್ಟುತ್ತವೆ. ಶರೀರವು ರೋಗಗಳಿಗೆ ಆಹುತಿಯಾಗುವುದೇ ಆಹಾರದ ವಿಷಯದಲ್ಲಿ ತೋರಿಸಲಾದ ಉದಾಸೀನತೆಯಿಂದ ಎಂದು ಹೇಳಿದರೂ ಅತಿಶಯೋಕ್ತಿಯಾಗದು. ಆದುದರಿಂದ ನಮ್ಮ ಜನರ ಆಹಾರಾಭ್ಯಾಸಗಳನ್ನು ತಿದ್ದಿ ಸರಿಪಡಿಸುವ, ಅವರಿಗೆ ಯೋಗ್ಯ ಮಾರ್ಗದರ್ಶನವನ್ನು ನೀಡುವ ಕೆಲಸಗಳನ್ನು ಕೈಗೊಳ್ಳುವುದು ಇಷ್ಟವಾಗಿರುತ್ತದೆ. ಆಹಾರ ಎಂಬ ವಿಷಯವು ಕೃಷಿ, ವಾಣಿಜ್ಯ, ಆರೋಗ್ಯ, ಶಿಕ್ಷಣ, ಸಾರಿಗೆ ಸೌಕರ್ಯ ಮುಂತಾದ ಅನೇಕ ಕ್ಷೇತ್ರಗಳನ್ನು ವ್ಯಾಪಿಸುತ್ತದೆ. ಜನರಿಗೆ ಬೇಕಾದಷ್ಟು ಆಹಾರವನ್ನು ಉತ್ಪಾದಿಸುವ ಪ್ರಯತ್ನ ನಡೆದಷ್ಟೇ ಉತ್ತಮರೀತಿಯಲ್ಲಿ ಆಹಾರ ಧಾನ್ಯಗಳನ್ನು ಒದಗಿಸಿಕೊಡುವ ವ್ಯವಸ್ಥೆಯೂ ಅದನ್ನು ಸಮುಚಿತ ರೀತಿಯಲ್ಲಿ ಬಳಸುವಂತೆ ಮಾಹಿತಿ ನೀಡುವ ಏರ್ಪಾಟೂ ಆರೋಗ್ಯ ಸೂತ್ರಗಳ ಪ್ರಚಾರ ಕಾರ್ಯವೂ ನಡೆಯಬೇಕಾಗುತ್ತದೆ.

ನೀಲಗಿರಿಯ ಕೂನೂರಿನಲ್ಲಿರುವ ಪ್ರಯೋಗ ಶಾಲೆಯು ಭಾರತದಲ್ಲಿ ಆಹಾರ ವಿಷಯಕ ಜ್ಞಾನವನ್ನು ಪ್ರಚಾರಗೊಳಿಸುವ ಅತ್ಯಮೂಲ್ಯವಾದ ಸೇವೆಯನ್ನು ೧೯೧೮ನೇ ಇಸವಿಯಷ್ಟು ಹಿಂದಿನಿಂದ ಸಲ್ಲಿಸುತ್ತಿದೆ. ವಿಸ್ತೃತ ಪ್ರಮಾಣದಲ್ಲಿ ಇಲ್ಲಿ ನಡೆಸಲಾಗುವ ಸಂಶೋಧನೆಗಳಿಂದ ದ್ವಿತೀಯ ಮಹಾಯುದ್ಧ ಕಾಲದಲ್ಲಿ ಅತ್ಯಧಿಕ ಪ್ರಯೋಜನವು ದೊರಕಿರುತ್ತದೆ. ಸಾರ್ವಜನಿಕ ಆರೋಗ್ಯ ಕ್ಷೇತ್ರದಲ್ಲಿ ದುಡಿಯುವ ಅಧಿಕಾರಿ ವರ್ಗಕ್ಕೆ ಆಹಾರವನ್ನು ಕುರಿತಾದ ಹೆಚ್ಚಿನ ತಿಳುವಳಿಕೆ ಅಗತ್ಯವೆನಿಸಿದರೆ, ರಾಜ್ಯ ಸರಕಾರಗಳು ಈ ಪ್ರಯೋಗಾಲಯಕ್ಕೆ ಅಂಥವರನ್ನು ತರಬೇತಿಗಾಗಿ ಕಳಿಸುತ್ತವೆ. ಇಲ್ಲಿ ತಾತ್ವಿಕವಾಗಿಯೂ ವ್ಯಾವಹಾರಿಕವಾಗಿಯೂ ಸಮತೂಕದ ಆಹಾರ ಮತ್ತು ಆಹಾರದ ಅಭಾವದಿಂದುಂಟಾಗುವ ರೋಗಗಳ ವಿಷಯದಲ್ಲಿ ಶಿಕ್ಷಣ ಕೊಡಲ್ಪಡುತ್ತದೆ. ವೈದ್ಯಕೀಯ ಪದವೀಧರರಿಗೂ ಸಮಾಜ ಕಲ್ಯಾಣ ಕಾರ್ಯಕರ್ತರಿಗೂ ಇಲ್ಲಿ ಪ್ರವೇಶ ಸಿಗುತ್ತಿದ್ದು, ಯೋಗ್ಯ ಮಾಹಿತಿಯನ್ನು ಅವರು ಪಡೆಯಬಲ್ಲರು. ಅಲ್ಲದೆ ವಿಶೇಷ ವಿಭಾಗಗಳಲ್ಲಿ ಸಂಶೋಧನೆಗಳನ್ನು ನಡೆಸುವುದಕ್ಕೂ ಜಿಜ್ಞಾಸೆಯುಳ್ಳವರಿಗೆ ಅವಕಾಶವನ್ನು ಕಲ್ಪಿಸಿ ಕೊಡಲಾಗುತ್ತದೆ.

ಸದ್ಯಕ್ಕೆ ಹೈದರಾಬಾದಿಗೆ ವರ್ಗಾಯಿಸಲ್ಪಡಲಿರುವ ಕೂನೂರಿನ ಪ್ರಯೋಗಾಲಯವು ಸರ್ ರೋಬರ್ಟ್ ಮೆಕ್ಯಾರಿಸನ್ ಎಂಬ ಆಹಾರ ತಜ್ಞರ ಪ್ರಯತ್ನದ ಫಲವಾಗಿ ಅಸ್ತಿತ್ವಕ್ಕೆ ಬಂದಿತು. ಈ ಶತಮಾನದ ಪ್ರಾರಂಭದಲ್ಲಿ ಭಾರತದಲ್ಲಿ ಆಹಾರವನ್ನು ಕುರಿತಾದ ಸಂಶೋಧನೆಯಾಗಲೀ ಮಾಹಿತಿಯಾಗಲೀ ಸಾಕಷ್ಟು ಇರಲಿಲ್ಲ. ಮಲೇರಿಯಾ, ಕಾಲರಾ, ಮುಂತಾದ ಪಿಡುಗುಗಳು ಹಳ್ಳಿ ಹಳ್ಳಿಗಳನ್ನೇ ಆಹುತಿ ತೆಗೆದು ಕೊಳ್ಳುತಿದ್ದುದರಿಂದ ಅವುಗಳಿಂದ ಜನರನ್ನು ಪಾರು ಮಾಡುವ ಪ್ರಯತ್ನದಲ್ಲಿಯೇ ಸರಕಾರವೂ ಸಾಮಾಜಿಕ ಕಾರ್ಯಕರ್ತರೂ ನಿರತರಾದರು; ಹೊರತು, ಇಂಥ ರೋಗಗಳು ಬರುವುದಕ್ಕೆ ಆಹಾರದಲ್ಲಿರುವ ಕೊರತೆಯೂ ಒಂದು ಕಾರಣವಾಗಿರಬಹುದೆಂದು ಆಲೋಚಿಸಿದವರು ವಿರಳ. ೧೯೧೮ರಲ್ಲಿ ಭಾರತದ ಸಂಶೋಧನಾ ಮಂಡಳಿಯೊಂದು ಸರ್ವಪ್ರಥಮವಾಗಿ ಇದುವರೆಗೆ ಮುಟ್ಟದಿದ್ದ ವಿಷಯದಲ್ಲಿ ಚಟುವಟಿಕೆಗಳನ್ನು ತೊಡಗಲು ಸಂಕಲ್ಪಿಸಿತು. ಅದೇ ಹೊತ್ತಿಗೆ, ಭಾರತದ ವೈದ್ಯಕೀಯ ಕ್ಷೇತ್ರದ ಓರ್ವ ಅಧಿಕಾರಿಯಾಗಿದ್ದ ಮೆಕ್ಯಾರಿಸನರು, ನಮ್ಮ ದೇಶದಲ್ಲಿ ವ್ಯಾಪಕವಾಗಿ ಕಂಡುಬಂದ ಕೆಲವು ವಿಶಿಷ್ಟ ರೋಗಗಳ ಮೂಲವನ್ನು ಕಂಡುಹಿಡಿಯಲು ಪ್ರಯತ್ನಿಸಿ ಯಶಸ್ವಿಯಾಗಿದ್ದರು; ಮಾತ್ರವಲ್ಲದೆ, ಅಂತಾರಾಷ್ಟ್ರೀಯ ಖ್ಯಾತಿಯನ್ನೂ ಹೊಂದಿದ್ದರು. ತಮ್ಮ ಸಂಶೋಧನೆಗಳಿಂದಾಗಿ ಅವರಿಗೆ ಸತ್ವಯುತವಾದ ಆಹಾರದ ಕೊರತೆಯಿಂದ ನಾನಾತರದ ರೋಗಗಳುಂಟಾಗುವವೆಂದು ಮನವರಿಕೆಯಾಯಿತು.

ಇನ್ನೂ ಹೆಚ್ಚು ಉತ್ಸಾಹದಿಂದ ಅವರು ಇನ್ನೊಬ್ಬ ಸಹಕಾರಿಯೊಂದಿಗೆ "ಬೆರಿ ಬೆರಿ ಸಂಶೋಧನೆ" ಎಂಬ ಹೆಸರಿನಿಂದ ೧೯೧೮ರಲ್ಲಿ ಪ್ರಯೋಗಶಾಲೆಯೊಂದನ್ನು ಕಟ್ಟಿಕೊಂಡು ತಮ್ಮ ಕೆಲಸವನ್ನು ಮುಂದರಿಸಿದರು. ಭಾರತದ ಸಂಶೋಧನಾ ಮಂಡಳಿಯಿಂದ ಅವರಿಗೆ ಧಾರಾಳವಾದ ಸಹಾಯ ದೊರಕಿತು. ನಡುನಡುವೆ ಅವರ ಕೆಲಸಕ್ಕೆ ವಿಘ್ನಗಳು ಬಂದವು; ೧೯೨೨ರಲ್ಲಿ ವೆಚ್ಚಗಳನ್ನು ಕಡಿಮೆಮಾಡುವುದಕ್ಕೋಸ್ಕರ ಸರಕಾರವು ನೇಮಿಸಿದ ಸಮಿತಿಯೊಂದು ಈ ಕೆಲಸಕ್ಕೆ ಆತಂಕವಾಯಿತು. ಅಂತೂ ಮೂರನೆಯ ಸಲ ೧೯೨೫ರಲ್ಲಿ ಭದ್ರ ಬುನಾದಿಯ ಮೇಲೆ ಪ್ರಯೋಗಾಲಯವು ಸ್ಥಾಪಿಸಲ್ಪಟ್ಟಿತು. ಇದನ್ನು ಸಂದರ್ಶಿಸಿ, ಕೆಲಸಗಳನ್ನು ಪರಿಶೀಲಿಸಿದ ರೋಯಲ್ ಕಮೀಶನಿನ ಸದಸ್ಯರು ಸರಕಾರಕ್ಕೆ ಸಂಸ್ಥೆಯ ಕಾರ್ಯಗಳನ್ನು ಇನ್ನಷ್ಟು ವ್ಯಾಪಗೊಳಿಸುವಂತೆ ಅನೇಕ ಸಲಹೆಗಳನ್ನು ಮಾಡಿದರು. ಇದರಿಂದ ಸಂಸ್ಥೆಯ ಪ್ರಯೋಜನದ ಕುರಿತು ಎಲ್ಲರಲ್ಲಿಯೂ ಭರವಸೆಯ ಭಾವನೆಗಳು ನೆಲೆಸುವಂತಾಯಿತು.

ಸರ್ ಮೆಕ್ಯಾರಿಸನರ ಬಳಿಕ ಅಧಿಕಾರಕ್ಕೆ ಬಂದ ಡಾ. ಐಕ್ರೋಯ್ಡರೂ ಈಗಿನ ಡಾ. ವಿ. ಎನ್. ಪಟವರ್ಧನರೂ ಸಂಸ್ಥೆಯ ಅಭ್ಯುದಯಕ್ಕೆ ಕಾರಣವಾದ ಕೆಲಸಗಳನ್ನು ಮಾಡಿದರು. ಆಹಾರದ ಸಮತೂಕದ ಕುರಿತು ಸಂಶೋಧನೆ, ಕೃಷಿ ಹಾಗು ಆಹಾರ ಕ್ಷೇತ್ರಕ್ಕೆ ಇರುವ ಸಂಬಂಧ, ಬೇರೆ ಬೇರೆ ಆಹಾರಗಳಲ್ಲಿರುವ ಪೋಷಕಾಂಶಗಳ ಪ್ರಮಾಣ ನಿರ್ಣಯ, ಬೆಣ್ಣೆ ಮುಂತಾದ ಪ್ರಾಣಿಜನ್ಯ ಕೈಬಿಕ್ಕೆ ಸರಿಹೋಲುವ ಸಸ್ಯಜನ್ಯ ಕೈಬಿತಯಾರಿಕೆ, ಕೊರತೆಯ ಆಹಾರವು ದೈಹಿಕ ಕ್ರಿಯೆಯ ಮೇಲೆ ಮಾಡುವ ಪರಿಣಾಮ, ರೋಗಗಳಿಗೂ ಆಹಾರ ಸೇವನೆಗೂ ಇರುವ ಸಂಬಂಧ ಮುಂತಾದವುಗಳನ್ನು ವಿಶೇಷವಾಗಿ ಪರಿಶೀಲಿಸಲಾಗುತ್ತಿದೆ. ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಆಹಾರ ಪದ್ಧತಿಯ ಅಭ್ಯಾಸದ ವಿಶ್ಲೇಷಣೆಯನ್ನು ನಡೆಸುವುದೂ ಆಹಾರ ಸೇವನೆಯಲ್ಲಿರುವ ಕೊರತೆಯಿಂದ ಉಂಟಾಗುವ ಕಾಯಿಲೆಗಳ ಚಿಕಿತ್ಸೆ ಹಾಗು ಅಂಥ ಕಾಯಿಲೆಗಳ ಚಿಹ್ನೆಯನ್ನು ಮುಂದಾಗಿಯೇ ತಿಳಿದುಕೊಳ್ಳುವ ವಿಧಾನವನ್ನು ಕಂಡುಹಿಡಿಯುವುದೂ ಸಂಸ್ಥೆಯ ಧ್ಯೇಯಗಳಲ್ಲಿ ಸೇರಿದ್ದು, ತಕ್ಕಮಟ್ಟಿನ ಯಶಸ್ಸನ್ನು ಪ್ರಯೋಗಗಳು ತೋರಿಸಿರುತ್ತವೆ.

ರಚನಾತ್ಮಕ ಸ್ವರೂಪದ ಕೆಲಸಗಳು ಎಷ್ಟು ಹೆಚ್ಚು ಪ್ರಮಾಣದಲ್ಲಿ ನಡೆದರೂ ಕಡಿಮೆಯೇ ಆಗುತ್ತವೆ. ಕೂನೂರಿನ ಸಂಸ್ಥೆಯ ವಿಷಯದಲ್ಲೂ ಈ ಮಾತನ್ನು ಹೇಳಬಹುದು. ನಮ್ಮ ದೇಶದಲ್ಲಿ ಆಹಾರ ಸೇವನೆಯ ಅಭ್ಯಾಸವನ್ನು ಬದಲಾಯಿಸುವ ಪ್ರಯತ್ನಗಳಿಗೆ ಬಹಳ ಆತಂಕವನ್ನು ಎದುರಿಸಬೇಕಾಗುತ್ತದೆ. ಸಂಪ್ರದಾಯ ಪ್ರಿಯತೆಯಷ್ಟೇ ಅಜ್ಞಾನವೂ ನಮ್ಮವರನ್ನು ಬಾಧಿಸುತ್ತದೆ. ಒಳ್ಳೆಯ ಆಹಾರವನ್ನು ಸೇವಿಸುವುದಕ್ಕೆ ಬಡತನವು ಆತಂಕವೆಂದು ಹೇಳುವುದುಂಟು: ಅಷ್ಟೇ ದೊಡ್ಡ ಆತಂಕವಾಗಿ ನಮ್ಮ ಜನರ ಮನೋಭಾವವನ್ನೂ ಉದಾಹರಿಸಬಹುದು. ರಶಿಯಾದಂಥ ದೇಶಗಳಲ್ಲಿ ಸಾಮೂಹಿಕ ಭೋಜನದ ಏರ್ಪಾಡಿನಿಂದ ಸತ್ವಯುತ ಆಹಾರವನ್ನು ಜನರಿಗೆ ಪೂರೈಸುವ ಪ್ರಯತ್ನಗಳು ನಡೆದು, ಜನರೆಲ್ಲರೂ ಒಳ್ಳೆಯ ಆರೋಗ್ಯದಿಂದಿರುವಂತೆ ನೋಡಿಕೊಳ್ಳಲಾಯಿತು. ನಮ್ಮಲ್ಲಿ ಇಂಥ ಪ್ರಯತ್ನಗಳು ಜನಪ್ರಿಯವಾಗಲಿಲ್ಲ. ಶಾಲೆಗಳಲ್ಲಿ ಕಲಿಯುವ ಮಕ್ಕಳಿಗೂ ಕೈಗಾರಿಕಾ ಕೇಂದ್ರಗಳಲ್ಲಿ ದುಡಿಯುವ ಕೂಲಿಕಾರರಿಗೂ ಮೊದಲಾಗಿ ಇವರ ರುಚಿಯನ್ನು ಹತ್ತಿಸಬಹುದು; ಆದರೆ ಪ್ರಾಚೀನ ರೂಢಿಯ ಮೇಲಿನ ಮೋಹವು ಇದಕ್ಕೆ ಸಾಕಷ್ಟು ಇಂಬು ಗೊಡುವದಿಲ್ಲ.

ಸಾಮಾಜಿಕ ಸ್ವಾಸ್ಥ್ಯದ ದೃಷ್ಟಿಯಿಂದ ಕೆಲಸ ಮಾಡುವ ವಿಧಾಯಕ ಕಾರ್ಯಕರ್ತರು ಈ ದಿಸೆಯಲ್ಲಿ ಯೋಗ್ಯ ಮಾರ್ಗದರ್ಶನವನ್ನು ಮಾಡಿದರೆ ಲಾಭವಾದೀತು. ಆಹಾರದ ಕೊರತೆ ತೀವ್ರವಾಗಿದ್ದ ಕಾಲದಲ್ಲೂ ಸಮತೂಕದ ಆಹಾರ ಸೇವನೆಯ ಅಭ್ಯಾಸವನ್ನು ಹೊಂದಿದ ಜನರಿಗೆ ಸಾಕಾಗುವಷ್ಟು ನಮ್ಮ ದೇಶದಲ್ಲಿ ಇದ್ದಿತೆಂದು ಹೇಳಲಾಗುತ್ತದೆ. ಆದುದರಿಂದ ಈಗಲಾದರೂ ನಾವು ಆಹಾರಾಭ್ಯಾಸ ಆರೋಗ್ಯ ಲಾಭಕ್ಕೋಸ್ಕರ ತಕ್ಕ ರೀತಿಯಲ್ಲಿ ಪರಿಷ್ಕರಿಸುವ ಮನಸ್ಸು ಮಾಡಿದರೆ, ಅದರಿಂದ ಹೆಚ್ಚಿನ ಉಪಯೋಗವಾಗದಿರದು. ಆಹಾರದ ವಿಷಯವಾಗಿ ಪತ್ರಿಕೆ ಪುಸ್ತಕಗಳಲ್ಲಿ ಒಳ್ಳೆಯ ಮಾಹಿತಿಯನ್ನು ಒದಗಿಸಿಕೊಟ್ಟು ಮಕ್ಕಳಲ್ಲಿ ಸಮತೂಕದ ಆಹಾರ ಸೇವನೆಯ ಕುರಿತು ಪ್ರೀತಿ ಮೂಡುವಂತೆ ಮಾಡುವುದೊಳಿತು. ಗಿರಣಿಯಲ್ಲಿ ತಯಾರಾದ ಅಕ್ಕಿಯ ಉಪಯೋಗ ಮುಂತಾದ ಹಾನಿಕಾರಕ ಪದ್ಧತಿಯನ್ನು ಬಿಟ್ಟುಕೊಡುವಂತೆ ಜನರನ್ನು ಒತ್ತಾಯಿಸಿ, ಮನವೊಲಿಸುವ ಪ್ರಚಾರ ಕಾರ್ಯವೂ ಜರಗುವುದು ಅಪೇಕ್ಷಣೀಯ. ಹೆಚ್ಚು ಹೆಚ್ಚು ತರಕಾರಿಗಳನ್ನೂ ಬೇಳೆ ಕಾಳುಗಳನ್ನೂ ಹಾಲು ಮುಂತಾದುವನ್ನೂ ಉಪಯೋಗಿಸುವಂತೆ ಜನರಿಗೆ ಬೋಧಿಸುವ ಕೆಲಸವೂ ನಡೆಯುವುದು ಹಿತಕರ. ಅಡುಗೆಯ ಪದ್ಧತಿಯಲ್ಲಿರುವ ಕುಂದುಕೊರತೆಗಳನ್ನು ಗೃಹಿಣಿಯರಿಗೆ ತಿಳಿಸಿ, ತಿದ್ದಿಸುವುದೂ ಆರೋಗ್ಯವಂತರಾಗಿರುವುದಕ್ಕೆ ಆಹಾರ ಸೇವನೆಯ ಕ್ರಮವೇ ಪ್ರಮುಖ ಕಾರಣವೆಂಬ ಭಾವನೆಯನ್ನು ಬಿಂಬಿಸುವುದೂ ಲಾಭದಾಯಕವೆನಿಸುತ್ತವೆ.

(೧ನೇ ಪುಟದಿಂದ)

ಸಿಗುತ್ತದೆ. ಭಾರತವು ಸ್ವಾತಂತ್ರ್ಯ ಕ್ಷೇತ್ರದಲ್ಲಿ ಸಾಧಿಸಿದ ಪ್ರಗತಿಯ ರಹಸ್ಯವೇ ಇದೆಂದರೆ ಸಲ್ಲುತ್ತದೆ. ನಮ್ಮ ಮಟ್ಟಿಗೆ ನೆಹರೂಗಳು ರಾಷ್ಟ್ರೀಯ ಕಾಂಗ್ರೆಸಿನ ಧುರೀಣರು ಹೇಗೋ ಅದಕ್ಕಿಂತಲೂ ಹೆಚ್ಚಾಗಿ ಎಲ್ಲರ ಗೌರವಾದರಗಳನ್ನು ಸೂರೆಗೊಂಡ ವ್ಯಕ್ತಿ; ಅಥವಾ ಜನ ನಾಯಕ.

ಇಂದಿನ ಸಂದಿಗ್ಧ ಕಾಲದಲ್ಲಿ ಜನತೆಯ ಧುರೀಣನಾಗಲು ಪಕ್ಷದ ಸ್ಥಾನಮಾನ ವೊಂದೇ ಸಾಲದೆಂದೂ ಪ್ರಜೆಗಳ ಪ್ರೀತಿ ವಿಶ್ವಾಸಗಳನ್ನು ಸಂಪಾದಿಸುವುದೇ ಮುಖ್ಯವಾದ ಕೆಲಸವೆಂದೂ ರಾಜಕಾರಣಿಗಳು ತಿಳಿದುಕೊಳ್ಳುವುದರಿಂದ ಕ್ಷೇಮವುಂಟು. ಆದರೆ, ದುರಾದೃಷ್ಟದಿಂದ ಹಾಗೆ ಯಾರೂ ಭಾವಿಸುವುದಿಲ್ಲ. ನೆಹರುಗಳ ಬಹುಮುಖವಾದ ಪ್ರತಿಭೆಯನ್ನು ಹೊಂದಿರದಿದ್ದರೂ ಪ್ರಧಾನ ಮಂತ್ರಿಯ ಕುರ್ಚಿಯಲ್ಲಿ ಕುಳಿತುಕೊಳ್ಳುವ ಹಂಬಲ ನಮ್ಮಲ್ಲಿಯ ಅನೇಕ ರಾಜಕಾರಣಿಗಳಿಗಿದೆಯೆಂಬುದು ಬಹಿರಂಗವಾದ ಗುಟ್ಟು! ಇಂಥ ಹಂಬಲವಾಗಲೀ ಮಹತ್ವಾಕಾಂಕ್ಷೆಯಾಗಲೀ ರಾಜಕಾರಣದಲ್ಲಿ ದೂಷಿತವಾದುದಲ್ಲ; ಹಾಗೆಂದು ಅದು ಒಮ್ಮೆಲೇ ಸಿದ್ಧಿಸುವುದು ಮಾತ್ರ ಕಷ್ಟ. ನೆಹರುಗಳು ರಾಜ್ಯ ಸೂತ್ರಗಳನ್ನು ಕೈಯಲ್ಲಿ ಹಿಡಿದುಕೊಂಡು ಅನೇತು ಹಿಮಾಚಲ ಪರ್ಯಂತವಾದ ಭಾರತವನ್ನು ಜಾತಿ—ಮತ—ಪ್ರಾಂತ—ಭಾಷೆ— ಆಚಾರ—ವಿಚಾರ—ಆಹಾರ–ವಿಹಾರ ಮುಂತಾದ ಯಾವ ಬಗೆಯ ಭೇದಗಳನ್ನೂ ಗಮನಿಸದೆ ಮುನ್ನಡೆಸಲು ಯಶಸ್ವಿಯಾಗಿ ಪ್ರಯತ್ನಿಸಿದರು. ತಮ್ಮ ವ್ಯಕ್ತಿತ್ವದ ವರ್ಚಸ್ಸಿನಿಂದ ಜನರ ಮನಸ್ಸನ್ನು ಆಕರ್ಷಿಸಿಕೊಳ್ಳಲು ಶಕ್ತರಾದರು. ಅವ್ಯವಸ್ಥೆಯುಂಟಾದ, ಭಿನ್ನಾಭಿಪ್ರಾಯಗಳು ಉದ್ಭವಿಸಿದ ಪ್ರಸಂಗಗಳಲ್ಲಿ ದುಷ್ಪರಿಣಾಮವಾಗದಂತೆ ತಮ್ಮ ಪ್ರಭಾವವನ್ನು ಉಪಯೋಗಿಸಿದರು.

ಇದನ್ನು ಉದಾರ ನಾಯಕತ್ವದ ಲಕ್ಷಣವೆಂದು ಹೇಳಬಹುದು. ಪ್ರಜಾಸತ್ತೆಯ ಕ್ಷೇತ್ರದಲ್ಲಿ ಅಂಬೆಗಾಲಿಡುವ ಭಾರತಕ್ಕೆ ಈಗ ಉದಾರ ಮನೋಭಾವದ ನಾಯಕರ ಅಗತ್ಯವಿದೆ; ಈ ಅಭಾವವನ್ನು ಪೂರೈಸುವ ಕಡೆಗೆ ನಾವು ಹೆಚ್ಚಿನ ಲಕ್ಷ್ಯವನ್ನು ಪೂರೈಸುವುದರಿಂದ ಲಾಭವಿದೆ. ಅಧಿಕಾರ ಸ್ಥಾನ ಅಥವಾ ಶಾಸನ ಸಭೆಯ ಸ್ಥಾನಗಳಲ್ಲಿ ಮಾತ್ರ ರಾಜಕಾರಣಿಗಳಲ್ಲಿ ಹೆಚ್ಚಿನವರು ಆಸಕ್ತಿಯನ್ನು ತೋರಿಸುತ್ತಿರುವರೆಂದೂ ಜನಹಿತದ ಭಾವನೆಯಿಂದ ಆಲೋಚಿಸುವವರೂ ಅದಕ್ಕೆ ತಕ್ಕಂತೆ ಕೆಲಸ ಮಾಡುವವರೂ ಕಡಿಮೆಯೆಂದೂ ದೂರುಗಳು ಕೇಳಿಸುತ್ತವೆ. ನೆಹರುಗಳು, ಇದಕ್ಕೆ ಅವಕಾಶವಿಲ್ಲದಂತೆ ಮಾಡಲು, ತಾವು ಅಧಿಕಾರ ಸ್ಥಾನಗಳಿಂದ ಹೊರಗುಳಿದು ಜನರ ನಡುವೆ ಬೆರೆತು ಕೆಲಸ ಮಾಡಿ, ಜನಪ್ರಿಯತೆಯ ನಿಜವಾದ ರಹಸ್ಯವನ್ನು ಮನಗಾಣಿಸಿ ಕೊಡುವೆನೆಂದು ಹೇಳುತ್ತಾರೆ. ಅವರು ಈಗಿನ ಜನಪ್ರಿಯತೆಯನ್ನು ಗಳಿಸಿದ್ದೆ ತಮ್ಮ ಹಿಂದಿನ ದೇಶಸೇವೆಯಿಂದ ಎಂಬುದನ್ನು ಇಲ್ಲಿ ಜ್ಞಾಪಿಸಿಕೊಂಡರೆ, ನೆಹರುಗಳ ಮಾತಿನ ಸತ್ಯ ಮನವರಿಕೆಯಾಗುತ್ತದೆ.

ಅಧಿಕಾರವಲಯದಿಂದ ರಾಜಕಾರಣಿಗಳನ್ನು ಹೊರಗುಳಿಯಬೇಕೆಂದು ಒತ್ತಾಯಿಸಿದರೆ ಹೆಚ್ಚಿಗೆ ಪ್ರಯೋಜನವಾಗಲಿಕ್ಕಿಲ್ಲ. ಆದರೆ ಅವರು ಉದಾರವಾಗಿ ವರ್ತಿಸಿ, ಅಧಿಕಾರಕ್ಕಾಗಿ ನಡೆಯುವ ತಿಕ್ಕಾಟಗಳನ್ನು ಪರಿಹರಿಸಬಲ್ಲರು. ಪಕ್ಷದ ಸಂಘಟನೆಯನ್ನು ಮಾಡಿಕೊಳ್ಳುವಲ್ಲಿ ಪ್ರವೃತ್ತರಾದ ರಾಜಕಾರಣಿಗಳು ತಮ್ಮ ಅನುಯಾಯಿಗಳಿಂದ ವಿಧಾಯಕವಾದ ಟೀಕೆಗಳು ಮಾತ್ರ ಆಗುವಂತೆಯೂ ಜನಹಿತದ ವಿಷಯಗಳಲ್ಲಿ ಸರಕಾರಕ್ಕೆ ಬೆಂಬಲ ಸಿಗುವಂತೆಯೂ ಪ್ರಯತ್ನಿಸಬಹುದು. ಅಧಿಕಾರ ಸ್ಥಾನದಲ್ಲಿರುವ ಪಕ್ಷದ ಸದಸ್ಯರಾದರೂ ತಮ್ಮೊಡನೆ ಸಹ ಮತರಾಗದ ಪ್ರತಿ ಪಕ್ಷದವರನ್ನು ಶತ್ರುಗಳೆಂದು ಭಾವಿಸುವ ಬದಲು ಅವರನ್ನು ಸಹಾನುಭೂತಿಯಿಂದ ಕಂಡ, ಅವರ ಪ್ರತಿಪಾದನೆಯ ರಹಸ್ಯವನ್ನು ತಿಳಿಯಬಹುದು. ಅಂತಾರಾಷ್ಟ್ರೀಯ ಕ್ಷೇತ್ರದಲ್ಲಿ ಹೇಗೋ ಹಾಗೆಯೇ ರಾಷ್ಟ್ರೀಯ ಚಟುವಟಿಕೆಗಳಲ್ಲೂ ಸಹ ಜೀವನದ ಆದರ್ಶದಿಂದ ಲಾಭ ಸಿಗುತ್ತದೆ. ಪರಸ್ಪರರನ್ನು ತಿಳಿದು ಅರ್ಥ ಮಾಡಿಕೊಳ್ಳುವ ಪ್ರವೃತ್ತಿಯೇ ಉದಾರ ನಾಯಕತ್ವದ ತಿರುಳಾಗಿದ್ದು ಇದರಿಂದ ವಿವಿಧ ಪಕ್ಷಗಳಲ್ಲಿ ಇರಬೇಕಾದ ಉತ್ತಮ ವ್ಯವಸ್ಥೆಯನ್ನು ಸ್ಥಾಪಿಸುವುದು ಶಕ್ಯ.

ಪವಿತ್ರವಾದ ಮತ್ತು ಪ್ರಜಾಪ್ರಭುತ್ವಕ್ಕೆ ಸಮ್ಮತವಾದ ಇಂಥ ಉದಾರ ಭಾವನೆಯನ್ನು ಮೂಡಿಸುವುದಕ್ಕೆ ಪ್ರಯತ್ನಿಸುವ ರಾಜಕಾರಣಿಗಳು ನೆಹರುಗಳ ಮಾದರಿಯನ್ನು ಅನುಸರಿಸಿದರೆ ಶ್ರೇಯಸ್ಸಾದೀತು. ನೆಹರುಗಳು ಕಾಂಗ್ರೆಸು ಪಕ್ಷದ ಅಧಿಕಾರ ಸ್ಥಾನದಿಂದ ಹೊರಗುಳಿದರೆ ಎಲ್ಲ ರಾಜಕೀಯ ಬಣಗಳ ನಡುವೆಯೂ ಸೌಹಾರ್ದಯುಕ್ತವಾದ ಸಂಬಂಧವನ್ನು ನೆಲೆಗೊಳಿಸುವುದಕ್ಕೂ ತನ್ಮೂಲಕ ಪ್ರಜಾಪ್ರಭುತ್ವದ ಅಸ್ತಿವಾರವನ್ನು ಸುದೃಢಗೊಳಿಸುವುದಕ್ಕೂ ಸಮರ್ಥರಾಗಬಹುದೆಂದು ಕೆಲವು ಪ್ರಾಜ್ಞರ ಅಭಿಪ್ರಾಯ. ಇದು ಅಪಾಯಕರವಾದ ಪ್ರಯೋಗವೆಂದು ಒಂದು ದೃಷ್ಟಿಯಿಂದ ಕಂಡರೂ ಇನ್ನೊಂದು ದೃಷ್ಟಿಯಿಂದ ನೆಹರುಗಳಿರುವಾಗ ದುರ್ಘಟನೆಗಳೇನೂ ಸಂಭವಿಸಲಾರವೆಂಬ ಧೈರ್ಯ ಮೂಡುತ್ತದೆ. ಏಕೆಂದರೆ ತಿಳಿವಳಿಕೆ ಸಾಲದ ಪಕ್ಷಾಂಧರು ಏನಾದರೂ ಕಿರುಕುಳ ನಡೆಸಿದರೆ ಆಗ ಜನರನ್ನು ತಮ್ಮ ವಿಶ್ವಾಸಕ್ಕೆ ತೆಗೆದುಕೊಳ್ಳುವ ಶಕ್ತಿ ನೆಹರುಗಳಲ್ಲಿ ಇದ್ದೇ ಇರುತ್ತದೆ. ಇದರ ಭರವಸೆಯನ್ನು ಹೊಂದಿ, ಉದಾರ ನಾಯಕರ ಅಭಾವವನ್ನು ಹೋಗಲಾಡಿಸಲು ಪ್ರಯತ್ನಿಸುವುದು ಭವಿಷ್ಯದ ಶ್ರೇಯಸ್ಸಿನ ದೃಷ್ಟಿಯಿಂದ ಹಿತಕರವಾದ ಕಾರ್ಯ.

—ಕಾರ್ತಿಕೇಯ.

ಚತುರ್ ವಾರ್ಷಿಕ ಯೋಜನೆ.

!!! ಮಿತ ವ್ಯಯದಿಂದ ಹಣ ಉಳಿಸಿಕೊಳ್ಳುವ ಹಿರಿಯ ಕಲೆಯಲ್ಲಿ ನೀವೂ ಭಾಗಿಗಳಾಗಿರಿ !!!

!! ನಿಮ್ಮ ಹಾಗೂ ನಿಮ್ಮ ಕುಟುಂಬದ ಭವಿಷ್ಯವನ್ನು ಭದ್ರಪಡಿಸಿರಿ !!

"ರಿಕರಿಂಗ್" ಠೇವಣಾತಿ.

ಬರೇ ರೂಪಾಯಿ ಒಂದು ಅಥವಾ ಹೆಚ್ಚು ಪ್ರತಿ ತಿಂಗಳಿಗೆ ಬೇಂಕಿನಲ್ಲಿ ಜಮೆ ಮಾಡಿರಿ. ಬಡ್ಡಿ ಸಾಲಿಯಾನ್ ನೇಕಡಾ 4¼%.

ಬಡವ ಬಲ್ಲಿದರೆಂಬ ಭೇದವಿಲ್ಲದ ಪ್ರತಿಯೊಬ್ಬನಿಗೂ ಅನುಕೂಲವಾದ ಯೋಜನೆ.

ನಿಮ್ಮ ಸಮೀಪದ ಶಾಖೆಯಲ್ಲಿ ಇಂದೇ ಲೆಕ್ಕ ತೆರೆಯಿರಿ.

ದಿ ವಿಜಯ ಬೇಂಕ್ ಲಿಮಿಟೆಡ್.

ಯಂ. ಗಣಪ್ಪಯ್ಯ ಎಂಡ್ ಸನ್ಸ್

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ, ಮಂಗಳೂರು ಇವರ

ಅಶೋಕಾರಿಷ್ಟ ಮತ್ತು ಮಾತ್ರೆ—ಹೆಂಗಸರ ಗರ್ಭಾಶಯ ರೋಗಗಳಿಗೆ ಸಂಜೀವನ. ಅಕಾಲ ಬಹಿಷ್ಟೆ. ಋತುಸ್ರಾವವು ಜಾಸ್ತಿಯಾಗಿಯೂ, ಕಡಿಮೆಯಾಗಿಯೂ ಹೋಗುವುದು, ಬಿಳಿಸೆರಗು, ಸಂತಾನ ಹೀನತೆ, ರಕ್ತಹೀನತೆ ಋತುಶೂಲೆ, ಮೊದಲಾದ ಸ್ತ್ರೀಯರಿಗೆ ಸಂಬಂಧಪಟ್ಟ ಎಲ್ಲಾ ಕಾಯಿಲೆಗಳನ್ನು ಗುಣಪಡಿಸುವುದು. ಬಾಟ್ಲಿ 1ರ ರೂ. 3–8–0.

ಗರ್ಭ ರಕ್ಷಕ— ಗರ್ಭಿಣಿಯರಿಗೆ ಅತ್ಯಂತ ಫಲಕಾರಿಯಾದ ಔಷಧಿ. ಚವಿದೋಷ, ಗರ್ಭಪತನವಾಗುವಿಕೆ, ವಾಂತಿ, ಅರುಚಿ, ಅರಕ್ತತೆ, ಮಲಬದ್ಧತೆ, ವಾಯು ಉಪದ್ರ, ಕೈಕಾಲುಬಚ್ಚುವುದು ಇವುಗಳನ್ನೆಲ್ಲಾ ಹೋಗಲಾಡಿಸುವುದು. ಬಾಟ್ಲಿ 1ರ ರೂ. 3–8–0.

ಇವಲ್ಲದೆ ಇನ್ನೂ ಅನೇಕ ತರದ ಔಷಧಿಗಳು ನಮ್ಮಲ್ಲಿ ದೊರಕುತ್ತವೆ. ಕೆಟಲಾಗಿಗೆ ಬರೆಯಿರಿ. ಕಾಯಿಲೆ ಸಂಗತಿ ವಿವರವಾಗಿ ಬರೆದಲ್ಲಿ, ರೋಗಕ್ಕೆ ತಕ್ಕ ಔಷಧಿಯನ್ನು ರವಾನಿಸಬಹುದು.

ಕುಮಾರಿ ಬಿಲ್ಲೆಗಳು (ಸರಕಾರಿ ರಿಜಿಸ್ಟರ್)

ಹದತಪ್ಪಿದ ಮತ್ತು ನಿಂತುಹೋದ ಮುಟ್ಟು ದೋಷಗಳನ್ನು ಹತೋಟಿಗೆ ತರುವವು.

ಈ ಔಷಧ ಸೇವನೆಯಿಂದ ಯಾವ ಭಾದಕವೂ ಉಂಟಾಗದೆ ತೀವ್ರ ಗುಣಹೊಂದಬಹುದು. ಬೆಲೆ: ರೂ. 5/- ಸ್ಪೆಶಲ್ ರೂ. 8/-

Mrs. **P. DEVEE,** F. Ds. (N. J.) (ವಿ. ಪಿ. ಪಿ. ಪ್ರತ್ಯೇಕ)

CALCUTTA—40 ಸ್ಟಾಕಿಸ್ಟರು: ಶಹಾ ಕಂಪೆನಿ, ಮಂಗಳೂರು

ವಿವಿಧ ಪಾತ್ರೆಗಳು



ಯಾವತ್ತೂ ವಿವಿಧ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ, ಚಿಲ್ಲರೆಯಾಗಿಯೂ ಸಿಗುತ್ತವೆ.

ಕಲ್ಮಂಜೆ ವ್ಯಾಸಾಚಾರ್ಯರ ಪಾತ್ರೆ ಭಂಡಾರ,

ರಥಬೀದಿ ಉಡುಪಿ.

ಮೂಲ್ಕಿ ಬೇಂಕ್,

ಲಿಮಿಟೆಡ್, ಮೂಲ್ಕಿ.

1929ರಲ್ಲಿ ಸ್ಥಾಪಿತವಾಗಿ 25 ವರುಷಗಳಿಂದ ಊರ ಜನರ ಹಿತಕ್ಕಾಗಿ ಡಿಪೋಸಿಟ್ ಹಣಕ್ಕೆ ನ್ಯಾಯವಾದ ಬಡ್ಡಿಯಿಂದಲೂ, ಸಾಲದ ಹಣಕ್ಕೆ ಅತೀ ಕಡಿಮೆ ದರದ ಬಡ್ಡಿಯಿಂದಲೂ ಜನ ಹಿತಸಾಧನೆಯನ್ನು ಮಾಡುತ್ತಿರುವುದು.

THE MOOLKY BANK LTD.

Moolky, S. K.

ದಿ ಬೊಂಬೆಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿ., ಬೊಂಬಾಯಿ

1951ನೆ ವರ್ಷದ ವೆಲ್ಯುಯೇಶನ್ ಪ್ರಕಾರ ಉದಾರ ಬೋನಸ್

ಎಂಡೋಮೆಂಟ್ ಪೊಲಿಸಿಗಳ ಮೇಲೆ ರೂ. **10-** } ವರ್ಷ ಒಂದರ
ಜೀವಾವಧಿ ಪೊಲಿಸಿಗಳ ಮೇಲೆ ರೂ. **12-8** } ರೂ. **1000**ಕ್ಕೆ

(ಪ್ರಚಲಿತ ಪ್ರೀಮಿಯಮ್ ಸ್ಕೇಲಿನಂತೆ)

ಜೀವ ವಿಮೆಗಾಗಲೀ, ಪ್ರಾತಿನಿಧ್ಯಹೊಂದಲಿಕ್ಕಾಗಲೀ ನಮ್ಮೊಡನೆ ವಿಚಾರಿಸಿದರೆ ಅಪೇಕ್ಷಿತ ಫಲವನ್ನೀಯುವುದು

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್

ಚೀಫ್ ಏಜಂಟ್ಸ್, ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್, ಕೊ. ಲಿಮಿಟೆಡ್.

ಬೊಂಬೆ ಲ್ಯಾಫ್ ಬಿಲ್ಡಿಂಗ್, ಉಡುಪಿ, ದ. ಕ.

ಅಥವಾ ಶಾಖಾ ಕಛೇರಿಗಳಲ್ಲಿ: ಮಧುರೆ, ಬೆಂಗಳೂರು, ತ್ರಿವೆಂಡ್ರಮ್, ಕಲ್ಲಿಕೋಟೆ ಬೊಂಬಾಯಿ, ಮಂಗಳೂರು ಮತ್ತು ಕೊಯಮುತ್ತೂರು

The Bombay Life Assurance Co., Ltd., Bombay.

Edited, Printed & Published By K. H. Shetty at the Navayuga Press, Udipi, S. India